Registered No. M. 3618

೨೦ ಪುಟ

NAVAYUGA
A Nationalist Kanarese Weekly

It will pay you to advertise in 'NAVAYUGA' The Leading Nationalist Kanarese Weekly of Karnatak
FOR RATES OF ADVT Etc.
APPLY TO THE MANAGER

ವಾಚಕರನೇಕರ
ಅಪೇಕ್ಷೆಯಂತೆ ಮುದ್ರಿಸಲ್ಪಟ್ಟ
ಮಂಗಳೂರು ಉಡುಪಿಗಳಲ್ಲಿ
ಜಯಶೀಲವಾಗಿ
ಅಭಿನಯಿಸಲ್ಪಟ್ಟ
ಜನಪ್ರಿಯವಾದ ನಾಟಕ
ವ್ಯಭಿಚಾರಿಣಿ ಯಾರು?
ಕೆಲವೇ ಪ್ರತಿಗಳು ಉಳಿದಿವೆ.
ಬೆಲೆ ೦ ೮ ೦
ತರುಣರ ಪ್ರಪಂಚ, ಉಡುಪಿ

VOL XVI-NO. 16

7-1-1937

ಮೂಡ ಬಾನಿನ ಕಣ್ಣು ಕೆಂಗಿಡಿಯು ಕಾರುತಿದೆ,
ಬನದ ನಾಡೊಳು ಮೊಳಗುತಿದೆ ತುಮುಲನಾದ,

ವಾರಪತ್ರಿಕೆ
ಸಂಪಾದಕ: ಕೆ. ಕೆ. ಶೆಟ್ಟಿ.

ಮೂಡುವುದು ತಂಬೆಳಕ ತಿಂಗಳನ ಮೊಗವಲ್ಲ,
'ನವಯುಗ'ದ ರುದ್ರರವಿಯಾರಕ್ತ ಬಿಂಬ.

ಸಂಪುಟ ೧೬] ಉಡುಪಿ, ಗುರುವಾರ ೭, ಜನವರಿ, ೧೯೩೭ [ಸಂಚಿಕೆ ೧೯

THE

Canara Industrial & Banking SYNDICATE, LIMITED.

Head Office:
MUKUNDA NIVAS,
UDIPI, S. I.

BRANCHES:

1	Bangalore City	16	Kanhangad
2	Belgaum	17	Kasargode
3	Byadgi	18	Karkala
4	Bellary	19	Udipi
5	Adoni	20	Uppinangadi
6	Hospet	21	Karwar
7	Nandyal	22	Kumta
8	Prodattur	23	Ankola
9	Tadpatri	24	Honavar
10	Taliparamba	25	Bhatkal
11	Hubli	26	Sirsi
12	Gadag	27	Sagar
13	Mangalore	28	Coondapoor
14	Cannanore	29	Brahmavar
15	Payyanur	30	Hungarcutta

OVER ONE & A QUARTER MILLION

We commence the New Year with an increase of OVER ONE & A QUARTER MILLION RUPEES in our resources

The Total Working Funds of the Syndicate have risen to more than Rs 1,250,000 in the year 1936

• •

WE OFFER THANKS

Our Directors offer hearty thanks to the numerous clients and to the Public as well, for their ever increasing patronage and wish one and all

A VERY HAPPY
AND
PROSPEROUS NEW YEAR.

ದಿ ಕುಂದಾಪುರ ಬೇಂಕ್ ಲಿಮಿಟೆಡ್ ಕುಂದಾಪುರ

ಬ್ರಾಂಚ್—ಬ್ರಹ್ಮಾವರ.

ಚಾಲ್ತಿ ಮತ್ತು ಸೇವಿಂಗ್ಸ್ ಬೇಂಕ್ ಠೇವಣಾತಿಗಳು ಒಳ್ಳೇ ದರದ ಬಡ್ಡಿಯಲ್ಲಿಯೂ ಖಾಯಂ ಠೇವಣಾತಿಗಳು 3 ತಿಂಗಳಿಗೊಮ್ಮೆ ಸಾಲಿಯಾನ್ ಶೇಕಡಾ ರೂಪಾಯಿ 1½%, 6 ತಿಂಗಳಿಗೆ ಸಾಲಿಯಾನ್ ಶೇಕಡಾ ರೂಪಾಯಿ 5%, 12 ತಿಂಗಳಿಗೆ ಸಾಲಿಯಾನ್ ಶೇಕಡಾ ರೂಪಾಯಿ 6%, 24 ತಿಂಗಳಿಗೆ ಸಾಲಿಯಾನ್ ಶೇಕಡಾ 6½% ದರದ ಬಡ್ಡಿಯಲ್ಲಿ ಅಂಗೀಕರಿಸಲ್ಪಡುವುವು.

ಒಂದು ವರುಷದ ಯಾ ಹೆಚ್ಚಿಗೆ ಅವಧಿಯ ಖಾಯಂ ಠೇವಣಾತಿಗಳಿಗೆ ಮೇಲೆ ಕಾಣಿಸಿದ ದರವಲ್ಲ 6 ತಿಂಗಳಿಗೊಮ್ಮೆ ಬಡ್ಡಿ ಕೊಡಲಾಗುವುದು. ಬೇರೆ ಎಲ್ಲಾ ತರದ ಬೇಂಕ್ ವ್ಯವಹಾರಗಳು ನಡಿಸಲ್ಪಡುವುವು. ಕರೆಂಟ್, ಸೇವಿಂಗ್ಸ್ ಬೇಂಕ್ ಮತ್ತು ಕ್ಯುಮಲೇಟಿವ್ ಠೇವಣಾತಿಗಳು ಅಂಗೀಕರಿಸಲ್ಪಡುವುವು.

ವಿಶೇಷ ಸೂಚನೆ. ಬಡವರಿಗೆ ಸಹಾಯವಾಗುವಂತೆ ಕಡಿಮೆ ಎಂದರೆ ರೂಪಾಯಿ 10 ಸಹಾ ಸಾಲಕೊಡಲಾಗುತ್ತೆ. ಸಾಲುಗಳು ದೊರೆಯುತ್ತವೆ.

ಹೆಚ್ಚಿನ ಮಾಹಿತಿ ಬಗ್ಗೆ ಬರೆಕೊಳ್ಳಿರಿ.

ಸುಖನಿವಾಸ

(ತಾಲೂಕು ಕಚೇರಿಯ ಎದುರುಗಡೆ)

ಉಡುಪಿ, ದ. ಕ.

ಪ್ರಯಾಣಿಕರಿಗೂ ಶಾಲಾ ಬಾಲಕರಿಗೂ ಉದ್ಯೋಗಸ್ಥರಿಗೂ ಇನ್ನಿತರ ವ್ಯವಹಾರಿಕರಿಗೂ ಸ್ವಾದಿಷ್ಟವಾಗಿಯೂ ರುಚಿಕರವಾಗಿಯೂ ಹಿತದಾಯಕವಾಗಿಯೂ ನಿರ್ಮಲದ ಹೊಳಕೆಯಾಗಿಯೂ ಇರುವ ಕಾಫಿ, ತಿಂಡಿ, ತಿನಸು ಊಟ ವಗೈರೆ ನಮ್ಮ ಸ್ವಂತ ದೇಖರೇಖೆಯಿಂದ ತಯಾರಿಸಿ ಸದಾ ಕಾಲದಲ್ಲಿಯೂ ಅನಾಯಾಸವಾಗಿ ದೊರೆಯುವವು. ಒಮ್ಮೆ ಬಂದು ಪರೀಕ್ಷಿಸಿರಿ!

'ಸುಖನಿವಾಸ'ದ ಅಭಿವೃದ್ಧಿಯು ಮಹಾಜನರ ಪ್ರೋತ್ಸಾಹವನ್ನವಲಂಬಿಸಿದೆ.

ವ್ಯವಸ್ಥಾಪಕರು:

ಎಚ್. ವಾಸುದೇವ ನಾಯಕ್ ಎಂಡ್ ಬ್ರದರ್.

THE

MOOLKY BANK, LTD.,

MOOLKY.

ದಿ ಮೂಲ್ಕಿ ಬೇಂಕ್, ಲಿಮಿಟೆಡ್,

ಮೂಲ್ಕಿ.

ಎಲ್ಲಾ ತರದ ಬ್ಯಾಂಕ್ ವ್ಯವಹಾರಗಳು ನಡಿಸಲ್ಪಡುವವು. "ಮುಖ್ಯವಾಗಿ ಭಂಗಾರದ ಸರಕು ಈಡಿನ ಮೇಲೆ ಸಾಲವನ್ನು ಕೊಡುವುದು".

ಕಾಯಿಂ ಠೇವಣಾತಿಗಳು:

ಒಳ್ಳೇ ದರದ ಬಡ್ಡಿಯಲ್ಲಿಯೂ, ಮಾಸಿಕ, ಸೇವಿಂಗ್ಸ್‌ಬೇಂಕ್ ಮತ್ತು ಠೇವಣಾತಿಗಳು ಯೋಗ್ಯ ತರದ ಬಡ್ಡಿಯಲ್ಲಿಯೂ ಅಂಗೀಕರಿಸಲ್ಪಡುವವು.

ಹೆಚ್ಚಿನ ಮಾಹಿತಿಗೆ ಕೆಳಗಿನವರಿಗೆ ಬರೆದುಕೊಳ್ಳಿರಿ.

M. R. Punja, ಯಂ. ಆರ್. ಪುಂಜ,

President & Manager, ಪ್ರೆಸಿಡೆಂಟು ಮತ್ತು ಮೆನೇಜರ್.

ಇದೀಗ ಬಂದಿವೆ— | ಹೊಸ ಪುಸ್ತಕ!

ಟಾಲಸ್ಟಾಯಿಯವರ ಕತೆಗಳು

ಶ್ರೀ. ಎಲ್. ಗುಂಡಪ್ಪ, ಎಂ. ಎ. ಯವರಿಂದ ಅನುವಾದಿಸಲ್ಪಟ್ಟು ಟಾಲಸ್ಟಾಯಿಯವರ ಕಥೆಗಳೆಲ್ಲಾ ಕನ್ನಡದಲ್ಲಿ ಒಟ್ಟಾಗಿ ಅಚ್ಚಾಗಿ ಬಂದಿವೆ. ಈ ಕಥೆಗಳಲ್ಲಿ ಜೀವನಕ್ಕೆ ಸಂಬಂಧಪಟ್ಟ ಎಲ್ಲಾ ಪ್ರಶ್ನೆಗಳ ಚರ್ಚೆಯೂ ಇದೆ. ಆದುದರಿಂದ ಸ್ತ್ರೀಪುರುಷರೆಲ್ಲರೂ ಅವಶ್ಯ ಓದಬೇಕು.

೨೦೦ ಪುಟಗಳು — ಒಂದೂವರೆ ರೂಪಾಯಿ ಬೆಲೆ.

ಪ್ರತಿಗಳು ಸಿಗುವ ಸ್ಥಳ—

ಕಿರಿಯರ ಪ್ರಪಂಚ, ಉಡುಪಿ.

ವಿಜಯನಗರ ಸ್ಮಾರಕೋತ್ಸವ ಮಂಡಲದ ಪರವಾಗಿ ಹೊರಡಲಿರುವ

ಜಯಕರ್ನಾಟಕದ

ವಿಜಯನಗರ ವಿಶೇಷ ಸಂಚಿಕೆ

ವಿಶೇಷ ಸಂಪಾದಕರು ಪ್ರೊ. ಎಸ್. ಎಸ್. ಮಾಳವಾಡ, ಎಂ.ಎ

ಅಖಿಲ ಭಾರತದ ಪ್ರಸಿದ್ಧ ವಿದ್ವಾಂಸರ ಲೇಖನವೈಭವ!

ವಿಜಯನಗರಕ್ಕೆ ಸಂಬಂಧಿಸಿದ ಚಿತ್ರಮಾಲೆಗಳ ಐಶ್ವರ್ಯ!!

ಹೊಳಪಿನ ಹಾಳೆ ═══ ಅಚ್ಚಿನ ಅಚ್ಚುಕಟ್ಟು

ಬೆಲೆ: ಎಂಟಾಣೆ ಮಾತ್ರ

ಜಯಕರ್ನಾಟಕವು ಜನವರಿಯಿಂದ—ವಿಶೇಷ ಸಂಚಿಕೆಯಿಂದ ಮೊದಲ್ಗೊಂಡು **ದೊಡ್ಡ ಆಕಾರದಲ್ಲಿ** (ಡೆಮಿ ¼ ಪಲ್ಲಿ) ಹೊರಡುವುದು!

ಅಲ್ಲದೆ **ಚಂದಾದರವನ್ನು ಇಳಿಸಿದೆ—**ರೂ. ೪—೮—೦ ಮಾತ್ರ!

ಚಂದಾದಾರರಾಗಬೇಕೆನ್ನುವವರಿಗೂ ಜಾಹಿರಾತುದಾರರಿಗೂ ಸುಸಮಯ

ಜಯಕರ್ನಾಟಕ ಕಾರ್ಯಾಲಯ, ಧಾರವಾಡ.

ತುಳುನಾಡ್ ವೈದ್ಯಶಾಲೆ, ಉದ್ಯಾವರ, ದ. ಕ.

ಕೊಲೆರಾ ಫಿಲ್ಸ್	ಭೈರವ ಮಾತ್ರೆಗಳು
ಕೊಲೆರಾ ರೋಗಕ್ಕೆ ರಾಮಬಾಣ ಔಷಧ.	ಬಾಣಂತಿ ರೋಗಸಂಬಂಧವಾದ ಸಕಲ ರೋಗಗಳಿಗೂ ದಿವ್ಯೌಷಧ.
೧೦೦ ಮಾತ್ರೆಗಳಿಗೆ ರೂ ೨—೮—೦	೧೦೦ ಮಾತ್ರೆಗಳಿಗೆ ರೂ ೧—೮—೦

ಎಲ್ಲಾ ತರದ ರೋಗಗಳಿಗೂ ಅನುಭವಸಿದ್ಧವಾದ ದಿವ್ಯೌಷಧಗಳು ದೊರೆಯುತ್ತವೆ

ಯು. ಪಿ. ಮೇಸ್ತ್ರ, ಗೋಲ್ಡ್ ಮೆಡಲ್ಡ್ ಫಿಜಿಸಿಯನ್.

THE

PANGAL NAYAK BANK

LIMITED.

ESTABLISHED 1920.

***Head Office*: UDIPI.**

Branches: MANGALORE and KATAPADI.

Fixed loans and Overdraft advances are granted on the pledge of gold articles, on the mortgage of immovable properties and on the personal security of approved constituents on favourable terms.

Genuine trade bills, cheques, drafts etc., are discounted at a nominal charge.

Current, Savings Bank and Cumulative deposits are accepted at moderate rates of interest.

Fixed Deposits are received and interest allowed at 4% on 1 year and at 4½% on 2 years deposits.

Every other description of up-to-date Banking business is also undertaken.

A few shares are also available to the public

ಮಿರಜದಲ್ಲಿಯ ಸುಪ್ರಸಿದ್ಧ ವೈದ್ಯರಾದ ಎಮ್. ಕೆ. ರಜಪೂತ ಇವರ ಸ್ವದೇಶಿ ಔಷಧಗಳು

ಗುಣ ಬಾರದಿದ್ದರೆ — ## ಸ್ತ್ರೀಧರ್ಮ ಸಂಜೀವಿನೀ ಚೂರ್ಣ (ರಜಿಸ್ಟರ್ಡ) — **ಹಣ ಪರತ**

ಈ ಚೂರ್ಣವು ಕೆಂಪು ಬಿಳೆ ಶರಗಿಗೆ ಶತ್ರುವಾಗಿರುವುದು. ಅನಿಯಮಿತತನದಿಂದ ಮುಟ್ಟಾಗುವಿಕೆ, ಕ್ಲೇಶ ಬೈಯಲ್ಲಿ ನೋವು, ಉಷ್ಣತಾ ಕ್ಷೀಣತಾ ಗರ್ಭಾಶಯದಲ್ಲಿರುವ ದೋಷ ಗರ್ಭಧಾರಣವಾಗದಿರೋಣ, ಅಕಾಲದಲ್ಲಿ ಗರ್ಭಪತನವಾಗೋಣ ಈ ಮೊದಲಾದ ರೋಗಗಳು ನಿಶ್ಚಯವಾಗಿ ನೆಟ್ಟಗಾಗಿ ಗರ್ಭಕೋಶವು ಸ್ವಚ್ಛವಾಗುವದು. ಮಕ್ಕಳಾಗುವದಿಲ್ಲೆಂದು ಎರಡನೇ ಲಗ್ನಮಾಡಿಕೊಳ್ಳುವ ಮೊದಲು ಗೃಹದೇವತೆಯಾದ ಮೊದಲನೇ ಪತ್ನಿಗೆ ಈ ಚೂರ್ಣ ಅವಶ್ಯ ಕೊಡಿರಿ. ಮುಖ್ಯ ಸರ್ಟಿಫಿಕೇಟ ಮ. ರಾ. ಎ. ಎಮ್. ಇನ್ಸ್‌ಪೆಕ್ಟರ ಬೆಳಗಾಂವ:—ಈ ಚೂರ್ಣದಿಂದ ನನ್ನ ಕುಟುಂಬದ ಹೊಟ್ಟೆಯೊಳಗಿನ ರಕ್ತ ಗುಲ್ಮದ ಗಂಟು ನಾಮಶೇಷವಾಯಿತು. ಮತ್ತು ಎಲ್ಲ ರೋಗಗಳು ನಿಶ್ಶೇಷವಾದವು. ನನ್ನ ಮಿತ್ರನ ಹೆಂಡತಿಯ ರಕ್ತ ಮತ್ತು ಶರಗು ಇಲ್ಲದಂತಾದವು. ೨೧ ದಿವಸದ ಡಬ್ಬಿಯ ಕಿಮ್ಮತ್ತು ರೂ. ೩ ಟ. ಖ. ಆಣೆ, ೮. ಡಬ್ಬಿಗೆ ೪ರೂ.]

ಸಂತತಿ ಪ್ರತಿಬಂಧಕ ಚೂರ್ಣ. (ರಜಿಸ್ಟರ್ಡ) [ವಿ ಪಿ ಖರ್ಚು ಆಣೆ ೮.

ಬಹಳಸಾರಿ ಹಡಿಯುವುದರಿಂದ ಅತಿಶಯ ಅಶಕ್ತಿಯಾಗುತ್ತದೆ ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುರುವಾಗುವದು. ಶರೀರಕ್ಕೇನೂ ಅಪಾಯವಾಗದೆ ಸಂಸಾರ ಸುಖವು ಪೂರ್ಣವಾಗಿದೆ. ಕೂಡಲೇ ಗರ್ಭಧಾರಣ ಬಂದಾಗುವುದು ತದನಂತರ ಏನು ಮಾಡಿದರೂ ಸುರುವಾಗುವದಿಲ್ಲ. ಮೊದಲೇ ಪೂರಾ ವಿಚಾರಮಾಡಿ ಔಷಧ ಬೇಡಿರಿ. ಮುಖ್ಯ ಸರ್ಟಿಫಿಕೇಟ ಡಾಕ್ಟರ ಬಿ. ಎ. ವೈದ್ಯ ಎಲ್ ಸಿ. ಪಿ. ಎಸ್. ಮೂ। ಕೇಣವಾ ಮಾಹಿಮಾ ಜಿ. ರಾಜೆ. ಈ ಚೂರ್ಣದಿಂದ ಯಾವ ತರದ ಅಪಾಯವಾಗದೆ ಗರ್ಭಧಾರಣವಾಗುವದಿಲ್ಲ. ಪೂರ್ಣ ಗುಣಕಾರಿ

ವಿಳಾಸ:—ಸಂಜೀವಿನೀ ಔಷಧಾಲಯ, ಮು. ಪೊ. ಮಿರಜ, S. M. C.

ಸಮಾಚಾರ ಸಂಗ್ರಹ

ಚುನಾವಣೆಯ ವಿಚಿತ್ರ ತಂತ್ರ

ದುರ್ಗ ಡಿ. ಕೌನ್ಸಿಲಿನ ಚೇರ್‌ಮ್ಯಾನ್ ವೈಸ್ ಚೇರ್‌ಮ್ಯಾನರ ಚುನಾವಣೆಯಾಗಬೇಕಿತ್ತು. ಕಾಂಗ್ರೆಸ್ಸಿನವರೇ ಚುನಾಯಿತರಾಗುವರೆಂಬ ನಿಶ್ಚಯವಿತ್ತು. ಆದರೆ ಕಾಂಗ್ರೆಸ್ಸಿನ ವಿರೋಧಿಗಳಾದ ರಾಯಪುರ ಮತ್ತು ಧರ್ಮಕಾರೀ ಜಮೀನ್ದಾರರಿಗೆ ಅದು ಇಷ್ಟವಿದ್ದಿಲ್ಲ. ಹೊಸ ತಂತ್ರವೊಂದನ್ನು ಹೂಡಿದರು! ಕೌನ್ಸಿಲ್ ಆಫೀಸಿಗೆ ಬರುತ್ತಿದ್ದ ತಮ್ಮ ವಿರೋಧ ಪಕ್ಷದ ಕೆಲವು ಮಂದಿ ಮೆಂಬರರನ್ನು ಒಂದರೆ ಫರ್ಲಾಂಗು ದೂರದಲ್ಲೇ ಜಮೀನ್ದಾರರ ಕಡೆಯ ಪ್ರಮುಖ ಪ್ರಭೃತಿಗಳಿಬ್ಬರು ಇದಿರುಗೊಂಡು ಮಾತಾಡುವ ನೆವದಿಂದ ಪಕ್ಕದ ಮನೆಗೆ ಕರೆದೊಯ್ದರು. ಅನಂತರ ಅವರಲ್ಲಿಂದ ಹೋಗದಂತೆ ಪ್ರತಿಬಂಧಕ ಮಾಡಲಾಯಿತು. ಅಂತೂ ಇಬ್ಬರು ಮೂವರು ಹಾರಿ ತಪ್ಪಿಸಿಕೊಂಡು ಆಫೀಸಿಗೆ ಓಡಿಯೇ ಹೋಗಿ ಮುಟ್ಟಿದರು. ಕೋರಮಿಗೆ ತಕ್ಕಷ್ಟು ಜನವಾಯಿತು. ಕಾಂಗ್ರೆಸಿನವರೇ ಚುನಾಯಿಸಲ್ಪಟ್ಟರು!

ಜೈಲಲ್ಲಿ ಉಪವಾಸ ದೀಕ್ಷೆ ಕೈಗೊಂಡುದಕ್ಕೆ ಮತ್ತಾರು ತಿಂಗಳ ಅಧಿಕ ಶಿಕ್ಷೆ!

ಹೂಗ್ಲೀ ಜೈಲಿನಲ್ಲಿ ಕೊಡುತ್ತಿದ್ದ ಆಹಾರವು ತಿನ್ನಲಿಕ್ಕೆ ಅಯೋಗ್ಯವಾಗಿತ್ತೆಂದು 'ಬಿ' ಕ್ಲಾಸಿನ ಇಪ್ಪತ್ತೊಂದು ಮಂದಿ ಉಪವಾಸ ದೀಕ್ಷೆಯನ್ನು ಕೈಗೊಂಡರು. ಚಿನ್ಸೂರಾ ಮೆಜಿಸ್ಟ್ರೇಟರು ಅದಕ್ಕಾಗಿ ಅವರಿಗಾರು ತಿಂಗಳ ಅಧಿಕ ಶಿಕ್ಷೆ ವಿಧಿಸಿದರು.

ಚಿನ್ನಾಭರಣಗಳಿಗಾಗಿ ಹುಡುಗಿಯ ಕೊಲೆ

ಮಧುರೆಯ ನಾಗಲಿಂಗಪೇಟೆ ಹಳ್ಳಿಯ ಸಮೀಪ ಅನ್ನಮಲೆ ಗುಡ್ಡೆಯ ಬದಿಯಲ್ಲಿ ಹುಡುಗಿಯೊಬ್ಬಳ ಭೀಭತ್ಸ್ಯ ಮೃತ ಶರೀರ! ಗಂಟಲು ಕೊಯ್ಯಲ್ಪಟ್ಟಿತ್ತು. ಆಭರಣಗಳೆಲ್ಲ ತೆಗೆಯಲ್ಪಟ್ಟಿದ್ದುವು! ಅಂದು ಬೆಳಗ್ಗೆ ಸಾಲಂಕೃತಳಾಗಿದ್ದ ಆ ಹುಡುಗಿಯು ಕಾಣೆಯಾಗಿದ್ದಳಂತೆ. ಮಕ್ಕಳನ್ನು ಚಿನ್ನಾಭರಣಗಳಿಂದಲಂಕರಿಸಿಬಿಡುವವರ ಲಕ್ಷ್ಯವಿತ್ತ ಕಡೆಗೆ ಬೀಳಲಿ!

ಬಿ. ಎನ್ ರೈಲ್ವೇ ಮುಷ್ಕರ

ಅದಿನ್ನೂ ಹರಡುತ್ತಾ ಇದೆ. ವಿಶಾಖಪಟ್ಣ ರಾಯ್‌ಪುರ ಲ್ಯಾನಿಗೂ ಮುಟ್ಟಿದೆ. ದೊಂಕಿನ್‌ವಾಲಸ ಎಂಬ ಸ್ಟೇಶನು ಪೂರಾ ಮುಚ್ಚಲ್ಪಟ್ಟಿದೆ. ಬೊಬ್ಬಿ ಮತ್ತು ಪಾರ್ವತಿಪುರ ಸ್ಟೇಶನಿನ ಕೆಳ ನೌಕರರು ಮುಷ್ಕರ ತೊಡಗಿದ್ದಾರೆ.

ಕಾರಿನ ಚಕ್ರದೊಳಗೆ ಚಿನ್ನ!

ಫ್ರಾನ್ಸಿನಿಂದ ಸ್ವಿಜರ್ಲಾಂಡಿಗೊಂದು ಕಾರು ಬಲು ರಭಸದಿಂದ ಧಾವಿಸುತ್ತಿತ್ತು. ಅದರಲ್ಲೇನೂ ಸರಕ ಸಾಮಾನುಗಳಿರಲಿಲ್ಲ. ಆದರೂ ಪೋಲೀಸರು ನಿಲ್ಲಿಸಿದರು. ಹುಡುಕಿದರೆ ಎಲ್ಲಿಯೂ ಏನೂ ಸಿಕ್ಕಲಿಲ್ಲ. ಹಿಂದಿನಲ್ಲಿ ಕಟ್ಟಿಟ್ಟ ಚಕ್ರದ ಗಾಳಿಬಿಟ್ಟರು. ಆದರೂ ಮೆತ್ತಗಾಗಲಿಲ್ಲ. ಪರೀಕ್ಷಿಸಲಾಗಿ ಅದರೊಳಗೆ ೫೫ ರಾತಲು ಚಿನ್ನವಿತ್ತು!

ಸಿಂಪ್ಸನಳಿಗೆ ಭಯ ಪ್ರದರ್ಶನ

ಎಡ್ವರ್ಡರ ಪ್ರೇಯಸಿಯಾದ ಸಿಂಪ್ಸನಳಿಗೆ ಹಲವು ಕಾಗದಗಳು. ಬರೆದವರ್ಯಾರೆಂದು ಹೆಸರು ವಿಳಾಸವಿಲ್ಲ. ಒಕ್ಕಣೆಯನ್ನು ನೋಡಿದರೆ ಬುದ್ಧಿವಂತರು ಬರೆದಂತೆ ಇವೆ. ಪತ್ರಗಳ ಸಾರಂಶ: ಆಕೆಯನ್ನು ಜೀವದಿಂದಿರಲು ಬಿಡುವುದಿಲ್ಲವೆಂದು! ಹಿಂದೆ ಎಷ್ಟೋ ಅರಸರುಗಳ ಪ್ರೇಯಸಿಯರಿಗಾದ ಗತಿಯೇ ನಿನ್ನನ್ನೂ ಕಾದಿರುವುದು ನಿಶ್ಚಯವೆಂದು!

ಚೀನಾದ ದಂಗೆಯ ಬೆಂಕಿ ನಂದಿತು

ಚೀನಾದ ಸರ್ವಾಧಿಕಾರಿ ಮಾರ್ಷಲ್ ಚಿಯಾಂಗ್ ಕೈಷೇಕರು ಬಿಡುಗಡೆಹೊಂದಿ ನಾಂಕಿಂಗನ್ನು ಸೇರಿದ್ದಾರೆ. ದಂಗೆಯೆದ್ದು ಅವರನ್ನು ಸೆರೆಯಲ್ಲಿಟ್ಟ ಚಾಂಗ್ ಹ್ಸಿಯಾಂಗ್‌ರವರ ವಿಚಾರಣೆ ನಡೆದು ಅವರಿಗೆ ಹತ್ತು ವರುಷಗಳ ಶಿಕ್ಷೆ ವಿಧಿಸಲಾಗಿತ್ತು. ಆದರೆ ಚೀನಾ ಸರಕಾರವು ಅವರೊಂದು ತಪ್ಪು ಗ್ರಹಿಕೆಯಿಂದ ಅಪರಾಧಮಾಡಿದರೆಂದು ಅವರನ್ನು ಮಾಫಿಮಾಡಿದೆ!

ಇನ್ನೊಬ್ಬ ಅರಸರು ಸಿಂಹಾಸನ ತ್ಯಾಗ ಮಾಡಲಿರುವರೆ?

ಹಾಗೆಂದು ಪ್ರಬಲವಾದ ಸುದ್ದಿ. ಅವರು ಬೆಲ್ಜಿಯಮಿನ ಅರಸರು. ಕಿಂಗ್ ಲಿಯೋಪೋಲ್ಡ್ ಎಂಬುದು ಅವರ ಹೆಸರು. ಒಂದು ವರುಷದ ಹಿಂದೆ ಅವರು ಸಪತ್ನೀಕರಾಗಿ ಕಾರಿನಲ್ಲಿ ನಗರ ಸಂಚರಿಸುತ್ತಿದ್ದರು. ತಾನೇ ಕಾರು ನಡೆಸುತ್ತ ಪ್ರಿಯಪತ್ನಿಗೆ ನಗರ ತೋರಿಸುತ್ತಿದ್ದರು. ತನ್ನ ತುಸು ಅಜಾಗರೂಕತೆಯಿಂದಾಗಿ ಕಾರು ಒಂದು ಸೇತುವೆಗೆ ಡಿಕ್ಕಿಹೊಡೆಯಲು ಎದುರಿನ ಕನ್ನಡಿಯ ರಾಣಿಯ ಕತ್ತನ್ನು ಕತ್ತರಿಸಿತು! ಅಲ್ಲೇ ಪ್ರಾಣಬಿಟ್ಟ ಆ ತನ್ನ ಮುದ್ದುಪತ್ನಿಯ ಮುಖವು ಇನ್ನೂ ಅವರ ಕಣ್ಣೆದುರು ಕಟ್ಟಿದಂತಿದೆ. ಅಂದಿನಿಂದವರೊಬ್ಬ ವಿರಾಗಿ! ರಾಜ್ಯಭಾರದಲ್ಲಿ ಶ್ರದ್ಧೆಯಿಲ್ಲ. ದಿನಕ್ಕೆರಡು ಮೂರು ಬಾರಿ ತನ್ನ ಪತ್ನಿಯ ಸಮಾಧಿಗೆ ಹೋಗಿ ಕಣ್ಣೀರಿಡುತ್ತಾರೆ! ಪುನರ್ವಿವಾಹದಿಂದ ಇವರ ಮನಸ್ಸನ್ನು ಸರಿಗೊಳಿಸಬೇಕೆಂದು ಸರಕಾರದ ಮತ್ತು ಬಂಧುಗಳ ಪ್ರಯತ್ನ. ತಕ್ಕ ವಧುವೂ ಇದ್ದಾಳೆ—ಇಪ್ಪತ್ತೆರಡು ವರುಷದ ಸುಂದರ ತರುಣಿ, ಮುಂದೆ ಆಸ್ಟ್ರಿಯಾದ ಸಿಂಹಾಸನ ಸೇರಲಿರುವ ಪ್ರಿನ್ಸ್ ಒಟ್ಟೋವಿನ ಸೋದರಿ ಎಡೆಲ್ಹೈಡ್ ಎಂಬವಳು. ಯುರೋಪಿನ ರಾಜಕಾರಣದಲ್ಲಿ ಪ್ರಖ್ಯಾತಿಯುಳ್ಳವಳು. ಆದರೆ ಕಿಂಗ್ ಲಿಯೋಪೋಲ್ಡ್ ಆ ಕಡೆಗೆ ನೋಡುವುದಿಲ್ಲ. ತನ್ನ ಆರು ವರುಷದ ಮಗನಿಗೆ ಸಿಂಹಾಸನದ ಹಕ್ಕೇ ಬಿಟ್ಟುಕೊಟ್ಟು ತಾನು ವಿರಾಗಿಯಾಗುವನೆಂದೇ ಫಲ!

ಕೋರ್ಟಿನಲ್ಲಿಯೂ ಕವಿತೆಯ ಸ್ಟೇಟ್‌ಮೆಂಟ್!

ಅವನೊಬ್ಬ ಫ್ರೆಂಚ್ ಕವಿ, ಒಬ್ಬ ಅಧಿಕಾರಿಯ ಮೇಲೆ ನಕಲಿ ಬರೆದನೆಂದು ಅವನ ಮೇಲೆ ಆರೋಪಣೆ. ಕೋರ್ಟಿನಲ್ಲಿ ತನಗೆ ನೂರೆಂಟು ನೋವಿನ ನಿಲ್ಲಲಾಗುವುದಿಲ್ಲವೆಂದು ಜಡ್ಜರಿಗೆ ಪದ್ಯದಲ್ಲೇ ಅರಿಕೆ ಮಾಡಿದನು. ಆತನಿಗೊಂದು ಆರಾಮಕುರ್ಚಿಯ ಕೊಡಲಾಯಿತು! ತನ್ನ ಹಾಸ್ಯಶೈಲಿಯಾಗಲಿ ಪ್ರತಿಭೆಯಾಗಲೀ ಕಾಣದಿರುವ ಆ ನಕಲಿ ಬರಹವು ತನ್ನದೆಂದೂ ಆಗಲಾರದೆಂದು ಪದ್ಯದಲ್ಲೇ ಸ್ಟೇಟ್‌ಮೆಂಟ್ ಬಾಯ್ದೆರೆ ಕೊಟ್ಟಿದ್ದಾನೆ!

ಜರ್ಮನಿಯಲ್ಲಿ ಎಲ್ಲವೂ ವೃದ್ಧಿಯಾಗಬೇಕಂತೆ!

ಆಡುಗಳು, ಕುರಿಗಳು, ಕೋಳಿಗಳು, ಕುಂದಿಲಿಗಳು, ಜೇನು ನೊಣಗಳು, ರೇಷ್ಮೆ ಹುಳುಗಳು ಇತ್ಯಾದಿ ಇತ್ಯಾದಿಗಳೆಲ್ಲ ಇನ್ನು ನಾಲ್ಕು ವರುಷಗಳಲ್ಲಿ ಯಾವ ಯಾವ ಪ್ರಮಾಣದಿಂದ ವರ್ಷ ವರ್ಷ ವೃದ್ಧಿಯಾಗುತ್ತಿರಬೇಕೆಂದೂ ಹಾಗೆ ಅವನ್ನು ವೃದ್ಧಿಗೊಳಿಸುವುದು ಹೇಗೆಂದೂ ಹಳ್ಳಿಯ ಗೃಹಕೃತ್ಯಜೀವಿವೃದ್ಧಿಸಂಘದ ಅಧ್ಯಕ್ಷರುಚತಾತು ವಾರ್ಷಿಕಯೋಜನೆ (ಸ್ಕೀಮ್)ಯೊಂದನ್ನು ತಯಾರಿಸಿ ಊರಲ್ಲಿ ಪ್ರಕಟಿಸಿರುತ್ತಾರೆ.

ಸ್ಪೈಯಿನಿನಲ್ಲಿ ಹತ್ತಿರುವ ಯುದ್ಧದ ಬೆಂಕಿಯ ಪರ್ಯವಸಾನವೆಲ್ಲಿ?

ಸ್ಪೈಯಿನಿನಲ್ಲಿ ದಂಗೇಗಾರರ ಪಕ್ಷದವರೊಡನೆ ಯುದ್ಧ ಮಾಡಲಿಕ್ಕೆ ಜರ್ಮನಿಯು ಬಹಿರಂಗವಾಗಿ ಸೈನ್ಯವನ್ನು ಕಳುಹತೊಡಗಿದೆ. ಈಗ ಸ್ಪೈಯಿನಿನಲ್ಲಿರುವ ಜರ್ಮನ್ ಸೈನಿಕರು ಸುಮಾರು ೨೦,೦೦೦ ವಾಗಬಹುದೆಂದು ಅಂದಾಜು. ಮಾತ್ರವಲ್ಲ, ದಂಗೇಗಾರರ ಪಕ್ಷವು ಒಂದು ವೇಳೆ ಸೋತರೆ ತಾನು ಯುದ್ಧವನ್ನು ಮುಂದರಿಸುತ್ತೇನೆನ್ನುತಿದೆ ಇಟೇಲಿ! ಹೀಗೆ ಇಟೇಲಿ ಜರ್ಮನಿ ದಂಗೇಗಾರರ ಪಕ್ಷದಲ್ಲಿ ನಿಂತಾಗ ಸ್ಪೈಯಿನ್ ಸರಕಾರದ ಪಕ್ಷದ ಬೆಂಬಲವಾಗಿ ರಷ್ಯವು ಬಂದೇ ಬರುವುದು. ಫ್ರಾನ್ಸು ಬ್ರಿಟನನ್ನು ಎಳೆದು ಕೊಂಡಾದರೂ ರಣರಂಗಕ್ಕೆ ಇಳಿಯದಿರಲಾರದು ಆಗ?

ಉಡುಪಿಯಲ್ಲಿ ಚುನಾವಣೆಯ ಕಾರ್ಯಾರಂಭದ ಮಹಾಸಭೆ ಕೊಂಗ್ರೆಸಿನೊಡನೆ ಜನತೆಯ ಸಂಪೂರ್ಣ ಸಹಾನುಭೂತಿ!

ಉಡುಪಿ ತಾಲೂಕಿನಲ್ಲಿ ಚುನಾವಣೆಯ ಕಾರ್ಯಾರಂಭಿಸುವ ಮಹಾಸಭೆಯು ತಾಲೂಕು ಕೊಂಗ್ರೆಸ್ ಕಮಿಟಿಯ ಆಶ್ರಯದಲ್ಲಿ ವಕೀಲ ಶ್ರೀ ಎಮ್. ವಿಠ್ಠಲ ಕಾಮತರ ಅಧ್ಯಕ್ಷತೆಯಲ್ಲಿ ತಾ 3-1-1937ನೇ ಆದಿತ್ಯವಾರ ಸಂಜೆ ಘಂಟೆ ೫½ಗೆ ರಥಬೀದಿಯಲ್ಲಿ ನೆರೆಯಿತು. ಸ್ವಯಂಸೇವಕರು ರಾಷ್ಟ್ರಗೀತವನ್ನು ಹಾಡಿದರು. ಪುತ್ತೂರು ಡಿವಿಜನಿನಿಂದ ಲೆಜಿಸ್ಲೇಟಿವ್ ಎಸೆಂಬ್ಲಿಗೆ ಕೊಂಗ್ರೆಸ್ ಉಮೇದ್ವಾರಿಯಾಗಿ ನಿಂತಿರುವ ವಕೀಲ್ ಶ್ರೀ ಕೆ. ಆರ್. ಕಾರಂತರು ಪ್ರಾರಂಭದ ಭಾಷಣಮಾಡುತ್ತಾ ಕೊಂಗ್ರೆಸು ದೇಶದ ಏಕಮಾತ್ರ ಪ್ರತಿನಿಧಿ ಸಂಸ್ಥೆಯೆಂಬುದನ್ನು ಸರಳವಾಗಿ ಹೃದಯಂಗಮವಾಗಿ ವರ್ಣಿಸಿ ಮತದಾರರ ಕರ್ತವ್ಯವನ್ನು ಸ್ಪಷ್ಟವಾಗಿ ನಿರೂಪಿಸಿದರು. ತೆರಿಗೆಯ ಹೆಚ್ಚಳ ಮತ್ತು ಆರಣ್ಯ ಸಂಕಷ್ಟಗಳ ನಿವಾರಣೆಗೆ ಕೊಂಗ್ರೆಸನ್ನು ಬಲಗೊಳಿಸುವದೇ ಹಾದಿಯೆಂದು ವಿಶದೀಕರಿಸಿದರು. ಶ್ರೀ ಎ. ಬಿ. ಶೆಟ್ಟಿ, ಎಮ್. ಎಲ್ ಸಿ.ಯವರು ದಕ್ಷಿಣಕನ್ನಡದ ಕೊಂಗ್ರೆಸು ಮತ್ತು ಜಸ್ಟಿಸು ಪಕ್ಷಗಳ ಕಾರ್ಯಕಲಾಪಗಳನ್ನು ವರ್ಣಿಸಿ, ಕೊಂಗ್ರೆಸಿಗೇಕೆ ಮತಕೊಡಬೇಕೆಂಬುದನ್ನು ಸ್ಪಷ್ಟೀಕರಿಸಿದರು. ಬ್ರಾಹ್ಮಣ ವಿರೋಧಕ್ಕಾಗಿಯೇ ನಿರ್ಮಾಣಗೊಂಡಿರುವ ಜಸ್ಟಿಸು ಪಕ್ಷದ ಹುರುಳನ್ನು ಹೊರಗೆಡಹಿದರು. ವಕೀಲ್ ಶ್ರೀ ಕೆ ಆರ್ ಆಚಾರ್ಯರು, ಜಸ್ಟಿಸು ಪಾರ್ಟಿಯವರ ಎಂಡೋಮೆಂಟ್ ಬಿಲ್ಲನ್ನು ಮಂಜೂರು ಮಾಡಿ, ಮಠ, ದೇವಸ್ಥಾನಗಳಿಗೆ ಮಾಡಿರುವ ಹಾವಳಿಯನ್ನು ವಿವರಿಸಿ, ಎಷ್ಟು ಕಷ್ಟವಿದ್ದರೂ ಕೊಂಗ್ರೆಸಿನ ಉಮೇದ್ವಾರರನ್ನು ಸಂಪೂರ್ಣವಾಗಿ ಸಮರ್ಥಿಸಬೇಕೆಂದೂ, ದೇಶ ಪ್ರೇಮವನ್ನು ತೋರಿಸಬೇಕೆಂದೂ ಅನ್ಯಕಪೂರ್ವಕವಾಗಿ ಕೇಳಿಕೊಂಡರು. ವಕೀಲ್ ಶ್ರೀ ತಲ್ಲೂರಿ ರಂಗರಾಯರು ಬೋಧಪ್ರದ ಭಾಷಣವಿತ್ತರು. ವಕೀಲ್ ಶ್ರೀ ಬೈಲೂರು ವಾಸುದೇವ ರಾಯರು ಅದನ್ನು ಸಮರ್ಥಿಸಿದರು. ಶ್ರೀ ಹಿ. [illegible] ಕೊಂಗ್ರೆಸಿನ ತತ್ವವನ್ನು ವಿವರಿಸಿದರು. ಶ್ರೀ ಎನ್. ಎಸ್. [illegible]ಯವರು ಕೊಂಗ್ರೆಸ್ ವಿರೋಧಿಗಳ ಆರೋಪಿತ ಕಿರುಕುಳವನ್ನು ಖಂಡಿಸಿ ಸ್ವಾನುಭವದಿಂದ ಸಾರಿದರು. ಅಧ್ಯಕ್ಷರು [illegible] ಕರ್ತವ್ಯ ಅಭಿಪ್ರಾಯಗಳನ್ನು ಬಿಚ್ಚಿ ಅನುಮೋದಿಸಿದವರೂ ಕೊಂಗ್ರೆಸಿನೊಡನೆ ಸಹಕರಿಸಿ ಅದು ಜಯಶೀಲವಾಗುವ ಹಾಗೆ ಮಾಡಬೇಕೆಂದು ವಿನಂತಿಸಿದರು.

ಸುವರ್ಣ ತಾಯಿತಿ! ಬಂಗಾರದ ತಾಯಿತಿ!!
ಹಿಮಾಲಯ ಪರ್ವತದಲ್ಲಿ ವರ್ಷಗಟ್ಟಲೆ ತಪಸ್ಸು ಮಾಡಿ ಸಿದ್ಧಿಯನ್ನು ಪಡೆದ ಮಹಾ ಯೋಗೀಶ್ವರರಿಂದ ಕಂಡು ಹಿಡಿಯಲ್ಪಟ್ಟದ್ದು.
ಈ ತಾಯಿತಿಯನ್ನು
ಧರಿಸಿದ ಮಾತ್ರದಿಂದ ಸಕಲ ಇಷ್ಟಾರ್ಥಗಳೂ ನೆರವೇರುವುವು.
ಪರೀಕ್ಷಿಸಲಪೇಕ್ಷಿಸುವವರು
"ಯೋಗೀಶ್ವರರ ಶಕ್ತಿಸಾಹಸ"
ಎಂಬ ಪುಸ್ತಕವನ್ನು ಧರ್ಮಾರ್ಥವಾಗಿ ಪಡೆಯಬಹುದು.
ಪತ್ತೆ:—ಪಂಡಿತ್ ಎ. ವಿ. ಆರಮುಮ್
ಚಿಕಾಕೋಲ್

ಈ ವಾರದ ಕಥೆ

೧

• ಅಜ್ಞಾನ ಸಾಗರ •

(All Rights Reserved)

ತರಂಗ ೨

A Haunted House.

ಮನೆಯಲ್ಲಿ ಭೂತ ಸಂಚಾರ

"ಅಯ್ಯೋ! ಆ ಮನೆಯನ್ನು ಬಾಡಿಗೆಗೆ ಹಿಡಿದಿರಾ? ಈ ಪೇಟೆಯಲ್ಲಿ ಬೇರೆಲ್ಲಿಯೂ ನಿಮಗೆ ಮನೆ ಸಿಗಲಿಲ್ಲವೆ?"

"ಆ ಮನೆಗೇನಾಗಿದೆ? ಅಚ್ಚು ಕಟ್ಟಾದ ಮನೆ! ದೊಡ್ಡ ಆದೆಗಳು; ಗಾಳಿಬೆಳಕು ಚೆನ್ನಾಗಿ ಬರುವಂತಿವೆ; ಅಡಿಗೆ ಕೋಣೆ, ಬಚ್ಚಲು, ಹಟ್ಟಿಕೊಟ್ಟಿಗೆ, ಇವೆಲ್ಲಾ ಈಗಿನ ರೀತಿಗೆ ಹೇಗೆಬೇಕೋ ಹಾಗೆ! ಮೇಲಾಗಿ, ವಿಸ್ತಾರವಾದ ವಠಾರ ತಂಪಗೆ ಇರುವಷ್ಟು ಮರಮಟ್ಟುಗಳು? ಅಂತ ಮನೆಗಳು ಪೇಟೆಯಲ್ಲಿ ಎಷ್ಟಿವೆ? ಬಾಡಿಗೆ ಕೂಡಾ ..."

"ಹೌದು, ಬಾಡಿಗೆ ಕಡಿಮೆ, ಸೌಕರ್ಯ ಹೆಚ್ಚುಗೆಯೆಂದು ನಿಮ್ಮಂತೆ ಎಷ್ಟು ಜನ ಆ ಮನೆ ಕಂಡು ಮರುಳಾಗಿ ಹೊಕ್ಕರು! ಎಷ್ಟು ಜನ ಒಂದೆರಡು ತಿಂಗಳಲ್ಲಿ ಮುಂಗಡಕೊಟ್ಟ ಬಾಡಿಗೆಯನ್ನೂ ಬಿಟ್ಟೋಡಿದರು ಗೊತ್ತೆ? ಅಂತೂ ನೀವು ವಹಿಸಿ ಕೊಂಡಾಯಿತಲ್ಲ! ಇದ್ದು ನೋಡಿ ಕೆಲವು ದಿವಸ ಮತ್ತೇನು ಮಾಡಲಿಕ್ಕಾಗುತ್ತೆ ಇನ್ನು?"

ನಿವೃತ್ತ ಪೋಲೀಸ್ ಇನ್ಸ್‌ಪೆಕ್ಟರ್ ವಿಠಲರಾಯರು ಅಂದೇ ಆ ಮನೆಯಲ್ಲಿ ತನ್ನ ಸಂಸಾರವನ್ನಿಳಿಸಿದ್ದರು. ಸಾಯಂಕಾಲ ಪೇಟೆಗೆ ಬಂದಿದ್ದಾಗ ನೋಡ ಸಿಕ್ಕಿದ ಅವರ ಪೂರ್ವ ಪರಿಚಿತರೊಬ್ಬರಿಗೂ, ಅವರಿಗೂ ನಡೆದ ಮಾತುಗಳೇ ಮೇಲಿನವು. ವಿಠಲರಾಯರು ಆ ಮನೆಯನ್ನು ೧೫ ದಿವಸಗಳ ಹಿಂದೆ ಬಾಡಿಗೆಗೆ ಹಿಡಿದು ತನ್ನ ಗೃಹಕೃತ್ಯದ ಯಾವತ್ತು ಸಾಮಾನುಗಳನ್ನು ತರಿಸಿ ತಕ್ಕ ಸ್ಥಳಗಳಲ್ಲಿ ಅವುಗಳ ವ್ಯವಸ್ಥೆ ಮಾಡಿಸಿದ್ದರು. ವಾಸ್ತವ್ಯಕ್ಕೆ ಎಲ್ಲವೂ ಸಿದ್ಧವಾಯಿತೆಂದ ಮೇಲೆ ಅವರ ಸಂಸಾರವು ಅಂದು ಬೆಳಗ್ಗೆ ಬಂದಿಳಿದಿತ್ತಷ್ಟೆ. ಸಂಸಾರವೆಂದರೆ, ಅವರ ಹೆಂಡತಿ ಅಕ್ಕೆ, ಐದು ಮಕ್ಕಳು-ಮೂರು ಹೆಣ್ಣು ಎರಡು ಗಂಡು ಬಂದವರು ಮನೆ ನೋಡಿ ತುಂಬಾ ಸಂತೋಷಪಟ್ಟಿದ್ದರು. ಅಂತಹ ಮನೆಯನ್ನು ಚುನಾಯಿಸಿ ಎಲ್ಲ ವ್ಯವಸ್ಥೆಯನ್ನೂ ಮಾಡಿಸಿಟ್ಟುದಕ್ಕಾಗಿ ಅವರ ಪತ್ನಿ ಶಾಂತಿಗಾದ ಸಂತೋಷವೂ ಅಷ್ಟಿಷ್ಟಲ್ಲ. ಅದನ್ನು ಕಂಡು ರಾಯರುತಾನು ಕೃತಕೃತ್ಯನಾದೆನೆಂದು ಹಿರಿಹಿಗ್ಗಿದ್ದರು.

ರಾಯರು ಪೇಟೆಯಿಂದ ಮನೆ ಸೇರಿದಾಗ ದೀಪ ಹಚ್ಚುವ ಹೊತ್ತಾಗಿದ್ದಿತು. ಫ್ರಂಟ್‌ಕೋ (ಮುಮುಂಟಪ)ದಲ್ಲಿ ಮೇಜಿನ ಮೇಲೆ ದೀಪವಿತ್ತು. ಸುತ್ತಲೂ ಮಕ್ಕಳು ಕುಳಿತಿದ್ದರು. ಆದರೆ ಅವರು ನಿರೀಕ್ಷಿಸಿದಷ್ಟು ಉತ್ಸಾಹವು ಅಲ್ಲಿರಲಿಲ್ಲ. ರಾಯರು ಬಂದವರು ಕುರ್ಚಿಯೊಂದರಲ್ಲಿ ಕುಳಿತು 'ಕಮಲಾ, ಆಚೆ ಕೋಣೆಯೊಳಗೆ ದೀಪಹಚ್ಚು' ಎಂದರು. ಹಿರಿ ಮಗಳಿಗೆ 'ರಮಾ ನೀನೂ ಬಾ' ಎಂದು ಅವಳು ಕಿರಿಯಳನ್ನು ಕೇಳಿದಳು 'ಊಂ, ಹೂಂ! ನೀನೇ ಹೋಗು' ಎಂದಳವಳು. 'ಅಮ್ಮಾ; ಕೋಣೆಯಲ್ಲಿ ದೀಪಹಚ್ಚಬೇಕಂತೆ' ಎಂದು ಕಮಲೆಯು ತಾಯನ್ನು ಕರೆದಳು 'ಏನೇ ಕಮಲಾ! ದೀಪಹಚ್ಚಲಿಕ್ಕೆ ತಾಯಿಬೇಕೆ' ಎನ್ನುತ್ತಾ ರಾಯರು ಅಸಮಾಧಾನ ತೋರಿದರು. ಕಮಲೆಯು ಮರುಮಾತಾಡದೆ ಒಳಗೆ ಹೋದಳು. ಅವಳ ಹಿಂದೆ ರಮೆಯು ನಡೆದಳು. ಚಿಕ್ಕಮಕ್ಕಳೊಬ್ಬ 'ಪಪ್ಪಾ, ಭೂತಾಂದ್ರೆ ಹೇಗಿರುತ್ತೆ?' ಎಂದ ಅಷ್ಟರಲ್ಲಿ ರಾಯರ ಹೆಂಡತಿ ಶಾಂತಾ ಬಾಯಿಯು ಕೈದೀಪ ಹಿಡಿದುಕೊಂಡು ಬಂದು ಕೋಣೆಗೆ ಹೋಗಿ ದೀಪ ಹಚ್ಚಿದಳು. ರಾಯರು ಕೋಣೆಗೆ ಹೋಗಿ ಅಂಗಿ ತೆಗೆದಿಡುತ್ತಾ, 'ಮಕ್ಕಳಿಗಿಂದೇನಾಗಿದೆ? ದೀಪಹಚ್ಚಲಿಕ್ಕೆ ಹೇಳಿದರೆ ಮುಖಮುಖ ನೋಡುತ್ತಾರಲ್ಲಾ! ಎಂದರು.

"ಏನೂ ಇಲ್ಲ, ಆದರೆ ಹುಡುಕಿಹುಡುಕಿ ನಿಮಗೆ ಇದೇ ಮನೆ ಸಿಕ್ಕಬೇಕೆ?"

"ಈಗೇನಾಯಿತು ಮನೆಗೆ? ಆಗ ನೀನೆ ಅಷ್ಟು ಹೊಗಳಿದೆಯಲ್ಲ?"

"ಹೌದು ಆದರೆ ಇದರಲ್ಲಿ 'ಆಜನೆ' ಆಗುತ್ತಂತೆ!"

"ಅಂದರೆ?"

"ಮಾಡಿನಲ್ಲಿ, ಅಟ್ಟದಲ್ಲಿ, ಎಲ್ಲಾ ಶಬ್ದ ಆಗುತ್ತದಂತೆ."

"ಇಲಿ ಹೆಗ್ಗಣ ಬೆಕ್ಕು ಏನಾದರೂ ಓಡಿದರೆ ಶಬ್ದ ಆಗುತ್ತೆ"

"ಹಾಗಲ್ಲ ರಾತ್ರಿಗೆ ಮಧ್ಯಾಹ್ನಕ್ಕೆ ಠಕ್! ಠಕ್! ಚಟಕ್ ಹೀಗೆಲ್ಲ ಶಬ್ದ ಆಗುತ್ತಂತೆ"

"ಆಗಬಹುದು. ಮನೆ ಬಹಳ ಹಳೇದಾಗಿಲ್ಲ; ಹಂಚು ಚಾವಣಿಯ ಮನೆ; ಬಿಸಿಲು ಚೆನ್ನಾಗಿ ಕಾದಾಗ ರಾತ್ರೆ ತಣ್ಣಗಾದಾಗ ನೂರಾರು ಕೀಲು ಸಂದುಗಳ ಸಾವಿರಾರು ಹಂಚುಗಳ ಬಿಗಿತವಿರುವ ಮನೆಯಲ್ಲಿ ಶಬ್ದವಾಗುವುದು ಆಶ್ಚರ್ಯವೆ?"

"ಕಿಟಕಿ ಬಾಗಿಲು, ಗುದ್ದಿದಂತಾಗುತ್ತದೆಯಂತೆ"

"ಬಿಗಿಯಾಗಿ ಅಗಳಿಹಾಕಿದರೆ ಕಿಟಕಿ ಬಾಗಿಲುಗಳ ಅವಸ್ಥೆಯೇ ಹಾಗೆ! ಅದಿರಲಿ! ನಿನಗೆ ಇದೆಲ್ಲಾ ಹೇಳಿದವರ್‍ಯಾರು?"

"ಆಚೆ ಮನೆಯ ಕೆಲಸದವಳು ಆಗ ಬಂದಿದ್ದಳು. ಅಲ್ಲದೆ ಆ ಮನೆಯವರ ಹೆಂಡತಿ ನಮ್ಮನ್ನು ನೋಡಲಿಕ್ಕೆಂದು ಬಂದರು. ಆಗ ಮಾತಾಡುತ್ತ ಹಿಂದೆ ಈ ಮನೆಯಲ್ಲಿದ್ದವರ ಸಂಗತಿ ಬಂತು. ಯಾರೂ ಒಂದೆರಡು ತಿಂಗಳಮೇಲೆ ನಿಂತಿದ್ದಿಲ್ಲವಂತೆ ಇಲ್ಲಿ,

"ಅವರೆಲ್ಲ ಅಂಜುಬುರುಕರು! ಅಜ್ಞಾನಿಗಳು! ಇಲಿಯೋಡಿದರೆ ಹುಲಿಯೋಡಿತೆಂದು ಬಣ್ಣ ಕೊಟ್ಟವರು!"

"ಹಾಗೇ ನಾನೂ ಹೇಳಿದೆ. ಆದರೆ ನಡುರಾತ್ರೆ ಪಕ್ಕದ ಹಲಸಿನಮರದಿಂದ ಹೊಯಿಗೆ ಉದುರುವುದಂತೆ! ಮನೆ ಸುತ್ತೂ ಗಗ್ಗರಗೆಜ್ಜೆ ಕಟ್ಟಿಕೊಂಡು ಭೂತ ತಿರುಗುತ್ತದಂತೆ, ಬಾಗಿಲಸರಪಳಿ ಅಲುಗಿಸುತ್ತದಂತೆ ಒಂದೊಂದು ಸಲ ಬಾವಿಗೆ ಡುಳುಂ ಎಂದು ಹಾರುತ್ತದಂತೆ. ಹೀಗೆಲ್ಲ ಹಿಂದಿನವರು ಹೇಳಿಹೇಳಿ ಮನೆಬಿಟ್ಟು ಹೋಗಿದ್ದಾರಂತೆ."

"ಆ ಅಂತೆ ಕಂತೆ ನಮಗೆ ಬೇಡ. ಅವರೆಲ್ಲ ಹುಚ್ಚರು. ಸುತ್ತಮುತ್ತಲಿನವರು ಹೇಳಿದ್ದನ್ನು ಕೇಳಿ ಅದನ್ನೇ ಕನಸು ಕಂಡಿರಬೇಕವರು."

"ಏನೇ ಇರಲಿ, ನಾವಿದನ್ನು ಕ್ರಯಕ್ಕೆ ತೆಗೆದುಕೊಳ್ಳಬೇಕಾದರೆ ಆರು ತಿಂಗಳಾದರೂ ಇದರಲ್ಲಿದ್ದು ನೋಡಬೇಕು. ಅವಸರಮಾತ್ರ ಮಾಡಬೇಡಿ ಇದರಲ್ಲಿ"

"ಆಗಲಿ, ಹಾಗೇ ಮಾಡೋಣ ವಂತೆ ಆದರೆ ನೀನೂ ಮಕ್ಕಳೂ ಇಷ್ಟು ಪುಕ್ಕರಾದುದು ಆಶ್ಚರ್ಯ! ಪೋಲಿಸ್ ಅಧಿಕಾರಿಯಾಗಿದ್ದವರ ಬಳಿಗೆ ಭೂತ ಬರುವದುಂಟೆ? ಅವರೇ ದೊಡ್ಡಭೂತ! ತಿಳಿಯಿತೇ

"ಸರಿ, ಆದರೆ ನೀವು ಮಾತ್ರ ಕೆಲವು ದಿನಗಳ ವರೇಗೆ ಎಲ್ಲಿಗೂ ಹೋಗಬಾರದು"

"ನಿಮ್ಮ ಈ ಹೆದರಿಕೆಯು ಹೋಗುವತನಕ ಸಾಯಂಕಾಲ 6 ಘಂಟೆಗೇ ನಾನು ಮನೆಯಲ್ಲಿದ್ದೇನೆ. ಕಮಲಾ,ರಮಾ ಇದಕ್ಕೇನೇ ಕೋಣೆಯೊಳಗೆ ಹೋಗಿ ದೀಪಹಚ್ಚಲಿಕ್ಕೆ ಹೆದರಿದುದು? ಕೋಣೆಯ ಕತ್ತಲಲ್ಲಿ ಭೂತವಿದೆಯೇನೇ? ಭೀತನ ಹಿಂದೆ ಭೂತ! ಯಾರ ಹೃದಯದಲ್ಲಿ ಕತ್ತಲೆಯಿದೆಯೋ ಅಲ್ಲಿದೆ ಭೂತ! ಭೂತನಲಿಯುವುದು ಅಜ್ಞಾನ ಸಾಗರದಲ್ಲಿ! ಇಲ್ಲಿಗೇಕೆ ಬರುತ್ತದೆ? ಮೇಲಾಗಿ, ರಿಟಾಯರ್ಡ್ ಪೋಲೀಸು ಇನ್ಸ್‌ಪೆಕ್ಟರನನ್ನು ಕಂಡರೆ ಭೂತತಾನೇ ರಿಟಾಯರ್ ಆಗುತ್ತೆ! ಈ ಮನೆಸೂತ್ರಕ್ಕೆ ಬರಲಾರದು ಅದು!"

"ಪಪ್ಪಾ, ಭೂತಾಂದ್ರೆ ಹೇಗಿರುತ್ತಪ್ಪ?" ಎಂದನು ಸಣ್ಣ ಹುಡುಗನೊಬ್ಬ

ಕಳ್ಳನಾಯಿಯನ್ನು ಕಂಡಿದ್ದೀಯಲ್ಲಾ? ನಮ್ಮನ್ನು ಕಂಡರೆ ಬಾಲ ಅಡಿಗಿಟ್ಟುಕೊಂಡು ಕಂಪೌಂಡಿಂದ ಓಡಿಹೋಗುತ್ತೆ ನೋಡು! ಅದಕ್ಕೇ ಭೂತಾಂತಾರೆ ಇಲ್ಲಿಯವರು!"

ಆದರೆ ಈ ಭೂತದ ಸಮಸ್ಯೆಯು ವಿಠಲರಾಯರು ಯೋಚಿಸಿದಷ್ಟು ಸುಲಭವಿದ್ದಿಲ್ಲ ಅಂದುಸುಮಾರು ಅರ್ಧರಾತ್ರಿಯ ಸಮಯ ಬಾಗಿಲಿಗೋ ಮಾಡಿಗೋ ಏನೋ ಬಿದ್ದಂತಾಗಿ ರಾಯರಿಗೆ ಎಚ್ಚರವಾಯಿತು. ಆಲೈಸಿದರು. ತಾನು ಮಲಗಿದ್ದ ಕೊಠಡಿಯ ಬಳಿ ಇದ್ದ ಹಲಸಿನ ಮರದಿಂದ ದರದರನೆ ಹೊಯಿಗೆ ಮಳೆಗರೆಯಿತು. ಅನಂತರ ಎಲ್ಲ ನಿಶಬ್ದ ಇದೇನು ಪಿಕಿಲಾಟ ಎಂದು ರಾಯರು ಯೋಚಿಸುತ್ತಿದ್ದರು. ಅಂತೂ ಶಾಂತಿ ನಿದ್ದೆಯಲ್ಲಿದ್ದುದು ಚೆನ್ನಾಯಿತೆಂದು ಸಮಾಧಾನ ಗೊಂಡರು. ಆದರೆ "ನೋಡಿದಿರಾ ಹೊಯಿಗೆ ಬಿದ್ದುದು?" ಎಂದಳು. ಆತನಕ ಗಾಭರಿಯಿಂದ ಮೌನವಾಗಿದ್ದ ಶಾಂತಿ. ಮರುದಿನ ರಾಯರಿಗೂ ಅವರ ಪತ್ನಿಗೂ ಈ ವಿಷಯವಾಗಿ ಬಹಳ ಚರ್ಚೆ ನಡೆಯಿತು. ರಾಯರು ಇದನ್ನು ಶೋಧನೆ ಮಾಡುತ್ತೇನೆಂದರು. ಎಂತೆಂತಹ ಪತ್ತೆ ಮಾಡಿ ಕೀರ್ತಿಗೊಂಡಿದ್ದ ತನಗೆ ಈ ಭೂತವನ್ನು ಹಿಡಿಯಲಿಕ್ಕಾಗದೆ? ಎಂದೇ ಅವರವಾದ. ಆದರೆ ಶಾಂತಿಯು ಮಾತ್ರಕಾಡಿಬೇಡಿ ಕಣ್ಣೀರಿಟ್ಟು ರಾತ್ರೆ ಹೊರಗೆ ಹೋಗ ಕೂಡದೆಂದು ಆಣೆ ಹಾಕಿದಳು. "ನಿಮಗಷ್ಟುಧೈರ್ಯ ವಿದ್ದರೆ ಇನ್ನೂ ಕೆಲವುದಿನ ವಾಸವಾಗಿದ್ದು ನೋಡೋಣ. ಇದರ ಉಪಟಳ ಹೆಚ್ಚಿದರೆ ಮನೆಬಿಟ್ಟು ಹೋಗಿಬಿಡೋಣ ಬಾಡಿಗೆಕೊಟ್ಟರೆ ಬೇರೆಮನೆ ಸಿಗುವುದಿಲ್ಲವೆ? ಶೋಧನೆ ಗೀದನೆಯ ಕೆಲಸವನ್ನೆಲ್ಲ ಮನೆಯಧನಿಯೇ ನೋಡಿಕೊಳ್ಳಲಿ! ನೀವು ಮಾತ್ರ ರಾತ್ರಿ ಎಷ್ಟಕ್ಕೂ ಹೊರಗೆಹೊಗಕೂಡದು." ಎಂದು ಶಾಂತಿಯ ತೀರ್ಮಾನವಾಯಿತು. ಈ ತೀರ್ಮಾನವು ಶಾಂತಿಯಿಂದ ಮನೆಗೆಲಸದವಳಿಗೆ ತಿಳಿಯಿತೆಂದಮೇಲೆ ಅದೇನೂ ಗುಟ್ಟಿನದ್ದಲ್ಲವೆನ್ನಿ ಅಂತೆಯೇ ದಿನದಿನದ ಸುದ್ದಿ ಅವಳಿಂದ 'ಬ್ರೊಡ್‌ಕಾಸ್ಟ್' ಆಗಿಹಬ್ಬುತಿತ್ತು ಆ ಸುದ್ದಿಗಳೇನೆಂಬಿರಾ! ಸಂಕ್ಷಿಪ್ತವಾಗಿ ಹೇಳುವುದಾದರೆ, ಮರುದಿನ ರಾತ್ರೆ ಬಾವಿಯಲ್ಲಿ 'ಡುಳುಂ' ಎಂದು ಶಬ್ದ! ಮೂರನೆಯದಿನ ಮನೆಯ ಸುತ್ತು ಯಾರೋ ನಡೆದಂತಾಗಿ ಎದುರಿನ ಬಾಗಿಲಸರಪಣಿ ಅಲುಗಿಸಿದ ಸದ್ದು! ನಾಲ್ಕನೆಯ ದಿನ ಗಗ್ಗರಗೆಜ್ಜೆ ಕಟ್ಟಿಕೊಂಡು ಮನೆಗೊಂದು ಸುತ್ತುಬಂದು ಬಾವಿಗೆ ಹಾರಿದಂತೆ ಐದನೆ ದಿನ ಮಧ್ಯಾಹ್ನದ ಮೇಲೆ ರಾಯರು ತನ್ನ ಪತ್ತೆದಾರಿಯ ಬುದ್ಧಿಯನ್ನೆಲ್ಲ ಉಪಯೋಗಿಸಿ ಈ ಸಮಸ್ಯೆಯನ್ನು ಬಿಡಿಸಲಿಕ್ಕೆ ಕುಳಿತಿದ್ದರು. ಅಂದು ಶಾಂತಿಯ ಮಕ್ಕಳು ಅವಳ ಅಣ್ಣನ ಮನೆಗೆ ಹೋಗಿದ್ದರು. ಬರುವುದು ಮರುದಿನ. ಆದರೆ ಅಂದು ರಾತ್ರೆ ತಾನು ಆಳುಗಳನ್ನಿಟ್ಟುಕೊಳ್ಳುತ್ತೇನೆ ಎಂದು ಶಾಂತಿಯನ್ನು ಶಾಂತಪಡಿಸಿ ರಾಯರು ಕಳುಹಿಸಿದರು. ನೆರೆಮನೆಯ ಕೊಗ್ಗಣ್ಣಕಮ್ತಿಯು ಬೀದಿಯಲ್ಲಿ ಹೋಗುತ್ತಾ ರಾಯರೊಬ್ಬರೇ ಕುಳಿತಿರುವುದನ್ನು ಕಂಡು ಒಳಗೆಬಂದ ರಾಯರಿಗೂ ಅವನೊಡನೆ ಮಾತನಾಡಬೇಕೆಂದಿತ್ತು.

"ಬನ್ನಿ, ನಿಮ್ಮೊಡನೆ ಒಂದುವಿಚಾರ ಕೇಳಬೇಕೆಂದಿತ್ತು ನೀವೇ ಬಂದುಬಿಟ್ಟಿರಿ! ಚನ್ನಾಯಿತು. ಈ ಮನೆಯ ಭೂತದ ಕಾಟದ ವಿಷಯ ನಿಮಗೇನಾದರೂ ಗೊತ್ತಿದೆಯೆ?"

"ಅಯ್ಯೋ, ನಿಮ್ಮ ಕಿವಿಗೂ ಅದುಬಿದ್ದಿದೆಯೇ? ನಾನು ನಮ್ಮವಳ ಹತ್ತಿರ ಜಾಗ್ರತೆ ಹೇಳಿದ್ದೆ— ಎಲ್ಲಾದರೂ ಬಾಯಿತಪ್ಪಿಯಾದರೂ ಬಾಯಿ ಬಿಟ್ಟುಬಿಡಬೇಡಾಂತ! ಆದರೆ ಅವೆಲ್ಲಾ ಚಿಲ್ಲರೆ ಜನರಮಾತು ಇತ್ತೀಚೆಗೆ ಸುಮಾರು ಒಂದು ಒಂದೂವರೆ ವರ್ಷದಿಂದ ನಾಲ್ಕಾರು ಸಂಸಾರಗಳು ಇದಕ್ಕೆ ಬಂದುವು; ಬಿಟ್ಟುಹೋದುವು! ಅಜ್ಞಾನಿಗಳು! ಅವರ ಹೇಳಿಕೆ ನಂಬತಕ್ಕದ್ದಲ್ಲ ಸ್ವಾಮಿ, ಬರೇ ಭ್ರಮೆಯಾಗಲಿಕ್ಕೂ ಸಾಕು! ನಾನು ನಂಬ ಬೇಕಾದರೆ ತಮ್ಮಂಥವರ ಬಾಯಿಂದ ಏನಾದರೂ ಬರಬೇಕು. ತಮಗೇನಾದರೂ ತೋರಿ ಬಂತೇಹೇಳಿ."

"ಬಾರದೆ ಕೇಳುತ್ತೇನೆಯೆ? ಏನೇನು ಸುದ್ದಿಯುಂಟೋ ಅದೆಲ್ಲ ನಡೆಯುತ್ತಿಲ್ಲ! ನನಗದರಲ್ಲಿ ನಂಬಿಕೆ ಇಲ್ಲದಿದ್ದರೂ ಈಗ ನಂಬಬೇಕಾಗಿದೆ.

"ತಾವು ಹೇಳಿದಮೇಲೆ ನನಗಿನ್ನು ಸಂಶಯವಿಲ್ಲ ಭೂತಗಳ ರೀತಿಯೇವಿಚಿತ್ರ! ಅದರಲ್ಲಿ ನಮ್ಮ ತರ್ಕದ ಬೇಳೆ ಬೇಯುವುದಿಲ್ಲ. ಅದನ್ನು ಪರೀಕ್ಷೆಮಾಡಹೋಗುವುದೂ ವಿಷ ಪರೀಕ್ಷಿಸುವುದೂ ಒಂದೇ. ಒಟ್ಟಾರೆ ಹಾಗಾಗುತ್ತದೆಂದಾದಮೇಲೆ ತಾವು ಜಾಗ್ರತೆಯಿಂದಿರುವುದೊಳ್ಳೆತು! ಏನೇ ಆಗಲಿ, ತಾವುಬಾಗಿಲು ತೆರೆದು ಹೊರಗೆ ಬರಬೇಡಿರಿ. ಈ ಸುದ್ದಿಕೇಳಿದಂದಿ

ನಿಂದ ನಾವ್ಯಾರೂ ರಾತ್ರಿ ಹೊರಗೆ ಬರುವುದೇ ಇಲ್ಲ. ಆದರೆ ಹಿಂದಿನವರಂತೆ ತಾವು ಇಷ್ಟು ಬೇಗನೇ ಮನೆ ಬಿಡಬಾರದು. ಮಕ್ಕಳು ಮರಿಗಳಿಗೇನಾದರೂ ಕೆಡಕಿಲ್ಲವಷ್ಟೆ? ಹಾಗೇನಾದರೂ ಆದರೆ ಆಮೇಲೆ ನಿಲ್ಲಬಾರದು. ಒಟ್ಟಿನಮೇಲೆ, ಈ ಭೂತದ ಕಾಟದಿಂದ ಈ ಮನೆ ಮಕ್ಕಳು ಮರಿಗಳಿಗೆ ಜನಜಾನುವಾರುಗಳಿಗೆ ಆಗುವುದಿಲ್ಲವೆಂದು ಹಿಂದಿನವರು ಹೇಳುತ್ತಿದ್ದರು. ಆದರೆ ನಾನಿಂದಿನವರೆಗೆ ನಂಬಿದ್ದಿಲ್ಲ. ಈಗ ತಮ್ಮಂತಹರ ಬಾಯಿಂದ ಬಂದಮೇಲೆ ನನಗೂ ಪುಕುಪುಕು ಹಿಡಿದಿದೆ. ನನ್ನ ದುರದೃಷ್ಟವೆನ್ನಬೇಕು.

"ನಿಮ್ಮ ದುರಾದೃಷ್ಟ ಇದರಲ್ಲಿ ಎಲ್ಲಿಂದ ಬಂತು? ನಿಮ್ಮ ಮನೆಗೂ ಬರುವುದೆಂದೊ"

"ಇಷ್ಟರವರೆಗೆ ಹಾಗೇನೂ ಇಲ್ಲ. ಆದರೆ ಈ ಮನೆ ನನಗೆ ಒಂದೂವರೆ ಸಾವಿರ ರೂಪಾಯಿಗೆ ಈಡಾಗಿತ್ತು. ಇದನ್ನು ಯಾರಿಗಾದರೂ ಮಾರಿ ನನ್ನ ಸಾಲ ತೀರ್ಮಾನ ಮಾಡಬೇಕೆಂದು ಇದರ ಯಜಮಾನನ ಯೋಚನೆಯಿತ್ತು. ಯಾರಾದರೂ ಐದಾರು ಸಾವಿರ ರೂಪಾಯಿ ಕೊಡುವಂತಹ ಮನೆ ಇದು! ಆದರೆ ಸಿಕ್ಕಾಬಟ್ಟೆ ಜನರಿಗೆ ಬಾಡಿಗೆಗೆ ಕೊಟ್ಟು ಭೂತ ಸಂಚಾರದ ಮನೆಯೆಂಬ ಹೆಸರು ಹಾಕಿಸಿಕೊಂಡ! ಮಾರಾಟವಾಗಲಿಲ್ಲ. ಆದರೆ ನನಗೆ ದುಡ್ಡು ಬೇಕಿತ್ತು. ದಾವಾ ಹಾಕಿ ಡಿಕ್ರಿಮಾಡಿಕೊಂಡೆ. ಈಗ ಅದು ಸುಮಾರು ಎರಡೂವರೆ ಸಾವಿರ ಆಗಬಹುದು. ಏಲಂಗೆ ಇಡಿಸಿದ್ದೇನೆ ಇದನ್ನು! ನೀವು ಬಂದದ್ದು ಕೇಳಿ ನನಗೆ ತುಂಬಾ ಸಂತೋಷ ಆಗಿತ್ತು! ನಿಮ್ಮಂತಹರ ಬಾಯಿಂದ ಈ ಸುದ್ದಿಯು ಸುಳ್ಳೆಂದಾಗ ನೀವಾಗಲೀ ಬೇರೆ ಯವರಾಗಲೀ ಕ್ರಯಕ್ಕೆ ಪಡಕೊಂಡು ನನ್ನ ದುಡ್ಡು ನನಗೆ ಬಂದೀತೆಂದೊಂದು ಆಶೆಯಿತ್ತು! ನೀವೂ ಹೀಗೆ ಹೇಳಿದಮೇಲೆ, ಇದೆಲ್ಲಾದರೂ ನನ್ನ ತಲೆಯ ಮೇಲೇ ಬಂದು ಬಿಡುತ್ತೋ ಎಂದು ಈಗ ಭಯವಾಗತೊಡಗಿದೆ! ಹಾಗೇನಾದರೂ ಬಂದುಬಿಟ್ಟರೆ ನಾನು ನನ್ನ ಮಕ್ಕಳು ಮರಿಗಳನ್ನು ಕಟ್ಟಿಕೊಂಡು ಇದರಲ್ಲಿ ಹೇಗೆ ಇರಲಿ! ಯಾವ ಮಂತ್ರವಾದಿಯ ಕಾಲಿಗೆಬೀಳಬೇಕೋ! ಏನು ಖರ್ಚೋ! ಆ ಪರಮಾತ್ಮನೇ ಬಲ್ಲ!

"ಹಾಗಾದರೆ ನೀವಿರುವ ಆ ಮನೆ ನಿಮ್ಮ ಸ್ವಂತದ್ದಲ್ಲವೆ? "

"ಬಾಡಿಗೆದ್ದು ಸ್ವಾಮಿ, ಈ ಸಾಲದ ದುಡ್ಡು ಬರಮಾಡಿಕೊಂಡು ಎಲ್ಲಾದರೂ ಚಿಕ್ಕದೊಂದು ಗುಡಿಕಟ್ಟಿಕೊಳ್ಳಬೇಕೆಂದಿದ್ದೆ. ಬಾಡಿಗೆ ಕೊಟ್ಟೂ ಕೊಟ್ಟೂ ಸಾಕಾಯಿತು! ಆದರೆ ನನ್ನ ಹಣೆಯಲ್ಲಿ ಏನು ಬರೆದಿದೆಯೋ! ಆ ದೇವರಿಗೇ ಗೊತ್ತು! ಯಾರ ಸಂಗವಾದರೂ ಬೇಕು–ಭೂತದ ವ್ಯಾಪಾರ ಬೇಡ! ಆದುದರಿಂದ ತಮಗೊಂದು ಮಾತು ಹೇಳುತ್ತೇನೆ. ಆ 'ಅಜನೆ' ಆದಾಗ ಹೊರಗೆ ಮಾತ್ರ ಬರಬೇಡಿ! ಎಂಥ ಭಯಂಕರ ರೂಪ ಕಾಣಿಸುತ್ತೋ! ಎಂಥ 'ಶಾರ್ಕಣೆ' ಆಗಿಬಿಡುತ್ತೋ! ನಮಗೆಷ್ಟು ಎದೆ ಧೈರ್ಯವಿದ್ದರೂ ಆ ಸಮಯಕ್ಕೆ ನೀರಾಗಿ ಹೋಗಿ ಬಿಡಬಹುದು! ಅವಕ್ಕೆ ಈ ಸುದ್ದಿ ಕೇಳಿದಂದಿನಿಂದ ನಾನದನ್ನು ನಂಬದಿದ್ದರೂ ಒಂದೇ ಒಂದು ರಾತ್ರಿ ಹೊರಕ್ಕೆ ಬಂದಿಲ್ಲ!"

"ಹಾಗೆಲ್ಲ ಹೊರಗೆ ಬರಲಿಕ್ಕೆ ನನಗೇನಾದರೂ ಜೀವಭಾರವಾಗಿಲ್ಲ! ಇಲ್ಲವೆ, ನಾನೇನಾದರೂ ಸಂಸಾರಬಿಟ್ಟು ಬೈರಾಗಿಯೇ ಅಲ್ಲವೆನ್ನಿ! ನಮ್ಮ ಪ್ರಾಣಕ್ಕೂ ಈ ಮನೆಗೂ ಗಂಟಿಲ್ಲ. ಇನ್ನೂ ಸ್ವಲ್ಪ ದಿವಸ ನೋಡುತ್ತೇನೆ ಹೀಗೆ ಹೆಚ್ಚುಗುತ್ತಾ ಬಂದರೆ ಬಿಟ್ಟುಹೋಗಿ ಬಿಡುವುದು! ದುಡ್ಡುಕೊಟ್ಟು ಹೊಳೆ ಈಸಿ ಮೊಸಳೆ ಬಾಯಿಗೆ ತುತ್ತಾಗುವ ಹುಚ್ಚುತನ ನನ್ನಲಿಲ್ಲ! ಆ ಎದೆಗಾರಿಕೆಗೆ ಹೋಗುವವನೂ ನಾನಲ್ಲ!"

"ಚೆನ್ನವಂಥಾ ಮಾತು! ಹ್ಯಾಕೋರ್ಟು ಇನ್ಸ್ಪೆಕ್ಟರ್ ಶ್ರೀರ್ಪಿನ ಹಾಗೆ ತಮ್ಮ ಮಾತು! ಸುಮ್ಮನೆ ಬಹುಮಾನಪಟ್ಟ ಇನ್ಸ್ಪೆಕ್ಟರಿಕೆ ಸಿಕ್ಕೀತೆ? ಆಗಾಗ ಬರುತ್ತೇನೆ ಸ್ವಾಮಿ, ಸಾವಧಾನವಾಗಿ ವಿಚಾರಮಾಡೋಣ, ಅಂತೂ ಅವಸರ ಮಾಡಬೇಡಿ; ಅಪ್ಪಣೆಯಾಗಲಿ"

x x x x

ಅಂದು ಕಗ್ಗತ್ತಲೆ ರಾತ್ರೆ ರಾಯರೊಬ್ಬರೆ ಪೋರ್ಟಿಕೋದಲ್ಲಿ ಕೂತು ಓದುತ್ತಿದ್ದರು. ಹತ್ತೂವರೆ ಗಂಟೆ ಹೊಡೆಯಿತು. ಆಗ ಅವರಿಗೇನು ಹುಚ್ಚು ಬುದ್ಧಿ ಬಂತೋ! ಆ ಭೂತವನ್ನು ನೋಡಿಬಿಡಬೇಕೆಂದು ಭಲ ತೊಟ್ಟು ಎದೆಗಟ್ಟಿ ಮಾಡಿಕೊಂಡರು! ಕೈಯಲ್ಲಿ ಕಪ್ಪು ಸವರಿದ ಬಲಿಗೆಯ ದೊಣ್ಣೆ ಆ ದೊಣ್ಣೆ ಬೀಸಿ ಎಷ್ಟೋ ಕಳ್ಳರ ಕೈಯ ಕತ್ತಿಗಳನ್ನು ಕೆಳಗುರುಳಿಸಿದ ಖ್ಯಾತಿ ಅವರಿಗಿತ್ತು. ಅದನ್ನು ಹಿಡಕೊಂಡು ಒಳಗಿನ ಬಾಗಿಲುಗಳನ್ನು ಹಾಕುತ್ತಾ ಬಂದರು. ದೀಪಗಳನ್ನು ನಂದಿಸಿದರು. ಎದುರಿನ ಬಾಗಿಲಿಗೆ ಬೀಗ ತಿರುಗಿಸಿದರು. ತಾನು ಕಪ್ಪು ಬಟ್ಟೆಹೊದ್ದು ಬಾಗಿಲ ಎದುರು ಪೋರ್ಟಿಕೋದ ಕಂಬಕ್ಕೆ ಆತುನಿಂತರು. ಹೊದ್ದ ಕಪ್ಪು ಬಟ್ಟೆಯಿಂದಾಗಿ ಅವರ ಮೈಯೇ ಅವರಿಗೆ ಕಾಣುತ್ತಿದ್ದಿಲ್ಲ. ಆವರೂ ಕತ್ತಲೂ ಅಷ್ಟು ಚೆನ್ನಾಗಿ ಒಂದುಗೂಡಿ ಹೋಗಿದ್ದವು!

ಸುಮಾರು 12 ಗಂಟೆಯ ಸಮಯ. ಭೂತ ಬರುವ ಹೊತ್ತು. ಬಂತೇ ಬಂತು! ಮನೆಯ ಹಿಂಬದಿಯಲ್ಲಿ ಗಗ್ಗರ ಗೆಜ್ಜೆಯ ಧ್ವನಿ ಕೇಳಿಸಿತು! ಸದ್ದು ಮುಂದೆ ಮುಂದೆ ಬಂತು! ಕಿಟಕಿಗಳನ್ನು ಗುದ್ದಿದಂತಾಯ್ತು ಹಲಸಿನ ಮರದಿಂದ ಹೊಯಿಗೆ ಉದುರಿತು ಗಗ್ಗರ ಗೆಜ್ಜೆಯ ಧನಿ ಮತ್ತೂ ಹತ್ತಿರ ಬಂತು! ಇನ್ನೂ ಹತ್ತಿರ!. ಪೋರ್ಟಿಕೋದ ಮೇಲೆ! ಬಾಗಿಲ ಸರಪಳಿಯೂ ಗಗ್ಗರಗೆಜ್ಜೆಯೂ ಒಟ್ಟಿಗೆ 'ಘುಲ್ ಘುಲ್ ಘುಲು' ಎಂದಿತು ಮೂರು ಬಾರಿ! ರಾಯರೆಲ್ಲಿ? ನಿದ್ದೆ ಬಿದ್ದಿದ್ದರೆ? ಮೂರ್ಛೆ ಹೋಗಿದ್ದರೆ? ಇಲ್ಲ! ಆಲಿಸಿ, ಚಟ್! ಫ್ಯಾಲ್ ಅದೇನು? ರಾಯರು ದೊಣ್ಣೆಯನ್ನು ಬೀಸಿ ಸರಪಳಿಯ ಕುಲುಕುವ ಕಡೆಗೆ ಗುರಿಯಿಟ್ಟು ಹೊಡೆದಿದ್ದರು. ಅದೇ ಚಟ್! ಭೂತದ ಕೈಯಲ್ಲಿದ್ದ ಗಗ್ಗರ ಗೆಜ್ಜೆಯು ಫ್ಯಾಲ್ ಎಂದು ಕೆಳಗೆ ಬಿದ್ದಿರಬೇಕು! ಭೂತವು ಓಡುವ ಸದ್ದನ್ನು ರಾಯರು ಕೇಳಿದರು! ಬಂದ ಹಾದಿಯಾಗಿಯೇ ಓಡಿತು ಭೂತ! ರಾಯರು ಹಿಂಬಾಲಿಸಿಂಪೋಡಿದರು. ಆದರೆ ಅವರು ಮನೆಯ ಹಿಂದೆ ಹೋಗುವಷ್ಟರಲ್ಲಿ ಅದೆಲ್ಲೊ ಕತ್ತಲೊಳಗೆ ಮಾಯವಾಗಿತ್ತು! ಅಲ್ಲೇ ನಿಂತ್ಕೆ ಆಲಿಸಿದರು. ಅದು ಪಾಗಾರಹತ್ತಿ ಕೊಗ್ಗ ಕಮ್ತಿರ ಹಿತ್ತಲಿಗೆ ಹಾರಿದ ಸದ್ದು ಕೇಳಿಸಿತು!

x x x x

ಎಂಟು ದಿನ ಕೊಗ್ಗ ಕಮ್ತಿರು ಮನೆಯಿಂದ ಹೊರಗೆಬಂದಿದ್ದಿಲ್ಲ. ಅವರ ಎರಡು ಮುಂಗೈಗಂಟುಗಳೂ (Wrists) ಆಷ್ಟು ಬೀಗಿಕೊಂಡಿದ್ದವಂತೆ! ಏನೇನೋ ಲೇಪ ಹಾಕಿ ಕೊನೆಗದು ಗುಣವಾಯಿತೆನ್ನಿ. ಇತ್ತ ಈ ಮನೆಗೆ ಭೂತದಕಾಟವೂ ತಪ್ಪಿತೆನ್ನಿ! ಮೊನ್ನೆರಾಯರೇ ಅದನ್ನು ಐದುಸಾವಿರ ರೂಪಾಯಿ ಕೊಟ್ಟು ಕ್ರಯಕ್ಕೆ ಪಡಕೊಂಡರು ಕಮ್ತಿರಿಗೆ ಇಂದು ಹಣವನ್ನು ತೆತ್ತು ರಶೀದಿಪಡೆದಾಗ "ಅಂತೂ ಅದುನಿಮ್ಮ ತಲೆಯ ಮೇಲೆ ಬೀಳದಿದ್ದುದು ನಿಮ್ಮ ಪುಣ್ಯವೋ ನಮ್ಮ ಭಾಗ್ಯವೋ ಆ ಪರಮಾತ್ಮನಿಗೇ ಗೊತ್ತು! ಎಂದರು, "ಅಂತೂ ನನ್ನ ತಲೆಯಿಂದ ತಪ್ಪಿತಲ್ಲ! ಎನ್ನುತ್ತ ಕೊಗ್ಗ ಕಮ್ತಿಯು ಅಲ್ಲಿಂದೆದ್ದು ಹೋದ 'ಅದು' ಎಂದರೆ ಯಾವುದು? ಆ ಮನೆಯೋ? ರಾಯರ ದೊಣ್ಣೆಯೋ?

"ವಿಚಾರ ಪ್ರಿಯ"

ಭಾ ಷಾಂ ತ ರ ಕಾ ರ ರು
ದೊರೆಯದೆ ಪೇಚಾಡುವಿರೇಕೆ?

ಇನ್ಶೂರೆನ್ಸ್ ಕಂಪೆನಿ, ಬ್ಯಾಂಕು ಮೊದಲಾದುವುಗಳಿಗೆ ಸಂಬಂಧಪಟ್ಟ ಮತ್ತು ಇತರ ಎಲ್ಲಾ ತರದ ಇಂಗ್ಲಿಷ್ ಕನ್ನಡ ಭಾಷಾಂತರಗಳನ್ನು ಉತ್ತಮ ರೀತಿಯಿಂದ ಮಾಡಿಕೊಡಲಾಗುವುದು ಹೆಚ್ಚಿನ ವಿವರಕ್ಕೆ ಈ ಕೆಳಗಿನ ವಿಳಾಸದೊಡನೆ ಪತ್ರ ವ್ಯವಹಾರ ಮಾಡಬೇಕು

'ಟ್ರಾನ್ಸ್‌ಲೇಟರ್,'
C/o 'ಕಿರಿಯರ ಪ್ರಪಂಚ,' ಉಡುಪಿ

ಬಾಲವಾಙ್ಮಯದ
ಆವಶ್ಯಕತೆ ಮತ್ತು ನಿರ್ಮಾಣದ
ವಿಷಯಕವಾದ ಪ್ರಬಂಧ
ಬಾ ಲ ವಾ ಙ್ಮ ಯ
ಬೆಲೆ ಮೂರಾಣೆ

ಉಪಾಧ್ಯಾಯರ ಪ್ರಕಟನ ಸಮಿತಿ,
ಉ ಡು ಪಿ

ನವಯುಗಕ್ಕೆ ಇಂದೆ
ಚಂದಾದಾರರಾಗಿರಿ!

ತಾಳದೇ ಇರತಕ್ಕ ಮೂತ್ರವ್ಯಾಧಿಗಳಿಗೆ
ಆಶ್ಚರ್ಯಕರವಾದ ಔಷಧಿ.

ಡಾ. ಜಸಾನಿಯವರ
ಜಗತ್ಪ್ರಸಿದ್ಧ

"ಗೊನೊಕಿಲರ್"
(ರಿಜಿಸ್ಟರ್ಡ್)

GONO KILLER

ನಕಲಿ ಮದ್ದುಗಳಿಗೆ ಮರುಳಾಗಿ
ಮೋಸ ಹೋಗಬೇಡಿರಿ. ಕೊಂಡು
ಕೊಳ್ಳುವುದಕ್ಕೆ ಮೊದಲು ಕೋಳಿಯ
ಗುರುತನ್ನು ಗಮನಿಸಿರಿ

ಪ್ರಮೇಹ ವ್ಯಾಧಿಗೆ ಸಿದ್ಧೌಷಧ

ಇಂದಿನ ಅಪ್ರತಿಮ ಔಷಧ. ಆಂಗ್ಲೇಯ ಮತ್ತು ಆಯುರ್ವೇದ ಔಷಧಿಗಳಿಂದೂ ಫಲಕಾರಿಯಾಗದೇ ಇನ್‌ಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ, ಒಂದಾವರ್ತಿಯಾದರೂ ಈ ನಮ್ಮ **ಗೋನೋಕಿಲರ್** ಎಂಬ ಔಷಧವನ್ನು ಉಪಯೋಗಿಸಿನೋಡಿರಿ. ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ, ಗೋನೋಕಿಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯದ ಗಾಯ ಬಾತುವಿಕೆ, ಸರ್ವಪ್ರಕಾರದ ಪ್ರಮೇಹ (ಎಷ್ಟೇ ಹಳೆಯ ಯಾ ಯಾವದೇ ಸ್ಥಿತಿಯಲ್ಲಿರಲಿ), ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತುಸ್ರಾವ, ಬಿಳುಪು ಹರಿಯುವದು ಇನ್ನೇ ಮೊದಲಾದ ಯಾವತ್ತು ಗೊನೋಕೋಕಸ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ.

ಬೆಲೆ 60 ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ. 3—0—0 (ಮೂರು) ವಿ. ಪಿ. ಛಾರ್ಜು ಬೇರೆ.

ತಯಾರಿಸುವ ಏಕಮಾತ್ರರು: **ಡಾಕ್ಟರ್ ಡಿ. ಎನ್. ಜಸಾನಿ,** ಗಿರಿಗಾಂವ ಬ್ಯಾಕ್ ರೋಡ್, ಮುಂಬಯಿ 4.

Sole Manufacturer: **Dr. D. N. JASANI,** GIRGAUM BACK ROAD, BOMBAY 4

ದ್ವಿತೀಯ ಸಂಸ್ಕರಣ

ಕಾವ್ಯಸಾಮ್ರಾಜ್ಯ

ವಿಶ್ವಕರ್ನಾಟಕದೊಗಿನ
ಆಧುನಿಕ್ ಕವಿ ಪ್ರಮುಖರ
೪೮ ಸವಿಗವನಗಳ ಸಂಗ್ರಹ

ಕಿರಿಯ ರ

ಬೆಲೆ
ಪಸ್ತ ೧ದಾ೯

ಪ್ರಸಂಚ

'ಆಧುನಿಕ ಕವಿಗಳ ಕವಿತೆಗಳ ಇಂತಹ ಉತ್ತಮ ಸಂಗ್ರಹವನ್ನು ಈ ವರೆಗೆ ಯಾರೂ ಒದಗಿಸಿ ಕೊಟ್ಟಿರುವುದಿಲ್ಲ'. ಎಂಬ ಮನ್ನಣೆಗೆ ಪಾತ್ರವಾಗಿ ಅಲ್ಪಾವಕಾಶದಲ್ಲಿಯೇ ದ್ವಿತೀಯಾವೃತ್ತಿಯನ್ನು ಹೊಂದಿದ ಗ್ರಂಥ! ಬಾಹ್ಯಾಂಗವು ನಯನಮನೋಹರವಾಗಿದೆ. ಅಂತರಂಗವು ಚೇತೋಪಹಾರಿಯಾಗಿದೆ.

ಉಡುಪಿ

ಉತ್ಸಾಹೀ ಏಜಂಟರು ಬೇಕಾಗಿದ್ದಾರೆ.

'ನವಯುಗ'ದ

ಪ್ರತಿನಿಧಿಗಳಿಲ್ಲದ ಕೇಂದ್ರಗಳಲ್ಲಿ ಬಿಡಿಪ್ರತಿಗಳನ್ನು ವಿಕ್ರಯಿಸುವುದಕ್ಕೂ 'ನವಯುಗ'ಕ್ಕೆ ಚಂದಾದಾರರನ್ನು ಸೇರಿಸುವುದಕ್ಕೂ ಜಾಹಿರಾತುಗಳನ್ನು ಸಂಗ್ರಹಿಸುವುದಕ್ಕೂ ಉದಾರ ಶರ್ತಗಳ ಮೇಲೆ ಅನುಭವಶಾಲಿಗಳಾದ

ಕುಶಲ ಏಜಂಟರು ಬೇಕಾಗಿದ್ದಾರೆ.

ಹೆಚ್ಚಿನ ಮಾಹಿತಿ ಬಗ್ಗೆ ಪತ್ರವ್ಯವಹಾರ ಬೆಳೆಯಿಸಿರಿ.

ಮೆನೇಜರ್---'ನವಯುಗ',
ಉಡುಪಿ.



ಗೃಹಕೃತ್ಯಕ್ಕೆ ಬೇಕಾದ ವಿಧವಿಧ ತಾಮ್ರದ ಪಾತ್ರೆಗಳು.

ಗೃಹಸ್ಥರೇ!

ಗೃಹಕೃತ್ಯೋಪಯೋಗದ ಎಲ್ಲಾ ವಿಧದ ತಾಮ್ರ ಹಿತ್ತಾಳೆ, ಜರ್ಮನ್ ಬೆಳ್ಳಿ, ಬೆಳ್ಳಿ ಸಾಮಾನುಗಳು ಎಲ್ಲಿ ಸಿಗುತ್ತವೆ ಬಲ್ಲಿರಾ?

ರಥಬೀದಿಯಲ್ಲಿ ಕಲ್ಮಂಜೆ ವ್ಯಾಸಾಚಾರ್ಯರ ಅಂಗಡಿಯಲ್ಲಿ ಮಾತ್ರವೇ.

ಸ್ವದೇಶಿ ಕೈಗಾರಿಕೆ! ಹದಿನೆಂಟು ವರ್ಷಗಳ ಅನುಭವ!

ಮನೆಯ ಉಪಯೋಗಕ್ಕೂ ಉಡುಗೊರೆ ಕೊಡಲಿಕ್ಕೂ ದಾನಮಾಡಲಿಕ್ಕೂ ಬೇಕಾದ ನಮೂನೆಯ ಸಾಮಾನುಗಳನ್ನು ಮನಮೆಚ್ಚುವ ಮಾದರಿಯಲ್ಲಿ ತಕ್ಕ ಕಾಲದಲ್ಲಿ ನಾಜೂಕಾಗಿ ತಯಾರುಮಾಡಿಸಿಯೂ ಕೊಡಲಾಗುವುದು.

ಹೆಚ್ಚಿನ ವಿವರಗಳಿಗೆ ಸಚಿತ್ರ ಕೆಟಲಾಗಿಗೆ ಬರೆಯಿರಿ.

ಕಲ್ಮಂಜೆ ವ್ಯಾಸಾಚಾರ್ಯ,

ಪಾತ್ರೆ ವ್ಯಾಪಾರಿ, ರಥಬೀದಿ, ಉಡುಪಿ.

ಮಲಯಾಳದ ಸ್ತ್ರೀ

ಸ್ತನೋಸ್ತೇಧಃ

THE MALAYALA STHANO STHEDAH OUSHADHA CO.,
Post-CHALAPURAM. MALABAR.

ರಹಸ್ಯಗಳು

ಇದೀಗ ತಿಳಿದುಬಂದಿದೆ, ಪುರುಷರನ್ನಾವುದು ಆಕರ್ಷಿಸುತ್ತವೆಂಬುದನ್ನು ಸ್ತ್ರೀಯರಿಗೆ ಒಲ್ಲರು. ನೀವು ಪುರುಷನೊಬ್ಬನನ್ನು ಪರೀಕ್ಷಿಸಿ ನೋಡಿದ್ದಲ್ಲಿ, ಅವನ ಕಣ್ಣುಗಳು ಸ್ತ್ರೀಯ ಮುಖದಿಂದ ಕೆಳಗೆ ಸ್ತನಸ್ಥಳಕ್ಕೆ ಚಲಿಸಿ ಕುಚಗಳು ಉನ್ನತವಾಗಿ, ದುಂಡಗೆ ಯೌವನಯುಕ್ತವಾಗಿ ಆಕರ್ಷಕವಾಗಿರುವವೊ ಎಂದು ನೋಡುವವು.

48 ದಿವಸಗಳಲ್ಲಿ ಮನೋಹರ ಕುಚಸ್ಥಲದ ಗ್ಯಾರಂಟಿ, ಇಲ್ಲವಾದರೆ ಹಣ ವಾಪಾಸು.

ಪ್ರಖ್ಯಾತ ಮಲಯಾಳಿ ರಹಸ್ಯ ಸ್ತನಸ್ಥೇಡ:—ಅಸ್ವಸ್ಥ, ಚಿಂತೆ, ವಯಸ್ಸು ಆಗಾಗಿನ ಹೆರಿಗೆ ನಿಮಿತ್ತ ಸ್ತ್ರೀಯರ ಎದೆಯ ಆಕರ್ಷತೆಯು ನಷ್ಟವಾಗಿದ್ದರೆ, ಕುಚಗಳು ಸರಿಯಾಗಿ ಬೆಳೆಯದಿದ್ದರೆ, ಚಪ್ಪಟೆಯಾಗಿದ್ದರೆ, ಬಲವಿಲ್ಲದೆ ತೂಗಾಡಿಕೊಂಡಿದ್ದರೆ, ಬಿದ್ದುಕೊಂಡಿದ್ದರೆ, ಟೊಳ್ಳಾಗಿ ಅಥವಾ ಬಹು ತಗ್ಗಾಗಿದ್ದರೆ, ನರಗಳು ದುರ್ಬಲವಾಗಿದ್ದು ಕುಚಗಳನ್ನು ಸ್ಥಿರವಾಗಿರಿಸಲಾರದಾದರೆ

ದಿ ಮಲಯಾಳ ಔಷಧ ಕಂಪೆನಿ, ಛಲಪುರಮ್ ಇವರು ತಮ್ಮ ಪ್ರಖ್ಯಾತ ಚಿಕಿತ್ಸೆಯಿಂದ ಸಹಾಯಮಾಡುವರು, ಬಿದ್ದುಕೊಂಡಿದ್ದು ವಿರೂಪವಾಗಿ ಚಪ್ಪಟೆಯಾಗಿರುವ ಕುಚಗಳು ಸರಿಯಾಗಿ ಬೆಳೆಸಲ್ಪಡುವುವು, ಟೊಳ್ಳುತನವು ತುಂಬಿ ಬರುವುದು, ಕುಚಗಳು ಮನೋಹರವಾಗಿಯೂ, ಸ್ಥಿರವಾಗಿಯೂ, ದುಂಡಗಾಗಿಯೂ ಮಾಡಲ್ಪಡುವುವು. ಸಡಿಲಾಗಿರುವ ಮಾಂಸವು ಸ್ಥಿರವಾಗುವದು ಮತ್ತು ಕುಚಗಳು ಯೋಗ್ಯವೂ ಮನೋಹರವೂ ಆದ ರೂಪಕ್ಕೆ ತರಲ್ಪಡುವವು. ತಮ್ಮ ಸೌಂದರ್ಯಕ್ಕೆ ಪ್ರಸಿದ್ಧಹೊಂದಿರುವ ಮಲಯಾಳ ದೇಶದ ಸ್ತ್ರೀಯರು ಅನಾದಿಕಾಲದಿಂದ ಜಯಶೀಲವಾಗಿ ತಮ್ಮ ಸೌಂದರ್ಯವನ್ನು ಕಾಪಾಡಿಕೊಂಡು ಬಂದಿರುವ ರಹಸ್ಯಗಳಿವು.

ಸ್ತನಸ್ಥೇಡ ನಂಬ್ರ 20: ಒಳಗೆ ತೆಗೆದುಕೊಳ್ಳುವುದಕ್ಕೆ ನಂಬ್ರ ರೂ. ೩. ನಂಬ್ರ 21. ಹೊರಗಣ ಉಪಯೋಗಕ್ಕೆ ರೂ. ೩. ಧರ್ಮಾರ್ಥ ಕಳುಹಿಸಲ್ಪಡುವ ಕೆಟಲಾಗಿಗೆ ದಯಮಾಡಿ ಬರೆಕೊಳ್ಳಿ.

ದಿ ಮಲಯಾಳ ಔಷಧ ಕಂಪೆನಿ, ಪೋಸ್ಟ್ ಛಲಪುರಮ್, ಮಲಬಾರ್.

ಈ ಕೆಳಗಣವುಗಳಿಗೆ ನಮ್ಮಲ್ಲಿ ಸಿದ್ಧೌಷಧಗಳಿವೆ.

ಋತುವೇದನೆಗಳು, ಸಂತತಿ ನಿರೋಧ, ಧಾತುಪುಷ್ಟಿ, ಲಿಂಗವೃದ್ಧಿ, ಗುಹ್ಯೇಂದ್ರಿಯ ರೋಗಗಳು, ಕ್ಷಯಸಂಹಾರಿ, ವಾತರೋಗಕ್ಕಾಗಿ ಕ್ಷೀರಬಲ.

ಮದ್ರಾಸ್ ಎಸೆಂಬ್ಲಿಗೆ ಅಲ್ಲ ಕೌನ್ಸಿಲಿಗೆ

ನನ್ನ ಉಮೇದುವಾರಿಕೆ

ಕೆಲವರು ನಾನು ಕೌನ್ಸಿಲ್ ಅಥವಾ (Upper Chamber) ಸ್ಥಾನಕ್ಕೆ ಉಮೇದುವಾರನಾದ ಕುರಿತು ಅಸಮಧಾನ ಪಟ್ಟು ಬೇರೆ ಬೇರೆ ತರದ ವರ್ತಮಾನಗಳನ್ನು ಹರಡಿ ಕೂಡಿದಷ್ಟು ರೀತಿಯಲ್ಲಿ ವಿರೋಧವಾಗಿ ಪ್ರಯತ್ನಿಸುತ್ತಿರುವುದು ತಿಳಿಯದ ವಿಷಯವಲ್ಲ. ಈ ವಿಷಯದಲ್ಲಿ ಹಿಂದೆ ನಡೆದ ವಿದ್ಯಮಾನಗಳನ್ನು ಬರೆದರೆ ಕೆಲವರಿಗಾದರೂ ತಪ್ಪು ಅಭಿಪ್ರಾಯಗಳು ಸರಿಯಾಗಬಹುದಾಗಿ ಕೋರಿಕೆ.

ಒಮ್ಮೆ ನಾನು ಮತ್ತು ದಿವಾನ್ ಬಹದ್ದೂರ್ ಮಹಾಬಲ ಹೆಗ್ಡೇರು ಮಂಗಳೂರು ಜೈನ್ ಬೋರ್ಡಿಂಗಿನಲ್ಲಿ ಭೇಟಿಯಾದಾಗ ಶ್ರೀಯುತ ಮಹಾಬಲ ಹೆಗ್ಡೇರು ಡಿಸ್ಟ್ರಿಕ್ಟ್ ಬೋರ್ಡು ಪ್ರಸಿಡೆಂಟರಾಗುವ ಮೊದಲೇ ಬರುವ ಹೊಸ ಚುನಾವಣೆಯಲ್ಲಿ ಎಸೆಂಬ್ಲಿಗೆ ಉಮೇದುವಾರನಾಗಿ ನಿಲ್ಲುವ ಇಚ್ಛೆಯನ್ನು ತಿಳಿಸಿ ನನ್ನ ಸಹಾನುಭೂತಿಯನ್ನು ಅಪೇಕ್ಷೆಪಟ್ಟಿದ್ದರು. ನಾನು ಕೂಡ ನಮ್ಮ ಜಿಲ್ಲೆಯಿಂದ ನ್ಯಾಯ ವಿಧಾಯಕ ಸಭೆಗಳಲ್ಲಿ ನಾಲ್ಕು ಸ್ಥಾನಗಳು ಇರುವುದರಿಂದ ಎಸೆಂಬ್ಲಿಗೆ ಆಗಲಿ ಕೌನ್ಸಿಲಿಗೆ ಆಗಲಿ ಒಂದು ಸ್ಥಾನಕ್ಕೆ ನಿಲ್ಲುವ ಅಪೇಕ್ಷೆಯನ್ನು ತಿಳಿಸಿದ್ದೆನು. ನಾನು ಮತ್ತು ಶ್ರೀಯುತ ಹೆಗ್ಡೇರು ಕೊಂಗ್ರೆಸಿಗೆ ಸೇರದವರಾದ್ದರಿಂದ ಒಮ್ಮತದಿಂದ ಕೆಲಸಮಾಡುವ ಸಂದರ್ಭವನ್ನು ನಿರೀಕ್ಷಿಸಿದ್ದೆವು. ಈ ಮಧ್ಯೆ ಕುಂದಾಪುರ, ಮಂಗಳೂರು, ಪುತ್ತೂರು ಡಿವಿಜನ್ಸ್‌ಗಳ ವೋಟರ್ಸ್ ಲಿಸ್ಟುಗಳನ್ನು ನೋಡಿ 'ಕಂಟೆಸ್ಟ್' ಮಾಡಲು ಯಾವ ಡಿವಿಜನು ಅನುಕೂಲವಾದದ್ದು ಎಂದು ಯೋಚಿಸುವ ಕಾಲದಲ್ಲಿ ಶ್ರೀಯುತ ಮಹಾಬಲ ಹೆಗ್ಡೇರು ಬಂದು ತಾನು ಕುಂದಾಪುರ ಡಿವಿಜನಿಗೆ ನಿಲ್ಲುವುದಾಗಿಯೂ ಅಲ್ಲಿ ನಾನು ಪ್ರತಿಯಾಗಿ ಬರಬಾರದಾಗಿಯೂ ತಿಳಿಸಿದರು. ಕೆಲವು ದಿವಸಗಳ ನಂತರ ಶ್ರೀಯುತ ಸದಾಶಿವ ಅಡಿಗರು ನಾನು ಕುಂದಾಪುರ ಡಿವಿಜನಿನ ಸೀಟಿನ ನಿರೀಕ್ಷಣೆಯನ್ನು ಮಾಡಕೂಡದಾಗಿ ಸುಗ್ರೀವ ಕಟ್ಟಾಜ್ಞೆಯಂತಹ ಕ್ರೂರ ಕಟ್ಟಾಜ್ಞೆಯನ್ನು ಸ್ವಲ್ಪ ಬೆದರಿಕೆ ಉಂಟಾಗುವ ರೀತಿಯಲ್ಲಿ ನಮ್ಮ ಸ್ನೇಹಿತರಾದ ಒಬ್ಬ ಯೋಗ್ಯ ಮಹನೀಯರ ಕೂಡೆ ಹೇಳಿ ಕಳುಹಿಸಿದರು. ಆದರೆ ಇಲೆಕ್ಷನ್ ಕೆಲಸವು ಎಲ್ಲಿ ಸುಲಭವಾಗಿ ಆಗಬಹುದೆಂಬ ಯೋಚನೆಯಲ್ಲಿ ಅವರ ಎಚ್ಚರಿಕೆಯ ಬೆದರಿಕೆ ಮಾತು ಮನಸ್ಸಿಗೆ ಬಾರದೆ ಕೆಲವು ಸ್ನೇಹಿತರನ್ನು ಉಡುಪಿ ಕಾರ್ಕಳ ಕಡೇಗೆ ಕಳುಹಿಸಿ ಕೊಟ್ಟು, ಕೆಲವು ಮಹನೀಯರನ್ನು ನೋಡಿ ಅವರ ಸಹಾನುಭೂತಿಯನ್ನು ಹೊಂದಲೋಸುಗ ಪ್ರಯತ್ನಪಟ್ಟೆನು. ಅಲ್ಲಿ ಅನೇಕರು ತಮ್ಮ ಸಹಾಯವನ್ನು ಕೊಡುವ ಸಂಭವವೂ ಇತ್ತು ಎಂಬುದಾಗಿ ತಿಳಿಯ ಬಂತು. ಈ ವಿಚಾರ ಶ್ರೀಯುತ ಹೆಗ್ಡೇಯವರಿಗೆ ತಿಳಿದು ಬಂದು ಪುನಃ ನನ್ನಲ್ಲಿ ಬಂದು ಕುಂದಾಪುರ ಡಿವಿಜನಿಗೆ ಎಷ್ಟಕ್ಕೂ ಮನಸ್ಸು ಮಾಡಬಾರದಾಗಿಯೂ ಅವರ ಹಿತೈಷಿಗಳಾದ ಸದಾಶಿವ ಅಡಿಗರು ಎಂತಹ ಮಾತು ಹೇಳಿದ್ದರೂ ಮನಃಪೂರ್ವಕವಲ್ಲವೆಂದು ಹೇಳಿ ಆ ಕಡೆಗೆ ಗಮನಿಸಕೂಡದೆಂದೂ ಕಾಗದ ಮೂಲಕ ತಿಳಿಸಿದ್ದರು. ಕುಂದಾಪುರ ಡಿವಿಜನ್ ಬಿಟ್ಟು ಪುತ್ತೂರು ಡಿವಿಜನ್‌ಗೇನೆ ನಿಲ್ಲಬೇಕೆಂದೂ ಹೀಗೆ ನಿಂತರೆ ಅವರ ಪಕ್ಷದವರ ಸಹಾಯ ಕಾಸರಗೋಡು ಮೊದಲಾದ ಕಡೆಗಳಲ್ಲಿ ಸಿಕ್ಕುವಂತೆ ಏರ್ಪಾಡು ಮಾಡಬಹುದೆಂದೂ ಕೂಡಾ ಹೇಳಿದರು. ಪ್ರತಿಯಾಗಿ ಕಾರ್ಕಳ ಪ್ರಾಂತ್ಯಗಳಲ್ಲಿ ಕೆಲವು ಕಡೆಗಳಲ್ಲಿ ನನ್ನ ಸಹಾಯವನ್ನು ಕೂಡಾ ಅಪೇಕ್ಷೆಪಟ್ಟರು.

ಪೂರ್ವದಲ್ಲಿ ಒಮ್ಮೆ ದಿವಾನ್ ಬಹದ್ದೂರ್ ಹೆಗ್ಗಡೇರಿಗೂ ನನಗೂ ಇಲೆಕ್ಷನಿನಲ್ಲಿ ಎದುರಾಳಿತನ ಇದ್ದಾಗ್ಯೂ ಡಿಸ್ಟ್ರಿಕ್ಟ್ ಬೋರ್ಡಿನ ಪ್ರಸಿಡೆಂಟರ ಚುನಾವಣೆಯಲ್ಲಿ ನಾನು ಅವರಿಗೆ ವಿರೋಧವಾಗಿ ವರ್ತಿಸಿದ್ದಾಗ್ಯೂ ಹೊಸ ಚುನಾವಣೆಯಲ್ಲಿಯಾದರೂ ನಾವು ಒಮ್ಮತದವರು ಏಕೆ ಆಗಬಾರದೆಂದು ಯೋಚಿಸಿ ಅವರ ಎದುರಾಗಿ 'ಕಂಟೆಸ್ಟ್' ಮಾಡುವುದಿಲ್ಲವಾಗಿ ಭರವಸೆ ಕೊಟ್ಟೆನು. ಅನಂತರ ಕೊಂಗ್ರೆಸ್ಸ್ ಕಡೆಯ ಕೆಲವು ಮಹನೀಯರು ನನ್ನನ್ನು ಕುಂದಾಪುರಕ್ಕೇನೆ ನಿಲ್ಲಬೇಕೆಂದು ಹೇಳಿ ತಾವು ಸಹಾಯವನ್ನು ಕೊಡುವುದಾಗಿ ಹೇಳಿದಾಗ್ಯೂ ನಾನು ಒಪ್ಪದಿದ್ದೆನು. ಹಾಗೆ ಪ್ರೋತ್ಸಾಹಕೊಟ್ಟು ಕಾಗದ ಬರೆದವರ ಪೈಕಿ ಶ್ರೀ ಸುಬ್ರಹ್ಮಣ್ಯ ಭಟ್ಟರೊಬ್ಬರು.

ಇನ್ನು ಪುತ್ತೂರು ಡಿವಿಜನಿನ ವಿಚಾರ. ಪುತ್ತೂರು ನನ್ನ ಡಿವಿಜನ್ ಅಂದರೆ ನಾನು ಪುತ್ತೂರು ಡಿವಿಜನಿಗೆ ಸೇರಿದವನೆಂದರ್ಥ. ಶ್ರೀಯುತ ಮಹಾಬಲ ಹೆಗ್ಗಡೇರು ನಿಜವಾಗಿ ಅವರ ಇಷ್ಟಮಿತ್ರರುಗಳ ಸಹಾಯವನ್ನು ನನಗೆ ಕೊಡಬೇಕಾಗಿ ಹೇಳಿದ್ದರು. ಆದರೆ ಶ್ರೀಯುತ ಸುಬ್ರಹ್ಮಣ್ಯ ಭಟ್ಟರು ಮೊದಲೇ ನಮ್ಮ ಡಿವಿಜನಿನಿಂದ ನಿಲ್ಲುವ ಪ್ರಯತ್ನ ಮಾಡಿದ್ದರು. ಅನಂತರ ಶ್ರೀಯುತ ರಾಮಕೃಷ್ಣ ಕಾರಂತರ ಪರವಾಗಿ ಮ. ರಾ. ರಾ. ಮೊಳಹಳ್ಳಿ ಶಿವರಾಯರು, ಮ. ರಾ. ರಾ. ಬೆಳ್ಳಂಗಡಿ ಮಂಗೇಶ ರಾಯರು, ಇನ್ನು ಮ. ರಾ. ರಾ. ವಕೀಲ್ ಸದಾಶಿವ ರಾಯರು, ಮ. ರಾ. ರಾ. ಸಿ. ಎಸ್. ಶಾಸ್ತ್ರೀಯವರು ಎಲ್ಲವರೂ ಶ್ರೀ. ಕಾರಂತರ ಪರವಾಗಿ ಕೆಲಸಮಾಡಹತ್ತಿದರು. ಈ ಮಧ್ಯೆ ನಾನು ಪುತ್ತೂರು ಡಿವಿಜನಿನಿಂದ ಉಮೇದುವಾರನಾಗುವ ಯೋಚನೆಯನ್ನು ಮಾಡಿ ಜನರ ಸಹಾನುಭೂತಿಯನ್ನು ತಿಳಿಯಲು ಅಪೇಕ್ಷಿಸಿದ್ದೆನು. ಕೆಲವರು ತಮ್ಮಗಳ ಸಹಾಯವನ್ನು ವಾಗ್ದಾನಮಾಡಿದ್ದರು. ಆದರೂ ಮದ್ರಾಸ್ ಕೌನ್ಸಿಲಿಗೆ ನಿಲ್ಲುವುದು ಉತ್ತಮವಾದದ್ದೆಂದು ತಿಳಿದು ಅದರ ಪರವಾಗಿಯೂ ಕೆಲವರ ಕೂಡೆ ಪ್ರಸ್ತಾಪಿಸಿದ್ದೆನು. ಆದರೆ ನಮ್ಮ ಪುತ್ತೂರು ತಾಲೂಕಿನ ಶ್ರೀಯುತ ಮೊಳಹಳ್ಳಿ ಶಿವರಾಯರು ಒಮ್ಮೆ ಅದೇ ಕೌನ್ಸಿಲಿಗೆ ನಿಲ್ಲುವ ಅಭಿಪ್ರಾಯ ಮಾಡಿದ್ದರಿಂದಲೂ ಅವರು ಯೋಗ್ಯ ಕೆಲಸಮಾಡತಕ್ಕವರಾದ್ದರಿಂದಲೂ ಅವರು ಈ ವರೆಗೆ ನ್ಯಾಯ ವಿಧಾಯಕ ಸಭೆಗೆ ಹೋಗದೆ ಇದ್ದದರಿಂದಲೂ ಕೂಡಾ ಅವರಿಗೆ ... ಅವರ ... ಉತ್ತಮವೆನ್ನುವೆಂದು ತಿಳಿದು. ಎಸ್ಸೆಂಬ್ಲಿಗೆ ಪ್ರತಿಸ್ಪರ್ಧಿಗೇನೆ ನಿಲ್ಲಬಹುದೆಂದು. ಸಂಬಂಧದಲ್ಲಿದ್ದಾಗ್ಯೂ ಮ. ರಾ. ರಾ. ಸುಬ್ರಹ್ಮಣ್ಯ ಭಟ್ಟರು ಕೂಡಾ ಕಾಸರಗೋಡಿನಿಂದ ಎಸ್ಸೆಂಬ್ಲಿ ಸೀಟಿಗೆ ಖಂಡಿತ ನಿಲ್ಲುವವರಾದರೆ ಅವರನ್ನು ಕೂಡಾ ಇಲೆಕ್ಷನಿನಲ್ಲಿ ಎದುರಾಳಿಯನ್ನಾಗಿ ಮಾಡುವುದಿಲ್ಲವಾಗಿ ಕಾಗದ ಬರೆದೆನು. ಕಡೆಗೆ ಅವರೂ ಕೂಡ ಕೊಂಗ್ರೆಸಿನ ಮೂಲಕ ಕೌನ್ಸಿಲ್ ಸೀಟಿಗೆ ನಿಲ್ಲುವ ಯೋಚನೆಮಾಡಿದರು. ಕಾರಣಾಂತರದಿಂದ ಶ್ರೀಯುತ ಶಿವರಾಯರು ಕೌನ್ಸಿಲಿನ ಉಮೇದುವಾರಿಕೆಯನ್ನು ಮುಂದೊತ್ತಲಿಲ್ಲ. ಅನಂತರ ಕೌನ್ಸಿಲ್ ಸೀಟಿಗೆ ಶ್ರೀಯುತ ಎ. ಬಿ. ಶೆಟ್ರು ಉಮೇದುವಾರನಾಗುವೆನೆಂಬ ಕಾಗದ ಬರೆದಿದ್ದರು. ಅದಕ್ಕೆ ಉತ್ತರವಾಗಿ ನಾನು ಕೂಡಾ ಅದೇ ಸೀಟಿಗೆ ನಿಲ್ಲುವ ಯೋಚನೆ ಮಾಡಿದ್ದೇನೆಂಬುದನ್ನು ತಿಳಿಸಿದೆನು. ಒಂದು ತಿಂಗಳ ನಂತರ ಶ್ರೀಯುತ ಕಾರ್ಕಳ ನಾಗಣ್ಣ ಹೆಗಡೇರು ಜುಲಾಯಿ ತಾರೀಕು 29ರಲ್ಲಿ ಕೌನ್ಸಿಲ್ ಸೀಟಿಗೆ ಉಮೇದುವಾರನಾಗಿ ನಿಲ್ಲುವುದಾಗಿ ಬರೆದದ್ದಕ್ಕೆ ಅವರಿಗೂ ನನ್ನ ಉಮೇದುವಾರಿಕೆಯ ಅಭಿಪ್ರಾಯವನ್ನು ತಿಳಿಸಿದೆನು. ಈ ವಿಷಯ ಮ. ರಾ. ರಾ. ಮಹಾಬಲ ಹೆಗ್ಗಡೇರ ಕೂಡೆ ಮ. ರಾ. ರಾ. ವಕೀಲ ನಾಗರಾಜಯ್ಯನವರ ಮೂಲಕ ಪ್ರಸ್ತಾಪ ನಡೆಸಿದ್ದಲ್ಲಿ ಶ್ರೀಯುತ ಡಾಕ್ಟರ್ ರಾಮರಾಯರು ಕೌನ್ಸಿಲಿಗೆ ನಿಲ್ಲಬಹುದಾದ್ದರಿಂದ ಅವರು ನನಗೆ ಸಹಾಯವನ್ನು ಕೊಡಲು ನಿರಾಕರಿಸಿದರು. ಆದರೆ ಎಸೆಂಬ್ಲಿಗೆ ಪುತ್ತೂರು ಕಾಸರಗೋಡು ಪರವಾಗಿ ಶ್ರೀ. ಕಾರಂತರ ಎದುರಿಗೆ ನಿಲ್ಲಲೇ ಬೇಕೆಂದು ಅವರು ಮತ್ತು ಅವರ ಕಡೆಯವರು ಒತ್ತಾಯಮಾಡಿದರು. ಸೇಪರಿನಲ್ಲಿ ನನ್ನ ಉಮೇದುವಾರಿಕೆಯನ್ನು ಪ್ರಕಟಮಾಡಲು ಸೂಚನೆಕೊಟ್ಟರು. ಪುತ್ತೂರು ಕಾಸರಗೋಡು ತಾಲೂಕುಗಳ ಪ್ರಮುಖರನ್ನು ಸ್ವತಃ ಹೋಗಿ ನೋಡಬೇಕೆಂದು ಪದೇ ಪದೇ ತಿಳಿಸಿದರು. ಮತ್ತು ಮತ್ತು ಕಾಗದ ಬರೆದರು. ಆದರೆ ಎಸೆಂಬ್ಲಿಗೆ ನಿಲ್ಲುವ ಯೋಚನೆ ಪಕ್ವವಾಗಿ ಇಲ್ಲದ್ದರಿಂದಲೂ ವಿಚಾರಿಸಿ ತಿಳಿದಲ್ಲಿ ಶ್ರೀ. ಕಾರಂತರು ಸ್ವತಃ ಬ್ರಾಹ್ಮಣನಾಗಿದ್ದುದರಿಂದ ಬ್ರಾಹ್ಮಣ ಮುಖಂಡರು ಶ್ರೀ. ಕಾರಂತರಿಗೇನೆ ಸಹಾಯ ಕೊಡುವ ಉಪಾಯವನ್ನು ಶ್ರೀ. ಕಾರಂತರು ಹೂಡಿರುವರೆಂದು ತಿಳಿದು ಬ್ರಾಹ್ಮಣ ವರ್ಗದ ವೋಟರ್ಸುಗಳು ಪುತ್ತೂರು ಕಾಸರಗೋಡು ತಾಲೂಕುಗಳಲ್ಲಿ ಹೆಚ್ಚಾಗಿದ್ದುದರಿಂದ ಶ್ರೀಯುತ ಮಹಾಬಲ ಹೆಗ್ಗಡೇರ ಪರವಾಗಿ ಸಹಾಯ ಕೊಟ್ಟು ಕೆಲಸಮಾಡುವ ಬ್ರಾಹ್ಮಣಪ್ರಮುಖರಾದ ಕೆಲವು ವಕೀಲರೇ ಮೊದಲಾದ ಮಹನೀಯರ ಸಹಾಯವನ್ನು ನಾನು ಪ್ರಯತ್ನಿಸಿದ್ದಲ್ಲಿ ಸಿಕ್ಕಲು ಅನುಮಾನ ತೋರಿತು. ಶ್ರೀಯುತ ಮಹಾಬಲ ಹೆಗ್ಗಡೇರಿಗೆ ಸಹಾಯಮಾಡುವವರಾಗ್ಯೂ ನನಗೋಸ್ಕರ ಶ್ರೀಯುತ ಕಾರಂತರ ವಿರೋಧವಾಗಿ ಕಾರ್ಯ ನಡೆಸಲು ಅಸಾಧ್ಯವೆಂದೂ ಉತ್ತರ ಸಿಕ್ಕಿತು. ಇದೆಲ್ಲಾ ಶ್ರೀಯುತ ವಕೀಲ ನಾಗರಾಜಯ್ಯನವರ ಮೂಲಕ ನಡೆದ ವಿಚಾರವು.

ಈ ಮಧ್ಯೆ ಕಾರಂತರ ಪರವಾಗಿ ಕಾಸರಗೋಡು ಪುತ್ತೂರು ಕಡೆಗಳಲ್ಲಿ ಶ್ರೀ. ಮಹಾಬಲ ಹೆಗ್ಗಡೇರ ಕಡೆಯ ಬ್ರಾಹ್ಮಣ

GREETINGS

In the spirit of the coming season and in deepest appreciation of the patronage, confidence and goodwill accorded our bank, we extend to all our customers and other friends our sincerest wishes for a HAPPY NEW YEAR. May the days be filled for YOU and YOURS, with cheer and happiness

ESTD 1906

CANARA BANK

LIMITED

ಪ್ರಮುಖ ಮನುಷ್ಯರೇ ಪ್ರೋತ್ಸಾಹ ಕೊಡುತ್ತಾರೆಂಬ ವದಂತಿಯು ಕೂಡಾ ಹೊರಟಿತು. ಆದರೂ ಶ್ರೀಯುತ ಮಹಾಬಲ ಹೆಗ್ಗಡೇರು ಮತ್ತು ಅವರ ಪಾರ್ಟಿಯವರು ನನ್ನನ್ನು ಕಾಸರಗೋಡು ಡಿವಿಜನಿಗೆ ನಿಲ್ಲುವಂತೆ ಪ್ರೋತ್ಸಾಹಿಸುವದನ್ನು ಕಡಮೆಮಾಡಲಿಲ್ಲ. ಕಡೆಗೆ ಶ್ರೀಯುತ ಡಾಕ್ಟರ್ ರಾಮರಾಮರಾಯರು ಕೌನ್ಸಿಲಿಗೆ ನಿಲ್ಲದೆ ಶ್ರೀಯುತ ಸದಾಶಿವ ಅಡಿಗರು ಸ್ವತಹ ಮದ್ರಾಸ್ ಕೌನ್ಸಿಲಿಗೆ ಉಮೇದುವಾರರಾದ ವರ್ತಮಾನವು ಸಿಕ್ಕಿತು. ಶ್ರೀ. ಸದಾಶಿವ ಅಡಿಗರು ನನ್ನ ಪರವಾಗಿ ಎಂತಹ ಅಭಿಪ್ರಾಯ ಇಟ್ಟುಕೊಂಡರಾಗ್ಯೂ ಕೌನ್ಸಿಲಿಗೆ ಉಮೇದುವಾರನಾದ್ದರಿಂದ ನನ್ನ ವ ನನ್ನ ಕಡೆಯವರ ಓಟನ್ನು ಕೂಡಾ ಅಪೇಕ್ಷಿಸಬಹುದಾದ್ದರಿಂದ ನನಗೂ ಎಸೆಂಬ್ಲಿ ವಿಚಾರದಲ್ಲಿ ತನ್ನ ಸಹಾನುಭೂತಿಯನ್ನು ತೋರಿಸಬಹುದೆಂದು ಗ್ರಹಿಸಿ ನಾನು ಬೆಳ್ತಂಗಡಿಯಲ್ಲಿ ನನ್ನ ಎಸೆಂಬ್ಲಿಯ ಉಮೇದುವಾರಿಕೆಯನ್ನು ಸಮರ್ಥಿಸುವ ಕೆಲವು ಗ್ರಾಮಸ್ಥರ ಸಭೆಗೆ ಅಧ್ಯಕ್ಷನಾಗಲು ಶ್ರೀಯುತ ಅಡಿಗರನ್ನು ಮ. ರಾ. ರಾ ಎಸ್ ನಾಗರಾಜಯ್ಯನವರ ಮೂಲಕ ಅಪೇಕ್ಷಿಸಿದಾಗ ಅದಕ್ಕೆ ನಿರಾಕರಿಸಿದರು. ಅದು ಅವರ ಇಷ್ಟ. ಆದರೆ ಸಭೆಯ ಅಧ್ಯಕ್ಷನಾಗುತ್ತಿದ್ದರೆ ಅವರ ಕೌನ್ಸಿಲು ಉಮೇದುವಾರಿಕೆಯನ್ನು ಜನರಲ್ಲಿ ಸಭೆಯ ಮೂಲಕ ತಿಳಿಸಿ ಅವರ ಬಗ್ಗೆ ಓಟುಗಳನ್ನು ಅಪೇಕ್ಷಿಸಪಟ್ಟಂತೆ ಆಗುತ್ತಿತ್ತಲ್ಲದೆ ಶ್ರೀಯುತ ಕಾರಂತರ ಪರವಾಗಿ ಸಹಾಯ ಮಾಡುತ್ತಾರೆಂಬ ವರ್ತಮಾನವನ್ನು ಅಲ್ಲಗಳೆದಂತೆ ಆಗಬಹುದಿತ್ತೆಂದೂ ನನ್ನ ಉಮೇದುವಾರಿಕೆಗೆ ಕಾಸರಗೋಡು ಪುತ್ತೂರು ಪ್ರಾಂತ್ಯದ ಬ್ರಾಹ್ಮಣವರ್ಗದವರ ಸಹಾಯ ಸಿಕ್ಕುವರೆ ಅನುಕೂಲ ಮಾಡಿಕೊಟ್ಟಂತೆ ಆಗುತ್ತಿತ್ತೆಂದೂ ಪೂರ್ಣ ಭರವಸೆ ಇತ್ತು. ಇದರೆ ಅಂಥ ಸಂದರ್ಭ ದೊರೆಯಲಿಲ್ಲ. ಶ್ರೀಯುತ ಮಹಾಬಲ ಹೆಗ್ಗಡೇರು ಈ ವಿಚಾರದಲ್ಲಿ ಏನೂ ಪ್ರಯತ್ನ ಮಾಡದೆ ಹೋದರು. ಆದರೂ ಕಾಸರಗೋಡು ತಾಲೂಕಿನಲ್ಲಿ ಅವರ ಕೆಲವು ಇಷ್ಟಮಿತ್ರರುಗಳ ಸಹಾಯವನ್ನು ಕೊಡುವಂತೆ ಏರ್ಪಾಡು ಮಾಡಿದ್ದರೆಂಬದು ಅಲ್ಲವೆಂದಲ್ಲ. ಆದರೆ ನನಗೆ ಸರ್ವಜಾತಿ, ಮತದವರ ಬೆಂಬಲವು ಅಗತ್ಯವಾದುದರಿಂದಲೂ ಮತ್ತು ಕಳೆದ ೧೯೩೫ನೇ ಇಸವಿಯ ಇಲೆಕ್ಷನಿನಲ್ಲಿ ಸಹಾಯಮಾಡಿದ ಅನೇಕರಲ್ಲಿ ವಿರೋಧಮಾಡಿಕೊಂಡು ಇಲೆಕ್ಷನಿಗೆ 'ಕಂಟೆಸ್ಟ್' ಮಾಡಬೇಕಾದೀತೆಂಬುದರಿಂದಲೂ ಹಾಗೂ ಕೌನ್ಸಿಲಿಗೆ ನಿಲ್ಲುವ ಯೋಚನೆ ಮೊದಲೇ ಇದ್ದುದರಿಂದಲೂ ಪುತ್ತೂರಿನ ಎಸೆಂಬ್ಲಿ ಚುನಾವಣೆಯ ಕುರಿತು ಉತ್ಸಾಹಗೊಂಡು ಕಾರ್ಯವಹಿಸಲೇ ಇಲ್ಲ. ಆ ಕುರಿತು ಡಿವಿಜನಿನ ಪ್ರಮುಖರನ್ನು ಯಾರನ್ನೂ ನೋಡಿ ಮಾತಾಡಲಿಲ್ಲ.

ಮೊದಲು ನಾನು ಕುಂದಾಪುರ ಡಿವಿಜನಿಗೆ ಉಮೇದುವಾರನಾಗಲು ಯೋಚಿಸಿದ್ದಾಗ ಶ್ರೀಯುತ ಹೆಗ್ಡೆಯವರ ಮುಖ್ಯ ಸಹಾಯಕರಾದ ಶ್ರೀ|| ಅಡಿಗರು ಅಬ್ಬರದಿಂದ ಎಚ್ಚರಿಸಿ ಕಳುಹಿಸಿದುದರಿಂದಲೂ ಜೇಲಿ ಡಿವಿಜನಿನಲ್ಲಿ ಉಮೇದುವಾರನಾದಾಗ ಸಹಾಯಮಾಡಲುಉಪೇಕ್ಷಿಸುವುದರಿಂದಲೂ ಶ್ರೀಯುತ ಕಾರಂತರ ಪರವಾಗಿ ಸಹಾಯಮಾಡುವರೆಂಬ ಊರವದಂತಿ ಇದ್ದುದರಿಂದಲೂ ಶ್ರೀ|| ಮಹಾಬಲ ಹೆಗ್ಡೇರು ಈ ಕುರಿತು ಏನೊಂದೂ ಗಮನಕೊಡದೆ ಇದ್ದುದರಿಂದಲೂ ಮದ್ರಾಸ್ ಕೌನ್ಸಿಲಿನ ಉಮೇದುವಾರಿಕೆಯ ಕುರಿತು ಹೆಚ್ಚಾಗಿ ಯೋಚಿಸುವ ಸಂದರ್ಭ ಒದಗಿತು. ಆದರೆ ಶ್ರೀಯುತ ಸುಬ್ರಹ್ಮಣ್ಯ ಭಟ್ರು ಕೊಂಗ್ರೆಸ್ಸಿನಿಂದ ಅನುಮತಿ ಪಡೆದು ಕೌನ್ಸಿಲಿಗೆ ಉಮೇದುವಾರನಾದರೆ ಅವರಿಗೆ ಸಹಾಯ ಮಾಡಬೇಕೆಂಬುದಾಗಿಯೂ ಕಾಸರಗೋಡಿನಲ್ಲಿ ನನ್ನ ಎಸೆಂಬ್ಲಿ ಸೀಟಿನ ಉಮೇದುವಾರಿಕೆಗೆ ಅವರು ಸಹಾಯಮಾಡಬೇಕಾಗಿಯೂ ಒಪ್ಪಿ ಮಾತಾಗಿತ್ತು. ಕೆಲವು ಕಾಗದಪತ್ರಗಳೂ ನಡೆದಿದ್ದುವು. ಕಾಸರಗೋಡಿನಲ್ಲಿ ಮ. ರಾ. ರಾ. ಸುಬ್ರಹ್ಮಣ್ಯ ಭಟ್ರ ಸಹಾಯ ಅಷ್ಟೊಂದು ದೊರೆತಂತೆ ಕಾಣಲಿಲ್ಲ. ಕೊಂಗ್ರೆಸ್ಸಿನವರು ಅವರನ್ನು ಕೊಂಗ್ರೆಸ್ಸಿನ ಕಡೆಯಿಂದ ನಿಲ್ಲಲು ಅನುಮತಿ ಕೊಟ್ಟಂತೆಯೂ ತೋರಲಿಲ್ಲ. ಬಹುಶಃ ಅವರಿಗೆ ಇತರ ಕೊಂಗ್ರೆಸ್ ಪಂಗಡದವರು ವಿರೋಧವಾಗಿದ್ದಾರೆಂದು ಕೆಲವರು ಹೇಳಿದರು. ಕಂಠೀರವ ಪತ್ರಿಕೆಯಲ್ಲಿಯೂ ಕೊಂಗ್ರೆಸ್ಸಿನವರು ಶ್ರೀ. ಸುಬ್ರಹ್ಮಣ್ಯ ಭಟ್ಟರಿಗೆ ಅನುಮತಿ ಕೊಡುವುದು ಅನುಮಾನವೆಂಬ ಅರ್ಥದಲ್ಲಿ ಲೇಖನ ಹುಟ್ಟಿತು

ಈ ಸಂದರ್ಭದಲ್ಲಿ ಶ್ರೀಯುತ ಅಡಿಗರವರ ಕೌನ್ಸಿಲು ಉಮೇದುವಾರಿಕೆಯ ಕುರಿತು ಪತ್ರಿಕೆಯಲ್ಲಿ ಪ್ರಕಟವಾದುದರಿಂದ ಈ ವಿಚಾರವನ್ನು ಶ್ರೀಯುತ ಸುಬ್ರಹ್ಮಣ್ಯ ಭಟ್ಟರಲ್ಲಿ ಸ್ವತಃ ನಾನು ಪ್ರಸ್ತಾವಿಸಿದಾಗ ಶ್ರೀಯುತ ಅಡಿಗರನ್ನು ತನ್ನ ಉಮೇದುವಾರಿಕೆಯನ್ನು ಹಿಂತೆಗೆಯುವಂತೆ ಕೇಳುವೆನಾಗಿಯೂ ತನ್ನ ಕೌನ್ಸಿಲು ಉಮೇದುವಾರಿಕೆಗೆ ಕೊಂಗ್ರೆಸು ಅನುಮತಿಯನ್ನು ಒಂದೆರಡು ದಿವಸಗಳಲ್ಲಿ ಸಿಕ್ಕುವಂತೆ ಮಾಡುವೆನೆಂಬುದಾಗಿಯೂ ಖಂಡಿತವಾಗಿ ಹೇಳಿದರು. ಆ ರೀತಿ ವರ್ತಿಸಲೇ ಇಲ್ಲ. ಕಾಸರಗೋಡು ಪ್ರಾಂತ್ಯದಲ್ಲಿ ಅವರ ಸಹಾಯವನ್ನು ಪುನಃ ಕೇಳಲಾಗಿ ಅವರು ಉತ್ತರ ಕೊಟ್ಟದ್ದೇನೆಂದರೆ:—ನೀವು ರಾಜಿಯಿಂದಲೂ ಗೌರವದಿಂದಲೂ ನಿಮ್ಮ ಉಮೇದುವಾರಿಕೆಯನ್ನು ಹಿಂತೆಗೆಯುವಂತೆ (I shall arrange for your honourable withdrawal) ಏರ್ಪಾಡು ಮಾಡುವೆನು ಎಂದು ಕೊಂಗ್ರೆಸ್ಸಿನವರು ಶ್ರೀ. ಸುಬ್ರಹ್ಮಣ್ಯ ಭಟ್ರಿಗೆ ಅನುಮತಿ ಕೊಡದೆ ಹೋದುದರಿಂದಲೂ ಶ್ರೀಯುತ ಅಡಿಗರು ಕೌನ್ಸಿಲಿಗೆ ನಿಲ್ಲುವ ಯೋಚನೆ ಮಾಡಿ, ಕಾರ್ಯಕ್ಕಾರಂಭಿಸಿದ್ದರಿಂದಲೂ ಶ್ರೀ. ಸುಬ್ರಹ್ಮಣ್ಯ ಭಟ್ರ ಪ್ರಯತ್ನವು ಅಷ್ಟೊಂದು ಪ್ರಯೋಜನವಾಗುವದಿಲ್ಲವಾಗಿ ತಿಳಿಯಬೇಕಾಗಿ ಬಂತು.

ಈ ವೇಳೆ ನಿವಸಿದ ವಿದ್ಯಮಾನಗಳೆಲ್ಲವು ನನ್ನನ್ನು ಕೌನ್ಸಿಲ್ ಅಥವಾ UPPER CHAMBER ಸೀಟಿಗೆ ಉಮೇದುವಾರನಾಗಲು ಅನುಗೊಳಿಸಿದುವು.

ಶ್ರೀಯುತ ಡಾಕ್ಟರ್ ರಾಮರಾಯರು ಕೌನ್ಸಿಲಿಗೆ ಉಮೇದುವಾರರಾಗುತ್ತಿದ್ದರೆ ಅವರಿಗೆ ವಿರೋಧವಾಗಿ ಶ್ರೀಯುತ ಮಹಾಬಲ ಹೆಗ್ಗಡೇರು ನನ್ನನ್ನು ಕೌನ್ಸಿಲಿಗೆ ಉಮೇದ್ವಾರನಾಗಲು ಪ್ರೋತ್ಸಾಹ ಕೊಡುತ್ತಿದ್ದಿಲ್ಲವೆಂಬುದು ನಿಜ. ಆದರೆ ಅವರು ತನ್ನ ಉಮೇದುವಾರಿಕೆಯನ್ನು ಬಿಟ್ಟ ನಂತರವೂ ನನ್ನ ಕೌನ್ಸಿಲು ಉಮೇದುವಾರಿಕೆಯ ಅಭಿಪ್ರಾಯವು ಮೊದಲೇ ತಿಳಿದಿರುತ್ತಾ ನಾವೆಲ್ಲ ಒಮ್ಮತದಿಂದ ಕೆಲಸ ಮಾಡಲಿಕ್ಕಿರುವೆವಾದ್ದರಿಂದ ಕೂಡಾ ಶ್ರೀಯುತ ಮಹಾಬಲ ಹೆಗ್ಗಡೇರು ನನ್ನ ಕೂಡೆ ವಿಚಾರಿಸದೇನೆ ಶ್ರೀಯುತ ಅಡಿಗರ ಉಮೇದುವಾರಿಕೆಗೆ ಸಹಾಯವನ್ನಿತ್ತದ್ದು ಅಷ್ಟೊಂದು ಸರಿ ಕಾಣಲಿಲ್ಲ. ಒಟ್ಟಾರೆ ಶ್ರೀಯುತ ಕಾರಂತರನ್ನು ಎದುರಾಡಲು ಹಣ ಖರ್ಚುಮಾಡತಕ್ಕ ಮನುಷ್ಯನು ಪುತ್ತೂರು ಡಿವಿಜನಿನಲ್ಲಿರಬೇಕು. ಕೌನ್ಸಿಲಿಗೆ ಒಬ್ಬ ಹಿತೈಷಿ ಬ್ರಾಹ್ಮಣ ಪ್ರಮುಖರನ್ನು ಉಮೇದುವಾರಿಕೆಗೆ ನಿಲ್ಲಿಸಿ ಆ ಮೂಲಕ ತನ್ನ ಸ್ಥಾನಕ್ಕೆ ಬ್ರಾಹ್ಮಣ ವರ್ಗದವರ ಬೆಂಬಲ ಸಿಕ್ಕಬೇಕೆಂಬ ಇರಾದೆ ಅಲ್ಲದೆ ಇತರರ ಕಷ್ಟನಿಷ್ಠೂರಗಳನ್ನು ಶ್ರೀಯುತ ಹೆಗ್ಗಡೇರು ಯೋಚಿಸಲಿಲ್ಲವೆಂಬುದು ಖಂಡಿತವಾಯಿತು.

ನಾನು ಎಸೆಂಬ್ಲಿಗೆ ಅಲ್ಲದೆ ಕೌನ್ಸಿಲಿಗೆ ಉಮೇದುವಾರನಾದ ಕುರಿತು ನನ್ನ ವರ್ತನೆಯಲ್ಲಿ ಶ್ರೀಯುತ ಹೆಗ್ಗಡೇರ ಇಚ್ಛೆಗೆ ಅಡ್ಡಿ ಆಯಿತೆಂದು ಮಾತ್ರ ಅವರು ತಿಳಿದುಕೊಂಡದ್ದಲ್ಲದೆ ನನ್ನ ಅಭಿಪ್ರಾಯಕ್ಕೆ ಗಮನಕೊಡಲಿಲ್ಲವೆಂಬುದೇ ವ್ಯಸನ!

ಒಟ್ಟಾರೆ ನಮ್ಮ ಈಗಿನ ಇಲೆಕ್ಷನಿನಲ್ಲಿ ಪಾರ್ಟಿತತ್ವಗಳಿಗಿಂತಲೂ ವ್ಯಕ್ತಿದ್ವೇಷ ಹಟಸಾಧನೆಗಳು ಹೆಚ್ಚಾಗಿವೆ ಎಂದರೆ ಅತಿಶಯೋಕ್ತಿಯಾಗಲಾರದು. ಈ ವ್ಯಕ್ತಿದ್ವೇಷಕ್ಕೆ ಇತರರು ಬಲಿಬೀಳಬೇಕೆಂಬುದು ವಿವೇಕಿಗಳು ಮೆಚ್ಚದ ಕೆಲಸ. ಇಂಥ ಹಟಸಾಧನೆಯಲ್ಲಿ ಸರಕಾರದವರಲ್ಲಿ ಮೊರೆಯಿಟ್ಟು ಸರಕಾರಿ ಸಂಸ್ಥೆಗಳ ಮೂಲಕವಾದರೂ ತಮ್ಮ ಕಾರ್ಯಸಾಧನೆ ಮಾಡಲು ಪ್ರಯತ್ನಿಸುವುದು ನಿರರ್ಥಕವಾದ ಕಾರ್ಯವು.

ನಾವು ಇಲೆಕ್ಷನಿನಲ್ಲಿ ಜಯಪ್ರದರಾದರೆ ನಮ್ಮ ನಾಡನ್ನು ಸ್ವರ್ಗವನ್ನಾಗಿ ಮಾಡುತ್ತೇವೆಯೇ? ಅಥವಾ ನಾವು ಅಮರರಾಗುವೆವೋ? ಅಥವಾ ಮುಂದಕ್ಕೆ ಉತ್ತಮ ಜನ್ಮವನ್ನು ಹೊಂದುವಂತೆ ಮಾಡಬಹುದೇ? ೩–೪ ವರ್ಷಗಳ ಮೆಂಬರಿಕೆಗೆ ಏನೆಲ್ಲಾ ಕುತಂತ್ರ! ಕುಹಕತನ! ಜಾತಿವೈಷಮ್ಯ, ಮತಭೇದಪ್ರಚಾರ, ವರ್ಣಭೇದ ವಿಚಾರ, ಇಲೆಕ್ಷನ ರಂಗಸ್ಥಳದಲ್ಲಿ ಹಳ್ಳಿಯ ಗೃಹಸ್ಥರ ಮನಸ್ಸೂ ಕೂಡಾ ಇವುಗಳಿಂದ ಅಪವಿತ್ರವಾಗಬೇಕೇ? ಇಲೆಕ್ಷನಿನಲ್ಲಿ ಗೆದ್ದರೇನು? ಸೋತರೇನು? ಸೋಲು ಗೆಲವುಗಳು ಮಾನವರಿಗೆ ಸದಾ ಇರುವುದಿಲ್ಲವೇ? ಆದರೆ ಜನದ್ವೇಷ ಹುಟ್ಟಿಸಿ ಪಂಗಡವಿರೋಧ ಉಂಟುಮಾಡಿಕೊಳ್ಳುವುದರಿಂದ ಪ್ರಯೋಜನವೇನು?

ಜಾತಿವಿರೋಧ, ಪಂಗಡದ್ವೇಷ, ಮತವಿರೋಧ ಮಾಡಿ ದೇಶದಲ್ಲಿ ಕ್ರಾಂತಿ ಉಂಟುಮಾಡದೆ ಇರುವುದೇ ಉತ್ತಮವಾದ ದೇಶಸೇವೆಯಾಗದೇ?

ನಾನು ಜೈನಮತದವನು. ಶ್ರೀ ಧರ್ಮಸ್ಥಳ ದೇವಸ್ಥಾನದ ಪ್ರತಿನಿಧಿಯು ಎಂಬುದು ಎಲ್ಲವರಿಗೂ ಗೊತ್ತು. ಕೌನ್ಸಿಲು ಓಟರ್ಸ್ಸುಗಳು ಸಾಧಾರಣ ೯೦೦ ಇರಬಹುದು, ಅದರಲ್ಲಿ ನನ್ನ ಸ್ವಜಾತಿಯವರ ಓಟು ೭ರಲ್ಲಿ ೧ ಅಂಶಕ್ಕೆ ಮಿಕ್ಕಲಾರದು. ಉಳಿದವರು ಹೆಚ್ಚಾಗಿ ಬಂಟರು ಅಥವಾ ನಾಡವರು, ಬ್ರಾಹ್ಮಣರು, ಸಾರಸ್ವತ ಮತ್ತು ಗೌಡ ಸಾರಸ್ವತ ಬ್ರಾಹ್ಮಣರು, ಇನ್ನಿತರ ಸಮಾಜದವರು. ಆದಾಗ್ಯೂ ನಾನು ಸರ್ವ ಜಾತಿಮತಗಳ ಮತದಾರರನ್ನು ನಂಬಿಯೇ ಉಮೇದುವಾರನಾಗಿರುವೆನು. ನಾನು ದೊಡ್ಡ ದೀಪೋತ್ಸವ ಮಾಡಿಸುವವನೆಂದಲ್ಲ. ಬೇರೆ ಕಡೆಯ ದೇವಸ್ಥಾನಗಳಲ್ಲಿ ಕಾರ್ತಿಕ ದೀಪೋತ್ಸವ ನಡೆಸತಕ್ಕವರು ಅನೇಕರು ಇರಬಹುದು. ಸಾವಿರಾರು ಮುಡಿ ಅಕ್ಕಿ ಹುಟ್ಟುವಳಿ ಇರತಕ್ಕ ದೊಡ್ಡ ಮನುಷ್ಯನೆಂದಲ್ಲ, ನನ್ನಿಂದಲೂ ಐಶ್ವರ್ಯವಂತರು ಎಷ್ಟೋ ಮಂದಿ ಇರಬಹುದು. ನಾನು ಹೆಚ್ಚು ಓದಿ ತಿಳಿದ ಯೋಗ್ಯ ಪಂಡಿತನೆಂದಲ್ಲ. ನನ್ನಿಂದಲೂ ಹೆಚ್ಚು ಪಾಸು ಮಾಡಿದ ಮೇಧಾವಿಗಳು ಇರಬಹುದು. ನಾನು ಏನಾದರೂ ಮಹಾಜನರಿಗೆ ತನುಮನ ಧನಗಳಿಂದ ಕೊಡುವ ಸಹಾಯವನ್ನು ಮಾಡಿದ್ದರೆ, ಮಾಡುತ್ತೇನಾದರೆ, ಇನ್ನು ಮಾಡುವೆನೆಂದು ತಿಳಿದರೆ ಈ ಮೊದಲು ಕೌನ್ಸಿಲು ಎಸೆಂಬ್ಲಿ ಪ್ರವೇಶ ಮಾಡಿರುವ ರಾವು ಸಾಹೇಬ, ದಿವಾನ್ ಬಹದೂರ್ ಮೊದಲಾದ ಬಿರುದಾಂಕಿತ ಮಹನೀಯರಿಗಿಂತ ಕಡಮೆ ಇಲ್ಲದೆ ಕಾರ್ಯ ವಹಿಸಬಲ್ಲೆನೆಂದು ತಿಳಿಯುವಿರಾದರೆ— (ಈ ಸಂದರ್ಭದಲ್ಲ ನನ್ನ ಮೊದಲಿನ ಕೌನ್ಸಿಲ್ ಮೆಂಬರಿಕೆಯ ವರದಿಯನ್ನು ಪರಿಶೀಲನೆ ಮಾಡಬಹುದು.) ನನಗೇನೇ ಕೌನ್ಸಿಲು ಓಟುಗಳನ್ನು ಕೊಡುವಿರಾಗಿ ನಂಬಿದ್ದೇನೆ! ದೇಶದಲ್ಲಿರುವ ಬೇರೆ ಬೇರೆ ರಾಜಕೀಯ ಪಕ್ಷದವರ ಉತ್ತಮವಾದ ಧ್ಯೇಯಗಳನ್ನು ಸಾಧಿಸುವುದರಲ್ಲಿ ನಾನು ಸಹಕರಿಸಿ ಕೌನ್ಸಿಲು ಕಾರ್ಯ ವಹಿಸುವೆನು. ನಾನು ಕ್ರಾಂತಿಕಾರಕನಲ್ಲ ಸರಕಾರದ ಕಾನೂನಿಗೊಳಪಟ್ಟು ಅನುಕೂಲವಾಗುವ ರೀತಿ ಜನರಿಗೆ ಕೂಡಿದಷ್ಟು ಕೆಲಸ ಮಾಡಲಿಕ್ಕಿರುವೆನು ಎಂಬ ವಿಚಾರ ಶ್ರುತಪಡಿಸಿದ್ದೇನೆ.

DHARMASTHALA
30—12—1936 } D. Manjaya Hegde.

ಆತಂಕನಿಗ್ರಹ ಮಾತ್ರೆಗಳು

ಯಾವ ಕಾರಣದಿಂದಾಗಲಿ ಉಂಟಾದ ಧಾತುನಷ್ಟ, ನರಗಳ ನಿಶ್ಶಕ್ತಿ ಇವುಗಳನ್ನು ಹೋಗಲಾಡಿಸಿ ವಿಶಿಷ್ಟತ ಗುಣ ಉಂಟಾಗುವಂತೆ ಮಾಡುತ್ತದೆ. ಈ ಗುಳಿಗೆಗಳು ಆರೋಗ್ಯವಾದ ಹಸಿವನ್ನುಂಟುಮಾಡಿ ದೇಹಕ್ಕೂ ಮತ್ತು ಮನಸ್ಸಿಗೂ ಬಲಹೀನತ್ವವನ್ನು ಹೋಗಲಾಡಿಸಿ ದುಷ್ಟರಕ್ತವನ್ನು ಶುದ್ಧಿಮಾಡಿ ಜ್ಞಾಪಕ ಶಕ್ತಿಯನ್ನು ವೃದ್ಧಿಪಡಿಸುವುದು. ಕ್ರಯ: ಡಬ್ಬಿ ೧ಕ್ಕೆ ೧–೦–೦,

ವಾಜೀಕರಣ ತೈಲ:—(ಹೊರಗೆ ಹಚ್ಚಲು ಮಾತ್ರವೇ) ಬಾಲ್ಯದಲ್ಲಿ ಸ್ವತಃ ಅನೇಕ ವಿಧಗಳಲ್ಲಿ ಶರೀರವನ್ನು ಕೆಡಿಸಿಕೊಂಡು ಅದರಿಂದ ಉಂಟಾಗುವ ಅಶಕ್ತಿ, ನರಗಳ ದೌರ್ಬಲ್ಯ, ನಪುಂಸಕತ್ವ, ಮುಂತಾದ ವ್ಯಾಧಿಗಳನ್ನು ಪರಿಹರಿಸುವ ಸಂಜೀವಿನಿಯಾಗಿರುವದು. ನರಗಳಿಗೆ ಬಲವನ್ನುಂಟುಮಾಡಿ, ಸಂಭೋಗಕ್ಕೆ ಉತ್ಸಾಹವನ್ನು ಕೊಡುವುದು. ಒಂದು ಸಾರಿ ಔಷಧವನ್ನು ಹಚ್ಚುವುದರಿಂದ ಗುಣವು ಗೊತ್ತಾಗುತ್ತದೆ. ಕ್ರಯ: ಸೀಸೆ ಒಂದಕ್ಕೆ ೫—೦—೦.

ಅಮೃತಾರ್ಣವ ಲೇಹ್ಯ:— ರಕ್ತವನ್ನು ಶುದ್ಧಿಮಾಡಿ, ನರಗಳನ್ನು ಬಲಪಡಿಸಿ, ಅತಿಉಷ್ಣ, ಕೈಕಾಲುಗಳ ಉರಿ, ಇನ್ನೂ ಮುಂತಾದ ಉಷ್ಣವ್ಯಾಧಿಗಳನ್ನು ಗುಣಪಡಿಸಿ, ಮೆದುಳನ್ನು ತಂಪುಮಾಡಿ, ದೇಹಬಲವನ್ನೂ, ತೇಜಸ್ಸನ್ನೂ ಹೆಚ್ಚಿಸುವುದಲ್ಲದೆ ದೀರ್ಘಕ್ಷಯ, ಎದೆನೋವು, ತಲೆನೋವು, ಮುಂತಾದ ವ್ಯಾಧಿಗಳಿಗೆ ಅಮೃತಪ್ರಾಯವಾದುದು. ಕ್ರಯ: ಡಬ್ಬಿ ೧ಕ್ಕೆ ೨-೦-೦.

'ಕಾಮಶಾಸ್ತ್ರ' ಧರ್ಮಾರ್ಥ. ಪೋಸ್ಟೇಜು ಮಾಫಿಯಾಗಿ ಕಳುಹಿಸುವೆವು. ಒಂದು ಕಾರ್ಡು ಹಾಕಿರಿ.

ಆತಂಕ ನಿಗ್ರಹ ಫಾರ್ಮಸಿ, ೭೪, ಚಿಕ್ಕಪೇಟೆ ಚೌಕ, ಬೆಂಗಳೂರು ಸಿಟಿ

ಮಂಗಳೂರು

(ನಮ್ಮ ಸ್ವಂತ ಬಾತ್ಮಿದಾರರಿಂದ)

ತಾ ೪ ೧ ೩೭

ಕ್ಲಬ್ಬಿನ ವಾರ್ಷಿಕ ಔತಣ

ಸ್ಥಳೀಯ ಕೊಸ್ಮೋಪೊಲಿಟನ್ ಕ್ಲಬ್ಬಿನ ವಾರ್ಷಿಕ ಔತಣವು ಕ್ಲಬ್ಬಿನ ಅಧ್ಯಕ್ಷರಾದ ಶ್ರೀಮಾನ್ ಅಮ್ಮೆಂಬಳ ರಾಮರಾಯರ ಅಧ್ಯಕ್ಷತೆಯಲ್ಲಿ ಕಳೆದ ತಾ ೩೧ನೇ ರಾತ್ರಿ ನಾಗಸರ ಮೊದಲಾದ ವಾದ್ಯಘೋಷಗಳಿಂದ ಯಶಸ್ವಿಯಾಗಿ ನೆರವೇರಿತು ಕ್ಲಬ್ಬಿನ ಸದಸ್ಯರ ಪೈಕಿ ನೂರಾರು ಮಂದಿಗಿಂತಲೂ ಹೆಚ್ಚಾಗಿ ಜಿತ್ತೈಸಿದ್ದರು ಈ ಸಮಾರಂಭದಲ್ಲಿ ಹಲವರ ಭಾಷಣಗಳಾದುವು

ಸ್ತುತ್ಯ ಅನ್ನದಾನ

ಶ್ರೀ ಈಶ್ವರಾನಂದ ಮಹಿಳಾಸೇವಾಶ್ರಮದವರು ಕಳೆದ ತಾ ೩೧ರಲ್ಲಿ ಸುಮಾರು (ಗಂಡಸರು, ಹೆಂಗಸರು ಮತ್ತು ಮಕ್ಕಳು ಸೇರಿ) ಎಂಟುನೂರು ಮಂದಿ ಕೊರಗರಿಗೆ ಅನ್ನದಾನ ಮಾಡಿದರು ಈ ಧರ್ಮದ ಬಗ್ಗೆ ಡಾ ಬಿ ರಾಘವೇಂದ್ರ ರಾಯರು ರೂ ನೂರನ್ನು ದಾನಮಾಡಿದ್ದರು ಆಶ್ರಮದ ಸೂಪರಿಂಟೆಂಡೆಂಟರೂ, ಖಜಾನ್ಚಿಯವರೂ ಆದ ಶ್ರೀ ತಲಚೇರಿ ರಾಮರಾಯರೂ ಅನ್ನದಾನವನ್ನು ಶಿಸ್ತಿನಿಂದ ನಡೆಸಿದರು ಆಶ್ರಮದವರೇ ಸಕಲರಿಗೂ ಬಡಿಸಿ ತೃಪ್ತಿಗೊಳಿಸಿದರು

ಶಿಕ್ಷಣ ಪ್ರದರ್ಶನ

ಮಂಗಳೂರು ಗವರ್ನಮೆಂಟ್ ಟ್ರೈನಿಂಗ್ ಶಾಲೆಯಲ್ಲಿ ಇದೇ ತಾ ೧೩ಕ್ಕೆ ಜರಗುವ ಶಿಕ್ಷಣ ವಸ್ತು ಪ್ರದರ್ಶನವು ಜಿಲ್ಲಾ ಕಲೆಕ್ಟರ್ ದೊರೆಗಳಾದ ಮಿ ಎ ಡಿ ಕ್ರೊಂಬಿ ಐ ಸಿ ಎಸ್ ಇವರಿಂದ ತೆರೆಯಲ್ಪಡುವುದು

ಹೊಸ ಸಬ್‌ಜಡ್ಜರು

ನಮ್ಮ ಜಿಲ್ಲೆಗೆ ನೂತನವಾಗಿ ನಿರ್ಗಾಯಿಸಲ್ಪಟ್ಟು ಬಂದಿರುವ ಸಬ್ ಜಡ್ಜರು ಚಾರ್ಜು ವಹಿಸಿದರು

ಕೇರಳದ ಕಥಾಕಳಿ

ಕೇರಳದ ಕಲಾ ಮಂಡಲದವರು ತಮ್ಮ ಕಥಾಕಳಿ ಎಂಬ ಮೂಕ ಆಟ ಪ್ರದರ್ಶನಗಳನ್ನು ಮಂಗಳೂರಲ್ಲಿ ತೋರಿಸಲಿರುವರಷ್ಟೆ ಈ ಪ್ರಯುಕ್ತ ಕೇರಳದ ಪ್ರಸಿದ್ಧ ಕವಿವರ್ಯರಾದ ಶ್ರೀ ವಳ್ಳತ್ತೋಳ್ ನಾರಾಯಣ ಮೆನೋನರು ನಾಳಿನ ದಿನ ಮಂಗಳೂರಿಗೆ ಬಂದು ಬೇಕಾದ ಸಿದ್ಧತೆಗಳನ್ನು ಮಾಡುವರೆಂದು ಗೊತ್ತಾಗಿದೆ

ಶುದ್ಧಿ ಸಮಾರಂಭ

ನಿನ್ನೆಯ ದಿನ (ತಾ ೩) ಬೆಳಗ್ಗೆ ೮ ಘಂಟೆಕ್ಕೆ ಮಂಗಳೂರು ಆರ್ಯ ಸಮಾಜದಲ್ಲಿ ಒಂದು ಶುದ್ಧಿ ಸಮಾರಂಭವು ಜರಗಿತು ಹಿಂದೂವಾಗಿದ್ದು ಕೆಥೋಲಿಕ್ ಕ್ರಿಸ್ತ ಜಾತಿಗೆ ಸೇರಿ ಲೂಯಿಸ್ ನಜರೆತ್ ಎಂದು ಹೆಸರಿಟ್ಟುಕೊಂಡಿದ್ದ ಮಹಾಶಯರು ಪುನಃ ಆರ್ಯಧರ್ಮದ ಆಶ್ರಯವನ್ನು ಪಡೆದು ಶ್ರೀ ಧರ್ಮಪಾಲರೆಂಬ ಹೆಸರನ್ನು ಪಡೆದರು ಶ್ರೀಯುತರು ತಾವು ಈಗ ಹಿಂದೂ ಧರ್ಮವನ್ನು ಸ್ವೀಕರಿಸಲು ಕಾರಣವೇನೆಂಬುದನ್ನು ವಿವರಿಸಿ ಭಾಷಣಮಾಡಿದರು ಶ್ರೀ ನೋಹನಪ್ಪ ತಿಂಗಳಾಯರು ಆಚಾರ್ಯರಾಗಿದ್ದರು ಶುದ್ಧಿಯಾದ ಮೇಲೆ ಫಲಾಹಾರಾದಿ ಸತ್ಕಾರವೂ ನಡೆಯಿತು

ಫೈಜಪುರ ಕಾಂಗ್ರೆಸ್ ದಿನಾಚರಣೆ
ಪ್ರಚಂಡ ಜನ ಸಮೂಹ ಮೆರವಣಿಗೆ

ಫೈಜಪುರ ಕಾಂಗ್ರೆಸ್ ದಿನಾಚರಣೆಯು ಕಳೆದ ತಾ ೧ರಲ್ಲಿ ಜರಗಿತು ಬೆಳಿಗ್ಗೆ ೬ ಘಂಟೆಗೆ ಕಾಂಗ್ರೆಸ ಕಚೇರಿಯಿಂದ ಪ್ರಭಾತಪೇರಿ ಹೊರಟು ನಗರದ ಅನೇಕ ಕಡೆಗಳಲ್ಲಿ ರಾಷ್ಟ್ರಗೀತೆ ಹಾಡುತ್ತಾ ಸಂಚರಿಸಿ ಸುಮಾರು ೮ ಘಂಟೆಗೆ ಮೈದಾನವನ್ನು ಸೇರಿತು ಅಲ್ಲಿ ಶ್ರೀ ಉಮಾರಾಯ ಮಲ್ಯರು ರಾಷ್ಟ್ರಧ್ವಜ ವನ್ನೇರಿ ದರ ವಂದನೆ ಮಾಡಿದ ನಂತರ ರಾಷ್ಟ್ರಧ್ವಜದ ಮಹತ್ವವನ್ನು ಕುರಿತು ಒಂದು ಚಿಕ್ಕ ಭಾಷಣ ಮಾಡಿದರು ಸಾಯಂಕಾಲ ೪ ಘಂಟೆಗೆ ಪುನಃ ಮೆರವಣಿಗೆಯು ಕಾಂಗ್ರೆಸು ಕಚೇರಿಯಿಂದ ಹೊರಟು ನಗರದ ಹಲವು ಬೀದಿಗಳಲ್ಲಿ ಸಂಚರಿಸಿ ೬ ಘಂಟೆಗೆ ಮೈದಾನಕ್ಕೆ ಬಂದು ಮುಟ್ಟಿತು ಅಲ್ಲಿ ಶ್ರೀ ಬಿ ವೆಂಕಟ್ರಾಯ ಬಾಳಿಗರ ಅಧ್ಯಕ್ಷತೆಯಲ್ಲಿ ಪ್ರಚಂಡಮಹಾಸಭೆ ನಡೆಯಿತು ಶ್ರೀ ಪಿ ಟಿ ಕೈರೇಳು ದೇಶಭಾಷೆಯಲ್ಲಿ ಮಾತನಾಡುತ್ತ ಹಳ್ಳಿಯವರ ದುಃಸ್ಥಿತಿ ಹಳ್ಳಿಯವರು ಸಾಲದಿಂದ ಹಾಳಾಗಿ ಕಷ್ಟಪಡುವುದು, ಹಳ್ಳಿಗರ ವಿಷಯದಲ್ಲಿ ಸರಕಾರದವರಿಗೆ ಇರತಕ್ಕ ಅಲಕ್ಷ್ಯ ಇತ್ಯಾದಿ ವಿಷಯಗಳನ್ನು ಹೇಳಿ ಈ ದುಸ್ಥಿತಿಯಿಂದ ಜನರನ್ನು ಉದ್ಧರಿಸಲು ಕಾಂಗ್ರೆಸ ಸಂಸ್ಥೆಯವರೇ ಸಮರ್ಥರೆಂದೂ ಆದಕಾರಣ ಕಾಂಗ್ರೆಸ್ ಕಡೆಯಿಂದ ಉಮೇದುವಾರರನ್ನು ಎಸೆಂಬ್ಲಿಗೆ ಕಳುಹಿಸಬೇಕೆಂದೂ ಹೇಳಿದರು ಶ್ರೀ ಕೆ ಕೃಷ್ಣಯ್ಯ ಸೆಟ್ಟಿ ಕಾಂಗ್ರೆಸಿಗೆ ಮತದಾರರು ಏತಕ್ಕಾಗಿ ಮತಕೊಡಬೇಕೆಂಬುದನ್ನು ವಿವರಿಸಿ ಕಾಂಗ್ರೆಸಿಗೆ ಮತಕೊಡದ ಜಸ್ಟಿಸ್ ಪಕ್ಷದವರಿಗೆ ಕೊಟ್ಟಲ್ಲಿ ಅದು ನಮ್ಮ ದಾಸ್ಯಶೃಂಖಲೆಯನ್ನು ಬಲಪಡಿಸುವುದಕ್ಕಾಗಿ ಉಪಯೋಗಿಸಲ್ಪಡುತ್ತದೆಂದೂ ಹೇಳಿ ಪ್ರತಿಯೊಬ್ಬರೂ ತಮ್ಮ ಮತಗಳನ್ನೂ ಕಾಂಗ್ರೆಸಿನವರಿಗೇನೆ ಕೊಡಬೇಕೆಂದು ಪ್ರಾರ್ಥಿಸಿದರು ಶ್ರೀ ಮಾರ್ಸಿಯವರು ತಮ್ಮ ಭಾಷಣದಲ್ಲಿ ಹೊಸವರ್ಷದಲ್ಲಿ ಹೊಸನಿರ್ಧಾರಗಳನ್ನು ಮಾಡಬೇಕೆಂದೂ ಆದ್ದರಿಂದ ಕಾಂಗ್ರೆಸಿಗೆ ಬೆಂಬಲಕೊಡಬೇಕೆಂದು ಇಂದೇ ನಿರ್ಧರಿಸಬೇಕೆಂದೂ ಮತದಾರರಲ್ಲಿ ವಿಜ್ಞಾಪಿಸಿದರು ಶ್ರೀ ಉರಾಮರಾಯ ಮಲ್ಯರು ಫೈಜಪುರದಲ್ಲಿ ಆದ ನಿರ್ಣಯಗಳನ್ನು ಒಂದೊಂದಾಗಿ ವಿವರಿಸಿ ಅವುಗಳಿಗನುಸಾರವಾಗಿ ನಾವು ನಡೆಯಬೇಕೆಂದರು ಅಧ್ಯಕ್ಷರು ತಮ್ಮ ಉಪಸಂಹಾರ ಭಾಷಣದಲ್ಲಿ ಪೂರ್ವೋಕ್ತ ಭಾಷಣಕರ್ತರ ಅಭಿಪ್ರಾಯಗಳನ್ನು ಪುಷ್ಟೀಕರಿಸಿ ಸರ್ವರೂ ಕಾಂಗ್ರೆಸಿಗೆ ಬೆಂಬಲಕೊಡಬೇಕೆಂದು ಪ್ರಾರ್ಥಿಸಿದರು ಅನಂತರ ಶ್ರೀ ಕೆ ಹೈದರು ವಂದನಾರ್ಪಣೆ ಮಾಡಿದ ಬಳಿಕ ಸಭೆ ಸಮಾಪ್ತವಾಯಿತು

ಆ ದಿನದ ಮೆರವಣಿಗೆಯಲ್ಲಿ ಸ್ವಯಂಸೇವಕರು ...

ಉಡುಪಿ

ದ. ಕ. ಜಿಲ್ಲಾ ಆದಿದ್ರಾವಿಡ ಅಧ್ಯಾಪಕ ಪರಿಷತ್ತು

ಮೇಲಿನ ಸಂಘದ ೨ನೇ ಪರಿಷತ್ತು ಡಿಸೆಂಬರ ೩೦ ೩೧ರಲ್ಲಿ ಉಡುಪಿ ಮುನ್ಸಿಪಲ್ ಮೈನ್ ಶಾಲೆಯಲ್ಲಿ ಪೂರ್ವಾಹ್ನ ಘಂಟೆ ೧೧ಕ್ಕೆ ಜರಗಿತು ಶ್ರೀ ಇ ಸುಬ್ಬಕೃಷ್ಣಯ್ಯ M A B Sc, B D ಯವರು ಪರಿಷತ್ತನ್ನು ತೆರೆದರು ಉಡುಪಿಯ ಪ್ರಮುಖ ವಕೀಲರಲ್ಲೊಬ್ಬರಾದ ಶ್ರೀ. ಪಿ ಎನ್ ನಾಡವರಾಯರು ಅಧ್ಯಕ್ಷತೆಯನ್ನು ವಹಿಸಿದ ನಂತರ ಕಾರ್ಯದರ್ಶಿಯವರ ವರದಿಯು ಸರ್ವಾನುಮತದಿಂದ ಮಂಜೂರಾಯಿತು ಶ್ರೀ ಕೆ ವಾಮನ ಮಾಸ್ತರರ ಭಾಷಣವಾಗಿ ಶ್ರೀಗಳು ದ ಪಿ ಜಿ ಅಬಾರ್, ಎಮ್ ಮಾರ್ಟಿನ್ (ರೇಂಜ ಇನ್ಸ್‌ಪೆಕ್ಟರ್) ಪಿ ಎನ ಸೆಟ್ಟಿ ಮೊದಲಾದವರು ಉಪನ್ಯಸಿತ್ತರು ಅಪರಾಹ್ನ ೩ ಘಂಟೆಕ್ಕೆ ಪುನಃ ಪರಿಷತ್ತು ನೆರೆದು ಶ್ರೀ ಗೋಪಾಲ ಸಾಲಿಯಾನರನ್ನು ಕಾರ್ಯದರ್ಶಿಯಾಗಿಯೂ ಶ್ರೀ ಕ ವಾಮನ ಮಾಸ್ತರನ್ನು ಜತೆ ಕಾರ್ಯದರ್ಶಿಯಾಗಿಯೂ ಶ್ರೀ ಗಣೇಶರನ್ನು ಖಜಾನ್ಚಿ ಮತ್ತು ಶ್ರೀ ಬಿ ಚಂದರ ಮಾಸ್ತರನ್ನು ಉಪಾಧ್ಯಕ್ಷರಾಗಿ ಆರಿಸಲಾಯಿತು ದಿವಂಗತ ಪಿ ರ ಮಚಂದ್ರರಾಯರ ದಿನಾಚರಣೆಯನ್ನು ಮಾಡುವದೇ ಮೊದಲಾದ ಕೆಲವು ನಿರ್ಣಯಗಳಾಗಿ ಅಧ್ಯಕ್ಷರ ಮತ್ತು ಕಾರ್ಯದರ್ಶಿಯವರ ವಂದನಾರ್ಪಣೆಯ ನಂತರ ಸಭೆ ಮುಗಿಯಿತು ಅಧ್ಯಕ್ಷರಾದ ಶ್ರೀ ಪಿ ಎನ್ ನಾಡವರಾಯರು ಸಕಲರಿಗೆಲ್ಲಾ ಲಘೂಪಾಹಾರ ಮತ್ತು ರಾತ್ರಿ ಭೋಜನ ಮತ್ತು ದಿವಂಗತ ಪಡಮುನ್ನೂರು ರಾಮಚಂದ್ರರಾಯರ ದಿನಾಚರಣೆಯ ಸಭೆ ಭಾಷಣಗಳು ನಡೆದುವು

ದಿವಂಗತ ಪಡಮುನ್ನೂರು ರಾಮಚಂದ್ರ ರಾಯರ ದಿನಾಚರಣೆ

ದ ಕ ಜಿಲ್ಲೆಯ ಆದಿ ದ್ರಾವಿಡ ಸಮಾಜದ ಏಳಿಗೆಗಾಗಿ ಸ್ಥಾಪಿಸಲ್ಪಟ್ಟ ಶ್ರೀ ಶಿವ ಸಮಾಜದವರು ದಿವಂಗತ ಪಡಮುನ್ನೂರು ರಾಮಚಂದ್ರರಾಯರ ದಿನಾಚರಣೆಯನ್ನು ವಕೀಲ್ ಶ್ರೀ ಎಮ್ ವಿಟ್ಠಲ ಕಾಮತರ ಅಧ್ಯಕ್ಷತೆಯಲ್ಲಿ ಜರಗಿಸಿದರು ಶ್ರೀಗಳಾದ ಕೊರಡ್ಕಲ್ ಶ್ರೀನಿವಾಸರಾಯರು ಹರಿಜನರ ಕರ್ತವ್ಯದ ಕುರಿತು ಚೆಲೋ ಭಾಷಣವಿತ್ತರು, ಶ್ರೀ ಎಮ್ ವಿಟ್ಠಲ ಹೆಗ್ಡೆಯವರು ಹರಿಜನರ ಹದನಕ್ಕೆ ಮೂಲ ಕಾರಣವ ದ ಆರ್ಥಿಕ ಸಮಸ್ಯೆಯನ್ನು ವಿವರಿಸಿದರು, ಶ್ರೀ ಯು ನಾಗಪ್ಪ ಕಾಮತರ ವಿಮರ್ಶಾತ್ಮಕವಾಗಿ ಅಧ್ಯಕ್ಷರು ದಿವಂಗತರ ಕುರಿತು ಅನುಭವಪೂರ್ಣ ಉಪನ್ಯಾಸವಿತ್ತು ಎಲ್ಲರೂ ಕಾಂಗ್ರೆಸು ಉಮೇದುವಾರರಿಗೆ ಬರುವ ಚುನಾವಣೆಯಲ್ಲಿ ಮತ ...

... ಶ್ರಮದಿಂದ ಕೆಲಸಮಾಡಿದ್ದು ಸ್ತುತ್ಯ ಸಭಾಗೃಹ ಕಾಲಿ ಅನಂತರ ಮಾಸ್ತರಿದ್ದರೆ ಶಿಸ್ತಿನ ಮೆರವಣಿಗೆಯು ನಡೆದಿಲ್ಲದೆಂದು ಹಲವರ ಅಭಿಪ್ರಾಯ ... ಬೇಯುವ ಆವಶ್ಯಕತೆಯನ್ನು ಮನಗಾಣಿಸಿದರು ಕಾರ್ಯದರ್ಶಿ ಶ್ರೀ ಪಿ ರಾಮಚಂದ್ರನವರು ವಂದನಾರ್ಪಣೆಗಳನ್ನಿತ್ತರು ಸಭೆಗೆ ಸುಮಾರು ೩೦೦ ಹರಿಜನರು ನೆರೆದು ಬಂದಿದ್ದರು, ನಗರ ಸಂಕೀರ್ತನೆಯೂ ಇತ್ತು

ಕೃಷ್ಣ ಸಂದೇಶಕಾರರಿಗೆ ಜುಲ್ಮಾನೆ

ಶ್ರೀಕೃಷ್ಣಸಂದೇಶದ ಸಂಪಾದಕರ ಮೇಲೆ ಶ್ರೀಯುತ ಕೊಂಡ ಶಿವರಾಮ ಕಾರಂತರು ನಡೆಸಿದ ಮಾನನಷ್ಟ ದಾವೆಯು ನಿನ್ನೆಯ ತಾ ೪ ೧ ೩೭ರಲ್ಲಿ ಮಂಗಳೂರಿನಲ್ಲಿ ಡಿಸ್ಟ್ರಿಕ್ಟ್ ಆಫೀಸರರಿಂದ ನಡೆದು ಸಂದೇಶದ ಸಂಪಾದಕರಾದ ಶ್ರೀ ಮುದ್ರಾಡಿ ಜನಾರ್ದನಾಚಾರ್ಯರಿಗೆ ೨೦೦ ರೂಗಳ ಜುಲ್ಮಾನೆಯಾಗಿದೆ

ಈಗ ಬಂದ ವಾರ್ತೆ.

ಸ್ಪೈನಿನ ಯುದ್ಧ ಹಡಗವೊಂದನ್ನು ಜರ್ಮನರು ಹಿಡಿದಿಟ್ಟಿರುವದಕ್ಕಾಗಿ ಜರ್ಮನಿ-ಸ್ಪೈನ್ ಸರಕಾರಗಳೊಳಗೆ ಪತ್ರವ್ಯವಹಾರ ನಡೆದು ಪರಿಸ್ಥಿತಿಯು ವಿಷಮವಾಗಿದೆ ಜರ್ಮನರು ಆ ಹಡಗವನ್ನು ಬಿಡಲೊಪ್ಪುವದಿಲ್ಲ. ಜನವರಿ ತಾ 1ರಲ್ಲಿ ಸ್ಪೈನಿನ ಲೆಂಟೆಂಡೋ ಎಂಬಲ್ಲಿಗೆ ಸಮೀಪದಲ್ಲಿ ಹೋಗುತ್ತಿದ್ದ ಬ್ರಿಟಿಶರ 'ಬ್ಲೇಕ್ ಓಕ್' ಎಂಬ ಹಡಗದ ಮೇಲೆ ದಂಗೆಗಾರರು ಗುಂಡು ಹಾರಿಸಿದರು. ಹಡಗವು ಶೀಘ್ರವಾಗಿ ಓಡಿಹೋದುದರಿಂದ ಅಪಾಯದಿಂದ ಪಾರಾಯಿತು

ಮದ್ರಿದಿನ ಸುತ್ತುಕಲಿಯುವ ಮೇಲೆ ದಾಳಿಯನ್ನು ದಂಗೆಗಾರರ ಎಲ್ಲಾ ಪ್ರಯತ್ನಗಳು ನಿಷ್ಫಲವಾಗಿವೆ. ಕ್ರಿಸ್‌ಮಸ್ ಸಮಾರಂಭದ ಕಾಲದಲ್ಲಿಯೂ ಮೇದ್ರಿದಿನ ಮೇಲೆ ಬಾಂಬುಗಳು ಬಿದ್ದು ನಾಗರಿಕರ ನಿದ್ದೆಯನ್ನು ಕೆಡಿಸಿದವು

ಮ ಗಾಂಧಿಯವರು ಈ ತಿಂಗಳ ತಾ 12ಕ್ಕೆ ತಿರುವಾಂಕೂರಿಗೆ ಬಂದು 13-14ರ ವರೆಗ ಸಂಚರಿಸಲಿರುವರು

ಜರ್ಮನಿಯಲ್ಲಿ ಕಲಿಯುವುದು ಕಡಿಮೆ ಮಾಡಿಯಾದರೂ ಯುದ್ಧವಿದ್ಯೆಯನ್ನು ಕಲಿಯಬೇಕು

ಯುದ್ಧಕ್ಕಾಗಿ ಪರೀಕ್ಷೆಗಳಿಗೆ ಕಲಿಯಬೇಕಾದ ವಿಷಯಗಳ ವಿಸ್ತಾರಕ್ಕೆ ಕತ್ತರಿಹಾಕಲಾಗಿದೆ ಶಿಕ್ಷಣ ಮುಗಿದ ಕೂಡಲೆ ಪ್ರತಿಯೊಬ್ಬ ಯುವಕನೂ ಸೆಟ್ಟಿಗೆ ಸೈನ್ಯಶಿಕ್ಷಣ ತರಗತಿಗೆ ಸೇರಬೇಕೆಂದೂ ನಿಯಮ

THE BOMBAY LIFE ASSURANCE Co., LTD.

ESTD 1908

Church Gate Street, Fort - - BOMBAY.

SPECIAL FEATURES.

1 Rebate on yearly payment of policies.
2 Rebate for larger assurances.
3. Accident Risk covered on small extra premiums
4. Attractive Bonuses

It pays you to represent this Company
Wanted Agents in unrepresented parts.

Apply to—

KOCHIKAR BROTHERS,

Madras Branch Secretaries

BRANCHES AT.		
P B 337 Mount Road Madras	Visveswarapuram Circle Bangalore City	Soumyabhavan Puthiyara, Calicut
Car Street Mangalore	Udipi, S India	Charni Road Bombay No 4

EVIDENCE OF SECURITY & STABILITY

FIGURES THAT SPEAK FOR THEMSELVES

TOTAL ASSETS **Rs. 80,66,600**

Summary of 1935 Accounts

Total Assets Over	Rs 80 00 000
Life Funds Over	Rs 68,00 000
Premium Income Over	Rs 22,54 000
Interest Income	Rs 3 16 000
Claims Paid ..	Rs 5 75 000

Total Claims paid Over Rs 58 00.000
Total Business in Force Over Rs 4,42,51 200

TOTAL BUSINESS IN FORCE **Rs. 4,42,51,200**

ಚಂದಾದಾರರಲ್ಲಿ

ಚಂದಾಹಣ ಬಾಕಿ ಇರುವ ನಮ್ಮ ಚಂದಾದಾರರು ಅದಷ್ಟು ಬೇಗನೇ ತಮ್ಮ ಹಣವನ್ನು ಮಣಿಯಾರ್ಡರ್ ಮೂಲಕ ದಯವಿಟ್ಟು ಕಳುಹಿಸಿಕೊಡಬೇಕಾಗಿ ಅಪೇಕ್ಷಿಸುತ್ತೇವೆ. ವಿ. ಪಿ. ಮಾಡುವದಾದರೆ ಐದಾಣೆ ಹೆಚ್ಚಿಗೆ ಬೀಳುವದು.

ನಮ್ಮೊಡನೆ ಪತ್ರವ್ಯವಹಾರ ನಡೆಸುವವರು ತಮ್ಮ ಚಂದಾ ನಂಬ್ರವನ್ನು ಸೂಚಿಸಿ ಬರೆಯಬೇಕಾಗಿ ವಿನಂತಿ.

ಮೆನೇಜರ್ ನವಯುಗ

ನವಯುಗ

ಉಡುಪಿ, ತಾ. ೭-೧-'೩೭ ಗುರುವಾರ

ಮತದಾರರ ಮುಂದೆ ಮಾಯದ ಬಲೆ.

ಹೊಸ ಸುಧಾರಣೆಯ ಕ್ರಮದಂತೆ ಜಾರಿಗೆ ಬರಲಿರುವ ನವೀನ ಕಾಯಿದೇ ಮಂಡಲಗಳಿಗೆ ಚುನಾವಣೆಯಾಗಲಿರುವ ಈ ಕಾಲದಲ್ಲಿ, ಮತದಾರರನ್ನು ವಂಚನೆಗೀಡುಮಾಡುವ ಜಸ್ಟಿಸ್‌ಪಾರ್ಟಿಯವರ ಹಂಚಿಕೆಯು ತೀರಾ ನಿಷೇಧಾರ್ಹವಿದೆ. ಕೃತ್ರಿಮ ಸಾಧನೆ, ಒಳಸಂಚು—ಇಂತಹ ತಾತ್ಕಾಲಿಕ ಪರಿಣಾಮವೀಯುವ ಉಪಾಯಗಳಿಂದ ಓಟಿನ ಬೇಟೆಗೆ ಹೊರಟವರು, ಭವಿಷ್ಯತ್ಕಾಲದಲ್ಲಿ ಮತದಾರರು ಮತ್ತು ತಮ್ಮೊಳಗೆ ಸಂಬಂಧವಿರಬೇಕೆಂಬ ಯೋಚನೆಯಿಂದಿಲ್ಲವೆಂಬುದಂತೂ, ಅವರ ಈ ತಾತ್ಕಾಲಿಕ ಶಮನಗಳಿಂದಲೇ ಸ್ಪಷ್ಟ! ಹಾಗಾದರೆ ಮತದಾರರೇಕೆ ವಂಚಿಸಲ್ಪಡಬೇಕು? ಈಗ ಅವರ ಮೇಲೆ ಪ್ರಯೋಗಿಸಲ್ಪಡುತ್ತಿರುವ ಜುಲುಮೆ, ಭರವಸೆ, ಆಶ್ವಾಸನೆ, ಒತ್ತಾಯ—ಇವುಗಳಿಂದೆಲ್ಲಾ ಸೋತುಹೋದ ಓಟರರು ಹೇಗಾದರೂ ಓಟನ್ನೊಪ್ಪಿ ಹೊತ್ತು ಹಾಕಿ ಅಪಾಯದಿಂದ ತಪ್ಪಿಸಿಕೊಳ್ಳೋಣ ಎಂದು ಚಡಪಡಿಸುತ್ತಿರಬಹುದು! ಈ ಮುಷ್ಟೆ ತಾಳ್ಮೆಯಿಂದ ತಮ್ಮ ಓಟಿಗೆಂತಹ ಮಹತ್ವವಿದೆಯೆಂಬುದನ್ನು ಒಂದರೆಘಳಿಗೆ ಯೋಚಿಸಿ ನೋಡಿದರೆ ಅವರೊಂದು ನಿರ್ಧಾರಕ್ಕೆ ಬಾರದಿರರು; ಆ ನಿರ್ಧಾರದ ಬಲದಿಂದ ತಮ್ಮ ತೊಂದರೆಗಳನ್ನು ಜಯಿಸದಿರರು. ಓಟರರನ್ನು ಕಾಣಲು ಬರುವವರಲ್ಲಿ ವಿಶಾಲ ರಾಷ್ಟ್ರಪ್ರೇಮವಿರಬೇಕು; ಜನಸೇವೆಯ ನಿಶ್ಚಿತ ಕಾರ್ಯಕ್ರಮಗಳಿರಬೇಕು. ಅವುಗಳನ್ನು ಮತದಾರರ ಇದಿರಿಗಿಟ್ಟ ಮೇಲೆ, ಬಾಕಿಯುಳಿಯುವವೆಂದರೆ ಅವರಲ್ಲಿ ಕರ್ತವ್ಯ ಜಾಗ್ರತಿಯನ್ನುಂಟುಮಾಡಿ ಅದನ್ನನುಸರಿಸುವಂತೆ ಮಾಡುವ ಒಂದೇ ಕೆಲಸ! ಇದೀಗ ಓಟನ್ನು ಕೊಡುವವರು ಮತ್ತು ಪಡೆಯುವವರಲ್ಲಿ ಇರಬೇಕಾದ ಸಂಬಂಧ. ಓಟಿನ ಅಧಿಕಾರವು ಉಮೇದ್ವಾರಿಗೆ ದಾನಮಾಡುವ ಒಂದೇ ಕೆಲಸಕ್ಕಾಗಿರುವವಲ್ಲದೆ, ಅದು ಅನ್ಯ ಉಪಯೋಗಕ್ಕೆ ಬೀಳುವದಿಲ್ಲವಷ್ಟೆ! ಹಾಗಿರುವಾಗ ಅದನ್ನು ಪಡೆಯುವವರಲ್ಲಿರುವಷ್ಟೇ ಆತುರವು ಕೊಡುವವರಲ್ಲಿಯೂ ಇರುವುದು ಸ್ವಾಭಾವಿಕ. ಹಾಗಾಗಬೇಕಾದರೆ ಮಾತ್ರ ನಾವು ತೋರಿಸಿಕೊಟ್ಟ ಸಂಬಂಧವು ಅವರಿಬ್ಬರೊಳಗಿರಬೇಕು. ಆ ಸಂಬಂಧವಿಲ್ಲವಾದರೂ ಓಟು ಮಾತ್ರ ನಮ್ಮ ಜಸ್ಟೀಸ್ ಪಾರ್ಟಿಗೆ ಬೇಕಾಗಿದೆ; ಅದನ್ನು ಗಳಿಸುವದೆಂದರೆ ಆ ಪಾರ್ಟಿಗೆ ಬಹು ಪ್ರಯಾಸದ ಕೆಲಸವಾಗಿಹೋಗಿದೆ. ಓಟನ್ನು ಪಡೆಯುವರೆ ನ್ಯಾಯವಾದ ಹಕ್ಕು ಜಸ್ಟಿಸ್ ಪಾರ್ಟಿಯವರಲ್ಲಿಲ್ಲದಿರುವಾಗ,—ಹಾಗಿದ್ದೂ ಓಟು ಕೇಳದಿರಲು ಸಾಧ್ಯವಿಲ್ಲದ ಸ್ವಂತ ಕಾರಣಗಳಿರುವಾಗ,—ಅವರೇನು ಮಾಡಬೇಕು? ಓಟರರ ಮನಸ್ಸನ್ನು ಅಡ್ಡಹಾದಿಗೆಳೆಯಬೇಕು; ಓಟನ್ನೊಮ್ಮೆ ಅವರ ಕೈತಪ್ಪಿಸಿ ತಮ್ಮ ಬೊಕ್ಕಸದೊಳಗೆ ಬೀಳುವಂತೆ ಮಾಡುವ ಎಲ್ಲಾ ಹಂಚಿಕೆಗಳನ್ನೂ ಮಾಡಬೇಕು! ಅವರ ಸರ್ವಸ್ವವೂ ಓಟು ಪಡೆದು ಅಧಿಕಾರ ಸಂಪಾದಿಸುವುದೊಂದೇ ಆಗಿರುವಾಗ ಅದಕ್ಕಾಗಿ ಮಾಡದಿರಬೇಕಾದ ಕೃತ್ಯವಾವುದೂ ಅವರ ಮಿಟ್ಟಿಗಿಲ್ಲ! ಅದಕ್ಕಿಂತ ದೊಡ್ಡದಾದ ಧ್ಯೇಯವಿದ್ದರಲ್ಲವೇ ಆ ಧ್ಯೇಯಪಾಲನೆಗೆ ಬೇಕಾಗುವ ನ್ಯಾಯವನ್ನು ರಕ್ಷಿಸುವ ಅಗತ್ಯ ಬೀಳುವುದು? ಅಂತೂ ಅವರ ಎಲ್ಲಾ ಕುತಂತ್ರಗಳು ಕೇವಲ ತಮ್ಮ ಪಕ್ಷದ ಇರಸ್ತಿಕೆಗಾಗಿ! ಅವರು ಅವರ ಹಾದಿಯಿಂದಲೇ ತಮ್ಮ ಪಕ್ಷದ ಹೆಚ್ಚಳಕ್ಕೆ ಪ್ರಯತ್ನಿಸುವಾಗ ಮತದಾರರೂ ತಮ್ಮ ಹಿತವು ಅಡಕವಾಗಿರುವ ವಿಶಾಲ ಧ್ಯೇಯದ ಕಡೆಗೆ ದೃಷ್ಟಿಯಿಡಲಿ!

ದಕ್ಷಿಣಕನ್ನಡ ಜಿಲ್ಲೆಯ ಕುರಿತು ಹೇಳುವದಾದರೆ ಇಷ್ಟೊಂದು ಶಿಖಂಡಿ ತನವನ್ನು ಜಸ್ಟೀಸ್ ಪಕ್ಷವು ಬೇರೆಲ್ಲಿಯೂ ತೋರಿಸಿರಲಾರದು. ಇಲ್ಲಿ ಕೊಂಗ್ರೆಸ್ ಉಮೇದ್ವಾರಿಗಳ ಇದಿರಾಳಿಗಳಾಗಿ ನಿಂತ ಪ್ರತಿಯೊಬ್ಬರೂ ಶೇಕಡಾ ನೂರರಷ್ಟು ಜಸ್ಟೀಸರು—ಚುನಾವಣೆಯಲ್ಲಿ ಜಯಶೀಲರಾದರೆ ಹೆಗ್ಗಳಿಕೆಯ ಭೇರಿಯನ್ನು ಬಾರಿಸುತ್ತಾ ಖಂಡಿತವಾಗಿಯೂ ಜಸ್ಟೀಸು ಪಾರ್ಟಿಯ ಸೆರಗನ್ನು ಹಿಡಿಯುವವರು. ಆದರೂ ಅದನ್ನು ಮತದಾರರಲ್ಲಿ ಹೇಳುವದೆಂದರೆ, ಅದು ಅವರ ಶಕ್ತಿಗೆ ಮಿಕ್ಕಿದ ಎದೆಗಾರಿಕೆಯಾಗಿ ನಿಂತಿದೆ; ಅವರು ಓಟರರ ಮುಂದೆ ಸುಳಿಯುವಾಗ ಪ್ರಯತ್ನಪಟ್ಟು ತಮ್ಮ ಪಾರ್ಟಿ ಹೆಸರನ್ನು ಬಚ್ಚಿಡುತ್ತಿದ್ದಾರೆ. ತಪ್ಪುಗಾರನಲ್ಲಿಯಾದರೂ ಆತ್ಮವಿಶ್ವಾಸವಿರಬೇಕು. ಇತರರಿಂದ ತನ್ನ ಪಕ್ಷಕ್ಕೆ ಸೈ ಗುಟ್ಟಿಸುವ ಶಕ್ತಿಯಿರಲಿ, ಇಲ್ಲದಿರಲಿ - ತನ್ನವಾದಕ್ಕೆ ತಾನಾದರೂ ಒಂದು ಆಧಾರವಾಗಿ ನಿಂತಿರಬೇಕು. ಇಲ್ಲಿಯ ಜಸ್ಟೀಸರು ತಮ್ಮನ್ನು ತಾವೇ ಅಲ್ಲವೆನ್ನುತ್ತಿದ್ದಾರೆ; ತಮ್ಮ ವಾದವನ್ನು ತಮ್ಮಲ್ಲಿಯೇ ಪೂರ್ಣವಾಗಿ ಜೀರ್ಣಿಸಿಕೊಂಡು, ಅಂಗೈ ಮುಗಚುತ್ತಿದ್ದಾರೆ! ಮತದಾರರನ್ನು ಹೀಗೂ ವಂಚಿಸಬಹುದೆ? ಅದರ ಪುರಸ್ಕರ್ತರೇ ಈ ರೀತಿ ಹೆಸರೆತ್ತಲು ನಾಚುತ್ತಿರುವ ಜಸ್ಟೀಸು ಪಾರ್ಟಿಗೆ ಕೊಟ್ಟ ಓಟೆಂಬುದು ಆಕಾಶದಲ್ಲಿ ಬರೆದ ಅಕ್ಷರವಾಗಲಾರದೆ? ಇವುಗಳನ್ನೆಲ್ಲಾ ಓಟರರೇಕೆ ಯೋಚಿಸಬಾರದು?

ಇವುಗಳನ್ನೆಲ್ಲಾ ನೋಡುವಾಗ ಜಸ್ಟೀಸ್ ಪಕ್ಷದ ಉಮೇದ್ವಾರರಿಗಿರುವದು ಸ್ವಂತ ಪಕ್ಷದ ಮೇಲಿನ ವಿಶ್ವಾಸವಲ್ಲ; ಬಣ್ಣ ಬದಲಾಯಿಸಿಕೊಂಡುಹೋಗಿ ಮತದಾರರನ್ನು ಒಲಿಸಬಹುದೆಂಬ ವಿಶ್ವಾಸ! ಅವರ ಈ ವಿಶ್ವಾಸವಿಲ್ಲದೆ ಮತದಾರರೆಲ್ಲಾ ಅಜ್ಞಾನಿಗಳೆಂಬ ಅರ್ಥ! ಸಾರ್ವಜನಿಕರಿಗೆ ಇದಕ್ಕಾ ಮಿಕ್ಕಿದ ಅವಮಾನವೇನಿದೆ?

ದೇಶ — ವಿದೇಶ

ಕೊಡಗು ಶಾಸನ ಸಭೆಯ ಏಳು ಮಂದಿ ಸದಸ್ಯರು ರಾಜಿನಾಮೆ ಹಾಕಿದರು.

ಅವರು ಸುಮಾರು ಹನ್ನೊಂದು ವರ್ಷಗಳಿಂದ ವೀರರಾಜೇಂದ್ರ ಪೇಟೆಯಲ್ಲಿರುವ ದಕ್ಷಿಣ ಕೊಡಗಿನ ಏಕಮಾತ್ರ ಪ್ರಾಮುಖ್ಯ ಆಸ್ಪತ್ರೆಗೆ ಉತ್ತಮ ದರ್ಜೆಯ ಡಾಕ್ಟರರನ್ನು ನೇಮಿಸಬೇಕೆಂದು ಕೇಳಿಕೊಳ್ಳುತ್ತಿದ್ದರಂತೆ. ಈ ಸರ್ತಿ ಆ ಸ್ಥಾನವು ಖಾಲಿಬಿದ್ದಾಗಲಾದರೂ ತಮ್ಮ ಬೇಡಿಕೆಯನ್ನು ಕಮಿಷನರು ಪೂರೈಸುವರಾಗಿ ನಂಬಿದ್ದರು ಅವರು. ಆದರೆ ಸಾಮಾನ್ಯ ವೈದ್ಯನೊಬ್ಬನ ನೇಮಕವಾಯಿತು. ಆದುದರಿಂದ ತಮ್ಮ ಅಸಂತುಷ್ಟಿ ಪ್ರದರ್ಶನಕ್ಕಾಗಿ ಸದಸ್ಯತನ ತ್ಯಾಗ.

ತುರ್ಕಿಯು ತೋರಿಸಿರುವ ಅನುಸರಣೀಯ ಮಾರ್ಗ

ಶಿಕ್ಷೆಹೊಂದಿದವರು ಅದು ಮುಗಿದ ಮೇಲೆ ಆ ಕಳಂಕದ ನಿಮಿತ್ತವಾಗಿ ಯಾವ ಜೀವನ ಹಾದಿಯನ್ನು ಹಿಡಿಯಲಾರದೆ ಮತ್ತು ದುಷ್ಕಾರ್ಯ ಪ್ರವರ್ತಿಗಳಾಗುತ್ತಿರುವುದನ್ನು ತಪ್ಪಿಸಲಿಕ್ಕಾಗಿ ತುರ್ಕಿಯ ನ್ಯಾಯಾಂಗ ಶಾಖೆಯ ಮಂತ್ರಿಗಳು ಅನುಸರಣೀಯವಾದ ಹಾದಿಯನ್ನು ಹಾಕಿದ್ದಾರೆ. ಶಿಕ್ಷೆ ಹೊಂದಿದವರನ್ನು ಒಂದು ದ್ವೀಪದಲ್ಲಿ ಇರಿಸಿ ಅವರಲ್ಲಿ ಸ್ವತಂತ್ರ ಜೀವನವನ್ನು ಅವರವರ ಯೋಗ್ಯತಾನುಸಾರವಾಗಿ ಪ್ರಾಮಾಣಿಕತನದಿಂದಲೂ ಆತ್ಮಗೌರವದಿಂದಲೂ ನಡೆಯಿಸುವಂತೆ ತಕ್ಕ ಉದ್ಯೋಗಗಳನ್ನು ಕಲ್ಪಿಸಿಕೊಡುತ್ತಾರೆ, ಫಲಿತಾಂಶವು ಪ್ರಶಂಸನೀಯವಾಗಿರುವುದು.

ಜಡ್ಜರಲ್ಲಿ ಕರುಣೆ ಹುಟ್ಟಿಸಲು ಇಂಗ್ಲೆಂಡಿನಲ್ಲಿ ಸ್ತ್ರೀಯರ ಯುಕ್ತಿ!

ತನಗೆ ಮಗುವಿಲ್ಲದಿದ್ದರೆ ಬಾಡಿಗೆಗಾದರೂ ಒಂದೆರಡು ಮಕ್ಕಳನ್ನು ಪಡೆದು ಕೈಕಂಕುಳುಗಳಲ್ಲಿರಿಸಿಕೊಂಡು ಪ್ರತಿವಾದಿಸ್ಥಾನದಲ್ಲಿ ಸ್ವತಃ ಅಥವಾ ತನ್ನ ಗಂಡನ ಪರವಾಗಿ ನಿಲ್ಲುವಳು. ಹಲವು ಮಕ್ಕಳ ತಾಯಿಯ ಸಂಕಷ್ಟವೇ ಎಂದು ಜಡ್ಜರು ಕನಿಕರಗೊಂಡು ಕೊಡತಕ್ಕ ಸಾಲ ತೀರ್ಮಾನಕ್ಕೆ ಅನುಕೂಲವಾದ ಕಂತುಗಳ ಅಥವಾ ಕೆಲವಂಶ ರಿಯಾಯಿತಿಯ ತೀರ್ಪು ಕೊಡುವರು. ಕಳೆದ ತಿಂಗಳಲ್ಲಿ ಬೆಳಗ್ಗೆ ಸ್ತ್ರೀ ಪ್ರತಿವಾದಿಯೊಬ್ಬಳ ಕಂಕುಳಲ್ಲಿದ್ದ ಮಗುವೇ ಮಧ್ಯಾಹ್ನದ ಮೇಲೆ ಮತ್ತೊಬ್ಬಳು ಪ್ರತಿವಾದಿಯ ಸೊಂಟವೇರಿತ್ತು! ಗುಟ್ಟು ರಟ್ಟಾಯಿತು! ಇಂತಹ ಯುಕ್ತಿಯನ್ನು ಹೂಡುವವರಿಗೆ ಕಠಿಣ ಶಿಕ್ಷೆ ಕೊಡಲಾಗುವುದೆಂದು ಸಾರಲಾಗಿದೆ.

ಎಡ್ವರ್ಡರಿಗೆ ಮೇಡಂ ಹೆರ್ನಾಂಡ್ ಬಟ್ರೆಂಡಳ ಮಹಾತ್ಯಾಗ

ಅವಳೊಬ್ಬ ಫೊಟೋಗ್ರಾಫ್ ಸ್ಟುಡಿಯೋ ಇಟ್ಟವಳು. ಎಡ್ವರ್ಡರು ಸಿಂಪ್ಸನ ಕೊಡನೆ ನೌಕಾವಿಹಾರ ಯಾತ್ರೆ ಮಾಡಿದಾಗ ತೆಗೆಯಲ್ಪಟ್ಟ ಹಲವು ಪ್ರಣಯ ಚಿತ್ರಗಳನ್ನೆಲ್ಲ 'ಡೆವೆಲೊಪ್' ಮಾಡಲಿಕ್ಕೆ ಎಡ್ವರ್ಡರು ಅವಳಿಗೆ ಕಳುಹಿಸಿದ್ದರು. ಪ್ರತಿಯೊಂದು ಚಿತ್ರದ ಒಂದೊಂದು ಪ್ರತಿಯನ್ನು ಅವಳಿಟ್ಟುಕೊಂಡಿದ್ದಳು. ಇತ್ತೀಚೆಗೆ ಎಡ್ವರ್ಡ್ ಸಿಂಪ್ಸನಳ ಪ್ರಕರಣವು ಬಹಿರಂಗವಾದಾಗ ಪತ್ರಿಕಾಪ್ರತಿನಿಧಿಗಳು ಆ ಚಿತ್ರಗಳಿಗಾಗಿ ಅವಳು ಕೇಳಿದಷ್ಟು ಹಣಕೊಡುವುದಾಗಿ ಒಪ್ಪಿದರು. ಮಾತ್ರವಲ್ಲ ಲಕ್ಷಾಂತರ ಧನವನ್ನು ಅವಳ ಮುಂದೆ ಸುರಿದು ನೋಡಿದರು. ಆದರೆ ಅವಳೆಂದುದು ಒಂದು ಮಾತು. ಎಡ್ವರ್ಡರು ತನ್ನಲ್ಲಿಟ್ಟ ವಿಶ್ವಾಸಕ್ಕೆ ಅವರು ತಾಪತ್ರಯದಲ್ಲಿ ಸಿಕ್ಕಿರುವ ಈ ಕಾಲದಲ್ಲಿ ತಾನೆಂದೂ ವಿಶ್ವಾಸ ಘಾತಕಿಯಾಗಲಾರೆನೆಂದಳು. ಚಿತ್ರಗಳನ್ನೆಲ್ಲ ಅಗ್ನಿನಾರಾಯಣನಿಗೆ ಸ್ವಾಹಾಮಾಡಿಬಿಟ್ಟಳು!

ನಿರ್ವಿಚಾರ ವೇದಿಕೆಯಲ್ಲಿ ನರಬಲಿ!

ಅದೂ ಬೆಂಗಳೂರಿನಂತಹ ಮುಂದಾದ ನಗರದಲ್ಲಿ! ಮಕ್ಕಳನ್ನು ಎತ್ತಿಕೊಂಡು ಹೋಗುವವರು ಬಂದಿರುವರೆಂದು ಶುದ್ಧ ಸುಳ್ಳು ಸುದ್ದಿಯನ್ನು ಯಾರೋ ವಿನೋದಕ್ಕಾಗಿ ಬಿತ್ತಿದರು. ನಗರವೆಲ್ಲ ಹಬ್ಬಿತು ವಾರ್ತೆ. ಭಸ್ಮ ಚೆಲ್ಲಿ ಚಿಕ್ಕ ಮಕ್ಕಳನ್ನು ಮಂಕುಮಾಡಿ ತಮ್ಮನ್ನು ಹಿಂಬಾಲಿಸಿಕೊಂಡು ಬರುವಂತೆ ಗೈದು ಹೊಸದಾಗಿ ನಿರ್ಮಿಸುತ್ತಿರುವ ಜಲಾಶಯಕ್ಕೆ ಬಲಿಗೊಡುತ್ತಾರೆಂಬ ಆ ಸುದ್ದಿಯು ರಂಗುತಾಳಿ ಹಾಡಲು ನಾಗರಿಕರೂ ಅದನ್ನು ನಂಬಬೇಕೆ? ಗುಬ್ಬಿ ತಾಲೂಕಿನ ಪರಮೇಶ್ವರನೆಂಬವನೊಬ್ಬ ಕಬ್ಬನ್ ಪೇಟೆಯಲ್ಲಿರುವ ತನ್ನ ಸೋದರಿಯ ಮನೆಗೆ ಬಂದಿದ್ದ. ತುಸು ಹುಚ್ಚು ತರದವ. ಮಂಕನಂತೆ ನಡೆಯುತ್ತಿದ್ದ "ಅವನೇ ಅವನೇ ಹಿಡಿಯಿರಿ!" ಎಂದು ಯಾರೋ ಕೂಗಿದುದೇ ತಡ, ನೂರಾರು ಮಂದಿ ನಾಗರಿಕರೂ ಕೂಡಿ ಅವನನ್ನು ಹೊಡೆದರು. ಹುಚ್ಚುನಾಯಿಗೆ ಹೊಡೆವಂತೆ! ಆತ ಬಿದ್ದ ಪ್ರಜ್ಞೆ ತಪ್ಪಿ! ಆದರೂ ಬಿಟ್ಟರೇ? ದರದರನೆ ಬೀದಿಯಲ್ಲಿ ಎಳೆಯುತ್ತ ಒಂದೆರಡು ಪಲ್ಟಿಂಗೂ ತಂದೇ ಬಿಟ್ಟರು! ಮೈಚರ್ಮವೆಲ್ಲಾ ಕಿತ್ತುಹೋದರೂ ಬಿಡಲಿಲ್ಲ! ಪೊಲೀಸರು ಬಂದುಬಿಡಿಸಿದರೂ ಅವರ ಮೇಲೇ ಜನರು ಬಿದ್ದರು! ಸ್ಪೆಶಲ್ ಪೋಲೀಸ್ ದಳವೂ ಬರಬೇಕಾಯಿತು! ನಿರಪರಾಧಿ ಪರಮೇಶ್ವರನು ಆಸ್ಪತ್ರೆಯಲ್ಲಿ ಪ್ರಾಣಬಿಟ್ಟ! ಅಮೇರಿಕದಲ್ಲಿ ಬಿಳೀ ಜನರು ಕೆಲವೊಮ್ಮೆ ಉದ್ರಿಕ್ತರಾಗಿ ನಿಗ್ರೋ ಜನರನ್ನು 'ಲಿಂಚಿಂಗ್' ಎಂಬ ಚಿತ್ರವಧೆಗೀಡುಮಾಡುವುದನ್ನು ಕೇಳಿದ್ದೆವು. ಆದರೆ ರಾಮರಾಜ್ಯವೆಂದೆನ್ನಿಸಿಕೊಂಡ ಮೈಸೂರಿನ ಪ್ರಮುಖ ನಗರದಲ್ಲಿ ಇಂತಹ ಅಮಾನುಷ ಪ್ರಕರಣ ನಡೆದುದು ಬೆಂಗಳೂರಿನ ಕೀರ್ತಿಗೆ ಕಳಂಕ ತಂದಿರುವದೆಂದು ಬೆಂಗಳೂರಿನ ಪತ್ರಿಕೆಯೊಂದು ವಿಷಾದ ತೋರಿಸುತ್ತಿದೆ.

ಹಿಂದುವಿನ ಕೈಹಿಡಿದ ಯುರೋಪಿಯನಳು ಡೈವೋರ್ಸ್ (ವಿವಾಹರದ್ದಿಯಾತಿ) ಮಾಡಿಕೊಳ್ಳಬಹುದೆ?

ಹಾಗಾಗುವದಿಲ್ಲವೆಂದು ಎಡಿನ್‌ಬರೋ ಸೆಶ್ಶನ್ ಕೋರ್ಟಿನ ಲಾರ್ಡ್ ಜೆಮಿಸನ್ ಎಂಬ ಜಡ್ಜರ ತೀರ್ಪು. ಆನಂದ ಶಂಕರ

ರಾವ್ ಚಿಟ್ನೀಸ್ ಎಂಬವರು ಎಡಿನ್‌ಬರೋ ಯುನಿವರ್ಸಿಟಿಯಲ್ಲಿ ಕಲಿಯುತ್ತಿದ್ದಾಗ ಸಹಪಾಠಿಯಾಗಿದ್ದ ಮ್ಯಾಕ್‌ಡೋಗಲ್ ಎಂಬ ಸ್ಕೋಚ್ ಯುವತಿಯನ್ನು ಮದುವೆಯಾಗಿ ಹಿಂದೂದೇಶಕ್ಕೆ ಬಂದಳು. ಇಲ್ಲಿ ಆಕೆಗೆ ಸರಿ ಬೀಳಲಿಲ್ಲ. ಸ್ಕಾಟ್ಲೆಂಡಿಗೆ ಹಿಂತಿರುಗಿ ವಿವಾಹ ವಿಚ್ಛೇದನಕ್ಕೆ ದಾವೆ ಹಾಕಿದಳು. ಆಕೆಯ ಧರ್ಮವನ್ನೇ ಅನುಸರಿಸಿದ ವಿಧರ್ಮಿಯ ಕೈಹಿಡಿದವಳು ಅವನ ಧರ್ಮವನ್ನೇ ಅನುಸರಿದಂತಾದುದರಿಂದ ಡೈವೋರ್ಸ್ ಕಾನೂನು ಲಗಾವಾಗುವುದಿಲ್ಲ ಎಂದು ಜಡ್ಜರ ತೀರ್ಪು.

ಇಲಿಗಳ ಉಪದ್ರವದಿಂದ ಮನೆ ಬಾಡಿಗೆಕೊಡುವುದು ತಪ್ಪುವುದೆ

ಸೌತ್‌ವಾರ್ಕ್ ಕಂಟ್ರೀ ಕೋರ್ಟಿನ ಜಡ್ಜ್ ಬೆನ್‌ಸ್ಲೀವೆಲ್ಸ್ ಎಂಬವರ ಮುಂದೆ ಮನೆಬಾಡಿಗೆ ಬಾಕಿಯಾಗಿ ಪ್ರತಿವಾದಿ ಸ್ಥಾನದಲ್ಲಿ ನಿಂತ ಸ್ತ್ರೀಯರಿಬ್ಬರು ಹೀಗೆಂದರು. ಮನೆಯಲ್ಲಿ ಸಹನಾತೀತವಾದ ಮೂಷಿಕೋಪದ್ರವ! ಆದರಿಂದಾಗಿ ನಾವು ಒಳಬಾಡಿಗೆಗೆ ಕೊಟ್ಟ ಸಂಸಾರಗಳೂ ಕೋಣೆಗಳನ್ನು ಬಿಟ್ಟುಹೋದರು. ನಮ್ಮ ಮಕ್ಕಳು ನಡುರಾತ್ರಿಯಲ್ಲಿ ಬೊಬ್ಬೆಯಿಡುತ್ತಾರೆ. 'ಅಮ್ಮಾ! ಉದ್ದ ಬಾಲದ ಭಯಂಕರ ಪ್ರಾಣಿಯೊಂದು ನನ್ನ ಮುಖದ ಮೇಲೆ ಓಡಾಡುತ್ತದೆ! ತಣ್ಣಗಾದ ಏನೋ ಒಂದು ಪ್ರಾಣಿಯು ನನ್ನ ಮೈಮೇಲೆ ನೆಗೆಯುತ್ತದೆ; ಅದಕ್ಕೊಂದು ಉದ್ದ ಬಾಲವಿದೆ!' ಎಂದು. ಮನೆಯಲ್ಲಿ ಬಟ್ಟೆಬರೆ ಸುಸೂತ್ರವಾಗಿ ಉಳಿಯುವುದಿಲ್ಲ.

ಇದನ್ನು ಕೇಳಿ ಜಡ್ಜರೆಂದರು ವಾದಿಗೆ— ಮನೆಯನ್ನು ಕಿತ್ತು ತೆಗೆಯಯ್ಯಾ! ಮನೆಯಲ್ಲಿ ಒಕ್ಕಲು ನಿಲ್ಲದಂತೆ ಇಲಿಗಳು ಓಡಿಸಿದರೆ ಬಾಡಿಗೆ ಕೊಡುವುದು ಯಾರು? ಅವರಿಗೆ ಬಾಡಿಗೆ ದೊರೆಯದಿದ್ದರೆ ನಿನಗೆ ಬಾಡಿಗೆ ದೊರೆಯದಿದ್ದರೆ ನಿನಗೆ ಅವರೇನನ್ನು ಕೊಟ್ಟಾರು? ಹೋಗಯ್ಯಾ, ದಾವಾ ಡಿಸ್‌ಮಿಸ್!

ರಷ್ಯಾದಲ್ಲಿ ಸ್ತ್ರೀಯರು ಮಾಡದ ಕೆಲಸಗಳು ಇಲ್ಲ!

ಸೋವಿಯಟ್ ರಷ್ಯಾದವರು 'ತಮ್ಮ ಜನಸಂಖ್ಯೆಯಲ್ಲಿ ಅರ್ಧ ಭಾಗವಾದ ಸ್ತ್ರೀಯರನ್ನು ನಿರುಪಯೋಗ ಜೀವನದಿಂದ ಹೊರಕ್ಕೆ ತಂದು, ಅವರಿಗೆ ಕೆಲಸವನ್ನು ಕಲ್ಪಿಸಿ ಅವರನ್ನು ಮಾನವ ಸಂಘಕ್ಕೆ ಲಾಭಕರವಾದ ವ್ಯಾಪಾರಾದಿಗಳಲ್ಲಿ ನಿಯೋಗಿಸುವ, ಒಂದು ನೂತನ ಸಾಮಾಜಿಕ ಪದ್ಧತಿಯನ್ನು ಅನುಸರಿಸಿ' ಇತರ ರಾಷ್ಟ್ರಗಳವರಿಗೆಲ್ಲಾ ಆದರ್ಶಪ್ರಾಯರಾಗಿದ್ದಾರೆ.

ಸ್ತ್ರೀಯರಿಂದ ಜರಗಬೇಕಾದ ರಾಷ್ಟ್ರೀಯ ಕಾರ್ಯಗಳಿಗೆ ಪ್ರಪಂಚದಲ್ಲಿ ಮತ್ತಾವ ರಾಜ್ಯದಲ್ಲೂ ಇಷ್ಟು ಪ್ರಾಮುಖ್ಯತೆ ಕೊಟ್ಟಿರುವಂತೆ ಕಾಣುವುದಿಲ್ಲ.

ಈಗ ರಷ್ಯದ ಸ್ತ್ರೀಯರು ಎಲ್ಲಾ ಫ್ಯಾಕ್ಟರಿಗಳಲ್ಲೂ ವಿಶೇಷವಾಗಿ ಕೆಲಸಮಾಡುತ್ತಿದ್ದಾರೆ ಯಾವ ವರ್ಕ್‌ಶಾಪು ನೋಡಿದಾಗ್ಯೂ ಇವರೇ ಕಂಡುಬರುತ್ತಿದ್ದಾರೆ

ನೆಯಿಗೆ ಕೆಲಸಗಳಲ್ಲಿ ಇವರು ಮಾಡುತ್ತಿರುವ ಕೆಲಸಗಳು ನಿರ್ವಹಿಸುತ್ತಿರುವ ಬಾಧ್ಯತೆಗಳು ಎಂಥವರನ್ನಾದರೂ ಆಶ್ಚರ್ಯಚಕಿತರನ್ನಾಗಿ ಮಾಡುತ್ತದೆ.

ಸ್ತ್ರೀಯರೇ ದೊಡ್ಡ ದೊಡ್ಡ ಡೈರೆಕ್ಟರುಗಳು, ಮ್ಯಾನೇಜರುಗಳಾಗಿ ಕೆಲಸಮಾಡುತ್ತಾ ತಮ್ಮ ಕಾರ್ಯನಿರ್ವಹಣ ಸಾಮರ್ಥ್ಯವನ್ನು ಪ್ರದರ್ಶಿಸುತ್ತಿರುತ್ತಾರೆ.

ಇಷ್ಟೇಕೆ? ಲಂಡನಿನಲ್ಲಿ ಉದಾಹರಣೆಗಾದರೂ ಒಬ್ಬ ಸ್ತ್ರೀಯಾದರೂ ಟ್ರಾಮ್ ಬಂಡಿಯನ್ನು ನಡೆಸುತ್ತಿರುವಂತಿಲ್ಲ. ಇನ್ನು ಮಾಸ್ಕೋದಲ್ಲಾದರೋ, ಟ್ರಾಮು ಕಂಡಕ್ಟರುಗಳು, ಡ್ರೈವರುಗಳು ಸರ್ವಸಾಮಾನ್ಯವಾಗಿ ಸ್ತ್ರೀಯರೇ.

ರಷ್ಯಾದಲ್ಲಿ ಎಲ್ಲಾ ಪ್ರಾಂತಗಳಲ್ಲೂ ಸ್ತ್ರೀಯರೇ ವಿದ್ಯಾವಿಧಾನವನ್ನು ನಡೆಸುತ್ತಿದ್ದಾರೆ. ಗವರ್ನಮೆಂಟಿನ ವಿದ್ಯಾ ಇಲಾಖೆಯಲ್ಲಿ ಎಲ್ಲಾ ದೊಡ್ಡ ದೊಡ್ಡ ಹುದ್ದೆಗಳನ್ನು ಸ್ತ್ರೀಯರೇ ಆಕ್ರಮಿಸಿಕೊಂಡಿದ್ದಾರೆ

ವೈದ್ಯ ಪರಿಶೋಧನ ಶಾಖೆಯಲ್ಲೂ ಆಸ್ಪತ್ರೆ, ಫಿಲ್ಮ್ ಪರಿಶ್ರಮದಲ್ಲೂ ನ್ಯಾಯವಾದ ವೃತ್ತಿಯಲ್ಲೂ ಸ್ತ್ರೀಯರೇ ಆ ಸ್ಥಾನಗಳನ್ನು ಅಲಂಕರಿಸುತ್ತಲಿದ್ದಾರೆ.

ನಂಬಿಸಿ ಮೋಸ

ಲಾಹೋರು ಯಾಕೋ ಕಚೇರಿಗೆ ಪೋಸಗಾರದ ಹೆಡ್‌ಕ್ವಾರ್ಟರ್ ಆನಂತಿದೆ ಅದರಲ್ಲಿ ಕಚೇರಿಗೆ - ಕಳೆದ ವಾರ— ನಡೆದ ಮೋಸವು ಒಂದು ಆಶ್ಚರ್ಯಕರವಾದುದು.

ಈ ಊರಿನಲ್ಲಿ ಸುಂದರದಾಸ್ ಎಂಬುವನೊಬ್ಬ ಇವನ ಹೆಂಡತಿಗೆ ಸೋನೇ ಎಂಬುವ ನೆಂಟರು ಯಾರೂ ಇಲ್ಲ. ಯಾವನೋ ಒಬ್ಬ ಚಿಕ್ಕಪ್ಪನ ವಿನಾ ಎಲ್ಲರೂ ಸತ್ತುಹೋಗಿದ್ದರು ಅಲ್ಲದೆ ಆ ಚಿಕ್ಕಪ್ಪನಾದವನೂ ಯಾವ ಊರಿನಲ್ಲಿದ್ದನೆಂಬುದೂ ತಿಳಿಯದು

ಈಗ್ಗೆ ಹತ್ತು ಹದಿನೈದು ದಿನಗಳ ಹಿಂದೆ ಈ ಚಿಕ್ಕಪ್ಪನೆಂದು ಒಬ್ಬನು ಬಂದು ಈ ಸುಂದರದಾಸನ ಮನೆಯಲ್ಲಿ ನಿಂತ. ಬಂದವನು ಈ ರೀತಿ ಹೇಳಿದ—ನಾನು ಇಷ್ಟು ದಿನಗಳೂ ಬರೋಡಾ ಸಂಸ್ಥಾನದಲ್ಲಿ ಒಂದು ಹುದ್ದೆಯಲ್ಲಿದ್ದಂತೆಯೂ, ಅಲ್ಲಿ ಸಂಪಾದನೆಯ ನಿಮಿತ್ತ ಇದ್ದ ಕಾರಣ ಎಲ್ಲಿಗೂ ಬರಲಾಗಲಿಲ್ಲವೆಂದೂ ಹೇಳಿದ

ಅಲ್ಲದೆ ತಾನು ಇದುವರೆಗೂ ಸಂಪಾದನೆ ಮಾಡಿಟ್ಟುದೆಲ್ಲಾ ಒಂದು ಪೆಟ್ಟಿಗೆಯಲ್ಲಿಟ್ಟಿರುವುದಾಗಿ ಹೇಳಿ ಆ ಪೆಟ್ಟಿಗೆಯಲ್ಲಿ ಆ ಸುಂದರದಾಸನ ಹೆಂಡತಿಯ ಕೈಗೆಕೊಟ್ಟಿದ್ದ.

ಕೆಲವು ದಿನಗಳಾದುವು ಆ ಮೇಲೆ ಒಂದು ದಿನ ಆ ದಿವಸ ಬ್ಯಾಂಕಿಗೆ ರಜಾ-ನನಗೆ ಇಷ್ಟೊತ್ತು ಕೊಂಚ ಹಣ ಬೇಕಾಗಿತ್ತು. ನನ್ನ ಪೆಟ್ಟಿಗೆಯಲ್ಲಿರುವುದೆಲ್ಲಾ ಸಾವಿರ ರೂಪಾಯಿ ನೋಟುಗಳು. ಅವುಗಳನ್ನು ಮುರಿಸುವುದಕ್ಕಾಗುವುದಿಲ್ಲ. ಬ್ಯಾಂಕುಗಳಿಗೂ ರಜಾ ಎಂದುದಾಗಿ ಒಹಳವಾಗಿ ಮನನೊಂದುಕೊಂಡು ಹೇಳಿದನು.

ಈ ಎರಡನೆಯ ದಿವಸ ಮುವ್ವತ್ತು ರೂಪಾಯಿಗಳನ್ನು ತೆಗೆದುಕೊಂಡನು ಮತ್ತೆ ಮನೆಗೆ ಬರಲೇ ಇಲ್ಲ. ನಾಲ್ಕು ದಿನಗಳಾದರೂ ಬರಲಿಲ್ಲ.

ಆಗ ಅವರಿಗೆ ತಾವೆಲ್ಲಾದರೂ ಮೋಸಹೋದೆವೋ? ಎಂಬ ಅನುಮಾನ ಬಂದು, ಅವನು ಕೊಟ್ಟಿದ್ದ ಪೆಟ್ಟಿಗೆಯನ್ನು ಒಡೆದು ನೋಡಿದರೆ ಅದರಲ್ಲೇನಿದೆ ಬರಿಯ ಕಾಗದಗಳು!!

THE

GUARDIAN OF INDIA

INSURANCE COMPANY, LTD.

Head Office: **MADRAS.** • Branch: **MANGALORE.**

Capital— Indian.
Management—Entirely Indian & Efficient.
LOW PREMIUMS,
CONDITIONS LIBERAL & EQUITABLE.
Schemes— Most novel, suited to all sorts and conditions and attractive.
ASSURED SECURTY

Life is uncertain, Savings are uncertain, Insurance is the only remedy for this uncertainty

Let the Guardian Guard your future.

Insure your life with this popular and Progressive and Economical Indian Life Office—Do not delay.

Applications are invited from respectable gentlemen and ladies to represent the Company in S. Kanara, N. Kanara and Coorg on commission or salary or both.

Notice: All the policy holders & agents are informed that all future dealings must be made with The Branch Secretary, The Guardian of India Insurance Co., Ltd, Mangalore Branch.

ತೀರಾ ದೇಶೀಯ ಭಂಡವಾಳ=ತೀರಾ ದೇಶೀಯ ಆಡಳಿತೆ
ತೀರಾ ಭದ್ರವಾದ ಕಾರ್ಯಕ್ರಮ.
ತೀರಾ ಕಡಿಮೆ ವಿಮೆಯ ದರಗಳು — ಉದಾರವಾದ ಶರ್ತಗಳು
ನ್ಯಾಯನೀತಿ ಸಮ್ಮತವಾದ ವ್ಯವಹಾರ.
ತೀರಾ ಹೊಸ ಹೊಸ ನಮೂನೆಯ ಏರ್ಪಾಡುಗಳು,
ಎಲ್ಲಾ ಬಗೆಯ ವಿವಿಧ ಸ್ಥಿತಿಯ ಜನರಿಗೆ ಸರ್ವಾನುಕೂಲ.
ಆತ್ಯಾಕರ್ಷಕವಾದ ಶರ್ತಗಳು—ಖಂಡಿತವಾದ ಭದ್ರತೆ.
ಜೀವನ ಅನಿಶ್ಚಿತ; ಸಂಪಾದನೆ ಅನಿಶ್ಚಿತ.
ಇವುಗಳ ಬಾಧಕಕ್ಕೆ ಜೀವವಿಮೆಯೇ ಉತ್ತಮ ಪರಿಹಾರ.

ಒಮ್ಮೆ ನಮ್ಮಲ್ಲಿ ವಿಮೆ ಕೊಂಡವರು
ನಿರಾಶರಾಗಲಾರರು.

ಸೂಚನೆ:—ನಮ್ಮ ಎಲ್ಲಾ ಪಾಲಿಸಿಹೋಲ್ಡರೂ ಏಜಂಟರೂ ಇನ್ನು ಮುಂದೆ ತಮ್ಮ ವ್ಯವಹಾರವನ್ನು ದಿ ಬ್ರಾಂಚ್ ಸೆಕ್ರೆಟರಿ, ದಿ ಗಾರ್ಡಿಯನ್ ಒಫ್ ಇಂಡಿಯಾ ಇನ್ಶೂರೆನ್ಸ್ ಕೋ., ಲಿಮಿಟೆಡ್, ಮಂಗಳೂರು ಶಾಖೆ ಇವರೊಡನೆ ಬೆಳೆಸಬೇಕಾಗಿ ವಿನಂತಿ.

ವಿಶೇಷ ಮಾಹಿತಿಗಳಿಗೆ ಇವರಿಗೆ ಬರೆಯಿರಿ.

E. A. PAIS, B. Sc., *Branch ecretary*, **The Guardian of India Insurance Co., Limited,**
MANGALORE BRANCH.

ದಿ ಗಾರ್ಡಿಯನ್ ಒಫ್ ಇಂಡಿಯಾ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್,
ಮುಖ್ಯ ಆಫೀಸು—ಪೋಸ್ಟ್ ಬೋಕ್ಸ್ ೮೯—ಮದ್ರಾಸು.

ದಕ್ಷಿಣಕನ್ನಡ

ಕುಂದಾಪುರ ಡಿವಿಜನಿನ ಮತದಾರರಲ್ಲಿ ವಿನಂತಿ.

ಕಾಂಗ್ರೆಸಿನ ಪರವಾಗಿ ಉಮೇದ್ವಾರರಾಗಿ ನಿಂತಿರುವ ಶ್ರೀ ಎ ಬಿ ಸೆಟ್ಟಿಯವರು ತನ್ನ ಕ್ಯಾಸಂಟಿಂಜೆಂಟ್ ಮೊದಲನ್ನು ಪರಿತ್ಯಾಗ ಮಾಡುವ ಪಕ್ಷದಲ್ಲಿ ನನ್ನ ಉಮೇದ್ವಾರಿಕೆಯನ್ನು ಹಿಂದೆ ತೆಗೆದುಕೊಳ್ಳುವೆನು ಎಂಬ ವಚನವನ್ನು ನನ್ನ ಸಹೋದ್ಯೋಗಿ ಕಾಂಗ್ರೆಸ್ ಕೆಲಸಗಾರರೊಡನೆ ಹೇಳಿದ ಪ್ರಕಾರ ನನ್ನ ಉಮೇದ್ವಾರಿಕೆಯನ್ನು ಹಿಂತೆಗೆದಿದ್ದೇನೆ ನನ್ನ ಉಮೇದ್ವಾರಿಕೆಯಲ್ಲಿ ಪ್ರೋತ್ಸಾಹವನ್ನೂ ಸಹಾನುಭೂತಿಯನ್ನೂ ತೋರಿಸಿದ ನನ್ನ ಸ್ನೇಹಿತರೂ, ಹಿತಚಿಂತಕರೂ ತಮ್ಮ ಸಹಾನುಭೂತಿಯನ್ನು ಕಾಂಗ್ರೆಸ್ ಉಮೇದ್ವಾರರಿಗೇ ತೋರಿಸಬೇಕಾಗಿ ಈ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ

S. U. Paniady
UDIPI 6—1—37

ಉಡುಪಿ ಕಾಂಗ್ರೆಸ್ ಕೆಲಸಗಾರರಲ್ಲಿ ವಿನಂತಿ.

೧೯೩೧ನೇ ಇಸವಿಯ ಅಸಹಕಾರ ಚಳವಳದ ಪರಿಣಾಮವಾಗಿ ಅನೇಕ ಕಾಂಗ್ರೆಸ್ ಕೆಲಸಗಾರರೂ ಉಡುಪಿಯ ಮಹನೀಯರೂ ಒಟ್ಟಾಗಿ ಸುಮಾರು ನಾಲ್ಕೈದು ಸಾವಿರ ರೂಪಾಯಿ ಖರ್ಚಿನಿಂದ ಸ್ವರ್ಗೀಯ ಪಡಮುನ್ನೂರು ರಾಮಚಂದ್ರರಾಯರಿಂದ ಧರ್ಮಾರ್ಥವಾಗಿ ಕೊಡಲ್ಪಟ್ಟ ಜಾಗದಲ್ಲಿ ಒಂದು ರಾಷ್ಟ್ರೀಯ ಶಾಲೆಗೆ ಕಟ್ಟಡವನ್ನು ಕಟ್ಟಿಸಿರುವುದು ಎಲ್ಲರಿಗೂ ಜ್ಞಾಪಕವಿರಬಹುದೆಂದು ನಂಬುತ್ತೇನೆ ಆ ಸ್ಥಳವೂ ಕಟ್ಟಡವೂ ಎರಡುವಾರಗಳ ಹಿಂದೆ ಕೋರ್ಟಿನಲ್ಲಿ ಒಂದರೂಪಾಯಿಗಳಿಗೆ ಏಲಂ ಆಗಿಹೋಯಿತೆಂದು ತಿಳಿಯಲು ತುಂಬಾ ವಿಷಾದಪಡುತ್ತೇನೆ ಇದೆಂದಿಗೂ ಕಾಂಗ್ರೆಸ್ ಕೆಲಸಗಾರರಿಗೆ ಭೂಷಣವಾಗಲಿಕ್ಕಿಲ್ಲ ಜಿಲ್ಲಾ ಕಾಂಗ್ರೆಸ್ ಕಮಿಟಿಯವರೂ ಉಡುಪಿ ತಾಲೂಕು ಕಾಂಗ್ರೆಸ್ ಕಮಿಟಿಯವರೂ ಕಾಂಗ್ರೆಸ್ ಕೆಲಸಗಾರರೂ ಇನ್ನಾದರೂ ಎಚ್ಚೆತ್ತು ಡಿಕ್ರಿಬಾಬ್ತು ಹಣವನ್ನು ಸಲ್ಲಿಸಿ ಕಟ್ಟಡವನ್ನು ಸ್ವಾಧೀನಪಡಿಸಿಕೊಳ್ಳುವರೆ ಪ್ರಯತ್ನಿಸುವರಾಗಿ ನಂಬಿದ್ದೇನೆ ಈ ತರವಾದ ಉತ್ತಮ ಕೆಲಸವನ್ನು ಮಾಡುವರೆ ನಮ್ಮ ಕಾಂಗ್ರೆಸ್ ಕೆಲಸಗಾರರಿಗೆ ಬುದ್ಧಿಯನ್ನೂ ಸಾಹಸವನ್ನೂ ದೇವರು ಕೊಡಲೆಂದು ಪ್ರಾರ್ಥಿಸುತ್ತೇನೆ

S. U. Paniady.

ಮುಲ್ಕಿಪಾಡಿ.

ಇಲ್ಲಿಯ ಎಲಿಮೆಂಟರಿ ಶಾಲಾ ಅಷ್ಟಮ ವಾರ್ಷಿಕೋತ್ಸವವು ತಾ ೩೧–೧೨–೩೬ನೇ ಗುರುವಾರ ಅಪರಾಹ್ನ ಗಂಟೆ ೩ಕ್ಕೆ ಮಂಗಳೂರು ಹಾಯರ್ ಎಲಿಮೆಂಟರಿ ಟ್ರೈನಿಂಗ್ ಶಾಲೆಯ ಮುಖ್ಯೋಪಾಧ್ಯಾಯರಾದ ಮ ರಾ ಕೆ ಗೋಪಾಲರಾವ್ (ಬಿ ಎ ಎಲ್ ಟಿ) ಯವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ಜರಗಿತು ವಿಲಾಪರೂಪಾಚನ, ಕೋಲಾಟ ಜಡೆ ಆಟ ವಿವಿಧ ವಿನೋದಾವಳಿಗಳು ಕಲಾನಟನಗಳಿಂದ ಮಕ್ಕಳು ಸಭಿಕರನ್ನು ಆನಂದಗೊಳಿಸಿದರು ಮಕ್ಕಳಿಗೆ ಬಹುಮಾನ ಹಂಚಿದ ತರುವಾಯ ಸಭಿಕರು ಮತ್ತು ಸಭಾಧ್ಯಕ್ಷರು ತಮ್ಮ ಅನುಕೂಲವಾದ ಮಾತುಗಳಿಂದ ಭಾಷಣವಿತ್ತರು ಕೊನೆಗೆ ವಂದನಾರ್ಪಣೆ ಮಾಡಿ ಸಭೆಯು ಮುಕ್ತಾಯವಾಯಿತು

ಮರುದಿನ ರಾತ್ರಿ ಶ್ರೀ ಮಂದಾರ್ತಿ ಮೇಳದ ದಶಾವತಾರ ಆಟವು ಅಧ್ಯಕ್ಷರ ನೇತೃತ್ವದಲ್ಲಿ ನಡೆಯಿತು

ಮೊಗವೀರ ವ್ಯವಸ್ಥಾಪಕ ಮಂಡಳಿ, ಮುಂಬಯಿ

ಈ ಮೇಲ್ಕಂಡ ಮಂಡಳಿಯು ತಾ ೫ರಲ್ಲಿ ಜರಗಿದ ಕಾರ್ಯನಿರ್ವಾಹಕ ಸಭೆಯ ಮೀಟಿಂಗಿನಲ್ಲಿ ಕೋಶಾಧ್ಯಕ್ಷರಾದ ಬಪ್ಪನಾಡು ಎ ಕೆ ಪೈಯವರ ಅನುಜ ಶ್ರೀ ಎ ಎಸ್ ಪೈಯವರ ನಿಧನಕ್ಕಾಗಿ ದುಃಖಸೂಚಕ ಠರಾವನ್ನು ಎಲ್ಲರೂ ಎದ್ದು ನಿಂತು ಸರ್ವಾನುಮತದಿಂದ ಮಂಜೂರುಮಾಡಲಾಗಿದೆ

ದ. ಕ.

ಪಾರ್ಲಿಮೆಂಟರೀ ಬೋರ್ಡಿನವರ ಜಯಶೀಲ ಪ್ರಚಾರಕಾರ್ಯ

ಎಲ್ಲೆಲ್ಲಿಯೂ ಕಾಂಗ್ರೆಸಿಗೆ ಬೆಂಬಲ! ತರುಣ ಜನಾಂಗದವರ ಉತ್ಸಾಹ!

ತಾರೀಕು ೭೭–೧೭–೩೬ನೇ ದಿನ ಸಾಯಂಕಾಲ ಗಂಟೆ 4ಕ್ಕೆ ಕೋಟೆಕಾರಿನ ಶ್ರೀ ತಲಪಾಡಿ ನಾಂಜಪ್ಪ ರೈಗಳ ಅಧ್ಯಕ್ಷತೆಯಲ್ಲಿ ಮಹಾಜನರ ಸಭೆ ಸೇರಿತು ಶ್ರೀ ಪಿ ರಾಮರಾಯಮಲ್ಯ ಎನ್ ಎಸ್ ಕಿಲ್ಲೆಯವರು ಭಾರತದ ರಾಷ್ಟ್ರಸಭೆಯ ಇಂದಿನ ಸಂದೇಶವನ್ನು ವಿವರಿಸಿ ಭಾಷಣಮಾಡಿದರು ಮಂಗಳೂರು ಡಿವಿಜನಿನ ಕಾಂಗ್ರೆಸ್ ಉಮೇದ್ವಾರರಾದ ಶ್ರೀ ಬಿ ವೆಂಕಟ್ರಾಯಬಾಳಿಗರು ಕಾಂಗ್ರೆಸಿಗೆ ಬೆಂಬಲಕೊಡಬೇಕಾಗಿ ಪ್ರಾರ್ಥಿಸಿದರು ಅಧ್ಯಕ್ಷರ ಸ್ಫೂರ್ತಿದಾಯಕ ಭಾಷಣದೊಡನೆ ಸಭೆಯು ಮುಕ್ತಾಯವಾಯಿತು.

ಅದೇ ದಿನ ಸಾಯಂಕಾಲ ಗಂಟೆ 6-0ಕ್ಕೆ ಉಳ್ಳಾಲದಲ್ಲಿ ಪ್ರಚಂಡ ಮಹಾಜನಸಭೆಯಾಯಿತು. ಶ್ರೀ ಉಳ್ಳಾಲ ಗೋವಿಂದ ಕಿಣಿಯರು ಅಧ್ಯಕ್ಷಸ್ಥಾನವನ್ನು ಸ್ವೀಕರಿಸಿದರು ಶ್ರೀಗಳಾದ ಮೋನಪ್ಪ ತಿಂಗಳಾಯ, ಪ್ರೊಫೆಸರ್ ಸಿ ಜಿ ಮಾರ್ಲ ಎನ್ ಎಸ್ ಕಿಲ್ಲೆಯವರ ಭಾಷಣಗಳಾದುವು ಅಧ್ಯಕ್ಷರು ಉಳ್ಳಾಲದವರು ಕಾಂಗ್ರೆಸಿಗೆ ಸಂಪೂರ್ಣ ಬೆಂಬಲ ಕೊಡುವರೆಂದು ಆಶ್ವಾಸನೆ ಇತ್ತು ಸಭೆಯು ಮುಗಿಯಿತು

ತಾ ೭೩–೧೭–೩೬ನೇ ದಿನ ಸಾಯಂಕಾಲ ಮಂಗಳೂರಿನಿಂದ ನಾಲ್ಕು ಮೈಲು ದೂರದ ಮಂಜಿಯಲ್ಲಿ ಮಹಾಜನ ಸಭೆಯಾಯಿತು ಇಲ್ಲಿಯ ಪ್ರಮುಖ ಜಮೀನ್ದಾರರಾದ ಶ್ರೀ ನಂಜೆ ಬೈಲು ನಾರಾಯಣ ಭಟ್ಟರು ಅಧ್ಯಕ್ಷರಾಗಿದ್ದರು ಶ್ರೀ ಬಿ ವೆಂಕಟ್ರಾಯಬಾಳಿಗ ಹಿ ರಾ ಮಲ್ಯ, ಬೆಳ್ಳಿಪಾಡಿ ತಿಮ್ಮಪ್ಪ ರೈ, ಕರಿಯಂಗಳ ಮುತ್ತು ಮಾರ್ಲ ಮತ್ತು ಎನ್ ಎಸ್ ಕಿಲ್ಲೆ ಇವರ ಭಾಷಣಗಳಾದ ಬಳಿಕ ಅಧ್ಯಕ್ಷರು ಈಗಿನ ರಾಜಕೀಯ ಪದ್ಧತಿಯನ್ನು ವಿವರಿಸಿ ಪ್ರಜೆಗಳ ಕಷ್ಟಗಳು ಪರಿಹಾರವಾಗಬೇಕಾದರೆ ಕಾಂಗ್ರೆಸಿಗೆ ಬೆಂಬಲ ಕೊಡಬೇಕೆಂದು ಸೂಚಿಸಿದರು ಶ್ರೀ ಬಂಟಮಾಳ ಕೇಶವಮಾಳಿಗರು ಧನ್ಯವಾದಗಳನ್ನು ಕೊಟ್ಟಬಳಿಕ ಸಭೆಯು ಅಂತ್ಯವಾಯಿತು

ಅದೇ ದಿನ ರಾತ್ರೆ ಗಂಟೆ ೯–೧೦ಕ್ಕೆ ಅಡ್ಯಾರಿನಲ್ಲಿ ಮಹಾಜನರ ಸಭೆಯು ಜರಗಿತು ಶ್ರೀ ಕಾಂತು ಭಂಡಾರಿಯವರು ಅಧ್ಯಕ್ಷರಾಗಿದ್ದರು ಶ್ರೀಗಳಾದ ಬಿ ತಿಮ್ಮಪ್ಪ ರೈ ಕರಿಯಂಗಳ ಮುತ್ತು ಮಾರ್ಲ ಮತ್ತು ಎನ್ ಎಸ್ ಕಿಲ್ಲೆಯವರು ಜಾತಿ ಮ ಕುಟುಂಬದ ಮತ್ಸರಕ್ಕೆ ಬೀಳದೆ ಕಾಂಗ್ರೆಸ್ ಉಮೇದ್ವಾರರನ್ನು ದೇಶದ ಹಿತಕ್ಕಾಗಿ ಸಮರ್ಥಿಸಬೇಕಾಗಿ ಭಾಷಣಗಳನ್ನು ಮಾಡಿದರು ಅಧ್ಯಕ್ಷರು ಅಡ್ಯಾರದಲ್ಲಿ ಕಾಂಗ್ರೆಸ್ಸ್ ಕೆಲಸಗಾರರು ಬಹಳ ಮಂದಿ ಇರುವುದಾಗಿಯೂ ಕಾಂಗ್ರೆಸಿಗೆ ಬೆಂಬಲ ಸಿಕ್ಕುವುದರಲ್ಲಿ ಸಂಶಯವಿಲ್ಲವೆಂದು ಭರವಸೆ ಕೊಟ್ಟು ಸಭೆಯು ಮುಕ್ತಾಯವಾಯಿತು

ತಾ ೭೪–12–36ನೇ ಸಾಯಂಕಾಲ ಕುಪ್ಪೆಗದವಿನಲ್ಲಿ ಶ್ರೀ ದಾಸಪ್ಪಯ್ಯಸೆಟ್ಟರ ಅಧ್ಯಕ್ಷತೆಯಲ್ಲಿ ಜಹೀರ ಸಭೆಯು ನೆರವೇರಿತು ಶ್ರೀ ಬಿ ಟ ರೈ ಎನ್ ಎಸ್ ಕಿಲ್ಲೆ, ಬಿ ಟಿ ಬಾಳಿಗ ಮತ್ತು ಮಾರ್ಲ ಮೊದಲಾದವರು ಕಾಂಗ್ರೆಸಿಗೆ ಬೆಂಬಲವನ್ನು ಬೇಡಿದರು

ಅದೇ ದಿನ ರಾತ್ರೆ ಮಾವಂಜೂರಿನ ದೇವಸ್ಥಾನದಲ್ಲಿ ಶ್ರೀ ಬದಕಬೈಲು ಪರಮೇಶ್ವರಯ್ಯನವರ ಅಧ್ಯಕ್ಷತೆಯಲ್ಲಿ ಸಭೆ ಜರಗಿತು ಶ್ರೀ ಎನ್. ಎಸ್ ಕಿಲ್ಲೆಯವರ ಭಾಷಣವಾಯಿತು ಕಾಂಗ್ರೆಸ್ ಉಮೇದ್ವಾರರಾದ ಶ್ರೀ ಬಿ ವೆಂಕಟ್ರಾಯ ಬಾಳಿಗರಿಗೆ ಅಥವಾ ಕಾಂಗ್ರೆಸಿನವರಿಗೆ ಕಾಂಗ್ರೆಸಿಗೆ ವಿಜಯವಾಗಲೆಂದು ಪ್ರಾರ್ಥನೆ ಪ್ರಸಾದಕೊಟ್ಟ ಬಳಿಕ ಸಭೆಯು ವಿಸರ್ಜನೆ ಆಯಿತು

ತಾ ೭೪–೧೨–೩೬ರಲ್ಲು ಬೆಳಿಗ್ಗೆ ಅಡೂರಿನಲ್ಲಿ ಚುನಾವಣೆಯ ಪ್ರಚಾರಕ್ಕಾಗಿ ಸೇರಿದ ಮಹಾಜನ ಸಭೆಯಲ್ಲಿ ಶ್ರೀ, ಕೆ ಆರ್ ಕಾರಂತರು ಕಾಂಗ್ರೆಸಿನವರಿಗೆ ಏಕೆ ಬೆಂಬಲಕೊಡಬೇಕೆಂಬುದನ್ನು ವಿವರಿಸಿದರು ಅದೇ ದಿನ ಸಂಜೆಗೆ ಅಡೂರಿನಲ್ಲಿ ಶ್ರೀ ಕದಂಬತ್ತಾಯರ ಅಧ್ಯಕ್ಷತೆಯಲ್ಲಿ ಜಾಹೀರ ಸಭೆಯು ನಡೆದು ಶ್ರೀ ಕೆ ಆರ್ ಕಾರಂತರ ಭಾಷಣವಾಯಿತು

> ## ರಾಷ್ಟ್ರಪತಿ ಪಂಡಿತ ಜವಾಹಿರಲಾಲರು
> ### ಫೆಬ್ರವರಿ ತಾ. 10ಕ್ಕೆ ಬೊಂಬಾಯಿಂದ ಮಂಗಳೂರಿಗೆ ವಿಮಾನದಲ್ಲಿ ಬಂದಿಳಿಯುವರು.
> ### ಶ್ರೀಮತಿ ಕಮಲಾದೇವಿಯವರು ಅವರೇರಲಿರುವ ವಿಮಾನವನ್ನು ಟಾಟಾ ಕಂಪೆನಿಯಲ್ಲಿ ನಿಶ್ಚೈಸಿಯೂ ಆಯಿತು!

ತಾ 26 12 36ರ ಸಂಜೆಗೆ ಬದಿಯಡ್ಕದಲ್ಲಿ ಮಹಾ ಸಭೆ—ಕಾಸರಗೋಡಿನ ಶ್ರೀ ಕೆ ಆರ್ ದಂಡಿಲ್ಲಾಯರು ಅಧ್ಯಕ್ಷರಾದರು ಶ್ರೀಗಳಾದ ವಕೀಲ ರಾಮ ಶೆಟ್ಟರು, ಎನ್ ಎಸ್ ಕಿಲ್ಲೆಯವರು ಮತ್ತು ಕೆ ಆರ್ ಕಾರಂತರು ಕಾಂಗ್ರೆಸಿನ ಚುನಾವಣೆಯ ಧ್ಯೇಯಗಳನ್ನು ವಿವರಿಸಿ ಎಲ್ಲರೂ ತಮ್ಮ ಓಟುಗಳನ್ನು ಕಾಂಗ್ರೆಸ್ಸಿಗೆ ಕೊಟ್ಟು ಜಿಲ್ಲೆಯ ಕೀರ್ತಿಯನ್ನೂ ಕಾಂಗ್ರೆಸಿನ ಗೌರವವನ್ನು ಉಳಿಸಬೇಕಾಗಿ ಪ್ರಾರ್ಥಿಸಿದರು

ತಾ. ೭೬–೭–೩೬ರಲ್ಲಿ ಸುರತಕಲ್ಲಿನಲ್ಲಿ ಸಟ್ಟಿಗಾರ ದೇವಸ್ಥಾನದಲ್ಲಿ ಹಾಗೂ ಮೊಗೇರ ದೇವಸ್ಥಾನದಲ್ಲಿ ನಡೆದ ಸಭೆಗಳಲ್ಲಿ ಶ್ರೀ ಎನ್ ಎಸ್ ಕಿಲ್ಲೆಯವರ ಭಾಷಣಗಳಾಗಿ ಅನಂತರ ಪಣಂಬೂರಿನಲ್ಲಿ ಮಹಾಜನ ಸಭೆ ಸೇರಿತು ಶ್ರೀ ಪಣಂಬೂರು ವಾಮರಾಯರು ಅಧ್ಯಕ್ಷರಾಗಿದ್ದರು ಶ್ರೀ ವೆಂಕಟ್ರಾಯ ಬಾಳಿಗ ಎನ್ ಎಸ್ ಕಿಲ್ಲೆ ಮೋನಪ್ಪ ತಿಂಗಳಾಯ ಮತ್ತು ಹೊಳ್ಳರ ಭಾಷಣಗಳಾದ ಬಳಿಕ ಅಧ್ಯಕ್ಷರು ಕಾಂಗ್ರೆಸಿಗೆ ಬೆಂಬಲ ಕೊಡುವ ಆಶ್ವಾಸನೆ ಇತ್ತು ಸಭೆಯು ಮುಕ್ತಾಯವಾಯಿತು

ತಾ ೭8–೧೭–3೬ರಲ್ಲು ಶಂಕರನಾರಾಯಣದಲ್ಲಿ ಬೆಳಿಗ್ಗೆ ಗಂಟೆ ೧೧ಕ್ಕೆ ಶ್ರೀ ಸುಬ್ರಾಯ ಉಡುಪರ ಅಧ್ಯಕ್ಷತೆಯಲ್ಲಿ ಮಹಾಜನರ ಸಭೆಸೇರಿ ಶ್ರೀಗಳಾದ ಎನ್ ಎಸ್ ಕಿಲ್ಲೆ ಮತ್ತು ರಂಗರಾವ್ ತಲಚೇರಿಕರ ಇವರ ಭಾಷಣಗಳಾದವು ಭಾಷಣಕರ್ತರು ಕಾಂಗ್ರೆಸಿನ ಚುನಾವಣೆಯ ಧ್ಯೇಯಗಳನ್ನು ವಿವರಿಸಿ ಕಾಂಗ್ರೆಸಿಗೆ ಬೆಂಬಲಬೇಡಿದರು ಎಲ್ಲರೂ ಕಾಂಗ್ರೆಸಿಗೆ ಸಹಾಯಮಾಡುವುದು ಮಹಾಜನರ ಕರ್ತವ್ಯವೆಂದು ಅಧ್ಯಕ್ಷರು ಸೂಚಿಸಿದ ಬಳಿಕ ಸಭಾಂತ್ಯವಾಯಿತು

ತಾ ೭೯–೧೭–೩೬ರ ಮಧ್ಯಾಹ್ನ ಹಾಲಾಡಿಯಲ್ಲಿ ಶ್ರೀ ಆವರ್ಸೆ ಚಂದಯ್ಯ ಸೆಟ್ಟರ ಅಧ್ಯಕ್ಷತೆಯಲ್ಲಿ ಜಾಹೀರ ಸಭೆಯು ಜರಗಿ ಮೇಲಿನವರಿಬ್ಬರ ಭಾಷಣಗಳಾದವು

ತಾ ೭೯–೧೭ ೩೬ನೇ ಸಾಯಂಕಾಲ ಸ್ವಾಬರ ಕಟ್ಟೆಯಲ್ಲಿ ಮಹಾಜನ ಸಭೆ ಎದುರು ಕಡೆಯವರು ಇತ್ತಂಡದವರೊಳಗೆ ದೊಂಬಿ ನಡೆಯುವ ಸಂಭವವಿದೆಯಾಗಿ ಪೋಲೀಸರಿಗೆ ಅರ್ಜಿಮಾಡಿದ್ದರಿಂದ ಈ ಸಭೆಗೆ ಕುಂದಾಪುರ ಸಬ್‌ಕಲೆಕ್ಟರರು, ಸೆಕೆಂಡ್ ಮ್ಯಾಜಿಸ್ಟ್ರೇಟರರು, ಸರ್ಕಲ ಇನ್ಸ್‌ಪೆಕ್ಟರರು ಮತ್ತು ಕೆಲವು ಪೋಲಿಸರು ಕೂಡಾ ಬಂದಿದ್ದರು ಈ ವಾರ್ತೆಯು ಮೊದಲೇ ಜನರಲ್ಲಿ ಹಬ್ಬಿತ್ತಾದ್ದರಿಂದ ಕುಂದಾಪುರದಿಂದ ಕಾರುಮಾಡಿ ಹಲವರು ಸಭೆಗೆ ಬಂದಿದ್ದರು ಸುತ್ತಮುತ್ತಲಿನ ಮಹಾಜನರೆಲ್ಲ ಉತ್ಸಾಹದಿಂದ ಕೂಡಿ ಬಂದು ಸಭೆಯು ಅತ್ಯಂತ ಯಶಸ್ವಿಯಾಗಿ ಜರಗಿತು ಶ್ರೀಗಳಾದ ಎ ಬಿ ಸೆಟ್ಟಿ, ಎನ್ ಎಸ್ ಕಿಲ್ಲೆ ಮತ್ತು ರಂಗರಾವ್ ತಲಚೇರಿಕರರು ಉಜ್ವಲ ಭಾಷಣಗಳನ್ನಿತ್ತರು ಈ ಸಭೆಯ ಅಧ್ಯಕ್ಷಸ್ಥಾನವನ್ನು ವಹಿಸಿದ ಶ್ರೀ ಹಲ್ಸನಾಡು ಸೂರಪ್ಪಯ್ಯನವರು ಕುಂದಾಪುರ ತಾಲೂಕಿನ ಮಹಾಜನರು ಈ ಮೊದಲು ಕಾಂಗ್ರೆಸಿನ ಮೇಲೆ ಇಟ್ಟ ಸಹಾನುಭೂತಿಯನ್ನು ಇಂದು ಮರೆಯದೆ ತಾಲೂಕಿನ ಕೀರ್ತಿಯನ್ನು ಕಾಂಗ್ರೆಸಿನಂಥ ಮಹಾಸಂಸ್ಥೆಯ ಗೌರವವನ್ನೂ ಕಾಪಾಡಬೇಕೆಂದು ಪ್ರಾರ್ಥಿಸಿದರು ಯಾವ ಗಲಾಟೆಯೂ ಇಲ್ಲದೆ ಸಭೆಯು ನೆರವೇರಿತು. ಅಧಿಕಾರಿಗಳಿಗೆ ಅರ್ಜಿಕೊಟ್ಟುದರ ಪರಿಣಾಮವಾಗಿ ಈ ಕಡೆಯಲ್ಲೆಲ್ಲ ಕಾಂಗ್ರೆಸ್ ಪ್ರಚಾರಕಾರ್ಯವು ತನ್ನಷ್ಟಕ್ಕೆ ನಡೆದು ಕಾಂಗ್ರೆಸಿಗೆ ಒಳ್ಳೇ ಬೆಂಬಲವು ದೊರೆಯುವಂತಾಗಿದೆ ಎಂದು ತಿಳಿದು ಬರುತ್ತದೆ

ತಾ ೩೯–೧೨ ೩೬ರ ಸ್ವಾಬರ ಕಟ್ಟೆ ಸಭೆಯ ನಂತರ ಮಾರನೆಯ ದಿನ ಸಾಯಂಕಾಲ ಗಂಟೆ ೬ಕ್ಕೆ ಸಾಸ್ತಾನದಲ್ಲಿ ಶ್ರೀ ಕೆ ಆರ್ ಕಾರಂತರ ಅಧ್ಯಕ್ಷತೆಯಲ್ಲಿ ಮಹಾಜನ ಸಭೆಯು ಜರಗಿ ಶ್ರೀಯುತರುಗಳಾದ ಎನ್ ಎಸ್ ಕಿಲ್ಲೆ ಮತ್ತು ರಂಗರಾವ್ ತಲಚೇರಿಕರ ಇವರ ಭಾಷಣಗಳಾದವು. ಅದೇ ದಿನ ಸಂಜೆ ಗಂಟೆ ೬ ೩೦ಕ್ಕೆ ಸಾಲಿಗ್ರಾಮದಲ್ಲಿ ಮೇಲಿನವರ ಭಾಷಣಗಳಿದ್ದವು

ತಾ ೩೧–೧೨–೩೬ನೇ ಬೆಳಿಗ್ಗೆ ಗಂಟೆ ೧೦ಕ್ಕೆ ಗಂಗೊಳ್ಳಿಯಲ್ಲಿ ಮಹಾಜನ ಸಭೆ ಶ್ರೀ ಗಂಗೊಳ್ಳಿ ಸಂಜೀವರಾಯರು ಅಧ್ಯಕ್ಷತೆಯನ್ನು ವಹಿಸಿದ್ದರು ಶ್ರೀಗಳಾದ ಕೆ ಎಲ್. ಭಂಡಾರಿ, ರಂಗರಾವ್ ತಲಚೇರಿಕರ ಮತ್ತು ಎನ್ ಎಸ್ ಕಿಲ್ಲೆಯವರ ಭಾಷಣಗಳಾದುವು ಇದೇ ದಿನ ಸಾಯಂಕಾಲ ೫ ೩೦ಕ್ಕೆ ಕೋಟೇಶ್ವರದಲ್ಲಾದ ಮಹಾಸಭೆಯಲ್ಲಿ ಶ್ರೀಗಳಾದ ಸೀತಾರಾಮ ಮಯ್ಯ ಕೆ ಆರ್ ಕಾರಂತ ರಂಗರಾವ್ ಮತ್ತು ಕಿಲ್ಲೆಯವರ ಭಾಷಣಗಳಾದವು.

ತಾ ೧–೧–೩೭ನೇ ಸಂಜೆ ಗಂಟೆ ೪ಕ್ಕೆ ಬೈಂದೂರಲ್ಲಿ ಡಾ ಹೊಳ್ಳರ ಅಧ್ಯಕ್ಷತೆಯಲ್ಲಿ ಮಹಾಜನ ಸಭೆ ಶ್ರೀ ಎ ಬಿ ಸೆಟ್ಟಿ, ಸೀತಾರಾಮಯ್ಯ ಕೆ ಆರ್ ಕಾರಂತ ರಂಗರಾವ್ ಮತ್ತು ಕಿಲ್ಲೆಯವರ ಭಾಷಣಗಳಾದವು

ತಾ ೨–೧–೩೭ಕ್ಕೆ ಬೆಳಿಗ್ಗೆ ಗಂಟೆ ೧೦ಕ್ಕೆ ಶಿರೂರಲ್ಲಿ ಶ್ರೀ ಸ್ವಾಮಿಕೃಷ್ಣ ಚೈತನ್ಯ ಅಧ್ಯಕ್ಷತೆಯಲ್ಲಿ ಸಭೆಜರಗಿ ಶ್ರೀ ರಂಗರಾವ್, ಎ ಬಿ ಸೆಟ್ಟಿ ಮತ್ತು ಕಿಲ್ಲೆಯವರ ಭಾಷಣಗಳಾದವು

ಅದೇ ದಿನ ಸಂಜೆಗೆ ಉಪ್ಪುಂದದಲ್ಲಿ ಶ್ರೀ ನಾಗಪ್ಪ ಮೇಲಂಟರ ಅಧ್ಯಕ್ಷತೆಯಲ್ಲಿ ನಡೆದ ಮಹಾಜನಸಭೆಯಲ್ಲಿ ಶ್ರೀ ಎ ಬಿ ಸೆಟ್ಟಿ, ಸೀತಾರಾಮ ಮಯ್ಯ, ವಿಮಲಾಮ ಸೆಟ್ಟಿ, ಕೆ ಆರ್ ಕಾರಂತ ರಂಗರಾವ್ ಮತ್ತು ಕಿಲ್ಲೆಯವರ ಭಾಷಣಗಳಾದವು

ಎಲ್ಲಾ ಸಭೆಗಳಲ್ಲಿ ಕಾಂಗ್ರೆಸು ಚುನಾವಣೆಯ ಉದ್ದೇಶಗಳು ಕಾಂಗ್ರೆಸಿಗೆ ಬೆಂಬಲ ಕೊಡುವ ಆವಶ್ಯಕತೆ ಮೊದಲಾದವುಗಳನ್ನು ವಿಸ್ತರಿಸಿದಲ್ಲದೆ ಮಹಾಜನರು ಉತ್ಸಾಹದಿಂದ ಕಾಂಗ್ರೆಸ್ ಸಂದೇಶವನ್ನು ಸ್ವೀಕರಿಸಿ ಕಾಂಗ್ರೆಸಿಗೆ ಬೆಂಬಲ ಕೊಡುವುದಾಗಿ ಆಶ್ವಾಸನೆ ಇತ್ತಿರುವರು

ಮಂಗಳೂರು ಗವರ್ನಮೆಂಟ್ ಹಾಯರ್ ಎಲಿಮೆಂಟರಿ ಟ್ರೈನಿಂಗ್ ಶಾಲೆಯಲ್ಲಿ ಜರಗುವ ದಕ್ಷಿಣ ಕನ್ನಡಜಿಲ್ಲಾ ಶಿಕ್ಷಣ ಪ್ರದರ್ಶನವು ನಮ್ಮ ಜಿಲ್ಲಾ ಕಲೆಕ್ಟರು A D Crombie Esq C I E I. C S ಇವರಿಂದ ೧೯೩೭ನೇ ಜನವರಿ ತಾ ೧೩ನೇ ಬುಧವಾರ ಪ್ರಾತಃಕಾಲ ೯ ೩೦ಕ್ಕೆ ತೆರೆಯಲ್ಪಡುವುದು ಪ್ರದರ್ಶನಕ್ಕೆ ಕಳುಹಿಸಲ್ಪಡುವ ವಸ್ತುಗಳು ೧೯೩೭ನೇ ಜನವರಿ ತಾರೀಕು ೭ಗುರುವಾರ ಸಾಯಂಕಾಲದೊಳಗೆ ಟ್ರೈನಿಂಗ್ ಶಾಲೆಗೆ ತಲ್ಪತಕ್ಕದ್ದು

ದಿವಂಗತ ಡಾ। ಎ ಸರ್ವೋತ್ತಮ ಪೈಯವರು

ಸ್ವಜಾತಿ, ಸ್ವಭಾಷೆ, ಸ್ವದೇಶಾಭಿಮಾನಿಗಳೂ ದಕ್ಷಿಣಕನ್ನಡಿಗರೂ ಆದ ಡಾ। ಎ ಸರ್ವೋತ್ತಮ ಪೈಯವರು ಕಳೆದ ತಾ ೨೩ ೧೨ ೩೬ರಲ್ಲಿ ಬೊಂಬಾಯಿಯಲ್ಲಿ ನಿಧನ ಹೊಂದಿದುದು ಶೋಚನೀಯವಿದೆ। ದಿವಂಗತರು ಉದಾರಿಗಳು, ಸದ್ಗುಣಿಗಳು ಇವರ ನಿಧನದಿಂದ ಅವರ ಸಮಾಜಕ್ಕೆ ಹಾಗೂ ದ ಕನ್ನಡ ಜಿಲ್ಲೆಗೆ ಹೆಚ್ಚಿನ ನಷ್ಟವಿದೆ। ದಿವಂಗತರ ಬಂಧುಮಿತ್ರರೊಡನೆ ನಮ್ಮ ಸಹಾನುತಾಪವಿದೆ।

ನಾರದನ ತಂಬೂರಿ

ನಾರದನ ನೆಲೆಯಿಂದು | ನರರ ಬೀಡಾಗುತಿದೆ | ನರಿಸಮಾನತೆ ಗಗನವನು ಮುಟ್ಟಿತು || ನರನಾರಾಯಣ! ಶುಭವಾಗಲಿ ಮಾನವರೆ! ಇದನ್ನು ಸಮಾನತೆಯ ಯುಗವೆನ್ನುತ್ತಾರಲ್ಲ-ಅದು ನಿಜ. ನಿಮ್ಮ ರಾಷ್ಟ್ರಪತಿ ಜವಾಹಿರರ ಸಮಾನದೃಷ್ಟಿ ಆಕಾಶದವರೆಗೂ ಬಿದ್ದಿದೆ. ಗಗನ ಸಂಚಾರಿಯೆಂಬ ಹೆಗ್ಗಳಿಕೆ ನಾರದನಿಗೆ ಮಾತ್ರವಿತ್ತು-ನಾಡದು ಅವರೂ ಗಗನಮಾರ್ಗವಾಗಿಯೇ ನಿಮ್ಮಲ್ಲಿಗೆ ಬರುವರಂತೆ! ಅವರ ತತ್ವಗಳೆಲ್ಲ ನಿಮ್ಮನೆತ್ತುವ ಯಾವ | ಆವರೇರಿಕೆಯಲೆ ಬಂದಿಳಿವರಯ್ಯ ||

○

ಫೆಬ್ರುವರಿಯಲ್ಲಿ ಅವರು ಬೊಂಬಾಯಿಂದ ವಿಮಾನದಲ್ಲಿ ಹಾರಿ ಬಂದು ಮಂಗಳೂರಿನಲ್ಲಿರುವರು; ಬಲು ದೊಡ್ಡ ಹೆಜ್ಜೆ! ಇಲ್ಲಿ ಜಸ್ಟೀಸ್‌ಪಾರ್ಟಿಯವರು ಮತದಾರರ ಮನೆಯಿಂದ ಮನೆಗೆ ಹಾರಿ ಉಂಟಾದ ಹೆಜ್ಜೆಯ ಗುರುತುಗಳೆಲ್ಲಾ ಈ ದೊಡ್ಡ ಹೆಜ್ಜೆಯ ಅಡಿಗೆ ಬೀಳುತ್ತವೋ ಹೇಗೆ? ಮತ್ತೆ ನೋಡೋಣ! ಗೆದ್ದಲುಗಳೊಟ್ಟಾಗಿ ಕಟ್ಟಿರುವ ಹುತ್ತವನು | ಆನೆ ಮೆಟ್ಟುವ ಗಾದೆಯಾಗಲಾಂಟು || ನರನಾರಾಯಣ!

○

ಎಂಟನೇ ಎಡ್ವರ್ಡರು ಸಿಂಹಾಸನ ಬಿಡುವರೆ ಕಾರಣಭೂತಳಾದ ನಮ್ಮ ಸಿಂಪ್ಸನ್ ದೊರೆಸಾನಿಯುರಿದ್ದಾರಲ್ಲಾ-ಅವರಿಗೀಗ ಎಂಟೂ ದಿಕ್ಕುಗಳಿಂದ ಬೆದರಿಕೆಯ ಪತ್ರಗಳು "ನಿನ್ನನ್ನು ಕೊಲೆಮಾಡುತ್ತೇವೆ" ಎಂದು! ಈ ಪತ್ರಗಳನ್ನೆಲ್ಲಾ ಮಾಜೀ ಅರಸರ ಮೇಲೆ ಅತಿರೇಕ ಪ್ರೀತಿಯಿರುವವರು, ಅವರೇ ಬರೆಯುವುದಂತೆ-ಎಂಟನೇ ಎಡ್ವರ್ಡರ ಅರ್ಧಪ್ರಾಣವೇ ಸಿಂಪ್ಸನಳಾಗಿದ್ದಾಳೆ. ಆದನ್ನು ಕೊಲೆಮಾಡುವೆವೆನ್ನುವುದೂ ಮಮತೆಯಿಂದಲೆ! ಮಮತೆಯನ್ನು ತೋರಿಸುತ ಕೈಬಾಯಿ ಮನಸಿನಲಿ | ಎದೆಯ ತಿವಿದರೆ ನೋವು ನೋವಲ್ಲವೇ? || ನರನಾರಾಯಣ!

○

ಶ್ರೀ. ಎ. ಬಿ. ಶೆಟ್ಟರು ಉಪಾಯವಿಲ್ಲದೆ 'ಕೈಸರ್-ಈ-ಹಿಂದ್' ಮೆಡಲ್ ಬಿಟ್ಟರೆಂದು ಕಂಠೀರವದ ಬಂಟಪ್ಪನು ತರಳೆ ಹೇಳುತ್ತಿದ್ದಾನೆ. ಇನ್ನಾವ ಆರೋಪವನ್ನೂ ಶ್ರೀ ಶೆಟ್ಟರ ಮೇಲೆ ಹೊರಿಸಲು ಬಂಟಪ್ಪನಂಥವರಿಗೆ ಉಪಾಯವಿಲ್ಲ; ಆದ್ದರಿಂದ ಶ್ರೀ. ಶೆಟ್ಟರನ್ನು ಟೀಕಿಸುವುದಕ್ಕಾಗಿ ಬಂಟಪ್ಪನು ಉಪಾಯವಿಲ್ಲ ಎಂಬ ಶಬ್ದವನ್ನೇ ಉಪಯೋಗಿಸಿದ್ದಾನೆ. ಪಾಪ! ಹುಳುಕು ಹುಡುಕುವ ರುಚಿಯು | ಅಗಲಿ ಹೋಗುವದಿಲ್ಲ || ಸಿಕ್ಕಲ್ಲಿ ನೆವ ಹುಡುಕಿ ಸವಿಯದಿರದು || ನರನಾರಾಯಣ!

○

ಪುತ್ತೂರಿನಲ್ಲಿ ವಕೀಲ್ ಶ್ರೀ ಕಾರಂತರು ಕೊಂಗ್ರೆಸಿನ ಕಡೆಯಿಂದ ವ್ಯವಹರಿಸುವುದು-ಮತದಾರರು ಏಕ ಪಕ್ಷೀಯ ತೀರ್ಮಾನವೀಯುವದು-ಇದು ಜಸ್ಟೀಸ್ ಪಕ್ಷದವರಿಗೆ ಸರಿತೋರಲಿಲ್ಲ. ವಕೀಲರ ಅಭಾವವಿಲ್ಲದ ಈ ಕಾಲದಲ್ಲಿಯೂ ಏಕಪಕ್ಷೀಯ ತೀರ್ಮಾನವೆಂದರೆ? ಹೇಗೂ ಜಸ್ಟೀಸ್ ಪಾರ್ಟಿಗೆ ಒಬ್ಬ ವಕೀಲರೇನೋ ಸಿಕ್ಕಿದರು-ಕಷ್ಟವೆಂದರೆ ಕೊಂಗ್ರೆಸಿನೊಡನಿರುವ ಜನಸೇವೆಯ ರಿಕಾರ್ಡುಗಳಿಗೆ ಪ್ರತಿಯಾಗಿ ರಿಕಾರ್ಡುಗಳನ್ನೊದಗಿಸುವುದೊಂದೆ! ಪಾಳುರಿಯು ಬಲವಿರದ ವ್ಯಾಜ್ಯ ಗೆಲುವುದು ಹೇಗೆ? ಕೊಂಗ್ರೆಸು ಕಂಕುಳಲಿ ಅದು ಸಿಲುಕಿದೆ || ನರನಾರಾಯಣ!

○

ಪುತ್ತೂರಿನಲ್ಲಿ ಅರಣ್ಯದ ಕಷ್ಟ ಜಾಸ್ತಿ; ಅಂತಹ ಅರಣ್ಯರೋದನಗಳಿಗೆ ಜಸ್ಟೀಸ್ ಪಾರ್ಟಿಯವರು ಕಿವಿಗೊಟ್ಟು ಸಮಯ ಹಾಳುಮಾಡುವವರಲ್ಲ; ಅದನ್ನು ಶ್ರೀ. ಕಾರಂತರು ಕೇಳಬೇಕು. ವರ್ಗದಾರರ ತೊಂದರೆಗಳೇನಾದರೂ ಇದ್ದರೆ ಅದೂ ಶ್ರೀ. ಕಾರಂತರಲ್ಲಿಗೇ ವರ್ಗವಾಗಲಿ! ನಿಮ್ಮಲ್ಲಿ ಓಟು ಇದ್ದರೆ-ಅದು ಮಾತ್ರ ಜಸ್ಟೀಸ್ ಪಾರ್ಟಿಯವರಿಗೆ ಬೇಕು. ನರನಾರಾಯಣ! ಕೊಟ್ಟವಗೆ ಸರ್ವವನು ಕೊಟ್ಟು ಬಿಡುವದ ಕಿತ | ಇದನೊಂದು ಕೊಡಿರೆನುವರವರು; ನ್ಯಾಯ! || ನರನಾರಾಯಣ!

○

ಮಂಗಳೂರಿನಲ್ಲಿ ಶ್ರೀಮಾನ್ ಲಕ್ಕಪ್ಪ ರೈಗಳು ನಿಲ್ಲುತ್ತಾರೆ; ಮದ್ರಾಸಿನ ಪ್ರೊಫೆಸರರವರು. ಜಸ್ಟೀಸ್‌ಪಾರ್ಟಿಯ ಸಂಪೂರ್ಣ ಬೆಂಬಲವುಳ್ಳವರು. ಮಂಗಳೂರಿನ ಮತದಾರರಿಗೆ ಅಪರೂಪವಾದರೂ ಆ ಮತದಾರರಿಗಿಂತ ಬಹಳ ದೊಡ್ಡವರಾದ ಮದ್ರಾಸಿನ ರಾಜ-ಮಹಾರಾಜರ ಪರಿಚಿತರು ಓಟುಕೊಡುವ ಮೊದಲು ಅವರ ಕುರಿತು ಅನುಭವ ಬೇಕೆಂದು ಮತದಾರರು ಅಪೇಕ್ಷಿಸುವದಾದರೆ ಈಗ ಗೊತ್ತಾಯಿತಲ್ಲ. ಅಪರೂಪದ ಉಮೇದ್ವಾರರು, ಅಪರೂಪದ ಓಟು! ನಿತ್ಯ ನಿಮ್ಮಲಿ ಬೆರೆದು ಸುಖ-ದುಃಖವರಿತವರು | ಅವರೇಕೆ? ಅಪರೂಪದವರು ಬರಲಿ! || ನರನಾರಾಯಣ!

○

ಶ್ರೀಮಾನ್ ಧರ್ಮಸ್ಥಳ ಮಂಜಯ ಹೆಗ್ಗಡೆಯವರನ್ನೇ ತಮ್ಮ ಪಕ್ಷಕ್ಕೆ ಸೇರಿಸಿಕೊಂಡರಾದೀತೆಂದು ಜಸ್ಟೀಸ್ ಪಾರ್ಟಿಗೆ ಮನಸಿತ್ತಂತೆ, ಈಗ ಅವರು ಸೇರುವುದಿಲ್ಲವಾದರೆ ಅವರ ದೇವಸ್ಥಾನವನ್ನಾದರೂ ಸೇರಿಸಿಕೊಳ್ಳಬಹುದಲ್ಲಾ ಎಂಬ ಯೋಚನೆಯು ಮದ್ರಾಸಿನ ಮಂತ್ರಿಮಂಡಲದವರಿಗಾದಂತಿದೆ. ಶ್ರೀ. ಹೆಗ್ಗಡೆಯವರಿಗೆ ಅದರಲ್ಲಿಯೂ ಮನಸಿಲ್ಲ; ಇದರಲ್ಲಿಯೂ ಮನಸಿಲ್ಲ. ಒಂದು ನ್ಯಾಯ ಹೇಳಿ, ಯಾರ ಮನಸಿದ್ಧಂತಾಗಬೇಕು? ಏನೇನು ನಡೆಯುವದೊ? ಏನಾಗಿ ಹೋಗುವದೊ? | ಕಾಲಪುರುಷನ ಕೃತ್ಯ ಸಾಗುತಿರಲಿ! || ನರನಾರಾಯಣ.

○

ಬಂಟಪ್ಪನಿಗೆ ಇನ್ನೊಂದು ವಾರ್ತೆ ಹೇಳುತ್ತೇನೆ. ಡಾ| ವಿಟ್ಠಲ ಶೆಟ್ರು ತನಗೆ ಬಂದ 'ರಾವ್ ಸಾಹೇಬ' ಬಿರುದನ್ನು ನಿರಾಕರಿಸಿದ ಆ ಕಾಲದಲ್ಲಿ ಕಲೆಕ್ಟರ್ ಮಿ. ಗೋನ್ ಸಾಹೇಬ್ ಶ್ರೀ. ಎ. ಬಿ. ಶೆಟ್ರಿಗೊಂದು ಪತ್ರ ಬರೆದು ಶೆಟ್ರೆ! ನೀವು ಮೂರುವರ್ಷ ಡಿ. ಬೋರ್ಡು ಪ್ರೆಸಿಡೆಂಟರಾಗಿದ್ದವರು; ಇತರ ಸಾರ್ವಜನಿಕ ಕೆಲಸಗಳನ್ನೂ ಮಾಡಿದವರು, ನಿಮಗೊಂದು 'ರಾವ್ ಸಾಹೇಬ' ಇರಲಿ, ಡಾ| ಶೆಟ್ರಂತೆ ನೀವೂ ನಿರಾಕರಿಸುವಿರೋ ಎಂಬುದಕ್ಕಾಗಿ ಮೊದಲೇ ಕೇಳಿದೆ' ಎಂದು ಕೇಳಿದಾಗ 'ನನಗದು ಬೇಡ' ಎಂದಿದ್ದರು. ಶ್ರೀ. ಎ. ಬಿ. ಶೆಟ್ರು ಆ ಕಾಗದ ಬರೆದುದು ತಾ. 27-8-1935ರಲ್ಲಿ. ಬಂಟಪ್ಪನಂಥವರು ಇದಕ್ಕೇನೆನ್ನುವರು? "ಅಯ್ಯಪ್ಪ" ಎನ್ನು ಪರೆ! ತಮ್ಮ ಮುಸಿಯನು ಬಳೆದು ಕೆಡಿಸಿ ತೋರಿಸುವವರು; ಅನ್ಯರಲಿ ತಮ್ಮ ಕೊಳೆ ಕಾಣುತಿಹರು || ನರನಾರಾಯಣ!

—ನಾರದ.

ವಿಶ್ವಕಿರುಕುಳ

ಚೀನೀಯರ ಸಭ್ಯತನ—ಸ್ಪೆಯಿನ್ ಯುದ್ಧದ ಪರ್ಯಾವಸಾನವೆಲ್ಲಿ?

ಚೀನಿಯರ ಸಭ್ಯತನ

ಚೀನದ ಮುಖ್ಯಾಧಿಕಾರಿಯಾದ ಚಿಯಾಂಗ್ ಕೈಶೇಕರನ್ನು ಅಲ್ಲಿಯ ಸೈನ್ಯಾಧಿಪತಿಗಳೊಬ್ಬರು ಉದ್ರೇಕದಿಂದ ಬಂಧಿಸಿದ್ದರು. ಸ್ವಲ್ಪ ಸಮಯದಲ್ಲಿ ಆ ದಳಪತಿಯು ಪಶ್ಚಾತ್ತಾಪ ಪೂರ್ವಕವಾಗಿ ತನ್ನ ಮೇಲಧಿಕಾರಿಯನ್ನು ಬಿಟ್ಟುಬಿಟ್ಟರು. ಬಂಧನದಿಂದ ಹೊರಬಂದ ಚಿಯಾಂಗ್ ಕೈಶೇಕರು ಹೇಳುತ್ತಾರೆ. 'ನನ್ನನ್ನು ಚಾಂಗ್ ಹ್ಸುಯೆಯಾಂಗರು ತಮ್ಮ ಅಭಿಪ್ರಾಯದಿಂದ ಸೆರೆ ಹಿಡಿದರು. ತಾನು ಮಾಡಿದುದು ತಪ್ಪೆಂದು ತಿಳಿದೊಡನೆ ಚೀನೀ ಸಭ್ಯತೆಗನುಸಾರವಾಗಿ ಬಿಟ್ಟುಬಿಟ್ಟರು' ಚೀನೀ ಸಭ್ಯತೆಯು ಮುಖ್ಯಾಧಿಕಾರಿಯನ್ನು ಮಾತ್ರವಲ್ಲ, ಆ ತಪ್ಪಿಗಾಗಿ ಕ್ರಮದಂತೆ ಹತ್ತು ವರ್ಷಗಳ ಶಿಕ್ಷೆಗೊಳಗಾಗಿದ್ದ ಆ ದಳಪತಿಯನ್ನೂ ಬಿಡಿಸಿತು! ಭವಿಷ್ಯತ್ಕಾಲದಲ್ಲಿ ತಪ್ಪು ಮಾಡಬಹುದೆಂಬ ಊಹನೆಗೋಸ್ಕರವಾಗಿ ಸಾಯುವವರೆಗೆ ಬಂಧನದಲ್ಲಿ ನರಳುವವರು ಭಾರತದಲ್ಲಿದ್ದಾರೆ—ತಪ್ಪು ಮಾಡಿದವರೂ ಗೊತ್ತಿಲ್ಲದೆ ಪಾರಾಗುವುದಕ್ಕೆ ರಿಯಾಯತಿ ಚೀನದಲ್ಲಿ ದೊರಕುತ್ತದೆ. ಪಾರತಂತ್ರ್ಯಕ್ಕೂ ಸ್ವಾತಂತ್ರ್ಯಕ್ಕೂ ಇರುವ ವ್ಯತ್ಯಾಸವಿದು.

ಸ್ಪೆಯಿನು ಯುದ್ಧದ ಪರ್ಯವಸಾನವೆಲ್ಲಿ?

ಸ್ಪೆಯಿನಿನ ಯಾದವೀ ಕಲಹದ ಅಂತ್ಯವೆಲ್ಲಿ ಎಂದು ಈಗ ಹೇಳಲು ಬರುವುದಿಲ್ಲ. ಇತ್ತೀಚೆಗೆ ದಂಗೆಗಾರರು ಆಗಾಗ ಪೆಟ್ಟು ತಿಂದು ಹಿಮ್ಮೆಟ್ಟುವ ಸುದ್ದಿಗಳೇ ಬರುತ್ತಿವೆ. ಅವರು ಹಿಂದೆ ಜಾರುವರೆಂದರೆ 'ಫೇಸಿಸಮ್'ನ ಒಂದು ಭಾಗವು ಕೆಳಜಾರುವದೆಂದೆ ಅರ್ಥ. ಇದನ್ನು ಕಂಡು ಹಿಟ್ಲರ್ ಮುಸಲಿನಿಗಳು ಹಲ್ಲು ಕಡಿಯುತ್ತಿದ್ದಾರೆ: 'ಸ್ಪೆಯಿನಿನಲ್ಲಿ ದಂಗೆಗಾರರು ಸೋತರೆ ಇಟಲಿಯು ಪ್ರತ್ಯಕ್ಷವಾಗಿ ಕೈಹಾಕಿ ಯುದ್ಧವನ್ನು ಮುನ್ನಡೆಸುವ ಸಿದ್ಧತೆ ತೋರಿಸುತ್ತಿರುವದು' ಎಂದು ಬ್ರಿಟಿಷ್ ಪರದೇಶ ಮಂತ್ರಿ ಮಿ. ಏಡನರು ಮಂತ್ರಿಮಂಡಲದ ಸಭೆಯಲ್ಲಿ ತಿಳಿಸಿದರು. ಬ್ರಿಟಿಷರು ಈಗ ಪ್ರಯತ್ನಪಟ್ಟು ಆಂಗ್ಲೋ-ಇಟಲಿ ಒಪ್ಪಂದವನ್ನು ಮಾಡಿಕೊಂಡರು. ಇಟಲಿ ನಿಜರೂಪದಿಂದ ಮುಂದೆ ಬಂದರೆ ಅದನ್ನು ಕಂಡು ಕಂಗಾಲಾಗುವವರೇ ಪ್ರಪಂಚದಲ್ಲಿ ತುಂಬಿಲ್ಲ; ರಕ್ತಕ್ಕೆ ಬೆಳಕನ್ನು ಕಾಣಲು ಇದೇ ಸಂದರ್ಭವಾಗಲೂ ಬಹುದು. ಈ ತನಕ ಈ ಎರಡು ರಾಷ್ಟ್ರಗಳು ಪ್ರಾಪಂಚಿಕ ಸಭ್ಯತನಕ್ಕೆ ಹೆದರಿ ಪರದೆಯ ಮರೆಯಲ್ಲಿಯೇ ಎಳೆದಾಡಿಕೊಳ್ಳುತ್ತಿದ್ದವು; ಇನ್ನು ಅವು ಮುಖಾಮುಖಿಯಾಗಿ ಬಯಲಿಗಿಳಿಯುವಾಗ ನಾಗರಿಕತೆಯು ಪರದೆಯೊಳಗೆ ಹೋದರೆ ಸರಿ!

ಬ್ರಿಟಿಷರ ಬುದ್ಧಿವಂತಿಗೆ

ಈ ಮಧ್ಯೆ ಬ್ರಿಟಿಷರು ಬುದ್ಧಿವಂತಿಕೆಯಿಂದಲೇ ಎಲ್ಲಾ ಗಂಡಾಂತರಗಳಿಂದ ಹೊರಬರಬೇಕೆಂದು ಪ್ರಯತ್ನಿಸುತ್ತಿರುವರು. ಆಂಗ್ಲೋ-ಇಟಲಿ ಒಪ್ಪಂದವು ಭೂಮಧ್ಯ ಸಮುದ್ರದಲ್ಲಿ ಬ್ರಿಟಿಷರ ಹಕ್ಕು ರಕ್ಷಿಸುವ ಸಲುವಾಗಿ ರಚಿಸಲ್ಪಟ್ಟಿದೆ. ಅಂತೂ ಸದಾ ಕಾಲ ಒಪ್ಪಂದದ ಕೆಲಸವಿರದಿದ್ದರೆ ಬ್ರಿಟಿಷರ ಮನಸ್ಸಿಗೆ ನೆಮ್ಮದಿಯಿಲ್ಲ. ಲೋಕ ನೆಮ್ಮದಿಯ ಗತಿಯು ಏನೇ ಆಗಲಿ; ಲೋಕದ ಬಹು ಭಾಗವನ್ನು ಆಳುವ ಬ್ರಿಟಿಷರ ಮನಸ್ಸಿಗಾದರೂ ಸದ್ಯಕ್ಕೆ ನೆಮ್ಮದಿ ದೊರೆಯಲಿ.

ಜರ್ಮನಿಯ ಉದ್ಧಟತನ

'ಗ್ರಿಡ್ಜೆ' ಎಂಬ ಜರ್ಮನಿಯವನು ದಂಗೆಗಾರರೊಡನೆ ಸೇರಿದವನೆಂದು ಸ್ಪೆಯಿನು ಸರಕಾರವು ನ್ಯಾಯವಾದ ವಿಚಾರಣೆಯ ನಂತರ ಮರಣದಂಡನೆ ವಿಧಿಸಿತು. ಅದಕ್ಕಾಗಿ ಜರ್ಮನಿಯು ಕಿಡಿಕಾರುತ್ತಿದೆ. ಸ್ಪೆಯಿನು ಸರಕಾರದ 'ಅರಗನ್' ಎಂಬ ಹಡಗನ್ನು ಜರ್ಮನರು ಸೆರೆಹಿಡಿದು ಸ್ಪೆಯಿನು ಸೆರೆಹಿಡಿದಿರುವ ತಮ್ಮ ನಾವಿಕನು ಬಿಡುಗಡೆ ಹೊಂದದೆ ಈ ಹಡಗನ್ನು ಬಿಡಲಾಗುವದಿಲ್ಲವೆಂದು ತಿಳಿಸಿರುವರು. ಸ್ಪೆಯಿನು ಸರಕಾರವು ಈ ಉದ್ಧಟತನವನ್ನು ಖಂಡಿಸುತ್ತಾ, 'ಹೆಚ್ಚುತ್ತಾ ಬರುತ್ತಿರುವ ಇಂತಹ ಉಪಟಳಗಳು ಕೂಡಲೇ ನಿಲ್ಲಿಸಲ್ಪಡದಿದ್ದರೆ ಪರಿಸ್ಥಿತಿಯು ಪಕ್ಕೋಡಿಯ ಮೇರೆ ಮೀರಬಹುದು' ಎಂದು ಎಚ್ಚರಿಸಿರುವರು. ಜರ್ಮನಿಯ ಭುಜಕಂಡೂತಿಯು ಬೆಳೆಯುತ್ತಾ ಹೋಗಿ ಆರೋಗ್ಯ ಕೆಡಹತ್ತಿದೆ; ಲೋಕವನ್ನದು ಯುದ್ಧದ ಕಡೆಗೆಳೆಯಲು ಸಿದ್ಧವಾಗಿ ಬರಲಾರದು.

ಅನಿಷ್ಟ ಸೂಚನೆಗಳು

5000ಕ್ಕೂ ಮಿಕ್ಕಿದ ಇಟಲಿಯ ಸೈನಿಕರು ಸ್ಪೆಯಿನಿನ ಎಲ್ಲೆಯನ್ನು ಪ್ರವೇಶಿಸಿ, ದಂಗೆಗಾರ ನಾಯಕರಿಂದ ಸತ್ಕಾರ ಹೊಂದಿದ ವಾರ್ತೆ ಬಂದಿದೆ. ಇಟಲಿ. ಜರ್ಮನಿಗಳ ಅಧಿಕಪ್ರಸಂಗದ ದೆಸೆಯಿಂದ ಯೂರೋಪಿನ ವಾತಾವರಣವು ಕ್ಷುಬ್ಧವಾಗಿದೆ. ಬ್ರಿಟಿಷ್ ನೌಕೆಯೊಂದರ ಮೇಲೆ ದಂಗೆಗಾರರ ಗುಂಡುಗಳು ಹಾರಿದವು. ಫೇಸಿಸ್ಟ ರಾಷ್ಟ್ರಗಳು ಲೋಕ ಯುದ್ಧ ತಯಾರಿಯ ಯಾವ ಸಂದರ್ಭವನ್ನೂ ವ್ಯರ್ಥಗೊಳಿಸುವುದಿಲ್ಲ. ಹೀಗೆ ಎಡೆಬಿಡದೆ ಪರಿಶ್ರಮಿಸುತ್ತಿರುವಾಗ ಯಾವುದಾದರೊಂದು ಸಂದರ್ಭವು ಅವಕ್ಕನುಕೂಲವಾಗದೆ ಹೋದೀತೆ?

ಒಂದಿಷ್ಟು ನಗು

ಮನೇ ಕೆಲಸದವಳು: 'ತಾಯೀ, ನಾನು ನಿಮಗಿಂತ ಚನ್ನಾಗಿ ಚುಂಬಿಸಬಲ್ಲೆ'

ಯಜಮಾನಿ (ಆಶ್ಚರ್ಯದಿಂದ): 'ಏನೇ' ನಮ್ಮವರು ಏನಾದರೂ ನಿನ್ನ ಸಂಗಡ....

ಕೆಲಸದವಳು: 'ಓ, ಇಲ್ಲಾ, ತಾಯೀ! ಮೋಟಾರು ಡ್ರೈವರು ಹಾಗೆ ಹೇಳಿದ'.

ಅವನು: 'ಏನೇ, ಒಂದುವೇಳೆ ಒಬ್ಬ ಕುರೂಪಿ ನಿನ್ನನ್ನು ಆಲಿಂಗನ ಮಾಡಿದರೆ ಏನುಮಾಡುತ್ತೀ?'

ಅವಳು: 'ನೀವು ಈಗ ಮಾಡಿನೋಡಿ, ಗೊತ್ತಾಗುತ್ತದೆ'.

ಕಸ್ತೂರಿ ಮಿಶ್ರಣ ದಶಮೂಲವೆಂಬ

ಸೂತಿಕಾ ರಸಾಯನ

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

I. ಶೋಧನ ಗುಣ:—ಶೋಧನದಿಂದ ಪ್ರಸವಾನಂತರ ಗರ್ಭಕೋಶದ ಸರ್ವತರದ ಸಂಚನ್ನು ಹೊರಗೆ ಹಾಕಿ ಪ್ರಸೂತವಾದ ಗರ್ಭಕೋಶವನ್ನು ಮೂರು ದಿವಸಗಳೊಳಗೆ ಸಂಕುಚಿತವಾಗಿ ಮಾಡುವದು.

II. ರಸಾಯನ ಗುಣ:— ರಸಾಯನದಿಂದ ಸೂತಿಕಾ ಸ್ತ್ರೀಯು ಗರ್ಭದ ಬೆಳವಣಿಗೆಬಗ್ಗೆಯೂ, ಪ್ರಸವವೇದನಾ ಬಗ್ಗೆಯೂ ತಾನು ಕಳಕೊಂಡ ಮೂಲ ಶಕ್ತಿಯನ್ನು ಇಮ್ಮಡಿಯಾಗಿ ತಿರುಗಿ ಹೊಂದುವಳು.

III. ಸುಖಸೇವನ: -ಸುಖಸೇವನದಿಂದ ಮಧುರ ಮನೋಹರವಾದ ಈ ರಸಾಯನವು ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾದವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವಾನಂತರದ ತೀಕ್ಷ್ಣವೇದನೆಯನ್ನು ಶೀಘ್ರದಿಂದ ನಿಲ್ಲಿಸುವದು.

ಒಬ್ಬಳು ಬಾಣಂತಿಗೆ ಎರಡು ಬಟ್ಲಿ ಬೇಕಾಗುವದು. ಕ್ರಯ ಬಾಟ್ಲಿ 1ಕ್ಕೆ ರೂ. 2-0-0.

ಎಸ್. ವಿ. ಶಾಸ್ತ್ರಿ, ಆಯುರ್ವೇದ ಭೂಷಣ

ಮಂಗಳೂರು, ದ.ಕ.

ಕ್ರೌನ್ ರಬ್ಬರ್ ಸ್ಟಾಂಪ್ ಕಂಪೆನಿ

ಸ್ಥಾಪನೆ: 1926



18 ಬಲ್ಮಠ ರಸ್ತೆ, ಮಂಗಳೂರು.

ಯಾವತ್ತೂ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಅಗತ್ಯವಿರುವ ಎಲ್ಲಾ ತರದ ರಬ್ಬರ್ ಮೊಹರುಗಳೂ ನೈಮ್ ಬೋರ್ಡು, ಪೇಪರುಗಳ ಜೇಬು, ಮೊನೊಗ್ರಾಮ್ ಸೀಲು, ಇತ್ಯಾದಿಗಳನ್ನು ಪ್ರತಿಯೊಬ್ಬರ ಅಭಿರುಚಿಗೊಪ್ಪುವಂತೆ ಸುಲಭ ದರಗಳಲ್ಲಿ ಮಾಡಿಕೊಡಲಾಗುವುದು.

ಹೆಬ್ಬೆಟ್ಟು ಒತ್ತುವ ಪೆಟ್ಟಿಗೆಗಳು ಕೂಡಾ ಸಿಗುವವು.

ಮಿಕ್ಕ ವಿಚಾರಗಳನ್ನು ನಮ್ಮ ಆಫೀಸಿಗೆ ಸ್ವತಹ ಬಂದು ಯಾ ಪತ್ರ ಮುಖೇನ ತಿಳಕೊಳ್ಳಬಹುದು.

ಮಂಗಳೂರಲ್ಲಿ ರೈಲು ಬಂಡಿಗಳ ಸಮಯ

ಗಾಡಿಗಳು	ಹೊರಡುವ ಘಂಟೆ.	ತಲಪುವ ಘಂಟೆ
ಮಿಕ್ಸಡ್	ಬೆಳಗ್ಗೆ 5-55	ರಾತ್ರಿ 8-55
ಕಾಂಜಂಗಾಡ್ ಪ್ಯಾಸೆಂಜರ್	ಬೆಳಗ್ಗೆ 8-35	ಮಧ್ಯಾಹ್ನ 1-20
ಮೈಲ್	ಬೆಳಗ್ಗೆ 9 50	ಸಂಜೆ 4-20
ಫಾಸ್ಟ್ ಪೆಸೆಂಜರ್	ಮಧ್ಯಾಹ್ನ 12 45	ಮಧ್ಯಾಹ್ನ 2-10
ಕಾಸರಗೋಡ್ ಪ್ಯಾಸೆಂಜರ್	ಮಧ್ಯಾಹ್ನ 3-20	ಸಂಜೆ 6-15
ಶಟಲ್	ಸಂಜೆ 5-25	ಬೆಳಗ್ಗೆ 9-30

ಜನರಲ್ ಎಶ್ಯೂರೆನ್ಸ್ ಸೊಸೈಟಿ ಲಿಮಿಟೆಡ್.

ಸ್ಥಾಪಿತವಾದದ್ದು [1907ರಲ್ಲಿ]

ವೇಲ್ಯುವೇಶನ್ ವರ್ಷ **1936.**

ಕೊನೆಯ ಬೋನಸು ಎಲ್ಲಕ್ಕಿಂತಲೂ ಅತಿ ಹೆಚ್ಚಾಗಿರುವುದು.

ಬೇರೆ ಬೇರೆ ಫಂಡುಗಳು ರೂ. **70** ಲಕ್ಷ ಮಿಕ್ಕಿವೆ.

ವಿಮಾ ಹಣ ಪಾವತಿ ರೂ. **37** ಲಕ್ಷ ಮಿಕ್ಕಿವೆ.

ಹೊಸತಾಗಿ ವಿಮೆಗೆ ಸೇರುವವರು ಹೊಸ ವೇಲ್ಯುವೇಶನಿನ ಉಳಿತಾಯದಲ್ಲಿ ಪಾಲು ಪಡೆಯುವರು. ಎಲ್ಲಾ ತರದ ಆವಶ್ಯಕತೆ ಮತ್ತು ಸ್ಥಿತಿಗತಿಗೆ ಸರಿಹೋಲುವ ವಿಮಾ ಯೋಜನೆಗಳಿವೆ.

ಏಜನ್ಸಿ ಶರ್ತಗಳು:—ಅತ್ಯಧಿಕ ನವೆಯ ಕಮಿಶನಿನಿಂದ ಬಹಳ ಲಾಭದಾಯಕವಾಗಿದೆ. ವಿಶೇಷ ಮಾಹಿತಿಗಾಗಿ ಈ ಕೆಳಗಣ ವಿಳಾಸಗಳಿಗೆ ಬರಕೊಳ್ಳಿರಿ

P. D. BHARGOVA,

General Manager, ***AJMER,***

SUPERINTENDENT. 278, Linga Chetty Street, MADRAS

Or Chief Agent:—

BELLARY: MADURA: TRICHINAPOLY: VELLORE.

ಸ್ಟೀಮರು ಸಮಯ

	ತಲಪುವುದು	ಹೊರಡುವುದು
ಮಂಗಳೂರು	ಗುರುವಾರ ಬೆಳಗ್ಗೆ ಗಂಟೆ 9	ಶನಿವಾರ ಬೆಳಗ್ಗೆ ಗಂಟೆ 9
	ಸೋಮವಾರ ಬೆಳಗ್ಗೆ ಗಂಟೆ 6	ಮಂಗಳವಾರ ಬೆಳಗ್ಗೆ ಗಂಟೆ 9
ಮಲ್ಪೆ	ಗುರುವಾರ ಬೆಳಗ್ಗೆ ಗಂಟೆ 3	ಶನಿವಾರ ಮಧ್ಯಾಹ್ನ 2-30
	ಆದಿತ್ಯವಾರ ಸಂಜೆ ಗಂಟೆ 6	ಮಂಗಳವಾರ ಮಧ್ಯಾಹ್ನ 2-30
ಕುಂದಾಪುರ		ಶನಿವಾರ ಸಂಜೆ ಗಂಟೆ 4
		ಮಂಗಳವಾರ ಮಧ್ಯಾಹ್ನ 3

ನಮ್ಮ ಉನ್ನತಿಗಾಗಿ ನಾವೇನು ಮಾಡಬೇಕು? ಇತ್ಯಾದಿ ಸಮಸ್ಯೆಗಳಿಗೆ ಸದುತ್ತರವನ್ನು ಕೊಡುವ ಪತ್ರಿಕೆ ಎಂದರೆ

ಸದ್ಧರ್ಮ ಪ್ರಚಾರಕ

ವಾ. ಚ. **1—4—0.**

ಸಂಪಾದಕರು:-

ಬಿ. ಲಕ್ಷ್ಮಣದೇವ ವಿದ್ಯಾರ್ಥಿ.

ಉತ್ಕೃಷ್ಟ ಲೇಖ, ಕವನಗಳಿಂದೊಡಗೂಡಿ, ಪ್ರತಿಮಾಸದ 16ನೇ ತಾರೀಕಿಗೆ ತಪ್ಪದೆ ಹೊರಡುವದು

ಸದ್ಧರ್ಮ ಪ್ರಚಾರಕ, ಕಾರ್ಯಾಲಯ, ಅಳಕೆ ರಸ್ತೆ, ಮಂಗಳೂರು

ಪ್ರವಾಸಿ.

ಅತ್ಯುತ್ತಮವಾದ ಸಚಿತ್ರ ಕನ್ನಡ ಮಾಸಪತ್ರಿಕೆ.

ಬೋಧಪ್ರದವಾದ ಲೇಖನಗಳು-ಮಹಾಪುರುಷರ ಜೀವನ ಚರಿತ್ರೆಗಳು ಉತ್ತಮ ಕಥೆಗಳು-ಆರ್ಥಿಕ ರಾಜಕೀಯ ವಿಚಾರಗಳು. ವೈಜ್ಞಾನಿಕ ವಿಷಯಗಳು-ಪರರಾಷ್ಟ್ರಗಳ ಸಮಸ್ಯೆಗಳು-ಗ್ರಂಥ ವಿಮರ್ಶೆ ಇವುಗಳನ್ನೊಳಗೊಂಡ ಹೊಸ ರೀತಿಯ ಮಾಸಪತ್ರಿಕೆ. ಕೈಗೆಲಸವೆಂಬ ನೂತನ ವಿಭಾಗವಿರುವ ಪತ್ರಿಕೆಯು ಇದೊಂದೇ.

ವಾರ್ಷಿಕ ಚಂದಾ ರೂ 3—8—0.

ಪ್ರವಾಸಿ ಕಾರ್ಯಾಲಯ

ಕಾಸರಗೋಡು, ದಕ್ಷಿಣಕನ್ನಡ.

THE VIJAYA BANK Ltd.,

Head Office. MANGALORE. **Branch Office Court Road, UDIPI.**

ದಿ ವಿಜಯ ಬೇಂಕ್ ಲಿಮಿಟೆಡ್,

ಹೆಡ್ ಆಫೀಸು: **ಮಂಗಳೂರು.** ಶಾಖೆ: **ಕೋರ್ಟು ರಸ್ತೆ, ಉಡುಪಿ**

ಚಾಲ್ತಿ ಠೇವಣಾತಿಗಳು ಸಾ. ಶೆ. 2. ಸೇವಿಂಗ್ಸ್ ಬ್ಯಾಂಕ್ ಠೇವಣಾತಿಗಳುಸಾ. ಶೆ. 3½

ಕಾಯಂ ಠೇವಣಾತಿಗಳು 3 ತಿಂಗಳ ಬಾಬ್ತು ಸಾ. ಶೆ. 3½

6 ಮತ್ತು 9 ತಿಂಗಳ ಬಾಬ್ತು ಸಾ ಶೆ. 4. 1 ವರ್ಷದ ಬಾಬ್ತು ಸಾ. ಶೆ. 5.

2 ವರ್ಷದ ಮೇಲಿನವುಗಳ ಬಾಬ್ತು ಸಾ. ಶೆ. 5½ ದರದ ಬಡ್ಡಿಯಲ್ಲಿ ಅಂಗೀಕರಿಸಲ್ಪಡುವುವು.

ಬ್ಯಾಂಕಿಗೆ ಸಮ್ಬಂಧಪಟ್ಟ ಎಲ್ಲಾ ತರದ ವ್ಯವಹಾರಗಳು ನಡೆಸಲ್ಪಡುತ್ತವೆ— ಅಂದರೆ—ಪ್ರೋ ನೋಟು, ಹುಂಡಿ, ಸರಕು, ವಗೈರೆ ಮೇಲೆ ಸಾಲಕೊಡಲಾಗುತ್ತದೆ, ಭಂಗಾರದ ಈಡಿನ ಮೇಲೆ ಈ ಕೆಳಗಿನ ದರದ ಬಡ್ಡಿಯಲ್ಲಿ ಸಾಲ ದೊರೆಯುವುದು.

ರೂ. 10ರಿಂದ 99ರ ವರೆಗೆ ಸಾ. ಶೆ. 9. 100ರಿಂದ 250ರ ವರೆಗೆ ಸಾ. ಶೆ. 8. ಮತ್ತು 25 ರರ ಮೇಲ್ಪಟ್ಟ ಸಾಲಗಳಿಗೆ ಸಾ. ಶೆ. 7.

ವಿಶೇಷ ಸೂಚನೆ:—ಬಡವರಿಗೆ ಸಹಾಯವಾಗುವಂತೆ ಕಡಿಮೆಯೆಂದರೆ ರೂಪಾಯಿ 5/ ಸಾಲ ಕೊಡಲಾಗುತ್ತದೆ. ಪಾಲುಗಳು ದೊರೆಯುತ್ತವೆ.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಕೊಳ್ಳಿರಿ.

A B Shetty. ಚೆಯರ್‌ಮೇನ್.

K. Gopalakrishna Shetty ಸೆಕ್ರಟರಿ.

ವಿಜಯ ಬೇಂಕ್ ಲಿಮಿಟೆಡ್, ಕದ್ರಿರೋಡ್, ಮಂಗಳೂರು.

ಸ್ವದೇಶಿ ಕೈಗಾರಿಕೆಯನ್ನು ಪ್ರೋತ್ಸಾಹಿಸಿರಿ.

ಸ್ವದೇಶಿ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗೆಬಗೆಯ ಬಣ್ಣದಲ್ಲಿ, ಅಂಚಿನಲ್ಲಿ, ನಮೂನೆಯಲ್ಲಿ ದೊರೆಯುತ್ತವೆ.

ಶುದ್ಧ ಖಾದಿ ಮತ್ತು ಮಿಲ್‌ಬಟ್ಟೆಗಳೂ ವಿಕ್ರಯಿಸಲ್ಪಡುತ್ತವೆ.

P. A. PAI, BROS.

ಪಿ. ಎ. ಪೈ ಬ್ರದರ್ಸ್,

ಆಸ್ಪತ್ರೆ ಎದುರು, ಉಡುಪಿ.

ಕಸಿಗಿಡಗಳು.

ಸಪೋಟಿಲ್ಲ (ಚಿಕ್ಕು)

ಈ ಮರವು ನಮ್ಮ ಜಿಲ್ಲೆಯ ಎಲ್ಲಾ ಭಾಗದಲ್ಲಿಯೂ ಸರಿಯಾಗಿ ಬೆಳೆದು, 4ನೇ ವರ್ಷದಲ್ಲಿಯೇ ತಪ್ಪದೆ ಫಲಬಿಡುತ್ತದೆ. ಒಂದು ಮರದಲ್ಲಿ ಸಾವಿರಗಟ್ಟಲೆ ಹಣ್ಣಾಗುವುದು, ಒಂದು ಎಕ್ರೆಯಲ್ಲಿ ವರ್ಷಕ್ಕೆ ರೂ. ಸಾವಿರದ ಮೇಲೆ ಉತ್ಪತ್ತಿಯಾಗುವುದು. ಹಣ್ಣು ಅತಿ ಮಧುರ, ಒಳ್ಳೇ ರುಚಿ, ಕಾಯಿಲೆಯವರಿಗೆ ಉತ್ತಮ ಆಹಾರ ಅದರಲ್ಲಿ ಕಬ್ಬಿಣ ಸತ್ವ ಮತ್ತು ವಿಟಮಿನ್ ತುಂಬ ಇರುವದರಿಂದ ರಕ್ತವನ್ನು ವೃದ್ಧಿಸುವುದು. ತಾರಸಿಯಲ್ಲಿ ಯಾವಾಗಲೂ ಹಣ್ಣು ಇರುವುದು. ಎಲ್ಲ ತೋಟದಲ್ಲಿಯೂ ಇರತಕ್ಕದ್ದು. ಗಿಡವೊಂದರ ಕ್ರಯ ರೂ. 1-0-0 ಮಾತ್ರ. ನಮ್ಮಲ್ಲಿ ಉತ್ತಮ ಮಾವು ಮತ್ತು ಇತರ ಕಸಿ ಗಿಡಗಳು ಕೂಡಾ ದೊರೆಯುತ್ತವೆ. ಕ್ರಯಪಟ್ಟಿಗೆ ಕೆಳಗಣ ವಿಳಾಸಕ್ಕೆ ಬರೆಯುವುದು

ಮಂಗಳೂರಲ್ಲಿ ವಿಜಯ ಬ್ಯಾಂಕಿನಲ್ಲಿಯೂ ಸ್ವಾಗತ ಡಿಪೋ, ಹಂಪನಕಟ್ಟೆಯಲ್ಲಿಯೂ, ಸೋಮಯಾಜಿ ಎಂಡ್ ಕೋ, ರಥಬೀದಿಯಲ್ಲಿಯೂ ಮತ್ತು ಜಿಲ್ಲೆಯ ಎಲ್ಲಾ ಎಗ್ರಿ ಕಲ್ಚರಲ್ ಡಿಪೋ ಸ್ಟೋರುಗಳಲ್ಲಿಯೂ ಮೇಲಿನ ಎಲ್ಲಾ ಗಿಡಗಳು ದೊರೆಯುತ್ತವೆ.

ಕೆ. ಎಮ್. ಶೆಟ್ಟಿ, ಕೆನರಾ ನರ್ಸರಿ, ಪೋಸ್ಟ್ ಕಾಪು, ದ. ಕನ್ನಡ

ಪ್ರಪಂಚದ ಸೋಜಿಗ

ಒಂದು ನಾಯಿಗಾಗಿ ದೇಶವನ್ನೆಲ್ಲಾ ಶೋಧಿಸುವರು

ಕೋಪನ್ ಹೇಗನ್ (ಡೆನ್ಮಾರ್ಕ್)ನಲ್ಲಿ ಒಂದು ನಾಯಿಯಿತ್ತು. ಈ ನಾಯಿಯು ತಾಯಿ ಸತ್ತ ಒಂದು ಹುಲಿಯ ಮರಿಗೆ ಹಾಲುಕೊಟ್ಟು ಸಾಕುತ್ತಿತ್ತು. ಹುಲಿಯ ಮರಿಯೂ ಸಹಾ ಇವರ ಹಾಲು ಕುಡಿದುಕೊಂಡು ಸುಖವಾಗಿತ್ತು. ಹೀಗಿರಲು ಒಂದು ದಿವಸ ಆ ನಾಯಿಯು ಎಲ್ಲೋ ತಪ್ಪಿಸಿಕೊಂಡು ಬರಲೇ ಇಲ್ಲ. ಇದರಿಂದ ಹುಲಿಯ ಮರಿಗೆ ಹಾಲಿಲ್ಲದೆ ಹೋಗಿ ಅಳುವುದಕ್ಕೆ ಮೊದಲುಮಾಡಿತು. ಆ ಕೂಡಲೆ ಆ ನಾಯಿಗಾಗಿ ಒಂದು ಅರ್ಜೆಂಟ್ ಟೆಲಿಗ್ರಾಂ ಕೊಟ್ಟರು. ಅರ್ಧಗಂಟೆಯೊಳಗಾಗಿ ಇಡೀ ಡೆನ್ಮಾರ್ಕ್ ಪ್ರಾಂತ್ಯವನ್ನೆಲ್ಲಾ ಒಂದಿಷ್ಟೂ ಬಿಡದಂತೆ ಶೋಧಿಸಿಬಿಟ್ಟರು. ಕೊನೆಗೆ ನಾಯಿ ಸಿಕ್ಕಿತು. ಅದನ್ನು ಹುಲಿಯ ಮರಿ ಬಳಿಗೆ ಕಳುಹಿಸಿಕೊಟ್ಟರು.

ಹೀಗೆ ಟೆಲಿಗ್ರಾಮುಗಳ ಪ್ರಯೋಜನವು ಕೇವಲ ಮನುಷ್ಯರಿಗೇ ಅಲ್ಲದೆ ಎಲ್ಲಾ ಜೀವಕೋಟಿಗೂ ಇದೆ.

ಬ್ರಿಟಿಷ್ ಸಾರ್ವಭೌಮರಿಗೆ ಒಂದು ಅಲ್ಪ ಸಂಬಳ

ನಮ್ಮ ಸಾರ್ವಭೌಮರಿಗೆ ಬ್ರಿಟನ್ನಿನ ಸಿವಿಲ್‌ಲಿಸ್ಟ್ ಪ್ರಕಾರ ಲಕ್ಷಾಂತರ ಪೌಂಡುಗಳು ಸಂದಾಯವಾಗುತ್ತವೆ. ಆದರೆ ಇವರಿಗೆ ಒಂದು ವಿಚಿತ್ರ ಹುದ್ದೆ ಇದೆ. ಇದಕ್ಕಾಗಿ ಇವರಿಗೆ ವರ್ಷಕ್ಕೆ ಒಂದು ಪೌಂಡು ಸುಮಾರು (ಹದಿನೈದು ರೂಪಾಯಿ) ಸಂಬಳವಿದೆ.

ಇದು ವಂಶಪಾರಂಪರ್ಯವಾಗಿ ಬರುತ್ತಿರುವ ಸಂಬಳ. ಆದುದರಿಂದ ಇದು ಪ್ರತಿವರ್ಷವೂ ಕರಾರುವಾಕಾ ಸಂದಾಯವಾಗುತ್ತದೆ.

ಪಂಬ್ರೊಕ್‌ಷೈರಿನಲ್ಲಿರುವ ಸಂಟ್‌ಡೇವಿಡ್ಸ್ ಕೆಥೀಡ್ರಲ್‌ನಲ್ಲಿ ಇವರ ಹುದ್ದೆ. ಇವರು ಅಲ್ಲಿಯ ಪ್ರಬೊಂಡರಿಯವರು. ಅಲ್ಲಿ ವರ್ಷಕ್ಕೊಮ್ಮೆ ಭಾಷಣಮಾಡುವ ಹಕ್ಕುಂಟು. ಅದಕ್ಕಾಗಿ ಇವರಿಗೆ ಈ ಸಂಬಳ.

ಚಿಕ್ಕ ಸಂಬಳಗಳ ಮಾತಿಗೆ ಬಂದರೆ ಇಂತಹವೇ ಇನ್ನೂ ಹಲವು ಹುದ್ದೆಗಳಿವೆ. ಕೆನ್‌ಸಿಂಗ್‌ಟನ್ನಿನ ಬಿಷಪ್ (ಮಠಾಧಿಪತಿ) ಯವರು ಲಂಡನ್‌ಸಿಟಿಯ ಚರ್ಚಿನಲ್ಲಿ ವರ್ಷಕ್ಕೊಂದುಬಾರಿ ಭಾಷಣ ಮಾಡುತ್ತಾರೆ. ಇದಕ್ಕೆ ಅವರಿಗೆ ಒಂದು ಪೌಂಡು ಸಂಬಳ.

ಇದಕ್ಕೂ ಭರತಖಂಡಕ್ಕೂ ಒಂದು ಸಂಬಂಧವಿದೆ. ಈ ಬಗ್ಗೆ ಇನ್ನೂರು ವರ್ಷಗಳ ಹಿಂದೆ ಲಂಡನ್ನಿನ ಮೇಯರಾಗಿದ್ದವರು ಈಸ್ಟ್ ಇಂಡಿಯಾ ಕಂಪೆನಿಯ ಮೆಂಬರರಾಗಿದ್ದರು. ಆದುದರಿಂದ ಇವರು ಇಂಡಿಯಾಕ್ಕೆ ಬರ ತಕ್ಕ ದಾರಿಯಲ್ಲಿ ಅರೇಬಿಯಾ ಮರುಳುಗಾಡನ್ನು ದಾಟುತ್ತಿದ್ದರು. (ಯಾಕೆಂದರೆ ಆಗ ಸೂಯಜ್ ಕಡಲ್ಗಾಲುವೆ ಇರಲಿಲ್ಲ). ಆಗ ಇವರು ದಾರಿ ತಪ್ಪಿದರು. ರಾತ್ರಿ ಒಂದು ಕಡೆ ಮರುಳುಗಾಡಿನಲ್ಲಿ ಮಲಗಿಕೊಂಡಿದ್ದಾಗ, ಒಂದು ಸಿಂಹ ಬಂದು ಇವರ ಮುಂದೆ ನಿಂತಿತು. ಅದನ್ನು ಕಂಡು ಇವರು ಭಯಭ್ರಾಂತರಾಗಿ ಏನುಮಾಡುವುದಕ್ಕೂ ತೋರದೆ ದೇವರ ಧ್ಯಾನಮಾಡಿದರು. ಸಿಂಹ ಹೊರಟು ಹೋಯಿತು. ಮೂರನೆಯದಿನ ದಾರಿಗೆ ಬಂದು ಮುಂದಿನ ಪ್ರಯಾಣ ಮಾಡಿದರು.

ಇವರು ಸ್ವದೇಶಕ್ಕೆ ಹಿಂತಿರುಗಿದ ಮೇಲೆ ೩೦೦ ಪೌಂಡುಗಳ ಪ್ರದುವಟ್ಟು ಹಾಕಿ ಅದರಿಂದ ಬರುವ ಬಡ್ಡಿಯಲ್ಲಿ ಒಂದು ಪೌಂಡನ್ನು ಈ ಭಾಷಣಕ್ಕಾಗಿ ಕೊಡುತ್ತಿದ್ದಾರೆ.

ವಿಚಿತ್ರ ಸ್ಮಾರಕಗಳು

ಬೋರ್ನ್ ಮೌತ್ ಎಂಬ ಊರಿನಲ್ಲಿ ನಾಯಿಗಳನ್ನು ಸಪ್ಲೈಮಾಡುವ ಅನೇಕ ಕಂಪನಿಗಳಿವೆ. ಅಲ್ಲಿ ಕೆಲವು ನಾಯಿ ಮರಿಗಳಿಗೆ ಸಾವಿರದೈನೂರು ಎರಡು ಸಾವಿರ ರೂಪಾಯಿಗಳ ತನಕ ಬೆಲೆಯಾಗುತ್ತವೆ.

ಅಲ್ಲಿ ಒಬ್ಬಾಕೆಯು ತನ್ನ ಪ್ರೀತಿ ಪಾತ್ರವಾದ ನಾಯಿ ಮರಿಯು ಸತ್ತುಹೋಯಿತೆಂದು ಅದರ ಸ್ಮಾರಕಾರ್ಥವಾಗಿ ನಾಯಿಗಳಿಗೊಂದು ಗೃಹವನ್ನು ಧರ್ಮಾರ್ಥವಾಗಿ ಕಟ್ಟಿಸಿಕೊಟ್ಟಿದ್ದಾಳೆ. ನಾಯಿಯ ಸ್ಮಾರಕ ಕಟ್ಟಡವು ಜಗತ್ತಿನಲ್ಲಿ ಇನ್ನೆಲ್ಲೂ ಇಲ್ಲವೆಂದು ಹೇಳಬಹುದು.

ಜಗತ್ತಿನಲ್ಲಿ ಈ ತೆರನಾದ ವಿಚಿತ್ರ ಸ್ಮಾರಕಗಳು ಇನ್ನೂ ಇವೆ. ಪ್ರಾಣಿಗಳಿಗೂ ಪಕ್ಷಿಗಳಿಗೂ ಇವೆ. ಕೆಲವು ಪ್ರಯೋಜನಕಾರಿಯಾಗಿದ್ದಾಗ್ಯೂ ಮತ್ತೆ ಹಲವು ಕೇವಲ ಅರ್ಥಶೂನ್ಯಗಳೇ ಸರಿ.

ಉದಾಹರಣೆಗೆ ವಾಶಿಂಗ್‌ಟನ್ನಿನ ಬಳಿ ಇರುವ ಸೀಟಲ್ ಎಂಬೂರಿನಲ್ಲಿ ಜಗತ್ತಿನ ಅತ್ಯಾಶ್ಚರ್ಯಕರವಾದ ಹಸುವಿತ್ತು. ಅದು ಎರಡು ವರ್ಷಗಳಲ್ಲಿ ೩೩,೯೩೩ ಕ್ವಾರ್ಟ್ ಅಂದರೆ ೮೪೮೦ ಗ್ಯಾಲನ್ನುಗಳ ಹಾಲನ್ನು ಕೊಟ್ಟಿತು. ಈ ಹಸುವಿನ ಸ್ಮಾರಕಾರ್ಥವಾಗಿ ಆ ಹಸುವಿನ ಒಂದು ಶಿಲಾ ಪ್ರತಿಮೆಯನ್ನು ಸ್ಥಾಪಿಸಿದ್ದಾರೆ.

ಸಾಲ್ಟ್‌ಲೇಕ್ ಸಿಟಿಯ ಸುತ್ತುಮುತ್ತಲೂ ಒಂದುಬಾರಿ ಮಿಡತೆಗಳು ಹೆಚ್ಚಿಹೋಗಿ ಯಾವ ಬೆಳೆಯೂ ಉಳಿಯುವಂತಿರಲಿಲ್ಲ. ಆಗ ಸೀಗಲ್ಸ್ ಎಂಬ ಪ್ರಾಣಿಗಳು ಆ ಮಿಡಿತೆಗಳನ್ನೆಲ್ಲಾ ತಿಂದುಹಾಕಿದವು. ಆದುದರಿಂದ ಆ ಸೀಗಲ್ಸ್ ಪ್ರಾಣಿಗಳ ಸ್ಮಾರಕಾರ್ಥವಾಗಿ ಅವು ಊರನ್ನು ಕಾಪಾಡಿತೆಂದು ಒಂದು ಶಿಲಾ ಪ್ರತಿಮೆಯನ್ನು ನಿರ್ಮಿಸಿದ್ದಾರೆ.

ಅವರೆ ಹಾನೋವರ್ ಬಳಿ ಇರುವ ಲೂನ್‌ಬರ್ಗ್ ಎಂಬಲ್ಲಿ ಇರುವ ಸ್ಮಾರಕವು ಎಲ್ಲಕ್ಕೂ ವಿನೋದವು. ಅಲ್ಲಿ ಒಂದು ಹಂದಿಯ ಸ್ಮಾರಕಾರ್ಥವಾಗಿ ಒಂದು ಶಿಲಾಪ್ರತಿಮೆ ಇದೆ. ಯಾಕೆ ಈ ರೀತಿ ಹಂದಿಗೆ ಸ್ಮಾರಕವೆಂದು ಕೇಳಬಹುದು? ಅದಕ್ಕೆ ಕಾರಣವಿದೆ. ಅದು ಒಂದು ಅಮೂಲ್ಯವಾದ ಔಷಧಿ ಸತ್ವವಾದ ಒಂದು ನೀರಿನ ಊಟೆಯು ಕಂಡುಹಿಡಿಯಲ್ಪಡಲು ಕಾರಣಭೂತವಾಯಿತು.

ಮಹಾ ವಿಚಿತ್ರ ಪುಷ್ಪ

ಚೀಣಾದೇಶದ ಪ್ರಮುಖ ನಗರವಾದ ಷಾಂಗ್ಹೀಯಲ್ಲಿ ಒಂದು ವೃತ್ತಪತ್ರಿಕಾ ಕಛೇರಿಯಲ್ಲಿ ಮಿ|| ಎನ್. ಪ್ಯೈ. ಜೊ ಎಂಬ ಮ್ಯಾನೇಜರಿದ್ದಾನೆ. ಈತನ ಮಗಳ ಮನೆಯಲ್ಲಿ ಒಂದು ಹೂವಿನ ಗಿಡವುಂಟು. ಈ ಹೂವಿಗೆ ಆವಿಯ ಹೂವೆಂದು ಹೆಸರು. ಇದು ಸಾಮಾನ್ಯವಾಗಿ ಅರಳುವುದು ಬಲು ನಿಧಾನ. ಆದರೆ ಇವಳ ಬಳಿ ಇರುವ ಗಿಡದಂತೂ ಇದ್ದುದ್ದು ಬಲು ನಿಧಾನ, ಕಳೆದ ೧೨೫ ವರ್ಷಗಳ ಹಿಂದೆ ಈ ಗಿಡದಲ್ಲಿ ಒಂದು ಮೊಗ್ಗೆ ಹುಟ್ಟಿ ಇದುವರೆಗೂ ಅರಳೇ ಇಲ್ಲ. ಈಗ ಅರಳಿದೆ.

ಈ ತೆರನಾದ ಹೂವಿನ ಗಿಡಗಳು ಜಗತ್ತಿನಲ್ಲಿ ಮತ್ತಾವ ರಾಷ್ಟ್ರದಲ್ಲೂ ಇಲ್ಲ. ಈ ಹೂವುಗಳು ಮುನ್ನೂರು ವರ್ಷಗಳ ಕಾಲ ಬಾಡದೆ ಇರಬಲ್ಲುವೆಂದು ಹೇಳಲಾಗಿದೆ.

ಖಂಡಿತವಾಗಿಯೂ ಇದು ಜಗತ್ತಿನ ಮಹಾ ಪುಷ್ಪ.

ಪ್ರಜಾಮತದಿಂದ

ಬ್ರೇಕ್ ಪಿಲ್ಸು

ಸ್ತ್ರೀಪುರುಷರಿಗೆ ಆನಂದವನ್ನುಂಟುಮಾಡುವುದು ಈ ಮಾತ್ರೆಗಳೆ. ಮದಿಸಿದ ಸ್ತ್ರೀಯರ ಗರ್ವ ಭಂಗಮಾಡಲು ಕಂಡು ಹಿಡಿದಿರುವ ಮಾತ್ರೆಗಳಿವು. ಇದರಲ್ಲಿ ವಿಷಾದಿಗಳು ಸೇರಿಲ್ಲ, ಕಸ್ತೂರಿ, ಚಿನ್ನ ಹಿಮಾಲಯಪರ್ವತದ ವನಮೂಲಿಕೆಗಳು ಮುಂತಾದುವುಗಳಿಂದ ದೊಡ್ಡ ಯೋಗೀಶ್ವರರ ಹತ್ತಿರ ಸಂಗ್ರಹಿಸಿ ಮುದುಕತನವನ್ನು ಲೋಕದಲ್ಲಿ ಇಲ್ಲದಂತೆ ಮಾಡುವುದು. ಅರ್ಧ ಘಂಟೆಯೊಳಗಾಗಿ ವೀರ್ಯವನ್ನು ಕಲ್ಲಿನಂತೆ ಮಾಡಿ ರಮಿಸಲು ಉಲ್ಲಾಸವನ್ನು ಮಾಡುವುದು ಗುಣವಿಲ್ಲದಿದ್ದಲ್ಲಿ ಹಣ ವಾಪಸು. **೬೦ ಮಾತ್ರೆಗಳು ರೂ. ೫ ೦--೦**

೩೦ ಮಾತ್ರೆಗಳು ರೂ. ೩—೦—೦ **ಕಾಗದ ಪತ್ರಗಳು ಇಂಗ್ಲೀಷಿನಲ್ಲಿಯೇ.**

ಡಾ. ಎ. ಎಸ್. ಮೂರ್ತಿ,

ಚಿಕಾಗೋಲ್ ಗಂಜಾಮ್ ಡಿಸ್ಟ್ರಿಕ್ಟ್.

ಬೇಕಾಗಿದ್ದಾರೆ.

ಉಡುಪಿ ಶ್ರೀಕೃಷ್ಣದೇವರ ಮಠದ ಚಿಟ್ಟುಪತ್ರಗಳನ್ನು ಇಡುವ ಬಗ್ಗೆ ಇಂಗ್ಲೀಷ್, ಕನ್ನಡ, ಮತ್ತು ನಾಗರೀ ತಿಳಿದ ದ್ರಾವಿಡ ವೈಷ್ಣವ ಬ್ರಾಹ್ಮಣ ಸಮಾಜಕ್ಕೆ ಸೇರಿದ ಒಬ್ಬ ಯೋಗ್ಯ ವ್ಯಾಸಂಗಿಗನು ಬೇಕಾಗಿದೆ. ಅಪೇಕ್ಷೆಯುಳ್ಳವರು ತಾ. ೩-೧-೧೯೩೭ ರ ಒಳಗಾಗಿ ಕೆಳಗಿನ ವಿಳಾಸಕ್ಕೆ ಅರ್ಜಿ ಬರೆಯಬೇಕು. ಸಂಬಳ ಯೋಗ್ಯತಾನುಸಾರ.

ಮಿಯಾರು ನರಸಿಂಹಾಚಾರ್,

ಜನರಲ್ ಏಜಂಟ,

ಪರ್ಯಾಯ ಶ್ರೀ ಪೇಜಾವರ ಮಠ.

ಉಡುಪಿ. ತಾ. 30-12 1936

ದೀರ್ಘಕಾಲದ ರೋಗಗಳಿಂದ ಇನ್ನೂ ಇನ್ನೂ ವೃಥಾ ನರಳುತ್ತಿರುವುದೇಕೆ?

ನಾಯಕ್ ಬ್ರದರ್ಸರ ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ.ಕ.

ಇವರ ಅತ್ಯಮೂಲ್ಯವಾದ ಔಷಧಗಳ ಸೇವನೆಯಿಂದ ಶೀಘ್ರದಲ್ಲೇ ಗುಣಹೊಂದಬಹುದಲ್ಲವೇ?

ಇವರ ಔಷಧಗಳ ವೈಶಿಷ್ಟ್ಯ ಏನು?

ದೇಶೀಯ ಉದ್ಯಮ

100 ವರ್ಷಗಳ ಅನುಭವದಿಂದ ತಯಾರಿ.

ಶಾಸ್ತ್ರೀಯ ರೀತಿಯ ಸಿದ್ಧತೆ.

ಅತ್ಯಂತ ಗುಣಕಾರಿ.

ಸ್ವರ್ಣ, ರಜತಪದಕಗಳನ್ನು ಪಡೆದ ವಿಶ್ವೌಷಧಗಳು.

ಅತ್ಯಂತ ಕಡಿಮೆ ದರ.

ಭುವನೇಂದ್ರ ತ್ರೈರತ್ನಗಳು

ಗುಡಪಿಪ್ಪಲಿ
(ಮಕ್ಕಳ ಲೀವರ್ ರೋಗಕ್ಕೆ ಅತ್ಯುತ್ತಮ)
ಗರ್ಭಪಾಲ
(ಗರ್ಭಶೂಲೆ, ಗರ್ಭಸ್ರಾವಕ್ಕೆ ದಿವ್ಯೌಷಧ)
ಚಂದ್ರಮಸ್
(ವಾಂತಿಭೇದಿ, ಅತಿಸಾರಗಳ ಮೇಲೆ
(ಅತ್ಯಂತ ಗುಣಕಾರಿ)

ಶಾಸ್ತ್ರೀಯರೀತ್ಯಾ ತಯಾರಿಸಿದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲಗಳು—ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ.
ನಮ್ಮ ಪ್ರತಿನಿಧಿಗಳಿಲ್ಲದ ಕಡೆಗಳಲ್ಲಿ ವ್ಯವಹಾರಕುಶಲರೂ, ವ್ಯಾಪಕರೂ, ಯೋಗ್ಯರೂ ಆದ ಏಜಂಟರು ಬೇಕು. ಅವರಿಗೆ ವಿಪುಲವಾದ ಸೌಕರ್ಯಗಳಿವೆ

ಹೆಚ್ಚಿನ ಮಾಹಿತಿಗೂ, ಸೂಚಿಪತ್ರಕ್ಕೂ, ವ್ಯವಹಾರನಿಯಮಕ್ಕೂ ಬರೆಕೊಳ್ಳಿರಿ.

ಹೊಸದು! • ಐರಾವತ • ತೀರಾ ಹೊಸದು!!

ಇದರಲ್ಲಿ—ಕಾಮಶಾಸ್ತ್ರ, ಕೈಗಾರಿಕೆಯ ವಿಷಯ, ಇಂದ್ರಜಾಲ-ಮಹೇಂದ್ರಜಾಲ, ಕಾಯದೇಭಾಗ, ತಂತ್ರ-ಮಂತ್ರ-ಯಂತ್ರ, ಸರ್ವ ಮುಹೂರ್ತ ವಿಷಯ, ವೈದ್ಯಭಾಗ. ಈ ಪ್ರಕಾರ ೭ ಪ್ರಕರಣಗಳಿದ್ದು ಅತ್ಯಂತ ಮಹತ್ವದ ವಿಷಯಗಳು ಅಡಕವಾಗಿವೆ. ಇದರ ಬೆಲೆ ರೂ- ೧--೦--೦ ವಿ. ಪಿ. ಚಾರ್ಜು ಬೇರೆ.

ವಿಳಾಸ:— ಎಸ್. ಸಿ. ಸಾಲಿಮಠ ಅಂಡ್ ಸನ್ಸ್, ಗದಗ ಸಿಟಿ.

ಅನೇಕ ಮರ್ಮ ವಿದ್ಯೆಗಳಿಂದೊಡಗೂಡಿದ

—ಚಿಂತಾರತ್ನ—

ಇದರಲ್ಲಿ ಜಾತಕಫಲ, ಕೈಗಾರಿಕೆಯ ವಿಷಯ, ಇಂದ್ರಜಾಲ, ಮಹೇಂದ್ರಜಾಲ, ಯಕ್ಷಿಣಿ ಮೊದಲಾದ ವಿದ್ಯೆಗಳು ಇರುತ್ತವೆ. ಒಂದೊಂದು ವಿಷಯಕ್ಕೆ ಎಷ್ಟು ಬೆಲೆ ಕೊಟ್ಟರೂ ಸಾಲದು.

೧ ಸಬಕಾರವನ್ನು ತಯಾರಿಸುವ ರೀತಿ
೨ ಮೇಣಬತ್ತಿ ತಯಾರಿಸುವ ರೀತಿ
೩ ಕಾಸ್ಟಿಕ್ ಸೋಡಾ ತಯಾರಿಸುವದು
೪ ಬಿಸ್‌ಕ್ಯೂಟ ತಯಾರಮಾಡುವದು
೫ ದಶಾಂಗ ತಯಾರಮಾಡುವದು
೬ ಪೆಪ್ಪರಮೆಂಟ ಮಾಡುವದು
೭ ದೂಪದ ಘಟ್ಟಿ ಮಾಡುವದು
೮ ಭಂಗಾರ ಮಾಡುವದು
೯ ಬೆಳ್ಳಿ ತಯಾರಮಾಡುವದು
೧೦ ಜರ್ಮನ್ ಶಿಲ್ವರ ಧಾತು
೧೧ ಊದಿನಕಡ್ಡಿ ತಯಾರಮಾಡುವದು
೧೨ ಶಾಯಿನ ಪಾಟಿ ತಯಾರಮಾಡುವದು
೧೩ ಕುಂಕುಮವನ್ನು ತಯಾರಿಸುವದು
೧೪ ಹಸಿ ಕುಂಕುಮ ತಯಾರಿಸುವದು
೧೫ ಗೋದೀಸರಿ ಕೆಡದಂತೆ ಮಾಡುವದು
೧೬ ಬುಕ್ಕಿಟ್ಟು ಮಾಡುವದು
೧೭ ಮೀನಸರಿ ಯಾವಾಗಲೂ ನೀರಾಗಿರುವಂತೆ ಮಾಡುವದು
೧೮ ಅಷ್ಟಗಂಧ ಸಾಮಾನುಗಳು
೧೯ ಭರ್ಪ ತಯಾರಮಾಡುವದು
೨೦ ಕಟ್ಟಿಗೆ ಲೋಹಗಳಿಗೆ ಹಚ್ಚುವ ಬಣ್ಣ ಮಾಡುವದು
೨೧ ಕಾಗದವನ್ನು ಮಾಡುವದು
೨೨ ಮೊಂಘೇಲ ಎಣ್ಣೆ ತಯಾರಿಸುವದು
೨೩ ಕನ್ನಡಿಯ ಮೇಲೆ ಬರೆಯುವದು
೨೪ ದಂತಮಂಜನ ಮಾಡುವದು
೨೫ ರಕ್ತಶುದ್ಧಿ, ಧಾತುವೃದ್ಧಿ ಔಷಧಿ
೨೬ ಕಸ್ತೂರಿ ಮಾತ್ರೆ ಮಾಡುವದು
೨೭ ಕುಚಪ್ರಭಾತಕ್ಕೆ ಔಷಧ
೨೮ ಬಾಲಾಮೃತ ಮಾಡುವದು
೨೯ ಶಿಶ್ನವೃದ್ಧಿಗೆ ಔಷಧ
೩೦ ಶರಬತ್ತು ಮಾಡುವದು
೩೧ ಛಳಿಜ್ವರದ ಗುಳಿಗೆ ಮಾಡುವದು
೩೨ ಬೂಟಪಾಲೀಸ ಮಾಡುವದು
೩೩ ಮನೆ, ವಠಾರ, ಅಂಗಡಿ ಮೊದಲಾದುವುಗಳಿಗೆ ಗೆದ್ದಲಿ ಹತ್ತದಂತ ಮಾಡುವದು
೩೪ ಹುರುಕು ಖಜ್ಜಿ ಮಲಾಮು ಮಾಡುವದು
೩೫ ನಾಸೀಪುಡಿ ಮಾಡುವದು
೩೬ ಮನೆ, ವಠಾರ, ಅಂಗಡಿಗಳಲ್ಲಿ ಇಲಿ, ಹೆಗ್ಗಣ ಮೊದಲಾದವುಗಳು ಇರದಂತೆ ಮಾಡುವದು
೩೭ ಜರ್ದಾತಂಬಾಕ ಮಾಡುವದು
೩೮ ಒಪನೆ, ಕುಂಬಳ ಮುಂತಾದ ಕಾಯಿಗಳಿಗೂ, ಮಾವು, ಲೇಬು ಮುಂತಾದ ಹಣ್ಣುಗಳಿಗೂ ಬೀಜವಿಲ್ಲದ ದೊಡ್ಡವಾಗುವದು
೩೯ ಸಿಮೆಂಟ್ ತಯಾರಿಸುವದು
೪೦ ಬಿಳೀ ಹೂಗಳು ಕೆಂಪಾಗುವಂತೆ ಗಿಡಗಳನ್ನು ತಯಾರಿಸುವದು
೪೧ ಕೆಂಪು ಹೂಗಳು ಬೆಳ್ಳಗಾಗುವಂತೆ ಗಿಡಗಳನ್ನು ತಯಾರಿಸುವದು
೪೨ ಇಸ್ಪೀಟಿನ ಚಮತ್ಕಾರ
೪೩ ಮುಖ ನೋಡಿಕೊಳ್ಳುವ ಕನ್ನಡಿ ಮಾಡುವದು
೪೪ ಸುವಾಸನೆ ಎಣ್ಣೆ ತಯಾರಿಸುವದು
೪೫ ಕೇದಿಗೆ ದವನದೆಣ್ಣೆ ಮಾಡುವದು
೪೬ ಯಾವ ಗಿಡವಾದರೂ ಹುಟ್ಟುತ್ತಲೆ ಹೂವು ಬಿಡುವಂತೆ ಮಾಡುವದು
೪೭ ಗಂಧಕದ ಬಟ್ಟಲ ತಯಾರಿಸುವದು
೪೮ ಕರ್ಪುರ ಮಾಡುವದು
೪೯ ಬ್ರೆಷ್ಷು ತಯಾರಿಸುವದು
೫೦ ನೂಲ, ಬಟ್ಟೆಗೆ ಬಣ್ಣ ಹಾಕುವದು
೫೧ ಕಪ್ಪು, ಕೆಂಪು, ಹಸುರು, ಹಳದಿ ಬಣ್ಣ ತಯಾರಿಸುವದು
೫೨ ಬರ್ಥ ಕಂಟ್ರೋಲ
೫೩ ಅರಗಿನ ಬಣ್ಣ ತಯಾರಿಸುವದು
೫೪ ಗಿಲೀಟ ಮಾಡುವದು
೫೫ ತಾಮ್ರದ ಮೇಲೆ ಭಂಗಾರದ ಗಿಲೀಟು ಮಾಡುವದು
೫೬ ತಾಮ್ರ, ಹಿತ್ತಾಳಿಗೆ ಬೆಳ್ಳಿ ಗಿಲೀಟು ಮಾಡುವದು
೫೭ ಕಡ್ಡಿ ಪೆಟ್ಟಿಗೆ ತಯಾರಿಸುವದು
೫೮ ರೋಜವಾಟರ ತಯಾರಿಸುವದು

ಇತ್ಯಾದಿ ೧೭೦ ವಿಷಯಗಳಿವೆ.
ಸ್ಥಳ ಸಂಕೋಚ ಮೂಲಕ ಎಲ್ಲವನ್ನೂ ಕೊಟ್ಟಿಲ್ಲ.
ಬೆಲೆ ೧ ರೂಪಾಯಿ .. (ವಿ. ಪಿ. ವೆಚ್ಚ ಬೇರೆ)

ಎಸ್. ಸಿ. ಸಾಲಿಮಠ, ಪ್ರಿಂಟರ, ಗದಗ
ಇವರಿಂದ ಬರೆಯಲ್ಪಟ್ಟ

ಕಾಮಕಳಾಶಾಸ್ತ್ರ

ಪ್ರತಿ ಒಬ್ಬ ರಸಿಕರು ಅವಶ್ಯ ಓದಬೇಕಾದ

—ಈ ಪುಸ್ತಕದೊಳಗಿನ ವಿಷಯಗಳು—

೧ ಪುರುಷ ಸಾಮುದ್ರಿಕ ಲಕ್ಷಣ. ೨ ಸ್ತ್ರೀ ಸಾಮುದ್ರಿಕ ಲಕ್ಷಣ. ೩ ಶಶಕ ಜಾತಿ ಪುರುಷನ ಲಕ್ಷಣ. ೪ ಮೃಗಜಾತಿ ಪುರುಷನ ಲಕ್ಷಣ. ೫ ವೃಷಭಜಾತಿ ಪುರುಷನ ಲಕ್ಷಣ. ೬ ಅಶ್ವಜಾತಿ ಪುರುಷನ ಲಕ್ಷಣ ೭ ಪದ್ಮಿನಿಜಾತಿ ಸ್ತ್ರೀಯಳ ಲಕ್ಷಣ. ೮ ಚಿತ್ರಿಣಿಜಾತಿ ಸ್ತ್ರೀಯಳ ಲಕ್ಷಣ. ೯ ಶಂಖಿನಿಜಾತಿ ಸ್ತ್ರೀಯಳ ಲಕ್ಷಣ. ೧೦ ಹಸ್ತಿನಿಜಾತಿ ಸ್ತ್ರೀಯಳ ಲಕ್ಷಣ. ೧೧ ಯಾವ ಯಾವ ಜಾತಿ ಪುರುಷನಿಗೆ ಯಾವ ಯಾವ ಜಾತಿ ಸ್ತ್ರೀಯಳು ಯೋಗ್ಯ. ೧೨ ಮತ್ತು ಅವರಿಂದ ಹುಟ್ಟಿದ ಮಕ್ಕಳ ಫಲವಿಚಾರ (ಜಾತಕ.) ೧೩ ಯಾವ ಯಾವ ಜಾತಿ ಸ್ತ್ರೀಯರಿಗೆ ಯಾವ ಯಾವ ತಿಥಿಯ ದಿವಸ ಭೋಗೇಚ್ಛಾ ಉಂಟಾಗುತ್ತವೆಂಬುದನ್ನು ತಿಳಿಯುವದು. ೧೪ ಯಾವ ಯಾವ ಸ್ತ್ರೀಯರಿಗೆ ಎಷ್ಟೆಷ್ಟು ಹೊತ್ತಿಗೆ ಭೋಗೇಚ್ಛಾ ಉಂಟಾಗುತ್ತದೆಂಬದನ್ನು ತಿಳಿಯುವದು. ೧೫ ಯಾವ ಯಾವ ಜಾತಿ ಸ್ತ್ರೀಯರಿಗೆ ಯಾವ ಯಾವ ತಿಥಿಯ ದಿವಸ ಯಾವ ಯಾವ ಅವಯವದಲ್ಲಿ ಕಾಮವು ಇರುತ್ತದೆಂಬುದನ್ನು ತಿಳಿಯುವ ಕ್ರಮವು. ೧೬ ಚಂದ್ರಕಲೆಯ ಸ್ಥಾನಗಳು. ೧೭ ಸ್ತ್ರೀವಶೀಕರಣ. ೧೮ ಪುರುಷವಶೀಕರಣ. ೧೯ ಪದ್ಮಿನಿ ಸ್ತ್ರೀಯಳನ್ನು ವಶಮಾಡಿಕೊಳ್ಳುವ ಉಪಾಯ. ೨೦ ಚಿತ್ರಿಣಿ ಸ್ತ್ರೀಯಳನ್ನು ವಶಮಾಡಿಕೊಳ್ಳುವ ಉಪಾಯ. ೨೧ ಶಂಖಿನಿ ಸ್ತ್ರೀಯಳನ್ನು ವಶಮಾಡಿಕೊಳ್ಳುವ ಉಪಾಯ. ೨೨ ಹಸ್ತಿನಿ ಸ್ತ್ರೀಯಳನ್ನು ವಶಮಾಡಿಕೊಳ್ಳುವ ಉಪಾಯ. ೨೩ ಭೋಗಕ್ಕೆ ಯೋಗ್ಯ ಸ್ಥಳ. ೨೪ ಭೋಗಕ್ಕೆ ಅಯೋಗ್ಯ ಸ್ಥಳ ೨೫ ಮೈಥುನಕ್ಕೆ ಅಯೋಗ್ಯವಾದ ವೇಳೆ. ೨೬ ಮೈಥುನಕ್ಕೆ ಅಯೋಗ್ಯ ಸ್ತ್ರೀಯರು. ೨೭ ಪರಸ್ತ್ರೀ ಗಮನದಿಂದಾಗುವ ಹಾನಿ. ೨೮ ಸುಗಂಧ ದ್ರವ್ಯ ೨೯ ಕಂಕುಳದೊಳಗಿನ ದುರ್ಗಂಧ ಹೋಗುವುದಕ್ಕೆ. ೩೦ ಬಾಯಿ ದುರ್ಗಂಧ ಹೋಗುವುದಕ್ಕೆ. ೩೧ ಮಡಿಬಕ್ಕೆಗೆ ೩೨ ಕೇಶರಂಜನಕ್ಕೆ. ೩೩ ತಿಗಳಿನೆಕ್ಕಿದಕ್ಕೆ. ೩೪ ಕೂದಲು ಉದುರುವುದಕ್ಕೆ. ೩೫ ಶರೀರದ ಕಪ್ಪುಬಣ್ಣಕ್ಕೆ. ೩೬ ಕುಚ ವೃದ್ಧಿಗೆ. ೩೭ ಸ್ತ್ರೀಯರಲ್ಲಿಯ ಅವಸ್ಥೆಗಳು. ೩೮ ಅವಸ್ಥೆ ಮೇಲಿಂದ ಪ್ರೇಮದ ಇರುವಿಕೆ. ೩೯ ಮೈಥುನದ ಸುಖದಲ್ಲಿ ಅಂತರ ಬೀಳುವ ಕಾರಣ. ೪೦ ದಂಪತಿಗಳು ಕೂಡುವ ದಿಕ್ಕಿನ ಫಲವು. ೪೧ ಸತಿಪತಿಗಳು ಕೂಡುವ ದಿವಸ ಫಲ. ೪೨ ಗರ್ಭ ನಿಂತ ದಿವಸ ಫಲ. ೪೩ ಗರ್ಭ ನಿಂತ ಕಾಲ ಫಲ ೪೪ ಸ್ತ್ರೀಯರ ಜಾತಿ ಮೇಲಿಂದ ಕೂಸಿನ ಲಕ್ಷಣ ೪೫ ವಿಕಾಶಯೋನಿಗೆ ಉಪಾಯ. ೪೬ ಯೋನಿ ಸಂಕೋಚಕ್ಕೆ. ೪೭ ಶಿಶ್ನ ವೃದ್ಧಿಗೆ. ೪೮ ಸ್ತ್ರೀಯರಿಗೆ ಮೈಥುನವು ಬೇಗನೆ ಸಾಕಾಗುವಂತೆ ಮಾಡುವ ಉಪಾಯ. ೪೯ ಪುರುಷರಿಗಿಂತ ಮೊದಲು ಸ್ತ್ರೀಯರ ರೇತಸ್ಖಲನವಾಗುವ ಉಪಾಯ. ೫೦ ಪುರುಷರ ರೇತಸ್ಸು ಬೇಗ ಬೀಳಬಾರದೆಂಬುವಕ್ಕೆ ಉಪಾಯ. ೫೧ ವಾಜಿಕರಣ ಪ್ರಯೋಗ. ೫೨ ಸ್ತ್ರೀಯರನ್ನು ಜಯಿಸುವುದಕ್ಕೆ ೫೩ ಬಹಳ ಮುಟ್ಟಾಗುತ್ತಿದ್ದರೆ. ೫೪ ಸಂತತಿ ಪ್ರತಿಬಂಧಕ ಉಪಾಯ. ೫೫ ಮುಟ್ಟು ತಡೆದಿದ್ದರೆ. ೫೬ ಗರ್ಭಾಶಯ ಶುದ್ಧಿಗೆ. ೫೭ ಗರ್ಭಧಾರಣಕ್ಕೆ. ೫೮ ಗರ್ಭಪಾತಕ್ಕೆ ಉಪಾಯ.

ಇತ್ಯಾದಿ ೧೭೦ ವಿಷಯಗಳಿವೆ. ಸ್ಥಳ ಸಂಕೋಚ ಮೂಲಕ ಎಲ್ಲವನ್ನೂ ಕೊಟ್ಟಿಲ್ಲ.
ಬೆಲೆ ೧ ರೂಪಾಯಿ (ವಿ. ಪಿ. ವೆಚ್ಚ ಬೇರೆ)

ವಿಳಾಸ:—ಎಸ್. ಸಿ. ಸಾಲಿಮಠ ಅಂಡ್ ಸನ್ಸ್, ಗದಗ ಸಿಟಿ.

ಧನಪ್ರಿಯವಾದವೂ ಜನಪ್ರಿಯವಾದವೂ

ಧನಕ್ಕಾಗಿಯೇ ಅಧಿಕಾರಬೇಕು

ಈಗಿನ ಜಗತ್ತಿನ ಪರಿಸ್ಥಿತಿಯನ್ನು ಅವಲೋಕಿಸಿದರೆ ದಾರಿದ್ರ್ಯ ಅಸಂತೋಷ ಅಶಾಂತಿ **ಯುದ್ಧ** ಇವೇ ಮೊದಲಾದುವು ಕಂಡು ಬರುತ್ತವೆ. ರಾಜ್ಯದಾಡಳಿತವು ಹಲಕೆಲವು ಧನಾಢ್ಯರ ಕೈಯಲ್ಲಿ ಹೋಗಿರುವುದು ಇದಕ್ಕೆ ಕಾರಣ. ಸ್ವತಂತ್ರ ರಾಷ್ಟ್ರಗಳೇ ಆಗಲಿ, ಪರತಂತ್ರ ರಾಷ್ಟ್ರಗಳೇ ಆಗಲಿ ಎಲ್ಲಿ ನೋಡಿದಲ್ಲಿ ಒಂದೇ ಹಾಡು, ಒಂದೇ ಗೋಳು. ಒಬ್ಬನು ಸುಖಿಸುತ್ತಿರುವದು ಕಂಡು ಬಂದರೆ ಸಾವಿರಗಟ್ಟಲೆ ಜನರು ಹಸಿವೆಯಿಂದ ಬಳಲುತ್ತಿರುವರು. ಹೆಸರಿಗೆ ಪ್ರಜಾಪ್ರಭುತ್ವವೆಂದಿದ್ದರೂ ರಾಜ್ಯಸೂತ್ರವೆಲ್ಲವೂ ಕೇವಲ ಹಲಕೆಲವು ಧನಾಢ್ಯರ (Capitalists) ಕೈಯಲ್ಲಿದೆ. ಈ ಧನತ್ವವಾದದಲ್ಲಿ ಜನತ್ವವು ಬರೀ ಮಾತುಗಾರಿಕೆಯಾಗುಳಿದಿದೆ ಅಷ್ಟೆ. ಜನರಿಗೆ ಹೊಟ್ಟೆಗೆ ಸಾಕಷ್ಟು ಹಿಟ್ಟು ದೊರೆತಾಗಲೇ ಸ್ಥಿತಿ ಸುಧಾರಿಸಿದೆ ಎನ್ನಬಹುದು. ಇದಾಗಬೇಕಾದರೆ ಹಣವು ಹಲಕೆಲವರಲ್ಲಿ ಮಾತ್ರ ಕುಪ್ಪೆಕಟ್ಟಿದೆ. ಎಲ್ಲರಲ್ಲಿಯೂ ಹಂಚಿಹೋಗಬೇಕು. ಈ ಸ್ಥಿತಿಯುಂಟಾದರೆ, ಧನಾಢ್ಯರ ಸುಖಕ್ಕೆ ತಿಲಾಂಜಲಿಯಲ್ಲವೇ ಮತ್ತೆ? ಅದಕ್ಕಾಗಿ ಅವರು ತಮ್ಮ ಕೈಯಲ್ಲಿರುವ ಅಧಿಕಾರ ಸೂತ್ರವನ್ನು ಬಿಡಲೊಪ್ಪರು. ಸಕಲ ಪ್ರಯತ್ನಗಳಿಂದಲೂ ಈ ಅಧಿಕಾರವು ತಮ್ಮ ಕೈಯಿಂದ ಜಾರಿಹೋಗದಂತೆ ನೋಡಿಕೊಳ್ಳುವುದೇ ಅವರ ಕೆಲಸವಾಗಿದೆ. ಜರ್ಮನಿ ಸ್ಪೈನ್ ಇಟಲಿ ಮೊದಲಾದ ದೇಶಗಳಲ್ಲಿ ಈಗ ನಡೆದಿರುವ ಘನ ಕೋಲಾಹಲಕ್ಕೆ ಧನತ್ವವಾದವೇ ಕಾರಣವಾಗಿದೆ.

ಈಗ ನಾವು ಧನತ್ವವೆಂದರೇನು, ಜನತ್ವವೆಂದರೇನು. ಸಕಲ ಪ್ರಜಾಪ್ರಭುತ್ವ ರಾಜ್ಯಪದ್ಧತಿಯಿದ್ದರೂ ಅಲ್ಪ-ಸ್ವಲ್ಪ ಧನಾಢ್ಯರ ಕೈಯಲ್ಲಿ ರಾಜ್ಯಸೂತ್ರವು ಹೇಗೆ ಹೋಗುತ್ತದೆ, ಹೋಯಿತು ಎಂಬುದನ್ನು ಪರೀಕ್ಷಿಸೋಣ.

ಧನತ್ವವೆಂದರೇನು? ಹಣಕ್ಕೆ ಪ್ರಾಧಾನ್ಯತೆ ಇದ್ದು ಹಣವುಳ್ಳವರ ಶಕ್ತಿಯೇ ಹೆಚ್ಚಾಗಿ ನಡೆಯುವದೇ ಧನತ್ವ. ಜಗತ್ತಿನಲ್ಲಿ ನಾನಾ ಪ್ರಕಾರವಾದ ಸರಕಾರಗಳಿವೆ. ಹೆಚ್ಚಾಗಿ ಇವುಗಳೆಲ್ಲವೂ ದುಡ್ಡುಮಾಡುವುದು, ದುಡ್ಡಿಗಾಗಿ ರಾಜ್ಯಮಾಡುವುದು. ಇವನ್ನೇ ಮುಖ್ಯವಾಗಿಟ್ಟುಕೊಂಡಿವೆ. ಬರೇ ಲಾಭಪ್ರಿಯತೆಯೇ ಮುಖ್ಯವಾಗಿದೆ

ವ್ಯಾಪಾರಕ್ಕಾಗಿಯೇ ವಸಾಹತುಗಳು

ಹಣವನ್ನು ಬೆಳೆಸಬೇಕಾದರೆ ವ್ಯಾಪಾರ-ಉದ್ಯಮಗಳು ಹೆಚ್ಚಾಗಬೇಕು. ಇವು ಹೆಚ್ಚಾಗಬೇಕಾದರೆ ಕಚ್ಚಾ ಸರಕುಗಳು ವಿಪುಲವಾಗಿ ದೊರೆಯಬೇಕು. ತಯಾರಾದ ಸರಕುಗಳ ಮಾರಾಟಕ್ಕಾಗಿ ಮಾರ್ಕೆಟು ಬೇಕು. ಈ ಕಾರಣಗಳಿಂದಲೇ ಜಗತ್ತಿನ ಸ್ವತಂತ್ರ ಬಲಿಷ್ಠ ರಾಷ್ಟ್ರಗಳು, ಕಚ್ಚಾ ಸರಕುಗಳುಳ್ಳ ವಸಾಹತು (Colony)ಗಳಿಗಾಗಿ ಹೋರಾಡುತ್ತಿರುವವು. ವಸಾಹತುಗಳಲ್ಲಿ ಕಚ್ಚಾಮಾಲು ಹೇರಳವಾಗಿ ದೊರೆಯುವುದಲ್ಲದೆ, ಅವುಗಳಿಂದ ತಯಾರಾದ ಸರಕುಗಳನ್ನು ಅಲ್ಲಿಯೇ ಒಂದಕ್ಕೆರಡು ಲಾಭಮಾಡಿಕೊಂಡು ಮಾರಬಹುದು.

ಪ್ರೇಮವಿದ್ಯಾಪೀಠದ ಪತ್ರಿಕೋದ್ಯಮ ಶಾಖೆಯಲ್ಲಿ ಪಂಡಿತ ತಾರಾನಾಥರು ಕೊಟ್ಟ ಹಲವು ವ್ಯಾಖ್ಯಾನಗಳ ಸಾರಾಂಶವಿದು

ಈ ವಸಾಹತುಗಳ ಸಂಪಾದನೆಗಾಗಿ ಕೈಕೊಳ್ಳುವ ಉಪಾಯಗಳು ಬಗೆ-ಬಗೆಯಾಗಿವೆ. ಮೊದಲನೆಯದಾಗಿ, ವ್ಯಾಪಾರಕ್ಕೆಂದು ಬಂದು ಅಲ್ಲಿ ನೆಲಸುವರು. ಸಾವಕಾರನಾಗಿ ಅಲ್ಲಿ ಕಚ್ಚಾಮಾಲು ಬೆಳೆಯುವವರಿಗೆ ಹಣವನ್ನು ಮುಂಗಡವಾಗಿ ಕೊಟ್ಟು ಅವುಗಳ ಬೆಲೆಯನ್ನು ತಮಗನುಕೂಲವಾಗುವಂತೆ ನಿರ್ಧರಿಸಿಕೊಂಡು, ಜನರನ್ನು ಸಾಲಗಾರರನ್ನಾಗಿ ಮಾಡಿ ತಮ್ಮ ಅಧಿಕಾರಕ್ಕೊಳಪಡಿಸಿಕೊಳ್ಳುವದು ಎರಡನೆಯದು. ಹಣವನ್ನು ಈ ರೀತಿಯಾಗಿ ವಿಪುಲವಾಗಿ ಕೊಡುವುದಕ್ಕಾಗಿ ಲಿಮಿಟೆಡ್ ಕಂಪೆನಿಗಳು, ಬ್ಯಾಂಕುಗಳು ಸ್ಥಾಪಿಸಲ್ಪಡುವವು. ಅಲ್ಲಿಂದ ಮುಂದೆ ತಮ್ಮ ವಿದ್ಯೆ ಜ್ಞಾನ-ಅನುಭವಗಳು ಹೆಚ್ಚೆಂಬುದನ್ನು ತೋರಿಸಿ ಪರತ್ವ-ಅಪರತ್ವ ಅಂದರೆ ತಾವು ಮೇಲು, ನೀವು ಕೀಳು ಎಂಬ ಭಾವನೆಯನ್ನು ಜನರಲ್ಲಿ ಉಂಟುಮಾಡುವುದು ಮೂರನೆಯದು. ಬಡಬಗ್ಗರ ಹಿತವೇ ತಮ್ಮ ಧ್ಯೇಯವೆಂಬುದನ್ನು ತೋರಿಸುವ ಸೋಗಿನಿಂದ ಮಿಶನರಿಗಳ ಮುಖಾಂತರ ಶಾಲೆ ಮೊದಲಾದವುಗಳನ್ನು ಸ್ಥಾಪಿಸಿ, ನೂರರಲ್ಲೋ ಸಾವಿರದಲ್ಲೋ ಒಬ್ಬನಂತೆ ಹಲಕೆಲವರಿಗೆ ಸಹಾಯಮಾಡಿ ಅವರನ್ನು ತಮ್ಮ ಹೊಗಳುಭಟ್ಟರನ್ನಾಗಿ ಮಾಡುವುದು ನಾಲ್ಕನೆಯ ಉಪಾಯ. ಇದರಿಂದ ಜನರಿಗೆ ಇವರ ವಿಷಯದಲ್ಲಿ ಆದರ ಭಾವವುಂಟಾಗಿ ತಮ್ಮ ಉದ್ಧಾರಕರ್ತರು ಇವರೇ ಎಂದು ಭಾವಿಸಿ ಅವರಿಗೆ ಕಾಯೇನ-ವಾಚಾ ಮನಸಾ ಅಡಿಯಾಳಾಗುವರು. ಹೀಗೆ ಜನರ ಮಾನಸಿಕ ಪರಾಜಯವು ಪೂರ್ಣವಾದ ನಂತರ ಧನಾಢ್ಯರ ಕೆಲಸವು ಮುಕ್ಕಾಲು ಭಾಗ ಪೂರ್ಣವಾದಂತಾಯಿತು.

ಜನರ ಗುಲಾಮಗಿರಿಗೆ ಪ್ರಾರಂಭ

ಹಣವುಳ್ಳವರಿಗೆ ಈ ರೀತಿ ಅಧಿಕಾರ ಬಂದೊಡನೆಯೇ ಜನರ ಸುಖ-ದುಃಖಗಳಿಗೆಲ್ಲ ಅವರೇ ಕಾರಣರಾಗುವರು. ಹಣವೆಲ್ಲವೂ ಅವರ ಕೈಯಲ್ಲಿರುವದರಿಂದ ಇತರರೆಲ್ಲರೂ ತಮ್ಮ ನಿತ್ಯ ಜೀವನಕ್ಕಾಗಿ ಇವರನ್ನು ಅವಲಂಬಿಸಬೇಕಾಗುವುದು. ಈಗ ಹತ್ತಿಗೆ ಮಣಕ್ಕೆ ೪ ರೂ. ಧಾರಣೆಯಿದೆ ಎಂದು ತಿಳಿದುಕೊಳ್ಳೋಣ. ರೈತನಿಗೆ ಈಗಲೇ ಈ ಧಾರಣೆಯಲ್ಲಿ ಅವನು ಬೆಳೆಯಬಹುದಾದ ೪೦ ಮಣ ಹತ್ತಿಗೆ ೧೬೦ ರೂ. ಮುಂಗಡವಾಗಿ ಕೊಟ್ಟುಬಿಡುವರು. ಮುಂದೆ ಸರಕು ತಯಾರಾದಾಗ ಹತ್ತಿ ಮಣಕ್ಕೆ ೬ ರೂ. ಆಗಿದ್ದರೂ ಆ ರೈತನಿಗೆ ಮೊದಲೇ ರೂಪಾಯಿ ತೆಗೆದುಕೊಂಡದ್ದರಿಂದ ಸ್ವತಂತ್ರತೆ ಇಲ್ಲವಾಗಿ ಅವನು ತನಗೆ ಹಾನಿಯನ್ನುಂಟು ಮಾಡಿಕೊಳ್ಳಬೇಕಾಗುತ್ತದೆ. ಇವನಿಗೆ ಆದ ೮೦ ರೂ. ಹಾನಿ ಬಂಡವಾಳಗಾರರಿಗೆ ಲಾಭ. ಹೀಗೆ ಬಂಡವಾಳಗಾರರು ತಮ್ಮ ಕೈಯಲ್ಲಿ ವ್ಯಾಪಾರವನ್ನು ಇಟ್ಟುಕೊಳ್ಳುವರು. ಇದರಿಂದ ಸಾಮಾನ್ಯ ಜನರೆಲ್ಲರೂ ಅವರು ಹೇಳಿದಂತೆ ಕೇಳಬೇಕಾಗಿ ಬಂದು ಅವರ ದಾಸರಾಗುವರು. ಇದರ ಅನುಭವವನ್ನು ನಮ್ಮ ಹಳ್ಳಿಗಳಲ್ಲಿಯೂ ಕಾಣಬಹುದು.

ಪ್ರಜಾಪ್ರಭುತ್ವ—ಅದೆಲ್ಲಿದೆ?

ಪ್ರಜಾಪ್ರಭುತ್ವವೆಂದರೆ, ಜನರು ತಮ್ಮ ಪ್ರತಿನಿಧಿಗಳನ್ನು ತಾವೇ ಆರಿಸಿಕೊಂಡು ಅವರ ಮುಖಾಂತರ ತಮ್ಮ ರಾಜ್ಯಭಾರವನ್ನು ಸಾಗಿಸಿಕೊಳ್ಳುವುದಷ್ಟೆ. ಜನರಿಂದ ಆರಿಸಲ್ಪಟ್ಟ ಪ್ರತಿನಿಧಿಗಳು ಜನರ ಹಿತವನ್ನು ಕಾಯುವುದಿಲ್ಲವೆಂಬುದನ್ನು ಯೋಚಿಸುವದಾದರೂ ಹೇಗೆಂದು ಅನಿಸಬಹುದು. ಆದರೆ ಈ ಆರಿಸುವ ಅಧಿಕಾರ ಜನರಿಗೆ ಇರುವದಾದರೂ ಬಂಡವಾಳಗಾರರನ್ನು ಜೀವನಕ್ಕಾಗಿ ಅವರು ಅವಲಂಬಿಸಿರಬೇಕಾಗುವದರಿಂದ ಅವರು ಹೇಳಿದಂತೆ ಕೇಳಿ ಅವರು ಆಜ್ಞಾಪಿಸಿದವರನ್ನೇ ಜನರು ಆರಿಸಬೇಕಾಗುತ್ತದೆ. **ಧನಾಢ್ಯರ ದಾಕ್ಷಿಣ್ಯಕ್ಕೆ ಬಿದ್ದು ಆರಿಸಲ್ಪಟ್ಟ ಜನರು ಅವರ ವಿರುದ್ಧ ಹೋಗಲು ಹೇಗೆ ಸಾಧ್ಯ?** ಆದರಿಂದ ಮೇಲೆ ಮೇಲೆ ಈಗಿರುವ ಪ್ರಜಾಪ್ರಭುತ್ವವು ಒಳ್ಳೆಯದಾಗಿ ಕಂಡು ಬಂದರೂ, ಧನತ್ವದ ಹಾವಳಿಯಿಂದ ಜನಸಾಮಾನ್ಯಕ್ಕೆ ವಿಶೇಷ ಲಾಭವಾಗುತ್ತಿರುವುದು ಕಂಡು ಬರುವುದಿಲ್ಲ. ಲಾಭವಾಗುತ್ತಿದ್ದರೆ ಈ ಅಸಂತೋಷ ಅಸಮಾಧಾನಗಳು ಹುಟ್ಟುತ್ತಿರಲಿಲ್ಲ. ಈಗಿನ ಪ್ರಜಾಪ್ರಭುತ್ವದಿಂದ ಲಾಭವೇನೂ ಇಲ್ಲವೆಂದು ಅನ್ನಲು ಬಾರದಿದ್ದರೂ ಹೆಸರಿಗೆ ತಕ್ಕ ಕಾರ್ಯವಾಗುತ್ತಿಲ್ಲವೆಂದು ಧಾರಾಳವಾಗಿ ಹೇಳಬಹುದು. ಹೆಸರಿಗೆ ಪ್ರಜಾಪ್ರಭುತ್ವವಾಗಿದ್ದರೂ (Democracy) ಇಂಗ್ಲಂಡಿನಲ್ಲಿ ೧೮೩೨ರ ವರೆಗೆ ಮಧ್ಯಮ ವರ್ಗದವರಿಗೆ ೧೮೬೭ರ ವರೆಗೆ ಉದ್ಯೋಗಿಗಳಿಗೆ ೧೯೨೮ರ ವರೆಗೆ ಹೆಂಗಸರಿಗೆ "ವೋಟಿ"ನ ಅಧಿಕಾರವಿದ್ದಿಲ್ಲ. ಆದರೆ 'ಡಿಮೊಕ್ರೆಸಿ' ಎಂಬ ಹೆಸರು ಮಾತ್ರ ಅಂದಿನಿಂದಲೂ ಇದ್ದೇ ಇದೆ. ಅಲ್ಲಿ ಈಗಲೂ ಅಲ್ಲಿ ಹೆಂಗಸರು ಕಾಲೇಜ್‌ಗಳಲ್ಲಿ ವಿದ್ಯಾಭ್ಯಾಸಮಾಡಬಹುದಾದರೂ ಅನೇಕ ಯುನಿವರ್ಸಿಟಿಗಳಲ್ಲಿ ಪದವೀದಾನ ವಿಧಿಗಳಲ್ಲಿ (Convocations) ಅವರಿಗೆ ಪ್ರವೇಶವಿಲ್ಲ! ಫ್ರಾನ್ಸಿನಲ್ಲಿ ಪ್ರಜಾಪ್ರಭುತ್ವವು ಎಲ್ಲ ಕಡೆಗಿಂತಲೂ ಮೊದಲೇ ಜನಿಸಿದ್ದರೂ ಅಲ್ಲಿ ಹೆಂಗಸರಿಗೆ ಈ ಹೊತ್ತಿಗೂ ಮತಾಧಿಕಾರವಿಲ್ಲ! ಆರ್ಥಿಕ ವ್ಯವಹಾರಗಳಲ್ಲಿ ಅವರಿಗೇನೇನೂ ಅಧಿಕಾರವಿಲ್ಲ. ಅವಳು ನೌಕರಳಾಗಿ ದುಡಿಯಬಹುದಾದರೂ, ತನ್ನ ಸಂಬಳವನ್ನು ಪಡೆಯಲು ಗಂಡನಿಂದ ಪಾವತಿಮಾಡಿಸಬೇಕು. ಜರ್ಮನಿಯಲ್ಲಿ ಇತ್ತೀಚೆಗೆ ಹೆಂಗಸರಿಗಿದ್ದ 'ವೋಟ್'ನ ಅಧಿಕಾರವನ್ನು ಕಿತ್ತುಕೊಂಡಿದ್ದಾರೆ. ಸಾರ್ವಜನಿಕ ಸರಕಾರಿ ನೌಕರಿಗಳನ್ನು ಅವರು ಅಲ್ಲಿ ಮಾಡಲು ಪ್ರತಿಬಂಧವಿದೆ. ಪ್ರಜಾಪ್ರಭುತ್ವ ತತ್ವದ ತವರೂರುಗಳಲ್ಲಿಯೇ ಈ ರೀತಿ ಹೆಂಗಸರು ಪಾಕಗೃಹ-ಶಯ್ಯಾಗೃಹಗಳಿಗೆ ಮಾತ್ರ ಅಧಿಕಾರಿಗಳು ಎನ್ನುವುದು ಅವರನ್ನು ಪ್ರಜೆಗಳಲ್ಲಿ ಗಣಿಸದಿರುವುದು ಆಶ್ಚರ್ಯವಲ್ಲವೇ? **ಹಿಂದುಸ್ಥಾನದಲ್ಲಿಯೂ ಸ್ತ್ರೀಯರಿಗೆ ಮತಾಧಿಕಾರವಿದೆ, ಸ್ವಾತಂತ್ರ್ಯವಿಲ್ಲ.** ೧೯೨೦ರಲ್ಲಿ ಲೀಗ್ ಆಫ್ ನೇಶನ್ಸಿಗೆ ಪ್ರತಿನಿಧಿಯನ್ನು ಕಳಿಸಲು ಹಿಂದುಸ್ಥಾನಕ್ಕೂ ಅಧಿಕಾರಕೊಟ್ಟರು. ಅಲ್ಲಿಗೆ ಸ್ವತಂತ್ರ ರಾಷ್ಟ್ರಗಳು ಮಾತ್ರವೇ ಪ್ರತಿನಿಧಿಗಳನ್ನು ಕಳಿಸಬೇಕು. ಹೀಗಿರುವಾಗ ಈಗಿನ ಹಿಂದುಸ್ಥಾನವೂ ಒಂದು ಸ್ವತಂತ್ರ ರಾಷ್ಟ್ರವೇ ಅಲ್ಲವೇ? ಈ ದೃಷ್ಟಿಯಲ್ಲಿ!! ಇದಕ್ಕೂ ಹೆಚ್ಚಿನ ಮರುಳುತನವಿನ್ನೆಲ್ಲಿ? ಇದುವರೆಗೆ ಧರ್ಮ, ದೇವರು, ಪಾಪ, ಪುಣ್ಯಗಳ ಹೆಸರಿನಲ್ಲಿ ಭಟ್ಟ-ಪೂಜಾರಿ, ಮುಲ್ಲಾ, ಪಾದ್ರಿಗಳು ಮಾಡಿದ ಇಂದ್ರಜಾಲ-ಮಹೇಂದ್ರಜಾಲಗಳನ್ನೇ ಈಗ ಧನಾಢ್ಯರು ಪ್ರಜಾಪ್ರಭುತ್ವವೆಂಬ ಶಬ್ದಾಡಂಬರದಿಂದ ಮಾಡಿ ಮಂಕುಬೂದಿಯನ್ನೆರಚುತ್ತ ಮಾಡುತ್ತ ಇಷ್ಟೆಲ್ಲ ಅನಾಹುತ ನಡೆಸಿದ್ದಾರೆ. **ಧನತ್ವದ ಈ ತತ್ವಕ್ಕೆ ಧನವೇ ಗಮ್ಯ; ಜನರು ಬರೀ ಸಾಧನ. ಆದರೆ ಜನತ್ವಕ್ಕೆ ಜನಹಿತವೇ ಉದ್ದೇಶ; ಧನವು ಸಾಧನಮಾತ್ರವೇ.** ಎಲ್ಲಿಯವರೆಗೆ ಜನತ್ವಕ್ಕಲ್ಲದೆ ಧನತ್ವಕ್ಕೆ ಬೆಲೆಯು ಯಾವ ರಾಜ್ಯಪದ್ಧತಿಯಲ್ಲಿರುವದೋ, ಅಲ್ಲಿಯವರೆಗೆ ಅದು ಪ್ರಜಾಪ್ರಭುತ್ವವೇ ಆಗಿರಲಿ ಅಥವಾ ಜನಹಿತದ ಸೋಗಿನ ಇನ್ನಾವ ರಾಜ್ಯಪದ್ಧತಿಯೇ ಆಗಿರಲಿ, ಧನಾಢ್ಯರು ಸೂತ್ರಧಾರರಾಗಿರುವವರೆಗೆ ಅದರಿಂದ ಜಗತ್ತಿನಲ್ಲಿ ಶಾಂತಿ ನೆಲೆಸಲಾರದು.

ವಸಾಹತುಗಳೂ ಬೇಕು ಅವುಗಳಿಗಿರುವ ಮಾರ್ಗಗಳೂ ಬೇಕು

ಈಗ ನಡೆಯುತ್ತಿರುವ ಯುದ್ಧಗಳು ಧನತ್ವದ ಸೂತ್ರಧಾರಿಕೆಯಿಂದಲೇ ಪರಿಣಮಿಸಿದವು. ಇನ್ನು ಮುಂದೆ ಬೇಗನೆ ಜಗತ್ತಿನಲ್ಲಿಯೇ ಎಲ್ಲ ಯುದ್ಧದ ಬೇಗೆಯು ಹಬ್ಬಿಕೊಳ್ಳುವದೋ ಎಂದು ಇಂದಿರುವ ಅಂಜಿಕೆಗೂ ಧನಾಢ್ಯರೇ ಕಾರಣ. **ಅನುಕೂಲ ಪರಿಸ್ಥಿತಿಯುಳ್ಳ ವಸಾಹತುಗಳು ಇರುವಲ್ಲೆಲ್ಲ ತಮ್ಮಧಿಕಾರ ಇರಬೇಕೆಂಬುದೇ ಇವರ ಇಚ್ಛೆ.** ನೆಲದಮೇಲಾಗಲಿ ಸಮುದ್ರದಲ್ಲಾಗಲಿ ಈ ವಸಾಹತುಗಳಿಗೆ ಹೋಗುವ ಮಾರ್ಗಗಳು ಎಲ್ಲೆಲ್ಲಿವೆಯೋ ಅಲ್ಲೆಲ್ಲ ಇವರ ಗೃಧ್ರದೃಷ್ಟಿ! ಈಗ ವಾಯು ವಿಮಾನಗಳು ತಯಾರಾದಂದಿನಿಂದ ಅವುಗಳ ತಡೆಗಟ್ಟು (Halting Stations)ಗಳು ಯಾವಲ್ಲಿವೆಯೋ ಅಲ್ಲಿ ತಮ್ಮ ಅಧಿಕಾರ ಸ್ಥಾಪಿಸುವ ಪ್ರಯತ್ನಗಳು ನಡೆದಿವೆ. ೨೦ನೇ ಶತಮಾನದಲ್ಲಿ ಇದುವರೆಗೆ ನಡೆದ ಯುದ್ಧಗಳು ಮುಖ್ಯವಾಗಿ 'ಪೆಟ್ರೋಲ್'ಗಾಗಿ ನಡೆದವು. ಮೆಸೊಪೊಟೋಮಿಯಾ, ಇರಾಕ್‌ಗಳಲ್ಲಿರುವ ಪೆಟ್ರೋಲ್ ಬಾವಿಗಳ ಒಡೆತನಕ್ಕಾಗಿ ಯುದ್ಧ ನಡೆಯಿತು. ಚೀನದೇಶದಲ್ಲಿ ಜಪಾನವು ನಡೆಸಿದ ಯುದ್ಧಕ್ಕೂ ತನಗೆ ಅಲ್ಲಿರುವ ಉಗಿಬಂಡಿಯ ಮಾರ್ಗಗಳ ಮೇಲಿನ ಒಡೆತನವು ಬೇಕಾದದ್ದೇ ಕಾರಣ. ಇತರ ಹಲವು ಕಾರಣಗಳು ಇದ್ದರೂ ಮುಖ್ಯವಾಗಿ ಪೂರ್ವದೇಶಗಳಿಗೆ ವಾಯುವಿಮಾನಗಳು ಸುಲಭವಾಗಿ ಅನಿಷ್ಟ ಗಂಡಾಂತರವಿಲ್ಲದೆ ಹೋಗಲು ಬೇಕಾಗುವ ಸ್ಥಾವರವಾದ ಠಾಣೆಗಳಿಗಾಗಿಯೇ ಇಟಲಿಯು ಅಬಿಸೀನಿಯದಲ್ಲಿ ಯುದ್ಧಗಳನ್ನು ಹೂಡಿದ್ದು. ಧನಾಢ್ಯರ ಧನತೃಷ್ಣೆಯು ಪೂರ್ತಿಗಾಗಿ **ದೇಶಗಳು ಬೇಕು. ಅಲ್ಲಿಗೆ ಹೋಗಲು ಮಾರ್ಗಗಳೂ ಬೇಕು.** ಆ ಮಾರ್ಗಗಳನ್ನು ಸಂಪಾದಿಸಲು ಯುದ್ಧಗಳಾಗಬೇಕು. ಅಪಾರವಾದ ಪ್ರಾಣಹಾನಿಯೂ ದಾರಿದ್ರ್ಯವೂ ಉಂಟಾಗಬೇಕು. ಜಗತ್ತಿನ ಇತಿಹಾಸವನ್ನು ನೋಡಿದರೆ ಈ ವಿಷಯಗಳು ವಿವರವಾಗಿ ಕಂಡು ಬರುವವು.

(ಮುಂದುವರಿಯುವುದು)

ಕೊರಗರು

ದಕ್ಷಿಣ ಕನ್ನಡ ಜಿಲ್ಲೆಯ ನಿವಾಸಿಗಳ ಪೈಕಿ ಕೊರಗರಷ್ಟು ಅತೀ ನಿಕೃಷ್ಟ ತರಗತಿಯಲ್ಲಿ ಜೀವನ ಮಾಡತಕ್ಕ ಮನುಷ್ಯ ವರ್ಗವು ಇಲ್ಲವೆಂದರೆ ಅತಿಶಯೋಕ್ತಿಯಾಗಲಾರದು. ಆದಿದ್ರಾವಿಡರು ಯಾ ಪಂಚಮರೆಂದು ಕರೆಯಲ್ಪಡುವ ಜನರಲ್ಲಿ ಇವರೂ ಒಂದು ಪಂಗಡದವರು.

ಇವರು ದಪ್ಪ ಪುಷ್ಟ ದೇಹವುಳ್ಳವರು. ಹಳೆ ಸಂಪ್ರದಾಯವಾದಿಗಳು. ಬಿದಿರ ಕಟ್ಟ ನಿಟ್ಟುಳ್ಳವರು. ಈ ಪಂಗಡದ ಜನರು ಗೆರಸೆ ಹಣೆಯುವುದು, ಕುಕ್ಕೆ ಹೆಣೆಯುವುದು, ಸಾಂಟಿನಿಂದ ನಾರಿ ಹಗ್ಗ ಮಾಡುವುದು. ಮುಂತಾದ ಕೆಲಸಗಳನ್ನು ಮಾಡುವರು.

ಊರ ದೇವಸ್ಥಾನಗಳ ಉತ್ಸವದ ಸಮಯದಲ್ಲಿಯಾಗಲಿ, ಕೋಲ ಕಂಬಳಗಳ ಸಮಯದಲ್ಲಿಯಾಗಲಿ ಡೋಲು ಬಡೆಯುವುದು, ಕೊಳಲು ಊದುವುದು, ಕುಣಿತ ಕುಣಿಯುವುದು ಇವರ ಇನ್ನೊಂದು ವೃತ್ತಿ. ಊರ ತೋಟಿಗಳು ಹೆಚ್ಚಿನ ಕಡೆಗಳಲ್ಲಿ ಇವರೇ ಆಗಿರುವರು.

ಈ ಜಾತಿಗಳ ಜನರಿಗೆ ಅಮಾವಾಸ್ಯೆ ಮತ್ತು ಸೋಮವಾರ ಶನಿವಾರಗಳಲ್ಲಿ ಇತರ ಜಾತಿಗಳ ಜನರು ನೀಚ ದಾನವೆಂಬ ದಾಗಿ ಅಕ್ಕಿ, ಅನ್ನ, ಎಣ್ಣೆ ಮತ್ತು ವಸ್ತ್ರ ದಾನಮಾಡುವರು. ಹೀಗೆ ದಾನ ಮಾಡಿದ ಎಣ್ಣೆಯನ್ನು ಇವರು ಮೈಗೆ ತುಂಬ ಪೂಸಿಕೊಳ್ಳುವರು.

ಇವರು ಹಾಳೆಯಿಂದ ಮಾಡಿದ ಕೊಂಬೆ (ತಲೆಟೋಪಿ) ಎಂಬ ತಲೆರಕ್ಷೆಯನ್ನು ಧರಿಸಿಕೊಳ್ಳುವರು. ಸೊಂಟಕ್ಕೆ ಸಿಪ್ಪೆ, ಹಳೆಯ ಮತ್ತು ಕೊಳೆಯಾದ ವಸ್ತ್ರವನ್ನು ಸುತ್ತಿಕೊಳ್ಳುವರು. ಇವರಲ್ಲಿ ಗಂಡಸರು ಪ್ರಯಾಣಕ್ಕೆ ಹೋಗುವಾಗ ಕೈಯಲ್ಲಿ ಒಂದು ದೊಣ್ಣೆಯನ್ನು ಹಿಡಿದುಕೊಳ್ಳುವರು. ಸೊಂಟಕ್ಕೆ ಅಂಕೊಡಿಯನ್ನು (ತುಳುಭಾಷೆ) ಧರಿಸಿಕೊಂಡು ಅದರಲ್ಲಿ ಅವರ ಕೆಲಸದ ಕತ್ತಿಯನ್ನು ಸಿಕ್ಕಿಸಿಕೊಳ್ಳುವರು.

ಅವೆ ಹಿಡಿಯುವುದೆಂದರೆ ಇವರ ಪ್ರಿಯವಾದ ಚಟ. ಇವರು ಸತ್ತ ದನ, ಎತ್ತು, ಕೋಣ, ನರಿ, ಪುಲಿ, ಹೆಬ್ಬಾವು ಇತ್ಯಾದಿ ಪ್ರಾಣಿಗಳ ಮಾಂಸವನ್ನೂ ಆಹಾರವಾಗಿ ಉಪಯೋಗಿಸುವರು.

ಇತರ ಎಲ್ಲಾ ಜಾತಿಗಳ ಜನರ ಎಂಜಲು ಅನ್ನವೆಂದರೆ ಇವರಿಗೆ ಬಲು ಪ್ರೀತಿ. ಕೆಲಸವನ್ನಾದರೂ ಬಿಟ್ಟು ಎಂಜಲು ಅನ್ನ ಬೇಡಲಿಕ್ಕೆ ಹೋಗುವರು. ಇವರ ಪ್ರಿಯವಾದ ಪಾನವು ತೆಂಗು, ತಾಳೆ ಮತ್ತು ಬೈನೆ ಮರಗಳ ರಸ (ಹೆಂಡ). ಇವರು ಸಂತೋಷ ಪ್ರಿಯರು. ಯಾವಾಗಲೂ ನಗಾಡುವರು. ಪೀಕ್ಕ ಹಾಕುವುದು ಇವರ ಇನ್ನೊಂದು ಸೇವನೆ.

ಸುಮಾರು ನೂರು ವರ್ಷಗಳ ಹಿಂದೆ ಈ ಜಾತಿಗಳ ಜನರು ನಾಣ್ಯ ಮುಚ್ಚುವುದಕ್ಕೆ ಸಿಕ್ಕಿ ಗಿಡದ ಎಲೆಗಳಿಂದ ಮಾಡಿದ ಪಟ್ಟವನ್ನು ತೊಟ್ಟುಕೊಳ್ಳುತ್ತಿದ್ದರು ಎಂದು ಹಳ್ಳಿಗಳಲ್ಲಿ ಮುದುಕರು ಈಗ ಹೇಳುವರು.

ಇವರಲ್ಲಿಯೂ ಸೊಪ್ಪಿನವರು, ಚಿಪ್ಪಿನವರು, ಕಾಡಿನವರು ವ ತ ಅಂಡಿಯವರು ಎಂಬ ಒಳ ಭೇದಗಳು ಉಂಟೆಂದು ಹೇಳುತ್ತಾರೆ. ಇವರಲ್ಲಿ ಸತ್ತವರನ್ನು ಹೂಳುವರು. ಮತ್ತು ಅವರಿಗೆ ಸಂಸ್ಕಾರ ಮಾಡುವರು. ಇವರ ಅಳಿಯ ಸಂತಾನ ಕಟ್ಟಿನವರು. ಇವರ ಮದುವೆಯ ಪದ್ಧತಿಯು ಬಹಳ ಚಲೋದಾಗಿರುವುದು. ಮದುವೆಯ ದಿವಸ ಮದುಮಗಳನ್ನು ಯಾ ಮದುಮಗನನ್ನು ಅರಸಿನ ಹಚ್ಚಿ ಎಣ್ಣೆ ಪೂಸಿ ಸ್ನಾನಮಾಡಿಸುವರು. ಆ ವೇಳೆ ಅವರ ಪಕ್ಕದ ಇತರ ವಸ್ತ್ರಗಳ ಪೈಕಿ ಒಳ್ಳೇ ವಸ್ತ್ರವನ್ನು ನೋಟಕ್ಕೆ ಉಡಿಸುವರು. ಒಂದು ವೇಳೆ ಅಂಗಿಯೂ ಕುಪ್ಪಸ ಇದ್ದರೂ ಸೊಂಟ ಬಿಟ್ಟು ಇತರ ಭಾಗಗಳಿಗೆ ಧರಿಸಿಕೊಳ್ಳಲು ಕೂಡದೆಂಬದಾಗಿ ಅವರ ಕಟ್ಟು. ಆ ವೇಳೆ ಹುಡುಗಿ ಅದರ ಮಣಿಗಳ ಸರವನ್ನು ಎದೆ ತುಂಬ ಸುತ್ತುವರು. ಮತ್ತು ಕುತ್ತಿಗೆಗೆ ಧರಿಸುವರು. ಕೈಗಳಿಗೆ ತುಂಬ ಕಬ್ಬಿಣದ ಬಳೆಗಳನ್ನು ತೊಡಿಸುವರು. ಮದುಮಗನಿಗೆ ಒಂದು ಹೊಸ ಕೊಂಬೆಯನ್ನು ತಲೆಗೆ ಇಟ್ಟು ವಸ್ತ್ರದಿಂದ ತಲೆಯನ್ನು ಸುತ್ತುವರು. ಒಬ್ಬ ಕೈಯಲ್ಲಿ ಒಂದು ದಂಡ್‌ಕೋಲು (ಸಿಪಾಯಿ ಆಯುಧ) ಎಂಬದಾಗಿ ಒಂದು ದೊಣ್ಣೆಯನ್ನು ಕೊಡುವರು. ಇವರ ಮದುವೆ ಮುಂತಾದ ಶುಭಕಾರ್ಯಗಳಿಗೆ ಇವರ ಡೋಲು, ಕೊಳಲು, ನರ್ತನ ಇವೇ ವಾದ್ಯವಾಗಿರುತ್ತವೆ. ಇಂಥ ಸಂದರ್ಭಗಳಲ್ಲಿ ಹೆಂಗಸರೂ ಕುಣಿಯುತ್ತಾರೆ. ಏನಾದರೂ ರೋಗ ಬಾಯಿಯ ಹಾಡುಗಳನ್ನು ಹಾಡುವುದೂ ಉಂಟು. ಹುಡುಗಿಯ ಮನೆಯಲ್ಲಿಯೂ ಹುಡುಗನ ಮನೆಯಲ್ಲಿ ಮದುವೆಯಾಗುವ ಪದ್ಧತಿಯು ಇವರಲ್ಲಿಯೂ ಉಂಟು.

ಮದುವೆ ಇತ್ಯಾದಿ ಶುಭ ಕಾರ್ಯಾರಂಭದಲ್ಲಿ ಅವರ ಕುಲದೈವವಾದ ಸ್ವಾಮಿಗೆ ಪ್ರಾರ್ಥನೆ ಮಾಡುವರು. ಅನಂತರ ಸಾಲ್ಯ ಒಕ್ಕಲಿಗೆ ಮುಖವಾಡ, ನಂತು ಪ್ರಾರ್ಥನೆ ಮಾಡುವರು.

ಇವರ ಮನೆಗಳಿಗೆ ಅವರ ಭಾಷೆಯಲ್ಲಿ ಕೊಪ್ಪ ಎಂತಲೂ ಕೊಟ್ಟ ಎಂತಲೂ ಹೇಳುವ ವಾಡಿಕೆ ಉಂಟು. ಹಾಗೆಯೇ ಹೆಚ್ಚಿನ ಶಬ್ದಗಳಿಗೆ ಅವರ ಪ್ರತ್ಯೇಕ ಭಾಷೆ ಇರುತ್ತದೆ. ಆದ್ದರಿಂದ ಕೊರಗರು ಅವರ ಸ್ವಂತ ಭಾಷೆಯಲ್ಲಿ ಮಾತಾಡಿದರೆ ಇತರ ಜಾತಿಯವರಿಗೆ ಅರ್ಥವಾಗುವುದಿಲ್ಲ.

ಈ ಜಾತಿಯ ಜನರೂ ಈಗೀಗ ಸರಕಾರದ ಲೇಬರ್ ಇಲಾಖೆಯ ಸಹಾಯದಿಂದಲೂ ಮಂಗಳೂರು ಡಿ. ಸಿ. ಮಿಶನಿನ ಅಪೂರ್ವವಾದ ಪ್ರಯತ್ನದಿಂದಲೂ ಉನ್ನತ ಸ್ಥಿತಿಗೆ ಬರುತ್ತಲಿದ್ದಾರೆ. ಇವರು ಕನ್ನಡ ಜಿಲ್ಲೆಯ ಇತರ ಎಲ್ಲಾ ಜಾತಿಗಳಿಗಿಂತ ಹೀನಸ್ಥಿತಿಯಲ್ಲಿರುವುದರಿಂದ ಇವರ ಸ್ಥಿತಿಯು ಮೊದಲು ವೃದ್ಧಿಯಾಗಬೇಕಿತ್ತು. ಆದರೂ ಲೋಕದ ವಾಡಿಕೆಯಂತೆ ಮೊದಲು ಅಣ್ಣನಿಗೆ ಆವೇಲೆ ತಮ್ಮನಿಗೆ ಎಂಬಂತೆ ಆಗಬೇಕು.

Yellappa Nitto

1937
ನೇ
ಇಸವಿಯ
ಡೈರಿಗಳು
ಮಾರಾಟಕ್ಕಿವೆ.
ಬೇಕಾದ ನಮೂನೆಯವು
ಬೇಕಾದ ಬೆಲೆಯವು
ಬಂದು ವಿಚಾರಿಸಿರಿ!
ನವಯುಗ ಆಫೀಸು,
ಉಡುಪಿ.

ನವಯುಗ
ಉಜ್ವಲ ರಾಷ್ಟ್ರೀಯ ವಾರಪತ್ರಿಕೆ—
ಉದ್ಬೋಧಕ ಲೇಖನಗಳಿವೆ!
ದೇಶ ವಿದೇಶಗಳ ತಾಜಾ ವರ್ತಮಾನಗಳಿವೆ!
ಮನೋಹ್ಲಾದಕ ಕಥೆ, ಕವನ, ನಾಟಕಗಳಿವೆ!
ಧುರೀಣರ 'ಫೋಟೋ'ಗಳಿವೆ!
ಪ್ರತಿ ಗುರುವಾರ ತಪ್ಪದೆ ಪ್ರಕಟವಾಗುವುದು.
ವಾ. ಚ. ಅಂಚೆವೆಚ್ಚ ಸೇರಿ ಕೇವಲ ೩—೪—೦.
ಇಂದೇ ಚಂದಾದಾರರಾಗಿರಿ!
ಅಖಿಲ ಕರ್ನಾಟಕದಲ್ಲಿಯೂ ಹೊರ ಪ್ರದೇಶದಲ್ಲಿಯೂ, ವಿಶಾಲವಾಗಿ ಪ್ರಚಾರದಲ್ಲಿರುವ "ನವಯುಗ"ವು ಜಾಹೀರಾತುಗಳಿಗೆ ವಾಹನವಾಗಿದೆ.
ಮೆನೇಜರ್— ನವಯುಗ, ಉಡುಪಿ.

ಪೇಟೆ ಧಾರಣೆ

ಸಾಮಗ್ರಿಗಳು	ಮಂಗಳೂರು		ಉಡುಪಿ	
	ಇಂದ	ವರೆಗೆ	ಇಂದ	ವರೆಗೆ
ರಾಶಿ ಅಕ್ಕಿ …	3 6	3—10	3— 2	3— 4
ಮುಕ್ತಿ …	3 — 4	4 0	3 12	4— 0
ಗದ್ದೆ ಸುಗ್ಗಿ …	3 – 10	3 14	3 - 6	3— 8
ಬೂರ ಅವ್ವಲ್ ಬೆಳ್ತಿಗೆ …	4 – 4	4 · 12	4— 8	4—12
ರಂಗೂನು ಬಿ ಗೋಣಿಗಕ್ಕೆ	6 2	7 – 0	6—10	6—12
ಗೋಧಿ ಗೋಣಿಗಕ್ಕೆ …	8 8	10 4	11 - 0	12 - 0
ತೊಗರಿ ಗೋಣಿಗಕ್ಕೆ …	9 – 0	[illegible]— 8	11— 8	…
ಹುರುಳಿ ಗೋಣಿಗಕ್ಕೆ …	5 2	5 8	5 - 0	5— 8
ಕಡಲೆ ಗೋಣಿಗಕ್ಕೆ …	7 —10	9 0	8 0	12 8
ತೊಗರಿಬೇಳೆ ಗೋಣಿಗಕ್ಕೆ	11 0	19— 0	11— 8	18 8
ಉದ್ದು ಗೋಣಿಗಕ್ಕೆ …	9 — 8	10 0	9— 4	9 — 8
ಹೆಸರು ಗೋಣಿಗಕ್ಕೆ …	9 4	9 12	10 — 8	11— 0
ರಾಗಿ ಗೋಣಿಗಕ್ಕೆ …	4 0	6 — 0	…	…
ಕೂಡುಬೆಲ್ಲ ಖಂಡಿಗಕ್ಕೆ…	30 — 0	35 — 0	20 — 0	25 — 0
ಉಪ್ಪು ಗೋಣಿಗಕ್ಕೆ …	4 8	4 —12	4 —10	4 —12
ಕೊಬ್ಬರಿ ಖಂಡಿಗಕ್ಕೆ …	60 – 0	70 — 0	67 8	70 – 0
ಕೊಬ್ಬರಿ ಹಿಂಡಿ ಖಂಡಿಗಕ್ಕೆ	27 — 0	28 – 8	33 - 0	36— 0
ಎಳ್ಳಿಂಡಿ ಖಂಡಿಗಕ್ಕೆ …	22 8	25 — 0	20— 0	21— 4
ಕೊಬ್ಬರಿ ಎಣ್ಣೆ ಮಣಗಕ್ಕೆ	4 15	5—14	6 8	6—12
ಎಳ್ಳೆಣ್ಣೆ ಮಣಗಕ್ಕೆ …	…	6 - 0	5 8	6 – 0
ಚಿಮಿಣಿ ಎಣ್ಣೆ ಪೆಟ್ಟಿಗೆಗಕ್ಕೆ	…	6 - 5	6 – 2	6— 4
ಮೋರಿಸ ಸಕ್ಕರೆ ಮಣಗಕ್ಕೆ	..	3— 9	3 .. 3	3- 4
ಮೆಣಸು …	3 8	4— 0	2 · 8	2—14
ಸಾಸಿವೆ ಮುಡಿಗಕ್ಕೆ …	5 — 4	6· 0	5— 4	…
ಕೊತ್ತಂಬರಿ ಮಣಗಕ್ಕೆ …	2— 8	3 – 0	…	…
ಕಾಳುಮೆಣಸು ಖಂಡಿಗಕ್ಕೆ…	95— 0	102 - 8	110 0	120 – 0
ಗೇರುಬೀಜ ಮುಡಿಗಕ್ಕೆ …	4 2	…	4 – 4	…
ಕಬ್ಬಿಣ ಖಂಡಿಗಕ್ಕೆ …	35— 0	37— 8	37 — 8	40— 0
ತಾಂಬ್ರ ತಗಡು ಮ.ಗಕ್ಕೆ	9—12	9 14	12— 4	12— 8
,, ಪಾತ್ರೆಗಳು ಮ.ಗಕ್ಕೆ	12 - 8	14 – 0	14— 0	15— 0
ಚೀನಿ ಬೆಳ್ಳಿ ಸೇರುಗಕ್ಕೆ…	17 8	18 — 0	13 12	14 0
ಹಿತ್ತಾಳೆ ತಗಡು ಮ.ಗಕ್ಕೆ	10 - 0	…	10 —	—
ಪವನು ಗಕ್ಕೆ …	22 — 8	…	22 - 8	…
ಹುಣಸೆ ಹುಳಿ ಖಂಡಿಗಕ್ಕೆ	20 — 0	25 — 0	60 — 0	65 – 0
ಸೇಟಿಸ್ ಕಾಫಿ ಖಂಡಿಗಕ್ಕೆ	140 - 0	150 0	…	…
ಪೀಬೇರಿ ಕಾಫಿ ಖಂಡಿಗಕ್ಕೆ	160— 0	170 — 0	155 0	160— 0
ಮಡಿಕೇರಿ ಏಲಕ್ಕಿ …	25 · 0	26 8	…	…
ಕೆಂಬಟಿ ಗೋದಿ …	…	…	12 – 0	…
ಏಲಕ್ಕಿ ಮಣಗಕ್ಕೆ …	45— 0	55 – 0	56 0	57 — 0
ಹೊಸ ಕಾಫಿ ಖಂಡಿಗಕ್ಕೆ	…	…	150 · 0	155— 0
ಭತ್ತ ಮುಡಿಗಕ್ಕೆ …	1— 4	1 8	…	…
ತುಪ್ಪ ಮಣಗಕ್ಕೆ …	17 0	18— 0	…	…

ಪ್ರಾಮುಖ್ಯ ಪ್ರಕಟಣೆ

ಅಮೃತಾಂಜನ

— ಡಿಪೋವಿನ ರಿಂಗ್‌ಪರ್ಮ್ ಮುಲಾಮು —

ಅಸ್ಸರ ವರಿಗಣ ನಮ್ಮ
ವಿಲಿಯಮ್ ಎಂಡ್ ಕೋ ರವರ
ರಾಜ ಮತ್ತು ರಾಣಿಯ ಟ್ರೇಡ್‌ಮಾರ್ಕಿನ ರಿಂಗ್‌ವರ್ಮ್
ಮುಲಾಮು ಈ ಕೆಳಗಣಂತೆ ಪ್ರತಿಪಾದಿಸಲಾಗಿದೆ

ಅಮೃತಾಂಜನ ಡಿಪೋವಿನ ತ್ರಿವರ್ಣದ 'ರೈಸಿಂಗ್ ಸನ್'

ಈ ಮೇಲಿನ ಪ್ರಾಮುಖ್ಯ ಪ್ರತ್ಯಾಸದ ಸಂಗತಿಯನ್ನು
ನಮ್ಮ ಗಿರಾಕಿದಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು.

ನಮ್ಮ ಟ್ರೇಡ್‌ಮಾರ್ಕಿನ ಮಾರ್ಪಾಟಿನಿಂದ ನಮ್ಮ ಔಷಧಿ ತಯಾರಿಯಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲೆಂಬ ಕುರಿತು ಸಹ ಈ ಮೂಲಕ ಭರವಸೆ ಕೊಡುತ್ತೇವೆ.

ಅಮೃತಾಂಜನ ಡಿಪೋ, —.— ಬೊಂಬಾಯಿ, ಮದ್ರಾಸು, ಕಲ್ಕತ್ತ.

ಕೇವಲ ಎರಡೇ ಆಣೆಗಳಲ್ಲಿ ೨೫ ರೂಪಾಯಿ ಬಹುಮಾನ

ಅಖಿಲ ಕನ್ನಡ ನಾಡಿಗೆ ಪ್ರೀತಿಯಾಗಿರುವ

ಕಥಾಕುಂಜ (ಮಾಸಪತ್ರಿಕೆ)

ನಯನಮನೋಹರವಾಗಿ ಹೊಸ ಹೊಸ ಚಿತ್ರಗಳಿಂದ ಅಲಂಕೃತವಾಗಿ ಡಿಸೆಂಬರ ವಲ್ಲಿ ಸಂಚಿಕೆಯು ವಿಶೇಷ ಸಂಚಿಕೆಯು ಪ್ರಕಟವಾಗುವದು. ಆದ್ದರಿಂದ ಕನ್ನಡಾಭಿಮಾನಿಗಳು ಈಗಲೆ ಮುಂಗಡ ಹಣ ಕಳುಹಿಸಿ ಚಂದಾದಾರರಾಗಬೇಕು

ಚಂದಾದಾರರಿಗೆ ೨೫ ರೂಪಾಯಿ ಬಹುಮಾನ.

ಈ ಸಂಧಿ ಕಳಕೊಳ್ಳಬಾರದು ಕಥಾಕುಂಜವನ್ನು ಕೊಂಡುಕೊಳ್ಳಲು ಎಲ್ಲರಿಗೂ ಅನುಕೂಲವಾಗಲೆಂದು ಚಂದಾ ಹಣವನ್ನು ಇಳಿಸಲಾಗಿದೆ

ಇಳಿಸಿದ ಚಂದಾ ೧-೮-೦ (ಅಂಚವೆಚ್ಚ ಸೇರಿ) ಶಾಲೆ, ಕಾಲೇಜು, ಲೈಬ್ರರಿಗಳಿಗೆ ೨-೮-೦

ಮೈಸೂರು ಮುಂಬೈ ವಿದ್ಯಾಖಾತೆಯವರಿಂದ ಶಾಲೆ ಕಾಲೇಜುಗಳ ವಾಚನಾಲಯಕ್ಕೆ
ಮಂಜೂರಾಗಿದೆ. ಜಾಹೀರಾತುದಾರರಿಗೆ ಸುವರ್ಣಸಂಧಿ! ಪತ್ರಿಕೆಗಳನ್ನು
ಮಾರಾಟಮಾಡಲು ಎಲ್ಲ ನಗರಗಳಲ್ಲಿ ಪ್ರಾಮಾಣಿಕ ಏಜಂಟರು ಬೇಕು,

ವಿಶೇಷ ಮಾಹಿತಿ ಹಸ್ತಪತ್ರಕ ನೋಡಿರಿ.

ವ್ಯವಸ್ಥಾಪಕ- **ಕಥಾಕುಂಜ, ಬೆಳಗಾಂವಿ.**

DIAMONDS! **DIAMONDS!!**

K. Ramachandra Krishna Shet

Near Mission High School, *Mangalore*

SUPERFINE UP TO DATE CUTTING! ವಜ್ರಗಳು **BEST BRILLIANCY!!**

ಉತ್ಕೃಷ್ಟ ತರಗತಿಯ ಚುನ್ಯಾತ (first quality, selected) ಎಮ್‌ಸ್ಟ ಡಮ್ಮಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ. ಕೊಂಡುಕೊಳ್ಳುವವರಿಗೆ ಬಜಾರ ಧಾರಣೆಗಿಂತ 5 ಪರ್ಸಂಟಿಗೆ ಕಡಿಮೆಯಾಗುವಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ. ಇದನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ. ಇದರ ಶಾಖೆಯೊಂದನ್ನು ಗವರ್ಮೆಂಟ್ ಕೋಲೇಜಿನ ಎದುರುಗಡೆ ತೆರೆಯಲಾಗಿದೆ

ಕೆ. ರಾಮಚಂದ್ರ ಕೃಷ್ಣ ಶೇಟ್,
ಜುವೆಲರ್, ಮಿಶನ್ ಹ್ಯಾಸ್ಕೂಲು ಬಳಿ, ಮಂಗಳೂರು.

ಬೊಂಬೈ ಲೋಂಡ್ರಿ

ಉಡುಪಿ, ಹೊಸ್ಪಿಟಲ್ ರೋಡ್.

ನಮ್ಮಲ್ಲಿ ವಸ್ತ್ರಗಳನ್ನು ಜಾಗ್ರತೆಯಿಂದ ಮಡಿಮಾಡಿ, ಕ್ಲಪ್ತ ವ್ಯಾದೆಗೆ
ಕೊಡುವುದಲ್ಲದೆ, ಊಲನ್, ಸಿಲ್ಕು ಮತ್ತು ಜರಿವಸ್ತ್ರಗಳನ್ನು
ನಾಜೂಕಾಗಿ ಡ್ರ್ಯಕ್ಲೀನಿಂಗ್ ಮಾಡುವುದು ಮತ್ತು
ಬೇಕಾದ ನಮೂನೆಯಲ್ಲಿ ಖಾತ್ರಿಯಾದ ರಂಗಿನ ಕೆಲಸವನ್ನು ಸಹ
ಅತಿ ಸುಲಭ ದರದಲ್ಲಿ ಮಾಡಿಕೊಡಲಾಗುವುದು.

ಹೆಚ್ಚಿನ ಮಾಹಿತಿ ಬಗ್ಗೆ ಕಂಪೆನಿಯಲ್ಲಿ ವಿಚಾರಿಸುವುದು.

ಪ್ರೊಪ್ರೈಟರ್: ಯಮ್. ಯಸ್. ಭಟ್ಕಳ್.

ಉತ್ತಮ ವರ್ಗದ ಶ್ರೇಷ್ಠವಾದ

ಸರಸ್ವತಿ

ಸ್ತ್ರೀಸಾಹಿತ್ಯ ಸಚಿತ್ರ ಮಾಸಪತ್ರಿಕೆ

ಇದು ಕರ್ನಾಟಕದಲ್ಲಿ ಸ್ತ್ರೀಯರ ಅಭ್ಯುದಯಕ್ಕಾಗಿ ಪ್ರಚುರಪಡಿಸುತ್ತಿರುವ ಪತ್ರಿಕೆಯು ಇದೊಂದೇ. ಈ ಪತ್ರಿಕೆಯ ಹದಿನೈದನೆಯ ಸಂಪುಟವು 1936ನೇಯ ಜನವರಿ ತಿಂಗಳಿನಿಂದ ಪ್ರಾರಂಭವಾಗಿದೆ. ಈ ಪತ್ರಿಕೆಯಲ್ಲಿ ಸ್ತ್ರೀಯರ ಉನ್ನತಿಗೆ ಅತ್ಯಾವಶ್ಯಕವಾದ ಶಿಕ್ಷಣ-ಸಾಹಿತ್ಯ ಕಲೆ-ಆರೋಗ್ಯ-ಪಾಕಶಾಸ್ತ್ರ-ಸಮಾಜ ಸುಧಾರಣೆ ಇವುಗಳಿಗೆ ಸಂಬಂಧಪಟ್ಟ ಲೇಖನಗಳೂ, ಸಣ್ಣ ಸಣ್ಣ ಕಥೆಗಳೂ, ನಾಟಕಗಳೂ ಕರ್ನಾಟಕದ ಸುಪ್ರಸಿದ್ಧ ಲೇಖಕ ಲೇಖಕಿಯರಿಂದ ಬರೆಯಲ್ಪಟ್ಟು ಪ್ರಕಟವಾಗುವವು. ಮಕ್ಕಳ ಸಲುವಾಗಿ 'ಮಕ್ಕಳ ಪುಟಗಳು' ಬೇರೆ ಪ್ರಕಟವಾಗುವುವು. ಮೈಸೂರು, ಮುಂಬೈ ವಿದ್ಯಾ ಇಲಾಖೆಯವರಿಂದ ಸರ್ಕಾರದ ಶಾಲೆಗಳಿಗೂ ವಾಚನಾಲಯಗಳಿಗೂ ಮಂಜೂರಾಗಿದೆ ಪ್ರಕಟನೆಗೆ ಅತ್ಯುತ್ತಮವಾದ ಮಾಸಪತ್ರಿಕೆ.

ವಾರ್ಷಿಕ ಚಂದಾ ರೂ 3—0—0 ಮಾತ್ರ,

ಸರಸ್ವತಿ ಕಾರ್ಯಾಲಯ,
ಚಾಮರಾಜಪೇಟೆ, **ಬೆಂಗಳೂರು ನಗರ**

The Commonwealth Assurance Co., Ltd.

(ESTD 1929)

Chairman, Mr. N. C. Kelkar, Ex- M. L. A

HEAD OFFICE **POONA CITY.** CHIEF AGENCY OFFICE **HAMPANKATTA, MANGALORE.**

1934ನೇ ಇಸ್ವಿ ಎಪ್ರಿಲ್ ತಿಂಗಳ ವರೆಗೆ
ರೂ. **57** ಲಕ್ಷಗಳಷ್ಟರ ವಹಿವಾಟುಮಾಡಿರುವುದು.

1933ನೇ ಎಪ್ರಿಲ್ ತಿಂಗಳ ವರೆಗೆ ಪಟ್ಟಿಯಲ್ಲಿದ್ದ ಎಲ್ಲಾ ಪೊಲಿಸಿದಾರರಿಗೆ
ಈ ಕಂಪೆನಿಯು **1000**ಕ್ಕೆ ರೂ. **10** ಮತ್ತು **12**ರಷ್ಟರ
ಬೋನಸು ಕೊಟ್ಟಿರುವುದು.

ಹೆಚ್ಚಿನ ಮಾಹಿತಿಗೆ ಹೆಡ್ ಆಫೀಸಿಗಾಗಲಿ ಈ ಕೆಳಗಣ ವಿಳಾಸಕ್ಕಾಗಲಿ ಬರೆಯಿರಿ—

ದಿ ಕೋಮನ್‌ವೆಲ್ತ್ ಎಶ್ಯುರೆನ್ಸ್ ಕಂಪೆನಿ ಲಿಮಿಟೆಡ್,
ಮುಖ್ಯ ಏಜನ್ಸಿ ಆಫೀಸು, ಹಂಪನಕಟ್ಟೆ, ಮಂಗಳೂರು.

ದಿ ಮೂಲ್ಕಿ ಗ್ರೇಂಡ್ ರೇಫ್ಲ್

(ಮೂಲ್ಕಿ ಹೈಸ್ಕೂಲಿನ ಸಹಾಯಾರ್ಥ)

ಮೂಲ್ಕಿ ದ. ಕನ್ನಡ.

ಟಿಕ್ಕು ಅಚ್ಚೆರು ತಾರೀಕು **25—1—1937]** • **[ಸೋಡ್ತಿ ತೆಗೆಯುವ ತಾರೀಕು 31—1—1937**

ಟಿಕೇಟು ಒಂದರ ಖರೀದಿ ಬರೇ ನಾಲ್ಕು ಆಣೆ ಮಾತ್ರ.

20 ಟಿಕೇಟುಗಳಿರುವ ಒಂದು ಪುಸ್ತಕಕ್ಕೆ ರೂ. 5—0—0 ಮಾತ್ರ. ಜಾಗ್ರತ ಮಾಡಿರಿ.

ನಿಮಗೆ ಬೇಕಾಗುವ ಟಿಕೇಟುಗಳನ್ನು ಕೂಡಲೇ ಪಡೆಯಿರಿ.

ಸೋಡ್ತಿ ತೆಗೆಯುವ ತಾರೀಕನ್ನು ಯಾವ ಕಾರಣದಿಂದಲೂ ಮುಂದರಿಸೋಗಾಗಲಿಕ್ಕಿಲ್ಲ.

ಹೆಚ್ಚಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಕೂಡಲೇ ಬರೆಯಿರಿ—

"ಕಾರ್ಯದರ್ಶಿ,"
"ದಿ ಮೂಲ್ಕಿ ಗ್ರೇಂಡ್ ರೇಫ್ಲ್,"
ಮೂಲ್ಕಿ, ದ. ಕನ್ನಡ.

ಪ್ರೇಮ ವಿದ್ಯಾಪೀಠ, ತುಂಗಭದ್ರಾ, (ಬಳ್ಳಾರಿ ಜಿಲ್ಲಾ)

ಇದರ ಹೊಸವರ್ಷವು ಜೂಲೈಯಲ್ಲಿ ನಡೆಯಲಾಗುತ್ತದೆ. ಸುಮಾರು ಉದ್ಯೋಗ ಬೇಕಾಗಿದ್ದವರೆ ಇಲ್ಲಿ ಶಿಕ್ಷಣವನ್ನು ಪಡೆಯಿರಿ ಮುಲ್ಕಿ, ಅಪ್ಪರ್ ಸೆಕೆಂಡರಿ, ಮೆಟ್ರಿಕ್ ಸ್ಕೂಲ್ ಫೈನಲ್ ಇತ್ಯಾದಿ ಪಾಸ್ ಆದವರೆಲ್ಲರಿಗೂ ಯೋಗ್ಯತೆಗೆ ತಕ್ಕಂತೆ ವಿಧ ವಿಧವಾದ ಕೋರ್ಸ್‌ಗಳಿವೆ ಪ್ರಾಸ್ಪೆಕ್ಟಸ್ ಮಾಹಿತಿಗಾಗಿ ಕೂಡಲೆ ೩ ಆಣೆ ಸ್ಟಾಂಪು ಇಟ್ಟು ಬರೆಯಿರಿ.

ಮಹೋಪಾಧ್ಯಾಯಾ ಡಾ| ಸುಮತಿಬಾಯಿ,

ಬಿ. ಎ. ಎಲ್. ಟಿ., ಎಫ್. ಪಿ. ಎಚ್. ಎಸ್, ಭಿಷಗ್ರತ್ನ, ರಿಜಿಸ್ಟ್ರಾರ್.

LAXMI BRAND COFFEE POWDER.

Pure & Superior quality. will last long without losing its flavour and colour.

TRADE MARK

Use always this LAXMI BRAND COFFEE POWDER prepared from the best & choicest Coffee Beans of Nilgiris. (Hills)

WANTED AGENTS in Southern India (samples available)

ಉತ್ಕೃಷ್ಟ ಕಾಫಿಬೀಜಗಳಿಂದ ತಯಾರಿಸಲ್ಪಟ್ಟ ಸುವಾಸನೆಯುಳ್ಳ ನಮ್ಮ **ಲಕ್ಷ್ಮೀಮಾರ್ಕಿನ ಕಾಫಿಹುಡಿಯನ್ನೇ** ಸದಾ ಉಪಯೋಗಿಸಿರಿ. ಏಜಂಟರಿಗೆ ಯೋಗ್ಯ ಕಮಿಶನ್ ಕೊಡಲಾಗುವದು. ಹೆಚ್ಚಿನ ಮಾಹಿತಿ ಬಗ್ಗೆ ಕೆಳಗಿನ ವಿಳಾಸಕ್ಕೆ ಬರೆದು ತಿಳಿಯಬಹುದು.

FOR SALE

Fire Resistance Steel Iron Safes.
latest pattern.



ನಮ್ಮಲ್ಲಿ ಕಬ್ಬಿಣದ ಪೆಟ್ಟಿಗೆಗಳು ಸದಾ ಮಾರಾಟಕ್ಕೆ ಸಿದ್ಧವಿರುತ್ತವೆ. ತಿಂಗಳುಗಟ್ಲೆ ಕಂತುಗಳಿಂದಲೂ ಮಾರುವ ಏರ್ಪಾಡಿದೆ.

For Prices & Particulars Apply to—

K. K. Shanbhag & Sons

Court Road, UDIPI, S. K.

Sold also by Instalments

ಮಾಸ] **ವಿಶ್ವವಾಣಿ** [ಪತ್ರಿಕೆ.

ಸಂಪಾದಕರು—**ಅ. ನ. ಕೃಷ್ಣರಾಯರು.**

ಸಂಸ್ಕೃತಿಯ ಪ್ರಸಾರಕ್ಕಾಗಿ ಕರ್ನಾಟಕದಲ್ಲಿ ಹೊರಟಿರುವ ಪತ್ರಿಕೆ ಇದೊಂದೇ. ಜಗತ್ತಿನ ಸಾಂಸ್ಕೃತಿಕ ಚಲನವಲನಗಳ ಸುದ್ದಿಗಳೆಲ್ಲಾ ಇದರಲ್ಲಿ ಪ್ರಕಟವಾಗುತ್ತವೆ.

ಚಿತ್ರವಿಭಾಗದ ವೈಶಿಷ್ಟ್ಯ—ಜಗತ್ತಿನ ಯಾವದೇ ಪತ್ರಿಕೆಯಲ್ಲಿಯೂ ಪ್ರಕಟವಾಗದಿರುವ ಅನೇಕ ಚಿತ್ರಗಳು 'ವಿಶ್ವವಾಣಿ'ಗೆ ಮೀಸಲು.

ಆದುದರಿಂದ ಇಂದೇ ಚಂದಾದಾರರಾಗಿರಿ.

ಸಾಮಾನ್ಯ ಚಂದಾದಾರರಿಗೆ (ವರ್ಷಕ್ಕೆ)	ರೂ. ೩—೮—೦
,, ,, (೬ ತಿಂಗಳಿಗೆ)	ರೂ. ೨—೦—೦
ಶಾಲೆ, ಕಾಲೇಜು, ವಾಚನಾಲಯ, ಸಾರ್ವಜನಿಕ ಸಂಸ್ಥೆಗಳಿಗೆ (ವರ್ಷಕ್ಕೆ)	ರೂ. ೫—೦—೦

ವಿಶ್ವವಾಣಿಯು ಮೈಸೂರು, ಮುಂಬಯಿ, ಮದರಾಸು, ಹೈದರಾಬಾದು, ಕೊಡಗು, ಕರ್ನಾಟಕಗಳಲ್ಲಿ ಮಾತ್ರವಲ್ಲದೆ ಕನ್ನಡಿಗರು ನೆಲಸಿರುವ ಎಲ್ಲ ಕಡೆಯಲ್ಲಿಯೂ ಪ್ರಚಾರವಾಗುತ್ತದೆ.

ಆದುದರಿಂದ 'ವಿಶ್ವವಾಣಿ'ಯಲ್ಲೇ ಜಾಹೀರಾತನ್ನು ಕೊಡಿರಿ.

ಹೆಚ್ಚು ವಿವರಗಳಿಗೆ ಬರೆಯಿರಿ—

ವ್ಯವಸ್ಥಾಪಕ—'ವಿಶ್ವವಾಣಿ,' 'ಅನ್ನಪೂರ್ಣ', ವಿಶ್ವೇಶ್ವರಪುರಂ,

ಬೆಂಗಳೂರು ನಗರ.

ನಮ್ಮ ಜರಿ ಪೀತಾಂಬರ, ರೇಶ್ಮೆ ಮಡಿಗಳಿಗೆ ಗಮನಕೊಡಿರಿ.

S. U. N. & CO. ***Choukhamba, Benares City.***

ನೂರು ಇನಾಮುಗಳು.

ಶ್ರೀ ಕಾಶಿಯಲ್ಲಿ ತಯಾರಾಗತಕ್ಕ ರೇಶ್ಮೆ ಮಾಲುಗಳ ಕೆಟಲಗು, ಕಾಶೀಸಕ್ಷೆ, ವಿಶ್ವೇಶ್ವರ ಪಟ, ಈ ೩ ಸಾಮಾನುಗಳು ೧ ಆಣೆ ಸ್ಟೇಂಪು ಕಳುಹಿಸಿದರೆ ಇನಾಮಾಗಿ ಕಳುಹಿಸಲಾಗುವವು. ಸ್ಟಾಂಪು ಬಾರದಿದ್ದರೆ ಈಗಿನ ಫೇಶನಿಗೆ ತಕ್ಕಂತೆ ಜರೀ ಕೆಲಸಗಳಿಂದ ತಯಾರಿಸಿದ ರೇಶ್ಮೆಸೀರೆಗಳೂ, ಖಣ, ಮಡಿ ಕದಪಾಮ್ಸಿ, ಪೇಟಾ, ಕೋಟಿಂಗ್, ಶರ್ಟಿಂಗ್ ಶಿಲ್ಕುಗಳೂ, ಕಾಶ್ಮೀರ ಶಾಲುಗಳೂ, ಉಲ್ಲನ್ ಚೌಕ, ಧಾವಳಿ, ನಾಮುಣಿ, ತರತರದ ರುದ್ರಾಕ್ಷಿಗಳೂ ಸಾಮಾನುಗಳೇ ಮೊದಲಾದ ಅನೇಕ ತರದ ಸಾಮಾನುಗಳ ಕೆಟಲಾಗು ೧ ಮಾತ್ರ ಇನಾಂ. ಈಗಿನ ಹೊಸನಮೂನೆಯ ಮಡಲು ಬುಟ್ಟಿ, ಹಾಕಿದ ಜರೀ ಶೀರೆ ಎಲ್ಲಾ ರಂಗುಗಳಲ್ಲಿ ರೂ. 20ರಿಂದ 55 ಮಡಲು ಸಾದಾ ೧೮ಮೊಳದ ಶೀರೆ 1ಕ್ಕೆ ರೂ. 16ರಿಂದ ರೂ. 35ರ ವರೆಗೆ. ಆರಿ ಕದಮ ೧೬ಮೊಳ ಕ್ರೇಪ್ ಅಂಚು ರೂ. 10½ ಯಿಂದ ರೂ. 16, ಖಣ ೧ಕ್ಕೆ ರೂ. ೧½ರಿಂದ ರೂ. ೧೦ರ ವರೆಗೆ. ಪೋಸ್ಟು ಖರ್ಚು ಪ್ರತ್ಯೇಕ. ಆರ್ಡರಿನಂತೆ ಸಾಮಾನುಗಳನ್ನು ಸರಿಯಾದ ಸುಲಭ ದರದಿಂದ ಕಳುಹಿಸಲಾಗುವುದು.

ಶಿರೋಮಣಿ ನಾರಾಯಣಾಚಾರ್ಯ & ಕಂಪೆನಿ, ಚೌಕಂಬಾ, ಬನಾರಿಸ್, ಕಾಶಿ.

USE

SUVASINI AGARBATHIES

(REGD.)

SRI BHARATHA VASTU MANDIRA, UDIPI

Good Colour Combination

Well Designed Pictures

ARE

INSERTED IN

Calendar Printing

Book your order for Calendars

R-A-T-E-S - - - M-O-D-E-R-A-T-E

THULUNAD PRESS, UDIPI

Printed by P. VENKATARAMANACHARYA for & on behalf of SUPPLY AGENCY LTD., at THULUNAD PRESS, UDIPI and Published by K. H. SHETTY at "NAVAYUGA" OFFICE, UDIPI.

Registered No. M. 3618

೨೦ ಪುಟ ನಾಣೆ

NAVAYUGA
A Nationalist Kanarese Weekly, UDIPI, S. K

It will pay you to advertise in 'NAVAYUGA' The Leading Nationalist Kanarese Weekly of Karnatak
FOR RATES OF ADVT Etc.
APPLY TO THE MANAGER

ನವಯುಗ

ವಾಚಕರನೇಕರ
ಅಪೇಕ್ಷೆಯಂತೆ ಮುದ್ರಿಸಲ್ಪಟ್ಟ
ಮಂಗಳೂರು ಉಡುಪಿಗಳಲ್ಲಿ
ಜಯಶೀಲವಾಗಿ
ಅಭಿನಯಿಸಲ್ಪಟ್ಟ
ಜನಪ್ರಿಯವಾದ ನಾಟಕ
ವ್ಯಭಿಚಾರಿಣಿ ಯಾರು?
ಕೆಲವೇ ಪ್ರತಿಗಳು ಉಳಿದಿವೆ.
ಬೆಲೆ ೦ ೮ ೦
ಕಿರಿಯ.ರ ಪ್ರಪಂಚ, ಉಡುಪಿ

VOL. XVI-NO 20

14-1-1937

ಮೂಡ ಬಾನಿನ ಕಣ್ಣು ಕೆಂಗಿಡಿಯ ಕಾರುತಿದೆ,
ಬನದ ನಾಡೊಳು ಮೊಳಗುತಿದೆ ತುಮುಲನಾದ;

ವಾರಪತ್ರಿಕೆ
ಸಂಪಾದಕ: ಕೆ. ಕೆ. ಶೆಟ್ಟಿ.

ಮೂಡುವುದು ತಂಬೆಳಕ ತಿಂಗಳಿನ ಮೊಗವಲ್ಲ,
'ನವಯುಗ'ದ ರುದ್ರರವಿಯಾರಕ್ತ ಬಿಂಬ.

ಸಂಪುಟ ೧೬] ಉಡುಪಿ, ಗುರುವಾರ ೧೪, ಜನವರಿ, ೧೯೩೭ [ಸಂಚಿಕೆ ೨೦

THE

Canara Industrial & Banking SYNDICATE, LIMITED.

Head Office:
MUKUNDA NIVAS,
UDIPI, S. I.

BRANCHES:

1	Bangalore City	16	Kanhangad
2	Belgaum	17	Kasargode
3	Byadgi	18	Karkala
4	Bellary	19	Udipi
5	Adoni	20	Uppinangadi
6	Hospet	21	Karwar
7	Nandyal	22	Kumta
8	Prodattur	23	Ankola
9	Tadpatri	24	Honavar
10	Taliparamba	25	Bhatkal
11	Hubli	26	Sirsi
12	Gadag	27	Sagar
13	Mangalore	28	Coondapoor
14	Cannanore	29	Brahmavar
15	Payyanur	30	Hungarcutta

OVER ONE & A QUARTER MILLION

We commence the New Year with an increase of OVER ONE & A QUARTER MILLION RUPEES in our rescurces.

The Total Working Funds of the Syndicate have risen by more than Rs. 1,250,000/- in the year 1936.

WE OFFER THANKS

Our Directors offer hearty thanks to the numerous clients and to the Public as well, for their ever increasing patronage and wish one and all

A VERY HAPPY
AND
PROSPEROUS NEW YEAR.

ದಿ ಕುಂದಾಪುರ ಬೇಂಕ್ ಲಿಮಿಟೆಡ್ ಕುಂದಾಪುರ

ಬ್ರಾಂಚ್—ಬ್ರಹ್ಮಾವರ.

ಚಾಲ್ತಿ ಮತ್ತು ಸೇವಿಂಗ್ಸ್ ಬೇಂಕ್ ಠೇವಣಾತಿಗಳು ಒಳ್ಳೇ ದರದ ಬಡ್ಡಿಯಲ್ಲಿಯೂ ಖಾಯಂ ಠೇವಣಾತಿಗಳು 3 ತಿಂಗಳಿಗೊಮ್ಮೆ ಸಾಲಿಯಾನ್ ಶೇಕಡಾ ರೂಪಾಯಿ 4½%, 6 ತಿಂಗಳಿಗೆ ಸಾಲಿಯಾನ್ ಶೇಕಡಾ ರೂಪಾಯಿ 5%, 12 ತಿಂಗಳಿಗೆ ಸಾಲಿಯಾನ್ ಶೇಕಡಾ ರೂಪಾಯಿ 6%, 24 ತಿಂಗಳಿಗೆ ಸಾಲಿಯಾನ್ ಶೇಕಡಾ 6½% ದರದ ಬಡ್ಡಿಯಲ್ಲಿ ಅಂಗೀಕರಿಸಲ್ಪಡುವುವು.

ಒಂದು ವರುಷದ ಯಾ ಹೆಚ್ಚಿಗೆ ಅವಧಿಯ ಖಾಯಂ ಠೇವಣಾತಿಗಳಿಗೆ ಮೇಲೆ ಕಾಣಿಸಿದ ದರದಲ್ಲಿ 6 ತಿಂಗಳಿಗೊಮ್ಮೆ ಬಡ್ಡಿ ಕೊಡಲಾಗುವುದು. ಬೇರೆ ಎಲ್ಲಾ ತರದ ಬೇಂಕ್ ವ್ಯವಹಾರಗಳು ನಡಿಸಲ್ಪಡುವುವು. ಕರೆಂಟ್, ಸೇವಿಂಗ್ಸ್ ಬೇಂಕ್ ಮತ್ತು ಕ್ಯುಮುಲೇಟಿವ್ ಠೇವಣಾತಿಗಳು ಅಂಗೀಕರಿಸಲ್ಪಡುವುವು.

ವಿಶೇಷ ಸೂಚನೆ:—ಬಡವರಿಗೆ ಸಹಾಯವಾಗುವಂತೆ ಕಡಿಮೆ ಎಂದರೆ ರೂಪಾಯಿ 10 ಸಹಾ ಸ್ವೀಕರಿಸಲಾಗುತ್ತೆ. ಪಾಲುಗಳು ದೊರೆಯುತ್ತವೆ, ಹೆಚ್ಚಿನ ಮಾಹಿತಿ ಬಗ್ಗೆ ಬರೆಕೊಳ್ಳಿ.

ಸುಖನಿವಾಸ

(ತಾಲೂಕು ಕಚೇರಿಯ ಎದುರುಗಡೆ)

ಉಡುಪಿ, ದ. ಕ.

ಪ್ರಯಾಣಿಕರಿಗೂ ಶಾಲಾ ಬಾಲಕರಿಗೂ ಉದ್ಯೋಗಸ್ಥರಿಗೂ ಇನ್ನಿತರ ವ್ಯವಹಾರಿಕರಿಗೂ ಸುಸ್ವಾದ್ಯವಾಗಿಯೂ ರುಚಿಕರವಾಗಿಯೂ ಹಿತದಾಯಕವಾಗಿಯೂ ನಿರ್ಮಲದ ಹೊಳೆಯಾಗಿಯೂ ಇರುವ ಕಾಫಿ, ತಿಂಡಿ, ತಿನಸು ಊಟ ವಗೈರೆ ನಮ್ಮ ಸ್ವಂತ ದೇಖರೇಖೆಯಿಂದ ತಯಾರಿಸಿ ಸದಾ ಕಾಲದಲ್ಲಿಯೂ ಅನಾಯಾಸವಾಗಿ ದೊರೆಯುವವು. ಒಮ್ಮೆ ಬಂದು ಪರೀಕ್ಷಿಸಿರಿ!

'ಸುಖನಿವಾಸ'ದ ಅಭಿವೃದ್ಧಿಯು ಮಹಾಜನರ ಪ್ರೋತ್ಸಾಹವನ್ನವಲಂಬಿಸಿದೆ. ವ್ಯವಸ್ಥಾಪಕರು:

ಎಚ್. ವಾಸುದೇವ ನಾಯಕ್ ಎಂಡ್ ಬ್ರದರ್.

THE

MOOLKY BANK, LTD.,

MOOLKY.

ದಿ ಮೂಲ್ಕಿ ಬೇಂಕ್, ಲಿಮಿಟೆಡ್,

ಮೂಲ್ಕಿ.

ಎಲ್ಲಾ ತರದ ಬ್ಯಾಂಕ್ ವ್ಯವಹಾರಗಳು ನಡಿಸಲ್ಪಡುವವು. "ಮುಖ್ಯವಾಗಿ ಭಂಗಾರ ವ ಸರಕು ಈಡಿನ ಮೇಲೆ ಸಾಲವನ್ನು ಕೊಡುವುದು".

ಕಾಯಂ ಠೇವಣಾತಿಗಳು:

ಒಳ್ಳೇ ದರದ ಬಡ್ಡಿಯಲ್ಲಿಯೂ, ಮಾಸಿಕ, ಸೇವಿಂಗ್ಸು ಬೇಂಕ್ ಮತ್ತು ಠೇವಣಾತಿಗಳು ಯೋಗ್ಯ ತರದ ಬಡ್ಡಿಯಲ್ಲಿಯೂ ಅಂಗೀಕರಿಸಲ್ಪಡುವವು.

ಹೆಚ್ಚಿನ ಮಾಹಿತಿಗೆ ಕೆಳಗಿನವರಿಗೆ ಬರೆದುಕೊಳ್ಳಿರಿ.

M. R. Punja, ಯಂ. ಆರ್. ಪೂಂಜ,
President & Manager, ಪ್ರೆಸಿಡೆಂಟು ಮತ್ತು ಮೆನೇಜರ್.

ಇದೀಗ ಬಂದಿದೆ— ಹೊಸ ಪುಸ್ತಕ!

ಟಾಲಸ್ಟಾಯಿಯವರ ಕತೆಗಳು

ಶ್ರೀ. ಎಲ್. ಗುಂಡಪ್ಪ, ಎಂ. ಎ.ಯವರಿಂದ ಅನುವಾದಿಸಲ್ಪಟ್ಟ ಟಾಲಸ್ಟಾಯಿಯವರ ಕಥೆಗಳೆಲ್ಲಾ ಕನ್ನಡದಲ್ಲಿ ಒಟ್ಟಾಗಿ ಅಚ್ಚಾಗಿ ಬಂದಿವೆ. ಈ ಕಥೆಗಳಲ್ಲಿ ಜೀವನಕ್ಕೆ ಸಂಬಂಧಪಟ್ಟ ಎಲ್ಲಾ ಪ್ರಶ್ನೆಗಳ ಚರ್ಚೆಯೂ ಇದೆ. ಆದುದರಿಂದ ಸ್ತ್ರೀಪುರುಷರೆಲ್ಲರೂ ಅವಶ್ಯ ಓದಬೇಕು.

೧೦೪ ಪುಟಗಳು ಒಂದೂವರೆ ರೂಪಾಯಿ ಬೆಲೆ,

ಪ್ರತಿಗಳು ಸಿಗುವ ಸ್ಥಳ—

ಕಿರಿಯರ ಪ್ರಪಂಚ, ಉಡುಪಿ.

ವಿಜಯನಗರದ ಸ್ಮಾರಕೋತ್ಸವ ಮಂಡಲದ ಪರವಾಗಿ ಹೊರಡಲಿರುವ

ಜಯಕರ್ನಾಟಕದ

ವಿಜಯನಗರ ವಿಶೇಷ ಸಂಚಿಕೆ

ವಿಶೇಷ ಸಂಪಾದಕರು: ಪ್ರೊ. ಎಸ್. ಎಸ್. ಮಾಳವಾಡ, ಎಂ.ಎ

ಅಖಿಲ ಭಾರತದ ಪ್ರಸಿದ್ಧ ವಿದ್ವಾಂಸರ ಲೇಖನವೈಭವ!

ವಿಜಯನಗರಕ್ಕೆ ಸಂಬಂಧಿಸಿದ ಚಿತ್ರಮಾಲಿಕೆಗಳ ಐಶ್ವರ್ಯ!!

ಹೊಳಪಿನ ಹಾಳೆ — ಅಚ್ಚಿನ ಅಚ್ಚುಕಟ್ಟು

ಬೆಲೆ: ಎಂಟಾಣೆ ಮಾತ್ರ

ಜಯಕರ್ನಾಟಕವು ಜನವರಿಯಿಂದ—ವಿಶೇಷ ಸಂಚಿಕೆಯಿಂದ ಮೊದಲ್ಗೊಂಡು **ದೊಡ್ಡ ಆಕಾರದಲ್ಲಿ** (ಡೆಮಿ $\frac{1}{4}$ ದಲ್ಲಿ) ಹೊರಡುವುದು!

ಅಲ್ಲದೆ **ಚಂದಾದರವನ್ನು** ಇಳಿಸಿದೆ—ರೂ. ೪—೮—೦ ಮಾತ್ರ!

ಚಂದಾದಾರರಾಗಬೇಕೆನ್ನುವವರಿಗೂ ಜಾಹಿರಾತುದಾರರಿಗೂ ಸುಸಮಯ

ಜಯಕರ್ನಾಟಕ ಕಾರ್ಯಾಲಯ, ಧಾರವಾಡ.

ತುಳುನಾಡ್ ವೈದ್ಯಶಾಲೆ, ಉದ್ಯಾವರ, ದ. ಕ.

ಕೊಲೆರಾ ಪಿಲ್ಸ್
ಕೊಲೆರಾ ರೋಗಕ್ಕೆ ರಾಮಬಾಣ ಔಷಧ.
೧೦೦ ಮಾತ್ರೆಗಳಿಗೆ ರೂ. ೩—೮—೦

ಭೈರವ ಮಾತ್ರೆಗಳು
ಬಾಣಂತಿ ರೋಗಸಂಬಂಧವಾದ ಸಕಲ ರೋಗಗಳಿಗೂ ದಿವ್ಯೌಷಧ.
೧೦೦ ಮಾತ್ರೆಗಳಿಗೆ ರೂ. ೩—೮—೦

ಎಲ್ಲಾ ತರದ ರೋಗಗಳಿಗೂ ಅನುಭವಸಿದ್ಧವಾದ ದಿವ್ಯೌಷಧಗಳು ದೊರೆಯುತ್ತವೆ.

ಯು. ಪಿ. ಮೇಸ್ತ್ರ, ಗೋಲ್ಡ್ ಮೆಡಲ್ಡ್ ಫಿಜಿಸಿಯನ್.

THE

PANGAL NAYAK BANK

LIMITED.

ESTABLISHED 1920.

***Head Office*: UDIPI.**

Branches: MANGALORE and KATAPADI.

Fixed loans and Overdraft advances are granted on the pledge of gold articles, on the mortgage of immovable properties and on the personal security of approved constituents on favourable terms.

Genuine trade bills, cheques, drafts etc., are discounted at a nominal charge.

Current, Savings Bank and Cumulative deposits are accepted at moderate rates of interest.

Fixed Deposits are received and interest allowed at 4% on 1 year and at $4\frac{1}{2}$% on 2 years deposits.

Every other description of up-to-date Banking business is also undertaken

A few shares are also available to the public.

ಮಿರಜದಲ್ಲಿಯ ಸುಪ್ರಸಿದ್ಧ ವೈದ್ಯರಾದ ಎಮ್. ಕೆ. ರಜಪೂತ ಇವರ ಸ್ವದೇಶಿ ಔಷಧಗಳು.

ಗುಣ ಬಾರದಿದ್ದರೆ ## ಸ್ತ್ರೀಧರ್ಮ ಸಂಜೀವಿನೀ ಚೂರ್ಣ (ರಿಜಿಸ್ಟರ್ಡ) **ಹಣ ಪರತ**

ಈ ಚೂರ್ಣವು ಕೆಂಪು ಬಿಳೆ ಶರಗಿಗೆ ಶತ್ರುವಾಗಿರುವದು. ಅನಿಯಮಿತತನದಿಂದ ಮುಟ್ಟಾಗುವಿಕೆ, ಕ್ಲೇಶ ಹೊಟ್ಟೆಯಲ್ಲಿ ನೋವು, ಉಷ್ಣತಾ ಕ್ಷೀಣತಾ ಗರ್ಭಾಶಯದಲ್ಲಿರುವ ದೋಷ ಗರ್ಭಧಾರಣವಾಗದಿರೋಣ, ಅಕಾಲದಲ್ಲಿ ಗರ್ಭಪತನವಾಗೋಣ ಈ ಮೊದಲಾದ ರೋಗಗಳು ನಿಶ್ಚಯವಾಗಿ ನೆಟ್ಟಗಾಗಿ ಗರ್ಭಕೋಶವು ಸ್ವಚ್ಛವಾಗುವದು. ಮಕ್ಕಳಾಗುವದಿಲ್ಲೆಂದು ಎರಡನೇ ಲಗ್ನಮಾಡಿಕೊಳ್ಳುವ ಮೊದಲು ಗೃಹದೇವತೆಯಾದ ಮೊದಲನೇ ಪತ್ನಿಗೆ ಈ ಚೂರ್ಣ ಅವಶ್ಯ ಕೊಡಿರಿ. ಮುಖ್ಯ ಸರ್ಟಿಫಿಕೇಟ ಮ. ರಾ ಎ. ಎಮ್. ಇನ್ಸ್‌ಪೆಕ್ಟರ ಬೆಳಗಾಂವ:—ಈ ಚೂರ್ಣದಿಂದ ನನ್ನ ಕುಟುಂಬದ ಹೊಟ್ಟೆಯೊಳಗಿನ ರಕ್ತ ಗುಲ್ಮದ ಗಂಟು ನಾಮಶೇಷವಾಯಿತು. ಮತ್ತು ಎಲ್ಲ ರೋಗಗಳು ನಿಶ್ಶೇಷವಾದವು. ನನ್ನ ಮಿತ್ರನ ಹೆಂಡತಿಯ ರಕ್ತ ಮತ್ತು ಶರಗು ಇಲ್ಲದಂತಾದವು. ೨೧ ದಿವಸದ ಡಬ್ಬಿಯ ಕಿಮ್ಮತ್ತು ರೂ. ೩ ಟ.ಖ. ಆಣೆ, ೮. ಡಬ್ಬಿಗೆ ೪ರೂ.]

ಸಂತತಿ ಪ್ರತಿಬಂಧಕ ಚೂರ್ಣ. (ರಿಜಿಸ್ಟರ್ಡ) [ಬಿ ಪಿ. ಖರ್ಚು ಆಣೆ ೮,

ಬಹಳಸಾರೆ ಹಡೆಯುವುದರಿಂದ ಅತಿಶಯ ಅಶಕ್ತಿಯಾಗುತ್ತದೆ ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುರುವಾಗುವದು. ಶರೀರಕ್ಕೇನೂ ಅಪಾಯವಾಗದೆ ಸಂಸಾರ ಸುಖವು ಪೂರ್ಣವಾಗಿದೆ. ಕೂಡಲೇ ಗರ್ಭಧಾರಣ ಬಂದಾಗುವುದು ತದನಂತರ ಏನು ಮಾಡಿದರೂ ಸುರುವಾಗುವದಿಲ್ಲ. ಮೊದಲೇ ಪೂರಾ ವಿಚಾರಮಾಡಿ ಔಷಧ ಬೇಡಿರಿ. ಮುಖ್ಯಸರ್ಟಿಫಿಕೇಟ ಡಾಕ್ಟರ ಬಿ. ಎ. ವೈದ್ಯ ಎಲ್ ಸಿ. ಪಿ. ಎಸ್. ಮು॥ ಕೇಳವಾ ಮಾಹಿಮಾ ಜಿ. ಠಾಣೆ. ಈ ಚೂರ್ಣದಿಂದ ಯಾವ ತರದ ಅಪಾಯವಾಗದೆ ಗರ್ಭಧಾರಣವಾಗುವದಿಲ್ಲ. ಪೂರ್ಣ ಗುಣಕಾರಿ

ವಿಳಾಸ:—ಸಂಜೀವಿನೀ ಔಷಧಾಲಯ ಮು. ಪೊ. ಮಿರಜ S. M. C.

ಸಮಾಚಾರ ಸಂಗ್ರಹ

ತೀರ್ಥಕ್ಕೆ ವ್ಯಾಜ್ಯ! ನಾವೂ ಬತ್ತಲೆ ನಿಲ್ಲಬಹುದು! ಸರ್ಕಸ್ ಹುಲಿಯ ಸಿಟ್ಟು! ಕೋಳಿಮೊಟ್ಟೆಗೆ ಇಂಜಕ್ಷನ್!

ತಂದೆಯು ಮರಣಾಂತಿಕ ಅವಘಡಕ್ಕೆ ತುತ್ತಾದುದರಿಂದ ಮಕ್ಕಳಿಗೆ ಪರಿಹಾರ ದ್ರವ್ಯ.

ಮದ್ರಾಸಿನ ಸಂಗಂಬುರವಮ್ ರೋಡಿನಲ್ಲಿ ಮೋಟರ್ ಬಸ್ಸಿನಪಘಾತಗಲಿ ಶ್ರೀನಿವಾಸನ್ ಎಂಬವರು ಮೃತರಾಗಲು ಡ್ರೈವರನ ಅಜಾಗರೂಕತೆಯೇ ಕಾರಣವೆಂದು ಮೃತರ ಮಕ್ಕಳ ಪರವಾಗಿ ಪರಿಹಾರ ದ್ರವ್ಯಕ್ಕೋಸ್ಕರ ವ್ಯಾಜ್ಯವಾಗಿತ್ತು. ಆ ಮೂರು ಮೈನರ ಮಕ್ಕಳಿಗೆ ಒಟ್ಟು ರೂ 4200 ಪರಿಹಾರದ್ರವ್ಯವನ್ನು ಬಸ್ ಡ್ರೈವರನು ಕೊಡಬೇಕೆಂದು ಜಡ್ಜರ ತೀರ್ಪು.

ಕುಂಭಕೋಣದಲ್ಲಿ ತೀರ್ಥಕ್ಕಾಗಿ ವ್ಯಾಜ್ಯ.

ಪ್ರಾಜಾಂತ್ಯದಲ್ಲಿ ತೀರ್ಥ ತೆಗದುಕೊಳ್ಳುವ ಮೊದಲನೇ ಹಕ್ಕು ತಮ್ಮದೆಂದು ಅರ್ಚಕರೂ, ತಮ್ಮದೆಂದು ಪಾತ್ರ್ಯಾಚಾರ್ಯರುಗಳೂ ಸಾಧಿಸಿದಾಗ ಪ್ರಾಜಾಂತ್ಯದ ಕಾರ್ಯವಾಗಿ ಅರ್ಚಕರೇ ತೀರ್ಥ ತೆಗದುಕೊಳ್ಳತಕ್ಕದೆಂದೂ ಅದ ಮುಗಿದ ಮೇಲೆಯೇ ತೀರ್ಥ ಕೊಡುವ ಕಾರ್ಯಾರಂಭವಾಗುವುದರಿಂದ ಅನಂತರದ ಮೊದಲ ಕೊಡುವಿಕೆಯು ಪಾತ್ರ್ಯಾಚಾರ್ಯರಿಗೆಂದೂ ಕುಂಭಕೋಣದ ಟೆಂಪಲ್ ಕಮಿಟಿಯ ಅಧ್ಯಕ್ಷರ ತೀರ್ಪು. ಈ ತೀರ್ಪು ಶಾಂತಿಭಂಗವಾಗದೆ ಆಚರಿಸಲ್ಪಡುವಂತೆ ಪೋಲೀಸರ ಹಾಜರಿ ಅಲ್ಲಿಯ ಸಾರಂಗಪಾಣಿ ದೇವಸ್ಥಾನದಲ್ಲಿ!

ಚುನಾವಣೆಯ ರಂಗದಲ್ಲಿ ಗ್ರಾಮಫೋನು ರಿಕಾರ್ಡು!

ತಮಿಳುನಾಡು ಕಾಂಗ್ರೆಸ್ಸ್ ಕಮಿಟಿಯವರು ಕಾಂಗ್ರೆಸ್ ಉಮೇದ್ವಾರರಿಗೆ ಓಟು ಕೊಡಬೇಕೆಂದು ಪ್ರಚಾರಕೆಲಸ ನಿರ್ವಹಿಸುವುದಕ್ಕಾಗಿ ಒಂದು ಗ್ರಾಮಫೋನ್ ರೀಕಾರ್ಡನ್ನು ತಯಾರಿಸಿರುವರು. ಅಪ್ಲೇಟಿನ ಒಂದು ಬದಿಯಲ್ಲಿ ಎಸ್ ಸತ್ಯಮೂರ್ತಿಯವರ ಸ್ಫೂರ್ತಿಪತ್ರವ್ಯಾಖ್ಯಾನವಿದೆ. ಮತ್ತೊಂದು ಬದಿಯಲ್ಲಿ ಅದೇ ಹೃದಯ ಸ್ಪರ್ಶಿಯಾದ ಪದ್ಯ ರೂಪದಲ್ಲಿ ಮಾರ್ಪಡಿಸಲ್ಪಟ್ಟು ಪ್ರಖ್ಯಾತ ಸಂಗೀತಗಾರ ಮುಸ್ರೀ ಸುಬ್ರಮಣ್ಯ ಐಯ್ಯರ ಗಾನದಲ್ಲಿದೆ.

ರಿಕಾರ್ಡಿನ ಬೆಲೆ ರೂ ೨ ೪ ೦

ನಮ್ಮಲ್ಲಿಯೂ ಬತ್ತಲೆಯವರಿಗೊಂದು ಕುದುರು!

ಬಿಹಾರದ ಪ್ರೋಣಿನದಿಯ ಮೇರಿ...ದೊಡ್ಡ ಕುದುರಿನಲ್ಲಿ ಬತ್ತಲೆಯವರ ವಸಾಹತು 'ಹಿಂದುಸ್ಥಾನೀ ನ್ಯೂಡಿಸ್ಟ್ ಕೊಲೊನಿ (ನಗ್ನರ ವಸಾಹತು) ಎಂಬುದನ್ನು ಸ್ಥಾಪಿಸುತ್ತೇವೆಂದೂ ಜರ್ಮನಿ ಬ್ರಿಟನ್ ಮುಂತಾದ ವಿದೇಶಗಳಲ್ಲಿ ಬಹಳ ಕಾಲದಿಂದ ಅವುಗಳ ಸದಸ್ಯರಿಗುಂಟಾದ ಶಾರೀರಿಕ ಮಾನಸಿಕ ಕ್ಷೇಮವನ್ನು ಮನಗಂಡ ತಾನು ಅದೇ ಕ್ರಮವನ್ನನುಸರಿಸಿ ವಸಾಹತು ನಡೆಯಿಸಲಿಕ್ಕೆ ಆ ಚಿಕ್ಕ ದ್ವೀಪವು ಪ್ರೋಣಿನದಿಯೂ ಆದರ್ಶ ಸ್ಥಾನವಾಗಿದೆ ಎಂದೂ ಈ ನವೀನ ವಸಾಹತಿನ ಕಾರ್ಯದರ್ಶಿ ಗಾ...ದ ಎಮ್ ಎಸ್ ಅನ್ಸಾರಿ ಎಂಬವರ ಹೇಳಿಕೆ. ಒಂದಾಗುವುದು ನಿನ್ನಿಂದ ಪತ್ತಾಗುವುದು ನಿನ್ನಿಂದ ಎಂಬಿವಯಂತೆ ಕೆಟ್ಟ ಚಾ...ಳ ಜಾಲ.

ಬಸ್ ಮಗುಚಿಬಿದ್ದು ಕ್ಲೀನರನಿಗೆ ಪ್ರಾಣಹಾನಿ.

ಆಲೂ ಯಿಯಲ್ಲಿ ಆದ ಜನವರಿ ೬ ಲಿಂ ಆಗಿ ಆಸ್ಪತ್ರಿಯಲಿ ದ್ವಾರ ... ಒದೆ ತಿದ್ದ ಬಸ್ಸು ಹೊಂದಕ್ಕೆ ಳಿನು ಮಗುಚಿ ಬಿದ್ದಾಗ ಕ್ಲೀನರನು ಅದಿ ಮುರಿ ಸಿಕ್ಕಿ ನಜ್ಜುಗುಜ್ಜಾಗಿ ಅಲ್ಲೇ ಪ್ರಾಣಬಿಟ್ಟ! ಬಸ್ಸು ನಡೆಸುವವರು ತಮ್ಮ ಕೈಯಲ್ಲಿ ಹಲವರ ಪ್ರಾಣಗಳು ಇವೆ ಎಂಬುದನ್ನು ಸದಾ ಲಕ್ಷ್ಯದಲ್ಲಿಟ್ಟುಕೊಳ್ಳಲಾರರೇಕೆ?

ಸರ್ಕಸ್ ಹುಲಿಗ ಸಿಟ್ಟೇರಿತು!

ಬೊಂಬಾಯಿಯಲ್ಲಿ ಜನವರಿ ತಾ ೩ ರಲ್ಲಿ ಸರ್ಕಸ್ ನೋಡುತ್ತಿದ್ದವರಲ್ಲ ಒಂದೂ ಭಯಾಗಾಬರಿಯಾಗಿ ಬಿಟ್ಟರು. ಆಟ ತೋರಿಸುತಿದ್ದ ಹತ್ತು ಹುಲಿಗಳಲ್ಲೊಂದು ರೇಗಿ ಟ್ರೈನರನ ಮೇಲೆ ನೆಗದು ಕುತ್ತಿಗೆಯನ್ನೇ ಕಚ್ಚಿ ಹಿಡಿಯಿತು. ಪುಣ್ಯವಶಾತ್ ಉಪದ್ರವಗಳು ಅದನ್ನನುಸರಿಸಲಿಲ್ಲ. ಟ್ರೈನರನ ಅಂಗರಕ್ಷಕರು ನೀರಿನ ಬಾಲ್ದಿಗಳನ್ನು ಎರಚಿ ಅದರ ಬಾಯಿಂದ ತಪ್ಪಿಸಿದರು! ಬೊಂಬಾಯಿ ನಾವು ಗೆದ್ದೆವೆಂಬ ಮಾತು ಆಗ ಹಲವರಿಗ ಮರೆಯಿತು.

ಕೋಳಿಯ ಮೊಟ್ಟೆಗೆ ಇಂಜೆಕ್ಷನ್

ಗಂಡು ಮರಿಬೇಕೋ ಹೆಣ್ಣು ಮರಿಬೇಕೋ? ಹೇಗೆ ಬೇಕಾದರೂ ಗಂಡು-ಕೋಳಿಯ ...ಯರ್ಯಾಶಯದ ಪರಿಣಾಮದ ಹೆಚ್ಚು ಯಾ ಕಡಿಮೆಯಾಗುವಂತೆ ಮೊಟ್ಟೆಯೊಳಕ್ಕೆ ಅದನ್ನು ಇಂಜಕ್ಷನ್ ಕೊಟ್ಟು ಮಾರ್ಪಡಿಸಿಕೊಳ್ಳಬಹುದೆಂದು ನ್ಯೂಯೋರ್ಕದ ಜೂಲೋಜಿ ಪ್ರೊಫೆಸರರೊಬ್ಬರು ಒಂದು ಕ್ರಮವನ್ನು ಕಂಡುಹಿಡಿದಿದಾರೆ.

ಮಾನವನ ಆಯುಷ್ಯವು ಸಾಮಾನ್ಯವಾಗಿ ೧೫೦ ವರುಷ

ಹಲವು ವರುಷಗಳ ಶೋಧನೆಯಿಂದ ಮಾನವನ ಸಾಮಾನ್ಯ ಆಯುರ್ದಾಯವು ೧೫೦ ವರ್ಷಗಳಾಗುವಂತೆ ಮಾಡಬಹುದೆಂದು ರಸ್ಯಾದ ಲೆನಿಂಗ್ರಾಡ್ ಬಯೊಲೊಜಿಕಲ್ ಇನ್ಸ್ಟಿಟ್ಯೂಟಿನ ಪ್ರೊಫೆಸರ್ ಲಾಜರ್‌ಎವರ ಸಿದ್ಧಾಂತ!

ಸ್ಪೈಯಿನಿನಲ್ಲಿ ಹೇಗಾಗುವುದು?

ದಂಗೆಗಾರರ ಪಕ್ಷಕ್ಕೆ ಜರ್ಮನಿ ಇಟಲಿಗಳಿಂದ ಬಲವು ಕೂಡಿ ಬಂದರೂ ಸರಕಾರ ಪಕ್ಷದ ಸೈನ್ಯದ ಸಂಖ್ಯೆಯು ಇನ್ನೂ ಒಂದು ಲಕ್ಷ ಹೆಚ್ಚು ಇರುವುದರಿಂದ ಮ್ಯಾಡ್ರಿಡ್ ಬೇಗನೇ ದಂಗೆಗಾರರ ಕೈಸೇರುವದಾಗಿಲ್ಲವೆಂದು ಅಭಿಪ್ರಾಯ.

ಸ್ಪೈಯಿನಿಗೆ ಆಯುಧಗಳನ್ನು ಕಳುಹಿಸಬಾರದು.

ಸ್ಪಾಯಿನಿನ ಯುದ್ಧ ವಿಮಾನ ಪತ್ತೆಯಿದ್ದು ಆ ಊರ ಗಡಿಯನ್ನು ದಾಟಿ ಹರಿದುವ ಸ್ವಭಾವದ್ದಾಗಿರುವದರಿಂದ ಅಲ್ಲಿಗ ಯುದ್ಧೋಪಕರಣಗಳನ್ನು ಕಳಿಸುವವರಿಗೆ ಕಠಿಣ ಶಿಕ್ಷೆಕೊಡಬೇಗ ವೃತ್ತಿ... ಯಿದೆಯೆಂದು ... ಗಳು ... ಮೇರಿಕದಲ್ಲಿ ... ರಿಗೆ ಬಂದಿರಬೇಕು. ಅದರ ನೋಟದ ತಿಳಿದು ಹಲವು ಕಂಪನಿಗಳು ಬೇಗಬೇಗನೆ ಹಡಗು ತುಂಬಿಸಿ ಗಡಿಯಿಂದ ಹೊರಗೆ ದೂಡಿಬಿಟ್ಟಿವೆ.

ಲಂಡನ್ ಪ್ರಾಂತದಲ್ಲಿ ಇನ್‌ಫ್ಲುಯೆಂಜಾ ಜ್ವರದ ಹಾವಳಿ

ಲಂಡನ್ ಪ್ರಾಂತದಲ್ಲಿ ...ನ ಫ್ಲುಯೆಂಜಾ ಜ್ವರವು ತೀವ್ರಗತಿಯಿಂದ ಹರಡುತ್ತಿದೆ. ಆಸ್ಪತ್ರೆಗಳಲ್ಲಿ ಸ್ಥಳವಿಲ್ಲದಂತಾಗಿದೆ. ಡಾಕ್ಟರುಗಳಿಗ ಬಿಡುವಿಲ್ಲ. ನೌಕರರು ಜ್ವರಬಿದ್ದು ಕೋರ್ಟು ಕಚೇರಿಗಳ ಕೆಲಸಗಳಿಗೆ ತೊಡಕುಂಟಾಗಿದೆ.

ಶ್ರೋಣ್ ಗುರುಗಳ ಅಸ್ವಸ್ಥ

ಅವು ಕಡಿಮೆಯಾಗಿಲ್ಲ. [illegible] ಕಾಲಿನಲ್ಲಿ ನೋವು ... ಹೃದಯದ ಪರಿಸ್ಥಿತಿಯು ಉಕ್ರಮವಾಗಿರುವುದರಿಂದ ಯಾವ ವಿಷಯದಲ್ಲಿಯೂ ... ಶಾಂತಿಕರವಾಗಿರುವುದೆಂದು ... ಪ್ರಕಟಿಸಿದ್ದಾರೆ.

ಜನ್ಮ ದಿನಾಚರಣೆ.

ಮಂಗಳೂರಿನ ... [illegible] ... ದಿನಾಚರಣೆಯು ... [illegible] ... ಆಚರಿಸಲ್ಪಟ್ಟಿತು.

ಫೆಡರೇಶನ್ ಕೋರ್ಟಿನ ಎಡ್ವೋಕೇಟ್ ಜನರಲ್.

ಇಂಗ್ಲೆಂಡ್ ... ಪ್ರಿವಿ ಕೌನ್ಸಿಲಿನ ... ಸರ್ ... [illegible] ... ಇವರು ಫೆಡರೇಶನ್ ಕೋರ್ಟಿನ ಎಡ್ವೋಕೇಟ್ ಜನರಲ್ ಆಗಿ ನೇಮಕಹೊಂದಿರುವರು.

ಬಹಳ ಹಳೆಯ ಮರ

ಇದರ ... [illegible] ... ಅಭಿಪ್ರಾಯ. ... ದಪ್ಪ ೧೫೦೦ ... [illegible]

... [illegible] ... ಮಂಡಿನಲ್ಲಿದೆ.

ಇಪ್ಪತ್ತೇಳು ದೇಶಗಳ ಕಾಲವನ್ನು ತೋರಿಸುವ ಗಡಿಯಾರ.

... ಪ್ರಾಂತ್ಯದ ... [illegible] ... ತಯಾರಿಸಿದ್ದಾನೆ ... [illegible] ... ವರ್ಷ ಹಿಡಿದಿದೆ.

ಇಪ್ಪತ್ತೊಂಬತ್ತು ಭಾಷೆಗಳನ್ನು ಬಲ್ಲ ಪಂಡಿತ

ಇವನ ... [illegible] ... ಸಂಸ್ಕೃತ ... ೧೦೦೦ ... [illegible]

ಸೋಲಿಲ್ಲದ ಪಣಿಗ.

[illegible] ... ಡಾಕ್ಟರ ... [illegible] ... ೩೦೦೦೦ ... ಇಂಜಕ್ಷನನ್ನು ... [illegible]

[illegible]

ವಿದ್ಯಾದಾನಕ್ಕೆ ಪ್ರೋತ್ಸಾಹಿಸಿರಿ !
ಹಿಂದೂ ವಿದ್ಯಾದಾಯಿನೀ ಸಂಘದವರು ತಮ್ಮ ಆದಿತ್ಯ ಯೊಳಗಿರುವ
"ಇಡ್ಯ ವಿದ್ಯಾದಾಯಿನೀ ಶಾಲೆ" ಮತ್ತು
ಹೊಸದಾಗಿ ಸ್ಥಾಪಿಸಲಿರುವ 'ಅನಾಥಾಲಯ'
ಇವುಗಳ ಸಹಾಯಾರ್ಥವಾಗಿ ಏರ್ಪಡಿಸಿರುವ
ಗ್ರ್ಯಾಂಡ್ ವಿದ್ಯಾದಾಯಿನೀ ಲೋಟ್ರಿ
ತೆಗೆಯುವ ತಾರೀಕು: 17 1 1937
ಲೋಟ್ರಿಯ ಮೊಬಲಗು ರೂ. 50,000.
1ನೇ ಇನಾಂ 8,000, ೨ನೇ ಇನಾಂ 2,000
ಜುಮ್ಲಾ ಇನಾಮು 1,000 ಇನಾಮುಗಳ ಜುಮ್ಲಾ ಮೌಲ್ಯ 20,135
ಟಿಕೇಟು 1ರ ನಾಲ್ಕಾಣೆ ಮಾತ್ರ
10 ಟಿಕೇಟುಗಳಿರುವ 1 ಪುಸ್ತಕದ ಬೆಲೆ ರೂ 4—0—0 ಎರಡು ಪುಸ್ತಕಗಳ ಬೆಲೆ ರೂ 7—8—0 ಸ್ಪೆಶಲ್ ಬಹುಮಾನಗಳೂ ಇವೆ
ಹೆಚ್ಚಿನ ವಿವರಗಳಿಗೆ ... ಬರೆಯಿರಿ
ಮೆನೇಜರ್ ಗ್ರ್ಯಾಂಡ್ ವಿದ್ಯಾದಾಯಿನೀ ಲೋಟ್ರಿ ... ಮಂಗಳೂರು

ಈ ವಾರದ ಕಥೆ

• ಅಜ್ಞಾನ ಸಾಗರ •

(ALL RIGHTS RESERVED)

ತರಂಗ ೩

ಉಣ್ಣಿಗೆ ಮುಟ್ಟೇಸ

ರಾಮು ಸೆಟ್ಟಿಯ ಹಟ್ಟಿಯೆಂದರೆ ಕುಂಬಾರ ಹಳ್ಳಿಯಲ್ಲಿ ಗೊತ್ತಿಲ್ಲದಿದ್ದವರಿಲ್ಲ. ಅದೇನು ಅಷ್ಟು ಪ್ರಸಿದ್ಧಿ? ಅಲ್ಲೇನು ಕೊಡ ಹಾಲಿನ ಎಮ್ಮೆ ಇವೆಯೆ? ಕಂಬಳದ ಜೋಡು ಉಂಟೆ? ಒಳ್ಳೆಯ ತಳಿಯ ಕಡಸುಗಳಗದು ಹಸರಾಡುವೇ? ಇಲ್ಲ: ಅವು ಯಾವುವೂ ಆ ಹಟ್ಟಿಯಲ್ಲಾಗುವುದಿಲ್ಲವೆಂಬುದರಿಂದಲೇ ಅದಕ್ಕಷ್ಟು ಪ್ರಾಪ್ರವ ಖ್ಯಾತಿ, ಹಾಗಾಗಲು ಕಾರಣವೇನೆಂದರೆ ಆ ಹಟ್ಟಿ ಕಟ್ಟಿದ ಜಾಗವೇ ಅಂತಹದು–ನಾಗನಬೀದಿ! ತಿಮ್ಮಣ್ಣ ಸಾಮುಗರು ಕೊಟ್ಟ ತೀರ್ಮಾನ ಹಾಗೆ–"ಶೆಟ್ಟಿಯೇ, ಅಲ್ಲಿ ಹಟ್ಟಿ ಕಟ್ಟಿ ನೀನು ಕೆಟ್ಟೆ" ಎಂದು. ಆ ತೀರ್ಪಿನ ಮೇಲೆಯೂ ವಿಚಾರಿಸುವುದೆಂದರೆ ಹುಚ್ಚರೇ ಸರಿ. ಕುಂಬಾರ ಹಳ್ಳಿಯಲ್ಲಿ ಹುಚ್ಚರಿಲ್ಲವಷ್ಟೆ! ಆದುದರಿಂದ ಸಾಮುಗರೆಂದ ಮಾತದು ಈಗ ಊರ ಮಾತಾಗಿದೆ.

ಆದರೂ ಸಾಮುಗರು ಆತನ ಮೇಲೆ ಕನಿಕರಗೊಂಡು ಒಳಗಿಂದೊಳಗೆ ಹಲವು ತಹತಟ್ಟೆ ಮುಟ್ಟೇಸು ಮುಂತಾದುವನ್ನು ಮಾಡಿದ್ದರು. ಕರ್ಚಿಗೆಲ್ಲ ಶೆಟ್ಟಿಯು ಕೊಟ್ಟಿದ್ದನೆನ್ನಿ ಪ್ರತಿ ತಿಂಗಳೂ ಅವರೇ ನಾಗನಿಗೆ 'ತನು' ಹೊಯಿದು ಸಂತೃಪ್ತಿಗೊಳಿಸಿದ್ದರೂ ಪ್ರಯೋಜನವೇನೂ ಕಂಡುಬರಲಿಲ್ಲ ಶೆಟ್ಟಿಗೆ ಕೊನೆಗೆ ಸಾಮುಗರ ಅಪ್ಪಣೆಯಾಯಿತು, 'ಏನುಮಾಡಿದರೂ ನಾಗನು ಆ ಜಾಗದಿಂದ ತನ್ನ ಬೀದಿ ತಪ್ಪಿಸುವ ಹಾಗಿಲ್ಲ! ನಮ್ಮ ನಾಗನ ಬನದಲ್ಲೊಂದು ನಾಗಪ್ರತಿಷ್ಠೆಮಾಡಿಸು. ಅಂದು ನಾಗನ ಬಳ್ಕೆ ನೋಡಿ ಬೇರೆಜಾಗ ತೋರಿಸಿ ಕೊಡುತ್ತೇನೆ" ಎಂದು. ಅದೂ ನಡೆಯಿತು. ತಕ್ಷಣಕ್ಕೆ ಈ ಜಾಗ ಆದೀತು; ಇದೂ ಚಿಂತೆ ಇಲ್ಲ; ಅಲ್ಲಿಯೂ ಆಗಬಹುದು. ಆದರೆ ಭ್ರಷ್ಟ ಮಾಡಬಾರದು! ಒಟ್ಟಾರೆ, ನೀನು ನಂಬಿ ಪ್ರತಿಷ್ಠೆಮಾಡಿಸಿದ ನಾಗನಿಗೆ ಪೂಜೆ ಹರಿಕೆಗಳೆಲ್ಲ ಸರಿಯಾಗಿ ಸಲ್ಲುತ್ತಿರಲಿ. ಎಂದು ಸಾಮುಗರು ಮೂರು ಜಾಗಗಳನ್ನು ತೋರಿಸಿ ಎಲ್ಲಿ ಬೇಕಾದರೂ ಹಟ್ಟಿ ಕಟ್ಟುವಂತೆ ಅಪ್ಪಣೆಯಿತ್ತರು. ಅಂದರೆ ನಾಗನ ಅನುಮತಿಯೇ ದೊರೆಯಿತೆಂದರ್ಥ! ಈ ಮೂರು ವರ್ಷಗಳಲ್ಲಿ ಆ ಮೂರು ಜಾಗದಲ್ಲಿಯೂ ಹಟ್ಟಿ ಕಟ್ಟಿಯಾಯಿತು. ಬಿಟ್ಟೂ ಆಯಿತು. ಸಾಮುಗರಲ್ಲಿ ಹೋಗಿ ಅರಿಕೆ ಮಾಡಿಕೊಂಡ ರಾಮು ಶೆಟ್ಟಿ ಅವರ ಸವಾರಿ ಬಂತು. ನೋಡು! ಇಲ್ಲಿ ಮೂತ್ರ! ಇಲ್ಲಿ ಎಂಜಲು! ಇಲ್ಲಿ ಸಣ್ಣ ಮಕ್ಕಳ ಕರ್ಮ! ಇಲ್ಲಿ ಮಿಣುಕೆರೆಸಿ ಹಾಕಿದ್ದಿ! ಕೋಳಿ ಪಿಷ್ಟೆ ಎಲ್ಲೆಲ್ಲಿಯೂ! ಅಲ್ಲೆಲ್ಲ ಮುಟ್ಟಾದ ಹೆಂಗಸರು ತಿರುಗಿರಬೇಕು! ಮನೆ ಸುತ್ತ ಭ್ರಷ್ಟ ಮಾಡಬೇಡಾಂತ ನಾನುನಿನಗೆ ಸಾರಿಸಾರಿ ಹೇಳಿದರೂ ನೀನು ಲಕ್ಷ್ಯಗೊಡದ ಹೀಗೆಲ್ಲಾ ಮಾಡುತ್ತ ಬಂದರೆ ಹಟ್ಟಿ ನಾನು ಎಷ್ಟರತನಕ ರಕ್ಷಣೆ ಮಾಡಿ ಕೊಟ್ಟೇನು! ಈ ಸಲದ ಹಟ್ಟಿಯನ್ನೆಂತೂ ಕಲ್ಲುಕಂಬ ಹಾಕಿ ಗಟ್ಟಿಮುಟ್ಟಾಗಿಯೇ ಕಟ್ಟಿಬಿಟ್ಟಿದ್ದೀ!..........." "ಹೌದು, ಯಾವ ಜಾಗದಲ್ಲಾಗದಿದ್ದರೂ ಈ ಜಾಗದಲ್ಲಿ ಖಂಡಿತ ಆಗುತ್ತದೆಯೆಂದು ತಮ್ಮ ಅಪ್ಪಣೆಯಾಗಿತ್ತು. ಆದುದರಿಂದ ಇನ್ನದರಲ್ಲಿ ಪರೀಕ್ಷೆಮಾಡುವ ಅಂಶ ವಿಲ್ಲಾಂತ ..." "ಆದರೆ ಹೀಗೆಲ್ಲಾ ಬೀದಿ ಭ್ರಷ್ಟ ಮಾಡಬಾರದೂಂತ ಮೊದಲೇ ಎಚ್ಚರಿಸಿಲ್ಲವೇ? ಆಗಲಿ, ಇನ್ನೇನುಮಾಡಲಿಕ್ಕೆ ಬರುತ್ತೆ? ಈ ಹಟ್ಟಿಯು ಸೂತ್ರ ನಾಗಬಿಟ್ಟು ಕೊಡಬೇಕು. ನೀನು ಚಿಕ್ಕದರಲ್ಲಿ, ಬಹು ಚಿಕ್ಕದರಲ್ಲಿ ಆತನಿಗೊಂದು ಅರ್ಧಮಂಡಲವಾದರೂ ಮಾಡಿಸಿ ಬಿಡು! ಮಂಡಲವೆಂದರೆ ಕೊಪ್ಪರಿಗೆಯನ್ನೇ ಬಿಟ್ಟುಕೊಡುವ ನಾಗ ಈ ಹಾದಿಬಿಟ್ಟುಕೊಡುವನಾಗ ಈ ಹಾದಿ ಬಿಟ್ಟು ಕೊಡಲಾರನೇ ನಾಳೆ ಒಂದು ಗೊನೆ ಬಾಳೆಹಣ್ಣು, ಸಕ್ಕರೆ, ಜೇನು, ತುಪ್ಪ ಇವೆಲ್ಲ ಹಿಡಿದುಕೊಂಡು ಬಾ ಬನದಲ್ಲಿ ಪ್ರಾರ್ಥನೆ ಮಾಡಿ ತೀರ್ಥ ಗಂಧಪ್ರಸಾದ ಕೊಡುತ್ತೇನೆ. ಅವನ್ನು ತಂದು ಈ ಹಟ್ಟಿಗೆಲ್ಲಾ ಮುಟ್ಟೆಸ ಮಾಡಿಬಿಡು. ನಾಗ ನಡೆಸಿಕೊಡುತ್ತಾನೆ. ಮಂಡಳ ಎಂದು ಗಾಬರಿಗೊಳ್ಳಬೇಡ ಚಿಕ್ಕದರಲ್ಲಿ ಅರ್ಧ ಮಂಡಳ– ಅನುಕೂಲವಾದಾಗ– ಹರಿಕೆಗೆ ಹನ್ನೆರಡುವರ್ಷ ಇದೆ. ಸಾಮುಗರು ಸಾಗಿದರು.

ರಾಮುಶೆಟ್ಟಿಯ ಹಟ್ಟಿಯಲ್ಲಾಗುವುದೇನು? ನಾಗಬರುತ್ತದೆಯೆ? ಎಂದು ಕೇಳುವಿರಾ? ಓಹೋ ಹೇಳಲಿಕ್ಕೆ ಮರೆತೆನೆ! ಹಳ್ಳಿಯ ಮನೆಯ ದಿಣ್ಣೆಯ ಸುತ್ತಲೂ ಬೇಲಿಯಿದೆ; ಕೆಳಗೆ ಗದ್ದೆ ಕೆರೆ ಇರುವಂತಹದ್ದೇ ಬೇಲಿ ಗದ್ದೆ ಕೆರೆ ಇದ್ದಲ್ಲಿ ಒಳ್ಳೇ ಕೇರೆಗಳೂ ಇವೆ. ಆ ಒಳ್ಳೇ ಕೇರಗಳಿಗೇ ಕೆಲವರು ಬಣ್ಣಕೊಟ್ಟು ಹೆದೆಬರಿಸುತ್ತಾರೆ. ಹೀಗೆ ಹಳ್ಳಿಗಳಲ್ಲಿ ಏಳು ಹೆಡೆಯ ಪುಟ ಸರ್ಪವು ಕೆರೆಯೇರಿಯ ಮುಂಡಗೆಯಲ್ಲಿರಳಿದ "ಕೇದಿಗೆ ಹೂವಿಗೆ ಸುತ್ತುಹಾಕಿ ಹೆಡೆಗಳನ್ನೆತ್ತಿ ಕುಳಿತುದನ್ನು ನೋಡಿದವರೂ ಇದ್ದಾರೆ! ಎಂದಮೇಲೆ ಹಳ್ಳಿಯ ಮನೆಬದಿಗಳೆಲ್ಲಾ ನಾಗನ ಬೀದಿಗಳೇ ಅಲ್ಲವೆನ್ನುವವರಿಲ್ಲ. ಹಾಗೆ ಯಾರಾದರೂ ತುಸು ಭಿನ್ನಾಭಿಪ್ರಾಯ ಪಡುವವರಿದ್ದರೆ, 'ನಿನಗೇನು ಗೊತ್ತು ನಾಗ ಲಕ್ಷಣ? ಯಾವ ಶಾಸ್ತ್ರ ಓದಿದವ ನೀನು?" ಎಂದು ತಿಮ್ಮಣ್ಣ ಸಾಮುಗರು, ಪದ್ಮನಾಭ ಭಟ್ಟರು, ಮಂತ್ರವಾದಿ ಧಪೆದಾರ, ಈ ತ್ರಿಮೂರ್ತಿಗಳ ಬಾಯಿಂದ ಬರುತ್ತೆ. "ನೋಡು, ಇವರಿಗೆಲ್ಲಾ ಹೇಳಹೇಳಿ ಈಗ ಗೊತ್ತಾಗಿದೆ! ನೀನಿನ್ನೂ ಚಿಕ್ಕವ ಅನುಭವ ಬರಬೇಕು!" ಎಂದು ಉಳಿದವರ ಕಡೆಗೆ ನೋಡುವರು! ಅವರೆಲ್ಲ ಚಿಕ್ಕವನ ಕಡೆಗೆ ಸಹಾನುಭೂತಿಯದೃಷ್ಟಿ ಬೀರಿ ಆ ತಲೆಯಲ್ಲಿ ಇನ್ನೂ ಮೆದುಳು ಬೆಳೆಯಲಿಲ್ಲವಲ್ಲ, ಎಂದು ಆಶ್ಚರ್ಯಪಡುವರು ಅವರ ದೃಷ್ಟಿಯಲ್ಲಿ ಅಂದಿನಿಂದಾತನು ಹೆಡ್ಡನಿಂದಾಗುವನು! ಆದುದರಿಂದ ಈ ತ್ರಿಮೂರ್ತಿಗಳ ಅಭಿಪ್ರಾಯಕ್ಕೆ ಬಂದ್ರು ಊರಿಂದ ಹೆಡ್ಡನೆನ್ನಿಸಿಕೊಳ್ಳುವುದು ಯಾರಿಗೆ ಬೇಕಾಗಿದೆ.

ರಾಮುಸೆಟ್ಟಿಯ ಮನೆಯ ಸುತ್ತುವಳೆಯವೆಲ್ಲ ಬೀದಿಯೇ. ಹಾಗೆಂದು ಪ್ರಶ್ನೆಯಲ್ಲಿ ತೋರಿಬಂದ ಮೇಲೆ ನಾಗ ಕಣ್ಣಿಗೆ ಬೀಳಬೇಕೆಂದಿಲ್ಲ. ಇನ್ನು ದೃಷ್ಟಾಂತಬೇಕಾದರೆ ಅವನೆಲ್ಲಿ ಹಟ್ಟಿ ಕಟ್ಟಿದರೂ ಉಣ್ಣಿಗಳು ಉಣ್ಣೆಯಂತೆ ಜಡೆಗಟ್ಟಿ ನಡೆಗಳ ಮೈಮೇಲೆ! ಎಳೆಗರುಗಳ ಕಿವಿಯೊಳಗೂ ಮುಷ್ಟಿ ಮುಷ್ಟಿ ಉಣ್ಣಿಗಳು ಅವುಗಳಿಂದಾಗಿ ಸಾಯದೆ ಉಳಿಯುವ ಕರುಗಳು ಕಡಿಮೆ. ದೊಡ್ಡ ನಡೆಗಳೆಲ್ಲ ಬಲರಾಮನ ಪಶು' ವಿನಂತೆ! ಒಂದೊಂದು ವೇಳೆ ಕಡಿಮೆಯಾಗುವವು. ಹಾಗಾಗುವುದು ಆತನು ಮಾಡಿಸಿದ ತಹಕಡ್ಡಿಗಳಿಂದ ಮತ್ತು ಮುಟ್ಟೇಸದಿಂದ ತಿಮ್ಮಣ್ಣ ಸಾಮುಗರು ಮಾಡುವ ಸೂತ್ರಬಂಧನದಿಂದ ಆದರೆ ಅವುಗಳ ವಾಯಿದೆ ತೀರಿತೆಂದ ಕೂಡಲೆ ಪುನಃ ಅದೇ ರೋಗ!

ಆದರೂ ರಾಮು ಶೆಟ್ಟಿಯು ಮಂಡಳವೆಂದರೆ ತುಸುಹಿಂಜರಿದ ನಾಗಮಂಡಳ ಮಾಡಿ ಕೆಟ್ಟವರೆಷ್ಟೋ ಮಂದಿ ಸೆಟ್ಟಿಯ ಅನುಭವದಲ್ಲಿತ್ತು. ಬೆರಳುಮಡಚಿ ಹೆಸರು ಹೇಳುವಷ್ಟು ಅವನ ನೆನಪಿನಲ್ಲಿತ್ತು. ಮಂಡಳ ಕೊಟ್ಟು ನಾಗನನ್ನು ತೃಪ್ತಿಪಡಿಸಿದವರು ಅವರಲ್ಲಿಯಾರು ಇದ್ದಿಲ್ಲ. ಒಂದು ಮಂಡಳ ಕೊಟ್ಟು ಮತ್ತೊಂದಕ್ಕೆ ಬುನಾದಿ ಹಾಕಿಕೊಂಡವರೇ ಅವರೆಲ್ಲ! ಹತ್ತುಸಾವಿರ ರೂಪಾಯಿಗಳನ್ನು ನೀರಿನಂತೆ ಚೆಲ್ಲಿ ಬೆಪ್ಪನವರು ಮಂಡಳಮಾಡಿಸಿದ್ದರು. ಆಸ್ಪಾಸಿನ ಹದಿನಾರುಮಾಗಣೆಯ ಮುಖಂಡರೂ ತಮಗೆ ಬುದ್ಧಿತಿಳಿದ ಮೇಲೆ ಅಂತಹ ಭಾರಿ ಸಂಭ್ರಮದ ಮಂಡಳವನ್ನಾರೂ ಮಾಡಿಸಿದ್ದಿಲ್ಲವೆಂದು ತೀರ್ಪು ಕೊಟ್ಟಿದ್ದರು. ಆದರೆ ಕೊನೆಗೆ ತಿಮ್ಮಣ್ಣ ಸಾಮುಗರ ಮೈಮೇಲೆ ನಾಗ ಬಂದು ಬುಸುಗುಟ್ಟಿತ್ತು "ಇದು ನಿನ್ನ ದೊಡ್ಡಸ್ತಿಕೆಯ ಮೆರವಣಿಗೆಯಲ್ಲವೆ ನನ್ನ ಸೇವೆಯಲ್ಲ! ಹಿಂದೆಯಾರಾದರೂ ಘಟ್ಟದಿಂದ ಲೋರಿಯಲ್ಲಿ ಸಿಂಗಾರ ತರಿಸಿದ್ದರೇ? ಹಾದಿಯುದ್ದಕ್ಕೂ ಲಕ್ಷಾಂತರ ಮೂಗುಗಳು ಪರಿಮಳ ಸೇವಿಸಿದ ಈ ಸಿಂಗಾರದ ರಾಸಿಯಲ್ಲಿ ಯೇನು ಉಳಿದಿದೆ ನನಗೆ ಹೂವೆಂದರೆ ಹಟ್ಟಿಗೆ ತಂದೊಡ್ಡುವ ಸೊಪ್ಪಿನರಾಶಿಯೆಂದು ತಿಳಿದೆಯೋ ತಿಳಿಯದೆಮಾಡಿದ ಅಪರಾಧವನ್ನುತ್ತಿ ಯಾ ಹೋಗಲಿ ಬಿಡು ಭಕ್ತಿಯಿಂದ ಇನ್ನೊಂದು ಸೇವೆಮಾಡು ಆಗ ಅಪ್ಪಣೆ ಕೊಡುತ್ತೇನೆ" ಎಂದು ಮಂಡಳ ಸಮಾಪ್ತಿ ಯಾಗಿತ್ತು ಆದುದರಿಂದ ತಾನು ಮಂಡಳ ಕೊಟ್ಟರೆ ಗುಂಡಾಂತರವಾದೇನೆಂದು ಹಿಂಜರಿದ ಸೆಟ್ಟಿ ಮುಂದೇನು ಮಾಡುವುದೆಂದು ತಿಳಿಯದಾದ.

ಅಷ್ಟರಲ್ಲಿ ಗ್ರಾಮೋದ್ಧಾರಕ ಸಂಘದಿಂದೊಬ್ಬ ಸ್ವಯಂಸೇವಕರು ಕುಂಬಾರಹಳ್ಳಿಗೆ ಬಂದರು. ಜನಾರ್ದನರಾಯರೆಂದು ಅವರ ಹೆಸರು. ಗೋರಕ್ಷಣೆಯ ಕುರಿತು ದೇಶವಿದೇಶಗಳ ರೀತಿನೀತಿಗಳನ್ನು ಪರಿಶೀಲಿಸಿ ಪರಿಶೋಧಿಸಿ ಪ್ರಯೋಗಿಸಿ ನುರಿತ ಕೈ ಅವರದು. ಪಶುಗಳ ಮದ್ದು ಮಾಯಗಳನ್ನು ತಿಳಿದಿಪ್ಪರು ರಾಮುಶೆಟ್ಟಿಯ ಹಟ್ಟಿಯನ್ನು ನೋಡಿದರು! ಸಾರಣೆಯನ್ನು ಕಾಣದ ಬಿರುಕುಬಿಟ್ಟ ಕೊರಕಲು ಕೊರಕಲು ಗೋಡೆ; ಬಿರುಕು ಕೊರಕಲುಗಳಲ್ಲಿ ಅವನ್ನು ಮಾರಿಸುವ ದಳಿಗೂಟಗಳು, ಉಣ್ಣಿಗಳ ಮರಿಮೊಟ್ಟೆಗಳಿಗೆ ಹಾಸಿತಟ್ಟಿದ ಉತ್ಕೃಷ್ಟ ಸ್ಥಾನಗಳೆಂದರೆ ಅವು! ಶೆಟ್ಟಿಯು ಆ ಕಡೆಗೆ ಲಕ್ಷ್ಯವಿಟ್ಟಿದ್ದಿಲ್ಲ. ಉಣ್ಣಿಗೆ ಕಾರಣ ಅವೆಂದು ಅವನಿಗೆದೆಂದೂ ಹೊಳೆದಿದ್ದಿಲ್ಲ; ಯಾರೂ ಹೇಳಿದವರಿಲ್ಲ. ಅವನ ಹಾಗೂ ಊರವರ ತಲೆಯಲ್ಲಿದ್ದುದು 'ಕೀಳು' ಮತ್ತು 'ದೃಷ್ಟಿ'! ಅವನ್ನು ತಡೆಗಟ್ಟುವ ಸಾಧನಗಳು ಹಟ್ಟಿಯಲ್ಲಿ ತುಂಬ ಇದ್ದುವು: ಹಳೆಯ ಮೆಟ್ಟಿನ ಜೋಡು ತೂಗಾಡುತ್ತಿತ್ತು! ಮೊಳೆ ಹೊಡೆಯಲ್ಪಟ್ಟ ತೆಂಗಿನಕಾಯಿಯೊಂದು ತಟ್ಟಿಗೆ ಕಟ್ಟಿತ್ತು! ಬಣ್ಣಬಣ್ಣದ ಬೊಟ್ಟುಗಳಿಂದಲಂಕೃತವಾದ ಕುಡಿಕೆಯೊಂದು ದಳಿಗಂಬಕ್ಕೆ ಟೊಪ್ಪಿಯಾಗಿತ್ತು. ಹಟ್ಟಿಯ ಬಾಗಿಲಲ್ಲಿ ದ್ವಾರಪಾಲಕರಂತೆ ಗುತ್ತಿ ಹಿಡಿಸೂಡಿಗಳೆರಡು ತಟ್ಟಿಗೆ ತುರುಕಿಸಲ್ಪಟ್ಟು ಹೊರಗೆ ತಲೆ ಹಾಕಿದ್ದುವು! ಆ ತಟ್ಟಿಗಳಾದರೋ ಯಾವ ಕೆಲಸಕ್ಕೂ ಆಗದವುಗಳೆಂದಾದ ಮೇಲೆ ಹಟ್ಟಿ ಸೇರಿ ಉಣ್ಣಿಯ ಮರಿಮೊಟ್ಟೆಗಳಿಗೆ ತೊಟ್ಟಿಲುಗಳಾಗಿದ್ದುವು. ಹಗಲಲ್ಲಿಯೂ ಕತ್ತಲೆಯಲ್ಲಿ. ಆ ಕತ್ತಲಲ್ಲಿ ಸೊಳ್ಳೆಗಳ ಸಂಗೀತ. ಜನಾರ್ದನರಾಯರು ಇವನ್ನೆಲ್ಲ ಪರಿಶೀಲಿಸುತ್ತಿದ್ದಾಗ ಶೆಟ್ಟಿಯು ತಾನು ಆ ತನಕ ಮಾಡಿಸಿದ ಮುಟ್ಟೇಸಗಳ ನಿಷ್ಪ್ರಯೋಜಕತೆಯನ್ನು ಹೇಳಿ "ತಾವೇನಾದರೂ ಒಂದು ಮುಟ್ಟೇಸ ಮಾಡಿದರೆ ಆದೀತು" ಎಂದು ಬೇಡಿಕೊಂಡ.

"ನೀನೇ ಮಾಡಿಕೋ; ನಾನು ಹೇಳುತ್ತೇನೆ." ಎಂದರು ಅವರು. "ಮೊದಲಾಗಿ ಈ ನಡೆಗಳನ್ನು ದಿನಾಲೂ ದೂರ ಕೊಂಡುಹೋಗಿ ಮೈಯುಜ್ಜಿ ಕೆರೆದು ಹೊಸ ಮಣ್ಣು ಚೆಲ್ಲಿ. ಹಳೆ ಮಣ್ಣನ್ನು ಸುಡು ಬೂದಿ ಇಡು ಇತ್ತ ಈ ಹಟ್ಟಿಯ ಗೋಡೆಗಳ ಮತ್ತು ಕಲ್ಲುಕಂಬಗಳ ಒಳ ಹೊರಮೈಗಳನ್ನು ಚೆನ್ನಾಗಿ ಕೆತ್ತಿ ಉರುಕುಗಳಿಗೆಲ್ಲ ಬಿಸಿಬಿಸಿ ಸುಣ್ಣದ ನೀರನ್ನು ಸುರಿದು ಮಣ್ಣು ತುಂಬಿಸಿ ಮುಟ್ಟಿ ನಯಗಾರೆ ಹಾಕು ಈ ದಳಿಗೂಟಗಳನ್ನೆಲ್ಲ ಕಿತ್ತು ಬೆಂಕಿಗೆ ಹಾಕು. ಬಿರುಕಿಲ್ಲದ ನಯಗೊಳಿಸಿದ ಹೊಸ ದಳಿಗಂಬಗಳನ್ನು ನೆಡು. ಮೇವು ಹಾಕುವ ಎದುರಿನ ಗೋದಲಿಯು ಮರಿಗೆಗಳು ಹುಗಿಯಲ್ಪಟ್ಟ ಸಿಮೆಂಟಿನ ಜಗುಲಿಯಂತಿರಲಿ. ನಡೆಗಳು ನಿಲ್ಲುವ ಜಾಗಕ್ಕೆ ಇಟ್ಟಿಗೆ, ಸುಣ್ಣದ ಕಲ್ಲು ಅಥವಾ ಹಾಸುಗಲ್ಲುಗಳನ್ನು ಸಿಮೆಂಟಿನಿಂದ ಗಚ್ಚುಗೊಳಿಸಿ ಮುಚ್ಚಬೇಕು. ಅದರ ಮೇಲೆ ಗೊಬ್ಬರಕ್ಕೆ ಸೊಪ್ಪುಸದೆಗಳನ್ನು ಹಾಕಬಹುದು. ವಾರಕ್ಕೊಂದಾವರ್ತಿ ಗೊಬ್ಬರ ತೆಗೆದು ಗೋಡೆ ನೆಲದಳಿಗಂಬಗಳನ್ನೆಲ್ಲ ಗುಡಿಸಿ ತೊಳೆಯತಕ್ಕದು. ಈ ಹಟ್ಟಿಯನ್ನು ದುರುಸ್ತಿ ಮಾಡುವಾಗ ಕೆರೆಯುವ ಮಣ್ಣುಗಳನ್ನೆಲ್ಲ ಸುಡುಬೂದಿ ಇಟ್ಟುಬಿಡು. ಈ ತಟ್ಟಿಗಳನ್ನು ಅದಕ್ಕೇ ಹಾಕಿಬಿಡು! ಈ ಹಟ್ಟಿ ಸಿದ್ಧವಾದ ಮೇಲೆ ನಡೆಗಳ ಕುತ್ತಿಗೆಯ ಮಂತ್ರದ ಹಗ್ಗಗಳನ್ನೆಲ್ಲ ಕಡಿದುಹಾಕಿ ಹೊಸ ಹಗ್ಗ ಹಾಕಿ ಇಲ್ಲಿ ಕಟ್ಟು. ಹಾಗೆ ಮಾಡಿದರೆ ಈ ನಡೆಗಳ ರಕ್ತ ಹೀರುವ ಉಣ್ಣಿಗಳೂ ಇಲ್ಲ. ನಿನ್ನ ರಕ್ತ ಹೀರುವ ಸಾಮುಗಾದಿ ಉಣ್ಣಿಗಳಿಗೂ ಎಡೆಯಿಲ್ಲ. ಆಚೆಯ

ಪುಟ ೭ಕ್ಕೆ

ಧನಪ್ರಿಯವಾದವೂ — ಜನಪ್ರಿಯವಾದವೂ

ಪ್ರೇಮವಿದ್ಯಾಪೀಠದ ಪತ್ರಿಕೋದ್ಯಮ ಶಾಖೆಯಲ್ಲಿ **ಪಂಡಿತ ತಾರಾನಾಥರು** ಕೊಟ್ಟ ಹಲವು ವ್ಯಾಖ್ಯಾನಗಳ ಸಾರಾಂಶವಿದು.

ಕಳೆದ ಸಂಚಿಕೆಯಿಂದ ಮುಂದರಿಸಿದ್ದು.

ಸಾಮಾನ್ಯವಾಗಿ ಅವರ ತತ್ವಗಳನ್ನು ಈ ರೀತಿಯಾಗಿ ಹೇಳಬಹುದು. ೧ ವಿದ್ಯಾಭ್ಯಾಸ ಸಮಯದಲ್ಲಿ ಯಾವ ಭೇದವೂ ಇಲ್ಲದೆ ಎಲ್ಲರಿಗೂ ಸರಿಸಮಾನವಾದ ಅಧಿಕಾರವನ್ನೂ ಅನುಕೂಲವನ್ನೂ ಅವಕಾಶವನ್ನೂ ವಿದ್ಯಾ-ಶಿಕ್ಷಣವಿಕಾಸಗಳಾಗಿ ಕೊಡುವದು ನಂತರದಲ್ಲಿ ವ್ಯಕ್ತಿಯ ಯೋಗ್ಯತಾನುಸಾರವಾಗಿ ಫಲವನ್ನು ಕೊಡುವದು ಉದ್ಯೋಗ ಪದವಿ ಅಂತಸ್ತುಗಳು ಯೋಗ್ಯತೆಗೆ ತಕ್ಕಂತೆ ಶಿಕ್ಷಣಕಾಲದಲ್ಲಿ ಸಮಾನ ಅನುಕೂಲತೆ ಮುಖ್ಯವಾದರೆ ಇಲ್ಲಿ ಉದ್ಯೋಗಗಳಿಗೆ ಯೋಗ್ಯತೆ ಒಂದೇ ಪ್ರಧಾನ.

ಇದಕ್ಕೆ ಬೇಕಾಗುವ ಹಣವನ್ನು ಸಂಪಾದಿಸುವ ರೀತಿ.

೧. ಈ ಗಾಗಲೇ ಅಲ್ಲಲ್ಲಿ ಇರುವಧನವನ್ನು ಏಕತ್ರ ಸೇರಿಸಿ ಅದನ್ನು ರಾಷ್ಟ್ರೀಯ ಸಂಪತ್ತನ್ನಾಗಿ ಮಾಡುವದು. ೨. ದೇಶದ ಉತ್ಪನ್ನವನ್ನು ಬೆಳೆಸುವದು ೩. ಪ್ರಮುಖ ಉದ್ಯಮ (ಕಾರ್ಖಾನೆಮೊದಲಾದವು)ಗಳನ್ನು ಸರಕಾರವೇ ನಡೆಸುವದು.

ಇವರಲ್ಲಿ ಕರ-ತೆರಿಗೆಗಳ ಮೂಲಕವಾಗಿ ಧನಾಢ್ಯರಿಂದ ಹಣವು ಸರಕಾರಕ್ಕೆ ಬರುವಂತೆ ಮಾಡಿ ಮೊದಲನೆಯದನ್ನು ಸಾಧಿಸಬಹುದು. ಸರಕಾರವು ದೊಡ್ಡ ಪ್ರಮಾಣದಲ್ಲಿ ಉದ್ಯಮಗಳನ್ನು ಬೆಳೆಸುವದರಿಂದ ಎರಡನೆಯದನ್ನು ಸಾಧಿಸಬಹುದು. ಮೂರನೆಯದನ್ನು ಧನಾಢ್ಯರ ಕಂಪನಿಗಳನ್ನು ಬಲಾತ್ಕಾರವಾಗಿ ಕಸಿದು ಕೊಳ್ಳುವದರಿಂದ ಅಥವಾ ಅವರ ಉತ್ಪನ್ನಕ್ಕೊಂದು ಮೇರೆಯನ್ನು ಹಾಕುವದರಿಂದ ಅಥವಾ ಸರಕಾರವು ಅವರಿಗಿಂತಲೂ ಉತ್ತಮವಾದ ಸರಕುಗಳನ್ನು ತಯಾರಿಸಿ ಅವರೊಡನೆ ಸ್ಪರ್ಧೆಯನ್ನು ಮಾಡುವದರಿಂದ ಸಾಧಿಸಬಹುದು.

ಖಾಸಗಿ ಆಸ್ತಿಯ ಆವಶ್ಯಕತೆ

ಇವರ ಸಾಧನೆಯಲ್ಲಿ ವ್ಯಕ್ತಿಯ ಮನೋಧರ್ಮ ವಿಚಾರವನ್ನೂ ನೋಡಬೇಕಾಗುತ್ತದೆ. ಅವರ ಮನೋಭಿಲಾಷೆಗಳ ಪೂರಯಿಕೆಯೂ ಸಾಕಷ್ಟು ಆಗಿ, ಅವರ ಉತ್ಪನ್ನವು ರಾಷ್ಟ್ರದ ಹಿತವೃದ್ಧಿ-ಧ್ಯೇಯಗಳಿಗೆ ಪೂರಕವಾಗುವಂತೆ ನೋಡಿಕೊಳ್ಳಬೇಕು. ಅಂದರೆ ಒಂದು ಯೋಗ್ಯ ಮಿತಿಗೊಳಪಟ್ಟು ಅವರಿಗೆ ಆಸ್ತಿಯನ್ನು ಮಾಡಿಕೊಳ್ಳಲು ಅವಕಾಶವನ್ನೀಯಬೇಕು. ಅಲ್ಲಿ ಸಹ ಅದು ಜನಪ್ರಿಯ ಸರಕಾರಕ್ಕೆ ಲಾಭದಾಯಕವಾಗಿರುವಂತಿರಬೇಕು. ಸರಕಾರವು ಅನ್ನ, ವಸ್ತ್ರ, ವಿದ್ಯೆಯನ್ನು ಕೊಟ್ಟರೂ ವ್ಯಕ್ತಿಗೆ ಖಾಸಗಿ ಆಸ್ತಿಯ ಆವಶ್ಯಕತೆಯಿದೆ. ಏಕೆಂದರೆ ಪ್ರಕೃತಿ ಸ್ವಭಾವಕ್ಕನುಸರಿಸಿ ಮನುಷ್ಯನ ಶರೀರ-ಮನಸ್ಸು-ಯೋಗ್ಯತೆಗಳಲ್ಲಿ ಭೇದವಿರುತ್ತದೆ. ಆ ಕಾರಣ ವಿದ್ಯಾದಾನವು ಅವರವರ ಯೋಗ್ಯತಾನುಸಾರವಾಗಿ ಬೇರೆ ಬೇರೆ ವಿಧದಲ್ಲಿ ಸಿಗಬೇಕು. ಸಾಮಾನ್ಯರ ವ್ಯವಸ್ಥೆಯನ್ನು ಸರಕಾರವು ಮಾಡಿದರೂ, ವಿಶೇಷ ಬುದ್ಧಿಯುಳ್ಳವರನ್ನು ತಂದೆ ತಾಯಿಗಳಾಗಲೀ ತಜ್ಞರಾಗಲೀ ನೋಡಿಕೊಳ್ಳ ಬೇಕಾಗುತ್ತದೆ. ಆದರೆ ತಂದೆ-ತಾಯಿಗಳು ಎಲ್ಲ ಕಡೆಗಳಲ್ಲಿಯೂ ತಜ್ಞರಾಗಿರುವದಿಲ್ಲ. ತಜ್ಞರಿಗೆ ತಂದೆ-ತಾಯಿಗಳಿಗೆ ತಮ್ಮ ಮಗುವಿನ ವಿಷಯದಲ್ಲಿ ಇರುವ ಪ್ರೇಮವಿರುವದಿಲ್ಲ, ಆದ್ದರಿಂದ ಇವೆರಡೂ ಕೂಡಿ ಫಲಿಸುವಂತೆ ಮಾಡುವದೇ ಗುರಿಯಾಗಿರಬೇಕು.

ಜನಪ್ರಿಯವಾದವನ್ನು (socialism) ಸಮತಾವಾದವೆಂದು (communism) ಅನೇಕರು ತಿಳಿದಿರುತ್ತಾರೆ. ಆದರೆ ಜನಪ್ರಿಯವಾದಕ್ಕೂ ಸಮತಾವಾದಕ್ಕೂ ಬಹಳ ಭೇದವಿದೆ. ಸಮತಾವಾದದಂತೆ ಸರಕಾರಕ್ಕೆ ಮಾತ್ರ ಆಸ್ತಿಯ ಹಕ್ಕು ಹಣವೆಲ್ಲವೂ ಎಲ್ಲರಲ್ಲಿಯೂ ಸರಿಸಮಾನವಾಗಿ ಹಂಚಿಹೋಗಬೇಕು ಎಂಬದೇ ಧ್ಯೇಯ. ತತ್ವತಃ ಅಲ್ಲಿ ಯಾವ ವ್ಯಕ್ತಿಯೂ ಆಸ್ತಿಯನ್ನು ಪಡೆಯಲಾರನು. ಆದರೆ ಒಬ್ಬನಿಗಿಂತ ಇನ್ನೊಬ್ಬನ ಬುದ್ಧಿಶಕ್ತಿ ಕಾರ್ಯಶಕ್ತಿಯು ಹೆಚ್ಚಿರುವವರೆಗೆ ಸಮಾನತ್ವವು ಉಂಟಾಗುವದು ಹೇಗೆ? ಇಂದು ಹಣವನ್ನು ಸರಿಯಾಗಿ ಹಂಚಿದರೂ ನಾಳೆ ಪುನಃ ಅದು ಯೋಗ್ಯತೆಯಿದ್ದವನಲ್ಲಿ ಹೆಚ್ಚಾಗಿ ಸೇರಿಯೇ ಸೇರಬೇಕಷ್ಟೆ? ಇದನ್ನರಿತೇ ಈಗ ೧೫ ವರ್ಷಗಳ ಹಿಂದೆ ರಷ್ಯದಲ್ಲಿ ಒಂದು ಯೋಗ್ಯ ಮಿತಿಗೊಳಪಟ್ಟು ಖಾಸಗಿ ಆಸ್ತಿಯನ್ನು ಮಾಡಿಕೊಳ್ಳಬಹುದೆಂಬ ಕಾನೂನನ್ನು ಪಾಸುಮಾಡಿದರು.

ಖಾಸಗಿ ಆಸ್ತಿಯ ತತ್ವಸಾಧನ.

ಆದರೆ ಜನಪ್ರಿಯವಾದವು ಖಾಸಗೀ ಆಸ್ತಿಗೆ ಅವಕಾಶವನ್ನು ಕೊಟ್ಟರೂ ಅದು ಮಿತಿಯಿಲ್ಲದೆ ಬೆಳೆದು ಇತರರಿಗೆ ಕೇಡುಂಟುಮಾಡಲು ಬಿಡುವದಿಲ್ಲ. ಯುಕ್ತವಾದ ನಾನಾ ಕರತೆರಿಗೆಗಳ ಮೂಲಕ ವ್ಯಕ್ತಿಯು ಸಂಚಯಮಾಡಿದ ಹಣದಲ್ಲಿ ಬಹುಭಾಗವು ಸರಕಾರಕ್ಕೆ ಬರುವಂತೆಮಾಡಿ, ಅದರಿಂದ ಜನರಿಗೆ ಹಿತವನ್ನುಂಟು ಮಾಡುವದು. ಆದರೆ ಇದರಿಂದ ಅವನ ದುಡಿತದ ಹಕ್ಕಿಗೇನೂ ಬಾಧೆಬರುವದಿಲ್ಲ. ಇನ್ನು ಅವನ ಆಸ್ತಿ ಅವನ ಮಕ್ಕಳಿಗೆ ಹೋಗಲೇ ಕೂಡದು ಎಂದೂ ಹೇಳಿದರೂ ನಡೆಯದು ಏಕೆಂದರೆ ಆಗ ಅವನಿಗೆ ದುಡಿತದಲ್ಲಿ ಪ್ರೋತ್ಸಾಹನ (Impetus) ವೇ ಇರಲಿಕ್ಕಿಲ್ಲ. ಕೆಲಭಾಗವಾದರೂ ಮಕ್ಕಳಿಗೆ, ತನ್ನವರಿಗೆ ಹೋಗುತ್ತದೆ ಎಂದಿದ್ದರೆ ಅವನು ದುಡಿಯುವನು. ತನ್ನ ಉತ್ಪನ್ನದಲ್ಲಿ ಬಹುಭಾಗ ಸರಕಾರಕ್ಕೆ ಹೋಗುತ್ತಿದ್ದರೂ ಅವನದನ್ನು ಕರರೂಪವಾಗಿ ಕೊಡುತ್ತಿರುವದರಿಂದ ಅವನದನ್ನು ಅಷ್ಟಾಗಿ ಲಕ್ಷಿಸುವದಿಲ್ಲ. ಇಂಗ್ಲಂಡದಲ್ಲೂ ಕೂಡ ಈ ರೀತಿಯಾಗಿ ವ್ಯಕ್ತಿ ಧನಸಂಚಯಕ್ಕೆ ಸ್ವಲ್ಪ ಮಟ್ಟಿಗಾದರೂ ತಡೆಹಾಕುವದಕ್ಕಾಗಿ ಕರದ ಬಗೆ ಬಗೆಯ ವಿಧಾನಗಳಿವೆ.

ಸಾರಾಂಶ.

ಜನಪ್ರಿಯವಾದದ ಮೂಲತತ್ವವಿಷ್ಟೇ. ಅದು ಹಣವು ಒಬ್ಬನಲ್ಲಿಯೇ ಸೇರಿ ನಿರುಪಯೋಗಿಯಾಗಲು ಅಥವಾ ಇತರರಿಗೆ ಹಾನಿಕರವಾಗಲು ಬಿಡುವದಿಲ್ಲ. ಹಲವರ ದುಡಿತವು ಒಬ್ಬನ ವಿಲಾಸಕ್ಕಾಗಿ ಪರಿಣಮಿಸಲು ಕೊಡುವದಿಲ್ಲ. ಶ್ರೀಮಂತರು-ದರಿದ್ರರು ಎಂಬ ಭೇದಭಾವದ ಮೂಲಕವಾಗಿ ಮಾನವನ ನೈಸರ್ಗಿಕ ವಿದ್ಯಾಶಿಕ್ಷಣ ಹಕ್ಕು ಭಾಧ್ಯತೆಗಳಿಗೆ ಕುಂದು ಬರಗೊಡುವದಿಲ್ಲ.

ಇದಕ್ಕಾಗಿ ಮುಖ್ಯೋಪಾಯಗಳು.

ಇಲ್ಲಿ ಪ್ರಮುಖ ಉದ್ಯಮಗಳೆಲ್ಲವೂ ಕಬ್ಬಿಣ ಕಲ್ಲಿದ್ದಲಿಯ ಕಾರ್ಖಾನೆಗಳು, ಮಿಲ್ಲುಗಳು ಇತ್ಯಾದಿ-ಸರಕಾರದ ಸ್ವಾಧೀನವಾಗಿರುತ್ತವೆ. ಇದರಿಂದ ಕಂಪನಿಗಳ ಲಾಭಾಂಶಗಳೆಲ್ಲವೂ (Dividends) ಹಲಕೆಲವು ಬಂಡವಾಳಗಾರರಲ್ಲಿ ಮಾತ್ರ ಹಂಚಲ್ಪಡದೆ ಸರಕಾರಕ್ಕೆ ಬಂದು ಅದರಿಂದ ಜನಹಿತದ ಕಾರ್ಯಗಳು ಕೈಕೊಳ್ಳಲ್ಪಡುವವು. ಸ್ವತಂತ್ರವಾಗಿ ಸುಮಾರಿನ ಅನೇಕ ಉದ್ಯಮಗಳನ್ನು ನಡೆಸಲು ಜನರಿಗೆ ಅವಕಾಶವಿದೆ. ಆದರೆ ಸರಕಾರದ ಅದಕ್ಕೂ ಕರದ ಕಡಿವಾಣವನ್ನಿಟ್ಟೇ ಇಡುತ್ತದೆ. ಇದರಿಂದ ವ್ಯಕ್ತಿಯ ಲೋಭಾಕಾಂಕ್ಷೆಗೂ ತೊಂದರೆಯಿಲ್ಲದೆ ಜನಪ್ರಿಯವಾದದ ಆಚಾರಣೆಗೂ ಅಡ್ಡಿಯಿಲ್ಲದಂತೆ ಎಲ್ಲವೂ ನಾಗುತ್ತದೆ.

ಧನತ್ವದ ಕೊನೆಯುಸಿರು

ಈಗ ಜನಪ್ರಿಯವಾದಕ್ಕೆ ಹೆಚ್ಚು ಪ್ರೋತ್ಸಾಹನ ದೊರೆಯುತ್ತಿರುವದರಿಂದ ಪ್ರತಿಕ್ರಿಯೆಯಾಗಿ ಫ್ಯಾಸಿಝಂ (Fascism) ತಲೆಯೆತ್ತಿದೆ. ಮೊದಲು ಧನತ್ವವು ತಲೆದೋರಲು ಹಲವು ಪ್ರಬಲ ಕಾರಣಗಳುಂಟಾದವು. ದೃಷ್ಟಾಂತಕ್ಕೆ ಇಂಡಿಯದಲ್ಲಿ ಮೊದಲು ಹಣವನ್ನು ದೋಚಿಕೊಂಡು ಹೋಗುವಆಸೆಯಿಂದ ಹೂಣರು-ಸಿಥಿಯನ್ನರಿಂದ ಮಹಮೂದ್ ಗಜ್ನಿಯವರೆಗೆ ಅನೇಕರು ಹಿಂದುಸ್ಥಾನದಲ್ಲಿ ದಾಳಿಯನ್ನಿಟ್ಟರು. ದಂಗೆ ದೌಡುಗಳಿಂದ ತತ್ಕಾಲಕ್ಕೆ ತನಗೆ ಬೇಕಾದನ್ನು ಸಂಪಾದಿಸುವದು ಆದ್ಯಮಾನವನ ಗಂವಾರ ಪದ್ಧತಿಯಿದು. ಅಲ್ಲಿಂದ ರಾಜ್ಯಗಳನ್ನು ಗೆದ್ದು ಸಾರ್ವಭೌಮರಾಗಿ, **ಪಡೆದ ಸಂಪತ್ತನ್ನು ಶಾಶ್ವತವಾಗಿಟ್ಟುಕೊಳ್ಳಲು ಯುದ್ಧಗಳನ್ನಾರಂಭಿಸಿದ್ದು** ಅಲೆಗ್ಝಾಂಡರ, ಮಹಮ್ಮದ ಘೋರಿಗಳ ಉದಾಹರಣೆಯಿಂದ ಕಾಣ ಬರುತ್ತದೆ. ಮುಂದೆ ಈಸ್ಟ್ ಇಂಡಿಯಾ ಕಂಪನಿಯವರಂತೆ **ಉದ್ಯಮ-ವ್ಯಾಪಾರಗಳನ್ನು ಪ್ರಾರಂಭಿಸಿ ಬರಬರುತ್ತಾ ರಾಜ್ಯಾಧಿಕಾರ ಸಂಪಾದಿಸುವುದು.** ಮತ್ತು ಈಗ ನಮಗೆ ಇಟಲಿಯ ಮುಸೋಲಿನಿಯ ದೃಷ್ಟಾಂತ! ಮೇಲಿನ ಎಲ್ಲ ಕಾರಣಗಳನ್ನೂ ವಶೀಕರಿಸಿಕೊಂಡು ಅದರಂತೆ ಆಚರಿಸಿದ್ದಾನೆ ಇವನು. ಗಂವಾರರಂತೆ ದೋಚುವುದು, ರಾಜರಂತೆ ಯುದ್ಧ ಮಾಡುವುದು, ವ್ಯಾಪಾರಮಾಡಿ ಕ್ರಮೇಣ ರಾಜ್ಯಗಳನ್ನೇ ಉಪಾಯದಿಂದ ನುಂಗಿಬಿಡುವುದು ಇವೆಲ್ಲ ಹಲವು ಕಾಲಗಳ ಹಲವು ರೀತಿಗಳನ್ನೂ ಒಂದೇ ಕಾಲಕ್ಕೆ ರೀತಿಯನ್ನಾಗಿಯೂ ಇಟ್ಟುಕೊಂಡಿರುವುದೇ "ಫೆಸಿಜಮ್" ಎನ್ನಬಹುದು. ಸಾರ್ವಭೌಮತ್ವದ ಅಧಿಕಾರದ ಆಕಾಂಕ್ಷೆ 'ಡಿಕ್ಟೇಟರ್ ಶಿಪ್'ನಲ್ಲಿ ಪೂರೈಸುವದು. ದೇಶವನ್ನು ಗೆಲ್ಲುವದರಿಂದ ವಸತಿಗೆ ಅನುಕೂಲ, ನಂತರದಲ್ಲಿ ವ್ಯಾಪಾರೋದ್ಯಮಗಳನ್ನು ಪ್ರಾರಂಭಿಸುವದರಿಂದ ಆರ್ಥಿಕ ವ್ಯವಹಾರವೂ ಇವರ ಸ್ವಾಧೀನವೇ ಆಗುವುದು. ಮುಸೋಲಿನಿಯು ಮೊದಲು ಡಿಕ್ಟೇಟರನಾಗಿ ಆ ಮೇಲೆ ಅಬಿಸೀನಿಯವನ್ನು ಗೆದ್ದನು. ಈಗಾಗಲೇ ಅಬಿಸೀನಿಯದಲ್ಲಿ ಇಟಲಿಯವರ ೧೩ ಜ್ಯಾಂಟ್ ಸ್ಟಾಕ್ ಕಂಪನಿಗಳು ಸ್ಥಾಪಿತವಾಗಿವೆ. ಅವರದೇ ಸರಕಾರವಾಗಿರುವದರಿಂದ ಬೇಕಾದ ಅನುಕೂಲತೆಗಳು ಅವರಿಗೆ ಸಿಕ್ಕಿ, ಅಬಿಸೀನಿಯದವರು ಹಿಂದುಸ್ಥಾನದವರು ಆಂಗ್ಲರ ಬಲೆಗೆ ಬಿದ್ದಂತೆ ಇಟಲಿಯವರ ಬಲೆಗೆ ಬೀಳಲು ಹೆಚ್ಚು ಅವಕಾಶ ಬೇಕಿಲ್ಲವಿನ್ನು.

ಹೊಸ ನೀತಿಯ ಪ್ರಭಾವ

ಇಂಥ ಧನಾಢ್ಯರ ಪ್ರಾಬಲ್ಯಕ್ಕೆ **ಕಚ್ಚಾಮಾಲುಬೇಕು. ಕಚ್ಚಾಮಾಲು ಬೆಳೆಯುವ ಜಾಗಬೇಕು. ಆ ಜಾಗಗಳಿಗೆ ಹೋಗುವ ರಸ್ತೆಗಳು ಬೇಕು.** ಕಚ್ಚಾಮಾಲು ಬೆಳೆಯುವ ಎಲ್ಲ ದೇಶಗಳಲ್ಲಿಯೂ ೧೯ನೆಯ ಶತಮಾನದಿಂದ ಈ ಮೂರು ವಿಷಯಗಳಿಗಾಗಿ ವಿನಿಮಯ-ಲೂಟಿ-ಯುದ್ಧಗಳು ನಡೆದು ಬಂದದ್ದು ಇತಿಹಾಸವೇ ಆಗಿದೆ. ೧೯ನೆಯ ಶತಮಾನದಲ್ಲಿ ರಾಷ್ಟ್ರತ್ವಕ್ಕೆಯುಂಟಾಗಿ ರಾಜ್ಯ ಸಂಪಾದನೆಗಾಗಿ ಯುಕ್ತಿ ಕುಯುಕ್ತಿಗಳು ನಡೆದವು. ಬೋಅರ್ ಯುದ್ಧವೇ ಮೊದಲಾದ ಒಂದೆರಡು ಯುದ್ಧಗಳನ್ನು ಬಿಟ್ಟರೆ ಈ ಸಮಯದಲ್ಲಿ ದೊಡ್ಡಯುದ್ಧಗಳಾಗಲಿಲ್ಲ. ಈ ೨೦ನೆಯ ಶತಮಾನದಲ್ಲಿ ಯುದ್ಧಪ್ರಿಯತೆಯು ಬಲಿತಿದೆ. ಅದರಂತೆ ಯುದ್ಧಗಳೂ ನಡೆದಿವೆ.

ಈ ಧನತ್ವದಿಂದ ಧನಾಢ್ಯರನ್ನುಳಿದು ಇತರರ ಜೀವನಗಳು ಕಷ್ಟಮಯವಾಗಿವೆ. ಆಗ ೧೮೪೮ರಲ್ಲಿ ಕಾರ್ಲಮಾರ್ಕ್ಸ್ ಅವರು ಸಮತಾವಾದದ (Communism) ಬೀಜವನ್ನು ಬಿತ್ತಿದರು ಧನಾಢ್ಯರ ಬಲವನ್ನು ತಗ್ಗಿಸಲು ಮುಷ್ಕರ (Strike)ಹೂಡುವದು ಕೂಲಿಗಾರರ ಪ್ರಮುಖ ಆಯುಧವಾಯಿತು. ಪ್ರಜಾ ಪ್ರಭುತ್ವವಿದ್ದೆಡೆಯಲ್ಲೆಲ್ಲ ಸಂಘಗಳಿಗೆ ಸಂಘಗಾರರಿಗೆ ಅನುಕೂಲವಾದ ಕಾಯದೆಗಳುಂಟಾದವು. ರಷ್ಯದಲ್ಲಂತೂ ಬರಬರುತ್ತಾ ಕೂಲಿಗಾರರ ಸರಕಾರವೇ ಏರ್ಪಟ್ಟಿತು. ಮೊದ-ಮೊದಲು ಧನಾಢ್ಯರಿಗೆ ಧನದ ಬಲದಿಂದ ತಮ್ಮ ಅಧಿಕಾರ ರಕ್ಷಣೆ ಮಾಡಿಕೊಳ್ಳಲು ಅವಕಾಶವಿತ್ತು. ವಿದ್ಯಾಪ್ರಸಾರವು ಹೆಚ್ಚಾದಂತೆ, ಸಮಾಜಕ್ಕೆ ತನ್ನ ಯೋಗ್ಯತಾವಶ್ಯಕತೆಗಳ ಎಚ್ಚರವೂ ಆದಂತೆ ಕೂಲಿಗಾರರಿಗೆ ತಮ್ಮ ಸ್ಥಿತಿಗಳು ಅಧಿಕಾರ ಬಲಗಳುಗೊತ್ತಾದಂತೆ ತಮ್ಮ ಸ್ಥಿತಿಯನ್ನು ಸುಧಾರಿಸಿಕೊಳ್ಳುವ ನೀತಿಗೊತ್ತಾಗುತ್ತಾ ಬಂದಂತೆ ಧನಾಢ್ಯರಿಗೆ ತೊಂದರೆಯುಂಟಾಯಿತು. ಕೂಲಿಗಾರರ ಅಧಿಕಾರ ಬೆಳೆದಂತೆ ಧನಾಢ್ಯರ ಅಧಿಕಾರ ಕುಗ್ಗುತ್ತಬಂತು ಆದ್ದರಿಂದ ಇವರು ಜಾಗ್ರತರಾಗಿ ತಮ್ಮ ಅಧಿಕಾರ ರಕ್ಷಣೆಗಾಗಿ ಪ್ರಯತ್ನಿಸಹತ್ತಿದ್ದಾರೆ. ಈ ಕಾರಣವೇ 'ಫ್ಯಾಸಿಝಂ' ನಾಜಿಜಂ, ತಲೆಯೆತ್ತಿ ಬೆಳೆಯಲು ಅವಕಾಶವನ್ನಿತ್ತಿದೆ. [ಪು. 7

ಮದ್ರಾಸ್ ಕೌನ್ಸಿಲ್ ಓಟರರುಗಳಲ್ಲಿ ವಿನಂತಿ

ಈ ಮೊದಲು ನಾನು ನನ್ನ ಕೌನ್ಸಿಲು ಉಮೇದುವಾರಿಕೆಯ ಕುರಿತು ಪತ್ರಿಕೆಯಲ್ಲಿ ಜ್ಯಾಹೀರುಮಾಡಿ ಎಲ್ಲಾ ಓಟರರುಗಳಿಗೂ ಕಾಗದ ಮೂಲಕ ಪ್ರೋತ್ಸಾಹವನ್ನು ಅಪೇಕ್ಷಿಸಿದ್ದೆನಷ್ಟೆ! ನಾನು ಸ್ವತಃ ಕೂಡಿದಷ್ಟು ಓಟರರುಗಳನ್ನು ನೋಡಬೇಕೆಂದಿದ್ದೇನೆ. ಶ್ರೀ ಸ್ಥಳವನ್ನು ಬಿಟ್ಟು ಹೆಚ್ಚಿನ ದಿವಸ ಜಿಲ್ಲೆಯಲ್ಲಿ ತಿರುಗಾಡಲು ಅನುಕೂಲವಾಗದ ಕಾರಣವೂ ನಾನು ಹೋದ ಸಮಯ ಕೆಲವು ಓಟರರುಗಳು ತಮ್ಮ ಕಾರ್ಯಕ್ಕೋಸ್ಕರ ಬೇರೆ ಕಡೆಗೆ ಹೋಗಿದ್ದುದರಿಂದಲೂ ಅವರನ್ನು ನೋಡಲು ಅವಕಾಶವಾಗಲಿಲ್ಲ. ಕಾಲ ಸಂಕೋಚದಿಂದ ಅಥವಾ ಶರೀರದ ಅಸೌಖ್ಯತೆಯಿಂದ ಹೆಚ್ಚು ದೂರ ನಡೆದು ಹೋಗಿ ಕೆಲವು ಓಟರರುಗಳನ್ನು ನೋಡಲು ಅನಾನುಕೂಲವಾದರೆ ಅವರು ಯಾವ ತರಹದ ಬೇಧ ಅಥವಾ ವಿರೋಧಾಭಿಪ್ರಾಯವನ್ನು ಹೊಂದಬಾರದಾಗಿ ವಿನಂತಿ.

ಇಷ್ಟರತನಕ ಓಟರರುಗಳೂ ಮತ್ತು ಇತರ ಸ್ನೇಹಿತರೂ ತೋರಿಸಿರುವ ಗೌರವ ಸಹಾನುಭೂತಿ ಮತ್ತು ಪ್ರೋತ್ಸಾಹಕ್ಕೆ ಕೂಡಾ ತುಂಬಾ ಆಭಾರಿಯಾಗಿರುವೆನು. ಇಂಥ ಪರಸ್ಪರ ಪ್ರೇಮವಾತ್ಸಲ್ಯವು ಅಚ್ಚಳಿಯದೆ ವೃದ್ಧಿಯಾಗಲೆಂದು ಶ್ರೀಸ್ವಾಮಿಯಲ್ಲಿ ಪ್ರಾರ್ಥನೆ.

DHARMASTALA
11—1—1937

D. Manjaya Hegde.

ಮಕರ ಸಂಕ್ರಮಣದ ವಿಶೇಷ ಒಗಟು

ಪ್ರಥಮ ಬಹುಮಾನ
ಅರ್ಧ ವರುಷದ ನವಯುಗ,

ದ್ವಿತೀಯ ಬಹುಮಾನ
ಒಂದು ಉತ್ತಮ ಪುಸ್ತಕ

X	1	2	3	4		X
5	X	6			X	7
8	9	X	X	X	10	
11	X	X	X	X	12	
	X	13	14	15	X	
X	16					X

ಎಡದಿಂದ ಬಲಕ್ಕೆ

1 ಹಿಂದೀಯರ ಪ್ರಾಚೀನ ಪದ್ಧತಿಗಳಲ್ಲೊಂದು
6 ಹಿಂದು ಅರಸರಲ್ಲೊಬ್ಬ
8 ಶ್ರೇಷ್ಠ
10 ಮಾಯಾ
11 ಸಂವತ್ಸರಗಳಲ್ಲೊಂದು
12 ಅಡವಿ
13 ಗೃಹ
16 ಹಣೆ ಬರೆಹ.

ಮೇಲಿಂದ ಕೆಳಕ್ಕೆ

2 ಕುದುರೆ
3 ಪವಿತ್ರ ಸ್ಥಳಗಳಲ್ಲೊಂದು
4 ಬುದ್ಧಿ
5 ವಾರ್ತಾ ಪತ್ರಿಕೆಗಳಲ್ಲೊಂದು
7 ನವರಸಗಳಲ್ಲೊಂದು
9 ನಿಜವಾದ
10 ಬಂಧುಗಳಲ್ಲೋರ್ವ
13 ಹುರುಪುಗೊಳಿಸುವ ಒಂದುಮಾತು
14 ಒಂದು ವೃಕ್ಷ
15 ಕುಣಿದಾಡು.

ನಿಯಮಗಳು:-

ಪ್ರತಿ ಉತ್ತರದೊಡನೆ ಒಂದಾಣೆಯ ಟಪ್ಪಾಲುಚೀಟನ್ನು ಇಡಬೇಕು. ಅದನ್ನು ಯಾವ ಕಾರಣದಿಂದಲೂ ತಿರುಗಿ ಕೊಡಲಾಗುವುದಿಲ್ಲ. ಅಥವಾ ಬೇರೊಂದು ಸ್ಪರ್ಧೆಗೆ ಜಮೆಹಿಡಿಯುವಂತೆಯೂ ಇಲ್ಲ. ೨. ಒಬ್ಬರು ಅನೇಕ ಉತ್ತರಗಳನ್ನು ಕಳುಹಿಸಬಹುದು. ಮೊದಲನೆಯದನ್ನು ಮೇಲಿನ ಚಕ್ರಬಂಧದಲ್ಲಿಯೂ ಮಿಕ್ಕವುಗಳನ್ನು ಬೇರೆ ಕಾಗದದಲ್ಲಿಯೂ ಬರೆದು ಕಳುಹಿಸಬಹುದು ಸ್ಪರ್ಧೆಯ ಎಲ್ಲಾ ವಿಷಯಗಳಲ್ಲಿಯೂ ಚಕ್ರಬಂಧ ಸ್ಪರ್ಧೆಯ ಸಂಪಾದಕರ ತೀರ್ಮಾನವೇ ಕೊನೆಯದಾಗಿರುತ್ತದೆ ೪. ಈ ಸ್ಪರ್ಧೆಗೆ ಸಂಬಂಧಪಟ್ಟ ಪತ್ರವ್ಯವಹಾರಗಳನ್ನು ಎಷ್ಟು ಮಾತ್ರವೂ ಮಾಡಲಿಕ್ಕಿಲ್ಲ; ಅದಕ್ಕಾಗಿ ಮಾತುಕಥೆಯೂ ಅನಗತ್ಯವಿದೆ. ೫. ನಿಯಮಗಳನ್ನು ಪಾಲಿಸದಿರುವ ಉತ್ತರಗಳು ಅಸ್ವೀಕೃತವಾಗುವವು. ೬. ನವಯುಗದ ಸಂಪಾದಕರ ಬಳಿ ಮೊಹರುಮಾಡಿಟ್ಟ ಉತ್ತರಕ್ಕೆ ಹೊಂದಿಕೆಯಾಗುವ ಉತ್ತರವೇ ಸಂಪೂರ್ಣ ಸಮರ್ಪಕ ಉತ್ತರ. ಒಂದಕ್ಕಿಂತ ಹೆಚ್ಚು ಸಂಪೂರ್ಣ ಉತ್ತರಗಳು ಬಂದರೆ ಇನಾಮನ್ನು ಸೋಡ್ತಿ ಹಾಕಿ ಕೊಡಲಾಗುವುದು. ಆದರೆ ಎಲ್ಲರ ಹೆಸರುಗಳನ್ನು ಪ್ರಕಟಿಸಲಾಗುವುದು. ಉತ್ತರವನ್ನು ತಾ 31—1—37ರ ತನಕ ಸ್ವೀಕರಿಸಿ ತಾ. 4—2—17ಕ್ಕೆ ಪ್ರಕಟಿಸಲಾಗುವುದು. ಉತ್ತರವನ್ನು ಈ ಕೆಳಗಿನ ವಿಳಾಸಕ್ಕೆ ಕಳುಹಿಸಬೇಕು.

ಮೆನೇಜರ್: ನವಯುಗ, ಉಡುಪಿ.

—ಆಚಾರ ಕುಂಡ—

ಮೈಸೂರಿನ ಇಗರ್ಜಿ ಗಲಭೆ

ಮೈಸೂರಿನ ಸೈಂಟ್ ಫಿಲೋಮೆನರ ಚರ್ಚಿನಲ್ಲಿ ಕಳೆದ ತಾ. 10ನೇ ರಾತ್ರಿ ಶೋಚನೀಯ ಗಲಭೆ ನಡೆಯಿತು. ಆ ದಿನ ರಾತ್ರಿ 7 ಘಂಟೆಗೆ 4 ಮಂದಿ ಮುಸ್ಲಿಂ ಹುಡುಗರು ಉಪಾಯದಿಂದ ಚರ್ಚಿಗೆ ಕರತರಲ್ಪಟ್ಟು ಅಲ್ಲಿ ಒಂದು ಪ್ರತಿಮೆಯ ಇದಿರಿನಲ್ಲಿ ದೊಗ್ಗಾಲೂರುವಂತೆ ಒತ್ತಾಯ ಮಾಡಲ್ಪಟ್ಟಾಗ ಒಬ್ಬ ಹುಡುಗನು ದೊಗಾಲೂರಿದೊಡನೆ ಇನ್ನೊಬ್ಬನು ಹೊರಗೋಡಿ ಮುಸ್ಲೀಮರಿಗೆಲ್ಲಾ ಇದನ್ನು ತಿಳಿಸಿದನಂತೆ. ಹುಡುಗರು ನರಬಲಿಯಾಯಲ್ಪಡುವರೆಂದು ವಾರ್ತೆ ಹಬ್ಬಿ ಮುಸ್ಲೀಮರ ದೊಡ್ಡ ಗುಂಪು ಚರ್ಚಿನ ಮುಂಭಾಗದಲಿ ನೆರೆದು ಕಂಪೌಂಡಿನ ಒಳನುಗ್ಗಿ ಕಲ್ಲುಗಳನ್ನೆಸೆಯಲಾರಂಭಿಸಿತು. ಇಗರ್ಜಿಯ ಕನ್ನಡಿ ಬಾಗಿಲುಗಳೊಡೆದು ಚೂರಾದವು. ಕಂಪೌಂಡಿನಲಿ ವಾಸಮಾಡಿಕೊಂಡಿದ್ದ ಕೆಲಸಗಾರರ ಗುಡಿಸಲುಗಳಿಗೆ ಗಲಭೆಗಾರರು ಬೆಂಕಿ ಕೊಟ್ಟರು. ಇಗರ್ಜಿಯ ಗುರುಗಳೂ ಕೆಲವು ಕ್ರಿಶ್ಚಿಯನರೂ ಇಗರ್ಜಿಯೊಳಗಿದ್ದರು. ಗಲಾಟೆಗಾರರು ಒಳನುಗ್ಗಿ ಸೈಂಟ್‌ಫಿಲೋಮನರ ಪ್ರತಿಮೆಯನ್ನೊಡೆದು ಹಾಕಿದರು. ಅಷ್ಟರಲ್ಲಿ ರಿಜರ್ವ್ ಪೋಲೀಸರೂ ಸಿಟಿ ಮೆಜಿಸ್ಟ್ರೇಟರೂ ಆ ಸ್ಥಳಕ್ಕೆ ಬಂದು ಗಲಭೆಯನ್ನು ನಿಲ್ಲಿಸಲು ಪ್ರಯತ್ನಿಸಿದಾಗ, ಮೆಜಿಸ್ಟ್ರೇಟರ ಹಣೆಗೇ ಕಲ್ಲಿನೇಟು ಬಿದ್ದು ಗಾಯಗೊಂಡರು. ಮೆಜಿಸ್ಟ್ರೇಟರು ಕೊಟ್ಟ ಎಚ್ಚರಿಕೆಯು ನಿಷ್ಫಲವಾಯಿತು ಪೋಲೀಸರು ಜನರನ್ನು ಚದರಿಸುವ ಸಲುವಾಗಿ ಪ್ರಥಮತಃ ಆಕಾಶಕ್ಕೆ ಗುಂಡು ಹಾರಿಸಿದರು. ಗಲಭೆಗಾರರು ಅದನ್ನು ಲಕ್ಷಿಸದೆ ಮುನ್ನುಗ್ಗಿದರು. ಒಡನೆಯೇ ಪೋಲೀಸರು ಗುಂಪಿನಮೇಲೆ ಗುಂಡು ಹಾರಿಸಿ ಮೂವರು ಮುಸಲ್ಮಾನರು ಮಡಿದುಬಿದ್ದರು. ಹಲವರು ಗಾಯಗೊಂಡರು. ಮಿಕ್ಕವರು ಚದರಿದರು. 'ಫಯರು ಇಂಜಿನು ಬಂದು ಬೆಂಕಿಯನ್ನು ನಂದಿಸಿತು ಈಗ ಪರಿಸ್ಥಿತಿಯು ಹತೋಟಿಗೆ ಬಂದಿದೆ'

ಈ ಅನಾಚಾರಗಳ ಮೂಲವೆಲ್ಲಿ?

ಹಿಂದೂದೇಶದಲ್ಲಿ ಅಂಧಶ್ರದ್ಧೆಯಿಂದಾಗಿ ಜನರು ನೈತಿಕವಾಗಿಯೇ ಅಲ್ಲ, ಈ ರೀತಿ ದೈಹಿಕವಾಗಿಯೂ ಅಲ್ಲಲ್ಲಿ ನಾಶ ಹೊಂದುತ್ತಿದ್ದಾರೆ. ಇನ್ನೊಂದು ಮತದವರು ಯಾವದೇ ವಿಧದಿಂದ ತಮ್ಮ ದೇವರನ್ನು, ಆ ದೇವರ ನೆಲೆಯನ್ನು ಕಂಡರೆಂದಾದೊಡನೆ ಪ್ರತಿಯೊಂದು ಮತಸ್ಥರೂ ಸಂಶಯ ಗ್ರಸ್ತರಾಗುತ್ತಾರೆ. ಇಗರ್ಜಿಯು ಅತ್ಯಂತ ಪವಿತ್ರ ಸ್ಥಳವೆಂದು ಕ್ರಿಶ್ಚಿಯಾನರ ಭಾವನೆ. ಮುಸ್ಲೀಮರಿಗೆ ಆ ಪವಿತ್ರ ಸ್ಥಳದಲ್ಲಿ ಎಂತಹ ಅಪನಂಬಿಕೆಯಿತ್ತೆಂದರೆ, ಅದರೊಳ ಹೊಕ್ಕು ತಮ್ಮ ಹುಡುಗರ ಜೀವಕ್ಕೇ ಸಂಚಕಾರವೆಂದು ಅವರು ನಂಬಿಬಿಟ್ಟರು. ಇಂತಹ ಅನುಮಾನವು ಯಾವುದಾದರೊಂದು ಸಾರ್ವಜನಿಕ ಸ್ಥಳದ ಕುರಿತು ಹುಟ್ಟಲೆಡೆಯಿತ್ತೆ? ಆದರೆ ಇಗರ್ಜಿಯಂತಹ ಸಾರ್ವಜನಿಕ ಪವಿತ್ರ ಸ್ಥಳದ ಮೇಲೆ ಹುಟ್ಟಿತು. ಹಾಗೆಯೇ ದೇವಸ್ಥಾನದ ಮೇಲೆ ಹುಟ್ಟುತ್ತದೆ. ಕ್ರಿಶ್ಚಿಯನರೂ ಹಾಗೆಯೇ; ಹಿಂದೂಗಳೂ ಹಾಗೆಯೇ; ತಮ್ಮ ತಮ್ಮ ದೇವರುಗಳ ನೆಲೆಯಲ್ಲಿ ವಿಶ್ವಾಸ. ಅನ್ಯ ಮತೀಯರ ದೇವಾಲಯಗಳ ಮೇಲೆ ಅವಿಶ್ವಾಸ ಕಟ್ಟಿಕೊಂಡಿದ್ದಾರೆ. ಭಾರತದ ಸಕಲ ದೇವಾಲಯಗಳಿಂದ ಇದಕ್ಕೆ ಮಿಕ್ಕಿದ ಕಾರ್ಯವೇನಾಗುತ್ತಿದೆ? ಪ್ರತಿಯೊಂದು ಮತದ ದೇವರೂ ಆ ಮತದ ಸೈನ್ಯಾಧಿಪತಿಯಾಗಿ ತನ್ನ ಸೈನ್ಯವನ್ನೂ ಕ್ರಮಬದ್ಧವಾಗಿ ನಡಿಸುವವರಾಗಿದ್ದಾರೆ! ತಮ್ಮನ್ನಿದಿರಿಸುವವರೊಡನೆ ಹೋರಾಡಲು ಸಿದ್ಧರಾಗಿದ್ದಾರೆ. ಈ ಒಳ ಜಗಳವೇ ನಮಗೀಗ ಬೇಕಾಗಿರುವದೆ?

ಉಮೇದುವಾರನ ಹೆಂಡತಿಯ ಕೊಲೆ

ಲಕ್ನೋ ಪ್ರಾಂತ್ಯದಲ್ಲಿ ಚಮ್ಮಾರ ಜಾತಿಯ ಶ್ರೀ. ಪೂರ್ಣಮಸಿ ಎಂಬವರು ಕೊಂಗ್ರೆಸ್ ಉಮೇದ್ವಾರರಾಗಿ ನಿಂತಿದ್ದರು. ಅವರ ಹೆಂಡತಿಯನ್ನು ಯಾರೋ ಹೊಡೆದುಕೊಂದು ಮೃತದೇಹವು ಕೂಡಾ ಯಾರಿಗೂ ಸಿಕ್ಕದಂತೆ ಮಾಡಿರುವರೆಂಬ ವಾರ್ತೆ ಬಂದಿದೆ. ಈ ಪರಿಸ್ಥಿತಿಯ ಮೂಲ ಕಾರಣವು ಬೇರೆಯೇ ಇರಬೇಕು. ಕೌನ್ಸಿಲು ಎಸೆಂಬ್ಲಿ ಮೆಂಬರಿಕೆಯು ಮೇಲ್ತರಗತಿಯ ಬಹುಮಾನ; ಅದನ್ನು ಹೊಂದುವವರು ಮೇಲ್ಜಾತಿಯವರೇ ಆಗಬೇಕು–ಹಾಗಲ್ಲವೇ ಆಚಾರ? ಎಷ್ಟೋ ಮಂದಿ ಮೇಲ್ಜಾತಿಯವರಿರುವಾಗ ಚಮ್ಮಾರನೊಬ್ಬನು ದೊಡ್ಡ ಮನುಷ್ಯನಾಗಿ ಕೌನ್ಸಿಲು ಹೋಗುವುದೆಂದರೆ? ಕೆಳಜಾತಿಯವರು ಬೇಡಿ, ದುಡಿದು ಹೆಂಡತಿ ಮಕ್ಕಳನ್ನು ಕಟ್ಟಿಕೊಂಡು ಸಂಸಾರಮಾತ್ರ ಮಾಡಿಕೊಂಡಿರಬಹುದು. ಅದನ್ನು ಬಿಟ್ಟು ಮೆಂಬರಿಕೆಗೆ ಕೈಹಾಕುವ ಕೀಳ್ಜಾತಿಯವನಿಗೆಮೆಂಬರಿಕೆಯಿದ್ದರೆ ಹೆಂಡತಿ ಮಕ್ಕಳಿರಬಾರದು; ಹೆಂಡತಿಯಿದ್ದರೆ ಮೆಂಬರಿಕೆ ಬರಕೂಡದು ಎಂಬ ಅಭಿಪ್ರಾಯವಿರಬಹುದು ಕೆಲವರಿಗೆ! ಹಾಗೆಯೇ ಆಯಿತು!

ಬೆಲ್ಜಿಯಮ್ ರಾಜರ ಸಂತಾಪ

ಬೆಲ್ಜಿಯಮಿನ ರಾಜರಾದ ಲಿಯೋಪೊಲ್ಡ್ ದೊರೆಗಳು ಒಂದು ಕಾರು ಅಪಘಾತದಲ್ಲಿ ತನ್ನ ಪ್ರಿಯ ಪತ್ನಿಯನ್ನು ಕಳಕೊಂಡಿದ್ದರು. ಆ ಅಪಘಾತವು ತನ್ನ ಪ್ರಮಾದದಿಂದ ಆಯಿತೆಂಬ ಪಶ್ಚಾತ್ತಾಪವೊಂದೆಡೆ ಕಾರಿನ ಕನ್ನಡಿಯಿಂದ ಕತ್ತು ಕತ್ತರಿಸಲ್ಪಟ್ಟುಬಿದ್ದಾಡಿ ಪ್ರಾಣಬಿಟ್ಟ ಪ್ರೀತಿಯ ಪತ್ನಿಯ ಜೀವಯಾತನೆಯನೆನವು ಇನ್ನೊಂದೆಡೆ ನಿಂತು ಸದಾಕಾಲ ದೊರೆಗಳ ಹೃದಯವನ್ನು ಕೊರೆಯುತ್ತವೆ. ಆದರೆ ಮಂತ್ರಿಮಂಡಲಕ್ಕೆ ಅವರಿಗೆ ಪುನರ್ವಿವಾಹ ಮಾಡಿಸುವ ಉಮೇದು ಎದ್ದಿದೆ. ಮಂತ್ರಿಗಳ ನಿರ್ಧಾರಕ್ಕೆ ಒಪ್ಪಿಗೆ ಕೊಡಬೇಕೆಂಬುದೇ ಅಲ್ಲಿಯ ಆಚಾರ. ಹೀಗಾಗಿ ಅರಸರಿಗೀಗ ಸಿಂಹಾಸನ ತ್ಯಾಗಮಾಡುವ ಸಂದರ್ಭ ವೊದಗಿದಂತೆ ತೋರುತ್ತದೆ. ಈ ಆಚಾರಕ್ಕೇನೆನ್ನಲಿ! ಅರಸರ ಹೃದಯವನ್ನು ಗತ ಪತ್ನಿಯು ಬಿಟ್ಟುಹೋಗಿಲ್ಲ. ಹೃದಯದ ಒಳಗೆ ಯಾರೂ ಇರಲಿ. ಅರಸರ ಮಗ್ಗುಲಲ್ಲಿ ಒಬ್ಬಳನ್ನು ಕುಳಿತುಕೊಳ್ಳಿಸುವ ಇಷ್ಟ ಮಂತ್ರಿಮಂಡಲದವರದು!

೫ನೇ ಪುಟದಿಂದ

ಹಲವು ವರ್ಷಗಳಿಂದ ಜಪಾನ್ ಮಂಚೂರಿಯಾದಲ್ಲಿ ಮಾಡುತ್ತ ಬಂದ ಹಾವಳಿಗೂ ಇದೇ ಕಾರಣ. ಮೊನ್ನೆ ಇಟೆಲಿಯು ಅಬಿಸಿನಿಯಾ ನುಂಗಿ ಹಾಕಿದ್ದಕ್ಕೂ ಇದೇ ಉತ್ತೇಜನ. ಇತ್ತೀಚೆಗೆ ಸ್ಪೈಯಿನಿನಲ್ಲಿ ನಡೆಯುತ್ತಿರುವ ಭೀಕರ ಅಂತಃಕಲಹಕ್ಕೂ ಅದರಲ್ಲಿ ಇಟೆಲಿ ಜರ್ಮನಿಗಳ ಸಹಾನುಭೂತಿ ಸಹಾಯಗಳಿಗೂ ಇದೇ ಮೂಲ.

ಇಂದು ರಾಜ್ಯ ತೃಷ್ಣೆಗೂ ಅಧಿಕಾರ ಪ್ರಿಯತೆಯುಷ್ಟಲ್ಲ. ಧನತ್ವವೇ ಮೂಲ, ಆದರೆ ಆ ಧನತ್ವವು ಈಗ ಹೊಸ ವೇಷಗಳಿಂದ ನಲಿಯುತ್ತಿದೆ ಗವರಿಸುತ್ತಿದೆ ಗುಡುಗುತ್ತಿದೆ. ಅದರ ಸಂಘಟನ ಶಕ್ತಿ ಅದ್ಭುತವಾಗಿದೆ. ಬಲವೂ ದಿನೇ ದಿನೇ ಹೆಚ್ಚುತ್ತಲಿದೆ, ಹಬ್ಬುತ್ತಲಿದೆ. ಸಂಘತ್ವದಲ್ಲಿ ನ್ಯಾಯವಿದೆ, ಆದರೂ ರಷ್ಯ ಒಂದನ್ನು ಬಿಟ್ಟರೆ, ಸಂಘಟನವು ಸಾಕಷ್ಟು ಇನ್ನೂ ಇಲ್ಲ ಅದಕ್ಕಾಗಿ ಬಲವೂ ಸಾಕಷ್ಟಿಲ್ಲ.

ಜನಕ್ಕಾಗಿ ಧನ ಎಂಬ ಮನವರಿಕೆಯುಳ್ಳ ವ್ಯಕ್ತಿ ಸಂಘ ಜನಾಂಗಗಳೆಲ್ಲ ಒಕ್ಕಟ್ಟಾಗುವ ವರೆಗೆ ಧನತ್ವದ ದಿಗಿಲು ಬಿಟ್ಟಿದ್ದಲ್ಲ, ಜನತ್ವಕ್ಕೆ ಜನ ಸಮೂಹಕ್ಕೆ ಅಪಾಯವೂ ಬಿಟ್ಟಿದ್ದಲ್ಲ.

ಪತ್ರಿಕೋದ್ಯಮ ಶಾಲೆ,

ಪ್ರೇಮವಿದ್ಯಾಪೀಠ, ತುಂಗಭದ್ರಾ.

೪ನೇ ಪುಟದಿಂದ ಮುಂದರಿಸಿದ್ದು

ಗ್ರಾಮದ ಸೋಮಯ್ಯನ ಹಟ್ಟಿಯು ಕಳೆದ ವರ್ಷ ಹೀಗೇ ಇತ್ತು. ನಾನು ಹೇಳಿದ ಈ ಪ್ರಯೋಗವನ್ನು ಮಾಡಿದ. ಈಗ ಹೇಗಿದೆಯೆಂದು ನೀನೇ ಹೋಗಿ ಕೇಳಿ ತಿಳಿದುಕೊಂಡು ಬಾ'' ಎಂದು ಜನಾರ್ದನರಾಯರೊಂದು ಹೊಸ ಮುಟ್ಟೀಸ ಹೇಳಿದರು.

ಜನಾರ್ದನ ರಾಯರ ಮುಟ್ಟೀಸವನ್ನು ರಾಮು ಶೆಟ್ಟಿಯು ಪ್ರಯೋಗದಲ್ಲಿ ತಂದು ಇಂದಿಗೊಂದು ವರ್ಷದ ಮೇಲಾಯಿತು. ಈಗ ಆತನ ಹಟ್ಟಿಯ ಮಾದರಿಯಲ್ಲಿ ಹಲವು ಹಟ್ಟಿಗಳು ಕುಂಬಾರ ಹಳ್ಳಿಯಲ್ಲಾಗಿವೆ ಆದರಲ್ಲೆಲ್ಲ ಉಣ್ಣೆಗಳ ಕಾಟವೇ ಇಲ್ಲ. ಈಗಲ್ಲಿ ಯಾರಾದರೂ ಉಣ್ಣೆಗಳ ಕಾಟವೆಂದರೆ 'ನಾಗನ ಬೀದಿ' ಎನ್ನುವವರ ಬದಲಾಗಿ 'ಜನಾರ್ದನ ರಾಯರ ಹಾದಿಯನ್ನು ಹಿಡಿಯಿರೆಂಬವರೇ ಹೆಚ್ಚು. ಆದರೂ ತಿಮ್ಮಣ್ಣ ನಾಮಗರೊಂದು ದಿನ ರಾಮು ಶೆಟ್ಟಿಯಲ್ಲಿ ಬಂದು, 'ಈಗ ಹಟ್ಟಿಯಲ್ಲಿ ಉಣ್ಣೆಗಳ ಕಾಟ ತಪ್ಪಿತಲ್ಲ? ಮಂಡಲಮಾಡಿಸುವ ಯೋಚನೆ ಇಲ್ಲವೆ?' ಎಂದರು. 'ನಾನು ಮಂಡಲ ಹೇಳಿಕೊಳ್ಳಲಿಲ್ಲವಲ್ಲ!' ಎಂದ ಶೆಟ್ಟಿ. 'ನೀನು ಹೇಳಿಕೊಳ್ಳದಿದ್ದರೆ ಅಂದು ನಿನ್ನ ಬಗ್ಗೆ ನಾನು ಹೇಳಿಕೊಂಡಿದ್ದೆನಲ್ಲ!'ಎಂದರು ನಾಮಗರು. 'ಹಾಗಾದರೆ ನನ್ನ ಬಗ್ಗೆ ನೀವೇ ಮಾಡಿಸಿಬಿಡಿ!' ಎಂದ ಶೆಟ್ಟಿ. ರಾಮು ಶೆಟ್ಟಿಯ ಈ ಎದೆಗಾರಿಕೆಯನ್ನು ಕಂಡು 'ಊರು ಕೆಟ್ಟಿತು! ಈ ಜನಾರ್ದನನು ಈ ಊರಿಗೊಂದು ಶನಿಯಾಗಿ ಸಾರ್ಪತ್ತಿ ಆಗಿದ್ದಾನೆ!' ಎಂದು ಗುಣುಗುಟ್ಟುತ್ತ ಸಾಗಿದರು ನಾಮಗರು.

'ವಿಚಾರಪ್ರಿಯ'.

ಬ್ರೇಕ್ ಪಿಲ್ಲು

ಸ್ತ್ರೀಪುರುಷರಿಗೆ ಆನಂದವನ್ನುಂಟುಮಾಡುವುದು ಈ ಮಾತ್ರೆಗಳೆ. ಮದಿಸಿದ ಸ್ತ್ರೀಯರ ಗರ್ವ ಭಂಗಮಾಡಲು ಕಂಡು ಹಿಡಿದಿರುವ ಮಾತ್ರೆಗಳಿವು. ಇವರಲ್ಲಿ ವಿಷಾದಿಗಳು ಸೇರಿಲ್ಲ, ಕಸ್ತೂರಿ, ಚಿನ್ನ ಹಿಮಾಲಯಪರ್ವತದ ವನಮೂಲಿಕೆಗಳು ಮುಂತಾದುವುಗಳಿಂದ ದೊಡ್ಡ ಯೋಗೀಶ್ವರರ ಹತ್ತಿರ ಸಂಗ್ರಹಿಸಿ ಮುದುಕತನವನ್ನು ಲೋಕದಲ್ಲಿ ಇಲ್ಲದಂತೆ ಮಾಡುವುದು. ಅರ್ಧ ಘಂಟೆಯೊಳಗಾಗಿ ವೀರ್ಯವನ್ನು ಕಲ್ಲಿನಂತೆ ಮಾಡಿ ರಮಿಸಲು ಉಲ್ಲಾಸವನ್ನು ಮಾಡುವುದು. ಗುಣವಿಲ್ಲದಿದ್ದಲ್ಲಿ ಹಣ ವಾಪಸು. **೬೦ ಮಾತ್ರೆಗಳು ರೂ. ೫ ೦-೦-೦**

೩೦ ಮಾತ್ರೆಗಳು ರೂ. ೩—೦—೦ ಕಾಗದ ಪತ್ರಗಳು ಇಂಗ್ಲೀಷಿನಲ್ಲಿಯೇ.

ಡಾ. ಎ. ಎಸ್. ಮೂರ್ತಿ,

ಚಿಕಾಗೋಲ್ ಗಂಜಾಮ್ ಡಿಸ್ಟ್ರಿಕ್ಟ್.

ಸುವರ್ಣ ತಾಯಿತಿ! ಬಂಗಾರದ ತಾಯಿತಿ!!

ಹಿಮಾಲಯ ಪರ್ವತದಲ್ಲಿ ವರ್ಷಗಟ್ಟಲೆ ತಪಸ್ಸು ಮಾಡಿ
ಸಿದ್ಧಿಯನ್ನು ಪಡೆದ ಮಹಾ ಯೋಗೀಶ್ವರರಿಂದ
ಕಂಡು ಹಿಡಿಯಲ್ಪಟ್ಟದ್ದು.

ಈ ತಾಯಿತಿಯನ್ನು

ಧರಿಸಿದ ಮಾತ್ರದಿಂದ ಸಕಲ ಇಷ್ಟಾರ್ಥಗಳೂ ನೆರವೇರುವುವು.
ಪರೀಕ್ಷಿಸಲಪೇಕ್ಷಿಸುವವರು
"ಯೋಗೀಶ್ವರರ ಶಕ್ತಿಸಾಹಸ"
ಎಂಬ ಪುಸ್ತಕವನ್ನು ಧರ್ಮಾರ್ಥವಾಗಿ ಪಡೆಯಬಹುದು.

ಪತ್ತೆ:— ಪಂಡಿತ್ ಎ. ವಿ. ಆರಮುಮ್

ಚಿಕಾಕೋಲ್

ನವಯುಗಕ್ಕೆ ಇಂದೇ ಚಂದಾದಾರರಾಗಿರಿ

GREETINGS

In the spirit of the coming season and in deepest appreciation of the patronage, confidence and goodwill accorded our bank, we extend to all our customers and other friends our sincerest wishes for a HAPPY NEW YEAR. May the days be filled for YOU and YOURS with cheer and happiness.

ESTD 1906

CANARA BANK

LIMITED

ವಿಶ್ವ ವಿಶೇಷ

ಪುಷ್ಪಾಹಾರಿ.

ಮೆಲ್‌ಬೋರ್ನ್ ನಗರದಲ್ಲಿ ಹೆರಾಲ್ಡ್ ವಿಲಿಯಂಸ್ ಎಂಬುವನಿದ್ದಾನೆ. ಅವನಿಗೆ ಒಂದು ದೊಡ್ಡ ಕಲ್ಲಿದ್ದಲ ಕಂಪನಿಯಲ್ಲಿ ಕೆಲಸ ಮೆನೇಜಿಂಗ್ ಡೈರೆಕ್ಟರು.

ಇವನು ಹೂವುಗಳನ್ನು ತಿಂದುಕೊಂಡಿರುತ್ತಾನೆ. ಆ ಹೂವುಗಳಲ್ಲಿ ವಿಟಮಿನ್ನುಗಳಿವೆಯಂತೆ. ಇದನ್ನು ತಿನ್ನುವುದರಿಂದ ತನಗೆ ಯಾವ ತೊಂದರೆಯೂ ಇಲ್ಲವಂತೆ. "ನೋಡಿ ನನ್ನ ದೇಹ ಪುಷ್ಟಿಯೇನಾದರೂ ಕಡಿಮೆಯಾಗಿದೆಯೋನೋ?" ಎಂದು ಹೇಳಿ ತನ್ನ ದೇಹವನ್ನು ತೋರಿಸುತ್ತಾನೆ.

ಒಂದು ದಿನವಂತೂ ಇವನು ಒಂದು ವಿಹಾರಮಂದಿರದಲ್ಲಿ ನೂರೈವತ್ತು ರೂಪಾಯಿಗಳ ಹೂವುಗಳನ್ನು ತಿಂದು ಅಲ್ಲಿದ್ದವರೆಲ್ಲರನ್ನೂ ವಿಸ್ಮಿತರನ್ನಾಗಿ ಮಾಡಿಬಿಟ್ಟನು!

ಗುಲಾಬಿಯೇ ಮುಂತಾದ ಹೂಗಳನ್ನು ಕಂಡರಂತೂ ಮಹಾ ಪ್ರೀತಿಯಂತೆ! ಇವನು ಒಂದೊಂದುಬಾರಿ ಒಂದೊಂದು ಗೊಂಚಲನ್ನೇ ತಿಂದು ಬಿಡುತ್ತಾನೆ!

ರಷ್ಯಾದಲ್ಲಿ ದುಗೂಣೀ ಬೆಳೆ.

ರಷ್ಯಾದಲ್ಲಿ ಪ್ರೊಫೆಸರ್ ಲಿಸೆಂಕೊ ಎಂಬ ವ್ಯವಸಾಯ ನಿಪುಣನಿದ್ದಾನೆ. ಎಲ್ಲರೂ ವರ್ಷಕ್ಕೊಂದು ಫಸಲು ತೆಗೆದುಕೊಳ್ಳುತ್ತಿದ್ದರೆ ಈತನು ಎರಡು.

ಈತನು ಒಡೆಸ್ಸಾಬಳಿ ಇಪ್ಪತ್ತೈಕರೆ ಭೂಮಿಯಲ್ಲಿ ಪರೀಕ್ಷಾರ್ಥವಾಗಿ ತನ್ನ ಪ್ರಯೋಗವನ್ನು ನಡೆಸಿ ಎರಡು ಬೆಳೆಯನ್ನು ತೆಗೆದುಕೊಂಡು ಇತರ ಕೃಷಿಕರನ್ನೆಲ್ಲಾ ಮುಗ್ಧರನ್ನಾಗಿ ಮಾಡಿದ್ದಾನೆ.

ಈ ವರ್ಷ ಉಕ್ರೈನ್ ಮತ್ತು ಉತ್ತರ ಕಕೇಷಿಯಾ ಪ್ರಾಂತಗಳಲ್ಲಿ (ಇಲ್ಲಿ ಗೋಧಿ ಬೆಳೆ ಬಲು ಹೆಚ್ಚು) ಸಹಾ ತನ್ನ ಪ್ರಯೋಗಮಾಡಿ ನೋಡುತ್ತಾನಂತೆ. ಇಲ್ಲಿಯೂ ಇವನ ಪ್ರಯೋಗವು ಫಲಕಾರಿಯಾದಲ್ಲಿ ಮುಂದೆ ಜಗತ್ತಿನ ಗೋಧಿಯ ವ್ಯಾಪಾರದಲ್ಲೇ ಒಂದು ಕ್ರಾಂತಿಯುಂಟಾಗುವುದರಲ್ಲಿ ಅಭ್ಯಂತರವಿಲ್ಲ.

ಜಗತ್ತಿನ ದೊಡ್ಡ ಸೇತುವೆ.

ಸ್ಯಾನ್ ಫ್ರಾನ್ಸಿಸ್ಕೊದಲ್ಲಿ ಓಕ್‌ಲೆಂಡ್ ಬೇ ಬ್ರಿಡ್ಜ್ ಎಂಬ ಹೊಸ ಸೇತುವೆಯನ್ನು ಕಟ್ಟಿದ್ದಾರೆ. ಪ್ರೆಸಿಡೆಂಟ್ ರೂಜವೆಲ್ಟರು ಇದರ ಪ್ರಾರಂಭೋತ್ಸವವನ್ನು ನೆರವೇರಿಸಿದರು. ಹೇಗೆ? ಆ ಸ್ಥಳಕ್ಕೆ ಹೋಗಿ ಸೇತುವೆಯ ಬಳಿ ನಿಂತುಕೊಂಡಿಲ್ಲ. ಸೇತುವೆಯಿಂದ ಸಾವಿರಾರು ಮೈಲಿ ದೂರದಲ್ಲಿದ್ದುಕೊಂಡೇ ಈ ಮಹೋತ್ಸವ ನಡೆಸಿದರು! ವಾಷಿಂಗ್‌ಟನ್ ನಗರದಲ್ಲಿ ಇದ್ದುಕೊಂಡು ಒಂದು ವಿದ್ಯುಚ್ಛಕ್ತಿಯ ಗುಂಡಿಯನ್ನು ಒತ್ತುವುದರ ಮೂಲಕ ನೆರವೇರಿಸಿದರು.

ಈ ಸೇತುವೆಯ ಮೇಲೆ ಓಡಾಡುವ ಬೈಸ್ಕಲ್ಲುಗಳ ಸಂಖ್ಯೆಯನ್ನಾದರೂ ಕಂಡು ಹಿಡಿಯಬಹುದು. ಮೋಟಾರುಗಳ ಸಂಖ್ಯೆಯನ್ನು ತಿಳಿಸಲು ಆಗುವುದಿಲ್ಲ. ಅಸಂಖ್ಯಾತ ಮೋಟಾರುಗಳು.

ಈ ಸೇತುವೆಯು ಹನ್ನೆರಡೂವರೆ ಮೈಲಿ ಉದ್ದವಾಗಿದೆ. ನಾಲ್ಕೂವರೆ ಮೈಲಿದೂರ ಎಂತಹ ಹಡಗುಗಳ ಓಡಾಟಕ್ಕೆ ಅನುಕೂಲವಾಗಿರುವಂತಹ ಆಳವಾದ ನೀರಿನ ಮೇಲೆ ಸೇತುವೆ ಇದೆ.

(ಪ್ರಜಾಮತ)

ದ್ವಿತೀಯ ಸಂಸ್ಕರಣ

ಕಾವ್ಯಸಾಮ್ರಾಜ್ಯ

ವಿಸ್ತೃತಕರ್ನಾಟಕದೊಗಿನ
ಆಧುನಿಕ ಕವಿ ಪ್ರಮುಖರ
೪೮ ಸವಿಗವನಗಳ ಸಂಗ್ರಹ

ಕಿರಿಯರ ಪ್ರಸಂಚ

ಬೆಲೆ ಹನ್ನೆರಡಾಣೆ

'ಆಧುನಿಕ ಕವಿಗಳ ಕವಿತೆಗಳ ಇಂತಹ ಉತ್ತಮ ಸಂಗ್ರಹವನ್ನು ಈ ವರೆಗೆ ಯಾರೂ ಒದಗಿಸಿ ಕೊಟ್ಟಿರುವುದಿಲ್ಲ' ಎಂಬ ಮನ್ನಣೆಗೆ ಪಾತ್ರವಾಗಿ ಅಲ್ಪಾವಕಾಶದಲ್ಲಿಯೇ ದ್ವಿತೀಯಾವೃತ್ತಿಯನ್ನು ಹೊಂದಿದ ಗ್ರಂಥ; ಬಾಹ್ಯಾಂಗವು ನಯನಮನೋಹರವಾಗಿದೆ ಅಂತರಂಗವು ಚೇತೋಪಹಾರಿಯಾಗಿದೆ.

ಉಡುಪಿ

ಉತ್ಸಾಹೀ ಏಜಂಟರು ಬೇಕಾಗಿದ್ದಾರೆ.

'ನವಯುಗ'ದ

ಪ್ರತಿನಿಧಿಗಳಿಲ್ಲದ ಕೇಂದ್ರಗಳಲ್ಲಿ ಬಿಡಿಪ್ರತಿಗಳನ್ನು ವಿಕ್ರಯಿಸುವುದಕ್ಕೂ 'ನವಯುಗ'ಕ್ಕೆ ಚಂದಾದಾರರನ್ನು ಸೇರಿಸುವುದಕ್ಕೂ ಜಾಹಿರಾತುಗಳನ್ನು ಸಂಗ್ರಹಿಸುವುದಕ್ಕೂ ಉದಾರ ಶರ್ತಗಳ ಮೇಲೆ ಅನುಭವಶಾಲಿಗಳಾದ

ಕುಶಲ ಏಜಂಟರು ಬೇಕಾಗಿದ್ದಾರೆ.

ಹೆಚ್ಚಿನ ಮಾಹಿತಿ ಬಗ್ಗೆ ಪತ್ರವ್ಯವಹಾರ ಬೆಳೆಯಿಸಿರಿ.

ಮನೇಜರ್—'ನವಯುಗ',
ಉಡುಪಿ.



ಗೃಹಕೃತ್ಯಕ್ಕೆ ಬೇಕಾದ ವಿಧವಿಧ ತಾಮ್ರದ ಪಾತ್ರೆಗಳು

ಗೃಹಸ್ಥರೇ!

ಗೃಹಕೃತ್ಯೋಪಯೋಗದ ಎಲ್ಲಾ ವಿಧದ ತಾಮ್ರ ಹಿತ್ತಾಳಿ, ಜರ್ಮನ್ ಬೆಳ್ಳಿ, ಬೆಳ್ಳಿ ಸಾಮಾನುಗಳು ಎಲ್ಲಿ ಸಿಗುತ್ತವೆ ಬಲ್ಲಿರಾ?

ರಥಬೀದಿಯಲ್ಲಿ ಕಲ್ಮಂಜೆ ವ್ಯಾಸಾಚಾರ್ಯರ ಅಂಗಡಿಯಲ್ಲಿ ಮಾತ್ರವೇ

ಸ್ವದೇಶಿ ಕೈಗಾರಿಕೆ! ಹದಿನೆಂಟು ವರ್ಷಗಳ ಅನುಭವ!

ಮನೆಯ ಉಪಯೋಗಕ್ಕೂ ಉಡುಗೊರೆ ಕೊಡಲಿಕ್ಕೂ ದಾನಮಾಡಲಿಕ್ಕೂ ಬೇಕಾದ ನಮೂನೆಯ ಸಾಮಾನುಗಳನ್ನು ಮನಮೆಚ್ಚುವ ಮಾದರಿಯಲ್ಲಿ ತಕ್ಕ ಕಾಲದಲ್ಲಿ ನಾಜೂಕಾಗಿ ತಯಾರುಮಾಡಿಯೂ ಕೊಡಲಾಗುವುದು.

ಹೆಚ್ಚಿನ ವಿವರಗಳಿಗೆ ಸಚಿತ್ರ ಕಟಲಾಗಿಗೆ ಬರೆಯಿರಿ

ಕಲ್ಮಂಜೆ ವ್ಯಾಸಾಚಾರ್ಯ,

ಪಾತ್ರೆ ವ್ಯಾಪಾರಿ, ರಥಬೀದಿ, ಉಡುಪಿ.

ಶ್ರೀ ಮಲಯಾಳದ

ಸ್ತನೋ ಸ್ತೇಧಃ

THE MALAYALA STHANO STHEDAH OUSHADHA CO.,
POST-CHALAPURAM, MALABAR.

ರಹಸ್ಯಗಳು

ಇದೀಗ ತಿಳಿದುಬಂದಿದ್ದೆ ಪುರುಷರನ್ನಾಪ್ಪದು ಆಕರ್ಷಿಸುವ ಪಂಬಾದನ್ನು ಸ್ತ್ರೀಯರಿಗೆ ಒಲ್ಲರು ನೀವು ಪುರುಷನೊಬ್ಬನನ್ನು ಪರೀಕ್ಷಿಸಿ ನೋಡಿದ್ದಲ್ಲಿ, ಆತನ ಕಣ್ಣುಗಳು ಸ್ತ್ರೀಯ ಮುಖದಿಂದ ಕೆಳಗೆ ಇಂಚರ್ನಕ್ಕೆ ಚಲಿಸಿ ಕುಚಗಳು ಉನ್ನತವಾಗಿ, ದುಂಡಗೆ ಯೌವನಯುಕ್ತವಾಗಿ ಆಕರ್ಷಕವಾಗಿರುವವೊ ಎಂದು ನೋಡುವವು



48 ದಿವಸಗಳಲ್ಲಿ ಮನೋಹರ ಕುಚಸ್ಥಲದ ಗ್ಯಾರಂಟಿ, ಇಲ್ಲವಾದರೆ ಹಣ ವಾಪಾಸು.

ಪ್ರಖ್ಯಾತ ಮಲಯಾಳಿ ರಹಸ್ಯ ಸ್ಥನಸ್ಥೆಡೆ:—ಅಸ್ವಸ್ಥ, ಚಿಂತೆ, ಪ್ರಾಯ ಆಗಾಗಿನ ಹೆರಿಗೆ ನಿಮಿತ್ತ ಸ್ತ್ರೀಯರ ಎದೆಯ ಆಕರ್ಷಕತೆಯು ನಷ್ಟವಾಗಿದ್ದರೆ, ಕುಚಗಳು ಸರಿಯಾಗಿ ಬೆಳೆಯದಿದ್ದರೆ, ಚಪ್ಪಟೆಯಾಗಿದ್ದರೆ, ಬಲವಿಲ್ಲದೆ ತೂಗಾಡಿಕೊಂಡಿದ್ದರೆ, ಬಿದ್ದುಕೊಂಡಿದ್ದರೆ, ಟೊಳ್ಳಾಗಿ ಅಥವಾ ಏರು ತಗ್ಗಾಗಿದ್ದರೆ, ನರಗಳು ದುರ್ಬಲವಾಗಿದ್ದು ಕುಚಗಳನ್ನು ಸ್ಥಿರವಾಗಿರಿಸಲಾರವಾದರೆ

ದಿ ಮಲಯಾಳ ಔಷಧ ಕಂಪೆನಿ, ಛಲಪುರಮ್ ಇವರು ತಮ್ಮ ಪ್ರಖ್ಯಾತ ಚಿಕಿತ್ಸೆಯಿಂದ ಸಹಾಯಮಾಡುವರು, ಬಿದ್ದುಕೊಂಡಿದ್ದು ವಿರೂಪವಾಗಿ ಚಪ್ಪಟೆಯಾಗಿರುವ ಕುಚಗಳು ಸರಿಯಾಗಿ ಬೆಳೆಸಲ್ಪಡುವುವ, ಟೊಳ್ಳುತನವು ತುಂಬಿ ಬರುವುದು, ಕುಚಗಳು ಮನೋಹರವಾಗಿಯೂ, ಸ್ಥಿರವಾಗಿಯೂ, ದುಂಡಗಾಗಿಯೂ ಮಾಡಲ್ಪಡುವುವ, ಸಡಿಲಾಗಿರುವ ಮಾಂಸವು ಸ್ಥಿರವಾಗವುದು ಮತ್ತು ಕುಚಗಳು ಯೋಗ್ಯವೂ ಮನೋಹರವೂ ಆದ ರೂಪಕ್ಕೆ ತರಲ್ಪಡುವವು. ತಮ್ಮ ಸೌಂದರ್ಯಕ್ಕೆ ಪ್ರಸಿದ್ಧಹೊಂದಿರುವ ಮಲಯಾಳ ದೇಶದ ಸ್ತ್ರೀಯರು ಅನಾದಿಕಾಲದಿಂದ ಜಯಶೀಲವಾಗಿ ತಮ್ಮ ಸೌಂದರ್ಯವನ್ನು ಕಾಪಾಡಿಕೊಂಡು ಬಂದಿರುವ ರಹಸ್ಯಗಳಿವು.

ಸ್ಥನಸ್ಥೆಡ ನಂಬ್ರ 20.—ಒಳಗೆ ತೆಗೆದುಕೊಳ್ಳುವುದಕ್ಕೆ ನಂಬ್ರ ರೂ. 3 ನಂಬ್ರ 21 ಹೊರಗಣ ಉಪಯೋಗಕ್ಕೆ ರೂ. 3. ಧರ್ಮಾರ್ಥ ಕಳುಹಿಸಲ್ಪಡುವ ಕೆಟಲಾಗಿಗೆ ದಯಮಾಡಿ ಬರಕೊಳ್ಳಿ

ದಿ ಮಲಯಾಳ ಔಷಧ ಕಂಪೆನಿ, ಪೋಸ್ಟ್ ಛಲಪುರಮ್, ಮಲಬಾರ್.

ಈ ಕೆಳಗಣವುಗಳಿಗೆ ನಮ್ಮಲ್ಲಿ ಸಿದ್ಧೌಷಧಗಳಿವೆ.

ಋತುವೇದನೆಗಳು, ಸಂತತಿ ನಿರೋಧ, ಧಾತುಪುಷ್ಟಿ, ಲಿಂಗವೃದ್ಧಿ, ಗುಹ್ಯೇಂದ್ರಿಯ ರೋಗಗಳು, ಕ್ಷಯಸಂಹಾರಿ, ವಾತರೋಗಕ್ಕಾಗಿ ಕ್ಷೀರಬಲ

ಮಂಗಳೂರು

(ನಮ್ಮ ಬಾತ್ಮಿದಾರರಿಂದ)

ಮಂಗಳೂರು, ೧೧-೧-೩೭.

ನಮ್ಮ ಜಿಲ್ಲಾ ಬೋರ್ಡ್ ಸಭೆ

ದ. ಕನ್ನಡ ಜಿಲ್ಲಾ ಬೋರ್ಡ್ ಸಭೆಯು ಇದೇ ಬರುವ ತಾ. ೧೫ನೇ ಜನವರಿ ಪೂರ್ವಾಹ್ನ ಘಂ. ೧೧ಕ್ಕೆ ಜಿಲ್ಲಾ ಬೋರ್ಡಿನ ಆಫೀಸಿನಲ್ಲಿ ನಡೆಯುವುದು.

ಬೆಂಕಿಯ ಅನಾಹುತ

ಸ್ಥಳೀಯ ಕದ್ರಿ ಮಾರ್ಕೆಟಿನ ಸಮೀಪ ಒರ್ವ ಕ್ರಿಸ್ತ ಗೃಹಸ್ಥನ ಮನೆಗೆ ಕಳೆದ ಶುಕ್ರವಾರ ಮಧ್ಯ ರಾತ್ರಿಯಲ್ಲಿ ಬೆಂಕಿತಗಲಿ ಮನೆಯು ಕೊಟ್ಟಿಗೆ ಕೊಡಿಟ್ಟಹುಲ್ಲಿನರಾಸಿ ಇವೆಲ್ಲ ಸುಟ್ಟುಹೋದವು. ದನಕರಗಳನ್ನು ರಕ್ಷಿಸಿದರು ಜನರಿಗೆ ಹಾನಿಯೇನುಆಗಲಿಲ್ಲ ನಷ್ಟವು ತುಂಬಾಆಗಿದೆ.

ಸತ್ಕಾರಕೂಟ

ಬರುವ ಮಾರ್ಚಿ ತಿಂಗಳಲ್ಲಿ ಜರಗಲಿರುವ ಜಿಲ್ಲಾ ಮುಸ್ಲಿಮ ಉಪಾಧ್ಯಾಯರ ಪರಿಷತ್ತಿನ ಮತ್ತು ಶಿಕ್ಷಣಪ್ರದರ್ಶನದ ಕಾರ್ಯಕಲಾಪಗಳನ್ನು ಚರ್ಚಿಸಿ ನಿರ್ಧರಿಸುವುದಕ್ಕೆ ನಿನ್ನೆಯ ದಿವಸ ಮುಸ್ಲಿಮು ಉಪಾಧ್ಯಾಯ ಸಂಘದ ಕಾರ್ಯಕಾರಿ ಮಂಡಳಿದ ಸಭೆಯು ಸೇರಿತು ಇದಕ್ಕೆ ಜಿಲ್ಲಾ ವಿದ್ಯಾಧಿಕಾರಿಗಳೂ ಶ್ರೀ. ಯಂ. ಎನ್. ಕಾಮತರೇ ಮೊದಲಾದ ಮಹನೀಯರು ಆಹ್ವಾನಿಸಲ್ಪಟ್ಟಿದ್ದರು. ಬಂದಿದ್ದ ಅತಿಥಿಗಳಿಗೆ ಕಾಫಿ ಫಲಾಹಾರಾದಿಗಳ ಸತ್ಕಾರವು ನಡೆಯಿತು.

ಟಪ್ಪಾಲು ಚೀಲಗಳ ಕಳವು

ಮಂಗಳೂರು ರೈಲ್ವೆ ಸ್ಟೇಶನಿನಲ್ಲಿ ಕಳೆದ ಬುಧವಾರ ಒಂದು ವಿಚಿತ್ರಕಳವಾಯಿತು. ರೈಲ್ವೆ ಸ್ಟೇಶನಿನಲ್ಲಿರುವ ಟಪ್ಪಾಲು ಚೀಲಗಳನ್ನಿಡುವ ಉಗ್ರಾಣದಿಂದ ಕೆಲವು ಟಪ್ಪಾಲು ಚೀಲಗಳು ಕಾಣೆಯಾಗಿರುವುವು ಬಾಗಿಲಿಗೆ ಹಾಕಿದ್ದ ಬೀಗವು ಹಾಗೆಯೇ ಇತ್ತು ಮಾಡಿನ ಹಂಚುಗಳನ್ನು ತೆಗೆದು ಕಳ್ಳರು ಒಳಗೆ ಪ್ರವೇಶಿಸಿರುವರೆಂದು ತಿಳಿದು ಬಂದಿದೆ.

ದ. ಕನ್ನಡ ಜಿಲ್ಲಾ ಪಾರ್ಲಿಮೆಂಟರಿ ಬೋರ್ಡಿನ ಅಧ್ಯಕ್ಷರಾದ ಡಾ. ಕೆ. ವಿಟ್ಠಲ ಸೆಟ್ಟಿಯವರು ಶ್ರೀಗಳಾದ ಗಂಗಾಧರ ರಾವ್ ದೇಶಪಾಂಡೆ, ಆರ್. ದಿವಾಕರ ಇವರುಗಳನ್ನು ದ. ಕನ್ನಡದಲ್ಲಿ ಪ್ರವಾಸಮಾಡುವಂತೆ ಕೇಳಿಕೊಂಡಿರುವದಾಗಿಯೂ ಅವರೀ ಆಮಂತ್ರಣವನ್ನು ಸ್ವೀಕರಿಸಿರುವುದಾಗಿಯೂ ತಿಳಿದು ಬರುತ್ತದೆ.

ತಿದ್ದುಪಡಿ

ಕಳೆದ ಸಂಚಿಕೆಯಲ್ಲಿ ಪ್ರಕಟವಾದ ಫೈಜಪುರ ಕಾಂಗ್ರೆಸ್ ದಿನಾಚರಣೆ' ಎಂಬ ಶಿರೋನಾಮದ ಕೆಳಗೆ ಪ್ರಕಟವಾದ ವಿಷಯದಲ್ಲಿ ಶ್ರೀ. ಬಿ. ಟಿ. ರೈಗಳು ಭಾಷಣಮಾಡಿದ ಮೇಲೆ ಮಾತಾಡಿದವರು. ಶ್ರೀ. ಕೃಷ್ಣಯ್ಯ ಸೆಟ್ಟರಲ್ಲ ಕೆ. ಕೃಷ್ಣ ರಾಯರು ಎಂದು ತಿದ್ದಿ ಓದಬೇಕಾಗಿ ವಿನಂತಿ

ಶ್ರೀ ಯು. ಸಿ ಸುಬ್ರಹ್ಮಣ್ಯ ಭಟ್ಟರು ಮತ್ತು ಮದ್ರಾಸ್ ಪ್ರಾಂತದ ಕೌನ್ಸಿಲಿನ ಜಾಗ

ಅಖಿಲಭಾರತ ಕಾಂಗ್ರೆಸ್ ಪಾರ್ಲಿಮೆಂಟರಿ ಬೋರ್ಡಿನವರು ಶ್ರೀ. ಯು. ಸಿ. ಸುಬ್ರಹ್ಮಣ್ಯಭಟ್ಟ ಇವರನ್ನು ಮದ್ರಾಸಿನ ಲೆಜಿಸ್ಲೇಟಿವ್ ಕೌನ್ಸಿಲಿಗೆ ಕಾಂಗ್ರೆಸಿನಪರವಾಗಿ ಉಮೇದ್ವಾರರಾಗಿ ನಿಲ್ಲಲುಅನುಮತಿಯನ್ನು ಕೊಟ್ಟಿದ್ದರು. ಆದರೆ ಈ ಅನುಮತಿಯು ಬರುವುದರೊಳಗಾಗಿಯೇ ಶ್ರೀ. ಭಟ್ಟರು ತಮ್ಮ ಕಾಂಗ್ರೆಸಿನ ನಾಲ್ಕಾಣೆ ಸದಸ್ಯತ್ವಕ್ಕೆ ಸಹಾ ರಾಜಿನಾಮೆಯನ್ನು ಕೊಟ್ಟಿರುವುದರಿಂದ ಕಾಂಗ್ರೆಸಿನಪರವಾಗಿ ಕೌನ್ಸಿಲಿಗೆ ನಿಲ್ಲಲು ಕೊಟ್ಟ ಅನುಮತಿಯನ್ನು ಹಿಂದಕ್ಕೆ ತೆಗೆದುಕೊಳ್ಳಲಾಗಿದೆ

ಉಡುಪಿ

ಗರ್ಲ್ ಗೈಡ್

ಉಡುಪಿಯ ಬೋರ್ಡ್ ಹೈಸ್ಕೂಲಿನ ವಠಾರದಲ್ಲಿ ಇಲ್ಲಿಯ ಮೋಡರ್ನ್ ಶಾಲೆ, ಕಡಿಯಾಳಿ ಮತ್ತು ಗುಷ್ಟೆ ಶಾಲೆಗಳು ಕಿದಿಯೂರು ಶಾಲೆ ಹಾಗೂ ಹೆಂಗಸರ ಟ್ರೈನಿಂಗು ಶಾಲೆಯ ಹೆಮ್ಮಕ್ಕಳು ಒಟ್ಟಾಗಿ ತಾ॥ ೯-೧-೩೭ರಲ್ಲಿ ಜಯಶೀಲವಾಗಿ ವಿವಿಧ ವಿನೋದಾವಳಿಗಳನ್ನು ಪ್ರದರ್ಶಿಸಿದರು. ಚಿಕ್ಕ ಮಕ್ಕಳ ಕೋಲಾಟ, ನರ್ತನ, ಗಾಯನ, ಡ್ರಿಲ್ಲು ಮೊದಲಾದ ಆಟಗಳು ಮನೋಹರವಾಗಿದ್ದುವು. ಹೆಮ್ಮಕ್ಕಳ ಟ್ರೈನಿಂಗುಶಾಲೆಯ ವಿದ್ಯಾರ್ಥಿನಿಯರು ಕೇಂಪ್ ಫಯರನ್ನು ಉತ್ತಮವಾಗಿ ಮಾಡಿತೋರಿಸಿದರು. ವಿದ್ಯಾರ್ಥಿನಿಯರ ನಕಲಿಯಾಟಗಳು ಚತುರವಿದ್ದವು. ಈ ಸಭೆಗೆ ಮುನಿಸಿಪಲ್ ಅಧ್ಯಕ್ಷರಾದ ಶ್ರೀ. ಆರೂರರವರು ಅಧ್ಯಕ್ಷರಾಗಿದ್ದರಲ್ಲದೆ ವಕೀಲ ಶ್ರೀ. ಎಮ್. ವಿಟ್ಠಲಕಾಮತ್, ಬೋರ್ಡ್ ಹೈಸ್ಕೂಲು ಮುಖ್ಯೋಪಾಧ್ಯಾಯರ ಮಿ ರೋಶಿ ಫೆರ್ನಾಂಡಿಸ್ ವಕೀಲ್ ಪಿ. ಎನ್. ಮಾಧವರಾವ್ ಮೊದಲಾದವರು ಕಾರ್ಯಚಾಲಕರಾಗಿದ್ದರು. ಶ್ರೀ ಆರೂರು ಧನ್ಯವಾದಗಳನ್ನಿತ್ತರು

ಜಯಶೀಲ ಹರತಾಳ! ದುಃಖ ಸೂಚಕಸಭೆ!!

ಶ್ರೀ. ಕಾರ್ನಾಡು ಸದಾಶಿವರಾಯರ ನಿಧನವಾರ್ತೆಯು ತಾ. ೧೧-೧-೩೭ನೇ ಸಂಜೆ ೬ ಘಂಟೆಗೆ ಉಡುಪಿಗೆ ತಲುಪಿದೊಡನೆ ಸ್ವಯಂ ಸೇವಕರು ಪೇಟೆಯಲ್ಲೆಲ್ಲಾ ಡಂಗುರ ಹೊಡೆದು ತಿಳಿಸಿದರು. ಉತ್ಸವದ ದಿನವಾಗಿದ್ದರೂ ಮರುದಿನ (ತಾ. ೧೨ರಲ್ಲಿ) ಸಾರ್ವತ್ರಿಕ ಹರತಾಳವಾಚರಿಸಲ್ಪಟ್ಟಿತು. ಸಂಜೆ ೪ ಘಂಟೆಗೆ ಬರೀತಲೆಯ ಮೆರವಣಿಗೆಯು ರಥಬೀದಿಯಿಂದ ಹೊರಟು ಪೇಟೆಯಲ್ಲಿ ಸುತ್ತಾಡಿ ಪುನಃ ರಥಬೀದಿಯನ್ನು ಸೇರಿ ಶ್ರೀ. ಪಿ. ಮಂಜುನಾಥ ನಾಯ್ಕರ ಅಧ್ಯಕ್ಷತೆಯಲ್ಲಿ ಪ್ರಚಂಡ ಸಾರ್ವಜನಿಕ ಸಭೆಸೇರಿತು. ಶ್ರೀಗಳಾದ ಕೆ. ಶೀನ ಸೆಟ್ಟಿ, ಆರ್. ಎಸ್. ಶೆಣೈ, ಎಮ್ ವಿಟ್ಠಲ ಹೆಗ್ಡೆಯರು ದಿವಂಗತರ ಗುಣಕಥನಮಾಡಿ, ಅವರ ನಿಧನದಿಂದುಂಟಾದ ಅಪಾರ ಹಾನಿಯನ್ನು ಬಣ್ಣಿಸಿದರು. ಶ್ರೀ. ಸೂಡವಾಸುದೇವ ಜ್ಯೋಸಿ ಬಿ.ಎ. ಯವರು ಶ್ರೀ ಸದಾಶಿವರಾಯರ ನಿಧನದಿಂದ ಕಾಂಗ್ರೆಸ್ ವಿರೋಧಿಗಳು ಕಲಿಯಬೇಕಾದ ಪಾಠವನ್ನು ತಿಳಿಸಿದರು ಅಧ್ಯಕ್ಷರು ಭಾಷಣಮಾಡಿ ದುಃಖಸೂಚಕ ಠರಾವನ್ನು ಮುಂದಿಟ್ಟರು. ಸಭಿಕರೆಲ್ಲ ಎದ್ದು ನಿಂತು ಮೌನದೊಡನೆ ಮಂಜೂರುಮಾಡಿದರು. ಈ ದಿನ ಮಲ್ಪೆಯಲ್ಲಿಯೂ ಸಂಪೂರ್ಣ ಹರತಾಳವಿತ್ತು. ಕಟಪಾಡಿಯಲ್ಲಿ ಹರತಾಳವಿತ್ತಲ್ಲದೆ ಸಂಜೆ ಶ್ರೀ ವೆಂಕಪ್ಪಯ್ಯ ಹೆಗ್ಡೆಯರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆಸೇರಿ ಶ್ರೀಗಳಾದ ಪಿ. ಲಕ್ಷ್ಮೀನಾರಾಯಣ ನಾಯಕ್, ಕೆ. ಗಣಪಯ್ಯ ಸೆಟ್ಟಿ, ಕೆ. ವಾಸುದೇವ ಕಿಣಿ ಎಮ್. ಎಲ್, ಶೆಣೈ, ಕೆ. ಆರ್. ಶೆಣೈ, ಡಾ. ಕೆ. ಟಿ. ಕಿಣಿ ಮೊದಲಾದವರ ಭಾಷಣಗಳಾದವು. ಅಧ್ಯಕ್ಷರು ದುಃಖಸೂಚಕ ನಿರ್ಣಯವನ್ನು ಮುಂದಿಟ್ಟರು. ಹಿರಿಯಡ್ಕ ಪೆರ್ಡೂರು ಮೊದಲಾದ ಹಳ್ಳಿಗಳಲ್ಲಿ ಕೂಡಾ ಹರತಾಳವಾಚರಿಸಲ್ಪಟ್ಟಿತು ಅಲ್ಲಲ್ಲಿ ಸಭೆಗಳು ನಡೆದಿರುವವು.

ದ. ಕ. ಪಾರ್ಲಿಮೆಂಟರೀ ಬೋರ್ಡಿನವರ ಪರಿಣಾಮಕಾರೀ ಪ್ರಚಾರಕಾರ್ಯ

ವಕೀಲ ಬಂಧುಗಳ ಪ್ರೋತ್ಸಾಹ!

ಎಲ್ಲೆಲ್ಲಿಯೂ ಕಾಂಗ್ರೆಸಿಗೆ ಬೆಂಬಲ!

ತಾ. 5-1-37ರಲ್ಲಿ ಪುತ್ತೂರಿನ ಬೆಟ್ಟಂಪಾಡಿಯಲ್ಲಿ ಸಾರ್ವಜನಿಕ ಸಭೆ ಸೇರಿ ಶ್ರೀಗಳಾದ ಕೆ. ಆರ್. ಕಾರಂತ, ಎನ್. ಎಸ್. ಕಿಲ್ಲೆಯವರು ಭಾಷಣವಿತ್ತರು. ತಾ. 6ರಲ್ಲಿ ಪೆರ್ಲ್ಕರೆಯಲ್ಲಿ ಶ್ರೀ. ನಾರ್ಣಪ್ಪಯ್ಯನವರ ಅಧ್ಯಕ್ಷತೆಯಲ್ಲಿ ಪ್ರಚಂಡ ಸಭೆಸೇರಿತು. ಶ್ರೀಗಳಾದ ಮೊಳಹಳ್ಳಿ ಶಿವರಾವ್, ಬೆಳ್ತಂಗಡಿ ಮಂಗೇಶರಾವ್, ಬೆಳ್ಳಿಪಾಡಿ ದಾಸ ರೈ, ಎ, ಬಿ. ಶೆಟ್ಟಿ, ಕೆ. ಆರ್. ಕಾರಂತ, ಪದ್ಮರಾಜ ಜೈನ್, ಚಿನ್ನಪ್ಪ ಗೌಡ, ಪುಂಡರೀಕ ಭಟ್, ಎಚ್. ರಾಮರಾಯ ಮಲ್ಯ, ಎನ್. ಎಸ್. ಕಿಲ್ಲೆಯವರ ಭಾಷಣಗಳಾದವು. ತಾ. 7ಕ್ಕೆ ಕಾರಡ್ಕದಲ್ಲಿ ಸಭೆ. ಶ್ರೀಗಳಾದ ಕೆ. ಆರ್. ಕಾರಂತ, ಎನ್. ಎಸ್. ಕಿಲ್ಲೆ, ಹಿ. ರಾಮರಾಯ ಮಲ್ಯರ ಭಾಷಣಗಳು. ಅದೇ ದಿನ ಬೋವಿಕಾನದ ಸಭೆಯಲ್ಲಿಯ ಮೇಲಿನ ಮಹನೀಯರು ಭಾಷಣಗಳನ್ನಿತ್ತರು. ತಾ. 8ಕ್ಕೆ ಉಪ್ಪಿನಂಗಡಿಯಲ್ಲಿ ಶ್ರೀ. ಬಿ. ವೆಂಕಪ್ಪ ರೈಗಳ ಅಧ್ಯಕ್ಷತೆಯಲ್ಲಿ ಸೇರಿದ ಸಭೆಯಲ್ಲಿ ಶ್ರೀಗಳಾದ ಎಚ್. ಗಣಪತಿ ರಾವ್, ಪುಂಡರೀಕ ಭಟ್, ಗೋಪಾಲ ಭಟ್, ಕೆ. ಆರ್. ಕಾರಂತ್, ಎನ್. ಎಸ್. ಕಿಲ್ಲೆ ಮೊದಲಾದವರ ಭಾಷಣಗಳಾದವು. ಅದೇ ದಿನ ಮಂಗಳೂರು ತಾಲೂಕಿನ ಕಾರಂಜೆಯಲ್ಲಿ ಶ್ರೀ. ಕರಿಯಂಗಳ ಮತ್ತು ಮಾರ್ಲ, ಶ್ರೀಗಳಾದ ಎನ್. ಎಸ್. ಕಿಲ್ಲೆ, ಬಿ. ಡಿ. ರೈ, ಹಿ. ರಾಮರಾಯ ಮಲ್ಯ, ವೆಂಕಟ್ರಾಯ ಬಾಳಿಗರೇ ಮೊದಲಾದವರು ಭಾಷಣವಿತ್ತರು. ಪುಂಜಾಲ ಕಟ್ಟೆಯಲ್ಲಿಯೂ ಮೇಲಿನ ಮಹನೀಯರ ಬೋಧಪ್ರದ ಭಾಷಣಗಳಾದವು. ತಾ. 9ರಲ್ಲಿ ಸುಳ್ಯದಲ್ಲಿ ಶ್ರೀ. ಲಕ್ಷ್ಮೀನಾರ್ಣಪ್ಪಯ್ಯನವರ ಅಧ್ಯಕ್ಷತೆಯಲ್ಲಿ ಶ್ರೀಗಳಾದ ಬಿ. ಮಂಗೇಶರಾವ್, ಶಿವರಾಮ ಹೊಳ್ಳ, ಗಣಪತಿರಾವ್, ಐತಪ್ಪ ರೈ, ರಾಮರಾಯ ಮಲ್ಯ, ಕಿಲ್ಲೆ, ತಲ್ಲೇರಿ ರಂಗರಾಯರು ಭಾಷಣವಿತ್ತರು. ತಾ. 7ಕ್ಕೆ ಮಂಗಳೂರಿನಲ್ಲಿ ಸೇರಿದ ಆದಿದ್ರಾವಿಡ ಮಹಾಸಭೆಯಲ್ಲಿ ಶ್ರೀಗಳಾದ ಡಾ। ವಿಟ್ಠಲ ಶೆಟ್ಟಿ, ಬಿ. ಟಿ. ರೈಗಳ ಭಾಷಣವಿತ್ತು. ತಾ. ೧೧ರಲ್ಲಿ ಪಣಂಬೂರಿನ ಸಭೆಯೊಂದರಲ್ಲಿ ಡಾ। ವಿಟ್ಠಲ ಶೆಟ್ಟರು ಚುನಾವಣೆಯ ಕುರಿತು ಭಾಷಣವಿತ್ತರು. ತಾ. 13ರಲ್ಲಿ ಮಲ್ಪೆಯ ವಡಭಾಂಡೇಶ್ವರ ದೇವಸ್ಥಾನದ ಬಳಿಯಲ್ಲಿ ಶ್ರೀ ಕೃಷ್ಣ ಉಪಾಧ್ಯರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಶ್ರೀಗಳಾದ ಕೆ. ಶೀನ ಶೆಟ್ಟಿ, ಎಮ್. ವಿಟ್ಠಲ ಕಾಮತ್, ವಕೀಲ್, ಎನ್. ಎಸ್. ಕಿಲ್ಲೆ, ಎ. ಬಿ. ಶೆಟ್ಟಿಯವರು ಭಾಷಣವಿತ್ತರು. ಶ್ರೀಯುತ ಕೋಮ ಮರಕಾಲ, ಶ್ರೀಮಾನ್ ಅಣ್ಣಯ್ಯ ಪೂಜಾರಿಗಳೇ ಮೊದಲಾದ ಊರ ಪ್ರಮುಖರು ಉತ್ಸಾಹದಿಂದ ಸಹಕರಿಸಿದ್ದರು.

ಅಂದು ಸಂಜೆ ಅಂಬಲಪಾಡಿ ದೇವಸ್ಥಾನದ ಬಳಿಯಲ್ಲಿ ಶ್ರೀ. ಕೆ. ರಾಮರಾಯರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆಸೇರಿತು. ಶ್ರೀಗಳಾದ ಪಿ. ಮಂಜುನಾಥನಾಯಕ್, ಎನ್. ಎಸ್. ಕಿಲ್ಲೆ, ಎ. ಬಿ. ಸೆಟ್ರು ಭಾಷಣವಿತ್ತರು.

ಸುರತ್ಕಲ್.

ಇಲ್ಲಿಯ [illegible] ತಾ. ೧೨ ೧ [illegible] [illegible]

THE BOMBAY LIFE ASSURANCE Co., LTD.

ESTD. 1908

Church Gate Street, Fort - - BOMBAY.

SPECIAL FEATURES.

1. Rebate on yearly payment of policies.
2. Rebate for larger assurances.
3. Accident Risk covered on small extra premiums
4. Attractive Bonuses.

It pays you to represent this Company.
Wanted Agents in unrepresented parts.

Apply to:—

KOCHIKAR BROTHERS,

Madras Branch Secretaries.

BRANCHES AT:

P. B. 337 Mount Road, Madras.	Visveswarapuram Circle, Bangalore City.	Soumyalayam Puthiyara, Calicut.
Car Street, Mangalore.	Udipi, S. India.	Charni Road, Bombay No. 4.

EVIDENCE OF SECURITY & STABILITY

FIGURES THAT SPEAK FOR THEMSELVES

TOTAL ASSETS Rs. 80,66,600

Summary of 1935 Accounts

Total Assets Over	... ...	Rs. 80,00,000
Life Funds Over	... ...	Rs. 68,00,000
Premium Income Over	...	Rs. 22,54,000
Interest Income	... ...	Rs. 3,16,000
Claims Paid ...	... ...	Rs. 5,75,000

Total Claims paid Over Rs. 38,50,000
Total Business in Force Over Rs. 4,42,51,200

TOTAL BUSINESS IN FORCE Rs. 4,42,51,200

ಚಂದಾದಾರರಲ್ಲಿ

ಚಂದಾಹಣ ಬಾಕಿ ಇರುವ ನಮ್ಮ ಚಂದಾದಾರರು ಆದಷ್ಟು ಬೇಗನೇ ತಮ್ಮ ಹಣವನ್ನು ಮಣಿಯಾರ್ಡರ್ ಮೂಲಕ ದಯವಿಟ್ಟು ಕಳುಹಿಸಿಕೊಡಬೇಕಾಗಿ ಅಪೇಕ್ಷಿಸುತ್ತೇವೆ. ವಿ. ಪಿ. ಮಾಡುವದಾದರೆ ಐದಾಣೆ ಹೆಚ್ಚಿಗೆ ಬೀಳುವದು.

ನಮ್ಮೊಡನೆ ಪತ್ರವ್ಯವಹಾರ ನಡೆಸುವವರು ತಮ್ಮ ಚಂದಾ ನಂಬ್ರವನ್ನು ಸೂಚಿಸಿ ಬರೆಯಬೇಕಾಗಿ ವಿನಂತಿ.

ಮೆನೇಜರ್ ನವಯುಗ

ಉಡುಪಿ, ತಾ. ೧೪-೧-'೩೭ ಗುರುವಾರ

ದೇಶಭಕ್ತ ಶ್ರೀ ಕಾರ್ನಾಡು ಸದಾಶಿವ ರಾಯರು ನಮ್ಮನ್ನಗಲಿದರು!

ದಕ್ಷಿಣ ಕನ್ನಡವನ್ನು ಮಾತ್ರವಲ್ಲ ಅಖಿಲ ಕರ್ಣಾಟಕವನ್ನು ಕಣ್ಣೀರಿಡಿಸುವ ದುರ್ಘಟನೆಯೊಂದು ಕಳದ ತಾ. ೯ನೇ ಶನಿವಾರ ನಡೆದುಹೋಯಿತು! ದೇಶಭಕ್ತ ಶ್ರೀಯುತ ಕಾರ್ನಾಡು ಸದಾಶಿವರಾಯರು ತನ್ನ ೫೬-೫೭ನೇ ವಯಸ್ಸಿನಲ್ಲಿ ಆ ದಿನ ಜೀವನ ಯಾತ್ರೆಯನ್ನು ಕೊನೆಗಾಣಿಸಿದರು. ಅವರ ನಶ್ವರ ಶರೀರವನ್ನು ನಾವಿನ್ನು ಕಾಣಲಾರೆವು; ಅದರೊಡನೆ ನಾವೀತನಕ ನಡಿಸಿಕೊಂಡು ಬರುತ್ತಿದ್ದ ವ್ಯವಹಾರವನ್ನು ಮುಂದೆ ನಡೆಸಲಾರೆವು. ಅದಕ್ಕಾಗಿ ನಾವೀಗ ದುಃಖಿಸಬೇಕು; ಆ ಸಂದರ್ಭವಿನ್ನು ಒದಗಲಾರದಲ್ಲಾ ಎಂದು ಅಳಬೇಕು!

ನಿಜ. ಅವರೆ ಅದರೊಡನೆ ಎಲ್ಲವೂ ಕಳೆದುಹೋಗಿಲ್ಲ. ದಿವಂಗತರು ತ್ಯಾಗಮೂರ್ತಿಗಳು; ಕರ್ಮ ತಲ್ಲೀನರು. ಅವರ ಕಾಯವು ಕೆಲಸಗಳಿಗೊಂದು ಸಾಧನ ಮಾತ್ರವಾಗಿತ್ತು; ಆ ಸಾಧನವಿಂದು ಕಳಚಿಬಿದ್ದಿದೆ. ಹೀಗಾಗಿ ಅವರ ತ್ಯಾಗರೂಪ-ಕರ್ಮರೂಪಗಳಿಗೆ ಇತರರು ಆಧಾರವಾಗಬೇಕಾಗಿದೆ. ಈಯೊಂದು . ಪರಾಧೀನತೆಯು ಮಾತ್ರ ಇಂದಿನ ಸದಾಶಿವರಾಯರಿಗೆ! ನಮ್ಮ ಹೃದಯದಲ್ಲಿ ಸ್ಥಾನಪಡೆದುದು ಈಗ ಬಿದ್ದು ಹೋಗಿರುವ ಆ ದೇಹವಲ್ಲ—ಶ್ರೀಯುತ ರಾಯರ ದೇಶಸೇವೆಯ ತ್ಯಾಗರೂಪ! ಅದಕ್ಕೆ ನಮ್ಮಲ್ಲಿಯೂ ಸ್ಥಾನವಿದೆ; ಆದ್ದರಿಂದ ಅದಕ್ಕೆ ಇನ್ನೆಷ್ಟೋ ಕಾಲ ಆಯುಷ್ಯವೂ ಇದೆ. ಈಗ ಆದುದೇನು? ಆ ದೇಹರೂಪವಾದ ಆಧಾರವೊಂದು ನಷ್ಟವಾಯಿತು ಮಾತ್ರ. ನಾವೆಲ್ಲರೂ ಆಧಾರವಾಗಿ ನಿಲ್ಲಬೇಕು. ಅವರ ಕೆಲಸ ಕಾರ್ಯಗಳನ್ನು ಮುಂದೊತ್ತಬೇಕು. ಆ ಮೂಲಕ ಶ್ರೀಯುತ ಕಾರ್ನಾಡು ಸದಾಶಿವರಾಯರಿಗೆ ಚಿರಾಯುಷ್ಯವನ್ನೊದಗಿಸಿಕೊಡಬೇಕು!!! ಕಳೆದ ತಾ ೯ರಲ್ಲಿ ನಡೆದುದು ನಮ್ಮ ಹತೋಟಿಯೊಳಗಿನದಲ್ಲ; ಅದು ಕಾಲನ ಕೈಯೊಳಗಿನದು. ಕರ್ಮರೂಪೀ ಸದಾಶಿವರಾಯರನ್ನು ಆರೈಕೆಮಾಡುವ ಜವಾಬ್ದಾರಿ—ಇದು ಮಾತ್ರ ಈಗ ನಮ್ಮ ಕೈಯಲ್ಲಿದೆ!

ಶ್ರೀಯುತ ಕಾರ್ನಾಡು ಸದಾಶಿವರಾಯರ ಜೀವಮಾನದಲ್ಲಿ ಕ್ರಾಂತಿಯ ಸ್ಪಷ್ಟ ಕುರುಹುಗಳಿವೆ. ೧೯೨೦ರ ಅಸಹಕಾರದಂತಹ ಚಳವಳಿಯು ಆ ಕಾಲಕ್ಕೆ ಹೊಸದಾಗಿತ್ತು. ಅಂದಿನವರೆಗೂ ಆಡಂಬರ ಪ್ರಿಯರಾಗಿದ್ದ ವಕೀಲ್ ಶ್ರೀ ಸದಾಶಿವರಾಯರಲ್ಲಿದು ನಿಜವಾದ ಮಾರ್ಪಾಟನ್ನುಂಟುಮಾಡಿತು. ದ. ಕನ್ನಡದ ಆಗಿನ ಪರಿಸ್ಥಿತಿಯು ಅದನ್ನು ಉತ್ತೇಜಿಸುವಂತಿರಲಿಲ್ಲ; ಶ್ರೀ. ರಾಯರ ಸ್ಥಿತಿಯಾದರು ರಾಜಕೀಯ ಸನ್ಯಾಸಕ್ಕೆ ಅನುಕೂಲವಿರಲಿಲ್ಲ. ಅವರ ಹೃದಯದಲ್ಲಿ ಮಾತ್ರ ಹುರುಪು ಮೂಡಿತ್ತು. ದೇಶಸೇವೆಯ ಹುರುಪೊಂದರಿಂದಲೇ ಸೊಂಟಕಟ್ಟಿ ರಣರಂಗಕ್ಕಿಳಿದು ವಿರುದ್ಧ ಪರಿಸ್ಥಿತಿಗಳೊಡನೆ ಹೋರಾಡುವಾಗ, ಅವರ ಪರಿಣಾಮವೂ ಆಗಲೇ ಕಂಡು ಬಂತು. ಶ್ರೀ. ಸದಾಶಿವ ರಾಯರು ತನ್ನ ಸರ್ವಸ್ವವನ್ನೂ ಕಳಕೊಳ್ಳಬೇಕಾಯಿತು! ಆ ಕಾಲದಲ್ಲಿ ಶ್ರೀಯುತ ಕಾರ್ನಾಡರ ಜತೆಗೂಡಿ ಸ್ವಾತಂತ್ರ್ಯಕ್ಕಾಗಿ ಹೋರಾಡಲಿಳಿದುದೆಂದರೆ ಅವರ ಸಂಪತ್ತು ಒಂದೇ! ಶ್ರೀಯುತ ರಾಯರು ಜೈಲು ಸೇರಿದರು. ಸಂಪತ್ತು ಮಣ್ಣುಗೂಡಿತು!!

ಅವರು ಮಹಾತ್ಮ ಗಾಂಧಿಯವರ ಅಂಧಾನುಕರಣೆಯವರಾಗಿದ್ದರು! ಕಾಲವು ಇನ್ನೂ ಹೆಚ್ಚಿನದನ್ನಪೇಕ್ಷಿಸುವದೆಂಬುದಕ್ಕೆ ಅವರ ಸಮ್ಮತಿಯಿರಲಿಲ್ಲ. ಹೀಗಾಗಿ ಮ. ಗಾಂಧಿ, ಸಿ. ರಾಜಗೋಪಾಲಾಚಾರಿಯವರೇ ಮೊದಲಾದವರ ಮೇಲೆ ಕೆಡೆದ ವಿಶ್ರಾಂತಿಯ ನೆರಳು ಮೆಲ್ಲ ಮೆಲ್ಲನೆ ಶ್ರೀ ಕಾರ್ನಾಡು ಸದಾಶಿವರಾಯರನ್ನೂ ಸಮೀಪಿಸುತ್ತಿತ್ತು. ಹೇಗಿದ್ದರೂ ಅವರು ಮಾಡಿರುವ ತ್ಯಾಗ, ದೇಶಕ್ಕಾಗಿ ಪಟ್ಟಿರುವ ಕಷ್ಟ, ಇವುಗಳ ಬೆಲೆ ಕೆಡಿಸುವ ಕಾಲವೊಂದು ಬರುವದೆಂಬ ಹೆದರಿಕೆಯೇ ಇದ್ದಿಲ್ಲ; ಆದರೂ ದೇಶಭಕ್ತ ಶ್ರೀಮಾನ್ ಕಾರ್ನಾಡ ಸದಾಶಿವ ರಾಯರು ದೀರ್ಘ ವಿಶ್ರಾಂತಿಯನ್ನು ಹೊಂದಿದರು. ನಮ್ಮನ್ನಗಲಿದರು! ಇದು ಕನ್ನಡಿಗರ ಮೇಲೊದಗಿದ ಮಹಾವಿಪತ್ತು.

ಬಿ. ಎನ್. ರೈಲ್ವೇ ಮುಷ್ಕರ

ಬಂಗಾಳ-ನಾಗಪುರ ಕೆಲಸಗಾರರು ಕಳದ ಮೂರುವಾರಗಳಿಂದಲೂ ಶಾಂತಪರ ಮುಷ್ಕರವನ್ನು ನಡೆಸುತ್ತಿರುವರು. ಸುಮಾರು 500000 ಕೂಲಿಗಾರರು ಮುಷ್ಕರದಲ್ಲಿ ಸೇರಿರುವರು. ದಿನದಿಂದ ದಿನಕ್ಕೆ ಕೆಲಸ ಬಿಡುವವರ ಸಂಖ್ಯೆ ಹೆಚ್ಚುತ್ತಾ ಬರುತ್ತಿದೆ; ಕೆಲಸಗಾರರಿಗಾಗುತ್ತಿರುವ ಸಂಕಷ್ಟಗಳು ಬೆಳಕಿಗೆ ಬೀಳುತ್ತಾ ಬರುತ್ತಿವೆ. ಆದರೂ ನ್ಯಾಯವಾದ ತೀರ್ಮಾನವು ವಿಳಂಬಿಸಲ್ಪಟ್ಟಿದೆ. ಅಷ್ಟೇ ಅಲ್ಲ, ಈ ಮುಷ್ಕರದ ಪ್ರಾಮುಖ್ಯತೆಯನ್ನು ಕಡಿಮೆಮಾಡಿ ತೋರಿಸುವ ಅಡ್ಡ ಹಾದಿಯ ಯತ್ನವೂ ನಡೆದಿದೆ. ಸಾವಿರಾರು ಜನರು ಮುಷ್ಕರದಲ್ಲಿ ಸೇರಿರುವಾಗ ರೈಲ್ವೇ ಏಜೆಂಟ್ ಮಿ. ಜರಾದರು ಆಕಳಿಕೆ ತೆಗೆಯುತ್ತಾ, "ಆಡಳಿತೆಗಾರರು ಮತ್ತು ಕೆಲಸಗಾರರೊಳಗೆ ಅಂತಹ ಜಗಳವೇನೂ ಇಲ್ಲ" ಎಂಬ ಹೇಳಿಕೆಯನ್ನಿತ್ತಿರುವುದು ಸೋಜಿಗನೇ ಸರಿ. ಮಿ. ಜರಾದರು "ಏನೂ ಇಲ್ಲ" ಎಂದೊಡನೆ ಇಂದಿನ ಮುಷ್ಕರವು ಏನೂ ಇಲ್ಲದಂತಾಗುವುದಾದರೆ ನಮಗೂ ಸಂತೋಷ! ಮಿ. ಜರಾದರಂಥವರು ಕೆಲಸಗಾರರಿಗೆ ಅತೃಪ್ತಿಯಿಲ್ಲ; ಬೇನೆ ಬೇಸರವಿಲ್ಲ ಎಂದು ಸದಾಕಾಲ ಹಾಡುತ್ತಿರುವವರು. ಆ ಕ್ರಮದಲ್ಲಿ ಒಂದಿಷ್ಟು ಮುಂದುವರಿದು ಈಗ ಮುಷ್ಕರವೇ ಇಲ್ಲವೆನ್ನುವ ಸ್ಥಿತಿಗೆ ಬಂದಿದ್ದಾರೆ! ಯಾವುದೇ ಇರಲಿ, ಇಲ್ಲದಿರಲಿ ತಮ್ಮ ಸಂಕಷ್ಟದ ಪರಮಾವಧಿಯನ್ನೂ ಸಹಿಸಿ ಮುಗಿಸಿದ ಕೂಲಿಗಾರರಿಗೆ ಇನ್ನದನ್ನು ತಡಕೊಳ್ಳುವ ಶಕ್ತಿಯೊಂದು ಇಲ್ಲವೆಂಬುದಂತೂ ನಿಜ. ಬಿ. ಎನ್. ರೈಲ್ವೇ ಮುಷ್ಕರವು ಅದನ್ನೇ ಸ್ಪಷ್ಟಪಡಿಸುತ್ತದೆ. ಪಂಡಿತ ಜವಾಹಿರಲಾಲರು ಹೇಳಿರುವಂತೆ ಇದು ಬರಿಯ 50000 ಜನರ ಪ್ರಶ್ನೆಯಲ್ಲ, ಕೂಲಿಗಾರ ಪ್ರಪಂಚದ ಪ್ರಶ್ನೆ. ಕೂಲಿಗಾರರ ವಾದದಲ್ಲಿ ನ್ಯಾಯವಿದೆಯೆಂಬುದು ಸ್ಪಷ್ಟವಾಗಿದೆ. ಅವರ ಸಂಕಷ್ಟದ ಪರಿಹಾರವು ಬೇಗನೇ ಆಗಬಹುದೆಂದು ಹಾರೈಸಬಹುದೆ?

ಶ್ರೀ ಸುಭಾಸ್ ಭೋಸರ ಆರೋಗ್ಯ

ಈಗ ಬಂಧನದಲ್ಲಿರುವ ಶ್ರೀ. ಸುಭಾಸಚಂದ್ರ ಭೋಸರ ಆರೋಗ್ಯವು ದಿನದಿಂದ ದಿನಕ್ಕೆ ಕೆಡಹತ್ತಿರುವದೆಂದು ಶ್ರೀ. ಭೋಸರೇ ತನ್ನೊಬ್ಬ ಮಿತ್ರನಿಗೆ ಬರೆದ ಪತ್ರದಲ್ಲಿ ತಿಳಿದುಬರುತ್ತದೆ. ಕಳದ ಜೂನ್ ತಿಂಗಳಲ್ಲಿ 171 ಪೌಂಡು ಇದ್ದ ತನ್ನ ತೂಕವು ಕಳೆದ ನವಂಬರ್ ಅಂತ್ಯಕ್ಕೆ 158ಕ್ಕಿಳಿದಿತ್ತೆಂದೂ ಗಂಟಲು ನೋವಿನಿಂದ ಬೇನೆಯುಣ್ಣುತ್ತಿರುವೆನಾಗಿಯೂ ಶ್ರೀ. ಭೋಸರು ತಿಳಿಸುತ್ತಾರೆ. ಸ್ಥಳ ಬದಲಾಯಿಸುವ ಅಗತ್ಯವಿದೆಯೆಂದು ಅವರನ್ನು ಪರೀಕ್ಷಿಸಿದ ಡಾಕ್ಟರರ ಮತ. ಅನಾರೋಗ್ಯದೊಡನೆ ಹೋರಾಡಿ, ಅದರಿಂದ ಬಿಡುಗಡೆ ಹೊಂದುವ ಸ್ವಾತಂತ್ರ್ಯವನ್ನು ಸುಭಾಸ್ ಬಾಬುಗಳು ಅಪೇಕ್ಷಿಸುವುದು ತಪ್ಪೆಂಬ ಭಾವನೆಯು ಸರಕಾರದಲ್ಲಿಯಾದರೂ ಇರಲಾರದು. ಹಾಗಾದರೆ ಅವರೇಕೆ ಈಗಲೂ ಬಂಧನದಲ್ಲಿರಬೇಕು? ಶ್ರೀ ಸುಭಾಸಬೋಸರು ಸಾರ್ವಜನಿಕ ಕೆಲಸದಲ್ಲಿ ಕೈಹಾಕುವದು ಸರಕಾರಕ್ಕೆ ಒಪ್ಪಿಗೆಯಿಲ್ಲದಿರಬಹುದು; ಅದಕ್ಕಾಗಿ ಸರಕಾರವು ಈಗ ಮಾಡಬೇಕಾದುದೇನೂ ಉಳಿದಿಲ್ಲ. ಆ ತಡೆಯನ್ನು ಅವರ ಪ್ರಕೃತಿಯೇ ಅವರಿಗೆ ಹಾಕಿಬಿಟ್ಟದೆ. ಇಂದಿನ ಸ್ಥಿತಿಯಲ್ಲಿ ಅವರನ್ನು ಬಿಡುಗಡೆ ಮಾಡುವಾಗ ಸರಕಾರವು ಯಾವ ಭೀಕರ ಕನಸನ್ನೂ ಕಾಣಬೇಕೆಂದಿಲ್ಲ; ಬದಲಾಗಿ ಅವರ ಆರೋಗ್ಯ ಸಾಧನೆಗೆ ಅನುಕೂಲ ಮಾಡಿಕೊಟ್ಟ ಸುಕೃತವನ್ನಷ್ಟೇ ಕಟ್ಟಿಕೊಳ್ಳಬಹುದು.

ಸ್ಪೈಯಿನಿಗೇನು ಗತಿ?

ಕಳದ ಕೆಲವು ತಿಂಗಳುಗಳಿಂದ ಸ್ಪೈಯಿನು ಪಟ್ಟ ಸಂಕಷ್ಟವು ವರ್ಣನಾತೀತವಿದೆ. ಮೇದ್ರಿದನ್ನು ರಕ್ಷಿಸುವ ಸಲುವಾಗಿ ತನ್ನ ಸರ್ವಶಕ್ತಿಯನ್ನೂ ಉಸಿರುಕಟ್ಟಿ ಉಪಯೋಗಿಸಿ, ವೈರಿಗಳ ಧಾಳಿಯನ್ನು ಬಾರಿ ಭಾರಿಗೂ ಹಿಮ್ಮೆಟ್ಟಿಸಿ, ಸ್ಪೈಯಿನು ಸರಕಾರವಿಂದು ಬಡವಾದ ಕುರುಹುಗಳು ಕಂಡು ಬರುತ್ತಿವೆ. ಈ ಇಳಿತದೊಡನೆ ಲೋಕಹಿತ ಸಾಧನೆಯ ಒಂದು ಶಕ್ತಿಯೂ ಇಳಿಜಾರುವದೆಂಬುದರಲ್ಲಿ ಅನುಮಾನವಿಲ್ಲ. ಈ ಸಂಕಷ್ಟ ಕಾಲದಲ್ಲಿಯೂ ಶಾಂತಿ ಸ್ಥಾಪನೆಯ ಹೆಸರಿನಿಂದ ಇತರ ರಾಷ್ಟ್ರಗಳು ನಡೆಸುತ್ತಿರುವ ವ್ಯವಹಾರವು ತೀರಾ ಮಕ್ಕಳಾಟಿಕೆಯೇ ಸರಿ. ಇಟಲಿ ಜರ್ಮನಿಗಳ ಖಾಡಾಖಾಡಿ ವಿರೋಧ, ಇತರ ರಾಷ್ಟ್ರಗಳ ಪುಕ್ಕತನ ಇವುಗಳಿಂದ ಸ್ಪೈಯಿನಿನ ಪ್ರಜಾಪ್ರಭುತ್ವವು ಅಡಿಮೇಲಾಗುವದಾದರೆ ಅದಕ್ಕೂ ಮಿಕ್ಕಿದ ದುಃಖಕರ ವಿದ್ಯಮಾನವು ಬೇರೊಂದಿರಲಾರದು.

ವಿದೇಶ

ಮೆಡಿಟರೇನಿಯನ್ (ಭೂಮಧ್ಯ) ಸಮುದ್ರದ ಹಕ್ಕಿನ ಕುರಿತು ಬ್ರಿಟಿಷರಿಗೂ ಇಟೆಲಿಯನರಿಗೂ ಒಂದು ಒಪ್ಪಂದದ ಕರಾರು.

ಕರಾರಿನ ಶರ್ತವಿಷ್ಟೇ: ನಮ್ಮ ತಳಿಗೆ ನೀವು ಎದುರಾಡಬಾರದು. ನಿಮ್ಮದಕ್ಕೆ ನಾವು ತೊಂದರೆ ಕೊಡುವುದಿಲ್ಲ ಇದರಿಂದ ಯಾರಿಗೂ ಭಾದೆಯಿಲ್ಲ ಎಂದೊಂದು ಒಪ್ಪಂದ. ಅಂತೂ ಇಟೆಲಿಯು ತನ್ನ ಹಕ್ಕನ್ನು ಸ್ಥಾಪಿಸಿಕೊಂಡಂತಾಯಿತು! ಇಟೆಲಿಗೆ ಬೇಕಾದುದು ಹೊಸ-ಹೊಸ ಹಕ್ಕುಗಳು ಬ್ರಿಟನ್ನಿಗೆ ಬೇಕಾದುದು ಏನಾದರೊಂದು ಸಂಧಿ ಹೇಗಾದರೂ ಅನಿಷ್ಟದಿನಗಳನ್ನು ಮುಂದೂಡಿದರಾಯಿತು ಬ್ರಿಟನಿಗೆ!

ಸ್ಪೈಯಿನಿನ ಯುದ್ಧ

ಅದು ಬಹುಶಃ ಭಯಂಕರ ಲೋಕನಾಶಕಾರಕ ಯುದ್ಧವಾಗಿ ಹರಡುವ ಚಿನ್ಹೆಗಳೇ ಹೆಚ್ಚು. ಸ್ಪೈಯಿನಿನ ದಂಗೆಗಾರ ಪಕ್ಷಕ್ಕೆ ಜರ್ಮನಿಯಿಂದ ಇಪ್ಪತ್ತು ಸಾವಿರ ಸೈನಿಕರು ಇಟೆಲಿಯಿಂದ ಐದ. ಸಾವಿರ ಸೈನಿಕರೂ ಬಂದಿರುವರು ಬಹಿರಂಗವಾಗಿ. ಇನ್ನು ಸೈನಿಕರ ವೇಷವಿಲ್ಲದೆ ಗುಪ್ತವಾಗಿ ಬಂದಿರುವವರೆಷ್ಟೊ. ಮಾತ್ರವಲ್ಲ ಅವೆರಡು ದೇಶಗಳೂ ಹಲವು ಅಂತರಾಷ್ಟ್ರೀಯ ನಿಯಮಗಳನ್ನು ಉಲ್ಲಂಘನೆಮಾಡಿ ಕಲಹಕ್ಕೆ ಕಾಲುಕೆದರುತ್ತಿವೆ. ಇದರಿಂದಾಗಿ ಇಷ್ಟವಿಲ್ಲದಿದ್ದರೂ ಫ್ರಾನ್ಸ್ ಒಂದುದಿನ ಸ್ಪೈಯಿನ್ ಸರಕಾರದ ಪಕ್ಷಕ್ಕೆ ಬ್ರಿಟನಿನೊಡನೆ ನಿಲ್ಲಬೇಕಾಗುತ್ತದೆ. ಆಗ ರಶ್ಯವೂ ಬರಲಿಕ್ಕೆ ಕಾದುಕೂತಿದೆ. ಯುದ್ಧವು ಸ್ಪೈಯಿನಿನ ಗಡಿದಾಟುವುದೇ ತಡ ಮಹಾ ಅನರ್ಥ ಕಾರಿಯಾದ ಯುದ್ಧವಾಗಿ ಪರಿಣಮಿಸುವುದು!

ಒಂದು ಮದುವೆಯ ಸಾಹಿತ್ಯ

ಯುಗೋಸ್ಲೇವಿಯಾದ ಸೂಂಬರ್ ಎಂಬುದರ ಸಮೀಪದ ಹಳ್ಳಿಯೊಂದರಲ್ಲಿ ಕೆತರೀನ್ ಶ್ಯೂಮರ್ ಮತ್ತು ಜೇಕಬ್ ಕೊನ್ರಾಟ್ ಇವರಿಗೆ ಮದುವೆಯಾಯಿತು. ಮದುವೆಯ ಔತಣಕ್ಕೆ ಹತ್ತು ಸಾವಿರ ರಾತಲು ಗೋಮಾಂಸ, ಎಂಟು ಸಾವಿರ ರಾತಲು ಹಂದಿಯ ಮಾಂಸ, ಇನ್ನೂರು ಕೊಬ್ಬಿದ ಕೋಳಿಗಳು, ಇನ್ನೂರು ರಾತಲು ಮೀನು ಒಂದು ಸಾವಿರ ರಾತಲು ಬ್ರೆಡ್! ಇವುಗಳನ್ನೆಲ್ಲ ಗಂಟಲ ಕೆಳಗಿಳಿಸಲಿಕ್ಕೆ ಮೂರು ಸಾವಿರ ಪ್ಯಾಂಟ್ ವ್ಯೆನ್ (ದ್ರಾಕ್ಷೆರಸ) ಮತ್ತು ಒಂದು ಸಾವಿರ ಪ್ಯಾಂಟ ರಾಕೀಜಾ (ದ್ರಾಕ್ಷೆ ಬ್ರಾಂಡಿ). ಈ ಔತನಕ್ಕೆ ನಿಮಂತ್ರಿತರಾದವರು ಏನೂರು ಮಂದಿ. ಬಂದರು ಒಂದು ಸಾವಿರ! ಎಲ್ಲರಿಗೂ ಸುಸ್ವಾಗತ!

ಮೊರೊಕ್ಕೊ (ಸ್ಪೈನಿನ ಎದುರು ಯಿರುವ ಕರಾವಳಿ ಪ್ರದೇಶ) ದಲ್ಲಿ

ಜರ್ಮನರ ದೊಡ್ಡ ಸೈನ್ಯವೂ ಯುದ್ಧ ಸಾಮಾಗ್ರಿಗಳೂ ಬಂದಿಳಿಯುವುದಕ್ಕೆ ವ್ಯವಸ್ಥೆಗಳಾಗಿವೆ. ಮಾತ್ರವಲ್ಲ ಫ್ರೆಂಚ್ ಮೊರೊಕ್ಕೊ ಮತ್ತು ಸ್ಪೆನಿಷ್ ಮೊರೊಕ್ಕೊಗಳ ಪ್ರಜೆಗಳು ಸ್ಪೈಯಿನಿನ ದಂಗೆಗಾರರ ಪಕ್ಷವನ್ನು ವಹಿಸಿದರೆ ವಿಶೇಷ ಸ್ವಾತಂತ್ರ್ಯವು ದೊರಕುವುದೆಂಬ ಆಸೆಯನ್ನು ಹುಟ್ಟಿಸುವ ಚಳವಳಿಗಳನ್ನು ಜರ್ಮನ್ ಮತ್ತು ಇಟೆಲಿಯವರು ನಡೆಸುತ್ತಿದ್ದಾರೆ.

ಸ್ವದೇಶ

ಬಿ. ಎನ್ ರೈಲ್ವೆ ಮುಷ್ಕರದಲ್ಲಿ 30000 ಮಂದಿ ಸೇರಿರುವರು.

ಇಂಡಿಯಾ ಸರಕಾರವು ತಾನದರ ಗೋಜಿಗೆ ಹೋಗುವುದಿಲ್ಲವೆನ್ನುತ್ತಿದೆ. ರಾಜಪಂಚಾಯ್ತಿಕೆಗೊಂದು ಬೋರ್ಡನ್ನು ನಿಯಮಿಸೋಣವೆಂದರೆ ಕಂಪೆನಿಯು ಕೇಳುವುದಿಲ್ಲ. ಮೂರು ಪ್ರಾಂತಗಳ ಸಂಚಾರ ಸೌಕರ್ಯವನ್ನು ನೋಡಿಕೊಳ್ಳಬೇಕಾಗಿರುವ ಹೊಣೆ ತನ್ನ ಹೊತ್ತ ಈ ಕಂಪೆನಿಯು ತನ್ನ ೬೦೦೦೦ ನೌಕರರಲ್ಲಿ ಸರಿ ಅರ್ಧಾಂಶ ಮುಷ್ಕರಹಾಕಿದರೂ ಹೊಸ ಹೊಸ ಜನರನ್ನು ನೇಮಿಸಿಕೊಂಡು ಹಾಗೂ ಹೀಗೂ ಇಂಜನು ನಡೆಸುತ್ತದೆ. ಇನ್ನು ಈ ಅನುಭವವಿಲ್ಲದ ಹೊಸ ಜನರಿಂದಾಗಿ ಯಾವ ಟ್ರೈನು ಯಾವುದಕ್ಕೆ ಕೂಡಬೇಕೊ ಎಷ್ಟೆಲ್ಲ ಪ್ರಾಣ ಹಾನಿಯಾಗಬೇಕೋ ಕಂಪನಿಗೆ ಬುದ್ಧಿ ಬರಬೇಕಾದರೆ!

ನಾಗಪುರ ಮಿಲ್ಸ್ (ಗಿರಣಿ) ಇದರಲ್ಲಿ ೬೦೦ ಮಂದಿ ಕೆಲಸಗಾರರ ಮುಷ್ಕರ- ಕಾರಣ, ಅಲ್ಲಿರುವ 952 ಮಗ್ಗಗಳಲ್ಲಿಯೂ ಕೆಲಸವಾಗಬೇಕೆಂದೂ ಈಗಿರುವಂತೆ 670 ಮಗ್ಗಗಳನ್ನು ಕೆಲಸದಲ್ಲಿ ಉಪಯೋಗಿಸಿದುದು ಸಾಲದೆಂದೂ ಕೆಲಸಗಾರರ ಹಟ. ಗಿರಣಿಯ ಮಾಲೀಕರು ಈಗಾಗಲೇ ದಾಸ್ತಾನು ಬಿದ್ದಿರುವ ಬಟ್ಟೆಗಳಿಗೇ ಗ್ರಾಹಕರಿಲ್ಲದಿರುವಾಗ ಇನ್ನೂ ನೆಯ್ದು ಹಾಕಿದರೆ ಕೊಂಡುಕೊಳ್ಳುವವರಿಲ್ಲವೆಂದೂ ಆದು ಕಾರಣ ಎಲ್ಲ ಮಗ್ಗಗಳನ್ನೂ ಕೆಲಸದಲ್ಲಿ ಹಾಕಲಿಕ್ಕೆ ಸಾಧ್ಯವಿಲ್ಲವೆಂದೂ ಹೇಳುತ್ತಾರೆ.

ಚುನಾವಣೆ ವೇದಿಕೆಯಲ್ಲಿ ಸ್ತ್ರೀ ಬಲಿಯಾಯಿತೆ?

ಗೋರಕ್‌ಪುರದಲ್ಲಿ ಅವನೊಬ್ಬ ಶೆಡ್ಯೂಲ್ ಜಾತಿಗಳ ಪಟ್ಟಿಯಲ್ಲಿ ಸೇರುವ ಚಾಮಾರ್ ಜಾತಿಯ 'ಕಾಂಗ್ರೆಸ್ಸ್ ಕಡೆಯ ಉಮೇದ್ವಾರಿ. ಪ್ರಾಥಮಿಕ ಚುನಾವಣೆಯ ದಿನವೇ ಆತನು ಉಮೇದ್ವಾರಿಕೆಯನ್ನು ಹಿಂತೆಗೆಯದಿದ್ದರೆ ಅನರ್ಥ ಪರಿಣಾಮವಾದೀತೆಂದು ಆತನಿಗೆ ಭಯ ಪ್ರದರ್ಶನ ಮಾಡಲಾಗಿತ್ತು. ಆದರೆ ಆತನು ಅದಕ್ಕೆ ಹೆದರಿ ತನ್ನ ಉಮೇದ್ವಾರಿಕೆಯನ್ನು ಹಿಂತೆಗೆಯಲಿಲ್ಲ. ಅದಕ್ಕಾಗಿ ಅವನ ಹೆಂಡತಿಗೆ ಕಠಿಣವಾದ ಹೊಡೆತ ಬಿತ್ತು. ಆತನು ಫಿರ್ಯಾದು ಮಾಡಿದ. ಈಗ ಆ ಹೆಂಡತಿಯೇ ಕಾಣೆಯಾಗಿದ್ದಾಳೆ. ಅವನಿಲ್ಲದಿರುವಾಗ ಅವಳನ್ನು ಹೊಡೆದು ಕೊಂದು ಶವವನ್ನೆಲ್ಲೊ ಅಡಗಿಸಿರುವರೆಂದು ಗುಮಾನಿ. ಅಲ್ಲಿಯ ಕಾಂಗ್ರೆಸ್ ಕಮಿಟಿಯು ಆತನ ಕಡೆಯಲ್ಲಿ ಕೆಲಸಮಾಡುತ್ತಿದೆ. ಪೋಲೀಸರು ಶೋಧನೆ ನಡೆಯಿಸುತ್ತಾರೆ!

ಮತಾಂತರ ಹೊಂದಿದರೂ ಅಸ್ಪೃಶ್ಯತೆಯು ಹೋಗಿಲ್ಲ!

ಕುಂಭಕೋಣದಲ್ಲಿ ಕಥೋಲಿಕರ ಕೆಥಿಡ್ರಲ್ (ಮಹಾ ದೇವಾಲಯ) ಕಟ್ಟಲ್ಪಟ್ಟಿತು ಅದಕ್ಕೆ ಕಥೋಲಿಕ ಮತಾಂತರ ಹೊಂದಿದ ಅಸ್ಪೃಶ್ಯರು ಹೇರಳ ವರಾಡವಂತಿಕೆಗಳನ್ನು ಕೊಟ್ಟಿದ್ದರು. ಕಟ್ಟುವುದರಲ್ಲಿ ಸಹ ಭಾಗಿಗಳಾಗಿದ್ದರು. ಈಗ ಅದರ ಪ್ರವೇಶಕ್ಕೆ ಮಾತ್ರ ಅವರಿಗಧಿಕಾರವಿಲ್ಲ. ಈ ಆದಿದ್ರಾವಿಡ ಕಥೋಲಿಕರು ನಮ್ಮೊಂದಿಗೆ ಇಗರ್ಜಿಯಲ್ಲಿ ಕುಳಿತುಕೊಳ್ಳುವುದೆ? ಎಂದಿಗೂ ಕೂಡದು. ಎಂದು ಮೇಲ್ಜಾತಿಯ ಕಥೋಲಿಕರ ಹಟ. ಕುಂಭಕೋಣದ ಬಿಷೋಪ ಸಾಹೇಬರೂ ಅದಕ್ಕೆ ಸೈಯೆಂದಿದ್ದಾರೆ. ಆದಿದ್ರಾವಿಡ ಕಥೋಲಿಕರು ತಮಗೆ ಪ್ರವೇಶ ಸಿಗಬೇಕೆಂದು ಸತ್ಯಾಗ್ರಹ ಹೂಡಿದ್ದಾರೆ! ಕಥೋಲಿಕರ ಭ್ರಾತೃತ್ವ, ಸರ್ವ ಸಮಾನತ್ವದ ತತ್ವವೆಲ್ಲಿದೆ? ಎಂದು ಕೇಳುತ್ತಾರೆ. ತಿರುಚನಾಪಳ್ಳಿಯ ಬಿಶೋಪರೂ ಮದ್ರಾಸಿನ ಆರ್ಚಬಿಷೋಪರೂ ಆದಿದ್ರಾವಿಡ ಕಥೋಲಿಕರ ಬೇಡಿಕೆಯು ನ್ಯಾಯವೆಂದೂ ಕಥೋಲಿಕರಲ್ಲಿ ಕೀಳುಮೇಲೆಂಬುದಿರಬಾರದೆಂದೂ ಸಾರಿದ್ದಾರೆ. ಜಗಳವು ಬಲವಾಗತೊಡಗಿದೆ!

ಪೋಲೀಸರು ತಮಗೇ ಗುಂಡಿಟ್ಟುಕೊಳ್ಳತೊಡಗಿರುವರಲ್ಲ!

ಕೊನ್ಸ್ಟೆಬಲ್ ನಾರಾಯಣಸಾಮಿ ನಾಯ್ಡು ಕೊಯಮುತ್ತೂರಿನ ಹಜೂರು ಟ್ರೆಜರಿಯ ಸಹರೆಮಾಡುತ್ತಲಿದ್ದ ಅವನಿಗೂ ಹೇಡ್ ಕೊನ್ಸ್ಟೆಬಲ್ ರಾಮಸಾಮಿ ನಾಯ್ಡು ಎಂಬವನಿಗೂ ವೈರತ್ವವಿತ್ತೆಂತ ಕಾಣುತ್ತೆ. ಕೊನ್ಸ್ಟೆಬಲನು ಹೇಡ್ ಕೊನ್ಸ್ಟೆಬಲನು ಮಲಗಿದ್ದ ಕಡೆಗೆ ಗುರಿಯಿಟ್ಟು ಮೇಲಿಂದಮೇಲೆ ಎರಡುಸಲ ರ್ಯಾಫಲ್ ಹೊಡೆದ, ಮೂರನೇ ಸರ್ತಿ ತನಗೇ ಇಟ್ಟುಕೊಂಡ ಬಹುಶಃ ಹೇಡ್‌ಕೊನ್ಸ್ಟೇಬಲನು ಸತ್ತನೆಂದು ತಾನು ಆತ್ಮಹತ್ಯೆ ಮಾಡಿಕೊಂಡಿರಬೇಕು ಆದರೆ ಹೇಡ ಕಾನ್ಸ್ಟೇಬಲನಿಗೆ ಎರಡು ಗುಂಡುಗಳೂ ಗುರಿ ತಪ್ಪಿ ಆತನು ಬದುಕಿದ್ದಾನೆ!

ಫಲಿಮಾರು

ದಕ್ಷಿಣಕನ್ನಡ ಜಿಲ್ಲಾ ಬೋರ್ಡು ಶಾಲಾಧ್ಯಾಪಕರ ಪರಿಷತ್ತು ತಾ. ೨೩-೧-೩೭ನೇ ಅಪರಾಹ್ನ ೨-೩೦ಕ್ಕೆ ಫಲಿಮಾರಿನಲ್ಲಿ ಜರಗುವದು. ಶ್ರೀ ರಘುಮಾನ್ಯ ತೀರ್ಥ ಶ್ರೀಪಾದಂಗಳವರು ಪರಿಷತ್ತನ್ನು ತೆರೆಯುವರು. ದಿವಾನ್ ಬಹದೂರ್ ಶ್ರೀ ಬಿ. ಮಹಾಬಲ ಹೆಗ್ಡೆಯವರು ಅಧ್ಯಕ್ಷರಾಗುವರು.

ತಿದ್ದುಪಡಿ

ಇದೇ ಸಂಚಿಕೆಯ "ಕಾಲಚಕ್ರದ ಹೇಂದ್ಲ ನಮ್ಮ ಕೈಯಲ್ಲಿದೆ" ಎಂಬ ಶಿರೋನಾಮೆಯ ಕೆಳಗೆ ೧೩ನೇ ಪುಟದಲ್ಲಿ ಪ್ರಕಟವಾದ ಲೇಖನದಲ್ಲಿ ಜಿಲ್ಲಾ ಬೋರ್ಡು ಸಭೆ 'ಇದೇ ತಿಂಗಳ ತಾ. ೨೮ರಲ್ಲಿ ಜರಗುವದೆಂದು ತಪ್ಪಾಗಿ ಮುದ್ರಿತವಾಗಿದೆ. ಇದೇ ತಾ. ೧೫ರಲ್ಲಿ ಜರಗುವದೆಂದಾಗಬೇಕು.

ಬರುವ ಮದರಾಸ್ ಎಸೆಂಬ್ಲಿಗೆ ಪುತ್ತೂರು ಡಿವಿಜನಿನಿಂದ ತಾನೂ ಒಬ್ಬ ಉಮೇದುವಾರನಾಗಿರುವೆನೆಂದು ಶ್ರೀಮಾನ್. ಬಿ. ನರಸಿಂಗರಾಯರು ನಮಗೆ ತಿಳಿಸುತ್ತಾರೆ.

ಶಿವಸಮಾಜ

ದಿವಂಗತ ಪಡಮನ್ನೂರು ರಾಮಚಂದ್ರರಾಯರ ದಿನಾಚರಣೆಗೆ ಸೇರಿದ ಸೋಲಿನ ಸಮಾಜದ ಸಭೆಯಲ್ಲಿ ತಿರುವಾಂಕೂರು ಮತ್ತು ಮೈಸೂರು ಮಹಾರಾಜರನ್ನು ಅಭಿನಂದಿಸುವ ಠರಾವುಗಳಾಗಿದ್ದವು.

ಈಗ ಬಂದ ವಾರ್ತೆ

ನಾರಾಯಣಗಂಜಿನಿಂದ ಬಂಗಾಲ ಲೇಜಿಸ್ಲೇಟಿವ್ ಎಸೆಂಬ್ಲಿಗೆ ಮುಸ್ಲೀಮು ಸೀಟಿನ ಉಮೇದುವಾರರಾಗಿ ನಿಂತಿದ್ದ ಮೌಲ್ವಿ ಅಪ್ತಾಬುದ್ದೀನ್ ಜೋಂದಕರರು ಚುನಾವಣಾ ಪ್ರಚಾರ ಕಾರ್ಯಕ್ಕೆ ಹೋಗಿದ್ದವರು ದುಸ್ಸಾಹಸರಿಂದ ಗುಂಡಿನೇಟಿನಿಂದ ಹೊಡೆಯಲ್ಪಟ್ಟು ಮೃತರಾಗಿರುವರು.

THE

GUARDIAN OF INDIA

INSURANCE COMPANY, Ltd.,

Head Office: **MADRAS.** Branch: **MANGALORE.**

Capital— Indian.

Management—Entirely Indian & Efficient.

LOW PREMIUMS.

CONDITIONS LIBERAL & EQUITABLE.

Schemes— Most novel, suited to all sorts and conditions and attractive.

ASSURED SECURTY

Life is uncertain, Savings are uncertain, Insurance is the only remedy for this uncertainty.

Let the Guardian Guard your future.

Insure your life with this popular and Progressive and Economical Indian Life Office—Do not delay.

Applications are invited from respectable gentlemen and ladies to represent the Company in S. Kanara, N. Kanara and Coorg on commission or salary or both.

Notice: All the policy holders & agents are informed that all future dealings must be made with The Branch Secretary, The Guardian of India Insurance Co., Ltd., Mangalore Branch.

ತೀರಾ ದೇಶೀಯ ಭಂಡವಾಳ=ತೀರಾ ದೇಶೀಯ ಆಡಳಿತೆ

ತೀರಾ ಭದ್ರವಾದ ಕಾರ್ಯಕ್ರಮ.

ತೀರಾ ಕಡಿಮೆ ವಿಮೆಯ ದರಗಳು — ಉದಾರವಾದ ಶರ್ತಗಳು

ನ್ಯಾಯನೀತಿ ಸಮ್ಮತವಾದ ವ್ಯವಹಾರ.

ತೀರಾ ಹೊಸ ಹೊಸ ನಮೂನೆಯ ಏರ್ಪಾಡುಗಳು,

ಎಲ್ಲಾ ಬಗೆಯ ವಿವಿಧ ಸ್ಥಿತಿಯ ಜನರಿಗೆ ಸರ್ವಾನುಕೂಲ.

ಅತ್ಯಾಕರ್ಷಕವಾದ ಶರ್ತಗಳು—ಖಂಡಿತವಾದ ಭದ್ರತೆ.

ಜೀವನ ಅನಿಶ್ಚಿತ; ಸಂಪಾದನೆ ಅನಿಶ್ಚಿತ.

ಇವುಗಳ ಬಾಧಕಕ್ಕೆ ಜೀವವಿಮೆಯೇ ಉತ್ತಮ ಪರಿಹಾರ.

ಒಮ್ಮೆ ನಮ್ಮಲ್ಲಿ ವಿಮೆ ಕೊಂಡವರು

ನಿರಾಶರಾಗಲಾರರು.

ಸೂಚನೆ:—ನಮ್ಮ ಎಲ್ಲಾ ಪಾಲಿಸಿಹೋಲ್ಡರರೂ, ಏಜಂಟರೂ ಇನ್ನು ಮುಂದೆ ತಮ್ಮ ವ್ಯವಹಾರವನ್ನು **ದಿ ಬ್ರಾಂಚ್ ಸೆಕ್ರೆಟರಿ, ದಿ ಗಾರ್ಡಿಯನ್ ಒಫ್ ಇಂಡಿಯಾ ಇನ್ಶೂರೆನ್ಸ್ ಕೋ., ಲಿಮಿಟೆಡ್,** ಮಂಗಳೂರು ಶಾಖೆ ಇವರೊಡನೆ ಬೆಳೆಸಬೇಕಾಗಿ ವಿನಂತಿ.

ವಿಶೇಷ ಮಾಹಿತಿಗಳಿಗೆ ಇವರಿಗೆ ಬರೆಯಿರಿ.

E. A. PAIS, B. Sc., ***Branch Secretary,*** **The Guardian of India Insurance Co., Limited,**
MANGALORE BRANCH.

ದಿ ಗಾರ್ಡಿಯನ್ ಒಫ್ ಇಂಡಿಯಾ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್,

ಮುಖ್ಯ ಆಫೀಸು—ಪೋಸ್ಟ್ ಬೊಕ್ಸ್ ೮೯—**ಮದ್ರಾಸು.**

ದಕ್ಷಿಣ ಕನ್ನಡ

ಮೂಡಬಿದ್ರೆ

ಮೂದಬಿದ್ರೆ ಉಪಾಧ್ಯಾಯರ ಸಂಘದ ೭ನೇ ಸಾಮಾನ್ಯ ಸಭೆಯು ಇದೇ ೧೯೩೭ನೇ ಜನವರಿ ತಾ. ೯ರಲ್ಲು ದಿಗಂಬರ ಜೈನ ಹಾಯರ್‌ಎಲಿಮೆಂಟರಿ ಶಾಲೆಯಲ್ಲಿ ದೇರೆಗುಡ್ಡೆ ಶಾಲಾಹೆಡ್ಮಾಸ್ಟರರಾದ ಮ. ರಾ. ಕೆ. ಪಿ. ನೇಮಿರಾಜ ಹೆಗ್ಡೆರವರ ಅಧ್ಯಕ್ಷತೆಯಲ್ಲಿ ಸಾಂಗವಾಗಿ ಜರಗಿತು. ಸಂಘದ ೭೬ಮೆಂಬರರ ಪೈಕಿ ೫೫ಮಂದಿ ಅಧ್ಯಾಪಕರೂ ಹಾಜರಿದ್ದರು. ಮಾರ್ನಾಡು ಬಿ. ಇ. ಎಂ. ಶಾಲಾ ಹೆಡ್ಮಾಸ್ಟರರಾದ ಮ. ರಾ. ಆರ್. ಕಲ್ಯಾಣರವರು ನಾಲ್ಕನೆ ಕ್ಲಾಸಿನ ಮಕ್ಕಳಿಗೆ ಲೆಕ್ಕ ಭಿನ್ನರಾಶಿಯಲ್ಲಿ ಮಾದರಿ ಪಾಠವನ್ನು ಬಹು ಸೊಗಸಾಗಿ ಕೊಟ್ಟರು. ಬರುವ ಸಭೆಯು ಫೇಬ್ರವರಿ ೧೩ಕ್ಕೆ ಮೂಡುಬಿದ್ರಿ ಲೇಬರ ಶಾಲೆಯಲ್ಲಿ ಜರಗಿಸಲ್ಪಡುವುದೆಂದು ಈ ಮೂಲಕ ತಿಳಿಸೋಣಾಗಿದೆ.

ಕಾರ್ಕಳ.

ಇದೇ ತಾ. 10-1-1937ರ ದಿನ ಸಾಯಂಕಾಲ ಸ್ವರಾಜ್ಯ ಮೈದಾನಿನಲ್ಲಿ ಕಾರ್ಕಳ ತಾಲೂಕು ಕಾಂಗ್ರೆಸ ಪಾರ್ಲಿಮೆಂಟರಿ ಬೋರ್ಡಿನ ನೇತೃತ್ವದಲ್ಲಿ ರಾಜಶ್ರಿ ವಕೀಲ ಕೆ. ಸಾಂತಯ್ಯ ಕಾಮತರ ಅಧ್ಯಕ್ಷತೆಯಲ್ಲಿ ತಾಲೂಕಿನ ಮಹಾಜನರ ಸಾರ್ವಜನಿಕ ಸಭೆಯು ನಡೆದು, ಬರುವ ಕೌನ್ಸಿಲು ಮತ್ತು ಎಸೆಂಬ್ಲಿ ಚುನಾವಣೆಗಳಲ್ಲಿ ಮತದಾರರು ಕಾಂಗ್ರೆಸ ಕಡೆಯ ಉಮೇದುವಾರರಿಗೇ ತಮ್ಮ ಮತಗಳನ್ನು ಕೊಡಬೇಕೆನ್ನುವ ಅರ್ಥಗರ್ಭಿತವಾದ ಕಾರಣಯುಕ್ತ ಭಾಷಣಗಳನ್ನು ಶ್ರೀಗಳಾದ ಪಿ. ವಾಸುದೇವ ಉಪಾಧ್ಯಾಯ ಎ. ಬಿ. ಸೆಟ್ಟಿ, ಬಿ. ವಾಸುದೇವರಾವ, ಕಟಪಾಡಿ ಶ್ರೀನಿವಾಸ ಶೆಣೈ, ಯಂ. ಯಸ್. ಅಧಿಕಾರಿ, ಕೆ. ಲಕ್ಷ್ಮಣ ಕುಡ್ವ, ಕೆ. ಮಹಾಬಲ ಪೈ, ಕೆ. ಸದಾನಂದ ಹೆಗ್ಡೆಯರು ಮಾಡಿದರು. ಆ ಮೇಲೆ ಚುನಾವಣೆಗಳಲ್ಲಿ ಕಾಂಗ್ರೆಸಿಗೇ ಜಯಸಾಗುವಂತೆ ಸಭಿಕರು ಹಸ್ತ ಪರ ಹಸ್ತೇನ ಪ್ರಯತ್ನಿಸಬೇಕೆಂದು ಅಧ್ಯಕ್ಷರು ಕೋರಿದರು. ಈಗ ಈ ತಾಲೂಕಿನಲ್ಲಿ ಪ್ರಚಂಡ ಬಹುಮತವಿರುವ ಹಾಗೆ ಕಾಣುತ್ತದೆ.

ದೇಶಭಕ್ತ ಕಾರ್ನಾಡು ಸದಾಶಿವರಾಯರ ಅಕಾಲ ನಿಧನದ ನಿಮಿತ್ತ ತಾ. ೧೦-೧-೧೯೩೭ರ ದಿನ ನಡೆದ ಸಾರ್ವಜನಿಕ ಸಭೆಯಲ್ಲಿ ಸಂತಾಪವನ್ನು ಸೂಚಿಸಿ, ಮೃತರ ಆತ್ಮಕ್ಕೆ ಶಾಂತಿಯನ್ನು ಇಚ್ಛಿಸುವ ಸರ್ವಾನುಮತಿಯ ಠರಾವು ಅಧ್ಯಕ್ಷರಿಂದ ಮುಂದೆ ತರಲ್ಪಟ್ಟು ಮಂಜೂರಾದುದು ಮಾತ್ರವಲ್ಲದೆ, ಮರುದಿನ ಪೇಟೆಯಲ್ಲಿ ಆ ಸಂಬಂಧ ಸಂಪೂರ್ಣ ಹರತಾಳ ಕೂಡ ಆಚರಿಸಲ್ಪಟ್ಟು ದುಃಖ ಪ್ರದರ್ಶನವೂ ನಡೆದಿದೆ.

ಕಟಪಾಡಿ.

ಕಟಪಾಡಿಯ ಯುವಕರು ತಾ. ೯-೧-'೩೭ ನೆ ಶನಿವಾರ ಸಭೆಸೇರಿ 'ನಿತ್ಯಾನಂದಸಂಯುಕ್ತ ಯುವಕ ಸಂಘ' ಎಂಬ ಹೆಸರಿನಿಂದ ಸಂಘವೊಂದನ್ನೇರ್ಪಡಿಸಿಕೊಂಡರು. ಶ್ರಿ. ಕೆ. ಸಂಜೀವ ಬಳ್ಳಾಲರು ಅಧ್ಯಕ್ಷ, ಶ್ರೀ. ಪಿ. ನಾರಾಯಣ ಸೆಟ್ಟರು ಉಪಾಧ್ಯಕ್ಷ, ಕಟಪಾಡಿ ದೇಜಪ್ಪ ಸೆಟ್ರು ಮತ್ತು ಗರಡಿ ದೇಜು ಸೆಟ್ರು, ಜತೆಕಾರ್ಯದರ್ಶಿಗಳು, ಶ್ರೀಯುತ ಲೋಕುಮಾದರು ಖಜಾಂಜಿಯರು, ಕುರ್ಕಾಲು ಶಾಲಾಧ್ಯಾಪಕ ಶ್ರೀ ದೇಜಪ್ಪ ಶೆಟ್ರು ಹಾಗೂ ಶ್ರೀ ಕೆ. ವಿಟ್ಠಲ ಸೆಟ್ರು ಮೆಂಬರರಾಗಿರುವ ಕಾರ್ಯಕಾರೀ ಮಂಡಳಿಯರಚನೆಯಾಯಿತು. ಸಂಘಕ್ಕೆ 30 ಕ್ಕೂ ಮಿಕ್ಕಿ ಇಪ್ಪರಲ್ಲೇ ಮೆಂಬರರಾಗಿ ಸೇರಿರುವರು ಶ್ರೀಗಳಾದ ಪಿ. ಎಮ್. ಶೆಟ್ಟಿ ಎಮ್. ಮುಣ್ಣ ಹೆಗ್ಡೆ, ಕೆ. ದೇಜಪ್ಪ ಶೆಟ್ಟಿ, ಎಮ್ ವಿ ಹೆಗ್ಡೆ, ಕೆ. ಸಂಜೀವ ಬಳ್ಳಾಳ ಎಮ್. ಆರ್. ಪೂಂಜ ಮೊದಲಾದವರು ಭಾಷಣವಿತ್ತು, ಸಂಘಶಕ್ತಿ ಕೊಂಗ್ರೆಸಿನ ಧ್ಯೇಯ ಮೊದಲಾದುವುಗಳನ್ನು ವಿವರಿಸಿದರು.

ಶಿರ್ವ.

ಶ್ರಿ ಶಾರದಾ ಪ್ರಾಥಮಿಕ ಶಾಲೆಯಲ್ಲಿ ತಾರೀಕು ೭-೧-೧೯೩೭ರಲ್ಲು ಸದ್ರಿ ಶಾಲಾ ವಿದ್ಯಾರ್ಥಿಗಳ ತರ್ಕ ಸಂಘದ ಪ್ರಥಮ ಸಭೆಯು ಶಾಲಾ ಮುಖ್ಯೋಪಾಧ್ಯಾಯ ಶಿರ್ವ ದುಗ್ಗಪ್ಪ ಹೆಗ್ಡೆರ ಅಧ್ಯಕ್ಷತೆಯಲ್ಲಿ ಜರಗಿಸಲ್ಪಟ್ಟಿತು ಈ ಸಂಘದ ಉದ್ದೇಶವನ್ನು ಶ್ರೀಯುತ ಶಿರ್ವ ಭೋಜರಾಯರೂ ಮತ್ತು ಶ್ರೀ ಶಿವಣ್ಣ ಶೆಟ್ರರವರೂ ವಿವರಿಸಿದರು. ಚಾಲ್ತಿ ವರ್ಷಕ್ಕೆ ಮುಖ್ಯ ಉಪಾಧ್ಯಾಯರನ್ನು ಅಧ್ಯಕ್ಷರಾಗಿಯೂ, ಶ್ರೀಯುತ ಶಿರ್ವ ಭೋಜರಾಯರನ್ನು ಕೋಶಾಧ್ಯಕ್ಷರನ್ನಾಗಿಯೂ ಪಾಂಡುರಂಗ ಕಮ್ತಿಯರನ್ನು ಕಾರ್ಯದರ್ಶಿಯನ್ನಾಗಿಯೂ ಶ್ರೀ ಎಸ್ ಸ ಂದರ ಹೆಗ್ಡೆಯನ್ನು ಸಹಾಯಕ ಕಾರ್ಯದರ್ಶಿಯನ್ನಾಗಿಯೂ ಸರ್ವಾನುಮತದಿಂದ ನಿರ್ಣಯಿಸಿದ ತರುವಾಯ ಅಧ್ಯಕ್ಷರ ಭಾಷಣ ದೇವರ ಪ್ರಾರ್ಥನೆ ನಡೆದು ಸಭೆಯು ಮುಕ್ತಾಯವಾಯ್ತು.

ಪಲಿಮಾರು

ತಾರೀಕು ೪ನೇ ಶುಕ್ರವಾರ ಶ್ರೀಯುತ ನಾರಾಯಣ ನ್ಯಾಕರವರ ಮನೆಯಲ್ಲಿ ಪೂರ್ವ ನಿಶ್ಚಯದಂತೆ ಸದ್ರಿಯವರ ಅಧ್ಯಕ್ಷತೆಯಲ್ಲಿ ಪಲಿಮಾರು ಗೌಡಸಾರಸ್ವತ ಯುವಕ ಸಂಘದ ಸಭೆಸೇರಿ ನಮ್ಮ ಜಿಲ್ಲೆಯ ಯೋಗ್ಯ ಮನೆತನದವರೂ, ತ್ಯಾಗಮಾರ್ಗಿಗಳೂ ಆದ ಶ್ರಿ ಎ. ಬಿ. ಸೆಟ್ರವರಿಗೇನೇ ಈ ಬಾರಿಯ ಚುನಾವಣೆಯಲ್ಲಿ ತಮ್ಮೆಲ್ಲವರ ಓಟನ್ನೇ ಕೊಡಬೇಕಾಗಿಯೂ ಅದಲ್ಲದೆ ಭಾರತದ ಆದರ್ಶ ಸಂಸ್ಥೆಯಾದ ಕೊಂಗ್ರೆಸ್ಸಿಗೇನೇ ಜಯಸಿಕ್ಕುವಂತೆ ಈ ಸಂಘದ ಸದಸ್ಯರೆಲ್ಲರೂ ತ್ರಿಕರಣ ಪೂರ್ವಕವಾಗಿ ಕೆಲಸಮಾಡಬೇಕಾಗಿಯೂ ಶ್ರೀಯುತ ರಾಮದಾಸ ಪ್ರಭುರಿಂದ ತಂದ ಠರಾವು ಸರ್ವಾನುಮತದಿಂದ ಪಾಸಾಗಿ, ಸಂಘದ ಕಾರ್ಯಕ್ರಮದಂತೆ ಪರಿಭಜನೆಯಾಗಿ ಈ ದಿನದ ಸಭೆಯು ವಿಸರ್ಜಿಸಲ್ಪಾತು.

ದಿವಂಗತ ದೇಶಭಕ್ತ ಶ್ರೀ. ಕಾರ್ನಾಡು ಸದಾಶಿವರಾಯರು

ಅಖಿಲ ಕರ್ನಾಟಕವನ್ನು ಅಪಾರಶೋಕಕ್ಕೀಡುಮಾಡಿ, ಶ್ರೀಯುತ ಕಾರ್ನಾಡು ಸದಾಶಿವರಾಯರು ಕಳದ ತಾ. ೯ರಲ್ಲಿ ಸಂಜೆ ೪ ಘಂಟೆಗೆ ಬೊಂಬಾಯಿಯ ಒಂದು ಆಸ್ಪತ್ರೆಯಲ್ಲ ನ್ಯುಮೋನಿಯಾ ಜ್ವರದಿಂದ ಜೀವನ ಯಾತ್ರೆಯನ್ನು ಕೊನೆಗೊಳಿಸಿ ಅಂತ್ಯಕಾಲವನ್ನು ಕೂಡಾ ಕೊಂಗ್ರೆಸ್ ಕ್ಷೇತ್ರದಲ್ಲಿಯೇ ಕಳೆದರು! ದೇಶಭಕ್ತರು ಇತ್ತೀಚೆಗೆ ಹೆಚ್ಚಾಗಿ ಬೆಂಗಳೂರಿನಲ್ಲಿ ವಾಸಿಸುತ್ತಿದ್ದರು. ಕಳದ ನವಂಬರ ಸಂದರ್ಶನವೇ ಅವರಿಗೆ ದಕ್ಷಿಣಕನ್ನಡದ ಕೊನೆಯ ದರ್ಶನವಾಯಿತು. ಆಗ ದೇಹದಲ್ಲಿ ಒಂದಿಷ್ಟು ಕೃಶವಾಗಿದ್ದರೂ, ಉತ್ಸಾಹದಿಂದ ನಗುಮೊಗದಿಂದ ಇಲ್ಲಿಯ ಕೊಂಗ್ರೆಸ್ ಕೆಲಸಗಳಲ್ಲಿ ಭಾಗವಹಿಸಿದ್ದರು. ಇಲ್ಲಿಂದ ಮೈಸೂರಿಗೆ ಹೋದವರು ಅಲ್ಲಿಂದ ಫೈಜಪುರ ಕೊಂಗ್ರೆಸಿಗೆ ತೆರಳಿದರು. ಅಲ್ಲಿಯೇ ಜ್ವರವು ಕಾಣಿಸಿಕೊಂಡಿತು. ಚಿಕಿತ್ಸೆಗಾಗಿ ಬೊಂಬಾಯಿಗೆ ತೆರಳಿದರು. ಉತ್ತಮ ರೀತಿಯ ಚಿಕಿತ್ಸೆಯು ದೊರೆಯಿತು. ಯಾವದೂ ಫಲಿಸದೆ ಅವರನ್ನು ನ್ಯುಮೋನಿಯವು ಬಲಿಗೊಂಡೇ ಬಿಟ್ಟಿತು!

ದೇಶಭಕ್ತ ಶ್ರೀಯುತ ರಾಯರು ಮಂಗಳೂರಿನ ಪ್ರಸಿದ್ಧ ಸಾರಸ್ವತ ಮನೆತನವಾದ ಕಾರ್ನಾಡು ಮನೆತನದವರು. ಅವರ ತಂದೆ ಶ್ರೀ. ಕಾರ್ನಾಡು ರಾಮಚಂದ್ರಯ್ಯನವರು ತುಂಬಾ ಹಣ ಮತ್ತು ಕೀರ್ತಿಗಳಿಸಿದ ವಕೀಲರು. ಶ್ರೀ. ಸದಾಶಿವರಾಯರು ಅವರ ಏಕೆ ಮಾತ್ರ ಪುತ್ರರು, ಬಹು ಮಮತೆಯವರು. ಸ್ಥಳೀಯ ಗವರ್ನಮೆಂಟ್ ಕಾಲೇಜಿನಲ್ಲಿ ಇಂಟರ್‌ಮಿಡಿಯೇಟಿನ ವರೆಗೆ ಓದಿ, ಮದ್ರಾಸಿನಲ್ಲಿ ಬಿ. ಎ. ಪಾಸುಮಾಡಿ ಮುಂಬಾಯಿಗೆ ತೆರಳಿ ಎಲ್. ಎಲ್. ಬಿ. ಡಿಗ್ರಿ ಹೊಂದಿ, ಮಂಗಳೂರಿನಲ್ಲಿ ವಕಾಲತನ್ನಾರಂಭಿಸಿದರು. ಅಂದಿನ ತರುಣ ವಕೀಲ ಶ್ರೀ. ಕಾರ್ನಾಡು ಸದಾಶಿವರಾಯರು ಫೆಶನಿನ ದಾಸರಾಗಿದ್ದರು. ಅಗರ್ಭ ಶ್ರೀಮಂತಿಕೆ ವಕಾಲತಿನ ಸಂಪಾದನೆ ಇವುಗಳಿಂದ ರಾಯರ ಜೀವನವು ವೈಭವ ಪೂರ್ಣವಾಗಿತ್ತು. ಆದರೂ ಹುಟ್ಟುದಾತರು ಕೆಲವುವೇಳೆ ಕಕ್ಷಿಗಾರರಿಗೆ ತನ್ನ ಕೈಯಿಂದ ಹಣಬಿಟ್ಟು ಖರ್ಚುಮಾಡಿದುದುಂಟು. ಅಕ್ಕಿ ಮುಡಿಗೆ ಹದಿನೈದು ರೂಪಾಯಿ ಆದ ಕಾಲ ಸಾವಿರಾರು ಮುಡಿ ಅಕ್ಕಿಯನ್ನು ಅತ್ಯಲ್ಪ ಬೆಲೆಗೆ ಬಡವರಿಗೆ ಕೊಟ್ಟಿದ್ದರು. ನೆರೆ ಹಾವಳಿಯ ಕಾಲ ಅತಿ ಹೆಚ್ಚಿನ ಸಹಾಯಮಾಡಿದ್ದರು. ೧೯೨೦ರಲ್ಲಿ ಅಸಹಕಾರವಾರಂಭವಾದಾಗ ತನ್ನ ವಕೀಲ ವೃತ್ತಿಯನ್ನು ಮಾತ್ರವಲ್ಲ, ತನ್ನ ಸರ್ವ ಸಂಪತ್ತನ್ನೂ ದೇಶಕ್ಕಾಗಿ ತ್ಯಾಗಮಾಡಿದರು.

ತಿಲಕ ವಿದ್ಯಾಲಯವನ್ನು ರೂಪಾಯಿ ೧೦೦೦೦ದ ವರೆಗೆ ಖರ್ಚುಮಾಡಿ ಸ್ಥಾಪಿಸಿದರು. ಕದ್ರಿಯ ಸಾಧಕಾಶ್ರಮಕ್ಕೆ ೮೦೦೦ ಖರ್ಚುಮಾಡಿದ್ದರಲ್ಲದೆ, ತಿಂಗಳಿಗೆ ರೂ. ೩೦೦ರ ಸಹಾಯವೀಯುತ್ತಿದ್ದರು. ಖಾದಿ ಪ್ರಚಾರಕ್ಕೆ ರೂ. ೭೦೦೦ ಖರ್ಚುಮಾಡಿದ್ದರು. ರೂ. ೩ರ ಒಂದು ಸಾವಿರ ಚರ್ಕಗಳನ್ನು ತಯಾರಿಸಿ ಜಿಲ್ಲೆಯಲ್ಲೆಲ್ಲಾ ಹಂಚಿ ನೂಲುವಮಾಡಿಸಿದ್ದರು. ಸತ್ಯಾಗ್ರಹದಲ್ಲಿ ಉತ್ಸಾಹದಿಂದ ಭಾಗವಹಿಸಿ, ಒಟ್ಟಿಗೆ ಮೂರುಸಲ ಕಾರಾಗ್ರಹವನ್ನು ಪ್ರವೇಶಿಸಿದ್ದರು ಮೂರು ವರ್ಷ ಕ. ಪ್ರಾಂತಿಕ ಕೊಂಗ್ರೆಸ್ ಕಮಿಟಿಯ ಅಧ್ಯಕ್ಷರಾಗಿದ್ದರಲ್ಲದೆ ಬೆಳಗಾಂ ಕಾಂಗ್ರೆಸಿನಸ್ವಾ. ಕ. ಉಪಾಧ್ಯಕ್ಷರಾಗಿದ್ದರು. ಹಲವು ಕೊಂಗ್ರೆಸ್ ಸಂಸ್ಥೆಗಳಲ್ಲಿ ಅಧಿಕಾರಿಗಳಾಗಿದ್ದರು. ಮಂಗಳೂರಿನ 'ಮಹಿಳಾ ಸಭಾ' 'ಸ್ಟೂಡೆಂಟ್ಸ್ ಬ್ರದರ್‌ಹುಡ' 'ಡಿಪ್ರೆಸ್ಡ್ ಕ್ಲಾಸಸ್ ಮಿಶನ್' ಮೊದಲಾದ ಸಂಸ್ಥೆಗಳಿಗೆ ಶ್ರೀ ಸದಾಶಿವರಾಯರ ಕೊಡುಗೈಯ ದಾನವೇ ಜೀವಾಳ. ಶ್ರೀಯುತ ರಾಯರು ಬ್ರಹ್ಮ ಸಾಮಾಜಿಕರು. ತೀವ್ರ ಸುಧಾರಕರು. ಸಂಪತ್ತಿನ ಪ್ರತಿಯೊಂದು ಭಾಗವೂ ಸಾರ್ವಜನಿಕರ ಸೊತ್ತು; ಜೀವಮಾನದ ಪ್ರತಿಯೊಂದು ಕ್ಷಣವೂ ದೇಶಸೇವೆಯ ಮುಡಿಪು—ಹೀಗಿದ್ದೇ ಮುಗಿದು ಹೋಯಿತು ಶ್ರೀ ಕಾರ್ನಾಡು ಸದಾಶಿವ ರಾಯರ ಕಾಲ! ದಿವಂಗತರಿಗೆ ಇಬ್ಬರು ಪುತ್ರಿಯರಿರುವರು. ಇಬ್ಬರೂ ಪ್ರಾಯಬಂದವರು, ಅವಿವಾಹಿತರು. ಮುದಿ ತಾಯಿಯೂ ಇರುವರು. ಕೀರ್ತಿಶೇಷ ರಾಯರು ಸದ್ಾಹಸನ್ಮುಖಿಗಳು. ಬೇನೆ ಬೇಸರವಿಲ್ಲದೆ ಶಾಂತಿ ಯುದ್ಧವನ್ನು ನ್ನಡೆಸಬಲ್ಲ ಅರ್ಹತೆಯಿದ್ದವರು. ಅತ್ಯಂತ ಸರಳ ಸ್ವಭಾವಿಯು, ನಿಗರ್ವಿಯು, ತ್ಯಾಗ ಪ್ರಭಾವವು ನಡೆ. ನುಡಿಗಳಲ್ಲಿ ತೋರಿಬರುವ ಕರ್ಮಯೋಗಿಯು. ಸಾಯುವಾಗ ೫೬-೫೭ ವರ್ಷ ಪ್ರಾಯ. ದೇಶಭಕ್ತರು ನಿಧನಹೊಂದಿದ ವಾರ್ತೆ ತಲಪಿದೊಡನೆ ಮಂಗಳೂರಿನಲ್ಲಿ ಸಾರ್ವತ್ರಿಕ ಹರತಾಳವಾಚರಿಸಲ್ಪಟ್ಟಿತು. ಪಟ್ಟಣವಿಡೀ ಮೌನವಾಗಿ ಅಳುತ್ತಿತ್ತು. ಸಂಜೆ ಒಂದು ಮೈಲುದ್ದದ ಬರೀ ತಲೆಯ ಮೆರವಣಿಗೆಯು ಕೊಂಗ್ರೆಸು ಮಂದಿರದಿಂದ ಹೊರಟು ಮೈದಾನಿನಲ್ಲಿ ಐದು ಸಾವಿರಕ್ಕೂ ಮಿಕ್ಕಿದ ಸಂದಣಿಯ ಸಭೆಕೂಡಿತು. ಡಾ। ವಿಟ್ಠಲ ಸೆಟ್ರು ಅಧ್ಯಕ್ಷರಾಗಿದ್ದರು. ಶ್ರೀಗಳಾದ ಹಿ. ರಾ. ಮಲ್ಯ, ಎಸ್. ಎಸ್. ಕಿಲ್ಲೆ, ಕಲ್ಕೀರಿರಂಗರಾವ್ ಚಂಡೂರ ಮೊದಲಾದವರ ಭಾಷಣಗಳಾದವು.

ದೀರ್ಘಕಾಲದ ರೋಗಗಳಿಂದ ಇನ್ನೂ ಇನ್ನೂ ವೃಥಾ ನರಳುತ್ತಿರುವುದೇಕೆ?

ನಾಯಕ್ ಬ್ರದರ್ಸರ ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ.ಕ.

ಇವರ ಅತ್ಯಮೂಲ್ಯವಾದ ಔಷಧಗಳ ಸೇವನೆಯಿಂದ ಶೀಘ್ರದಲ್ಲೇ ಗುಣಹೊಂದಬಹುದಲ್ಲವೇ?

ಇವರ ಔಷಧಗಳ ವೈಶಿಷ್ಟ್ಯ ಏನು?

ದೇಶೀಯ ಉದ್ಯಮ
100 ವರ್ಷಗಳ ಅನುಭವದಿಂದ ತಯಾರಿ.
ಶಾಸ್ತ್ರೀಯ ರೀತಿಯ ಸಿದ್ಧತೆ.
ಅತ್ಯಂತ ಗುಣಕಾರಿ.
ಸ್ವರ್ಣ, ರಜತಪದಕಗಳನ್ನು ಪಡೆದ ದಿವ್ಯೌಷಧಗಳು.
ಅತ್ಯಂತ ಕಡಿಮೆ ಬೆಲೆ.

ಭುವನೇಂದ್ರ ತ್ರಿರತ್ನಗಳು

ಗುಡಪಿಪ್ಪಲಿ
(ಮಕ್ಕಳ ಲೀವರ್ ರೋಗಕ್ಕೆ ಅತ್ಯುತ್ತಮ)
ಗರ್ಭಪಾಲ
(ಗರ್ಭಶೂಲೆ, ಗರ್ಭಸ್ರಾವಕ್ಕೆ ದಿವ್ಯೌಷಧ)
ಚಂದ್ರಮಸ್
(ವಾಂತಿಭೇದಿ, ಅತಿಸಾರಗಳ ಮೇಲೆ
(ಅತ್ಯಂತ ಗುಣಕಾರಿ)

ಶಾಸ್ತ್ರೀಯರೀತ್ಯಾ ತಯಾರಿಸಿದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲಗಳು---ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ.
ನಮ್ಮ ಪ್ರತಿನಿಧಿಗಳಿಲ್ಲದ ಕಡೆಗಳಲ್ಲಿ ವ್ಯವಹಾರಕುಶಲರೂ, ವ್ಯಾಪಕರೂ, ಯೋಗ್ಯರೂ ಆದ ಏಜಂಟರು ಬೇಕು. ಅವರಿಗೆ ವಿಪುಲವಾದ ಸೌಕರ್ಯಗಳಿವೆ.

ಹೆಚ್ಚಿನ ಮಾಹಿತಿಗೂ, ಸೂಚಿಪತ್ರಕ್ಕೂ, ವ್ಯವಹಾರನಿಯಮಗಳ್ಗೂ ಬರಕೊಳ್ಳಿರಿ.

ಕಾಲಚಕ್ರದ 'ಹೇಂಡ್ಲ್' ನಮ್ಮ ಕೈಯಲ್ಲಿದೆ! (?)

ಮೇಲಿನ ಹೆಡ್ಡಿಂಗನ್ನು ಓದಿ 'ಕಾಲಚಕ್ರದ ಹೇಂಡ್ಲನ್ನು ಕಂಡು ಹಿಡಿವ ಈ ವಿಜ್ಞಾನಿ ಎಲ್ಲಿಂದ ಬಂದನಪ್ಪಾ' ಎಂದು ನೀವು ಆಶ್ಚರ್ಯ ಪಡಬಹುದು. ಅದಕ್ಕೆ ವಿಜ್ಞಾನ ಶಾಸ್ತ್ರವನ್ನೇ ಕಲಿಯಬೇಕೆಂದಿಲ್ಲ; ಅನುಕೂಲ ಶಾಸ್ತ್ರವನ್ನು ಕಲಿತರೂ ಸಾಕಾಗುತ್ತದೆ! ತಾರೀಕು ೩ನೇ ದಶಂಬರ ೧೯೩೬ರ ನವಯುಗವನ್ನು ಓದಿದ ನೆನಪುಂಟೆ? ಅದರಲ್ಲಿ ಡಾ| ವಿಟ್ಠಲ ಶೆಟ್ರು ಡಿಸ್ಟ್ರಿಕ್ಟ್ ಬೋರ್ಡು ಪ್ರೆಸಿಡೆಂಟರಿಗೊಂದು ಪತ್ರ ಮತ್ತು ಬರುವ ಜಿಲ್ಲಾ ಬೋರ್ಡು ಮೀಟಿಂಗಿನಲ್ಲಿ ತಾನು ತರಲಿಕ್ಕಿರುವ ಠರಾವು ಇವೆರಡನ್ನು ಪ್ರಕಟಿಸಿದ್ದರು. ಅವರು ಪ್ರಕಟಿಸಿದ್ದ ಪತ್ರದ ಅರ್ಥವಿದು—'ಕಳೆದ ಜಿಲ್ಲಾ ಬೋರ್ಡು ಮೀಟಿಂಗಿನ ಪ್ರಶ್ನೋತ್ತರಗಳಿಂದ 1934-35 ಮತ್ತು 1835-36ನೇ ವರ್ಷಗಳ ರಸ್ತೆ ಕಂಟ್ರಾಕ್ಟಿನ ಟೆಂಡರುಗಳು ದಶಂಬರದಲ್ಲಿ ಕರೆಯಲ್ಪಟ್ಟು ಜನವರಿ ಮೂರನೇ ವಾರದಲ್ಲಿ ಕಂಟ್ರಾಕ್ಟಿನ ನಿರ್ಣಯಗಳಾಗಿದ್ದುವೆಂದು ತಿಳಿದುಬಂದುದನ್ನು ದಯವಿಟ್ಟು ನೆನಪುಮಾಡಿಕೊಳ್ಳಿ. ಅದೇ ಮೀಟಿಂಗಿನಲ್ಲಿ ಈ ವರ್ಷ ಮಾತ್ರ ಟೆಂಡರು ಕರೆಯಲು ತಡವೇಕೆ ಎಂಬ ಪ್ರಶ್ನೆಗೂ, 1937-38ನೇ ಇಸವಿಗಳ ಬಗ್ಗೆ 1937ನೇ ಜನವರಿ ಮಧ್ಯದಲ್ಲಿಯಾದರೂ ಟೆಂಡರುಗಳ ಕುರಿತು ನಿರ್ಣಯಗಳು ಹೊರಬೀಳಬಹುದೋ ಎಂಬ ನನ್ನ ಉಪಪ್ರಶ್ನೆಗಳಿಗೂ ತಾವು ಸ್ಪಷ್ಟವಾದ ಉತ್ತರವನ್ನು ದಯಪಾಲಿಸಲಿಲ್ಲ. ಬರುವ ಚುನಾವಣೆಯ ಸಂಬಂಧದಿಂದಲೇ ರಸ್ತೆ ಕಂಟ್ರಾಕ್ಟು ವಿಳಂಬಿಸಲ್ಪಟ್ಟಿದೆ ಎಂಬ ಅನುಮಾನಕ್ಕೆ ಇದು ಆಸ್ಪದವನ್ನು ಕೊಟ್ಟಿದೆ. ಆದ್ದರಿಂದ ಕಂಟ್ರಾಕ್ಟುದಾರರು ತಮ್ಮ ಕೆಲಸವನ್ನು ಸಕಾಲದಲ್ಲಿ ಮಾಡಲನುಕೂಲವಾಗುವಂತೆ ನಾನೀ ಠರಾವನ್ನು ಬರುವ ಮೀಟಿಂಗಿನ ಮುಂದಿಡಲಿಚ್ಛಿಸುತ್ತೇನೆ.' ಹೀಗೆ ಸ್ಪಷ್ಟವಾಗಿ ಬರೆದಿದ್ದರು ಡಾ. ಶೆಟ್ಟಿಯವರು. ಠರಾವಿನ ಅರ್ಥವೂ ಅದೆ 'ಈ ಮೀಟಿಂಗು 1937-38ರ ಬಗ್ಗೆ ರಸ್ತೆ ಕಂಟ್ರಾಕ್ಟು ತೀರ್ಮಾನವು 1937ನೇ ಇಸವಿಯ ಜನವರಿ ಅಂತ್ಯದೊಳಗೆ ಹೊರಬೀಳಬೇಕಲ್ಲದೆ ಪ್ರತಿವರ್ಷವೂ ಹಾಗೆಯೇ ಆಗಬೇಕೆಂದು ನಿರ್ಧರಿಸುತ್ತದೆ' ಇಷ್ಟು ಸಂಗತಿಗಳನ್ನು ಶ್ರೀ ವಿಟ್ಠಲ ಶೆಟ್ರು ನವಯುಗದಲ್ಲಿ ಮಾತ್ರವಲ್ಲ; ಇತರ ಪತ್ರಿಕೆಗಳಲ್ಲಿಯೂ ಪ್ರಕಟಿಸಿದ್ದರು. ಪ್ರೆಸಿಡೆಂಟರಿಗೂ ಕಳುಹಿಸಿದ್ದರು ಜಿಲ್ಲಾ ಬೋರ್ಡಿನ ಮೀಟಿಂಗು ಇದೇ ತಿಂಗಳ ತಾ. 27ರಲ್ಲಿ ನಡೆಯಲಿದೆ. ಆ ಮೀಟಿಂಗಿನ ಕಾರ್ಯಕ್ರಮ ಪಟ್ಟಿ (ಎಜೆಂಡ)ಯು ಹೊರಬಿದ್ದಿದೆ. ಅದರಲ್ಲಿ ಈ ಠರಾವಿನ ಸುದ್ದಿ ಇಲ್ಲ. ಶ್ರೀಮತಿ ಪಿ. ಮನೋರಮಾಬಾಯಿಯವರು ಕೆಲವು ಪ್ರಶ್ನೆಗಳನ್ನು ಕಳುಹಿಸಿದ್ದರು; ಅವು ಡಿ. ಬೋರ್ಡಿನ ಆಡಳಿತೆಗೆ ಸಂಬಂಧಪಟ್ಟವುಗಳು. ಅವುಗಳ ಪ್ರಸ್ತಾಪವಿಲ್ಲ! ಇದನ್ನು ಕಂಡೇ ಕಾಲಚಕ್ರದ ಹೇಂಡ್ಲ್ ನಮ್ಮ ಕೈಗೆ ಬಂದಾಯಿತು—ಎಂದು ನೆನಸಿಕೊಂಡೆ. ಅನುಕೂಲ ಶಾಸ್ತ್ರಕ್ಕೆ ವಿಜ್ಞಾನ ಶಾಸ್ತ್ರದಷ್ಟೇ ಕಾರಣಿಕವಿರುವದೆಂದು ತಿಳಕೊಂಡೆ.

ಫೆಬ್ರುವರಿ 18ಕ್ಕೆ ಚುನಾವಣೆಯಾಗುವದೆಂದು ಗೊತ್ತಾಗಿದೆ. ಜನವರಿ ಅಂತ್ಯದಿಂದ ಫೆಬ್ರವರಿ 18ರ ವರೆಗಿರುವ ದಿವಸಗಳೆಂದರೆ ಒಂದೇ ಹದಿನೆಂಟು ಎಂಬುದು ಬರಹ ಗೊತ್ತಿಲ್ಲದವರಿಗೂ ಗೊತ್ತು. ಅದು ಹದಿನೆಂಟಾಯಿತಲ್ಲ—ಟೆಂಡರು ಒಂದೊಂದಕ್ಕೆ ನೂರ ಹದಿನೆಂಟರಂತೆ ಉಮೇದ್ವಾರರಿರಬಹುದೆನ್ನಿ; ಆ ನೂರಹದಿನೆಂಟರಲ್ಲಿ ಕೊಡಲು ಸಾಧ್ಯವಿರುವದು ಒಬ್ಬನಿಗೆ ಮಾತ್ರ ಉಳಿದ ನೂರ ಹದಿನೇಳು ಮಂದಿ ತಮಗೆ ಆ ಕಂಟ್ರಾಕ್ಟ್ ಸಿಕ್ಕಲಿಲ್ಲವೆಂದಾದೊಡನೆ ಮುಖವೆಷ್ಟು ಚಿಕ್ಕದಾಗಬಹುದೆಂಬ ಚಿತ್ರವನ್ನು ನೀವೇ ಚಿತ್ರಿಸಿಕೊಳ್ಳಿ! ಅವರ ಮುಖಗಳು ಇಂದಲ್ಲದಿದ್ದರೆ ನಾಳೆಯಾದರೂ ಚಿಕ್ಕವಾಗಲೇ ಬೇಕು. ಆದರೆ ಹಾಗಾಗಲು ಮಾತ್ರ ಕಾಲವಲ್ಲ. ಮುಖದ ಆಕಾರ ಸಣ್ಣದಾದರೆ ಪರವಾ ಇಲ್ಲ-ಅದು ಸಣ್ಣದಾಯಿತೆಂದು ಓಟಿನ ಸಂಖ್ಯೆಯು ಸಣ್ಣದಾದರೆ? ಈ ಚುನಾವಣೆಯ ಕಾಲದಲ್ಲಿ ಎಲ್ಲರ ಮುಖಗಳೂ ಅರಳಿಕೊಂಡೇ ಇರಬೇಕು; ಅದರಲ್ಲೂ ಕಂಟ್ರಾಕ್ಟುದಾರರೆಂದ ಮೇಲೆ ಅವರು ರಸ್ತೆ ಕಂಟ್ರಾಕ್ಟುದಾರರಾಗಿದ್ದಂತೆಯೇ ಹುಟ್ಟು ಕಂಟ್ರಾಕ್ಟುದಾರರಾಗಿಯೂ ಇರಬಹುದು! ಅವರೇಕೆ ಈ ಚುನಾವಣೆ ಕಾಲದಲ್ಲಿಯೇ ನಿರಾಶರಾಗಬೇಕು? ಅದಕ್ಕಿದೆ ಉಪಾಯ-ಕಾಲ ಚಕ್ರದ ಹೇಂಡ್ಲಿಗೆ ಕೈಕೊಡುವದು, ಅದನ್ನೊಂದೆರಡು ತಿಂಗಳ ಮಟ್ಟಿಗೆ ಹಿಡಿದು ನಿಲ್ಲಿಸುವದು! ವಿಜ್ಞಾನ ಶಾಸ್ತ್ರದಿಂದ ಹೊಸಹೊಸ ಶೋಧನೆಗಳಾಗುತ್ತಿವೆ—ಅನುಕೂಲ ಶಾಸ್ತ್ರದಿಂದ ಆಗಬಾರದೆಂದೇನು?

ಸಿದ್ಧಾಂತಗಾರ.

ಪುನಹ ಪ್ರಭಾತ ಚಿತ್ರ ಜ್ಯೋತಿ!

ಅಮೃತ ಮಂಥನ--ಮಹಾತ್ಮಾ ಮುಂತಾದ ಆದರ್ಶಗಳನ್ನಿತ್ತು ನಿಮ್ಮನ್ನು ಸದಾ ತನ್ನವರನ್ನಾಗಿ ಮಾಡಿಕೊಂಡ ಪ್ರಭಾತ ಚಿತ್ರ.

ರಜಪುತ್ ರಮಣಿ

ನಲಿನಿ ತರ್ಖಡ್, ಶಾಂತಾ ಆಪ್ಟೆ

ಅಲ್ಲದೆ ಸಾವಿರಾರು ಮಂದಿ ಇತರರು

ತಾರೀಕು **14**ನೇ ಜನವರಿ **1937**ರಿಂದ

ಶ್ರೀ ಚಿತ್ರಾ ಟಾಕೀಸ್, ಮಂಗಳೂರು

ಇಲ್ಲಿ ಪ್ರದರ್ಶಿಸಲ್ಪಡುವುದು.

ಬಾಲಸಾಹಿತ್ಯದ ಆವಶ್ಯಕತೆ ಮತ್ತು ನಿರ್ಮಾಣದ ವಿಷಯಕವಾದ ಪ್ರಬಂಧ

ಬಾಲವಾಙ್ಮಯ

ಬೆಲೆ ಮೂರಾಣೆ

ಉಪಾಧ್ಯಾಯರ ಪ್ರಕಟನ ಸಮಿತಿ, ಉಡುಪಿ

ಭಾಷಾಂತರಕಾರರು

ದೊರೆಯದೆ ಹೇಚಾಡುವಿರೇಕೆ?

ಇನ್ಶ್ಯೂರೆನ್ಸ್ ಕಂಪೆನಿ, ಬ್ಯಾಂಕು ಮೊದಲಾದವುಗಳಿಗೆ ಸಂಬಂಧಪಟ್ಟ ಮತ್ತು ಇತರ ಎಲ್ಲಾ ತರದ ಇಂಗ್ಲಿಷ್ ಕನ್ನಡ ಭಾಷಾಂತರಗಳನ್ನು ಉತ್ತಮ ರೀತಿಯಿಂದ ಮಾಡಿಕೊಡಲಾಗುವುದು ಹೆಚ್ಚಿನ ವಿವರಕ್ಕೆ ಈ ಕೆಳಗಿನ ವಿಳಾಸದೊಡನೆ ಪತ್ರ ವ್ಯವಹಾರ ಮಾಡಬೇಕು

'ಟ್ರಾನ್ಸ್‌ಲೇಟರ್,'

C/o 'ಕಿರಿಯರ ಪ್ರಪಂಚ,' ಉಡುಪಿ.

1937

ನೇ

ಇಸವಿಯ

ಡೈರಿಗಳು

ಮಾರಾಟಕ್ಕಿವೆ.

ಬೇಕಾದ ನಮೂನೆಯವು

ಬೇಕಾದ ಬೆಲೆಯವು

ಬಂದು ವಿಚಾರಿಸಿರಿ!

ನವಯುಗ ಆಫೀಸು,

ಉಡುಪಿ.

ತಾಳದೇ ಇರತಕ್ಕ ಮೂತ್ರವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧಿ.

ಡಾ. ಜಸಾನಿಯವರ ಜಗತ್ಪ್ರಸಿದ್ಧ

"ಗೊನೊಕಿಲರ್"

(ರಿಜಿಸ್ಟರ್ಡ್)

GONO KILLER ORIGINAL

ನಕಲಿ ಮದ್ದುಗಳಿಗೆ ಮರುಳಾಗಿ ಮೋಸ ಹೋಗಬೇಡಿರಿ. ಕೊಂಡುಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಗಮನಿಸಿರಿ.

ಪ್ರಮೇಹ ವ್ಯಾಧಿಗೆ ಸಿದ್ಧೌಷಧ

ಇಂದಿನ ಅಪ್ರತಿಮ ಔಷಧ. ಆಂಗ್ಲೇಯ ಮತ್ತು ಆಯುರ್ವೇದ ಔಷಧಿಗಳಿಂದೂ ಫಲಕಾರಿಯಾಗದೇ ಇನ್‌ಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ, ಒಂದಾವರ್ತಿಯಾದರೂ ಈ ನಮ್ಮ **ಗೋನೋಕಿಲರ್** ಎಂಬ ಔಷಧವನ್ನು ಉಪಯೋಗಿಸಿನೋಡಿರಿ. ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ, ಗೋನೋಕಿಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾತುವಿಕೆ, ಸರ್ವಪ್ರಕಾರದ ಪ್ರಮೇಹ (ಎಷ್ಟೇ ಹಳತು ಯಾ ಹೊಸದೇ ಸ್ಥಿತಿಯಲ್ಲಿರಲಿ), ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತುಸ್ರಾವ, ಬಿಳುಪು ಹರಿಯುವದು ಇವೇ ಮೊದಲಾದ ಯಾವತ್ತು ಗೊನೋಕೋಕಸ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ.

ಬೆಲೆ 50 ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ. ३—0—0 (ಮೂರು) ವಿ. ಪಿ. ಛಾರ್ಜು ಬೇರೆ.

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ, ಗಿರಿಗಾಂವ ಬ್ಯಾಕ್ ರೋಡ್, ಮುಂಬಯಿ ४.

Sole Manufacturer: Dr. D. N. JASANI, GIRGAUM BACK ROAD, BOMBAY 4.

ಕಸ್ತೂರಿ ಮಿಶ್ರಣ ದಶಮೂಲವೆಂಬ

ಸೂತಿಕಾ ರಸಾಯನ

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

I. **ಶೋಧನ ಗುಣ:**—ಶೋಧನದಿಂದ ಪ್ರಸವಾನಂತರ ಗರ್ಭಕೋಶದ ಸರ್ವತರದ ನಂಜನ್ನು ಹೊರಗೆ ಹಾಕಿ ಪ್ರಸೂತವಾದ ಗರ್ಭಕೋಶವನ್ನು ಮೂರು ದಿವಸಗಳೊಳಗೆ ಅಂಕುಚಿತವಾಗಿ ಮಾಡುವದು.

II. **ರಸಾಯನ ಗುಣ:**—ರಸಾಯನದಿಂದ ಸೂತಿಕಾ ಸ್ತ್ರೀಯು ಗರ್ಭದ ಬೆಳವಣಿಗೆಬಗ್ಯೆಯೂ, ಪ್ರಸವವೇದನಾ ಬಗ್ಯೆಯೂ ತಾನು ಕಳಕೊಂಡ ಮೂಲ ಶಕ್ತಿಯನ್ನು ಇನ್ಮಡಿಯಾಗಿ ತಿರುಗಿ ಹೊಂದುವಳು.

III. **ಸುಖಸೇವನ:**—ಸುಖಸೇವನದಿಂದ ಮಧುರ ಮನೋಹರವಾದ ಈ ರಸಾಯನವು ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾದುವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವಾ ನಂತರದ ತೀಕ್ಷ್ಣವೇದನೆಯನ್ನು ಶೀಘ್ರದಿಂದ ನಿಲ್ಲಿಸುವದು.

ಒಬ್ಬಳು ಬಾಣಂತಿಗೆ ಎರಡು ಬಾಟ್ಲಿ ಬೇಕಾಗುವುದು. ಕ್ರಯ ಬಾಟ್ಲಿ 1ಕ್ಕೆ ರೂ. 2-0-0.

ಎಮ್. ವಿ. ಶಾಸ್ತ್ರಿ, ಆಯುರ್ವೇದ ಭೂಷಣ

ಮಂಗಳೂರು, ದ.ಕ.

ಕ್ರೌನ್ ರಬ್ಬರ್ ಸ್ಟಾಂಪ್ ಕಂಪೆನಿ

ಸ್ಥಾಪನೆ: 1926

18 ಬಲ್ಮಠ ರಸ್ತೆ, ಮಂಗಳೂರು.

ಯಾವತ್ತೂ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಅಗತ್ಯವಿರುವ ಎಲ್ಲಾ ತರದ ರಬ್ಬರ್ ಮೊಹರುಗಳೂ ಸೈನ್ ಬೋರ್ಡು, ಪೇದೆಗಳ ಬೇಜು, ಮೊನೊಗ್ರಾಮ್ ಸೀಲು, ಇತ್ಯಾದಿಗಳನ್ನು ಪ್ರತಿಯೊಬ್ಬರ ಅಭಿರುಚಿಗೊಪ್ಪುವಂತೆ ಸುಲಭ ದರಗಳಲ್ಲಿ ಮಾಡಿಕೊಡೋಣಾಗುವುದು.

ಹೆಚ್ಚಿಟ್ಟು ಒತ್ತುವ ಸೆಟ್ಟುಗಳು ಕೂಡಾ ಸಿಗುವವು.

ಮಿಕ್ಕ ವಿಚಾರಗಳನ್ನು ನಮ್ಮ ಆಫೀಸಿಗೆ ಸ್ವತಹ ಬಂದು ಯಾ ಪತ್ರ ಮುಖೇನ ತಿಳಕೊಳ್ಳಬಹುದು.

ಮಂಗಳೂರಲ್ಲಿ ರೈಲು ಬಂಡಿಗಳ ಸಮಯ

ಗಾಡಿಗಳು	ಹೊರಡುವ ಘಂಟೆ.	ತಲಪುವ ಘಂಟೆ
ಮಿಕ್ಸೆಡ್	ಬೆಳಿಗ್ಗೆ 5-55	ರಾತ್ರಿ 8-55
ಕಾಂಜಂಗಾಂಡ್ ಪ್ಯಾಸಂಜರ್	ಬೆಳಿಗ್ಗೆ 8-25	ಮಧ್ಯಾಹ್ನ 1-20
ಮೈಲ್	ಬೆಳಿಗ್ಗೆ 9 50	ಸಂಜೆ 4-20
ಫಾಸ್ಟ್ ಪಸೆಂಜರ್	ಮಧ್ಯಾಹ್ನ 12-45	ಮಧ್ಯಾಹ್ನ 2-40
ಕಾಸರಗೋಡ್ ಪ್ಯಾಸೆಂಜರ್	ಮಧ್ಯಾಹ್ನ 3-20	ಸಂಜೆ 6-15
ಶಟಲ್	ಸಂಜೆ 5-25	ಬೆಳಿಗ್ಗೆ 9-20

ಜನರಲ್ ಎಶ್ಯೂರೆನ್ಸ್ ಸೊಸೈಟಿ ಲಿಮಿಟೆಡ್.

[1907ರಲ್ಲಿ ಸ್ಥಾಪಿತವಾದದ್ದು]

ವೇಲ್ಯುವೇಶನ್ ವರ್ಷ 1936.

ಕೊನೆಯ ಬೋನಸು ಎಲ್ಲಕ್ಕಿಂತಲೂ ಅತಿ ಹೆಚ್ಚಾಗಿರುವುದು.

ಬೇರೆ ಬೇರೆ ಫಂಡುಗಳು ರೂ. **70** ಲಕ್ಷ ಮಿಕ್ಕಿವೆ

ವಿಮಾ ಹಣ ಪಾವತಿ ರೂ. **37** ಲಕ್ಷ ಮಿಕ್ಕಿವೆ.

ಹೊಸತಾಗಿ ವಿಮೆಗೆ ಸೇರುವವರು ಹೊಸ ವೇಲ್ಯುವೇಶನಿನ ಉಳಿತಾಯದಲ್ಲಿ ಪಾಲು ಪಡೆಯುವರು. ಎಲ್ಲಾ ತರದ ಆವಶ್ಯಕತೆ ಮತ್ತು ಸ್ಥಿತಿಗತಿಗೆ ಸರಿಹೋಲುವ ವಿಮಾ ಯೋಜನೆಗಳಿವೆ.

ಏಜನ್ಸಿ ಶರ್ತಗಳು:—ಅತ್ಯಧಿಕ ನಷ್ಠೆಯ ಕಮಿಶನಿನಿಂದ ಬಹಳ ಲಾಭದಾಯಕವಾಗಿವೆ. ವಿಶೇಷ ಮಾಹಿತಿಗಾಗಿ ಈ ಕೆಳಗಣ ವಿಳಾಸಗಳಿಗೆ ಬರಕೊಳ್ಳಿರಿ

P. D. BHARGOVA,

General Manager, ***AJMER,***

SUPERINTENDENT. 278, Linga Chetty Street, MADRAS

Or Chief Agent:—

BELLARY: MADURA: TRICHINAPOLY: VELLORE.

ಸ್ಟೀಮರು ಸಮಯ

	ತಲಪುವುದು	ಹೊರಡುವುದು
ಮಂಗಳೂರು	ಗುರುವಾರ ಬೆಳಿಗ್ಗೆ ಗಂಟೆ 9	ಶನಿವಾರ ಬೆಳಿಗ್ಗೆ ಗಂಟೆ 9
	ಸೋಮವಾರ ಬೆಳಿಗ್ಗೆ ಗಂಟೆ 6	ಮಂಗಳವಾರ ಬೆಳಿಗ್ಗೆ ಗಂಟೆ 9
ಮಲ್ಪೆ	ಗುರುವಾರ ಬೆಳಿಗ್ಗೆ ಗಂಟೆ 3	ಶನಿವಾರ ಮಧ್ಯಾಹ್ನ 2-30
	ಆದಿತ್ಯವಾರ ಸಂಜೆ ಗಂಟೆ 6	ಮಂಗಳವಾರ ಮಧ್ಯಾಹ್ನ 2-30
ಕುಂದಾಪುರ		ಶನಿವಾರ ಸಂಜೆ ಗಂಟೆ 3
		ಮಂಗಳವಾರ ಮಧ್ಯಾಹ್ನ 3

ನಮ್ಮ ಉನ್ನತಿಗಾಗಿ ನಾವೇನು ಮಾಡಬೇಕು? ಇತ್ಯಾದಿ ಸಮಸ್ಯೆಗಳಿಗೆ ಸದುತ್ತರವನ್ನು ಕೊಡುವ ಪತ್ರಿಕೆ ಎಂದರೆ

ಸದ್ಧರ್ಮ ಪ್ರಚಾರಕ

ವಾ. ಚ. 1—4—0.

ಸಂಪಾದಕರು:-

ಬಿ. ಲಕ್ಷ್ಮಣದೇವ ವಿದ್ಯಾರ್ಥಿ.

ಉತ್ಕೃಷ್ಟ ಕಥೆ, ಕವನಗಳಿಂದೊಡಗೂಡಿ, ಪ್ರತಿಮಾಸದ 15ನೇ ತಾರೀಕಿಗೆ ತಪ್ಪದೆ ಹೊರಡುವುದು.

ಸದ್ಧರ್ಮ ಪ್ರಚಾರಕ, ಕಾರ್ಯಾಲಯ,

ಅಳಕೆ ರಸ್ತೆ, ಮಂಗಳೂರು

ಪ್ರವಾಸಿ.

ಅತ್ಯುತ್ತಮವಾದ ಸಚಿತ್ರ ಕನ್ನಡ ಮಾಸಪತ್ರಿಕೆ.

ಬೋಧಪ್ರದವಾದ ಲೇಖನಗಳು-ಮಹಾಪುರುಷರ ಜೀವನ ಚರಿತ್ರೆಗಳು ಉತ್ತಮ ಕಥೆಗಳು-ಆರ್ಥಿಕ ರಾಜಕೀಯ ವಿಚಾರಗಳು. ವೈಜ್ಞಾನಿಕ ವಿಷಯಗಳು-ಪರರಾಷ್ಟ್ರಗಳ ಸಮಸ್ಯೆಗಳು-ಗ್ರಂಥ ವಿಮರ್ಶೆ ಇವುಗಳನ್ನೊಳಗೊಂಡ ಹೊಸ ರೀತಿಯ ಮಾಸಪತ್ರಿಕೆ. ಕೈಗೆಲಸವೆಂಬ ನೂತನ ವಿಭಾಗವಿರುವ ಪತ್ರಿಕೆಯು ಇದೊಂದೇ.

ವಾರ್ಷಿಕ ಚಂದಾ ರೂ 3—8—0.

ಪ್ರವಾಸಿ ಕಾರ್ಯಾಲಯ

ಕಾಸರಗೋಡು, ದಕ್ಷಿಣಕನ್ನಡ.

THE VIJAYA BANK Ltd.,

Head Office: MANGALORE. Branch Office: Court Road, UDIPI.

ದಿ ವಿಜಯ ಬೇಂಕ್ ಲಿಮಿಟೆಡ್,

ಹೆಡ್ ಆಫೀಸು: **ಮಂಗಳೂರು.** ಶಾಖೆ: **ಕೋರ್ಟು ರಸ್ತೆ, ಉಡ್ಪಿ**

ಚಾಲ್ತಿ ಠೇವಣಾತಿಗಳು ಸಾ. ಶೆ. 2. ಸೇವಿಂಗ್ಸ್ ಬ್ಯಾಂಕ್ ಠೇವಣಾತಿಗಳುಸಾ. ಶೆ. 3½

ಕಾಯಂ ಠೇವಣಾತಿಗಳು 3 ತಿಂಗಳ ಬಾಬ್ತು ಸಾ. ಶೆ. 3½

6 ಮತ್ತು 9 ತಿಂಗಳ ಬಾಬ್ತು ಸಾ ಶೆ. 4. 1 ವರ್ಷದ ಬಾಬ್ತು ಸಾ. ಶೆ. 5.

2 ವರ್ಷದ ಮೇಲಿನವುಗಳ ಬಾಬ್ತು ಸಾ. ಶೆ. 5½ ದರದ ಬಡ್ಡಿಯಲ್ಲಿ ಅಂಗೀಕರಿಸಲ್ಪಡುವುವು.

ಬ್ಯಾಂಕಿಗೆ ಸಮ್ಮಂಧಪಟ್ಟ ಎಲ್ಲಾ ತರದ ವ್ಯವಹಾರಗಳು ನಡೆಸಲ್ಪಡುತ್ತವೆ—ಅಂದರೆ—ಪ್ರೊ ನೋಟು, ಹುಂಡಿ, ಸರಕು, ವಗೈರೆ ಮೇಲೆ ಸಾಲಕೊಡಲಾಗುತ್ತದೆ. ಭಂಗಾರದ ಈಡಿನ ಮೇಲೆ ಈ ಕೆಳಗಿನ ದರದ ಬಡ್ಡಿಯಲ್ಲಿ ಸಾಲ ದೊರೆಯುವುದು. ರೂ. 1ರಿಂದ 99ರ ವರೆಗೆ ಸಾ. ಶೆ. 9. 100ರಿಂದ 250ರ ವರೆಗೆ ಸಾ. ಶೆ. 8. ಮತ್ತು 251ರಿಂದ ಮೇಲ್ಪಟ್ಟ ಸಾಲಗಳಿಗೆ ಸಾ. ಶೆ. 7.

ವಿಶೇಷ ಸೂಚನೆ:—ಬಡವರಿಗೆ ಸಹಾಯವಾಗುವಂತೆ ಕಡಿಮೆಯೆಂದರೆ ರೂಪಾಯಿ 10/ ಸಹಾ ಸಾಲಕೊಡಲಾಗುತ್ತದೆ. ಡಾಲುಗಳು ದೊರೆಯುತ್ತವೆ.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಕೊಳ್ಳಿರಿ.

A B Shetty, ಚೆಯರ್‌ಮೇನ್. **K. Gopalakrishna Shetty.** ಸೆಕ್ರಟರಿ.

ವಿಜಯ ಬೇಂಕ್ ಲಿಮಿಟೆಡ್, ಕದ್ರಿರೋಡ್, ಮಂಗಳೂರು.

ಸ್ವದೇಶಿ ಕೈಗಾರಿಕೆಯನ್ನು ಪ್ರೋತ್ಸಾಹಿಸಿರಿ.

ಸ್ವದೇಶಿ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗೆಬಗೆಯ ಬಣ್ಣದಲ್ಲಿ, ಅಂಚಿನಲ್ಲಿ, ನಮೂನೆಯಲ್ಲಿ ದೊರೆಯುತ್ತವೆ.

ಶುದ್ಧ ಖಾದಿ ಮತ್ತು ಮಿಲ್‌ಬಟ್ಟೆಗಳೂ ವಿಕ್ರಯಿಸಲ್ಪಡುತ್ತವೆ.

P. A. PAI, BROS.

ಪಿ. ಎ. ಪೈ ಬ್ರದರ್ಸ್,

ಆಸ್ಪತ್ರೆ ಎದುರು, ಉಡುಪಿ.

ಕಸಿಗಿಡಗಳು.

ಸಪೋಡಿಲ್ಲ (ಚಿಕ್ಕು)

ಈ ಮರವು ನಮ್ಮ ಜಿಲ್ಲೆಯ ಎಲ್ಲಾ ಭಾಗದಲ್ಲಿಯೂ ಸರಿಯಾಗಿ ಬೆಳೆದು, 3ನೇ ವರ್ಷದಲ್ಲಿಯೇ ತಪ್ಪದೆ ಫಲಬಿಡುತ್ತದೆ. ಒಂದು ಮರದಲ್ಲಿ ಸಾವಿರಗಟ್ಲೆ ಹಣ್ಣಾಗುವದು. ಒಂದು ಎಕ್ರೆಯಲ್ಲಿ ವರ್ಷಕ್ಕೆ ರೂ. ಸಾವಿರದ ಮೇಲೆ ಉತ್ಪತ್ತಿಯಾಗುವದು. ಹಣ್ಣು ಅತಿ ಮಧುರ, ಒಳ್ಳೇ ರುಚಿ, ಕಾಯಿಲೆಯವರಿಗೆ ಉತ್ತಮ ಆಹಾರ ಅದರಲ್ಲಿ ಕಬ್ಬಿಣ ಸತ್ವ ಮತ್ತು ವಿಟಮಿನ್ ತುಂಬ ಇರುವದರಿಂದ ರಕ್ತವನ್ನು ವೃದ್ಧಿಪಡಿಸುವದು. ವರುಷದಲ್ಲಿ ಯಾವಾಗಲೂ ಹಣ್ಣು ಇರುವುದು. ಎಲ್ಲಾ ತೋಟದಲ್ಲಿಯೂ ಇರತಕ್ಕದ್ದು. ಗಿಡವೊಂದರ ಕ್ರಯ ರೂ. 1-0-0 ಮಾತ್ರ. ನಮ್ಮಲ್ಲಿ ಉತ್ತಮ ಮಾವು ಮತ್ತು ಇತರ ಕಸಿ ಗಿಡಗಳು ಕೂಡ ದೊರೆಯುತ್ತವೆ. ಕ್ರಯಪಟ್ಟಿಗೆ ಕೆಳಗಣ ವಿಳಾಸಕ್ಕೆ ಬರೆಯುವುದು.

ಮಂಗಳೂರಲ್ಲಿ ವಿಜಯ ಬ್ಯಾಂಕಿನಲ್ಲಿಯೂ, ಸ್ಟ್ಯಾಂಡರ್ಡ ಶೋಪು, ಹಂಪನಕಟ್ಟೆಯಲ್ಲಿಯೂ, ಸೋಮಯಾಜಿ ಎಂಡ್ ಕೊ, ರಥಬೀದಿಯಲ್ಲಿಯೂ ಮತ್ತು ಜಿಲ್ಲೆಯ ಎಲ್ಲಾ ಎಗ್ರಿಕಲ್ಚರಲ್ ಡೆಪೋನ್ ಸ್ಟೋರಲ್ಲಿಯೂ ಮೇಲಿನ ಎಲ್ಲಾ ಗಿಡಗಳು ದೊರೆಯುತ್ತವೆ.

ಕೆ. ಎಮ್. ಶೆಟ್ಟಿ, ಕೆನರಾ ನರ್ಸರಿ,

ಪೋಸ್ಟ್ ಕಾಪು, ದ. ಕನ್ನಡ

ಆತಂಕನಿಗ್ರಹ ಮಾತ್ರೆಗಳು

ಯಾವ ಕಾರಣದಿಂದಾಗಲಿ ಉಂಟಾದ ಧಾತುನಷ್ಟ, ನರಗಳ ನಿಶ್ಶಕ್ತಿ ಇವುಗಳನ್ನು ಹೋಗಲಾಡಿಸಿ ಶಾಶ್ವತ ಗುಣ ಉಂಟಾಗುವಂತೆ ಮಾಡುತ್ತದೆ. ಈ ಗುಳಿಗೆಗಳು ಆರೋಗ್ಯವಾದ ಹಸಿವನ್ನುಂಟುಮಾಡಿ ದೇಹಕ್ಕೂ ಮತ್ತು ಮನಸ್ಸಿಗೂ ಬಲಹೀನತ್ವವನ್ನು ಹೋಗಲಾಡಿಸಿ ದುಷ್ಟರಕ್ತವನ್ನು ಶುದ್ಧಿ ಮಾಡಿ ಜ್ಞಾಪಕ ಶಕ್ತಿಯನ್ನು ವೃದ್ಧಿಪಡಿಸುವುದು. ಕ್ರಯ: ಡಬ್ಬಿ ೧ಕ್ಕೆ ೧-೦-೦,

ವಾಜೀಕರಣ ತೈಲ:—(ಹೊರಗೆ ಹಚ್ಚಲು ಮಾತ್ರವೇ) ಬಾಲ್ಯದಲ್ಲಿ ಸ್ವತಃ ಅನೇಕ ವಿಧಗಳಲ್ಲಿ ಶರೀರವನ್ನು ಕೆಡಿಸಿಕೊಂಡು ಆದರಿಂದ ಉಂಟಾಗುವ ಅಶಕ್ತಿ, ನರಗಳ ದುರ್ಬಲ, ನಪುಂಸಕತ್ವ, ಮುಂತಾದ ವ್ಯಾಧಿಗಳನ್ನು ಪರಿಹರಿಸುವ ಸಂಜೀವಿನಿಯಾಗಿರುವದು. ನರಗಳಿಗೆ ಬಲವನ್ನುಂಟುಮಾಡಿ, ಸಂಭೋಗಕ್ಕೆ ಉತ್ಸಾಹವನ್ನು ಕೊಡುವುದು. ಒಂದು ಸಾರಿ ಔಷಧವನ್ನು ಹಚ್ಚುವುದರಿಂದ ಗುಣವು ಗೊತ್ತಾಗುತ್ತದೆ. ಕ್ರಯ: ಸೀಸೆ ಒಂದಕ್ಕೆ ೫—೦—೦.

ಅಮೃತಾರ್ಣವ ಲೇಹ್ಯ:— ರಕ್ತವನ್ನು ಶುದ್ಧಿಮಾಡಿ, ನರಗಳನ್ನು ಬಲಪಡಿಸಿ, ಅತಿ ಉಷ್ಣ, ಕೈಕಾಲುಗಳ ಉರಿ, ಇನ್ನೂ ಮುಂತಾದ ಉಷ್ಣವ್ಯಾಧಿಗಳನ್ನು ಗುಣಪಡಿಸಿ, ಮೆದುಳನ್ನು ತಂಪುಮಾಡಿ, ದೇಹಬಲವನ್ನೂ, ತೇಜಸ್ಸನ್ನೂ ಹೆಚ್ಚಿಸುವುದಲ್ಲದೆ ದೀರ್ಘಕ್ಷಯ, ಎದೆನೋವು, ತಲೆನೋವು, ಮುಂತಾದ ವ್ಯಾಧಿಗಳಿಗೆ ಅಮೃತಪ್ರಾಯವಾದುದು. ಕ್ರಯ: ಡಬ್ಬಿ ೧ಕ್ಕೆ ೨-೦-೦.

'ಕಾಮಶಾಸ್ತ್ರ' ಧರ್ಮಾರ್ಥ. ಪೋಸ್ಟೇಜು ಮಾಫಿಯಾಗಿ ಕಳುಹಿಸುವೆವು. ಒಂದು ಕಾರ್ಡು ಹಾಕಿರಿ.

ಆತಂಕ ನಿಗ್ರಹ ಫಾರ್ಮಸಿ, ೭೪, ಚಿಕ್ಕಪೇಟೆ ಚೌಕ, ಬೆಂಗಳೂರು ಸಿಟಿ

ಡಾ| ಯು. ರಾಮರಾಯರ ಭಾಷಣ.

ಮದ್ರಾಸಿನ ಗೋಖಲೆ ಹೋಲಿನಲ್ಲಿ ಚುನಾವಣಾ ಸಂಬಂಧವಾದ ಸಭೆಯೊಂದು ಇದೇ ತಾ. ೮ರಲ್ಲಿ ಮದ್ರಾಸಿನ ಮೇಯರರಾದ ಶ್ರೀ. ಕೆ. ಶ್ರೀ ರಾಮುಲು ನಾಯುಡುರವರ ಅಧ್ಯಕ್ಷತೆಯಲ್ಲಿ ನೆರೆಯಿತು ಮದ್ರಾಸಿನ ಒಂದು ಸೀಟಿಗೆ ಕೊಂಗ್ರೆಸ್ ಕಡೆಯಿಂದ ಕೌನ್ಸಿಲ್ ಉಮೇದ್ವಾರರಾಗಿ ನಿಂತಿರುವ ದಕ್ಷಿಣಕನ್ನಡ ಜಿಲ್ಲೆಯ ಡಾ. ಯು. ರಾಮರಾಯರು ಕೊಟ್ಟ ಭಾಷಣವು ಅರ್ಥಗರ್ಭಿತವಾಗಿತ್ತು. ಮದ್ರಾಸಿನ ಓಟರರು ಮಾತ್ರವಲ್ಲ, ದ. ಕನ್ನಡದಲ್ಲಿ ಕೊಂಗ್ರೆಸ್ ಉಮೇದ್ವಾರರಿಗಿದಿರಾಗಿ ಕೆಲಸ ಮಾಡುತ್ತಿರುವ ಅವರ ಬಂಧುಮಿತ್ರರೂ ಆದರರ್ಥವನ್ನು ಮಾಡಿಕೊಳ್ಳುವರೆಂದು ಹಾರೈಸುತ್ತೇವೆ. "ನಾನು ನಲ್ವತ್ತು ವರ್ಷಗಳಿಗೂ ಮಿಕ್ಕಿ ಈ ಪಟ್ಟಣದಲ್ಲಿ ವಾಸಮಾಡುತ್ತಿದ್ದು ಇಲ್ಲಿಯ ಮತದಾರರೊಡನೆ ಸಂಬಂಧ ಬೆಳೆಸುವ ಹಲವು ಸಂದರ್ಭಗಳನ್ನು ಸಂಪಾದಿಸಿದ್ದೇನು. ಇಲ್ಲಿಯ ಮತದಾರರು ಯಾವಾಗಲೂ ಜಾತ್ಯಭಿಮಾನರ ಹಿತರಾಗಿದ್ದು **ದೇಶದ ಹಿತಸಾಧನೆಯ ಕಡೆಗೇನೆ ದೃಷ್ಟಿಯಿಟ್ಟುದನ್ನು ನಾನು ಕಂಡಿದ್ದೇನು. ಕೊಂಗ್ರೆಸು ದೇಶದ ಕಲ್ಯಾಣಕ್ಕಾಗಿ ದುಡಿಯುವ ಸಂಸ್ಥೆಯಾಗಿದ್ದು ಅವರ ಹಿತಕ್ಕಾಗಿಯೇ ಓಟರರನ್ನು ಕಾಣಲು ಬರುವಾಗ ತಮ್ಮ ಓಟನ್ನು ಕೊಂಗ್ರೆಸಿಗೇನೇ ಕೊಡುವದು ಮತದಾರರ ಕರ್ತವ್ಯವಾಗಿರುವದೆಂಬುದರಲ್ಲಿ ಎಳ್ಳಷ್ಟು ಸಂದೇಹವಿಲ್ಲ.**

ಒಂದಿಷ್ಟು ನಗು

ಗಣೇಶರಾಯನು:—ಏನು ಹನುಮಂತರಾಯರೆ? ನಿಮ್ಮ ಬಾಲವನ್ನೆಲ್ಲ ಬಿಟ್ಟು ಬಂದಿರುವಿರಿ?

ಹನುಮಂತರಾಯ:—ತಮ್ಮ ಸೊಂಡಲೆಲ್ಲಿ?

X X X

ಕಿಟ್ಟ:—ಲೋ ಸದಾರಾಮ್ ಕನ್ನಡ ನಮ್ಮ ಮಾತೃಭಾಷೆ ಹೇಗೋ?

ಸದಾರಾಮ್:—ತಂದೆಗಿಂತ ತಾಯೀನೆ ಹೆಚ್ಚು ಮಾತಾಡುತ್ತಾಳೆ ಅದಕ್ಕೆ?

X X X

ಉಪಾಧ್ಯಾಯ:- ತಿಮ್ಮ! ಎಮ್ಮೆ ಗಿಡಗಳನ್ನೆಲ್ಲಾ ತಿಂದು ಬಿಟ್ಟಿತಲ್ಲ

ತಿಮ್ಮ:- ಗಿಡಗಳನ್ನು ತಿನ್ನಲಿಲ್ಲ; ಎಲೆಗಳನ್ನು ಮಾತ್ರ ಸ್ವಾಮಿ.

ನೋಟಿಸು

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

S. C. No. 666/1936

1 ವಾದಿ: ರಾಮಚಂದ್ರ ಶ್ಯಾನುಭಾಗ, ವೆಂಕಟ್ರಮಣ ಶ್ಯಾನುಭಾಗರ ಮಗ. ಕುಂದಾಪುರ ತಾಲೂಕು ಶಿದ್ದಾಪುರ ಗ್ರಾಮ.

2 ಸಪ್ಲಿಮೆಂಟ 3ನೇ ಪ್ರತಿವಾದಿ: ಕೊರಾತಿ ಶೆಡ್ತಿ ರುಕ್ಕು ಶೆಡ್ತಿಯ ಮಗಳು, ಕುಂದಾಪುರ ತಾಲ್ಲು ಶಿದ್ದಾಪುರ ಗ್ರಾಮದ ಕೆರೆಮನೆಯಲ್ಲಿರುವವಳು

3 ವಾದಿಯು ಮೇಲ್ಕಂಡ ಪ್ರತಿವಾದಿ ವಗೈರೆರ ಮೇಲೆ ಗೇಣಿ ಬಾಕಿ ಬಗ್ಗೆ ಮಾಡಿದ ಮೇಲ್ಕಂಡ ದಾವೆಯು ತಾರೀಕು 14—1—1937ಕ್ಕೆ ತಕ್ಕಿಗೆ ಯಿಟ್ಟದೆ. ಆ ಕುರಿತು ಆಕ್ಷೇಪ ಇದ್ದರೆ ಆ ತಾರೀಕಿಗೆ ಹಾಜರಾಗಿ ಹೇಳತಕ್ಕದ್ದು. ಇಲ್ಲದಿದ್ದರೆ ನಂಬ್ರವನ್ನು ಏಕಪಕ್ಷವಾಗಿ ತೀರ್ಮಾನಿಸಲಾದೀತು.

K. Narayana Shenai,
ವಾದಿ ಕಡೆಯ ವಕೀಲು.

ತಾ. ೧೩-೧-೧೯೩೭, ಕುಂದಾಪುರ.

X X X

ಆಚಾರ್ರು—ಏನಮ್ಮ ನನ್ನನ್ನು ನೋಡಿ ಗುರ್ತಿಸದೆ ನಿಮ್ಮ ನಾಯಿ ಬಗಳುತ್ತದಲ್ಲ.

ಮಿಸ್ ಪದ್ಮ—ಅದಕ್ಕೆ ಕಣ್ಣು ಸ್ವಲ್ಪ ಮಧ್ಯಸ್ಥ, (Short sight) ನಮ್ಮ ತಂದೆಯವರು ಅದಕ್ಕೊಂದು ಕನ್ನಡಕ ತರಲು ಹೊಂಗಿದ್ದಾರೆ.

X X X

ಗಂಡ:- (ಹೆಂಡತಿಯೊಡನೆ) ಏನೇ ಚಿನ್ನ! ನಿನ್ನ ಜೊತೇಲಿರುವಾಗ ನನಗೆ ಪ್ರಪಂಚಾನೆ ಮರೆತುಹೋಗುತ್ತಲ್ಲ.

ಹೆಂಡತಿ:-ನೀವು ಯಾವುದನ್ನು ಬೇಕಾದರೂ ಮರೆತುಕೊಳ್ಳಿ; ನಾನು ಕೇಳಿದ ಸೀರೆ ಮಾತ್ರ ಮರೆಯಬೇಡಿ.

ಗಿರಾಕಿ:-ಬಿಸಿಯಾಗಿ ಏನುಂಟೊ?

ಹೋಟೆಲಿನವ:-ಬೆಂಕಿ ಕೆಂಡ ಸ್ವಾಮಿ!

X X X

ವ್ಯಾಪಾರಿ:- ನನಗೇನಾದರೂ ಮನಿಯಾರ್ಡರುಗಳಿವೆಯೇ?

ಟಪಾಲಿನವನು: ಮನಿಯಾರ್ಡರುಗಳಿಲ್ಲ; ರಿಜಿಸ್ಟರ್ ನೋಟೀಸ್ ಮಾತ್ರ ಇದೆ.

ವ್ಯಾಪಾರಿ:- ಅಡ್ರಸ್ ತಪ್ಪು ಬಿದ್ದಿರಬಹುದು; ವಾಪ್ಸು ಮಾಡಿಬಿಡಿ.

X X X

ಒಬ್ಬ ರೈಲ್ವೇ ಪ್ರಯಾಣಿಕನು:— "ಏನು ಮಾಡಲಿ, ತಿಳಿಯದೆ ಈ ಅಪಾಯದ ಸರಪಣಿಯನ್ನು ಎಳೆದುಬಿಟ್ಟೆನಲ್ಲ. ಈಗೇನು ಮಾಡುವುದು? ೫೦ ರೂಪಾಯಿ ಜುಲ್ಮಾನೆ ಹಾಕುತ್ತಾರಲ್ಲ.

X X X

ನಾರದನ ತಂಬೂರಿ

ಬಲು ಕೆಟ್ಟವಾರವಿದು ನಮ್ಮ ನೋಡಿರ ನೊಬ್ಬ! ಕೈಬಿಟ್ಟು ತೆರಳಿದನು! ಕಾಲ ಕಳತೆ ‖ ಶುಭವಾಗಲಿ ಮಾನವರೇ! ನಮ್ಮ ದೇಶಭಕ್ತ ಸದಾಶಿವ ರಾಯರು ಹೊರಟು ಹೋದರು. ಪಾಪವವರನ್ನು—ಬಡವರನ್ನು ಈ ವರೆಗೆ ಬಿಟ್ಟುಹಾಕಿದವರಲ್ಲ. ಈಗ ಬಿಟ್ಟೇ ಬಿಟ್ಟರು! ಈ ಸಂಧಿಗ್ಧ ಕಾಲದಲ್ಲಿ ಈ ವರೆಗೂ ಅವರು ಮಾಡದಿದ್ದ ಅನ್ಯಾಯವನ್ನು ಮಾಡಿದರು! ಯಾರೇನು ಮಾಡಲಿ ‖ ಕಾಲವೇ ಮುನಿದೆದ್ದು ಮುರಿದು ತಿನ್ನುವ ವೇಳೆ! ನಾವು ತಲೆ ಬಡಕೊಂಡರದು ಕೇಳ್ವುದೇ? ‖

○

ಈ ಸಮಯದಲ್ಲಿ ಕೆಲವರು ಅಳುವ ವಿಧಾನವು ಸುಧಾರಿತ ರೀತಿಯದು! ಈ ರೀತಿಗನುಸಾರವಾಗಿ ಅಳುವಾಗ ಕಣ್ಣಿನಲ್ಲಿ ನೀರೂ ಕೆಂಡವೂ ಒಟ್ಟೊಟ್ಟಿಗೆ ಸುರಿಯುತ್ತವೆ. ಹೀಗೆ ನೀರು-ಬೆಂಕಿಗಳ ಸೃಷ್ಟಿಯುಂಟಾದುದು ಇದೇ ಮೊದಲನೇ ಬಾರಿ! ನರನಾರಾಯಣ! ‖ ಗಂಡನಳುವಿನ ನಡುವೇ | ಅತ್ತೆಯನು ಬೈಯುವರೆ ' ನೂಸೆಗೊಂದು ಸಂದರ್ಭ! ಏನು ದುಃಖ! ‖

○

ಶ್ರೀಯುತ ಕಾರ್ನಾಡು ಸದಾಶಿವ ರಾಯರನ್ನು ಎಸೆಂಬ್ಲಿಗೆ ನಿಲ್ಲಿಸದೆ ಅವರಿಗೆ ಮಹತ್ತಾದ ಅನ್ಯಾಯವನ್ನು ಕೊಂಗ್ರೆಸಿನವರು ಮಾಡಿದರೆಂದು ಕೆಲವರ ಬೊಬ್ಬೆಯೇ ಬೊಬ್ಬೆ! 'ದೇಶಭಕ್ತರು ನಿಧನ ಹೊಂದಿದುದು ಅದೇ ವ್ಯಥೆಯಿಂದ' ಎಂದು ಹೇಳಿಬಿಡೋಣ ಎನ್ನುವ ಮನಸ್ಸೂ ಕೆಲವರಿಗಾಗಿರಬಹುದು. ಆದರೆ ಅದಕ್ಕಾಗಿ ದಿವಂಗತ ರಾಯರಲ್ಲಿರದಿದ್ದ ಮಹಾವ್ಯಥೆಯನ್ನು ತಾವು ಉಂಟುಮಾಡಿಕೊಂಡಿದ್ದರೂ ಅದನ್ನು ತಡಕೊಂಡು ಇನ್ನೂ ಬದುಕಿರುವಾಗ ಶ್ರೀ. ಸದಾಶಿವರಾಯರು ಮಾತ್ರ ಅದರಿಂದ ನಿಧನಹೊಂದಿದರೆನ್ನುವದು ಹೇಗೆ? ಎಂದು ಶಂಕಿಸಿ ಸುಮ್ಮನಿದ್ದಿರಬಹುದು! ‖ ದೇಶಪ್ರೇಮದ ಮೂರ್ತಿ, ಆ ದಿವಂಗತರಯ್ಯ | ಇವರೆಲ್ಲ ಮೂರ್ತಿ ಪೂಜೆಯ ಭಟ್ಟರು ‖

○

ಮಂಗಳೂರಿನ ಒಂದು ಪತ್ರಿಕೆಯೂ, ಮಂಗಳೂರಿನ ಒಬ್ಬ ಮಹನೀಯರೂ ದಿವಂಗತ ಶ್ರೀಯುತ ರಾಯರಿಗೆ ಇಲ್ಲಿಯ ಕೊಂಗ್ರೆಸುವಾಲರು ಎಸೆಂಬ್ಲಿ ಸ್ಥಾನದ ಗೌರವೀಯಲಿಲ್ಲವಲ್ಲಾ ಎಂದು ಹಂಗಿಸಿ ತೃಪ್ತಿ ಪಡುವಂತಿದೆ. ಶ್ರೀ ಸದಾಶಿವರಾಯರು ಬದುಕಿದ್ದಾಗ ಕೊಂಗ್ರೆಸಿನವರು ಕಡಿಮೆ ಮಾಡಿದ್ದ ಅವರ ಗೌರವವನ್ನು ಸತ್ತಮೇಲಾದರೂ ಈ ರೀತಿ ತುಂಬಿಸಿಬಿಡುವ ಮಹತ್ಕಾರ್ಯವಿವರದು! ಅಬ್ಬಬ್ಬ! ಇವರಿಂದಯಾರ ಆತ್ಮಕ್ಕೆ ತೃಪ್ತಿ? | ಇವರಿತ್ತ ಗೌರವವ ಪಡಕೊಳ್ಳಲವರಿಲ್ಲ ‖ ಇವರದೀಟೀಕೆಯಿವರಾತ್ಮತೃಪ್ತಿ ‖

○

ದಿವಂಗತ ಶ್ರೀ| ಕಾರ್ನಾಡು ಸದಾಶಿವ ರಾಯರಿಗೆ ಕೊಂಗ್ರೆಸಿನಮೇಲೆ ಅಪಾರ ಪ್ರೇಮವಿತ್ತು. ಅದರ ಶಿಸ್ತನ್ನು ಪಾಲಿಸುವ ರೀತಿಯೂ ಗೊತ್ತಿತ್ತು. ಕೊಂಗ್ರೆಸು ಕಾರ್ಯಕರ್ತರಲ್ಲಿ ದೃಢವಾದ ವಿಶ್ವಾಸವಿತ್ತು! ಅವರು ಅಕಾಲದಲ್ಲಿ ಹೊರಟು ಹೋದಮೇಲೆ ಅವರ ಹೆಸರನ್ನು ಎತ್ತಿಕೊಂಡು ಹೇಗೆ ಹೇಗೋ ಕೋರೆರಾಗ ಎಳೆಯುತ್ತಿರುವರಲ್ಲಾ ಕೆಲವರು—ಅದರ ಅರ್ಥವೇನು ಗೊತ್ತುಂಟೆ? ಶ್ರೀ. ಕಾರ್ನಾಡು ಸದಾಶಿವರಾಯರು ನಿಧನ ಹೊಂದಿಯಾಯಿತು. ಅವರನ್ನು ನ್ಯುಮೋನಿಯಾ ಕೊಂದಿತು. ಇನ್ನುಳಿದಿರುವುದು ಅವರ ತ್ಯಾಗ, ತತ್ವನಿಷ್ಠೆ ಮೊದಲಾದುವು-ಅವುಗಳನ್ನು ಈ ಹೊಸ ರೋಗವು ಕೊಲ್ಲುತ್ತಿದೆ ಅಷ್ಟೆ! ‖ ದೇಹ ನುಸ್ಥಿರವಲ್ಲ ಕೆಲಸತ್ಯಾಗವೆಸ್ಥಿರವು! ಕಾರ್ಯತತ್ವದ ಕೊಲೆಯು ತರವಲ್ಲ! ‖ ನರನಾರಾಯಣ!

○

ಸ್ಪೈಯಿನಿಗೆ ಓಲಂಟಿಯರರನ್ನು ಕಳುಹಿಸುವುದನ್ನು ನಿಲ್ಲಿಸಬೇಕೆಂದು ಸಂಬಂಧಪಟ್ಟ ರಾಷ್ಟ್ರಗಳೆಲ್ಲಾ ಒಟ್ಟಾಗಿ ಭಾರೀ ಪಂಚಾಯತಿಕೆ ಮಾಡುತ್ತಿವೆ. ಪಂಚಾಯತಿಕೆಯಲ್ಲಿ ಅನುಭವದ ಕೈಯಾದ ಬ್ರಿಟಿಷರೇ ಕೈಯಾಡಿಸುತ್ತಿದ್ದಾರೆ. ನರೆಕರೆಯವರು ಜಗಳಮಾಡಿಕೊಳ್ಳುವಾಗ, ಗೌಜಿಯಿಂದ ಸಂಧಿಮಾಡಿಸಿ ಹಾಕುವುದೊಂದು ಸಭ್ಯತನ. ಈ ಸಭ್ಯತನವನ್ನು ಬ್ರಿಟಿಷರು ಖಂಡಿತವಾಗಿಯೂ ಬಿಡುವವರಲ್ಲ! ಹೌದಪ್ಪಾ! ಸಭ್ಯತನ ಬಾಳಿದರೆ ಶಾಂತಿ ಬಾಳುವದಂತೆ! ‖ ಶಾಂತಿ ಬಾಳಲಿ ಬೇರೆ ಬಾಳಲೇಕೆ? ‖

○

ಮೈಸೂರಿನ 'ಸ್ಯಾಂಟ್ ಫಿಲೋಮಿನಾಸ' ಇಗರ್ಜಿಯಲ್ಲಿ, ದೇವರ ಸಾನ್ನಿಧ್ಯದಲ್ಲಿ ತಾ.೧೦ನೇ ರಾತ್ರಿ ಭಾರೀ ಗಲಭೆ! ಹೆಚ್ಚಿನ ಕಾರಣ ತಿಳಿದುಬಂದಿಲ್ಲ. ಮುಸ್ಲಿಮ ಹುಡುಗನೊಬ್ಬನು ಸಂಜೆ ೭ ಗಂಟೆಗೆ ಆ ಚರ್ಚಿನೊಳಗೆ ಕರೆಯಲ್ಪಟ್ಟನು, ರಾತ್ರಿ ೧೧ ಘಂಟೆಗೆ ಮುಸಲ್ಮಾನರು ಗಲಾಟೆಯೆಬ್ಬಿಸಿದರು. ಪೋಲೀಸರು ಗುಂಡು ಹಾರಿಸಿ ಮೂವರು ಮುಸ್ಲೀಮರನ್ನು ಕೊಂದರು. ಇಷ್ಟು ಗೊತ್ತಾಗುತ್ತದೆ, ಹೆಚ್ಚಿನ ವಿವರ ಆ ಇಗರ್ಜಿಯಲ್ಲಿ ಕುಳಿತು ಎಲ್ಲವನ್ನೂ ಕಂಡಿದ್ದ (ಗಲಭೆಯಲ್ಲಿ ಕಣ್ಣಿಗೆ ಪೆಟ್ಟು ಬೀಳಲಿಲ್ಲವಾದರೆ) ಆ ದೇವನಿಗೇ ಗೊತ್ತು! ‖ ದೇವಮಾಡಿಸುವನಿದ ನಾವೇನು ಮಾಡುವೆವು? ‖ ಕೊಂದವರು ಸತ್ತವರೊಳವನಿರುವನು! | ನರನಾರಾಯಣ!

—**ನಾರದ.**

ಮುಗ್ಗುಲಲ್ಲಿದವ:—ನನಗೆ ಇಪ್ಪತ್ತೈದು ಕೊಡಿ; ನನಗೆ ಮೂರ್ಛೆ ಬಂದಂತೆ ನಟಿಸುತ್ತೇನೆ.

X X X

ವಿಜ್ಞಾನಶಾಸ್ತ್ರಜ್ಞ:-ಗಿಡಗಳಿಂದ ನಮಗೆ ಲಾಭವುಂಟಾಗುತ್ತದೆ.

ಶಿಷ್ಯ:-ಹೌದು ನೌದೆಯಿಂದ ಬಹಳ ಲಾಭ

ನವಯುಗಕ್ಕೆ ಇಂದೆ

ಚಂದಾದಾರರಾಗಿರಿ!

ಹೊಸದು! • ಐರಾವತ • ತೀರಾ ಹೊಸದು!!

ಇದರಲ್ಲಿ—ಕಾಮಶಾಸ್ತ್ರ, ಕೈಗಾರಿಕೆಯ ವಿಷಯ, ಇಂದ್ರಜಾಲ-ಮಹೇಂದ್ರಜಾಲ, ಕಾಯದೇಭಾಗ, ತಂತ್ರ-ಮಂತ್ರ-ಯಂತ್ರ, ಸರ್ವ ಮುಹೂರ್ತ ವಿಷಯ, ವೈದ್ಯಭಾಗ. ಈ ಪ್ರಕಾರ ೭ ಪ್ರಕರಣಗಳಿದ್ದು ಅತ್ಯಂತ ಮಹತ್ವದ ವಿಷಯಗಳು ಅಡಕವಾಗಿವೆ. ಇದರ ಬೆಲೆ ರೂ- ೧--೦--೦ ವಿ. ಪಿ. ಚಾರ್ಜು ಬೇರೆ.

ವಿಳಾಸ:— ಎಸ್. ಸಿ. ಸಾಲಿಮಠ ಅಂಡ್ ಸನ್ಸ್, ಗದಗ ಸಿಟಿ.

ಅನೇಕ ಮರ್ಮ ವಿದ್ಯೆಗಳಿಂದೊಡಗೂಡಿದ

—ಚಿಂತಾರತ್ನ—

ಇದರಲ್ಲಿ ಜಾತಕಫಲ, ಕೈಗಾರಿಕೆಯ ವಿಷಯ, ಇಂದ್ರಜಾಲ, ಮಹೇಂದ್ರಜಾಲ, ಯಕ್ಷಿಣಿ ಮೊದಲಾದ ವಿದ್ಯೆಗಳು ಇರುತ್ತವೆ. ಒಂದೊಂದು ವಿಷಯಕ್ಕೆ ಎಷ್ಟು ಬೆಲೆ ಕೊಟ್ಟರೂ ಸಾಲದು.

೧ ಸಬಕಾರವನ್ನು ತಯಾರಿಸುವ ರೀತಿ
೨ ಮೇಣಬತ್ತಿ ತಯಾರಿಸುವ ರೀತಿ
೩ ಕಾಸ್ಟಿಕ್ ಸೋಡಾ ತಯಾರಿಸುವದು
೪ ಬಿಸ್‌ಕ್ಯೂಟ ತಯಾರಮಾಡುವದು
೫ ದಶಾಂಗ ತಯಾರಮಾಡುವದು
೬ ಪೆಪ್ಪರಮೆಂಟ ಮಾಡುವದು
೭ ದೂಪದ ಘಟ್ಟಿ ಮಾಡುವದು
೮ ಭಂಗಾರ ಮಾಡುವದು
೯ ಬೆಳ್ಳಿ ತಯಾರಮಾಡುವದು
೧೦ ಜರ್ಮನ್ ಶಿಲ್ವರ ಧಾತು
೧೧ ಊದಿನಕಡ್ಡಿ ತಯಾರಮಾಡುವದು
೧೨ ೩೯ ದಿನ ಪಾಟಿ ತಯಾರಮಾಡುವದು
೧೩ ಕುಂಕುಮವನ್ನು ತಯಾರಿಸುವದು
೧೪ ಹಸಿ ಕುಂಕುಮ ತಯಾರಿಸುವದು
೧೫ ಗೋದೀಸರಿ ಕೆಡದಂತೆ ಮಾಡುವದು
೧೬ ಬುಕ್ಕಿಟ್ಟು ಮಾಡುವದು
೧೭ ಮೊನಸರಿ ಯಾವಾಗಲೂ ನೀರಾಗಿರುವಂತೆ ಮಾಡುವದು
೧೮ ಅಷ್ಟಗಂಧ ಸಾಮಾನುಗಳು
೧೯ ಭರ್ಮ ತಯಾರಮಾಡುವದು
೨೦ ಕಟ್ಟಿಗೆ ಲೋಹಗಳಿಗೆ ಹಚ್ಚುವ ಬಣ್ಣ ಮಾಡುವದು
೨೧ ಕಾಗದವನ್ನು ಮಾಡುವದು
೨೨ ಮೆಂಥೇಲ ಎಣ್ಣೆ ತಯಾರಿಸುವದು
೨೩ ಕನ್ನಡಿಯ ಮೇಲೆ ಬರೆಯುವದು
೨೪ ದಂತಮಂಜನ ಮಾಡುವದು
೨೫ ರಕ್ತಶುದ್ಧಿ, ಧಾತುವೃದ್ಧಿ ಔಷಧಿ
೨೬ ಕಸ್ತೂರಿ ಮಾತ್ರೆ ಮಾಡುವದು
೨೭ ಕುಚಪ್ರಭಾತಕ್ಕೆ ಔಷಧ
೨೮ ಬಾಲಾಮೃತ ಮಾಡುವದು
೨೯ ಶಿಷ್ನವೃದ್ಧಿಗೆ ಔಷಧ
೩೦ ಪರಬತ್ತು ಮಾಡುವದು
೩೧ ಛಳಿಜ್ವರದ ಗುಳಿಗೆ ಮಾಡುವದು
೩೨ ಬೂಟಪಾಲೀಸ ಮಾಡುವದು
೩೩ ಮನೆ, ವಠಾರ, ಅಂಗಡಿ ಮೊದಲಾದುವುಗಳಿಗೆ ಗೆದ್ದಲಿ ಹತ್ತದಂತೆ ಮಾಡುವದು
೩೪ ಹುರುಕು ಖಜ್ಜಿ ಮುಲಾಮು ಮಾಡುವದು
೩೫ ನಾಸೀಪುಡಿ ಮಾಡುವದು
೩೬ ಮನೆ, ವಠಾರ, ಅಂಗಡಿಗಳಲ್ಲಿ ಇಲಿ, ಹೆಗ್ಗಣ ಮೊದಲಾದವುಗಳು ಇರದಂತೆ ಮಾಡುವದು
೩೭ ಜರ್ದಾತಂಬಾಕ ಮಾಡುವದು
೩೮ ಒದನೆ, ಕುಂಬಳ ಮುಂತಾದ ಕಾಯಿಗಳಿಗೂ, ಮಾವು, ಲೇಬು ಮುಂತಾದ ಹಣ್ಣುಗಳಿಗೂ ಬೀಜವಿಲ್ಲದೆ ದೊಡ್ಡವಾಗುವದು
೩೯ ಸಿಮೆಂಟ್ ತಯಾರಿಸುವದು
೪೦ ಬಿಳೀ ಹೂಗಳು ಕೆಂಪಾಗುವಂತೆ ಗಿಡಗಳನ್ನು ತಯಾರಿಸುವದು
೪೧ ಕೆಂಪು ಹೂಗಳು ಬೆಳ್ಳಗಾಗುವಂತೆ ಗಿಡಗಳನ್ನು ತಯಾರಿಸುವದು
೪೨ ಇಸ್ಪೀಟಿನ ಚಮತ್ಕಾರ
೪೩ ಮುಖ ನೋಡಿಕೊಳ್ಳುವ ಕನ್ನಡಿ ಮಾಡುವದು
೪೪ ಸುವಾಸನೆ ಎಣ್ಣೆ ತಯಾರಿಸುವದು
೪೫ ಕೇದಿಗೆ ದವನದೆಣ್ಣೆ ಮಾಡುವದು
೪೬ ಯಾವ ಗಿಡವಾದರೂ ಹುಟ್ಟುತ್ತಲೆ ಹೂವು ಬಿಡುವಂತೆ ಮಾಡುವದು
೪೭ ಗಂಧಕದ ಬಟ್ಟಲ ತಯಾರಿಸುವದು
೪೮ ಕರ್ಪೂರ ಮಾಡುವದು
೪೯ ಬ್ರಷ್ಷ ತಯಾರಿಸುವದು
೫೦ ನೂಲ. ಬಟ್ಟೆಗೆ ಬಣ್ಣ ಹಾಕುವದು
೫೧ ಕಪ್ಪು, ಕೆಂಪು, ಹಸುರು, ಹಳದಿ ಬಣ್ಣ ತಯಾರಿಸುವದು
೫೨ ಬರ್ಥ ಕಂಟ್ರೋಲ
೫೩ ಅರಗಿನ ಬಣ್ಣ ತಯಾರಿಸುವದು
೫೪ ಗಿಲೀಟ ಮಾಡುವದು
೫೫ ತಾಮ್ರದ ಮೇಲೆ ಭಂಗಾರದ ಗಿಲೀಟು ಮಾಡುವದು
೫೬ ತಾಮ್ರ, ಹಿತ್ತಾಳಿಗೆ ಬೆಳ್ಳಿ ಗಿಲೀಟು ಮಾಡುವದು
೫೭ ಕಡ್ಡಿ ಪೆಟ್ಟಿಗೆ ತಯಾರಿಸುವದು
೫೮ ಸೋಡಾವಾಟರ ತಯಾರಿಸುವದು

ಇತ್ಯಾದಿ ೧೭೦ ವಿಷಯಗಳಿವೆ.
ಸ್ಥಳ ಸಂಕೋಚ ಮೂಲಕ ಎಲ್ಲವನ್ನೂ ಕೊಟ್ಟಿಲ್ಲ.

ಬೆಲೆ ೧ ರೂಪಾಯಿ . . (ವಿ. ಪಿ. ವೆಚ್ಚ ಬೇರೆ)

ಎಸ್. ಸಿ. ಸಾಲಿಮಠ, ಪ್ರಿಂಟರ, ಗದಗ
ಇವರಿಂದ ಬರೆಯಲ್ಪಟ್ಟ

ಕಾಮುಕಳಾಶಾಸ್ತ್ರ

ಪ್ರತಿ ಒಬ್ಬ ರಸಿಕರು ಅವಶ್ಯ ಓದಬೇಕಾದ
-- ಈ ಪುಸ್ತಕದೊಳಗಿನ ವಿಷಯಗಳು --

೧ ಪುರುಷ ಸಾಮುದ್ರಿಕ ಲಕ್ಷಣ ೨ ಸ್ತ್ರೀ ಸಾಮುದ್ರಿಕ ಲಕ್ಷಣ. ೩ ಶಶಕ ಜಾತಿ ಪುರುಷನ ಲಕ್ಷಣ. ೪ ಮೃಗಜಾತಿ ಪುರುಷನ ಲಕ್ಷಣ. ೫ ವೃಷಭಜಾತಿ ಪುರುಷನ ಲಕ್ಷಣ. ೬ ಅಶ್ವಜಾತಿ ಪುರುಷನ ಲಕ್ಷಣ ೭ ಪದ್ಮಿನಿಜಾತಿ ಸ್ತ್ರೀಯಳ ಲಕ್ಷಣ. ೮ ಚಿತ್ರಿಣಿಜಾತಿ ಸ್ತ್ರೀಯಳ ಲಕ್ಷಣ. ೯ ಶಂಖಿನಿಜಾತಿ ಸ್ತ್ರೀಯಳ ಲಕ್ಷಣ. ೧೦ ಹಸ್ತಿನಿಜಾತಿ ಸ್ತ್ರೀಯಳ ಲಕ್ಷಣ. ೧೧ ಯಾವ ಯಾವ ಜಾತಿ ಪುರುಷನಿಗೆ, ಯಾವ ಯಾವ ಜಾತಿ ಸ್ತ್ರೀಯಳು ಯೋಗ್ಯ. ೧೨ ಮತ್ತು ಅವರಿಂದ ಹುಟ್ಟಿದ ಮಕ್ಕಳ ಫಲವಿಚಾರ (ಜಾತಕ.) ೧೩ ಯಾವ ಯಾವ ಜಾತಿ ಸ್ತ್ರೀಯರಿಗೆ ಯಾವ ಯಾವ ತಿಥಿಯ ದಿವಸ ಭೋಗೇಚ್ಛಾ ಉಂಟಾಗುತ್ತದೆಂಬುದನ್ನು ತಿಳಿಯುವದು. ೧೪ ಯಾವ ಯಾವ ಸ್ತ್ರೀಯರಿಗೆ ಎಷ್ಟೆಷ್ಟು ಹೊತ್ತಿಗೆ ಭೋಗೇಚ್ಛಾ ಉಂಟಾಗುತ್ತದೆಂಬದನ್ನು ತಿಳಿಯುವದು, ೧೫ ಯಾವ ಯಾವ ಜಾತಿ ಸ್ತ್ರೀಯರಿಗೆ ಯಾವ ಯಾವ ತಿಥಿಯ ದಿವಸ ಯಾವ ಯಾವ ಅವಯವದಲ್ಲಿ ಕಾಮವು ಇರುತ್ತದೆಂಬುದನ್ನು ತಿಳಿಯುವ ಕ್ರಮವು. ೧೬ ಚಂದ್ರಕಲೆಯ ಸ್ಥಾನಗಳು. ೧೭ ಸ್ತ್ರೀವಶೀಕರಣ. ೧೮ ಪುರುಷವಶೀಕರಣ. ೧೯ ಪದ್ಮಿನಿ ಸ್ತ್ರೀಯಳನ್ನು ವಶಮಾಡಿಕೊಳ್ಳುವ ಉಪಾಯ. ೨೦ ಚಿತ್ರಿಣಿ ಸ್ತ್ರೀಯಳನ್ನು ವಶಮಾಡಿಕೊಳ್ಳುವ ಉಪಾಯ. ೨೧ ಶಂಖಿನಿ ಸ್ತ್ರೀಯಳನ್ನು ವಶಮಾಡಿಕೊಳ್ಳುವ ಉಪಾಯ. ೨೨ ಹಸ್ತಿನಿ ಸ್ತ್ರೀಯಳನ್ನು ವಶಮಾಡಿಕೊಳ್ಳುವ ಉಪಾಯ. ೨೩ ಭೋಗಕ್ಕೆ ಯೋಗ್ಯ ಸ್ಥಳ. ೨೪ ಭೋಗಕ್ಕೆ ಅಯೋಗ್ಯ ಸ್ಥಳ ೨೫ ಮೈಥುನಕ್ಕೆ ಅಯೋಗ್ಯವಾದ ವೇಳೆ. ೨೬ ಮೈಥುನಕ್ಕೆ ಅಯೋಗ್ಯ ಸ್ತ್ರೀಯರು. ೨೭ ಪರಸ್ತ್ರೀ ಗಮನದಿಂದಾಗುವ ಹಾನಿ. ೨೮ ಸುಗಂಧ ದ್ರವ್ಯ ೨೯ ಕಂಕುಳದೊಳಗಿನ ದುರ್ಗಂಧ ಹೋಗುವುದಕ್ಕೆ. ೩೦ ಬಾಯಿ ದುರ್ಗಂಧ ಹೋಗುವುದಕ್ಕೆ. ೩೧ ಮಡಿಬಕ್ಕೆಗೆ. ೩೨ ಕೇಶರಂಜನಕ್ಕೆ. ೩೩ ತಿಗಳೆನೆಕ್ಕಿದಕ್ಕೆ. ೩೪ ಕೂದಲು ಉದುರುವುದಕ್ಕೆ. ೩೫ ಶರೀರದ ಕಪ್ಪುಬಣ್ಣಕ್ಕೆ. ೩೬ ಕುಚವೃದ್ಧಿಗೆ. ೩೭ ಸ್ತ್ರೀಯರಲ್ಲಿಯ ಅವಸ್ಥೆಗಳು. ೩೮ ಅವಸ್ಥೆ ಮೇಲಿಂದ ಪ್ರೇಮದ ಇರುವಿಕೆ. ೩೯ ಮೈಥುನದ ಸುಖದಲ್ಲಿ ಅಂತರ ಬೀಳುವ ಕಾರಣ. ೪೦ ದಂಪತಿಗಳು ಕೂಡುವ ದಿಕ್ಕಿನ ಫಲವು. ೪೧ ಸತಿಪತಿಗಳು ಕೂಡುವ ದಿವಸ ಫಲ. ೪೨ ಗರ್ಭ ನಿಂತ ದಿವಸ ಫಲ. ೪೩ ಗರ್ಭ ನಿಂತ ಕಾಲ ಫಲ ೪೪ ಸ್ತ್ರೀಯರ ಜಾತಿ ಮೇಲಿಂದ ಕೂಸಿನ ಲಕ್ಷಣ. ೪೫ ವಿಶಾಲಯೋನಿಗೆ ಉಪಾಯ. ೪೬ ಯೋನಿ ಸಂಕೋಚಕ್ಕೆ. ೪೭ ಶಿಷ್ನ ವೃದ್ಧಿಗೆ. ೪೮ ಸ್ತ್ರೀಯರಿಗೆ ಮೈಥುನವು ಬೇಗನೆ ಸಾಕಾಗುವಂತೆ ಮಾಡುವ ಉಪಾಯ. ೪೯ ಪುರುಷರಿಗಿಂತ ಮೊದಲು ಸ್ತ್ರೀಯರ ರೇತಸ್ಖಲನವಾಗುವ ಉಪಾಯ. ೫೦ ಪುರುಷರ ರೇತಸ್ಸು ಬೇಗ ಬೀಳಬಾರದೆಂಬುದಕ್ಕೆ ಉಪಾಯ. ೫೧ ವಾಜಿಕರಣ ಪ್ರಯೋಗ. ೫೨ ಸ್ತ್ರೀಯರನ್ನು ಜಯಿಸುವುದಕ್ಕೆ. ೫೩ ಬಹಳ ಮುಟ್ಟಾಗುತ್ತಿದ್ದರೆ. ೫೪ ಸಂತತಿ ಪ್ರತಿಬಂಧಕ ಉಪಾಯ. ೫೫ ಮುಟ್ಟು ತಡೆದಿದ್ದರೆ. ೫೬ ಗರ್ಭಾಶಯ ಶುದ್ಧಿಗೆ. ೫೭ ಗರ್ಭಧಾರಣಕ್ಕೆ. ೫೮ ಗರ್ಭಪಾತಕ್ಕೆ ಉಪಾಯ.

ಇತ್ಯಾದಿ ೧೭೦ ವಿಷಯಗಳಿವೆ. ಸ್ಥಳ ಸಂಕೋಚ ಮೂಲಕ ಎಲ್ಲವನ್ನೂ ಕೊಟ್ಟಿಲ್ಲ.

ಬೆಲೆ ೧ ರೂಪಾಯಿ (ವಿ. ಪಿ. ವೆಚ್ಚ ಬೇರೆ)

ವಿಳಾಸ:—ಎಸ್. ಸಿ. ಸಾಲಿಮಠ ಅಂಡ್ ಸನ್ಸ್, ಗದಗ ಸಿಟಿ.

OUR CINEMA PAGE | **Indian Films** | Master Venkauna

ಭಾರತೀಯ ಚಲಚ್ಚಿತ್ರಗಳು

ನಮ್ಮ ಭಾರತವು ಕಲಾವಂತರ ನಾಡು. ಸತ್ಕಲೆಗಳ ಬೀಡು ಎಂಬುದು ಸರ್ವಮಾನ್ಯವಾದರೂ ಚಲಚ್ಚಿತ್ರ ಪ್ರಪಂಚದಲ್ಲಿ ನಮ್ಮ ಹಿಂದೂದೇಶವು ಇನ್ನೂ ಹಿಂದುಳಿದ ದೇಶವಾಗಿಯೇ ಇರುವುದು ಶೋಚನೀಯ ವಿಷಯ. ಹಲಕೆಲವು ಕಲಾಭಿಜ್ಞರು ಪರರಾಷ್ಟ್ರಗಳ ಈ ಭರತಖಂಡದ ಕಲಾವೈಚಿತ್ರ್ಯವು ಅಸಾಮಾನ್ಯವಾದುದೆಂದು ಮನಗಾಣುವಂತೆ, ಪ್ರಕಾಶಮಾನವಾಗಿದೆ. ಆದರೂ ಅನೇಕ ಚಲಚ್ಚಿತ್ರ ಸಂಸ್ಥೆಗಳು ತಾವು ಕಲಾಪ್ರದರ್ಶನ ಮಾಡುವೆವೆಂದು ಹೆಮ್ಮೆ ಕೊಚ್ಚಿಕೊಂಡು, ಕಲೆಯ ಕೊಲೆಯನ್ನೇ ಮಾಡುತ್ತಿರುವವು. ಇದರಿಂದಲೇ ಹಿಂದುದೇಶವು ಇನ್ನೂ ದೂರಾಸನ್ನವರ್ತಿಯಾಗಿದೆ.

ಚಲಚ್ಚಿತ್ರ ಶಾಖೆಯಲ್ಲಿ ಹಿಂದೀಯರು ಮುಂಬರದಿರಲು ಕಾರಣವೇನೆಂದು ಪರಿಶೀಲಿಸುವುದು ಮೊದಲ ಕೆಲಸ. ಎಷ್ಟೋ ಸಂಸ್ಥೆಗಳು ಮೊದಲಾಗಿ ಹಲವು ಪುರಾತನ ಕಥೆಗಳನ್ನು ಮಾತ್ರ ಆರಿಸಿ, ತಮ್ಮ ಕಂಪೆನಿಯ ಚಲಚ್ಚಿತ್ರಗಳಿವು ಎಂದು ತೋರಿಸುತ್ತಿವೆ. ಆ ಪ್ರತಿಯೊಂದು ಚಿತ್ರವೂ ಕಲೆಯನ್ನು ಸಂಪೂರ್ಣವಾಗಿ ಕೊಂದುಬಿಡುವುದನ್ನು ನಾವು ಕಾಣುತ್ತಿದ್ದೇವೆ. 'ವೇಲ್ ಪಿಕ್ಚರ್ಸ್'ನವರ 'ಕೃಷ್ಣಲೀಲೆ'ಯನ್ನು ಕಂಡು ಹೇಗೇಗೋ ಎನ್ನಿಸಿತು. ಅದು ನನ್ನ ಕಣ್ಣಿನಲ್ಲಿ ತುಂಬಿದ ಕೊಸರಿನ ಕಾರಣದಿಂದಾಗಿರಲೂಬಹುದು. ಆ ಚಿತ್ರದಲ್ಲಿ ಕಾಳಿಂಗನ ಶರೀರವೆಲ್ಲವೂ ನೆಂಗಟ್ಟುತ್ತಿತ್ತು. ವಸುದೇವನು ಬಾಲಕೃಷ್ಣನನ್ನು ಯಮುನಾನದಿಯ ಮೂಲಕ ಕೊಂಡುಹೋಗುತ್ತಿದ್ದ ಕಾಲದಲ್ಲಿ ಹಿಂದಿನಿಂದ ಅನುಸರಿಸುತ್ತಿದ್ದ ಮಹಾಶೇಷನ ಹೆಡೆಗೂ, ಶರೀರಕ್ಕೂ, ಬಾಲಕಕ್ಕೂ ಒಂದಿಷ್ಟು ಪ್ರಕೃತಿ ಸಾಮ್ಯವಿರಲಿಲ್ಲ; ಮತ್ತು ಅದರ ಗಮನವೂ ಸರ್ಪಯೋಗ್ಯವಾಗಿರಲಿಲ್ಲ. ಇಂತಹ ದೋಷಗಳು (ಇವು ನ್ಯೂನತೆಗಳಲ್ಲ) ಭಾರತೀಯ ಚಲಚ್ಚಿತ್ರಗಳಲ್ಲಿ ತುಂಬಾ ಕಂಡುಬರುತ್ತಿವೆ. ಒಮ್ಮೊಮ್ಮೆ ರಾಜಭವನದ ಗೋಡೆಗಳು ತೆರೆಗೆಲೆಗಳಂತೆ ನಡುಗುವುವು. ಕೆಲವು ವೇಳೆ ಸಿಂಹಾಸನದ ಒರಗುಮಣೆ ತಲೆದೂಗುವುದು. ಹಲವು ವೇಳೆ ಖಡ್ಗಯುದ್ಧವಾಗುವಾಗ ಗೋಡೆಗಳು ತೂತಾಗಿ ಆ ತೂತಿನ ಮೂಲಕ ಬೆಳಕು ಹೊಳೆಯುವುದು. ಇವೆಲ್ಲವೂ ಕಲೆಯ ಕೊಲೆಯಲ್ಲದೆ ಬೇರೇನೂ ಅಲ್ಲವೆಂದು ದೃಢವಾಗಿ ಹೇಳಬಲ್ಲೆನು. ಇದೇ ರೀತಿಯ ಇಲ್ಲವೇ ಇನ್ನೂ ಹೆಚ್ಚಿನ ಕುಂದುಕೊರತೆಗಳು ನಮ್ಮ ದೇಶದ ಚಿತ್ರಗಳಲ್ಲಿ ಭೂಯಿಷ್ಠವಾಗಿವೆ.

ಪುರಾತನ ಕಥೆಗಳನ್ನು ಚಿತ್ರ ತೆಗೆಯುವುದರಿಂದಲೇ ಇಂತಹ ದೋಷಗಳು ಉಂಟಾಗುವುವೆಂದು ನಾನು ಹೇಳಲಾರೆನು. ಇಂತಹ ದೋಷಗಳು ಚಿತ್ರ ನಿರ್ದೇಶಕರ, ಅಜ್ಞಾನದಿಂದ ಇಲ್ಲವೇ, ಅವರ ಅವಿಚಾರದಿಂದ ಬರುತ್ತವೆ.

ಪುರಾತನ ಕಥೆಗಳನ್ನೂ ಉತ್ತಮವಾದ ಚಿತ್ರವನ್ನಾಗಿ ಮಾರ್ಪಡಿಸುವುದು ಎಷ್ಟು ಮಟ್ಟಿಗೆ ಸಾಧ್ಯವೆಂಬುದನ್ನು ಸರ್ವಭಾರತಮಾನ್ಯ ನಿರ್ದೇಶಕ ವಿ. ಶಾಂತಾರಾಮರು ತೋರಿಸಿಕೊಟ್ಟಿರುವರು. ಅವರ 'ಅಮೃತಮಂಥನ'ವನ್ನು ಕಂಡು ಸಂತೋಷಪಡದ ಭಾರತೀಯರು ವಿರಳ. ಮಾಯಾಮಚ್ಛೇಂದ್ರದ ವೈಭವವನ್ನು ನೋಡಿ ಆನಂದಗೊಳ್ಳದವರಿಲ್ಲ. ಈಗ ತಾನೇ ಅನುರಜ್ಯೋತಿಯ ಕೀರ್ತಿಪ್ರಭೆಯು ಎತ್ತೆತ್ತಲೂ ಹರಡಿ ಭಾರತೀಯ ಚಲಚ್ಚಿತ್ರದ ಮೇಲ್ಮೆಯನ್ನು ಬೆಳಗಿಸುವುದು ಎಲ್ಲರಿಗೂ ತಿಳಿದೇ ಇದೆ. ಇದರಿಂದಲೇ ನನ್ನ ಅಭಿಮತದಂತೆ ಚಲಚ್ಚಿತ್ರಗಳ ತಯಾರಿಯಲ್ಲಿ ಕಥೆಗಿಂತಲೂ ನಿರ್ದೇಶಕ ಶಕ್ತಿಯೇ ಪ್ರಧಾನವಾದುದೆಂದು ಬೇರೆ ಹೇಳಬೇಕಾಗಿಲ್ಲ. ಕಥೆಗೆ ಒಂದಿಷ್ಟು ಪ್ರಾಧಾನ್ಯವಿಲ್ಲವೆಂದು ಶ್ರೀ. ನಿರಂಜನ ಪಾಲರು ಒತ್ತಿ ಹೇಳುವುದನ್ನು ಎಲ್ಲರೂ ತಿಳಿದಿರಬಹುದು; ಅದಿಲ್ಲವಾದರೆ ಈಗಲಾದರೂ ವಿಚಾರಿಸಿ ತಿಳಿದುಕೊಳ್ಳಲಿ!

ಚಿತ್ರನಿರ್ದೇಶಕರು ನಿರ್ದಾಕ್ಷಿಣ್ಯರಾಗಿರಬೇಕು. ಯಾವ ಯಾವ ಪಾತ್ರಗಳನ್ನು ಯಾರು ಯಾರು ಹೇಗೆ ಹೇಗೆ ಅಭಿನಯಿಸಬಲ್ಲರೆಂಬ ನಿಗೂಢಸಾಮರ್ಥ್ಯವನ್ನು ತಿಳಿಯುವ ಶಕ್ತಿಯು ಅವರಲ್ಲಿರಬೇಕು, ಅವಲ್ಲದೆ, ಹಲವು ಸಂಸ್ಥೆಗಳಂತೆ ಎಂತಹ ಪಾತ್ರಗಳನ್ನು ಆ ಸಂಸ್ಥೆಯಲ್ಲೇ ಇರುವ ಹೆಸರು ಹೋದ (ಎಂದರೆ ಅನೇಕ ಚಿತ್ರಗಳಲ್ಲಿ ಅಭಿನಯಿಸಿ, ತಮ್ಮ ಹೆಸರನ್ನು ಎಲ್ಲೆಡೆಗೆ ನಿಷ್ಕಾರಣವಾಗಿ ಹರಡಿಸಿದ) ನಟ-ನಟಿಯರೇ ಅಭಿನಯಿಸುವಂತೆ ಮಾಡಿ, ಈ ಚಿತ್ರವನ್ನೇ ಹಾಳುಮಾಡುವ ನಿರ್ದೇಶಕರು ಎಂದೂ ಕಲೆಯ ಔನ್ನತ್ಯವನ್ನು ಪ್ರದರ್ಶಿಸಲಾರರು.

ಆ ಹಳೆಯ ಸಂಸ್ಥೆಯಾದ ಇಂಪೀರಿಯಲ್ ಕಂಪೆನಿಯಲ್ಲಿ ಮಿಸ್ ಸುಲೋಚನಾ ಮತ್ತು ಡಿ. ಬಿಲ್ಲಿಮೋರಿಯರು ಮುಖ್ಯ ಪಾತ್ರಧಾರಿಗಳು. ರಂಜಿತ್ ಕಂಪೆನಿಯಲ್ಲಿ ಹೆಚ್ಚಾಗಿ ಗೋಹರ್, ಇ. ಬಿಲ್ಲಿಮೋರಿಯ ಮತ್ತು ಮಾಧುರಿ ಇವರು ಮುಖ್ಯ ನಟ-ನಟಿಯರು. ಇದಲ್ಲದೆ, ಇಂತಹ ರೀತಿಯ ಸುವ್ಯವಸ್ಥೆ (?) ಯನ್ನು ಇನ್ನೂ ಹಲವು ಸಂಸ್ಥೆಗಳಲ್ಲಿ ನಾವು ಕಾಣಬಹುದು. ಈ ರೀತಿಯ ವ್ಯವಸಾಯದಿಂದಲೇ ನಮ್ಮ ದೇಶದ ಚಲನ ಚಿತ್ರಗಳು ಇನ್ನೂ ಕಲಾ ಪ್ರದರ್ಶಕವಾಗಿಲ್ಲವೆಂದು ಹೇಳಬೇಕಾಗಿದೆ. ಪ್ರಮಥೇಶ ಬರು (Pramathesa Baru),ಹೇಮಚಂದ್ರ ಮತ್ತು ವಿ.ಶಾಂತಾರಾಮ ಮೊದಲಾದವರು ತಾವು ತಯಾರಿಸುವ ಚಿತ್ರದಲ್ಲಿ ಯಾವ ಪಾತ್ರವನ್ನು ಯಾರು ಯೋಗ್ಯವಾಗಿ ಅಭಿನಯಿಸಬಲ್ಲರೆಂದು ತಿಳಿದು ಅವರನ್ನೇ ಆರಿಸುವರು. ಶಾಂತಾರಾಮರ ಮಾಯಾಮಚ್ಛೇಂದ್ರದ ನಾಯಿಕೆಯು ಅಮೃತಮಂಥನದಲ್ಲಿದ್ದ ನಟಿಯು ಮಹಾತ್ಮದಲ್ಲಿಲ್ಲ. ಅಂತೆಯೇ ದೇಶವಾಸದ ನಾಯಕನು ಮಾಯದಲ್ಲಿ ಮಾಯವಾಗಿರುವನು. ಅಲ್ಲದೆ ಚಂಡೀದಾಸನು ದೇವದಾಸನಾದರೂ, ಭಾಗ್ಯಚಕ್ರದ ದಿಲೀಪನಾಗುವ ಭಾಗ್ಯವು ಆತನಿಗೆ ಬರಲೇ ಇಲ್ಲ. ನಿರ್ದೇಶಕರ ಇಂತಹ ನಿರ್ದಾಕ್ಷಿಣ್ಯ ಕಾರ್ಯಗಳಿಂದಲೇ ನ್ಯೂ ಥಿಯೇಟರ್ಸಿನ ಪ್ರತಿಯೊಂದು ಚಿತ್ರವೂ ಮಾನ್ಯತೆ ಪಡೆಯಿತು ಇದರಿಂದಲೇ ಪ್ರಭಾತದ ಜಯಧ್ವನಿಯು ಎಲ್ಲೆಡೆಯನ್ನೂ ಹಬ್ಬಿಸಿತು.

(ಮುಂದುವರಿಯುವುದು.)

ಪತ್ರವ್ಯವಹಾರ

(ಬಾತ್ಮಿದಾರರು ತಮ್ಮ ಸಂಪೂರ್ಣ ವಿಳಾಸ ಆದ್ಯ ನಮಗೆ ಕೊಡಬೇಕಾಗಿದೆ, ಬಾತ್ಮಿಗಳು ಆದಷ್ಟು ಸಂಕ್ಷೇಪವಿದ್ದು ಕಾಗದದ ಒಂದೇ ಮಗ್ಗುಲಲ್ಲಿ ಶಾಯಿಯಿಂದ ಬರೆಯಲ್ಪಟ್ಟು ಸ್ಪಷ್ಟವಾದ ಅಕ್ಷರಗಳಲ್ಲಿರಬೇಕು. ಬಾತ್ಮಿದಾರರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ.

ಸಂ. ಸ.

ಮಂಗಳೂರು ತಾಲೂಕಿನ ಮತದಾರರಿಗೆ ವಿಜ್ಞಾಪನೆ.

ಈಗ ನಡೆಯುವ ಚುನಾವಣೆಯು ಜನರನ್ನು ಮುಖ್ಯತಃ ಮತದಾರರನ್ನು ಸಂಪೂರ್ಣ ಪರೀಕ್ಷೆ ಮಾಡತಕ್ಕದ್ದಾಗಿರುತ್ತದೆ.

ದೇಶೋದ್ಧಾರದ ಬಗ್ಗೆ 50 ವರುಷಗಳ ಹಿಂದೆ ದೇಶಭಕ್ತರಿಂದ ಕಾಂಗ್ರೆಸ್ ಸ್ಥಾಪಿಸಲ್ಪಟ್ಟಿತು. 20 ವರುಷಗಳಿಂದ ದೇಶ ಸ್ವಾತಂತ್ರ್ಯಕ್ಕಾಗಿ ಘೋರ ಕದನಗಳನ್ನು ಅದ್ಭುತ ಶೌರ್ಯದಿಂದ ಕಾಂಗ್ರೆಸ್ ನಡಿಸಿತು. ಸ್ವರಾಜ್ಯದ ಹೋರಾಟವನ್ನು ಕೌನ್ಸಿಲ್, ಎಸೆಂಬ್ಲಿಗಳಲ್ಲಿಯೂ ಮುಂದರಿಸುವ ಉದ್ದಿಶ್ಯ, ಚುನಾವಣೆಯ ರಂಗದಲ್ಲಿ ಇಳಿದು ಕಾಂಗ್ರೆಸ್ ಸಂಸ್ಥೆಯು ಮತದಾರರ ಮತವನ್ನು ಕೇಳುತ್ತದೆ.

ಈಗ ಜಾರಿಗೆ ಬರಲಿರುವ ಮಸೂದೆಯಲ್ಲಿ ಸ್ವರಾಜ್ಯವೆಷ್ಟು ಇಲ್ಲ, ಇದಕ್ಕೆ ದೇಶದ ಸಮ್ಮತಿ ಇಲ್ಲ. ಇದರಿಂದ ದೇಶದ ಹಿತವು ಎಳ್ಳಷ್ಟೂ ಸಿಕ್ಕಲಿಕ್ಕಿಲ್ಲ. ಸ್ವಾರ್ಥಲಾಭಕ್ಕಾಗಿಯೂ ಕೆಲವು ಮುದ್ದೆಗಳ ಆಶೆಗಾಗಿಯೂ ಜಸ್ಟೀಸ್ ಮೊದಲಾದ ಸ್ವರಾಜ್ಯ ಸ್ವಾತಂತ್ರ್ಯದ ವಿರೋಧಿಗಳಾದ ಕೆಲವು ಪಕ್ಷದವರು ಕೌನ್ಸಿಲ್ ಎಸೆಂಬ್ಲಿಗಳಿಗೆ ಹೊಗ್ಗಬೇಕೆಂತ ಈ ಚುನಾವಣೆಯಲ್ಲಿ ಹೋರಾಡುತ್ತಿದ್ದಾರೆ. ಅವರಿಗೆ ದೇಶದ ಹಿತದ ಚಿಂತನೆಯಿಲ್ಲ, ಅವರಿಗೆ ಇರುವುದು ಸಿಕ್ಕಬಹುದಾದ ಸಂಬಳದ ಹಿತಚಿಂತನೆಯೊಂದೇ. ಇವರ ಸಹಾಯದಿಂದ ದೇಶಕ್ಕೆ ವಿಷರೂಪವಾಗಿ ಪರಿಣಮಿಸುವ ಈ ಹೊಸ ಆಕ್ಟನ್ನು ಜಾರಿಗೆ ತಂದೇನೆಂಬುದೇ ಬ್ರಿಟಿಷರ ಅಭಿಲಾಷೆ

ನಮ್ಮ ಜಿಲ್ಲೆಯಲ್ಲಿ ಜಸ್ಟಿಸ್ ಪಕ್ಷದವರಾದ ಕೆಲವು ಉಮೇದ್ವಾರರು ಪಂಗಡದ ಹೆಸರನ್ನು ಹೇಳದೆ ಸ್ವತಂತ್ರರೆಂದು ಹೇಳಿಕೊಳ್ಳುತ್ತಾ ಕಾಂಗ್ರೆಸ್ ಉಮೇದ್ವಾರರಿಗೆ ಇದಿರಾಯಿಸುತ್ತಿದ್ದಾರೆ ಇವರೇ ಕಾಂಗ್ರೆಸ್ಸನ್ನು ಸೇರಿ ಸ್ವರಾಜ್ಯ ಸ್ಥಾಪನೆ ಕಾರ್ಯಗಳಲ್ಲಿ ಭಾಗವನ್ನು ವಹಿಸತಕ್ಕದ್ದಿತ್ತು. ಕಡೇಪಕ್ಷ ಕಾಂಗ್ರೆಸಿನ ಸ್ವರಾಜ್ಯ ಸ್ಥಾಪನೆಯ ಯತ್ನಗಳಲ್ಲಿ ವಿಘ್ನ ಭೂತರಾಗಬರಬಾರದಿತ್ತು. ಸ್ವಾರ್ಥವನ್ನೇ ಮುಂದಿಟ್ಟುಕೊಂಡು ದೇಶ ಹಿತವನ್ನು ಒಂದುಕ್ಷಣವಾದರೂ ಯೋಚಿಸದೆ ಚುನಾವಣೆಯಲ್ಲಿ ಇಂಥವರು ಇಳಿದಿರುತ್ತಾರೆ.

ಮುಖ್ಯತಃ ಮಂಗ್ಳೂರು ಸರ್ಕಲಲ್ಲಿ ಜಸ್ಟಿಸ್ ಪಂಗಡದ ಉಮೇದ್ವಾರಿಯ ಕಡೆಯವರು ಜಾತೀಯ ಮಾತ್ಸರ್ಯ ಮತ್ತು ದ್ವೇಷ ಇವಕ್ಕೆ ಜನರನ್ನು ಗುರಿಮಾಡಿ, ತಮ್ಮ ಉಮೇದ್ವಾರಿಗೆ ಬಲವಾದ ಪ್ರೋತ್ಸಾಹವನ್ನು ಮುಖ್ಯವಾಗಿ ಬಂಟ ಮತಸ್ಥರಲ್ಲಿ ಹೊಂದಿದಂತೆ ತೋರುತ್ತದೆ. ಮಂಗ್ಳೂರು ತಾಲೂಕಿನ ಬಂಟ ಮತಸ್ಥರೂ ಇತರ ಗೃಹಸ್ಥರೂ ಒಂದೇ ಸಂಗತಿಯನ್ನು ಆಲೋಚಿಸಿಕೊಂಡು ತಮ್ಮ ಓಟನ್ನು ಕೊಡಬೇಕಾಗಿದೆ. ಸ್ವರಾಜ್ಯ ಹೋರಾಟದಲ್ಲಿ ಕೊಂಗ್ರೆಸ್ಸಿಗೆ ತಮ್ಮಿಂದಾಗುವ ಅಲ್ಪ ಸಹಾಯವನ್ನು ಕೊಡದೆ, ಜಾತೀಯ ವಾತ್ಸಲ್ಯಕ್ಕೆ ಒಳಬಿದ್ದು ಕೇವಲ ಸ್ವಾರ್ಥಕ್ಕೂ ಹುದ್ದೆ ಆಶೆಗೂ ಹೋರಾಡುವ ಜಸ್ಟೀಸ್ ಉಮೇದ್ವಾರಿಗೆ ಓಟನ್ನು ಕೊಟ್ಟು ಎಂದೂ ಮಾಸದ ಅಪಕೀರ್ತಿಗೆ ಗುರಿಮಾಡಿಕೊಳ್ಳಬೇಕೋ ಅಥವಾ ಎಲ್ಲಾ ದೇಶ ಪ್ರೇಮಿಗಳಂತೆ ತಮ್ಮ ಸಂಪೂರ್ಣ ಸಹಾನುಭೂತಿಯನ್ನು ಕೊಂಗ್ರೆಸ್ ಉಮೇದ್ವಾರರಿಗೆ ಕೊಟ್ಟು ತಮ್ಮದೇ ಆಗಿರುವ ಕೊಂಗ್ರೆಸ್ ಪತಾಕೆಯನ್ನು ಎತ್ತಿ ಹಿಡಿಯಬೇಕೋ ಎಂಬ ಈ ಎರಡು ಸಂಗತಿಯನ್ನೇ ಯೋಚಿಸಿ ತಮ್ಮ ಓಟನ್ನು ಕೊಡಬೇಕಾಗಿರುತ್ತದೆ.

ಕಾಸರಗೋಡು
9-1-1936 ಎಚ್. ಎಸ್. ಮೈಯ್ಯ.

ಮುಂದಿನ ಚುನಾವಣೆ

ಶ್ರೀಮಾನ್ ಬಾಲಕೃಷ್ಣ ರಾವ್, ಎಡ್ವೋಕೇಟರವರು ರಾಷ್ಟ್ರಬಂಧು ಪತ್ರಿಕೆಯ ತಾ. ೨೮-೧೨-೩೬ನೇ ಸಂಚಿಕೆಯಲ್ಲಿ ಪ್ರಕಟಿಸಿದ ಮುಂದಿನ ಚುನಾವಣೆಯೆಂಬ ಶಿರೋನಾಮೆಯ ಲೇಖನದ ಪೂರ್ವಾರ್ಧವನ್ನು ಓದುವಾಗ್ಯೆ ರಾ. ಬಾಲಕೃಷ್ಣ ರಾಯರು ಸದ್ಯಕ್ಕೆ ಯಾವ ಪಂಗಡಕ್ಕೆ ಸೇರದಿದ್ದರೂ ಕೊಂಗ್ರೆಸ್ಸಿನಯೂ ಸ್ವದೇಶದ ಮೇಲೆ ತುಂಬಾ ಅಭಿಮಾನವೂ ಕೊಂಗ್ರೆಸ್ಸಿನ ಧ್ಯೇಯದ ಮೇಲೆ ವಿಶ್ವಾಸವೂ ಕೊಂಗ್ರೆಸ್ಸಿನ ಕಾರ್ಯದ ಮೇಲೆ ತುಂಬಾ ನಂಬಿಕೆಯೂ ಇದ್ದ ಹಾಗೆ ತೋರುವುದರಿಂದ ಇವರ ಸ್ವದೇಶಾಭಿಮಾನಕ್ಕೋಸ್ಕರ ಕೊಂಡಾಡಲೇ ಬೇಕಾಗುತ್ತದೆ. ಆದರೆ ಇವರ ಲೇಖನದ ಉತ್ತರಾರ್ಧವನ್ನು ಓದುವಾಗ್ಯೆ ಇವರು ಸ್ವಮತ ಸ್ವಜಾತಿ ವಾತ್ಸಲ್ಯ ಮತ್ತು ಸ್ವಉದ್ಯೋಗಾಭಿಮಾನಕ್ಕೆ ಕಟ್ಟುಬಿದ್ದು ಸ್ವಲ್ಪ ಗಲಿಬಿಲಿಯಾದಂತ ಕಾಣುತ್ತದೆ. ಕೊಂಗ್ರೆಸಿನ ಕಾರ್ಯಗಳ ಮೇಲೆ ನಂಬಿಕೆಯಿದ್ದ ಯಾವನೊಬ್ಬ ವ್ಯಕ್ತಿಯೂ ಕೊಂಗ್ರೆಸಿಗೆ ವಿರೋಧವಾಗಿರುವ ಯಾವದೊಂದು ಪಂಗಡಕ್ಕೂ ಸಹಾಯ ಮಾಡಿರಿಯೆಂದು ಜನತೆಯನ್ನು ಕೇಳುವುದಾದರೆ ಆತನನ್ನು ದೇಶದ್ರೋಹಿಯೆನ್ನಲೇ ಬೇಕಾಗುವುದು. ರಾ. ಬಾಲಕೃಷ್ಣರಾಯರು ಶ್ರೀಮಾನ್ ಸದಾಶಿವ ಅಡಿಗರ ಕಡೆಗೆ ನಿಂತು ಪ್ರೋತ್ಸಾಹಿಸುವುದು ತಪ್ಪಲ್ಲ ಜಾತಿವಾತ್ಸಲ್ಯವೂ ಉದ್ಯೋಗ ವಾತ್ಸಲ್ಯವೂ ಸ್ನೇಹವಾತ್ಸಲ್ಯವೂ ಯಾರನ್ನು ಬಿಟ್ಟುಬಿಟ್ಟದೆ? ಆ ಮೇಲೆ ಎಲ್ಲಾ ಪಂಗಡಗಳ ಮೇಲಿನ ಅಭಿಮಾನ.

ಕೌನ್ಸಿಲಿನ ಒಂದು ಸ್ಥಾನಕ್ಕೆ ಈ ವರೆಗೆ ಕೊಂಗ್ರೆಸಿನ ಪ್ರತಿನಿಧಿಯನ್ನು ಚುನಾಯಿಸದೆ ಇದ್ದದ್ದು ಅತೃಪ್ತಿಕರವೆಂದೂ ಇನ್ನು ಚುನಾಯಿಸುವದರಲ್ಲಿ ಅರ್ಥವಿಲ್ಲೆಂದೂ ಹಾಗೆ ಚುನಾಯಿಸಿದರೆ ಕೊಂಗ್ರೆಸಿನವರಲ್ಲದ ಸ್ವತಂತ್ರವಾಗಿ ನಿಂತವರಿಗೆ ತೊಂದರೆಯಾಗುವದೆಂದೂ ರಾ. ಬಾಲಕೃಷ್ಣರಾಯರ ಅಂಬೋಣ. ಈ ಮಾತುಗಳಿಗೆ ಪರಸ್ಪರ ಸಂಬಂಧವಿರುವದಿಲ್ಲ. ಮಾತ್ರವಲ್ಲ ರಾಯರಲ್ಲಿ ಒಂದು ನಿಶ್ಚಿತವಾದ ಧ್ಯೇಯವಿದ್ದ ಹಾಗೆ ಕೂಡಾ ತೋರುವದಿಲ್ಲ. ಅದು ಅಲ್ಲದಿದ್ದರೆ ಇದು ಆಗ ಬಹುದು. ಇದು ಅಲ್ಲದಿದ್ದರೆ ಅದು ಆಗಬಹುದು ಎಂಬ ಭಾವನೆಯಿದ್ದ ಹಾಗೆ ತೋರುತ್ತದೆ.

ಶ್ರೀಮಾನ್ ಧರ್ಮಸ್ಥಳ ಮಂಜಯ್ಯ ಹೆಗ್ಗಡೆಯವರು ನಿಲ್ಲತಕ್ಕ ಸ್ಥಾನವನ್ನು ಬದಲಾಯಿಸಲಿಲ್ಲ. ಅವರ ಯೋಗ್ಯತೆಗೆ ಸರಿಯಾದ ಸ್ಥಾನಕ್ಕೆ ನಿಂತಿರುವರು. ಆದರೆ ಮೊದಲು ಎಸೆಂಬ್ಲಿಗೆ ಪ್ರತಿನಿಧಿಯಾಗಿ ನಿಲ್ಲಲು ಆಲೋಚಿಸಿದರೂ ಅದನ್ನು ಯಾಕೆ ಬದಲಿಸಿದರೆಂದು ರಾ. ಬಾಲಕೃಷ್ಣರಾಯರು ಯೋಚಿಸುತ್ತಿದ್ದರೆ ಯಾ ದೇಶದ ಮೇಲೆ ಅಭಿಮಾನವಿದ್ದರೆ ಶ್ರೀಮಾನ್ ಮಂಜಯ್ಯ ಹೆಗಡೇರವರೇ ಕೌನ್ಸಿಲಿಗೆ ಪ್ರತಿನಿಧಿಯಾಗಿ ನಿಲ್ಲಲು ಯೋಗ್ಯ ಮೆಂಬರರೆಂದೂ ರಾ. ಬಾಲಕೃಷ್ಣರಾಯರಿಗೆ ಅಡಿಗರ ಮೇಲಿನ ಪ್ರೇಮದಿಂದ ಕಾಣದಿದ್ದರೂ ಜನತೆಗೆ ಕಾಣದೆಯಿರಲಾರದು. ಶ್ರೀಮಾನ್ ಮಂಜಯ್ಯ ಹೆಗಡೇರವರು ಕೊಂಗ್ರೆಸ್ ಪ್ರತಿನಿಧಿಯಾಗಿ ನಿಲ್ಲದಿದ್ದರೂ ಕೊಂಗ್ರೆಸಿನ ಮೇಲೆ ನಂಬಿಕೆಯುಳ್ಳವರೆಂದೂ ದೇಶಾಭಿಮಾನಿಗಳೆಂದೂ ಅವರ ಹಿಂದಿನ ಯಾ ಮುಂದಿನ ಕಾರ್ಯಗಳಿಂದ ಜನತೆಗೆ ತಿಳಿಯದೆ ಇರಲಾರದು. ಆದುದರಿಂದ ಮದ್ರಾಸು ಲೆಜಿಸ್ಲೇಟಿವ್ ಕೌನ್ಸಿಲಿನ ಓಟರರೆಲ್ಲರೂ ದಯವಿಟ್ಟು ಶ್ರೀಮಾನ್ ಮಂಜಯ್ಯ ಹೆಗಡೇರವರನ್ನೇ ಕೌನ್ಸಿಲಿನ ಪ್ರತಿನಿಧಿಯನ್ನಾಗಿ ಚುನಾಯಿಸಬೇಕೆಂದು ನಾನು ಕೇಳಿಕೊಳ್ಳುವೆನು. ಇತಿ ಸಜ್ಜನ ವಿಧೇಯ,

ಕೆ. ಮಂಜುನಾಥ ನ್ಯಾಕ್,
ಜನರಲ್ ಮರ್ಚಂಟ್, ವಿಟ್ಲ.

ಇಂದೇ ನವಯುಗಕ್ಕೆ
ಚಂದಾದಾರರಾಗಿರಿ.

ಸ್ತ್ರೀ ವಿಭಾಗ

ರಾಜಕುಮಾರಿ ಎಲಿಜಬೆತಳ ಶೀವಿ ಬಲ್ಲಿರಾ?

ಅಕ್ಕಂದಿರಾ,

ಇಂಗ್ಲೆಂಡಿನಲ್ಲಿ ಎಂಟನೇ ಎಡ್ವರ್ಡರು ಸಿಂಹಾಸನ ತ್ಯಾಗಮಾಡಿ ಅವರ ತಮ್ಮ ಆರನೇ ಜೋರ್ಜರಾಗಿ ಪಟ್ಟವೇರಿದುದು ನಿಮಗೆಲ್ಲಾ ಗೊತ್ತುಂಟಷ್ಟೆ. ಈ ಆರನೇ ಜೋರ್ಜರ ಹಿರಿಯ ಪುತ್ರಿಯ ಹೆಸರು 'ಎಲಿಜಬೆತ್' ಎಂದು. ಅವರಿಗೆ ಈ ವರೆಗೆ ಗಂಡು ಮಕ್ಕಳಿಲ್ಲ. ಇನ್ನು ಮುಂದೆ ಆಗಬಾರದೆಂದಿಲ್ಲ. ಆದರೂ-ಆಗದಿದ್ದರೂ ಇವರ ನಂತರ ಪಟ್ಟ ಈ ರಾಜಕುಮಾರಿ ಎಲಿಜಬೆತಳಿಗೆ. ಹೆಣ್ಣಾಗಲಿ, ಗಂಡಾಗಲಿ ರಾಜನಲ್ಲಿ ಪ್ರಥಮತಃ ಹುಟ್ಟಿದವರೇ ಸಿಂಹಾಸನದ ಹಕ್ಕುದಾರರು, ರಾಜನು ಇರುವಾಗ ಇವರೇ ಯುವರಾಜ ಅಥವಾ ಯುವರಾಜ್ಞಿಯರು. ನಮ್ಮಲ್ಲಿ ಹಿರಿಯರಾಗಿದ್ದವರೇ ಆಸ್ತಿಯ ಪಟ್ಟಾದಾರರಾಗುವದಿಲ್ಲವೆ? ಅದೇ ಕ್ರಮ ತಿಳಿಯಿತೆ?

ಈ ರಾಜಕುಮಾರಿ ಎಲಿಜಬೆತಳ ಪ್ರಾಯ ಬರೇ ಹತ್ತು ವರ್ಷ. ನೀಲವಾದ ಕಣ್ಣುಗಳು, (ಕಣ್ಣುಗಳು ಕಮಲದಂತಿದ್ದರೆ ನಮಗೆ ಚಂದ-ನಾವು ಬೆಕ್ಕು ಕಣ್ಣು ಅನ್ನುತ್ತೇವಲ್ಲ ಹಾಗೆ ನೀಲಿ ಇದ್ದರೆ ಆಂಗ್ಲೇಯರಿಗೆ ಚಂದ') ಗುಂಗುರು ಗುಂಗುರಾದ ಕೂದಲು, ಗಟ್ಟಿಮುಟ್ಟಾದ ದೇಹ ಚುರುಕಾದ ನಡೆನುಡಿ ಇವುಗಳಿಂದೆಲ್ಲಾ ಎಲಿಜಬೆತಳು ಎಷ್ಟು ನೋಡಿದರೂ ಇನ್ನೂ ನೋಡೋಣ ಎಂಬ ಮನಸು ಹುಟ್ಟಿಸತಕ್ಕ ಹುಡುಗಿ. ಪ್ರಾಯಕ್ಕೆ ತಕ್ಕ ಮಕ್ಕಳಾಟಿಕೆ, ಆಟನೋಟಗಳಲ್ಲಿ ಆಸೆ-ಇವು ಇವೆ; ಜತೆಯಲ್ಲೆ ಪ್ರಾಯಕ್ಕೆ ಮಿಕ್ಕಿದ ಬುದ್ಧಿ ಶಕ್ತಿ, ಶೀವಿ ಇವೂ ಇವೆ. ಇವಳಿಗೊಬ್ಬಳು ತಂಗಿಯಿರುವಳು. ಅವಳ ಹೆಸರು 'ಮಾರ್ಗರೆಟ್ ರೋಜ್.' ಇಬ್ಬರೂ ಅಲ್ಲಿಯ ಜನರ ಅಚ್ಚುಮೆಚ್ಚಿನವರು ಪ್ರೀತಿ, ಕೊಂಡಾಟದವರು!

ರಾಜಕುಮಾರಿ ಎಲಿಜಬೆತಳಿಗೆ ಹತ್ತೇ ವರ್ಷವೆಂದು ಹೇಳಿದೆನಷ್ಟೆ. ಇಷ್ಟರಲ್ಲೇ ಅವಳಿಗೆ ಫ್ರೆಂಚ್ ಭಾಷೆಯು ನೀರಿನಂತೆ ಬರುತ್ತದೆ. ಜರ್ಮನಿ ಭಾಷೆಯು ಸಾಕಷ್ಟು ಬರುತ್ತದೆ. ಲ್ಯಾಟಿನ್ ಭಾಷೆಯು ಸರಾಗವಾಗಿ ಓದಬಲ್ಲಳು. ಅವಳ ಮಾತೃಭಾಷೆಯಾದ ಇಂಗ್ಲಿಷಿನಲ್ಲಾದರೋ ದೊಡ್ಡ ದೊಡ್ಡ ವಿದ್ವಾಂಸರು ಕೂಡಾ ತಲೆದೂಗುವಷ್ಟು ಹುಶಾರಿನಿಂದ ಮಾತನಾಡಬಲ್ಲಳು. ಇನ್ನು ಆಂಗ್ಲೇಯರ ಇತಿಹಾಸ ಕೇಳುವಿರಾ? ಅದು ಇವಳಿಗೆ ಗೊತ್ತಿರುವಷ್ಟು ರಾಜಸಭೆಯನ್ನಲಂಕರಿಸಿರುವ ಕೆಲವರಿಗೆ ಗೊತ್ತಿಲ್ಲವೆನ್ನುತ್ತಾರೆ. ಮುಂದಕ್ಕೆ ಮಹಾರಾಣಿಯಾಗುವವಳಲ್ಲವೆ-ಈಗಲೇ ಅದರ ಸಿದ್ಧತೆ ಎಷ್ಟು ಪಸಂದಾಗಿ ಆಗಿದೆ ನೋಡಿ! ಇವಳ ಪುಟ್ಟ ಸೊಗಸಾದ ಕೈಗಳು ಹಿಡಿಯುವ, ಒಂದು ಪುಟ್ಟ, ಸೊಗಸಾದ 'ಪಿಯಾನೊ.' ಅದನ್ನಿವಳು ಬಹು ಸೊಗಸಾಗಿ ಬಾರಿಸುತ್ತಾಳೆ; ಮುದ್ದುಮುದ್ದಾಗಿ ಹಾಡುತ್ತಾಳೆ. ಹತ್ತು ವರ್ಷದ ಹುಡುಗಿ ತಾಯಿ ತಂದೆಗಳ ಕಂಕುಳಲ್ಲಿ, ಹೆಗಲನ್ನು ಹತ್ತುವ ಕ್ರಮವಿಲ್ಲವೆ? ಈ ಹುಡುಗಿ ಸರಾಗವಾಗಿ ಕುದುರೆ ಹತ್ತುತ್ತಾಳೆ. ತನ್ನ ಪುಟ್ಟ ಕೈಕಾಲುಗಳನ್ನು ಬಡಿಯುತ್ತಾ ಹಲವು ನಿಮಿಷಗಳ ವರೆಗೆ ಈಜುತ್ತಾಳೆ ನೋಡಿದಿರಾ ದೊಡ್ಡವರು ಹುಡುಗಿಯನ್ನು ಮಾಡಿಟ್ಟ ರೀತಿ!

ಅದು ಹಾಗಾಯಿತಲ್ಲಾ-ಇನ್ನು ಆ ಹುಡುಗಿಯ ಶೀವಿಯನ್ನು ಕೇಳಿದರೆ ಹೊಟ್ಟೆಯಲ್ಲಿ ಹುಣ್ಣಾಗುವಷ್ಟು ನಕ್ಕು ಬಿಡುವಿರಿ! ಹತ್ತು ವರ್ಷದ ಹುಡುಗಿ-ಐವತ್ತು ವರ್ಷದ ಮುದುಕಿಯ ಶೇಂಕಾರ ಅವಳಿಗೆ. ಕೇಳಿ-ಒಂದು ವರ್ಷಕ್ಕೆ ಹಿಂದೆ ಈಗಿನ ಅರಸ ಜೋರ್ಜರು ಪಿಕಾಡಿಯಲ್ಲಿರುವ ೧೪೫ನೇ ನಂಬರಿನ ಮನೆಯನ್ನು ಸಂಸಾರಮಾಡಿಕೊಂಡಿದ್ದರು. ಆಗ ಅವರು ಸಾಮ್ರಾಟರಾಗಿರಲಿಲ್ಲ. ಬಹು ಮೋಜಿನ ಸಂಸಾರ ಅವರದು. ಇಂಗ್ಲೆಂಡಿನಲ್ಲೆಲ್ಲಾ 'ನಗೆಯ ರಾಣಿ' ಎಂದು ಹೆಸರು ಪಡೆದಿರುವ ಬಹು ಸುಂದರಿ ಪತ್ನಿ; ಮುದ್ದುಮುದ್ದಾದ ಇಬ್ಬರು ಹೆಣ್ಣು ಮಕ್ಕಳು-ಪ್ರಪಂಚದ ಎಲ್ಲಾ ಸುಖವನ್ನು ಅನುಭವಿಸಲು ಸಾಧ್ಯವಿರುವ ಸಂಪತ್ತು-ಇಷ್ಟಿದ್ದರೆ ಸ್ವರ್ಗವೆಂಬುದು ಬೇರೆ ಉಂಟೇನು? ಆದರೆ ಒಂದುಂಟು ನೋಡಿ ಎಂತಹ ಸುಖವಾದರೂ-ಉಂಡದ್ದನ್ನೇ ಉಣ್ಣುತ್ತಿದ್ದರೆ ಮತ್ತೆ ಅದರಲ್ಲಿ ರುಚಿಯುಂಟೆನ್ನುವಿರಾ? ಹಾಗಾಗಿತ್ತು ಒಂದು ದಿನ ನಮ್ಮ ಜೋರ್ಜರಿಗೆ. ಅವರೂ ಅವರ ಮನೆಯವರೂ ಒಂದು ವಿಧದ ಬೇಜಾರಿನಿಂದ ಕೊಠಡಿಯಲ್ಲಿ ಕುಳಿತಿದ್ದರು. ತುಸು ಹೊತ್ತಿನಲ್ಲಿ ಥಕ್ಕನೆ ಅವರ ಕೊಠಡಿ ಬಾಗಿಲಿನ ರೆಕ್ಕೆಗಳು ತೆರೆಯಲ್ಪಟ್ಟುವು. ಹುಡುಗಿಯೊಬ್ಬಳು ಕೈ ಬೀಸುತ್ತಾ 'ಸಾವಧಾನ! ಇಂಗ್ಲೆಂಡಿನ ಮುಂದಿನ ರಾಣಿ ಬರುತ್ತಿದ್ದಾಳೆ; ಪಕ್ಕಕ್ಕೆ ಸರಿಯಿರಿ' ಎಂದು ಇದಿರಿಗೆ ಬಂದು ನಿಂತಳು; ನೋಡಿದರೆ ಮಹಾರಾಣಿಗೆ ಹೇಳಿಸುವಂತಹ ಶೀವಿ; ದರ್ಪ; ಮುಖ ಭಂಗಿ! ಕೇಡ ಮರುವಿನ ನಿಮಿಷಕ್ಕೆ ಯಾರಾದರೂ ಥಕ್ಕನೆ ತಲೆ ಬಗ್ಗಿಸ ಬೇಕು. ಮರುಕ್ಷಣದಲ್ಲಿಯೇ ಹುಡುಗಿ ಗೊಳ್ಳೆಂದು ನಗುತ್ತಾಳೆ. ಒಂದು ವರುಷಕ್ಕೆ ಮೊದಲು ಅವಳದಿದು ಹುಡುಗಾಟಿಕೆ; ಈಗ ಅವಳ ಅಂದಿನ ಈ ಮಾತು ನಮ್ಮ ಸಾರ್ಣಭಟ್ಟರ ಬಲ್ಮೆಯ ಹಾಗಾಗಿಹೋಯಿತು ನೋಡಿ! ಒಮ್ಮೊಮ್ಮೆ ಹಾಗೆ ಆಗುತ್ತದೆ ಅಕ್ಕಂದಿರಾ? ಎಲಿಜಬೆತಳಿಗೊಬ್ಬ ಗವರ್ನೆಸ್ (ಉಪಾಧ್ಯಾಯಿನಿ) ಇದ್ದಾಳೆ. ಹುಡುಗಿಗೆ ತುಂಟತನ ಜಾಸ್ತಿ. ಒಂದು ದಿನ ಏನೊ ಹೇಳಿದ್ದನ್ನು ಕೇಳಲಿಲ್ಲವೆಂದು ಉಪಾಧ್ಯಾಯಿನಿ ಅವಳನ್ನು 'ಕಾನ್ವೆಂಟ್ರಿಗೆ' ಕಳುಹಿಸಿದಳು ಮಾರನೆಯ ದಿನ ಹುಡುಗಿ ಪಾಠಕ್ಕೆ ಬಂದವಳು ಉಪಾಧ್ಯಾಯಿನಿಗೆ ವಂದಿಸಿದಳು, ಅವಳದಕ್ಕೆ ಮರುವಂದಿಸಲಿಲ್ಲ. ಎರಡನೇ ಬಾರಿ ವಂದಿಸಿದರೂ ಹಾಗೆಯೇ. ಎಲಿಜಬೆತಳು ಹಠ ಹಿಡಿದು ಮೂರನೇ ಬಾರಿ ವಂದಿಸಿ 'ಈಗ ಮಾತನಾಡುತ್ತಿರುವದು ರಾಣಿ!' ಎಂದಳು. ಈ ವಾರ್ತೆ ಹುಡುಗಿಯ ತಾಯಿಗೆ ಮುಟ್ಟಿತು. ಅವರು ಬಂದು 'ರಾಣಿಯಾದವಳು ಈ ರೀತಿ ಗುಣ ಹೀನಳಾಗಿರುವದಿಲ್ಲ' ಎಂದರು. ಆಗ ಹುಡುಗಿಯು ಪಶ್ಚಾತ್ತಾಪದಿಂದ ಬಿಕ್ಕಿಬಿಕ್ಕಿ ಅಳಲಾರಂಭಿಸಿದಳು. ಹೇಗೆ ಅಕ್ಕಂದಿರಾ-ರಾಣಿಯಾಗಬೇಕಾದರೂ ಮೊದಲು ದಾಸಿಯಾಗಿ ಕಲಿತೇ ಆಗಬೇಕು!

ಕೆಲವು ದಿವಸಗಳ ಹಿಂದೆ ಒಂದು ತಮಾಷೆ ನಡೆಯಿತು. ಎಲಿಜಬೆತಳು ಬಕ್ಕಿಂಗ್ ಹೇಮ್ ಅರಮನೆಯಲ್ಲಿದ್ದಳು. ಒಂದು ದಿನ ಮಹಾದ್ವಾರದ ಬಳಿಗೆ ಬಂದು ಹೊರಗೆ ನೋಡುತ್ತಾಳೆ-ಅಲ್ಲಿ ಭರ್ತಿ ಆಳು-ಆರಡಿ ಎರಡಂಗುಲ ಎತ್ತರವಿರುವ ಸೋಲ್ಜರನು ದ್ವಾರ ಕಾವಲು ಮಾಡುತ್ತಿದ್ದು ಅತ್ತಿಂದಿತ್ತ ಇತ್ತಿಂದತ್ತ ನಡೆಯುತ್ತಾ ಇದ್ದ. ಎಲಿಜಬೆತಳನ್ನು ಕಂಡೊಡನೆ ಲಷ್ಕರೀ ಕಾಯಿದೆಗನುಸಾರವಾಗಿ ಸಲ್ಯೂಟ್ ಹೊಡೆದ. ದಾಂಢಿಗ ಸೋಲ್ಜರನ ವೇಷಭೂಷಣ, ಅವನ ಸೆಲ್ಯೂಟ್ ಹೊಡೆಯುವ ರೀತಿ-ಇವುಗಳನ್ನು ಕಂಡ ಹುಡುಗಿಗೆ ಮಝಾ ಮೂಡಿತು. ಹುಡುಗಿ ಕಣ್ಣುಬಿಟ್ಟು ಪಿಳಪಿಳನೆ ನೋಡುತ್ತಾ ನಿಂತುಬಿಟ್ಟಳು. ಸೋಲ್ಜರನು ಆಚೆ ಹೋಗುವಾಗ ಒಮ್ಮೆ, ಈಚೆ ಬರುವಾಗೊಮ್ಮೆ ಸಲ್ಯೂಟ್ ಕೊಟ್ಟು ಕೊಟ್ಟು ಸೋತುಹೋದ; ಮುಖ ಕೆಂಪೇರಲಿಕ್ಕೆ, ಕೈಯುದಾಡಿ ಬಲಗುಂದಲಿಕ್ಕೆ ಪ್ರಾರಂಭ! ಇಷ್ಟರಲ್ಲಿ ಉಪಾಧ್ಯಾಯಿನಿ ಬಂದು ಹುಡುಗಿಯನ್ನು ಎಳೆಕೊಂಡು ಹೋದಳು. ಆಗಲೂ 'ನನಗವನನ್ನು ಇನ್ನೂ ನೋಡಬೇಕೆನ್ನಿಸುತ್ತದೆ' ಎನ್ನುತ್ತಾಳೆ ಹುಡುಗಿ! ಹುಡುಗಿಗೆ ತನ್ನನ್ನು ಪ್ರಜೆಗಳು ಹೊಗಳುವವನ್ನು ಕೇಳುವದೆಂದರೆ ಈಗಲೇ ಉಮೇದು! ಒಮ್ಮೆ ಮೇರಿ ರಾಣಿಯವರು ವ್ಯಾಪಾರಕ್ಕೆ ಹೋಗುವಾಗ ಎಲಿಜಬೆತಳನ್ನು ಕರಕೊಂಡು ಅಂಗಡಿಗೆ ಹೋಗಿದ್ದರು. ಅಲ್ಲಿ "ವ್ಯಾಪಾರ ಬೇಗ ಮುಗಿಸೋಣ" ಎಂದು ಹುಡುಗಿಯ ಒತ್ತಾಯ "ಯಾಕೆ ಮಗೂ?" ಎಂದರು ಮೇರಿರಾಣಿ. "ನನ್ನನ್ನು ನೋಡಲು ಜನರು ಹೊರಗೆ ಕಾಯುತ್ತಿದ್ದಾರೆ" ಎಂದಳು ಎಲಿಜಬೆತ್. ಮೇರಿರಾಣಿಯವರಿಗೆ ಮೊಮ್ಮಗಳ ಶೇಂಕಾರ ನೋಡಿ ನಗುಬಂತು; ಅವಳ ಆಶಾಭಂಗ ಮಾಡುವ ಮನಸಾಯಿತು. ಹುಡುಗಿಗೆ ಬುದ್ಧಿ ಕಲಿಸೋಣ ಎಂದು ಅಂಗಡಿಯ ಹಿಂಬಾಗಿಲಿನಿಂದಲೇ ಅರಮನೆಗೆ ಕಳುಹಿಸಿಬಿಟ್ಟರು!

ಇತಿ ನಿಮ್ಮ ಸಹೋದರಿ '**ಸರೂ**'

ಪೇಟೆ ಧಾರಣೆ

ಸಾಮಗ್ರಿಗಳು	ಮಂಗಳೂರು ಇಂದ	ಮಂಗಳೂರು ವರೆಗೆ	ಉಡುಪಿ ಇಂದ	ಉಡುಪಿ ವರೆಗೆ
ರಾಶಿ ಅಕ್ಕಿ ...	3— 6	3—10	3— 2	3— 4
ಮಸ್ಕತಿ ...	3— 4	4 0	3 - 12	4— 0
ಗುಡ್ಡೆ ಸುಗ್ಗಿ ...	3—10	3 14	3 - 6	3— 8
ಊರ ಅವ್ವಲ್ ಬೆಳ್ತಿಗೆ ...	4— 4	4 —12	4— 8	4—12
ರಂಗೂನು ಬೆ. ಗೋ. ರಕ್ಕೆ	6— 2	7— 0	6—10	6 —12
ಗೋದಿ ಗೋಣಿ ರಕ್ಕೆ ...	8— 8	10— 4	11 — 0	12— 0
ತೊಗರಿ ಗೋಣಿ ರಕ್ಕೆ ...	9— 0	9— 8	11— 8	...
ಹುರುಳಿ ಗೋಣಿ ರಕ್ಕೆ ...	5 — 2	5 8	5— 0	5— 8
ಕಡಲೆ ಗೋಣಿ ರಕ್ಕೆ ...	7—10	9 — 0	8— 0	12 - 8
ತೊಗರಿಬೇಳೆ ಗೋಣಿ ರಕ್ಕೆ	11— 0	19— 0	11— 8	18 - 8
ಉದ್ದು ಗೋಣಿ ರಕ್ಕೆ ...	9— 8	10 — 0	9— 4	9— 8
ಹೆಸರು ಗೋಣಿ ರಕ್ಕೆ ...	9— 4	9 —12	10— 8	11— 0
ರಾಗಿ ಗೋಣಿ ರಕ್ಕೆ ...	4— 0	6 — 0	...	...
ಊರುಬೆಲ್ಲ ಖಂಡಿ ರಕ್ಕೆ...	30— 0	35— 0	20— 0	25 — 0
ಉಪ್ಪು ಗೋಣಿ ರಕ್ಕೆ ..	4 8	4—12	4 —10	4—12
ಕೊಬ್ರಿ ಖಂಡಿ ರಕ್ಕೆ ...	60— 0	70— 0	67— 8	70— 0
ಕೊಬ್ರಿ ಹಿಂಡಿ ಖಂಡಿ ರಕ್ಕೆ	27— 0	28 — 8	33— 0	36— 0
ಎಳ್ಳಿಂಡಿ ಖಂಡಿ ರಕ್ಕೆ ...	22 — 8	25— 0	20— 0	21— 4
ಕೊಬ್ರಿ ಎಣ್ಣೆ ಮಣ ರಕ್ಕೆ	4—15	5—14	6 · 8	6—12
ಎಳ್ಳೆಣ್ಣೆ ಮಣ ರಕ್ಕೆ ...	...	6— 0	5 8	6 — 0
ಚಿಮಿಣಿ ಎಣ್ಣೆ ಪೆಟ್ಟಿಗೆ ರಕ್ಕೆ	...	6 — 5	6— 2	6— 4
ಮೋರಿಸ ಸಕ್ಕರೆ ಮ ರಕ್ಕೆ	...	3— 9	3— 3	3- 4
ಮೆಣಸು ...	3— 8	1— 0	2 — 8	2—14
ಸಾಸಿವೆ ಮುಡಿ ರಕ್ಕೆ ...	5— 4	6- 0	5— 4	...
ಕೊತ್ತಂಬರಿ ಮಣ ರಕ್ಕೆ ...	2— 8	3 — 0	...	...
ಕಾಳುಮೆಣಸು ಖ. ರಕ್ಕೆ...	95— 0	102 - 8	110 0	120 — 0
ಗೇರುಬೀಜ ಮು ರಕ್ಕೆ ...	4 - 2	...	4— 4	...
ಕಬ್ಬಿಣ ಖಂಡಿ ರಕ್ಕೆ ...	35— 0	37— 8	37— 8	40— 0
ತಾಂಬ್ರ ತಗಡು ಮ. ರಕ್ಕೆ	9—12	9 14	12— 4	12— 8
,, ಪಾತ್ರೆಗಳು ಮ. ರಕ್ಕೆ	12 — 8	14— 0	14— 0	15— 0
ಚೀನಿ ಬೆಳ್ಳಿ, ಸೇರು ರಕ್ಕೆ...	17— 8	18— 0	13 - 12	14 0
ಹಿತ್ತಾಳೆ ತಗಡು ಮ ರಕ್ಕೆ	10 — 0	...	10—	—
ಪವನು ರಕ್ಕೆ ...	22— 8	...	22 — 8	...
ಹುಣಸೆ ಹುಳಿ ಖಂಡಿ ರಕ್ಕೆ	20 — 0	25— 0	60 — 0	65— 0
ನೇಟಿವ್ ಕಾಫಿ ಖಂಡಿ ರಕ್ಕೆ	140 — 0	150 0	...	...
ಫಿಬೇರಿ ಕಾಫಿ ಖಂಡಿ ರಕ್ಕೆ	160— 0	170— 0	155 — 0	160— 0
ಮಡಿಕೇರಿ ಏಲಕ್ಕಿ ...	25— 0	26 — 8	...	...
ಕೆಂಪಟೆ ಗಡೀದು ...	...	...	12— 0	...
ಏಲಕ್ಕಿ ಮಣ ರಕ್ಕೆ ...	45— 0	55— 0	56 — 0	57— 0
ಹೊಸ ಕಾಫಿ ಖಂಡಿ ರಕ್ಕೆ	...	...	150— 0	155— 0
ಭತ್ತ ಮುಡಿ ರಕ್ಕೆ ...	1— 4	1 - 8	...	...
ತುಪ್ಪ ಮಣ ರಕ್ಕೆ ...	17 — 0	18— 0	...	...

ಪ್ರಾಮುಖ್ಯ ಪ್ರಕಟಣೆ

ಅಮೃತಾಂಜನ

— ಡಿಪೋವಿನ ರಿಂಗ್‌ವರ್ಮ್ ಮುಲಾಮು —

ಇಷ್ಟರ ವರೆಗಣ ನಮ್ಮ
ವಿಲಿಯಮ್ಸ್ ಎಂಡ್ ಕೋ ರವರ
ರಾಜ ಮತ್ತು ರಾಣಿಯ ಟ್ರೇಡ್‌ಮಾರ್ಕಿನ ರಿಂಗ್‌ವರ್ಮ್
ಮುಲಾಮು ಈ ಕೆಳಗಣಂತೆ ವ್ಯತ್ಯಾಸ ಮಾಡಲಾಗಿದೆ

ಅಮೃತಾಂಜನ ಡಿಪೋವಿನ ತ್ರಿವರ್ಣದ 'ರೈಸಿಂಗ್ ಸನ್'

ಈ ಮೇಲಿನ ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು
ನಮ್ಮ ಗಿರಾಕಿದಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು.
ನಮ್ಮ ಟ್ರೇಡ್‌ಮಾರ್ಕಿನ ಮಾರ್ಪಾಟಿನಿಂದ ನಮ್ಮ ಔಷಧಿ ತಯಾರಿಯಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲೆಂಬ ಕುರಿತು ನಾವು ಈ ಮೂಲಕ ಭರವಸೆ ಕೊಡುತ್ತೇವೆ.

ಅಮೃತಾಂಜನ ಡಿಪೋ, —·— ಬೊಂಬಾಯಿ, ಮದ್ರಾಸು, ಕಲ್ಕತ್ತ.

ಕೇವಲ ಎರಡೇ ಆಣೆಗಳಲ್ಲಿ ೨೫ ರೂಪಾಯಿ ಬಹುಮಾನ

ಅಖಿಲ ಕನ್ನಡ ನಾಡಿಗೆ ಪ್ರೀತಿಯಾಗಿರುವ

ಕಥಾಕುಂಜ (ಮಾಸಪತ್ರಿಕೆ)

ನಯನಮನೋಹರವಾಗಿ ಹೊಸ ಹೊಸ ನಿರ್ಮಾಣಗಳಿಂದ ಅಲಂಕೃತವಾಗಿ ಡಿಸೆಂಬರದಲ್ಲಿ ೩ನೆಯ ವರುಷದ ಗನೆಯ ಸಂಚಿಕೆಯು ಪ್ರಕಟವಾಗುವದು. ಆದ್ದರಿಂದ ಕನ್ನಡಾಭಿಮಾನಿಗಳು ಈಗಲೆ ಮುಂಗಡ ೨.೫ ಕಳುಹಿಸಿ ಚಂದಾದಾರರಾಗಬೇಕು.

ಚಂದಾದಾರರಿಗೆ ೨೫ ರೂಪಾಯಿ ಬಹುಮಾನ.

ಈ ಸಂಧಿ ಕಳಕೊಳ್ಳಬಾರದು. ಕಥಾಕುಂಜವನ್ನು ಕೊಂಡುಕೊಳ್ಳಲು ಎಲ್ಲರಿಗೂ ಅನುಕೂಲವಾಗಲೆಂದು ಚಂದಾ ಹಣವನ್ನು ಇಳಿಸಲಾಗಿದೆ.
ಇಳಿಸಿದ ಚಂದಾ ೧-೮-೦ (ಅಂಚೆವೆಚ್ಚ ಬೇರೆ) ಶಾಲೆ, ಕಾಲೇಜು, ಲೈಬ್ರರಿಗಳಿಗೆ ೩-೮-೦
ಮೈಸೂರು, ಮುಂಬೈ ವಿದ್ಯಾಖಾತೆಯವರಿಂದ ಶಾಲೆ ಕಾಲೇಜುಗಳ ವಾಚನಾಲಯಕ್ಕೆ ಮಂಜೂರಾಗಿದೆ. ಜಾಹೀರಾತುದಾರರಿಗೆ ಸುವರ್ಣಸಂಧಿ! ಪತ್ರಿಕೆಗಳನ್ನು ಮಾರಾಟಮಾಡಲು ಎಲ್ಲ ನಗರಗಳಲ್ಲಿ ಪ್ರಾಮಾಣಿಕ ಏಜಂಟರು ಬೇಕು.

ವಿಶೇಷ ಮಾಹಿತಿ ಹಸ್ತಪತ್ರಿಕೆ ನೋಡಿರಿ.

ವ್ಯವಸ್ಥಾಪಕ— **ಕಥಾಕುಂಜ, ಬೆಳಗಾಂವಿ.**

DIAMONDS! **DIAMONDS!!**

K. Ramachandra Krishna Shet

Near Mission High School, *Mangalore*

SUPERFINE UP TO DATE CUTTING! **ವಜ್ರಗಳು** **BEST BRILLIANCY!!**

ಉತ್ಕೃಷ್ಟ ತರಗತಿಯ ಚುನ್ನಾಿತ (first quality, selected) ಎಮ್‌ಸ್ಟರ್‌ಡಮ್ಮಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ. ಕೊಂಡುಕೊಳ್ಳುವವರಿಗೆ ಬಜಾರ ಧಾರಣೆಗಿಂತ 5 ಪರ್ಸಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ. ಇದನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ. ಇದರ ಶಾಖೆಯೊಂದನ್ನು ಗವರ್ನ್‌ಮೆಂಟ್ ಕೊಲೆಜಿನ ಎದುರುಗಡೆ ತೆರೆಯಲಾಗಿದೆ.

ಕೆ. ರಾಮಚಂದ್ರ ಕೃಷ್ಣ ಶೇಟ್,
ಜುವೆಲರ್, ಮಿಶನ್ ಹೈಸ್ಕೂಲು ಬಳಿ, ಮಂಗಳೂರು

ಬೊಂಬೈ ಲೋಂಡ್ರಿ

ಉಡುಪಿ, ಹೊಸ್ಪಿಟಲ್ ರೋಡ್.

ನಮ್ಮಲ್ಲಿ ವಸ್ತ್ರಗಳನ್ನು ಜಾಗ್ರತೆಯಿಂದ ಮಡಿಮಾಡಿ, ಕ್ಲಪ್ತಪ್ರಕಾರ ಕೊಡುವುದಲ್ಲದೆ, ಊಲನ್, ಸಿಲ್ಕು ಮತ್ತು ಜರಿವಸ್ತ್ರಗಳನ್ನು ನಾಜೂಕಾಗಿ ಡ್ರೈಕ್ಲೀನಿಂಗ್ ವಗೈರೆ ಮತ್ತು ಬೇಕಾದ ನಮೂನೆಯಲ್ಲಿ ಖಾತ್ರಿಯಾದ ರಂಗಿನ ಕೆಲಸವನ್ನು ಸಹ ಅತಿ ಸುಲಭ ದರದಲ್ಲಿ ಮಾಡಿಕೊಡಲಾಗುವುದು.

ಹೆಚ್ಚಿನ ಮಾಹಿತಿ ಬಗ್ಗೆ ಕಂಪೆನಿಯಲ್ಲಿ ವಿಚಾರಿಸುವುದು.
ಪ್ರೊಪ್ರೈಟರ್: ಯಮ್. ಯಸ್. ಭಟ್ಕಳ್.

ಉತ್ತಮ ವರ್ಗದ ಶ್ರೇಷ್ಠವಾದ **ಸರಸ್ವತಿ** **ಸ್ತ್ರೀಸಾಹಿತ್ಯ ಸಚಿತ್ರ ಮಾಸಪತ್ರಿಕೆ**

ಇಡೀ ಕರ್ನಾಟಕದಲ್ಲಿ ಸ್ತ್ರೀಯರ ಅಭ್ಯುದಯಕ್ಕಾಗಿ ಪ್ರಚುರಪಡಿಸುತ್ತಿರುವ ಪತ್ರಿಕೆಯು ಇದೊಂದೇ. ಈ ಪತ್ರಿಕೆಯ ಹದಿನೈದನೆಯ ಸಂಪುಟವು 1936ನೇಯ ಜನವರಿ ತಿಂಗಳಿನಿಂದ ಪ್ರಾರಂಭವಾಗಿದೆ. ಈ ಪತ್ರಿಕೆಯಲ್ಲಿ ಸ್ತ್ರೀಯರ ಉನ್ನತಿಗೆ ಅತ್ಯಾವಶ್ಯಕವಾದ ಶಿಕ್ಷಣ-ಸಾಹಿತ್ಯ ಕಲೆ-ಆರೋಗ್ಯ-ಪಾಕಶಾಸ್ತ್ರ-ಸಮಾಜ ಸುಧಾರಣೆ ಇವುಗಳಿಗೆ ಸಂಬಂಧಪಟ್ಟ ಲೇಖನಗಳೂ, ಸಣ್ಣ ಸಣ್ಣ ಕಥೆಗಳೂ, ನಾಟಕಗಳೂ ಕರ್ನಾಟಕದ ಸುಪ್ರಸಿದ್ಧ ಲೇಖಕ ಲೇಖಕಿಯರಿಂದ ಬರೆಯಲ್ಪಟ್ಟು ಪ್ರಕಟವಾಗುವವು. ಮಕ್ಕಳ ಸಲುವಾಗಿ 'ಮಕ್ಕಳ ಪುಟಗಳು' ಬೇರೆ ಪ್ರಕಟವಾಗುವುವು. ಮೈಸೂರು, ಮುಂಬೈ ವಿದ್ಯಾ ಇಲಾಖೆಯವರಿಂದ ಸರ್ಕಾರದ ಶಾಲೆಗಳಿಗೂ ವಾಚನಾಲಯಗಳಿಗೂ ಮಂಜೂರಾಗಿದೆ. ಪ್ರಕಟನೆಗೆ ಅತ್ಯುತ್ತಮವಾದ ಮಾಸಪತ್ರಿಕೆ.

ವಾರ್ಷಿಕ ಚಂದಾ ರೂ. 3—0—0 ಮಾತ್ರ.

ಸರಸ್ವತಿ ಕಾರ್ಯಾಲಯ,
ಚಾಮರಾಜಪೇಟೆ, ಬೆಂಗಳೂರು ನಗರ

The Commonwealth Assurance Co., Ltd.

(ESTD 1929)

Chairman, Mr. N. C. Kelkar. Ex- M. L. A.

HEAD OFFICE: **POONA CITY.**

CHIEF AGENCY OFFICE **HAMPANKATTA, MANGALORE.**

1934ನೇ ಇಸ್ವಿ ಎಪ್ರಿಲ್ ತಿಂಗಳ ವರೆಗೆ
ರೂ. 57 ಲಕ್ಷಗಳಷ್ಟರ ವಹಿವಾಟುಮಾಡಿರುವುದು.
1932ನೇ ಎಪ್ರಿಲ್ ತಿಂಗಳ ವರೆಗೆ ಪಟ್ಟಿಯಲ್ಲಿದ್ದ ಎಲ್ಲಾ ಪೊಲಿಸಿದಾರರಿಗೆ
ಈ ಕಂಪೆನಿಯು 1000ಕ್ಕೆ ರೂ. 10 ಮತ್ತು 12ರಷ್ಟರ ಬೋನಸು ಕೊಟ್ಟಿರುವುದು.
ಹೆಚ್ಚಿನ ಮಾಹಿತಿಗೆ ಹೆಡ್ ಆಫೀಸಿಗಾಗಲಿ ಈ ಕೆಳಗಣ ವಿಳಾಸಕ್ಕಾಗಲಿ ಬರೆಕೊಳ್ಳಿರಿ—
ದಿ ಕೋಮನ್‌ವೆಲ್ತ್ ಎಶ್ಯುರೆನ್ಸ್ ಕಂಪೆನಿ ಲಿಮಿಟೆಡ್,
ಮುಖ್ಯ ಏಜನ್ಸಿ ಆಫೀಸು, ಹಂಪನಕಟ್ಟೆ, ಮಂಗಳೂರು.

ದಿ ಮೂಲ್ಕಿ ಗ್ರೇಂಡ್ ರೇಫ್‌ಲ್

(ಮೂಲ್ಕಿ ಹೈಸ್ಕೂಲಿನ ಸಹಾಯಾರ್ಥ)

ಮೂಲ್ಕಿ ದ. ಕನ್ನಡ.

ಲೆಖ್ಖ ಒಪ್ಪಿಸುವ ತಾರೀಕು 25—1—1937] • **[ಸೋಡ್ತಿ ತೆಗೆಯುವ ತಾರೀಕು 31—1—1937**

ಟಿಕೇಟು ಒಂದರ ಖರೀದಿ ಬರೇ ನಾಲ್ಕು ಆಣೆ ಮಾತ್ರ.

20 ಟಿಕೇಟುಗಳಿರುವ ಒಂದು ಪುಸ್ತಕಕ್ಕೆ ರೂ. 5—0—0 ಮಾತ್ರ. ಜಾಗ್ರತೆ ಮಾಡಿರಿ.

ನಿಮಗೆ ಬೇಕಾಗುವ ಟಿಕೇಟುಗಳನ್ನು ಕೂಡಲೇ ಪಡೆಯಿರಿ.

ಸೋಡ್ತಿ ತೆಗೆಯುವ ತಾರೀಕನ್ನು ಯಾವ ಕಾರಣದಿಂದಲೂ ಮುಂದರಿಸೋಣಾಗಲಿಕ್ಕಿಲ್ಲ.
ಹೆಚ್ಚಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಕೂಡಲೇ ಬರೆಯಿರಿ—

"ಕಾರ್ಯದರ್ಶಿ,"
"ದಿ ಮೂಲ್ಕಿ ಗ್ರೇಂಡ್ ರೇಫ್‌ಲ್,"
ಮೂಲ್ಕಿ, ದ. ಕನ್ನಡ.

ಪ್ರೇಮ ವಿದ್ಯಾಪೀಠ, ತುಂಗಭದ್ರಾ, (ಬಳ್ಳಾರಿ ಜಿಲ್ಲಾ)

ಈವರ್ಷ ಶಾಲಾವರ್ಷವು ಜೂಲೈಯಲ್ಲಿ ಮೊದಲಾಗುತ್ತದೆ ಮಹಿಳೆಯರು ಉದ್ಯೋಗ ಬೇಕಾಗಿದ್ದರೆ ಇಲ್ಲಿ ಶಿಕ್ಷಣವನ್ನು ಪಡೆಯಿರಿ. ಮುಲ್ಕಿ, ಅಪ್ಪರ್ ಸೆಕೆಂಡರಿ, ಮೆಟ್ರಿಕ್ ಸ್ಕೂಲ್ ಫೈನಲ್ ಇತ್ಯಾದಿ ಪಾಸ್ ಆದವರೆಲ್ಲರಿಗೂ ಯೋಗ್ಯತೆಗೆ ತಕ್ಕಂತೆ ವಿಧ ವಿಧವಾದ ಕೋರ್ಸ್‌ಗಳಿವೆ. ಪ್ರಾಸ್‌ಪೆಕ್ಟಸ್ ಮಾಹಿತಿಗಾಗಿ ಕೂಡಲೆ ೨ ಆಣೆ ಸ್ಟಾಂಪು ಇಟ್ಟು ಬರೆಯಿರಿ.

ಮಹೋಪಾಧ್ಯಾಯಾ ಡಾ। **ಸುಮತಿಬಾಯಿ,**

ಬಿ. ಎ. ಎಲ್. ಟಿ., ಎಫ್. ಸಿ. ಎಮ್. ಎಸ್. ಭಿಷಗ್ರತ್ನ. ರಿಜಿಸ್ಟ್ರಾರ್

LAXMI BRAND COFFEE POWDER.

Pure & Superior quality, will last long without losing its flavour and colour.

TRADE MARK

Use always this LAXMI BRAND COFFEE POWDER prepared from the best & choicest Coffee Beans of Nilgiris. (Hills)

WANTED AGENTS in Southern India (samples available)

ಉತ್ಕೃಷ್ಟ ಕಾಫಿಬೀಜಗಳಿಂದ ತಯಾರಿಸಲ್ಪಟ್ಟ ಸುವಾಸನೆಯುಳ್ಳ ನಮ್ಮ ಲಕ್ಷ್ಮೀಮಾರ್ಕಿನ ಕಾಫಿಹುಡಿಯನ್ನೇ ಸದಾ ಉಪಯೋಗಿಸಿರಿ. ಏಜಂಟರಿಗೆ ಯೋಗ್ಯ ಕಮಿಶನ್ ಕೊಡಲಾಗುವದು. ಹೆಚ್ಚಿನ ಮಾಹಿತಿ ಬಗ್ಗೆ ಕೆಳಗಿನ ವಿಳಾಸಕ್ಕೆ ಬರೆದು ತಿಳಿಯಬಹುದು.

Fire Resistance Steel Iron Safes. latest pattern.

ನಮ್ಮಲ್ಲಿ ಕಬ್ಬಿಣದ ತ್ರಿಜೋರಿಗಳು ಸದಾ ಮಾರಾಟಕ್ಕೆ ಸಿದ್ಧವಿರುತ್ತವೆ. ತಿಂಗಳುಗಟ್ಲೆ ಕಂತುಗಳಿಂದಲೂ ಮಾರುವ ಏರ್ಪಾಡಿದೆ.

For Prices & Particulars Apply to—

K. K. Shanbhag & Sons

Court Road, UDIPI, S. K.

FOR SALE

Sold also by Instalments

ಮಾಸ] **ವಿಶ್ವವಾಣಿ** [ಪತ್ರಿಕೆ.

ಸಂಪಾದಕರು—**ಅ. ನ. ಕೃಷ್ಣರಾಯರು.**

ಸಂಸ್ಕೃತಿಯ ಪ್ರಚಾರಕ್ಕಾಗಿ ಕರ್ನಾಟಕದಲ್ಲಿ ಹೊರಟಿರುವ ಪತ್ರಿಕೆ ಇದೊಂದೇ. ಜಗತ್ತಿನ ಸಾಂಸ್ಕೃತಿಕ ಚಲನವಲನಗಳ ಸುದ್ದಿಗಳೆಲ್ಲಾ ಇದರಲ್ಲಿ ಪ್ರಕಟವಾಗುತ್ತವೆ

ಚಿತ್ರವಿಭಾಗದ ವೈಶಿಷ್ಟ್ಯ—ಜಗತ್ತಿನ ಯಾವದೇ ಪತ್ರಿಕೆಯಲ್ಲಿಯೂ ಪ್ರಕಟವಾಗದಿರುವ ಅನೇಕ ಚಿತ್ರಗಳು 'ವಿಶ್ವವಾಣಿ'ಗೆ ವಿಶೇಷ

ಆದುದರಿಂದ ಇಂದೇ ಚಂದಾದಾರರಾಗಿರಿ.

ಸಾಮಾನ್ಯ ಚಂದಾದಾರರಿಗೆ (ವರ್ಷಕ್ಕೆ)	ರೂ. ೩—೮—೦
,, ,, (೬ ತಿಂಗಳಿಗೆ)	ರೂ. ೨—೦—೦
ಶಾಲೆ, ಕಾಲೇಜು, ವಾಚನಾಲಯ, ಸಾರ್ವಜನಿಕ ಸಂಸ್ಥೆಗಳಿಗೆ (ವರ್ಷಕ್ಕೆ)	ರೂ. ೫—೦—೦

ವಿಶ್ವವಾಣಿಯು ಮೈಸೂರು, ಮುಂಬಯಿ, ಮದ್ರಾಸು, ಹೈದರಾಬಾದು, ಕೊಡಗು, ಕರ್ನಾಟಕಗಳಲ್ಲಿ ಮಾತ್ರವಲ್ಲದೆ ಕನ್ನಡಿಗರು ನೆಲಸಿರುವ ಎಲ್ಲ ಕಡೆಯಲ್ಲಿಯೂ ಪ್ರಚಾರವಾಗುತ್ತದೆ.

ಆದುದರಿಂದ 'ವಿಶ್ವವಾಣಿ'ಯಲ್ಲೇ ಜಾಹೀರಾತನ್ನು ಕೊಡಿರಿ.

ಹೆಚ್ಚು ವಿಚಾರಗಳಿಗೆ ಬರೆಯಿರಿ—

ವ್ಯವಸ್ಥಾಪಕ—'ವಿಶ್ವವಾಣಿ,' 'ಅನ್ನಪೂರ್ಣ', ವಿಶ್ವೇಶ್ವರಪುರಂ,

ಬೆಂಗಳೂರು ನಗರ.

ನಮ್ಮ ಜರಿ ಪೀತಾಂಬರ, ರೇಶ್ಮೆ ಮಡಿಗಳಿಗೆ ಗಮನಕೊಡಿರಿ.

S. U. N. & CO. *Choukhamba, Benares City.*

ಮೂರು ಇನಾಮುಗಳು.

OUR CUSTOMER

THIS MAN

THIS MAN WISHES HE HAD

ಶ್ರೀ ಕಾಶಿಯಲ್ಲಿ ತಯಾರಾಗತಕ್ಕ ರೇಶ್ಮೆ ಮಾಲುಗಳ ಕೆಟಲಗು ೧, ಕಾಶೀಲಕ್ಷ್ಮಿ ೧, ವಿಶ್ವೇಶ್ವರ ಪಟ ೧, ಈ ೩ ಸಾಮಾನುಗಳು 1 ಆಣೆ ಸ್ಟೇಂಪು ಕಳುಹಿಸಿದರೆ ಇನಾಮಾಗಿ ಕಳುಹಿಸಲಾಗುವವು. ಸ್ಟಾಂಪು ಬಾರದಿದ್ದರೆ ಈಗಿನ ಫೇಶನಿಗೆ ತಕ್ಕಂತೆ ಜರೀ ಕೆಲಸಗಳಿಂದ ತಯಾರಿಸಿದ ರೇಶ್ಮೆ ಸೀರೆಗಳೂ, ಖಣ, ಮಡಿ ಕದಪಾಮ್ಹಿ, ಪೇಟಾ, ಕೋಟಿಂಗ್, ಶರ್ಟಿಂಗ್ ಶಿಲ್ಕುಗಳೂ, ಕಾಶ್ಮೀರ ಶಾಲುಗಳೂ, ಊಲ್ಲನ್ ಚೌಕ, ಧೋವಳಿ, ನಾಮರ್ದ, ತರತರದ ರುದ್ರಾಕ್ಷಿಗಳೂ ಸಾಮಾನು ಇವೇ ಮೊದಲಾದ ಅನೇಕ ತರದ ಸಾಮಾನುಗಳ ಕೆಟಲಾಗು ೧ ಮಾತ್ರ ಇನಾಂ. ಈಗಿನ ಹೊಸನಮೂನೆಯ ಮಡಲು ಬುಟ್ಟಿ ಹಾಕಿದ ಜರೀ ಸೀರೆ ಎಲ್ಲಾ ರಂಗುಗಳಲ್ಲಿ ರೂ. 20ರಿಂದ 55 ಮಡಲು ಸಾದಾ 16ಮೊಳದ ಸೀರೆ 1ಕ್ಕೆ ರೂ. 16 ರಿಂದ ರೂ. 35ರ ವರೆಗೆ. ಅರೆ ಕಡಮೆ 16ಮೊಳ ಕ್ರಪ್ಡ್ ಅಂಚು ರೂ. 10½ ಯಿಂದ ರೂ. 16. ಖಣ 1ಕ್ಕೆ ರೂ. 1½ರಿಂದ ರೂ. 10ರ ವರೆಗೆ. ಪೋಸ್ಟು ಖರ್ಚು ಪ್ರತ್ಯೇಕ. ಆರ್ಡರಿನಂತೆ ಸಾಮಾನುಗಳನ್ನು ಸರಿಯಾದ ಸುಲಭ ದರದಿಂದ ಕಳುಹಿಸಲಾಗುವದು.

ಶಿರೋಮಣಿ ನಾರಾಯಣಾಚಾರ್ಯ & ಕಂಪೆನಿ, ಚೌಕಂಬಾ, ಬೆನಾರಿಸ್, ಕಾಶಿ.

USE

SUVASINI AGARBATHIES

(REGD.)

SRI BHARATHA VASTU MANDIRA, UDIPI

ಈಗಾಗಲೇ ತಯಾರಾಗಿದೆ

ಈಶ್ವರ ಸಂವತ್ಸರದ

ತುಳುನಾಡ್ ತಿಲಕ ಪಂಚಾಂಗ

ಬೆಲೆ: ೦-೧-೦.

ಆಧುನಿಕ ದೃಗ್ಗಣಿತವಾದ

ಕೇತಕೀ ರೀತಿಯಲ್ಲಿ ತಯಾರಿಸಲ್ಪಟ್ಟ ಶುದ್ಧ ಪಂಚಾಂಗ

ನೀವು ಮಾಡುವ ಕರ್ಮಗಳು ವಿಧ್ಯುಕ್ತವಾಗಿ ನಿಮಗೆ ಫಲಕಾರಿಗಳಾಗಬೇಕೆಂದು ಮನಸ್ಸಿದ್ದರೆ ಈ ಪಂಚಾಂಗವನ್ನು ಉಪಯೋಗಿಸಿರಿ.

ಕರ್ನಾಟಕದ ಎಲ್ಲಾ ಕಡೆಗಳಲ್ಲಿಯೂ ದೊರೆಯುತ್ತದೆ.

ತುಳುನಾಡ್ ಛಾಪಖಾನೆ, ಉಡುಪಿ.

Printed by V. VENKATARAMANACHARYA for & on behalf of SUPPLY AGENCY LTD., at THULUNAD PRESS, UDIPI and Published by K. H. SHETTY at "NAVAYUGA" OFFICE, UDIPI.

Registered No. M. 3618

೨೦ ಪುಟಗಳು--ಒಂದಾಣೆ

NAVAYUGA
A Nationalist Kanarese Weekly, UDIPI, S. K.

It will pay you to advertise in NAVAYUGA' The Leading Nationalist Kanarese Weekly of Karnatak

FOR RATES OF ADVT Etc

APPLY TO THE MANAGER

ವಾಚಕರನೇಕರ
ಅಪೇಕ್ಷೆಯಂತೆ ಮುದ್ರಿಸಲ್ಪಟ್ಟ
ಮಂಗಳೂರು ಉಡುಪಿಗಳಲ್ಲಿ
ಜಯಶೀಲವಾಗಿ
ಅಭಿನಯಿಸಲ್ಪಟ್ಟ
ಜನಪ್ರಿಯವಾದ ನಾಟಕ
ವ್ಯಭಿಚಾರಿಣಿ ಯಾರು?
ಕೆಲವೇ ಪ್ರತಿಗಳು ಉಳಿದಿವೆ.
ಬೆಲೆ ೦ ೮ ೦
ಕಿರಿಯರ ಪ್ರಪಂಚ, ಉಡುಪಿ.

VOL XVII-NO 21

21-1-1937

ಮೂಡ ಬಾನಿನ ಕಣ್ಣು ಕೆಂಗಿಡಿಯು ಕಾರುತಿದೆ,
ಬನದ ನಾಡೊಳು ಮೊಳಗುತಿದೆ ತುಮುಲನಾದ;

ವಾರಪತ್ರಿಕೆ

ಸಂಪಾದಕ: ಕೆ. ಕೆ. ಶೆಟ್ಟಿ.

ಮೂಡುವುದು ತಂಬೆಳಕ ತಿಂಗಳನ ಮೊಗವಲ್ಲ,
'ನವಯುಗ'ದ ರುದ್ರರವಿಯಾರಕ್ತ ಬಿಂಬ.

ಸಂಪುಟ ೧೭]   ಉಡುಪಿ, ಗುರುವಾರ ೨೧, ಜನವರಿ, ೧೯೩೭   [ಸಂಚಿಕೆ ೨೧

THE

Canara Industrial & Banking SYNDICATE, LIMITED.

ESTD: [INCORPORATED IN BRITISH INDIA] **1925**

Head Office:
MUKUNDA NIVAS,
UDIPI, S. I.

BRANCHES:

1 BANGALORE CITY	16 KARWAR
2 BELGAUM	17 KUMTA
3 BYADGI	18 ANKOLA
4 BELLARY	19 HONAVAR
5 ADONI	20 BHATKAL
6 HOSPET	21 KARKALA
7 NANDYAL	22 BRAHMAVAR
8 PRODATTUR	23 HUNGARCUTTA
9 TADPATRI	24 SIRSI
10 TALIPARAMBA	25 SAGAR
11 HUBLI	26 KANHANGAD
12 GADAG	27 COONDAPOOR
13 UDIPI	28 PAYYANUR
14 UPPINANGADI	29 CANNANORE
15 KASARGODE	30 MANGALORE

A branch at BOMBAY will be opend in April next.

We stand for all that is BEST in MODERN BANKING SERVICE

OPEN

AN ACCOUNT TO-DAY
IN THIS
Pioneer & Highly Progressive
BANK OF KARNATAKA
AND BE
A SATISFIED CUSTOMER.

ALL KINDS OF BANKING BUSINESS TRANSACTED ON EASY TERMS.

Total Working Funds exceed Rs. 35 Lakhs

Apply for Rules of Business.

"MUKUNDA NIVAS"
UDIPI
22—11—1936

P. A. Pai Brothers,
Managing Agents

ದಿ ಕುಂದಾಪುರ ಬೇಂಕ್ ಲಿಮಿಟೆಡ್ ಕುಂದಾಪುರ

ಬ್ರಾಂಚ್—ಬ್ರಹ್ಮಾವರ.

ಚಾಲ್ತಿ ಮತ್ತು ಸೇವಿಂಗ್ಸ್ ಬೇಂಕ್ ಠೇವಣಾತಿಗಳು ಒಳ್ಳೇ ದರದ ಬಡ್ಡಿಯಲ್ಲಿಯೂ ಖಾಯಂ ಠೇವಣಾತಿಗಳು 3 ತಿಂಗಳಿಗೊಮ್ಮೆ ಸಾಲಿಯಾನ್ ಶೇಕಡಾ ರೂಪಾಯಿ 4½, 6 ತಿಂಗಳಿಗೆ ಸಾಲಿಯಾನ್ ಶೇಕಡಾ ರೂಪಾಯಿ 5%, 12 ತಿಂಗಳಿಗೆ ಸಾಲಿಯಾನ್ ಶೇಕಡಾ ರೂಪಾಯಿ 6%, 24 ತಿಂಗಳಿಗೆ ಸಾಲಿಯಾನ್ ಶೇಕಡಾ 6½% ದರದ ಬಡ್ಡಿಯಲ್ಲಿ ಅಂಗೀಕರಿಸಲ್ಪಡುವುವು.

ಒಂದು ವರುಷದ ಯಾ ಹೆಚ್ಚಿಗೆ ಅವಧಿಯ ಖಾಯಂ ಠೇವಣಾತಿಗಳಿಗೆ ಮೇಲೆ ಕಾಣಿಸಿದ ದರದಲ್ಲಿ 6 ತಿಂಗಳಿಗೊಮ್ಮೆ ಬಡ್ಡಿ ಕೊಡಲಾಗುವುದು. ಬೇರೆ ಎಲ್ಲಾ ತರದ ಬೇಂಕ್ ವ್ಯವಹಾರಗಳು ನಡಿಸಲ್ಪಡುವುವು. ಕರೆಂಟ್, ಸೇವಿಂಗ್ಸ್ ಬೇಂಕ್ ಮತ್ತು ಕ್ಯುಮುಲೇಟಿವ್ ಠೇವಣಾತಿಗಳು ಅಂಗೀಕರಿಸಲ್ಪಡುವುವು.

ವಿಶೇಷ ಸೂಚನೆ:—ಬಡವರಿಗೆ ಸಹಾಯವಾಗುವಂತ ಕಡಿಮೆ ಎಂದರೆ ರೂಪಾಯಿ 10 ಸಹಾ ಸಾಲಕೊಡಲಾಗುತ್ತೆ. ಫಾರಂಗಳು ದೊರೆಯುತ್ತವೆ. ಹೆಚ್ಚಿನ ಮಾಹಿತಿ ಬಗ್ಗೆ ಬರೆಕೊಳ್ಳಿರಿ.

ಸುಖನಿವಾಸ

(ತಾಲೂಕು ಕಚೇರಿಯ ಎದುರುಗಡೆ)

ಉಡುಪಿ, ದ. ಕ.

ಪ್ರಯಾಣಿಕರಿಗೂ ಶಾಲಾ ಬಾಲಕರಿಗೂ ಉದ್ಯೋಗಸ್ಥರಿಗೂ ಇನ್ನಿತರ ವ್ಯವಹಾರಿಕರಿಗೂ ಸುಸ್ವಾದ್ಯವಾಗಿಯೂ ರುಚಿಕರವಾಗಿಯೂ ಹಿತದಾಯಕವಾಗಿಯೂ ನಿರ್ಮಲದ ಹೊಳಕೆಯಾಗಿಯೂ ಇರುವ ಕಾಫಿ, ತಿಂಡಿ, ತಿನಸು ಊಟ ವಗೈರೆ ನಮ್ಮ ಸ್ವಂತ ದೇಖ ರೇಖೆಯಿಂದ ತಯಾರಿಸಿ ಸದಾ ಕಾಲದಲ್ಲಿಯೂ ಅನಾಯಾಸವಾಗಿ ದೊರೆಯುವುವು. ಒಮ್ಮೆ ಬಂದು ಪರೀಕ್ಷಿಸಿರಿ!

'ಸುಖನಿವಾಸ'ದ ಅಭಿವೃದ್ಧಿಯು ಮಹಾಜನರ ಪ್ರೋತ್ಸಾಹವನ್ನವಲಂಬಿಸಿದೆ.

ವ್ಯವಸ್ಥಾಪಕರು:

ಎಚ್. ವಾಸುದೇವ ನಾಯಕ್ ಎಂಡ್ ಬ್ರದರ್.

THE
MOOLKY BANK, LTD.,
MOOLKY.

ದಿ ಮೂಲ್ಕಿ ಬೇಂಕ್, ಲಿಮಿಟೆಡ್,

ಮೂಲ್ಕಿ.

ಎಲ್ಲಾ ತರದ ಬ್ಯಾಂಕ್ ವ್ಯವಹಾರಗಳು ನಡಿಸಲ್ಪಡುವವು. "ಮುಖ್ಯವಾಗಿ ಭಂಗಾರ ವ ಸರಕು ಈಡಿನ ಮೇಲೆ ಸಾಲವನ್ನು ಕೊಡುವುದು".

ಕಾಯಂ ಠೇವಣಾತಿಗಳು:

ಒಳ್ಳೇ ದರದ ಬಡ್ಡಿಯಲ್ಲಿಯೂ, ಮಾಸಿಕ, ಸೇವಿಂಗ್ಸ್‌ಬೇಂಕ್ ಮತ್ತು ಠೇವಣಾತಿಗಳು ಯೋಗ್ಯ ತರದ ಬಡ್ಡಿಯಲ್ಲಿಯೂ ಅಂಗೀಕರಿಸಲ್ಪಡುವವು.

ಹೆಚ್ಚಿನ ಮಾಹಿತಿಗೆ ಕೆಳಗಿನವರಿಗೆ ಬರೆದುಕೊಳ್ಳಿರಿ.

M. R. Punja, ಯಂ. ಆರ್. ಪುಂಜ,
President & Manager, ಪ್ರೆಸಿಡೆಂಟು ಮತ್ತು ಮೆನೇಜರ್.

ಇದೀಗ ಬಂದಿದೆ— ಹೊಸ ಪುಸ್ತಕ!

ಟಾಲಸ್ಟಾಯಿಯವರ ಕತೆಗಳು

ಶ್ರೀ. ಎಲ್. ಗುಂಡಪ್ಪ, ಎಂ. ಎ.ಯವರಿಂದ ಅನುವಾದಿಸಲ್ಪಟ್ಟ ಟಾಲಸ್ಟಾಯಿಯವರ ಕಥೆಗಳೆಲ್ಲಾ ಕನ್ನಡದಲ್ಲಿ ಒಟ್ಟಾಗಿ ಅಚ್ಚಾಗಿ ಬಂದಿವೆ. ಈ ಕಥೆಗಳಲ್ಲಿ ಜೀವನಕ್ಕೆ ಸಂಬಂಧಪಟ್ಟ ಎಲ್ಲಾ ಪ್ರಶ್ನೆಗಳ ಚರ್ಚೆಯೂ ಇದೆ. ಆದುದರಿಂದ ಸ್ತ್ರೀಪುರುಷರೆಲ್ಲರೂ ಅವಶ್ಯ ಓದಬೇಕು.

೦೦೪ ಪುಟಗಳು ಒಂದೂವರೆ ರೂಪಾಯಿ ಬೆಲೆ,

ಪ್ರತಿಗಳು ಸಿಗುವ ಸ್ಥಳ—

ಕಿರಿಯರ ಪ್ರಪಂಚ, ಉಡುಪಿ.

ವಿಜಯನಗರ ಸ್ಮಾರಕೋತ್ಸವ ಮಂಡಲದ ಪರವಾಗಿ ಹೊರಡಲಿರುವ

ಜಯಕರ್ನಾಟಕದ

ವಿಜಯನಗರ ವಿಶೇಷ ಸಂಚಿಕೆ

ವಿಶೇಷ ಸಂಪಾದಕರು: ಪ್ರೊ. ಎಸ್. ಎಸ್. ಮಾಳವಾಡ, ಎಂ.ಎ

ಅಖಿಲ ಭಾರತದ ಪ್ರಸಿದ್ಧ ವಿದ್ವಾಂಸರ ಲೇಖನವೈಭವ!

ವಿಜಯನಗರಕ್ಕೆ ಸಂಬಂಧಿಸಿದ ಚಿತ್ರಮಾಲೆಗಳ ಐಶ್ವರ್ಯ!!

ಹೊಳಪಿನ ಹಾಳೆ ═══ ಅಚ್ಚಿನ ಅಚ್ಚುಕಟ್ಟು

ಬೆಲೆ: ಎಂಟಾಣೆ ಮಾತ್ರ

ಜಯಕರ್ನಾಟಕವು ಜನವರಿಯಿಂದ—ವಿಶೇಷ ಸಂಚಿಕೆಯಿಂದ ಮೊದಲ್ಗೊಂಡು **ದೊಡ್ಡ ಆಕಾರದಲ್ಲಿ** (ಡೆಮಿ ¼ ದಲ್ಲಿ) ಹೊರಡುವುದು!

ಅಲ್ಲದೆ **ಚಂದಾದರವನ್ನು** ಇಳಿಸಿದೆ—ರೂ. ೪—೮—೦ ಮಾತ್ರ!

ಚಂದಾದಾರರಾಗಬೇಕೆನ್ನುವವರಿಗೂ ಜಾಹಿರಾತುದಾರರಿಗೂ ಸುಸಮಯ

ಜಯಕರ್ನಾಟಕ ಕಾರ್ಯಾಲಯ, ಧಾರವಾಡ.

ತುಳುನಾಡ್ ವೈದ್ಯಶಾಲೆ, ಉದ್ಯಾವರ, ದ. ಕ.

ಕೋಲೆರಾ ಪಿಲ್ಸ್
ಕೊಲರಾ ರೋಗಕ್ಕೆ ರಾಮಬಾಣ ಔಷಧ.
೧೦೦ ಮಾತ್ರೆಗಳಿಗೆ ರೂ ೩—೮—೦

ಭೈರವ ಮಾತ್ರೆಗಳು
ಬಾಣಂತಿ ರೋಗಸಂಬಂಧವಾದ ಸಕಲ ರೋಗಗಳಿಗೂ ದಿವ್ಯೌಷಧ.
೧೦೦ ಮಾತ್ರೆಗಳಿಗೆ ರೂ. ೨—೮—೦

ಎಲ್ಲಾ ತರದ ರೋಗಗಳಿಗೂ ಅನುಭವಸಿದ್ಧವಾದ ದಿವ್ಯೌಷಧಗಳು ದೊರೆಯುತ್ತವೆ.

ಯು. ಪಿ. ಮೇಸ್ತ್ರ, ಗೋಲ್ಡ್ ಮೆಡಲ್ಡ್ ಫಿಜಿಸಿಯನ್.

THE
PANGAL NAYAK BANK
LIMITED.
ESTABLISHED 1920.

***Head Office*: UDIPI.**

Branches: MANGALORE and KATAPADI.

Fixed loans and Overdraft advances are granted on the pledge of gold articles, on the mortgage of immovable properties and on the personal security of approved constituents on favourable terms.

Genuine trade bills, cheques, drafts etc., are discounted at a nominal charge.

Current, Savings Bank and Cumulative deposits are accepted at moderate rates of interest.

Fixed Deposits are received and interest allowed at 4% on 1 year and at 4½% on 2 years deposits.

Every other description of up-to-date Banking business is also undertaken.

A few shares are also available to the public.

ಮಿರಜದಲ್ಲಿಯ ಸುಪ್ರಸಿದ್ಧ ವೈದ್ಯರಾದ ಎಮ್. ಕೆ. ರಜಪೂತ ಇವರ ಸ್ವದೇಶಿ ಔಷಧಗಳು.

ಗುಣ ಬಾರದಿದ್ದರೆ ## ಸ್ತ್ರೀಧರ್ಮ ಸಂಜೀವಿನೀ ಚೂರ್ಣ (ರಿಜಿಸ್ಟರ್ಡ) **ಹಣ ಪರತ**

ಈ ಚೂರ್ಣವು ಕೆಂಪು ಬಿಳೆ ಶೆರಗಿಗೆ ಶತ್ರುವಾಗಿರುವುದು. ಅನಿಯಮಿತತನದಿಂದ ಮುಟ್ಟಾಗುವಿಕೆ, ಕ್ಲೇಶ ಮೈಯಲ್ಲಿ ನೋವು, ಉಷ್ಣತಾ ಕ್ಷೀಣತಾ ಗರ್ಭಾಶಯದಲ್ಲಿರುವ ದೋಷ ಗರ್ಭಧಾರಣವಾಗದಿರೋಣ, ಅಕಾಲದಲ್ಲಿ ಗರ್ಭಪತನವಾಗೋಣ ಈ ಮೊದಲಾದ ರೋಗಗಳು ನಿಶ್ಚಯವಾಗಿ ನೆಟ್ಟಗಾಗಿ ಗರ್ಭಕೋಶವು ಸ್ವಚ್ಛವಾಗುವದು. ಮಕ್ಕಳಾಗುವದಿಲ್ಲೆಂದು ಎರಡನೇ ಲಗ್ನಮಾಡಿಕೊಳ್ಳುವ ಮೊದಲು ಗೃಹದೇವತೆಯಾದ ಮೊದಲನೇ ಪತ್ನಿಗೆ ಈ ಚೂರ್ಣ ಅವಶ್ಯ ಕೊಡಿರಿ. ಮುಖ ಸರ್ಟಿಫಿಕೇಟ ಮ. ರಾ. ಎ. ಎಮ್ ಇನ್ಸ್‌ಪೆಕ್ಟರ ಬೆಳಗಾಂವ:—ಈ ಚೂರ್ಣದಿಂದ ನನ್ನ ಕುಟುಂಬದ ಹೊಟ್ಟೆಯೊಳಗಿನ ರಕ್ತ ಗುಲ್ಮದ ಗಂಟು ನಾಮಶೇಷವಾಯಿತು. ಮತ್ತು ಎಲ್ಲ ರೋಗಗಳು ನಿಶ್ಶೇಷವಾದವು. ನನ್ನ ಮಿತ್ರನ ಹೆಂಡತಿಯ ರಕ್ತ ಮತ್ತು ಶೆರಗು ಇಲ್ಲದಂತಾದವು. ೨೧ ದಿವಸದ ಡಬ್ಬಿಯ ಕಿಮ್ಮತ್ತು ರೂ. ೩ ಟ. ಖ. ಆಣೆ, ೪ ಡಬ್ಬಿಗೆ ೪ರೂ.]

ಸಂತತಿ ಪ್ರತಿಬಂಧಕ ಚೂರ್ಣ. (ರಿಜಿಸ್ಟರ್ಡ) [೨ ಪಿ. ಖರ್ಚು ಆಣೆ ೮.

ಬಹಳಸಾರಿ ಹಡಿಯುವುದರಿಂದ ಅತಿಶಯ ಅಶಕ್ತಿಯಾಗುತ್ತದೆ ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುರುವಾಗುವದು. ಶರೀರಕ್ಕೇನೂ ಅಪಾಯವಾಗದೆ ಸಂಸಾರ ಸುಖವು ಪೂರ್ಣವಾಗಿದೆ. ಕೂಡಲೇ ಗರ್ಭಧಾರಣ ಬಂದಾಗುವುದು ತದನಂತರ ಏನು ಮಾಡಿದರೂ ಸುರುವಾಗುವದಿಲ್ಲ. ಮೊದಲೇ ಪೂರಾ ವಿಚಾರಮಾಡಿ ಔಷಧ್ಯಬೇಡಿರಿ. ಮುಖ್ಯಸರ್ಟಿಫಿಕೇಟ ಡಾಕ್ಟರ ಟಿ. ಎ. ವೈದ್ಯ ಎಲ್ ಸಿ. ಪಿ. ಎಸ್. ಮು। ಕೇಳವಾ ಮಾಹಿನಾ ಜಿ. ಠಾಣೆ. ಈ ಚೂರ್ಣದಿಂದ ಯಾವ ತರದ ಅಪಾಯವಾಗದೆ ಗರ್ಭಧಾರಣವಾಗುವದಿಲ್ಲ. ಪೂರ್ಣ ಗುಣಕಾರಿ

ವಿಳಾಸ:—ಸಂಜೀವಿನೀ ಔಷಧಾಲಯ, ಮು. ಪೋ. ಮಿರಜ, S. M. C.

ಹಿಂದೂದೇಶದಲ್ಲಿ ವೋಟಿನ ಹಕ್ಕುಳ್ಳವರು

ಹಿಂದೂಸ್ಥಾನದ ಜನಸಂಖ್ಯೆ ಮೂವತ್ತೈದು ಕೋಟಿ. ಇದರಲ್ಲಿ ವೋಟುಕೊಡುವ ಹಕ್ಕುಳ್ಳವರು ಬರೇ ಮೂರೂವರೆ ಕೋಟಿ. ಇವರಿಂದ ಚುನಾಯಿತರಾಗಬೇಕಾಗಿರುವ ಒಟ್ಟು ಸದಸ್ಯರು ಒಂದೂವರೆಸಾವಿರ. ಎಂದರೆ ಪ್ರತಿಯೊಬ್ಬ ವೋಟ...

ಸಮಾಚಾರ ಸಂಗ್ರಹ

ತನ್ನ ನ್ಯಾಯಿಯಾ ಸೇನೆಯಲ್ಲಿ 20,000 ಮಂದಿಯನ್ನು ಹೆಚ್ಚಿಗೆ ಸೇರಿಸಿಕೊಳ್ಳಬೇಕೆಂದ ಸರಕಾರಕ್ಕೆ ರಿಪೋರ್ಟು ಮಾಡಿ...

ನುಡಿದನು. ಜರ್ಮನಿಯು ತನ್ನ ಕೈಗಾರಿಕೆಗೆ ಬೇಕಾದ ಅಸಿದ್ಧ ಸಾಹಿತ್ಯ ಸಂಗ್ರಹಗಳನ್ನು ನಾಲ್ಕು ವರುಷಗಳೊಳಗೆ ಮಾಡಿ...

ಇಂಗ್ಲೆಂಡಿಗೆ ರೂ. 10,000 ಬೆಲೆಯುಳ್ಳ ಕ್ಷೀರ...ಯ ಪೀಠ

ಮಹಾರಾಣಿಯ ಲೇಡಿ ಆಫ್ ಡೋರೆಸ್ ಇಂಗ್ಲೆಂಡಿನಲ್ಲಿ ಇಡುವುದಕ್ಕಾಗಿ ಇಟೆಲಿಯಿಂದ ಅಷ್ಟು ಬೆಲೆ ಬಾಳುವ ವಜ್ರದ ಆಲ್ಟರ್ (ಪೀಠ)ವನ್ನು ತರಿಸಿದ್ದಾರೆ...

ಕೊಂಗ್ರೆಸ್ ಪಾರ್ಲಿಮೆಂಟರಿ ಬೋರ್ಡ್, ಮಂಗಳೂರು.

ಚುನಾವಣಾ ಕರಪತ್ರ.

ಇಂಡಿಯನ್ ನ್ಯಾಶನಲ್ ಕೊಂಗ್ರೆಸ್

ಮತ್ತು

ಜಸ್ಟಿಸ್ ಪಾರ್ಟಿ.

ಇವುಗಳೊಳಗೆ ನಿಮಗೆ ಯಾವುದು ಬೇಕು?

ಇದೇ ಬರುವ ಚುನಾವಣೆಗಳ ಪ್ರಧಾನ ಪ್ರಶ್ನೆ.

ಮೇಲಿನ ಪ್ರಶ್ನೆಗೆ ಜಿಲ್ಲೆಯ ಓಟರುಗಳು ಕೊಡುವ ಉತ್ತರದ ಮೇಲೆ ನಮ್ಮ ಜಿಲ್ಲೆಯ, ನಮ್ಮ ಆಧಿಪತ್ಯದ ಆದರಿಂದಾಗಿ ನಮ್ಮ ದೇಶದ ಭವಿಷ್ಯವು ನಿರ್ಣಯವಾಗಲಿದೆ.

ಜಿಲ್ಲೆಯ ಓಟರು ಮಹಾಶಯರಿಗೆ.

"I have said that nothing substantial can be achieved by entering the legislatures but if the Congress has decided to capture them and has asked the Congress members of the legislatures to carry the Congress flag even into the Council chambers it is because the Congress wants to prevent undesirables from capturing those seats and using them in any way detrimental to the national interests."

Mahatma Gandhi, Faizpur Dec. 22.

"ನ್ಯಾಯ ವಿಧಾಯಕ ಸಭೆಗಳನ್ನು ಪ್ರವೇಶಿಸಿ ಸ್ವರಾಜ್ಯ ಹಕ್ಕುಗಳನ್ನು ಪಡೆಯುವುದು ಸಾಧ್ಯವಿಲ್ಲವೆಂದು ನಾನು ಹೇಳಿದ್ದೇನೆ. ಆದರೆ ಕೊಂಗ್ರೆಸು ಈಗ ಈ ಸಭೆಗಳನ್ನು ಕೈವಶಪಡಿಸಲು ನಿರ್ಣಯಿಸಿ ತನ್ನ ಸದಸ್ಯರನ್ನು ಈ ಕೌನ್ಸಿಲು ಸಭೆಗಳ ಒಳಗೆ ಕೂಡಾ ತನ್ನ ರಾಷ್ಟ್ರಧ್ವಜವನ್ನು ಕೊಂಡುಹೋಗಲು ಹೇಳಿರುವುದಾದರೂ ಯಾಕೆಂದರೆ ಬೇಡದ ಜನರು ಈ ಸ್ಥಾನಗಳನ್ನು ಸ್ವಾಧೀನಪಡಿಸಿ ರಾಷ್ಟ್ರೀಯ ಆಶಯಗಳಿಗೆ ಘಾತವನ್ನುಂಟುಮಾಡುವ ರೀತಿಯಲ್ಲಿ ಅವನ್ನು ಉಪಯೋಗಿಸುವುದನ್ನು ತಡೆಗಟ್ಟಬೇಕೆಂಬ ಉದ್ದೇಶದಿಂದಲೇ ಇರುತ್ತದೆ."

(ಫೈಜಾಪುರ ಸಮೀಪದ ತಿಲಕ್‌ನಗರ ಗ್ರಾಮಸ್ಥರಿಗೆ ಮಹಾತ್ಮಾ ಗಾಂಧಿಯವರು ತಾ. 22–12–'36ರಲ್ಲಿ ಮಾಡಿದ ಭಾಷಣದಿಂದ)

ಟ್ಟನ ರಣಮಂತ್ರಿ ಹನ್ರಿವುಡ್‌ರಿಂಗ ರ ಜರ್ಮನ್ ಕಾಮಗಾರಿಗಳ ಪರಿಷತ್ತಿನಲ್ಲಿ ಯುಂಬುದು ಪ್ರತ್ಯಕ್ಷವಾಗುವುದು ... ರನ್ನು ಎರೆಸ್ಟ್ ಮಾಡಿದ್ದಾರೆ.

ಹಿಂದೂ ದೇಶದ ಸಂಪೂರ್ಣ ಸ್ವರಾಜ್ಯಕ್ಕಾಗಿ ನ್ಯಾಯವಾದ ಮತ್ತು ಶಾಂತವಾದ ಸಾಧನಗಳಿಂದ ಹೋರಾಡುತ್ತಿರುವ ಕೊಂಗ್ರೆಸ್ ಸಂಸ್ಥೆಯು ಈ ಚುನಾವಣೆಯ ಕಾರ್ಯರಂಗಕ್ಕೆ ಕೈಹಾಕಿರುವುದೇಕೆಂಬುದನ್ನು ಮಹಾತ್ಮಾ ಗಾಂಧಿಯವರು ಮೇಲಿನ ಒಂದೇ ಮಾತಿನಲ್ಲಿ ಸ್ಪಷ್ಟಗೊಳಿಸುತ್ತಾರೆ. ಕೊಂಗ್ರೆಸಿನವರು ರಾಷ್ಟ್ರೀಯ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿರುವಾಗ ಈ ಸಂದರ್ಭದ ಲಾಭ ಪಡೆದು ಸರಕಾರದವರೊಡನೆ ಸೇರಿ ರಾಷ್ಟ್ರಕ್ಕೆ ಘಾತವನ್ನುಂಟುಮಾಡುತ್ತಿದ್ದ ಕೆಲವು ಮಂದಿ ಪುನಃ ಈ ರೀತಿ ಅಧಿಕಾರ ಸ್ಥಾನಗಳನ್ನು ಸ್ವಾಧೀನಪಡಿಸಿಕೊಳ್ಳದಂತೆ ತಡೆಗಟ್ಟಬೇಕೆಂಬುದೇ ಈಗಿನ ಚುನಾವಣೆಗಳಲ್ಲಿ ಕಾಂಗ್ರೆಸ್ ಸಂಸ್ಥೆಯು ಕೈಹಾಕಲು ಒಂದು ಮುಖ್ಯ ಕಾರಣವಿರುತ್ತದೆಂಬುದರಿಂದ ಇಂಥವರು ಮಾಡುತ್ತಿದ್ದ ಹಾವಳಿಯನ್ನು ನಿವಾರಿಸಿ ಸ್ವಾತಂತ್ರ್ಯ ಚಳವಳಿವು ಸುಗಮವಾಗಿ ನಡೆಯಬೇಕೆಂಬುದೇ ಕಾಂಗ್ರೆಸಿನವರ ಉದ್ದೇಶವೆಂಬುದು ಸ್ಪಷ್ಟವಾದಂತಾಯಿತು. ಆದುದರಿಂದಲೇ ನಿಮಗೆ ದೇಶದ ಸ್ವಾತಂತ್ರ್ಯವು ಬೇಕೆಂದಿದ್ದರೆ ರಾಷ್ಟ್ರಸಭೆಗೆ ಈ ಚುನಾವಣೆಗಳಲ್ಲಿ ನಿಮ್ಮ ಓಟುಗಳನ್ನು ಕೊಡಿರೆಂದು ಶ್ರೀ ವಲ್ಲಭಭಾಯಿ ಪಟೇಲರೂ ಪಂಡಿತ ಜವಾಹರಲಾಲರೇ ಮೊದಲಾದ ಮುಂದಾಳುಗಳೂ ಒತ್ತಿಹೇಳುತ್ತಿರುವರು.

ಒಂದೆಡೆ ಕೊಂಗ್ರೆಸ್ ಸಂಸ್ಥೆಯವರು ನೇಮಿಸಿದ ಉಮೇದ್ವಾರರು. ಇನ್ನೊಂದೆಡೆ ನಮ್ಮ ಆದಿಪತ್ಯದಲ್ಲಿ ಕಳೆದ ಹಲವು ವರ್ಷಗಳಿಂದ ಸರಕಾರದ ಆಶ್ರಯವನ್ನು ಪಡೆದು ಅಧಿಕಾರ ನಡೆಸಿದ ಜಸ್ಟೀಸ್ ಪಾರ್ಟಿಯ ಉಮೇದ್ವಾರರು. ಇವರೊಳಗೆ ನಿಮ್ಮ ಪ್ರತಿನಿಧಿಗಳನ್ನು ನೀವು ಆರಿಸಬೇಕಾಗಿದೆ. ಇದರಲ್ಲಿ ಶ್ರೀ! ಎ. ಬಿ. ಶೆಟ್ಟರು ಮತ್ತು ದಿವಾನ್ ಬಹದೂರು ಬಿ. ಮಹಾಬಲ ಹೆಗ್ಡೆರು ಅಥವಾ ಶ್ರೀ ಬಿ. ವೆಂಕಟ್ರಾಯ ಬಾಳಿಗರು ಮತ್ತು ಶ್ರೀ! ಬಿ. ಲಕ್ಷ್ಮಪ್ಪ ರೈಯವರು ಇವರೊಳಗೆ ನಿಮಗೆ ಯಾರು ಪ್ರತಿನಿಧಿಗಳಾಗಬಹುದೆಂಬ ವೈಯಕ್ತಿಕ ಪ್ರಶ್ನೆಯಿಲ್ಲ. ನಿಮಗೆ ಕಾಂಗ್ರೆಸ್ ಸಂಸ್ಥೆಯು ಬೇಕೊ ಅಥವಾ ಜಸ್ಟೀಸ್ ಪಾರ್ಟಿಯು ಬೇಕೊ ಎಂಬುದೇ ಬರುವ ಚುನಾವಣೆಗಳ ಪ್ರಧಾನ ಪ್ರಶ್ನೆ. ಈ ಪ್ರಶ್ನೆಗೆ ನೀವು ಕೊಡುವ ಉತ್ತರದ ಮೇಲೆ ನಮ್ಮ ಜಿಲ್ಲೆಯ, ನಮ್ಮ ಆಧಿಪತ್ಯದ, ಅದರಿಂದಾಗಿ ನಮ್ಮ ದೇಶದ ಭವಿಷ್ಯವು ನಿರ್ಣಯವಾಗಲಿದೆ.

ಈ ದಿನ ನಿಮಗೆ ಕೊಂಗ್ರೆಸ್ ಸಂಸ್ಥೆಯ ಪರಿಚಯವನ್ನು ನಾವು ಮಾಡಿ ಕೊಡಬೇಕಾಗಿಲ್ಲ. ಕಳೆದ 50 ವರ್ಷಗಳಿಂದ ರಾಷ್ಟ್ರದ ಹಿತಕ್ಕಾಗಿ ಅದು ದುಡಿಯುತ್ತಿದೆಯೆಂದು ನಿಮ್ಮೆಲ್ಲರಿಗೂ ಗೊತ್ತಿದೆ. ದಾದಾಭಾಯಿ ನವರೋಜಿಯವರ ಕಾಲದಿಂದ ಗೋಪಾಲಕೃಷ್ಣ ಗೋಖಲೆ, ಲೋಕಮಾನ್ಯ ಬಾಲ ಗಂಗಾಧರ ತಿಲಕ, ಅನ್ನಿಬಿಸೆಂಟಮ್ಮನ ಕಾಲದ ತನಕ ಎಷ್ಟೊಂದು ಪುಣ್ಯ ಪುರುಷರು ಈ ಸಂಸ್ಥೆಗಾಗಿ ತಮ್ಮ ಜೀವನವನ್ನು ಸವೆಯಿಸಿರುವರೆಂಬುದನ್ನು ನೀವು ಕೇಳಿರಬೇಕು. ಮಹಾತ್ಮಾ ಗಾಂಧಿಯವರು ಕೊಂಗ್ರೆಸ್ ಕಾರ್ಯರಂಗಕ್ಕೆ ಪ್ರವೇಶಿಸಿದಂದಿನಿಂದ ಕೊಂಗ್ರೆಸಿನ ಪರಿಚಯವಿಲ್ಲದವರು ಯಾರೂ ಉಳಿದಿಲ್ಲವೆಂದು ಧೈರ್ಯದಿಂದ ಹೇಳಬಹುದು. ಯಾವ ಕೊಂಗ್ರೆಸ್ ಸಂಸ್ಥೆಗಾಗಿ ಲಾಲಾ ಲಜಪತರಾಯರಂಥವರು ಲಾಠಿಪೆಟ್ಟುಗಳಿಗೆ ಎದೆಯೊಡ್ಡಿ ಬೇಗನೆ ಮರಣವನ್ನು ತಂದುಕೊಂಡರೊ ಯಾವ ಸಂಸ್ಥೆಗಾಗಿ ತಮ್ಮ ಸರ್ವಸ್ವವನ್ನು ಪೇಸಿ ಕಾರಾಗೃಹವನ್ನು ಅನುಭವಿಸಿ ಪಂಡಿತ ಮೋತಿಲಾಲ ನೆಹರು, ಸಿ. ಆರ್. ದಾಸರಂತಹರು ತಮ್ಮ ಆತ್ಮಯಜ್ಞ ಮಾಡಿದರೊ ಯಾವ ಸಂಸ್ಥೆಯ ಹೆಸರಲ್ಲಿ ಪಂಡಿತ ಮೋತಿಲಾಲರ ಧರ್ಮ ಪತ್ನಿಯು ಕೂಡಾ ಲಾಠಿ ಹೊಡೆತಗಳನ್ನು ಸ್ವೀಕರಿಸಿದರೋ ಅಂಥ ಕೊಂಗ್ರೆಸ್ ಸಂಸ್ಥೆಯ ಪರಿಚಯವು ಇನ್ನೂ ನಮ್ಮಲ್ಲಿಯ ಜನರಿಗಿಲ್ಲವೆಂದು ಯಾರೂ ಹೇಳುವಂತಿಲ್ಲ. ಈ ಕೊಂಗ್ರೆಸ್ ಸಂಸ್ಥೆಯ ಕಾರ್ಯಕ್ಕಾಗಿ ಶ್ರೀಮತಿ ಕಮಲಾ ನೆಹರುರಂಥವರು ಕಾರಾಗೃಹವನ್ನು ಸೇರಿದ ಮಾತಿರಲಿ ಇವರು ತಮ್ಮ ಮೃತ್ಯುಶಯ್ಯೆಯಿಂದ ಪಂಡಿತ ಜವಾಹರಲಾಲರನ್ನು ಕೊಂಗ್ರೆಸ್ ಕಾರ್ಯಕ್ಕಾಗಿ ತನ್ನನ್ನು ಬಿಟ್ಟುಹೋಗುವಂತೆ ಕೇಳಿದರೆಂಬ ಮಾತಿನ ಪುಣ್ಯ ಸ್ಮರಣೆಯನ್ನು ಹಿಂದೀ ಜನಾಂಗವು ಇಷ್ಟು ಬೇಗನೆ ಮರೆಯಲಿಕ್ಕಿಲ್ಲ. ಕೊಂಗ್ರೆಸ್ ಸಂಸ್ಥೆಗಾಗಿ ಲಕ್ಷಗಟ್ಟಲೆ ಜನರು ಕಾರಾಗೃಹವನ್ನು ಸೇರಿದರು. ಎಷ್ಟೊಂದು ಮಂದಿ ತಮ್ಮ ಮನೆಮಾರು ಸರ್ವಸ್ವವನ್ನೂ ಕಳಕೊಂಡರು. ಎಷ್ಟೊಂದು ಮಂದಿ ಬಾಬುಗಣೂನಂಥವರು ಅತ್ಯ ಸಂತೋಷದಿಂದ ತಮ್ಮ ಪ್ರಾಣವನ್ನು ಕೂಡಾ ಆಹುತಿಯನ್ನಾಗಿ ಅರ್ಪಿಸಿದರು. ಮನೆ ಬಿಟ್ಟು ಹೊರಗೆ ಬಾರದ ಲಕ್ಷಾಂತರ ಸ್ತ್ರೀಯರೂ ಮುಂದೆ ಬಂದು ಈ ಸಂಸ್ಥೆಗಾಗಿ ಕಾರಾಗೃಹದ ಸುಖವನ್ನೂ ಹೊಡೆತಗಳನ್ನೂ ನಾನಾ ಬಗೆಯ ಅವಮರ್ಯಾದೆಗಳನ್ನೂ ಸಹಿಸಿದರು. ಕೊನೆಗೆ ನಮ್ಮ ಶ್ರೀ ಎಲ್. ಎನ್. ಪ್ರಭುಗಳ ಧರ್ಮಪತ್ನಿಯವರ ಮಂಗಲ ಸೂತ್ರಕ್ಕೆ ಕೂಡ ಕೈಹಾಕುವಷ್ಟರ ಮಟ್ಟಿಗೆ ಬಂದಿದ್ದ ಆ ದಿನದ ಸಂಗತಿಗಳು ನಮ್ಮ ಜನರಿಗೆ ಇಷ್ಟೊಂದು ಬೇಗನೆ ಮರೆತುಬಿಡಲು ಸಾಧ್ಯವಾಗದೆಂದು ನಂಬಿಗೆ ಇರುವುದರಿಂದ ಕೊಂಗ್ರೆಸ್ ಸಂಸ್ಥೆಯ ಪರಿಚಯವನ್ನು ಪುನಃ ಮಾಡಿಕೊಡಬೇಕಾದುದಿಲ್ಲವೆಂದು ಮೇಲೆ ಹೇಳಲಾಯಿತು.

ಯಾವ ಸಂಸ್ಥೆಯು ಉದ್ಯೋಗವಿಲ್ಲದೆ ಉಪವಾಸವಿರುವ ಬಡ ಹಳ್ಳಿಯ ಹೆಂಗಸರಿಗೆ ರಾಟೆಯನ್ನು ತಂದುಕೊಟ್ಟು ಒಂದು ಊಟವಾದರೂ ಸಿಕ್ಕುವಂತಾಗಲೆಂದು ರಾತ್ರಿ ಹಗಲು ಅಖಿಲಭಾರತ ಚರಕ ಸಂಘದ ಮೂಲಕ ಪ್ರಯತ್ನಿಸುತ್ತಲಿರುವುದೋ ಯಾವ ಸಂಸ್ಥೆಯ ಆಶ್ರಯದಲ್ಲಿ ಹಿಂದು ಸಮಾಜದ ತಿರಸ್ಕಾರಕ್ಕೊಳಪಟ್ಟು ದಳಿತವರ್ಗವೆನ್ನಿಸಿಕೊಳ್ಳುತ್ತಿದ್ದ ಹರಿಜನರ ಸೇವೆಗಾಗಿ ಹರಿಜನ ಸೇವಾ ಸಂಘವು ಸ್ಥಾಪಿತವಾಗಿ ಕೆಲಸಮಾಡಿ ತಿರುವಾಂಕೂರಿನಂಥ ಸ್ಥಳದಲ್ಲಿ ಈ ಹರಿಜನರಿಗೆ ಕೂಡಾ ದೇವಸ್ಥಾನಗಳಲ್ಲಿ ಪ್ರವೇಶ ದೊರೆಯುವಂತಾಯಿತೋ ಯಾವ ಸಂಸ್ಥೆಯು ತನ್ನ ಆಶ್ರಯದಲ್ಲಿ ಅಖಿಲ ಭಾರತ ಗ್ರಾಮ ಉದ್ಯೋಗ ಸಂಘವನ್ನು ಸ್ಥಾಪಿಸಿ ಮಹಾತ್ಮಾ ಗಾಂಧಿಯವರು ಸ್ವತಃ ಹಳ್ಳಿಯಲ್ಲಿ ಹೋಗಿ ಕುಳಿತುಕೊಳ್ಳುವಂತಾಗಿದೆಯೋ ಯಾವ ಸಂಸ್ಥೆಯ ಆಶ್ರಯದಲ್ಲಿ ಹಿಂದೀ ಪ್ರಚಾರವೇ ಮೊದಲಾದ ಹಲವು ಬಗೆಯ ಸಾರ್ವಜನಿಕ ಹಿತದ ಕಾರ್ಯಗಳು ಸತತ ನಡೆಯುತ್ತಲೇ ಇವೆಯೋ ಅಂಥ ಭಾರತ ರಾಷ್ಟ್ರ ಸಭೆಯ ಪರಿಚಯವಿಲ್ಲದವರು ಯಾರೂ ಇಲ್ಲ. ಅತೀವ ದಾರಿದ್ರ್ಯ ಹಾಗೂ ಭಯಂಕರ ನಿರುದ್ಯೋಗಗಳ ನಿವಾರಣೆ, ಪ್ರತಿಯೊಬ್ಬರಿಗೂ ಯೋಗ್ಯ ಜೀವನಕ್ಕೆ ಬೇಕಷ್ಟು ಸಂಪಾದನೆ, ಸಾರ್ವಜನಿಕ ರಾಷ್ಟ್ರೀಯ ಶಿಕ್ಷಣ, ಸ್ತ್ರೀಯರ ಸಮಾನತೆ, ಧಾರ್ಮಿಕ ಸ್ವಾತಂತ್ರ್ಯ, ಕುಡಿತದ ನಿವಾರಣೆ, ಸುಂಕವಿಲ್ಲದ ಉಪ್ಪು, ಹಳ್ಳಿಯ ಉತ್ಪತ್ತಿಗಳಿಗೆ ಧಾರಣೆ, ಪ್ರಜೆಗಳ ಮೂಲಭೂತ ಹಕ್ಕುಗಳು ಇವನ್ನೆಲ್ಲ ಸರಿಯಾಗಿ ಸಾಧಿಸಬೇಕೆಂದಾದರೆ ದೇಶದ ಆಡಳಿತದ ಕ್ರಮಗಳನ್ನು ಬದಲಾಯಿಸು

ಗುಣ ಬಾರದಿದ್ದರೆ [illegible]

ಈ ಚೂರ್ಣವು ಕೆಂಪು ಬಿಳಿ ಶರಗಿಗೆ ಶತ್ರುವಾಗಿರುವುದು. ಅನಿಯಮಿತತನದಿಂದ ಮುಟ್ಟಾಗುವಿಕೆ, ಕ್ಲೇಶ ವ್ಯಯಲ್ಲಿ ನೋವು, ಉಷ್ಣತಾ ಕ್ಷೀಣತಾ ಗರ್ಭಾಶಯದಲ್ಲಿರುವ ದೋಷ ಗರ್ಭಧಾರಣವಾಗದಿರೋಣ, ಅಕಾಲದಲ್ಲಿ ಗರ್ಭಪತನವಾಗೋಣ ಈ ಮೊದಲಾದ ರೋಗಗಳು ನಿಶ್ಚಯವಾಗಿ ನೆಟ್ಟಗಾಗಿ ಗರ್ಭಕೋಶವು ಸ್ವಚ್ಛವಾಗುವದು. ಮಕ್ಕಳಾಗುವದಿಲ್ಲೆಂದು ಎರಡನೇ ಲಗ್ನಮಾಡಿಕೊಳ್ಳುವ ಮೊದಲು ಗೃಹದೇವತೆಯಾದ ಮೊದಲನೇ ಪತ್ನಿಗೆ ಈ ಚೂರ್ಣ ಅವಶ್ಯ ಕೊಡಿರಿ. ಮುಖ್ಯ ಸರ್ಟಿಫಿಕೇಟ ಮ. ರಾ. ಎ. ಎಮ್. ಇನ್ಸ್‌ಪೆಕ್ಟರ ಬೆಳಗಾಂವ:—ಈ ಚೂರ್ಣದಿಂದ ನನ್ನ ಕುಟುಂಬದ ಹೊಟ್ಟೆಯೊಳಗಿನ ರಕ್ತ ಗುಲ್ಮದ ಗಂಟು ನಾಮಶೇಷವಾಯಿತು. ಮತ್ತು ಎಲ್ಲ ರೋಗಗಳು ನಿಶ್ಶೇಷವಾದವು. ನನ್ನ ಮಿತ್ರನ ಹೆಂಡತಿಯ ರಕ್ತ ಮತ್ತು ಶರಗು ಇಲ್ಲದಂತಾದವು. ೨೧ ದಿವಸದ ಡಬ್ಬಿಯ ಕಿಮ್ಮತ್ತು ರೂ. ೩ ಟ. ಖ. ಆಣೆ, ೩ ಡಬ್ಬಿಗೆ ೪ರೂ.]

ಸಂತತಿ ಪ್ರತಿಬಂಧಕ ಚೂರ್ಣ. (ರಿಜಿಸ್ಟರ್ಡ) [೨ ಪಿ. ಖರ್ಚು ಆಣೆ ೮.

ಬಹಳಸಾರಿ ಹಡಿಯುವುದರಿಂದ ಅತಿಶಯ ಅಶಕ್ತಿಯಾಗುತ್ತದೆ ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವದರಿಂದ ದುಃಖವಾಗುತ್ತದೆ ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುರುವಾಗುವದು. ಶರೀರಕ್ಕೇನೂ ಅಪಾಯವಾಗದೆ ಸಂಸಾರ ಸುಖವು ಪೂರ್ಣವಾಗಿದೆ. ಕೂಡಲೇ ಗರ್ಭಧಾರಣ ಬಂದಾಗುವುದು ತದನಂತರ ಏನು ಮಾಡಿದರೂ ಸುರುವಾಗುವದಿಲ್ಲ ಮೊದಲೇ ಪೂರಾ ವಿಚಾರಮಾಡಿ ಔಷಧ್ಯಬೇಡಿರಿ. ಮುಖ್ಯಸರ್ಟಿಫಿಕೇಟ ಡಾಕ್ಟರ ಬಿ. ಎ. ವೈದ್ಯ ಎಲ್ ಸಿ. ಪಿ. ಎಸ್. ಮೂ। ಕೇಳವಾ ಮಾಹಿಮಾ ಜಿ. ಠಾಣೆ. ಈ ಚೂರ್ಣದಿಂದ ಯಾವ ತರದ ಅಪಾಯವಾಗದೆ ಗರ್ಭಧಾರಣವಾಗುವದಿಲ್ಲ. ಪೂರ್ಣ ಗುಣಕಾರಿ

ವಿಳಾಸ:—ಸಂಜೀವಿನೀ ಔಷಧಾಲಯ, ಮು. ಪೋ. ಮಿರಜ, S. M. C.

ವುದು ಆಗತ್ಯವೆಂಬುದರಿಂದಲೇ ಕಾಂಗ್ರೆಸಿನವರು ಇದಕ್ಕಾಗಿ ಹೋರಾಡುತ್ತಿದ್ದಾರೆ ಎಂಬುದು ಪ್ರತಿಯೊಬ್ಬರಿಗೂ ಗೊತ್ತಿದೆ.

ಇನ್ನು ಕಾಂಗ್ರೆಸ್ ಸಂಸ್ಥೆಯು ಈ ಪವಿತ್ರ ಕಾರ್ಯಕ್ಕೆ ಅಡ್ಡಿ ಬಂದು ನಿಂತು ವಿರೋಧಿಸುತ್ತಿರುವ ಜಸ್ಟಿಸ್ ಪಾರ್ಟಿಯ ಪರಿಚಯವನ್ನು ನಾವು ಜಿಲ್ಲೆಯ ಮಹಾಜನರಿಗೆ ಮಾಡಿಕೊಡಬೇಕಾಗಿದೆ. ಮದ್ರಾಸಿನಲ್ಲಿ ಕೆಲವರು ಸರಕಾರೀ ನೌಕರಿಗಳ ಮತ್ತು ತಮ್ಮ ಲಾಭದ ಉದ್ದೇಶವನ್ನಿಟ್ಟುಕೊಂಡು ಬ್ರಾಹ್ಮಣ ಬ್ರಾಹ್ಮಣೇತರರೆಂಬ ಭೇದವನ್ನು ಕಲ್ಪಿಸಿ ಬ್ರಾಹ್ಮಣರ ಮೇಲೆ ದ್ವೇಷವನ್ನು ಹುಟ್ಟಿಸಿ ತಯಾರಿಸಿದ ಪಕ್ಷವಿದು. ನಮ್ಮೊಳಗಿನ ಭೇದದಿಂದಲೇ ತನ್ನ ಅಧಿಕಾರವನ್ನು ಬಲಪಡಿಸಿಕೊಳ್ಳುವ ಸರಕಾರವು ಇದಕ್ಕೆ ಕೈಕೊಟ್ಟು ಇದನ್ನು ಎತ್ತಿಹಿಡಿಯಿತು. ಯಾವ ಬಗೆಯ ಪ್ರಶ್ನೆಯು ಮುಂದೆ ಬಂದರೂ ಸರಕಾರವನ್ನು ಸಮರ್ಥಿಸಬೇಕೆಂಬುದೇ ಈ ಸಂಗಡದ ಪದ್ಧತಿ. ಸತ್ಯಾಗ್ರಹ ಚಳವಳವನ್ನು ಮುರಿಯುವುದಕ್ಕೆ ಇವರು ಪೂರ್ಣ ಬೆಂಬಲ ಕೊಟ್ಟ ಬಗ್ಗೆ ಇವರಿಗೆ ಸರಕಾರದ ಧನ್ಯವಾದಗಳು ಇನ್ನೂ ಮುಗಿದಿಲ್ಲ. ಪ್ರಜೆಗಳ ವಾಕ್ ಸ್ವಾತಂತ್ರ್ಯ, ಬರಹ ಸ್ವಾತಂತ್ರ್ಯ, ಸಭೆ ಸೇರುವ ಸ್ವಾತಂತ್ರ್ಯ ಇಂಥ ಮೂಲ ಭೂತ ಹಕ್ಕುಗಳನ್ನು ಕೂಡಾ ಸರಕಾರದವರು ನಿರಾಕರಿಸಿದಾಗ ಇಂಥ ಧೋರಣೆಗೆ ಕೂಡಾ ಈ ಜಸ್ಟಿಸ್ ಸಂಗಡದವರು ಬೆಂಬಲ ಕೊಟ್ಟು ತಾವೂ ದೇಶದಲ್ಲಿಯ ಒಂದು ರಾಜಕೀಯ ಪಕ್ಷವೆಂದು ಹೇಳಿಕೊಳ್ಳುವ ಅಧಿಕಾರವನ್ನು ಸಹಾ ಇವರು ಕಳೆದುಕೊಂಡಿರುವರು.

ಜಸ್ಟಿಸ್ ಸಂಗಡದವರು ಕಾಂಗ್ರೆಸಿಗೆ ಮಾಡಿದ ಅಪರಾಧಗಳನ್ನು ನಾವು ವಿವರಿಸಲಿಚ್ಛಿಸುವುದಿಲ್ಲ. ಯಾಕೆಂದರೆ ಕಾಂಗ್ರೆಸಿನವರು ಸರ್ವ ಕಷ್ಟಗಳಿಗೆ ತಲೆಕೊಟ್ಟವರು. ಕಾಂಗ್ರೆಸ್ ಕೆಲಸಗಾರರು ಜೈಲಿನಲ್ಲಿ ಅಸ್ವಸ್ಥದಿಂದ ನರಳುತ್ತಿದ್ದಾಗ ಇವರಿಗೆ ಸ್ವಲ್ಪ ಮಜ್ಜಿಗೆ ಕೊಡುವುದು ಅಗತ್ಯವೆಂದು ಯಾರೊ ವಾದಿಸಿದ್ದಕ್ಕೆ ಕಾಂಗ್ರೆಸ್ ಕೆಲಸಗಾರರಿಗೆ ಮಜ್ಜಿಗೆಯ ಅಭ್ಯಾಸವಿಲ್ಲವೆಂದು ಈ ಸಂಗಡದ ಮಹನೀಯರೊಬ್ಬರು ಹೇಳಿದ ಮಾತು ನಮಗೆ ನೆನಪಿದೆ. ಕಾಂಗ್ರೆಸ್ ಕೆಲಸಗಾರರಿಗೆ ಲಾಠಿ ಹೊಡೆತಗಳು ಸಿಕ್ಕಿವೆಯಾದರೆ ಈ ಜಸ್ಟಿಸ್ ಸಂಗಡದವರು ಅದಕ್ಕೆ ಎಷ್ಟರಮಟ್ಟಿಗೆ ಹೊಣೆಯೆಂಬುದು ನಮಗೆ ಗೊತ್ತಿದೆ. ಇಂಥ ಅತ್ಯಾಚಾರಗಳನ್ನೆಲ್ಲ ಕಾಂಗ್ರೆಸಿನವರು ಇವರಿಗೆ ಕ್ಷಮಿಸಬಲ್ಲರು. ಆದರೆ ಪ್ರಜಾಹಿತದ ಕಾರ್ಯಗಳಲ್ಲಿ ಇವರು ತಂದೊಡ್ಡುವ ತೊಂದರೆಗಳು ಮಾತ್ರ ಅಕ್ಷಮ್ಯವಿರುತ್ತವೆ.

ಹಲಕೆಲವು ಸರಕಾರೀ ಹುದ್ದೆಗಳಿಗಾಗಿಯೂ, ತಮ್ಮ ಲಾಭಕ್ಕಾಗಿಯೂ ಯತ್ನಿಸುತ್ತಿರುವ ಈ ಕೂಟದವರೊಳಗೆ ಆಗಿಂದಾಗ ಆಗುತ್ತಿರುವ ಕಚ್ಚಾಟಗಳ ವರ್ಣನೆಯೂ ನಮಗೆ ಅಗತ್ಯವಿಲ್ಲ. ಒಬ್ಬ ಮಹನೀಯರ ಮೇಲೆ ಅಪನಂಬಿಗೆಯ ಠರಾವನ್ನು ತಂದು ಅವರನ್ನು ತಮ್ಮ ಕೂಟದಿಂದ ಹೊರಗಟ್ಟಿ ಈಗ ಚುನಾವಣೆಗಳ ಖರ್ಚಿಗಾಗಿ ಅವರನ್ನು ಪುನಃ ಹೇಗೆ ಸೇರಿಸಿಕೊಂಡು ಮಂತ್ರಿಸ್ಥಾನ ಕೂಡ ಕೊಟ್ಟಿರುವರೆಂಬಿತ್ಯಾದಿ ಸ್ವಾರಸ್ಯದ ಸಂಗತಿಗಳನ್ನು ಇಲ್ಲಿ ವಿವರಿಸಬೇಕಾಗಿಲ್ಲ.

ಕಳೆದ ಎಸೆಂಬ್ಲಿ ಚುನಾವಣೆಗಳಲ್ಲಿ ಜಸ್ಟಿಸ್ ಸಂಗಡವು ಒಮ್ಮೆಗೆ ಸಂಪೂರ್ಣ ಮುರಿದುಹೋಯಿತು. ಅಂದಿನಿಂದ ಪುನಃ ಇವರು ತಮ್ಮ ಸಂಗಡವನ್ನು ಬಲಪಡಿಸಿಕೊಳ್ಳುವ ವಿಧಾನಗಳನ್ನು ನೋಡಿದರೆ ಸಾಕು. ಜಿಲ್ಲಾ ಬೋರ್ಡು ವ ಇತರ ಸ್ಥಳೀಯ ಸಂಸ್ಥೆಗಳನ್ನು ತಮ್ಮ ಮಂತ್ರಿಪದವಿಗಳ ಬಲದಿಂದ ಸ್ವಾಧೀನಪಡಿಸುವ ಪ್ರಯತ್ನ— ಇದರಲ್ಲಿ ಓಟರರ ಪಟ್ಟಿಯನ್ನು ತಯಾರಿಸುವಾಗ ತಮ್ಮ ಅಧಿಕಾರದ ದುರುಪಯೋಗ— ಅಧಿಕಾರದ ಬೆಂಬಲದಿಂದ ಬೇಕಾದವರಿಗೆ ಬೇಕಾದ ಸಹಾಯ— ಒಬ್ಬರನ್ನು ಜೈಲಿನಿಂದ ಬಿಡಿಸೋಣ— ಒಬ್ಬರನ್ನು ಜೈಲಿಗೆ ಕಳುಹಿಸುವ ಯತ್ನ- ಇತ್ಯಾದಿ ಬಗೆಬಗೆಯ ಆಟಗಳು ನಮ್ಮ ಜಿಲ್ಲೆಯವರಿಗೂ ಗೊತ್ತಿಲ್ಲದ ಸಂಗತಿಗಳಲ್ಲ. ಎಲ್ಲಿ ಇಂಥ ಆಟಗಳು ನಡಿಯುವುದಿಲ್ಲವೊ ಅಲ್ಲಿ ಜಿಲ್ಲೆಯ ವಿಭಜನೆ— ಈ ವಿಭಜನೆಯಲ್ಲಿ ತಮಗೆ ಬೇಕಾದವರ ನೇಮಕದಿಂದ ಅಧ್ಯಕ್ಷಪದವಿ ಸ್ವಾಧೀನತೆ— ಇವೆಲ್ಲ ಸಾಮಾನ್ಯವಾಗಿ ತಿಳಿದ ಸಂಗತಿಗಳು.

ಈ ಜಿಲ್ಲಾ ಬೋರ್ಡು ಚುನಾವಣೆಗಳಿಗಾಗಿ ಜಸ್ಟಿಸ್ ಸಂಗಡದವರು ಎಲ್ಲಿಯ ತನಕ ಹೋಗಲು ಸಿದ್ಧರೆಂಬುದು ಇತ್ತೀಚೆಗೆ ನಡೆದ ರಾಮನಾಡಿನಲ್ಲಿಯ ಚುನಾವಣೆಯು ಸ್ಪಷ್ಟಪಡಿಸಿರುತ್ತದೆ. ಒಂದು ಜಿಲ್ಲಾ ಬೋರ್ಡಿನ ಸೀಟಿಗೆ ಹಣದ ರಾಶಿಯನ್ನೇ ಸುರಿದು ಕಾಂಗ್ರೆಸ್ ಕೆಲಸಗಾರರಲ್ಲಿ ನೂರಕ್ಕೆ ಮಿಕ್ಕಿ ಕೈದುಮಾಡಿಸಿ ಲಾಠಿಗಳು ಕೂಡಾ ಎದುರಿಗೆ ಬಂದು ಈ ಸಂಗಡದವರು ಮೊನ್ನೆ ತಾನೆ ಒಂದು ವಿಜಯವನ್ನು ಸಂಪಾದಿಸಿದರು. ಇಂಥ ಅಕೃತ್ಯಕ್ಕೆ ಉತ್ತರ ಕೊಡುವ ದಿನವು ಬೇಗನೆ ಬರಲಿದೆಯೆಂದು ಶ್ರೀ ವಲ್ಲಭ ಭಾಯಿಯವರು ಹೇಳಿಹೋಗಿದ್ದಾರೆ.

ಇಷ್ಟು ಸಾಹಸದಿಂದ ಸಂಪಾದಿಸಿದ ಈ ಜಿಲ್ಲಾ ಬೋರ್ಡುಗಳ ಅಧಿಕಾರಗಳನ್ನು ಈಗಿನ ಚುನಾವಣೆಗಳಲ್ಲಿ ಈ ಸಂಗಡದವರು ಚೆನ್ನಾಗಿ ದುರುಪಯೋಗಗೊಳಿಸದೆ ಇರುವಂತಿಲ್ಲವೆಂದು ಎಣಿಸಲಿಕ್ಕೆ ಸಾಕಷ್ಟು ಕಾರಣಗಳಿವೆ. ಜಿಲ್ಲಾ ಬೋರ್ಡುಗಳ ಸ್ವಾಧೀನದಲ್ಲಿ ಉಪಾಧ್ಯಾಯವರ್ಗವಿದೆ— ಕಂಟ್ರಾಕ್ಟದಾರರಿದ್ದಾರೆ— ಆಸ್ಪತ್ರೆಗಳಿವೆ— ಜಿಲ್ಲಾ ಬೋರ್ಡು ಪ್ರೆಸಿಡೆಂಟರುಗಳಿಗೆ ಬೇಕೆಂಬಂತೆ ಸಂಚಾರ ಕಾರ್ಯಕ್ರಮಗಳಿವೆ— ಅದರಲ್ಲೂ ಮಂತ್ರಿಗಳ ಬೆಂಬಲವೆಂದ ಮೇಲೆ ಬೇಕಾದವರಿಗೆ ಬೇಕಾದ ಸಹಾಯವನ್ನು ವಾಗ್ದಾನ ಮಾಡುವ ಅನುಕೂಲತೆಯಿದೆ. ಹಲವರನ್ನು ಬೆದರಿಸುವ ಅಧಿಕಾರವಿದೆ. ಇವೆಲ್ಲ ಚುನಾವಣೆಗೆ ಬಹಳ ಉಪಯುಕ್ತ ಸಂಗತಿಗಳೆಂಬುದರಿಂದಲೇ ಜಸ್ಟಿಸ್ ಪಾರ್ಟಿಯವರು ಈ ಜಿಲ್ಲಾ ಬೋರ್ಡುಗಳಿಗಾಗಿ ಇಷ್ಟೊಂದು ಸಾಹಸವನ್ನು ಮಾಡಲು ಕಾರಣವಾಯಿತು. ಈ ಸಂಗತಿಗಳೆಲ್ಲ ನಮ್ಮ ಜಿಲ್ಲೆಯಲ್ಲೆ ಎಷ್ಟರಮಟ್ಟಿಗೆ ನಡೆಯುತ್ತಿವೆಯೆಂಬುದನ್ನು ಮಹಾಜನರು ಪ್ರತ್ಯಕ್ಷವಾಗಿ ತಿಳಿಯಲು ಸಾಧ್ಯವಿದೆಯೆಂದ ಮೇಲೆ ನಾವು ವಿವರಿಸುವ ಅಗತ್ಯವಿಲ್ಲ. ರಸ್ತೆ ವಗೈರೆ ಕಂಟ್ರಾಕ್ಟುಗಳ ಟೆಂಡರುಗಳನ್ನು ಎಂದಿನ ಕ್ರಮವನ್ನು ಬಿಟ್ಟು ಬಾಕಿಯಿರಿಸಿದ್ದೇಕೆಂದು ಮೊನ್ನೆ ತಾನೇ ಡಿಸ್ಟ್ರಿಕ್ಟ್ ಬೋರ್ಡು ಸಭೆಯಲ್ಲಿ ಕೇಳಿದ ಪ್ರಶ್ನೆಗೆ ಇನ್ನೂ ಉತ್ತರವಿಲ್ಲವೆಂಬುದು ಜಿಲ್ಲೆಯ ಮಹಾಜನರು ಲಕ್ಷ್ಯಕ್ಕೆ ತೆಗೆದುಕೊಳ್ಳಬೇಕು.

ಜಸ್ಟಿಸ್ ಸಂಗಡದ ಮಂತ್ರಿಗಳು ಅಲ್ಲಲ್ಲಿ ಸಂಚರಿಸಿ ತಮ್ಮ ಪಕ್ಷವನ್ನು ಬಲಪಡಿಸುತ್ತಿದ್ದಾರೆ. ಯಾವ ಯಾವ ಅಧಿಕಾರಗಳು ತಮ್ಮ ಕೈಸೇರಿವೆಯೊ ಅವನ್ನು ತಮ್ಮ ಕಾರ್ಯಕ್ಕಾಗಿ ಉಪಯೋಗಿಸುತ್ತಿದ್ದಾರೆ. ಎಂಡೋವ್‌ಮೆಂಟು ಬೋರ್ಡನ್ನು ಸ್ಥಾಪಿಸಿ ನಮ್ಮ ದೇವಸ್ಥಾನಗಳನ್ನು ಉದ್ಧಾರಮಾಡಲು ಹೊರಟ ಸಂಗತಿಯು ನಮ್ಮ ಜಿಲ್ಲೆಯವರಿಗೆ ಅದರಲ್ಲೂ ಬ್ರಾಹ್ಮಣರಿಗೆ ಇಷ್ಟರೊಳಗೆ ಚೆನ್ನಾಗಿ ಅನುಭವಕ್ಕೆ ಬಂದಿರಬೇಕು. ದೊಡ್ಡ ದೇವಸ್ಥಾನಗಳಿಗೆಲ್ಲಾ ಎಕ್ಸಿಕ್ಯೂಟಿವ್ ಆಫೀಸರೆಂದು ತಮ

...ಅಸ್ವಟಿಸ್ಥ ಪ್ರ...

ನಡೆಯುತ್ತಿದೆ.

ಕಳೆದ 1933ನೆಯ ಖಾನೇಷುಮಾರಿಯಲ್ಲಿ ಸೋವಿಯಟ್ ರಶ್ಯದ ಜನಸಂಖ್ಯೆಯು 165, 748, 400 ಈಗ ತನ್ನ ಅಧಿಕಾರ ಕ್ಷೇತ್ರದ ಪ್ರಜಾಗಣನೆ ಎಷ್ಟೆಂದು ನೋಡುವ ಸೂಕ್ಷ್ಮ ರೀತಿಯ ವ್ಯವಸ್ಥೆಯನ್ನು ಮಾಡುತ್ತಿದೆ.

ಲೋಕದ ಗತಿಗೆ ಹಿಂದೆ ಬೀಳಬಾರದು.

ಎಂದು ಅಮೇರಿಕದ ಯುನೈಟೆಡ್ ಸ್ಟೇಟ್ಸಿನ ರಣಮಂತ್ರಿ ಮೆಸ್ಸ್ರಪ್ರುಡ್‌ರಿಂಗರು

ದಂಗಗಾರರ ಅಮಾನುಷ ಕ್ರೌರ್ಯ

ಸರಕಾರದ ಪಕ್ಷವು ಮ್ಯಾಡ್ರಿಡನ್ನು ಬಿಡಲಿಲ್ಲವಾದರೂ ಆ ಪಕ್ಷವನ್ನು ಬೆದರಿಸಲಿಕ್ಕಾಗಿ ದಂಗೆಗಾರರು ನಿರಪರಾಧಿಗಳನ್ನು ರಾಕ್ಷಸೀಯ ರೀತಿಯಲ್ಲಿ ಕೊಲೆಮಾಡುತ್ತಿರುವರು. ಶಾಲೆ, ಆಸ್ಪತ್ರೆಗಳ ಮೇಲೂ ಬೋಂಬಿನ ಮಳೆಗರೆಯುವರು.

ಅಸಾಧ್ಯವೆಂಬುದೇ ಇಲ್ಲ.

ಹಾಗೆಂದು ಹಿಟ್ಲರನು ಬರ್ಲಿನಿನಲ್ಲಿ ಜರ್ಮನ್ ಕಾಮಗಾರಿಗಳ ಪರಿಷತ್ತಿನಲ್ಲಿ

ಅವಧಿಯಲ್ಲಿ ಹಿಂದೂಸ್ಥಾನವು ತರಿಸಿಕೊಂಡ ಸಿಗರೇಟು ಇತ್ಯಾದಿಗಳ ಬೆಲೆಯು ರೂ. 13,85,000 ಆದರೆ ಅದೇ ಅವಧಿಯಲ್ಲಿ 1935 ಮತ್ತು 1936ರಲ್ಲಿ ಆಮದು ತರಿಸಿದುದರ ಬೆಲೆಯು ರೂಪಾಯಿ 17,81,000 ಮತ್ತು ರೂ 20,10,000 ಇದರೊಂದಿಗೆ ಊರಲ್ಲಿ ದಿನೇ ದಿನೇ ಪ್ರಬಲವಾಗುತ್ತಿರುವ ಕಾರ್ಖಾನೆಗಳ ಉತ್ಪತ್ತಿಯ ಅಭಿವೃದ್ಧಿಯನ್ನೂ ನೋಡಿದರೆ ಹೊಗೆಬತ್ತಿಯ ಹೊಗೆಯು ಹೇಗೆ ಹರಡುತ್ತಿದೆಯೆಂಬುದು ವ್ಯಕ್ತವಾಗುವುದು.

ಮೊದಲಿನ ನಿರ್ಧಾರಕ್ಕೂ ಅನಂತರದ್ದಕ್ಕೂ ಎಷ್ಟಾದರೂ ವ್ಯತ್ಯಾಸವಿರಲಾರದೆ? ಜೀವವಿದ್ದಂತೆ ಸುಡುವಾಗ ಆ ಯಾತನೆ! ಬಹಳವಾಗಿ ಕೂಗಿಕೊಂಡಳಂತೆ. ಆದರೆ ಆ ರಂಬವಾದ್ಯಗಳ ಘೋಷದಲ್ಲಿ ಆ ಕೂಗಿನ ಸ್ವರೂಪವೇನೆಂದು ಯಾರಿಗೂ ತಿಳಿಯಲಿಲ್ಲ. ಮೋಕ್ಷಕೊಡೆಂದು ದೇವರನ್ನು ಕರೆದೊ ರಕ್ಷಿಸೆಂದು ಜನರನ್ನು ಕೂಗಿದುದೋ ಅದಕ್ಕಾರು ಲಕ್ಷ್ಯಗೊಡಲಿಲ್ಲ ಅಲ್ಲಿ ನೆರೆದಿದ್ದವರು. ಈಗ ಪೋಲೀಸಿನವರು ಹಲವರನ್ನು ಎರೆಸ್ಟುಮಾಡಿದ್ದಾರೆ.

ಜನರನ್ನು ಅಲ್ಲಲ್ಲಿ ಸ್ಥಾಪಿಸುತ್ತಿದ್ದಾರೆ. ಶ್ರೀ ಧರ್ಮಸ್ಥಳ ಮಂಜಯ್ಯ ಹೆಗ್ಗಡೆಯವರು ಪುತ್ತೂರಿನ ಸೀಟಿಗೆ ಕಾಂಗ್ರೆಸ್ ಉಮೇದ್ವಾರರ ವಿರೋಧವಾಗಿ ನಿಲ್ಲುವ ಯೋಚನೆಯನ್ನು ಬಿಟ್ಟು ಅಪ್ಪರ್ ಕೌನ್ಸಿಲಿಗೆ ಉಮೇದ್ವಾರರಾಗಿರುವರಷ್ಟೆ. ಮೊನ್ನೆ ತಾನೆ ಅವರಿಗೆ ಎಂಡೋವ್‌ಮೆಂಟ್ ಬೋರ್ಡಿನಿಂದ ಅವರ ದೇವಸ್ಥಾನವನ್ನು ಹೊರಗಿಟ್ಟ ವಿಚಾರವನ್ನು ಯಾಕೆ ಬದಲಾಯಿಸಬಾರದೆಂದು ಕಾರಣಗಳನ್ನು ಕೊಡಲು ದಶಂಬರ 18ಕ್ಕೆ ಮದ್ರಾಸಿಗೆ ಹಾಜರಾಗಬೇಕಾಗಿ ನೋಟೀಸು ಬಂದಿದೆಯೆಂದೂ ಅವರು ಹೀಗೆ ಸ್ವತ: ಹಾಜರಾಗದಿದ್ದ ಪ್ರಯುಕ್ತ ತನಖೆಯನ್ನು ಜನವರಿ ತಾ. ೨೯ಕ್ಕೆ ಮುಂದರಿಸಿಟ್ಟಿರುವರಾಗಿಯೂ ತಿಳಿಯುತ್ತೇವೆ. ಇದರ ಮೇಲೆ ಟೀಕೆಯೇಕೆ?

ಸಹಕಾರೀ ಸೆಂಟ್ರಲ್ ಬ್ಯಾಂಕುಗಳಿಗೂ ಎಕ್ಸೆಕ್ಯೂಟಿವ್ ಆಫೀಸರರ ನೇಮಕದ ಯೋಜನೆ—ಸಹಕಾರ ಸಂಘಗಳ ಪಂಚಾಯ್ತದಾರರು ಆ ಕೆಲಸ ಬಿಟ್ಟರೂ ಅವರನ್ನು ಅವರು ಮುಂಚೂರು ಮಾಡಿದ ಸಾಲಗಳಿಗೆ ಜವಾಬ್ದಾರಿ ಮಾಡೋಣ—ಇವು ಕೂಡ ತಮ್ಮ ಅಧಿಕಾರವನ್ನು ಬಲಪಡಿಸುವ ಉದ್ದೇಶದಿಂದ ಮುಂದೆ ಬಂದಿವೆಯೋ ಗೊತ್ತಿಲ್ಲ. ಜಿಲ್ಲಾ ಇಕೊನೊಮಿಕ್ ಕೌನ್ಸಿಲೆಂದು ನಮ್ಮ ಈಗಿನ ವ್ಯಾಸರಾಯರ ಹಳ್ಳಿಪ್ರೇಮದಿಂದ ಹುಟ್ಟಿವೆಯುವೆಲ್ಲ—ಅವನ್ನು ಕೂಡಾ ಚುನಾವಣೆಗಳ ಬಗ್ಗೆ ಬೇಕಾದವರಿಗೆ ಬೇಕಾದಂತೆ ಮಾತುಕೊಡಲು ಉಪಯೋಗಿಸಲ್ಪಡುತ್ತಿವೆಯೋ ಎಂಬಂತೆ ಭಾಸವಾಗುತ್ತದೆ.

ಈ ಜಸ್ಟಿಸ್ ಪಂಗಡದ ಮುಖಂಡರಾದ ಬೊಬ್ಬಿಲಿ ರಾಜರ ಊರಿಗೆ ಇತ್ತೀಚೆಗೆ ಪಂಡಿತ ಜವಾಹರಲಾಲರು ಹೋದ ಸಂದರ್ಭದಲ್ಲಿ ಸಭೆಯ ಮಧ್ಯದಿಂದ ಆನೆಯಿಂದೊಡಗೂಡಿದ ಮೆರವಣಿಗೆಯು ನಡೆದು ಥೋಲು ಬಡಿದ ವಾರ್ತೆಯು ಇಲ್ಲಿಯು ತನಕ ಕೇಳಬಾರದೆ ಇಲ್ಲವೆಂದ ಮೇಲೆ ಈ ಪಕ್ಷದ ವಿಷಯ ಹೆಚ್ಚು ಬರೆಯುವ ಅವಶ್ಯಕತೆಯಿಲ್ಲ.

ಇಂಥ ಈ ಬಗೆಯ ಈ ಕೂಟದವರು ಈಗ ಚುನಾವಣೆಗಳು ಬಂದ ಕಾಲದಲ್ಲಿ ತಾವೂ ಒಂದು ರಾಜಕೀಯ ಪಂಗಡವೆಂದು ತೋರಿಸಿ ತಮಗೂ ಒಂದು ಕಾರ್ಯಕ್ರಮವನ್ನು ರಚಿಸಿಕೊಂಡು ತಾವೂ ಸ್ವರಾಜ್ಯ ತರುವೆವೆಂದು ಹೊರಟಿದ್ದಾರೆ. ಹತ್ತು ವರ್ಷದ ಒಂದು ಯೋಚನೆ— ಹತ್ತು ವರ್ಷಗಳಲ್ಲಿ ಎಲ್ಲರಿಗೂ ವಿದ್ಯಾಭ್ಯಾಸ— ಇತ್ಯಾದಿ. ಹಿಂದೊಮ್ಮೆ ಇವರು ಇಪ್ಪತ್ತು ವರ್ಷಗಳಲ್ಲಿ ಕುದಿತನವನ್ನು ನಿಲ್ಲಿಸುವುದಾಗಿ ಒಂದು ಪ್ರಚಾರ ಕಮಿಟಿಯನ್ನು ಏರ್ಪಡಿಸಿದ್ದರು. ಕಾರ್ಯಕ್ರಮಗಳನ್ನು ಕಾಗದದ ಮೇಲೆ ಬರೆದ ಕೂಡಲೆ ಜನರು ಈ ಕೂಟದವರನ್ನು ನಂಬುವರೆಂದು ಇವರು ಎಣಿಸುವುದು ಬಲು ಚೋದ್ಯವಿದೆ. ಮಾತ್ರವಲ್ಲ ಹತ್ತು ವರ್ಷದ ಯೋಜನೆಯನ್ನು ಹಾಕಿಟ್ಟು ತಾವು ಇನ್ನೂ ಹತ್ತು ವರ್ಷ ಅಂದರೆ ಎರಡು ಬಾರಿ ಚುನಾವಣೆಯಲ್ಲಿ ವಿಜಯ ಹೊಂದುತ್ತೇವೆಂದು ಇವರು ಭಾವಿಸುವಾಗ ಕನಿಕರವೆನ್ನಿಸುತ್ತದೆ. ಯಾಕಂದರೆ ಈ ಪಂಗಡದ ದಿನಗಳು ಈಗಲೇ ತುಂಬಿರುತ್ತವೆಂಬುದು ಸ್ಪಷ್ಟವಿರುತ್ತದೆ.

ಈ ಜಸ್ಟಿಸ್ ಪಾರ್ಟಿಯ ಅತ್ಯಾಚಾರಗಳ ಪೂರ್ಣ ಪಟ್ಟಿಯನ್ನು ಬರೆಯಲು ಅವಕಾಶವು ಸಾಲದೆಂದ ಬಳಿಕ ಇವರು ನಮ್ಮ ಜಿಲ್ಲೆಯವರಿಗೆ ಮಾಡಿರುವ ಒಂದು ಉಪಕಾರವನ್ನು ಹೇಳಿ ಇವರ ಚರಿತ್ರೆಯನ್ನು ನಿಲ್ಲಿಸುತ್ತೇವೆ. ಈಗಿನ ಈ ಆರ್ಥಿಕ ದುಸ್ಥಿತಿಯಲ್ಲಿ ಸರಕಾರದವರು ತಂದ ರೂಪಾಯಿಗೆ ಎರಡಾಣೆಯಂತೆ ತೀರ್ವೆ ಏರಿಸುವ ಸೂಚನೆಯನ್ನು ಶ್ರೀ ಎ. ಬಿ. ಶೆಟ್ಟರು ಮದ್ರಾಸು ಕೌನ್ಸಿಲಿನಲ್ಲಿ ವಿರೋಧಿಸಿದರೂ ಈ ಕೂಟದವರು ಸರಕಾರಕ್ಕೆ ಬೆಂಬಲಕೊಟ್ಟ ವಿಷಯ ನವಯುಗ ಪತ್ರಿಕೆಯಲ್ಲಿ ಸ್ವಲ್ಪ ಹಿಂದೆ ಪ್ರಕಟಪಡಿಸಿಯದೆ. ಈ ಉಪಕಾರವನ್ನು ನಮ್ಮ ಜಿಲ್ಲೆಯ ಓಟರು ಮಹಾಶಯರು ಚುನಾವಣೆಯ ದಿನ ಮರೆಯದಂತೆ ಜಾಗರೂಕರಾಗಿರಬೇಕು.

ನಮಗೆ ಜಸ್ಟೀಸ್ ಪಂಗಡವು ಬೇಕೇ? ಅಥವಾ ಕಾಂಗ್ರೆಸ್-ಸಂಸ್ಥೆಯು ಬೇಕೇ? ಎಂಬುದೇ ನಮ್ಮ ಮುಂದಿರುವ ಮುಖ್ಯ ಪ್ರಶ್ನೆ. ಉಳಿದುದೆಲ್ಲವೂ ಎದುರಾಳಿಗಳ ಗುಪ್ತಪ್ರಚಾರ ಮತ್ತು ಕುಹಕ ತಂತ್ರದ ಪ್ರಶ್ನೆಗಳು. ದಿವಾನ್ ಬಹದ್ದೂರ್ ಮಹಾಬಲ ಹೆಗ್ಡೆ ಮತ್ತು ಶ್ರೀಮಾನ್ ಲಕ್ಕಪ್ಪ ರೈ ಇವರ ಮೇಲೆ ನಮಗಿನ್ನೂ ಸ್ವಲ್ಪ ಗೌರವವುಂಟು. ಆದರೆ ಅವರು ಈ ಬಗೆಯ ಒಂದು ಅಯೋಗ್ಯ ಪಕ್ಷವನ್ನು ಕಟ್ಟಿಕೊಂಡು ಕಾಂಗ್ರೆಸಿನಂಥ ಪವಿತ್ರ ಸಂಸ್ಥೆಯ ದೇಶಸ್ವಾತಂತ್ರ್ಯದ ಕಾರ್ಯಕ್ಕೆ ವಿಘ್ನವನ್ನು ತಂದೊಡ್ಡುವುದು ಅವರಿಗೆ ಹೇಳಿಸಿದ ಕೆಲಸವಲ್ಲ. ಒಂದು ವೇಳೆ ದಿವಾನ್ ಬಹದ್ದೂರ್ ಹೆಗ್ಡೆರು ತಮ್ಮ ಮದ್ರಾಸಿನ ಸ್ನೇಹಿತರ ಒತ್ತಾಯಕ್ಕೆ ಒಳಪಟ್ಟು ಮತ್ತು ಶ್ರೀ ಲಕ್ಕಪ್ಪ ರೈಯವರು ತಾವು ಸರಕಾರೀ ಸಂಬಳದಲ್ಲಿರುವವರೆಂಬುದರಿಂದ ಇಂಥ ಕೆಲಸಕ್ಕೆ ಕೈಕೊಟ್ಟರೂ ಇವರ ಕೆಲವು ಆಪ್ತಮಿತ್ರರು ಇವರನ್ನು ಈ ಕಾರ್ಯದಲ್ಲಿ ಕಟ್ಟಿಕೊಳ್ಳುವುದು ಶ್ರೇಯಸ್ಕರವಲ್ಲ.

ಜಿಲ್ಲೆಯ ಓಟರು ಮಹಾಶಯರು ಕಾಂಗ್ರೆಸಿನ ಗೌರವವನ್ನೂ ಜಿಲ್ಲೆಯ ಕೀರ್ತಿಯನ್ನೂ ಕಾಪಾಡುವಂತೆ ಕಾಂಗ್ರೆಸ್ ಉಮೇದ್ವಾರರೆಲ್ಲರನ್ನೂ ಪ್ರಚಂಡ ಬಹುಮತದಿಂದ ಆರಿಸಿ ಕಾಂಗ್ರೆಸಿನ ಪವಿತ್ರ ಧ್ವಜವನ್ನು ಎತ್ತಿಹಿಡಿಯಬೇಕಾಗಿ ಭಾರತ ರಾಷ್ಟ್ರ ಸಭೆಯ ಹೆಸರಲ್ಲಿ ವಿಜ್ಞಾಪಿಸಿಕೊಳ್ಳುತ್ತೇವೆ.

ಹಿ ರಾಮರಾಯ ಮಲ್ಯ,

ಕಾಂಗ್ರೆಸ್ ಪಾರ್ಲಿಮೆಂಟರಿ ಬೋರ್ಡು,

ಮಂಗಳೂರು.

ದಿ ಉಡುಪಿ ಪ್ರೆಸ್ಸು, ಉಡುಪಿ.

ಗುಣ

ಈ ಚೂ... ... ಅನಿಯಮಿತತನದಿಂದ ಮುಟ್ಟಾಗುವಿಕೆ, ಕ್ಲೇಶ ವೆೃಯಲ್ಲಿ ನೋವು, ಉಷ್ಣತಾ ಕ್ಷೀಣತಾ ಗರ್ಭಾಶಯದಲ್ಲಿರುವ ದೋಷ ಗರ್ಭಧಾರಣವಾಗದಿರೋಣ, ಅಕಾಲದಲ್ಲಿ ಗರ್ಭಪತನವಾಗೋಣ ಈ ಮೊದಲಾದ ರೋಗಗಳು ನಿಶ್ಚಯವಾಗಿ ನೆಟ್ಟಗಾಗಿ ಗರ್ಭಕೋಶವು ಸ್ವಚ್ಛವಾಗುವದು ಮಕ್ಕಳಾಗುವದಿಲ್ಲೆಂದು ಎರಡನೇ ಲಗ್ನಮಾಡಿಕೊಳ್ಳುವ ಮೊದಲು ಗೃಹದೇವತೆಯಾದ ಮೊದಲನೇ ಪತ್ನಿಗೆ ಈ ಚೂರ್ಣ ಅವಶ್ಯ ಕೊಡಿರಿ. ಮುಖ್ಯ ಸರ್ಟಿಫಿಕೇಟ ಮ. ರಾ ಎ. ಎಮ್. ಇನ್ಸ್‌ಪೆಕ್ಟರ ಬೆಳಗಾಂವ:—ಈ ಚೂರ್ಣದಿಂದ ನನ್ನ ಕುಟುಂಬದ ಹೊಟ್ಟೆಯೊಳಗಿನ ರಕ್ತ ಗುಲ್ಮದ ಗಂಟು ನಾಮಶೇಷವಾಯಿತು. ಮತ್ತು ಎಲ್ಲ ರೋಗಗಳು ನಿಶ್ಶೇಷವಾದವು. ನನ್ನ ಮಿತ್ರನ ಹೆಂಡತಿಯ ರಕ್ತ ಮತ್ತು ಶರಗು ಇಲ್ಲದಂತಾದವು. ೨೧ ದಿವಸದ ಡಬ್ಬಿಯ ಕಿಮ್ಮತು ರೂ. ೩ ಟಿ ಖ. ಆಣೆ, ೮. ಡಬ್ಬಿಗೆ ೪ರೂ.]

ಸಂತತಿ ಪ್ರತಿಬಂಧಕ ಚೂರ್ಣ. (ರಿಜಿಸ್ಟರ್ಡ) [ಎ ಪಿ. ಖರ್ಚು ಆಣೆ ೮.

ಬಹಳಸಾರಿ ಹಡಿಯುವುದರಿಂದ ಅತಿಶಯ ಅಶಕ್ತಿಯಾಗುತ್ತದೆ ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುರುವಾಗುವದು ಶರೀರಕ್ಕೇನೂ ಅಪಾಯವಾಗದೆ ಸಂಸಾರ ಸುಖವು ಪೂರ್ಣವಾಗಿದೆ. ಕೂಡಲೇ ಗರ್ಭಧಾರಣ ಬಂದಾಗುವುದು ತದನಂತರ ಏನು ಮಾಡಿದರೂ ಸುರುವಾಗುವದಿಲ್ಲ. ಮೊದಲೇ ಪೂರಾ ವಿಚಾರಮಾಡಿ ಔಷಧ್ಯ ಬೇಡಿರಿ. ಮುಖ್ಯಸರ್ಟಿಫಿಕೇಟ ಡಾಕ್ಟರ ಬಿ. ಎ. ವೈದ್ಯ ಎಲ್ ಸಿ. ಪಿ. ಎಸ್. ಮೂ। ಕೇಳವಾ ಮಾಹಿಮಾ ಜಿ. ಠಾಣೆ ಈ ಚೂರ್ಣದಿಂದ ಯಾವ ತರದ ಅಪಾಯವಾಗದೆ ಗರ್ಭಧಾರಣವಾಗುವದಿಲ್ಲ. ಪೂರ್ಣ ಗುಣಕಾರಿ

ವಿಳಾಸ:—ಸಂಜೀವಿನೀ ಔಷಧಾಲಯ, ಮು. ಪೋ. ಮಿರಜ, S. M. C.

ಸಮಾಚಾರ ಸಂಗ್ರಹ

ಹಿಂದೂದೇಶದಲ್ಲಿ ವೋಟಿನ ಹಕ್ಕುಳ್ಳವರು

ಹಿಂದೂಸ್ಥಾನದ ಜನಸಂಖ್ಯೆ ಮೂವತ್ತೈದು ಕೋಟಿ ಇದರಲ್ಲಿ ವೋಟುಕೊಡುವ ಹಕ್ಕುಳ್ಳವರು ಬರೇ ಮೂರೂವರೆ ಕೋಟಿ. ಇವರಿಂದ ಚುನಾಯಿತರಾಗಬೇಕಾಗಿರುವ ಒಟ್ಟು ಸದಸ್ಯರು ಒಂದೂವರೆಸಾವಿರ ಎಂದರೆ ಪ್ರತಿಯೊಬ್ಬ ವೋಟರನೂ ಹತ್ತು ಜನರ ಪ್ರತಿನಿಧಿಯಾಗಿ ವೋಟು ಕೊಡಲಿಕ್ಕಿರುವನು ಪ್ರತಿಯೊಬ್ಬ ಸದಸ್ಯನೂ ಸುಮಾರು ಇಪ್ಪತ್ತಮೂರು ಸಾವಿರ ಜನರ ಪ್ರತಿನಿಧಿಯಾಗಿ ಶಾಸನ ಸಭೆಯಲ್ಲಿ ಕುಳಿತುಕೊಳ್ಳುವನು

ರಶ್ಯದ ಪೂರ್ವ ಪಶ್ಚಿಮಗಡಿಗಳಲ್ಲಿ ದುರ್ಗ ಪ್ರಾಕಾರಗಳು

ರಶ್ಯದ ಪೂರ್ವದಲ್ಲಿರುವ ಜಪಾನೂ ಪಶ್ಚಿಮದಲ್ಲಿರುವ ಜರ್ಮನಿಯೂ ಒಟ್ಟಾಗಿ ರಶ್ಯದ ಸೊಕ್ಕನ್ನು ಮುರಿಯುವುದರಲ್ಲಿ ಪರಸ್ಪರ ಸಹಾಯ ಮಾಡಬೇಕೆಂದು ನಿರ್ಧರಿಸಿಕೊಂಡಿವೆ ಆದರೆ ಇವರನ್ನು ತಡೆಯಲಿಕ್ಕೆ ಅತ್ಯನುಕೂಲವಾಗುವಂತೆ ರಶ್ಯವು ತನ್ನ ಪೂರ್ವ ಪಶ್ಚಿಮ ಗಡಿಗಳಲ್ಲಿ ಪ್ರವೇಶ ಸಾಧ್ಯವಾದೆಡೆಯಲ್ಲಿ ದುರ್ಗಪ್ರಾಕಾರಗಳನ್ನು ಕಟ್ಟುವ ಯೋಜನ ಮಾಡಿದ ಇದರ ಉದ್ದವು ಎರಡು ಸಾವಿರ ಮೈಲು. ಕಟ್ಟಲಿಕ್ಕೆ ಸುಮಾರು ಐದು ವರುಷಗಳು ಹಿಡಿಯಬಹುದು. ಕಟ್ಟಡವು ಸಂಪೂರ್ಣವಾದ ಮೇಲೆ ರಶ್ಯಾದ ಸೈನಿಕರು ಯಾವ ಭಯವೂ ಇಲ್ಲದ ಅಲ್ಲಿ ನಿಂತುಕೊಂಡು ಪಿರಂಗಿ ಹಾರಿಸಿ ಸಮೀಪಿಸುವ ಶತ್ರುಗಳನ್ನು ಧ್ವಂಸ ಮಾಡಬಹುದಂತೆ

ವಿಚಿತ್ರ!

ವಾಷಿಂಗ್‌ಟನ್ನಿನ ಮೇರಿಮಾರ್ಗರೆಟ್ ಎಂಬ ೧೩ ವರ್ಷದ ಹುಡುಗಿಯು ಕಳೆದ ಅಕ್ಟೋಬ್ರ ತಾ ೯ರಿಂದ ನಿರಂತರ ಸೀನುತ್ತ (Sneezing)ಲೇ ಇದ್ದಾಳೆ ಯಾವ ಡಾಕ್ಟರರಿಗೂ ಅದನ್ನು ಗುಣಮಾಡಲಿಕ್ಕಾಗಲೀ ಅದರ ಕಾರಣವನ್ನು ಕಂಡುಹಿಡಿಯಲಿಕ್ಕಾಗಲೀ ಇಂದಿನ ವರೆಗೂ ಆಗಲಿಲ್ಲ.

ಮಂಗಳ ನಕ್ಷತ್ರವು ಕೈಗೆ ಬಂದಂತೆ ಕಾಣುವುದು.

ಕೆಲಿಫೋರ್ನಿಯದ ಮೌಂಟ್ ವಿಲ್ಸನ್ ಎಂಬ ನಕ್ಷತ್ರಾವಲೋಕನ ಶಾಲೆಯಲ್ಲಿ ಒಂದು ಮಹಾ ದೂರದರ್ಶಕ ಯಂತ್ರವನ್ನು ಡಾಕ್ಟರ್ ಎಡ್ವಿನ್ ಹುಬ್ಲೆ ಎಂಬವರು ನಿರ್ಮಿಸಿರುವರು ಇದರಿಂದ ಮಂಗಳನಕ್ಷತ್ರವನ್ನು ಪರಿಪೂರ್ಣ ಪರೀಕ್ಷಿಸಿ ನೋಡಲಾಗುವುದಲ್ಲದೆ ಅಂತರಿಕ್ಷದ ಹಲವು ರಹಸ್ಯಗಳನ್ನು ತಿಳಿಯಲಾಗುವುದೆಂದು ನಿರೀಕ್ಷಣೆಯಿದೆ.

ರಶ್ಯದಲ್ಲಿ ಪ್ರಜಾಗಣನ ನಡೆಯುತ್ತಿದೆ.

ಕಳೆದ 1933ನೆಯ ಜಾನೇವರಿಯಲ್ಲಿ ಸೋವಿಯಟ್ ರಶ್ಯದ ಜನಸಂಖ್ಯೆಯು 165, 748, 400 ಈಗ ತನ್ನ ಅಧಿಕಾರ ಕ್ಷೇತ್ರದ ಪ್ರಜಾಗಣನೆ ಎಷ್ಟೆಂದು ನೋಡುವ ಸೂಕ್ಷ್ಮ ರೀತಿಯ ವ್ಯವಸ್ಥೆಯನ್ನು ಮಾಡುತ್ತಿದೆ

ಲೋಕದ ಗತಿಗೆ ಹಿಂದೆ ಬೀಳಬಾರದು.

ಎಂದು ಅಮೇರಿಕದ ಯುನೈಟೆಡ್ ಸ್ಟೇಟ್ಸಿನ ರಣಮಂತ್ರಿ ಡೆಸ್ಸಿವುಡ್‌ರಿಂಗ ರು ತನ್ನ ಸ್ಥಾಯೀ ಸೇನೆಯಲ್ಲ 20,000 ಮಂದಿಯನ್ನು ಹೆಚ್ಚಿಗೆ ಸೇರಿಸಿಕೊಳ್ಳಬೇಕೆಂದ ಸರಕಾರಕ್ಕೆ ರಿಪೋರ್ಟು ಮಾಡಿಕೊಂಡಿರುವರು

ನಾರಕ್ಕೆ ಅರ್ಧ ಮಿಲಿಯ ಹೊಗವಾಡಗಳು.

ಯುದ್ಧಕಾಲದ ವಿಷವಾಯುವಿನಿಂದ ಜೀವರಕ್ಷಣಮಾಡಿಕೊಳ್ಳಲಿಕ್ಕೆ ಉಪಯೋಗಿಸಿಕೊಳ್ಳುವ ಮೊಗವಾಡ (ಗ್ಯಾಸ್‌ಮಾಸ್ಕ) ಗಳನ್ನು ವಾರಕ್ಕೆ ಅರ್ಧ ಮಿಲಿಯದಂತೆ ಸಿದ್ಧಗೊಳಿಸಲು ಬ್ರಿಟನಿನಲ್ಲಿ ಹೊಸ ಸರಕಾರೀ ಕಾರ್ಖಾನೆಯೊಂದು ಬ್ಲೇಕ್ ಬರ್ನ ಎಂಬಲ್ಲಿ ತೆರೆಯಲಾಗಿದೆ ಹೀಗೆ ಸಿದ್ಧವಾದ ಮೊಗವಾಡಗಳೆಲ್ಲವೂ ದಾಸ್ತಾನುಮಾಡಲ್ಪಟ್ಟು ಆಪತ್ಕಾಲದಲ್ಲಿ ಜನಸಾಮಾನ್ಯರಿಗೆ ಹಂಚಲಾಗುವುದು ಅವುಗಳನ್ನು ಉಪಯೋಗಿಸುವ ಶಿಕ್ಷಣವನ್ನು ಮಾತ್ರ ಮುಂಚಿತವಾಗಿ ಕೊಡುವ ವ್ಯವಸ್ಥೆಯುಂಟಾಗಿದೆ ಇವನ್ನು ಕೂಡಿಡುವ ಡಿಪೋಗಳು ದೇಶದಲ್ಲೆಲ್ಲ ಚೆದರಿರುವುದರಿಂದ ಸಂದರ್ಭ ಬಂದಾಗ ವಿಳಂಬವಿಲ್ಲದೆ ಜನತೆಗೆ ಅವು ದೊರಕುವುವು ಇವೆಲ್ಲ ಮುಂದೆ ಬರಬಹುದಾದ ಭಯಂಕರ ರಾಕ್ಷಸೀಯ ಯುದ್ಧ ಕ್ರಮದಿಂದ ಜನರನ್ನು ರಕ್ಷಿಸುವುದಕ್ಕಾಗಿ ಮಾಡುತ್ತಿರುವ ಪೂರ್ವ ಸಿದ್ಧತೆ ಆದರೆ ಇಂಡಿಯದ ಗತಿಯೇನು

ಪೋಪ ಸಾಹೇಬರ ಆರೋಗ್ಯ

ಗಾಬರಿಗೊಳ್ಳುವಂತಿಲ್ಲ ಆರಾಮ ಕುರ್ಚಿಯಲ್ಲಿ ಕುಳಿತು ಹಲವು ತಾಸು ಕಳೆಯುವರು ಅನೇಕರಿಗೆ ಬೇಟಿಕೊಡುವರು ಆಗಾಗ ಬಲಗಾಲಿನಲ್ಲಿ ನೋವುಂಟಾಗುತ್ತದಷ್ಟೆ

ವಿದೇಶ

ಫ್ರಾಂಕೋವಿನ ಸಾಲ

ಸ್ಪಯಿನಿನ ದಂಗೆಗಾರರ ಸರ್ವಾಧಿಕಾರಿಯಾದ ಫ್ರಾಂಕೋವನು ಜರ್ಮನಿಯಿಂದ ತರಿಸಿಕೊಂಡ ಶಸ್ತ್ರಾಸ್ತ್ರಗಳಿಗಾಗಿ ೧೯ ಮಿಲಿಯ ಪವನು ಕೊಡಲಿಕ್ಕಿದೆ ೩೩೭ ವಿಮಾನಗಳನ್ನು ತರಿಸಿಕೊಂಡಿದ ಅವುಗಳ ಮೌಲ್ಯವೂ ಸಲಲಿಕ್ಕಿದೆ ಸ್ಪಯಿನಿನಿಂದ ಲೋಹದ ಅದಿರು (Ores)ಗಳನ್ನು ಬದಲಾವಣೆಯಾಗಿ ಕಳುಹಿಸಿಯೇ ಈ ಸಾಲ ತೀರ್ಮಾನವಾಗಬೇಕಾಗಿ ತಹ ಆದುದರಿಂದ ಈಗ ಕಬ್ಬಿಣದ ಅದಿರುಗಳನ್ನು ಜರ್ಮನ್ ಹಡಗುಗಳು ಒಯ್ಯುತ್ತಿವೆ.

ದಂಗೆಗಾರರ ಅಮಾನುಷ ಕ್ರೌರ್ಯ

ಸರಕಾರದ ಪಕ್ಷವು ಮೆಡ್ರಿಡನ್ನು ಬಿಡಲಿಲ್ಲವಾದರೂ ಆ ಪಕ್ಷವನ್ನು ಬೆದರಿಸಲಿಕ್ಕಾಗಿ ದಂಗೆಗಾರರು ನಿರಪರಾಧಿಗಳನ್ನು ರಾಕ್ಷಸೀಯ ರೀತಿಯಲ್ಲಿ ಕೊಲೆಮಾಡುತ್ತಿರುವರು. ಶಾಲೆ, ಆಸ್ಪತ್ರೆಗಳ ಮೇಲೂ ಬೋಂಬಿನ ಮಳೆಗರೆಯುವರು.

ಅಸಾಧ್ಯವೆಂಬುದೇ ಇಲ್ಲ.

ಹಾಗೆಂದು ಹಿಟ್ಲರನು ಬರ್ಲಿನಿನಲ್ಲಿ ಜರ್ಮನ್ ಕಾಮಗಾರಿಗಳ ಪರಿಷತ್ತಿನಲ್ಲಿ ನುಡಿದನು ಜರ್ಮನಿಯು ತನ್ನ ಕೈಗಾರಿಕೆಗೆ ಬೇಕಾದ ಅಸಿದ್ಧ ಸಾಹಿತ್ಯ ಸಂಗ್ರಹಗಳನ್ನೂ ನಾಲ್ಕು ವರುಷಗಳೊಳಗೆ ಮಾಡಿಕೊಂಡು ಸರ್ವ ಸ್ವತಂತ್ರವಾಗಿರತಕ್ಕುದೆಂದು ಆತನ ಮತ

ಗಾಂಧಿಜಿಯವರು ತಿರುವಾಂಕೂರಿನಲ್ಲಿ

ಹಿಂದೆ ನಿಶ್ಚಿತವಾದಂತ ಅವರ ಸಂಚಾರ ಕಾರ್ಯಕಲಾಪವು ಸಂಕ್ಷೇಪವಾಗಿರದೆ ಸಂಸ್ಥಾನವನ್ನೆಲ್ಲ ಸುತ್ತಿ ಇತ್ತೀಚೆಗ ಅಲ್ಲಿ ಉಂಟಾಗಿರುವ ಸುಧಾರಣೆಯನ್ನು ರೂಢಮೂಲವೂ ಸುಗಮವೂ ಆಗುವಂತೆ ಯತ್ನಿಸುವ ವಿಶಾಲ ತರದ ಕಾರ್ಯಕ್ರಮವನ್ನು ಒಳಗೊಳ್ಳುವಂತ ಮಾರ್ಪಡಿಸಲಾಗಿದೆ

ಬಿ. ಎನ್. ರೈಲ್ವೆ ಮುಷ್ಕರದಿಂದ

ವ್ಯಾಪಾರಿಗಳಿಗೆ ಹೇರಳ ನಷ್ಟ ತಮ್ಮ ಸರಕುಗಳನ್ನು ಸಾಗಿಸುವ ಸೌಕರ್ಯವಿಲ್ಲದಿರುವುದರಿಂದ ಈಗ ತಾನೆ ವ್ಯಾಪಾರ ಲೆಕ್ಕಕ್ಕೆ ರೂ 50,000ದ ನಷ್ಟ ಸಂಭವಿಸಿದೆಯೆಂದು ಕೂಡಲೇ ಈ ಮುಷ್ಕರ ಪ್ರಶ್ನೆಯಲ್ಲಿ ಸರಕಾರವು ಕೈಹಾಕಬೇಕೆಂದೂ ಚೈಪುರದ ಸಾಹುಕಾರರ ಸಂಘವು ವೈಸರಾಯ ಮತ್ತು ಗವರ್ನರರುಗಳಿಗೆ ತಂತಿ ಕೊಟ್ಟಿದೆ ತೀರ್ಮಾನವು ವಿಳಂಬವಾದುದರಿಂದ ಮುಷ್ಕರಗಾರರು ಸಂಕಷ್ಟಕ್ಕೊಳಗಾಗಿದರೂ ಕಂಗೆಡದೆ ಅಸದೃಶ ಐಕ್ಯತೆಯನ್ನು ತೋರಿಸುತ್ತಿದ್ದಾರೆ ಇದರಿಂದಾಗಿ ರೈಲ್ವೆಯವರಿಗೂ ನಷ್ಟವಾಗಿದ ಕಳೆದ ದಶಂಬರ ಕೊನೆಯ ಭಾಗದಲ್ಲಿ ಜಿ. ಐ ಪಿ ಮತ್ತು ಎನ ಡಬ್ಲ್ಯು ಆರ್ ರೈಲ್ವೆಗಳು ಹಿಂದಿನ ವರ್ಷದ ಆ ವಾರದ ಉತ್ಪತ್ತಿಗಿಂದ 11 ಮತ್ತು 12 ಲಕ್ಷ ರೂಪಾಯಿ ಹೆಚ್ಚಿಗೆ ಹುಟ್ಟುವಳಿಯನ್ನು ಹೊಂದಿರುತ್ತ ಈ ಕಂಪನಿಯು 8 ಲಕ್ಷ ರೂಪಾಯಿ ನಷ್ಟದಲ್ಲಿದೆ ಸದರ್ನ ಇಂಡಿಯಾ ಚೇಂಬರ್ ಆಫ್ ಕಮರ್ಸ ಎಂಬ ದಕ್ಷಿಣ ಹಿಂದೂಸ್ಥಾನದ ವ್ಯಾಪಾರ ಸಮಿತಿಯ ಅಧ್ಯಕ್ಷರೂ ಇಂಡಿಯಾ ಸರಕಾರವು ಕೂಡಲೇ ಇದನ್ನು ತೀರ್ಮಾನಮಾಡಬೇಕೆಂದು ಒತ್ತಾಯದ ತಂತಿ ಕೊಟ್ಟಿದ್ದಾರೆ

ಹೊಗೆಬತ್ತಿ ಸೇದುವುದು ಹೆಚ್ಚುತ್ತಿದೆ

1934ನೇ ಇಸವಿಯ ಎಂಟು ತಿಂಗಳ ಅವಧಿಯಲ್ಲಿ ಹಿಂದೂಸ್ಥಾನವು ತರಿಸಿಕೊಂಡ ಸಿಗರೇಟು ಇತ್ಯಾದಿಗಳ ಬೆಲೆಯು ರೂ 13,85,000 ಅದರ ಅದೇ ಅವಧಿಯಲ್ಲಿ 1935 ಮತ್ತು 1936ರಲ್ಲಿ ಆಮದು ತರಿಸಿರುವದರ ಬೆಲೆಯು ರೂಪಾಯಿ 17,81 000 ಮತ್ತು ರೂ 20,10,000 ಇದರೊಂದಿಗೆ ಊರಲ್ಲಿ ದಿನಂ ದಿನಂ ಪ್ರಬಲವಾಗುತ್ತಿರುವ ಕಾರ್ಖಾನೆಗಳ ಉತ್ಪತ್ತಿಯ ಅಭಿವೃದ್ಧಿಯನ್ನೂ ಗಣಿಸಿದರೆ ಹೊಗೆಬತ್ತಿಯ ಹೊಗೆಯು ಹೇಗೆ ಹರಡುತ್ತಿದೆಯೆಂಬುದು ವ್ಯಕ್ತವಾಗುವುದು

ಇಗರ್ಜಿಗೆ ರೂ. 10,000 ಬೆಲೆಯುಳ್ಳ ಕ್ಷೀರವಲೆಯ ಸೀರೆ

ಮದುರೆಯ ರೋಡಿ ಅವ್ ಡೋರೆರನ ಇಗರ್ಜಿಯಲ್ಲ ಇಡುವುದಕ್ಕಾಗಿ ಇಟಲಿಯಿಂದ ಅಷ್ಟು ಬೆಲ ಬಾಳುವ ಮಾರ್ಬಲ್ ಆಲ್ಟರ್ (ಪೀಠ)ವನ್ನು ತರಿಸಿದ್ದಾರೆ.

ಮಹಾಮಹೋಪಾಧ್ಯಾಯರ ಪತ್ನಿಗೆ ಕಳ್ಳನೊಡನೆ ಹೋರಾಟ

ಅನಕ ಮೈಸೂರಿನ ಸಂಸ್ಕೃತ ವಿದ್ವಾನ್ ಮಹಾಮಹೋಪಾಧ್ಯಾಯ ಪಂಡಿತರತ್ನ ಎಲ್ ಶ್ರೀನಿವಾಸಾಚಾರ್ಯರ ಪತ್ನಿ ಚಿತ್ತೂರಿನ ಕುಪ್ಪಮ್ ಸಮೀಪ ಲಕ್ಷ್ಮೀಪುರ ಅಗ್ರಹಾರದಲ್ಲಿ ಮನೆಯಲ್ಲೊಬ್ಬಳ ಇದ್ದಳು ತಾ ೧೦ನೆಯ ದಿನ ಮಧ್ಯರಾತ್ರಿ ಕಳ್ಳನೊಬ್ಬನು ಬಂದ. ಬಾಗಿಲಲ್ಲ ತೂತು ಕೊರೆದು ಅಗಳೆಯನ್ನು ದೂಡಿ ಒಳಗೆ ಪ್ರವೇಶಿಸಿದ ಹೆಂಗಸು ಎಚ್ಚತ್ತು ಗಾಬರಿಗೊಂಡು ಕೂಗುವಷ್ಟರಲ್ಲ ಆತ ಬಾಯಿ ಬಿಗಿಹಿಡಿದು ತುಳಿದು ನೆಲಕ್ಕುರುಳಿಸಿ ತಾಳಿ ಒಳೆ ಮುಂತಾದುವುಗಳನ್ನೆಲ್ಲ, ತಗೆದು ಕಿವಿಯ ಕಮಲುಗಳನ್ನು ತೆಗೆಯಲಿಕ್ಕೆ ಕಿವಿ ಕಚ್ಚುತ್ತಿದ್ದಾಗ ಹೆಂಗಸು ತನ್ನ ಶಕ್ತಿಯಿದ್ದಷ್ಟು ತಂದುಕೊಂಡು, ಧೈರ್ಯದಿಂದ ಒದೆದು ಬಿಟ್ಟಳು ಆತನು ಹಿಡಿತ ತಪ್ಪಿ ಬಿದ್ದ ಆಗ ಕೂಗಿದಳು ನೆರೆಕರೆಯವರು ಓಡಿ ಬಂದಾರೆಂದು ಆತ ಓಡಿ ಹೋದ ಹೆಂಗಸಿಗ ಜಖಂ ಆಗಿದೆ

ಕೊಲೆಗೆ ಹನ್ನೆರಡು ವರುಷದ ಅವಧಿ ಬಾಧಕವಿಲ್ಲ

ನರಸಿಂಹಯ್ಯನೆಂಬವನು ತಾ ನಿಟ್ಟುಕೊಂಡಿದ ಪಳನ್ನು ತಾ ೨-೫-1924ರಲ್ಲಿ ಕೊಲೆಮಾಡಿ ಪತ್ತೆ ಇಲ್ಲದ ತಪ್ಪಿಸಿಕೊಂಡಿದ್ದ ಕಳದ ಜುಲೈಯಲ್ಲಿ ಪೋಲೀಸರಿಗೆ ಸಿಕ್ಕಿದ ವಿಚಾರಣೆಯಾಗಿ ಆತನಿಗೆ ವೆಸ್ಟ್ ಗೋದಾವರಿಯ ಸೆಸ್ಸನ್ ಜಡ್ಜರು ಮರಣ ಶಿಕ್ಷೆಯನ್ನು ವಿಧಿಸಿರುವರು

ಬ್ರಾಹ್ಮಣ ಸ್ತ್ರೀಯ ಸಹಗಮನ

ಆಗ್ರಾದಿಂದ 15 ಮೈಲು ದೂರದ ಕಾಟಪುರ ಎಂಬ ಹಳ್ಳಿಯಲ್ಲಿ ಬ್ರಾಹ್ಮಣ ಸ್ತ್ರೀಯೊಬ್ಬಳು ಪತಿಯ ಮೃತಶರೀರದೊಂದಿಗೆ ತನ್ನನ್ನೂ ಅಗ್ನಿಗೆ ಅರ್ಪಿಸಿಕೊಳ್ಳುವ ದೃಢ ಸಂಕಲ್ಪಮಾಡಿದಳು ಹಳ್ಳಿಯವರು ಹಾಗೆಮಾಡಬಾರದೆಂದು ಎಷ್ಟು ಹೇಳಿದರೂ ಕೇಳಲಿಲ್ಲ ತನ್ನ ಸಂಕಲ್ಪಕ್ಕೆ ವಿಘ್ನ ತರುವವರಿಗೆ ಶಾಶ್ವತ ಭಯಂಕರ ನರಕ ಪ್ರಾಪ್ತಿಯಾಗುವುದೆಂದು ಶಾಪದ ಭಯ ತೋರಿಸಿದಳು ಹಳ್ಳಿಯವರು ಬಾಸಂತರವೂ ಎಷ್ಟಿಸಾಡಿಯಾರೇ? ದೇವಸ್ಥಾನದ ಮುಂದಯೇ ಚಿತೆಯು ಸಿದ್ಧವಾಯಿತು ಅವಳು ಮದುವೆ ಗಳಂತೆ ಸಿಂಗರಿಸಿಕೊಂಡು ಒಂದು ಪತಿಯ ಮೃತಶರೀರದೊಂದಿಗೆ ಚಿತಾರೋಹಣಮಾಡಿದ ಚಿತೆ ಹತ್ತುವ ಮೊದಲಿನ ನಿರ್ಧಾರಕ್ಕೂ ಅನಂತರಕ್ಕೂ ಎಷ್ಟಾದರೂ ವ್ಯತ್ಯಾಸವಿರಬಹುದಲ್ಲ? ಜೀವವಿದ್ದಂತೆ ಸುಡುವಾಗಲ ಯಾತನೆ! ಬಹಳವಾಗಿ ಕೂಗಿಕೊಂಡಳಂತೆ ಆದರ ಆ ಶಂಖ ವಾದ್ಯಗಳ ಘೋಷದಲ್ಲಿ ಆ ಕೂಗಿನ ಸ್ವರೂಪವೇನೆಂದು ಯಾರಿಗೂ ತಿಳಿಯಲಿಲ್ಲ ಮೋಕ್ಷಕೊಡೆಂದು ದೇವರನ್ನು ಕರೆದುದೋ ರಕ್ಷಿಸೆಂದು ಜನರನ್ನು ಕೂಗಿದುದೋ ಅದಕ್ಕಾರು ಲಕ್ಷ್ಯಗೊಡಲಿಲ್ಲ ಅಲ್ಲಿ ನೆರೆದಿದ್ದವರು ಈಗ ಪೋಲೀಸಿನವರು ಹಲವರನ್ನು ಎರಸ್ಟುಮಾಡಿದ್ದಾರೆ.

ಈ ವಾರದ ಕಥೆ

ಸಂತ ಮಹಾರಾಜ!

(ಲೇಖಕ—ಶ್ರೀ ಕಟಪಾಡಿ ಶ್ರೀನಿವಾಸ ಶೆಣೈ, ಅಧ್ಯಾಪಕ, ಕಾರ್ಕಳ)

ಮಹಾಲಕ್ಷ್ಮಿ ದೇವಾಲಯದಲ್ಲಿ ಎಂದಿನಂತೆ ಆ ವರ್ಷವೂ ಶ್ರಾವಣ ಮಾಸದಲ್ಲಿ ಭಜನೆ ಸಪ್ತಾಹ ಮಹೋತ್ಸವವು ಆಗುತ್ತಲಿದ್ದಿತು ಊರು ಪರವೂರುಗಳಿಂದ ನೂರಾರು ಮಂದಿ ದೊಡ್ಡ ದೊಡ್ಡ ಸಂತರು ಗುಂಪುಗುಂಪಾಗಿ ಬಂದು ಅಲ್ಲಿ ಸೇರಿದ್ದರು ಅವರೂ ಇತರರೂ ಕೂಡಿ ಆರು ದಿನಗಳವರೆಗೆ ಅಹೋರಾತ್ರಿ ಭಗವನ್ನಾಮ ಸಂಕೀರ್ತನದಲ್ಲಿ ತಲ್ಲೀನರಾಗಿ ತಾವು ಪರಮಪಾವನರಾಗುತ್ತಲಿದ್ದರು, ಮತ್ತು ಅಲ್ಲಿಗೆ ದಿನಕ್ಕೊಮ್ಮೆಯಾದರೂ ಬಂದು ಕಣ್ಣು ಕಿವಿಗಳಿಗೆ ಮಹದಾನಂದವನ್ನು ಕೊಡುತ್ತಿದ್ದ ಜನವೃಂದವನ್ನೂ ಪಾವನಗೊಳಿಸುತ್ತಿದ್ದರು 'ದಾಸನ ಮಾಡಿಕೋ ಎನ್ನ | ಶ್ರೀ ಮಹಾಲಕ್ಷ್ಮೀ | ದಾಸನ ಮಾಡಿಕೋ ಎನ್ನ ||' ಎಂಬ ಭಕ್ತರ ದೀನ ವಾಣಿಯು ದೇವಾಲಯದ ಅಷ್ಟು ವಿಶಾಲವೂ ಎತ್ತರವೂ ಆದ ಪೌಳಿ ಗೋಡೆಗಳನ್ನು ದಾಟಿ, ಅರ್ಧ ಮೈಲು ದೂರದ ವರೆಗೂ ಚೆನ್ನಾಗಿ ಕೇಳಿಸುತ್ತಿತ್ತು.

ಅಂದು ಬಂದ ಭಕ್ತ ಮಂಡಳಿಯಲ್ಲಿ ಲಕ್ಷ್ಮೀದಾಸ ಉರುಫ ಸಂತಮಹಾರಾಜರು ಮುಖ್ಯರಾಗಿದ್ದರು ಇವರು ಸಂತ ಕೂಟದಲ್ಲಿ ಸಂತ ಶಿಖಾಮಣಿಗಳೆನ್ನಿಸಿಕೊಂಡಿದ್ದರು. ಅವರಿಗೆ ಅಲ್ಲಿ ಉಚ್ಚಸ್ಥಾನ ಗೌರವಗಳು ಪ್ರಾಪ್ತವಾಗಿದ್ದುವು ಅವರ ಕೀರ್ತಿಗಾನವು ನಾಲ್ದಿಕ್ಕುಗಳಿಂದಲೂ ಮೊಳಗಿ ಪ್ರತಿಧ್ವನಿಸುತ್ತಿತ್ತು ಸಂತ ಮಹಾರಾಜರ ಊರು, ಕೇರಿ, ಮನೆ, ಮಠಗಳು ಯಾವುದೆಂದು ಯಾರಿಗೂ ತಿಳಿಯದು. ಅವರು ವಿವಾಹವಾಗಿ ಹೆಂಡತಿಯೊಂದಿಗೆ ಮಕ್ಕಳುಮರಿಗಳನ್ನು ಕಟ್ಟಿಕೊಂಡು ಸಂಸಾರಿಗಳಾಗಿದ್ದರೋ, ಅದೂ ಗೊತ್ತಿಲ್ಲ ಎಲ್ಲಿಗೆ ಹೋಗುವರೋ ಅಲ್ಲೇ ಅವರ ಊರು ಕೇರಿ ಮನೆ ಮಠಗಳಾಗುತ್ತಿದ್ದುವು ಪರಂತು ವರ್ಷಕ್ಕೊಮ್ಮೆ ಮಾತ್ರ ಸಪ್ತಾಹ ಕಾಲಕ್ಕಾದರೂ ಬಂದು, 'ದಾಸನ ಮಾಡಿಕೋ ಎನ್ನ . 'ಎಂದು ಹಾಡುತ್ತ ಭಕ್ತಜನಸ್ತೋಮವನ್ನು ಆನಂದ ಸಾಗರದಲ್ಲಿ ತೇಲಿಸದೆ ಇರುತ್ತಿರಲಿಲ್ಲ ಆದ ಕಾರಣ ಊರವರು ಸಹಜವಾಗಿ ಅವರನ್ನು ತಮ್ಮವರೆಂದು ತಿಳಿದುಕೊಂಡಿದ್ದರು ಅವರು ನಿಜವಾಗಿ ಯಾರವರೆಂಬುದು ಜನರಿಗೆ ಗೊತ್ತಾದುದು— ಆ ವರ್ಷ ಅದೇ ಕೊನೆಯದಾಗಿ ಮಹಾಲಕ್ಷ್ಮಿ ದೇವಾಲಯದಲ್ಲಿ ಸಪ್ತಾಹ ಮಹೋತ್ಸವವು ನಡೆದಾಗ

ಸಂತ ಮಹಾರಾಜರು ಕರ್ಣಾಟಕ ಭಾಷಾಭಿಮಾನಿಗಳು, ಸ್ತ್ರೀಸುಧಾರಕರು ಅವರು ಪ್ರಾಚೀನಕಾಲದ ಸಂತರುಗಳಂತೆ ತಮ್ಮನ್ನು ಪುನೀತಗೊಳಿಸುವ ಸ್ವಾರ್ಥವನ್ನು ಮಾತ್ರ ಕಟ್ಟಿಕೊಂಡವರಲ್ಲ ತಮ್ಮೊಂದಿಗೆ ಇತರ ಸ್ತ್ರೀಪುರುಷರಿಗೂ ಮಾರ್ಗದರ್ಶಕರಾಗಿದ್ದರು ಸಪ್ತಾಹ ಕಾಲದಲ್ಲಿ ಸಂತ ಮಹಾರಾಜರ ಹಾಡುಗಾರಿಕೆಯಲ್ಲಿ ಒಂದು ವೈಶಿಷ್ಟ್ಯವಿತ್ತು ಎಲ್ಲಾ ಕಾಲಗಳಲ್ಲಿ ಅವರು ಹಾಡುತ್ತಿರಲಿಲ್ಲ ಹಾಡಿದಾಗಲೆಲ್ಲ ಅವರು ಭಕ್ತಿರಸ ಪಾನಮಾಡಿ ಉನ್ಮತ್ತರಾಗುತ್ತಲೂ ಇರಲಿಲ್ಲ ಕೆಲವು ಸಂದರ್ಭಗಳಲ್ಲಿ ಅವರು ಅತಿಶಯವಾದ ಉತ್ಸಾಹದಿಂದ ಕೂಡಿ ಕುಣಿಕುಣಿದು ಹಾಡುತ್ತ ಇರುತ್ತಿದ್ದರು 'ದಾಸನ ಮಾಡಿಕೋ ಎನ್ನ 'ಎಂದು ಸಂತ ಮಹಾರಾಜರಿಗೆ ಮರಾಠಿ ಅಭಂಗಗಳು, ಹಿಂದೀ ಗೀತಗಳು, ಕರ್ನಾಟಕ ಪದ್ಯಗಳನ್ನು ಹಾಡಿಹಾಡಿ ಚೆನ್ನಾಗಿ ಅಭ್ಯಾಸವಾಗಿತ್ತಾದರೂ, ಕರ್ಣಾನಂದವಾಗುವಂತೆ ಹಾವಭಾವದಿಂದ ಕೂಡಿ 'ದಾಸನ ಮಾಡಿಕೋ ಎನ್ನ | ಶ್ರೀ ಮಹಾಲಕ್ಷ್ಮೀ | ದಾಸನ ಮಾಡಿಕೋ ಎನ್ನ ||' ಎಂದು ಹಾಡುವದರಲ್ಲಿ ಅವರು ಪಡೆದಷ್ಟು ಪ್ರಸಿದ್ಧಿಯನ್ನು ಆ ಸಂತ ಮಂಡಲಿಯಲ್ಲಿ ಬೇರೆ ಯಾರೂ ಪಡೆದಿರಲಿಲ್ಲ ಆ ಕರ್ಣಾಟಕ ಪದವು ಅವರ ಅಚ್ಚುಮೆಚ್ಚಿನ ಪದವಾಗಿತ್ತು ಹೀಗಾಗಿ ಅವರು ಕರ್ಣಾಟಕ ಭಾಷಾಭಿಮಾನಿಗಳು

ಊರಲ್ಲಿರುವದು ಮಹಾಲಕ್ಷ್ಮಿಯ ದೇವಾಲಯ. ಮತ್ತು ಅದೇ ಹೆಸರಿನ ಒಬ್ಬ ಬಾಲ ವಿಧವೆ ಆ ಬಾಲ ವಿಧವೆಗೆ ಸುಮಾರು ೨೫-೩೦ ವರ್ಷಗಳಾಗಿದ್ದಿರಬಹುದು ಆದರೂ ಆಕೆ ಅಷ್ಟು ಚಿಕ್ಕ ಪ್ರಾಯದಲ್ಲಿ ಮುಂಡನ ಮಾಡಿಸಿಕೊಂಡು, ಕೆಂಪು ಸೀರೆ ಉಟ್ಟುಕೊಂಡು, ಕೈಯಿಂದ ಜಪಮಾಲೆಯನ್ನು ತಿರುಗಿಸಿ, ಬಾಯಿಂದ ಭಗವನ್ನಾಮವನ್ನುಚ್ಚರಿಸುತ್ತ ತಪಸ್ವಿನಿಯರಂತೆ ಹಗಲು ರಾತ್ರಿಗಳನ್ನು ಕಳೆಯುತ್ತಿದ್ದಳು ಅವಳಿಗೆ ಸಂತ ಕೂಟಕ್ಕೆ ಸೇರಿದ ದೊಡ್ಡ ಸಂತಿನಿ ಎಂಬ ಖ್ಯಾತಿಯಿತ್ತು ಅವಳನ್ನು ಬೆಳಕಿಗೆ ತಂದ ಕಾರಣ ಪುರುಷರ್, ಇವರು ನಮ್ಮ ಸಂತ ಮಹಾರಾಜರು ಸ್ತ್ರೀ ಸುಧಾರಕರು! ಹರಿಕಥೆ, ಪುರಾಣ, ಪ್ರವಚನ ಭಜನ ಸಪ್ತಾಹ ನಾಮ ಸಂಕೀರ್ತನ ಯಾವದಾಗುವದಿದ್ದರೂ ಅವಳ ಉಪಸ್ಥಿತಿ ಎಲ್ಲರಿಗಿಂತ ಮೊದಲು, ಎಲ್ಲರಿಗಿಂತ ಮುಂದು, ಬೇರೆ ಯಾರು ಬಾರದಿದ್ದರೂ, ಅಂಥ ಸಂದರ್ಭಗಳಲ್ಲಿ ಮಹಾಲಕ್ಷ್ಮಿ ಮಾತ್ರ ಅಗತ್ಯವಾಗಿಯೂ ಬರುತ್ತಿದ್ದಳು. ವಿಧವೆಯರ ನೀರಸ ಜೀವನವು ಸರಸವಾಗಬೇಕಾದುದು ಹೀಗೆಯೇ ಪೂರ್ವ ಕರ್ಮಫಲದಿಂದ ಮಹಾಲಕ್ಷ್ಮಿ ಕೈ ಹಿಡಿದ ಒಬ್ಬ ಗಂಡನನ್ನು ಕಳಕೊಂಡು ವಿಧವೆಯಾಗಿದ್ದಳು ಇನ್ನು ಮುಂದಾದರೂ ಆಕೆಗೆ, ತಾನು ಸಧವೆಯಾಗಿದ್ದುಕೊಂಡು ಸಾಯಬೇಕೆಂಬ ಮಹದಾಕಾಂಕ್ಷೆ ಸರ್ವತ್ರಾಣಿಮಾಪ ಭಗವಂತನಿಗೆ ಅಸಾಧ್ಯವಾದ ಕೆಲಸವು ಯಾವುದೂ ಇರಲಿಲ್ಲ ಆದ್ದರಿಂದ ಮಹಾಲಕ್ಷ್ಮಿ ಆತನನ್ನೇ ಶರಣು ಹೋಗಿ 'ದಾಸಿಯ ಮಾಡಿಕೋ ಎನ್ನ | ಶ್ರೀ ಲಕ್ಷ್ಮೀಕಾಂತನೆ | ದಾಸಿಯ ಮಾಡಿಕೋ ಎನ್ನ ||' ಎಂದು ಹಾಡಿ ಬೇಡುತ್ತಿದ್ದಳು

ಮಹಾಲಕ್ಷ್ಮಿ ಹೀಗೆ ಹಾಡಿ ಬೇಡುವದನ್ನು ಕೇಳುವಾಗ ಸಂತ ಮಹಾರಾಜರಿಗೆ ಬಹು ಕನಿಕರವಾಗುವದು 'ಅಯ್ಯೋ! ವಿಧವೆಯರ ಹಾಳು ಬಾಳೇ!' ಎನ್ನಿಸುವದು ಆಗ ಅವರೂ ಪರಮಾತ್ಮನಿಗೆ ಮೊರೆ ಹೋಗಿ ಉನ್ಮತ್ತರಂತೆ ಹಾಡತೊಡಗುವರು 'ದಾಸನ ಮಾಡಿಕೋ ಎನ್ನ | ಶ್ರೀ ಮಹಾಲಕ್ಷ್ಮೀ | ದಾಸನ ಮಾಡಿಕೋ ಎನ್ನ ||' ಅವರ ಆ ಧ್ವನಿಯು ಎಲ್ಲೆಲ್ಲಿಂದ ಪ್ರತಿಧ್ವನಿಸುವದು ಆಗ ಸಂಗೀತ ದೇವತೆಯೇ ಅವರ ತುದಿ ನಾಲಗೆಯ ಮೇಲೆ ಪ್ರತ್ಯಕ್ಷವಾಗಿ ಅವರಿಂದ ಈ ಹಾಡನ್ನು ಹಾಡಿಸುತ್ತ ಭಕ್ತ ಜನರಿಗೆ ಭಕ್ತಿರಸದ ಪಾನಮಾಡಿಸುತ್ತಿರುವದೋ ಎಂಬಂತೆ ಭಾಸವಾಗುವದು, ಸಂತ ಮಹಾರಾಜಕೀ ಜೈ! ಲಕ್ಷ್ಮೀಕಾಂತ ಮಹಾರಾಜಕೀ ಜೈ ಎಂಬ ಪ್ರಚಂಡ ಜಯಜಯಕಾರಗಳು ಎದ್ದು ವಾಯುಮಂಡಲವನ್ನು ಸೇರಿ, ಸಾವಧಾನವಾಗಿ ಅನಂತ ಆಕಾಶದಲ್ಲಿ ಲೀನವಾಗಿ ಹೋಗುವವು

ಆದ ಕಾರಣ, ಭಕ್ತ ಶಿಖಾಮಣಿ ಸಂತ ಮಹಾರಾಜರಿಗೆ ಎಲ್ಲಿಗೆ ಹೋಗಲಿಕ್ಕೂ ಏನು ಮಾಡಲಿಕ್ಕೂ ಯಾರ ತಡೆಯೂ ಇರುತ್ತಿರಲಿಲ್ಲ ಎಲ್ಲರಿಗೆ ಅವರ ಮೇಲೆ ಇಲ್ಲದ ಅಭಿಮಾನ! ಅವರು ತಮ್ಮವರೆಂಬ ವಾತ್ಸಲ್ಯ! ಸಂತ ಮಹಾರಾಜರ ಅಚ್ಚುಮೆಚ್ಚಿನ ಹಾಡು, ಕನ್ನಡ ಭಾಷೆಯದ್ದಾಗಿರುವದೆಂದು ಕೆಲವರು, ಸಂತ ಮಂಡಳಿಯಲ್ಲಿ ಸ್ತ್ರೀಯರಿಗೂ ಸ್ಥಾನ ಕೊಟ್ಟು ಅವರನ್ನು ಮುಂದಕ್ಕೆ ತಂದವರೆಂದು ಕೆಲವರು, ತುಕಾರಾಮ, ನಾಮದೇವ, ಪುರಂದರ, ಕನಕರಂತೆ, ಕೀರ್ತಿಯುತರಾಗಿರುವರೆಂದು ಕೆಲವರು, ಹೀಗೆ ಜನರು ತಮ್ಮ ತಮ್ಮ ಅಭಿರುಚಿಗೆ ತಕ್ಕಂತೆ ಒಂದೊಂದು ಗುಣವನ್ನು ಅವರಲ್ಲಿ ಕಲ್ಪಿಸಿಕೊಂಡು ಅವರನ್ನು ತಮ್ಮ ಆರಾಧ್ಯ ದೇವತೆಯಂತೆ ಮಾಡಿಟ್ಟುಕೊಂಡಿದ್ದರು

ಊರಿಗೆ ವರ್ಷಕ್ಕೊಮ್ಮೆ ಬರುವ ಮಹೋತ್ಸವವಾದರೂ ನಾಗೇಶ ರಾಯರಿಗೆ ಮಾತ್ರ ಈ ಸಪ್ತಾಹ ಕಾರ್ಯಕ್ರಮದಿಂದ ಆನಂದ ಉತ್ಸಾಹ ಸುಖ ಸ್ವಲ್ಪವಾದರೂ ಇರುತ್ತಿರಲಿಲ್ಲ ದೇವಸ್ಥಾನದ ಸಮೀಪದಲ್ಲಿಯೇ ಅವರ ಮನೆ ಸಪ್ತಾಹದ ಅಷ್ಟು ದಿನಗಳಲ್ಲಿ ಅವರಿಗೆ ನಿದ್ದೆಯೆಂಬುದಿಲ್ಲ ಬೆಳಗಾದಂದಿನಿಂದ ರಾತ್ರಿ ೧೧-೧೨ ಗಂಟೆ ವರೆಗೆ ದಿಕ್ಕಿಲ್ಲದ ಮಕ್ಕಳಿಗೆ ಸಪ್ತಾಹ ಸ್ಥಾನವೇ ದಿಕ್ಕು ಅವರು ಬೀದಿಯ ಆ ಕೊನೆಯಿಂದ ಈ ಕೊನೆಗೆ ಈ ಕೊನೆಯಿಂದ ಆ ಕೊನೆಗೆ ಜಯಜಯಕಾರವನ್ನು ಹಾಕುತ್ತ ಅಡ್ಡಾಡುತ್ತಲೂ, ಓಡಾಡುತ್ತಲೂ ಇರುವರು ಆ ಮಕ್ಕಳನ್ನು ಆ ಜಯಜಯಕಾರಗಳಿಗೆ ಅರ್ಥವಿಲ್ಲೆಂದು ತಡೆಯುವವರಿಲ್ಲ ಪ್ರೋತ್ಸಾಹಿಸುವವರೇ ಹೆಚ್ಚು ಪ್ರತಿ ವರ್ಷ ಸಪ್ತಾಹ ಆರಂಭವಾದೊಡನೆ 'ಅಯ್ಯೋ, ಅದನ್ನು ಕೊನೆಗಾಣಿಸುವದು ಹೇಗೆ?' ಎಂಬ ಆಲೋಚನೆಯಲ್ಲಿ ನಾಗೇಶ ರಾಯರು ಮುಳುಗಿ ಹೋಗುತ್ತಿದ್ದರು ಅವರಿಗೆ ಭಗವನ್ನಾಮ ಸಂಕೀರ್ತನದಲ್ಲಿ ವಿಶ್ವಾಸವಿದ್ದಿರಲಿಲ್ಲವೆಂದಲ್ಲ ದಿನಮಾನದಲ್ಲಿ ಅವರೂ ಕೆಲವು ಕಾಲದ ವರೆಗೆ ವಿಚಾರಪರರಾಗಿ ಧ್ಯಾನಮಗ್ನರಾಗಿದ್ದಾಗ 'ರಾಮ ರಾಮ' ಎಂದು ಮೆಲ್ಲಮೆಲ್ಲಗೆ ಬೇರೆಯವರಿಗೆ ಬಾಧೆಯಾಗದಂತೆ ನಾಮ ಸಂಕೀರ್ತನ ಮಾಡುತ್ತಿದ್ದುದನ್ನು ಎಲ್ಲರೂ ಬಲ್ಲವರಾಗಿದ್ದರು ಪರಂತು ಭಜನ ಸಪ್ತಾಹಗಳ ಆ ಗಲಾಟೆ ಗದ್ದಲಗಳು ಮಾತ್ರ ಅವರಿಗೆ ಸ್ವಲ್ಪವೂ ಸೇರುತ್ತಿರಲಿಲ್ಲ ಅಲ್ಲಿ ನೆರೆದು ಬರುವ ಆ ಸಂತ ಮಂಡಳಿ, ಆ ಜನಸ್ತೋಮ, ಅವರ ಹಾರಾಟ ನೆಗೆದಾಟ, ಮಾತುಕತೆ, ಹಾವಭಾವ, ರೀತಿನೀತಿ ಪ್ರತಿಯೊಂದರಲ್ಲಿಯೂ ಅವರಿಗೆ ನಂಬಿಗೆ ಇದ್ದಿರಲಿಲ್ಲ. ಎಲ್ಲವನ್ನೂ ಸಂದೇಹ ದೃಷ್ಟಿಯಿಂದ ನೋಡುತ್ತಿದ್ದರು

ಅಂದು ರಾತ್ರಿ ೧೨ ಗಂಟೆ ಕಳೆದು ಹೋಗಿದ್ದಿತು ಮಕ್ಕಳ ಕೂಗು ಮೆಲ್ಲಮೆಲ್ಲಗೆ ಕಡಿಮೆಯಾಗುತ್ತ ಬಂದು ಪೂರ್ಣ ನಿಂತು ಹೋಗಿತ್ತು ಆದರೂ ನಾಗೇಶ ರಾಯರಿಗೆ ನಿದ್ದೆ ಬಿದ್ದಿರಲಿಲ್ಲ. ಹಾಸಿಗೆಯ ಮೇಲೆ ಸುಮ್ಮನೆ ಹೊರಳಾಡುತ್ತಿದ್ದರು. ಆಗ ಅವರಿಗೆ ಏನು ಆಲೋಚನೆಯಾಯಿತೋ 'ದಾಸನ ಮಾಡಿಕೋ ಎನ್ನ ದಾಸಿಯ ಮಾಡಿಕೋ ಎನ್ನ ' ಎಂಬೆರಡು ಅತಿ ಕ್ಷೀಣ ಸ್ವರಗಳು ಸ್ಪಷ್ಟವಾಗಿ ಅವರ ಕಿವಿಗೆ ಬಿದ್ದುದೇ, ತಟ್ಟನೆ ಹಾಸಿಗೆಯಿಂದೆದ್ದು ಪಂಚೆ ಉಟ್ಟು ಅಂಗಿ ತೊಟ್ಟುಕೊಂಡರು ನೆಟ್ಟಗೆ ದೇವಸ್ಥಾನದ ಕಡೆಗೆ ನಡೆದರು ಅಲ್ಲಿ ಯಾರೂ ಇರಲಿಲ್ಲ ಎಲ್ಲರೂ ತಮ್ಮ ತಮ್ಮ ಮನೆಗೆ ತೆರಳಿದ್ದರು. ಪರವೂರುಗಳಿಂದ ಬಂದವರು ಚಂದ್ರಶಾಲೆಯಲ್ಲಿ ಗೊರಕೆ ಹೊಡೆಯುತ್ತಿದ್ದರು ಕೇವಲ ಇಬ್ಬರು ನಮ್ಮ ಸಂತ ಮಹಾರಾಜರು ಮತ್ತು ಮಹಾಲಕ್ಷ್ಮೀ ಅಮ್ಮನವರು ರಾಜಾರಾಣಿಯರಂತೆ ಎಡಬಲವಾಗಿ ಮೈಗೆ ಮೈ ಒತ್ತಿಕೊಂಡು ಕೂತು, ಒಂದೊಂದೇ ಕೈಗಳಿಂದ ತಾಳ ಹಾಕುತ್ತ .'ದಾಸನ ಮಾಡಿಕೋ ಎನ್ನ ದಾಸಿಯ ಮಾಡಿಕೋ ಎನ್ನ ..' ಹಾಡುತ್ತ .ಮುಂದೆ ಹೇಳಬಾರದು ಅದು ಮಹಾ ಪಾಪ! ನಾಗೇಶ ರಾಯರು ಈ ದೃಶ್ಯವನ್ನು ನೋಡಿದವರೇ, ರಾಮರಾಮ ಎಂದುಕೊಂಡು ಕಣ್ಣು ಮುಚ್ಚಿದರು ಅಲ್ಲಿಂದೆದ್ದು ಚಂದ್ರಶಾಲೆಗೆ ಓಡಿಬಂದರು. ಕೆಲವರನ್ನು ಎಬ್ಬಿಸಿ —'ನೋಡಿ ನೋಡಿ ನಿಮ್ಮ ಕರ್ಮಾಂತರದಿಂದ ಲಕ್ಷ್ಮೀಕಾಂತರ ಪ್ರತ್ಯಕ್ಷ ದರುಶನವಾಗಿದೆ ಬೇಗಬನ್ನಿ' ಎಂದು ಕೈಹಿಡಿದು ಎಳೆಯುತ್ತ ಅವರಿಗೂ ಆ ದೃಶ್ಯ ತೋರಿಸಿದರು. ಅವರು ನಿದ್ದೆ ಕಣ್ಣಿನಿಂದ 'ಜಯ ಸಂತ ಮಹಾರಾಜಕೀ ಜಯ! ಜಯ ಲಕ್ಷ್ಮೀಕಾಂತ ಮಹಾರಾಜಕೀ ಜಯ!' ಎಂದು ಅರಚಿದರು ಆಗ ಸಂತ ಮಹಾರಾಜರು ಮತ್ತು ಮಹಾಲಕ್ಷ್ಮಿಯಮ್ಮನವರು ಪಕ್ಕನೆ ಎಚ್ಚರಗೊಂಡವರಂತೆ ತಟ್ಟನೆ ಎದ್ದು ಒಂದೊಂದು ಮಗ್ಗುಲಿಗೆ ಸರಿದು ನಿಂದರು ಆಡಲಿಕ್ಕೆ, ಹಾಡಲಿಕ್ಕೆ ನಾಲಿಗೆಯೇ ಹೊರಳಲಿಲ್ಲ

ಮುಂದೆ ಆ ಸಂತ ಮಹಾರಾಜರು, ಮತ್ತು ಆ ಮಹಾಲಕ್ಷ್ಮಿ ಅಮ್ಮನವರು ಎಲ್ಲಿಗೆ ಹೋದರು, ಏನು ಮಾಡಿದರು ಎಂಬ ಆ ಸುದ್ದಿ ನಮಗೆ ಬೇಡ. ಅಂದಿನಿಂದ ಮಹಾಲಕ್ಷ್ಮಿ ದೇವಾಲಯದಲ್ಲಿ ವರ್ಷಂಪ್ರತಿ ಸಪ್ತಾಹವಾಗುವದು ಮಾತ್ರ ಪೂರ್ಣ ನಿಂತು ಹೋಯಿತು.

ಬಾಲವಾಙ್ಮಯದ ಆವಶ್ಯಕತೆ ಮತ್ತು ನಿರ್ಮಾಣದ ವಿಷಯಕವಾದ ಪ್ರಬಂಧ

ಬಾಲವಾಙ್ಮಯ

ಬೆಲೆ ಮೂರಾಣೆ

ಉಪಾಧ್ಯಾಯರ ಪ್ರಕಟನ ಸಮಿತಿ, ಉಡುಪಿ

ಚುನಾವಣೆಯಲ್ಲಿ ಕಿರುಮಂತ್ರ

(ಮಂತ್ರವಾದಿಯಿಂದ)

ಚುನಾವಣೆಯ ಗದ್ದಲವು ಪ್ರಾರಂಭವಾದಂದಿನಿಂದ ಎಲ್ಲರ ಬಾಯಿಯಲ್ಲಿಯೂ 'ಕೊಂಗ್ರೆಸು!' ಈ ಕೊಂಗ್ರೆಸು ಮನಸಿನೊಳಗೆ ಹೋಗಿದೆಯೋ ಇಲ್ಲವೋ ಎಂಬ ಪ್ರಶ್ನೆಗೆ ಬಲ್ಕೆ ಹೇಳಲು ನನಗೆ ಗೊತ್ತಿಲ್ಲ. ಇಷ್ಟನ್ನು ಹೇಳಬಹುದು. ಈಗ ಬಾಯಿಗೆ ಬಂದಿದೆ. ಬಾಯಿಗೂ ಮನಸಿಗೂ ಬಹಳ ದೂರವಿಲ್ಲ. ಆದ್ದರಿಂದ ಕೆಲವರಲ್ಲಾದರೂ ಅಲ್ಲಿಂದಲೇ ಸೀದಾ ಮನಸಿನೊಳಗೆ ಹೋಗಲೂ ಬಹುದು ಅದು ಹೇಗೂ ಇರಲಿ—ಈ ಚುನಾವಣೆಯ ದೆಸೆಯಿಂದ ಕೊಂಗ್ರೆಸ್ ಪ್ರಚಾರವು ಬಹಳ ಜೋರಿನಿಂದ ನಡೆದಿದೆ, ನಡೆಯುವಾಗ ಬೇರೆಬೇರೆ ಹಾದಿಗಳಿಂದಲೇ ನಡೆದಿದೆ. ಕೊಂಗ್ರೆಸಿನ ಕಡೆಯಿಂದ ನಿಂತವರು, ಮತ್ತು ಅವರ ಅನುಯಾಯಿಗಳು ಅವರೊಂದು ರೀತಿಯಿಂದ ಸಾರುತ್ತಿದ್ದಾರೆ. ಅವರ ವಿರೋಧಿಗಳು ಮತ್ತೊಂದು ರೀತಿಯಿಂದ ಕೊಂಗ್ರೆಸನ್ನು ಬಣ್ಣಿಸುತ್ತಾರೆ ಇವರಲ್ಲದೆ ಯಾವ ಪಕ್ಷಕ್ಕೂ ಸೇರದ ಒಂದು ಬಗೆಯವರಿದ್ದಾರೆ. ಅವರಿಗೆ ಕೌನ್ಸಿಲು ಎಸೆಂಬ್ಲಿ ಮೆಂಬರಿಕೆ ಬೇಡ—ಮೆಂಬರರಾಗುವವರೂ ಬೇಡ. ಓಟರರೂ ಬೇಡ—ಓಟನ್ನು ಕೊಡುವದಾಗಲೀ ತೆಗೆದುಕೊಳ್ಳುವದಾಗಲೀ—ಅದೂ ಬೇಡ! ಮತ್ತೇನು ಬೇಕು ಗೊತ್ತುಂಟೆ? ಯಾರಿಗೂ ಯಾವುದಕ್ಕೂ ಬೇಡವಾದ ಕೊಂಗ್ರೆಸ್ ನಿಂದೆಯೊಂದು ಇವರಿಗೆ ಬೇಕು ಲೋಕದಲ್ಲಿ ಕೆಲಸಕ್ಕೆ ಬೀಳದ ವಿಷಯವಾವುದೂ ಇಲ್ಲವೆನ್ನುವದು ಇದಕ್ಕಾಗಿ! ಇಂಥವರು ನಮಗೆ ಬೇಡವೆನ್ನುವಿರಾ? ಅದೂ ಕೂಡದು. ಈ ವರ್ಗದವರು ಇಲ್ಲದೆ ಹೋದರೆ ಲೋಕದ ವೈವಿಧ್ಯದಲ್ಲಿ ಒಂದು ಕೊರತೆಯು ಕಂಡುಬಂದೀತು. ಆದ್ದರಿಂದ ಅವರು ಇರಲಿ! ಲೋಕವು ಅದರ ಇಚ್ಛೆಯಂತೆ ನಡೆಯುತ್ತಾ ಇರಲಿ—ಈ ಮಧ್ಯ ಲೋಕದಲ್ಲಿರುವ ನಾವು ಹೇಗೆ ನಡೆದುಕೊಳ್ಳಬೇಕೆಂಬುದನ್ನು ಯೋಚಿಸೋಣ! ಸದ್ಯಕ್ಕೆ ನಮ್ಮ ಕೆಲಸವಿಷ್ಟೆ!

ಎಸೆಂಬ್ಲಿ ಕೌನ್ಸಿಲ, ಚುನಾವಣೆಯು ತೀರಾ ಹತ್ತಿರಕ್ಕೆ ಬಂದು ಬಿಟ್ಟಿತು. ಇಷ್ಟರೊಳಗೆ ನಮ್ಮ ತೀರಾ ಹತ್ತಿರಕ್ಕೆ ಹತ್ತಿಪ್ಪತ್ತು ಸಲ ಬಂದು ಹೋದ ಉಮೇದುವಾರರಿರಬಹುದು. ನಾವು ಇವರಲ್ಲಿ ಯಾರಿಗೆ ಓಟು ಕೊಟ್ಟರಾದೀತೆಂಬುದನ್ನೆಲ್ಲವೇ ಯೋಚಿಸಬೇಕಾಗಿರುವುದು. ನಮಗೆ ಯಾರು ಸಹಾಯ ಮಾಡುವರೋ ಅವರಿಗೆ ಕೊಟ್ಟು ಬಿಡೋಣ ಎನ್ನುವದೆ? ಒಬ್ಬ ಉಮೇದುವಾರನು 'ನಿಮ್ಮೂರಿಗೆ ಸಂಕ ಕಟ್ಟಿಸುತ್ತೇನೆ' ಎಂದು ಹೇಳಿ ಹೋದರೆ ಅವನ ಇದಿರಾಳಿ ಮರುದಿನವೇ ಬಂದು ಹೇಳುತ್ತಾನೆ—'ನಾನು ಊರಲ್ಲೆಲ್ಲಾ ರಸ್ತೆ ಮಾಡಿ ಹಾಕುತ್ತೇನೆ ಎಂದು. ಒಬ್ಬನ ಕಾಗದವು 'ದಯವಿಟ್ಟು ಓಟುಕೊಡಿ' ಎಂದು ಬಂದಿದ್ದರೆ ಇನ್ನೊಬ್ಬನು 'ತಮ್ಮ ವಿಧೇಯ ಸೇವಕ'ನಾಗಿ ಬರೆಯುತ್ತಾನೆ. ಅಂತೂ ನಮಗೆ ಉಪಕಾರವನ್ನು ಪಂಥಾತೆ ಒಬ್ಬನಿಂದೊಬ್ಬನು ಹೆಚ್ಚಾಗಿ ಮಾಡಲು ಇಬ್ಬರೂ ತಯಾರು! ಮನೆ ಬಾಗಿಲಿಗೆ ಹೆಚ್ಚು ಸಲ ಬಂದವನ್ಯಾರೆಂದು ನೋಡಿ. ಕೊಟ್ಟು ಬಿಡೋಣವೆಂದರೆ—ಅ ಲೆಕ್ಕವೇ ಮರೆತು ಹೋಗುವಷ್ಟು ಸಲ ಎರಡೂ ಕಡೆಯವರು ಬಂದು ಹೋಗಿ ಆಯಿತು ಅಪರಿಚಿತರನ್ನು ಕಂಡರೆ ನಮ್ಮ ಮನೆಯ ಬಗುಳುವ ಅಭ್ಯಾಸವಿರುವ ನಾಯಿಗಳು ಅವರನ್ನು ಕಂಡು ಬಾಲವಾಡಿಸುವ ಕ್ರಮವನ್ನು ಕಲಿತಾಯಿತು! ನಾವು ಇವರಲ್ಲಿ ಯಾರಿಗೆ ಓಟುಕೊಟ್ಟರಾದೀತೆಂಬ ಒಂದು ಪ್ರಶ್ನೆಗೆ ಅವುಗಳಲ್ಲೆಲ್ಲಾ ಹುಡುಕಿದರೆ ಉತ್ತರ ಸಿಗುವಂತಿಲ್ಲ. ಆದ್ದರಿಂದ ಓಟಿಗಾಗಿ ಈ ವರೆಗೆ ನಮಗಾದ ಮಾನ, ಮರ್ಯಾದೆ, ಅಥವಾ ಅವಮರ್ಯಾದೆ ಇವುಗಳನ್ನೆಲ್ಲಾ ಒಟ್ಟುಮಾಡಿ ಒಂದು ಮೂಲೆ ಸೇರಿಸಿ ಬಿಡೋಣ ಇಷ್ಟು ತಲೆ ಸಿಡಿತಕ್ಕೆ ಮೂಲ ಕಾರಣವಾದ ಆ ಓಟ ಯಾಕಾಗಿ ನಮ್ಮಲ್ಲಿಗೆ ಬಂತು. ಎಂಬುದನ್ನು ವಿಚಾರಿಸೋಣ. ಕೆಲವು ಸ್ವತಂತ್ರ ರಾಷ್ಟ್ರಗಳಲ್ಲಿ ಪ್ರಾಯ ಬಂದವರಿಗೆಲ್ಲಾ ಓಟಿನ ಹಕ್ಕಿರುವದಂತೆ. ಅವರು ಆ ಹಕ್ಕು ತಮ್ಮ ಸ್ವಾತಂತ್ರ್ಯದ ತಿರುಳು ಎಂದು ತಿಳಿದುಕೊಂಡಿರುವರಂತೆ. ಅವರಿಗೆ ತಿರುಳಾಗಿ ಕಂಡು ಬಂದುದೇ ನಮಗೆ ಕುತ್ತಿಗೆಯ ಉರುಳಾಗಿ ಹೆದರಿಕೆಯನ್ನುಂಟುಮಾಡುತ್ತಿರುವದಲ್ಲಾ ಅದಕ್ಕೆ ಕಾರಣವೇನು ಎಂಬುದನ್ನೂ ಒಂದಿಷ್ಟು ಆಲೋಚಿಸೋಣ. ಹಾಗೆ ಆಲೋಚಿಸುವ ಮೊದಲು ಒಂದರ ಘಳಿಗೆ ಕಣ್ಣು ಮುಚ್ಚಿ ಕುಳಿತುಕೊಳ್ಳಬೇಕು ಕಣ್ಣು ಮುಚ್ಚುವದೆಂದರೆ ಈ ಚುನಾವಣೆಯ ಕುರಿತು ಬೇರೆಬೇರೆ ಪಕ್ಷಗಳಿಂದ ನಡೆಯುತ್ತಿರುವ ಗೊಂದಲವು ಕಾಣದ ಹಾಗೆ ಮಾತ್ರ! ಓಟರರನ್ನು ಕರೆಯಲಿಕ್ಕಾಗಿ ಮಾತ್ರ ಉಂಟಾದ ಕೆಲವು ಪಾರ್ಟಿಗಳಿದ್ದಾವಲ್ಲ—ಅವುಗಳನ್ನೆಲ್ಲಾ ನಮ್ಮ ಸ್ವತಂತ್ರ ಆಲೋಚನೆಗೆ ಅನುಕೂಲವಾಗುವಂತೆ ಒಂದೇ ಪಕ್ಷವೆಂದು ಇಟ್ಟುಕೊಳ್ಳೋಣ, 'ನನಗೆ ನಿಮ್ಮಿಂದ ಓಟು ಪಡೆಯಲು ಹಕ್ಕು ಇದೆ' ಎಂದು ಮುಂದ ಬಂದಿರುವ ಕೊಂಗ್ರೆಸು ಉಂಟಲ್ಲಾ-ಅವರ ಹಕ್ಕಿನ ತನಿಖೆಯನ್ನೂ ಕಡೆಗೆ ಮಾಡೋಣ. "ಕೊಂಗ್ರೆಸು ಗೀಂಗ್ರೆಸು ಎಂದು ಹುಚ್ಚುಗಟ್ಟಬೇಡಿ; ನ್ಯಾಯವೆಲ್ಲಿದೆ ನೋಡಿ" ಎಂದು ಕೆಲವರು ಹೇಳುವದುಂಟಲ್ಲಾ—ಹಾಗೆಯೇ ಮಾಡಿಬಿಡಿ. ನ್ಯಾಯವು ಎಲ್ಲಿ ಅವಿತಿದೆ. ಎಂಬುವದನ್ನೇ ಈಗ ಹುಡುಕಿ ತೆಗೆಯೋಣ. ಈ ಮಾತಿಗೆ ಯಾವದಾದರೂ ಪಾರ್ಟಿಯ-ಅಥವಾ ಯಾವನಾದರೂ ಮಹಾನುಭಾವನ ಆಕ್ಷೇಪವಿರಲಾರದಷ್ಟೆ!

ಸರಿ! ಹಾಗೆಯೇ ಆಕ್ಷೇಪವಿಲ್ಲದ ಇತರ ಅಂಶಗಳೇನಾದರೂ ಇದ್ದರೆ ಅವುಗಳನ್ನು ಮೊದಲು ಕಂಡುಹಿಡಿದು ಮಂಜೂರಾತಿಯ ಮುದ್ರೆಯನ್ನೊತ್ತುವ ಕೆಲಸವನ್ನೊಂದು ತೀರಿಸಿಬಿಡೋಣ. 'ಕೊಂಗ್ರೆಸು ನಿಜವಾಗಿಯೂ ಶ್ರೇಷ್ಠ ಸಂಸ್ಥೆ, ಅದನ್ನು ನಾವು ದೂರುವಂತಿಲ್ಲ' ಎಂದು ಎಲ್ಲಾ ಪಾರ್ಟಿಯವರೂ ಹೇಳುತ್ತಾರೆ. ನನಗೆ ತಿಳಿದ ಮಟ್ಟಿಗೆ ಆ ವಿಷಯದಲ್ಲಿ ಭಿನ್ನಾಭಿಪ್ರಾಯವಿಲ್ಲ, ಇದ್ದರೆ ಅದನ್ನು ಹೇಳುವವರು ಹೇಳಬಹುದು; ಅಥವಾ ಬೇರೆಯವರು ಹೇಳಿದುದನ್ನು ಕೇಳಿದವರಿದ್ದರೆ ಅವರು ಕೂಡಾ ಹೇಳಬಹುದು. ದಕ್ಷಿಣ ಕನ್ನಡದಲ್ಲಿ ಕೊಂಗ್ರೆಸಂದರೆ ಉತ್ತಮ ಸಂಸ್ಥೆಯೆಂಬುದನ್ನು ವರ್ಣಿಸಿ ಸಮಯ ಹಾಳುಮಾಡುವ ಅಗತ್ಯವಿಲ್ಲ. ಎಲ್ಲಾ ಪಾರ್ಟಿಯವರೂ ಎಲ್ಲಾ ಉಮೇದ್ವಾರರೂ ಅದನ್ನೊಪ್ಪುತ್ತಾರೆ. ಹಾಗಾದರೆ ಇಲ್ಲಿ ಕೊಂಗ್ರೆಸಿಗೆ ವಿರುದ್ಧ ಉಮೇದ್ವಾರಿಗಳು ಹೇಗೆ ಬಂದರು ಎಂಬ ಪ್ರಶ್ನೆ. 'ಕೊಂಗ್ರೆಸು ಶ್ರೇಷ್ಠವಾದುದು; ಆದರೆ ಇಲ್ಲಿಯ ಕೊಂಗ್ರೆಸಿನವರಿದ್ದಾರಲ್ಲಾ ಅವರೆಲ್ಲಾ ಅನ್ಯಾಯಗಾರರು. ಇಲ್ಲಿಯ ಪಾರ್ಲಿಮೆಂಟರೀ ಬೋರ್ಡು ಉಂಟಲ್ಲಾ ಅದು ತೋರಿಸಿದ ಪಕ್ಷಪಾತವನ್ನು ಲೋಕದಲ್ಲಿ ಇನ್ನಾರೂ ತೋರಿಸಿಲ್ಲ' ಇಷ್ಟು ಕೊಂಗ್ರೆಸಿನ ವಿರೋಧಿಗಳು ಹೇಳುವ ಮಾತು. ಹೀಗೆ ತೋರಿದ್ದರಿಂದಲೇ ಅವರು ಕೊಂಗ್ರೆಸನ್ನು ವಿರೋಧಿಸುವುದೋ ಎಂದು ಮಾತ್ರ ಯಾರೂ ಕೇಳಬೇಡಿ. ಅವರು ಯಾವ ಕಾರಣದಿಂದಲೇ ನಿಲ್ಲಲಿ-ಮತದಾರರ ಇದಿರಿಗೆ ಬರುವಾಗ ಹೇಳುವದು ಇಷ್ಟನ್ನೆ! ಇಷ್ಟನ್ನು ಬಿಟ್ಟು ಬೇರೆ ಕಾರಣಗಳು ಇವೆಯೋ ಹೇಗೆ? ಎಂದು ಹುಡುಕಿ ಹೋಗುವ ಅಗತ್ಯವು ನಮಗಿಲ್ಲ. ಒಳಗಿಂದೊಳಗೆ ಇತರ ಕಾರಣಗಳಿದ್ದರೆ, ಅವುಗಳಲ್ಲಿ ಮತದಾರರ ಮುಂದೆ ಬರುವ ಯೋಗ್ಯತೆಯಿಲ್ಲವೆಂಬುದರಿಂದಲ್ಲವೇ ಅವರದನ್ನು ಬಚ್ಚಿಡುತ್ತಿರುವುದು? ಆದ್ದರಿಂದ ಆ ವಿಷಯದಲ್ಲಿ ನಾವು ಯೋಚಿಸಿ ಕುಳಿತುಕೊಳ್ಳಬೇಕೆಂದಿಲ್ಲ-ಅಂತಹ ಕಾರಣಗಳು ಕಂಡು ಬಂದೊಡನೆ, 'ಈ ಅಲ್ಪ ಸಂಗತಿಗಳನ್ನು ಕಟ್ಟಿಕೊಂಡು ಬಡಿದಾಡುವವರು ನಮ್ಮ ಪ್ರತಿನಿಧಿಗಳಾಗಲು ಅನರ್ಹರು' ಎಂದು ಸುಲಭದಲ್ಲಿ ತೀರ್ಪು ಕೊಡಲು ಬರುತ್ತದೆ. ಈಗ ನಮ್ಮ ವಿಚಾರಣೆಗೆ ಉಳಿದಿರುವ ವಿಷಯವೆಂದರೆ ಇಲ್ಲಿಯ ಕೊಂಗ್ರೆಸ್ ಕೆಲಸಗಾರರು ಅಷ್ಟು ಅನ್ಯಾಯಗಾರರೇ? ಇಲ್ಲಿಯ ಪಾರ್ಲಿಮೆಂಟರೀ ಬೋರ್ಡಿನವರು ಇಷ್ಟು ಪಕ್ಷಪಾತಿಗಳೇ? ಎಂಬುದೆ. ಇವುಗಳ ವಿಮರ್ಶೆಯನ್ನು ನಾವು ಹೇಗೆ ಮಾಡಬೇಕು? ಅದಕ್ಕೇನೂ ಕಷ್ಟವಿಲ್ಲ. ನಾವು ಮೊದಲೇ ನಿರ್ಧರಿಸಿದ್ದೇವೆ. 'ನ್ಯಾಯವಿದ್ದ ಕಡೆ ಓಟನ್ನು ಕೊಡಬೇಕು' ಎಂದು. ಇದನ್ನು ಆಕ್ಷೇಪಿಸುವವರು ಇಡೀ ಲೋಕದಲ್ಲಿಯೇ ಇಲ್ಲ, ಆ ಮೇಲೆ ಆ ನ್ಯಾಯವೆಲ್ಲಿದೆ ಎಂಬುವದನ್ನು ಹುಡುಕುವ ಕೆಲಸ ಸಿಕ್ಕಿತು. 'ಅದು ಕೊಂಗ್ರೆಸಿನಲ್ಲಿದೆ' ಎಂಬುದಕ್ಕೂ ಎಲ್ಲರ ಸಮ್ಮತಿಯೂ ಇದೆ. 'ಆದರೆ ಆ ಕೊಂಗ್ರೆಸು ಮಾತ್ರ ಇಲ್ಲಿಲ್ಲ—ಎಂದರೆ ಇಲ್ಲಿಯ ಕೊಂಗ್ರೆಸಿನವರು ಯಥಾರ್ಥ ಕೊಂಗ್ರೆಸಿನವರಲ್ಲ-ಪಕ್ಷಪಾತಿಗಳು!" ಸರಿ ಈಗ ನಾವು ಬಿಡಿಸಲಿಕ್ಕಿರುವ 'ಸಿಕ್ಕು' ಎಂದರೆ ಇದೊಂದೆ! 'ನ್ಯಾಯಶಾಲಿ ಕೊಂಗ್ರೆಸಿನ ನಿಯಮಗಳನ್ನು ಉಲ್ಲಂಘಿಸಿ, ಅದರ ಪ್ರತಿಷ್ಠೆಗೆ ಕುಂದುಂಟಾಗುವ ರೀತಿಯಲ್ಲಿ ವರ್ತಿಸಿ-ಮತ್ತೂ ಕೊಂಗ್ರೆಸಿನವರಾಗಿರಲು ಯಾರಿಗೂ ಸಾಧ್ಯವಿಲ್ಲ; ಅಂಥವರು ಕೊಂಗ್ರೆಸಲ್ಲ-ಅಂಥವರನ್ನು ನಾವು ವಿರೋಧಿಸಿದರೆ ಅದು ಕೊಂಗ್ರೆಸನ್ನು ವಿರೋಧಿಸಿದಂತಾಗುವದಿಲ್ಲ' ಎಂದೆಲ್ಲಾ ಇವರ ವಾದ! ಕೊಂಗ್ರೆಸಿನ ಕೆಲಸಗಳಲ್ಲಿ ನ್ಯಾಯವಿದೆ ಎಂದು ಇವರು ಒಪ್ಪಿಕೊಂಡಂತೆಯೇ ಇವರ ಈ ವಾದದಲ್ಲಿ ನ್ಯಾಯವಿದೆ ಎಂಬುದನ್ನು ನಾವೂ ಒಪ್ಪಿಕೊಳ್ಳಬೇಕು. ನ್ಯಾಯವು ಕೊಂಗ್ರೆಸಿನವರಿಗೂ-ಕೊಂಗ್ರೆಸ್‌ವೈರಿಗಳಿಗೂ ಒಂದೆ. ಇಲ್ಲಿಯ ವರೆಗೂ ಎಲ್ಲರೂ ಒಂದೇ ಪಕ್ಷದವರು-ಒಂದೇ ಹಾದಿಯನ್ನನುಸರಿಸುವವರು ಎಂದೇ ಕಂಡು ಬಂತು. ಇದನ್ನೊಂದು ಘಟ್ಟಮಾಡಿಕೊಳ್ಳೋಣ! ನಾವೀಗ ಹೊಂದಿದ ತೀರ್ಮಾನವನ್ನು ಸರೀ ನೆನಪಿನಲ್ಲಿಟ್ಟುಕೊಂಡು ಮುಂದೆ ಯೋಚಿಸೋಣ! ಕೊಂಗ್ರೆಸ್ ವಿರೋಧಿಗಳ ಆತುರದ ಪ್ರಶ್ನೆಯಾದ ಕೊಂಗ್ರೆಸ್ ಧರ್ಮವನ್ನೇ ರಕ್ಷಿಸುವ ಧ್ಯೇಯವೊಂದೇ ನಮ್ಮ ಮುಂದಿರಲಿ! ಆ ಧರ್ಮಕ್ಕೆ ವಿರೋಧವಾಗಿ ಕೊಂಗ್ರೆಸಿನವರು ವರ್ತಿಸಿದರೆಂದಲ್ಲವೆ ಇವರೆಲ್ಲಾ ದಂಗೆಯೆಬ್ಬಿಸಿರುವದು? ಕೊಂಗ್ರೆಸ್ ಪವಿತ್ರ ಭದ್ರವಾಗಿರಬೇಕೆಂದು ಭಾರೀ ಆಸೆ ಇವರಲ್ಲಿಯೂ ಉಂಟಲ್ಲ? ಸಂತೋಷ! ಇನ್ನುಳಿಯಿತು ಉಭಯ ಪಕ್ಷಗಳ ಕಾರ್ಯಕಲಾಪಗಳ ವಿಮರ್ಶೆಯೊಂದು. ಅದನ್ನು ನಿಷ್ಪಕ್ಷಪಾತ ಬುದ್ಧಿಯಿಂದ ಮಾಡುತ್ತಾ ಹೋದರೆ ಎಲ್ಲವೂ ಸ್ಪಷ್ಟವಾಗಲೇ ಬೇಕು. ಕೊಂಗ್ರೆಸೆಂದರೇನು? ಅದರ ಕಾರ್ಯಕ್ರಮಗಳಾವುವು? ಅವುಗಳನ್ನು ಮುಂದೊತ್ತುವ ರೀತಿ ಹೇಗೆ? ಪಾರ್ಲಿಮೆಂಟರೀ ಬೋರ್ಡಿನವರಾಗಲೀ ಇಲ್ಲಿಯ ಕೊಂಗ್ರೆಸ್ ಕಾರ್ಯಕರ್ತರಾಗಲೀ ಕೊಂಗ್ರೆಸ್ ಶಿಸ್ತಿಗೆ ವಿರುದ್ಧವಾಗಿ ವರ್ತಿಸಿರುವರೆ? ಅಥವಾ ಇದು ತಮ್ಮ ಪಕ್ಷವು ತೀರಾ ಅನ್ಯಾಯದ್ದೆಂದು ಲೋಕವೇ ತಿಳಿದಿರುವಾಗ, ನ್ಯಾಯದ ಸೋಗನ್ನು ಹಾಕಿಕೊಂಡಾದರೂ ಜಯ ಸಂಪಾದನೆಯಾಗುತ್ತದೋ ನೋಡೋಣವೆಂದು ಕೆಲವರು ಕೈಕೊಂಡಿರುವ ಹಂಚಿಕೆಯಿರಬಹುದೆ? ಎಂಬುದನ್ನೆಲ್ಲಾ ವಿಮರ್ಶಿಸುವ ಅಗತ್ಯವೊಂದು—ಇದೊಂದೆ—ಈಗ ಮತದಾರರಿಗೆ ಬಂದಿದೆ. ಅವುಗಳನ್ನೆಲ್ಲಾ ಬರುವ ಸಂಚಿಕೆಯಲ್ಲಿ ವಿಮರ್ಶಿಸುತ್ತೇನೆ.

1937

ನೇ

ಇಸವಿಯ

ಡೈರಿಗಳು

ಮಾರಾಟಕ್ಕಿವೆ.

ಬೇಕಾದ ನಮೂನೆಯವು

ಬೇಕಾದ ಬೆಲೆಯವು

ಬಂದು ವಿಚಾರಿಸಿರಿ!

ನವಯುಗ ಆಫೀಸು

ಉಡುಪಿ.

ಕಸ್ತೂರಿ ಮಿಶ್ರಣ ದಶಮೂಲವೆಂಬ

ಸೂತಿಕಾ ರಸಾಯನ

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

I. **ಶೋಧನ ಗುಣ:**—ಶೋಧನದಿಂದ ಪ್ರಸವಾನಂತರ ಗರ್ಭಕೋಶದ ಸರ್ವತರದ ನಂಜನ್ನು ಹೊರಗೆ ಹಾಕಿ ಪ್ರಸೂತವಾದ ಗರ್ಭಕೋಶವನ್ನು ಮೂರು ದಿವಸಗಳೊಳಗೆ ಸಂಕುಚಿತವಾಗಿ ಮಾಡುವದು

II. **ರಸಾಯನ ಗುಣ:**—ರಸಾಯನದಿಂದ ಸೂತಿಕಾ ಸ್ತ್ರೀಯು ಗರ್ಭದ ಬೆಳವಣಿಗೆಬಗ್ಗೆಯೂ, ಪ್ರಸವವೇದನಾ ಒಗ್ಗೆಯೂ ತಾನು ಕಳಕೊಂಡ ಮೂಲ ಶಕ್ತಿಯನ್ನು ಇಮ್ಮಡಿಯಾಗಿ ತಿರುಗಿ ಹೊಂದುವಳು.

III. **ಸುಖಸೇವನ:**—ಸುಖಸೇವನದಿಂದ ಮಧುರ ಮನೋಹರವಾದ ಈ ರಸಾಯನವು ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶ ಮೊದ ಲಾದುವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವಾ ನಂತರದ ತೀಕ್ಷ್ಣವೇದನೆ ಯನ್ನು ಶೀಘ್ರದಿಂದ ನಿಲ್ಲಿಸುವದು.

ಒಬ್ಬಳು ಬಾಣಂತಿಗೆ ಎರಡು ಬಾಟ್ಲಿ ಬೇಕಾಗುವುದು ಕ್ರಯ ಬಾಟ್ಲಿ 1ಕ್ಕೆ ರೂ. 2-0-0.

ಎಸ್. ವಿ. ಶಾಸ್ತ್ರಿ, ಆಯುರ್ವೇದ ಭೂಷಣ
ಮಂಗಳೂರು, ದ. ಕ.

ಕ್ರೌನ್ ರಬ್ಬರ್ ಸ್ಟಾಂಪ್ ಕಂಪೆನಿ

ಸ್ಥಾಪನೆ. 1926



18 ಬಲ್ಮಠ ರಸ್ತೆ, ಮಂಗಳೂರು.

ಯಾವತ್ತೂ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಆಗತ್ಯವಿರುವ ಎಲ್ಲಾ ತರದ ರಬ್ಬರ್ ಮೊಹರುಗಳೂ ಸೈನ್ ಬೋರ್ಡು, ಪೇದೆಗಳ ಬೇಜು, ಮೊನೊಗ್ರಾಮ್ ಸೀಲು, ಇತ್ಯಾದಿಗಳನ್ನು ಪ್ರತಿಯೊಬ್ಬರ ಅಭಿರುಚಿಗೊಪ್ಪು ವಂತೆ ಸುಲಭ ದರಗಳಲ್ಲಿ ಮಾಡಿಕೊಡೋಣಾಗುವುದು.

ಹೆಚ್ಚೆಟ್ಟು ಒತ್ತುವ ಸೆಟ್ಟುಗಳು ಕೂಡಾ ಸಿಗುವವು.

ಮಿಕ್ಕ ವಿಚಾರಗಳನ್ನು ನಮ್ಮ ಆಫೀಸಿಗೆ ಸ್ವತಹ ಬಂದು ಯಾ ಪತ್ರ ಮುಖೇನ ತಿಳಕೊಳ್ಳಬಹುದು.

ಮಂಗಳೂರಲ್ಲಿ ರೈಲು ಬಂಡಿಗಳ ಸಮಯ

ಗಾಡಿಗಳು	ಹೊರಡುವ ಘಂಟೆ.		ತಲಪುವ ಘಂಟೆ	
ಮಿಕ್ಸೆಡ್	ಬೆಳಿಗ್ಗೆ	5-55	ರಾತ್ರಿ	8-55
ಕೊಂಜಂಗೊಂಡ್ ಪ್ಯಾಸಂಜರ್	ಬೆಳಿಗ್ಗೆ	8 35	ಮಧ್ಯಾಹ್ನ	1-20
ಮೈಲ್	ಬೆಳಿಗ್ಗೆ	9 50	ಸಂಜೆ	4-20
ಫಾಸ್ಟ್ ಪೆಸೆಂಜರ್	ಮಧ್ಯಾಹ್ನ	12 45	ಮಧ್ಯಾಹ್ನ	2-40
ಕಾಸರಗೋಡ್ ಪ್ಯಾಸೆಂಜರ್	ಮಧ್ಯಾಹ್ನ	3-20	ಸಂಜೆ	6-15
ಶಟಲ್	ಸಂಜೆ	5-25	ಬೆಳಿಗ್ಗೆ	9-20

ಜನರಲ್ ಎಶ್ಯೂರೆನ್ಸ್ ಸೊಸೈಟಿ ಲಿಮಿಟೆಡ್.

ಸ್ಥಾಪಿತವಾದದ್ದು] [1907ರಲ್ಲಿ

ವೇಲ್ಯುವೇಶನ್ ವರ್ಷ 1936.

ಕೊನೆಯ ಬೋನಸು ಎಲ್ಲಕ್ಕಿಂತಲೂ ಅತಿ ಹೆಚ್ಚಾಗಿರುವುದು.

ಬೇರೆ ಬೇರೆ ಫಂಡುಗಳು ರೂ. **70** ಲಕ್ಷ ಮಿಕ್ಕಿವೆ

ವಿಮಾ ಹಣ ಪಾವತಿ ರೂ **37** ಲಕ್ಷ ಮಿಕ್ಕಿವೆ.

ಹೊಸತಾಗಿ ವಿಮೆಗೆ ಸೇರುವವರು ಹೊಸ ವೇಲ್ಯುವೇಶನಿನ ಉಳಿತಾಯ ದಲ್ಲಿ ಪಾಲು ಪಡೆಯುವರು ಎಲ್ಲಾ ತರದ ಆವಶ್ಯಕತೆ ಮತ್ತು ಸ್ಥಿತಿಗತಿಗೆ ಸರಿಹೋಲುವ ವಿಮಾ ಯೋಜನೆಗಳಿವೆ.

ಏಜನ್ಸಿ ಶರ್ತಗಳು:—ಅತ್ಯಧಿಕ ನಫೆಯ ಕಮಿಶನಿನಿಂದ ಬಹಳ ಲಾಭ ದಾಯಕವಾಗಿವೆ. ವಿಶೇಷ ಮಾಹಿತಿಗಾಗಿ ಈ ಕೆಳಗಣ ವಿಳಾಸಗಳಿಗೆ ಬರಕೊಳ್ಳಿರಿ

P. D. BHARGOVA,
General Manager, **AJMER,**

Or, Chief Agents, MADURA, TRICHINAPOLY.
Or, Organisers, VELLORE, BELLARY

ಸ್ಟೀಮರು ಸಮಯ

	ತಲಪುವುದು	ಹೊರಡುವುದು
ಮಂಗಳೂರು	ಗುರುವಾರ ಬೆಳಿಗ್ಗೆ ಗಂಟೆ 9 ಸೋಮವಾರ ಬೆಳಿಗ್ಗೆ ಗಂಟೆ 6	ಶನಿವಾರ ಬೆಳಿಗ್ಗೆ ಗಂಟೆ 9 ಮಂಗಳವಾರ ಬೆಳಿಗ್ಗೆ ಗಂಟೆ 9
ಮಲ್ಪೆ	ಗುರುವಾರ ಬೆಳಿಗ್ಗೆ ಗಂಟೆ 3 ಆದಿತ್ಯವಾರ ಸಂಜೆ ಗಂಟೆ 6	ಶನಿವಾರ ಮಧ್ಯಾಹ್ನ 2-30 ಮಂಗಳವಾರ ಮಧ್ಯಾಹ್ನ 2-30
ಕುಂದಾಪುರ		ಶನಿವಾರ ಸಂಜೆ ಗಂಟೆ 4 ಮಂಗಳವಾರ ಮಧ್ಯಾಹ್ನ 4

ನಮ್ಮ ಉನ್ನತಿಗಾಗಿ ನಾವೇನು ಮಾಡಬೇಕು? ಇತ್ಯಾದಿ ಸಮಸ್ಯೆ ಗಳಿಗೆ ಸದುತ್ತರವನ್ನು ಕೊಡುವ ಪತ್ರಿಕೆ ಎಂದರೆ

ಸದ್ಧರ್ಮ ಪ್ರಚಾರಕ

ವಾ. ಚ. 1—4—0.

ಸಂಪಾದಕರು:-

ಬಿ. ಲಕ್ಷ್ಮಣದೇವ ವಿದ್ಯಾರ್ಥಿ.

ಉತ್ಕೃಷ್ಟ ಕಥೆ, ಕವನಗಳಿಂದೊಡ ಗೂಡಿ, ಪ್ರತಿಮಾಸದ 16ನೇ ತಾರೀಕಿಗೆ ತಪ್ಪದೆ ಹೊರಡುವದು

ಸದ್ಧರ್ಮ ಪ್ರಚಾರಕ, ಕಾರ್ಯಾಲಯ,
ಅಳಕೆ ರಸ್ತೆ, ಮಂಗಳೂರು

ಪ್ರವಾಸಿ.

ಅತ್ಯುತ್ತಮವಾದ ಸಚಿತ್ರ ಕನ್ನಡ ಮಾಸಪತ್ರಿಕೆ.

ಬೋಧಪ್ರದವಾದ ಲೇಖನಗಳು-ಮಹಾಪುರ ಷರ ಜೀವನ ಚರಿತ್ರೆಗಳು ಉತ್ತಮ ಕಥೆ ಗಳು-ಆರ್ಥಿಕ ರಾಜಕೀಯ ವಿಚಾರಗಳು ವೈಜ್ಞಾನಿಕ ವಿಷಯಗಳು-ಪರದೇಶ್ಯಗಳ ಸಮಸ್ಯೆಗಳು-ಗ್ರಂಥ ವಿಮರ್ಶೆ ಇವುಗಳ ನ್ನೊಳಗೊಂಡ ಹೊಸ ರೀತಿಯ ಮಾಸಪತ್ರಿಕೆ. ಕೈಗೆಲಸವೆಂಬ ನೂತನ ವಿಭಾಗವಿರುವ ಪತ್ರಿಕೆಯು ಇದೊಂದೇ.

ವಾರ್ಷಿಕ ಚಂದಾ ರೂ 3—8—0.

ಪ್ರವಾಸಿ ಕಾರ್ಯಾಲಯ
ಕಾಸರಗೋಡು, ದಕ್ಷಿಣಕನ್ನಡ.

THE

Vijaya Bank, Ltd.

Head Office MANGALORE **Branch Office Court Road, UDIPI**

ದಿ ವಿಜಯ ಬೇಂಕ್ ಲಿಮಿಟೆಡ್,

ಹೆಡ್ ಆಫೀಸು: ಮಂಗಳೂರು. ಶಾಖೆ: ಕೋರ್ಟು ರಸ್ತೆ, ಉಡ್ಪಿ

ಚಾಲ್ತಿ ಠೇವಣಾತಿಗಳು ಸಾ. ಶೆ. 2. ಸೇವಿಂಗ್ಸ್ ಬ್ಯಾಂಕ್ ಠೇವಣಾತಿಗಳುಸಾ. ಶೆ. 3½

ಕಾಯಂ ಠೇವಣಾತಿಗಳು 3 ತಿಂಗಳ ಬಾಬ್ತು, ಸಾ. ಶೆ. 3½

6 ಮತ್ತು 9 ತಿಂಗಳ ಬಾಬ್ತು ಸಾ ಶೆ. 4. 1 ವರ್ಷದ ಬಾಬ್ತು ಸಾ. ಶೆ. 5.

2 ವರ್ಷದ ಮೇಲಿನವುಗಳ ಬಾಬ್ತು ಸಾ. ಶೆ. 5½ ದರದ ಬಡ್ಡಿಯಲ್ಲಿ ಅಂಗೀಕರಿಸಲ್ಪಡುವುವು.

ಬ್ಯಾಂಕಿಗೆ ಸಮ್ಮಂಧಪಟ್ಟ ಎಲ್ಲಾ ತರದ ವ್ಯವಹಾರಗಳು ನಡೆಸಲ್ಪಡುತ್ತವೆ— ಅಂದರೆ—ಪ್ರೊ ನೋಟು, ಹುಂಡಿ, ಸರಕು, ವಗೈರೆ ಮೇಲೆ ಸಾಲಕೊಡಲಾಗುತ್ತದೆ, ಭಂಗಾರದ ಈಡಿನ ಮೇಲೆ ಈ ಕೆಳಗಿನ ದರದ ಬಡ್ಡಿಯಲ್ಲಿ ಸಾಲ ದೊರೆಯುವುದು ರೂ 1ರಿಂದ 99ರ ವರೆಗೆ ಸಾ ಶೆ 9 100ರಿಂದ 250ರ ವರೆಗೆ ಸಾ. ಶೆ. 8. ಮತ್ತು 251ರಿಂದ ಮೇಲ್ಪಟ್ಟ ಸಾಲಗಳಿಗೆ ಸಾ ಶೆ 7.

ವಿಶೇಷ ಸೂಚನೆ:—ಬಡವರಿಗೆ ಸಹಾಯವಾಗುವಂತೆ ಕಡಿಮೆಯೆಂದರೆ ರೂಪಾಯಿ 10/ ವರಾ ಸಾಲಕೊಡಲಾಗುತ್ತದೆ ಪಾಲುಗಳು ದೊರೆಯುತ್ತವೆ

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರಕೊಳ್ಳಿರಿ.

A B Shetty, **K. Gopalakrishna Shetty.**
ಚೆಯರ್ ಮೇನ್ ಸೆಕ್ರಟರಿ.
ವಿಜಯ ಬೇಂಕ್ ಲಿಮಿಟೆಡ್, ಕದ್ರಿರೋಡ್, ಮಂಗಳೂರು.

ಸ್ವದೇಶಿ ಕೈಗಾರಿಕೆಯನ್ನು ಪ್ರೋತ್ಸಾಹಿಸಿರಿ.

ಸ್ವದೇಶಿ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗೆಬಗೆಯ ಬಣ್ಣದಲ್ಲಿ, ಅಂಚಿನಲ್ಲಿ, ನಮೂನೆಯಲ್ಲಿ ದೊರೆ ಯುತ್ತವೆ.

ಶುದ್ಧ ಖಾದಿ ಮತ್ತು ಮಿಲ್‌ಬಟ್ಟೆ ಗಳೂ ವಿಕ್ರಯಿಸಲ್ಪಡುತ್ತವೆ.

P. A. PAI, BROS.
ಪಿ. ಎ. ಪೈ ಬ್ರದರ್ಸ್,
ಆಸ್ಪತ್ರೆ ಎದುರು, ಉಡುಪಿ.

ಕಸಿಗಿಡಗಳು.

ಸಪೋಡಿಲ್ಲ (ಚಿಕ್ಕು)

ಈ ಮರವು ನಮ್ಮ ಜಿಲ್ಲೆಯ ಎಲ್ಲಾ ಭಾಗ ದಲ್ಲಿಯೂ ಸರಿಯಾಗಿ ಬೆಳೆದು, 5ನೇ ವರ್ಷದ ಲ್ಲಿಯೇ ತಪ್ಪದೆ ಫಲಬಿಡುತ್ತದೆ. ಇದು ಮನೆ ದಲ್ಲಿ ಎಂದರೆ ಹಣ್ಣಾಗುವದು ಒಂದು ಎಕರೆ ಯಲ್ಲಿ ವರ್ಷಕ್ಕೆ ರೂ. ಸಾವಿರದ ಮೇಲೆ ಉತ್ಪತ್ತಿ ಯಾಗುವದು ಹಣ್ಣು ಅತಿ ಮಧುರ, ಒಳ್ಳೆ ರುಚಿ, ಕಾಯಿಲೆಯವರಿಗೆ ಉತ್ತಮ ಆಹಾರ ಆದರಲ್ಲಿ ಕಬ್ಬಿಣ ಸತ್ವ ಮತ್ತು ವಿಟಮಿನ್ ಇರುವು ಇರುವವರಿಂದ ರಕ್ತವನ್ನು ವೃದ್ಧಿಪಡಿಸುವುದು ಮರದಲ್ಲಿ ಯಾವಾಗಲೂ ಹಣ್ಣು ಇರುವುದು ಎಲ್ಲ ತೋಟದಲ್ಲಿಯೂ ಇರತಕ್ಕದ್ದು ಗಿಡ ವೊಂದರ ಕ್ರಯ ರೂ 1-0-0 ಮಾತ್ರ ನಮ್ಮಲ್ಲಿ ಉತ್ತಮ ಮಾವು ಮತ್ತು ಇತರ ಕಸಿ ಗಿಡಗಳ ಕೂಡ ದೊರೆಯುತ್ತವೆ ಕ್ರಯಪಟ್ಟಿಗೆ ಕೆಳಗಿನ ವಿಳಾಸಕ್ಕೆ ಬರೆಯುವುದು.

ಮಂಗಳೂರಿನಲ್ಲಿ ವಿಜಯ ಬ್ಯಾಂಕಿನಲ್ಲಿಯೂ ಸ್ವಾದೇಶೀ ಪು, ಹಂಪನಕಟ್ಟೆಯಲ್ಲಿಯೂ ಸೋಮಯಾಜಿ ಎಂಡ್ ಕೊ, ರಥಬೀದಿಯಲ್ಲಿ ಯೂ ಮತ್ತು ಜಿಲ್ಲೆಯ ಎಲ್ಲಾ ಏಗ್ರಿಕಲ್ಚರಲ್ ಡಿಮೋನ್ ಸ್ಟ್ರೇಟರಲ್ಲಿಯೂ ಮೇಲಿನ ಎಲ್ಲಾ ಗಿಡಗಳು ದೊರೆಯುತ್ತವೆ.

ಕೆ. ಎಮ್. ಶೆಟ್ಟಿ,ಕೆನರಾ ನರ್ಸರಿ,
ಪೋಸ್ಟ್ ಬಾರ್ಕೂರು, ದ ಕನ್ನಡ

The Late Mr. Karnad Sadashiva Rao

By Dr. N. S Hardiker, Hubli.

BY the sudden and untimely death of Mr. Sadashiva Rao Karnatak has lost one of its illustrious sons of the day. He was the pillar of Congress movement in Karnatak and particularly in the District of Mangalore. His removal from the field has given a set-back to the Congress work specially in South Canara which owes a deep debt of gratitude to him.

It was from Mr. Sadashiva Rao that the people of South Canara received inspiration for national service. Born and bred up in a very rich family and being the only son of his father Mr. Sadashiva Rao's temperament and health were not suited to the sufferings he underwent during the last decade both financially and physically. He first entered the public field in 1916 after a few years of local practice in Mangalore. In that year he joined late Mrs. Annie Besant's Home Rule League and worked in his district for the furtherance of the League's object. When the clarion call came from Mahatma Gandhi for renunciation in 1920 Mr. Sadashiva Rao renounced all the comforts of life to which he was used from his birth and plunged himself heart and soul into the Non-co-operation movement. He not only gave up his legal practice but swore that he would never enter the Court and he stuck up to his oath literally to the day of his death. This oath brought him into severe financial difficulties. Taking the advantage of the situation and his lenient and loving nature, the majority of those who owed him large sums of money never returned them. Mr. Sadashiva Rao not even caring for his personal and family's needs, went on supporting all the activities of the Congress including national schools and khadi centres in South Canara and before the end of the year 1925 all his resources were over.

Even then his residence was the centre of all the national activities in the district. Once a very rich man but now caught in the grip of poverty Mr. Sadashiva Rao was put to hard tests but he bravely stood all of them and did not shirk his duty to the nation and Congress the services of which he had made his own. He went to Jail in the Civil Disobedience movements both in 1930 and 1932 and never lost his faith in the struggle for freedom.

He was twice the President of the Karnatak Provincial Congress Committee. He started an Ashram at Kadre near Mangalore and a national school in his residential premises soon after the inauguration of the Non-co-operation movement. Kadre was known for its production of khadi in those days. Mr. Sadashiva Rao was at the head of the relief organized in South Canara during the flood havoc of 1923-24 at Bantwal and various other places. When the occasion came for holding the 39th session of the Indian National Congress in Karnatak it was Mr. Sadashiva Rao's keen desire to have it in his district. But the majority favoured its holding at Belgaum and at Belgaum too Mr. Sadashiva Rao strove hard to make his contribution to its success.

Mr. Sadashiva Rao lost his father at a very young age. His ailing mother over eighty years of age has the misfortune of seeing with her own eyes the passing away of her only son. His two daughters are not yet given any permanent footing in life. They are still studying, one being a Research Scholar and the other reading in the College at Bangalore. Under these circumstances, his death has been a bolt from the blue to them just as it has been an unbearable shock to those in the Congress field in Karnatak. Mr. Sadashiva Rao had endeared himself by his sweet and gentle nature to all, whether young or old, for a long time to come. They will feel the pangs of his passing away and his name will be perpetuated in the annals of the Congress in Karnatak. Our heart-felt sympathies are with his aged and ailing mother and two daughters. May the soul of the departed rest in peace.

GREETINGS

In the spirit of the coming season and in deepest appreciation of the patronage, confidence and goodwill accorded our bank, we extend to all our customers and other friends our sincerest wishes for a HAPPY NEW YEAR. May the days be filled for YOU and YOURS with cheer and happiness.

ESTD 1906

CANARA BANK
LIMITED.

ಡಾ. ಅಂಬೇಡಕರರು

ಆರೋಗ್ಯಕ್ಕಾಗಿ ಯುರೋಪಿಗೆ ಹೋಗಿದ್ದವರು ಜನವರಿ ತಾ. ೧೪ಕ್ಕೆ ಹಿಂತಿರುಗಿ ಬೊಂಬಾಯಿಗೆ ಬಂದಿಳಿದಿರುವರು. ಅವರ ಹಿಂದೂಮತವನ್ನು ಬಿಡಬೇಕೆಂಬ ಅವರ ರೋಗವಿನ್ನೂ ಗುಣವಾಗಲಿಲ್ಲ. ಅದನ್ನು ಬಿಡುವುದೆಂತೂ ನಿಶ್ಚಯವಂತೆ. ಆದರೆ ಯಾವ ಮತವನ್ನವಲಂಬಿಸುವದೆಂದು ಇನ್ನೂ ನಿಶ್ಚಯಮಾಡಿಲ್ಲವಂತೆ. ಹಾಗೆಂದು ಹಾಡಿದ್ದೇ ಹಾಡುತ್ತಿದ್ದಾರೆ.

ತೆಂಗಿನ ತೋಟದವರಿಗೆ ಸಂತೋಷದ ಸುದ್ದಿ.

ಕೊಬ್ಬರಿಗೆ ದರವೇರುತ್ತಿದೆ. ಕೊಲೊಂಬೋದಿಂದ ಕೊಬ್ಬರಿಯು ಪರದೇಶಗಳಿಗೆ ಸಾಗತೊಡಗಿದೆ. ಜನವರಿ ತಾ. [illegible]ರಲ್ಲಿ ಅಲ್ಲಿ ಸಾವಿರ ಕಾಯಿಗೆ 68ಕ್ಕೆಯಿಂದ 71 ರ ವರೆಗೆ ಬೆಲೆಯಾಗಿದೆ. ವಿದೇಶಗಳಲ್ಲಿ ಕೈಗಾರಿಕೆಗಳಿಗೆ ಚರ್ಬಿಯು ಕಡಿಮೆಯಾಗಿರುವದರಿಂದಲೂ ಪರದೇಶಗಳಿಗೆ ಎಣ್ಣೆ ಬೇಕಾಗಿರುವದರಿಂದಲೂ ತೆಂಗಿನಕಾಯಿ ಬೆಳೆ ಕಡಿಮೆಯಾಗಿರುವದರಿಂದಲೂ ತೆಂಗಿನಕಾಯಿಯ ದರವು ಕೆಲವು ಸಮಯದ ವರೆಗಾದರೂ ಏರಿಕೆಯಲ್ಲೇ ನಿಂತೀತು.

ಕಿರಿಯರ ಪ್ರಪಂಚ

೧	ನಾಡಕಥೆ	೦	೨	೦
೨	ಮುಂದಿನ ದೇವರು	೦	೨	೦
೩	ಸ್ವತಂತ್ರ ಜೀವನೋಪಾಯ	೦	೨	೬
೪	ಕುಶ-ಲವ	೦	೪	೦
೫	ಸಂಶಯ ಪಿಶಾಚಿ	೦	೬	೦
೬	ಕಾವ್ಯಸಾಮ್ರಾಜ್ಯ ...	೦	೧೨	೧
೭	ಮಧುವನ ...	೧	೮	೦
೮	ವ್ಯಭಿಚಾರಿಣಿ ಯಾರು	೦	೮	೦

ಕಿರಿಯರ ಪ್ರಪಂಚ, ಉಡುಪಿ.

ದ್ವಿತೀಯ ಸಂಸ್ಕರಣ

ಕಾವ್ಯಸಾಮ್ರಾಜ್ಯ

ವಿಶ್ವಕರ್ನಾಟಕದೊಗಿನ
ಆಧುನಿಕ ಕವಿ ಪ್ರಮುಖರ
೪೮ ಕವಿಗವನಗಳ ಸಂಗ್ರಹ

ಕಿರಿಯರ

ಬೆಲೆ
ಹನ್ನೆರಡಾಣೆ

ಪ್ರಪಂಚ

'ಆಧುನಿಕ ಕವಿಗಳ ಕವಿತೆಗಳ ಇಂತಹ ಉತ್ತಮ ಸಂಗ್ರಹವನ್ನು ಈ ವರೆಗೆ ಯಾರೂ ಒದಗಿಸಿ ಕೊಟ್ಟಿರುವುದಿಲ್ಲ' ಎಂಬ ಮನ್ನಣೆಗೆ ಪಾತ್ರವಾಗಿ ಅಲ್ಪಾವಕಾಶದಲ್ಲಿಯೇ ದ್ವಿತೀಯಾವೃತ್ತಿಯನ್ನು ಹೊಂದಿದ ಗ್ರಂಥ! ಬಾಹ್ಯಾಂಗವು ನಯನಮನೋಹರವಾಗಿದೆ ಅಂತರಂಗವು ಚೇತೋಹಾರಿಯಾಗಿದೆ

ಉಡುಪಿ

ಉತ್ಸಾಹೀ ಏಜಂಟರು ಬೇಕಾಗಿದ್ದಾರೆ.

'ನವಯುಗ'ದ

ಪ್ರತಿನಿಧಿಗಳಿಲ್ಲದ ಕೇಂದ್ರಗಳಲ್ಲಿ ಬಿಡಿಪ್ರತಿಗಳನ್ನು ವಿಕ್ರಯಿಸುವುದಕ್ಕೂ 'ನವಯುಗ'ಕ್ಕೆ ಚಂದಾದಾರರನ್ನು ಸೇರಿಸುವುದಕ್ಕೂ ಜಾಹಿರಾತುಗಳನ್ನು ಸಂಗ್ರಹಿಸುವುದಕ್ಕೂ ಉದಾರ ಶರ್ತಗಳ ಮೇಲೆ ಅನುಭವಶಾಲಿಗಳಾದ

ಕುಶಲ ಏಜಂಟರು ಬೇಕಾಗಿದ್ದಾರೆ.

ಹೆಚ್ಚಿನ ಮಾಹಿತಿ ಬಗ್ಗೆ ಪತ್ರವ್ಯವಹಾರ ಬೆಳೆಯಿಸಿರಿ

ಮನೇಜರ್—'ನವಯುಗ',
ಉಡುಪಿ.



ಗೃಹಕೃತ್ಯಕ್ಕೆ ಬೇಕಾದ ವಿವಿಧ ತಾಮ್ರದ ಪಾತ್ರೆಗಳು

ಗೃಹಸ್ಥರೇ!

ಗೃಹಕೃತ್ಯೋಪಯೋಗದ ಎಲ್ಲಾ ವಿಧದ ತಾಮ್ರ ಹಿತ್ತಾಳೆ, ಜರ್ಮನ್ ಬೆಳ್ಳಿ, ಬೆಳ್ಳಿ ಸಾಮಾನುಗಳು ಎಲ್ಲಿ ಸಿಗುತ್ತವೆ ಬಲ್ಲಿರಾ?

ರಥಬೀದಿಯಲ್ಲಿ ಕಲ್ಮಂಜೆ ವ್ಯಾಸಾಚಾರ್ಯರ ಅಂಗಡಿಯಲ್ಲಿ ಮಾತ್ರವೇ.

ಸ್ವದೇಶಿ ಕೈಗಾರಿಕೆ! ಹದಿನೆಂಟು ವರ್ಷಗಳ ಅನುಭವ!

ಮನೆಯ ಉಪಯೋಗಕ್ಕೂ ಉಡುಗೊರೆ ಕೊಡಲಿಕ್ಕೂ ದಾನಮಾಡಲಿಕ್ಕೂ ಬೇಕಾದ ನಮೂನೆಯ ಸಾಮಾನುಗಳನ್ನು ಮನಮೆಚ್ಚುವ ಮಾದರಿಯಲ್ಲಿ ತಕ್ಕ ಕಾಲದಲ್ಲಿ ನಾಜೂಕಾಗಿ ತಯಾರುಮಾಡಿಸಿಯೂ ಕೊಡಲಾಗುವುದು.

ಹೆಚ್ಚಿನ ವಿವರಗಳಿಗೆ ಸಚಿತ್ರ ಕೆಟಲಾಗಿಗೆ ಬರೆಯಿರಿ.

ಕಲ್ಮಂಜೆ ವ್ಯಾಸಾಚಾರ್ಯ,

ಪಾತ್ರೆ ವ್ಯಾಪಾರಿ, ರಥಬೀದಿ, ಉಡುಪಿ.

ಸ್ತ್ರೀ
ಮಲಯಾಳದ

ಸ್ತನೋಸ್ತೇಧಃ

THE MALAYALA OUSHADHA CO.
POST - CHALAPURAM, MALABAR
STHANO STHEDAH

ರಹಸ್ಯಗಳು

ಇದೀಗ ತಿಳಿದುಬಂದಿದೆ ಪುರುಷರನ್ನಾಕರ್ಷಿಸುವುದೆಂಬುದನ್ನು ಸ್ತ್ರೀಯರಿಗೆ ಎಲ್ಲರು ನೀವು ಪುರುಷನೊಬ್ಬನನ್ನು ಪರೀಕ್ಷಿಸಿ ನೋಡಿದ್ದಲ್ಲಿ, ಆತನ ಕಣ್ಣುಗಳು ಸ್ತ್ರೀಯ ಮುಖದಿಂದ ಕೆಳಗೆ ಹುಟ್ಟುಗಳು ಚಲಿಸಿ ಕುಚಗಳ ಉನ್ನತವಾಗಿ, ದೃಢವಾಗಿ ಯೌವನಯುಕ್ತವಾಗಿ ಆಕರ್ಷಕವಾಗಿರುವವೂ ಎಂದು ನೋಡುವವು.

೪೮ ದಿವಸಗಳಲ್ಲಿ ಮನೋಹರ ಕುಚಸ್ಥಲದ ಗ್ಯಾರಂಟಿ, ಇಲ್ಲವಾದರೆ ಹಣ ವಾಪಾಸು



ಪ್ರಖ್ಯಾತ ಮಲಯಾಳಿ ರಹಸ್ಯ ಸ್ತನಸ್ತೇಡೆ:—ಅಶಕ್ತ, ಚಿಂತೆ, ಪ್ರಾಯ ಅಗಾಗಿನ ಹೆರಿಗೆ ನಿಮಿತ್ತ ಸ್ತ್ರೀಯರ ಎದೆಯ ಆಕರ್ಷಕತೆಯು ನಷ್ಟವಾಗಿದ್ದರೆ, ಕುಚಗಳು ಸರಿಯಾಗಿ ಬೆಳೆಯದಿದ್ದರೆ, ಚಪ್ಪಟೆಯಾಗಿದ್ದರೆ, ಬಲವಿಲ್ಲದೆ ತೂಗಾಡಿಕೊಂಡಿದ್ದರೆ, ಬಿದ್ದುಕೊಂಡಿದ್ದರೆ, ಟೊಳ್ಳಾಗಿ ಅಥವಾ ಏನು ತಗ್ಗಾಗಿದ್ದರೆ, ನರಗಳು ದುರ್ಬಲವಾಗಿದ್ದು ಕುಚಗಳನ್ನು ಸ್ಥಿರವಾಗಿರಿಸಲಾರದಾದರೆ

ದಿ ಮಲಯಾಳ ಔಷಧ ಕಂಪೆನಿ, ಛಲಪುರಮ್ ಇವರು ತಮ್ಮ ಪ್ರಖ್ಯಾತ ಚಿಕಿತ್ಸೆಯಿಂದ ಸಹಾಯಮಾಡುವರು, ಬಿದ್ದುಕೊಂಡಿದ್ದು ವಿರೂಪವಾಗಿ ಚಪ್ಪಟೆಯಾಗಿರುವ ಕುಚಗಳು ಸರಿಯಾಗಿ ಬೆಳೆಸಲ್ಪಡುವುವು, ಟೊಳ್ಳುತನವು ತುಂಬಿ ಬರುವದು, ಕುಚಗಳು ಮನೋಹರವಾಗಿಯೂ, ಸ್ಥಿರವಾಗಿಯೂ, ದುಂಡಗಾಗಿಯೂ ಮಾಡಲ್ಪಡುವವು. ಸಡಿಲಾಗಿರುವಮಾಂಸವು ಸ್ಥಿರವಾಗುವದು ಮತ್ತು ಕುಚಗಳು ಯೋಗ್ಯವೂ ಮನೋಹರವೂ ಆದ ರೂಪಕ್ಕೆ ತರಲ್ಪಡುವವು. ತಮ್ಮ ಸೌಂದರ್ಯಕ್ಕೆ ಪ್ರಸಿದ್ಧಿಹೊಂದಿರುವ ಮಲಯಾಳ ದೇಶದ ಸ್ತ್ರೀಯರು ಅನಾದಿಕಾಲದಿಂದ ಜಯಶೀಲರಾಗಿ ತಮ್ಮ ಸೌಂದರ್ಯವನ್ನು ಕಾಪಾಡಿಕೊಂಡು ಬಂದಿರುವ ರಹಸ್ಯಗಳಿವು.

ಸ್ತನಸ್ತೇಡ ನಂಬ್ರ 20—ಒಳಗೆ ತೆಗೆದುಕೊಳ್ಳುವುದಕ್ಕೆ ನಂಬ್ರ ರೂ. 3 ನಂಬ್ರ 21 ಹೊರಗಣ ಉಪಯೋಗಕ್ಕೆ ರೂ. 3 ಧರ್ಮಾರ್ಥ ಕಳುಹಿಸಲ್ಪಡುವ ಕೆಟಲಾಗಿಗೆ ದಯಮಾಡಿ ಬರೆಕೊಳ್ಳಿ.

ದಿ ಮಲಯಾಳ ಔಷಧ ಕಂಪೆನಿ, ಪೋಸ್ಟ್ ಛಲಪುರಮ್, ಮಲಬಾರ್.

ಈ ಕೆಳಗಣವುಗಳಿಗೆ ನಮ್ಮಲ್ಲಿ ಸಿದ್ಧೌಷಧಗಳಿವೆ.

ಋತುವೇದನೆಗಳು, ಸಂತತಿ ನಿರೋಧ, ಧಾತುಪುಷ್ಟಿ, ಲಿಂಗವೃದ್ಧಿ, ಗುಹ್ಯೇಂದ್ರಿಯ ರೋಗಗಳು, ಕ್ಷಯಸಂಹಾರಿ, ವಾತರೋಗಕ್ಕಾಗಿ ಕ್ಷೀರಬಲ

ಮಂಗಳೂರು ಸಮಾಚಾರ

ಮುದ್ರಣ ದಿನಾಚರಣೆ

ಮಂಗಳೂರು ಮಿತ್ರಮಂಡಳಿಯ ಆಶ್ರಯದಲ್ಲಿ, ಕೆನರಾ ಹೈಸ್ಕೂಲ್ ಭುವನೇಂದ್ರ ಸದನದಲ್ಲಿ ಇದೇ ತಾ. ೨೧ನೇ ಗುರುವಾರ ಸಾಯಂ ೫-೩೦ಕ್ಕೆ ಶ್ರೀ. ಜಿ. ಪಿ ರಾಜರತ್ನಂ, ಎಂ. ಎ., ಇವರ ಅಧ್ಯಕ್ಷತೆಯಲ್ಲಿ ಮುದ್ರಣ ದಿನಾಚರಣೆಯು ಆರಿಸಲ್ಪಡುವುದು.

ಮಗುವಿನ ಮರಣ

ಕೆಲವು ದಿನಗಳ ಹಿಂದೆ ಬಿಜಯಿನಲ್ಲಿ ೧೩ವರ್ಷ ಪ್ರಾಯದ ಒಬ್ಬ ಗೌಡಸಾರಸ್ವತರ ಬಾಲಕನು ಆಕಸ್ಮಾತ್ ನೀರಿಗೆ ಬಿದ್ದು ಮೃತನಾದನೆಂದು ತಿಳಿಸಲು ವಿಷಾದವೆನಿಸುತ್ತದೆ.

ಜಿಲ್ಲಾ ಬೋರ್ಡು ಸಭೆ

ಕಳೆದ ಶುಕ್ರವಾರ ತಾ ೧೫ರಲ್ಲು ಜಿಲ್ಲಾ ಬೋರ್ಡಿನ ಸಾಮಾನ್ಯ ಸಭೆಯೊಂದು ಜರಗುವ ಬಗ್ಗೆ ಮೆಂಬರರೆಲ್ಲರು ಬಂದು ಜಿಲ್ಲಾ ಬೋರ್ಡು ಭವನದಲ್ಲಿ ಸೇರಿದ್ದರು. ಜಿಲ್ಲಾ ಬೋರ್ಡಿನ ಅಧ್ಯಕ್ಷರಾದ ಶ್ರೀ ಮಹಾಬಲ ಹೆಗ್ಡೆಯವರು ಅಧ್ಯಕ್ಷಸ್ಥಾನ ವಹಿಸಿದರು.

ಪ್ರಾರಂಭದಲ್ಲಿ ಶ್ರೀ ಶಿವರಾಯರು 'ಸಭೆ ಜರಗಬೇಕಾದರೆ ಸಭೆ ಜರಗುವ ದಿನದಿಂದ ೧೦ ದಿನಗಳ ಮುಂಚಿತವಾಗಿಯೇ ಮೆಂಬರರೆಲ್ಲರಿಗೆ ನೋಟೀಸು ಕೊಡಬೇಕೆಂದು ಕಾನೂನಿದೆ. ಈ ದಿನದ ಸಭೆಗೆ ಹಾಗೆ ನೋಟೀಸು ತಕ್ಕ ಸಮಯದಲ್ಲಿ ಬರಲಿಲ್ಲವಾದುದರಿಂದ ಸಭೆಯಲ್ಲಿ ಈ ದಿನ ಯಾವ ಕಾರ್ಯವಾದರೂ ಅದು ಕಾನೂನಿಗೆ ವಿರುದ್ಧವಾದುದರಿಂದ ಈ ದಿನ ಸಭೆ ನಡೆಯುವುದು ಸರಿಯಲ್ಲ'ವೆಂದರು. ಡಾ. ವಿಟ್ಠಲ ಶೆಟ್ಟರು ಇದನ್ನು ಅನುಮೋದಿಸಿದರು. ಈ ವಿಷಯದಲ್ಲಿ ಸ್ವಲ್ಪ ಚರ್ಚೆಯಾಗಿ ಅನಂತರ ಅಧ್ಯಕ್ಷರ ಅನುಮತಿಯಿಂದ, ಕಾನೂನಿಗೆ ತಕ್ಕಂತೆ, ಸಭೆಯು ಮುಂದುವರಿಸಲಾಯಿತು.

ಸತ್ಕಾರ ಕೂಟ

ಕಳೆದ ೧೫ ವರ್ಷಗಳಿಂದಲೂ ಮಂಗಳೂರು ಕೇಂದ್ರಕ್ಕೆ ಸಂಬಂಧಪಟ್ಟ ಮುಸ್ಲಿಂ ಶಾಲೆಗಳ ಅಭಿವೃದ್ಧಿಗಾಗಿ ಪ್ರಯತ್ನಪಡುತ್ತಿರುವ ಮಂಗಳೂರು ಮುಸ್ಲಿಂ ಉಪಾಧ್ಯಾಯ ಸಂಘದವರು ಕಳೆದ ತಾ.೧೦ನೇ ಆದಿತ್ಯವಾರ ಅಪರಾಹ್ನ ಘಂಟೆ ೩ಕ್ಕೆ ಸರಿಯಾಗಿ ಸ್ಥಳೀಯ ಮಹಮ್ಮಡನ್ ಎಲಿಮೆಂಟರಿ ಶಾಲೆಯಲ್ಲಿ ಒಂದು ಸತ್ಕಾರಕೂಟವನ್ನೇರ್ಪಡಿಸಿದರು. ಅನೇಕ ಮಹಾಜನರೂ, ವಿದ್ಯಾಧಿಕಾರಿಗಳೂ, ಪತ್ರಿಕಾ ಪ್ರತಿನಿಧಿಗಳೂ ದಯಮಾಡಿಸಿದ್ದರು.

ಉಪಹಾರ, ಪ್ರಾರ್ಥನೆ, ಸಂಗೀತಗಳಾದ ಮೇಲೆ ಸಂಘದ ಕಾರ್ಯದರ್ಶಿಗಳಾದ ಜನಾಬ್ ಬಿ. ಅಹಮ್ಮದ್ ಬ್ಯಾರಿಗಳು ಶ್ರೀ ಕಣ್ಣಪ್ಪನವರೊಡನೆ ಅಂದಿನ ಸಭೆಯ ಅಧ್ಯಕ್ಷರಾಗಲು ಕೇಳಿಕೊಂಡರು. ತರುವಾಯ ಕಾರ್ಯದರ್ಶಿಗಳು ಮುಸ್ಲಿಂ ಮಕ್ಕಳ ವಿದ್ಯಾಭಿವೃದ್ಧಿಗಾಗಿ ಬರುವ ಮಾರ್ಚ ತಾ. ೫, ೬, ೭ರಲ್ಲಿ ಸಂಘದವರಿಂದ ಏರ್ಪಡಿಸಲಿರುವ ಶಿಕ್ಷಣಪ್ರದರ್ಶನದ ಕಾರ್ಯಕ್ರಮವನ್ನು ಯೋಗ್ಯರೀತಿಯಿಂದ ಕೈಕೊಳ್ಳುವರೆ ಅತಿಥಿಗಳೂ ಅಧ್ಯಕ್ಷರೂ ತಮಗೆ ಸಲಹೆಗಳನ್ನು ಕೊಡಬೇಕಾಗಿ ಕೇಳಿಕೊಂಡರು. ಸಭಿಕರೂ ಅಧ್ಯಕ್ಷರೂ ಈ ವಿಷಯದಲ್ಲಿ ಯೋಗ್ಯ ಸಲಹೆಗಳನ್ನಿತ್ತರು. ಅಧ್ಯಕ್ಷರು ಸಂಘವೂ, ಮುಸ್ಲಿಂ ಶಾಲೆಗಳೂ ಉನ್ನತ ಸ್ಥಿತಿಗೆ ಬರಲೆಂದು ಪ್ರಾರ್ಥಿಸಿ ಭಾಷಣವಿತ್ತರು. ನೆರೆದ ಸಭಿಕರಿಗೆ ಕಾರ್ಯದರ್ಶಿಗಳು ಧನ್ಯವಾದಗಳನ್ನರ್ಪಿಸಿ, ತಾವು ಕೈಕೊಂಡ ಕಾರ್ಯವು ಯಶಸ್ಸಿಯಿಂದ ಜರಗಬೇಕೆಂದು ದೇವರನ್ನು ಪ್ರಾರ್ಥಿಸಿದ ಮೇಲೆ ಸಭೆಯು ಮುಕ್ತಾಯವಾಯಿತು.

ಜಿಲ್ಲಾ ಕೊಂಗ್ರೆಸ್ ಕಮಿಟಿ ಸಭೆ.

ದ. ಕ. ಜಿಲ್ಲಾ ಕೊಂಗ್ರೆಸ್ ಕಮಿಟಿಯ ವಾರ್ಷಿಕ ಸಭೆಯು ಇದೇ ತಾ. 17—1—37ನೇ ಆದಿತ್ಯವಾರ ಜರಗಿ ಶ್ರೀ. ಉಮೇಶರಾವ್, ವಕೀಲ್ ಇವರು ಅಧ್ಯಕ್ಷರಾಗಿಯೂ ಶ್ರೀಯುತ ರಾಮರಾಯ ಮಲ್ಯರು ಕಾರ್ಯದರ್ಶಿಯಾಗಿಯೂ ಶ್ರೀ. ಭೋಜರಾವ್ ಬೋಳಾರರು ಖಜಾನ್ಜಿಯಾಗಿಯೂ ಚುನಾಯಿಸಲ್ಪಟ್ಟರು. ಒಟ್ಟಿಗೆ 15 ಮಂದಿ ಮೆಂಬರರುಳ್ಳ ಕಾರ್ಯಕಾರೀ ಸಮಿತಿಯ ರಚನೆಯೂ ಆಯಿತು.

ಅಂದು ಸಂಜೆ ಮೈದಾನಿನಲ್ಲಿ ಸಾರ್ವಜನಿಕ ಸಭೆಯು ವಕೀಲ್ ಶ್ರೀ ಉಮೇಶರಾಯರ ಅಧ್ಯಕ್ಷತೆಯಲ್ಲಿ ಜರಗಿ ಶ್ರೀಗಳಾದ ಅಧಿಕಾರಿ, ಹಿ. ರಾ. ಮಲ್ಯ, ಎನ್. ಎಸ್ ಕಿಲ್ಲೆ, ಮೊದಲಾದವರು ಕೊಂಗ್ರೆಸಿಗೇಕೆ ಮತವೀಯಬೇಕೆಂಬುದನ್ನು ವಿವರಿಸಿ ಭಾಷಣವಿತ್ತರು.

ಶಿಕ್ಷಣ ಪ್ರದರ್ಶನ

ದ. ಕ. ಜಿಲ್ಲೆಯ ಶಿಕ್ಷಣ ಪ್ರದರ್ಶನವು ಸ್ಥಳೀಯ ಗ. ಹ. ಎಲಿಮೆಂಟರಿ ಶಾಲೆಯಲ್ಲಿ ಅತಿ ಯಶಸ್ವಿಯಾಗಿ ಜರಗಿತು. 13ನೆಯ ತಾರೀಕು ಬುಧವಾರ ಬೆಳಗ್ಗೆ ಜಿಲ್ಲಾ ಕಲೆಕ್ಟರರು ಅನಾವರಣ ಸಮಾರಂಭವನ್ನು ನೆರವೇರಿಸಿದರು. ಜಿಲ್ಲೆಯ ಮೂಲೆಮೂಲೆಗಳಿಂದಲೂ ವಿದ್ಯಾಭಿಮಾನಿಗಳು ಬಂದು ಕಿಕ್ಕಿರಿದಿದ್ದರು. ಪ್ರದರ್ಶನ ದಿನಗಳ ಅಪರಾಹ್ನದಲ್ಲಿ ವಿವಿಧ ವಿಷಯಗಳ ಕುರಿತು ವಿಚಕ್ಷಣರ ಭಾಷಣಗಳೂ, ಸಂಜೆಗೆ ನಾಟಕವೇ ಮೊದಲಾದ ಗೋಷ್ಠಿಗಳೂ ಇದ್ದುವು. ಅಂತೂ ಶಿಕ್ಷಣ ಪ್ರದರ್ಶನವು ಶಿಕ್ಷಣಾಭಿಮಾನಿಗಳ ಸಂತೋಷದ ಸುಗ್ಗಿಯಾಗಿದ್ದಿತು.

ಪ್ರದರ್ಶಿತವಾದ ವಸ್ತುಗಳು ಕೂಡ, ಕಳೆದ ಬಾರಿಗಿಂತ ಹೆಚ್ಚು ವಿವಿಧವಾಗಿಯೂ, ಉತ್ತಮವಾಗಿಯೂ ಇದ್ದುವೆಂಬುದರಲ್ಲಿ ಸಂದೇಹವಿಲ್ಲ. ವಿಶಾಲವಾದ ಮೂರು ಕೋಣೆಗಳೊಳಗೆ ವಸ್ತುಗಳಿದ್ದುವು. ವಿದ್ಯಾವಿಷಯಕವಾದ ಪಟಗಳು, ಉಪಾಧ್ಯಾಯ ಲಿಖಿತ ಗ್ರಂಥಗಳು ವಿದ್ಯಾರ್ಥಿಗಳ ಕೈಬರಹದ ಕನ್ನಡ ಪತ್ರಿಕೆಗಳು, ಮರದಿಂದಲೂ ಮಣ್ಣಿನಿಂದಲೂ ಮಾಡಿದ ಜೋಂಪಿ, ದೀಪಸ್ತಂಭ, ಆದರ್ಶ ಕಟ್ಟಡ ಮೊದಲಾದುವುಗಳು, ರೈಲ್ವೇ, ಒಟೊಮೊಬೈಲ್ ಯಂತ್ರಗಳು, ಮರಕೆಲಸದ ಸಾಮಾನುಗಳು, ಚಿತ್ರಲೇಖನಗಳು, ಕಸೂತಿ ಕೆಲಸಗಳು, ಹೆಚ್ಚೇನು? ನೂರಾರು ಪ್ರೇಕ್ಷಣೀಯ ಸಾಮಗ್ರಿಗಳಿದ್ದುವು. ಶ್ರೀ ಬಡಗೆರೆ ಎಂ.ನವರ ಧ್ಯಾನ, ಆಶ್ಚರ್ಯ ಈ ಭಾವನಾತ್ಮಕ ಚಿತ್ರಗಳು ನಮ್ಮ ಜಿಲ್ಲೆಯ ಕಲೋಪಾಸಕರಿಗೆ ವಿಶೇಷ ಸಂತೋಷವನ್ನುಂಟುಮಾಡದಿರವು. ಇತರ ವಿಭಾಗಗಳಲ್ಲಿಯೂ ಉತ್ತಮ ಕೃತಿಗಳಷ್ಟೋ ಇದ್ದುವು.

ಏಡೆಡ್ ಶಾಲಾ ಉಪಾಧ್ಯಾಯರ ಸಂಘ

ಇದೇ ತಿಂಗಳ ತಾ ೧೬ರಲ್ಲಿ ಮಂಗಳೂರು ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದಲ್ಲಿ ಮುನಿಸಿಪಲ್ ಮ| ಹಾ| ಎ| ಶಾಲಾ ಅಧ್ಯಾಪಕರಾದ ಬಿ. ಮಹಮ್ಮದ್ ಬ್ಯಾರಿಗಳವರ ಅಧ್ಯಕ್ಷತೆಯಲ್ಲಿ ನಮ್ಮ ಜಿಲ್ಲಾ ಏಡೆಡ್ ಪ್ರಾಥಮಿಕ ಶಾಲಾ ಅಧ್ಯಾಪಕರುಗಳ ಮಹಾಸಭೆಯೊಂದು ಸೇರಿ ದ. ಕ. ಜಿಲ್ಲಾ ಪ್ರಾಥಮಿಕ ಏಡೆಡ್ ಶಾಲಾ ಉಪಾಧ್ಯಾಯರ ಸಂಘವನ್ನು ಪ್ರಾರಂಭಿಸಲಾಯಿತು. ಸುಮಾರು ೪೦ ಮಂದಿ ಉಪಾಧ್ಯಾಯ-ಉಪಾಧ್ಯಾಯಿನಿಯರುಗಳು ಹಾಜರಿದ್ದರು ಬಾಲ್ಪ ವರ್ಷದ ಬಾಬ್ತು ಕುಲಶೇಕರ್ ಸ್ಯೆಂಟ್ ಜೋಸೆಫ್ಸ್ ಹಾ| ಎ| ಶಾಲಾ ಅಧ್ಯಾಪಕರಾದ ಮ. ರಾ ಬಿ. ಗೋವಿಂದರಾಯರನ್ನು ಸಂಘದ ಅಧ್ಯಕ್ಷರನ್ನಾಗಿಯೂ ಕುತ್ಯಾರು ವಿದ್ಯಾದಾಯಿನಿ ಶಾಲಾ ಅಧ್ಯಾಪಕರಾದ ಮ| ರಾ| ಎಲ್ಲಪ್ಪ ಹೆಗ್ಗಡೆಯವರನ್ನು ಕಾರ್ಯದರ್ಶಿಯರನ್ನಾಗಿಯೂ ಸರ್ವಾನುಮತದಿಂದ ಚುನಾಯಿಸಲಾಯಿತು.

ಉಪನ್ಯಾಸ

ಪಂಡಿತ ಸಂಘದ ಆಶ್ರಯದಲ್ಲಿ ಕಳೆದ ತಾ. ೧೪ನೇ ಗುರುವಾರ ಸಾಯಂಕಾಲ ಸುಮಾರು ೬. ಗಂಟೆಗೆ ಸರಿಯಾಗಿ ಉಳ್ಳಾಲ ರಘುನಾಥಯ್ಯನವರ ಸ್ಮಾರಕ ಮಂದಿರದಲ್ಲಿ ಕೇರಳ ಕಲಾ ಮಂಡಲದ ಅಧ್ಯಕ್ಷರಾದ ಮಹಾಕವಿ ವಳ್ಳತ್ತೋಳ್ ನಾರಾಯಣ ಮೇನೋನ್‌ರವರು 'ಕಥಾಕಳಿ'ಯ ವಿಷಯವಾಗಿ ಒಂದು ಉಪನ್ಯಾಸವಿತ್ತರು. ಪಂಡಿತ ಸಂಘದ ಅಧ್ಯಕ್ಷರಾದ ಬ್ರ. ಶ್ರೀ ಸಿಡ್ಲೋಡಿ ಅನಂತ ಉಪಾಧ್ಯಾಯರು ಅಭ್ಯಾಗತರ ಪರಿಚಯವನ್ನು ನೆರೆದಿದ್ದ ಸಭಿಕರಿಗೆ ಮಾಡಿಕೊಟ್ಟ ತರುವಾಯ ಮಹಾಕವಿಗಳು ಮಳೆಯಾಳದಲ್ಲಿ ಭಾಷಣವಿತ್ತರು. ವಿಶೇಷತೆಯನ್ನು ತಿಳಿದುಕೊಳ್ಳಬೇಕಾಗಿ ಪ್ರಾರ್ಥನೆ. ಉಪನ್ಯಾಸಕರಿಗೆ ಬ್ರ. ಶ್ರೀ. ಸಿಡ್ಲೋಡಿ ಅನಂತ ಉಪಾಧ್ಯಾಯರು ಧನ್ಯವಾದಗಳನ್ನರ್ಪಿಸಿದರು. ಅನಂತರ ಸಭೆಯು ಕೊನೆಗೊಂಡಿತು.

ಕೆಥೊಲಿಕ್ ವಕೀಲರ ಸಂಘ

ಮಂಗಳೂರಿನಲ್ಲಿ ಈ ಹೆಸರಿನ ಸಂಘವೊಂದು ಜನವರಿ ೧೧ಕ್ಕೆ ಸ್ಥಾಪನೆಗೊಂಡಿದೆ ಸ್ಥಾಪನೆಯ ಸಮಾರಂಭದ ದಿನ ಕ್ಯಾಥೊಲಿಕರ ಪ್ರಮುಖ ವಕೀಲರು ಹತ್ತು ಮಂದಿ ಹಾಜರಿದ್ದರು. ಶ್ರೀ ಎ. ಸಿ. ಗೊನ್ಸಾಲ್ವಿಸರ, ಆ ದಿನದ ಅಧ್ಯಕ್ಷರಾಗಿದ್ದರು. ತಮ್ಮ ಜಾತಿಯ ಮತ್ತು ವೃತ್ತಿಯ ಹಿತಸಾಧನೆಯ ಬಗ್ಗೆ ಸಂಘ ಸ್ಥಾಪನೆ ಮಾಡಬೇಕೆಂದೂ, ಕಳೆದ ೧೬ ವರ್ಷಗಳಿಂದ ನ್ಯಾಯವಿಧಾಯಕ ಸಭೆಗೆ ಪ್ರಮುಖ ಕರಾವಳಿಯ ಕ್ರೈಸ್ತರು, ರಿಟೈರ್ ಆದ ಆಫೀಸರರನ್ನೆ ಪ್ರತಿನಿಧಿಗಳಾಗಿ ಕಳುಹಿಸುತ್ತಿರುವುದು ಅನುಚಿತವೆಂದೂ, ಮುಂದಿನ ಚುನಾವಣೆಯಲ್ಲಿ ತಮ್ಮ ಧೋರಣ ಹೇಗಿರಬೇಕೆಂಬುದನ್ನು ನಾಮಿನೇಶನ್ ಆದ ಮೇಲೆ ನಿರ್ಧರಿಸಬೇಕೆಂದೂ, ಇತರ ವ್ಯಕ್ತಿಗಳನ್ನು ಅನುಸರಿಸುವವರೂ ತಂತಮ್ಮ ಸಂಘಗಳನ್ನು ಸ್ಥಾಪಿಸಬೇಕೆಂದೂ, ಠರಾವುಗಳಾದುವಲ್ಲದೆ, ಈ ಸಂಸ್ಥೆಕ್ಕೆ ಶ್ರೀ. ಎ ಸಿ. ಗೊನ್ಸಾಲ್ವಿಸರು ಅಧ್ಯಕ್ಷರಾಗಿಯೂ, ಶ್ರೀ ಪಿ ಡಿ. ಸೋಜರು ಉಪಾಧ್ಯಕ್ಷರಾಗಿಯೂ, ಶ್ರೀ. ಎ. ಎಂ. ಡಿಸೋಜರು ಕಾರ್ಯದರ್ಶಿಗಳಾಗಿಯೂ ಇರಬೇಕೆಂದೂ ನಿರ್ಧಾರವಾಯಿತು.

ವಿವೇಕೋದಯ ಯುವಕ ಸಂಘ. ನಿರೇಶ್ವಾಲ್ಯ ಮಂಗಳೂರು.

ಇದೇ ಕಳೆದ ತಾ. 12-1-37ನೇ ಮಂಗಳವಾರ ರಾತ್ರಿ ಘಂಟೆ 8-30ರಲ್ಲಿ ಮೇಲಿನ ಸಂಘದಲ್ಲೊಂದು ಶ್ರೀಮಾನ್ ಕಾರ್ನಾಡು ಸದಾಶಿವ ರಾಯರ ಅಕಾಲ ನಿಧನದ ಕುರಿತು ದುಃಖಸೂಚಕ ಸಭೆಯು ಜರಗಿತು.

ಸಭೆಯಲ್ಲಿ ಪಾಸಾದ ಠರಾವುಗಳು.

1- ಕೈ. ವಾ ಕಾರ್ನಾಡು ಸದಾಶಿವರಾಯರ ಸ್ಮರಣಾರ್ಥವಾಗಿ ಪ್ರತೀ ವರ್ಷ ಜರಗುವ ವಾರ್ಷಿಕೋತ್ಸವದ ಸಮಯ ಒಂದು ಪ್ರಭಾತಫೇರಿಯನ್ನು ಹೆಚ್ಚಾಗಿ ಆಚರಿಸತಕ್ಕದ್ದು.

2 ದಿವಂಗತರ (ರಾ. ಸದಾಶಿವರಾಯರ) ಒಂದು ಭಾವಚಿತ್ರವನ್ನು ಸಂಘದಲ್ಲಿ ಅನಾವರಣ ಮಾಡತಕ್ಕದ್ದು.

3. ಮಂಗಳೂರು ಪ್ರಮುಖ ವಕೀಲರಲ್ಲೊಬ್ಬರಾದ ಕೆ ರಾಮಚಂದ್ರಾಚಾರ್ಯ M. A., L. L. B. ಯವರು ಮೈದಾನಿನಲ್ಲಿ ತಾನ ಕೊಟ್ಟ ಸಾರ್ವಜನಿಕ ಭಾಷಣದಲ್ಲಿ ದಿವಂಗತರ ಸ್ಮರಣಾರ್ಥವಾಗಿ ಮಂಗಳೂರಲ್ಲಿ ಏನಾದರೊಂದು ಏರ್ಪಾಡನ್ನು ಮಾಡಬೇಕೆಂದು ಕೇಳಿಕೊಂಡುದುದನ್ನು ಸಂಘವು ಅನುಮೋದಿಸುತ್ತದಲ್ಲದೆ ತನ್ನ ಸಹಾನುಭೂತಿಯನ್ನೂ ಸೂಚಿಸುತ್ತದೆ.

ಕೈ. ವಾ. ಕಾರ್ನಾಡು ಸದಾಶಿವರಾಯರ ಭಾವಚಿತ್ರವನ್ನು ಶ್ರೀಮಾನ್ ಯನ್. ರಾಮಚಂದ್ರಬಂಗೇರವರು ಸಂಘಕ್ಕೆ ದಾನಕೊಡುವೆನಾಗಿ ವಾಗ್ದಾನವಿತ್ತಿರುವರು

ನವಯುಗಕ್ಕೆ ಇಂದೇ ಚಂದಾದಾರರಾಗಿರಿ.

ವಾರ್ಷಿಕ ಚಂದಾ ಹಣ

ಸ್ಥಳೀಕರಿಗೆ ೨—೮—೦

ಪರಸ್ಥಳೀಕರಿಗೆ ೩—೪—೦

THE BOMBAY LIFE ASSURANCE Co., LTD.

ESTD. 1908

Church Gate Street, Fort - - BOMBAY.

SPECIAL FEATURES.

1. Rebate on yearly payment of policies.
2. Rebate for larger assurances.
3. Accident Risk covered on small extra premiums
4. Attractive Bonuses.

It pays you to represent this Company.
Wanted Agents in unrepresented parts.

Apply to:—

KOCHIKAR BROTHERS,

Madras Branch Secretaries.

BRANCHES AT:

P. B. 337 Mount Road, Madras	Visveswarapuram Circle, Bangalore City.	Soumyalayam Puthiyara, Calicut.
Car Street, Mangalore.	Udipi, S. India	Charni Road, Bombay No. 4.

EVIDENCE OF SECURITY & STABILITY

FIGURES THAT SPEAK FOR THEMSELVES

TOTAL ASSETS Rs. 80,66,600

Summary of 1935 Accounts

Total Assets Over	Rs. 80,00,000
Life Funds Over	Rs. 68,00,000
Premium Income Over ...	Rs. 27,54,000
Interest Income	Rs 3,16,000
Claims Paid	Rs 5,75,000
Total Claims paid Over	Rs. 38,50,000
Total Business in Force Over	Rs. 4,42,51,200

TOTAL BUSINESS IN FORCE Rs. 4,42,51,200

ಚಂದಾದಾರರಲ್ಲಿ

ಚಂದಾಹಣ ಬಾಕಿ ಇರುವ ನಮ್ಮ ಚಂದಾದಾರರು ಆದಷ್ಟು ಬೇಗನೇ ತಮ್ಮ ಹಣವನ್ನು ಮಣಿಯಾರ್ಡರ್ ಮೂಲಕ ದಯವಿಟ್ಟು ಕಳುಹಿಸಿಕೊಡಬೇಕಾಗಿ ಅಪೇಕ್ಷಿಸುತ್ತೇವೆ. ವಿ. ಪಿ. ಮಾಡುವದಾದರ ಖರ್ಚು ಹೆಚ್ಚಿಗೆ ಬೀಳುವದು.

ನಮ್ಮೊಡನೆ ಪತ್ರವ್ಯವಹಾರ ನಡೆಸುವವರು ತಮ್ಮ ಚಂದಾ ನಂಬ್ರವನ್ನು ಸೂಚಿಸಿ ಬರೆಯಬೇಕಾಗಿ ವಿನಂತಿ.

ಮೆನೆಜರ್, 'ನವಯುಗ'

ಉಡುಪಿ, ತಾ ೨೧-೧-'೩೭ ಗುರುವಾರ

ಚುನಾವಣೆಯಿಂದ ರಾಷ್ಟ್ರೀಯಭಾವನೆ

ಹಿಂದೂದೇಶದಲ್ಲಿ ಈ ಸಲದ ಚುನಾವಣೆಯು ಎಬ್ಬಿಸಿರುವಷ್ಟು ಗೊಂದಲವನ್ನು ಹಿಂದಾವುದೂ ಎಬ್ಬಿಸಿರಲಿಲ್ಲ. ಈಗ ಉಂಟಾದಂಥ ಸಾರ್ವಜನಿಕ ಸಂಬಂಧವು ಹಿಂದೆ ಯಾವಾಗಲೂ ಉಂಟಾಗಿರಲಿಲ್ಲ. ಇದಕ್ಕೆ ಕಾರಣವೇನು? ಈಗ ಮತದಾರರ ಸಂಖ್ಯೆ ಮೂರು ಕೋಟಿಯಷ್ಟಾಗಿದೆ. ಆ ಮೂರು ಕೋಟಿಯ ಅನುಮತಿ ಪಡೆದು ಎಸೆಂಬ್ಲಿಗೆ ಹೋಗಿರೆಂದು 1000ಕ್ಕೂ ಮಿಕ್ಕಿದ ತನ್ನ ಪ್ರತಿನಿಧಿಗಳನ್ನು ರಾಷ್ಟ್ರಸಭೆಯು ರಣಕಣಕ್ಕಿಳಿಸಿದೆ. ಈಗ ಕಂಡು ಬರುವದೆಲ್ಲಾ ಮತದಾರರನ್ನು ಕಾಣುವ ಅವರ ಮನಸ್ಸೊಲಿಸುವ ಗದ್ದಲ! ರಾಷ್ಟ್ರಪ್ರೇಮಿಗಳೆಲ್ಲರೂ ಕೊಂಗ್ರೆಸು ಗೆಲ್ಲುವಂತಾಗಬೇಕೆಂದು ಸೊಂಟಕಟ್ಟಿಹೋರಾಡುತ್ತಿದ್ದಾರೆ. ಹುರುಪೇರಿರುವ ವಾತಾವರಣವು ದೇಶಾಭಿಮಾನವಿರುವ ಯಾವನನ್ನೂ ವಿಶ್ರಾಂತಿ ಸುಖವನ್ನನುಭವಿಸಲು ಬಿಟ್ಟಿಲ್ಲ. ರಾಜಕೀಯ ಕ್ಷೇತ್ರದಿಂದ ಹೊರ ಕಾಲಿಟ್ಟಿದ್ದ ಮದ್ರಾಸಿನ ಶ್ರೀ. ಸಿ. ರಾಜಗೋಪಾಲಾಚಾರಿಯವರು ಈಗ ಹೋರಾಟಕ್ಕೆ ಮುಂದೆ ಬಂದಿರುವರು. ಶುದ್ಧ ಗಾಂಧಿತ್ವವಾದಿಯಾದ ಅವರೀಗ ಮದ್ರಾಸಿನ ಎಸೆಂಬ್ಲಿ ಸ್ಥಾನವೊಂದಕ್ಕೆ ಸ್ಪರ್ಧಿಸಲಿರುವರು; ಇತ್ತ ಪಂಡಿತ ಜವಾಹಿರಲಾಲರು,—ಎಸೆಂಬ್ಲಿ ಕೌನ್ಸಿಲುಗಳನ್ನು ಕಲಹಿತ ಗೃಹಗಳೆಂದೇ ಹೇಳುವವರು ಊರಿಂದೂರಿಗೆ ವಿಮಾನದಲ್ಲಿ ಧಾವಿಸುತ್ತಾ ರಾಷ್ಟ್ರಸಭೆಯ ಸಂದೇಶವನ್ನು ಸಾರಹತ್ತಿರುವರು! ದೇಶದಲ್ಲೆಲ್ಲಾ ರಾಷ್ಟ್ರೀಯ ಭಾವನೆಯ ಪ್ರಸಾರವು ತೀವ್ರವಾಗಿ ಆಗುತ್ತಿದೆ. ಕೆಲಸಗಾರರಲ್ಲಿ ಸ್ಫೂರ್ತಿಯೆದ್ದಿದೆ!

ಈ ನವ ಜಾಗ್ರತಿಯು ಗುರಿಯ ಸ್ಪಷ್ಟೀಕರಣದಿಂದಲೇ ಉಂಟಾದುದೆಂಬುದರಲ್ಲಿ ಸಂದೇಹವಿಲ್ಲ. ಕೊಂಗ್ರೆಸು ಪ್ರತಿನಿಧಿಗಳು ಆರಿಸಲ್ಪಡಬೇಕು. ಅವರು ಎಸೆಂಬ್ಲಿಗಳನ್ನು ಹೊಕ್ಕು ಆ ಮೂಲಕ ಹೊಸ ಸುಧಾರಣೆಗೆ ಬಲವಾದ ಪೆಟ್ಟನ್ನಿಡಬೇಕು. ಈ ತೀರ್ಮಾನದ ಅಪೇಕ್ಷೆಯಿಂದಲೇ ಇಂದಿನ ಚುನಾವಣೆಯ ರಂಗದಲ್ಲಿ ಇಷ್ಟೊಂದು ಹುರುಪೆದ್ದಿದೆ. ನಮಗೆ ನಿಜವಾಗಿಯೂ ಅಂತಹ ಪರಿಣಾಮವುಂಟಾಗಬೇಕಾಗಿದೆ; ಆದರೆ ಒಂದು ಪ್ರಶ್ನೆ. ಇಂದು ಎದ್ದಿರುವ ನವಜಾಗ್ರತಿಯು ಕಾರ್ಯಸ್ಫೂರ್ತಿಯು, ಕೆಲವು ಎಸೆಂಬ್ಲಿ ಸೀಟುಗಳ ಸಂಪಾದನೆಯೊಡನೆ ಮುಕ್ತಾಯ ಹೊಂದೀತೆ? ಇಷ್ಟು ಬಲವಾಗಿ ಹರಡಿರುವ ರಾಷ್ಟ್ರೀಯ ಭಾವನೆಗೆ ಇನ್ನಿರುವದು ಒಂದೇ ತಿಂಗಳ ಆಯುಷ್ಯವೆ? ಖಂಡಿತವಾಗಿಯೂ ಅಲ್ಲ. ಈ ಜಾಗ್ರತಿಯು ಮುಂದುವರಿಯಲೇಬೇಕು. ಎಸೆಂಬ್ಲಿ ಸ್ಥಾನಗಳ ಜಯವೆಂಬುದು ಈ ಪ್ರವಾಹದಲ್ಲಿ ತೇಲಿಕೊಂಡು ಬರಬೇಕೇ ಹೊರತು ಅದನ್ನು ತನ್ನಲ್ಲಿ ತಡೆದಿಟ್ಟುಕೊಳ್ಳುವ ಅಣೆ ಕಟ್ಟಾಗಬಾರದು. ಈ ದೃಷ್ಟಿಯಿಂದ ನೋಡಿದರೆ ಮುಂದೆ ಸುಲಭವಲ್ಲಾಗಬಹುದಾದ ವಿಜಯಕ್ಕಿಂತಲೂ ಇಂದು ಜನಸಾಮಾನ್ಯರಲ್ಲುಂಟಾಗಿರುವ ರಾಷ್ಟ್ರೀಯಭಾವನೆಗೆ ಪ್ರಾಮುಖ್ಯತೆ ಹೆಚ್ಚು.

ಮತದಾರರಲ್ಲಿ, ಮತದಾರರಲ್ಲದವರಲ್ಲಿ ರಾಷ್ಟ್ರೀಯ ತತ್ವಗಳ ಪ್ರಚಾರವನ್ನು ಮಾಡಿದಾಗಲೇ ನಾವು ಹೊಂದಿದ ಲಾಭವು ಮಹತ್ತಾದುದು; ನಮ್ಮ ಈ ಸಾಹಸಕ್ಕೆ ಬಹುಮಾನವಾಗಿ ಸಿಕ್ಕಲೇಬೇಕಾದ ಆ ಎಸೆಂಬ್ಲಿ ಸ್ಥಾನಗಳಿಗಿಂತಲೂ ಇದು ದೊಡ್ಡ ಲಾಭ! ದೇಶದ ಪ್ರಾಮುಖ್ಯ ಪ್ರಶ್ನೆಯು ಬಾಕಿಯಿದೆ; ಅದಕ್ಕಾಗಿ ಜನಸಾಮಾನ್ಯರಿಗೂ ರಾಷ್ಟ್ರಸಭೆಗೂ ನಿಕಟ ಸಂಬಂಧವುಂಟಾಗಿದೆ. ಎಸೆಂಬ್ಲಿ, ಕೌನ್ಸಿಲುಗಳ ಹೆಸರಿನಲ್ಲಿ ಈಗ ಉಂಟಾಗಿರುವ ರಾಷ್ಟ್ರೀಯ ಭಾವನೆಯು ಅತ್ಯಂತ ಪ್ರಯೋಜನಕಾರಿಯಿದೆ. ಅಂತೂ ದೇಶದ ಮುಖ್ಯ ಪ್ರಶ್ನೆಯನ್ನೇ ದೃಷ್ಟಿಸುವದಾದರೆ ಇಂದಿನ ಚುನಾವಣೆಯ ಸತ್ಪರಿಣಾಮಗಳಲ್ಲಿ ಕೊಂಗ್ರೆಸ್ ಭಾವನೆಯ ಪ್ರಚಾರವೇ ಶ್ರೇಷ್ಠವಾದುದು.

ಸರಿ, ನಾವೀಗ ಆ ಹುರುಪಿನಿಂದ ತುಂಬಿರುವ ವಾತಾವರಣದ ಮಧ್ಯದಲ್ಲಿದ್ದುಕೊಂಡು ಅದಕ್ಕಾಗಿ ಹಿಗ್ಗುತ್ತಿದ್ದೇವೆ. ಈ ಸ್ಫೂರ್ತಿಗೆ ಕೆಲವೇ ದಿನಗಳ ಆಯುಷ್ಯವೆಂದಾದಲ್ಲಿ, ನಮ್ಮ ಹುರುಪಿಗೂ, ಪಾತ್ರಿಯ ಆವೇಶಕ್ಕೂ ವ್ಯತ್ಯಾಸವಿರಲಾರದು. ಹಾಗಾಗದಂತೆ ನೋಡುವ ಮುಂಜಾಗ್ರತೆಯು ಈಗಲೇ ಬೇಕಾಗಿದೆ. ಪಂಡಿತ ಜವಾಹಿರಲಾಲರು ಹೇಳಿರುವಂತೆ ಎಸೆಂಬ್ಲಿ ಜಯವೆಂಬುದು ಮುಂದಿನ ಮಹಾವಿಜಯದ ಮೊದಲನೆಯ ಕಂತಾಗಿ ನಮಗೆ ದೊರಕಬೇಕು! ನಮ್ಮ ಪ್ರಚಾರಕಾರ್ಯ ಸಾರ್ವಜನಿಕ ಸಂಬಂಧಗಳ ವಿರಾಮದ ಗುರಿಯು ಆ ಕೊನೆಯ ಮಹಾವಿಜಯವೇ ಆಗಿರಬೇಕು. ಚುನಾವಣೆಯಲ್ಲಿ ಕೊಂಗ್ರೆಸಿನ ಜಯವಂತೂ ಸಿದ್ಧ: ಅಷ್ಟನ್ನೇ ಮಾಡಿ, ಕೆಲಸದ ಕೈ ಮುದುಡಿಸಿ ನಾವು ಕುಳಿತೆವಾದರೆ ಅದೇ ನಮ್ಮ ಸೋಲು! ನಮ್ಮಲ್ಲಿ ಕರ್ತವ್ಯ ಸ್ಫೂರ್ತಿಯು ಸದಾಕಾಲವಿದೆ ಎಂಬುದನ್ನು ಕೆಲಕಾಲ ನಾವು ತೋರಿಸುತ್ತಾ ಬಂದೆವಾದರೆ, ಹಿಂದುಸ್ಥಾನದ ವಿಪತ್ತು ದೂರವಾಗಲು ಹೆಚ್ಚು ಕಾಲವಿರಲಾರದು ಚುನಾವಣೆಯಲ್ಲಿ ಕೊಂಗ್ರೆಸೊಂದೇ ಜಯಿಸಿ ಬರುವಂತೆ ನೋಡಬೇಕು; ಆ ಜಯದ ಸತ್ಪರಿಣಾಮ, ನಾವದನ್ನು ಸಂಪಾದಿಸಲು ಕೈಕೊಂಡ ಕಾರ್ಯಸ್ಫೂರ್ತಿ ಜನಸಾಮಾನ್ಯರೊಡನೆ ಆ ಮೂಲಕ ಉಂಟಾಗಿರುವ ಸಂಬಂಧ, ಇವೆಲ್ಲಾ ಹಿಂದೀ ಸ್ವಾತಂತ್ರ್ಯದ ಕೊನೆಯ ಗುರಿಯ ವರೆಗೂ ಮುಂದೆ ಸಾಗಬೇಕು! ಚುನಾವಣೆಯಲ್ಲಿ ಕೊಂಗ್ರೆಸೇ ಗೆಲ್ಲಬೇಕು ಎಂಬ ನ್ಯಾಯವು ನಮಗೆ ಗೊತ್ತಿದೆ. ಅಷ್ಟೊಂದು ಸಹಾನುಭೂತಿಯು ಕೊಂಗ್ರೆಸಿನೊಡನಿದೆ. ಅದೇ ಕೊಂಗ್ರೆಸಿಗೆ ಹಿಂದೂದೇಶದ ಪೂರ್ಣ ಸ್ವಾತಂತ್ರ್ಯವನ್ನು ಕಾಣದೆ ನಿದ್ದೆ ಬೀಳುವಂತಿಲ್ಲ; ಆದರೊಡನೆ ಸಹಾನುಭೂತಿಯಿರುವ ನಮಗೂ ಹಾಗೆಯೇ ಆಗಬೇಕಲ್ಲವೇ?

ಕರ್ಣಾಟಕ ತರುಣರಲ್ಲೊಂದು ಮಾತು. ಜನಸಾಮಾನ್ಯರೊಡನೆ ಸಂಪರ್ಕವನ್ನು ಬೆಳೆಸುವರೆ ಚುನಾವಣೆಯಂತಹ ಸುಸಂದರ್ಭವು ಬೇರೆ ಇಲ್ಲ. ತರುಣರು ಅದನ್ನು ಅಲಕ್ಷಿಸಬಾರದು. ಚುನಾವಣೆಯಿಂದ ಜನತೆಯಲ್ಲಿ ಪ್ರಜ್ಞೆಯುಂಟಾಗಿದೆ; ಅವರನ್ನೆಚ್ಚರಿಸುವ ಕೆಲಸವು ತನ್ನಂತೆ ನಡೆದು ಹೋಗಿದೆ. ತರುಣರು ಯುಕ್ತಿಯುಕ್ತ ಕೆಲಸಗಳಿಂದ ಜನತೆಯು ತಮ್ಮನ್ನು ಹಿಂಬಾಲಿಸುವಂತೆ ಮಾಡಬೇಕು; ಜನಸಾಮಾನ್ಯರ ಮನಸನ್ನಾಕರ್ಷಿಸಿ ಕೊಂಗ್ರೆಸ್ಸಿನ ಹುರಿಯಾಳುಗಳ ಜಯವೆಂಬುದು ತೀರಾ ಸುಲಭವಲ್ಲಾಗುವಂತೆ ನೋಡಬೇಕು. ರಾಷ್ಟ್ರಸಭೆಯ ಕಡೆಯಿಂದ ನಿಂತವರನ್ನಾರಿಸುವಾಗ ತಮ್ಮ ಕರ್ತವ್ಯಗಳಲ್ಲೊಂದನ್ನು ಮಾಡಿದೆವೆಂದು ಮತದಾರರು ತಿಳಿದುಕೊಂಡು, ಹಾಗೆಯೇ ಇನ್ನುಳಿದುದನ್ನು ಮಾಡಿ ತೀರಬೇಕೆಂಬ ಹುರುಪು ಅವರಲ್ಲುಂಟಾಗುವಂತೆ ನೋಡಬೇಕು. ಇಂದಿನ ಜಾಗ್ರತವಾತಾವರಣದಲ್ಲಿ ಹಾಗಾಗುವದೆಂದು ನಂಬುತ್ತೇವೆ.

ಶ್ರೀಮತಿ ಕಮಲಾ ದೇವಿಯರ ಮೇಲೆ ಪ್ರತಿ ಬಂಧಕ ಆಜ್ಞೆ

ಮೈಸೂರು ಸಂಸ್ಥಾನದ ಕೊಂಗ್ರೆಸು ಪಾರ್ಲಿಮೆಂಟರೀ ಬೋರ್ಡಿನ ಚುನಾವಣಾ ಕಾರ್ಯಾರಂಭವನ್ನು ನೆರವೇರಿಸಲು ತೆರಳಿದ್ದ ಶ್ರೀಮತಿ ಕಮಲಾದೇವಿಯರು ೬ ತಿಂಗಳ ವರೆಗೆ ಬೆಂಗಳೂರು ನಗರ ಮತ್ತು ಆ ಸುಪಾಸುಗಳಲ್ಲಿ ಭಾಷಣವೀಯಬಾರದೆಂದು ಅಲ್ಲಿಯ ಜಿಲ್ಲಾ ಮೆಜಿಸ್ಟ್ರೇಟರು ಆತಂಕಿಸಿರುವರು ಶ್ರೀಮತಿಯವರು ಅಲ್ಲಿಂದ ಮೈಸೂರಿಗೆ ತೆರಳಿದಾಗ ಅಲ್ಲಿಯೂ ಒಂದು ತಿಂಗಳ ವರೆಗೆ ಭಾಷಣವೀಯಬಾರದೆಂಬ ನೋಟೀಸು ಅವರಿಗೂ ಶ್ರೀಗಳಾದ ತಗಡೂರು, ಭಾಶ್ಯಂ ಕರಮರರಿಗೂ ಅಲ್ಲಿಯ ಜಿ. ಮೆಜಿಸ್ಟ್ರೇಟರಿಂದ ಬಂದಿರುವದು. ಪ್ರಗತಿ ಪರರಾಜ್ಯವೆಂಬ ಹೊಗಳಿಕೆಗೊಳಗಾಗಿರುವ ಮೈಸೂರಿನ ಸರಕಾರದ ಇಂತಹ ವರ್ತನೆಯು ಸೋಜಿಗಕರವಿದೆ. ಚುನಾವಣೆಯ ಕಾರ್ಯಕ್ಕಾಗಿ ತೆರಳಿರುವ ಶ್ರೀಮತಿಯವರಿಂದ ಶಾಂತಿಭಂಗವಾಗುವದೆಂಬ ಹೆದರಿಕೆಗಾವ ಆಧಾರವೋ ನಮಗೆ ತಿಳಿಯದು. ಕಾಯಿದೇ ಶೀರವಾಗಿಯೇ ವರ್ತಿಸಿ ನ್ಯಾಯ ವಿಧಾಯಕ ಸಭೆಗಳನ್ನು ಪ್ರವೇಶಿಸಬೇಕೆಂದು ರಾಷ್ಟ್ರ ಸಭೆಯು ಸಂಕಲ್ಪಿಸಿರುವದು. ಈಗ ಅನಗತ್ಯ ತೊಂದರೆಗಳನ್ನೆಬ್ಬಿಸಿ ಕೊಂಗ್ರೆಸ್ ಕೆಲಸಗಾರರಲ್ಲಿ ತಮ್ಮ ನೆಮ್ಮದಿಯನ್ನು ಕೆಡಿಸುವರೋ ಎಂದು ಸರಕಾರವು ಹೆದರುವದಕ್ಕಿಂತಲೂ ಹೆಚ್ಚಾಗಿ, ತಮ್ಮ ಕೆಲಸದ ಏಕಾಗ್ರತೆಯನ್ನು ಬಿಟ್ಟು ಅಡ್ಡ ಹಾದಿ ಹಿಡಿಯಲು ಕೊಂಗ್ರೆಸಿನವರೇ ಹೇಸುತ್ತಿದ್ದಾರೆ. ಹೀಗಿರುವಾಗ ಶ್ರೀಮತಿ ಕಮಲಾ ದೇವಿಯರಿಂದ ಶಾಂತಿಭಂಗವಾಗುವದೆಂದು ಮೈಸೂರು ಸರಕಾರವು ಗೊತ್ತು ಹಚ್ಚಿದುದು ಹೇಗೆ ಎಂಬುದೇ ಪ್ರಶ್ನೆ? ಅಲ್ಲಿಯ ಕೊಂಗ್ರೆಸು ಪಾರ್ಲಿಮೆಂಟರೀ ಬೋರ್ಡಿನವರು ತಮ್ಮ ಚುನಾವಣೆಯ ಕಾರ್ಯವನ್ನು ಬಳಗೊಳಿಸುವದಕ್ಕಾಗಿ ಈ ವ್ಯವಸ್ಥೆಯನ್ನು ಮಾಡಿದ್ದರು. ಆದನ್ನು ಸರಕಾರವು ತಡೆಗಟ್ಟಿದಂತಾಯಿತು. ಜತೆಯಲ್ಲಿಯೇ ಶ್ರೀಮತಿಯವರ ವ್ಯಕ್ತಿ ಸ್ವಾತಂತ್ರ್ಯಕ್ಕೂ ಮನ್ನಣೆ ಕೊಡದಂತಾಯಿತು! ಪಟ್ಟಣದ ನಾಗರೀಕರ ನ್ಯಾಯಪರ ಅಪೇಕ್ಷೆಯನ್ನೂ ಅಲ್ಲಗಳೆದಂತಾಯಿತು. ಈ ರೀತಿ ಪ್ರಗತಿಯ ಹಾದಿಯನ್ನು ಮೂರು ದಿಕ್ಕುಗಳಲ್ಲಿಯೂ ತಡೆಗಟ್ಟಿ ಮೈಸೂರು ಸರಕಾರವು ಸಾಧಿಸಿದ ಪುರುಷಾರ್ಥವಾವುದೆಂದರೆ 'ಏನೂ ಇಲ್ಲ'. ಇಂತಹ ವರ್ತನೆಯಿಂದ ಶ್ರೀಮತಿ ಕಮಲಾ ದೇವಿಯರು ಹೇಳಿರುವಂತೆ "ಪ್ರಜೆಗಳ ಸರ್ವಸಾಮಾನ್ಯ ವ್ಯಕ್ತಿ ಸ್ವಾತಂತ್ರ್ಯಕ್ಕೂ ಆತಂಕವನ್ನೊಡ್ಡಿದ" ಅಪವಾದವೊಂದಲ್ಲದೆ ಮತ್ತೇನೂ ಲಭಿಸದು.

ಇದಕ್ಕೆ ಹೊಣೆಯಾರು?

ಇದೇ ತಾ. ೧೫ರಲ್ಲಿ ನೆರೆದಿದ್ದ ಜಿಲ್ಲಾ ಬೋರ್ಡಿನ ಸಭೆಯು ಮೆಂಬರರಿಗೆ ಕ್ಲುಪ್ತ ಕಾಲಕ್ಕೆ ನೋಟೀಸು ಸಿಕ್ಕಲಿಲ್ಲವೆಂಬ ಕಾರಣದಿಂದ ಮುಂದುವರಿಸಲ್ಪಟ್ಟಿತು. ಇಂಥಾ ಪ್ರಮಾದಕ್ಕೆ ಹೊಣೆ ಯಾರು? ಸಭೆಯೊಂದನ್ನು ಕರೆಯಲು ತಗಲುವ ಸುಮಾರು ರೂ. ೩೦೦ರಷ್ಟರ ಹೊರೆಯನ್ನು ಹೊರುವವರಾರು? ಎಂಬ ಪ್ರಶ್ನೆಗಳು ಸ್ವಾಭಾವಿಕವಾಗಿ ಹೊರಡುತ್ತವೆ. ಜಿಲ್ಲಾ ಬೋರ್ಡಿನ ಅಧಿಕಾರಿಗಳಿಗೆ ಚುನಾವಣೆಯ ಅಗತ್ಯ ಕಾರ್ಯಗಳಿರಬಹುದು. ಪ್ರತಿಯೊಂದು ಕ್ಷಣವನ್ನೂ ಅಲ್ಲಿಯೇ ವ್ಯಯಿಸಬೇಕಾದಷ್ಟು ಪ್ರಾಮುಖ್ಯತೆಯು ಚುನಾವಣೆಯ ರಂಗದಲ್ಲಿರಬಹುದು! ಆದರೆ ಆ ಕಾರ್ಯದಲ್ಲಿ ಜಿಲ್ಲಾ ಬೋರ್ಡಿನ ಸಭೆ ಕರೆಯುವ ದಿನಗಳೂ ವ್ಯಯವಾಗಿ ಹೋಗಿದ್ದರೆ ಅದಕ್ಕೆ ತಾವು ಹೊಣೆಯಾಗಲಾರೆವೆಂದು ಮೆಂಬರರು ಸ್ಪಷ್ಟಪಡಿಸಿರುವರು. ಇನ್ನು ಅನಾವಶ್ಯಯವಾಗಿ ಹೋದ ಒಂದು ಸಭೆಯ ಖರ್ಚಿಗೆ ಹೊಣೆಯಾರಾಗಬೇಕು? ಬೋರ್ಡಿನ ಬಡ ತೆರಿಗೆದಾರರೆ? ಉಪಾಧ್ಯಾಯರೇ ಮೊದಲಾದ ಕೆಳ ನೌಕರರು ಎಷ್ಟು ದುಡಿದರೂ, ಸಂಬಳದ ಕಡಿತವನ್ನು ತೆಗೆಯುವದು ಸಾಧ್ಯವಿಲ್ಲ – ಮೇಲಧಿಕಾರಿಗಳ ಸೋಮಾರಿತನಕ್ಕೆ ಮಾತ್ರ ಪರಿಹಾರ ದ್ರವ್ಯವನ್ನು ತೆರಿಗೆದಾರರು ತುಂಬಿಸಬೇಕೆ? ಅದು ನ್ಯಾಯವೆ? ಸಂಬಂಧಪಟ್ಟ ಅಧಿಕಾರಿಗಳೂ, ತೆರಿಗೆದಾರರೂ ಈ ತಪ್ಪಿಗೆ ಪ್ರಾಯಶ್ಚಿತ್ತವನ್ನೇಕೆ ಹುಡುಕಬಾರದು?

ಸೂಚನೆ

ಶ್ರೀ ಕಾರ್ನಾಡು ಸದಾಶಿವ ರಾಯರ ನಿಧನಕ್ಕಾಗಿ ದುಃಖ ಸೂಚಕ ಸಭೆಯು ಉಡುಪಿಯಲ್ಲಿ ನಡೆದುದು ತಾ ೧೧-೧-೩೭ರಲ್ಲಿ. ಕಳೆದ ಸಂಚಿಕೆಯಲ್ಲಿ ಪ್ರಕಟವಾದಂತೆ ತಾ. ೧೫ರಲ್ಲಿ ಅಲ್ಲ.

ಕಳೆದವಾರ ಪ್ರಕಟವಾದ ಒಗಟನ್ನು ರಚಿಸಿದವರು ಶ್ರೀ ರಾಮದಾಸ ನಾಯಕ್, ಕೊಚ್ಚಿಕಾರ್ ಆಫೀಸು, ಉಡುಪಿ, ಇವರು.

ದಿ ಕೋಮನ್ ವೆಲ್ತ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್, ಪೂನ

ಈ ಕಂಪೆನಿಯು ಒಂದೂವರೆ ಕೋಟಿ ರೂಪಾಯಿಗಳಿಗೂ ಮಿಕ್ಕಿ ವಹಿವಾಟು ಮಾಡಿರುವದಲ್ಲದೆ, ಒಂದು ಸಾವಿರಕ್ಕೆ ರೂ. ೨೭½ ಮತ್ತು ೪೫ರಂತೆ ಬೋನಸು ಸಹ ಕೊಟ್ಟಿರುವದು ಎಂದು ಸಂಬಂಧಪಟ್ಟವರು ತಿಳಿಸುತ್ತಾರೆ.

ವಿದೇಶ

ಚೀನಾದಲ್ಲಿ ತಿರುಗಿ ದಂಗೆಯ ಚಿನ್ಹೆ

ಹಿಂದಿನ ದಂಗೆಯ ಮುಖಂಡ (ಕಮ್ಯೂನಿಸ್ಟರ ನಾಯಕ) ಜನರಲ್ ಚಾಂಗ್ ಹ್ಸುಯಾಂಗರನ್ನು ಸರಕಾರವು ಕ್ಷಮಿಸಿ

ಸುದ್ದಿ. ಒಟ್ಟಿನ ಮೇಲೆ, ಈ ಕಾಡುಕರಿ ಜನರ ಊರು ಸೇರಿ ನೆಮ್ಮದಿಯಿಲ್ಲ ಇಟಲಿಯಾನ್ನರಿಗೆ.

ಜಪಾನಿನಲ್ಲಿ ಉದ್ದಗಡ್ಡದವ

ಅವನ ಹೆಸರು ಮಾಂಘೊಜಿರೋ. ಅವನ ಎತ್ತರ ಐದು ಅಡಿ ಒಂದು ಇಂಚು. ಅವನ ಗಡ್ಡದ ಉದ್ದ ಐದು ಅಡಿ ಆರು ಇಂಚು. ಗಡ್ಡವು ಪಾದಿ

ಪಡೆ ಇಗರ್ಜಿಯ ಪಟ್ಟಿಂದ ಹಲವು ಗುಡಿಸಲುಗಳಿಗೆ ಬೆಂಕಿಕೊಟ್ಟರು. ಕಲ್ಲು ಇಟ್ಟಿಗೆಗಳಿಂದ ಇಗರ್ಜಿಕನ್ನಡಿ ಬಾಗಿಲುಗಳನ್ನು ಪುಡಿಮಾಡಿದರು. ಪೋಲೀಸ ಪಡೆಬಂತು. ಅವರ ಮೇಲೂ ಬಿದ್ದರು. ಪೋಲೀಸು ಸಬ್‌ಇನ್ಸ್‌ಪೆಕ್ಟರರಿಗೂ ಸಿಟಿ ಮ್ಯಾಜಿಸ್ಟ್ರೇಟರಿಗೂ ಸಹ ಪೆಟ್ಟುಬಿತ್ತು. ಪೋಲೀಸರು ಬಿರುಪಾಯರಾಗಿ ಗುಂಡುಹಾರಿಸುತ್ತೇವೆಂದು ಸೂಚನೆಕೊಟ್ಟರೂ ಮಂದಿಯು ಹಿಂತೆಗೆಯಲಿಲ್ಲ. ಗುಂಡುಹಾರಿಸಬೇಕಾ

ನ್ಯಾಯವಿಧಾಯಕ ಸಭೆಗಳಿಗೆ ನಾಮಪತ್ರಗಳು

ಮದ್ರಾಸು ಎಸೆಂಬ್ಲಿ ಮತ್ತು ಕೌನ್ಸಿಲುಗಳ ದಕ್ಷಿಣ ಕನ್ನಡದ ಬೇರೆ ಬೇರೆ ಸ್ಥಾನಗಳಿಗೆ ನಾಮಪತ್ರದ ಸ್ವೀಕಾರವು ತಾ ೧೫-೧-೩೭ರಲ್ಲಿ ನಡೆಯಿತು. ನಾಮಪತ್ರಗಳನ್ನು ದಾಖಲ್ಮಾಡಿದವರು—

ಕೌನ್ಸಿಲ್ ಶ್ರೀ ಜಿನರಾಜ ಹೆಗ್ಡೆ, ಶ್ರೀ ಧರ್ಮ ಮಂಜಯ್ಯ ಹೆಗ್ಡೆ, ಶ್ರೀ ಸದಾಶಿವ ಅಡಿಗ.

...ಂಬ್ಲಿ— (ಪುತ್ತೂರು ಜನರಲ್) ಶ್ರೀ ಕೆ ...ಪಾರಂತ (ಕೊಂಗ್ರೆಸ್) ಬಿ. ನರಸಿಂಗರಾವ್ ...ಸ್)

...ಂಗಳೂರು ಜನರಲ್—ಶ್ರೀ. ಬಿ. ವೈಕುಂಠ ... (ಕೊಂಗ್ರೆಸು) ಶ್ರೀ. ಬಿ ಲಕ್ಕಪ್ಪ ರೈ. ...ಸ್) ಹಿಂದೀ ಕ್ರಿಸ್ತ ಸೀಟಿಗೆ—ಪ್ರೊ ಸಿ. ...ರ್ಜಿ (ಕೊಂಗ್ರೆಸ್) ಮಿ ಯಂ ಎಸ್. ... (ಜಸ್ಟಿಸ್) ಮಿ. ಜೆ ಪಿ ಸಿಕೇರ (ಸ್ವತಂತ್ರ) ...ಸ್ಲಿಂ ಸೀಟು— ಮಿ. ಸಯ್ಯದ್ ಹುಸೇನ್... ...ನ್ (ಸ್ವತಂತ್ರ) ಪ್ರತಿಸ್ಪರ್ಧಿಗಳಿಲ್ಲ.

...ಂದಾಪುರ ಜನರಲ್— ಶ್ರೀ. ಎ ಬಿ. ಶೆಟ್ಟಿ ...ಗ್ರೆಸ್) ದಿವಾನ ಬಹಾದೂರ್ ಬಿ ಮುದಾಬಲ (ಜಸ್ಟೀಸ್)

ಬಿಸಿ ವಾರ್ತೆ

...ಐ. ಎಸ್. ರೈಲ್ವೇ ಮುಷ್ಕರದಲ್ಲಿ ಕೆಲ...ದ ತೆಗೆದುಹಾಕಿದವರನ್ನು ಪುನಃ ಸೇ...ಕೊಳ್ಳಬಹುದಾಗಿ ರೈಲ್ವೇ ಏಜಂಟರು ...ಕೆಯನ್ನಿತ್ತಿರುವರು.

ನವಯುಗ ತುಳು ಸಂಚಿಕೆ

ಸಂಪುಟ ೧	ಮಕರ (ಪೊನ್ನಿ) ೮ ಗುರುವಾರ	ಸಂಚಿಕೆ ೪

ಆರೋಗ್ಯಗೀತೆ

(ಪುರಾಲ್ಪ ತುಳುನಾಡ್ ಪತ್ರಿಕೆಡ್ದ್)

(ಬರೆತಿನಾಯೆ—ಟಿ. ಯೆಸ್. ರಾವು)

ಲೋಕೊದೆಂಕುಲು ಸುಕೊಟು ಬಾಲುಬಿ ರೀತಿ ಕೇನ್ಲೆ ಮಿತ್ರೆರೆ
ನೋಕೆ ವನಸ್ಪತಿ ಇದ್ದಿ, ಸುಕ ಸಿನಿಯೆರಾಂಡ, ಸತ್ಯೊನೆ ಮಿತ್ರೆರ

ಪುಲ್ಯ ಲಕ್ಕ್‌ದ್, ಮೋನೆ ದೆಕ್ಕ್‌ದ್, ಕೂಲಿ ಬೆಲಗ್‌ದ್ ನಿತ್ಯೊಲಾ
ಜಲಕ ಮಲ್ತ್‌ದ್, ಮೆಯಿನ್ ನಿರ್ಮಲ, ದಿಂಡ ಸುಕ ಬರು ಸತ್ಯೊಲಾ

ಮಯಿಲೆ ದೆಕ್ಕ್‌ದಿ ಕುಂಟು ತುತ್ತ್‌ಂಡ, ಬರಂದ್ ಕುರೆ, ಪುಡಿ ಏಪಲಾ
ಮಯಿಲೆ ಕಯಿ, ಮೆಯಿ, ಮೋನೆ ಮಾತಲ, ಮರ್ಜಿ ರೋಗದ ತೂಪೊನ್ಲಾ

ಹಿತದ ತಿನಸ್‌ನ್ ಮಿತಿಟ್ ತಿಂದ್‌ದ್ ಅತಿನ್ ಬುಡುದು ಉಪ್ಪೊಲಾ
ಮತಿನ್ ಮದವಡ, ಕತಿನ್ ಸತ್ತಡ, ಸತತ ನಿರ್ಮಲೊಡುಪ್ಪೊಲಾ

ಮುಸುಕು ಮೋನೆಗ್ ದೀದ್ ಜಪ್ಪಡ, ಉಸಕ್ ಬರು ಮೆಯಿ ಕಯಿಕುಲು
ಮುಸುಕುದುಲಯಿದ ಗಾಲಿ ಏಸ ಅಪ್ಪ ಕನವ್ಪ ಬಗೆಬಗೆ ರೋಗೊಲು

ತರೆಕ್ ಏರಾಪೊಡು, ಎಣ್ಣೆ ಪಾಡೊಡು, ಕುರೆನ್ ದೆಕ್ಕ್‌ದ್ ಕಲೆಪೊಡು
ಕರಕರಿದ್ಯಂದೆ ಮದನ್ ನಿರ್ಮಲ ದೀದ್ ನಡಪೊಡು ಲೋಕೊಡು

ಜಾಲ್ ಯಿಲ್ಲ್‌ನ್, ಕೆಸುಸು ಗೂಪಲ್‌ದಪ್ಲು ದೀಪೊಡು ನಿರ್ಮಲ
ಗಾಲಿ ತೂಂಬುದ ಬೊಲ್ಪು ಕಂಡಿದ ಇಲ್ಲ್ ಇತ್ತ್‌ಂಡ ಪರಿಮಲ

ಕೊಟ್ಯ ಕಿದೆಸ್ಲ್ ಮೂರ ಮಲ್ತ್‌ದ್ ಉಮಿಲ್ ಕಾಟೊನು ತಪ್ಪಲ
ಒಟ್ಟು ಅಡಿತ್‌ದ್ ಮೂಲೆ ಬಲೆಕ್ಲ್‌ನ್ ಕುಟ್ಟು ದಕ್ಕ್‌ಂಡ ನಿರ್ಮಲ

ಜಗಲಿ ಚಾವಡಿ, ಕೋಣೆ ಸಂದ್‌ದ್, ಕಟ್ಟ್‌ದೀಪಡ ಕೋರಿನ್
ಮಗಟ ಪ್ರೀತಿಡ್ ಬುಡದ ಗೊಬ್ಬೆರೆ ಕೋರಿ ಕಿಸ್ಸಿನ್ ನಾಯಿನ್

ಕಿಲೆಂಜಿ ಮುಟ್ಟಿನ ತಿನಸ್ ತಿನ್ನಡ ಕಿಲೆಂಜಿ ರೋಗದ ಮುದ್ದೆನೆ
ಕಿಲೆಂಜಿ ಮುತ್ತುಬಿ ವಸ್ತ್ ದೀವದೆ ಮುಚ್ಚಿದೀಪೊಡು ಮಾತೆನ್

...E

...Register of members ... Limited, Udipi will ...th January 1937, to ...th days inclusive.

...Lakshman Nayak,
SECRETARY

...DIA

...ANGALORE.

...ರಾ ದೇಶೀಯ ಆಡಳಿತೆ
...ರ್ಯಕ್ರಮ.
ಉದಾರವಾದ ಶರ್ತಗಳು
...ತ ವ್ಯವಹಾರ.
...ರು ಏರ್ಪಾಡುಗಳು,
...ವರಿಗೆ ಸರ್ವಾನುಕೂಲ.
...ಖಂಡಿತವಾದ ಭದ್ರತೆ.
ಸಂಪಾದನೆ ಅನಿಶ್ಚಿತ.
...ೀ ಉತ್ತಮ ಪರಿಹಾರ.
...ಕೊಂಡವರು
...ಗಾರರು.

commission or salary or both.

Notice: All the policy holders & agents are informed that all future dealings must be made with The Branch Secretary, The Guardian of India Insurance Co., Ltd., Mangalore Branch.

ಸೂಚನೆ:—ನಮ್ಮ ಎಲ್ಲಾ ಪಾಲಿಸಿದಾರರೂ, ಏಜಂಟರೂ ಇನ್ನು ಮುಂದೆ ತಮ್ಮ ವ್ಯವಹಾರವನ್ನು ದಿ ಬ್ರಾಂಚ್ ಸೆಕ್ರಿಟರಿ, ದಿ ಗಾರ್ಡಿಯನ್ ಒಫ್ ಇಂಡಿಯಾ ಇನ್ಶೂರೆನ್ಸ್ ಕೋ., ಲಿಮಿಟೆಡ್, ಮಂಗಳೂರು ಶಾಖೆ ಇವರೊಡನೆ ಬೆಳೆಸಬೇಕಾಗಿ ವಿನಂತಿ.

ವಿಶೇಷ ಮಾಹಿತಿಗಳಿಗೆ ಇವರಿಗೆ ಬರೆಯಿರಿ.

E. A. PAIS, B. Sc, ***Branch Secretary***, **The Guardian of India Insurance Co., Limited,**
MANGALORE BRANCH.

ದಿ ಗಾರ್ಡಿಯನ್ ಒಫ್ ಇಂಡಿಯಾ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್,
ಮುಖ್ಯ ಆಫೀಸು—ಪೋಸ್ಟ್ ಬೊಕ್ಸ್ ೮೯—ಮದ್ರಾಸು.

ಚಂದಾದಾರರಲ್ಲಿ

ಚಂದಾಹಣ ಬಾಕಿ ಇರುವ ನಮ್ಮ ಚಂದಾದಾರರು ಅದಷ್ಟು ಬೇಗನೇ ತಮ್ಮ ಹಣವನ್ನು ಮಣಿಯಾರ್ಡರ್ ಮೂಲಕ ದಯವಿಟ್ಟು ಕಳುಹಿಸಿಕೊಡಬೇಕಾಗಿ ಅಪೇಕ್ಷಿಸುತ್ತೇವೆ. ವಿ. ಪಿ. ಮಾಡುವದಾದರೆ ಐದಾಣೆ ಬೀಳುವದು.

ನಮ್ಮೊಡನೆ ಪತ್ರವ್ಯವಹಾ[ರ]ಸುವವರು ತಮ್ಮ ಚಂದಾ[ನಂಬರ]ವನ್ನು ಸೂಚಿಸಿ ಬರೆಯ[ಬೇಕಾಗಿ] ವಿನಂತಿ.

ಮೆನೇಜರ್, 'ನವ[ಯುಗ']

ದು ಹುರುಪೆದ್ದಿದೆ ನಮಗೆ ನಿಜವಾಗಿಯೂ ಅಂತಹ ಪರಿಣಾಮವುಂಟಾಗಬೇಕಾಗಿದೆ, ಆದರೆ ಒಂದು ಪ್ರಶ್ನೆ ಇಂದು ಎದ್ದಿರುವ ನವಜಾಗ್ರತಿಯು ಕಾರ್ಯಸ್ಫೂರ್ತಿಯು, ಕೆಲವು ಎಸೆಂಬ್ಲಿ ಸೀಟುಗಳ ಸಂಪಾದನೆಯೊಡನೆ ಮುಕ್ತಾಯ ಹೊಂದೀತೆ? ಇಷ್ಟೂ, ಬಲವಾಗಿ ಹರಡಿರುವ ರಾಷ್ಟ್ರೀಯ ಗೆಲ್ಲಬೇಕು ಎಂಬ ನ್ಯಾಯವು ನಮಗೆ ಗೊತ್ತಿದೆ ಅಷ್ಟೊಂದು ಸಹಾನುಭೂತಿಯು ಕೊಂಗ್ರೆಸಿನೊಡನಿದೆ ಆದೇ ಕೊಂಗ್ರೆಸಿಗೆ ಹಿಂದೂದೇಶದ ಪೂರ್ಣ ಸ್ವಾತಂತ್ರ್ಯವನ್ನು ಕಾಣದೆ ನಿದ್ದೆ ಬೀಳುವಂತಿಲ್ಲ, ಅದರೊಡನೆ ಸಹಾನುಭೂತಿಯಿರುವ ನಮಗೂ ಹಾಗೆಯೇ ಆಗಬೇಕಲ್ಲವೇ? ವಣೆಯ ಕಾರ್ಯವನ್ನು ಬಲಗೊಳಿಸುವದಕ್ಕಾಗಿ ಈ ವ್ಯವಸ್ಥೆಯನ್ನು ಮಾಡಿದ್ದರು. ಅದನ್ನು ಸರಕಾರವು ತಡೆಗಟ್ಟಿದಂತಾಯಿತು. ಜತೆಯಲ್ಲಿಯೇ ಶ್ರೀಮತಿಯವರ ವ್ಯಕ್ತಿ ಸ್ವಾತಂತ್ರ್ಯಕ್ಕೂ ಮನ್ನಣೆ ಕೊಡದಂತಾಯಿತು! ಪಟ್ಟಣದ ನಾಗರೀಕರ ನ್ಯಾಯಪರ ಅಪೇಕ್ಷೆಯನ್ನೂ, ಅಲಗಳೆದಂತಾ

ಡಾಕ್ ಪಾಡ್ಂಡ ಮೂರ ಪೋಪುಂಡು ಮಯಿಲಿಗಜ್ಯನ್ನ ಊರುಡು
ದಾಕ್ ಪಾಡೊಡು ಮಾತ ಊರುದು, ಉಪ್ಪುಂಡವು ಸುಕ ಸಂಗೊಡು

ಬಂಗಿ ಸಿಗ್ರೇಟ್ ಬೀಡಿ ಓಪೀಮ್ ಹಾಲ್‌ಮಲ್ಪುಂಡು ನಮ್ಮನ್
ಮಂಗೆ ಮಲ್ಪುಂಡು ಊದು ಕೊಪೊಡು ಪರಂಡ ಕಲಿಸರಾಯಿನ್

ಕಾಪಿ ಚಾತಭ್ಯಾಸ ಮಲ್ತದ ಬುಡಂಡ್ ನಿನನವು ಯೇಪೊಲ
ಅಪೀಮ್ ಬಂಗಿದಲೆಕ್ಕು ಮನಸ್ಸ್‌ನ್ ಹಾಲ್‌ದೀವುಂಡೇಪೊಲ

ದೂರಮಲ್ತ್‌ದ್ ಹಾಲ್ ತಿಬ್ಬೆನ ಬಾರಿ ತೆರಿನಾಯೆ ಆಪುನ್ನಾ
ಊರು "ತುಳುನಾಡ್" ಊರ ಐಸಿರಿ ಹೆಚ್ಚೊಡಿಂಡ್‌ದ್ ಕೇನೂನ್ನಾ

"ಪ್ರಕಾಶಕೆ—ತುಳುನಾಡ್ ಪತ್ರಿಕ"

ಮುತ್ತೊಕುಳು

(ಜನೇದ ಪುರಾಲ್ದ ತುಳುನಾಡ್ ಪತ್ರಿಕೆಡ್ದ್) (ಬಾರುಬಕ್ಕನೆ—ಪ್ರಶ್ನೋತ್ತರ)

(ಲೇಖಕೆ —ಅಮ್ಮೆಂಬಳ ಶಂಕರನಾರಾಯಣ, ವಿದ್ವಾನ್)

೧ ಹಿಂದು ಮತೊಡು ಉಂಡುಮಲ್ತಿನಾರ್ ಯೇರ್‌ಯೆ?
ಕುಂದು ಕೊರತ ನಾಮ ರೂಪು ದಾಂತಿ ಚಿನ್ಮಯೆ
೨ ಆಯಿನ್ ಪೊಕ್ಕ ವೃದ್ಧಿರೂಪುಗೇರ ಕನತೆರ್?
ಪೂರ್ಣ ನಾತ್ರ ವೇದ ಬರೆಯಿ ಯೋಗಿವರ್ಯೆರ್!
೩ ಯಾಗೊಡಾಪಿ ಜಂತು ಹಿಂಸನೇರ್ ಮುಗಿತೆರ್?
ಜಂಗ ಬೌದ್ಧಮತೊಡು ಮಲ್ತಿ ಬುದ್ಧ ದೇವೆರ್!
೪ ದಯತ ಕಡಲ್ ಜೈನ ಮತೊಡು ಮಲ್ತಿನೇರ್ ಯೆ?
ನಯೊಟು ದರ್ಮ ಪತ್ತಿ ಮಹಾವೀರ ಸ್ವಾಮಿಯೆ
೫ ಕ್ರೈಸ್ತ ಮತೊಡು ನಂಬು ಸುರು ಮಲ್ತಿನೇರ್ ಯೆ?
ನಷ್ಟ ತಪ್ಪ ಬುಡುದು ತಯ್ತಿ ಯೇಸುಕ್ರಿಸ್ತೆಯೆ
೬ ಬ್ಯಾರಿಲೆಪ್ಪಿ ಇಸ್ಲಾಂ ಮತೊಡು ಮಲ್ತಿನೇರ್ ಯೆ?
ದೂರ ಅರಬಿಡಿತ್ತಿನಾ ಮಹಮ್ಮದೆತ್ತಯೆ
೭ ಪಾರಶೈವ ಮತೊಡು ವೃದ್ಧಿಗೇರ್ ಕನತೆರ್?
ಭಾರಿ ಬಸವ ಪುರುಷೇಶ ಸ್ವಾಮಿಬಾವೆರ್
೮ ಬೀರ ಸಿಕ್ಖ ಸಿಕ್ಖಮತೊಡು ತಾನೇನೇರ್ ಯೆ?
ಆರ್ ದೇವಕಿಂಡಿ ಗುರು ನಾನಕೆರ್ತಯೆ
೯ ಜನಿ ಅದ್ವೈತ ಮತೊಡು ಮಲ್ತಿನೇರ್ ಯೆ?
ಗೇನದಾರ್ ಶಂಕರಾಚಾರ್ಯೆರತ್ತಯೆ
೧೦ ಆ ವಿಶಿಷ್ಟಾದ್ವೈತ ಮತೊಡು ಮಾತಿನೇರ್ ಯೆ?
ಶ್ರೀ ವೈಷ್ಣವೇರ ರಾಮಾನುಜೆರತ್ತಯೆ
೧೧ ದ್ವೈತ ಮತೊಡು ಉಂಡುಮಲ್ತಿನಾರ್ ಯೇರ್ ಯೆ?
ಮಾತ ಹರಿಯೆ ಎಂದ್ ಪನ್ಪಿ ಮಧ್ವಾಚಾರಿಯೆ
೧೨ ಪ್ರಾರ ನಾ ವೈದೀಕ ಮತೊಡನೇರ್ ದೆತೆರ್?
ಲೋಕೆದಾರ್ಯ ಕೊಟ ಮಲ್ತಿ ದಯಾನಂದೆರ್
೧೩ ಮಾತ ಮತಲ ಒಂಜೆಂದ್ ತೋಜಾದಿನೇರ್ ಸ್ವಾತ್ಯರ?
ನೀತಿದಾರ್ ರಾಮಕೃಷ್ಣ ಪರಮಹಂಸೆರ್
೧೪ ಹಿಂದು ಮತೊಡು ಮಲ್ಲೆಯಿಂದ್ ನಾದಿನೇರ್ ಯೆ?
ಗೆಂದ ಬತ್ತಿನಾ ವಿವೇಕಾನಂದೆರತ್ತಯೆ
೧೫ ಆ ಸ್ವರಾಜ್ಯೊಗಾದ್ ಕಷ್ಟಬುಡ್ತಿನೇರ್ ಯೆ?
ನಾನ ಮಲ್ಪುನಾ ಮಹಾತ್ಮಗಾಂಧ್ಯೆರತ್ತಯೆ

ಪ್ರಕಾಶಕೆ
ತುಳುನಾಡ್, ಪುರಾಲ್.

ತುಳು ಬಾಸೆದ ಪ್ರೆಲ್ಯರ್ನ್‌ಲಾ ಕತೆಗಾರಿಕೆದ ತಿರ್ಲ್‌ನ್‌ಲಾ ತೂವೊಡಾಂಡ

ಮಿತ್ರನಾರಾಯಣ ಕತೆನ್

ಬರೆತಿನಾರ್] ಓದೊಡು [ಶ್ರೀ. ಎಸ್. ಎ. ತೀನಪ್ಪ ಹೆಗ್ಡೆ.

ನವಯುಗ

ಉಡುಪಿ, ತಾ ೨೧-೧ '೩೭ ಗು[ರುವಾರ]

ಚುನಾವಣೆಯಿಂದ ರಾಷ್ಟ್ರೀಯಭಾವ

ಹಿಂದೂದೇಶದಲ್ಲಿ ಈ ಸಲದ [ಚುನಾ]ವಣೆಯು ಎಬ್ಬಿಸಿರುವಷ್ಟು ಗೊಂ[ದಲ] ಹಿಂದಾವುದೂ ಎಬ್ಬಿಸಿರಲಿಲ್ಲ ಈ[ತ]ರದ ಸಾರ್ವಜನಿಕ ಸಂಬಂದ[ವು] ಯಾವಾಗಲೂ ಉಂಟಾಗಿರಲಿಲ್ಲ[ವ]ಕ್ಕೆ ಕಾರಣವೇನು? ಈಗ ವ[...] ಸಂಖ್ಯೆ ಮೂರು ಕೋಟಿಯಷ್ಟಾ[...]ವ ಊರು ಕೋಟಿಯು ಅನುಮತಿ ಎಸೆಂಬ್ಲಿಗೆ ಹೋಗಿರೆಂದು 100C[...] ಕ್ಕಿಬ ತನ್ನ ಪ್ರತಿನಿಧಿಗಳನ್ನು [...] ಯು ರಣಕಣಕ್ಕಿಳಿಸಿದ ಈ[...] ಬರುವದಲ್ಲಾ ಮತದಾರರನ್ನು ಅವರ ಮನವೊಲಿಸುವ ಗದ್ದಲ ಪ್ರೇಮಿಗಳೆಲ್ಲರೂ ಕೊಂಗ್ರೆಸು [...]ತಾಗಬೇಕೆಂದು ಸೊಂಟಕಟ್ಟಿಹೆತ್ತಿದ್ದಾರೆ. ಹುರುಪೇರಿರುವ [...]ಣವು ದೇಶಾಭಿಮಾನವಿರುವ [...]ನನ್ನು ವಿಶ್ರಾಂತಿ ಸುಖವನ್ನು ನ[...] ಬಿಟ್ಟಿಲ್ಲ ರಾಜಕೀಯ ಕ್ಷೇತ್ರದಿಂ[ದ] ಕಾಲಿಟ್ಟಿದ್ದ ಮದ್ರಾಸಿನ ಶ್ರೀ [ರಾಜ]ಗೋಪಾಲಾಚಾರಿಯವರು ಈಗ [...]ಟಕೆ, ಮುಂದ ಬಂದಿರುವರು [...]ಗಾಂಧಿತ್ವವಾದಿಯಾದ ಅವರೀಗ [...]ಸಿನ ಎಸಂಬ್ಲಿ ಸ್ಥಾನವೊಂದಕ್ಕೆ [...]ಲಿರುವರು, ಇತ್ತ ಪಂಡಿತ ಜವ[ಹ]ಲರು,-ಎಸೆಂಬ್ಲಿ ಕೌನ್ಸಿಲುಗಳನ [...]ರಹಿತ ಗೃಹಗಳೆಂದೇ ಹೇಳುವವ[...]ರಿಂದೂರಿಗೆ ವಿಮಾನದಲ್ಲಿ ಧಾ[...] ರಾಷ್ಟ್ರಸಭೆಯ ಸಂದೇಶವನ್ನು [...]ರುವರು! ದೇಶದಲ್ಲೆಲ್ಲಾ ರಾಷ್ಟ್ರೀ[ಯಭಾ]ವನೆಯ ಪ್ರಸಾರವು ತೀವ್ರವಾಗಿ ಆಗುತ್ತಿದೆ. ಕಲಸಗಾರರಲ್ಲಿ ಸ್ಫೂರ್ತಿಯೆದ್ದಿದೆ!

ಈ ನವ ಜಾಗ್ರತಿಯು ಗುರಿಯ ಸ್ಪಷ್ಟೀಕರಣದಿಂದಲೇ ಉಂಟಾದುದೆಂಬುದರಲ್ಲಿ ಸಂದೇಹವಿಲ್ಲ. ಕೊಂಗ್ರೆಸು ಪ್ರತಿನಿಧಿಗಳು ಆರಿಸಲ್ಪಡಬೇಕು. ಅವರು ಎಸೆಂಬ್ಲಿಗಳನ್ನು ಹೊಕ್ಕು ಆ ಮೂಲಕ ಹೊಸ ಸುಧಾರಣೆಗೆ ಬಲವಾದ ಪೆಟ್ಟನ್ನಿಡಬೇಕು ಈ ತೀರ್ಮಾನದ ಅಪೇಕ್ಷೆಯಿಂದಲೇ ಇಂದಿನ ಚುನಾವಣೆಯ ರಂಗದಲ್ಲಿ ಇಷ್ಟೊಂದರೆ, ಹಿಂದುಸ್ಥಾನದ ವಿಪತ್ತು ದೂರವಾಗಲು ಹೆಚ್ಚು ಕಾಲವಿರಲಾರದು ಚುನಾವಣೆಯಲ್ಲಿ ಕೊಂಗ್ರೆಸೊಂದೇ ಜಯಿಸಿ ಬರುವಂತೆ ನೋಡಬೇಕು, ಆ ಜಯದ ಸತ್ಫಲವನ್ನು, ನಾವದನ್ನು ಸಂಪಾದಿಸಲು ಕೈಕೊಂಡ ಕಾರ್ಯ ಸ್ಫೂರ್ತಿ ಜನಸಾಮಾನ್ಯರೊಡನೆ ಆ ಮೂಲಕ ಉಂಟಾಗಿರುವ ಸಂಬಂಧ, ಇವೆಲ್ಲಾ ಹಿಂದೀ ಸ್ವಾತಂತ್ರ್ಯದ ಕೊನೆಯ ಗುರಿಯ ವರೆಗೂ ಮುಂದೆ ಸಾಗಬೇಕು! ಚುನಾವಣೆಯಲ್ಲಿ ಕೊಂಗ್ರೆಸೇ ರೆಲ್ಲಿ ತಮ್ಮ ನೆಮ್ಮದಿಯನ್ನು ಕೆಡಿಸುವರೋ ಎಂದು ಸರಕಾರವು ಹೆದರುವದಕ್ಕಿಂತಲೂ ಹೆಚ್ಚಾಗಿ, ತಮ್ಮ ಕೆಲಸದ ಏಕಾಗ್ರತೆಯನ್ನು ಬಿಟ್ಟು ಅಡ್ಡ ಹಾದಿ ಹಿಡಿಯಲು ಕೊಂಗ್ರೆಸಿನವರೇ ಹೇಸುತ್ತಿದ್ದಾರೆ. ಹೀಗಿರುವಾಗ ಶ್ರೀಮತಿ ಕಮಲಾ ದೇವಿಯರಿಂದ ಶಾಂತಿಭಂಗವಾಗುವದೆಂದು ನ್ಯೂಸೂರು ಸರಕಾರವು ಗೊತ್ತು ಹಚ್ಚಿದುದು ಹೇಗೆ ಎಂಬುದೇ ಪ್ರಶ್ನೆ? ಅಲ್ಲಿಯ ಕೊಂಗ್ರೆಸು ಪಾರ್ಲಿಮೆಂಟರೀ ಬೋರ್ಡಿನವರು ತಮ್ಮ ಚುನಾ

[...] ಉಡುಪಿ, ಇವರು.

ದಿ ಕೋಮನ್ ವೆಲ್ತ್ ಇನ್ಶೂರೆನ್ಸ್ ಕೆಂಪೆನಿ, ಲಿಮಿಟೆಡ್, ಪೂನ

ಈ ಕೆಂಪನಿಯು ಒಂದೂವರೆ ಕೋಟಿ ರೂಪಾಯಿಗಳಿಗೂ ಮಿಕ್ಕಿ ವಹಿವಾಟು ಮಾಡಿರುವದಲ್ಲದೆ, ಒಂದು ಸಾವಿರಕ್ಕೆ ರೂ ೩7½ ಮತ್ತು 45ರಂತೆ ಬೋನಸು ಸಹ ಕೊಟ್ಟಿರುವದು ಎಂದು ಸಂಬಂಧಪಟ್ಟವರು ತಿಳಿಸುತ್ತಾರೆ

ವಿದೇಶ

ಚೀನಾದಲ್ಲಿ ತಿರುಗಿ ದಂಗೆಯ ಚಿನ್ಹೆ

ಹಿಂದಿನ ದಂಗೆಯ ಮುಖಂಡ (ಕ ಮ್ಯೂನಿಷ್ಟರ ನಾಯಕ) ಜನರಲ್ ಚಾಂಗ್ ಹ್ಸುಯಾಂಗರನ್ನು ಸರಕಾರವು ಕ್ಷಮಿಸಿ

ಸುದ್ದಿ. ಒಟ್ಟಿನ ಮೇಲೆ, ಈ ಕಾಡುಕರಿ ಜನರ ಊರು ಸೇರಿ ನೆಮ್ಮದಿಯಿಲ್ಲ ಇಟಲಿ ಯಾನರಿಗೆ.

ಜಪಾನಿನಲ್ಲಿ ಉದ್ದ ಗಡ್ಡದವ

ಅವನ ಹೆಸರು ಮಾಂಪ್ಪೂಜರೋ. ಅವನ ಎತ್ತರ ಐದು ಅಡಿ ಒಂದು ಇಂಚು. ಅವನ ಗಡ್ಡದ ಉದ್ದ ಐದು ಅಡಿ ಆರು ಇಂಚು! ಗಡ್ಡವು ಹಾದಿ

ಪಡೆ. ಇಗರ್ಜಿಯ ಪಟಾರದ ಹಲವು ಗುಡಿಸಲಗಳಿಗೆ ಬೆಂಕಿಕೊಟ್ಟರು. ಕಲ್ಲು ಇಟ್ಟಿಗೆಗಳಿಂದ ಇಗರ್ಜಿ ಕನ್ನಡಿ ಬಾಗಿಲುಗಳನ್ನು ಪುಡಿಮಾಡಿದರು. ಪೋಲೀಸ ಪಡೆಬಂತು. ಅವರ ಮೇಲೂ ಬಿದ್ದರು. ಪೋಲೀಸು ಸಬ್ಇನ್ಸ್‌ಪೆಕ್ಟರರಿಗೂ ಸಿಟಿ ಮ್ಯಾಜಿಸ್ಟ್ರೇಟರಿಗೂ ಸಹ ಪೆಟ್ಟುಯಿತು. ಪೋಲೀಸರು ಇರುಮುಯರಾಗಿ ಗುಂಡುಹಾರಿಸುತ್ತೇವೆಂದು ಸೂಚನೆಕೊಟ್ಟರೂ ಮಂದಿಯು ಹಿಂತೆಗೆಯಲಿಲ್ಲ. ಗುಂಡು ಹಾರಿಸಲಾಗ...

ನ್ಯಾಯವಿಧಾಯಕ ಸಭೆಗಳಿಗೆ ನಾಮಪತ್ರಗಳು

ಮದ್ರಾಸು ಎಸೆಂಬ್ಲಿ ಮತ್ತು ಕೌನ್ಸಿಲುಗಳ ದಕ್ಷಿಣ ಕನ್ನಡದ ಬೇರೆ ಬೇರೆ ಸ್ಥಾನಗಳಿಗೆ ನಾಮಪತ್ರದ ಸ್ವೀಕಾರವು ತಾ ೧೮-೧-೩೭ರಲ್ಲಿ ನಡೆಯಿತು. ನಾಮಪತ್ರಗಳನ್ನು ದಾಖಲ್ಮಾಡಿದವರು—

ಕೌನ್ಸಿಲ್ ಶ್ರೀ ಜನರಾಜ ಹೆಗ್ಡೆ, ಶ್ರೀ ದರ್ಮ ಮಂಜಯ್ಯ ಹೆಗ್ಡೆ, ಶ್ರೀ ಸದಾಶಿವ ಅಡಿಗ.

...ಂಬ್ಲಿ— (ಪುತ್ತೂರು ಜನರಲ್) ಶ್ರೀ ಕೆ. ಕಾರಂತ (ಕೊಂಗ್ರೆಸ್) ಬಿ. ನರಸಿಂಗರಾವ್ ...ಕ್)

...ಂಗಳೂರು ಜನರಲ್—ಶ್ರೀ. ಬಿ. ವೈಕುಂಠ ...(ಕೊಂಗ್ರೆಸು) ಶ್ರೀ. ಬಿ. ಲಕ್ಕಪ್ಪ ರೈ, ...ಕ್) ಹಿಂದೀ ಕ್ರಿಸ್ತ ಸೀಟಿಗೆ—ಪ್ರೊ. ಸಿ. ...ರ್ಕೆ (ಕೊಂಗ್ರೆಸ್) ಮಿ. ಯಂ ಎಸ್. (ಜಸ್ಟಿಸ್) ಮಿ. ಜೆ ಪಿ. ಸಿಕೇರ (ಸ್ವತಂತ್ರ) ...ಸ್ಲಿಂ ಸೀಟು— ಮಿ ಸಯ್ಯದ್ ಹುಸೇನ್ ...ಶ್ (ಸ್ವತಂತ್ರ) ಪ್ರತಿಸ್ಪರ್ಧಿಗಳಿಲ್ಲ.

...ಂದಾಪುರ ಜನರಲ್— ಶ್ರೀ. ಎ. ಬಿ. ಶೆಟ್ಟಿ ...ಗ್ರೆಸ್) ದಿವಾನ ಬಹದ್ದೂರ್ ಬಿ ಮಹಾಬಲ (ಜಸ್ಟೀಸ್)

ಬಿಸಿ ವಾರ್ತೆ

...ಪಿ. ಎಸ್. ರೈಲ್ವೇ ಮುಷ್ಕರದಲ್ಲಿ ಕೆಲ...ಸದ ತೆಗೆದುಹಾಕಿದವರನ್ನು ಪುನಃ ಸೇ...ಕೊಳ್ಳಬಹುದಾಗಿ ರೈಲ್ವೇ ಏಜಂಟರು ...ಕೆಯನ್ನಿತ್ತಿರುವರು.

...CE

Register of members ... Limited Udipi will ...th January 1937, to ...5th days inclusive.

Lakshman Nayak,
SECRETARY.

● ಪಸು ●

ಬರೆತಿನಾಯಿ ಪರಮೇಶ್ವರಯ್ಯ

(ಬೇಸ ತಿಂಗೊಲ್ದ 'ತುಳುನಾಡ್' ಪತ್ರಿಕೆಡ್ದ್)

ನರಮಾನಿಲೆಗ್ ಪಸುಕುಳೆ ಉಪಕಾರ ಏತ್ಂದ್ ಪಣಿಯೆರೆ ಸಾಧ್ಯನೇ ಇದ್ದಿ. ಪೇರ್, ಕೊಜಪ್ಪು, ಸೈ, ಬೊಳ್ಳಿಯಿ, ಅಳೆ, ಮಿನಿ ಬೋಡು ಬೋಡಾಯಿನ ತಿನಸ್‌ದ ಬಗೆಕುಳುಲಾ ಪಲಪ್ಪುರುಳೆಗ್ ಎಡ್ಡೆ ಸಗ್ತಿಯಾದ್ ಒಸಿಪರೆಗ್ ಬೋಡಾಯಿನ ಕಾಪ್ಪುದ ಪಜೆ ಸುಂಗೆಲ್ ಪ್ರೊಡಿಗೊಬ್ಬ ಮೊಲುಲಾ, ಮದ್ದ್‌ಗ್ ಬೋಡಾಯಿನ ಗೋಮಯ, ಗೋಮೂತ್ರ, ಅಂಚಿ ಮಿನಿ ಮಾತ ಪಸುಕುಳೆಡ್ದೇ ತಿಕ್ಕೊಡು. ಉಂಬುಲಾ ಪೆತ್ತ, ಬೋರಿ, ಎರ್ಮೆ, ಎರು, ಪಡ್ಡ, ಗುಡ್ಡೆ, ಕುರಿ, ಕುಂಡ್ರ, ಕೆತ್ತಿ, ಒಂಟೆ, ಆನೆನೇ ಮೊದಲಾಯಿನೆತ್ತ ಗೊಬ್ಬರ ಅಯಿಟ್ಲಾ ಆನೆ ಒಡುಮು ಬಾಳೆದಯಿಕುಳೆನ್ ಪದ್ದೆಡೆ, ನೀರೊಯಿನೆರೆ, ಪೇರ್ ಪಾಡ್ದ್ ನಾಗಾಪೆಡೆ, ಗಾಡಿ ಒಯಿಪೆರೆ ಮಿನಿ ಆಯಾಯ ಜಾತಿದ ಪಸುಕುಳೆನ್ ಉಪಯೋಗ ಮಲ್ತ್‌ಂಡಲಾ ಜಾತಿ ಪಸುಕುಳೆನಾತ್ ಪರಜನೊಗು ಬೂರುನ ಪ್ರಾಣಿಲು ಜೀತದಪ್ಪ ಅತ್ತ್. ಕೋಳಿ, ಆನೆ ಮರ ಒಯಿಪೆರೆ, ಕಲ್ಲ್ ದೆರ್ಪೆರೆ ಮಿನಿ ಮಲ ಮಲ್ಲ ಕೆಲಸೊಲೆಗಾಂಡ್ ಒಂಟೆ ಸಾಮಾನ್ ನಾಗಾಪೆರೆ ಒದಕಾಂಡ್ ಪ್ರಾಯ್ಯೆದ ರಾಜೆನ್ನೆಡು ಒಂಜಿ ಊರುಡ್ದು ಊರುಗು ಪೋಪರೆಲಾ ಸವಾರಿಗ್ ಅಯಿನ್ ಉಪಯೋಗ ಮಲ್ಪುವೆರ್. ಕುದ್ರೆ ಗಾಡಿ ಒಯಿಪರೆ, ದಪ್ಪರೆ, ಪೇರ್ ನಾಗಾಪೆರೆ, ಕುಳ್ಳೆರೆ, ಸವಾರಿ ಮಲ್ಪೆರೆ, ಇಂಚ —ಪತ್ತೆಲುಲಾ ಅಂಚಿನ ಜಟ್ಟಿಗು ಕಟ್ಟೆರೆ, ಪುದೆ ತುಂಬೆರೆ, ಮದ್ದೊಳ್ಳೆನ ಕುಟ್ಟು ಗಂಟ್ ತುಂಬೆರೆ ಮಿನಿ ಉಪಯೋಗ—ಪದ್ ಕುರುಕುಳೆನ್ ದಪ್ಪುನ ಕೆಲಸೊ. ಎರು —ದಪ್ಪೆರೆಗ್, ಗಾಡಿಗು ಕಟ್ಟೆರೆಗ್ ಗಿಡಾಪೆರೆಗ. ಮಿನಿ ಎರ್ಮೆ ಪೇರ್ ಕೊರ್ಪುಂಡು ಆಂಡಲಾ ಪಸು ಇಂದ್‌ಂಡ ನಿಜವಾಯಿನ "ಕಾಮಧೇನು" ಇಂದ ಂದ ಸತ್ತ—ಅಂಚಿನ "ಪ್ರತ್ಯಕ್ಷ" ಇಂದ ಂದ ಜೀವಿ. ಇಂಚ ಇತ್ತಿನ ಪತ್ತ ಬೊಕ್ಕ ಬೋರಿ ಇಂದು ರತ್ನಯಿನಲಾ ಲೆಪ್ಪುನ ಒಂಜೇ ಪ್ರದಾರ್. ಒಪ್ಪ ಇಂದ್‌ಂದ "ಗೋವು" ಅಂಚಿನ ಗೋತ್ರ ಪಣ್ಪಿನ ಪಸುಕುಳೆ ಕುಟುಂಬದ ಏಳಿಗೆನೇ ಇಡೀ ನರಮಾನಿ ಕುಟುಂಬದ ಏಳಿಗೆ ತೂಲೆ. ಬೋರಿಲೆನ್ ಗಾಡಿಗ್ ಕಟ್ಟುವೆರ್. ನಾಜೊಗು ಕಟ್ಟುವೆರ್, ನೀರ್ ದೆಪ್ಪು ಕಸಿಲೆಗ್ ಕಟ್ಟುವೆರ್, ದಪ್ಪರೆ ಕಟ್ಟುವೆರ್, ಒಯಿ ಮೊಂಕಾವೆರ್, ಕುಕ್ಕೊಂದು ಪೋಪರೆ ಮಲ್ಪುವೆರ್. ಎಡ್ಡೆ ದಾಯೆ? ಬೋರಿಲೆನ್ ನಲಿಪಾವೇ ಕೆಲ ಕುಟುಂಬದಕುಲು ಜೀವನ ಮಲ್ಪು ವೆರ್. ಪೆತ್ತನೊ! ಅಯಿತ ಸಂಗತಿ ಅಂಚತ್ತ್. ನರಮಾನಿ ಪುಟ್ಟುನಗನೇ ಅಪ್ಪೆ ನಯ್ತ್ಯೊಂಡಲಾ ಇತ್ತಿನಾಯ ಜೀವಮಾನ ಮುಟ್ಟಗ್ ಪೇರ್ ಕೊರುದು ತಾಂಕುನ ನಿಜವಾಯಿನ ಲೋಕದ ಅಪ್ಪ್‌ಂದ್‌ಂಡ ಕಾಮಧೇನುವೇ ಸೈ. ಆ 'ಗೋರಕ್ಷ ಸಭೆ' ನ್ಪಿನ ಅಪ್ಪ್ ಅಪ್ಪ್‌ಲ್ಲ ಸಮ ಪದಿ ಅಪ್ಪೆ ಅಪ್ಪ್‌ಲ್ಲ ಲಾ ಒಂಜಿ, ಪತ್ತ್, ಸೂಪತ್ತ್, ನಾರ ಕಾಲ ಡ್ ಲಾ ಪೆದ್ದದಾಕುಳು ಮಂಡ ಮಾನಿ ರಂಚದ—ಅಕುಲು ಉಪ್ಪುನ ಮಾತೆರೆ ಅಪ್ಪಲ್ ನಪ್ಪು ಮೊಕ್ಕಲಾ ಅಯಿಕ್ಕ್ ಪ್ರತಿಯೋಜ ಬಾಗಲಾ ಉಪಕಾರೊಗೆ ಬೂರುಂಡು. ಎಂಚಾಂಡ್‌ಂಡ ಗಂಡ್ಸೆರ್, ಕೊರಗೆರ್ ಮಿಸಿ ತಿಂದ್‌ದ್ ಒರಿನ ಗಟ್ಟ್ ನಾಡಿ ನರೆಂಬುಲು ಮಿನಿ ಕೆತ್ತೆ. ಕರು, ನಾಯಿ, ರಪ್ಪರೆಗ ತಿನಿಯರ ಆಪುಂಡು. ಕೆನಂಬು ಅಪಡೊಬೆಡ್‌ದ್ ಒಚೆರೆ ಮಿನಿ ಉಪಯೋಗದ ಬಗೆಕುಳೆನ ... ಅಂಚನೆ ಕರಂಡೆ, ಗುಬ್ಬಿ, ಅಂಗಿದ ಗೊಂಡೆ, ಬಿಸಟೆ, ಕತ್ತಿ ಬಿಕ್ಕೊಲೆಗ್ ಪ್ರಡಿ ಮಿನಿ ... ಪೆರ. ಚರ್ಮೊದು ಮುಟ್ಟು, ಸಾಮಾನ್, ಬುಟ್ಟಿಸು, ಪಕೆಟ್, ಚೆಂಡು, ಚೆಂಡ್ ಮಿನಿ ಮಲ್ಪುವೆರ್. ಎಡ್ಡೆ ಚರ್ಮೊದು ಮದ್ದಳೆ, ಚಂಡೆ, ತಮಿಳೆ ಪವಾಜ್ಞ, ಡೋಲು, ಉಡ್ಕೆ, ಸರ್ , ತ್ರಾಸ, ನಗಾರಿ, ಡೋಲ್ಕೆ, ಕರಣ, ಬೆಂಚೆ, ದುಡಿ, ... ಮಿನಿ ... ಅಯಿನ್ ... ಅಪ್ಪು ದನಿ ... ಸಂತೋಷೊಡು ಗೊಬ್ಬುದು ನಲಿಪುವೆರ್. ಬೊಕ್ಕಲಾ ದಾದೆಕ್ಕಲ ತಿಕ್ಕಂದಿನ ತಂಡ್ ತುಂಡು ಪ್ರಡಿ ಎಲು ಚರ್ಮೊಳೆನ್ ಗುದ್ದು ಪುಲ್ಯ ತಾರೆ ಕಂಗ್‌ದ ಪಯ್ಯೆ ಮದಲೆಗ್ ಪಾಡುವೆರ್. ತೂಂಡ ಅಯಿದ್ ಮಿತ್ತ ಗೊಬ್ಬರನೇ ಇದಿಗೆ. ಅಯ್ಯೋ! ಈ ಪಸು ಪ್ರಾಣಿಲ ನಾಡುಗುಡ್ಡು ಏತ್‌ಂದ್ ಪಂಡ್‌ದ್ ಮುಗಿಪ್ಪೊಲಿ? ಗಾ... ಜಟ್ಟಿ ಗಾಡಿಗು ಕಟ್ಟೆನಾಪಗ ಜಬುಕು (ಜಾಟಿ)ದ ಪೆಟ್ಟ ದಪ್ಪರೆ ಕಟ್ಟೆನಾಪಗ ಉರಬಡಂತ ... ಅತ್ತ್‌ದ ಸಂಗತಿ ಬಪ್ಪದ ಪೆಟ್ಟ್ ಯಾಯಿದ ಪುಡ್ಡಾಯಿನ ಪೆಟ್ಟ್, ಮಿದ್ದೊಲಿಗ ... ಪನ ಕೃತ ಪಟ್ಟ್ ದೋಲು ಬೆಂಡ್‌ಗ್ ಮುಟ್ಟಿ ನವಗ ಕಾಲುದ ಪೆಟ್ಟ್ ಮುಟ್ಟ್ ಸಾಮಾನ್ ಮುಟ್ಟನಗ ಚರ್ಮದ ಕೃತ ಕೆಬಿದ ಗುದ್ದಿದ ಪೆಟ್ಟ್ ಅದಿತ ಕಲ್ಲ್‌ದ ಪೆಟ್ಟ್ (ಕಾತ್ತಿಲು, ಪಸು, ಹೋರಿಕೆ ದಾನೆ ಪೂಜೆಕುಳೆ ಎನ್ನ ಕಷ್ಟ ನಿಕ್ಲೆಗ್ ತೋಜುಜಾ ಒಂತೆ ಕೆಣ್ ಬುಳಾಲೆ.)

...NDIA

...ANGALORE.

...ರಾ ದೇಶೀಯ ಆಡಳಿತೆ
...ರ್ಯಕ್ರಮ.
ಉದಾರವಾದ ಶರ್ತಗಳು
...ಕ ವ್ಯವಹಾರ.
...ಮ ವಿಮಾಪಡುಗಳು.
...ರಿಗೆ ಸರ್ವಾನುಕೂಲ.
...ಬಂಡಿತವಾದ ಭದ್ರತೆ.
ಸಂಪಾದನೆ ಅನಿಶ್ಚಿತ.
...ಉತ್ತಮ ಪರಿಹಾರ.
ಕೊಂಡವರು
...ರರು.

commission or salary or both.

Notice: All the policy holders & agents are informed that all future dealings must be made with The Branch Secretary, The Guardian of India Insurance Co, Ltd, Mangalore Branch.

ಸೂಚನೆ.—ನಮ್ಮ ಎಲ್ಲ ...ಪಾಲಿಸಿಹೋಲ್ಡರರೂ, ಏಜಂಟರೂ ಇನ್ನು ಮುಂದೆ ತಮ್ಮ ವ್ಯವಹಾರವನ್ನು ದಿ ಬ್ರಾಂಚ್ ಸೆಕ್ರೆಟರಿ, ದಿ ಗಾರ್ಡಿಯನ್ ಒಫ್ ಇಂಡಿಯಾ ಇನ್ಸೂರೆನ್ಸ್ ಕೋ., ಲಿಮಿಟೆಡ್, ಮಂಗಳೂರು ಶಾಖೆ ಇವರೊಡನೆ ಬೆಳೆಸಬೇಕಾಗಿ ವಿನಂತಿ.

ವಿಶೇಷ ಮಾಹಿತಿಗಳಿಗೆ ಇವರಿಗೆ ಬರೆಯಿರಿ.

E. A. PAIS, B. Sc, *Branch Secretary*, **The Guardian of India Insurance Co., Limited**, MANGALORE BRANCH.

ದಿ ಗಾರ್ಡಿಯನ್ ಒಫ್ ಇಂಡಿಯಾ ಇನ್ಸೂರೆನ್ಸ್ ಕಂಪೆನಿ, ಲಿಮಿಟೆಡ್,
ಮುಖ್ಯ ಆಫೀಸು—ಪೋಸ್ಟ್ ಬೊಕ್ಸ್ ೮೯—ಮದ್ರಾಸು.

ಚಂದಾದಾರರಲ್ಲಿ

ಚಂದಾಹಣ ಬಾಕಿ ಇರುವ ನಮ್ಮ ಚಂದಾದಾರರು ಆದಷ್ಟು ಬೇಗನೇ ತಮ್ಮ ಹಣವನ್ನು ಮಣಿಯಾರ್ಡರ್ ಮೂಲಕ ದಯವಿಟ್ಟು ಕಳುಹಿಸಿಕೊಡಬೇಕಾಗಿ ಅಪೇಕ್ಷಿಸುತ್ತೇವೆ. ವಿ. ಪಿ. ಮಾಡುವದಾದರೆ ಐದಾಣೆ ಬೀಳುವದು.

ನಮ್ಮೊಡನೆ ಪತ್ರವ್ಯವಹಾರ ಸುವವರು ತಮ್ಮ ಚಂದಾವನ್ನು ಸೂಚಿಸಿ ಬರೆಯ' ವಿನಂತಿ.

ಮೆನೆಜರ್, 'ನವ

ದು ಹುರುಪೆದ್ದಿದೆ. ನಮಗೆ ನಿಜವಾಗಿಯೂ ಅಂತಹ ಪರಿಣಾಮವುಂಟಾಗಬೇಕಾಗಿದೆ, ಆದರೆ ಒಂದು ಪ್ರಶ್ನೆ. ಇಂದು ಎದ್ದಿರುವ ನವಜಾಗ್ರತಿಯು ಕಾರ್ಯಸ್ಫೂರ್ತಿಯು, ಕೆಲವು ಎಸೆಂಬ್ಲಿ ಸೀಟುಗಳ ಸಂಪಾದನೆಯೊಡನೆ ಮುಕ್ತಾಯ ಹೊಂದೀತೆ? ಇಷ್ಟು ಬಲವಾಗಿ ಹರಡಿರುವ ರಾಷ್ಟ್ರೀಯ ಗೆಲ್ಲಬೇಕು ಎಂಬ ನ್ಯಾಯವು ನಮಗೆ ಗೊತ್ತಿದೆ. ಅಷ್ಟೊಂದು ಸಹಾನುಭೂತಿಯು ಕೊಂಗ್ರೆಸಿನೊಡನಿದೆ. ಅದೇ ಕೊಂಗ್ರೆಸಿಗೆ ಹಿಂದೂದೇಶದ ಪೂರ್ಣ ಸ್ವಾತಂತ್ರ್ಯವನ್ನು ಕಾಣದೆ ನಿದ್ದೆ ಬೀಳುವಂತಿಲ್ಲ; ಆದರೊಡನೆ ಸಹಾನುಭೂತಿಯಿರುವ ನಮಗೂ ಹಾಗೆಯೇ ಆಗಬೇಕಲ್ಲವೇ? ವಣೆಯ ಕಾರ್ಯವನ್ನು ಬಲಗೊಳಿಸುವದಕ್ಕಾಗಿ ಈ ವ್ಯವಸ್ಥೆಯನ್ನು ಮಾಡಿದ್ದರು. ಅದನ್ನು ಸರಕಾರವು ತಡೆಗಟ್ಟಿದಂತಾಯಿತು. ಜತೆಯಲ್ಲಿಯೇ ಶ್ರೀಮತಿಯವರ ವ್ಯಕ್ತಿ ಸ್ವಾತಂತ್ರಕ್ಕೂ ಮನ್ನಣೆ ಕೊಡದಂತಾಯಿತು! ಪಟ್ಟಣದ ನಾಗರೀಕರ ನ್ಯಾಯಪರ ಅಪೇಕ್ಷೆಯನ್ನೂ ಅಲಗಳೆದಂತಾ

೪ ನವಯುಗ ತುಳುಸಂಚಿಕೆ

ನನೂನೆ ನಮೂನೆತ ಪಲುಪತ್ತ್ ವಿದತ ಪೆಟ್ಟ್ ಬೂರುಂಡಲಾ ಗುಟ್ಟ್ ಬುಡಂದೆ ಪಿನ್ಪ್ ಮಲ್ಪಂದೆ ಜೀವೊಡುಪ್ಪು ಮರೆಗ್ ಜನೊಕುಳೆಗ್ ಉಪಕಾರ ಮಲ್ಪುನಿಯತ್ತಂದೆ ಅಯಿತ್‌ದ್ ಬೊಕ್ಕಲಾ ವಾ ವಾ ತರೊಟು ಬಗೆತ್ ಕಟ್ಟ್‌ದ್ ಪಟ್ಟ್ ಕೊರುಂಡಲಾ ಬೇತೆ ಬೇತೆ ಪಾಡ್ದ್ಯಾಲೆ ಮಿತ್ತ್ ಕುಳ್ಳುದ್ ಕೇಣುನಾಕುಳೆ ಸಿತ್ತ ಸಂತೋಸ ಆಪಿ ಲೆಕೆಂತಿನ ಎಡ್ಡೆ ಡ್ಡೆ ಪನಿಕುಲೆಪ್ ಪಾತೆರುವೊ ಇಂಚಿನ ಲೋಕೋಪಕಾರದ ಪಸುಕುಳೆ ಕುಟುಂಬ ಏಳಿಗೆ ಆಪಿನವೇ ಇಡೀ ಲೋಕದ ಏಳಿಗೆ ಎಂದ್‌ದ್ ಪೂರ್ವ ಕಾಲೊಡುದು ಇನಿ ಮುಟ್ಟಲಾ ತೆರಿನ ಮಹಾತ್ಮೆರ್‌ನ ತುಳು ಪಂಡೊಂದುಲಾ ಅಯಿಕ್ ಬೋಡಾಯಿನ ಕೆಲಸೊಕ್ಕ್ ಅನ್ನೂಲಿ ಮಲ್ತೊಂದುಲಾ ಬತೊಂದೇ ಉಳ್ಳೆರ್. ಅಂಚೀನ ವೇದ, ಶಾಸ್ತ್ರ, ಪುರಾಣದ ನುಡಿಕುಳೆನ್ ಮಾತ ಪೆರಪುಡುದು ಬರೆದ್ ಪಿನ್ಪಾವೆ ಇತ್ತೆ ಆ ಬಿಸಯದ ಮುಖ್ಯ ಸಂಗತಿ ಕೇಣ್ಣೆ. ದಾದಪ್ರ ಅಂದ್‌ಂಡ ಊರು ಉದ್ಧಾರ ಆಪಿನ ಕಲಸ ಊರು ಡಿತ್ತಿನಾಕುಳು ಮಾತೆರ್ಲಾ ಮಲ್ಪೊಡು ಅಂಚ ಮಲ್ತ್ಂಡನೇ ಊರು ಏಳಿಗೆ ಆಪ್ಪ ಅತ್ತಂಡ ಒರಿಯೊರಿಯಡ್ಡಾವಾ? ಅಯಿಕ್ ನರಿಯಾದ್ ತುಳುಟೊಂಜ ಗಾದೆನ್ ಉಂಡು, ಎಂಚಾಂದ್‌ಂಡ "ಒಂಜಿ ಮುಣ್ಕೆಡ್ದ್ ಒಂಜ ಕಜೆಪ್ಪಾವಾ?"ಂದ್. ಅಂಡ ಮಾತ ಕೆಲಸಲ ಮಾತೆರ್ ಕೂಡುದು ಮಲ್ಪೆರೆ ಸಾಧ್ಯ ಉಂಡಾ? ಇದ್ದಿ ಅಯಿಕಾದೇ ಪ್ರತಿಪೊರ್ಲಾ ಮಲ್ಪೆರೆ ಸಾಧ್ಯದಂತಿನ ಮಾತೆರೆಗ್ ಒಂಜೇ ತರೊಟು ಉಪಕಾರ ಆಪಿನ ಕೆಲವು ಕೆಲಸೊಕುನ್ ಐಕ್ಯತ್ ಬೇತೆ ಬೇತೆ ಜನ, ಜಾತಿ, ಜಾಗೆ ನಿಶ್ಚಯ ಮಲ್ತ್‌ದ್ ಒರಿಯಾಗ್ ಒಪ್ಪುಕೊರುದು ಮಾತೆಲ್ಲಾ ಅಯಕ್ ಸಹಾಯ ಮಲ್ತ್‌ದ್ ಆ ಕೆಲಸದ ಪರಿಜನ ಪಡೆಪೊಣೆರೆಗ್ ತಾದಿ ಮಲ್ತ್ ದೀತೆರ್. ಅಂಚೀನ ಆ ಲೋಕೋಪಕಾರಾಂದ್ ಪಣ್ಪಿನ ಮಾಮಲ್ಲ ಸತ್ಯ ನಿರೆಲ್‌ದ ಧರ್ಮ ಪರುಂದುನು ಪಣ್ಪಿನ ಮರತ ಗೆಲ್ಲುಲೇ ಈ ದೇವತ್ತಾನನ್ ದುಂಬಾಯಿನ ತಾನಮಾನೊಲು ಇಂದ್‌ಂಡ ಅರತ್ತಾನ, ಮಠತ್ತಾನ ಎಂಬಿ ಮಾತ ಅಂಚನ ಜಾಗೆಲಡ್ ಒಂಜೊಂಜಿ ಡಿಡ್‌ಂಜಿದು (ಬಸ್ವಬೋರಿ) ಉಪ್ಪುವೊ ಬಸ್ವೆ ಇಂದ್‌ಂಡ ಅಯಿತ ಬಿತ್ತ್ ವಿಂಸಿ ಸುಗಾರ್ಪಂದೆ ಪೊರ್ಲುಪು ತಾಂಕ ದ್ ಅಗತ್ಯ ಬೋಡಾಯಿನ ಕೆಲಸೊಲೆಗ್ ಮಾತ್ರ ಅವನಪನಗ ಬುಡುದು ಬೊಕ ಬಂದೋಬಸ್ತ್‌ಡ್ ದೀಪರ್ ದಾಯಿ? ಪಸುಕುಳೆಗ್ ಬುದ್ಧಿ ಇದ್ದಿ. ಅಪ್ಪ ಗಾದೆನೇ ಉಂಡೆ ಬುದ್ಧಿಪಂತಿ ಪಸು ಇಂದ್‌ದ್. ದಾಂಪಿಂದ್‌ಂಡ ಅಯ್ಯುಕ್ಲೆಗ್ ಅಪ್ಪೆ-ಮಗೆ, ಅಮ್ಮೆ-ಮಗಳ್‌ಂದ್ ಪಣ್ಪಿನ ಬೇದ ಇದ್ದಿ ದುಂಬುಸಿರದ ಏಚನೆ ದುಂಬೇ ಇದ್ದಿ. ಅಯ್ಯಾದೇ ಕೆಂತಾಬಟ್ಟೆ ಮಲ್ಪು ಜವನೆರೆಗ್ ಗಡಸುಲೆ ಬೆರಿಯೆ ಬಲಿಪುನ ಬೋರಿ ಮುಂಡುಲೆ ಲೆಕ್ಕಾಂದ್ ಪಣ್ಪಿನಿ. ಅಯಿದ್ದಾತ್ರನೇ ಅಯಿನ್ ಬಂದೋಬಸ್ತ್‌ಡ್ ದೀಪನಿ ದಾಯೆ? "ತಂದೆಯಂತೆ ಮಗ—ಬಸವನಂತೆ ಬಾಲ" ಇಂದ್‌ದ್ ಕೇಂದರಾ ಈ ರಡ್ಡ್ ಗಾದೆಲ ಒಂಜೆ ಒಂಜೆ ಎಂಚಾಂದ್‌ಂಡ ಲಿಂಗಂತೆರಿಡ್ ಆಣುಳೆಗ್ ಬಸ್ವೇಂದ್‌ಲಾ, ಪೊಣ್ಣುಳೆಗ್ ಬಸ್ವಿಂದ್‌ಲಾ ಪಣ್ಪಿನ ವಾಡಿಕೆ ಉಂಡು, ಅವು ದಾಯೆ ನಮ ತುಳುವುಂಡೆ ಡ್‌ಲಾ ಬಸವೆ, ಬಸವೆ, ಬಸೆ ಇನ್ನಿ ಪುದರ್ ಒಳ್ಪಲ ಉಂಡು. ಅಂಚನೆ ಬ್ರಾಹ್ಮಣೆರೆಗ್ ಸರ್ವ, ಸರ್ವಿ, ಇಂದ್ ಪಣ್ಪಿನ ರೂಢಿಲಾ ಇತ್ತ್‌ಂಡ್. ಗಟ್ಟದ ಮಿತ್ತ್ ಇತ್ತಲಾ ಉಂಡು—ಉಪ್ಪಡ್. "ಬಾಲ" ಇಂದ್‌ಂಡ ಸಂಸ್ಕೃತೊಡು ಮಗೆ ಇಂದ್‌ದ್ ಅರ್ಥ. ಅಯಿನ್ ಕನಡೊಡು ಇತ್ತಿನ ಇತ್ತಲೆಕನೇ ಪಣೊಂದು ಬತ್ತಿನೆಯಿಡ್ದ್ ಬಸವೇಂದ್‌ಂಡ ಅಮ್ಮೆ ಬಾಲಾಂದ್‌ಂಡ ಮಗೆ ಇಂದ್‌ಂಡ ಅಮ್ಮಲೆಕನೇ ಮಗೇಂದ್ ಪಂಡಿಲೆಕ ಆಂಡ್ ಅಯಿಕಾದೇ ಊರುಡಿತ್ತಿನ ಮಾತ ಬೋರಿಳು ಬೆಂದ್‌ದ್ ನಮ ತೆರಣದಂತೆ ಅಯಿಕ್ ಪುಟ್ಟಿನ ಅಲ್ಮ್ಯಾಲುಲ ಅರೆತರಣ ಆದ್ ಕೆಲಸೊಗು ಬೂರಂದಿನ ಪಸುಕುಳೆ ಕುಲನೇ ಪೆಟ್ಟಿದ್ ಊರುದ ಜನೊಕುಳೆ ಗಯ್ಯ್ಮದ ಪಲ ಕುಂದೆಲ್‌ಗ್ ಬೂರಿಯರೆ ಆಪಂದ್‌ದ್ ಎರು ಕೊಂಡೋಪಿನ ಪೆತ್ತಳು ಬೋರ್ಲೆಗ್ ನಕೆರಿಗಳೆಗೆನೆ ಬಿತ್ತ್‌ದ ಬೋರಿ ಇತ್ತಿನಡೆ ಕೊಣೂದು ಬುಡ್ಪಿನ ಕ್ರಮ ಇತ್ತಲಿ ವೇಂಟೆಲೆಡ್ ಉಂಡು. ಆ ರಿವಾಜಿದ ಮೂಲಕನೇ ಈ ದಿಡ್‌ಂಬೆರುಕುಳೆನ್ ತಾಂಕುನ ಗುಬ್ಬ್.

ಮೇಲ್ಕಂಡ ವ್ಯಾಜ್ಯದಲ್ಲಿ ಪ್ರತಿವಾದಿಯು ತನಗೆ ತಾ 2-8-1935ರಲ್ಲಿ ಬರಕೊಟ್ಟ ಡಿಮಾಂಡ್ ಪ್ರೊಮಿಸರಿ ನೋಟಿನ ಅಸಲು ಬಡ್ಡಿ ಒಟ್ಟು ರೂಪಾಯಿ 231-15-4ನ್ನು ಪ್ರತಿವಾದಿಯಿಂದ ಬರಮಾಡಿಕೊಳ್ಳುವ ಬಗ್ಗೆ ವಾದಿಯು ಈ ದಾವಾ ದಾಖಲ್ಲು ಮಾಡಿದ್ದಾಗಿರುತ್ತದೆ.

ಈ ದಾವೆಯು ತಾರೀಕು 2-12-'36 ವ 8-1-37ಕ್ಕೆ ಇಟ್ಟಲ್ಲಿ ಪ್ರತಿವಾದಿಯು ಹಾಜ್ರಾಗುವ ಹಾಗೆ ಕೋರ್ಟಿನಿಂದ ನೋಟೀಸು ಮಾಡ್ಸಿದ್ದಲ್ಲಿ ಪ್ರತಿವಾದಿಯು ಹಾಜ್ರಾಗದೆ ಈ ವ್ಯಾಜ್ಯದ ನೋಟೀಸನ್ನು ಪ್ರತಿವಾದಿಯು ವಾಸ್ತವ್ಯದ ಮನೆಗೆ ಹಚ್ಚಿ ಜ್ಯಾರಿ ಮಾಡುವ ಬಗ್ಗೆ ತಾ 5-2-1937ಕ್ಕೆ ಇಟ್ಟದೆ.

ಸದ್ರಿ ದಿನ ಬೆಳಗ್ಗೆ 11 ಘಂಟೆಗೆ ಪ್ರತಿವಾದಿಯು ಮೇಲ್ಕಂಡ ಕೋರ್ಟು ಮುಂದೆ ಹಾಜ್ರಾಗಿ ಆಕ್ಷೇಪ ಇದ್ದರೆ ಹಾಜರುಪಡಿಸಬೇಕು. ಸದ್ರಿ ದಿನ ಹಾಜ್ರಾಗದಿದ್ದರೆ ಮೇಲ್ಕಂಡ ವ್ಯಾಜ್ಯವನ್ನು ಪ್ರತಿವಾದಿಯು ಹಾಜ್ರು ಇಲ್ಲ ಎಂಬ ಸಬಬಿನ ಮೇಲೆ ತೀರ್ಮಾನಿಸಲಾದೀತು.

(*Sd*) S. Nanjappa Shetty,
Pleader for Plaintiff.

Karkal, 14-1-1937

ಪುಟ ೧೧ರಿಂದ

ಕಾರ್ಯವಹಿಸುವುದು ದೇಶದ್ರೋಹವಾಗಲಾರದು. ಒಮ್ಮೆ ಶ್ರೀ॥ ಅಡಿಗರನ್ನು ಪ್ರೋತ್ಸಾಹಿಸುವದು ದೇಶದ್ರೋಹವಾದರೆ ಶ್ರೀ॥ ಹೆಗ್ಗಡೆಯವರನ್ನೂ ಪ್ರೋತ್ಸಾಹಿಸುವುದು ದೇಶದ್ರೋಹವಾಗುವದಲ್ಲವೆ? ಶ್ರೀಮಾನ್ ಮಂಜಯ್ಯ ಹೆಗ್ಗಡೆಯವರು ಸ್ವತಂತ್ರ ಪಕ್ಷದವರು. ಅವರು ತಾ. 1-1-1937ರ ಕಂಠೀರವ ಸಂಚಿಕೆಯಲ್ಲಿ ಬರೆದ ಲೇಖನದಿಂದಲೆ ಕೊಂಗ್ರೆಸ್ಸಿಗೆ ವಿರೋಧವಾಗಿ ಕುಂದಾಪುರ ಮತ್ತು ಪುತ್ತೂರು ಡಿವಿಜನ್ನುಗಳಲ್ಲಿ ತಾನು ನಿಲ್ಲಲು ಹೇಗೆ ಯತ್ನಿಸಿದೆನೆಂದು ಬರೆದದ್ದನ್ನು ನೋಡಿದರೆ ಕೊಂಗ್ರೆಸ್ಸಿಗೂ ಅವರಿಗೂ ಹೇಗೆ ಸಾಮ್ಯವಿರುವದೆಂದು ಶ್ರೀ॥ ನಾಯಕರು ಪ್ರತಿಪಾದಿಸಲು ಸಮರ್ಥರಿರುವರೆ? "ದೇಶದಲ್ಲಿರುವ ಬೇರೆ ಬೇರೆ **ರಾಜಕೀಯ ಪಕ್ಷದವರ** ಉತ್ತಮವಾದ ಧ್ಯೇಯಗಳನ್ನು ಸಾಧಿಸುವದರಲ್ಲಿ ನಾನು ಸಹಕರಿಸಿ ಕೌನ್ಸಿಲು ಕಾರ್ಯ ವಹಿಸುವೆನು" ಎಂದು ಶ್ರೀಮಾನ್ ಹೆಗ್ಗಡೆಯವರೆ ಸ್ಪಷ್ಟವಾಗಿ ಬರೆದಿರುವಾಗ ಅವರು ಕೊಂಗ್ರೆಸ್ಸಿನಮೇಲೆ ನಂಬಿಕೆಯುಳ್ಳವರೆಂದೂ ದೇಶಾಭಿಮಾನಿಗಳೆಂದೂ ಇತ್ಯಾದಿ ಬರೆದು ಬಾಹ್ಯಾಂತರ್ಯ ಭೇದದಿಂದ ಕೆಲಸಮಾಡತಕ್ಕವರೆಂದೂ ಅವರ ಮೇಲೆ ದೋಷಾರೋಪಣಮಾಡಿ ಅವರಿಗೇನೇ ಸಹಾನುಭೂತಿಯನ್ನು ಮಹಾಜನರು ತೋರಿಸಬೇಕೆಂದು ಶ್ರೀ॥ ನಾಯಕರು ಬರೆದಿರುವುದನ್ನು ನೋಡಿದರೆ ತಮ್ಮ ಉದ್ದೇಶದ ಮೂಲಕ್ಕೇನೆ ತಾವು ಕತ್ತಿ ಯಿಟ್ಟಂತಾಗಲಿಲ್ಲವೆ?

ಶ್ರೀಮಾನ್ ಸದಾಶಿವ ಅಡಿಗರು ಸಮಯ ಬಂದಂತೆ ತಾವು ನಿಲ್ಲತಕ್ಕ ಸ್ಥಾನವನ್ನು ಬದಲುಮಾಡಲಿಲ್ಲ. ಕಾಂಗ್ರೆಸು ಉಮೇದ್ವಾರರು ಇಲ್ಲದಿದ್ದ ಸ್ಥಾನಕ್ಕೇನೆ ಉಮೇದ್ವಾರರಾಗಿ ನಿಂತಿರುತ್ತಾರೆ. ತಾಲೂಕುಬೋರ್ಡ್ ಪ್ರೆಸಿಡೆಂಟ್ ಜಿಲ್ಲಾ ಬೋರ್ಡು ಮೆಂಬರ್ ಇತ್ಯಾದಿ ಪದವಿಗಳನ್ನು ಹೊಂದಿ ಜನತೆಯ ಪ್ರೀತಿ ವಿಶ್ವಾಸಗಳಿಗೆ ಪಾತ್ರರಾದ ಮಹನೀಯರು ಶ್ರೀ ಅಡಿಗರೆಂಬುದರಲ್ಲಿ ಸಂಶಯವಿಲ್ಲ. ಅಂತವರಲ್ಲಿ ಏನಾದರೂ ದೋಷಗಳಿದ್ದರೆ ಅವುಗಳನ್ನು ತೋರಿಸಿ ಅವರಿಂದ ಶ್ರೀಮಾನ್ ಹೆಗ್ಗಡೆಯವರೇ ಕೌನ್ಸಿಲ್ ಸ್ಥಾನಕ್ಕೆ ಯೋಗ್ಯರೆಂದು ಶ್ರೀ ನಾಯಕರು ಪ್ರತಿಪಾದಿಸಲು ಯತ್ನಿಸುತ್ತಿದ್ದಾರೆ. ಅರ್ಥವಿತ್ತು ಹೊರತು ನನ್ನನ್ನು ವರ್ಣಿಸಿ ಬರೆದ ಲೇಖನವು ಚುನಾವಣೆಯ ದೃಷ್ಟಿಯಿಂದ 'ನೀರಿನ ಮೇಲಿಟ್ಟ ಹೋಮ' ವೆಂದು ಭಾವಿಸಬೇಕಾಗಿದೆ.

ಕೆ ಬಾಲಕೃಷ್ಣ ರಾವ್,
ಎಡ್ವೊಕೇಟ್

ನಿಮಗೆ ಯಾರು ಬೇಕು?

ಕಾಂಗ್ರೆಸ್ ಪಕ್ಷವೊ? ಅಥವಾ ಜಸ್ಟಿಸ್ ಪಕ್ಷವೊ?

ಬರುವ ಫಬ್ರವರಿ ೧೮ ಮತ್ತು ೨೦ನೇಯ ತಾರೀಖುಗಳಲ್ಲಿ ಮದರಾಸ್ ಇಲಾಖೆಯ ಲೆಜಿಸ್ಲೇಟಿವ್ ಅಸೆಂಬ್ಲಿಗೆ ನಿಮ್ಮ ಪರವಾಗಿ ಹೋಗುವ ಪ್ರತಿನಿಧಿಗಳನ್ನು ಆರಿಸುವುದಿದೆ. ದೇಶದಲ್ಲಿ ಈಗ ಎರಡು ಪಕ್ಷಗಳು ಮಾತ್ರ ಇವೆ. ಹಿಂದೀ ಜನತೆಯ ಪರವಾಗಿ, ಹಿಂದೀ ಜನತೆಯ ಹಿತಕ್ಕಾಗಿ ಹೋರಾಡುತ್ತಿರುವ ಕಾಂಗ್ರೆಸ್ ಒಂದು ಕಡೆ; ಮತ್ತೊಂದು ಕಡೆ ಕಾಂಗ್ರೆಸಿನ ವಿರುದ್ಧ ವಿರುವ ಜಸ್ಟಿಸ್ ಪಕ್ಷಗಳು ನಿಮ್ಮೆದುರಿಗಿವೆ. ಇವೆರಡರಲ್ಲಿ ನಿಮಗೆ ಯಾವ ಪಕ್ಷಬೇಕು?

ನಿಮ್ಮ ಹಿತಬೇಕಾದರೆ ನೀವು ಕಾಂಗ್ರೆಸ್ಸಿನ ಪಕ್ಷದವರಿಗೇ ಓಟುಕೊಡುವುದು ನಿಮ್ಮ ಧರ್ಮ. ನಿಮ್ಮ ಅಹಿತವನ್ನು ನೀವೇ ಮಾಡಿಕೊಳ್ಳುವುದಾದರೆ ಕಾಂಗ್ರೆಸಿನ ವಿರುದ್ಧ ನಿಂತಿರುವ ಅಥವಾ ತಮ್ಮ ತಮ್ಮ ಹಿತವನ್ನು ಮಾತ್ರ ನೋಡಿಕೊಳ್ಳುವ ಜಸ್ಟಿಸ್ ಪಕ್ಷಕ್ಕೆ ಕೊಡಿರಿ.

ನಿಮ್ಮ ಹಿತಾಹಿತಗಳನ್ನು ನೋಡಿಕೊಳ್ಳುವುದು ನಿಮಗೇ ಸೇರಿದೆ. ಇದನ್ನು ನೆನಪಿನಲ್ಲಿ ಇಡಿರಿ.

ಬಡಜನರ ನಲುವಾಗಿ ಕಾಂಗ್ರೆಸ್ಸು ಏನು ಮಾಡಲು ನಿಶ್ಚಯಿಸಿದೆ? ನಮ್ಮ ದೇಶ ಬಡ ರೈತರ ದೇಶ. ರೈತರಿಗೆ ಮುಖ್ಯವಾಗಿ ಏನು ಬೇಕು? ಸಂಬಂಧವಾಗಿ ಕಾಂಗ್ರೆಸ್ ಏನು ಗೊತ್ತುಮಾಡಿದೆ? ಕಾಂಗ್ರೆಸ್ ಪಕ್ಷವು ಕೌನ್ಸಿಲ್ ಮತ್ತು ಅಸಂಬ್ಲಿಗಳಲ್ಲಿ ಯಾವ ಕಾರ್ಯಕ್ರಮವನ್ನು ಕೈಕೊಳ್ಳುವುದೆಂಬ ಬಗ್ಗೆ ಅಖಿಲಭಾರತ ಕಾಂಗ್ರೆಸ್ ಕಮಿಟಿಯು ತನ್ನ ಪ್ರಸಿದ್ಧ ಪತ್ರಿಕೆಯಲ್ಲಿ ಹೀಗೆಂದು ಹೇಳಿದೆ.—

"ರೈತರಿಗೆ ಸಂಬಂಧಪಟ್ಟ ಸಂಪೂರ್ಣ ಕಾರ್ಯಕ್ರಮವು ನಿಶ್ಚಿತವಾಗುವ ವರೆಗೆ ಕರಾಚಿಯಲ್ಲಿ ನಿರ್ಣಯಿಸಿರುವುದನ್ನೇ ಕಾಂಗ್ರೆಸ್ ಪುನಃ ದೃಢಪಡಿಸುತ್ತದೆ. ಅವುಗಳಾವುವೆಂದರೆ ಭೂಕಂದಾಯ, ಹಿಡುವಳಿ ಮತ್ತು ಗೇಣಿಯ ಪದ್ಧತಿಯನ್ನು ಸುಧಾರಿಸುವುದು; ಈಗ ಅವರು ಕೊಡುತ್ತಿರುವ ಗೇಣಿ ಮತ್ತು ತೀರ್ವೆಯಲ್ಲಿ ಬಹಳ ಮಟ್ಟಿಗೆ ಕಡಿಮೆ ಮಾಡುವುದರಿಂದಲೂ ಮತ್ತು ಲಾಭದಾಯಕವಿಲ್ಲದ ಹಿಡುವಳಿಗಳ ಮೇಲೆ ಹಾಕಿರುವ ಗೇಣಿ ಮತ್ತು ತೀರ್ವೆಯನ್ನು ಸಂಪೂರ್ಣವಾಗಿ ತೆಗೆದು ಹಾಕುವುದರ ಮೂಲಕವಾಗಿಯೂ ಸಣ್ಣ ಪುಟ್ಟ ರೈತರಿಗೆ ಒಡನೆಯೇ ಸಹಾಯವನ್ನು ಕೊಟ್ಟು ಭೂವ್ಯವಸಾಯದ ಮೇಲಿರುವ ಹೊರೆಯನ್ನು ಸರಿಸಮಾನಗೊಳಿಸುವುದು.

"ಮತ್ತೊಂದು ಮಹತ್ವ ಹಾಗೂ ಶೀಘ್ರವಾಗಿ ವಿಚಾರಣೆ ನಡೆಸಬೇಕಾಗಿರುವ ಸಮಸ್ಯೆಯೆಂದರೆ ರೈತರ ಸಾಲದ ಪ್ರಶ್ನೆ. ಸದ್ಯಕ್ಕೆ ಸಾಲದ ವಸೂಲಿಯ ತಹಕೂಲಿಯನ್ನು ಪ್ರಸಿದ್ಧಪಡಿಸಿ ಇದರ ಬಗ್ಗೆ ವಿಚಾರಣೆ ನಡೆಸಿ ಸಾಲದ ಹೊರೆಯನ್ನು ಕಡಿಮೆಮಾಡುವುದಲ್ಲದೆ ಸರಕಾರದಿಂದ ಸುಲಭ ಬಡ್ಡಿಯಿಂದ ಹಣ ಸಹಾಯವೊದಗುವಂತೆ ಮಾಡುವುದು. ಈ ಸಹಾಯವು ಗೇಣಿಹಿಡಿದಿರುವವರು ಸ್ವಂತ ಸಾಗುವಳಿದಾರರು ಸಣ್ಣಪುಟ್ಟ ಜಮೀನು ಹಿಡುವಳಿದಾರರೂ, ಮತ್ತು ಸಣ್ಣಪುಟ್ಟ ವ್ಯಾಪಾರಸ್ಥರೂ ಮೊದಲಾದವರಿಗೆ ದೊರೆಯುವಂತಾಗಬೇಕು.

ಅಂದ ಮೇಲೆ ವಿಶೇಷ ತಹಃ ಬಡರೈತರ ಸಂಬಂಧವಾಗಿ ಕಾಂಗ್ರೆಸು ಏನು ಮಾಡಲಿರುವುದು ಎಂಬುದು ಸ್ಪಷ್ಟವಾಗುವುದು. ಇಂತಹ ಸಣ್ಣ ಪುಟ್ಟ ಸೌಕರ್ಯಗಳನ್ನು ಒದಗಿಸಿ ಕೊಡಲು ಪ್ರಯತ್ನ ಮಾಡಬೇಕಾದರೆ ಕಾಂಗ್ರೆಸ್ಸಿನವರು ಹೆಚ್ಚು ಸಂಖ್ಯೆಯಲ್ಲಿ ಅಸೆಂಬ್ಲಿಗಳಿಗೆ ಹೋದರೆ ಮಾತ್ರ ಸಾಧ್ಯವಾದೀತು. ರೈತರು ತಮ್ಮ ಹಿತಗಳ ಕಡೆಗೆ ಹೆಚ್ಚು ಮನಸ್ಸು ಕೊಡುವುದಾದರೆ ಕಾಂಗ್ರೆಸ್ ಪಕ್ಷದವರಿಗೇ ವೋಟುಕೊಟ್ಟು ಅವರನ್ನೇ ಅಸೆಂಬ್ಲಿಗಳಿಗೆ ಕಳುಹಿಸಿಕೊಡುವುದರಿಂದ ಆದೀತು.

ಕಾಂಗ್ರೆಸ್ಸಿನಿಂದ ಆರಿಸಲ್ಪಟ್ಟ ಸದಸ್ಯರಾರು?

೧	ಕುಂದಾಪುರ, ಉಡುಪಿ ಮತ್ತು ಕಾರ್ಕಳ (ಸಾಮಾನ್ಯ ಮತದಾರರಿರುವ) ಭಾಗಕ್ಕೆ	**ಶ್ರೀ ಎ ಬಿ. ಶೆಟ್ರು**
	ಶೆಡ್ಯೂಲ್ ಜಾತಿ (ಹರಿಜನ) ಮತದಾರರಿಂದ	**ಶ್ರೀ ಕೆ ಈಶ್ವರ**
೨	ಮಂಗಳೂರು ಭಾಗಕ್ಕೆ	**ಶ್ರೀ ವೆಂಕಟ್ರಾಯ ಬಾಳಿಗರು.**
೩	ಕಾಸರಗೋಡು ಪುತ್ತೂರು ಭಾಗಕ್ಕೆ ...	**ಶ್ರೀ ಕೋಟರಾಮಕೃಷ್ಣ ಕಾರಂತರು**
೪	ಕ್ರಿಶ್ಚಿಯನ್ ಮತದಾರ ಸಂಘದಿಂದ .	**ಪ್ರೊ. ಸಿ. ಜಿ. ವಾರ್ಕಿ ಇವರು**

ದಕ್ಷಿಣ ಕನ್ನಡ ಜಿಲ್ಲಾ ಕೊಂಗ್ರೆಸ್ ಪಾರ್ಲಿಮೆಂಟರಿ ಬೋರ್ಡು
ಮಂಗಳೂರು.

ತಾರೀಕು ೨೪ ೧೨ ೩೬ನೇ ನವಯುಗದಲ್ಲಿ ನಿಮ್ಮ ಪ್ರಕಟನೆ ಪ್ರಕಾರ ನಿಮ್ಮ ಕಾರ್ಯಕಾರಿ ಸಮಿತಿಯ ಒಬ್ಬ ಸದಸ್ಯನನ್ನಾಗಿ ನನ್ನನ್ನು ಆರಿಸಿದ್ದೀರೆಂಬುದು ಗೊತ್ತಾಗಿಯದೆ. ಆದರೆ ನನಗೆ ಸದ್ರಿ ಮೆಂಬರನಾಗಿರಲು ಇಷ್ಟವೂ ಇಲ್ಲ, ಅನುಕೂಲವೂ ಇಲ್ಲ. ಸದರಿ ಚುನಾವಣೆಗೆ ನನ್ನ ಒಪ್ಪಿಗೆಯೂ ಇರುವುದಿಲ್ಲ. ಆದುದರಿಂದ ನನ್ನ ಸದರಿ ಮೆಂಬರಿಕೆಯನ್ನು ರದ್ದುಪಡಿಸಿ ಆಸ್ಥಾನಕ್ಕೆ ಬೇರೊಬ್ಬರನ್ನು ನೇಮಿಸಬೇಕಾಗಿ ಅಪೇಕ್ಷಿಸುತ್ತೇನೆ.

(Sd) Miyala Narasimhachar.

ಒಂದಿಷ್ಟು ನಗು.

ಅಕ್ಕ—ಏನೋ ರಾಮು! ಈ ವರ್ಷ ನಾವರೂ ಪರೀಕ್ಷೆಯಲಿ ಪ್ಯಾಸಾಯಿತೇನೋ

ತಮ್ಮ—ಹೋದ ವರ್ಷ ಕೊಟ್ಟಿದ್ದ ಪ್ರಶ್ನೆಗಳನ್ನೇ ಈ ವರ್ಷವೂ ಕೊಟ್ಟಿದ್ದಾರೆಂದು ಆಗಲೇ ಹೇಳಿಲ್ಲಿನೇನಕ್ಕಾ.

ಒಂದು ಬಾಯಿ ನಗು

ಸಂತೆಗೆ ಬಂದಿದ್ದ ಬಡಕಲು ಕುದುರೆಯನ್ನು ನೋಡಿ ಗಿರಾಕಿ—

"ಇದಕ್ಕೆಷ್ಟು?"

ಮಾರುವವ—"ಇಪ್ಪತ್ತು ಪೌಂಡು"

ಗಿರಾಕಿ—ನಾನಿದರ ತೂಕವನ್ನಲ್ಲಿ—ಬೆಲೆಯನ್ನು ಕೇಳಿದೆ.

X X X

ಯಜಮಾನ—ಸುಬ್ರಾಯ! ಚೂರಿಯು ಶುಚಿಯಾಗಿದೆಯೋ?

ಸುಬ್ಬಾ—ಹೌದು ಸ್ವಾಮಿ, ಬಹಳ ಶುಚಿಯಾಗಿದೆ.

ಯಜಮಾನ—ಥೂ! ಏನು ಹೇಳುತ್ತೀಯೋ? ಎಷ್ಟು ಕೊಳಕಾಗಿದೆ ನೋಡು

ಸುಬ್ಬಾ—ವಿಚಿತ್ರ ಸ್ವಾಮಿ! ಆದರಿಂದ ಸಾಬೂನು ತುಂಡುಮಾಡಿ ಎರಡು ಮಿನಿಟು ಕೂಡಾ ಕಳೆಯಲಿಲ್ಲ!

X X X

ಸುಬ್ರಾಯರು—ಡಾಕ್ಟರರು ನನ್ನನ್ನು ಪರೀಕ್ಷಿಸಿ ನನ್ನಲ್ಲಿ ರೋಗದ ಕುರುಹುಗಳೇನೂ ಇಲ್ಲವೆಂದರು.

ರಾಮಣ್ಣನವರು—ನೀವು ಅದಕ್ಕಾಗಿ ಹಿಗ್ಗಲೇಬೇಕಷ್ಟೆ!

ಸುಬ್ರಾಯರು—ನೀವು ಹಾಗೆನ್ನುವಿರಿ. ಪರೀಕ್ಷೆಗಾಗಿ ಎರಡು ರೂಪಾಯಿ ಕಳೆದುಕೊಂಡುದಕ್ಕಾಗಿ ನನಗೆ ಬಹಳ ದುಃಖವಾಗುತ್ತದೆ.

X X X

ಉಪಾಧ್ಯಾಯ—ನೀರಿದ್ದುದು ಐಸ್ (ಹಿಮ) ಆಗುವಾಗ ಏನು ಬದಲಾಗುವುದು?

ಹುಡುಗ—ಕ್ರಯದ ಬದಲಾವಣೆ ಸರ್!

X X X

ಮಗ—ನಾನು ಅವಳನ್ನು ಹೊರತು ಇನ್ನೊಬ್ಬಳನ್ನು ವಿವಾಹವಾಗಲಿಕ್ಕಿಲ್ಲ.

ತಂದೆ—ನೋಡಿ ಹುಚ್ಚನನ್ನು! ಅವನು ತಾನೀಗ ಇಂಗ್ಲೆಂಡಿನ ಮಾಜಿರಾಜರೆಂದು ನೆನಸುತ್ತಾನೆ!

X X X

ಹಾದಿಗ—ಏನು ಸಾಬರೇ! ಕನ್ನಡಿ ಕೈಯಲ್ಲಿ ಹಿಡಿದು ಮಲಗಿ ಕೊಂಡು ಕಣ್ಣು ಮುಚ್ಚಿದ್ದೀರಲ್ಲ! ಏನು ನೋಡುತ್ತಿದ್ದೀರಿ?

ಸಾಹೇಬರು—ನಿದ್ದೆ ಮಾಡುವಾಗ ನನ್ನ ಮುಖ ಹೇಗೆ ಕಾಣಿಸುವುದೆಂದು ನೋಡುತ್ತಿದ್ದೇನಯ್ಯಾ!

X X X

ಪ್ರಯಾಣಿಕ—ರೈಲುಗಳು ಈ ರೀತಿ ಲೇಟಾಗಿ ಬರುತ್ತಿದ್ದರೆ ಈ ಟೈಂಟೇಬಲ್ಲುಗಳಿಂದ ಪ್ರಯೋಜನವೇನು?

ಇನ್ನೊಬ್ಬ—ರೈಲು ಸರಿಯಾಗಿ ಬಂದರೆ ವೈಟಿಂಗ್ ರೂಮುಗಳಿಂದ ಪ್ರಯೋಜನವೇನು?

ಚುನಾವಣೆಯ ಗಲಾಟೆ

ನೋಕಾಲಿ ಎಂಬಲ್ಲಿ 144ನೇ ಸೆಕ್ಷನ್ ಜ್ಯಾರಿಮಾಡಲಾಗಿದೆ. ಮೂರು ಯಾ ಹೆಚ್ಚು ಜನರು ಲಾಠಿ ಹಿಡಿದುಕೊಳ್ಳಕೂಡದೆಂದು, ಕಾರಣವು ಆ ಭಾಗದಿಂದ ಬಂಗಾಳಾ ಎಸೆಂಬ್ಲಿಗೆ ನಿಲ್ಲುವ ಇಬ್ಬರು ಉಮೇದ್ವಾರರ ಚುನಾವಣೆಯ ಸಂಬಂಧ ಸಭೆಯಲ್ಲುಂಟಾದ ಕಲಹದ ಪರಿಣಾಮವಾಗಿ ಮುಂದಿಯಲ್ಲೊಬ್ಬನಿಗೆ ಪ್ರಾಣ ಹಾನಿಯಾದುದೇ.

ಹೊಸದು! • ಐರಾವತ • ತೀರಾ ಹೊಸದು!!

ಇದರಲ್ಲಿ—ಕಾಮಶಾಸ್ತ್ರ, ಕೈಗಾರಿಕೆಯ ವಿಷಯ, ಇಂದ್ರಜಾಲ-ಮಹೇಂದ್ರಜಾಲ, ಕಾಯದೇಭಾಗ, ತಂತ್ರ-ಮಂತ್ರ-ಯಂತ್ರ, ಸರ್ವ ಮುಹೂರ್ತ ವಿಷಯ, ವೈದ್ಯಭಾಗ. ಈ ಪ್ರಕಾರ ೭ ಪ್ರಕರಣಗಳಿದ್ದು ಅತ್ಯಂತ ಮಹತ್ವದ ವಿಷಯಗಳು ಅಡಕವಾಗಿವೆ. ಇದರ ಬೆಲೆ ರೂ- ೧--೦--೦ ವಿ. ಪಿ. ಚಾರ್ಜು ಬೇರೆ.

ವಿಳಾಸ:— ಎಸ್. ಸಿ. ಸಾಲಿಮಠ ಅಂಡ್ ಸನ್ಸ್, ಗದಗ ಸಿಟಿ.

ಅನೇಕ ಮರ್ಮ ವಿದ್ಯೆಗಳಿಂದೊಡಗೂಡಿದ

—ಚಿಂತಾರತ್ನ—

ಇದರಲ್ಲಿ ಜಾತಕಫಲ, ಕೈಗಾರಿಕೆಯ ವಿಷಯ, ಇಂದ್ರಜಾಲ, ಮಹೇಂದ್ರಜಾಲ, ಯಕ್ಷಿಣಿ ಮೊದಲಾದ ವಿದ್ಯೆಗಳು ಇರುತ್ತವೆ. ಒಂದೊಂದು ವಿಷಯಕ್ಕೆ ಎಷ್ಟು ಬೆಲೆ ಕೊಟ್ಟರೂ ಸಾಲದು.

೧ ಸಬಕಾರವನ್ನು ತಯಾರಿಸುವ ರೀತಿ
೨ ಮೇಣಬತ್ತಿ ತಯಾರಿಸುವ ರೀತಿ
೩ ಕಾಷ್ಟಿಕ್ ಸೋಡಾ ತಯಾರಿಸುವದು
೪ ಬಿಸ್ಕ್ಯೂಟ ತಯಾರಮಾಡುವದು
೫ ಮರಾಂಗ ತಯಾರಮಾಡುವದು
೬ ಪೆಪ್ಪರಮೆಂಟ ಮಾಡುವದು
೭ ದೂಪದ ಘಟ್ಟಿ ಮಾಡುವದು
೮ ಭಂಗಾರ ಮಾಡುವದು
೯ ಬೆಳ್ಳಿ ತಯಾರಮಾಡುವದು
೧೦ ಜರ್ಮನ್ ಶಿಲ್ವರ ಧಾತು
೧೧ ಊದಿನಕಡ್ಡಿ ತಯಾರಮಾಡುವದು
೧೨ ತಗಡಿನ ಪಾಟಿ ತಯಾರಮಾಡುವದು
೧೩ ಕುಂಕುಮವನ್ನು ತಯಾರಿಸುವದು
೧೪ ಹಸಿ ಕುಂಕುಮ ತಯಾರಿಸುವದು
೧೫ ಗೋದೀಸರಿ ಕೆಡದಂತೆ ಮಾಡುವದು
೧೬ ಬುಕ್ಕಿಟ್ಟು ಮಾಡುವದು
೧೭ ಮೀನಸರಿ ಯಾವಾಗಲೂ ನೀರಾಗಿರುವಂತೆ ಮಾಡುವದು
೧೮ ಅಷ್ಟಗಂಧ ಸಾಮಾನುಗಳು
೧೯ ಭರ್ಮ ತಯಾರಮಾಡುವದು
೨೦ ಕಟ್ಟಿಗೆ ಲೋಹಗಳಿಗೆ ಹಚ್ಚುವ ಬಣ್ಣ ಮಾಡುವದು
೨೧ ಕಾಗದವನ್ನು ಮಾಡುವದು
೨೨ ಮೆಂಥೇಲ ಎಣ್ಣೆ ತಯಾರಿಸುವದು
೨೩ ಕನ್ನಡಿಯ ಮೇಲೆ ಬರೆಯುವದು
೨೪ ದಂತಮಂಜನ ಮಾಡುವದು
೨೫ ರಕ್ತಶುದ್ಧಿ, ಧಾತುವೃದ್ಧಿ ಔಷಧಿ
೨೬ ಕಸ್ತೂರಿ ಮಾತ್ರೆ ಮಾಡುವದು
೨೭ ಕುಚಪ್ರಭಾತಕ್ಕೆ ಔಷಧ
೨೮ ಬಾಲಾಮೃತ ಮಾಡುವದು
೨೯ ಶಿಷ್ನವೃದ್ಧಿಗೆ ಔಷಧ
೩೦ ಸರಬತ್ತು ಮಾಡುವದು
೩೧ ಛಳಿಜ್ವರದ ಗುಳಿಗೆ ಮಾಡುವದು
೩೨ ಬೂಟಪಾಲೀಸ ಮಾಡುವದು
೩೩ ಮನೆ, ವಠಾರ, ಅಂಗಡಿ ಮೊದಲಾದುವುಗಳಿಗೆ ಗೆದ್ದಲಿ ಹತ್ತದಂತೆ ಮಾಡುವದು
೩೪ ಹುರುಕು ಖಜ್ಜಿ ಮುಲಾಮು ಮಾಡುವದು
೩೫ ನಾಸೀಪುಡಿ ಮಾಡುವದು
೩೬ ಮನೆ, ವಠಾರ, ಅಂಗಡಿಗಳಲ್ಲಿ ಇಲಿ, ಹೆಗ್ಗಣ ಮೊದಲಾದವುಗಳು ಇರದಂತೆ ಮಾಡುವದು
೩೭ ಜರ್ದಾತಂಬಾಕ ಮಾಡುವದು
೩೮ ಒದನೆ. ಕುಂಬಳ ಮುಂತಾದ ಕಾಯಿಗಳಿಗೂ, ಮಾವು, ಲೇಬು ಮುಂತಾದ ಹಣ್ಣುಗಳಿಗೂ ಬೀಜವಿಲ್ಲದೆ ದೊಡ್ಡವಾಗುವದು
೩೯ ಸಿಮೆಂಟ್ ತಯಾರಿಸುವದು
೪೦ ಬಿಳೇ ಹೂಗಳು ಕೆಂಪಾಗುವಂತೆ ಗಿಡಗಳನ್ನು ತಯಾರಿಸುವದು
೪೧ ಕೆಂಪು ಹೂಗಳು ಬೆಳ್ಳಗಾಗುವಂತೆ ಗಿಡಗಳನ್ನು ತಯಾರಿಸುವದು
೪೨ ಇಸ್ಪೀಟಿನ ಚಮತ್ಕಾರ
೪೩ ಮುಖ ನೋಡಿಕೊಳ್ಳುವ ಕನ್ನಡಿ ಮಾಡುವದು
೪೪ ಸುವಾಸನೆ ಎಣ್ಣೆ ತಯಾರಿಸುವದು
೪೫ ಕೇದಿಗೆ ದವನದಣ್ಣೆ ಮಾಡುವದು
೪೬ ಯಾವ ಗಿಡವಾದರೂ ಹುಟ್ಟುತ್ತಲೆ ಹೂವು ಬಿಡುವಂತ ಮಾಡುವದು
೪೭ ಗಂಧಕದ ಬಟ್ಟಲ ತಯಾರಿಸುವದು
೪೮ ಕರ್ಪೂರ ಮಾಡುವದು
೪೯ ಬ್ರೆಡ್ಡು ತಯಾರಿಸುವದು
೫೦ ನೂಲ ಬಟ್ಟೆಗೆ ಬಣ್ಣ ಹಾಕುವದು
೫೧ ಕಪ್ಪು, ಕೆಂಪು, ಹಸುರ, ಹಳದಿ ಬಣ್ಣ ತಯಾರಿಸುವದು
೫೨ ಬರ್ಥ ಕಂಟ್ರೋಲ
೫೩ ಅರಗಿನ ಬಣ್ಣ ತಯಾರಿಸುವದು
೫೪ ಗಿಲೀಟ ಮಾಡುವದು
೫೫ ತಾಮ್ರದ ಮೇಲೆ ಭಂಗಾರದ ಗಿಲೀಟು ಮಾಡುವದು
೫೬ ತಾಮ್ರ, ಹಿತ್ತಾಳಿಗೆ ಬೆಳ್ಳಿ ಗಿಲೀಟು ಮಾಡುವದು
೫೭ ಕಡ್ಡಿ ಪಟ್ಟಿಗೆ ತಯಾರಿಸುವದು
೫೮ ರೋಜವಾಟರ ತಯಾರಿಸುವದು

ಇತ್ಯಾದಿ ೧೭೦ ವಿಷಯಗಳಿವೆ.
ಸ್ಥಳ ಸಂಕೋಚ ಮೂಲಕ ಎಲ್ಲವನ್ನೂ ಕೊಟ್ಟಿಲ್ಲ.
ಬೆಲೆ ೧ ರೂಪಾಯಿ . . (ವಿ. ಪಿ. ವೆಚ್ಚ ಬೇರೆ)

ಎಸ್. ಸಿ. ಸಾಲಿಮಠ, ಪ್ರಿಂಟರ, ಗದಗ
ಇವರಿಂದ ಬರೆಯಲ್ಪಟ್ಟ

ಕಾಮಕಳಾಶಾಸ್ತ್ರ

ಪ್ರತಿ ಒಬ್ಬ ರಸಿಕರು ಅವಶ್ಯ ಓದಬೇಕಾದ
--- ಈ ಪುಸ್ತಕದೊಳಗಿನ ವಿಷಯಗಳು ---

೧ ಪುರುಷ ಸಾಮುದ್ರಿಕ ಲಕ್ಷಣ ೨ ಸ್ತ್ರೀ ಸಾಮುದ್ರಿಕ ಲಕ್ಷಣ. ೩ ಶಶಕ ಜಾತಿ ಪುರುಷನ ಲಕ್ಷಣ. ೪ ಮೃಗಜಾತಿ ಪುರುಷನ ಲಕ್ಷಣ. ೫ ವೃಷಭಜಾತಿ ಪುರುಷನ ಲಕ್ಷಣ ೬ ಅಶ್ವಜಾತಿ ಪುರುಷನ ಲಕ್ಷಣ ೭ ಪದ್ಮಿನಿಜಾತಿ ಸ್ತ್ರೀಯಳ ಲಕ್ಷಣ. ೮ ಚಿತ್ರಿಣಿಜಾತಿ ಸ್ತ್ರೀಯಳ ಲಕ್ಷಣ. ೯ ಶಂಖಿನಿಜಾತಿ ಸ್ತ್ರೀಯಳ ಲಕ್ಷಣ. ೧೦ ಹಸ್ತಿನಿಜಾತಿ ಸ್ತ್ರೀಯಳ ಲಕ್ಷಣ. ೧೧ ಯಾವ ಯಾವ ಜಾತಿ ಪುರುಷನಿಗೆ, ಯಾವ ಯಾವ ಜಾತಿ ಸ್ತ್ರೀಯಳು ಯೋಗ್ಯ. ೧೨ ಮತ್ತು ಅವರಿಂದ ಹುಟ್ಟಿದ ಮಕ್ಕಳ ಫಲವಿಚಾರ (ಜಾತಕ.) ೧೩ ಯಾವ ಯಾವ ಜಾತಿ ಸ್ತ್ರೀಯರಿಗೆ ಯಾವ ಯಾವ ತಿಥಿಯ ದಿವಸ ಭೋಗೇಚ್ಛಾ ಉಂಟಾಗುತ್ತವೆಂಬುದನ್ನು ತಿಳಿಯುವದು. ೧೪ ಯಾವ ಯಾವ ಸ್ತ್ರೀಯರಿಗೆ ಎಷ್ಟೆಷ್ಟು ಹೊತ್ತಿಗೆ ಭೋಗೇಚ್ಛಾ ಉಂಟಾಗುತ್ತದೆಂಬದನ್ನು ತಿಳಿಯುವದು. ೧೫ ಯಾವ ಯಾವ ಜಾತಿ ಸ್ತ್ರೀಯರಿಗೆ ಯಾವ ಯಾವ ತಿಥಿಯ ದಿವಸ ಯಾವ ಯಾವ ಅವಯವದಲ್ಲಿ ಕಾಮವು ಇರುತ್ತದೆಂಬುದನ್ನು ತಿಳಿಯುವ ಕ್ರಮವು. ೧೬ ಚಂದ್ರಕಲೆಯ ಸ್ಥಾನಗಳು. ೧೭ ಸ್ತ್ರೀವಶೀಕರಣ. ೧೮ ಪುರುಷವಶೀಕರಣ. ೧೯ ಪದ್ಮಿನಿ ಸ್ತ್ರೀಯಳನ್ನು ವಶಮಾಡಿಕೊಳ್ಳುವ ಉಪಾಯ. ೨೦ ಚಿತ್ರಿಣಿ ಸ್ತ್ರೀಯಳನ್ನು ವಶಮಾಡಿಕೊಳ್ಳುವ ಉಪಾಯ. ೨೧ ಶಂಖಿನಿ ಸ್ತ್ರೀಯಳನ್ನು ವಶಮಾಡಿಕೊಳ್ಳುವ ಉಪಾಯ. ೨೨ ಹಸ್ತಿನಿ ಸ್ತ್ರೀಯಳನ್ನು ವಶಮಾಡಿಕೊಳ್ಳುವ ಉಪಾಯ. ೨೩ ಭೋಗಕ್ಕೆ ಯೋಗ್ಯ ಸ್ಥಳ. ೨೪ ಭೋಗಕ್ಕೆ ಅಯೋಗ್ಯ ಸ್ಥಳ ೨೫ ಮೈಥುನಕ್ಕೆ ಅಯೋಗ್ಯವಾದ ವೇಳೆ. ೨೬ ಮೈಥುನಕ್ಕೆ ಅಯೋಗ್ಯ ಸ್ತ್ರೀಯರು. ೨೭ ಪರಸ್ತ್ರೀ ಗಮನದಿಂದಾಗುವ ಹಾನಿ. ೨೮ ಸುಗಂಧ ದ್ರವ್ಯ ೨೯ ಕಂಕುಳದೊಳಗಿನ ದುರ್ಗಂಧ ಹೋಗುವುದಕ್ಕೆ. ೩೦ ಬಾಯಿ ದುರ್ಗಂಧ ಹೋಗುವುದಕ್ಕೆ. ೩೧ ಮಡಿಬಕ್ಕೆಗೆ. ೩೨ ಕೇಶರಂಜನಕ್ಕೆ. ೩೩ ತಿಗಳಿನೆಕ್ಕಿದಕ್ಕೆ. ೩೪ ಕೂದಲು ಉದುರುವುದಕ್ಕೆ. ೩೫ ಶರೀರದ ಕಪ್ಪುಬಣ್ಣಕ್ಕೆ. ೩೬ ಕುಚವೃದ್ಧಿಗೆ. ೩೭ ಸ್ತ್ರೀಯರಲ್ಲಿಯ ಅವಸ್ಥೆಗಳು. ೩೮ ಅವಸ್ಥೆ ಮೇಲಿಂದ ಪ್ರೇಮದ ಇರುವಿಕೆ. ೩೯ ಮೈಥುನದ ಸುಖದಲ್ಲಿ ಅಂತರ ಬೀಳುವ ಕಾರಣ. ೪೦ ದಂಪತಿಗಳು ಕೂಡುವ ದಿಕ್ಕಿನ ಫಲವು. ೪೧ ಸತಿಪತಿಗಳು ಕೂಡುವ ದಿವಸ ಫಲ ೪೨ ಗರ್ಭ ನಿಂತ ದಿವಸ ಫಲ. ೪೩ ಗರ್ಭ ನಿಂತ ಕಾಲ ಫಲ ೪೪ ಸ್ತ್ರೀಯರ ಜಾತಿ ಮೇಲಿಂದ ಕೂಸಿನ ಲಕ್ಷಣ. ೪೫ ವಿಕಾಶಯೋನಿಗೆ ಉಪಾಯ. ೪೬ ಯೋನಿ ಸಂಕೋಚಕ್ಕೆ. ೪೭ ಶಿಶ್ನ ವೃದ್ಧಿಗೆ. ೪೮ ಸ್ತ್ರೀಯರಿಗೆ ಮೈಥುನವು ಬೇಗನೆ ಸಾಕಾಗುವಂತೆ ಮಾಡುವ ಉಪಾಯ. ೪೯ ಪುರುಷರಿಗಿಂತ ಮೊದಲು ಸ್ತ್ರೀಯರ ರೇತಸ್ಖಲನವಾಗುವ ಉಪಾಯ. ೫೦ ಪುರುಷರ ರೇತಸ್ಸು ಬೇಗ ಬೀಳಬಾರದೆಂಬುವಕ್ಕೆ ಉಪಾಯ. ೫೧ ವಾಜಿಕರಣ ಪ್ರಯೋಗ. ೫೨ ಸ್ತ್ರೀಯರನ್ನು ಜಯಿಸುವುದಕ್ಕೆ. ೫೩ ಬಹಳ ಮುಟ್ಟಾಗುತ್ತಿದ್ದರೆ. ೫೪ ಸಂತತಿ ಪ್ರತಿಬಂಧಕ ಉಪಾಯ. ೫೫ ಮುಟ್ಟು ತಡೆದಿದ್ದರೆ. ೫೬ ಗರ್ಭಾಶಯ ಶುದ್ಧಿಗೆ. ೫೭ ಗರ್ಭಧಾರಣಕ್ಕೆ. ೫೮ ಗರ್ಭಪಾತಕ್ಕೆ ಉಪಾಯ.

ಇತ್ಯಾದಿ ೧೭೦ ವಿಷಯಗಳಿವೆ. ಸ್ಥಳ ಸಂಕೋಚ ಮೂಲಕ ಎಲ್ಲವನ್ನೂ ಕೊಟ್ಟಿಲ್ಲ.
ಬೆಲೆ ೧ ರೂಪಾಯಿ (ವಿ. ಪಿ. ವೆಚ್ಚ ಬೇರೆ)

ವಿಳಾಸ:—ಎಸ್. ಸಿ. ಸಾಲಿಮಠ ಅಂಡ್ ಸನ್ಸ್, ಗದಗ ಸಿಟಿ.

Our Cinema Page	Indian Films	Master Venkanna

ಭಾರತೀಯ ಚಲಚ್ಚಿತ್ರಗಳು

(ಕಳೆದ ಸಂಚಿಕೆಯಿಂದ ಮುಂದರಿಸಿದ್ದು)

ಅಭಿನೇತೃಗಳೂ ಚಿತ್ರದ ಯೋಗ್ಯಾಯೋಗ್ಯತೆಗೆ ಕಾರಣರಾಗುವರು. ತಾವು ಸಂಬಳ ತಿನ್ನುತ್ತೇವೆ ಎಂಬ ನೆವದಿಂದಲ್ಲ, ಕಲಾ ದೃಷ್ಟಿಯಿಂದ ಮಾತ್ರ ಅಭಿನಯಿಸುವ ಅಭಿನಯವೇ ಸ್ತುತ್ಯಾರ್ಹವಾದುದೆಂದು ಎಲ್ಲರೂ ಒಪ್ಪಬೇಕಾದ ಮಾತು. ಆದರೂ ಕೆಲವು ನಟನಟಿಯರು ಸಂಬಳ ತಿನ್ನುವ ಕರ್ಮಕ್ಕಾಗಿ ಚಲಚ್ಚಿತ್ರದ ನಾಯಕ ನಾಯಕಿಯರಾಗುತ್ತಿರುವರು. ಮಿಸ್. ಸುಲೋಚನಳ ಅಭಿನಯವು ಈಗೀಗ ನಿಷ್ಪ್ರಯೋಜಕವಾಗಿದೆ. ಡಿ. ಬಿಲ್ಲಿಮೋರಿಯನು ಅವಳಿಗೆ ಸರ್ವವಿಧದಲ್ಲೂ ಒಪ್ಪುವ ಜತೆಗಾರನೆಂದರೆ ತಪ್ಪಲ್ಲ. ದಕ್ಷಿಣ ಭಾರತದ ವೇಮೂರಿ ಗಗ್ಗಯ್ಯನು ರಂಗಭೂಮಿಯ (ಅದೂ ದಶಾವತಾರದ ರಂಗಸ್ಥಳದಲ್ಲಿ ಇನ್ನೂ ಉತ್ತಮ) ರಾವಣನಾಗಬಹುದು. ಮೊದಲ ಬಾರಿಗೇ ತನ್ನದೊಂದು ವ್ಯಕ್ತಿತ್ವವನ್ನು ಸ್ಥಾಪಿಸಿದ ಆ ಭಾರತದ ಹೆಸರಾಂತ ಬಾಲ ನಟಿ ವಸಂತಿಯನ್ನು ಸುಲೋಚನಳ ತಲೆಯ ಮೇಲೆ (ಇಲ್ಲವೇ ಸುಲೋಚನಳನ್ನು ವಸಂತಿಯ ಪಾದದ ಕೆಳಗೆ) ಇರಿಸಿದರೆ ತಪ್ಪಾದೀತೇ? ಹಾಸ್ಯಗಾರರಲ್ಲೂ ಕಲಾದೃಷ್ಟಿಯು ಒಂದಿಷ್ಟಾದರೂ ಇಲ್ಲ. ಗೋರಿ ಮತ್ತು ದೀಕ್ಷಿತ್ ಇವರ ಅಪಹಾಸ್ಯವು ಎಷ್ಟು ಹೇಯವಾಗಿದೆಯೆಂದು ಕಂಡವರೇ ತಿಳಿದಿರಬಹುದು. ಆ ಜಗತ್ಪ್ರಸಿದ್ಧ ಹಾಸ್ಯಗಾರ ಚಾರ್ಲೀ ಚಾಪ್ಲಿನ್ನನ ಹಾಸ್ಯವನ್ನು ದೂರುವವರು ಆರಾದರೂ ಇರುವರೇ? ಒಂದು ವೇಳೆ ಇರುವರೆಂದಾದರೆ ಅವರನ್ನು Weeping philosophers ಎಂದು ಕರೆದರೆ ಸಮರ್ಪಕವಾಗದಿರದು. ಇಂಥಹ (ಹಿಂದೂದೇಶದಲ್ಲಿರುವಂಥಹ) ಕಲಾಪಂತರೆನಿಸಿ ಕಲೆಯನ್ನು ಕೊಲ್ಲುವವರನ್ನೂ ಪೂರ್ಣ ಧಿಕ್ಕರಿಸಿದರೆ ಅದು ನಮ್ಮ ತಪ್ಪಾಗಲಾರದೆಂದು ನನ್ನ ಭರವಸೆ. ಅಲ್ಲದೆ, ಇಂಥಹರನ್ನು ಉತ್ತೇಜಿಸಗೊಳಿಸುವ ಕಲಾಪಂತರ ಧಿಕ್ಕಾರವೂ ಕಲೆಯ ದೃಷ್ಟಿಯಿಂದ ಶ್ರೇಯಸ್ಕರವಾದೀತು.

ಚಲಚ್ಚಿತ್ರದ ಉನ್ನತಿಯನ್ನು ಬಯಸುವ ಮಹನೀಯರು ಆರಾದರೂ ಇದ್ದರೆ, ಅವರು ಇನ್ನುಮುಂದಾದರೂ ವಿ. ಶಾಂತಾರಾಮ, ಪಿ. ಬರು, ಹೇಮಚಂದ್ರ, ನಿತಿನ್ ಬೋಸ್ ಮೊದಲಾದವರ ಸಲಹೆಯನ್ನು ತೆಗೆದುಕೊಳ್ಳಲಿ! ಅಥವಾ ನನಗೆ ತಿಳಿದಷ್ಟು ಮಟ್ಟಿಗೆ ನಾನು ಹೇಳುವ ಹಿತೋಕ್ತಿಗಳನ್ನು ಪರಿಶೀಲಿಸಿ, ಯೋಗ್ಯವೆಂದು ಕಂಡುಬಂದಲ್ಲಿ ಅನುಸರಿಸಲಿ! ಪ್ರತಿಯೊಬ್ಬ ಚಿತ್ರನಿರ್ದೇಶಕನೂ ಆಯಾ ಪಾತ್ರಗಳನ್ನು ದಕ್ಷತೆಯಿಂದ ವಹಿಸಬಲ್ಲ ನಟ-ನಟಿಯರನ್ನಾರಿಸಲಿ. ಅಭಿನಯವು ಕೃತ್ರಿಮವಾಗಿ ಕಾಣದಂತೆ ಜಾಗರೂಕರಾಗಿರಲಿ, ಅಗತ್ಯವಿಲ್ಲದಲ್ಲಿ ಹಾಸ್ಯ ಶೃಂಗಾರ ಮೊದಲಾದವುಗಳನ್ನು ತಂದು ಚಿತ್ರವನ್ನು ಕೆಡಿಸದಿರಲಿ! ಚಿತ್ರಗ್ರಾಹಕರು, ಸಂಗೀತ ನಿರ್ದೇಶಕರು ಮತ್ತು ಚಿತ್ರಕ್ಕೆ ಸಂಬಂಧಪಟ್ಟ ಪ್ರತಿಯೊಬ್ಬನೂ ಕಲೆಗಾಗಿ, ಕಲೆಯ ಉನ್ನತಿಗಾಗಿ ತನ್ನಿಂದಾದನ್ನು ಶ್ರಮವಹಿಸಿ, ಕಂಡುಬರುವ ಕುಂದುಕೊರತೆಗಳನ್ನೆಲ್ಲಾ ಒದಿಗೊದ್ದು ಬಿಡಬೇಕು. ಅಭಿನಯಕಾರರೂ ತಾವೇ ಆ ವ್ಯಕ್ತಿಗಳು; ತಾವು ಪಾತ್ರವನ್ನು ವಹಿಸಿದವರಲ್ಲವೆಂಬ ಭಾವನೆಯಿಂದ ಸ್ವಾಭಾವಿಕವಾಗಿ ಅಭಿನಯಿಸಬೇಕು. ಅಭಿನಯದಲ್ಲಿ ಅತಿ ಶ್ರಮವನ್ನು ತೋರಿಸುವುದು ಹಲವು ನಟ-ನಟಿಯರ ದೋಷಗಳಲ್ಲೊಂದಾಗಿದೆ. ಅದಕ್ಕಾಗಿ ತಮಗೆ ಯಾವ ಪಾತ್ರವನ್ನು ವಹಿಸುವ ಶಕ್ತಿಯಿದೆಯೋ ಅದನ್ನೇ (ಅದು ಸೇವಕನ ಪಾತ್ರವಾದರೂ) ವಹಿಸಿ, ತಮ್ಮ ಕಾರ್ಯದಕ್ಷತೆಯನ್ನು ತೋರಿಸುವುದಕ್ಕೆ ಹಿಂಜರಿಯಬಾರದು. ತಮಗೆ ಸಾಧ್ಯವಾಗದಿದ್ದಲ್ಲಿ ಕಲೆಯ ದೃಷ್ಟಿಯಿಂದಲಾದರೂ ಆ ಪಾತ್ರವನ್ನು (ನಾಯಕನ ಪಾತ್ರವೂ ಇರಬಹುದು) ಒದ್ದು ಬಿಡಬೇಕು. ದೃಶ್ಯಗಳನ್ನು ರಚಿಸುವಾಗಲೂ ಯೋಗ್ಯವಾದ ಪದ್ಧತಿಯನ್ನಿರಿಸುವುದು ಅತ್ಯಾವಶ್ಯಕ. ಉಪ್ಪರಿಗೆಯು ಮನೆಯಾಗಬೇಕು ಎಂದಿದ್ದಾಗ ಅನಗತ್ಯವಾಗಿ ಅರಮನೆಯನ್ನು ರಚಿಸಬಾರದು. ಅರಣ್ಯವಾಗಬೇಕಾದರೆ ಗುಲಾಬಿ ಸೇವಂತಿಗೆ ಮೊದಲಾದ ಹೂ ಗಿಡಗಳನ್ನು ನೆಡುವುದು ಸಮರ್ಪಕವಾಗದಷ್ಟೆ! ಇವೆಲ್ಲವುಗಳ ಮುಖ್ಯ ತತ್ವವೆಂದರೆ ಪ್ರತಿಯೊಬ್ಬ ಭಾರತೀಯನೂ ಭಾರತೀಯ ಚಲಚ್ಚಿತ್ರಕ್ಕಾಗಿ-ಚಲಚಿತ್ರ ಕಲೆಯ ವಿಶಿಷ್ಟ ಉಜ್ವಲ ಔನ್ನತ್ಯಕ್ಕಾಗಿ, ತನ್ನಿಂದಾದಷ್ಟು ಹೆಣಗಬೇಕು. ಅದಕ್ಕಾಗಿ ತನು-ಮನ ಧನಗಳು ಧಾರತಾರ್ಪಣವೆಂದು ತಿಳಿಯಬೇಕು, ಮತ್ತು ಹಾಗೆಯೇ ವರ್ತಿಸಬೇಕು. ತನ್ನ ಮುಂದಾಳುಗಳಾಗಿ ಈಗ ಬೆಳಗುವ ಹಲವು ಜನ ಚಿತ್ರ ನಿರ್ದೇಶಕರ, ಅಭಿನಯ ಗೌರವ ಮತ್ತು ಇತರರ ಮಾರ್ಗವನ್ನು ಅನುಸರಿಸಬೇಕು. ಯಾವ ಕಷ್ಟ ನಷ್ಟಗಳು ಬಂದರೂ ಎದೆಗುಂದದೆ ತಮ್ಮ ಉತ್ತಮ ಧ್ಯೇಯದ ಪತ್ರರಿಣಾಮಕ್ಕಾಗಿ ಪ್ರತಿಯೊರ್ವ ಹಿಂದೀಯನೂ ಮುಂದಾಗಬೇಕು. ಹಾಗೆ ಮಾಡಿದರೆ ಇನ್ನು ಅತ್ಯಲ್ಪ ಕಾಲದಲ್ಲೇ ಪರರಾಷ್ಟ್ರಗಳೂ ಭಾರತೀಯ ಚಲಚ್ಚಿತ್ರ ಕಲೆಯ ಮುಂದೆ, ಭಾರತೀಯ ವೈವಿಧ್ಯ-ವೈಚಿತ್ರ್ಯಗಳ ಮುಂದೆ ಅನವರತವೂ ತಲೆತಗ್ಗಿಸಬೇಕಾಗಬಹುದು. ಆ ಸ್ಥಿತಿ ಆಗುವಂತೆ ನಮ್ಮನ್ನು ಅವ್ಯಕ್ತ ಸಚ್ಛಕ್ತಿಯೊಂದು ಹುರಿದುಂಬಿಸಲೆಂದು ನನ್ನ ಸದಾಶಯ!

'ಭಾರತೀಯ'

ನೋಟಿಸು.

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

O S 204 1931. R L P. No 117-1936
R. E A 9 1937

ಅಸ್ಲು ವಾದಿ ಅನಂತಯ್ಯ ಆಚಾರ್ಯ, ಈಗಿನ ಮೊಕ್ತ್ಯರುದಾರ ಬಸ

ಪ್ರತಿವಾದಿ ಶಿರೂರು ಶಿವಪ್ಪ ಸೆಟ್ಟಿ

ಪ್ರತಿವಾದಿ ಶಿರೂರು ಶಿವಪ್ಪ ಸೆಟ್ರಿಗೆ—

ಅರ್ಜಿದಾರನು ನಿಮ್ಮ ಬಾಬ್ತು ಸ್ಥಿರಾಸ್ತಿ ಏಲಮಿಗೆ ಅಪೇಕ್ಷಿಸಿ, ಆ ಕುರಿತು ಏಲಂ ಇಸ್ತಿಹಾರಿನ ಷರತುಗಳನ್ನು ನಿರ್ಣಯಿಸುವದಿ ಮೇಲ್ಕಂಡ ಅಮ್ಲಜ್ಯಾರಿ ಅರ್ಜಿಯ ತಸ್ತಿಯು ತಾ 21 1-1937ಕ್ಕೆ ಏಲಂದಿನಲ್ಲಿ ತನಗೆ ಪಾರು ಕರೆಯುವದಿ ಕೂಡಾ ಕೋರ್ಟಿನಿಂದ ಪರ್ಮಿಶನ್ ಕೊಡಿಸಬೇಕೆಂತ ಕೊಟ್ಟ R E A 9/1937ನೇ ಅರ್ಜಿ ತಸ್ತಿಯು ತಾ 26 1-1937ಕ್ಕೆ ಸದ್ರಿ ಮೇಲ್ಕಂಡ ಕೋರ್ಟಿನಲ್ಲಿ ತಸ್ತಿಗೆ ಇಟ್ಟಿರುತ್ತದೆ ಆ ಕುರಿತು ನಿಮ್ಮ ಆಕ್ಷೇಪ ಇದ್ದರೆ ಆ ತಸ್ತಿ ದಿವಸಗಳ 11 ಘಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ಹಾಜರಾಗಿ ಜಾಹೀರ್ಮಾಡಿಕೊಳ್ಳತಕ್ಕದ್ದು. ತಪ್ಪಿದರೆ ಏಕಪಕ್ಷವಾಗಿ ತೀರ್ಮಾನಿಸಲ್ಪಡುವದು ಎಂಬ ಸಂಗ್ತಿ ಈ ಮೂಲಕ ತಿಳಿಸಲಾಗುತ್ತದೆ

K Vittaldas Shenai,
ಅರ್ಜಿದಾರನಕಡೆ ಎಡ್ವೊಕೇಟ್.

ಕುಂದಾಪುರ, ತಾ 11 1 1937.

ಭಾಷಾಂತರಕಾರರು
ದೊರೆಯದೆ ಪೇಚಾಡುವಿರೇಕೆ?

ಇನ್ಸೂರೆನ್ಸ್ ಕಂಪೆನಿ, ಬ್ಯಾಂಕು ಮೊದಲಾದವುಗಳಿಗೆ ಸಂಬಂಧಪಟ್ಟ ಮತ್ತು ಇತರ ಎಲ್ಲಾ ತರದ ಇಂಗ್ಲಿಷ್ ಕನ್ನಡ ಭಾಷಾಂತರಗಳನ್ನು ಉತ್ತಮ ರೀತಿಯಿಂದ ಮಾಡಿಕೊಡಲಾಗುವುದು. ಹೆಚ್ಚಿನ ವಿವರಕ್ಕೆ ಈ ಕೆಳಗಿನ ವಿಳಾಸದೊಡನೆ ಪತ್ರವ್ಯವಹಾರ ಮಾಡಬೇಕು

'ಟ್ರಾನ್ಸ್‌ಲೇಟರ್,'
C/o 'ಕಿರಿಯರ ಪ್ರಪಂಚ,' ಉಡುಪಿ.

ವಿಚಾರಿಗಳು ಮತ್ತು ಸಂಪ್ರದಾಯವಾದಿಗಳು

ಇತ್ತೀಚೆಗೆ ನಮ್ಮ ಯುವಕರಲ್ಲಿ ತಾವು ಸ್ವತಂತ್ರ ವಿಚಾರಮಾಡಿ ಯಾವುದು ನ್ಯಾಯ ಮತ್ತು ಸಂಭವವೆಂದು ಕಾಣುತ್ತದೋ ಅದನ್ನು ಮಾತ್ರ ನಂಬಬೇಕೇ ಹೊರತು ಹಿಂದಿನವರು ಹೇಳಿರುವ ಮಾತು ಎಂಬ ಒಂದೇಕಾರಣದಿಂದ ಅದು ಸತ್ಯವೆಂದು ನಂಬುವುದು ಸರಿಯಲ್ಲವೆಂಬ ಭಾವನೆಯು ಎಲ್ಲೆಲ್ಲಿಯೂ ಹರಡುತ್ತಿದೆ. ನಮ್ಮ ಪೂರ್ವಿಕರೆಲ್ಲರೂ ಸರ್ವಜ್ಞರು. ಅವರ ಮಾತಿನ ನಿಜತ್ವದ ವಿಷಯದಲ್ಲಿ ಚರ್ಚಿಸುವ ಅಧಿಕಾರವಾಗಲಿ ಶಕ್ತಿಯಾಗಲಿ ನಮಗಿರುವುದಿಲ್ಲವೆಂಬ ನಂಬಿಕೆಯು ಈಗ ಬಹಳ ಮಟ್ಟಿಗೆ ಕಡಿಮೆಯಾಗ ಹತ್ತಿದೆ. ಸಾಧ್ಯವಿದ್ದಷ್ಟು ಮಟ್ಟಿಗೆ ಪ್ರತಿಯೊಂದು ವಿಷಯವನ್ನೂ ನಾವು ಸ್ವತಂತ್ರವಾಗಿ ವಿಚಾರಿಸಬೇಕೆಂಬ ಸೂತ್ರವನ್ನು ಇಟ್ಟುಕೊಂಡರೆ ಮಾತ್ರ ನಮ್ಮಲ್ಲಿರುವ ಅನೇಕ ಮೂಢನಂಬಿಗೆಗಳು ಮಾಯವಾದವೇ ವಿನಾ ಅನ್ಯಥಾ ಸಾಧ್ಯವಲ್ಲ. ಈ ರೀತಿಯ ಹೊಸ ಭಾವನೆಗಳನ್ನು ಪ್ರಚಾರಗೊಳಿಸುತ್ತಿರುವವರೇ ವಿಚಾರಿಗಳು. ವಿಚಾರಿಗಳ ಸಂಖ್ಯೆಯೂ ಚಳವಳವೂ ಈಗ ಹೆಚ್ಚುತ್ತಾ ಬರುತ್ತಿರುವದು. ಹಿಂದಿನವರ ಆಚಾರ ವಿಚಾರಗಳು ನಮಗೆ ಸರಿಯೆಂದು ತೋರಲಿ ತೋರದಿರಲಿ, ಅವುಗಳನ್ನು ನಾವು ಚರ್ಚೆಯಿಲ್ಲದೆ ಶಿರಸಾವಹಿಸಿ ಅನುಸರಿಸುವುದೇ ನಮ್ಮ ಧರ್ಮವೆನ್ನುವ ಸಂಪ್ರದಾಯವಾದಿಗಳಲ್ಲಿ ಇದು ಸ್ವಲ್ಪ ಗಲಭೆಯನ್ನು ಉಂಟುಮಾಡಿದೆ. ವಿಚಾರಿಗಳ ಮತವು ಸರಿಯಲ್ಲವೆಂದು ಯುಕ್ತಿ ಯುಕ್ತವಾಗಿ ವಾದಿಸಲಾರದೆ ಸಂಪ್ರದಾಯವಾದಿಗಳು ವಿಚಾರಿಗಳನ್ನು ನಿಷ್ಕಾರಣವಾಗಿ ದ್ವೇಷಿಸತೊಡಗಿದ್ದಾರೆ. ಮಾತ್ರವಲ್ಲದೆ ಸ[illegible]ರೀತಿಯ ಮೇರೆಯನ್ನು ದಾಟಿ ಸಿಕ್ಕಿದಂತೆ ದೂಷಿಸಲಿಕ್ಕೆ ಪ್ರಾರಂಭಿಸಿದ್ದಾರೆ. ದೇವರ ಅಸ್ತಿತ್ವದ ವಿಷಯವಾಗಿ ವಿಚಾರಿಗಳು ಈ ವರೆಗೆ ಯಾವ ವಾದವನ್ನು ನಡೆಯಿಸದಿದ್ದರೂ ಅವರನ್ನು ಸಂಪ್ರದಾಯವಾದಿಗಳು ಸುಲಭದಲ್ಲಿ ನಾಸ್ತಿಕರೆಂದು ಕರೆಯುತ್ತಿದ್ದಾರೆ, ಸ್ವತಂತ್ರ ವಿಚಾರವು ಆಸ್ತಿಕರ ಲಕ್ಷಣವಲ್ಲವೆಂಬುದು ಅವರ ಅಭಿಪ್ರಾಯವಾದರೆ ಆಸ್ತಿಕತನವು ಒಬ್ಬನಿಗೆ ಭೂಷಣವೆಂದು ಹೇಗೆ ಎಣಿಸಲಾದೀತು? ಆಸ್ತಿಕ ನಾಸ್ತಿಕ ಈ ಶಬ್ದಗಳಿಗೆ ಸಂಪ್ರದಾಯವಾದಿಗಳ ನಿಘಂಟಿನಲ್ಲಿ ಹೊಸ ಅರ್ಥವಿರುತ್ತದೋ ಏನೋ! ಇಲ್ಲದಿದ್ದರೆ ನಮ್ಮ ಕೆಲವು ಭಾವನೆಗಳಲ್ಲಿ ಮತ್ತು ಆಚಾರ ವಿಚಾರಗಳಲ್ಲಿ ಕೆಲವು ಬದಲಾವಣೆಗಳು ಆಗತಕ್ಕದ್ದಿದೆ ಎಂದು ಒಬ್ಬನು ಸೂಚಿಸಿದ ಕೂಡಲೆ ಅವನನ್ನು ನಾಸ್ತಿಕನೆಂದು ಹೇಳಿಬಿಡುವ ನಮ್ಮ ಸಂಪ್ರದಾಯವಾದಿಗಳ ಕ್ರಮಕ್ಕೇನೆನ್ನಬೇಕು? ವಿಚಾರಿಗಳು ಬ್ರಾಹ್ಮಣ ದ್ವೇಷಿಕರೆಂದು ಸಂಪ್ರದಾಯವಾದಿಗಳು ಅನ್ನುವುದಕ್ಕೂ ಯಾವ ನ್ಯಾಯವೂ ಇರುವುದಿಲ್ಲ. ವಿಚಾರಿಗಳು ನಮ್ಮ ಆಚಾರ ವಿಚಾರಗಳಲ್ಲಿ ಕೆಲವು ಬದಲಾವಣೆಗಳನ್ನು ಸೂಚಿಸುವಾಗ ಬ್ರಾಹ್ಮಣರು ಅಬ್ರಾಹ್ಮಣರು ವೈದಿಕರು ಲೌಕಿಕರೆನ್ನದೆ ಎಲ್ಲರ ಕ್ರಮಗಳನ್ನೂ ಟೀಕಿಸಬೇಕಾಗುತ್ತದೆ. ಟೀಕಿಸಲ್ಪಟ್ಟ ಸಂಪ್ರದಾಯವು ಯಾರನ್ನು ಅಂಟಿಕೊಂಡಿರುತ್ತದೋ ಅವರು ತಮ್ಮನ್ನು ವಿಚಾರಿಗಳು ದ್ವೇಷಿಸುತ್ತಾರೆಂದು ಎಣಿಸಲು ಕಾರಣವಿದೆ. ಮೂಢ ನಂಬಿಗೆಯೆಂಬುದು ಬ್ರಾಹ್ಮಣರಂತೆಯೆ ಅಬ್ರಾಹ್ಮಣರಲ್ಲಿಯೂ ಯಥೇಷ್ಟವಾಗಿದೆ. ವಿಚಾರಿಗಳ ಲೇಖನಗಳಲ್ಲಿ ಕಥೆಗಳಲ್ಲಿ ಮತ್ತು ಮಾತುಗಳಲ್ಲಿ ಬ್ರಾಹ್ಮಣರಲ್ಲಿರುವ ಮೂಢ ಸಂಪ್ರದಾಯಗಳ ಮೇಲಿರುವಷ್ಟೇ ಟೀಕೆಯು ಅಬ್ರಾಹ್ಮಣರಲ್ಲಿರುವ ಮೂಢ ಸಂಪ್ರದಾಯಗಳ ಮೇಲೂ ಇದೆ. ಯಾವ ಸಂಬಂಧ ವಿಚಾರಿಗಾಗಲಿ ಸಂಪ್ರದಾಯವಾದಿಗಾಗಲಿ ಅಂತೆ ತನ್ನ ಜಾತಿಯ ಮೇಲೆ ವಿಶೇಷ ಅಭಿಮಾನ, ಇತರ ಜಾತಿಯವರ ಮೇಲೆ ಅನಾವಶ್ಯ ದ್ವೇಷಾಸೂಯೆ ಇರಲು ನ್ಯಾಯವಿಲ್ಲ. ಸಾರ್ವಜನಿಕ ಪತ್ರಿಕೆಗಳಲ್ಲಿ ಬರೆಯುವಾಗ ಈ ರೀತಿಯ ಭೇದ ತೋರಿಸದೆ ಜಾತಿ ಮತವೆಣಿಸದೆ ಎಲ್ಲರೂ ನಮ್ಮಲ್ಲಿರುವ ಅರ್ಥವಿಲ್ಲದ ಕೆಲವು ದುಷ್ಟ ಸಂಪ್ರದಾಯಗಳನ್ನು ಮೂಲೆಗೊತ್ತಿ ಸ್ವತಂತ್ರ ವಿಚಾರಿಗಳಾಗಿ ವರ್ತಿಸಬೇಕೆಂದು ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಇದಕ್ಕಾಗಿ ಸಂಪ್ರದಾಯವಾದಿಗಳು ಅವರನ್ನು ದ್ವೇಷಿಸಿ ಅಥವಾ ಅಸಭ್ಯರೀತಿಯಿಂದ ದೂಷಿಸಿ ಸಾರ್ಥಕವೇನು? ವಿಚಾರಿಗಳ ಭಾವನೆಗಳು ಸರಿಯಲ್ಲವೆಂದು ಸಂಪ್ರದಾಯವಾದಿಗಳು ಯುಕ್ತಿ ಯುಕ್ತವಾಗಿ ವಾದಿಸಬೆತ್ತಿಸುವುದೇ ಇದಕ್ಕಿಂತ ಪ್ರಯೋಜನವಲ್ಲವೇ?

— ವಿಚಾರಿ.

ನವಯುಗಕ್ಕೆ ಇಂದೇ ಚಂದಾದಾರರಾಗಿರಿ!

ಉಡುಪಿ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O S No. 98/1936

1 ವಾಸುದೇವ } ಪ್ರ್ಯಾನರರು ರಕ್ಷಕಳು
2 ಗುರುರಾಜ } ತಾಯಿ ಜಲಜಾಕ್ಷಿ } ಅರ್ಜಿದಾರರು
3 ಶಾಂತಾನಂದ } ಯಂಮ, ರಾಮಚಂದ್ರ

ತಂತ್ರಿಗಳ ವಿಧವೆ, ಉಡ್ಪಿ ತಾಲೂಕು ಬಡಗಬೆಟ್ಟು ಗ್ರಾಮ

ಅರ್ಜಿದಾರರ ತಂದೆ ಮೃತ ರಾಮಚಂದ್ರ ತಂತ್ರಿಯು ದಿ ಬೊಂಬೆ ಲ್ಯಾಪ್ ಇನ್ಸೂರೆನ್ಸ ಕಂಪನಿ ಲಿಮಿಟೆಡ್ ಇವರಲ್ಲಿ ಪಡೆದ ನಂಬ್ರ 13270 ನೇ ಪೊಲಿಸಿಯ ಹಣವನ್ನು ಸದ್ರಿ ರಾಮಚಂದ್ರ ತಂತ್ರಿಗಳು ತಾ 1-9-1936ರಲ್ಲು ಮೃತಪಟ್ಟಿರುವದರಿಂದ ವಸೂಲು ಮಾಡುವರ ಸಕ್ಸೆಶನ್ ಸರ್ಟಿಫಿಕೇಟ ಕೊಡಬೇಕಾಗಿ ವಗೈರೆ ಅರ್ಜಿದಾರರು ಮಾಡಿದ ಅರ್ಜಿಯು ತಾ 30-1-1937ಕ್ಕೆ ತನ್ಕಿಗೆಯಿಟ್ಟಿರುವದರಿಂದ ಆಕ್ಷೇಪವುಳ್ಳವರು ಸದ್ರಿ ತಾರೀಕಿನ ಬೆಳಗ್ಯೆ 10 ಗಂಟೆಗೆ ಸದ್ರಿ ಕೋರ್ಟಿನ ಮುಂದ ಜ್ಯಾಹೀರುಮಾಡಿಕೊಳ್ಳತಕ್ಕದೆಂಬ ಸಂಗತಿ ಈ ಮೂಲಕ ತಿಳಿಸಿಯದೆ

18-1-1937 } **C. Raya Ballal,**
ಉಡುಪಿ } *Advocate for Petitioners.*

ಪೇಟೆ ಧಾರಣೆ

ಸಾಮಗ್ರಿಗಳು	ಮಂಗಳೂರು ಇಂದ	ಮಂಗಳೂರು ವರೆಗೆ	ಉಡುಪಿ ಇಂದ	ಉಡುಪಿ ವರೆಗೆ
ರಾಶಿ ಅಕ್ಕಿ	3 - 6	3—10	3— 2	3— 4
ಮುಡ್ಕಿ	3— 1	4 0	3 12	4 — 0
ಗುಡ್ಡ ಸಗ್ಗಿ	3—10	3 11	3 - 6	3— 8
ಸೂರ ಅವ್ವಲ್ ಬೆಳ್ತಿಗೆ	4— 4	4 —12	4 — 8	4—12
ರಂಗೂನು ಬಿ ಗೋಣಿ ೧ಕ್ಕೆ	6 2	7 — 0	6 —10	6 12
ಗೋಧಿ ಗೋಣಿ ೧ಕ್ಕೆ	8 — 8	10 — 4	11 0	12 — 0
ತೊಗರಿ ಗೋಣಿ ೧ಕ್ಕೆ	9 — 0	9— 8	11— 8	..
ಹುರುಳಿ ಗೋಣಿ ೧ಕ್ಕೆ	5 — 2	5 8	5 — 0	5— 8
ಕಡಲೆ ಗೋಣಿ ೧ಕ್ಕೆ	7—10	9 — 0	8 0	1- 8
ತೊಗರಿಬೇಳೆ ಗೋಣಿ ೧ಕ್ಕೆ	11 — 0	19— 0	11 — 8	18 8
ಉದ್ದು ಗೋಣಿ ೧ಕ್ಕೆ	9— 8	10 — 0	9 — 4	9 — 8
ಹೆಸರು ಗೋಣಿ ೧ಕ್ಕೆ	9 — 4	9 —12	10— 8	11— 0
ರಾಗಿ ಗೋಣಿ ೧ಕ್ಕೆ	4 — 0	6— 0		
ಊರುಬೆಲ್ಲ ಖಂಡಿ ೧ಕ್ಕೆ	30— 0	35— 0	20 0	25 — 0
ಉಪ್ಪು ಗೋಣಿ ೧ಕ್ಕೆ	4 8	4—12	4—10	4—12
ಕೊಬ್ರಿ ಖಂಡಿ ೧ಕ್ಕೆ	60 — 0	70— 0	67 — 8	70 — 0
ಕೊಬ್ರಿ ಹಿಂಡಿ ಖಂಡಿ ೧ಕ್ಕೆ	27— 0	28 - 8	33 - 0	36— 0
ಎಳ್ಳಿಂಡಿ ಖಂಡಿ ೧ಕ್ಕೆ	22 8	25— 0	20— 0	21— 1
ಕೊಬ್ರಿ ಎಣ್ಣೆ ಮಣ ೧ಕ್ಕೆ	4 15	5—14	6 8	6—12
ಎಳ್ಳೆಣ್ಣೆ ಮಣ ೧ಕ್ಕೆ		6 - 0	5 8	6 0
ಚಿಮಿಣಿ ಎಣ್ಣೆ ಪೆಟ್ಟಿಗೆ ೧ಕ್ಕೆ		6 - 5	6 - 2	6— 1
ಪೋಂಡಿಸ ಸಕ್ಕರೆ ಮಣ ೧ಕ್ಕೆ		3— 9	3 3	3 1
ಮೆಣಸು	3— 8	4 - 0	2 8	2—14
ಸಾಸಿವೆ ಮುಡಿ ೧ಕ್ಕೆ	5— 4	6 0	5— 4	
ಕೊತ್ತುಂಬರಿ ಮಣ ೧ಕ್ಕೆ	2 — 8	3 0		
ಕಾಳುಮೆಣಸು ಖಂಡಿ ೧ಕ್ಕೆ	95— 0	102 8	110 0	120 — 0
ಗೇರುಬೀಜ ಮುಡಿ ೧ಕ್ಕೆ	4 2		4 4	
ಕಪ್ಪಿನ ಖಂಡಿ ೧ಕ್ಕೆ	35— 0	37— 8	37 — 8	10 — 0
ತಾಂಬ್ರ ತಗಡು ಮಣ ೧ಕ್ಕೆ	9—1	9 14	12— 4	12— 8
,, ಪಾತ್ರೆಗಳು ಮಣ ೧ಕ್ಕೆ	12 — 8	14 — 0	14— 0	15— 0
ಚೀನಿ ಬಳ್ಳಿ ಸೇರು ೧ಕ್ಕೆ	17— 8	18— 0	13 12	11 0
ಹಿತ್ತಾಳೆ ತಗಡು ಮಣ ೧ಕ್ಕೆ	10 — 0		10 -	—
ಪವನು ೧ಕ್ಕೆ	22— 8		22 - 8	
ಹುಣಸೆ ಹುಳಿ ಖಂಡಿ ೧ಕ್ಕೆ	20 — 0	25 — 0	60 0	65 - 0
ನೇಟಿವ್ ಕಾಫಿ ಖಂಡಿ ೧ಕ್ಕೆ	140 — 0	150 0		
ಫಿಟೇರಿ ಕಾಫಿ ಖಂಡಿ ೧ಕ್ಕೆ	160 — 0	170 — 0	155 0	160— 0
ಮಡಿಕೇರಿ ಏಲಕ್ಕಿ	25 — 0	26 — 8		
ಕೆಂಪು ಗೋಧಿ			12— 0	
ಏಲಕ್ಕಿ ಮಣ ೧ಕ್ಕೆ	15— 0	55— 0	56 — 0	57— 0
ಬೂಸ ಕಾಫಿ ಖಂಡಿ ೧ಕ್ಕೆ			150 — 0	155 — 0
ರತ್ತ ಮುಡಿ ೧ಕ್ಕೆ	1— 4	1 8		
ದುಪ್ಪ ಮಣ ೧ಕ್ಕೆ	17 0	18— 0		

ನಾರದನ ತಂಬೂರಿ

ಮುನಿಗಳೆಷ್ಟಿ ಹೆಚ್ಚಿದರು ಕಲಿಯುಗದಿ ಕಂಡಿರಾ? ! ಮುನಿವರರೆ ಈ ಯುಗದ ಮುನಿಗಳಯ್ಯಾ!! ಶುಭವಾಗಲಿ ಮಾನವರೆ! ಶ್ರೀಕೃಷ್ಣ ಸಂದೇಶದ ಅಶ್ವತ್ಥಾಮ ಮತ್ತು ವರ್ತಕ ಧರಣಿಯ ಜಮದಗ್ನಿ—ಇವರಿಬ್ಬರೂ ನಾರದನ ಮೇಲೆ ಮುನಿದು ಬಿದ್ದಿದ್ದಾರೆ ಮೌನಿಗಳು ಮಾತಾಡುವ ಚಂದ ನೋಡಿದಿರಾ! ನಾವು ಮುನಿಗಳು ಒಟ್ಟಾದಾಗ ಹೀಗೆಯೇ ಸಂಭಾಷಿಸಿಕೊಳ್ಳುವದುಂಟು – ನಮ್ಮದು ದೇವಭಾಷೆ ತಿಳಿಯಿತೆ? ‖ ಮಾನವರ ಇದಿರಿನಲಿ ನಾವೆಲ್ಲ ಮೌನಿಗಳು ! ನಮ್ಮೊಳಗ ಮಾತುಕತೆಯುಂಟು ನೋಡಿ ‖

●

"ಸುಧಾರಣೆಯ ಸೌಕರ್ಯಕ್ಕಾಗಿ ಸುಧಾರಕ ನಾದ ಎಂದು ಹೇಳಲು ನಿನಗೆ ಭಾರೀ ನಾಚಿಕೆಯಾಗಲಿಲ್ಲವೆ?" ಎಂದು ಅಶ್ವತ್ಥಾಮನು ಬಹು ವಿನಯದಿಂದ ಪ್ರಶ್ನಿಸುತ್ತಿದ್ದಾನೆ ಅದೇನು ಅಶ್ವತ್ಥಾಮ ಹೀಗೆ ಕೇಳುವೆ? ಸುಧಾರಕನಾಗಲು ಮನಸ್ಸಿದ್ದರೂ ನಾಚಿಕೆ ಬಿಡದೆ ಹಿಂದ ಬಿದ್ದವನಂತೆ ಕೇಳುತ್ತಿರುವೆಯಲ್ಲ? ನಿನ್ನ ನಾಚಿಕೆಯು ತಪ್ಪು ಸ್ಥಾನಕ್ಕೆ ಬಂದು ನಿಂತಿದೆ ನೋಡು ಅದನ್ನು ಅಲ್ಲಿಂದ ತಪ್ಪಿಸಿ—ಒಮ್ಮೆ ವ್ಯಂಗ್ಯವಾಗಿ ಟೀಕಿಸಿ ಕೊನೆಗೆ ಕ್ಷಮೆ ಕೇಳುವ ಮರ್ಜಿಯುಂಟಲ್ಲಾ— ಆ ಸ್ಥಾನದಲ್ಲಿ ತಂದಿಡು ‖ ನಾಚಿಕೆಗ ನೆಲೆಯಿಲ್ಲ ಇಟ್ಟಲ್ಲಿ ನಿಲ್ಲುವದದು ! ನ್ಯಾಯದಾ ನೆಲೆಯಲ್ಲಿ ನಿಲಿಸಬೇಕು ‖

●

ಅಶ್ವತ್ಥಾಮನು ತಿರುವಾಂಕೂರಿನ ಮಹಾರಾಜರಿಗೆ, ಎಂಟನೇ ಎಡ್ವರ್ಡ್ ಚಕ್ರವರ್ತಿಗಳಿಗೆ ದಾರಿ ತೋರಿಸಲು ಹೊರಟಿದ್ದಾನೆ—ಈ ದುರಭ್ಯಾಸವು ನಿನಗೆ ದ್ವಾಪರಯುಗದಲ್ಲಿಯೂ ಇತ್ತು ಪಾಂಡವರನ್ನು ದಾರಿಗೆ ಹಚ್ಚುವೆನೆಂದು ಹೋಗಿ ತಲೆ ಬೋಳಿಸಿಕೊಂಡ ಕಥೆಯನ್ನು ಮರೆತುಬಿಟ್ಟೆ ಮರೆಯಬೇಡ ಮಹಾರಾಯಾ! ಇದು ಕಲಿಯುಗ! ಹೀಗೆ ಹೇಳಿದನೆಂದು ಕ್ರೋಧಗೊಳ್ಳಬೇಡ—ನೀನೂ ಒಬ್ಬ ಮುನಿಯೆಂದು ಬುದ್ಧಿಗಾಗಿ ಹೇಳಿದೆ! ಕಲಿಯುಗದ ರಾಜರಲಿ, ಹುಳಿಮಂತ್ರ ಫಲಿಸುವದ ! ಬಾಯಿ ಮೂಗನು ಬಿಗಿದು ಜಪವ ಮಾಡು ‖

●

ಒಂದೂರಿನಲ್ಲಿ ಒಬ್ಬ ಮಹಾತ್ಮನಿದ್ದನಂತೆ, ಆತನು ಆ ಊರನ್ನು ತನ್ನಾಜ್ಞೆಯಂತೆ ನಡೆಸುತ್ತಿದ್ದನಂತೆ! ಹೇಗೆ ಗೊತ್ತುಂಟ? ರಸ್ತೆಯಲ್ಲಿ ಒಂದು ಬಸ್ಸು ಪೂರ್ವದಿಂದ ಪಶ್ಚಿಮಕ್ಕೆ ಹೋಗುತ್ತಿದ್ದನ್ನಿ ಈ ಮಹಾತ್ಮ ಅದನ್ನು ಕಂಡವನೇ 'ಹೋಗಲಿ ಪಶ್ಚಿಮಕ್ಕೆ' ಎನ್ನುತ್ತಾನೆ, ಪೂರ್ವಕ್ಕೆ ಹೋಗುವದಾದರೆ ಪೂರ್ವಕ್ಕೆ ಕೈಬೀಸಿದ—ಹೀಗಾಗಿ ಆ ಊರಿನಲ್ಲಾಗುವದಲ್ಲಾ ಈ ಮಹಾತ್ಮನ ಆಜ್ಞೆ ಪ್ರಕಾರ! ನಮ್ಮ ಜಮದಗ್ನಿಯು ಇಂದು ಅಂತಹ ಮಹಾತ್ಮನಾಗಿ ಹೋಗಿದ್ದಾನೆ, ಸಂತೋಷ! ! ಜಮದಗ್ನಿಯ ಮಹಾತ್ಮೆ ನೋಡಿದಿರ ತಪದ ಫಲ ಲೋಕ ಚಲಿಸುವದವನ ಕೈಯಿಂದಲೆ!‖

●

ಕೇಳಿ "ಜಮದಗ್ನಿಯ ಇಂಥಾ ಕಾರ್ಣಿಕವೊಂದನ್ನು 'ಶ್ರೀ ಎ ಬಿ. ಸಟ್ರಿ ಕೈಸರ್ ಈ ಹಿಂದ್ ಬಿಡಿಸಿದವರು ನಾವು" ಎನ್ನುತ್ತಿದ್ದಾನೆ ಜಮದಗ್ನಿ ! ಇನ್ನು ಹೀಗೆಯೇ ಒಂದೊಂದೇ ದೊಡ್ಡ ಕೆಲಸವನ್ನು ಮಾಡಲಿಕ್ಕೆ ಕೈಹಾಕುತ್ತಾನೆ ನೋಡಿ' ಆದರ ನಿಮ್ಮಲ್ಲೊಂದು ವಿನಂತಿ ನೀವು ಮಾತ್ರ ಅಂತಹ ಲೋಕಚಾಲಕರಾಗಲು ಯತ್ನಿಸಬೇಡಿ ನಮ್ಮಲ್ಲಿ ವಿನೋದವನ್ನೆಬ್ಬಿಸಲಿಕ್ಕೆ ಇಂಥವರು ಒಬ್ಬಿಬ್ಬರಿದ್ದರೂ ಸಾಕು ನೋಡಿ! ! ಕಾರ್ಯಕರ್ತರು ಬೇಕು ಬಾಯಿಚಪಲರು ಬೇಕು ‖ ಹಾಗಿಲ್ಲದಿರೆ ಲೋಕ ನಡವುದುಂಟೆ? ‖

●

ನಿಮ್ಮಲ್ಲಿ ಚಂಡಮೂಡಿ ಜೋಗುಳ ಹಾಡುವವರು ಯಾರಾದರೂ ಇರುವರೆ? ಅಂಥವರಿದ್ದರ ನಮ್ಮ ಜಮದಗ್ನಿಯನ್ನೊಮ್ಮೆ ಜೋಗುಳಿಸಲಾರಿರಾ? ಮೊನ್ನೆಯ ವರೆಗೆ ನನ್ನ ತಂಬೂರಿಯ 'ಟುಂಯಿ ಟುಂಯಿ' ಕೇಳಿ ಸ್ವಸ್ಥವಾಗಿದ್ದ, ಈಗ ನಾನು ಆ ಟುಂಯಿ ಟುಂಯಿ ನಿಲ್ಲಿಸಿದ್ದೇ ತಡ—ಜಮದಗ್ನಿ 'ಕುಂಯಿ ಕುಂಯಿ ಮಾಡಲು ತೊಡಗಿದ್ದಾನೆ "ನಾರದನ ತಂಬೂರಿ ಕಳವಾಗಿದೆಯೇ .... " ಇತ್ಯಾದಿ ಬಾಲಭಾಷೆಯಾಡುತ್ತಿದ್ದಾನ ಜಮದಗ್ನಿ! ಪ್ರಾಯ ಬಂದ ಕೆಲವರ ಸೂಚನೆಯಂತ ಆ ಸ್ವರವೆಬ್ಬಿಸುವದನ್ನು ನಿಲ್ಲಿಸಿದ್ದೇನಯ್ಯಾ! ಪಾಪ! ಬೇರ ಕೆಲಸದ ನಡುವೆ ನಿನ್ನ ಸಂತೈಸುವದು ! ನನಗಾಗಲಿಲ್ಲವೈ ಮಾಡಲೇನು? ‖

●

ಇನ್ನೂ ವಿನೋದ ನೋಡಬೇಕಾದರ ನೀವು ಚುನಾವಣೆಯ ರಂಗವನ್ನೇ ಕಾಣಬೇಕು! ಜಿಲ್ಲೆಯ ಮೂರು ಡಿವಿಜನುಗಳಿಗೂ ಕೊಂಗ್ರೆಸು ಹುರಿಯಾಳುಗಳಿದ್ದಾರಲ್ಲಾ,ಅವರಲ್ಲ ಪುತ್ತೂರು ಉಮೇದ್ವಾರರು ಶಿವಳ್ಳಿ ಬ್ರಾಹ್ಮಣರು, ಮಂಗಳೂರಿನವರು ಗೌಡಸಾರಸ್ವತ ಬ್ರಾಹ್ಮಣರು ಕುಂದಾಪುರದವರು ಬಂಟರು ಇದು ಜಾತಿಯ ಮಾತಾಯಿತು ಕುಂದಾಪುರ ಡಿವಿಜನಿನಲ್ಲೀಗ ಹಲವು ನಾರದರು ಹುಟ್ಟಿ ಭಾರೀ ಸುದ್ದಿ ಪ್ರಚಾರಕ್ಕೆ ಇಳಿದಿದ್ದಾರೆ! ಆ ನಾರದರು ಬೇರೆ—ಈ ನಾರದ ಬೇರೆ ನೆನಪಿರಲಿ! ‖ ಹಿಂದಿನಾ ಯುಗಗಳಿಗೆ ಒಬ್ಬ ನಾರದ ಸಾಕು! ಈ ಕಾಲ ಹಲವು ನಾರದರು ಬೇಕು ‖

●

ಈ ನಾರದರು ಒಂದು ಹೊಸ ಸುದ್ದಿ ಹುಟ್ಟಿಸಿದ್ದಾರೆ. ಕೊಂಗ್ರೆಸಿನವರಾದ ಮಂಗಳೂರಿನ ಬಂಟಪ್ರಮುಖರು ಅಲ್ಲಿ ಗೌಡಸಾರಸ್ವತ ಜಾತಿಯ ಕೊಂಗ್ರೆಸ್ ಉಮೇದ್ವಾರರಿಗೆದುರಾಗಿ ಕೆಲಸ ಮಾಡುತ್ತಿದ್ದಾರೆ ಎಂದು ಈ ನ್ಯೂಸ್‌ಮೇಕರರ ಪ್ರಚಾರ ನರನಾರಾಯಣ! ಬಿಸಿಬಿಸಿ ಸುಳ್ಳು ಸುದ್ದಿ ಬೇಕಾದವರು ಬೇಗಬೇಗನೆ ಇದನ್ನುಯ್ದುಕೊಳ್ಳಬಹುದು—ತಡವಾದರೆ ಸಿಕ್ಕಲಾರದು! ದೇವಲೋಕದ ನಾರದನು ಭೂಲೋಕಕ್ಕೆ ಬಂದಿದ್ದಾನ, ಮಂಗಳೂರಿನ ಸತ್ಯವಾರ್ತೆ ಕುಂದಾಪುರಕ್ಕೆ ತಲಪದಿದ್ದೀತೇ ಅದು ಬರುವ ಮುಂಚೆ ಇದು ಬೇಕಾದವರು ಬಂದುಬಿಡಿ! ‖ ಒಂದೊಂದೆ ಕ್ಷಣ ಬಾಳ್ವ ! ಯಿರುವ ಸುಳ್ಳಿನ ಜಾತಿ ! ಹುಟ್ಟಿ ಸಾಯುವದುಂಟು ಲೋಕದೊಳಗೆ ‖

●

ಚುನಾವಣೆಯ ಕಾಲ ಅವಸರದ ಬೆಳೆ ಭಾರೀ ಜಾಸ್ತಿ ನೋಡಿ ಶ್ರೀ ಸಿ ಸುಬ್ರಹ್ಮಣ್ಯ ಭಟ್ಟರಿದ್ದಾರಲ್ಲ ಅವರೊಮ್ಮೆ 'ತನ್ನನ್ನು ಅಪ್ಪರ್ ಹೌಸಿಗೆ ನಿಲ್ಲಿಸಿರೆಂದು ಕೊಂಗ್ರೆಸ್ ಪಾರ್ಲಿಮೆಂಟರೀ ಬೋರ್ಡಿಗೆ ಅರ್ಜಿಮಾಡಿದ್ದರು ಕೊಂಗ್ರೆಸಿನವರದನ್ನು ತಿರಸ್ಕರಿಸಿದರೆಂಬ ವಾರ್ತೆ ಬಂದದ್ದೇ ತಡ ಶ್ರೀಯುತ ಭಟ್ಟರು ತನ್ನ ನಾಲ್ಕಾಣೆಯ ಕೊಂಗ್ರೆಸ್ ಮೆಂಬರಿಕೆಯನ್ನು ಸಹ ಬಿಟ್ಟುಬಿಟ್ಟರು! ಆ ಮೇಲೆ ಶ್ರೀ ಭಟ್ಟರನ್ನು ನಿಲ್ಲಿಸಬಹುದೇ ಎಂದು ಯೋಚಿಸುವ ಸಂದರ್ಭ ಪಾರ್ಲಿಮೆಂಟಿನವರಿಗೆ ಒದಗಿತು—ಆದರೆ ನೋಡುವದೇನು? ಎಣ್ಣೆ ಬರುವಾಗ ಗಾಣ ಮುರಿದಿದೆ! ನರ ನಾರಾಯಣ! ಕೌನ್ಸಿಲಿನ ಮೆಂಬರಿಕೆಯಾ ಸ್ಥಾನವಿಲ್ಲದಿರೆ ! ಈ ಪುಟ್ಟ ಸ್ಥಾನದಲಿ ನಿಲುವದೆಂತು? ‖ —ನಾರದ

ಪ್ರಾಮುಖ್ಯ ಪ್ರಕಟಣೆ

ಅಮೃತಾಂಜನ

— ಡಿಪೋವಿನ ರಿಂಗ್‌ವರ್ಮ್ ಮುಲಾಮು —

ಇಷ್ಟರ ವರೆಗಣ ನಮ್ಮ
ವಿಲಿಯಮ್ ಎಂಡ್ ಕೋ ರವರ
ರಾಜ ಮತ್ತು ರಾಣಿಯ ಟ್ರೇಡ್‌ಮಾರ್ಕಿನ ರಿಂಗ್‌ವರ್ಮ್
ಮುಲಾಮು ಈ ಕೆಳಗಣಂತೆ ವ್ಯತ್ಯಾಸಮಾಡಲಾಗಿದೆ

ಅಮೃತಾಂಜನ ಡಿಪೋವಿನ ತ್ರಿವರ್ಣದ 'ರೈಸಿಂಗ್ ಸನ್'

ಈ ಮೇಲಿನ ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು
ನಮ್ಮ ಗಿರಾಕಿದಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು.

ನಮ್ಮ ಟ್ರೇಡ್‌ಮಾರ್ಕಿನ ಮಾರ್ಪಾಟದಿಂದ ನಮ್ಮ ಔಷಧಿ ತಯಾರಿಯಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲೆಂಬ ಕುರಿತು ನಾವು ಈ ಮೂಲಕ ಭರವಸೆ ಕೊಡುತ್ತೇವೆ.

ಅಮೃತಾಂಜನ ಡಿಪೋ, — ಬೊಂಬಾಯಿ, ಮದ್ರಾಸು, ಕಲ್ಕತ್ತ.

ಕೇವಲ ಎರಡೇ ಆಣೆಗಳಲ್ಲಿ ೨೫ ರೂಪಾಯಿ ಬಹುಮಾನ

ಅಖಿಲ ಕನ್ನಡ ನಾಡಿಗೆ ಪ್ರೀತಿಯಾಗಿರುವ

ಕಥಾಕುಂಜ (ಮಾಸಪತ್ರಿಕೆ)

ಸರ್ವಾಂಗಸುಂದರವಾಗಿ ಹೊಸ ಹೊಸ ಚಿತ್ರಗಳಿಂದ ಅಲಂಕೃತವಾಗಿ ಡಿಸೆಂಬರದಲ್ಲಿ ೩ನೆಯ ವರುಷದ ೧ನೆಯ ಸಂಚಿಕೆಯು ಪ್ರಕಟವಾಗುವದು. ಆದ್ದರಿಂದ ಕನ್ನಡಾಭಿಮಾನಿಗಳು ಈಗಲೆ ಮುಂಗಡ ಹಣ ಕಳುಹಿಸಿ ಚಂದಾದಾರರಾಗಬೇಕು.

ಚಂದಾದಾರರಿಗೆ ೨೫ ರೂಪಾಯಿ ಬಹುಮಾನ.

ಈ ಸಂಧಿ ಕಳಕೊಳ್ಳಬಾರದು. ಕಥಾಕುಂಜವನ್ನು ಕೊಂಡುಕೊಳ್ಳಲು ಎಲ್ಲರಿಗೂ ಅನುಕೂಲವಾಗಲೆಂದು ಚಂದಾ ಹಣವನ್ನು ಇಳಿಸಲಾಗಿದೆ.

ಇಳಿಸಿದ ಚಂದಾ ೧-೮-೦ (ಅಂಚೆವೆಚ್ಚ ಬೇರೆ) ಶಾಲೆ, ಕಾಲೇಜು, ಲೈಬ್ರರಿಗಳಿಗೆ ೨-೮-೦

ಮೈಸೂರು, ಮುಂಬೈ ವಿದ್ಯಾಖಾತೆಯವರಿಂದ ಶಾಲೆ ಕಾಲೇಜುಗಳ ವಾಚನಾಲಯಕ್ಕೆ ಮಂಜೂರಾಗಿದೆ. ಜಾಹೀರಾತುದಾರರಿಗೆ ಸುವರ್ಣಸಂಧಿ! ಪತ್ರಿಕೆಗಳನ್ನು ಮಾರಾಟಮಾಡಲು ಎಲ್ಲ ನಗರಗಳಲ್ಲಿ ಪ್ರಾಮಾಣಿಕ ಏಜಂಟರು ಬೇಕು.

ವಿಶೇಷ ಮಾಹಿತಿ ಹಸ್ತಪತ್ರಿಕೆ ನೋಡಿರಿ

ವ್ಯವಸ್ಥಾಪಕ— **ಕಥಾಕುಂಜ, ಬೆಳಗಾಂವಿ.**

DIAMONDS! **DIAMONDS!!**

K. Ramachandra Krishna Shet

Near Mission High School, *Mangalore*

SUPERFINE UP TO DATE CUTTING! ವಜ್ರಗಳು **BEST BRILLIANCY!!**

ಉತ್ಕೃಷ್ಟ ತರಗತಿಯ ಚುನ್ನಾತ (first quality, selected) ಎಮ್ ಸ್ಟ್ರ್ಯಾಡಮ್ಮಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ. ಕೊಂಡುಕೊಳ್ಳುವವರಿಗೆ ಬಜಾರ ಧಾರಣೆಗಿಂತ ೫ ಪರ್ಸಂಟಿಗೆ ಕಡಿಮೆಯಾಗಡಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ. ಇದನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ. ಇದರ ಶಾಖೆಯೊಂದನ್ನು ಗವರ್ಮೆಂಟ್ ಕೊಲೆಜಿನ ಎದುರುಗಡೆ ತೆರೆಯಲಾಗಿದೆ.

ಕೆ. ರಾಮಚಂದ್ರ ಕೃಷ್ಣ ಶೇಟ್,
ಜುವೆಲರ್, ಮಿಶನ್ ಹೈಸ್ಕೂಲು ಬಳಿ, ಮಂಗಳೂರು.

ಬೊಂಬೈ ಲೋಂಡ್ರಿ

ಉಡುಪಿ, ಹೊಸ್ಪಿಟಲ್ ರೋಡ್.

ನಮ್ಮಲ್ಲಿ ವಸ್ತ್ರಗಳನ್ನು ಜಾಗ್ರತೆಯಿಂದ ಮಡಿಮಾಡಿ, ಕ್ಲಪ್ತ ವ್ಯಾದೆಗೆ ಕೊಡುವುದಲ್ಲದೆ, ಊಲನ್, ಸಿಲ್ಕು ಮತ್ತು ಜರಿವಸ್ತ್ರಗಳನ್ನು ನಾಜೂಕಾಗಿ ಡ್ರ್ಯಾಕ್ಲೀನಿಂಗ್-ವಗೈರೆ ಮತ್ತು ಬೇಕಾದ ನಮೂನೆಯಲ್ಲಿ ಖಾತ್ರಿಯಾದ ರಂಗಿನ ಕೆಲಸವನ್ನು ಸಹ ಅತಿ ಸುಲಭ ದರದಲ್ಲಿ ಮಾಡಿಕೊಡಲಾಗುವುದು.

ಹೆಚ್ಚಿನ ಮಾಹಿತಿ ಬಗ್ಗೆ ಕಂಪೆನಿಯಲ್ಲಿ ವಿಚಾರಿಸುವುದು.
ಪ್ರೊಪ್ರೈಟರ್: ಯಮ್. ಯಸ್. ಭಟ್ಕಳ್.

ಉತ್ತಮ ವರ್ಗದ ಶ್ರೇಷ್ಠವಾದ

ಸರಸ್ವತಿ

ಸ್ತ್ರೀಸಾಹಿತ್ಯ ಸಚಿತ್ರ ಮಾಸಪತ್ರಿಕೆ

ಇಡೀ ಕರ್ಣಾಟಕದಲ್ಲಿ ಸ್ತ್ರೀಯರ ಅಭ್ಯುದಯಕ್ಕಾಗಿ ಪ್ರಚುರಪಡಿಸುತ್ತಿರುವ ಪತ್ರಿಕೆಯು ಇದೊಂದೇ. ಈ ಪತ್ರಿಕೆಯ ಹದಿನಾರನೆಯ ಸಂಪುಟವು 1937ನೇಯ ಜನವರಿ ತಿಂಗಳಿನಿಂದ ಪ್ರಾರಂಭವಾಗಿದೆ. ಈ ಪತ್ರಿಕೆಯಲ್ಲಿ ಸ್ತ್ರೀಯರ ಉನ್ನತಿಗೆ ಅತ್ಯಾವಶ್ಯಕವಾದ ಶಿಕ್ಷಣ-ಸಾಹಿತ್ಯ ಕಲೆ-ಆರೋಗ್ಯ-ಪಾಕಶಾಸ್ತ್ರ-ಸಮಾಜ ಸುಧಾರಣೆ ಇವುಗಳಿಗೆ ಸಂಬಂಧಪಟ್ಟ ಲೇಖನಗಳೂ, ಸಣ್ಣ ಸಣ್ಣ ಕಥೆಗಳೂ, ನಾಟಕಗಳೂ ಕರ್ಣಾಟಕದ ಸುಪ್ರಸಿದ್ಧ ಲೇಖಕ ಲೇಖಕಿಯರಿಂದ ಬರೆಯಲ್ಪಟ್ಟು ಪ್ರಕಟವಾಗುವವು. ಮಕ್ಕಳ ಸಲುವಾಗಿ 'ಮಕ್ಕಳ ಪುಟಗಳು' ಬೇರೆ ಪ್ರಕಟವಾಗುವುವು. ಮೈಸೂರು, ಮುಂಬೈ ವಿದ್ಯಾ ಇಲಾಖೆಯವರಿಂದ ಸರ್ಕಾರದ ಶಾಲೆಗಳಿಗೂ ವಾಚನಾಲಯಗಳಿಗೂ ಮಂಜೂರಾಗಿದೆ. ಪ್ರಕಟನೆಗೆ ಅತ್ಯುತ್ತಮವಾದ ಮಾಸಪತ್ರಿಕೆ.

ವಾರ್ಷಿಕ ಚಂದಾ ರೂ 3—0—0 ಮಾತ್ರ. ವಿ. ಪಿ ಹಾಸಲುಬೇರೆ.

ಸರಸ್ವತಿ ಕಾರ್ಯಾಲಯ,
ಚಾಮರಾಜಪೇಟೆ, **ಬೆಂಗಳೂರು ನಗರ**

The Commonwealth Assurance Co., Ltd.

(ESTD 19[illegible])

Chairman, Mr N. C. Kelkar, Ex- M. L. A

HEAD OFFICE
POONA CITY.

CHIEF AGENCY OFFICE
HAMPANKATTA,
MANGALORE.

1934ನೇ ಇಸ್ವಿ ಎಪ್ರಿಲ್ ತಿಂಗಳ ವರೆಗೆ
ರೂ. 57 ಲಕ್ಷಗಳಷ್ಟರ ವಹಿವಾಟುಮಾಡಿರುವುದು.

1932ನೇ ಎಪ್ರಿಲ್ ತಿಂಗಳ ವರೆಗೆ ಪಟ್ಟಿಯಲ್ಲಿದ್ದ ಎಲ್ಲಾ ಪೊಲಿಸಿದಾರರಿಗೆ
ಈ ಕಂಪೆನಿಯು 1000ಕ್ಕೆ ರೂ. 10 ಮತ್ತು 12ರಷ್ಟರ ಬೋನಸು ಕೊಟ್ಟಿರುವುದು.

ಹೆಚ್ಚಿನ ಮಾಹಿತಿಗೆ ಹೆಡ್ ಆಫೀಸಿಗಾಗಲಿ ಈ ಕೆಳಗಣ ವಿಳಾಸಕ್ಕಾಗಲಿ ಬರೆಕೊಳ್ಳಿರಿ—

ದಿ ಕೋಮನ್‌ವೆಲ್ತ್ ಎಶ್ಯುರೆನ್ಸ್ ಕಂಪೆನಿ ಲಿಮಿಟೆಡ್,
ಮುಖ್ಯ ಏಜನ್ಸಿ ಆಫೀಸು, ಹಂಪನಕಟ್ಟೆ, ಮಂಗಳೂರು.

ದಿ ಮೂಲ್ಕಿ ಗ್ರೇಂಡ್ ರೇಫ್ಲ್

(ಮೂಲ್ಕಿ ಹೈಸ್ಕೂಲಿನ ಸಹಾಯಾರ್ಥ)

ಮೂಲ್ಕಿ ದ. ಕನ್ನಡ.

ಲಿಷ್ಟು ಅಚ್ಚೈರು ತಾರೀಕು 25—1—1937] ● **[ಸೋಡ್ತಿ ತೆಗೆಯುವ ತಾರೀಕು 31—1—1937**

ಟಿಕೇಟು ಒಂದರ ಖರೀದಿ ಬರೇ ನಾಲ್ಕು ಆಣೆ ಮಾತ್ರ.

20 ಟಿಕೇಟುಗಳಿರುವ ಒಂದು ಪುಸ್ತಕಕ್ಕೆ ರೂ. 5—0—0 ಮಾತ್ರ. ಜಾಗ್ರತೆ ಮಾಡಿರಿ.

ನಿಮಗೆ ಬೇಕಾಗುವ ಟಿಕೇಟುಗಳನ್ನು ಕೂಡಲೇ ಪಡೆಯಿರಿ.

ಸೋಡ್ತಿ ತೆಗೆಯುವ ತಾರೀಕನ್ನು ಯಾವ ಕಾರಣದಿಂದಲೂ ಮುಂದರಿಸೋಣಾಗಲಿಕ್ಕಿಲ್ಲ.

ಹೆಚ್ಚಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಕೂಡಲೇ ಬರೆಯಿರಿ—

"ಕಾರ್ಯದರ್ಶಿ,"
"ದಿ ಮೂಲ್ಕಿ ಗ್ರೇಂಡ್ ರೇಫ್ಲ್,"
ಮೂಲ್ಕಿ, ದ. ಕನ್ನಡ.

ಪ್ರೇಮ ವಿದ್ಯಾಪೀಠ, ತುಂಗಭದ್ರಾ, (ಬಳ್ಳಾರಿ ಜಿಲ್ಲಾ)

ಇದರ ಹೊಸವರ್ಷವು ಜೂಲೈಯಲ್ಲಿ ಮೊದಲಾಗುತ್ತದೆ ಮರ್ಯಾದೆಯ ಉದ್ಯೋಗ ಬೇಕಾಗಿದ್ದರೆ ಇಲ್ಲಿ ಶಿಕ್ಷಣವನ್ನು ಪಡೆಯಿರಿ ಪಬ್ಲಿಕ್, ಅಪ್ಪರ್ ಸೆಕೆಂಡರಿ, ಮೆಟ್ರಿಕ್ ಸ್ಕೂಲ್ ಫೈನಲ್ ಇತ್ಯಾದಿ ಪಾಸ್ ಆದವರೆಲ್ಲರಿಗೂ ಯೋಗ್ಯತೆಗೆ ತಕ್ಕಂತೆ ವಿಧ ವಿಧವಾದ ಕೋರ್ಸ್‍ಗಳಿವೆ ಪ್ರಾಸ್‍ಫೆಕ್ಟಸ್ ಮಾಹಿತಿಗಾಗಿ ಕೂಡಲೆ ೩ ಆಣೆ ಸ್ಟಾಂಪು ಇಟ್ಟು ಬರೆಯಿರಿ.

ಮಹೋಪಾಧ್ಯಾಯಾ **ಡಾ| ಸುಮತಿಬಾಯಿ,**

ಬಿ ಎ ಎಲ್ ಟಿ, ಎಫ್ ಪಿ ಎಮ್ ಎಸ್ ಭಿಷಗ್ರತ್ನ, ರಿಜಿಸ್ಟ್ರಾರ್-

LAXMI BRAND COFFEE POWDER.

Pure & Superior quality, will last long without losing its flavour and colour

TRADE MARK

Use always this LAXMI BRAND COFFEE POWDER [prepared from the best & choicest Coffee Beans of Nilgiris (Hills)

WANTED AGENTS in Southern India (samples available)

ಉತ್ಕೃಷ್ಟ ಕಾಫಿಬೀಜಗಳಿಂದ ತಯಾರಿಸಲ್ಪಟ್ಟ ಸುವಾಸನೆಯುಳ್ಳ ನಮ್ಮ **ಲಕ್ಷ್ಮೀಮಾರ್ಕಿನ ಕಾಫಿಹುಡಿಯನ್ನೇ** ಸದಾ ಉಪಯೋಗಿಸಿರಿ ಏಜಂಟರಿಗೆ ಯೋಗ್ಯ ಕಮಿಶನ್ ಕೊಡಲಾಗುವದು ಹೆಚ್ಚಿನ ಮಾಹಿತಿ ಬಗ್ಗೆ ಕೆಳಗಿನ ವಿಳಾಸಕ್ಕೆ ಬರೆದು ತಿಳಿಯಬಹುದು

Fire Resistance Steel Iron Safes. latest pattern

ನಮ್ಮಲ್ಲಿ ಕಬ್ಬಿಣದ ಟ್ರಂಕುಗಳು ಸದಾ ಮಾರಾಟಕ್ಕೆ ಸಿದ್ಧವಿರುತ್ತವೆ ತಿಂಗಳಿಗಿಷ್ಟು ಕಂತ ಗಳಿಂದಲೂ ಮಾರುವ ಏರ್ಪಾಡಿದೆ

For Prices & Particulars Apply to—

K. K. Shanbhag & Sons

Court Road UDIPI S K

FOR SALE

Sold also by Instalments

ಮಾಸ] **ವಿಶ್ವವಾಣಿ** [ಪತ್ರಿಕೆ.

ಸಂಪಾದಕರು—**ಅ. ನ ಕೃಷ್ಣರಾಯರು.**

ಸಂಸ್ಕೃತಿಯ ಪ್ರಸಾರಕ್ಕಾಗಿ ಕರ್ನಾಟಕದಲ್ಲಿ ಹೊರಟಿರುವ ಪತ್ರಿಕೆ ಇದೊಂದೇ ಜಗತ್ತಿನ ಸಾಂಸ್ಕೃತಿಕ ಚಲನವಲನಗಳ ಸುದ್ದಿಗಳೆಲ್ಲಾ ಇದರಲ್ಲಿ ಪ್ರಕಟವಾಗುತ್ತವೆ

ಚಿತ್ರವಿಭಾಗದ ವೈಶಿಷ್ಟ್ಯ—ಜಗತ್ತಿನ ಯಾವದೇ ಪತ್ರಿಕೆಯಲ್ಲಿಯೂ ಪ್ರಕಟವಾಗದಿರುವ ಅನೇಕ ಚಿತ್ರಗಳು 'ವಿಶ್ವವಾಣಿ'ಗೆ ವಿಶೇಷವು

ಆದುದರಿಂದ ಇಂದೇ ಚಂದಾದಾರರಾಗಿರಿ

ಸಾಮಾನ್ಯ ಚಂದಾದಾರರಿಗೆ (ವರ್ಷಕ್ಕೆ)	ರೂ ೩—೮—೦
,, ,, (೬ ತಿಂಗಳಿಗೆ)	ರೂ ೨—೦—೦
ಶಾಲೆ, ಕಾಲೇಜು, ವಾಚನಾಲಯ, ಸಾರ್ವಜನಿಕ ಸಂಸ್ಥೆಗಳಿಗೆ (ವರ್ಷಕ್ಕೆ)	ರೂ ೫—೦—೦

ವಿಶ್ವವಾಣಿಯು ಮೈಸೂರು, ಮುಂಬಯಿ, ಮದರಾಸು, ಹೈದರಾಬಾದು, ಕೊಡಗು, ಕರ್ನಾಟಕಗಳಲ್ಲಿ ಮಾತ್ರವಲ್ಲದೆ ಕನ್ನಡಿಗರು ನೆಲಸಿರುವ ಎಲ್ಲ ಕಡೆಯಲ್ಲಿಯೂ ಪ್ರಚುರವಾಗುತ್ತದೆ

ಆದುದರಿಂದ 'ವಿಶ್ವವಾಣಿ'ಯಲ್ಲೇ ಜಾಹೀರಾತನ್ನು ಕೊಡಿರಿ.

ಹೆಚ್ಚು ವಿಚಾರಗಳಿಗೆ ಬರೆಯಿರಿ—

ವ್ಯವಸ್ಥಾಪಕ—'ವಿಶ್ವವಾಣಿ,' 'ಅನ್ನಪೂರ್ಣ', ವಿಶ್ವೇಶ್ವರಪುರಂ,

ಬೆಂಗಳೂರು ನಗರ.

ನಮ್ಮ ಜರಿ ಪೀತಾಂಬರ, ರೇಶ್ಮೆ ಮಡಿಗಳಿಗೆ ಗಮನಕೊಡಿರಿ

S. U. N. & CO. ***Choukhamba, Benares City***

ಮೂರು ಇನಾಮುಗಳು.

THIS MAN
OUR CUSTOMER

THIS MAN WISHES HE HAD

ಶ್ರೀ ಕಾಶಿಯಲ್ಲಿ ತಯಾರಾಗತಕ್ಕ ರೇಶ್ಮೆ ಮಾಲುಗಳ ಕೆಟಲಾಗು, ಕಾಶಿ ಎಕ್ಸೆ, ವಿಶ್ವೇಶ್ವರ ಪಟ, ಈ ಸಾಮಾನುಗಳು ೧ ಆಣೆ ಸ್ಟೇಂಪು ಕಳುಹಿಸಿದರೆ ಇನಾಮಾಗಿ ಕಳುಹಿಸಲಾಗುವವು ಸ್ಟಾಂಪು ಬಾರದಿದ್ದರೆ ಈಗಿನ ಫೆಶನಿಗೆ ತಕ್ಕಂತೆ ಜರೀ ಕೆಲಸಗಳಿಂದ ತಯಾರಿಸಿದ ರೇಶ್ಮೆ ಸೀರೆಗಳೂ, ಖಣ, ಮಡಿ ಕದಪಾಮ್ಸಿ, ಪೇಟಾ, ಕೋಟಿಂಗ್, ಶರ್ಟಿಂಗ್ ಶಿಲ್ಕುಗಳೂ, ಕಾಶ್ಮೀರ ಶಾಲುಗಳೂ, ಊಲ್ಲನ್ ಚಾರೆ, ಧೋತರ, ನಮುಣಾ, ತರತರದ ರುದ್ರಾಕ್ಷಿಗಳೂ ಸಾಮಾನುಗಳೇ ಮೊದಲಾದ ಅನೇಕ ತರದ ಸಾಮಾನುಗಳ ಕೆಟಲಾಗು ಮಾತ್ರ ಇನಾಂ ಈಗಿನ ಹೊಸನಮೂನೆಯ ಪಡಲು ಬುಟ್ಟಿ ಹಾಕಿದ ಜರಿ ಸೀರೆ ಎಲ್ಲಾ ರಂಗುಗಳಲ್ಲಿ ರೂ ೩೦ರಿಂದ 55 ಪಡಲು ಸಾದಾ ೧೮ಮೊಳದ ಸೀರೆ ೧ಕ್ಕೆ ರೂ 16 ರಿಂದ ರೂ ೩೫ರ ವರೆಗೆ ಅರೆ ಕಡಮೆ 16ಮೊಳ ಕ್ಲಾವರ್ ಅಂಚು ರೂ 10½ ಯಿಂದ ರೂ 16 ಖಣ 1ಕ್ಕೆ ರೂ 1½ರಿಂದ ರೂ 10ರ ವರೆಗೆ ಪೋಸ್ಟು ಖರ್ಚು ಪ್ರತ್ಯೇಕ ಆರ್ಡರಿನಂತೆ ಸಾಮಾನುಗಳನ್ನು ಸರಿಯಾದ ಸುಲಭ ದರದಿಂದ ಕಳುಹಿಸಲಾಗುವದು

ಶಿರೋಮಣಿ ನಾರಾಯಣಾಚಾರ್ಯ & ಕಂಪೆನಿ, ಚೌಕಂಬಾ, ಬೆನಾರಿಸ್, ಕಾಶಿ

USE

SUVASINI AGARBATHIES

(REGD.) **SRI BHARATHA VASTU MANDIRA, UDIP**

ಗೀತೆಯ ಕೈಗನ್ನಡಿ

[ಹೊಸಕೆರೆ ಚಿದಂಬರಯ್ಯನವರಿಂದ]

ಶ್ರೀ ಭಗವದ್ಗೀತೆಯ ಸಮೂಲ ಭಾಷಾಂತರ.

ಬೆಲೆ ನಾಲ್ಕಾಣೆ

ಒಂದೇ ತಿಂಗಳಲ್ಲಿ ಇಂಗ್ಲಿಷ್

[ಪಿ ಐ ಉಪಾಧ್ಯಾಯ, ಬಿ ಎ, ಎಲ್ ಎಲ್ ಬಿ]

ಕನ್ನಡಿಗರಿಗೆ ಇಂಗ್ಲಿಷ್ ಭಾಷೆಯ ಜ್ಞಾನ ಗಳಿಸಲು ಅನುಕೂಲ.

ಬೆಲೆ ಎಂಟಾಣೆ

ಮಧುವನ

[ಕಿರಿಯರ ಪ್ರಕಟಣೆ]

ಅತ್ಯಂತ ಮನೋಹರವಾದ ಇಪ್ಪತ್ತೈದು ಕತೆಗಳ ಸಂಗ್ರಹ ನಿಧಿ.

ಬೆಲೆ ರೂ ಒಂದೂವರೆ

ತುಳುನಾಡ್ • ಛಾಪಖಾನೆ

ಉಡುಪಿ

Printed by P VENKATARAMANACHARYA for & on behalf of SUPPLY AGENCY LTD, at THULUNAD PRESS UDIPI and Published by K H SHETTY at NAVAYUGA OFFICE UDIPI

Registered No. M. 3618

೧೦ [illegible]ಠಾಣೆ

NAVAYUGA
A Nationalist Kanarese Weekly, UDIPI, S. K.

It will pay you
to advertise in
NAVAYUGA'
The Leading
Nationalist
Kanarese Weekly
of Karnatak
FOR RATES OF ADVT. Etc.
APPLY TO THE MANAGER

ನವಯುಗ

ವಾಚಕರನೇಕರ
ಅಪೇಕ್ಷೆಯಂತೆ ಮುದ್ರಿಸಲ್ಪಟ್ಟು
ಮಂಗಳೂರು ಉಡುಪಿಗಳಲ್ಲಿ
ಜಯಶೀಲವಾಗಿ
ಅಭಿನಯಿಸಲ್ಪಟ್ಟು
ಜನಪ್ರಿಯವಾದ ನಾಟಕ
ವ್ಯಭಿಚಾರಿಣಿ ಯಾರು?
ಕೆಲವೇ ಪ್ರತಿಗಳು ಉಳಿದಿವೆ.
ಬೆಲೆ ೦ ೮ ೦
ಕಿರಿಯರ ಪ್ರಪಂಚ, ಉಡುಪಿ

VOL XXII-NO 22

28-1-1937

ಮೂಡ ಬಾನಿನ ಕಣ್ಣು ಕೆಂಗಿಡಿಯು ಕಾರುತಿದೆ,
ಬನದ ನಾಡೊಳು ಮೊಳಗುತಿದೆ ತುಮುಲನಾದ;

ವಾರಪತ್ರಿಕೆ
ಸಂಪಾದಕ: ಕೆ. ಕೆ. ಶೆಟ್ಟಿ.

ಮೂಡುವುದು ತಂಬೆಳಕ ತಿಂಗಳಿನ ಮೊಗವಲ್ಲ,
'ನವಯುಗ'ದ ರುದ್ರರವಿಯಾರಕ್ತ ಬಿಂಬ.

ಸಂಪುಟ ೧೬] ಉಡುಪಿ, ಗುರುವಾರ ೨೮, ಜನವರಿ, ೧೯೩೭ [ಸಂಚಿಕೆ ೨೨

THE

Canara Industrial & Banking SYNDICATE, LIMITED.

ESTD: [INCORPORATED IN BRITISH INDIA] 1925

Head Office:
MUKUNDA NIVAS,
UDIPI, S. I.

BRANCHES:

1 BANGALORE CITY
2 BELGAUM
3 BYADGI
4 BELLARY
5 ADONI
6 HOSPET
7 NANDYAL
8 PRODATTUR
9 TADPATRI
10 TALIPARAMBA
11 HUBLI
12 GADAG
13 UDIPI
14 UPPINANGADI
15 KASARGODE
16 KARWAR
17 KUMTA
18 ANKOLA
19 HONAVAR
20 BHATKAL
21 KARKALA
22 BRAHMAVAR
23 HUNGARCUTTA
24 SIRSI
25 SAGAR
26 KANHANGAD
27 COONDAPOOR
28 PAYYANUR
29 CANNANORE
30 MANGALORE

A branch at BOMBAY will be opend in April next

We stand for all that is BEST in MODERN BANKING SERVICE

OPEN AN ACCOUNT TO-DAY IN THIS

Pioneer & Highly Progressive
BANK OF KARNATAKA
AND BE
A SATISFIED CUSTOMER.

ALL KINDS OF BANKING BUSINESS TRANSACTED ON EASY TERMS.

Total Working Funds exceed Rs. 35 Lakhs

Apply for Rules of Business.

MUKUNDA NIVAS
UDIPI
22—12—1936

P. A. Pai Brothers.
Managing Agents

ದಿ ಕುಂದಾಪುರ ಬೇಂಕ್ ಲಿಮಿಟೆಡ್ ಕುಂದಾಪುರ

ಬ್ರಾಂಚ್—ಬ್ರಹ್ಮಾವರ.

ಚಾಲ್ತಿ ಮತ್ತು ಸೇವಿಂಗ್ಸ್ ಬೇಂಕ್ ಠೇವಣಾತಿಗಳು ಒಳ್ಳೇ ದರದ ಬಡ್ಡಿಯಲ್ಲಿಯೂ ಖಾಯಂ ಠೇವಣಾತಿಗಳು 3 ತಿಂಗಳಿಗೊಮ್ಮೆ ಸಾಲಿಯಾನ್ ಶೇಕಡಾ ರೂಪಾಯಿ 4½, 6 ತಿಂಗಳಿಗೆ ಸಾಲಿಯಾನ್ ಶೇಕಡಾ ರೂಪಾಯಿ 5%, 12 ತಿಂಗಳಿಗೆ ಸಾಲಿಯಾನ್ ಶೇಕಡಾ ರೂಪಾಯಿ 6%, 24 ತಿಂಗಳಿಗೆ ಸಾಲಿಯಾನ್ ಶೇಕಡಾ 6½% ದರದ ಬಡ್ಡಿಯಲ್ಲಿ ಅಂಗೀಕರಿಸಲ್ಪಡುವುವು.

ಒಂದು ವರುಷದ ಯಾ ಹೆಚ್ಚಿಗೆ ಅವಧಿಯ ಖಾಯಂ ಠೇವಣಾತಿಗಳಿಗೆ ಮೇಲೆ ಕಾಣಿಸಿದ ದರದಲ್ಲಿ 6 ತಿಂಗಳಿಗೊಮ್ಮೆ ಬಡ್ಡಿ ಕೊಡಲಾಗುವುದು. ಬೇರೆ ಎಲ್ಲಾ ತರದ ಬೇಂಕ್ ವ್ಯವಹಾರಗಳು ನಡಿಸಲ್ಪಡುವುವು ಕರೆಂಟ್, ಸೇವಿಂಗ್ಸ್ ಬೇಂಕ್ ಮತ್ತು ಕ್ಯುಮುಲೇಟಿವ್ ಠೇವಣಾತಿಗಳು ಅಂಗೀಕರಿಸಲ್ಪಡುವುವು.

ವಿಶೇಷ ಸೂಚನೆ—ಬಡವರಿಗೆ ಸಹಾಯವಾಗುವಂತೆ ಕಡಿಮೆ ಎಂದರೆ ರೂಪಾಯಿ 10 ಸಹಾ ಸಾಲಕೊಡಲಾಗುತ್ತೆ. ಸಾಲುಗಳು ದೊರೆಯುತ್ತವೆ. ಹೆಚ್ಚಿನ ಮಾಹಿತಿ ಬಗ್ಗೆ ಬರೆದುಕೊಳ್ಳಿ.

ನವಯುಗ

ಉಜ್ವಲ ರಾಷ್ಟ್ರೀಯ ವಾರಪತ್ರಿಕೆ—

ಉದ್ಬೋಧಕ ಲೇಖನಗಳಿವೆ, ದೇಶ ವಿದೇಶಗಳ ತಾಜಾ ವರ್ತಮಾನಗಳಿವೆ, ಮನೋಹ್ಲಾದಕ ಕಥೆ, ಕವನ, ನಾಟಕಗಳಿವೆ, ಧುರೀಣರ ಫೋಟೋಗಳಿವೆ.

ಪ್ರತಿ ಗುರುವಾರ ತಪ್ಪದೆ ಪ್ರಕಟವಾಗುವುದು.

ವಾ. ಚ. ಅಂಚೆವೆಚ್ಚ ಸೇರಿ ಕೇವಲ ೩—೬—೦.

ಇಂದೇ ಚಂದಾದಾರರಾಗಿರಿ!

ಅಖಿಲ ಕರ್ನಾಟಕದಲ್ಲಿಯೂ ಹೊರ ಪ್ರದೇಶದಲ್ಲಿಯೂ ವಿಶಾಲವಾಗಿ ಪ್ರಚಾರದಲ್ಲಿರುವ "ನವಯುಗ"ವು ಜಾಹೀರಾತುಗಳಿಗೆ ವಾಹನವಾಗಿದೆ.

ಮೆನೇಜರ್— ನವಯುಗ, ಉಡುಪಿ.

THE
MOOLKY BANK, LTD.,
MOOLKY.

ದಿ ಮೂಲ್ಕಿ ಬೇಂಕ್, ಲಿಮಿಟೆಡ್,
ಮೂಲ್ಕಿ.

ಎಲ್ಲಾ ತರದ ಬ್ಯಾಂಕ್ ವ್ಯವಹಾರಗಳು ನಡಿಸಲ್ಪಡುವವು. "ಮುಖ್ಯವಾಗಿ ಭಂಗಾರ ವ ಸರಕು ಈಡಿನ ಮೇಲೆ ಸಾಲವನ್ನು ಕೊಡುವುದು".

ಕಾಯಂ ಠೇವಣಾತಿಗಳು:

ಒಳ್ಳೇ ದರದ ಬಡ್ಡಿಯಲ್ಲಿಯೂ, ಮಾಸಿಕ, ಸೇವಿಂಗ್ಸ್‌ಬೇಂಕ್ ಮತ್ತು ಠೇವಣಾತಿಗಳು ಯೋಗ್ಯ ತರದ ಬಡ್ಡಿಯಲ್ಲಿಯೂ ಅಂಗೀಕರಿಸಲ್ಪಡುವವು.

ಹೆಚ್ಚಿನ ಮಾಹಿತಿಗೆ ಕೇಳಗಿನವರಿಗೆ ಬರೆದುಕೊಳ್ಳಿರಿ.

M. R. Punja, ಯಂ. ಆರ್. ಪೂಂಜ,
President & Manager, ಪ್ರೆಸಿಡೆಂಟು ಮತ್ತು ಮೆನೇಜರ್.

ಇದೀಗ ಬಂದಿದೆ— ಹೊಸ ಪುಸ್ತಕ!

ಟಾಲಸ್ಟಾಯಿಯವರ ಕತೆಗಳು

ಶ್ರೀ. ಎಲ್. ಗುಂಡಪ್ಪ, ಎಂ ಎ ಯವರಿಂದ ಅನುವಾದಿಸಲ್ಪಟ್ಟ ಟಾಲಸ್ಟಾಯಿಯವರ ಕಥೆಗಳೆಲ್ಲಾ ಕನ್ನಡದಲ್ಲಿ ಒಟ್ಟಾಗಿ ಅಚ್ಚಾಗಿ ಬಂದಿವೆ. ಈ ಕಥೆಗಳಲ್ಲಿ ಜೀವನಕ್ಕೆ ಸಂಬಂಧಪಟ್ಟ ಎಲ್ಲಾ ಪ್ರಶ್ನೆಗಳ ಚರ್ಚೆಯೂ ಇದೆ. ಆದುದರಿಂದ ಸ್ತ್ರೀಪುರುಷರೆಲ್ಲರೂ ಅವಶ್ಯ ಓದಬೇಕು.

೧೦೪ ಪುಟಗಳು — ಒಂದೂವರೆ ರೂಪಾಯಿ ಬೆಲೆ.

ಪ್ರತಿಗಳು ಸಿಗುವ ಸ್ಥಳ—

ಕಿರಿಯರ ಪ್ರಪಂಚ, ಉಡುಪಿ.

ವಿಜಯನಗರ ಸ್ಮಾರಕೋತ್ಸವ ಮಂಡಲದ ಪರವಾಗಿ ಹೊರಡಲಿರುವ

ಜಯಕರ್ನಾಟಕದ

ವಿಜಯನಗರ ವಿಶೇಷ ಸಂಚಿಕೆ

ವಿಶೇಷ ಸಂಪಾದಕರು: ಪ್ರೊ. ಎಸ್. ಎಸ್. ಬಾಳವಾಡ, ಎಂ.ಎ

ಅಖಿಲ ಭಾರತದ ಪ್ರಸಿದ್ಧ ವಿದ್ವಾಂಸರ ಲೇಖನವೈಭವ!

ವಿಜಯನಗರಕ್ಕೆ ಸಂಬಂಧಿಸಿದ ಚಿತ್ರಮಾಲೆಗಳ ಐಶ್ವರ್ಯ!!

ಹೊಳಪಿನ ಹಾಳೆ — ಅಚ್ಚಿನ ಅಚ್ಚುಕಟ್ಟು

ಬೆಲೆ: ಎಂಟಾಣೆ ಮಾತ್ರ

ಜಯಕರ್ನಾಟಕವು ಜನವರಿಯಿಂದ—ವಿಶೇಷ ಸಂಚಿಕೆಯಿಂದ ಮೊದಲ್ಗೊಂಡು ದೊಡ್ಡ ಆಕಾರದಲ್ಲಿ (ಡೆಮಿ ¼ ದಲ್ಲಿ) ಹೊರಡುವುದು!

ಅಲ್ಲದೆ ಚಂದಾದರವನ್ನು ಇಳಿಸಿದೆ—ರೂ. ೪—೮—೦ ಮಾತ್ರ!

ಚಂದಾದಾರರಾಗಬೇಕೆನ್ನುವವರಿಗೂ ಜಾಹಿರಾತುದಾರರಿಗೂ ಸುಸಮಯ

ಜಯಕರ್ನಾಟಕ ಕಾರ್ಯಾಲಯ, ಧಾರವಾಡ.

ತುಳುನಾಡ್ ವೈದ್ಯಶಾಲೆ, ಉದ್ಯಾವರ, ದ. ಕ.

ಕೊಲೆರಾ ಪಿಲ್ಸ್	ಜ್ವರದ ಮಾತ್ರೆಗಳು
ಕೊಲೆರಾ ರೋಗಕ್ಕೆ ರಾಮಬಾಣ ಔಷಧ.	ಚಳಿಜ್ವರ ರೋಗಸಂಬಂಧವಾದ ಸಕಲ ರೋಗಗಳಿಗೂ ದಿವ್ಯೌಷಧ.
೧೦೦ ಮಾತ್ರೆಗಳಿಗೆ ರೂ ೩—೮—೦	೧೦೦ ಮಾತ್ರೆಗಳಿಗೆ ರೂ ೩—೮—೦

ಎಲ್ಲಾ ತರದ ರೋಗಗಳಿಗೂ ಅನುಭವಸಿದ್ಧವಾದ ದಿವ್ಯೌಷಧಗಳು ದೊರೆಯುತ್ತವೆ.

ಯು. ಪಿ. ಶೇಸ್ತ್ರ, ಗೋಲ್ಡ್ ಮೆಡಲ್ಡ್ ಫಿಜಿಸಿಯನ್.

THE
PANGAL NAYAK BANK
LIMITED.
ESTABLISHED 1920.

***Head Office*: UDIPI.**

Branches: MANGALORE and KATAPADI.

Fixed loans and Overdraft advances are granted on the pledge of gold articles, on the mortgage of immovable properties and on the personal security of approved constituents on favourable terms.

Genuine trade bills, cheques, drafts etc., are discounted at a nominal charge.

Current, Savings Bank and Cumulative deposits are accepted at moderate rates of interest.

Fixed Deposits are received and interest allowed at 4% on 1 year and at 4½% on 2 years deposits.

Every other description of up-to-date Banking business is also undertaken.

A few shares are also available to the public.

ಮಿರಜದಲ್ಲಿಯ ಸುಪ್ರಸಿದ್ಧ ವೈದ್ಯರಾದ ಎಮ್. ಕೆ. ರಜಪೂತ ಇವರ ಸ್ವದೇಶಿ ಔಷಧಗಳು.

ಗುಣ ಬಾರದಿದ್ದರೆ ## ಸ್ತ್ರೀಧರ್ಮ ಸಂಜೀವಿನೀ ಚೂರ್ಣ (ರಿಜಿಸ್ಟರ್ಡ) **ಹಣ ಪರತ**

ಈ ಚೂರ್ಣವು ಕೆಂಪು ಬಿಳಿ ಶರಗಿಗೆ ಶತ್ರುವಾಗಿರುವುದು. ಅನಿಯಮಿತತನದಿಂದ ಮುಟ್ಟಾಗುವಿಕೆ, ಕ್ಲೇಶ ವೈಯಲ್ಲಿ ನೋವು, ಉಷ್ಣತಾ ಕ್ಷೀಣತಾ ಗರ್ಭಾಶಯದಲ್ಲಿರುವ ದೋಷ ಗರ್ಭಧಾರಣವಾಗದಿರೋಣ, ಅಕಾಲದಲ್ಲಿ ಗರ್ಭಪತನವಾಗೋಣ ಈ ಮೊದಲಾದ ರೋಗಗಳು ನಿಶ್ಚಯವಾಗಿ ನೆಟ್ಟಗಾಗಿ ಗರ್ಭಕೋಶವು ಸ್ವಚ್ಛವಾಗುವದು. ಮಕ್ಕಳಾಗುವದಿಲ್ಲೆಂದು ಎರಡನೇ ಲಗ್ನಮಾಡಿಕೊಳ್ಳುವ ಮೊದಲು ಗೃಹದೇವತೆಯಾದ ಮೊದಲನೇ ಪತ್ನಿಗೆ ಈ ಚೂರ್ಣ ಅವಶ್ಯ ಕೊಡಿರಿ. ಮುಖ್ಯ ಸರ್ಟಿಫಿಕೇಟ ಮ. ರಾ. ಎ. ಎಮ್ ಇನ್ಸ್‌ಪೆಕ್ಟರ ಬೆಳಗಾಂವ:—ಈ ಚೂರ್ಣದಿಂದ ನನ್ನ ಕುಟುಂಬದ ಹೊಟ್ಟೆಯೊಳಗಿನ ರಕ್ತ ಗುಲ್ಮದ ಗಂಟು ನಾಮಶೇಷವಾಯಿತು. ಮತ್ತು ಎಲ್ಲ ರೋಗಗಳು ನಿಶ್ಶೇಷವಾದವು. ನನ್ನ ಮಿತ್ರನ ಹೆಂಡತಿಯ ರಕ್ತ ಮತ್ತು ಶರಗು ಇಲ್ಲದಂತಾದವು. ೨೧ ದಿವಸದ ಡಬ್ಬಿಯ ಕಿಮ್ಮತು ರೂ. ೩ ಟ.ಖ. ಆಣೆ, ೮. ಡಬ್ಬಿಗೆ ೪ರೂ.]

ಸಂತತಿ ಪ್ರತಿಬಂಧಕ ಚೂರ್ಣ. (ರಿಜಿಸ್ಟರ್ಡ)

[ವಿ ಪಿ ಖರ್ಚು ಆಣೆ ೮.

ಬಹಳಸಾರಿ ಹಡಿಯುವುದರಿಂದ ಅತಿಶಯ ಅಶಕ್ತಿಯಾಗುತ್ತದೆ ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುರುವಾಗುವದು. ಶರೀರಕ್ಕೇನೂ ಅಪಾಯವಾಗದೆ ಸಂಸಾರ ಸುಖವು ಪೂರ್ಣವಾಗಿದೆ. ಕೂಡಲೇ ಗರ್ಭಧಾರಣ ಬಂದಾಗುವುದು ತದನಂತರ ಏನು ಮಾಡಿದರೂ ಸುರುವಾಗುವದಿಲ್ಲ. ಮೊದಲೇ ಪೂರಾ ವಿಚಾರಮಾಡಿ ಔಷಧ ಬೇಡಿರಿ. ಮುಖ್ಯಸರ್ಟಿಫಿಕೇಟ ಡಾಕ್ಟರ ಬಿ. ಎ. ವೈದ್ಯ ಎಲ್ ಸಿ. ಪಿ. ಎಸ್. ಮೂ। ಕೇ। ವಾ। ಮಾಹಿಮಾ ಜಿ. ರಾಣೆ. ಈ ಚೂರ್ಣದಿಂದ ಯಾವ ತರದ ಅಪಾಯವಾಗದೆ ಗರ್ಭಧಾರಣವಾಗುವದಿಲ್ಲ. ಪೂರ್ಣ ಗುಣಕಾರಿ

ವಿಳಾಸ:—ಸಂಜೀವಿನೀ ಔಷಧಾಲಯ, ಮು. ಪೋ. ಮಿರಜ, S. M. C.

ಸಮಾಚಾರ ಸಂಗ್ರಹ:

ಉಪವಾಸ ದೀಕ್ಷೆ, ದೇವಸ್ಥಾನದ ವಿಗ್ರಹ ಕಳವು, ಅಮೇರಿಕದಲ್ಲಿ ಮಹಾ ನೆರೆ, ಜರ್ಮನಿಯು ಸಿದ್ಧವಾಗುತ್ತಿದೆ.

ಉಪವಾಸ ದೀಕ್ಷೆ.

ಕಾಂಗ್ರೆಸಿಗಾಗಿ ಶ್ರದ್ಧೋತ್ಸಾಹಗಳಿಂದ ಶ್ರಮಿಸುತ್ತಿದ್ದ ತನ್ನನ್ನು ಪಾರ್ಲಿಮೆಂಟರಿ ಬೋರ್ಡು ಕಾಂಗ್ರೆಸ್ ಪಕ್ಷದ ಉಮೇದ್ವಾರಳನ್ನಾಗಿ ಚುನಾಯಿಸಲಿಲ್ಲವೆಂದು ಕಲ್ಕತ್ತೆಯ ಕುಮಾರಿ ಜ್ಯೋಯಿತ್ರಿ ಮೋಯಿ ಗಾಂಗೂಲಿ ಎಂಬ ಪ್ರಸಿದ್ಧ ಕಾಂಗ್ರೆಸ್ ಸೇವಾಧುರೀಣೆಯು ಉಪವಾಸದೀಕ್ಷೆಯನ್ನು ಕೈಗೊಂಡಿರುವಳು

ಪಂಜಾಬು ಬಂಗಾಳ.

ಚುನಾವಣೆಕಾರ್ಯವು ಮುಗಿಯಿತು. ಹಲವು ಸ್ಥಾನಗಳಿಗೆ ಕಾಂಗ್ರೆಸ್ ಉಮೇದ್ವಾರಿಗಳ ಪ್ರತಿಸ್ಪರ್ಧಿಗಳಾಗಿದ್ದವರು ಕೊನೆಕೊನೆಗೆ ತಮ್ಮ ಹೋರಾಟವನ್ನು ಬಿಟ್ಟು ಬಿಟ್ಟರು. ಒಟ್ಟಾರೆ ಕಾಂಗ್ರೆಸ್ ಪಕ್ಷಕ್ಕೆ ಪ್ರಚಂಡ ವಿಜಯವೆಂದು ನಂಬಲಾಗಿದೆ.

ಲಾಹೋರಿನಲ್ಲಿ ವೋಟು ತೆಗೆಯುವ ಮೊದಲನೆಯ ದಿನದಲ್ಲೇ ಪೋಲೀಸರ ಲಾಥಿ ಪ್ರಯೋಗವಾಗಬೇಕಾಯಿತು. ಜವಹರಲಾಲ್ ನೆಹರುಗಳ ಭಾಷಣವನ್ನು ಕೇಳಲು ಕೂಡಿದ್ದ ಮಹಾಸಭೆಯ ಒಂದು ಭಾಗವು ಭಾಷಣ ಮುಗಿದೊಡನೆ ಕಾಂಗ್ರೆಸ್ ಪಕ್ಷದ ಉಮೇದ್ವಾರನ ಸ್ತುತಿಪಾರ ಮಾಡುತ್ತ ಮೆರವಣಿಗೆಯಿಂದ ಹಿಂತಿರುಗುತ್ತ ಪ್ರತಿಸ್ಪರ್ಧಿಯ ಕಾರ್ಯಾಲಯದೆದುರು ಹೋದಾಗ ಇತ್ತಂಡದವರಿಗೂ ಕೈಕೈಯಾಗಿ ಹಲವರಿಗೆ ಜಖಂ ಆಯಿತು. ಪೋಲೀಸು ಪಡೆಬಂದು ಎರಡೆರಡು ಸಲ ಲಾಥಿಚಾರ್ಜು ಮಾಡಿ ಗುಂಪನ್ನು ಚದರಿಸಿದರು.

ದೇವಸ್ಥಾನದ ಮೈದಾನಿನಲ್ಲಿ ಭಾಷಣವಾಗಕೂಡದು.

ಹಾಗೆಂದು ತೆಂಕಾಸಿಯ ವಿಶ್ವನಾಥ ದೇವಾಲಯದ ಟ್ರಸ್ಟಿಗಳು ನೋಟೀಸುಕೊಟ್ಟಿರುತ್ತಾರೆ. ರಾಜಕೀಯ ವಿಷಯಗಳಿಗೆ ಸಂಬಂಧಪಟ್ಟ ಸಭೆ ಭಾಷಣಗಳಿಗೆ ಅಲ್ಲೆಡೆಗೊಟ್ಟರೆ ದೇವರ ಪೂಜೆಗೂ ಭಜಕರ ಸೌಕರ್ಯಕ್ಕೂ ತೊಂದರೆಯಾಗುವುದಂತೆ! ಜಾತ್ರೆ, ಸಂತೆ ಕೂಡಿಸಲಿ! ದೇವರಿಗೆ ಕಾಸು ಚಿಕ್ಕಾಸಾದರೂ ಕಾಣಿಕೆಬಿದ್ದೀತು! ಪೂಜೆಗೆ ತೊಂದರೆಯಾದರೂ ಪೂಜಾರಿಗಳ ಹೊಟ್ಟೆ ತಂಪಾದೀತು!

ಚಿಟ್ಟೂರಿನಲ್ಲಿ ಡೋಲು ಹೊಡೆಯಿಸಿದರು.
ಕಾಂಗ್ರೆಸ್‌ವಾಲರ ಕಾರಿಗೆ ಕಲ್ಲು ಎಸೆದರು.

ಮದ್ರಾಸ್ ಎಸೆಂಬ್ಲಿಗೆ ಚಿಟ್ಟೂರಿಂದ ಕಾಂಗ್ರೆಸ್ ಪಕ್ಷವಾಗಿ ನಿಲ್ಲುವ ಉಮೇದ್ವಾರನ ಸಲುವಾಗಿ ಎಡಮೂರು ಎಂಬಲ್ಲಿ ಒಂದು ಸಭೆಗೂಡಿದಾಗ ಆ ಕಾಂಗ್ರೆಸ್ ಉಮೇದ್ವಾರ ಪಾರ್ಥಸಾರಥಿಅಯ್ಯಂಗಾರರ ಪ್ರತಿಕಕ್ಷಿ ಚಿನ್ನಮ್ಮ ರೆಡ್ಡಿಯ ಆದಿದ್ರಾವಿಡ ಪಡೆಗಳೆರಡು ಬಂದು ಡೋಲು ಹೊಡೆದು ಗಲಭೆಯೆಬ್ಬಿಸಿ ಸಭೆಗೂಡದಂತೆ ಮಾಡಿತು! ಕಾಂಗ್ರೆಸ್ ಪಕ್ಷದವರ ಕಾರು ಕಣ್ಮರೆಯಾಗುವ ತನಕ ಅದಕ್ಕೆ ಕಲ್ಲೆಸೆದರು!

ಮದ್ರಾಸು ಪ್ರಾಂತ್ಯದಲ್ಲಿ

ಈಗಾಗಲೇ ಹಲವು ಕಾಂಗ್ರೆಸ್ ಉಮೇದ್ವಾರರು ಪ್ರತಿಸ್ಪರ್ಧಿಗಳು ಮುಂದೆ ಬಾರದುದರಿಂದ ಚುನಾಯಿತರಾಗಿರುತ್ತಾರೆ.

ರಾಮನಾಡಿನಲ್ಲಿ ಕುಮಾರ ರಾಜ ನಾಡರ್ ಇವರು ಪ್ರೊವಿನ್ಸಿಯಲ್ ಎಸೆಂಬ್ಲಿಗೆ ಕಾಂಗ್ರೆಸ್‌ಪಕ್ಷದ ಉಮೇದ್ವಾರರು ವಿ. ವಿ ರಾಮಸ್ವಾಮಿಯವರು ಜಸ್ಟೀಸ್ ಪಕ್ಷದ ಉಮೇದ್ವಾರರು. ಎರಡನೆಯವರು ತಮ್ಮ ಉಮೇದ್ವಾರಿಕೆಯನ್ನು ಹಿಂತೆಗೆದುದರಿಂದ ಕುಮಾರರಾಜರು ಏಕಮಾತ್ರ ಉಮೇದ್ವಾರರಾಗಿ ಚುನಾಯಿತರಾದರು.

ಹಾಗೆಯೇ ಕೊಯಮುತ್ತೂರಿಗಲ್ಲಿ ಪ್ರತಿಸ್ಪರ್ಧಿಗಳು ಹಿಂತೆಗೆದುದರಿಂದ ಕಾಂಗ್ರೆಸ್ ಉಮೇದ್ವಾರರುಗಳಾದ ಪಳಾನಿಸಾಮಿ ಗೌಡರ್ ಮತ್ತು ರಾಮಲಿಂಗ ಚೆಟ್ಟಿಯಾರ್ ಇವರಿಬ್ಬರೂ ಚುನಾಯಿಸಲ್ಪಟ್ಟಿರುವರು.

ತೂತುಕುಡಿಯಲ್ಲಿ ಅಂತೆಯೇ ಪ್ರತಿಪಕ್ಷದವರು ಹಿಂತೆಗೆದುದರಿಂದ ಕಾಂಗ್ರೆಸ್ ಪಕ್ಷದ ದೊರೆಸಾಮಿ ನಾಡರ್ ಎಸೆಂಬ್ಲಿಗೆ ಚುನಾಯಿತರಾಗಿರುವರು.

ಸೇಲಮಿನಲ್ಲಿ ಪೀಪಲ್ಸ್ ಪಾರ್ಟಿಯ ಅಮೃತಲಿಂಗ ಚೆಟ್ಟಿಯಾರರು ಹಿಂತೆಗೆದುದರಿಂದ ಕಾಂಗ್ರೆಸ್ ಪಕ್ಷದ ಪೆರುಮಾಲ್ ಚೆಟ್ಟಿಯಾರರು ಎಸೆಂಬ್ಲಿಯ ಸದಸ್ಯತನವನ್ನು ಪ್ರತಿಪಕ್ಷದ ಹೋರಾಟವಿಲ್ಲದೆ ಹೊತ್ತರು.

೨೪ ಇನ್ಶೂರೆನ್ಸ್ ಕಂಪೆನಿಗಳಿಗೆ ಮೋಸಮಾಡಿದವ

ಸೇಲಮಿನಲ್ಲಿ ಈ ಮೊಕದ್ದಮೆ ನಡೆಯುತ್ತಿದೆ ಅಪಾದಿತರು ರಾಜರೆಡ್ಡಿ ಯಾನೆ ವೆಂಕಟಾಚಲ ರೆಡ್ಡಿ ಮತ್ತು ಡಾಕ್ಟರ್ ಜೋಕಲಿಂಗಮ್. ರಾಜ ರೆಡ್ಡಿರು ಕೆಲವು ಕಂಪೆನಿಗಳಿಂದ ರಾಜರೆಡ್ಡಿಯೆಂಬ ಹೆಸರಲ್ಲಿ ಏಜನ್ಸಿಗಳನ್ನು ಪಡೆದು ತನ್ನ ತಾಯಿಯ ಹೆಸರಲ್ಲಿ ಒಟ್ಟು ಸುಮಾರು ಒಂದೂವರೆ ಲಕ್ಷ ರೂಪಾಯಿಗಳ ಪೋಲಿಸಿಗಳನ್ನು ಪಡೆದು ಅವನ್ನು ತನಗೇ ವೆಂಕಟಾಚಲ ರೆಡ್ಡಿಯೆಂಬ ಹೆಸರಲ್ಲಿ ಪರಭಾರೆ ಬರೆಸಿ ಒಂದುವರುಷದಲ್ಲಿ ಅವಳು ಮೃತಳಾಗಲು ಪೋಲಿಸಿಗಳ ಮೊಬಲಗುಗಳನ್ನು ಹೊಂದಲು ತೊಡಗಿದ. ಬರೋಡದ ಮ್ಯೂಚುವಲ್ ಅಶ್ಯೂರೆನ್ಸ್ ಕಂಪೆನಿಗೆ ಈ ವಿಷಯದಲ್ಲಿ ಸಂಶಯವುಂಟಾಗಿ ಶೋಧನೆ ನಡೆಸಲು ಗುಟ್ಟು ರಟ್ಟಾಯಿತು. ಡಾಕ್ಟರು ಮಹಾಶಯರೂ ಈ ಒಳಸಂಚಿಗೆ ಸೇರಿದವರೆಂದು ಅವರನ್ನೂ ತಕ್ಷೀರಿಗೆ ಗುರಿಪಡಿಸಲಾಗಿದೆ.

ಆನೆಯು ಮಾವುತನನ್ನು ಕೊಂದಿತು

ಕಲ್ಲಿಕೋಟೆಯ ಸಮೀಪದ ಮೊಕ್ಕಮ್ ಹೊಳೆಗೆ ಮಾಲನಾಯಕ್‌ನೆಂಬ ಮಾವುತನು ಆನೆಯನ್ನು ಮೀಯಿಸಲಿಕ್ಕೆ ಕೊಂಡು ಹೋಗಿದ್ದ. ಅದಕ್ಕೆ ಹೊಡೆದು ಅದು ಸಿಟ್ಟೆದ್ದು ಆತನನ್ನು ತುಳಿದು ಕೊಂದಿತು.

ಮದ್ದು ಕೊಡುವ ಪಂಡಿತನಿಗೆ ನಾಲ್ಕು ತಿಂಗಳ ಕಠಿಣ ಶಿಕ್ಷೆ.

ಕೃಷ್ಣನ್ ಯಾನೆ ಚಲ್ಲಯ್ಯನೆಂಬೊಬ್ಬ ಪಂಡಿತ ತೆಂಕಾಸಿಯಲ್ಲಿ ರೋಗಿಯೊಬ್ಬಳಿಗೆ ಚಿಕಿತ್ಸೆ ನಡಿಸುತ್ತ ಅವಳ ಚಿನ್ನಾಭರಣಗಳನ್ನು ಹಾರಿಸಿದ. ಈ ರೀತಿಯ ವಿಚಿತ್ರ ಚಿಕಿತ್ಸೆ ನಡಿಸಿದುದಕ್ಕಾಗಿ ಅವನಿಗೆ ನಾಲ್ಕು ತಿಂಗಳ ಶಿಕ್ಷೆ.

ದೇವಸ್ಥಾನದಿಂದ ವಿಗ್ರಹಕಳವು

ಜಿಂಗಲ್ಪಟ್ಟಿನ ಸಮೀಪದ ನೆಲ್ಲಿಕುಪ್ಪಮ್ ಎಂಬಲ್ಲಿಯ ಚೆಲ್ವ ವಿನಾಯಕ ದೇವಸ್ಥಾನದ ಉತ್ಸವ ಮೂರ್ತಿಯನ್ನು ಬಾಗಿಲೊಡೆದು ಒಳಹೊಕ್ಕು ಕದ್ದು ಕೊಂಡು ಹೋಗಿರುವರು. ಪೋಲೀಸರು ಪತ್ತೆ ಹಿಡಿಯಲು ಯತ್ನಿಸುತ್ತಿದ್ದಾರೆ.

ಅಮೇರಿಕದಲ್ಲಿ ದೊಡ್ಡ ನೆರೆ.

ಯುನೈಟೆಡ್ ಸ್ಟೇಟ್ಸಿನಲ್ಲಿ ಒಹಿಯೋ ನದಿಯಲ್ಲಿ ೬೭ ಅಡಿ ನೀರು ಏರಿದೆ. ಕಾರಣ ವಿಶೇಷ ಮಳೆ ಮತ್ತು ಅದರ ಉಗಮಸ್ಥಾನದ ಪರ್ವತದ ಹಿಮಕರಗಿದುದು. ಇಂತಹ ಅನಾಹುತಕಾರಕವಾದ ಮಳೆಯೂ ನೆರೆಯೂ ಕಳೆದ 1913ರಿಂದೀಚೆಗೆ ಬಂದಿದ್ದಿಲ್ಲವಂತೆ. ಸಾವಿರಾರು ಜನರು ಊರು ಬಿಟ್ಟೋಡಿ ಎತ್ತರ ಪ್ರದೇಶಗಳಲ್ಲಿ ಉಳಕೊಂಡಿರುತ್ತಾರೆ. ಇನ್ನು ಎಷ್ಟೋ ಹಳ್ಳಿಯೂರವರು ಊರು ಬಿಡಲು ಸಿದ್ಧರಾಗುತ್ತಾ ಇದ್ದಾರೆ. ನೆರೆಯು ಇನ್ನೂ ಏರುವದರಲ್ಲಿದೆ.

ಅಮೇರಿಕದ ದೊಡ್ಡ ದೊಡ್ಡ ನಗರಗಳಲ್ಲಿ ಕೂಲಿಗಾರರ ಮುಷ್ಕರವು ಹಬ್ಬುತ್ತಿದೆ. ಕಾರ್ಖಾನೆಯವರು ಅವರಿಗೆ ನ್ಯಾಯವಾದ ಹಕ್ಕು ಬಾಧ್ಯತೆ ಸೌಕರ್ಯಗಳನ್ನು ಕೊಡದೆ ಕೇವಲ ತಮ್ಮ ಲಾಭದ ದೃಷ್ಟಿಯಿಂದಲೇ ವರ್ತಿಸಿ ಅವರನ್ನು ಪಶುಸಮಾನವಾಗಿ ಗಣಿಸುವ ಧೋರಣೆಯಿಂದ ಮಜೂರರ ತಂಡಗಳಲ್ಲೆಲ್ಲ ಅಸಂತುಷ್ಟಿಯುಂಟಾಗುತ್ತಲೇ ಇತ್ತು. ಒಂದು ಕಡೆ ಕಿಡಿ ಹಾರಿದಂತೆ ಮುಷ್ಕರ ತೊಡಗಿದುದೇ ತಡ-ಅದು ಕಾರ್ಖಾನೆಯಿಂದ ಕಾರ್ಖಾನೆಗೆ ಹಿಡಿಯುತ್ತ ಹೋಗುತ್ತಾ ಇದೆ.

ಇಂತಹ ಸಂದರ್ಭ ಬಂದೀತೆಂದು ಹಲವು ಕಾರ್ಖಾನೆಯವರು ನಿರೀಕ್ಷಿಸಿದ್ದರು. ಆಗ ಮಜೂರರನ್ನು ಸದೆ ಬಡೆಯುವುದಕ್ಕಾಗಿ ಖಾಸಗಿಯಿಂದ ಸೈನ್ಯಪಡೆಯನ್ನೂ ಯುದ್ಧಸಾಮುಗ್ರಿಗಳನ್ನೂ ಸಿದ್ಧಗೊಳಿಸಿಟ್ಟುಕೊಂಡಿದ್ದವು ಹಲವು ದೊಡ್ಡ ದೊಡ್ಡ ಕೈಗಾರಿಕೆಯ ಸಂಸ್ಥೆಗಳು. ಆದರೆ ಇದರ ಸುಳಿವು ಸರಕಾರಕ್ಕೆ ತಿಳಿದುಬಂದು ಅಂತಹ ಗುಪ್ತ ಸೇನೆಯನ್ನಿಟ್ಟುಕೊಳ್ಳುವುದು ಶಿಕ್ಷಾರ್ಹವಾದ ಅಪರಾಧವೆಂದು ಪ್ರಕಟಿಸಿಯದೆ. ಆದುದರಿಂದ ಮಾಡಿಟ್ಟ ಸಿಡಿಮದ್ದನ್ನು ಉಪಯೋಗಿಸಲಾರದ ಪಿಳಿಪಿಳಿ ನೋಡುತ್ತಿದ್ದಾರೆ ಧಂಡವಾಳಗಾರರು.

ಪಂಡಿತ ಮಾಲವೀಯರು.

ಪಂಡಿತ ಮದನಮೋಹನ ಮಾಲವೀಯರಿಗೆ ದೇಹ ಸ್ವಾಸ್ಥ್ಯವಿಲ್ಲದೆ ಚಿಕಿತ್ಸಾ ಗೃಹದಲ್ಲಿದ್ದವರು ಈಗ ಆರೋಗ್ಯ ಹೊಂದಿ ಸಂಚಾರಕ್ಕೆ ತೊಡಗಿದ್ದಾರೆ.

ಮೈಸೂರಿನಲ್ಲಾದ ಇಗರ್ಜಿಯ ಗಲಾಟೆ.

ಸೈಂಟ್ ಫಿಲೋಮಿನಾ ಇಗರ್ಜಿಯಲ್ಲಿ ನಡೆದ ದುಂಡಾಟಿಕೆಯನ್ನು ಸ್ವತಃ ವಿಮರ್ಶಿಸಲು ದಿವಾನ್ ಸರ್ ಮಿರ್ಜಾ ಇಸ್ಮಾಯಿಲ್ ರವರೇ ಹೋಗಿದ್ದರು ಒಟ್ಟು ಸುಮಾರು 12000 ರೂಪಾಯಿಯ ನಷ್ಟವುಂಟಾಗಿದೆ ಎಂದು ಅಂದಾಜು ಮಾಡಲಾಗಿದೆ ಒಂದು ಸಾವಿರ ರೂಪಾಯಿ ಬೆಲೆಯುಳ್ಳ ಕಲಾದೃಷ್ಟಿಯಿಂದ ವಿಶೇಷ ಮಹತ್ವವುಳ್ಳ ಇಗರ್ಜಿಯ ಬಾಗಿಲನ್ನೇ ಸುಟ್ಟುಬಿಟ್ಟಿದ್ದಾರೆ. ದಿವಾನರು ತಮ್ಮ ಸಹಾನುಭೂತಿಯನ್ನು ತೋರಿದ್ದಾರೆ

ಜರ್ಮನಿಯು ಸಿದ್ಧವಾಗುತ್ತಿದೆ ಯುದ್ಧಕ್ಕೆ

ಪರದೇಶಗಳಲ್ಲಿರುವ ಜರ್ಮನರೂ ಮತ್ತೊಂದು ನೋಟೀಸು ಬಂದ ಕೂಡಲೆ ಎಲ್ಲೆಲ್ಲಿ ಯಾವ ಯಾವ ಕೆಲಸಕ್ಕೆ ಹಾಜರಾಗಬೇಕೆಂದು ಅವರಿಗೆಲ್ಲ ನೋಟೀಸು ಹೊರಟಿದೆ. ಆದರೆ ಜರ್ಮನಿಯು ತಾನು ಮಾಡುವುದೆಲ್ಲ ಲೋಕದ ಹಿತಕ್ಕಾಗಿ ಮತ್ತು ಲೋಕದ ಶಾಂತಿ ರಕ್ಷಣೆಗಾಗಿ ಎಂದು ಬಾಯಿಯಲ್ಲಿ ಹೇಳುತ್ತಾ ಇದೆ. ಆದರ ಲೋಕದ ಗಡಿಯು ಬಹಳ ಸಂಕೋಚವಾಗಿ ಲೋಕವೆಂದರೆ ಜರ್ಮನಿ, ಜರ್ಮನಿಯೆಂದರೆ ಲೋಕ ಎಂದಾಗಿವೆಯೋ ಏನೋ! ಯುದ್ಧದ ಕಾಲಬಂದಾಗ ಹೊಟ್ಟೆಗೂ ಪೆಟ್ಟಿಗೂ ಬೇಕಾದ ಯಾವ ಸಾಮುಗ್ರಿಗಳಿಗೂ ಯಾರನ್ನೂ ಆಧರಿಸಿಕೊಂಡಿದ್ದು ಪಜೀತಿಗೊಳಗಾಗಬಾರದೆಂಬುದು ಹಿಟ್ಲರನ ಮತ. ಅದು ಕಾರಣ "ಜನಸಂಖ್ಯೆ ಹೆಚ್ಚಬೇಕು ನವನವ ಯುದ್ಧೋಪಕರಣಗಳ ರಾಶಿರಾಶಿ ಬಿದ್ದಿರಬೇಕು. ಹಿಟ್ಟು ಒಟ್ಟಿಯ ಪಾಡಿಗಾಗಿ ಕೃಷಿವಾಣಿಜ್ಯಾಂಗವು ಸಾಕು." ಪ್ರಾಣಿಗಳಾದ ಆಡು, ಕುರಿ ಹಂದಿ, ಕೋಳಿ ಮುಂತಾದುವೂ ಪ್ರಸವದಲ್ಲೇ ಇಮ್ಮಡಿಯಾಗುವಂತ ಮಂದಿಗೆ ಸಲಹೆ ಸೂಚನೆಗಳನ್ನು ಕೊಡುವುದಕ್ಕಾಗಿ ಒಂದು ಇಲಾಖೆಯೇ ಏರ್ಪಟ್ಟಿರುತ್ತದೆ. ಹಿಟ್ಲರನೇ ಹಳ್ಳಿಹಳ್ಳಿಗೆ ಹೋಗಿ ಈ ಇಲಾಖೆಯವರಿಂದ ಪ್ರಯೋಜನ ಹೊಂದಿರೆಂದು ಮಂದಿಗೆ ಪ್ರೋತ್ಸಾಹಿಸುತ್ತಾನೆ.

ಯುರೋಪಿನಲ್ಲಿ ಅದೊಂದು ರೋಗ.

ಶ್ರೀಮಂತರ ಮಕ್ಕಳನ್ನು ಹಾರಿಸುವುದು ಪತ್ತೆಯಾಗದನ್ನು ರಹಸ್ಯವಾಗಿರಿಸುವುದು. ಅಪಾರದ್ರವ್ಯ ಕೊಡದಿದ್ದರೆ ಮಗುವನ್ನು ಕೊಂದು ಹಾಕುವೆವೆಂದು ಹೆತ್ತವರಿಗೆ ತಿಳಿಸಿ ಹಣ ಸುಲಿಗೆಮಾಡುವುದು. ಈಗ ಅದು ಇಂದೋರಿನ ಮಹಾರಾಜರ ಕಡೆಗೂ ತಿರುಗಿದೆ. ಅವರು ಯುರೋಪಿನಲ್ಲಿ ಸಂಚರಿಸುತ್ತಿದ್ದಾರೆ. ಅವರಿಗೊಂದು ಮೂರು ವರುಷದ ಮಗುವಿದೆ. ಅದನ್ನು ಅಪಹರಿಸುತ್ತೇವೆಂದು ಇಂತಹ ತಂಡದವರ ಪತ್ರ ಅವರಿಗೆ ಬಂದಿದೆ. ಅವರು ಕಂಗಾಲಾಗಿರುವರು.

ಅಜ್ಞಾನಸಾಗರ

(All Rights Reserved)

ತರಂಗ ೪

ದನವು ಧನವಾಯಿತು!

[ವಿ. ಸೂ. 'ಅಜ್ಞಾನಸಾಗರ'ದ ತರಂಗ ಮಾಲೆಗಳು ಮಂದಿಯ ಮೂಢನಂಬಿಗೆ (Superstitions)ಗಳನ್ನು ನಿವಾರಿಸಲಿಕ್ಕಾಗಿ ವಿಚಾರಪ್ರ್ಯೋತಕ ದೃಷ್ಟಿಯಿಂದಲೇ ಬರೆಯಲ್ಪಡುತ್ತವೆ. ಅದುಕಾರಣ ಇವುಗಳಲ್ಲಿ ಬರುವ ಹೆಸರು ವ್ಯಕ್ತಿಗಳೆಲ್ಲ ಅಂಧ ಪರಂಪರೆಯಲ್ಲಿ ಅಲ್ಲಲ್ಲಿ ಕಾಣಬಹುದಾದ ಲಕ್ಷಣಗಳನ್ನೆಲ್ಲ ಕೇಂದ್ರೀಕರಿಸಿ ವ್ಯಕ್ತಿರೂಪ ಗೊಟ್ಟು ಬರೆದ ಕೇವಲ ಕಲ್ಪಿತ (Type characterisation) ವರ್ಗ ವ್ಯಕ್ತಿ ನಿರ್ಮಾಣಗಳಲ್ಲದೆ ಅವು ಯಾರೊಬ್ಬನನ್ನೂ ಕುರಿತಾಗಿ ಅನ್ವಯಿಸುವುದಿಲ್ಲ.]

ಈ ವಾರದ ಕಥೆ

ವಿಚಾರಿ ರಾಮರಾಯನು ತನ್ನ ಬಾಲ್ಯದ ಗೆಳೆಯನಾಗಿದ್ದ ಗೋಪಣ್ಣನನ್ನು ಅಜ್ಞಾನಸಾಗರದಿಂದೆತ್ತಲು ಪ್ರಯತ್ನಿಸುವನು. ಬಾಲ್ಯದಲ್ಲಿ ಗೆಳೆಯರಾಗಿದ್ದರೂ ಅನಂತರ ಅವರ ಹಾದಿ ಬೇರಾಗಿ ಸನ್ನಿವೇಶಗಳ ಪ್ರಾಬಲ್ಯದಿಂದ ರಾಮರಾಯನು ವಿಚಾರಿಯಾಗಿಯೂ ಗೋಪಣ್ಣನು ಅಂಧಶ್ರದ್ಧಾವಂತನಾಗಿಯೂ ಬೆಳೆದು ಇತ್ತೀಚಿಗೆ ತಿರುಗಿ ಊರು ಸೇರಿರುವ ಅವರಲ್ಲಿ ಹಲವು ವಾದಗಳು ಗೆಳೆತನದ ಸಲುಗೆಯಿಂದಲೇ ನಡೆಯುವುದುಂಟು. ಈ ಕೆಳಗಿನದು ಅಂತಹ ವಾದಗಳಲ್ಲೊಂದು.

"ಯಾವನೋ ಒಬ್ಬ ಮಲೆಯಾಳಿ ಮಹಾ ಜೋಯಿಸ, ಕೊಲ್ಲೂರಿಗೆ ಹೋಗುತ್ತಿದ್ದವ, ನಮ್ಮ ದೇವಸ್ಥಾನದ ಹೆಬ್ಬಾಗಿಲ ಜಗಲಿಯಲ್ಲಿ ಮಲಗಿದ್ದ. ನೆರೆಸೆರೆ ರೂಪಾಯಿ ಸುರಿದರೂ ನಮ್ಮೂರಿಗೆ ಒರುವಂತಹನೆಂದು ತಿಳಿದೆಯಾ? ನನ್ನ ಪುಣ್ಯವೇ ಆ ದಿನ ಬೆಳಿಗ್ಗೆ ನನ್ನನ್ನು ದೇವಸ್ಥಾನದ ಕಡೆಗೆ ಒಯ್ದಿರಬೇಕು. ನಾನು ಮಲೆಯಾಳದಲ್ಲಿದ್ದವನೆಂಬ ಅಭಿಮಾನದಿಂದಲೂ ನನ್ನ ಒತ್ತಾಯದ ಮೇಲೆಯೂ ನನ್ನ ಮನೆಗೆ ಬಂದ. ಮರುದಿನವೇ ಹೊರಟಿದ್ದುಬಿಟ್ಟ! ಆದರೆ ನಾನು ಬೇಡಿ ಕಾಡಿ ಮಹಾ ಪ್ರಶ್ನೆಯಿಡಿಸಿದೆ. ಏಳು ದಿನ ದೀಪದೆದುರು ಮಹಾಮಂಡಲ ಬರೆದು ತಾಂಬೂಲವಿಟ್ಟು ಪೂಜೆ ನಡೆಸಿದ. ಏಳನೆಯ ರಾತ್ರಿ ತಾಂಬೂಲ ನೋಡಿ ಪ್ರಶ್ನೆ ಹೇಳಿದ: ನನ್ನ ಇಲ್ಲಿಯ ಕಾರ್ಬಾರು, ನಾನು ಮಲೆಯಾಳದಲ್ಲಿ ಮಾಡಿದ್ದ ದರ್ಬಾರು, ಏಕೆ? ನನ್ನ ತಂದೆ ಅಜ್ಜಂದಿರ ಕಾಲದ ಕೆಲವು ಸಂಗತಿಗಳನ್ನೂ ಹೇಳಿಬಿಟ್ಟ ಇದ್ದದ್ದು ಇದ್ದ ಹಾಗೆ! ಹಿಂದಿನ ವಿಷಯ ಅವನು ಹೇಳಿದ್ದೆಲ್ಲ ಸತ್ಯವಾದ ಮೇಲೆ ಮುಂದಿನದೂ ಸತ್ಯವಾಗಲೇಬೇಕು. ಅವನು ಹೇಳಿದ-ಈಶಾನ್ಯ ದಿಕ್ಕಿನಲ್ಲಿ ನಿಮಗೆ ಒಂದು ಜಾಗದ ಮೇಲೆ ಕಣ್ಣಿಟ್ಟದ್ದೀರಿ! ಅದರಲ್ಲಿ ನಿಮಗೆ ನಿಕ್ಷೇಪ ಪ್ರಾಪ್ತಿ!! ಎಂದು. ಹಿಂದೆಯೂ ಮಲೆಯಾಳದಲ್ಲಿ ನಾಲ್ಕಾರು ಜನ ನನ್ನ ಕೈನೋಡಿ ಜಾತಕನೋಡಿ ನನಗೆ ಗಂಟು ಸಿಕ್ಕುತ್ತದೆಂದು ಹೇಳಿದ್ದರು. ಅವರು ಹೇಳಿದ್ದಕ್ಕೂ ಈಗ ಇವನು ಹೇಳಿದ್ದಕ್ಕೂ ಹೇಗೆ ಗಂಟುಬಿತ್ತು ನೋಡು! ಮಲೆಯಾಳಿಗಳೆಂದರೆ ಏನು ಸಾಮಾನ್ಯರೆಂದು ತಿಳಿದುಕೊಂಡಿರುವೆಯಾ? ವದ್ದಿನಲ್ಲಿ ಮಂತ್ರವಾದದಲ್ಲಿ ಜೋಯಿಸದಲ್ಲಿ ಅವರಿಗೆ ಸರಿಗಟ್ಟುವವರು ಮೂರುಲೋಕದಲ್ಲಿ ಯಾರೂ ಇಲ್ಲ!"

'ನಿನ್ನಂತಹರನ್ನು ಮಂಕುಗೊಳಿಸುವುದರಲ್ಲಿ ಎಂದರೆ ಚೆನ್ನಾಗಿ ಒಪ್ಪುತ್ತೆ! ಮಲಯಾಳಿ ಏಳು ದಿನ ನಿಮ್ಮಲ್ಲಿದ್ದ. ನಿನ್ನ ಹೆಂಡತಿಯಂತೂ ನಿನ್ನೊಡನೆ ಮಲೆಯಾಳದಲ್ಲಿದ್ದು ಮಲಯಾಳ ಬಲ್ಲವಳು. ನಿನ್ನ ಜಾತಕವೆಲ್ಲ ಅವಳಿಂದ ಹೊರಬಿತ್ತು! ಸಾಕಾಗದಿದ್ದರೆ ನೀವಿದ್ದ ಅಗ್ರಹಾರದ ಸಾರ್ಣ ಭಟ್ಟ ಸುಬ್ಬಣ್ಣ ತಂತ್ರಿಗಳೂ ಮಲೆಯಾಳ ಬಲ್ಲವರೇ ಎಂದ ಮೇಲೆ ಆ ಮಲೆಯಾಳಿ ನಿನ್ನ ಮತ್ತು ನಿನ್ನ ಅಜ್ಜ ಪಿಜ್ಜನ ವಿಷಯವೆಲ್ಲ ಸಂಗ್ರಹಿಸದಿದ್ದರೆ ಏಳು ದಿನ ಅವನಿದ್ದುದಾದರೂ ಏತಕ್ಕೆ? ವಿಚಾರಮಾಡಿನೋಡು: ಈ ತರದ ದೊಡ್ಡ ಪ್ರಶ್ನೆಗಾರರು ಮಾಟ ಕೃತ್ರಿಮ ತೆಗೆಯುವ ಮಂತ್ರವಾದಿಗಳು ಏಳು ದಿನದ ಪೂಜೆಯ ನೆವನದಿಂದ ಮನೆಯಲ್ಲೇ ಝುಂದೆಯೂರಿ ಕೂತು ನೆರೆಹೊರೆಯಲ್ಲಿ ಸಂಚರಿಸಿ ಲೋಕಾಭಿರಾಮವಾಗಿ ಮಾತಾಡುತ್ತ ಮನೆಯ ಯಜಮಾನನ ಹಿಂದಿನ ಸಂಗತಿಗಳನ್ನೂ ಮುಂದಿನ ಆಶಾಕಾಂಕ್ಷೆಗಳನ್ನೂ ನಿಸ್ಪೃಹತೆಯಿಂದ ಸಂಗ್ರಹಿಸಿಕೊಳ್ಳುತ್ತಾರೆ. ಆ ಮೇಲೆ ಅದನ್ನೇ ಚಾತುರ್ಯದಿಂದ ಹೇಳಿ ಮಂದಿಯನ್ನು ನಂಬಿಸಿ ಮೋಸಗೊಳಿಸುತ್ತಾರೆ. ದುಡ್ಡಿನಾಶೆಯಿಲ್ಲವೆಂದೇ ಬಾಯಿಯಲ್ಲಿ ಹೇಳುತ್ತ ಹೇಳುತ್ತ ಹೇಗೆ ಸುಲಿಗೆ ಮಾಡುತ್ತಾರೆ ಬಲ್ಲೆಯಾ? ಮಾತ್ರವಲ್ಲ ಭವಿಷ್ಯದ ವಿಷಯವಾಗಿ ವ್ಯಕ್ತಿಯ ಆಶಾಕಾಂಕ್ಷೆಗಳಿಗೆ ಅನುಗುಣವಾಗಿ ಆಶೆಕೊಟ್ಟು ಮಾತಾಡಿ ದುಡ್ಡು ಹೊಡೆದು ಆತನನ್ನು ದೊಡ್ಡ ಹೊಂಡದಲ್ಲಿಳಿಸಿಬಿಡುತ್ತಾರೆ! ನಿನ್ನ ದೃಷ್ಟಾಂತವನ್ನೇ ತೆಗೆದುಕೊಳ್ಳೋಣ. ನೀನು ಆಗ ಈ ಜಾಗವನ್ನು ತೆಗೆದುಕೊಳ್ಳುವ ಯೋಚನೆಯಲ್ಲಿದ್ದುದೂ ನಿನಗೆ ಗಂಟು ಸಿಕ್ಕುತ್ತದೆಂದು ಮಳೆಯಾಳಿಗಳು ಹೇಳಿದ್ದರೆಂಬುದೂ ಬಹುಶಃ ನಿನ್ನ ಹೆಂಡತಿಯ ಬಾಯಿಯಿಂದಲೇ ಅವನು ತಿಳಿದಿರಬೇಕು. ಇಲ್ಲವೇ ಊರಿಗೆಲ್ಲ ಗೊತ್ತಿದ್ದ ಈ ಸಂಗತಿಗಳನ್ನು ಅವನು ಏಳು ದಿನವಿದ್ದೂ ಸಂಗ್ರಹಿಸಲಾರದೆ ಹೋದಾನೇ? ಅಂತೂ ನಿನಗೆ 'ಡಿಂಗ್'ಮಾಡಿದ. ಕೊಲ್ಲೂರು ಯಾತ್ರೆಯ ವೆಚ್ಚಕ್ಕೆ ದುಡ್ಡು ಮಾಡಿಕೊಂಡ! ನಾಳೆಗೆ ನಿನಗೊಂದು ಹೊಂಡವನ್ನೂ ತೋಡಿಟ್ಟು ನಡೆದ ಪುಣ್ಯಾತ್ಮ! ದೊಡ್ಡ ರುದ್ರಾಕ್ಷಿಯ ಮಾಲೆಗಳು ಕುತ್ತಿಗೆಯಲ್ಲಿರಬೇಕು. ಕಾಷಾಯ ಬಟ್ಟೆ ಸುತ್ತಿರಬೇಕು. ಮಾತು ಮಾತಿಗೆ 'ಶಂಭ್ಹರಾ!' ಎನ್ನಬೇಕು. ಪ್ರತಿಯೊಬ್ಬ ಮಳಿಯಾಳಿಯೂ ಮಹಾ ಮಂತ್ರವಾದಿ! ಮಹಾ ಧನ್ವಂತರಿ! ಮಹಾ ಜೋಯಿಸ! ಇನ್ನು ಜಡೆಗಡ್ಡಗಳಿದ್ದರಂತೂ ಪ್ರತ್ಯಕ್ಷ ಈಶ್ವರನೇ ಆಗಿಬಿಡುತ್ತಾನೆ ನಿಮ್ಮಂತಹರ ಕಣ್ಣಿಗೆ! ಕಾಸು ಕೈಯಲ್ಲಿಲ್ಲದಿದ್ದರೂ ನಿಮ್ಮಂತಹರ ಕೃಪೆಯಿಂದ ಅವರಿಗೆ ಕಾಶಿ ರಾಮೇಶ್ವರ ಯಾತ್ರೆಯಾಗುವುದು ಮಾತ್ರವಲ್ಲವೆ ತಿಂಗಳು ತಿಂಗಳು ಅವರ ಮನೆಗೆ ಮನಿಯಾರ್ಡರೂ ರವಾನೆಯಾಗುತ್ತೆ! ಆಗಲಿ, ಯಾತ್ರೆಮಾಡಿಸಿದ ಪುಣ್ಯ, ಸಂಸಾರ ನಡೆಸಿದ ಪುಣ್ಯ ನಿಮ್ಮ ಪಾಲಿಗುಂಟೆನ್ನಬಹುದು. ಆದರೆ ಅವನು ಹೇಳುವ ಠಕ್ಕುರವುಳಿಗಳನ್ನು ನಂಬಿ ಕಟ್ಟವರೆಷ್ಟು ಮಂದಿ! ಎಷ್ಟು ಜನರು ತಮ್ಮ ಆಪತ್ತುಗಳಿಗೆಲ್ಲ ಮಾಟಕೃತ್ರಿಮ ಪಿಶಾಚಿ ಜಕಣಿ ನಾಗದೈವ ದೇವರುಗಳ ಉಪದ್ರವಗಳೇ ಕಾರಣವೆಂದು ಇಂತಹ ಠಕ್ಕರು ಹೇಳುವ ಮಾತು ನಂಬಿ ನಿದ್ದುಮಾಡದೆ ಇದ್ದ ದುಡ್ಡನ್ನೆಲ್ಲ ಹರಿಕೆ ತಹತಟ್ಟು ಯಂತ್ರ ತಂತ್ರ ಮಂತ್ರೋಚ್ಚಾಟನೆಗಳಿಗೆ ಚೆಲ್ಲಿ ಕಾಲಹರಣಮಾಡಿ ಪ್ರಾಣಹರಣಮಾಡಿಸಿಕೊಂಡವರಿಲ್ಲ? ಬಡ ಅಜ್ಞಾನಿಗಳ ದುಡ್ಡು ಸುಲಿಗೆಮಾಡಿ ಕೊನೆಗೆ ಅವರ ಅಥವಾ ಅವರ ಹೆಂಡರುಮಕ್ಕಳ ಜನಜಾನುವಾರುಗಳ ಪ್ರಾಣಕ್ಕೇ ಸಂಚಕಾರ ಕೊಡುವ ಈ ಮಂತ್ರವಾದಿ, ಪ್ರಶ್ನೆಗಾರ' ಜೋಯಿಸ, ನಾಗಪಾತ್ರಿ, ದೈವಪಾತ್ರಿ,ದೇವಪಾತ್ರಿ, ನೂಲಿದ್ದ ಪೂಜಾರಿ, ನೂಲಿಲ್ಲದ ಪೂಜಾರಿ, ಇವರು ಮುಂತಾದವರಿಂದ ಹಳ್ಳಿ ಹಾಳಾಯಿತು! ಪಟ್ಟಣ ಹಾಳಾಗುತ್ತಿದೆ! ಕಣ್ಣು ನೋವಾದರೆ ನಾಗ! ಜ್ವರ ಬಂದರೆ ಗ್ರಹಚಾರ! ಅದು ತಲೆಗೇರಿ ಒದರ ತೊಡಗಿದರೆ ಭೂತ! ಕ್ಷಯ ಹಿಡಿದರೆ ಮಾಟ ಕೃತ್ರಿಮ! ಹೆಮ್ಮಕ್ಕಳಿಗೆ ಸೂತಿಕಾವಾಯು (hysteria) ಬಂದರೆ ಜಕಣಿ ಪ್ರೇತ! ಪಾರ್ಶ್ವವಾಯುವಿಗೆ ತಾರ್ಕಣೆ ಯಾ ಭೂತದ ಪೆಟ್ಟು! ಹಟ್ಟಿಯಲ್ಲಿ ದನಗಳು ನಡುಗಿದರೆ ಕೇಳು! ಹೀಗೆಂದು ಕೃಷಿಕನ ರಕ್ತ ಹೀರುತ್ತಾರೆ! ಇದರಿಂದಾಗಿ ಹೊಟ್ಟೆಗಿಲ್ಲದೆ ಹಟ್ಟಿಗಿಲ್ಲದೆ ಅವನಲ್ಲಿ ಜನ ಜಾನುವಾರುಗಳು ಬೇನೆಬಿದ್ದರೆ ತಿರುಗಿ ಬಂದೇ ಬರುತ್ತಾರೆ ಈ ಯಮದೂತರು ಅವನ ಎಲುಬಿನೆಡೆಯಲ್ಲಿ ಮಾಂಸವೇನಾದರೂ ಉಳಿದಿದ್ದರೆ ಅದನ್ನೂ ಕೀಳಲಿಕ್ಕೆ!! ಇವರಲ್ಲದೆ ಬೇರೆ ಯಮದೂತರಿರುವರೇ? ಪಾಪ! ಬಡ ಒಕ್ಕಲಿಗನು ಮೈಮುರಿದು ದುಡಿದು ಧನಿಯ ಗೇಣಿಕೊಟ್ಟು ಏನಾದರೂ ಕಾಸೋ ಕಾಳೋ ಉಳಿಸಿದರೆ ಅದನ್ನೆಲ್ಲ ದೋಚಿಕೊಳ್ಳಲು ನಾಚಿಕೆಯಿಲ್ಲದೆ ಹಂಚಿಕೆ ಹೂಡುವ ಸೋಮಾರಿ ಕೋಣಗಳ ವೈರೇ ಇದೆ ಊರಲ್ಲಿ! ದುಡಿವ ದಿನ ದೂಡುವ ಬಡಪಾಯಿಗಳನ್ನು ಮತ್ತೂ ಮತ್ತೂ ಅಜ್ಞಾನದಲ್ಲಿಟ್ಟು ಸದಾ ಅವರ ರಕ್ತ ಹೀರುತ್ತಾ ಸುಖವಾಗಿರುವ ಉಣ್ಣಿಯ ಜಾತಿಯ ಈ ಪರೋಪಜೀವಿಗಳ ಜೀವನಕ್ಕೆ ಧಿಕ್ಕಾರ! ಧಿಕ್ಕಾರ!........'

"ಸಾಕು ಮಹಾರಾಯಾ, ನಿನ್ನ ಲೆಕ್ಚರ್! ನೀನು ಹೇಳುವುದರಲ್ಲಿ ಕೆಲವಂಶವಾದರೂ ನಿಜವಿದೆಯನ್ನೋಣ. ಆದರೆ ಈ ನಿಧಿಯ ವಿಷಯದಲ್ಲಿ ಮಾತ್ರ ಹಾಗೇನೂ ಮೋಸವಿರಲಾರದು. ನಾನು ನಾಗ ಪಾತ್ರಿಯ ಕೈಯಲ್ಲಿಯೂ ಕೇಳಿದ್ದೇನೆ-ನಾಗನ ಕೈಯಲ್ಲಿದೆ ಅದು. ಒಂದು ಮಂಡಲ ಹೇಳಿ ಕೊಂಡರೆ ಬಿಟ್ಟುಕೊಡದೆ ಅವನೇನು ತಿನ್ನುತ್ತಾನೆಯೇ' ಅದನ್ನು ಯಾವುದಕ್ಕೂ ನಾಗದರ್ಶನಮಾಡಿಸಿ ಕೇಳಿಕೊಳ್ಳಿ. ನಿಮ್ಮ ಮನೋಭಿಷ್ಟ ಅವನು ನಡೆಸಿಕೊಡುತ್ತಾನೆ-ಎಂದಿದ್ದಾರೆ."

"ಯಾರು ಆ ಬೋರಿ ನಾಗಪಾತ್ರಿಯೇ ಹೇಳಿದ್ದು? ಸಿಗಿದರೆ ಒಂದು ಮನೆಕಟ್ಟಲಿಕ್ಕೆ ಸೋಪು ಆಗುವಷ್ಟು ಬೆಳೆದಿದ್ದಾನೆ. ಬಡವರ ರಕ್ತ ಹೀರಿ ಹೀರಿ! ಸಿಕ್ಕಿದ ದುಡ್ಡೆಲ್ಲ ಕೊಂಡುಹೋಗಿ ಸುರಿಯುತ್ತಾನೆ ಮ್ಯೊಲಿತುಂಗನ ಎದೆಯ ಮೇಲೆ! ಹದಿನೆಂಟು ಬಗೆಯ ಮೇಹ ರೋಗಕ್ಕೆ ತವರುಮನೆ ಆ ಶರೀರ! ಅವನ ಆ ಮೈಮೇಲೆಯೂ ನಾಗ ಮೈದೋರುವುದೇ? ಇವನೇ ಏನು? ನೂರಕ್ಕೆ ತೊಂಭತ್ತೊಂಬತ್ತು ಪಾತ್ರಿಗಳ ಅವಸ್ಥೆಯೆಲ್ಲ ಹೀಗೇ. ಒಬ್ಬ ವ್ಯಭಿಚಾರಿ, ಮತ್ತೊಬ್ಬ ಅಫೀಮುಖೋರ, ಇನ್ನೊಬ್ಬ ಜುಗಾರಿ ನಿಪುಣ! ಮಗದೊಬ್ಬ ಮದ್ಯಪಾನಿ! ಆ ಪರಮ ಪವಿತ್ರನಾದ ದೇವರು ಇವರ ಮೈಮೇಲೆ ಬಂದಾನೇ? ಎಲ್ಲ ರಕ್ಕು! ನಾಗದರ್ಶನೆಗೆ ಕರೆಯಲು ಹೋದರೆ ಬಿಡುವಿಲ್ಲವೆಂದು ಹದಿನೈದು ದಿನಕ್ಕೆ ಕಡಿಮೆಯಾಗದ ಅವಧಿಯ ಮೇಲಿನ ದಿನವಿಡುತ್ತಾನೆ! ಅಂದಿನಿಂದ ಅವನಲ್ಲಿಗೆ ಬರುವ ಗಿರಾಕಿಗಳೊಡನೆ ಈ ದರ್ಶನೆಗೆ ದಿವಸವಿಟ್ಟುಕೊಂಡಿರುವ ಪ್ರಸ್ತಾವವೆತ್ತಿ ಒಬ್ಬೊಬ್ಬರ ಬಾಯಿಯಿಂದ ಒಂದೊಂದನ್ನು ಕೇಳಿ ತಿಳಿದು ಸಂಗ್ರಹಿಸಿಕೊಳ್ಳುತ್ತಾನೆ. ಅವನ್ನೇ ಪಾತ್ರಿಯಾಗಿ ನಿಂತು ಒದರಿ ಮಂದಿಯನ್ನು ಮೋಸಗೊಳಿಸಿ ದುಡ್ಡು ತಿಂದು ಹಂದಿಯ ಹಾಗೆ ಬೆಳೆದಿದ್ದಾನೆ! ನೀನೂ ಅವನ ಬಲೆಗೆ ಬಿದ್ದೆಯಾ?'

"ಯಾವದನ್ನು ಏನೇ ಹೇಳು,ಪಾತ್ರಿಗಳ ವಿಷಯ ಮಾತ್ರ ನೀನು ಹಾಗೆನ್ನಬಾರದು. ಅವರ ಮಾತೆಲ್ಲ ಪಟ್ಟಡಿ! ದೇವರೇ ಮೈಮೇಲೆ ಬಂದು ಹೇಳುವುದನ್ನು ನೀನು ನಂಬುವುದಿಲ್ಲವೆಂದರೆ?"

"ದೇವರಿಗೆ ಎಲ್ಲವೂ ಕಾಣುತ್ತದೆ, ದೇವರಿಗೆ ಎಲ್ಲವೂ ಗೊತ್ತಿದೆ. ಅಂತಹ ದೇವರು ಮೈಮೇಲೆ ಬಂದು ಹೇಳುತ್ತಾನೆ ಅಲ್ಲವೇ? ಹಾಗಾದರೆ ಪಾತ್ರಿಯು ಆ ದ್ರಾವಿಡ ಪ್ರಾಣಾಯಾಮದ ನುಡಿಗಟ್ಟು ಕೊಡುವುದೇತಕ್ಕೆ? ಹೂವಿನ ಸರಿಮುಗುಳಿಯ ಕಣ್ಣುಕಟ್ಟು ಆಟವಾಡುವುದೇಕೆ? ಕಳವಿನ ವಿಷಯ ಕೇಳಿದರೆ ತಟ್ಟನೆ ಇಂತಹ ವಸ್ತು ಕಳವಾಗಿದೆ, ಇಂತಹರು ಕಳವುಮಾಡಿದ್ದಾರೆ ಇಂತಹ ಕಡೆ ಅದು ಈಗ ಇದೆ ಎಂದು ಆ ಎಲ್ಲವನ್ನೂ ಕಾಣುವ ಎಲ್ಲವನ್ನೂ ತಿಳಿದಿರುವ ದೇವರಿಗೆ ಹೇಳಲಿಕ್ಕೇನಡ್ಡಿ? ಬಹಳ ಹಸ್ತಾಂತರವಾಗಿ ದೂರಹೋಗಿದೆ. ಪತ್ತೆ ಮಾಡುವುದುಕಷ್ಟ. ಆದರೂ ಪತ್ತೆಮಾಡಿಕೊಟ್ಟರೆ ನನಗೇನು ನಡೆದುಕೊಳ್ಳುತ್ತಿ? ಎಂಬ ಆ 'ರ' ಯಾಕೆ ದೇವರಿಗೆ? ಈ ಕಮಿಷನಿಗೆ ಹೊರಟದ್ದು ದೇವರೋ ಪಾತ್ರಿಯೊ? ಬೇನೆ ಬಿದ್ದವರ ವಿಷಯ ಕೇಳಿದರೂ ಇದೇ ರಾಗ "ಗಂಜಿಹೋಗಿ ಅನ್ನವಾದ ಮೇಲೆ ಬಂದಿದ್ದೀರಿ. ಆದರೂ ನೋಡೋಣ ಗುಣ ಮಾಡಿಕೊಟ್ಟರೆ ಏನು ನಡಕೊಳ್ಳುತ್ತೀ?" ಗುಣವಾಗುತ್ತೋ ಇಲ್ಲವೋ ಎಂಬುದು ಸರ್ವಜ್ಞನಾದ ದೇವರಿಗೆ ಗೊತ್ತಿಲ್ಲವೆ? ಆ ದಂಡೆಯಲ್ಲಿಡುವ ಮಾತೇಕೆ? ಅದು ದೇವರದೋ ಪಾತ್ರಿಯದೋ? ಭಂಡವಾಳವಿಲ್ಲದೆ ಹೊಣೆಗಾರಿಕೆಯಿಲ್ಲದೆ ದುಡ್ಡುಮಾಡುವ ಈ ವಿಚಿತ್ರ ಭೀಕರ ನೃತ್ಯಗಳಿಗೆ ಹೆಡ್ಡ ಜನರು ದುಡ್ಡು ಸುರಿದು ಕೆಡುತ್ತಿರುವರಲ್ಲ? ಪ್ರಾಣ ಕಳಕೊಳ್ಳುತ್ತಿರುವರಲ್ಲ? ಹಲವು ವೇಳೆ ಈ ಸ್ವಾರ್ಥಿಗಳು ಹರಡಿರುವ ಕುಲೆ ಭೂತ ಜಕಣಿ ನಾಗ ದೈವ ದೇವರುಗಳ ಉಪದ್ರವ ಜಾಲದಿಂದ

ಬಡಪಾಯಿಗಳು ತಪ್ಪಿಸಿಕೊಳ್ಳಲು ಯಾವ ದಾರಿಯೂ ಕಾಣದೆ ಕಂಗೆಟ್ಟು, ಮತಾಂತರ ಹೊಂದುವವರೆಷ್ಟು ಮಂದಿ! ಮತಾಂತರ ಹೊಂದಿದ ಕೂಡಲೆ ಭೂತ ಪಿಶಾಚಿಗಳು ಬರುವುದಿಲ್ಲ. ಯಾವ ಭೂತಪಿಶಾಚಿಗಳು ಗೊತ್ತೇ. ಇದೇ ಪಾತ್ರಿ, ಮಂತ್ರವಾದಿ, ಪೂಜಾರಿ, ಜೋಯಿಸ, ನಿಮಿತ್ಯಗಾರ! ಇವರಲ್ಲದೆ ಬೇರೆ ಪಿಶಾಚಿಗಳೆಲ್ಲಿ? ಭೂತ ಪ್ರೇತ ಜಕಣಿಗಳೆಲ್ಲಿ? ನಾಗವೆಲ್ಲಿ? ಬ್ರಹ್ಮರಾಕ್ಷಸನೆಲ್ಲಿ? ಇವುಗಳ ಮಾತಿನ ಚಮತ್ಕಾರವನ್ನು ಏನುಹೇಳಲಿ ಮೊನ್ನೆ ಕೊಟ್ಟಂಪಾಡಿಯಲ್ಲಿ ದರ್ಶನ. ವಿನೋದ ನೋಡೋಣವೆಂದು ನಾನೂ ಹೋಗಿದ್ದೆ ಪಾತ್ರಿಯ ಮೈಮೇಲೆ ದೇವರು ಬಂದು ವಾಲಗಕ್ಕೆ ತಕ್ಕ ಗಡಗಡ ನಡುಗಿತು, ಹಾರಿತು, ಕುಣಿಯಿತು, ಆರ್ಭಟಿಸಿತು. ಒಬ್ಬನು ಎದುರಲ್ಲಿಟ್ಟಿರುವ ಹರಿವಾಣಕ್ಕೆ ಎಂಟಾಣೆ ಹಾಕಿ ಮೊಕ್ತೇಸರರ ಕಿವಿಯಲ್ಲಿ ಏನೋ ಹೇಳಿದ. ಪಾತ್ರಿಯು ಕರ್ತೃಗಳೇ ಏನಂತೆ? ಎಂದ, ಕರ್ತೃಗಳು 'ಆತನಲ್ಲೊಂದು ಕಾಣೆಯಾಗಿದೆ. ಎಷ್ಟು ಹುಡುಕಿದರೂ ಸಿಕ್ಕಲಿಲ್ಲ. ಯಾರ ಮನೆ ಸೇರಿದೆ ಎಂದು ಗೊತ್ತಾಗಲಿಲ್ಲ ಅಪ್ಪಣೆ ಯಾದರೆ ಆದೀತೆಂದು ಬಡವನ ಅರಿಕೆ! ಎಂದರು? 'ಹ್ಞೂ ಆಗಲಿ ನೇಮ!,' ಎಂದ ಪಾತ್ರಿ. ಕೂಡಲೇ ಕಟ್ಟು ವಾದ್ಯವಾಯಿತು. (ಪಾತ್ರಿಗೆ ಯೋಚಿಸಲಿಕ್ಕೊಂದು ಸುಸಂಧಿ. ಪ್ರೇಕ್ಷಕ ಮಂದಿಯಲ್ಲಿ ಭಯ ಭಕ್ತಿಯುಂಟುಮಾಡುವ ನಲ್ಮೆಯ ಪ್ರದರ್ಶನಕ್ಕೂ ಅದೊಂದು ಸುಸಂದರ್ಭ.) ವಾದ್ಯ ನಿಂತಿತು. 'ಕರ್ತೃಗಳೇ, ಗೊತ್ತಾಯಿತು. ಭಂಡಾರಕ್ಕೆ ಏನು ನಡಕೊಳ್ಳುತ್ತಾನಂತೆ?' ಎಂದ ಪಾತ್ರಿ. ಕರ್ತೃಗಳು ಆ ಬಡಪಾಯಿಯೊಡನೆ ಕೇಳಿ 'ಒಂದು ರೂಪಾಯಿ ಹಾಕುತ್ತಾನಂತೆ ಬಹಳ ಬಡವ!" ಎಂದರು 'ಅಷ್ಟು ಸಾಲದು! ಕಾಣೆಯಾದ ದನದ ಅರ್ಧ ಬೆಲೆ ಕೊಡಬೇಕು. ಈಗ ಮೂಡು ಬಡಗಿನಲ್ಲಿದೆ ತೆಂಕು ಪಡುವಲಿಗೂ ಹೋಗಲೂ ಬಹುದು ಹಟ್ಟಿಯಲ್ಲುಂಟು. ಮತ್ತೇನೂ ಆಗಿಲ್ಲ, ಹುಡುಕಲಿ! ಸಿಕ್ಕುತ್ತೆ!' ಎಂದ ಪಾತ್ರಿ. ಆ ಬಡಪಾಯಿಯು ಮತ್ತೇನೋ ಕರ್ತೃಗಳ ಕಿವಿಯಲ್ಲಿ ಪಿಸುಪಿಸು ಹೇಳಿದ. ಪಾತ್ರಿಯು 'ಮತ್ತೇನಂತೆ?' ಎಂದ. 'ಏನೂ ಇಲ್ಲ! ಕಾಣೆಯಾಗಿರುವುದು ದನವಲ್ಲ! ಪೆಟ್ಟಿಗೆಯಲ್ಲಿಟ್ಟಿದ್ದ ದುಡ್ಡು ಮತ್ತು ಅವನ ಹೆಂಡತಿ ಎರವಿಗೆ ತಂದಿದ್ದ ಒಂದು ಜೋಡು ಚಿನ್ನದ ಬಳೆಯಂತೆ' ಎಂದರು ಕರ್ತೃಗಳು. 'ಹ್ಞೂಂ!' ಎಂದ ಪಾತ್ರಿ, ಕಟ್ಟುವಾದ್ಯ ಬಹಳ ಹೊತ್ತಾಯಿತು. ಬಹಳ ಹೊತ್ತು ನಡುಗುತ್ತ ಚೆನ್ನಾಗಿ ಯೋಚಿಸಿದನೆಂದು ಕಾಣುತ್ತೆ. ಪುನಃ! 'ಹ್ಞೂಂ!' ಎಂದ ಪಾತ್ರಿ, ವಾದ್ಯ ನಿಂತಿತು! 'ಕರ್ತೃಗಳೇ, ನನ್ನ ಮಾತು ಅರ್ಥವಾಗಲಿಲ್ಲ ಆ ಜನಕ್ಕೆ. ಸಂಸ್ಕಾರವಿಲ್ಲದ ಮಂದಿ! ಹಾಗಾಗುವದು ಸಹಜ! ಕರ್ತೃಗಳೇ! **ದನವಲ್ಲ ಧನ!** ಹಟ್ಟಿಯಲ್ಲಿ ಹುಗಿದಿಟ್ಟಿದ್ದಾರೆ! ಒಂದು ವಾರದೊಳಗೆ ತುಬ್ಬಾಗದಿದ್ದರೆ, ಬಂದು ಅರಿಕೆ ಮಾಡಿಕೊಳ್ಳಲಿ, ಆಗ ವಿಚಾರಮಾಡೋಣ! ಈಗ ಹೊತ್ತಾಯಿತು! ಹಲವು ಭಕ್ತಾದಿಗಳ ಹಾಲಹವಾಲೆ ವಿಚಾರಿಸಿಕೊಳ್ಳಲಿಕ್ಕುಂಟು. ಇನ್ನೇನು ಏನಂತೆ ಆ ಜನದ ಕಷ್ಟ?' ಎಂದು ಈ ಕೇಸ್ ಎಜೋರ್ನ್‌ಮಾಡಿ (ಮುಂದುವರಿಸಿ) ಮತ್ತೊಂದು ಕೇಸ್ ತೆಗೆದಾಯಿತು! ದೇವರು ಮೈಮೇಲೆ ಬಂದ ಪಾತ್ರಿಗಳು ಹೀಗೆ ಮುಡಿಗಟ್ಟು ಕೊಡುವುದೆ? ದೇವರ ಅಗಾಧಮಹಿಮೆಗೂ ಸರ್ವಜ್ಞತೆಗೂ ಸರ್ವಸಾಕ್ಷಿತ್ವಕ್ಕೂ ಮಸಿ ಬಳಿದು ಅವನನ್ನು ಎರಡು ನಾಲಗೆಯ ಕಮಿಷನ್ ಏಜಂಟನನ್ನಾಗಿ ಮಾಡಿ ಜನರಿಗೆ ತೋರಿಸುವ ಈ ನಾಸ್ತಿಕ ಶಿರೋಮಣಿಗಳನ್ನು ಮೂಢ ಜನರು ದೇವರ ಪ್ರತಿನಿಧಿಗಳೆಂದು ನಂಬಿ ಕೆಡುತ್ತಿರುವರಲ್ಲ! ಮಂದಿಯೋ ಕುರಿ ಮಂದೆಯೊ ಎಂದು ಬಲ್ಲವನು ಹೇಳಿದುದು ಇಂಥವರನ್ನು ನೋಡಿಯೆ!"

'ವಿಚಾರ ಪ್ರಿಯ'

ನಮ್ಮ ಜಿಲ್ಲಾಬೋರ್ಡಿನ ಕಾರ್ಯಕಲಾಪಗಳು

(ಒಬ್ಬ ಬಾತ್ಮಿದಾರರಿಂದ)

ಈ ತಿಂಗಳಲ್ಲಿ ಜಿಲ್ಲಾ ಬೋರ್ಡಿನ ಎರಡು ಸಭೆ ಸೇರುವ ಸುಯೋಗವು ಮೆಂಬರರಿಗೊದಗಿದ್ದರೂ, ಇವೆರಡರಲ್ಲಿ ಯಾವ ಕಾರ್ಯಕ್ರಮವೂ ತೀರ್ಮಾನ ಹೊಂದಲಿಲ್ಲ. ಬೋರ್ಡಿನ ಅಧ್ಯಕ್ಷರು ತಮ್ಮ ಚುನಾವಣೆಯ ಕಾರ್ಯ ನಿರತರಾಗಿದ್ದುದರಿಂದ, 15ನೇ ತಾರೀಕಿನ ಕಾರ್ಯಕ್ರಮ ಪಟ್ಟಿಯು ಮೆಂಬರರಿಗೆ ಸಕಾಲದಲ್ಲಿ ಮುಟ್ಟಲೇ ಇಲ್ಲ ಆ ದಿನದ ಸಭೆಯಲ್ಲಿ ಕೊಂಗ್ರೆಸು ಪಕ್ಷದ ನಾಯಕರೂ ಉಪನಾಯಕರೂ ಆಕ್ಷೇಪವೆತ್ತಿ ಹತ್ತು ದಿನಕ್ಕೆ ಮೊದಲು ಸರಿಯಾದ ನೋಟೀಸು ಮೆಂಬರರಿಗೆ ದೊರಕದೆ, ಜಿಲ್ಲಾ ಬೋರ್ಡಿನ ಕಾರ್ಯಕಲಾಪಗಳನ್ನು ಜರಗಿಸುವದು ಸಾಧ್ಯವಿಲ್ಲವೆಂದರು. ಅಧ್ಯಕ್ಷರು ಒಡನೆಯೇ ಸಭೆಯನ್ನು ಮುಕ್ತಾಯಗೊಳಿಸಿ ತಾ. 20ಕ್ಕೊಂದು ಅವಸರದ ಸಭೆಯನ್ನು ಕರೆದರು. ಮೆಂಬರರೆಲ್ಲಾ ಚದರಿದ ಮೇಲೆ "ಶ್ರೀ ಶಿವರಾಯರು ತಂದು ಡಾ। ವಿಟ್ಠಲ ಸೆಟ್ಟಿಯವರು ಅನುಮೋದಿಸಿದ ಠರಾವಿಗನುಸಾರವಾಗಿ ಸಭೆಯು ಮುಂದುವರಿಸಲ್ಪಟ್ಟಿತು" ಎಂದು ಪ್ರೊಸಿಡಿಂಗ್ಸಿನಲ್ಲಿ ಬರೆಯಲಾಯಿತು. ಸತ್ಯಸ್ಥಿತಿಯೆಂದರೆ ಅಂದಿನ ಸಭೆಯಲ್ಲಿ ಠರಾವು ಬಂದುದಾಗಲೀ ಅದು ಮಂಜೂರಾದುದಾಗಲೀ ಇಲ್ಲ. 20ನೇ ತಾರೀಕಿನ ಸಭೆಗೆ ಕೊಟ್ಟ ನೋಟಿಸಿನಲ್ಲಿ ಪ್ರೆಸಿಡೆಂಟರು ಸಕಾಲಕ್ಕೆ ನೋಟಿಸು ಕೊಡದಿದ್ದ ತಪ್ಪು ಕ್ಷಮಾರ್ಹವಾದುದರಿಂದ ಬೋರ್ಡು ಅದನ್ನು ಕ್ಷಮಿಸಿದೆ ಎಂಬ ಅರ್ಥವು ಮೂಡಿತ್ತು. ತಾ. 20ರ ಸಭಾರಂಭದಲ್ಲಿ ಶ್ರೀ. ಎ. ಬಿ. ಸೆಟ್ಟಿ ಮತ್ತು ಡಾ ವಿಟ್ಠಲ ಸೆಟ್ಟರು, ಕಳೆದ ಸಭೆಯ ಪ್ರೊಸಿಡಿಂಗ್ಸ್ ಮತ್ತು ಮೆಂಬರರಿಗೆ ಕೊಟ್ಟ ನೋಟಿಸಿನಲ್ಲಿ ನಮೂದಿಸಲಾದ ತಪ್ಪು ಅಭಿಪ್ರಾಯಗಳ ಕುರಿತು ಆಕ್ಷೇಪವೆತ್ತಿದರು ಅಧ್ಯಕ್ಷರು ಆ ದಿನದ ಸಭೆಯಲ್ಲಿಲ್ಲದುದರಿಂದ ಉಪಾಧ್ಯಕ್ಷರು ವಿನೋದಾತ್ಮಕವಾಗಿ ವರ್ತಿಸಿದರು. ತಾ. 15ರ ಸಭೆಗೆ ಹಾಜರಾದ ಮೆಂಬರರ ಬತ್ತೆಯನ್ನು ಕೊಡಲು ಜಿಲ್ಲಾ ಬೋರ್ಡು ಬಾಧ್ಯವಾಗಲಾರದು.

ಶ್ರೀ. ಬಿ. ಶಿವರಾಮ ಸೆಟ್ಟರಿಂದ ಕೇಳಲ್ಪಟ್ಟ ಪ್ರತಿಕೂಲ ಪ್ರಶ್ನೆಗಳನ್ನು ಉತ್ತರಿಸಲಾಗದ ದೆಸೆಯಿಂದ, ಕಳೆದ ಜಿಲ್ಲಾ ಬೋರ್ಡ್ ಆಡಳಿತದಲ್ಲಿ ದ್ರಾವಿಡ ಬ್ರಾಹ್ಮಣರಿಗೆ ಕೊಟ್ಟ ಉದ್ಯೋಗಗಳ ಕುರಿತು ಶ್ರೀಮತಿ ಸುಶೀಲಾ ಬಾಯಿಯವರು ಕಳುಹಿಸಿದ ಪ್ರಶ್ನೆಗಳೂ ಹಿಂದಕ್ಕೆ ರಿಸಲ್ಪಟ್ಟವು. ಉಪಾಧ್ಯಕ್ಷರಿಗೆ ಯಾವ ಉಪಪ್ರಶ್ನೆಗಳನ್ನೂ ಉತ್ತರಿಸಲಾಗಲಿಲ್ಲ. ಪ್ರಶ್ನೋತ್ತರಗಳಾದ ನಂತರ ಶ್ರೀ. ಎ. ಬಿ. ಸೆಟ್ಟರು ತಂದ "1937–38ರ ರಸ್ತೆ ಕಂಟ್ರ್ಯಾಕ್ಟುಗಳನ್ನು ವಿಳಂಬಿಸಿದ್ದ ಅಧ್ಯಕ್ಷರ ವರ್ತನೆಯ ಕುರಿತು ಚರ್ಚಿಸಲು ಇತರ ಕಾರ್ಯಕಲಾಪಗಳನ್ನು ಮುಂದುವರಿಸಬೇಕೆಂಬ ಸೂಚನೆಯನ್ನು ಶ್ರೀ. ವಿಟ್ಠಲ ಸೆಟ್ಟರು ಅನುಮೋದಿಸಿದರು. ಕಾಯಂ ಅಧ್ಯಕ್ಷರು ಈ ಸೂಚನೆಗೆ ಸಮ್ಮತಿಯಿತ್ತಿದ್ದರೂ, ಇದೆ ವಿಷಯದ ಮೇಲೆ ಡಾ। ವಿಟ್ಠಲ ಸೆಟ್ಟರು ತಂದಿದ್ದ ಸೂಚನೆಯನ್ನು ಅವರು ನಿರಾಕರಿಸಿದ್ದರೆಂಬ ಕಾರಣದಿಂದ ಅಂದಿನ ಅಧ್ಯಕ್ಷರು ಬೋರ್ಡಿನ ಅಭಿಪ್ರಾಯ ಕೇಳದೇನೇ ಈ ಸೂಚನೆಗೆ ಸಮ್ಮತಿ ನಿರಾಕರಿಸಿದರು. ಈ ಸಂದರ್ಭದಲ್ಲಿ "ಮದ್ರಾಸ್ ಎಸೆಂಬ್ಲಿ ಚುನಾವಣೆಯಲ್ಲಿ ವಿರುದ್ಧ ಪರಿಣಾಮವನ್ನುಂಟುಮಾಡಬಹುದೆಂಬ ಕಾರಣದಿಂದ ರಸ್ತೆ ಕಂಟ್ರ್ಯಾಕ್ಟನ್ನು ವಿಳಂಬಿಸದೆ ಜನವರಿ ಅಂತ್ಯದೊಳಗೆ ಟೆಂಡರು ಕರೆಯಬೇಕೆಂಬ ತನ್ನ ಸೂಚನೆಯನ್ನು ನಿರಾಕರಿಸಿದ ಅಧ್ಯಕ್ಷರ ವರ್ತನೆಯನ್ನು ಚರ್ಚಿಸಲು ಸಭಾ ಕಾರ್ಯವನ್ನು ಮುಂದುವರಿಸಬೇಕೆಂಬ" ಅರ್ಥವನ್ನು ಸೂಚಿಸುವ ಇನ್ನೊಂದು ಸೂಚನೆಯನ್ನು ಡಾ। ವಿಟ್ಠಲ ಸೆಟ್ಟರು ತಂದರು. ಉಪಾಧ್ಯಕ್ಷರು ಶ್ರೀ. ವಿಟ್ಠಲ ಸೆಟ್ಟರ ಆ ಸೂಚನೆಗೂ ಒಪ್ಪಿಗೆಯನ್ನೀಯಲಿಲ್ಲ. ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಸ್ವೇಚ್ಛಾ ವರ್ತನೆಯ ನಿಷೇಧಾರ್ಥವಾಗಿ ಇಡೀ ಸಭೆಯನ್ನೇ ಮುಂದುವರಿಸಬೇಕೆಂಬ ಎರಡು ಠರಾವುಗಳು ಶ್ರೀ. ಎ. ಬಿ. ಸೆಟ್ಟರಿಂದ ತರಲ್ಪಟ್ಟು, ಶ್ರೀ ವಿಟ್ಠಲ ಸೆಟ್ಟರವುಗಳನ್ನನುಮೋದಿಸಿದರು. 16 ಅನುಕೂಲ ಮತ್ತು 6 ಪ್ರತಿಕೂಲ ಮತಗಳು ದೊರೆತು ಮಿಕ್ಕವರ ತಾಟಸ್ಥ್ಯದೊಡನೆ ಮುಂದುವರಿಸುವ ಸೂಚನೆಯು ಮಂಜೂರಾಯಿತು. ಇಂತಹ ನಿರಂಕುಶ ವರ್ತನೆಯನ್ನು ಬೋರ್ಡು ಈ ರೀತಿಯಲ್ಲಿ ಪ್ರತಿಭಟಿಸುವದು ಅಗತ್ಯವಿದೆ, ತನ್ನ ನ್ಯಾಯಬಾಧ ಹಕ್ಕು ಬಾಧ್ಯತೆಗಳ ಪರವಾಗಿ ಹೋರಾಡಿ ಜಿಲ್ಲಾ ಬೋರ್ಡು ನ್ಯಾಯವನ್ನನುಕರಿಸಿದಂತಾಯಿತು.

ತಾಳದೇ ಇರತಕ್ಕ ಮೂತ್ರವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧಿ.

ಡಾ. ಜಸಾನಿಯವರ ಜಗತ್ಪ್ರಸಿದ್ಧ

"ಗೊನೊಕಿಲರ್"

(ರಿಜಿಸ್ಟರ್ಡ್)

ನಕಲಿ ಮದ್ದುಗಳಿಗೆ ಮರುಳಾಗಿ ಮೋಸ ಹೋಗಬೇಡಿರಿ. ಕೊಂಡು ಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಗಮನಿಸಿರಿ.

ಪ್ರಮೇಹ ವ್ಯಾಧಿಗೆ ಸಿದ್ಧೌಷಧ

ಇಂದಿನ ಅಪ್ರತಿಮ ಔಷಧ ಆಂಗ್ಲೇಯ ಮತ್ತು ಆಯುರ್ವೇದ ಔಷಧಿಗಳಿಂದೂ ಫಲಕಾರಿಯಾಗದೇ ಇನ್‌ಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ, ಒಂದಾವರ್ತಿಯಾದರೂ ಈ ನಮ್ಮ **ಗೋನೋಕಿಲರ್** ಎಂಬ ಔಷಧವನ್ನು ಉಪಯೋಗಿಸಿನೋಡಿರಿ ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ, ಗೋನೋಕಿಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾತುವಿಕೆ, ಸರ್ವಪ್ರಕಾರದ ಪ್ರಮೇಹ (ಎಷ್ಟೇ ಹಳೆತು ಯಾ ಯಾವದೇ ಸ್ಥಿತಿಯಲ್ಲಿರಲಿ), ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತುಸ್ರಾವ, ಬಿಳುಪು ಹರಿಯುವದು ಇವೇ ಮೊದಲಾದ ಯಾವತ್ತು ಗೊನೋಕೋಕಸ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ.

ಬೆಲೆ 50 ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ. 3—0—9 (ಮೂರು) ವಿ. ಪಿ. ಖರ್ಚು ಬೇರೆ

ತಯಾರಿಸುವ ಏಕಮಾತ್ರರು- ಡಾಕ್ಟರ್ ಡಿ. ಎನ್. ಜಸಾನಿ, ಗಿರಿಗಾಂವ ಬ್ಯಾಕ್ ರೋಡ್, ಮುಂಬಯಿ 4.

Sole Manufacturer: Dr. D. N. JASANI, GIRGAUM BACK ROAD, BOMBAY 4

ಕಸ್ತೂರಿ ಮಿಶ್ರಣ ದಶಮೂಲವೆಂಬ

ಸೂತಿಕಾ ರಸಾಯನ

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

I. **ಶೋಧನ ಗುಣ:**—ಶೋಧನದಿಂದ ಪ್ರಸವಾನಂತರ ಗರ್ಭಕೋಶದ ಸರ್ವತರದ ನಂಜನ್ನು ಹೊರಗೆ ಹಾಕಿ ಪ್ರಸೂತವಾದ ಗರ್ಭಕೋಶವನ್ನು ಮೂರು ದಿವಸಗಳೊಳಗೆ ಅಂಕುಚಿತವಾಗಿ ಮಾಡುವದು.

II. **ರಸಾಯನ ಗುಣ:**—ರಸಾಯನದಿಂದ ಸೂತಿಕಾ ಸ್ತ್ರೀಯು ಗರ್ಭದ ಬೆಳವಣಿಗೆಬಗ್ಗೆಯೂ, ಪ್ರಸವವೇದನಾ ಬಗ್ಗೆಯೂ ತಾನು ಕಳಕೊಂಡ ಮೂಲ ಶಕ್ತಿಯನ್ನು ಇಮ್ಮಡಿಯಾಗಿ ತಿರುಗಿ ಹೊಂದುವಳು.

III. **ಸುಖಸೇವನ:**— ಸುಖಸೇವನದಿಂದ ಮಧುರ ಮನೋಹರವಾದ ಈ ರಸಾಯನವು ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾದುವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವಾ ನಂತರದ ತೀಕ್ಷ್ಣವೇದನೆಯನ್ನು ಶೀಘ್ರದಿಂದ ನಿಲ್ಲಿಸುವದು.

ಒಬ್ಬಳು ಬಾಣಂತಿಗೆ ಎರಡು ಬಾಟ್ಲಿ ಬೇಕಾಗುವುದು. ಕ್ರಯ ಬಾಟ್ಲಿ 1ಕ್ಕೆ ರೂ. 2-0-0

ಎಮ್. ವಿ. ಶಾಸ್ತ್ರಿ, ಆಯುರ್ವೇದ ಭೂಷಣ
ಮಂಗಳೂರು, ದ.ಕ.

ಕ್ರೌನ್ ರಬ್ಬರ್ ಸ್ಟಾಂಪ್ ಕಂಪೆನಿ

ಸ್ಥಾಪನೆ: 1926

18 ಬಲ್ಮಠ ರಸ್ತೆ, ಮಂಗಳೂರು.



ಯಾವತ್ತೂ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಆಗತ್ಯವಿರುವ ಎಲ್ಲಾ ತರದ ರಬ್ಬರ್ ಮೊಹರುಗಳೂ ಸೈನ್ ಬೋರ್ಡು, ಪೇದೆಗಳ ಬೇಜು, ಮೊನೊಗ್ರಾಮ್ ಸೀಲು, ಇತ್ಯಾದಿಗಳನ್ನು ಪ್ರತಿಯೊಬ್ಬರ ಅಭಿರುಚಿಗೊಪ್ಪುವಂತೆ ಸುಲಭ ದರಗಳಲ್ಲಿ ಮಾಡಿಕೊಡೋಣಾಗುವುದು.

ಹೆಚ್ಚಿಟ್ಟು ಒತ್ತುವ ಸೆಟ್ಟುಗಳು ಕೂಡಾ ಸಿಗುವವು.

ಮಿಕ್ಕ ವಿಚಾರಗಳನ್ನು ನಮ್ಮ ಆಫೀಸಿಗೆ ಸ್ವತಹ ಬಂದು ಯಾ ಪತ್ರ ಮುಖೇನ ತಿಳಕೊಳ್ಳಬಹುದು.

ಮಂಗಳೂರಲ್ಲಿ ರೈಲು ಬಂಡಿಗಳ ಸಮಯ

ಗಾಡಿಗಳು	ಹೊರಡುವ ಘಂಟೆ.	ತಲಪುವ ಘಂಟೆ.
ಮಿಕ್ಸೆಡ್	ಬೆಳಿಗ್ಗೆ 5-55	ರಾತ್ರಿ 8-55
ಕಾಂಜಂಗಾಂಡ್ ಪ್ಯಾಸಂಜರ್	ಬೆಳಿಗ್ಗೆ 8-25	ಮಧ್ಯಾಹ್ನ 1-20
ಮೈಲ್	ಬೆಳಿಗ್ಗೆ 9-50	ಸಂಜೆ 4-20
ಫಾಸ್ಟ್ ಪೆಸೆಂಜರ್	ಮಧ್ಯಾಹ್ನ 12-45	ಮಧ್ಯಾಹ್ನ 2-40
ಕಾಸರಗೋಡ್ ಪ್ಯಾಸೆಂಜರ್	ಮಧ್ಯಾಹ್ನ 3-20	ಸಂಜೆ 6-15
ಶಟಲ್	ಸಂಜೆ 5-25	ಬೆಳಿಗ್ಗೆ 9-20

ಜನರಲ್ ಎಶ್ಶೂರೆನ್ಸ್ ಸೊಸೈಟಿ ಲಿಮಿಟೆಡ್.

[ಸ್ಥಾಪನೆ: 1907]

ಅತ್ಯಧಿಕ ಬೋನಸು !

ಮರಣಾಂತ್ಯ ಪೊಲಿಸಿಗಳಮೇಲೆ ಸೇಕಡಾ 25,
ಎಂಡೊಮೆಂಟ್ ಪೊಲಿಸಿಗಳಮೇಲೆ ಸೇಕಡಾ 20,
ಬಲವಂತ ಪೊಲಿಸಿಗಳು ರೂ. **3 ಕೋಟಿ** ಮಿಕ್ಕಿವೆ.
ಮೂಲಧನವು ರೂ. **75** ಲಕ್ಷ ಮೀರಿದೆ.
ಬಡವರಿಗೂ ಧನಿಕರಿಗೂ ಹಿತಕಾರಿಯಾದ ಎಶ್ಶೂರೆನ್ಸ್ ಯೋಜನೆಗಳು.
ಅತೀ ಲಾಭದಾಯಕವಾದ ಉದಾರ ಏಜೆನ್ಸಿ ಶರ್ತಗಳು.
ವಿಶೇಷ ಮಾಹಿತಿಗಳಿಗಾಗಿ ಈ ಕೆಳಗಣ ವಿಳಾಸಗಳಿಗೆ ಬರಕೊಳ್ಳಿರಿ—

ಪಿ. ಡಿ. ಭಾರ್ಗವ, ಎಫ್. ಎಸ್. ಎಸ್. (ಲಂಡನ್)
ಜನರಲ್ ಮೆನೇಜರ್, **ಅಜ್ಮೀರ್.**
ಅಥವಾ
ಮೆನೇಜರ್, 278, ಲಿಂಗ ಚೆಟ್ಟಿ ಸ್ಟ್ರೀಟ್, ಮದ್ರಾಸ್.
ಸುಪರಿಂಟೆಂಡೆಂಟ್, ಬಳ್ಳಾರಿ. ಆರ್ಗನೈಸರ್, ವೆಲ್ಲೂರು.
ಚೀಫ್ ಏಜೆಂಟ್ಸ್, ಮಧುರ, ತ್ರಿಚಿನಾಪಳ್ಳಿ.

ಸ್ಟೀಮರು ಸಮಯ

	ತಲಪುವುದು	ಹೊರಡುವುದು
ಮಂಗಳೂರು	ಗುರುವಾರ ಬೆಳಿಗ್ಗೆ ಗಂಟೆ 9	ಶನಿವಾರ ಬೆಳಿಗ್ಗೆ ಗಂಟೆ 9
	ಸೋಮವಾರ ಬೆಳಿಗ್ಗೆ ಗಂಟೆ 6	ಮಂಗಳವಾರ ಬೆಳಿಗ್ಗೆ ಗಂಟೆ 9
ಮಲ್ಪೆ	ಗುರುವಾರ ಬೆಳಿಗ್ಗೆ ಗಂಟೆ 3	ಶನಿವಾರ ಮಧ್ಯಾಹ್ನ 2-30
	ಆದಿತ್ಯವಾರ ಸಂಜೆ ಗಂಟೆ 6	ಮಂಗಳವಾರ ಮಧ್ಯಾಹ್ನ 2-30
ಕುಂದಾಪುರ		ಶನಿವಾರ ಸಂಜೆ ಗಂಟೆ 3
		ಮಂಗಳವಾರ ಮಧ್ಯಾಹ್ನ 3

ನಮ್ಮ ಉನ್ನತಿಗಾಗಿ ನಾವೇನು ಮಾಡಬೇಕು? ಇತ್ಯಾದಿ ಸಮಸ್ಯೆಗಳಿಗೆ ಸದುತ್ತರವನ್ನು ಕೊಡುವ ಪತ್ರಿಕೆ ಎಂದರೆ

ಸದ್ಧರ್ಮ ಪ್ರಚಾರಕ
ವಾ. ಚ. 1—4—0.
ಸಂಪಾದಕರು:-
ಬಿ. ಲಕ್ಷ್ಮಣದೇವ ವಿದ್ಯಾರ್ಥಿ.
ಉತ್ಕೃಷ್ಟ ಕಥೆ, ಕವನಗಳಿಂದೊಡಗೂಡಿ, ಪ್ರತಿಮಾಸದ 16ನೇ ತಾರೀಕಿಗೆ ತಪ್ಪದೆ ಹೊರಡುವದು
ಸದ್ಧರ್ಮ ಪ್ರಚಾರಕ, ಕಾರ್ಯಲಯ,
ಅಳಕೆ ರಸ್ತೆ, ಮಂಗಳೂರು.

ಪ್ರವಾಸಿ.

ಅತ್ಯುತ್ತಮವಾದ ಸಚಿತ್ರ ಕನ್ನಡ ಮಾಸಪತ್ರಿಕೆ.

ಬೋಧಪ್ರದವಾದ ಲೇಖಗಳು-ಮಹಾಪುರುಷರ ಜೀವನ ಚರಿತ್ರೆಗಳು ಉತ್ತಮ ಕಥೆಗಳು-ಆರ್ಥಿಕ ರಾಜಕೀಯ ವಿಚಾರಗಳು. ವೈಜ್ಞಾನಿಕ ವಿಷಯಗಳು-ಪರರಾಷ್ಟ್ರಗಳ ಸಮಸ್ಯೆಗಳು-ಗ್ರಂಥ ವಿಮರ್ಶೆ ಇವುಗಳನ್ನೊಳಗೊಂಡ ಹೊಸ ರೀತಿಯ ಮಾಸಪತ್ರಿಕೆ. ಕೈಗೆಲಸವೆಂಬ ನೂತನ ವಿಭಾಗವಿರುವ ಪತ್ರಿಕೆಯು ಇದೊಂದೇ

ವಾರ್ಷಿಕ ಚಂದಾ ರೂ. 3—8—0.

ಪ್ರವಾಸಿ ಕಾರ್ಯಾಲಯ
ಕಾಸರಗೋಡು, ದಕ್ಷಿಣಕನ್ನಡ.

THE
Vijaya Bank, Ltd.

Head Office MANGALORE. Branch Office Court Road, UDIPI.

ದಿ ವಿಜಯ ಬೇಂಕ್ ಲಿಮಿಟೆಡ್,

ಹೆಡ್ ಆಫೀಸು: ಮಂಗಳೂರು. ಶಾಖೆ: **ಕೋರ್ಟು ರಸ್ತೆ, ಉಡ್ಪಿ**
ಚಾಲ್ತಿ ಠೇವಣಾತಿಗಳು ಸಾ. ಶೆ. 2. ಸೇವಿಂಗ್ಸು ಬ್ಯಾಂಕ್ ಠೇವಣಾತಿಗಳುಸಾ. ಶೆ. 3½
ಕಾಯಂ ಠೇವಣಾತಿಗಳು 3 ತಿಂಗಳ ಬಾಬ್ತು ಸಾ. ಶೆ. 3½
6 ಮತ್ತು 9 ತಿಂಗಳ ಬಾಬ್ತು ಸಾ ಶೆ. 4. 1 ವರ್ಷದ ಬಾಬ್ತು ಸಾ. ಶೆ. 5.
2 ವರ್ಷದ ಮೇಲಿನವುಗಳ ಬಾಬ್ತು ಸಾ. ಶೆ. 5½ ದರದ ಬಡ್ಡಿಯಲ್ಲಿ ಅಂಗೀಕರಿಸಲ್ಪಡುವುವು.

ಬ್ಯಾಂಕಿಗೆ ಸಮ್ಮಂಧಪಟ್ಟ ಎಲ್ಲಾ ತರದ ವ್ಯವಹಾರಗಳು ನಡೆಸಲ್ಪಡುತ್ತವೆ—
ಅಂದರೆ—ಪ್ರೊ ನೋಟು, ಹುಂಡಿ, ಸರಕು, ವಗೈರೆ ಮೇಲೆ ಸಾಲಕೊಡಲಾಗುತ್ತದೆ.
ಭಂಗಾರದ ಈಡಿನ ಮೇಲೆ ಈ ಕೆಳಗಿನ ದರದ ಬಡ್ಡಿಯಲ್ಲಿ ಸಾಲ ದೊರೆಯುವುದು.
ರೂ. 1ರಿಂದ 99ರ ವರೆಗೆ ಸಾ ಶೆ 9. 100ರಿಂದ 250ರ ವರೆಗೆ ಸಾ. ಶೆ. 8. ಮತ್ತು 251ರಿಂದ ಮೇಲ್ಪಟ್ಟ ಸಾಲಗಳಿಗೆ ಸಾ. ಶೆ. 7.
ವಿಶೇಷ ಸೂಚನೆ:—ಬಡವರಿಗೆ ಸಹಾಯವಾಗುವಂತೆ ಕಡಿಮೆಯೆಂದರೆ ರೂಪಾಯಿ 10/ ಸಹಾ ಸಾಲಕೊಡಲಾಗುತ್ತದೆ. ಹಾಲುಗಳು ದೊರೆಯುತ್ತವೆ
ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಕೊಳ್ಳಿರಿ.

A. B Shetty, ಚೆಯರ್‌ಮೇನ್. **K. Gopalakrishna Shetty.** ಸೆಕ್ರಟರಿ.
ವಿಜಯ ಬೇಂಕ್ ಲಿಮಿಟೆಡ್, ಕದ್ರಿರೋಡ್, ಮಂಗಳೂರು.

ಸ್ವದೇಶಿ ಕೈಗಾರಿಕೆಯನ್ನು ಪ್ರೋತ್ಸಾಹಿಸಿರಿ.

ಸ್ವದೇಶಿ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗೆಬಗೆಯ ಬಣ್ಣದಲ್ಲಿ, ಅಂಚಿನಲ್ಲಿ, ನಮೂನೆಯಲ್ಲಿ ದೊರೆಯುತ್ತವೆ.

ಶುದ್ಧ ಖಾದಿ ಮತ್ತು ಮಿಲ್‌ಬಟ್ಟೆಗಳೂ ವಿಕ್ರಯಿಸಲ್ಪಡುತ್ತವೆ.

P. A. PAI, BROS.
ಪಿ. ಎ. ಪೈ ಬ್ರದರ್ಸ್,
ಆಸ್ಪತ್ರೆ ಎದುರು, ಉಡುಪಿ.

ಕಸಿಗಿಡಗಳು.

ಸಪೋಡಿಲ್ಲ (ಚಿಕ್ಕು)

ಈ ಮರವು ನಮ್ಮ ಜಿಲ್ಲೆಯ ಎಲ್ಲಾ ಭಾಗದಲ್ಲಿಯೂ ಸರಿಯಾಗಿ ಬೆಳೆದು, 1ನೇ ವರ್ಷದಲ್ಲಿಯೇ ತಪ್ಪದೆ ಫಲಬಿಡುತ್ತದೆ. ಒಂದು ಮರದಲ್ಲಿ ಸಾವಿರಗಟ್ಟಲೆ ಹಣ್ಣಾಗುವುದು. ಒಂದು ಎಕ್ರೆಯಲ್ಲಿ ವರ್ಷಕ್ಕೆ ರೂ. ಸಾವಿರದ ಮೇಲೆ ಉತ್ಪತ್ತಿಯಾಗುವುದು. ಹಣ್ಣು ಅತಿ ಮಧುರ, ಒಳ್ಳೇ ರುಚಿ, ಕಾಯಿಲೆಯವರಿಗೆ ಉತ್ತಮ ಆಹಾರ ಅದರಲ್ಲಿ ಕಬ್ಬಿಣ ಸತ್ವ ಮತ್ತು ವಿಟಮಿನ್ ತುಂಬ ಇರುವದರಿಂದ ರಕ್ತವನ್ನು ವೃದ್ಧಿಸುವುದು. ಮರದಲ್ಲಿ ಯಾವಾಗಲೂ ಹಣ್ಣು ಇರುವುದು, ಎಲ್ಲ ತೋಟದಲ್ಲಿಯೂ ಇರತಕ್ಕದ್ದು. ಗಿಡವೊಂದರ ಕ್ರಯ ರೂ 1-0-0 ಮಾತ್ರ. ನಮ್ಮಲ್ಲಿ ಉತ್ತಮ ಮಾವು ಮತ್ತು ಇತರ ಕಸಿ ಗಿಡಗಳು ಕೂಡ ದೊರೆಯುತ್ತವೆ. ಕ್ರಯಪಟ್ಟಿಗೆ ಕೆಳಗಣ ವಿಳಾಸಕ್ಕೆ ಬರೆಯುವುದು.

ಮಂಗಳೂರಲ್ಲಿ ವಿಜಯ ಬ್ಯಾಂಕಿನಲ್ಲಿಯೂ ಸ್ಟಾಡಕೋಪು, ಹಂಪನಕಟ್ಟೆಯಲ್ಲಿಯೂ, ಸೋಮಯಾಜಿ ಎಂಡ್ ಕೊ, ರಥಬೀದಿಯಲ್ಲಿಯೂ ಮತ್ತು ಜಿಲ್ಲೆಯ ಎಲ್ಲಾ ಎಗ್ರಿಕಲ್ಚರಲ್ ಡೆಮೋನ್‌ಸ್ಟ್ರೇಟರಲ್ಲಿಯೂ ಮೇಲಿನ ಎಲ್ಲಾ ಗಿಡಗಳು ದೊರೆಯುತ್ತವೆ.

ಕೆ. ಎಮ್. ಶೆಟ್ಟಿ,ಕೆನರಾ ನರ್ಸರಿ,
ಪೋಸ್ಟ್ ಕಾಪು, ದ. ಕನ್ನಡ

ದಕ್ಷಿಣ ಕನ್ನಡದಲ್ಲಿ

ಕೊಂಗ್ರೆಸಿನವರ ಜಯಶೀಲ ಪ್ರಚಾರಕಾರ್ಯ

ಎಲ್ಲೆಲ್ಲಿಯೂ ಜನಜಾಗ್ರತಿ! — — — ಕೊಂಗ್ರೆಸಿನ ಕಡೆಗೆ ಹೃತ್ಪೂರ್ವಕ ಸಹಾನುಭೂತಿ!!

ಶ್ರೀಮತಿ ಕಮಲಾದೇವಿಯರ ಸಂಚಾರ

ದಕ್ಷಿಣ ಕನ್ನಡದಲ್ಲಿ ನ್ಯಾಯವಿಧಾಯಕ ಸಭೆಗಳ ಚುನಾವಣೆಗಾಗಿ ಕೊಂಗ್ರೆಸಿನವರು ನಡೆಸುತ್ತಿರುವ ಪ್ರಚಾರಕಾರ್ಯವು ಜನಸಾಮಾನ್ಯರಲ್ಲಿ ನವಜಾಗೃತಿಯನ್ನೆಬ್ಬಿಸಿದೆ. ಹಳ್ಳಿಹಳ್ಳಿಗಳಲ್ಲಿಯೂ ಸಭೆ, ಭಾಷಣಗಳ ಮೂಲಕ ರಾಷ್ಟ್ರಸಭೆಯ ಧ್ಯೇಯ, ಕಾರ್ಯಕ್ರಮಗಳನ್ನೆಲ್ಲಾ ಜನರಿಗೆ ಮಂದಟ್ಟಾಗುವಂತೆ ತಿಳಿಸಿ, ಅವರಲ್ಲಿ ಕರ್ತವ್ಯ ಜಾಗೃತಿಯನ್ನು ನಿರ್ಮಿಸಿಯೇ ಮತಗಳನ್ನು ಪಡೆಯಲೆತ್ನಿಸುವುದು ಅಭಿನಂದನೀಯವಿದೆ. ಜಿಲ್ಲೆಯ ಪ್ರತಿಯೊಂದು ಡಿವಿಜನಿನ ಪೇಟೆ, ಪಟ್ಟಣ, ಹಳ್ಳಿ, ಮೂಲೆಗಳಲ್ಲಿ ಸಭೆಗಳಾಗುತ್ತಿರುವವು; ಕರಪತ್ರ, ಸಭೆ, ಭಾಷಣಗಳ ಮೂಲಕ ಹುರುಪಿನಿಂದ ಪ್ರಚಾರಕಾರ್ಯವು ನಡೆಯುತ್ತಿರುವುದು. ಇವುಗಳ ಸತ್ಪರಿಣಾಮವೆಂದರೆ ಕೆಲವರು ಒಳಗಿಂದೊಳಗೆ ಪ್ರಸರಿಸಿಬಿಟ್ಟಿದ್ದ ಕೊಂಗ್ರೆಸು ಮತ್ತು ಕೊಂಗ್ರೆಸು ಕಡೆಯವರ ಮೇಲಿನ ಹಲವು ಆರೋಪಗಳ ಆಧಾರ ತಪ್ಪಿ, ಜನರ ಕಣ್ಣೆದಿರಿನಲ್ಲಿ ನಿಜಸ್ಥಿತಿಯು ಬಯಲಿಗೆ ಬಂದುದು! ಕೆಲವೇ ಸಭೆಗಳ ಕಾರ್ಯಕಲಾಪಗಳ ಸಾರಾಂಶವನ್ನು ಇಲ್ಲಿ ಕೊಡಲಾಗಿದೆ. ಇದೇ ತಾ. 20 ನೇ ಬುಧವಾರ ಮುಟ್ಟೆಯಲ್ಲೊಂದು ಸಾರ್ವಜನಿಕ ಸಭೆಯು ಡಾ. ಕೆ. ಜೆ. ಕಿಣಿಯವರ ಅಧ್ಯಕ್ಷತೆಯಲ್ಲಿ ನೆರೆದು ಶ್ರೀಗಳಾದ ವಕೀಲ್ ಪಿ. ವಿ. ಉಪಾಧ್ಯಾಯ, ಹಿ. ರಾಮರಾಯ ಮಲ್ಯ, ಎಮ್. ವಿ. ಹೆಗ್ಡೆಯವರ ಭಾಷಣಗಳಾದವು. ವಕೀಲ್ ಎಮ್. ಎಸ್. ಅಧಿಕಾರಿಗಳು ತನ್ನ ಗ್ರಾಮಸ್ಥರು ಕೊಂಗ್ರೆಸಿಗೆ ಬೆಂಬಲವೀಯಬೇಕೆಂದು ಆಗ್ರಹಪೂರ್ವಕವಾಗಿ ಕೇಳಿಕೊಂಡರು. ತಾ. 21ರಲ್ಲಿ ಗುತ್ತಿಗಾರಿನಲ್ಲಿ ಪ್ರಚಂಡ ಸಾರ್ವಜನಿಕ ಸಭೆ ಸೇರಿ ಶ್ರೀಯುತರಾದ ಮೊಳಹಳ್ಳಿ ಶಿವರಾವ್, ಎನ್. ಎಸ್. ಕಿಲ್ಲೆ, ವಕೀಲ್ ಮಂಗೇಶರಾವ್, ಕೆ. ಆರ್. ಕಾರಂತರಲ್ಲದೆ ಇತರ ಊರಪ್ರಮುಖರೂ ಕೊಂಗ್ರೆಸು ಗೆದ್ದು ಬರುವಂತೆ ಮಾಡಬೇಕೆಂದು ಸ್ಫೂರ್ತಿದಾಯಕ ಭಾಷಣಗಳನ್ನಿತ್ತರು. ಕಟಪಾಡಿಯ ಶ್ರೀ ನಿತ್ಯಾನಂದ ಯುವಕ ಸಂಘದವರು ದಿವಂಗತ ಕಾರ್ನಾಡು ಸದಾಶಿವ ರಾಯರ ದಿನಾಚರಣೆಯನ್ನು ಮಾಡಿ ಪಾಂಗಾಳ ದೇವಸ್ಥಾನದಲ್ಲಿ ಎಲ್ಲರೂ ಕೊಂಗ್ರೆಸಿಗೇನೆ ಮತವೀಯುವ ಪ್ರತಿಜ್ಞೆ ಮಾಡಿರುವರು. ಈ ಸಂಘದವರು ತಾ. 23ರಲ್ಲಿ ಮತ್ತೊಂದು ಸಭೆ ಕರೆದು ಅಲ್ಲಿ ಶ್ರೀಗಳಾದ ಎಮ್. ವಿ. ಹೆಗ್ಡೆ, ಕೆ. ಸಂಜೀವ ಬಲ್ಲಾಳ, ಲೋಕುಮಾಡ, ಕಟಪಾಡಿ ದೇಜಪ್ಪ ಸೆಟ್ಟಿ, ಕುರ್ಕಾಲು ಅಧ್ಯಾಪಕ ದೇಜಪ್ಪ ಸೆಟ್ಟಿ, ಎಮ್. ಮೆಣ್ಕ ಹೆಗ್ಡೆ, ಮತ್ತು ಒಬ್ಬ ಬ್ರಾಹ್ಮಣ ಮಹನೀಯರು ಭಾಷಣವಿತ್ತರಲ್ಲದೆ, ದೇವರ ಸಾನ್ನಿಧ್ಯದಲ್ಲಿ ಮೆಂಬರರೆಲ್ಲರೂ ಕೊಂಗ್ರೆಸನ್ನು ಸಮರ್ಥಿಸುವೆವೆಂದು ನಿರ್ಧರಿಸಿರುವರು. ಉಡುಪಿಯ ಸ್ವಯಂಸೇವಕರು ಕಲ್ಯಾಣಪುರ, ಹಿರಿಯಡ್ಕ ಮೊದಲಾದ ಕಡೆಗಳಲ್ಲಿ ಪ್ರಚಾರಕ್ಕೆ ತೆರಳಿದ್ದು ಶ್ರೀ. ನಾಗಪ್ಪ ಕಾಮತರೇ ಮೊದಲಾದವರ ಭಾಷಣಗಳಾಗಿವೆ.

ಶ್ರೀಮತಿ ಕಮಲಾದೇವಿಯರು

ಕೊಂಗ್ರೆಸು ಕೆಲಸಗಾರರೊಂದಿಗೆ ಕುಂದಾಪುರ ಡಿವಿಜನಿನಲ್ಲಿ ಸಂಚರಿಸಿ ಅಲ್ಲಲ್ಲಿ ಕೆಲಸಗಾರರ ಮತ್ತು ಸ್ವಯಂಸೇವಕರ ಸಭೆ ಕರೆದು ಕೊಂಗ್ರೆಸ್ ತತ್ವಗಳ ಸರಿಯಾದ ಪ್ರಚಾರವನ್ನು ಮಾಡಿರುವರು. ಉಡುಪಿಯಲ್ಲಿ ಕೊಂಗ್ರೆಸ್ ಆಫೀಸಿನಲ್ಲಿ ಸೇರಿದ ಕೆಲಸಗಾರರ ಸಭೆಯಲ್ಲಿ ಶ್ರೀಮತಿಯವರ ಭಾಷಣವಿತ್ತಲ್ಲದೆ ಆಸುಪಾಸಿನ ಹಳ್ಳಿಗಳಲ್ಲಿ ಕೆಲಸಮಾಡುವರೆ ಸ್ವಯಂಸೇವಕರ ನೇಮಕವಾಗಿರುವದು. ತಾ. 24ನೇ ಆದಿತ್ಯವಾರದ ಕುಂದಾಪುರದ ಸಭೆಯಲ್ಲಿ ಶ್ರೀ ಹಿ ರಾಮರಾಯ ಮಲ್ಯರು ರಾಷ್ಟ್ರ ಸಭೆಯು ನಿಶ್ಚಿತ ಧ್ಯೇಯದಿಂದ ಕೆಲಸಮಾಡುವ ವಿಧಾನವನ್ನು ವಿವರಿಸಿ ಹೇಳಿದರು. ಶ್ರೀಮತಿ ಕಮಲಾದೇವಿಯವರು ಹಿಂದುಸ್ಥಾನದ ಮುಖ್ಯ ಪ್ರಶ್ನೆಯಾದ ಬಡತನದ ಚಿತ್ರವನ್ನು ಸರಿಯಾಗಿ ಚಿತ್ರಿಸಿ, ಅದರ ನಿವಾರಣೆಯಾಗದೆ ನಾವು ಸುಖಹೊಂದಲಾರೆವೆಂದೂ ಚುನಾವಣೆಯಲ್ಲಿ ಕೊಂಗ್ರೆಸಿನವರು ಜಯಶೀಲರಾಗುವಂತೆ ಪ್ರತಿಯೊಬ್ಬರೂ ಪ್ರಯತ್ನಿಸಬೇಕಲ್ಲದೆ, ದೇಶದ ಮುಖ್ಯ ಸಮಸ್ಯೆಯನ್ನು ಬಿಡಿಸಲು ನೆರವಾಗಬೇಕೆಂದೂ, ಆಗ್ರಹಪೂರ್ವಕವಾಗಿ ಕೇಳಿಕೊಂಡರು. ಕೊಂಗ್ರೆಸ್ ಪಾರ್ಲಿಮೆಂಟರೀ ಬೋರ್ಡಿನ ಕಾರ್ಯದರ್ಶಿಯವರಾದ ಶ್ರೀ. ಯು. ಶ್ರೀನಿವಾಸಮಲ್ಯರು ಸ್ವಯಂಸೇವಕರು ಹಾಗೂ ಮತದಾರರು ಚುನಾವಣೆಯ ದಿನ ನಡಕೊಳ್ಳಬೇಕಾದ ರೀತಿಯನ್ನು ತೋರಿಸಿಕೊಟ್ಟರು. ಶ್ರೀಮತಿಯವರು ಶಿರ್ವ, ಕಾಪು, ಪಡುಬಿದ್ರೆ, ಬೈಲೂರು, ಮೂಡುಬಿದ್ರೆ, ಕಟಪಾಡಿ ಮೊದಲಾದ ಕಡೆಗಳಲ್ಲಿ ಸಂಚರಿಸಿ ಜನಜಾಗೃತಿಯನ್ನುಂಟುಮಾಡಿರುವರು. ಕಟಪಾಡಿ, ಶಿರ್ವ, ಬೈಲೂರು ಮೊದಲಾದೆಡೆಗಳಲ್ಲಿ ಹಳ್ಳಿಗರ ಸಭೆಯಲ್ಲಿ ಬಡವರ ಪರವಾಗಿ ಹೋರಾಡುತ್ತಿರುವ ರಾಷ್ಟ್ರ ಸಭೆಗೆ ಸಂಪೂರ್ಣ ಬೆಂಬಲವನ್ನಿತ್ತು ಮುಂದಕ್ಕದು ಕೈಕೊಳ್ಳಲಿಕ್ಕಿರುವ ಮಹತ್ಕಾರ್ಯಗಳಿಗೆ ಅನುಕೂಲಮಾಡಿಕೊಡಬೇಕೆಂದು ಬೋಧಪ್ರದ ಭಾಷಣಗಳನ್ನಿತ್ತರು. ಕಾರ್ಕಳದ ಪ್ರಮುಖ ವಕೀಲರುಗಳಾದ ಶ್ರೀ. ಪಿ. ವಿ. ಉಪಾಧ್ಯಾಯ, ಶ್ರೀ. ಎಂ. ಎಸ್. ಅಧಿಕಾರಿ, ಶ್ರೀ. ಮಹಾಬಲ ಹೆಗ್ಡೆ ಮೊದಲಾದವರು ಎಲ್ಲೂರು, ಸಾಂತೂರು, ಶಿರ್ವ ಮೊದಲಾದ ಕಡೆಗಳಲ್ಲಿ ಸಂಚರಿಸಿ ಸಭೆ, ಭಾಷಣಗಳನ್ನಿತ್ತು ಮತದಾರರ ಮನವೊಲಿಸುತ್ತಿರುವರು. ಪ್ರೊ. ಸಿ. ಜೆ. ವಾರ್ಕೆಯವರು ಸ್ವಯಂಸೇವಕ ದಳದೊಡನೆ ಕಲ್ಯಾಣಪುರಕ್ಕೆ ಹೋಗಿ ಅಲ್ಲಿಯ ಸಭೆಯಲ್ಲಿ ಮತದಾರರು ಕೊಂಗ್ರೆಸಿಗೆ ಬೆಂಬಲವೀಯಬೇಕಾದ ಆವಶ್ಯಕತೆಯನ್ನು ಮನಗಾಣಿಸಿ ಭಾಷಣವಿತ್ತರಲ್ಲದೆ ಉಡುಪಿಯಲ್ಲಿಯೂ, ಪ್ರಚಾರ ಕಾರ್ಯವನ್ನು ಮಾಡಿ ತೆರಳಿರುವರು. ಸ್ವಯಂಸೇವಕ ದಳವನ್ನು ನಡೆಸುತ್ತಾ, ರಾಷ್ಟ್ರೀಯ ಘೋಷಗಳೊಡನೆ ಅವರು ಕೈಕೊಂಡಿರುವ ಪ್ರಚಾರ ಕಾರ್ಯವು ಪರಿಣಾಮಕಾರಿಯಿದೆ. ಇತರ ಹಲವು ಕಡೆಗಳಲ್ಲಿಯೂ ಸಭೆಭಾಷಣಗಳು ನಡೆದಿರುವವು. ಜನಸಾಮಾನ್ಯರಲ್ಲಿ ಜಾಗೃತಿಯುಂಟಾಗಿರುವದು.

GREETINGS

In the spirit of the coming season and in deepest appreciation of the patronage, confidence and goodwill accorded our bank, we extend to all our customers and other friends our sincerest wishes for a HAPPY NEW YEAR. May the days be filled for YOU and YOURS with cheer and happiness.

ESTD. 1906

CANARA BANK

LIMITED

ಉಡುಪಿ

ಸ್ವಾತಂತ್ರ್ಯ ದಿನಾಚರಣೆ

ಪ್ರಚಂಡ ಸಭೆ

ಮೆರವಣಿಗೆಗಳು!

ಉಡುಪಿ ತಾಲೂಕು ಕೊಂಗ್ರೆಸ್ ಕಮಿಟಿಯವರು ತಾ. ೨೬ನೇ ಮಂಗಳವಾರ ಸ್ವಾತಂತ್ರ್ಯ ದಿನಾಚರಣೆಯನ್ನು ಅತ್ಯಂತ ವಿಜೃಂಭಣೆಯಿಂದ ಆಚರಿಸಿದರು. ಬೆಳಿಗ್ಗೆ ೬ ಘಂಟೆಗೆ ಪ್ರಭಾತಫೇರಿಯು ಕೊಂಗ್ರೆಸ್ ಆಫೀಸಿನಿಂದ ರಾಷ್ಟ್ರಗೀತೆಗಳನ್ನು ಹಾಡುತ್ತಾ ಹೊರಟು ಪಟ್ಟಣದ ಮುಖ್ಯ ರಸ್ತೆಗಳಲ್ಲಿ ಸುತ್ತಾಡಿ ರಥಬೀದಿಗೆ ಬಂದು ಘಂಟೆ ೮ಕ್ಕೆ ಧ್ವಜವಂದನೆ ನಡೆಯಿತು. ಸಂಜೆ ೫ ಘಂಟೆಗೆ ಸರಿಯಾಗಿ ಪ್ರಚಂಡ ಪುರ ಮೆರವಣಿಗೆಯು ಕೊಂಗ್ರೆಸ್ ಕಛೇರಿಯಿಂದ ಹೊರಟಿತು. ಪಟ್ಟಣದ ಕೊಂಗ್ರೆಸ್ ಕೆಲಸಗಾರರಲ್ಲದೆ ಬಹು ಮಂದಿ ಸ್ತ್ರೀಪುರುಷರು ಮೆರವಣಿಗೆಯಲ್ಲಿ ಉತ್ಸಾಹದಿಂದ ಭಾಗವಹಿಸಿದ್ದರು. ಘಂಟೆ ೬ಕ್ಕೆ ಸರಿಯಾಗಿ ರಥಬೀದಿಯಲ್ಲಿ ತಂಡತಂಡವಾಗಿ ಜನರು ನೆರೆದು ಎರಡು ಸಾವಿರಕ್ಕೂ ಮಿಕ್ಕಿದ ಸ್ತ್ರೀಪುರುಷರ ಸಭೆಯು ಶ್ರೀ. ಸಾಂತ್ಯಾರು ಅನಂತಪದ್ಮನಾಭ ಭಟ್ಟರ ಅಧ್ಯಕ್ಷತೆಯಲ್ಲಿ ನೆರೆಯಿತು. ಸ್ವಾತಂತ್ರ್ಯ ಪ್ರತಿಜ್ಞೆಯ ನಿಷೇಧ ಹುಕುಮನ್ನು ಸರಕಾರವು ಜಾರಿ ಮಾಡಿದ್ದುದರಿಂದ ಮೆಜಿಸ್ಟ್ರೇಟರು, ಮತ್ತು ಸಬ್ ಇನ್ಸ್‌ಪೆಕ್ಟರರು ಲಾತಿ ಮತ್ತು ಕೋವಿಧಾರಿಗಳಾದ ಪೋಲಿಸರೊಂದಿಗೆ ಹಾಜರಿದ್ದರು. ಸಭಾ ಪ್ರಾರಂಭದಲ್ಲಿ ಶ್ರೀ. ಹಿ. ರಾಮರಾಯಮಲ್ಯರು ಸ್ವಾತಂತ್ರ್ಯ ಪ್ರತಿಜ್ಞೆಯ ವಿರುದ್ಧವಾಗಿ ಸರಕಾರವು ಹೊರಡಿಸಿದ ಹುಕುಮಿನ ವಿಷಯವಾಗಿ ಪ್ರಸ್ತಾಪಿಸಿದರು. ಶ್ರೀ. ಎನ್. ಎಸ್. ಕಿಲ್ಲೆಯವರು ತನ್ನ ಸ್ಫೂರ್ತಿಯುಕ್ತ ಭಾಷಣದಲ್ಲಿ ಕೊಂಗ್ರೆಸು ಈ ತನಕ ಮಾಡಿರುವ ಕಾರ್ಯಕಲಾಪಗಳನ್ನು ಬಣ್ಣಿಸುತ್ತಾ ಹಿಂದೂದೇಶದ ಏಕಮಾತ್ರ ಪ್ರತಿನಿಧಿ ಸಂಸ್ಥೆಯಾದ ರಾಷ್ಟ್ರಸಭೆಯ ಪ್ರತಿನಿಧಿಗಳಿಗೇ ಮತವೀಯಬೇಕೆಂಬುದನ್ನು ಸಭಿಕರಿಗೆಲ್ಲಾ ಮಂದಟ್ಟಾಗುವಂತೆ ವರ್ಣಿಸಿದರು. ವಕೀಲ್ ಶ್ರೀ. ಪಿ. ವಿ. ಉಪಾಧ್ಯಾಯರು ಕೊಂಗ್ರೆಸಿಗೆಮ

ಪುಟ ೯ಕ್ಕೆ

ದ್ವಿತೀಯ ಸಂಸ್ಕರಣ

ಕಾವ್ಯಸಾಮ್ರಾಜ್ಯ

ವಿಶ್ವಕರ್ನಾಟಕದೊಗಿನ
ಆಧುನಿಕ ಕವಿ ಪ್ರಮುಖರ
೪೮ ಕವಿಗಳ ಕವನಗಳ ಸಂಗ್ರಹ

ಬೆಲೆ
ಹನ್ನೆರಡಾಣೆ

ಕಿರಿಯರ ಪ್ರಪಂಚ
ಉಡುಪಿ

'ಆಧುನಿಕ[ಕ]ವಿಗಳ ಕವಿತೆಗಳ ಇಂತಹ ಉತ್ತಮ ಸಂಗ್ರಹವನ್ನು ಈ ವರೆಗೆ ಯಾರೂ ಒದಗಿಸಿ ಕೊಟ್ಟಿರುವುದಿಲ್ಲ'. ಎಂಬ ಮನ್ನಣೆಗೆ ಪಾತ್ರವಾಗಿ ಅಲ್ಪಾವಕಾಶದಲ್ಲಿಯೇ ದ್ವಿತೀಯಾವೃತ್ತಿಯನ್ನು ಹೊಂದಿದ ಗ್ರಂಥ! ಬಾಹ್ಯಾಂಗವು ನಯನಮನೋಹರವಾಗಿದೆ ಅಂತರಂಗವು ಚೇತೋಪಹಾರಿಯಾಗಿದೆ.

ಉತ್ಸಾಹೀ ಏಜಂಟರು ಬೇಕಾಗಿದ್ದಾರೆ.

'ನವಯುಗ'ದ

ಪ್ರತಿನಿಧಿಗಳಿಲ್ಲದ ಕೇಂದ್ರಗಳಲ್ಲಿ ಬಿಡಿಪ್ರತಿಗಳನ್ನು ವಿಕ್ರಯಿಸುವುದಕ್ಕೂ 'ನವಯುಗ'ಕ್ಕೆ ಚಂದಾದಾರರನ್ನು ಸೇರಿಸುವುದಕ್ಕೂ ಜಾಹಿರಾತುಗಳನ್ನು ಸಂಗ್ರಹಿಸುವುದಕ್ಕೂ ಉದಾರ ಶರ್ತಗಳ ಮೇಲೆ ಅನುಭವಶಾಲಿಗಳಾದ

ಕುಶಲ ಏಜಂಟರು ಬೇಕಾಗಿದ್ದಾರೆ.

ಹೆಚ್ಚಿನ ಮಾಹಿತಿ ಬಗ್ಗೆ ಪತ್ರವ್ಯವಹಾರ ಬೆಳೆಯಿಸಿರಿ.

ಮನೇಜರ್—'**ನವಯುಗ**',
ಉಡುಪಿ.

ಗೃಹಸ್ಥರೇ!



ಗೃಹಕೃತ್ಯಕ್ಕೆ ಬೇಕಾದ ವಿಧವಿಧ ತಾಮ್ರದ ಪಾತ್ರೆಗಳು

ಗೃಹಕೃತ್ಯೋಪಯೋಗದ ಎಲ್ಲಾ ವಿಧದ ತಾಮ್ರ ಹಿತ್ತಾಳೆ, ಜರ್ಮನ್ ಬೆಳ್ಳಿ, ಬೆಳ್ಳಿ ಸಾಮಾನುಗಳು ಎಲ್ಲಿ ಸಿಗುತ್ತವೆ ಬಲ್ಲಿರಾ?

ರಥಬೀದಿಯಲ್ಲಿ ಕಲ್ಮಂಜೆ ವ್ಯಾಸಾಚಾರ್ಯರ ಅಂಗಡಿಯಲ್ಲಿ ಮಾತ್ರವೇ.

ಸ್ವದೇಶಿ ಕೈಗಾರಿಕೆ! ಹದಿನೆಂಟು ವರ್ಷಗಳ ಅನುಭವ!

ಮನೆಯ ಉಪಯೋಗಕ್ಕೂ ಉಡುಗೊರೆ ಕೊಡಲಿಕ್ಕೂ ದಾನಮಾಡಲಿಕ್ಕೂ ಬೇಕಾದ ನಮೂನೆಯ ಸಾಮಾನುಗಳನ್ನು ಮನಮೆಚ್ಚುವ ಮಾದರಿಯಲ್ಲಿ ತಕ್ಕ ಕಾಲದಲ್ಲಿ ನಾಜೂಕಾಗಿ ತಯಾರುಮಾಡಿಸಿಯೂ ಕೊಡಲಾಗುವುದು.

ಹೆಚ್ಚಿನ ವಿವರಗಳಿಗೆ ಸಚಿತ್ರ ಕೆಟಲಾಗಿಗೆ ಬರೆಯಿರಿ.

ಕಲ್ಮಂಜೆ ವ್ಯಾಸಾಚಾರ್ಯ,

ಪಾತ್ರೆ ವ್ಯಾಪಾರಿ, **ರಥಬೀದಿ, ಉಡುಪಿ.**

ಸ್ತ್ರೀ ಮಲಯಾಳದ **ಸ್ತನೋಸ್ತೇಧಃ** ರಹಸ್ಯಗಳು

THE MALAYALA STHANOSTHEDAH OUSHADHA CO.
POST-CHALAPURAM, MALABAR

ಇದೀಗ ತಿಳಿದುಬಂದಿದೆ, ಪುರುಷರನ್ನು ವಶಮಾಡುವ ಆಕರ್ಷಣಾಸಾಧನವೆಂಬುದನ್ನು ಸ್ತ್ರೀಯರೀಗ ಬಲ್ಲರು ನೀವು ಪುರುಷನೊಬ್ಬನನ್ನು ಪರೀಕ್ಷಿಸಿ ನೋಡಿದ್ದಲ್ಲಿ, ಆತನ ಕಣ್ಣುಗಳು ಸ್ತ್ರೀಯ ಮುಖದಿಂದ ಕೆಳಗೆ ವಕ್ಷಸ್ಥಳಕ್ಕೆ ಚಲಿಸಿ ಕುಚಗಳು ಉನ್ನತವಾಗಿ, ದೃಢಗೆ ಯೌವನಯುಕ್ತವಾಗಿ ಆಕರ್ಷಕವಾಗಿರುವವೂ ಎಂದು ನೋಡುವವು.

48 ದಿವಸಗಳಲ್ಲಿ ಮನೋಹರ ಕುಚಸ್ಥಲದ ಗ್ಯಾರಂಟಿ, ಇಲ್ಲವಾದರೆ ಹಣ ವಾಪಾಸು.

ಪ್ರಖ್ಯಾತ ಮಲಯಾಳಿ ರಹಸ್ಯ ಸ್ತನಸ್ಥೆಡೆ:—ಅಸ್ವಸ್ಥ, ಚಿಂತೆ, ಪ್ರಾಯ ಆಗಾಗಿನ ಹೆರಿಗೆ ನಿಮಿತ್ತ ಸ್ತ್ರೀಯರ ಎದೆಯ ಆಕರ್ಷಕತೆಯು ನಷ್ಟವಾಗಿದ್ದರೆ, ಕುಚಗಳು ಸರಿಯಾಗಿ ಬೆಳೆಯದಿದ್ದರೆ, ಚಪ್ಪಟೆಯಾಗಿದ್ದರೆ, ಬಲವಿಲ್ಲದೆ ತೂಗಾಡಿಕೊಂಡಿದ್ದರೆ, ಬಿದ್ದುಕೊಂಡಿದ್ದರೆ, ಟೊಳ್ಳಾಗಿ ಆಥವಾ ಏರು ತಗ್ಗಾಗಿದ್ದರೆ, ನರಗಳು ದುರ್ಬಲವಾಗಿದ್ದು ಕುಚಗಳನ್ನು ಸ್ಥಿರವಾಗಿರಿಸಲಾರವಾದರೆ

ದಿ ಮಲಯಾಳ ಔಷಧ ಕಂಪೆನಿ, ಛಲಪುರಮ್ ಇವರು ತಮ್ಮ ಪ್ರಖ್ಯಾತ ಚಿಕಿತ್ಸೆಯಿಂದ ಸಹಾಯಮಾಡುವರು, ಬಿದ್ದುಕೊಂಡಿದ್ದು ವಿರೂಪವಾಗಿ ಚಪ್ಪಟೆಯಾಗಿರುವ ಕುಚಗಳು ಸರಿಯಾಗಿ ಬೆಳೆಸಲ್ಪಡುವುವು, ಟೊಳ್ಳುತನವು ತುಂಬಿ ಬರುವುದು, ಕುಚಗಳು ಮನೋಹರವಾಗಿಯೂ, ಸ್ಥಿರವಾಗಿಯೂ, ದುಂಡಗಾಗಿಯೂ ಮಾಡಲ್ಪಡುವುವು. ಸಡಿಲಾಗಿರುವ ಮಾಂಸವು ಸ್ಥಿರವಾಗುವುದು ಮತ್ತು ಕುಚಗಳು ಯೋಗ್ಯವೂ ಮನೋಹರವೂ ಆದ ರೂಪಕ್ಕೆ ತರಲ್ಪಡುವವು ತಮ್ಮ ಸೌಂದರ್ಯಕ್ಕೆ ಪ್ರಸಿದ್ಧಿಹೊಂದಿರುವ ಮಲಯಾಳ ದೇಶದ ಸ್ತ್ರೀಯರು ಅನಾದಿಕಾಲದಿಂದ ಜಯಶೀಲವಾಗಿ ತಮ್ಮ ಸೌಂದರ್ಯವನ್ನು ಕಾಪಾಡಿಕೊಂಡು ಬಂದಿರುವ ರಹಸ್ಯಗಳಿವು

ಸ್ತನಸ್ಥೆಡ ನಂಬ್ರ 20—ಒಳಗೆ ತೆಗೆದುಕೊಳ್ಳುವುದಕ್ಕೆ ನಂಬ್ರ ರೂ. ३. ನಂಬ್ರ 21 ಹೊರಗಣ **ಉಪಯೋಗಕ್ಕೆ ರೂ** 3 ಧರ್ಮಾರ್ಥ ಕಳುಹಿಸಲ್ಪಡುವ ಕೆಟಲಾಗಿಗೆ ದಯಮಾಡಿ ಬರೆಕೊಳ್ಳಿ

ದಿ ಮಲಯಾಳ ಔಷಧ ಕಂಪೆನಿ, ಪೋಸ್ಟ್ ಛಲಪುರಮ್, ಮಲಬಾರ್.

ಈ ಕೆಳಗಣವುಗಳಿಗೆ ನಮ್ಮಲ್ಲಿ ಸಿದ್ಧೌಷಧಗಳಿವೆ.

ಮುಟ್ಟುವೇದನೆಗಳು, ಸಂತತಿ ನಿರೋಧ, ಧಾತುಪುಷ್ಟಿ, ಲಿಂಗವೃದ್ಧಿ, ಗುಹ್ಯೇಂದ್ರಿಯ ರೋಗಗಳು, ಕ್ಷಯಸಂಹಾರಿ, ವಾತರೋಗಕ್ಕಾಗಿ ಕ್ಷೀರಬಲ

ಮಂಗಳೂರು

(ನಮ್ಮ ಸ್ವಂತ ಬಾತ್ಮಿದಾರರಿಂದ)

ತಾ 25-1-37

ಉಪನ್ಯಾಸ

ಮಂಗಳೂರಿನ ಪ್ರಸಿದ್ಧ ಕಾಂಗ್ರೆಸ್ ಧುರೀಣರಾದ ಶ್ರೀ| ತಲೇಚೆರಿಕರ ರಂಗರಾಯರು ಕಳೆದ ತಾ 22 ನೇ ಶುಕ್ರವಾರ ಸಾಯಂಕಾಲ ಸ್ಥಳೀಯ ಹರಿಸೆಟ್ಟಿ ದೇವಸ್ಥಾನದ ವಠಾರದಲ್ಲಿ ಪ್ರಕೃತದ ಕಾಂಗ್ರೆಸ್ ಚುನಾವಣೆಯ ವಿಷಯವಾಗಿ ಭಾಷಣಮಾಡಿ ಮತದಾರರು ಕಾಂಗ್ರೆಸಿಗೆ ಸಂಪೂರ್ಣ ಬೆಂಬಲವನ್ನೀಯುವುದು ಹೇಗೆ ಅಗತ್ಯವೆಂಬುದನ್ನು ತಿಳಿಸಿದರು

ಮುದ್ದಣ ದಿನಾಚರಣೆ

ಹ ಕನ್ನಡದ ಪ್ರಸಿದ್ಧ ಕವಿಗಳಲ್ಲೊಬ್ಬರಾದ ಮುದ್ದಣ ಮಹಾಕವಿಯ ದಿನಾಚರಣೆಯನ್ನು ಸ್ಥಳೀಯ ಮಿತ್ರಮಂಡಲಿಯವರು ಯಶಸ್ವಿಯಾಗಿ ಜರಗಿಸಿದರು. ಶ್ರೀ| ಜಿ ಪಿ ರಾಜರತ್ನಂ ಎಂ ಎ ರವರು ದೇಹಾಲಸ್ಯದಿಂದ ಬಾರದ ಕಾರಣ ವಿದ್ವಾನ್ ಮುಳಿಯ ತಿಮ್ಮಪ್ಪಯ್ಯನವರು ಅಧ್ಯಕ್ಷತೆಯನ್ನು ವಹಿಸಿದ್ದರು ಶ್ರೀ| ಗಳಾದ ಬಿ ಭವಾನಿರಾವ್, ಹುರುಳಿ ಭೀಮರಾವ, ಕೆ. ನಾರಾಯಣ, ಯಂ ಬಾಬುಶೆಟ್ಟಿ, ಎನ್ ಮಂಗೇಶರಾವ್ ಮತ್ತು ಕ ಶಂಕರಭಟ್ಟರು ಕವಿಯ ಮಹತ್ವದ ಒಂದೊಂದು ವಿಷಯವನ್ನೆತ್ತಿಕೊಂಡು ಸ್ವಾರಸ್ಯವಾದ ವ ತ್ತು ವಿಷಯಗರ್ಭಿತ ಭಾಷಣಗಳನ್ನಿತ್ತರು ಅಧ್ಯಕ್ಷರು ಶ್ರೀ ನಂದಳಿಕೆ ಲಕ್ಷ್ಮೀನಾರಾಯಣಪ್ಪನವರ ಗ್ರಂಥಗಳಿಂದ ಅನೇಕ ವಿಷಯಗಳನ್ನು ಉದಾಹರಣೆಗಳಾಗಿ ಎತ್ತಿ ಅವುಗಳಲ್ಲಿರುವ ಮಹತ್ವವು ಎಷ್ಟಿದೆ ಎಂಬುದನ್ನು ವ್ಯಕ್ತಗೊಳಿಸಿದರು ಧನ್ಯವಾದಗಳನ್ನರ್ಪಿಸಿದ ಮೇಲೆ ಸಭಾಂತ್ಯವಾಯಿತು

ಮಂಗಳೂರು ನಗರ ಕಾಂಗ್ರೆಸ್ ಸಮಿತಿ

ಈ ಸಮಿತಿಯ ಕಾರ್ಯಕಾರಿ ಮಂಡಲದ ಸಭೆಯು ತಾ 22ರಲ್ಲಿ ನಡೆದು, ಚುನಾವಣೆಯ ಕಾರ್ಯದಲ್ಲಿ ಸಹಾಯ ಮಾಡುವುದಕ್ಕೂ ರಾಷ್ಟ್ರಪತಿಗಳ ಆಗಮನ ಕಾಲದಲ್ಲಿ ಸಹಾಯಕ್ಕಾಗಿಯೂ ಸ್ವಯಂ ಸೇವಕರ ದಳವೊಂದನ್ನು ಸಿದ್ಧಗೊಳಿಸಬೇಕೆಂದೂ, ಮೈದಾನದಲ್ಲಿ ಸಭೆ ಜರಗುವಾಗ ಭಾಷಣ ಕೊಡುವವರ ಅನುಕೂಲತೆಗೆ ಭಾಷಣ ವೇದಿಕೆಯೊಂದನ್ನು ಸಿದ್ಧಪಡಿಸಬೇಕೆಂದೂ, ದೀಪ ಇಡುವುದಕ್ಕೆ ಒಂದು ಸ್ತಂಭವನ್ನು ಸಿದ್ಧಪಡಿಸ ಬೇಕೆಂದೂ, ಒಂದು ರಾಷ್ಟ್ರೀಯ ವಾಚನಾಲಯವನ್ನು ತೆರೆಯಬೇಕೆಂದೂ, ತೀರ್ಮಾನಗಳಾದವು ಮತ್ತು ಸ್ವಾತಂತ್ರ್ಯ ದಿನಾಚರಣೆಗೆ ಬೇಕಾದ ಕಾರ್ಯಕ್ರಮವನ್ನು ಸಿದ್ಧಪಡಿಸಿದ್ದಲ್ಲದೆ ಆ ದಿನ ಧ್ವಜ ವಂದನ ಮಾಡಬೇಕೆಂದೂ ನಿರ್ಧಾರವಾಯಿತು. ಸ್ವಾತಂತ್ರ್ಯ ದಿನಾಚರಣೆಯ ದಿನ ದಿವಂಗತ ಸದಾಶಿವರಾಯರ ಹೆಸರಲ್ಲಿ ಬಡವರಿಗೆ ಅಕ್ಕಿ ದಾನ ಮಾಡಬೇಕೆಂದೂ ನಿರ್ಧಾರವಾಯಿತು

ಮುಸಲ್ಮಾನರ ಸಭೆ! ಹಾಜಿ ಸಯ್ಯದ್ ಹುಸ್ಸೇನ್ ಸಾಹೇಬರಿಗೆ ಧನ್ಯವಾದ

ಕಳೆದ ತಾ 20ರಲ್ಲಿ ಸ್ಥಳೀಯ ಮುಸ್ಲಿಂ ವೆಲ್ ಫೇರ್ ಲೀಗಿನವರು ಹಾಜಿ ಸಯ್ಯದ್ ಹುಸೇನ್ ಸಾಹೇಬರನ್ನು ಬರಮಾಡಿಕೊಂಡು, ಅವರನ್ನು ಮೆರವಣಿಗೆಯಿಂದ ನಗರದ ಬೀದಿಗಳಲ್ಲಿ ಕರೆದುಕೊಂಡು ಹೋದರು, ಬಳಿಕ ರಾತ್ರಿಯಲ್ಲಿ ಒಂದು ಸಭೆ ಜರಗಿಸಿ ಅದರಲ್ಲಿ ಅವರು, ಪ್ರತಿಸ್ಪರ್ಧಿಗಳಿಲ್ಲದೆ ಅಸೆಂಬ್ಲಿಗೆ ಚುನಾಯಿಸಲ್ಪಟ್ಟುದಕ್ಕಾಗಿ ಹಾಜಿ ಸಯ್ಯದ್ ಹುಸ್ಸೇನ್ ಸಾಹೇಬರಿಗೆ ತಮ್ಮ ಸಂತೋಷವನ್ನೂ ಧನ್ಯವಾದಗಳನ್ನೂ ಸೂಚಿಸಿ ಅರ್ಪಿಸಿದರು ಅತಿಥಿಗಳು ತಾವು ಮುಸಲ್ಮಾನ ಬಂಧುಗಳ ಹಿತಕ್ಕಾಗಿ ತಮ್ಮ ಸರ್ವಸ್ವವನ್ನೂ ಅರ್ಪಿಸುವುದಕ್ಕೆ ಸಿದ್ಧರಾಗಿರುವೆವೆಂದು ತಿಳಿಸಿದರು ಜಯ ಘೋಷದೊಡನೆ ಸಮಾರಂಭವು ಕೊನೆಗೊಂಡಿತು

ರಾತ್ರಿ ಶಾಲೆ

ಮುಸ್ಲಿಂ ವೆಲ್ ಫೇರ್ ಲೀಗಿನವರು ಒಂದು ರಾತ್ರಿ ಶಾಲೆಯನ್ನು ತೆರೆಯುವ ಏರ್ಪಾಡ ಮಾಡಿರುವರು

ವಾಂತಿ ಭೇದಿ

ಮಂಗಳೂರು ನಗರದ ಕೆಲವೆಡೆಗಳಲ್ಲಿ ವಾಂತಿಭೇದಿಯು ತಲೆಯೆತ್ತಿದೆಯೆಂದೂ ಈಗಾಗಲೆ ಕೆಲವು ಮರಣಗಳು ಸಂಭವಿಸಿರುವುವೆಂದೂ ತಿಳಿದುಬರುತ್ತದೆ ರೋಗವು ಹರಡದಂತೆ ನೋಡಲು ಅಧಿಕಾರಿಗಳೂ ರೋಗವು ಹತ್ತಿರ ಬಾರದಂತೆ ನೋಡುವುದಕ್ಕೆ ಪುರಜನರೂ ಬಿಗಿ ಗೊಟ್ಟು ಜಾಗರೂಕರಾಗಿರುವುದು ಉತ್ತಮ

ಹೊಸ ಪಂಚಾಯ್ತ ಆಫೀಸರು

ನಮ್ಮ ಜಿಲ್ಲೆಯ, ಪಂಚಾಯ್ತ ಆಫೀಸರರಾಗಿ ಮಲಬಾರ್ ಜಿಲ್ಲೆಯ ಪಂಚಾಯ್ತ ಆಫೀಸರರಾಗಿದ್ದ ಶ್ರೀ| ಯಂ ಸಿ ಬಾಲಕೃಷ್ಣನ್‌ರವರು ನೇಮಕ ಹೊಂದಿರುವರು.

ದ. ಕನ್ನಡ ಜಿಲ್ಲಾ ಬೋರ್ಡುಸಭೆ ತೀಕ್ಷ್ಣವಾದ ಪ್ರಶ್ನೋತ್ತರಗಳು ಸಭೆಯು ಎರಡನೇ ಸಾರಿ ಮುಂದರಿಸಲ್ಪಟ್ಟಿತು

ಹತ್ತು ದಿನಗಳ ಮುಂಚಿತವಾಗಿ ಸದಸ್ಯರಿಗೆ ನೋಟೀಸು ಬಾರದ ಕಾರಣದಿಂದ ಕಳೆದ ತಾ 15ರಲ್ಲಿ ಜರಗಬೇಕಾಗಿದ್ದ ಜ ಬೋರ್ಡು ಸಭೆಯು ಮುಂದುವರಿಸಲ್ಪಟ್ಟಿದ್ದಿತಷ್ಟೆ ಹೀಗೆ ಮುಂದುವರಿದ ಸಭೆಯು ತಾ 20ನೇ ಅಪರಾಹ್ನ 1 ಘಂಟೆಗೆ ಸರಿಯಾಗಿ ಕೂಡಿತು ಅಧ್ಯಕ್ಷರು ಬಾರದಿದ್ದ ಕಾರಣ ಉಪಾಧ್ಯಕ್ಷರು ಅಂದಿನ ಕಾರ್ಯಕ್ರಮಗಳನ್ನು ನಡಿಸಲು ಅಗ್ರಾಸನ ವಹಿಸಿದ್ದರು

ಸಭಾಕಾರ್ಯವು ಆರಂಭವಾಗುವುದಕ್ಕಿಂತ ಮೊದಲು ಯುರೋಪಿಯನ್ ಸದಸ್ಯರಾದ ಮಿ| ಜೆಫ್ರಿಯವರು ಸಭೆಗೆ ಬರಲಾಗಿ ಅಧ್ಯಕ್ಷರು ಖಾಸಗಿಯಿಂದ ಅವರನ್ನು ಕರೆದ, ಅವರ ಸ್ಥಾನವು ರದ್ದಾಗಿರುವುದಾಗಿಯೂ, 'ರೆಸ್ಟೋರ್' ಅಥವಾ ಪುನಃ ನೇಮಕವಾಗುವ ವರೆಗೆ ಅವರು ಸಭೆಯ ಕಾರ್ಯದಲ್ಲಿ ಭಾಗ ವಹಿಸಕೂಡದಾಗಿಯೂ ಸೂಚಿಸಿದರು ಮಿ| ಜೆಫ್ರಿಯವರು ಇದನ್ನು ಕೇಳಿ ಹೊರಟುಹೋದರು.

ಪ್ರಶ್ನೋತ್ತರಗಳು

ಬಹಳ ಸ್ವಾರಸ್ಯವಾದ ಪ್ರಶ್ನೋತ್ತರಗಳಾದುವು ಶ್ರೀ| ಎ ಬಿ ಶೆಟ್ಟಿಯವರು ಮೊದಲಾಗಿ ಹೀಗೆಂದರು ಮೀಟಿಂಗ್ ಮುಂದರಿಸಬೇಕೆಂದು ಠರಾವಾಗಿದ್ದಿಲ್ಲ ಆದರೆ ಪ್ರೊಸಿಡಿಂಗ್ಸ್ ಪುಸ್ತಕದಲ್ಲಿ ಠರಾವಾಗಿತ್ತೆಂದು ಬರೆಯಲ್ಪಟ್ಟದೆ ಮೀಟಿಂಗೇ ಆಗದೆ ಮುಂದರಿಸಿದಾಗ ಪ್ರೊಸೀಡಿಂಗ್ಸ್ ಹೇಗೆ ಬಂತೆಂದು ಗೊತ್ತಾಗುವುದಿಲ್ಲ. ಈ ದಿನದ ಸಭೆಯು ಸ್ಪೆಶಲ್ ಸಭೆಯಾಗಿ ಗಣಿಸಲ್ಪಡಬೇಕು ಮತ್ತು ಕಳೆದ ಸಾರಿ ಜನರು ಬಂದುದಕ್ಕೆ ಬೋರ್ಡಿನಿಂದ ಬತ್ತೆ ಸಲ್ಲಲು ಅನುಕೂಲವಿಲ್ಲ

ಅನಂತರದಲ್ಲಿ ಉಪಪ್ರಶ್ನೆಗಳನ್ನು (ಸಪ್ಲಿಮೆಂಟರಿ) ಕೇಳಿದಾಗ ಅಂತಹ ಪ್ರಶ್ನೆಗಳನ್ನೂ ಅವುಗಳಿಗೆ ಅಧ್ಯಕ್ಷರು ಕೊಡಬಹುದಾದ ಉತ್ತರಗಳನ್ನೂ ಸರಿಯಾಗಿ ರಿಕಾರ್ಡು ಮಾಡುವ ಹಾಗೆ ಏರ್ಪಾಡಾಗಬೇಕೆಂದೂ ಇದು ವರೆಗೆ ನಡೆದ ಏರ್ಪಾಡಿನಲ್ಲಿ ಸಮರ್ಪಕವಾಗಿ ಬರೆಯಲ್ಪಟ್ಟಿಲ್ಲವೆಂದೂ ಶ್ರೀ| ಎ ಬಿ ಶೆಟ್ಟಿಯವರು ಸೂಚಿಸಿದರು (ಇದೇ ಪ್ರಶ್ನೆಯನ್ನು ಹಿಂದಿನ ಅನೇಕ ಸಭೆಗಳಲ್ಲಿ ಸೂಚಿಸಿದ್ದರು)

ಸದಸ್ಯರ ಕೆಲವು ಪ್ರಶ್ನೆಗಳಿಗೆ ಅಧ್ಯಕ್ಷರು ಕೊಟ್ಟ ತೀರ್ಮಾನದ ವಿಷಯದಲ್ಲಿ ಹಲವರು ಅಸಮಾಧಾನಪಟ್ಟರು ಡಾ| ಶೆಟ್ಟಿಯವರು ರೋಡ್ ಫಂಡುಗಳನ್ನು ಅದಷ್ಟು ಬೇಗನೆ ವಿಲವಾರಿ ಮಾಡಬೇಕೆಂದು ಅಧ್ಯಕ್ಷರಿಗೆ ಬರೆದುದಕ್ಕಾಗಿ ಅಧ್ಯಕ್ಷರು ಡಾ| ಶೆಟ್ಟಿಯವರಿಗೆ ಅಸಮರ್ಪಕವಾದ ಉತ್ತರ ಕಳುಹಿದ್ದರಂತೆ, ಅದೇ ರೀತಿಯ ಪ್ರಶ್ನೆಯನ್ನು ಶ್ರೀ| ಎ ಬಿ ಶೆಟ್ಟಿಯವರು ಸೂಚಿಸಿದ್ದರು ಅಧ್ಯಕ್ಷರ ಗದ್ದುಗೆಯಲ್ಲಿ ಉಪಾಧ್ಯಕ್ಷರು ಅಧ್ಯಕ್ಷರು ಹಿಂದೆ ಕೊಟ್ಟ ಉತ್ತರದಂತೆಯೇ ತಮ್ಮ ನಿರ್ಧಾರವನ್ನು ಕೊಟ್ಟರು ಡಾ| ಶೆಟ್ಟಿಯವರು ಇದನ್ನು ಕೇಳಿ ಬೋರ್ಡಿನ ಸದಸ್ಯರಿಗೆ ಕೆಲ ಹಕ್ಕುಗಳಿವೆ ಆದರೆ, ಈ ರೀತಿಯ ನಿರ್ಧಾರಗಳು ಸದಸ್ಯರ ಹಕ್ಕುಗಳನ್ನು ಕಿತ್ತುಹಾಕುತ್ತವೆ ಈ ವಿಷಯದಲ್ಲಿ ತಾವು ತಮ್ಮ ಅಸಮಾಧಾನವನ್ನು ಸೂಚಿಸುವುದಾಗಿ ಹೇಳಿದರು ಮತ್ತು ಡಾ| ಶೆಟ್ಟಿಯವರು ಸೂಚನೆ ಕೊಟ್ಟಿದ್ದ ಅಡ್ಜರ್ನ್‌ಮೆಂಟ್ ಠರಾವಿಗೂ ಅಧ್ಯಕ್ಷರ ಉತ್ತರವು ಒಂದೇ ಇದನ್ನು ನೋಡಿ ಶ್ರೀ ಎ ಬಿ ಶೆಟ್ಟಿಯವರು ಸಭೆಯ ಕಾರ್ಯವನ್ನೇ ಮುಂದರಿಸಬೇಕೆಂದು ಠರಾವು ತಂದರು ಡಾ| ಶೆಟ್ಟಿಯವರದನ್ನು ಅನುಮೋದಿಸಿದರು ಮತ ತೆಗೆಯಲಾಗಿ ಅದು ಬಹುಮತದಿಂದ ಠರಾವು ವಿರೋಧವಾಗಿ ಅಂಗೀಕಾರವಾಯಿತು.

ಸ್ವಾತಂತ್ರ್ಯ ದಿನಾಚರಣೆ

ನಾಳೆಯ ದಿನ ಸ್ವಾತಂತ್ರ್ಯ ದಿನಾಚರಣೆಯು ಪ್ರಭಾತಫೇರಿ, ಧ್ವಜವಂದನೆ, ಮೆರವಣಿಗೆ, ಧ್ವಜ ಮಾರಾಟ, ಸಾರ್ವಜನಿಕ ಸಭೆ ಇತ್ಯಾದಿ ಕಾರ್ಯಕ್ರಮಗಳಿಂದ ನಡೆಯುವುದು

ಮುಸ್ಲಿಂ ಪ್ರತಿನಿಧಿಗಳು

" ಕಾಸರಗೋಡ್ ಪುತ್ತೂರು ಡಿವಿಜನ್ ಮುಸ್ಲಿಂ ಸ್ಥಾನಕ್ಕೆ ಖಾನ್ ಬಹಾದೂರ್ ಮಹಮ್ಮದ್ ರಮ್ಜಾನ್ ಸಾಹೇಬ್ ಬಹದ್ದೂರು (ಜಸ್ಟಿಸ್) ಇವರು ಪ್ರತಿಸ್ಪರ್ಧಿಗಳಿಲ್ಲದೆ ಮದ್ರಾಸ್ ಎಸೆಂಬ್ಲಿಗೆ ಆರಿಸಲ್ಪಟ್ಟಿರುವರು

ಜಿಲ್ಲಾ ಉಪಾಧ್ಯಾಯ ಉಪಾಧ್ಯಾಯಿನಿಯರ ಸಂಘದ ವಾರ್ಷಿಕ ಮಹಾಸಭೆಯ ಪ್ರೊಸಿಡಿಂಗ್ಸಿನ ಸಾರಾಂಶ.

ಸಂಘದ ಮಹಾಸಭೆಯು ತಾ ೧೫-೧-'೩೭ನೇ ಪೂರ್ವಾಹ್ನ 8 ಗಂಟೆಗೆ ಮಂಗಳೂರು ಗವರ್ನ್‌ಮೆಂಟ್ ಹಾಯರ್ ಎಲಿಮೆಂಟರಿ ಟ್ರೈನಿಂಗ್ ಶಾಲೆಯ ವಠಾರದಲ್ಲಿ ತಾ ೧೬-೧-೩೭ನೇ ಪೂರ್ವಾಹ್ನ 8 ಗಂಟೆಗೆ ಎಂಡಿರ ಹೋಸ್ಟೇಲಿನ ಕಟ್ಟಡದಲ್ಲೂ ಮಂಗಳೂರು ಮುನಿಸಿಪಲ್ ಚೆಯರ್‌ಮನರಾದ ಶ್ರೀಯುತ ಡಾಕ್ಟರ್ ಕೆ ವಿಠಲ್ ಶೆಟ್ರ ಅಧ್ಯಕ್ಷತೆಯಲ್ಲಿ ಜರಗಿತು 417 ಮಂದಿ ಉಪಾಧ್ಯಾಯ ಉಪಾಧ್ಯಾಯಿನಿಯರು ಹಾಜರಿದ್ದರು

ಸಂಘದ ಕಾರ್ಯದರ್ಶಿ ಎ ಬಾಬು ಶೆಟ್ರು ತಾವು ೧೯೧೬ನೇ ಇಸವಿಯಿಂದ ಈ ವರೆಗೆ ಉಪಾಧ್ಯಾಯ ವರ್ಗದ ಏಳ್ಗೆಗಾಗಿ ನಾಡಿದ ಕಾರ್ಯಕಲಾಪಗಳ ಸಂಕ್ಷಿಪ್ತ ವರದಿಯನ್ನು ಬಾಯಿದಾರೆ ವಿವರಿಸಿ ೧೯೩೬ನೇ ವರುಷದ ವರದಿಯನ್ನು ಓದಿದರು ಈ ಸಂಘವನ್ನು ಇನ್ನಷ್ಟು ಊರ್ಜಿತ ಪಡಿಸುವ-ಸುವ್ಯವಸ್ಥೆಗೆ ತರುವ ಸಂಬಂಧವಾದ ಸೂಚನೆಯನ್ನು

ಪುಟ ೧೦ಕ್ಕೆ ಹೋಗಿದೆ

ಪುಟ ೭ರಿಂದ

ರಾಗಿ ಹೋರಾಡುತ್ತಿರುವ ಜಸ್ಟೀಸ್ ಪಾರ್ಟಿಯ ಮೂಲತತ್ವವು ಬ್ರಾಹ್ಮಣ್ಯದ ವಿರೋಧವೆಂಬುದನ್ನು ಸ್ಪಷ್ಟೀಕರಿಸಿ, ಅಂತಹ ಪಕ್ಷಕ್ಕೂ ಕೆಲವರು ಬೆಂಬಲವೀಯುತ್ತಿರುವ ಶೋಚನೀಯ ವಿದ್ಯಮಾನವನ್ನು ವಿವರಿಸಿ ಬೋಧಪ್ರದ ಭಾಷಣವಿತ್ತರು ಶ್ರೀ. ಎ. ಬಿ. ಶೆಟ್ಟಿರು ಕುಂದಾಪುರ ಡಿವಿಜನಿನ ಚುನಾವಣೆಯ ಕಾರ್ಯಕಲಾಪಗಳನ್ನು ಸರಳವಾಗಿ ವರ್ಣಿಸಿ, ಮತದಾರರ ಕರ್ತವ್ಯವು ರಾಷ್ಟ್ರಸಭೆಗೆ ಬೆಂಬಲವೀಯುವುದೇ ಆಗಿದೆ ಎಂಬುವನ್ನು ಮನಗಾಣಿಸಿದರು. ಅಧ್ಯಕ್ಷರು ತನ್ನ ಭಾಷಣದಲ್ಲಿ ಭಾಷಣಕಾರರ ಅಭಿಪ್ರಾಯಗಳನ್ನು ಸಮರ್ಥಿಸಿದ ಮೇಲೆ ಕೊಂಗ್ರೆಸ್ ಕಮಿಟಿಯ ಕಾರ್ಯದರ್ಶಿಯ ಧನ್ಯವಾದಗಳಾಗಿ 'ವಂದೇ ಮಾತರಂ' ಹಾಡಲ್ಪಟ್ಟು ಸಭಾಂತ್ಯವಾಯಿತು.

THE BOMBAY LIFE ASSURANCE Co., LTD.

ESTD 1908

Church Gate Street, Fort - - BOMBAY.

SPECIAL FEATURES.

1. Rebate on yearly payment of policies.
2. Rebate for larger assurances
3. Accident Risk covered on small extra premiums
4. Attractive Bonuses.

It pays you to represent this Company.
Wanted Agents in unrepresented parts.

Apply to:—

KOCHIKAR BROTHERS,

Madras Branch Secretaries.

BRANCHES AT:

P B 337 Mount Road, Madras	Visveswarapuram Circle, Bangalore City	Soumyalayam Puthiyara, Calicut
Car Street, Mangalore	Udipi, S India	Charni Road, Bombay No 4

EVIDENCE OF SECURITY & STABILITY

FIGURES THAT SPEAK FOR THEMSELVES

TOTAL ASSETS Rs. 80,66,600

Summary of 1935 Accounts

Total Assets Over	Rs 80,00,000
Life Funds Over	Rs 68 00,000
Premium Income Over	Rs 22,54 000
Interest Income	Rs 3,10,000
Claims Paid ...	Rs. 5,75,000

Total Claims paid Over Rs. 38,50,000
Total Business in Force Over Rs 4,42,51,200

TOTAL BUSINESS IN FORCE Rs. 4,42,51,200

ಚಂದಾದಾರರಲ್ಲಿ

ಚಂದಾಹಣ ಬಾಕಿ ಇರುವ ನಮ್ಮ ಚಂದಾದಾರರು ಆದಷ್ಟು ಬೇಗನೇ ತಮ್ಮ ಹಣವನ್ನು ಮಣಿಯಾರ್ಡರ್ ಮೂಲಕ ದಯವಿಟ್ಟು ಕಳುಹಿಸಿಕೊಡಬೇಕಾಗಿ ಅಪೇಕ್ಷಿಸುತ್ತೇವೆ. ವಿ. ಪಿ. ಮಾಡುವದಾದರೆ ಐದಾಣೆ ಹೆಚ್ಚಿಗೆ ಬೀಳುವದು.

ನಮ್ಮೊಡನೆ ಪತ್ರವ್ಯವಹಾರ ನಡೆಸುವವರು ತಮ್ಮ ಚಂದಾ ನಂಬ್ರವನ್ನು ಸೂಚಿಸಿ ಬರೆಯಬೇಕಾಗಿ ವಿನಂತಿ.

ಮೆನೇಜರ್, 'ನವಯುಗ'

ಉಡುಪಿ, ತಾ. ೨೮-೧-'೩೭ ಗುರುವಾರ

ಮತದಾರರೊಡನೊಂದು ಮಾತು

(ಲೇಖಾಂಕ ೧)

ಚುನಾವಣೆಯ ಕಾಲವು ಸಮೀಪಿಸುತ್ತಿದೆ; ವಾತಾವರಣದಲ್ಲಿ ಉದ್ವೇಗವೇರಹತ್ತಿದೆ! ಓಟರರನ್ನು ಭ್ರಮೆಗೊಳಿಸಿ, ಮಂಕುಬೂದಿ ಬಳೆದು, ಭಯ–ದಾಕ್ಷಿಣ್ಯಕ್ಕೊಳಗುಮಾಡಿ, ಓಟುಗಳನ್ನಪಹರಿಸುವ ಹಂಚಿಕೆಗಳು ಇನ್ನು ಮುಂದೆ ವಿಶೇಷವಾಗಿ ನಡೆಯದಿರಲಾರವು. ಈ ಸಮಯದಲ್ಲಿ ಮತದಾರರು ಧೈರ್ಯ, ಸ್ಥೈರ್ಯವನ್ನು ಬಿಡಬಾರದು. ಸ್ವತಂತ್ರವಾಗಿ ಯೋಚಿಸುವ ಸಂದರ್ಭವನ್ನು ಕಳಕೊಳ್ಳಬಾರದು. ವಿಶಾಲ ಧ್ಯೇಯವಿಲ್ಲದೆ ನಿಮ್ಮ ಮುಂದ ಓಟಿಗಾಗಿ ತಾಂಡವನೃತ್ಯವಾಡುವವರಲ್ಲಾ ಸ್ವಕಾರ್ಯನಿರತರೆಂಬುದನ್ನು ಮರೆಯಬೇಡಿರಿ, ನಿಮ್ಮ ಹಿತಸಾಧಿಸುವ ರೀತಿಯನ್ನು ಅವರಿಂದ ಕಲಿಯಹೋದರೆ ಅವರದನ್ನು ಹೇಳಲಾರರು. ಅವರ ಮೆದುಳು ತಮ್ಮ ಪಂಥ ಗೆಲ್ಲುವ ಬಗೆ ಹೇಗೆ ಎಂಬ ಯೋಚನೆಯಿಂದಲೇ ತುಂಬಿಹೋಗಿದೆ; ಅವರ ನರನಾಡಿಗಳಲ್ಲಿಯೂ ಅದೇ ಬಡಿಯುತ್ತಿದೆ! ಇಂತಹ ಜ್ವರಪೀಡಿತರ ಆರೈಕೆಗೊಳಗಾಗುವುದೆಂದರೇನು? ನೀವೇಕೆ ಸ್ವತಂತ್ರ ವಿಚಾರಿಗಳಾಗಬಾರದು? ನಿಮ್ಮ ಮತಗಳನ್ನು ಪಡೆಯುವದಕ್ಕಾಗಿಯೇ ಹಿಂದೆಂದಿಗೂ ದೊರಕದಷ್ಟು ಹಿತಚಿಂತಕರು ಇಂದು ನಿಮಗೆ ಕಾಣಲು ಸಿಕ್ಕುತ್ತಿರುವಾಗ ಇವುಗಳ ಅರ್ಥವೇನೆಂಬುದನ್ನು ನೀವು ಯೋಚಿಸುವುದು ಬೇಡವೆ? ಓಟಿಗಾಗಿಯೇ ನಿಮ್ಮ ಕಣ್ಣ ಮುಂದೆ ವಿವಿಧ ನರ್ತನಗಳಾಗುತ್ತಿರುವಾಗಲಾದರೂ ನೀವು ನಿಮ್ಮ ಓಟಿನ ಮಹತ್ವವನ್ನು ತಿಳಿಯಬೇಡವೆ? ನಿಮ್ಮ ಓಟಿನ ಪರವಾಗಿ ಪರಕೀಯರು ಇಷ್ಟು ಕೆಲಸ ಮಾಡುತ್ತಾರಂತೆ–ನೀವು ಅದರ ಬೆಲೆಯ ಕುರಿತು ಯೋಚಿಸುವ ಕೆಲಸವನ್ನಾದರೂ ಮಾಡಬಾರದೇಕೆ? ಮತಕ್ಕಾಗಿ ನಿಮ್ಮೊಡನೆ ಬೇಡಿಕೆಯು ಹೆಚ್ಚುತ್ತಾ ಬಂದಂತೆ–ನೀವು ಆ ಗಡಿಬಿಡಿಯಿಂದ ಒಂದೊಂದೆ ಹೆಜ್ಜೆ ದೂರಸರಿದು ಆಳವಾಗಿ ಯೋಚಿಸಿರಿ. ನಿಮ್ಮ ಓಟು ಎಂಬುದೇನು? ಅದನ್ನು ಉಪಯೋಗಿಸುವ ರೀತಿ ಹೇಗೆ? ಅದನ್ನು ಪಡೆಯುವ ಯೋಗ್ಯತೆಯವರಾರು? ಇವೆಲ್ಲಾ ನೀವು ಯೋಚಿಸಬೇಕಾದ ಸಂಗತಿಗಳು.

ಜನಸಾಮಾನ್ಯರು ರಾಜ್ಯಭಾರದಲ್ಲಿ ಪಾಲುನಡೆಯುವಂತೆ ಮತದಾನದ ಅಧಿಕಾರವು ಅವರಿಗೆ ಕೊಡಲ್ಪಟ್ಟಿದೆ. ಅದನ್ನು ಉಪಯೋಗಿಸುವಾಗ ಮತದಾರರು ನೋಡಬೇಕಾದುದು ತಾವು ಅಪೇಕ್ಷಿಸುವ ರಾಜ್ಯಭಾರವೆಂತಹದೆಂಬುದನ್ನೆ. ಈ ಉಚಿತ ಮಾರ್ಗವು ಮಾತ್ರವಲ್ಲದೆ ಓಟಿನ ಹಕ್ಕನ್ನು ಅನಾವ್ರಯಮಾಡಲಾಗುವ ಇತರ ಹಾದಿಗಳೂ ಇರುವವು; ಅವೇ ಜಾತಿವಾತ್ಸಲ್ಯ, ವ್ಯಕ್ತಿದ್ವೇಷ, ಭಯ, ದಾಕ್ಷಿಣ್ಯಗಳು ತೋರಿಸುವ ಹಾದಿಗಳು. ಇಂತಹ ಯಾವುದಾದರೊಂದು ಅಡ್ಡ ಹಾದಿಯನ್ನು ಹಿಡಿಯುವದೆಂದರ ಓಟಿನ ಹಕ್ಕನ್ನು ನಿಜವಾಗಿಯೂ ದುರ್ವ್ಯಯಗೊಳಿಸುವದು! ಖಾಸಗಿ ಕಾರಣಗಳಿಗೆ, ಜಾತಿ ವಾತ್ಸಲ್ಯ ಯಾ ದ್ವೇಷಕ್ಕೆ ರಾಜಕೀಯ ಗುರಿಯವರೆಗೂ ಸಾಗುವ ಅಧಿಕಾರವಿಲ್ಲ; ಸಾಮರ್ಥ್ಯವೂ ಇಲ್ಲ. ಈ ಎಲ್ಲಾ ಸಣ್ಣ ಪುಟ್ಟ ಚಟುವಟಿಕೆಗಳು ಹುಟ್ಟಿದಲ್ಲಿಯೇ ಎದ್ದು ನಿಂತು, ಸಾಕಷ್ಟು ಉಪದ್ರವನ್ನು ಕೊಟ್ಟು ಅಲ್ಲಿಯೇ ಲಯಹೊಂದಬೇಕಲ್ಲದೆ ಅವುಗಳನ್ನು ರಾಜಕೀಯದ ವಿಶಾಲ ಕ್ಷೇತ್ರದಲ್ಲಿ ಸುತ್ತಾಡಿಸುವದು ಮಹದನ್ಯಾಯ ಮಾತ್ರವಲ್ಲ ಅವುಗಳಿಗಾಧಾರವಾಗಿರುವ ಕಾರಣಗಳು ಅಲ್ಲಿಯವರೆಗೆ ಬರುವಂಥವುಗಳಲ್ಲವೆಂಬುದಂತೂ ಸ್ವತಃ ಸಿದ್ಧ! ಓಟಿನ ಅಧಿಕಾರವೆಂಬುದು ಹಾಗಲ್ಲ. ಅದರ ಪರಿಣಾಮವು ಬಹು ದೂರದ ವರೆಗೆ ಹೋಗತಕ್ಕದ್ದಿದೆ. ಹಿಂದೀ ರಾಜಕೀಯವನ್ನು ಅದೇ ನಿರ್ಮಿಸಬೇಕಾಗಿದೆ. ದೇಶ ವ್ಯಾಪಕ ಪರಿಣಾಮವನ್ನು ಹುಟ್ಟಿಸಬಲ್ಲ ಇಂತಹ ಶಕ್ತಿಯೊಂದು, ಹೇಡಿತನ, ಅಸೂಯೆ, ಸಂಕುಚಿತ ಸ್ವಭಾವದ ಹೇತುಗಳಾದ ಜಾತಿಬೇಧದಂಥಾ ಅಲ್ಪ ಸಂಗತಿಗಳ ಬೆನ್ನು ಹಿಡಿಯುವದೆಂದರೆ ಅದಕ್ಕಿಂತ ಹೆಚ್ಚಿನ ಶೋಚನೀಯ ವಿದ್ಯಮಾನವಾವುದಿದೆ? ಮತದಾರರ ಹೆಗಲ ಮೇಲೆ ಪ್ರಬಲ ಜವಾಬ್ದಾರಿಯಿರುವದು. ಅವರ ಮೇಲೆ ಎಂತಹ ಒತ್ತಾಯವೇ ಪ್ರಯೋಗಿಸಲ್ಪಡಲಿ; ಎಂತಹ ಆಶ್ವಾಸನೆಯೇ ಕೊಡಲ್ಪಡಲಿ, ತಮ್ಮ ಮೇಲಿರುವ ಜವಾಬ್ದಾರಿಗಿಂತಲೂ ಇವು ಮಹತ್ವವಾದುವುಗಳಲ್ಲವೆಂಬುವದನ್ನು ಮತದಾರರು ಪ್ರಥಮತಃ ತಿಳಿದುಕೊಳ್ಳತಕ್ಕದ್ದು. ಬೇಡುವವರಿಗಿಂತ ನೀಡುವವರು ಮೇಲು, ಇದು ಪ್ರಕೃತಿಯ ಲಕ್ಷಣ! ಮತಕ್ಕಾಗಿ ದೊಡ್ಡ ದೊಡ್ಡ ಮಹನೀಯರು ನಿಮ್ಮಲ್ಲಿ ಅಂಗಲಾಚುವಾಗ ನೀವೀ ನೀತಿಯನ್ನು ಮರೆಯಬಾರದು. ದೇಶಕ್ಕಾಗಿಯೇ ನಿಮ್ಮಲ್ಲಿ ಓಟು ಇದೆ; ನಿಮ್ಮ ಓಟಿನಿಂದಲೇ ದೇಶದ ಅಭಿಪ್ರಾಯವು ತಿಳಿಯಬೇಕಾಗಿದೆ. ಓಟಿಗೆ ಈಯೊಂದು ಸಂಬಂಧವಲ್ಲದೆ ಬೇರಾವುದೂ ಇಲ್ಲವೆಂಬುದನ್ನು ಸ್ಪಷ್ಟವಾಗಿ ತಿಳಿದುಕೊಳ್ಳಿರಿ.

ಸರಿ. ಇನ್ನು ನಿಮಗೆ ನಿಮ್ಮ ಓಟನ್ನು ಪಡೆಯುವ ಅಂತಹ ಯೋಗ್ಯತೆ ಇರುವವರಾರು ಎಂಬುದನ್ನು ಕಲಿಯುವ ಸಂದರ್ಭವು ಬೇಕಾಗಬಹುದು. ಅದನ್ನು ಸರಿಯಾಗಿ ಪರೀಕ್ಷಿಸಿ ತಿಳಕೊಳ್ಳುವ ಒಂದೇ ಕೆಲಸವು ಈಗ ನಿಮಗಿದೆ. ಅಷ್ಟನ್ನು ಮಾತ್ರ ನೀವು ಬಹು ಜಾಗರೂಕತೆಯಿಂದ ಮಾಡಬೇಕು. ತಮ್ಮ ಪರವಾಗಿ ಪ್ರತಿನಿಧಿಗಳನ್ನು ನಿಲ್ಲಿಸಿರುವ ಪಕ್ಷಗಳ ಧ್ಯೇಯ, ಕಾರ್ಯಕ್ರಮ, ಹಿಂದೆಮಾಡಿರುವ ಕೆಲಸಗಳನ್ನೆಲ್ಲಾ ವಿಮರ್ಶಿಸಿ ತಿಳಕೊಳ್ಳಿರಿ. ನಿಮ್ಮ ಓಟಿಗಾಗಿ ಸಂಚು ಹಂಚಿಕೆಗಳು ನಡೆಯುತ್ತಿದ್ದರೆ ಅವುಗಳಷ್ಟು ನಿಮ್ಮನ್ನು ಅಪಮಾನಗೊಳಿಸುವ ವಿದ್ಯಮಾನವು ಬೇರೊಂದಿರಲಾರದು. ದೇಶದ ಸೊತ್ತಾಗಿರುವ ಓಟನ್ನೂ, ತಮ್ಮ ಯೋಗ್ಯತೆಯನ್ನು ರುಜುಪಡಿಸಿಯೇ ನಿಮ್ಮಿಂದ ಪಡೆಯಬೇಕಾಗಿರುವಾಗ ಅದಿಲ್ಲದಿದ್ದರೂ ನಿಮಗೆ ನಾನಾ ಆಶೆಗಳನ್ನು ತೋರಿಸಿ ಮನವೊಲಿಸ ಬಹುದೆಂಬ ಜಸ್ಟಿಸ್ ಪಾರ್ಟಿಯವರ ಭರವಸೆಯಲ್ಲಿದೆ, ನೀವೆಲ್ಲಾ ಧ್ಯೇಯ ಶೂನ್ಯರು, ಚಂಚಲಿಗಳೆಂಬ ಅರ್ಥ! ಮತದಾರರು ಸ್ವಾಭಿಮಾನದಿಂದ ಇದನ್ನಲ್ಲಗಳೆಯಲಿ! ತಮ್ಮ ಜವಾಬ್ದಾರಿಯನ್ನು ಯೋಗ್ಯ ರೀತಿಯಿಂದ ನಿರ್ವಹಿಸಲಿ!

ನಮಗೊಂದು ಸೂಚನೆ

ನಮ್ಮ ಕಳದ ತಾ. ೧೪ನೆಯ ಸಂಚಿಕೆಯಲ್ಲಿ ಡಾ। ಯು ರಾಮರಾಯರು ಮದ್ರಾಸಿನಲ್ಲಿತ್ತ ಭಾಷಣವೊಂದನ್ನು ಪ್ರಕಟಸಿದ್ದೆವು. ಡಾ। ರಾಯರು ತನ್ನ ಭಾಷಣದಲ್ಲಿ "ಸಣ್ಣ ಪುಟ್ಟ ಸಂಗತಿಗಳನ್ನು ಮರೆತು ಮತದಾರರೆಲ್ಲಾ ಕಾಂಗ್ರೆಸಿಗೆ ಬೆಂಬಲವೀಯಬೇಕು." ಎಂದು ಸ್ಪಷ್ಟವಾಗಿ ಉದ್ಗರಿಸಿದ್ದರು. ಅದನ್ನು ನಾವು ಸಂತೋಷಪೂರ್ವಕವಾಗಿ ಪ್ರಕಟಿಸಿ, ಅವರ ಬಂಧುಮಿತ್ರರ ಲಕ್ಷ್ಯವನ್ನಾಕಡೆಗೆಳೆದಿದ್ದೆವು ಅದಕ್ಕಾಗಿ ರಾಷ್ಟ್ರ ಬಂಧುವಿನ ಕುವಾಚಸ್ಪತಿಯು ನಮ್ಮನ್ನು ವ್ಯಂಗ್ಯವಾಗಿ ಟೀಕಿಸುತ್ತಾ "ರಾಮರಾಯ ಬಂಧುಗಳಿಗಾಗಿ ಒಂದು ಸಪ್ಲಿಮೆಂಟನ್ನು ಹೊರಡಿಸುವದಿಲ್ಲವೇಕೆ ನವಯುಗ?" ಎಂದು ಪ್ರಶ್ನಿಸುತ್ತಾನೆ. ಮದ್ರಾಸಿನ ಕಾಂಗ್ರೆಸು ಬೇರೆ, ದಕ್ಷಿಣ ಕನ್ನಡದ ಕಾಂಗ್ರೆಸೇ ಪ್ರತ್ಯೇಕವಾಗಿರುತ್ತಿದ್ದರೆ ನಾವು ಆ ಭಾಷಣಕ್ಕೆ ಅಷ್ಟೊಂದು ಪ್ರಾಮುಖ್ಯತೆಯನ್ನು ಕೊಡುತ್ತಿದ್ದಿಲ್ಲ. ಡಾ। ರಾಮರಾಯರು ಮದ್ರಾಸಿನಲ್ಲಿ ಕೊಂಗ್ರೆಸನ್ನು ಸಮರ್ಥಿಸುತ್ತಿದ್ದಾರೆ. ಇಲ್ಲಿ ಅವರ ಬಂಧುಮಿತ್ರರು ಅದೇ ಕೊಂಗ್ರೆಸನ್ನು ವಿರೋಧಿಸುತ್ತಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ನಾವೂ ಡಾಕ್ಟರ್ ರಾಯರ ಬೋಧನೆಗೂ ಅವರ ಅಪ್ತೇಷ್ಟರ ನಡತೆಗೂ ಸಂಬಂಧವನ್ನುಂಟುಮಾಡಲು ನೋಡಿದುದು ತಪ್ಪಾಯಿತೆ? ರಾಷ್ಟ್ರಬಂಧುವೂ ಈಗೀಗ ಚುನಾವಣೆಯಲ್ಲಿ ಕೊಂಗ್ರೆಸನ್ನು ಸಮರ್ಥಿಸಲು ತೊಡಗಿದೆ. ರಾಮರಾಯ ಬಂಧುಗಳಿಗಾಗಿ ಸಪ್ಲಿಮೆಂಟನ್ನಾದರೂ ಹೊರಡಿಸಿ ಅವರನ್ನು ತಿದ್ದುವ ಹೆಚ್ಚಿನ ಅಗತ್ಯವಿರುವದು ಡಾ. ಯು. ರಾಮರಾಯರ ಪತ್ರಿಕೆಯಾಗಿರುವ ರಾಷ್ಟ್ರಬಂಧುವಿಗಲ್ಲದೆ ನಮಗಲ್ಲ.

ಸ್ವಾತಂತ್ರ್ಯ ದಿನ

ಇದೇ ತಾ. ೨೬ನೇ ದಿನವು 'ಸ್ವಾತಂತ್ರ್ಯ ದಿನ'ವಾಗಿ ಹಿಂದುಸ್ಥಾನದಲ್ಲೆಲ್ಲಾ ಆಚರಿಸಲ್ಪಟ್ಟಿರುವದು. ಸ್ವಾತಂತ್ರ್ಯ ಪ್ರತಿಜ್ಞೆಯನ್ನೋದದಂತೆ ಎಲ್ಲಾ ಪ್ರಾಂತ್ಯಗಳಲ್ಲಿಯೂ ತಡೆಯಿತ್ತು. ಹಿಂದೆಂದೂ ಇಲ್ಲದ ನಿಷೇಧವು ಈ ವರ್ಷ ಸ್ವಾತಂತ್ರ್ಯ ಪ್ರತಿಜ್ಞೆಯ ಮೇಲೆ ಬಂದಿರುವದು. ಭಾರತದ ರಾಜಕೀಯ ವಾತಾವರಣದಲ್ಲಿ ಎದ್ದಿರುವ ನವಜಾಗ್ರತಿಯನ್ನು ಸರಕಾರವು ಅತ್ಯಂತ ಜಾಗರೂಕತೆಯಿಂದ ನಿರೀಕ್ಷಿಸುತ್ತಿರುವದೆಂಬುದಕ್ಕೆ ಇದೊಂದು ದೃಷ್ಟಾಂತ. ಪ್ರತಿಜ್ಞೆಯ ಓದುವಿಕೆಯು ದೇಶದ ನಿರ್ಧಾರ ಸೂಚನೆಯಷ್ಟೇ ಹೊರತು ಬೇರೇನೂ ಅಲ್ಲ. ಸರಕಾರವು ಅದನ್ನು ಆತಂಕಿಸಿ ಬಹಿರಂಗ ಘೋಷಣೆಯನ್ನು ನಿಲ್ಲಿಸಿದಷ್ಟಕ್ಕೆ ಆ ನಿರ್ಧಾರವು ಬದಲಾಗದು. ಸರಕಾರವೂ ಸ್ವಾತಂತ್ರ್ಯ ಪ್ರತಿಜ್ಞೆಗೆ ಮಹತ್ವವನ್ನು ಕೊಡಹತ್ತಿದೆ ಎಂಬುದು ಇದರಿಂದ ಸ್ಪಷ್ಟವಾಯಿತು.

ವಿದೇಶ

ರಷ್ಯದಲ್ಲಿ ಪಿತೂರಿ

ಸೋವಿಯಟ್ ಸರಕಾರದ ೧೭ ಮಂದಿ ಅಧಿಕಾರಿಗಳ ದಸ್ತಗಿರಿಯಾಗಿದೆ ಎಂ ಟ್ರಾಟ್ಸ್ಕಿಯವರ ಸಲಹೆಯಂತೆ ಸೋವಿಯೆಟ್ ಸರಕಾರವನ್ನು ಅಡಿಮೇಲು ಮಾಡಿ ಜರ್ಮನಿ, ಪೋಲಂಡ್, ಮತ್ತು ಜಪಾನಿಗೆ ಸಹಾಯವೀಯುವ ಒಳಸಂಚು ನಡಿಸಿದರೆಂಬುದೇ ಇವರ ಮೇಲಿನ ಆರೋಪ ಇವರ ವಿಚಾರಣೆಯಲ್ಲಿ ತಮ್ಮ ಮೇಲಣ ಆರೋಪವನ್ನು ಅಪಾದಿತರು ಒಪ್ಪಿರುವರು. ಎಲ್ಲರಿಗೂ ಮರಣದಂಡನೆಯಾಗುವ ಸಂಭವವಿದೆ. ಟ್ರಾಟ್ಸ್ಕಿಯವರು ಜರ್ಮನರ ಸಂಬಂಧವನ್ನಿಟ್ಟು ಕೊಂಡಿರುವರೆಂಬ ರಶ್ಯಾದ ಹೇಳಿಕೆಯನ್ನು ಜರ್ಮನಿಯೂ ಟ್ರಾಟ್ಸ್ಕಿಯವರೂ ಅಲ್ಲಗಳೆದಿರುವರು.

ಮೇಡ್ರಿಡಿನ ಮೇಲೆ ಧಾಳಿ

ತಾ. ೨೪ರಲ್ಲಿ ಈ ತನಕ ನಡೆಯದಿದ್ದ ಭಯಂಕರ ಧಾಳಿಯು ಮೇಡ್ರಿದಿನ ಮೇಲೆ ನಡೆಯಿತು ಬೊಂಬುಗಳ ಸುರಿಮಳೆಯಿಂದ ಅನೇಕ ಕಟ್ಟಡಗಳು ನೆಲಸಮವಾದವು ಪ್ರಜೆಗಳು ನಗರವನ್ನು ಬಿಡುತ್ತಿದ್ದಾರೆ ಕ್ರಾನಡಾ ಪ್ರಾಂತ್ಯದಲ್ಲಿ ಸಮುದ್ರ ಬದಿಯ ಸುಮಾರು ೨೧ ಮೈಲುದೂರದ ಸ್ಥಳವನ್ನು ದಂಗೆಗಾರರು ಆಕ್ರಮಿಸಿರುವರೆಂದೂ, ಅವರನ್ನಿದಿರಿಸಿದ ಸರಕಾರೀ ಸೈನ್ಯವು ಸೋತು ಹಿಂದಣಿಯಿತೆಂದೂ ತಿಳಿದುಬರುತ್ತದೆ.

ಸ್ಪೈಯಿನ್ ಸರಕಾರದ ಪ್ರಧಾನಾಧಿಕಾರಿಯಾದ ಅಜಾನಾರವರು ಸರಕಾರದ ವಿಜಯದ ಕುರಿತು ಭರವಸೆ ತೋರಿಸುತ್ತಾ ರಿಪಬ್ಲಿಕನ್ ಸರಕಾರವು ಸ್ಪೈಯಿನಿನ ಐಕ್ಯತೆಗೂ ರಾಷ್ಟ್ರದ ಸ್ವಾತಂತ್ರ್ಯಕ್ಕೂ ಹೋರಾಡುತ್ತಿರುವದೆಂದೂ ಬ್ರಾಡ್‌ಕಾಸ್ಟ ಭಾಷಣವಿತ್ತಿರುವರು.

ಎಣ್ಣೆಯ ಕಾರ್ಖಾನೆಗೆ ಬೆಂಕಿ

ಅಮೇರಿಕದ ಎಣ್ಣೆಯ ಕಾರ್ಖಾನೆಯಲ್ಲಿ ಬಹು ದೊಡ್ಡ ಬೆಂಕಿಯು ಅನಾಹುತ ಉಂಟಾಗಿದೆ. ಬೆಂಕಿಯು ಯಂತ್ರದ ಮುಂಭಾಗದಲ್ಲಿ ಮೂರುವರೆ ಮೈಲು ಉದ್ದಕ್ಕೂ ಒಂದೂವರೆ ಮೈಲು ಅಗಲಕ್ಕೂ ಹರಡಿ ಧಗಧಗಿಸಿತು. ಹಲವು ಕಟ್ಟಡಗಳು ಸುಟ್ಟು ಭಸ್ಮವಾಗಿವೆ ಒಟ್ಟು ೩ ಮಿಲಿಯ ಡಾಲರುಗಳ ನಷ್ಟವಾಗಬಹುದೆಂದು ಅಂದಾಜುಮಾಡಲಾಗಿದೆ

ಓಹಿಯೋ ನದಿಯಲ್ಲಿ ಪ್ರವಾಹವು ಉಕ್ಕೇರಿ ಆಸುಪಾಸಿನ ಪ್ರದೇಶಗಳನ್ನೆಲ್ಲಾ ಆಕ್ರಮಿಸಹತ್ತಿರುವದು. ನಗರದ ಮೇಯರರು ಪಟ್ಟಣವಾಸಿಗಳು ನಗರವನ್ನು ಬಿಟ್ಟುಹೋಗುವಂತೆ ಬಲವಂತ ಪಡಿಸತ್ತಿದ್ದಾರೆ. ರೈಲಿನ ಸಹಾಯವನ್ನು ಕೋರಲಾಗಿದೆ.

ಜಪಾನು ಮಂತ್ರಿ ಮಂಡಲದ ರಾಜಿನಾಮೆ.

ಜಾಪಾನಿನ ಮಂತ್ರಿಮಂಡಲವು, ರಾಜಸಭೆ(ಡಯೆಟ್)ಯ ವಿಷಯವಾಗಿ ಎದ್ದ ವಿವಾದದ ಸಂಧಾನಕ್ಕೆ ಯುದ್ಧಮಂತ್ರಿಗಳು ಅಸಮ್ಮತಿಸಿದ ದೆಸೆಯಿಂದ ರಾಜೀನಾಮೆಯಿತ್ತಿರುವದು. ಚಕ್ರವರ್ತಿಗಳು ಹೊಸ ಕೆಬಿನೆಟನ್ನು ರಚಿಸಲು ಜನರಲ್ ಉಗಾರೆಯವರನ್ನು ನೇಮಿಸಿರುವರು

ತಿದ್ದುಪಡಿ ಸೂಚನೆಗಳು.

ತಾ ೨೧ ೧-೩೭ರ ಸಂಚಿಕೆಯ ೧೪ನೇ ಪುಟದಲ್ಲಿರುವ ನೋಟೀಸಿನಲ್ಲಿ "O S. No. 98/1936" ಎಂಬುವುದನ್ನು "O. P. No. 98/1936" ಎಂದು ಓದುವುದು.

"ದಿ. ಕೋಮನ್ ವೆಲ್ತ್ ಇನ್ಸೂರೆನ್ಸ್ ಕಂಪೆನಿ, ಲಿಮಿಟೆಡ್, ಪೂನಾ" ಈ ಕಂಪೆನಿಯು ಒಂದೂವರೇ ಕೋಟಿ ರೂಪಾಯಿಗಳಿಗೂ ಮಿಕ್ಕಿ ವಹಿವಾಟು ಮಾಡಿರುವುದಲ್ಲದೆ ಒಂದು ಸಾವಿರಕ್ಕೆ ರೂಪಾಯಿ ೩೭॥ ಮತ್ತು ೪೫ರಂತೆ ಬೋನಸು ಸಹ ಕೊಟ್ಟಿರುವುದು. ಮಾತ್ರವಲ್ಲದೆ ಸದ್ರಿ ಕಂಪೆನಿಯ ದ. ಕ. ಜಿಲ್ಲೆಯ ಚೀಫ್ ಏಜಂಟರು ಮೆಸರ್ಸ್ ಗವಾಸ್‌ಕರ್ ಎಂಡ್ ಸನ್ಸ್ ಚಿಕ್ಕಪೇಟೆ ಬೆಂಗಳೂರು ಸಿಟಿ ಎಂದಾಗಬೇಕು.

ಸ್ವದೇಶ

ಬಹುಮಾನ

ಶ್ರೀ. ಜಿ. ಜಿ ಪದ್ಮನಾಭನೆಂಬ ಹಿಂದೀ ಒಕ್ಸ್‌ಫರ್ಡ್ ವಿದ್ಯಾರ್ಥಿಗೆ ಶೇಕ್ಸ್‌ಪಿಯರ್ ಕವಿಯ ಗ್ರಂಥಗಳ ವಿಷಯ ಶೋಧನೆಗೆ ದೊರಕತಕ್ಕ "ಚಾರ್ಲ್ಸ್ ಓಲ್ಡ್ ಹ್ಯಾಮ್" ಎಂಬ ವೇತನವು ದೊರೆತಿರುವದು. ಆ ಕುರಿತು ನಡೆದ ಪರೀಕ್ಷೆಯಲ್ಲಿ ಇವರು ಮೊದಲನೇ ವರ್ಗದಲ್ಲಿ ಉತ್ತೀರ್ಣರಾಗಿದ್ದರು. ಹಿಂದೀಯರಿಗೇ ಬಹುಮಾನವು ದೊರೆತುದು ಇದೇ ಮೊದಲು.

ಜಪ್ತಿ

ಡಿಲ್ಲಿಯ ಹಲವು ಸಮತಾವಾದಿಗಳ ಮನೆಯನ್ನು ಪೋಲಿಸರು ಜಪ್ತಿ ನಡಿಸಿ ಕೆಲವು ಪುಸ್ತಕಗಳನ್ನು ಕೊಂಡು ಹೋಗಿರುವರು.

ಹರತಾಳ

ಬರುವ ಎಪ್ರಿಲ್ ಒಂದನೇ ತಾರೀಕಿಗೆ ಹರತಾಳವನ್ನಾಚರಿಸಬೇಕೆಂದು ಬೊಂಬಾಯಿ ಪ್ರಾಂತಿಕ ಕೊಂಗ್ರೆಸ್ ಕಮಿಟಿಯವರು ವಿನಂತಿಸಿರುವರು

ಎಸೆಂಬ್ಲಿಗೆ ಕೊಂಗ್ರೆಸ್ ಪಕ್ಷದ ಸದಸ್ಯರ ಸಭೆ ಸೇರಿ ಬರುವ ಬಜೆಟ್ ಅಧಿವೇಶನದಲ್ಲಿ ತಮ್ಮ ಮಸೂದೆಗಳನ್ನು ಮುಂದಿಡುವ ಬಗ್ಗೆ ಮಾತ್ರ ಸಭೆಯಲ್ಲಿ ಹಾಜರಿರಬೇಕೆಂಬ ನಿರ್ಧಾರವಾಗಿರುವದು.

ಡಿಲ್ಲಿಯ ಗಾಡಿವಾಲರ ಮುಷ್ಕರವು ನಿಂತಿಲ್ಲ

ಬೊಂಬಾಯಿಯಲ್ಲಿ ಮಿ। ಬ್ರೆಲ್ವಿಯವರ ವಿರೋಧಾರ್ಥವಾಗಿ ಮಹಮ್ಮದೀಯರು ಸಭೆ ಸೇರಿ ಬೊಂಬ್ಬಾ ಮಂತ್ರಿಗಳಾದ ಸರ್. ಡೆಹ್‌ಲಾವಿಯವರು ಕೊಂಗ್ರೆಸನ್ನೂ ನೆಹರುಗಳನ್ನೂ ಟೀಕಿಸಿದಾಗ ಕೆಲವು ಮುಸ್ಲೀಂ ಯುವಕರದನ್ನು ಪ್ರತಿಭಟಿಸಿ ತುಸು ಗೊಂದಲವಾಗಿರುವದು.

ಕೊಂಗ್ರೆಸ್ ವರ್ಕಿಂಗ್ ಕಮಿಟಿಯ ಬರುವ ಅಧಿವೇಶನವು ಫೆಬ್ರವರಿ ಕೊನೆಯಲ್ಲಿ ವಾರ್ಧಾದಲ್ಲಿ ನೆರಯಲಿರುವದು 'ಅಖಿಲ ಭಾರತ ಕನ್‌ವೆನ್‌ಶನ್'ನ ಆಲೋಚನೆಯು ಅಲ್ಲಿ ನಡೆಯುವದು

ನೆಲ್ಲೂರು ಜಿಲ್ಲೆಯಲ್ಲಿ ಕೊಲೆರಾ ರೋಗವು ಸಾರ್ವತ್ರಿಕ ಹರಡಿರುವದು.

ಪಂಡಿತ ನೆಹರುಗಳು.

ಕಳೆದ ತಾ ೨೪ರಲ್ಲಿ ಕಾನಪುರದ ಪರೇಡ್ ಮೈದಾನಿನ ಪ್ರಚಂಡ ಸಾರ್ವಜನಿಕ ಸಭೆಯಲ್ಲಿ ಭಾಷಣದ ಸನ್ನಾಹ ಮಾಡುತ್ತಿದ್ದಾಗ ಯಾರೋ ಪಂಡಿತರ ಕಡೆಗೆ ಬೋದನ್ನೆಸೆದರು ಪಂಡಿತರು ತನ್ನ ಭಾಷಣದಲ್ಲಿ "ಮಹಾತ್ಮಾ ಗಾಂಧಿಯವರಾದರೂ ಕೊಂಗ್ರೆಸ್ ಶಿಸ್ತಿಗೊಳಗಾಗಲೇ ಬೇಕು ಕೊಂಗ್ರೆಸಿನ ಶಿಸ್ತು ಪಾಲನೆಯನ್ನು ಪ್ರತಿಯೊಬ್ಬರೂ ಸಾಧಿಸಬೇಕೆಂದು ವಿನಂತಿ ಮಾಡಿಕೊಂಡರು. ಶ್ರೀ ಶ್ರೀನಿವಾಸ ಶಾಸ್ತ್ರಿಗಳು ಸಿಂಹಳ ದ್ವೀಪ, ಮತ್ತು ಮಲಯಾದ ಪ್ರವಾಸವನ್ನು ಮುಗಿಸಿ ಮರಳಿ ಬಂದಿರುವರು.

ಮಹಾತ್ಮಾ ಗಾಂಧಿಯವರ ಸಂಚಾರ

ಮ. ಗಾಂಧಿಯವರು ತಿರುವಾಂಕೂರಿನಲ್ಲಿ ಸಂಚರಿಸಿ ಸಂಭ್ರಮದ ಸ್ವಾಗತ ಪಡೆಯುತ್ತಿರುವರು ಅಲ್ಲಿಯ ದಿವಾನರಾದ ಸರ್ ಸಿ ಪಿ. ರಾಮಸ್ವಾಮಿ ಅಯ್ಯರರೇ ಮೊದಲಾದವರು ಗಾಂಧಿಯವರೊಡನೆ ಸಂಭಾಷಿಸಿರುವರು ಹಲವು ದೇವಸ್ಥಾನಗಳನ್ನು ಸಂದರ್ಶಿಸಿ, ಹರಿಜನರಿಗೆ ಪ್ರವೇಶವನ್ನಿತ್ತುದಕ್ಕಾಗಿ ಮಹಾರಾಜರನ್ನು ಅಭಿನಂದಿಸಿರುವರು. ಅಲ್ಲಿಯ ಪ್ರವಾಸವನ್ನು ಮುಗಿಸಿ ಮದ್ರಾಸಿಗಾಗಿ ಹೊರಟುಹೋಗಿರುವರು.

ಫಲಿಮಾರು

ಜಿಲ್ಲಾ ಬೋರ್ಡು ಪ್ರಾಥಮಿಕ ಶಾಲಾ ಅಧ್ಯಾಪಕರ ಪರಿಷತ್ತು

ತಾ. 23-1-'37ನೇ ಶನಿವಾರ ಅಪರಾಹ್ನ ಗಂಟೆ 3-೩೦ಕ್ಕೆ ಫಲಮಾರು ಹಾಯರ್ ಎಲಿಮೆಂಟರಿ ಶಾಲಾ ವಠಾರದಲ್ಲಿ ಮ ರಾ. ರಾ. ದಿವಾನ್ ಬಹದ್ದೂರ್ ಮಹಾಬಲ ಹೆಗ್ಗಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಜಿಲ್ಲೆಯ ಎಲ್ಲೆಡೆಗಳಿಂದಲೂ ಹೆಚ್ಚು ಕಮ್ಮಿ ೫೦೦ ಮಂದಿ ಉಪಾಧ್ಯಾಯ ಉಪಾಧ್ಯಾಯಿನಿಯರು ಪರಿಷತ್ತಿನ ಕಾರ್ಯಕಲಾಪಗಳಲ್ಲಿ ಭಾಗವಹಿಸಿದ್ದರು ಶ್ರೀಗಳಾದ ಡಾಕ್ಟರ್ ವಿಟ್ಠಲ ಶೆಟ್ಟಿ ಯಮ್. ಆರ್ ಪೂಂಜ, ಯಮ್. ಯನ್. ಚೌಟ, ಕೆ ಜಿ. ಬಲ್ಲಾಳ, ಡಾಕ್ಟರ್ ಪಿ. ಜಿ. ಆಚಾರ್, ಕಲ್ಮಾಡಿ ಲಕ್ಷ್ಮೀನಾರಾಯಣ ರಾವ್ ಮೊದಲಾದ ಮಹನೀಯರು ಹಾಜರಿದ್ದರು

ಫಲಿಮಾರು ಮಠದ ಶ್ರೀ. ರಘುಮಾನ್ಯ ತೀರ್ಥ ಶ್ರೀಪಾದಂಗಳವರು ಶಾಲಾ ಮಾಸ್ತರುಗಳ ಜವಾಬ್ದಾರಿ, ಅವುಗಳ ಸಂಕಷ್ಟದ ಕುರಿತು ಪ್ರಸ್ತಾಪಿಸಿ ಶ್ರೀ ರಾಮನ ಪರಮಾನುಗ್ರಹವಾಗಲೆಂದು ಪ್ರಾರ್ಥಿಸಿ ಪರಿಷತ್ತನ್ನು ತೆರೆದರು. ಸ್ವಾಗತ ಕಮಿಟಿಯ ಅಧ್ಯಕ್ಷರಾದ ಶ್ರೀ ಎ ಎನ್ ಹೆಬ್ಬಾರರು, ಪರಿಷತ್ತನ್ನು ಕರೆದುದರ ಉದ್ದೇಶ, ನವಸುಧಾರಣಾಯುಗದಲ್ಲಿ ಉಪಾಧ್ಯಾಯರ ಸ್ಥಾನಮಾನಗಳ ಬದಲಾವಣೆಯೇ ಮೊದಲಾದ ವಿಷಯಗಳ ಕುರಿತು ಬರೆದ ರಿಪೋರ್ಟನ್ನು ಓದಿದರು ಸಭಾಧ್ಯಕ್ಷರು ಪ್ರಾಥಮಿಕ ಶಾಲೆಗಳ ಕುರಿತು ಇತ್ತೀಚೆಗೆ ಹೊರಟ ಮಾಸ್ಕ ಮದ್ರಾಸು ಸರಕಾರದ ಪ್ರಕಟಣೆಯನ್ನು ಓದಿ ಅಲ್ಪ ಸ್ವಲ್ಪ ವಿವರಿಸಿ ಸಂಬಳ ಕಡಿತದಿಂದುಂಟಾದ ಉಪಾಧ್ಯಾಯರ ವ್ಯಸನದಲ್ಲಿ ಸಹಾನುಭೂತಿಯನ್ನು ತೋರಿಸಿ ತಾನು ಬೋರ್ಡಿನ ಇತರ ಸದಸ್ಯರ ಬೆಂಬಲದಿಂದ ಕೈಲಾದಷ್ಟು ಸಹಾಯಮಾಡುವೆನೆಂದು ಭರವಸೆಯಿತ್ತು ಚುಟುಕಿನಿಂದ ತನ್ನ ಕಾರ್ಯವನ್ನು ಪೂರೈಸಿದರು ಇದಾಗಿ ಹನ್ನೆರಡು ನಿರ್ಣಯಗಳು ಒಮ್ಮತದಿಂದ ಪಾಸಾದುವು ಸಂಬಳದ ಕಡಿತವನ್ನು ತೆಗೆದು ಹಾಕುವಿಕೆ, ತಾಲೂಕು ಸಂಘಗಳ ಸ್ಥಾಪನೆ, ವರ್ಗಾವರ್ಗಿಯ ಕಾಲದಲ್ಲಿ ಭತ್ತೆ ಕೊಡುವಿಕೆ, ಅರುವತ್ತು ವರುಷಗಳ ತನಕ ಸರ್ಜನ್ ಸರ್ಟಿಫಿಕೇಟಗೊಳಪಟ್ಟು ಉಪಾಧ್ಯಾಯವೃತ್ತಿಯಲ್ಲಿಯೇ ಇರುವರೆ ವಿಶೇಷ ಹರಮಾನಗಿ ದಯಪಾಲಿಸುವಿಕೆ, ಮಾಧ್ಯಮಿಕ ಶಾಲೆಗಳಲ್ಲಿ ಬೀಳಬಹುದಾದ ಖಾಲಿಸ್ಥಾನಗಳಿಗೆ ಪ್ರಾಥಮಿಕ ಶಾಲೆಯ ಜಾಸ್ತಿ ಸರ್ವಿಸಿನವರನ್ನು ನೇಮಿಸುವಿಕೆ, ಉಪಧ್ಯನ ಸಂಘಸ್ಥಾಪನೆಯೇ ಪ್ರಾಮುಖ್ಯವಾದ ನಿರ್ಣಯಗಳ ಸಾರಾಂಶ

ಗ್ರೂಪ್ ಫೋಟೊ ತೆಗೆಯಲಾಗಿ ಸಂಧ್ಯಾಕಾಲದಲ್ಲಿ ಧನ್ಯವಾದಗಳೊಂದಿಗೆ ಪರಿಷತ್ತು ಕೊನೆಗೊಂಡಿತು ರಾತ್ರಿ 'ಗೃಹಲಕ್ಷ್ಮಿ' ನಾಟಕ ಪ್ರದರ್ಶನವಿತ್ತು

ಪರಿಷತ್ತನ್ನು ತೆರೆದ ಫಲಿಮಾರು ಮಠದ ಶ್ರೀ. ರಘುಮಾನ್ಯ ತೀರ್ಥ ಶ್ರೀಪಾದಂಗಳವರು ಅತಿಥಿಗಳಾಗಿ ಬಂದ ಊರ ಪರಊರ ಉಪಾಧ್ಯಾಯ ಉಪಾಧ್ಯಾಯಿನಿಯರಿಗೆ ಮಧ್ಯಾಹ್ನದ ಹಾಗೂ ರಾತ್ರಿವೇಳೆಯ ಊಟ ಉಪಚಾರಗಳ ಸುವ್ಯವಸ್ಥೆಯನ್ನು ತಮ್ಮ ಸ್ವಂತ ಖರ್ಚಿನಿಂದಲೇ ನಡಿಸಿ ಜಿಲ್ಲಾ ಅಧ್ಯಾಪಕರುಗಳ ಪ್ರೀತಿಗೆ ಪಾತ್ರರಾದುದು ಸಂತೋಷಕರ. ತದ್ರೀತಿ ದುರ್ಗಾ ಪರಮೇಶ್ವರಿ ಮೋಟರ್ ಸರ್ವಿಸಿನ ಮ್ಹಾಲಕರು ಸ್ಪೆಶಲು ಬಸ್ಸು ಸರ್ವಿಸುಗಳನ್ನು ಫಲಿಮಾರಿಗಿಟ್ಟುದು ಅಭಿನಂದನೀಯವು ಜಿಲ್ಲಾ ಬೋರ್ಡು ಪ್ರೆಸಿಡೆಂಟರು ಈ ಪರಿಷತ್ತಿನಲ್ಲಾದ ಠರಾವುಗಳಿಗೆ ತಕ್ಕ ಸಿಗಾಕೊಟ್ಟು ಪರಿಷತ್ತಿನ ಸಾರ್ಥಕತೆಯನ್ನು ವ್ಯಕ್ತಪಡಿಸುವರೆಂದು ನಿರೀಕ್ಷೆ.

ಬಂಟರ ಯಾನೆ ನಾಡವರ ಸಂಘ,
ನಾಯರ್ ಬಿಲ್ಡಿಂಗ್ ಲೆಮಿಂಗ್ಟನ್ ರೋಡ್
ಮುಂಬಾಯಿ.

ನಮಗೆ ಬೇಕಾಗಿದೆ

ನಮ್ಮ ಸಂಘದ ಮೆಂಬರರ ಪ್ರತಿ ತಿಂಗಳ ವಂತಿಗೆ ವಸೂಲುಮಾಡುವ ಬಗ್ಗೆ ಒಬ್ಬ ಸ್ವಜಾತಿ ಗೃಹಸ್ಥರು ಬೇಕಾಗಿದೆ. ಅಂಥವರು ಮುಂಬಾಯಿಯಲ್ಲಿರುವ ಉಪಗ್ರಾಹ ಮಾಹಲಿಕರ ಮತ್ತು ಆಫೀಸುಗಳಲ್ಲಿರುವ ಮೆಂಬರರ ಮಾಹಿತಿ ಇರುವವರೂ ಮತ್ತು ಮುಂಬಾಯಿಯಲ್ಲಿ ಎಲ್ಲಾ ಕಡೆಗಳಲ್ಲಿ ತಿರುಗಾಡಿ ಅನುಭವವುಳ್ಳ ಒಬ್ಬ ಬಿಲ್ ಕಲೆಕ್ಟರರು ಬೇಕಾಗಿದೆ. ಇದಕ್ಕೆ ಉಮೇದ್ವಾರರಾಗಿ ಬರುವವರು ಹೆಚ್ಚಿನ ಮಾಹಿತಿಯ ಬಗ್ಗೆ ಸಂಘದ ಸೆಕ್ರಿಟರರಿಗೆ ಬರಕೊಳ್ಳತಕ್ಕದ್ದು. ಇತಿ

ಮೂಲ್ಕಿ ದೊಂಬ ಶೆಟ್ಟಿ,
ಗೌರವ ಕಾರ್ಯದರ್ಶಿ.

THE

GUARDIAN OF INDIA

INSURANCE COMPANY, Ltd.,

Head Office: **MADRAS.** • Branch: **MANGALORE.**

Capital— Indian
Management—Entirely Indian & Efficient.

LOW PREMIUMS.

CONDITIONS LIBERAL & EQUITABLE.

Schemes— Most novel, suited to all sorts and conditions and attractive.

ASSURED SECURTY

Life is uncertain, Savings are uncertain, Insurance is the only remedy for this uncertainty.

Let the Guardian Guard your future.

Insure your life with this popular and Progressive and Economical Indian Life Office—Do not delay.

Applications are invited from respectable gentlemen and ladies to represent the Company in S Kanara, N. Kanara and Coorg on commission or salary or both.

Notice: All the policy holders & agents are informed that all future dealings must be made with The Branch Secretary, The Guardian of India Insurance Co., Ltd , Mangalore Branch.

ತೀರಾ ದೇಶೀಯ ಭಂಡವಾಳ=ತೀರಾ ದೇಶೀಯ ಆಡಳಿತೆ
ತೀರಾ ಭದ್ರವಾದ ಕಾರ್ಯಕ್ರಮ.
ತೀರಾ ಕಡಿಮೆ ವಿಮೆಯ ದರಗಳು — ಉದಾರವಾದ ಶರ್ತಗಳು
ನ್ಯಾಯನೀತಿ ಸಮ್ಮತವಾದ ವ್ಯವಹಾರ.
ತೀರಾ ಹೊಸ ಹೊಸ ನಮೂನೆಯ ಏರ್ಪಾಡುಗಳು,
ಎಲ್ಲಾ ಬಗೆಯ ವಿವಿಧ ಸ್ಥಿತಿಯ ಜನರಿಗೆ ಸರ್ವಾನುಕೂಲ.
ಅತ್ಯಾಕರ್ಷಕವಾದ ಶರ್ತಗಳು—ಖಂಡಿತವಾದ ಭದ್ರತೆ.
ಜೀವನ ಅನಿಶ್ಚಿತ; ಸಂಪಾದನೆ ಅನಿಶ್ಚಿತ.
ಇವುಗಳ ಬಾಧಕಕ್ಕೆ ಜೀವವಿಮೆಯೇ ಉತ್ತಮ ಪರಿಹಾರ.
ಒಮ್ಮೆ ನಮ್ಮಲ್ಲಿ ವಿಮೆ ಕೊಂಡವರು
ನಿರಾಶರಾಗಲಾರರು.

ಸೂಚನೆ:—ನಮ್ಮ ಎಲ್ಲಾ ಪಾಲಿಸಿಹೋಲ್ಡರರೂ, ಏಜಂಟರೂ ಇನ್ನು ಮುಂದೆ ತಮ್ಮ ವ್ಯವಹಾರವನ್ನು ದಿ ಬ್ರಾಂಚ್ ಸೆಕ್ರೆಟರಿ, ದಿ ಗಾರ್ಡಿಯನ್ ಒಫ್ ಇಂಡಿಯಾ ಇನ್ಶೂರೆನ್ಸ್ ಕೋ., ಲಿಮಿಟೆಡ್, ಮಂಗಳೂರು ಶಾಖೆ ಇವರೊಡನೆ ಬೆಳೆಸಬೇಕಾಗಿ ವಿನಂತಿ.

ವಿಶೇಷ ಮಾಹಿತಿಗಳಿಗೆ ಇವರಿಗೆ ಬರೆಯಿರಿ.

E. A. PAIS, B. Sc., ***Branch Secretary,*** **The Guardian of India Insurance Co., Limited,**
MANGALORE BRANCH.

ದಿ ಗಾರ್ಡಿಯನ್ ಒಫ್ ಇಂಡಿಯಾ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್,
ಮುಖ್ಯ ಆಫೀಸು—ಪೋಸ್ಟ್ ಬೊಕ್ಸ್ ೮೯—ಮದ್ರಾಸು.

ದಕ್ಷಿಣ ಕನ್ನಡ

ಪುಟ ೯ರಿಂದ

ಸಭೆಯ ಮುಂದಿಟ್ಟರು. ರಾ| ಎ. ಎನ್ ಹೆಬ್ಬಾರರು ಸಂಘವು ಪ್ರಾರಂಭವಾಗುವ ಕಾಲದಲ್ಲಿ ಒದಗಿದ ತೊಡಕನ್ನೂ ಈಗಿನ ಅನುಕೂಲತೆಯನ್ನೂ ವಿವರಿಸಿ ಸಂಘವನ್ನು ಬಲಪಡಿಸುವ ಆವಶ್ಯಕತೆಯನ್ನು ಖಚಿತಪಡಿಸಿ ಸಂಘಕ್ಕೆ ನಡಿಸಲು ಈ ವರ್ಷಾವಧಿ ಹಂಗಿಯನ್ನು ಸಂಘದ ನಿಯಮಕ್ಕನುಸರಿಸಿ ಎಲ್ಲಾ ಸೆಂಟರು ಸಂಘಗಳು ತಾಲೂಕು ಸಂಘಗಳು ಜೆತ್ತು ಸಂಘದ ಮೇಲ್ಮೈಯನ್ನು ಬೆಳೆಸಬೇಕು ಎ ವು ಅನು ಮೋದನೆಯನ್ನು ಕೊಟ್ಟಬಳಿಕ ಠರಾವು ಸರ್ವಸಮ್ಮತದಿಂದ ಪಾಸಾಯಿತು.

ರಾ| ಕಟ್ಟಪಡಿ ಶ್ರೀನಿವಾಸ ಎಣ್ಣೆಯವರು ಶಂಡ ಪ್ರಾಥಮಿಕ ಶಿಕ್ಷಣದ ವೃದ್ಧಿಯನ್ನು ಸಾಧಿಸುವದಕ್ಕಾಗಿ ಸರಕಾರದ ಧೋರಣೆಯು ಬದಲಾಗಬೇಕೆಂಬ ಸೂಚನೆಯನ್ನು ಎನ್ ಸಂಜೀವ ಸೆಟ್ಟಿ ಅನುಮೋದಿಸಿದ ಬಳಿಕ ಸರ್ವಸಮ್ಮತದಿಂದ ಪಾಸಾಯಿತು. ಬಿ| ಬೋ| ಉಪಾಧ್ಯಾಯರ ಸಂಬಳದ ಕಡಿತವನ್ನು ಸಂಪೂರ್ಣ ತೆಗೆದು ಹಾಕುವಂತೆಯೂ ವರ್ಗಾವರ್ಗಿಯ ಸಂಧರ್ಭದಲ್ಲಿ ಪ್ರಯಾಣದ ಭತ್ತೆಯನ್ನು ಸರಿಯಾಗಿ ಕೊಡಿಸುವಂತೆಯೂ ಮಾನ್ಯ ಬೋರ್ಡನ್ನು ಕೇಳಿಕೊಳ್ಳಬೇಕಾಗಿ ಬಂದ ಸೂಚನೆಗಳು ಸರ್ವಾನುಮತದಿಂದ ಪಾಸಾದುವು.

ಈ ಮಹಾ ಸಭೆಯು ಪ್ರಾಮುಖ್ಯವಾದ ೨೦ ಠರಾವುಗಳು ಪಾಸಾದವು. ಅವುಗಳ ಕೂಲಂಕಷವನ್ನು ಬಾಲಚಂದ್ರದಲ್ಲಿ ಉಪಾಧ್ಯಾಯರು ಓದಿಕೊಳ್ಳುವುದು. ಅಧ್ಯಕ್ಷರು ಕಡೆಯ ತನ್ನ ಭಾಷಣದಲ್ಲಿ ದೇಶದ ಏಳ್ಗೆಯನ್ನೇ ಬಯಸುವ ಮುಂದಾಳುಗಳೇ ಮುಂದಿನ ಚುನಾವಣೆಯಲ್ಲಿ ಒಬ್ಬ ಪ್ರಧಾರಾಗುವರೆಂದೂ ಆಗ್ಗೆ ದೇಶದ ವ ವಿದ್ಯಾಭ್ಯಾಸದ ಕಲ್ಯಾಣವು ಉಂಟಾಗುವುದೆಂದು ಉಪಾಧ್ಯಾಯರೆಲ್ಲರು ಸಂಘವನ್ನು ಬಲಪಡಿಸಿಕೊಂಡು ಕರ್ತವ್ಯ ದೃಷ್ಟಿಯಿಂದ ಉತ್ತಮ ರೀತಿಯಲ್ಲಿ ಕಲಸಮಾಡುತ್ತಿರಬೇಕೆಂದು ಹೇಳಿ ತನ್ನ ಭಾಷಣವನ್ನು ಕೊನೆಗಾಣಿಸಿದರು.

ಕಾರ್ಯದರ್ಶಿ.

ಕುಂದಾಪುರ ಡಿವಿಜನಿನ ಮತದಾರರಲ್ಲಿ ಹರಿಜನ ಲೇಬರ್‌ಲೀಗಿನ 60 ಮಂದಿ ಮೆಂಬರರ ವಿನಂತಿ

ಪ್ರಿಯ ದೇಶಾಭಿಮಾನಿಗಳೇ,

ನಾವು ತಮ್ಮೆಲ್ಲರ ಮುಂದೆ ಅರಿಕೆಮಾಡಿಕೊಳ್ಳುವುದೇನೆಂದರೆ ಇದೇ ಬರುವ ಹೊಸ ಮದ್ರಾಸ್ ಎಸೆಂಬ್ಲಿಗೆ ನಮ್ಮ ದಕ್ಷಿಣಕನ್ನಡ ಜಿಲ್ಲೆಯ ಹರಿಜನರ ಪರವಾಗಿ ಪ್ರತ್ಯೇಕವಾಗಿ ಇದಲ್ಪಟ್ಟ ಸ್ಥಾನಕ್ಕೆ ನಮ್ಮ ಪರವಾಗಿ ಕೊಂಗ್ರೆಸ್ ಕಡೆಯಿಂದ ಆರಿಸಿದ ನಮ್ಮ ಡಿ ಬೋ ಮೆಂಬರರಾದ ಕೆ ಈಶರನವರು ಆಗಿರುತ್ತಾರೆ. ಇವರು ಸುಮಾರು ೨ ವರ್ಷದಿಂದ ಮೆಂಬರರಾಗಿಯೂ ಮತ್ತು ಇದರ ಮುಂಚೆ ಜಿಲ್ಲಾ ಪ್ರಚಾರಕ ಕಮಿಟಿಯಲ್ಲಿ ಗೌರವ ಪ್ರಚಾರಕನಾಗಿಯೂ ಹರಿಜನರ ಪರವಾಗಿ ತುಂಬಾ ಕೆಲಸಮಾಡಿದವರೆಂದು ನಾವು ದೃಢವಾಗಿ ಹೇಳುವೆವು. ಇವರು ತರುಣರ ಹಿತಚಿಂತಕರಾಗಿ, ನಮ್ಮ ಏಳಿಗೆಗಾಗಿ ಒಂದು ಹರಿಜನ ಲೇಬರ್ ಲೀಗನ್ನು ಮಾಡಿರುತ್ತಾರೆ ಮತ್ತು ಹರಿಜನರ ಪರವಾಗಿ ಪ್ರತಿ ಒಂದು ಸಾರ್ವಜನಿಕ ಸಭೆಯಲ್ಲಿ ಮೆಂಬರರಾಗಿರುತ್ತಾರೆ. ನಮ್ಮ ದಕ್ಷಿಣಕನ್ನಡ ಜಿಲ್ಲೆಯಲ್ಲಿ, ಸಾರ್ವಜನಿಕ ಕೆಲಸದಲ್ಲಿ ಮುಂದೆ ಬಂದವರು ಈ ತನಕ ಇವರಲ್ಲದೆ ಬೇರೆ ಯಾರೂ ಇಲ್ಲವೆಂದು ನಾವೇ ಖಂಡಿತವಾಗಿ ಹೇಳುವೆವು. ಇವರಿಗೆ ರುತು ಪರಿಚಯ ಎಲ್ಲರಿಗೂ ತಿಳಿದ ವಿಷಯವಾಗಿರುತ್ತದೆ. ಕೊಂಗ್ರೆಸ್ ಪಕ್ಷವನ್ನು ಸೇರಿದವರಾಗಿರುತ್ತಾರೆ. ಇವರ ಮೇಲೆ ಎಷ್ಟೋ ಅರ್ಜಿಗಳು ಕೊಂಗ್ರೆಸ್ ಪಕ್ಷದವನೆಂದು ಸರಕಾರಕ್ಕೆ ಕೆಲವು ಹರಿಜನರ ಮುಖಂಡರು ಬರೆದಿರುತ್ತಾರೆ. ಇವರ ಮೇಲೆ ಅನೇಕ ರೀತಿಯಿಂದ ಆರೋಪಣೆಯನ್ನು ಬರೆದು ಸರಕಾರದ ಮುಂದೆ ಇಟ್ಟಿರುತ್ತಾರೆ. ಆದರೂ ಯಾವುದಕ್ಕೂ ಇವರು ಹೆದರಲಿಲ್ಲ. ಇದು ಎಲ್ಲರಿಗೂ ಗೊತ್ತಿದ್ದ ಸಂಗತಿಯಾಗಿರುತ್ತದೆ. ಆದುದರಿಂದ ಕುಂದಾಪುರ ಡಿವಿಜನಿನ ಮತದಾರರು ಅತಿ ಪ್ರೀತಿಯಿಂದ ಪ್ರತಿ ಒಬ್ಬ ಮತದಾರರು ಎರಡು ಓಟನ್ನು ಕೊಂಗ್ರೆಸ್ ಕಡೆಗೆಯೇ ಧಾರೆಯೆರೆಯಬೇಕಾಗಿ ನಮ್ಮ ಲೀಗಿನ ಮೆಂಬರರ ವಿನಂತಿಯಾಗಿರುತ್ತದೆ. ಹೀಗೆ ಮಾಡಿದರೆ ಮಾತ್ರ ಪ್ರತಿ ಒಬ್ಬರು ಹರಿಜನರ ಸೇವೆಮಾಡಿದಂತಾಗುವುದು.

ಹಳ್ಳಿಗಳಲ್ಲಿ ಕಾಂಗ್ರೆಸ್ ಸ್ವಯಂಸೇವಕರ ಮೆರವಣಿಗೆ ಕಂಕನಾಡಿಯಲ್ಲಿ ಸಭೆ

ಇದೇ ತಿಂಗಳ ತಾರೀಕು ೧೭ನೆಯ ಭಾನುವಾರ ಸಾಯಂಕಾಲ ೩ ಘಂಟೆಗೆ ಕಂಕನಾಡಿಯಿಂದ ಶ್ರೀ ಬಿ ಪಿ ಗಣಪತಿ, ಶ್ರೀ ಆನಂದ ಮೊದಲಾದವರ ನೇತೃತ್ವದಲ್ಲಿ ರಾಷ್ಟ್ರೀಯ ಧ್ವಜವನ್ನು ಹಿಡಿದು ಒಂದು ಮೆರವಣಿಗೆಯು ಹೊರಟು ಸುತ್ತಲೂ ಇರುವ ನಾಲ್ಕಾರು ಹಳ್ಳಿಗಳಿಗೆ ಹೋಗಿ ಸಾಯಂಕಾಲ ೭ ಗಂಟೆಗೆ ಕಂಕನಾಡಿ ಮೈದಾನದ ಬಳಿಗೆ ಬಂದು ನಿಂತಿತು. ಮೆರವಣಿಗೆಯು ಹಳ್ಳಿ ಹಳ್ಳಿಗಳಿಗೆ ಹೋದಂತೆಲ್ಲಾ ಜನರು ಹೆಚ್ಚಾಗಿ ಅದರಲ್ಲಿ ಸೇರಿ ಕಾಂಗ್ರೆಸ್ಸಿನ ಕಾರ್ಯಕ್ರಮದಲ್ಲಿ ಬಹಳ ಉತ್ಸಾಹವನ್ನು ತೋರಿಸಿದರು.

ಈ ಮೆರವಣಿಗೆಯು ಕಂಕನಾಡಿಯನ್ನು ಮುಟ್ಟಿದ ಮೇಲೆ ಮೈದಾನದಲ್ಲಿ ಒಂದು ಸಭೆಯು ಸೇರಿತು. ಶ್ರೀ ಎಸ್ ಎನ ಚಂದೂರ್ ಮತ್ತು ಶ್ರೀ ಬಿ ಪಿ ಗಣಪತಿ ಇವರು ಭಾಷಣಮಾಡಿದರು.

ಶ್ರೀ ಚಂದೂರರವರು ತಮ್ಮ ಭಾಷಣದಲ್ಲಿ ಕಾಂಗ್ರೆಸ್ಸು ಕೈಕೊಂಡಿರುವ ಕಾರ್ಯವನ್ನು ನೆರೆದಿದ್ದ ಸಭಿಕರಿಗೆ ವಿವರಿಸಿ ಹೇಳಿ ಕಾಂಗ್ರೆಸ್ಸಿಗೆ ತಮ್ಮ ವೋಟುಗಳನ್ನು ಕೊಟ್ಟು ಲೆಜಿಸ್ಲೇಟಿವ ಅಸೆಂಬ್ಲಿಗೆ ಕಾಂಗ್ರೆಸ್ಸಿನ ಪ್ರತಿನಿಧಿಗಳನ್ನೇ ಆರಿಸಿ ಬರುವಂತೆ ಮಾಡಬೇಕೆಂಬದಾಗಿ ವಿನಂತಿಮಾಡಿದರು. ಮತ್ತು ಚುನಾವಣೆಯು ಮುಗಿದ ನಂತರ ನಮ್ಮ ಕೆಲಸವು ಮುಗಿಯಲಿಲ್ಲ. ಚುನಾವಣೆಯು ಸ್ವಾತಂತ್ರ್ಯ ಸಂಗ್ರಾಮದ ಕಾರ್ಯಕ್ರಮದಲ್ಲಿ ಒಂದು ಮಾತ್ರ. ಅದು ನಮ್ಮ ಸಂಪೂರ್ಣ ಕಾರ್ಯಕ್ರಮದಲ್ಲಿ ಇದು ಮುಗಿದ ಒಡನೆಯೇ ನಾವು ಹೆಚ್ಚು ಜೋರಿನಿಂದ ಕೌನ್ಸಿಲುಗಳ ಹೊರಗಿನ ಕಾರ್ಯಕ್ರಮವನ್ನು ಕೈಕೊಂಡು ಕೌನ್ಸಿಲುಗಳೊಳಗಿನ ಕಾರ್ಯವನ್ನು ಸಫಲಗೊಳ್ಳುವಂತೆ ಮಾಡಿ ನಮ್ಮ ಸ್ವಾತಂತ್ರ್ಯದ ಮಾರ್ಗದಲ್ಲಿ ಮುಂದೆ ಹೆಜ್ಜೆಯಿಡುತ್ತಾ ಹೋಗಬೇಕೆಂದು ತಿಳಿಸಿದರು.

ಅನಂತರ ಶ್ರೀ ಗಣಪತಿ ಇವರು ಕಂಕನಾಡಿಯ ಜನರು ಇದೇ ರೀತಿಯಲ್ಲಿ ಉತ್ಸಾಹವನ್ನು ತೋರಿಸಿ ಕಾಂಗ್ರೆಸಿಗೆ ಜಯವಾಗುವಂತೆ ಮಾಡಬೇಕೆಂಬುದಾಗಿ ಜನರಲ್ಲಿ ಅರಿಕೆಮಾಡಿಕೊಂಡರು.

ಕಂಕನಾಡಿಯ ಯುವಕರು ಇದೇ ರೀತಿಯಲ್ಲಿ ಪ್ರತಿ ಭಾನುವಾರವೂ ಸುತ್ತುಮುತ್ತಲಿನ ಹಳ್ಳಿಗಳಿಗೆ ಹೋಗಿ ಕಾಂಗ್ರೆಸ್ಸಿನ ಕಾರ್ಯಕ್ರಮದ ಸಲುವಾಗಿ ಪ್ರಚಾರಮಾಡಲು ಹೊರಡುವುದಾಗಿ ನಿರ್ಣಯ ಮಾಡಿದ್ದಾರೆ.

ದುಃಖಸೂಚಕ ಸಭೆ

ಕಳೆದ ತಾ ೧೭-೧-೩೭ರಲ್ಲು ಆರ್ಯಸಮಾಜ ಸ್ಪೋರ್ಟ್ಸ್, ಇವರ ನೇತೃತ್ವದಲ್ಲಿ ಶ್ರೀಮಾನ್ ಕಾರ್ನಾಡ ಸದಾಶಿವರಾಯರ ಶೋಚನೀಯ ಮರಣಕ್ಕಾಗಿ ದುಃಖಪ್ರದರ್ಶಕ ಸಭೆಯೊಂದು ಜರಗಿತು.

ಶ್ರೀಮಾನ್‌ಗಳಾದ ಬಿ ಮೋನಪ್ಪ ತಿಂಗಳಾಯ, ಯಸ್ ವಿ ಕಾಂಚನ್, ಪಿ ಸತ್ಯಾರ್ಥಿ, ಎಂ ಚಂದ್ರಶೇಖರ ಮೊದಲಾದವರ, ಸದಾಶಿವರಾಯರು ದೇಶದ ಉದ್ಧಾರಕ್ಕೋಸ್ಕರ ಮಾಡಿದ ಹಲವು ಕಾರ್ಯಗಳನ್ನೂ ಮತ್ತು ಅವರ ತ್ಯಾಗವನ್ನೂ ವಿವರಿಸಿ ಮಾತಾಡಿದ ನಂತರ ಮುಖ್ಯ ಸೂಚಕ ಠರಾವನ್ನು ಪಾಸುಮಾಡಿ ಶಾಂತಿಪಾಠದೊಡನೆ ಸಭೆ ವಿಸರ್ಜನೆಯಾಯಿತು.

ಕರ್ಣಾಟಕ ಫ್ರೆಂಡ್ಸ್ ಯೂನಿಯನ್

ಕರ್ಣಾಟಕದ ಪ್ರಮುಖ್ಯ ಮುಂದಾಳುಗಳಾದ ಶ್ರೀ ಕಾರ್ನಾಡು ಸದಾಶಿವರಾಯರ ಅಕಾಲನಿಧನದಿಂದ ತಮಗಾದ ಶೋಕಸೂಚನಾರ್ಥವಾಗಿ ಇದೇ ಕಳೆದ ತಾ ೧೭-೧-'೩೭ರಲ್ಲಿ ಕರ್ಣಾಟಕ ಫ್ರೆಂಡ್ಸ್ ಯೂನಿಯನಿನ ಕಾರ್ಯನಿರ್ವಾಹಕ ಮಂಡಳಿಯು ಅಂದಿನ ಸಭಾಕಾರ್ಯವನ್ನು ಹಿಂದಿರಿಸಿ ದಿವಂಗತರ ಆತ್ಮಕ್ಕೆ ಶಾಂತಿದೊರಕುವಂತೆ ಪ್ರಾರ್ಥನೆಯನ್ನು ಸಲ್ಲಿಸಿತು. ಜನ್ಮಭೂಮಿಯ ಸೇವೆಗಾಗಿ ತನ್ನ ಸರ್ವಸ್ವವನ್ನು ಅರ್ಪಿಸಿ, ಅಪ್ರತಿಮ ದೇಶಭಕ್ತನೆಂದು ಹೆಸರುಗೊಂಡ ಶ್ರೀ ಕಾರ್ನಾಡು ಸದಾಶಿವರಾಯರ ಮರಣದಿಂದಾಗಿ ಅಖಿಲ ಕರ್ಣಾಟಕವೇ ಅನುಭವಿಸುತ್ತಿರುವ ಅಪರಿಮಿತ ದುಃಖದಲ್ಲಿ ತಾವೂ ಸಹಭಾಗಿಗಳಾಗಿರುವುದಲ್ಲದೆ, ಯಾವ ಸತ್ಕಾರ್ಯಕ್ಕಾಗಿ ಕೀರ್ತಿಶೇಷರು ತನ್ನ ತನುಮನಧನವೆಲ್ಲವನ್ನು ಸವೆಯಿಸಿದರೋ ಅದನ್ನು ಕನ್ನಡಿಗರು ಪೂರೈಸಿ ಅವರ ತ್ಯಾಗವನ್ನು ಸಾರ್ಥಕವಾಗಮಾಡುವರೆಂಬ ಹಾರೈಕೆಯನ್ನು ವ್ಯಕ್ತಪಡಿಸುವ ಠರಾವನ್ನು ಮಂಜೂರು ಮಾಡಲಾಯ್ತು.

ಮಂಗಳೂರು ಮುಸ್ಲಿಂ ಉಪಾಧ್ಯಾಯ ಸಂಘದವರಿಗೆ ಅರಿಕೆ.

ಕಳೆದ ೧೬ ವರುಷಗಳಿಂದ ಮಂಗಳೂರು ಕೇಂದ್ರಕ್ಕೆ ಸಂಬಂಧಪಟ್ಟ ಮುಸ್ಲಿಂ ಶಾಲೆಗಳ ಅಭಿವೃದ್ಧಿಗಾಗಿ ಪ್ರಯತ್ನಪಡುತ್ತಿರುವ ಈ ಸಂಘವ ಈ ಕೆಳಗಿನ ಕಾರ್ಯಕ್ರಮವನ್ನು ಈ ವರುಷ ಕೈಕೊಳ್ಳಬೇಕಾಗಿ ಅಧಿಕಾರಿಗಳ ಮತ್ತು ಸದಸ್ಯರ ಪ್ರೋತ್ಸಾಹದಿಂದ ನಿರ್ಧರಿಸಿರುವದು.

೧ ಶಿಕ್ಷಣ ಪ್ರದರ್ಶನವನ್ನು ತೆರೆಯೋಣ (ರೂಪಾಯಿ ೧೦೦) ೨ ಪುಸ್ತಕಾಲಯವನ್ನು ಸ್ಥಾಪಿಸೋಣ (ರೂಪಾಯಿ ೨೦೦) ೩ ಈ ಜಿಲ್ಲೆಯ ಎಲ್ಲಾ ಗ್ರಾಮಗಳಲ್ಲಿರುವ ಮುಸ್ಲಿಂ ವಿದ್ಯಾರ್ಥಿಗಳೊಳಗೆ ವಿದ್ಯಾ ಪ್ರಚಾರ ಮಾಡೋಣ ಮತ್ತು ಅವರು ಇರುವ ಮುಸ್ಲಿಂ ಶಾಲೆಗಳ ಮತ್ತು ಆ ಹಳ್ಳಿಗಳಲ್ಲಿನ ಮುಸ್ಲಿಂ ಸಮಾಜದ ಅಭಿವೃದ್ಧಿಗೆ ಸಂಬಂಧ ಸ್ಥಾಪಿಸೋಣ (ರೂಪಾಯಿ ೧೦೦) ೪. ಜಿಲ್ಲಾ ಮುಸ್ಲಿಂ ಉಪಾಧ್ಯಾಯರ (ವಿದ್ಯಾವರ್ಧಕ) ಸಂಘವನ್ನು ಸ್ಥಾಪಿಸೋಣ (ರೂಪಾಯಿ ೧೦೦)

ಈ ಕಾರ್ಯಕ್ರಮವನ್ನು ಕೂಡಲೇ ಕೈಕೊಳ್ಳಬೇಕಾಗಿದೆ. ಇದೇ ಬರುವ ಮಾರ್ಚ ತಾ. ೩೧ರ ಒಳಗೆ ಮೇಲಿನ ಉದ್ದೇಶಗಳನ್ನು ಸಾಧಿಸುವ ಬಗ್ಗೆ ಸಂಪೂರ್ಣವಾದ ತಳಹದಿಯನ್ನು ಹಾಕಿದ ದನ್ನು ಅದೇ ಮಾರ್ಚ ತಿಂಗಳ ಮೊದಲನೇ ವಾರದಲ್ಲಿ ಒದಗುವ ಸಂಘದ ವರ್ಧಂತಿಯ ಕಾಲದಲ್ಲಿ ಸಮಸ್ತರಿಗೆ ನಿವೇದಿಸಿಗೊಂಡು ಪ್ರೋತ್ಸಾಹವನ್ನೂ, ಸೂಚನೆಗಳನ್ನೂ ಪಡೆಯಬೇಕಾಗಿದೆ. ಈ ವಿಷಯವಾಗಿ ಆಗಾಗ ಕೈಕೊಂಡ ಕೆಲಸವನ್ನು ಪತ್ರಿಕೆಗಳಲ್ಲಿ ಪ್ರಕಟಿಸಲಾಗುವದು.

ಸಮಾಜೋದ್ಧಾರದ ಈ ಮಹತ್ಕಾರ್ಯವನ್ನು ಈ ಸಂಘವು ಕೈಕೊಂಡಿರುವ ಸಾಹಸವು ಸಂಘದ ಸದಸ್ಯರಿಂದ ಮಾತ್ರವೇ ಕೈಗೂಡುವಂತದಲ್ಲ. ಸಮಾಜದ ಪ್ರಮುಖರೂ, ವಿದ್ಯಾಭಿಮಾನಿಗಳೆಲ್ಲರೂ ಪ್ರತಿಯೊಂದು ಬಗೆಯಲ್ಲಿ ಸಹಕರಿಸದಲ್ಲದೆ ಸಂಘದ ಕೆಲಸಗಾರರು ಎಷ್ಟೇ ಪ್ರಯತ್ನ ಮಾಡಿದರೂ ಇದು ಸಾಧ್ಯವಾಗಲಾರದು. ಸುಮಾರು 500 ರೂಪಾಯಿಗಳಾದರೂ, ಈ ಕಾರ್ಯಕ್ರಮವನ್ನು ರೂಪಿಸುವುದಕ್ಕೆ ಅಗತ್ಯವೆಂದು ಇದಕ್ಕಾಗಿ ವ್ಯವಸ್ಥಿತವಾದ ಒಂದು ಕಮಿಟಿಯು ಅಂದಾಜು ಮಾಡಿದೆ. ಆದುದರಿಂದ ಸಂಘದ ಉದ್ದೇಶಗಳ ಮೇಲೆ ಗೌರವವನ್ನಿಟ್ಟು ವ್ಯವಸ್ಥಿತವಾದ ಕಮಿಟಿಯಲ್ಲಿ ವಿಶ್ವಾಸವನ್ನಿಟ್ಟು ಈ ಸಮಾಜೋದ್ಧಾರ ಕಾರ್ಯವು ಯಶಸ್ವಿಯಾಗುವಂತೆ ವಿಳಂಬವಿಲ್ಲದೆ ಧನಸಹಾಯವನ್ನು ಶಕ್ತಿಮೀರಿ ಕಮಿಟಿಗೆ ದಯಪಾಲಿಸಬೇಕಾಗಿ ಈ ಮೂಲಕ ವಿಜ್ಞಾಪಿಸಿಕೊಳ್ಳುತ್ತೇವೆ.

ಮುಸ್ಲಿಂ ಉಪಾಧ್ಯಾಯ ಸಂಘದವರ ಈ ವಿನಂತಿಯು ಮನ್ನಿಸಲ್ಪಟ್ಟು ಸಾರ್ವಜನಿಕರ ಪ್ರೋತ್ಸಾಹವು ದೊರೆತು ಅದು ಜಯಶೀಲವಾಗುವದೆಂದು ಹಾರೈಸುತ್ತೇವೆ.

ಕುಂದಾಪುರ

ಕುಂದಾಪುರ ಸರ್ಕಲಿನ ಡಿ ಬೋರ್ಡ ಚುನಾವಣೆಯಲ್ಲಿ ಜಯಶೀಲರಾದ ಮ| ರಾ| ಮೊಟ್ಟೆ ಬೈಲು ರಾಮಣ್ಣ ಶೆಟ್ಟರ ಮೆಂಬರಿಕೆಯು ಅವರ ಇದಿರಾಳಿಯಾಗಿ ಕೊಂಗ್ರೆಸ್ ಉಮೇದ್ವಾರರಾಗಿ ಮ ರಾ ರಾ ನಿಂತಿದ್ದ ಶ್ರೀಯುತ ಮಾಣೂರು ನಾಗಪ್ಪ ಹೊಳ್ಳರು ದ ಕ. ಜಿಲ್ಲಾ ಸಬ್ ಕೋರ್ಟಿನಲ್ಲಿ ಹೂಡಿದ ವಂಟ್ರದಲ್ಲಿ ಸದ್ರಿ ರಾಮಣ್ಣ ಶೆಟ್ಟರ ಮೆಂಬರಿಕೆಯು ರದ್ದು ಆಗಿತ್ತಷ್ಟೆ? ರಾಮಣ್ಣ ಶೆಟ್ಟರು ಇದಕ್ಕಾಗಿ ಮದ್ರಾಸು ಹೈ ಕೋರ್ಟಿನಲ್ಲಿ ಅಪೀಲುಮಾಡಿದ್ದರು. ಅದರೆ ಹೈಕೋರ್ಟಿನವರು ಸದ್ರಿಯವರ ಅಪೀಲನ್ನು ರದ್ದುಪಡಿಸಿ ಶ್ರೀಯುತ ನಾಗಪ್ಪ ಹೊಳ್ಳರ ಖರ್ಚ ಕೊಡಿಸಿ ಕೆಳಕೋರ್ಟಿನ ತೀರ್ಪನ್ನೇ ಇದೇ ತಾ 21-1-37ರಲ್ಲಿ ಕಾಯಂ ಮಾಡಿರುವದಾಗಿ ತಿಳಿದುಬಂದದೆ. ಸದ್ಯದಲ್ಲಿಯೆ ರಿ ಇಲೆಕ್ಷನ್ ಆಗಲಿಕ್ಕಿರುವದು.

ದೀರ್ಘಕಾಲದ ರೋಗಗಳಿಂದ ಇನ್ನೂ ಇನ್ನೂ ವೃಥಾ ನರಳುತ್ತಿರುವುದೇಕೆ?

ನಾಯಕ್ ಬ್ರದರ್ಸರ ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ.ಕ.

ಇವರ ಅತ್ಯಮೂಲ್ಯವಾದ ಔಷಧಗಳ ಸೇವನೆಯಿಂದ ಶೀಘ್ರದಲ್ಲೇ ಗುಣಹೊಂದಬಹುದಲ್ಲವೇ?

ಇವರ ಔಷಧಗಳ ವೈಶಿಷ್ಟ್ಯ ಏನು?

ದೇಶೀಯ ಉದ್ಯಮ
೧೦೦ ವರ್ಷಗಳ ಅನುಭವದಿಂದ ತಯಾರಿ
ಶಾಸ್ತ್ರೀಯ ರೀತಿಯ ಪದ್ಧತಿ
ಅತ್ಯಂತ ಗುಣಕಾರಿ
ಸ್ವರ್ಣ, ರಜತಪದಕಗಳನ್ನು ಪಡೆದ ದಿವ್ಯೌಷಧಗಳು
ಅತ್ಯಂತ ಕಡಿಮೆ ಬೆಲೆ

ಭುವನೇಂದ್ರ ಪ್ರ
ಶ್ರೀ ರತ್ನ ಗ ಳು

ಗುಡಪಿಪ್ಪಲಿ
(ಮಕ್ಕಳ ಲೀವರ್ ರೋಗಕ್ಕೆ ಅತ್ಯುತ್ತಮ)
ಗರ್ಭಪಾಲ
(ಗರ್ಭಶೂಲೆ, ಗರ್ಭಸ್ರಾವಕ್ಕೆ ದಿವ್ಯೌಷಧ)
ಚಂದ್ರಮಸ್
(ವಾಂತಿಭೇದಿ, ಅತಿಸಾರಗಳ ಮೇಲೆ
(ಅತ್ಯಂತ ಗುಣಕಾರಿ)

ಶಾಸ್ತ್ರೀಯರೀತ್ಯಾ ತಯಾರಿಸಿದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲಗಳು— ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ
ನಮ್ಮ ಪ್ರತಿನಿಧಿಗಳಿಲ್ಲದ ಕಡೆಗಳಲ್ಲಿ ವ್ಯವಹಾರಕುಶಲರೂ, ವ್ಯಾಪಕರೂ, ಯೋಗ್ಯರೂ ಆದ ಏಜಂಟರು ಬೇಕು. ಅವರಿಗೆ ವಿಪುಲವಾದ ಸೌಕರ್ಯಗಳಿವೆ
ಹೆಚ್ಚಿನ ಮಾಹಿತಿಗೂ, ಸೂಚಿಪತ್ರಕ್ಕೂ, ವ್ಯವಹಾರವಿಯಮಕ್ಕೂ ಬರೆಕೊಳ್ಳಿರಿ.

ಪತ್ರವ್ಯವಹಾರ

(ಬಾತ್ಮಿದಾರರು ತಮ್ಮ ಸಂಪೂರ್ಣ ವಿಳಾಸವನ್ನು ನಮಗೆ ಕೊಡಬೇಕಾಗಿದೆ. ಬಾತ್ಮಿಗಳು ಆದಷ್ಟು ಸಂಕ್ಷೇಪವಿದ್ದು ಕಾಗದದ ಒಂದೇ ಪುಟ್ಟದಲ್ಲಿ ಶಾಯಿಯಿಂದ ಬರೆಯಲ್ಪಟ್ಟು ಸ್ಪಷ್ಟವಾದ ಅಕ್ಷರಗಳಲ್ಲಿರಬೇಕು. ಬಾತ್ಮಿದಾರರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ.)

ಸಂ. ನ

ಜಸ್ಟಿಸ್ ಪಾರ್ಟಿಯವರ ಕೋಯಿಲದ ಸಭೆ

ಇಲ್ಲಿ ಇದೇ ದಶಂಬರ ತಾ. ೩೧ನೇ ಗುರುವಾರ ದಿನ ೧೦ ಗಂಟೆಗೆ ಕೋಯಿಲ ಬೋರ್ಡು ಶಾಲೆಯಲ್ಲಿ ಸಭೆ ಎಂಬುದಾಗಿ ಕೆಲವು ಜನ ಜಸ್ಟಿಸ್ ಮುಖಂಡರ ಮಾತಿನಂತೆ ಪ್ರಾತಃಕಾಲ ಗಂಟೆ ೧೦ಕ್ಕೆ ನಮ್ಮೂರಿನ ಕೆಲವರು ಬಂದು ಮಧ್ಯಾಹ್ನ ೧೨ ಗಂಟೆ ವರೆಗೆ ಕಾದು ಕೂತಾಗ ನಮ್ಮನ್ನು ಬರಹೇಳಿದ ಮುಖಂಡರು ಸಾಯಂಕಾಲ ಬರುತ್ತಾರೆಂತ ಕೇಳಿ ನಾವು ಊಟ ಮಾಡಿ ಬರುವುದು ಒಳ್ಳೆಯದೆಂದು ಹಿಂದೆ ಹೋದೆವು. ಮುಖಂಡರ ಒತ್ತಾಯದ ಬಿರುನುಡಿಗಳಿಗೆ ಕೆಲವರು ಬೆದರಿಯೂ ಕೆಲವರು ದಾಕ್ಷಿಣ್ಯಕ್ಕಾಗಿಯೂ ಇನ್ನು ಕೆಲವರು ಅಭಿಪ್ರಾಯ ತಿಳಿಯುವ ಉದ್ದೇಶದಿಂದಲೂ ಅಂತು ಸುಮಾರು ೫೦ ಜನರು ಕೋಯಿಲ ದೇವಸ್ಥಾನದ ಎದುರು ಮಾರ್ಗದ ಬದಿಯಲ್ಲಿರುವ ಒಂದು ಮರದಡಿಯಲ್ಲಿ ಮಣ್ಣ ಕುಪ್ಪೆಯ ಮೇಲೆ ಸುಮಾರು ೫ ಗಂಟೆಯಿಂದ ೬½ ಗಂಟೆಯ ತನಕ ಕಾದುಕೂತಲ್ಲಿ ಎರಡು ಕಾರುಗಳಲ್ಲಿ ಕೆಲವು ವ್ಯಕ್ತಿಗಳು ಬಂದು ಶಾಲೆಯ ಬೀಗದ ಕೈ ತರಿಸಿ ಶಾಲೆಯಲ್ಲಿ ಸಭೆಮಾಡುವರೆ ಮಾಡಿದ ಸಾಹಸವು ಅಷ್ಟಿಷ್ಟಲ್ಲ!

ಈಗ ಮೋಟರ್ ಕಾರುಗಳಲ್ಲಿ ಬಂದ ವ್ಯಕ್ತಿಗಳ ಪರಿಚಯ ಮಾಡೋಣ. ಒಬ್ಬರು ಜಸ್ಟಿಸ್ ಪಾರ್ಟಿಯ ಕಡೆಯಿಂದ ಮೆಂಬರಿಕೆಗೆ ನಿಲ್ಲುವ ವಕೀಲ್ ಮ ರಾ ರಾ ಲಕ್ಕಪ್ಪ ರೈಗಳು ಇನ್ನೊಬ್ಬರು ವಕೀಲ್ ಶ್ರೀ ಕುಂದಾಪ್ಪ ಉಗ್ಗಪ್ಪ ಶೆಟ್ರು, ಮತ್ತೊಬ್ಬರು ವಕೀಲ್ ಶ್ರೀ ನಾರ್ಣಪ್ಪ ಸುವರ್ಣರು. ಇತರರು ನಮ್ಮೂರಿನ ಶ್ರೀಮಂತ ಬಂಟರು.

ಪ್ರಥಮತಃ ವಕೀಲ್ ಶ್ರೀ ಉಗ್ಗಪ್ಪ ಶೆಟ್ರು ಎದ್ದು ನಿಂತು ಇಂದಿನ ಸಭೆಗೆ ನಮಗೆ ಗುರುಗಳಾಗಿರುವ ಬ್ರಾಹ್ಮಣರಲ್ಲೊಬ್ಬರನ್ನು ಅಧ್ಯಕ್ಷರಾಗಿ ಆರಿಸಿ ಅವರಿಂದ ಆಶೀರ್ವಾದ ಪಡೆಯಬೇಕೆಂದು ಹೇಳಿ ವೇ. ಮೂ. ದಾಸ ಯಾನೆ ಕೃಷ್ಣ ಭಟ್ಟರನ್ನು ಅವರು ತನ್ನ ಸಹಾನುಭೂತಿ ಕೊಂಗ್ರೆಸ್ಸಿನ ಕಡೆಗಿದೆ ಎಂದು ಹೇಳಿದರೂ ಬಲವಂತ ಪಡಿಸಿ ಅಧ್ಯಕ್ಷ ಪೀಠವನ್ನೇರಿಸಿ, ತಾವು ಬಂದ ಉದ್ದೇಶ ಶ್ರೀ. ಲಕ್ಕಪ್ಪ ರೈಗಳ ಪರಿಚಯ ಮೊದಲಾದ ಪೀಠಿಕಾಭಾಷಣ ಮಾಡಿ ತನ್ನಾಸನದ ಮೇಲೆ ಮಂಡಿಸಿದರು. ಅನಂತರ ಜಸ್ಟಿಸ್ ಉಮೇದ್ವಾರರಾದ ರಾ| ಲಕ್ಕಪ್ಪ ರೈಗಳು ಎದ್ದು ನಿಂತು ಕೊಂಗ್ರೆಸ್ಸನ್ನು 'ಕೊಂಕಣಿಗರ ಕೊಂಗ್ರೆಸೆಂದು' ಸಂಬೋಧಿಸಿ ಕೊಂಗ್ರೆಸ್ಸಿಗೆ ಸೇರಿದ ಕಾರ್ನಾಡ ಸದಾಶಿವರಾಯರು ತನ್ನ ಸರ್ವಸ್ವವನ್ನು ಕಳಕೊಂಡ ರೀತಿ ಮತ್ತು ಕೊಂಗ್ರೆಸಿನಿಂದ ಏಳಿಗೆ ಇಲ್ಲೆಂಬ ದೂಷಣೆಯಿಂದ ಮೊದಲು ಮಾಡಿ ತನ್ನ ಸರ್ವಸ್ವವನ್ನು ಕೊಂಗ್ರೆಸಿನಿಂದಾಗಿ ಕಳಕೊಂಡ ಕಾರ್ನಾಡು ಸದಾಶಿವರಾಯರನ್ನು ಇಂದು ಅದೇ ಕೊಂಗ್ರೆಸು ತಿರಸ್ಕರಿಸಿದುದು, ಬ್ರಾಹ್ಮಣರ ಕಡೆಯಿಂದ ಡಾ| ಯು. ರಾಮರಾಯರನ್ನು ನಿಲ್ಲದಂತೆ ಮಾಡಿದ ಕುತಂತ್ರ, ವಕೀಲ್ ಸುಬ್ರಹ್ಮಣ್ಯ ಭಟ್ಟರನ್ನು ತಪ್ಪಿಸಿದ ಜಾತಿಯ ಮತ್ಸರ ಮುಂತಾದುವುಗಳ ಕುರಿತು ತನಗೆ ತೋರಿದಂತೆ ಮಾತನಾಡಿದರು. ತಾನು ವಿದ್ಯಾಭ್ಯಾಸದಲ್ಲಿರುವಾಗ ಕೊಂಗ್ರೆಸಿಗೆ ಮಾಡಿದ ಸಹಾಯ ಈಗ ನಡೆಯುವ ನಾಲ್ಕಾಣೆ ಕೊಂಗ್ರೆಸ್ಸಿನ ವರ್ತನೆ ಮತ್ತು ತನ್ನ ಗೌರವ ಮೊದಲಾದುವುಗಳನ್ನು ಹೇಳಿ 'ತನಗೇನೇ ಮುಂದಿನ ಮೆಂಬರಿಕೆಗೆ ಓಟುಕೊಡಬೇಕೆಂದೂ ಒತ್ತಿ ಹೇಳಿದರು.

ಅನಂತರ ರಾ| ಸುವರ್ಣರು ಎದ್ದುನಿಂತು ವೈಶ್ಯ ವೃತ್ತಿಯನ್ನು ಕೈಕೊಂಡಿರುವ ಕೊಂಕಣಿಗರ ಕುತಂತ್ರ, ಮೋಸದ ವ್ಯಾಪಾರ, ಇತರ ಜಾತಿಯವರನ್ನು ನಿಂದಿಸುವ ನಕಲಿ, ತಮ್ಮ ಜಾತಿಯ ಮೇಲ್ಮೆ ಮತ್ತು ಒಗ್ಗಟ್ಟಿಗಾಗಿ ಮಾಡುವ ಕೆಲಸ, ರಾ| ವೆಂಕಟ್ರಾಯ ಬಾಳಿಗರನ್ನು ನಿಲ್ಲಿಸಿದ ಕಾರಣ, ಕೊಂಗ್ರೆಸಿನವರಿಗೆ ಎಸೆಂಬ್ಲಿಗೆ ಹೋಗಿ ಅಲ್ಲಿ ಸ್ವರಾಜ್ಯದ ವಿಷಯ ಮಾತಾಡುವ ಅಧಿಕಾರ ಇಲ್ಲವೆಂಬ ಮತ್ತು ಕೊಂಗ್ರೆಸ್ಸಿನಿಂದ ಸ್ವರಾಜ್ಯ ದೊರೆಯದೆಂಬ ಅಭಿಪ್ರಾಯದ ಖಂಡನೆಯ ಮಾತುಗಳನ್ನು ಹಿಡಿದು ಕೊಂಕಣಿಗರು ಪೂರ್ವ ಕಾಲದಿಂದಲೂ ಇಲ್ಲಿದ್ದವರಲ್ಲವೆಂದೂ ಕೆಲವು ಶತಮಾನಗಳ ಹಿಂದೆ ಬೇರೆ ಕಡೆಯಿಂದ ಓಡಿ ಬಂದು ಇಲ್ಲಿ ತಮ್ಮ ಬುದ್ಧಿ ಕುಶಲತೆಯಿಂದ ವ್ಯಾಪಾರಮಾಡಿ ಇತರರನ್ನು ಸೋಲಿಸಿ ಅವರು ಅಭಿವೃದ್ಧಿಯಾಗುತ್ತಾ ವಿದ್ಯೆಯಲ್ಲಿಯೂ ಐಶ್ವರ್ಯದಲ್ಲಿಯೂ ಶ್ರೇಷ್ಠರೆನಿಸಿ ಮೋಟರ್ ಕಂಪನಿ ಬೇಂಕ್ ಹೋಸ್ಟಾಟಿ ಸಕ್ಕರೆ ಕಾರ್ಖಾನೆ ಮೊದಲಾದ ಸಂಸ್ಥೆಗಳನ್ನು ಏರ್ಪಡಿಸಿ ತಮ್ಮಾಏಳಿಗೆಯನ್ನು ಮಾತ್ರ ಸಾಧಿಸುವವರೆಂದೂ 28000 ಓಟುಗಳಲ್ಲಿ ಅವರಿಗೆ ಬರೇ 2500 ಓಟುಗಳು ಮಾತ್ರ ಇರುವುದರಿಂದ ಇತರ ಜಾತಿಯವರೆಲ್ಲ ಅವರನ್ನು ದೂರೀಕರಿಸಬೇಕೆಂದರು. ಮತ್ತು ರಾ| ವೆಂಕಟ್ರಾಯ ಬಾಳಿಗರಿಗೆ ಓಟುಕೊಟ್ಟು ಅವರನ್ನು ಆರಿಸಿದರೆ ಅವರ ವಕಾಲಾತಿನಿಂದ ಅವರಿಗೆ ಸಭೆಗೆ ಹೋಗಲು ಆಗುವ ತಾಪತ್ರಯ, ಹೋದರೂ ಅಲ್ಲಿ ಕೆಲಸ ಮಾಡಲಿರುವ ಅನಾನುಕೂಲತೆಗಳನ್ನು ಹೇಳಿ ಗೌಡ ಸಾರಸ್ವತ ಸಮಾಜದ ದೂಷಣೆಯ ಸುರಿಮಳೆಗರೆದರು. ಆದುದರಿಂದ ರಾ| ಲಕ್ಕಪ್ಪ ರೈಗಳಿಗೆ ಮೆಂಬರಿಕೆ ಆದಲ್ಲಿ ಅವರು ಮದ್ರಾಸಿನಲ್ಲೇ ಇರುವ ಕಾರಣ ಸಭೆಗೆ ಹೋಗಲು ಆಗುವ ಅನುಕೂಲತೆ ಮತ್ತು ಅವರು ಮಾಡಲಿರುವ ಜನತಾ ಸೇವೆ ಮುಂತಾದ ಹಲವು ಸಂಗತಿಗಳಿಂದ ಯುಕ್ತವಾದ ದೀರ್ಘ ಭಾಷಣಮಾಡಿ ಬಂಟರು ಮತ್ತು ಬಿಲ್ಲವರು ಒಗ್ಗಟ್ಟಿನಿಂದ ಶ್ರೀ ಲಕ್ಕಪ್ಪ ರೈಗಳಿಗೇನೇ ಓಟು ಕೊಡಬೇಕೆಂದು ಹೇಳಿ ಮುಗಿಸಿದರು.

ಅಧ್ಯಕ್ಷರ ಪರವಾಗಿ ಅವರ ಅನುಜ ಯ ವಿ ಶರ್ಮರು ಎದ್ದು ನಿಂತ 'ರಾ| ಲಕ್ಕಪ್ಪ ರೈಗಳ ಪರಿಚಯ ಹೆಚ್ಚಿನ ಜನರಿಗೆ ಇರಲಿಕ್ಕಿಲ್ಲ ನಾನಂತೂ ಅವರ ಹೆಸರನ್ನು ಕೂಡಾ ಈ ವರೆಗೆ ಕೇಳಿದ್ದಿಲ್ಲ ಅಲ್ಪಜನ ಸಂಖ್ಯೆಯ ಜಾತಿಯನ್ನು ಮತ್ತು ನಿರಾಧಾರಿಗಳಾಗಿ ಬಂದವರನ್ನು ನಾವು ಐಶ್ವರ್ಯವಂತರಾಗಿ ಮಾಡಿದ್ದರೆ ಅದು ನಮಗೊಂದು ಭೂಷಣ. ಭಾಷಣಕಾರರಲ್ಲೊಬ್ಬರು ನಾಲ್ಕಾಣೆ ಕೊಂಗ್ರೆಸೆಂದೂ ಇನ್ನೊಬ್ಬರು ಕೊಂಕಣಿಗರು ವ್ಯಾಪಾರಮಾಡಲಿಕ್ಕೆಂದು ತಂದ ಕೊಂಗ್ರೆಸ್ಸೆಂದೂ ದೂಷಿಸುವುದು ಅವರವರ ಕೆಲಸವಾಗಬೇಕಾದರೆ ಅವರಿಗೇ ಅನುಕೂಲವಾದ ಶಾಸ್ತ್ರವನ್ನು ಪಾರಾಯಣ ಮಾಡುವ ಪದ್ಧತಿ. ಆದರೆ ನಮಗಿರುವ ಒಂದೇ ಒಂದು ಓಟನ್ನು ಯಾರಿಗೆ ಕೊಡಬೇಕೆಂಬುದನ್ನು ಚೆನ್ನಾಗಿ ಯೋಚಿಸಿ ಕೊಡುವುದು ನಮ್ಮ ಕರ್ತವ್ಯ. ಅಲ್ಲದೆ ರಾ| ಸುವರ್ಣರು ಆಡಿದ ಮಾತುಗಳು ಅವುಗಳ ಧೋರಣೆಯ ಕತೆ ಬಂಟರಿಗೆ ಮತ್ತು ಬಿಲ್ಲವರಿಗೆ ಹೊರತು ಬ್ರಾಹ್ಮಣರಿಗೆ ಅನ್ವಯಿಸುವದಿಲ್ಲ ಎಂದರು.

ಇದನ್ನು ಕೇಳಿ ಸುವರ್ಣರು ಪುನಃ ಎದ್ದುನಿಂತು'-ಬ್ರಾಹ್ಮಣರನ್ನು ಬಿಟ್ಟದ್ದಿಲ್ಲ ಅವರು ಕೂಡಾ ಈ ಕಾರ್ಯಕ್ಕೆ ಪ್ರೋತ್ಸಾಹಕೊಟ್ಟು ಓಟು ಕೊಡಬೇಕು. ಅಣ್ಣನ ಪರವಾಗಿ ಭಾಷಣಕ್ಕೆ ತಮ್ಮನನ್ನು ಕರೆದದ್ದಿಲ್ಲ' ಎಂದು ಹೇಳಿದ ನಂತರ ಸಭಾಂತ್ಯವಾಯಿತು

ಅಯ್ಯೋ, ವಾಚಕರೆ ಮೊದಲು ಹೊಗಳಿ ಬ್ರಾಹ್ಮಣರನ್ನು ತಮ್ಮ ವಶ ಮಾಡಿಕೊಳ್ಳಬಹುದೆಂದು ಅಧ್ಯಕ್ಷಸ್ಥಾನಕ್ಕೆ ಏರಿಸಿ ಅಧ್ಯಕ್ಷರ ಅನುಜನ ಮಾತಿನಿಂದ 'ಪುಳಿ ಬಿರಾಣಿ' ಎಂದು ಕರೆಯುವಂತಾಯಿತಲ್ಲಾ! ಜಸ್ಟಿಸ್ ಪಾರ್ಟಿಯವರು ಎಸೆಂಬ್ಲಿಗೆ ಹೋಗಿ ಮಾಡುವ ಕೆಲಸ ಇದೇ ಏನು? ನಮ್ಮೆದುರಿಗೆ ನಮ್ಮನ್ನು ಹೊಗಳಿ ಅದೇ ಬಾಯಿಯಿಂದ ತೆಗಳುವವರು ತಮ್ಮ ಕಾರ್ಯವಾದ ಮೇಲೆ ನಮ್ಮ ವಿಷಯದಲ್ಲಿ ಹೇಗೆ ನಡಕೊಳ್ಳಬಹುದೋ?

ಇಂತೀ ಸಭಿಕರಲ್ಲೊಬ್ಬ ಕೋಯಿಲ.

ಜಿಲ್ಲಾ ಬೋರ್ಡು ಮೂಲ ಶಾಲಾ ಅಧ್ಯಾಪಕರ ಪರಸ್ಪರ ಸಹಾಯಕ ನಿಧಿ.

ಇದೇ ತಾ. 23-1-37ರಲ್ಲಿ ಜರಗಿದ ಬೋರ್ಡು ಮೂಲ ಶಾಲಾಧ್ಯಾಪಕರ ಜಿಲ್ಲಾ ಪರಿಷತ್ತಿನಲ್ಲಿ ಮಂಜೂರಾದ ಠರಾವುಗಳಲ್ಲಿ ಪ್ರಶಂಸನೀಯವಾದ ಠರಾವು ಅಂದರೆ "ಬೋರ್ಡು ಮೂಲಶಾಲಾಧ್ಯಾಪಕರ ಪರಸ್ಪರ ಸಹಾಯಕ ನಿಧಿಯ ಏರ್ಪಾಡು" ಇದೊಂದು ಹೊಸ ಯೋಜನೆಯಲ್ಲ. ಇತರ ಇಲಾಖೆಯ ನೌಕರರೂ ಬೇರೆ ಬೇರೆ ಜಾತಿಯ ಪಂಗಡಗಳವರೂ ಈಗಲೂ ಅನುಸರಿಸಿಕೊಂಡು ಬರುವ ಯೋಜನೆ. ಇದರಿಂದಾಗಿ ವಿದ್ಯಾ ಇಲಾಖೆಯಲ್ಲಿ ಒಂದೇ ನಿಯಮ ಮತ್ತು ನಿಬಂಧನೆಯ ಆಡಳಿತೆಯೊಳಗಿರುವ ಮೂಲ ಶಾಲಾಧ್ಯಾಪಕರ ಆರ್ಥಿಕ ಹಿತಸಾಧನೆಗಾಗಿ ಅವರ ಕುಟುಂಬದ ಕ್ಷೇಮಕ್ಕಾಗಿ ಅಧ್ಯಾಪಕರು ಪರಸ್ಪರ ಸಹಾಯ ಮಾಡಿಕೊಂಡು ಉದ್ಯೋಗಿಸಲಾರಂಭಿಸುವ ಯೋಜನೆಯು ಅತ್ಯುತ್ತಮವಾಗಿರುತ್ತದೆ ಈ ಯೋಜನೆಗೆ ಆಡಳಿತೆಯ ಮೇಲಧಿಕಾರಿಗಳ ಬೆಂಬಲವೂ ದೊರೆತರೆ ಬಡ ಮೂಲ ಶಾಲಾಧ್ಯಾಪಕರ ಹಾಗೂ ಅವರ ಕುಟುಂಬಗಳ ಆರ್ಥಿಕ ಸ್ಥಿತಿಯು ಸುಧಾರಣೆಯಾಗುವುದಕ್ಕೆ ಯಾವುದೊಂದು ತೊಡಕುಂಟಾಗದೆಂದು ದೃಢವಾಗಿ ಹೇಳಬಹುದು. ಆದುದರಿಂದ ಅಂದಿನ ಪರಿಷತ್ತಿನ ಕಾರ್ಯನಿರ್ವಾಹಕರಲ್ಲಿ ಮೇಲಾಗಿರುವ ಶಿರೋಕ್ತ ಪ್ರಸ್ತಾಪನೆಯ ಯೋಜನೆಯು ಮುಂದೊತ್ತುವಂತೆ ಎಲ್ಲರೂ ಉತ್ಸಾಹಿಗಳಾಗಲೆಂದು ಹಾರೈಸುವ

ಅಧ್ಯಾಪಕರ ಬಂಧು.

ಭಾಷಾಂತರಕಾರರು ದೊರೆಯದೆ ಪೇಚಾಡುವಿರೇಕೆ?

ಇನ್ಶ್ಯೂರೆನ್ಸ್ ಕಂಪೆನಿ, ಬ್ಯಾಂಕು ಮೊದಲಾದುವುಗಳಿಗೆ ಸಂಬಂಧಪಟ್ಟ ಮತ್ತು ಇತರ ಎಲ್ಲಾ ತರದ ಇಂಗ್ಲಿಷ್ ಕನ್ನಡ ಭಾಷಾಂತರಗಳನ್ನು ಉತ್ತಮ ರೀತಿಯಿಂದ ಮಾಡಿಕೊಡಲಾಗುವುದು. ಹೆಚ್ಚಿನ ವಿವರಕ್ಕೆ ಈ ಕೆಳಗಿನ ವಿಳಾಸದೊಡನೆ ಪತ್ರವ್ಯವಹಾರ ಮಾಡಬೇಕು.

'ಟ್ರಾನ್ಸ್‌ಲೇಟರ್,'

C/o 'ಕಿರಿಯರ ಪ್ರಪಂಚ,' ಉಡುಪಿ.

ನೋಟೀಸು

ನಾನು ಬೇರಿಯವರಿಗೆ ಕಳದ ತಾ. 23-12-1936ರಲ್ಲಿ ರೂ. 50—0—0 ತಾ. 15-1-1937ರಲ್ಲಿ ರೂ. 450—0—0 ಕೂಡ ರೂಪಾಯಿ 500—0—0 ಐನೂರು ರೂಪಾಯಿಗಳು ಕೈಕಡಕೊಟ್ಟು, ಅವರ ಚಾಲ್ತಿ ಎಡ್ರೆಸ್ಸು ಇರುವ ಕಾಗದದಲ್ಲಿ ಅವರ ಪಟ್ಟಿ ಯಾನೆ ಕೈಕಾಗದ ಪಡಕೊಂಡಿದ್ದೆ. ಸದ್ರಿ ಪಟ್ಟಿ ಬಾಬ್ತು ಪೂರಾ ಐವೇಜು ನನಗೆ ನಗದಿಯಿಂದ ವಸೂಲು ಬಂದದೆ. ಸದ್ರಿ ಪಟ್ಟಿಯು ನನ್ನ ಕೂಡೆ ತಾ. 20-1-1937ರಲ್ಲಿ ಗೈರುವಿಲೆ ಆಗಿರುವದರಿಂದ ಆ ಬಗ್ಗೆ ಸದ್ರಿಪಟ್ಟಿ ಬರಕೊಟ್ಟವರಿಗೆ ನಾನು ತಾ. 20-1-1937ರಲ್ಲಿ ಅಲ್ಹಾದ ರಶೀದಿ ಕೊಟ್ಟಿರುತ್ತೇನೆ. ಆದ್ರಿಂದ ಸದ್ರಿ ಪಟ್ಟಿಯು ರದ್ದಾಗಿದೆಯೆಂಬ ಸಂಗ್ತಿ ಈ ಮೂಲಕ ಸರ್ವರಿಗೆ ತಿಳಿಸಿರುತ್ತೇನೆ.

ತಾ. 21—1—1937

× ಈ ಎಡ ಹೆಬ್ಬೆಟ್ಟಿನ ಗುರುತು ಕಲ್ಯಾಣಿ ರುಜು. ಲಕ್ಷ್ಮಿ ಮಗಳು.

ಉಡುಪಿ ಕಸಬಾ, ಬಂಡಾರಿ ಓಣಿ.

× ಇದು ಹೆಬ್ಬೆಟ್ಟಿನ ಗುರತು

ಸುವರ್ಣ ತಾಯಿತಿ! ಧರ್ಮಾರ್ಥ ಬಂಗಾರದ ತಾಯಿತಿ!

ಹಿಮಾಲಯ ಪರ್ವತದಲ್ಲಿ ವರ್ಷಗಟ್ಟಲೆ ತಪಸ್ಸು ಮಾಡಿ ಸಿದ್ಧಿಯನ್ನು ಪಡೆದ ಮಹಾ ಯೋಗೀಶ್ವರರಿಂದ ಕಂಡು ಹಿಡಿಯಲ್ಪಟ್ಟದ್ದು.

ಈ ತಾಯಿತಿಯನ್ನು

ಧರಿಸಿದ ಮಾತ್ರದಿಂದ ಸಕಲ ಇಷ್ಟಾರ್ಥಗಳೂ ನೆರವೇರುವುವು. ಪರೀಕ್ಷಿಸಲಪೇಕ್ಷಿಸುವವರು

"ಯೋಗೀಶ್ವರರ ಶಕ್ತಿಸಾಹಸ"

ಎಂಬ ಪುಸ್ತಕವನ್ನು ಧರ್ಮಾರ್ಥವಾಗಿ ಪಡೆಯಬಹುದು.

ಪತ್ತೆ:—ಪಂಡಿತ್ ಎ. ವಿ. ಆರಮುಮ್

ಚಿಕಾಕೋಲ್



ಬ್ರೇಕ್ ಪಿಲ್ಸು

ಸ್ತ್ರೀಪುರುಷರಿಗೆ ಆನಂದವನ್ನುಂಟುಮಾಡುವುದು ಈ ಮಾತ್ರೆಗಳೆ. ಮದಿಸಿದ ಸ್ತ್ರೀಯರ ಗರ್ವ ಭಂಗಮಾಡಲು ಕಂಡು ಹಿಡಿದಿರುವ ಮಾತ್ರೆಗಳಿವು. ಇವರಲ್ಲಿ ವಿಷಾದಿಗಳು ಸೇರಿಲ್ಲ, ಕಸ್ತೂರಿ, ಚಿನ್ನ, ಹಿಮಾಲಯಪರ್ವತದ ವನಮೂಲಿಕೆಗಳು ಮುಂತಾದುವುಗಳಿಂದ ದೊಡ್ಡ ಯೋಗೀಶ್ವರರ ಹತ್ತಿರ ಸಂಗ್ರಹಿಸಿ ಮುದುಕತನವನ್ನು ಲೋಕದಲ್ಲಿ ಇಲ್ಲದಂತೆ ಮಾಡುವುದು. ಅರ್ಧ ಘಂಟೆಯೊಳಗಾಗಿ ವೀರ್ಯವನ್ನು ಕಲ್ಲಿನಂತೆ ಮಾಡಿ ರಮಿಸಲು ಉಲ್ಲಾಸವನ್ನು ಮಾಡುವುದು. ಗುಣವಿಲ್ಲದಿದ್ದಲ್ಲಿ ಹಣ ವಾಪಸು. ೬೦ ಮಾತ್ರೆಗಳು ರೂ. ೫ ೦—೦ ಮಾತ್ರೆಗಳು ರೂ. ೩—೦—೦ ಕಾಗದ ಪತ್ರಗಳು ಇಂಗ್ಲೀಷಿನಲ್ಲಿಯೇ.

ಡಾ. ಎ. ಎಸ್. ಮೂರ್ತಿ,

ಚಿಕಾಗೋಲ್, ಗಂಜಾಮ್ ಡಿಸ್ಟ್ರಿಕ್ಟ್

ಹಿಂದೂದೇಶದ ರಾಜಕೀಯ ವಾತಾವರಣ

ಎಲ್ಲೆಲ್ಲಿಯೂ ಕೊಂಗ್ರೆಸು ವಿಜಯ! — ಸ್ವಾತಂತ್ರ್ಯ ಪ್ರತಿಜ್ಞೆಯ ನಿಷೇಧಾಜ್ಞೆ!!

ಮದ್ರಾಸ್ ಲೆಜಿಸ್ಲೇಟಿವ್ ಎಸೆಂಬ್ಲಿಗೆ ಕಾಂಗ್ರೆಸ್ ಉಮೇದುವಾರರಾಗಿ ಬೇರೆ ಬೇರೆ ಸ್ಥಾನಗಳಿಗೆ ನಿಂತ ಹಲವು ಮಂದಿ ಇಷ್ಟರಲ್ಲೇ ಪ್ರತಿಸ್ಪರ್ಧಿಗಳಿಲ್ಲದೆ ಆರಿಸಿಬಂದಿರುವರು. ನಾಮಪತ್ರದ ಹಾಜರಿಯ ದಿನದ ವರೆಗೂ ಕಾಂಗ್ರೆಸ್ ಹುರಿಯಾಳುಗಳನ್ನು ಸ್ಪರ್ಧಿಸಿ ಕೆಲಸಮಾಡಿ ಪ್ರಯೋಜನವಿಲ್ಲವೆಂದು ಕಂಡುಬಂದ ಹಲವು ಸ್ಥಾನಗಳ ಜಸ್ಟೀಸ್ ಪಾರ್ಟಿಯವರು ನಾಮಪತ್ರ (ನೋಮಿನೇಶನ್) ಹಾಕದೆ ಬಿಟ್ಟಿರುವರು. ಶ್ರೀ. ರಾಮರಾಜ ನಾಡರರು ರಾಮ್ನಾಡು ಜಿಲ್ಲೆಯಿಂದಲೂ, ಶ್ರೀ. ವಿ. ಸಿ. ಪಲನಿಸ್ವಾಮಿ ಗೌಡರರು ಕೊಯಮುತ್ತೂರಿನಿಂದಲೂ ಎಸೆಂಬ್ಲಿಗೆ ಆರಿಸಲ್ಪಟ್ಟಿರುವರು. ಕೊಯಮುತ್ತೂರಿನ ಕೌನ್ಸಿಲ್ ಸ್ಥಾನಕ್ಕೆ ಶ್ರೀ ಟಿ. ಎ. ರಾಮಲಿಂಗಮ್ ಚೆಟ್ಟಿಯಾರರು ಪ್ರತಿಸ್ಪರ್ಧಿಯಿಲ್ಲದೆ ಬಂದಿರುವರು. ಟ್ಯೂಟಿಕೋರಿನಿನ ಎಸೆಂಬ್ಲಿ ಸ್ಥಾನಕ್ಕೆ ಶ್ರೀ. ಎ. ಆರ್. ಎ ಎಸ್. ದೊರೆಸ್ವಾಮಿ ನಾಡರರ ಚುನಾವಣೆಯಾಗಿರುವದು. ಸೇಲಮಿನ ಶ್ರೀ. ವಿ. ಆರ್. ಪೆರುಮಲ್ ಚೆಟ್ಟಿಯಾರರು ಸ್ಪರ್ಧೆಯಿಲ್ಲದ ಎಸೆಂಬ್ಲಿಮೆಂಬರಿಕೆ ಪಡೆದಿರುವರು. ಗೆದ್ದು ಬಂದ ಮೆಂಬರರೆಲ್ಲರೂ ಕೊಂಗ್ರೆಸ್ ಪಕ್ಷೀಯರಿದ್ದು ಅವರ ಇದಿರಾಳಿಗಳಾಗಿ ನಿಂತವರು ಹೆಚ್ಚಾಗಿ ಜಸ್ಟೀಸ್ ಮತ್ತು ಪೀಪಲ್ಸ್ ಪಾರ್ಟಿಯವರಾಗಿದ್ದರು. ಬೊಂಬಾಯಿಯ ಮುಖ್ಯ ಕಾಂಗ್ರೆಸ್ ಪಾರ್ಲಿಮೆಂಟರಿ ಬೋರ್ಡಿನವರು ಪರಿಸ್ಥಿತಿಯ ಸರಿಯಾದ ಅವಲೋಕನದಿಂದ ೧೧ ಪ್ರಾಂತ್ಯಗಳ ಪೈಕಿ ಕಡಿಮೆ ಯೆಂದರೆ ೭ ಪ್ರಾಂತ್ಯಗಳಲ್ಲಾದರೂ ಕಾಂಗ್ರೆಸು ಪ್ರಬಲ ಬಹುಮತ ಪಡೆಯುವದೆಂದು ಗೊತ್ತುಹಚ್ಚಿರುವರು.

ಬೇರೆ ಪ್ರಾಂತ್ಯಗಳಲ್ಲಿ ಕಾಂಗ್ರೆಸ್ ವಿಜಯ

ಹಲವು ಎಸೆಂಬ್ಲಿ ಸ್ಥಾನಗಳು ಕೊಂಗ್ರೆಸಿನ ಕೈವಶವಾದವು. ರಾಷ್ಟ್ರಸಭೆಯ ಪಕ್ಷದ ಹುರಿಯಾಳು ಶ್ರೀ ಬಸಂತ ಕುಮಾರ ದಾಸರು ೪೫೦೩ ಓಟುಗಳ ಬೆಂಬಲದಿಂದ ಆರಿಸಲ್ಪಟ್ಟಿರುವರು. ಶ್ರೀ ಜೋಗೀಶ್ ಗೋಹಿಯಾನರೂ ಪ್ರಬಲ ಬಹುಮತದೊಡನೆ ಗೆದ್ದು ಬಂದಿರುವರು. ಲಾಹೋರಿನ ಹಿಂದುಗಳ ಸ್ಥಾನಕ್ಕೆ ಹಿಂದೂ ಮಹಾಸಭೆಯ ಉಮೇದ್ವಾರಿಯನ್ನು ಸೋಲಿಸಿ ಡಾ. ಗೋಪೀಚಂದ ಭಾರ್ಗವರು ಬಂದಿರುವರು. ಅಲ್ಲಿಯ ಹೆಂಗುಸರ ಸ್ಥಾನವನ್ನು ರಾಷ್ಟ್ರಸಭೆಯವರು ಜಯಶೀಲರಾಗಿ ಸ್ಪರ್ಧಿಸುತ್ತಿರುವರು. ಬಿಹಾರಿನ ೮೨ ಸ್ಥಾನಗಳ ಪೈಕಿ ೮೦ ಸ್ಥಾನಗಳಿಗೆ ಕೊಂಗ್ರೆಸು ಹುರಿಯಾಳುಗಳನ್ನು ನೇಮಿಸಿರುವದು. ಒಟ್ಟಿಗೆ ೯ ಉಮ್ಮೇದ್ವಾರರು ಚುನಾವಣಾರಂಗದಲ್ಲಿ ಹೋರಾಡುತ್ತಿರುವರು. ರಾಷ್ಟ್ರಸಭೆಯ ಪರವಾಗಿ ವಿಮಾನದ ಮೂಲಕವೂ ಕೆಲಸ ನಡೆಯುತ್ತಿವೆ. ಬರಹಂಪುರದ ಎರಡು ಸ್ಥಾನಗಳನ್ನೂ ರಾಷ್ಟ್ರಸಭೆಯವರೇ ಗೆದ್ದಿರುವರು. ಸ್ಪರ್ಧೆಯಿರುವ ಸ್ಥಾನಗಳಲ್ಲೆಲ್ಲಾ ರಾಷ್ಟ್ರಸಭೆಯ ಪ್ರತಿನಿಧಿಗಳು ಬಹುಶೇಕವಾಗಿ ಆರಿಸಿ ಬರುವ ಸಂಭವವಿದೆ.

ಅಲ್ಲಲ್ಲಿ ಗಲಭೆಗಳು.

ಶ್ರೀ ಸಿ. ರಾಜಗೋಪಾಲಾಚಾರಿ, ಶ್ರೀ ಸತ್ಯಮೂರ್ತಿ ಮೊದಲಾದ ಮದ್ರಾಸಿನ ಮುಖಂಡರು ಪ್ರಬಲ ಪ್ರಚಾರ ಕಾರ್ಯಕ್ಕಿಳಿದಿರುವರು. ಕೊಂಗ್ರೆಸು ಉಮೇದುವಾರರ ಸಮರ್ಥನೆಗಾಗಿ ತಿನ್ನವಲ್ಲಿಯಲ್ಲಿ ಕೂಡಿದ್ದ ಜಾಹೀರು ಸಭೆಯೊಂದರಲ್ಲಿ ಕಲ್ಲುಗಳೆಸೆಯಲ್ಪಟ್ಟು ತುಸು ಗಲಾಟೆಯಾಗಿರುವದು. ಪಾಟ್ನದ ಹಜಾರಿಬಾಗಿನಲ್ಲಿ ಬಾಬುರಾಜೇಂದ್ರ ಪ್ರಸಾದರು ಭಾಷಣಮಾಡುತ್ತಿದ್ದಾಗಲೇ ತುತೂರಿಯೊಂದನ್ನು ಅವರ ಮುಖದಿದಿರಿನಲ್ಲಿ ಊದಲಾಯಿತು. ಇದರಿಂದ ಸಭಿಕರು ಉದ್ವೇಗಗೊಂಡು ಪ್ರತಿಕಾರೋನ್ಮುಖರಾದಾಗ ಶ್ರೀ ಪ್ರಸಾದರವರನ್ನು ಸಂತೈಸಿದರು. ಹುಂಡು ಎಂಬಲ್ಲಿಯೂ ಇಂತಹ ಗಲಭೆಯನ್ನು ಕೆಲವರು ಮಾಡಲೆತ್ನಿಸಿ ಸಭಿಕರು ಉದ್ರೇಕಗೊಂಡುದರಿಂದ ಬಾಬುರಾಜೇಂದ್ರರು ಭಾಷಣವನ್ನು ನಿಲ್ಲಿಸಿ ಶಾಂತಿ ಸ್ಥಾಪಿಸಿದರು. ಕಲ್ಕತ್ತದಲ್ಲಿ ಚುನಾವಣೆಯು ಪ್ರಾರಂಭವಾಗಿರುವದು. ಸ್ತ್ರೀ ಮತ್ತು ಪುರುಷ ಮತದಾರರ ಸ್ಥಾನಗಳಲ್ಲಿ ತೀವ್ರ ಸ್ಪರ್ಧೆಯಿರುವದು. ಪಾಟ್ನದಲ್ಲಿ, ಪಂಡಿತ ಜವಹಿರಲಾಲ್, ರಾಜೇಂದ್ರ, ಪ್ರಸಾದ್, ವಲ್ಲಭಭಾಯಿ ಮೊದಲಾದವರ ವಿನಂತಿ ಪತ್ರಗಳು ವಿಮಾನದ ಮೂಲಕ ಚೆಲ್ಲಲ್ಪಡುತ್ತಿರುವವು ಚುನಾವಣೆಯು ಪ್ರಾರಂಭವಾಗಿರುವ ಲಾಹೋರು ಕಲ್ಕತ್ತ ಮೊದಲಾದ ಕಡೆಗಳಲ್ಲಿ ಜನರ ಆತುರವು ಮಿತಿಮೀರುತ್ತಿದೆ. ರಾಷ್ಟ್ರಸಭಾ ಧುರೀಣರು ಕೊಂಗ್ರೆಸ್ ವಿಜಯಕ್ಕಾಗಿ ಪ್ರಯತ್ನಿಸುತ್ತಿದ್ದಾರೆ.

ಸ್ವಾತಂತ್ರ್ಯ ಪ್ರತಿಜ್ಞೆಯ ಮೇಲೆ ನಿಷೇಧಾಜ್ಞೆ

ಮದ್ರಾಸ್, ಬೊಂಬಾಯಿ, ಬಿರಾರ್, ಸಂಯುಕ್ತ, ಗಡಿನಾಡು, ಮೊದಲಾದವುಗಳ ಪ್ರಾಂತಿಕ ಸರಕಾರಗಳು ಜನವರಿ ತಾ. ೨೬ನೇ ಸ್ವಾತಂತ್ರ್ಯ ದಿನದಲ್ಲಿ ಓದಲ್ಪಡುವ ಸ್ವಾತಂತ್ರ್ಯ ಪ್ರತಿಜ್ಞೆಯನ್ನು ನಿಷೇಧಿಸಿ ಆಜ್ಞೆಯನ್ನು ಹೊರಡಿಸಿವೆ. ಸ್ವಾತಂತ್ರ್ಯ ಪ್ರತಿಜ್ಞೆಯ ಯಾವದೇ ವಿಧದ ಪ್ರಕಟನೆಯು ಇಂಡಿಯನ್ ಪೆನಲ್ ಕೋಡಿನ 124ನೇ ಎ ಸೆಕ್ಷನಿಗನುಸಾರವಾಗಿ ತಕ್ಷೀರಾಗುವದೆಂದೂ, ಅದನ್ನು ಪ್ರಚಾರಗೊಳಿಸುವವರು ಶಿಕ್ಷಿಸಲ್ಪಡುವರೆಂದೂ ಪ್ರಾಂತಿಕ ಸರಕಾರಗಳು ಎಚ್ಚರಿಸಿರುವವು. ಈ ನಿಷೇಧಾಜ್ಞೆಯು ತಿಳಿದುಬಂದೊಡನೆ ಬೊಂಬಾಯಿಯ ಕೊಂಗ್ರೆಸ್ ಕೆಲಸಗಾರರು ಪಂಡಿತರಿಗೆ ತಂತಿಬಿಟ್ಟು ಅವರ ಸಲಹೆ ಕೇಳಿರುವರು ನಾಗಪುರದಲ್ಲಿ ಸಾರ್ವಜನಿಕ ಸಭೆ ಕೂಡಿ ಇದಕ್ಕಾಗಿ ನಿಷೇಧಸೂಚಕ ಠರಾವಾಗಿರುವುದು. ಅಂಕೋಲದ ಪ್ರಾಂತಿಕ ಕೊಂಗ್ರೆಸ್ ಕಮಿಟಿಯ ಆಫೀಸು, 'ಮಾತೃಭೂಮಿ' 'ನವರಾಜಸ್ಥಾನ್' ಮೊದಲಾದ ಪತ್ರಿಕೆಗಳ ಆಫೀಸುಗಳು ಜಪ್ತಿಮಾಡಲ್ಪಟ್ಟು ಮಾತೃಭೂಮಿಯ ಕಾರ್ಯಾಲಯದಲ್ಲಿದ್ದ ಪ್ರತಿಜ್ಞೆಯ ಕೆಲವು ಪತ್ರಿಕೆಗಳನ್ನು ಕೊಂಡುಹೋಗಿರುವರು.

ಪಂಡಿತ ಜವಾಹಿರಲಾಲರ ಹೇಳಿಕೆ.

"ಕೆಲವು ಪ್ರಾಂತಿಕ ಸರಕಾರಗಳು ಸ್ವಾತಂತ್ರ್ಯ ಪ್ರತಿಜ್ಞೆಯ ಪ್ರಕಟಣೆಯನ್ನು ನಿಷೇಧಿಸಿರುವವೆಂದು ತಿಳಿಯುತ್ತೇನೆ. ನನಗೆ ತಿಳಿದ ಮಟ್ಟಿಗೆ ಕಳೆದ ಏಳು ವರುಷಗಳಿಂದ ಈ ಪ್ರತಿಜ್ಞೆಯ ಪ್ರಚಾರವಾಗುತ್ತಿದ್ದರೂ ಸರಕಾರವದನ್ನು ನಿಷೇಧಿಸಿದುದು ಇದೇ ಪ್ರಥಮ ಸಲ. ಪ್ರಚಂಡ ಸಾರ್ವಜನಿಕ ಬೆಂಬಲವು ರಾಷ್ಟ್ರಸಭೆಗಿರುವುದನ್ನು ಕಂಡು ಸರಕಾರವು ತಬ್ಬಿಬ್ಬಾಗಿದೆ ಎಂಬುದಕ್ಕೆ ಇದೊಂದು ದೃಷ್ಟಾಂತ. ಸದ್ಯಸ್ಥಿತಿಯಲ್ಲಿ ಇಂತಹ ಆಜ್ಞೆಗಳನ್ನು ಉಲ್ಲಂಘಿಸುವದು ನಮ್ಮ ಧ್ಯೇಯ ಅಥವಾ ಕರ್ತವ್ಯವಾಗಿಲ್ಲ. ಅದ್ದರಿಂದ ಎಲ್ಲಿ ನಿಷೇಧಕ ಹುಕುಮಿರುವದೋ ಅಲ್ಲಿ ಈ ಪ್ರತಿಜ್ಞೆಯನ್ನಾಗಲೀ ಅದರ ಭಾಗವನ್ನಾಗಲೀ ಪ್ರಕಟಿಸುವದು ಅಪೇಕ್ಷಣೀಯವಲ್ಲ ಆದರೆ ಸ್ವಾತಂತ್ರ್ಯದಿನದ ಸಭೆಗಳು ಎಲ್ಲೆಡೆಗಳಲ್ಲಿಯೂ ಜರಗಬೇಕಲ್ಲದೆ ನಾವು ಮೊದಲಿನ ಪ್ರತಿಜ್ಞೆಗನುಗುಣವಾಗಿ ನಿಂತಿದ್ದೇವೆಂದಿಷ್ಟೇ ತಿಳಿಸಬೇಕು."

ಜಿಲ್ಲೆಯ ಚುನಾವಣೆಯ ಸಭೆಗಳು

ಕಳೆದ ತಾ. 25ರಲ್ಲಿ ಶ್ರೀ. ಧರ್ಮಸಾಮ್ರಾಜ್ಯರ ಅಧ್ಯಕ್ಷತೆಯಲ್ಲಿ ಪುತ್ತಿಗೆಯಲ್ಲಿ ಶ್ರೀಗಳಾದ ಬಿ. ಟಿ. ರೈ, ಎಸ್. ಎಸ್. ಕಿಲ್ಲೆ, ವಕೀಲ್ ಸದಾಶಿವ ಭಟ್, ಎ. ಬಿ. ಶೆಟ್ಟಿ ಮೊದಲಾದ ಮಹನೀಯರು ಭಾಷಣಗಳನ್ನಿತ್ತರು. ಅಂದು ರಾತ್ರಿ ಮೂಡುಬಿದ್ರೆ ಅರಮನೆಯ ಬಳಿ ಶ್ರೀಮಾನ್ ಪದ್ಮರಾಜ ಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಸೇರಿದ ಸಭೆಯಲ್ಲಿ ಶ್ರೀಯುತರಾದ ವಕೀಲ್ ಜಿನರಾಜ ಹೆಗ್ಡೆ, ಎ. ಬಿ. ಶೆಟ್ಟಿ, ಧರ್ಮಸಾಮ್ರಾಜ್ಯ, ಎಂ. ಗೋಪಾಲ ಪೈ, ಎನ್. ಎಸ್. ಕಿಲ್ಲೆ, ಡಾ। ಕರಿಂಜೆ ರಾಮ ರಾವ್ ಮೊದಲಾದವರು ಭಾಷಣಗಳನ್ನಿತ್ತರು. ತಾ. 25ನೇ ರಾತ್ರಿ ಪಂಜಿಕಲ್ಲಿನಲ್ಲಿ ಸಭೆ. ಶ್ರೀಗಳಾದ ಎನ್. ಎಸ್. ಕಿಲ್ಲೆ, ಬಿ. ಟಿ. ರೈಗಳ ಬೋಧಪ್ರದ ಭಾಷಣಗಳಾದವು. ತಾ. ೨೬ರಲ್ಲಿ ಬೆಳಗ್ಗೆ ವಕೀಲ್ ಶ್ರೀ. ಕೆ. ಸದಾಶಿವ ಭಟ್ಟರು ಧ್ವಜವಂದನೆ ಮಾಡಿದರು. ಶ್ರೀ. ಎ. ಬಿ. ಶೆಟ್ಟರೇ ಮೊದಲಾದವರು ನೆರೆದಿದ್ದರು. ತಾ. ೨೭ರಲ್ಲ ಪುತ್ತೂರಿನ ಗುರುವಾಯನಕೆರೆ, ಬಂಗಾಡಿ, ಉಜ್ರೆ, ೨೯ರಲ್ಲಿ ಸುಬ್ರಹ್ಮಣ್ಯ, ಗುತ್ತಿಗಾರು, ೩೦ರಲ್ಲಿ ಎಣ್ಮೂರುಕಟ್ಟ, ಬೆರೆಪಾಡಿ, ೩೧ರಲ್ಲಿ ಕನ್ಯಾನ ಮೊದಲಾದ ಸ್ಥಳಗಳಲ್ಲಿ ಭಾಷಣಗಳಾಗಿ ಶ್ರೀಗಳಾದ ಎನ್. ಎಸ್. ಕಿಲ್ಲೆ, ಕೆ. ಆರ್. ಕಾರಂತ, ಬೆಳ್ತಂಗಡಿ ಮಂಗೇಶರಾವ್, ಮೊಳಹಳ್ಳಿ ಶಿವರಾವ್, ಮುಂತಾದ ಹಲವರು ಉಪನ್ಯಾಸಗಳನ್ನಿತ್ತರು. ಮತದಾರರು ಕೊಂಗ್ರೆಸಿಗೇ ಮತವೀಯುವ ಆಶ್ವಾಸನೆಯಿತ್ತಿರುವರು.

ಬಾಲವಾಙ್ಮಯದ ಆವಶ್ಯಕತೆ ಮತ್ತು ನಿರ್ಮಾಣದ ವಿಷಯಕವಾದ ಪ್ರಬಂಧ

ಬಾಲವಾಙ್ಮಯ

ಬೆಲೆ ಮೂರಾಣೆ

ಉಪಾಧ್ಯಾಯರ ಪ್ರಕಟನ ಸಮಿತಿ, ಉಡುಪಿ

ನಗೆಗಡಲು

ಸ್ನೇಹಿತ—ಏನಯ್ಯಾ, ನನ್ನ ಕಾಲನ್ನು ಒಂದು ಇಲಿಯು ಕಚ್ಚಿ ಗಾಯಮಾಡಿಬಿಟ್ಟದೆ. ಇದಕ್ಕೆ ಏನು ಮಾಡಲಿ.

ಗೆಳೆಯ—ಅದಕ್ಕೆ ಮಾಡೋದೇನು. ಇಲಿ ಕಡಿದ ಗಾಯವನ್ನು ಬೆಕ್ಕಿನಿಂದ ಕಡಿಸಿಬಿಡು. ತಕ್ಷಣ ಗುಣವಾಗಿ ಹೋಗುವದು.

x x x

ರೋಗಿ—ಪಂಡಿತರೇ, ಯಾಕೋ ಶ್ವಾಸ ಹೋಗುವ ಹಾಗೆ ಆಗುತ್ತೆ. ಇದಕ್ಕೆ ಏನು ಮಾಡಲಿ.

ಪಂಡಿತ—ಶ್ವಾಸ ಹೋದರೂ ವಿಶ್ವಾಸವಿರಬೇಕು. ಇದರಿಂದ ಎಷ್ಟೋ ಗುಣಗಳುಂಟು.

x x x

ಗಂಡ:-(ಬಚ್ಚಲ ಪಾಯಿಲೆಯಲ್ಲಿರುವಾಗ ಹೆಂಡತಿಯನ್ನು ಕುರಿತು) ಲೇ, ತುಂಬಾ ಬಾಯಾರಿಕೆಯಾಗುತ್ತೆ ಒಂದು ಲೋಟಾ ನೀರು ಕೊಡೇ?

ಹೆಂಡತಿ:- ಸ್ವಲ್ಪ, ತಾಳೀಂದ್ರೆ, ಹಾಲು ಆರಿಹೋಗುತ್ತೆ. ದಾಸರಿಗೆ ಕೊಟ್ಟು ಹರಿಕಥೆ ಕೇಳಿಕೊಂಡು ಬೇಗ ಬಂದುಬಿಡುತ್ತೇನೆ.

x x x

ಜ್ಯೋತಿಷ್ಯಗಾರ:-ಏನ್ರೀ ರಾಯರೇ, ಇನ್ನು ಒಂದೆರಡು ವರ್ಷಗಳೊಳಗಾಗಿ ನಿಮ್ಮ ಹೆಂಡತಿಯು ವಿಧವೆಯಾಗೋಗ್ತಾಳಲ್ಲಾ.

ರಾಯರು:-ಅವಳು ವಿಧವೆಯಾಗೋದರೆ ನನಗೇನು ಚಿಂತೆ. ಬೇರೆಯೊಬ್ಬಳನ್ನು ಮದುವೆ ಮಾಡಿಕೊಳ್ಳಲು ಸಿದ್ಧನಾಗಿದ್ದೇನೆ.

x x x

ರಾಮಯ್ಯ:—ಏನು, ಕರಿಗಿರಿರಾಯರೇ ತಾವು ಒಬ್ಬ ರಾಜಕುವರಿಯನ್ನು ವರಿಸಬೇಕೆಂದಿರುವಿರಲ್ಲಾ?

ಕರಿಗಿರಿ.—ಆಶ್ಚರ್ಯವೇನಯ್ಯ ಅದರಲ್ಲಿ ಆಗಲೇ ಅರ್ಧ ಕೆಲ್ಸವೆಲ್ಲಾ ಮುಗಿದೇ ಹೋಗಿದೆಯಲ್ಲಾ.

ರಾಮಯ್ಯ.—ಹಾಗೆಂದ್ರೆ,

ಕರಿಗಿರಿ:—ಅಂದ್ರೆ (ಗಂಭೀರವಾಗಿ) ನಾನು ಅವಳನ್ನು ಒಪ್ಪಿಸಿರುವೆನು, ಅವಳು ನನ್ನನ್ನು ಒಪ್ಪಿದರೆ ಮದುವೆ ನಾಳೆಯೇ ಸರಿ.

(ಪ್ರಜಾಮತ)

ಕಿರಿಯರ ಪ್ರಪಂಚ

೧	ನಾಡಕಥೆ ..	೦	೨	೦
೨	ಮುಂದಿನ ದೇವರು ..	೦	೨	೦
೩	ಸ್ವತಂತ್ರ ಜೀವನೋಪಾಯ	೦	೨	೬
೪	ಕುಶ-ಲವ ...	೦	೪	೦
೫	ಸಂಶಯ ಪಿಶಾಚಿ ...	೦	೬	೦
೬	ಕಾವ್ಯಸಾಮ್ರಾಜ್ಯ ...	೦	೧೨	೧
೭	ಮಧುವನ	೧	೮	೦
೮	ವ್ಯಭಿಚಾರಿಣಿ ಯಾರು	೦	೮	೦

ಕಿರಿಯರ ಪ್ರಪಂಚ, ಉಡುಪಿ.

ಕುಂದಾಪುರ ಡಿಜವಿನಿನ ಮತದಾರರಲ್ಲಿ ವಿನಂತಿ

"ಮಹಾಬಲ ಹೆಗ್ಡೆರೂ, ಎ. ಬಿ. ಶೆಟ್ಟರೂ" ಎಂಬ ಶಿರೋನಾಮವುಳ್ಳ "ದೇಶಬಂಧು" ಎಂಬ ಹೆಸರಲ್ಲಿ ಪ್ರಕಟಿಸಿದ ಕರಪತ್ರವೊಂದು ಮತ್ತು "ಮಾನ್ಯ ಎ ಬಿ ಶೆಟ್ಟರೂ ಕೊಂಗ್ರೆಸ್ಸೂ" ಎಂದು ಕೆ. ವಿ. ಶೆಟ್ಟಿ ಎಂಬವರು ಪ್ರಕಟಿಸಿದ ಇನ್ನೊಂದು ಕರಪತ್ರ ಇವೆರಡೂ ನನ್ನ ಕೈಸೇರಿರುತ್ತವೆ. ಈ ಕರಪತ್ರಗಳು ಕುಂದಾಪುರ ಡಿವಿಜನಿನ ಮತದಾರರೊಳಗೆ ಹಂಚಲ್ಪಡುತ್ತಿವೆಯೆಂದು ತಿಳಿದು ಬಂದಿರುವುದರಿಂದ ಇವುಗಳ ಕುರಿತು ಒಂದೆರಡು ಮಾತುಗಳನ್ನು ಬರೆಯಬೇಕಾಗಿದೆ.

"ಇಡೀ ಅಧಿಪತ್ಯದಲ್ಲೇ ನಮ್ಮ ಜಿಲ್ಲಾ ಬೋರ್ಡು ಅಧ್ಯಕ್ಷರಾದ ಶ್ರೀ. ಮಹಾಬಲ ಹೆಗ್ಡೆಯರಂತಹ ಸರ್ವಶ್ರೇಷ್ಠ ವ್ಯಕ್ತಿಯು ಇನ್ನೊಬ್ಬನಿಲ್ಲ. ಮತ್ತು ಶ್ರೀ. ಎ. ಬಿ. ಶೆಟ್ಟರು ಬರೇ ಸ್ವಾರ್ಥ ದೃಷ್ಟಿಯಿಂದ ನಾವು ಸಹಾ ಕೊಂಗ್ರೆಸು ಎಂತ ಹೇಳಿ ಕೊಂಗ್ರೆಸ್ ಕೋಟು ಹಾಕಿದ್ದರಿಂದ ಕೊಂಗ್ರೆಸ್ ಆಗುವುದಿಲ್ಲ." ಇಷ್ಟೇ ಮೊದಲನೆಯ ಪತ್ರದ ಸಾರಾಂಶ. ಶ್ರೀ. ದಿವಾನ್ ಬಹದ್ದೂರ್ ಹೆಗ್ಡೆಯರನ್ನು ನಾವು ವ್ಯಕ್ತಿಗತವಾಗಿ ದೂರುತ್ತ ಇಲ್ಲವೆಂದ ಬಳಿಕ ಅವರನ್ನು ಎಷ್ಟು ಹೊಗಳಿದರೂ ನಮ್ಮ ಆಕ್ಷೇಪವಿಲ್ಲ. ನಾವು ದೂರುತ್ತಿರುವುದು ಅವರು ಕಟ್ಟಿಕೊಂಡಿರುವ ಜಸ್ಟೀಸ್ ಪಕ್ಷವನ್ನೆಂಬ ವಿಷಯವನ್ನು ಮತದಾರರು ಸರಿಯಾಗಿ ತಿಳಿದರೆಂದರೆ ಸಾಕು. ಎರಡನೆಯದಾಗಿ ಶ್ರೀ. ಎ. ಬಿ. ಶೆಟ್ಟರನ್ನು ಕಾಂಗ್ರೆಸ್ ಸಂಸ್ಥೆಯಿಂದ ನ್ಯಾಯವಾಗಿ ಅಧಿಕೃತರಾದ ಸೆಂಟ್ರಲ್ ಪಾರ್ಲಿಮೆಂಟರೀ ಬೋರ್ಡಿನ ಅಧ್ಯಕ್ಷ ಶ್ರೀ ವಲ್ಲಭಬಾಯಿ ಪಟೇಲರು ಕಾಂಗ್ರೆಸ್ ಉಮೇದ್ವಾರರೆಂದು ನೇಮಿಸಿರುವಾಗ ಅವರು ಕೊಂಗ್ರೆಸ್ ಅಲ್ಲವೆಂದು ಸಾವಿರ ಕರಪತ್ರಗಳನ್ನು ಹೊರಡಿಸಿದರೂ ಅವಕ್ಕೆ ಬೆಲೆಯಿಲ್ಲವೆಂಬುವನ್ನು ಮತದಾರರು ತಿಳಿಯದೆ ಇರಲಿಕ್ಕಿಲ್ಲ.

ಕೆ. ವಿ. ಶೆಟ್ಟರೆಂಬವರು ಬರೆದ ಎರಡನೇ ಕರಪತ್ರದಲ್ಲಿ ಕಾಂಗ್ರೆಸಿನವರ ಮೇಲೆ ಕೆಲವು ಆರೋಪಗಳಿವೆ ಮತ್ತು ಇವಕ್ಕೆಲ್ಲ ಶ್ರೀ ಎ ಬಿ. ಶೆಟ್ಟರು ಕಾರಣರೆಂದು ಬರೆಯಲ್ಪಟ್ಟಿದೆ. ಇದರಲ್ಲಿ ಮುಖ್ಯವಾದ ಒಂದು ಆರೋಪವೆಂದರೆ ಕಾಂಗ್ರೆಸಿನವರು ಕಳೆದ ಜಿಲ್ಲಾ ಬೋರ್ಡು ಚುನಾವಣೆಯಲ್ಲಿ ಬ್ರಾಹ್ಮಣತೇಜೋವಧೆ ಮಾಡಿದರೆಂಬುದೇ ಇರುತ್ತದೆ. ಇದಕ್ಕೆ ದೃಷ್ಟಾಂತವೆಂದರೆ ಶ್ರೀಗಳಾದ ಹಳ್ಳಿನಾಡು ಸೂರಪ್ಪಯ್ಯ, ಪುಂಡ್ಲೀಕ ಕಮ್ತೇರು, ನಾಗಪ್ಪ ಹೊಳ್ಳರು, ಕೋಟ ಮಂಜುನಾಥ ಶ್ಯಾನುಭಾಗರು, ಪಾಂಗಾಳ ಉಪೇಂದ್ರ ನಾಯ್ಕರು ಚುನಾವಣೆಯಲ್ಲಿ ಸೋತದ್ದು ಮತ್ತು ಮಹಾಬಲ ಹೊಳ್ಳರು ಮತ್ತು ಶ್ರೀ. ಕೊಡ್ಗಿಯರನ್ನು ಉಮೇದ್ವಾರರಾಗಿ ಆರಿಸದಿದ್ದುದು. ಚುನಾವಣೆಯಲ್ಲಿ ಗೆಲ್ಲಲಿಲ್ಲವೆಂದು ಇವರು ಬರೆದಿರುವವರ ಪೈಕಿ ನಾಗಪ್ಪ ಹೊಳ್ಳರು ಕಾಂಗ್ರೆಸ್ ಪ್ರತಿನಿಧಿಯಾಗಿ ನೇಮಿಸಲ್ಪಟ್ಟಿದ್ದಿಲ್ಲವೆಂಬುದರಿಂದ ಅವರನ್ನು ಬಿಟ್ಟು ಉಳಿದ ನಾಲ್ಕು ಮಂದಿ ಹಾಗೂ ಶ್ರೀ. ಕೊಡ್ಗಿಯವರು ಈ ಹೊತ್ತು ಕಾಂಗ್ರೆಸ್ ಉಮೇದ್ವಾರಿಯ ಕಡೆಯಿಂದ ಪುನಃಪೂರ್ವಕ ಕೆಲಸಮಾಡುತ್ತಿರುವರೆಂಬುದನ್ನು ಮತದಾರರು ಲಕ್ಷ್ಯಕ್ಕೆ ತೆಗೆದುಕೊಂಡರೆ ಇವರ ಬಗ್ಗೆ ಕೆ ವಿ. ಶೆಟ್ಟರು ಮಾಡಿರುವ ಆಕ್ಷೇಪಕ್ಕೆ ಬೆಲೆಯಿಲ್ಲವೆಂಬುದು ಸ್ಪಷ್ಟವಾಗುತ್ತದೆ. ಶ್ರೀ ಮಹಾಬಲ ಹೊಳ್ಳರೂ ಕೂಡಾ ಇಂದು ಪುನಃ ಕುಂದಾಪುರ ತಾಲೂಕು ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಾಗಿ ಆರಿಸಲ್ಪಟ್ಟಿರುವುದಾಗಿ ತಿಳಿದು ಬರುತ್ತದೆ.

ಇನ್ನೊಂದು ಆರೋಪವು ಪಾರ್ಲಿಮೆಂಟರೀ ಬೋರ್ಡಿನ ಮೇಲೆ ಇರುತ್ತದೆ. ದಿವಂಗತ ಕಾರ್ನಾಡು ಸದಾಶಿವರಾಯರು, ಡಾಕ್ಟರ್ ಯು. ರಾಮರಾಯರು ಮತ್ತು ಶ್ರೀ ಸುಬ್ರಹ್ಮಣ್ಯ ಭಟ್ಟರು ಇವರನ್ನು ಆರಿಸದೆ ಇದ್ದ ವಿಚಾರ ದಿವಂಗತ ಸದಾಶಿವರಾಯರ ಕುರಿತು ನಾನು ಪ್ರತ್ಯೇಕ ಒಂದು ಲೇಖನವನ್ನು ಬರೆದಿರುವುದರಿಂದ ಇಲ್ಲಿ ವಿಸ್ತರಿಸುವ ಆವಶ್ಯಕತೆ ಇಲ್ಲ. ಇವರನ್ನು ಕೌನ್ಸಿಲುಗಳಿಂದ ಹೊರ ನಿಲ್ಲುವಂತೆ ಕೇಳಿದ ಶ್ರೀ ವಲ್ಲಭಭಾಯಿಯವರಿಗೆ ಇವರ ಪೂರ್ಣ ಪರಿಚಯವಿದ್ದು ಎಲ್ಲ ಸಂಗತಿಗಳನ್ನು ವಿಚಾರಿಸಿ ಅವರೇ ಮಾಡಿದ ತೀರ್ಮಾನವೆಂದು ಇಲ್ಲಿ ಹೇಳಿದರೆ ಸಾಕು. ಡಾ| ರಾಮರಾಯರು ಇಂದು ಮದ್ರಾಸಿನಲ್ಲಿ ಕಾಂಗ್ರೆಸ್ ಉಮೇದ್ವಾರರೇ ಇದ್ದು ಕಾಂಗ್ರೆಸಿನ ಉಮೇದ್ವಾರರಿಗಳಿಗೇನೇ ಓಟು ಕೊಡುವಂತೆ ಹೇಳುತ್ತಿದ್ದಾರೆಂದೂ ಜಸ್ಟೀಸ್ ಪಾರ್ಟಿಗೆ ಓಟುಕೊಡಬಾರದೆಂದೂ ಹೇಳುತ್ತಾರೆಂದು ಮತದಾರರು ತಿಳಿಯಬೇಕಾದುದು ಅವಶ್ಯ. ಶ್ರೀ. ಸುಬ್ರಹ್ಮಣ್ಯ ಭಟ್ಟರನ್ನು ಪಾರ್ಲಿಮೆಂಟರೀ ಬೋರ್ಡಿನವರು ಚುನಾವಣೆ ಮಾಡುವುದರಲ್ಲಿದ್ದರೂ ಅವರಾಗಿ ತಾವು ಕಾಂಗ್ರೆಸ್ ಶಿಸ್ತನ್ನು ಪಾಲಿಸುವವರಲ್ಲವೆಂದು ರುಜುಪಡಿಸಿದ್ದಕ್ಕೆ ಯಾರನ್ನು ದೂರಿಯೂ ಫಲವಿಲ್ಲ.

ಶ್ರೀಮಾನ್ ಖಂಡಿಗೆ ಕೃಷ್ಣಭಟ್ಟರು ಕಾಂಗ್ರೆಸ್ ಸ್ವತಂತ್ರಪಕ್ಷವೆಂದು ಕೆಲವರು ಮಾಡಿದ ಅನ್ಯಾಯಕ್ಕೆ ತಾನು ಸೇರಿ ದಸ್ಕತು ಹಾಕಿದ್ದು ತಪ್ಪಾಯಿತೆಂದೂ ಅಧ್ಯಕ್ಷ ಚುನಾವಣೆಯಲ್ಲಿ ತನ್ನ ಓಟನ್ನು ಕಾಂಗ್ರೆಸ್ ಉಮೇದ್ವಾರರಿಗೇ ಕೊಟ್ಟಿರುವುದಾಗಿಯೂ ಹೇಳಿ ಇವರ ಮೇಲೆ ಕಾಂಗ್ರೆಸಿನವರು ಯಾವ ಶಿಸ್ತನ್ನೂ ಜ್ಯಾರಿಗೆ ತಂದಿಲ್ಲವೆಂಬುದು ಪ್ರಸ್ತುತ ಲೇಖಕರಿಗೆ ಪ್ರಾಯಶಃ ಗೊತ್ತಿಲ್ಲ.

ಅಳಿಯಸಂತಾನದ ಬಿಲ್ಲು ಜ್ಯಾರಿಗೆ ಬಾರದಂತೆ ದಿವಾನ್ ಬಹದ್ದೂರರು ಚಳವಳಿ ಮಾಡಿಲ್ಲವೆಂದು ನಾನು ಹೇಳಿಲ್ಲ. ಜನಮತವು ಸಿದ್ಧವಿಲ್ಲವೆಂದು ಇವರು ಹಳೆ ಸಂಪ್ರದಾಯವನ್ನು ಕಟ್ಟಿಕೊಂಡು ತೋರಿಸಿದ್ದು ನಿಜವಿರಬಹುದು ಆದರೆ ಈ ರೀತಿ ಜನಮತವು ಸಿದ್ಧವಿಲ್ಲವೆಂಬುದು ಸ್ಪಷ್ಟವಾದ ಬಿಲ್ಲನ್ನು ಶ್ರೀ ಶೆಟ್ಟರು ಮುಂದೊತ್ತಲಿಲ್ಲವೆಂಬುದೂ ಅಷ್ಟೇ ಸತ್ಯವಿರುತ್ತದೆ. ಈ ಕುರಿತು ನಾನು ಕಳೆದ ಬಾರಿ ಪ್ರಕಟಿಸಿದ ಲೇಖನದಲ್ಲಿ ಯಾವ ಸಂಗತಿಗಳು ಅಬದ್ಧವೆಂದು ತೋರಿಸುವ ಬದಲು ನನಗೆ ತಪ್ಪಾಗಿ ತಿಳಿಸಿರುವರೆಂದು ಕೇವಲ ಹೇಳಿಕೆ ಮಾತ್ರ ಮಾಡುವುದರಿಂದ ಸಾರ್ಥಕವೇನು?

ಮದ್ರಾಸ್ ಎಸೆಂಬ್ಲಿ ಚುನಾವಣೆ

ನಿಮಗೆ ಯಾವುದು ಬೇಕು ಕೊಂಗ್ರೆಸ್ಸೊ? ಜಸ್ಟೀಸ್ ಪಾರ್ಟಿಯೊ?

ಇವುಗಳೆರಡರ ಪರಿಚಯ

ಕೊಂಗ್ರೆಸ್ಸು

1 ಇದು ೫೦ ವರ್ಷಗಳ ಹಿಂದೆ ನಮ್ಮ ಇಡೀ ದೇಶದ ಸ್ವಾತಂತ್ರ್ಯ ಪ್ರೇಮಿಗಳಿಂದ ಸ್ಥಾಪಿತವಾದ ಸಂಸ್ಥೆ

2 ಸ್ವಾತಂತ್ರ್ಯವನ್ನು ಗಳಿಸುವುದೇ ಇದರ ಪ್ರಾಮುಖ್ಯ ಉದ್ದೇಶ.

3 ಜಾತಿ-ಮತ ಭೇದವಿಲ್ಲದೆ ಹಿಂದೂದೇಶದ ಎಲ್ಲಾ ಜಾತಿ ಮತದವರೂ ಇದರಲ್ಲಿ ಮೆಂಬರರಾಗಿರುವರು. ಎಲ್ಲಾ ಜಾತಿ-ಮತದ ಉಮೇದ್ವಾರರನ್ನೂ ಕೊಂಗ್ರೆಸು ಚುನಾವಣೆಗೂ ನಿಲ್ಲಿಸಿಯದೆ.

4 ಕೊಂಗ್ರೆಸು ಸರ್ವ-ಜಾತಿ ಮತದವರ ಮತ್ತು ಮುಖ್ಯವಾಗಿ ನಮ್ಮ ಬಡ ಬಂಧುಗಳ ಸರ್ವತೋಮುಖ ಅಭಿವೃದ್ಧಿಗಾಗಿ ದುಡಿಯುತ್ತಿದೆ.

5 ಸ್ವಾರ್ಥತ್ಯಾಗ, ದೇಶ ಸೇವೆ, ಸ್ವಾತಂತ್ರ್ಯ ಹೋರಾಟದಿಂದಾಗಿ ಕಾರಾಗೃಹವಾಸ ಇವುಗಳಿಂದಾಗಿ ತನ್ನ ಉಮೇದ್ವಾರಿಕೆಗೆ ವೋಟು ಕೊಡಿರೆಂದು ಕೇಳುತ್ತಿದೆ.

6 ಕೊಂಗ್ರೆಸಿನ ಈ ಹೊತ್ತಿನ ಮುಖಂಡರು ತ್ಯಾಗರತ್ನ ಮಹಾವಿಭೂತಿ ಪುರುಷರಾದ ಪಂಡಿತ್ ಜವಾಹಿರಲಾಲ್‌ನೇಹರು.

7 ಕೊಂಗ್ರೆಸ್ಸಿನಲ್ಲಿ ಇಂದು ೬೫೦೦೦೦ಕ್ಕೆ ಮಿಕ್ಕಿದ ಮೆಂಬರರು ಇದ್ದು, ಹಿಂದೂದೇಶದಲ್ಲಿ ಸ್ವಾತಂತ್ರ್ಯಕ್ಕೆ ಹೋರಾಡುವ ಏಕೈಕ ಸಂಸ್ಥೆಯೆಂತ ಹೆಸರುಗೊಂಡ ಸಂಸ್ಥೆ ಕೊಂಗ್ರೆಸ್ಸು ನಮ್ಮ ಜಿಲ್ಲೆಯಲ್ಲಿ 6000ಕ್ಕೆ ಮಿಕ್ಕಿ ಕೊಂಗ್ರೆಸು ಮೆಂಬರರು ಇರುತ್ತಾರೆ. ಕೊಂಗ್ರೆಸ್ ಮೆಂಬರನಾಗಲೀ ಉಮೇದ್ವಾರನಾಗಲೀ ತಾನು ಕೊಂಗ್ರೆಸಿನವನೆಂತ ಹೆಮ್ಮೆಯಿಂದ ಹೇಳುತ್ತಾನೆ.

8 ಕೊಂಗ್ರೆಸು ಈ ಕೆಳಗಿನ ಸುಧಾರಣೆಗಳಿಗೂ ಹೋರಾಡುತ್ತಿದೆ.

(a) ರೈತರಿಗೆ ಕಂದಾಯ ಕಡಿಮೆ ಮಾಡುವುದಕ್ಕಾಗಿ.

(b) ಎಲ್ಲರಿಗೂ ಕಡ್ಡಾಯ ಶಿಕ್ಷಣಕೊಡಬೇಕಾಗಿ ಮತ್ತು ನಿರಕ್ಷರತೆಯನ್ನು ಹೋಗಲಾಡಿಸುವದಕ್ಕಾಗಿ.

(c) ಅಬ್ಕಾರಿ ಇಲಾಖೆಯನ್ನೇ ತೆಗೆದು ಕಳ್ಳು ಸಾರಾಯಿಯಿಂದ ಬಡಜನರು ಹಾಳಾಗದಂತೆ ಮಾಡಬೇಕಾಗಿ

ಜಸ್ಟಿಸ್ ಪಾರ್ಟಿ

1 ಇದು 20 ವರ್ಷಗಳ ಹಿಂದೆ ನಮ್ಮ ಅಧಿಪತ್ಯದ ಕೆಲವೇ ಶ್ರೀಮಂತ ಅಬ್ರಾಹ್ಮಣ ಜಮೀನುದಾರರಿಂದ ಸ್ಥಾಪಿಸಲ್ಪಟ್ಟ ಪಾರ್ಟಿ.

2 ಸರಕಾರಿ ಹುದ್ದೆಗಳಲ್ಲಿರುತ್ತಿರುವ ನಮ್ಮ ಬ್ರಾಹ್ಮಣರನ್ನು ಅಲ್ಲಿಂದ ತಳ್ಳಿ ಅವನ್ನು ತಮ್ಮ ಕೂಟದ ಕೆಲವು ಅಬ್ರಾಹ್ಮಣರಿಗೆ ಗಳಿಸಿಕೊಳ್ಳುವುದೇ ಇದರ ಪ್ರಾಮುಖ್ಯ ಉದ್ದೇಶ.

3 ಬ್ರಾಹ್ಮಣರಾರೂ ಈ ಪಾರ್ಟಿಯಲ್ಲಿರುವುದಿಲ್ಲ. ಇಡೀ ಅಧಿಪತ್ಯದಲ್ಲಿ ಒಬ್ಬ ಬ್ರಾಹ್ಮಣನನ್ನಾದರೂ ಈ ಪಾರ್ಟಿಯವರು ಚುನಾವಣೆಗೆ ನಿಲ್ಲಿಸಿರುವುದು ಕಂಡು ಬರುವುದಿಲ್ಲ.

4 ಬ್ರಾಹ್ಮಣ ತೇಜೋವಧೆ ಮತ್ತು ಬ್ರಾಹ್ಮಣರನ್ನು ಸರಕಾರಿ ಹುದ್ದೆಗಳಿಂದಲೂ ಮತ್ತು ರಾಜಕೀಯ ಕ್ಷೇತ್ರದಿಂದಲೂ ಹೊರಗೆ ಅಟ್ಟುವುದಕ್ಕಾಗಿ ದುಡಿಯುತ್ತಿದೆ.

5 ಅಧಿಕಾರ ಆಲಾಸೆ, ಸುಖಲೋಲುಪತೆ ಸ್ವಾರ್ಥಸಾಧನೆ, ಬ್ರಾಹ್ಮಣದ್ವೇಷ, ಅಧಿಕಾರ ಹಂಗಿನ ಧೈರ್ಯ ಇವುಗಳಿಂದ ನಿಮ್ಮ ವೋಟು ಕೇಳುತ್ತಿದೆ.

6 ಜಸ್ಟಿಸ್‌ಪಾರ್ಟಿಯ ಇಂದಿನ ಮುಖಂಡರು ಅಂಥಾ ಪಂಡಿತ್ ಜವಾಹಿರ್‌ಲಾಲ್ ನೇಹರವರಿಗೆ ತನ್ನ ಸಂಸ್ಥಾನದಲ್ಲಿ ಪ್ರವಾಸಮಾಡುವಾಗ್ಗೆ ಆನೆಗಳನ್ನು ಎದುರು ನಿಲ್ಲಿಸಿ ದೋಲುಹೊಡಿಸಿ ಅಪಮಾನ ಮಾಡಿದ ಬೊಬ್ಬಿಲಿರಾಜರು.

7 ಜಸ್ಟಿಸ್‌ಪಾರ್ಟಿಯ ಮೆಂಬರಿಕೆಯ ಅಂಕೆ ಹೊರಬಿದ್ದಿದೇಯಿಲ್ಲ. ಹೆಚ್ಚೆಂದರೂ 500 ಯಾ 1000ಕ್ಕಿಂತ ಹೆಚ್ಚು ಮೆಂಬರರು ಇದರಲ್ಲಿ ಇಲ್ಲ. ನಮ್ಮ ಜಿಲ್ಲೆಯಲ್ಲಂತೂ ೩ ಯಾ 4 ಜನ ಮೆಂಬರಕ್ಕಿಂತ ಜಾಸ್ತಿಯಿಲ್ಲ. ಅವರು ಕೂಡಾ ಅದನ್ನು ಪಬ್ಲಿಕಿನಲ್ಲಿ ಹೇಳಲು ನಾಚಿಕೆಪಡುತ್ತಾರೆ. ಅಷ್ಟು ಅಸಹ್ಯವಾದ ಪಾರ್ಟಿಯೆಂದು ಅವರಿಗೇ ಗೊತ್ತು.

8 ಜಸ್ಟಿಸುಪಾರ್ಟಿಯವರು ತಮ್ಮ 15 ವರ್ಷದ ಆಡಳಿತೆಯಲ್ಲಿ ಈ ಕೆಳಗಿನ ಕಾರ್ಯ ಮಾಡಿರುತ್ತಾರೆ.

(a) ಕಳೆದ ಹೊಸ ಸೆಟ್ಲ್‌ಮೆಂಟಿನಲ್ಲಿ ನಮಗೆ ತೆರ್ವೆ ಏರಬೇಕೆಂದು ವೋಟು ಕೊಟ್ಟಿರುತ್ತಾರೆ.

(b) ಮುಂಚೆ ಇರುತ್ತಿದ್ದ ಶಾಲೆಗಳನ್ನೇ ಕಡಿಮೆ ಮಾಡಿರುತ್ತಾರೆ. ಓದುಬರಹ ಇಲ್ಲದವರ ಸಂಖ್ಯೆಯು 1921ರಲ್ಲಿ ಇದ್ದದ್ದಕ್ಕಿಂತ ಇವರ 15 ವರ್ಷದ ಆಡಳಿತೆಯಿಂದಾಗಿ ಈಗ ಹೆಚ್ಚಾಗಿರುತ್ತದೆ.

(c) ಅಬ್ಕಾರಿ ಇಲಾಖೆಯ ಉತ್ಪತ್ತಿಯನ್ನು ಬಹಳ ವೃದ್ಧಿಸಿದ್ದಾರೆ. ಬಡವನರ ರಕ್ತವನ್ನು ಆ ವಲಕೆ ಹೀರುತ್ತಿದ್ದಾರೆ

ನಿಮ್ಮ ಮುಂದೆ ವೋಟು ಕೇಳಲಿಕ್ಕೆ ನಿಂತಿರುವ ಈ ಎರಡು ಪಾರ್ಟಿಗಳ ಇಷ್ಟರ ಮಟ್ಟಿನ ಪರಿಚಯವೇ ನೀವು ಯಾವ ಪಾರ್ಟಿಗೆ ವೋಟುಬೇಕೆಂತ ನಿರ್ಣಯಿಸಲು ಸಾಕು ಎಂಬುದು ಸ್ವಯಂ ವ್ಯಕ್ತ.

ವ್ಯಕ್ತಿಗಳ ತಾರತಮ್ಯದ ಮತ್ತು ಜಾತಿಯ ಕುರಿತು ವೋಟರರು ಯೋಚಿಸುವುದೇ ಅಗತ್ಯವಿಲ್ಲ. ಮತ್ತು ಅದು ಸಾಧ್ಯವೂ ಇಲ್ಲ. ಏಕೆಂದರೆ ಒಂದುವೇಳೆ ಜಸ್ಟಿಸ್ ಪಾರ್ಟಿಯವನು ಸ್ವಜಾತಿಯವನೇ ಆಗಲೀ, ಎಮರಾಳಿಯಿಂದ ಬುದ್ಧಿವಂತನೇ ಆಗಿರಲೀ 216 ಮೆಂಬರರು ಇರುವ ಎಸೆಂಬ್ಲಿಯಲ್ಲಿ ಆತನೊಬ್ಬನಿಂದ ಪಾರ್ಟಿಯ ಸಹಾಯವಿಲ್ಲದೆ ಯೇನೂ ಕೆಲಸಮಾಡಲು ಖಂಡಿತವಾಗಿಯೂ ಸಾಧ್ಯವಿಲ್ಲ. ಜಾತಿಯನ್ನು ನೋಡಿ ವೋಟುಕೊಟ್ಟು ಕಳುಹಿಸಲಿಕ್ಕೆ ಎಸೆಂಬ್ಲಿಯು ಜಾತಿಯ ಪ್ರದರ್ಶನಾಲಯವಲ್ಲ. ಪಾರ್ಟಿ ಹಿಡಿದೇ ಯೆಲ್ಲಾ ಕೆಲಸವೂ ಆಗತಕ್ಕದ್ದು. ಈ ವಿಷಯವನ್ನು ಬರುವವಾರ ಪ್ರತ್ಯೇಕ ಲೇಖನದಲ್ಲಿ ಚರ್ಚಿಸಲಾಗುವುದು

ಕಾರ್ಕಳ,
21-1-'37

ಕೆ. ಮಹಾಬಲ ಹೆಗ್ಡೆ, B. A., B. L.
ಸಕ್ರೆಟರಿ,
ಕಾರ್ಕಳ ತಾಲೂಕು ಕೊಂಗ್ರೆಸು ಪಾರ್ಲಿಮೆಂಟರಿ ಬೋರ್ಡ್.

ಕಳೆದ ಜಿಲ್ಲಾಬೋರ್ಡು ಅಧ್ಯಕ್ಷರ ಚುನಾವಣೆಯ ವಿಚಾರವನ್ನು ಶ್ರೀ ದಿವಾನ್ ಬಹದ್ದೂರ್ ಮಹಾಬಲ ಹೆಗಡೆರು ಹೇಗೆ ಯಾರೆಲ್ಲರ ಸಹಾಯದಿಂದ ಗೆದ್ದರೆಂಬುದು ಇಡೀ ಜಿಲ್ಲೆಗೇ ಗೊತ್ತಿರುವಾಗ ಪುನಹ ಚರ್ಚಿಸುವ ಅಗತ್ಯವಿಲ್ಲ.

ಶ್ರೀ ಎ. ಬಿ. ಶೆಟ್ಟರು ಕಾಂಗ್ರೆಸಿನ ಶಕ್ತಿಯನ್ನು ಸ್ವಾರ್ಥಕ್ಕಾಗಿ ಉಪಯೋಗಿಸಿಕೊಳ್ಳುತ್ತಿದ್ದಾರೆಂದು ಶ್ರೀ ಕೆ. ವಿ. ಶೆಟ್ಟರು ಹೆದರುತ್ತಾರೆ. ಜಿಲ್ಲೆಯ ಸ್ವಯಂಸೇವಕರ ರಕ್ತಪಾತದಿಂದ ಸ್ಥಾಪಿಸಲ್ಪಟ್ಟ ಕಾಂಗ್ರೆಸ್ ಶಕ್ತಿಯು ಎಂಥಶಕ್ತಿ ಎಂಬುದನ್ನು ಶ್ರೀ ಕೆ. ವಿ. ಶೆಟ್ಟರು ಸರಿಯಾಗಿ ತಿಳಿದಿಲ್ಲ. ಅದು ದುರುಪಯೋಗಗೊಳಿಸಲು ಯಾರಿಗೂ ಸಿಕ್ಕತಕ್ಕ ಶಕ್ತಿಯಲ್ಲ. ಅದರ ಹತ್ತಿರ ಸುಳಿದವರನ್ನು ಪುನೀತರನ್ನಾಗಿ ಮಾಡುತ್ತದೆ. ಕಾಂಗ್ರೆಸ್ ಕಾರ್ಯವು ಯೋಗ್ಯ ರೀತಿಯಿಂದ ನಡೆಯುತ್ತಿದೆಯೆಂದು ಶ್ರೀ. ಕೆ. ವಿ. ಶೆಟ್ಟರಿಗೆ ನಾನು ಹಳೆಯ ಕಾಂಗ್ರೆಸ್ ಕೆಲಸಗಾರರ ಪರವಾಗಿ ಆಶ್ವಾಸನ ಕೊಡಬಲ್ಲೆನು. ಸಂಗತಿಗಳನ್ನೇ ಸರಿಯಾಗಿ ವಿಚಾರಿಸಿ ಶ್ರೀ. ಕೆ. ವಿ. ಶೆಟ್ಟರೂ ಅವರಂತೆ ಅಭಿಪ್ರಾಯವುಳ್ಳವರೂ ಮತದಾರರೂ ಕಾಂಗ್ರೆಸಿಗೇನೇ ವಿಜಯವಾಗುವಂತೆ ಯತ್ನಿಸಬೇಕಾಗಿ ಪ್ರಾರ್ಥಿಸುತ್ತೇನೆ.

ಹಿ. ರಾಮರಾಯ ಸುಳ್ಯ.

ಹೊಸದು! • **ಐರಾವತ** • ತೀರಾ ಹೊಸದು!!

ಇದರಲ್ಲಿ—ಕಾಮಶಾಸ್ತ್ರ, ಕೈಗಾರಿಕೆಯ ವಿಷಯು, ಇಂದ್ರಜಾಲ-ಮಹೇಂದ್ರಜಾಲ, ಕಾಯದೇಭಾಗ, ತಂತ್ರ-ಮಂತ್ರ-ಯಂತ್ರ, ಸರ್ವ ಮುಹೂರ್ತ ವಿಷಯು, ವೈದ್ಯಭಾಗ. ಈ ಪ್ರಕಾರ ೭ ಪ್ರಕರಣಗಳಿದ್ದು ಅತ್ಯಂತ ಮಹತ್ವದ ವಿಷಯಗಳು ಅಡಕವಾಗಿವೆ. ಇದರ ಬೆಲೆ ರೂ- ೧-೦-೦ ವಿ. ಪಿ. ಚಾರ್ಜು ಬೇರೆ.

ವಿಳಾಸ:— ಎಸ್. ಸಿ. ಸಾಲಿಮಠ ಅಂಡ್ ಸನ್ಸ್, ಗದಗ ಸಿಟಿ.

ಅನೇಕ ಮರ್ಮ ವಿದ್ಯೆಗಳಿಂದೊಡಗೂಡಿದ

— ಚಿಂತಾರತ್ನ —

ಇದರಲ್ಲಿ ಜಾತಕಫಲ, ಕೈಗಾರಿಕೆಯ ವಿಷಯು, ಇಂದ್ರಜಾಲ, ಮಹೇಂದ್ರಜಾಲ, ಯಕ್ಷಿಣಿ ಮೊದಲಾದ ವಿದ್ಯೆಗಳು ಇರುತ್ತವೆ. ಒಂದೊಂದು ವಿಷಯುಕ್ಕೆ ಎಷ್ಟು ಬೆಲೆ ಕೊಟ್ಟರೂ ಸಾಲದು.

೧ ಸಬಕಾರವನ್ನು ತಯಾರಿಸುವ ರೀತಿ
೨ ವೇಣಬತ್ತಿ ತಯಾರಿಸುವ ರೀತಿ
೩ ಕಾಸ್ಟಿಕ್ ಸೋಡಾ ತಯಾರಿಸುವದು
೪ ಬಿಸ್‌ಕ್ಯೂಟ ತಯಾರಮಾಡುವದು
೫ ದಶಾಂಗ ತಯಾರಮಾಡುವದು
೬ ಪೆಪ್ಪರಮೆಂಟ ಮಾಡುವದು
೭ ಧೂಪದ ಘಟ್ಟಿ ಮಾಡುವದು
೮ ಭಂಗಾರ ಮಾಡುವದು
೯ ಬೆಳ್ಳಿ ತಯಾರಮಾಡುವದು
೧೦ ಜರ್ಮನ್ ಶಿಲ್ವರ ಥಾತು
೧೧ ಊದಿನಕಡ್ಡಿ ತಯಾರಮಾಡುವದು
೧೨ ತಗಡಿನ ಪಾಟಿ ತಯಾರಮಾಡುವದು
೧೩ ಕುಂಕುಮವನ್ನು ತಯಾರಿಸುವದು
೧೪ ಹಸಿ ಕುಂಕುಮ ತಯಾರಿಸುವದು
೧೫ ಗೋದೀಸರಿ ಕೆಡದಂತೆ ಮಾಡುವದು
೧೬ ಬುಕ್ಕಿಟ್ಟು ಮಾಡುವದು
೧೭ ಮೀನಸರಿ ಯಾವಾಗಲೂ ನೀರಾಗಿರುವಂತೆ ಮಾಡುವದು
೧೮ ಅಷ್ಟಗಂಧ ಸಾಮಾನುಗಳು
೧೯ ಭರ್ಪ ತಯಾರಮಾಡುವದು
೨೦ ಕಟ್ಟಿಗೆ ಲೋಹಗಳಿಗೆ ಹಚ್ಚುವ ಬಣ್ಣಾ ಮಾಡುವದು
೨೧ ಕಾಗದವನ್ನು ಮಾಡುವದು
೨೨ ಮೆಂಥೀಲ ಎಣ್ಣೆ ತಯಾರಿಸುವದು
೨೩ ಕನ್ನಡಿಯ ಮೇಲೆ ಬರೆಯುವದು
೨೪ ದಂತಮಂಜನ ಮಾಡುವದು
೨೫ ರಕ್ತಶುದ್ಧಿ, ಧಾತುವೃದ್ಧಿ ಔಷಧಿ
೨೬ ಕಸ್ತೂರಿ ಮಾತ್ರೆ ಮಾಡುವದು
೨೭ ಕುಚಪ್ರಭಾತಕ್ಕೆ ಔಷಧ
೨೮ ಬಾಲಾಮೃತ ಮಾಡುವದು
೨೯ ಶಿಷ್ನವೃದ್ಧಿಗೆ ಔಷಧ
೩೦ ಪರಬತ್ತು ಮಾಡುವದು
೩೧ ಛಳಿಜ್ವರದ ಗುಳಿಗೆ ಮಾಡುವದು
೩೨ ಬೂಟಪಾಲೀಸ ಮಾಡುವದು
೩೩ ಮನೆ, ವರಾರ, ಅಂಗಡಿ ಮೊದಲಾದುವುಗಳಿಗೆ ಗೆದ್ದಲಿ ಹತ್ತದಂತೆ ಮಾಡುವದು
೩೪ ಹುರುಕು ಖಜ್ಜಿ ಮುಲಾಮು ಮಾಡುವದು
೩೫ ನಾಸೀಪುಡಿ ಮಾಡುವದು
೩೬ ಮನೆ, ವಠಾರ, ಅಂಗಡಿಗಳಲ್ಲಿ ಇಲಿ, ಹೆಗ್ಗಣ ಮೊದಲಾದವುಗಳು ಇರದಂತೆ ಮಾಡುವದು
೩೭ ಜರ್ದಾತಂಬಾಕ ಮಾಡುವದು
೩೮ ಒದನೆ, ಕುಂಬಳ ಮುಂತಾದ ಕಾಯಿಗಳಿಗೂ, ಮಾವು, ಶೇಬು ಮುಂತಾದ ಹಣ್ಣುಗಳಿಗೂ ಬೀಜವಿಲ್ಲದೆ ದೊಡ್ಡವಾಗುವದು
೩೯ ಸಿಮೆಂಟ್ ತಯಾರಿಸುವದು
೪೦ ಬಿಳೀ ಹೂಗಳು ಕೆಂಪಾಗುವಂತೆ ಗಿಡಗಳನ್ನು ತಯಾರಿಸುವದು
೪೧ ಕೆಂಪು ಹೂಗಳು ಬೆಳ್ಳಗಾಗುವಂತೆ ಗಿಡಗಳನ್ನು ತಯಾರಿಸುವದು
೪೨ ಇಸ್ಪೀಟಿನ ಚಮತ್ಕಾರ
೪೩ ಮುಖ ನೋಡಿಕೊಳ್ಳುವ ಕನ್ನಡಿ ಮಾಡುವದು
೪೪ ಸುವಾಸನೆ ಎಣ್ಣೆ ತಯಾರಿಸುವದು
೪೫ ಕೇದಿಗೆ ದವನದಣ್ಣೆ ಮಾಡುವದು
೪೬ ಯಾವ ಗಿಡವಾದರೂ ಹುಟ್ಟುತ್ತಲೆ ಹೂವು ಬಿಡುವಂತೆ ಮಾಡುವದು
೪೭ ಗಂಧಕದ ಬಟ್ಟಲ ತಯಾರಿಸುವದು
೪೮ ಕರ್ಪೂರ ಮಾಡುವದು
೪೯ ಬ್ರೆಡ್ಡು ತಯಾರಿಸುವದು
೫೦ ನೂಲ ಬಟ್ಟೆಗೆ ಬಣ್ಣಾ ಹಾಕುವದು
೫೧ ಕಪ್ಪು, ಕೆಂಪು, ಹಸುರು, ಹಳದಿ ಬಣ್ಣಾ ತಯಾರಿಸುವದು
೫೨ ಬರ್ಥ ಕಂಟ್ರೋಲ
೫೩ ಅರಗಿನ ಬಣ್ಣಾ ತಯಾರಿಸುವದು
೫೪ ಗಿಲೀಟ ಮಾಡುವದು
೫೫ ತಾಮ್ರದ ಮೇಲೆ ಭಂಗಾರದ ಗಿಲೀಟು ಮಾಡುವದು
೫೬ ತಾಮ್ರ, ಹಿತ್ತಾಳೆಗೆ ಬೆಳ್ಳಿ ಗಿಲೀಟು ಮಾಡುವದು
೫೭ ಕಡ್ಡಿ ಪೆಟ್ಟಿಗೆ ತಯಾರಿಸುವದು
೫೮ ರೋಜವಾಟರ ತಯಾರಿಸುವದು

ಇತ್ಯಾದಿ ೧೭೦ ವಿಷಯಗಳಿವೆ.
ಸ್ಥಳ ಸಂಕೋಚ ಮೂಲಕ ಎಲ್ಲವನ್ನೂ ಕೊಟ್ಟಿಲ್ಲ.
ಬೆಲೆ ೧ ರೂಪಾಯಿ . . (ವಿ. ಪಿ. ವೆಚ್ಚ ಬೇರೆ)

ಎಸ್. ಸಿ. ಸಾಲಿಮಠ, ಪ್ರಿಂಟರ, ಗದಗ
ಇವರಿಂದ ಬರೆಯಲ್ಪಟ್ಟ

ಕಾಮಕಳಾಶಾಸ್ತ್ರ

ಪ್ರತಿ ಒಬ್ಬ ರಸಿಕರು ಅವಶ್ಯ ಓದಬೇಕಾದ
-.- ಈ ಪುಸ್ತಕದೊಳಗಿನ ವಿಷಯುಗಳು -.-

೧ ಪುರುಷ ಸಾಮುದ್ರಿಕ ಲಕ್ಷಣ ೨ ಸ್ತ್ರೀ ಸಾಮುದ್ರಿಕ ಲಕ್ಷಣ. ೩ ಶಶಕ ಜಾತಿ ಪುರುಷನ ಲಕ್ಷಣ. ೪ ಮೃಗಜಾತಿ ಪುರುಷನ ಲಕ್ಷಣ. ೫ ವೃಷಭಜಾತಿ ಪುರುಷನ ಲಕ್ಷಣ. ೬ ಅಶ್ವಜಾತಿ ಪುರುಷನ ಲಕ್ಷಣ ೭ ಪದ್ಮಿನಿಜಾತಿ ಸ್ತ್ರೀಯಳ ಲಕ್ಷಣ. ೮ ಚಿತ್ರಿಣಿಜಾತಿ ಸ್ತ್ರೀಯಳ ಲಕ್ಷಣ. ೯ ಶಂಖಿನಿಜಾತಿ ಸ್ತ್ರೀಯಳ ಲಕ್ಷಣ. ೧೦ ಹಸ್ತಿನಿಜಾತಿ ಸ್ತ್ರೀಯಳ ಲಕ್ಷಣ. ೧೧ ಯಾವ ಯಾವ ಜಾತಿ ಪುರುಷನಿಗೆ, ಯಾವ ಯಾವ ಜಾತಿ ಸ್ತ್ರೀಯಳು ಯೋಗ್ಯ. ೧೨ ಮತ್ತು ಅವರಿಂದ ಹುಟ್ಟಿದ ಮಕ್ಕಳ ಫಲವಿಚಾರ (ಜಾತಕ.) ೧೩ ಯಾವ ಯಾವ ಜಾತಿ ಸ್ತ್ರೀಯರಿಗೆ ಯಾವ ಯಾವ ತಿಥಿಯು ದಿವಸ ಭೋಗೇಚ್ಛಾ ಉಂಟಾಗುತ್ತವೆಂಬುದನ್ನು ತಿಳಿಯುವದು. ೧೪ ಯಾವ ಯಾವ ಸ್ತ್ರೀಯರಿಗೆ ಎಷ್ಟೆಷ್ಟು ಹೊತ್ತಿಗೆ ಭೋಗೇಚ್ಛಾ ಉಂಟಾಗುತ್ತದೆಂಬದನ್ನು ತಿಳಿಯುವದು. ೧೫ ಯಾವ ಯಾವ ಜಾತಿ ಸ್ತ್ರೀಯರಿಗೆ ಯಾವ ಯಾವ ತಿಥಿಯು ದಿವಸ ಯಾವ ಯಾವ ಅವಯವದಲ್ಲಿ ಕಾಮವು ಇರುತ್ತದೆಂಬುದನ್ನು ತಿಳಿಯುವ ಕ್ರಮವು. ೧೬ ಚಂದ್ರಕಲೆಯು ಸ್ಥಾನಗಳು. ೧೭ ಸ್ತ್ರೀವಶೀಕರಣ. ೧೮ ಪುರುಷವಶೀಕರಣ. ೧೯ ಪದ್ಮಿನಿ ಸ್ತ್ರೀಯಳನ್ನು ವಶಮಾಡಿಕೊಳ್ಳುವ ಉಪಾಯ. ೨೦ ಚಿತ್ರಿಣಿ ಸ್ತ್ರೀಯಳನ್ನು ವಶಮಾಡಿಕೊಳ್ಳುವ ಉಪಾಯ. ೨೧ ಶಂಖಿನಿ ಸ್ತ್ರೀಯಳನ್ನು ವಶಮಾಡಿಕೊಳ್ಳುವ ಉಪಾಯ. ೨೨ ಹಸ್ತಿನಿ ಸ್ತ್ರೀಯಳನ್ನು ವಶಮಾಡಿಕೊಳ್ಳುವ ಉಪಾಯ. ೨೩ ಭೋಗಕ್ಕೆ ಯೋಗ್ಯ ಸ್ಥಳ. ೨೪ ಭೋಗಕ್ಕೆ ಅಯೋಗ್ಯ ಸ್ಥಳ. ೨೫ ಮೈಥುನಕ್ಕೆ ಅಯೋಗ್ಯವಾದ ವೇಳೆ. ೨೬ ಮೈಥುನಕ್ಕೆ ಅಯೋಗ್ಯ ಸ್ತ್ರೀಯರು. ೨೭ ಪರಸ್ತ್ರೀ ಗಮನದಿಂದಾಗುವ ಹಾನಿ. ೨೮ ಸುಗಂಧ ದ್ರವ್ಯ ೨೯ ಕಂಕುಳದೊಳಗಿನ ದುರ್ಗಂಧ ಹೋಗುವುದಕ್ಕೆ. ೩೦ ಬಾಯಿ ದುರ್ಗಂಧ ಹೋಗುವುದಕ್ಕೆ. ೩೧ ಮಡಿಬಕ್ಕೆಗೆ. ೩೨ ಕೇಶರಂಜನಕ್ಕೆ. ೩೩ ತಿಗಳಿನೆಕ್ಕಿದಕ್ಕೆ. ೩೪ ಕೂದಲು ಉದುರುವುದಕ್ಕೆ. ೩೫ ಶರೀರದ ಕಪ್ಪುಬಣ್ಣಕ್ಕೆ. ೩೬ ಕುಚವೃದ್ಧಿಗೆ. ೩೭ ಸ್ತ್ರೀಯರಲ್ಲಿಯ ಅವಸ್ಥೆಗಳು. ೩೮ ಅವಸ್ಥೆ ಮೇಲಿಂದ ಪ್ರೇಮದ ಇರುವಿಕೆ. ೩೯ ಮೈಥುನದ ಸುಖದಲ್ಲಿ ಅಂತರ ಬೀಳುವ ಕಾರಣ. ೪೦ ದಂಪತಿಗಳು ಕೂಡುವ ದಿಕ್ಕಿನ ಫಲವು. ೪೧ ಸತಿಪತಿಗಳು ಕೂಡುವ ದಿವಸ ಫಲ. ೪೨ ಗರ್ಭ ನಿಂತ ದಿವಸ ಫಲ. ೪೩ ಗರ್ಭ ನಿಂತ ಕಾಲ ಫಲ ೪೪ ಸ್ತ್ರೀಯರ ಜಾತಿ ಮೇಲಿಂದ ಕೂಸಿನ ಲಕ್ಷಣ ೪೫ ವಿಕಾಶಯೋನಿಗೆ ಉಪಾಯ. ೪೬ ಯೋನಿ ಸಂಕೋಚಕ್ಕೆ. ೪೭ ಶಿಶ್ನ ವೃದ್ಧಿಗೆ. ೪೮ ಸ್ತ್ರೀಯರಿಗೆ ಮೈಥುನವು ಬೇಗನೆ ಸಾಕಾಗುವಂತೆ ಮಾಡುವ ಉಪಾಯ. ೪೯ ಪುರುಷರಿಗಿಂತ ಮೊದಲು ಸ್ತ್ರೀಯರ ರೇತಸ್ಖಲನವಾಗುವ ಉಪಾಯ. ೫೦ ಪುರುಷರ ರೇತಸ್ಸು ಬೇಗ ಬೀಳಬಾರದೆಂಬುದಕ್ಕೆ ಉಪಾಯ. ೫೧ ವಾಜಿಕರಣ ಪ್ರಯೋಗ. ೫೨ ಸ್ತ್ರೀಯರನ್ನು ಜಯಿಸುವುದಕ್ಕೆ. ೫೩ ಬಹಳ ಮುಟ್ಟಾಗುತ್ತಿದ್ದರೆ. ೫೪ ಸಂತತಿ ಪ್ರತಿಬಂಧಕ ಉಪಾಯ. ೫೫ ಮುಟ್ಟು ತಡೆದಿದ್ದರೆ ೫೬ ಗರ್ಭಾಶಯ ಶುದ್ಧಿಗೆ. ೫೭ ಗರ್ಭಧಾರಣಕ್ಕೆ. ೫೮ ಗರ್ಭಪಾತಕ್ಕೆ ಉಪಾಯ.

ಇತ್ಯಾದಿ ೧೭೦ ವಿಷಯುಗಳಿವೆ. ಸ್ಥಳ ಸಂಕೋಚ ಮೂಲಕ ಎಲ್ಲವನ್ನೂ ಕೊಟ್ಟಿಲ್ಲ.
ಬೆಲೆ ೧ ರೂಪಾಯಿ (ವಿ. ಪಿ. ವೆಚ್ಚ ಬೇರೆ)

ವಿಳಾಸ:—ಎಸ್. ಸಿ. ಸಾಲಿಮಠ ಅಂಡ್ ಸನ್ಸ್, ಗದಗ ಸಿಟಿ.

ದಕ್ಷಿಣ ಕನ್ನಡವು ಹೇಗಿದೆ?

ಮದ್ರಾಸ್ ಲೆಜಿಸ್ಲೇಟಿವ್ ಎಸೆಂಬ್ಲಿಯ ಚುನಾವಣೆಯಲ್ಲಿ ದಕ್ಷಿಣ ಕನ್ನಡದಲ್ಲಿ ಎದ್ದ ಉತ್ಸಾಹವು ಶ್ಲಾಘನೀಯವಿದೆ. ಕೊಂಗ್ರೆಸು ಚುನಾವಣೆಯಲ್ಲಿ ಕೈಹಾಕುವದೆಂದಾದೊಡನೆ ಎಸೆಂಬ್ಲಿಗೆ ಹೋಗುವ ಆಸೆಯಿದ್ದವರೆಲ್ಲಾ ಕೊಂಗ್ರೆಸಿನ ಆಶ್ರಯಪಡೆಯಬೇಕೆಂಬ ಆಸೆಯಿಂದ ಪ್ರಯತ್ನಿಸಹತ್ತಿದರು. ಇದರಿಂದ ಪಾರ್ಲಿಮೆಂಟರೀ ಬೋರ್ಡಿನವರಿಗೆ ಉಮೇದುವಾರರನ್ನು ಆರಿಸುವುದು ಬಹಳ ಕಷ್ಟಕ್ಕಿಟ್ಟಿತು. ಕೊಂಗ್ರೆಸಿನ ಕೆಲವು ದೃಢವಾದ ಸೂತ್ರಗಳ ಆಧಾರದ ಮೇಲೆ ಪಾರ್ಲಿಮೆಂಟರೀ ಬೋರ್ಡಿನವರು ಹುರಿಯಾಳುಗಳನ್ನು ನೇಮಿಸಬೇಕಾದುದರಿಂದ ಅವರು ಗಲಿಬಿಲಿಗೊಳ್ಳುವ ಸಂದರ್ಭವಿದ್ದಿಲ್ಲ. ರಾಷ್ಟ್ರಸಭೆಯ ಧ್ಯೇಯ ಮತ್ತು ನಿಯಮಗಳನ್ನು ಲಕ್ಷ್ಯದಲ್ಲಿಟ್ಟುಕೊಂಡು, ಜಿಲ್ಲೆಯ ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ತಿಳಿದುಕೊಂಡು, ಜಾತಿಭೇದದ ಗಂಧಗಾಳಿ ತಗಲದಂತೆ ನೋಡಿಕೊಂಡು, ಅತ್ಯಂತ ವಿಚಕ್ಷಣತೆಯಿಂದ ಅವರು ಎಸೆಂಬ್ಲಿಗೆ ಉಮೇದುವಾರರನ್ನು ಆರಿಸಿರುವರು. ಒಂದೇ ಒಂದು ದುಃಖದ ಸಂಗತಿಯೆಂದರೆ ಕೌನ್ಸಿಲಿನ ಒಂದು ಸ್ಥಾನವನ್ನು ಬಿಟ್ಟುಬಿಡಬೇಕಾದುದು. ಈ ದುಃಖವಾದರೂ ಒಂದು ಸೀಟನ್ನು ಬಿಡಬೇಕಾಯಿತಲ್ಲಾ, ಎಂದಿಷ್ಟೇ. ಅಲ್ಲದೆ ಪಾರ್ಲಿಮೆಂಟರೀ ಬೋರ್ಡಿನವರು ಕರ್ತವ್ಯಶೂನ್ಯತೆಯನ್ನು ತೋರಿಸಿದರೆಂದಲ್ಲ. ಬದಲಾಗಿ ಈ ಮೂಲಕ ಅವರು ಕೊಂಗ್ರೆಸ್ ತತ್ವಗಳನ್ನು ಪುಷ್ಟೀಕರಿಸಿರುವರು. ತಮ್ಮನ್ನು ಕೌನ್ಸಿಲಿಗಾರಿಸಿರೆಂದು ಅರ್ಜಿ ಹಾಕಿದ ಯಾರಾದರೊಬ್ಬ ಬ್ರಾಹ್ಮಣ ಮಹನೀಯರನ್ನು ಅವರು ಆ ಸ್ಥಾನಕ್ಕೆ ಆರಿಸುವ ಸಂಭವವಿತ್ತು. ಹಾಗೆ ಮಾಡುವ ಮೊದಲು ಪರಿಸ್ಥಿತಿಯನ್ನೆಲ್ಲಾ ಸರಿಯಾಗಿ ತಿಳಿದುಕೊಳ್ಳುವ ಕೆಲಸವನ್ನವರು ಮಾಡುತ್ತಿದ್ದಂತೆಯೇ ಅರ್ಜಿದಾರರು ಅನುಮಾನಗೊಂಡು ಹಿಂದೆ ಸರಿದರು. ಆಗ ಪಾರ್ಲಿಮೆಂಟರೀ ಬೋರ್ಡಿನವರಿಗೆ, ಅವರ ಮನವೊಲಿಸಲು ಹೋಗಿ ಕೊಂಗ್ರೆಸು ಶಿಸ್ತನ್ನು ಮೀರಿ ನಡೆಯುವದು ಅಸಾಧ್ಯವಾಯಿತು. ಹೀಗಾಗಿ ಕೌನ್ಸಿಲ್ ಸೀಟಿನ ಮಟ್ಟಿಗೆ, ಪರಿಸ್ಥಿತಿಯು ಪಾರ್ಲಿಮೆಂಟರೀ ಬೋರ್ಡಿನವರಿಗೆ ಅವರ ನಿಯಮವನ್ನು ಕಾಪಾಡುವ ಸಂದರ್ಭವನ್ನು ಮಾತ್ರವೇ ಒದಗಿಸಿಕೊಟ್ಟಿತು. ಎಸೆಂಬ್ಲಿ ಸ್ಥಾನಗಳ ಪೈಕಿ ಸಾಮಾನ್ಯ ಮತದಾರರ ಮೂರು ಸ್ಥಾನಗಳಿಗೂ ಹರಿಜನರ ಮತ್ತು ಕ್ರಿಶ್ಚಿಯನ್ ಮತದಾರರ ಒಂದೊಂದು ಸ್ಥಾನಕ್ಕೂ ಕೊಂಗ್ರೆಸಿನ ನೇಮಕವಾಗಿದೆ. ಇವುಗಳಲ್ಲಿ ಕ್ರಿಶ್ಚಿಯನ್ ಉಮೇದುವಾರರಾಗುವೆವೆಂದು ಪಿ. ಝಕಾರಿಯಸ್ ಮತ್ತು ಪ್ರೊ. ವಾರ್ಕಿಯವರು ತಮ್ಮ ಅರ್ಜಿಗಳನ್ನು ಕಳುಹಿಸಿದ್ದರು. ಅವರ ಪೈಕಿ ಪ್ರೊ. ವಾರ್ಕಿಯವರನ್ನು ಕೊಂಗ್ರೆಸಿನವರು ಆರಿಸಿದರೆಂದಾದೊಡನೆ ಮಿ|| ಝಕಾರಿಸರು ತೋರಿಸಿದ ಕೊಂಗ್ರೆಸ್ ಭಕ್ತಿಯು ಅಭಿನಂದನೀಯವಿದೆ. ಅವರು ತನ್ನ ಉಮೇದುವಾರಿಕೆಯನ್ನು ಹಿಂದೆಗೆದಿರುವದಲ್ಲದೆ ತಮ್ಮಲ್ಲಿ ಸಹಾನುಭೂತಿಯಿರುವವರೆಲ್ಲರೂ ಪ್ರೊ. ವಾರ್ಕಿಯವರಿಗೆ ಬೆಂಬಲವಿತ್ತು ಅವರಾರಿಸಿಬರುವಂತೆ ನೋಡಬೇಕೆಂದು ಆಗ್ರಹದ ವಿನಂತಿಮಾಡಿಕೊಂಡಿರುವರು. ತಮ್ಮನ್ನು ಅಥವಾ ತಮ್ಮ ಜಾತಿಯವರನ್ನು ಆರಿಸಲಿಲ್ಲವೆಂಬ ಒಂದೇ ಕಾರಣದಿಂದ ನಾನಾ ವಿಧದ ತಂಟೆ ಹಬ್ಬಿಸುತ್ತಿರುವ ಕೆಲವು ಮಹನೀಯರು ಮಿ|| ಝಕಾರಿಯಸರ ಮಾದರಿಯನ್ನನುಸರಿಸುವದು ನ್ಯಾಯವಿತ್ತು. ಕ್ರೈಸ್ತರು ಕೊಂಗ್ರೆಸಿನ ಬೆಂಬಲಕ್ಕಿರುವದು ಅಸಂಭವವೆಂಬ ಅಪವಾದವನ್ನು ಈ ಕ್ರೈಸ್ತ ಮಹನೀಯರಿಬ್ಬರು ಸುಳ್ಳೆಂದು ತೋರಿಸಿರುವರು. ಪ್ರೊ. ವಾರ್ಕಿಯವರ ಚುನಾವಣೆಯ ಪ್ರಚಾರವು ಅತ್ಯಾಧುನಿಕ ರೀತಿಯದು. ರಾಷ್ಟ್ರಧ್ವಜಧಾರಿಗಳಾದ ಸ್ವಯಂಸೇವಕರ ತಂಡವನ್ನೇರ್ಪಡಿಸಿ, ಮೆರವಣಿಗೆ ಜಯಘೋಷಗಳ ಮೂಲಕ ಚುನಾವಣೆಯೆಂದರೆ ನ್ಯಾಯಪರವಾದ ಬಹಿರಂಗ ಹೋರಾಟವಲ್ಲವೆ, ಜಸ್ಟೀಸ್ ಪಾರ್ಟಿಯವರು ಮಾಡುತ್ತಿರುವಂತೆ ಒಳಗಿಂದೊಳಗೆ ನಡೆಯುತ್ತಿರುವ ಕಿವಿಬಾಯಿಗಳ ಕಚ್ಚಾಟವಲ್ಲವೆಂಬುದನ್ನು ತೋರಿಸಿಕೊಟ್ಟಿರುವರು. ಓಟನ್ನು ಜನರ ಮನವೊಲಿಸಿ ಪಡೆಯಬೇಕೇ ಹೊರತು ನಾನಾ ಮತದಾರರನ್ನು ಬೆದರಿಸುವವರಿದ್ದರೆ ಅಂಥವರೊಡನೆ ಜಂಗಲಾಟಿ ಓಟರರಿಂದ ಕಿತ್ತುಕೊಳ್ಳುವದಲ್ಲವೆಂಬುದನ್ನು ಸ್ಪಷ್ಟಪಡಿಸುತ್ತಿರುವರು. ಹರಿಜನರ ಸೀಟಿಗೆ ನಿಂತ ಕಾಂಗ್ರೆಸು ಉಮೇದ್ವಾರೀ ಶ್ರೀ. ಈಶ್ವರನವರು ಗೆದ್ದು ಬರುವುದರಲ್ಲಿ ಸಂದೇಹವಿಲ್ಲ. ಸ್ವತಂತ್ರ ಪಕ್ಷದ ಶ್ರೀ ನ ಲಯಾನರ ಕಾರ್ಯ ಚತುರತೆಗೆ ಸಂಕುಚಿತ ವಾತಾವರಣವು ಮಾತ್ರ ದೊರೆಯುತ್ತಿದೆ. ಜಸ್ಟೀಸ್‌ಪಾರ್ಟಿಯ ಹರಿಜನ ಉಮೇದ್ವಾರಿಯು ಸರಿಯಾಗಿ ಕೆಲಸ ನಡೆಯುವದೇನೂ ಕಂಡುಬರುವುದಿಲ್ಲ. ಮುಹಮ್ಮದೀಯರ ಒಂದು ಸ್ಥಾನಕ್ಕೆ ಪ್ರತಿಸ್ಪರ್ಧಿಯಿಲ್ಲದುದರಿಂದ ಮಿ|| ಸಯ್ಯದ್ ಹುಸೇನರು ಆರಿಸಲ್ಪಟ್ಟಿರುವರು. ದಕ್ಷಿಣಕನ್ನಡದಲ್ಲಿ ಆ ಸ್ಥಾನಕ್ಕಾಗಿ ನಡೆಯಲಿಕ್ಕಿದ್ದ ಗೊಂದಲವೊಂದು ಇಷ್ಟಕ್ಕೇ ನಿಂತಂತಾಯಿತು.

ಇನ್ನು ಎಸೆಂಬ್ಲಿ ಸ್ಥಾನಗಳ ವಿಚಾರ. ಪುತ್ತೂರು ಡಿವಿಜನಿನಲ್ಲಿ ಕೊಂಗ್ರೆಸ್ ಹುರಿಯಾಳು ಶ್ರೀ ಕಾರಂತರಿಗೆ ಪ್ರಬಲ ಬಹುಮತ ದೊರಕುವದರಲ್ಲಿ ಸಂದೇಹವಿಲ್ಲ. ಜಸ್ಟೀಸ್‌ಪಾರ್ಟಿಯವರು ಅವರಿಗೆ ಇದಿರಾಳಿಯನ್ನೊಡ್ಡಲು ಹಲವು ಕಾರಣಗಳಿವೆ. ಅವರ ದೃಷ್ಟಿಯಿಂದ ಕುಂದಾಪುರದ ಸ್ಥಾನವು ಅತ್ಯಂತ ಮಹತ್ವದ್ದಿರಬಹುದು. ಶ್ರೀ ಕೆ ಆರ್. ಕಾರಂತರು ಪುತ್ತೂರಿನಿಂದ ಕುಂದಾಪುರಕ್ಕೆ ಬಂದು ಕೊಂಗ್ರೆಸಿನ ಪರವಾಗಿ ಕೆಲಸಮಾಡುವದರಲ್ಲಿ ಅವರಿಗೆ ಒಪ್ಪಿಗೆಯಿಲ್ಲದಿರಬಹುದು. ಪುತ್ತೂರಿನಲ್ಲಿ ಶ್ರೀ ಕಾರಂತರು ಪ್ರತಿಸ್ಪರ್ಧಿಯಿಲ್ಲದೆ ಆರಿಸಲ್ಪಟ್ಟರೆ ಕೊಂಗ್ರೆಸಿನವರ ಜಯವನ್ನು ಒಂದು ತಿಂಗಳ ಮುಂಚೆಯೇ ಒಪ್ಪಿಕೊಂಡಂತಾಗುವದರಲ್ಲಿರುವ ಅಸಮ್ಮತಿ, ಶ್ರೀ ಕಾರಂತರು ತನ್ನ ಪ್ರತಿಷ್ಠೆಯನ್ನು ಕುಂದಾಪುರದಲ್ಲಿ ಕೊಂಗ್ರೆಸ್ ವಿಜಯಕ್ಕಾಗಿ ಉಪಯೋಗಿಸದಿರಲಾರರೆಂಬ ಭೀತಿ-ಹೀಗೆ ಎರಡು ಕಾರಣಗಳಿಂದಾಗಿ ಪುತ್ತೂರಿನಲ್ಲಿಯೂ ಸ್ಪರ್ಧೆಯುಂಟಾಯಿತು. ಶ್ರೀ ಕಾರಂತರ ಪ್ರತಿಸ್ಪರ್ಧಿ ಶ್ರೀ ಬಿ ನರಸಿಂಗರಾಯರು, ಸುಪ್ರಸಿದ್ಧ ವಕೀಲರಾಗಿದ್ದು ಜನಪ್ರಿಯರಿದ್ದರೂ ಕೊಂಗ್ರೆಸಿನ ಕಡೆಗೆ ಹೆಚ್ಚಿನ ಸಹಾನುಭೂತಿಯಿರುವ ಕೆಲಸಗಾರರು ಮತ್ತು ಮತದಾರರ ಬೆಂಬಲದಿಂದಾಗಿ ಶ್ರೀ ಕಾರಂತರು ಆರಿಸಿಬರುವ ಲಕ್ಷಣಗಳು ಸ್ಪಷ್ಟವಾಗಿ ಕಂಡುಬರುತ್ತಿವೆ. ಮಂಗಳೂರಿನ ಕೊಂಗ್ರೆಸ್ ಉಮೇದುವಾರರಾದ ಶ್ರೀ ಬಿ ವೆಂಕಟ್ರಾಯ ಬಾಳಿಗರು ಪ್ರಸಿದ್ಧ ವಕೀಲರಷ್ಟೇ ಅಲ್ಲ ಜನಪ್ರಿಯರು. ಮತದಾರರ ಮನಸನ್ನೊಲಿಸುವ ವ್ಯಕ್ತಿತ್ವವುಳ್ಳವರು. ಎಲ್ಲಕ್ಕಿಂತಲೂ ಮಿಗಿಲಾಗಿ ಮಂಗಳೂರಿನ ಜನಜಾಗ್ರತಿಯು ಕೊಂಗ್ರೆಸು ಉಮೇದುವಾರರಾದ ಅವರಿಗನುಕೂಲವಾಗಿ ನಿಂತಿದೆ ಎಂಬುದರಲ್ಲಿ ಸಂದೇಹವಿಲ್ಲ. ಶ್ರೀ ಲಕ್ಷ್ಮಪ್ಪ ರೈಗಳು ಪ್ರತಿಷ್ಠಿತರು, ಕರ್ತೃತ್ವ ಶಾಲಿಯು. ಅವರ ಕಡೆಯ ಕೆಲವರು ಉದ್ದೇಶಪೂರ್ವಕವಾಗಿ ಜಾತಿ ಭೇದದ ವಿಷಬೀಜವನ್ನು ಬಿತ್ತಿಯಾದರೂ ಕೆಲಸ ಸಾಧಿಸಬಹುದೋ ಎಂದು ಪ್ರಯತ್ನಿಸಿ ಇಷ್ಟರಲ್ಲೇ ಭಗ್ನಮನೋರಥರಾಗಿರುವರು. ರಾಷ್ಟ್ರೀಯ ಭಾವನೆಗೆ ಈ ಸಲ ದೊರೆತಷ್ಟು ಪ್ರಾಮುಖ್ಯತೆಯು ಹಿಂದಿನ ಚುನಾವಣೆಗಳಲ್ಲಿ ದೊರೆತಿಲ್ಲವೆಂಬುದು ಆಶಾಜನಕವಿದೆ. ಕುಂದಾಪುರ ಡಿವಿಜನು ಕಾಂಗ್ರೆಸ್ — ಜಸ್ಟೀಸು ಪಕ್ಷಗಳ ತೀವ್ರಹೋರಾಟದ ಕ್ಷೇತ್ರವಾಗಬಹುದು. ಇಲ್ಲಿ ಕಾಂಗ್ರೆಸಿನ ವಿರುದ್ಧ ಪಕ್ಷದವರೆಬ್ಬಿಸಿದ ನಾನಾವಿಧದ ಆರೋಪಗಳು ಕಾಂಗ್ರೆಸಿನವರ ಪ್ರಚಾರಕಾರ್ಯದಿಂದಾಗಿ ಅಲ್ಲಲ್ಲೇ ನಿರ್ನಾಮವಾಗಿರುವವು, ಆದಿಯಲ್ಲಿದ್ದ ಜಾತಿದ್ವೇಷ ವ್ಯಕ್ತಿದ್ವೇಷದ ಮಹತ್ವಗಳು ಲೋಪವಾಗುತ್ತ ಬಂದಿರುವವು. ಕೊಂಗ್ರೆಸು-ಜಸ್ಟೀಸು ಪಕ್ಷಗಳಲ್ಲಿರುವ ವ್ಯತ್ಯಾಸವನ್ನೇ ಮಸಕುಗೊಳಿಸಿ ಮತದಾರರನ್ನು ಮಂಕುಗೊಳಿಸಬೇಕೆಂದು ಈ ತನಕವೂ ನಡೆಸುಕೊಂಡು ಬರುತ್ತಿದ್ದ ಪಂಚಿಕೆಗಳೆಲ್ಲಾ ಮಣ್ಣುಗೂಡಿರುವವು. ಅಂತಹ ಪ್ರಯತ್ನಗಳು ಈಗ ಇಲ್ಲವೆಂದಲ್ಲ. ಈಗ ಇಲ್ಲದಿರುವದು ಆ ಕೂಗುಗಳಿಗೆ ಕಿವಿಗೊಡುವವರು ಮಾತ್ರ! ಇಲ್ಲಿಯ ವಾತಾವರಣದ ಮತ್ತೊಂದು ಸಲ್ಲಕ್ಷಣವೆಂದರೆ ಹಳೆಯದನ್ನೇ ನಂಬಿರುವವರು ಮತ್ತು ಉತ್ಸಾಹಶಾಲಿಗಳೊಳಗಿನ ಪರಸ್ಪರ ಹೋರಾಟ. ಕೆಲವೇ ಮಂದಿ ಆಡಳಿತೆಗಾರರು, ಜಮೀನುದಾರರು, ಸಂಪ್ರದಾಯವಾದಿಗಳು, ಜಸ್ಟೀಸುಪಾರ್ಟಿಯ ಉಮೇದ್ವಾರರನ್ನು ಸಮರ್ಥಿಸುತ್ತಿದ್ದರೆ ತರುಣರು ರಾಷ್ಟ್ರೀಯ ಭಾವನಾ ಪ್ರೇರಿತರು ಲೋಕಾನುಭವಿಗಳು ಇವರೆಲ್ಲಾ ಸ್ವಯಂ ಪ್ರೇರಣೆಯಿಂದ ಕಾಂಗ್ರೆಸ್ ಉಮೇದ್ವಾರಿಗೆ ಬೆಂಬಲವೀಯುತ್ತಿದ್ದಾರೆ. ಈ ದೃಷ್ಟಿಯಿಂದ ಕುಂದಾಪುರ ಡಿವಿಜನಿನ ಚುನಾವಣೆಯ ಫಲಿತಾಂಶವು ಪ್ರಾಮುಖ್ಯವಿದೆ.

ಇಡೀ ಜಿಲ್ಲೆಯಲ್ಲಿ ಕೊಂಗ್ರೆಸಿನವರು ಬಹಿರಂಗ ಪ್ರಚಾರಕ್ಕಿಳಿದಿದ್ದಾರೆ. ರಾಷ್ಟ್ರಸಭೆಯ ಧ್ಯೇಯ, ಅದು ಈ ತನಕ ಮಾಡಿರುವ ಕಾರ್ಯ ಇವುಗಳನ್ನೆಲ್ಲಾ ಚೊಕ್ಕವಾಗಿ ಮತದಾರರಿಗೆ, ಮತದಾರರಲ್ಲದವರಿಗೆ, ಸಭೆ, ಭಾಷಣ, ಕರಪತ್ರ, ಪತ್ರಿಕೆಗಳ ಮೂಲಕ ತಿಳಿಸುತ್ತಿದ್ದಾರೆ. ಇದರಿಂದಾಗಿ ಜನಸಾಮಾನ್ಯರಲ್ಲಿ ರಾಷ್ಟ್ರೀಯ ಭಾವನೆಯ ಪ್ರಸಾರವು ಜೋರಿನಿಂದ ಆಗಿದೆ. ಚುನಾವಣಾಕಾರ್ಯದ ಆದಿಯಿಂದ ಈ ವರೆಗೂ ಬೆನ್ನು ಹಿಡಿದುಕೊಂಡು ಬಂದಿದ್ದ ಕೊಂಗ್ರೆಸಿನ ಮೇಲಿನ ಹಲವು ಮಿಥ್ಯಾರೋಪಗಳು ಕೊಂಗ್ರೆಸು ಕಾರ್ಯದ ಧಾಳಿಗೆ ಸಿಕ್ಕಿ ನಿರ್ನಾಮವಾಗಿವೆ! ಜಸ್ಟಿಸ್ ಪಕ್ಷದವರ ಅಂತಹ ಕೆಲಸಗಳಾವುವೂ ಕಂಡುಬರುವದಿಲ್ಲ. ಮತದಾರರ ಮೇಲೆ ಪ್ರತಿಷ್ಠೆಯಿರುವ ಧನಿಕರು, ಜಮೀನ್ದಾರರು ಮೊದಲಾದವರನ್ನು ಹಿಡಿದು ಓಟುಗಳ ಬಹುಮತ ಪಡೆಯುವ ಒಳಗಿಂದೊಳಗಿನ ಕಾರ್ಯಗಳನ್ನು ಅತ್ಯಂತ ಜಾಗ್ರತೆಯಿಂದ ಅವರು ನಡೆಸುತ್ತಿದ್ದಾರೆ. ಅಂತೂ ಇಂದಿನ ಚುನಾವಣೆಯ ಫಲಿತಾಂಶದೊಡನೆ ಕೊಂಗ್ರೆಸು ಜಸ್ಟೀಸುಗಳ ಬಲಾಬಲದ ನಿರ್ಣಯ ಮಾತ್ರವಲ್ಲ, ಬಹಿರಂಗ ಪ್ರಚಾರ-ಅಂತರಂಗ ಪ್ರಚಾರಗಳ ತಾರತಮ್ಯವೂ ತಿಳಿದು ಹೋಗುವದು!

ವಿಮರ್ಶಕ.

ಆತಂಕನಿಗ್ರಹ ಮಾತ್ರೆಗಳು

ಯಾವ ಕಾರಣದಿಂದಾಗಲಿ ಉಂಟಾದ ಧಾತುನಷ್ಟ, ನರಗಳ ನಿಶ್ಶಕ್ತಿ ಇವುಗಳನ್ನು ಹೋಗಲಾಡಿಸಿ ಶಾಶ್ವತ ಗುಣ ಉಂಟಾಗುವಂತೆ ಮಾಡುತ್ತದೆ. ಈ ಗುಳಿಗೆಗಳು ಆರೋಗ್ಯವಾದ ಹಸಿವನ್ನುಂಟುಮಾಡಿ ದೇಹಕ್ಕೂ ಮತ್ತು ಮನಸ್ಸಿಗೂ ಬಲಹೀನತ್ವವನ್ನು ಹೋಗಲಾಡಿಸಿ ದುಷ್ಟರಕ್ತವನ್ನು ಶುದ್ಧಿಮಾಡಿ ಜ್ಞಾಪಕಶಕ್ತಿಯನ್ನು ವೃದ್ಧಿಪಡಿಸುವುದು. ಕ್ರಯ ಡಬ್ಬಿ ೧ಕ್ಕೆ ೧-೦-೦.

ವಾಜೀಕರಣ ತೈಲ:—(ಹೊರಗೆ ಹಚ್ಚಲು ಮಾತ್ರವೇ) ಬಾಲ್ಯದಲ್ಲಿ ಸ್ವತಃ ಅನೇಕ ವಿಧಗಳಲ್ಲಿ ವೀರ್ಯವನ್ನು ಕಡಿಸಿಕೊಂಡು ಅದರಿಂದ ಉಂಟಾಗುವ ಅಶಕ್ತ, ನರಗಳ ದುರ್ಬಲ, ನಪುಂಸಕತ್ವ ಮುಂತಾದ ವ್ಯಾಧಿಗಳನ್ನು ಪರಿಹರಿಸುವ ಸಂಜೀವಿನಿಯಾಗಿರುವದು. ನರಗಳಿಗೆ ಬಲವನ್ನುಂಟುಮಾಡಿ, ಸಂಯೋಗಕ್ಕೆ ಉತ್ಸಾಹವನ್ನು ಕೊಡುವುದು. ಒಂದು ಸಾರಿ ಔಷಧವನ್ನು ಹಚ್ಚುವುದರಿಂದ ಗುಣ ಗೊತ್ತಾಗುತ್ತದೆ. ಕ್ರಯ. ಸೀಸೆ ಒಂದಕ್ಕೆ ೫—೦—೦

ಅಮೃತಾರ್ಣವ ಲೇಹ್ಯ:— ರಕ್ತವನ್ನು ಶುದ್ಧಿಮಾಡಿ, ನರಗಳನ್ನು ಬಲಪಡಿಸಿ, ಅತಿಉಷ್ಣ, ಕೈಕಾಲುಗಳ ಉರಿ, ಇಸ್ಪು ಮುಂತಾದ ಉಷ್ಣವ್ಯಾಧಿಗಳನ್ನು ಗುಣಪಡಿಸಿ, ಮೆದುಳನ್ನು ತಂಪುಮಾಡಿ, ದೇಹಬಲವನ್ನೂ, ತೇಜಸ್ಸನ್ನೂ ಹೆಚ್ಚಿಸುವುದಲ್ಲದೆ ದೀರ್ಘಕ್ಷಯ, ಎದೆನೋವು, ತಲೆನೋವು, ಮುಂತಾದ ವ್ಯಾಧಿಗಳಿಗೆ ಅಮೃತಪ್ರಾಯವಾದುದು. ಕ್ರಯ ಡಬ್ಬಿ ೧ಕ್ಕೆ ೨-೦-೦

'ಕಾಮಶಾಸ್ತ್ರ' [illegible] ಪೋಸ್ಟೇಜು ಮಾಫಿಯಾಗಿ ಕಳುಹಿಸುವೆವು. ಒಂದು ಕಾರ್ಡು ಹಾಕಿರಿ.

ಆತಂಕ ನಿಗ್ರಹ ಫಾರ್ಮಸಿ, ೬೪, ಚಿಕ್ಕಪೇಟೆ ಚೌಕ, ಬೆಂಗಳೂರು ಸಿಟಿ

ನ ವ ಯು ಗ ಕ್ಕೆ
ಇಂದೇ ಚಂದಾದಾರರಾಗಿರಿ!

ಈ ಸಲದ ಚುನಾವಣೆ

ಲೇಖಕ—ಸಾದೂರು ವಾಸುದೇವ ಉಪಾಧ್ಯಾಯ, ವಕೀಲ, ಕಾರ್ಕಳ.

ಈ ಸಲ ಚುನಾವಣೆಗೆ ಕೊಂಗ್ರೆಸಿನವರು ಇಳಿದಿದ್ದಾರೆ ಕೊಂಗ್ರೆಸ್ಸೆಂಬುದು ಇತರ ಅನೇಕ ಪಾರ್ಟಿಗಳಂತೆಯೇ ಒಂದು ರಾಜಕೀಯ ಪಾರ್ಟಿಯೇ ಹೊರತು ಅದಕ್ಕೆ ದೇಶದಲ್ಲಿ ಸಂಪೂರ್ಣ ಬೆಂಬಲವಿಲ್ಲವೆಂದು ನಮ್ಮ ಸರಕಾರದವರು ದೇಶವಿದೇಶಗಳಲ್ಲಿ ಸಾರುತ್ತಿದ್ದಾರೆ. ಆದುದರಿಂದ ನಮ್ಮ ದೇಶದ ಎಲ್ಲಾ ಮತಗಳ ಎಲ್ಲಾ ತರಗತಿಗಳ ಜನರ ಪ್ರತಿನಿಧಿಯಾಗಿ ಕೆಲಸ ಮಾಡುವ ಎಲ್ಲರ ಪ್ರೀತಿಗೆ ಮತ್ತು ವಿಶ್ವಾಸಕ್ಕೆ ಪಾತ್ರವಾದ ಸಂಸ್ಥೆಯು ಇದು ಒಂದೇ ಹೊರತು ಇನ್ನೊಂದಿಲ್ಲವೆಂದು ಸ್ಪಷ್ಟಪಡಿಸಬೇಕಾಗಿದೆ. ದೇಶದ ಸ್ವಾತಂತ್ರ್ಯಕ್ಕಾಗಿ ಕಾದಾಡುವ ಒಂದೇ ಒಂದು ಸಂಸ್ಥೆಯೆಂದರೆ ಅದು ಕೊಂಗ್ರೆಸ್ಸು. ಇವರೊಂದಿಗೆ ನೇರವೆ ಇವರ ಕಾರ್ಯಕ್ರಮಕ್ಕೆ ವಿರೋಧವಾಗಿ ಕೆಲಸಮಾಡುವ ಸಂಸ್ಥೆಗಳು ನಮ್ಮಲ್ಲಿ ಅನೇಕ ಇವೆ. ಅವುಗಳು ಯಾವ ಹೆಸರಿನಿಂದ ಕರೆಯಲ್ಪಟ್ಟರೂ ಅವುಗಳೆಲ್ಲವೂ ಕೊಂಗ್ರೆಸ್ಸಿನ ತತ್ವಕ್ಕೆ ಅಂದರೆ ನಮ್ಮ ದೇಶದ ಸ್ವಾತಂತ್ರ್ಯ ಸಂಪಾದನೆಯ ಕಾರ್ಯಕ್ಕೆ ಬದ್ಧ ವಿರೋಧಿಗಳೆಂದು ನಾವು ಸ್ಪಷ್ಟವಾಗಿ ತಿಳಿಯಬೇಕು. ಯಾವ ಸ್ವಾರ್ಥ ಬುದ್ಧಿಯಿಂದಲಾದರೂ ಅಥವಾ ಇನ್ನಿತರ ಮಹತ್ವಾದ ಕಾರಣಗಳಿಂದಲಾದರೂ ಈ ಕೊಂಗ್ರೆಸ್ಸಿನ ಕಾರ್ಯಕ್ರಮವನ್ನು ಯಾರು ವಿರೋಧಿಸುವನೋ ಅವನು ಈಗಿನ ಸಂದರ್ಭದಲ್ಲಿ ದೇಶದ್ರೋಹಿ ಎಂದೇ ಕರೆಯಲ್ಪಡುವನು.

ಆದುದರಿಂದ ನಮ್ಮವರು ವೋಟುಗಳನ್ನು ಈ ಸಲದ ಚುನಾವಣೆಯಲ್ಲಿ ಕೊಂಗ್ರೆಸು ಕಡೆ ಪ್ರತಿನಿಧಿಗೆ ಕೊಟ್ಟು ಕೊಂಗ್ರೆಸ್ಸನ್ನು ವಿಜಯಿಯಾಗಿ ಮಾಡಿದರೆ ಅರ್ಧಶತಮಾನದಿಂದ ಕೊಂಗ್ರೆಸು ನಮ್ಮ ದೇಶದ ಸ್ವಾತಂತ್ರ್ಯಕ್ಕಾಗಿ ನಡೆಸುತ್ತಿರುವ ಚಳವಳದಲ್ಲಿ ನಮಗೆ ಸಂಪೂರ್ಣ ಸಹಾನುಭೂತಿಯಿದೆ, ನಮ್ಮ ದೇಶಕ್ಕೆ ಆದಷ್ಟು ತ್ವರ್ಯದಲ್ಲಿ ಸ್ವಾತಂತ್ರ್ಯ ದೊರೆಯಬೇಕೆಂಬ ಬಲವತ್ತಾದ ಆಶೆಯು ನಮಗಿದೆ ಎಂಬುದನ್ನು ನಾವು ಸ್ಪಷ್ಟಪಡಿಸಿದಂತಾಗುವುದು. ಯಾವುದಾದರೊಂದು ಕಾರಣದಿಂದ ನಾವು ನಮ್ಮ ಓಟನ್ನು ಕೋಂಗ್ರೆಸಿನ ಯಶಸ್ಸನ್ನು ಹಾಳುಮಾಡಲು ಹೊರಟಿರುವ ನಮ್ಮ ವಿರೋಧಿ ಪಕ್ಷದವರಿಗೆ ಕೊಟ್ಟೆವೆಂದರೆ ಸದಾ ದಾಸ್ಯದಲ್ಲಿರುವುದೇ ನಮಗೆ ಹಿತವೆಂದು ತೋರಿಸಿದಂತಾಗುವುದು. ಈ ಸಂಧಿಗ್ಧ ಕಾಲದಲ್ಲಿ ತನ್ನ ಓಟನ್ನು ಕೋಂಗ್ರೆಸು ವಿರೋಧಿಗಳಿಗೆ ಕೊಡುವವನು ಅಥವಾ ಇತರರನ್ನು ದಾಕ್ಷಿಣ್ಯಕ್ಕೆ ಹಾಕಿ ಓಟು ಕೊಡಿಸುವವನು ಎಂದೆಂದಿಗೂ ದೇಶಪ್ರೇಮಿಯೆಂದು ಎಣಿಸಲ್ಪಡಲಾರನು ಅಂಥವನ ಅಪರಾಧವು ಅಕ್ಷಮ್ಯವಾಗಿರುತ್ತದೆ.

ನಮ್ಮ ದೇಶದ ಹಿತಾಹಿತಗಳನ್ನು ಅರಿಯಬಲ್ಲ ವಿದ್ಯಾವಂತರೆಲ್ಲರೂ ಈ ಸಲ ಕೊಂಗ್ರೆಸು ಏಕೆ ಚುನಾವಣೆಗೆ ನಿಂತಿದೆ. ಓಟಿನ ಮಹತ್ವವೇನು ಎಂಬ ವಿಷಯ ಅರಿಯಲಾರದ ಓಟರರಿಗೆ ವಿವರಿಸಿ ಹೇಳಿ ಎಲ್ಲರೂ ಕೊಂಗ್ರೆಸ್ಸಿಗೆ ಬೆಂಬಲವಾಗಿ ನಿಲ್ಲುವಂತೆ ಮಾಡಬೇಕು. ಆದರೆ ನಮ್ಮ ದುರದೃಷ್ಟದಿಂದ ನಮ್ಮ ಜಿಲ್ಲೆಯ ಅನೇಕ ವಿದ್ಯಾವಂತರು ತಮ್ಮ ಕರ್ತವ್ಯವನ್ನು ಅರಿಯದೆ ಕೊಂಗ್ರೆಸ್ಸಿಗೆದುರಾಗಿ ಕೆಲಸಮಾಡುತ್ತಿರುವುದು ಅತ್ಯಂತ ಪಶ್ಚಾತ್ತಾಪಕರವಾಗಿರುತ್ತದೆ. ನಮ್ಮಲ್ಲಿಯ ವಿದ್ಯಾವಂತರಿಗಾದರೂ ಕೊಂಗ್ರೆಸ್ಸಿನ ಮತ್ತು ಸ್ವಾತಂತ್ರ್ಯದ ವಿಶ್ವಾಸವಿರುವುದಿಲ್ಲವೆಂದು ಎಣಿಸಕೂಡದು. ಕೊಂಗ್ರೆಸ್ಸಿಗೆ ವಿರೋಧವಾಗಿ ಚಳವಳ ನಡೆಯಿಸುತ್ತಿರುವ ಪ್ರತಿಯೊಬ್ಬ ವಿದ್ಯಾವಂತನಿಗೂ ತಾನು ಮಾಡುವ ಕಾರ್ಯವು ದೇಶಕ್ಕೆ ಅಹಿತವಾದ್ದೆಂದು ಸ್ಪಷ್ಟವಾಗಿ ಗೊತ್ತಿದೆ. ತನ್ನ ಸ್ವಾರ್ಥಕ್ಕಾಗಿಯೇ ಇತರರ ಸ್ನೇಹಕ್ಕಾಗಿಯೇ ಅವನು ಹಾಗೆ ವರ್ತಿಸುತ್ತಾನೆಯೇ ಹೊರತು ದೇಶದ ಸ್ವಾತಂತ್ರ್ಯಕ್ಕಾಗಿ ಕಾದಾಡುವ ಕೊಂಗ್ರೆಸು ಸೋತು ಅದರ ವಿರೋಧಿ ಪಕ್ಷಗಳು ಗೆಲ್ಲಬೇಕೆಂಬ ಆತುರವಿಲ್ಲವೆಂದು ಧೈರ್ಯವಾಗಿ ಹೇಳಬಹುದು. ಆದರೆ ಈ ತೆರದ ಸ್ನೇಹ ದಾಕ್ಷಿಣ್ಯಕ್ಕೆ ಬಲಿ ಬೀಳದೆ ದೇಶದ ಹಿತದ ಕಡೆಗೆ ದೃಷ್ಟಿಯಿಟ್ಟು ನಿರ್ಭೀತಿಯಿಂದ ಕೆಲಸ ಮಾಡುವಷ್ಟು ಸಾಮರ್ಥ್ಯವು ಇವರು ಕಲಿತವಿದ್ಯೆಯಿಂದ ಇವರಿಗೆ ದೊರೆಯಲಿಲ್ಲವೆಂಬುದೇ ವಿಷಾದಕರ ವಿಷಯವಾಗಿರುತ್ತದೆ. ಕೊಂಗ್ರೆಸಿಗೆ ವಿರೋಧವಾಗಿ ಕೆಲಸಮಾಡುತ್ತಿರುವ ಪ್ರತಿಯೊಬ್ಬನೂ ಯಾವ ಸ್ವಾರ್ಥಕ್ಕಾಗಿ ಅವನು ಆ ರೀತಿ ವರ್ತಿಸುತ್ತಿರುವನೆಂಬುದನ್ನು ಕಂಡು ಹುಡುಕುವುದೇನೂ ಕಷ್ಟದ ಕೆಲಸವಲ್ಲ. ಆದುದರಿಂದ ಇವರ ಈ ಸ್ವಾರ್ಥಪರ ಚಳವಳದಿಂದಾಗಿ ಓಟರರು ಮೋಸಹೋದಾರೆಂದು ಹೆದರಲು ಕಾರಣವಿಲ್ಲ.

ಓಟರರೇ! ಸ್ವಲ್ಪ ವಿಚಾರಿಸಿರಿ! ನಮ್ಮ ದೇಶಕ್ಕೆ ಸ್ವರಾಜ್ಯ ದೊರೆಯುವುದು ದೋಷಕರವೆಂದು ನೀವು ಯೋಚಿಸುವಿರಾದರೆ ಮಾತ್ರ ನೀವು ಕೊಂಗ್ರೆಸು ವಿರೋಧಿಪಕ್ಷದವರಿಗೆ ನಿಮ್ಮ ಓಟನ್ನು ಕೊಡಬಹುದೇ ಹೊರತು ಭೂಲೋಕದಲ್ಲಿರುವ ಇತರ ಅನೇಕ ಜನಾಂಗಗಳಂತೆಯೇ ನಾವೂ ಕೂಡಾ ಸ್ವತಂತ್ರರಾಗಿ ನಮ್ಮ ದೇಶದ ಬಡತನವನ್ನು ಹೋಗಲಾಡಿಸಿ ಸ್ವಾಭಿಮಾನದಿಂದಲೂ ಸುಖದಿಂದಲೂ ಜೀವಿಸಬೇಕೆಂಬುದೇ ನಿಮ್ಮಲ್ಲಿ ಸ್ವಲ್ಪವಾದರೂ ಆಶೆಯಿರುವುದಾದರೆ ನೀವು ಯಾರೊಬ್ಬನ ಮಾತನ್ನು ಲಕ್ಷಿಸದೆ ನಿರ್ಭೀತರಾಗಿ ಕೊಂಗ್ರೆಸುಕಡೆ ಪ್ರತಿನಿಧಿಗಳಿಗೆ ಓಟು ಕೊಡಬೇಕು. ಕೊಂಗ್ರೆಸಿಗೆ ವಿರೋಧವಾಗಿ ಕೆಲಸ ಮಾಡುತ್ತಿರುವ ನಮ್ಮಲ್ಲಿಯ ವಿದ್ಯಾವಂತರಾದರೂ ತಮ್ಮ ಕರ್ತವ್ಯವನ್ನರಿತು ತಮ್ಮ ಮಾತನ್ನು ವಿಶ್ವಾಸದಿಂದ ಕೇಳುವ ಸಾಮಾನ್ಯ ಓಟರರಿಗೆ ತಪ್ಪು ದಾರಿಯನ್ನು ತೋರಿಸುವ ಅನರ್ಥವಾದ ಕಾರ್ಯವನ್ನು ಬಿಟ್ಟು ಕೊಂಗೆಸಿಗೇನೇ ಬೆಂಬಲ ಕೊಡಬೇಕಾಗಿ ವಿನಂತಿ ಮಾಡಿಕೊಳ್ಳುತ್ತೇನೆ

ಕಲ್ಕತ್ತಾದಲ್ಲಿ ವಿದ್ಯಾರ್ಥಿಗಳ ಮುಷ್ಕರ

ಕಳೆದ ತಾ. ೧೪ರಲ್ಲಿ ಕಲ್ಕತ್ತಾ ನಗರದಲ್ಲಿ ಒಂದು ವಿದ್ಯಾರ್ಥಿಗಳ ದೊಡ್ಡ ಮುಷ್ಕರ ನಡೆಯಿತು. ವಿದ್ಯಾಸಾಗರ ಕಾಲೇಜಿನ ವಿದ್ಯಾರ್ಥಿಗಳು ಎರಡು ಫರ್ಲಾಂಗ್ ಉದ್ದವಿದ್ದ ಒಂದು ಮೆರವಣಿಗೆಯಲ್ಲಿ ಹೊರಟು 'ವಿಶ್ವವಿದ್ಯಾನಿಲಯದ ಪ್ರಾರಂಭೋತ್ಸವಗಳನ್ನು ಬಹಿಷ್ಕರಿಸಿ' ಎಂದು ಕೂಗುತ್ತಾ ಬೀದಿ ಬೀದಿಗಳಲ್ಲಿ ಬಂದರು.

ಇದಕ್ಕೆ ಕಾರಣವೇನೆಂದರೆ ಕಾಲೇಜಿನವರು ಜನವರಿ ೫ನೇ ತಾರೀಕಿನ ದಿವಸ ಕಲ್ಕತ್ತಾ ವಿಶ್ವವಿದ್ಯಾನಿಲಯದ ಪ್ರಾರಂಭೋತ್ಸವದ ದಿನಾಚರಣೆಯನ್ನು ನಡೆಸಬೇಕೆಂದು ಏರ್ಪಡಿಸಿದ್ದರು. ಈ ದಿನಾಚರಣೆಯ ಕಾರ್ಯಕಲಾಪಗಳಲ್ಲಿ ಆಂಗ್ಲೇಯ ಸರಕಾರದ ಧ್ವಜವಾದ ಯೂನಿಯನ್ ಜಾಕ್‌ಗೂ ವಿಶ್ವವಿದ್ಯಾನಿಲಯದ ಧ್ವಜಕ್ಕೂ ನಮಸ್ಕರಿಸುವುದೂ ಒಂದು ಐಟಂ ಉಂಟು. ಕೆಲವು ವಿದ್ಯಾರ್ಥಿಗಳು ಇದಕ್ಕೆ ಒಪ್ಪಲಿಲ್ಲ. ಜೂನಿಯರ್ ಬಿ. ಎ., ತರಗತಿಯ ವಿದ್ಯಾರ್ಥಿಗಳಿಬ್ಬರು ಈ ಉತ್ಸವಗಳು ಬೇಕಿಲ್ಲವೆಂದು ಕಾಲೇಜಿನ ಅಧಿಕಾರಿಗಳ ಬಳಿಗೆ ಹೋಗಿ ಹೇಳಿದರು. ಆ ವಿದ್ಯಾರ್ಥಿಗಳನ್ನು ಕಾಲೇಜಿನ ಅಧಿಕಾರಿಗಳು ಶಿಕ್ಷಿಸಿದರು.

ಇದರ ಫಲವೇ ಈ ಮುಷ್ಕರ. ಮುಂದೆ ಏನಾಗಲಿದೆಯೋ ನೋಡಬೇಕಾಗಿದೆ.

ಫೈಜ್‌ಪುರಕ್ಕೆ ಅಗ್ರಪೂಜೆ

ಭರತಖಂಡದ ಹಳ್ಳಿಗಳ ಪೈಕಿ ಟ್ರಂಕ್ ಟೆಲಿಫೋನ್ ಹೊಂದುವ ಭಾಗ್ಯವು ಲಭಿಸಿದ್ದು ಫೈಜ್‌ಪುರಕ್ಕೇ ಮೊದಲು ಫೈಜ್‌ಪುರವು ಈಗ ಜಗತ್ತಿನ ಎಲ್ಲಾ ಮಹಾ ನಗರಗಳೊಂದಿಗೂ ಮಾತನಾಡಬಹುದಾಗಿದೆ.

ಫೈಜ್‌ಪುರದಲ್ಲಿ ಕಾಂಗ್ರೆಸ್ಸಿಗಾಗಿ ಒಂದು ಹಂಗಾಮಿ ಟ್ರಂಕ್ ಟೆಲಿಫೋನನ್ನು ಸ್ಥಾಪಿಸಿದರು. ಈಗ ಅದನ್ನು ಕಿತ್ತುಹಾಕದೆ ಹಾಗೆಯೇ ಉಳಿಸಬೇಕೆಂದು ಹುಕುಂ ಮಾಡಿರುವುದಾಗಿ ತಿಳಿದುಬಂದಿದೆ.

ಯಾಕೆಂದರೆ ಇದನ್ನು ಕಿತ್ತುಹಾಕಿ ಸಾಮಾನುಗಳನ್ನು ಸಾಗಿಸುವ ಖರ್ಚು ಅಪಾರವಾಗುತ್ತದೆಯೆಂತೆ ಆದುದರಿಂದ ಇದನ್ನು ಕಿತ್ತುಹಾಕುವುದು ಅನವಶ್ಯಕವೆಂದು ಭಾವಿಸಿದ್ದಾರೆ.

ಈ ರೀತಿ ಕಾಂಗ್ರೆಸ್ ಅಧಿವೇಶನದಿಂದ ಫೈಜ್‌ಪುರಕ್ಕೆ ಟ್ರಂಕ್‌ಟೆಲಿಫೋನ್ ಬಂದಂತಾಯಿತು.

ಪೇಟೆ ಧಾರಣೆ

ಸಾಮುಗ್ರಿಗಳು	ಮಂಗಳೂರು ಇಂದ	ಮಂಗಳೂರು ವರೆಗೆ	ಉಡುಪಿ ಇಂದ	ಉಡುಪಿ ವರೆಗೆ
ರಂಗಿ ಅಕ್ಕಿ ...	3 6	3—10	3— 0	3— 4
ಮುಸ್ಕತಿ ...	3— 4	4 4	3 - 8	4— 8
ಗುಡ್ಡೆ ಸುಗ್ಗಿ ...	3—10	3 - 14	3— 0	3— 4
ಖೂರ ಅವ್ವಲ್ ಬೆಳ್ತಿಗೆ ...	4— 0	4 — 4	4— 0	4—12
ರಂಗೂನು ಬೆ ಗೋ ೧ಕ್ಕೆ	7 - 0	7 — 4	7— 0	7— 4
ಗೋದಿ ಗೋಣಿ ೧ಕ್ಕೆ ...	11— 0	13— 0	18 — 8	14— 0
ತೊಗರಿ ಗೋಣಿ ೧ಕ್ಕೆ ...	9— 8	12— 8	12— 8	13— 0
ಹುರುಳಿ ಗೋಣಿ ೧ಕ್ಕೆ ...	5 - 0	5 — 2	5— 0	5 — 8
ಕಡಲೆ ಗೋಣಿ ೧ಕ್ಕೆ ...	8— 0	8 —12	8— 8	8 12
ತೊಗರಿಬೇಳೆ ಗೋಣಿ ೧ಕ್ಕೆ	11— 0	19— 0	11— 0	17 - 0
ಉದ್ದು ಗೋಣಿ ೧ಕ್ಕೆ ...	9— 0	9 — 8	8— 0	8— 4
ಹೆಸರು ಗೋಣಿ ೧ಕ್ಕೆ ...	7 -12	8— 8	9— 4	9— 8
ಖೂರುಬೆಲ್ಲ ಖಂಡಿ ೧ಕ್ಕೆ...	30— 0	32— 0	20 — 8	30— 0
ಉಪ್ಪು ಗೋಣಿ ೧ಕ್ಕೆ ..	4 4	4—12	4 — 4	4—12
ಕೊಬ್ರಿ ಖಂಡಿ ೧ಕ್ಕೆ ...	75 — 0	84— 0	75— 0	85— 0
ಕೊಬ್ರಿ ಹಿಂಡಿ ಖಂಡಿ ೧ಕ್ಕೆ	30— 0	30 - 8	30— 0	32— 8
ಎಳ್ಳಿಂಡಿ ಖಂಡಿ ೧ಕ್ಕೆ ...	27 — 8	30— 0	20— 0	23—12
ಕೊಬ್ರಿ ಎಣ್ಣೆ ಮಣ ೧ಕ್ಕೆ	6— 0	7— 0	7 - 0	7—12
ಎಳ್ಳೆಣ್ಣೆ ಮಣ ೧ಕ್ಕೆ ...	7— 0	...	6 - 0	6 — 4
ಚಿಮಿಣಿ ಎಣ್ಣೆ ಪೆಟ್ಟಿಗೆ ೧ಕ್ಕೆ	6— 5	7 — 5	6 — 2	6— 8
ಮೋರಿಸ ಸಕ್ಕರೆ ಮ ೧ಕ್ಕೆ	3— 2	3— 4	3-- 0	3- 4
ಮೆಣಸು ...	2— 8	4— 8	2 —12	3— 0
ಸಾಸಿವೆ ಮುಡಿ ೧ಕ್ಕೆ ...	5— 4	6- 0	5— 8	5 —12
ಕೊತ್ತಂಬರಿ ಮಣ ೧ಕ್ಕೆ ...	2— 8	3 - 0	2 —12	3 — 8
ಕಾಳುಮೆಣಸು ಖ ೧ಕ್ಕೆ...	100— 0	120 - 0	110 0	120 — 0
ಗೇರುಬೀಜ ಮು ೧ಕ್ಕೆ ...	3 - 0	3— 8	4 — 4	...
ಕಬ್ಬಿಣ ಖಂಡಿ ೧ಕ್ಕೆ ...	35— 0	37— 8	45 — 8	50— 0
ತಾಂಬ್ರ ತಗಡು ಮ. ೧ಕ್ಕೆ	12— 4	12 — 8	14— 8	...
,, ಪಾತ್ರಗಳು ಮ. ೧ಕ್ಕೆ	12 — 8	14 — 0	16— 0	17— 0
ಚೀನಿ ಬೆಳ್ಳಿ ಸೇರು ೧ಕ್ಕೆ...	18 — 8	15— 0	13 - 12	14 0
ಹಿತ್ತಾಳೆ ತಗಡು ಮ ೧ಕ್ಕೆ	10 — 0	10 — 8	11— 0	—
ಪವನು ೧ಕ್ಕೆ ...	22— 8	...	22 - 8	...
ಹುಣಸೆ ಹುಳಿ ಖಂಡಿ ೧ಕ್ಕೆ	40— 0	45-— 0	45-- 0	50-— 0
ನೇಟಿವ್ ಕಾಫಿ ಖಂಡಿ ೧ಕ್ಕೆ	145 - 0	150 0	160 - 0	170— 0
ಫಿಬೇರಿ ಕಾಫಿ ಖಂಡಿ ೧ಕ್ಕೆ	175— 0	195 — 0	170 - 0	182— 8
ಮಡಿಕೇರಿ ಏಲಕ್ಕಿ ...	50 - 0	55 — 0	70— 0	75— 0
ಹುಪ್ಪ ಮಣ ೧ಕ್ಕೆ ...	17 - 0	18 — 0	14— 0	15— 0

ಪ್ರಾಮುಖ್ಯ ಪ್ರಕಟಣೆ

ಅಮೃತಾಂಜನ

— ಡಿಪೋವಿನ ರಿಂಗ್‌ವರ್ಮ್ ಮುಲಾಮು —

ಇಷ್ಟರ ವರೆಗಣ ನಮ್ಮ
ವಿಲಿಯಮ್ ಎಂಡ್ ಕೋ ರವರ
ರಾಜ ಮತ್ತು ರಾಣಿಯ ಟ್ರೇಡ್‌ಮಾರ್ಕುಳ್ಳ ರಿಂಗ್‌ವರ್ಮ್
ಮುಲಾಮು ಈ ಕೆಳಗಣಂತೆ ವ್ಯತ್ಯಾಸಮಾಡಲಾಗಿದೆ.

ಅಮೃತಾಂಜನ ಡಿಪೋವಿನ ತ್ರಿವರ್ಣದ 'ರೈಸಿಂಗ್ ಸನ್'

ಈ ಮೇಲಿನ ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು
ನಮ್ಮ ಗಿರಾಕಿದಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು.
ನಮ್ಮ ಟ್ರೇಡ್‌ಮಾರ್ಕಿನ ಮಾರ್ಪಾಟಿನಿಂದ ನಮ್ಮ ಔಷಧಿ ತಯಾರಿಯಲ್ಲಿ ಯಾವ
ವ್ಯತ್ಯಾಸವೂ ಆಗಿಲ್ಲೆಂಬ ಕುರಿತು ನಾವು ಈ ಮೂಲಕ ಭರವಸೆ ಕೊಡುತ್ತೇವೆ

ಅಮೃತಾಂಜನ ಡಿಪೋ, --- ಬೊಂಬಾಯಿ, ಮದ್ರಾಸು, ಕಲ್ಕತ್ತ

ಕೇವಲ ಎರಡೇ ಆಣೆಗಳಲ್ಲಿ ೨೫ ರೂಪಾಯಿ ಬಹುಮಾನ

ಅಖಿಲ ಕನ್ನಡ ನಾಡಿಗೆ ಪ್ರೀತಿಯಾಗಿರುವ

ಕಥಾಕುಂಜ (ಮಾಸಪತ್ರಿಕೆ)

ನಯನಮನೋಹರವಾಗಿ ಹೊಸ ಹೊಸ ಚಿತ್ರಗಳಿಂದ ಅಲಂಕೃತವಾಗಿ ಡಿಸೆಂಬರ ದಲ್ಲಿ ೩ನೆಯ ವರುಷದ ೧ನೆಯ ಸಂಚಿಕೆಯು ಪ್ರಕಟವಾಗುವದು ಆದ್ದರಿಂದ ಕನ್ನಡಾಭಿಮಾನಿಗಳು ಈಗಲೆ ಮುಂಗಡ ಹಣ ಕಳುಹಿಸಿ ಚಂದಾದಾರರಾಗಬೇಕು

ಚಂದಾದಾರರಿಗೆ ೨೫ ರೂಪಾಯಿ ಬಹುಮಾನ.

ಈ ಸಂಧಿ ಕಳಕೊಳ್ಳಬಾರದು ಕಥಾಕುಂಜವನ್ನು ಕೊಂಡುಕೊಳ್ಳಲು ಎಲ್ಲರಿಗೂ ಅನುಕೂಲವಾಗಲೆಂದು ಚಂದಾ ಹಣವನ್ನು ಇಳಿಸಲಾಗಿದೆ

ಇಳಿಸಿದ ಚಂದಾ ೧-೬-೦ (ಅಂಚವೆಚ್ಚ ಬೇರೆ) ಶಾಲೆ, ಕಾಲೇಜು, ಲೈಬ್ರರಿಗಳಿಗೆ ೩-೮-೦

ಮೈಸೂರು ಮುಂಬೈ ವಿದ್ಯಾಖಾತೆಯವರಿಂದ ಶಾಲೆ ಕಾಲೇಜುಗಳ ವಾಚನಾಲಯಕ್ಕೆ
ಮಂಜೂರಾಗಿದೆ ಜಾಹೀರಾತುದಾರರಿಗೆ ಸುವರ್ಣಸಂಧಿ! ಪತ್ರಿಕೆಗಳನ್ನು
ಮಾರಾಟಮಾಡಲು ಎಲ್ಲ ನಗರಗಳಲ್ಲಿ ಪ್ರಾಮಾಣಿಕ ಏಜಂಟರು ಬೇಕು.

ವಿಶೇಷ ಮಾಹಿತಿ ಹಸ್ತಪತ್ರಿಕೆ ನೋಡಿರಿ

ವ್ಯವಸ್ಥಾಪಕ— **ಕಥಾಕುಂಜ, ಬೆಳಗಾಂವಿ.**

DIAMONDS! DIAMONDS!!

K. Ramachandra Krishna Shet

Near Mission High School, *Mangalore*

SUPERFINE UP TO DATE CUTTING! **ವಜ್ರಗಳು** BEST BRILLIANCY!!

ಉತ್ಕೃಷ್ಟ ತರಗತಿಯ ಚುನ್ನಾತ (first quality, selected) ಎಮ್ ಸ್ಟ್ರ್ಯಾಡಮ್ಮಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ. ಕೊಂಡುಕೊಳ್ಳುವವರಿಗೆ ಬಜಾರ ಧಾರಣೆಗಿಂತ 5 ಪರ್ಸಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ. ಇದನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ ಇದರ ಶಾಖೆಯೊಂದನ್ನು ಗವರ್ಮೆಂಟ್ ಕೊಲೆಜಿನ ಎದುರುಗಡೆ ತೆರೆಯಲಾಗಿದೆ.

ಕೆ. ರಾಮಚಂದ್ರ ಕೃಷ್ಣ ಶೇಟ್,
ಜುವೆಲರ್, ಮಿಶನ್ ಹ್ಯಾಸ್ಕೂಲು ಬಳಿ, ಮಂಗಳೂರು.

ಬೊಂಬೈ ಲೋಂಡ್ರಿ

ಉಡುಪಿ, ಹೊಸ್ಪಿಟಲ್ ರೋಡ್.

ನಮ್ಮಲ್ಲಿ ವಸ್ತ್ರಗಳನ್ನು ಜಾಗ್ರತೆಯಿಂದ ಮಡಿಮಾಡಿ, ಕ್ಲಪ್ತವ್ಯಾದೆಗೆ ಕೊಡುವುದಲ್ಲದೆ, ಊಲನ್, ಸಿಲ್ಕು ಮತ್ತು ಜರಿವಸ್ತ್ರಗಳನ್ನು ನಾಜೂಕಾಗಿ ಡ್ರ್ಯಾಕ್ಲೀನಿಂಗ್ ವಗೈರೆ ಮತ್ತು ಬೇಕಾದ ನಮೂನೆಯಲ್ಲಿ ಖಾತ್ರಿಯಾದ ರಂಗಿನ ಕೆಲಸವನ್ನು ಸಹ ಅತಿ ಸುಲಭ ದರದಲ್ಲಿ ಮಾಡಿಕೊಡಲಾಗುವುದು.

ಹೆಚ್ಚಿನ ಮಾಹಿತಿ ಬಗ್ಗೆ ಕಂಪೆನಿಯಲ್ಲಿ ವಿಚಾರಿಸುವುದು.

ಪ್ರೊಪ್ರೈಟರ್: ಯಮ್. ಯುಸ್. ಭಟ್ಕಳ್.

ಉತ್ತಮ ವರ್ಗದ ಶ್ರೇಷ್ಠವಾದ **ಸರಸ್ವತಿ** ಸ್ತ್ರೀಸಾಹಿತ್ಯ ಸಚಿತ್ರ ಮಾಸಪತ್ರಿಕೆ

ಇಡೀ ಕರ್ನಾಟಕದಲ್ಲಿ ಸ್ತ್ರೀಯರ ಅಭ್ಯುದಯಕ್ಕಾಗಿ ಪ್ರಚುರಪಡಿಸುತ್ತಿರುವ ಪತ್ರಿಕೆಯು ಇದೊಂದೇ. ಈ ಪತ್ರಿಕೆಯ ಹದಿನಾರನೆಯ ಸಂಪುಟವು 1937ನೇಯ ಜನವರಿ ತಿಂಗಳಿನಿಂದ ಪ್ರಾರಂಭವಾಗಿದೆ. ಈ ಪತ್ರಿಕೆಯಲ್ಲಿ ಸ್ತ್ರೀಯರ ಉನ್ನತಿಗೆ ಆವಶ್ಯಕವಾದ ಶಿಕ್ಷಣ-ಸಾಹಿತ್ಯ ಕಲೆ-ಆರೋಗ್ಯ-ಪಾಕಶಾಸ್ತ್ರ-ಸಮಾಜ ಸುಧಾರಣೆ ಇವುಗಳಿಗೆ ಸಂಬಂಧಪಟ್ಟ ಲೇಖನಗಳೂ, ಸಣ್ಣ ಸಣ್ಣ ಕಥೆಗಳೂ, ನಾಟಕಗಳೂ ಕರ್ನಾಟಕದ ಸುಪ್ರಸಿದ್ಧ ಲೇಖಕ ಲೇಖಕಿಯರಿಂದ ಬರೆಯಲ್ಪಟ್ಟು ಪ್ರಕಟವಾಗುವವು. ಮಕ್ಕಳ ಸಲುವಾಗಿ 'ಮಕ್ಕಳ ಪುಟಗಳು' ಬೇರೆ ಪ್ರಕಟವಾಗುವವು ಮೈಸೂರು, ಮುಂಬೈ ವಿದ್ಯಾ ಇಲಾಖೆಯವರಿಂದ ಸರ್ಕಾರದ ಶಾಲೆಗಳಿಗೂ ವಾಚನಾಲಯಗಳಿಗೂ ಮಂಜೂರಾಗಿದೆ ಪ್ರಕಟನೆಗೆ ಅತ್ಯುತ್ತಮವಾದ ಮಾಸಪತ್ರಿಕೆ
ವಾರ್ಷಿಕ ಚಂದಾ ರೂ 3—0—0 ಮಾತ್ರ. ವಿ. ಪಿ. ಹಾಸಲುಬೇರೆ.

ಸರಸ್ವತಿ ಕಾರ್ಯಾಲಯ,
ಚಾಮರಾಜಪೇಟೆ, ಬೆಂಗಳೂರು ನಗರ

The Commonwealth Assurance Co., Ltd

(ESTD 1929)

Chairman, Mr N C Kelkar. Ex- M. L. A

HEAD OFFICE **POONA CITY.** CHIEF AGENCY OFFICE **HAMPANKATTA, MANGALORE.**

**1934ನೇ ಇಸ್ವಿ ಎಪ್ರಿಲ್ ತಿಂಗಳ ವರೆಗೆ
ರೂ. 57 ಲಕ್ಷಗಳಷ್ಟರ ವಹಿವಾಟುಮಾಡಿರುವುದು.**

1932ನೇ ಎಪ್ರಿಲ್ ತಿಂಗಳ ವರೆಗೆ ಪಟ್ಟಿಯಲ್ಲಿದ್ದ ಎಲ್ಲಾ ಪೊಲಿಸಿದಾರರಿಗೆ

ಈ ಕಂಪೆನಿಯು 1000ಕ್ಕೆ ರೂ. 10 ಮತ್ತು 12ರಷ್ಟರ ಬೋನಸು ಕೊಟ್ಟಿರುವುದು.

ಹೆಚ್ಚಿನ ಮಾಹಿತಿಗೆ ಹೆಡ್ ಆಫೀಸಿಗಾಗಲಿ ಈ ಕೆಳಗಣ ವಿಳಾಸಕ್ಕಾಗಲಿ ಬರೆಕೊಳ್ಳಿರಿ--

ದಿ ಕೋಮನ್‌ವೆಲ್ತ್ ಎಶ್ಯುರೆನ್ಸ್ ಕಂಪೆನಿ ಲಿಮಿಟೆಡ್,
ಮುಖ್ಯ ಏಜನ್ಸಿ ಆಫೀಸು, ಹಂಪನಕಟ್ಟೆ, ಮಂಗಳೂರು.

ದಿ ಮೂಲ್ಕಿ ಗ್ರೇಂಡ್ ರೇಫ್‌ಲ್

(ಮೂಲ್ಕಿ ಹೈಸ್ಕೂಲಿನ ಸಹಾಯಾರ್ಥ)

ಮೂಲ್ಕಿ ದ. ಕನ್ನಡ.

ಲೆಖ್ಖ ಒಪ್ಪಿಸುವ ತಾರೀಕು 25—1—1937] ● **[ಸೋಡ್ತಿ ತೆಗೆಯುವ ತಾರೀಕು 31—1—1937**

ಟಿಕೇಟು ಒಂದರ ಖರೀದಿ ಬರೇ ನಾಲ್ಕು ಆಣೆ ಮಾತ್ರ.

20 ಟಿಕೇಟುಗಳಿರುವ ಒಂದು ಪುಸ್ತಕಕ್ಕೆ ರೂ. 5—0—0 ಮಾತ್ರ. ಜಾಗ್ರತ ಮಾಡಿರಿ.

ನಿಮಗೆ ಬೇಕಾಗುವ ಟಿಕೇಟುಗಳನ್ನು ಕೂಡಲೇ ಪಡೆಯಿರಿ.

ಸೋಡ್ತಿ ತೆಗೆಯುವ ತಾರೀಕನ್ನು ಯಾವ ಕಾರಣದಿಂದಲೂ ಮುಂದರಿಸೋಣಾಗಲಿಕ್ಕಿಲ್ಲ.

ಹೆಚ್ಚಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಕೂಡಲೇ ಬರೆಯಿರಿ—

"ಕಾರ್ಯದರ್ಶಿ,"
"ದಿ ಮೂಲ್ಕಿ ಗ್ರೇಂಡ್ ರೇಫ್‌ಲ್,"
ಮೂಲ್ಕಿ, ದ. ಕನ್ನಡ.

ಪ್ರೇಮ ವಿದ್ಯಾಪೀಠ, ತುಂಗಭದ್ರಾ, (ಬಳ್ಳಾರಿ ಜಿಲ್ಲಾ)

ಇದರ ಹೊಸವರ್ಷವು ಜೂಲೈಯಲ್ಲಿ ಮೊದಲಾಗುತ್ತದೆ ಮರ್ಯಾದೆಯ ಉದ್ಯೋಗ ಬೇಕಾಗಿದ್ದರೆ ಇಲ್ಲಿ ಶಿಕ್ಷಣವನ್ನು ಪಡೆಯಿರಿ ಮುಲ್ಕಿ, ಅಪ್ಪರ್ ಸೆಕೆಂಡರಿ, ಮೆಟ್ರಿಕ್ ಸ್ಕೂಲ್ ಫೈನಲ್ ಇತ್ಯಾದಿ ಪಾಸ್ ಆದವರೆಲ್ಲರಿಗೂ ಯೋಗ್ಯತೆಗೆ ತಕ್ಕಂತೆ ವಿಧ ವಿಧವಾದ ಕೋರ್ಸ್‌ಗಳಿವೆ ಪ್ರೊಸ್‌ಪೆಕ್ಟಸ್ ಮಾಹಿತಿಗಾಗಿ ಕೂಡಲೆ ೨ ಆಣೆ ಸ್ಟಾಂಪು ಇಟ್ಟು ಬರೆಯಿರಿ.

ಮಹೋಪಾಧ್ಯಾಯಾ **ಡಾ| ಸುಮತಿಬಾಯಿ,**

ಬಿ ಎ ಎಲ್ ಟಿ., ಎಫ್. ಓ ಎಮ್ ಎಸ್. ಭಿಷಗ್ರತ್ನ. ರಿಜಿಸ್ಟ್ರಾರ್-

LAXMI BRAND COFFEE POWDER.

Pure & Superior quality, will last long without losing its flavour and colour

TRADE MARK

Use always this LAXMI BRAND COFFEE POWDER prepared from the best & choicest Coffee Beans of Nilgiris. (Hills)

WANTED AGENTS in Southern India (samples available)

ಉತ್ಕೃಷ್ಟ ಕಾಫಿಬೀಜಗಳಿಂದ ತಯಾರಿಸಲ್ಪಟ್ಟ ಸುವಾಸನೆಯುಳ್ಳ ನಮ್ಮ **ಲಕ್ಷ್ಮೀಮಾರ್ಕಿನ ಕಾಫಿಹುಡಿಯನ್ನೇ** ಸದಾ ಉಪಯೋಗಿಸಿರಿ ಏಜಂಟರಿಗೆ ಯೋಗ್ಯ ಕಮಿಶನ್ ಕೊಡಲಾಗುವದು ಹೆಚ್ಚಿನ ಮಾಹಿತಿ ಬಗ್ಗೆ ಕೆಳಗಿನ ವಿಳಾಸಕ್ಕೆ ಬರೆದು ತಿಳಿಯಬಹುದು

Fire Resistance Steel Iron Safes. latest pattern.

ನಮ್ಮಲ್ಲಿ ಕಬ್ಬಿಣದ ಪೆಟ್ಟಿಗೆಗಳು ಸದಾ ಮಾರಾಟಕ್ಕೆ ಸಿದ್ಧವಿರುತ್ತವೆ. ತಿಂಗಳುಗಟ್ಟಲೆ ಕಂತುಗಳಿಂದಲೂ ಮಾರುವ ಏರ್ಪಾಡಿದೆ.

FOR SALE

For Prices & Particulars Apply to—

K. K. Shanbhag & Sons

Court Road, UDIPI S K

Sold also by Instalments

ಮಾಸ] **ವಿಶ್ವವಾಣಿ** [ಪತ್ರಿಕೆ.

ಸಂಪಾದಕರು—**ಅ. ನ. ಕೃಷ್ಣರಾಯರು.**

ಸಂಸ್ಕೃತಿಯ ಪ್ರಸಾರಕ್ಕಾಗಿ ಕರ್ನಾಟಕದಲ್ಲಿ ಹೊರಟಿರುವ ಪತ್ರಿಕೆ ಇದೊಂದೇ. ಜಗತ್ತಿನ ಸಾಂಸ್ಕೃತಿಕ ಚಲನವಲನಗಳ ಸುದ್ದಿಗಳೆಲ್ಲಾ ಇದರಲ್ಲಿ ಪ್ರಕಟವಾಗುತ್ತವೆ

ಚಿತ್ರವಿಭಾಗದ ವೈಶಿಷ್ಟ್ಯ—ಜಗತ್ತಿನ ಯಾವದೇ ಪತ್ರಿಕೆಯಲ್ಲಿಯೂ ಪ್ರಕಟವಾಗದಿರುವ ಅನೇಕ ಚಿತ್ರಗಳು 'ವಿಶ್ವವಾಣಿ'ಗೆ ವಿಶೇಷ

ಆದುದರಿಂದ ಇಂದೇ ಚಂದಾದಾರರಾಗಿರಿ.

ಸಾಮಾನ್ಯ ಚಂದಾದಾರರಿಗೆ (ವರ್ಷಕ್ಕೆ)	ರೂ. ೩—೮—೦
,, ,, (೬ ತಿಂಗಳಿಗೆ)	ರೂ. ೨—೦—೦
ಶಾಲೆ, ಕಾಲೇಜು, ವಾಚನಾಲಯ, ಸಾರ್ವಜನಿಕ ಸಂಸ್ಥೆಗಳಿಗೆ (ವರ್ಷಕ್ಕೆ)	ರೂ. ೫—೦—೦

ವಿಶ್ವವಾಣಿಯು ಮೈಸೂರು, ಮುಂಬಯಿ, ಮದರಾಸು, ಹೈದರಾಬಾದು, ಕೊಡಗು, ಕರ್ನಾಟಕಗಳಲ್ಲಿ ಮಾತ್ರವಲ್ಲದೆ ಕನ್ನಡಿಗರು ನೆಲಸಿರುವ ಎಲ್ಲ ಕಡೆಯಲ್ಲಿಯೂ ಪ್ರಚುರವಾಗುತ್ತದೆ

ಆದುದರಿಂದ 'ವಿಶ್ವವಾಣಿ'ಯಲ್ಲೇ ಜಾಹೀರಾತನ್ನು ಕೊಡಿರಿ.

ಹೆಚ್ಚು ವಿಚಾರಗಳಿಗೆ ಬರೆಯಿರಿ—

ವ್ಯವಸ್ಥಾಪಕ—'ವಿಶ್ವವಾಣಿ,' 'ಅನ್ನಪೂರ್ಣ', ವಿಶ್ವೇಶ್ವರಪುರಂ,

ಬೆಂಗಳೂರು ನಗರ.

ನಮ್ಮ ಜರಿ ಪೀತಾಂಬರ, ಮುಂತಾದ ಮಡಿಗಳಿಗೆ ಗಮನಕೊಡಿರಿ.

S. U. N. & CO. ***Choukhamba, Benares City.***

ಮೂರು ಇನಾಮುಗಳು.

OUR CUSTOMER

THIS MAN



THIS MAN WISHES HE HAD

ಶ್ರೀ ಕಾಶಿಯಲ್ಲಿ ತಯಾರಾಗತಕ್ಕ ರೇಶಿಮೆ ಮಾಲುಗಳ ಕೆಟಲಾಗು 1, ಕಾಶೀನಕ್ಷೆ 1, ವಿಶ್ವೇಶ್ವರ ಪಟ 1, ಈ 3 ಸಾಮಾನುಗಳು 1 ಆಣೆ ಸ್ಟೇಂಪು ಕಳುಹಿಸಿದರೆ ಇನಾಮಾಗಿ ಕಳುಹಿಸಲಾಗುವವು ಸ್ಟಾಂಪು ಬಾರದಿದ್ದರೆ ಈಗಿನ ಫೆಶನಿಗೆ ತಕ್ಕಂತೆ ಜರೀ ಕೆಲಸಗಳಿಂದ ತಯಾರಿಸಿದ ರೇಶ್ಮೆ ಸೀರೆಗಳೂ, ಖಣ, ಮಡಿ ಕಿಂಖಾಪು, ಪೇಟಾ, ಕೋಟಿಂಗ್, ಶರ್ಟಿಂಗ್ ಶಿಲ್ಕುಗಳೂ, ಕಾಶ್ಮೀರ ಶಾಲುಗಳೂ, ಊಲನ್ ಚಾದರ, ಧಾವಳಿ, ನಾಮರ್ದಿ, ತರತರದ ರುದ್ರಾಕ್ಷಿಗಳೂ ಸಾಮಾನುಗಳೇ ಮೊದಲಾದ ಅನೇಕ ತರದ ಸಾಮಾನುಗಳ ಕೆಟಲಾಗು 1 ಮಾತ್ರ ಇನಾಂ. ಈಗಿನ ಹೊಸನಮೂನೆಯ ಮಡಲು ಬುಟ್ಟಿ, ಹಾಕಿದ ಜರೀ ಶೀರೆ ಎಲ್ಲಾ ರಂಗುಗಳಲ್ಲಿ ರೂ 20ರಿಂದ 55, ಮಡಲು ಸಾದಾ 16ಮೊಳದ ಶೀರೆ 1ಕ್ಕೆ ರೂ 16ರಿಂದ ರೂ 55ರ ವರೆಗೆ ಅರೆ ಕಡಮೆ 16ಮೊಳ ಕ್ವಾಲಿಟಿ ಅಂಚು ರೂ. 10½ ಯಿಂದ ರೂ 16 ಖಣ 1ಕ್ಕೆ ರೂ 1¼ರಿಂದ ರೂ 10ರ ವರೆಗೆ ಪೋಸ್ಟು ಖರ್ಚು ಪ್ರತ್ಯೇಕ ಆರ್ಡರಿನಂತೆ ಸಾಮಾನುಗಳನ್ನು ಸರಿಯಾದ ಸುಲಭ ದರದಿಂದ ಕಳುಹಿಸಲಾಗುವುದು

ಶಿರೋಮಣಿ ನಾರಾಯಣಾಚಾರ್ಯ & ಕಂಪೆನಿ, ಚೌಕಂಬಾ, ಬನಾರಿಸ್, ಕಾಶಿ

USE

SUVASINI AGARBATHIES

(REGD)

SRI BHARATHA VASTU MANDIRA, UDIPI

ಉತ್ತಮ ಪುಸ್ತಕಗಳು

ಸರಸ್ವತಿ
ದಿವಂಗತ ಡಾ| ಮಾಧವಾಚಾರ್ಯರ ಅತ್ಯುತ್ತಮ ಸಾಮಾಜಿಕ ನಾಟಕ.
ಬೆಲೆ: **0 8 0**

ಮಧುವನ
ಕಿರಿಯರ ಪ್ರಪಂಚದವರ ಸಾಹಸದ ಫಲವಾದ ಸುಂದರ ಚಿಕ್ಕ ಕತೆಗಳಿಪ್ಪತ್ತೈದರ ಸಂಗ್ರಹ.
ಬೆಲೆ: **1 8 0**

ಗೀತೆಯ ಕೈಗನ್ನಡಿ
ಹೊಸಕೆರೆ ಚಿದಂಬರಯ್ಯನವರ ಸಿದ್ಧಹಸ್ತದಿಂದ ಹೊರಟ ಭಗವದ್ಗೀತೆಯ ಸಮೂಲ ಭಾಷಾಂತರ.
ಬೆಲೆ **0 4 0**

ಗೀತೆಯ ಮೂಲ
ಪಂಡಿತ ಆರ್. ಅನಂತಾಚಾರ್ಯ ಶಿರೋಮಣಿಗಳ ಸರಳವಾದ ಈಶಾವಾಸ್ಯೋಪನಿಷತ್ತಿನ ಅನುವಾದ.
ಬೆಲೆ **0 8 0**

ಒಂದೇ ತಿಂಗಳಲ್ಲಿ ಇಂಗ್ಲಿಷ್
ಶ್ರೀ ಪಿ. ವಿ. ಉಪಾಧ್ಯಾಯ, ಬಿ ಎ. ಎಲ್‌ಎಲ್. ಬಿ. ಇವರಿಂದ ಬರೆಯಲ್ಪಟ್ಟ ಇಂಗ್ಲಿಷ್ ಕನ್ನಡ ಸ್ವಯಂಬೋಧಿನಿ.
ಬೆಲೆ: **0 8 0**

ತುಳುನಾಡ್ ಛಾಪಖಾನೆ, ಉಡುಪಿ

Printed by P VENKATARAMANACHARYA for & on behalf of SUPPLY AGENCY LTD at THULUNAD PRESS, UDIPI and Published by K H SHETTY at NAVAYUGA OFFICE UDIPI

Registered No. M. 3618

೨೦ ಪುಟಗಳು--ಒಂದಾಣೆ

NAVAYUGA
A Nationalist Kanarese Weekly, UDIPI, S. K.

It will pay you
to advertise in
'NAVAYUGA'
The Leading
Nationalist
Kanarese Weekly
of Karnatak
FOR RATES OF ADVT. Etc.
APPLY TO THE MANAGER

ನವಯುಗ

ವಾಚಕರನೇಕರ
ಅಪೇಕ್ಷೆಯಂತೆ ಮುದ್ರಿಸಲ್ಪಟ್ಟ
ಮಂಗಳೂರು ಉಡುಪಿಗಳಲ್ಲಿ
ಜಯಶೀಲವಾಗಿ
ಅಭಿನಯಿಸಲ್ಪಟ್ಟ
ಜನಪ್ರಿಯವಾದ ನಾಟಕ
ವ್ಯಭಿಚಾರಿಣಿ ಯಾರು?
ಕೆಲವೇ ಪ್ರತಿಗಳು ಉಳಿದಿವೆ.
ಬೆಲೆ ೦ ೮ ೦
ಕಿರಿಯರ ಪ್ರಪಂಚ, ಉಡುಪಿ

VOL XXIII-NO 23

4-2-1937

ಮೂಡ ಬಾನಿನ ಕಣ್ಣು ಕೆಂಗಿಡಿ
ಬನದ ನಾಡೊಳು ಮೊಳಗುತಿದೆ

ವಾರಪತ್ರಿಕೆ
ಸಂಪಾದಕ: ಕೆ. ಕೆ. ಶೆಟ್ಟಿ.

ಮೂಡುವುದು ತಂಬೆಳಕ ತಿಂಗಳಿನ ಮೊಗವಲ್ಲ,
'ನವಯುಗ'ದ ರುಪ್ರರವಿಯಾರಕ್ತ ಬಿಂಬ.

ಸಂಪುಟ ೧೬] ಉಡುಪಿ, ಗುರುವಾರ ೪, ಫೆಬ್ರವರಿ, ೧೯೩೭ [ಸಂಚಿಕೆ ೨೩

THE

Canara Industrial & Banking SYNDICATE, LIMITED.

ESTD: [INCORPORATED IN BRITISH INDIA] 1925

Head Office:
MUKUNDA NIVAS,
UDIPI, S. I.

BRANCHES:

1 BANGALORE CITY	16 KARWAR
2 BELGAUM	17 KUMTA
3 BYADGI	18 ANKOLA
4 BELLARY	19 HONAVAR
5 ADONI	20 BHATKAL
6 HOSPET	21 KARKALA
7 NANDYAL	22 BRAHMAVAR
8 PRODATTUR	23 HUNGARCUTTA
9 TADPATRI	24 SIRSI
10 TALIPARAMBA	25 SAGAR
11 HUBLI	26 KANHANGAD
12 GADAG	27 COONDAPOOR
13 UDIPI	28 PAYYANUR
14 UPPINANGADI	29 CANNANORE
15 KASARGODE	30 MANGALORE

A branch at BOMBAY will be opend in April next

We stand for all that is BEST in MODERN BANKING SERVICE

OPEN AN ACCOUNT TO-DAY IN THIS

Pioneer & Highly Progressive BANK OF KARNATAKA AND BE

A SATISFIED CUSTOMER.

ALL KINDS OF BANKING BUSINESS TRANSACTED ON EASY TERMS.

Total Working Funds exceed Rs. 35 Lakhs

Apply for Rules of Business

MUKUNDA NIVAS
UDIPI
22-12-1936

P. A. Pai Brothers,
Managing Agents

ದಿ ಕುಂದಾಪುರ ಬೇಂಕ್ ಲಿಮಿಟೆಡ್ ಕುಂದಾಪುರ

ಬ್ರಾಂಚ್—ಬ್ರಹ್ಮಾವರ.

ಚಾಲ್ತಿ ಮತ್ತು ಸೇವಿಂಗ್ಸ್ ಬೇಂಕ್ ಠೇವಣಾತಿಗಳು ಒಳ್ಳೇ ದರದ ಬಡ್ಡಿಯಲ್ಲಿಯೂ ಖಾಯಂ ಠೇವಣಾತಿಗಳು 3 ತಿಂಗಳಿಗೊಮ್ಮೆ ಸಾಲಿಯಾನ್ ಶೇಕಡಾ ರೂಪಾಯಿ 4½, 6 ತಿಂಗಳಿಗೆ ಸಾಲಿಯಾನ್ ಶೇಕಡಾ ರೂಪಾಯಿ 5%, 12 ತಿಂಗಳಿಗೆ ಸಾಲಿಯಾನ್ ಶೇಕಡಾ ರೂಪಾಯಿ 6%, 24 ತಿಂಗಳಿಗೆ ಸಾಲಿಯಾನ್ ಶೇಕಡಾ 6½% ದರದ ಬಡ್ಡಿಯಲ್ಲಿ ಅಂಗೀಕರಿಸಲ್ಪಡುವುವು.

ಒಂದು ವರುಷದ ಯಾ ಹೆಚ್ಚಿಗೆ ಅವಧಿಯ ಖಾಯಂ ಠೇವಣಾತಿಗಳಿಗೆ ಮೇಲೆ ಕಾಣಿಸಿದ ದರದಲ್ಲಿ 6 ತಿಂಗಳಿಗೊಮ್ಮೆ ಬಡ್ಡಿ ಕೊಡಲಾಗುವುದು. ಬೇರೆ ಎಲ್ಲಾ ತರದ ಬೇಂಕ್ ವ್ಯವಹಾರಗಳು ನಡಿಸಲ್ಪಡುವುವು. ಕರೆಂಟ್, ಸೇವಿಂಗ್ಸ್ ಬೇಂಕ್ ಮತ್ತು ಕ್ಯುಮುಲೇಟಿವ್ ಠೇವಣಾತಿಗಳು ಅಂಗೀಕರಿಸಲ್ಪಡುವುವು.

ವಿಶೇಷ ಸೂಚನೆ.—ಬಡವರಿಗೆ ಸಹಾಯವಾಗುವಂತೆ ಕಡಿಮೆ ಎಂದರೆ ರೂಪಾಯಿ 10 ಸಹಾ ನಾಲಿಕೊಡಲಾಗುತ್ತೆ. ಸಾಲುಗಳು ದೊರೆಯುತ್ತವೆ.

ಹೆಚ್ಚಿನ ಮಾಹಿತಿ ಬಗ್ಗೆ ಬರಕೊಳ್ಳಿರಿ

ನವಯುಗ

ಉಜ್ವಲ ರಾಷ್ಟ್ರೀಯ ವಾರಪತ್ರಿಕೆ—

ಉದ್ಬೋಧಕ ಲೇಖನಗಳಿವೆ, ದೇಶ ವಿದೇಶಗಳ ತಾಜಾ ವರ್ತಮಾನಗಳಿವೆ, ಮನೋಹ್ಲಾದಕ ಕಥೆ, ಕವನ, ನಾಟಕಗಳಿವೆ, ಧುರೀಣರ ಫೋಟೋಗಳಿವೆ.

ಪ್ರತಿ ಗುರುವಾರ ತಪ್ಪದೆ ಪ್ರಕಟವಾಗುವುದು.

ವಾ. ಚ. ಅಂಚೆವೆಚ್ಚ ಸೇರಿ ಕೇವಲ ೩—೪—೦.

ಇಂದೇ ಚಂದಾದಾರರಾಗಿರಿ!

ಅಖಿಲ ಕರ್ನಾಟಕದಲ್ಲಿಯೂ ಹೊರ ಪ್ರದೇಶದಲ್ಲಿಯೂ ವಿಶಾಲವಾಗಿ ಪ್ರಚಾರದಲ್ಲಿರುವ "ನವಯುಗ"ವು ಜಾಹೀರಾತುಗಳಿಗೆ ವಾಹನವಾಗಿದೆ.

ಮೆನೇಜರ್— ನವಯುಗ, ಉಡುಪಿ.

THE
MOOLKY BANK, LTD.,
MOOLKY.

ದಿ ಮೂಲ್ಕಿ ಬೇಂಕ್, ಲಿಮಿಟೆಡ್,
ಮೂಲ್ಕಿ.

ಎಲ್ಲಾ ತರದ ಬ್ಯಾಂಕ್ ವ್ಯವಹಾರಗಳು ನಡಿಸಲ್ಪಡುವವು. "ಮುಖ್ಯವಾಗಿ ಭಂಗಾರ ವ ಸರಕು ಈಡಿನ ಮೇಲೆ ಸಾಲವನ್ನು ಕೊಡುವುದು".

ಕಾಯಂ ಠೇವಣಾತಿಗಳು:

ಒಳ್ಳೇ ದರದ ಬಡ್ಡಿಯಲ್ಲಿಯೂ, ಮಾಸಿಕ, ಸೇವಿಂಗ್ಸ್‌ಬೇಂಕ್ ಮತ್ತು ಠೇವಣಾತಿಗಳು ಯೋಗ್ಯ ತರದ ಬಡ್ಡಿಯಲ್ಲಿಯೂ ಅಂಗೀಕರಿಸಲ್ಪಡುವವು.

ಹೆಚ್ಚಿನ ಮಾಹಿತಿಗೆ ಕೆಳಗಿನವರಿಗೆ ಬರೆದುಕೊಳ್ಳಿರಿ.

M. R. Punja, ಯಂ. ಆರ್. ಪೂಂಜ,
President & Manager, ಪ್ರೆಸಿಡೆಂಟು ಮತ್ತು ಮೆನೇಜರ್.

ಇದೀಗ ಬಂದಿದೆ— ಹೊಸ ಪುಸ್ತಕ!

ಟಾಲಸ್ಟಾಯಿಯವರ ಕತೆಗಳು

ಶ್ರೀ. ಎಲ್. ಗುಂಡಪ್ಪ, ಎಂ. ಎ.ಯವರಿಂದ ಅನುವಾದಿಸಲ್ಪಟ್ಟ ಟಾಲಸ್ಟಾಯಿಯವರ ಕಥೆಗಳೆಲ್ಲಾ ಕನ್ನಡದಲ್ಲಿ ಒಟ್ಟಾಗಿ ಅಚ್ಚಾಗಿ ಬಂದಿವೆ. ಈ ಕಥೆಗಳಲ್ಲಿ ಜೀವನಕ್ಕೆ ಸಂಬಂಧಪಟ್ಟ ಎಲ್ಲಾ ಪ್ರಶ್ನೆಗಳ ಚರ್ಚೆಯೂ ಇದೆ. ಆದುದರಿಂದ ಸ್ತ್ರೀಪುರುಷರೆಲ್ಲರೂ ಅವಶ್ಯ ಓದಬೇಕು.

೧೦೪ ಪುಟಗಳು — ಒಂದೂವರೆ ರೂಪಾಯಿ ಬೆಲೆ.

ಪ್ರತಿಗಳು ಸಿಗುವ ಸ್ಥಳ—

ಕಿರಿಯರ ಪ್ರಪಂಚ, ಉಡುಪಿ.

ವಿಜಯನಗರ ಸ್ಮಾರಕೋತ್ಸವ ಮಂಡಲದ ಪರವಾಗಿ ಹೊರಡಲಿರುವ

ಜಯಕರ್ನಾಟಕದ

ವಿಜಯನಗರ ವಿಶೇಷ ಸಂಚಿಕೆ

ವಿಶೇಷ ಸಂಪಾದಕರು: ಪ್ರೊ. ಎಸ್. ಎಸ್. ಮಾಳವಾಡ, ಎಂ.ಎ

ಅಖಿಲ ಭಾರತದ ಪ್ರಸಿದ್ಧ ವಿದ್ವಾಂಸರ ಲೇಖನವೈಭವ!

ವಿಜಯನಗರಕ್ಕೆ ಸಂಬಂಧಿಸಿದ ಚಿತ್ರಮಾಲೆಗಳ ಐಶ್ವರ್ಯ!!

ಹೊಳಪಿನ ಹಾಳೆ — ಅಚ್ಚಿನ ಅಚ್ಚುಕಟ್ಟು

ಬೆಲೆ: ಎಂಟಾಣೆ ಮಾತ್ರ

ಜಯಕರ್ನಾಟಕವು ಜನವರಿಯಿಂದ—ವಿಶೇಷ ಸಂಚಿಕೆಯಿಂದ ಮೊದಲ್ಗೊಂಡು **ದೊಡ್ಡ ಆಕಾರದಲ್ಲಿ** (ಡೆಮಿ ¼ ದಲ್ಲಿ) ಹೊರಡುವುದು!

ಅಲ್ಲದೆ **ಚಂದಾದರವನ್ನು ಇಳಿಸಿದೆ**—ರೂ. ೪—೮—೦ ಮಾತ್ರ!

ಚಂದಾದಾರರಾಗಬೇಕೆನ್ನುವವರಿಗೂ ಜಾಹಿರಾತುದಾರರಿಗೂ ಸುಸಮಯ

ಜಯಕರ್ನಾಟಕ ಕಾರ್ಯಾಲಯ, ಧಾರವಾಡ.

ತುಳುನಾಡ್ ವೈದ್ಯಶಾಲೆ, ಉದ್ಯಾವರ, ದ. ಕ.

ಕೊಲೆರಾ ಪಿಲ್ಸ್ — **ಭೈರನ ಮಾತ್ರೆಗಳು**

ಕೊಲೆರಾ ರೋಗಕ್ಕೆ ರಾಮಬಾಣ *ukha*ಣಂತಿ ರೋಗಸಂಬಂಧವಾದ ಸ

ಔಷಧ. — ಮ ರೋಗಗಳಿಗೂ ದಿವ್ಯೌಷಧ.

೧೦೦ ಮಾತ್ರೆಗಳಿಗೆ ರೂ. ೩—೮—೦ — ಶ್ರೀ ... ಮಾತ್ರೆಗಳಿಗೆ ರೂ. ೨—೮—೦

ಎಲ್ಲಾ ತರದ ರೋಗಗಳಿಗೂ ಅನುಭವಸಿದ್ಧವಾದ ... ದೊರೆಯುತ್ತವೆ.

ಯು. ಪಿ. ಮೇಸ್ತ್ರ, ಗೊ... ಸಾಮಾನುಗಳು ... ಯನ್.

...ಕಳುಹಿಸಲಾಗುವುವು.

...ಗೆ ತಕ್ಕಂತೆ ಜರಿ

THE
PANGAL NAYAK BANK
LIMITED.

ESTABLISHED 1920.

***Head Office*: UDIPI.**

Branches: MANGALORE and KATAPADI.

Fixed loans and Overdraft advances are granted on the pledge of gold articles, on the mortgage of immovable properties and on the personal security of approved constituents on favourable terms.

Genuine trade bills, cheques, drafts etc., are discounted at a nominal charge.

Current, Savings Bank and Cumulative deposits are accepted at moderate rates of interest.

Fixed Deposits are received and interest allowed at 4% on 1 year and at 4½% on 2 years deposits.

Every other description of up-to-date Banking business is also undertaken.

A few shares are also available to the public.

ಮಿರಜದಲ್ಲಿಯ ಸುಪ್ರಸಿದ್ಧ ವೈದ್ಯರಾದ ಎಮ್. ಕೆ. ರಜಪೂತ ಇವರ ಸ್ವದೇಶಿ ಔಷಧಗಳು.

ಗುಣ ಬಾರದಿದ್ದರೆ — ## ಸ್ತ್ರೀಧರ್ಮ ಸಂಜೀವಿನೀ ಚೂರ್ಣ (ರಿಜಿಸ್ಟರ್ಡ) — **ಹಣ ಪರತ**

ಈ ಚೂರ್ಣವು ಕೆಂಪು ಬಿಳೆ ಶರಗಿಗೆ ಶತ್ರುವಾಗಿರುವುದು. ಅನಿಯಮಿತತನದಿಂದ ಮುಟ್ಟಾಗುವಿಕೆ, ಕ್ಲೇಶ ವೈಯಲ್ಲಿ ನೋವು, ಉಷ್ಣತಾ ಕ್ಷೀಣತಾ ಗರ್ಭಾಶಯದಲ್ಲಿರುವ ದೋಷ ಗರ್ಭಧಾರಣವಾಗದಿರೋಣ, ಅಕಾಲದಲ್ಲಿ ಗರ್ಭಪತನವಾಗೋಣ ಈ ಮೊದಲಾದ ರೋಗಗಳು ನಿಶ್ಚಯವಾಗಿ ನೆಟ್ಟಗಾಗಿ ಗರ್ಭಕೋಶವು ಸ್ವಚವಾಗುವದು. ಮಕ್ಕಳಾಗುವದಿಲ್ಲೆಂದು ಎರಡನೇ ಲಗ್ನಮಾಡಿಕೊಳ್ಳುವ ಮೊದಲು ಗೃಹದೇವತೆಯಾದ ಮೊದಲನೇ ಪತ್ನಿಗೆ ಈ ಚೂರ್ಣ ಅವಶ್ಯ ಕೊಡಿರಿ. ಮುಖ್ಯ ಸರ್ಟಿಫಿಕೇಟ ಮ. ರಾ. ಎ. ಎಮ್. ಇನ್ಸ್‌ಪೆಕ್ಟರ ಬೆಳಗಾಂವ:—ಈ ಚೂರ್ಣದಿಂದ ನನ್ನ ಕುಟುಂಬದ ಹೊಟ್ಟೆಯೊಳಗಿನ ರಕ್ತ ಗುಲ್ಮದ ಗಂಟು ನಾಮಶೇಷವಾಯಿತು. ಮತ್ತು ಎಲ್ಲ ರೋಗಗಳು ನಿಶ್ಶೇಷವಾದವು. ನನ್ನ ಮಿತ್ರನ ಹೆಂಡತಿಯ ರಕ್ತ ಮತ್ತು ಶರಗು ಇಲ್ಲದಂತಾದವು. ೨೧ ದಿವಸದ ಡಬ್ಬಿಯ ಕಿಮ್ಮತು ರೂ. ೩ ಟ.ಖ. ಆಣೆ, ೮. ಡಬ್ಬಿಗೆ ೪ರೂ.]

ಸಂತತಿ ಪ್ರತಿಬಂಧಕ ಚೂರ್ಣ. (ರಿಜಿಸ್ಟರ್ಡ)
[ವಿ ಪಿ ಖರ್ಚು ಆಣೆ ೮.

ಬಹಳಸಾರಿ ಹಡಿಯುವುದರಿಂದ ಅತಿಶಯ ಅಶಕ್ತಿಯಾಗುತ್ತದೆ ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುರುವಾಗುವದು. ಶರೀರಕ್ಕೇನೂ ಅಪಾಯವಾಗದೆ ಸಂಸಾರ ಸುಖವು ಪೂರ್ಣವಾಗಿದೆ. ಕೂಡಲೇ ಗರ್ಭಧಾರಣ ಬಂದಾಗುವುದು ತದನಂತರ ಏನು ಮಾಡಿದರೂ ಸುರುವಾಗುವದಿಲ್ಲ. ಮೊದಲೇ ಪೂರಾ ವಿಚಾರಮಾಡಿ ಔಷಧ ಬೇಡಿರಿ. ಮುಖ್ಯಸರ್ಟಿಫಿಕೇಟ ಡಾಕ್ಟರ ಬಿ. ಎ. ವೈದ್ಯ ಎಲ್ ಸಿ. ಪಿ. ಎಸ್. ಮು॥ ಕೇಳವಾ ಮಾಹಿಮಾ ಜಿ. ಠಾಣೆ. ಈ ಚೂರ್ಣದಿಂದ ಯಾವ ತರದ ಅಪಾಯವಾಗದೆ ಗರ್ಭಧಾರಣವಾಗುವದಿಲ್ಲ. ಪೂರ್ಣ ಗುಣಕಾರಿ

ವಿಳಾಸ:—ಸಂಜೀವಿನೀ ಔಷಧಾಲಯ, ಮು. ಪೊ. ಮಿರಜ, S. M. C

ಸಮಾಚಾರ ಸಂಗ್ರಹ • ಚುನಾವಣೆಯ ಸಮಾಚಾರ

ಸಿವಿಲ್‌ಜೈಲು ಕಾನೂನು ಪೂರಾ ತೆಗೆದುಹಾಕಲ್ಪಡಲಿಲ್ಲ

ಇಂಡಿಯನ್ ಸಿವಿಲ್ ಪ್ರೊಸೀಜರ್ ಕೋಡಿನ 51ನೇ ಸೆಕ್ಷನಿನ ತಿದ್ದುಪಡಿಯ ಪ್ರಕಾರ ಡಿಕ್ರಿಯ ಮೇಲೆ ಬರತಕ್ಕ ಹಣದ ಸಂಬಂಧವಾಗಿ ಪ್ರತಿವಾದಿಯನ್ನು ಸಿವಿಲ್ ಜೈಲಿಗೆ ಕಳುಹಿಸುವ ಕಾನೂನು ರದ್ದಿಯಾತಿಯಾಗಿಲ್ಲ. ಈಗ ತಿದ್ದುಪಡಿಯಾದ ಕಾನೂನಿನ ಪ್ರಕಾರ ಪ್ರತಿವಾದಿಗೆ ನೋಟೀಸು ಕೊಡತಕ್ಕದು. ಮುಂಚೆ ಅಂತಹ ನೋಟೀಸು ಕೊಡದೆಯೂ ಪ್ರತಿವಾದಿಯನ್ನು ವಾರಂಟಿನಲ್ಲಿ ಹಿಡಿದು ಜೈಲಿಗೆ ಕಳುಹಿಸಬಹುದಿತ್ತು. ಅಲ್ಲದೆ, ಈಗ ಪ್ರತಿವಾದಿಯು ಹಣವನ್ನು ತೆರಲಿಕ್ಕೆ ಅಶಕ್ಯನಿದ್ದಾನೆಂದಾಗಲೀ ವಾದಿಗೆ ಮೋಸಮಾಡುವ ಅಪ್ರಾಮಾಣಿಕ ಕೆಲಸವನ್ನು ಮಾಡಿದ್ದಾನೆಂದಾಗಲೀ ರುಜುಪಡಿಸುವ ಭಾರವು ವಾದಿಯಮೇಲಿದೆ. ಈ ಕೆಳಗಿನ ವಿಷಯಗಳಲ್ಲಿ ಕೋರ್ಟಿಗೆ ಸಂತೃಪ್ತಿಯಾದರೆ ಈಗಲೂ ಪ್ರತಿವಾದಿಯನ್ನು ಸಿವಿಲ್ ಜೈಲಿಗೆ ಕಳುಹಿಸುವ ಹುಕುಮನ್ನು ಕೋರ್ಟು ಕೊಡಬಹುದು. 1 ಪ್ರತಿವಾದಿಯು ಡಿಕ್ರಿಯ ಜ್ಯಾರಿಯು ವಿಳಂಬವಾಗುವಂತೆ ಯಾ ಅದಕ್ಕೆ ತೊಡಕುಂಟಾಗುವಂತೆ ಮಾಡುವ ಉದ್ದೇಶದಿಂದ ತಲೆತಪ್ಪಿಸಿಕೊಳ್ಳುತ್ತಾನೆಂದಾಗಲೀ ಕೋರ್ಟಿನ ಚಕ್ರಬಂಧಿಯನ್ನು ಬಿಟ್ಟು ಪರವೂರಿಗೆ ಹೋಗುತ್ತಾನೆಂದಾಗಲೀ ಡಿಕ್ರಿಗೆ ಕಾರಣವಾದ ವ್ಯಾಜ್ಯವು ದಾಖಲು ಆದ ಮೇಲೆ ವಾದಿಗೆ ಮೋಸ ಕೊಡುವ ಅಪ್ರಾಮಾಣಿಕತನದಲ್ಲಿ ತನ್ನ ಸೊತ್ತುಗಳನ್ನು ಪರಾಭಾರೆ ಯಾ ಅಡಗಿಸಿ ಯಾ ಬೇರೆ ತರದಲ್ಲಿ ತನ್ನ ಸೊತ್ತುಗಳ ವಂಚನೆ ನಡೆಸಿರುತ್ತಾನೆಂದಾಗಲೀ ಅಥವಾ ಪ್ರತಿವಾದಿಗೆ ಹಣವನ್ನು ಯಾ ಅದರ ಅಂಶವನ್ನು ಕೊಡುವ ಅನುಕೂಲವಿದ್ದು ಕೊಡದೆ ಉಪೇಕ್ಷೆಮಾಡುತ್ತಾನೆಂದಾಗಲೀ ಕೋರ್ಟಿಗೆ ಸಮರ್ಪಕವಾಗುವ ರೀತಿಯಲ್ಲಿ ವಾದಿಯು ರುಜುವಾತು ನಡಿಸಿದಲ್ಲಿ ಕೋರ್ಟು ಸಿವಿಲ್ ಜೈಲಿಗೆ ಪ್ರತಿವಾದಿಯನ್ನು ಕಳುಹಿಸಬಹುದೆಂಬುದು ಇತ್ತೀಚೆಗೆ ಆದ ತಿದ್ದುಪಡಿ. ಇನ್ನುಮುಂದೆ ಯಾರನ್ನೂ ಸಿವಿಲ್ ಜೈಲಿಗೆ ಕಳುಹಿಸಲಾಗುವುದಿಲ್ಲವೆಂದು ಊರಲ್ಲಿರುವ ಸುದ್ದಿಯು ಸರಿಯಾದುದಲ್ಲ.

ಬಿ. ಎನ್. ರೈಲ್ವೇ ಮುಷ್ಕರವು ಮುಗಿಯಲಿಲ್ಲ

ರೈಲ್ವೇ ಏಜಂಟರು ಮುಷ್ಕರಕ್ಕೆ ಕಾರಣರಾದ ೨೮ ಜನರನ್ನು ಮೊದಲಿನ ಸ್ಥಾನಗಳಿಗೆ ನೇಮಿಸುವೆನೆಂತಲೂ ಉಳಿದ ಮುಷ್ಕರಗಾರರಲ್ಲಿ ಸಾಧ್ಯವಿದ್ದಷ್ಟು ಜನರನ್ನು ಪುನಃ ನೇಮಕಮಾಡಲಾಗುವುದೆಂದೂ ಮತ್ತುಳಿದವರನ್ನು ಜಾಗ ಖಾಲಿಬಿದ್ದ ಹಾಗೆಲ್ಲ ತೆಗೆದುಕೊಳ್ಳಲಾಗುವುದೆಂದೂ ರಾಜಿಯ ಪ್ರಸ್ತಾಪವೆತ್ತಿದರು. ಆದರೆ ಮುಷ್ಕರಗಾರನ್ನೆಲ್ಲ ಅವರವರ ಹಿಂದಿನ ಕೆಲಸಗಳಲ್ಲಿ ನೇಮಕ ಮಾಡಿದ ಹೊರತು ಸಂಧಿಯಿಲ್ಲವೆಂದು ಮುಷ್ಕರಗಾರರು ಹಟತೊಟ್ಟಿರುವರು. ರೈಲ್ವೇ ಕಂಪೆನಿಯು ಹೊಸ ಹೊಸ ಜನರನ್ನು ತೆಗೆದುಕೊಂಡು ಹೇಗೂ ಗಾಡಿಚಲಾವಣೆಮಾಡುತ್ತಿದೆ. ನಿರುದ್ಯೋಗದ ಈ ಕಾಲದಲ್ಲಿ ಜನಕ್ಕೇನು ಕೊರತೆಯೆ? ಆದರೆ ಕೆಲಸಗಾರರು ತಮ್ಮ ಹಕ್ಕು ಸ್ಥಾನಮಾನಗಳ ಭದ್ರತೆಗಾಗಿ ಮುಷ್ಕರ ತೊಟ್ಟಿರುವಲ್ಲಿ ಆ ಜಾಗಗಳಿಗೆ ಬೇರೆಯವರು ಕಾಲಿಟ್ಟು ಕಂಪೆನಿಯು ಉದ್ಧಟತನದಿಂದ ವರ್ತಿಸುವಂತೆ ಮಾಡಬಹುದೇ ಎಂದು ಹಲವರಿಗೆ ತೋರಬಹುದು. ಅವರವರ ಹೊಟ್ಟೆಯ ಪಾಡು ಅವರವರಿಗೆ! ಹೀಗಾದರೆ ಬಡಕೆಲಸಗಾರರು ಇನ್ನೆಷ್ಟು ದಿನ ಮುಷ್ಕರ ಹಿಡಿದು ಕೂತುಕೊಳ್ಳಲು ಸಾಧ್ಯ? ಅವರ ಪರಿಸ್ಥಿತಿಯು ಕರುಣಾಜನಕವಾಗಿದೆ. ಇದನ್ನು ಬಗೆಗಂಡು ಕೆಲವು ಸಂಸ್ಥೆಗಳಿಂದ ಅವರಿಗೆ ಸಹಾಯ ದ್ರವ್ಯವನ್ನು ಕಳುಹುವ ಯೋಚನೆ ಮಾಡಲಾಗಿದೆ.

ಸ್ವಾತಂತ್ರ್ಯ ದೀಕ್ಷೆಯನ್ನೋದಿದುದಕ್ಕೆ ಶಿಕ್ಷೆ

ಸರಕಾರವು ನಿಷೇಧಿಸಿದ್ದ ದೀಕ್ಷೆಯನ್ನು ಕಳೆದ ತಾ. ೨೬ನೇ ಸ್ವಾತಂತ್ರ್ಯ ದಿನದಲ್ಲಿ ಓದಿದುದಕ್ಕಾಗಿ ಮುರಾದಾಬಾದಿನಲ್ಲಿ ರಾಮಕುಮಾರ ಎಂಬ ಯುವಕನಿಗೆ 6 ತಿಂಗಳ ಜೈಲು ಶಿಕ್ಷೆಯೂ ೨೦೦ ರೂಪಾಯಿ ಜುಲ್ಮಾನೆಯೂ ವಿಧಿಸಲಾಯಿತು.

ಲಕ್ನೋದಲ್ಲಿ ಅದೇ ತಕ್ಷೀರಿನ ಮೇಲೆ ಎಸೆಂಬ್ಲಿಗೆ ಕಾಂಗ್ರೆಸ್ ಪಕ್ಷದ ಉಮೇದ್ವಾರರಾದ ಪಂಡಿತ ದೇವನಾರಾಯಣರನ್ನು ಎರೆಸ್ಟ್ ಮಾಡಲಾಗಿದೆ. ಚಿಪ್ಲೂನಿನಲ್ಲಿ ರತ್ನಗಿರಿಯ ಕಾಂಗ್ರೆಸ್ ಪಕ್ಷದವರಾದ ಅಪ್ಪಾ ಸಾಹೇಬ್ ಪಟವರ್ಧನ ಎಂಬವರನ್ನೂ ಮೇಲಿನ ತಕ್ಷೀರಿಗಾಗಿ ದಸ್ತಗಿರಿಮಾಡಿ ಜಾಮೀನಿನ ಮೇಲೆ ಬಿಟ್ಟರು.

ಪೋಸ್ಟ್‌ಮೇನನಿಗೆ ಶಿಕ್ಷೆ

ಬರೇ ಹತ್ತು ರೂಪಾಯಿಯ ಮನಿಯಾರ್ಡರು ಅದು. ಮೇ ತಾರೀಕು 6ರಲ್ಲಿ ವಿಳಾಸದಾರನಿಗೆ ಸಂದಂತೆ ಹೆಬ್ಬೆಟ್ಟು ಗುರುತಿನ ರಶೀದಿ (ಸ್ವಪ್ಪನೆ) ಮಾಡಿ ಕಳುಹಿಸಿಬಿಟ್ಟ. ತಾ. 14ರಲ್ಲಿ ವಿಳಾಸದಾರನಿಗೆ ಹಣವನ್ನೂ ಸಂದಾಯಮಾಡಿದ್ದ. ಬರೇ ಎಂಟು ದಿವಸಗಳ ಕೈನುಗುಚಾಟಕ್ಕೆ ರೂಪಾಯಿ ಹತ್ತನ್ನು ಉಪಯೋಗಿಸಿದ್ದ ಆತ. ಇದಕ್ಕೆ ಆತನಿಗೆ ದೊರಕಿದ್ದು ಎರಡು ವರುಷಗಳ ಕಠಿನ ಶಿಕ್ಷೆ. ಆತನ ಹೆಸರು ಕುಮಾರ ಸ್ವಾಮಿ ನಾಯ್ಡು. ಗುಡಿಯಾಟಮ್ ಪೋಸ್ಟ್ ಆಫೀಸಿನ ಪೇದೆ.

ಯುನೈಟೆಡ್ ಇಂಡಿಯಾ ಲ್ಯಾಫ್ ಎಶ್ಯೂರೆನ್ಸ್ ಕಂಪೆನಿ

ಕಲ್ಕತ್ತೆಯಲ್ಲಿ ಆರು ಲಕ್ಷ ರೂಪಾಯಿ ಗೂ ಮೀರಿದ ವೆಚ್ಚದಿಂದ ಭವ್ಯವಾದೊಂದು ಕಾರ್ಯಾಲಯವನ್ನು ಕಟ್ಟಿಸಿ ಮೊನ್ನೆ ತಾನೆ ಮಹಾರಾಜಾ ಸರ್ ಪ್ರದ್ಯೋತ ಕುಮಾರ ಟಾಗೋರ, ಕೆ. ಸಿ. ಎಸ್. ಐ. ಇವರ ಹಸ್ತದಿಂದ ತೆರೆಯೋಣಾಯಿತು. ಇದರ ವೈಶಿಷ್ಟ್ಯವೇನೆಂದರೆ ಇದು ಇತರ ಹಲವು ಕಟ್ಟಡಗಳಂತೆ ಕೇವಲ ಸೌಂದರ್ಯ ಕಲಾದೃಷ್ಟಿಯಿಂದ ಮಾತ್ರ ಮಹತ್ವವುಳ್ಳದ್ದಾಗಿರದೆ ನೌಕರರ ವಸತಿಗೂ ಅನುಕೂಲವಾಗಿದ್ದು ಹಾಕಿದ ಹಣಕ್ಕೆ ಸುಮಾರು ನೇಕಡ ಏಳರ ಉತ್ಪತ್ತಿ ಸಹ ಬರುವಂತಹದಾಗಿದೆ.

ಬಾಬು ರಾಜೇಂದ್ರ ಪ್ರಸಾದರ ಭಾಷಣಕ್ಕೆ ಭಂಗ

ಪಾಟ್ನಾದ ಸಮೀಪದ ಹಜಾರಿಬಾಗ ಎಂಬಲ್ಲಿ ಪ್ರಸಾದರು ಕಾಂಗ್ರೆಸ್ಸ್ ಉಮೇದ್ವಾರರ ಪಕ್ಷವಾಗಿ ಮತವೀಯಬೇಕೆಂದು ಭಾಷಣಕೊಡುತ್ತಿದ್ದಾಗ ಪುಂಡುಗಾರರು ಗಲಭೆಯೆಬ್ಬಿಸಿದರು. ಕೊಂಬು ಊದಿದರು. ಪ್ರಸಾದರಿಗೆ ಬೈದರು. ಸಭಿಕರು ಈ ಪುಂಡರಿಗೆ ತಕ್ಕ ಶಾಸನಮಾಡಲು ಎದ್ದಾಗ ಅವರನ್ನು ಪ್ರಸಾದರು ಸಮಾಧಾನಪಡಿಸಿ ಹೇಗೂ ತನ್ನ ಪ್ರಚಾರ ಕಾರ್ಯವನ್ನು ನೆರವೇರಿಸಿದರು.

ವಿಮಾನದಿಂದ ನೋಟೀಸುಗಳ ಸುರಿಮಳೆ

ಬಿಹಾರ ಪ್ರಾಂತದಲ್ಲಿ ಪೋಲಿಂಗ್ ಸ್ಟೇಶನುಗಳ ಮೇಲೆಲ್ಲಾ ಕಾಂಗ್ರೆಸ್ಸಿನ ಕದೆಯ ವಿಮಾನವು ಹಾರಾಡುತ್ತ ಕಾಂಗ್ರೆಸ್ಸ್ ಪಕ್ಷಕ್ಕೇ ಓಟುಕೊಡಿರೆಂದು ಬರೆದಿರುವ ವಿನಂತಿ ಪತ್ರಗಳನ್ನು ಸುರಿಮಳೆಯಂತೆ ಇಳಿಸುತ್ತಿತ್ತು. ವಿನಂತಿ ಪತ್ರಗಳಿಗೆ ನೆಹರು, ಪಟೇಲ್ ಮತ್ತು ಪ್ರಸಾದರವರುಗಳ ಸಹಿ ಹಾಕಲ್ಪಟ್ಟಿತ್ತು. ಆಕಾಶದಿಂದ ಪುಷ್ಪವೃಷ್ಟಿಯಂತೆ ಬೀಳುತ್ತಿದ್ದ ಈ ಪತ್ರಗಳನ್ನು ಕಂಡು ಮಂದಿಯು ಉತ್ಸಾಹದಿಂದ ಅವುಗಳನ್ನು ಹಿಡಿಯುವುದಕ್ಕಾಗಿ ಕೈನೀಡಿ ಗುಂಪು ಗುಂಪು ಕೂಡಿ ಓಡುತ್ತಿದ್ದರು!

ಲಾಹೋರಿನಲ್ಲಿ ಹಿಂದೆಂದೂ ಬಾರದಷ್ಟು ಮಹಮ್ಮದೀಯ ಸ್ತ್ರೀಯರು ಓಟುಕೊಡಲು ಈ ಸಲ ಬಂದಿದ್ದರು. ಇಬ್ಬರು ಮಹಮ್ಮದೀಯ ಸ್ತ್ರೀ ಉಮೇದ್ವಾರರ ಪ್ರಬಲ ಪಕ್ಷಗಳೊಳಗೆ ಸ್ವಲ್ಪ ಕೈ ಕೈ ಆಯಿತು. ಆದರೆ ಅಷ್ಟರಲ್ಲಿ ಅಲ್ಲಿಯ ಸ್ತ್ರೀ ಪೋಲಿಂಗ್ ಆಫೀಸರಳು ಚುರುಕಾದ ಪೋಲೀಸು ಡೆಪ್ಯುಟಿ ಕಮಿಷನರನ್ನೇ ಅಲ್ಲಿಗೆ ಬರಮಾಡಿಸಿಕೊಂಡುದರಿಂದ ಶಾಂತಿಭಂಗವಾಗಲಿಲ್ಲ.

ಪ್ರಾಯಶ್ಚಿತ್ತಾರ್ಥವಾಗಿ ಏಳು ದಿವಸಗಳ ಉಪವಾಸ ಮತ್ತು ನಿರಂತರ ಗಾಯತ್ರೀ ಜಪ ಪಠನ

ಪಂಡಿತ ಮಾಲವೀಯರು ಇತ್ತೀಚೆಗೆ ಲಾಹೋರ್ ಮತ್ತು ಅಮೃತ ನಾಗರದಲ್ಲಿ ಭಾಷಣಗಳನ್ನು ಕೊಟ್ಟಾಗ ಪುಂಡುಗಾರರು ಗಲಭೆಯೆಬ್ಬಿಸಿದ್ದರಷ್ಟೆ. ಅದರ ಬಗ್ಗೆ ತಾನು ಪ್ರಾಯಶ್ಚಿತ್ತಮಾಡಿಕೊಳ್ಳುವೆನೆಂದು ಆರ್ಯಸಮಾಜದ ಪ್ರಮುಖರೂ ಹಲವು ಹಿಂದೂ ಸಭೆಗಳ ಅಧ್ಯಕ್ಷರೂ ಆದ ಡಾಕ್ಟರ್ ಭಗತ್ರಾಮ್ ಶ್ಯಾಗಲ್ ಎಂಬವರು ಮೇಲಿನ ದೀಕ್ಷೆಯನ್ನು ತಾಳಿರುವರು.

ಪೊಂಡಿಚೇರಿಯ ಮೇಯೊರರನ್ನು ಕೊಲ್ಲಲು ಪ್ರಯತ್ನ

ಜೋಸೆಫ್ ದೇವಿಡ್ ಎಂಬವರು ಪೊಂಡಿಚೇರಿಯ ಮೇಯೊರ (ಮುಖ್ಯಾಧಿಕಾರಿ). ಅವರು ಕಳೆದ ತಾ. 21ರ ಆದಿತ್ಯವಾರ ಇಗರ್ಜಿಗೆ ಪ್ರವೇಶಿಸುತ್ತಿದ್ದಾಗ ಯಾರೋ ಒಬ್ಬನು ಅವರಿಗೆ ಗುಂಡಿಟ್ಟ. ಅದಕ್ಕೆ ಅಡ್ಡವಾಗಿ ಬಂದ ವಿದ್ಯಾರ್ಥಿಯೊಬ್ಬನಿಗದು ತಗಲಿ ಆತನು ಸತ್ತ. ಮತ್ತೊಂದು ಗುಂಡು ಮೇಯೊರರ ತೊಡೆಗೆ ತಗಲಿತು. ಪ್ರಾಣಾಪಾಯವಾಗಲಿಲ್ಲ. ಅಪರಾಧಿಯು ಪರಾರಿ. ಇನ್ನೂ ಪತ್ತೆಯಾಗಿಲ್ಲ.

ಮೈಸೂರಿನ ಇಗರ್ಜಿ ಗಲಾಟೆ

ಈ ಸಂಬಂಧವಾಗಿ ಪೋಲೀಸರು ದಸ್ತಗಿರಿಮಾಡಿದವರನ್ನು ವಿಚಾರಣೆಮಾಡಿ ೪೭ ಮಂದಿ ಮಹಮ್ಮದಿಯರ ಮೇಲೆ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಜಾರ್ಜುಶೀಟ್ ಮಾಡಿದ್ದಾರೆ. ಎಲ್ಲರನ್ನೂ ರಿಮಾಂಡಿನಲ್ಲಿ ಇಡಲಾಗಿದೆ. ಇವರ ತನಿಕಿಯು ಸ್ಪೆಶ್ಯಲ್ ಫಸ್ಟ್‌ಕ್ಲಾಸ್ ಮೆಜಿಸ್ಟ್ರೇಟರ ಮುಂದೆ ನಡೆಯುವುದು. ನಡೆದ ಪುಂಡಾಟಿಕೆಯಿಂದ ಇಗರ್ಜಿಗೆ ಏಳು ಸಾವಿರ ರೂಪಾಯಿ ನಷ್ಟವುಂಟಾಗಿದೆಯೆಂದು ಜಾರ್ಜುಶೀಟಿನಲ್ಲಿ ಡಿ। ಮ್ಯಾಜಿಸ್ಟ್ರೇಟರು ಬರೆದಿದ್ದಾರೆ.

ಸುಭಾಷ್‌ಚಂದ್ರ ಬೋಸರು

ದೇಹಾಲಸ್ಯದ ಸಂಬಂಧ ಕಲ್ಕತ್ತಾ ಮೆಡಿಕಲ್ ಕೋಲೇಜು ಹೊಸ್ಪಿಟಲ್‌ನಲ್ಲಿಡಲ್ಪಟ್ಟಿದ್ದಾರೆ. ಅವರು ವಾರಕ್ಕೆರಡಾವರ್ತಿ ಸಾಯಂಕಾಲ ಎರಡೆರಡು ಗಂಟೆ ತನ್ನ ತಾಯಿಯನ್ನು ನೋಡಿ ಮಾತಾಡಿಕೊಂಡು ಬರಲು ಅನುಮತಿ ಕೊಡಲಾಗಿದೆ. ಅವರನ್ನು ಕಾರಿನಲ್ಲಿ ಅಲ್ಲಿಗೆ ಒಯ್ಯಲಾಗುವುದು. ಒಬ್ಬ ಸ್ಪೆಶಲ್ ಬ್ರಾಂಚ್ ಆಫೀಸರರು ಬೋಸರೊಂದಿಗೆ ಈ ಸಂದರ್ಭದಲ್ಲಿ ಇರುವರು.

ಚಾ ಕಾರ್ಖಾನೆಯಲ್ಲಿ ಬೆಂಕಿ

ಕೂನೂರಿನ ಸಮೀಪದ ಕೆರೋಲಿನಾ ಎಸ್ಟೇಟಿನ ಚಾ ಕಾರ್ಖಾನೆಯಲ್ಲಿ ಬೆಂಕಿ ಹತ್ತಿ ಎರಡು ಮೂರು ಯಂತ್ರಗಳು ಹೊರತಾಗಿ ಕಾರ್ಖಾನೆಯೇ ಸುಟ್ಟುಹೋಯಿತು. 18,000 ರಾತಲು ಚಾಹಾವೂ ಅಗ್ನಿಪಾಲಾಯಿತು. ಸೊತ್ತುಗಳ ಒಟ್ಟು ನಷ್ಟ ರೂ 30,000.

ಇನ್ನೂರು ರೂಪಾಯಿಯ ಗಂಟಿಗಾಗಿ ಕೊಲೆ

ನೀಲಗಿರಿಯ ಗುಡ್ಡಗಳ ಕಾಫಿ ತೋಟಗಳಲ್ಲೊಂದರ ಮೇಸ್ತ್ರಿ ವೆಲ್ಲಾಯನ್ ಎಂಬವನು ಕೂಲಿಗಳಿಗೆ ಸಂಬಳಕೊಡಲಿಕ್ಕೆ ರೂ ೨೦೦ನ್ನು ಹಿಡಿದುಕೊಂಡು ಹೋಗುತ್ತಿದ್ದಾಗ ಯಾರೋ ಗುಂಡು ಹೊಡೆದು ಕೊಂದು ಗಂಟನ್ನು ಅಪಹರಿಸಿದರು.

ಅಮೇರಿಕದ ಯುನೈಟೆಡ್ ಸ್ಟೇಟ್ಸ್‌ನಲ್ಲಿ ಭಯಂಕರ ನೆರೆ ಮತ್ತು ಬೆಂಕಿಯ ಉತ್ಪಾತ.

ಸುಮಾರು ೭೫೦,೦೦೦ ಮಂದಿಗೆ ಮನೆಯಿಲ್ಲ. ಒಹಿಯೋ ನದಿಯಿಂದ ಈಗ ನೆರೆಯು ಮಿಸಿಸಿಪಿ ನದಿಗೆ ಹರಿಯುವ ಹಾಗಿದೆ. ಅದನ್ನು ತಡೆಗಟ್ಟುವುದಕ್ಕಾಗಿ ನದಿಯ ಇಬ್ಬದಿಯಲ್ಲಿ ಮುನ್ನೂರು ಮೈಲುಗಳ ಉದ್ದಕ್ಕೂ ಹಲಗೆಯ ಗೋಡೆಮಾಡಿ ಮರಳಿನ ಚೀಲಗಳನ್ನು ಅನಿಸಿ ಬಲಗೊಳಿಸಿ ಕಟ್ಟುವುದರಲ್ಲಿ ಜನರು ಹಗಲುರಾತ್ರೆಯೆನ್ನದೆ ಶ್ರಮಿಸುತ್ತಿದ್ದಾರೆ. ಆದರೂ ಅಪಾಯದ ಬೆದರಿಕೆ ಇದ್ದೇ ಇದೆ. ಅದು ಕಾರಣ ಇಲಿನೋಇಸ್‌ದಿಂದ ನ್ಯೂಯೋರ್ಲಿನ್ಸ್ ವರೆಗೆ ಮಿಸಿಸಿಪಿ ನದಿಯ ಇಬ್ಭಾಗದಲ್ಲಿಯೂ ಐವತ್ತು ಮೈಲುಗಳ ಅಗಲದ ವರೆಗೆ ಜನರು ಊರುಬಿಟ್ಟು ದೂರಾಗುವಂತೆ ಸರಕಾರದ ಸೇನೆಯು ಜನರನ್ನು ಸಿದ್ಧಗೊಳಿಸುತ್ತಿದ್ದಾರೆ.

ಜಸ್ಟಿಸ್ ಪಾರ್ಟಿಯು ಬ್ರಾಹ್ಮಣರ ಬಂಧುವೇ? ಕೊಂಗ್ರೆಸ್ ಬ್ರಾಹ್ಮಣ ವಿರೋಧಿಯೇ?

ಈ ಸಲದ ಚುನಾವಣೆಯಲ್ಲಿ ದ್ರಾವಿಡ ಬ್ರಾಹ್ಮಣರ ಕರ್ತವ್ಯವೇನು?

ಈ ಸಲದ ಚುನಾವಣೆಗೋಸ್ಕರ ನಮ್ಮ ಜಿಲ್ಲೆಯ ಜಸ್ಟಿಸ್ ಪಾರ್ಟಿಯವರು ತಯಾರಿಸಿರುವ ಅನೇಕ ಸುಳ್ಳುಗಳಲ್ಲ ಅವರು ಬ್ರಾಹ್ಮಣರ ಬಂಧುಗಳು, ಕೊಂಗ್ರೆಸಿನವರು ಬ್ರಾಹ್ಮಣ ವಿರೋಧಿಗಳು ಎಂಬುದೇ ಅತ್ಯಂತ ದೊಡ್ಡದು. ನಮ್ಮ ಆಧಿಪತ್ಯದಲ್ಲಿ ಬ್ರಾಹ್ಮಣರ ಏಳಿಗೆಯನ್ನು ತಡೆಗಟ್ಟಿ ಅವರನ್ನು ಎಲ್ಲೆಲ್ಲಿಯೂ ಹಿಂದೆ ನಿಲ್ಲಿಸಿದ ಪಾರ್ಟಿಯೆಂದರೆ ಅದು ಜಸ್ಟಿಸ್ ಪಾರ್ಟಿ. ಬ್ರಾಹ್ಮಣರು ವಿದ್ಯೆಯಲ್ಲಿ ಮುಂದುವರಿಸಿ ಸರಕಾರಿ ಹುದ್ದೆಗಳನ್ನು ಹೊಂದುತ್ತಿದ್ದುದನ್ನು ನೋಡಿ ಅಸೂಯೆಪಟ್ಟು ಆ ಸಂದರ್ಭವು ಅವರಿಗೆ ಮುಂದೆ ಸಿಕ್ಕದಂತೆ ಮಾಡಿ ಸರಕಾರಿ ಹುದ್ದೆಗಳೆಲ್ಲವೂ ತಮ್ಮ ಪಾರ್ಟಿಯ ಕೆಲವರಿಗೇನೇ ದೊರೆಯುವಂತೆ ಮಾಡುವ ಮುಖ್ಯ ಉದ್ದೇಶದಿಂದಲೇ ಈ ಪಾರ್ಟಿಯು ಮದ್ರಾಸಿನ ಕೆಲವು ಶ್ರೀಮಂತ ಬ್ರಾಹ್ಮಣೇತರ ಜಮೀನುದಾರರಿಂದ ಸ್ಥಾಪಿಸಲ್ಪಟ್ಟಿತು. ಈ ಪಾರ್ಟಿಯವರು ಸರಕಾರದ ಸ್ನೇಹವನ್ನು ಬೆಳೆಯಿಸಿಕೊಂಡು ತಮ್ಮ ಉದ್ದೇಶವನ್ನು ಸಾಧಿಸುವುದಕ್ಕೋಸ್ಕರ ಬ್ರಾಹ್ಮಣರ ವಿರೋಧವಾಗಿ ಏನೆಲ್ಲಾ ಚಳವಳಿಗಳನ್ನು ನಡಿಸಿದರೆಂಬುದು ಎಲ್ಲರಿಗೂ ತಿಳಿದ ವಿಷಯ. ಬ್ರಾಹ್ಮಣೇತರರ ಈ ಪಾರ್ಟಿಗೆ ಮೊನ್ನೆಯ ವರೆಗೆ ಬ್ರಾಹ್ಮಣರಿಗೆ ಪ್ರವೇಶ ಕೂಡಾ ಕೊಡಬಾರದೆಂಬ ಕಠಿನ ನಿಯಮವಿತ್ತು. ಕಾರಣಾಂತರಗಳಿಂದ ಇತ್ತಲಾಗೆ ಈ ನಿಯಮವು ಸ್ವಲ್ಪಮಟ್ಟಿಗೆ ಸಡಿಲಿಸಲ್ಪಟ್ಟಿರುವುದಾದರೂ ಈ ಪಾರ್ಟಿಗೆ ಬ್ರಾಹ್ಮಣರ್ಯಾರೂ ಸೇರಿದ್ದು ಕಂಡುಬರುವುದಿಲ್ಲ. ಕಳೆದ 16 ವರುಷಗಳಿಂದ ಈ ಪಾರ್ಟಿಯವರು ನಡೆಯಿಸಿದ ಚಳವಳಿಯ ದೆಸೆಯಿಂದಾಗಿ ನಮಗೆ ಈಗ ಎಲ್ಲೆಲ್ಲಿಯೂ ಸರಕಾರಿ ಹುದ್ದೆಗಳು ಸಿಕ್ಕುವ ಮಾತಂತಿರಲಿ, ಮೆಡಿಕಲ್, ಇಂಜಿನಿಯರಿಂಗ್, ಟ್ರೇಡಿಂಗ್, ಮೊದಲಾದ ಸ್ವತಂತ್ರ ಜೀವನೋಪಾಯವನ್ನು ಕಲಿಸುವ ಸರಕಾರಿ ಶಾಲೆಗಳಲ್ಲಿ ಕೂಡಾ ನಮ್ಮ ವಿದ್ಯಾರ್ಥಿಗಳಿಗೆ ಈ ಪಾರ್ಟಿಯವರು ಮಾಡಿರುವ ನಿಯಮಗಳಿಂದ ಪ್ರವೇಶ ದೊರೆಯುವುದೇ ಕಷ್ಟವಾಗಿದೆ. ಇದನ್ನು ತಿಳಿದು ಬ್ರಾಹ್ಮಣರು ಈಗ ತಮ್ಮ ಮಕ್ಕಳಿಗೆ ಮೇಲ್ತರಗತಿಯ ವಿದ್ಯೆಯನ್ನು ಕಲಿಸುವ ಯೋಚನೆಯನ್ನೇ ಬಿಡಹತ್ತಿದ್ದಾರೆ. ಜಸ್ಟಿಸ್ ಪಾರ್ಟಿಯ ಚಳವಳಿದಿಂದಾಗಿ ಬ್ರಾಹ್ಮಣರೆಂಬ ಒಂದೇ ಕಾರಣದಿಂದ ನಮಗೆ ಎಲ್ಲೆಲ್ಲಿಯೂ ತಿರಸ್ಕಾರವೇ ಹೊರತು ಮನ್ನಣೆ ಇಲ್ಲದಂತಾಗಿದೆ. ನಮ್ಮ ಸಮಾಜವನ್ನು ಇಷ್ಟು ಕಠಿನಾವಸ್ಥೆಗೆ ತಂದಿರುವ ಈ ಜಸ್ಟಿಸ್ ಪಾರ್ಟಿಯವರನ್ನು ನಮ್ಮವರನೇಕರು ನಮ್ಮ ಬಂಧುಗಳೆಂದು ನಂಬುವುದಾದರೆ ನಮಗೆ ವಿಚಾರಶಕ್ತಿಯಿದೆಯೆಂದು ಹೇಗೆ ಹೇಳಬಹುದು? ನಮ್ಮ ಜಿಲ್ಲೆಯಲ್ಲಿ ಜಸ್ಟಿಸ್ ಪಾರ್ಟಿಯವರು ಸಾರುತ್ತಿರುವುದನ್ನು ನೋಡುವಾಗ ಇತರರು ಹೇಳಿದ್ದನ್ನೆಲ್ಲಾ ವಿಚಾರವಿಲ್ಲದೆ ನಂಬುವಷ್ಟು ನಾವು ಹೆಡ್ಡರೆಂದು ಅವರು ತಿಳಿದುಕೊಂಡಂತೆ ಕಾಣುತ್ತದೆ. ವೋಟಿಗಾಗಿ ಅವರು ಯಾವ ವೇಷವನ್ನು ಧರಿಸಲಿಕ್ಕೂ ಸಿದ್ಧರಾದರೂ ಅವರ ನಿಜವೇಷವನ್ನು ತಿಳಿಯುವಷ್ಟು ವಿಚಾರಶಕ್ತಿಯು ನಮ್ಮಲ್ಲಿದೆ ಎಂಬುದನ್ನು ನಾವು ಅವರಿಗೆ ಸ್ಪಷ್ಟವಾಗಿ ತಿಳಿಸಬೇಕು. ನಮ್ಮ ಸಮಾಜದ ಮೇಲಿರುವ ಅನ್ಯಾಯವಾದ ನಿರ್ಬಂಧಗಳು ಹೋಗಿ ನಾವೂ ಇತರರಂತೆಯೇ ಮುಂದುವರಿಯಬೇಕೆಂದು ಇಚ್ಛಿಸುವ ಯಾವನೊಬ್ಬ ಬ್ರಾಹ್ಮಣನಾದರೂ ನಮ್ಮ ಸಮಾಜದ ಅವನತಿಗೆ ಕಾರಣವಾದ ಈ ಪಾರ್ಟಿಯ ಬಾಂಧವ್ಯವನ್ನು ಮಾಡಬೇಕೆಂದು ಎಷ್ಟು ಮಾತ್ರಕ್ಕೂ ಇಚ್ಛಿಸಲಾರನು.

ನಮ್ಮ ಆಧಿಪತ್ಯದಲ್ಲಿ ಬೇರೆ ಬೇರೆ ಜಿಲ್ಲೆಗಳಿಂದ ಜಸ್ಟಿಸ್ ಪಾರ್ಟಿಯ ಪರವಾಗಿ ಈ ಸಲದ ಚುನಾವಣೆಯಲ್ಲಿ ಉಮೇದ್ವಾರರಾಗಿ ನಿಲ್ಲಲಿರುವವರ ಪಟ್ಟಿಯು ಈಗ ತಾನೆ ಪತ್ರಿಕೆಗಳಲ್ಲ ಪ್ರಕಟವಾಗಿದೆ. ಇದರಲ್ಲಿ ಒಬ್ಬನೇ ಒಬ್ಬ ಬ್ರಾಹ್ಮಣನ ಹೆಸರಾದರೂ ಕಂಡು ಬರುವುದಿಲ್ಲ. ಕಳೆದ ಡಿಸ್ಟ್ರಿಕ್ಟ್ ಬೋರ್ಡು ಚುನಾವಣೆಯಲ್ಲಿ ನಮ್ಮ ಜಿಲ್ಲೆಯಲ್ಲಿಯೂ ಜಸ್ಟಿಸ್ ಪಾರ್ಟಿಯವರು ತಮ್ಮ ಕಡೆಯಿಂದ ಯಾವನೊಬ್ಬ ಬ್ರಾಹ್ಮಣನನ್ನಾದರೂ ಉಮೇದ್ವಾರನನ್ನಾಗಿ ನಿಲ್ಲಿಸಿರಲಿಲ್ಲ. ಆದುದರಿಂದ ನಾವು ಅವರೊಡನೆ ಸೇರಿದರೂ ಅವರು ನಮಗೆ ಯಾವ ಸಂದರ್ಭಗಳನ್ನೂ ಕೊಡುವವರಲ್ಲವೆಂಬುದು ಸ್ಪಷ್ಟವಾಗಿರುತ್ತದೆ. ಕೊಂಗ್ರೆಸಿನವರಿಗಾದರೆ ಈ ರೀತಿಯ ಜಾತಿವೈಷಮ್ಯವಿಲ್ಲ. ಈ ಮೊದಲಿನ ಅನೇಕ ಚುನಾವಣೆಗಳಲ್ಲಿ ಮತ್ತು ಈಗಲೂ ಕೂಡಾ ಅವರು ಎಲ್ಲಾ ಜಾತಿಯಿಂದಲೂ ಪ್ರತಿನಿಧಿಗಳನ್ನು ಆರಿಸಿದ್ದಾರೆ ಕೊಂಗ್ರೆಸಿನವರು ಈ ಸಲ ಚುನಾವಣೆಯಲ್ಲಿ ಪ್ರವೇಶಿಸದೆ ಚುನಾವಣೆಯು ಸಂಪೂರ್ಣ ಜಸ್ಟಿಸ್ ಪಾರ್ಟಿಯ ಕೈಯಲ್ಲೇ ಇರುತ್ತಿದ್ದರೆ ಈ ಸಲದ ಎಸೆಂಬ್ಲಿಯಲ್ಲಿ ಬ್ರಾಹ್ಮಣರಿಗೆ ಯಾವುದೊಂದು ಸ್ಥಾನವೂ ದೊರೆಯುತ್ತಿರಲಿಲ್ಲವೆಂಬುದರಲ್ಲಿ ಸಂದೇಹವಿಲ್ಲ. ಜಾತಿ ಮತವೆನ್ನದೆ ಎಲ್ಲರಿಗೂ ಸಂದರ್ಭ ಒದಗಿಸಿಕೊಡುವ ಸಂಸ್ಥೆಯೆಂದರೆ ಅದು ಕೊಂಗ್ರೆಸು ಒಂದೇ ಆಗಿರುತ್ತದೆ. ಆದುದರಿಂದ ಬ್ರಾಹ್ಮಣ ವಿರೋಧಿಯಾದ ಈ ಜಸ್ಟಿಸ್ ಪಾರ್ಟಿಯವರು ಜಾತಿದ್ವೇಷರಹಿತವಾದ ಕೊಂಗ್ರೆಸನ್ನು ಬ್ರಾಹ್ಮಣದ್ವೇಷಿ ಎಂದು ನಮ್ಮ ಜಿಲ್ಲೆಯಲ್ಲಿ ಅನ್ನುತ್ತಿರುವುದು ಅಂತ್ಯಂತ ಹಾಸ್ಯಾಸ್ಪದವಲ್ಲವೇ?

ಇನ್ನು ಕೊಂಗ್ರೆಸಿನವರು ಕೌನ್ಸಿಲುಗಳಿಗೆ ಹೋದರೆ ಅವರು ದೇವಸ್ಥಾನ ಪ್ರವೇಶದ ಕಾಯಿದೆಗಳನ್ನು ಮಾಡಿಸ್ಯಾರು ಎಂದು ನಮ್ಮಲ್ಲಿಯ ಜಸ್ಟಿಸ್‌ಪಾರ್ಟಿಯವರು ನಮ್ಮವರಿಗೆ ಅಲ್ಲಲ್ಲಿ ಹೆದರಿಸುತ್ತಿದ್ದಾರೆಂದು ಇತ್ತಲಾಗೆ ತಿಳಿದುಬಂದಿದೆ. ದೇವಸ್ಥಾನದ ಪ್ರವೇಶದ ವಿಷಯವಾಗಿ ಮಹಾತ್ಮಾ ಗಾಂಧಿಯವರು ಚಳವಳವನ್ನು ಹೂಡಿದಾಗ ಆ ಬಗ್ಗೆ ಶ್ರೀ. ರಂಗ ಅಯ್ಯರರು ಎಸೆಂಬ್ಲಿಯಲ್ಲಿ ಒಂದು ಬಿಲ್ಲನ್ನು ತಂದರು, ಆಗ ಎಸೆಂಬ್ಲಿಯಲ್ಲಿ ಸ್ವರಾಜ್ಯ ಪಾರ್ಟಿಯ ಅನೇಕ ಮೆಂಬರರಿದ್ದುದರಿಂದ ಮಹಾತ್ಮ ಗಾಂಧಿಯವರು ಇಚ್ಛಿಸಿದ್ದರೆ ಆ ಬಿಲ್ಲು ಸುಲಭದಲ್ಲಿ ಕಾನೂನಾಗುತಿತ್ತು. ಪಂಡಿತ ಮಾಲವೀಯ ಮೊದಲಾದ ಮಹನೀಯರು ಮತ ಸಂಬಂಧವಾದ ಸುಧಾರಣೆಗಳನ್ನು ಪ್ರಜೆಗಳ ಅಭಿಪ್ರಾಯವನ್ನು ಬದಲಾಯಿಸಿಕೊಂಡೇ ಮಾಡಬೇಕಲ್ಲದೆ ಕಾಯಿದೆಗಳ ಸಹಾಯದಿಂದ ಮುಂದುವರಿಸಬಾರದೆಂದು ಹೇಳಿದ ಮಾತನ್ನು ಮಹಾತ್ಮಾ ಗಾಂಧಿಯವರು ಒಪ್ಪಿ ಕೊಂಗ್ರೆಸಿನವರು ಈ ಬಿಲ್ಲಿಗೆ ಬೆಂಬಲ ಕೊಡಕೂಡದೆಂದು ಹೇಳಿದುದರಿಂದಲೇ ಆ ಬಿಲ್ಲು ಮುರಿದುಹೋಯಿತೆಂಬ ವಿಷಯವು ಎಲ್ಲರಿಗೂ ತಿಳಿದೇ ಇದೆ. ಆದುದರಿಂದ ಕೊಂಗ್ರೆಸಿನವರು ತಾವು ಬಹುಪಕ್ಷದಲ್ಲಿದ್ದೇವೆಂಬ ಕಾರಣದಿಂದ ಪ್ರಜೆಗಳಲ್ಲಿ ಹೆಚ್ಚಿನವರ ಅಭಿಪ್ರಾಯಕ್ಕೆ ವಿರೋಧವಾದ ಯಾವ ಮತಸಂಬಂಧವಾದ ಸುಧಾರಣೆಯನ್ನು ಕಾನೂನು ಮೂಲಕ ಬಲಾತ್ಕರಿಸ್ಯಾರೆಂದು ಯಾರೂ ಎಣಿಸಲು ನ್ಯಾಯವಿಲ್ಲ. ಪಂಡಿತ ಜವಾಹಿರಲಾಲರು ಕೊಂಗ್ರೆಸಿನ ನಾಯಕತ್ವವನ್ನು ವಹಿಸಿಕೊಂಡನಂತರವಂತೂ ಕೊಂಗ್ರೆಸು ಕೇವಲ ದೇಶದ ಸ್ವಾತಂತ್ರ್ಯದ ಕಾರ್ಯದಲ್ಲಿಯೇ ಪ್ರವರ್ತಿಸಬೇಕಲ್ಲದೆ ಜಾತಿ ಮತಕ್ಕೆ ಸಂಬಂಧವಾದ ಯಾವ ಕಾರ್ಯಕ್ಕೂ ಕೈಹಾಕಬಾರದೆಂದು ಸ್ಪಷ್ಟವಾಗಿ ಹೇಳಿರುತ್ತಾರೆ. ಆದುದರಿಂದ ಕೊಂಗ್ರೆಸಿನವರಿಂದ ನಮ್ಮ ಸಮಾಜಕ್ಕೆ ಗಂಡಾಂತರಗಳು ಬಂದಾವೆಂದು ಯಾರೂ ಭಯಪಡಬೇಕಾದುದಿಲ್ಲ. ಅಸ್ಪೃಶ್ಯತಾನಿವಾರಣೆಯ ಕಾರ್ಯದಲ್ಲ ಜಸ್ಟಿಸ್ ಪಾರ್ಟಿಯವರು ಕೊಂಗ್ರೆಸಿನವರಿಗಿಂತ ಹಿಂದಯಿಲ್ಲವೆಂಬುದನ್ನು ನಾವು ಮರೆಯಬಾರದು. ಇತ್ತಲಾಗೆ ಪ್ರಕಟವಾದ ಜಸ್ಟಿಸ್ ಪಾರ್ಟಿಯ ಕಾರ್ಯಕ್ರಮದಲ್ಲಿ ಅಸ್ಪೃಶ್ಯತಾನಿವಾರಣೆಯು ಒಂದು ಮುಖ್ಯ ವಿಷಯವಾಗಿರುತ್ತದೆ. ಹರಿಜನೋದ್ಧಾರದ ಕಾರ್ಯದಲ್ಲಿ ಹೆಚ್ಚಿನ ಆಸಕ್ತಿಯುಳ್ಳ ಈ ಪಾರ್ಟಿಯವರು ಸನಾತನಿಗಳಾದ ಬ್ರಾಹ್ಮಣರನ್ನು ಒಲಿಸಿಕೊಳ್ಳುವುದಕ್ಕಾಗಿ ತಾವು ಅಸ್ಪೃಶ್ಯತಾನಿವಾರಣೆಗೆ ವಿರೋಧವೆಂದು ಹೇಳುತ್ತಿರುವುದು ಅಸಹ್ಯಕರ ಮಾತ್ರವಲ್ಲದೆ ಇದರಿಂದ ಅವರಲ್ಲಿ ಎಷ್ಟರ ಮಟ್ಟಿನ ಪ್ರಾಮಾಣಿಕತೆಯಿದೆ ಎಂಬುದೂ ಸ್ಪಷ್ಟವಾಗುತ್ತದೆ. ಬ್ರಾಹ್ಮಣರೂ ಇತರ ಹಿಂದುಗಳೂ ಎಷ್ಟುವಿರೋಧಿಸಿದರೂ ಅದನ್ನು ಲಕ್ಷಿಸದೆ ಎಂಡೋಮೆಂಟ್ ಆಕ್ಟನ್ನು ಮಾಡಿಸಿದವರು ಜಸ್ಟೀಸ್ ಪಾರ್ಟಿಯವರು. ಇದು ಬ್ರಾಹ್ಮಣರಿಗೆ ಅಷ್ಟು ಬೇಗನೆ ಮರೆತುಹೋಗಲಿಕ್ಕಿಲ್ಲ ಆದುದರಿಂದ ಅವರು ಈ ರೀತಿಯ ಸುಳ್ಳುಗಳನ್ನು ಹರಡಿಸಿ ಪ್ರಯೋಜನ ಹೊಂದಲಾರರು.

ಜಸ್ಟಿಸ್ ಪಾರ್ಟಿಯವರು ಬ್ರಾಹ್ಮಣರ ಬಂಧುಗಳೆಂದು ನಮ್ಮಲ್ಲಿಯ ಸಾರಸ್ವತ ಗೌಡಸಾರಸ್ವತ ಮೊದಲಾದ ಇತರ ಪಂಗಡದ ಬ್ರಾಹ್ಮಣರು ಯಾರೂ ನಂಬುವುದಿಲ್ಲ. ಈ ತಪ್ಪು ಭಾವನೆಯು ನಮ್ಮಲ್ಲಿಯ ದ್ರಾವಿಡ ಬ್ರಾಹ್ಮಣರಲ್ಲಿ ಕೆಲವರಲ್ಲಿ ಮಾತ್ರ ಅಂಟಿಕೊಂಡಿವೆ. ನಮ್ಮ ಸಮಾಜದ ಮುಖಂಡರೆನಿಸಿಕೊಳ್ಳುವ ಒಬ್ಬಿಬ್ಬರು ಜಸ್ಟಿಸ್ ಪಾರ್ಟಿಯ ಇಲ್ಲಿಯ ಮುಖಂಡರ ಅತ್ಯಂತ ಮಿತ್ರರಾಗಿರುವುದೇ ಈ ತಪ್ಪು ಭಾವನೆಗೆ ಕಾರಣವಾಗಿರುತ್ತದೆ. ರಾಜಕೀಯ ಕ್ಷೇತ್ರದಲ್ಲಿ ಇತರ ಸಮಾಜಗಳಂತೆಯೇ ನಮ್ಮ ಸಮಾಜಕ್ಕೂ ಒಂದು ಸ್ಥಾನವಿರಬೇಕೆಂದು ನಮ್ಮ ಮುಖಂಡರೆನಿಸಿಕೊಳ್ಳುವವರು ಎಣಿಸುತ್ತಿದ್ದರೆ ಕೊಂಗ್ರೆಸಿಗೆ ವಿರೋಧವಾದ ಈ ಚಳವಳಗಳಲ್ಲ ಅವರು ಕೈಹಾಕುತ್ತಿರಲಿಲ್ಲ ಇಲ್ಲಿಯ ಜಸ್ಟಿಸ್ ಪಾರ್ಟಿಯ ಮುಖಂಡರ ಮೇಲಿರುವ ಇವರ ಅಖಂಡ ಸ್ನೇಹದ ದೆಸೆಯಿಂದಾಗಿ ನಮ್ಮ ಸಮಾಜದವರು ಅನೇಕ ಟೀಕೆಗೆ ಒಳಗಾಗಬೇಕಾಯಿತು. ಮಾತ್ರವಲ್ಲದೆ ಸಾರ್ವಜನಿಕ ಕಾರ್ಯಗಳಲ್ಲಿ ಬೇಕಾದಷ್ಟು ಪ್ರಾಮಾಣಿಕತೆ ಮತ್ತು ರಾಷ್ಟ್ರೀಯತೆ ನಮ್ಮಲ್ಲಿದೆಯೇ ಎಂದು ಇತರರು ಸಂಶಯಪಡಲು ಕಾರಣವಾಗಿದೆ. ಕಳೆದ ಜಿಲ್ಲಾ ಬೋರ್ಡು ಪ್ರೆಸಿಡೆಂಟರ ಚುನಾವಣೆಯಲ್ಲಿ ಕೊಂಗ್ರೆಸು ಮೆಂಬರರು ಬಹುಪಕ್ಷದವರಿದ್ದರೂ ಕೊಂಗ್ರೆಸು ಸೋತುಹೋಗಲಿಕ್ಕೆ ಇವರೊಳಗಿದ್ದ ಸ್ನೇಹವೇ ಕಾರಣವೆಂದು ಅಲ್ಲಲ್ಲಿ ಹೇಳುತ್ತಿದ್ದಾರೆ. ಈ ಸ್ನೇಹವು ಜಸ್ಟಿಸ್ ಪಕ್ಷದ ಮುಖಂಡರ ಜಯಕ್ಕೆ ಸಹಾಯವಾಯಿತೇ ಹೊರತು ಅದು ನಮ್ಮ ಸಮಾಜದ ಒಬ್ಬರನ್ನು ಸಿನೇಟಿಗೆ ಕಳುಹಿಸಿಕೊಡುವಷ್ಟು ಬಲವುಳ್ಳದ್ದಾಗಿರಲಿಲ್ಲವೆಂತ ಸಂಬಂಧಪಟ್ಟವರಿಂದ ತಿಳಿದರೆ ಸ್ಪಷ್ಟವಾಗುವುದು. ನಮ್ಮ ಸಮಾಜದವರು ಜಸ್ಟಿಸ್ ಪಾರ್ಟಿಯವರೊಡನೆ ಸ್ನೇಹ ಬೆಳೆಯಿಸಿದರೆ ನಮ್ಮ ಸಮಾಜಕ್ಕೆ ಎಷ್ಟರ ಮಟ್ಟಿನ ಲಾಭವಿದೆಯೆಂದು ಇದರಿಂದಲಾದರೂ ನಾವು ತಿಳಿದುಕೊಳ್ಳಬೇಕಿತ್ತು.

ಜಸ್ಟಿಸ್ ಪಾರ್ಟಿಯವರು ಬ್ರಾಹ್ಮಣ ವಿರೋಧಿಗಳಾದರೂ ಆ ಪಾರ್ಟಿಯ ಇಲ್ಲಿಯ ಮುಖಂಡರು ನಮ್ಮ ಸಮಾಜದ ಅತ್ಯಂತ ಹಿತೈಷಿಗಳೆಂದು ಕೆಲವರು ಅನ್ನುತ್ತಿದ್ದಾರೆ. ಇದಾದರೂ ಎಷ್ಟರ ಮಟ್ಟಿಗೆ ನಿಜವೆಂದು ಹೇಳಕೂಡದು. ಒಂದು ವೇಳೆ ಇದು ನಿಜವೆಂತಾದರೂ ಅವರು ಈ ಸಲ ಚುನಾವಣೆಗೆ ನಿಂತಿದ್ದು ಆ ಬ್ರಾಹ್ಮಣ ವಿರೋಧಿ ಜಸ್ಟಿಸ್ ಪಾರ್ಟಿಯನ್ನು ಬಲಪಡಿಸುವುದಕ್ಕಾಗಿ ಎಂಬುದನ್ನು ನಾವು ಮರೆಯಬಾರದು. ಅವರ ಪಾರ್ಟಿಯ ತತ್ವಗಳಿಗೆ ವಿರೋಧವಾಗಿ ಅವರು ನಡೆಯುವವರಲ್ಲವಾದುದರಿಂದ ಅವರ ಸ್ವಂತ ಅಭಿಪ್ರಾ

ಯಿಂದ ನಮ್ಮ ಸಮಾಜಕ್ಕೇನೂ ಪ್ರಯೋಜ ಸಿಕ್ಕಲಾರದು. ಕೆಲವೇ ದಿನಗಳ ಹಿ ನಮ್ಮ ಸಮಾಜದ ಹೈಸ್ಕೂಲ್ ಪಾಧ್ಯಾಯರೊಬ್ಬರನ್ನು ಮನೆಗೆ ಕಳು ಕೊಟ್ಟ ಸಂದರ್ಭಗಳಿಂದಲೇ ಇದು ಸ್ಪಷ್ಟವಲ್ಲವೇ?

ನಮ್ಮ ಕುಂದಾಪುರ ಡಿವಿಜನಿನಲ್ಲಿ ಕಾಂಗ್ರೆಸು ಕಡೆಯಿಂದ ಉಮೇದ್ವಾರ ರಾಗಿ ನಿಂತವರು ಬ್ರಾಹ್ಮಣರ ವಿರೋಧಿ ಯೆಂದು ಇಲ್ಲಿಯ ಜಸ್ಟಿಸ್ ಪಾರ್ಟಿಯವರು ಎಲ್ಲಲ್ಲಿ ಸಾರುತ್ತಿದ್ದಾರೆ. ನಮ್ಮ ಸಮಾಜಕ್ಕೆ ವಿರೋಧವಾಗಿ ಅವರು ಮಾಡಿದ ಕಾರ್ಯವೇನೆಂದು ನನಗೇನೂ ತಿಳಿಯುವುದಿಲ್ಲ. ಕಳೆದ ಹದಿನೈದು ಇಪ್ಪತ್ತು ವರ್ಷಗಳ ಅವರ ರಾಜಕೀಯ ಜೀವನದಲ್ಲಿ ಅವರು ಜನಹಿತ ಕಾರ್ಯಗಳನ್ನು ಮಾಡಿದ್ದೇ ಕಂಡುಬರುತ್ತದಲ್ಲದೆ, ಬ್ರಾಹ್ಮಣರಿಗೆ ದ್ರೋಹಕರವಾದ ಯಾವ ಕಾರ್ಯವನ್ನು ಮಾಡಿದ್ದೂ ಕಂಡುಬರುವುದಿಲ್ಲ. ಜಸ್ಟಿಸ್ ಪಾರ್ಟಿಯವರು ಅಷ್ಟು ಉತ್ಸಾಹದಿಂದ ಸಮರ್ಥಿಸುತ್ತಿದ್ದ ಹಿಂದೂ ಮಠಗಳ ಬಿಲ್ಲನ್ನು ಎದುರಿಸಿದವರಲ್ಲಿ ಅವರೂ ಒಬ್ಬರು. ಹೀಗಿರುವಾಗ ಅವರನ್ನು ಬ್ರಾಹ್ಮಣ ವಿರೋಧಿಯೆಂದು ಹೇಳುವುದರಲ್ಲಿ ಅರ್ಥವೇನಿದೆ? ಮಾತ್ರವಲ್ಲದೆ ಜಾತಿದ್ವೇಷ ರಹಿತವಾದ ಕೊಂಗ್ರೆಸು ಸಂಸ್ಥೆಯ ಕಠಿಣ ಶಿಸ್ತಿಗನುಸರಿಸಿ ಕೆಲಸ ಮಾಡಲಿಕ್ಕಿರುವ ಅವರಿಂದ ನಮ್ಮ ಸಮಾಜಕ್ಕೆ ಯಾವ ಹಾನಿಯೂ ಬರಲಾರದು ಎಂದು ಧೈರ್ಯವಾಗಿ ಹೇಳಬಹುದು.

ನಮ್ಮ ಮದ್ರಾಸು ಆಧಿಪತ್ಯದಲ್ಲಿ ಎಲ್ಲಿಯಾದರೂ ಬ್ರಾಹ್ಮಣರು ಜಸ್ಟಿಸ್ ಪಾರ್ಟಿಗೆ ಸಹಾಯಕರಾಗಿ ನಿಂತದ್ದು ಇರುವುದಿಲ್ಲ. ಜಸ್ಟಿಸ್ ಪಾರ್ಟಿಯು ನಮ್ಮ ಸಮಾಜಕ್ಕೆ ಸಂಪೂರ್ಣ ವಿರೋಧಿಯೆಂದೂ ನಮ್ಮ ಮೇಲೆ ಅವರು ಹಾಕಿರುವ ನಿರ್ಬಂಧಗಳು ಮಾಯವಾಗಿ ನಾವು ಮುಂದೆ ಬರಬೇಕಾದರೆ ಆ ಪಾರ್ಟಿಯು ನಾಶನಾಗಬೇಕೆಂದೂ ಅವರಿಗೆ ತಿಳಿದಿದೆ. ಜಸ್ಟಿಸ್ ಪಾರ್ಟಿಯ ಕೈಯಲ್ಲಿ ಅಧಿಕಾರವಿರುವಷ್ಟು ಕಾಲ ನಮ್ಮ ಸಮಾಜದ ಏಳಿಗೆಯಾಗಲಿಕ್ಕಿಲ್ಲವೆಂಬುದರಲ್ಲಿ ಯಾರೂ ಸಂದೇಹ ಪಡಬೇಕಾಗಿಲ್ಲ. ಆದುದರಿಂದ ನಮ್ಮ ಸಮಾಜದವರಿಗೂ ರಾಜಕೀಯ ಜೀವನದಲ್ಲಿ ಸ್ಥಾನಮಾನಾದಿಗಳು ದೊರೆಯಬೇಕೆಂದಿದ್ದರೆ ಈ ಸಲ ಕೊಂಗ್ರೆಸು ಜಯ ಹೊಂದುವಂತ ನಾವು ಸರ್ವಪ್ರಯತ್ನ ಮಾಡಬೇಕು.

ನಮ್ಮ ಜಿಲ್ಲೆಯ ಜಸ್ಟಿಸ್ ಪಾರ್ಟಿಯವರು ನಮ್ಮ ಸಮಾಜದವರಲ್ಲಿ ಹರಡುತ್ತಿರುವ ಅನೇಕ ಸುಳ್ಳು ಅಭಿಪ್ರಾಯಗಳನ್ನು ನಾವು ಸರಿಪಡಿಸಬೇಕು. ನಮ್ಮ ಓಟುಗಳನ್ನು ಸಂಪಾದಿಸುವುದಕ್ಕಾಗಿ ಅವರು ನಡೆಯಿಸುತ್ತಿರುವ ಅನೇಕ ತಂತ್ರಗಳನ್ನು ಅರಿಯದಷ್ಟು ಮೂಢರಲ್ಲವೆಂದು ನಾವು ಅವರಿಗೆ ಸ್ಪಷ್ಟಪಡಿಸಬೇಕು. ನಮ್ಮ ಕೂಡೆ ಯಾರಾದರೂ ಬಂದು ನೀವು ಕೊಂಗ್ರೆಸು ಕಡೆ ಪ್ರತಿನಿಧಿಗಳಿಗೆ ಸಹಾಯ ಮಾಡಬೇಡಿರಿ, ಜಸ್ಟಿಸ್ ಪಾರ್ಟಿಯ ಪ್ರತಿನಿಧಿಗೆ ಓಟು ಕೊಡಿರೆಂದು ಹೇಳಿದರೆ ಅವರು ನಮ್ಮ ಸಮಾಜದವರಾಗಲಿ ಬೇರೆ ಸಮಾಜದವರಾಗಲಿ ಅವರು ನಮ್ಮ ಹಿತೈಷಿಗಳಲ್ಲವೆಂದೇ ನಾವು ತಿಳಿಯಬೇಕು. ರಾಜಕೀಯ ವಿಷಯವನ್ನು ಅರಿತ ಯಾರಾದರೂ ಈ ರೀತಿ ನಮಗೆ ಬೋಧಿಸಿದರೆ ಅವರನ್ನು ಅವರ ಸ್ವಂತ ಪ್ರಯೋಜನದ ಯಾವುದೋ ಎಂದು ಮಹತ್ವವಾದ ಕಾರಣವು ಪೀಡಿಸುತ್ತಿದೆಯೆಂದು ನಾವು ಖಂಡಿತವಾಗಿ ತಿಳಿಯಬೇಕು. ಏಕೆಂದರೆ ತನ್ನ ಸಮಾಜದ ಮತ್ತು ದೇಶದ ಹಿತವನ್ನು ಅರಿಯುವ ಯಾವನೊಬ್ಬನಾದರೂ ಅರ್ಧ ಶತಮಾನದ ದೀರ್ಘ ನಿಸ್ವಾರ್ಥ ಬುದ್ಧಿಯಿಂದ ನಮ್ಮ ದೇಶದ ಸ್ವಾತಂತ್ರ್ಯಕ್ಕಾಗಿ ನಿರಂತರ ಕಾರ್ಯ ಮಾಡುತ್ತಿರುವ, ಎಲ್ಲರ ಮೇಲೂ ಏಕ ರೀತಿಯ ಪ್ರೇಮವಿರುವ ನಮ್ಮ ಕೊಂಗ್ರೆಸಿಗೆದುರಾಗಿ ಕೆಲಸ ಮಾಡಿರೆಂದು ಎಷ್ಟುಮಾತ್ರಕ್ಕೂ ಹೇಳಲಾರನು. ಆದ್ದರಿಂದ ನಮ್ಮ ದ್ರಾವಿಡ ಬ್ರಾಹ್ಮಣ ಸಮಾಜದವರು ಯಾರ ಹಂಗಿಗೂ ಬಲಿಬೀಳದೆ ಸ್ವತಂತ್ರ ವಿಚಾರ ಮಾಡಿ ಕರ್ತವ್ಯವನ್ನು ಅರಿತು ಈ ಸಲದ ಚುನಾವಣೆಯಲ್ಲಿ ಕೊಂಗ್ರೆಸು ಕಡೆ ಉಮೇದ್ವಾರರಿಗೆ ತಮ್ಮ ಸಂಪೂರ್ಣ ಬೆಂಬಲವನ್ನು ಕೊಟ್ಟು ಅವರನ್ನು ಜಯಶೀಲರನ್ನಾಗಿ ಮಾಡಿ ನಮ್ಮ ದೇಶದ ಸ್ವಾತಂತ್ರ್ಯ ಸಂಪಾದನೆಯ ಪುಣ್ಯಕಾರ್ಯದಲ್ಲಿ ಸಹಭಾಗಿಗಳಾಗಿ ಕೃತಾರ್ಥರಾಗಬೇಕೆಂದು ವಿನಯಪೂರ್ವಕವಾಗಿ ಪ್ರಾರ್ಥಿಸುತ್ತೇನೆ.

ಇತಿ,

ಪಾದೂರು ವಾಸುದೇವ ಉಪಾಧ್ಯಾಯ
ಬಿ ಎ., ಎಲ್ಎಲ್. ಬಿ., ವಕೀಲ್,
ಕಾರ್ಕಳ.

ನೋಟೀಸು

ದಿ ಕರ್ನಾಟಕ ಬೇಂಕ್ ಲಿಮಿಟೆಡ್ ಉಡುಪಿ

ಈ ಮೂಲಕ ಸರ್ವರಿಗೂ ತಿಳಿಸುವುದೇನಂದರೆ, ಈ ಕೆಳಗೆ ಕಾಣಿಸಿದವರು ಸದರೀ ಬೇಂಕಿನಿಂದ ಚಿನ್ನಾಭರಣಗಳ ಅಡವಿನ ಮೇಲೆ ಪಡೆದ ಸಾಲಗಳ ಮೊಬಲಗನ್ನಾಗಲೀ ವ ಬಡ್ಡಿಯನ್ನಾಗಲೀ ವಾಯಿದೆಗೆ ಕೊಡದಿದ್ದುದರಿಂದ ಸದರಿಯವರಿಗೆ ಕೊಟ್ಟ ರಿಜಿಸ್ತ್ರಿ ನೋಟೀಸುಗಳೂ, ಮೃತಪಟ್ಟಿರುತ್ತಾರೆಂತ ವಾಪಾಸು ಬಂದ ಪ್ರಯುಕ್ತ, ಬೇಂಕಿಗೆ ಬರತಕ್ಕ ಅಸಲೂ ಬಡ್ಡಿ ಖವೇಜು ಮತ್ತು ಖರ್ಚು ವಗೈರೆಯನ್ನು ಇದೇ ಇಸವಿ ಫೆಬ್ರವರಿ ತಾರೀಕು 5ನೇ ಶುಕ್ರವಾರ ಮಧ್ಯಾಹ್ನ 3 ಗಂಟೆ ಒಳಗೆ ಬೇಂಕಿಗೆ, ಸದರೀ ಮೃತರ ವಾರೀಸುದಾರರೂ ಅವರವರ ಹಕ್ಕುಗಳನ್ನು ದೃಢಪಡಿಸಿ ವ ಸ್ಥಾಪಿಸಿ. ತಂದುಕೊಟ್ಟು ಅವರವರ ಲೋನುಗಳನ್ನು ಬಿಡಿಸಿಕೊಂಡು ಹೋಗದಿದ್ದರೆ, ಸದರೀ ಲೋನುಗಳ ಬಾಬು ಎಲ್ಲಾ ನಗಗಳನ್ನು ಇದೇ ತಿಂಗಳ ತಾರೀಕು 6ನೇ ಶನಿವಾರ ಮಧ್ಯಾಹ್ನ ಗಂಟೆ 1ಕ್ಕೆ ಸರಿಯಾಗಿ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂಮಾಡಲಾದೀತು. ತಿಳಿದಿರುವುದು.

ಜಂಜ್ರಾ ನಂಬ್ರ	ಸಾಲದ ನಂಬ್ರ	ಅಸಾಮಿಗಳ ಹೆಸರು	ಸಾಲದ ಮೊಬಲಗು ರೂ.
1	189/36	ಉಡ್ಪಿ ತಾಲೂಕು ಯೇಣಗುಡ್ಡೆ ಗ್ರಾಮದಲ್ಲಿರುವ ಶೇಕ್ ಮೈದೀನ್ ಸಾಹೇಬರ ಮಗ ಶೇಕ್ ಇಮಾಮ್ ಸಾಹೇಬ್	55—0—0
2	345/36	ಉಡ್ಪಿತಾಲೂಕು 76 ಬಡಗಬೆಟ್ಟು ಗ್ರಾಮದ ಚಿಟ್ಪಾಡಿಯಲ್ಲಿರುವ ಪದ್ಮನಾಭ ತಂತ್ರಿಗಳ ಮಗ ರಾಮಚಂದ್ರ ತಂತ್ರಿ	60—0—0

ಬೇಂಕಿನ ಆಫೀಸು,
ಜೆಂಕಪೇಟೆ, ಉಡುಪಿ
ತಾ 4—2—1937

Agent.

ತಾಳದೇ ಇರತಕ್ಕ ಮೂತ್ರವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧಿ.

ಡಾ. ಜಸಾನಿಯವರ

ಜಗತ್ಪ್ರಸಿದ್ಧ

"ಗೋನೋಕಿಲರ್"

(ರಿಜಿಸ್ಟರ್ಡ್)

GONO KILLER

ನಕಲಿ ಮದ್ದುಗಳಿಗೆ ಮರುಳಾಗಿ ಮೋಸ ಹೋಗಬೇಡಿರಿ ಕೊಂಡುಕೊಳ್ಳುವದಕ್ಕೆ ಮೊದಲು ಕೋಳಿಯ ಗುರ್ತುತನು ಗಮನಿಸಿರಿ

ಪ್ರಮೇಹ ವ್ಯಾಧಿಗೆ ಸಿದ್ಧೌಷಧ

ಇಂದಿನ ಅಪ್ರತಿಮ ಔಷಧ ಆಂಗ್ಲೇಯ ಮತ್ತು ಆಯುರ್ವೇದ ಔಷಧಿಗಳೊಂದೂ ಫಲಕಾರಿಯಾಗದೇ ಇನ್‌ಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ, ಒಂದಾನರ್ತಿಯಾದರೂ ಈ ನಮ್ಮ **ಗೋನೋಕಿಲರ್** ಎಂಬ ಔಷಧವನ್ನು ಉಪಯೋಗಿಸಿನೋಡಿರಿ ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ, ಗೋನೋಕಿಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾತುವಿಕೆ, ಸರ್ವಪ್ರಕಾರದ ಪ್ರಮೇಹ (ಎಷ್ಟೇ ಹಳೆತು ಯಾ ಯಾವದೇ ಸ್ಥಿತಿಯಲ್ಲಿರಲಿ), ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತುಸ್ರಾವ, ಬಿಳುಪು ಸುರಿಯುವದು ಇವೇ ಮೊದಲಾದ ಯಾವತ್ತು ಗೂನೋಕೋಕಸ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ

ಬೆಲೆ 50 ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ. ೩—೦—೦ (ಮೂರು) ವಿ. ಪಿ ಖರ್ಚು ಬೇರೆ

ತಯಾರಿಸುವ ಏಕಮಾತ್ರರು ಡಾಕ್ಟರ್ ಡಿ. ಎನ್. ಜಸಾನಿ, ಗಿರಿಗಾಂವ ಬ್ಯಾಕ್ ರೋಡ್, ಮುಂಬಯಿ ೪.

Sole Manufacturer **Dr. D. N. JASANI,** GIRGAUM BACK ROAD, BOMBAY 4

ಜಂಟಿರ ಯಾನೆ ನಾಡವರ ಸಂಘ
ನಾಯರ್ ಬಿಲ್ಡಿಂಗ್,
ಲೆಮಿಂಗ್ಟನ್ ರೋಡ್, ಮುಂಬಾಯಿ.

ನಮಗೆ ಬೇಕಾಗಿದೆ

ನಮ್ಮ ಸಂಘದ ಮೆಂಬರರ ಪ್ರತಿ ತಿಂಗಳ ವಂತಿಗೆ ವಸೂಲು ಮಾಡುವ ಬಗ್ಗೆ ಒಬ್ಬ ಸ್ವಜಾತಿ ಗ್ರಹಸ್ಥರು ಬೇಕಾಗಿದೆ. ಅಂಥವರು ಮುಂಬಾಯಿಯಲ್ಲಿರುವ ಉಪಗ್ರಾಹ ಮಾಹಲಿಕರ ಮತ್ತು ಆಫೀಸುಗಳಲ್ಲಿರುವ ಮೆಂಬರರ ಮಾಹಿತಿ ಇರುವವರೂ ಮತ್ತು ಮುಂಬಾಯಿಯಲ್ಲಿ ಎಲ್ಲಾ ಕಡೆಗಳಲ್ಲಿ ತಿರುಗಾಡಿ ಅನುಭವವುಳ್ಳ ಒಬ್ಬ ಬಿಲ್ ಕಲೆಕ್ಟರರು ಬೇಕಾಗಿದೆ. ಇದಕ್ಕೆ ಉಮೇದ್ವಾರರಾಗಿ ಬರುವವರು ಹೆಚ್ಚಿನ ಮಾಹಿತಿಯ ಬಗ್ಗೆ ಸಂಘದ ಸಕ್ರೆಟರರಿಗೆ ಬರಕೊಳ್ಳತಕ್ಕದ್ದು. ಇತೀ

ಮೂಲ್ಕಿ ಬೊಂಬ ಶೆಟ್ಟಿ,
ಗೌರವ ಕಾರ್ಯದರ್ಶಿ

ನ ವ ಯು ಗ
(ವಾರಪತ್ರಿಕೆ)
ಅಂಚೆವೆಚ್ಚ ಸೇರಿ ೩—೪—೦

ಹೊಸದು! • **ಐ ರಾ ವ ತ** • ತೀರಾ ಹೊಸದು!!

ಇದರಲ್ಲಿ—ಕಾಮಶಾಸ್ತ್ರ, ಕೈಗಾರಿಕೆಯ ವಿಷಯ, ಇಂದ್ರಜಾಲ-ಮಹೇಂದ್ರಜಾಲ, ಕಾಯದೇಭಾಗ, ತಂತ್ರ-ಮಂತ್ರ-ಯಂತ್ರ, ಸರ್ವ ಮುಹೂರ್ತ ವಿಷಯ, ವೈದ್ಯಭಾಗ. ಈ ಪ್ರಕಾರ ೭ ಪ್ರಕರಣಗಳಿದ್ದು ಅತ್ಯಂತ ಮಹತ್ವದ ವಿಷಯಗಳು ಅಡಕವಾಗಿವೆ. ಇದರ ಬೆಲೆ ರೂ- ೧--೦--೦ ವಿ. ಪಿ. ಚಾರ್ಜು ಬೇರೆ.

ವಿಳಾಸ:— ಎಸ್. ಸಿ. ಸಾಲಿಮಠ ಅಂಡ್ ಸನ್ಸ್, ಗದಗ ಸಿಟಿ.

ಅನೇಕ ಮರ್ಮ ವಿದ್ಯೆಗಳಿಂದೊಡಗೂಡಿದ

— ಚಿಂ ತಾ ರ ತ್ನ —

ಇದರಲ್ಲಿ ಜಾತಕಫಲ, ಕೈಗಾರಿಕೆಯ ವಿಷಯ, ಇಂದ್ರಜಾಲ, ಮಹೇಂದ್ರಜಾಲ, ಯಕ್ಷಿಣಿ ಮೊದಲಾದ ವಿದ್ಯೆಗಳು ಇರುತ್ತವೆ. ಒಂದೊಂದು ವಿಷಯಕ್ಕೆ ಎಷ್ಟು ಬೆಲೆ ಕೊಟ್ಟರೂ ಸಾಲದು.

೧ ಸಬಕಾರವನ್ನು ತಯಾರಿಸುವ ರೀತಿ
೨ ಮೇಣಬತ್ತಿ ತಯಾರಿಸುವ ರೀತಿ
೩ ಕಾಸ್ಟಿಕ್ ಸೋಡಾ ತಯಾರಿಸುವದು
೪ ಬಿಸ್‌ಕ್ಯೂಟ ತಯಾರಮಾಡುವದು
೫ ದಶಾಂಗ ತಯಾರಮಾಡುವದು
೬ ಪೆಪ್ಪರಮೆಂಟ ಮಾಡುವದು
೭ ಧೂಪದ ಘಟ್ಟಿ ಮಾಡುವದು
೮ ಭಂಗಾರ ಮಾಡುವದು
೯ ಬೆಳ್ಳಿ ತಯಾರಮಾಡುವದು
೧೦ ಜರ್ಮನ್ ಶಿಲ್ವರ ಧಾತು
೧೧ ಊದಿನಕಡ್ಡಿ ತಯಾರಮಾಡುವದು
೧೨ ತರ್ಡಿನ ಪಾಟಿ ತಯಾರಮಾಡುವದು
೧೩ ಕುಂಕುಮವನ್ನು ತಯಾರಿಸುವದು
೧೪ ಹಸಿ ಕುಂಕುಮ ತಯಾರಿಸುವದು
೧೫ ಗೋದೀಸರಿ ಕೆಡದಂತೆ ಮಾಡುವದು
೧೬ ಬುಕ್ಕಿಟ್ಟು ಮಾಡುವದು
೧೭ ಮೊನಸರಿ ಯಾವಾಗಲೂ ನೀರಾಗಿರುವಂತೆ ಮಾಡುವದು
೧೮ ಅಷ್ಟಗಂಧ ಸಾಮಾನುಗಳು
೧೯ ಭರ್ಪ ತಯಾರಮಾಡುವದು
೨೦ ಕಟ್ಟಿಗೆ ಲೋಹಗಳಿಗೆ ಹಚ್ಚುವ ಬಣ್ಣ ಮಾಡುವದು
೨೧ ಕಾಗದವನ್ನು ಮಾಡುವದು
೨೨ ಮೆಂಥೇಲ ಎಣ್ಣೆ ತಯಾರಿಸುವದು
೨೩ ಕನ್ನಡಿಯ ಮೇಲೆ ಬರೆಯುವದು
೨೪ ದಂತಮಂಜನ ಮಾಡುವದು
೨೫ ರಕ್ತಶುದ್ಧಿ, ಧಾತುವೃದ್ಧಿ ಔಷಧಿ
೨೬ ಕಸ್ತೂರಿ ಮಾತ್ರೆ ಮಾಡುವದು
೨೭ ಕುಚಪ್ರಭಾತಕ್ಕೆ ಔಷಧ
೨೮ ಬಾಲಾಮೃತ ಮಾಡುವದು
೨೯ ಶಿಷ್ನವೃದ್ಧಿಗೆ ಔಷಧ
೩೦ ಷರಬತ್ತು ಮಾಡುವದು
೩೧ ಛಳಿಜ್ವರದ ಗುಳಿಗೆ ಮಾಡುವದು
೩೨ ಬೂಟಪಾಲೀಸ ಮಾಡುವದು
೩೩ ಮನೆ, ವರಾರ, ಅಂಗಡಿ ಮೊದಲಾದುವುಗಳಿಗೆ ಗೆದ್ದಲಿ ಹತ್ತದಂತೆ ಮಾಡುವದು
೩೪ ಹುರುಕು ಖಜ್ಜಿ ಮುಲಾಮು ಮಾಡುವದು
೩೫ ನಾಸೀಪುಡಿ ಮಾಡುವದು
೩೬ ಮನೆ, ವರಾರ, ಅಂಗಡಿಗಳಲ್ಲಿ ಇಲಿ, ಹೆಗ್ಗಣ ಮೊದಲಾದವುಗಳು ಇರದಂತೆ ಮಾಡುವದು
೩೭ ಜರ್ದಾತಂಬಾಕ ಮಾಡುವದು
೩೮ ಒದನೆ. ಕುಂಬಳ ಮುಂತಾದ ಕಾಯಿಗಳಿಗೂ, ಮಾವು, ಲಿಂಬು ಮುಂತಾದ ಹಣ್ಣುಗಳಿಗೂ ಬೀಜವಿಲ್ಲದೆ ದೊಡ್ಡವಾಗುವದು
೩೯ ಸಿಮೆಂಟ್ ತಯಾರಿಸುವದು
೪೦ ಬಿಳೀ ಹೂಗಳು ಕೆಂಪಾಗುವಂತೆ ಗಿಡಗಳನ್ನು ತಯಾರಿಸುವದು
೪೧ ಕೆಂಪು ಹೂಗಳು ಬೆಳ್ಳಗಾಗುವಂತೆ ಗಿಡಗಳನ್ನು ತಯಾರಿಸುವದು
೪೨ ಇಸ್ಪೀಟಿನ ಚಮತ್ಕಾರ
೪೩ ಮುಖ ನೋಡಿಕೊಳ್ಳುವ ಕನ್ನಡಿ ಮಾಡುವದು
೪೪ ಸುವಾಸನೆ ಎಣ್ಣೆ ತಯಾರಿಸುವದು
೪೫ ಕೇದಿಗೆ ದವನದೆಣ್ಣೆ ಮಾಡುವದು
೪೬ ಯಾವ ಗಿಡವಾದರೂ ಹುಟ್ಟುತ್ತಲೆ ಹೂವು ಬಿಡುವಂತೆ ಮಾಡುವದು
೪೭ ಗಂಧಕದ ಬಟ್ಟಲ ತಯಾರಿಸುವದು
೪೮ ಕರ್ಪುರ ಮಾಡುವದು
೪೯ ಬ್ರೆಡ್ಡು ತಯಾರಿಸುವದು
೫೦ ನೂಲ ಬಟ್ಟೆಗೆ ಬಣ್ಣ ಹಾಕುವದು
೫೧ ಕಪ್ಪು, ಕೆಂಪು, ಹಸುರು, ಹಳದಿ ಬಣ್ಣ ತಯಾರಿಸುವದು
೫೨ ಬರ್ಧ ಕಂಟ್ರೋಲ
೫೩ ಅರಗಿನ ಬಣ್ಣ ತಯಾರಿಸುವದು
೫೪ ಗಿಲೀಟ ಮಾಡುವದು
೫೫ ತಾಮ್ರದ ಮೇಲೆ ಭಂಗಾರದ ಗಿಲೀಟು ಮಾಡುವದು
೫೬ ತಾಮ್ರ, ಹಿತ್ತಾಳಿಗೆ ಬೆಳ್ಳಿ ಗಿಲೀಟು ಮಾಡುವದು
೫೭ ಕಡ್ಡಿ ಪೆಟ್ಟಿಗೆ ತಯಾರಿಸುವದು
೫೮ ರೋಜವಾಟರ ತಯಾರಿಸುವದು

ಇತ್ಯಾದಿ ೧೭೦ ವಿಷಯಗಳಿವೆ.
ಸ್ಥಳ ಸಂಕೋಚ ಮೂಲಕ ಎಲ್ಲವನ್ನೂ ಕೊಟ್ಟಿಲ್ಲ.
ಬೆಲೆ ೧ ರೂಪಾಯಿ . . (ವಿ. ಪಿ. ವೆಚ್ಚ ಬೇರೆ)

ಎಸ್. ಸಿ. ಸಾಲಿಮಠ, ಪ್ರಿಂಟರ, ಗದಗ
ಇವರಿಂದ ಬರೆಯಲ್ಪಟ್ಟ

ಕಾ ಮ ಕ ಳಾ ಶಾ ಸ್ತ್ರ

ಪ್ರತಿ ಒಬ್ಬ ರಸಿಕರು ಅವಶ್ಯ ಓದಬೇಕಾದ
--- ಈ ಪುಸ್ತಕದೊಳಗಿನ ವಿಷಯಗಳು ---

೧ ಪುರುಷ ಸಾಮುದ್ರಿಕ ಲಕ್ಷಣ ೨ ಸ್ತ್ರೀ ಸಾಮುದ್ರಿಕ ಲಕ್ಷಣ. ೩ ಶಶಕ ಜಾತಿ ಪುರುಷನ ಲಕ್ಷಣ. ೪ ಮೃಗಜಾತಿ ಪುರುಷನ ಲಕ್ಷಣ. ೫ ವೃಷಭಜಾತಿ ಪುರುಷನ ಲಕ್ಷಣ. ೬ ಅಶ್ವಜಾತಿ ಪುರುಷನ ಲಕ್ಷಣ ೭ ಪದ್ಮಿನಿಜಾತಿ ಸ್ತ್ರೀಯಳ ಲಕ್ಷಣ. ೮ ಚಿತ್ರಿಣಿಜಾತಿ ಸ್ತ್ರೀಯಳ ಲಕ್ಷಣ. ೯ ಶಂಖಿನಿಜಾತಿ ಸ್ತ್ರೀಯಳ ಲಕ್ಷಣ. ೧೦ ಹಸ್ತಿನಿಜಾತಿ ಸ್ತ್ರೀಯಳ ಲಕ್ಷಣ. ೧೧ ಯಾವ ಯಾವ ಜಾತಿ ಪುರುಷನಿಗೆ, ಯಾವ ಯಾವ ಜಾತಿ ಸ್ತ್ರೀಯಳು ಯೋಗ್ಯ. ೧೨ ಮತ್ತು ಅವರಿಂದ ಹುಟ್ಟಿದ ಮಕ್ಕಳ ಫಲವಿಚಾರ (ಜಾತಕ.) ೧೩ ಯಾವ ಯಾವ ಜಾತಿ ಸ್ತ್ರೀಯರಿಗೆ ಯಾವ ಯಾವ ತಿಥಿಯ ದಿವಸ ಭೋಗೇಚ್ಛಾ ಉಂಟಾಗುತ್ತವೆಂಬುದನ್ನು ತಿಳಿಯುವದು. ೧೪ ಯಾವ ಯಾವ ಸ್ತ್ರೀಯರಿಗೆ ಎಷ್ಟೆಷ್ಟು ಹೊತ್ತಿಗೆ ಭೋಗೇಚ್ಛಾ ಉಂಟಾಗುತ್ತದೆಂಬದನ್ನು ತಿಳಿಯುವದು. ೧೫ ಯಾವ ಯಾವ ಜಾತಿ ಸ್ತ್ರೀಯರಿಗೆ ಯಾವ ಯಾವ ತಿಥಿಯ ದಿವಸ ಯಾವ ಯಾವ ಅವಯವದಲ್ಲಿ ಕಾಮವು ಇರುತ್ತದೆಂಬುದನ್ನು ತಿಳಿಯುವ ಕ್ರಮವು. ೧೬ ಚಂದ್ರಕಲೆಯ ಸ್ಥಾನಗಳು. ೧೭ ಸ್ತ್ರೀವಶೀಕರಣ. ೧೮ ಪುರುಷವಶೀಕರಣ. ೧೯ ಪದ್ಮಿನಿ ಸ್ತ್ರೀಯಳನ್ನು ವಶಮಾಡಿಕೊಳ್ಳುವ ಉಪಾಯ. ೨೦ ಚಿತ್ರಿಣಿ ಸ್ತ್ರೀಯಳನ್ನು ವಶಮಾಡಿಕೊಳ್ಳುವ ಉಪಾಯ. ೨೧ ಶಂಖಿನಿ ಸ್ತ್ರೀಯಳನ್ನು ವಶಮಾಡಿಕೊಳ್ಳುವ ಉಪಾಯ. ೨೨ ಹಸ್ತಿನಿ ಸ್ತ್ರೀಯಳನ್ನು ವಶಮಾಡಿಕೊಳ್ಳುವ ಉಪಾಯ. ೨೩ ಭೋಗಕ್ಕೆ ಯೋಗ್ಯ ಸ್ಥಳ. ೨೪ ಭೋಗಕ್ಕೆ ಅಯೋಗ್ಯ ಸ್ಥಳ. ೨೫ ಮೈಥುನಕ್ಕೆ ಅಯೋಗ್ಯವಾದ ವೇಳೆ. ೨೬ ಮೈಥುನಕ್ಕೆ ಅಯೋಗ್ಯ ಸ್ತ್ರೀಯರು. ೨೭ ಪರಸ್ತ್ರೀ ಗಮನದಿಂದಾಗುವ ಹಾನಿ. ೨೮ ಸುಗಂಧ ದ್ರವ್ಯ ೨೯ ಕಂಕುಳದೊಳಗಿನ ದುರ್ಗಂಧ ಹೋಗುವುದಕ್ಕೆ. ೩೦ ಬಾಯಿ ದುರ್ಗಂಧ ಹೋಗುವುದಕ್ಕೆ. ೩೧ ಮಡಿಬಕ್ಕೆಗೆ. ೩೨ ಕೇಶರಂಜನಕ್ಕೆ. ೩೩ ತಿಗಳೆಕ್ಕಿದಕ್ಕೆ. ೩೪ ಕೂದಲು ಉದುರುವುದಕ್ಕೆ. ೩೫ ಶರೀರದ ಕಪ್ಪುಬಣ್ಣಕ್ಕೆ. ೩೬ ಕುಚವೃದ್ಧಿಗೆ. ೩೭ ಸ್ತ್ರೀಯರಲ್ಲಿಯ ಅವಸ್ಥೆಗಳು. ೩೮ ಅವಸ್ಥೆ ಮೇಲಿಂದ ಪ್ರೇಮದ ಇರುವಿಕೆ. ೩೯ ಮೈಥುನದ ಸುಖದಲ್ಲಿ ಅಂತರ ಬೀಳುವ ಕಾರಣ. ೪೦ ದಂಪತಿಗಳು ಕೂಡುವ ದಿಕ್ಕಿನ ಫಲವು. ೪೧ ಸತಿಪತಿಗಳು ಕೂಡುವ ದಿವಸ ಫಲ. ೪೨ ಗರ್ಭ ನಿಂತ ದಿವಸ ಫಲ. ೪೩ ಗರ್ಭ ನಿಂತ ಕಾಲ ಫಲ ೪೪ ಸ್ತ್ರೀಯರ ಜಾತಿ ಮೇಲಿಂದ ಕೂಸಿನ ಲಕ್ಷಣ. ೪೫ ವಿಕಾಶಯೋನಿಗೆ ಉಪಾಯ. ೪೬ ಯೋನಿ ಸಂಕೋಚಕ್ಕೆ. ೪೭ ಶಿಶ್ನ ವೃದ್ಧಿಗೆ. ೪೮ ಸ್ತ್ರೀಯರಿಗೆ ಮೈಥುನವು ಬೇಗನೆ ಸಾಕಾಗುವಂತೆ ಮಾಡುವ ಉಪಾಯ ೪೯ ಪುರುಷರಿಗಿಂತ ಮೊದಲು ಸ್ತ್ರೀಯರ ರೇತಸ್ಖಲನವಾಗುವ ಉಪಾಯ. ೫೦ ಪುರುಷರ ರೇತಸ್ಸು ಬೇಗ ಬೀಳಬಾರದೆಂಬುದಕ್ಕೆ ಉಪಾಯ. ೫೧ ವಾಜಿಕರಣ ಪ್ರಯೋಗ. ೫೨ ಸ್ತ್ರೀಯರನ್ನು ಜಯಿಸುವುದಕ್ಕೆ. ೫೩ ಬಹಳ ಮುಟ್ಟಾಗುತ್ತಿದ್ದರೆ. ೫೪ ಸಂತತಿ ಪ್ರತಿಬಂಧಕ ಉಪಾಯ. ೫೫ ಮುಟ್ಟು ತಡೆದಿದ್ದರೆ. ೫೬ ಗರ್ಭಾಶಯ ಶುದ್ಧಿಗೆ. ೫೭ ಗರ್ಭಧಾರಣಕ್ಕೆ. ೫೮ ಗರ್ಭಪಾತಕ್ಕೆ ಉಪಾಯ.

ಇತ್ಯಾದಿ ೧೭೦ ವಿಷಯಗಳಿವೆ. ಸ್ಥಳ ಸಂಕೋಚ ಮೂಲಕ ಎಲ್ಲವನ್ನೂ ಕೊಟ್ಟಿಲ್ಲ.
ಬೆಲೆ ೧ ರೂಪಾಯಿ (ವಿ. ಪಿ. ವೆಚ್ಚ ಬೇರೆ)

ವಿಳಾಸ:—ಎಸ್. ಸಿ. ಸಾಲಿಮಠ ಅಂಡ್ ಸನ್ಸ್, ಗದಗ ಸಿಟಿ.

Affairs of S. K. District Board in the NEW YEAR ROLE!

The following is a copy of the letter dated 25th January 1937 from

M. R. Ry. K. Vittal Shetty, Avl., Member, District Board South Kanara & Chairman, Municipal Council, Mangalore.

To the Secretary to the Government of Madras, *Local Self Government Department,*

Fort St. George, Madras.

Sir,

Subject:-ROADS—Maintenance—Calling of tenders for 1937-1938—My resolution about the same disallowed.

On 30-11-1936 I addressed a letter to the President, District Board South Kanara, enclosing the following **resolution:—**

"This Board resolves that the annual road maintenance tenders for 1937-38 should be disposed off by the President, District Board, before the end of January 1937 and that every year the annual road maintenance tenders should be disposed off by the end of January i. e. two clear months preceding the year for which the annual road manteinance tenders are called", which I intended moving at the next meeting of the Board.

In the letter I reminded him that to the interpellations that were put in the previous meeting, as to the dates on which the annual road maintenance tenders were called and disposed off, during the last three years, the answers given were that in the years 1934-35 and 1935-36 the tenders were called in December and disposed off, by the third week of January and so far as the tenders for 1936-37 were concerned, there was a delay, during the Collector-President's regime. But to the question regarding the same for 1937-38 there was no definite reply from the President and when a supplementary question was put by me, as to whether the President would expedite and dispose off the tenders by the middle of January 1937, he did not give any assurance about it, which gave rise to a reasonable apprehension that the said tenders were being purposely delayed on account of Provincial elections and also that it was desirable that tenders should be settled early, so that Contractors may collect metal and begin work in right time so that the efficiency of road work may not suffer, and further that the delay in the disposal of tenders was also undesirable in view of the coming elections.

In reply to the above dated 30th November 1936 a true copy of which is herein enclosed, the President sent a letter to me Ref. C. No. 12849/A1/36 dated 11-1-37 which was actually despatched on 14th January 1937, a day previous to the meeting of the Board—after a delay of nearly a month and a half—a true copy of which is enclosed herewith for your perusal. It will be seen, that the reason given by him, for disallowing my resolution is, "that it is an attempt at interfering with the executive functions of the President" and the reason given for the delay is that the G. O. No. 4468 L. S. G. dated 10-10-1936, ordering a re-classification of roads necessitated a redistribution of allotments for roads and a recast of the estimates.

I have commented on these points in my reply to the President dated 17-1-1937, a true copy of which is also herein enclosed for your perusal. My resolution did not in any way make any attempt at interfering with the executive functions of the President e. g. with his discretion in the matter of the disposal of road contracts. It was only meant to call his attention to a statutory duty on his part, in the discharge of which, in my opinion, he has committed a default. Under section 26 (1) and (2) of the Madras Local Act, every member of the Board has an undeniable right to call the attention of the President, to any matter concerning its administration and move resolutions and interpellate the President in respect thereof, and the said right cannot be prevented from being exercised unless it infringes the provisions of the Act and the regulations framed by the Government and the Board.

My resolution relating as it is, to matters connected with the administration of the District Board did not in any way, contravene the provisions of the Act and the regulations of the Government and the Board. The explanation for the delay in the disposal of tenders, is not at all bonafide nor is it excusable in any way. The President's experience—he has been President of the District Board, South Kanara for about nine years—the opportunities he had of consulting Mr. Shrinivas Rao, the then District Board Engineer, who had served in all the Divisions of the District as Asst. Engineer, and had thus the necessary knowledge and experience, and Mr. Vipan's report—all these ought to have made it easy for the President to act, without the least delay and the matter was one which did not call for any such extraordinary lapse of time of over two months, on the plea of consultation involving the putting off the call and the disposal of tenders.

Such inexcusable delay on the part of the President, gives rise to a reasonable apprehension that it is calculated to stimulate prospective contractors into work, on behalf of the President and for his party in the forthcoming provincial elections, with a view to earn the obvious reward for such substantial services rendered to him and to his party, in time of dire need. Contractors being shrewd businessmen, understand what course of action they have to pursue in the elections, in order to feather their own nests. They wield not a negligible influence with the voters, and it cannot be said that the President—a keen contesting candidate for the ensuing Provincial Legislature—has in any way overlooked or ignored this important aspect in his election work, especially so when the President has practically admitted in the course of his replies to the interpellations and supplemental questions at the District Board Meeting, that a portion of the District Board Funds by way of his Travelling Allowance is being spent for his election work. It is therefore clear that the conduct of the President in putting back the calling of tenders and disposal thereof and the disallowance of my resolution on flimsy and unjustifiable grounds, is not at all due to

GREETINGS

In the spirit of the coming season and in deepest appreciation of the patronage, confidence and goodwill accorded our bank, we extend to all our customers and other friends our sincerest wishes for a HAPPY NEW YEAR. May the days be filled for YOU and YOURS with cheer and happiness.

ESTD. 1906

CANARA BANK LIMITED.

mere inadvertance and inexperience on his part, but the grounds set forth by him, in his letter referred to above dated 11—1—1937, are only a make-believe to shield him in his attempt to justify this election stunt. I therefore requested the President to reconsider the matter in the light of the above facts and provisions of Law, and include my resolution in the agenda of the next meeting.

In reply to my aforesaid letter of 17th January 1937, he addressed a letter to me dated 19-1-1937, a true copy of which is enclosed herewith, to the effect that my resolution is one that cannot be allowed The reasons for the same however, are strangely inconsistent. In para (1) of his letter, he states that "after examining all connected papers and the rules and the Law on the subject, I propose to send you a detailed reply." In para (2) of his letter, he refers to the delay caused by the reclassification of roads and the allotment of funds, without in any way rebutting the points specified in my letter to him dated 17-1-1937. It will be seen that the same reasons are repeated and he writes from memory alone, and is therefore very vague and indefinite. Para (3) of his letter states, that it is not possible to reconsider and include my resolution in the agenda of the next meeting, i.e. 20-1-1937, "for want of sufficient time, even granting that the resolution is held to be admissible." In the last para he says "considering all aspects of the case, I am of opinion that the resolution is one that cannot be allowed for the reasons set forth above and in my previous letter."

It is needless to say that no reasons have been set forth in his above letter dated 19-1—1937 for disallowing my resolution or for holding that it is inadmissible. The letter itself is self-contradictory regarding consideration of all aspects of the case, since he clearly wants time in para (1) to examine all connected papers and the rules and Law on the subject." The reasons given by him in his previous letter dated 11—1—1937 have been amply proved by me in my reply dated 17—1—1937 to be entirely untenable, absolutely groundless and unjustifiable, and these points in my letter are not at *all referred to or explained* any way, in his last reply dated 19—1—1937.

The reclassification of roads and the allotment of funds would not take any appreciable time so as to justify this unnecessarily prolonged delay from 16—11—'36 to 15—1—37 —practically two months—*and the meeting of the* Standing Committee and the Board could have been called much earlier than this. Further, the President having put it in the agenda of the District Board Meeting to be held on 15—1—1937, failed to give 10 days' clear notice of the business of the said meeting as required under Schedule 2 Rule 3 (1) of the Madras Local Boards Act and on this account, the *meeting* had to be dissolved without transacting any business. I am enclosing herein a true copy of my letter dated 11—1—'37 holding him personally responsible for all the expenses and the loss incurred by the Board in respect of that meeting. This also seems to be an election stunt on the part of the President to still further postpone the consideration of the call and disposal *of road* contracts, until the elections are over.

In these circumstances, I request that you will kindly consider all the facts stated above and direct the President, District Board, South Kanara to admit my resolution and comply with the provisions of the Local Boards Act, and stop him from further abusing his powers as President, District Board, for the sole purpose of helping him and his party in carrying on the election campaign.

Mangalore, 25th Jan. 1937. } **K. Vittal Shetty, Member Dt Board,** S. Kanara.

Copies to:

His Excellency the Governor of Madras.

The Collector of South Kanara, Mangalore.

The Inspector of Municipal Council & Local Boards, Madras.

The President, District Board, S. Kanara.

ಪ್ರಸಿದ್ಧಿ ಪತ್ರಿಕೆ

ಶ್ರೀಶಕೆ ೧೮೫೮ನೇ ಧಾತೃ ನಾಮ ಸಂ॥ರದ ಪುಷ್ಯ ಶು. ೧೪ ಸೋಮವಾರ ಶಿರ್ಸಿ ಶ್ರೀ ಮಾರೆಮ್ಮ ದೇವಸ್ಥಾನದ ಮೊಕ್ತೇಸರರ ಕಡೆಯಿಂದ ಪ್ರಕಟಪಡಿಸುವದೇನೆಂದರೆ---

ದೇಶಕಲ್ಯಾಣಾರ್ಥವಾಗಿಯೂ, ಸುಭಿಕ್ಷಾರ್ಥವಾಗಿಯೂ, ಶ್ರೀ ಮಾರೆಮ್ಮ ದೇವರ ಜಾತ್ರೆಯನ್ನು ಮಾಡುವುದಕ್ಕೆ ಶ್ರೀ ದೇವರ ಅಪ್ಪಣೆಯನ್ನು ಪಡಕೊಂಡು ಈ ಕಾರ್ಯವನ್ನು ಆರಂಭಿಸಿ ಇದೇ ಬರುವ ಫಾಲ್ಗುಣ ಬ. ೩ ಮಂಗಳವಾರ (ತಾರೀಕು ೨೦-೩-೧೯೩೭) ರಾತ್ರೆ ೮ ಘಂಟೆ ಲಾಗ್ಯಾತು, ಪೂಜಾ ವಿನಿಯೋಗಗಳು ನಡೆದು ಬುಧವಾರ ಬೆಳಗ್ಗೆ ಶ್ರೀ ದೇವರ ರಥೋತ್ಸವವಾಗಿ ಅದೇ ದಿವಸ ಸಾಯಂಕಾಲ ೪ ಘಂಟೆಯಿಂದ ಬಲಿ ಕೆಲಸಗಳು ವಗೈರೆ ನಡೆದು ನಂತರ ಗುರುವಾರ ಬೆಳಗಿನ ೮ ಘಂಟೆಯಿಂದ ಫಾಲ್ಗುಣ ಬ. ೧೦ ಮಂಗಳವಾರ ರಾತ್ರೆ ೧೦ ಘಂಟೆಯ ವರೆಗೆ ಪ್ರತಿನಿತ್ಯದಲ್ಲಿಯೂ ಸದರಿ ಘಂಟೆಗೆ ಸರಿಯಾಗಿ ಭಕ್ತಜನರಿಂದ ಬಂದ ಕಾಯಿ ಹಣ್ಣು, ಬೇವಿನ ಉಡಿ, ತೊಲಾಭಾರ, ಕಾಣಿಕೆ ವಗೈರೆ ಹರಕೆಗಳನ್ನು ಒಪ್ಪಿಸುವರೆ ಸದರಿ ವೇಳೆಯನ್ನು ನಿಶ್ಚಯಿಸಿರುತ್ತೇವೆ

ಪ್ರಯುಕ್ತ:—ಈ ಮಹೋತ್ಸವಕ್ಕೆ ಎಲ್ಲವರೂ ದಯಮಾಡಿ ಬರಬೇಕೆಂತ ಅಪೇಕ್ಷಿಸುತ್ತೇವೆ.

ಈ ಶಿವ್ಸಾ ತಾರೀಕು ೨೦-೩-೧೯೩೭ನೇಗೆ ಆಗುವ ಶಿರ್ಸಿ, ಶ್ರೀಮಾರೆಮ್ಮ ದೇವರ ಜಾತ್ರೆ ಸಮ್ಮಂಧ ಮಾರಿಬೈಲಿನಲ್ಲಿ ತಾರೀಕು ೨೫-೨-೧೯೩೭ನೇ ಗುರುವಾರ ಬೆಳಗಿನ ೮ ಘಂಟೆಯಿಂದ ಅಂಗಡಿಗಳ ಬಗ್ಗೆ ಜಾಗೆಗಳನ್ನು ಗುರ್ತಮಾಡಿ ಕೊಡಲ್ಪಡುವವು. ಖಾಯಸವುಳ್ಳವರಿಗೆ ಸದರಿ ದಿವಸದಿಂದ ಮುಂದೆ ತಾರೀಕು ೨೯-೨-೧೯೩೭ನೇ ಸೋಮವಾರದ ವರೆಗೆ ಕೊಡಲ್ಪಡುವವು.

ತಮ್ಮ ವಿಧೇಯರಾದ

ಶೇಷಗಿರಿರಾವ ಕೇಶವೈನ,
ರಾಮಕೃಷ್ಣರಾವ ಧಾಕಪ್ಪನ
ಗಣೇಶರಾವ ನಾಡೀಗ.

ಬ್ರೇಕ್ ಪಿಲ್ಸ್

ಸ್ತ್ರೀಪುರುಷರಿಗೆ ಆನಂದವನ್ನುಂಟುಮಾಡುವುದು ಈ ಮಾತ್ರೆಗಳೆ. ಮದಿಸಿದ ಸ್ತ್ರೀಯರ ಗರ್ವ ಭಂಗಮಾಡಲು ಕಂಡು ಹಿಡಿದಿರುವ ಮಾತ್ರೆಗಳಿವು. ಇದರಲ್ಲಿ ವಿಷಾದಿಗಳು ಸೇರಿಲ್ಲ, ಕಸ್ತೂರಿ, ಚಿನ್ನ ಹಿಮಾಲಯಪರ್ವತದ ವನಮೂಲಿಕೆಗಳು ಮುಂತಾದುವುಗಳಿಂದ ದೊಡ್ಡ ಯೋಗೀಶ್ವರರ ಹತ್ತಿರ ಸಂಗ್ರಹಿಸಿ ಮುದುಕತನವನ್ನು ಲೋಕದಲ್ಲಿ ಇಲ್ಲದಂತೆ ಮಾಡುವುದು. ಅರ್ಧ ಘಂಟೆಯೊಳಗಾಗಿ ವೀರ್ಯವನ್ನು ಕಲ್ಲಿನಂತೆ ಮಾಡಿ ರಮಿಸಲು ಉಲ್ಲಾಸವನ್ನು ಮಾಡುವುದು. ಗುಣವಿಲ್ಲದಿದ್ದಲ್ಲಿ ಹಣ ವಾಪಸು. **೬೦ ಮಾತ್ರೆಗಳು ರೂ. ೫—೦—೦ ಮಾತ್ರೆಗಳು ರೂ. ೩—೦—೦** **ಕಾಗದ ಪತ್ರಗಳು ಇಂಗ್ಲೀಷಿನಲ್ಲಿಯೇ.**

ಡಾ. ಎ. ಎಸ್. ಮೂರ್ತಿ,
ಚಿಕಾಗೋಲ್, ಗಂಜಾಮ್ ಡಿಸ್ಟ್ರಿಕ್ಟ್.

ಸುವರ್ಣ ತಾಯಿತಿ! ಧರ್ಮಾರ್ಥ ಬಂಗಾರದ ತಾಯಿತಿ!

ಹಿಮಾಲಯ ಪರ್ವತದಲ್ಲಿ ವರ್ಷಗಟ್ಟಲೆ ತಪಸ್ಸು ಮಾಡಿ
ಸಿದ್ಧಿಯನ್ನು ಪಡೆದ ಮಹಾ ಯೋಗೀಶ್ವರರಿಂದ
ಕಂಡು ಹಿಡಿಯಲ್ಪಟ್ಟದ್ದು.

ಈ ತಾಯಿತಿಯನ್ನು

ಧರಿಸಿದ ಮಾತ್ರದಿಂದ ಸಕಲ ಇಷ್ಟಾರ್ಥಗಳೂ ನೆರವೇರುವುವು.
ಪರೀಕ್ಷಿಸಲಪೇಕ್ಷಿಸುವವರು
"ಯೋಗೀಶ್ವರರ ಶಕ್ತಿಸಾಹಸ"
ಎಂಬ ಪುಸ್ತಕವನ್ನು ಧರ್ಮಾರ್ಥವಾಗಿ ಪಡೆಯಬಹುದು.

ಪತ್ತೆ:—ಪಂಡಿತ್ ಎ. ವಿ. ಆರಮುಮ್
ಚಿಕಾಕೋಲ್

ಮಂಗಳೂರು

(ನಮ್ಮ ಸ್ವಂತಬಾತ್ಮಿದಾರರಿಂದ)

ತಾ. ೧—೨—'೩೭.

ಮಂಗಳೂರಲ್ಲಿ ಸ್ವಾತಂತ್ರ್ಯದಿನಾಚರಣೆ ಪೋಲೀಸರ ಜಪ್ತಿ.

ಕಳೆದ ತಾ ೨೬ರಲ್ಲಿ ರಾಷ್ಟ್ರಪತಿ ಜವಾಹಿರಲಾಲ ನೆಹರುಗಳ ಆಜ್ಞೆ ಮೇರೆಗೆ ಮಂಗಳೂರಲ್ಲಿ ಸ್ವಾತಂತ್ರ್ಯ ದಿನಾಚರಣೆಯು ಆಚರಿಸಲ್ಪಟ್ಟಿತು ಅಂದಿನ ದಿನ ಪ್ರಾತಃಕಾಲ ಸ್ವಯಂ ಸೇವಕರೂ ಕಾಂಗ್ರೆಸ್ ಅಧಿಕಾರಿಗಳೂ ಕಾಂಗ್ರೆಸ್ ಭವನದಿಂದ ಮೆರವಣಿಗೆಯಲ್ಲಿ ಹೊರಟು, ನಗರದ ರಾಜಬೀದಿಗಳಲ್ಲಿ ಸಂಚರಿಸಿ ೮ ಘಂಟೆಗೆ ಮೈದಾನಕ್ಕೆ ಬಂದು ಸೇರಿದರು ಅಲ್ಲಿ ಧ್ವಜವಂದನೆಯ ಸಮಾರಂಭವು ಶ್ರೀಮಾನ್ ತಲಚೇರಿಕರ ರಂಗರಾಯರಿಂದ ನೆರವೇರಿಸಲ್ಪಟ್ಟಿತು ರಾಷ್ಟ್ರಧ್ವಜದ ಮಹತ್ವ, ಅದರ ಗೌರವವನ್ನು ನಾವು ಹೇಗೆ ಪಾಲಿಸಬೇಕು ಎಂಬ ವಿಷಯಗಳನ್ನು ತಿಳಿಸಿದರು ಬೆಳಗಿನ ಕಾರ್ಯಕ್ರಮವು ಇಲ್ಲಿಗೆ ಅಂತ್ಯವಾಯಿತು

ಮಧ್ಯಾಹ್ನದಲ್ಲಿ ಮಂಗಳೂರಿನ ಪೋಲೀಸ್ ಅಧಿಕಾರಿಗಳು ರಾಷ್ಟ್ರಬಂಧು ವಾರಪತ್ರಿಕೆಯ ಕಚೇರಿಯನ್ನೂ ಕಾಂಗ್ರೆಸು ಕಚೇರಿಯನ್ನೂ ಪರಿಶೋಧನೆ ಮಾಡಿದರು ಪತ್ರಿಕಾ ಕಚೇರಿಯಲ್ಲಿ ರಾಷ್ಟ್ರಬಂಧು (ತಾ. ೨೫ರ)ಪತ್ರಿಕೆಯ ಕೆಲ ಪ್ರತಿಗಳನ್ನೂ ಸ್ವಾತಂತ್ರ್ಯದ ಠರಾವಿನ ಮೂಲನಕಲನ್ನೂ ಹಿಡಿದುಕೊಂಡು ಹೋದರು. ಕಾಂಗ್ರೆಸ್ ಕಚೇರಿಯಲ್ಲೂ ಅದೇರೀತಿ ಜಪ್ತಿ ನಡೆಸಿ ಆಕ್ಷೇಪಕರವಾದ ಪತ್ರಗಳನ್ನು ಹಿಡಿದುಕೊಂಡು ಹೋದರು.

ಸಾಯಂಕಾಲ ಪುನಃ ಕಾಂಗ್ರೆಸ್ ಭವನದಿಂದ ಮೆರವಣಿಗೆ ಹೊರಟು ಸಾಯಂಕಾಲ ೬ ಘಂಟೆಗೆ ಮೈದಾನಕ್ಕೆ ಬಂದು ಮುಟ್ಟಿತು. ಶ್ರೀ ವೆಂಕಪ್ಪ ರೈಗಳ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಜರಗಿತು ಶ್ರೀಗಳಾದ ಬೆಂದೂರ, ಡಾ| ವಿಠಲ ಸೆಟ್ಟಿಯವರು, ಪ್ರೊ ಸಿ ಜಿ ಮಾರ್ಕ, ಶ್ರೀ. ಬಿ ವೆಂಕಟ ರಾವ್ ಬಾಳಿಗ, ಶ್ರೀ ಕೆ ಆರ್ ಕಾರಂತರೇ ಮೊದಲಾದವರು ರಾಷ್ಟ್ರಸಭೆಯ ಧ್ಯೇಯವನ್ನು ಕುರಿತು ಮಾತಾಡಿ ಭರತ ಖಂಡದ ಪ್ರಕೃತದ ಆರ್ಥಿಕ ರಾಜಕೀಯ ದುಃಸ್ಥಿತಿಗಳನ್ನು ಹೋಗಲಾಡಿಸದಿದ್ದರೆ ದೇಶಕ್ಕೆ ಕಲ್ಯಾಣವಾಗುವಂತಿಲ್ಲವೆಂದೂ ಆ ದುಃಸ್ಥಿತಿಯನ್ನು ಹೋಗಲಾಡಿಸಬೇಕಾದರೆ ಸ್ವಾತಂತ್ರ್ಯವನ್ನು ಮೊದಲಾಗಿ ಸ್ಥಾಪಿಸಬೇಕೆಂದೂ ಸ್ವಾತಂತ್ರ್ಯಸ್ಥಾಪನೆಯ ಕಾರ್ಯದಲ್ಲಿ ಮೊದಲನೆಯ ಸೋಪಾನವಾದ ನ್ಯಾಯಸಭಾಮಂದಿರಗಳ ಪ್ರವೇಶನಕ್ಕೆ ಮಹಾಜನರು ಕಾಂಗ್ರೆಸಿನವರಿಗೆ ಸಂಪೂರ್ಣ ಬೆಂಬಲವಿತ್ತು ಸಹಾಯ ಮಾಡಬೇಕೆಂದೂ ಹೇಳಿದರು ಅಧ್ಯಕ್ಷರು ತಮ್ಮ ಭಾಷಣದಲ್ಲಿ ಕಾಂಗ್ರೆಸಿನವರಿಗೆ ಮಹಾಜನರು ಸಂಪೂರ್ಣ ಬೆಂಬಲಕೊಡಬೇಕೆಂದರು, ಶ್ರೀ ಕೆ ಹೆಗಡೆಯರು ಆ ದಿನದ ಪೋಲೀಸ್ ಜಪ್ತಿಯ ವಿಷಯವಾಗಿ ಹೇಳಿ ಇಂತಹ ಜಪ್ತಿಗಳು ನಮ್ಮ ದಾಸ್ಯದ ಫಲವೆಂದು ಹೇಳಿ ಮಂಗಳೂರಿನ ಪುರಜನರು ಸ್ವಾತಂತ್ರ್ಯಕ್ಕಾಗಿ ಹೋರಾಡುವ ನಿರ್ಧಾರವನ್ನು ಮಾಡಬೇಕೆಂದರು. ಆ ಠರಾವು ಸರ್ವಾನುಮತದಿಂದ ಮಾನ್ಯವಾಯಿತು. ಧನ್ಯವಾದಾರ್ಪಣೆಯೊಂದಿಗೆ ಸಭೆಯು ಕೊನೆಗೊಂಡಿತು

ಶ್ರೀ ರಾಮಕೃಷ್ಣ ವಿದ್ಯಾರ್ಥಿಭವನ, ಮಂಗಳೂರು

ಇದರ ವರ್ಷಂತ್ಯುತ್ಸವವು ತಾ. ೭-೨-೩೭ನೇ ಆದಿತ್ಯವಾರ ಮಂಗಳೂರು ಗವರ್ನಮೆಂಟ್ ಕೋಲೇಜಿನ ಪ್ರಿನ್ಸಿಪಾಲರಾದ ಶ್ರೀ. ಪಿ ನಾರಾಯಣ ಗೌಡ ಎಂ ಎ ಬಿ ಯಸ್ ಸಿ, (ಎಡಿನ್) ಯವರ ಅಧ್ಯಕ್ಷತೆಯಲ್ಲಿ ಜರಗುವದು ಹಿತಚಿಂತಕರಿಗೆಲ್ಲಾ ಸುಸ್ವಾಗತವಿದೆ

ಕಾರ್ಯಕ್ರಮ—

ಬೆಳಿಗ್ಯೆ ಘಂಟೆ ೭ರಿಂದ ೧೦ರ ವರೆಗೆ ಆಟಗಳು ಮತ್ತು ಉಪಹಾರ.

ಸಂಜೆ ೫ರಿಂದ ೮ರ ವರೆಗೆ ವರದಿವಾಚನ ಅಭ್ಯುದಯ ಬಾಷಣ ಬಹುಮಾನ ಪಂಚುವಿಕೆ ಅಧ್ಯಕ್ಷರ ಭಾಷಣ, ನಾಟಕ.

ಬಿ. ಬಾಲಕೃಷ್ಣ ರೈ
ಎಸ್. ವಿಟ್ಟಲ ಸೆಟ್ಟಿ.
ಕಾರ್ಯದರ್ಶಿಗಳು

ಸತ್ಕಾರ ಕೂಟಗಳು

ಕಳೆದ ತಾ ೨೯ರಲ್ಲಿ ಮಂಗಳೂರಿನ ಜಿಲ್ಲಾ ಮತ್ತು ಸೆಷನ್ಸ್ ಜಡ್ಜರಾದ ಮಿಸ್ಟರ್ ಅಮಿರುದ್ದೀನ್ ಸಾಹೇಬರು, ಡಿಸ್ಟ್ರಿಕ್ಟ್ ಕೋರ್ಟಿನ ಶಿರಸ್ತೆದಾರರಾಗಿದ್ದು ಸಧ್ಯದಲ್ಲಿಯೇ ಕೆಲಸದಿಂದ ನಿವೃತ್ತರಾಗಲಿರುವ ಶ್ರೀಮಾನ್ ಪಿ. ಶಂಕರನಾರಾಯಣ ರಾಯರಿಗೆ ಒಂದು ಟೀಪಾರ್ಟಿ ಸತ್ಕಾರವನ್ನು ಕೊಟ್ಟರು ಮರುದಿವಸ ಜಿಲ್ಲಾ ಸಬ್ ಮತ್ತು ಮುನ್ಸೀಪರೂ ಕೋರ್ಟುಗಳ ನೌಕರರೆಲ್ಲರೂ ಸೇರಿ ಶ್ರೀ| ರಾಯರಿಗೆ ತಮ್ಮ ಲೆಕ್ಕದಿಂದ ಒಂದು ಸತ್ಕಾರವನ್ನಿತ್ತರು ಈ ಸತ್ಕಾರಕ್ಕೆ ಮೂರು ಕೋರ್ಟುಗಳ ನ್ಯಾಯಾಧಿಕಾರಿಗಳೂ, ಸರಕಾರಿ ವಕೀಲರೂ ಆಮಂತ್ರಿಸಲ್ಪಟ್ಟಿದ್ದರು. ವಿವಿಧ ವಿನೋದಾವಳಿ, ಸಂಗೀತ, ಭಾಷಣಗಳೂ ಇದ್ದುವು ನಿವೃತ್ತರಾಗಲಿರುವ ಅಧಿಕಾರಿಗಳ ಗುಣಗಳನ್ನು ಪ್ರಶಂಸಿಸಿ ಹಲವರು ಮಾತಾಡಿದರು.

ಹಿಂದಿನ ಆದಿತ್ಯವಾರ ದಿನ ಜಿಲ್ಲಾ ಜಡ್ಜಿಗಳು ಮಂಗಳೂರಿನ ವಕೀಲರುಗಳಿಗೆ ಟೀಪಾರ್ಟಿಯ ಸತ್ಕಾರವನ್ನಿತ್ತರು

ಶ್ರೀ ಸ್ವಾಮಿ ಈಶ್ವರಾನಂದರ ಪುಣ್ಯ ದಿನಾಚರಣೆ

ಕಳೆದ ತಾ ೩೦ನೇ ಶನಿವಾರ ಸ್ಥಳೀಯ ಡಿಪ್ರೆಸ್ಡ್ ಕ್ಲಾಸಸ್ ಮಿಶನಿನವರು, ಗವರ್ನಮೆಂಟ್ ಹಾ ಎಲಿಮೆಂಟರಿ ಟ್ರೈನಿಂಗ್ ಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ| ಕೆ. ಗೋಪಾಲರಾಯರ ಅಧ್ಯಕ್ಷತೆಯಲ್ಲಿ ಸ್ವಾಮಿ ಈಶ್ವರಾನಂದರವರ ಪುಣ್ಯ ದಿನಾಚರಣೆಯನ್ನು ನೆರವೇರಿಸಿದರು ದೇವತಾ ಪ್ರಾರ್ಥನೆಯಾದ ಮೇಲೆ ಶಾಲಾ ಇನ್ಸ್‌ಪೆಕ್ಟರರಾದ ಶ್ರೀ| ಟಿ ಕೃಷ್ಣರವರು ಶ್ರೀ| ಸ್ವಾಮಿಗಳು ಹಿಂದುಳಿದವರನ್ನು ಮುಂದೆ ಬರುವಂತೆ ಮಾಡುವುದಕ್ಕೆ ಏನೆಲ್ಲ ಪ್ರಯತ್ನ ಮಾಡಿದರೆಂಬುದನ್ನು ಸವಿಸ್ತಾರವಾಗಿ ತಿಳಿಸಿದರು ಅಧ್ಯಕ್ಷರು ತಮ್ಮ ಭಾಷಣದಲ್ಲಿ ಶ್ರೀ| ಈಶ್ವರಾನಂದರ ಗುಣಗಳನ್ನು ವಿವರಿಸಿ, ಅವರು ಹರಿಜನರ ಉದ್ಧಾರವನ್ನು ತಮ್ಮ ಜೀವನದ ಒಂದು ಮುಖ್ಯ ಧ್ಯೇಯವನ್ನಾಗಿ ಹೇಗೆ ಇಟ್ಟುಕೊಂಡಿದ್ದರೆಂಬುದನ್ನು ಹೇಳಿದರು. ಶ್ರೀ| ಸೂರ್ಯನಾರಾಯಣ ರಾಯರು ಅಧ್ಯಕ್ಷರಿಗೆ ದನ್ಯವಾದಗಳನ್ನರ್ಪಿಸಿದರು ಅನಂತರ ಪ್ರಾರ್ಥನೆಯೊಂದಿಗೆ ಸಭಾಂತ್ಯವಾಯಿತು ಸಾಯಂಕಾಲ 7 ಗಂಟೆಗೆ ಶ್ರೀ| ಈಶ್ವರಾನಂದ ಬಾಲಚಮಂದಳದ ಶಿಬಿರಾಗ್ನಿ ಸಮಾರಂಭವೂ ನಡೆಯಿತು

ಖೂನಿ ಮೊಕದ್ದಮೆ ಹೆಂಗಸಿಗೆ ಮರಣದಂಡನೆ

ಕಳೆದ ೩೦-5-36ರಲ್ಲಿ ಮಂಗಳೂರು ಸಮೀಪವಿರುವ ಕೊಳಂಬೆ ಗ್ರಾಮದ ಕೋಟ್ಸೆ ಎಂಬಲ್ಲಿ ಒಂದು ಕುಟುಂಬದವರೊಳಗೆ ಬಡಿದಾಟವಾಗಿ, ಅದರ, ಪರಿಣಾಮವು ಮೂರು ಮಂದಿಯ ಕೊಲೆಯಲ್ಲಿ ಪರ್ಯವಸಾನ ಹೊಂದಿತು ಕುಟುಂಬದ ಯಜಮಾನನಾದ ದೇವು ನಾಯಕನು ಅಕ್ಕಿ ಟೀರೆಯವರಿಗೆ ಮಾರಲು ಹೋದಾಗ ಲಕ್ಷ್ಮೀ, ಮಗಳು ಕಾವೇರಿ, ಮತ್ತು ಅವರ ಪೈಕಿಯವರು ಆತಂಕ ಪಡಿಸಿದರೆಂದು ಪ್ರಾಸಿಕ್ಯೂಶನಿನವರ ಹೇಳಿಕೆ ತಮ್ಮ ಮನೆಯಿಂದ ಅಕ್ಕಿಯನ್ನು ಬಲಾತ್ಕಾರವಾಗಿ ಸಾಗಿಸಲು ತಾವು ತಡಮಾಡಿದರಿಂದ ಜಗಳವಾಯಿತೆಂದೂ, ತಾವು ಆತ್ಮರಕ್ಷಣೆಗಾಗಿ ಯತ್ನಿಸಿದಾಗಿಯೂ, ಆ ಸಂದರ್ಭದಲ್ಲಿ ಕೆಲವರಿಗೆ ಜಖಂ ಆಗಿ ಮಡಿದರೆಂದೂ ಆರೋಪಿತರ ಹೇಳಿಕೆ ಅಸೆಸರು ಆರೋಪಿತರು ತಪ್ಪಿತಸ್ಥರಲ್ಲವೆಂದು ಅಭಿಪ್ರಾಯಪಟ್ಟರು ಸೆಷನ್ಸ್ ಜಡ್ಜರು ಆ ಅಭಿಪ್ರಾಯವನ್ನು ಅನುಮೋದಿಸದೆ ಲಕ್ಷ್ಮೀ ಹೆಂಗಸಿಗೆ ಮರಣ ದಂಡನೆಯನ್ನೂ, ಒಬ್ಬನಿಗೆ ಟಾವು ಇಬ್ಬರು ಸಣ್ಣ ಪ್ರಾಯದವರಿಗೆ ಜಾಮೀನು ಮುಚ್ಚಳಿಕೆ ಮತ್ತಿಬ್ಬರಿಗೆ ೪-5 ತಿಂಗಳುಗಳ ಶಿಕ್ಷೆಯನ್ನು ವಿಧಿಸಿದರು.

ಚುನಾವಣೆಯ ದಿನಾಚರಣೆ

ನಿನ್ನೆಯ ದಿನ (ತಾ ೩1) ಸಾಯಂಕಾಲ ನೆಹರೂ ಮೈದಾನಿನಲ್ಲಿ ಕ್ರಿಸ್ತ ಬಂದುಗಳ ಒಂದು ಮಹಾಸಭೆಯು ಸೇರಿ ಪ್ರಕೃತ ಮದ್ರಾಸ್ ನ್ಯಾಯ ವಿಧಾಯಕ ಸಭೆಗೆ ಚುನಾಯಿಸಲ್ಪಡುವುದಕ್ಕೆ ಉಮೇದ್ವಾರರಾಗಿ ನಿಂತಿರುವ ಇಬ್ಬರು ಕ್ರಿಸ್ತ ಪೈಕಿ ಯಾರಿಗೆ ಮತಕೊಡಬೇಕೆಂಬುದನ್ನು ಪರ್ಯಾಲೋಚಿಸುವುದಕ್ಕಾಗಿ ವಿಚಾರಿಸಿತು ಹಲವರು ಹಲವು ಅಭಿಪ್ರಾಯಗಳನ್ನು ಕೊಟ್ಟರು ಆದರೆ ಬಹುಪಕ್ಷದವರು ರಾಷ್ಟ್ರ ಪಕ್ಷದ ಉಮೇದ್ವಾರರಿಗೆ ಮತದಾನ ಮಾಡಬೇಕೆಂಬ ಅಭಿಪ್ರಾಯಪಟ್ಟರು ಪ್ರೊ ಮಾರ್ಕಿಯವರು ತಾವು ಸಮಾಜಕ್ಕೇನು ಮಾಡಿದ್ದೇವೆಂದೂ, ಇನ್ನೇನು ಮಾಡಲಿರುವೆವೆಂದೂ ಹೇಳಿದರು ಮತ್ತು ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡುವುದು ಕ್ರಿಸ್ತರ ಕರ್ತವ್ಯಕ್ಕೆ ವಿರುದ್ಧವಲ್ಲವೆಂದು ಪೋಪರಿಯೋರವರ ಮಾತಿನಿಂದ ಸಮರ್ಥಿಸಿದರು

ಅತ್ತ ಮಂಗಳೂರು ನಗರ ಕಾಂಗ್ರೆಸ್ ಸಭೆಯ ಆಶ್ರಯದಲ್ಲಿ ಟ್ಯಾನ್ ಮೈದಾನದಲ್ಲಿ ಒಂದು ಮಹಾಸಭೆಯು ನಡೆದು ಅದರಲ್ಲಿ ಶ್ರೀ ತಲಚೇರಿಕಾರರು ಭಾಷಣಮಾಡಿ ಜಸ್ಟಿಸ್ ಪಕ್ಷವನ್ನೂ ಅದರ ಕೆಲಸವನ್ನೂ ಖಂಡಿಸಿದರು. ಶ್ರೀಗಳಾದ ಬಾಳಿಗರು ಬೆಂದೂರರು ಮೊದಲಾದವರು ಕಾಂಗ್ರೆಸಿಗೆ ಬೆಂಬಲಕೊಡಬೇಕೆಂದು ಮತದಾರರನ್ನು ಪ್ರಾರ್ಥಿಸಿದರು ಅಧ್ಯಕ್ಷತೆವಹಿಸಿದ್ದ ಶ್ರೀ ಪದ್ಮನಾಭ ಆರಿಗರು ಭಾಷಣ ಕರ್ತರುಗಳ ಅಭಿಪ್ರಾಯವನ್ನು ಅನುಮೋದಿಸಿ ಎಲ್ಲರೂ ಕಾಂಗ್ರೆಸಿಗೆ ಸಹಾಯ ಮಾಡಬೇಕೆಂದರು

ಉಡುಪಿ

ತಾ. ೨೫ ೧ ೩೭ರಲ್ಲಿ ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ ಶ್ರೀ. ಶಾರದಾ ಸಂಗೀತಕಲಾಶಾಲೆಯ ವಿದ್ಯಾರ್ಥಿನಿಯರಿಂದ ಶ್ರೀ ಕೆ ಪದ್ಮನಾಭಾಚಾರ್ಯರಿಂದ ರಚಿಸಲ್ಪಟ್ಟ 'ಸಾವಿತ್ರಿ ಸತ್ಯವಾನ' ನಾಟಕವು ಚಲೋದಾಗಿ ಅಭಿನಯಿಸಲ್ಪಟ್ಟಿತು ಸಾಹಿತ್ಯ ಸಾಮ್ರಾಜ್ಯ ನಾಟಕ ಮಂಡಳಿಯ ಚಾಲಕರಾದ ಶ್ರೀ. ಆರ್ ನಾಗೇಂದ್ರರಾಯರು ಅಧ್ಯಕ್ಷತೆ ವಹಿಸಿದ್ದರು. ಚಿಕ್ಕ ಬಾಲಿಕೆಯರ ಲೇಝಿಂ, ಕೋಲಾಟ, ನರ್ತನ ಮೊದಲಾದವು ಉತ್ತಮವಾಗಿದ್ದವು ಬಾಲಿಕೆಯರನ್ನು ತರಬೇತಿ ಮಾಡಿದ ಶ್ರೀ ಕೆ ಪದ್ಮನಾಭಾಚಾರ್ಯರಿಗೆ ಸುವರ್ಣಪದಕ ಒಂದು ಒಬ್ಬ ಮಹನೀಯರಿಂದ ಕೊಡಲ್ಪಟ್ಟಿತು ಬೇರೆ ಬೇರೆ ಪಾತ್ರಗಳನ್ನು ವಹಿಸಿದ ಬಾಲಿಕೆಯರಿಗೆಲ್ಲಾ ಪದಕಗಳ ಬಹುಮಾನಗಳು ದೊರೆತಿದ್ದವು. ನಾಟಕದ ಮುನಾಫೆಯನ್ನು ಶ್ರೀ ಕೃಷ್ಣಸಂದೇಶ ಪತ್ರಿಕೆಗೆ ಕೊಡಲಾಗಿದೆ

ಉಡುಪಿಯಲ್ಲಿ ಮಾಮೂಲು ಪ್ರಕಾರ ಪಲಿಮಾರು ಶ್ರೀ ಶ್ರೀಪಾದಂಗಳವರ ಪರ್ಯಾಯ ಮಹೋತ್ಸವದ ಅಕ್ಕಿಯ ಮುಹೂರ್ತವು ಕಳೆದ ತಾ ೨೫-೧-೩೭ರಲ್ಲಿ ನಡೆಯಿತು

ಶಿಬಿರಾಗ್ನಿ ಕಳೆದ ತಾ ೨೭ನೇ ಬುಧವಾರ ಬೋರ್ಡ್ ಹ್ಯಾಸ್ಕೂಲಿನ 'ಗರ್ಲ್ ಗೈಡ್ಸ್' ಮತ್ತು ಬೊಯಿ ಸ್ಕಾಟರ ಶಿಬಿರಾಗ್ನಿಯು ಜಿಲ್ಲಾ ಎಜ್ಯುಕೇಶನಲ್ ಆಫೀಸರರಾದ ಶ್ರೀ ಕಣ್ಣಪ್ಪ ಎಂ ಎ ಎಲ್ ಟಿ. ಯವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ಬೋರ್ಡ್ ಹ್ಯಾಸ್ಕೂಲಿನ ವಠಾರದಲ್ಲಿ ಜರಗಿತು.

ಪಂಡಿತ ಜವಾಹಿರಲಾಲರು

ಪಂಡಿತ ಜವಾಹಿರಲಾಲರು ತಾ ೧೧ ೨ ೩೭ನೇ ಗುರುವಾರ ಪೂರ್ವಾಹ್ನ ೯-೧೦ಕ್ಕೆ ಇಲ್ಲಿಗೆ ಬಂದು ಉಡುಪಿ ನಗರದ ಸಭೆ ಮತ್ತು ಕಾಂಗ್ರೆಸ್ ಕಮಿಟಿಯ ಮಾನಪತ್ರ ಸ್ವೀಕಾರ, ಬಾಷಣ ಮಾಡಿ ಘಂಟೆ ೯ ೩೦ಕ್ಕೆ ಹೊರಡುವರೆಂದು ಪ್ರಕಟವಾಗಿದೆ.

ಜಿಲ್ಲಾ ಎಜ್ಯುಕೇಶನಲ್ ಆಫೀಸರರು ಇಲ್ಲಿಗೆ ಬಂದಿದ್ದು ಸ್ಥಳೀಕ ಬೋರ್ಡ್ ಮತ್ತು ಕ್ರಿಶ್ಚಿಯನ್ ಹೈಸ್ಕೂಲುಗಳನು ಸಂದರ್ಶಿಸಿರುವರು.

THE BOMBAY LIFE
ASSURANCE Co., LTD.
ESTD. 1908
Church Gate Street, Fort - - BOMBAY.

SPECIAL FEATURES.

1. Rebate on yearly payment of policies.
2. Rebate for larger assurances.
3. Accident Risk covered on small extra premiums
4. Attractive Bonuses.

It pays you to represent this Company.
Wanted Agents in unrepresented parts.

Apply to:—

KOCHIKAR BROTHERS,
Madras Branch Secretaries.

BRANCHES AT:

P B 337 Mount Road, Madras	Visveswarapuram Circle, Bangalore City	Soumyalayam Puthiyara, Calicut.
Car Street, Mangalore	Udipi, S India	Charni Road, Bombay No 4

EVIDENCE
OF
SECURITY & STABILITY
FIGURES THAT SPEAK FOR THEMSELVES

TOTAL ASSETS Rs. 80,66,600

Summary of 1935 Accounts

Total Assets Over	Rs. 80,00,000
Life Funds Over	Rs 68,00,000
Premium Income Over	Rs 22,54,000
Interest Income	Rs 3,16,000
Claims Paid	Rs 5,75 000

Total Claims paid Over Rs. 38,50,000
Total Business in Force Over Rs. 4,42,51,200

TOTAL BUSINESS IN FORCE Rs. 4,42,51,200

ಚಂದಾದಾರರಲ್ಲಿ

ಚಂದಾಹಣ ಬಾಕಿ ಇರುವ ನಮ್ಮ ಚಂದಾದಾರರು ಆದಷ್ಟು ಬೇಗನೇ ತಮ್ಮ ಹಣವನ್ನು ಮಣಿಯಾರ್ಡರ್ ಮೂಲಕ ದಯವಿಟ್ಟು ಕಳುಹಿಸಿಕೊಡಬೇಕಾಗಿ ಅಪೇಕ್ಷಿಸುತ್ತೇವೆ. ವಿ ಪಿ. ಮಾಡುವದಾದರ ಐದಾಣೆ ಹೆಚ್ಚಿಗೆ ಬೀಳುವದು

ನಮ್ಮೊಡನೆ ಪತ್ರವ್ಯವಹಾರ ನಡೆಸುವವರು ತಮ್ಮ ಚಂದಾ ನಂಬ್ರವನ್ನು ಸೂಚಿಸಿ ಬರೆಯಬೇಕಾಗಿ ವಿನಂತಿ. ಮೆನೇಜರ್, 'ನವಯುಗ'

ಉಡುಪಿ, ತಾ ೪-೨ '೩೭ ಗುರುವಾರ

ಮತದಾರರೊಡನೊಂದು ಮಾತು

(ಲೇಖಾಂಕ ೨)

ತಮ್ಮ ಘನಸ್ಥಿಕೆಯನ್ನು ತಾವೇ ಹೆಚ್ಚಿಸಿಕೊಳ್ಳುವ ಜವಾಬ್ದಾರಿಯು ಈಗ ಮತದಾರರದಾಗಿದೆ ಅವರು ವೋಟಿನ ಬೆಲೆಯನ್ನಿಳಿಸಿ ಕೊಂಡರಾದರ, ಹಿಂದೂದೇಶದ ಬಡತನ, ಜನಸಾಮಾನ್ಯರ ಸಂಕಷ್ಟ, ಸ್ವಾತಂತ್ರ್ಯಕ್ಕಾಗಿ ಭಾರತವು ಪಡತ್ತಿರುವ ಆತುರ ಇವೆಲ್ಲವನ್ನೂ ತಾತ್ಸಾರಗೊಳಿಸಿದಂತಾಗುವದು ವೋಟರರು ಇಂತಹ ಪ್ರಾಮುಖ್ಯ ಸಂಗತಿಗಳನ್ನು ಮರೆತು ಮತ್ತೇನನ್ನು ಸಂಪಾದಿಸುವರು? ಸ್ವಪ್ರತಿಷ್ಠೆಗಾಗಿ ಒದ್ದಾಡುತ್ತಿರುವ ಕೆಲವು ದೊಡ್ಡ ಮನುಷ್ಯರ ಅನುಗ್ರಹವನ್ನು ಮಾತ್ರ? ಇದಕ್ಕಿಂತಲೂ ದುಃಖಕರವಾದ, ನಾಚಿಕೆಕರವಾದ ವಿದ್ಯಮಾನವು ಬೇರೊಂದಿರಲಾರದು ಇಂದಿನ ಪರಿಸ್ಥಿತಿಯಲ್ಲಿ ಒಬ್ಬನ ಸಂಪತ್ತನ್ನು ಇನ್ನೊಬ್ಬ ಬಲಶಾಲಿಯು ಅಪಹರಿಸುತ್ತಿರುವನಾದರ ಅದರಲ್ಲಿ ಆಶ್ಚರ್ಯವಿಲ್ಲ ಒಬ್ಬನ ಮತ (ಅಭಿಪ್ರಾಯ) ವು ಇನ್ನೊಬ್ಬನ ಅಧಿಕಾರಕ್ಕೊಳಗಾಗಿರುವದೆಂದರೆ ಅದಷ್ಟಕ್ಕೂ ಸಹಿಸಲಾಗದ ಸಂಗತಿ ಈ ಚುನಾವಣೆಯಲ್ಲಿ ಗೆದ್ದು ಬರುವರೆ ಇಷ್ಟೊಂದು ಸಾಹಸ ಪಡಬೇಕಾದ ಪರಿಸ್ಥಿತಿಯು ಕೊಂಗ್ರೆಸಿಗೊದಗಿದುದನ್ನು ನೋಡಿಯಾದರೂ ನಾವು ಆತ್ಮ ಶೋಧನೆಗಿಳಿಯಬೇಕಾಗಿದೆ ಈ ಹೋರಾಟದ ಸತ್ಪರಿಣಾಮವೆಂದರೆ ಕೆಲವು ಎಸೆಂಬ್ಲಿ ಸ್ಥಾನಗಳು ಮಾತ್ರವೆಂದಾದರೆ ನಾವದಕ್ಕೆ ಹಿಗ್ಗುವಂತಿಲ್ಲ. ಜನತೆಯ ಸಹಾನುಭೂತಿ ಸಂಪಾದನೆಗಾಗಿಯೂ ಕೊಂಗ್ರೆಸು ದುಡಿಯಬೇಕೆ? ಇದಕ್ಕಿಂತಲೂ ಉಜ್ವಲವಾದ ಶಕ್ತಿಪೂರ್ಣವಾದ ಕೆಲಸಗಳನ್ನು ಮಾಡಿದ ದಾಖಲೆಯು ಕೊಂಗ್ರೆಸಿನೊಡನಿಲ್ಲವೆ? ಅವುಗಳು ಜನತೆಯ ಸಹಾನುಭೂತಿ ಸಂಪಾದನೆಗೂ ಸಾಕಾಗಲಾರವ? ಇಷ್ಟಿದ್ದರೂ ಚುನಾವಣೆಯ ಜಯಕ್ಕಾಗಿ ಕೊಂಗ್ರೆಸು ದುಡಿಯಬೇಕಾದುದು ಹಿಂದೂದೇಶದ ಹಳ್ಳಿಗರ ದುರವಸ್ಥೆಯನ್ನು ತೋರಿಸಿಕೊಡುತ್ತದೆ ಪರಕೀಯರ ಆಳ್ವಿಕೆಯಿಂದ ಹಳ್ಳಿಗರಲ್ಲುಂಟಾಗಿರುವ ನಿಶ್ಚೇತನಾವಸ್ಥೆಯನ್ನು ಚಿತ್ರಿಸುತ್ತದೆ ಹೀಗಾಗಿ ಕೊಂಗ್ರೆಸಿನ ಚುನಾವಣೆಯ ಚಳವಳದ ಮುಖ್ಯ ಸತ್ಪರಿಣಾಮವೆಂದರೆ ಜನಜಾಗ್ರತಿ, ಕೊಂಗ್ರೆಸಿಗೂ ಸಾಮಾನ್ಯ ಜನರಿಗೂ ಉಂಟಾಗಿರುವ ಸಂಬಂಧ ಆ ದೃಷ್ಟಿಯಿಂದ ಈ ಹೋರಾಟವು ಅಗತ್ಯವೆಂದು ನಾವು ಭಾವಿಸುತ್ತೇವೆ ಅದನ್ನು ಸ್ವಾಗತೀಕರಿಸುತ್ತೇವೆ

ಮತದಾರರೀಗ ತಮ್ಮ ಸಿದ್ಧತೆಯನ್ನು ತೋರಿಸಬೇಕಾಗಿದೆ. ಅಜ್ಞಾನಿಗಳಾಗಿ, ಅಂಧಾನುಕರಣೆಯವರಾಗಿ, ಇರುವ ಕಾಲಕ್ಕೂ ಒಂದು ಮಿತಿಯಿದ ಕೊಂಗ್ರೆಸಿನ ಪ್ರಚಾರಕರು ತಮ್ಮ ಕೆಲಸವನ್ನು ಅತ್ಯಂತ ದಕ್ಷತೆಯಿಂದ ನಿರ್ವಹಿಸುತ್ತಿದ್ದಾರೆ ರಾಷ್ಟ್ರಸಭೆಯ ಕಾರ್ಯಕಲಾಪ, ಮತದಾರರ ಕರ್ತವ್ಯ–ಇವುಗಳನ್ನೆಲ್ಲಾ ಸರಿಯಾಗಿ ಪ್ರಚಾರ ಮಾಡುತ್ತಿದ್ದಾರೆ ಮಿಕ್ಕ ಜವಾಬ್ದಾರಿಯು ವೋಟರರ ಮೇಲಿದೆ, ಪರಿಣಾಮದಲ್ಲಿ ನ್ಯೂನತೆಯು ಕಂಡುಬಂದರೆ ಅದಕ್ಕೆ ವೋಟರರು ಹೊಣೆಯಾಗಬೇಕಾಗುವದು ಮತದಾರರಿಗೆ ಕೊಂಗ್ರೆಸೀಗ ಅತ್ಯಂತ ಸುಲಭದ ಹಾದಿಯನ್ನು ತೋರಿಸಿಕೊಟ್ಟಿರುವುದು ಸ್ವಾತಂತ್ರ್ಯ ಸಂಪಾದನೆಯ ಧ್ಯೇಯದಲ್ಲಿ ಅವರ ಸಹಾನುಭೂತಿಯನ್ನು ಮಾತ್ರ ಕೊಂಗ್ರೆಸೀಗ ಕೇಳಿರುವದು ಸ್ವಾತಂತ್ರ್ಯಕ್ಕಾಗಿ ರಾಷ್ಟ್ರಸಭೆಯು ಜನತೆಯಿಂದ ಅಪೇಕ್ಷಿಸುವ ತ್ಯಾಗಗಳಲ್ಲಿ ಅತೀ ಸಣ್ಣದೆಂದರೆ ಈ 'ವೋಟು' ಅನಾಯಸದ ರಾಷ್ಟ್ರಸೇವೆಯನ್ನು ಮಾಡಿ ಮತದಾರರು ತಮ್ಮ ಘನಸ್ತಿಕೆಯನ್ನು ಹೆಚ್ಚಿಸಿ ಕೊಳ್ಳುವದಕ್ಕ ಹಿಂದೆಗೆಯಲಾರರೆಂದು ದೃಢವಾಗಿ ನಂಬುತ್ತೇವೆ. ಕರ್ಣಾಟಕ ಪ್ರಾಂತ್ಯವು ತನ್ನ ಜವಾಬ್ದಾರಿಯನ್ನು ದಕ್ಷತಯಿಂದ ನಿರ್ವಹಿಸುವ ಕಾಲವೀಗ ಒಂದಿದ ಚುನಾವಣೆಯು ನಡೆದ ಒರಿಸ್ಸಾ, ಬಂಗಾಳ, ಗಡಿನಾಡು, ಬೊಂಬಾಯಿ, ಸಂಯುಕ್ತ ಸಂಸ್ಥಾನ ಮೊದಲಾದ ಎಲ್ಲಾ ಪ್ರಾಂತ್ಯಗಳೂ ಸಂಪೂರ್ಣವಾಗಿ ಕೊಂಗ್ರೆಸನ್ನು ಸಮರ್ಥಿಸಿವೆ. ಈಗ ಪ್ರಶ್ನೆಯು ಕರ್ಣಾಟಕದ ಕಡೆಗೆ ತಿರುಗಿದೆ. 'ಕರ್ಣಾಟಕವು ಏನು ಮಾಡುವದು" ದೇಶಾಭಿಮಾನವನ್ನು ಪ್ರದರ್ಶಿಸಿದ ಮಿಕ್ಕ ಪ್ರಾಂತ್ಯಗಳ ಸಾಲಿನಲ್ಲಿ ಅದೂ ತಲೆಯೆತ್ತಿ ನಿಲ್ಲುವ ಸಾಹಸಮಾಡಿಯೇ ತೀರಬೇಕು ಮತದಾರರೀಕೆಲಸವನ್ನು ಸ್ವಯಂಪ್ರೇರಣೆಯಿಂದ ನೆರವೇರಿಸುವರೆಂದೂ ದೇಶಾಭಿಮಾನವನ್ನು ತೋರಿಸುವರೆಂದೂ ಹಾರೈಸುತ್ತೇವೆ

'ಪೆಟ್ಟಿಗೆಗೊಂದು ಬಣ್ಣ'!

ಬರುವ ಎಸೆಂಬ್ಲಿ ಚುನಾವಣೆಗಿಳಿದಿರುವ ಪಕ್ಷಗಳಿಗೆ ಪ್ರತ್ಯೇಕ ಬಣ್ಣಗಳನ್ನಿತ್ತು, ಮತದಾರರು ಗುಪ್ತವಾಗಿ ಮತದಾನಮಾಡಲನುಕೂಲ ಮಾಡಿಕೊಟ್ಟಿರುವ ಸರಕಾರದ ವ್ಯವಸ್ಥೆಯು ಸ್ತುತ್ಯವಿದೆ ರಾಷ್ಟ್ರಸಭಾಪಕ್ಷಕ್ಕೆ ಹಳದಿ, ಜಸ್ಟಿಸ್ ಪಕ್ಷಕ್ಕೆ ಕೆಂಪು ಬಣ್ಣಗಳೆಂದು ಜಾಹೀರು ಮಾಡಿ, ಆ ಬಣ್ಣಗಳ ಪೆಟ್ಟಿಗೆಗಳನ್ನು ಪೋಲಿಂಗ್ ಸ್ಟೇಶನುಗಳಲ್ಲಿ ಇಡಲಾಗುವದೆಂದೂ ಮತದಾರರು ಅವುಗಳನ್ನು ಗುರುತಿಸಿ ವೋಟುಗಳನ್ನು ಹಾಕಿದರಾಯಿತೆಂದೂ ಪ್ರಕಟವಾಗಿತ್ತು. ಈಗ ಆ ಪೆಟ್ಟಿಗೆಗಳ ಮೇಲ್ಭಾಗಕ್ಕೆ ಮಾತ್ರ ಬಣ್ಣದ ಕಾಗದಗಳನ್ನು ಹಚ್ಚಲಾಗುವದೆಂದು ತಿಳಿದು ಬರುತ್ತಿದೆ ಈ ಕ್ರಮವನ್ನು ಶ್ರೀ ಸಿ. ರಾಜಗೋಪಾಲಾಚಾರಿಯವರೇ ಮೊದಲಾದ ಕೊಂಗ್ರೆಸ್ ಧುರೀಣರು ಎಷ್ಟೇ ವಿರೋಧಿಸಿದರೂ ಸರಕಾರವದಕ್ಕೆ ಕಿವಿಗೊಟ್ಟಿಲ್ಲ. ಓಟಿನ ಪೆಟ್ಟಿಗೆಗಳನ್ನು ಎರಡಡಿ ಎತ್ತರದ ಸ್ಟೂಲುಗಳ ಮೇಲೆ ಇಡಲಾಗುವುದೆಂದೂ, ಮತದಾರರು ಮೇಲ್ಭಾಗವನ್ನು ಕಾಣಲು ಅಡ್ಡಿಯಿಲ್ಲವೆಂದೂ ಸರಕಾರೀ ಕಡೆಯವರ ಅಂಬೋಣ. ಇಡೀ ಪೆಟ್ಟಿಗೆಗೆ ಬಣ್ಣಬಳಿಯಬೇಕೆಂಬ ಕೊಂಗ್ರೆಸ್ ಪಕ್ಷೀಯರ ವಾದವನ್ನು ಮನ್ನಿಸಲು ಹೋದರೆ ಹೆಚ್ಚಿಗೆ ಖರ್ಚು ತಗಲುವದಂತೆ! ಲಕ್ಷಗಟ್ಟಲೆ ರೂಗಳ ವ್ಯಯವಾಗುವ ಚುನಾವಣೆಯಲ್ಲಿ, ಸರಕಾರವು ತೋರಿಸುತ್ತಿರುವ ಇಂಥಾ ಜಿಪುಣತನಕ್ಕೆ ಬೇರೆಯೇ ಅರ್ಥವಿರಬೇಕು. ಇಲ್ಲವಾದರೆ ನಮ್ಮ ಸರಕಾರದವರಲ್ಲಿ ಎಂದೂ ಕಂಡುಬಾರದಿರುವ ಮಿತವ್ಯಯ ಬುದ್ಧಿಯು ಮತದಾನಕ್ಕೆ ಅನುಕೂಲತೆಯನ್ನೊದಗಿಸುವ ಕಾರ್ಯದಲ್ಲಿಯೇ ಕಂಡು ಬಂತೇಕೆ? ರಾಷ್ಟ್ರಸಭೆಯ ಕಡೆಯಿಂದ ಪೆಟ್ಟಿಗೆಯ ಬಣ್ಣದ ಕುರಿತು ಸರಿಯಾದ ಪ್ರಚಾರವು ನಡೆದಿರುವಾಗ, ಸರಕಾರವು ಫಕ್ಕನೆ ಇಂತಹ ತೊಂದರೆಗಳನ್ನೊಡ್ಡುವದರಲ್ಲಿ ನ್ಯಾಯವಿದಯ? ಯಾವ ತಡೆಯೂ ಇಲ್ಲದೆ ಮತದಾರರ ಅಭಿಪ್ರಾಯವು ಸ್ಪಷ್ಟವಾಗಿ ಹೊರಬೀಳುವಂತೆ ನೋಡುವದೇ ಚುನಾವಣೆಯಲ್ಲಿ ಸರಕಾರದ ಮೇಲಿರುವ ಹೊಣೆ ಅದಕ್ಕೆ ಬದಲಾಗಿ ಬಣ್ಣವನ್ನು ಓಟಿನ ಪೆಟ್ಟಿಗಯಲ್ಲಿ ಹುಡುಕುವ ಕೆಲಸವನ್ನೂ ಮತದಾರರಿಗೆ ಕೊಟ್ಟುದು ಸರಿಯಲ್ಲ ಪೆಟ್ಟಿಗೆಯ ಮೇಲ್ಭಾಗಕ್ಕೆ ಹಳದಿ ಬಣ್ಣದ ಕಾಗದ ಹಚ್ಚುವ ಏರ್ಪಾಡಾಗಿದ ಇದರಿಂದ ಬಣ್ಣವೂ ಓಟರರೂ ಇದಿರಿದಿರಾಗುವ ಸಂದರ್ಭ ತಪ್ಪಿದರೂ, ಮತದಾರರು ಅರಸಿನ ಬಣ್ಣವನ್ನು ಮರಯಬಾರದೆಂದು ನಮ್ಮ ವಿನಂತಿ.

ಪಂಡಿತ ನೆಹರುಗಳಿಗೆ ಸುಸ್ವಾಗತ

ನವಯುಗದ ಇನ್ನೊಂದು ಸಂಚಿಕೆಯು ಹೊರಬೀಳುವಾಗ ರಾಷ್ಟ್ರಪತಿ ಪಂಡಿತ ಜವಾಹಿರಲಾಲರು ದಕ್ಷಿಣ ಕನ್ನಡದಲ್ಲಿರುವರು ಇಲ್ಲಿಯ ಅವರ ಕಾರ್ಯಕ್ರಮವನ್ನು ಇನ್ನೊಂದೆಡೆಯಲ್ಲಿ ಕೊಡಲಾಗಿದೆ ಜಿಲ್ಲೆಯಲ್ಲಿ ಅವರಿಗೆ ರಾಜಯೋಗ್ಯ ಸ್ವಾಗತವು ದೊರಕುವದೆಂದು ನಂಬುತ್ತೇವೆ. ಪಂಡಿತ ನೆಹರುಗಳ ಧ್ಯೇಯವೇನೆಂಬುದನ್ನು ಎಲ್ಲರೂ ಬಲ್ಲರು ಒಂದೇ ಮಾತಿನಲ್ಲಿ ಹೇಳುವದಾದರ ಅವರಿಗೀಗ ರಾಷ್ಟ್ರಸಭೆಯನ್ನು ಉಜ್ವಲ ಭವಿಷ್ಯದ ಕಡೆಗೆ ಸಾಗಿಸುವ ಕೆಲಸ ಬೇಕಾಗಿದೆ ದಕ್ಷಿಣ ಕನ್ನಡಿಗರು ಪಂಡಿತರನ್ನು ಕಾಣುವ, ಅವರ ಮಾತನ್ನು ಕೇಳುವ ಆತುರವನ್ನಷ್ಟೇ ತೋರಿಸಿದರೆ ಸಾಲದು ಅಖಿಲ ಭಾರತ ಮಹಾಸಭೆಯ ಅಧ್ಯಕ್ಷರಾಗಿ ಅವರು ನಮ್ಮನ್ನು ಕಾಣಲು ಬರುವದರಲ್ಲಿಯೂ ಒಂದು ಉದ್ದೇಶವಿದೆ, ನಾವವರನ್ನು ಕಾಣಲು ಹೋಗುವಾಗಲೂ ಆ ಉದ್ದೇಶವನ್ನು ಕಟ್ಟಿಕೊಂಡೇ ಹೋಗಬೇಕು ಪಂಡಿತರ ಆಗಮನದಿಂದ ಈ ಸಂಬಂಧವು ದೃಢವಾಗುವುದೆಂದು ಹಾರೈಸುತ್ತೇವೆ, ರಾಷ್ಟ್ರಪತಿಗೆ ಸುಸ್ವಾಗತವನ್ನು ಬಯಸುತ್ತೇವೆ

ವಿದೇಶ

ಸ್ಪೈನಿನ ಅಂತಃಕಲಹ

ಒಂದೊಮ್ಮೆ ಸರಕಾರವು ಮುಂದುವರಿಯಿತೆಂದೂ ಮತ್ತೊಮ್ಮೆ ದಂಗೆಗಾರರ ಕೈಬಲವಾಗುತ್ತಿದೆಯೆಂದೂ ಅನಿಶ್ಚಿತ ಪರಿಣಾಮದ ಎಷ್ಟೋ ಸುದ್ದಿಗಳು ತಿಂಗಳುಗಟ್ಟಲೆಯಿಂದ ಬರುತ್ತಿವೆ ಒಂದು ದಿನ ಅವರಿಗೆ ಜಯವಾದರೆ ಮತ್ತೊಂದು ದಿನ ಇವರಿಗೆ. ಒಟ್ಟಾರೆ ಹೇಳುವುದಾದರೆ ದಂಗೆಗಾರರ ಕೈಸೋತ ಚಿನ್ಹೆಗಳು ಕಾಣುತ್ತವೆ ಜರ್ಮನಿ ಮತ್ತು ಇಟೆಲಿಗಳಿಂದ ಇನ್ನೂ ಹೆಚ್ಚಿನ ಸೈನ್ಯ ಸಹಾಯಬಾರದೆ ದಂಗೆಗಾರರು ಗೆಲ್ಲುವ ಹಾಗಿಲ್ಲ ಆದರೆ ಗೆಲ್ಲದಿದ್ದರೂ ಅವರ ಮಾಡುತ್ತಿರುವ ಅಧರ್ಮ ಯುದ್ಧದಿಂದ ಸೈನಿಕರಲ್ಲದ ಸಾಮಾನ್ಯ ಜನರಿಗೂ ಒಂದೇ ಕ್ಷಣವಾದರೂ ಪ್ರಾಣಾಪಾಯದ ಭಯವಿಲ್ಲದೆ ನೆಮ್ಮದಿಯಿಂದಿರಲು ಸಾಧ್ಯವಿಲ್ಲ ತಿಂಗಳುಗಟ್ಟಲೆಯಿಂದ ರಾತ್ರಿಹಗಲೆನ್ನದೆ ಕ್ಷಣಕ್ಷಣವೂ ಪ್ರಾಣಾಪಾಯದ ಭಯದಿಂದ ಜೀವಿಸುತ್ತಿರುವ ಶಾಂತಪ್ರಿಯ ಹೆಂಗಸರು ಮಕ್ಕಳ ಅಲ್ಲಿಯ ಜೀವನದ ಕಲ್ಪನೆಯು ದೂರದಲ್ಲಿ ಸುದ್ದಿ ಕೇಳುತ್ತಿರುವವರಿಗೆ ಗ್ರಹಿಸಲಸಾಧ್ಯ 'ಹೊಟ್ಟೆಗಿಷ್ಟು ಹಿಟ್ಟು! ಮನಸ್ಸಿಗಿಷ್ಟು ನೆಮ್ಮದಿ! ಓ ದೇವರೇ ದಯಪಾಲಿಸು!' ಎಂದು ಹೆಂಗಸರು ಮಕ್ಕಳು ಬೊಬ್ಬಿಯಿಡುತ್ತಾರೆ ವೈರಿಯು ಮುತ್ತುತ್ತಿರುವ ಪ್ರದೇಶವನ್ನು ಬಿಟ್ಟಾದರೂ ಓಡೋಣವೆಂದರೆ ಯಾವುದನ್ನ ಬಿಟ್ಟು ಹೋಗುವುದು? ಏನನ್ನು ಹಿಡಿದುಕೊಂಡು ಹೋಗವುದು? ಎಲ್ಲಿಗೆ ಹೋಗುವುದು? ಹೇಗಿರುವುದು? ಜನಸಾಮಾನ್ಯರಿಗೆ ಸಾಧ್ಯವಿಲ್ಲದ ಮಾತು ಒಂದಿಷ್ಟು ಸೌದೆಯೂ ದೊರೆಯದೆ ಚಳಿ ಬಾಳುವ ಗೃಹಕೃತ್ಯದ ಸಾಮಾನುಗಳನ್ನೂ ಒಡೆದು ಬೆಂಕಿಗೆ ಒಟ್ಟುತ್ತಾರೆಂದ ಮೇಲೆ ಅವರ ಬಾಳು ಎಷ್ಟು ಕಷ್ಟವಿರಬೇಕು

ವಿಶ್ವಶಾಂತಿ ಪ್ರಯತ್ನಕ್ಕೆ ನೋಬೆಲ್ ಪ್ರಾಯ್ಜ್

೧೯೩೭ನೆಯ ಇಸವಿಯ ಲಕ್ಷದ ಈ ಬಹುಮಾನಕ್ಕೆ ಪ್ರೆಸಿಡೆಂಟ್ ರೂಸ್‌ವೆಲ್ಟರು ಕಳೆದ ಡಿಸೆಂಬರ ಬೋನಸ್ ಯಾರಿಸ್ಸಿನಲ್ಲಿ ನಡೆದ ವಿಶ್ವಶಾಂತಿ ಸಮ್ಮೇಳನದಲ್ಲಿ ನಡೆಯಿಸಿದ ಕಾರ್ಯಕಲಾಪಗಳ ಮಹತ್ವದಿಂದ ಅರ್ಹರೆಂದು ಕ್ಯೂಬಾದ ಕೆಬಿನೆಟ್ ಶಿಫಾರಸು ಮಾಡಿದೆ

ಹಿಂದೂದೇಶ

ವೋಟಿನ ಪೆಟ್ಟಿಗೆಗೆಲ್ಲಿ ಬಣ್ಣವಿದೆ

ಮೇಲಿನ ಬದಿಗೆ ಬಣ್ಣದ ಕಾಗದ ಹಚ್ಚುತ್ತಾರೆ ಆದರೆ ಎಡುರೂ ಬದಿಗೂ ಬಣ್ಣದ ಕಾಗದ ಹಚ್ಚಬೇಕೆಂದೂ ಒಣ್ಣದ ರಂಗು ಬಳಿದರೆ ಮತ್ತೂ ಒಳ್ಳೆಯದೆಂದೂ ಮದ್ರಾಸಿನ ಇಲೆಕ್ಷನ್ ಕಮಿಶನರಿಗೆ ಅಲ್ಲಿಯ ಕಾಂಗ್ರೆಸ್ ಮುಂದಾಳುಗಳ ಸೂಚನೆ ಇತ್ತು ಆದರೆ ಅದು ಅಂಗೀಕೃತವಾಗಲಿಲ್ಲ ವೋಟಿನ ಪೆಟ್ಟಿಗೆಯು ಸುಮಾರು ಎರಡಡಿ ಎತ್ತರದ ಸ್ಟೂಲಿನ ಮೇಲೆ ಇಡಲಾಗುವುದರಿಂದ ಅದರ ಮೇಲಿನ ಬದಿಯೇ ವೋಟರನ ಕಣ್ಣಿಗೆ ವಿಶೇಷವಾಗಿ ಕಾಣುವ ಭಾಗವೆಂದೂ ಆ ಮೇಲಿನ ಬದಿಗೆ ಬಣ್ಣದ ಕಾಗದ ಹಚ್ಚಿ ಪ್ರಯೋಗಿಸಿದುದರಲ್ಲಿ ವೋಟರರಿಗೆ ಬಣ್ಣದ ವಿಷಯವಾಗಿ ಏನೊಂದೂ ಗಲಿಬಿಲಿಯಾಗಲಿಲ್ಲವೆಂಬುದು ಇತರ ಕಡೆಗಳಿಂದ ತಿಳಿದುಬಂದಿದೆಯೆಂದೂ ಇಲೆಕ್ಷನ್ ಕಮಿಶನರ ಹೇಳಿಕೆ

ವಿಶೇಷ ವಾರ್ತೆ

ಪಂಡಿತ ಜವಾಹಿರಲಾಲರು ಕಳೆದ ತಾ ೨೦ರಲ್ಲಿ ಝಾನ್ಸಿಯಲ್ಲಿ ಸಂಚರಿಸುತ್ತಿದ್ದಾಗ ಅವರ ಕಾರು ಒತ್ತಿನ ಗಾಡಿಯೊಂದಕ್ಕೆ ಬಡಿದು ಅನಾಹುತವಾಗುವದರಲ್ಲಿತ್ತು ಡ್ರೈವರನು ಅದನ್ನು ಜಾಗ್ಮೆಯಿಂದ ತಪ್ಪಿಸಿದನು ಕಾರಿನ ಮಡ್ಗಾರ್ಡಿಗೆ ಪೆಟ್ಟಾಗಿದೆ

ಜರ್ಮನಿಯ 'ರಿಚ್‌ಸ್ಟ್ಯಾಗ್' ಸಭೆಯಲ್ಲಿ ಹಿಟ್ಲರರು "ತಾನು ವಿಶೇಷವಾಗಿ ಶಾಂತಿಯನ್ನಾಶಿಸುತ್ತೇನೆಂದೂ, ತನ್ನ ಜನಾಂಗಕ್ಕೆ ಉದ್ಯೋಗವನ್ನೊದಗಿಸುವದೇ ತನ್ನ ಧ್ಯೇಯವೆಂದೂ, ಜರ್ಮನಿಗೂ ಫ್ರಾನ್ಸಿಗೂ ಮನಸ್ತಾಪವಿಲ್ಲವೆಂದೂ ಸ್ಪೈಯಿನಿನ ಕುರಿತು ಆರ್ಥಿಕ ಸಂಬಂಧದ ಹೊರತು ಬೇರುವ ಅಭಿಲಾಷೆಯೂ ಇಲ್ಲವೆಂದೂ ಭಾಷಣವಿತ್ತರು.

ರಷ್ಯದ ಮಾಸ್ಕೋ ಮೊಕದ್ದಮೆಯಲ್ಲಿ ಫಾಶಿ ಶಿಕ್ಷೆಗೆ ಗುರಿಯಾಗಿದ್ದ ೧೩ ಜನರ ಅಪೀಲು ನಿರಾಕರಿಸಲ್ಪಟ್ಟು ಅವರೆಲ್ಲಾ ಗಲ್ಲಿಗೇರಿಸಲ್ಪಟ್ಟಿರುವರು

ಕಳೆದ ತಾ ೨೧ರ ವರೆಗೆ ಬಂಗಾಳದಲ್ಲಿ ೪೯ ಸ್ಥಾನಗಳನ್ನು ಕೊಂಗ್ರೆಸಿನವರು ಪಡೆದಿರುವರು ಬಿಹಾರಿನಲ್ಲಿ ಕೊಂಗ್ರೆಸು ಉಮೇದ್ವಾರೀ ಶ್ರೀ ಮಹಲಾಲರಿಗೆ ೮೪೭ ವೋಟುಗಳು ದೊರೆತಿರುವಾಗ ಅವರ ಇದಿರಾಳಿಗೆ ಕೇವಲ ೧೯೭ ವೋಟುಗಳು ಬಿದ್ದಿರುವವು ಇನ್ನೊಬ್ಬ ಕಾಂಗ್ರೆಸ್ ಹುರಿಯಾಳು ಸಿಂಗರಿಗೆ ೮೫೨೦ ವೋಟುಗಳೂ ಇದಿರಾಳಿಗೆ ೧೮೪ ಮತಗಳು ದೊರೆತಿವೆ

ಸ್ವದೇಶ

ಚುನಾವಣೆಯ ಸಂಬಂಧವಾದ ಚಲ ಚಿತ್ರ (ಸಿನೆಮಾ)ವನ್ನು ಉಪಯೋಗಿಸ ಕೂಡದು.

ಹಾಗೆಂದು ಸರಕಾರವು ಮದ್ರಾಸಿನ ಸಿನೆಮಾ ಬೋರ್ಡಿನ ಅಧ್ಯಕ್ಷರಿಗೆ ಹುಕುಮನ್ನು ಕೊಟ್ಟಿದೆ. ಚಲ ಚಿತ್ರ ಪ್ರದರ್ಶನವು ಸಾರ್ವಜನಿಕ ಮನೋರಂಜಕವಾಗಿದ್ದು ವಿವಿಧ ಪಕ್ಷದ ಜನರೂ ಕೂಡುವಂತಹ ಸಂದರ್ಭವಾಗಿರುವುದರಿಂದ ಚುನಾವಣೆಯ ಯಾವುದಾದರೂ ಒಂದು ಪಕ್ಷದ ಪರವಾದ ಚಲಚಿತ್ರ ಪ್ರದರ್ಶನವನ್ನು ಮಾಡಿದರೆ ಅಂತಹ ಗೃಹಗಳಲ್ಲಿ ಗಲಭೆಯೆದ್ದು ಹೊಯ್ಕೈಯಾಗುವ ಸಂಭವವಿರುವುದರಿಂದಲೂ ಈ ಕಾರಣದಿಂದಲೇ ಬ್ರಿಟನಿನಲ್ಲಾಗಲೀ ಪ್ರಪಂಚದ ಬೇರೆ ಯಾವ ದೇಶದಲ್ಲಾಗಲೀ ಚಲಚಿತ್ರ ಗೃಹಗಳಲ್ಲಿ ಚುನಾವಣೆಗೆ ಸಂಬಂಧಪಟ್ಟ ಪಕ್ಷ ಪರವಾದ ಚಿತ್ರ ಪ್ರದರ್ಶನಗಳನ್ನು ಮಾಡಲೆಡೆಗೊಡುವುದಿಲ್ಲವಾದುದರಿಂದಲೂ ಇಲ್ಲಿಯೂ ಅಂತಹ ಅನುಮತಿಯನ್ನು ಕೊಡಲಾಗುವುದಿಲ್ಲವೆಂದು ಸರಕಾರದ ಹುಕುಮಿನಲ್ಲಿ ಕಾರಣವನ್ನು ಕೊಡಲಾಗಿದೆ

ರಾಜಂಪೇಟೆ ತಾಲೂಕಿನಲ್ಲಿ ಏಳು ದೇವಸ್ಥಾನಗಳ ವಿಗ್ರಹಗಳು ಕೀಳಲ್ಪಟ್ಟಿವೆ. ಚಿನ್ನಾಭರಣಗಳು ಕಳವಾಗಿವೆ

ಈ ತಾಲೂಕಿನ ಮುನ್ನೂರ್ ಎಂಬಲ್ಲಿಯ ಶ್ರೀರಾಮಲಿಂಗೇಶ್ವರ ಸ್ವಾಮಿ ದೇವಸ್ಥಾನ, ಪುಲ್ಲಪೇಟೆಯ ಆಂಜನೇಯ ಸ್ವಾಮಿ ದೇವಸ್ಥಾನ, ಮದನಗೋಪಾಲಪುರ ಅಗ್ರಹಾರದ ಭವಾನಿ ನೀಲಕಂಠಸ್ವಾಮಿ ದೇವಸ್ಥಾನ, ಸೀಮಾರ್ಣಂಪುಲದ ಆಂಜನೇಯ ದೇವಸ್ಥಾನ, ಅತ್ತಿರಾಲದ ಗಧಾಪರ ದೇವಸ್ಥಾನ, ಪಂಡಲೂರಿನ ದೇವಾಲಯ ಮತ್ತು ರಂಗತ್ತಾಳದ ಶಕ್ತಿ ದೇವಾಲಯ ಇವುಗಳೆಲ್ಲದರ ವಿಗ್ರಹಗಳನ್ನು ಕಿತ್ತು ಹಾಕಲಾಗಿದೆ ಸುಮಾರು ೩೦೦೦ ರೂಪಾಯಿ ಬೆಲೆಯ ಚಿನ್ನಾಭರಣಗಳು ಕಳವಾಗಿದೆ ಪೋಲೀಸರು ಅಪರಾಧಿಗಳ ಪತ್ತೆ ಮಾಡಹತ್ತಿದ್ದಾರೆ.

ಹಳ್ಳಿಯ ವೈದ್ಯನೊಬ್ಬನಿಗೆ ನಾಲ್ಕು ವರುಷ ಜೈಲು

ಗುಂಟೂರಿನಲ್ಲಿ ಲಕ್ಷ್ಮಯ್ಯನೆಂಬ ಹಳ್ಳಿಯ ವೈದ್ಯ ಅವನಿಗೂ ಹಳ್ಳಿಯವನೊಬ್ಬನಿಗೂ ಹಗೆತನವಿತ್ತು. ವೈದ್ಯನು ಲಚ್ಚಿ ಎಂಬವಳ ಮೂಲಕ ಆ ಹಳ್ಳಿಯವನ ಐದು ಮಕ್ಕಳಿಗೆ ದತ್ತೂರದಪುಡಿ ಮಿಶ್ರಮಾಡಿದ ಕಜ್ಜಾಯ ಕೊಡಿಸಿದನು ಮಕ್ಕಳ ಆಯುಷ್ಯ ಬಲವಿತ್ತು ಆಸ್ಪತ್ರೆಗೊಯ್ಯಲ್ಪಟ್ಟು ಅಲ್ಲಿಯ ಚಿಕಿತ್ಸೆಯಿಂದ ಬದುಕಿಕೊಂಡರು ಕ್ರಿಮಿನಲ್ ಮೊಕದ್ದಮೆ ನಡೆಯಿತು ಗುಂಟೂರಿನ ಸೆಷನ್ ಜಡ್ಜರು ವೈದ್ಯನಿಗೆ ನಾಲ್ಕು ವರ್ಷ ಎಳೆದರು ಐದು ಮಕ್ಕಳ ಲೆಕ್ಕಕ್ಕೆ ಐದಾಗಬೇಕಿತ್ತಲ್ಲವೆ?

ಪೋಲಿಂಗ್ ಸ್ಟೇಶನಿನಲ್ಲಿ ಗಲಾಟೆ ಯೆದ್ದು ವೋಟು ತೆಗೆದುಕೊಳ್ಳುವುದನ್ನು ನಿಲ್ಲಿಸಲಾಯಿತು.

ಪಾಟ್ನಾದ ಸಮೀಪದ ಸುಸಾರಾಮ್ ಎಂಬಲ್ಲಿ ಪುಂಡುಗಾರರ ಗಲಾಟೆಯಿಂದ ತಾ 27ನೆಯ ಪೋಲಿಂಗ್ ಕೆಲಸವು ಅರ್ಧದಲ್ಲೇ ನಿಲ್ಲಿಸಲಾಯಿತು ಏಳು ಮಂದಿ ಕಾಂಗ್ರೆಸ್‌ವಾಲರೂ ಇತರರೂ ಎಂದು ಸುಮಾರು ಒಂದು ನೂರು ಮಂದಿಗೆ ಪೆಟ್ಟಾಗಿದೆ ಕಾಂಗ್ರೆಸ್ ಪಕ್ಷದ ಮುಕುಧಾರೀಸಿಂಗ್ ಎಂಬವರಿಗೆ ವಿಶೇಷ ಪೆಟ್ಟಾಗಿದ್ದು ಆಸ್ಪತ್ರೆಗೆ ಒಯ್ಯಲ್ಪಟ್ಟಿದ್ದಾರೆ ನಿಲ್ಲಿಸಲ್ಪಟ್ಟ ಪೋಲಿಂಗ್ ಮರುದಿನ ಮುಂದುವರಿಸಲಾಯಿತು

ಮಕರ ಸಂಕ್ರಮಣದ ವಿಶೇಷ ಒಗಟಿನ ಉತ್ತರ

ಇದೇ ಸಂಚಿಕೆಯಲ್ಲಿ ಪ್ರಕಟವಾಗಬೇಕಿತ್ತು ಸ್ಥಳಾಭಾವದಿಂದ ಪ್ರಕಟಿಸಲಾಗಲಿಲ್ಲ ತಾ 18-2-37ಕ್ಕೆ ಪ್ರಕಟಿಸುವೆವು ಉತ್ತರವನ್ನು ತಾ 15-2-37ರೊಳಗೆ ನಮ್ಮ ಕೈಸೇರುವಂತೆ ಕಳುಹಿಸಬಹುದು

ಸಂ ನ

ದಿ ಗಾರ್ಡಿಯನ್ ಒಫ್ ಇಂಡಿಯಾ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್,

ಮುಖ್ಯ ಆಫೀಸು—ಪೋಸ್ಟ್ ಬೊಕ್ಸ್ ೮೯—ಮದ್ರಾಸು.

ತೀರಾ ದೇಶೀಯ ಭಂಡವಾಳ=ತೀರಾ ದೇಶೀಯ ಆಡಳಿತೆ

ತೀರಾ ಭದ್ರವಾದ ಕಾರ್ಯಕ್ರಮ.

ತೀರಾ ಕಡಿಮೆ ವಿಮೆಯ ದರಗಳು — ಉದಾರವಾದ ಶರ್ತಗಳು

ನ್ಯಾಯನೀತಿ ಸಮ್ಮತವಾದ ವ್ಯವಹಾರ.

ತೀರಾ ಹೊಸ ಹೊಸ ನಮೂನೆಯ ಏರ್ಪಾಡುಗಳು,

ಎಲ್ಲಾ ಬಗೆಯ ವಿವಿಧ ಸ್ಥಿತಿಯ ಜನರಿಗೆ ಸರ್ವಾನುಕೂಲ.

ಅತ್ಯಾಕರ್ಷಕವಾದ ಶರ್ತಗಳು—ಖಂಡಿತವಾದ ಭದ್ರತೆ.

ಜೀವನ ಅನಿಶ್ಚಿತ; ಸಂಪಾದನೆ ಅನಿಶ್ಚಿತ.

ಇವುಗಳ ಬಾಧಕಕ್ಕೆ ಜೀವವಿಮೆಯೇ ಉತ್ತಮ ಪರಿಹಾರ.

ಒಮ್ಮೆ ನಮ್ಮಲ್ಲಿ ವಿಮೆ ಕೊಂಡವರು

ನಿ ರಾ ಶ ರಾ ಗ ಲಾ ರ ರು.

ಸೂಚನೆ—ನಮ್ಮ ಎಲ್ಲಾ ಪಾಲಿಸಿಹೋಲ್ಡರರೂ, ಏಜಂಟರೂ ಇನ್ನು ಮುಂದೆ ತಮ್ಮ ವ್ಯವಹಾರವನ್ನು **ದಿ ಬ್ರಾಂಚ್ ಸೆಕ್ರೆಟರಿ, ದಿ ಗಾರ್ಡಿಯನ್ ಒಫ್ ಇಂಡಿಯಾ ಇನ್ಶೂರೆನ್ಸ್ ಕೋ, ಲಿಮಿಟೆಡ್,** ಮಂಗಳೂರು ಶಾಖೆ ಇವರೊಡನೆ ಬೆಳೆಸಬೇಕಾಗಿ ವಿನಂತಿ.

ವಿಶೇಷ ಮಾಹಿತಿಗಳಿಗೆ ಇವರಿಗೆ ಬರೆಯಿರಿ

E. A. PAIS, B. Sc, *Branch Secretary*,

The Guardian of India Insurance Co., Limited.

MANGALORE BRANCH.

ಪಂಡಿತ ಜವಾಹಿರಲಾಲರ

ದಕ್ಷಿಣ ಕನ್ನಡದ ಕಾರ್ಯಕ್ರಮ

ರಾಷ್ಟ್ರಪತಿ ಪಂಡಿತ ನೆಹರುಗಳ ಅಮೂಲ್ಯ ಸಮಯದಲ್ಲಿ ದಕ್ಷಿಣ ಕನ್ನಡಕ್ಕೆ ಕೇವಲ ಇಪ್ಪತ್ತು ಘಂಟೆಗಳು ಮಾತ್ರ ದೊರೆತಿವೆ. ಫೆಬ್ರವರಿ ೧೦ನೇ ಬುಧವಾರ ಸಾಯಂಕಾಲ ಮಂಗಳೂರಿಗೆ ತಲಪಿದವರು ಇಡೀ ಜಿಲ್ಲೆಯ ಕಾರ್ಯಕ್ರಮವನ್ನು ಮುಗಿಸಿಕೊಂಡು ತಾ. ೧೧ನೇ ಅಪರಾಹ್ನ ಘಂಟೆ ೧ಕ್ಕೆ ಬೈಂದೂರಿನಿಂದ ಹೊರಟು ಹೋಗುವರು. ಅವರು ಬೇರೆ ಬೇರೆ ಊರುಗಳನ್ನು ಸಂದರ್ಶಿಸಲಿರುವ ಸಮಯವನ್ನು ಕೆಳಗಡೆ ಕೊಡಲಾಗಿದೆ.

ಫೆಬ್ರವರಿ ತಾ. ೧೦ನೇ ಬುಧವಾರ ಬೆಳಿಗ್ಗೆ ಬೊಂಬಾಯಿಯಿಂದ ಕಣ್ಣಾನೂರಿಗೆ ವಿಮಾನದಲ್ಲಿ ಬಂದಿಳಿಯುವರು. ಅಲ್ಲಿಂದ ಮಲಬಾರ್ ಎಕ್ಸ್‌ಪ್ರೆಸ್ಸನ್ನು ಹತ್ತಿ ಅದೇ ದಿನ ಸಾಯಂಕಾಲ ಮಂಗಳೂರನ್ನು ತಲಪುವರು. ಒಡನೆಯೇ ಇಲ್ಲಿಯ ಕಾರ್ಯಕ್ರಮವಾರಂಭವಾಗುವದು.

ಮಂಗಳೂರು—ಮೈದಾನಿನಲ್ಲಿ ಸಭೆ ಮತ್ತು ಮಾನ ಪತ್ರವನ್ನು ಅರ್ಪಿಸುವುದು ಸಾಯಂಕಾಲ ೫-೧೫ ರಿಂದ ೬-೩೦ವರೆಗೆ.

ಕಥೋಲಿಕರಿಂದ ಉಪಹಾರ ,, ೬-೩೦ರಿಂದ ೬-೪೫ವರೆಗೆ.

ಸಾಯಂಕಾಲ ೭ಕ್ಕೆ ಮಂಗಳೂರನ್ನು ಬಿಡುವರು.

ಪಾಣೆಮಂಗಳೂರು	ತಲಪುವುದು	ಸಾಯಂಕಾಲ	೭-೪೦ ಘಂಟೆ
	ಹೊರಡುವುದು	,,	೭-೪೫ ,,
ಮಣಿ	ತಲಪುವುದು	,,	೭-೫೫ ,,
	ಹೊರಡುವುದು	,,	೭-೫೭ ,,
ನೇರಲಕಟ್ಟೆ	ತಲಪುವುದು	,,	೮ ,,
	ಹೊರಡುವುದು	,,	೮-೨ ,,
ಕಬಕ	ತಲಪುವುದು	,,	೮-೧೦ ,,
	ಹೊರಡುವುದು	,,	೮-೧೫ ,,
ಪುತ್ತೂರು	ತಲಪುವುದು	,,	೮-೩೦ ,,
	ಹೊರಡುವುದು	,,	೮-೫೫ ,,
ಬಂಟ್ವಾಳ	ತಲಪುವುದು	ರಾತ್ರಿ	೯-೩೫ ,,
ಊಟ ಮುಗಿಸಿಕೊಂಡು	ಹೊರಡುವುದು	,,	೧೦ ,,
ಮೂಡಬಿದ್ರೆ	ತಲಪುವುದು	,,	೧೦ ೪೦ ,,

ಸಭೆಯ ನಂತರ ರಾತ್ರೆ ವಿಶ್ರಾಂತಿಯನ್ನು ಪಡೆಯುವರು

ಫೆಬ್ರವರಿ ತಾ. ೧೧ನೇ ಬೆಳಿಗ್ಗೆ ೬ ಘಂಟೆಗೆ ಮೂಡಬಿದ್ರೆಯಿಂದ ಹೊರಡುವರು.

ಕಾರ್ಕಳ	ತಲಪುವುದು	ಬೆಳಿಗ್ಗೆ	೬-೨೦ ಗಂಟೆ
	ಹೊರಡುವುದು	,,	೬-೩೦ ,,
ಕಿನ್ನಿಗೋಳಿಮಾರ್ಗವಾಗಿ ಮೂಲ್ಕಿ	ತಲಪುವುದು	,,	೭ ,,
	ಹೊರಡುವುದು	,,	೮-೧೦ ,,

ಕಟ್ಪಾಡಿ (ಪಡುಬಿದ್ರೆ ಮತ್ತು ಕಾಪಿನಲ್ಲಿ ಎರಡೆರಡು ನಿಮಿಷಗಳು ನಿಂತು) ತಲಪುವದು ಬೆಳಿಗ್ಗೆ ೮-೩೦ ಗಂಟೆಗೆ

ಉಡುಪಿ (ಉದ್ಯಾವರದಲ್ಲಿ ಎರಡು ನಿಮಿಷ ನಿಂತು)	ತಲಪುವುದು	,,	೯-೧೦ ,,
	ಹೊರಡುವುದು	,,	೯-೩೦ ,,
ಕಲ್ಯಾಣಪುರ-ಬ್ರಹ್ಮಾವರ	ತಲಪುವುದು	,,	೧೦ ,,
ಕುಂದಾಪುರ (ಕೋಟ, ಕೋಟೇಶ್ವರ ಮೂಲಕವಾಗಿ)	ತಲಪುವುದು	,,	೧೧-೧೦ ,,
	ಹೊರಡುವುದು	,,	೧೨ ,,

ಆಹಾರ ಮತ್ತು ವಿಶ್ರಾಂತಿಯನ್ನು ಪಡೆದು

ಗಂಗೊಳ್ಳಿ	ತಲಪುವುದು	ಮಧ್ಯಾಹ್ನ	೧೨-೪೦ ,,
ಬೈಂದೂರು	,,	,,	೧ ,,

ದಕ್ಷಿಣ ಕನ್ನಡದಲ್ಲಿ ಕೊಂಗ್ರೆಸಿನವರ ಸರ್ವತೋಮುಖ ಪ್ರಚಾರಕಾರ್ಯ

—: ಅತ್ಯಂತ ಆಶಾದಾಯಕ ಪರಿಸ್ಥಿತಿ :—

ಎಲ್ಲೆಲ್ಲಿಯೂ ಕೊಂಗ್ರೆಸಿಗೆ ಆಶ್ವಾಸನೆ! ಸ್ವಯಂಪ್ರೇರಣೆಯಿಂದ ಕೊಂಗ್ರೆಸಿನ ಸಮರ್ಥನೆ!

ದ. ಕ. ಪಾರ್ಲಿಮೆಂಟರೀ ಬೋರ್ಡಿನವರ ಪ್ರಚಾರಕಾರ್ಯವು ರಭಸದಿಂದ ನಡೆದಿರುವುದು. ಮಂಗಳೂರು, ಉಡುಪಿ, ಕುಂದಾಪುರ, ಕಾರ್ಕಳ, ಪುತ್ತೂರು, ಕಾಸರಗೋಡು ಮೊದಲಾದ ಮುಖ್ಯ ಪಟ್ಟಣಗಳಲ್ಲಿ ಮಾತ್ರವಲ್ಲ, ಹಳ್ಳಿಹಳ್ಳಿಗಳಲ್ಲಿ ಕೂಡಾ ಕರಪತ್ರಗಳನ್ನು ಸ್ವಯಂಸೇವಕರು ಹಂಚುತ್ತಿರುವರು. ಎಲ್ಲೆಲ್ಲಿಯೂ 'ಕೊಂಗ್ರೆಸಿಗೆ ವೋಟು ಕೊಡಿರಿ' 'ಹಿಂದೀ ಮಾತೆಯನ್ನು ಸ್ವತಂತ್ರಗೊಳಿಸಿರಿ' ಎಂಬ ಜಯಘೋಷವು ಕೇಳಿಬರುತ್ತಿದೆ. ಸಭೆ, ಭಾಷಣಗಳು ಎಲ್ಲಾ ಕಡೆಗಳಲ್ಲಿಯೂ ಜರಗುತ್ತಿವೆ. ಜನರಲ್ಲಿ ಕೊಂಗ್ರೆಸನ್ನು ಸಮರ್ಥಿಸುವ ಸ್ವಯಂ ಪ್ರೇರಣೆಯುಂಟಾಗಿರುವದು. ತಾ. 27ರಲ್ಲಿ ಬ್ರಹ್ಮಾವರ ಮತ್ತು ಪೇತ್ರಿಯಲ್ಲಿಯೂ, ತಾ. 28ರಲ್ಲಿ ಹಿರಿಯಡ್ಕ ಮತ್ತು ಪೆರ್ಡೂರುಗಳಲ್ಲಿಯೂ ಸಾರ್ವಜನಿಕ ಸಭೆಗಳು ಜರಗಿ ಉಜ್ವಲ ಭಾಷಣಗಳಾಗಿವೆ. ಜಸ್ಟಿಸ್ ಪಾರ್ಟಿಯವರ ಅನುಕೂಲ ಕ್ಷೇತ್ರವೆಂದಿದ್ದ ಪೆರ್ಡೂರಿನಲ್ಲಿ ಸಾವಿರಕ್ಕೂ ಮಿಕ್ಕಿದ ಹಳ್ಳಿಗರು ನೆರೆದು ಬಂದಿದ್ದರಲ್ಲದೆ ಜನರಲ್ಲಿ ಕೊಂಗ್ರೆಸ್ ಭಕ್ತಿಯು ಒಡೆದು ತೋರುತ್ತಿತ್ತು. ತಾ. 29ರಲ್ಲಿ ಕಾಪು ಮತ್ತು ಪಡುಬಿದ್ರೆ, 30ರಲ್ಲಿ ಶಿರ್ವ ಮೂಡು, ಉದಿಯಾವರ 31ರಲ್ಲಿ ಕಲ್ಯಾಣಪುರ, ಮುಲ್ಕಿ, ತಾ. 1ರಲ್ಲಿ ಬೆಳ್ಮಣ್ಣು, ಬೈಲೂರು, 2ರಲ್ಲಿ ಹೆಬ್ರಿ, ಕೊಕ್ಕರಣೆ ಮೊದಲಾದ ಸ್ಥಳಗಳಲ್ಲಿ ಸಭೆಗಳು ಜರಗಿ ಸಾವಿರಾರು ಹಳ್ಳಿಗರಿಗೆ ಕೊಂಗ್ರೆಸಿನ ಧ್ಯೇಯ, ಕಾರ್ಯಕ್ರಮಗಳನ್ನು ವಿವರಿಸಿ ತಿಳಿಸಲಾಯಿತು. ಶ್ರೀಗಳಾದ ಎ. ಬಿ. ಶೆಟ್ಟಿ, ವಕೀಲ್ ಸಿ. ವಿ. ಉಪಾಧ್ಯಾಯ, ಎನ್. ಎಸ್. ಕಿಲ್ಲೆ, ರಾಮರಾಯ ಮಲ್ಯ ಮೊದಲಾದವರಲ್ಲದೆ ಇತರ ಅನೇಕ ಸ್ಥಳೀಕ ಮಹನೀಯರ ಭಾಷಣಗಳಾಗಿದ್ದುವು. ಕಟಪಾಡಿ, ಕಲ್ಯಾಣಪುರ ಮೊದಲಾದ ಹಳ್ಳಿಗಳಲ್ಲಿ ಕೂಡಾ ಸ್ಥಳೀಕ ಪಾರ್ಲಿಮೆಂಟರೀ ಬೋರ್ಡುಗಳು ಮತ್ತು ಸಂಘಗಳು ಸ್ಥಾಪಿಸಲ್ಪಟ್ಟು ಹುರುಪಿನಿಂದ ಕೆಲಸಕ್ಕಿಳಿದಿರುವವು. ಮೂಡಬಿದ್ರೆಯಲ್ಲಿ ದಿ. ಬ. ಹೆಗ್ಡೆಯವರು ಸಭೆಯೊಂದನ್ನು ಕರೆದು ಭಾಷಣವಿತ್ತಿದ್ದರೆಂದು ತಿಳಿದುಬರುತ್ತದೆ. ಪುತ್ತೂರಿನಲ್ಲಿ ಇದೇ ತಾ. 7–8ಕ್ಕೆ ಬೇರೆ ಬೇರೆ ಕಡೆಗಳಲ್ಲಿ ಕೊಂಗ್ರೆಸ್ ಸಭೆಗಳು ಜರಗಲಿಕ್ಕಿರುವವು. ಕಟಪಾಡಿಯ ಸಂಘದವರು ಇದೇ 6ನೇ ಶನಿವಾರ ಎಲ್ಲಾ ಉಮೇದುವಾರಿಗಳನ್ನೂ ಆಮಂತ್ರಿಸಿ ಸಭೆಯೊಂದನ್ನು ಕರೆದಿರುವರು. ಅಲ್ಲಿ ಪ್ರತಿಯೊಬ್ಬರಿಗೂ ತಮ್ಮ ಕಾರ್ಯಕ್ರಮಗಳನ್ನು ವಿವರಿಸುವ ಅನುಕೂಲತೆಯಿತ್ತಿರುವರೆಂದು ತಿಳಿದುಬರುತ್ತದೆ. ಮಂಗಳೂರಿನ ಚುನಾವಣಾ ಕಾರ್ಯವು ಬಹು ಚುರುಕಿನಿಂದ ನಡೆದಿದೆ. ಪ್ರೊ. ವಾರ್ಕಿಯವರ ಕಡೆಯ ಸ್ವಯಂಸೇವಕರು ರಾಷ್ಟ್ರಧ್ವಜವನ್ನು ರಾಷ್ಟ್ರೀಯಘೋಷದೊಡನೆ ಕ್ರೈಸ್ತಮತದಾರರು ನೆರೆದುಬರುವ ಇಗರ್ಜಿಗಳೇ ಮೊದಲಾದ ಸ್ಥಳಗಳಿಗೆ ಹೋಗಿ ಉತ್ಸಾಹದಿಂದ ಪ್ರಚಾರಕಾರ್ಯ ಮಾಡುತ್ತಿರುವರು. ಜಿಲ್ಲೆಯಲ್ಲೆಲ್ಲಾ ಜನಜಾಗೃತಿಯು ಕಂಡುಬರುತ್ತಿದೆ.

ಕಟಪಾಡಿ

ಕಳೆದ ತಾ. ೨೬ರಲ್ಲಿ ಸ್ವಾತಂತ್ರ್ಯ ದಿನವಾಚರಿಸಲ್ಪಟ್ಟಿತು. ಸಂಜೆ ಕಟಪಾಡಿಯಿಂದ ಪಾಂಗಾಳದ ವರೆಗೆ ಮೆರವಣಿಗೆಯಿತ್ತು. ಶ್ರೀ ಕೆ. ಸಂಜೀವ ಬಲ್ಲಾಳರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಸೇರಿ ಶ್ರೀಗಳಾದ ಪಿ. ಲಕ್ಷ್ಮೀನಾರಾಯಣ ನಾಯಕ್, ಡಾ. ಕೆ. ಜಿ. ಕಿಣಿ, ಕೊಗ್ಗಯ ಕಾಮತ್, ಕೆ. ದೇಜಪ್ಪ ಶೆಟ್ಟಿ, ಮೊದಲಾದವರು ಸ್ವಾತಂತ್ರ್ಯ ದಿನದ ಕುರಿತು ಭಾಷಣವಿತ್ತರು. ತಾ. ೨೯ರಲ್ಲಿ ತರುಣರ ಸಭೆಯು ಶ್ರೀ ಮಧ್ವನವೇಂದ್ರ ಮಹೌಷಧಾಲಯದಲ್ಲಿ ಸೇರಿ ಎಲ್ಲರೂ ಚುನಾವಣೆಯಲ್ಲಿ ಕೊಂಗ್ರೆಸನ್ನು ಸಮರ್ಥಿಸಲಿಕ್ಕಾಗಿ ಕೂಡಲೇ ಕೆಲಸಕ್ಕಿಳಿಯುವ ನಿರ್ಧಾರವಾಗಿರುವದು. ತಾ. ೩೦ರಲ್ಲಿ ಸಾರ್ವಜನಿಕ ಸಭೆಯೊಂದು ಶ್ರೀ ವೆಂಕಯ್ಯ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ನೆರೆದು ಶ್ರೀಗಳಾದ ಪಿ. ಲಕ್ಷ್ಮೀನಾರಾಯಣ ನಾಯಕ್, ಕುರುಕಾಲು ಗಣಪಯ್ಯ ಶೆಟ್ಟಿ, ಕೆ ದೇಜಪ್ಪ ಶೆಟ್ಟಿ ಮೊದಲಾದವರು ಎಲ್ಲರೂ ಕೊಂಗ್ರೆಸಿಗೆ ಓಟುಕೊಡಬೇಕೆಂದು ವಿನಂತಿಸಿ ಭಾಷಣವಿತ್ತರು.

ಪಾಂಗಾಳ

ಶ್ರೀ ನಿತ್ಯಾನಂದ ಸಂಯುಕ್ತ ಯುವಕಸಂಘದವರ ಆಶ್ರಯದಲ್ಲಿ ಇಲ್ಲಿಯೊಂದು ಸಾರ್ವಜನಿಕ ಸಭೆಯು ಕಳೆದ ತಾ ೩೧ನೇ ಆದಿತ್ಯವಾರ ಶ್ರೀ. ಪಿ. ಲಕ್ಷ್ಮೀನಾರಾಯಣ ನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿ ಎಲ್ಲರೂ ಕೊಂಗ್ರೆಸಿಗೆ ಬೆಂಬಲವೀಯಬೇಕೆಂದು ಶ್ರೀಗಳಾದ ಕೆ. ಗಣಪಯ ಶೆಟ್ಟಿ, ಕೆ. ದೇಜು ಶೆಟ್ಟಿ, ಲೋಕು ಪೂಜಾರಿ, ಸಂಜೀವ ಬಲ್ಲಾಳ, ಮೊದಲಾದವರು ಮಾತನಾಡಿದರು.

ಹೇರಾಡಿ

ಉಡುಪಿ ತಾಲೂಕು ಹೇರಾಡಿ ಗ್ರಾಮದಲ್ಲಿರುವ ಕುಮ್ರಗೋಡು ಶ್ರೀನಿವಾಸ ಶಾನುಭಾಗರು ತಾ. ೩೧–೧–೩೭ನೇ ಆದಿತ್ಯವಾರ ಬೆಳಿಗ್ಗೆ ೭ ಗಂಟೆಗೆ ಸ್ವರ್ಗಸ್ಥರಾಗಿದ್ದಾರೆ. ಸಂಗೀತ ವಿದ್ಯೆಯಲ್ಲಿ ಅತಿ ನಿಪುಣರಾಗಿಯೂ ಅನೇಕ ಜನರಿಗೆ ಸಂಪೂರ್ಣ ಪ್ರೀತಿಗೆ ಪಾತ್ರರಾಗಿಯೂ ಪರೋಪಕಾರಿಯೂ ಹೆಸರುಗೊಂಡ ಅವರ ನಿಧನವು ಶೋಚನೀಯವಿದೆ.

ಕುಂಬಳೆ

ತಾ. ೧೬–೧–೩೭ರಲ್ಲಿ ಮ. ರಾ. ವಾಸುದೇವ ನ್ಯಾಕರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಕೂಟವನ್ನು ಜರಗಿಸಿ ಮದ್ರಾಸು ನ್ಯಾಯವಿಧಾಯಕ ಸಭೆಯ ಉದ್ದೇಶ ಮತ್ತು ಓಟು ಕಾರಂತರಿಗೆ ಯಾಕೆ ಕೊಡಬೇಕು ಮುಂತಾದ ವಿಷಯಗಳು ರಾ. ನಾರಾಯಣ ಕಿಲ್ಲೆಯವರು ವಿಶದವಾಗಿ ತಿಳಿಸಿ ಅನಂತರ ಬಿ. ಜಗನ್ನಾಥ ರೈಗಳು ದೇಶಸೇವೆಯು ಯಾಕೆ ಕೈಕೊಳ್ಳಬೇಕು ಮುಂತಾದ ವಿಷಯ ತಿಳಿಸಿ ಅಧ್ಯಕ್ಷರ ಉಪಸಂಹಾರವಾದ ಬಳಿಕ ಸಭಾ ವಿಸರ್ಜನವಾಯಿತು. ಶ್ರೀಯುತ ಕಾರಂತರು ಹಾಜರಿದ್ದರು. ಜಾತ್ರೆಯ ಸಮಾರಂಭವಾದ್ದರಿಂದ ಸಾಧಾರಣ ೧೦೦೦ ಜನ ಹಾಜರಿದ್ದರು.

ನೆಟ್ಟಣಿಗೆ

ಇಲ್ಲಿ ತಾ. ೨೩ಕ್ಕೆ ಕೊಂಗ್ರೆಸು ಕಡೆಯಿಂದ ಮ. ರಾ. ಬಿ. ಜಗನ್ನಾಥ ರೈ ಮತ್ತು ಬಿ. ದೇವಪ್ಪಾಳ್ವರು ಬಂದು ಪೆದ್ರೆಗ್ರಾಮದ ಮಾಜಿ ಪಟೇಲ ಹಾಗೂ ಕಾಡು ಸತ್ಯಾಗ್ರಹ ಚಳವಳದಲ್ಲಿ ಕಾರಾಗೃಹ ವಾಸವನ್ನು ಅನುಭವಿಸಿದ ಪಿ. ವಿ. ಕಡಂಬಳಿತ್ತಾಯರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಕೂಟವನ್ನು ಸೇರಿಸಿ ಮತವನ್ನು ಯಾರಿಗೆ ಕೊಡಬೇಕು ಎಂಬುದರ ಕುರಿತು ಶ್ರೀಗಳಾದ ಬಿ. ಜಗನ್ನಾಥ ರೈ ಬಿ. ದೇವಪ್ಪಾಳ್ವರು ಕೂಡಾ ಭಾಷಣಮಾಡಿದರು. ಈ ಸಭೆಗೆ ನೆರೆಕರೆಯವಳಿ ಗ್ರಾಮದ ವರ್ಗದಾರರ ಹಾಗೂ ಸದಸ್ಯರನ್ನು ಸೇರಿಸಲಿಕ್ಕೆ ಎಮ್. ಎಸ್. ಕಡಂಬಳಿತ್ತಾಯರು ಮತ್ತು ತುಕ್ಕಪ್ಪ ಬಂಟರು, ಸಂಕಪ್ಪಾಳ್ವರು, ಬಿ. ವಿಟ್ಟು ಶೆಟ್ರು ವಗೈರೆಗು ತುಂಬಾ ಸಹಾಯವಿತ್ತ ಮಹನೀಯರು. ಜಾತ್ರೆ ಸಮಾರಂಭವಾದ್ದರಿಂದ ಸಾಧಾರಣ ೧೫೦೦ ಜನಸಂದಣಿ ಸೇರಿತ್ತು.

ಕುಂಬಳೆ

ತಾ. ೨೬ರಲ್ಲಿ ಸ್ವಾತಂತ್ರ್ಯ ದಿನಾಚರಣೆಯ ಬಗ್ಗೆ ಸಾಯಂ ಘಂಟೆ೫ಕ್ಕೆ ನಾಗಪ್ಪ ನಾರಾಯಣ ಪ್ರಭುಗಳ ಅಧ್ಯಕ್ಷತೆಯಲ್ಲಿ ಬಂಕ್ಲೆ ವೈದಾನಿನಲ್ಲಿ ಸಾರ್ವಜನಿಕ ಸಭೆಸೇರಿಸಿ ಇಂದಿನ ಸಭೆಯ ಉದ್ದೇಶ ರಾ ವಾಸುದೇವ ನ್ಯಾಕರು ವಿವರಿಸಿದರು. ಬಿ. ಜಗನ್ನಾಥ ರೈ ಮತ್ತು ವಿ. ದೇವಪ್ಪಾಳ್ವರು, ಮಾಧವ ಪೈ ಮೊದಲಾದ ಕಾಂಗ್ರೆಸು ಕೆಲಸಗಾರರು ಇಲ್ಲಿ ಹಾಜರಿದ್ದರು.

ತುಳುವ ಮಹಾಸಭೆ ಪೊಳಲಿ

ಇದೇ ಜನವರಿ ತಾ. ೨೬ನೇ ಮಂಗಳವಾರ ಸಾ. ಗಂಟೆ ೫–೩೦ಕ್ಕೆ ಕಾಂಗ್ರೆಸಿನ ಪರವಾಗಿ ಪೊಳಲಿ ದೇವಸ್ಥಾನದ ಗೋಪುರದಲ್ಲಿ ಸುಮಾರು ೫೦೦ ಜನರ ಒಂದು ಜಾಹೀರು ಸಭೆಯು ಸೇರಿತು. ಸದ್ರಿಸಭೆಗೆ ಜಮೀನ್ದಾರ್ ಮುಡಾಯಿಕೋಡಿ ಅಚ್ಯುತ ಭಟ್ಟ ಬಿ. ಎ ಇವರನ್ನು ಅಧ್ಯಕ್ಷರಾಗಿ ಆರಿಸಲಾಯಿತು.

ಮಂಗಳೂರಿನಿಂದ ಬರುತ್ತೇನೆಂತ ಹೇಳಿದವರು ಕಾರಣಾಂತರಗಳಿಂದ ಬಾರದಿದ್ದರೂ ಸುಮಾರು ೬ ಗಂಟೆಗೆ ಸಭೆ ಆರಂಭವಾಗಿ ಶ್ರೀಮಾನ್ ಕರಿಯಂಗಳ ಮುತ್ತು ಮಾರ್ಲರು, ಬಡಕಬಯಲು ಪರಮೇಶ್ವರಯ್ಯನವರೂ ಕೂಡಾ ನಾವೆಲ್ಲರೂ ಕಾಂಗ್ರೆಸಿಗೆ ಯಾಕೆ ಓಟುಕೊಡಬೇಕೆಂಬದನ್ನು ಜನರಿಗೆ ವಿವರವಾಗಿ ತಿಳಿಸಿದರು. ಅಧ್ಯಕ್ಷರು ಸರಸವಾದ ಭಾಷಣದಿಂದ ಹಿಂದೀಯರಾದ ನಮಗೆಲ್ಲರಿಗೂ ಬರುವ ಚುನಾವಣೆಯಲ್ಲಿ ಕೊಂಗ್ರೆಸಿಗೆ ಓಟುಕೊಡುವಂತೆ ಶ್ರೀದೇವಿಯು ಸುಜ್ಞಾನವನ್ನು ದಯಪಾಲಿಸಲೆಂದು ಪ್ರಾರ್ಥಿಸಿ ಸುಮಾರು ೮ ಗಂಟೆಗೆ ಸಭೆವಿಸರ್ಜನೆಯಾಯ್ತು.

ಕೃತಜ್ಞತಾಪೂರ್ವಕ ವಂದನೆಗಳು

ತುಳುವ ಮಹಾಸಭೆಗೆ 'ದಿ ಗ್ರ್ಯಾಂಡ್ ವಿದ್ಯಾ ಡಾಯಿಸಿ' ಸೋಡ್ತಿ ಕಮ್ಟಿಯಲ್ಲಿ ಇನಾಂ ಸಿಕ್ಕಿದವರಿಂದ ರೂಪಾಯಿಗೆ ಒಂದು ಪೈಯಂತೆ ಪಡೆದು ಸಭೆಗೆ ಕೊಡುವದಾಗಿ ವಾಗ್ದಾನಮಾಡಿದ್ದಕ್ಕೆ ತುಳುವ ಮಹಾಸಭೆಯ ಪರವಾಗಿ ಮೇಲಿನ ಕಮ್ಟಿಯವರಿಗೂ, ಇನಾಂ ಪಡೆದವರಿಗೂ, ಸದ್ರಿ ಕಮ್ಟಿಯ ಗೌರವ ಕಾರ್ಯದರ್ಶಿಗಳಾದ ದಾಮೋದರ ರಾಯರಿಗೂ ಈ ಮೂಲಕ ವಂದನೆಗಳು ಅರ್ಪಿಸುತ್ತೇವೆ

ಎನ್. ಎ. ಶೀನಪ್ಪ ಹೆಗ್ಡೆ
ಕಾರ್ಯದರ್ಶಿ,
ತುಳುವ ಮಹಾಸಭೆ ಪೊಳಲಿ.

ತಾ. ೩೧–೧–೩೭ರಲ್ಲಿ ಜರಗಿದ ದ. ಕ. ಜಿಲ್ಲಾ ಏಡೆಡ್ ಎಲಿಮೆಂಟರಿ ಶಾಲಾ ಉಪಾಧ್ಯಾಯರ ಸಂಘದ ಕಾರ್ಯಕಾರಿ ಮಂಡಳಿಯ ನಿರ್ಣಯದ ಮೇರೆಗೆ ನಮ್ಮ ಜಿಲ್ಲೆಯ ಏಡೆಡ್ ಶಾಲಾ ಉಪಾಧ್ಯಾಯರ ಪ್ರಥಮ ಪರಿಷತ್ತನ್ನು ಇದೇ ತಿಂಗಳ ತಾ: ೨೮ನೇ ಆದಿತ್ಯವಾರ ಪೂರ್ವಾಹ್ನ ಗಂಟೆ ೧೧ಕ್ಕೆ ಮಂಗಳೂರು ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದಲ್ಲಿ ಜರಗಿಸುವ್ರದಾಗಿ ಈ ಮೂಲಕ ಪ್ರಕಟಿಸಲಾಗುತ್ತದೆ. ಆದುದರಿಂದ ಶಿಬಂದಿಗೆ ಸಂಬಂಧಪಟ್ಟ ಏಡೆಡ್ ಶಾಲಾ ಅಧ್ಯಾಪಕ ಅಧ್ಯಾಪಕಿಯರುಗಳು ಪರಿಷತ್ತಿನ ಮುಂದಿಡುವ ವಿಷಯಗಳಲ್ಲಿ ತಂತಮ್ಮ ಸೂಚನೆಗಳನ್ನು ಕ್ರಮವಾದ ನಿರ್ಣಯ ರೂಪದಲ್ಲಿ ಈ ಸಮಯ ಆಫೀಸಿಗೆ ಇದೇ ತಿಂಗಳ ತಾ 20ನೇ ಶನಿವಾರದೊಳಗೆ ತಲ್ಪುವಂತೆ ದಯಮಾಡಿ ಕಳುಹಿಸುವದು ಮಾತ್ರವಲ್ಲದೆ ಜಿಲ್ಲೆಯ ಎಲ್ಲಾ ಭಾಗಗಳಿಂದಲೂ ಬೇರೆಬೇರೆ ಮೆನೇಜುಮೆಂಟುಗಳ ಕೈಕೆಳಗೆ ಕೆಲಸಮಾಡುತ್ತಿರುವ ಉಪಾಧ್ಯಾಯ ವರ್ಗದವರೆಲ್ಲರೂ ಸಭೆಯನ್ನು ವ ಈ ಸಂಘದ ಕಾರ್ಯವನ್ನು ಯಶಸ್ವಿಗೊಳಿಸಬೇಕಾಗಿ ಅಪೇಕ್ಷಿಸಲಾಗುತ್ತದೆ. ಸದರಿ ಪರಿಷತ್ತಿನ ಅಧ್ಯಕ್ಷರ ಹೆಸರನ್ನು ಪರಿಷತ್ತಿನ ಮುಂಚಿನ ವಾರದ ಪತ್ರಿಕೆಗಳಲ್ಲಿ ಸೂಚಿಸಲಾಗುವದು.

ನಮ್ಮ ಜಿಲ್ಲೆಯ ಬೇರೆ ಬೇರೆ ಟೀಚರ್ ಸಂಘಗಳ ಕಾರ್ಯದರ್ಶಿಯವರು ಈ ವಿಷಯವನ್ನು ತಂತಮ್ಮ ಸೆಂಟರಿಗೆ ಸಂಬಂಧಪಟ್ಟ ಶಾಲಾ ಉಪಾಧ್ಯಾಯರೊಳಗೆ ಪ್ರಕಟಿಸಿ ಸಹಾಯಮಾಡಬೇಕಾಗಿ ಕೇಳಿಕೊಳ್ಳಲಾಗುತ್ತದೆ. ಪತ್ರವ್ಯವಹಾರವನ್ನು ಈ ಕೆಳಗಣ ವಿಳಾಸಕ್ಕೆ ಬರಕೊಳ್ಳುವುದು.

ಅಧ್ಯಕ್ಷ, ಸದರಿ ಸಂಘದ ಆಫೀಸು ಕದಿರೆ,
ಮಂಗಳೂರು.

ಜಾಹೀರು ನೋಟಿಸು

ಮದ್ರಾಸು ಎಸೆಂಬ್ಲಿ ಚುನಾವಣೆಗೆ ನಿಂತಿರುವ ಉಮೇದ್ವಾರರಲ್ಲಿ ಯಾರಿಗೆ ಓಟುಗಳನ್ನು ಕೊಡಬೇಕೆಂದು ನಿರ್ಣಯಿಸುವುದಕ್ಕೋಸ್ಕರ ಕಟಪಾಡಿ ಮತ್ತು ಹತ್ತರದ ಗ್ರಾಮಗಳ ಓಟರುಗಳು ಮತ್ತು ಮಹಾಜನರು ಇದೇ ಫೆಬ್ರವರಿ ತಾ. 6ನೇ ಶನಿವಾರ ಸಾಯಂ ಘಂಟೆ 4ಕ್ಕೆ ಕಟಪಾಡಿಯಲ್ಲಿ ಶ್ರೀಮಧ್ವನವೇಂದ್ರ ಮಹೌಷಧಾಲಯದ ಬಳಿ ಮೈದಾನಿನಲ್ಲಿ ಸಭೆ ಸೇರಬೇಕಾಗಿ ನಿರ್ಣಯಿಸಲ್ಪಟ್ಟಿದೆ. ಎಲ್ಲಾ ಪಕ್ಷದ ಉಮೇದ್ವಾರರೂ ಅವರ ಕಡೆಯವರೂ ಆ ಸಭೆಗೆ ದಯವಿಟ್ಟು ಬಂದು ಭಾಗವಹಿಸಬೇಕಾಗಿ ಆಮಂತ್ರಿಸುತ್ತೇನೆ.

ಪಿ. ಲಕ್ಷ್ಮೀನಾರಾಯಣನಾಯಕ್,
ಕಾರ್ಯದರ್ಶಿ, ವ್ಯವಸ್ಥಾಪಕ ಸಮಿತಿ ಕಟಪಾಡಿ.

ಮೊಗವೀರ ವ್ಯವಸ್ಥಾಪಕ ಮಂಡಳಿ ಬೊಂಬಾಯಿ

ಮೊಗವೀರ ವ್ಯವಸ್ಥಾಪಕ ಮಂಡಳಿಯವರಿಂದ ನಡಿಸಲ್ಪಡುತ್ತಿರುವ 'ಧರ್ಮಾರ್ಥ ರಾತ್ರಿಶಾಲೆ'ಯನ್ನು ಸಂದರ್ಶಿಸುವ ಸುಯೋಗವನ್ನು ನನಗೊದಗಿಸಿ ಕೊಟ್ಟುದಕ್ಕಾಗಿ ನಾನು ಮಂಡಳಿಯ ಅಧ್ಯಕ್ಷರಿಗೆ ಧನ್ಯವಾದವನ್ನೀಯಬೇಕಾಗಿದೆ ಈ ಶಾಲೆಯ ಉತ್ತಮ ಕಾರ್ಯಕಲಾಪಗಳ ವಾರ್ತೆಯನ್ನು ಹಲವು ಬಾರಿ ಕೇಳಿದ್ದ ನಾನು ಮಹದಾತುರದಿಂದ ಅದನ್ನು ಸಂದರ್ಶಿಸಿ, ನಿರೀಕ್ಷೆಗೂ ಮಿಕ್ಕಿದ ಸಮಾಧಾನವನ್ನು ಹೊಂದಿದೆನು. ಚಟುವಟಿಕೆಯಿಂದ ಕೆಲಸಮಾಡುತ್ತಿರುವ ಉಪಾಧ್ಯಾಯ ವರ್ಗವನ್ನೂ ಹಗಲಿನಲ್ಲಿ ಬೇರೆ ಬೇರೆ ಬೇರೆ ಆಫೀಸುಗಳಲ್ಲಿ ಕೆಲಸಮಾಡುವವರಾಗಿರುವ ವಿದ್ಯಾರ್ಥಿ ವೃಂದದ ಉತ್ಸಾಹ ಭರಿತ ವದನಗಳನ್ನೂ ಕಂಡ ನನಗೆ ಹೆಚ್ಚಿನ ಆನಂದವಾಯಿತು. ಶಾಲೆಯ ವಾತಾವರಣದಲ್ಲಿ ಜೀವ ಕಳೆಯು ತುಂಬಿತ್ತು.

ಕೆ. ಕೆ. ಶೆಟ್ಟಿ, ಸಂಪಾದಕ.

ಮೂಲ್ಕಿ

ಸ್ಥಳೀಕ ಗ್ರೇಂಡ್ ರೇಫ್‌ಲ್ ಇದೇ ಕಳೆದ ತಾ. ೩೧-೧-೩೭ನೇ ರವಿವಾರ ಮತ್ತು ತಾ. ೧-೨-೩೭ನೇ ಸೋಮವಾರ ಬಹಿರಂಗವಾಗಿ ತೆಗೆಯಲ್ಪಟ್ಟಿತು. ಮೊದಲನೇ ಬಹುಮಾನ ರೂಪಾಯಿ ೨೫೦೦/ ಮುಂಬೈಗೂ, ೨ನೇ ಬಹುಮಾನ ರೂ. ೧೦೦೦/- ಮಂಗಳೂರಿಗೂ, ೩ನೇ ಬಹುಮಾನ ರೂ. ೫೦೦ ಮೂಡಬಿದ್ರೆಗೂ ಹೋಗಿರುವುದು. ಸಮಸ್ತ ವಿದ್ಯಾಭಿಮಾನಿಗಳ ಹೆಚ್ಚಿನ ಪ್ರೋತ್ಸಾಹದಿಂದ ಈ ಮಹತ್ಕಾರ್ಯವು ಯಶಸ್ವಿಯಾಗಿ ಕೊನೆಗೊಂಡಿತು. ಬಹುಮಾನದ ಪಟ್ಟಿಯು ಒಂದು ಹಪ್ತೆಯೊಳಗೆ ಹೊರಬೀಳಬಹುದಾಗಿ ನಿರೀಕ್ಷಣೆಯಿದೆ.

ಪತ್ರವ್ಯವಹಾರ

(ಬಾತ್ಮಿದಾರರು ತಮ್ಮ ಸಂಪೂರ್ಣ ವಿಳಾಸವನ್ನು ನಮಗೆ ಕೊಡಬೇಕಾಗಿದೆ, ಬಾತ್ಮಿಗಳು ಅದಷ್ಟು ಸಂಕ್ಷೇಪವಿದ್ದು ಕಾಗದದ ಒಂದೇ ಮಗ್ಗುಲಲ್ಲಿ ಶಾಯಿಯಿಂದ ಬರೆಯಲ್ಪಟ್ಟು ಸ್ಪಷ್ಟವಾದ ಅಕ್ಷರಗಳಲ್ಲಿರಬೇಕು ಬಾತ್ಮಿದಾರರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ)

ಸಂ ನ

ಮದ್ರಾಸು ಎಸೆಂಬ್ಲಿಯ ಚುನಾವಣೆ

ಪಾರ್ಟಿಗೆ ಓಟು ಕೊಡಿರಿ ವ್ಯಕ್ತಿಗೆ ಓಟು ಕೊಡಬೇಡಿ

ಲೇಖಕ —ಕೆ ಮಹಾಬಲ ಹೆಗ್ಡೆ B A, B L
ವಕೀಲ್ ಕಾರ್ಕಳ

ಈ ಸಲದ ಚುನಾವಣೆಯಲ್ಲಿ ಎಲ್ಲೆಲ್ಲಿಯೂ "ಪಾರ್ಟಿ ನೋಡಿ ಓಟು ಕೊಡಿರಿ, ವ್ಯಕ್ತಿಯನ್ನು ನೋಡಿ ಓಟುಕೊಡಬೇಡಿ" ಎಂಬ ಘೋಷಣೆಯು ಕೇಳಿ ಬರುತ್ತಿದೆಯಷ್ಟೆ? ಇದರ ಅರ್ಥವೇನು?ಪಾರ್ಟಿ ಅಂದರೇನು? ಅದಕ್ಕೆ ಏಕೆ ಪ್ರಾಧಾನ್ಯ ಕೊಡಬೇಕು? ವ್ಯಕ್ತಿಗೆ ಪ್ರಾಮುಖ್ಯತೆ ಇಲ್ಲವೆ? ಒಬ್ಬ ಯೋಗ್ಯ, ಸಾಮರ್ಥ್ಯವಂತ ಕಾರ್ಯಪಟು ಉಮೇದ್ವಾರನು ಹಿಡಿದಿರುವ ಪಾರ್ಟಿಯು ನಮಗೆ ಬೇಡವಾದರೂ ಆ ಉಮೇದ್ವಾರನು ನಮ್ಮ ಜಾತಿ ಬಂಧುವಾದರೆ, ಅಥವಾ ಇತರ ಕಾರಣಗಳಿಂದ ನಮಗೆ ಬೇಕಾದವನಾದರೆ ಅತನ ಪಾರ್ಟಿಯ ಕಡೆ ದೃಷ್ಟಿಯಿಡದೆ ಅವನಿಗೆ ನಮ್ಮ ಓಟು ಕೊಟ್ಟರಾಗದೇ? ಎಂಬಿವೇ ಮೊದಲಾದ ಅನೇಕ ಪ್ರಶ್ನೆಗಳು ಉತ್ಪನ್ನವಾಗುವುದು ಸ್ವಾಭಾವಿಕವಾದ್ದರಿಂದ ಈ ಚಿಕ್ಕ ಲೇಖನದಲ್ಲಿ ಸಾಧ್ಯವಿದ್ದಷ್ಟು ಮಟ್ಟಿಗೆ ಅವುಗಳನ್ನು ಉತ್ತರಿಸಲಾಗುವುದು

ಪ್ರಥಮತಃ ನಾವು ಈ ಕೆಲವು ವಿಷಯಗಳನ್ನು ಮನಸ್ಸಿನಲ್ಲಿ ಇಟ್ಟುಕೊಳ್ಳತಕ್ಕದ್ದು. ಎಪ್ರಿಲ್ ತಾ 1ಕ್ಕೆ ನಮ್ಮ ದೇಶದಲ್ಲಿ ಜಾರಿಗೆ ಬರಲಿರುವ ರಾಜ್ಯಭಾರ ಕ್ರಮವು "ಪ್ರಜಾ ಸತ್ತಾತ್ಮಕ" (democratic) ಸರಕಾರ ಕ್ರಮವೆಂದೆಣಿಸಲ್ಪಡುತ್ತದೆ ಅಂದರೆ ಅಧಿಕ ಸಂಖ್ಯೆ ಪ್ರಜೆಗಳ ಅಭಿಪ್ರಾಯಕ್ಕೆ ಅನುಸರಿಸಿ ಆ ಅಧಿಕ ಸಂಖ್ಯೆ ಪ್ರಜೆಗಳಿಂದ ಚುನಾಯಿಸಲ್ಪಟ್ಟ ಬಹು ಸಂಖ್ಯ ಪ್ರತಿನಿಧಿಗಳು ರಾಜಕೀಯ ಸಾಮಾಜಿಕ, ಮತ್ತು, ಆರ್ಥಿಕ ವಿಷಯಗಳಲ್ಲಿ ಒಂದೇ ನಿರ್ದಿಷ್ಟ ಅಭಿಪ್ರಾಯವುಳ್ಳವರಾದರೆ ಮಾತ್ರ ಅಂಥವರು ಮಂತ್ರಿಮಂಡಲವನ್ನು ರಚಿಸಿ ರಾಜ್ಯದ ಆಡಳಿತೆ ಸುವ್ಯವಸ್ಥಿತವಾಗಿ ನಡಿಸಲು ಸಾಧ್ಯ ಆ ನಿರ್ದಿಷ್ಟ ಅಭಿಪ್ರಾಯಕ್ಕೇನೇ ಪಾರ್ಟಿಯು ಕಾರ್ಯಕ್ರಮ (programme) ವೆನ್ನುತ್ತಾರೆ ಚುನಾವಣೆಯ ರಂಗಸ್ಥಳಕ್ಕೆ ಇಳಿಯುವ ಎಲ್ಲಾ ಪಾರ್ಟಿಗಳೂ ತಮ್ಮ ಮುಂದಿನ ಕಾರ್ಯಕ್ರಮವನ್ನೂ, ಹಿಂದಿನ ಕಾರ್ಯಕಲಾಪಗಳನ್ನೂ ಓಟರರ ಮುಂದೆ ಇಟ್ಟು, ಅದರಲ್ಲಿ ವಿಶ್ವಾಸವಿದ್ದರೆ ಮಾತ್ರ ತಮ್ಮ ಪಾರ್ಟಿ ಉಮೇದ್ವಾರನಿಗೆ ಓಟುಕೊಡಿರಿ ಎಂತ ಕೇಳುವುದು 'ಪ್ರಜಾಸತ್ತಾತ್ಮಕ' ಸರಕಾರ ಕ್ರಮವಿರುವ ಎಲ್ಲಾ ದೇಶಗಳಲ್ಲಿಯೂ ನಡೆದು ಬರುವ ಪದ್ಧತಿಯಾಗಿರುತ್ತದೆ ಚುನಾವಣೆ ಸಮಯ ಓಟರರ ಮುಂದೆ ಇಡುವ ಹಿಂದಿನ ಕಾರ್ಯಕಲಾಪ ಮತ್ತು ಮುಂದಿನ ಕಾರ್ಯಕ್ರಮಕ್ಕೆ "ಚುನಾವಣೆ ಪತ್ರಿಕೆ" ಎಂತ ಹೇಳುತ್ತಾರೆ. ಆ ಚುನಾವಣೆ ಪತ್ರಿಕೆಯಲ್ಲಿ ತನ್ನ ಪಾರ್ಟಿಯವರು ದೇಶದ ಸಲುವಾಗಿ ಈ ತನಕ ಏನೇನು ಕಾರ್ಯ ಮಾಡಿರುತ್ತಾರೆ, ತನ್ನ ಪಾರ್ಟಿಗೆ ಚುನಾವಣೆಯಲ್ಲಿ ಬಹುಮತ ದೊರೆತರೆ ಏನು ಕೆಲಸ ಮಾಡಲು ತನ್ನ ಪಾರ್ಟಿಯು ನಿಶ್ಚಯಿಸಿರುತ್ತದೆ ಎಂಬುದನ್ನೆಲ್ಲಾ ವಿವರಿಸುತ್ತಾರೆ. ಯಾವುದಾದರೂ ಒಂದು ಪಾರ್ಟಿಯು ಚುನಾವಣೆಯಲ್ಲಿ ಬಹುಮತವಾಗಿ ಬಂದಲ್ಲಿ ತನ್ನ ಚುನಾವಣೆ ಪತ್ರಿಕೆ ಪ್ರಕಾರ ಕಾರ್ಯ ಸಾಧಿಸಲೇ ಬೇಕು ಆದುದರಿಂದಲೇ ಓಟರನು ಎಲ್ಲಾ ಪಾರ್ಟಿಗಳ ಚುನಾವಣೆ ಪತ್ರಿಕೆಗಳನ್ನು ಪರಿಶೀಲಿಸಿ ತನ್ನ ಮೆಚ್ಚಿಗೆಗೆ ಪಾತ್ರವಾದ ಪಾರ್ಟಿಗೇನೇ ಓಟು ಕೊಡುವುದು ಎಲ್ಲಾ ನಾಗರಿಕ ರಾಜ್ಯಗಳಲ್ಲಿ ನಡೆದು ಬರುವ ಕ್ರಮ ಒಂದು ಪಾರ್ಟಿಯ ಉಮೇದ್ವಾರನು ಯಾರೇ ಇರಲಿ, ಅವನ ಜಾತಿಯು ಯಾವುದೇ ಇರಲಿ ಖಾಸಗಿಯಲ್ಲಿ ಅವನೊಡನೆ ಎಷ್ಟು ಮೈತ್ರಿಯೇ ಇರಲಿ, ಆ ಪಾರ್ಟಿಯ ಚುನಾವಣೆ ಪತ್ರಿಕೆಯಲ್ಲಿ ಒಪ್ಪಿಗೆಯಿದ್ದರೆ ಮಾತ್ರ ಅವನಿಗೆ ಓಟುಕೊಡತಕ್ಕದ್ದು ಇಲ್ಲದಿದ್ದರೆ ಸರ್ವದಾ ಆತನಿಗೆ ಓಟುಕೊಡಕೂಡದು ಏಕೆಂದರೆ ಚುನಾವಣೆಯಲ್ಲಿ ಓಟು ಕೊಡುವುದು ಪಾರ್ಟಿಗೆ, ಪಾರ್ಟಿಯ ಕಾರ್ಯಕ್ರಮಕ್ಕೆ, ವ್ಯಕ್ತಿಗಲ್ಲ ಚುನಾಯಿತ ಪಾರ್ಟಿಗಳಲ್ಲಿ ಬಹುಪಕ್ಷವಿರುವ ಪಾರ್ಟಿಯೇ ಸರಕಾರದ ಆಡಳಿತೆಯನ್ನು ನಡಿಸುವುದು ವಿನಾ ವ್ಯಕ್ತಿಯಲ್ಲ ವ್ಯಕ್ತಿಯು ಎಷ್ಟು ವಿಶಾಲ ಹೃದಯಿಯೇ ಆಗಲಿ ಎಷ್ಟು ಕಾರ್ಯಪಟುವೇ ಆಗಿರಲಿ, ಅಥವಾ ಎಷ್ಟು ಸಂಕುಚಿತ ಅಭಿಪ್ರಾಯವುಳ್ಳವನೇ ಆಗಿರಲಿ, ಅವನ ವ್ಯಕ್ತಿತ್ವವು ಬಹುಮಟ್ಟಿಗೆ ಅವನ ಪಾರ್ಟಿಯ ಅಭಿಪ್ರಾಯದಲ್ಲಿ ಸಮ್ಮಿಳಿತವಾಗುತ್ತದೆ ಅವನ ಪಾರ್ಟಿಯ ಕಾರ್ಯಕ್ರಮಕ್ಕೆ ವಿರೋಧವಾಗಿ ಅವನು ಏನೊಂದು ಕೆಲಸ ಮಾಡಲು ಕೂಡಾ ಅವನಿಗೆ ಸಾಧ್ಯವಿಲ್ಲ ಮತ್ತು ಪಾರ್ಟಿಯ ಶಿಸ್ತಿಗೆ ಸರಿಯಾಗಿ ಅವನು ವರ್ತಿಸಲೇ ಬೇಕು ಆದುದರಿಂದಲೇ ಪಾಶ್ಚಾತ್ಯ ದೇಶಗಳಲ್ಲಿ ವ್ಯಕ್ತಿಗೆ ಪ್ರಾಶಸ್ತ್ಯವಿಲ್ಲ ಪಾರ್ಟಿಗೆ ಮಾತ್ರ ಪ್ರಾಮುಖ್ಯತೆ ಇರುವಂತಾದ್ದಾಗಿರುತ್ತದೆ ಆ ಕಾರಣದಿಂದಲೇ ನಮ್ಮ ದೇಶದಲ್ಲಿ ಕೂಡಾ ಪಾರ್ಟಿ ಹಿಡಿದೇ ಉಮೇದ್ವಾರರು ಚುನಾವಣೆಗೆ ನಿಲ್ಲಬೇಕಾಗಿಯೂ, 'ಸ್ವತಂತ್ರ'ನಾಗಿ ಚುನಾವಣೆಯಲ್ಲಿ ನಿಲ್ಲುವವನಿಗೆ ಓಟರರು ಎಷ್ಟು ಮಾತ್ರಕ್ಕೂ ಬೆಂಬಲಕೊಡಬಾರದಾಗಿಯೂ, ನಮ್ಮ ಅಧಿಪತ್ಯದ ಮುಂಚಿನ ಗವರ್ನರರು ಲೋರ್ಡ್ ಗೋಶ್ಚೆನ್ (Lord Goschen) ರವರು ನ್ಯಾಯವಿಧಾಯಕ ಸಭೆಯಲ್ಲಿ 2 ವರ್ಷಗಳ ಹಿಂದೆ ಉಪದೇಶ ಕೊಟ್ಟಿರುತ್ತಾರೆ

ಈ 'ಸ್ವತಂತ್ರ'ಗಳ ವಿಷಯ ಇಲ್ಲಿ ಒಂದೆರಡು ಮಾತು ಹೇಳುವುದು ಅತೀ ಅವಶ್ಯ ಇವರು ಯಾವ ಪಾರ್ಟಿಗೂ ಸೇರಿದವರಲ್ಲ. ಪ್ರತಿಯೊಬ್ಬ 'ಸ್ವತಂತ್ರ'ನೇ ಇನ್ನೊಬ್ಬ 'ಸ್ವತಂತ್ರ' ಇಂದ 'ಸ್ವತಂತ್ರ'ನಾಗಿರುತ್ತಾನೆ ಅದು ವಿನಹ ಅವನು ಎಲ್ಲಾ ಪಾರ್ಟಿಗಳಿಂದಲೂ 'ಸ್ವತಂತ್ರ' ಆಗಿರುತ್ತಾನೆ ಅತನು ಎಲ್ಲಾ ರಾಜಕೀಯ, ಸಾಮಾಜಿಕ, ಮತ್ತು ಆರ್ಥಿಕ ತತ್ವಗಳಿಂದಲೂ 'ಸ್ವತಂತ್ರ'ನು ಅವನಿಗೆ ಯಾವ ನಿಷ್ಠೆ ತತ್ವವೂ ಇಲ್ಲ. ಜನರ ಹಿತಾರ್ಥವಾದ ಎಲ್ಲಾ ಕಾರ್ಯಗಳನ್ನು ಯಾರ ಹಂಗು ವ ಹೆದರಿಕೆ ಇಲ್ಲದೆ ಸಾಧಿಸುವನೆಂದು ಅವನು ಚುನಾವಣ ಸಮಯ ಹೇಳುವನಾದರೂ ಅತನಿಗೆ ಯಾವ ಪಾರ್ಟಿಯ ಬೆಂಬಲವೂ ಇಲ್ಲವಾದ್ದರಿಂದ ಅತನ ಸೂಚನೆಗಳಿಗೆ ಕಿವಿಗೊಡುವವನರೇ ಇಲ್ಲ ಅವನಿಂದ ಯಾವ ಕಾರ್ಯ ಸಾಧನೆಯೂ ಆಗುವುದಿಲ್ಲ. ಅವನು ಎಷ್ಟು ಮೇಧಾವಿಯಾದರೂ, ಧೈರ್ಯಶಾಲಿಯಾದರೂ ಅವನ ರೋಧನವು ಅರಣ್ಯರೋದನ ಅವನೂ ಅತ್ತ ಮೃಗವೂ ಅಲ್ಲ, ಇತ್ತ ಪಕ್ಷಿಯೂ ಅಲ್ಲದ ಗಬ್ಬಿಲದಂತಿರುತ್ತಾನೆ ಈ ನ್ಯಾಯವಿಧಾಯಕ ಸಭೆಗಳಲ್ಲಿ ಈ 'ಸ್ವತಂತ್ರಗಳ' ಸಂಖ್ಯೆಯು ಅಧಿಕವಾದರೆ ಯಾವ ಪಾರ್ಟಿಗೂ ಆಡಳಿತೆ ವಹಿಸಲು ಇವರ ಉಪದ್ರವದಿಂದ ಅಸಾಧ್ಯವಾಗಿ ಪುನಃ ಹೊಸ ಚುನಾವಣೆಯೇ ಆಗುವ ಸಂದರ್ಭ ಕೂಡಾಬರುವುದುಂಟು ಇವರ ಸಂಖ್ಯೆಯು ಬರೇ ಅಲ್ಪವಾಗಿದ್ದರೆ ಇವರನ್ನು ಕೇಳುವವರಿಲ್ಲವೆ ಇವರು ಗಾಳಿಬಂದ ಕಡೆಕೊಡೆಹಿಡಿದು ದಿನಗಳನ್ನು ದೂಡುತ್ತಾರೆ ಯಾವ ಪಾರ್ಟಿಗೂ ಸಂಪೂರ್ಣ ಬಹುಮತವಿಲ್ಲದಿದ್ದರೆ ಈ 'ಸ್ವತಂತ್ರ' ಪ್ರಾಣಿಗಳ ಸಂಖ್ಯೆಯು ಗಣನೀಯವಿದ್ದರೆ ಮಾತ್ರ ಇವರು ಒಂದು ಉಪದ್ರಕಾರಕ ಪಂಗಡವಾಗಿ ನಿಲ್ಲುವ ಸಂಭವವೇ ಹೆಚ್ಚು ಆ ಸಂದರ್ಭದಲ್ಲಿ ಇವರು ಇವರ ಸಂಖ್ಯೆಗಿಂತಲೂ ಮಿಕ್ಕಿದ ಬೆಲೆಯನ್ನು ಪಡೆಯುವುದುಂಟು ಮತ್ತು ಅಂಥಾ ಸಂದರ್ಭಗಳಲ್ಲಿ ಇವರು ತಮ್ಮ ಸ್ವಕಾರ್ಯಗಳನ್ನು ಮಾಡಿಕೊಳ್ಳಲೋಸುಗ ಇಷ್ಟಬಂದ ರೀತಿ ವರ್ತಿಸುತ್ತಾರೆ ಅಂತೂ ಇವರು ಸರಳವಾದ ರಾಜಕೀಯ ಜೀವನದ ಬಗ್ಗೆಗೇನೇ ವಿಷಪಾಕುವ ವ ಹಾಕಲು ಅಸ್ಪದಕೊಡುವ ಜಾತಿಯವರಾಗಿರುತ್ತಾರೆಂತ ಮೇಧಾವಿಗಳ ಅಭಿಪ್ರಾಯ. ಆದುದರಿಂದಲೇ ಈ 'ಸ್ವತಂತ್ರ'ಗಳಿಗೆ ಪಾಶ್ಚಿಮಾತ್ಯ ದೇಶಗಳಲ್ಲಿ ಪ್ರೋತ್ಸಾಹವಿಲ್ಲ. ೭೦೦ ಮೆಂಬರರಿರುವ ಇಂಗ್ಲೆಂಡಿನ ಪಾರ್ಲಿಮೆಂಟಿನಲ್ಲಿ ಕೂಡಾ ಇವರ ಸಂಖ್ಯೆಯು ಕೇವಲ ೧೦ ಯಾ ೧೨ಕ್ಕೆ ಮಿಕ್ಕ ಇರುವುದಿಲ್ಲ ಸ್ವತಂತ್ರಗಳಿಗೆ ಓಟು ಕೊಡುವುದೆಂದರೆ ಅಂಕೆ ಹಾಕದ ಚೆಕ್ಕುಗಳಿಗೆ ಓಟರರು ಸಹಿಹಾಕಿಕೊಟ್ಟಂತೆಯೇ ಸರಿ ಎಂತ ಸಾತ್ಯಕರ ಅಭಿಪ್ರಾಯ. ಆದುದರಿಂದಲೇ 'ಸ್ವತಂತ್ರ'ಗಳಿಗೆ ಎಂದೂ ಅಸ್ಪದ ಕೊಡಬಾರದೆನ್ನುವುದು ನಮ್ಮ ಅಧಿಪತಿ ವರಲ್ಲಿ ಈ ೧೦ ಚುನಾವಣೆಗೆ ನಿಂತಿರುವ ೩ ಪಾರ್ಟಿಗಳ ಪೈಕಿ ಜಸ್ಟಿಸ್ ಪಾರ್ಟಿಯಿಂದಲೇ ಕವಲೊಡೆದು ಹೊಸದಾಗಿ ಉಂಟಾಗಿರುವ ಪೀಪಲ್ ಪಾರ್ಟಿಯನ್ನು ಬಿಟ್ಟರೆ ಇನ್ನು ಉಳಿದುದು ೫೦ ವರ್ಷಗಳಿಂದ ನಮ್ಮ ದಾಸ್ಯವನ್ನು ಹೋಗಲಾಡಿಸುವರೆ ಅವಿಶ್ರಾಂತವಾಗಿ ಸ್ವಾರ್ಥತ್ಯಾಗ, ಲಾಠಿಪೆಟ್ಟು, ಕಾರಾಗೃಹವಾಸ ಮೊದಲಾದ ಕಷ್ಟಪರಂಪರೆಗಳನ್ನು ಅನುಭವಿಸಿ ಹೋರಾಡುವ ಅಖಿಲ ಹಿಂದೂಸ್ಥಾನದ ಕಾಂಗ್ರೆಸ್ಸು ಸಂಸ್ಥೆ. ಮತ್ತು ಈಗ ೧೫ ವರ್ಷಗಳಿಂದ ಆಡಳಿತೆಯಲ್ಲಿರುತ್ತಿದ್ದು, ಕಾಂಗ್ರೆಸಿನವರು ಸತ್ಯಾಗ್ರಹ ಚಳವಳದಲ್ಲಿ ಪ್ರವರ್ತಿಸಿದ್ದಾಗ್ಯೂ ಅವರಿಗೆ ಲಾಠಿಪೆಟ್ಟು ಹೊಡಿಸಿ, ಜೈಲಿನಲ್ಲಿ ಹಾಕಿಸಿದ ನೀರುಮಜ್ಜಿಗೆ ಸಹಾ ಕೊಡಲು ನಿರಾಕರಿಸಿದ ದ್ವೇಷಮಾಡಿದ ಜಸ್ಟಿಸ್ ಪಾರ್ಟಿ ಇವುಗಳೆರಡರಲ್ಲಿ ಓಟರರಿಗೆ ಯಾವುದು ಬೇಕು? ಇದೇ ಬರುವ ತಾ 18-1-1937ಕ್ಕೆ ಉತ್ತರ ಕೊಡಿರಿ

ಬರುವ ಎಸೆಂಬ್ಲಿ ಚುನಾವಣೆಯಲ್ಲಿ ಓಟರರ ಕರ್ತವ್ಯ

ಈ ಮೊದಲು ಎಷ್ಟೋ ಚುನಾವಣೆಗಳು ಆಗಿಹೋಗಿವ ಓಟು ಕೊಡಲು ಹಕ್ಕಿದ್ದವರು ತಮಗೆ ಬೇಕಾದ ಉಮೇದ್ವಾರರಿಗೆ ಓಟು ಕೊಟ್ಟಿದ್ದರು ಆದರೆ ಈ ಸಾರಿಯ ಚುನಾವಣೆಯು ಈ ವರೆಗೆ ಆಗಿದ್ದ ಚುನಾವಣೆಗಳ ಹಾಗಲ್ಲ ಏಕೆಂದರೆ ಇದು ವರೆಗೆ ಕೌನ್ಸಿಲುಗಳಿಗೆ ಪ್ರವೇಶಿಸದ ಕಾಂಗ್ರೆಸ್ ಈ ಸಾರಿ ಎಸೆಂಬ್ಲಿ ಚುನಾವಣೆಗೆ ತನ್ನ ಕಡೆಯಿಂದ ಉಮೇದ್ವಾರರನ್ನೂ ನಿಲ್ಲಿಸಿದೆ ಇಡೀ ಹಿಂದುಸ್ಥಾನದಲ್ಲಿ ಸುಮಾರು 1000ಕ್ಕೆ ಮೇಲ್ಪಟ್ಟ ಉಮೇದ್ವಾರರನ್ನು ಕಾಂಗ್ರೆಸು ಬರುವ ಚುನಾವಣೆಯಲ್ಲಿ ಸ್ಪರ್ಧಿಸುವರೆ ನಿಲ್ಲಿಸಿದೆ ನಮ್ಮ ಮದ್ರಾಸ್ ಸಂಸ್ಥಾನದಲ್ಲಿ ಎಸೆಂಬ್ಲಿಗೆ 215 ಸದಸ್ಯರು ಬೇಕು ಈ 215 ಸ್ಥಾನಗಳಲ್ಲಿ ಹೆಚ್ಚಿನ ಸ್ಥಾನಗಳಿಗೆ ಕಾಂಗ್ರೆಸು ತನ್ನ ಕಡೆಯಿಂದ ಉಮೇದ್ವಾರರನ್ನು ನಿಲ್ಲಿಸಿದೆ ಕೆಲವು ಸ್ಥಾನಗಳು ಪ್ರತಿಸ್ಪರ್ಧಿಸುವವರಿಲ್ಲದೆ ಕಾಂಗ್ರೆಸಿಗೆ ಸಿಕ್ಕಿದೆ ಹಾಗೆಂಯೇ ಬೇರೆ ಪ್ರಾಂತ್ಯಗಳಲ್ಲಿ ಸಹ ಸಿಕ್ಕಿದೆ ಬೇರೆ ಪ್ರಾಂತ್ಯಗಳಲ್ಲಿ ಚುನಾವಣೆಗಳು ಆಗುತ್ತಾ ಇವೆ ಅವುಗಳಲ್ಲಿ ಹೆಚ್ಚಾಗಿ ಕಾಂಗ್ರೆಸಿಗೆ ಜಯ ಸಿಕ್ಕುತ್ತಾ ಇದೆ ಒಟ್ಟಿನಲ್ಲಿ ನೋಡುವಾಗ ಕಾಂಗ್ರೆಸಿಗೆ ಈ ಸಾರಿ ಹೆಚ್ಚಿನ ಜಯ ಸಿಕ್ಕುವುದರಲ್ಲಿ ಯಾವ ಸಂಶಯವೂ ಇರುವುದಿಲ್ಲ. ಏಕೆಂದರೆ ಕಾಂಗ್ರೆಸು 51 ವರ್ಷಗಳಿಂದ ಮಾಡಿದ ಜನತಾ ಸೇವೆ ತ್ಯಾಗ ಮತ್ತು ಕಾಂಗ್ರೆಸಿನ ಧ್ಯೇಯ ಮತ್ತು ತತ್ವ ಪ್ರತಿಯೊಂದು ಹಳ್ಳಿಯಲ್ಲಿಯೂ ಜನರಿಗೆ ಗೊತ್ತಾಗಿದೆ ಕಾಂಗ್ರೆಸಿನಲ್ಲಿ ಹೆಚ್ಚು ತ್ಯಾಗಮಾಡಿದ ಸರದಾರ್ ವಲ್ಲಭಭಾಯಿ ಪಟೇಲ್, ಬಾಬು ರಾಜೇಂದ್ರ ಪ್ರಸಾದರಂತಹ ದುರೀಣರೂ ಎಸೆಂಬ್ಲಿಗಳಿಗೆ ಉಮೇದ್ವಾರರಾಗಿರದೆ ಹೊರಗಿದ್ದು ಕಾಂಗ್ರೆಸ್ ಉಮೇದ್ವಾರರ ಕಡೆಯಿಂದ ಹಗಲಿರುಳು ಕೆಲಸ ಮಾಡುತ್ತಾ ಇದ್ದಾರೆ ರಾಷ್ಟ್ರಪತಿ ಪಂಡಿತ ಜವಾಹಿರಲಾಲ ನೇಹರುಗಳಾದರೋ ಆಕಾಶ ವಿಮಾನದಲ್ಲಿ ಈ ಉದ್ದಿಶ್ಯ ದೇಶದ ಎಲ್ಲಾ ಕಡೆಗಳಿಗೂ ಓಡ್ಯಾಡುತ್ತಾ ಇದ್ದಾರೆ. ತಾ 10-12-1937ಕ್ಕೆ ನಮ್ಮ ಜಿಲ್ಲೆಗೂ ಕಾಂಗ್ರೆಸ್ ಕಡೆ ಉಮೇದ್ವಾರರ ಕಡೆಯಿಂದ ಪ್ರಚಾರ ಕೆಲಸ ಮಾಡುವುದಕ್ಕೋಸ್ಕರ ಅವರು ಬರುವವರಿದ್ದಾರೆ.

ಹೊಸರಾಜ್ಯ ಘಟನೆಯಿಂದ ಜನರಿಗೆ ಏನೂ ಪ್ರಯೋಜನವಿಲ್ಲವಾದ್ದರಿಂದ ಕಾಂಗ್ರೆಸಿನವರೂ ಎಷ್ಟು ಮಾತ್ರಕ್ಕೂ ಅವರೊಡನೆ ಸಹಕರಿಸ ಲಿಲ್ಲ ಕಾಂಗ್ರೆಸಿನವರೂ ಬಹು ಪಕ್ಷವಾಗಿ ಎಸಂಬ್ಲಿಗಳೊಳಗೆ ಹೋದ ಪಕ್ಷದಲ್ಲಿ ಅವುಗಳ ಒಳಗೂ ಸ್ವಚ್ಛಂದ ಚಳವಳಿಗಳನ್ನು ಹೂಡಿ ಹೊಸಪರಿಸ್ಥಿತಿಯನ್ನುಂಟು ಮಾಡಿ ಹೊಸ ರಾಜ್ಯಭಾರ ಘಟನೆಯನ್ನು ಮುರಿದೂ ನಮಗೆ ಹಿತ ಮಾಡುವಂಥಾ ರಾಜ್ಯಘಟನೆಯನ್ನು ನಿರ್ಮಾಣ ಮಾಡುವರೆ ಪ್ರಯತ್ನ ಮಾಡುವರು ಮೇಲಿನ ನಿಶ್ಚಿತ ಧ್ಯೇಯಗಳಿಂದ ಕಾಂಗ್ರೆಸು ಈ ಸಾರಿ ಕಾಯಿದೆ ಮಂಡಲಗಳಿಗೆ ಪ್ರವೇಶ ಮಾಡುವುದು ಆದರೂ ಕೆಲವು ಮಂದಿ ಸ್ವಾರ್ಥಿಗಳು ತಮ್ಮ ಸ್ವಂತ ಲಾಭದ ದೃಷ್ಟಿಯಿಂದ ಜನರ ಹಿತದ ಕಡೆಗೆ ಲಕ್ಷ್ಯ ಕೊಡದೆ ಸಂಕುಚಿತ ಮತ್ತು ಅಸ್ಪಷ್ಟ ಧ್ಯೇಯವಿರುವ ಜಸ್ಟಿಸ್ ಮೊದಲಾದ ಪಕ್ಷಗಳನ್ನು ಕಟ್ಟಿಕೊಂಡು ಕಾಂಗ್ರೆಸ್ ಕಡೆ ಉಮೇದ್ವಾರರನ್ನು ವಿರೋಧಿಸುವರು ಮೇಲಿನ ಸಪಾದ್ವೇಶಗಳನ್ನೂ ಇಟ್ಟುಕೊಂಡು ಕಾಂಗ್ರೆಸಿನವರೂ ಒಂದು ಬಲವಾದ ಪಕ್ಷವಾಗಿ ಒಗ್ಗಟ್ಟಿನಿಂದ ನಮ್ಮ ಕೈಗಾರಿಕೆಗಳಿಗೆ ಪ್ರೋತ್ಸಾಹಕೊಟ್ಟು, ಬಡತನ ನಿವಾರಣೆ ಮಾಡುವದೂ ಕಂದಾಯ ಕಡಿಮೆ ಮಾಡುವುದರ ವಿಷಯ, ರೈತರ ಸಾಲದ ವಿಷಯ, ಕೋರ್ಟು ಕಚೇರಿಗೆ ರಜೆ ಕೊಡುವುದರ ವಿಷಯ ಜನರಿಗೆ ಹಿತವಾಗುವಂತೆ ಕೆಲಸಗಳನ್ನು ಮಾಡುವುದಕ್ಕೆ ಪ್ರಯತ್ನ ಮಾಡುವರು ಎಸೆಂಬ್ಲಿಯಲ್ಲಿ ಎಲ್ಲಾ ವಿಷಯಗಳೂ ಬಹುಮತದಿಂದ ನಿರ್ಣಯ ಆಗಬೇಕು ಎಷ್ಟು ದೊಡ್ಡ ಮನುಷ್ಯನಾಗಲೀ ಒಬ್ಬರೂ, ಇಬ್ಬರೂ ಮೆಂಬರರು ಯಾವುದಾದರೊಂದು ದೊಡ್ಡ ರಾಜಕೀಯ ಪಕ್ಷದ ಸಹಾಯ ವ ಬೆಂಬಲ ಪಡೆಯದೆ ಏನೂ ಕೆಲಸ ಮಾಡಲಿಕ್ಕೆ ಸಾಧ್ಯವಿಲ್ಲ ಕಾಂಗ್ರೆಸ್ ಕಡೆ ಮೆಂಬರರೂ ಸರಿಯಾದ ಶಿಸ್ತಿನಿಂದ ಕೆಲಸ ಮಾಡುವರು ಅವರಿಗೆ ಎಸೆಂಬ್ಲಿಯಲ್ಲಿ ಖುಷಿ ಬಂದ ಹಾಗೆ ನಡೆಯಲು ಆಗುವುದಿಲ್ಲ ಅವರನ್ನು ಕೇಳುವವರೂ ಕಾಂಗ್ರೆಸ್ ಪಾರ್ಟಿಯವರೂ ವ ಕಮಿಟಿಯವರೂ ಇದ್ದಾರೆ ಅವರೂ 4 ಆಣೆಯ ಹೊಸ ಕಾಂಗ್ರೆಸ್ ಮೆಂಬರರಾದರೂ ಅವರು ಕಾಂಗ್ರೆಸಿನವರು ಹೇಳಿದ ಹಾಗೆ ಕೇಳುತ್ತೇವೆಯೆಂದು ಬರಹ ಮೂಲಕ ಪ್ರತಿಜ್ಞಾಪತ್ರಿಕೆ ಕೊಟ್ಟಿರುತ್ತಾರೆ ಹಾಗೆ ಕೇಳದಿದ್ದರೆ ಅವರನ್ನು ಕಾಂಗ್ರೆಸಿನವರು ಶಿಸ್ತಿನ ಶಿಕ್ಷೆಗೀಡು ಮಾಡುತ್ತಾರೆ ಮುಂದೆ ರಾಜಕೀಯ ಮತ್ತು ಸಾರ್ವಜನಿಕ ಜೀವನದಲ್ಲಿ ಸ್ಥಾನ ಬೇಕೆಂದಿರುವವನೂ ಹಾಗೆ ಎಂದಿಗೂ ಮಾಡಲಾರನು ಆದುದರಿಂದ ಜೈಲಿಗೆ ಹೋದವರೇ ಎಸಂಬ್ಲಿ ಉಮೇದ್ವಾರರಾಗಬೇಕೆಂಬ ನಿಯಮವಿಲ್ಲ.

ನಮ್ಮ ಜಿಲ್ಲೆಯಲ್ಲಿ ಕಾಂಗ್ರೆಸ್ ಕಡೆ ಉಮೇದ್ವಾರರನ್ನು ವಿರೋಧಿಸುವ ಉಮೇದ್ವಾರರ ಕಡೆ ಕೆಲವರು ವ್ಯಕ್ತಿದೃಷ್ಟಿಯಿಂದ ನೋಡಿ ಅವರು ತಮ್ಮ ಅತ್ಯಂತ ಮಿತ್ರರು ವ ಸಂಬಂಧಿಕರು ವ ಜಾತಿಯವರು ಎಂದು ಅವರಿಗೆ ಸಹಾಯ ಮಾಡುತ್ತಿರುವದು ಶೋಚನೀಯಕರವಾದ ಸಂಗತಿಯಾಗಿದೆ ಈ ಸಾರಿಯ ಚುನಾವಣೆಯಲ್ಲಿ ವ್ಯಕ್ತಿಗಳ ಪೂಜೆಗೆ ಆಸ್ಪದವೇ ಇಲ್ಲ ಯಾವ ಉಮೇದ್ವಾರನು ಯಾವ ರಾಜಕೀಯ ಪಕ್ಷಕ್ಕೆ ಸೇರಿದವನು'ಆ ಪಕ್ಷಕ್ಕೆ ಜನರ ಬೆಂಬಲ ಎಷ್ಟು ಇದೆ ಆ ಪಕ್ಷವು ಇದುವರೆಗೆ ನಮಗೆ ಒಳ್ಳೇದು ಮಾಡಿಯದೋ ಕೆಟ್ಟದ್ದು ಮಾಡಿಯದೂ ಯಾವ ಪಕ್ಷಕ್ಕೆ ಓಟುಕೊಟ್ಟರೆ ನಮಗೆ ಒಳ್ಳೇದಾದೀತು ಎಂದು ಆಲೋಚಿಸಿ ನಮ್ಮ ಓಟುಗಳನ್ನು ಕೊಡಬೇಕು ಓಟು ಕೊಡುವಂಥಾದ್ದು ನಮಗೆ ಇರುವ ಒಂದು ಪವಿತ್ರವಾದ ಹಕ್ಕು ಕಾಂಗ್ರೆಸಿನವರ ಕೆಲಸದಿಂದ ಈಗ ಸೇಕಡ ೧೦ ಜನರಿಗೆ ಓಟುಕೊಡುವ ಹಕ್ಕು ದೊರೆತಿದೆ ಈ ಹಕ್ಕನ್ನು ನಾವು ದುರುಪಯೋಗ ಮಾಡಬಾರದು ಕಾಂಗ್ರೆಸ್ ಪಕ್ಷದವರಾಗಲೀ ಜಸ್ಟೀಸ್ ಪಕ್ಷದವರಾಗಲಿ, ಅವರವರ ಪಕ್ಷಗಳ ಧ್ಯೇಯಕ್ಕೆ ಸರಿಯಾಗಿ ಅವರು ಹೋಗುವವರು ಇಲ್ಲವಾದರೆ ಅವರನ್ನು ಆ ಪಕ್ಷದಿಂದ ಹೊರಗೆ ತಳ್ಳಿದಾಕುವರು ನಮಗೆ ಕೇಡುಕನ್ನು ಉಂಟುಮಾಡುವ ಪಕ್ಷದವರಿಗೆ ನಮ್ಮ ಓಟು ಕೊಟ್ಟು ಅವರನ್ನು ನಮ್ಮ ಪ್ರತಿನಿಧಿಗಳನ್ನಾಗಿ ಕಳಿಸಿದರೆ ಅವರು ದೇಶಕ್ಕೆ ಮಾಡಬಹುದಾದ ಕೇಡುಕುಗಳಿಗೆ ನಮ್ಮ ಒಪ್ಪಿಗೆ ಕೊಟ್ಟಹಾಗಾಗುವದು ಕಾಂಗ್ರೆಸಿನವರು ದೇಶಕ್ಕೋಸ್ಕರ ಅನೇಕ ತ್ಯಾಗಗಳನ್ನು ಮಾಡಿದ್ದಾರೆ ಜಸ್ಟಿಸ್ ಪಾರ್ಟಿಯವರು ಯಾವತ್ಯಾಗವನ್ನೂ ಮಾಡಿದ್ದಿಲ್ಲ. ಜಸ್ಟಿಸ್‌ಪಾರ್ಟಿಯವರು ಅವರು ಅಧಿಕಾರ ನಡಿಸಿದ ಕಳೆದ ೧೫ ವರ್ಷಗಳಲ್ಲಿ ನಮಗೆ ಅನೇಕ ಕೇಡುಕುಗಳನ್ನು ಮಾಡಿದ್ದಾರೆಯೇ ಹೊರತು ಒಳ್ಳೇದು ಮಾಡಿದ್ದು ಬಹಳ ಕಡಿಮೆ ಕಳೆದ ೧೫ ವರ್ಷಗಳಲ್ಲಿ ನಮ್ಮ ಮದ್ರಾಸು ಸಂಸ್ಥಾನದಲ್ಲಿ ಜಸ್ಟಿಸ್‌ಪಾರ್ಟಿಯವರು ರೂ ೫೦ ಕೋಟಿ ತೀರ್ವೆ ಏರಿಸಿರುತ್ತಾರೆ ಇದರ ಪ್ರಯೋಜನ ಜನರಿಗೆ ಏನೂ ಸಿಕ್ಕಲಿಲ್ಲ ಕಾಂಗ್ರೆಸಿನವರು ಈ ವರೆಗೆ ದೇಶಕ್ಕೆ ಮಾಡಿದ ಸೇವೆ ಇನ್ನು ಮುಂದಕ್ಕೆ ಕೈಗೊಳ್ಳುವ ಕಾರ್ಯಕ್ರಮಗಳನ್ನು ಪ್ರಕಟಿಸಿ ಅಲ್ಲಲ್ಲಿ ಸಭೆಗಳನ್ನು ಮಾಡಿ ಜನರಿಗೆ ಬೋಧನೆ ಕೊಡುತ್ತಾರೆ. ಜಸ್ಟಿಸ್ ಪಾರ್ಟಿಯವರು ಹಾಗೇನೂ ಮಾಡುವುದಿಲ್ಲ ಏಕೆಂದರೆ ಅವರು ಈ ವರೆಗೆ ಒಳ್ಳೇದು ಮಾಡಿದ್ದೂ ವಿಶೇಷ ಇಲ್ಲ, ಮುಂದೆ ಒಳ್ಳೇದು ಮಾಡುವ ಕಾರ್ಯಕ್ರಮಗಳೂ ಅವರಲ್ಲಿಲ್ಲ ನಮ್ಮ ಕೂಡೆ ಓಟು ಕೇಳಲಿಕ್ಕೆ ಬರುವಾಗ ತಾವು ಜಸ್ಟಿಸ್ ಪಾರ್ಟಿಗೆ ಸೇರಿದವರು ಎಂದು ಹೇಳಲಿಕ್ಕೆ ಸಹ ಅವರಿಗೆ ನಾಚಿಕೆ ಆಗುತ್ತದೆ ತಾವು ಮುದುಕರು ತಾವು ಹಾಗೆ ಮಾಡುತ್ತೇವ ಹೀಗೆ ಮಾಡುತ್ತೇವೆ ಎಂದು ಗುಟ್ಟಿನಲ್ಲಿ ಬಂದು ಓಟುಕೇಳುತ್ತಾರೆ ಕಾಂಗ್ರೆಸಿನವರ ಹಾಗೆ ಅವರು ಸಭೆಗಳನ್ನು ಮಾಡುವುದಿಲ್ಲ ಹಾಗೆ ಮಾಡಿದರೆ ಅವರ ಗುಟ್ಟು ಹೊರಗೆ ಬೀಳುವದು

ಆದುದರಿಂದ ಓಟರರೇ! ನೀವು ವ್ಯಕ್ತಿಗಳ ಕಡೆಗೆ ವ ಜಾತಿಯ ಕಡೆಗೆ ನೋಡದೆ ಕಾಂಗ್ರೆಸಿನವರೂ ಸ್ವೀಕರಿಸಿರುವ ಶುಭಸೂಚಕವಾದ ಹಳದಿ ಬಣ್ಣದ ಪೆಟ್ಟಿಗೆಗೆ ನಿಮ್ಮ ಪವಿತ್ರವಾದ ಓಟುಗಳನ್ನು ಹಾಕಿ ಕಾಂಗ್ರೆಸಿನವರು ಪ್ರಚಂಡ ಬಹುಮತದಿಂದ ಆರಿಸಿ ಬರುವಂತೆ ಮಾಡಿ ನಿಮ್ಮನ್ನು ನೀವು ಉದ್ಧಾರಮಾಡಿ ಕೊಳ್ಳಿರಿ.

ಎಂ. ಎಸ್. ಅಧಿಕಾರಿ, ಕಾರ್ಕಳ.
ತಾ. 31-1-1937

ಪಲಮಾರಿನಲ್ಲಿ ನಡೆದ ಉಪಾಧ್ಯಾಯರ ಸಭೆ

ತಾ. 23-1-37ನೇ ದಿನ ಪಲಮಾರಿನಲ್ಲಿ ದಿ. ಬ ಮಹಾಬಲ ಹೆಗ್ಡೆಯರ ಅಧ್ಯಕ್ಷತೆಯಲ್ಲಿ ಡಿ. ಬೋ. ಶಾಲಾ ಉಪಾಧ್ಯಾಯರದೊಂದು ಸಭೆ ನಡೆದಿತ್ತು. ಮಂಗಳೂರಿನಲ್ಲಿ ಜರಗಿಸಿದ್ದ ವಿದ್ಯಾಪ್ರದರ್ಶನದಲ್ಲಿ ಮೊನ್ನೆ ತಾನೇ ತಾ. 15, 16ರಲ್ಲಿ ಕೂಡಿದ್ದ ಉಪಾಧ್ಯಾಯರ ಸಭೆಯು, ಅಷ್ಟು ಬೇಗನೇ ಮತ್ತೊಂದು ಸಭೆಯಾಗಿ ಪಲಮಾರಿನಲ್ಲಿ ಕೂಡಿ ಬಂದ ಉದ್ದೇಶವೇನೋ ಗೊತ್ತಾಗುವುದಿಲ್ಲ. ಆದರಲ್ಲಿಯೂ ಚುನಾವಣೆಯ ಕೆಲಸದ ದೆಸೆಯಿಂದ ಡಿ. ಬೋ. ಮೀಟಿಂಗಿಗೆ ಕೂಡಾ ಬರುವಷ್ಟು ಸಮಯವಿಲ್ಲದ ದಿ. ಬ. ಹೆಗ್ಡೆಯರೇ ಅಧ್ಯಕ್ಷರಾಗಿದ್ದು ನಡೆದ ಈ ಸಭೆಯು ಅದೊಂದು ಬಗೆಯ ಅನುಮಾನವನ್ನು ಎಲ್ಲರಲ್ಲಿಯೂ ಹುಟ್ಟಿಸುವಂತಿದೆ. ಈ ಸಭೆಗೂ ನಡೆಯುವ ಚುನಾವಣಾರಂಗಕ್ಕೂ ಏನೋ ಸಂಬಂಧವಿರಬೇಕೆಂದು ಮೊದಲಾಗಿ ಹಲವರು ಊಹಿಸಿದ್ದರೂ, ಅದು ಕೂಡಾ ಬಹಿರಂಗಕ್ಕೆ ಬಾರದೆ ಉಪಾಧ್ಯಾಯರುಗಳ ಕಷ್ಟ ಪರಂಪರೆಯ ಸಲುವಾಗಿಯೇ ಆ ಸಭೆಯು ನಡೆದುದಾಗಿ ಹೇಳುತ್ತಾರೆ. ಆದರೆ ಈ ಮೊದಲೇ ಪಾಸಾಗಿದ್ದ ಕೆಲವು ಠರಾವುಗಳು ಮಾತ್ರ ಅಲ್ಲಿಯೂ ಚರ್ವಿತಚರ್ವಣವಾಗಿದ್ದುವೆಂದು ತಿಳಿದುಬರುತ್ತಿದೆ. ಈ ಸಂದರ್ಭದಲ್ಲ ದಿ. ಬ. ಹೆಗ್ಡೆಯರಾದರೂ ಉಪಾಧ್ಯಾಯರುಗಳಿಗೆ ಯಾವ ಭರವಸೆ ಕೊಟ್ಟಿರುವರೆಂದು ಗೊತ್ತಾಗಿಲ್ಲ. ಅಂತೂ ಈ ಮೊದಲು ಬೋರ್ಡಿನಲ್ಲಿ ಏನೂ ಹಣವಿಲ್ಲೆಂಬ ಸುಳ್ಳು ಪ್ರಚಾರವು ನಡೆದಿದ್ದು, ಬಜೆಟಿನ ಸಮಯ ಉಪಾಧ್ಯಾಯರ ಸಂಬಳದ ಕಡಿತವು ಏರಿದ್ದು, ಬೋರ್ಡಿನಲ್ಲಿ ರೂ. 75000/- ದಷ್ಟು ಇದೆಯೆಂಬ ನಿಜಾಂಶವು ಗೊತ್ತಾಗಿ, ಸದ್ರಿ ಏರಿದ ಕಡಿತವನ್ನು ತೆಗೆದುಹಾಕಬೇಕೆಂಬ ಠರಾವನ್ನು ಕಾಂಗ್ರೆಸ್ ಮೆಂಬರರ ಕಡೆಯಿಂದ ಡಾ| ವಿಟ್ಠಲ ಶೆಟ್ರು ತಂದಿದ್ದರು. ಆ ಕಾಲದಲ್ಲಿ ಆ ಠರಾವನ್ನು ಬಾರದಂತೆ ಮಾಡುವರೆ ದಿ. ಬ. ಹೆಗ್ಡೆಯರೂ, ಅವರೊಂದಿಗೆ ಪಲಮಾರಿಗೆ ಬಂದಿದ್ದ ಡಿ. ಬೋ. ಮೆಂಬರ್ ರಾ| ಕೆ. ಜೆ. ಬಳ್ಳಾಲರೂ ಬಹುವಾಗಿ ಪ್ರಯತ್ನಿಸಿದವರು. ಅಲ್ಲದೆ ಕಡಿತ ಮಾಡುವಾಗ ಸರಕಾರದ ಹುಕುಮನ್ನು ಕಾಯ-ದೇನೆ ಕೆಲಸ ಮುಂದುವರಿಸಿದ್ದು ಸದ್ರೀ ಕಡಿತವನ್ನು ತೆಗೆಯಬೇಕೆಂಕೆಂದು ಡಿ. ಬೋರ್ಡಿನ ಬಹುಮತವು ನಿರ್ಣೈಸಿದರೂ ಅದನ್ನು ಕೂಡಲೇ ಜಾರಿಗೆ ತಾರದೆ ಸರಕಾರಕ್ಕೆ ಬರೆದು ಹುಕುಮನ್ನು ಕಾದಿದ್ದ ಅಧ್ಯಕ್ಷರೂ, ಅವರನ್ನು ಅನುಸರಿಸಿದ್ದ ಮೆಂಬರರೂ ಉಪಾಧ್ಯಾಯರ ಸಂಕಷ್ಟಗಳ ನಿವಾರಣೆಗಾಗಿ ಯಾವ ರೀತಿಯಿಂದ ಪೇಚಾಡುವರೆಂದು ನಮಗಂತೂ ಗೊತ್ತಾಗುವುದಿಲ್ಲ. ಕಡಿತವನ್ನು ತೆಗೆದು ಹಾಕುವಂತೆ ಪ್ರಯಾಸಪಟ್ಟು ಕೆಲಸಮಾಡಿದ ಉಪಾಧ್ಯಾಯರ ಸಂಘದ ಕಾರ್ಯದರ್ಶಿ ಶ್ರೀ ಬಾಬು ಶೆಟ್ರಿಗೆ ಡಿ. ಬೋ. ಎಡ್ಯುಕೇಶನಲ್ ಆಫೀಸರರ ಮೂಲಕ ಎಚ್ಚರಿಕೆಯನ್ನು ಕೂಡಾ ಕೊಡಿಸಿದ್ದು ಆ ಕುರಿತು ಬೋರ್ಡಿನಲ್ಲಿ ಪ್ರಶ್ನೆಗಳನ್ನು ಕೇಳಿರುವುದು ವಿದಿತ ವಿಚಾರವು. ಇದನ್ನೆಲ್ಲಾ ನೋಡುವಾಗ ಹಲವು ಕಡೆಗಳಿಂದ ಬಂದಿದ್ದ ಉಪಾಧ್ಯಾಯರ-ಗಳನ್ನು ಎಷ್ಟೋ ಕಷ್ಟನಷ್ಟಗಳಿಗೆ ಗುರಿಪಡಿಸಿದಂತಾಯ್ತಲ್ಲದೆ, ಅವರ ಸಂಬಳದ ಕಡಿತವನ್ನು ಕಡಿಮೆ ಮಾಡುವ ವಿಷಯದಲ್ಲಯೂ ತೊಂದರೆಗಳನ್ನೇ ಮಾಡಲೆತ್ನಿಸಿದ ಅಧ್ಯಕ್ಷರಿಂದಲೂ ಅವರ ಅನುಯಾಯಿಗಳಿಂದಲೂ ಉಪಾಧ್ಯಾಯ ವೃಂದಕ್ಕೆ ಅದೆಷ್ಟು ಪ್ರಯೋಜನವಾದೀತೆಂದು ಯಾರು ತಾವೇ ತಿಳಿಯಲಾರರು?

ಬಡ ಉಪಾಧ್ಯಾಯ.

ನೋಟೀಸು

ಕುಂದಾಪುರ ಡಿ. ಮು. ಕೋರ್ಟಿನಲ್ಲಿ.

O. S. ಸಂಬ್ರ 501/1935
R. E. P. No. 913/1936

ಸೀತಾರಾಮ ಆಚಾರ್ಯ — ವಾದಿ, ಅರ್ಜಿದಾರ
ಶ್ರೀನಿವಾಸ ವೈದ್ಯ ಕೊಡಾ — ಪ್ರತಿವಾದಿರು ಎದ್ರಿರು

ಈ ಮೂಲಕ ಸರ್ವ ಜನರಿಗೂ ತಿಳಿಸುವುದೇನೆಂದ್ರೆ ನೇಲ್ಕಂಡ ಅಮಲ್‌ಜ್ಯಾರಿಯಲ್ಲಿ ಅರ್ಜಿದಾರನು ಎದ್ರಿರ ಹಕ್ಕಿನ ಸ್ಥಿರ ಆಸ್ತಿಗಳನ್ನು ಏಲಮಿಗೆ ಅಪೇಕ್ಷಿಸಿ ಈ ಕೋರ್ಟಿನಲ್ಲಿ ಏಲಂ ಇಸ್ತಿಹಾರು ದಾಖ್ಲು ಮಾಡಿರುತ್ತಾನೆ. ಆದ್ದರಿಂದ ಇದೇ ಇಸವಿ ಫೆಬ್ರವರಿ ತಾರೀಕು 4ಕ್ಕೆ ವಿಕ್ರಯದ ವರತುಗಳನ್ನು ನಿಶ್ಚಯಿಸುವರೆ ಅಮಲ್‌ಜ್ಯಾರಿ ತನಖಿಗೆ ಇಟ್ಟಿರುತ್ತದೆ ಎಂತ ಈ ಮೂಲಕ ತಿಳಿಸಿಯದೆ.

P. Mahabal Rao,
Pleader for Plaintiff,

ಕುಂದಾಪುರ, 30-1-'37

ಕಿರಿಯರ ಪ್ರಪಂಚ

೧	ನಾಡಕಥೆ	೦	೨	೦
೨	ಮುಂದಿನ ದೇವರು	೦	೨	೦
೩	ಸ್ವತಂತ್ರ ಜೀವನೋಪಾಯ	೦	೨	೬
೪	ಕುಶ-ಲವ	೦	೪	೦
೫	ಸಂಶಯ ಪಿಶಾಚಿ	೦	೬	೦
೬	ಕಾವ್ಯಸಾಮ್ರಾಜ್ಯ ..	೦	೧೨	೧
೭	ಮಧುವನ ...	೧	೮	೦
೮	ವ್ಯಭಿಚಾರಿಣಿ ಯಾರು	೦	೮	೦

ಕಿರಿಯರ ಪ್ರಪಂಚ, ಉಡುಪಿ.

ಬಾಲವಾಙ್ಮಯದ ಆವಶ್ಯಕತೆ ಮತ್ತು ನಿರ್ಮಾಣದ ವಿಷಯಕವಾದ ಪ್ರಬಂಧ

ಬಾಲವಾಙ್ಮಯ

ಬೆಲೆ ಮೂರಾಣೆ

ಉಪಾಧ್ಯಾಯರ ಪ್ರಕಟನ ಸಮಿತಿ, ಉಡುಪಿ

ಕುಂದಾಪುರ ಡಿವಿಜನಿನ ಚುನಾವಣೆಯೂ ಪಲಮಾರಿನ ಸಹಾನುಭೂತಿಯು

ತಾ. ೩೦-೧-೩೭ನೇ ದಿನ ಕುಂದಾಪುರ ಡಿವಿಜನಿನ ಚುನಾವಣೆಯ ಸಂಬಂಧ ಪಲಮಾರಿನಲ್ಲಿ ಸಾರ್ವಜನಿಕ ಸಭೆಯು ನಡೆದಿತ್ತು. ಕಾಂಗ್ರೆಸಿನ ಕಡೆಗೆ ಜನರೆಲ್ಲಾ ಸಹಾನುಭೂತಿಯನ್ನು ಚೆನ್ನಾಗಿ ತೋರಿಸುತ್ತಿದ್ದರೂ, ಆ ದಿನ ಅಲ್ಲಿಯ ಶ್ರೀ. ಶ್ರೀಪಾದಂಗಳವರು ಇಲ್ಲದೇ ಇದ್ದುದರಿಂದ ಕೆಲವರೆಲ್ಲಾ ಈ ವಿಷಯದಲ್ಲಿ ಅವರ ಅಭಿಪ್ರಾಯವೇನೆಂದು ಕೇಳಿರುತ್ತಾರೆ. ನನ್ನ ಉಮೇದ್ವಾರಿಕೆಯ ವಿಷಯದಲ್ಲಿಯೂ, ಕಾಂಗ್ರೆಸಿನ ವಿಚಾರದಲ್ಲಿಯೂ ಅವರಿಗೆ ಪೂರ್ಣ ಸಹಾನುಭೂತಿಯಿರುವುದೆಂಬದನ್ನು ಈ ಕೆಳಗೆ ಕಾಣಿಸಿರುವ ಅವರು ಈ ಮೊದಲು ನನಗೆ ಬರೆದಿರುವ ಕಾಗದವೇ ರುಜು ಮಾಡುತ್ತಿದೆ.

ಎ. ಬಿ. ಶೆಟ್ಟಿ.

ಪಲಿಮಾರು ಮಠದ ಶ್ರೀ ಶ್ರೀಪಾದಂಗಳವರು

ಆತ್ಮಾವರ ಎ. ಬಿ. ಸೆಟ್ರುವರಿಗೆ ಮಾಡುವ ಶ್ರೀಮನ್ನಾರಾಯಣ ಸ್ಮರಣೆಗಳು-ಸಾಂಪ್ರತಂ ನಿಮ್ಮ ತಾ. ೧೧-೧೧-೩೬ನೇ ಪತ್ರವು ತಲ್ಪಿ ಅಭಿಪ್ರಾಯ ತಿಳಿಯಲಾಯ್ತು. ನಮ್ಮ ಮಠದ ಪರ್ಯಾಯ ಸಂಬಂಧಪಟ್ಟ ಕೆಲವು ಕೆಲಸಗಳ ಕಾರಣ ನಾವು ಉಡ್ಪಿ ಅತ್ತಕಡೆ ಪ್ರಯಾಣ ಬೆಳೆಸಿದ್ದರಿಂದ ಕೂಡ್ಲೆ ಜವಾಬುಬರೆಯುವರೆ ಅನಾನುಕೂಲವಾಯ್ತು. ಮಠಗಳ ಹಿತವನ್ನು ಸಾಧಿಸಿ ಸದ್ರಿ ಬಿಲಿಗೆ ನೀವು ವಿರೋಧಿಸಿದ್ದನ್ನು ಎಲ್ಲರೂ ತಿಳಿದಿದ್ದ ವಿಷಯವಾಗಿರುತ್ತದೆ. ಅದನ್ನು ನಾವು ಅಷ್ಟ ಮಠದವರು ಎಂದಿಗೂ ಮರಿಯುವ ಹಾಗಿಲ್ಲ. ಅಲ್ಲದೆ ಈ ಬಡ ಹಳ್ಳಿಗರ ಮೇಲೆ ತುಂತುಂಬಾ ಸಹಾನುಭೂತಿಯಿಟ್ಟು ನೀವು ಮಾಡಿರುವ ಅನೇಕ ಕೆಲಸಗಳು ಚಿರಸ್ಮರಣೀಯವಾಗಿವೆ. ಆ ಬಗ್ಗೆ ನಾವು ನಿಮಗೆ ಎಷ್ಟು ಕೃತಜ್ಞರಾದರೂ ಸಾಲದು.

ಚುನಾವಣೆ ಬಾಬಿನಲ್ಲಿ ನಿಮ್ಮ ಮೇಲ ಹಾಗೂ ಕಾಂಗ್ರೆಸ್ ಸಂಸ್ಥೆ ಮೇಲೆ ನಮಗಿರುವ ಅಭಿಮಾನವು ಎಂದೂ ಕಡಿಮೆಯಾಗದು. ಪರಂತು ನಮ್ಮ ಈಗಿನ ಪರಿಸ್ಥಿತಿ ಮೇಲಣ ಅನೇಕ ಕಾರಣಗಳಿಂದ ಚುನಾವಣೆಯಲ್ಲಿ ನಾವು ಹೆಚ್ಚಿನ ಭಾಗವನ್ನೂ ವಹಿಸಿ ಒಬ್ಬರ ಕಡೆಯಿಂದ ಕೆಲಸಮಾಡಲಿಕ್ಕೆ ಹೆಚ್ಚಿನ ಅನಾನುಕೂಲತೆಗಳು ಬಂದೊದಗಿವೆ. ಆದರೆ ಇದರಿಂದ ನಮ್ಮ ಅಭಿಪ್ರಾಯವು ಬದಲಾವಣೆ ಹೊಂದಲಾರದು. ನಮ್ಮ ಹಳ್ಳಿಯಲ್ಲಿ ನಿಮಗೆ ಯಾವ ತರದ ತೊಂದರೆಯೂ ಬರಲಾರದೆಂದು ಖಂಡಿತವಾಗಿ ಹೇಳಬಲ್ಲೆವು. ಸಂಸ್ಥಾನದ ಮೇಲೆ ತುಂಬಾ ಅಭಿಮಾನವಿಟ್ಟು ನಮ್ಮ ಹಳ್ಳಿಯ ಹಿತವನ್ನು ಎಂದಿನಂತೆಯೇ ಭಾವಿಸಬೇಕಾಗಿ ಅಪೇಕ್ಷಿಸುತ್ತೇವೆ.

ದಸ್ಕತು.

ಇತ್ಯನೇಕ ಶ್ರೀಮನ್ನಾರಾಯಣ ಸ್ಮರಣೆಗಳು.

ನವಯುಗಕ್ಕೆ ಇಂದೇ ಚಂದಾದಾರರಾಗಿರಿ!

ಕೊಡಗು ಫಾರೆಸ್ಟ್ ಇಲಾಖೆ, ಮಡಿಕೇರಿ

ಮಾರಾಟಕ್ಕೆ

ಮಡಿಕೇರಿಯಿಂದ ಮಂಗಳೂರಿಗೆ ಹೋಗುವ ರಸ್ತೆಯ ಬಾಜಿನಲ್ಲಿ 14ನೇ ಮೈಲಿನ ಬಲಪಾರ್ಶ್ವದ ಸಂಪಾಜೆ ಫಾರೆಸ್ಟಿನಲ್ಲಿ ಅಂದಾಜು 1700 ತೇಗದ ಸರಗಳು 1937ನೇ ಫೆಬ್ರವರಿ ತಿಂಗಳ 16ನೇ ಮಂಗಳವಾರ ಹಗಲು 11 ಘಂಟೆಗೆ ಸರಿಯಾಗಿ ಫ್ರೇಸರ್‌ಪೇಟ್ ರೇಂಜಾಫೀಸರವರಿಂದ ಸಂಪಾಜೆ ಫಾರೆಸ್ಟಿನ ಕ್ಯಾಂಪ್ ಮನೆಯ ಕಂಪಾಂಡಿನಲ್ಲಿ ಹರಾಜು ಮಾಡಲ್ಪಡುವವು. ಸರಗಳು 1 ಅಡಿಯಿಂದ 2 ಅಡಿಗಳ ವರೆಗೆ ದಪ್ಪವಾಗಿಯೂ 12 ಅಡಿಯಿಂದ 25 ಅಡಿಗಳ ವರೆಗೆ ಉದ್ದವಾಗಿಯೂ ಇರುವವು. ಹೆಚ್ಚಿನ ಮಾಹಿತಿಗೆ,

ಚೀಫ್ ಫಾರೆಸ್ಟ್ ಆಫೀಸರು, ಮಡಿಕೇರಿ, ಕೊಡಗು,

ಇವರಿಗೆ ಬರೆಯತಕ್ಕದ್ದು.

ಚುನಾವಣೆಯ ಜಯವೇ ಮುಂದಿನ ಮಹಾ ವಿಜಯದ ಪೂರ್ವಸೂಚನೆ

ಇದೊಂದು ಯಾತ್ರೆಯೆಂದು ತಿಳಿದು ವೋಟು ಕೊಡಲು ನಡೆದೇ ಹೋಗಿರಿ.

ವೋಟರರಿಗೆ ಪಂಡಿತ ನೆಹರು ಮತ್ತು ಸರದಾರ ಪಟೇಲರ ಬೋಧನೆ

ಪಂಡಿತ ಜವಾಹಿರಲಾಲರು ಚುನಾವಣೆಯಲ್ಲಿ ಕೊಂಗ್ರೆಸು ಗೆದ್ದು ಬರುವಂತೆ ಮಾಡಲು ಎಡೆಬಿಡದೆ ಶ್ರಮಿಸುತ್ತಿರುವರು. ಊರಿಂದೂರಿಗೆ ವಿಮಾನದಲ್ಲಿ ಧಾವಿಸುತ್ತಾ ಜನತೆಯಲ್ಲಿ ಜಾಗ್ರತಿಯನ್ನುಂಟು ಮಾಡುತ್ತಿರುವರು. ಅವರು ಹೋದೆಡೆಗಳಲ್ಲಿ ಜನರು ಹಿಂಡುಗಟ್ಟಿ ದರ್ಶನಾಪೇಕ್ಷೆಯಿಂದ ನುಗ್ಗುವ ರಭಸದಿಂದ ಒಂದೆರಡು ಕಡೆಗಳಲ್ಲಿ ವಿಮಾನದ ರೆಕ್ಕೆಗಳಿಗೆ ಪೆಟ್ಟಾಗಿದುವದು. ಬಾಂಡಾ ಎಂಬಲ್ಲಿ ಪ್ರಚಂಡ ಜನಸಮುದಾಯಕ್ಕೆ ಭಾಷಣವೀಯುತ್ತಾ "ಹಿಂದೀ ಸ್ವಾತಂತ್ರ್ಯದ ಭಾವೀ ಯುದ್ಧವು ಅತ್ಯಂತ ಸಮೀಪದಲ್ಲಿರುವುದು. ಜನರು ಅದಕ್ಕೆ ಸಿದ್ಧರಿರಬೇಕು. ಇಂದಿನ ಚುನಾವಣೆಯ ಜಯವೆಂಬುದು ಮುಂದಿನ ಆ ಮಹಾವಿಜಯದ ಮುಂಗುರುತು" ಎಂದರು. ಸುಮಾರು 50000 ಸಾವಿರ ಜನರು ನೆರೆದಿದ್ದ ಹಮಿರಪುರ ರಾಜಕೀಯ ಪರಿಷತ್ತಿನಲ್ಲಿ ಭಾಷಣವಿತ್ತು ಕೊಂಗ್ರೆಸ್ ಧ್ವಜವು ಹಾರಾಡುವಂತೆ ಮಾಡಬೇಕೆಂದು ಕೇಳಿಕೊಂಡರು. ಹೋದಲ್ಲೆಲ್ಲಾ ಅವರಿಗೆ ನಿಧಿ ಸಮರ್ಪಣೆಯಾಗುತ್ತಿರುವುದು. ಅವರು ಇದೇ ತಾ. 9ಕ್ಕೆ ಬೊಂಬಾಯಿಗೆ ತೆರಳಿ ತಾ. 10ರಲ್ಲಿ ವಿಮಾನವೇರಿ ಕಂಣಾನೂರಿಗೆ ಬಂದಿಳಿಯುವರು. ಅಲ್ಲಿಂದ ರೈಲು ಹತ್ತಿ ದಕ್ಷಿಣಕನ್ನಡಕ್ಕೆ ಬಂದು ತಾ. 11ನೇ ಅಪರಾಹ್ನ ಧಾರವಾಡ ಮಾರ್ಗವಾಗಿ ಹೊರಟು ಹೋಗುವರು.

ಸರದಾರ ಪಟೇಲರ ಕರೆ

"ಬರುವ ಪ್ರಾಂತಿಕ ಚುನಾವಣೆಯು ಈ ತನಕ ನೀವು ಕಂಡಿರುವ ಚುನಾವಣೆಗಳಿಗಿಂತ ತೀರಾ ಭಿನ್ನವಾದುದು. ನಿಮ್ಮಲ್ಲಿ ಎಷ್ಟೇ ಕೊಂಗ್ರೆಸ್ ಭಾವನೆಯಿರಲಿ, ಅಖಿಲ ಭಾರತದಲ್ಲಿ ಸಂಘಟನೆಯನ್ನುಂಟು ಮಾಡದೆ ನಿಮ್ಮ ಕಾರ್ಯವು ಫಲಿಸದು" ಬೊಂಬಾಯಿಯ ಪ್ರಚಂಡ ಸಾರ್ವಜನಿಕ ಸಭೆಯಲ್ಲಿ ಭಾಷಣವೀಯುವಾಗ ವಲ್ಲಭಭಾಯಿ ಪಟೇಲರು ಹೀಗೆಂದರು. ಕೊಂಗ್ರೆಸ್ ಕೇಂದ್ರ ಪಾರ್ಲಿಮೆಂಟರೀ ಬೋರ್ಡಿನ ಅಧ್ಯಕ್ಷರಾದ ಅವರು ಇಡೀ ದೇಶದ ಮತದಾರರನ್ನು ವಿನಂತಿಸುತ್ತಾ "ನಮ್ಮ ಮುಂದಿರುವ ಸಮಯವು ಅತ್ಯಲ್ಪವಾದುದು. ಆದುದರಿಂದ ಅತ್ಯುತ್ಸಾಹದಿಂದ ಕೆಲಸ ಮಾಡಿರಿ. ಈ ದಿನವೇ ನಿಮ್ಮಲ್ಲಿ ಪ್ರತಿಯೊಬ್ಬರೂ ಕೊಂಗ್ರೆಸ್ ಸಂದೇಶವನ್ನು ಪ್ರತಿಯೊಂದು ಮನೆಗೂ ಮುಟ್ಟಿಸಲು ಹೊರಡಿರಿ". "ಕ್ರಾಂತಿಯು ಚಿರಾಯುವಾಗಲಿ" ಎಂದು ಕೂಗಿದಮಾತ್ರಕ್ಕೆ ನಮ್ಮ ಸ್ವರಾಜ್ಯದ ಗುರಿಯನ್ನು ನಾವು ಒಂದಿಷ್ಟೂ ಸಮೀಪಿಸಲಾರೆವು. ಈಗ ಶಕ್ತಿಪೂರ್ಣ ಕಾರ್ಯವು ಬೇಕಾಗಿದೆ. ನಡಕೊಂಡೇ ಯಾತ್ರೆಗೆ ಹೊರಡುವ ರೀತಿಯಲ್ಲಿ ನೀವೆಲ್ಲಾ ಶಿಸ್ತಿನಿಂದ ಕಾಲುನಡಿಗೆಯಿಂದಲೇ ಪೋಲಿಂಗ್ ಸ್ಟೇಶನಿಗೆ ಹೋಗಿರಿ" ಎಂದರು.

ಎಲ್ಲಾ ಪ್ರಾಂತ್ಯಗಳಲ್ಲಿ ಕೊಂಗ್ರೆಸಿನ ಪ್ರಚಂಡ ವಿಜಯ!

ಕ್ರಮಬದ್ಧ ಸೈನಿಕರು

ಚುನಾವಣೆಯ ಕೆಲಸಕ್ಕಾಗಿ ಸಂಯುಕ್ತ ಪ್ರಾಂತ್ಯದಲ್ಲಿ ಸಂಚರಿಸುತ್ತಿದ್ದು ಈಗ ಅನಾರೋಗ್ಯಕ್ಕೆ ಬಲಿಯಾಗಿರುವ ಶ್ರೀಮತಿ ಸರೋಜಿನೀ ನಾಯಿಡೂರವರು ಮಣಿಪುರವೆಂಬಲ್ಲಿಯ 10,000 ಜನರ ಸಭೆಯಲ್ಲಿ ಉತ್ಸಾಹ ಜನಕ ಭಾಷಣವೀಯುತ್ತಾ ಹೀಗೆಂದರು. "ಕೊಂಗ್ರೆಸು ಹೊಸ ಸುಧಾರಣೆಯನ್ನು ಸಂಪೂರ್ಣವಾಗಿ ನಿರಾಕರಿಸಿದೆ; ಅದರ ಸಂಬಂಧವುಂಟಾಗುವ ಎಲ್ಲಾ ಸಂಗತಿಗಳನ್ನೂ ಕೊಂಗ್ರೆಸು ಧಿಕ್ಕರಿಸಿದೆ. ದೇಶದ ನಂಬಿಗೆಯನ್ನು–ಮತವನ್ನು–ಮಾತ್ರ ಅದು ಕೇಳುತ್ತಿದೆ. ಕೊಂಗ್ರೆಸು ಉಮೇದ್ವಾರಿಗಳು ಕ್ರಮಬದ್ಧ ಸೈನಿಕರು ಮಾತ್ರ. ಅವರು ತಪ್ಪು ಮಾಡಿ ಕೊಂಗ್ರೆಸು ವಿಚಾರಣೆಗೊಳಗಾಗಲಾರರೆಂದು ನನಗೆ ಖಾತ್ರಿಯಿದೆ. ಎಲ್ಲರೂ ಕೊಂಗ್ರೆಸಿಗೆ ಬೆಂಬಲವಾಗಿರಿ."

ಕಾರಾಗೃಹದಿಂದ ಸ್ವಾತಂತ್ರ್ಯನಿಲಯಕ್ಕೆ

ಮದ್ರಾಸಿನ ಮತದಾರರನ್ನುದ್ದೇಶಿಸಿ ಭಾಷಣವೀಯುವಾಗ ಕೇಂದ್ರಸಭೆಯ ಕೊಂಗ್ರೆಸ್ ಪಕ್ಷದ ನಾಯಕರಾದ ಶ್ರೀ. ಭುಲಾಭಾಯಿ ದೇಸಾಯಿಯವರು ಮಾರ್ಮಿಕವಾಗಿ ಹೀಗೆಂದು ಉದ್ಗರಿಸಿದರು. "ಯಾವ ಪರಿಸ್ಥಿತಿಯ ನಿರ್ಮಾಣಕ್ಕಾಗಿ ಈ ಚುನಾವಣೆಗಳು ನಮ್ಮ ಮೇಲೆ ಹೊರಿಸಲ್ಪಟ್ಟವೋ ಅದಕ್ಕೆ ಸಂಪೂರ್ಣ ವ್ಯತಿರಿಕ್ತವಾದ ಸ್ಥಿತಿಗತಿಯನ್ನು ನಾವೀಗ ನಿರ್ಮಿಸಿಬಿಟ್ಟಿರುವೆವು. ನಮಗೆ ಕಾರಾಗೃಹವಾಗಿ ನಿರ್ಮಿಸಲ್ಪಟ್ಟ ಈ ಕಟ್ಟೋಣವನ್ನು ಒಡೆದು ಹಾಕಿಯೇ ನಾವು ಸ್ವಾತಂತ್ರ್ಯ ನಿಲಯವನ್ನು ಕಟ್ಟಬೇಕಾಗಿದೆ. ಮತದಾನದ ಹಕ್ಕು ನಾವು ಅಪೇಕ್ಷಿಸಿದ ರೀತಿಯಲ್ಲಿ ದೊರೆತಿಲ್ಲವಾದರೂ ನಾವದನ್ನು ಸಾಧ್ಯವಿದ್ದಷ್ಟು ರೀತಿಯಲ್ಲಿ ಉಪಯೋಗಿಸಿ, ಬಡವರ ಮತ್ತು ಅಜ್ಞಾತರ ಸಂಬಂಧವನ್ನುಂಟುಮಾಡಿಕೊಂಡಿರುವೆವು."

ಎಲ್ಲಾ ಪ್ರಾಂತ್ಯಗಳಲ್ಲಿಯೂ ಕೊಂಗ್ರೆಸ್ ವಿಜಯ!

ಬಂಗಾಳದಲ್ಲಿ ಬಹುಮತ ಚುನಾವಣೆಯು ನಡೆದ ಪ್ರಾಂತ್ಯಗಳಲ್ಲಿ ಕೊಂಗ್ರೆಸು ಉಮೇದ್ವಾರಿಗಳು ಬಹುಪಕ್ಷೀಯರಾಗಿ ಆರಿಸಿ ಬಂದಿದ್ದಾರೆ. ಕೊಂಗ್ರೆಸು ಉಮೇದ್ವಾರಿಗಳು ಸಂಪಾದಿಸಿರುವ ಓಟುಗಳ ಸಂಖ್ಯೆಯು ಗಣನೀಯವಿದೆ. ಬಂಗಾಳದಲ್ಲಿ 49 ಸ್ಥಾನಗಳು ಇಷ್ಟರಲ್ಲೇ ಕೊಂಗ್ರೆಸಿನವರಿಗೆ ದೊರೆತಿವೆ. ಕಳೆದ ತಾ. 3ರ ವರೆಗೆ ಬೇರೆ ಬೇರೆ ಪಕ್ಷೀಯರು ಸಂಪಾದಿಸಿನ ಸ್ಥಾನಗಳ ಸಂಖ್ಯೆಯು ಹೀಗಿವೆ. ಕೊಂಗ್ರೆಸ್ **49**, ಸ್ವತಂತ್ರ ಕೊಂಗ್ರೆಸ್ 1, ಮುಸ್ಲೀಮ ಲೀಗ್ 40, ಪ್ರಜಾಪಕ್ಷ 36, ಸ್ವತಂತ್ರ ಹಿಂದೂ ಪಕ್ಷ 15, ಸ್ವತಂತ್ರ ಹರಿಜನ ಪಕ್ಷ 24, ಹಿಂದು ಸಭಾ 2, ಹಿಂದೂ ನೇಶನಲಿಸ್ಟ 3, ಯುರೋಪಿಯಾನರು 25, ಆಂಗ್ಲೋ ಇಂಡಿಯಾನರು 4, ಹಿಂದೀ ಕ್ರೈಸ್ತರು 2. ಮಿಡ್ನಾಪುರದ ಕೊಂಗ್ರೆಸು ಉಮೇದ್ವಾರಿಯು ಇದಿರಾಳಿಯನ್ನು 65,000 ಓಟುಗಳ ಬಹುಮತದಿಂದ ಸೋಲಿಸಿರುವರು. ಸ್ತ್ರೀಯರ ಎರಡೂ ಸ್ಥಾನಗಳನ್ನು ಕೊಂಗ್ರೆಸಿನವರೇ ಗೆದ್ದಿರುವರು. ಕಳೆದ ಬಂಗಾಳ ಕೌನ್ಸಿಲಿನ ಅಧ್ಯಕ್ಷರು, ಗವರ್ನರರ ಕೇಬಿನೆಟ್ ಮೆಂಬರರು, ವಿರುದ್ಧ ಪಕ್ಷದ ನಾಯಕರಾಗಿದ್ದವರೆಲ್ಲಾ ಕೊಂಗ್ರೆಸಿನಿದಿರಲ್ಲಿ ಪರಾಜಿತರಾಗಿರುವರು!

ಒರಿಸ್ಸಾದ ಪ್ರಚಂಡ ವಿಜಯ!

ಒರಿಸ್ಸಾ ಪ್ರಾಂತಿಕ ಸಭೆಯಲ್ಲಿದ್ದ ಸಂಸಂಸ್ಥಾನಗಳಲ್ಲಿ **33**ನ್ನು ಕೊಂಗ್ರೆಸು ಗೆದ್ದಿರುವದು. ಮಿಕ್ಕ ಸ್ಥಾನಗಳು ಬೇರೆ ಬೇರೆ ಪಕ್ಷಗಳಿಗೆ ಹಂಚಿಹೋಗಿರುವವು ಮೂರು ಸ್ಥಾನಗಳ ಫಲಿತಾಂಶವು ತಿಳಿದುಬಂದಿಲ್ಲ. ಬಹುತೇಕವಾಗಿ ಕೊಂಗ್ರೆಸಿನವರೇ ಬರುವ ಸಂಭವವಿವೆ. ಕೊಂಗ್ರೆಸಿನವರು ಸಂಪಾದಿಸಿರುವ ಸ್ಥಾನಗಳಿಗಿಂತಲೂ ಅವರು ಪಡೆದಿರುವ ಮತಗಳ ಸಂಖ್ಯೆಯು ವಿರೋಧಿಗಳ ಕಣ್ಣು ತೆರೆಯಿಸುವಂತಹದಿದೆ. ಕೊಂಗ್ರೆಸ್ ಉಮೇದ್ವಾರಿಗಳಿಗಿದಿರಾಗಿ ನಿಂತ 22 ಮಂದಿ ಕಟ್ಟಿದ ಹಣವನ್ನೇ ಕಳಕೊಂಡಿರುವರು! ಸರದಾರ್ ಪಟೇಲರು ಅದಕ್ಕಾಗಿ ಒರಿಸ್ಸಾವನ್ನು ಅಭಿನಂದಿಸುತ್ತಾ ಅಲ್ಲಿಯ ಜನತೆಗೂ ಜಯಶೀಲರಾದ ಮೆಂಬರರಿಗೂ ಆಭಾರಸೂಚಿಸಿರುವರು.

ಅಸ್ಸಾಮಿನಲ್ಲಿಯೂ ಜಯ!

ಅಸ್ಸಾಮಿನ ಎಸೆಂಬ್ಲಿಗೆ 18 ಮಂದಿ ರಾಷ್ಟ್ರಸಭಾ ಹುರಿಯಾಳುಗಳು ಆರಿಸಲ್ಪಟ್ಟಿರುವರು. ಬಿಹಾರಿನಲ್ಲಿ ತಾ. 30ರಲ್ಲಿ ಚುನಾವಣೆಯು ನಡೆದಿರುವದು. 2 ಮಿಲಿಯ ಮತದಾರರು ಮತದಾನ ಮಾಡಿರುವರು. ಸ್ತ್ರೀಯರು ತಂಡತಂಡವಾಗಿ ನೆರೆದುಬಂದು ವೋಟನಿತ್ತುದು ಈ ಸಲದ ಚುನಾವಣೆಯ ವಿಶಿಷ್ಟತೆಯಾಗಿರುತ್ತದೆ. ಬಾಬುರಾಜೇಂದ್ರ ಪ್ರಸಾದರು ಅಲ್ಲಿಯ ಕೆಲಸವನ್ನು ಮುಗಿಸಿ ಸಂಯುಕ್ತ ಪ್ರಾಂತ್ಯಕ್ಕೆ ಹೊರಟುಹೋಗಿರುವರು. ಬಿಹಾರಿನ ಪ್ರಮುಖ ಕೆಲಸಗಾರರೂ ಸ್ವಯಂಸೇವಕರೂ ಸಂಯುಕ್ತ ಪ್ರಾಂತ್ಯಕ್ಕೆ ಹೊರಟಿರುವರು.

ಗಡಿನಾಡಿನಲ್ಲಿ ಜಯಭರವಸೆ.

ಗಡಿನಾಡಿನಲ್ಲಿರುವ 50 ಸ್ಥಾನಗಳಲ್ಲಿ **37**ನ್ನು ಕೊಂಗ್ರೆಸಿನವರು ಸ್ಪರ್ಧಿಸುತ್ತಿರುವರು. ಇದೇ ತಾ. 1ಕ್ಕೆ ಪ್ರಾರಂಭವಾದ ಚುನಾವಣೆಯು ಇಡೀ ಪ್ರಾಂತ್ಯದಲ್ಲಿ ತಾ. 10ರ ವರೆಗಿರುವದು. ಎರಡೂವರೆ ಲಕ್ಷ ಮತದಾರರಲ್ಲಿ ಎಂದೂ ಕಂಡುಬಾರದಿರುವ ಉತ್ಸಾಹವೇರಿರುವದರಿಂದ, ನೇಕಡಾ ಎಪ್ಪತ್ತರಷ್ಟು ವೋಟುಗಳು 'ಪೋಲ್' ಆಗಬಹುದೆಂದು ಅಲ್ಲಿಯ ರಿಟರ್ನಿಂಗ್ ಆಫೀಸರರ ಅಂದಾಜು. ಪೇಶಾವರದ ಕೊಂಗ್ರೆಸ್ ಉಮೇದ್ವಾರಿಯೊಬ್ಬರ ಏಜೆಂಟರಾಗಿ ಕೆಲಸ ಮಾಡುತ್ತಿದ್ದವರೊಬ್ಬರು ಕಾರು ಅಪಘಾತದಿಂದ ಕೊಲ್ಲಲ್ಪಟ್ಟಿರುವರು.

ಸಂಯುಕ್ತ ಪ್ರಾಂತ್ಯದ ಸಿದ್ಧತೆ

ಬಂಗಾಳ, ಬಿಹಾರ್, ಒರಿಸ್ಸಾ ಮೊದಲಾದ ಕಡೆಗಳಲ್ಲಿ ಚುನಾವಣಾ ಕಾರ್ಯವು ಮುಗಿದಿರುವದರಿಂದ ಅಲ್ಲಿಯ ಸ್ವಯಂಸೇವಕರೂ ಧುರೀಣರೂ ಸಂಯುಕ್ತ ಪ್ರಾಂತ್ಯಕ್ಕೆ ತೆರಳುತ್ತಿದ್ದಾರೆ. ಫರುಕಾಬಾದ್ ಜಿಲ್ಲೆಯ ಜಿಲ್ಲಾ ಕೊಂಗ್ರೆಸ್ ಕಮಿಟಿಯ ಅಧ್ಯಕ್ಷರ ವರ್ತನೆಯು ಚುನಾವಣಾ ಕಾರ್ಯದಲ್ಲಿ ಅನುಮಾನಕರವಾಗಿ ಕಂಡುಬಂದುದರಿಂದ ಪಂಡಿತ ಜವಾಹಿರಲಾಲರವರನ್ನು ಸಸ್ಪೆಂಡ್ ಮಾಡಿರುವರು.



ಧರ್ಮಾರ್ಥ ಬಹುಮಾನಗಳು

1-4-0ಗೆ !

--- **ಯಾರಿಗೆ ?** ---

ರೂಪಾಯಿ 1—4—0 ಕೊಟ್ಟು 14ಸೀಸೆ ಒಟ್ಟೊರೋಸ್ ಅಥವಾ 10 ಡಬ್ಬಿ ಗಜಕರ್ಣ ಮುಲಾಮನ್ನು ಕ್ರಯಕ್ಕೆ ಪಡಕೊಳ್ಳುವವರಿಗೆ !!

ಇನಾಮುಗಳ ವಿವರ:—3ಡಜ್ಮ ರಿಸ್ಟ್‌ವಾಚುಗಳು; 1 ಕ್ರೈಷ್ಟೋಮಿಯಂ ಡಮ್ಮಿ ಪಾಕೆಟ್ ವಾಚು; 1 ಸೇಫ್ಟಿರೇಜರ್; 1 ಶೇವಿಂಗ್ ಬ್ರಸ್; 1 ಶೇವಿಂಗ್ ಸೋಪು; 1 ಕನ್ನಡಿ; 1 ಪೌಡರ್ ; 1 ಜತ ಗುಬ್ಬಿಗಳು; 1 ಫೌಂಟನ್ ಪೇನು 14 ಕ್ಯಾರೆಟ್ ನಿಬ್ಬು ಸಮೇತ; 1 ಇಮಿಟೇಶನ್ ಮೋತಿಮಲ್ಲರ್; 1 ಹೆಸರು ಕೆತ್ತಲ್ಪಟ್ಟ ರೋಲ್ಡ್‌ಗೋಲ್ಡ್ ಗಿಲ್ಟ್ ಉಂಗುರ, ಆರುನೂರು ಅಡಿ ದೂರಕ್ಕೆ ಪ್ರಕಾಶವೀಯುವ 1 ಟೋರ್ಚ್‌ಲೈಟ್ ಅಥವಾ 1 ಅತ್ಯುತ್ತಮ 'B' ಟಾಯಂಪೀಸು (ಹತ್ತು ವರುಷ ಗ್ಯಾರಂಟಿ)

ಪ್ಯಾಕಿಂಗ್ ಮತ್ತು ಪೋಸ್ಟೇಜು 0—12—0. **ಇಂದೇ ಆರ್ಡರು ಕೊಡಿರಿ.**

Bengal Watch Co.,
Post Box No. 12214, CALCUTTA.

ಪತ್ರವ್ಯವಹಾರ.

ಕಲ್ಯಾಣಪುರ ಮಿಲಾಗ್ರಿಸ್ ಹೈಸ್ಕೂಲಿನಲ್ಲಿ S. S. L C ಪರೀಕ್ಷೆಗೆ ವಿದ್ಯಾರ್ಥಿಗಳನ್ನು ಚುನಾಯಿಸಿದ ರೀತಿನೀತಿ

ತನ್ನ ರಜತೋತ್ಸವ ವರುಷವಾದ ಈ ವರುಷದ ಪರೀಕ್ಷಾ ಫಲಿತಾಂಶವು ಅಸದೃಶವಾಗಬೇಕೆಂಬ ಮಹತ್ವಾಕಾಂಕ್ಷೆಯಿಂದ ಈ ಶಾಲೆಯು ವಿದ್ಯಾರ್ಥಿಗಳನ್ನು ಪರೀಕ್ಷೆಗೆ ಚುನಾಯಿಸುವುದರಲ್ಲಿ ಅನುಸರಿಸಿದ ಕ್ರಮವು ನ್ಯಾಯವೋ ಎಂಬುದನ್ನು ಇತರ ಹೈಸ್ಕೂಲುಗಳೂ ವಿದ್ಯಾರ್ಥಿಗಳ ಪಾಲಕರೂ ಪರಿಶೀಲಿಸಲೆಂಬ ಉದ್ದೇಶದಿಂದ ವಿದ್ಯಮಾನಗಳನ್ನು ಈ ಕಳಗೆ ಕೊಡಲಾಗಿದೆ ಶಾಲೆಗೆ ಮಹತ್ವಾಕಾಂಕ್ಷೆ ಇರಬೇಕು ಆದರೆ ಅದಕ್ಕೊಂದು ಹದ ಬೇಕು ಆದರ ಮದವೇರಿ ಶಾಲೆಯು ಪೋಷಕರನ್ನು ತಿಳಿಯಬಾರದು ಆ ಮಹತ್ವಾಕಾಂಕ್ಷೆಯ ಸಾಫಲ್ಯಕ್ಕಾಗಿ ತನ್ನ ಕೈಗೆ ಸಿಕ್ಕಿದ ಹಲವು ಮಕ್ಕಳನ್ನು ಬಲಿಗೊಡಬಾರದು ಈ ರಜತ ಮಹೋತ್ಸವವನ್ನು ಜರಗಿಸುವಷ್ಟು ಶಾಲೆಯು ಬದುಕಿದುದು ಊರವರ ಪ್ರೋತ್ಸಾಹದಿಂದೆಂಬುದನ್ನು ಈಗ ಅಭಿವೃದ್ಧಿ ಮದದಲ್ಲಿ ಮರೆತು ಹೀಗೆ ವಿದ್ಯಾರ್ಥಿಗಳ ಭವಿಷ್ಯವನ್ನು ನಾಶಮಾಡಿ ಪಾಲಕರ ಕಣ್ಣೀರ ಪ್ರವಾಹಕ್ಕೆ ಎಡೆಗೊಡುತ್ತಾ ಹೋದರೆ ಮುಂದೆ ಸುವರ್ಣ ಮಹೋತ್ಸವದ ಆಯುಸ್ಯವು ಶಾಲೆಗೆ ಉಳಿದೀತೇ ಎಂಬುದನ್ನು ಅದು ವಿಚಾರಿಸಿಕೊಳ್ಳಲೆಂಬುದೂ ಈ ಲೇಖನಕ್ಕೊಂದು ಕಾರಣ ಅಲ್ಲದೆ ಹಳ್ಳಿಯವರ ನಡುವೆ ಇರುವ ಈ ಶಾಲೆಯು ಇತ್ತೀಚೆಗೆ ತಾನು ಬಳಗೊಂದಂತೆ ನ್ಯಾಯನೀತಿಯ ರೀತಿಗಳನ್ನೂ ಲೆಕ್ಕಿಸದೆ 'ರೂಲುರೂಲು' ಎನ್ನುತ್ತಾ ತಿಳಿಯದ ಹಳ್ಳಿಯವರನ್ನು ಬಾಯಿ ಎತ್ತದಂತೆ ಮಾಡಿ ತನ್ನ ಖ್ಯಾತಿಯ ವೇದಿಕೆಯಲ್ಲಿ ವಿದ್ಯಾರ್ಥಿಗಳ ಭವಿಷ್ಯವನ್ನೂ ಹೆತ್ತವರ ಆಶಾಕಾಂಕ್ಷೆಗಳನ್ನೂ ಬಲಿಗೊಡಲು ಹಿಂಜರಿಯುವುದಿಲ್ಲವೆಂಬುದನ್ನು ಹಳ್ಳಿಯವರು ತಿಳಿದುಕೊಂಡು ಗುರುಗಳ ಶಾಲೆಯಲ್ಲಿ ಆಗುವದೆಲ್ಲಾ ನ್ಯಾಯವೆಂಬ ಕುರುಡು ನಂಬಿಗೆಯನ್ನು ಬಿಟ್ಟು ಮುಂಜಾಗರೂಕರೂ ವಿಚಾರಿಗಳೂ ಆಗುವಂತೆ ಅವರನ್ನು ಎಚ್ಚರಿಸುವುದು ಸಹಾ ಈ ಲೇಖನದ ಕಾರಣ

ಈ ಶಾಲೆಯ S. S L C ಕ್ಲಾಸಿನಲ್ಲಿ 25 ಮಂದಿ ಪ್ರಥಮ ವರುಷದ ವಿದ್ಯಾರ್ಥಿಗಳೂ 4 ಮಂದಿ ಅದೇ ಶಾಲೆಯ ದ್ವಿತೀಯ ವರುಷದವರೂ ಇದ್ದರು ಜನವರಿ ತಾ ೬ಅಲ್ಲು ಶಾಲೆಯು ಇವರಿಂದೆಲ್ಲಾ ತಲಾ ಒಂದರ ರೂಪಾಯಿ 15ರಂತೆ S S L C ಪರೀಕ್ಷಾಫೀಸನ್ನು ವಸೂಲು ಮಾಡಿತು ತಾ 22ರ ವರೆಗೆ ಏನನ್ನೂ ಹೇಳದೆ ಮೌನವಾಗಿದ್ದು ಆ ದಿನ 20 ಮಂದಿ ಪ್ರಥಮ ವರುಷದ ವಿದ್ಯಾರ್ಥಿಗಳ ಮತ್ತು ಒಬ್ಬ ದ್ವಿತೀಯ ವರುಷದ ವಿದ್ಯಾರ್ಥಿಯ ಪರೀಕ್ಷಾಫೀಸುಗಳನ್ನು ಕಳ ಹಿಸಿಕೊಟ್ಟು ಸಾಯಂಕಾಲ ಶಾಲಾ ಸಮಯ ಮುಗಿದ ನಂತರ ಉಳಿದವರನ್ನು ಪರೀಕ್ಷೆಗೆ ಕಳುಹಿಸಿಕೊಡಲಿಲ್ಲವೆಂದು ಹೇಳಲಾಯ್ತು ಕಳುಹಿಸಲ್ಪಡದ ಈ ಮೂರು ದ್ವಿತೀಯ ವರುಷದ ವಿದ್ಯಾರ್ಥಿಗಳು ಕಳೆದ ವರುಷವೂ ಅದೇ ಶಾಲೆಯಲ್ಲಿದ್ದು ಆ ವರುಷ ಪರೀಕ್ಷೆಗೆ ಕಳುಹಲ್ಪಡದಿದ್ದವರು 10 ವರುಷ ದಾಟದವರು ಕಲಿಯುವಿಕೆಯಲ್ಲಿ ಕರೆ ಮುಟ್ಟುವಂತಿದ್ದರೂ ಚುನಾವಣೆಯ ಪರೀಕ್ಷೆ ಆಗುವಾಗಲೇ ಪಾಸಾಗುವಂಥವರಿಗೆ ಚೆನ್ನಾಗಿ ಮಾರ್ಕುಕೊಟ್ಟು ಬಿಟ್ಟು ಕರೆ ಮುಟ್ಟುವಂಥವರನ್ನು ಪಾತಾಳಕ್ಕೆ ದೂಡಿಬಿಡಬೇಕೆಂಬ ಧೋರಣೆಯು ಸಾರಲ್ಪಟ್ಟುದರಿಂದ ಕನಿಷ್ಠಾವಧಿಯ ಮಾರ್ಕು ಈ ಮೂವರಿಗೆ ದೊರೆಯಲಿಲ್ಲವೋ ಏನೋ! ಹೇಗಾದರೂ ಕಳೆದ ವರುಷವೂ ಈ ವರುಷವೂ ಹಿಂದೆಯೂ ಅದೇ ಶಾಲೆಯನ್ನೇ ಹೊಂದಿಕೊಂಡಿದ್ದ ಈ ಮೂವರ ಯೋಗ್ಯತೆಯು ಶಾಲೆಗೆ ಗೊತ್ತಾದುದು ಜನವರಿ 22ನೇ ತಾರೀಕಿನಲ್ಲಿ ಮಾತ್ರ ಆಗಿರಲಿಕ್ಕಿಲ್ಲವಷ್ಟೆ! ತನ್ನ ಮಹತ್ವಾಕಾಂಕ್ಷೆಯ ಸಾಫಲ್ಯಕ್ಕೆ ಈ ವಿದ್ಯಾರ್ಥಿಗಳು ತೊಡಕಾದಾರು ಎಂಬುದು ಈ ವರುಷದ ಆದಿಯಲ್ಲಿಯೇ ಶಾಲೆಗೆ ತಿಳಿದಿರಲಿಲ್ಲವೇ? ಅವರಿಗೇಕೆ ಪ್ರವೇಶಕೊಟ್ಟರು?

ಒಂದು ವೇಳೆ ಈ ವರುಷದಲ್ಲಾದರೂ ತಮ್ಮ ಒರೆಗಲ್ಲಿನಲ್ಲಿ ತಕ್ಕಷ್ಟು ಬಣ್ಣವನ್ನು ಅವರು ತೋರಿಸಿಯಾರೆಂಬ ನಿರೀಕ್ಷಣೆಯಿಂದ ಅವರನ್ನು ಸೇರಿಸಿಕೊಂಡುದ್ದಾಗಿದ್ದರೆ ಪರಂಬ್ರ ಅಂತ್ಯದಲ್ಲಾದರೂ ನಿರೀಕ್ಷಿಸಲ್ಪಟ್ಟ ಬಣ್ಣವನ್ನು ಅವರು ತೋರಿಸಲಿಲ್ಲವೆಂದೂ ಅವರನ್ನು ಪರೀಕ್ಷೆಗೆ ಕಳುಹಿಸಿ ಕೊಡಲಿಕ್ಕಾಗುವುದಿಲ್ಲವೆಂದೂ ಹೇಳಿಬಿಡಬಹುದಿತ್ತಲ್ಲ? ಅವರು ಬೇರೆಯಾವ ಶಾಲೆಯನ್ನಾದರೂ ಸೇರಿ ಪರೀಕ್ಷೆಗೆ ಕಳುಹಿಸಿಕೊಡಲ್ಪಡುವಂತೆ ಪ್ರಯತ್ನಿಸುತಿದ್ದರು ಸಂಬಳವನ್ನು ತೆಗೆದುಕೊಂಡಾದರೂ ಜನವರಿ ತಾ ೮ರ ನಂತರ ೨೨ರ ಒಳಗೆ ಅವರನ್ನು ಕಳುಹಿಸುವದಿಲ್ಲವೆಂಬದನ್ನು ಸಕಾಲದಲ್ಲಿ ಹೇಳುವ ಕೃಪೆಯನ್ನಾದರೂ ಶಾಲೆಯು ತೋರಿದ್ದರೆ ಬೇರೆಲ್ಲಾದರೂ ಸರಿದು ಹೋಗುವ ಯತ್ನವನ್ನು ಅವರು ಮಾಡುತ್ತಿದ್ದಿಲ್ಲವೇ? ಅಷ್ಟಕ್ಕಾದರೂ ಈ ಶಾಲೆಯು ಅವಕಾಶವೇಕೆ ಕೊಡಲಿಲ್ಲ? ಇವರ ಈ ನೀತಿಯ ತೂತಿಯು ಪ್ರತಿ ಒಂದು ಶಾಲೆಯ ಬಾಗಿಲಲ್ಲಿ ಊಪಲ್ಪಡುವದೆಂದೋ? ಈಗಾದರೂ ಪರೀಕ್ಷೆಗೆ ಕಳುಹಿಸಲ್ಪಡದ ಮಕ್ಕಳು ಶಾಲೆಗೆ ಬರಲಿ, ಬಾರದಿರಲಿ, ಇಡೀ ವರುಷದ ಸಂಬಳವಂತೂ ಸಿಕ್ಕಿತು ಅವರಿಗೆ ಆದ ಅನ್ಯಾಯವು ಸದ್ದಿಲ್ಲದೆ ಅಡಗಿತು! ಮುಂದೆ ಪರೀಕ್ಷಾ ಫಲಿತಾಂಶವು ಹೊರಬೀಳುವಾಗ ಒಳಗೊಳಗೆ ಬಲಿಕೊಟ್ಟ ಈ ವಿದ್ಯಾರ್ಥಿಗಳ ಸಂಖ್ಯೆ ಏನೂ ಹೊರಬೀಳುವದಿಲ್ಲ! 'ಇಂತಿಷ್ಟು ಪರೀಕ್ಷೆಗೆ ಕೂತವರಲ್ಲಿ ಇಂತಿಷ್ಟು ಉತ್ತೀರ್ಣರಾದರೆಂಬ ಶೇಕಡದ (Percentage) ಖ್ಯಾತಿಯು ಈ ತರದ ಕ್ರೌರ್ಯವನ್ನು ತೋರದ ಶಾಲೆಗಳ ಪರೀಕ್ಷಾ ಫಲಿತಾಂಶಗಳ ಹೋಲಿಕೆಯಲ್ಲಿ ಉತ್ಕೃಷ್ಟವಾಗಿ ಕಾಣುವುದು! ಶಾಲೆಯ ಈ ವರ್ತನೆಯನ್ನು ಪರಿಶೀಲಿಸಿದರೆ ಅದು ವಿದ್ಯಾರ್ಥಿಗಳನ್ನು ಬಲಿಗೊಟ್ಟಾದರೂ ತನ್ನ ಖ್ಯಾತಿಯ ಮಹತ್ವಾಕಾಂಕ್ಷೆಯನ್ನು ಸಾಧಿಸುತ್ತಿದೆ ಎಂಬುದು ವ್ಯಕ್ತವಾಗದಿರಲಾರದು ಅದುಕಾರಣ ಇತರ ದಾಕ್ಷಿಣ್ಯಶೀಲರಾದ ಶಾಲೆಗಳವರು ತಮ್ಮ ತಮ್ಮ ಶಾಲೆಯ ಪರೀಕ್ಷಾ ಫಲಿತಾಂಶವನ್ನು ಈ ಶಾಲೆಯೊಂದಿಗೆ ಹೋಲಿಸುವಾಗ ಈ ವಿಷಯವು ಅವರ ಲಕ್ಷ್ಯದಲ್ಲಿರಲೆಂದೂ ಎರಡನೆಯ ವರುಷದಲ್ಲಾದರೂ ತಮ್ಮ ಮಕ್ಕಳನ್ನು ಪರೀಕ್ಷೆಗೆ ಕಳುಹಿಸ್ಯಾರು ಎಂಬ ನಂಬಿಗೆಯಿಂದ ಮಕ್ಕಳನ್ನು ಈ ಶಾಲೆಯಲ್ಲಿರುವ ಹೆತ್ತವರ ಎಚ್ಚರಗೊಳ್ಳಲೆಂದೂ ಈ ಶಾಲೆಯ ಮಹತ್ವಾಕಾಂಕ್ಷೆಯ ಧೋರಣೆಯ ವಿಚಿತ್ರ ಕ್ರಮವನ್ನು ಇತರ ಶಾಲೆಗಳೂ ಹೆತ್ತವರೂ ವಿಚಾರಿಸಿ ನ್ಯಾಯಾನ್ಯಾಯವನ್ನು ಪರಿಶೀಲಿಸಲೆಂದೂ ಈ ಲೇಖನವನ್ನು ಬರೆದುದಾಗಿದೆ

ನ್ಯಾಯಾಪೇಕ್ಷಿ.

ಗ್ರೆಂಡ್ ವಿದ್ಯಾದಾಯಿನೀ ಸೋಡ್ತಿ ಸುರತಕಲ್, ದ ಕ

ಈ ಸೋಡ್ತಿಯು ಇದೇ ಕಳೆದ ತಾರೀಕು 17-1-1937ರಲ್ಲಿ, ಡಾ। ಕ ವಿಠಲ ಶೆಟ್ಟರವರಿಂದೊಡಗೂಡಿದ ಸನ್ಮಾನ್ಯ ಕಮಿಟಿಯ ನಾಯಕತ್ವದಲ್ಲಿ ಇಡ್ಯ ವಿದ್ಯಾದಾಯಿನೀ ಶಾಲಾ ಮಂದಿರದಲ್ಲಿ ಅತ್ಯಂತ ಸುವ್ಯವಸ್ಥಿತವಾದ ರೀತಿಯಿಂದ ಸಾರ್ವಜನಿಕವಾಗಿ ತಗೆಯಲ್ಪಟ್ಟಿತು. ಮಾರಾಟವಾಗಿಬಂದ ಟಿಕೇಟಿನ ದ್ವಿಪ್ರತಿಗಳು ಮತ್ತು ಅವುಗಳ ಹಣಗಳನ್ನು ಕಳುಹಿಸಿದವರ ಲೇಖದಲ್ಲಿ ಪ್ರತ್ಯಪ್ರತ್ಯೇಕ ರಶೀದಿಗಳನ್ನು ಕೊಡುವ ಕ್ರಮವನ್ನಿಟ್ಟುಕೊಂಡಿರುವುದಲ್ಲದೆ, ಆಯಾಯ ಪುಸ್ತಕಗಳ ಬಾಬ್ತು ಒಂದು ಹಣದ ಸಂಪೂರ್ಣ ಲೆಕ್ಕವನ್ನು ತೋರಿಸುವಂತೆ ವ್ಯವಸ್ಥೆ ಇಡಲಾಗಿತ್ತು. ಈ ಸೋಡ್ತಿಯ ಲೆಖ ಪತ್ರಗಳ ಬಗ್ಗೆ ಕೂಡಾ ಲೆಕ್ಕ ಪರಿಶೋಧಕರು ಉತ್ತಮವಾದ ಅಭಿಪ್ರಾಯಪಟ್ಟಿರುವರು. ಟಿಕೇಟಿನ ದ್ವಿಪ್ರತಿಗಳನ್ನು ನೆಂದ್ರಿಗೆ (Barrel) ಹಾಕುವರೆ ಅವು ತೀರಾ ತೆಳ್ಳನೆ ಕಾಗದಗಳಾಗಿರುವ ಪ್ರಯುಕ್ತ ಆ ಕುರಿತು ಪ್ರತ್ಯೇಕ ದಪ್ಪನಾದ ರಟ್ಟಿನ ತುಂಡ ಗಳನ್ನು ತಯಾರಿಸಿ, ಖರ್ಚಾದ ಆಯಾಯ ನಂಬರುಗಳನ್ನು ಬರೆದು ಆಯಾಯ ಟಿಕೇಟು ಪುಸ್ತಕಗಳೊಳಗಿಟ್ಟು, ಅವುಗಳನ್ನೆಲ್ಲಾ ಅನುಕ್ರಮವಾಗಿ (Serial order) ಅತ್ಯಂತ ಸುಂದರವಾಗಿಯೂ, ಅಚ್ಚುಕಟ್ಟಾಗಿಯೂ, ಪೆಟ್ಟಿಗೆಗಳಲ್ಲಿ ಸಂಗ್ರಹಿಸಿಡಲಾಗಿತ್ತು. ಆ ಬಗ್ಗೆ ಸೂಚೀಪತ್ರ (Index) ಗಳನ್ನು ಕೂಡ ತಯಾರಿಸಿ, ಯಾವಯಾವ ಪುಸ್ತಕಗಳ ಟಿಕೇಟುಗಳು ವಿಕ್ರಯವಾಗಿ ಬಂದಿವೆ ಎಂಬುದನ್ನು ಕೇಳಿದೊಡನೆ ತೃಪ್ತಿಕರವಾದ ಉತ್ತರ ದೊರೆಯುವಂತೆ ಏರ್ಪಾಡೆನ್ನು ಮಾಡಿಟ್ಟದು ತುಂಬಾ ಶ್ಲಾಘನೀಯ ಅಂದಿನ ಕಮಿಟಿಯವರು ಸೋಡ್ತಿ ಪ್ರಾರಂಭದ ಮೊದಲು ಪಲಕೆಲವು ನಂಬ್ರಗಳನ್ನು ಹೆಕ್ಕಿ ತೆಗೆದು ಮೇಲಿನ ಏರ್ಪಾಡಿನ ಸವರ್ಕತೆಯನ್ನು (Test audit ನ ಮೂಲಕ) ದೃಢಪಡಿಸಿಕೊಂಡರಲ್ಲದೆ, ಆ ದಿನ ಅಲ್ಲಿ ನೆರೆದ ಸಭಿಕರು ಕೇಳಿದ "ಯಾವಯಾವ ಪುಸ್ತಕಗಳು ಬಂದಿವೆ? ಎಂಬ ಪ್ರಶ್ನೆಗಳಿಗೆ ಕೂಡಾ ಅವುಗಳ ದ್ವಿಪ್ರತಿಗಳನ್ನು ಕಾಣಿಸಿ, ಅವರಿಗೆ ಮನದಟ್ಟಾಗುವ ಉತ್ತರ ದೊರಕುವಂತೆ ಯೋಜನೆಗಳನ್ನು ಮಾಡಿಟ್ಟದು ಸಂತೋಷಕರವಾಗಿದೆ. ಆ ಒಳಿಕ ಎಲ್ಲಾ ನಂಬ್ರದ ತುಂಡುಗಳನ್ನು ಅಗಲವಾದ ಒಂದು ದೊಡ್ಡ ಪಾತ್ರೆಯೊಳಗೆ ಹಾಕಿ, ನಾಲ್ಕಾರು ಜನರು ಅವುಗಳನ್ನು ಮಗುಚುತ್ತಾ ಇದ್ದಂತೆ ಚಿಕ್ಕ ಹುಡುಗನೊಬ್ಬನು ಅವುಗಳಲ್ಲಿ ಒಂದೊಂದೇ ನಂಬ್ರನನ್ನು ಹೆಕ್ಕಿ ಕೊಡುತ್ತಲೂ, ಇನ್ನೊಂದು ಪಾತ್ರೆಯೊಳಗಿಂದ ಬೇರೊಬ್ಬನು ಇನಾಮಿನ ತುಂಡನ್ನು ಆಯ್ದು ಕೊಡುತ್ತಲೂ ಸೋಡ್ತಿಯು ಸಂಜೆ 7 ಗಂಟೆಗೆ ತೆಗೆದು ಮುಗಿಯಿತು. ಇನಾಮುಗಳು ಚದರಿದ ರೀತಿಯನ್ನು ನೋಡುವಾಗಲೇ ಬೆರಸುವಿಕೆಯು ಚೆನ್ನಾಗಿತ್ತೆಂದು ಒಡೆದು ಕಾಣುತ್ತದೆ ಸೋಡ್ತಿ ತೆಗೆಯುವ ಮೊದಲೇ ಓದಲ್ಪಟ್ಟ ಶಾಲಾ ಸೋಡ್ತಿ ಕಮಿಟಿಯವರ ವರದಿಯಿಂದ ಈ ಉದ್ಯಮಕ್ಕೆ ಊರಿನಿಂದಲೂ ವಿಶೇಷವಾಗಿ ಪರಪ್ರಾಂತ್ಯಗಳ ಶಾಲಾಭಿಮಾನಿಗಳ, ವಿದ್ಯಾಪ್ರೇಮಿಗಳೂ ಅದಮ್ಯ ಹಸೀಯರಿಂದಲೂ, ಸಿಕ್ಕಿದ ಸಹಾಯ ಪ್ರೋತ್ಸಾಹಗಳೇ ಹೆಚ್ಚೆಂದು ತಿಳಿದು ಬಂತು ಮೇಲಿನ ಎಲ್ಲಾ ಕಾರ್ಯಕ್ರಮಗಳನ್ನು ನೋಡಿ ಸಂತೋಷಚಿತ್ತರಾದ ಅಂದಿನ ಸಭಾಧ್ಯಕ್ಷರು ಕೊನೆಗೆ ಈ ಉದ್ಯಮದ ಯೋಗ್ಯ ಏರ್ಪಾಡುಗಳನ್ನು ಹೊಗಳಿದುದಲ್ಲದೆ, ಮಹಾಜನರಿಂದ ಈ ವಿದ್ಯಾಸಂಸ್ಥೆಗೆ ಇದಕ್ಕೂ ಮಿಕ್ಕಿದ ಆಶ್ರಯವು ಸಿಗಲೆಂದು ಹಾರೈಸಿದರು. ಇಷ್ಟು ಉತ್ತಮ ರೀತಿಯಲ್ಲಿ ತೆಗೆಯಲ್ಪಡುವ ಸೋಡ್ತಿಗಳು ನಮ್ಮಲ್ಲಿ ತೀರಾ ವಿರಳ. ಸೋಡ್ತಿ ತೆಗೆಯುವ ಕ್ರಮ ಮತ್ತು ಏರ್ಪಾಡುಗಳನ್ನು ಮಾಡಲುದುದಿದವರೆಲ್ಲರ ಶ್ರಮವನ್ನು ಕೊಂಡಾಡಬೇಕಾಗಿದೆ.

"ಪ್ರತ್ಯಕ್ಷದರ್ಶಿ"

ಗೃಹಸ್ಥರೇ!

ಗೃಹಕೃತ್ಯೋಪಯೋಗದ ಎಲ್ಲಾ ವಿಧದ ತಾಮ್ರ, ಹಿತ್ತಾಳಿ, ಜರ್ಮನ್ ಬೆಳ್ಳಿ, ಬೆಳ್ಳಿ ಸಾಮಾನುಗಳು ಎಲ್ಲಿ ಸಿಗುತ್ತವೆ ಬಲ್ಲಿರಾ?

ರಥಬೀದಿಯಲ್ಲಿ ಕಲ್ಮಂಜೆ ವ್ಯಾಸಾಚಾರ್ಯರ ಅಂಗಡಿಯಲ್ಲಿ ಮಾತ್ರವೇ.

ಸ್ವದೇಶಿ ಕೈಗಾರಿಕೆ! ಹದಿನೆಂಟು ವರ್ಷಗಳ ಅನುಭವ!

ಮನೆಯ ಉಪಯೋಗಕ್ಕೂ ಉಡುಗೊರೆ ಕೊಡಲಿಕ್ಕೂ ದಾನಮಾಡಲಿಕ್ಕೂ ಬೇಕಾದ ನಮೂನೆಯ ಸಾಮಾನು ಗಳನ್ನು ಮನಮೆಚ್ಚುವ ಮಾದರಿಯಲ್ಲಿ ತಕ್ಕ ಕಾಲದಲ್ಲಿ ನಾಜೂಕಾಗಿ ತಯಾರುಮಾಡಿಸಿಯೂ ಕೊಡಲಾಗುವುದು.

ಹೆಚ್ಚಿನ ವಿವರಗಳಿಗೆ ಸಚಿತ್ರ ಕೆಟಲಾಗಿಗೆ ಬರೆಯಿರಿ.

ಕಲ್ಮಂಜೆ ವ್ಯಾಸಾಚಾರ್ಯ,

ಪಾತ್ರೆ ವ್ಯಾಪಾರಿ, ರಥಬೀದಿ, ಉಡುಪಿ.

ಗೃಹಕೃತ್ಯಕ್ಕೆ ಬೇಕಾದ ವಿಧವಿಧ ತಾಮ್ರದ ಪಾತ್ರೆಗಳು.

ಕಸ್ತೂರಿ ಮಿಶ್ರಣ ದಶಮೂಲವೆಂಬ

ಸೂತಿಕಾ ರಸಾಯನ

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

I. **ಶೋಧನ ಗುಣ:**—ಶೋಧನದಿಂದ ಪ್ರಸವಾನಂತರ ಗರ್ಭಕೋಶದ ಸರ್ವತರದ ನಂಜನ್ನು ಹೊರಗೆ ಹಾಕಿ ಪ್ರಸೂತವಾದ ಗರ್ಭಕೋಶವನ್ನು ಮೂರು ದಿವಸಗಳೊಳಗೆ ಅಂಕುಚಿತವಾಗಿ ಮಾಡುವದು.

II. **ರಸಾಯನ ಗುಣ:**—ರಸಾಯನದಿಂದ ಸೂತಿಕಾ ಸ್ತ್ರೀಯು ಗರ್ಭದ ಬೆಳವಣಿಗೆಬಗ್ಗೆಯೂ, ಪ್ರಸವವೇದನಾ ಬಗ್ಗೆಯೂ ತಾನು ಕಳಕೊಂಡ ಮೂಲ ಶಕ್ತಿಯನ್ನು ಇಮ್ಮಡಿಯಾಗಿ ತಿರುಗಿ ಹೊಂದುವಳು.

III. **ಸುಖಸೇವನ:**—ಸುಖಸೇವನದಿಂದ ಮಧುರ ಮನೋಹರವಾದ ಈ ರಸಾಯನವು ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾದುವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವಾ ನಂತರದ ತೀಕ್ಷ್ಣವೇದನೆಯನ್ನು ಶೀಘ್ರದಿಂದ ನಿಲ್ಲಿಸುವದು.

ಒಬ್ಬಳು ಬಾಣಂತಿಗೆ ಎರಡು ಬಾಟ್ಲಿ ಬೇಕಾಗುವುದು. ಕ್ರಯ ಬಾಟ್ಲಿ 1ಕ್ಕೆ ರೂ. 2-0-0.

ಎಮ್. ವಿ. ಶಾಸ್ತ್ರಿ, ಆಯುರ್ವೇದ ಭೂಷಣ
ಮಂಗಳೂರು, ದ.ಕ.

ಕ್ರೌನ್ ರಬ್ಬರ್ ಸ್ಟಾಂಪ್ ಕಂಪೆನಿ

ಸ್ಥಾಪನೆ: 1926



18 ಬಲ್ಮಠ ರಸ್ತೆ, ಮಂಗಳೂರು.

ಯಾವತ್ತೂ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಅಗತ್ಯವಿರುವ ಎಲ್ಲಾ ತರದ ರಬ್ಬರ್ ಮೊಹರುಗಳೂ ಸೈನ್ ಬೋರ್ಡು, ಪೇಪೆಗಳ ಬೇಜು, ಮೊನೊಗ್ರಾಮ್ ಸೀಲು, ಇತ್ಯಾದಿಗಳನ್ನು ಪ್ರತಿಯೊಬ್ಬರ ಅಭಿರುಚಿಗೊಪ್ಪುವಂತೆ ಸುಲಭ ದರಗಳಲ್ಲಿ ಮಾಡಿಕೊಡೋಣಾಗುವುದು.

ಹೆಚ್ಚೆಟ್ಟು ಒತ್ತುವ ಸೆಟ್ಟುಗಳು ಕೂಡಾ ಸಿಗುವವು.

ಮಿಕ್ಕ ವಿಚಾರಗಳನ್ನು ನಮ್ಮ ಆಫೀಸಿಗೆ ಸ್ವತಹ ಬಂದು ಯಾ ಪತ್ರ ಮುಖೇನ ತಿಳಕೊಳ್ಳಬಹುದು.

ಮಂಗಳೂರಲ್ಲಿ ರೈಲು ಬಂಡಿಗಳ ಸಮಯ

ಗಾಡಿಗಳು	ಹೊರಡುವ ಘಂಟೆ.		ತಲಪುವ ಘಂಟೆ.	
ಮಿಕ್ಸೆಡ್	ಬೆಳಗ್ಗೆ	6-55	ರಾತ್ರಿ	8-55
ಕಾಂಜಂಗಾಂಡ್ ಪ್ಯಾಸಂಜರ್	ಬೆಳಗ್ಗೆ	8-25	ಮಧ್ಯಾಹ್ನ	1-20
ಮೈಲ್	ಬೆಳಗ್ಗೆ	9-50	ಸಂಜೆ	4-20
ಫಾಸ್ಟ್ ಪೆಸೆಂಜರ್	ಮಧ್ಯಾಹ್ನ	12-45	ಮಧ್ಯಾಹ್ನ	2-40
ಕಾಸರಗೋಡ್ ಪ್ಯಾಸೆಂಜರ್	ಮಧ್ಯಾಹ್ನ	3-20	ಸಂಜೆ	6-15
ಶಟಲ್	ಸಂಜೆ	5-25	ಬೆಳಗ್ಗೆ	9-20

ಜನರಲ್ ಎಶ್ಯೂರೆನ್ಸ್ ಸೊಸೈಟಿ ಲಿಮಿಟೆಡ್.

[ಸ್ಥಾಪನೆ: **1907**]

ಅತ್ಯಧಿಕ ಬೋನಸು !

ಮರಣಾಂತ್ಯ ಪೊಲಿಸಿಗಳಮೇಲೆ ಸೇಕಡಾ **25,**
ಎಂಡೊಮೆಂಟ್ ಪೊಲಿಸಿಗಳಮೇಲೆ ಸೇಕಡಾ **20,**
ಬಲವಂತ ಪೊಲಿಸಿಗಳು ರೂ. **3** ಕೋಟಿ ಮಿಕ್ಕಿವೆ.
ಮೂಲಧನವು ರೂ. **75** ಲಕ್ಷ ಮೀರಿದೆ.

ಬಡವರಿಗೂ ಧನಿಕರಿಗೂ ಹಿತಕಾರಿಯಾದ ಎಷ್ಯೂರೆನ್ಸ್ ಯೋಜನೆಗಳು.

ಅತೀ ಲಾಭದಾಯಕವಾದ ಉದಾರ ಏಜೆನ್ಸಿ ಶರ್ತಗಳು.

ವಿಶೇಷ ಮಾಹಿತಿಗಳಿಗಾಗಿ ಈ ಕೆಳಗಣ ವಿಳಾಸಗಳಿಗೆ ಬರಕೊಳ್ಳಿರಿ—

ಪಿ. ಡಿ. ಭಾರ್ಗವ, ಎಫ್. ಎಸ್. ಎಸ್. (ಲಂಡನ್)
ಜನರಲ್ ಮೆನೇಜರ್, ಅಜ್ಮೀರ್.

ಅಥವಾ

ಮೆನೇಜರ್, 278, ಲಿಂಗ ಚೆಟ್ಟಿ ಸ್ಟ್ರೀಟ್, ಮದ್ರಾಸ್.
ಸುಪರಿಂಟೆಂಡೆಂಟ್, ಬಳ್ಳಾರಿ. ಆರ್ಗೆನೈಸರ್, ವೆಲ್ಲೂರು.
ಚೀಫ್ ಏಜೆಂಟ್ಸ್, ಮಧುರ, ತ್ರಿಚಿನಾಪಳ್ಳಿ.

ಸ್ಟೀಮರು ಸಮಯ

	ತಲಪುವುದು	ಹೊರಡುವುದು
ಮಂಗಳೂರು	ಗುರುವಾರ ಬೆಳಗ್ಗೆ ಗಂಟೆ 9	ಶನಿವಾರ ಬೆಳಗ್ಗೆ ಗಂಟೆ
	ಸೋಮವಾರ ಬೆಳಗ್ಗೆ ಗಂಟೆ 6	ಮಂಗಳವಾರ ಬೆಳಗ್ಗೆ ಗಂಟೆ
ಮಲ್ಪೆ	ಗುರುವಾರ ಬೆಳಗ್ಗೆ ಗಂಟೆ 4	ಶನಿವಾರ ಮಧ್ಯಾಹ್ನ 2-30
	ಆದಿತ್ಯವಾರ ಸಂಜೆ ಗಂಟೆ 6	ಮಂಗಳವಾರ ಮಧ್ಯಾಹ್ನ 2-30
ಕುಂದಾಪುರ		ಶನಿವಾರ ಸಂಜೆ ಗಂಟೆ 3
		ಮಂಗಳವಾರ ಮಧ್ಯಾಹ್ನ 3

ನಮ್ಮ ಉನ್ನತಿಗಾಗಿ ನಾವೇನು ಮಾಡಬೇಕು? ಇತ್ಯಾದಿ ಸಮಸ್ಯೆಗಳಿಗೆ ಸದುತ್ತರವನ್ನು ಕೊಡುವ ಪತ್ರಿಕೆ ಎಂದರೆ

ಸದ್ಧರ್ಮ ಪ್ರಚಾರಕ

ವಾ. ಚ. 1—4—0.

ಸಂಪಾದಕರು:-

ಬಿ. ಲಕ್ಷ್ಮಣದೇವ ವಿದ್ಯಾರ್ಥಿ.

ಉತ್ಕೃಷ್ಟ ಕಥೆ, ಕವನಗಳಿಂದೊಡಗೂಡಿ, ಪ್ರತಿಮಾಸದ 16ನೇ ತಾರೀಕಿಗೆ ತಪ್ಪದೆ ಹೊರಡುವುದು.

ಸದ್ಧರ್ಮ ಪ್ರಚಾರಕ, ಕಾರ್ಯಲಯ,
ಅಳಕೆ ರಸ್ತೆ, ಮಂಗಳೂರು.

ಪ್ರವಾಸಿ.

ಅತ್ಯುತ್ತಮವಾದ ಸಚಿತ್ರ ಕನ್ನಡ. ಮಾಸಪತ್ರಿಕೆ.

ಬೋಧಪ್ರದವಾದ ಲೇಖಗಳು-ಮಹಾಪುರುಷರ ಜೀವನ ಚರಿತ್ರೆಗಳು ಉತ್ತಮ ಕಥೆಗಳು-ಆರ್ಥಿಕ ರಾಜಕೀಯ ವಿಚಾರಗಳು ವೈಜ್ಞಾನಿಕ ವಿಷಯಗಳು-ಪರರಾಷ್ಟ್ರಗಳ ಸಮಸ್ಯೆಗಳು-ಗ್ರಂಥ ವಿಮರ್ಶೆ ಇವುಗಳ ನ್ನೊಳಗೊಂಡ ಹೊಸ ರೀತಿಯ ಮಾಸಪತ್ರಿಕೆ. ಕೈಗೆಲಸವೆಂಬ ನೂತನ ವಿಭಾಗವಿರುವ ಪತ್ರಿಕೆಯು ಇದೊಂದೇ

ವಾರ್ಷಿಕ ಚಂದಾ ರೂ. 3—8—0.

ಪ್ರವಾಸಿ ಕಾರ್ಯಾಲಯ
ಕಾಸರಗೋಡು, ದಕ್ಷಿಣಕನ್ನಡ.

THE

Vijaya Bank, Ltd.

Head Office: MANGALORE. Branch Office: Court Road, UDIPI.

ದಿ ವಿಜಯ ಬೇಂಕ್ ಲಿಮಿಟೆಡ್,

ಹೆಡ್ ಆಫೀಸು: ಮಂಗಳೂರು. ಶಾಖೆ: **ಕೋರ್ಟು ರಸ್ತೆ, ಉಡುಪಿ**

ಚಾಲ್ತಿ ಠೇವಣಾತಿಗಳು ಸಾ. ಶೆ. 2. ಸೇವಿಂಗ್ಸ್ ಬ್ಯಾಂಕ್ ಠೇವಣಾತಿಗಳುಸಾ. ಶೆ. 3½

ಕಾಯಂ ಠೇವಣಾತಿಗಳು 3 ತಿಂಗಳ ಬಾಬ್ತು ಸಾ. ಶೆ. 3½

6 ಮತ್ತು 9 ತಿಂಗಳ ಬಾಬ್ತು ಸಾ ಶೆ. 4. 1 ವರ್ಷದ ಬಾಬ್ತು ಸಾ. ಶೆ. 5.

2 ವರ್ಷದ ಮೇಲಿನವುಗಳ ಬಾಬ್ತು ಸಾ. ಶೆ. 5½ ದರದ ಬಡ್ಡಿಯಲ್ಲಿ ಅಂಗೀಕರಿಸಲ್ಪಡುವುವು.

ಬ್ಯಾಂಕಿಗೆ ಸಮ್ಮಂಧಪಟ್ಟ ಎಲ್ಲಾ ತರದ ವ್ಯವಹಾರಗಳು ನಡೆಸಲ್ಪಡುತ್ತವೆ—
ಅಂದರೆ—ಪ್ರೊ ನೋಟು, ಹುಂಡಿ, ಸರಕು, ವಗೈರೆ ಮೇಲೆ ಸಾಲಕೊಡಲಾಗುತ್ತದೆ.
ಭಂಗಾರದ ಈಡಿನ ಮೇಲೆ ಈ ಕೆಳಗಿನ ದರದ ಬಡ್ಡಿಯಲ್ಲಿ ಸಾಲ ದೊರೆಯುವುದು.
ರೂ. 1ರಿಂದ 99ರ ವರೆಗೆ ಸಾ. ಶೆ. 9. 100ರಿಂದ 250ರ ವರೆಗೆ ಸಾ. ಶೆ. 8. ಮತ್ತು 251ರಿಂದ ಮೇಲ್ಪಟ್ಟ ಸಾಲಗಳಿಗೆ ಸಾ. ಶೆ. 7.

ವಿಶೇಷ ಸೂಚನೆ:—ಬಡವರಿಗೆ ಸಹಾಯವಾಗುವಂತೆ ಕಡಿಮೆಯೆಂದರೆ ರೂಪಾಯಿ 10/ ಸಹಾ ಸಾಲಕೊಡಲಾಗುತ್ತದೆ. ಪಾಲುಗಳು ದೊರೆಯುತ್ತವೆ.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಕೊಳ್ಳಿರಿ.

A. B Shetty, ಚೆಯರ್‌ಮೇನ್. **K. Gopalakrishna Shetty.** ಸೆಕ್ರೆಟರಿ.

ವಿಜಯ ಬೇಂಕ್ ಲಿಮಿಟೆಡ್, ಕದ್ರಿರೋಡ್, ಮಂಗಳೂರು.

ಸ್ವದೇಶಿ ಕೈಗಾರಿಕೆಯನ್ನು ಪ್ರೋತ್ಸಾಹಿಸಿರಿ.

ಸ್ವದೇಶಿ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗೆಬಗೆಯ ಬಣ್ಣದಲ್ಲಿ, ಅಂಚಿನಲ್ಲಿ, ನಮೂನೆಯಲ್ಲಿ ದೊರೆಯುತ್ತವೆ.

ಶುದ್ಧ ಖಾದಿ ಮತ್ತು ಮಿಲ್ ಬಟ್ಟೆಗಳೂ ವಿಕ್ರಯಿಸಲ್ಪಡುತ್ತವೆ.

P. A. PAI, BROS.
ಪಿ. ಎ. ಪೈ ಬ್ರದರ್ಸ್,
ಆಸ್ಪತ್ರೆ ಎದುರು, ಉಡುಪಿ.

ಕಸಿಗಿಡಗಳು.

ಸಪೋಡಿಲ್ಲ (ಚಿಕ್ಕು)

ಈ ಮರವು ನಮ್ಮ ಜಿಲ್ಲೆಯ ಎಲ್ಲಾ ಭಾಗದಲ್ಲಿಯೂ ಸರಿಯಾಗಿ ಬೆಳೆದು, 3ನೇ ವರ್ಷದಲ್ಲಿಯೇ ತಪ್ಪದೆ ಫಲಬಿಡುತ್ತದೆ. ಒಂದು ಮರದಲ್ಲಿ ಸಾವಿರಗಟ್ಟಲೆ ಹಣ್ಣಾಗುವುದು. ಒಂದು ಎಕ್ರೆಯಲ್ಲಿ ವರ್ಷಕ್ಕೆ ರೂ. ಸಾವಿರದ ಮೇಲೆ ಉತ್ಪತ್ತಿಯಾಗುವುದು. ಹಣ್ಣು ಅತಿ ಮಧುರ, ಒಳ್ಳೇ ರುಚಿ, ಕಾಯಿಲೆಯವರಿಗೆ ಉತ್ತಮ ಆಹಾರ ಆದರಲ್ಲಿ ಸಕ್ಕರೆ ಸತ್ವ ಮತ್ತು ವಿಟಮಿನ್ ತುಂಬ ಇರುವದರಿಂದ ರಕ್ತವನ್ನು ವೃದ್ಧಿಪಡಿಸುವುದು. ಮರದಲ್ಲಿ ಯಾವಾಗಲೂ ಹಣ್ಣು ಇರುವುದು, ಎಲ್ಲ ತೋಟದಲ್ಲಿಯೂ ಇರತಕ್ಕದ್ದು. ಗಿಡವೊಂದರ ಕ್ರಯ ರೂ. 1-0-0 ಮಾತ್ರ. ನಮ್ಮಲ್ಲಿ ಉತ್ತಮ ಮಾವು ಮತ್ತು ಇತರ ಕಸಿ ಗಿಡಗಳು ಕೂಡ ದೊರೆಯುತ್ತವೆ. ಕ್ರಯಪಟ್ಟಿಗೆ ಕೆಳಗಣ ವಿಳಾಸಕ್ಕೆ ಬರೆಯುವುದು.

ಮಂಗಳೂರಲ್ಲಿ ವಿಜಯ ಬ್ಯಾಂಕಿನಲ್ಲಿಯೂ ಸ್ವಾದೇಶಿ ಶಾಪು, ಹಂಪನಕಟ್ಟೆಯಲ್ಲಿಯೂ, ಸೋಮಯಾಜಿ ಎಂಡ್ ಕೊ, ರಥಬೀದಿಯಲ್ಲಿಯೂ ಮತ್ತು ಜಿಲ್ಲೆಯ ಎಲ್ಲಾ ಎಗ್ರಿಕಲ್ಚರಲ್ ಡೆಮೋನ್ಸ್ಟ್ರೇಟರಲ್ಲಿಯೂ ಮೇಲಿನ ಎಲ್ಲಾ ಗಿಡಗಳು ದೊರೆಯುತ್ತವೆ,

ಕೆ. ಎಮ್. ಶೆಟ್ಟಿ, ಕೆನರಾ ನರ್ಸರಿ,
ಪೋಸ್ಟ್ ಕಾಪು, ದ. ಕನ್ನಡ

ನಾರದನ ತಂಬೂರಿ

ಎದ್ದಿಹುದು ಸುಳಿಗಾಳಿ! ಬೀಸಿ ಮುಗಿಯುವ ತನಕ! ನಿಮ್ಮ ತಲೆಯೊಳಗದೇ ಸುಳಿಯದಿರದು॥ ನರನಾರಾಯಣ! ಶುಭವಾಗಲಿ ಮಾನವರೆ! ಏನಾದರೂ ವಾರ್ತೆ ಬೇಕೆ? ಮೊನ್ನೆ ಚರ್ಖಾರೀ ಸಂಸ್ಥಾನವಲ್ಲಿ ಜವಾಹಿರಲಾಲರ ಕಾರು ಹೋಗುತ್ತಿದ್ದಾಗ ಪೋಲೀಸಿನವರು ತಡೆದು ನಿಲ್ಲಿಸಿಬಿಟ್ಟರಂತೆ! ನಿಲ್ಲಿಸಿಬಿಟ್ಟರಂತೆ! ನಿಲ್ಲಿಸಲಿಕ್ಕಾದುದು ಮಾತ್ರ ಎರಡೇ ನಿಮಿಷ—ಮೂರನೇ ನಿಮಿಷದಲ್ಲಿ ಜವಾಹಿರಲಾಲರು ಅದನ್ನು ಹೊರಡಿಸಿಬಿಟ್ಟರು.

●

ಪಂಡಿತ ಜವಾಹರಲಾಲರ ಕಾರು ರಾಷ್ಟ್ರಧ್ವಜದೊಡನೆ ಹೋಗುತ್ತಿತ್ತು. ಪೋಲೀಸರು ಅದಾಗುವುದಿಲ್ಲ ಎಂದರು. ಜವಾಹಿರಲಾಲರು ಕೆಳಗಿಳಿದು "ನನ್ನ ಕಾರು ಧ್ವಜವನ್ನು ಹಾರಿಸಿಕೊಂಡೇ ಹೋಗುವದು; ಅದನ್ನು ತಡೆಯುವವರಾರು ನೋಡೋಣ. ಹೂಂ—ಹೋಗಲಿ" ಎಂದರು. ಕಾರು ಧಾವಿಸಿತು—ಪೆಟ್ರೋಲಿನಿಂದಲ್ಲ; ಜವಾಹಿರಲಾಲರ ಸ್ಪಿರಿಟನಿಂದ!

●

ಪಂಡಿತ ಮಾಲವೀಯರು ಸಭೆಯೊಂದರಲ್ಲಿ ಕೊಂಗ್ರೆಸ್ ಉಮೇದ್ವಾರಿಗಿದಿರಾಗಿ ನಿಂತವರನ್ನು ಸಮರ್ಥಿಸಿ ಭಾಷಣ ಕೊಡುತ್ತಿದ್ದರು. ಸಭಿಕರಿಗದನ್ನು ಸಹಿಸಲಾಗಲಿಲ್ಲ. ಅವರು ಮಾಲವೀಯರನ್ನು ಅವಮಾನಗೊಳಿಸಲು ಬಗೆದರಂತೆ! ಮಾಲವೀಯರಂತಹ ಮುಂದಾಳುಗಳ ಮುಂದೆ ಹಾಗೆ ಮಾಡಬಾರದಿತ್ತು; ಕೊಂಗ್ರೆಸಿನ ಸೇವೆಯಲ್ಲಿ ಮುಂದಾಳಾದ ಮಾಲವೀಯರೂ ಹಾಗೆ ಮಾಡಬಾರದಿತ್ತು!

●

ಪಾಶ್ಚಿಮಾತ್ಯ ದೇಶಗಳೆಲ್ಲಾ ಶಸ್ತ್ರತ್ಯಾಗಕ್ಕೆ ಅನುಕೂಲ ಮನೋವೃತ್ತಿಯನ್ನು ತೋರಿಸುತ್ತವೆ. ಶಸ್ತ್ರ 'ತ್ಯಾಗ'ವನ್ನು ಎರಡು ವಿಧದಿಂದ ಮಾಡಲಾಗುತ್ತದೆ. ಒಂದು ಶಸ್ತ್ರವನ್ನು ಮೂಲೆಪಾಲು ಮಾಡುವದು; ಇನ್ನೊಂದು ವೈರಿಗಳ ಮೇಲೆ ಬಿಡುವದು—ಎರಡರಲ್ಲಿ ಯಾವುದಕ್ಕಾದರೂ ಕೈಯಲ್ಲಿದ್ದುದನ್ನು ತ್ಯಾಗಮಾಡಲೇಬೇಕು! ಈ ರಾಷ್ಟ್ರಗಳ ತ್ಯಾಗವು ಯಾವ ರೀತಿಯದೆಂಬುದನ್ನು ಮುಂದೆ ನೋಡಬೇಕು!

●

ರಾಷ್ಟ್ರಬಂಧುವಿನ ಕು. ವಾಚಸ್ಪತಿಯು ತರ್ಕಕ್ಕಿಳಿದಿದ್ದಾನೆ. ಡಾ। ಯು. ರಾಮರಾಯರನ್ನು ನವಯುಗವು ಒಂದೆ ಮಿತಿಮೀರಿ ನಿಂದಿಸಿದ್ದಂಟಂತೆ! ಈಗ ಅವರ ಮಾತನ್ನೇ ಅವರ ಬಂಧುಮಿತ್ರರಿಗೆ ತೋರಿಸಲು ನವಯುಗಕ್ಕೆ ಅಧಿಕಾರವಿಲ್ಲವೆಂಬ ಅರ್ಥ-ಕು. ವಾಚಸ್ಪತಿಯದು.

●

ಡಾ। ರಾಯರು ತಪ್ಪುಮಾಡಿದರೆ ಅದನ್ನು ತಪ್ಪೆಂದು ನವಯುಗವು ಹೇಳುತ್ತದೆ; ಅವರು ನ್ಯಾಯವನ್ನು ಪ್ರತಿಪಾದಿಸಿದರೆ ನವಯುಗವದನ್ನು ಎತ್ತಿ ತೋರಿಸುತ್ತದೆ. ಕು. ವಾಚಸ್ಪತಿಗೆ ಅದು ಸರಿದೋರುವದಿಲ್ಲ: ಡಾ। ಯು. ರಾಮರಾಯರಂಥವರನ್ನು ಸದಾ ಕಾಲ ಪೂಜಿಸದಿದ್ದಷ್ಟು ದೊಡ್ಡ ತಪ್ಪು ಇನ್ನೊಂದಿಲ್ಲವೆಂದು ಅವನ ಭಾವನೆ. ಆದರೂ 'ಎಲ್ಲರೂ ಮೂರ್ತಿ ಪೂಜೆಯನ್ನೆ ಮಾಡಲೆ ಬೇಕೊ?' ಎಂದು ಪ್ರಶ್ನಿಸುವದನ್ನು ಬಿಡುವದಿಲ್ಲ. 'ರಾಯರು ಹತ್ತಿರವಿದ್ದರೆ ಕೆಟ್ಟ ಮನುಷ್ಯರು! ದೂರವಿದ್ದರೆ ಒಳ್ಳೆಯವರಯ್ಯ!' ಇದು ಕು. ವಾಚಸ್ಪತಿಯ ಮಾತು, ನವಯುಗವು ಪ್ರಶ್ನಿಸಿದ್ದೂ ಅದನ್ನೆ-'ಮದ್ರಾಸಿನಲ್ಲಿ ಇಷ್ಟು ಒಳ್ಳೆಯವರಾಗಿರುವಾಗ ದಕ್ಷಿಣ ಕನ್ನಡದಲ್ಲಿ ಹೀಗೇಕೆ?'

●

ಬಂಧುಗಳಾದ ಶೆಟ್ಟರು ಮತ್ತು ಹೆಗ್ಗಡೆಗಳು ತಮ್ಮೊಳಗೆ ಯುದ್ಧ ಹೂಡಿದಂತೆ ಡಾ। ಯು. ರಾಮರಾಯರೂ ಬಂಧುಗಳೂ ಮಾಡಲಾರರೆಂದು ಕು. ವಾಚಸ್ಪತಿಯ ವಾದದಿಂದ ತಿಳಿದುಬರುತ್ತದೆ. ಸೆಟ್ಟರು ಮತ್ತು ಹೆಗ್ಗಡೆಗಳು ಒಂದೊಂದು ರಾಜಕೀಯ ಪಂಥವನ್ನು ಕಟ್ಟಿಕೊಂಡು ಯುದ್ಧ ಹೂಡಿದ್ದಾರೆ. ಅದರಲ್ಲಿ ದುಃಖವಿಲ್ಲ. ಪಂಥವನ್ನು ಬಿಟ್ಟುಕೊಟ್ಟಾದರೂ ಬಂಧುತ್ವವನ್ನು ರಕ್ಷಿಸುವವರಲ್ಲಿಯೇ ಕು. ವಾಚಸ್ಪತಿಗೆ ಅಭಿಮಾನವೆಂದಾದರೆ ಆ ಮೇಲೆ ನನ್ನ ಟೀಕೆಯಿಲ್ಲ.

●

ನವಯುಗದ ವಿಮರ್ಶಕರ ಪತ್ರದಲ್ಲಿ ಅನ್ಯರ ಉಪದೇಶದ ಇಂಗ್ಲಿಷಿನಲ್ಲಿ ಬರೆದುದರ ಭಾಷಾಂತರದ ವಾಸನೆ ಕು. ವಾಚಸ್ಪತಿಗೆ ಬಂತಂತೆ! ಕು. ವಾಚಸ್ಪತಿಯು ಸತ್ತೇದಾರನಲ್ಲ-ತನ್ನಂತೆ ಪರರ ಬಗೆವ ಉದಾರಿ ಮಾತ್ರ!

●

ಕು. ವಾಚಸ್ಪತಿಯು ಕೊಂಗ್ರೆಸಿನ ತತ್ವಗಳ ಭಜಕ; ಆದರೆ ನಾಲ್ಕಾರು ಮಂದಿ ಪಾರ್ಲಿಮೆಂಟರಿ ಕಮಿಟಿಯವರ ತೀರ್ಮಾನದಲ್ಲಿ ಆತನಿಗೆ ವಿಶ್ವಾಸವಿಲ್ಲ. ಆ ತತ್ವಗಳಿಗೇ ಕೈಬಾಯಿ ಹುಟ್ಟಿ ತೀರ್ಮಾನ ಕೊಡುತ್ತವಾದರೆ ಅದನ್ನವನು ಮೀರುವಂತಿಲ್ಲ!

●

ಡಾ. ರಾಮರಾಯರು ಅಪ್ಪರ್ ಹೌಸ್ ಉಮೇದ್ವಾರಿಕೆಯ ಅರ್ಜಿ ಹಾಕಿದಾಗ ಅದನ್ನು ಶಿಫಾರಸು ಮಾಡದಿದ್ದುದು ಈ ನಾಲ್ಕಾರು ಮಂದಿ ಸ್ಥಳಿಕ ಪಾರ್ಲಿಮೆಂಟರಿ ಕಮಿಟಿಯವರು ಮಾತ್ರ. ಆ ತೀರ್ಮಾನಕ್ಕೆ ಮಹತ್ವವನ್ನು ಕೊಟ್ಟು ಡಾ। ರಾಮರಾಯರು ಹಿಂದೆಗೆದುದು ತಪ್ಪಲ್ಲವೆಂದು ಕು. ವಾಚಸ್ಪತಿಯು ತೋರಿಸಿ ಕೊಡುತ್ತಾನೆ. ಅದೇ ಸಮಯದಲ್ಲಿ ನಾಲ್ಕಾರು ಮಂದಿಯ ಕಮಿಟಿಯ ಮಹತ್ವವನ್ನು ಅಲ್ಲಗಳೆಯುತ್ತಾನೆ!!

●

ಡಾ. ಯು. ರಾಮರಾಯರು ಹಿಂದೆಗೆದ ಮೇಲೆ ಅರ್ಜಿ ಕೊಟ್ಟಿದ್ದ ಮಿಕ್ಕ ವ್ಯಕ್ತಿಗಳು ಕಾಣೆಯಾಮದೇಕೆ? ಎಂದು ಕು. ವಾಚಸ್ಪತಿಯ ಪ್ರಶ್ನೆ. ಕೊನೆಯ ತೀರ್ಮಾನದ ವರೆಗೆ ಕಾಯದೆ ಎಲ್ಲರೂ ಕಾಣೆಯಾಗಿರುವಾಗ ಕು. ವಾಚಸ್ಪತಿಯು ಕೆಲವರನ್ನು ಮಾತ್ರ ಪ್ರಶ್ನಿಸುತ್ತಾನೇಕೆ?

●

ಅಪ್ಪರ್ ಹೌಸಿಗೆ ಯಾರನ್ನೂ ನಿಲ್ಲಿಸದಿದ್ದುದರ ಕುರಿತು ಪ್ರಕಟಣೆಯನ್ನು ಪಾರ್ಲಿಮೆಂಟರಿ ಬೋರ್ಡಿನವರು ಕೊಡದಿರುವದು ಕು. ವಾಚಸ್ಪತಿಯ ದೃಷ್ಟಿಯಲ್ಲಿ ಮಹಾಪರಾಧ. ಅವರು ಪ್ರಕಟಣೆಯನ್ನು ಹೊರಡಿಸದಿರುವುದರಿಂದ ಆ ಕುರಿತು ಯಾರಾದರೂ ಇಚ್ಛೆ ಬಂದಂತೆ ಪ್ರಕಟಣೆ ಹೊರಡಿಸಬಹುದೆಂಬ ಅರ್ಥವಾಗುವುದಿಲ್ಲವಷ್ಟೆ!

●

ಡಾ। ಯು. ರಾಮರಾಯರ ಉಮೇದುವಾರಿಕೆಗೆ ಪ್ರತಿಕೂಲವಾಗಿ ನಿಂತ ಎಲ್ಲಾ ವಿದ್ಯಮಾನಗಳಿಗೂ ಕು. ವಾಚಸ್ಪತಿಯ ಮಾತಿನಂತೆ ಪಾರ್ಲಿಮೆಂಟರೀ ಬೋರ್ಡಿನವರೇ ಹೊಣೆ; ಅವರದೆ ಮಹಾಪರಾಧ! ಆದ್ದರಿಂದ ಡಾ। ಯು. ರಾಮರಾಯರ ಮಾತಿನ ಪ್ರಸ್ತಾಪವನ್ನು ನವಯುಗವೆತ್ತಬಾರದು ಎಂದು ಕು. ವಾಚಸ್ಪತಿಯ ಅಂಬೋಣವೆ?

ಇಷ್ಟು ತರ್ಕಿಸಲು ಹೋಗಿ ನಾರದನೀಗ ಮಹಾಪರಾಧಿಯಾಗಿರಬಹುದು. ಇನ್ನಾದರೂ ಹೋಗುವದುತ್ತಮ. ಹೋಗಿ ಬಿಡುತ್ತೇನೆ. ಸುದ್ದಿಯಾ ಸುಳಿಯೊಂದು ದೊರಕಿತದ ವಾದಿಸಿದೆ! ನಾರದನಿಗೀ ತಂಟೆಯಾತಕಯ್ಯಾ ॥

—ನಾರದ.

ಕಳೆದ ತಾ 31ನೇ ರವಿವಾರ ರಾತ್ರಿ ಘಂಟೆ 7-15ಕ್ಕೆ ಬೊಂಬಾಯಿಯ ಶೇರ್ ಬಜಾರ್, ಅಶೋಬಾನ್ ಬಿಲ್ಡಿಂಗಿನ 4ನೇ ಮಾಳಿಗೆಯಲ್ಲಿ, ಶ್ರೀಮಾನ್ ಮಾಧವ ಪುತ್ರನ್ನಾಯರ ಪುತ್ರ ತಿಮ್ಮಪ್ಪ ಸುವರ್ಣರೆಂಬವರು ದಿವಂಗತ ವಿ. ಸಿ. ಅಮೀನರ ಪುತ್ರಿ ಕುಮಾರಿ ಚಂದ್ರಾವತಿ ದೇವಿಯನ್ನು ವೈದಿಕ ವಿಧಿ ಮೇರೆಗೆ ಪಾಣಿಗ್ರಹಣ ಮಾಡಿಕೊಂಡರು. ಶ್ರೀಯುತರುಗಳಾದ ಬಿ. ಮೋನಪ್ಪ ತಿಂಗಳಾಯರು ವರನ ಕಡೆಯಿಂದಲೂ, ವಿ. ಸತ್ಯಾರ್ಥಿಯವರು ವಧುವಿನ ಕಡೆಯಿಂದಲೂ ಪೌರೋಹಿತ್ಯವನ್ನು ವಹಿಸಿದ್ದರು. ತನ್ನ ಮದುವೆಯ ಸ್ಮರಣಾರ್ಥವಾಗಿ ಶ್ರೀ. ತಿಮ್ಮಪ್ಪ ಸುವರ್ಣರು ಫೋರ್ಟು ಆರ್ಯ ಸಮಾಜದ ವೇದ ಪ್ರಚಾರ ಫಂಡಿಗೆ ರೂಪಾಯಿ 11 ದಾನವಿತ್ತುದು ಸ್ತುತ್ಯವಿರುತದೆ.

ಶಾಲೆಯಮೇಲೆ ಶಾಲೆ! (Overlapping of Schools!)

ಅಯ್ಯಾ ವಿದ್ಯಾಭಿಮಾನಿಗಳೇ!

ನಮ್ಮೂರಲ್ಲಿರುವ ಮಟಪಾಡಿ ಶಾಲೆಯು ೬ನೇ ದರ್ಜೆಗಳವರೆಗೆ ಇದ್ದು ಯೋಗ್ಯರೀತಿಯಿಂದ ನಡೆದು ಬರುತ್ತಿರುವ ಸಮಯ ಅದಕ್ಕೊಂದು ಅವಘಡವನ್ನು ತಂದೊಡ್ಡುವುದು ಅಗತ್ಯವೆಂದೋ, ಇಲ್ಲವೇ ಕಾಲಿಕವೆಂದೋ, ಬೇರೊಂದು ಶಾಲೆಯ ಪ್ರಾದುರ್ಭಾವ! ಅದೇ ಹಂದಾಡಿಶಾಲೆ! ಮಟಪಾಡಿ ಶಾಲೆಯಿಂದ ಹಂದಾಡಿ ಶಾಲೆಗಿರುವುದು ಬರೇ ಅರ್ಧ ಮೈಲು; ಮಾತ್ರವಲ್ಲದೆ ಹಂದಾಡಿಯಿಂದ ನಂಚಾರು ಮೈಲು ದೂರದಲ್ಲಿ ಬ್ರಹ್ಮಾವರ ಬೋರ್ಡುಶಾಲೆ ಇರುವುದು. ಹಂದಾಡಿ ಶಾಲೆ ಬರೇ ಎರಡನೇ ದರ್ಜೆವರೆಗೆ ಇರುವ ಶರ್ತದಮೇಲೆ, ಮಂಜೂರಾತಿಯಾಗಿತ್ತು. ಈಗ ಆ ಶಾಲೆಯು ಕೆಥೋಲಿಕ್ ಬೋರ್ಡಿನವರ ಅಧೀನಕ್ಕೆ ಹೋಗುವಾಗಲೇ, ಹಿಂದಿನ ಶರ್ತಗಳನ್ನು ಬಿಟ್ಟಿಟ್ಟು ಈಗೀಗಲೆ ಮೂರನೇ ದರ್ಜೆಗೆ ಮಂಜೂರಾತಿಯನ್ನು ಕೇಳಿದ್ದಾರಂತೆ; ಮಾತ್ರವಲ್ಲದೆ, ವಿದ್ಯಾಧಿಕಾರಿಗಳು ಕಣ್ಣುಮುಚ್ಚಿ 'ಲೇಖನಿ'ಯನ್ನು ತಿರುಗಿಸುವುದಕ್ಕೂ ಸಿದ್ಧರಿರುತ್ತಾರೆಂದು ವದಂತಿ. ಇನ್ನೂ ನೋಡುವುದಾದರೆ, ಹತ್ತಿರದ ಹೊಳೆಯ ಮತ್ತೊಂದು ಪಾರ್ಶ್ವದಲ್ಲಿ ಬಾರ್ಕೂರ್ ಬೋರ್ಡು ಹಾ. ಎ. ಶಾಲೆಯು ಹಂದಾಡಿಯಿಂದ ಮುಕ್ಕಾಲು ಮೈಲಿನೊಳಗಿರುವುದು. ಈ ರೀತಿಯಾಗಿ ಶಾಲೆಗಳ ಮೇಲಾಟವು ವಿದ್ಯೆಯ ಅಭಿವೃದ್ಧಿಗೆಂದು ತೋರಿದರೂ ವಿದ್ಯಾವೈಷಮ್ಯಕ್ಕೆ ಕಾರಣವೆಂದೇ ನಮಗೆ ತೋರುವುದು, ಮಾತ್ರವಲ್ಲದೆ, ಇತ್ತಂಡದ ಮೆನೇಜರರ ಪೇಚಾಟಕ್ಕೆ ಕೂಡ ಕಾರಣವಾಗುವುದು.

ತಾ. 21 1 37ರಲ್ಲಿ ವಿದ್ಯಾಖಾತೆಯ ಪ್ರಧಾನಾಧಿಕಾರಿಗಳು "ಶಾಲೆಯ ಮೇಲೆ ಶಾಲೆ(overlaping of school)"ಗಳಿಗೆ ಎಡೆಕೊಡಬಾರದೆಂದು ಸರ್ಕ್ಯುಲರನ್ನು ಹೊರಡಿಸಿರುತ್ತಾರೆ. ಆದ್ದರಿಂದ ವಿದ್ಯಾಧಿಕಾರಿಗಳು, ಪ್ರತ್ಯಕ್ಷ ಆಗುತ್ತಿರುವ ಮಟಪಾಡಿ ಶಾಲೆಗಳ ಮೇಲಾಟವನ್ನು ನೋಡಿಯಾದರೂ, ಸರಿಯಾದ ವ್ಯವಸ್ಥೆಯನ್ನು ಮಾಡಬೇಕಾಗಿ ಹಳ್ಳಿಯವರ ಬಿನ್ನಪ.

ಓರ್ವಸ್ಥಳೀಕ.

ಜಿಲ್ಲೆಯ ಬ್ರಾಹ್ಮಣ ಮುಖಂಡರ ವರ್ತನೆಯ ಖಂಡನೆ

ದ. ಕ. ಜಿಲ್ಲಾ ಬ್ರಾಹ್ಮಣ ವಿದ್ಯಾರ್ಥೀ ಭವನದಲ್ಲಿ ಪ್ರಚಂಡ ಸಭೆ.

ದಕ್ಷಿಣ ಕನ್ನಡ ದ್ರಾವಿಡ ಬ್ರಾಹ್ಮಣರ ಹೋಸ್ಟೆಲಿನ ವಿದ್ಯಾರ್ಥಿ ಸಂಘದವರು ಆಶ್ರಯ ದಲ್ಲಿ ಕಾಂಗ್ರೆಸಿಗೇನೇ ವೋಟು ಕೊಡುವಂತೆ ಪ್ರೋತ್ಸಾಹಿಸಲೂ ಬ್ರಾಹ್ಮಣ ಮುಖಂಡರಾದ ಕೆಲವರು ಕಾಂಗ್ರೆಸ್ ವಿರುದ್ಧವಾಗಿ ಕೆಲಸ ಮಾಡುತ್ತಿರುವುದನ್ನು ಖಂಡಿಸಲೂ ಒಂದು ಸಭೆಯುಜರಗಿಸಲ್ಪಟ್ಟಿತು. ಶ್ರೀಮಾನ್ ಯಸ್. ಯನ್. ಹೊಳ್ಳರು ಅಧ್ಯಕ್ಷರಾಗಿದ್ದರು. ನಾವು ಎಲ್ಲಿರುವೆವು- ಜಗತ್ತು ಇಂದು ಏನುಮಾಡುತ್ತಿದೆ-ನಮ್ಮ ಕರುಣಾಳು ಸರಕಾರವು ನಮಗೆ ಎಷ್ಟು ಉಪಕಾರ (?) ಮಾಡುತ್ತಿದೆ ಮುಂತಾದವುಗಳ ಕುರಿತು ಭಾಷಣವಿತ್ತು ಬಳಿಕ ನೆರೆದಿದ್ದ ಹಲಕೆಲವು ತರುಣರಲ್ಲಿ ಶ್ರೀಗಳಾದ ಯಸ್. ಎನ್. ಹೊಳ್ಳ, ಎಂ. ಆರ್. ರಾವ್, ಕೆ. ಪಿ ಕಾರಂತ ಯು ಜಿ. ರಾವ್, ಆಚಾರ್; ಪಿ. ಆರ್. ರಾವ್. ಮಾಸ್ಟರ್ ವೆಂಕಣ್ಣ, ಬಿ. ಯು ಹೊಳ್ಳ ಮೊದಲಾದ ಮಹನೀಯರು ಹಳೆ ತಲೆಗಳು 'ಸಾಯುವಕಾಲಕ್ಕೆ ಮಾಳಪ್ಪ ಮೀನುತಿಂದು ಸತ್ತ' ಎಂಬ ಹಳೇ ಉಕ್ತಿಯಂತೆ ತಮ್ಮ ಮುದಿಹುಚ್ಚಿನಿಂದ ಹೆತ್ತ ತಾಯಿಯನ್ನು ಮರೆತು ಬ್ರಾಹ್ಮಣ ಕುಲಕ್ಕೇನೇ ಕಂಟಕಪ್ರಾಯರಾದ ಜಸ್ಟಿಸ್ ಪಂಗಡಕ್ಕೆ ಸಹಾಯಮಾಡುವುದು ಅವರ ಇಂದಿನ ತನಕದ ಉತ್ತಮ ಕೆಲಸಗಳಿದ್ದರೆ ಅದರ ಫಲವನ್ನು ಕಳೆದು ಕೊಳ್ಳುವುದಕ್ಕಲ್ಲದೆ ಬೇರೆ ಅಲ್ಲ ಆದರೆ ನಾವು ನಮ್ಮ ಕರ್ತವ್ಯದಿಂದ ಅವರಿಗೆ ಕರ್ತವ್ಯದಾರಿಕಾಣಿಸೋಣ ಎಂದು ಮುಂತಾಗಿ ಮಾತನಾಡಿದರು ಕೊನೆಗೆ (೧) ಜನಸಮುದಾಯವು ಕಾಂಗ್ರೆಸಿಗೇನೇ ಓಟುಕೊಡಬೇಕಲ್ಲದೆ ಅದಕ್ಕಾಗಿ ಓಟು ಕೊಡಿಸಹಾಕಬೇಕು. (೨) ಜಿಲ್ಲೆಯ ಬ್ರಾಹ್ಮಣ ಮುಖಂಡರು ಕಾಂಗ್ರೆಸ್ ವಿರುದ್ಧಪಾರ್ಟಿಯನ್ನು ಬಿಟ್ಟು ದೇಶದ ಒಂದೇ ಒಂದು ಸಂಸ್ಥೆಯಾದ ಕಾಂಗ್ರೆಸನ್ನೇ ಸೇರಬೇಕು— ಎಂಬುದಾಗಿ ಠರಾವುಗಳು ಪಾಸಾಗಿ ವಂದನಾರ್ಪಣೆಯ ಬಳಿಕ ಸಭೆಯು ಮುಕ್ತಾಯವಾಯಿತು.

ಕುಂದಾಪುರ ಬೇಂಕ್ ಲಿಮಿಟೆಡ್
ಕುಂದಾಪುರ

ನಮ್ಮ ಬೇಂಕಿಗೆ ಬೇಂಕಿಂಗ್ ವ್ಯವಹಾರವು ಚೆನ್ನಾಗೆ ಗೊತ್ತಿರುವ ಒಬ್ಬ ಆಫೀಸು ಸೆಕ್ರೆಟರಿಯೂ ಮೂರು ಜನ ಕ್ಲಾರ್ಕರೂ ಬೇಕಾಗಿದ್ದಾರೆ. ಆಫೀಸು ಸೆಕ್ರೆಟರಿಯು ಸೆಕ್ಯೂರಿಟಿ (ಜಾಮೀನು ಹಣ) ಕೊಡಬೇಕಾಗಿದೆ. ಉಮೇದುವಾರರು ತಮ್ಮ ಯೋಗ್ಯತಾಪತ್ರದೊಂದಿಗೆ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ನಡಿಸತಕ್ಕದ್ದು.

ಮೆನೇಜಿಂಗ್ ಡೈರೆಕ್ಟರ್,
ಕುಂದಾಪುರ ಬೇಂಕ್, ಲಿಮಿಟೆಡ್,
ಕುಂದಾಪುರ.

--- **ನವಯುಗಕ್ಕೆ** ---
ಇಂದೇ ಚಂದಾದಾರರಾಗಿರಿ!

PUBLICATION.

ಈ ಮೂಲಕ ಸರ್ವಜನರಿಗೆ ತಿಳಿಯಪಡಿಸುವದೇನೆಂದರೆ.

ಉಡುಪಿ ಡಿಸ್ಟ್ರಿಕ್ಟ್ ಮುನ್ಸಿಫ ಕೋರ್ಟಿನಲ್ಲಿ O. P. No. $\frac{11}{1937}$

ಭಾಗೀರಥೀಬಾಯಿ, ಉಡ್ಪಿ ತಾಲೂಕು ಹಿರೆಬೆಟ್ಟು ಗ್ರಾಮ **ಅರ್ಜೀದಾರಳು.**

ಮತ್ತು

1 ರಾಮಚಂದ್ರ ದತ್ತಾತ್ರಯ ಲಾಘವಂನಕಾರ್ (Calicut)
2 ಕೃಷ್ಣ ಭಟ್ಟ
3 ಪ್ರಭಾಕರ } ಮ್ಯಾನರು
4 ಮನೋಹರ }
ಗಾರ್ಡಿಯನ್ 2ನೆ ಯಡ್ರಿ
} ಉಡ್ಪಿ ತಾಲೂಕು ಹಿರೆ ಬೆಟ್ಟು ಗ್ರಾಮ } ರೆಸ್ಪೋಂಡೆಂಟರು

ಅರ್ಜಿದಾರಳ ಗಂಡ ವ ರೆಸ್ಪೋಂಡೆಂಟರ ತಂದೆ, ದತ್ತಾತ್ರಯ ಗಣೇಶ ಭಟ್ಟ ಲಾಘವಂನ್ ಕಾರನು The Industrial Prudential Assurance Co. Ltd. Bombay ಈ ಕಂಪೆನಿಯಲ್ಲಿ ಪೋಲಿಸಿ ನಂಬ್ರ 8862ಕ್ಕೆ ಇನ್ಶೂರುಮಾಡಿದ ಬಾಬ್ತು ಆತನು ಸ್ವರ್ಗಸ್ತನಾದ್ದರಿಂದ ರೂ. 1250/-ಕ್ಕೆ ಪೋಲಿಸಿ ಶರ್ತಪ್ರಕಾರ ವಸೂಲುಮಾಡುವರೆ ತನಗೆ ಸಕ್ಸೆಶನ್ ಸರ್ಟಿಫಿಕೇಟ್ ಕೊಡಿಸಬೇಕಾಗಿ ಕೊಟ್ಟ ಸದ್ರಿ ಅರ್ಜಿಯು ತಾ. 15-3-1937ಕ್ಕೆ ತನ್ಕಿಗೆ ಇಟ್ಟದೆ. ಆ ಕುರಿತು ಆಕ್ಷೇಪ ಇದ್ದವರು ಆ ದಿವಸ ಹಗಲು 10 ಗಂಟೆಗೆ ಸದ್ರಿ ಕೋರ್ಟಿನ ಮುಂದೆ ಸ್ವತಹಾ ಪ್ಲೀಡರ್ ಮುಖಾಂತರ ಹಾಜರಾಗಿ ಜಾಹೀರುಮಾಡಿಕೊಳ್ಳತಕ್ಕದ್ದು ಎಂಬ ಸಂಗ್ತಿ ಈ ಮೂಲಕ ತಿಳಿಸೋಣಾಗಿಯದೆ.

ಮೊಕ್ಕಾಂ. ಉಡುಪಿ
ತಾ. 10—2—1937

M. Vittal Kamath,
B. A. B. L.
Pleader for Petitioner.

ಉಡುಪಿಯಲ್ಲಿ ಪಂಡಿತ ನೆಹರುಗಳಿಗೆ ॥ ಪ್ರಚಂಡ ಸ್ವಾಗತ ॥

ಎಲ್ಲೆಲ್ಲಿಯೂ ಜನತೆಯ ಉತ್ಸಾಹ! ದೇಶದ ಸ್ವಾತಂತ್ರ್ಯಸಾಧನೆಗಾಗಿ, ಜನತೆಯ ದಾರಿದ್ರ್ಯದುಃಖ ನಿವಾರಣೆಗಾಗಿ ಕಾಂಗ್ರೆಸ್ ಉಮೇದ್ವಾರಿಗಳಿಗೇನೇ ಓಟು ಕೊಡಬೇಕೆಂದು ಪಂಡಿತರ ಆಗ್ರಹದ ವಿನಂತಿ. ಸದಾ ಸರಕಾರದ ಬೆನ್ನು ಹಿಡಿದು ಸ್ವರಾಜ್ಯವಿರೋಧಿಯಾಗಿ, ಕೆಲವೇ ಮಂದಿಯ ಸ್ವಾರ್ಥ ಮತ್ತು ಸ್ವಪ್ರತಿಷ್ಠಾಸಾಧನವಾದ ಜಸ್ಟಿಸ್ ಪಕ್ಷದ ತೀವ್ರ ನಿಷೇಧ

ಮತದಾರರೆಲ್ಲರೂ ಮೋಟರು ಬಸ್ಸುಗಳಿಗಾಗಿ ಕಾಯದೆ, ತಿಂಡಿತೀರ್ಥಗಳ ಆಶೆ ಕಟ್ಟಿಕೊಳ್ಳದೆ ಕಾಲ್ನಡೆಯಿಂದಲೇ ಪೋಲಿಂಗ್ ಸ್ಟೇಶನುಗಳಿಗೆ ಹೋಗಿ ಕಾಂಗ್ರೆಸ್ ಉಮೇದ್ವಾರಿಗಳಿಗೇನೇ ಮತವಿತ್ತು ಕಾಂಗ್ರೆಸಿನ ಹೆಸರನ್ನು ಮೆರೆಸಬೇಕೆಂದು ಹೇಳಿಕೆ

ಕಾಂಗ್ರೆಸ್ ಪ್ರೆಸಿಡೆಂಟರಾದ ಪಂಡಿತ ಜವ್ಹಾರಲಾಲ ನೆಹರುಗಳು ತನ್ನ ಸೆಕ್ರಿಟರಿಗಳೊಂದಿಗೆ ಇದೇ ತಾ. 10ರಲ್ಲಿ ಬೊಂಬಾಯಿಯಿಂದ ವಿಮಾನ ಮೂಲಕ ಕಣ್ಣಾನೂರಿಗೆ ಹೋಗಿ ಅಲ್ಲಿಂದ ಟ್ರೈನ್ ಮೂಲಕ ಮಂಗಳೂರಿಗೆ ಬಂದು ರೈಲ್ವೆ ಸ್ಟೇಶನಿನಲ್ಲಿ ಜನತೆಯಿಂದ ಪ್ರಚಂಡ ಸ್ವಾಗತಪಡೆದರು. ಆ ಮೇಲೆ ಮೈದಾನಿನಲ್ಲಿ ಜಿಲ್ಲಾಬೋರ್ಡು, ನಗರಸಭೆ, ವಿದ್ಯಾರ್ಥಿಸಂಘಗಳ ಮಾನಪತ್ರವನ್ನು ಸ್ವೀಕರಿಸಿ ಸುಮಾರು 1೫ ಸಾವಿರ ಜನಸ್ತೋಮಕ್ಕೆ ಕಾಂಗ್ರೆಸಿನ ಸಂದೇಶವನ್ನು ಸಾರಿ, ಜನತೆಯು ಪ್ರಕೃತದ ಚುನಾವಣೆಯಲ್ಲಿ ಕಾಂಗ್ರೆಸ್ ಉಮೇದ್ವಾರಿಗಳಿಗೇನೇ ಮತವೀಯುವ ಆವಶ್ಯಕತೆಯನ್ನು ಮನಗಾಣಿಸಿದರು. ಶ್ರೀ ಮುದವೀಡು ಕೃಷ್ಣರಾಯರು ಪಂಡಿತರ ಭಾಷಣವನ್ನು ಕನ್ನಡಕ್ಕೆ ಭಾಷಾಂತರಿಸಿದರು. ಮಂಗಳೂರಿಂದ ಪಂಡಿತರು ಬಂಟ್ವಾಳಕ್ಕೆ ಹೋಗಿ ಅಲ್ಲಿಂದ ಮೂಡಬಿದ್ರೆಗೆ ತೆರಳಿ ರಾತ್ರಿ ವಿಶ್ರಮಿಸಿದರು. ಮರುದಿನ ಬೆಳಿಗ್ಗೆ ಮೂಡಬಿದ್ರೆಯಿಂದ ಕಾರ್ಕಳಕ್ಕೆ ಹೋಗಿ ಅಲ್ಲಿಂದ ಕಿನ್ನಿಗೋಳಿ ಮಾರ್ಗವಾಗಿ ಮೂಲ್ಕಿಗೆ ಬಂದು ಸಂಭ್ರಮದ ಸ್ವಾಗತಪಡೆದು ಕಾಪು ಕಟಪಾಡಿಗಳಲ್ಲಿ ಜನತೆಯಿಂದ ಸ್ವಾಗತೀಕರಿಸಲ್ಪಟ್ಟು ಮಧ್ಯಾಹ್ನ ಘಂಟೆ 12-30ಕ್ಕೆ ಉಡುಪಿಯ ಗಾಂಧಿಮೈದಾನಿಗೆ ಚಿತ್ತೈಸಿದರು. ಪಂಡಿತರು ಬರುವಾಗ ದಾರಿಯಲ್ಲೆಲ್ಲಾ ಜನರು ತೋರಣಕಟ್ಟಿ ಉತ್ಸಾಹಪರ ಸ್ವಾಗತವಿತ್ತರು. ಕಟಪಾಡಿಯಲ್ಲಿ ಜನತೆಯಲ್ಲಿ ಅತ್ಯಂತ ಹೆಚ್ಚಿನ ಉತ್ಸಾಹವಿದ್ದಿತು. ತಳಿರುತೋರಣಗಳ ಮಂಟಪವೇ ಕಟ್ಟಲ್ಪಟ್ಟಿತ್ತು.

ಉಡುಪಿಗೆ ಪಂಡಿತರು ಬೆಳಿಗ್ಗೆ 9 ಘಂಟೆಗೆ ಬರುವರೆಂದಿದ್ದುದರಿಂದ ಸುಮಾರು 8 ಘಂಟೆಗೇನೇ ಜನರು ನೆರೆಯಲಾರಂಭಿಸಿ 9 ಘಂಟೆಗೆ ಸುಮಾರು ೫೦೦೦ ಜನರು ನೆರೆದಿದ್ದರು. ಆದರೆ ಪಂಡಿತರು ಬರಲು ೩ ಘಂಟೆ ವಿಳಂಬವಾದರೂ ಜನರು ಕಡುಬಿಸಿಲಲ್ಲಿ ಬಹಳ ಆತುರದಿಂದ ಕಾದುಕೊಂಡಿದ್ದರು. ಪಂಡಿತರು ಬಂದೊಡನೆಯೇ ಪ್ರಚಂಡ ಜಯಘೋಷವೆದ್ದಿತು. ಉಡುಪಿ ಮುನಿಸಿಪಲ್ ಚೆಯರ್‌ಮೆನ್ನರಾದ ಶ್ರೀ ಅರೂರು ಲಕ್ಷ್ಮೀನಾರಾಯಣರಾಯರು ಖಾದಿವಸ್ತ್ರದಲ್ಲಿ ಛಾಪಿಸಲ್ಪಟ್ಟ ಮಾನಪತ್ರವನ್ನು ಪಂಡಿತರಿಗೊಪ್ಪಿಸಿದರು. ಆ ಮೇಲೆ ಅವರು ಈ ಕೆಳಗಣ ಸಾರಾಂಶದ ಭಾಷಣವಿತ್ತರು.

9 ವರ್ಷಗಳ ನಂತರ ನಾನೀಗ ಉಡುಪಿಗೆ ಬಂದಿರುವೆನು. ಈ 9 ವರ್ಷಗಳಲ್ಲಿ ದೇಶವು ಬಹಳ ಸ್ಥಿತ್ಯಂತರ ಹೊಂದಿದೆ. ಅನೇಕ ವಿದ್ಯಮಾನಗಳು ನಡೆದು ಹೋಗಿವೆ. ಅವೆಲ್ಲಾ ನನ್ನ ಸ್ಮರಣೆಯಲ್ಲಿವೆ. ಈ ೯ ವರ್ಷಗಳಲ್ಲಿ ದೇಶದಲ್ಲಿ ರಾಜ್ಯಕ್ಕಾಗಿ ಪ್ರಬಲ ಆಂದೋಲನ ನಡೆದಿರುವುದು. ಅದನ್ನಡಗಿಸಲು ಹಲವು ರೀತಿಯ ದಬ್ಬಾಳಿಕೆಯೂ ಆಗಿರುವುದು. ಈ ಚಳವಳದ ಹಿಂಬದಿಯಲ್ಲಿ ಜನತೆಯ ದಾರಿದ್ರ್ಯ ಮತ್ತು ಬಡತನದ ಪ್ರೇರಣೆಯಿದೆ. ಈಗ ದೇಶದಲ್ಲೆಲ್ಲಾ ನಡೆದಿರುವ ಚುನಾವಣೆಯು ಸ್ವರಾಜ್ಯಚಳವಳದ ಕೇವಲ ಒಂದು ಅಂಗ ಮಾತ್ರವಾಗಿದೆ. ಅದೇ ಸರ್ವಸ್ವವೆಂದು ಯಾರೂ ಭಾವಿಸಬಾರದು. ಈ ಚುನಾವಣೆಯ ಹೋರಾಟದಿಂದ ಜನತೆಯ ನಿಜವಾದ ಪ್ರತಿನಿಧಿಗಳಿಗೆ ಅಧಿಕಾರ ದೊರೆಯುವಂತಾಗುವುದು. ಕೌನ್ಸಿಲುಗಳನ್ನು ದೇಶಹಿತ ಶತ್ರುಗಳು ತಮ್ಮ ಸ್ವಾರ್ಥಸಾಧನೆಗಾಗಿ ಉಪಯೋಗಿಸದಂತೆ ತಡೆಹಾಕಿದಂತಾಗುವುದು. ಈ ಅಧಿಕಾರವನ್ನು ಜನತೆಯ ಸಂಕಷ್ಟ ನಿವಾರಣೆ ಮತ್ತು ಸ್ವರಾಜ್ಯ ಸಾಧನೆಗಾಗಿ ಉಪಯೋಗಿಸುವುದೇ ಕಾಂಗ್ರೆಸಿನ ಉದ್ದೇಶ. ಕಾಂಗ್ರೆಸು ಹೋರಾಡುವ ಸ್ವರಾಜ್ಯವು ಕೆಲವೇ ಮಂದಿಯ ಸ್ವಾರ್ಥ ಸಾಧನೆಯದಲ್ಲ. ನಾವು ಸಾಧಿಸುವ ಸ್ವರಾಜ್ಯದಲ್ಲಿ ದೇಶದ 3೫ ಕೋಟಿ ಜನತೆಗೂ ಅಧಿಕಾರ ದೊರೆಯಬೇಕು. ಅದರಲ್ಲಿ ಕೆಲವೊಂದು ಪಂಗಡಗಳ ಆಟ ನಡೆಯದಂತಾಗಬೇಕು.

ನಾನೀಗ ದೇಶದ ಸ್ವಾತಂತ್ರ್ಯ ಸಾಧನೆಯ ಮತ್ತು ಜನತೆಯ ತೀವ್ರ ಬಡತನ ನಿವಾರಣೆಯ ಸಂದೇಶವನ್ನೀಯುತ್ತೇನೆ. ಈ ಸಂದೇಶವನ್ನೇ ಮುಂದಿಟ್ಟುಕೊಂಡು ಚುನಾವಣೆಯ ಪ್ರಚಾರ ಕಾರ್ಯವು ನಡೆಸಲ್ಪಡಬೇಕು. ಚುನಾವಣೆಯ ಚಳವಳದಲ್ಲಿ ಆ ವ್ಯಕ್ತಿ ಈ ವ್ಯಕ್ತಿಗಳೆಂಬುದೇನೂ ಮುಖ್ಯವಲ್ಲ. ಬಿಹಾರ್ ಮತ್ತು ಸಂಯುಕ್ತ ಪ್ರಾಂತದಲ್ಲಿ ಜನಸಾಮಾನ್ಯರ ಮೇಲೆ ಕಾಂಗ್ರೆಸಿನ ವರ್ಚಸ್ಸು ಬಹಳವಾಗಿದ್ದುದರಿಂದಲೇ ಕಾಂಗ್ರೆಸ್ ಉಮೇದ್ವಾರಿಗಳು ಪ್ರಚಂಡ ವಿಜಯ ಪಡೆದಿದ್ದಾರೆ. ಮಿಲ್ಯಾಂತರ ಜನರ ಸಂಪರ್ಕ ಪಡೆಯುವುದು ಮತ್ತು ಅವರಿಗೆ ಕಾಂಗ್ರೆಸಿನ ಸಂದೇಶ ಸಾರುವುದೇ ಈ ಚುನಾವಣೆಯ ಮುಖ್ಯ ಉದ್ದೇಶ. ಈ ರೀತಿಯ ಪ್ರಚಂಡ ಪ್ರಚಾರವು ನಡೆದಿರುವುದರಿಂದಲೇ ಬಿಹಾರ್ ಮತ್ತು ಸಂಯುಕ್ತ ಪ್ರಾಂತದಲ್ಲಿ ಕಾಂಗ್ರೆಸ್ ಉಮೇದ್ವಾರಿಗಳು ಪ್ರಚಂಡ ಬಹುಪಕ್ಷದಿಂದ ಆರಿಸಿಬರಲು ಕಾರಣ. ಈ ದೃಷ್ಟಿಯಿಂದಲೇ ದಕ್ಷಿಣ ಕನ್ನಡದಲ್ಲಿಯೂ ಚುನಾವಣೆಯು ನಡೆಸಲ್ಪಡಬೇಕು. ಕಾಂಗ್ರೆಸಿನ ವರ್ಚಸ್ಸೇ ಮುಖ್ಯ. ವ್ಯಕ್ತಿಗಳು, ಪ್ರಮುಖರು, ಕೆಲಸಗಾರರೇ ಮೊದಲಾದವರು ಅದರಿದಿರಲ್ಲಿ ತೃಣಸಮಾನರು. ಈ ರೀತಿ ಚುನಾವಣೆಯ ಹೋರಾಟವು ನಡೆಸಲ್ಪಟ್ಟಿರುವುದರಿಂದಲೇ ಕಾಂಗ್ರೆಸ್ ಉಮೇದ್ವಾರಿಗಳು ವಿಜಯ ಹೊಂದುತ್ತಿರುವರು. ಇದೇ ರೀತಿಯಲ್ಲಿಯೆ ಸ್ವರಾಜ್ಯದ ಹೋರಾಟವೂ ನಡೆಸಲ್ಪಡುವುದು. ಮತ್ತು ಅದರಲ್ಲೂ ವಿಜಯವು ನಿಶ್ಚಯ.

ಕಾಂಗ್ರೆಸು ಚುನಾವಣೆಯ ರಂಗಕ್ಕಿಳಿದು ಹೋರಾಡುವ ಉದ್ದೇಶವಾದರೂ ಏನೆಂಬುದನ್ನು ನಾನೀಗ ತಿಳಿಸಿರುವೆನು. ಜಸ್ಟಿಸ್ ಪಕ್ಷವು ಕೇವಲ ಅಧಿಕಾರ ಹುದ್ದೆಗಳಿಗಾಗಿ ಹೋರಾಡುತ್ತಿರುವ ಕೆಲವೇ ಮಂದಿಯ ಪಕ್ಷ. ಅದಕ್ಕೆ ಯಾವದೊಂದು ತತ್ವವೂ ಇಲ್ಲ. ಆ ಪಕ್ಷೀಯರು ತಮ್ಮ ಸ್ವಾರ್ಥಸಾಧನೆಗಾಗಿ ಎಂತಹ ಅಕೃತ್ಯ ಮಾಡಲೂ ಸಿದ್ಧರು. ಇಂತಹ ದೇಶ ಮತ್ತು ಜನಹಿತ ಘಾತುಕ ಪಕ್ಷವನ್ನು ನಿರ್ನಾಮಗೊಳಿಸುವುದೇ ನಮ್ಮ ಕರ್ತವ್ಯ. ಅದರೊಡನೆ ಯಾವ ತರದ ಸಂಬಂಧವನ್ನೂ ಇಟ್ಟುಕೊಳ್ಳಲು ಸಾಧ್ಯವಿಲ್ಲ. ನಾನದಕ್ಕೆ ಬದ್ಧ ವಿರೋಧಿಯಿರುವೆನು. ಅದು ಕಾಂಗ್ರೆಸಿನ ವೈರಿಯಿರುವುದು. ದೇಶದ ಸ್ವಾತಂತ್ರ್ಯ ಸಾಧನೆ ಮತ್ತು ಜನತೆಯ ದಾರಿದ್ರ್ಯ ನಿವಾರಣೆಗೆ ವಿರೋಧವಾಗಿ ನಡೆಯುವ ದ್ರೋಹಿಗಳು ಕಾಂಗ್ರೆಸಿನ ಶತ್ರುಗಳು. ಈ ಚುನಾವಣೆಯೆಂದರೆ, ಕಾಂಗ್ರೆಸಿಗೂ, ಸರಕಾರ ಮತ್ತು ಅದರ ಅನುಯಾಯಿಗಳು ಕೆಲವರಿಗೂ ನಡೆದಿರುವ ಹೋರಾಟ. ಕಾಂಗ್ರೆಸನ್ನು ವಿರೋಧಿಸುವರೆಲ್ಲರೂ ದೇಶಘಾತುಕರು. ಸರಕಾರದ ಸಹಾಯಕರು. ಜಾತಿ ಮತಗಳ ಕೂಗನ್ನೆಬ್ಬಿಸಿ ಜನತೆಯನ್ನು ಮರುಳುಗೊಳಿಸುವ ಕುಟಿಲ ತಂತ್ರಕ್ಕೆ ಮರುಳಾಗಬೇಡಿರಿ. ದೇಶಕ್ಕೆ ಸ್ವಾತಂತ್ರ್ಯ ಬೇಕು, ಜನತೆಯ ದಾರಿದ್ರ್ಯಾದಿ ದುಃಖಗಳು ತೊಲಗಿಹೋಗಬೇಕೆಂಬ ಇಚ್ಛೆಯುಳ್ಳವರೆಲ್ಲರೂ ಕಾಂಗ್ರೆಸಿನ ಸಹಾಯಕರಾಗಿ ನಿಂತು ಕೆಲಸಮಾಡಬೇಕು. ಕಾಂಗ್ರೆಸ್ ಪಕ್ಷದ ಉಮೇದ್ವಾರಿಗಳು ಜಯಹೊಂದುವಂತೆ ನೋಡಬೇಕು.

ಹಿಂದೂದೇಶದಲ್ಲಿ ದೇಶದ್ರೋಹಿಗಳು, ಜಾತಿ ಮತ ಭೇದಗಳ ವಿಷಬೀಜ ಬಿತ್ತಿ ತಮ್ಮ ಬೇಳೆ ಬೇಯಿಸಿಕೊಳ್ಳುವವರು ಈವರೆಗೆ ನಡೆಸಿದ ಆಟವೇ ಸಾಕ್ಷು. ಈಗ ನಾವು ಸ್ವರಾಜ್ಯಸಾಧನೆಯ ನಿಶ್ಚಲ ಧ್ಯೇಯದಿಂದ ಉದಾತ್ತ ತತ್ವ ಹಿಡಿದು ಕೆಲಸ ಮಾಡಬೇಕು. ನನಗೆ ಇಲ್ಲಿಯ ಯಾವ ಉಮೇದ್ವಾರಿಗಳ ಪರಿಚಯವೂ ಇಲ್ಲ. ಅವರಾರಾದರೇನು? ಆ ಗೊಡವೆಂದೇ ನನಗೆ ಬೇಡ. ಪ್ರತಿಯೊಬ್ಬ ಕಾಂಗ್ರೆಸ್ ಉಮೇದ್ವಾರಿಯು ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡುವ ಸೈನಿಕನು. ಅವನು ಕಾಂಗ್ರೆಸಿನ ಶಿಸ್ತಿಗನುಸಾರವಾಗಿ ನಡೆಯಬೇಕು. ಹಾಗೆ ನಡೆಯದೆ ಹೋದಲ್ಲಿ ಹೊರಹಾಕಲ್ಪಡುವನು.

ಕುಂದಾಪುರ ಡಿವಿಜನಿನ ಕಾಂಗ್ರೆಸ್ ಉಮೇದ್ವಾರಿಗಳೆಂದರೆ ಶ್ರೀಗಳಾದ ಎ. ಬಿ. ಶೆಟ್ಟಿ, ಪ್ರೊಫೆಸರ್ ಸಿ. ಜೆ. ವಾರ್ಕಿ ಮತ್ತು ಎಮ್. ಈಶ್ವರನವರು. ಇವರು ಮೂರು ಮಂದಿಯೂ ಬೇರೆ ಬೇರೆ ಪಂಡಕ್ಕೆ ಸೇರಿದವರೆಂಬುದು ಸಂತೋಷಕರ. ಇವರಿಷ್ಟು ಮಂದಿಯೂ ಜಯಶೀಲರಾಗಿ ಆರಿಸಿ ಬರುವಂತೆ ನೀವು ನೋಡಬೇಕು. ಇವರು ಮೂವರೊಳಗೆ ನೀವು ಯಾವ ಅಭ್ಯಂತರವನ್ನೂ ಮಾಡಬಾರದು.

ಈ ಚುನಾವಣೆಯ ಗಲಾಟೆಯ ನಂತರ ನೀವೆಲ್ಲರೂ ಏನೇನು ಮಾಡುವಿರಿ? ಸುಮ್ಮನೆ ಕುಳಿತುಕೊಳ್ಳುವಿರೇ? ಹಾಗೆಂದೂ ಮಾಡಕೂಡದು. ಚುನಾವಣೆಯ ಚಳವಳವೆಂಬುದು ನಮ್ಮ ಹೋರಾಟದ ಆಯುಧಗಳನ್ನು ತುಸು ಬಿಚ್ಚಿಟ್ಟಂತೆ ಮಾತ್ರ! ಸ್ವಾತಂತ್ರ್ಯಸಾಧನೆಗಾಗಿ ಹೆಚ್ಚಿನ ಕೆಲಸವಾಗಬೇಕು. ಅದಕ್ಕಾಗಿ ನೀವು ಕಾಂಗ್ರೆಸನ್ನು ಬಲಗೊಳಿಸಬೇಕು. ನಿಮ್ಮ ಉತ್ಸಾಹಪರಸ್ವಾಗತ ಮತ್ತು ನಿಮ್ಮ ಹೊಸ ಮುನಿಸಿಪಾಲಿಟಿಯ ಮಾನಪತ್ರಕ್ಕಾಗಿ ಆಭಾರಿಯಿರುವೆನು. ಇಂತಹ ಸ್ವಾಗತಗಳೇನೋ ನನಗೆ ಸುಸ್ವಾಗತ. ಆದರೆ ಅಷ್ಟರಿಂದಲೇ ನಾನೇನೂ ತೃಪ್ತನಾಗಲಿಕ್ಕಿಲ್ಲ. ನೀವು ಕಾಂಗ್ರೆಸನ್ನು ಬಲಪಡಿಸಿದರೇನೇ ಈ ಸ್ವಾಗತ ಸನ್ಮಾನಗಳಿಗೆ ಬೆಲೆಬರುವುದು. ಇಲ್ಲವಾದರೆ ಅವು ಬೆಲೆಯಿಲ್ಲದವಾಗುವವು.

ಇನ್ನೊಂದು ವಿಷಯವೆಂದರೆ ನೀವು ಚುನಾವಣೆಯ ಕಾಲದಲ್ಲಿ ಓಟು ಕೊಡಹೋಗುವಾಗ ಯಾವ ಮೋಟರು ವಾಹನಗಳನ್ನೂ ತಿಂಡಿತೀರ್ಥಗಳನ್ನೂ ಆಶಿಸಬಾರದು. ಕಾಂಗ್ರೆಸು ಬಡ ಸಂಸ್ಥೆ. ಜಮೀನುದಾರರಂತೆ ಧನಮದದ ಸಂಸ್ಥೆಯಲ್ಲ. ಆ ದ

ಪುಟ ೧೩ಕ್ಕೆ

ಚಂದಾದಾರರಲ್ಲಿ

ಚಂದಾಹಣ ಬಾಕಿ ಇರುವ ನಮ್ಮ ಚಂದಾದಾರರು ಆದಷ್ಟು ಬೇಗನೇ ತಮ್ಮ ಹಣವನ್ನು ಮಣಿಯಾರ್ಡರ್ ಮೂಲಕ ದಯವಿಟ್ಟು ಕಳುಹಿಸಿಕೊಡಬೇಕಾಗಿ ಅಪೇಕ್ಷಿಸುತ್ತೇವೆ. ವಿ. ಪಿ. ಮಾಡುವದಾದರೆ ಐದಾಣೆ ಹೆಚ್ಚಿಗೆ ಬೀಳುವದು.

ನಮ್ಮೊಡನೆ ಪತ್ರವ್ಯವಹಾರ ನಡೆಸುವವರು ತಮ್ಮ ಚಂದಾ ನಂಬ್ರವನ್ನು ಸೂಚಿಸಿ ಬರೆಯಬೇಕಾಗಿ ವಿನಂತಿ. ಮೆನೇಜರ್, 'ನವಯುಗ'

ಉಡುಪಿ, ತಾ. ೧೧-೨-'೩೭ ಗುರುವಾರ

ಮತದಾರರೊಡನೊಂದು ಮಾತು

(ಲೇಖಾಂಕ ೩)

ಚುನಾವಣೆಯ ದಿನವು ಸಮೀಪಿಸುತ್ತಿದ್ದಂತೆ ಆವೇಗವು ಏರಹತ್ತಿದೆ. ರಾಷ್ಟ್ರಪತಿ ಪಂಡಿತ ಜವಾಹಿರಲಾಲ ನೆಹರುಗಳು ದಕ್ಷಿಣ ಕನ್ನಡವನ್ನು ಸಂಚರಿಸಿ ಕೊಟ್ಟ ಸಂದೇಶವು ಮತದಾರರ ಕರ್ತವ್ಯವನ್ನು ಸ್ಪಷ್ಟಗೊಳಿಸಿದೆ. ರಾಷ್ಟ್ರಸಭೆಯನ್ನಾಗಲೀ ಅದರ ಅಧ್ಯಕ್ಷರನ್ನಾಗಲೀ ಟೀಕಿಸಲು ಜಸ್ಟೀಸು ಪಕ್ಷೀಯರು ಕೂಡಾ ಸಿದ್ಧರಿಲ್ಲ. ಅದವರಿಗೆ ಅಸಾಧ್ಯವಾದ ಕೆಲಸ ಮಾತ್ರವಲ್ಲ, ಅಂತಹ ಟೀಕೆಯು ತಮ್ಮ ಪರಿಸ್ಥಿತಿಯನ್ನು ಕೆಡಿಸಬಹುದೆಂಬ ಹೆದರಿಕೆಯು ಅವರಲ್ಲಿದೆ. ಕಾರಣವಿಷ್ಟೆ, ಜನ ಮತವು ಕೊಂಗ್ರೆಸಿಗೆ ಮತ್ತು ಕೊಂಗ್ರೆಸಿನ ಅಧ್ಯಕ್ಷರಿಗೆ ಸಂಪೂರ್ಣ ಅನುಕೂಲವಾಗಿರುವಾಗ ಮತದಾರರ ಬೆಂಬಲವನ್ನಪೇಕ್ಷಿಸುತ್ತಿರುವ ತಾವು ಕೊಂಗ್ರೆಸ್ಸನ್ನು ದೂರಹತ್ತಿದರೆ ಪರಿಣಾಮವು ನೆಟ್ಟಗಾಗಲಿಕ್ಕಿಲ್ಲವೆಂದು ಅವರಿಗೆ ಗೊತ್ತು. ಆದರೆ ಅವರ ಕೃತ್ಯವು ಕೊಂಗ್ರೆಸಿನ ವರ್ಚಸ್ಸನ್ನು ಹಾಳುಮಾಡಿ, ಅದು ಮಾಡಲಿರುವ ಹಿಂದುಸ್ಥಾನದ ಪ್ರಗತಿಯನ್ನು ಕೆಡಿಸುವಂತಹದಿರುವದರಿಂದ ಮಹಾ ದೇಶದ್ರೋಹವೇ ಸರಿ, ಕೊಂಗ್ರೆಸಿಗೆ ಅಂತಹ ದ್ರೋಹವನ್ನು ಕಾರ್ಯಮುಖೇನ ಸಾಧಿಸುವರೆ ಅನುಕೂಲ ವಾತಾವರಣವನ್ನು ನಿರ್ಮಿಸುವ ಸಲುವಾಗಿಯೇ ಅವರು ಕೊಂಗ್ರೆಸಿನ ಮುಖಸ್ತುತಿಯನ್ನು ಮಾಡುತ್ತಿರುವರು. ಮತದಾರರು ಈ ವಂಚನೆಗೆ ಬಲಿಬೀಳಬಾರದು. ಪಂಡಿತ ಜವ್ಹಾರಲಾಲ ನೆಹರುಗಳು ಇಲ್ಲಿಯ ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ಗ್ರಹಿಸಿಕೊಂಡು ದಕ್ಷಿಣ ಕನ್ನಡದ ಭಾಷಣಗಳಲ್ಲಿ ಮತದಾರರನ್ನು ಸ್ಪಷ್ಟವಾಗಿ ಎಚ್ಚರಿಸಿರುವರು. ಅವರು ಉಡುಪಿಯ ತನ್ನ ಭಾಷಣದಲ್ಲಿ "**ಕೊಂಗ್ರೆಸು ಈ ಜಸ್ಟೀಸರಂತೆ ನೌಕರಿಗಳ ಬೇಟೆಗೆ ಹೊರಟ ಪಕ್ಷವಲ್ಲ. ಅದಕ್ಕೆ ಇಡೀ ಹಿಂದುಸ್ಥಾನದ ಭವಿಷ್ಯವನ್ನು ನಿರ್ಮಿಸುವ ಕೆಲಸವಿದೆ. ಕೊಂಗ್ರೆಸಿಗೆ ಬದ್ಧ ವಿರುದ್ಧವಾಗಿ, ಜನಹಿತವನ್ನು ಎಳ್ಳಷ್ಟು ಗಣಿಸದೆ ದೇಶದ್ರೋಹವನ್ನು ಸಾಧಿಸುತ್ತಿರುವ ಈ ಜಸ್ಟೀಸು ಪಾರ್ಟಿಗೂ, ನಮಗೂ ಸಂಬಂಧವೇ ಇಲ್ಲ. ಅವರು ಒಂದೋ ಸರಕಾರದ ಬೆನ್ನು ಹಿಡಿಯಬೇಕು, ಇಲ್ಲವೇ ನಮ್ಮ ಪಕ್ಷ ಸೇರಬೇಕು**" ಎಂದು ಪೀರೋದ್ಗಾರ ತೆಗೆದಿರುವರು. ಹಿಂದೂದೇಶದ ಬಡತನವು ಪಂಡಿತಜೀಯವರ ಹೃದಯದಲ್ಲಿ ಸದಾಕಾಲ ಬೇನೆ ಕೊಡುತ್ತಿದೆ; ಅವರ ಪ್ರತಿಯೊಂದು ಮಾತಿನಲ್ಲಿ ಆ ನೋವಿನ ಕುರುಹಿತ್ತು. ದಕ್ಷಿಣ ಕನ್ನಡ ಜಿಲ್ಲೆಯವರಿಂದ ಅವರು ಆ ನೋವಿಗೊಂದು ಶಮನಬೇಕೆಂದು ಕೇಳಿದರೇ ಹೊರತು ಬೇರೇನೂ ಇಲ್ಲ.

ಮತದಾರರು ಪಂಡಿತ ನೆಹರುಗಳನ್ನು ಗೌರವಿಸುವರಾದರೆ ಅವರ ಅಪೇಕ್ಷೆಯನ್ನು ಪೂರ್ತಿಮಾಡಲು ಹಿಂದೆಗೆಯಬಾರದು "**ಹಿಂದೂದೇಶದ ನಿಜವಾದ ಹೋರಾಟವು ಮುಂದಕ್ಕೆ ನಡೆಯಲಿದೆ. ಇಂದಿನ ಚುನಾವಣೆಯು ಅದರ ಒಂದು ಸಣ್ಣಭಾಗ ಮಾತ್ರ. ಕೊಂಗ್ರೆಸಿನ ಪರವಾಗಿ ಚುನಾವಣೆಗೆ ನಿಂತ ಸಾವಿರಾರು ಮಂದಿಯ ಪರಿಚಯವು ನನಗಿಲ್ಲ. ಅವರು ಕೊಂಗ್ರೆಸ್ ಸೋಲ್ಜರರೆಂದಿಷ್ಟೇ ಗೊತ್ತು. ನನ್ನ ಪ್ರಾಂತ್ಯವಾದ ಸಂಯುಕ್ತ ಸಂಸ್ಥಾನದಲ್ಲಿ ಚುನಾವಣೆಯಲ್ಲಿ ಪ್ರಬಲ ಬಹುಮತವನ್ನು ಪಡೆದು ಕೊಂಗ್ರೆಸು ಗೆದ್ದು ಬಂದಿದೆ ಆ ಜಯವು ಉಮೇದ್ವಾರಿಗಳದಲ್ಲ, ಕೆಲಸಗಾರರದಲ್ಲ, ನನ್ನದು ಕೂಡಾ ಅಲ್ಲ. ಅದು ಕೊಂಗ್ರೆಸಿನದು! ದೇಶದ ಬಡತನವನ್ನೂ ದಿವಾಳಿಗಿರಿಯನ್ನೂ ನಿವಾರಿಸಲು ಸೊಂಟಕಟ್ಟಿರುವ ಕೊಂಗ್ರೆಸಿನದು! ಅದರ ಉಮೇದ್ವಾರರು ಗೆಲ್ಲುವಂತೆ ಮಾಡಿರಿ. ಕೊಂಗ್ರೆಸನ್ನು ಬಲಗೊಳಿಸಿರಿ**" ಹೀಗೆಂದು **ಕೊಂಗ್ರೆಸಿನ ಅಧ್ಯಕ್ಷರಾದ** ಪಂಡಿತ ನೆಹರುಗಳು ಆಗ್ರಹ ಪೂರ್ವಕವಾಗಿ ಮತದಾರರನ್ನು ಕೇಳಿಕೊಂಡಿರುವರು. 'ಕೊಂಗ್ರೆಸ್ ರಾಷ್ಟ್ರೋದ್ಧಾರಕ ಸಂಸ್ಥೆ. ಪಂಡಿತ ನೆಹರುಗಳು ನಿಜವಾದ ಕೊಂಗ್ರೆಸುವಾಲರು' ಎಂದು ಜಸ್ಟಿಸ್‌ಪಾರ್ಟಿಯವರು ಹೇಳುವುದುಂಟು. ಇನ್ನೇನು? ಇಂಥಾ ದೇಶೋದ್ಧಾರಕ ಸಂಸ್ಥೆಯ ಸರ್ವಮಾನ್ಯ ಅಧ್ಯಕ್ಷರ ಕರೆಗೆ ಹೂಗುಟ್ಟುವದೊಂದೇ ಮತದಾರರ ಧರ್ಮ. ಇದು ಚುನಾವಣೆಯಲ್ಲಿ ಕೊಂಗ್ರೆಸಿನ ವೈರಿಗಳಾಗಿ ನಿಂತವರಿಂದ ಮುಂಗಡವಾಗಿ ಒಪ್ಪಿಗೆದೊರೆತ ಆಚರಣೆ. ವೋಟರರು ಈ ನೀತಿಯನ್ನು ಮರೆಯಬಾರದು. ರಾಷ್ಟ್ರಸಭಾಪತಿಗೆ ಆತಿಥ್ಯವನ್ನಿತ್ತ ದಕ್ಷಿಣಕನ್ನಡವು ಅಪವಾದವನ್ನು ಹೊರಬಾರದು. ದಕ್ಷಿಣ ಕನ್ನಡಾಜಿಲ್ಲೆಯ ವೋಟರರ ಜವಾಬ್ದಾರಿಯು ಇತರಜಿಲ್ಲೆಗಳು ಕೊಂಗ್ರೆಸನ್ನು ಉಮೇದ್ವಾರರನ್ನು ಪ್ರಬಲ ಬಹುಮತದಿಂದ ಆರಿಸಿ ಹೆಗ್ಗಳಿಕೆ ಪಡುತ್ತಿರುವ ಈ ಕಾಲದಲ್ಲಿ ಬಹಳವಾಗಿ ಹೆಚ್ಚಿದೆ ಇನ್ನು ಕೊಂಗ್ರೆಸಿನ ಅಧ್ಯಕ್ಷರು ಸ್ವತಃ ಬಂದು ವೋಟರರ ಕರ್ತವ್ಯವನ್ನು ಸುಸ್ಪಷ್ಟವಾಕ್ಯಗಳಿಂದ ತಿಳಿಸಿ ಹೋಗಿರುವಾಗ ದಕ್ಷಿಣಕನ್ನಡವು ಹಿಂದುಳಿದರೆ ಎಂತಹ ಅಪವಾದಕ್ಕೊಳಗಾಗಬೇಕಾಗುವದೆಂಬುದನ್ನು ಮರೆಯಬಾರದು. ಪಂಡಿತ ನೆಹರುಗಳನ್ನು ಅತ್ಯುತ್ಸಾಹದಿಂದ ಸ್ವಾಗತೀಕರಿಸಿದ ದ. ಕನ್ನಡವು ಅವರ ಬೆನ್ನ ಹಿಂದೆಯೇ ಅವರಿಗೊಂದು ಧಿಕ್ಕಾರವನ್ನು ಚುನಾವಣೆಯ ಮೂಲಕ ಕಳುಹಿಸಿಕೊಡುವದೆಂದು ನಾವು ನಂಬುವದಿಲ್ಲ. ಪಂಡಿತಜೀಯವರ ಬಾಯಿಯಿಂದ "ದೇಶ ದ್ರೋಹಿಗಳು" ಎಂಬ ಬಿರುದನ್ನು ಪಡೆದ ಜಸ್ಟಿಸಪಾರ್ಟಿಯನ್ನು ಪುರಸ್ಕರಿಸಿ ಪಂಡಿತರ ಮಾತೂ ಅವರ ಮೇಲೆ ದ. ಕನ್ನಡವು ತೋರಿಸಿದಗೌರವವೂ ಸುಳ್ಳೆಂದು ವೋಟರರು ತೋರಿಸಿಕೊಡುವವರೆಂದು ನಾವು ಭಾವಿಸುವದಿಲ್ಲ. ರಾಷ್ಟ್ರಪತಿಗಳು ಹೇಳಿರುವಂತೆ ಜನತೆಗಾಗಿ ಕೊಂಗ್ರೆಸಿದೆ ಕೊಂಗ್ರೆಸಿಗಾಗಿ ಜನರಿರುವದು ಬೇಡವೆ?

ಮತದಾನದ ಅನುಕೂಲತೆ

ಕೊಂಗ್ರೆಸಿನ ಅಧ್ಯಕ್ಷರ ಕರೆಗೆ ಹೂಂಗುಟ್ಟಲು ಮತದಾರರಿಗಿರುವ ಅಡಚಣೆಗಳಾವುವೆಂಬುದನ್ನೂ ಪರಿಶೀಲಿಸೋಣ. ಹಳ್ಳಿಗಳ ಶೋಚನೀಯ ಪರಿಸ್ಥಿತಿಯಿಂದಾಗಿ ಮತದಾರರಲ್ಲಿ ಕೆಲವರಿಗೆ ಹಂಗು ದಾಕ್ಷಿಣ್ಯ ಬೆದರಿಕೆಗಳನ್ನು ಕಡೆಹಾಯ್ದು ಮುಂದೊತ್ತಲು ಅಸಾಧ್ಯವೆಂಬುದನ್ನು ನಾವು ಬಲ್ಲೆವು. ಅನರಾದರೂ ಈ ಶೋಚನೀಯ ಪರಿಸ್ಥಿತಿಯನ್ನು ದ್ವೇಷಿಸುವದಿಲ್ಲವೆ? ಇಂತಹ ದುರವಸ್ಥೆಯಿಂದ ಹಳ್ಳಿಗರನ್ನು ಪಾರುಮಾಡಲು ನಡು ಬಿಗಿದಿರುವ ಕೊಂಗ್ರೆಸಿಗೆ ಸರ್ವ ವಿಧದ ಸಹಾಯವನ್ನೀಯುವುದು ಅವರ ಧರ್ಮವಲ್ಲವೇ? ಭಯ ದಾಕ್ಷಿಣ್ಯಗಳಿಂದಾಗಿ ಮನಸ್ಸು ಡೋಲಾಯಮಾನವಾಗಿರುವವರೆಲ್ಲರೂ, ಬಡವರಿಗೆ ಇಂಥಾ ಕಳಮಳಕ್ಕಾಸ್ಪದವಿರದಂತೆ ಪ್ರಯತ್ನಿಸುವ ಕೊಂಗ್ರೆಸ್ಸನ್ನು ಸ್ಮರಿಸಲೇಬೇಕು. ಪಂಡಿತ ನೆಹರುಗಳಾದರೂ ಅದನ್ನೇ ಆಡುತ್ತಿರುವರು. ಈ ಸಲದ ಚುನಾವಣೆಯಲ್ಲಿ ಗುಟ್ಟಾಗಿ ಮತದಾನವನ್ನು ಮಾಡುವ ವ್ಯವಸ್ಥೆಯಾಗಿರುವದರಿಂದ, ತಮ್ಮ ಮತದಾನದಿಂದ ದೇಶದ ಹಿತ ಯಾ ಅಹಿತವಲ್ಲದೆ ಇನ್ನಾವ ಪರಿಣಾಮವಾಗಲೂ ಆಸ್ಪದವಿಲ್ಲವೆಂಬುದನ್ನು ವೋಟರರು ಸ್ಪಷ್ಟವಾಗಿ ತಿಳಿದುಕೊಳ್ಳಬೇಕು. ವೋಟುಗಳನ್ನು ಹಾಕುವ ಕೋಣೆಯಲ್ಲಿ ಇತರರಾರೂ ಇರುವಂತಿಲ್ಲ. ವೋಟರರು ಆ ಏಕಾಂತ ಭವನದಲ್ಲಿ ಹೊರಗಡೆಯ ವಿದ್ಯಮಾನಗಳನ್ನೆಲ್ಲಾ ನೆನಪಿಗೆ ತಂದುಕೊಳ್ಳಲಿ; ಮನಸ್ಸಾಕ್ಷಿಯನ್ನು ಮುಂದಿಟ್ಟುಕೊಳ್ಳಲಿ. ಕೊಂಗ್ರೆಸಿನ ಅಧ್ಯಕ್ಷರ ಕರೆಯಲ್ಲಿ ಹುರುಳಿತ್ತಾದರೆ ಅದನ್ನು ಮರೆಯದಿರಲಿ. ನ್ಯಾಯವನ್ನು ಸ್ವತಂತ್ರವಾಗಿ ಹುಡುಕಿ ತೆಗೆಯಿರೆಂದು ತಮ್ಮನ್ನು ಈ ಗುಪ್ತಗೃಹಕ್ಕೆ ಕಳುಹಿಸಿರುವರೆಂಬುದನ್ನು ವೋಟುಕೊಡುವ ಕೋಣೆಗೆ ಹೋದ ಮತದಾರರು ಮರೆಯದೆ ದೇಶದ ಏಕಮಾತ್ರ ಪ್ರತಿನಿಧಿ ಸಂಸ್ಥೆಯಾದ **ಕೊಂಗ್ರೆಸ್ ಧ್ವಜವನ್ನು** ಹಾರಾಡಿಸಲಿ!

ಶ್ರೀ. ಎ. ಬಿ. ಸೆಟ್ಟಿರೂ ಕೈಸರ್ ಈ-ಹಿಂದ್ ಪದಕ ತ್ಯಾಗ

ಕುಂದಾಪುರ ಡಿವಿಜನಿನಿಂದ ಕೊಂಗ್ರೆಸ್ ಉಮೇದ್ವಾರಿಯಾಗಿ ನಿಂತಿರುವ ಶ್ರೀ. ಎ. ಬಿ. ಸೆಟ್ಟರು ತನ್ನ ಕೈಸರ್-ಈ-ಹಿಂದ್ ಪದಕವನ್ನು ತ್ಯಜಿಸಿದ ಕುರಿತು ವಿರುದ್ಧ ಪಕ್ಷೀಯರು ನಾನಾವಿಧದ ಕ್ಷುದ್ರಪ್ರಚಾರಗಳನ್ನು ಮಾಡುತ್ತಿರುವರೆಂದು ತಿಳಿದು ಬರುತ್ತದೆ. ಇದೇ ತಾ. ೯ರ ಕಂಠೀರವ ಸಂಚಿಕೆಯಲ್ಲಿ 'ಸ್ವಯಂ ಸೇವಕ"ನಾಮಾಂಕಿತರೊಬ್ಬರು ಶ್ರೀ. ಸೆಟ್ಟರ ಬಿರುದುತ್ಯಾಗಕ್ಕೆ ಅಪ್ರಾಮುಖ್ಯವಾದ ಕಾರಣವೊಂದನ್ನು ತೋರಿಸಲು ಮುಂದಾಗಿರುವರು. ಶ್ರೀ. ಎ. ಬಿ. ಸೆಟ್ಟರು ಬಿರುದು ಬಿಟ್ಟದ್ದಕ್ಕೆ ಕೆಲವರು ತಮ್ಮ ಖಾಸಗಿಕಾರಣಗಳ ಮೇಲ್ಪಾಗಕ್ಕೆ ಹಚ್ಚಿ ತೋರಿಸುತ್ತಿದ್ದ ಲೇಪವೇ ಆಧಾರವೆನ್ನುವದು ಚುನಾವಣೆಯ ಕಾಲದ ಒಂದು ಕುತಂತ್ರವಲ್ಲದೆ ಮತ್ತೇನೂ ಅಲ್ಲ. ಸರಕಾರದ ಬಿರುದು, ಬಿಲ್ಲೆಗಳು ಸಾರ್ವಜನಿಕ ಕೆಲಸಕ್ಕೆ ಆತಂಕಗಳೆಂಬುದನ್ನು ಶ್ರೀ. ಸೆಟ್ಟರು ತಿಳಿದೇ ಚುನಾವಣೆಯ ಗದ್ದಲವಿಲ್ಲದ 1935ರಲ್ಲ ಸರಕಾರದವರು **ಕೊಡಲಿದ್ದ** ಬಿರುದನ್ನು ನಿರಾಕರಿಸಿದರು **ಆ ಕುರಿತು**ಆಗಿನ ಕಲೆಕ್ಟರ್ ಮಿ. ಗೋಸ್ ಸಾಹೇಬರು ಶ್ರೀ. ಸೆಟ್ಟರಿಗೆ ಬರೆದಿದ್ದ ಪತ್ರವನ್ನು ಬೇರೊಂದೆಡೆಯಲ್ಲಿ ಕೊಟ್ಟಿರುವೆವು. ಚುನಾವಣೆಯಲ್ಲಿ ಕಾಂಗ್ರೆಸಿನ ಜಯವು ಅತ್ಯಗತ್ಯವಾಗಿರುವ ಈಕಾಲದಲ್ಲಿ ಕೆಲವರು ಕುಟಿಲ ಉಪಾಯದಿಂದ ಕಾಂಗ್ರೆಸು ಕೆಲಸಗಾರರ ಮೇಲೆ ಕೆಸರೆರಚಲು ನೋಡುವದು ಶೋಚನೀಯವಿದೆ.

ರಾಷ್ಟ್ರಸಭೆಯೂ ಸನಾತನಿಗಳೂ

ಉಡುಪಿಯ ಸನಾತನಿಗಳ ಕುರಿತು ನೀವು ಆತುರಪಡಬೇಕಾಗಿಲ್ಲ; ಅವರು ತಮ್ಮ ವೋಟನ್ನು ಕೊಂಗ್ರೆಸ್ಸಿಗೇನೇ ಕೊಡುವರು'' ಎಂದು ಶ್ರೀ. ಸಿ. ರಾಜಗೋಪಾಲಾಚಾರಿಯವರ ಆಶ್ವಾಸನೆ. ಅವರ ಭರವಸೆಯು ಸುಳ್ಳಾಗಲಾರದೆಂದು ಹಾರೈಸುತ್ತೇನೆ. ಮದ್ರಾಸಿನಲ್ಲಿ ಬ್ರಾಹ್ಮಣ-ಬ್ರಾಹ್ಮಣೇತರರೆಂಬ ಜಾತಿ ಭೇದವನ್ನು ಹುಟ್ಟಿಸುದುದೇ ಜಸ್ಟಿಸ್ ಪಾರ್ಟಿ. ಸಾಮುದಾಯಿಕ ಹಿತಸಾಧನೆಯ ಕಡೆಗೆ ಹರಿಯಬೇಕಾಗಿದ್ದ ಜನತೆಯ ಲಕ್ಷ್ಯವನ್ನು ಜಾತಿದ್ವೇಷವನ್ನೆಬ್ಬಿಸಿ ಅಡ್ಡ ಹಾದಿ ಹಿಡಿಸಿದ ಮಹಾಪರಾಧವು ಜಸ್ಟಿಸ್ ಪಾರ್ಟಿಯದು. ಕುಂದಾಪುರ ಡಿವಿಜನಿನಲ್ಲಿ ಸನಾತನಿಗಳು ಆ ಅನ್ಯಾಯವನ್ನು ಪುರಸ್ಕರಿಸುತ್ತಿರುವರೆಂಬ ಆರೋಪವು ಕೇಳಬರುತ್ತದೆ. ಶ್ರೀ. ಸಿ. ರಾಜಗೋಪಾಲಾಚಾರಿಯವರಂತಹ ದೇಶ ಭಕ್ತ ಬ್ರಾಹ್ಮಣ ಮುಖಂಡರು ಈ ವಿಚಿತ್ರವರ್ತನೆಯನ್ನು ಸ್ವಾಭಾವಿಕವಾಗಿ ನಂಬಲಾರದೆ ಹೋಗಿರುವರು. ಬ್ರಾಹ್ಮಣ ದ್ವೇಷವೇ ಜೀವಾಳವಾಗಿರುವ ಜಸ್ಟಿಸ್ ಪಕ್ಷವನ್ನು ಸನಾತನಿಗಳು ಎಷ್ಟಕ್ಕೂ ಪುರಸ್ಕರಿಸಲಾರರೆಂದು ಅವರ ಭಾವನೆ. ಈ ಆಶ್ಚರ್ಯಕರ ಘಟನೆಗೆ ಜಸ್ಟಿಸ್ ಪಾರ್ಟಿಯವರ ಬೆದರಿಕೆಯೂ ಒಂದು ಕಾರಣವೆಂದು ಕೇಳುತ್ತೇವೆ. ತಮಗೆ ವೋಟನ್ನೀಯದಿದ್ದರೆ ಮಠಗಳನ್ನು ಎಂಡೋಮೆಂಟ್ ಬೋರ್ಡಿನೊಳಗೆ ಸೇರಿಸಿಕೊಳ್ಳಲಾಗುವದೆಂಬ ಬೆದರಿಕೆಯನ್ನು ಜಸ್ಟಿಸ್ ಪಕ್ಷೀಯರು ಎಬ್ಬಿಸಿರುವರು. ಬರುವ ಮದ್ರಾಸ್ ಎಸೆಂಬ್ಲಿಯಲ್ಲಿ ಜಸ್ಟಿಸ್ ಪಕ್ಷವೆಂಬುದು ಅಳಿದುಳಿದ ಅವಶೇಷರೂಪದಿಂದ ಕಾಣಿಸಿಕೊಂಡರೆ ಅದೇ ದೊಡ್ಡದೆನ್ನಬೇಕು. ಎಸೆಂಬ್ಲಿಯಲ್ಲಿ ಒಂದು ಪಕ್ಷವಾಗಿ ಕಾಣಿಸಿಕೊಳ್ಳುವುದೇ ಕಷ್ಟವಾಗಿರುವವರ ಬೆದರಿಕೆ ಅಥವಾ ಆಶ್ವಾಸನೆಯಿಂದರೆ ಯಾವದೇ ವಿಧದಿಂದಲಾದರೂ ಚುನಾವಣೆಯಲ್ಲಿ ದಡ ಸೇರೋಣವೆಂಬ ಹಂಚಿಕೆ ಮಾತ್ರವೆಂಬುದು ಸುಸ್ಪಷ್ಟ; **ಕೋಗ್ರೆಸಿನ** ಉಜ್ವಲ ಕೆಲಸಗಳೆದಿರಲ್ಲಿ ಚೇತನಗುಂದಿದ ಇದಿರಾಳಿಗಳ ಇಂತಹ ಅನುಕೂಲ ಶಾಸ್ತ್ರಗಳ ಶ್ರವಣವನ್ನು ಮಾಡುವ ಅಜ್ಞಾನಿಗಳು ನಮ್ಮಲ್ಲಿರಲಾರರೆಂದು **ನಮ್ಮ ಭರವಸೆ.**

ಸಂಯುಕ್ತ ಪ್ರಾಂತದಲ್ಲಿ ಕಾಂಗ್ರೆಸ್ ಉಮೇದ್ವಾರಿಗಳ ಪ್ರಚಂಡ ವಿಜಯ

ಸಂಯುಕ್ತ ಪ್ರಾಂತದ ಚುನಾವಣೆಯಲ್ಲಿ ಸರಕಾರವೂ ದೊಡ್ಡ ಜಮೀನುದಾರರೂ ಕಾಂಗ್ರೆಸಿಗೆ ಪ್ರಬಲ ವಿರೋಧ ಹೂಡಿ ಹಲವು ಆತಂಕಗಳನ್ನೊಡ್ಡಿದರೂ, 133 ಮಂದಿ ಕಾಂಗ್ರೆಸ್ ಉಮೇದ್ವಾರರುಗಳು ಇಷ್ಟರಲ್ಲೇ ಆರಿಸಿಬಂದಿರುವರೆಂದು ಪಂಡಿತ ಜವಾಹರಲಾಲರಿಗೆ ತಂತಿ ಬಂದಿರುವದೆಂದು ತಿಳಿದು ಬರುತ್ತದೆ. ಇದರಿಂದ ಕಾಂಗ್ರೆಸಿಗೆ ಅಲ್ಲಿ ಪ್ರಬಲ ಬಹುಮತವು ದೊರೆತಂತಾಗುವುದು.

ವಿದೇಶ

ಸ್ಪೈಯಿನಿನ ಅಂತಃಕಲಹ

ದಂಗೆಗಾರರು ದಕ್ಷಿಣದ ಮಾಲಗಾದ ಕಡೆಗೆ ಮುಂದುವರಿಯುತ್ತಾರೆ. ಆದರೆ ಉತ್ತರದಲ್ಲಿ ಸರಕಾರ ಪಕ್ಷವು ಟೊಲೆಡೋ ಕಡೆಗೆ ಮುಂದುವರಿದಿರುತ್ತದೆ. ಮೆಡ್ರಿಡ್ ನಗರದ ಆಹಾರ ಪೂರೈಕೆಯ ಕೆಲಸವನ್ನು ಸರಕಾರವೇ ವಹಿಸಿಕೊಂಡಿದೆ.

ಇತೋಪಿಯ (ಎಬಿಸೀನಿಯ)ದ ರಾಸ್ ಇಮ್ರುವಿನ ಮಗ ಸ್ಪೈಯಿನಿನಲ್ಲಿ.

ಫೇಸೀಸಮ್‌ನ್ನು ಎದುರಾಡಿದರೆ ಇತೋಪಿಯವನ್ನು ರಕ್ಷಿಸಿದಂತಾಗುವುದೆಂದು ಅವನ ಹೇಳಿಕೆ. ಆತನು ಅಂತರಾಷ್ಟ್ರೀಯ ಬ್ರಿಗೇಡ್ ಎಂಬ ಪಡೆಯನ್ನು ಸೇರಿ ಸ್ಪೈಯಿನಿಗೆ ಬಂದಿದ್ದಾನೆ. ಆತನ ಹೆಸರು ಲಿಜೆಗ್‌ವೆಟ್ ಸ್ಪೈಯಿನಿನಲ್ಲಿ ಫೇಸೀಸಮಿಗೆ ಎದುರಾಗಿ ಕಾದಾಡಿಗೆದ್ದರೆ ನನ್ನ ದೇಶದ ಸ್ವಾತಂತ್ರ್ಯವನ್ನು ರಕ್ಷಿಸಿದಂತಾಯಿತೆಂದು ಆತ ಹೇಳುತ್ತಾನೆ.

ಸ್ಪೈಯಿನಿನ ದಂಗೆಗಾರರು ಸೋವ್ಯೆಟ್ (ರಷ್ಯದ) ಸ್ಟೀಮರನ್ನು ಮುಳುಗಿಸಿದರು

ಭೂಮಧ್ಯ ಸಮುದ್ರದಲ್ಲಿ ಬರುತ್ತಿದ್ದ ಸೋವಿಯೆಟ್ ಸ್ಟೀಮರನ್ನು ದಂಗೆಗಾರರು ಟೋರ್ಪೆಡೋ ಬಿಟ್ಟು ಮುಳುಗಿಸಿದರು, ಆದರಲ್ಲಿ ವೈರಿ ಪಕ್ಷಕ್ಕೆ ಸಹಾಯಕವಾದ ಯುದ್ಧೋಪಕರಣಗಳು ತುಂಬಿದ್ದುವೆಂದು ಅವರ ಸಂಶಯವಿತ್ತು.

ಸ್ತ್ರೀ ವಿಕ್ರಯದ ವ್ಯಾಪಾರಕ್ಕಾಗಿ ೧೧ ಜನರಿಗೆ ಶಿಕ್ಷೆ

ಒಂಭತ್ತು ಗಂಡಸರೂ ಇಬ್ಬರು ಹೆಂಗಸರೂ ಕೂಡಿ ಒಂದು ಹೊಸ ಕಂಪೆನಿಯನ್ನು ಮಾಡಿದ್ದರು. ಈ ಕಂಪೆನಿಯ ಕೆಲಸ ಬೇರೆ ಬೇರೆ ಪ್ರಾಂತ್ಯಗಳಿಂದ ವಿವಿಧೋಪಾಯಗಳಿಂದ (ಚೋರತನದಿಂದಲೂ) ಎಳೇ ಪ್ರಾಯದ ಹೆಂಗಸರನ್ನು ತಂದು ಬೇಕಾದವರಿಗೆ ಮಾರುವುದು. ಆ ಕಂಪೆನಿಯ ಕೇಂದ್ರ ಕಾರ್ಯಾಲಯ ಪಾಟ್ನಾದ ಸಮೀಪ. ಇವರಿಂದ ವಿಕ್ರಿತವಾದ ತರುಣಿಯೊಬ್ಬಳು ತನ್ನನ್ನು ಕೊಂಡುಕೊಂಡವನಿಂದ ತಪ್ಪಿಸಿಕೊಂಡು ಪೋಲೀಸರಿಗೆ ದೂರುಕೊಟ್ಟಳು. ಗುಟ್ಟು ಹೊರಬಿದ್ದಿತು (ಲ್ಲರಟ್ಟಾಯಿತು). ಸೆಷ್ಯನ್ ಕೋರ್ಟಿನಲ್ಲಿ ಮೊಕದ್ದಮೆ ನಡೆದು ಈ ೧೧ ಜನರಿಗೆ ತರಾಂತರ ಅವಧಿಯ ಕಠಿಣ ಜೈಲು ಶಿಕ್ಷೆ ದೊರಕಿತು.

ಶಾಲಾ ವಿದ್ಯಾರ್ಥಿನಿಯರಿಗೆ ನಗ್ನ ಚಿತ್ರವನ್ನು ಕಳುಹಿಸಿದುದಕ್ಕಾಗಿ ಆರು ತಿಂಗಳ ಕಾರಾಗೃಹವಾಸ.

ಇಂಗ್ಲಾಂಡಿನ ಬಕ್ಕಿಂಗ್ಹಾಮ್ ಡಿಸ್ಟ್ರಿಕ್ಟಿನಲ್ಲಿ ಪ್ರೋಕರ್ ಎಂಬವನೊಬ್ಬ, ಹುಡುಗಿಯರ ಶಾಲೆಯ ಮೊನಿಟರಳಿಗೆ (ಕ್ಲಾಸಿನ ಶಿಸ್ತು ನೋಡಿಕೊಳ್ಳುವ ಹೊಣೆಗಾರಿಕೆಯುಳ್ಳವಳು) ಎಂದು. ನಗ್ನ ಚಿತ್ರಗಳನ್ನು ಶಾಲೆಗಳಿಗೆಲ್ಲ ಕಳುಹಿಸಿಬಿಡುವ ಹುಚ್ಚು ಅವನಿಗೆ, ಸಿ. ಐ. ಡಿ. ಯವರು ಅವನನ್ನು ಪತ್ತೆಹಿಡಿದರು. ಆರು ತಿಂಗಳ ಶಿಕ್ಷೆ ಕೊಡಿಸಿದರು.

ಮುಸೋಲಿನಿಯ ಜ್ಯೇಷ್ಠ ಪುತ್ರನಿಗೆ ವಿವಾಹ

ರೋಮಿನಲ್ಲಿ ಕಳೆದ ತಾ. ೬ರಲ್ಲಿ ವಿಜೃಂಭಣೆಯಿಂದ ನಡೆಯಿತು. ವಧೂವರರಿಬ್ಬರೂ ಸಮಾನವಯಸ್ಕರು. ೨೦ ವರುಷ ಪ್ರಾಯ.

ಪೋಪ್ ಸಾಹೇಬರು ಗುಣಹೊಂದುತ್ತಾರೆ.

ಅವರು ಪೋಪ್ ಪಟ್ಟವೇರಿದ ೧೫ನೇ ವಾರ್ಷಿಕೋತ್ಸವವನ್ನು ಜರಗಿಸುವ ಕಾರ್ಯಕಲಾಪಗಳು ನಡೆಯುತ್ತಿವೆ. ಅದು ತಾ. ೧೨ನೆಯ ದಿನ ಬರುವದು. ಪೋಪರು ತಾನು ಬೇನೆ ಬೀಳುವದಕ್ಕಿಂತ ಮೊದಲಿದ್ದುದಕ್ಕಿಂತಲೂ ಸುಖತರವಾಗಿದ್ದೇನೆಂದು ಅವರನ್ನು ಸಂದರ್ಶಿಸಿದವರೊಡನೆ ಹೇಳುತ್ತಾರಂತೆ.

ಅಮೇರಿಕದ ಉತ್ಪಾತ ನೆರೆ

ಯುನೈಟೆಡ್ ಸ್ಟೇಟ್ಸಿನ ಒಹಿಯೋ ನದಿಯ ಈ ಜಲಪ್ರಳಯವು ತಗ್ಗುವ ಲಕ್ಷಣವನ್ನು ತೋರಿಸುತ್ತದೆ.

ವರುಷಕ್ಕೆ ೩೫೦೦ ಹವನು ಸಂಬಳದ ಕೆಲಸಕ್ಕೆ ಉಮೇದ್ವಾರರಿಲ್ಲ

ಪೇನ್ಸ್ಟಿಗ್‌ನ ಲೀಗ್ ಆಫ್ ನೇಶನ್ಸ್ (ಜನಾಂಗ ಶಾಂತಿ ಸ್ಥಾಪನಾ ಸಂಘ) ಎಂಬುದರ ಹೈಕಮಿಶನರ ಸ್ಥಾನಕ್ಕೆ ಅಷ್ಟು ಸಂಬಳವಿದೆ. ಆದರೆ ಯಾವ ಜನಾಂಗದ ವಕ್ರದೃಷ್ಟಿಯು ತನ್ನಮೇಲೆ ಬೀಳುವುದೋ ಎಂಬ ಬೆದರಿಕೆಯಿಂದ ಯುರೋಪ್ ಖಂಡದಲ್ಲಾದರೂ ಆ ಸ್ಥಾನಕ್ಕೆ ಉಮೇದ್ವಾರರಾಗಿ ಬರುವುದಿಲ್ಲ.

ಸಾರ್ವಭೌಮರ ಪ್ರೈವೇಟ್ ಸೆಕ್ರೆಟರಿ ಇಂಡಿಯಕ್ಕೆ ಬಂದಿದ್ದಾರೆ

ಚಕ್ರವರ್ತಿ ಜೋರ್ಜ್‌ಪಷ್ಠರ ಪ್ರೈವೇಟ್ ಸೆಕ್ರೆಟರಿಯಾದ ಒನರೇಬಲ್ ಅಲೆಕ್ಸಾಂಡರ್ ಹಾರ್ಡಿಂಜರು ಸಪತ್ನೀಕರಾಗಿ ಇಂಡಿಯಕ್ಕೆ ಬಂದಿರುವರು. ಮುಂದೆ ಜನವರಿಯಲ್ಲಿ ಜರಗಲಿಕ್ಕಿರುವ ಡಿಲ್ಲಿ ಪಟ್ಟಾಭಿಷೇಕದ ವ್ಯವಸ್ಥೆಗಳ ವಿಚಾರನೋಡಿಕೊಳ್ಳುವುದು ಬಂದಿರುವ ಉದ್ದೇಶಗಳಲ್ಲೊಂದು.

ಚಕ್ರವರ್ತಿಗಳಾದ ಆರನೇ ಜೋರ್ಜರಿಗೆ ಎಡಗೈಮೇಲು

ಈ ಎಡಗೈ ಮೇಲಿನ (left handedness) ವಿಷಯವಾಗಿ ಅಮೇರಿಕದ ಮನಶ್ಶಾಸ್ತ್ರಜ್ಞರು ತರ್ಕಮಾಡತೊಡಗಿದ್ದಾರೆ ಇದರ ಕಾರಣವು ಅಭ್ಯಾಸಬಲವೋ ಅಥವಾ ಹುಟ್ಟುಗುಣವೋ ಎಂಬುದು ಅವರ ವಿಚಾರಾಂಶ.

ಸ್ವದೇಶ

ಅನಂತಶಯನದ ಸಮೀಪ ತಿಮಿಂಗಿಲ

ಹಿಂದೂ ಸಾಗರದಲ್ಲಿ ಸಾಮಾನ್ಯವಾಗಿ ಸಿಗದಿರುವ ದೊಡ್ಡ ತಿಮಿಂಗಿಲವದು. ೪೫ ಅಡಿ ಉದ್ದ ೮ ಅಡಿ ಅಗಲವಿತ್ತು. ಮೃತವಾದ ಈ ತಿಮಿಂಗಿಲವನ್ನು ಸಮುದ್ರವು ಕರೆಹಾಕಿಸಿತ್ತು. ಎಲುಬಿನಟ್ಟೆಯನ್ನು ಅನಂತಶಯನದ ವಸ್ತು ಪ್ರದರ್ಶನಾಲಯದಲ್ಲಿ ಇಡುವ ವ್ಯವಸ್ಥೆ ಮಾಡಲಾಗಿದೆ.

ಬಳ್ಳಾರಿಯಲ್ಲಿ ಕ್ಲಾರ್ಕರ ಮುಷ್ಕರ

ಬಳ್ಳಾರಿ ಮುನ್ಸಿಪಾಲಿಟಿಯು ತಮಗೆ ಲೈಸನ್ಸ್ ಫೀಸು ಹೊರಿಸಿತೆಂದು ಅವರ ಮುಷ್ಕರ. ಸುಮಾರು ೨೦೦ ಮಂದಿ ಕಲೆಕ್ಟರನ್ನು ಕಂಡು ತಮ್ಮ ದೂರನ್ನು ಹೇಳಿಕೊಂಡರು. ಮೂರು ತಿಂಗಳವೇಳಾದರೂ ಈ ನಿರ್ಣಯವನ್ನು ಮುನ್ಸಿಪಾಲಿಟಿಯು ರದ್ದು ಮಾಡೀತು ಎಂದು ಕಲೆಕ್ಟರರು ಆಶೆ ಹೇಳಿದುದರಿಂದ ಮುಷ್ಕರವು ನಿಲ್ಲುವ ಸಂಭವವಿದೆ.

ತಿರುವಾಂಕೂರು ಮಹಾರಾಜರು ಮದ್ರಾಸಿನಲ್ಲಿ

ಮಹಾರಾಜರು ತಾ. ೭ರಲ್ಲಿ ಎಗ್ಮೋರ್ ಸ್ಟೇಶನಿನಲ್ಲಿ ದಿವಾನ್ ಮತ್ತು ಜೂನಿಯರ್ ಮಹಾರಾಣಿ ಸಮೇತರಾಗಿ ಬಂದಿಳಿದಾಗಲೇ ಪೌರಜನರ ಉತ್ಸಾಹಪೂರ್ವಕ ಸುಸ್ವಾಗತ. ಹರಿಜನ ದೇವಸ್ಥಾನ ಪ್ರವೇಶದ ಐತಿಹಾಸಿಕ ಮಹತ್ವವುಳ್ಳ ಆಜ್ಞೆಯನ್ನಿತ್ತ ಬಳಿಕ ಇದೀಗ ಮೊದಲನೆಯ ಬಾರಿ ಮದ್ರಾಸಿಗೆ ಅವರು ಚಿತ್ತೈಸಿದುದು. ಆದುದರಿಂದ ಈ ಸಲದ ಸಂದರ್ಶನದಲ್ಲಿ ನಗರವು ಹೆಚ್ಚಿನ ಉತ್ಸಾಹತಾಳಿದೆ. ತ್ರಿವೇಂದ್ರಮ್ ಎಕ್ಸ್‌ಪ್ರೆಸ್ ಬರುವುದೇ ಒಂದು ಘಂಟೆ ತಡವಾಗಿತ್ತು. ಕಾರಣ ದಾರಿಯುದ್ದಕ್ಕೂ ಸುಸ್ವಾಗತವನ್ನೀವ ಮತ್ತು ದರ್ಶನ ತೆಗೆದುಕೊಳ್ಳುವ ಅಲ್ಲಲ್ಲಿ ಮತ್ತು ಊರವರ ಕಾರ್ಯಕಲಾಪಗಳ ರಾಶಿಯೇ ಇದ್ದಿತಂತೆ. ಮದ್ರಾಸಿನಲ್ಲಿಳಿದಾಗ ಪುಷ್ಪಹಾರಗಳ ಸಮರ್ಪಣೆಯಲ್ಲದೆ ಪಂಡಿತ ಪರಿಷತ್ತಿನ ಸದಸ್ಯರು ಪೂರ್ಣಕುಂಭ ಸಮರ್ಪಣೆಯಂಗೈದು ಕೃತಾರ್ಥರಾದರ್. ಅಲ್ಲಿಂದ ಮಹಾ ಜನರು ಅಡ್ಯಾರದ ತಮ್ಮ ಅರಮನೆಗೆ ಪರಿವಾರ ಸಮೇತ ತೆರಳಿದರು. ದಾರಿಯುದ್ದಕ್ಕೂ ಅಲ್ಲಲ್ಲಿ ನಗರ ಶೃಂಗಾರವಾಗಿತ್ತು. ಮಹಾರಾಜರು ಹದಿನೈದು ದಿವಸ ಮದ್ರಾಸಿನಲ್ಲಿರುವರಂತೆ. ಗವರ್ನರ್ ಧೊರೆಗಳು ೧೫ನೇ ತಾರೀಕಿನ ದಿನ ಗಾರ್ಡನ್ ಪಾರ್ಟಿಯಿಂದ ಸತ್ಕರಿಸಲಿಕ್ಕಿರುವರು. ಇತರ ಕೆಲವು ಸನ್ಮಾನ ಕೂಟ ಸ್ವಾಗತ ಭಾಷಣೇತ್ಯಾದಿ ಕಾರ್ಯಕಲಾಪಗಳೂ ಇವೆಯಂತೆ.

ಮೇಡ್ರಿಡಿನ ಯುದ್ಧ

ಇಡೀ ಸ್ಪೈಯಿನಿನ ಬೇರೆ ಬೇರೆ ಕಡೆಗಳಲ್ಲಿ ಯುದ್ಧವು ಜೋರಾಗಿ ಪ್ರಾರಂಭವಾಗಿದೆ. ಕಾರಡೋಬಾದ 20 ಮೈಲು ದೂರದ ಪ್ರದೇಶದಲ್ಲಿ ಬಿರುಸಾದ ಕದನವು ನಡೆಯುವುದೆಂಬ ನಿರೀಕ್ಷೆಯಿದೆ. ದಂಗೆಗಾರರ ಪ್ರಾಮುಖ್ಯ ಸ್ಥಳವಾದ ಕೊರಡೋಬಾದ ಸುತ್ತುಮುತ್ತಲಿನ ಆರು ಕಡೆಗಳಲ್ಲಿ ಭಯಂಕರ ಕದನವು ನಡೆಯುತ್ತಾ ಇದೆ. ಒರಿಯಾಲ್ ಜಾಲೆಟ್ ಎಂಬಲ್ಲಿ ದಂಗೆಗಾರರ ಶಿಬಿರಕ್ಕೆ ಸರಕಾರವು ಬೆಂಕಿ ಕೊಟ್ಟಿರುವುದು. ವಿಡೋ ಎಂಬಲ್ಲಿ ಸರಕಾರವು ಬೊಂಬುಗಳನ್ನು ಹಾಕುತ್ತಲೇ ಇದೆ. ಮೇಡ್ರಿಡಿನ ಟ್ರೋಟ್ಸ್ಕಿಯವರ ಕಡೆಯ ಜನ್ರೇರ್ ಕಾಸ್ಟಿಂಗ್ ಸ್ಟೇಶನನ್ನು ಜಪ್ತಿಮಾಡಿ ಅವರ ವಾರಪತ್ರಿಕೆಯ ಪ್ರಕಟಣೆಯನ್ನು ನಿಲ್ಲಿಸಿರುವರು. ಕೆಟ್ಟ ಹವೆಯ ನಿಮಿತ್ತ ವಿಳಂಬಿಸಲ್ಪಟ್ಟಿದ್ದ ಅವಿಭಾ ಪಟ್ಟಣದ ಮೇಲಿನ ಧಾಳಿಯನ್ನು ದಂಗೆಗಾರರು ತಾ. ೮ರಲ್ಲಿ ಪ್ರಾರಂಭಿಸಿರುವರು. ಭಯಂಕರ ಕದನವು ನಡೆಯುತ್ತಿವೆ. ದಂಗೆಗಾರರು ಮೇಡ್ರಿಡಿನ ದಕ್ಷಿಣ ಭಾಗದಲ್ಲಿ ಮುಂದೊತ್ತುತ್ತಿರುವರು. ಮೇಡ್ರಿಡಿನ ಮೇಲೆ ನಡೆದ ಧಾಳಿಯು ಹವೆಯ ಅನಾನುಕೂಲತೆಯಿಂದಾಗಿ ಜಯಶೀಲವಾಗಿರುವುದಿಲ್ಲ.

ಲಂಡನಿನ ಕೆಲವು ಪ್ರಮುಖ ಪುಸ್ತಕವ್ಯಾಪಾರಿಗಳು, ಸಿಂಪ್ಸನ್ ಪ್ರಕರಣದ ಎಲ್ಲ ಪುಸ್ತಕಗಳನ್ನೂ ಬಹಿಷ್ಕರಿಸಲು ನಿರ್ಧರಿಸಿರುವರು.

THE BOMBAY LIFE ASSURANCE Co., LTD.
ESTD. 1908
Church Gate Street, Fort - - BOMBAY.
SPECIAL FEATURES.
1. Rebate on yearly payment of policies.
2. Rebate for larger assurances.
3. Accident Risk covered on small extra premiums
4. Attractive Bonuses.
It pays you to represent this Company.
Wanted Agents in unrepresented parts.
Apply to:—
KOCHIKAR BROTHERS,
Madras Branch Secretaries.

BRANCHES AT:		
P. B. 337 Mount Road, Madras.	Visveswarapuram Circle, Bangalore City.	Soumyalayam Puthiyara, Calicut.
Car Street, Mangalore.	Udipi, S. India.	Charni Road, Bombay No. 4.

EVIDENCE OF SECURITY & STABILITY
FIGURES THAT SPEAK FOR THEMSELVES
TOTAL ASSETS Rs. 80,66,600
Summary of 1935 Accounts

Total Assets Over	...	...	Rs. 80,00,000
Life Funds Over	...	...	Rs. 68,00,000
Premium Income Over		...	Rs. 22,54.000
Interest Income	...	...	Rs. 3,16,000
Claims Paid	...	...	Rs. 5,75,000

Total Claims paid Over Rs. 38,50,000
Total Business in Force Over Rs. 4,42,51,200
TOTAL BUSINESS IN FORCE Rs. 4,42,51,200

ಚಂದಾದಾರರಲ್ಲಿ

ಚಂದಾಹಣ ಬಾಕಿ ಇರುವ ನಮ್ಮ ಚಂದಾದಾರರು ಆದಷ್ಟು ಬೇಗನೇ ತಮ್ಮ ಹಣವನ್ನು ಮಣಿಯಾರ್ಡರ್ ಮೂಲಕ ದಯವಿಟ್ಟು ಕಳುಹಿಸಿಕೊಡಬೇಕಾಗಿ ಅಪೇಕ್ಷಿಸುತ್ತೇವೆ. ವಿ. ಪಿ. ಮಾಡುವದಾದರೆ ಐದಾಣೆ ಹೆಚ್ಚಿಗೆ ಬೀಳುವದು.

ನಮ್ಮೊಡನೆ ಪತ್ರವ್ಯವಹಾರ ನಡೆಸುವವರು ತಮ್ಮ ಚಂದಾ ನಂಬ್ರವನ್ನು ಸೂಚಿಸಿ ಬರೆಯಬೇಕಾಗಿ ವಿನಂತಿ. ಮೆನೇಜರ್, 'ನವಯುಗ'

ಉಡುಪಿ, ತಾ. ೧೧-೨-'೩೭ ಗುರುವಾರ

ಮತದಾರರೊಡನೊಂದು ಮಾತು
(ಲೇಖಾಂಕ ೩)

ಚುನಾವಣೆಯ ದಿನವು ಸಮಿಪಿಸುತ್ತಿದ್ದಂತೆ ಆವೇಗವು ಏರಹತ್ತಿದೆ. ರಾಷ್ಟ್ರಪತಿ ಪಂಡಿತ ಜವಾಹಿರಲಾಲ ನೆಹರುಗಳು ದಕ್ಷಿಣ ಕನ್ನಡವನ್ನು ಸಂಚರಿಸಿ ಕೊಟ್ಟ ಸಂದೇಶವು ಮತದಾರರ ಕರ್ತವ್ಯವನ್ನು ಸ್ಪಷ್ಟಗೊಳಿಸಿದೆ. ರಾಷ್ಟ್ರಸಭೆಯನ್ನಾಗಲೀ ಅದರ ಅಧ್ಯಕ್ಷರನ್ನಾಗಲೀ ಟೀಕಿಸಲು ಜಸ್ಟೀಸು ಪಕ್ಷೀಯರು ಕೂಡಾ ಸಿದ್ಧರಿಲ್ಲ. ಅದವರಿಗೆ ಅಸಾಧ್ಯವಾದ ಕೆಲಸ ಮಾತ್ರವಲ್ಲ, ಅಂತಹ ಟೀಕೆಯು ತಮ್ಮ ಪರಿಸ್ಥಿತಿಯನ್ನು ಕೆಡಿಸಬಹುದೆಂಬ ಹೆದರಿಕೆಯು ಅವರಲ್ಲಿದೆ. ಕಾರಣವಿಷ್ಟೆ, ಜನ ಮತವು ಕೊಂಗ್ರೆಸಿಗೆ ಮತ್ತು ಕೊಂಗ್ರೆಸಿನ ಅಧ್ಯಕ್ಷರಿಗೆ ಸಂಪೂರ್ಣ ಅನುಕೂಲವಾಗಿರುವಾಗ ಮತದಾರರ ಬೆಂಬಲವನ್ನಪೇಕ್ಷಿಸುತ್ತಿರುವ ತಾವು ಕೊಂಗ್ರೆಸ್ಸನ್ನು ದೂರಹತ್ತಿದರೆ ಪರಿಣಾಮವು ನೆಟ್ಟಗಾಗಲಿಕ್ಕಿಲ್ಲವೆಂದು ಅವರಿಗೆ ಗೊತ್ತು. ಆದರೆ ಅವರ ಕೃತ್ಯವು ಕೊಂಗ್ರೆಸಿನ ವರ್ಚಸ್ಸನ್ನು ಹಾಳುಮಾಡಿ, ಅದು ಮಾಡಲಿರುವ ಹಿಂದುಸ್ಥಾನದ ಪ್ರಗತಿಯನ್ನು ಕೆಡಿಸುವಂತಹದಿರುವದರಿಂದ ಮಹಾ ದೇಶದ್ರೋಹವೇ ಸರಿ; ಕೊಂಗ್ರೆಸಿಗೆ ಅಂತಹ ದ್ರೋಹವನ್ನು ಕಾರ್ಯಮುಖೇನ ಸಾಧಿಸುವರೆ ಅನುಕೂಲ ವಾತಾವರಣವನ್ನು ನಿರ್ಮಿಸುವ ಸಲುವಾಗಿಯೇ ಅವರು ಕೊಂಗ್ರೆಸಿನ ಮುಖಸ್ತುತಿಯನ್ನು ಮಾಡುತ್ತಿರುವರು. ಮತದಾರರು ಈ ವಂಚನೆಗೆ ಬಲಿಬೀಳಬಾರದು. ಪಂಡಿತ ಜವ್ಹಾರಲಾಲ ನೆಹರುಗಳು ಇಲ್ಲಿಯ ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ಗ್ರಹಿಸಿಕೊಂಡು ದಕ್ಷಿಣ ಕನ್ನಡದ ಭಾಷಣಗಳಲ್ಲಿ ಮತದಾರರನ್ನು ಸ್ಪಷ್ಟವಾಗಿ ಎಚ್ಚರಿಸಿರುವರು. ಅವರು ಉಡುಪಿಯ ತನ್ನ ಭಾಷಣದಲ್ಲಿ "**ಕೊಂಗ್ರೆಸು ಈ ಜಸ್ಟೀಸರಂತೆ ನೌಕರಿಗಳ ಬೇಟೆಗೆ ಹೊರಟ ಪಕ್ಷವಲ್ಲ. ಆದಕ್ಕೆ ಇಡೀ ಹಿಂದುಸ್ಥಾನದ ಭವಿಷ್ಯವನ್ನು ನಿರ್ಮಿಸುವ ಕೆಲಸವಿದೆ. ಕೊಂಗ್ರೆಸಿಗೆ ಬದ್ಧ ವಿರುದ್ಧವಾಗಿ, ಜನಹಿತವನ್ನು ಎಳ್ಳಷ್ಟು ಗಣಿಸದೆ ದೇಶದ್ರೋಹವನ್ನು ಸಾಧಿಸುತ್ತಿರುವ ಈ ಜಸ್ಟೀಸು ಪಾರ್ಟಿಗೂ, ನನಗೂ ಸಂಬಂಧವೇ ಇಲ್ಲ. ಅವರು ಒಂದೋ ಸರಕಾರದ ಬೆನ್ನು ಹಿಡಿಯಬೇಕು, ಇಲ್ಲವೇ ನಮ್ಮ ಪಕ್ಷ ಸೇರಬೇಕು**" ಎಂದು ವೀರೋದ್ಗಾರ ತೆಗೆದಿರುವರು ಹಿಂದೂದೇಶದ ಬಡತನವು ಪಂಡಿತಜೀಯವರ ಹೃದಯದಲ್ಲಿ ಸದಾಕಾಲ ಬೇನೆ ಕೊಡುತ್ತಿದೆ; ಅವರ ಪ್ರತಿಯೊಂದು ಮಾತಿನಲ್ಲಿ ಆ ನೋವಿನ ಕುರುಹಿತ್ತು. ದಕ್ಷಿಣ ಕನ್ನಡ ಜಿಲ್ಲೆಯವರಿಂದ ಅವರು ಆ ನೋವಿಗೊಂದು ಶಮನಬೇಕೆಂದು ಕೇಳಿದರೇ ಹೊರತು ಬೇರೇನೂ ಇಲ್ಲ.

ಮತದಾರರು ಪಂಡಿತ ನೆಹರುಗಳನ್ನು ಗೌರವಿಸುವರಾದರೆ ಅವರ ಅಪೇಕ್ಷೆಯನ್ನು ಪೂರ್ತಿಮಾಡಲು ಹಿಂದೆಗೆಯಬಾರದು "ಹಿಂದೂದೇಶದ ನಿಜವಾದ ಹೋರಾಟವು ಮುಂದಕ್ಕೆ ನಡೆಯಲಿದೆ. ಇಂದಿನ ಚುನಾವಣೆಯು ಅದರ ಒಂದು ಸಣ್ಣ ಭಾಗ ಮಾತ್ರ. ಕೊಂಗ್ರೆಸಿನ ಪರವಾಗಿ ಚುನಾವಣೆಗೆ ನಿಂತ ಸಾವಿರಾರು ಮಂದಿಯ ಪರಿಚಯವು ನನಗಿಲ್ಲ. ಅವರು ಕೊಂಗ್ರೆಸ್ ಸೋಲ್ಜರರೆಂದಿಷ್ಟೇ ಗೊತ್ತು. ನನ್ನ ಪ್ರಾಂತ್ಯವಾದ ಸಂಯುಕ್ತ ಸಂಸ್ಥಾನದಲ್ಲಿ ಚುನಾವಣೆಯಲ್ಲಿ ಪ್ರಬಲ ಬಹುಮತವನ್ನು ಪಡೆದು ಕೊಂಗ್ರೆಸು ಗೆದ್ದು ಬಂದಿದೆ. ಆ ಜಯವು ಉಮೇದ್ವಾರಿಗಳದಲ್ಲ, ಕೆಲಸಗಾರರದಲ್ಲ, ನನ್ನದು ಕೂಡಾ ಅಲ್ಲ. ಅದು ಕೊಂಗ್ರೆಸಿನದು! ದೇಶದ ಬಡತನವನ್ನೂ ದಿವಾಳಿಗಿರಿಯನ್ನೂ ನಿವಾರಿಸಲು ಸೊಂಟಕಟ್ಟಿರುವ ಕೊಂಗ್ರೆಸಿನದು! ಅದರ ಉಮೇದ್ವಾರರು ಗೆಲ್ಲುವಂತೆ ಮಾಡಿರಿ. ಕೊಂಗ್ರೆಸನ್ನು ಬಲಗೊಳಿಸಿರಿ" ಹೀಗೆಂದು ಕೊಂಗ್ರೆಸಿನ ಅಧ್ಯಕ್ಷರಾದ ಪಂಡಿತ ನೆಹರುಗಳು ಆಗ್ರಹ ಪೂರ್ವಕವಾಗಿ ಮತದಾರರನ್ನು ಕೇಳಿಕೊಂಡಿರುವರು. 'ಕೊಂಗ್ರೆಸ್ ರಾಷ್ಟ್ರೋದ್ಧಾರಕ ಸಂಸ್ಥೆ. ಪಂಡಿತ ನೆಹರುಗಳು ನಿಜವಾದ ಕೊಂಗ್ರೆಸುವಾಲರು' ಎಂದು ಜಸ್ಟಿಸ್‌ಪಾರ್ಟೀಯವರು ಹೇಳುವುದುಂಟು. ಇನ್ನೇನು? ಇಂಥಾ ದೇಶೋದ್ಧಾರಕ ಸಂಸ್ಥೆಯ ಸರ್ವಮಾನ್ಯ ಅಧ್ಯಕ್ಷರ ಕರೆಗೆ ಹೂಗುಟ್ಟುವದೊಂದೇ ಮತದಾರರ ಧರ್ಮ. ಇದು ಚುನಾವಣೆಯಲ್ಲಿ ಕೊಂಗ್ರೆಸಿನ ವೈರಿಗಳಾಗಿ ನಿಂತವರಿಂದ ಮುಂಗಡವಾಗಿ ಒಪ್ಪಿಗೆದೊರೆತ ಆಚರಣೆ. ವೋಟರರು ಈ ನೀತಿಯನ್ನು ಮರೆಯಬಾರದು. ರಾಷ್ಟ್ರಸಭಾಪತಿಗೆ ಆತಿಥ್ಯವನ್ನಿತ್ತ ದಕ್ಷಿಣಕನ್ನಡವು ಅಪವಾದವನ್ನು ಹೊರಬಾರದು. ದಕ್ಷಿಣ ಕನ್ನಡಾಜಿಲ್ಲೆಯ ವೋಟರರ ಜವಾಬ್ದಾರಿಯು ಇತರಜಿಲ್ಲೆಗಳು ಕೊಂಗ್ರೆಸನ್ನು ಉಮೇದ್ವಾರರನ್ನು ಪ್ರಬಲ ಬಹುಮತದಿಂದ ಆರಿಸಿ ಹೆಗ್ಗಳಿಕೆ ಪಡುತ್ತಿರುವ ಈ ಕಾಲದಲ್ಲಿ ಬಹಳವಾಗಿ ಹೆಚ್ಚಿದೆ. ಇನ್ನು ಕೊಂಗ್ರೆಸಿನ ಅಧ್ಯಕ್ಷರು ಸ್ವತಃ ಬಂದು ವೋಟರರ ಕರ್ತವ್ಯವನ್ನು ಸುಸ್ಪಷ್ಟವಾಕ್ಯಗಳಿಂದ ತಿಳಿಸಿ ಹೋಗಿರುವಾಗ ದಕ್ಷಿಣಕನ್ನಡವು ಹಿಂದುಳಿದರೆ ಎಂತಹ ಅಪವಾದಕ್ಕೊಳಗಾಗಬೇಕಾಗುವದೆಂಬುದನ್ನು ಮರೆಯಬಾರದು. ಪಂಡಿತ ನೆಹರುಗಳನ್ನು ಅತ್ಯುತ್ಸಾಹದಿಂದ ಸ್ವಾಗತೀಕರಿಸಿದ ದ. ಕನ್ನಡವು ಅವರ ಬೆನ್ನ ಹಿಂದೆಯೇ ಅವರಿಗೊಂದು ಧಿಕ್ಕಾರವನ್ನು ಚುನಾವಣೆಯ ಮೂಲಕ ಕಳುಹಿಸಿಕೊಡುವದೆಂದು ನಾವು ನಂಬುವದಿಲ್ಲ. ಪಂಡಿತಜೀಯವರ ಬಾಯಿಯಿಂದ "ದೇಶ ದ್ರೋಹಿಗಳು" ಎಂಬ ಬಿರುದನ್ನು ಪಡೆದ ಜಸ್ಟಿಸಪಾರ್ಟಿಯನ್ನು ಪುರಸ್ಕರಿಸಿ ಪಂಡಿತರ ಮಾತೂ ಅವರ ಮೇಲೆ ದ. ಕನ್ನಡವು ತೋರಿಸಿದಗೌರವವೂ ಸುಳ್ಳೆಂದು ವೋಟರರು ತೋರಿಸಿಕೊಡುವವರೆಂದು ನಾವು ಭಾವಿಸುವದಿಲ್ಲ. ರಾಷ್ಟ್ರಪತಿಗಳು ಹೇಳಿರುವಂತೆ ಜನತೆಗಾಗಿ ಕೊಂಗ್ರೆಸಿದೆ ಕೊಂಗ್ರೆಸಿಗಾಗಿ ಜನರಿರುವದು ಬೇಡವೆ?

ಮತದಾನದ ಅನುಕೂಲತೆ

ಕೊಂಗ್ರೆಸಿನ ಅಧ್ಯಕ್ಷರ ಕರೆಗೆ ಹೂಂಗುಟ್ಟಲು ಮತದಾರರಿಗಿರುವ ಅಡಚಣೆಗಳಾವುವೆಂಬುದನ್ನೂ ಪರಿಶೀಲಿಸೋಣ. ಹಳ್ಳಿಗಳ ಶೋಚನೀಯ ಪರಿಸ್ಥಿತಿಯಿಂದಾಗಿ ಮತದಾರರಲ್ಲಿ ಕೆಲವರಿಗೆ ಹಂಗು ದಾಕ್ಷಿಣ್ಯ ಬೆದರಿಕೆಗಳನ್ನು ಕಡೆಗಾಯ್ದು ಮುಂದೊತ್ತಲು ಅಸಾಧ್ಯವೆಂಬುದನ್ನು ನಾವು ಬಲ್ಲೆವು. ಅವರಾದರೂ ಈ ಶೋಚನೀಯ ಪರಿಸ್ಥಿತಿಯನ್ನು ದ್ವೇಷಿಸುವದಿಲ್ಲವೆ? ಇಂತಹ ದುರವಸ್ಥೆಯಿಂದ ಹಳ್ಳಿಗರನ್ನು ಪಾರುಮಾಡಲು ನಡು ಬಿಗಿದಿರುವ ಕೊಂಗ್ರೆಸಿಗೆ ಸರ್ವ ವಿಧದ ಸಹಾಯವನ್ನೀಯುವುದು ಅವರ ಧರ್ಮವಲ್ಲವೇ? ಭಯ ದಾಕ್ಷಿಣ್ಯಗಳಿಂದಾಗಿ ಮನಸ್ಸು ಡೋಲಾಯಮಾನವಾಗಿರುವವರೆಲ್ಲರೂ, ಬಡವರಿಗೆ ಇಂಥಾ ತಳಮಳಕ್ಕಾಸ್ಪದವಿರದಂತೆ ಪ್ರಯತ್ನಿಸುವ ಕೊಂಗ್ರೆಸ್ಸನ್ನು ಸ್ಮರಿಸಲೇಬೇಕು. ಪಂಡಿತ ನೆಹರುಗಳಾದರೂ ಅದನ್ನೇ ಆಡುತ್ತಿರುವರು. ಈ ಸಲದ ಚುನಾವಣೆಯಲ್ಲಿ ಗುಟ್ಟಾಗಿ ಮತದಾನವನ್ನು ಮಾಡುವ ವ್ಯವಸ್ಥೆಯಾಗಿರುವದರಿಂದ, ತಮ್ಮ ಮತದಾನದಿಂದ ದೇಶದ ಹಿತ ಯಾ ಅಹಿತವಲ್ಲದೆ ಇನ್ನಾವ ಪರಿಣಾಮವಾಗಲೂ ಆಸ್ಪದವಿಲ್ಲವೆಂಬುದನ್ನು ವೋಟರರು ಸ್ಪಷ್ಟವಾಗಿ ತಿಳಿದುಕೊಳ್ಳಬೇಕು. ವೋಟುಗಳನ್ನು ಹಾಕುವ ಕೋಣೆಯಲ್ಲಿ ಇತರರಾರೂ ಇರುವಂತಿಲ್ಲ. ವೋಟರರು ಆ ಏಕಾಂತ ಭವನದಲ್ಲಿ ಹೊರಗಡೆಯ ವಿದ್ಯಮಾನಗಳನ್ನೆಲ್ಲಾ ನೆನಪಿಗೆ ತಂದುಕೊಳ್ಳಲಿ; ಮನಸ್ಸಾಕ್ಷಿಯನ್ನು ಮುಂದಿಟ್ಟುಕೊಳ್ಳಲಿ. ಕೊಂಗ್ರೆಸಿನ ಅಧ್ಯಕ್ಷರ ಕರೆಯಲ್ಲಿ ಹುರುಳಿತ್ತಾದರೆ ಅದನ್ನು ಮರೆಯದಿರಲಿ. ನ್ಯಾಯವನ್ನು ಸ್ವತಂತ್ರವಾಗಿ ಹುಡುಕಿ ತೆಗೆಯಿರೆಂದು ತಮ್ಮನ್ನು ಈ ಗುಪ್ತಗೃಹಕ್ಕೆ ಕಳುಹಿಸಿರುವರೆಂಬುದನ್ನು ವೋಟುಕೊಡುವ ಕೋಣೆಗೆ ಹೋದ ಮತದಾರರು ಮರೆಯದೆ ದೇಶದ ಏಕಮಾತ್ರ ಪ್ರತಿನಿಧಿ ಸಂಸ್ಥೆಯಾದ **ಕೊಂಗ್ರೆಸ್ ಧ್ವಜವನ್ನು** ಹಾರಾಡಿಸಲಿ!

ಶ್ರೀ. ಎ. ಬಿ. ಸೆಟ್ಟಿರೂ ಕೈಸರ್ ಈ-ಹಿಂದ್ ಪದಕ ತ್ಯಾಗ

ಕುಂದಾಪುರ ಡಿವಿಜನಿನಿಂದ ಕೊಂಗ್ರೆಸ್ ಉಮೇದ್ವಾರಿಯಾಗಿ ನಿಂತಿರುವ ಶ್ರೀ. ಎ. ಬಿ. ಸೆಟ್ಟರು ತನ್ನ ಕೈಸರ್-ಈ-ಹಿಂದ್ ಪದಕವನ್ನು ತ್ಯಜಿಸಿದ ಕುರಿತು ವಿರುದ್ಧ ಪಕ್ಷೀಯರು ನಾನಾವಿಧದ ಕ್ಷುದ್ರಪ್ರಚಾರಗಳನ್ನು ಮಾಡುತ್ತಿರುವರೆಂದು ತಿಳಿದು ಬರುತ್ತದೆ. ಇದೇ ತಾ. ೯ರ ಕಂಠೀರವ ಸಂಚಿಕೆಯಲ್ಲಿ 'ಸ್ವಯಂ ಸೇವಕ"ನಾಮಾಂಕಿತರೊಬ್ಬರು ಶ್ರೀ. ಸೆಟ್ಟರ ಬಿರುದುತ್ಯಾಗಕ್ಕೆ ಅಪ್ರಾಮುಖ್ಯವಾದ ಕಾರಣವೊಂದನ್ನು ತೋರಿಸಲು ಮುಂದಾಗಿರುವರು. ಶ್ರೀ. ಎ. ಬಿ. ಸೆಟ್ಟರು ಬಿರುದು ಬಿಟ್ಟದ್ದಕ್ಕೆ ಕೆಲವರು ತಮ್ಮ ಖಾಸಗಿಕಾರಣಗಳ ಮೇಲ್ಪಾಗಕ್ಕೆ ಹಚ್ಚಿ ತೋರಿಸುತ್ತಿದ್ದ ಲೇಪವೇ ಆಧಾರವೆನ್ನುವದು ಚುನಾವಣೆಯ ಕಾಲದ ಒಂದು ಕುತಂತ್ರವಲ್ಲದೆ ಮತ್ತೇನೂ ಅಲ್ಲ. ಸರಕಾರದ ಬಿರುದು, ಬಿಲ್ಲೆಗಳು ಸಾರ್ವಜನಿಕ ಕೆಲಸಕ್ಕೆ ಆತಂಕಗಳೆಂಬುದನ್ನು ಶ್ರೀ. ಸೆಟ್ಟರು ತಿಳಿದೇ ಚುನಾವಣೆಯ ಗದ್ದಲವಿಲ್ಲದ 1935ರಲ್ಲಿ ಸರಕಾರದವರು ಕೊಡಲಿದ್ದ ಬಿರುದನ್ನು ನಿರಾಕರಿಸಿದರು. ಆ ಕುರಿತು ಆಗಿನ ಕಲೆಕ್ಟರ್ ಮಿ॥ ಗೋನ್ ಸಾಹೇಬರು ಶ್ರೀ. ಸೆಟ್ಟರಿಗೆ ಬರೆದಿದ್ದ ಪತ್ರವನ್ನು ಬೇರೊಂದೆಡೆಯಲ್ಲಿ ಕೊಟ್ಟಿರುವೆವು. ಚುನಾವಣೆಯಲ್ಲಿ ಕಾಂಗ್ರೆಸಿನ ಜಯವು ಅತ್ಯಗತ್ಯವಾಗಿರುವ ಈ ಕಾಲದಲ್ಲಿ ಕೆಲವರು ಕುಟಿಲ ಉಪಾಯದಿಂದ ಕಾಂಗ್ರೆಸು ಕೆಲಸಗಾರರ ಮೇಲೆ ಕೆಸರೆರಚಲು ನೋಡುವದು ಶೋಚನೀಯವಿದೆ.

ರಾಷ್ಟ್ರಸಭೆಯೂ ಸನಾತನಿಗಳೂ

ಉಡುಪಿಯ ಸನಾತನಿಗಳ ಕುರಿತು ನೀವು ಆತುರಪಡಬೇಕಾಗಿಲ್ಲ; ಅವರು ತಮ್ಮ ವೋಟನ್ನು ಕೊಂಗ್ರೆಸ್ಸಿಗೇನೇ ಕೊಡುವರು'' ಎಂದು ಶ್ರೀ. ಸಿ. ರಾಜಗೋಪಾಲಾಚಾರಿಯವರ ಆಶ್ವಾಸನೆ. ಅವರ ಭರವಸೆಯು ಸುಳ್ಳಾಗಲಾರದೆಂದು ಹಾರೈಸುತ್ತೇನೆ. ಮದ್ರಾಸಿನಲ್ಲಿ ಬ್ರಾಹ್ಮಣ-ಬ್ರಾಹ್ಮಣೇತರರೆಂಬ ಜಾತಿ ಭೇದವನ್ನು ಹುಟ್ಟಿಸುದುದೇ ಜಸ್ಟಿಸ್ ಪಾರ್ಟಿ. ಸಾಮುದಾಯಿಕ ಹಿತಸಾಧನೆಯ ಕಡೆಗೆ ಹರಿಯಬೇಕಾಗಿದ್ದ ಜನತೆಯ ಲಕ್ಷ್ಯವನ್ನು ಜಾತಿದ್ವೇಷವನ್ನೆಬ್ಬಿಸಿ ಅಡ್ಡ ಹಾದಿ ಹಿಡಿಸಿದ ಮಹಾಪರಾಧವು ಜಸ್ಟಿಸ್ ಪಾರ್ಟಿಯದು. ಕುಂದಾಪುರ ಡಿವಿಜನಿನಲ್ಲಿ ಸನಾತನಿಗಳು ಆ ಅನ್ಯಾಯವನ್ನು ಪುರಸ್ಕರಿಸುತ್ತಿರುವರೆಂಬ ಆರೋಪವು ಕೇಳಬರುತ್ತಿದೆ. ಶ್ರೀ. ಸಿ. ರಾಜಗೋಪಾಲಾಚಾರಿಯವರಂತಹ ದೇಶ ಭಕ್ತ ಬ್ರಾಹ್ಮಣ ಮುಖಂಡರು ಈ ವಿಚಿತ್ರವರ್ತನೆಯನ್ನು ಸ್ವಾಭಾವಿಕವಾಗಿ ನಂಬಲಾರದೆ ಹೋಗಿರುವರು. ಬ್ರಾಹ್ಮಣ ದ್ವೇಷವೇ ಜೀವಾಳವಾಗಿರುವ ಜಸ್ಟಿಸ್ ಪಕ್ಷವನ್ನು ಸನಾತನಿಗಳು ಎಷ್ಟಕ್ಕೂ ಪುರಸ್ಕರಿಸಲಾರರೆಂದು ಅವರ ಭಾವನೆ. ಈ ಆಶ್ಚರ್ಯಕರ ಘಟನೆಗೆ ಜಸ್ಟಿಸ್ ಪಾರ್ಟಿಯವರ ಬೆದರಿಕೆಯೂ ಒಂದು ಕಾರಣವೆಂದು ಕೇಳುತ್ತೇವೆ. ತಮಗೆ ವೋಟನ್ನೀಯದಿದ್ದರೆ ಮಠಗಳನ್ನು ಎಂಡೋಮೆಂಟ್ ಬೋರ್ಡಿನೊಳಗೆ ಸೇರಿಸಿಕೊಳ್ಳಲಾಗುವದೆಂಬ ಬೆದರಿಕೆಯನ್ನು ಜಸ್ಟಿಸ್ ಪಕ್ಷೀಯರು ಎಬ್ಬಿಸಿರುವರು. ಬರುವ ಮದ್ರಾಸ್ ಎಸೆಂಬ್ಲಿಯಲ್ಲಿ ಜಸ್ಟಿಸ್ ಪಕ್ಷವೆಂಬುದು ಅಳಿದುಳಿದ ಅವಶೇಷರೂಪದಿಂದ ಕಾಣಿಸಿಕೊಂಡರೆ ಅದೇ ದೊಡ್ಡದೆನ್ನಬೇಕು. ಎಸೆಂಬ್ಲಿಯಲ್ಲಿ ಒಂದು ಪಕ್ಷವಾಗಿ ಕಾಣಿಸಿಕೊಳ್ಳುವುದೇ ಕಷ್ಟವಾಗಿರುವವರ ಬೆದರಿಕೆ ಅಥವಾ ಆಶ್ವಾಸನೆಯೆಂದರೆ ಯಾವದೇ ವಿಧದಿಂದಲಾದರೂ ಚುನಾವಣೆಯಲ್ಲಿ ದಡ ಸೇರೋಣವೆಂಬ ಹಂಚಿಕೆ ಮಾತ್ರವೆಂಬುದು ಸುಸ್ಪಷ್ಟ; **ಕೊಂಗ್ರೆಸಿನ ಉಜ್ವಲ ಕೆಲಸಗಳೆದಿರಲ್ಲಿ ಚೇತನಗುಂದಿದ ಇದಿರಾಳಿಗಳ ಇಂತಹ ಅನುಕೂಲ ಶಾಸ್ತ್ರಗಳ ಶ್ರವಣವನ್ನು ಮಾಡುವ ಅಜ್ಞಾನಿಗಳು** ನಮ್ಮಲ್ಲಿರಲಾರರೆಂದು **ನಮ್ಮ ಭರವಸೆ.**

ವಿದೇಶ

ಸ್ಪೈಯಿನಿನ ಅಂತಃಕಲಹ

ದಂಗೆಗಾರರು ದಕ್ಷಿಣದ ಮಾಲಗಾದ ಕಡೆಗೆ ಮುಂದುವರಿಯುತ್ತಾರೆ. ಆದರೆ ಉತ್ತರದಲ್ಲಿ ಸರಕಾರ ಪಕ್ಷವು ಟೊಲೆಡೋ ಕಡೆಗೆ ಮುಂದುವರಿದಿರುತ್ತದೆ. ಮೆಡ್ರಿಡ್ ನಗರದ ಆಹಾರ ಪೂರೈಕೆಯ ಕೆಲಸವನ್ನು ಸರಕಾರವೇ ವಹಿಸಿಕೊಂಡಿದೆ.

ಇಥೋಪಿಯ (ಎಬಿಸೀನಿಯ)ದ ರಾಸ್ ಇಮ್ರುವಿನ ಮಗ ಸ್ಪೈಯಿನಿನಲ್ಲಿ.

ಪೇಸೀಸಮ್‌ನ್ನು ಎದುರಾಡಿದರೆ ಇಥೋಪಿಯವನ್ನು ರಕ್ಷಿಸಿದಂತಾಗುವುದೆಂದು ಅವನ ಹೇಳಿಕೆ. ಆತನು ಅಂತರಾಷ್ಟ್ರೀಯ ಬ್ರಿಗೇಡ್ ಎಂಬ ಪಡೆಯನ್ನು ಸೇರಿ ಸ್ಪೈಯಿನಿಗೆ ಬಂದಿದ್ದಾನೆ. ಆತನ ಹೆಸರು ಲಿಜಿಗ್‌ವೆಟ್ ಸ್ಪೈಯಿನಿನಲ್ಲಿ ಪೇಸೀಸಮಿಗೆ ಎದುರಾಗಿ ಕಾದಾಡಿಗೆದ್ದರೆ ನನ್ನ ದೇಶದ ಸ್ವಾತಂತ್ರ್ಯವನ್ನು ರಕ್ಷಿಸಿದಂತಾಯಿತೆಂದು ಆತ ಹೇಳುತ್ತಾನೆ.

ಸ್ಪೈಯಿನಿನ ದಂಗೆಗಾರರು ಸೋವ್ಯೆಟ್ (ರಷ್ಯದ) ಸ್ಟೀಮರನ್ನು ಮುಳುಗಿಸಿದರು

ಭೂಮಧ್ಯ ಸಮುದ್ರದಲ್ಲಿ ಬರುತ್ತಿದ್ದ ಸೋವಿಯಟ್ ಸ್ಟೀಮರನ್ನು ದಂಗೆಗಾರರು ಟೋರ್ಪೆಡೋ ಬಿಟ್ಟು ಮುಳುಗಿಸಿದರು. ಆದರಲ್ಲಿ ವೈರಿ ಪಕ್ಷಕ್ಕೆ ಸಹಾಯಕವಾದ ಯುದ್ಧೋಪಕರಣಗಳು ತುಂಬಿದ್ದುವೆಂದು ಅವರ ಸಂಶಯವಿತ್ತು.

ಸ್ತ್ರೀ ವಿಕ್ರಯದ ವ್ಯಾಪಾರಕ್ಕಾಗಿ ೧೧ ಜನರಿಗೆ ಶಿಕ್ಷೆ

ಒಂಭತ್ತು ಗಂಡಸರೂ ಇಬ್ಬರು ಹೆಂಗಸರೂ ಕೂಡಿ ಒಂದು ಹೊಸ ಕಂಪೆನಿಯನ್ನು ಮಾಡಿದ್ದರು. ಈ ಕಂಪೆನಿಯ ಕೆಲಸ ಬೇರೆ ಬೇರೆ ಪ್ರಾಂತ್ಯಗಳಿಂದ ವಿವಿಧೋಪಾಯಗಳಿಂದ (ಚೋರತನದಿಂದಲೂ) ಎಳೇ ಪ್ರಾಯದ ಹೆಂಗಸರನ್ನು ತಂದು ಬೇಕಾದವರಿಗೆ ಮಾರುವುದು. ಆ ಕಂಪೆನಿಯ ಕೇಂದ್ರ ಕಾರ್ಯಾಲಯ ಪಾಟ್ನಾದ ಸಮೀಪ. ಇವರಿಂದ ವಿಕ್ರೀತವಾದ ತರುಣಿಯೊಬ್ಬಳು ತನ್ನನ್ನು ಕೊಂಡುಕೊಂಡವನಿಂದ ತಪ್ಪಿಸಿಕೊಂಡು ಪೋಲೀಸರಿಗೆ ದೂರುಕೊಟ್ಟಳು. ಗುಟ್ಟು ಹೊರಬಿದ್ದಿತು. ಸೆಷನ್ ಕೋರ್ಟಿನಲ್ಲಿ ಮೊಕದ್ದಮೆ ನಡೆದು ಈ ೧೧ ಜನರಿಗೆ ತರುಂತರ ಅವಧಿಯ ಕಠಿಣ ಜೈಲು ಶಿಕ್ಷೆ ದೊರಕಿತು.

ಶಾಲಾ ವಿದ್ಯಾರ್ಥಿನಿಯರಿಗೆ ನಗ್ನ ಚಿತ್ರವನ್ನು ಕಳುಹಿಸಿದುದಕ್ಕಾಗಿ ಆರು ತಿಂಗಳ ಕಾರಾಗೃಹವಾಸ.

ಇಂಗ್ಲಾಂಡಿನ ಬಕ್ಕಿಂಗ್ಹಾಮ್ ಡಿಸ್ಟ್ರಿಕ್ಟಿನಲ್ಲಿ ಪೋಕರ್ ಎಂಬವನೊಬ್ಬ, ಹುಡುಗಿಯರ ಶಾಲೆಯ ಮೊನಿಟರಳಿಗೆ (ಕ್ಲಾಸಿನ ಶಿಸ್ತು ನೋಡಿಕೊಳ್ಳುವ ಹೊಣೆಗಾರಿಕೆಯುಳ್ಳವಳು) ಎಂದು ನಗ್ನ ಚಿತ್ರಗಳನ್ನು ಶಾಲೆಗಳಿಗೆಲ್ಲ ಕಳುಹಿಸಿಬಿಡುವ ಹುಚ್ಚು ಅವನಿಗೆ, ಸಿ ಐ ಡಿ ಯವರು ಅವನನ್ನು ಪತ್ತೆಹಿಡಿದರು. ಆರು ತಿಂಗಳ ಶಿಕ್ಷೆ ಕೊಡಿಸಿದರು.

ಮುಸೋಲಿನಿಯ ಜ್ಯೇಷ್ಠ ಪುತ್ರನಿಗೆ ವಿವಾಹ

ರೋಮಿನಲ್ಲಿ ಕಳೆದ ತಾ [illegible]ರಲ್ಲಿ ವಿಜೃಂಭಣೆಯಿಂದ ನಡೆಯಿತು. ವಧೂವರರಿಬ್ಬರೂ ಸಮಾನವಯಸ್ಕರು. ೨೨ ವರುಷ ಪ್ರಾಯ.

ಪೋಪ್ ಸಾಹೇಬರು ಗುಣಹೊಂದುತ್ತಾರೆ

ಅವರು ಪೋಪ್ ಪಟ್ಟವೇರಿದ ೧೫ನೇ ವಾರ್ಷಿಕೋತ್ಸವವನ್ನು ಜರಗಿಸುವ ಕಾರ್ಯಕಲಾಪಗಳು ನಡೆಯುತ್ತಿವೆ. ಅದು ತಾ ೧೨ನೆಯ ದಿನ ಬರುವುದು. ಪೋಪರು ತಾನು ಬೇನೆ ಬೀಳುವುದಕ್ಕಿಂತ ಮೊದಲಿದ್ದುದಕ್ಕಿಂತಲೂ ಸುಖಕರವಾಗಿದ್ದೇನೆಂದು ಅವರನ್ನು ಸಂದರ್ಶಿಸಿದವರೊಡನೆ ಹೇಳುತ್ತಾರಂತೆ.

ಅಮೇರಿಕದ ಉತ್ಪಾತ ನೆರೆ

ಯುನೈಟೆಡ್ ಸ್ಟೇಟ್ಸಿನ ಒಹಿಯೋ ನದಿಯು ಈ ಜಲಪ್ರಳಯವು ತಗ್ಗುವ ಲಕ್ಷಣವನ್ನು ತೋರಿಸುತ್ತದೆ.

ವರುಷಕ್ಕೆ ೩೫೦೦ ಪವನು ಸಂಬಳದ ಕೆಲಸಕ್ಕೆ ಉಮೇದ್ವಾರರಿಲ್ಲ

ಲೀಗ್ ಆಫ್ ನೇಶನ್ಸ್ (ಜನಾಂಗ ಶಾಂತಿ ಸ್ಥಾಪನಾ ಸಂಘ) ಎಂಬುದರ ಹೈಕಮಿಶನರ ಸ್ಥಾನಕ್ಕೆ ಅಷ್ಟು ಸಂಬಳವಿದೆ. ಆದರೆ ಯಾವ ಜನಾಂಗದ ವಕ್ರದೃಷ್ಟಿಯು ತನ್ನಮೇಲೆ ಬೀಳುವುದೋ ಎಂಬ ಬೆದರಿಕೆಯಿಂದ ಯುರೋಪ್ ಖಂಡದಲ್ಲಿ ಯಾರೂ ಆ ಸ್ಥಾನಕ್ಕೆ ಉಮೇದ್ವಾರರಾಗಿ ಬರುವುದಿಲ್ಲ.

ಸಾರ್ವಭೌಮರ ಪ್ರೈವೇಟ್ ಸೆಕ್ರೆಟರಿ ಇಂಡಿಯಕ್ಕೆ ಬಂದಿದ್ದಾರೆ

ಚಕ್ರವರ್ತಿ ಜೋರ್ಜ್‌ಪಷ್ಟರ ಪ್ರೈವೇಟ್ ಸೆಕ್ರೆಟರಿಯಾದ ಒನರೇಬಲ್ ಅಲೆಕ್ಸಾಂಡರ್ ಹಾರ್ಡಿಂಜರು ಸಪತ್ನೀಕರಾಗಿ ಇಂಡಿಯಕ್ಕೆ ಬಂದಿರುವರು. ಮುಂದೆ ಜನವರಿಯಲ್ಲಿ ಜರಗಲಿಕ್ಕಿರುವ ಡಿಲ್ಲಿ ಪಟ್ಟಾಭಿಷೇಕದ ವ್ಯವಸ್ಥೆಗಳ ವಿಚಾರನೋಡಿಕೊಳ್ಳುವುದು ಬಂದಿರುವ ಉದ್ದೇಶಗಳಲ್ಲೊಂದು.

ಚಕ್ರವರ್ತಿಗಳಾದ ಆರನೇ ಜೋರ್ಜರಿಗೆ ಎಡಗೈ ಮೇಲು

ಈ ಎಡಗೈ ಮೇಲಿನ (left handedness) ವಿಷಯವಾಗಿ ಅಮೇರಿಕದ ಮನಶ್ಶಾಸ್ತ್ರಜ್ಞರು ತರ್ಕ ಮಾಡತೊಡಗಿದ್ದಾರೆ. ಇದರ ಕಾರಣವು ಅಭ್ಯಾಸಬಲವೋ ಅಥವಾ ಹುಟ್ಟುಗುಣವೋ ಎಂಬುದು ಅವರ ವಿಚಾರಾಂಶ.

ಸಂಯುಕ್ತ ಪ್ರಾಂತದಲ್ಲಿ
ಕಾಂಗ್ರೆಸ್ ಉಮೇದ್ವಾರಿಗಳ ಪ್ರಚಂಡ ವಿಜಯ

ಸಂಯುಕ್ತ ಪ್ರಾಂತದ ಚುನಾವಣೆಯಲ್ಲಿ ಸರಕಾರವೂ ದೊಡ್ಡ ಜಮೀನುದಾರರೂ ಕಾಂಗ್ರೆಸಿಗೆ ಪ್ರಬಲ ವಿರೋಧ ಹೂಡಿ ಹಲವು ಆತಂಕಗಳನ್ನೊಡ್ಡಿದರೂ, 133 ಮಂದಿ ಕಾಂಗ್ರೆಸ್ ಉಮೇದ್ವಾರರುಗಳು ಇಷ್ಟರಲ್ಲೇ ಆರಿಸಿಬಂದಿರುವರೆಂದು ಪಂಡಿತ ಜವಾಹರಲಾಲರಿಗೆ ತಂತಿ ಬಂದಿರುವದೆಂದು ತಿಳಿದು ಬರುತ್ತದೆ. ಇದರಿಂದ ಕಾಂಗ್ರೆಸಿಗೆ ಅಲ್ಲಿ ಪ್ರಬಲ ಬಹುಮತವು ದೊರೆತಂತಾಗುವುದು.

ಸ್ವದೇಶ

ಅನಂತಶಯನದ ಪವಿತ್ರ ತಿಮಿಂಗಿಲ

ಹಿಂದೂ ಸಾಗರದಲ್ಲಿ ಸಾಮಾನ್ಯವಾಗಿ ಸಿಗದಿರುವ ದೊಡ್ಡ ತಿಮಿಂಗಿಲವದು. [illegible] ಅಡಿ ಉದ್ದ ೮ ಅಡಿ ಅಗಲವಿತ್ತು. ಮೃತವಾದ ಈ ತಿಮಿಂಗಿಲವನ್ನು ಸಮುದ್ರವು ಕರೆಹಾಕಿತ್ತು. ಎಲುಬಿನಸ್ಥಿಯನ್ನು ಅನಂತಶಯನದ ವಸ್ತು ಪ್ರದರ್ಶನಾಲಯದಲ್ಲಿ ಇಡುವ ವ್ಯವಸ್ಥೆ ಮಾಡಲಾಗಿದೆ.

ಬಳ್ಳಾರಿಯಲ್ಲಿ ಕ್ಲೀನರ ಮುಷ್ಕರ

ಬಳ್ಳಾರಿ ಮ್ಯುನ್ಸಿಪಾಲಿಟಿಯು ತಮಗೆ ಲೈಸನ್ಸ್ ಫೀಸು ಹೊರಿಸಿತೆಂದು ಅವರ ಮುಷ್ಕರ. ಸುಮಾರು ೨೦೦ ಮಂದಿ ಕಲೆಕ್ಟರನ್ನು ಕಂಡು ತಮ್ಮ ದೂರನ್ನು ಹೇಳಿಕೊಂಡರು. ಮೂರು ತಿಂಗಳವರೆಗಾದರೂ ಈ ನಿರ್ಣಯವನ್ನು ಮ್ಯುನ್ಸಿಪಾಲಿಟಿಯು ರದ್ದು ಮಾಡೀತು ಎಂದು ಕಲೆಕ್ಟರರು ಆಶೆ ಹೇಳಿದುದರಿಂದ ಮುಷ್ಕರವು ನಿಲ್ಲುವ ಸಂಭವವಿದೆ.

ತಿರುವಾಂಕೂರು ಮಹಾರಾಜರು ಮದ್ರಾಸಿನಲ್ಲಿ

ಮಹಾರಾಜರು ತಾ ೭ರಲ್ಲಿ ಎಗ್ಮೋರ್ ಸ್ಟೇಶನಿನಲ್ಲಿ ದಿವಾನ್ ಮತ್ತು ಜೂನಿಯರ್ ಮಹಾರಾಣಿ ಸಮೇತರಾಗಿ ಬಂದಿಳಿದಾಗಲೇ ಪೌರಜನರ ಉತ್ಸಾಹಪೂರ್ವಕ ಸುಸ್ವಾಗತ. ಹರಿಜನ ದೇವಸ್ಥಾನ ಪ್ರವೇಶದ ಐತಿಹಾಸಿಕ ಮಹತ್ವದ ಆಜ್ಞೆಯನ್ನಿತ್ತ ಬಳಿಕ ಇದೀಗ ಮೊದಲನೆಯ ಬಾರಿ ಮದ್ರಾಸಿಗೆ ಅವರು ಚಿತ್ತೈಸಿದುದು. ಆದುದರಿಂದ ಈ ಸಲದ ಸಂದರ್ಶನದಲ್ಲಿ ನಗರವು ಹೆಚ್ಚಿನ ಉತ್ಸಾಹಶಾಲಿಯಾದ. ತ್ರಿವೇಂದ್ರಮ್ ಎಕ್ಸ್‌ಪ್ರೆಸ್ ಬರುವುದೇ ಒಂದು ಘಂಟೆ ತಡವಾಗಿತ್ತು. ಕಾರಣ ದಾರಿಯುದ್ದಕ್ಕೂ ಸುಸ್ವಾಗತವನ್ನೀವ ಮತ್ತು ದರ್ಶನ ತೆಗೆದುಕೊಳ್ಳುವ ಅಲ್ಲಲ್ಲಿ ಮತ್ತು ಊರವರ ಕಾರ್ಯಕಲಾಪಗಳ ದಾಳಿಯೇ ಇದ್ದಿತಂತೆ. ಮದ್ರಾಸಿನಲ್ಲಿಳಿದಾಗ ಪುಷ್ಪಹಾರಗಳ ಸಮರ್ಪಣೆಯಲ್ಲದೆ ಪಂಡಿತ ಪರಿಷತ್ತಿನ ಸದಸ್ಯರು ಪೂರ್ಣಕುಂಭ ಸಮರ್ಪಣೆಯಿಂದ ಕೃತಾರ್ಥರಾದರ್. ಅಲ್ಲಿಂದ ಮಹಾ ಜನರು ಅಡ್ಯಾರದ ತಮ್ಮ ಅರಮನೆಗೆ ಪರಿವಾರ ಸಮೇತ ತೆರಳಿದರು. ದಾರಿಯುದ್ದಕ್ಕೂ ಅಲ್ಲಲ್ಲಿ ನಗರ ಶೃಂಗಾರವಾಗಿತ್ತು. ಮಹಾರಾಜರು ಹದಿನೈದು ದಿವಸ ಮದ್ರಾಸಿನಲ್ಲಿರುವರಂತೆ. ಗವರ್ನರ್ ದೊರೆಗಳು ೧೫ನೇ ತಾರೀಕಿನ ದಿನ ಗಾರ್ಡನ್ ಪಾರ್ಟಿಯಿಂದ ಸತ್ಕರಿಸಲಿಕ್ಕಿರುವರು. ಇತರ ಕೆಲವು ಸನ್ಮಾನ ಕೂಟ ಸ್ವಾಗತ ಭಾಷಣೇತ್ಯಾದಿ ಕಾರ್ಯಕಲಾಪಗಳೂ ಇವೆಯಂತೆ.

ಮೇದ್ರಿದಿನ ಯುದ್ಧ

ಇದೀಗ ಸ್ಪೈಯಿನಿನ ಬೇರೆ ಬೇರೆ ಕಡೆಗಳಲ್ಲಿ ಯುದ್ಧವು ಜೋರಾಗಿ ಪ್ರಾರಂಭವಾಗಿದೆ. ಕಾರಡೋಬಾದ ೫೦ ಮೈಲು ದೂರದ ಪ್ರದೇಶದಲ್ಲಿ ಬಿರುಸಾದ ಕದನವು ನಡೆಯುವುದೆಂಬ ನಿರೀಕ್ಷೆಯಿದೆ. ದಂಗೆಗಾರರ ಪ್ರಾಮುಖ್ಯ ಸ್ಥಳವಾದ ಕೊರಡೋವಾದ ಸುತ್ತುಮುತ್ತಲಿನ ಆರು ಕಡೆಗಳಲ್ಲಿ ಭಯಂಕರ ಕದನವು ನಡೆಯುತ್ತಾ ಇದೆ. ಒರಿಯಾಲ್ ಬಾಟೆಟ್ ಎಂಬಲ್ಲಿ ದಂಗೆಗಾರರ ಶಿಬಿರಕ್ಕೆ ಸರಕಾರವು ಬೆಂಕಿ ಕೊಟ್ಟಿರುವುದು. ವಿಗೋ ಎಂಬಲ್ಲಿ ಸರಕಾರವು ಬೊಂಬುಗಳನ್ನು ಹಾಕುತ್ತಲೇ ಇದೆ. ಮೆಡ್ರಿದನ ಟ್ರೋಟ್ಸ್ಕಿಯವರ ಕಡೆಯು ಬ್ರೋಡ್ ಕಾಸ್ಟಿಂಗ್ ಸ್ಟೇಶನನ್ನು ಜಪ್ತಿಮಾಡಿ ಅದರ ವಾರ್ತಾಪತ್ರಿಕೆಯ ಪ್ರಕಟಣೆಯನ್ನು ನಿಲ್ಲಿಸುವರು. ಕೆಟ್ಟ ಹವೆಯ ನಿಮಿತ್ತ ವಿಳಂಬಿಸಲ್ಪಟ್ಟಿದ್ದ ಅವಿಲಾ ಪಟ್ಟಣದ ಮೇಲಿನ ಧಾಳಿಯನ್ನು ದಂಗೆಗಾರರು ತಾ ೬ರಲ್ಲಿ ಪ್ರಾರಂಭಿಸಿರುವರು. ಭಯಂಕರ ಕದನವು ನಡೆಯುತ್ತಿವೆ. ದಂಗೆಗಾರರು ಮೇದ್ರಿದಿನ ದಕ್ಷಿಣ ಭಾಗದಲ್ಲಿ ಮುಂದೊತ್ತುತ್ತಿರುವರು. ಮೇದ್ರಿದಿನ ಮೇಲೆ ನಡೆದ ಧಾಳಿಯು ಹವೆಯ ಅನಾನುಕೂಲತೆಯಿಂದಾಗಿ ಜಯಶೀಲವಾಗಿರುವುದಿಲ್ಲ.

ಲಂಡನಿನ ಕೆಲವು ಪ್ರಮುಖ ಪುಸ್ತಕವ್ಯಾಪಾರಿಗಳು, ಎಡ್ವರ್ಡ್ ಪ್ರಕರಣದ ಎಲ್ಲ ಪುಸ್ತಕಗಳನ್ನೂ ಬಹಿಷ್ಕರಿಸಲು ನಿರ್ಧರಿಸಿರುವರು.

THE BOMBAY LIFE ASSURANCE Co., LTD.

ESTD 1908

Church Gate Street, Fort - - BOMBAY.

SPECIAL FEATURES.

1. Rebate on yearly payment of policies.
2. Rebate for larger assurances.
3. Accident Risk covered on small extra premiums
4. Attractive Bonuses.

It pays you to represent this Company.
Wanted Agents in unrepresented parts.

Apply to:—

KOCHIKAR BROTHERS,

Madras Branch Secretaries

BRANCHES AT:		
P. B 337 Mount Road, Madras	Visveswarapuram Circle, Bangalore City	Soumyalayam Puthiyara Calicut
Car Street, Mangalore	Udipi, S India	Charni Road, Bombay No 4.

EVIDENCE OF SECURITY & STABILITY

FIGURES THAT SPEAK FOR THEMSELVES

TOTAL ASSETS **Rs. 80,66,600**

Summary of 1935 Accounts

Total Assets Over	Rs. 80,00 000
Life Funds Over	Rs 68,00,000
Premium Income Over	Rs 22,54.000
Interest Income	Rs 3,16,000
Claims Paid	Rs 5,75,000
Total Claims paid Over	Rs. 38,50,000
Total Business in Force Over	Rs 4,42,51,200

TOTAL BUSINESS IN FORCE **Rs. 4,42,51,200**

ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು

೧೯೩೬ನೇ ಇಸವಿಯ ಬೇಲೆನ್ಸ್ ಶೀಟಿನ ಪರಿಶೀಲನೆ.

ಮೇಲ್ಕಂಡ ಬ್ಯಾಂಕಿನ ಗತವರುಷದ ವರದಿಯನ್ನು ಸ್ವೀಕರಿಸಲು ತುಂಬಾ ಆನಂದವೆನಿಸುತ್ತದೆ. ವರದಿಯಲ್ಲಿ ನಮೂದಿಸಿದಂತೆ, ಗತವರ್ಷದ ಕಾರ್ಯಭಾರವು ತುಂಬಾ ಯಶಸ್ವಿಯಾಗಿ ಪರಿಣಮಿಸಿ ಬ್ಯಾಂಕಿನ ಬುನಾದಿಯನ್ನು ದ್ವಿಗುಣಿತವಾಗಿ ಗಟ್ಟಿಮುಟ್ಟಾಗಿರಿಸಲು ಕಾರಣೀಭೂತರಾದ ಚಾಲಕರ ಕುಶಲತೆಯನ್ನು ಈ ಸಂದರ್ಭದಲ್ಲಿ ಕೊಂಡಾಡಲೇ ಬೇಕು. ವರದಿಯ ವರ್ಷದಲ್ಲಿ ಉತ್ತರ ಮತ್ತು ದಕ್ಷಿಣ ಕನ್ನಡದ, ಮೈಸೂರು ಮಲಬಾರುಗಳ ಪ್ರಮುಖ್ಯ ಕೇಂದ್ರಗಳಲ್ಲಿ ಒಂಭತ್ತು ಹೊಸ ಶಾಖೆಗಳನ್ನು ತೆರೆದು ಇನ್ನೂ ಜನಾದರಣೀಯವಾದುದು ಸಂತೋಷಕರ ಹಾಗೂ ಎತ್ತಿ ಹೇಳತಕ್ಕದು.

ಈ ಬ್ಯಾಂಕಿನ ಸರ್ವತೋಮುಖವಾದ ಅಭಿವೃದ್ಧಿಯು ಈ ಕೆಳಗಣ ಅಂಕೆ ಸಂಖೆಗಳಿಂದ ಸ್ವಯಂವೇದ್ಯವಾಗುವುದು

	ಐನ್ ಮುನಾಫೆ	ಒಟ್ಟು ಠೇವಣಾತಿ
೧೯೩೪	೬೦,೧೪೯	೫೮,೬೨,೪೮೬
೧೯೩೫	೬೫,೧೩೩	೬೧,೯೨,೯೭೩
೧೯೩೬	೬೬,೪೨೪	೭೯,೬೪,೪೦೩
ನಗದಿ	೯,೭೪,೮೧೦	೧೧,೧೩,೪೧೮
	೧೩,೮೭,೦೨೮	

	ವಿನಿಯೋಗದ ಮೊತ್ತ	ವ್ಯವಹಾರದ ಮೂಲಧನ
೧೯೩೫	೧೧೫೭೪೬೦	೭೩೪೯೨೯
೧೯೩೬	೧೧೭೦೬೫೦	೭೩೪೦೮೨೨
೧೯೩೬	೨೦೬೩೩೮೮	೯೭೨೫೫೫೦

ಇನ್ನು ಮುಂದೆಯೂ ಈ ತೆರನಾದ ಅಭಿವೃದ್ಧಿಯಿಂದ ಜಿಲ್ಲೆಯ ಆದರ್ಶ ಸಂಸ್ಥೆಯಾಗಿ ಯಶಸ್ವಿಯನ್ನು ಪಡೆಯಲೆಂದು ಹಾರೈಸುತ್ತೇವೆ.

ಪುಟ ೯ರಿಂದ

ದರಿಂದ ಎಲ್ಲರೂ ವಾಹನಗಳಿಗೆ ಕಾದುಕೊಂಡಿರದೆ ತಂಡತಂಡವಾಗಿ ಕಾಲ್ನಡೆಯಿಂದಲೇ ಪೋಲಿಂಗ್ ಸ್ಟೇಶನುಗಳಿಗೆ ಹೋಗಿ ಕಾಂಗ್ರೆಸ್ ಉಮೇದ್ವಾರಿಗಳಿಗೆ ಮತವಿತ್ತು ದಕ್ಷಿಣ ಕನ್ನಡದ ಕಾಂಗ್ರೆಸಿನ ಕೀರ್ತಿ ಧ್ವಜವನ್ನೆತ್ತಿ ಹಿಡಿಯಬೇಕು. ಪಂಡಿತರು ಭಾಷಣ ಮುಗಿಸಿ ಹೂಮಾಲೆಗಳಿಂದ ಅಲಂಕರಿಸಲ್ಪಟ್ಟು ಪಡುಪೇಟೆಯ ಮಾರ್ಗವಾಗಿ ಶ್ರೀಕೃಷ್ಣ ದೇವಸ್ಥಾನಕ್ಕೆ ಹೋಗಿ ಕೋಳದಪೇಟೆ ಮಾರ್ಗವಾಗಿ ಬಂದು ಅನಂತರ ಕುಂದಾಪುರಕ್ಕೆ ತೆರಳಿದರು. ಕಲ್ಯಾಣಪುರದ ಜನರು ತಳಿರು ತೋರಣ ಕಟ್ಟಿ ಪಂಡಿತರನ್ನು ಸ್ವಾಗತೀಕರಿಸಿದರು. ಕುಂದಾಪುರದಲ್ಲಿ ಪಂಡಿತರ ಸ್ವಾಗತಕ್ಕಾಗಿ ದೊಡ್ಡ ಚಪ್ಪರ ಹಾಕಲ್ಪಟ್ಟಿದ್ದಿತು. ಪಂಡಿತರು ಬೈಂದೂರು ಮಾರ್ಗವಾಗಿ ಉತ್ತರ ಕನ್ನಡದಲ್ಲಿ ಸಂಚರಿಸಿ ಮಹಾರಾಷ್ಟ್ರಕ್ಕೆ ಹೋಗುವರು.

ವಿದೇಶ

ನಿಲ್ಲುವ ಪುಸ್ತಕಗಳ ಕುರಿತು ಗಟ್ಟಿಯಾಗಿ ಉಚ್ಛರಿಸುವಂತೆ, ಮಲ್ಬೋರ್ನಿನ ಟ್ರಾಮುಗಳಲ್ಲಿ ಲೌಡ್ ಸ್ಪೀಕರುಗಳನ್ನು ಇರಿಸಲಾಗಿದೆ.

ಬ್ರಿಟಿಷ್ ಜನಾಂಗದ ಆರೋಗ್ಯಾಭಿವೃದ್ಧಿಗಾಗಿ ಎಲ್ಲರಿಗೂ ಶಾರೀರಿಕ ಶಿಕ್ಷಣವು ದೊರೆಯುವಂತೆ ಬ್ರಿಟನಿನಲ್ಲಿ ಏರ್ಪಾಡು ನಡೆದಿದೆ.

ಚುನಾವಣೆಯ ಜಯಾಪಜಯಗಳ ಪರಿಶೀಲನೆ

(ಒಬ್ಬ ಬಾತ್ಮೀದಾರರಿಂದ)

ಮದ್ರಾಸ್ ಎಸೆಂಬ್ಲಿ ಮತ್ತು ಕೌನ್ಸಿಲಿಗೆ ಚುನಾವಣೆಯ ದಿನವು ಸಮೀಪಿಸುತ್ತಾ ಬಂತು. ಚುನಾವಣೆಯ ಜಯಾಪಜಯಗಳ ಕುರಿತು ಭವಿಷ್ಯ ಹೇಳುವುದು ತಪ್ಪಾದರೂ ಪರಿಸ್ಥಿತಿಗಳನ್ನು ಚೆನ್ನಾಗಿ ಪರಿಶೀಲಿಸಿಕೊಂಡು ಜನತೆಯನ್ನು ಸರಿಯಾದ ದಾರಿ ಹಿಡಿಸುವಂತೆ ಅಭಿಪ್ರಾಯವನ್ನು ವ್ಯಕ್ತಪಡಿಸುವುದರಲ್ಲಿ ಅನುಚಿತವೇನೂ ಇರಲಾರನು. ಒರಿಸ್ಸ ಮತ್ತು ಬಿಹಾರು ಪ್ರಾಂತ್ಯಗಳಲ್ಲಿ ಕಾಂಗ್ರೆಸ್ ಉಮೇದ್ವಾರಿಗಳು ಪ್ರಬಲ ಬಹುಮತ ಪಡೆದು ಇಡೀ ದೇಶಕ್ಕೊಂದು ಮಾದರಿ ಹಾಕಿಕೊಟ್ಟಿರುವರು. ಆದರೆ ಸಂಯುಕ್ತ ಪ್ರಾಂತ್ಯದಲ್ಲಿ ಕಾಂಗ್ರೆಸಿಗೆ ಇಷ್ಟೊಂದು ಪ್ರಬಲ ವಿಜಯದೊರೆಯುವುದೆಂದು ಯಾರೂ ನೆನಸಲಿಲ್ಲ. ಯಾಕೆಂದರೆ ಅಲ್ಲಿ ಬಹಳ ಶ್ರೀಮಂತರೂ ಹಲವು ವರ್ಷಗಳಿಂದ ಅಧಿಕಾರದಲ್ಲಿದ್ದವರೂ ಆದ ಜಮೀನುದಾರರು ಕಾಂಗ್ರೆಸಿನ ಪ್ರಬಲ ವಿರೋಧಿಗಳಾಗಿ ಅತ್ಯಂತ ಸಂಘಟನೆಯಿಂದ ರಣರಂಗಕ್ಕಿಳಿದಿದ್ದರು. ಅವರಿಗೆ ಸರಕಾರವು ಅಪ್ರತ್ಯಕ್ಷರೂಪದಲ್ಲಿ ಬೇಕಾದ ಸಹಾಯ ವಿತ್ತಿರವುದೆಂದೇ ಹೇಳಬಹುದು. ಆದರೂ ಅಲ್ಲಿ ಕಾಂಗ್ರೆಸ್ ಉಮೇದ್ವಾರಿಗಳು ಪ್ರಬಲ ಬಹುಪಕ್ಷದಿಂದ ಆರಿಸಿ ಬಂದಿರುವುದು ಮಹದಾನಂದದ ಸಂಗತಿಯು. ಮಧ್ಯ ಪ್ರಾಂತ್ಯದಲ್ಲಿಯೂ ಕಾಂಗ್ರೆಸಿಗೆ ಬಹುಪಕ್ಷ ದೊರಯಬಹುದೆಂದು ನಿರೀಕ್ಷಿಸಲಾಗಿದೆ. ಮುಸಲ್ಮಾನರ ಪ್ರಾಂತ್ಯವಾದ ವಾಯವ್ಯ ಗಡಿನಾಡಿನಲ್ಲಿಯೂ ಹೆಚ್ಚಿನ ಕಾಂಗ್ರೆಸ್ ಪಕ್ಷೀಯರು ಆರಿಸಿ ಬರುವರೆಂದು ನಂಬಲಾಗಿದೆ. ಬೊಂಬಾಯಿ ಪ್ರಾಂತ್ಯದಲ್ಲಿಯೂ ಇದೇ ರೀತಿಯಾಗಬಹುದೆಂಬ ಭರವಸೆಯಿದೆ. ಪಂಜಾಬು ಮತ್ತು ಬಂಗಾಳದಲ್ಲಿ ಕಾಂಗ್ರೆಸಿನವರು ಬಹುಪಕ್ಷೀಯರಾಗಿ ಆರಿಸಿ ಬರದಿದ್ದರೂ, ಅಲ್ಲಿಯ ಸ್ಥಿತಿಗತಿಗಳ ದೃಷ್ಟಿಯಿಂದ ಕಾಂಗ್ರೆಸ್ ಉಮೇದ್ವಾರಿಗಳು ಅಲ್ಲಿಯೂ ಸಾಕಷ್ಟು ಮಂದಿ ಆರಿಸಿ ಬಂದಿರುವರೆಂದು ಹೇಳಬಹುದು.

ಕಳೆದ ಸಲದ ಡಿಲ್ಲಿ ಎಸೆಂಬ್ಲಿ ಸಭೆಯ ಚುನಾವಣೆಯ ಸಂದರ್ಭದಲ್ಲಿ, ಮದ್ರಾಸ್ ಪ್ರಾಂತ್ಯದ ಚುನಾವಣೆಯನ್ನು ಮೊದಲಾಗಿ ನಡಿಸಿದರೆ, ಅಲ್ಲಿ ಕಾಂಗ್ರೆಸಿಗೆ ಅಪಜಯವಾಗಿ ಇಡೀ ದೇಶವು ಅದರಿಂದ ನಿರುತ್ಸಾಹಗೊಳ್ಳುವಂತಾಗುತ್ತಿತ್ತೆಂದು ಪ್ರಥಮ ಮರ್ಯಾದೆಯು ಮದ್ರಾಸಿಗೆ ಕೊಡಲ್ಪಟ್ಟಿತ್ತು. ಆಗ ಮದ್ರಾಸ್ ಕಾಂಗ್ರೆಸ್ ಉಮೇದ್ವಾರಿಗಳನ್ನೇ ಆರಿಸಿ, ಇಡೀ ದೇಶಕ್ಕೆ ಉಜ್ವಲ ಮಾದರಿ ಹಾಕಿಕೊಟ್ಟು ಸರಕಾರವನ್ನು ತೀವ್ರ ನಿರಾಶೆಯಲ್ಲಿ ಕೆಡಹಿತೆನ್ನಬಹುದು. ಇದರಿಂದ ಪಾಠ ಕಲಿತ ಸರಕಾರವು ಈ ಸಲ ಉತ್ತರದ ಚುನಾವಣೆಗಳನ್ನು ಮುಂದಾಗಿ ನಡಿಸಿರುವುದೆಂದು ಹೇಳಬಹುದು. ಆದರೂ ಪರಿಣಾಮವು ಅದು ನೆನಸಿದಂತೆ ಆಗಲಿಲ್ಲ. ಇಂದೀಗ ಮದ್ರಾಸಿನ ಪರೀಕ್ಷೆ ಸಮಯವು ಸನ್ನಿಹಿತವಾಗಿರುವುದು. ಆಂಧ್ರ, ತಮಿಳುನಾಡು ಮತ್ತು ಕೇರಳದ ಪರಿಸ್ಥಿತಿ ನೋಡಿದರೆ ಈ ಸಲ ಜಸ್ಟಿಸ್ ಪಕ್ಷದ ಅಪಜಯ ನಿಶ್ಚಯವೆಂದು ಧೈರ್ಯದಿಂದ ಹೇಳಬಹುದು. ಅವರಿನ್ನು ಅಧಿಕಾರಕ್ಕೆ ಬರುವಷ್ಟರ ಬಹುಪಕ್ಷವು ಅವರಿಗೆ ಎಂದಿಗೂ ದೊರೆಯಲಾರದು. ಆದುದರಿಂದ ಅವರನ್ನು ಅಧಿಕಾರಕ್ಕೆ ಬಂದಾರೆಂಬ ಭೀತಿಗೆ ಒಂದಿಷ್ಟು ಆಸ್ಪದವಿಲ್ಲ. ಜಸ್ಟಿಸ್ ಪಕ್ಷಕ್ಕೆ ವೋಟು ಕೊಡುವುದೆಂದರೆ ಜೈಸುವ ಕುದುರೆಯನ್ನು ಬಿಟ್ಟು ಅಪಜಯ ದೊರೆಯುವ ಕುದುರೆಯಮೇಲೆ ಥರ ಕಟ್ಟಿದಂತೆಯೇ ಸರಿಯೆಂದು ಹೇಳಬಹುದು. ತಮಿಳುನಾಡಿನಲ್ಲಿ ಕಾಂಗ್ರೆಸಿಗೆ ಹೆಚ್ಚಿನ ವಿಜಯ ದೊರೆಯಬಹುದು. ಆಂಧ್ರ ಮತ್ತು ಕೇರಳದಲ್ಲಿ ಕಾಂಗ್ರೆಸ್ ಉಮೇದ್ವಾರಿಗಳು ಬಹುಮಂದಿ ಆರಿಸಿ ಬರಬಹುದು. ಅಂತೂ ಕಾಂಗ್ರೆಸ್ ಪಕ್ಷವು ಬಹುಮತವಾಗಿ ಆರಿಸಿಬರುವುದೆಂಬುದರಲ್ಲಿ ಸಂದೇಹವಿಲ್ಲ. ಅಂದಮೇಲೆ ಮುಂದೆ ಅಧಿಕಾರಕ್ಕೆ ಬರುವ ಪಕ್ಷವೆಂದರೆ ಕಾಂಗ್ರೆಸ್.

ದಕ್ಷಿಣ ಕನ್ನಡದ ಪರಿಸ್ಥಿತಿ

ಕೌನ್ಸಿಲ್ ಚುನಾವಣೆಯಲ್ಲಿ ಶ್ರೀ ಧರ್ಮಸ್ಥಳ ಮಂಜಯ್ಯ ಹೆಗ್ಗಡೆಯರಿಗೆ ವಿಜಯವು ಬಹುತೇಕ ನಿಶ್ಚಯವೆಂಬಂತೆ ತೋರುತ್ತದೆ. ಅವರ ಇದಿರಾಳಿಗಳೂ ಇದನ್ನು ಮನಗಂಡಿರಬೇಕೆಂದು ತೋರುತ್ತದೆ. ಇವರು ಕಾಂಗ್ರೆಸಿನ ಕುರಿತು ತುಂಬಾ ಸಹಾನುಭೂತಿಯುಳ್ಳವರು. ದೇಶ ಹಿತಕಾಂಕ್ಷಿಯು ಮತ್ತು ಜನಪ್ರಿಯರು, ಪುತ್ತೂರು ಡಿವಿಜನಿನಲ್ಲಿ ಕಾಂಗ್ರೆಸ್ ಉಮೇದ್ವಾರಿಗಳಾದ ಶ್ರೀ ಕೆ. ಆರ್. ಕಾರಂತರು ಆರಿಸಿಬರುವುದರಲ್ಲಿ ಸಂದೇಹವಿರುವಂತೆ ತೋರುವುದಿಲ್ಲ. ಶ್ರೀ ಕೆ. ಆರ್. ಕಾರಂತರಂತ ನಿರ್ಭೀತ ಜನಹಿತ ಸಾಧಕರು ನಮ್ಮ ಜಿಲ್ಲೆಯಲ್ಲೇ ಅಪರೂಪ. ಅವರು ಆರಿಸಿಬರುವುದು ದಕ್ಷಿಣ ಕನ್ನಡಕ್ಕೊಂದು ಹೆಗ್ಗಳಿಕೆಯೇ ಸರಿ. ಮಂಗಳೂರು ಡಿವಿಜನಿನಲ್ಲಿ ಕಾಂಗ್ರೆಸ್ ಉಮೇದ್ವಾರಿಯಾದ ಶ್ರೀ ವೆಂಕಟ್ರಾಯ ಬಾಳಿಗರು, ಜಸ್ಟಿಸ್ ಪಕ್ಷದ ಅತಿ ದೀರ್ಘಸಮಯದ ಸಿದ್ಧತೆಯ ದೃಢವಿಶ್ವಾಸದ ಅಡಿಗಲ್ಲನ್ನೇ ಅಲುಗಿಸಿ ತಳಮಳಗೊಳಿಸಿರುವಂತಿದೆ. ನನಗೆ ತಿಳಿದಮಟ್ಟಿಗೆ ಅವರು ಆರಿಸಿಬರುವರೆಂದು ಹೇಳಬಹುದು, ಕ್ರೈಸ್ತರ ಪರವಾದ ಕಾಂಗ್ರೆಸ್ ಉಮೇದ್ವಾರಿಯಾದ ಪ್ರೊಫೆಸರ್ ವಾರ್ಕಿಯವರ ಚಾನ್ಸು ದಿನೇ ದಿನೇ ಒಳ್ಳೆದಾಗುತ್ತಿದ್ದು ಅವರ ಪ್ರತಿಕಕ್ಷಿ ಮಿ. ಶ್ರೇಷ್ಠರ ಕೋಟೆಯಾದ ಮಂಗಳೂರನ್ನೇ ಅವರು ಮುರಿದು ಹಾಕಿರುವರೆಂದು ತಿಳಿದುಬರುತ್ತದೆ. ತನ್ನ ಊರಾದ ಮಲಬಾರಿನಲ್ಲಂತೂ ಅವರಿಗೆ ಪ್ರಬಲ ಬಹುಪಕ್ಷ ನಿಶ್ಚಯ. ಆದ್ದರಿಂದ ಮಿ. ವಾರ್ಕಿಯವರೂ ಆರಿಸಿಬರಬಹುದು. ಕುಂದಾಪುರ ಡಿವಿಜನಿನ ಕಾಂಗ್ರೆಸ್ ಉಮೇದ್ವಾರಿಗಳಾದ ಶ್ರೀ ಎ. ಬಿ. ಶೆಟ್ಟಿ ವಿಜಯದ ಕುರಿತು ಭೀತಿಗೊಳ್ಳಲು ಆಸ್ಪದವಿರಲಾರದ ಪರಿಸ್ಥಿತಿಯುಂಟಾಗಿದೆ. ಅವರ ಪ್ರತಿಕಕ್ಷಿಯು ತನ್ನ ಕೋಟೆಯೆಂದೆನಿಸಿದ್ದ ಕುಂದಾಪುರ ತಾಲೂಕಿನಲ್ಲೇ ಶ್ರೀ ಎ. ಬಿ. ಶೆಟ್ರಿ ಚಾನ್ಸು ಬಹಳ ಒಳ್ಳೇದಾಗುತ್ತಾ ನಡೆದಿದೆ.

THE

Guardian of India

Insurance Company, Ltd.,

Head Office: MADRAS] **[Branch: MANGALORE**

Capital— Indian.

Management—Entirely Indian & Efficient.

LOW PREMIUMS.

CONDITIONS LIBERAL & EQUITABLE.

Schemes— Most novel, suited to all sorts and conditions and attractive.

ASSURED SECURTY

Life is uncertain, Savings are uncertain, Insurance is the only remedy for this uncertainty.

Let the Guardian Guard your future.

Insure your life with this popular and Progressive and Economical Indian Life Office—Do not delay

Applications are invited from respectable gentlemen and ladies to represent the Company in S Kanara, N. Kanara and Coorg on commission or salary or both.

Notice: All the policy holders & agents are informed that all future dealings must be made with The Branch Secretary, The Guardian of India Insurance Co, Ltd, Mangalore Branch.

E. A. PAIS, B. Sc., ***Branch Secretary,***

The Guardian of India Insurance Co., Limited,

MANGALORE BRANCH.

ಶ್ರೀ. ಎ. ಬಿ. ಶೆಟ್ಟರೂ ಬಿರುದುಬಾವಲಿಗಳೂ.

ಕಲೆಕ್ಟರ್ ಮಿ. ಗೋನ್ ಸಾಹೇಬರ ಪತ್ರ.

ಶ್ರೀ. ಎ. ಬಿ. ಶೆಟ್ಟರ 'ಕೈಸರ್-ಈ-ಹಿಂದ್' ತ್ಯಾಗದ ಕುರಿತು ತರ್ಕಿಸುವದನ್ನು ಕೆಲವರು ಇನ್ನೂ ಬಿಟ್ಟಿಲ್ಲ. ಕುಂದಾಪುರ ಡಿವಿಜನಿನ ಕೊಂಗ್ರೆಸ್ ಉಮೇದ್ವಾರಿಯು ಈ ತ್ಯಾಗದ ಮಹತ್ವವನ್ನು ಕಡಿಮೆ ಮಾಡಿ ತೋರಿಸುವ ಕುತಂತ್ರವು ಕೆಲವರಿಂದ ನಡೆಸಲ್ಪಡುತ್ತಿರುವುದರಿಂದ ೧೯೩೫ರಲ್ಲಿ ದ. ಕ. ಜಿಲ್ಲೆಯ ಕಲೆಕ್ಟರರಾಗಿದ್ದ ಮಿ. ಗೋನ್ ಸಾಹೇಬರು ಶ್ರೀ. ಶೆಟ್ಟರಿಗೆ ಬರೆದಿದ್ದ ಪತ್ರವೊಂದನ್ನು ಕೆಳಗಡೆ ಕೊಟ್ಟಿದ್ದೇವೆ. ಶ್ರೀ. ಎ. ಬಿ. ಶೆಟ್ಟರು ಕಲೆಕ್ಟರರು ಪತ್ರ ಮೂಲಕ ಸೂಚಿಸಿದ ಬಿರುದನ್ನು ನಿರಾಕರಿಸಿದ್ದರು.

ಸಂ. ಸ.

MANGALORE,
25th August, 1935

Dear Mr. Balakrishna Shetty,

Please let me know what are your feelings in the matter of having your name put up to His Excellency the Governor for a title. In vind of the fact that you almost completed three years as President of the District Board, in addition to your other activities, I understand that a recommendation is likely to be considered favourably but in view of the refusal of the title by Dr Vittal Shetty, it is desired particularly that there should not be any similar occurance from South Kanara.

If you agree to your name being put forward please let me now what the initial 'A' stands for in your name.

Yours sincerely,
E. M. Gowne.

ಮಂಗಳೂರು, 27 ಆಗೋಸ್ತು, '35

ಪ್ರಿಯ ಬಾಲಕೃಷ್ಣ ಶೆಟ್ಟರೇ,

ಬಿರುದು ಒಂದನ್ನು ಕೊಡುವರೆ ನಿಮ್ಮ ಹೆಸರನ್ನು ಮಾನ್ಯ ಗವರ್ನರರ ಮುಂದೆ ಇಡುವ ವಿಷಯದಲ್ಲಿ ನಿಮ್ಮ ಅಭಿಪ್ರಾಯವೇನೆಂಬುದನ್ನು ದಯವಿಟ್ಟು ತಿಳಿಸಿರಿ. ನೀವು ಇಷ್ಟರಲ್ಲೇ ಬಹುತೇಕವಾಗಿ ಮೂರು ವರ್ಷಗಳ ಜಿಲ್ಲಾಬೋರ್ಡು ಅಧ್ಯಕ್ಷತನವನ್ನು ನಿರ್ವಹಿಸಿರುವಿರಲ್ಲದೆ ಇತರ ಸಾರ್ವಜನಿಕ ಕೆಲಸಗಳನ್ನೂ ಮಾಡಿರುವಿರಿ. ನನ್ನ ಶಿಫಾರಸು ಅನುಕೂಲ ಇತ್ಯರ್ಥವನ್ನೂ ಹೊಂದುವದೆಂದು ತಿಳಿಯುತ್ತೇನೆ. ಆದರೆ ಡಾ. ವಿಟ್ಠಲ ಶೆಟ್ಟರ ಬಿರುದು ನಿರಾಕರಣೆಯಂತಹ ಇತರ ಸಂದರ್ಭಗಳು ದಕ್ಷಿಣ ಕನ್ನಡದಲ್ಲಿ ಒದಗಬಾರದೆಂಬ ಇಚ್ಛೆಯಿದೆ.

ನೀವು ನಿಮ್ಮ ಹೆಸರನ್ನು ಸೂಚಿಸುವದಕ್ಕೆ ಸಮ್ಮತಿಯನ್ನು ಕೊಡುವದಾದರೆ ದಯವಿಟ್ಟು ನಿಮ್ಮ ಹೆಸರಿನೊಡನಿರುವ 'ಎ' ಎಂಬುದರ ವಿವರವೇನೆಂಬುದನ್ನು ತಿಳಿಸಿರಿ.

ನಿಮ್ಮ ವಿಶ್ವಾಸಪಾತ್ರ,
ಇ. ಎಮ್. ಗೋನ್.

ಶ್ರೀಮಾನ್ ಪಂಡಿತ ಜವಾಹರಲಾಲ ನೆಹರು

ಇವರಿಗೆ

ಉಡುಪಿ ನಗರ ಸಭೆಯವರ

ಮಾನಪತ್ರ

ಸನ್ಮಾನ್ಯ ರಾಷ್ಟ್ರಪತಿಗಳೇ,

ವಾಸ್ತವವಾಗಿಯೂ ಚಿಕ್ಕ ಊರಾದ ನಮ್ಮ ಉಡುಪಿಗೆ, ನಾಗರಿಕರ ವ್ಯತಿರಿಕ್ತವಾಗಿ ಸರಕಾರದವರು ಇತ್ತೀಚೆಗೆ ಪೌರಸಭೆಯನ್ನು ರೂಢಿಗೊಳಿಸಿದ್ದರೂ, ಇನ್ನೂ ತೀರ ಬಾಲ್ಯಾವಸ್ಥೆಯಲ್ಲಿರುವ ಹೆಚ್ಚಿನ ವ್ಯವಹಾರ ಜ್ಞಾನವಿಲ್ಲದ ಪೌರಸಭಿಕರಾದ ನಾವು ಈ ನಮ್ಮ ಉಡುಪಿಗೆ ತಮ್ಮನ್ನು ಬಹು ಸಂತೋಷದಿಂದಲೂ ಆದರಪೂರ್ವಕವಾಗಿಯೂ ಸ್ವಾಗತೀಕರಿಸುತ್ತೇವೆ.

ಉಡುಪಿಯು ಧರ್ಮಕ್ಷೇತ್ರವೆಂದು ಹೆಸರುಗೊಂಡಿದ್ದರೂ, ಪ್ರಕೃತಿ ವಿಶೇಷದಿಂದ ಭರತ ಖಂಡದ ಒಂದು ಮೂಲೆಯಲ್ಲಿರುವುದರಿಂದ ಯಾವನೊಬ್ಬ ವಿಭೂತಿ ಪುರುಷನು ಇಲ್ಲಿಗೆ ಆಗಮಿಸುವುದು ದುರ್ಲಭವಾಗಿತ್ತು. ಆದರೆ ಸುಮಾರು ಒಂಭತ್ತು ವರ್ಷಗಳ ಹಿಂದೆ ನಮ್ಮೂರಿಗೆ ತಮ್ಮ ಸುಭಾಗಮನವು ಪೂರ್ವಸೀಠಿಕೆಯಂತಾಗಿ ಜಗದ್ವಂದ್ಯ ಮಹಾತ್ಮಾ ಗಾಂಧಿ, ದೀನಬಂಧು ಬಾಬುರಾಜೇಂದ್ರ ಪ್ರಸಾದರವರು ಇಲ್ಲಿಗೆ ಚಿತ್ತೈಸುವ ಸುಯೋಗವನ್ನು ದೊರಕಿಸಿಕೊಟ್ಟಿತು.

ಸಮಗ್ರಭಾರತದ ಏಕಮಾತ್ರ ಪ್ರತಿನಿಧಿ ಹಾಗೂ ಪ್ರಬಲವಾದ ರಾಷ್ಟ್ರೀಯ ಮಹಾಸಭೆಗೆ ಒಂದಲ್ಲ, ಮೂರಾವರ್ತಿ,– ಅದರಲ್ಲೂ ಹಿಂದೆಂದೂ ಆಗದಿರುವಂತೆ ಒತ್ತಾಗಿ ಇದೀಗ ಎರಡನೆಯ ಸಲ,–ಅಧ್ಯಕ್ಷರಾಗಿ ತಮ್ಮನ್ನು ಆರಿಸಿರುದು. ನಮ್ಮ ಮಾತೃಭೂಮಿಯ ಸದ್ಯದ ವಾತಾವರಣದಲ್ಲಿ ತಮ್ಮ ಅಸದೃಶ ತ್ಯಾಗ, ತ್ರಿಕರಣಪೂರ್ವಕವಾದ ಸೇವಾತುರಗಳ ದೆಸೆಯಿಂದ ತಮ್ಮ ಧುರೀಣತ್ವದಲ್ಲಿ ಜನತೆಗೆ ಅಚಲ ವಿಶ್ವಾಸವು ಬೇರೂರಿರುತ್ತದೆಂಬುದಕ್ಕೆ ಹೆಗ್ಗುರುತು.

ತಿರಿತಿರಿಗಿ ಕಾರಾಗೃಹವನ್ನು ಸೇರಿಯೂ ಹಲವು ಬಗೆಯ ಸಂಸಾರ ದುಃಖವನ್ನು ಅನುಭವಿಸಿಯೂ, ದೇಶದ ಹಾಗೂ ಬಡವರ ಉದ್ಧಾರಕ್ಕಾಗಿ ನಡೆಯುತ್ತಿರುವ ತಮ್ಮ ಅವಿಶ್ರಾಂತ ಪ್ರಯತ್ನಗಳು ಯಾರಲ್ಲಿ ತಾನೇ ಸ್ವಾಭಿಮಾನ ಸ್ವಾವಲಂಬನಗಳನ್ನು ಪ್ರಜ್ವಲಿಸಲಾರವು?

ರಾಷ್ಟ್ರಸಭೆಯ ಪರವಾಗಿ ತಾವು ಈಗ್ಗೆ ಕೈಕೊಂಡಿರುವ ಅಖಿಲ ಭಾರತ ಪ್ರವಾಸದ ಅತ್ಯವಸರದ ಕಾರ್ಯಕ್ರಮದಲ್ಲಿ ತಾವು ನಮ್ಮೂರಿನ ನೆನಹುಮಾಡಿದುದಕ್ಕಾಗಿ, ಪುರಜನರ ಪರಮಾವಧಿ ಆಹ್ಲಾದವನ್ನು ಮತ್ತು ತಮ್ಮ ಧುರೀಣತ್ವದಲ್ಲಿ ತೀವ್ರವಾಗಿ ದೇಶಾಭ್ಯುದಯವಾದೀತೆಂಬ ಭರವಸೆಯನ್ನು ನಾವಿಲ್ಲಿ ವೇದ್ಯಪಡಿಸುತ್ತೇವೆ.

ಅಲ್ಲಾಹಾಬಾದ್ ನಗರಸಭೆಯ ಅಧ್ಯಕ್ಷತನದಿಂದ ಹಾಗೂ ಪಾಶ್ಚಾತ್ಯ ದೇಶಸಂಚಾರದಿಂದ ಅನುಭವಿಗಳಾದ ತಾವು ನಾಗರಿಕರ ಸೌಕರ್ಯಗಳಿಗಾಗಿ ನಾವೇನನ್ನು ಮಾಡಬಹುದೆಂಬುದನ್ನು ಸೂಚಿಸಿದ್ದಲ್ಲಿ ಸಾಧ್ಯವಿದ್ದಷ್ಟು ಪ್ರಯತ್ನಿಸದಿರಲಾರೆವು.

ಪೂಜ್ಯ ರಾಷ್ಟ್ರಪತಿಗಳೇ, ಪತಿತರನ್ನುದ್ಧರಿಸಿದ ಶ್ರೀದೇವರು ತಮಗೆ ದೀರ್ಘಾಯುರಾರೋಗ್ಯವನ್ನೂ ಮಾತೃಭೂಮಿಯ ಸೇವೆಯಲ್ಲಿ ಅಪಾರಶಕ್ತಿಯನ್ನೂ ದಯಪಾಲಿಸಲೆಂದು ನಾವು ಸಂಪ್ರಾರ್ಥಿಸುತ್ತೇವೆ.

ಇತಿ,
ಉಡುಪಿ ನಗರ ಸಭಿಕರು

ತಿದ್ದುಪಡಿ

ಕಳೆದ ಸಂಚಿಕೆಯಲ್ಲಿ ಪ್ರಕಟವಾದಂತೆ ಕಟಪಾಡಿಯ ಸಭೆಯಲ್ಲಿ ಭಾಷಣಕೊಟ್ಟವರು ಕೊಗ್ಗ ಯ ಕಮ್ತಿಯರಲ್ಲ, ಚಿಕ್ಕಯ ಕಮ್ತಿಯವರೆಂದಾಗಬೇಕು.

ಪಂಡಿತ ಜವಾಹರಲಾಲರ ಸಂದರ್ಶನದ ನಿಮಿತ್ತ ಈ ವಾರದ ನವಯುಗವು ಒಂದು ದಿನ ವಿಳಂಬವಾಗಿ ಪ್ರಕಟನಲ್ಪಟ್ಟಿದೆ. ಇದಕ್ಕಾಗಿ ನಮ್ಮ ವಾಚಕರು ನಮ್ಮನ್ನು ಕ್ಷಮಿಸುವರೆಂದು ನಂಬುತ್ತೇವೆ.

ಮೆನೇಜರ್,
ನ ವ ಯು ಗ

ಸಾದರ ಸ್ವೀಕಾರ

ಬಾಲಸಾಹಿತ್ಯ ಮಂಡಲ, ಉಡುಪಿ ಪ್ರೆಸ್, ತುಳುನಾಡ್ ಪ್ರೆಸ್, ವ್ಹೈಟ್‌ಶೋಹಿನ ಶ್ರೀ. ವ್ಯಾಸರಾವ್, ಸಂಯುಕ್ತ ಯುನೈಟೆಡ್ ಇಂಡಿಯಾ ಇನ್ಶ್ಯೂರೆನ್ಸ್ ಕಂಪೆನಿ ಲಿಮಿಟೆಡ್ ಧಾರವಾಡ, ಪಿ. ಎ. ಉಪಾಧ್ಯಾಯ, ಗಾರ್ಡಿಯನ್ ಒಫ್ ಇಂಡಿಯಾ ಇನ್ಶ್ಯೂರೆನ್ಸ್ ಕಂಪೆನಿ ಮದ್ರಾಸ್, ಇವರೇ ಮೊದಲಾದವರ ಹೊಸ ವರ್ಷದ ಕೆಲೆಂಡರುಗಳನ್ನು ಸಂತೋಷಪೂರ್ವಕ ಸ್ವೀಕರಿಸುತ್ತೇವೆ.

ಸ್ವೀಕಾರ ಮತ್ತು ವಿಮರ್ಶೆ

ಶ್ರೀ ಭಾರತೀ ವಾಚನಾಲಯ ಸುರತ್ಕಲ್ ಇವರ ಐದನೇ ವಾರ್ಷಿಕ ವರದಿ, ಕುಂದಾಪುರ ಕರ್ನಾಟಕ ಸಾಹಿತ್ಯ ಸಂಘದವರ ವರ್ಧಂತಿ ಮಹೋತ್ಸವದ ವರದಿ. ಶ್ರೀ ಎಮ್. ಎಚ್. ನಾರಾಯಣ ಶೆಟ್ಟರಿಂದ ಬರೆಯಲ್ಪಟ್ಟ 'ಪದ್ಯರತ್ನ ಸಂಗ್ರಹ, ಶ್ರೀ. ಅ. ನ. ಕೃಷ್ಣರಾಯರ 'ಗೋಮುಖ ವ್ಯಾಘ್ರ', 'ಶ್ರೀ ರಂಗನವರಿಂದ ಬರೆಯಲ್ಪಟ್ಟ ಪ್ರೇಮ ಪ್ರಕಟನಾಲಯದವರು ಪ್ರಕಟಿಸಿದ 'ನರಕದಲ್ಲಿ ನರಸಿಂಹ' ಜಯಕರ್ನಾಟಕದ ವಿಜಯನಗರ ಸ್ಮಾರಕ ಸಂಚಿಕೆ, ಸರಸ್ವತಿಯ ವರ್ಷಾರಂಭದ ಸಂಚಿಕೆ ಇವನ್ನೆಲ್ಲಾ ಸಾದರಪೂರ್ವಕ ಸ್ವೀಕರಿಸುತ್ತೇವೆ. ಯಥಾವಕಾಶ ವಿಮರ್ಶಿಸಲಾಗುವದು.

ಸಂ. ಸ.

ಮೂಲ್ಕಿ ಗ್ರೇಂಡ್ ರೇಫಲಿನ ಟಿಕೇಟು ಮಾರಾಟದಲ್ಲಿ ಪ್ರಥಮ ಬಹುಮಾನ ಪಡೆದ ಶ್ರೀಮತಿ ಲೀಲಾಬಾಯಿ ಅನಂತಯ್ಯನವರು ಟಿಕೇಟು ಮಾರಾಟಕ್ಕೆ ಸಹಾಯಮಾಡಿದವರಿಗೆಲ್ಲಾ ಆಭಾರ ಸೂಚಿಸುತ್ತಾರೆ.

ಧರ್ಮಾರ್ಥ ಬಹುಮಾನಗಳು
1-4-0ಗೆ !
--- ಯಾರಿಗೆ? ---

ರೂಪಾಯಿ 1—4—0 ಕೊಟ್ಟು 14ಸೀಸೆ ಒಟ್ಟೊರೋಸ್ಟೋ ಅಥವಾ 10 ಡಬ್ಬಿ ಗಜಕರ್ಣ ಮುಲಾಮನ್ನು ಕ್ರಯಕ್ಕೆ ಪಡಕೊಳ್ಳುವವರಿಗೆ !!

ಇನಾಮುಗಳ ವಿವರ.—3 ದಮ್ಮಿ ರಿಸ್ಟ್‌ವಾಚುಗಳು; 1 ರೈಲ್ವೇಟಾಯಿಂ ದಮ್ಮಿ ಪಾಕೆಟ್ ವಾಚು; 1 ಸೇಫ್ಟಿರೇಜರ್; 1 ಶೇವಿಂಗ್ ಬ್ರಸ್; 1 ಶೇವಿಂಗ್ ಸೋಪು; 1 ಕನ್ನಡಿ; 1 ಪೌಡರ್; 1 ಜತೆ ಗುಬ್ಬಿಗಳು; 1 ಫೌಂಟೆನ್ ಪೇನು 14 ಕ್ಯಾರೆಟ್ ನಿಬ್ಬು ಸಮೇತ; 1 ಇಮಿಟೇಶನ್ ಮೋತಿಮಲ್ಲರ್; 1 ಹೆಸರು ಕೆತ್ತಲ್ಪಟ್ಟ ರೋಲ್ಡುಗೋಲ್ಡು ಗಿಲ್ಟ್ ಉಂಗುರ, ಆರುನೂರು ಅಡಿ ದೂರಕ್ಕೆ ಪ್ರಕಾಶಸುವ 1 ಟೋರ್ಚ್‌ಲೈಟ್ ಅಥವಾ 1 ಅತ್ಯುತ್ತಮ 'B' ಟಾಯಿಂಪೀಸು (ಹತ್ತು ವರುಷ ಗ್ಯಾರಂಟಿ)

ಪ್ಯಾಕಿಂಗ್ ಮತ್ತು ಪೋಸ್ಟೇಜು 0—12—0. **ಇಂದೇ ಆರ್ಡರುಕೊಡಿರಿ.**

Bengal Watch Co.,
Post Box No. 12214, CALCUTTA.

ಉಡುಪಿಯ ಸನಾತನಿಗಳಲ್ಲಿ

ಶ್ರೀ. ಸಿ. ರಾಜಗೋಪಾಲಾಚಾರಿಯವರ

— ವಿಶ್ವಾಸ —

ಶ್ರೀ. ಎ. ಬಿ. ಶೆಟ್ಟರಿಗೆ ಮದ್ರಾಸಿನ ಸುಪ್ರಸಿದ್ಧ ಕೊಂಗ್ರೆಸ್ ಧುರೀಣರಾದ ಶ್ರೀ. ಸಿ. ರಾಜಗೋಪಾಲಾಚಾರಿಯವರು ಬರೆದ ಪತ್ರವಿದು.

Camp: Coimbutore,
3rd Feb. '37.

DEAR SIR,

Dr. Subbarayan has asked me to consider the question of my going to Udipi. I have read your letter to him. It is not possible for me to go to Udipi. Kindly forgive me. I think you need not be anxious about the Udipi orthodox people: They will vote for Congress.

Yours Sincerely,

C. Rajagopalachari.

ಕೊಯಮುತ್ತೂರು, ತಾ. ೩—೨—'೩೭.

ಅಯ್ಯಾ,

ನಾನು ಉಡುಪಿಗೆ ಹೋಗುವಂತೆ ನೋಡಬೇಕೆಂದು ಡಾ. ಸುಬ್ಬರಾಯನರು ನನ್ನನ್ನು ಕೇಳಿಕೊಂಡರು. ನೀವು ಅವರಿಗೆ ಬರೆದಿದ್ದ ಪತ್ರವನ್ನು ನಾನು ಓದಿದೆನು. ಆದರೆ ಉಡುಪಿಗೆ ಬರಲು ಅಸಾಧ್ಯವಾದುದಕ್ಕಾಗಿ ದಯವಿಟ್ಟು ನನ್ನನ್ನು ಕ್ಷಮಿಸಿರಿ. ಉಡುಪಿಯ ಸನಾತನಿಗಳ ವಿಷಯವಾಗಿ ನೀವು ಆತುರಪಡುವ ಅಗತ್ಯವೇ ಇಲ್ಲವೆಂದು ನಾನು ನೆನಸುತ್ತೇನೆ. ಅವರು ತಮ್ಮ ಓಟನ್ನು ಕೊಂಗ್ರೆಸಿಗೇನೆ ಕೊಡುವರು.

ನಿಮ್ಮ ವಿಶ್ವಾಸಪಾತ್ರ,

ಸಿ. ರಾಜಗೋಪಾಲಾಚಾರಿ.

ನವಯುಗಕ್ಕೆ ಇಂದೇ ಚಂದಾದಾರರಾಗಿರಿ!



ಬ್ರೇಕ್ ಪಿಲ್ಸ್

ಸ್ತ್ರೀಪುರುಷರಿಗೆ ಆನಂದವನ್ನುಂಟುಮಾಡುವುದು ಈ ಮಾತ್ರೆಗಳೆ. ಮದಿಸಿದ ಸ್ತ್ರೀಯರ ಗರ್ವ ಭಂಗಮಾಡಲು ಕಂಡು ಹಿಡಿದಿರುವ ಮಾತ್ರೆಗಳಿವು. ಇದರಲ್ಲಿ ವಿಷಾದಿಗಳು ಸೇರಿಲ್ಲ, ಕಸ್ತೂರಿ, ಚಿನ್ನ ಹಿಮಾಲಯಪರ್ವತದ ವನಮೂಲಿಕೆಗಳು ಮುಂತಾದುವುಗಳಿಂದ ದೊಡ್ಡ ಯೋಗೀಶ್ವರರ ಹತ್ತಿರ ಸಂಗ್ರಹಿಸಿ ಮುದುಕತನವನ್ನು ಲೋಕದಲ್ಲಿ ಇಲ್ಲದಂತೆ ಮಾಡುವುದು. ಅರ್ಧ ಘಂಟೆಯೊಳಗಾಗಿ ವೀರ್ಯವನ್ನು ಕಲ್ಲಿನಂತೆ ಮಾಡಿ ರಮಿಸಲು ಉಲ್ಲಾಸವನ್ನು ಮಾಡುವುದು. ಗುಣವಿಲ್ಲದಿದ್ದಲ್ಲಿ ಹಣ ವಾಪಸು. **೬೦ ಮಾತ್ರೆಗಳು ರೂ. ೫—೦—೦ ಮಾತ್ರೆಗಳು ರೂ. ೩—೦—೦** ಕಾಗದ ಪತ್ರಗಳು ಇಂಗ್ಲೀಷಿನಲ್ಲಿಯೇ.

ಡಾ. ಎ. ಎಸ್. ಮೂರ್ತಿ,
ಚಿಕಾಗೋಲ್, ಗಂಜಾಮ್ ಡಿಸ್ಟ್ರಿಕ್ಟ್.

ಚುನಾವಣೆಯ ದಿನ ವೋಟರರೂ ಕೆಲಸಗಾರರೂ ತಿಳಿದುಕೊಳ್ಳಬೇಕಾದ ಮಾಹಿತಿ.

1 ಚುನಾವಣೆಗಳು ಕ್ರಮದಂತೆ ಶಾಂತ ರೀತಿಯಿಂದ ನಡೆಯುವಂತೆ ಸರಕಾರದವರು ಮಾಡಬಹುದಾದ ಎಲ್ಲಾ ಏರ್ಪಾಡುಗಳಲ್ಲಿ ಮಹಾಜನರೂ ವೋಟರರೂ ಕಾಂಗ್ರೆಸ್ ಕೆಲಸಗಾರರೂ ಸಂಪೂರ್ಣವಾಗಿ ಸಹಕರಿಸಿ ನಮ್ಮ ಜಿಲ್ಲೆಯಲ್ಲಿ ಯಾವ ತರದ ಗಲಾಟೆಯೂ ಇಲ್ಲದೆ ಚುನಾವಣೆಗಳು ನಡೆಯುವಂತೆ ಮಾಡುವುದು ನಮ್ಮೆಲ್ಲರ ಕರ್ತವ್ಯವಿರುತ್ತದೆ. ಈ ಬಗ್ಗೆ ಮಾಡಿರಬಹುದಾದ ನಿಯಮಗಳನ್ನು ಶಿಸ್ತಿನಿಂದ ಪಾಲಿಸತಕ್ಕದ್ದು.

2 ಈ ಬಾರಿಯ ಚುನಾವಣೆಗಳ ಕ್ರಮದಲ್ಲಿ ವಿಶೇಷವೆಂದರೆ ವೋಟರರು ಸಂಪೂರ್ಣ ಗುಟ್ಟಿನಲ್ಲಿ ವೋಟು ಕೊಡಲು ಮಾಡಿರುವ ಅನುಕೂಲತೆ. ಪ್ರತಿಯೊಂದು ಪೋಲಿಂಗ್ ಬೂಥಿನಲ್ಲಿ ವೋಟು ಕೊಡುವ ಸ್ಥಳವನ್ನು ಪ್ರತ್ಯೇಕ ವಿಂಗಡಿಸಿ ಅಲ್ಲಿ ಯಾರೂ ಇರುವುದಿಲ್ಲ. ಒಬ್ಬ ಪಾಚಕರನ್ನು ಪರದೆಯ ಅಡ್ಡ ಕುಳ್ಳಿರಿಸುತ್ತಾರೆ. ಇವನಿಗೆ ವೋಟು ಪೆಟ್ಟಿಗೆಯಲ್ಲಿ ಹಾಕುತ್ತಾರೊ ಇಲ್ಲವೊ ಎಂಬುದನ್ನು ಮಾತ್ರ ನೋಡುವ ಏರ್ಪಾಡಿರುತ್ತದೆ. ಅಲ್ಲದೆ ವೋಟು ಹಾಕುವವರನ್ನು ನೋಡಲಿಕ್ಕೆ ಸಾಧ್ಯವಿಲ್ಲ. ಆದ್ದರಿಂದ ಯಾರ ಗುರ್ತವೂ ಸಿಕ್ಕುವಂತಿಲ್ಲ. ಯಾರ ಒತ್ತಾಯದಿಂದಲಾದರೂ ವೋಟಿನ ಕಾಗದವನ್ನು ಪೆಟ್ಟಿಗೆಯಲ್ಲಿ ಹಾಕದೆ ಹಿಂದೆ ಕೊಂಡುಹೋಗಿ ಒತ್ತಾಯಮಾಡಿದವರ ಕೈಗೆ ಕೊಡದಂತೆ ಮಾತ್ರ ಈ ಪಾಚಕರನ್ನು ಇಟ್ಟಿದ್ದಾರೆ. ಒಳಗೆ ಹೋದವನು ವೋಟು ಹಾಕದೆ ಹಿಂದಿರುಗಿದರೆ ಪಾಚಕನು ತಿಳಿಸುತ್ತಾನೆ. ಮತ್ತು ಅವನನ್ನು ಹಿಡಿದು ಆ ವೋಟಿನ ಕಾಗದವನ್ನು ಹಿಂದೆ ಪಡೆದು ಅವನನ್ನು ಹೊರಗೆ ಕಳುಹಿಸುತ್ತಾರೆ. ಆ ಕಾಗದವು ವ್ಯರ್ಥವಾಗುತ್ತದೆ. ಸಂಪೂರ್ಣ ಗುಟ್ಟಿನಲ್ಲಿ ವೋಟು ಕೊಡಲು ಅನುಕೂಲ ಮಾಡುವುದೇ ಪಾಚಕರನ್ನಿಟ್ಟ ಉದ್ದೇಶವಲ್ಲದೆ ಇದರಿಂದಾಗಿ ಯಾರ ಗುರ್ತವೂ ಸಿಕ್ಕುವಂತಿಲ್ಲವೆಂಬುದು ಸ್ಪಷ್ಟವಿರುತ್ತದೆ.

3 ಪ್ರತಿಯೊಂದು ಬೂಥಿನಲ್ಲಿ ಉಮೇದ್ವಾರರಸಂಖ್ಯೆಯಷ್ಟು ಪೆಟ್ಟಿಗೆಗಳನ್ನಿಡುತ್ತಾರೆ. ಆ ಪೆಟ್ಟಿಗೆಗಳಲ್ಲಿ ಉಮೇದ್ವಾರರಿಗೆ ಕೊಟ್ಟ ನಂಬ್ರ ಅವರ ಹೆಸರು ಬರೆಯಲ್ಪಡುತ್ತದೆ. ಮಾತ್ರವಲ್ಲ ಅವರವರಿಗೆ ಕೊಟ್ಟ ಬಣ್ಣದ ಕಾಗದವನ್ನು ಅವುಗಳಿಗೆ ಹಚ್ಚುತ್ತಾರೆ. ಕುಂದಾಪುರ ಡಿವಿಜನ್ ಎಸೆಂಬ್ಲಿ ಜನರಲ್ ಮತ್ತು ರಿಜರ್ವ ಸೀಟುಗಳ ಚುನಾವಣೆಯಲ್ಲಿ ಒಟ್ಟಿಗೆ ಇರುವ ಐದು ಮಂದಿ ಉಮೇದ್ವಾರರ ನಂಬ್ರ ಹೆಸರು ಮತ್ತು ಬಣ್ಣಗಳು ಈ ಕೆಳಗಿನಂತಿವೆ—

1. ಈಶ್ವರ ಕೆ. ಹಳದಿ ಬಣ್ಣ ಮೇಲೆ ಹಸುರು ಬಣ್ಣದ ಪಟ್ಟಿ.
2. ಗೋಪಾಲ ಸಾಲೆನ್ನ ಬಿಳಿಬಣ್ಣ.
3. ಬಾಬು ಬಿ. ಕೆಂಪುಬಣ್ಣದ ಮೇಲೆ ಬಿಳಿ ಪಟ್ಟಿ.
4. ಬಾಲಕೃಷ್ಣ ಶೆಟ್ಟಿ ಎ. ಹಳದಿಬಣ್ಣ
5. ಮಹಾಬಲ ಹೆಗ್ಡೆ,ಬಿ. ದಿವಾನಬಹದೂರ್ } ಕೆಂಪು ಬಣ್ಣ

ವಿ. ಸೂ. ಬಣ್ಣದ ಕಾಗದವು ಪೆಟ್ಟಿಗೆಯ ಮೇಲ್ಭಾಗದಲ್ಲಿಯೂ ಎದುರು ಭಾಗದಲ್ಲಿಯೂ ಮಾತ್ರವಿರುತ್ತದೆ. ಮೊದಲಿನ ಮೂರು ಪೆಟ್ಟಿಗೆಗಳು ಸ್ವಲ್ಪ ಚಿಕ್ಕದಿದ್ದು ಕಡೆಯ ಎರಡು ಪೆಟ್ಟಿಗೆಗಳು ಸ್ವಲ್ಪ ದೊಡ್ಡದಿರುತ್ತವೆ. ಈ ಚುನಾವಣೆಯಲ್ಲಿ ಇಬ್ಬರು ಉಮೇದ್ವಾರರನ್ನು ಆರಿಸಲಿಕ್ಕಿರುವುದರಿಂದ ಪ್ರತಿಯೊಬ್ಬ ವೋಟರರಿಗೂ ಎರಡು ಕಾಗದಗಳು ಕೊಡಲ್ಪಡುತ್ತವೆ. ಅವನ್ನು ವೋಟರರ ಇಷ್ಟದಂತೆ ಒಂದೇ ಪೆಟ್ಟಿಗೆಯಲ್ಲಿ ಅಥವಾ ಬೇರೆ ಬೇರೆ ಪೆಟ್ಟಿಗೆಗಳಲ್ಲಿ ಹಾಕಲು ನಿಯಮಗಳಂತೆ ಯಾವ ಆಕ್ಷೇಪವೂ ಇರುವುದಿಲ್ಲ. ಈ ಚುನಾವಣೆಗಳು ತಾ.18 ರಲ್ಲಿ ನಡೆಯುತ್ತವೆ.

ತಾ. 18ರಲ್ಲಿ ನಡೆಯಲಿಕ್ಕಿರುವ ಕೌನ್ಸಿಲು ಚುನಾವಣೆಯ ಉಮೇದ್ವಾರರ ನಂಬ್ರ ಹೆಸರು, ಬಣ್ಣಗಳು ಈ ಕೆಳಗಿನಂತಿವೆ:—

1. ಮಂಜಯ್ಯ ಹೆಗ್ಗಡೆ ನೀಲ.
2. ಸದಾಶಿವ ಅಡಿಗ ಕೆ. ಬಿಳೀ

ತಾ. 16ರಲ್ಲು ನಡೆಯುವ ಹಿಂದೀ ಕ್ರೈಸ್ತ ಚುನಾವಣೆಯಲ್ಲಿ ಉಮೇದ್ವಾರರ ನಂಬ್ರ ಹೆಸರು.

ಬಣ್ಣಗಳು ಈ ಕೆಳಗಿನಂತಿವೆ:—

1. ಶ್ರೀಷ್ಠ ಎಮ್. ಎಸ್. ಕೆಂಪುಬಣ್ಣ
2. ವಾರ್ಕೆ ಸಿ. ಜೆ. ಹಳದಿ ಬಣ್ಣ

ತಾ 20ರಲ್ಲಿ ನಡೆಯುವ ಮಂಗಳೂರು ಜನರಲ್ ಸೀಟಿನ ಉಮೇದುವಾರರ ನಂಬ್ರ ಹೆಸರು ಮತ್ತು ಬಣ್ಣಗಳು:—

1. ಲಕ್ಕಪ್ಪ ರೈ ಬಿ. ಕೆಂಪು ಬಣ್ಣ
2. ವೆಂಕಟ್ರಾಯ ಬಾಳಿಗ, ಬಿ. ಹಳದಿ ಬಣ್ಣ

ತಾ. 20ರಲ್ಲಿ ನಡೆಯುವ ಪುತ್ತೂರು ಡಿವಿಜನಿನ ಉಮೇದ್ವಾರರ ನಂಬ್ರ ಹೆಸರು ಬಣ್ಣಗಳು ಈ ರೀತಿ ಇವೆ:—

1. ಕಾರಂತ ಕೆ. ಆರ್. ಹಳದಿಬಣ್ಣ
2. ನರಸಿಂಗರಾವ್ ಬಿ. ನೀಲಬಣ್ಣ

4. ಚುನಾವಣೆಗಳ ನಿಯಮಗಳ ಅಗತ್ಯವುಳ್ಳ ಮಾಹಿತಿಯನ್ನು ಕಾಂಗ್ರೆಸ್ ಪಾರ್ಲಿಮೆಂಟರೀ ಬೋರ್ಡಿನವರು ಕನ್ನಡದಲ್ಲಿ ಪ್ರಕಟಿಸಿದ್ದಾರೆ. ಕೆಲಸಗಾರರು ಅದನ್ನು ಕಾಂಗ್ರೆಸ್ ಆಫೀಸಿನಿಂದ ಪಡೆಯಬಹುದು. ಅವುಗಳಲ್ಲಿ ಕಾಣಿಸಿದಂತೆ ವೋಟುಕೊಟ್ಟವರ ಸಂಖ್ಯೆ ವಗೈರೆ ಸ್ಟೇಟಮೆಂಟನ್ನು ಕೊನೆಗೆ ತಯಾರಿಸುವಾಗ ಪ್ರತಿಯೊಂದು ಬೂಥಿನ ಕುರಿತು ಈ ರೀತಿಯ ಸ್ಟೇಟುಮೆಂಟುಗಳನ್ನು ಪ್ರತ್ಯೇಕವಾಗಿ ತಯಾರಿಸಬೇಕೆಂಬುದನ್ನು ಕಾಂಗ್ರೆಸ್ ಕಡೆಯ ಏಜಂಟರು ಲಕ್ಷ್ಯಕ್ಕೆ ತೆಗೆದುಕೊಳ್ಳಬೇಕು.

5. ಚುನಾವಣೆಯ ದಿನ ಕಾಂಗ್ರೆಸಿನ ಸ್ವಯಂಸೇವಕರು ವೋಟರರು ಕಾಂಗ್ರೆಸ್ ಕಡೆಗೆ ವೋಟುಕೊಡುವಂತೆ ಬೋಧಿಸಲು ಪ್ರಯತ್ನಪಡುವದಕ್ಕಿಂತ ಆ ದಿನದ ವೋಟಿನ ಕೆಲಸವು ಶಿಸ್ತಿನಿಂದಲೂ ಶಾಂತತೆಯಿಂದಲೂ ನಡೆಯುವಂತೆ ಪ್ರಯತ್ನಪಡುವುದೇ ಸ್ವಯಂಸೇವಕರ ಅಂದಿನ ಪ್ರಧಾನ ಕರ್ತವ್ಯವೆಂದು ತಿಳಿಯತಕ್ಕದ್ದು.

ಹಿ. ರಾಮರಾಯ ಮಲ್ಯ.

ಪತ್ರವ್ಯವಹಾರ

(ಬಾತ್ಮಿದಾರರು ತಮ್ಮ ಸಂಪೂರ್ಣ ವಿಳಾಸವನ್ನು ನಮಗೆ ಕೊಡಬೇಕಾಗಿದೆ. ಬಾತ್ಮಿಗಳು ಆದಷ್ಟು ಸಂಕ್ಷೇಪವಿದ್ದು ಕಾಗದದ ಒಂದೇ ಮಗ್ಗುಲಲ್ಲಿ ಶಾಯಿಯಿಂದ ಬರೆಯಲ್ಪಟ್ಟು ಸ್ಪಷ್ಟವಾದ ಅಕ್ಷರಗಳಲ್ಲಿರಬೇಕು. ಬಾತ್ಮಿದಾರರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ.)

ಸಂ. ಸ

ನವಯುಗದಲ್ಲಿ ಹಿ. ರಾಮರಾಯ ಮಲ್ಯರು ಕೆ. ವಿ. ಶೆಟ್ಟರ ಲೇಖನದ ಮೇಲೆ ಬರೆದ ಟೀಕೆಗೆ ಪ್ರತ್ಯುತ್ತರ.

ಸರಳ ಸ್ವಭಾವದ ಶ್ರೀ ರಾಮರಾಯ ಮಲ್ಯರು ಹಳೇ ಕಾಂಗ್ರೆಸ್ ಕೆಲಸಗಾರರ ಪರವಾಗಿ ದ್ರಾವಿಡಪ್ರಾಣಾಯಾಮದ ಉತ್ತರವನ್ನು ದಯಪಾಲಿಸಿರುತ್ತಾರೆ. ಆದರೆ ಈ ಉತ್ತರದಿಂದ 'ಉಂಡೆಯಾ ಗುಂಡಾ ಬಟ್ಟಾ?' ಎಂತ ಕೇಳಿದ್ದಕ್ಕೆ, ಮುಂಡಾಸು ಮೂವತ್ತು ಮೊಳ' ಎಂತ ಉತ್ತರ ಕೊಟ್ಟಂತಾಯಿತು. ರಾ. ಎ. ಬಿ. ಸೆಟ್ರ ನೇತೃತ್ವದಲ್ಲಿ ಸ್ಥಾಪಿಸಲ್ಪಟ್ಟ ಸಿವಿಕ್‌ಬೋರ್ಡ್ ಮತ್ತು ಪಾರ್ಲಿಮೆಂಟರಿ ಬೋರ್ಡ್‌ಗಳು ಮತ್ತು ಶ್ರೀ ಸೆಟ್ರ ಪಾರ್ಟಿಯ ಕೆಲವು ಜನರು, ಸೂರಪ್ಪಯ್ಯ, ಕೊಡ್ಗಿ, ಉಪೇಂದ್ರ ನ್ಯಾಯ್ಕರು, ಕೋಟೆ ಮಂಜುನಾಥಶ್ಯಾನುಭಾಗರು, ಡಾಕ್ಟರ್ ಯು. ರಾಮರಾಯರು, ಕಾರ್ನಾಡ ಸದಾಶಿವರಾಯರೇ ಮೊದಲಾದ ಶ್ರೇಷ್ಠವ್ಯಕ್ತಿಗಳಿಗೆ ಅನ್ಯಾಯ ಮಾಡಿರುತ್ತಾರೆ, ಎಂಬ ಎಲ್ಲಾ ಅಪವಾದಗಳನ್ನು ಮೇಲಿನವರೆಲ್ಲಾ ಕಾಂಗ್ರೆಸುಬಗ್ಗೆ ಈಗಲೂ ಕೆಲಸ ಮಾಡುತ್ತಲಿದ್ದಾರೆ' ಎಂಬ ಒಂದೇ ವಾಕ್ಯದಿಂದ ತೊಳೆದು ಬಿಟ್ಟಿದ್ದಾರೆ ಈ ದಾರಿ ಅತಿಸುಲಭದಾರಿ! ಇದರಂತೆ ನ್ಯಾಯ ವಿಮರ್ಶೆಮಾಡುವುದಾದರೆ ಶ್ರೀ ಕೃಷ್ಣನು ಮನಸ್ಸಿನಲ್ಲದ ಪಾಂಡವರಿಂದ ಮಹಾಭಾರತ ಯುದ್ಧವನ್ನು ನಡಿಸಿ ಕೌರವಾದಿಗಳನ್ನು ವಧಿಸವುದೇ ಬೇಡವಿತ್ತು ಹೇಗೆಂದರೆ ವಿಷಪ್ರಯೋಗ ಲಾಕ್ಷಾಗೃಹದಹನ ಕಪಟದ್ಯೂತ ದ್ರೌಪದೀ ವಸ್ತ್ರಾಪಹರಣವೇ ಮೊದಲಾದ ಮಹಾಭಯಂಕರ ಅನ್ಯಾಯಗಳನ್ನು ಕೌರವನು ಪಾಂಡವರ ಮೇಲೆ ಮಾಡಿದರೂ ಧರ್ಮರಾಯನು ಚಿತ್ರಸೇನನಿಂದ ಸೆರೆಹಿಡಿಯಲ್ಪಟ್ಟ 27 ಜನ ಕೌರವಾದಿಗಳನ್ನು ಬಿಡಿಸಿತಂದನು ಇದರಿಂದ ಯುಧಿಷ್ಠಿರನ ಯೋಗ್ಯತೆ ಪ್ರದರ್ಶನವಾದಂತಾಯಿತೇ ವಿನಹ ದುರ್ಯೋಧನನ ಪಾಪಪರಿಹಾರವಾದಂತಾಯಿತೆ? ಹಾಗೆಯೇ ಮೇಲಿನ ಸದ್ಗೃಹಸ್ಥರು ಸ್ವಧರ್ಮ ನಿಷ್ಠೆಗಾಗಿ ಕಾಂಗ್ರೆಸು ಸೇವೆಮಾಡುವುದರಿಂದ ಅವರಯೋಗ್ಯತೆ ಪ್ರದರ್ಶಿಸಿದಂತಾಯಿತೇ ವಿನಹ ಮೇಲಿನ ಸಂಸ್ಥೆ ಹಾಗೂ ವ್ಯಕ್ತಿಗಳು ಮಾಡಿರುವ ಅನ್ಯಾಯಕ್ಕೆ ಯಾವ ಪ್ರಾಯಶ್ಚಿತ್ತವಾಯಿತೋ? ಶ್ರೀ ದೇವರೇ ಬಲ್ಲ. ಯಾರೇ ಆಗಲಿ ಅಧಿಕಾರದ ಬಲದಿಂದ ಧರ್ಮವನ್ನು ಹಿಂಡಿಹಿಸುಕಿ ತಮಗೆ ಬೇಕಾದರೂಪಕ್ಕೆ ತಂದರೂ ಧರ್ಮಸಂಸ್ಥಾಪಕನಾದ ಶ್ರೀ ದೇವರು ಧರ್ಮನಾಶವಾಗದಂತೆ ಕಾಪಾಡುವನೆಂಬ ವಿಚಾರವು ಶ್ರೀ ಮಲ್ಯರಿಗೆ ತಿಳಿದೇ ಇದ್ದರೂ ಪ್ರಕೃತ ಮರೆತದ್ದು ಸಂಸರ್ಗದೋಷವೆಂತ ಕಾಣುತ್ತದೆ.

ಇತಿ ಹಿತೈಷಿ,

ಕೆ. ವಿ. ಸೆಟ್ಟಿ.

ಮೇಲಿನ ಪತ್ರವನ್ನು ಶ್ರೀ ಹಿ ರಾಮರಾಯ ಮಲ್ಯರಿಗೆ ತೋರಿಸಿದಾಗ ಅವರು ಕೊಟ್ಟ ಉತ್ತರವನ್ನು ಕೆಳಗಡೆ ಕೊಡಲಾಗಿದೆ

ಸಂ. ಸ

"ದೇಶಬಂಧು" ಮತ್ತು "ಹಳೆಯ ಕಾಂಗ್ರೆಸ್ ಕೆಲಸಗಾರರಾದ ಕೆ. ವಿ. ಶೆಟ್ಟರು" ಹೊರಿಸಿದ ಎಲ್ಲಾ ಅಪವಾದಗಳನ್ನು ಶ್ರೀ ಕೊಡ್ಗಿ, ಸೂರಪ್ಪಯ್ಯ ಮೊದಲಾದವರೆಲ್ಲ ಈಗಲೂ ಕಾಂಗ್ರೆಸ್ ಉಮೇದ್ವಾರರ ಬಗ್ಗೆ ಕೆಲಸಮಾಡುತ್ತಲಿದ್ದಾರೆ ಎಂಬ ಒಂದೇ ವಾಕ್ಯದಿಂದ ತೊಳೆದ ಬಿಟ್ಟಿದ್ದಾರೆಂಬುದೇ ಮೇಲಿನ ಲೇಖಕರ ಮುಖ್ಯ ಆಕ್ಷೇಪವೆಂದು ತೋರುತ್ತದೆ. ಈ ಹೊತ್ತು ನಮ್ಮ ಮುಂದಿರುವ ಪ್ರಶ್ನೆಯು ಇಂದು ಕಾಂಗ್ರೆಸ್ ಉಮೇದ್ವಾರರಾಗಿ ನಿಲ್ಲಿಸಲ್ಪಟ್ಟವರ ಬಗ್ಗೆ ಕೆಲಸಮಾಡಿ ಅವರಿಗೆ ಬೆಂಬಲ ಕೊಡುವುದು ನಮ್ಮೆಲ್ಲರ ಕರ್ತವ್ಯವಿರುತ್ತದೊ ಇಲ್ಲವೊ ಎಂಬುದೇ ಇರುತ್ತದೆ. ಇಂದು ಈ ರೀತಿ ಕಾಂಗ್ರೆಸ್ ಉಮೇದ್ವಾರರ ಬಗ್ಗೆ ಕೆಲಸಮಾಡುತ್ತಾರಾಗಿ ನಾನು ಹೇಳಿದ ಶ್ರೀ ಕೊಡ್ಗಿ ಮೊದಲಾದವರು ಯುಧಿಷ್ಠಿರನಂತೆ ತಮ್ಮ ಧರ್ಮವನ್ನು ಪಾಲಿಸುತ್ತಿದ್ದಾರೆಂದು ಮೇಲಿನ ಲೇಖಕರೇ ಬರೆದಿರುವುದರಿಂದ ಇವರು ಕೈಕೊಂಡ ಕೆಲಸವು ಸರಿಯಾದುದೆಂದು ಇವರೇ ಸ್ಪಷ್ಟವಾಗಿ ಒಪ್ಪಿದಂತಾಯಿತು. ಅಂದರೆ ಕಾಂಗ್ರೆಸ್ ಕೆಲಸಗಾರರೂ ಕಾಂಗ್ರೆಸಿನಂಥ ಮಹಾ ಸಂಸ್ಥೆಯ ಮೇಲೆ ಅಭಿಮಾನವುಳ್ಳವರೂ ಇಂದು ಕಾಂಗ್ರೆಸ್ ಉಮೇದ್ವಾರರಾಗಿ ನೇಮಿಸಲ್ಪಟ್ಟಿರುವ ಶ್ರೀಮಾನ್ ಎ. ಬಿ. ಶೆಟ್ಟರ ಬಗ್ಗೆ ಶ್ರೀ ಕೊಡ್ಗಿ ಮೊದಲಾದವರಂತೆ ಕೆಲಸಮಾಡಿ ತನ್ಮೂಲಕ ಕಾಂಗ್ರೆಸಿಗೆ ವಿಜಯವನ್ನು ಹೊಂದಿಸಿ ಕೊಡುವುವೇ ನ್ಯಾಯವೆಂದು ಈ ಲೇಖಕರೇ ಮೇಲಿನಂತೆ ಒಪ್ಪಿಕೊಂಡ ಬಳಿಕ ಹೆಚ್ಚಿನ ತರ್ಕದ ಅಗತ್ಯವು ನನಗೆ ತೋರುವುದಿಲ್ಲ. ವಿಷಯವು ಇಷ್ಟೊಂದು ಸ್ಪಷ್ಟವಿದ್ದುದರಿಂದಲೇ ಮುಖ್ಯವಾದ ಒಂದೇ ವಾಕ್ಯದಲ್ಲಿ ಎಲ್ಲ ಅಪವಾದಗಳಿಗೆ ಉತ್ತರ ಕೊಟ್ಟದ್ದನಲ್ಲದೆ ಬೇರೆಯಲ್ಲ.

ಹಿ. ರಾ. ಮಲ್ಯ.

ಕೆಂಧೀರವನ ಘಂಟಾನಾದವೂ ಮತದಾರರಲ್ಲೊಬ್ಬರ ಶಂಖನಾದವೂ

ಆಯ್ಯಾ ಮತದಾರರೇ' (ನಿಖಿಲಭಾರತ) ಕಾಂಗ್ರೆಸಿನ ಮುಸುಕಿನಲ್ಲಿ ಮರೆಯಲ್ಲಿ' ನಿಂತು ನಾನು ಲೇಖನವನ್ನು ಬರೆದುದಾಗಿ ನೀವು ಬಂದಿರುತ್ತೀರಲ್ಲಾ ಅದಕ್ಕಾಗಿ ನಾನು ತುಂಬಾ ಅಭಿಮಾನವುಳ್ಳವನಾಗಿದ್ದೇನೆ. ದಾರಿದ್ರ್ಯ ಮತ್ತು ಪಾರತಂತ್ರ್ಯದ ದುಃಖಗಳಿಂದ ನೊಂದು ಹಾಹಾಕಾರಪಡುತ್ತಿರುವ ಲಕ್ಷೋಪಲಕ್ಷ ಭಾರತೀಯರು ಕಾಂಗ್ರೆಸಿನ ಮರೆಯಲ್ಲಿ ನಿಂತು ಮೊರೆಯಿಡುತ್ತಿರುವಾಗ ನಾನೂ ಕಾಂಗ್ರೆಸಿನಂಥ ಮಹಾಸಂಸ್ಥೆಯ ಮುಸುಕಿನ ಮರೆಯಲ್ಲಿ ನಿಂತುದರಲ್ಲಿ ಆಶ್ಚರ್ಯವೇನು? ಕಾಂಗ್ರೆಸಿನ ಮೆಂಬರರಿಗೆ ಮಾತ್ರ ಕಾಂಗ್ರೆಸಿನಲ್ಲಿ ಸಹಾನುಭೂತಿ ಇರಬೇಕೆಂದೂ, ಇದೆಯೆಂದೂ ತಿಳಿಯುವುದಕ್ಕೆ ಅವಕಾಶವಿಲ್ಲ. ನಾನೂ ಕಾಂಗ್ರೆಸಿನ ಮೆಂಬರನಲ್ಲದಿದ್ದರೂ ಕಾಂಗ್ರೆಸು ಮಾತ್ರ ನನ್ನ ಮನೋರಾಜ್ಯದಲ್ಲಿ ನಿರಂಕುಶ ಪ್ರಭುತ್ವವನ್ನು ಪಾಲಿಸುತ್ತಿದೆ. ಕಾಂಗ್ರೆಸು ತನ್ನ ೫೧ ವರುಷಗಳ ಜೀವಮಾನದಲ್ಲಿ ನಮಗಾಗಿಮಾಡಿದ ಸೇವೆ, ತ್ಯಾಗಗಳಿಂದ ಶತ್ರುಗಳು ಕೂಡಾ ಕಾಂಗ್ರೆಸಿಗೆ 'ನಮೋ ನಮೋ' ಎಂದು ಹೇಳಬೇಕಾಯಿತು. ಅದಕ್ಕಾಗಿ ನೀವು ಶಂಖನಾದವನ್ನು ಮಾಡಬೇಕೇ? ನನ್ನ ಪಕ್ಷಪಾತ ಶರೀರದಲ್ಲಿ ನೀವು ಪಕ್ಷಪಾತದ ಲೇಪವನ್ನು ಮಾತ್ರ ನೋಡಿರುತ್ತೀರಿ ನಿಮ್ಮನ್ನು ಸಾಕ್ಷಾತ್ ಧನ್ವಂತರಿಯ ಅವತಾರವೆಂದೂ ತಿಳಿಯೋಣವೆಂದರೆ ಅದಕ್ಕೆ ಎಳ್ಳಷ್ಟೂ ಅವಕಾಶವಿಲ್ಲ ಪಕ್ಷಪಾತದ ಪಂಕದಲ್ಲಿಯೇ ಹುಟ್ಟಿ ಅದರಲ್ಲಿಯೇ ಬೆಳೆದು ಅದನ್ನೇ ಇತರರಿಗೆ ಲೇಪಿಸುವುದಕ್ಕೆ ಉದ್ಯುಕ್ತರಾದ ನಿಮ್ಮ ಪಕ್ಷಪಾತದ ದೇಹದಲ್ಲಿ ಪಕ್ಷವಾತ ರೋಗವೇ ಇರುವುದಲ್ಲಾ ಅದಕ್ಕೆ ತಕ್ಕ ಚಿಕಿತ್ಸೆಯನ್ನೇಕೆ ಮಾಡಲಿಲ್ಲ ಸ್ವಾಮಿ!

ನಮ್ಮ ದೃಷ್ಟಿಗೆ ಪರೆಬಂದಿರಬೇಕು. ಅದಕ್ಕಾಗಿ ಡಾಕ್ಟರರನ್ನು ಕೇಳಬೇಕೆಂದು ನೀವು ಬರೆದಿರುತ್ತೀರಿ ನನ್ನ ದೃಷ್ಟಿಗೆ ಪರೆಬಂದಾಗ ನಾನಾಗಿಯೇ ಡಾಕ್ಟರರನ್ನು ಕಂಡು ಆಗತ್ಯವುಳ್ಳ ಚಿಕಿತ್ಸೆಯನ್ನು ಮಾಡಿಸಿಕೊಳ್ಳುತ್ತೇನೆ. ಈಗ ನನ್ನ ದೃಷ್ಟಿಗೆ ಯಾವ ರೋಗವೂ ಇಲ್ಲ. ನಿಮ್ಮ ಜ್ಞಾನ ಚಕ್ಷುಗಳಿಗೆ ಏನೋ ಪರೆಬಂದಿರಬೇಕು. ಆದುದರಿಂದ ನನ್ನ ದೃಷ್ಟಿಗೆ ಪರೆಬಂದಿರಬೇಕೆಂದು ನೀವು ಭಾವಿಸುವುದಕ್ಕೆ ಕಾರಣ. ಅದು ಭಯಂಕರವಾದ ರೋಗ ಸ್ವಾಮಿ! ಅದಕ್ಕೆ ಚಿಕಿತ್ಸೆಮಾಡುವ ಡಾಕ್ಟರರು ನಮ್ಮಲ್ಲಿ ದೊರೆಯುವುದು ದುರ್ಲಭ. ಆದರೆ ಕಾಂಗ್ರೆಸೆಂಬ ವಿಶ್ವವಿದ್ಯಾಲಯದಲ್ಲಿ ವ್ಯಾಸಂಗವನ್ನು ಮಾಡಿ ವೈದ್ಯವಿದ್ಯಾನಿಪುಣರೆನ್ನಿಸಿಕೊಂಡ ಆ ಮಹಾಪಂಡಿತರು ಸದ್ಯದಲ್ಲೇ ನಮ್ಮ ಜಿಲ್ಲೆಗೆ ಬರಲಿಕ್ಕಿರುವರು ಜಾಗ್ರತೆಯಾಗಿ ಅವರ ಬಳಿಗೆ ಹೋಗಿರಿ ಅವರ ದರ್ಶನಮಾತ್ರದಿಂದ ನಿಮ್ಮ ರೋಗವು ನಾಶವಾಗಿ ನೀವೂ ದೇಶಸೇವೆಯನ್ನು ಮಾಡುವಂತಾಗಲೆಂದೇ ನನ್ನ ಪ್ರಾರ್ಥನೆ. ದಯವಿಟ್ಟು ಮರೆಯಬೇಡಿರಿ.

ಕೆಂಧೀರವನ ವಯಸ್ಸೆಷ್ಟೆಂಬುದನ್ನು ನಿರ್ಣಯ ಮಾಡುವುದಕ್ಕೆ ಆತನ ಜಾತಕವು ನನ್ನ ಬಳಿಯಲ್ಲಿರಲಿಲ್ಲ. ಆದರೂ ನೀವು ಹೇಳುವಂತೆ ಆತನು ತರುಣನೆಂದು ನಾನು ಒಪ್ಪುವುದಿಲ್ಲ. ಆತನವಯಸ್ಸು ೧೮. ಆತನ ಹೃದಯಪಂಜರದೊಳಗಿರುವ ಜಸ್ಟೀಸಪಕ್ಷವೆಂಬ ಪಕ್ಷಿಯವಯಸ್ಸು ೧೭. ಆತನ ಹೃದಯದಲ್ಲಿ ಕುಳಿತುಕೊಂಡು ಶಂಖನಾದವನ್ನು ಮಾಡುವ ನಿಮ್ಮವಯಸ್ಸು ೫೫. ಇವನ್ನು ಕೂಡಿಸಿದರೆ ಜುಮಲಾ ೯೦ ಆಗುತ್ತದೆ. ಹಾಗಾದರೆ ಆತನು ಮುದಿಯಾಗದೆ ತರುಣನಾಗುವುದಾದರೂ ಹೇಗೆ? ಸ್ವಾಮೀ! ಕಾಂಗ್ರೆಸಿನ ವಯಸ್ಸು ೫೧ ಆದರೂ ಅದಕ್ಕೆ ಭಾರತೀಯರ ಆಶೀರ್ವಾದದ ಬಲದಿಂದ ಸದಾಕಾಲವೂ ತಾರುಣ್ಯವಿದೆ. ಅದು ಮುದಿಯಾಗುವ ಸಂಭವವೇ ಬರಲಾರದು. ಅದು ಸ್ಥಿರಂಜೀವಿ, ಅದು ಅಜ ಅಜಿತ, ಅಜೇಯವಾದ ಒಂದು ಮಹಾಶಕ್ತಿ.

ಕಾಂಗ್ರೆಸ್ಸಿನಲ್ಲಿ ಸ್ತ್ರೀಪಾಸುಕೊಡುವ ಪದ್ಧತಿಯೇ ಇಲ್ಲ. ಆದುದರಿಂದಲೇ ನಿಮ್ಮಂಥ ಮಹಾನುಭಾವರು ಅದರಮೇಲೆ ನಿರಾಧಾರವಾದ ದೋಷಾರೋಪಣೆಗಳನ್ನು ಮಾಡುವುದಕ್ಕೆ ಕಾರಣ. ಸ್ತ್ರೀಪಾಸುಗಳು, 'ಬಿರಿದುಬಾವಲಿಗಳು' 'ಸರಕಾರಿ ಹುದ್ದೆಗಳು' 'ಸ್ಥಾನಮಾನಗಳು' ದೊರೆಯುವ ಸ್ಥಳವೆಂದರೆ, ನೀವು ಈಗ ಇರುವ ಜಸ್ಟೀಸಪಾರ್ಟಿಯ ಸಂತೆಯೇ ಸರಿ. ಜಸ್ಟೀಸೆ ಪಕ್ಷವೆಂಬ ಪಕ್ಷಿಯು ಈಗ 'ಓಟ್ಸು' (Oats)ಗಳನ್ನು ಹೆಕ್ಕುವುದಕ್ಕಾಗಿ ಚುನಾವಣೆಯ ರಂಗಸ್ಥಳಕ್ಕೆ ಇಳಿದಿರುತ್ತದೆ. ಈ ಸಂದರ್ಭದಲ್ಲಿ ನೀವು ಸಂತೆಯಲ್ಲೇ ಇರುವುದರಿಂದ ನಿಮಗೆ ಸಂತಾಪಕ್ಕೆ ಕಾರಣವಿಲ್ಲವಷ್ಟೆ?

ಕಾಂಗ್ರೆಸ್ಸಿನ ಎಲ್ಲಾ ಮುಂದಾಳುಗಳು ಚುನಾವಣೆಗೆ ನಿಲ್ಲಬೇಕೆಂದು ನೀವು ಕೇಳುವ ಪ್ರಶ್ನೆಗೆ ಅವರೇ ಉತ್ತರವನ್ನು ಕೊಟ್ಟಿರುತ್ತಾರೆ. ಆದರೂ ಇವತ್ತಿನ ದಿವಸ ಹಿಂದೂ ದೇಶದ ೧೧ ಪ್ರಾಂತ್ಯಗಳಲ್ಲಿ ನಿಮಾನರೂಢರಾಗಿ ಸಂಚರಿಸುತ್ತಿರುವ ರಾಷ್ಟ್ರಸಭಾಪತಿಗಳ ಉತ್ಸಾಹ, ಇತರಕಾಂಗ್ರೆಸ್ ಮುಂದಾಳುಗಳ ಸಾಹಸವೆಂಬುವನ್ನು ತಿಳಿಯುತ್ತಿದ್ದರೆ ನೀವು ಆ ಪ್ರಶ್ನೆಯನ್ನೇ ಕೇಳುತ್ತಿರಲಿಲ್ಲ. ನಿಮ್ಮದುರದೃಷ್ಟ ಅಜ್ಞಾನಕೂಪದಲ್ಲಿ ಮುಳುಗಿದ ಮಂಡೂಕದ ಅವಸ್ಥೆಯು ನಿಮಗಾಯಿತಲ್ಲಾ. ಪಾಪ! ಪಾಪ! ಪಶ್ಚಾತ್ತಾಪವಾಗುತ್ತದೆ.

ಆ ಅಜ್ಞಾನಕೂಪದಲ್ಲಿದ್ದು ತಮ್ಮ ಸ್ವರೂಪವನ್ನೇ ತಾವು ಮರೆತು ಅಲ್ಪವಿಚಾರಗಳಿಗೆ ಬಲಿಬಿದ್ದು ತಮ್ಮ ಪುರುಷಾರ್ಥವನ್ನೇ ಕೆಡಿಸಿಕೊಂಡು ಇತರರನ್ನೂ ಅದರಲ್ಲಿ ಹಾರುವಂತೆ ಪ್ರೇರಿಸಿ ಅನರ್ಥವನ್ನೇ ಮಾಡುತ್ತಿರುವ ನಿಮ್ಮಂಥಾ ಮತದಾರರು ನಮ್ಮಲ್ಲಿರುವುದರಿಂದಲೇ ಕಾಂಗ್ರೆಸಿನವರು ಬಹಳ ಪ್ರಯತ್ನಗಳಿಂದ ಅನುಕೂಲ ವಾತಾವರಣವನ್ನು ನಿರ್ಮಿಸಬೇಕಾಯಿತು ತಿಳಿಯಿತೇ? ನಮ್ಮ ಮತ್ತು ನಿಮ್ಮ ಗ್ರಹಚಾರದ ಫಲಾಂತರದಲ್ಲಿ ಕಾಂಗ್ರೆಸಿಗೆ ಗ್ರಹಚಾರವೇ, ನಿಮ್ಮ ಜಸ್ಟೀಸಪಾರ್ಟಿಯ ಅವಿಚಾರದ ಅನಾಚಾರಕ್ಕೆ ಸಂಚಕಾರವೋ ಎಂಬುದನ್ನು ಸದ್ಯದಲ್ಲಿಯೇ ಭಾರತವರ್ಷದ ಹಳ್ಳಿಪಳ್ಳಿಗಳಲ್ಲಿಯೂ, ಅತ್ಯಂತ ಸಂಭ್ರಮದಿಂದ ಜರಗಿಸಲಿಕ್ಕಿರುವ ವಿಜಯೋತ್ಸವದಿಂದ. ಅಥವಾ ಇತರ ಮತದಾರರೇ ನಿರ್ಣಯಿಸಲಿ

ಸ್ವಾಮಿ ಮತದಾರರೇ! ಕಾಂಗ್ರೆಸಿಗಿಂತಲೂ ತಮ್ಮ ಯೋಗ್ಯತೆಯೇ ಅಧಿಕವೆಂದು ತಿಳಿದು ಜನತೆಯನ್ನೇ ಧಿಕ್ಕರಿಸುವ ನಿಮ್ಮಂಥ ಮಹಾನುಭಾವರನ್ನು ತೃಪ್ತಿಪಡಿಸುವುದೆಂದರೆ ಸಾಮಾನ್ಯ ಕೆಲಸವಲ್ಲ. ಹಿರಣ್ಯಕಶ್ಯಪನು ಪ್ರಹ್ಲಾದನಿಗೆ ಕೇಳಿದ ಪ್ರಶ್ನೆಯೂ ನೀವು ಕೇಳುವ ಪ್ರಶ್ನೆಯೂ ಸೆಂಟ್ ಪರ್ಸೆಂಟ್ ಒಂದೇ ಎಂದು ಹೇಳಬಹುದು. ಕಣ್ಣು ಮುಚ್ಚಿ ದಸ್ಕತು ಹಾಕುವ ಅಭ್ಯಾಸವು ಜಸ್ಟೀಸಪಕ್ಷದವರಿಗೇ ಇರಲಿ ನಮಗೂ ಬೇಡ ನಿಮಗೂ ಬೇಡ

ವ್ಯಕ್ತಿ ಪೂಜೆಯು ಸಂಸ್ಥೆಯ ಹೆಸರಲ್ಲಿ ನಮ್ಮ ಜಿಲ್ಲೆಯ ಮಟ್ಟಿಗಾದರೂ ನಡೆದೇ ಇದೆ ಎಂದು ಬರೆದಿರುವರಲ್ಲಾ. ಅದಕ್ಕೆ ನನ್ನ ಓಟು. ನೋಟ್ ಮಾಡಿಕೊಳ್ಳಿರಿ ಸಂಸ್ಥೆಯೆಂದರೆ ನೀವು ನಿಮ್ಮದಾಗಿ ಸ್ವೀಕರಿಸಿದ ಜಸ್ಟೀಸಪಕ್ಷವೆಂದು ನಾನು ನಿರ್ಭಯವಾಗಿ ಹೇಳಬಲ್ಲೆನು ಲಾಢೀಪೂಜೆಯನ್ನು ಮಾಡಿದ ಆ ಸಂಸ್ಥೆಯು ಈ ಜಿಲ್ಲೆಯಲ್ಲಿ ವ್ಯಕ್ತಿ ಪೂಜೆಯನ್ನು ಮಾತ್ರವಲ್ಲ ಕೆಲವು ಕಡೆಗಳಲ್ಲಿ ವ್ಯಕ್ತಿದ್ವೇಷ, ಜಾತಿದ್ವೇಷಗಳ ಬೀಜಗಳನ್ನೂ ಬಿತ್ತಿರುತ್ತದೆ. ಕೆಲವು ಕಡೆಗಳಲ್ಲಿ ಕಪಟ ಪ್ರೀತಿಯನ್ನೂ ಭೀತಿಯನ್ನೂ ಉಂಟುಮಾಡಿರುತ್ತದೆ. ಬ್ರಾಹ್ಮಣ ಸಮಾಜದ ಹಕ್ಕುಗಳನ್ನು ಕಿತ್ತುಕೊಂಡು ಬ್ರಾಹ್ಮಣರ ತೇಜೋವಧೆಯನ್ನು ಮಾಡಿದ ಪಕ್ಷದವರು ಕೆಲವು ಕಡೆಗಳಲ್ಲಿ ತಾವು ಬ್ರಾಹ್ಮಣರ ಮಿತ್ರರೆಂದೂ, ಕೆಲವು ಕಡೆಗಳಲ್ಲಿ ನಾವು ಶತ್ರುಗಳೆಂದೂ ಹೇಳುವರೀತಿಯು ಶಕುನಿಯ ನೀತಿಯನ್ನು ಓದಿದವರಿಗೆ ಮಾತ್ರ ಚೆನ್ನಾಗಿ ಗೊತ್ತು. ಪಾರ್ಟಿ ಇನ್ಶುರೆನ್ಸ್‌ಯಾರಿಗೆ ಆಗತ್ಯವೆಂದ ನಮ್ಮ ಜಿಲ್ಲೆಗೆ ಚೆಟ್ಟನಾಡಿನಿಂದ ಒದಗುತ್ತಿರುವ ಟಪ್ಪಾಲು ಇನ್ಶೂರೆನ್ಸ್‌ಗಳಿಂದ ಮತದಾರರಿಗೆ ಚೆನ್ನಾಗಿ ತಿಳಿದಿವೆ. ಜಸ್ಟೀಸಪಾರ್ಟಿಯ ಮುಖಂಡರಲ್ಲೊಬ್ಬರು ಮದರಾಸಿನ ಮಂತ್ರಿಗಳಲ್ಲೊಬ್ಬರಾದ ಮಿ. ಪಿ. ಟಿ. ರಾಜನ್‌ರವರು ನಮ್ಮ ಜಿಲ್ಲೆಗೆ ಬಂದಾಗ ಅಂದು ಮಾನ ಪತ್ರವನ್ನೂ ಕೊಡಲರ್ಪಿಸುವುದಕ್ಕೆ ಸಾಧ್ಯವಾಗದೆ ಹೋಯಿತೆಂದ ಮೇಲೆ ಜಸ್ಟೀಸ ಪಾರ್ಟಿಗೆ ಜಿಲ್ಲೆಯಲ್ಲಿ ಬೆಂಬಲವೆಷ್ಟೆಂಬುದನ್ನು ನೀವೇ ಊಹಿಸಿರಿ. ಕಾಂಗ್ರೆಸಿನ ಮೆಂಬರರೂ ಕೆಲವರ ಸಹಾಯದಿಂದ ಡಿ. ಬೋರ್ಡಿನ ಅಧ್ಯಕ್ಷರಾದ ಮಾತ್ರಕ್ಕೆ ಕಾಂಗ್ರೆಸನ್ನು ಗೆದ್ದವಾಗುಯಿತೇ? ಕಳೆದ ಬೋರ್ಡು ಚುನಾವಣೆಯಲ್ಲಿ ಬ್ರಾಹ್ಮಣರ ಸರ್ಕಲಿನಲ್ಲಿ ಕಾಂಗ್ರೆಸಿನ ಪ್ರತಿನಿಧಿಗಳೆದುರು ಸ್ಪರ್ಧಿಸಿ ಸೋತುಹೋದವರು ಯಾರು? ರಾಷ್ಟ್ರಪತಿಗಳಿಗೆ ಮಾನಪತ್ರವನ್ನು ಅರ್ಪಿಸುವುದಕ್ಕೆ ಜಸ್ಟೀಸುಪಾರ್ಟಿಯವರು ಎಷ್ಟು ವಿರೋಧವಿತ್ತಿರು. ಡಿ. ಬೋರ್ಡಿನಲ್ಲಿ ಆ ಠರಾವು ಪಾಸಾದುದು ಯಾರ ದೆಸೆಯಿಂದ? ಆದುದರಿಂದ ಜಸ್ಟೀಸಪಾರ್ಟಿಯನ್ನು ಇನ್ನು ಮುಂದೆ ಇನ್ಶೂರುಮಾಡದಂತೆ ಕೆಂಧೀರವನಿಗೆ ದಯವಿಟ್ಟು ಬುದ್ಧಿ ಹೇಳಿರಿ. ಕಾಂಗ್ರೆಸಿನ ದೇಶಪ್ರೇಮದ ಪ್ರವಾಹದಲ್ಲಿ ತೇಲಿಕೊಂಡು ಬೋಮ್ಯನಾಗರವನ್ನು ಸೇರಲಿಕ್ಕಿರುವ ಜಸ್ಟೀಸ ಪಾರ್ಟಿಯ ಒಟ್ಟಿಗೆ ನಮ್ಮ ಜಿಲ್ಲೆಯ ಕೆಂಧೀರವನೂ ಹೋದರೆ ಘಂಟಾನಾದವನ್ನು ಮಾಡುವವರಾರು? ನಿಮ್ಮ ಶಂಖನಾದಕ್ಕೆ ಆಸ್ಪದವೆಲ್ಲಿದೆ?

ಡಾ| ರಾಮರಾಯರನ್ನು ಕಾಂಗ್ರೆಸಿನವರು ಈ ಜಿಲ್ಲೆಯಿಂದ ಓಡಿಸಿದರೆಂದು ಹೇಳುತ್ತೀರಲ್ಲಾ. ಅವರು ಇಂದಿನ ದಿನ ತನ್ನ ಸ್ಥಾನಮಾನ ಗೌರವಗಳಿಗೆ ಕಾರಣವಾದ ಮದ್ರಾಸಿನಲ್ಲಿಯೇ ಕಾಂಗ್ರೆಸ್ ಪ್ರತಿನಿಧಿಯಾಗಿ ಚುನಾವಣೆಗೆ ನಿಂತಿರುವರಲ್ಲ. ಜಸ್ಟೀಸ ಪಕ್ಷದವರು ಮದ್ರಾಸಿನಲ್ಲಿ ಪ್ರೊಫೆಸರ್ ರಂಗ ಸುಖವಾಗಿದ್ದರಾ| ಲಕ್ಷ್ಮಪ್ಪ ರೈಗಳನ್ನು ಮಂಗಳೂರಿಗೆ ಕಳುಹಿಸಿದುದೇಕೆ?

ಡಾ| ಧ ಸದಾಶಿವರಾಯರಿಗೆ ಟೊಪ್ಪಿಹಾಕಿರುವರೆಂದು ಬರೆದಿರುವರಲ್ಲಾ. ಬ್ರಾಹ್ಮಣರಿಗೆ ಟೊಪ್ಪಿ, ಕ್ರೈಸ್ತರಿಗೆ ಟೊಪ್ಪಿ, ಉಪಾಧ್ಯಾಯರಿಗೆ ಟೊಪ್ಪಿ, ಹಾಕಿ ಆಪಾರ್ಟಿಯವರು ಗಾಂಧಿ ಟೊಪ್ಪಿ ಇಟ್ಟವರಿಗೆ ಸಿಕ್ಕಿದರೆ ಆ ದಿಪ್ಪಟ್ಟಿಗೂ ಒಪ್ಪಿ ಸ್ವೈಪಾಕಿ ಅದರಲ್ಲಿಯೂ ತೃಪ್ತವಾಗದೆ ಕಳೆದ ಎಸೆಂಬ್ಲಿ ಚುನಾವಣೆಯಲ್ಲಿ ಮದ್ರಾಸಿನವರೆಂದ ನುಷ್ಕ್ರಿಯದೇಶಭಕ್ತರಲ್ಲೊಬ್ಬರಾದ ಶ್ರೀಸತ್ಯಮೂರ್ತಿಗಳಿಗೆ ರಾ. ಬ. ರಾಮಸ್ವಾಮಿ

ಪುಟ ೧೬ ನೋಡಿ

ಕೊಂಗ್ರೆಸ್ ಉಮೇದ್ವಾರರಿಗೆ ಮತದಾರರು ಓಟು ಕೊಡಬೇಕು ಯಾಕಯ್ಯಾ ಯಾಕೆ?

ಜನತೆಯವರಿಗೆ ಕರಪತ್ರ ಮೂಲಕವಾಗಿ ಕೊಂಗ್ರೆಸ್ಸು ಪಾರ್ಲಿಮೆಂಟರಿ ಬೋರ್ಡಿನವರು ಓಟುಕೊಡುವುದರ ವಿಷಯ ತಿಳಿಸಿರುವರು—ಓಟು ಕೊಡುವವರ ಸೌಕರ್ಯಕ್ಕಾಗಿ ಅದರ ಸಾರಾಂಶವನ್ನು ತಿರಿಗಿ ತಿಳಿಸುವದು ಅಗತ್ಯ.

1 ಕೊಂಗ್ರೆಸು ಇಡೀ ಭರತ ಖಂಡದ ರಾಷ್ಟ್ರಸಭೆ. ಇದರಲ್ಲಿ ಮತಭೇದಗಳಿಲ್ಲ ಎಲ್ಲರೂ ಸರಿಸಮಾನರು, ಜಸ್ಟಿಸ್ ಪಾರ್ಟಿಯು ನಮ್ಮ ಮದ್ರಾಸು ಆಧಿಪತ್ಯದಲ್ಲಿ ಮಾತ್ರ. ಇದರಲ್ಲಿ ಐಶ್ವರ್ಯವಂತರು ಹೆಚ್ಚು. ಇದು ದೇಶೋದ್ಧಾರಕ್ಕೆ ಸ್ಥಾಪನೆ ಆದದ್ದು ಅಲ್ಲ. ಬ್ರಾಹ್ಮಣರ ಪ್ರಾಬಲ್ಯವನ್ನು ಮುರಿಯುವದೇ ಅದರ ಪ್ರಥಮ ಧ್ಯೇಯ. ನಮ್ಮ ಸರ್ಕಾರಕ್ಕೆ ಸಹಾನುಭೂತಿ ಕೊಟ್ಟು ಮಹಾತ್ಮರು ಹೂಡಿದ ಸ್ವಾತಂತ್ರ್ಯದ ಸಮಯದಲ್ಲಿ ದೇಶಕ್ಕೆ ವಿರೋಧವಾಗಿ ನಡೆದಿದೆ. 16 ವರುಷಗಳಿಂದ ಅದು ಆಳುತ್ತಿದ್ದರೂ ಅದು ಯಾವದೊಂದು ಜನತೆಯ ಅಭಿವೃದ್ಧಿಯ ಕಾರ್ಯವನ್ನು ಕೈಕೊಳ್ಳಲಿಲ್ಲ.

2. 1885ರ ಲಾಗಾಯಿತು ಈ ವರೆಗೂ ಕೊಂಗ್ರೆಸ್ಸು ದೇಶಸೇವೆಯಲ್ಲಿ ಮಗ್ನವಾಗಿದೆ. ಕೊಂಗ್ರೆಸ್ಸಿನವರನೇಕರೂ ದೇಶೋದ್ಧಾರಕ್ಕೆ ಸರ್ವಸ್ವವನ್ನು ಕಳಕೊಂಡಿರುತ್ತಾರೆ. ಕಾಲಕಳೆಯುತ್ತಾ ಹೊಸ ಕಾರ್ಯಕ್ರಮಗಳಿಗೆ ಅನುಕೂಲವಾಗಿ ಸ್ವರಾಜ್ಯ ಪಡೆಯುವರೆ ಸ್ವಾತಂತ್ರ್ಯದ ಹೋರಾಟದಲ್ಲಿ ನಮ್ಮ ಕೊಂಗ್ರೆಸ್ ಮುಖಂಡರು ಹೊಸ ಪ್ರಯೋಗಗಳನ್ನು ಕಂಡುಹಿಡಿಯುತ್ತಾ ಇದ್ದಾರೆ. ಸ್ವಾತಂತ್ರ್ಯವು ಕಾರಾಗೃಹದಲ್ಲಿ ಜನ್ಮಿಸುತ್ತಿದೆ. ಸ್ವರಾಜ್ಯವು ದೇಶಕ್ಕೆ ಸಿಕ್ಕತಕ್ಕದ್ದು ಎಂಬೀ ಮೂಲತತ್ವವನ್ನು ಅದು ಪ್ರಚಾರಗೊಳಿಸಿಯದೆ. ಈ ಸಂಸ್ಥೆಯ ಕಾರ್ಯಕ್ರಮಗಳು ದೇಶದಲ್ಲಿ ಸದಾ ಜಾರಿಯಲ್ಲಿರುತ್ತವೆ. ಯುದ್ಧಕ್ಕೆ ಸರಿಸಮಾನವಾದ (Moral equivalent of war) ದೇಶೋನ್ನತಿಯು ಸತ್ಯಾಗ್ರಹ ಪ್ರಯೋಗವನ್ನು ಅದು ಹುಡುಕಿ ತೆಗೆದಿರುತ್ತದೆ.

3. ಹಿಂದೀಪ್ರಚಾರ, ಅಸ್ಪೃಶ್ಯತಾನಿವಾರಣೆ, ಜಾತಿ ವಿಜಾತಿ ಭಿನ್ನಭೇದಗಳನ್ನು ತೆಗೆಯುವದು, ಸ್ತ್ರೀಯರ ಉನ್ನತಿ, ಬಿಹಾರ ಭೂಕಂಪದ ಬಡಜನರ ಸಹಾಯ, ನಮಗೆ ಬೇಕಾದ ಸುಧಾರಣೆಗಳು, ಹಿಂದು ಮುಸಲ್ಮಾನರ ಐಕ್ಯ, ಇವೇ ಮೊದಲಾದ ದೇಶಸೇವೆಯ ಕಾರ್ಯಗಳಲ್ಲಿ ಅದು ಪೂರ್ಣ ತನ್ನ ಆಸಕ್ತಿಯನ್ನು ಇಟ್ಟಿದೆ. ಬೇರೆ ಪಾರ್ಟಿಯವರು ಇವನ್ನು ಕೈಕೊಂಡಿಲ್ಲ.

4. ತನ್ನ ಕಾರ್ಯಕ್ರಮಗಳಿಂದ ಇತರ ಅಹಿಂಸಾತ್ಮಕ ತತ್ವಗಳ ಮೂಲಕ ಜನತೆಯಲ್ಲಿ ಕೊಂಗ್ರೆಸ್ಸು ದೇಶಭಕ್ತಿಯನ್ನು ಹುಟ್ಟಿಸಿ, ಧೈರ್ಯವನ್ನುಂಟುಮಾಡಿ ಹಿಂದೈದೇಶಕ್ಕೆ ಪರದೇಶದ ಜನರಲ್ಲಿರುವ ಗೌರವವನ್ನು ಹೆಚ್ಚಿಸಿ ಪ್ರತಿ ಒಬ್ಬ ವ್ಯಕ್ತಿಯಲ್ಲಿ ಸ್ವರಾಜ್ಯದ ಆಶಯನ್ನು ಹುಟ್ಟಿಸಿಯದೆ. ದೇಶದ ಜನರನ್ನು ನಿದ್ರಾವಸ್ಥೆಯಿಂದ ಕೊಂಗ್ರೆಸ್ಸು ಎಬ್ಬಿಸಿಯದೆ.

5. ಬಡ ಜನತೆಯ ಸೌಕರ್ಯವನ್ನು ತನ್ನ ಮುಖ್ಯವಾದ ಧ್ಯೇಯವೆಂದೂ ಪ್ರಾಯಸ್ಥ ಪ್ರತಿ ಒಬ್ಬರಿಗೆ ಮತಕೊಡುವ ಹಕ್ಕಿರಬೇಕೆಂತಲೂ, ಪ್ರತಿ ಒಬ್ಬ ವ್ಯಕ್ತಿಗೆ ವಿದ್ಯಾಭ್ಯಾಸಕೊಡುವದು ಸರ್ಕಾರದ ಮುಖ್ಯ ಕರ್ತವ್ಯವೆಂತಲೂ ಕೊಂಗ್ರೆಸು ಪ್ರತಿ ವರುಷವೂ ಪ್ರತಿ ಸಾರಿಯೂ ಸರ್ಕಾರಕ್ಕೆ ತಿಳಿಸಿ ಆ ವಿಷಯ ಸರ್ಕಾರವು ಮುಂದು ಹೆಜ್ಜೆ ಇಡುವಂತೆ ಪ್ರಯತ್ನಿಸುತ್ತಿದೆ.

6. ಭೂಲೋಕದಲ್ಲಿ ಪ್ರಖ್ಯಾತಿ ಹೊಂದಿರುವ ಇಂಡಿಯದಲ್ಲಿ ಜನ್ಮವೆತ್ತಿದ ಪ್ರತಿ ಒಬ್ಬ ವ್ಯಕ್ತಿಯು ಕೊಂಗ್ರೆಸ್ಸಿನ ಕಾರ್ಯಕ್ರಮಗಳಲ್ಲಿ ಸೇರಿ ಇವರ ಶ್ರಮೆಯಿಂದ ಈ ಸಂಸ್ಥೆಯು ಅತೀ ಉತ್ಕೃಷ್ಟವಾದ ಶಿಸ್ತು ಇರುವ ರಾಜಕೀಯ ಸಂಸ್ಥೆಯಾಗಿ ದೇಶಸೇವೆಯನ್ನು ಮಾಡುತ್ತದೆ. ಕೆಲವು ವರುಷಗಳ ಹಿಂದೆ ನಮ್ಮ ವ್ಯಾಸರಾಯರಾದ ಇರ್ವಿನ್ (Lord Irwin) ಪ್ರಭುಗಳು ಮಹಾತ್ಮಾ ಗಾಂಧಿಯವರ ಕೂಡೆ ನಮ್ಮ ದೇಶದ ರಾಜರಚನೆಯ ಸುಧಾರಣೆಯ ವಿಷಯ ಒಂದು ಒಪ್ಪಂದ (Pact) ಮಾಡಿರುವರು. ಕಾರಣಾಂತರಗಳಿಂದ ಈ ನಮ್ಮ ದೇಶಕ್ಕೆ ಹೆಚ್ಚಿನ ಸುಧಾರಣೆಗಳು ಅನೇಕ ಸಿಕ್ಕಲಿಲ್ಲವಾದರೂ ಮುಂದಕ್ಕೆ ಈ ಸಂಸ್ಥೆಯೊಂದೇ ಸುಧಾರಣೆಗಳನ್ನೂ ಸ್ವಾತಂತ್ರ್ಯವನ್ನೂ ನಮ್ಮ ಆಳರಸರಿಂದ ಪಡೆಯುವಷ್ಟು ಸಾಮರ್ಥ್ಯವುಳ್ಳದ್ದು ಆಗಿರುತ್ತದೆ; ಬೇರೆ ಯಾವ ಸಂಸ್ಥೆಗಳೂ ಇಷ್ಟು ಗೌರವ ವಾ ಪ್ರಖ್ಯಾತಿಯಿದ್ದವುಗಳಲ್ಲ ಅವುಗಳಿಂದ ಈ ಕಾರ್ಯಕ್ರಮಗಳನ್ನು ನಡಿಸಲು ಸಾಧ್ಯವಿಲ್ಲ. ಆದುದರಿಂದ ಕೊಂಗ್ರೆಸ್ಸನ್ನು ಸಮರ್ಥಿಸಿ ಕೊಂಗ್ರೆಸ್ ಉಮೇದ್ವಾರರಿಗೆ ವೋಟುಕೊಡುವಂಥಾದ್ದು ಪ್ರತಿ ಮತದಾರನ ಕರ್ತವ್ಯ.

7. ಸರ್ಕಾರ ಮತ್ತು ಕೊಂಗ್ರೆಸ್ಸು ಎಂಬ ಪಾರ್ಟಿ ಎರಡಲ್ಲದೆ ಬೇರೆ ಪಾರ್ಟಿಗಳು ನಮ್ಮಲ್ಲಿ ಇಲ್ಲ. ಜಸ್ಟಿಸ್ ಪಾರ್ಟಿಯು ಸರ್ಕಾರಕ್ಕೆ ಸಹಾನುಭೂತಿಯಾದ ಐಶ್ವರ್ಯವಂತರ ಪಕ್ಷ. ಪ್ರಜಾ ಪಾರ್ಟಿಯು ಜಸ್ಟಿಸ್ ಪಾರ್ಟಿಯ ಒಂದು ಭಾಗ.

8. ಕೊಂಗ್ರೆಸ್ಸು ಅಂದರೆ ನಾವೇ. ನಮ್ಮ ದೇಶದ ಜನರ ಮುಂದಿನ ಅಭಿವೃದ್ಧಿಯ ಎಲ್ಲಾ ಆಶೆಗಳೂ ಕೋರಿಕೆಗಳೂ ಸಹಾರೂಪವು ಹೊಂದಿ ಕೊಂಗ್ರೆಸ್ಸಿನ ಮೇಲೆಯೇ ಆಧರಿಸಿರುತ್ತವೆ. ಕೊಂಗ್ರೆಸ್ಸು ಜಯವಾದರೆ ಇಡೀ ಹಿಂದು ದೇಶದ ಜನತೆಯು ಜಯಶೀಲವಾಯಿತು. ಅವರ ಆಶೆಗಳು ತೃಪ್ತಿಯಾಗುವ ಸಂದರ್ಭ ಬಂದೊದಗಿತು 50 ವರುಷದ ಚಳವಳವು ಸಫಲವಾಯಿತು ನಮ್ಮ ಸಂಕಲೆಗಳು ಸಿಥಿಲವಾದವು

ಕೊಂಗ್ರೆಸು ಜಯವಾಗಲೀ

ಕೆ ಲಕ್ಷ್ಮಣ ಕುದ್ವಾ.

ಪುಟ ೧೫ರಿಂದ

ಮುದಲಿಯಾರರನ್ನು ಹಾಕಿ ಟೊಪ್ಪಿಹಾಕಿಸಿಕೊಂಡರಲ್ಲಾ ಅದಕ್ಕೆ ನಿಮ್ಮ ಉತ್ತರವೇನು? ಈಗಲೂ ಅಲ್ಲಿ ಚುನಾವಣೆಗೆ ನಿಂತಿರುವ ಅನೇಕ ದೇಶಭಕ್ತರ ಎದುರಿಗೆ ನಿಂತು ಸ್ಪರ್ಧಿಸುವ ಆ ಜಸ್ಟೀಸಪಕ್ಷದವರು ದೇಶಕ್ಕಾಗಿ ಸರ್ವಸ್ವವನ್ನು ತ್ಯಜಿಸಿದ ಆ ದೇ. ಭ. ಕಾರ್ನಾಡು ಸದಾಶಿವರಾಯರಿಗೂ ಟೊಪ್ಪಿಹಾಕುವುದಕ್ಕೆ ಹಿಂಜರಿಯುತ್ತಿದ್ದರೇ? ಅದಕ್ಕೆ ಕಾಂಗ್ರೆಸಿನವರು ಅಸ್ಪದಕೊಡಲಿಲ್ಲ. ಏತಕ್ಕಾಗಿ ಕಾ. ಸ. ಕಾಂಗ್ರೆಸಿನ ಭಕ್ತರು. ಸಾಧುಪುರುಷರು ವಯಸ್ಸಾದವರು ದೇಶಸೇವೆಯಲ್ಲಿ ದಣಿದವರು. ದೇಶಸೇವೆಯಲ್ಲಿ ತನ್ನ ಆರೋಗ್ಯವನ್ನೂ ಕೂಡ ನಷ್ಟ ಪಡಿಸಿಕೊಂಡವರು. ಅವರಿಗೆ ವಿಶ್ರಾಂತಿಯು ಆಗತ್ಯವೆಂದು ಅವರೇ ಅಪೇಕ್ಷೆಪಟ್ಟಿದ್ದರು. ಇನ್ನಾದರೂ ಟೊಪ್ಪಿಗಳ ಮಾತು ಬಿಟ್ಟುಬಿಡಿ ಸ್ವಾಮಿ!

ಶ್ರೀ | ಯು. ಸಿ. ಎಸ್. ಭಟ್ಟರು ಕಾಂಗ್ರೆಸಿನ ಶಿಸ್ತಿನಲ್ಲಿ ತಮ್ಮ ವಿಶ್ವಾಸವು ನಾಸ್ತಿಯೆಂದು ಹೇಳಿ ಅವರೇ ತ್ರಿಶಂಕು ಸ್ವರ್ಗವನ್ನು ಸೇರಿದರೆ ಕಾಂಗ್ರೆಸಿನವರನ್ನು ದೂರಬೇಡಿರಿ. ಮೊಳಹಳ್ಳಿಯವರ ಮೊಳಕೈಗೆ ಸವರಿದ ಆಚೆಣ್ಣೆಯ ಜಸ್ಟೀಸಪಾರ್ಟಿಯ ಬೆಂಬಲದಿಂದ ಚುನಾವಣೆಗೆ ನಿಂತಿರುವ ರಾ. ನರಸಿಂಗರಾಯರ ಕಣ್ಣಿಗೆ ಸುಣ್ಣದಂತಾಗಿ ಜಸ್ಟೀಸಪಾರ್ಟಿಯವರೀಗೆ ಕಣ್ಣೇ ಕಾಣದಂತಾಗಿರುವಾಗ ವಕೀಲರಾದ ಮೊಳಹಳ್ಳಿ ಶಿವರಾಯರ ವಕಾಲತು ನಿಮಗೇಕೆ?

ಕೊಂಗ್ರೆಸಿಗೆ ಸೇರಿದರೆ ನಾಲ್ಕಾಣೆ ಕೊಂಗ್ರೆಸ್ಸಿಂದೂ, ಕಾಂಗ್ರೆಸ್ ಮೆಂಬರರಾಗುವ ಮನೋವೃತ್ತಿ ಇಲ್ಲದವರೆಂದೂ ಹೇಳುವ ನಿಮ್ಮ ಮಾತಿಗೆ ಅರ್ಥವಿಲ್ಲ. ಕಾಂಗ್ರೆಸಿಗೆ ಸೇರಿದವರು, ಸೇರದವರು ಕಾಂಗ್ರೆಸಿನ ಸೇವೆಯನ್ನು ಮಾಡಬಾರದೆಂಬ ನಿರ್ಬಂಧವಿಲ್ಲ. ಆದರೆ ಕಾಂಗ್ರೆಸಿಗೆ ಸೇರದವರು ಕಾಂಗ್ರೆಸಿಗೆ ತನ್ಮೂಲಕ ದೇಶಕ್ಕೆ ವಿರೋಧವಾಗಿ ಚುನಾವಣೆಯ ಕೊಳುಗುಳದಲ್ಲಿ ಚಳವಳಗಳನ್ನು ಮಾಡಿ ಕಳವಳದಿಂದ ಹಾಳಾಗಬಾರದೆಂದೇ ನಾನು ಅಪೇಕ್ಷಿಸುವುದಾದರೆ ನೀವು ನನ್ನನ್ನು ಉಪೇಕ್ಷಿಸುವುದಾದರೂ ಏಕೆ? ಇನ್ನಾದರೂ ದಯವಿಟ್ಟು ಜಸ್ಟೀಸ ಪಕ್ಷದವರ ಅಧಿಕಾರದ ಭಯವನ್ನು ಬಿಟ್ಟು, ನ್ಯಾಯವನ್ನೇ ಬಯಸಿ ನ್ಯಾಯವನ್ನೇ ಪ್ರತಿಪಾದಿಸಿ ಕೃತಕೃತ್ಯರಾಗಿರಿ.

ಓಂ ಶಾಂತಿಃ! ಶಾಂತಿಃ!! ಶಾಂತಿಃ!!!

—ಮತದಾರರಲ್ಲೊಬ್ಬ.

ತಾಳದೆ ಇರತಕ್ಕ ಮೂತ್ರವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧಿ.

ಡಾ. ಜಸಾನಿಯವರ

ಜಗತ್ಪ್ರಸಿದ್ಧ

“ಗೊನೋಕಿಲರ್”

(ರಿಜಿಸ್ಟರ್ಡ್)



ನಕಲಿ ಮದ್ದುಗಳಿಗೆ ಮರುಳಾಗಿ ಮೋಸ ಹೋಗಬೇಡಿರಿ. ಕೊಂಡು ಕೊಳ್ಳುವದಕ್ಕೆ ಮೊದಲು ಕೋಳಿಯ ಗುರ್ತನ್ನು ಗಮನಿಸಿರಿ.

ಪ್ರಮೇಹ ವ್ಯಾಧಿಗೆ ಸಿದ್ಧೌಷಧ

ಇಂದಿನ ಅಪ್ರತಿಮ ಔಷಧ. ಆಂಗ್ಲೇಯ ಮತ್ತು ಆಯುರ್ವೇದ ಔಷಧಿಗಳೊಂದೂ ಫಲಕಾರಿಯಾಗದೇ ಇನ್‌ಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ, ಒಂದಾವರ್ತಿಯಾದರೂ ಈ ನಮ್ಮ **ಗೋನೋಕಿಲರ್** ಎಂಬ ಔಷಧವನ್ನು ಉಪಯೋಗಿಸಿನೋಡಿರಿ. ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ, ಗೋನೋಕಿಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾತುನಿಕೆ, ಸರ್ವಪ್ರಕಾರದ ಪ್ರಮೇಹ (ಎಷ್ಟೇ ಹಳೆತು ಯಾ ಯಾವದೇ ಸ್ಥಿತಿಯಲ್ಲಿರಲಿ), ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತುಸ್ರಾವ, ಬಿಳುಪು ಹರಿಯುವದು ಇವೇ ಮೊದಲಾದ ಯಾವತ್ತು ಗೊನೋಕೋಕಸ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ.

ಬೆಲೆ ೬೦ ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ. ೩—೦—೦ (ಮೂರು) ವಿ. ಪಿ. ಛಾರ್ಜು ಬೇರೆ.

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ, ಗಿರಿಗಾಂವ ಬ್ಯಾಕ್ ರೋಡ್, ಮುಂಬಯಿ 4.

Sole Manufacturer Dr. D. N. JASANI, GIRGAUM BACK ROAD, BOMBAY 4

ಕಸ್ತೂರಿ ಮಿಶ್ರಣ ದಶಮೂಲವೆಂಬ

ಸೂತಿಕಾ ರಸಾಯನ

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

I. ಶೋಧನ ಗುಣ:—ಶೋಧನದಿಂದ ಪ್ರಸವಾನಂತರ ಗರ್ಭಕೋಶದ ಸರ್ವತರದ ನಂಜನ್ನು ಹೊರಗೆ ಹಾಕಿ ಪ್ರಸೂತವಾದ ಗರ್ಭಕೋಶವನ್ನು ಮೂರು ದಿವಸಗಳೊಳಗೆ ಅಂಕುಚಿತವಾಗಿ ಮಾಡುವದು.

II. ರಸಾಯನ ಗುಣ:—ರಸಾಯನದಿಂದ ಸೂತಿಕಾ ಸ್ತ್ರೀಯು ಗರ್ಭದ ಬೆಳವಣಿಗೆಬಗ್ಗೆಯೂ, ಪ್ರಸವವೇದನಾ ಬಗ್ಗೆಯೂ ತಾನು ಕಳಕೊಂಡ ಮೂಲ ಶಕ್ತಿಯನ್ನು ಇಮ್ಮಡಿಯಾಗಿ ತಿರುಗಿ ಹೊಂದುವಳು.

III. ಸುಖಸೇವನ:—ಸುಖಸೇವನದಿಂದ ಮಧುರ ಮನೋಹರವಾದ ಈ ರಸಾಯನವು ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾದುವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವಾ ನಂತರದ ತೀಕ್ಷ್ಣವೇದನೆಯನ್ನು ಶೀಘ್ರದಿಂದ ನಿಲ್ಲಿಸುವದು.

ಒಬ್ಬಳು ಬಾಣಂತಿಗೆ ಎರಡು ಬಾಟ್ಲಿ ಬೇಕಾಗುವದು. ಕ್ರಯ ಬಾಟ್ಲಿ 1ಕ್ಕೆ ರೂ. 2-0-0.

ಎಮ್. ವಿ. ಶಾಸ್ತ್ರಿ, ಆಯುರ್ವೇದ ಭೂಷಣ
ಮಂಗಳೂರು, ದ.ಕ.

ಕ್ರೌನ್ ರಬ್ಬರ್ ಸ್ಟಾಂಪ್ ಕಂಪೆನಿ

ಸ್ಥಾಪನೆ: 1926

18 ಬಲ್ಮಠ ರಸ್ತೆ, ಮಂಗಳೂರು.



ಯಾವತ್ತೂ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಅಗತ್ಯವಿರುವ ಎಲ್ಲಾ ತರದ ರಬ್ಬರ್ ಮೊಹರುಗಳೂ ಸೈನ್ ಬೋರ್ಡು, ಪೇದೆಗಳ ಬೇಜು, ಮೊನೊಗ್ರಾಮ್ ಸೀಲು, ಇತ್ಯಾದಿಗಳನ್ನು ಪ್ರತಿಯೊಬ್ಬರ ಅಭಿರುಚಿಗೊಪ್ಪುವಂತೆ ಸುಲಭ ದರಗಳಲ್ಲಿ ಮಾಡಿಕೊಡೋಣಾಗುವುದು.

ಹೆಚ್ಚಿಟ್ಟು ಒತ್ತುವ ಸೆಟ್ಟುಗಳು ಕೂಡಾ ಸಿಗುವವು.

ಮಿಕ್ಕ ವಿಚಾರಗಳನ್ನು ನಮ್ಮ ಆಫೀಸಿಗೆ ಸ್ವತಹ ಬಂದು ಯಾ ಪತ್ರ ಮುಖೇನ ತಿಳಕೊಳ್ಳಬಹುದು.

ಮಂಗಳೂರಲ್ಲಿ ರೈಲು ಬಂಡಿಗಳ ಸಮಯ

ಗಾಡಿಗಳು	ಹೊರಡುವ ಘಂಟೆ.	ತಲಪುವ ಘಂಟೆ.
ಮಿಕ್ಸೆಡ್	ಬೆಳಿಗ್ಗೆ 5-55	ರಾತ್ರಿ 8-55
ಕಾಂಜಂಗಾಂಡ್ ಪ್ಯಾಸಂಜರ್	ಬೆಳಿಗ್ಗೆ 8-25	ಮಧ್ಯಾಹ್ನ 1-20
ಮೈಲ್	ಬೆಳಿಗ್ಗೆ 9-50	ಸಂಜೆ 4-20
ಫಾಸ್ಟ್ ಪೆಸೆಂಜರ್	ಮಧ್ಯಾಹ್ನ 12-45	ಮಧ್ಯಾಹ್ನ 2-40
ಕಾಸರಗೋಡ್ ಪ್ಯಾಸೆಂಜರ್	ಮಧ್ಯಾಹ್ನ 3-30	ಸಂಜೆ 6-15
ಶಟಲ್	ಸಂಜೆ 5-25	ಬೆಳಿಗ್ಗೆ 9-20

ಜನರಲ್ ಎಶ್ಯೂರೆನ್ಸ್ ಸೊಸೈಟಿ ಲಿಮಿಟೆಡ್.

[ಸ್ಥಾಪನೆ: **1907**]

ಅತ್ಯಧಿಕ ಬೋನಸು !

ಮರಣಾಂತ್ಯ ಪೊಲಿಸಿಗಳಮೇಲೆ ಸೇಕಡಾ 25,

ಎಂಡೋಮೆಂಟ್ ಪೊಲಿಸಿಗಳಮೇಲೆ ಸೇಕಡಾ 20,

ಬಲವಂತ ಪೊಲಿಸಿಗಳು ರೂ. **3** ಕೋಟಿ ಮಿಕ್ಕಿವೆ.

ಮೂಲಧನವು ರೂ. **75** ಲಕ್ಷ ಮೀರಿದೆ.

ಬಡವರಿಗೂ ಧನಿಕರಿಗೂ ಹಿತಕಾರಿಯಾದ ಎಶ್ಯೂರೆನ್ಸ್ ಯೋಜನೆಗಳು.

ಅತೀ ಲಾಭದಾಯಕವಾದ ಉದಾರ ಏಜೆನ್ಸಿ ಶರ್ತಗಳು.

ವಿಶೇಷ ಮಾಹಿತಿಗಳಿಗಾಗಿ ಈ ಕೆಳಗಣ ವಿಳಾಸಗಳಿಗೆ ಬರಕೊಳ್ಳಿರಿ—

ಪಿ. ಡಿ. ಭಾರ್ಗವ, ಎಫ್. ಎಸ್. ಎಸ್. (ಲಂಡನ್)
ಜನರಲ್ ಮೆನೇಜರ್, ಅಜ್ಮೀರ್.

ಅಥವಾ

ಮೆನೇಜರ್, 278, ಲಿಂಗ ಚೆಟ್ಟಿ ಸ್ಟ್ರೀಟ್, ಮದ್ರಾಸ್.

ಸುಪರಿಂಟೆಂಡೆಂಟ್, ಬಳ್ಳಾರಿ. ಆರ್ಗನೈಸರ್, ವೆಲ್ಲೂರು.

ಚೀಫ್ ಏಜೆಂಟ್ಸ್, ಮಧುರ, ತ್ರಿಚಿನಾಪಳ್ಳಿ.

ಸ್ಟೀಮರು ಸಮಯ

	ತಲಪುವುದು	ಹೊರಡುವುದು
ಮಂಗಳೂರು	ಗುರುವಾರ ಬೆಳಿಗ್ಗೆ ಗಂಟೆ 9	ಶನಿವಾರ ಬೆಳಿಗ್ಗೆ ಗಂಟೆ
	ಸೋಮವಾರ ಬೆಳಿಗ್ಗೆ ಗಂಟೆ 6	ಮಂಗಳವಾರ ಬೆಳಿಗ್ಗೆ ಗಂಟೆ
ಮಲ್ಪೆ	ಗುರುವಾರ ಬೆಳಿಗೆ ಗಂಟೆ 3	ಶನಿವಾರ ಮಧ್ಯಾಹ್ನ 2-30
	ಆದಿತ್ಯವಾರ ಸಂಜೆ ಗಂಟೆ 6	ಮಂಗಳವಾರ ಮಧ್ಯಾಹ್ನ 2-30
ಕುಂದಾಪುರ		ಶನಿವಾರ ಸಂಜೆ ಗಂಟೆ 3
		ಮಂಗಳವಾರ ಮಧ್ಯಾಹ್ನ 3

ನಮ್ಮ ಉನ್ನತಿಗಾಗಿ ನಾವೇನು ಮಾಡಬೇಕು? ಇತ್ಯಾದಿ ಸಮಸ್ಯೆಗಳಿಗೆ ಸದುತ್ತರವನ್ನು ಕೊಡುವ ಪತ್ರಿಕೆ ಎಂದರೆ

ಸದ್ಧರ್ಮ ಪ್ರಚಾರಕ

ವಾ. ಚ. **1—4—0.**

ಸಂಪಾದಕರು:-

ಬಿ. ಲಕ್ಷ್ಮಣದೇವ ವಿದ್ಯಾರ್ಥಿ.

ಉತ್ಕೃಷ್ಟ ಕಥೆ, ಕವನಗಳಿಂದೊಡಗೂಡಿ, ಪ್ರತಿಮಾಸದ 16ನೇ ತಾರೀಕಿಗೆ ತಪ್ಪದೆ ಹೊರಡುವುದು.

ಸದ್ಧರ್ಮ ಪ್ರಚಾರಕ, ಕಾರ್ಯಲಯ,
ಅಳಕೆ ರಸ್ತೆ, ಮಂಗಳೂರು.

ಪ್ರವಾಸಿ.

ಅತ್ಯುತ್ತಮವಾದ ಸಚಿತ್ರ ಕನ್ನಡ. ಮಾಸಪತ್ರಿಕೆ.

ಬೋಧಪ್ರದವಾದ ಲೇಖಗಳು-ಮಹಾಪುರುಷರ ಜೀವನ ಚರಿತ್ರೆಗಳು ಉತ್ತಮ ಕಥೆಗಳು-ಆರ್ಥಿಕ ರಾಜಕೀಯ ವಿಚಾರಗಳು. ವೈಜ್ಞಾನಿಕ ವಿಷಯಗಳು-ಪರರಾಷ್ಟ್ರಗಳ ಸಮಸ್ಯೆಗಳು-ಗ್ರಂಥ ವಿಮರ್ಶೆ ಇವುಗಳ ನ್ನೊಳಗೊಂಡ ಹೊಸ ರೀತಿಯ ಮಾಸಪತ್ರಿಕೆ. ಕೈಗೆಲಸವೆಂಬ ನೂತನ ವಿಭಾಗವಿರುವ ಪತ್ರಿಕೆಯು ಇದೊಂದೇ

ವಾರ್ಷಿಕ ಚಂದಾ ರೂ 3—8—0.

ಪ್ರವಾಸಿ ಕಾರ್ಯಾಲಯ
ಕಾಸರಗೋಡು, ದಕ್ಷಿಣಕನ್ನಡ.

THE
Vijaya Bank, Ltd.

Head Office: MANGALORE. **Branch Office: Court Road, UDIPI.**

ದಿ ವಿಜಯ ಬೇಂಕ್ ಲಿಮಿಟೆಡ್,

ಹೆಡ್ ಆಫೀಸು: ಮಂಗಳೂರು. ಶಾಖೆ: ಕೋರ್ಟು ರಸ್ತೆ, ಉಡುಪಿ

ಚಾಲ್ತಿ ಠೇವಣಾತಿಗಳು ಸಾ. ಶೆ. 2. ಸೇವಿಂಗ್ಸ ಬ್ಯಾಂಕ್ ಠೇವಣಾತಿಗಳುಸಾ. ಶೆ. 3½

ಕಾಯಂ ಠೇವಣಾತಿಗಳು 3 ತಿಂಗಳ ಬಾಬ್ತು ಸಾ. ಶೆ. 3½

6 ಮತ್ತು 9 ತಿಂಗಳ ಬಾಬ್ತು ಸಾ ಶೆ. 4. 1 ವರ್ಷದ ಬಾಬ್ತು ಸಾ. ಶೆ. 5.

2 ವರ್ಷದ ಮೇಲಿನವುಗಳ ಬಾಬ್ತು ಸಾ. ಶೆ. 5½ ದರದ ಬಡ್ಡಿಯಲ್ಲಿ ಅಂಗೀಕರಿಸಲ್ಪಡುವುವು.

ಬ್ಯಾಂಕಿಗೆ ಸಂಬಂಧಪಟ್ಟ ಎಲ್ಲಾ ತರದ ವ್ಯವಹಾರಗಳು ನಡೆಸಲ್ಪಡುತ್ತವೆ—

ಅಂದರೆ—ಪ್ರೊ, ನೋಟು, ಹುಂಡಿ, ಸರಕು, ಒಡ್ಡಿಗೆ ಮೇಲೆ ಸಾಲಕೊಡಲಾಗುತ್ತದೆ. ಭಂಗಾರದ ಒಡವೆ ಮೇಲೆ ಈ ಕೆಳಗಿನ ದರದ ಬಡ್ಡಿಯಲ್ಲಿ ಸಾಲ ದೊರೆಯುವುದು.

ರೂ. 1ರಿಂದ 99ರ ವರೆಗೆ ಸಾ. ಶೆ. 9. 100ರಿಂದ 250ರ ವರೆಗೆ ಸಾ. ಶೆ. 8. ಮತ್ತು 251ರಿಂದ ಮೇಲ್ಪಟ್ಟ ಸಾಲಗಳಿಗೆ ಸಾ. ಶೆ 7.

ವಿಶೇಷ ಸೂಚನೆ:—ಬಡವರಿಗೆ ಸಹಾಯವಾಗುವಂತೆ ಕಡಿಮೆಯೆಂದರೆ ರೂಪಾಯಿ 10/ ಸಹಾ ಸಾಲಕೊಡಲಾಗುತ್ತದೆ. ಲಾಕರುಗಳು ದೊರೆಯುತ್ತವೆ.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಕೊಳ್ಳಿರಿ.

A. B. Shetty, ಚೆಯರ್‌ಮೇನ್. **K. Gopalakrishna Shetty.** ಸೆಕ್ರೆಟರಿ.

ವಿಜಯ ಬೇಂಕ್ ಲಿಮಿಟೆಡ್, ಕದ್ರಿರೋಡ್, ಮಂಗಳೂರು.

ಸ್ವದೇಶೀ ಕೈಗಾರಿಕೆಯನ್ನು ಪ್ರೋತ್ಸಾಹಿಸಿರಿ.

ಸ್ವದೇಶಿ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗೆಬಗೆಯ ಬಣ್ಣದಲ್ಲಿ, ಅಂಚಿನಲ್ಲಿ, ನಮೂನೆಯಲ್ಲಿ ದೊರೆಯುತ್ತವೆ.

ಶುದ್ಧ ಖಾದಿ ಮತ್ತು ಮಿಲ್‌ಬಟ್ಟೆಗಳೂ ವಿಕ್ರಯಿಸಲ್ಪಡುತ್ತವೆ.

P. A. PAI, BROS.
ಪಿ. ಎ. ಪೈ ಬ್ರದರ್ಸ್,
ಆಸ್ಪತ್ರೆ ಎದುರು, ಉಡುಪಿ.

ಕಸಿಗಿಡಗಳು.

ಸಪೋಡಿಲ್ಲ (ಚಿಕ್ಕು)

ಈ ಮರವು ನಮ್ಮ ಜಿಲ್ಲೆಯ ಎಲ್ಲಾ ಭಾಗದಲ್ಲಿಯೂ ಸರಿಯಾಗಿ ಬೆಳೆದು, 3ನೇ ವರ್ಷದಲ್ಲಿಯೇ ತಪ್ಪದೆ ಫಲಬಿಡುತ್ತದೆ ಒಂದು ಮರದಲ್ಲಿ ಸಾವಿರಗಟ್ಲೆ ಹಣ್ಣಾಗುವುದು. ಒಂದು ಎಕ್ರೆಯಲ್ಲಿ ವರ್ಷಕ್ಕೆ ರೂ. ಸಾವಿರದ ಮೇಲೆ ಉತ್ಪತ್ತಿಯಾಗುವುದು. ಹಣ್ಣು ಅತಿ ಮಧುರ, ಒಳ್ಳೇ ರುಚಿ, ಕಾಯಿಲೆಯವರಿಗೆ ಉತ್ತಮ ಆಹಾರ ಅದರಲ್ಲಿ ಕಬ್ಬಿಣ ಸತ್ವ ಮತ್ತು ವಿಟಮಿನ್ ತುಂಬ ಇರುವದರಿಂದ ರಕ್ತವನ್ನು ವೃದ್ಧಿಸುವದು. ವರುಷದಲ್ಲಿ ಯಾವಾಗಲೂ ಹಣ್ಣು ಇರುವುದು, ಎಲ್ಲ ತೋಟದಲ್ಲಿಯೂ ಇರತಕ್ಕದ್ದು. ಗಿಡವೊಂದರ ಕ್ರಯ ರೂ. 1-0-0 ಮಾತ್ರ. ನಮ್ಮಲ್ಲಿ ಉತ್ತಮ ಮಾವು ಮತ್ತು ಇತರ ಕಸಿ ಗಿಡಗಳು ಕೂಡ ದೊರೆಯುವವು. ಕ್ರಯಪಟ್ಟಿಗೆ ಕೆಳಗಣ ವಿಳಾಸಕ್ಕೆ ಬರೆಯುವುದು.

ಮಂಗಳೂರಲ್ಲಿ ವಿಜಯ ಬ್ಯಾಂಕಿನಲ್ಲಿಯೂ ಸ್ವಾದೇಶೀ ಸ್ಟೋರ್ಸು, ಹಂಪನಕಟ್ಟೆಯಲ್ಲಿಯೂ. ಸೋಮಯಾಜಿ ಎಂಡ್ ಕೊ, ರಥಬೀದಿಯಲ್ಲಿಯೂ ಮತ್ತು ಜಿಲ್ಲೆಯ ಎಲ್ಲಾ ಎಗ್ರಿ ಕಲ್ಚರಲ್ ಡೆಮೋನ್ಸ್ಟ್ರೇಟರಲ್ಲಿಯೂ ಮೇಲಿನ ಎಲ್ಲಾ ಗಿಡಗಳು ದೊರೆಯುತ್ತವೆ.

ಕೆ. ಎನ್. ಶೆಟ್ಟಿ. ಜನತಾ ನರ್ಸರಿ.
ಪೋಸ್ಟ್ ಕಾಪು, ದ. ಕನ್ನಡ

ನಾರದನ ತಂಬೂರಿ

ಜಗಳವಿದ್ದುದರಿಂದ। ಜಗವೆಂಬವೆಸರಾಯ್ತು|| ಗಲಭೆಯೇಗತಿ ನಮ್ಮ ಭೂಮಾತೆಗೆ || ನರನಾರಾಯಣ! ಶುಭವಾಗಲಿ ಮಾನವರೆ! ರಾಷ್ಟ್ರಬಂಧುವಿನ ಕು. ವಾಚಸ್ಪತಿಯು ಭಾರೀ ಉರಿದು ಬಿದ್ದಿದ್ದಾನೆ. ನನಗೂ ಅವನಿಗೂ ಒಂದೊಂದು ಬಿರುದು ಇಟ್ಟಿದ್ದಾನೆ. ಅವನಿಗೆ ಆ ಕೆಲಸ ಬೇಡವೆಂದು ನಾನೂ ಹೇಳುವದಿಲ್ಲ. ಆದರೆ ತನ್ನ ಟ್ರೇಡ್‌ಮಾರ್ಕಾದ ಆ 'ಕು' ಅಕ್ಷರವನ್ನು ಸೇರಿಸಿಕೊಳ್ಳಲಿಲ್ಲವೇಕೆ?

●

"ರಾಮರಾಯರೂ ಅವರ ಬಂಧುಗಳೂ ಇದಿರುಕಳಗಳನ್ನು ಪ್ರವೇಶಿಸುವದು ತಪ್ಪಲ್ಲ" "ಬಂಧುಗಳ ವರ್ತನಕ್ಕೂ ರಾಮರಾಯರ ಧೋರಣೆಗೂ ಯಾವ ಸಂಬಂಧವಿದೆ? ಅವರ ವರ್ತನಕ್ಕೆ ರಾಮರಾಯರ ಪ್ರೇರಣೆ ಕಾರಣವೆನ್ನುವದಕ್ಕೆ ಆಧಾರವಿದೆಯೆ? "–ಹೀಗೆಲ್ಲಾ ವಾದಿಸುವ ಕು. ವಾಚಸ್ಪತಿಯ ಮಾತಿನಲ್ಲಿಯೇ 'ಇದೆ, ಡಾ। ರಾಮರಾಯರೂ ಅವರ ಬಂಧುಗಳೂ ವಿರುದ್ಧ ಕಳಗಳನ್ನು ಪ್ರವೇಶಿಸಿದ್ದು ಹೌದು ಎಂಬ ಒಪ್ಪಿಗೆ. ಇಷ್ಟು ಮಾಡಿದಮೇಲೆ ನವಯುಗವನ್ನು ಅಬ್ಬರಿಸಿ ಕೇಳುವದಕ್ಕಿಂತ ಬಂಧುಗಳ ಹೆಸರನ್ನೂ ಕು. ವಾಚಸ್ಪತಿಯೇ ಹೇಳಿಬಿಡಬಹುದಿತ್ತಲ್ಲ!

●

ಬಂಧುಗಳ ವರ್ತನಕ್ಕೆ ಡಾ। ರಾಮರಾಯರ ಪ್ರೇರಣೆಯೇ ಕಾರಣವೆಂದು ನವಯುಗವಾಗಲೀ ನಾರದನಾಗಲೀ ಹೇಳಲಿಲ್ಲ. ರಾಯರ ಬೋಧನೆಗೂ ಅವರ ಬಂಧುಮಿತ್ರರ ವರ್ತನೆಗೂ ಸಂಬಂಧವನ್ನುಂಟುಮಾಡುವ ಪತ್ರಿಕಾಧರ್ಮವನ್ನು ಮಾತ್ರ ನವಯುಗವು ತೋರಿಸಿತು. ಚಿತ್ರವನ್ನು ಕಂಡ ಹುಡುಗನಂತೆ ಎಲ್ಲವನ್ನೂ ಬಾಯಿಬಿಟ್ಟದ್ದು ಕು. ವಾಚಸ್ಪತಿ! ಬಂಧುಗಳ ಪರವಾಗಿ ವಾದಿಸಲು ತಿಳಿದವನಿಗೆ ಹೆಸರು ಮಾತ್ರ ತಿಳಿದಿಲ್ಲವೆ? ಮತ್ತೇಕೆ 'ಒಬ್ಬರೆ? ಇಬ್ಬರೆ? ಸಾವಿರಮಂದಿಯೆ?' ಎಂಬ ಬೆಲೆಬಾಳದ ಅಬ್ಬರ?

●

ಪಾರ್ಲಿಮೆಂಟರೀ ಬೋರ್ಡು ರಾಮರಾಯರಿಗೆ ಮಾತ್ರ ಅನ್ಯಾಯ ಮಾಡಿದ್ದಲ್ಲವಂತೆ 'ದೇವರಾಣೆ ಅಲ್ಲ'ವಂತೆ–ಬೇರೆಯವರಿಗೂ ಮಾಡಿದೆಯಂತೆ–ಅವರ ಹೆಸರು ಹೇಳುವದಕ್ಕೆ ಮಾತ್ರ ಇದು ಸಮಯವಲ್ಲವಂತೆ!! ನೋಡಿದಿರಾ-ರಾಮರಾಯರ ಬಂಧುಗಳ ಹೆಸರು ಹೇಳದಿದ್ದುದು ಹೇಡಿತನವೆನ್ನುವ ಕು. ವಾಚಸ್ಪತಿಯ ಧೀರತನವನ್ನು!

●

'ಸುಳ್ಳಿಗೆ ಆಣೆಬಿದ್ದವರಿಗೆ ಬೇಗ ಮರಣ'ವೆಂಬ ಮಾತು ಉಂಟು. ಕು. ವಾಚಸ್ಪತಿಯು ದೇವರಾಣೆಯಿಡಲು ಹೋಗಿ ಹತ್ಯಾದೋಷದಿಂದ ಪಾರಾದ.

●

'ಇನ್ನು ಅಪ್ಪರ್ ಹೌಸಿನ ವಿಚಾರವಲ್ಲಿ ಯೋಗ್ಯರ (ಅವರ ಹೆಸರೇನು?—ನಾರದ) ಅರ್ಜಿಗಳನ್ನು ಬರೆಯಿಸಿ, ಬರಸಿ, ಮುಂದೆ ಕಳುಹಿಸಿ, ಹಿಂದೆ ಕಳುಹಿಸಿ........................ದೇವರೇ ಗತಿಯೆಂದು ಕುಳಿತ ಮಹಾನುಭಾವರೇ (ಇವರ ಹೆಸರೂ ಯಾವುದು?–ನಾರದ) ಹೇಳಬೇಕಲ್ಲದೆ ಮತ್ತಾರು ಹೇಳಬಹುದು?'–ಇದು ಕು. ವಾಚಸ್ಪತಿಯ ಹೆಸರು ಹೇಳುವ ಧೀರತನದ ಇನ್ನೊಂದು ಮಾದರಿ!

●

'ರಾಮರಾಯರ ಬಂಧುಗಳಿಗೆ ಓದುಬರಹ ಬರುತ್ತದೆ;' ನವಯುಗಕ್ಕೆ ಓದುಬರಹ ಬರುವದಿಲ್ಲವೆಂದು ಕು. ವಾಚಸ್ಪತಿಗೆ ಹೇಳಿದವರಾರು?'ರಾಮರಾಯರ ಬಂಧುಗಳು' ಎಂದು ಬರೆದದ್ದು ತಪ್ಪು' ಎಂದು ಅಕ್ಷರ ಕಲಿಸಲು ಹೊರಟಿದ್ದಾನಲ್ಲ!

●

ಡಾ। ರಾಯರ ಭಾಷಣದ ಪ್ರಸ್ತಾಪಕ್ಕೆ ನವಯುಗವು ಹೋದುದು ತಪ್ಪು. "ರಾಮರಾಯರ ಬಂಧುಗಳು" ಎಂಬ ಶಬ್ದವನ್ನುಚ್ಚರಿಸಿದುದೂ ತಪ್ಪು—ಅವೆಲ್ಲಾ ಮಡಿಯಾಗಿ ಬಂದವುಗಳು—ನವಯುಗವು ಅವುಗಳನ್ನು ಸ್ಪರ್ಶಿಸಬಾರದಿತ್ತು. ಹೀಗೆ ಒಂದೆಡೆಯಲ್ಲಿ ಅಸ್ಪೃಶ್ಯತಾಧರ್ಮವನ್ನು ಸಾರುವ ಕು. ವಾಚಸ್ಪತಿಯು ಇನ್ನೊಂದೆಡೆಯಲ್ಲಿ ಹರಿಜನ ಉಮೇದುವಾರರನ್ನು ಸಮರ್ಥಿಸುವವನಂತೆ ನಟಿಸುತ್ತಾನೆ!

●

ಮಂತ್ರಹೇಳುವ ಅಧಿಕಾರವಿಲ್ಲದ ಕೆಲವರು "ಎರಡೂ ಓಟುಗಳು ಇತ್ತ ಬರಲಿ ಸ್ವಾಹಾ; ಹರಿಜನ ಉಮೇದುವಾರರಿಗೆ ಒಂದೋಟೂ ಬೇಡ ಸ್ವಾಹಾ" ಮಾತ್ರವನ್ನು ಪಠಿಸುತ್ತಿದ್ದಾರಂತೆ. ಮಂತ್ರಗಳನ್ನು ಅನ್ಯರು ಉಚ್ಚರಿಸದಂತೆಮಾಡುವ ಹೊಣೆಹೊತ್ತಿದ್ದಾನೆ-ವಾಚಸ್ಪತಿ!

●

ಕುಂದಾಪುರ ಡಿವಿಜನಿನಲ್ಲಿ ಎರಡು ಸೀಟುಗಳಿವೆ. ಓಟರರಿಗೆ ಎರಡು ಓಟುಗಳೂ ಇವೆ. ಕೊಂಗ್ರೆಸಿನ ಇಬ್ಬರು ಉಮೇದ್ವಾರರೂ ಇದ್ದಾರೆ. ಒಬ್ಬೊಬ್ಬರಿಗೆ ಒಂದೊಂದು ವೋಟುಗಳನ್ನು ಹಾಕಿದರೆ ಎಷ್ಟಾಗುತ್ತದೆ; ಎರಡೆರಡು ವೋಟುಗಳನ್ನು ಹಾಕಿದರೆ ಎಷ್ಟಾಗುತ್ತದೆ; ಇವುಗಳನ್ನು ಕೂಡಿಸುವಷ್ಟು ಕಳೆಯುವಷ್ಟು ಓದು ಬರಹವನ್ನು ಕೊಂಗ್ರೆಸ್ ಕೆಲಸಗಾರರು ಕಲಿತಿದ್ದಾರೆ. ಕೊಂಗ್ರೆಸ್ ಬಂಧುಗಳಿಗೂ ಓದು ಬರುತ್ತದೆ, ಬರಹ ಬರುತ್ತದೆ!

●

ರಾಷ್ಟ್ರ ಬಂಧುವು ಕಪಟನಾಟಕವನ್ನಾಡುವುದಲ್ಲ. ಆದರ ಕಡೆಯಲ್ಲಿ ಓದು ಬರುವವರು, ಬರಹ ಬರುವವರು ಇದ್ದಾರಲ್ಲ; ಶಾಲೆಗಳಲ್ಲಿ ಓದು ಬರಹದೊಟ್ಟಿಗೇ ಕೂಡಿಸುವ ಕಳೆಯುವ ಲೆಕ್ಕವನ್ನೂ ಕಲಿಸುತ್ತಾರಲ್ಲ. ಆ ಕಲಿತವರನ್ನು ಕುಂದಾಪುರ ಡಿವಿಜನಿಗೆ ಕಳುಹಿಸಲಿ; "ಯಾರ ತೂಕ ಹೆಚ್ಚು" ಯಾರ ತೂಕ ಕಡಿಮೆ ಎಂಬುದನ್ನು ತೂಗುವ ತಕ್ಕಡಿಯನ್ನು ಅವರ ಕೈಗೆ ಕೊಟ್ಟೇ ಕಳುಹಿಸಲಿ. ಹಾಗೆ ಪರೀಕ್ಷಿಸದೆ ವ್ಯರ್ಥ ಸಂಜುಕಾರುವದೇಕೆ?

●

ರಾಷ್ಟ್ರಬಂಧುವು ಶ್ರೀ ಸಿ. ರಾಜಗೋಪಾಲಾಚಾರಿಯವರ ಬೋಧನೆಯನ್ನು ಅಕ್ಷರಶಃ ಪಾಲಿಸುವ ಹುಕುಂ ಹೊರಡಿಸಿದೆ. ಸಿ. ರಾಜಗೋಪಾಲಾಚಾರಿಯವರ ಭಾಷಣದಲ್ಲಿ ಹರಿಜನ ಸೀಟನ್ನು ಕಳಕೊಳ್ಳಬಾರದೆಂಬ ಅರ್ಥವಿತ್ತು; ಒಂದು ಸೀಟು ಹೋದರೂ ಭಾಷಣದ ಒಂದಕ್ಷರವೂ ಕಳೆದು ಹೋಗಬಾರದೆಂಬ ಅರ್ಥವಿರಲಿಲ್ಲ. ರಾಷ್ಟ್ರಬಂಧು ಶ್ರೀ ಸಿ. ರಾಜಗೋಪಾಲಾಚಾರಿಯವರ ಮಾತಿನ ಅಕ್ಷರಗಳಲ್ಲಿ ಮಾತ್ರ ಪ್ರೀತಿಬಿದ್ದಿದೆ! ಕುತರ್ಕಿಗೆ ಅಕ್ಷರವೇ ಆಧಾರ!

●

ಕೊಂಗ್ರೆಸ್ ಪಾಳಯದೊಳಗೆ ಕಚ್ಚಾಟ ಹಿಡಿಸುವ ಪ್ರಯತ್ನ ಕು. ವಾಚಸ್ಪತಿಯದು. 'ಜಗಳಗಂಟಿ' ಎಂಬ ಬಿರುದು ನನಗೆ ಕೊಟ್ಟು ಕೆಲಸ ತಾನು ಮಾಡೋಣ ಎಂಬ ಯೋಚನೆಯವನದು. ಈ ರಗಳೆ ನನಗೇಕೆ ಹೋಗಬಹುದಲ್ಲವೇ? "ಶಕುನಿ ತಂತ್ರವ ಹೂಡಿ ಕೆಲಸ ಕೆಡಿಸುವ ಭಟರು! ಮೇಲೇರಿ ಬರುವಾಗ ಜಾರಿಬಿಡುವೆ" ನರನಾರಾಯಣ!

—ನಾರದ.

ರೋಂನಗರದ ಪ್ರಚಂಡ ಪ್ರದರ್ಶನ

೧೯೪೧ನೆಯ ಇಸವಿಯಲ್ಲಿ ಇಟಲಿಯ ಮುಖ್ಯ ಪಟ್ಟಣವಾದ ರೋಂ ನಗರದಲ್ಲಿ ಒಂದು ಪ್ರಚಂಡ ಪ್ರದರ್ಶನವು ನಡೆಯಲು ಅಪಾರ ಏರ್ಪಾಟುಗಳು ನಡೆಯುತ್ತಿವೆ. ಈ ಪ್ರದರ್ಶನದಲ್ಲಿ ಎಲ್ಲಾ ರಾಷ್ಟ್ರಗಳವರೂ ಭಾಗ ವಹಿಸಲು ತಕ್ಕ ಏರ್ಪಾಟುಗಳನ್ನು ಮಾಡುತ್ತಿದ್ದಾರೆ.

ಈ ಪ್ರದರ್ಶನದ ಉದ್ದೇಶವು ಜಗತ್ತಿನ ಪರಿಸ್ಥಿತಿಯನ್ನು ಈ ಮೂಲಕ ತಿಳಿಯಬೇಕೆಂದೂ ಅಲ್ಲದೆ ಇಟಲಿಯ ಕೀರ್ತಿಯು ಜಗತ್ತಿನಲ್ಲಿ ಹರಡಲೆಂದೂ ಆಗಿದೆ.

ಕಟ್ಟಡಗಳನ್ನು ಕಟ್ಟುವುದಕ್ಕೂ, ಅವುಗಳನ್ನು ತಕ್ಕ ರೀತಿಯಲ್ಲಿ ಚಿತ್ರ ಕೆಲಸಗಳಿಂದ ಅಲಂಕರಿಸುವುದಕ್ಕೂ ಸುಪ್ರಸಿದ್ಧ ಶಿಲ್ಪಿಗಳ ಸಮಿತಿಯೊಂದನ್ನು ರಚಿಸಿದ್ದಾರಂತೆ.

ಈ ಪ್ರದರ್ಶನವು ನಡೆಯುವ ಸ್ಥಳವು ೯೮೮ ಎಕರೆ ವಿಸ್ತೀರ್ಣವಾಗಿದ್ದು ೧೯೨೪–೨೫ರಲ್ಲಿ ಲಂಡನ್ನಿನಲ್ಲಿ ಜರುಗಿದ ವೆಂಬ್ಲಿ ಪ್ರದರ್ಶನದ ಐದರಷ್ಟು ದೊಡ್ಡದಾಗಿದೆ.

ಪ್ರದರ್ಶನವು ಮುಗಿದ ಮೇಲೆ ಆ ಪ್ರದೇಶದಲ್ಲಿ ಒಂದು ಭಾರಿ ಉದ್ಯಾನವನ್ನು ನಿರ್ಮಿಸಲಿದ್ದಾರಂತೆ.

೯೦೬೦ ಅಸ್ಥಿಪಂಜರಗಳು

ಕ್ವೆಟ್ಟಾ ಭೂಕಂಪದಿಂದ ಉರುಳಿದ ಮನೆಮಠಗಳ ಪ್ರದೇಶವನ್ನು ಹುಡುಕಿ ಸಾಫುಮಾಡುತ್ತಿದ್ದಾರಷ್ಟೆ. ಇದುವರೆಗೆ ಆ ಗೋಡೆ ಮಣ್ಣುಗಳ ಕೆಳಗೆ ದೊರಕಿರುವ ಮನುಷ್ಯರ ಅಸ್ಥಿಪಂಜರಗಳು ೯೦೬೦ ಎಂಬುದಾಗಿ ಹೇಳಲ್ಪಟ್ಟಿದೆ.

ಪೇಟೆ ಧಾರಣೆ

ಸಾಮುಗ್ರಿಗಳು	ಮಂಗಳೂರು ಇಂದ	ಮಂಗಳೂರು ವರೆಗೆ	ಉಡುಪಿ ಇಂದ	ಉಡುಪಿ ವರೆಗೆ
ರಾಶಿ ಅಕ್ಕಿ ...	3 - 6	3—10	3— 0	3— 4
ಮುಸ್ಕತಿ ...	3— 8	4 - 4	3 -12	4— 4
ಗುಡ್ಡು ಸುಗ್ಗಿ ...	3—10	3 - 14	3— 0	3— 4
ಊರ ಅವ್ವಲ್ ಬೆಳ್ತಿಗೆ ...	4— 0	4— 4	4— 0	4— 8
ರಂಗೂನು ಬೆ. ಗೋ. ರಿಕ್ಕೆ	7— 0	7— 4	7— 0	7— 8
ಗೋದಿ ಗೋಣಿ ರಿಕ್ಕೆ ...	11— 0	13— 0	13 - 8	14— 0
ತೊಗರಿ ಗೋಣಿ ರಿಕ್ಕೆ ...	9— 8	12— 8	12— 0	13— 0
ಹುರುಳಿ ಗೋಣಿ ರಿಕ್ಕೆ ...	5 — 0	5 — 6	5— 0	5— 8
ಕಡಲೆ ಗೋಣಿ ರಿಕ್ಕೆ ...	8 — 0	12— 8	8 - 8	8 - 12
ತೊಗರಿಬೇಳೆ ಗೋಣಿ ರಿಕ್ಕೆ	11— 0	19— 0	11— 0	17— 0
ಉದ್ದು ಗೋಣಿ ರಿಕ್ಕೆ ...	9— 0	9— 8	8— 4	8— 8
ಹೆಸರು ಗೋಣಿ ರಿಕ್ಕೆ ...	7 —12	8— 0	9— 4	9— 8
ಊರುಬೆಲ್ಲ ಖಂಡಿ ರಿಕ್ಕೆ...	30— 0	32— 8	20 — 0	30— 0
ಉಪ್ಪು ಗೋಣಿ ರಿಕ್ಕೆ ..	4 2	5— 4	4— 4	4—12
ಕೊಬ್ರಿ ಖಂಡಿ ರಿಕ್ಕೆ ...	75 — 0	84 — 0	75— 0	85— 0
ಕೊಬ್ರಿ ಹಿಂಡಿ ಖಂಡಿ ರಿಕ್ಕೆ	26— 8	28 - 8	27— 0	28— 8
ಎಳ್ಳಿಂಡಿ ಖಂಡಿ ರಿಕ್ಕೆ ...	26 — 4	27— 8	20— 0	21— 4
ಕೊಬ್ರಿ ಎಣ್ಣೆ ಮಣ ರಿಕ್ಕೆ	6— 0	7— 0	7— 0	7—12
ಎಳ್ಳೆಣ್ಣೆ ಮಣ ರಿಕ್ಕೆ ...	7— 0	...	6 — 0	6— 4
ಚಿಮಿಣಿ ಎಣ್ಣೆ ಪೆಟ್ಟಿಗೆ ರಿಕ್ಕೆ	6— 5	7 - 5	6— 2	6— 8
ಮೋರಿಸ ಸಕ್ಕರೆ ಮು ರಿಕ್ಕೆ	3— 2	3— 4	2—15	3— 2
ಮೆಣಸು ...	2— 8	5— 0	3 — 0	3— 4
ಸಾಸಿವೆ ಮುಡಿ ರಿಕ್ಕೆ ...	5— 4	5- 8	5— 8	5—12
ಕೊತ್ತಂಬರಿ ಮುಡಿ ರಿಕ್ಕೆ ...	2— 8	3 — 0	2—12	3— 8
ಕಾಳುಮೆಣಸು ಖ. ರಿಕ್ಕೆ...	100— 0	120 — 0	110 - 0	120 — 0
ಗೇರುಬೀಜ ಮು ರಿಕ್ಕೆ ...	3 - 4	3— 8	4— 4	...
ಕಬ್ಬಿಣ ಖಂಡಿ ರಿಕ್ಕೆ ...	35— 0	37— 8	45— 8	50— 0
ತಾಂಬ್ರ ತಗಡು ಮು. ರಿಕ್ಕೆ	12— 4	12— 8	14— 8	...
,, ಪಾತ್ರಗಳು ಮು. ರಿಕ್ಕೆ	12 — 8	14 — 0	16— 0	17— 0
ಚೀನಿ ಬೆಳ್ಳಿ ಸೇರು ರಿಕ್ಕೆ...	13— 8	15— 0	13 —12	14 - 0
ಹಿತ್ತಾಳೆ ತಗಡು ಮು. ರಿಕ್ಕೆ	10 — 0	10 — 8	11— 0	...
ಪವನು ರಿಕ್ಕೆ ...	22— 7	22— 8	22— 8	...
ಹುಣಸೆ ಹುಳಿ ಖಂಡಿ ರಿಕ್ಕೆ	40— 0	45— 0	45— 0	50— 0
ನೇಟಿವ್ ಕಾಫಿ ಖಂಡಿ ರಿಕ್ಕೆ	170 — 0	180 — 0	160— 0	170— 0
ಫಟೇರಿ ಕಾಫಿ ಖಂಡಿ ರಿಕ್ಕೆ	175— 0	195— 0	170 — 0	187— 8
ಮಡಿಕೇರಿ ಏಲಕ್ಕಿ ...	50 — 0	55— 0	70— 0	75— 0
ತುಪ್ಪ ಮಣ ರಿಕ್ಕೆ ...	17 — 0	18 — 0	14— 0	15— 0
ಏಲಕ್ಕಿ ಬೀಜ ಮಣ ರಿಕ್ಕೆ	80— 0	85— 0	70— 0	80 — 0

ಪ್ರಾಮುಖ್ಯ ಪ್ರಕಟಣೆ

ಅಮೃತಾಂಜನ

— ಡಿಪೋವಿನ ರಿಂಗ್‌ವರ್ಮ್ ಮುಲಾಮು —

ಇಷ್ಟರ ವರೆಗಣ ನಮ್ಮ

ವಿಲಿಯಮ್ ಎಂಡ್ ಕೋ ರವರ

ರಾಜ ಮತ್ತು ರಾಣಿಯ ಟ್ರೇಡ್‌ಮಾರ್ಕುಳ್ಳ ರಿಂಗ್‌ವರ್ಮ್ ಮುಲಾಮು ಈ ಕೆಳಗಣಂತೆ ವ್ಯತ್ಯಾಸಮಾಡಲಾಗಿದೆ.

ಅಮೃತಾಂಜನ ಡಿಪೋವಿನ ತ್ರಿವರ್ಣದ 'ರೈಸಿಂಗ್ ಸನ್'

ಈ ಮೇಲಿನ ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು ನಮ್ಮ ಗಿರಾಕಿದಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು.

ನಮ್ಮ ಟ್ರೇಡ್‌ಮಾರ್ಕಿನ ಮಾರ್ಪಾಟದಿಂದ ನಮ್ಮ ಔಷಧಿ ತಯಾರಿಯಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲೆಂಬ ಕುರಿತು ನಾವು ಈ ಮೂಲಕ ಭರವಸೆ ಕೊಡುತ್ತೇವೆ.

ಅಮೃತಾಂಜನ ಡಿಪೋ, — ಬೊಂಬಾಯಿ, ಮದ್ರಾಸು, ಕಲ್ಕತ್ತ.

ಕೇವಲ ಎರಡೇ ಆಣೆಗಳಲ್ಲಿ ೨೫ ರೂಪಾಯಿ ಬಹುಮಾನ

ಅಖಿಲ ಕನ್ನಡ ನಾಡಿಗೆ ಪ್ರೀತಿಯಾಗಿರುವ

ಕಥಾಕುಂಜ (ಮಾಸಪತ್ರಿಕೆ)

ನಯನಮನೋಹರವಾಗಿ ಹೊಸ ಹೊಸ ಏರ್ಪಾಡುಗಳಿಂದ ಅಲಂಕೃತವಾಗಿ ಡಿಸೆಂಬರದಲ್ಲಿ ೬ನೆಯ ವರುಷದ ೧ನೆಯ ಸಂಚಿಕೆಯು ಪ್ರಕಟವಾಗುವದು. ಅದ್ದರಿಂದ ಕನ್ನಡಾಭಿಮಾನಿಗಳು ಈಗಲೆ ಮುಂಗಡ ಹಣ ಕಳುಹಿಸಿ ಚಂದಾದಾರರಾಗಬೇಕು.

ಚಂದಾದಾರರಿಗೆ ೨೫ ರೂಪಾಯಿ ಬಹುಮಾನ.

ಈ ಸಂಧಿ ಕಳೆಕೊಳ್ಳಬಾರದು. ಕಥಾಕುಂಜವನ್ನು ಕೊಂಡುಕೊಳ್ಳಲು ಎಲ್ಲರಿಗೂ ಅನುಕೂಲವಾಗಲೆಂದು ಚಂದಾ ಹಣವನ್ನು ಇಳಿಸಲಾಗಿದೆ.

ಇಳಿಸಿದ ಚಂದಾ ೧-೮-೦ (ಅಂಚವೆಚ್ಚ ಬೇರೆ) ಶಾಲೆ, ಕಾಲೇಜು, ಲೈಬ್ರರಿಗಳಿಗೆ ೨-೮-೦

ಮೈಸೂರು, ಮುಂಬೈ ವಿದ್ಯಾಖಾತೆಯವರಿಂದ ಶಾಲೆ ಕಾಲೇಜುಗಳ ವಾಚನಾಲಯಕ್ಕೆ ಮಂಜೂರಾಗಿದೆ. ಜಾಹೀರಾತುದಾರರಿಗೆ ಸುವರ್ಣಸಂಧಿ! ಪತ್ರಿಕೆಗಳನ್ನು ಮಾರಾಟಮಾಡಲು ಎಲ್ಲ ನಗರಗಳಲ್ಲಿ ಪ್ರಾಮಾಣಿಕ ಏಜಂಟರು ಬೇಕು.

ವಿಶೇಷ ಮಾಹಿತಿ ಹಸ್ತಪತ್ರಿಕೆ ನೋಡಿರಿ.

ವ್ಯವಸ್ಥಾಪಕ— **ಕಥಾಕುಂಜ, ಬೆಳಗಾಂವಿ.**

DIAMONDS! DIAMONDS!!

K. Ramachandra Krishna Shet

Near Mission High School, *Mangalore*

SUPERFINE UP TO DATE CUTTING! **ವಜ್ರಗಳು** BEST BRILLIANCY!!

ಉತ್ಕೃಷ್ಟ ತರಗತಿಯ ಚುನ್ನಾತ (first quality, selected) ಎಮ್‌ಸ್ಟ್ರಡಮ್ಮಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ. ಕೊಂಡುಕೊಳ್ಳುವವರಿಗೆ ಬಜಾರ ಧಾರಣೆಗಿಂತ 5 ಪರ್ಸಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ. ಇದನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ. ಇದರ ಶಾಖೆಯೊಂದನ್ನು ಗವರ್ನ್‌ಮೆಂಟ್ ಕೊಲೆಜಿನ ಎದುರುಗಡೆ ತೆರೆಯಲಾಗಿದೆ.

ಕೆ. ರಾಮಚಂದ್ರ ಕೃಷ್ಣ ಶೇಟ್,

ಜುವೆಲರ್, ಮಿಶನ್ ಹ್ಯಾಸ್ಕೂಲು ಬಳಿ, ಮಂಗಳೂರು.

ಬೊಂಬೈ ಲೋಂಡ್ರಿ

ಉಡುಪಿ, ಹೊಸ್ಪಿಟಲ್ ರೋಡ್.

ನಮ್ಮಲ್ಲಿ ವಸ್ತ್ರಗಳನ್ನು ಜಾಗ್ರತೆಯಿಂದ ಮಡಿಮಾಡಿ, ಕ್ಲಪ್ತವ್ಯಾದೆಗೆ ಕೊಡುವುದಲ್ಲದೆ, ಊಲನ್, ಸಿಲ್ಕು ಮತ್ತು ಜರಿವಸ್ತ್ರಗಳನ್ನು ನಾಜೂಕಾಗಿ ಡ್ರ್ಯಕ್ಲೀನಿಂಗ್ ವಗೈರೆ ಮತ್ತು ಬೇಕಾದ ನಮೂನೆಯಲ್ಲಿ ಖಾತ್ರಿಯಾದ ರಂಗಿನ ಕೆಲಸವನ್ನು ಸಹ ಅತಿ ಸುಲಭ ದರದಲ್ಲಿ ಮಾಡಿಕೊಡಲಾಗುವುದು.

ಹೆಚ್ಚಿನ ಮಾಹಿತಿ ಬಗ್ಗೆ ಕಂಪೆನಿಯಲ್ಲಿ ವಿಚಾರಿಸುವುದು.

ಪ್ರೊಪ್ರೈಟರ್: ಯಮ್. ಯಸ್. ಭಟ್ಕಳ್.

ಉತ್ತಮ ವರ್ಗದ ಶ್ರೇಷ್ಠವಾದ **ಸರಸ್ವತಿ** ಸ್ತ್ರೀಸಾಹಿತ್ಯ ಸಚಿತ್ರ ಮಾಸಪತ್ರಿಕೆ

ಇಡೀ ಕರ್ಣಾಟಕದಲ್ಲಿ ಸ್ತ್ರೀಯರ ಅಭ್ಯುದಯಕ್ಕಾಗಿ ಪ್ರಚುರಪಡಿಸುತ್ತಿರುವ ಪತ್ರಿಕೆಯು ಇದೊಂದೇ. ಈ ಪತ್ರಿಕೆಯ ಹದಿನಾರನೆಯ ಸಂಪುಟವು 1937ನೇಯ ಜನವರಿ ತಿಂಗಳಿನಿಂದ ಪ್ರಾರಂಭವಾಗಿದೆ. ಈ ಪತ್ರಿಕೆಯಲ್ಲಿ ಸ್ತ್ರೀಯರ ಉನ್ನತಿಗೆ ಅತ್ಯಾವಶ್ಯಕವಾದ ಶಿಕ್ಷಣ-ಸಾಹಿತ್ಯ ಕಲೆ-ಆರೋಗ್ಯ-ಪಾಕಶಾಸ್ತ್ರ-ಸಮಾಜ ಸುಧಾರಣೆ ಇವುಗಳಿಗೆ ಸಂಬಂಧಪಟ್ಟ ಲೇಖನಗಳೂ, ಸಣ್ಣ ಸಣ್ಣ ಕಥೆಗಳೂ, ನಾಟಕಗಳೂ ಕರ್ಣಾಟಕದ ಸುಪ್ರಸಿದ್ಧ ಲೇಖಕ ಲೇಖಿಕೆಯರಿಂದ ಬರೆಯಲ್ಪಟ್ಟು ಪ್ರಕಟವಾಗುವವು. ಮಕ್ಕಳ ಸಲುವಾಗಿ 'ಮಕ್ಕಳ ಪುಟಗಳು' ಬೇರೆ ಪ್ರಕಟವಾಗುವುವು. ಮೈಸೂರು, ಮುಂಬೈ ವಿದ್ಯಾ ಇಲಾಖೆಯವರಿಂದ ಸರ್ಕಾರದ ಶಾಲೆಗಳಿಗೂ ವಾಚನಾಲಯಗಳಿಗೂ ಮಂಜೂರಾಗಿದೆ. ಪ್ರಕಟನೆಗೆ ಅತ್ಯುತ್ತಮವಾದ ಮಾಸಪತ್ರಿಕೆ.

ವಾರ್ಷಿಕ ಚಂದಾ ರೂ. 3—0—0 ಮಾತ್ರ. ವಿ. ಪಿ. ಹಾಸಲುಬೇರೆ.

ಸರಸ್ವತಿ ಕಾರ್ಯಾಲಯ,

ಚಾಮರಾಜಪೇಟೆ, ಬೆಂಗಳೂರು ನಗರ

ದಿ ನ್ಯೂ ಗ್ಲಾಸ್ ಎಂಪೋರಿಯಮ್

ಪೋಸ್ಟಾಫೀಸ್ ರೋಡ್, ಉಡುಪಿ

ನಮ್ಮಲ್ಲಿ ಎಲ್ಲಾ ತರದ ಗ್ಲಾಸ್‌ವೇರ್, ಎನಾಮಲ್‌ವೇರ್ ಪೋರ್ಸಿಲಿನ್‌ವೇರ್, ಲೇಂಪ್ಸ್ ಲಾಟೀನು, ಪೆಟ್ರಮೇಕ್ಸ್ ಇತ್ಯಾದಿ ಎಲ್ಲಾ ತರದ ಸಾಮಾಗ್ರಿಗಳು ಮತ್ತು ಹೊಟೇಲು-ಸ್ಕೂಲುಗಳಿಗೆ ಉಪಯುಕ್ತವಾದ 'ಟೀಸೆಟ್' ಕಪ್ಸ್ ಸಾಸರ್, ಪ್ಲೇಟ್ಸ್, ಥರ್ಮಸ್‌ಫ್ಲಾಸ್ಕ್, ಜಗ್, ಟ್ರೇಫ್ಲವರ್ ವೇಜ್, ಮತ್ತು ಪ್ರಜಂಟೇಶನ್ ಬಗ್ಗೆ ನಾನಾತರದ ಚಲೋ ಫೆನ್ಸಿ, ಗ್ಲಾಸ್‌ವೇರ್ ಸಾಮಾನುಗಳೂ ಸಹಾ ಕಡಿಮೆ ಬೆಲೆಗೆ ಸಿಕ್ಕುವವು.

ನಾವು ಹೊಸತಾಗಿ ಎಲ್ಲಾ ಸಾಮಾನುಗಳನ್ನು ಡೈರೆಕ್ಟ್ ತರಿಸಿರುವುದರಿಂದ ಯಾವತ್ತೂ ಸಾಮಾನುಗಳು ಕಡಿಮೆ ಬೆಲೆಗೆ ಕೊಡಲು ಅನುಕೂಲವಿದೆ. ಕಾರಣ ಗ್ರಾಹಕರು ಸ್ವತಹಾ ನಮ್ಮ 'ಶೋರೂಮ'ನ್ನು ಸಂದರ್ಶಿಸಿ ಮಾಲನ್ನೂ, ದರಗಳನ್ನೂ ಪರಿಶೀಲಿಸಿ ಕೊಂಡುಕೊಳ್ಳಬೇಕಾಗಿ ವಿನಂತಿ.

THE GENERAL STORES, UDIPI

The only Reliable House for quality goods of every description

---

ದೀರ್ಘಕಾಲದ ರೋಗಗಳಿಂದ ಇನ್ನೂ ಇನ್ನೂ ವೃಥಾ ನರಳುತ್ತಿರುವುದೇಕೆ?

ನಾಯಕ್ ಬ್ರದರ್ಸರ ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕ.

ಇವರ ಅತ್ಯಮೂಲ್ಯವಾದ ಔಷಧಗಳ ಸೇವನೆಯಿಂದ ಶೀಘ್ರದಲ್ಲೇ ಗುಣಹೊಂದಬಹುದಲ್ಲವೇ?

ಇವರ ಔಷಧಗಳ ವೈಶಿಷ್ಟ್ಯ ಏನು?

—o—

- ದೇಶೀಯ ಉದ್ಯಮ
- 100 ವರ್ಷಗಳ ಅನುಭವದಿಂದ ತಯಾರಿ.
- ಶಾಸ್ತ್ರೀಯ ರೀತಿಯ ಸಿದ್ಧತೆ.
- ಅತ್ಯಂತ ಗುಣಕಾರಿ.
- ಸ್ವರ್ಣ, ರಜತಪದಕಗಳನ್ನು ಪಡೆದ ದಿವ್ಯೌಷಧಗಳು.
- ಅತ್ಯಂತ ಕಡಿಮೆ ಬೆಲೆ.

ಭುವನೇಂದ್ರ ತ್ರೈರತ್ನಗಳು

ಗುಡಪಿಪ್ಪಲಿ
(ಮಕ್ಕಳ ಲೀವರ್ ರೋಗಕ್ಕೆ ಅತ್ಯುತ್ತಮ)

ಗರ್ಭಪಾಲ
(ಗರ್ಭಶೂಲೆ, ಗರ್ಭಸ್ರಾವಕ್ಕೆ ದಿವ್ಯೌಷಧ)

ಚಂದ್ರಮಸ್
(ವಾಂತಿಭೇದಿ, ಅತಿಸಾರಗಳ ಮೇಲೆ)
(ಅತ್ಯಂತ ಗುಣಕಾರಿ)

ಶಾಸ್ತ್ರೀಯರೀತ್ಯಾ ತಯಾರಿಸಿದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲಗಳು—ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ.

ನಮ್ಮ ಪ್ರತಿನಿಧಿಗಳಿಲ್ಲದ ಕಡೆಗಳಲ್ಲಿ ವ್ಯವಹಾರಕುಶಲರೂ, ವ್ಯಾಪಕರೂ, ಯೋಗ್ಯರೂ ಆದ ಏಜಂಟರು ಬೇಕು. ಅವರಿಗೆ ವಿಪುಲವಾದ ಸೌಕರ್ಯಗಳಿವೆ.

ಹೆಚ್ಚಿನ ಮಾಹಿತಿಗೂ, ಸೂಚಿಪತ್ರಕ್ಕೂ, ವ್ಯವಹಾರನಿಯಮಕ್ಕೂ ಬರೆಕೊಳ್ಳಿರಿ.

ಪ್ರೇಮ ವಿದ್ಯಾಪೀಠ, ತುಂಗಭದ್ರಾ, (ಬಳ್ಳಾರಿ ಜಿಲ್ಲಾ)

ಇದರ ಹೊಸವರ್ಷವು ಜುಲೈಯಲ್ಲಿ ಮೊದಲಾಗುತ್ತದೆ ಮರ್ಯಾದೆಯ ಉದ್ಯೋಗ ಬೇಕಾಗಿದ್ದರೆ ಇಲ್ಲಿ ಶಿಕ್ಷಣವನ್ನು ಪಡೆಯಿರಿ ಮುಲ್ಕಿ, ಅಪ್ಪರ್ ಸೆಕೆಂಡರಿ, ಮೆಟ್ರಿಕ್ ಸ್ಕೂಲ್ ಫೈನಲ್ ಇತ್ಯಾದಿ ಪಾಸ್ ಆದವರೆಲ್ಲರಿಗೂ ಯೋಗ್ಯತೆಗೆ ತಕ್ಕಂತೆ ವಿಧ ವಿಧವಾದ ಕೋರ್ಸ್ ಗಳಿವೆ. ಪ್ರಾಸ್‌ಫೆಕ್ಟಸ್ ಮಾಹಿತಿಗಾಗಿ ಕೂಪಲೆ ೩ ಆಣೆ ಸ್ಟ್ಯಾಂಪು ಇಟ್ಟು ಬರೆಯಿರಿ.

ಮಹೋಪಾಧ್ಯಾಯಾ ಡಾ| ಸುಮತಿಬಾಯಿ,

ಬಿ. ಎ ಎಲ್ ಟಿ, ಎಫ್. ಸಿ ಎಮ್. ಎಸ್. ಭಿಷಗ್ರತ್ನ. ರಿಜಿಸ್ಟ್ರಾರ್.

LAXMI BRAND COFFEE POWDER.

Pure & Superior quality, will last long without losing its flavour and colour

TRADE MARK

Use always this LAXMI BRAND COFFEE POWDER prepared from the best & choicest Coffee Beans of Nilgiris. (Hills)

WANTED AGENTS in Southern India (samples available)

ಉತ್ಕೃಷ್ಟ ಕಾಫಿಬೀಜಗಳಿಂದ ತಯಾರಿಸಲ್ಪಟ್ಟ ಸುವಾಸನೆಯುಳ್ಳ ನಮ್ಮ ಲಕ್ಷ್ಮೀಮಾರ್ಕಿನ ಕಾಫಿಹುಡಿಯನ್ನೇ ಸದಾ ಉಪಯೋಗಿಸಿರಿ. ಏಜಂಟರಿಗೆ ಯೋಗ್ಯ ಕಮಿಶನ್ ಕೊಡಲಾಗುವದು. ಹೆಚ್ಚಿನ ಮಾಹಿತಿ ಬಗ್ಗೆ ಕೆಳಗಿನ ವಿಳಾಸಕ್ಕೆ ಬರೆದು ತಿಳಿಯಬಹುದು.

FOR SALE

Fire Resistance Steel Iron Safes. latest pattern.

ನಮ್ಮಲ್ಲಿ ಕಬ್ಬಿಣದ ಟ್ರೆಜರಿಗಳು ಸದಾ ಮಾರಾಟಕ್ಕೆ ಸಿದ್ಧವಿರುತ್ತವೆ. ತಿಂಗಳುಗಟ್ಲೆ ಕಂತುಗಳಿಂದಲೂ ಮಾರುವ ಏರ್ಪಾಡಿದೆ.

For Prices & Particulars Apply to—

K. K. Shanbhag & Sons

Court Road, UDIPI, S K



Sold also by Instalments

ಮಾಸ] **ವಿಶ್ವವಾಣಿ** [ಪತ್ರಿಕೆ.

ಸಂಪಾದಕರು—ಅ. ನ. ಕೃಷ್ಣರಾಯರು.

ಸಂಸ್ಕೃತಿಯ ಪ್ರಸಾರಕ್ಕಾಗಿ ಕರ್ನಾಟಕದಲ್ಲಿ ಹೊರಟಿರುವ ಪತ್ರಿಕೆ ಇದೊಂದೇ. ಜಗತ್ತಿನ ಸಾಂಸ್ಕೃತಿಕ ಚಲನವಲನಗಳ ಸುದ್ದಿಗಳೆಲ್ಲಾ ಇದರಲ್ಲಿ ಪ್ರಕಟವಾಗುತ್ತವೆ.

ಚಿತ್ರವಿಭಾಗದ ವೈಶಿಷ್ಟ್ಯ—ಜಗತ್ತಿನ ಯಾವದೇ ಪತ್ರಿಕೆಯಲ್ಲಿಯೂ ಪ್ರಕಟವಾಗದಿರುವ ಅನೇಕ ಚಿತ್ರಗಳು 'ವಿಶ್ವವಾಣಿ'ಗೆ ವಿಶೇಷಲು

ಆದುದರಿಂದ ಇಂದೇ ಚಂದಾದಾರರಾಗಿರಿ.

ಸಾಮಾನ್ಯ ಚಂದಾದಾರರಿಗೆ (ವರ್ಷಕ್ಕೆ)	.. ..	ರೂ. ೩—೮—೦
,, ,, (೬ ತಿಂಗಳಿಗೆ)	... ...	ರೂ. ೨—೦—೦
ಶಾಲೆ, ಕಾಲೇಜು, ವಾಚನಾಲಯ, ಸಾರ್ವಜನಿಕ ಸಂಸ್ಥೆಗಳಿಗೆ (ವರ್ಷಕ್ಕೆ)		ರೂ. ೫—೦—೦

ವಿಶ್ವವಾಣಿಯು ಮೈಸೂರು, ಮುಂಬಯಿ, ಮದರಾಸು, ಹೈದರಾಬಾದು, ಕೊಡಗು, ಕರ್ನಾಟಕಗಳಲ್ಲಿ ಮಾತ್ರವಲ್ಲದೆ ಕನ್ನಡಿಗರು ನೆಲಸಿರುವ ಎಲ್ಲ ಕಡೆಯಲ್ಲಿಯೂ ಪ್ರಚುರವಾಗುತ್ತದೆ

ಆದುದರಿಂದ 'ವಿಶ್ವವಾಣಿ'ಯಲ್ಲೇ ಜಾಹೀರಾತನ್ನು ಕೊಡಿರಿ.

ಹೆಚ್ಚು ವಿಚಾರಗಳಿಗೆ ಬರೆಯಿರಿ—

ವ್ಯವಸ್ಥಾಪಕ—'ವಿಶ್ವವಾಣಿ,' 'ಅನ್ನಪೂರ್ಣ', ವಿಶ್ವೇಶ್ವರಪುರಂ, ಬೆಂಗಳೂರು ನಗರ.

ನಮ್ಮ ಜರಿ ಪೀತಾಂಬರ, ರೇಶ್ಮೆ ಮಡಿಗಳಿಗೆ ಗಮನಕೊಡಿರಿ.

S. U. N. & CO. ***Choukhamba, Benares City.***

ಮೂರು ಇನಾಮುಗಳು.

THIS MAN WISHES HE HAD

ಶ್ರೀ ಕಾಶಿಯಲ್ಲಿ ತಯಾರಾಗತಕ್ಕ ರೇಶ್ಮೆ ಮಾಲುಗಳ ಕೆಟಲಗು 1, ಕಾಶೀಸಕ್ಷೆ 1, ವಿಶ್ವೇಶ್ವರ ಪಟ 1, ಈ 3 ಸಾಮಾನುಗಳು 1 ಆಣೆಸ್ಟ್ಯಾಂಪು ಕಳುಹಿಸಿದರೆ ಇನಾಮಾಗಿ ಕಳುಹಿಸಲಾಗುವುವು, ಸ್ಟ್ಯಾಂಪು ಬಾರದಿದ್ದರೆ ಈಗಿನ ಫೇಶನಿಗೆ ತಕ್ಕಂತೆ ಜರೀ ಕೆಲಸಗಳಿಂದ ತಯಾರಿಸಿದ ರೇಶ್ಮೆ ಸೀರೆಗಳೂ, ಖಣ, ಮಡಿ ಕದಪಾವಿನ್ನ, ಪೇಟಾ, ಕೋಟಿಂಗ್, ಶರ್ಟಿಂಗ್ ಶಿಲ್ಕುಗಳೂ, ಕಾಶ್ಮೀರ ಶಾಲುಗಳೂ, ಊಲನ್ ಚೌಕ, ಧಾವಳಿ, ನಾಮದಾ, ತರತರದ ರುದ್ರಾಕ್ಷಿಗಳೂ ಸಾಮಾನುಗಳೇ ಮೊದಲಾದ ಅನೇಕ ತರದ ಸಾಮಾನುಗಳ ಕೆಟಲಾಗು 1 ಮಾತ್ರ ಇನಾಂ. ಈಗಿನ ಹೊಸನಮೂನೆಯ ಮಡಲು ಬುಟ್ಟಿ ಹಾಕಿದ ಜರೀ ಸೀರೆ ಎಲ್ಲಾ ರಂಗುಗಳಲ್ಲಿ ರೂ. 20ರಿಂದ 55 ಮಡಲು ಸಾದಾ 16ಮೊಳದ ಸೀರೆ 1ಕ್ಕೆ ರೂ. 16 ರಿಂದ ರೂ. 35ರ ವರೆಗೆ. ಅರೆ ಕಡಮೆ 16ಮೊಳ ಕ್ವಾರ್ ಅಂಚು ರೂ. 10½ ಯಿಂದ ರೂ. 16 ಖಣ 1ಕ್ಕೆ ರೂ. 1¼ರಿಂದ ರೂ 10ರ ವರೆಗೆ. ಪೋಸ್ಟು ಖರ್ಚು ಪ್ರತ್ಯೇಕ. ಆರ್ಡರಿನಂತೆ ಸಾಮಾನುಗಳನ್ನು ಸರಿಯಾದ ಸುಲಭ ದರದಿಂದ ಕಳುಹಿಸಲಾಗುವುದು.

ಶಿರೋಮಣಿ ನಾರಾಯಣಾಚಾರ್ಯ & ಕಂಪೆನಿ, ಚೌಕಂಬಾ, ಬನಾರಿಸ್, ಕಾಶಿ.

USE

SUVASINI AGARBATHIES

(REGD.) **SRI BHARATHA VASTU MANDIRA, UDIPI**

ಮಹಾ ಕವಿ ಪೊನ್ನನ

ಶಾಂತಿಪುರಾಣವ

ನವಿಯನ್ನು ನೋಡಿದ್ದೀರಾ?

ಕನ್ನಡ ಕಾವ್ಯದ ರತ್ನತ್ರಯದಲ್ಲೊಂದೆಂದು

ಇದು ಪ್ರಸಿದ್ಧವಾಗಿದೆ

ಸುಂದರವಾದ ಮುದ್ರಣ, ಸುಂದರವಾದ ಬೈಂಡು

ಬರೆಯಿರಿ--

ಸಪ್ಲೈ ಏಜೆನ್ಸಿ, ಲಿಮಿಟೆಡ್, ಉಡುಪಿ

Printed by P VENKATARAMANACHARYA for & on behalf of SUPPLY AGENCY LTD., at THULUNAD PRESS UDIPI and Published by K. H SHETTY at "NAVAYUGA" OFFICE, UDIPI.

Registered No. M. 3618

೨೦ ಪುಟಗಳು---ಒಂದಾಣೆ

NAVAYUGA
A Nationalist Kanarese Weekly, UDIPI, S. K.

It will pay you to advertise in 'NAVAYUGA' The Leading Nationalist Kanarese Weekly of Karnatak
FOR RATES OF ADVT. Etc
APPLY TO THE MANAGER

ನವಯುಗ

ವಾಚಕರನೇಕರ
ಅಪೇಕ್ಷೆಯಂತೆ ಮುದ್ರಿಸಲ್ಪಟ್ಟ,
ಮಂಗಳೂರು ಉಡುಪಿಗಳಲ್ಲಿ
ಜಯಶೀಲವಾಗಿ
ಅಭಿನಯಿಸಲ್ಪಟ್ಟ
ಜನಪ್ರಿಯವಾದ ನಾಟಕ
ವ್ಯಭಿಚಾರಿಣಿ ಯಾರು?
ಕೆಲವೇ ಪ್ರತಿಗಳು ಉಳಿದಿವೆ.
ಬೆಲೆ ೦ ೮ ೦
ಕಿರಿಯರ ಪ್ರಪಂಚ, ಉಡುಪಿ.

VOL. XXV-NO. 25

18-2-1937

ಮೂಡ ಬಾನಿನ ಕಣ್ಣು ಕೆಂಗಿಡಿಯು ಕಾರುತಿದೆ,
ಬನದ ನಾಡೊಳು ಮೊಳಗುತಿದೆ ತುಮುಲನಾದ;

ವಾರಪತ್ರಿಕೆ
ಸಂಪಾದಕ: ಕೆ. ಕೆ. ಶೆಟ್ಟಿ.

ಮೂಡುವುದು ತಂಬೆಳಕ ತಿಂಗಳಿನ ಮೊಗವಲ್ಲ,
'ನವಯುಗ'ದ ರುದ್ರರವಿಯಾರಕ್ತ ಬಿಂಬ.

ಸಂಪುಟ ೧೬] ಉಡುಪಿ, ಗುರುವಾರ ೧೮ ಫೆಬ್ರವರಿ, ೧೯೩೭ [ಸಂಚಿಕೆ ೨೫

THE

Canara Industrial & Banking SYNDICATE, LIMITED.

ESTD: [INCORPORATED IN BRITISH INDIA] 1925

Head Office:
MUKUNDA NIVAS,
UDIPI, S. I.

BRANCHES:

1 BANGALORE CITY	16 KARWAR
2 BELGAUM	17 KUMTA
3 BYADGI	18 ANKOLA
4 BELLARY	19 HONAVAR
5 ADONI	20 BHATKAL
6 HOSPET	21 KARKALA
7 NANDYAL	22 BRAHMAVAR
8 PRODATTUR	23 HUNGARCUTTA
9 TADPATRI	24 SIRSI
10 TALIPARAMBA	25 SAGAR
11 HUBLI	26 KANHANGAD
12 GADAG	27 COONDAPOOR
13 UDIPI	28 PAYYANUR
14 UPPINANGADI	29 CANNANORE
15 KASARGODE	30 MANGALORE

A branch at BOMBAY will be opend in April next.

We stand for all that is BEST in MODERN BANKING SERVICE

OPEN AN ACCOUNT TO-DAY IN THIS

Pioneer & Highly Progressive

BANK OF KARNATAKA

AND BE

A SATISFIED CUSTOMER.

ALL KINDS OF BANKING BUSINESS TRANSACTED ON EASY TERMS.

Total Working Funds exceed Rs. 35 Lakhs

Apply for Rules of Business

'MUKUNDA NIVAS'
UDIPI
22—12—1936

P. A. Pai Brothers,
Managing Agents

ದಿ ಕುಂದಾಪುರ ಬೇಂಕ್ ಲಿಮಿಟೆಡ್ ಕುಂದಾಪುರ

ಬ್ರಾಂಚ್—ಬ್ರಹ್ಮಾವರ.

ಚಾಲ್ತಿ ಮತ್ತು ಸೇವಿಂಗ್ಸ್ ಬೇಂಕ್ ಠೇವಣಾತಿಗಳು ಒಳ್ಳೇ ದರದ ಬಡ್ಡಿಯಲ್ಲಿಯೂ ಖಾಯಂ ಠೇವಣಾತಿಗಳು 3 ತಿಂಗಳಿಗೊಮ್ಮೆ ಸಾಲಿಯಾನ್ **ಶೇಕಡಾ ರೂಪ್ಯಾ 4½,** 6 ತಿಂಗಳಿಗೆ ಸಾಲಿಯಾನ್ ಶೇಕಡಾ ರೂಪ್ಯಾ 5%, 12 ತಿಂಗಳಿಗೆ ಸಾಲಿಯಾನ್ ಶೇಕಡಾ ರೂಪ್ಯಾ 6%, 24 ತಿಂಗಳಿಗೆ ಸಾಲಿಯಾನ್ ಶೇಕಡಾ 6½% ದರದ ಬಡ್ಡಿಯಲ್ಲಿ ಅಂಗೀಕರಿಸಲ್ಪಡುವುವು.

ಒಂದು ವರುಷದ ಯಾ ಹೆಚ್ಚಿಗೆ ಅವಧಿಯ ಖಾಯಂ ಠೇವಣಾತಿಗಳಿಗೆ ಮೇಲೆ ಕಾಣಿಸಿದ ದರದಲ್ಲಿ 6 ತಿಂಗಳಿಗೊಮ್ಮೆ ಬಡ್ಡಿ ಕೊಡಲಾಗುವುದು. ಬೇರೆ ಎಲ್ಲಾ ತರದ ಬೇಂಕ್ ವ್ಯವಹಾರಗಳು ನಡಿಸಲ್ಪಡುವುವು. ಕರೆಂಟ್, ಸೇವಿಂಗ್ಸ್ ಬೇಂಕ್ ಮತ್ತು ಕ್ಯುಮಲೇಟಿವ್ ಠೇವಣಾತಿಗಳು ಅಂಗೀಕರಿಸಲ್ಪಡುವುವು.

ವಿಶೇಷ ಸೂಚನೆ:—ಬಡವರಿಗೆ ಸಹಾಯವಾಗುವಂತೆ ಕಡಿಮೆ ಎಂದರೆ ರೂಪ್ಯಾ 10 ಸಹಾ ಸಾಲಕೊಡಲಾಗುತ್ತೆ. ಪಾಲುಗಳು ದೊರೆಯುತ್ತವೆ. ಹೆಚ್ಚಿನ ಮಾಹಿತಿ ಬಗ್ಗೆ ಬರಕೊಳ್ಳಿರಿ.

ನವಯುಗ

ಉಜ್ವಲ ರಾಷ್ಟ್ರೀಯ ವಾರಪತ್ರಿಕೆ—

ಉದ್ಬೋಧಕ ಲೇಖನಗಳಿವೆ, ದೇಶ ವಿದೇಶಗಳ ತಾಜಾ ವರ್ತಮಾನಗಳಿವೆ, ಮನೋಹ್ಲಾದಕ ಕಥೆ, ಕವನ, ನಾಟಕಗಳಿವೆ, ಧುರೀಣರ ಫೋಟೋಗಳಿವೆ.

ಪ್ರತಿ ಗುರುವಾರ ತಪ್ಪದೆ ಪ್ರಕಟವಾಗುವುದು.

ವಾ. ಚ. ಅಂಚೆವೆಚ್ಚ ಸೇರಿ ಕೇವಲ ೩—೮—೦.

ಇಂದೇ ಚಂದಾದಾರರಾಗಿರಿ!

ಅಖಿಲ ಕರ್ನಾಟಕದಲ್ಲಿಯೂ ಹೊರ ಪ್ರದೇಶದಲ್ಲಿಯೂ ವಿಶಾಲವಾಗಿ ಪ್ರಚಾರದಲ್ಲಿರುವ "ನವಯುಗ"ವು ಜಾಹೀರಾತುಗಳಿಗೆ ವಾಹನವಾಗಿದೆ.

ಮೆನೇಜರ್— ನವಯುಗ, ಉಡುಪಿ.

THE

MOOLKY BANK, LTD.,

MOOLKY.

ದಿ ಮೂಲ್ಕಿ ಬೇಂಕ್, ಲಿಮಿಟೆಡ್,

ಮೂಲ್ಕಿ.

ಎಲ್ಲಾ ತರದ ಬ್ಯಾಂಕ್ ವ್ಯವಹಾರಗಳು ನಡಿಸಲ್ಪಡುವವು. "ಮುಖ್ಯವಾಗಿ ಭಂಗಾರ ವ ಸರಕು ಈಡಿನ ಮೇಲೆ ಸಾಲವನ್ನು ಕೊಡುವುದು".

ಕಾಯಂ ಠೇವಣಾತಿಗಳು:

ಒಳ್ಳೇ ದರದ ಬಡ್ಡಿಯಲ್ಲಿಯೂ, ಮಾಸಿಕ, ಸೇವಿಂಗ್ಸುಬೇಂಕ್ ಮತ್ತು ಠೇವಣಾತಿಗಳು ಯೋಗ್ಯ ತರದ ಬಡ್ಡಿಯಲ್ಲಿಯೂ ಅಂಗೀಕರಿಸಲ್ಪಡುವವು.

ಹೆಚ್ಚಿನ ಮಾಹಿತಿಗೆ ಕೆಳಗಿನವರಿಗೆ ಬರೆದುಕೊಳ್ಳಿರಿ.

M. R. Punja, ಯಂ. ಆರ್. ಪೂಂಜ,
President & Manager, ಪ್ರೆಸಿಡೆಂಟು ಮತ್ತು ಮೆನೇಜರ್.

ಇದೀಗ ಬಂದಿದೆ— | ಹೊಸ ಪುಸ್ತಕ!

ಟಾಲಸ್ಟಾಯಿಯವರ ಕತೆಗಳು

ಶ್ರೀ. ಎಲ್. ಗುಂಡಪ್ಪ, ಎಂ. ಎ.ಯವರಿಂದ ಅನುವಾದಿಸಲ್ಪಟ್ಟ ಟಾಲಸ್ಟಾಯಿಯವರ ಕಥೆಗಳೆಲ್ಲಾ ಕನ್ನಡದಲ್ಲಿ ಒಟ್ಟಾಗಿ ಅಚ್ಚಾಗಿ ಬಂದಿವೆ. ಈ ಕಥೆಗಳಲ್ಲಿ ಜೀವನಕ್ಕೆ ಸಂಬಂಧಪಟ್ಟ ಎಲ್ಲಾ ಪ್ರಶ್ನೆಗಳ ಚರ್ಚೆಯೂ ಇದೆ. ಆದುದರಿಂದ ಸ್ತ್ರೀಪುರುಷರೆಲ್ಲರೂ ಅವಶ್ಯ ಓದಬೇಕು.

೪೦೦ ಪುಟಗಳು ಒಂದೂವರೆ ರೂಪಾಯಿ ಬೆಲೆ.

ಪ್ರತಿಗಳು ಸಿಗುವ ಸ್ಥಳ—

ಕಿರಿಯರ ಪ್ರಪಂಚ, ಉಡುಪಿ.

ವಿಜಯನಗರ ಸ್ಮಾರಕೋತ್ಸವ ಮಂಡಲದ ಪರವಾಗಿ ಹೊರಡಲಿರುವ

ಜಯಕರ್ನಾಟಕದ

ವಿಜಯನಗರ ವಿಶೇಷ ಸಂಚಿಕೆ

ವಿಶೇಷ ಸಂಪಾದಕರು: ಪ್ರೊ. ಎಸ್. ಎಸ್. ಮಾಳವಾಡ, ಎಂ.ಎ.

ಅಖಿಲ ಭಾರತದ ಪ್ರಸಿದ್ಧ ವಿದ್ವಾಂಸರ ಲೇಖನವೈಭವ!
ವಿಜಯನಗರಕ್ಕೆ ಸಂಬಂಧಿಸಿದ ಚಿತ್ರಮಾಲೆಗಳ ಐಶ್ವರ್ಯ!!

ಹೊಳಪಿನ ಹಾಳೆ ═══ ಅಚ್ಚಿನ ಅಚ್ಚುಕಟ್ಟು

ಬೆಲೆ: ಎಂಟಾಣೆ ಮಾತ್ರ.

ಜಯಕರ್ನಾಟಕವು ಜನವರಿಯಿಂದ—ವಿಶೇಷ ಸಂಚಿಕೆಯಿಂದ ಮೊದಲ್ಗೊಂಡು ದೊಡ್ಡ ಆಕಾರದಲ್ಲಿ (ಡೆಮಿ ⅛ ದಲ್ಲಿ) ಹೊರಡುವುದು! ಅಲ್ಲದೆ ಚಂದಾದರವನ್ನು ಇಳಿಸಿದೆ—ರೂ. ೪—೮—೦ ಮಾತ್ರ!

ಚಂದಾದಾರರಾಗಬೇಕೆನ್ನುವವರಿಗೂ ಜಾಹಿರಾತುದಾರರಿಗೂ ಸುಸಮಯ

ಜಯಕರ್ನಾಟಕ ಕಾರ್ಯಾಲಯ, ಧಾರವಾಡ.

ತುಳುನಾಡ್ ವೈದ್ಯಶಾಲೆ, ಉದ್ಯಾವರ, ದ. ಕ.

ಕೋಲೆರಾ ಪಿಲ್ಸ್	ಭೈರವ ಮಾತ್ರೆಗಳು
ಕೋಲೆರಾ ರೋಗಕ್ಕೆ ರಾಮಬಾಣ ಔಷಧ.	ಬಾಣಂತಿ ರೋಗಸಂಬಂಧವಾದ ಸಕಲ ರೋಗಗಳಿಗೂ ದಿವ್ಯೌಷಧ.
೧೦೦ ಮಾತ್ರೆಗಳಿಗೆ ರೂ. ೨—೮—೦	೧೦೦ ಮಾತ್ರೆಗಳಿಗೆ ರೂ. ೩—೮—೦

ಎಲ್ಲಾ ತರದ ರೋಗಗಳಿಗೂ ಅನುಭವಸಿದ್ಧವಾದ ದಿವ್ಯೌಷಧಗಳು ದೊರೆಯುತ್ತವೆ.

ಯು. ಪಿ. ಮೇಸ್ತ್ರ, ಗೋಲ್ಡ್ ಮೆಡೆಲ್ಡ್ ಫಿಜಿಸಿಯನ್.

THE

PANGAL NAYAK BANK

LIMITED.

ESTABLISHED 1920.

***Head Office*: UDIPI.**

Branches: MANGALORE and KATAPADI.

Fixed loans and Overdraft advances are granted on the pledge of gold articles, on the mortgage of immovable properties and on the personal security of approved constituents on favourable terms.

Genuine trade bills, cheques, drafts etc., are discounted at a nominal charge.

Current, Savings Bank and Cumulative deposits are accepted at moderate rates of interest.

Fixed Deposits are received and interest allowed at 4% on 1 year and at 4½% on 2 years deposits.

Every other description of up-to-date Banking business is also undertaken.

A few shares are also available to the public.

ಮಿರಜದಲ್ಲಿಯ ಸುಪ್ರಸಿದ್ಧ ವೈದ್ಯರಾದ ಎಮ್. ಕೆ. ರಜಪೂತ ಇವರ ಸ್ವದೇಶಿ ಔಷಧಗಳು.

ಗುಣ ಬಾರದಿದ್ದರೆ # ಸ್ತ್ರೀಧರ್ಮ ಸಂಜೀವಿನೀ ಚೂರ್ಣ (ರಿಜಿಸ್ಟರ್ಡ) **ಹಣ ಪರತ**

ಈ ಚೂರ್ಣವು ಕೆಂಪು ಬಿಳೆ ಶರಗಿಗೆ ಶತ್ರುವಾಗಿರುವುದು. ಅನಿಯಮಿತತನದಿಂದ ಮುಟ್ಟಾಗುವಿಕೆ, ಕ್ಲೇಶ ಟ್ಟೆಯಲ್ಲಿ ನೋವು, ಉಷ್ಣತಾ ಕ್ಷೀಣತಾ ಗರ್ಭಾಶಯದಲ್ಲಿರುವ ದೋಷ ಗರ್ಭಧಾರಣವಾಗದಿರೋಣ, ಅಕಾಲದಲ್ಲಿ ಗರ್ಭಪತನವಾಗೋಣ ಈ ಮೊದಲಾದ ರೋಗಗಳು ನಿಶ್ಚಯವಾಗಿ ನೆಟ್ಟಗಾಗಿ ಗರ್ಭಕೋಶವು ಸ್ವಚ್ಛವಾಗುವದು. ಮಕ್ಕಳಾಗುವದಿಲ್ಲೆಂದು ಎರಡನೇ ಲಗ್ನಮಾಡಿಕೊಳ್ಳುವ ಮೊದಲು ಗೃಹದೇವತೆಯಾದ ಮೊದಲನೇ ಪತ್ನಿಗೆ ಈ ಚೂರ್ಣ ಅವಶ್ಯ ಕೊಡಿರಿ. ಮುಖ್ಯ ಸರ್ಟಿಫಿಕೇಟ ಮ. ರಾ. ಎ. ಎಮ್. ಇನ್ಸಪೆಕ್ಟರ ಬೆಳಗಾಂವ:—ಈ ಚೂರ್ಣದಿಂದ ನನ್ನ ಕುಟುಂಬದ ಹೊಟ್ಟೆಯೊಳಗಿನ ರಕ್ತ ಗುಲ್ಮದ ಗಂಟು ನಾಮಶೇಷವಾಯಿತು. ಮತ್ತು ಎಲ್ಲ ರೋಗಗಳು ನಿಶ್ಶೇಷವಾದವು. ನನ್ನ ಮಿತ್ರನ ಹೆಂಡತಿಯ ರಕ್ತ ಮತ್ತು ಶರಗು ಇಲ್ಲದಂತಾದವು. ೨೧ ದಿವಸದ ಡಬ್ಬಿಯ ಕಿಮ್ಮತ್ತು ರೂ. ೩ ಟ.ಖ. ಆಣೆ, ೮. ಡಬ್ಬಿಗೆ ೪ರೂ.]

ಸಂತತಿ ಪ್ರತಿಬಂಧಕ ಚೂರ್ಣ. (ರಿಜಿಸ್ಟರ್ಡ)

[ಎ. ಪಿ. ಖರ್ಚು ಆಣೆ ೮.

ಬಹಳಸಾರಿ ಹಡಿಯುವುದರಿಂದ ಅತಿಶಯ ಅಶಕ್ತಿಯಾಗುತ್ತದೆ ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ್ಲ ಮುಟ್ಟಾಗುವಿಕೆಯು ನೇಮದಂತೆ ಸುರುವಾಗುವದು. ಶರೀರಕ್ಕೇನೂ ಅಪಾಯವಾಗದೆ ಸಂಸಾರ ಸುಖವು ಪೂರ್ಣವಾಗಿದೆ. ಕೂಡಲೇ ಗರ್ಭಧಾರಣ ಬಂದಾಗುವುದು ತದನಂತರ ಏನು ಮಾಡಿದರೂ ಸುರುವಾಗುವದಿಲ್ಲ. ಮೊದಲೇ ಪೂರಾ ವಿಚಾರಮಾಡಿ ಔಷಧ ಬೇಡಿರಿ. ಮುಖ್ಯಸರ್ಟಿಫಿಕೇಟ ಡಾಕ್ಟರ ಬಿ. ಎ. ವೈದ್ಯ ಎಲ್ ಸಿ. ಪಿ. ಎಸ್. ಮು॥ ಕೇಳವಾ ಮಾಹಿಮಾ ಜಿ. ಠಾಣೆ. ಈ ಚೂರ್ಣದಿಂದ ಯಾವ ತರದ ಅಪಾಯವಾಗದೆ ಗರ್ಭಧಾರಣವಾಗುವದಿಲ್ಲ. ಪೂರ್ಣ ಗುಣಕಾರಿ

ವಿಳಾಸ:—ಸಂಜೀವಿನೀ ಔಷಧಾಲಯ, ಮು. ಪೊ. ಮಿರಜ, S. M. C

ಸಂಯುಕ್ತ ಪ್ರಾಂತದಲ್ಲಿ — ಕೋಂಗ್ರೆಸ್ಸಿನ ಪ್ರಚಂಡ ವಿಜಯ

ಅಧ್ಯಾಪಕಿಯೊಬ್ಬಳು ಶ್ರೀ. ಚಿಂತಾಮಣಿಯವರನ್ನು ಗೆದ್ದಳು
ಎಲ್ಲೆಲ್ಲಿಯೂ ಜಮೀನುದಾರ, ಪದವಿಧಾರಿಗಳು ನೆಲಹಿಡಿದರು.
ಡಿಲ್ಲಿಯ ಅಧಿಕಾರಿಗಳ ತಳಮಳ

ಪಂಡಿತ ಜವಾಹರಲಾಲರ ಪ್ರಾಂತವಾದ ಸಂಯುಕ್ತ ಪ್ರಾಂತದಲ್ಲಿ ಕಾಂಗ್ರೆಸ್ ಪಕ್ಷೀಯರಿಗೆ 110 ರಿಂದ 120ರ ವರೆಗೆ ಸೀಟುಗಳು ದೊರೆಯಬಹುದೆಂದು ನಿರೀಕ್ಷಿಸಲಾಗಿದೆ. ಇದರಿಂದ ಅವರಿಗೆ ಸಂಯುಕ್ತಪ್ರಾಂತೀಯ ಎಸೆಂಬ್ಲಿಯಲ್ಲಿ ಪ್ರಬಲ ಬಹುಪಕ್ಷ ದೊರೆತಂತಾಗುವುದು. ಸಂಯುಕ್ತಪ್ರಾಂತದ ಚುನಾವಣೆಯ ಫಲಿತಾಂಶವು ಅತ್ಯಂತ ವಿಸ್ಮಯಕರವೂ ವಿನೋದಕರವೂ ಇರುವುದು. ಸಂಯುಕ್ತ ಪ್ರಾಂತದ ಅತ್ಯಂತ ಅನುಭವಶಾಲಿ ರಾಜಕೀಯ ಪ್ರಮುಖರೂ ಮಂದಪಕ್ಷದ ಅಗ್ರಗಣ್ಯ ಮುಖಂಡರೂ ಆಗಿರುವ ಶ್ರೀ ಸಿ. ವೈ. ಚಿಂತಾಮಣಿಯವರನ್ನು ಕಾಂಗ್ರೆಸ್‍ಪಕ್ಷದ ಶಾಲಾ ಅಧ್ಯಾಪಕಿಯೋರ್ವಳು ಸುಮಾರು 4 ಪಾಲು ಹೆಚ್ಚು ಓಟು ಪಡೆದು ಗೆದ್ದಿರುವಳು ಶ್ರೀ ಚಿಂತಾಮಣಿಯವರಿಗೆ 3454 ಓಟು ದೊರೆತಿರುವಾಗ ಕಾಂಗ್ರೆಸ್ ಕಡೆಯ ಶ್ರೀಮತಿ ವಿದ್ಯಾವತಿಯವರಿಗೆ 12177 ಓಟುಸಿಕ್ಕಿರುವುದು ಇದೇ ರೀತಿ ಪ್ರತಿಯೊಂದು ಕಡೆಯಲ್ಲಿಯೂ ಕಾಂಗ್ರೆಸ್ ಉಮೇದ್ವಾರಿಗಳು ಜಯಹೊಂದಿರುವುದು ಮಾತ್ರವಲ್ಲದೆ ಅವರ ವಿರೋಧಿಗಳಿಗಿಂತ ಸಹಸ್ರಗಟ್ಲೆಯಲ್ಲಿ ಹೆಚ್ಚು ಓಟು ಪಡೆದಿರುವರು. ಮೈನ್‍ಪುರಿ ಎಂಬಲ್ಲಿ ರಾಜಬಹದೂರು ಕುಶಲಪಾಲ ಸಿಂಘ ಎಂಬ ಜಮೀನುದಾರರಿಗೆ ಒಂದು ಓಟೂಸಿಕ್ಕಿರುವುದಿಲ್ಲ. ಇಲ್ಲಿಯ ಕಾಂಗ್ರೆಸ್ ಉಮೇದ್ವಾರಿಗಳಿಗೆ 32,509 ಓಟು ದೊರೆತಿರುವುದು. ಅವರ ಇನ್ನೊಬ್ಬ ಪ್ರತಿಸ್ಪರ್ಧಿಗೆ 17,595 ಮತಗಳು ಸಿಕ್ಕಿರುವುವು. ರಾಜಬಹದೂರು ಕುಶಲಪಾಲರು ಆಗ್ರದಲ್ಲಿಯೂ ನಿಂತಿದ್ದು ಅಲ್ಲಿಯೂ ಕಾಂಗ್ರೆಸ್ ಉಮೇದ್ವಾರಿಯಿಂದ ಪರಾಜಿತರಾಗಿರುವರು. ಇವರು ಸಂಯುಕ್ತ ಪ್ರಾಂತದ ಪ್ರಮುಖ ಜಮೀನುದಾರರು. ತನ್ನ ಜಿಲ್ಲೆಯಾದ ಆಗ್ರದಲ್ಲಿಯೇ ಇವರನ್ನು ಕಾಂಗ್ರೆಸ್ ಉಮೇದ್ವಾರಿಯು 6000 ಓಟುಗಳ ಬಹುಪಕ್ಷದಿಂದ ಗೆದ್ದಿರುವರು. ಬಿಹಾರ್ ಮತ್ತು ಸಂಯುಕ್ತ ಪ್ರಾಂತಗಳ ಚುನಾವಣೆಯ ಪರಿಣಾಮದಿಂದ ಜಮೀನುದಾರರಿಗೆ ಅವರ ಒಕ್ಕಲುಗಳೇ ವಿರೋಧವಾಗಿರುವರೆಂಬುದು ವ್ಯಕ್ತವಾಗಿರುವುದು.

ಸಂಯುಕ್ತ ಪ್ರಾಂತದಲ್ಲಿ ಕಾಂಗ್ರೆಸ್ ಉಮೇದ್ವಾರಿಗಳ ವಿಸ್ಮಯಕರ ವಿಜಯದಿಂದ ಡಿಲ್ಲಿಯ ಅಧಿಕಾರಿಗಳು ವಿಸ್ಮಯಗೊಂಡಿರುವರು. ಸಂಯುಕ್ತ ಪ್ರಾಂತದ ಮಂತ್ರಿಗಳಾಗಿದ್ದ ಸರ್ ಶ್ರೀ ವಾಸ್ತವರವರ ನೆಶನಲ್ ಅಗ್ರಿಕಲ್ಚರಿಸ್ಟ್ ಪಕ್ಷವು ಪರಿಪೂರ್ಣ ಸೋತು ಹೋಗಿರುವುದು. ಛಾತರಿಯ ನವಾಬರ ಪಕ್ಷದಿಂದ ಕೆಲವೇ ಮಂದಿ ಆರಿಸಲ್ಪಟ್ಟಿರುವರು. ಅಯೋಧ್ಯದ ಮಹಾರಾಣಿಯವರೂ, ವಿಜಯನಗರಮಿನ ಮಹಾರಾಜಕುಮಾರರೂ ಪರಾಜಿತರಾಗಿರುವರು. ಕಾಂಗ್ರೆಸ್ ಮುಖಂಡರುಗಳಾದ ಬಾಬು ಪುರುಷೋತ್ತಮದಾಸ ಥಂಡನ್, ಪಂಡಿತ ಗೋವಿಂದವಲ್ಲಭಪಂತ್, ಪಂಡಿತ ಗೋವಿಂದ ಮಾಲವೀಯ ಮೊದಲಾದವರು ಆರಿಸಿಬಂದಿರುವರು. ಸರ್. ಶಾಫತ್ ಅಹಮ್ಮದ್ ಖಾನ್, ಸರ್ ಮಹಮ್ಮದ್ ಅಕ್ಬರ್ ಖಾನ್ ಮತ್ತು ಹೋತಿಯ ನವಾಬರುಗಳು ಆರಿಸಿಬರುವುದು ಬಹುತೇಕ ನಿಶ್ಚಯವೆಂದಿದ್ದರೂ ಮುಸ್ಲಿಮ್ ಲೀಗಿನ ಪ್ರತಿಸ್ಪರ್ಧಿಗಳಿಂದ ಪರಾಜಯಹೊಂದಿರುವರು. ಬಂಗಾಳ, ಬಿಹಾರ್, ಅಸ್ಸಾಮ್, ವಾಯುವ್ಯ ಗಡಿನಾಡು ಮತ್ತು ಸಂಯುಕ್ತ ಪ್ರಾಂತದ ಕೌನ್ಸಿಲು ಪ್ರೆಸಿಡೆಂಟರುಗಳು ಚುನಾವಣೆಯಲ್ಲಿ ಪರಾಜಿತರಾಗಿರುವರು.

ಲಾಹೋರಿನಲ್ಲಿ ಕಾಂಗ್ರೆಸ್ ಪಕ್ಷದ ಸ್ತ್ರೀ ಉಮೇದ್ವಾರಿಯಾದ ಶ್ರೀಮತಿ ಪಾರ್ವತಿದೇವಿಗೆ 11,331 ಮತ್ತು ನೆಶನಲಿಸ್ಟ್ ಪಕ್ಷದ ಶ್ರೀಮತಿ ಶಣೂದೇವಿಗೆ 5070 ಮತಗಳು ದೊರೆತಿರುವವು. ಶ್ರೀಮತಿ ಶಣೂದೇವಿಯವರ ಉಮೇದ್ವಾರಿಕೆಯನ್ನು ಸಮರ್ಥಿಸುವುದಕ್ಕಾಗಿ ಪಂಡಿತ ಮಾಲವೀಯರು ವಿಮಾನ ಮೂಲಕ ಲಾಹೋರಿಗೆ ಹೋಗಿ ಪ್ರಬಲ ಪ್ರಚಾರ ಕಾರ್ಯ ನಡಿಸಿದ್ದರು. ಲಾಹೋರಿನ ಕಾಂಗ್ರೆಸ್ ಉಮೇದ್ವಾರಿಯಾದ ಡಾಕ್ಟರ್ ಗೋಪಿಚಂದ ಭಾರ್ಗವರಿಗೆ 14,483 ಓಟುಗಳು ದೊರೆತು ಪ್ರಚಂಡ ವಿಜಯ ಹೊಂದಿರುವರು. ಅವರ ಪ್ರತಿಸ್ಪರ್ಧಿಗಳಾದ ಕಾಪೂರರಿಗೆ 1761 ಡಾಕ್ಟರ್ ನೈಗಲರಿಗೆ 31 ಮತ್ತು ರಾಮಭೋಜರಿಗೆ 20ಓಟುದೊರೆತು ಈ ಮೂರು ಮಂದಿಯೂ ತಮ್ಮ ಡಿಪೋಸಿಟುಗಳನ್ನು ಕಳಕೊಂಡಿರುವರು. ಪಂಜಾಬಿನ ಸಿಖ್ಖರಲ್ಲಿ ಚುನಾವಣೆಯ ಹೋರಾಟವು ಬಹಳ ಪ್ರಬಲವಾಗಿ ನಡೆದಿದ್ದಿತು. ಅಂಬಲವಲ್ಲಿ ಮಗನೇ ತಂದೆಯ ಪ್ರತಿ ಕಕ್ಷಿಯಾಗಿ ಚುನಾವಣೆಗೆ ನಿಂತು ತಂದೆಯನ್ನು ಸೋಲಿಸಿರುವನು. ಇನ್ನೊಂದೆಡೆ ಅಳಿಯನು ಮಾವನನ್ನು ಗೆದ್ದಿರುವನು.

ಕೌನ್ಸಿಲ್ ಪ್ರೆಸಿಡೆಂಟರು ಡಿಪೋಜಿಟ್ ಹಣ ಕಳಕೊಂಡರು

ಸಂಯುಕ್ತ ಪ್ರಾಂತದ ಕೌನ್ಸಿಲ್ ಪ್ರಸಿಡೆಂಟರಾಗಿದ್ದ ಸರ್ ಸೀತಾರಾಮರನ್ನು ಸೀತಾಪುರದಲ್ಲಿ ಕಾಂಗ್ರೆಸ್ ಉಮೇದ್ವಾರಿಯು ಗೆದ್ದಿರುವುದು ಮಾತ್ರವಲ್ಲದೆ ಕಾಂಗ್ರೆಸಿಗೆ 16,123 ಓಟು ದೊರೆತಿರುವಾಗ ಸರ್ ಸೀತಾರಾಮರಿಗೆ ಕೇವಲ ಓಟು 200 ದೊರೆತು ಅವರು ತನ್ನ ಜಾಮೀನು ಹಣವನ್ನೂ ಕಳಕೊಂಡಿರುವರು. ಸಂಯುಕ್ತ ಪ್ರಾಂತದ ಮಾಜಿ ಮಂತ್ರಿಗಳೂ ಸುಪ್ರಸಿದ್ಧ ತಾಲೂಕುದಾರರೂ ಆದ ರಾಜರಾಜೇಶ್ವರ ಬಲಿಯವರು ಬರಬಾಂಕಿ ಜಿಲ್ಲೆಯಲ್ಲಿ ಅಪಜಯ ಹೊಂದಿರುವರು. ಸುಲ್ತಾನಪುರ ಜಿಲ್ಲೆಯಲ್ಲಿ ಕೆವನ ಮತ್ತು ಡೇರದ ರಾಣಿಯವರನ್ನು ಕಾಂಗ್ರೆಸ್ ಉಮೇದ್ವಾರಿಗಳು ಪ್ರಬಲ ಬಹುಪಕ್ಷ ಪಡೆದು ಗೆದ್ದಿರುವರು. ಈ ಜಿಲ್ಲೆಯ ಹೆಚ್ಚಿನ ಭಾಗವು ಈ ರಾಣಿಯವರದ್ದಾಗಿರುವುದು. ಮಹಮ್ಮದಾಬಾದಿನ ರಾಜರ ಊರಾದ ಸುಲ್ತಾನಪುರದಲ್ಲಿ ಅವರ ಕಡೆಯ ಉಮೇದ್ವಾರಿಯೇ ಪರಾಜಿತನಾಗಿರುವನು. ಪ್ರತಾಪ ನಗರದ ಅಗ್ರಗಣ್ಯ ತಾಲೂಕುದಾರರನ್ನು ಕಾಂಗ್ರೆಸ್ ಉಮೇದ್ವಾರಿಯಾದ ಶ್ರೀ ಗೋವಿಂದ ಮಾಲವೀಯರು ಗೆದ್ದಿರುವರು. ಸಂಯುಕ್ತ ಪ್ರಾಂತ ಸರಕಾರವು ಕಾಂಗ್ರೆಸ್ ಪಕ್ಷಕ್ಕೆ ಬದ್ಧ ವಿರೋಧಿಯಾಗಿದ್ದು ದೊಡ್ಡ ದೊಡ್ಡ ತಾಲೂಕುದಾರರೇ ಕಾಂಗ್ರೆಸ್ ಉಮೇದ್ವಾರಿಗಳ ಪ್ರತಿಸ್ಪರ್ಧಿಗಳಿದ್ದಾಗ ಕಾಂಗ್ರೆಸ್ ಉಮೇದ್ವಾರಿಗಳನ್ನು ಸಮರ್ಥಿಸುವ ಒಂದು ಇಂಗ್ಲಿಷ್ ಪತ್ರಿಕೆಯೂ ಇಲ್ಲದಿದ್ದಾಗ ಕಾಂಗ್ರೆಸು ಪ್ರಚಂಡ ವಿಜಯಪಡೆದಿರುವುದು ವಿಚಿತ್ರವೇ ಸರಿ.

> ## ನಾವು ಗೆಲ್ಲುವೆವು!
> ಜನಸಾಮಾನ್ಯರಿಗೆ ಕೋಂಗ್ರೆಸ್ಸಿನ ಸಂದೇಶವನ್ನು
> ತಿಳಿಸುವದಕ್ಕಾಗಿ ನಾವು ಚುನಾವಣೆಯಲ್ಲಿ ಕೈ ಹಾಕಿದ್ದೇವೆ.
> ಜನರಲ್ಲಿ ಜಾಗ್ರತಿಯನ್ನು ಹುಟ್ಟಿಸುವುದಕ್ಕಾಗಿ
> ನಾವಿದಕ್ಕಿಳಿದಿದ್ದೇವೆ. ನಾವು ಗೆಲ್ಲುವೆವು;
> ನಮಗೆ ಜಯವಂತೂ ನಿಶ್ಚಯ!
>
> —ಪಂಡಿತ ನೆಹರು.

ಕಾಂಗ್ರೆಸ್ ಪ್ರೆಸಿಡೆಂಟರ ಸಂದೇಶ

ಕಾಂಗ್ರೆಸ್ ಪ್ರೆಸಿಡೆಂಟರಾದ ಪಂಡಿತ ಜವಾಹರಲಾಲರು ಸಂಯುಕ್ತಪ್ರಾಂತ್ಯದ ಚುನಾವಣೆಯ ಫಲಿತಾಂಶದಿಂದ ಬಹಳ ಆನಂದಗೊಂಡು ಈ ಕೆಳಗಣ ಹೇಳಿಕೆಯನ್ನಿತ್ತಿರುರು—

"ಸಂಯುಕ್ತಪ್ರಾಂತದ ನನ್ನ ಬಂಧುಗಳೇ! ದೂರದ ಕರ್ನಾಟಕದಿಂದ ನಾನು ನಿಮಗೆ ವಂದನೆಯನ್ನು ಕಳುಹಿಸುತ್ತೇನೆ. ನಿಮ್ಮ ವಿಜಯೋತ್ಸವದಲ್ಲಿ ನಾನು ನಿಮ್ಮೊಂದಿಗೆ ಸೇರುತ್ತೇನೆ. ನಮ್ಮ ನಿರೀಕ್ಷೆಯಂತೆ ಚುನಾವಣೆಯಲ್ಲಿ ನಾವು ಪ್ರಚಂಡ ವಿಜಯ ಹೊಂದಿರುತ್ತೇವೆ. ಪರಂತು ವಿಜಯ ಹೊಂದಿದವರಾದರೂ ಯಾರು? ನಮ್ಮ ಉಮೇದ್ವಾರಿಗಳು ವೈಯಕ್ತಿಕವಾಗಿ ಗೆದ್ದಿರುವುದಿಲ್ಲ ಈ ವಿಜಯಕ್ಕಾಗಿ ಎಡೆಬಿಡದೆ ಶ್ರಮಿಸಿ ಕೆಲಸಮಾಡಿರುವ ನಮ್ಮ ಕೆಲಸಗಾರರು ಮತ್ತು ಸೈನಿಕರು ಕೂಡಾ ವಿಜಯ ಹೊಂದಿರುವುದಲ್ಲ. ಜಯ ಹೊಂದಿರುವುದೆಂದರೆ ಕಾಂಗ್ರೆಸ್ಸು. ನಮ್ಮನ್ನೆಲ್ಲಾ ಪೋಷಿಸಿ ಬಲಗೊಳಿಸಿ, ನಾನಾ ಸಂಕಷ್ಟಕ್ಕೊಳಗಾಗಿರುವ ಮಿಲ್ಯಾಂತರ ಜನರಲ್ಲಿ ಆಶಾ ಕಿರಣವನ್ನು ಬೆಳಗಿರುವ ಆ ಮಹಾಸಂಸ್ಥೆ ಇದಕ್ಕಿಂತಲೂ ಹೆಚ್ಚಿನ ವಿಜಯವೆಂದರೆ, ಎಂತಹ ಒತ್ತಾಯ, ಬೆದರಿಕೆ, ಬಲಾತ್ಕಾರ, ಆಸೆ, ಅಭಿಲಾಷೆಗಳನ್ನೂ ಗಣಿಸದೆ ಕಾಂಗ್ರೆಸಿನ ಬೆಂಬಲಕ್ಕೆ ನಿಂತ ಜನತೆಯದು!

ನಮ್ಮ ಹಳ್ಳಿಯ ಜನತೆಯು ರಾಷ್ಟ್ರೀಯ ಧ್ವಜವನ್ನು ಹಿಡಕೊಂಡು ಬಹುದೂರದ ವರೆಗೆ ರಸ್ತೆಗಳಲ್ಲಿ ಸುವ್ಯವಸ್ಥೆಯಿಂದ ನಡೆದುಹೋಗಿ ಕಾಂಗ್ರೆಸ್ ಉಮೇದ್ವಾರಿಗಳಿಗೆ ಎಲ್ಲಾ ಓಟುಗಳನ್ನೀಯುವ ನೋಟವು ಅತಿಮನೋಹರವೂ ಉತ್ಸಾಹಜನಕವೂ ಇರುವುದು. ಅವರು ನಮ್ಮ ಕರೆಯನ್ನಾಲಿಸಿ, ಕಾಂಗ್ರೆಸಿನ ಸಂದೇಶವನ್ನು ಮನ್ನಿಸಿ, ಅತ್ಯಂತ ಪ್ರಶಂಸನೀಯ ರೀತಿಯಲ್ಲಿ ಅದಕ್ಕೆ ಬೆಂಬಲವಿತ್ತಿರುವರು. ಇದರಿಂದ, ದೇಶದ ಇತರಭಾಗಕಳಂತೆ ಸಂಯುಕ್ತ ಪ್ರಾಂತವೂ ಹೊಸ ರಾಜ್ಯಾಂಗ ರಚನೆಯ ನಿರಾಕರಣೆ ಮತ್ತು ಅದನ್ನು ಮೂಲೆಗೊತ್ತಿ ಜನಾಭಿಮತದಂತೆ ರಾಜ್ಯಾಂಗ ರಚನೆಮಾಡುವ ಹೋರಾಟಕ್ಕೆ ಅನುಕೂಲವಾಗಿರುವುದೆಂದು ಸಿದ್ಧವಾದಂತಾಯಿತು. ಎಲ್ಲಕ್ಕಿಂತಲೂ ಮೇಲಾಗಿ ಕಾಂಗ್ರೆಸು ತಮ್ಮ ಹಿತಸಾಧನೆಗಾಗಿ ಕೆಲಸಮಾಡುವ ನಿಜವಾದ ಜನಪ್ರಾತಿನಿಧ್ಯವುಳ್ಳ ಸಂಸ್ಥೆಯೆಂಬುದನ್ನು ಜನಸಾಮಾನ್ಯರು ಮನಗಂಡೇ ಅದಕ್ಕೆ ತಮ್ಮ ಓಟುಕೊಟ್ಟಿರುವರು. ಇದನ್ನು ನಾವು ಸದಾ ನೆನಪಿನಲ್ಲಿಟ್ಟುಕೊಂಡು ಜನ ಸಾಮಾನ್ಯರ ನಿಕಟ ಸಂಬಂಧವು ಬಲವಾಗಿ ಬೆಳೆಯುವಂತೆ ಪ್ರಯತ್ನಿಸುವ. ಅಂತಾದರೆ ಮಾತ್ರ ನಮಗೆ ಕಟ್ಟಕಡೆಗೆ ಜಯ ಪ್ರಾಪ್ತಿಯಾಗಿ ನಾವು ನಮ್ಮ ಜನರಿಗಿತ್ತಿರುವ ಮಾತು ಸಾರ್ಥಕವಾದಂತಾಗುವುದು ಹೀಗಾಗದಿದ್ದಲ್ಲಿ ನಾವು ನಮ್ಮ ಕಾರ್ಯಕ್ಕೆ ಮತ್ತು ನಮ್ಮ ಮಿಲ್ಯಾಂತರ ಜನತೆಯ ಹಿತಕ್ಕೆ ವಿಘಾತವನ್ನುಂಟುಮಾಡಿದಂತಾಗುವುದು.

ಸಂಯುಕ್ತ ಪ್ರಾಂತ, ಬಿಹಾರ್ ಮತ್ತು ಇತರ ಕಡೆಗಳ ಚುನಾವಣೆಯಿಂದ ನಾವು ಕಲಿತ ಪಾಠವೇನೆಂದರೆ, ನಾವು ಎಲ್ಲಿ ನೆಟ್ಟಗೆ ಜನತೆಯ ಬಳಿಗೆಹೋಗಿ ಅವರು ತಿಳಿಯಬಲ್ಲ ಸರಳ ಸ್ಪಷ್ಟಭಾಷೆಯಲ್ಲಿ ಮಾತಾಡಿರುವೆವೋ ಅಲ್ಲಿ ಅವರು ಸಂತೋಷದಿಂದ ಮತ್ತು ಸಂಪೂರ್ಣ ಮನಸ್ಸಿನಿಂದ ನಮ್ಮ ಬೆಂಬಲಕ್ಕೆ ನಿಂತಿರುವರು ಎಲ್ಲಿ ನಾವು ದುರ್ಬಲ ಮನಸ್ಸಿನಿಂದ ಸಂಧಾನಮಾಡಿರುವೆವೋ ನಮ್ಮ ವಿಜಯವು ಅಷ್ಟೊಂದು ಹೆಚ್ಚಿನದಾಗಿರುವುದಿಲ್ಲ.

ದ. ಕನ್ನಡದಲ್ಲಿ ಪಂಡಿತ ಜವಾಹರಲಾಲ ನೆಹರು

ಇವರು ದಕ್ಷಿಣ ಕನ್ನಡವನ್ನು ಚುನಾವಣೆಯ ಸಂದರ್ಭದಲ್ಲಿ ಸಂದರ್ಶಿಸುವಂತೆ ಮಾಡುವುದರಲ್ಲಿ ಹೆಚ್ಚಿನ ಕೆಲಸ ಮಾಡಿದವರು ಡಾಕ್ಟರ್ ಕೆ. ವಿಠ್ಠಲ ಶೆಟ್ರು. ಚುನಾವಣೆಗಾಗಿ ಕೇವಲ ಒಂದು ದಿವಸದ ಮಟ್ಟಿಗೆ ಪಂಡಿತರನ್ನು ಜಿಲ್ಲೆಗೆ ಕರಕೊಂಡು ಹೋಗುವುದಕ್ಕಿಂತ ಇನ್ನೊಂದು ಸಂದರ್ಭದಲ್ಲಿ, ಅವರಿಗೆ ಸಾಕಷ್ಟು ಸಮಯವಿದ್ದಾಗ ನಾಲ್ಕೈದು ದಿವಸಗಳನ್ನು ಜಿಲ್ಲೆಗೆ ಕೊಡಹೇಳಿ, ಸಾಧ್ಯವಾದ ಮಟ್ಟಿಗೆ ಹಳ್ಳಿಹಳ್ಳಿಗೂ ಕಾಂಗ್ರೆಸಿನ ಸಂದೇಶವು ಮುಟ್ಟುವಂತೆಯೂ, ಅವರ ಸಂದರ್ಶನವು ಹೆಚ್ಚಿನ ಹಳ್ಳಿಗರಿಗೆ ಆಗುವಂತೆಯೂ ಮಾಡುವುದು ಲೇಸೆಂದು ಕೆಲವರ ಅಭಿಪ್ರಾಯವಿತ್ತು. ಚುನಾವಣೆಯ ನಿಮಿತ್ತವೇ ಯಾವ ಸ್ಥಳವನ್ನಾದರೂ ಸಂದರ್ಶಿಸಲು ಪಂಡಿತರಿಗೂ ಸರಿಹೋಗಲಿಲ್ಲ. ಯಾಕೆಂದರೆ ಸ್ವರಾಜ್ಯ ಚಳವಳದಿದಿರಲ್ಲಿ ಕೌನ್ಸಿಲು ಚುನಾವಣೆಯೆಂಬುದು ಅವರಿಗೆ ಕಡ್ಡಿಗೆ ಸಮಾನ. ಚುನಾವಣೆಯು ಸ್ವರಾಜ್ಯಸಾಧನೆಗೆ ಸಹಾಯಕವಾದರೆ ಮಾತ್ರ ಸಾರ್ಥಕವೆಂಬ ಮನೋನಿರ್ಧಾರವುಳ್ಳವರವರು. ಹೊರತು ಶಾಸನ ಸಭೆಗಳಲ್ಲಿ ಅವರಿಗೆ ಒಂದಿಷ್ಟು ವಿಶ್ವಾಸವಿಲ್ಲ. ಡಾಕ್ಟರ್ ವಿಠ್ಠಲ ಶೆಟ್ರು ಫೈಜಪುರಕ್ಕೆ ಹೋದೊಡನೆಯೇ, ಪಂಡಿತ ಜವಾಹರಲಾಲರನ್ನು ಚುನಾವಣೆಯ ಸಮಯ ಹೇಗಾದರೂ ಒಮ್ಮೆ ಬರುವಂತೆ ಮಾಡಬೇಕೆಂಬುದೇ ಅವರ ಪ್ರತಿಕ್ಷಣದ ಯೋಚನೆಯಾಗಿದ್ದಿತು. ಕರ್ನಾಟಕದ ಪ್ರಮುಖರು ಕೆಲವರು ಅದು ಸಾಧ್ಯವಿಲ್ಲೆಂದರೂ ಡಾಕ್ಟರ್ ಶೆಟ್ರು ನಿರುತ್ಸಾಹಗೊಳ್ಳದೆ ಡಾಕ್ಟರ್ ಹರ್ಡಿಕರ್, ಶ್ರೀಮತಿ ಕಮಲಾದೇವಿ, ದಿವಂಗತ ಕಾರ್ನಾಡ್ ಸದಾಶಿವರಾವ್, ಶ್ರೀಗಳಾದ ಹ. ಕೈರಿಕರ್ ಮತ್ತು ದಿವಾಕರರ ಸಹಾಯ ಪಡೆದು ಪಂಡಿತ ಜವಾಹರಲಾಲರು ಕರ್ನಾಟಕದಲ್ಲಿ ೨ ದಿವಸ ಸಂಚರಿಸುವಂತೆ, ವಿಶೇಷವಾಗಿ ದಕ್ಷಿಣ ಕನ್ನಡಕ್ಕೊಂದು ದಿನ ಕೊಡುವಂತೆ ಪ್ರಯತ್ನಿಸಿ ಸಫಲ ಹೊಂದಿದರು.

ದಕ್ಷಿಣ ಕನ್ನಡದ ಕಾಂಗ್ರೆಸ್ ಪ್ರತಿನಿಧಿಗಳಾದ ನಾವು ಪಂಡಿತ ಜವಾಹರಲಾಲರ ಭೇಟಿಯನ್ನು ಕೇಳಿದಾಗ ಅದು ದೊರೆಯುವುದೋ ಎಂಬ ಸಂದೇಹವು ನನ್ನಲ್ಲಿತ್ತು. ಪಂಡಿತರ ಪ್ರೈವೇಟ್ ಸೆಕ್ರೆಟರಿಗಳಾದ ಶ್ರೀ. ಉಪಾಧ್ಯಾಯರೂ ಈ ವಿಷಯದಲ್ಲಿ ಯಾವುದನ್ನೂ ನಿಶ್ಚಿತವಾಗಿ ತಿಳಿಸಲು ಅಶಕ್ತರಿದ್ದರು. ಒಂದೊಮ್ಮೆ ಭೇಟಿ ದೊರೆತರೂ ಅಭಿಪ್ರಾಯ ನಿವೇದನೆಗೆ ಸಾಕಷ್ಟು ಅವಕಾಶ ದೊರೆಯುವದೋ ಇಲ್ಲವೋ ಎಂಬ ಭೀತಿಯು ನನ್ನಲ್ಲಿ ದೃಢವಾಗಿತ್ತು. ಸಬ್ಜೆಕ್ಟ್ ಕಮಿಟಿಯಲ್ಲಿಯ ಪಂಡಿತರ ಕಠಿಣ ಮತ್ತು ನಿರ್ದಾಕ್ಷಿಣ್ಯವಾದ ವರ್ತನೆಯೇ ಇದಕ್ಕೆ ಕಾರಣವಾಗಿತ್ತು. ಅವರು ಶ್ರೀ. ಎಂ. ಎನ್. ರಾಯ್‌ಗಳೊಬ್ಬರಿಗೆ ಮಾತ್ರ ಸ್ವಲ್ಪ ರಿಯಾಯಿತಿ ತೋರಿಸಿದ್ದರು. ಉಳಿದವರೆಲ್ಲರೂ, ಶ್ರೀಗಳಾದ ಭೂಲಾಭಾಯಿ ದೇಸಾಯಿ, ಸರ್ದಾರ್ ವಲ್ಲಭಭಾಯಿಯಂಥವರೂ ಪಂಡಿತರ ಕಠಿಣ ಶಿಸ್ತು ಮತ್ತು ಕ್ರಮಕ್ಕೆ ತಲೆಬಾಗಿ ನಡೆಯಬೇಕಾಗಿದ್ದಿತು. ಎಂತಹ ಕಾಂಗ್ರೆಸ್ ಮುಖಂಡರಾದರೂ ಕ್ರಮತಪ್ಪಿ ನಡೆದರೆ, ಅಸಂಗತವಾಗಿ ನುಡಿದರೆ 'ಓರ್ಡರ್' ಓರ್ಡರ್ 'ಸಿಟ್‌ಡೌನ್' ಎಂಬ ಪಂಡಿತರ ಬಿರುದನಿಯ ಹೊಡೆತಕ್ಕೊಳಗಾಗಲೇಬೇಕಾಗಿತ್ತು. ಮಹಾತ್ಮಾ ಗಾಂಧಿಯವರು ನಾಲ್ಕಾಣೆ ಕಾಂಗ್ರೆಸ್ ಮೆಂಬರರು ಕೂಡಾ ಅಲ್ಲ. ಅವರು ಕಾಂಗ್ರೆಸಿನಲ್ಲಿ ಮಾತಾಡುವದು ಹೇಗೆಂಬ ಪಂಡಿತರ ಪ್ರಶ್ನೆಯು, ಅವರು ಎಂತಹ ವ್ಯಕ್ತಿತ್ವಕ್ಕೂ ಮಾನ್ಯ ಕೊಡುವ ಮನುಷ್ಯರಲ್ಲವೆಂಬುದನ್ನು ವ್ಯಕ್ತಗೊಳಿಸುವುದು. ಅವರು ಶಿಸ್ತು, ಕ್ರಮ, ನಿಯಮಗಳನ್ನು ಯಂತ್ರದಂತೆ ಹೃದಯರಹಿತರಾಗಿ ಪಾಲಿಸುವವರೆಂದರೂ ತಪ್ಪಾಗದು.

ಆದರೆ ಕಾಂಗ್ರೆಸ್ ಅಧಿವೇಶನ ಮುಗಿದು 10 ಘಂಟೆ ರಾತ್ರಿ ಸಮಯಕ್ಕೆ ನಾವು ಪಂಡಿತರನ್ನು ಕಾಣಹೋದಾಗ ನಮ್ಮೆಲ್ಲರ ಹೃದಯವು ತಳಮಳಗೊಂಡಿದ್ದಿತು. ಎರಡು ಘಂಟೆಯ ವರೆಗೆ ಒಂದೇ ಸಮನೆ ಭಾಷಣ ಮಾಡಿ ಆ ಮೇಲೆ ಇನ್ನೆರಡು ಘಂಟೆ ಠರಾವುಗಳನ್ನು ಕಾಂಗ್ರೆಸ್ ಅಧಿವೇಶನದ ಮುಂದಿರಿಸಿ ಬಹಳ ಬಳಲಿದ ಅವರು ನಮ್ಮ ಭೇಟಿಯಿಂದೆಲ್ಲಿ ಸಿಟ್ಟೆದ್ದು ನಮ್ಮ ಕೆಲಸ ಹಾಳಾಗಿ ಹೋಗುವುದೋ ಎಂಬ ಕಳವಳ ನಮ್ಮದು. ಆದರೆ ಒಂದೊಮ್ಮೆ ನಾವೆಲ್ಲರೂ ಕಾಂಗ್ರೆಸ್ ಅಧ್ಯಕ್ಷರ ಶಿಬಿರವನ್ನು ಪ್ರವೇಶಿಸಿ ಗಾದಿಯ ಮೇಲೆ ಒರಗಿ ಕುಳಿತಿದ್ದ ಪ್ರಶಾಂತ ಮೂರ್ತಿಯನ್ನು ಕಂಡೊಡನೆಯೇ ನಮ್ಮ ತಳಮಳ ಕಳವಳವೆಲ್ಲಾ ದೂರವಾಗಿ ಬಿಟ್ಟಿತು. 'ಪ್ಲೀಸ್ ಸಿಟ್‌ಡೌನ್' ಎಂಬ ಮಧುರ ನುಡಿಯನ್ನು ಕೇಳಿದ ಮೇಲಂತೂ ನಾವೆಲ್ಲರೂ ಆನಂದಿತರಾದೆವು. ಕಾಂಗ್ರೆಸ್ ಅಧ್ಯಕ್ಷರಾಗಿ ಕ್ರಮಶಿಸ್ತು ಪಾಲಿಸುವ ಸಿಟ್‌ಡೌನಿಗೂ ಖಾಸಗಿ ಭೇಟಿಯ ಈ 'ಪ್ಲೀಸ್ ಸಿಟ್‌ಡೌನಿ'ಗೂ ಎಷ್ಟೊಂದು ಅಭ್ಯಂತರ!

ಪಂಡಿತರು ಕಳೆದ ಸುಮಾರು 4 ತಿಂಗಳುಗಳಿಂದ ಎಡೆಬಿಡದೆ ಚುನಾವಣೆಯ ಸಂಬಂಧವಾದ ಕಾಂಗ್ರೆಸ್ ಪ್ರಚಾರ ಕಾರ್ಯವನ್ನು ನಡೆಸುತ್ತಾ ಬಂದಿರುವರು. ದೇಶದ ಒಂದು ಮೂಲೆಯಿಂದ ಮತ್ತೊಂದು ಮೂಲೆಗೆ ಧಾವಿಸಿ ಪ್ರಚಂಡ ಜನಜಾಗ್ರತಿಯನ್ನುಂಟುಮಾಡಿರುವರು. ಅವರಿಗೆ ಒಂದಿಷ್ಟು ವಿಶ್ರಾಂತಿಗೆಡೆಯಿಲ್ಲ. ತುಸು ಆರಾಮಕ್ಕವಕಾಶವಿಲ್ಲ. ಕೆಲಸ ಹೆಚ್ಚಾದಂತೆ ಪಂಡಿತರ ಉತ್ಸಾಹವೂ ಹೆಚ್ಚುವುದು. ತಾನೆಷ್ಟು ಕಷ್ಟಪಟ್ಟರೂ, ಎಷ್ಟೊಂದು ದೊಡ್ಡ ಕಾರ್ಯಕ್ರಮವಿದ್ದರೂ ದಿನದಿನದ ಕಾರ್ಯಕ್ರಮವನ್ನು ತಪ್ಪದೆ ಮುಗಿಸಿಯೇ ತೀರಬೇಕೆಂಬುದೇ ಪಂಡಿತರ ದೃಢ ನಿರ್ಧಾರ. ಇದಕ್ಕೇನಾದರೂ ಲೋಪವುಂಟಾದರೆ ಅವರಿಗೆ ಸಹನವಾಗದು.

ಪಂಡಿತರು ಬೊಂಬಾಯಿಂದ ಮಂಗಳೂರಿಗೆ ಘಂಟೆಗೆ ೪೦ ಮೈಲುಗಳ ವೇಗದಿಂದ ಹಾರಾಡಿದಾಗ ಬಹಳವಾಗಿ ಎದುರುಗಾಳಿಯಿದ್ದಿತು. ಆದುದರಿಂದ ಪಂಡಿತರಿಗೆ ಬಹಳ ತ್ರಾಸವಾಗಿತ್ತು. ಕಿವಿಗಳೆರಡೂ ಕಿವುಡುಗಟ್ಟಿದಂತಾಗಿದ್ದಿತು. ಆದರೂ ಅವರು ಯಾವ ಆಯಾಸವನ್ನೂ ಗಣಿಸದೆ ಕನ್ನಾನೂರಿನಲ್ಲಿ ವಿಮಾನದಿಂದಿಳಿದೊಡನೆಯೇ, ಅಲ್ಲಿ ನೆರೆದಿರುವ ಸುಮಾರು 30 ಸಾವಿರದಷ್ಟರ ಜನಸ್ತೋಮಕ್ಕೆ ಸಂದರ್ಶನವಿತ್ತು ಕೂಡಲೇ ಮದ್ರಾಸ್ ಮೈಲು ಹತ್ತಿ ಮಂಗಳೂರಿಗೆ ಚಿತ್ತೈಸಿದರು. ಮಾರ್ಗದಲ್ಲಿ ಕಾಞಂಗಾಡ್, ಕಾಸರಗೋಡುಗಳಲ್ಲಿ ಮಾತ್ರವಲ್ಲದೆ, ಮೈಲುಬಂಡಿ ನಿಲ್ಲದ ಮಂಜೇಶ್ವರದಲ್ಲಿಯೂ, ಜನರೆಲ್ಲಾ ರೈಲ್ವೆ ಕಂಬಿಗಳಮೇಲೆ ಕೂತು ಬಿಟ್ಟುದರಿಂದ ಟ್ರೈನು ನಿಲ್ಲಿಸಲ್ಪಟ್ಟು ಪಂಡಿತರು ಸಾವಿರಾರು ಜನರಿಂದ ಸ್ವಾಗತಪಡೆದರು.

ಮಂಗಳೂರಿನ ಮೈದಾನಿನಲ್ಲಿ ಪಂಡಿತರನ್ನು ಸ್ವಾಗತೀಕರಿಸಲು ನೆರೆದ ಪ್ರಚಂಡ ಜನಸ್ತೋಮವು ಅಭೂತಪೂರ್ವವಾಗಿದ್ದಿತೆಂದು ಹೇಳಬಹುದು. ಹಿಂದೆ ಗಾಂಧಿಜೀಯವರು ಬಂದಿದ್ದಾಗಲೂ ಇಷ್ಟೊಂದು ಜನಸಂದಣೆಯು ನೆರೆದಿಲ್ಲವಂತೆ. ಎಲ್ಲಕ್ಕಿಂತಲೂ ವಿಶೇಷ ಸಂಗತಿಯೆಂದರೆ ಪಂಡಿತರನ್ನು ಮಂಗಳೂರಿನ ಕ್ರೈಸ್ತರು ಸತ್ಕರಿಸಿದುದು. ಕ್ರೈಸ್ತರು ಪ್ರಮುಖ ರಾಷ್ಟ್ರಮುಖಂಡರನ್ನು ಸತ್ಕರಿಸಿದುದು ಇದೇ ಪ್ರಥಮ ಸಾರಿ. ಇದರಿಂದ ಕ್ರೈಸ್ತರ ಮನೋವೃತ್ತಿಯು ಹೇಗೆ ಬದಲಾಗ ಹತ್ತಿದೆಯೆಂಬುದು ವ್ಯಕ್ತವಾಗುವುದು. ಕಾಂಗ್ರೆಸಿಗೂ ಧರ್ಮಕ್ಕೂ ಯಾವ ಸಂಬಂಧವೂ ಇಲ್ಲ. ಕಾಂಗ್ರೆಸು ಕೇವಲ ರಾಜಕೀಯ ಸಂಸ್ಥೆ. ಮುಂದೆ ಯಾವ ರೀತಿಯ ರಾಜ್ಯಾಂಗ ಹಾಗೂ ಸಮಾಜ ರಚನೆಯಾಗುವುದೆಂಬ ಕಲ್ಪನೆ ಕೂಡಾ ತನಗಿಲ್ಲ. ಆದುದರಿಂದ ಧಾರ್ಮಿಕ ವಿಷಯದಲ್ಲಿ ಕಾಂಗ್ರೆಸು ಯಾವ ಧೋರಣೆಯನ್ನು ವಹಿಸುವದೆಂದು ಈಗ ಹೇಳಲಾಗುವುದಿಲ್ಲ. ಆ ವಿಷಯದಲ್ಲಿ ಈಗ ಯಾವ ಭರವಸೆಯನ್ನೂ ಕೊಡಲಾಗುವುದಿಲ್ಲೆಂದು ಪಂಡಿತರು ಧರ್ಮವೇ ಪ್ರಾಮುಖ್ಯವಾದುದೆಂಬ ಕೆಥೋಲಿಕ ಬಂಧುಗಳಿಗೆ ಚುನಾವಣೆಯ ಸಂದರ್ಭದಲ್ಲೂ ಯಾವ ಅಭಯವನ್ನೂ ಕೊಡದೆ ನಿರ್ಭಯವಾಗಿ ತನ್ನ ಮನೋನಿರ್ಧಾರವನ್ನೇ ಶ್ರುತಪಡಿಸಿದರು.

ಮಂಗಳೂರಿನಲ್ಲಿ ಲೌಡ್ ಸ್ಪೀಕರನ್ನು ತೆಗೆದು ಹಾಕಿಸಿದ, ಕುಂದಾಪುರದಲ್ಲಿ ಸ್ವಯಂಸೇವಕರ ಮೇಲೆ ಮುನಿದುಬಿದ್ದ ವಿದ್ಯಮಾನಗಳಿಂದ ಮತ್ತು ಭಾಷಣದ ಬಿರುಸುತನದಿಂದ, ಪಂಡಿತರು ಬಹಳ ಕಠಿಣ ಮನಸ್ಸಿನವರು, ನಿಷ್ಠುರ ಪ್ರವೃತ್ತಿಯವರೆಂದು ಕೆಲವರು ಅಭಿಪ್ರಾಯಮಾಡಿಕೊಳ್ಳಬಹುದು. ಆದರೆ ಇದು ತೋರಿಕೆಗೆ ಮಾತ್ರ. ಪಂಡಿತರ ಅಂತರ ಹೃದಯವು ಪ್ರೇಮಪೂರ್ಣವಾದುದು. ಮನಸ್ಸು ಕೋಮಲವಾದುದು. ಅವರು ತುಸು ಮುಂಗೋಪಿಯೆಂಬುದೇನೋ ನಿಜ. ಅದು ಪರ್ವತ ಪ್ರವಾಹದಂತೆ ಒಮ್ಮೆಯೇ ಘರ್ಜಿಸಿತರ್ಜಿಸಿ ಹರಿದು ಬಿದ್ದ ಉತ್ತರ ಕ್ಷಣದಲ್ಲೇ ಪ್ರಶಾಂತ ಜಲಾಶಯವಾಗಿ ಪ್ರವಹಿಸುವುದು.

ಯಾವ ಕೆಲಸವಾದರೂ ಸಂಪೂರ್ಣ ತೃಪ್ತಿಕರವಾಗಿ ನಡೆಸಲ್ಪಡಬೇಕು ಅವರಿಗೆ. ಅಲ್ಪ ಸಂತುಷ್ಟಿ ಅವರಲ್ಲಿಲ್ಲ. ಯಾವಾಗಲೂ ಕಠಿಣ ಶಿಸ್ತು ಪಾಲಿಸಲ್ಪಡಬೇಕು ಅವರಿಗೆ. ಅವ್ಯವಸ್ಥೆಯೆಂದರೆ ನೋಡಿದರಾಗದು. ಇದನ್ನು ಜನರ ಮನಗಾಣಿಸಲು ಅವರು ಕಠಿಣ ಧೋರಣೆವಹಿಸುವರು. ನಿಷ್ಠುರ ಪ್ರವೃತ್ತಿಯುಳ್ಳವರಾಗುವರು. ಅಸಹಿಷ್ಣುತೆ ತೋರಿಸುವರು. ದಕ್ಷಿಣ ಕನ್ನಡದ ಗಡಿದಾಟಿದೊಡನೆಯೇ ಮುಂದಿನ ಕಾರ್ಯಕ್ರಮವೇನೆಂದು ಸ್ಪಷ್ಟವಾಗಿ ಪಂಡಿತರಿಗೆ ತಿಳಿಯದಿದ್ದುದರಿಂದ, ಅವರು ಉರಿದುಬಿದ್ದರು. "ತನಗೆ ಊಟಗೀಟ ಬೇಡ. ದಿನದ ಕೆಲಸವೇನು? ಮುಂದೆಲ್ಲಿ ಹೋಗುವುದೆಂದು ತಿಳಿಯಬೇಕು. ಇಂತಹ ಸಂಚಾರ ಕಾರ್ಯಕ್ರಮವನ್ನು ನಾನೀವರೆಗೆ ಕಂಡಿಲ್ಲ ಎಂದು ನಿರ್ದಾಕ್ಷಿಣ್ಯವಾಗಿ ಖಂಡಿಸಿ ಬಿಟ್ಟರು. ಸ್ವಯಂ ಸೇವಕರಲ್ಲಾಗಲೀ ಅಗ್ರಗಣ್ಯ ಪ್ರಮುಖರಲ್ಲಾಗಲೀ ಅವ್ಯವಸ್ಥೆ ಕಂಡರೆ ಕೆಂಡದಂತೆ ಕಿಡಿಕಿಡಿಯಾಗಿ ನಿಷ್ಠುರವಾಗಿ ಖಂಡಿಸಿ ಬಿಡುವರವರು.

ನವಯುಗಕ್ಕೆ
ಇಂದೇ ಚಂದಾದಾರರಾಗಿರಿ!
ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ)
೩—೪—೦



ಧರ್ಮಾರ್ಥ
ಬಹುಮಾನಗಳು
1-4-0ಗೆ !
ಯಾರಿಗೆ ?

ರೂಪಾಯಿ 1—4—0 ಕೊಟ್ಟು 14 ಸೀಸೆ ಓಟ್ಟೋರೋಸ್ಟ್ ಅಥವಾ 10 ಡಬ್ಬಿ ಗಜಕರ್ಣ ಮುಲಾಮನ್ನು ಕ್ರಯಕ್ಕೆ ಪಡಕೊಳ್ಳುವವರಿಗೆ !!

ಇನಾಮುಗಳ ವಿವರ:—3 ದಮ್ಮಿ ರಿಸ್ಟ್ ವಾಚುಗಳು; 1 ರೈಲ್ವೆಟಾಯಂ ದಮ್ಮಿ ಪಾಕೆಟ್ ವಾಚು; 1 ಸೇಫ್ಟಿರೇಜರ್; 1 ಶೇವಿಂಗ್ ಬ್ರಸ್; 1 ಶೇವಿಂಗ್ ಸೋಪು; 1 ಕನ್ನಡಿ; 1 ಪೌಡರ್; 1 ಜತೆ ಗುಬ್ಬಿಗಳು; 1 ಪೌಂಟನ್ ಪೇನು 14 ಕ್ಯಾರೆಟ್ ನಿಬ್ಬು ಸಮೇತ; 1 ಇಮಿಟೇಶನ್ ಮೋತಿಮಲ್ಲರ್; 1 ಹೆಸರು ಕೆತ್ತಲ್ಪಟ್ಟ ರೋಲ್ಡುಗೋಲ್ಡು ಗಿಲ್ಟ್ ಉಂಗುರ, ಆರುನೂರು ಅಡಿ ದೂರಕ್ಕೆ ಪ್ರಕಾಶಬೀಯುವ 1 ಟೋರ್ಚ್‌ಲೈಟ್ ಅಥವಾ 1 ಅತ್ಯುತ್ತಮ 'B' ಟಾಯಂಪೀಸು (ಹತ್ತು ವರುಷ ಗ್ಯಾರಂಟಿ)

ಪ್ಯಾಕಿಂಗ್ ಮತ್ತು ಪೋಸ್ಟೇಜು 0—12—0. **ಇಂದೇ ಆರ್ಡರು ಕೊಡಿರಿ.**

Bengal Watch Co.,
Post Box No. 12214, CALCUTTA.

ನಮ್ಮ ಸಿನೇಮಾ ಪುಟ

ಉಡುಪಿಯಲ್ಲಿ ವಾಕ್ಚಲ ಚಿತ್ರಪ್ರದರ್ಶನ

ಕಳೆದ ಸಂಚಿಕೆಯಿಂದ ಮುಂದುವರಿದುದು.

ಪ್ರೇಕ್ಷಕರಿಗೆ ತೋರಿಸುವ ಮೊದಲು ತಾವು ತರಿಸಿಕೊಂಡಿರುವ ಚಿತ್ರವು ತಮ್ಮ ಸಿನೆಮಾ ಗೃಹದಲ್ಲಿ ತಮ್ಮ ಯಂತ್ರದಲ್ಲಿ ಜನಮನೋರಂಜನೆಯಾಗುವಂತೆ ಪ್ರದರ್ಶಿತವಾಗುವುದೋ ಎಂಬುದನ್ನು ತಾವು ಮೊದಲಾಗಿ ಪರೀಕ್ಷಾರ್ಥಪ್ರಯೋಗ (Trial) ಮಾಡಿನೋಡಿ ನಿವಾರ್ಯವಾದ ಕುಂದುಕೊರತೆಗಳನ್ನೆಲ್ಲಾ ನಿವಾರಿಸಿಕೊಂಡೇ ಪ್ರೇಕ್ಷಕವರ್ಗವನ್ನು ಕರೆಯಬೇಕು, ಹಾಗೆ ಮಾಡಿದ್ದರೆ ಮೊನ್ನಿನ ಜನರು ಅಷ್ಟು ಹತಾಶರಾಗಿ ಹಿಂತಿರುಗುತ್ತಿದ್ದಿಲ್ಲ. ಯಾವುದರ ದೋಷದಿಂದಲೋ ಮಾತುಗಳೊಂದೂ ಸ್ಪಷ್ಟವಾಗಿ ಕೇಳುತ್ತಿದ್ದಿಲ್ಲ. ಕಥಾಭಾಗವು ಗೊತ್ತಿದ್ದುದಾದರೂ ಕಥಾವ್ಯಕ್ತಿಗಳು ಬಂದು ಸ್ವಲ್ಪ ಹೊತ್ತಾಗುವ ತನಕ ಅದು ಯಾರು, ಯಾವ ಕಥಾಂಶವು ಪ್ರದರ್ಶಿಸಲ್ಪಡುತ್ತದೆಂಬುದು ಕಲ್ಪನಾಶಕ್ತಿಯುಳ್ಳವರಿಗೂ ಗೊತ್ತಾಗುತ್ತಿದ್ದಿಲ್ಲ. ಅಲ್ಲಲ್ಲಿ ಒಂದೆರಡು ಮಾತುಗಳು ಕೇಳಿದರೂ ಅದು ಮನುಷ್ಯನ ಸ್ವರವೆಂದು ತಿಳಿಯುವುದು ಕಷ್ಟವಾಗಿತ್ತು. ಆ ಮಾತುಗಳಲ್ಲಿ ಸಂದರ್ಭೋಚಿತವಾದ ಸ್ವರವಾಗಲೀ ಮಾಧುರ್ಯವಾಗಲೀ ಮಾನವೀಯತೆಯಾಗಲೀ ಇರಲಿಲ್ಲ. ದೆವ್ವ ಹುಲಿ ಸಿಂಹ ಆನೆಗಳ ಸ್ವರಲಕ್ಷಣಗಳೇ ಕೇಳುತ್ತಿತ್ತು. ಇನ್ನು ಆ ಪದಗಳೋ (Simply boring) ಎಂದು ಹಲವರು ಜುಗುಪ್ಸೆ ಪಡುವಷ್ಟು ಕರ್ಕಶವೂ, ಅಸಹನೀಯವೂ ಆಗಿತ್ತು. ಅವುಗಳಲ್ಲಿ ಹಲವು ಪದಗಳನ್ನು ಗ್ರಾಮಫೋನುಗಳಲ್ಲಿ ಕೇಳಲಿಲ್ಲವೇ? ಕೇಳೋಣ ಕೇಳೋಣವೆನ್ನುವಂತಿಲ್ಲವೇ ಅವು? ಅವೇ ಈ ವಾಕ್ಚಲ ಚಿತ್ರದಲ್ಲಿ ಹಾಡಲ್ಪಟ್ಟಾಗ ಕಿವಿಗೆ ಬೆರಳಿಟ್ಟುಕೊಳ್ಳೋಣವೆನ್ನಿಸುತ್ತಿತ್ತು ಪ್ರದರ್ಶನದ ದೋಷಗಳಿಂದ. ಫೋಟೋಗ್ರಾಫಿಯು ಮತ್ತು ಧ್ವನಿ ಗ್ರಹಣದ ದೋಷವೂ ಇಲ್ಲದೆ ಇದ್ದಿಲ್ಲ. ಕೆಲವರು ಹಾಡುವಾಗ ಬಾಯಿತುಂಬ ಹಲ್ಲೊ, ಹತ್ತಿ ಮುದ್ದೆಯೋ ಬಾಯಲ್ಲಿದ್ದಂತೆ ವಿಕಲ್ಪವಾಗಿ ಕಾಣುತ್ತಲೂ ಇತ್ತು. ಈ ಪದಗಳಾದರೂ ನಾಲ್ಕಾರೇ? ನಮ್ಮ ಕನ್ನಡ ನಾಟಕದ ರೋಗವುಂಟಲ್ಲ? ಗಂಡ ಸತ್ತಾಗಲೂ ಹೆಂಡತಿ ಹಾಡುವುದು! ಮನುಷ್ಯ ಸಾಯುವಾಗಲೂ ಹಾಡುತ್ತಾನೆ! ಬೀದಿಯಲ್ಲಿ ಹೋಗುವಾಗಲೂ ರಾಜನು ಹಾಡುತ್ತಾನೆ! ಅಂತೂ ಕೂತದ್ದಕ್ಕೆ ನಿಂತದ್ದಕ್ಕೆ ಎದ್ದದ್ದಕ್ಕೆ ಹಾಡುವ ಈ ಅಸ್ವಾಭಾವಿಕರೋಗ ಹೋಗುವದೆಂದೊ! ಈ ಪದಗಳಾದರೂ ಸಂದರ್ಭೋಚಿತವಾದ ಭಾವರಸೋದ್ರೇಕಗೊಳಿಸುವ ಮಾತುಗಳಿಗೆ ಸೆರಗಿನಂತೆ ಸಹಜವಾಗಿ ಸರಾಗವಾಗಿ ಇಳಿದು ಬಂದು ಮಾತೆಲ್ಲಿ ನಿಂತಿತು, ಪದವೆಲ್ಲಿ ತೊಡಗಿತು ಎಂಬುದನ್ನು ರಸೋದ್ರೇಕದಿಂದ ಮರೆಸಿಬಿಡುವಂತೆ ಹರಿದು ಬರುತ್ತವೆಯೆ? ಇಲ್ಲ, ಮಾತು ನಿಲ್ಲಬೇಕು. ರಸಭಂಗವಾಗಬೇಕು. ಹಿಮ್ಮೇಳಗಳು ಪದನುಡಿಸಬೇಕು ನಟನು ಆ ಹಿಮ್ಮೇಳಗಳ ಕಡೆಗೆ ಸರಿಯಬೇಕು. ಆ ಕಡೆಗೆ ನೋಡುತ್ತಾ ಸನ್ನಿವೇಶದ ಇತರ ನಟರ ಪರಿಸ್ಥಿತಿಯನ್ನೆಲ್ಲ, ಮರೆತು ತಾನೇ ತಾನಾಗಿ ತನ್ನ ಸಂಗೀತ ಜ್ಞಾನ ಪ್ರದರ್ಶನ ಮಾಡುತ್ತಿರಬೇಕು ಅವರಲ್ಲೊಬ್ಬ ನಟ. ಇಂತಹ ರಸಭಂಗಕಾರಕ ಪದಗಳೂ ಪ್ರದರ್ಶನದ ಯಂತ್ರೇತ್ಯಾದಿಗಳ ದೋಷಗಳಿಂದ ಕಿರಚಿಕೊಂಡಂತಾದರೆ ಯಾರಿಗೆ ಬೇಕಾಗಿವೆ ಅವು? ಆದರೆ ಚಾಲಕರು ಮುಂಜಾಗರೂಕರೂ, ಔದಾಸೀನ್ಯರಹಿತರೂ ಆಗಿದ್ದು ಮುಂಚಿತವಾಗಿ ರೀಲನ್ನೊಮ್ಮೆ ತಮ್ಮ ಯಂತ್ರಕ್ಕೆ ಕೊಟ್ಟು ಪ್ರಯೋಗಮಾಡಿ ನೋಡಿದ್ದರೆ ಮಾತುಗಳೂ, ಪದಗಳೂ ಮಾನವೀಯತೆಯುಳ್ಳವಾಗಿ ಕೇಳಿಸುವಂತೆ ಯಂತ್ರವನ್ನೋ ಮಂದಿರದ ಪ್ರತಿಧ್ವನಿಯ ವ್ಯವಸ್ಥೆಯನ್ನೋ ಸರಿಗೊಳಿಸಬಹುದಿತ್ತೊ ಏನೊ! ಮುಂದಾದರೂ ಚಾಲಕರು ಚಿತ್ರಗಳನ್ನು ಚುನಾಯಿಸುವುದರಲ್ಲಿ, ವಿಚಾರಿಗಳೂ ಪ್ರದರ್ಶಿಸುವುದರಲ್ಲಿ ಮುಂಜಾಗರೂಕರೂ ಆಗಿದ್ದು ಉತ್ಸಾಹೀ ಪ್ರೇಕ್ಷಕವರ್ಗವನ್ನು ನಿರುತ್ಸಾಹಿಗಳಾಗಿ ಅಸಂತೃಪ್ತರಾಗಿ ಹಿಂತೆರಳುವಂತೆ ಮಾಡಿಕೊಳ್ಳದೆ ತಮ್ಮ ಕಡೆಗೆ ಪ್ರೇಕ್ಷಕವರ್ಗವನ್ನು ಸೆಳೆದುಕೊಳ್ಳುವ ಎಲ್ಲಾ ವಿಚಾರಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿ, ಅನುಸರಿಸಿ ಉಡುಪಿಯಲ್ಲಿ ಚಲಚಿತ್ರ ಗೃಹವು ಸ್ಥಾಯಿಯಾಗಿ ಬಾಳುವಂತೆ ಮಾಡಿಕೊಳ್ಳಲೆಂದು ಸಲಹೆ ಸೂಚನೆಗಳನ್ನು ಕೊಡುವ ದೃಷ್ಟಿಯಿಂದ ಈ ವಿಮರ್ಶೆಯನ್ನು ಬರೆಯಲಾಗಿದೆ.

A Cinema Critic

ಕೊಂಗ್ರೆಸ್ಸಿಗೇ ಮತದಾನ ಮಾಡುವಾ!

ಭಾರತವರ್ಷವು ಹಳ್ಳೀಸಾಮ್ರಾಜ್ಯವಾಗಿದೆ; ಚೇತನಮಯ ಹಳ್ಳೀನಡೆಗಳೇ ಭಾರತಾಂಬೆಯ ಮುನ್ನಡೆಯಾಗಿದೆ! ಹಳ್ಳಿಯೋದ್ಧಾರದ ಧ್ಯೇಯಸಾಧನೆಗಳಿಂದ ಮುಂದೊತ್ತುವ **ಕೊಂಗ್ರೆಸ್ಸಿಗೇ ಹಳ್ಳಿಗರ ಸಂಪೂರ್ಣ ಬೆಂಬಲ!**

ಹಳ್ಳಿಗರೆಂದು ಹೇಳಿಕೊಳ್ಳುವುದರಲ್ಲಿ ಅಭಿಮಾನಿಗಳಾದ ನಾವು ಮಹಾತ್ಮಾಜೀಯವರಿಂದ ಉತ್ತೇಜಿತರಾಗಿ **ಜವಾಹರಲಾಲರ ಸ್ಪಷ್ಟೋಕ್ತಿಗಳಿಂದ** ಸ್ಫೂರ್ತಿಗೊಂಡಿರುವೆವು! ಅದನ್ನು ಇಂದುನಾಳೆಯಲ್ಲೇ ಕಾರ್ಯತಃ ತೋರಿಸಬೇಕಾಗಿದೆ. ಕಷ್ಟನಷ್ಟಗಳಿಲ್ಲದೇ ದೇಶದ ಕಡೆಗೇ ನಿಂತು 'ವೋಟು' ಕೊಟ್ಟು ಧನ್ಯರಾಗುವ ಸುಯೋಗವು ನಮಗೂ ಬಂದೊದಗಿದೆ. ಈ ಸಂದರ್ಭದಲ್ಲಿ ಜಾರಿಬೀಳದೆ,—ಭಯ, ಭೀತಿ, ಹಂಗು, ಹರಿವು, ಹೊಗಳಿಕೆ, ಬೆದರಿಕೆ, ಬಂಧುಬಾಂಧವ್ಯಗಳ ದಾಕ್ಷಿಣ್ಯಕ್ಕೆ ಕಟ್ಟುಬೀಳದೆ, ಕುಹಕತನದ ಒಳಸಂಚಿನ ಚಳವಳದಲ್ಲಿ ಕೈಹಾಕದೆ, **ದೇಶದ—ಕೊಂಗ್ರೆಸ್ಸಿನ—ನಮ್ಮ—ಹಳದಿ ಬಣ್ಣದ ಪೆಟ್ಟಿಗೆಗೇ 'ವೋಟು'**ಗಳನ್ನು ಹಾಕಿ ಆತ್ಮಸಂತೋಷಗೊಳ್ಳುವಾ! ದರಿದ್ರ—ಧನಿಕ, ಜಾತಿ—ವಿಜಾತಿ ಎಂಬ ಭೇದಗಳ ಎಣಿಕೆಗೂ, ತಿಂಡಿತಿನಸಿನ ಮತ್ತು ಖಾಸಗಿ ವ್ಯವಹಾರದ ಗಣನೆಗೂ, 'ವೋಟಿ'ನ ಕೊಡುವಿಕೆಗೂ ಏನೂ ಸಂಬಂಧವಿಲ್ಲ. ಮತವೀಯುವುದರಲ್ಲೂ ಪರಾವಲಂಬಿಗಳಾಗಿ—ಕೊಂಗ್ರೆಸ್ಸಿಗೆ ವಿರುದ್ಧವಾಗಿ ಚಳವಳಿಸಿದರೆ, ನಮ್ಮ ಕೈಬಾಯಿಗಳಿಗೂ ಅನ್ಯರು ಯಜಮಾನರೆಂಬುದು ಸ್ಪಷ್ಟವಾಗಿ, ನಾವು ಜೀವನ್ಮೃತರೆಂದೇ ಗಣನೀಯರಾದೇವು! ಇಂಥಾ ಹೊಲಸು ವ್ಯವಹಾರಕ್ಕೆ ಧಿಕ್ಕಾರವಿತ್ತು, **ಮನೋವಾಕ್ಕಾಯಗಳಿಂದ ಕೊಂಗ್ರೆಸ್ಸಿಗೇ ಬೆಂಬಲವೀಯುವಾ!**

ಬಡ ಭಾರತೀಯರ, ದಣಿದ ರೈತರ, ಹಸಿದ ಹಳ್ಳಿಗರ ಹಿತಚಿಂತಕರ ಗುಂಪು ಕೊಂಗ್ರೆಸ್ಸು! ಮೇಲು ಕೀಳಿನ ಭೇದಭಾವವು ಆ ಪವಿತ್ರ ಸಂಸ್ಥೆಗಿಲ್ಲ! ಸಹಿಸಲಾಗದ ಕಷ್ಟನಷ್ಟಗಳೂ, ವರ್ಣನಾತೀತ ಜರ್ಝರಿಗಳೂ ಕೊಡಲ್ಪಟ್ಟರೂ ಅದರ ತೇಜಸ್ಸೇನು! ಓಜಸ್ಸೇನು!!

ಅದು ನಮ್ಮ ಕೊಂಗ್ರೆಸ್!!!

ಜವಾಹರಲಾಲರಿಗೆ ಜಯವಾಗಲೆಂದು!—ಒಟ್ಟಾಗಿ ಕಾಲ್ನಡೆಯಿಂದಲೇ ಮುನ್ನಡೆದು **ಕೊಂಗ್ರೆಸ್ಸಿಗೇ ಓಟು ಕೊಟ್ಟು** ಕರ್ಣಾಟಕಾಂಬೆಯ ನಿಜಪುತ್ರರಾಗಿ ಮೆರೆಯುವಾ!

ವಂದೇ ಮಾತರಂ!

ಕಾರ್ಯದರ್ಶಿ,
ಹಳ್ಳಿಯ ಕೂಟ, ಶಿರ್ವ, ದ, ಕ.

ಶಿಕ್ಷೆಯು ವಜಾ ಆಯಿತು

ಮದ್ರಾಸ್ ಮೊಡರ್ನ್ ಕೆಫೆ ಪ್ರೊಪ್ರೈಟರ್ ಶ್ರೀ. ಕೆ. ಸೀತಾರಾಮ ರಾಯರು ತನ್ನ ತಮ್ಮ ಉಡುಪಿ ಆನಂದ ಭವನದ ಪ್ರೊಪ್ರೈಟರ್ ಶ್ರೀ. ಕೆ. ಗುರುರಾಜಾಚಾರ್ಯರು ತಾ. 1-7-36ರಲ್ಲು ತನ್ನನ್ನು ಬೈದು ಅವಮಾನಮಾಡಿದರೆಂದೂ ಮುಖದ ಮೇಲೆ ಬಲವಾಗಿ ಹೊಡೆದರೆಂದೂ ಅದರಿಂದ ಕನ್ನಡಕವು ಒಡೆಯಿತೆಂದೂ ಅಲ್ಲದೇ ಪ್ರಾಣ ಭಯವುಂಟಾಗುವಂತೆ ಹೆದರಿಸುವ ಪತ್ರಬರೆದರೆಂದೂ ವಗೈರೆ ಮೈಸೂರು ಸಿಟಿ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ಮೊಕದ್ದಮೆ ಹೂಡಿದ್ದರಷ್ಟೆ. ಸದರಿ ಮೊಕದ್ದಮೆಯಲ್ಲಿ ಸಿಟಿ ಮಾಜಿಸ್ಟ್ರೇಟರು ಅಪಾದಿತರು ೩೫೦/- ರೂಪಾಯಿಗಳಿಗೆ ಸ್ವಂತ ಮುಚ್ಚಳಿಕೆಯನ್ನು ಮತ್ತು ಇಬ್ಬರನ್ನೂ ಅದೇ ಮೊತ್ತಕ್ಕೆ ಜಾಮೀನು ಕೊಡಬೇಕೆಂದು ತೀರ್ಪುಕೊಟ್ಟಿದ್ದರು.

ಸದರಿ ಮೊಕದ್ದಮೆಯಲ್ಲಿ ಶ್ರೀ. ಗುರುರಾಜಾಚಾರ್ಯರು ಡಿಸ್ಟ್ರಿಕ್ಟ್ ಮತ್ತು ಸೆಶನ್ ಜಡ್ಜರವರ ಕೋರ್ಟಿನಲ್ಲಿ ಅಪೀಲುಮಾಡಲಾಗಿ ಅವರು ಕೆಳಗಿನ ಕೋರ್ಟಿನ ಆರ್ಡರನ್ನು ರದ್ದುಪಡಿಸಿದರು. ಮ|| ರಾ|| ಗುರುರಾಜಾಚಾರ್ಯರವರು ಫಿರ್ಯಾದಿ ಕೊಟ್ಟಿರುವ ಕಂಪ್ಲೇಂಟು ಸುಳ್ಳೆಂದೂ ಪಿತ್ರಾರ್ಜಿತ ಸಂಬಂಧದ ಆಸ್ತಿಪಾಲಿನ ವಿಚಾರದ ಮನಸ್ತಾಪವಿರುವುದಾಗಿಯೂ ಮೊಡರ್ನ್‌ಕೆಫೆ ಹೊಟೇಲಿನಲ್ಲಿ ಭಾಗಕ್ಕಾಗಿ ದಾವೆಮಾಡಲಿರುವರೆಂದೂ ಇದಕ್ಕೆಲ್ಲಾ ಅಡ್ಡಿತರಬೇಕೆಂಬ ಇರಾದೆಯಿಂದ ಫಿರ್ಯಾದಿಯು ಮೊಕದ್ದಮೆ ಹೂಡಿರುವರೆಂದೂ ವಗೈರೆ ಹೇಳಿಕೆಯನ್ನು ಕೊಟ್ಟದ್ದನ್ನು ಗಮನಕ್ಕೆ ತಂದುಕೊಂಡು ಮುಖ್ಯವಾಗಿ 1ನೇ ಸಾಕ್ಷಿ ಬ್ರಾಡ್‌ವೇ ಮ| ಕೆ. ಗೋಪಾಲರಾಯರು ಮತ್ತು ೪ನೇ ಸಾಕ್ಷಿ ಭಾರತೀ ವಿಲಾಸದ ಮಿ| ಎಂ ಅನಂತಾಚಾರ್ಯರ ಹೇಳಿಕೆಗಳು ನಂಬಲು ಅನರ್ಹವಾದವುಗಳೆಂದೂ ವಗೈರೆ ದೀರ್ಘವಾದ ತೀರ್ಪನ್ನು ಬರೆದು ಮೈಸೂರು ಡಿಸ್ಟ್ರಿಕ್ಟ್ ಮತ್ತು ಸೆಶನ್ ಜಡ್ಜಿಯವರಾದ ಮ|| ಟಿ. ಸಿಂಗಾರವೇಲು ಮೊದಲಿಯಾರರವರು ಕೆಳಗಿನ ಕೋರ್ಟಿನ ತೀರ್ಪನ್ನು ರದ್ದುಪಡಿಸಿ ಅಪಾದಿತರಿಂದ ಜಾಮೀನು ಮುಚ್ಚಳಿಕೆಯನ್ನು ತೆಗೆದುಕೊಳ್ಳುವುದಕ್ಕೆ ಯಾವ ಕಾರಣವೂ ಇಲ್ಲವೆಂತಲೂ ತೀರ್ಪನ್ನು ಕೊಟ್ಟರು.

ಫಿರ್ಯಾದಿತರ ಪರ ಮಿ|. ಸಿ. ನರಸಿಂಹಯ್ಯನವರೂ, ಅಪಾದಿತರ ಪರ ಮಿ|. ಎಂ. ಶ್ರೀನಿವಾಸಯ್ಯಂಗಾರ್ಯರೂ ವಕೀಲತ್ತು ವಹಿಸಿದ್ದರು.

ನೋಟೀಸು

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

O. S. 136/33 R. I. A. 1502/36

1 ವಾದಿ, ಅರ್ಜಿದಾರ. ಸಾಲ್ವೋದರ ಬರೇತ. ಜುವಾಂ ಯಾನೆ ದುಮಿಂಗ್ ಬರೇತನ ಮಗ, ಕುಂದಾಪುರ ತಾಲೂಕು ಕುಂದಾಪುರ ಕಸಬಾ ಗ್ರಾಮದಲ್ಲಿರುವವ.

2 **ಪ್ರತಿವಾದಿ**, ಎದ್ರಿ. ಮರಿಯಂಣ ಬರೇತ, ಅಂದ್ರು ಬರೇತನ ಮಗ. ಕುಂದಾಪುರ ಕಸಬಾ ಗ್ರಾಮದಲ್ಲಿರುವವ. ಸದ್ರಿ ಪ್ರತಿವಾದಿ ಮರಿಯಂಣ ಬರೇತರಿಗೆ ತಿಳಿಯಪಡಿಸುವುದೇನೆಂದ್ರೆ—

ಸದ್ರಿ ಅರ್ಜಿದಾರನು ನಿಮ್ಮ ಮೇಲೆ ಮೇಲಿನ ನಂಬ್ರಕ್ಕೆ ಪಡೆದ ಪ್ರಿಲಿಮಿನೆರಿ ಡಿಕ್ರಿ ಮೇಲೆ ಫೈನಲ್ ಡಿಕ್ರಿಕೊಡಿಸಬೇಕಾಗಿ ಕೊಟ್ಟ ಮೇಲಿನ ಅರ್ಜಿಯು ಮೇಲ್ಕಂಡ ಕೋರ್ಟಿನಲ್ಲಿ ತಾ. 24-2-'37ಕ್ಕೆ ತನ್ಕಿಗೆ ಇಡೋಣಾಗಿರುತ್ತದೆ. ಆ ಕುರಿತು ನಿಮ್ಮ ಆಕ್ಷೇಪಣೆಯಿದ್ದರೆ ಸದರಿ ದಿವಸ ಪೂರ್ವಾಹ್ನ ಘಂಟೆ 11ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ಸ್ವತಹಾ ಯಾ ವಕೀಲರ ಮುಖಾಂತರ ಹಾಜರಾಗಿ ಜ್ಯಾಹೀರುಮಾಡತಕ್ಕದ್ದು. ತಪ್ಪಿದರೆ ನಿಮ್ಮನ್ನು ಎಕ್ಸ್‌ಪಾರ್ಟಿಮಾಡಿ ನಿಮ್ಮ ಗೈರಹಾಜರಿಯಲ್ಲಿ ಸದ್ರಿ ಅರ್ಜಿಯನ್ನು ತೀರ್ಮಾನಿಸೋಣಾದೀತೆಂತ ಈ ಮೂಲಕ ತಿಳುಹಿಸೋಣಾಗಿರುತ್ತದೆ.

ತಾ. 12-2-'37
ಮೊಕ್ಕಾಂ
ಕುಂದಾಪುರ

S. Baratto,
Petitioner.

ಕುಂದಾಪುರ ಬೇಂಕ್ ಲಿಮಿಟೆಡ್
ಕುಂದಾಪುರ

ನಮ್ಮ ಬೇಂಕಿಗೆ ಬೇಂಕಿಂಗ್ ವ್ಯವಹಾರವು ಚೆನ್ನಾಗಿ ಗೊತ್ತಿರುವ ಒಬ್ಬ ಆಫೀಸು ಸೆಕ್ರೆಟರಿಯೂ ಮೂರು ಜನ ಕ್ಲಾರ್ಕರೂ ಬೇಕಾಗಿದ್ದಾರೆ. ಆಫೀಸು ಸೆಕ್ರೆಟರಿಯು ಸೆಕ್ಯೂರಿಟಿ (ಜಾಮೀನು ಹಣ) ಕೊಡಬೇಕಾಗಿದೆ. ಉಮೇದುವಾರರು ತಮ್ಮ ಯೋಗ್ಯತಾಪತ್ರದೊಂದಿಗೆ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ನಡೆಸತಕ್ಕದ್ದು.

ಮೆನೇಜಿಂಗ್ ಡೈರೆಕ್ಟರ್,
ಕುಂದಾಪುರ ಬೇಂಕ್, ಲಿಮಿಟೆಡ್,
ಕುಂದಾಪುರ.

ಹೊಸದು! • **ಐ ರಾ ವ ತ** • ತೀರಾ ಹೊಸದು!!

ಇದರಲ್ಲಿ—ಕಾಮಶಾಸ್ತ್ರ, ಕೈಗಾರಿಕೆಯ ವಿಷಯ, ಇಂದ್ರಜಾಲ-ಮಹೇಂದ್ರಜಾಲ, ಕಾಯದೇಭಾಗ, ತಂತ್ರ-ಮಂತ್ರ-ಯಂತ್ರ, ಸರ್ವ ಮುಹೂರ್ತ ವಿಷಯ, ವೈದ್ಯಭಾಗ. ಈ ಪ್ರಕಾರ ೭ ಪ್ರಕರಣಗಳಿದ್ದು ಅತ್ಯಂತ ಮಹತ್ವದ ವಿಷಯಗಳು ಅಡಕವಾಗಿವೆ. ಇದರ ಬೆಲೆ ರೂ- ೧-–೦-–೦ ವಿ. ಪಿ. ಚಾರ್ಜ ಬೇರೆ.

ವಿಳಾಸ:— ಎಸ್. ಸಿ. ಸಾಲಿಮಠ ಅಂಡ್ ಸನ್ಸ್, ಗದಗ ಸಿಟಿ.

ಅನೇಕ ಮರ್ಮ ವಿದ್ಯೆಗಳಿಂದೊಡಗೂಡಿದ

— ಚಿಂ ತಾ ರ ತ್ನ —

ಇದರಲ್ಲಿ ಜಾತಕಫಲ, ಕೈಗಾರಿಕೆಯ ವಿಷಯ, ಇಂದ್ರಜಾಲ, ಮಹೇಂದ್ರಜಾಲ, ಯಕ್ಷಿಣಿ ಮೊದಲಾದ ವಿದ್ಯೆಗಳು ಇರುತ್ತವೆ. ಒಂದೊಂದು ವಿಷಯಕ್ಕೆ ಎಷ್ಟು ಬೆಲೆ ಕೊಟ್ಟರೂ ಸಾಲದು.

೧ ಸಬಕಾರವನ್ನು ತಯಾರಿಸುವ ರೀತಿ
೨ ವೇಣಬತ್ತಿ ತಯಾರಿಸುವ ರೀತಿ
೩ ಕಾಷ್ಟಿಕ್ ಸೋಡಾ ತಯಾರಿಸುವದು
೪ ಬಿಸ್‌ಕ್ಯೂಟ ತಯಾರಮಾಡುವದು
೫ ದಶಾಂಗ ತಯಾರಮಾಡುವದು
೬ ಪೆಪ್ಪರಮೆಂಟ ಮಾಡುವದು
೭ ದೂಪದ ಘಟ್ಟಿ ಮಾಡುವದು
೮ ಭಂಗಾರ ಮಾಡುವದು
೯ ಬೆಳ್ಳಿ ತಯಾರಮಾಡುವದು
೧೦ ಜರ್ಮನ್ ಶಿಲ್ವರ ಧಾತು
೧೧ ಊದಿನಕಡ್ಡಿ ತಯಾರಮಾಡುವದು
೧೨ ತಗಡಿನ ಪಾಟ ತಯಾರಮಾಡುವದು
೧೩ ಕುಂಕುಮವನ್ನು ತಯಾರಿಸುವದು
೧೪ ಹಸಿ ಕುಂಕುಮ ತಯಾರಿಸುವದು
೧೫ ಗೋದೀಸರಿ ಕೆಡದಂತೆ ಮಾಡುವದು
೧೬ ಬುಕ್ಕಿಟ್ಟು ಮಾಡುವದು
೧೭ ಮೊನಸರಿ ಯಾವಾಗಲೂ ನೀರಾಗಿರುವಂತೆ ಮಾಡುವದು
೧೮ ಅಷ್ಟಗಂಧ ಸಾಮಾನುಗಳು
೧೯ ಭರ್ಪ ತಯಾರಮಾಡುವದು
೨೦ ಕಟ್ಟಿಗೆ ಲೋಹಗಳಿಗೆ ಹಚ್ಚುವ ಬಣ್ಣ ಮಾಡುವದು
೨೧ ಕಾಗದವನ್ನು ಮಾಡುವದು
೨೨ ಮೆಂಥೇಲ ಎಣ್ಣೆ ತಯಾರಿಸುವದು
೨೩ ಕನ್ನಡಿಯ ಮೇಲೆ ಬರೆಯುವದು
೨೪ ದಂತಮಂಜನ ಮಾಡುವದು
೨೫ ರಕ್ತಶುದ್ಧಿ, ಧಾತುವೃದ್ಧಿ ಔಷಧಿ
೨೬ ಕಸ್ತೂರಿ ಮಾತ್ರೆ ಮಾಡುವದು
೨೭ ಕುಚಪ್ರಭಾತಕ್ಕೆ ಔಷಧ
೨೮ ಬಾಲಾಮೃತ ಮಾಡುವದು
೨೯ ಶಿಶ್ನವೃದ್ಧಿಗೆ ಔಷಧ
೩೦ ಪರಬತ್ತು ಮಾಡುವದು
೩೧ ಛಳಜ್ವರದ ಗುಳಿಗೆ ಮಾಡುವದು
೩೨ ಬೂಟಪಾಲೀಸ ಮಾಡುವದು
೩೩ ಮನೆ, ವಠಾರ, ಅಂಗಡಿ ಮೊದಲಾದುವುಗಳಿಗೆ ಗೆದ್ದಲಿ ಹತ್ತದಂತೆ ಮಾಡುವದು
೩೪ ಹುರುಕು ಖಜ್ಜಿ ಮುಲಾಮು ಮಾಡುವದು
೩೫ ನಾಸೀಪುಡಿ ಮಾಡುವದು
೩೬ ಮನೆ, ವಠಾರ, ಅಂಗಡಿಗಳಲ್ಲಿ ಇಲಿ, ಹೆಗ್ಗಣ ಮೊದಲಾದವುಗಳು ಇರದಂತೆ ಮಾಡುವದು
೩೭ ಜರ್ದಾತಂಬಾಕ ಮಾಡುವದು
೩೮ ಬದನೆ, ಕುಂಬಳ ಮುಂತಾದ ಕಾಯಿಗಳಿಗೂ, ಮಾವು, ಶೇಬು ಮುಂತಾದ ಹಣ್ಣುಗಳಿಗೂ ಬೀಜವಿಲ್ಲದೆ ದೊಡ್ಡವಾಗುವದು
೩೯ ಸಿಮೆಂಟ್ ತಯಾರಿಸುವದು
೪೦ ಬಿಳೀ ಹೂಗಳು ಕೆಂಪಾಗುವಂತೆ ಗಿಡಗಳನ್ನು ತಯಾರಿಸುವದು
೪೧ ಕೆಂಪು ಹೂಗಳು ಬೆಳ್ಳಗಾಗುವಂತೆ ಗಿಡಗಳನ್ನು ತಯಾರಿಸುವದು
೪೨ ಇಸ್ಪೀಟಿನ ಚಮತ್ಕಾರ
೪೩ ಮುಖ ನೋಡಿಕೊಳ್ಳುವ ಕನ್ನಡಿ ಮಾಡುವದು
೪೪ ಸುವಾಸನೆ ಎಣ್ಣೆ ತಯಾರಿಸುವದು
೪೫ ಕೇದಿಗೆ ದವನದೆಣ್ಣೆ ಮಾಡುವದು
೪೬ ಯಾವ ಗಿಡವಾದರೂ ಹುಟ್ಟುತ್ತಲೆ ಹೂವು ಬಿಡುವಂತೆ ಮಾಡುವದು
೪೭ ಗಂಧಕದ ಬಟ್ಟಲ ತಯಾರಿಸುವದು
೪೮ ಕರ್ಪೂರ ಮಾಡುವದು
೪೯ ಬ್ರೆಡ್ಡು ತಯಾರಿಸುವದು
೫೦ ನೂಲು ಬಟ್ಟೆಗೆ ಬಣ್ಣ ಹಾಕುವದು
೫೧ ಕಪ್ಪು, ಕೆಂಪು, ಹಸುರು, ಹಳದಿ ಬಣ್ಣ ತಯಾರಿಸುವದು
೫೨ ಬರ್ಥ ಕಂಟ್ರೋಲ
೫೩ ಅರಗಿನ ಬಣ್ಣ ತಯಾರಿಸುವದು
೫೪ ಗಿಲೀಟ ಮಾಡುವದು
೫೫ ತಾಮ್ರದ ಮೇಲೆ ಭಂಗಾರದ ಗಿಲೀಟು ಮಾಡುವದು
೫೬ ತಾಮ್ರ, ಹಿತ್ತಾಳಿಗೆ ಬೆಳ್ಳಿ ಗಿಲೀಟು ಮಾಡುವದು
೫೭ ಕಡ್ಡಿ ಪೆಟ್ಟಿಗೆ ತಯಾರಿಸುವದು
೫೮ ರೋಜವಾಟರ ತಯಾರಿಸುವದು

ಇತ್ಯಾದಿ ೧೭೦ ವಿಷಯಗಳಿವೆ.
ಸ್ಥಳ ಸಂಕೋಚ ಮೂಲಕ ಎಲ್ಲವನ್ನೂ ಕೊಟ್ಟಿಲ್ಲ.

ಬೆಲೆ ೧ ರೂಪಾಯಿ . . (ವಿ. ಪಿ. ವೆಚ್ಚ ಬೇರೆ)

ಎಸ್. ಸಿ. ಸಾಲಿಮಠ, ಪ್ರಿಂಟರ, ಗದಗ
ಇವರಿಂದ ಬರೆಯಲ್ಪಟ್ಟ

ಕಾ ಮ ಕ ಳಾ ಶಾ ಸ್ತ್ರ

ಪ್ರತಿ ಒಬ್ಬ ರಸಿಕರು ಅವಶ್ಯ ಓದಬೇಕಾದ
–– ಈ ಪುಸ್ತಕದೊಳಗಿನ ವಿಷಯಗಳು ––

೧ ಪುರುಷ ಸಾಮುದ್ರಿಕ ಲಕ್ಷಣ. ೨ ಸ್ತ್ರೀ ಸಾಮುದ್ರಿಕ ಲಕ್ಷಣ. ೩ ಶಶಕ ಜಾತಿ ಪುರುಷನ ಲಕ್ಷಣ. ೪ ಮೃಗಜಾತಿ ಪುರುಷನ ಲಕ್ಷಣ. ೫ ವೃಷಭಜಾತಿ ಪುರುಷನ ಲಕ್ಷಣ. ೬ ಅಶ್ವಜಾತಿ ಪುರುಷನ ಲಕ್ಷಣ. ೭ ಪದ್ಮಿನಿಜಾತಿ ಸ್ತ್ರೀಯಳ ಲಕ್ಷಣ. ೮ ಚಿತ್ರಿಣಿಜಾತಿ ಸ್ತ್ರೀಯಳ ಲಕ್ಷಣ. ೯ ಶಂಖಿನಿಜಾತಿ ಸ್ತ್ರೀಯಳ ಲಕ್ಷಣ. ೧೦ ಹಸ್ತಿನಿಜಾತಿ ಸ್ತ್ರೀಯಳ ಲಕ್ಷಣ. ೧೧ ಯಾವ ಯಾವ ಜಾತಿ ಪುರುಷನಿಗೆ, ಯಾವ ಯಾವ ಜಾತಿ ಸ್ತ್ರೀಯಳು ಯೋಗ್ಯ. ೧೨ ಮತ್ತು ಅವರಿಂದ ಹುಟ್ಟಿದ ಮಕ್ಕಳ ಫಲವಿಚಾರ (ಜಾತಕ.) ೧೩ ಯಾವ ಯಾವ ಜಾತಿ ಸ್ತ್ರೀಯರಿಗೆ ಯಾವ ಯಾವ ತಿಥಿಯ ದಿವಸ ಭೋಗೇಚ್ಛಾ ಉಂಟಾಗುತ್ತವೆಂಬುದನ್ನು ತಿಳಿಯುವದು. ೧೪ ಯಾವ ಯಾವ ಸ್ತ್ರೀಯರಿಗೆ ಎಷ್ಟೆಷ್ಟು ಹೊತ್ತಿಗೆ ಭೋಗೇಚ್ಛಾ ಉಂಟಾಗುತ್ತದೆಂಬದನ್ನು ತಿಳಿಯುವದು. ೧೫ ಯಾವ ಯಾವ ಜಾತಿ ಸ್ತ್ರೀಯರಿಗೆ ಯಾವ ಯಾವ ತಿಥಿಯ ದಿವಸ ಯಾವ ಯಾವ ಅವಯವದಲ್ಲಿ ಕಾಮವು ಇರುತ್ತದೆಂಬುದನ್ನು ತಿಳಿಯುವ ಕ್ರಮವು. ೧೬ ಚಂದ್ರಕಲೆಯ ಸ್ಥಾನಗಳು. ೧೭ ಸ್ತ್ರೀವಶೀಕರಣ. ೧೮ ಪುರುಷವಶೀಕರಣ. ೧೯ ಪದ್ಮಿನಿ ಸ್ತ್ರೀಯಳನ್ನು ವಶಮಾಡಿಕೊಳ್ಳುವ ಉಪಾಯ. ೨೦ ಚಿತ್ರಿಣಿ ಸ್ತ್ರೀಯಳನ್ನು ವಶಮಾಡಿಕೊಳ್ಳುವ ಉಪಾಯ. ೨೧ ಶಂಖಿನಿ ಸ್ತ್ರೀಯಳನ್ನು ವಶಮಾಡಿಕೊಳ್ಳುವ ಉಪಾಯ. ೨೨ ಹಸ್ತಿನಿ ಸ್ತ್ರೀಯಳನ್ನು ವಶಮಾಡಿಕೊಳ್ಳುವ ಉಪಾಯ. ೨೩ ಭೋಗಕ್ಕೆ ಯೋಗ್ಯ ಸ್ಥಳ. ೨೪ ಭೋಗಕ್ಕೆ ಅಯೋಗ್ಯ ಸ್ಥಳ. ೨೫ ಮೈಥುನಕ್ಕೆ ಅಯೋಗ್ಯವಾದ ವೇಳೆ. ೨೬ ಮೈಥುನಕ್ಕೆ ಅಯೋಗ್ಯ ಸ್ತ್ರೀಯರು. ೨೭ ಪರಸ್ತ್ರೀ ಗಮನದಿಂದಾಗುವ ಹಾನಿ. ೨೮ ಸುಗಂಧ ದ್ರವ್ಯ. ೨೯ ಕಂಕ್ಳದೊಳಗಿನ ದುರ್ಗಂಧ ಹೋಗುವುದಕ್ಕೆ. ೩೦ ಬಾಯಿ ದುರ್ಗಂಧ ಹೋಗುವುದಕ್ಕೆ. ೩೧ ಮಡಿಬಕ್ಕೆಗೆ. ೩೨ ಕೇಶರಂಜನಕ್ಕೆ. ೩೩ ತಿಗಳಿನೆಕ್ಕಿದಕ್ಕೆ. ೩೪ ಕೂದಲು ಉದುರುವುದಕ್ಕೆ. ೩೫ ಶರೀರದ ಕಪ್ಪುಬಣ್ಣಕ್ಕೆ. ೩೬ ಕುಚವೃದ್ಧಿಗೆ. ೩೭ ಸ್ತ್ರೀಯರಲ್ಲಿಯ ಅವಸ್ಥೆಗಳು. ೩೮ ಅವಸ್ಥೆ ಮೇಲಿಂದ ಪ್ರೇಮದ ಇರುವಿಕೆ. ೩೯ ಮೈಥುನದ ಸುಖದಲ್ಲಿ ಅಂತರ ಬೀಳುವ ಕಾರಣ. ೪೦ ದಂಪತಿಗಳು ಕೂಡುವ ದಿಕ್ಕಿನ ಫಲವು. ೪೧ ಸತಿಪತಿಗಳು ಕೂಡುವ ದಿವಸ ಫಲ. ೪೨ ಗರ್ಭ ನಿಂತ ದಿವಸ ಫಲ. ೪೩ ಗರ್ಭ ನಿಂತ ಕಾಲ ಫಲ ೪೪ ಸ್ತ್ರೀಯರ ಜಾತಿ ಮೇಲಿಂದ ಕೂಸಿನ ಲಕ್ಷಣ. ೪೫ ವಿಕಾಸಯೋನಿಗೆ ಉಪಾಯ. ೪೬ ಯೋನಿ ಸಂಕೋಚಕ್ಕೆ. ೪೭ ಶಿಶ್ನ ವೃದ್ಧಿಗೆ. ೪೮ ಸ್ತ್ರೀಯರಿಗೆ ಮೈಥುನವು ಬೇಗನೆ ಸಾಕಾಗುವಂತೆ ಮಾಡುವ ಉಪಾಯ. ೪೯ ಪುರುಷರಿಗಿಂತ ಮೊದಲು ಸ್ತ್ರೀಯರ ರೇತಸ್ಖಲನವಾಗುವ ಉಪಾಯ. ೫೦ ಪುರುಷರ ರೇತಸ್ಸು ಬೇಗ ಬೀಳಬಾರದೆಂಬುದಕ್ಕೆ ಉಪಾಯ. ೫೧ ವಾಜೀಕರಣ ಪ್ರಯೋಗ. ೫೨ ಸ್ತ್ರೀಯರನ್ನು ಜಯಿಸುವುದಕ್ಕೆ. ೫೩ ಬಹಳ ಮುಟ್ಟಾಗುತ್ತಿದ್ದರೆ. ೫೪ ಸಂತತಿ ಪ್ರತಿಬಂಧಕ ಉಪಾಯ. ೫೫ ಮುಟ್ಟು ತಡೆದಿದ್ದರೆ. ೫೬ ಗರ್ಭಾಶಯ ಶುದ್ಧಿಗೆ. ೫೭ ಗರ್ಭಧಾರಣಕ್ಕೆ. ೫೮ ಗರ್ಭಪಾತಕ್ಕೆ ಉಪಾಯ.

ಇತ್ಯಾದಿ ೧೭೦ ವಿಷಯಗಳಿವೆ. ಸ್ಥಳ ಸಂಕೋಚ ಮೂಲಕ ಎಲ್ಲವನ್ನೂ ಕೊಟ್ಟಿಲ್ಲ.

ಬೆಲೆ ೧ ರೂಪಾಯಿ (ವಿ. ಪಿ. ವೆಚ್ಚ ಬೇರೆ)

ವಿಳಾಸ:—ಎಸ್. ಸಿ. ಸಾಲಿಮಠ ಅಂಡ್ ಸನ್ಸ್, ಗದಗ ಸಿಟಿ.

Pandit Jawaharlal Nehru at Mangalore

THE Thrice Congress President, the National hero and the uncrowned King of National India was expected to reach Cannanore at 12 noon and Mangalore at 4-20 by the Malabar Express on Wednesday the 10th instant. From early morning the City seemed to be on the alert. People with yellow caps were seen moving to and fro briskly and an atmosphere of intense anxiety to have a glimpse of the great man prevailed. From 11 o'clock onwards people began to look up and watch the buzz of the aeroplane conveying the Congress President to Cannanore enroute to Mangalore at 11-20 A. M. The plane was seen flying at considerable hight. Earlier in the day Dr. K. Vittal Shetty, the President of the Congress Parliamentary Board had proceeded to Cannanore to meet the Pandit. Long before the scheduled time for the arrival of the mail train, the railway premises and the large space in front of the station was covered by a serging mass of humanity numbering over several thousands.

From the Railway station the Pandit proceeded to the residence of Mr. J. Z. Saldanha at Falnir to participate in the tea party organised by the Roman Catholics of Mangalore. A very representative gathering of the Roman Catholic Community consisting of men and women including clergy were assembled to meet the distinguished guest. After light refreshments an address of welcome was read by Mr. J. Z. Saldanha, on behalf of the hosts. In welcoming the Pandit the address stated that Mangalore is the Rome of the East and that there was the general allegation that the Catholic Community as a body is not Congress-minded, though there were a good few who in their allegiance to the Mother land are second to none. The address stated that the welcome was more personal than official. That the Pandit is the greater son of a Great Father round whom the eye of the world is centred now. He happens to be one of the greatest sons of Mother India. The hosts did not propose, the address mentioned, to enter into subjects of a political nature in a cosmopolitan gathering of the kind present; the address expressed the feeling that the hosts as Roman Catholic Christians did love their country but they put their God and religion first and everything else next. The Roman Catholic religion is world wide and possessed 2 characteristics viz, that the community is one, that it is Catholic and they believe that their religion is founded by God. The hosts wished to know in their address what the attitude of the Congress would be when it comes to power towards the Catholic religion, towards safeguarding the rights and liberties of the Catholic religion. They would like, the address said, to have their doubts dispelled. The hosts in conclusion expressed gratitude to the honoured guest of the evening for responding to the invitation and added that the day's function was shorn of all pomp and pleasure as they were commencing the period of lent that day.

The guest stood up amidst cheers and said that it was difficult to speak in a spread out space like that and make himself heard by all. He was delighted to be once again in this beautiful town which he had visited 9 years ago. He added he had carried then vivid memories of the place and wanted to come back. He said he has come this time in a hurry and his stay was necessarily brief. The town was peculiar in its situation and composition of the people. He could see various kinds and groups of people not found in other parts. Continuing he said he has listened to the interesting address just then read and was wondering what to say. You have said he added political questions are too much for guests and hosts, but you have later on dragged me in your address to certain political issues. He said he was not in a position to give any assurance on the points raised by them. Congress stands for democratic Government today and that is what he would like it to stand for tomorrow. He added it was utterly irrelevant to raise religious issues so far as Congress was concerned. It is fundamentally a political body and as such it aims at complete freedom of conscience. Anything else, commonsense dictates, will mean civil war. Cultural development of age and commonsense both go to assert complete freedom of conscience. The President added that the real issue was one of Economical problem. One thing is certain, that the present economical condition is breaking down and not fulfilling the need. Continuing the Pandit said he had not the ghost of a conception as to what India will turn into in the future. It must be settled by Indians without outside interference. In the ranks of the Congress, President admitted, opinions differ, but when a decision was arrived at, all are willing to pull together. He advised the Catholics not to cut themselves adrift from the flow of national currents. He thanked them for their kindness and left the place amidst thundering cheers.

From thence the Congress President proceeded to the maidan to address the public and to receive the welcome address from the several local bodies. The road all along was thickly lined by men and women so much so that the car could hardly move in more than a creeping speed. At the maidan there was a

A VOTE

For CANARA BANK

IS A

VOTE FOR FREEDOM

FROM FINANCIAL WORRIES.

ESTD. 1906

CANARA BANK

LIMITED.

RESOURCES OF CRORE.

gathering like which both in magnitude and in representative nature, had never collected in the memory of the oldest man alive here. There were occasions when huge gatherings had collected on the maidan notably when Mahatma Gandhi, Maulana Shaukat Ali and other leaders were here; but the present gathering exceeded in number many times more of all such gatherings. It proved once for all the affection and regard with which the masses even in this district and lithargic land have held the Congress President. All the addresses were taken as read and in his address the Pandit referred little or nothing to them. Whether he had opportunity to see the advance copies of the addresses is not known. But the Congress President seemed to be a man of iron will, made of sterner metal and was against all superficial demonstrations and from what could be seen of his methods and manners he was keeping himself above all the courtiers that naturally surround great men. The Municipal address was a piece of brief and concise history of South Kanara expressed in choice language for the benefit of the distinguished guest.

Loud speaker arrangements proved a failure and Pandith Jawaharlal a man of determined will condemned the same and threw out the Microphone from his table. He rightly characterised the loud speaker arrangment as primitive and silly They could not reach half the audience. He said he should have liked to be heard by all as he wanted to deliver to them the Congress message The President said he has come with the message of Indian freedom and the removal of Indian poverty and the misery of masses.

He said that people hear a lot now and then about election. He did not come for that purpose from Northern India. He had come to speak of greater things-things relating to the political and economical freedom of the masses. Election he added was only a byeproduct which will last for a few days. Therefore he said people should remember the fundamental and greater problems of the poverty of India and everything else must be considered in the light of that problem. Even the problem of Swaraj the Pandit added is of secondary importance. We have to take up the problem of Swaraj only to remedy the poverty. How can we, he thundered get rid of poverty so long as we have not the power. We cannot do it unless we have a voice in our Government. Therefore he said the question of Swaraj and political freedom become urgent problems The struggles at election come and go; but the question of poverty and freedom remain. Congress he added has organised itself and combated against Government to achieve this for several years and for this end only Congress is contesting at the elections. We shall get freedom only when we gained and developed sufficient strength and strength comes only from conflict. He said there are many organisations in the country, some good, some bad but none with strength enough to stand up against British Imperalism, except the Congress organisation:

He appealed to the masses that therefore if they wanted to lend a helping hand in this struggle for Swaraj and national freedom they must come under the flag of Congress, join the ranks of Congress and fight with the Congress. He emphasised the point that no committee is worth the name unless it has village organisations and that it makes its voice heard by the villagers. If these Committees he said do not secure the mind and will of the masses, such a Committee consisting of 5 or 6 notables does not deserve to exist. Swaraj he added did not mean changing the English officials by Indian officials. It means, the President emphasised, vesting the powers in the 35 crores of Indian masses. These men and women must share in the administration of the Government of India without the distinction of caste or creed. That is, the Pandit said, the idea of Swaraj. He said that when he spoke of Congress it must be understood in terms of Indian masses and their freedom.

We are likely to have political upheavals like the terresterial earthquakes. We must look ahead to be prepared. Keep the struggle of India before your eyes and think of elections in that light. Do not think, he added that Congress is interested in sending a few men to the Councils to hob-nob with the Officers nor to do some work in a humdrum manner. Nothing will be gained by speeches in the Council Real work, he said, is outside with the masses, in the market places, factories and working houses Congress sends candidates only to sweep clean all those that betray their Country to sweep clean of all those that indulge in the term 'loyalty'. We have now, the Pandit said, two forces, combating one against the other the Congress and the Government with its hangers on.

The present election campaign, has become a straight fight. It is not a question concerning individuals but of principles. It is for the people, the President said, to see and find out if proper persons are selected by the Congress and if so it is their duty to support. In his own province and in the other provinces of Nortern India, the President said the success of the Congress has been phenomenal and it has resulted in the abandonment of the Coronation Durbar of the new King in India.

Look therefore, Panditji said to elections in terms of Indian freedom and poverty and not in terms of individual candidates. In takling the problem of economics and poverty all differences will melt away. He then read the names of the 5 Congress candidates and exhorted the audience to support them whole-heartedly, so that they may come out triumphantly successful. He thanked the audience for the welcome given and said in welcoming him they were offering a welcome and the cause he represented.

The Congress Predent's speech was very decently, appropriately and appreciatively translated into Canarese by Mr Mudavedu Krishna Rao of Dharwar.

It took a long time for the audience to melt away the whole maidan was a sea of faces and the sight was one worthy of being enjoyed by Gods even. Very great enthusiasm prevailed and it must be said to the credit of our people, no untoward event occured though the gathering was the largest ever at a single function in Mangalore. *George Herbert.*

ಇಟಲಿಗೂ ಬಂದಿತು ಸಂತಾನ ಶುದ್ಧೀಕರಣ

ಇದುವರೆಗೂ ತಮ್ಮ ಜನಾಂಗದವರನ್ನು ಬಿಟ್ಟು ಬೇರೆ ಜಾತಿಯವರನ್ನು ಮದುವೆಯಾಗಕೂಡದೆಂಬ ಕಾನೂನು ಜರ್ಮನಿಯಲ್ಲಿ ಮಾತ್ರ ಜಾರಿಯಲ್ಲಿದ್ದಿತು. ಈಗ ಈ ಸಂತಾನಶುದ್ಧೀಕರಣ ಚಳವಳ ಪ್ರಚಾರವು ಇಟಲಿಗೂ ಹತ್ತಿದಂತಿದೆ.

ಅನೇಕ ಮಂದಿ ಇಟಲಿಯ ದೇಶೀಯರು ಈಗ ಅಬಿಸೀನಿಯಾ ದೇಶದಲ್ಲಿ ಇಥಿಯೋಪಿಯಾ ಹುಡುಗಿಯರೊಡನೆ ಸುಖವಾಗಿ ಕಾಲಯಾಪನೆ ಮಾಡುತ್ತಿದ್ದಾರೆ.

ಇನ್ನು ಮುಂದೆ ಯಾರೂ ಈ ರೀತಿ ಬೇರೆ ಜನಾಂಗದವರೊಡನೆ ಮದುವೆ ಮಾಡಿಕೊಳ್ಳಕೂಡದೆಂದೂ, ಹಾಗೆ ವಿವಾಹಿತರಾದವರನ್ನು ಜೈಲಿಗೆ ಕಳುಹಿಸಲಾಗುವುದೆಂದೂ ಮುಸೋಲಿನಿಯವರು ಇಟಾಲಿಯನ್ ಸರಕಾರದ ಆಜ್ಞೆಯನ್ನು ಹೊರಡಿಸಿದ್ದಾರೆ.

ಮಂಗಳೂರು

(ನಮ್ಮ ಸ್ವಂತ ಬಾತ್ಮೀದಾರರಿಂದ) ತಾ ೧೫—೨—೧೯೩೭

ರಾಷ್ಟ್ರಪತಿ ಪಂಡಿತ ಜವಾಹರಲಾಲರ ಆಗಮನ ಮಂಗಳೂರಲ್ಲಿ ಅಪೂರ್ವ ಸ್ವಾಗತ

ರಾಷ್ಟ್ರಸಭೆಯ ಸಂದೇಶವು ಈ ದೇಶದ ಜನರ ಬಡತನವನ್ನು ನೀಗಿಸುವಂತೆ ಮಾಡಬೇಕೆಂಬುದೇ

ಮೂವತ್ತೈದು ಕೋಟಿ ಜನರಿಗೆ ಸರಕಾರದ ಕೆಲಸದಲ್ಲಿ ಭಾಗವಹಿಸುವ ಹಕ್ಕು ಇರಬೇಕು. ಅದೇ ಸ್ವರಾಜ್ಯವೆಂಬುದರಅರ್ಥ. ಅಲ್ಲದೆ ಕೆಲವು ಆಂಗ್ಲ ಅಧಿಕಾರಿಗಳ ಸ್ಥಾನದಲ್ಲಿ ಹಿಂದೀಯರನ್ನು ನೇಮಿಸುವುದು ಸ್ವರಾಜ್ಯವಲ್ಲ.

● ●

ರಾಷ್ಟ್ರಪತಿ ಪಂಡಿತ ಜವಾಹರಲಾಲ ನೆಹರುಗಳು ತಾ. ೧೪ರಲ್ಲು ಮುಂಬಯಿಯಿಂದ ವಿಮಾನದಲ್ಲಿ ಕುಳಿತು, ಅಪರಾಹ್ನ ಸುಮಾರು ಒಂದು ಘಂಟೆಗೆ ಕಣ್ಣಾನೂರಿಗೆ ಬಂದಿಳಿದರು. ಅವರನ್ನು ಇದಿರುಗೊಳ್ಳಲು ಕೇರಳದ ಕಾಂಗ್ರೆಸ್ ಧುರೀಣರನೇಕರಲ್ಲದೆ ಡಾ| ವಿಟ್ಠಲ ಶೆಟ್ಟಿಯವರೂ, ಶ್ರೀಮತಿ ಕಮಲಾದೇವಿಯವರೂ ಕಣ್ಣಾನೂರಿನ ವಿಮಾನ ನಿಲ್ದಾಣಕ್ಕೆ ಹೋಗಿದ್ದು ರಾಷ್ಟ್ರಪತಿಗಳಿಗೆ ಹೂಮಾಲೆಯನ್ನರ್ಪಿಸಿ ಸ್ವಾಗತವಿತ್ತರು. ಅಲ್ಲಿ ನೆರೆದಿದ್ದ ಮಹಾಜನರಿಗೆ ರಾಷ್ಟ್ರ ಸಂದೇಶವನ್ನಿತ್ತು ಸ್ವಲ್ಪ ವಿಶ್ರಾಂತಿ ಹೊಂದಿ ಕೂಡಲೆ ಮಂಗಳೂರಿಗೆ ರೈಲು ಬಂಡಿಯಲ್ಲಿ ಹೊರಟರು ದಾರಿಯುದ್ದಕ್ಕೂ ಜನರು ಜಯಜಯಕಾರಗಳನ್ನು ಮಾಡಿದರು

ರೈಲು ದ. ಕನ್ನಡದ ಎಲ್ಲೆಕಟ್ಟಿನ ನಿಲ್ದಾಣವಾದ ಚೆರುವತ್ತೂರಿಗೆ ಬರಲು ಅಲ್ಲಿ ಶ್ರೀಮಾನ್ ಕಾರಂತರೂ ಶ್ರೀ| ಬಿ. ವೆಂಕಟರಾವ್ ಬಾಳಿಗರೇ ಮೊದಲಾದವರು ಅಧ್ಯಕ್ಷರನ್ನು ಸ್ವಾಗತೀಕರಿಸಿದರು. 'ನವಯುಗದ' ಪ್ರತಿನಿಧಿಗಳೂ ಕೂಡ ಚೆರುವತ್ತೂರಿಗೆ ಬಂದು ವಿದ್ಯಮಾನಗಳನ್ನು ಪರಿಶೀಲಿಸಿಕೊಂಡಿದ್ದರು.

ಚೆರುವತ್ತೂರೆಂಬುದು ಒಂದು ನಿರ್ಜನ ಪ್ರದೇಶವಾದರೂ, ರೈಲು ಬರುವ ಹೊತ್ತಿಗೆ ಬಹಳ ಮಂಚಿತವಾಗಿಯೇ ದೂರ ದೂರದ ಹಳ್ಳಿಗಳಿಂದ ಆಬಾಲವೃದ್ಧರೂ, ತರುಣರೂ ರಾಷ್ಟ್ರಧ್ವಜವನ್ನು ಹಿಡಿದುಕೊಂಡು ತಂಡ ತಂಡವಾಗಿ ಬಂದರು. ಅಧ್ಯಕ್ಷರ ಆಗಮನ ಕಾಲದಲ್ಲಿ ಕಡಿಮೆಯೆಂದರೆ ನಾಲ್ಕೈದು ಸಾವಿರ ಜನರು ಬಂದು ಕಾದಿದ್ದರು.

ರೈಲು ನಿಲ್ದಾಣಕ್ಕೆ ಬರಲು 'ಜವಾಹರಲಾಲ್ ಕೀ ಜೈ' ಎಂಬ ಧ್ವನಿಯು ನಭೋ ಮಂಡಲಕ್ಕೆ ಏರಿತು. ಕೂಡಲೆ ರಾಷ್ಟ್ರಪತಿಗಳು ಬಂಡಿಯಿಂದಿಳಿದು ನಸಿಗೆ ಚಿತ್ತೈಸಿ ಈ ಮಾತುಗಳನ್ನಾಡಿದರು:—'ಮಿತ್ರರೇ, ನಿಮ್ಮ ಆದರದ ಸ್ವಾಗತಕ್ಕೆ ಕೃತಜ್ಞತಾಪೂರ್ವಕ ವಂದನೆಗಳನ್ನರ್ಪಿಸುತ್ತೇನೆ. ಆದರೆ ಈ ಸ್ವಾಗತವೆಂತಹುದು ಎಂಬುದನ್ನು ಮರೆಯಬೇಡಿರಿ ಸ್ವಾಗತವು ಕಾಂಗ್ರೆಸ್ಸಿಗೆಮತ್ತು ಅದು ಕೈಕೊಂಡಿರುವ ಧ್ಯೇಯಕ್ಕೆ. ರಾಷ್ಟ್ರಸಭೆಯ ಧ್ಯೇಯವು ಪ್ರಧಾನವಾಗಿ, ಹಿಂದೀಯರ ಬಡತನವನ್ನು ನೀಗಿಸುವುದೊಂದೆ. ನಾವು ಸ್ವಾತಂತ್ರ್ಯಕ್ಕಾಗಿ ಹೋರಾಡಿ ಅದನ್ನು ಪಡೆದು ಬಡತನವನ್ನು ದೂರಮಾಡಲೆತ್ನಿಸುತ್ತೇವೆ. ಸಂಕಷ್ಟಗಳನ್ನು ನಿರ್ಮೂಲಮಾಡಬೇಕೆಂದಿದ್ದೇವೆ. ಪ್ರಕೃತದ ಮುಖ್ಯ ಪ್ರಶ್ನೆಯು ಇದು—ಈ ಬಡತನವನ್ನು ಹೋಗಲಾಡಿಸುವುದು ಹೇಗೆ? ಎಂಬುದು. ಪ್ರಕೃತದಲ್ಲಿ ಕಾಣುವ ನಿರುದ್ಯೋಗತೆಯನ್ನು ಹೋಗಲಾಡಿಸವುದು ಹೇಗೆಂಬುದು ಈಗಿನ ಮುಖ್ಯ ಪ್ರಶ್ನೆ. ನೀವೀ ವಿಷಯಗಳನ್ನು ಒಪ್ಪಿಕೊಳ್ಳುವುದಾದರೆ ನೀವೆಲ್ಲರೂ ಕಾಂಗ್ರೆಸ್ಸಿಗೆ ಬೆಂಬಲಕೊಡಬೇಕು. ರಾಷ್ಟ್ರಸಭೆಯ ಈ ಸಂದೇಶವನ್ನು ಪ್ರತಿಯೊಂದು ಹಳ್ಳಿಗೂ ಪ್ರತಿಯೊಂದು ಮನೆಗೂ ಮುಟ್ಟುವಂತೆ ಮಾಡಬೇಕು. ಈಗ ಚುನಾವಣೆಯ ಕಾಲವು ಸಮೀಪಿಸಿದೆ. ನಾವೆಲ್ಲರೂ ಕಾಂಗ್ರೆಸಿಗೆ ಸಹಾಯಮಾಡಬೇಕು.' ಇಷ್ಟರಲ್ಲಿ ರೈಲುಬಂಡಿ ಹೊರಡಲು ಸಮಯವಾದ್ದರಿಂದ ಅಷ್ಟರಲ್ಲೇ ತಮ್ಮ ಭಾಷಣವನ್ನು ಮುಗಿಸಿದರು. ಚೆರುವತ್ತೂರಲ್ಲಿ ರಾಷ್ಟ್ರಪತಿಗಳು ಮೊದಲನೆಯ ಬಾರಿ ರಾಷ್ಟ್ರಸಭೆಯ ಸಂದೇಶವನ್ನು ಕೊಟ್ಟರು.

ರೈಲು ಹೊಸದುರ್ಗಕ್ಕೆ ಬಂತು. ಅಲ್ಲಿ ಸುಮಾರು ಎಂಟು ಹತ್ತು ಸಾವಿರ ಮಂದಿ ಅಧ್ಯಕ್ಷರ ದರ್ಶನಕ್ಕಾಗಿ ಬೆಳಗಿನಿಂದಲೂ ಕಾದು ನಿಂತಿದ್ದರು. ಚೆರುವತ್ತೂರಲ್ಲಿ ಕೊಟ್ಟ ಸಂದೇಶವನ್ನೇ ಅಧ್ಯಕ್ಷರು ಅಲ್ಲಿಯೂ ಕೊಟ್ಟರು. ಕಾಸರಗೋಡಿನಲ್ಲಿ ಸುಮಾರು ಏಳೆಂಟು ಸಾವಿರಮಂದಿ ಅಧ್ಯಕ್ಷರ ಸಂದರ್ಶನಕ್ಕಾಗಿ ಬಂದಿದ್ದರು. ಮಹಿಳೆಯರೂ ತುಂಬಾ ಸಂಖ್ಯೆಯಲ್ಲಿ ಬಂದಿದ್ದರು. ರೈಲ್ವೆ ಸ್ಟೇಶನ್ ಪ್ಲೇಟ್‌ಫಾರ್ಮಿನ ಮೇಲೆ ಒಂದು ಎತ್ತರವಾದ ಭಾಷಣವೇದಿಕೆಯನ್ನು ನಿರ್ಮಿಸಿದ್ದರು ಅದರ ಮೇಲೇರಿ ರಾಷ್ಟ್ರಪತಿಗಳು ಮೇಲಿನ ಸಂದೇಶವನ್ನೇ ಕೊಟ್ಟರು ಶ್ರೀ ಎಸ್. ಲಕ್ಷ್ಮಣ ರಾಯರು ರಾಷ್ಟ್ರಪತಿಗಳಿಗೆ ಹೂಮಾಲೆಯನ್ನಿತ್ತು ಸತ್ಕರಿಸಿದರು ರೈಲು ಮಂಗಲಪಾಡಿಗೆ ಬಂದಾಗ ಒಂದು ವಿಚಿತ್ರ ದೃಶ್ಯ ಕಾಣಿಸಿತು. ರೈಲುಮಾರ್ಗವು ದುರಸ್ತಿಯಾಗುತ್ತಿದ್ದ ಕಾರಣ ರೈಲು ಬಹಳ ನಿಧಾನವಾಗಿ ಬರುತ್ತಿತ್ತು. ಆ ಸಮಯದಲ್ಲಿ ಕೂಲಿಯವರು ರಾಷ್ಟ್ರಪತಿಗಳ ದರ್ಶನಕ್ಕಾಗಿ ರೈಲುಮಾರ್ಗದ ಬಳಿಯಲ್ಲಿ ತಂಡ ತಂಡವಾಗಿ ಓಡುತ್ತಿದ್ದರು ರೈಲು ಬಂಡಿಯಿಂದ ರಾಷ್ಟ್ರಪತಿಗಳು ಅವರನ್ನು ನೋಡಿ ಕೈಮುಗಿದು ಅವರನ್ನು ಸಂತೋಷಗೊಳಿಸಿದರು. ಮಂಜೇಶ್ವರದಲ್ಲಿ ರೈಲುಬಂಡಿಯಿಂದಲೇ ಕೆಲಮಾತುಗಳನ್ನು ನಿಲ್ದಾಣದಲ್ಲಿ ಬಂದು ಕೂಡಿದ್ದ ಜನಸ್ತೋಮಕ್ಕೆ ಹೇಳಿದರು.

ಅನಂತರ ಹೊರಟ ರೈಲು ಮಂಗಳೂರಿಗೆ ಸಾಯಂಕಾಲ ೪-೪೦ಕ್ಕೆ ಬಂದು ಮುಟ್ಟಿತು.

> **'ಜಸ್ಟೀಸ'ರು ನಮ್ಮಿಂದೇಕೆ ಓಟು ಕೇಳಬೇಕು? ಇವರ ದೆಸೆಯಿಂದಲೇ ನಮ್ಮ ತರುಣ-ತರುಣಿಯರು ಜೈಲನ್ನವನ್ನು ಮುಕ್ಕಿದರು; ನಮ್ಮವರ ತಲೆಗಳು ಇವರ ಬೋಧನೆಯಿಂದಲೇ ಒಡೆಯಲ್ಪಟ್ಟವು; ಮತ್ತೀಗ ಇವರು ನಮ್ಮಿಂದಲೇ ಓಟನ್ನು ಕೇಳುತ್ತಿದ್ದಾರೆ! ಇವರು ನಮ್ಮಿಂದೇಕೆ ಓಟನ್ನು ಕೇಳಬೇಕು?**
>
> —ವಲ್ಲಭಭಾಯಿ ಪಟೇಲ್.

ಮಂಗಳೂರು ರೈಲ್ವೆ ಸ್ಟೇಶನಿನ ದೃಶ್ಯ

ಸಾಯಂಕಾಲದಿಂದಲೂ ಮಂಗಳೂರು ರೈಲ್ವೆ ಸ್ಟೇಶನಿನ ಪತ್ತಿರ ಜನರು ಬಂದು ಕಾದಿದ್ದರು. ಸುಮಾರು ೨೫ರಿಂದ ೩೦ಸಾವಿರ ಜನ ಸಂದಣಿಯಿತ್ತು ರೈಲು ಸ್ಟೇಶನಿಗೆ ಬಂದು ಮುಟ್ಟಿದೊಡನೆ ಜಯಶಬ್ದವು ಕೇಳಿಸಿತು. ರಾಷ್ಟ್ರಪತಿಗಳು ಬಂಡಿಯಿಂದ ಕೆಳಗಿಳಿದೊಡನೆ ನಗರ ಸಭಾಧ್ಯಕ್ಷರು ಅವರಿಗೆ ಹೂವಿನ ಹಾರವನ್ನಿತ್ತು ಮನ್ನಿಸಿ ಅನಂತರ ಸ್ಟೇಶನಿನ ಹೊರ ನಿಂತಿದ್ದ, ಚೆನ್ನಾಗಿ ಶೃಂಗರಿಸಲ್ಪಟ್ಟಿದ್ದ ಮೋಟರಿಗ ಕರೆದೊಯ್ದರು ಸ್ವಯಂಸೇವಕರ ಬೇಂಡ್ ಜಯಭೇರಿಯನ್ನು ಮೊಳಗಿಸಿತು. ಸ್ವಲ್ಪ ದೂರ ಮೆರವಣಿಗೆಯಲ್ಲಿ ಹೊರಟು ಅಧ್ಯಕ್ಷರು ಕಾರ್ಯಕ್ರಮಕ್ಕನುಸರಿಸಿ ಮಂಗಳೂರಿನ ಕ್ರಿಸ್ತ ಬಂಧುಗಳ ಆತಿಥ್ಯವನ್ನು ಸ್ವೀಕರಿಸುವುದಕ್ಕೆ ಶ್ರೀ ಜೆ. ಝೂಕ್ ಸಾಲ್ಡಾನರಲ್ಲಿಗೆ ಹೋದರು.

ಕೆಥೋಲಿಕರ ಸತ್ಕಾರ

ರಾಷ್ಟ್ರಪತಿಗಳು ಶ್ರೀ ಜೆ. ಝೂಕ್ ಸಾಲ್ಡಾನರ ಮನೆಯ ಹತ್ತಿರ ಬರುವಾಗಲೆ ಆ ಗೃಹಸ್ಥರು ರಾಷ್ಟ್ರಪತಿಗಳನ್ನು ಇದಿರುಗೊಂಡು ಹಸ್ತಲಾಘವವನ್ನಿತ್ತು ಅವರನ್ನು ಕರೆದುಕೊಂಡು ಹೋದರು ವತ್ತು ಸತ್ಕಾರ ಸಮಾರಂಭಕ್ಕೆ ಆಮಂತ್ರಿಸಲ್ಪಟ್ಟಿದ್ದ ನಗರದ ಪ್ರಮುಖರನ್ನೂ ಜಾತಿಗೃಹಸ್ಥರ ಮತ್ತು ಪತ್ರಿಕಾಕರ್ತರ ಪರಿಚಯವನ್ನು ಮಾಡಿಕೊಟ್ಟರು ಅನಂತರ ಲಘುಫಲಾಹಾರವಾಯಿತು. ಅದು ಮುಗಿದ ಮೇಲೆ ಶ್ರೀ ಸಾಲ್ಡಾನರು ಕೆಥೋಲಿಕರ ಪರವಾಗಿ ರಾಷ್ಟ್ರಪಕ್ಷಕ್ಕೆ ವಿರೋಧಿಗಳಲ್ಲವೆಂದೂ ಅದಕ್ಕೆ ಆ ದಿನ ಸಮಾರಂಭವೇ ಸಾಕ್ಷಿಯೆಂದೂ ತಿಳಿಸಿದರು ಮತ್ತು ಕೆಥೋಲಿಕರು ತಮ್ಮ ಧರ್ಮದ ವಿಷಯದಲ್ಲಿ ತುಂಬಾ ಆಸಕ್ತಿಯುಳ್ಳವರೆಂದೂ, ಅದಕ್ಕೆ ವಿರುದ್ಧವಾಗಿ ಅವರು ನಡೆಯುವವರಲ್ಲವೆಂದೂ ತಿಳಿಸಿದರು.

ರಾಷ್ಟ್ರಪತಿಗಳು ಉತ್ತರಕೊಡುತ್ತಾ ಮಾನಪತ್ರಕ್ಕಾಗಿ ತಮ್ಮ ವಂದನೆಗಳನ್ನರ್ಪಿಸಿ ಹೀಗೆಂದರು. ಧಾರ್ಮಿಕ ವಿಷಯವನ್ನೆತ್ತಿದಿರಿ. ರಾಷ್ಟ್ರಸಭೆಯು ಪ್ರಧಾನವಾಗಿ ರಾಜಕೀಯ ಸಂಸ್ಥೆ. ಅದಕ್ಕೆ ಜಾತಿಧರ್ಮವೆಂಬುದಿಲ್ಲ. ಎಲ್ಲಾ ಧರ್ಮದವರಿಗೂ ಅದರಲ್ಲಿ ಸ್ವಾತಂತ್ರ್ಯವು ಕೊಡಲ್ಪಡುವುದು. ಯಾವ ರೀತಿಯ ಧರ್ಮವನ್ನನುಸರಿಸುವುದಕ್ಕೂ ಅದರಲ್ಲಿ ಸ್ವಾತಂತ್ರ್ಯವು ಕೊಡಲ್ಪಡುವುದು. ಯಾರ ಧರ್ಮಕ್ಕೂ ರಾಷ್ಟ್ರಸಭೆಯು ವಿರೋಧಮಾಡುವುದಿಲ್ಲ. ಆದುದರಿಂದ ರಾಷ್ಟ್ರಸಭೆಗೆ ಸೇರಿದರೆ ಧರ್ಮಾಚರಣೆಗೆ ಅಡ್ಡಿಯಾಗುವುದೆಂದು ಯಾರೂ ತಿಳಿಯಕೂಡದು. ಇನ್ನು ಕೆಥೋಲಿಕರು ರಾಷ್ಟ್ರದ ಅಭಿಮಾನವುಳ್ಳವರೆಂದು ಹೇಳಿದಿರಿ. ದೇಶದ ಸ್ವಾತಂತ್ರ್ಯವು ಯಾವುದಾದರೂ ಒಂದು ಪಕ್ಷದವರಿಗೆ ಸೇರಿದ್ದಲ್ಲ ಎಲ್ಲರೂ ಸ್ವಾತಂತ್ರ್ಯರಾಗಿರಬೇಕೆಂದೇ ರಾಷ್ಟ್ರಸಭೆಯ ಉದ್ದೇಶ. ಹಾಗಿರುವುದರಿಂದ ರಾಷ್ಟ್ರಸಭೆಗೆ ಯಾರೂ ವಿರೋಧವಾಗಿರುವುದು ಅಸಂಗತ್ಯವೆಂದು ಹೇಳಿದರು. ಶ್ರೀ. ಸಾಲ್ಡಾನರು ರಾಷ್ಟ್ರಪತಿಗಳಿಗೆ ಧನ್ಯವಾದಗಳನ್ನರ್ಪಿಸಿದರು ಅನಂತರ ಅಲ್ಲಿ ನೆರೆದಿದ್ದ ಕೆಲವು ವಿದ್ಯಾರ್ಥಿ ವಿದ್ಯಾರ್ಥಿನಿಯರು ರಾಷ್ಟ್ರಪತಿಗಳ ದಸ್ಕತನ್ನು ಬೇಡಿದರು ಸಂತೋಷದಿಂದ ಜವಹರಲಾಲರು ಅವರವರ ಪುಸ್ತಕಗಳಲ್ಲಿ ದಸ್ಕತು ಹಾಕಿದರು. ಅಲ್ಲಿಂದ ಸುಮಾರು ೬ ಘಂಟೆಗೆ ಮೈದಾನಕ್ಕೆ ಬಂದರು.

ಮೈದಾನದ ಸಾರ್ವಜನಿಕ ಸಭೆ

ಮೈದಾನದಲ್ಲಿ ಸುಮಾರು ಮೂವತ್ತು ಸಾವಿರಕ್ಕೂ ಮಿಕ್ಕಿ ಸ್ತ್ರೀಪುರುಷರು ಅಧ್ಯಕ್ಷರ ಸಂದೇಶವನ್ನು ಕೇಳುವುದಕ್ಕೆ ಬಂದಿದ್ದರು ಅಲ್ಲಿ ಇಟ್ಟಿದ್ದ ಧ್ವನಿವರ್ಧಕ ಯಂತ್ರವು ಹಳೆಯದು ಮತ್ತು ಪ್ರಯೋಜನವಿಲ್ಲದ್ದೆಂದು ಅಧ್ಯಕ್ಷರು ಅದನ್ನು ತೆಗೆದುಹಾಕುವಂತೆ ಹೇಳಿದರು ಧ್ವನಿವರ್ಧಕಯಂತ್ರವಿಲ್ಲದೆ ಇಂಗ್ಲೀಷಿನಲ್ಲಿ ಭಾಷಣಮಾಡಿದರು ಅಧ್ಯಕ್ಷರು ಭಾಷಣವೇದಿಕೆಯನ್ನೇರಿದೊಡನೆ ನಗರ ಸಭೆ, ಜಿಲ್ಲಾಬೋರ್ಡು ಹಿಂದುಸ್ಥಾನಿ ಕಲ್ಚರಲ್ ಸಂಘ, ವಿದ್ಯಾರ್ಥಿ ಸಂಘ ಮೊದಲಾದ ಸಂಸ್ಥೆಗಳವರು ಮಾನಪತ್ರಗಳನ್ನರ್ಪಿಸಿದರು

ಅಧ್ಯಕ್ಷರು ಅವುಗಳನ್ನು ಸ್ವೀಕರಿಸಿದ ಮೇಲೆ ತಮ್ಮ ಭಾಷಣವನ್ನಾರಂಭಿಸಿದರು. ಅದನ್ನು ದೇಶಭಕ್ತ ಮುದವೀಡು ಕೃಷ್ಣರಾಯರು ಕನ್ನಡಕ್ಕೆ ಭಾಷಾಂತರಮಾಡಿದರು. ಪಂಡಿತ ಜವಾಹಿರಲಾಲರ ಭಾಷಣದ ಸಾರ ದೇಶಬಾಂಧವರೇ, ನೀವು ಕೊಟ್ಟ ಸ್ವಾಗತದಿಂದ ತುಂಬಾ ಸಂತುಷ್ಟಿ ಹೊಂದಿದ್ದೇನೆ ನನಗೆ ನಿಮಗೆಲ್ಲರಿಗೂ ರಾಷ್ಟ್ರಸಭೆಯ ಸಂದೇಶವನ್ನು ತಿಳಿಸಬೇಕೆಂದಿತ್ತು ಆದರೆ ಎಷ್ಟು ಜನರಿಗೆ ನನ್ನ ಮಾತು ಕೇಳಿಸುವುದೊ ಹೇಳಲಸಾಧ್ಯ. ಸ್ನೇಹಿತರೇ ನಾನು ರಾಷ್ಟ್ರಸಭೆಯ ಸಂದೇಶವನ್ನು ತಮಗೆ ಸಾರಲು ಇಲ್ಲಿಗೆ ಬಂದಿದ್ದೇನೆ ಆ ಸಂದೇಶವೆಂದರೆ ಬಡತನವನ್ನು ಹೋಗಲಾಡಿಸುವ ಮತ್ತು ದೇಶದ ದಾಸ್ಯವನ್ನು ಪರಿಹರಿಸುವ ಸಂದೇಶ. ಆದರೆ ಚುನಾವಣೆಯ ವಿಷಯವಾಗಿಯೂ ಕೆಲವಿಷಯಗಳನ್ನು ಹೇಳುತ್ತೇನೆ ಆದರೆ ನನ್ನ ಮಟ್ಟಿಗೆ ಚುನಾವಣೆಗಳಿಂದಲೂ ಮುಖ್ಯವಾದ ವಿಷಯಗಳು ಅನೇಕ ಇವೆ ಅವುಗಳಲ್ಲಿ ನನಗೆ ಹೆಚ್ಚಿನ ಪ್ರೀತಿ ಇದೆ ನನಗೆ ದೇಶದ ರಾಜಕೀಯ, ಆರ್ಥಿಕಸ್ಥಿತಿಗಳನ್ನು ಬದಲಾಯಿಸುವುದಕ್ಕೆ ತುಂಬಾ ತಾತ್ಪರ್ಯವಿದೆ ಆದಕಾರಣ ನಾವುಗಳು ದೇಶದ ಬಡತನವನ್ನು ಹೋಗಲಾಡಿಸುವುದು ಮತ್ತು ದೇಶದಲ್ಲಿರುವ ನಿರುದ್ಯೋಗತೆಯನ್ನು ಹೋಗಲಾಡಿಸುವುದು. ಇದೇ ಮುಖ್ಯವೆಂಬುದನ್ನು ಮರೆಯಕೂಡದು. ಬಡತನದ ಸಮಸ್ಯೆಯೇ ಮುಖ್ಯ. ಸ್ವರಾಜ್ಯಪ್ರಾಪ್ತಿ ಪ್ರಶ್ನೆಯು ಎರಡನೆಯದು. ಎರಡನೆಯ ಸ್ಥಾನಕೊಟ್ಟಿದ್ದರಿಂದ ಅದನ್ನು ಅಮುಖ್ಯವೆಂದು ನಾನು ಗಣಿಸಿರುವೆನಾಗಿ ಯಾರೂ ತಿಳಿಯಕೂಡದು ಆದರೆ ಈ ಬಡತನವನ್ನು ನಾವು ಹೋಗಲಾಡಿಸುವುದೆಂತು. ಅದನ್ನು ಹೋಗಲಾಡಿಸಬೇಕಾದರೆ ನಮಗೆ ಶಕ್ತಿ ಬೇಕು ಆ ಶಕ್ತಿ ಬರಬೇಕಾದರೆ ನಮಗೆ ಸ್ವರಾಜ್ಯ ಬೇಕು.

ಹಾಗಾದರೆ ಸ್ವರಾಜ್ಯವೆಂದರೇನು? ಇಂಗ್ಲೀಷ್ ಅಧಿಕಾರಿಗಳಿಂದ ಅಧಿಕಾರವನ್ನು ಕಿತ್ತುಕೊಂಡು ಹಿಂದೀಯರಿಗೆ ಕೊಟ್ಟರೆ ಅದು ಸ್ವರಾಜ್ಯವಲ್ಲ ನಮ್ಮ ದೇಶದಲ್ಲಿ ಚುನಾವಣೆಗಳು ಆಗುತ್ತವೆ. ಹೋಗುತ್ತವೆ. ಆದರೆ ಬಡತನವು ಸದಾ ನಿಲ್ಲುತ್ತದೆ. ಇದನ್ನು ಹೋಗಲಾಡಿಸಬೇಕಾದರೆ ಸ್ವರಾಜ್ಯ ಬೇಕು. ಈ ಸ್ವರಾಜ್ಯವು ನಮ್ಮ ದೇಶದ ೩೫ ಕೋಟಿ ಜನರಿಗೆ ತಮಗೆ ಬೇಕಾದ ಅಧಿಕಾರವನ್ನು ಕೊಡುವಂತಾಗಬೇಕು. ಬೇಕಾದ ರೀತಿಯ ಸರಕಾರವನ್ನು ಸ್ಥಾಪಿಸುವ ಅಧಿಕಾರವು ನಮ್ಮ ದೇಶದ ೩೫ಕೋಟಿ ಜನರಿಗಿರಬೇಕು. ಇದೇ ಸ್ವರಾಜ್ಯ

ಶಕ್ತಿ ಬರುವುದು ಹೇಗೆ

ಸ್ವರಾಜ್ಯವನ್ನು ಪಡೆಯುವ ಶಕ್ತಿಯು ಬರಬೇಕು. ರಾಷ್ಟ್ರಸಭೆಯು ಶಿಸ್ತಿನ ಸಂಸ್ಥೆಯನ್ನು ಸ್ಥಾಪಿಸಿದೆ. ಅದರ ಶಕ್ತಿಯನ್ನು ಮತ್ತಷ್ಟು ಹೆಚ್ಚಿಸಬೇಕು. ಬ್ರಿಟಿಷ್ ಸಾಮ್ರಾಜ್ಯವಾದಿಗಳ ಶಕ್ತಿಯನ್ನು ಇದಿರಿಸುವ ಬಲವು ಬರಬೇಕು ಹಿಂದುಸ್ಥಾನದಲ್ಲಿ ಬ್ರಿಟಿಷರ ಶಕ್ತಿಯನ್ನು ಇದಿರಿಸುವ ಸಂಸ್ಥೆಯು ಮತ್ತೊಂದಿಲ್ಲ. ಆದರೆ ಇಷ್ಟೇಸಾಲದು, ಕಾಂಗ್ರೆಸಿನ ಶಕ್ತಿಯನ್ನು ಮತ್ತಷ್ಟು ಹೆಚ್ಚಿಸಬೇಕು ದೇಶಕ್ಕೆ ಏನಾದರೂ ಸಹಾಯಮಾಡಬೇಕೆಂದಿದ್ದಲ್ಲಿ ಕಾಂಗ್ರೆಸ್ಸನ್ನು ಸೇರಿ ಅದರ ಧ್ವಜದ ಕೆಳಗೆ ನಿಂತು ಹೋರಾಡಬೇಕು. ಒಬ್ಬೊಬ್ಬರಾಗಿ ಏನು ಮಾಡಲೂ ಸಾಧ್ಯವಿಲ್ಲ ಆದ್ದರಿಂದ ಕಾಂಗ್ರೆಸ್ಸನ್ನು ಸೇರಿ ಬೇಕಾದ ಕೆಲಸಮಾಡಬಹುದು.

ಕಾಂಗ್ರೆಸ್ಸಿನ ಧ್ಯೇಯ, ಸಂದೇಶಗಳನ್ನು ಪ್ರತಿಯೊಂದು ಹಳ್ಳಿಗೂ ಮನೆಗೂ ಹರಡುವುದು ನಿಮ್ಮೆಲ್ಲರ ಕರ್ತವ್ಯ ಪ್ರತಿಯೊಂದು ಹಳ್ಳಿಯಲ್ಲಿಯೂ ಕಾಂಗ್ರೆಸ್ ಸಂಸ್ಥೆಯು ಸ್ಥಾಪಿಸಲ್ಪಡಬೇಕು ಕೆಲ ದೊಡ್ಡ ಮನುಷ್ಯರು ನಗರಗಳಲ್ಲಿದ್ದು ಕೊಂಡು ಸಂಸ್ಥೆಗಳನ್ನು ನಡಿಸಿದರೆ ಸಾಲದು ನಾವು ದೇಶದ ಜನರಿಗೆ ಅಧಿಕಾರ ಬೇಕೆನ್ನುತ್ತೇವೆ ನಮ್ಮ ಸಂಸ್ಥೆಯಾದ ಕಾಂಗ್ರೆಸಿನಲ್ಲಿಯೇ ಈ ಹಕ್ಕನ್ನು ನಾವು ಜನರಿಗೆ ಕೊಡಬೇಕಾಗಿದೆ ನಮ್ಮ ಜನರಿಗೆ ಈ ದೇಶದ ಭವಿಷ್ಯವನ್ನು ನಿರ್ಧರಿಸುವ ಹಕ್ಕು ಇರಬೇಕು. ನಮಗೆ ರಾಜರಾಗಲೀ ನವಾಬರಾಗಲಿ ಅಗತ್ಯವಿಲ್ಲ. ಅಧಿಕಾರವು ಬಡಜನರ ಕೈಯಲ್ಲಿರಬೇಕು. ಮುಂದಕ್ಕೂ ದೊಡ್ಡ ಘಟನೆಗಳು ಬರಲಿವೆ. ಅವುಗಳನ್ನು ಇದಿರಿಸಬೇಕಾದರೆ ನಾವು ಪೂರ್ವ ಸಿದ್ಧತೆಯನ್ನು ಮಾಡಬೇಕು.

ಚುನಾವಣೆಗಳು

ಮುಂದಿನ ಹೋರಾಟಕ್ಕೆ ಸಿದ್ಧಮಾಡುವುದಕ್ಕೆ ನಾವು ಚುನಾವಣೆಯ ರಂಗಕ್ಕೆ ಇಳಿದಿದ್ದೇವೆ ಕೌನ್ಸಿಲುಗಳಿಗೆ ಹೋಗಿ ಅಧಿಕಾರಮಾಡುವುದಕ್ಕೆ ನಮ್ಮ ಪ್ರತಿನಿಧಿಗಳು ಹೋಗವದಿಲ್ಲ ದೇಶದ್ರೋಹಿಗಳು ಕೌನ್ಸಿಲುಗಳಿಗೆ ಹೋಗಿ ದೇಶಕ್ಕೆ ವಿರೋಧಮಾಡದಂತೆ ಮಾಡುವುದಕ್ಕೆ ನಮ್ಮ ಪ್ರತಿನಿಧಿಗಳನ್ನು ಕಳುಹಿಸಬೇಕಾಗಿದೆ ಕಾಂಗ್ರೆಸ್ ಕಡೆಯ ಉಮೇದ್ವಾರರು ಯಾರಾದರಂತೆ ಆದಕಾರಣ ಅವರಿಗೆ ಬೆಂಬಲಕೊಡುವುದು ನಮ್ಮ ಕರ್ತವ್ಯ. ಅನೇಕರ ಹೆಸರು ನನಗೆ ಗೊತ್ತಿಲ್ಲ ಆದರೆ ಯಾರನ್ನು ಕಾಂಗ್ರೆಸ್ ನಿಲ್ಲಿಸಿದೆಯೋ ಅಂಥವರನ್ನು ಸಮರ್ಥಿಸುವುದು ಅವರಿಗೆ ಬೆಂಬಲಕೊಡುವುದು ನನ್ನ ಕರ್ತವ್ಯ ದೇಶದ್ರೋಹಿಗಳನ್ನು ಕಸಬರಿಕೆಯಿಂದ ಗುಡಿಸಿಬಿಡಬೇಕು.

ಹಿಂದುಸ್ಥಾನದ ಎಲ್ಲ ಕಡೆಗಳಲ್ಲಿಯೂ ಚುನಾವಣೆಯ ಚಳವಳ ನಡೆಯುತ್ತಿದೆ ಸಂಯುಕ್ತ ಪ್ರಾಂತಗಳಲ್ಲಿ ಜನರು ಕಾಂಗ್ರೆಸ್ಸಿಗೆ ಮತಗಳನ್ನು ಉಮೇದ್ವಾರರ ಹೆಸರನ್ನು ಸಹ ತಿಳಿಯದೆ ಕೊಡುತ್ತಿದ್ದಾರೆ ಜನರು ವಿಚಾರಿಸಬೇಕಾದುದು ತತ್ವಗಳನ್ನು ವ್ಯಕ್ತಿಗಳನ್ನಲ್ಲ.

ಈಗ ಬಡತನವು ದೂರವಾಗಬೇಕು. ಅದಕ್ಕಾಗಿ ನಾವೆಲ್ಲರೂ ಪ್ರಯತ್ನಿಸಬೇಕು. ಈಗ ಈ ಜಿಲ್ಲೆಯಿಂದ ಶ್ರೀಗಳಾದ ಬಾಳಿಗರು, ಎ ಬಿ ಶೆಟ್ಟಿಯವರು, ಕೆ. ಈಶ್ವರರು, ಕೆ ಆರ್ ಕಾರಂತರು, ಪ್ರೊ. ಮಾರ್ಗಯವರು ಕಾಂಗ್ರೆಸ್ ಕಡೆಯಿಂದ ನಿಂತಿರುವರು ಅವರನ್ನು ನೀವುಗಳು ಚುನಾಯಿಸಬೇಕೆಂದು ಕೇಳಿಕೊಳ್ಳುತ್ತೇನೆ

ಚುನಾವಣೆಯಾದ ಮೇಲೆ ನಮ್ಮ ಕರ್ತವ್ಯ ಮುಗಿದಂತಾಗಲಿಲ್ಲ ಪ್ರತಿದಿಕ್ಕಿನಲ್ಲಿಯೂ ಶಿಸ್ತಿನಿಂದ ಕಾಂಗ್ರೆಸ್ಸನ್ನು ಬಲಪಡಿಸಬೇಕು ಅದಕ್ಕೆ ಎಲ್ಲರೂ ಯತ್ನಿಸಬೇಕು ಕಾಂಗ್ರೆಸ್ಸಿಗೆ ಜಯ ಸಿಕ್ಕೇ ಸಿಕ್ಕುವುದು ಖಂಡಿತ

ನನಗೆ ಮಾನಪತ್ರಗಳನ್ನು ಕೊಟ್ಟಿದ್ದೀರಿ. ನನ್ನ ಕೃತಜ್ಞತಾಪೂರ್ವಕ ವಂದನೆಗಳು. ನೀವುಗಳು ನನ್ನ ಧ್ಯೇಯಕ್ಕೆ ಈ ಗೌರವವನ್ನು ಕೊಟ್ಟದಾಗಿ ಭಾವಿಸುತ್ತೇನೆ

ಪುಟ ೧೨ಕ್ಕೆ

ಚಂದಾದಾರರಿಗೆ

[illegible] ನಮ್ಮ [illegible] ಬೇಗನೇ ತಮ್ಮ [illegible] ಮಣಿಯಾರ್ಡರ್ [illegible] ಕಳುಹಿಸಿಕೊಡಬೇಕಾಗಿ ಅಪೇಕ್ಷಿಸುತ್ತೇವೆ. ವಿ. ಪಿ ಮಾಡುವನಾದರ ಐದಾಣೆ ಹೆಚ್ಚಿಗೆ ಬೀಳುವನು.

ನಮ್ಮೊಡನೆ ಪತ್ರವ್ಯವಹಾರ ನಡೆಸುವವರು ತಮ್ಮ ಚಂದಾ ನಂಬ್ರವನ್ನು ಸೂಚಿಸಿ ಬರೆಯಬೇಕಾಗಿ ವಿನಂತಿ. ಮೆನೇಜರ್, 'ನವಯುಗ'

ಉಡುಪಿ, ತಾ ೧೮-೨-'೩೭ ಗುರುವಾರ

ನಿಮ್ಮ ಓಟು ಸ್ವಾತಂತ್ರ್ಯಕ್ಕಲ್ಲವೇ?

ನಮ್ಮ ಪರೀಕ್ಷೆಯು ಈಗ ನಡೆಯುತ್ತಿದೆ ಹಿಂದೀಯರ ದಾಸ್ಯತನಕ್ಕೆ ಪ್ರತ್ಯೇಕ ಕಾರಣವಿರಬಹುದು, ಅದರ ನಿವಾರಣೆಗೆ ಸಮಯವು ಬೇಕಾಗಬಹುದು. ಆದರೆ ನಮಗೆ ಸ್ವಾತಂತ್ರ್ಯವು ಬೇಕು ಎಂಬ ಇಚ್ಛೆಯನ್ನು ಪ್ರದರ್ಶಿಸುವದಕ್ಕೂ ಸಮಯಬೇಕೆ? ಅದನ್ನು ಅನ್ಯರು ಬೋಧಿಸಿ ನಾವು ಕಲಿಯಬೇಕೆ?ಸ್ವಾತಂತ್ರ್ಯದ ಅಭಿಲಾಷೆಯ ಪ್ರದರ್ಶನಕ್ಕೂ ಸಂದೇಹವೆಂದಾದರೆ, ಅದಕ್ಕೂ ಹೆದರಿಕೆಯೆಂದಾದರ ಮತ್ತೆ ಮಾನುಷತ್ವಕ್ಕೆಲ್ಲಿ ನೆಲೆ? ಹಿಂದೀಯರು ಒಂದೂವರೆ ಶತಮಾನದಿಂದಲೂ ಪರಕೀಯರ ದಾಸರು; ತಮ್ಮ ರಾಜ್ಯದಲ್ಲಿ ತಾವೇ ಗುಲಾಮರು! ನಿಜ. ಆದರೆ ಆ ಪರಿಸ್ಥಿತಿಯಲ್ಲಿಯೂ, ಸ್ವಾತಂತ್ರೇಚ್ಛೆಯೊಂದು ನಮ್ಮ ಮಾನುಷತ್ವದ ರಕ್ಷಣೆಮಾಡುತ್ತಾ ಬಂದಿದೆ. ಹಾಗಲ್ಲದಿರುತ್ತಿದ್ದರೆ ನಮ್ಮ ಅವಸ್ಥೆ ಇಂದು ತೀರಾ ಕಳತಯದಾಗುತ್ತಿತ್ತು. ಈ ತನಕವೂ ನಮಗೆ ನಮ್ಮ ಸ್ವಾಭಿಮಾನ, ಸ್ವಾತಂತ್ರ್ಯಾಭಿಲಾಷ ಇವುಗಳೇ ಆಧಾರ ನಮಗೆ ಸ್ವಾತಂತ್ರ್ಯ ಬೇಕು ಎಂಬ ಅಭಿಲಾಷೆಯೊಂದಲ್ಲದೆ ಆ ಸ್ವಾತಂತ್ರ್ಯದ ಮಿಕ್ಕಾವಭಾಗವು ನಮ್ಮಲ್ಲಿದೆ? ಭವಿಷತ್ಕಾಲದಲ್ಲಿ ಭರವಸಯಿಡುವದಾದರೂ ಈಯೊಂದು ಅಪೇಕ್ಷೆಯುಂಟಲ್ಲಾ ಎಂಬುದರಿಂದಲೆ. ಈ ಅಭಿಲಾಷಗ ಕಾರ್ಯರೂಪವು ಬಂದಾಗ ನಮ್ಮ ಇಷ್ಟಾರ್ಥ ಸಿದ್ಧಿಯಾಗುವದಲ್ಲಾ ಎಂಬ ಆಸಯಿಂದಲೆ! ನಾವು ಆ ಕಾರ್ಯಕ್ಕಾಗಿ ಆತುರಪಡುತ್ತಿದ್ದೇವೆ; ಆ ಕಾಲವನ್ನು ಹಾರೈಸುತ್ತಿದ್ದೇವೆ. ಅಂತೂ ಸದ್ಯಕ್ಕೆ ನಮ್ಮಲ್ಲಿರುವದು ಸ್ವಾತಂತ್ರ್ಯದ ಅಭಿಲಾಷೆಮಾತ್ರ, ಮುಂದೆ ಕಾರ್ಯದ ರೂಪಾಂತರ ಹೊಂದಲಿರುವ ಈಯೊಂದು ಅಭಿಲಾಷೆ ಮಾತ್ರ. ಅದನ್ನು ತೋರಿಸುವದಕ್ಕೂ ನಮಗಂಜಿಕೆಯೆ? ಅನುಮಾನವೆ? ದಾಕ್ಷಿಣ್ಯವೇ? ಇಂದಿನ ನಮ್ಮ ಓಟಿಂದರೇನು? ಕೇವಲ ಈಯೊಂದು ಅಪೇಕ್ಷೆ ಮಾತ್ರ. ಮತ್ತೇನೂ ಅಲ್ಲ ಕೇವಲ ಮತ. ನಮ್ಮ ಮತದ ಸ್ವಾತಂತ್ರ್ಯಕ್ಕಲ್ಲದೆ ಮತ್ತಾವುದಕ್ಕಿದ್ದೀತು? ಸ್ವಾತಂತ್ರ್ಯಕ್ಕಾಗಿ ದುಡಿಯುವದಿಲ್ಲ, ಮನೆಮಾರು ಕಳಕೊಳ್ಳುವದಿಲ್ಲ-ಸ್ವಾತಂತ್ರ್ಯಕ್ಕಾಗಿ ಮತಕೊಡುವದು! ಸ್ವಾತಂತ್ರ್ಯವು ಬೇಕು ಎಂಬ ಅಭಿಪ್ರಾಯವನ್ನು ತೋರಿಸುವದು ಅಷ್ಟೆ! ಓಟರರಿಗೆ ಈ ಸಂದರ್ಭವು ದೊರೆತುದಕ್ಕಾಗಿ ನಿಜವಾಗಿಯೂ ಅವರು ಹಿಗ್ಗಬೇಕು. ಸ್ವಾತಂತ್ರ್ಯ ಸಂಗ್ರಾಮದಲ್ಲ ಇದಕ್ಕಿಂತ ಸುಲಭದ ಇನ್ನೊಂದು ಕಾರ್ಯವಿಲ್ಲ ಯಾವುದಾದರೊಂದು ಸಂಪಾದನೆಯ ಮೂಲವೆಂದರೆ ಅದು ಬೇಕೆಂಬ ಅಭಿಲಾಷೆ. ಆ ಅಭಿಲಾಷೆಯೇ ಹುಟ್ಟದಿದ್ದಲ್ಲಿ, ಬೀಜವೇ ಇಲ್ಲದಿದ್ದಲ್ಲಿ ಫಲವೆಲ್ಲಿ ಉಂಟಾಗಬೇಕು? ಹಾಗಾಗಿ 'ಮತ'ವು ಬಹು ಸುಲಭದ್ದಾದರೂ ಅತ್ಯಂತ ಮಹತ್ವದ್ದು. ದೇಶದ ಸ್ವಾತಂತ್ರ್ಯ ಚಳವಳದಲ್ಲಿ ಈ ರೀತಿ ಅನಾಯಾಸವಾಗಿ ಒಂದು ಪ್ರಾಮುಖ್ಯ ಭಾಗವನ್ನು ವಹಿಸುವ ಸಂದರ್ಭದೊರೆತುದಕ್ಕಾಗಿ ಮತದಾರರು ಹಿಗ್ಗಬೇಕು. ಹಿಗ್ಗುತ್ತಾ ಈ ಸಂದರ್ಭವನ್ನು ಸಾರ್ಥಕಗೊಳಿಸಬೇಕು. ನಿಮ್ಮ ವೋಟು ಯಾರಿಗೆ? ಸ್ವಾತಂತ್ರ್ಯಕ್ಕೆ; ಆ ಸ್ವಾತಂತ್ರ್ಯಕ್ಕಾಗಿ ನಿಂತಿರುವ ಕೊಂಗ್ರೆಸಿಗ ಕೊಂಗ್ರೆಸ್ ವಿರೋಧಿಗಳಿಗೆ ಮತದಾರರೇಕೆ ಹೆದರಬೇಕು? ಹೆದರುವವರಿದ್ದಾರೆ. ಕಾರಣವಿದೆ: ಮಾನವರಾದ ಮತದಾರರು ಕಷ್ಟನಷ್ಟಗಳಿಗೆ ಹೆದರುತ್ತಾರೆ. ಜಸ್ಟಿಸ್ ಪಾರ್ಟಿಯೇ ಮೊದಲಾದ ಕೊಂಗ್ರೆಸಿನ ವಿರುದ್ಧ ಪಾರ್ಟಿಗಳ ಜನರು ಅಂತಹ ಕಷ್ಟನಷ್ಟಗಳನ್ನುಂಟು ಮಾಡಬಹುದೆಂದು ಅವರು ಹೆದರುತ್ತಾರೆ, ಅಥವಾ ದಾಕ್ಷಿಣ್ಯಕ್ಕೊಳಗಾಗುತ್ತಾರೆ. ಆದರೆ ಜಸ್ಟೀಸ್ ಪಾರ್ಟಿಯವರನ್ನು ಪುರಸ್ಕರಿಸಿದವರಿಗೆ ದೊರಕುವ ಆರೈಕೆ ಕ್ಷಣಿಕವಾದುದು, ಅದಕ್ಕೆ ಆಯುಸ್ಸಿರಲಾರದು, ಅದು ಸಮಜಾಯಿಸುವಿಕೆಯಲ್ಲದ ಮತ್ತೇನೂ ಅಲ್ಲ. ಅದೇ ಸಮಯದಲ್ಲಿ ಈ ಕೃತ್ಯದಿಂದುಂಟಾಗುವ ಕಷ್ಟನಷ್ಟಗಳನ್ನೂ ನೋಡೋಣ-ಸಾತಂತ್ರ್ಯಕ್ಕೆ ಮತವೀಯದವರಲ್ಲಿ ಮಾನುಷತ್ವವಿಲ್ಲ, ಅಂಥವರಿಗೆ ಉತ್ತಮ ಭವಿಷ್ಯವಿಲ್ಲ. ಈ ನಷ್ಟವು ತುಂಬಿ ಬರುವಂತಹದಲ್ಲ. ಮಾನವನ ಜೀವಾಳವಾದ ಮಾನುಷತ್ವವನ್ನೇ ಮುಕ್ಕುವ ಈ ಕೃತ್ಯವು ಯಾರಿಗೂ ಬೇಡ. ದೇಶಸೇವೆಯಲ್ಲ ಹಿಂಜರಿಯುತ್ತಾ ಹೋಗುವುದಕ್ಕೂ ಒಂದು ಗದಿಯಿದೆ ಜೈಲು ಸೇರುವುದಕ್ಕೆ, ಹೊಡೆತಗಳನ್ನು ತಿನ್ನುವುದಕ್ಕೆ, ಮನೆಮಾರು ಕಳೆಕೊಳ್ಳುವದಕ್ಕೆ, ಕಷ್ಟಪಡುವುದಕ್ಕೆ ಇದಕ್ಕೆಲ್ಲಾ ಹಿಂಜರಿದು ನಿಲ್ಲಬಹುದು, "ಸ್ವಾತಂತ್ರ್ಯವು ಬೇಕು" ಎನ್ನುವದಕ್ಕೂ ಹಿಂಜರಿಯುವದೆ? ಸ್ವಾತಂತ್ರ್ಯಕ್ಕೆ ಓಟು ಕೊಡುವುದಕ್ಕೂ ಹಿಂಜರಿಯುವದೆ? ಆದ್ದರಿಂದ ಓಟರರೇ, ನಿಮ್ಮ ಓಟು ಯಾರಿಗೆ—ಸ್ವಾತಂತ್ರ್ಯಕ್ಕಲ್ಲವೆ?

ಸಿಂಡಿಕೇಟಿನ ಆಶ್ಚರ್ಯಕರ ಅಭಿವೃದ್ಧಿ

ಉಡುಪಿಯ ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್ ಎಂಬೀ ಸಂಸ್ಥೆಯು 1925ರಲ್ಲಿ ಸ್ಥಾಪಿಸಲ್ಪಟ್ಟು ಇಡೀ ಕರ್ನಾಟಕದಲ್ಲೆಲ್ಲಾ 30 ಶಾಖೆಗಳನ್ನು ಸ್ಥಾಪಿಸಿ, ಇಂದೀಗ ಬೊಂಬಾಯಿಯಲ್ಲೊಂದು ದೊಡ್ಡ ಶಾಖೆಯನ್ನು ತೆರೆಯುವ ಸಾಹಸಮಾಡಿರುವುದು. ಸಿಂಡಿಕೇಟಿನ ಅಭಿವೃದ್ಧಿಯು ಯಾರನ್ನಾದರೂ ಆಶ್ಚರ್ಯಗೊಳಿಸದಿರದು. ಅದೀಗ ಇಡೀ ಕರ್ನಾಟಕದ ಅಭಿಮಾನಾಸ್ಪದವಾದ ಬೇಂಕಿಂಗ್ ಸಂಸ್ಥೆಯಾಗಿ ಗಣನೀಯವಾಗಿರುವುದೆಂದು ಧೈರ್ಯದಿಂದ ಹೇಳಬಹುದು. ರೂ. 5 ಲಕ್ಷವಾಗಿದ್ದ ಇದರ ಮೂಲ ಧನವನ್ನು ಇತ್ತಲಾಗಿ ರೂ. 10 ಲಕ್ಷಕ್ಕೇರಿಸಿ, ಪಾಲುಗಳನ್ನು ವಿದಿತಗೊಳಿಸಿದ ಒಂದು ತಿಂಗಳೊಳಗೆನೇ ಎಲ್ಲಾ ಪಾಲುಗಳು ತುಂಬಿ ಹೋಗಿರುವವೆಂಬ ಸಂತೋಷ ವಿಷಯವನ್ನು ನಾವು ಇನ್ನೊಂದೆಡೆ ಪ್ರಕಟಿಸಿರುತ್ತೇವೆ. ಇದೀಗ ಸಂಸ್ಥೆಯ ದೃಢತೆಯನ್ನೂ ಅದರ ಮೇಲಿನ ಜನವಿಶ್ವಾಸವನ್ನೂ ಶ್ರುತಗೊಳಿಸುತ್ತದೆ. ಸಿಂಡಿಕೇಟು ಉತ್ತರೋತ್ತರ ಅಭಿವೃದ್ಧಿಹೊಂದಿ ಇಡೀ ಕರ್ನಾಟಕದ ಅಗ್ರಗಣ್ಯ ಬೇಂಕಿಂಗ್ ಸಂಸ್ಥೆಯಾಗಿ ಮೆರೆಯಲೆಂದು ಹಾರೈಸುತ್ತೇವ.

ಮಣಿಪಾಲ ಸೆನಿಟೋರಿಯಮ್

ದಕ್ಷಿಣಕನ್ನಡದಲ್ಲಿ ಕ್ಷಯರೋಗ ಪೀಡೆಯು ಪ್ರಬಲವಾಗಿ ಹಬ್ಬಿರುವುದು. ಜನರ ಅಜ್ಞಾನದ ನಿಮಿತ್ತ ಅದು ಮತ್ತಷ್ಟು ಪ್ರಸರಿಸಲು ಆಸ್ಪದವುಂಟಾಗಿರುವುದು. ಕ್ಷಯರೋಗ ಪೀಡಿತರನ್ನು ಪ್ರತ್ಯೇಕಿಸಿ ಜಾಗ್ರತೆ ತೆಗೆದುಕೊಳ್ಳದಿದ್ದಲ್ಲಿ ಅವರಿಂದಲೇ ಆ ರೋಗಾಣುವು ಇತರರಿಗೆ ಹಬ್ಬುವಂತಾಗುವುದು. ಆದುದರಿಂದ ಕ್ಷಯರೋಗ ಪೀಡಿತರನ್ನು ಪ್ರತ್ಯೇಕವಾಗಿರಿಸಿ ತಕ್ಕ ಚಿಕಿತ್ಸೆ ನಡಿಸುವ ವ್ಯವಸ್ಥೆಯೇ ಅದನ್ನು ತಡೆಗಟ್ಟುವ ಉಪಾಯ. ಈ ವ್ಯವಸ್ಥೆಯನ್ನು ಖಾಸಗಿಯಾಗಿ ನಡಿಸಲು ಸಾಧ್ಯವಿಲ್ಲ. ಅದಕ್ಕಾಗಿ ಆರೋಗ್ಯವಸತಿಗಳು ಅತ್ಯಾವಶ್ಯಕ. ಉಡುಪಿಯ ಸಮೀಪದ ಮಣಿಪಾಲದ ಹವಾಗುಣವು ಕ್ಷಯರೋಗಿಗಳಿಗೆ ಉತ್ತಮವಾದುದೆಂದು ಕಂಡುಕೊಳ್ಳಲಾಗಿದೆ. ಆದುದರಿಂದಲೇ ಡಾಕ್ಟರ್ ಮಾಧವ ಪೈಗಳು ಸ್ವಂತ ವೆಚ್ಚದಿಂದ ಯೋಗ್ಯ ಸನಿಟೋರಿಯಮನ್ನು ಕಟ್ಟಿಸಿ ಅತ್ಯುದಾರ ಹಾಗೂ ಪರೋಪಕಾರ ಬುದ್ಧಿಯಿಂದ ಅದಕ್ಕೆ ತಕ್ಕ ಎಂಡೋಮೆಂಟ್ ಮಾಡಿ ಇದೇ ಸೆನಿಟೋರಿಯಮಿನ ಆಡಳಿತವನ್ನು-ಕೆಲವು ಮಂದಿ ಟ್ರಸ್ಟಿಗಳಿಗೆ ಬಿಟ್ಟುಕೊಟ್ಟಿರುವರು. ಮಣಿಪಾಲದ ಸೆನಿಟೋರಿಯಮಿನಲ್ಲಿ ಕೆಲವು ಮಂದಿ ಕ್ಷಯರೋಗಿಗಳು ಇಷ್ಟರಲ್ಲೇ ಚಿಕಿತ್ಸೆ ಹೊಂದಿರುವರು. ಇದನ್ನು ಆಧುನಿಕ ಉಪಕರಣಗಳ ಸಿದ್ಧತೆಯಿಂದ ಹೆಚ್ಚಿಗೆ ಉಪಯುಕ್ತವನ್ನಾಗಿ ಮಾಡುವ ಆಲೋಚನೆ ನಡೆದಿದೆ. ರೂ. 17,500ರ ವೆಚ್ಚದಿಂದ ಒಂದು ಎಕ್ಸ್‌ರೇಪ್ಲೇಂಟನ್ನು ತರಿಸಿಡುವ ಯೋಚನೆ ಮಾಡಲಾಗಿದೆ. ಇದಕ್ಕಾಗಿ ಹಣದ ಆವಶ್ಯಕತೆಯಿದೆ. ಅರೆವಾಸಿ ಹಣವನ್ನು ಟ್ರಸ್ಟಿನವರು ಒದಗಿಸಿದಲ್ಲಿ ಉಳಿದ ಅರ್ಧವನ್ನು ಸರಕಾರದಿಂದ ಪಡೆಯುವ ಪ್ರಯತ್ನ ಮಾಡಬಹುದು. ಜಿಲ್ಲೆಯಲ್ಲಿ ದಿನೇ ದಿನೇ ಹೆಚ್ಚೆಚ್ಚಾಗಿ ಹಬ್ಬಿ, ಅನೇಕ ಜೀವಿಗಳನ್ನು ಎಳೆವಯಸ್ಸಿನಲ್ಲೇ ಜೀವನ್ಮೃತವಾಗಿ ಮಾಡಿ ನಾಶಗೊಳಿಸುವ ಘೋರ ರೋಗಕ್ಕೆ ಚಿಕಿತ್ಸೆ ನಡಿಸುವ ಮತ್ತು ಅದನ್ನು ತಡೆಗಟ್ಟುವ ವ್ಯವಸ್ಥೆಯು ಅದೆಂತಹ ಪುಣ್ಯಕೆಲಸವೆಂಬುದನ್ನು ನಾವು ಪ್ರತ್ಯೇಕ ಹೇಳಬೇಕಾಗಿಲ್ಲ. ಆದುದರಿಂದ ಮಣಿಪಾಲ ಸೆನಿಟೋರಿಯಮ್ ಟ್ರಸ್ಟಿನವರು ಈ ಸಂಬಂಧವಾಗಿ ಮಾಡಿಕೊಳ್ಳುವ ವಿನಂತಿಯನ್ನು ಮನ್ನಿಸಿ ಮುಖ್ಯವಾಗಿ ಜಿಲ್ಲೆಯ ದೇವಸ್ಥಾನಗಳವರು ಧನಸಹಾಯವಿತ್ತಲ್ಲಿ ಟ್ರಸ್ಟಿನವರ ಉದ್ದೇಶವು ನೆರವೇರಲು ತೊಂದರೆಯೇ ಬರಲಾರದು. ಇದು ಹೊರತು ಡಿಸ್ಟ್ರಿಕ್ಟ್ ಬೋರ್ಡು ಮತ್ತು ಮುನಿಸಿಪಾಲಿಟಿಯವರೂ, ಈ ವಿಷಯಕ್ಕೆ ಹೆಚ್ಚಿನ ಗಮನಕೊಟ್ಟು ಉದಾರ ಸಹಾಯ ಮಾಡುವುದು ಅವರ ಕರ್ತವ್ಯವಿರುವುದು.

ನಿಮ್ಮ ಓಟನ್ನು ಹಳದಿ ಪೆಟ್ಟಿಗೆಗೆ ಹಾಕಿರಿ

ಹಿಂದುಸ್ಥಾನದಲ್ಲ ೩೫ ಕೋಟಿ ಜನರಿದ್ದಾರೆ. ಮಹತ್ವಿಕೆಯೂ ಇದೆ.
ಇಡೀ ಲೋಕದಲ್ಲಿ ಗಣನೀಯರಾದ ಮಹಾ ಪುರುಷರೂ ಇದ್ದಾರೆ.

ಆದರೂ ಸ್ವಾತಂತ್ರ್ಯವಿಲ್ಲ!

ಸ್ವತಂತ್ರವಾಗಿ ಬಾಳುವ ಅನುಕೂಲತೆ ಇದ್ದರೂ ಸ್ವಾತಂತ್ರ್ಯವಿಲ್ಲ!!

ಬಡತನವು ಮನೆಮಾಡಿಕೊಂಡಿದೆ! ನಿರುದ್ಯೋಗವು ಸರ್ವತ್ರ ಹಬ್ಬಿದೆ!!

ಮಿಲ್ಯಾಂತರ ಜನರಿಗೆ ದಿನಕ್ಕೊಂದೇ ಊಟ!

ಬಡವರ ಹೊಟ್ಟೆ ತುಂಬಿಸುವ ಸ್ವಾತಂತ್ರ್ಯವೀಗ ಬೇಕಾಗಿದೆ.

ಕೊಂಗ್ರೆಸು ಆ ಕೆಲಸವನ್ನು ಕೈಕೊಂಡಿದೆ. ಅದಕ್ಕಾಗಿ ದುಡಿಯುತ್ತಿದೆ.

ಬರುವ ಎಪ್ರಿಲ್‌ನಲ್ಲಿ ಜಾರಿಗೆ ಬರಲಿರುವ ಹೊಸ ಸುಧಾರಣೆಯೆಂಬುದು ದೇಶದ ಬಡತನವನ್ನು ಇನ್ನಷ್ಟು ಹೆಚ್ಚಿಸುವದು. ಬಡವರ ಬಾಯಿತುತ್ತನ್ನು ಮತ್ತಷ್ಟು ಕಿರಿದು ಮಾಡುವುದು. ಬಡವರಿಗೆ ಅನ್ನ ಕೊಡಬೇಕೆನ್ನುವ ಕೋಂಗ್ರೆಸು ಅನ್ನವನ್ನು ಕಡಿಮೆ ಮಾಡುವ ಈ ಸುಧಾರಣೆಯನ್ನು ಒಲ್ಲದು. ಅದನ್ನು ಮುರಿದೊಗೆಯಬೇಕೆಂದದು ಸಂಕಲ್ಪಸಿರುವದು ಅದಕ್ಕಾಗಿ ತನ್ನ ಪ್ರತಿನಿಧಿಗಳನ್ನು ಈಗ ಎಸೆಂಬ್ಲಿ ಕೌನ್ಸಿಲುಗಳಿಗೆ ಕಳುಹಿಸುವರೆ ಹೊರಟಿರುವುದು, ಆ ಪ್ರತಿನಿಧಿಗಳನ್ನು ಮತದಾರರು ಈಗ ಓಟುಕೊಟ್ಟು ಕಳುಹಿಸಬೇಕು. ಜನರಲ್ ಮತ್ತು ಹರಿಜನ ಸೀಟುಗಳಿಗೆ ಆ ವೋಟು ಕೊಡುವ ಕೆಲಸವು ಕುಂದಾಪುರ ಡಿವಿಜನಿನಲ್ಲಿ ಇದೇ ತಾ. ೧೮ಕ್ಕೆ ಮತ್ತು ಮಂಗಳೂರು, ಪುತ್ತೂರು ಡಿವಿಜನುಗಳಲ್ಲಿ ಇದೇ ತಾ. 20ಕ್ಕೆ ನಡೆಯುವದು. ಕೋಂಗ್ರೆಸ್ ಪೆಟ್ಟಿಗೆಯ ಬಣ್ಣ ಹಳದಿ—ಎಲ್ಲರೂ ಹಳದಿ ಪೆಟ್ಟಿಗೆಗೆ ಓಟು ಹಾಕಿರಿ. ಹಳದಿ ಪೆಟ್ಟಿಗೆಗೆ ಹಾಕಿದ ಓಟಿನಿಂದ ಕೋಂಗ್ರೆಸ್ಸು ಬಲಗೊಳ್ಳುವದು. ನಿಮ್ಮನ್ನು ಬಲಗೊಳಿಸಬೇಕೆಂದು ದುಡಿಯುತ್ತಿರುವ ಕೋಂಗ್ರೆಸು ಬಲಗೊಳ್ಳುವುದು-ಅಂದರೆ—ನೀವೇ ಬಲಗೊಳ್ಳುವಿರಿ. ಅದೇ ಸ್ವರಾಜ್ಯಕ್ಕಾಗಿ ಕೊಡುವ ಓಟಾಗುವುದು.

॥ ವಂದೇ ಮಾತರಂ ॥

ಮಹಾಜನರ ಅತ್ಯಪೂರ್ವ ವಿಶ್ವಾಸ

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್ ಉಡುಪಿ

ಇವರು ತಮ್ಮ ಮೂಲಧನವನ್ನು 5,00,000 ಏರಿಸಿ ಒಟ್ಟಿಗೆ 10 ಲಕ್ಷಕ್ಕೆ ತಂದದ್ದು ಎಲ್ಲರಿಗೂ ವಿದಿತವಷ್ಟೆ ಪಾಲು ಒಂದರ ರೂಪಾಯಿ 35ರ ವರೆಗೆ ಪ್ರಿಮಿಯಮ್ ಇಟ್ಟದ್ದರೂ ಪಾಲುಗಳು ಪ್ರಕಟಿಸಲ್ಪಟ್ಟ ಒಂದು ತಿಂಗಳ ಒಳಗೆನೇ ಎಲ್ಲ ಪಾಲುಗಳು ಮಾರಾಟವಾಗಿವೆಯೆಂದೂ ಅನೇಕ ಅರ್ಜಿದಾರರು ನಿರಾಶರಾಗಬೇಕಾಯಿತೆಂದು ತಿಳಿಸಲು ತುಂಬಾ ಸಂತೋಷವಾಗುತ್ತದೆ ಈ ತರದ ಮಾರಾಟಕ್ಕೆ ಸಿಂಡಿಕೇಟಿನವರ ಕಾರ್ಯದಕ್ಷತೆಯೂ, ಸಿಂಡಿಕೇಟಿನಲ್ಲಿ ವಹಿವಾಟ ಮಾಡುವವರು ಅದರ ಮೇಲೆ ಇಟ್ಟಿರುವ ವಿಶ್ವಾಸವೂ ಮುಖ್ಯ ಕಾರಣ. ಸಿಂಡಿಕೇಟ್ ಇದಕ್ಕಿಂತಲೂ ಹೆಚ್ಚಾಗಿ ಮೆರೆಯಲಿ ಎಂದು ಹಾರೈಸುವೆವು.

ವಿದೇಶ

2 ಲಕ್ಷ ಹೆಚ್ಚಿನ ಸೈನಿಕರು

ರಷ್ಯವು ಈ ವರ್ಷ ತನ್ನ ಸೇನಾಬಲವನ್ನು ೨ ಲಕ್ಷದಷ್ಟು ಹೆಚ್ಚಿಸಲಿರುವುದು. ಸೇನಾವೆಚ್ಚವನ್ನು ಕಳೆದ ವರ್ಷದ ಸೇಕಡ ೩೫ರಷ್ಟು ಅಂದರೆ ೮೦೪,೨೦೦ ಪವನಿನಷ್ಟು ಹೆಚ್ಚಿಸಲಾಗಿದೆ

ಬೈಬಲಿನ ಮಾರ್ಪಾಟ

ಜರ್ಮನಿಯ ನಾಜಿಗಳು ಕ್ರೈಸ್ತರ ಧರ್ಮಗ್ರಂಥವಾದ ಬೈಬಲನ್ನೇ ತಮಗೆ ಬೇಕಾದಂತೆ ಬದಲಾಯಿಸಿ ಕ್ರೈಸ್ತನು ಯೆಹೂದ್ಯನಲ್ಲೆಂಬಂತೆ ಬರೆದಿರುವರು

ಮಲಾಗ ರೇವು ಬಂಡಾಯಗಾರರ ವಶವಾಯಿತು

ಸ್ಪೈಯಿನಿನ ಪ್ರಾಮುಖ್ಯ ಬಂದರುಗಳಲ್ಲೊಂದಾದ ಮಲಾಗವನ್ನು ಬಂಡಾಯಗಾರರು ಗೆದ್ದಿರುವರು ಮಲಾಗ ಬಂದರದ ವಶನದಿಂದ ಸ್ಪೈನ್ ಸರಕಾರಕ್ಕೆ ದೊಡ್ಡ ಪೆಟ್ಟಾಗಿರುವುದು ಬಂಡಾಯಗಾರರಿಗೆ ದೊಡ್ಡ ಲಾಭವಾಗಿರುವದು ಮಲಾಗ ಬಂದರನ್ನು ವಶಪಡಿಸಿಕೊಳ್ಳಲು ನಡೆದ ಘೋರ ಯುದ್ಧದಲ್ಲಿ ಕಡಿಮೆಯೆಂದರೆ ೨೦,೦೦೦ ಇಟೆಲಿಯಾನ ಸೈನಿಕರೂ ಹಲವು ಸಹಸ್ರ ಜರ್ಮನ್ ಸೈನಿಕರೂ ಎಷ್ಟೋ ಮಂದಿ ಮೂರ್ ಸೈನಿಕರೂ ಭಾಗಿಯಾಗಿದ್ದರು. ಈ ಯುದ್ಧದಲ್ಲಿ ಕೊನೆಗೆ ಜರ್ಮನ್ ಸೇನಾನಿಗಳೇ ಪ್ರಧಾನ ಸೇನಾಧಿಪತ್ಯ ವಹಿಸಿ ಲಗ್ಗೆಗೆ ಪ್ರಾರಂಭಮಾಡಿದರು ಇನ್ನು ಜಲ ಯುದ್ಧದಲ್ಲಿಯೂ ಜರ್ಮನಿಯ ಯುದ್ಧ ನೌಕೆಗಳೇ ಅಗ್ರ ಭಾಗವಹಿಸಿದ್ದವು ಇದರಿಂದ ಅಂತರ ರಾಷ್ಟ್ರೀಯ ತಾಟಸ್ಥ್ಯದ ಫಾರ್ಸು ಬಟ್ಟಬಯಲಾಗಿರುವುದು.

ಕಿರೀಟ ಧಾರಣೋತ್ಸವ

ಬ್ರಿಟಿಶ್ ಸಾರ್ವಭೌಮರ ಕಿರೀಟ ಧಾರಣೋತ್ಸವವು ಬರುವ ಮೇ ತಿಂಗಳ ತಾ ೧೨ರಲ್ಲು ನಡೆಯುವುದೆಂದು ನಿಶ್ಚಯವಾಗಿದೆ ಈ ಸಂಬಂಧವಾಗಿ ಬ್ರಿಟಿಷ್ ಸಾಮ್ರಾಜ್ಯದಲ್ಲೆಲ್ಲ ಸಿದ್ಧತೆಯು ನಡೆದಿದೆ ಲಂಡನಿನ ವೆಸ್ಟ್‌ಮಿನಿಸ್ಟರ್ ಅಬ್ಬೆ ಎಂಬ ಇಗರ್ಜಿಯಲ್ಲಿ ಕಿರೀಟ ಧಾರಣೋತ್ಸವವನ್ನು ನೋಡಲು ೭,೭೦೦ ಮಂದಿಗೆ ಸ್ಥಳವನ್ನೇರ್ಪಡಿಸಲಾಗಿದೆ

ನಾಟಕ ಗೃಹಕ್ಕೆ ಬೆಂಕಿ ಹಿಡಿದು 700 ಮಂದಿಯ ಮರಣ

ಚೀನದ ಅರ್ತಿಂಗ್ ಎಂಬಲ್ಲಿ ಮಂಚು ಥಿಯೇಟರ್ ಎಂಬ ನಾಟಕ ಗೃಹದಲ್ಲಿ ಇದೇ ತಾ ೧೪ರಲ್ಲು ಒಂದು ನಾಟಕ ಪ್ರದರ್ಶನವಾಗುತ್ತಿದ್ದಾಗ, ಒಂದು ಮೇಣದ ಬತ್ತಿಯಿಂದಾಗ ಇಡೀ ನಾಟಕ ಗೃಹಕ್ಕೆ ಒಮ್ಮೆಯೇ ಬೆಂಕಿ ಹಿಡಿದು ಗೆಲ್ಲರಿಯು ಬಿದ್ದು 700 ಮಂದಿ ಕೊಲ್ಲಲ್ಪಟ್ಟಿರುವರು. ಈ ನಾಟಕ ಗೃಹದ ಬಳಿಯ ೩೦ ಮನೆಗಳಿಗೂ ಬೆಂಕಿ ಹಬ್ಬಿ ಹಾವಳಿಯಾಗಿರುವುದು.

ಸ್ಪೈನಿನ ಯುದ್ಧ

ಮಲಾಗರೇವನ್ನು ವಶಪಡಿಸಿಕೊಳ್ಳಲು ನಡೆದ ಸಮರದ ನಿಮಿತ್ತವಾಗಿ ಇಡೀ ಪಟ್ಟಣದ ಹತ್ತನೇ ಒಂದುಭಾಗವು ನಾಶವಾಗಿ ಹೋಗಿರುವುದು. ಒಟ್ಟು ೨೦ ಮಿಲ್ಯ ಪವನು ನಷ್ಟವಾಗಬಹುದೆಂದು ತಿಳಿದು ಬರುತ್ತದೆ ಮೇದ್ರಿದಿಗೂ ವೆಲೆನ್ಸಿಯಾ ಪಟ್ಟಣಕ್ಕೂ ನಡುವೆ ಇರುವ ಮುಖ್ಯಮಾರ್ಗವನ್ನು ವಶಪಡಿಸಿಕೊಂಡು, ಮೇದ್ರಿದಿಗೆ ಯಾವ ಆಹಾರ ಮತ್ತು ಯುದ್ಧ ಸಾಮಗ್ರಿಯೂ ದೊರೆಯದಂತೆ ಮಾಡಬೇಕೆಂದು ಬಂಡಾಯಗಾರರು ಆ ಭಾಗದಲ್ಲಿ ಬೀಷಣ ಹೋರಾಟವಾರಂಭಿಸಿರುವರು ಸರಕಾರದ ಕಡೆಯವರೂ ಪ್ರಬಲ ಹೋರಾಟ ನಡೆಸುತ್ತಿರುವರು. ವೆಲೆನ್ಸಿಯಾ ರಸ್ತೆಯ ಕೆಲವು ಭಾಗವನ್ನು ವಶಪಡಿಸಿಕೊಂಡಿರುವೆವೆಂದು ಬಂಡಾಯಗಾರರು ಪ್ರಕಟಿಸಿರುವರು ತಾವು ಬಂಡಾಯಗಾರ ಸೇನೆಯನ್ನು ಸೋಲಿಸಿ ಹಿಂದಕ್ಕಟ್ಟಿರುವೆವೆಂದು ಸರಕಾರದ ಕಡೆಯವರು ವಿದಿತ ಪಡಿಸಿರುವರು. ಬಂಡಾಯಗಾರರ ಯುದ್ಧ ಹಡಗವೊಂದು ವೆಲೆನ್ಸಿಯ ಪಟ್ಟಣಕ್ಕೆ ತೋಪು ಹೊಡೆದುದರಿಂದ ಬಹಳ ಹಾನಿಯಾಗಿರುವುದು. 14 ಮಂದಿ ಕೊಲ್ಲಲ್ಪಟ್ಟಿರುವರು

ಹಿಂದೂದೇಶ

ನೈಜಾಮರ ಆಳ್ವಿಕೆಯ ರಜತೋತ್ಸವ ರೈತರಿಗೆ ರೂ 40 ಲಕ್ಷ ಮಾಫಿ.

ಇದೇ ತಾ ೧೪ರಲ್ಲಿ ಹೈದರಾಬಾದಿನ ನೈಜಾಮರ ರಜತೋತ್ಸವದ ಸಂದರ್ಭದಲ್ಲಿ ಪ್ರಜೆಗಳ ಪರವಾಗಿ ಮಾನಪತ್ರ ಒಂದು ಅವರಿಗೆ ಅರ್ಪಿಸಲ್ಪಟ್ಟಾಗ ನೈಜಾಮರು ಬೇಸಾಯಗಾರರ ಸಂಕಷ್ಟಗಳನ್ನು ನಾನು ಚೆನ್ನಾಗಿ ಬಲ್ಲೆನು ನಾನು ಅವರ ಕ್ಷೇಮ ಚಿಂತಕನಿರುವೆನು ಈ ಜನತೆಯ ಸಾಂಪತ್ತಿಕ ಮತ್ತು ಸಾಮಾಜಿಕ ಅಭಿವೃದ್ಧಿಯಲ್ಲಿ ನಾನೂ ನನ್ನ ಸರಕಾರವೂ ಬಹಳ ಆಸಕ್ತಿಯಿಂದಿರುವೆವು ಈ ಸಂದರ್ಭದಲ್ಲಿ ರೂ ೪೦ ಲಕ್ಷಗಳಷ್ಟರ ಕಂದಾಯ ಬಾಕಿಯನ್ನು ನಾನು ಮಾಫಿ ಬಿಟ್ಟಿರುವೆನೆಂದು ತಿಳಿಸಲು ಸಂತೋಷಪಡುತ್ತೇನೆ ಎಂದರು ನೈಜಾಮರ ರಜತೋತ್ಸವವು ಹೈದರಾಬಾದ್ ಸಂಸ್ಥಾನದಲ್ಲೆಲ್ಲಾ ಬಹಳ ವಿಜೃಂಭಣೆಯಿಂದ ಆಚರಿಸಲ್ಪಟ್ಟಿರುವುದು.

ಅಖಿಲಭಾರತ ಕಾಂಗ್ರೆಸ್ ಕಮಿಟಿ.

ಮತ್ತು ಕಾಂಗ್ರೆಸ್ ವರ್ಕಿಂಗ್ ಕಮಿಟಿಗಳ ಸಭೆಯು ಇದೇ ತಾ 27ರಲ್ಲು ವಾರ್ಧದಲ್ಲಿ ನಡೆಯಲಿರುವುದು ಈ ಸಭೆಯಲ್ಲಿ ಕಾಂಗ್ರೆಸಿನ ಮುಂದಿನ ಕಾರ್ಯಕ್ರಮವು ನಿಶ್ಚೈಸಲ್ಪಡುವುದು.

ಹುಲಿಯೊದನೆ ತರುಣಿಯ ಹೋರಾಟ.

ಕಟ್ನೀಕ್ ಎಂಬಲ್ಲಿ ಓರ್ವ ತರುಣಿಯು ತನ್ನ ಮಾವನ ಹಿಂದಿನಿಂದ ಕಾಡುಮಾರ್ಗವಾಗಿ ಹೋಗುತ್ತಿದ್ದಾಗ ಹುಲಿಯೊಂದು ಅವಳ ಮೇಲೆ ಹಾರಿ ಅವಳನ್ನು ಕಾಡಿನೊಳಗಿನ ಗುಹೆಯೊಳಗೊಯ್ದು ಹಾಕಿತು ತರುಣಿಗೆ ಆಗ ಜ್ಞಾನತಪ್ಪಿಹೋಗಿದ್ದಿತು. ಅವಳಿಗೆ ಬೋಧ ಬಂದು ಎದ್ದು ನಿಂತಾಗ ಹೊರ ಹೋಗಿದ್ದ ಹುಲಿಯು ಗುಹೆಯ ಬಳಿಗೆ ಬಂತು ತರುಣಿಯು ಅದರ ಕಣ್ಣಿಗೆ ಎರಡು ಕೈಗಳಿಂದಲೂ ದೂಳೆಸೆದು ಹುಲಿಯು ಕೆಳಗೆ ಬೀಳುವಂತೆಮಾಡಿದಳು ಆ ವೇಳೆ ಗುಹೆಯೊಳಗೆ ಬಿದ್ದಿದ್ದ ದೊಣ್ಣೆಯೊಂದನ್ನು ಹೆಕ್ಕಿ ಹುಲಿಯ ತಲೆಗೆ ಹೊಡೆದು ಗುಹೆಯಿಂದ ಹೊರಗೋಡಿ ಬಂದಳು ಆ ಮೇಲೆ ಹುಲಿ ಅವಳ ಬೆನ್ನು ಹಿಡಿಯಲಿಲ್ಲ ಸುದೈವದಿಂದ ಮರ ಕಡಿಯುವವರು ಕೆಲವರು ತರುಣಿಯನ್ನು ಕಂಡು ಆಸ್ಪತ್ರೆಗೊಯ್ದರು

ಇಡೀ ಹಳ್ಳಿಯ ನಾಶ

ಏಟಾ ಎಂಬ ಪಟ್ಟಣದ ಬಳಿಯ ಒಂದು ಚಿಕ್ಕ ಹಳ್ಳಿಯಲ್ಲಿ ಒಬ್ಬ ಹುಡುಗಿಯು ತನ್ನನ್ನು ಮದುವೆಯಾಗಲೊಪ್ಪಲಿಲ್ಲೆಂದು ತರುಣನೊಬ್ಬನು ಅವಳ ಗುಡಿಸಲಿಗೆನೇ ಬೆಂಕಿ ಕೊಟ್ಟುಬಿಟ್ಟನು ಈ ಬೆಂಕಿಯು ಆ ಹಳ್ಳಿಯ ೨೮ ಗುಡಿಸಲುಗಳಿಗೂ ಹಬ್ಬಿ ಇಡೀ ಹಳ್ಳಿಯೇ ಸುಟ್ಟುಹೋಯಿತು ಅತ್ಯಾಚಾರಿಯು ಕೆಲಸಮಯ ತಲೆತಪ್ಪಿಸಿಕೊಂಡನು ಕೊನೆಗೆ ಪತ್ತೆ ಹಚ್ಚಲ್ಪಟ್ಟು ೫ ವರ್ಷಗಳ ಠಕ್ಕೆಗೆ ಗುರಿಯಾದಲ್ಪಟ್ಟಿರುವನು,

ಕಾಂಗ್ರೆಸು ಮತ್ತು ಅಧಿಕಾರ ಸ್ವೀಕಾರ

ಹಲವು ಪ್ರಾಂತಗಳಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಬಹುಮತ ಸಿಗಬಹುದಾದುದರಿಂದ ಕಾಂಗ್ರೆಸು ಅಧಿಕಾರ ಸ್ವೀಕರಿಸಬಹುದೆಂದು ನಂಬಲಾಗಿದೆ ಈ ವಿಷಯವನ್ನು ಅಖಿಲಭಾರತ ಕಾಂಗ್ರೆಸ್ ಕಮಿಟಿಯು ನಿರ್ಣೈಸಬೇಕಾಗಿದೆ

ಸಂಯುಕ್ತ ಪ್ರಾಂತ

ಚುನಾವಣೆಯಲ್ಲಿ ಪಂಡಿತ ಜವಾಹರಲಾಲರ ತಂಗಿ ಶ್ರೀಮತಿ ವಿಜಯಲಕ್ಷ್ಮೀ ಪಂಡಿತರೂ ಅವರ ಗಂಡ ಶ್ರೀ ಆರ್ ಎಸ್ ಪಂಡಿತರೂ ಆರಿಸಿ ಬಂದಿರುವರು ಕಾಂಗ್ರೆಸ್ ವರ್ಕಿಂಗ್ ಕಮಿಟಿ ಮೆಂಬರರಾದ ಆಚಾರ್ಯ ನರೇಂದ್ರ ದೇವರೂ ಚುನಾಯಿಸಲ್ಪಟ್ಟಿರುವರು.

ಪಂಡಿತ ನೆಹರು

ಇದೇ ತಾ 15ರಲ್ಲು ಸತಾರ ಮತ್ತು ಶೋಲಾಪುರ ಜಿಲ್ಲೆಗಳಲ್ಲಿ ಸಂಚರಿಸಿರುವರು ನಿಪ್ಪಾಣಿಯಿಂದ ಇದೇ ರಾತ್ರಿ ಮೋಟರ್‌ಕಾರಿನಲ್ಲಿ ಪ್ರಯಾಣಮಾಡಿ ಸತಾರದಲ್ಲಿ ಕರಾಡಿಗೆ ಮುಟ್ಟಿ ಅಲ್ಲಿಯ ಕಾರ್ಯಕ್ರಮವನ್ನು ಮುಗಿಸಿದರು ಬೆಳಿಗ್ಗೆ ನಾರಾಯಣ್ ಮತ್ತು ಸತಾರದಲ್ಲಿ ನೆರೆದ ಪ್ರಚಂಡ ಜನಸ್ತೋಮಕ್ಕೆ ಕಾಂಗ್ರೆಸಿನ ಸಂದೇಶ ಸಾರಿದರು ಅವರಾಪ್ಪ ಪಂಢರಾಪುರಕ್ಕೆ ಹೋಗಿ, ಗುಲಾಮಗಿರಿಯಲ್ಲಿರುವವರಿಗೆ ಅದನ್ನು ತೊಲಗಿಸುವುದೇ ಪ್ರಥಮ ಧರ್ಮವೆಂದು ಸ್ಪಷ್ಟಗೊಳಿಸಿದರು ಶೋಲಾಪುರದಲ್ಲಿ ನೆರೆದಿದ್ದ 10,000 ಮಂದಿಗೆ ಒಂದು ಘಂಟೆ ಭಾಷಣವಿತ್ತರು

ಬಂಟರ ಯಾನೆ ನಾಡವರ ಸಂಘ ಮುಂಬಾಯಿ

ನಮ್ಮ ಸಂಘದ ಬಿಲ್‌ಕಲಕ್ಟರರು ರಾಜಿನಾಮೆ ಕೊಟ್ಟು ಊರಿಗೆ ಹೋದದ್ದರಿಂದ, ಸದ್ರಿ ಸಂಘದ ಸದಸ್ಯರ ಚಂದಗಳು ತಿಂಗಳ ವರ್ಗಣಿ ವಸೂಲು ಮಾಡುವ ಬಗ್ಗೆ ಪ್ರಥಮ ಸಲ ಬಿಲ್‌ಕಲಕ್ಟರಾಗಿದ್ದನು ರಾ ರಾ ಜಮ್ಮೂಪ ಸುಬ್ಬಣ್ಣ ಶೆಟ್ರನ್ನು ಈ ಸಲ ಸದ್ರಿ ಕೆಲಸಕ್ಕೆ ನೇಮಿಸಿದ್ದೇವೆ. ಆದ್ದರಿಂದ ನಮ್ಮ ಸಂಘದ ಎಲ್ಲಾ ಸದಸ್ಯರು ದಯವಿಟ್ಟು ನಮ್ಮ ಚಂದಾವಣವನ್ನು ಇವರಲ್ಲಿ ಕೊಟ್ಟು ರಶೀದಿ ಪಡಕೊಳ್ಳಬೇಕಾಗಿ ವಿನಂತಿಸುವ,

ಕೆ. ಪಿ ಕೆ. ಶೆಟ್ಟಿ,

ಮೂಲ್ಕಿ ಪೊಂಬ ಶೆಟ್ಟಿ,

ಗೌರವ ಜೊತೆ ಕಾರ್ಯದರ್ಶಿಯವರು.

ಕುಂದಾಪುರದಲ್ಲಿ ಪಂಡಿತ ನೆಹರುಗಳು

'ನಾನು ಕಾಂಗ್ರೆಸಿನ ಸಂದೇಶವನ್ನು ತಂದವನೆಂಬುದನ್ನು ನೀವು ಬಲ್ಲಿರಿ ಚುನಾವಣೆಯು ನಮ್ಮ ಮುಂದಿನ ಪ್ರಾಮುಖ್ಯ ಪ್ರಶ್ನೆಯಿದರಲ್ಲಿ ಸಣ್ಣ ಸಂಗತಿಯೆಂಬುವನ್ನು ನೆನಸಿರಲ್ಲಿಡಿರಿ. ನಾವು ಎಲ್ಲಾ ದಿಕ್ಕುಗಳಲ್ಲಿಯೂ ಸ್ವರಾಜ್ಯಕ್ಕಾಗಿ ಹೋರಾಡಬೇಕಾಗಿ ಸಂಕಲ್ಪಿಸಿರುವದರಿಂದ ಈಗ ಕೌನ್ಸಿಲು ಕಾರ್ಯಕ್ರಮವನ್ನು ಕೈಕೊಂಡಿರುವವು ಕಾಂಗ್ರೆಸಿನ ಧ್ಯೇಯವನ್ನು ನೀವು ಒಪ್ಪುವವಾದರೆ ಅದನ್ನು ಸಮರ್ಥಿಸಲು ಮುಂದಾಗಿರಿ ನೀವು ಸಂಘಟಿತರಾದಷ್ಟೂ ದೇಶದ ಹಿತವು ಅಧಿಕವಾಗುವದು' ಹೀಗೆಂದು ಕುಂದಾಪುರದ ಪ್ರಚಂಡ ಸ್ತ್ರೀಪುರುಷರ ಸಭೆಯಲ್ಲಿ ಪಂಡಿತ ನೆಹರುಗಳು ಭಾಷಣವಿತ್ತು ಹುಬ್ಬಳ್ಳಿಯ ಮಾರ್ಗವಾಗಿ ಬೆಳಗಾಂವಿಗೆ ಹೊರಟುಹೋದರು

ಕುಂದಾಪುರ ಧರ್ಮಾರ್ಥ ವಾಚನಾಲಯ

ಸ್ಥಳೀಯ ಕರ್ನಾಟಕ ಸಾಹಿತ್ಯ ಸಂಘದ ಆಶ್ರಯದಲ್ಲಿ ಸದ್ಯದಲ್ಲಿಯೇ ಒಂದು ಧರ್ಮಾರ್ಥ ವಾಚನಾಲಯವನ್ನು ತೆರೆಯಬೇಕೆಂದು ನಿಶ್ಚಯವಾಗಿದೆ. ಮತ್ತು ಬೆಂಗಳೂರಿನ ಕರ್ನಾಟಕ ಸಾಹಿತ್ಯ ಪರಿಷತ್ತಿನವರು ಈ ಸಂಸ್ಥೆಯನ್ನು ಪರಿಷತ್ತಿನ ನಿಯಮದಂತೆ ಉಪಸಂಸ್ಥೆಯನ್ನಾಗಿ ಮಾಡಬೇಕೆಂಬ ಕಳುಹಿಸಿರುವ ಸೂಚನೆ ಸಂಘದಲ್ಲಿ ಅಂಗೀಕೃತವಾಗಿರುತ್ತದೆ.

ದಿ ಗಾಡಿಯನ್ ಒಫ್ ಇಂಡಿಯಾ ಇನ್ಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್,

ಮುಖ್ಯ ಆಫೀಸು—ಫೋರ್ಟ್ ಬೋರ್ಡ್ ಲೇ—ಮದ್ರಾಸು.

ತೀರಾ ದೇಶೀಯ ಭಂಡವಾಳ=ತೀರಾ ದೇಶೀಯ ಆಡಳಿತೆ ತೀರಾ ಭದ್ರವಾದ ಕಾರ್ಯಕ್ರಮ.

ತೀರಾ ಕಡಿಮೆ ವಿಮೆಯ ದರಗಳು — ಉದಾರವಾದ ಶರ್ತಗಳು ನ್ಯಾಯನೀತಿ ಸಮ್ಮತವಾದ ವ್ಯವಹಾರ.

ತೀರಾ ಹೊಸ ಹೊಸ ನಮೂನೆಯ ಏರ್ಪಾಡುಗಳು,

ಎಲ್ಲಾ ಬಗೆಯ ವಿವಿಧ ಸ್ಥಿತಿಯ ಜನರಿಗೆ ಸರ್ವಾನುಕೂಲ.

ಆತ್ಯಾಕರ್ಷಕವಾದ ಶರ್ತಗಳು—ಖಂಡಿತವಾದ ಭದ್ರತೆ.

ಜೀವನ ಅನಿಶ್ಚಿತ; ಸಂಪಾದನೆ ಅನಿಶ್ಚಿತ.

ಇವುಗಳ ಬಾಧಕಕ್ಕೆ ಜೀವವಿಮೆಯೇ ಉತ್ತಮ ಪರಿಹಾರ.

ಒಮ್ಮೆ ನಮ್ಮಲ್ಲಿ ವಿಮೆ ಕೊಂಡವರು ನಿರಾಶರಾಗಲಾರರು.

ಸೂಚನೆ:—ನಮ್ಮ ಎಲ್ಲಾ ಪಾಲಿಸಿಹೋಲ್ಡರರೂ, ಏಜಂಟರೂ ಇನ್ನು ಮುಂದೆ ತಮ್ಮ ವ್ಯವಹಾರವನ್ನು ದಿ ಬ್ರಾಂಚ್ ಸೆಕ್ರೆಟರಿ, ದಿ ಗಾರ್ಡಿಯನ್ ಒಫ್ ಇಂಡಿಯಾ ಇನ್ಶ್ಯೂರೆನ್ಸ್ ಕೋ., ಲಿಮಿಟೆಡ್, ಮಂಗಳೂರು ಶಾಖೆ ಇವರೊಡನೆ ಬೆಳೆಸಬೇಕಾಗಿ ವಿನಂತಿ.

ವಿಶೇಷ ಮಾಹಿತಿಗಳಿಗೆ ಇವರಿಗೆ ಬರೆಯಿರಿ.

E. A. PAIS, B. Sc., **Branch Secretary,**

The Guardian of India Insurance Co., Limited,

MANGALORE BRANCH.

ದಕ್ಷಿಣ ಕನ್ನಡ

ಘೋಷಣೆ

ಸ್ವ ನ ವಿ ಜ್ಞಪ್ತಿ ಸಮ್ಮೇಳನ ಅಸ್ಪೃಶ್ಯ ಜನ ಘೋಷವನ್ನು ಮಾಡುತ್ತಿರುವರು

ಬ್ರಾ ಸಾಯಂಕಾಲ ಸಾಮಂಗಳೂರು ಮಾರ್ಗ ವಾಗಿ ಪುತ್ತೂರಿಗೆ ಹೋಗಿ ಅಲ್ಲಿಂದ ಬಂಟ್ವಾಳಕ್ಕೆ ಎಂದು, ಅಲ್ಲಿಂದ ಮೂಡುಬಿದ್ರಿಗೆ ಬಂದು ಅಲ್ಲಿ ಭಾಷಣಮಾಡಿದರು

ಕದ್ರಿಯಲ್ಲಿ ಸಭೆ

ಕಳೆದ ತಾ ೯ನೇ ಮಂಗಳವಾರ ದಿನ ಕದ್ರಿಯಲ್ಲಿ ಕಾಂಗ್ರೆಸ್ ಪಕ್ಷದವರ ಸಭೆಯು ಕೆ ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ನಡೆಯಿತು ಶ್ರೀ ಯಂ ಆರ್ ಶಾಸ್ತ್ರಿಗಳು, ರಾಷ್ಟ್ರದ ಸಭೆಯ ಧ್ಯೇಯವನ್ನು ವಿವರಿಸಿ ಕಾಂಗ್ರೆಸಿಗೆ ಸಕಲರೂ ಮತಕೊಡಬೇಕೆಂದು ಭಾಷಣಮಾಡಿದರು

ಬೋಳಾರದಲ್ಲಿ ಸಭೆ

ನಿನ್ನೆಯ ದಿನ (ತಾ ೧೪) ಬೋಳಾರದಲ್ಲಿ ಒಂದು ಸಾರ್ವಜನಿಕ ಸಭೆಯು ಶ್ರೀ ಆಲ್ಬು ಕರ್ಕರ ಅಧ್ಯಕ್ಷತೆಯಲ್ಲಿ ಜರಗಿತು ಶ್ರೀ ರಾಮರಾಯರೂ ಶ್ರೀ ಕಿಲ್ಲೆಯವರೂ ಭಾಷಣಮಾಡಿದರು ಶ್ರೀ ಕಿಲ್ಲೆಯವರು ಜಸ್ಟಿಸ್ ಪಾರ್ಟಿಯಲ್ಲಿ ಸೇರಿಕೊಂಡ ಸ್ವಾಭಿಮಾನಿಗಳು ನಾಸ್ತಿಕರೆಂದೂ, ಅವರಿರುವ ಕಡೆಗೆ ಕ್ರಿಸ್ತ ಬಂಧುಗಳ ಮತದಾನ ಮಾಡವಾರದೆಂದೂ ತಿಳಿಸಿದರು ಅಧ್ಯಕ್ಷರು ಶ್ರೀ ಕಿಲ್ಲೆಯವರ ಅಭಿಪ್ರಾಯವನ್ನು ಅನುಮೋದಿಸಿದರು

ಮೆರವಣಿಗೆಗಳಿಗೆ ಪ್ರತಿಬಂಧಕ

ತಾ ೧೪ರಿಂದ ೨೦ರ ವರೆಗೆ ಮೆರವಣಿಗೆಗಳಾಗ ಕೂಡದೆಂದೂ, ಆಗಬೇಕಾದರೆ ಅಧಿಕಾರಿಗಳ ಅನುಮತಿ ಮುಂಚಿತವಾಗಿ ಪಡೆಯಬೇಕೆಂದೂ ನಗರದಲ್ಲಿ ಡಂಗುರಸಾರಿದ್ದಾರೆ

ಕಾಂಗ್ರೆಸ್ ಸ್ವಯಂ ಸೇವಕನ ದಸ್ತಗಿರಿ

ಕಾಂಗ್ರೆಸ್ ಸ್ವಯಂ ಸೇವಕರಾದ ಮತ್ತು ಅತ್ತಾವರ ಸ್ವಯಂ ಸೇವಕರ ದಳದ ಕ್ಯಾಪ್ಟನರಾದ ಶ್ರೀ ಎ ಅಣ್ಣಪ್ಪನವರನ್ನು ದಸ್ತಗಿರಿಮಾಡಿದರು ಅವರು ಒಬ್ಬ ಜಸ್ಟಿಸ್ ಸ್ವಯಂ ಸೇವಕನ ಕೆಂಪು ಟೊಪ್ಪಿಯನ್ನು ಸುಟ್ಟರೆಂದು ಅವರ ಮೇಲಿನ ಆರೋಪಣೆ ಅವರನ್ನೀಗ ಜಾಮೀನಿನ ಮೇಲೆ ಬಿಟ್ಟಿದ್ದಾರೆ

ಹರಿಜನರ ಸಭೆ

ಕಂಕನಾಡಿಯ ಹರಿಜನರ ಸಭೆಯು ನಿನ್ನೆಯ ದಿನ ನಡೆಯಿತು ಶ್ರೀ ರಂಗರಾಯರು ಹರಿಜನ ಮತದಾರರು ಕಾಂಗ್ರೆಸಿಗೆ ವೋಟು ಕೊಡಬೇಕೆಂದು ಕೇಳಿಕೊಂಡರು

ಧಾರ್ಮಿಕ ಉಪನ್ಯಾಸ

ಬೆಂಗಳೂರಿನ ಶ್ರೀ ಜಿ ಸಿ. ರಾಜರತ್ನಂರವರು ಬುದ್ಧ ಧರ್ಮದ ಮೇಲೆ ಮೂರು ಉಪನ್ಯಾಸಗಳನ್ನು ಮಾಡಿದರು

ಉಡುಪಿ

ಚುನಾವಣೆಯ ಪ್ರಚಾರಕಾರ್ಯವು ಎಲ್ಲಾ ಪಕ್ಷಿಯರಿಂದಲೂ ವಿಶೇಷ ಉತ್ಸಾಹದಿಂದ ನಡೆಯುತ್ತಿದೆ ಶ್ರೀ ಇ ಸುಬ್ರಹ್ಮಣ್ಯನವರೂ ಶ್ರೀ ಗೋಪಾಲ ಸಾಲೆನ್ಸರೂ ಪ್ರಚಾರ ಕಾರ್ಯದಲ್ಲಿ ತೊಡಗಿರುವರು ಕೊಂಗ್ರೆಸಿನ ಹರಿಜನ ಉಮೇದ್ವಾರರಾದ ಶ್ರೀ ಈಶ್ವರನವರು ಅಲ್ಲಲ್ಲಿ ಸಂಚರಿಸಿ ಕೊಂಗ್ರೆಸ್ ಪ್ರಚಾರ ಮಾಡುತ್ತಿರುವರು ಕೌನ್ಸಿಲು ಚುನಾವಣೆಯು ತಾ ೧೫ರಲ್ಲಿ ನಡೆಯಿತು ಶ್ರೀ ಡಿ ಮಂಜಯ್ಯ ಹೆಗ್ಗಡೆಯವರಿಗೆ ಹೆಚ್ಚಿನ ಮತಗಳು ದೊರೆತಿರಬಹುದೆಂಬ ಊಹನೆಯಿದೆ ಉಡುಪಿಯ ಪ್ರಮುಖರೆಲ್ಲಾ ಉತ್ಸಾಹದಿಂದ ಕೊಂಗ್ರೆಸಿನ ಕಡೆಯಿಂದ ಕೆಲಸಮಾಡಲಿಳಿದಿದ್ದಾರೆ ತಾ ೧೬ರಲ್ಲಿ ಕ್ರಿಶ್ಚಿಯನ್ ಸೀಟಿನ ಚುನಾವಣೆಯು ನಡೆಯಿತು ಎರಡೂ ಕಡೆಯ ಸ್ವಯಂಸೇವಕರು ಮುಂಚಿನ ದಿನ ಮೆರವಣಿಗೆ ಜಯಕಾರಗಳೊಡನೆ ಪಟ್ಟಣದಲ್ಲಿ ಸಂಚರಿಸಿದರು ವಿಶೇಷವಾಗಿ ಕೊಂಗ್ರೆಸ್ ಉಮೇದ್ವಾರೀ ವಿ ಮಾರ್ಕಿಯವರ ರಾಷ್ಟ್ರಧ್ವಜ ಯುಕ್ತ ಕಾರುಗಳೂ, ಸ್ವಯಂಸೇವಕರು ಮತದಾರರನ್ನು ತರುವದರಲ್ಲಿ ಚುರುಕಿನಿಂದ ಕೆಲಸಮಾಡುತ್ತಿದ್ದುದೂ ಕಂಡುಬಂದಿದೆ ಚುನಾವಣೆಯು ಶಾಂತರೀತಿಯಿಂದ ನಡೆದಿರುವದು ಸ್ವಯಂಸೇವಕರು ಹಳ್ಳಿಗಳಿಗಿಳಿದು ವಾಸ್ತವ್ಯೋದ್ಧಾರಕ್ಕಾಗಿ ಸಂಚರಿಸುತ್ತಿರುವರು ರಥಬೀದಿಯಲ್ಲಿ ಕೊಂಗ್ರೆಸು ಮತ್ತು ಜಸ್ಟೀಸರ ಕಾರ್ಯಾಲಯಗಳು ತೆರೆಯಲ್ಪಟ್ಟು ಹುರುಪಿನಿಂದ ಕೆಲಸವಾಗುತ್ತಿದೆ

ಮಹಾಜನರಲ್ಲಿ ವಿನಂತಿ

ರಾಷ್ಟ್ರಸಭಾಧ್ಯಕ್ಷರಾದ ಪಂಡಿತ ಜವಾಹರಲಾಲನೆಹರೂರವರು ಉಡುಪಿಯನ್ನು ಸಂದರ್ಶಿಸಿ ಕೊಟ್ಟ ಸಂದೇಶವು ಇಷ್ಟರಲ್ಲೇ ಜನರಿಗೆಲ್ಲಾ ತಿಳಿದಿದೆ "ದೇಶದ ಸ್ವಾತಂತ್ರ್ಯವನ್ನು ಬಯಸುವ ಮತ್ತು ಜನತೆಯ ದಾರಿದ್ರ್ಯವು ನಿವಾರಣೆಯಾಗಬೇಕೆಂದಿರುವವರೆಲ್ಲಾ ಕೊಂಗ್ರೆಸ್ಸಿಗೇನೇ ವೋಟುಕೊಡಬೇಕು. ಕೊಂಗ್ರೆಸೆಂದರೆ ಯಾವತರದ ಜಾತಿ ಮತ ಭೇದವಿಲ್ಲದೆ ಯಾವ ತರದ ಸಂಕುಚಿತ ಸ್ವಾರ್ಥವೂ ಇಲ್ಲದೆ ಜನಸಾಮಾನ್ಯರ ಹಿತಸಾಧನೆಗಾಗಿರುವ ಏಕಮಾತ್ರ ರಾಷ್ಟ್ರೀಯ ಸಂಸ್ಥೆ-ಜಸ್ಟೀಸು ಪಕ್ಷದಂತೆ ಅದು ಕೆಲವೇ ವ್ಯಕ್ತಿಗಳ ಸ್ವಾರ್ಥಸಾಧನೆಯ ಪಕ್ಷವಲ್ಲ, ಸರಕಾರದ ಬೆನ್ನು ಹಿಡಿದು ಬಿರಿದುಬಾವಲಿಗಾಗಿ ಹಾತೊರೆಯುವವರ ಸೂತ್ರಚಾಲನೆಯ ಸಂಸ್ಥೆಯಲ್ಲ. ಆದುದರಿಂದ ಮತದಾರರೆಲ್ಲರೂ ಕೊಂಗ್ರೆಸು ಉಮೇದ್ವಾರರಿಗೇನೇ ತಮ್ಮ ವೋಟುಗಳನ್ನಿತ್ತು ಕೊಂಗ್ರೆಸ್ಸಿಗೆ ಕೀರ್ತಿಯನ್ನು ತರಬೇಕು," ಎಂಬ ಪಂಡಿತರ ಸಂದೇಶವನ್ನು ನಾವೆಲ್ಲರೂ ಮನ್ನಿಸುವದಾದರೆ, ಅವರ ಸಂದರ್ಶನವು ಸಾರ್ಥಕವಾಗಬೇಕಾದರೆ ನಾವೆಲ್ಲರೂ ಯಾವದೊಂದು ತರದ ಭಿನ್ನಭೇದಗಳನ್ನಾದರೂ ಮೂಲೆಗೊತ್ತಿ ರಾಷ್ಟ್ರದ ಪರೀಕ್ಷೆಯ ಈ ಸಂದರ್ಭದಲ್ಲಿ ಕೊಂಗ್ರೆಸು ಉಮೇದ್ವಾರಿಗಳಿಗೇನೇ ಸಮ್ಮತ ಮತಗಳನ್ನಿತ್ತು ಕೊಂಗ್ರೆಸಿನ ಕೀರ್ತಿಧ್ವಜವನ್ನು ಹಾರಿಸುವದು ನಮ್ಮ ಕರ್ತವ್ಯವಾಗಿದೆ ಆದ ದರಿಂದ ಉಡುಪಿ ತಾಲೂಕಿನ ಮತದಾರರು ಕೊಂಗ್ರೆಸ್ ಕಡೆಯ ಉಮೇದ್ವಾರಿಗಳಿಗೇನೇ ಅರಸಿನ ಬಣ್ಣದ ಪೆಟ್ಟಿಗೆಯಲ್ಲಿ ನಿಮ್ಮ ವೋಟುಗಳನ್ನೀಯಬೇಕಾಗಿ ನಮ್ಮ ಆಗ್ರಹಪೂರ್ವಕ ವಿನಂತಿ

ಎಮ್ ವಿಟ್ಠಲ್ ಕಾಮತ್ ವಕೀಲ್ ಉಡುಪಿ, ಅರೂರು ಲಕ್ಷ್ಮೀನಾರಾಯಣರಾವ್ ಎಡ್ವೋಕೇಟ್ ಉಡುಪಿ ಮತ್ತು ಮುನ್ಸಿಪಲ್ ಚೆರ್ಮನ್, ಕೊಚ್ಚಿಕಾರ್ ರಮಾನಾಥ ಪೈ ವಕೀಲ್ ಉಡುಪಿ, ಕೆ. ವಿಟ್ಠಲ ನಾಯಕ್ ಬಿ ವೈಕುಂಠ ಬಾಳಿಗ, ಬೈಲೂರು ವಾಸುದೇವ ರಾವ್ ಎಡ್ವೋಕೇಟ್, ಡಾಕ್ಟರ್ ಟಿ ಮಾಧವ ಪೈ ಉಡುಪಿ, ಡಾಕ್ಟರ್ ಪಿ, ರಾಘವೇಂದ್ರ ನಾಯಕ್ ಉಡುಪಿ, ಡಾಕ್ಟರ್ ಯ. ಸದಾಶಿವ ಉಡುಪಿ ಎಮ್ ವಾಮನ ಭಟ್ ಮುನ್ಸಿಪಲ್ ಕೌನ್ಸಿಲರ ಉಡುಪಿ, ಯು ಕೇಶವ ಪ್ರಭು ಮುನ್ಸಿಪಲ್ ಕೌನ್ಸಿಲರ ಉಡುಪಿ, ಕೆ ಅನಂತ ಶೆಟ್ಟಿ ಮುನ್ಸಿಪಲ್ ಕೌನ್ಸಿಲರ ಉಡುಪಿ, ಹಾಂಗಾಳ ಮಂಜುನಾಥ ನಾಯಕ್ ಅಧ್ಯಕ್ಷ ತಾಲೂಕು ಕೊಂಗ್ರೆಸ್ ಕಮಿಟಿ ಉಡುಪಿ, ಉದ್ಯಾವರ ನ ಗಪ್ಪ ಕಮ್ತಿ ಸಾಹುಕಾರ ಉಡುಪಿ, ವಿ ಎಸ್ ಕುಡ್ವ, ಎಮ್. ಶ್ರೀನಿವಾಸ ಪ್ರಭು ಮೆನೇಜರ ಕೋರ್ಪರೇಶನ್ ಬೇಂಕ್ ಉಡುಪಿ, ಪಿ ಎ ಪೈ ಬ್ರದರ್ಸ್ ಸಾಹುಕಾರರು ಉಡುಪಿ, ಎ ಶಂಭುಶೆಟ್ಟಿ ಮುನ್ಸಿಪಲ್ ಕೌನ್ಸಿಲರ ಉಡುಪಿ, ವೆಪ್ಪ ಶ್ರೀನಿವಾಸ ಉಪಾಧ್ಯಾಯ ವರ್ಗದಾರ ಕೊಡವೂರು, ಪಿ ಶ್ರೀನಿವಾಸ ರಾವ ಕೊಡವೂರು ಪಂಚಾಯತ ಬೋರ್ಡು ಮೆಂಬರ, ನಾರಾಯಣ ಭಟ್ ಏಜಂಟ್ ಕೊರ್ಪೊರೇಶನ್ ಬೇಂಕ್ ಉಡುಪಿ, ನಯಂಪಳ್ಳಿ ಆನಂದರಾವ್ ಉಡುಪಿ, ಕಾನಾರ್ಡು ರಾಮರಾವ್ ಸಾಹುಕಾರ ಉಡುಪಿ, ಎಸ್. ಯು. ಪಣಿಯಾಡಿ, ಉಡುಪಿ, ಬಿ ಶ್ಯಾಮಭಟ್ಟ ಪ್ರೆಸಿಡೆಂಟ ಪಂಚಾಯತ ಕೋರ್ಟು ಮಟ್ಪೆ, ಬಿ ಶೀನಪ್ಪ ಹೆಗ್ಡೆ ವಕೀಲ್ ಉಡುಪಿ, ಪುತ್ತಿಗೆ ಸುಬ್ಬಾಚಾರ್ಯ ಜನರಲ್ ಪವರ್ ಆಫ್ ಎಟೋರ್ನಿ ಹೋಲ್ಡರ ಶ್ರೀ ಸೋದೆಮಠ ಉಡುಪಿ ಕಾಪು ಲಕ್ಷ್ಮೀನಾರಾಯಣ ಐತಾಳ ವಕೀಲ್ ಉಡುಪಿ, ತೋನ್ಸೆ ಗಣಪಯ್ಯ ಶೆಟ್ಟಿ ವಕೀಲ್ ಉಡುಪಿ, ಪಿ ಪದ್ಮನಾಭ ರಾವ್ ವಕೀಲ್ ಉಡುಪಿ, ಟಿ ಎನ್ ತೇಳುನಂಬಿಯಾರ್, ಕಲ್ಯಾಣಿ ವ್ಯಾಸಾಚಾರ್ಯ ಮರ್ಚಂಟ್, ಕೆ ಕೆ ಹೆಬ್ಬಾರ್ ಮರ್ಚಂಟ್, ಡಾಕ್ಟರ್ ಶೇಷಗಿರಿ ಪೈ, ಸಾಣೂರು ಗೋವಿಂದ ಜೀ ಸೇಟ್ ಮರ್ಚಂಟ್, ಸರಾಫ್ ಯು. ಶಿವರಾಯ ಸೇಟ್, ಕೆ ಎಲ್ ಕಾಮತ್, ಕಾಸರಗೋಡು, ಎಲ್ ಎಸ್ ನಾಯಕ್ ಎಮ್ ಎ ಉಡುಪಿ, ಬಿ ಕೃಷ್ಣಯ್ಯ ಹೆಗ್ಡೆ ಡಿಸ್ಟ್ರಿಕ್ಟ್ ಬೋರ್ಡು ಮೆಂಬರ್, ಎಮ್ ಎಸ್ ಅಧಿಕಾರಿ ವಕೀಲ್ ಕಾರ್ಕಳ, ಕೆ. ಎಲ್ ಬಲ್ಲಾಳ, ಎಮ್. ಕೆ ಮಂಜಪ್ಪ ಸಾಹುಕಾರ ಮಾಲ್ಪೆ.

ಸ್ವಾತಂತ್ರ್ಯಕ್ಕೆ ಓಟು ಕೊಡಿರಿ

ಕೋಂಗ್ರೆಸಿಗೆ ಕೊಟ್ಟ ಓಟು ನಿಮ್ಮ ಸ್ವಾತಂತ್ರ್ಯ ಸಾಧನೆಗಾಗುವದು. ಕೋಂಗ್ರೆಸಿನ ವಿರುದ್ಧವಾಗಿ ಬಿದ್ದ ಪ್ರತಿಯೊಂದು ಓಟೂ ನಿಮ್ಮ ಗುಲಾಮಗಿರಿಯನ್ನು ಸಮರ್ಥಿಸುವದು. ನಿಮಗಾವುದು ಬೇಕು? ಸ್ವಾತಂತ್ರ್ಯವೋ? ದಾಸ್ಯವೋ?

—ಸರೋಜಿನಿ ನಾಯಿಡು

ಕೌನ್ಸಿಲು ಚುನಾವಣೆ

ತಾ. ೧೫ರಲ್ಲಿ ನಡೆದ ಕೌನ್ಸಿಲು ಚುನಾವಣೆಯಲ್ಲಿ ಉಡುಪಿಯ ಎಲ್ಲಾ ಪೋಲಿಂಗ್ ಸ್ಟೇಶನುಗಳಲ್ಲಿಯೂ ಶ್ರೀಯುತ ಡಿ ಧರ್ಮಸ್ಥಳ ಮಂಜಯ್ಯ ಹೆಗಡೆಯವರಿಗೆ ಪ್ರಬಲ ಬಹುಮತ ದೊರೆಯಿತೆನ್ನಬಹುದು, ಬೇರೆ ತಾಲೂಕುಗಳಲ್ಲಿಯೂ ಅವರಿಗೆ ಹೆಚ್ಚಿನ ವೋಟುಗಳು ಬಿದ್ದಿರುವವೆಂಬ ವಾರ್ತೆ ಬಂದಿದೆ

ಎಸೆಂಬ್ಲಿ ಕ್ರೈಸ್ತ ಸೀಟಿಗೆ ಚುನಾವಣೆ

ತಾ ೧೬ರಲ್ಲಿ ನಡೆದ ಎಸೆಂಬ್ಲಿ ಚುನಾವಣೆಯಲ್ಲಿ ಉಡುಪಿಯ ಹಲವು ಕಡೆಗಳಲ್ಲಿ ಕೋಂಗ್ರೆಸ್ ಉಮೇದ್ವಾರರಾದ ವಿ ಮಾರ್ಕಿಯವರಿಗೆ ಹೆಚ್ಚಿನ ಓಟುಗಳು ದೊರೆತಿರುವವು ಮಂಗಳೂರಿನಲ್ಲಿ ಪ್ರಬಲ ಬಹುಮತ ದೊರೆತಿರುವದೆಂದು ತಂತಿ ಬಂದಿದೆ ಬೇರೆ ಕಡೆಗಳಲ್ಲಿಯೂ ಪರಿಸ್ಥಿತಿಯು ಕೋಂಗ್ರೆಸ್ಸಿಗೆ ಅನುಕೂಲವಿತ್ತೆಂಬ ವಾರ್ತೆಯಿದೆ

THE BOMBAY LIFE ASSURANCE Co., LTD.

ESTD 1908

Church Gate Street, Fort - - BOMBAY

SPECIAL FEATURES.

1. Rebate on yearly payment of policies.
2. Rebate for larger assurances.
3. Accident Risk covered on small extra premiums
4. Attractive Bonuses

It pays you to represent this Company
Wanted Agents in unrepresented parts.

Apply to —

KOCHIKAR BROTHERS,

Madras Branch Secretaries.

BRANCHES AT:

P B 337 Mount Road, Madras	Visveswarapuram Circle Bangalore City	Soumyalayam Puthiyara, Calicut
Car Street, Mangalore	Udipi, S India	Charni Road, Bombay No 4

EVIDENCE OF SECURITY & STABILITY

FIGURES THAT SPEAK FOR THEMSELVES

TOTAL ASSETS **Rs. 80,66,600**

Summary of 1935 Accounts

Total Assets Over	Rs. 80,00,000
Life Funds Over	Rs 68,00,000
Premium Income Over	Rs 22,54,000
Interest Income	Rs 3,16,000
Claims Paid	Rs 5,75,000

Total Claims paid Over Rs. 38,50,000
Total Business in Force Over Rs 4 12,51,200

TOTAL BUSINESS IN FORCE **Rs. 4,42,51,200**

ಪ್ರಸಿದ್ಧ ಪತ್ರಿಕೆ

ಶ್ರೀಶಕೆ ೧೮೫೮ನೇ ಧಾತೃ ನಾಮ ಸಂ॥ರದ ಪುಷ್ಯ ಶು. ೧೪ ಸೋಮವಾರ ಶಿರ್ಶಿ ಶ್ರೀ ಮಾರೆಮ್ಮ ದೇವಸ್ಥಾನದ ಮೊಕ್ತೇಸರರ ಕಡೆಯಿಂದ ಪ್ರಕಟಪಡಿಸುವದೇನೆಂದರೆ—

ದೇಶಕಲ್ಯಾಣಾರ್ಥವಾಗಿಯೂ, ಸುಭಿಕ್ಷಾರ್ಥವಾಗಿಯೂ, ಶ್ರೀ ಮಾರೆಮ್ಮ ದೇವರ ಜಾತ್ರೆಯನ್ನು ಮಾಡುವುದಕ್ಕೆ ಶ್ರೀ ದೇವರ ಅಪ್ಪಣೆಯನ್ನು ಪಡಕೊಂಡು ಈ ಕಾರ್ಯವನ್ನು ಆರಂಭಿಸಿ ಇದೇ ಬರುವ ಫಾಲ್ಗುಣ ಬ ೩ ಮಂಗಳವಾರ (ತಾರೀಕು ೩೦-೩-೧೯೩೭)ರಾತ್ರೆ ೮ ಘಂಟೆ ಲಾಗ್ಯಾತು, ಪೂಜಾ ವಿನಿಯೋಗಗಳು ನಡೆದು ಬುಧವಾರ ಬೆಳಗ್ಗೆ ಶ್ರೀ ದೇವರ ರಥೋತ್ಸವನಾಗಿ ಅದೇ ದಿವಸ ಸಾಯಂಕಾಲ ೪ ಘಂಟೆಯಿಂದ ಬಲಿ ಕೆಲಸಗಳು ವಗೈರೆ ನಡದು ನಂತರ ಗುರುವಾರ ಬೆಳಗಿನ ೮ ಘಂಟೆಯಿಂದ ಫಾಲ್ಗುಣ ಬ. ೧೦ ಮಂಗಳವಾರ ರಾತ್ರೆ ೧೦ ಘಂಟೆಯ ವರೆಗೆ ಪ್ರತಿನಿತ್ಯದಲ್ಲಿಯೂ ಸದರಿ ಘಂಟೆಗೆ ಸರಿಯಾಗಿ ಭಕ್ತಜನರಿಂದ ಬಂದ ಕಾಯಿ ಹಣ್ಣು, ಬೇವಿನ ಉಡಿ, ತೊಲ ಭಾರ, ಕಾಣಿಕೆ ವಗೈರೆ ಹರಿಕೆಗಳನ್ನು ಒಪ್ಪಿಸುವರೆ ಸದರಿ ವೇಳೆಯನ್ನು ನಿಶ್ಚಯಿಸಿರುತ್ತೇವೆ.

ಪ್ರಯುಕ್ತ:—ಈ ಮಹೋತ್ಸವಕ್ಕೆ ಎಲ್ಲರೂ ದಯಮಾಡಿ ಬರಬೇಕೆಂತ ಅಪೇಕ್ಷಿಸುತ್ತೇವೆ..

ಈ ಶಿವ್ಯಾ ತಾರೀಕು ೩೦-೩-೧೯೩೭ನೇಗೆ ಆಗುವ ಶಿರ್ಶಿ, ಶ್ರೀಮಾರೆಮ್ಮ ದೇವರ ಜಾತ್ರೆ ಸಂಬಂಧ ಮಾರಿಬೈಲಿನಲ್ಲಿ ತಾರೀಕು ೨೫-೩-೧೯೩೭ನೇ ಗುರುವಾರ ಬೆಳಗಿನ ೮ ಘಂಟೆಯಿಂದ ಅಂಗಡಿಗಳ ಬಗ್ಗೆ ಜಾಗಗಳನ್ನು ಗುರ್ತುಮಾಡಿ ಕೊಡಲ್ಪಡುವವು. ಖಾಯಸವುಳ್ಳವರಿಗೆ ಸದರಿ ದಿವಸದಿಂದ ಮುಂದ ತಾರೀಕು ೨೯-೩-೧೯೩೭ನೇ ಸೋಮವಾರದ ವರೆಗೆ ಕೊಡಲ್ಪಡುವವು.

ತಮ್ಮ ವಿಧೇಯರಾದ

ಶೇಷಗಿರಿರಾವ ಕೇಶವೈನ,
ರಾಮಕೃಷ್ಣರಾವ ಥಾಕಪ್ಪನ
ಗಣೇಶರಾವ ನಾಡಿಗ

ದ. ಕ.ದಲ್ಲಿ ಚುನಾವಣೆಯ ಪ್ರಚಂಡಾಂದೋಲನ

ನೆಹರುಗಳ ಸಂದೇಶದ ಸತ್ಪರಿಣಾಮ!

ಮಂಗಳೂರಿನಲ್ಲಿ ಮೆರವಣಿಗೆಗಳ ನಿಷೇಧ!!!

ಸಾರ್ವಜನಿಕರೊಡನೆ ಕೋಂಗ್ರೆಸಿಗುಂಟಾಗಿರುವ ನಿಕಟ ಸಂಪರ್ಕಗಳು!!!

ಪಂಡಿತ ನೆಹರುಗಳು ದಕ್ಷಿಣ ಕನ್ನಡದ ಮೂರೂ ಡಿವಿಜನುಗಳ ಹಲವು ಊರುಗಳನ್ನು ಸಂದರ್ಶಿಸಿ ಕೋಂಗ್ರೆಸು ಸಂದೇಶವನ್ನು ಸಾರುತ್ತಾ ಹೋದ ಪರಿಣಾಮವಾಗಿ ಸಾರ್ವಜನಿಕರಲ್ಲಿ ಅತ್ಯುತ್ಸಾಹವುಂಟಾಗಿದೆ. ರಾಷ್ಟ್ರಪತಿಗಳು ಜಿಲ್ಲೆಯ ಎಲ್ಲಾ ಭಾಷಣಗಳಲ್ಲಿಯೂ ಕೋಂಗ್ರೆಸು ಮುಂಪಕ್ಕೆ ಮಾಡಲಿರುವ ಮಹತ್ಕಾರ್ಯಕ್ಕೆ ಜನರು ಅಣಿಯಾಗಬೇಕೆಂದೂ, ಚುನಾವಣೆಯು ಅಂತಹ ಒಂದು ಪ್ರಾಮುಖ್ಯ ಕೆಲಸವೆಂದೂ ಆವೇಶದಿಂದ ಸಾರಿ ಜನತೆಯಲ್ಲಿ ನವಚೇತನವನ್ನುಂಟುಮಾಡಿರುವರು. ಇದರ ಪರಿಣಾಮವಾಗಿ ಈ ತನಕ ತಟಸ್ಥರಾಗಿದ್ದ ಹಲವು ಪ್ರಮುಖರು ಈಗ ಕೋಂಗ್ರೆಸ್ಸನ್ನು ಸಮರ್ಥಿಸಲು ನಡು ಬಿಗಿದಿಳಿದಿರುವರು ಮಂಗಳೂರು, ಪುತ್ತೂರು, ಕಾರ್ಕಳ, ಉಡುಪಿ, ಕುಂದಾಪುರಗಳ ಸಹಸ್ರಾರು ಮಂದಿ ಈಗ ಚಟುವಟಿಕೆಯಿಂದ ಕೋಂಗ್ರೆಸು ಕೆಲಸವನ್ನು ಕೈಕೊಂಡಿದ್ದಾರೆ ಉಡುಪಿಯ ೪೩ ಜನ ಪುರಪ್ರಮುಖರು ಕೋಂಗ್ರೆಸ್ಸನ್ನು ಸಮರ್ಥಿಸುವ ವಿನಂತಿ ಪತ್ರವನ್ನು ಹೊರಡಿಸಿ ಮಹಾಜನರೆಲ್ಲಾ ಕೋಂಗ್ರೆಸ್ಸಿಗೆ ಬೆಂಬಲವೀಯಬೇಕೆಂದು ಕೇಳಿಕೊಂಡಿರುವರು. ಹಲವರು ಉತ್ಸಾಹದಿಂದ, ಅವಿಶ್ರಾಂತವಾಗಿ ದುಡಿಯುತ್ತಿರುವರು. ಉದ್ಯಾವರದಲ್ಲಿ ತಾ 11ರಲ್ಲಿ ಕ್ರಿಶ್ಚಿಯನ್ ಮತದಾರರು ಯಾರಿಗೆ ವೋಟ ನ್ನೀಯಬೇಕೆಂಬುದನ್ನು ನಿರ್ಧರಿಸುವರೆ ಸಭೆ ಸೇರಿದ್ದರು. ಇತ್ತಂಡದವರ ಪರವಾಗಿಯೂ ವಾದ ವಿವಾದಗಳು ನಡೆದು ಪ್ರಬಲ ಬಹುಮತದಿಂದ ಕೋಂಗ್ರೆಸ್ ಕಡೆಯ ಮಿ ವಾರ್ಕಿಯವರಿಗೇನೇ ಮತನೀಯಬೇಕೆಂಬ ನಿರ್ಧಾರವಾಗಿರುವದು. ತಾ. 15ರಲ್ಲಿ ನಡೆದ ಕೌನ್ಸಿಲು ಚುನಾವಣೆಯಲ್ಲಿ ಸ್ವತಂತ್ರವಾಗಿ ನಿಂತ ಇಬ್ಬರು ಉಮೇದ್ವಾರಿಗಳ ಪೈಕಿ ಶ್ರೀ, ಡಿ. ಮಂಜಯ್ಯ ಹೆಗ್ಡೆಯವರಿಗೇನೆ ಹೆಚ್ಚಿನ ವೋಟುಗಳು ದೊರೆತಿರಬೇಕೆಂದು ಊಹಿಸಲಾಗಿದೆ ತಾ. 16ರಲ್ಲಿ ಎಸೆಂಬ್ಲಿಯ ಕ್ರೈಸ್ತರ ಸ್ಥಾನದ ಚುನಾವಣೆಯು ನಡೆಯಿತು. ಮಿ ವಾರ್ಕಿಯವರ ಮತ್ತು ಮಿ ಶ್ರೇಷ್ಠರ ಪೈಕಿ ಜಿಲ್ಲೆಯಲ್ಲಿ ಮತದಾರರ ಒಲವು ಕೋಂಗ್ರೆಸ್ ಉಮೇದ್ವಾರಿಗಳಿಗೇನೆ ಹೆಚ್ಚಾಗಿ ಬಿದ್ದಂತೆ ಕಂಡುಬಂದಿದೆ ಕೋಂಗ್ರೆಸ್ ಸ್ವಯಂಸೇವಕರು ರಾಷ್ಟ್ರ ಧ್ವಜಧಾರಿಗಳಾಗಿ ಜಿಲ್ಲೆಯಲ್ಲೆಲ್ಲಾ ಜಯಘೋಷದೊಡನೆ ಸುತ್ತಾಡಿ ಕೋಂಗ್ರೆಸ್ ಉಮೇದ್ವಾರಿಗಳಿಗೇನೆ ಮತವೀಯುವಂತೆ ಹುರಿದುಂಬಿಸಿದರು

ಜನಮತವು ಕೋಂಗ್ರೆಸ್ ಉಮೇದ್ವಾರಿಗಳಿಗನುಕೂಲಿಸಿತ್ತೆಂಬುದರಲ್ಲಿ ಸಂದೇಹವಿಲ್ಲ ಕ್ರೈಸ್ತ ಬಾಂಧವರಲ್ಲೆಲ್ಲಾ ಅತ್ಯಪೂರ್ವ ಕೋಂಗ್ರೆಸ್ ಭಕ್ತಿಯು ಕಂಡು ಬರುತ್ತಿತ್ತು. ಈ ಸಲದ ಚುನಾವಣೆಯ ಪ್ರಾಮುಖ್ಯ ಸತ್ಪರಿಣಾಮವೆಂದರೆ ಜಿಲ್ಲೆಯ ಸಂದುಗೊಂದುಗಳ ಮತದಾರರಿಗೂ ಕೂಡಾ ಕೋಂಗ್ರೆಸಿನ ಧ್ಯೇಯವಾಪ್ರವೆಂಬುದರ ತಿಳುವಳಿಕೆಯುಂಟಾದುದು ಚುನಾವಣೆಯು ಎಲ್ಲಾ ವರಿಯಲ್ಲಿ ಉಂಟುಮಾಡಬಹುದಾದಷ್ಟು ಜನ ಸಂಬಂಧವನ್ನು ಕೆಲಸಗಾರರು ಕೋಂಗ್ರೆಸಿನೊಡನುಂಟು ಮಾಡಿರುವರು. ಮಂಗಳೂರಿನಲ್ಲಿ ಕೋಂಗ್ರೆಸು ಚುನಾವಣೆಯ ಕೆಲಸವು ಅತ್ಯಂತ ಜಯಶೀಲವಾಗಿ ನಡೆದುದರ ಪರಿಣಾಮವಾಗಿ ಪಟ್ಟಣದಲ್ಲಿ ತಾ. 14ರಿಂದ 21ರ ವರೆಗೆ ಮೆರವಣಿಗೆಗಳನ್ನು ಮಾಡಬಾರದೆಂದು 144ನೇ ಕಲಮಿನನ್ವಯ ಹುಕುಂ ಜಾರಿಯಾಗಿರುವುದು ಕೆಲವು ಮಹಿಳೆಯರು ಮೌನವಾಗಿ ಶಾಂತಪರ ಮೆರವಣಿಗೆ ಮಾಡಲನುಮತಿ ಕೊಡಬೇಕೆಂದು ಕೇಳಿಕೊಂಡರೆಂದೂ, ಅದು ನಿರಾಕರಿಸಲ್ಪಟ್ಟಿತೆಂದೂ ತಿಳಿದು ಬರುತ್ತದೆ. ಜಸ್ಟಿಸು ಪಾರ್ಟಿಯ ಒಣ್ಣವಾದ ಕಂಪು ಟೊಪ್ಪಿಯನ್ನು ಸುಟ್ಟು ಹಾಕಿದನೆಂಬ ಆರೋಪಣೆಯೊಳ ಒಬ್ಬ ಸ್ವಯಂಸೇವಕನ ವಸ್ತಗಿರಿಯಾಗಿರುವದು

ಆತಂಕನಿಗ್ರಹ ಮಾತ್ರೆಗಳು

ಯಾವ ಕಾರಣದಿಂದಾಗಲಿ ಉಂಟಾದ ಧಾತುನಷ್ಟ, ನರಗಳ ನಿಶ್ಶಕ್ತಿ ಇವುಗಳನ್ನು ಹೋಗಲಾಡಿಸಿ ಶಾಶ್ವತ ಗುಣ ಉಂಟಾಗುವಂತೆ ಮಾಡುತ್ತದೆ ಈ ಗುಳಿಗೆಗಳು ಆರೋಗ್ಯವಾದ ಹಸಿವನ್ನುಂಟುಮಾಡಿ ದೇಹಕ್ಕೂ ಮತ್ತು ಮನಸ್ಸಿಗೂ ಬಲಹೀನತ್ವವನ್ನು ಹೋಗಲಾಡಿಸಿ ದುಷ್ಟರಕ್ತವನ್ನು ಶುದ್ಧಿಮಾಡಿ ಜ್ಞಾಪಕಶಕ್ತಿಯನ್ನು ವೃದ್ಧಿಪಡಿಸುವುದು ಕ್ರಯ. ಡಬ್ಬಿ ೧ಕ್ಕೆ ೧-೦-೦

ವಾಜೀಕರಣ ತೈಲ:—(ಹೊರಗೆ ಹಚ್ಚಲು ಮಾತ್ರವೇ) ಬಾಲ್ಯದಲ್ಲಿ ಸ್ವತಃ ಅನೇಕ ವಿಧಗಳಲ್ಲಿ ಶರೀರವನ್ನು ಕೆಡಿಸಿಕೊಂಡು ಅದರಿಂದ ಉಂಟಾಗುವ ಅಶಕ್ತಿ, ನರಗಳ ದುರ್ಬಲ, ನಪುಂಸಕತ್ವ, ಮುಂತಾದ ವ್ಯಾಧಿಗಳನ್ನು ಪರಿಹರಿಸುವ ಸಂಜೀವನಿಯಾಗಿರುವದು ನರಗಳಿಗೆ ಬಲವನ್ನುಂಟುಮಾಡಿ, ಸಂಭೋಗಕ್ಕೆ ಉತ್ಸಾಹವನ್ನು ಕೊಡುವುದು ಒಂದು ಸಾರಿ ಔಷಧವನ್ನು ಹಚ್ಚುವುದರಿಂದ ಗುಣವು ಗೊತ್ತಾಗುತ್ತದೆ ಕ್ರಯ: ಸೀಸೆ ಒಂದಕ್ಕೆ ೫—೦—೦.

ಅಮೃತಾರ್ಣವ ಲೇಹ್ಯ:— ರಕ್ತವನ್ನು ಶುದ್ಧಿಮಾಡಿ, ನರಗಳನ್ನು ಬಲಪಡಿಸಿ, ಅತಿ ಉಷ್ಣ, ಕೈಕಾಲುಗಳ ಉರಿ, ಇನ್ನೂ ಮುಂತಾದ ಉಷ್ಣವ್ಯಾಧಿಗಳನ್ನು ಗುಣಪಡಿಸಿ, ಮೆದುಳನ್ನು ತಂಪುಮಾಡಿ, ದೇಹಬಲವನ್ನೂ, ತೇಜಸ್ಸನ್ನೂ ಹೆಚ್ಚಿಸುವುದಲ್ಲದೆ ದೀರ್ಘಕ್ಷಯ, ಎದೆನೋವು, ತಲೆನೋವು, ಮುಂತಾದ ವ್ಯಾಧಿಗಳಿಗೆ ಅಮೃತಪ್ರಾಯವಾದುದು ಕ್ರಯ: ಡಬ್ಬಿ ೧ಕ್ಕೆ ೨-೦-೦

'ಕಾಮಶಾಸ್ತ್ರ' ಧರ್ಮಾರ್ಥ ಪೋಸ್ಟೇಜು ಮಾಫಿಯಾಗಿ ಕಳುಹಿಸುವೆವು ಒಂದು ಕಾರ್ಡು ಸಾಕಿರಿ

ಆತಂಕ ನಿಗ್ರಹ ಫಾರ್ಮಸಿ, ೭೪, ಚಿಕ್ಕಪೇಟೆ ಚೌಕ, ಬೆಂಗಳೂರು ಸಿಟಿ

ಗೃಹಸ್ಥರೇ!

ಗೃಹಕೃತ್ಯೋಪಯೋಗದ ಎಲ್ಲಾ ವಿಧದ ತಾಮ್ರ ಹಿತ್ತಾಳೆ, ಜರ್ಮನ್ ಬೆಳ್ಳಿ, ಬೆಳ್ಳಿ ಸಾಮಾನುಗಳು ಎಲ್ಲಿ ಸಿಗುತ್ತವೆ ಬಲ್ಲಿರಾ?

ರಥಬೀದಿಯಲ್ಲಿ ಕಲ್ಮಂಜೆ ವ್ಯಾಸಾಚಾರ್ಯರ ಅಂಗಡಿಯಲ್ಲಿ ಮಾತ್ರವೇ.

ಸ್ವದೇಶಿ ಕೈಗಾರಿಕೆ! ಹದಿನೆಂಟು ವರ್ಷಗಳ ಅನುಭವ!

ಮನೆಯ ಉಪಯೋಗಕ್ಕೂ ಉಡುಗರೆ ಕೊಡಲಿಕ್ಕೂ ದಾನಮಾಡಲಿಕ್ಕೂ ಬೇಕಾದ ನಮೂನೆಯ ಸಾಮಾನುಗಳನ್ನು ಮನಮೆಚ್ಚುವ ಮಾದರಿಯಲ್ಲಿ ತಕ್ಕ ಕಾಲದಲ್ಲಿ ನಾಜೂಕಾಗಿ ತಯಾರುಮಾಡಿಸಿಯೂ ಕೊಡಲಾಗುವುದು

ಹೆಚ್ಚಿನ ವಿವರಗಳಿಗೆ ಸಚಿತ್ರ ಕೆಟಲಾಗಿಗೆ ಬರೆಯಿರಿ.

ಕಲ್ಮಂಜೆ ವ್ಯಾಸಾಚಾರ್ಯ,

ಪಾತ್ರೆ ವ್ಯಾಪಾರಿ, ರಥಬೀದಿ, ಉಡುಪಿ.



ಗೃಹಕೃತ್ಯಕ್ಕೆ ಬೇಕಾದ ವಿಧವಿಧ ತಾಮ್ರದ ಪಾತ್ರೆಗಳು

ಕುಂದಾಪುರ ಡಿವಿಜನಿನಲ್ಲಿ ಜಸ್ಟಿಸ್ ಪಾರ್ಟಿಯ ಶ್ರೀ. ಸಾಲಿನ್ಸರ ಪ್ರಚಾರ ಕಾರ್ಯವೂ ರಭಸದಿಂದ ನಡೆಯುತ್ತಿದೆ. ಕುಂದಾಪುರ ಕಾರ್ಕಳವೇ ಮೊದಲಾದ ಕಡೆಗಳ ಹರಿಜನರು ಕೊಂಗ್ರೆಸ್ ಉಮೇದ್ವಾರರನ್ನು ಸಮರ್ಥಿಸುವ ಆಶ್ವಾಸನೆಯಿತ್ತಿರುವರು. ಜಸ್ಟೀಸ್ ಪಾರ್ಟಿಯವರ ಕೆಂಪು ಪತಾಕೆ ಮತ್ತು ಟೋಪಿಗಳೂ ಅಲ್ಲಲ್ಲಿ ಗೋಚರಿಸುತ್ತಿವೆ. ಇದೇ ತಾ. 17ರಲ್ಲಿ ಉಡುಪಿಯಲ್ಲಿ ಪ್ರಚಂಡ ಮೆರವಣಿಗೆ ಮತ್ತು ರಥಬೀದಿಯಲ್ಲಿ ಸಾರ್ವಜನಿಕ ಸಭೆ ಸೇರುವ ಏರ್ಪಾಡಾಗಿರುವುದು ಹಲವು ಮಹನೀಯರು ಭಾಷಣಗಳನ್ನೀಯಲಿರುವರು. ಎಲ್ಲೆಲ್ಲಿಯೂ ಕಾರ್ಯೋತ್ಸಾಹವು ಕಂಡು ಬರುತ್ತದೆ. ಸ್ವಯಂಸೇವಕರೂ, ವಿದ್ಯಾರ್ಥಿಗಳೂ ಹಳದಿ ಟೊಪ್ಪಿಗಳನ್ನಿಟ್ಟು ಮೆರವಣಿಗೆಯೇ ಮೊದಲಾದ ಪ್ರದರ್ಶನಗಳನ್ನು ನಡೆಸುತ್ತಿರುವರು.

ಬ್ರಾಹ್ಮಣ ಬಾಂಧವರೇ,

ಮದ್ರಾಸು ನ್ಯಾಯವಿಧಾಯಕ ಸಭೆಗೆ ಮೆಂಬರರನ್ನು ಚುನಾಯಿಸುವುದಕ್ಕಾಗಿ ಇದೇ ತಿಂಗಳ ತಾ. 18ಕ್ಕೆ ಪ್ರತಿ ಒಬ್ಬರೂ ತಮ್ಮ ಮತ (Vote)ಗಳನ್ನು ಕೊಡಬೇಕೆಂಬುದು ತಿಳಿದಿರುವದಷ್ಟೆ? ಈ ಚುನಾವಣೆಗೆ ನಮ್ಮ ಕುಂದಾಪುರ ಡಿವಿಜನಿನ ಪರವಾಗಿ ಮುಖ್ಯಕೊಂಗ್ರೆಸು ಮತ್ತು ಜಸ್ಟಿಸ ಎಂಬ ಎರಡು ಪಕ್ಷಗಳಿಂದ ಇಬ್ಬರು ಉಮೆದ್ವಾರರಾಗಿ ನಿಂತಿರುವ ಸಂಗತಿ ಎಲ್ಲರಿಗೂ ತಿಳಿದಿರುವ ವಿಷಯವಾಗಿರುತ್ತದೆ. ಆದರೆ ಈ ಮತಪಕ್ಷವಾಗಿ ನಿಂತವ್ಯಕ್ತಿಗಳ ವಿಷಯ ನಾನು ಒಂದೂ ಹೇಳುವುದಿಲ್ಲ. ಅವರುದೊಡ್ಡ ಮಹನೀಯರು ಇರಬಹುದು. ಇಲ್ಲದೆಯೂ ಇರಬಹುದು. ಆದು ಆಧುನಿಕ ರಾಜ್ಯಕಾರ್ಯದಲ್ಲಿ ವ್ಯಕ್ತಿಗಳು (Individual)ಎಷ್ಟೇ ದೊಡ್ಡವರಾಗಿದ್ದರೂ ಒಂದೂಕಾರ್ಯವನ್ನೂ ಸಾಧಿಸುವುದಕ್ಕೆ ಅಸ್ಪದವಿಲ್ಲ. ಏನಾದರೂ ಮಹತ್ವದ ಕೆಲಸಗಳನ್ನು ಸಾಧಿಸಬೇಕಾಗಿದ್ದರೆ ಒಂದು ವ್ಯವಸ್ಥಿತ ಪಕ್ಷವೇ ಬೇಕು. ಆದುದರಿಂದ ಉಮೇದ್ವಾರವ್ಯಕ್ತಿಯು ಎಷ್ಟೇ ದೊಡ್ಡವನಾಗಿದ್ದರೂ ಇಂತಹ ಸಭೆಗಳಲ್ಲಿ ಬಹುಮತಗಳಿಲ್ಲದೆ ಒಂದೂ ಕಾರ್ಯವನ್ನು ನಿರ್ವಹಿಸಲಾರು. ಆದುದರಿಂದ ಈ ಚುನಾವಣೆಗೆ ಉಮೇದ್ವಾರರನ್ನಾಗಿ ನಿಲ್ಲಿಸಿದ ಪಕ್ಷವು ಎಷ್ಟು ಯೋಗ್ಯತೆಯುಳ್ಳದ್ದು, ಏನು ರಾಜ್ಯ ಕಾರ್ಯವನ್ನು ಸಾಧಿಸಬಲ್ಲುದು ಮತ್ತು ದರಿದ್ರಜನಗಳಿಗೆ, ಬಡರೈತರಿಗೆ ಏನು ರಾಜಕೀಯ ಸಹಾಯವನ್ನು ಮಾಡಬಲ್ಲುದು ಎಂಬವನ್ನು ಸ್ವಲ್ಪವಿಚಾರ ಮಾಡಿ ನೋಡುವುದು ಸುಜ್ಞಾನಿಗಳಾದ ತಮಗೆಲ್ಲರಿಗೆ ಅವಶ್ಯವಿದೆ.

ಮೇಲೆ ಹೇಳಿದ ಜಸ್ಟಿಸ್ ಪಕ್ಷದವರು ಸುಮಾರು ೧೭ ವರ್ಷಗಳಿಂದ ಮದರಾಸು ಪ್ರಭುತ್ವದ ಮಂತ್ರಿತ್ವಗಳನ್ನು ವಹಿಸಿಕೊಂಡು ಯಾವರೈತರಿಗಾಗಲೀ, ಬೇರೆ ಜನಾಂಗಗಳಿಗಾಗಲೀ ರಾಜ್ಯದ ವ್ಯವಸಾಯ ವ್ಯಾಪಾರದ ವಿಷಯದಲ್ಲೇ ಆಗಲಿ ಬಡವರ ದಾರಿದ್ರ್ಯಗಳನ್ನು ಹೋಗಲಾಡಿಸುವುದಕ್ಕಾಗಲಿ ಏನು ಕಾರ್ಯ ನೆರವೇರಿಸಿರುವರು? ಎಂಬ ವಿಷಯ ಅವರೇ ಎದೆ ಮೇಲೆ ಕೈಯಿಟ್ಟು ಹೇಳಲಿ. ಇದು ಸರ್ವ ಜನಾಂಗಗಳ ವಿಷಯಕ್ಕಾಯಿತು. ಆದರೆ ನಮ್ಮ ಬ್ರಾಹ್ಮಣ ಸಮಾಜದ ವಿಷಯದಲ್ಲಿ ಇವರು ನಡೆಸಿದ ಕಾರ್ಯಕ್ರಮದಲ್ಲಿ ಬ್ರಾಹ್ಮಣ ಜನಾಂಗದವರು ಸ್ವಲ್ಪ ವಿಚಾರ ಮಾಡತಕ್ಕದ್ದು ಅವಶ್ಯವಿದೆ.

ಬ್ರಾಹ್ಮಣರು ಸಾಧಾರಣವಾಗಿ ವಿದ್ಯಾವಂತರಾಗಿದ್ದು ಸರ್ಕಾರದ ಉದ್ಯೋಗಗಳನ್ನು ಹೆಚ್ಚಾಗಿ ಪಡಕೊಂಡಿದ್ದರು. ಇದನ್ನು ಸಹಿಸಲಾರದ ಕೆಲವು ಬ್ರಾಹ್ಮಣೇತರ ಮುಖಂಡರು ಕೂಡಿ ಒಂದು ಅಬ್ರಾಹ್ಮಣರ ಸಂಘವನ್ನು ಜಸ್ಟಿಸ್ ಪಾರ್ಟಿ ಎಂಬ ನಾಮಧೇಯದಿಂದ ಸುಮಾರು ೨೫ ವರ್ಷಗಳ ಹಿಂದೆ ಪ್ರಾರಂಭಿಸಿದರು.

ಇವರು ಇಷ್ಟು ವರ್ಷಗಳಿಂದಲೂ ಕೈಕೊಂಡ ಕಾರ್ಯಗಳನ್ನು ಅವಲೋಕಿಸಿದಲ್ಲಿ ತಿಳಿದು ಬರುವದೇನೆಂದರೆ, ಬ್ರಾಹ್ಮಣರಲ್ಲಿ ದ್ವೇಷ ಬ್ರಾಹ್ಮಣೇತರರಿಗೆ ಸರಕಾರದಲ್ಲ ಹುದ್ದೆಗಳನ್ನು ಹೆಚ್ಚಾಗಿ ಸಿಗುವಂತೆ ಮಾಡುವದು. ಬ್ರಾಹ್ಮಣರಿಗೆ ಇಂತಹ ಉದ್ಯೋಗಗಳು ದೊರಕದಂತೆ ಮಾಡುವುದು ಆಗಿರುತ್ತದೆ. ಬ್ರಾಹ್ಮಣ ವಿದ್ಯಾರ್ಥಿಗಳಿಗೆ ಮೆಡಿಕಲ್ ಕಾಲೇಜುಗಳಲ್ಲಿಯೂ ಇಂಜನಿಯರಿಂಗ್ ಕಾಲೇಜುಗಳಲ್ಲಿಯೂ ಮುಂತಾದ ವಿಶ್ವವಿದ್ಯಾಲಯಗಳಲ್ಲಿ ಪ್ರವೇಶವು ಕೂಡಾ ದೊರಕದಂತೆ ಮಾಡಿದವರು ಇದೇ ಜಸ್ಟೀಸ್ ಪಾರ್ಟಿಯವರಲ್ಲವೊ ಅಲ್ಲದೆ ಈ ಪಕ್ಷದವರು ಸರ್ವಜನಾಂಗದ ಹಿತಕ್ಕಾಗಿ ಹೋರಾಡುವ ಅಖಿಲಭಾರತೀಯ ಕೊಂಗ್ರೆಸ್ಸು ಪಕ್ಷಕ್ಕೆ ವಿರುದ್ಧವಾಗಿ ನಿಂತು ಸರ್ಕಾರದವರ ಕೂಡೆ ಸಹಕರಿಸಿ ತನಗೆ ಬೇಕಾದವರಿಗೆ ಸರಕಾರ ಉದ್ಯೋಗಗಳನ್ನು ಸಿಗುವಂತೆ ಮಾಡುವುದೇ ಇವರ ಧ್ಯೇಯವಾಗಿರುವಂತೆ ತಿಳಿದು ಬರುತ್ತದೆ. ಇತ್ತಲಾಗಿ ಐದಾರು ವರ್ಷಗಳ ಹಿಂದೆ ಮಹಾತ್ಮಾಗಾಂಧಿಯವರು ಕೊಂಗ್ರೆಸ್ಸು ಕಡೆಯಿಂದ ಹೂಡಿದ ಅಮೋಘವಾದ ಸತ್ಯಾಗ್ರಹದ ಚಳವಳದಲ್ಲಿ ಸರ್ಕಾರದವರು ಕೈಕೊಂಡಘೋರಣೆಯಲ್ಲಿ ಇದೇ ಜಸ್ಟಿಸ್‌ಪಕ್ಷದವರೇ ಮಂತ್ರಿತ್ವವನ್ನು ನಡೆಸಿಕೊಂಡಿದ್ದರು. ಆ ಸಮಯ ಮದ್ರಾಸು ಪಟ್ಟಣದಲ್ಲಿ ಸ್ವಯಂ ಸೇವಕರಾದ ಪುರುಷರ ಮೇಲೂ ಸ್ತ್ರೀಯರ ಮೇಲೂ ನಡೆಸಿದ ಅತ್ಯಾಚಾರವನ್ನು ನೆನಸಿದರೆ ಎಳ್ಳಷ್ಟಾದರೂ ದೇಶದ ಮೇಲೆ ಮಮತೆಯುಳ್ಳ ವ್ಯಕ್ತಿಗೆ ರೋಮಾಂಚವಾಗದೆ ಇರಲಾರದು.

ಇಂತಹ ಜಸ್ಟಿಸ್ ಪಕ್ಷದವರು ಇಷ್ಟು ಕಾಲದವರೆಗೆ ಪ್ರಭುತ್ವವನ್ನು ನಡೆಸಿದ್ದು ಸಾಲದೆ ಈಗಲೂ ದೇಶಹಿತಕ್ಕಾಗಿ ಕೆಲಸ ಮಾಡುವ ಕೊಂಗ್ರೆಸ್ಸು ವಿರುದ್ಧವಾಗಿ ತಮಗೆ ಪ್ರಭುತ್ವಸಿಕ್ಕಬೇಕೆಂದೂ ತಮ್ಮ ಪಕ್ಷದವರಿಗೆ ಮತಗಳು ಚುನಾವಣೆಗಳಲ್ಲಿ ಕೊಡಬೇಕೆಂದೂ ಅದರಲ್ಲೂ ಬ್ರಾಹ್ಮಣ ಈ ಪಕ್ಷದವರಿಗೆ ಮತಕೊಡಬೇಕೆಂದೂ ಕೊಂಗ್ರೆಸಿನವರು ಚುನಾವಣೆಯಾಗಿ ಬಂದರೆ ಕ್ಷೇತ್ರ, ದೇವಾಲಯ ಮುಂತಾದ ಪವಿತ್ರ ಸ್ಥಳಗಳಲ್ಲ ಹರಿಜನರು ಮುಂತಾದ ಅಸ್ಪೃಶ್ಯರಿಗೆ ಪ್ರವೇಶಕೊಟ್ಟು ಧರ್ಮಕ್ಕೆ ಹಾನಿತರುವರೆಂದೂ ಸಾರುತ್ತಿರುವರು. ಆದರೆ ಯಾವ ಪಕ್ಷದವರ ಮತವು ಮತ್ತು ಧ್ಯೇಯವು ಏನು ಆಗಿದೆ ಎಂಬುದನ್ನು ವಿಚಾರಮಾಡಿ ನೋಡಿದರೆ ಯಾವ ಬ್ರಾಹ್ಮಣನೂ ಇವರ ಉಪದೇಶಕ್ಕೆಮೋಸಹೋಗಲಾರನು ಇವರಮತ ಬ್ರಾಹ್ಮಣೇತರ ಮತ ಬ್ರಾಹ್ಮಣರಲ್ಲಿ ದ್ವೇಷ ಅಬ್ರಾಹ್ಮಣರೆಂದರೆ ಬ್ರಾಹ್ಮಣರಲ್ಲದ ಎಲ್ಲಾ ಹಿಂದುಗಳು ಅಸ್ಪೃಶ್ಯರೂ ಆಗಿರುತ್ತಾರೆ.

ಜಸ್ಟಿಸ್ ಪಾರ್ಟಿಯು ಕಾನೂನುಗಳ ಪ್ರಕಾರ ಯಾವನೇ ಬ್ರಾಹ್ಮಣನು ಇವರ ಮೆಂಬರನಾಗಿರಲಾರನು ಪರಕೀಯ ಧರ್ಮಸ್ಥರು. ಮುಸಲ್ಮಾನರೇ ಆಗಲಿ ಕ್ರೈಸ್ತರೇ ಆಗಲಿ, ಬೇರೆ ಜನಾಂಗದವರೇ ಆಗಲಿ ಮೆಂಬರರು ಆಗ ಬಹುದು ಆದರೆ ಬ್ರಾಹ್ಮಣರು ಮಾತ್ರಕೂಡದು. ಇವರ ಇದೊಂದೇ ಕಾನೂನು (By lowo) ವಿಮರ್ಶಿಸಿ ನೋಡಿದ್ದಲ್ಲಿ ಎಷ್ಟರ ಮಟ್ಟಿಗೆ ಬ್ರಾಹ್ಮಣರ ಮೇಲೆ ಇವರ ಅಂತಃಕರಣವಿದೆ ಎಂದು ಅಲ್ಪವಾದರೂ ಆಲೋಚನೆಯುಳ್ಳ ಮತ್ತು ಸಮಾಜದ ಮೇಲೆ ಪ್ರೀತಿಯುಳ್ಳ ಬ್ರಾಹ್ಮಣನು ತಿಳಿಯಬಹುದು.

ಎಸ್. ಕೆ. ಧಾರವಾಡಕಾರ್. [ಸಹಿಸ]

ನೋಟೀಸು

ದಿ ಪಾಂಗಾಳ ನಾಯಕ್ ಬೇಂಕ್, ಲಿಮಿಟೆಡ್, ಉಡುಪಿ

ಈ ಕೆಳಗೆ ಹೆಸರು ಕಾಣಿಸಿದವರು ಈ ಬೇಂಕಿನಿಂದ ಚಿನ್ನಾಭರಣಗಳ ಅಡವಿನ ಮೇಲೆ ಪಡದ ಸಾಲಗಳ ಅಸಲು ಮತ್ತು ಅವುಗಳ ಮೇಲಣ ಬಡ್ಡಿ ಹಣ ಬೇಂಕಿಗೆ ವ್ಯಾದೆಗೆ ವಸೂಲು ಬಾರದೆ ಇದ್ದ ಕಾರಣ ಅವರಿಗೆ ಕಳುಹಿಸಿದ ಟಪ್ಪಾಲು ನೋಟೀಸುಗಳು "ಸದರಿಯವರು ಮೃತಪಟ್ಟಿರುತ್ತಾರೆ" ಎಂಬ ಸಬಬಿನಿಂದ ಹಿಂತಿರುಗಿ ಬಂದಿರುವದರಿಂದಲೂ ಸದರಿ ಮೃತರ ವಾರಿಸುದಾರರು ಹಕ್ಕು ಸ್ಥಾಪಿಸಿ ಕೋರ್ಟಿನಿಂದ ಸಕ್ ಸಶ್ಯನ್ ಸರ್ಟಿಫಿಕೇಟು ಪಡದು ಸದರಿ ಸಾಲಗಳ ಅಸಲು ಹಣ ವ ಈ ವರೇಗಿನ ಬಡ್ಡಿ ಬೇಂಕಿಗೆ ಸಲಾಯಿಸಿ ನಗಗಳನ್ನು ಈ ವರೇಗೂ ಬಿಡಿಸಿಕೊಂಡು ಹೋಗದೆ ಇರುವುದರಿಂದಲೂ ಈ ಮೂಲಕ ಪ್ರಕಟಿಸೋಣಾಗುವುದೇನೆಂದರೆ, ಸದರಿ ಸಾಲಗಳ ಬಾಬ್ತು ಬಹಾ ಸಮಸ್ತ ಅಸ್ಲು ಬಡ್ಡಿ ಐವೇಜುಗಳನ್ನು ನೋಟೀಸುಗಳ ಖರ್ಚು ಸಹಿತ ತಾರೀಕು 6—3—1937ನೇ ಶನಿವಾರ ಅಪರಾಹ್ನ ಘಂಟೆ 1ರ ಒಳಗೆ ಬೇಂಕಿಗೆ ಜಾಡಾ ವಸೂಲು ಬಾರದೆ ಇದ್ದರೆ ಸದರಿ ಸಾಲಗಳ ಭದ್ರತೆ ಬಗ್ಗೆ ಸದರಿಯವರು ಬೇಂಕಿನಲ್ಲಿ ಒತ್ತೆಯಿಟ್ಟ ನಗಗಳನ್ನು ತಾರೀಕು 8–3–37ನೇ ಸೋಮವಾರ ಮಧ್ಯಾಹ್ನ 12 ಘಂಟೆಗೆ ಬೇಂಕಿನ ಆಫೀಸಿನಲ್ಲಿ ಬಹಿರಂಗವಾದ ಏಲಂ ಮೂಲಕ ಮಾರಾಟ ಮಾಡಲಿರುವರು. ಏಲಂ ಅದೇ ದಿವಸ ಪೂರ್ಣವಾಗದೆ ಇದ್ದರೆ ನಂತರದ ದಿವಸಗಳಲ್ಲಿ ಮುಂದುವರಿಸಲಾದೀತು.

ಸಾಲಗಳ ನಂಬ್ರ 736/35, 608/35, 739/35, ಮತ್ತು 773/35, ಶಿರ್ವಾ ಕೋಡು ಶಿದ್ದಯ್ಯ ಹೆಗ್ಡೆ, ಚಂದಯ್ಯ ಹೆಗ್ಡೆರ ಅಳಿಯ, ಶಿರ್ವ ಪೋಸ್ಟು, ಸಾಲಗಳ ಅಸಲು ಬಾಕಿ ರೂ. 125/- ರೂ. 360/- ರೂ. 50/- ಮತ್ತು ರೂ. 175/- ಬಡ್ಡಿ ಬಾಕಿ ಆದ ತಾರೀಕು 4—5—1936 ತಾರೀಕು 23—5—1936 ತಾರೀಕು 28—6—1936 ಮತ್ತು 28—5—1936.

ಬೇಂಕಿನ ಆಫೀಸು, ಉಡುಪಿ
ತಾ. 15—2—1937

(Sd.) **P. Lakshman Nayak,**
ಸೆಕ್ರೆಟರಿ.

ಮಕರ ಸಂಕ್ರಮಣದ ವಿಶೇಷ ಒಗಟಿನ ಉತ್ತರ.

X	ಸ	ಹ	ಗ	ಮ	ನ	X
ನ	X	ಯ	ಯಾ	ತಿ	X	ಭ
ಪ	ರ	X	X	X	ಮಾ	ಯಾ
ಯು	X	X	X	X	ಪ	ನ
ಗ	X	ಭ	ವ	ನ	X	ಕ
X	ಲ	ಲಾ	ಟ	ಲಿ	ಪಿ	X

ಬಿಚ್ಚುಗರ ಹೆಸರು.

1 ಪಾವಂಜೆ ಸರಸ್ವತಿಬಾಯಿ, ಉಡುಪಿ.
2 ಎಮ್. ರಾಮದಾಸ ಪಡಿಯಾರ, ಮಾಬುಕಳ.
3 ಕೆ. ಎಮ್. ಸುವರ್ಣ, ಬೊಂಬಾಯಿ.
4 ಅಣ್ಣಪ್ಪ ಪಿ. ಭಟ್ಕಳಕಾರ್, ಭಟ್ಕಳ,
5 ಪಿ. ಆರ್. ಚಂದ್ರ, ಪುತ್ತೂರು.
6 ಕೆ. ಶ್ರೀಧರ ಶಾಸ್ತ್ರಿ, ಪಣಿಯೂರು.
7 ಲಕ್ಷ್ಮೀನಾರಾಯಣ ಭಟ್, ಬೈಲಹೊಂಗಲ.
8 ಎಮ್. ಎಸ್. ತೀನಪ್ಪಗೌಡ, ಕೊಲ್ಲಮೊಗರು.

ಮೇಲಿನವರೊಳಗೆ ಸೋಡ್ತಿ ಹಾಕಲಾಗಿ ಪ್ರಥಮ ಬಹುಮಾನವು ನಂಬ್ರ 6ನೇಯವರಿಗೂ ದ್ವಿತೀಯ ಬಹುಮಾನವು ನಂಬ್ರ 8ನೇಯವರಿಗೂ ದೊರಕಿರುತ್ತದೆ.

ಮೆ. ನವಯುಗ.

ಕಸ್ತೂರಿ ಮಿಶ್ರಣ ದಶಮೂಲವೆಂಬ

ಸೂತಿಕಾ ರಸಾಯನ

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

I. **ಶೋಧನ ಗುಣ:**—ಶೋಧನದಿಂದ ಪ್ರಸವಾನಂತರ ಗರ್ಭಕೋಶದ ಸರ್ವತರದ ನಂಜನ್ನು ಹೊರಗೆ ಹಾಕಿ ಪ್ರಸೂತವಾದ ಗರ್ಭಕೋಶವನ್ನು ಮೂರು ದಿವಸಗಳೊಳಗೆ ಸಂಕುಚಿತವಾಗಿ ಮಾಡುವದು.

II. **ರಸಾಯನ ಗುಣ:**—ರಸಾಯನದಿಂದ ಸೂತಿಕಾ ಸ್ತ್ರೀಯು ಗರ್ಭದ ಬೆಳವಣಿಗೆ ಬಗ್ಗೆಯೂ, ಪ್ರಸವವೇದನಾ ಬಗ್ಗೆಯೂ ತಾನು ಕಳಕೊಂಡ ಮೂಲ ಶಕ್ತಿಯನ್ನು ಇಮ್ಮಡಿಯಾಗಿ ತಿರುಗಿ ಹೊಂದುವಳು.

III. **ಸುಖಸೇವನ:**—ಸುಖಸೇವನದಿಂದ ಮಧುರ ಮನೋಹರವಾದ ಈ ರಸಾಯನವು ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾದುವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವಾನಂತರದ ತೀಕ್ಷ್ಣವೇದನೆಯನ್ನು ಶೀಘ್ರದಿಂದ ನಿಲ್ಲಿಸುವದು.

ಒಬ್ಬಳು ಬಾಣಂತಿಗೆ ಎರಡು ಬಾಟ್ಲಿ ಬೇಕಾಗುವುದು. ಕ್ರಯ ಬಾಟ್ಲಿ 1ಕ್ಕೆ ರೂ. 2-0-0.

ಎಮ್. ವಿ. ಶಾಸ್ತ್ರಿ, ಆಯುರ್ವೇದ ಭೂಷಣ
ಮಂಗಳೂರು, ದ. ಕ.

ಕ್ರೌನ್ ರಬ್ಬರ್ ಸ್ಟಾಂಪ್ ಕಂಪೆನಿ

ಸ್ಥಾಪನೆ: 1926

18 ಬಲ್ಮಠ ರಸ್ತೆ, ಮಂಗಳೂರು.

ಯಾವತ್ತೂ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಅಗತ್ಯವಿರುವ ಎಲ್ಲಾ ತರದ ರಬ್ಬರ್ ಮೊಹರುಗಳೂ ಸೈನ್ ಬೋರ್ಡು, ಪೇದೆಗಳ ಬೇಜು, ಮೊನೊಗ್ರಾಮ್ ಸೀಲು, ಇತ್ಯಾದಿಗಳನ್ನು ಪ್ರತಿಯೊಬ್ಬರ ಅಭಿರುಚಿಗೊಪ್ಪುವಂತೆ ಸುಲಭ ದರಗಳಲ್ಲಿ ಮಾಡಿಕೊಡೋಣಾಗುವುದು.

ಹೆಬ್ಬೆಟ್ಟು ಒತ್ತುವ ಸೆಟ್ಟುಗಳು ಕೂಡಾ ಸಿಗುವವು.

ಮಿಕ್ಕ ವಿಚಾರಗಳನ್ನು ನಮ್ಮ ಆಫೀಸಿಗೆ ಸ್ವತಹ ಬಂದು ಯಾ ಪತ್ರ ಮುಖೇನ ತಿಳಕೊಳ್ಳಬಹುದು.

ಮಂಗಳೂರಲ್ಲಿ ರೈಲು ಬಂಡಿಗಳ ಸಮಯ

ಗಾಡಿಗಳು	ಹೊರಡುವ ಘಂಟೆ.	ತಲಪುವ ಘಂಟೆ.
ಮಿಕ್ಸೆಡ್	ಬೆಳಗ್ಗೆ 5-55	ರಾತ್ರಿ 8-55
ಕಾಂಜಂಗಾಂಡ್ ಪ್ಯಾಸಂಜರ್	ಬೆಳಗ್ಗೆ 8-26	ಮಧ್ಯಾಹ್ನ 1-20
ಮೈಲ್	ಬೆಳಗ್ಗೆ 9-50	ಸಂಜೆ 4-20
ಫಾಸ್ಟ್ ಪೆಸೆಂಜರ್	ಮಧ್ಯಾಹ್ನ 12-45	ಮಧ್ಯಾಹ್ನ 2-40
ಕಾಸರಗೋಡ್ ಪ್ಯಾಸೆಂಜರ್	ಮಧ್ಯಾಹ್ನ 3-20	ಸಂಜೆ 6-15
ಶಟಲ್	ಸಂಜೆ 5-26	ಬೆಳಗ್ಗೆ 9-20

ಜನರಲ್ ಎಶ್ಯೂರೆನ್ಸ್ ಸೊಸೈಟಿ ಲಿಮಿಟೆಡ್.

[ಸ್ಥಾಪನೆ: **1907**]

ಅತ್ಯಧಿಕ ಬೋನಸು!

ಮರಣಾಂತ್ಯ ಪೊಲಿಸಿಗಳಮೇಲೆ ಸೇಕಡಾ 25,
ಎಂಡೊಮೆಂಟ್ ಪೊಲಿಸಿಗಳಮೇಲೆ ಸೇಕಡಾ 20,

ಬಲವಂತ ಪೊಲಿಸಿಗಳು ರೂ. **3 ಕೋಟಿ** ಮಿಕ್ಕಿವೆ.

ಮೂಲಧನವು ರೂ. **75** ಲಕ್ಷ ಮೀರಿದೆ.

ಬಡವರಿಗೂ ಧನಿಕರಿಗೂ ಹಿತಕಾರಿಯಾದ ಎಶ್ಯೂರೆನ್ಸ್ ಯೋಜನೆಗಳು.

ಅತೀ ಲಾಭದಾಯಕವಾದ ಉದಾರ ಏಜೆನ್ಸಿ ಶರ್ತಗಳು.

ವಿಶೇಷ ಮಾಹಿತಿಗಳಿಗಾಗಿ ಈ ಕೆಳಗಣ ವಿಳಾಸಗಳಿಗೆ ಬರಕೊಳ್ಳಿರಿ—

ಪಿ. ಡಿ. ಭಾರ್ಗವ, ಎಫ್. ಎಸ್. ಎಸ್. (ಲಂಡನ್)
ಜನರಲ್ ಮೆನೇಜರ್, ಅಜ್ಮೀರ್.

ಅಥವಾ

ಮೆನೇಜರ್, 278, ಲಿಂಗ ಚೆಟ್ಟಿ ಸ್ಟ್ರೀಟ್, ಮದ್ರಾಸ್.
ಸುಪರಿಂಟೆಂಡೆಂಟ್, ಬಳ್ಳಾರಿ. ಆರ್ಗನೈಸರ್, ವೆಲ್ಲೂರು.
ಚೀಫ್ ಏಜೆಂಟ್ಸ್, ಮಧುರೆ, ತ್ರಿಚಿನಾಪಳ್ಳಿ.

ಸ್ಟೀಮರು ಸಮಯ

	ತಲಪುವುದು	ಹೊರಡುವುದು
ಮಂಗಳೂರು	ಗುರುವಾರ ಬೆಳಗ್ಗೆ ಗಂಟೆ 9	ಶನಿವಾರ ಬೆಳಗ್ಗೆ ಗಂಟೆ
	ಸೋಮವಾರ ಬೆಳಗ್ಗೆ ಗಂಟೆ 6	ಮಂಗಳವಾರ ಬೆಳಗ್ಗೆ ಗಂಟೆ
ಮಲ್ಪೆ	ಗುರುವಾರ ಬೆಳಗ್ಗೆ ಗಂಟೆ 3	ಶನಿವಾರ ಮಧ್ಯಾಹ್ನ 2-30
	ಆದಿತ್ಯವಾರ ಸಂಜೆ ಗಂಟೆ 6	ಮಂಗಳವಾರ ಮಧ್ಯಾಹ್ನ 2-3 0
ಕುಂದಾಪುರ		ಶನಿವಾರ ಸಂಜೆ ಗಂಟೆ 3
		ಮಂಗಳವಾರ ಮಧ್ಯಾಹ್ನ 3

ನಮ್ಮ ಉನ್ನತಿಗಾಗಿ ನಾವೇನು ಮಾಡಬೇಕು? ಇತ್ಯಾದಿ ಸಮಸ್ಯೆಗಳಿಗೆ ಸದುತ್ತರವನ್ನು ಕೊಡುವ ಪತ್ರಿಕೆ ಎಂದರೆ

ಸದ್ಧರ್ಮ ಪ್ರಚಾರಕ

ವಾ. ಚ. **1—4—0.**

ಸಂಪಾದಕರು:-

ಬಿ. ಲಕ್ಷ್ಮಣದೇವ ವಿದ್ಯಾರ್ಥಿ.

ಉತ್ಕೃಷ್ಟ ಕಥೆ, ಕವನಗಳಿಂದೊಡಗೂಡಿ, ಪ್ರತಿಮಾಸದ 16ನೇ ತಾರೀಕಿಗೆ ತಪ್ಪದೆ ಹೊರಡುವುದು.

ಸದ್ಧರ್ಮ ಪ್ರಚಾರಕ, ಕಾರ್ಯಾಲಯ,
ಅಳಕೆ ರಸ್ತೆ, ಮಂಗಳೂರು.

ಪ್ರವಾಸಿ.

ಅತ್ಯುತ್ತಮವಾದ ಸಚಿತ್ರ ಕನ್ನಡ. ಮಾಸಪತ್ರಿಕೆ.

ಬೋಧಪ್ರದವಾದ ಲೇಖನಗಳು-ಮಹಾಪುರುಷರ ಜೀವನ ಚರಿತ್ರೆಗಳು ಉತ್ತಮ ಕಥೆಗಳು-ಆರ್ಥಿಕ ರಾಜಕೀಯ ವಿಚಾರಗಳು. ವೈಜ್ಞಾನಿಕ ವಿಷಯಗಳು-ಪದಬಂಧಗಳ ಸಮಸ್ಯೆಗಳು-ಗ್ರಂಥ ವಿಮರ್ಶೆ ಇವುಗಳನ್ನೊಳಗೊಂಡ ಹೊಸ ರೀತಿಯ ಮಾಸಪತ್ರಿಕೆ. ಕೈಗೆಲಸವೆಂಬ ನೂತನ ವಿಭಾಗವಿರುವ ಪತ್ರಿಕೆಯು ಇದೊಂದೇ

ವಾರ್ಷಿಕ ಚಂದಾ ರೂ 3—8—0.

ಪ್ರವಾಸಿ ಕಾರ್ಯಾಲಯ
ಕಾಸರಗೋಡು, ದಕ್ಷಿಣಕನ್ನಡ.

THE

Vijaya Bank, Ltd.

Head Office: MANGALORE. Branch Office: Court Road, UDIPI.

ದಿ ವಿಜಯ ಬೇಂಕ್ ಲಿಮಿಟೆಡ್,

ಹೆಡ್ ಆಫೀಸು: ಮಂಗಳೂರು. ಶಾಖೆ: ಕೋರ್ಟ್ ರಸ್ತೆ, ಉಡ್ಪಿ

ಚಾಲ್ತಿ ಠೇವಣಾತಿಗಳು ಸಾ. ಶೆ. 2. ಸೇವಿಂಗ್ಸು ಬ್ಯಾಂಕ್ ಠೇವಣಾತಿಗಳುಸಾ. ಶೆ. 3½

ಕಾಯಂ ಠೇವಣಾತಿಗಳು 3 ತಿಂಗಳ ಬಾಬ್ತು ಸಾ. ಶೆ. 3½

6 ಮತ್ತು 9 ತಿಂಗಳ ಬಾಬ್ತು ಸಾ ಶೆ. 4. 1ವರ್ಷದ ಬಾಬ್ತು ಸಾ. ಶೆ. 5.

2 ವರ್ಷದ ಮೇಲಿನವುಗಳ ಬಾಬ್ತು ಸಾ. ಶೆ. 5½ ದರದ ಬಡ್ಡಿಯಲ್ಲಿ ಅಂಗೀಕರಿಸಲ್ಪಡುವುವು.

ಬ್ಯಾಂಕಿಗೆ ಸಂಬಂಧಪಟ್ಟ ಎಲ್ಲಾ ತರದ ವ್ಯವಹಾರಗಳು ನಡೆಸಲ್ಪಡುತ್ತವೆ—

ಅಂದರೆ—ಪ್ರೋ. ನೋಟು, ಹುಂಡಿ, ಸರಕು, ವಗೈರೆ ಮೇಲೆ ಸಾಲಕೊಡಲಾಗುತ್ತದೆ.

ಭಂಗಾರದ ಈಡಿನ ಮೇಲೆ ಈ ಕೆಳಗಿನ ದರದ ಬಡ್ಡಿಯಲ್ಲಿ ಸಾಲ ದೊರೆಯುವುದು.

ರೂ. 1ರಿಂದ 99ರ ವರೆಗೆ ಸಾ. ಶೆ. 9. 100ರಿಂದ 250ರ ವರೆಗೆ ಸಾ: ಶೆ. 8. ಮತ್ತು 251ರಿಂದ ಮೇಲ್ಪಟ್ಟ ಸಾಲಗಳಿಗೆ ಸಾ. ಶೆ. 7.

ವಿಶೇಷ ಸೂಚನೆ:—ಬಡವರಿಗೆ ಸಹಾಯವಾಗುವಂತೆ ಕಡಿಮೆಯೆಂದರೆ ರೂಪಾಯಿ 10/ ಸಹಾ ಸಾಲಕೊಡಲಾಗುತ್ತದೆ. ಹಾಲುಗಳು ದೊರೆಯುತ್ತವೆ.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಕೊಳ್ಳಿರಿ.

A. B. Shetty, ಚೆಯರ್‌ಮೇನ್. **K. Gopalakrishna Shetty.** ಸೆಕ್ರೆಟರಿ.

ವಿಜಯ ಬೇಂಕ್ ಲಿಮಿಟೆಡ್, ಕದ್ರಿರೋಡ್, ಮಂಗಳೂರು.

ಸ್ವದೇಶಿ ಕೈಗಾರಿಕೆಯನ್ನು ಪ್ರೋತ್ಸಾಹಿಸಿರಿ.

ಸ್ವದೇಶಿ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗೆಬಗೆಯ ಬಣ್ಣದಲ್ಲಿ, ಅಂಚಿನಲ್ಲಿ, ನಮೂನೆಯಲ್ಲಿ ದೊರೆಯುತ್ತವೆ.

ಶುದ್ಧ ಖಾದಿ ಮತ್ತು ಮಿಲ್‌ಬಟ್ಟೆಗಳೂ ವಿಕ್ರಯಿಸಲ್ಪಡುತ್ತವೆ.

P. A. PAI, BROS.
ಪಿ. ಎ. ಪೈ ಬ್ರದರ್ಸ್,
ಆಸ್ಪತ್ರೆ ಎದುರು, ಉಡುಪಿ.

ಕಸಿಗಿಡಗಳು.

ಸಪೋಡಿಲ್ಲ (ಚಿಕ್ಕು)

ಈ ಮರವು ನಮ್ಮ ಜಿಲ್ಲೆಯ ಎಲ್ಲಾ ಭಾಗದಲ್ಲಿಯೂ ಸರಿಯಾಗಿ ಬೆಳೆದು, 3ನೇ ವರ್ಷದಲ್ಲಿಯೇ ತಪ್ಪದೆ ಫಲಬಿಡುತ್ತದೆ. ಒಂದು ಮರದಲ್ಲಿ ಸಾವಿರಗಟ್ಟಲೆ ಹಣ್ಣಾಗುವದು. ಒಂದು ಎಕ್ರೆಯಲ್ಲಿ ವರ್ಷಕ್ಕೆ ರೂ. ಸಾವಿರದ ಮೇಲೆ ಉತ್ಪತ್ತಿಯಾಗುವದು. ಹಣ್ಣು ಅತಿ ಮಧುರ, ಒಳ್ಳೇ ರುಚಿ, ರೋಗಿಯವರಿಗೆ ಉತ್ತಮ ಆಹಾರ ಅದರಲ್ಲಿ ಕಬ್ಬಿಣ ಸತ್ವ ಮತ್ತು ವಿಟಮಿನ್ ತುಂಬ ಇರುವದರಿಂದ ರಕ್ತವನ್ನು ವೃದ್ಧಿಸುವುದು. ಮರದಲ್ಲಿ ಯಾವಾಗಲೂ ಹಣ್ಣು ಇರುವುದು, ಎಲ್ಲ ತೋಟದಲ್ಲಿಯೂ ಇರತಕ್ಕದ್ದು. ಗಿಡವೊಂದರ ಕ್ರಯ ರೂ. 1-0-0 ಮಾತ್ರ. ನಮ್ಮಲ್ಲಿ ಉತ್ತಮ ಮಾವು ಮತ್ತು ಇತರ ಕಸಿ ಗಿಡಗಳು ಕೂಡ ದೊರೆಯುತ್ತವೆ. ಕ್ರಯಪಟ್ಟಿಗೆ ಕೆಳಗಣ ವಿಳಾಸಕ್ಕೆ ಬರೆಯುವುದು.

ಮಂಗಳೂರಲ್ಲಿ ವಿಜಯ ಬ್ಯಾಂಕಿನಲ್ಲಿಯೂ ಸ್ವದೇಶೋಪ, ಹಂಪನಕಟ್ಟೆಯಲ್ಲಿಯೂ, ಸೋಮಯಾಜಿ ಎಂಡ್ ಕೊ, ರಥಬೀದಿಯಲ್ಲಿಯೂ ಮತ್ತು ಜಿಲ್ಲೆಯ ಎಲ್ಲಾ ಎಗ್ರಿ ಕಲ್ಚರಲ್ ಡಿಪೋ ಸ್ಟೇಟರಲ್ಲಿಯೂ ಮೇಲಿನ ಎಲ್ಲಾ ಗಿಡಗಳು ದೊರೆಯುತ್ತವೆ.

ಕೆ. ಎಮ್. ಶೆಟ್ಟಿ, ಕೆನರಾ ನರ್ಸರಿ,
ಪೋಸ್ಟ್ ಕಾಪು, ದ. ಕನ್ನಡ

ಪತ್ರವ್ಯವಹಾರ

(ಬಾತ್ಮಿದಾರರು ತಮ್ಮ ಸಂಪೂರ್ಣ ನಿವಾಸ ದನ್ನು ನಮಗೆ ಕೊಡಬೇಕಾಗಿದೆ. ಬಾತ್ಮಿಗಳು ಆದಷ್ಟು ಸಂಕ್ಷೇಪವಿದ್ದು ಕಾಗದದ ಒಂದೇ ಮಗ್ಗುಲಲ್ಲಿ ಶಾಯಿಯಿಂದ ಬರೆಯಲ್ಪಟ್ಟು ಸ್ಪಷ್ಟವಾದ ಅಕ್ಷರಗಳಲ್ಲಿರಬೇಕು. ಬಾತ್ಮಿದಾರರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ.)

ಸಂ. ಸ.

ದಕ್ಷಿಣ ಕನ್ನಡ ಜಿಲ್ಲಾ ಪಾರ್ಲಿಮೆಂಟರಿ ಬೋರ್ಡಿನ ಅಧ್ಯಕ್ಷರಿಗೆ ಕುಂದಾಪುರ ಡಿವಿಜನಿಗೆ ಕಾಂಗ್ರೆಸ್ ಹುರಿಯಾಳಾಗಿ ನಿಂತಿರುವ ಶ್ರೀಯುತ ಎ. ಬಿ. ಶೆಟ್ಟರಿಗೆ ಉಡುಪಿ ತಾಲೂಕು ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಿಗೆ ಕೂಡಾ

ಬಹಿರಂಗ ಪತ್ರ

ರಾಷ್ಟ್ರಪತಿ ಪಂಡಿತ ಜವಾಹಿರಲಾಲ ನೆಹರುಗಳವರು ದಕ್ಷಿಣ ಕನ್ನಡದಲ್ಲಿ ಚುನಾವಣಾ ಪ್ರವಾಸವನ್ನು ಕೈಕೊಳ್ಳುತ್ತಾರೆಂದು ತಿಳಿದಕೊಡಲೇ, ಮೂಲ್ಕಿಯಿಂದ ಪಡುಬಿದ್ರೆ, ಬೆಳ್ಮಣ್ಣು, ಶಿರ್ವಕ್ಕಾಗಿ ಕಟ್ಪಾಡಿಗೆ ಹೋಗುವುದೆಂದು ನೀವು ಪ್ರಥಮ ಒಂದು ಕಾರ್ಯಕ್ರಮವನ್ನು ರಚಿಸಿಕೊಂಡದ್ದು ನಿಜವೋ? ಇದನ್ನು ಉಡ್ಪಿ ತಾಲೂಕು ಕಾಂಗ್ರೆಸ್ ಕಮಿಟಿಯ ಚಕ್‌ಬಂದಿಗೆ ಒಳಪಟ್ಟ ಕಾಪಿನ ಜನರು ತಿಳಿದು, ದ. ಕ. ಜಿ. ಪಾ. ಬೋರ್ಡಿನ ಅಧ್ಯಕ್ಷರೀಗೆ ಒಂದು ಮನವಿಯನ್ನು ಮಾಡಿಕೊಂಡಿರುವರೇ? ಆ ಮನವಿಯಲ್ಲಿ ಪಂಡಿತ ಜವಾಹಿರಲಾಲರನ್ನು ಕಾಪು ಮಾರ್ಗವಾಗಿ ತಂದು ಕಾಪಿನಲ್ಲಿ ನಿಲ್ಲಿಸಬೇಕೆಂತ ಕೇಳಿಕೊಂಡದ್ದುಂಟೋ? ಅದಕ್ಕೆ ತಾ. 4 $\frac{2}{37}$ರಲ್ಲು ಉಡ್ಪಿಯ ಶ್ರೀ. ಯು. ಸರ್ವೋತ್ತಮ ಶೆಟ್ಟರು ಪಂಡಿತರ ಕಾರ್ಯಕ್ರಮವೆಂಬ ಪ್ರಕಟಣೆಯನ್ನು ಕಾಪು ಕಾ. ಇ. ಆಫೀಸಿಗೆ ಪತ್ರಸಹಿತ ಕಳುಹಿಸಿದ್ದುಂಟೇ? ಅದರಲ್ಲಿ ಕಾಪು ಮತ್ತು ಪಡುಬಿದ್ರೆಗಳಲ್ಲಿ ಎರಡೆರಡು ನಿಮಿಷ ನಿಲ್ಲುತ್ತಾರೆಂದು ಪ್ರಕಟಿಸಲ್ಪಟ್ಟಿತ್ತೊ? ಆ ಪ್ರಕಾರ ಕಾಪಿನ ಜನರು ತಾ 11 $\frac{2}{37}$ರಲ್ಲು ಪೇಟೆಯೆಲ್ಲೆಲ್ಲಾ ತಳಿರು ತೋರಣಾದಿಗಳಿಂದ ಅಲಂಕರಿಸಿ, ಇಲ್ಲಿಯ ರಥಬೀದಿಯಲ್ಲಿ ಎಳೆಂಟು ಮೈಲು ದೂರದಿಂದ ಕೂಡಾ ಬೆಳಿಗ್ಗೆ 8 ಘಂಟೆಗೆ ಹೆಂಗಸರು ಮಕ್ಕಳು, ತರುಣರು ಮುದುಕರೆನ್ನದೆ ಸುಮಾರು ಎರಡು ಮೂರು ಸಾವಿರ ಜನರು ನೆರೆದಿರುತ್ತಾ ಆ ದಿನ ಕಾರ್ಯಕ್ರಮದಲ್ಲಿ ತೋರುವಂತೆ ಸಮಯಕ್ಕೆ ಸರಿಯಾಗಿ ಬಾರದೆ ಇದ್ದರೂ, ಜನರು ಮಾತ್ರ ಪಂಡಿತರನ್ನು ನೋಡುವ ಕಾಂಕ್ಷೆಯಿಂದ ಅನ್ನ ನೀರು ಬಿಟ್ಟು 11½ ಗಂಟೆವರೆಗೆ ಕಾದುಕೂತುಕೊಂಡು ಕೆಲವರು ಮಾರ್ಗದ ಬದಿಗಳಲ್ಲಿ ನಿಂತು ಪಂಡಿತರ ದರ್ಶನಕ್ಕಾಗಿ ಹಾತೊರೆಯುತ್ತಿರುವಾಗ, ಉಡ್ಪಿ ತಾ. ಕಾ. ಕ. ಅಧ್ಯಕ್ಷ ಶ್ರೀ. ಪಾಂಗಾಳ ಮಂಜುನಾಥನ್ನಾಕರು ಕಾರಿನಲ್ಲಿ ಪ್ರಥಮತೆ ಬಂದವರು ಇಲ್ಲಿನ ಸ್ವಾಗತದ ವಿಚಾರ, ನಿಲ್ದಾಣದ ವಿಚಾರ ಇಲ್ಲಿಯ ಜನರ ಕೂಡೆ ವಿಚಾರಿಸಿ ತಿಳಿದುಕೊಂಡಿರುತ್ತಾರೆಯೇ? ಹಾಗೆ ವಿಚಾರಿಸುವುದು ಈ ಕಾಪು ಉಡ್ಪಿ ತಾ. ಕಾ. ಕಮಿಟಿಗೆ ಸೇರಿದ್ದಾದ್ದರಿಂದ ಅವರಿಗೆ ಅಗತ್ಯವಿತ್ತೋ?—ಇಲ್ಲವೋ? ಹಾಗಾದರೆ ಕಾರ್ಯಕ್ರಮದಲ್ಲಿ ಸೇರಿರುವ ಕಾಪಿನಲ್ಲಿ ನಿಲ್ಲಿಸದಿರಲು ಕಾರಣವೇನು? ಸದ್ರಿ ಪಂಡಿತರು ಬಂದ ಕಾರಿನಲ್ಲಿ ನಮ್ಮತ್ತ ಕಡೆಯ ಹುರಿಯಾಳುಗಳಾದ ಶ್ರೀಯುತ ಎ. ಬಿ. ಶೆಟ್ಟರಿರುತ್ತಾ, ಸದರಿಯವರಿಗೆ ಕಾಪಿನ ಕಾರ್ಯಕ್ರಮ ತಿಳಿದಿದ್ದಿತಲ್ಲದೆ, ಕಾರ್ಯಕ್ರಮದಲ್ಲಿ ಈ ಊರು ಸೇರದೆಇದ್ದರೂ, ಇಲ್ಲಿ ಜಸ್ಟೀಸು ಪಾರ್ಟಿಯ ಕಡೆಯಿಂದ ಹೆಚ್ಚಿನ ಕೆಲಸ ನಡೆಯುತ್ತದೆ ಎಂಬುದು ಗೊತ್ತಿರುವಾಗ—ಜನರ ಮತವನ್ನು ಒಲಿಸಿಕೊಳ್ಳುವುದಕ್ಕಾದರೂ—ಖಾಸಗಿಯಿಂದ ಒಂದೆರಡು ನಿಮಿಷ ಪಂಡಿತರನ್ನು ನಿಲ್ಲಿಸುವ ಅಗತ್ಯವಿತ್ತೋ?—ಇಲ್ಲವೋ? ಆದುದರಿಂದ ಜನರ ಮನೋಗತವು ಈ ವರೆಗೆ ಕಾಂಗ್ರೆಸಿಗೆ ಸಂಪೂರ್ಣ ಒಲಿದಿರುವುದನ್ನು-ಈ ಒಂದು ಘಟನೆಯಿಂದ ಬದಲಾಯಿಸಿಕೊಳ್ಳುವಂತೆಮಾಡಿದ ಇದಕ್ಕೆ ಹೊಣೆಯಾರು? ಎಂಬುದಕ್ಕೆ ಸಾರ್ವಜನಿಕ ಕಾರ್ಯಗಳಲ್ಲಿ ತತ್ಪರರಾಗಿರುವ ಈ ಮೂರುವರಿಂದಿಯೂ ಉತ್ತರಕೊಡಬೇಕಾಗಿ ಪ್ರಾರ್ಥನೆ.

"ಕಾಂಗ್ರೆಸ್ ಹಿತೈಷಿ"
ಕಾಪು.
ತಾ. 12-2-37

ಕಾಪಿನ ಮಹಾಜನರ ಮನಸ್ಸಿಗೆ ತೀವ್ರ ವೇದನೆಯನ್ನುಂಟುಮಾಡಿದ ಈ ಪ್ರಮಾದದ ಕುರಿತು ವಿಚಾರಿಸಿದಾಗ 'ಪಂಡಿತ ನೆಹರುಗಳು ಬರುವಾಗ ರಸ್ತೆಯ ಬದಿಯಲ್ಲಿ ಪದ್ಧತಿಯಂತೆ ಜನಸಮೂಹವು ನೆರೆದಿರಲಿಲ್ಲ. ಇದರಿಂದ ಪಂಡಿತರು ಬರುವಾಗ ಬಹಳ ತಡವಾಗಿದ್ದುದರಿಂದ ಜನರು ಚೆದರಿ ಹೋಗಿರಬೇಕೆಂದು ಭಾವಿಸಬೇಕಾಯಿತು! ಈ ಭಾವನೆಯನ್ನು ಮಾರಿಗುಡಿಯ ಸಮೀಪ ಸಮರ್ಪಿಸಲ್ಪಟ್ಟ ಹೂಮಾಲೆಯು ದೃಢಗೊಳಿಸಿತು. ಹೀಗಾಗಿ ಅವರ ಕಾರು ಅಲ್ಲಿ ನಿಲ್ಲಲಿಲ್ಲ' ಎಂದು ತಿಳಿದುಬಂದಿದೆ. ಈ ಕುರಿತು ಶ್ರೀ. ಮಂಜುನಾಥ ನಾಯ್ಕರೊಂದು ಪ್ರಕಟಣೆ ಹೊರಡಿಸಿ ಮಹಾಜನರಲ್ಲಿ ಕ್ಷಮಾಯಾಚನೆಮಾಡಿರುವರು. ಕಾಪಿನ ಮಹಾಜನರು ಈ ಪ್ರಮಾದದಿಂದ ನಿರುತ್ಸಾಹಗೊಳ್ಳದೆ ರಾಷ್ಟ್ರಪತಿಗಳ ಆಗಮನದ ಉದ್ದೇಶವನ್ನು ನೆರವೇರಿಸಲು ನೆರವಾಗುವರೆಂದು ನಂಬುತ್ತೇವೆ.

ಸಂ. ಸ.

ಸ್ವಾಗತ ಪತ್ರ.

ಅಖಿಲ ಭಾರತ ರಾಷ್ಟ್ರ ಸಭಾಧ್ಯಕ್ಷರಾದ ಶ್ರೀ। ಪಂಡಿತ ಜವಾಹರಲಾಲ ನೆಹರುಗಳವರ ಸನ್ನಿಧಿಯಲ್ಲಿ—

ಪೂಜ್ಯ ರಾಷ್ಟ್ರಪತಿಗಳೇ,

ತಮ್ಮ ಚಿರಸ್ಮರಣೀಯವಾದ ಸಂದರ್ಶನಕ್ಕಾಗಿ ದಕ್ಷಿಣ ಕನ್ನಡ ಜಿಲ್ಲಾ ಒಕ್ಕಲಿಗರ ಸಹಕಾರ ಸಮಿತಿಯ ಸದಸ್ಯರಾದ ನಾವು ಅತ್ಯಂತಕಾಂಕ್ಷೆಯಿಂದ ಈ ತನಕ ಹಾತೊರೆಯುತ್ತಿದ್ದೆವು. ಅಧಃಪತನ ಪರಮಾವಧಿಗಿಳಿದ, ದಾಸ್ಯಶೃಂಖಲೆಯಿಂದ ಬಿಗಿಯಲ್ಪಟ್ಟ, ನಮ್ಮ ದುರ್ಭಾಗ್ಯ ಜನ್ಮಭೂಮಿಯ ಭವಿತವ್ಯತೆಯ ಆಶಾಜ್ಯೋತಿಯಾಗಿ ಆರಿಸ್ಪಟ್ಟಿರುವ, ದಿವ್ಯ ಮಾತಾಪಿತೃಗಳ ಕೀರ್ತಿಯುತ ಕುಮಾರರಾಗಿರುವ ತಮಗೆ ಈ ಸುಸಂದರ್ಭದಲ್ಲಿ ನಾವು ನಮ್ಮ ವಿನೀತ ಪ್ರೇಮಾದರಗಳನ್ನು ಸಮರ್ಪಿಸುತ್ತೇವೆ.

ನಾವು ಮಂಗಳೂರು ತಾಲೂಕಿನಲ್ಲಿರುವ ಕೊಳಂಬೆ, ಕೆಂದಾವರ ಮತ್ತು ಅದ್ಯಪಾಡಿ ಇವುಗಳಲ್ಲದೆ ಕಾರ್ಕಳ ತಾಲೂಕಿಗೆ ಸೇರಿದ ಪಾಲಡ್ಕ, ಪುತ್ತಿಗೆ ಮತ್ತು ಬೆಳುವಾಯಿ ಗ್ರಾಮಗಳ ರೈತರು. ನಮ್ಮ ಎರಡು ಪಂಗಡಗಳು ದಕ್ಷಿಣಕನ್ನಡ ಜಿಲ್ಲಾ ಒಕ್ಕಲಿಗರ ಸಹಕಾರ ಸಮಿತಿಗೆ ಸಂಬಂಧಿಸಿರುವವುಗಳಾಗಿವೆ. ೧೯೩೦ನೆಯ ಇಸವಿಯಲ್ಲಿ ಪ್ರಾರಂಭಿಸಲ್ಪಟ್ಟು, ರಾಷ್ಟ್ರೀಯ ಧೋರಣೆಗಳಿಗನುಗುಣವಾಗಿರುವ ಮತ್ತು ಭಾರತರಾಷ್ಟ್ರಸಭೆಯ ಎಲ್ಲಾ ರಚನಾತ್ಮಕ ಕಾರ್ಯಕಲಾಪಗಳನ್ನು ಸ್ವೀಕರಿಸಿಕೊಂಡು ದುಡಿಯುತ್ತಿರುವ ರೈತರ ಸಂಸ್ಥೆಯೆಂದರೆ ಇಂದಿಗೆ ನಮ್ಮ ಜಿಲ್ಲೆಯಲ್ಲಿ ಇದೊಂದೇ. ನಮ್ಮ ಸಂಸ್ಥೆಯು, ಇದರ ಸ್ಥಾಪಕರೆ ಮತ್ತು ವ್ಯವಸ್ಥಾಪಕರೂ, ೧೯೩೦ನೇ ಇಸ್ವಿಯ ಸತ್ಯಾಗ್ರಹಿಗಳು ಆಗಿರುವ ಶ್ರೀ। ಬಿ. ಟಿ. ರೈ ಇವರ ಯೋಗ್ಯ ಬೆಂಬಲದಿಂದ ನಡೆಯುತ್ತಿರುವುದೆಂದು ತಿಳಿಸಲು ನಾವು ಆನಂದಿಸುತ್ತೇವೆ

ಭಾರತದ ಇನ್ನಿತರ ಕಡೆಗಳಂತೆಯೇ, ಇಲ್ಲಿ ಕೂಡಾ ನಮ್ಮ ಪರಿಸ್ಥಿತಿಯು ಕಠಿಣವಾದುದಲ್ಲದೆ, ಹೃದಯವಿದ್ರಾವಕಗೊಳಿಸುವಂತಾಗಿದೆ. ಹಳ್ಳಿಗಳಲ್ಲಿ ನಾವು ಸಮಾಜದಲ್ಲಿಯ ಅತ್ಯಂತ ಕೀಳುವರ್ಗದವರೆಂದು ಪರಿಗಣಿಸಲ್ಪಟ್ಟಿರುವೆವು. ನಮ್ಮಲ್ಲಿ ಭೂಮಿ, ಧನ ಅಥವಾ ನಮ್ಮದೇ ಎಂದು ಕರೆಯುವಂತಹ ಯಾವ ಒಳ್ಳೆಯ ವಸ್ತುವೂ ಇಲ್ಲ. ಹೆಚ್ಚೇಕೆ! ನಮಗೆ ಸಾಕಷ್ಟು ಆಹಾರವಿಲ್ಲ, ಬಟ್ಟೆ ಬರೆಗಳಿಲ್ಲ! ಮತ್ತು ತಂಗಿಕೊಳ್ಳಲು ಸರಿಯಾದ ವಸತಿ ಕೂಡಾ ಇರುವುದಿಲ್ಲ. ಮಳೆಗಾಲದಲ್ಲಿ ಉದ್ಯೋಗ ಹೀನರಾಗಿ ನಾವು ಕಾಡುಮೃಗಗಳಂತೆ ಕಾಡಿನ ಗಡ್ಡೆ ವ ಸೊಪ್ಪುಗಳನ್ನು ನಮ್ಮ ಜೀವನಕ್ಕಾಗಿ ಉಪಯೋಗಿಸಬೇಕಾಗುತ್ತದೆ. ಕೆಲಸವಿರುವ ದಿನಗಳಲ್ಲಿ ನಾವು ಬೆವರು ಸುರಿಸಿ ದುಡಿಯುತ್ತಿರುವೆವಾದರೂ ಬೇಕಾದಷ್ಟು ಆಹಾರವನ್ನು ಗಳಿಸಲು ನಮಗೆ ಶಕ್ಯವಾಗುವದಿಲ್ಲ. ಸಂಪತ್ಸಮೃದ್ಧಿಯುಳ್ಳ ನಮ್ಮ ಸ್ವರ್ಣಭೂಮಿಯಲ್ಲಿ ನಾವು ಜೀವಿಸುತ್ತಿರುವೆವಾದರೂ ಸದಾ ಬಳಲುತ್ತಿರುವುದೇ ನಮ್ಮ ಭಾಗ್ಯವಾಗಿದೆ. ಇವೆಲ್ಲವುಗಳ ಫಲವಾಗಿ ನಾವು ಹೊರಲಸಾಧ್ಯವಾದ ಸಾಲದ ಹೊರೆಯನ್ನು ಹೊತ್ತು ನಮ್ಮ ಜಮೀನ್ದಾರರ ಅಂತೂ ಬಂಡವಾಳಗಾರರ ಎಲ್ಲಾ ವಿಧದ ನಿರ್ದಾಕ್ಷಿಣ್ಯ ನಿಷ್ಕಾರುಣ್ಯ ಪೀಡೆಗೊಳಗಾಗಿರುವೆವು. ಇಷ್ಟುಮಾತ್ರವಲ್ಲದೆ ನಮ್ಮ ಜೀವನಕ್ಕೆ ಅತ್ಯವಶ್ಯಕವಾದ ವಿಚಾರಗಳಮೇಲೆ ಕೂಡಾ ವಿವಿಧ ರೀತಿಯಲ್ಲಿ ಹೊರಿಸಿರುವ ತೆರಿಗೆಯ ಬಾಧೆಗೊಳಗಾಗಿರುವೆವು. ಈಗ ನಾವು ಸಮಾಜದ, ಅಂತೂ ಆರ್ಥಿಕ ಗಂಡಾತರದ ಮಡುವಿನಲ್ಲಿ ಬಿದ್ದು ನರಳುತ್ತಿದ್ದೇವೆ. ನಮ್ಮ ನಿಸ್ಸಹಾಯಕ ಪರಿಸ್ಥಿತಿಯಲ್ಲಿ ನಾವು ರಾಷ್ಟ್ರದ ಏಕಮಾತ್ರ ಪ್ರಮುಖ ಸಂಸ್ಥೆಯಾದ ಅಖಿಲಭಾರತ ರಾಷ್ಟ್ರ ಸಭೆಯಲ್ಲಿ ವಿಶ್ವಾಸವನ್ನಿಟ್ಟುಕೊಂಡಿರುವೆವಲ್ಲದೆ ಆ ಸಂಸ್ಥೆಯು ನಮ್ಮನ್ನು ಜೀವಂತ ಸ್ಥಿತಿಯಲ್ಲಿರಿಸುವಂತೆ ಮಾಡುವುದೆಂದು ಭರವಸೆಯುಂದಿದ್ದು ಅದರ ಸಹಾಯವನ್ನು ಕೋರುತ್ತಿದ್ದೇವೆ. ಸಾಮೂಹಿಕ ಸಂಬಂಧವನ್ನು ಬೆಳೆಸಿ, ಬಡ ಜನತೆಯ ದಾರಿದ್ರ್ಯವನ್ನು ನಿವಾರಿಸಲು ಹೊರಡಬೇಕೆಂಬ ಕಾಂಗ್ರೆಸಿನ ನಿರ್ಣಯ ಮತ್ತು ಪ್ರಯತ್ನಗಳ ಕುರಿತು ನಾವು ಎಷ್ಟೋ ಬಾರಿ ಕೇಳಿರುತ್ತೇವೆ. ಈ ವಾರ್ತೆಯು ನಮಗೆ ಆನಂದವನ್ನುಂಟುಮಾಡಿರುವದಲ್ಲದೆ ನಮ್ಮ ಹೃದಯದ ಆಶಾಜ್ಯೋತಿಯನ್ನು ಬೆಳಗಿಸಿರುವುದು. ಹೇಗಿದ್ದರೂ, ನಮ್ಮ ಏಕಮಾತ್ರ ಕೋರಿಕೆಯೆಂದರೆ, ಸಾಮೂಹಿಕ ಸಂಬಂಧವು ಪ್ರಕೃತದ ಪರಿಸ್ಥಿತಿಗನುಗುಣವಾಗಿ ಫಲದಾಯಕವಾಗಬೇಕಾದರೆ ಆ ಯತ್ನವು ಇಂದಿನ ಹಾಗೂ ಮುಂದಿನ ಕುರಿತು ದೀರ್ಘದೃಷ್ಟಿಯುಳ್ಳದ್ದಾಗಿರಬೇಕು.

ಅದು ನಮ್ಮನ್ನು—ಈಗಿನ ಸಂಕಷ್ಟದಿಂದ ದುಃಖದಾರಿದ್ರ್ಯ ಮೊದಲಾದವುಗಳಿಂದ ದೂರಗೊಳಿಸಿ ನಮ್ಮ ಸಾಮಾಜಿಕ ಆರ್ಥಿಕ ಮತ್ತು ರಾಜಕೀಯ ಭವಿತವ್ಯತೆಯನ್ನು ಕಾಯಬೇಕು. ಅದು ಕ್ರಮಪ್ರಕಾರವಾಗಿ, ಶಕ್ತಿಪೂರ್ವಕವಾಗಿ, ಉತ್ಸುಕತೆಯಿಂದ ನಡೆಯಬೇಕು. ಪ್ರತಿನಿಧಿತ್ವ ಭರಣವು ಬೇಕೆಂದು ಕಂಡಲ್ಲಿ ನಮ್ಮ ನೈಜ ಪ್ರತಿನಿಧಿಗಳನ್ನು ಕಳುಹಿಸಲು ಯೋಗ್ಯ ಏರ್ಪಾಡುಗಳು ನಡೆಯಬೇಕು, ದೀನದಲಿತರ ಕರುಣಾಮಯ ಪರಿಸ್ಥಿತಿಯ ನಿವಾರಣೆಗೆ ಹೆಚ್ಚಿಚ್ಚು ಪ್ರಾಮುಖ್ಯತೆಯನ್ನೀಯುವ ಪುಣ್ಯಪ್ರಭೃತಿಗಳಾದ ಮುಂದಾಳುಗಳಲ್ಲಿ ತಾವೊಬ್ಬರು. ನಿಮ್ಮ ಮಾತುಗಳಿಗಿಂತಲೂ ಕಾರ್ಯಗಳೇ ಎದೆಯೊಡ್ಡಿ ಮುಂಬರಿದಿವೆ. ಸಾಂಸಾರಿಕ ಎಡರುಗಳನ್ನು ಕೂಡಾ ಲಕ್ಷಿಸದೆ ತಾವು ಮಾಡಿರುವ ತ್ಯಾಗಗಳೆಷ್ಟೋ ವಿವಿಧ ರೀತಿಗಳದ್ದಾಗಿವೆ. ತಾವು ತಮ್ಮಾತ್ಮವನ್ನು ಸಾಂಸ್ಕೃತಿಕ ಜಗತ್ತಿನಲ್ಲಿಯ ಶ್ರೇಷ್ಠವೂ, ಪವಿತ್ರವೂ ಸೌಂದರ್ಯಮಯವೂ, ಸತ್ಯವೂ ಮತ್ತು ಘನವೂ ಆಗಿರುವ ತತ್ವಗಳಿಂದ ತುಂಬಿ ತುಳುಕಿಸಿ, ತಮ್ಮ ಸರ್ವಸ್ವವನ್ನೂ ಜನ್ಮದಾತೆಯ ಪಾದಕಮಲಗಳಿಗರ್ಪಿಸಿರುವಿರಿ. ತಾವು ಮೂರುಸಾರಿ ಆರಿಸಲ್ಪಟ್ಟ ನಮ್ಮ ರಾಷ್ಟ್ರಾಧಿಪತಿಗಳು. ತಮ್ಮಲ್ಲಿ ನಮಗೆ ಅಚಲ ಭರವಸೆಯಿದೆ ನಮ್ಮೊಲವಿನ ರಾಷ್ಟ್ರಪತಿಗಳೇ, ತಾವು ರೈತರಕುರಿತು ಚಿಂತಿಸುವಾಗ ನಮ್ಮ ನೆನಪು ತಮಗಿರಲಿ, ಮಾತ್ರವಲ್ಲ ನಮ್ಮನ್ನು ಶಾಂತ ಸುಖ ಸಂಪತ್ತಿನ ಆ ಸ್ವಾತಂತ್ರ್ಯ ಗುರಿಗೊಯ್ಯಿರೆಂದು ಈಮೂಲಕ ವಿನಯಭಾವದಿಂದ ಪ್ರಾರ್ಥಿಸುವೆವು.

ನಮ್ಮ ಜಿಲ್ಲೆಗೆ ತಾವು ತಮ್ಮ ದರ್ಶನವಿತ್ತುದಕ್ಕಾಗಿ ನಾವು ತಮಗೆ ಸದಾ ಋಣಿಗಳಾಗಿರುವೆವು ಮತ್ತು ತಮ್ಮ ಮುಂದಿನ ಪಯಣವು ಸುಖದಾಯಕವಾಗಿ ತಮಗೆ ಚಿರಾಯುರಾರೋಗ್ಯವು ಲಭಿಸಲೆಂದು ಪ್ರಾರ್ಥಿಸುವೆವು.

ಕೊಳಂಬೆ, ಕೆಂದಾವರ, ಅದ್ಯಪಾಡಿ, ಪಾಲಡ್ಕ ಪುತ್ತಿಗೆ ಮತ್ತು ಬೆಳುವಾಯಿ ಗ್ರಾಮಗಳ ರೈತರು.

ವ್ಯವಸ್ಥಾಪಕ:- ಬಿ. ಟಿ ರೈ.

ಬಾಲವಾಙ್ಮಯದ ಆವಶ್ಯಕತೆ ಮತ್ತು ನಿರ್ಮಾಣದ ವಿಷಯಕವಾದ ಪ್ರಬಂಧ

ಬಾ ಲ ವಾ ಙ್ಮ ಯ

ಬೆಲೆ ಮೂರಾಣೆ

ಉಪಾಧ್ಯಾಯರ ಪ್ರಕಟನ ಸಮಿತಿ,
ಉ ಡು ಪಿ.

ಸುವರ್ಣ ತಾಯಿತಿ! ಧರ್ಮಾರ್ಥ ಭಂಗಾರದ ತಾಯಿತಿ!
ಹಿಮಾಲಯ ಪರ್ವತದಲ್ಲಿ ವರ್ಷಗಟ್ಟಲೆ ತಪಸ್ಸು ಮಾಡಿ
ಸಿದ್ಧಿಯನ್ನು ಪಡೆದ ಮಹಾ ಯೋಗೀಶ್ವರರಿಂದ
ಕಂಡು ಹಿಡಿಯಲ್ಪಟ್ಟದ್ದು.

ಈ ತಾಯಿತಿಯನ್ನು

ಧರಿಸಿದ ಮಾತ್ರದಿಂದ ಸಕಲ ಇಷ್ಟಾರ್ಥಗಳೂ ನೆರವೇರುವುವು.
ಪರೀಕ್ಷಿಸಲಪೇಕ್ಷಿಸುವವರು
"ಯೋಗೀಶ್ವರರ ಶಕ್ತಿಸಾಹಸ"
ಎಂಬ ಪುಸ್ತಕವನ್ನು ಧರ್ಮಾರ್ಥವಾಗಿ ಪಡೆಯಬಹುದು.

ಪತ್ತೆ:—ಪಂಡಿತ್ ಎ. ವಿ. ಆರಮುಮ್
ಚಿಕಾಕೋಲ್

ಬ್ರೇಕ್ ಪಿಲ್ಸು

ಸ್ತ್ರೀಪುರುಷರಿಗೆ ಆನಂದವನ್ನುಂಟುಮಾಡುವುದು ಈ ಮಾತ್ರೆಗಳೇ. ಮದಿಸಿದ ಸ್ತ್ರೀಯರ ಗರ್ವ ಭಂಗಮಾಡಲು ಕಂಡು ಹಿಡಿದಿರುವ ಮಾತ್ರೆಗಳಿವು. ಇದರಲ್ಲಿ ವಿಷಾದಿಗಳು ಸೇರಿಲ್ಲ, ಕಸ್ತೂರಿ, ಚಿನ್ನ ಹಿಮಾಲಯಪರ್ವತದ ವನಮೂಲಿಕೆಗಳು ಮುಂತಾದುವುಗಳಿಂದ ದೊಡ್ಡ ಯೋಗೀಶ್ವರರ ಹತ್ತಿರ ಸಂಗ್ರಹಿಸಿ ಮುದುಕತನವನ್ನು ಲೋಕದಲ್ಲಿ ಇಲ್ಲದಂತೆ ಮಾಡುವುದು. ಅರ್ಧ ಘಂಟೆಯೊಳಗಾಗಿ ವೀರ್ಯವನ್ನು ಕಲ್ಲಿನಂತೆ ಮಾಡಿ ರಮಿಸಲು ಉಲ್ಲಾಸವನ್ನು ಮಾಡುವುದು. ಗುಣವಿಲ್ಲದಿದ್ದಲ್ಲಿ ಹಣ ವಾಪಸು. **೬೦ ಮಾತ್ರೆಗಳು ರೂ. ೫—೦—೦**
೩೦ ಮಾತ್ರೆಗಳು ರೂ. ೩—೦—೦ ಕಾಗದ ಪತ್ರಗಳು ಇಂಗ್ಲೀಷಿನಲ್ಲಿಯೇ.

ಡಾ. ಎ. ಎಸ್. ಮೂರ್ತಿ,
ಚಿಕಾಗೋಲ್, ಗಂಜಾಮ್ ಡಿಸ್ಟ್ರಿಕ್ಟ್.

= ತಿರುವಾಂಕೂರಿನ ಮಹಾರಾಜರಿಗೆ =
'ಪದ್ಮನಾಭದಾಸ' ಎಂಬ ಬಿರುದು ಹೇಗೆ ಬಂತು?

ತಿರುವಾಂಕೂರಿನ ಮಹಾರಾಜರ ಬಿರುದಾದ "ಪದ್ಮನಾಭ ದಾಸ" ಎಂಬುದು ೨೦೦ ವರ್ಷಗಳಿಂದಲೂ ವಾಡಿಕೆಯಲ್ಲಿದೆ. ಇಲ್ಲಿನ ಅರಸರು ಈ ಬಿರುದನ್ನು ಧರಿಸುವುದು ಮಾತ್ರವೇ ಅಲ್ಲ; ಬಿರುದಿಗನುಸಾರವಾಗಿ ನಡೆದುಕೊಂಡೂ ಬರುತ್ತಿದ್ದಾರೆ. ಮಹಾರಾಜರು ರಾಜಧಾನಿಯಲ್ಲಿ ಇರುವಷ್ಟು ಕಾಲವೂ ಪ್ರತಿದಿನವೂ ತಮ್ಮ ಕುಲದೇವರಾದ ಶ್ರೀಮದನಂತಪದ್ಮನಾಭಸ್ವಾಮಿಯನ್ನು ಪೂಜಿಸುತ್ತಾರೆ, ಯಾವುದಾದರೂ ಪರಸ್ಥಳಕ್ಕೆ ಹೋಗುವಂತಿದ್ದರೆ ಊರು ಬಿಟ್ಟು ಹೊರಡುವಾಗ ದೇವಾಲಯಕ್ಕೆ ಹೋಗಿ ಪೂಜಿಸಿ ಹೋಗುತ್ತಾರೆ. ಮತ್ತೆ ರಾಜಧಾನಿಗೆ ಬಂದ ಕೂಡಲೆ ಮೊದಲು ದೇವಾಲಯದಲ್ಲಿ ಪೂಜೆ ಮಾಡಿ ಅನಂತರ ಆಡಳಿತದ ಕಾರ್ಯಭಾರವನ್ನು ನೋಡುತ್ತಾರೆ. ಈ "ಪದ್ಮನಾಭದಾಸ" ಎಂಬ ಬಿರುದನ್ನು ಇಲ್ಲಿನ ಮಹಾರಾಜರುಗಳು ಎಂದಿನಿಂದ ಧರಿಸುತ್ತಿದ್ದಾರೆಂಬ ವಿಚಾರವಾಗಿ ತಿಳಿದು ಬಂದಿರುವ ವಿವರಗಳಿವು.— ಕ್ರಿ. ಶ. ೧೭೨೯ರಿಂದ ೧೭೫೮ರ ತನಕ ತಿರುವಾಂಕೂರು ರಾಜ್ಯವನ್ನು ಆಳಿ ಕೀರ್ತಿಶಾಲಿಗಳಾದ ರಾಜಾ ಮಾರ್ತಾಂಡ ವರ್ಮರವರೇ ಈ ಬಿರುದನ್ನು ಧರಿಸಲು ಮೊದಲನೆಯವರೆಂದು ತಿಳಿದು ಬಂದಿದೆ. ಈ ಮಾರ್ತಾಂಡವರ್ಮರವರು ಮಹಾಬಲಶಾಲಿಗಳು. ತಮ್ಮ ಭುಜಬಲ ಪರಾಕ್ರಮದಿಂದಲೂ, ಶ್ರೀಮದನಂತಪದ್ಮನಾಭಸ್ವಾಮಿಯವರಲ್ಲಿ ಇವರಿಗಿದ್ದ ಅಚಲ ಭಕ್ತಿಯಿಂದಲೂ, ವಿರೋಧಿಗಳನ್ನೆಲ್ಲಾ ಸೋಲಿಸಿ ೧೭೨೯ರಲ್ಲಿ ಸಿಂಹಾಸನವನ್ನು ಹತ್ತಿದರು. ಸಿಂಹಾಸನಾರೂಢರಾದ ಮೇಲೆ ತಾವೂ ತಮ್ಮ ಪ್ರಧಾನಿಗಳೂ ಸೇರಿ ರಾಜ್ಯದಲ್ಲಿ ಐಕಮತ್ಯವನ್ನುಂಟುಮಾಡಿ ಅಧಿಕಾರದ ಬಿಗಿಯೂ ಶಿಸ್ತೂ ನಿಲ್ಲುವಂತೆ ಮಾಡಿದರು. ಅನಂತರ ಶ್ರೀ ಪದ್ಮನಾಭ ಸ್ವಾಮಿಯವರ ದೇವಾಲಯವನ್ನು ಹೊಸದಾಗಿ ಕಟ್ಟಿಸಿ ನಿತ್ಯೋತ್ಸವ, ಪಕ್ಷೋತ್ಸವ ಮಾಸೋತ್ಸವ, ಸಂವತ್ಸರೋತ್ಸವಗಳೇ ಮುಂತಾದ ಅನೇಕ ಉತ್ಸವಗಳನ್ನೇರ್ಪಡಿಸಿ ಅವುಗಳನ್ನು ಸಾಂಗೋಪಾಂಗವಾಗಿ ನಡೆಸಿಕೊಂಡು ಬರುವುದಕ್ಕೆ ತಕ್ಕ ಸ್ಥಿರ ಅನುಕೂಲಗಳನ್ನು ನಿಬಂಧನೆ ಮಾಡಿದರು. ಈ ಮಹಾರಾಜರು ತಮ್ಮ ಯೌವನದಲ್ಲಿ ವೀರಾವೇಶದಿಂದ ಒರೆಯಿಂದೆಳೆದು ಪ್ರಯೋಗಿಸುತ್ತಿದ್ದ ಕತ್ತಿಯನ್ನು ಬಹುಕಾಲ ಒರೆಯೊಳಗಿಡಲೇ ಇಲ್ಲ. ಅಷ್ಟು ಕಾಲವೂ ತಮ್ಮ ವಿರೋಧಿಗಳನ್ನು ಸದೆಬಡಿದು ರಾಜ್ಯದಲ್ಲಿ ಶಿಸ್ತನ್ನು ಸ್ಥಾಪಿಸುವುದರಲ್ಲೇ ಆಗಿಹೋಗಿತ್ತು. ರಾಜ್ಯದಲ್ಲಿ ಪ್ರತಿ ಪಕ್ಷಿಗಳ ಬಾಧೆಯೇನೂ ಇಲ್ಲವೆಂದು ಚೆನ್ನಾಗಿ ಮನಗಂಡಮೇಲೆ, ತಮ್ಮ ಕತ್ತಿಯನ್ನು ಮೊದಲಿನಂತೆ ಪ್ರಯೋಗಿಸಬೇಕಾಗಿಲ್ಲವೆಂದು ತಿಳಿದು ಬಂದ ಮೇಲೆ, ಇವರು ತಮ್ಮ ಕತ್ತಿಯನ್ನು ಒರೆಯೊಳಗಿಟ್ಟು, ಅದನ್ನು ತಮ್ಮ ಕುಲದೈವವಾದ ಶ್ರೀ ಪದ್ಮನಾಭಸ್ವಾಮಿಯ ಮುಂದಿಟ್ಟರು. ಅನಂತರ ಅದನ್ನು ತಮ್ಮ ಆರಾಧ್ಯ ಕುಲದೈವದ ಪ್ರತಿನಿಧಿಯೆಂದು ಭಾವಿಸಿ ಪುನಃ ಧರಿಸಿಕೊಂಡರು.

ಈ ಕಾರ್ಯದ ಅಂತರಾರ್ಥವೇನೆಂದರೆ 'ನಾನೀ ಕತ್ತಿಯಿಂದ ಜಯಿಸಿರುವ ಈ ರಾಜ್ಯವೆಲ್ಲವನ್ನೂ ನಿನಗೆ ಅರ್ಪಿಸಿದ್ದೇನೆ. ನಾನೀಗ ನಿನ್ನ ಸೇವಕ. ಈ ಕತ್ತಿಯೇ ನಿನ್ನ ಪ್ರತಿನಿಧಿ. ನಾನು ಸೇವಕನಂತೆ ಈ ಕತ್ತಿಯನ್ನು ಧರಿಸಿ, ನಿನಗೋಸ್ಕರ ಈ ಭಾರವನ್ನು ಕೈಕೊಳ್ಳುತ್ತೇನೆ' ಎಂಬುದು. ಅಪೂರ್ವವೂ ಸಾಂಕೇತಿಕವೂ ಆದ ಈ ಕಾರ್ಯದಿಂದ ತಾವು ಹೊಸದಾಗಿ ಗೆದ್ದು ವಶಪಡಿಸಿಕೊಂಡಿದ್ದ ರಾಜ್ಯವೆಲ್ಲವೂ ಭಗವದರ್ಪಿತವಾದಂತಾಯಿತು. ಹೀಗೆ ತಿರುವಾಂಕೂರಿನ ಮಹಾರಾಜರು ಅಂದಿನಿಂದಲೂ ತಮ್ಮ ಹೆಸರುಗಳ ಜತೆಗೆ 'ಶ್ರೀ ಪದ್ಮನಾಭದಾಸ' ಎಂಬ ಬಿರುದನ್ನು ಸೇರಿಸಿಕೊಳ್ಳುತ್ತಾ ಬಂದರು. ತಾವು ತಮ್ಮ ರಕ್ಷಕ ದೈವದ ಸಾಮಂತರೆಂದು ಹೇಳಿಕೊಂಡರು.

ಇದೀಗ ಈ ಬಿರುದಿನ ಕಥೆ

ಹೀಗೆ ಇನ್ನೂರು ವರ್ಷಗಳ ಹಿಂದೆ ಆ ಮಾರ್ತಾಂಡ ವರ್ಮರವರು ಏರ್ಪಡಿಸಿದ್ದ ಪಡಿತರ ದೀಪಾರಾಧನೆಗಳೇ ಮುಂತಾದ ಸಮಸ್ತ ಪೂಜೆ ಪುರಸ್ಕಾರಗಳೂ ಇಂದಿಗೂ ನಡೆಯುತ್ತಿವೆ. ಇಂತಹ ಪವಿತ್ರ ಉದ್ದೇಶದಿಂದ ಆರಂಭಿಸಲ್ಪಟ್ಟ ಸಂಪ್ರದಾಯಗಳು ಚ್ಯುತಿಯಿಲ್ಲದೆ ಸಾಂಗೋಪಾಂಗವಾಗಿ ನಿಂತಿವೆ. ಸಂಪ್ರದಾಯಗಳು ಜನರನ್ನು ಉತ್ತಮಗೊಳಿಸಲೂ ಬಲ್ಲುವು; ಅವರಲ್ಲಿ ಮೂಢಭಕ್ತಿಯನ್ನು ಉಂಟುಮಾಡಲೂ ಬಲ್ಲವು. ಇದೇ ರೀತಿಯಾಗಿ ಈಗ್ಗೆ ಕೆಲವು ದಿನಗಳ ತನಕ ಈ ಹಿಂದೂರಾಜ್ಯದಲ್ಲಿಯೂ ಅಸ್ಪೃಶ್ಯತೆಯು ಒಂದು ಸಂಪ್ರದಾಯವಾಗಿ ಎಣಿಸಲ್ಪಟ್ಟಿದ್ದಿತು. ಇಲ್ಲಿ ಈ ಅಸ್ಪೃಶ್ಯತೆಯು ಎಷ್ಟರಮಟ್ಟಿಗೆ ರೂಢಮೂಲವಾಗಿದ್ದಿತೆನ್ನಲು ಹಲವು ಉದಾಹರಣೆಗಳಿವೆ. ಸಾದೃಶ್ಯಗಳಿವೆ

ತ್ರಿವೇಂಡ್ರಂ ನಗರದಲ್ಲಿರುವ 'ಮ್ಯೂಸಿಯಂ'ನಲ್ಲಿ ದಂತದಲ್ಲಿ ಮಾಡಿರುವ ಮಾನವನ ಅಸ್ಥಿಪಂಜರವೊಂದಿದೆ. ಇದು ಯಾರಿಂದಲೋ ಸುಮ್ಮನೆ ಬಹುಮಾನ ಪಡೆಯಲು ಮಾಡಲ್ಪಟ್ಟದ್ದಲ್ಲ. ಈಗ್ಗೆ ಎಪ್ಪತ್ತು ವರ್ಷಗಳ ಹಿಂದೆ ಈ ಸಂಸ್ಥಾನಕ್ಕೆ ದೊರೆಗಳಾಗಿದ್ದ ರಾಜ ಮಾರ್ತಾಂಡವರ್ಮ (ಮೊದಲನೆಯ ಮಾರ್ತಾಂಡರಲ್ಲ) ರವರಿಗಾಗಿ ಮಾಡಿದ್ದದು. ಇವರಿಗೆ ಮಾನವ ದೇಹ ರಚನ ವಿಧಾನವನ್ನು ತಿಳಿಯಬೇಕೆಂಬ ಅಭಿಲಾಷೆಯುಂಟಾಯಿತು. ಆದರೆ ಏನು ಮಾಡುವುದು? ಹಿಂದೂ ಸಂಪ್ರದಾಯರೀತ್ಯಾ ಅವರು ಮೂಳೆಗಳನ್ನು ಮುಟ್ಟುವಂತಿರಲಿಲ್ಲ. ಆದುದರಿಂದ ಮೂಳೆಗಳಂತೆಯೇ ದಂತದಲ್ಲಿ ಮಾನವನ ಅಸ್ಥಿಪಂಜರವನ್ನು ಮಾಡಿಸಿಕೊಂಡು ಅದರ ಸಹಾಯದಿಂದ ಮಾನವ ದೇಹರಚನಾ ವಿಧಾನವನ್ನು ತಿಳಿದುಕೊಂಡರು! ಇದೀಗ 'ಆ ಮ್ಯೂಸಿಯಂ'ನಲ್ಲಿರುವ ದಂತದ ಅಸ್ಥಿಪಂಜರದ ಇತಿಹಾಸ. ಈ ಅರಸರಿಗೆ ಸಂಬಂಧಪಟ್ಟ ಇನ್ನೊಂದು ಕಥೆಯಿದೆ. ಇಂಡಿಯಾದಲ್ಲಿ ಹುಟ್ಟಿ ಬಹುಕಾಲ ಇಂಡಿಯಾದಲ್ಲೇ ಸೈನ್ಯಾಧಿಕಾರಿಗಳಾಗಿದ್ದು ಅನಂತರ ಫೀಲ್ಡ್ ಮಾರ್ಷಲ್ ರಾಗಿದ್ದ ಲಾರ್ಡ್ ರಾಬರ್ಟ್ಸ್‌ರವರು ಒಂದು ಕಥೆಯನ್ನು ಹೇಳಿದ್ದಾರೆ.

ಆಗ ಮಹಾರಾಜರು ಲೇಡಿ ರಾಬರ್ಟ್ಸ್‌ರವರಿಗೆ ಹಸ್ತಲಾಘವ ಕೊಟ್ಟು ಅವರನ್ನು ಔತಣ ಮಂದಿರಕ್ಕೆ ಕರೆದುಕೊಂಡು ಹೋದದ್ದಲ್ಲದೆ ಔತಣಾನಂತರ ಆಕೆಯ ಕೈ ಹಿಡಿದುಕೊಂಡು ಗಾಡಿಯ ತನಕ ಬಂದು ಹತ್ತಿಸಿದರಂತೆ. ಮಹಾರಾಜರ ಈ ವರ್ತನೆಯನ್ನು ಕಂಡು ಅಲ್ಲಿನ ಬ್ರಾಹ್ಮಣರು ಅಸ್ಪೃಶ್ಯರನ್ನು ಮುಟ್ಟಿದ್ದಕ್ಕಾಗಿ ಮಹಾರಾಜರಿಗೆ ಕಠಿಣವಾದೊಂದು ಪ್ರಾಯಶ್ಚಿತ್ತವನ್ನು ಮಾಡಿಸಿದರಂತೆ! ಇಂತಹ ಕಠಿಣ ಸಂಪ್ರದಾಯಗಳಿದ್ದ ದೇಶದಲ್ಲಿ ಇಂದು ಅಸ್ಪೃಶ್ಯತೆಯು ಸಂಪೂರ್ಣವಾಗಿ ನಿವಾರಿಸಲ್ಪಟ್ಟಿದೆ. ಈ ಮಾರ್ಪಾಟಾಗುವಂತೆ ರಾಜಶಾಸನವನ್ನು ಹೊರಡಿಸಿ ಜಗದ್ವಿಖ್ಯಾತರಾದ ತರುಣ ಮಹಾರಾಜರವರು ಮೊನ್ನೆ ಆಟ್ಟಿಂಗಲ್ ಎಂಬ ಊರಿಗೆ ಹೋಗಿದ್ದಾಗ ಅಲ್ಲಿನ ಒಂದು ದೇವಾಲಯದಲ್ಲಿ ಅಸ್ಪೃಶ್ಯರ ಪೂಜಾದಿಗಳಿಗೆ ಅವಕಾಶಗಳನ್ನು ಕಲ್ಪಿಸಿರಲಿಲ್ಲವಾಗಿ ತಾವು ಆ ದೇವಾಲಯಕ್ಕೆ ಬರುವುದಿಲ್ಲವೆಂದು ಹೇಳಿಬಿಟ್ಟರಂತೆ! ಇದೀಗ ಈಗಿನ ಮಾರ್ಪಾಟು. ಆದ ಕಾರಣದಿಂದಲೇ ಮಹಾತ್ಮಾ ಗಾಂಧಿಜಿಯವರು ಈ ಹರಿಜನೋದ್ಧರಣ ಕಾರ್ಯದ ವಿಷಯವಾಗಿ ಭಾಷಣ ಮಾಡುತ್ತಾ "ಮುಂದೆ ತಿರುವಾಂಕೂರಿನ ವಿಷಯವಾಗಿ ಮಿಕ್ಕ ಎಲ್ಲಾ ವಿಷಯಗಳು ಮರೆತು ಹೋದಾಗ್ಯೂ ಮಹಾರಾಜರವರ ಆ ಒಂದು ಮಹಾಕಾರ್ಯವು ಮಾತ್ರ—(ಅಂದರೆ ದೇವಾಲಯಗಳಲ್ಲಿ ಹರಿಜನ ಪ್ರವೇಶಕ್ಕೆ ಅವಕಾಶ ಕಲ್ಪಿಸಿದ ಕಾನೂನನ್ನು ಜಾರಿಗೆ ತಂದದ್ದು) ಅನೇಕ ಶತಮಾನಗಳ ಪರ್ಯಂತ ಜನರ ನೆನಪಿನಲ್ಲಿ ಉಳಿಯುವುದು ಎಂದು ನಾನು ಭಾವಿಸುತ್ತೇನೆ" ಎಂದು ಹೇಳಿದರು.

(ಪ್ರಜಾಮತ

ತಾಳದೆ ಇರತಕ್ಕ ಮೂತ್ರವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧಿ.

ಡಾ. ಜಸಾನಿಯವರ ಜಗತ್ಪ್ರಸಿದ್ಧ

"ಗೊನೊಕಿಲರ್" (ರಿಜಿಸ್ಟರ್ಡ್)

GONO KILLER ORIGINAL

ನಕಲಿ ಮದ್ದುಗಳಿಗೆ ಮರುಳಾಗಿ ಮೋಸ ಹೋಗಬೇಡಿರಿ. ಕೊಂಡುಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಗಮನಿಸಿರಿ.

ಪ್ರಮೇಹ ವ್ಯಾಧಿಗೆ ಸಿದ್ಧೌಷಧ

ಇಂದಿನ ಅತ್ಯುತ್ತಮ ಔಷಧ. ಆಂಗ್ಲೇಯ ಮತ್ತು ಆಯುರ್ವೇದ ಔಷಧಿಗಳೊಂದೂ ಫಲಕಾರಿಯಾಗದೇ ಇನ್‌ಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ, ಒಂದಾವರ್ತಿಯಾದರೂ ಈ ನಮ್ಮ **ಗೋನೋಕಿಲರ್** ಎಂಬ ಔಷಧವನ್ನು ಉಪಯೋಗಿಸಿನೋಡಿರಿ. ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ, ಗೋನೋಕಿಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾತುವಿಕೆ, ಸರ್ವಪ್ರಕಾರದ ಪ್ರಮೇಹ (ಎಷ್ಟೇ ಹಳತು ಯಾ ಯಾವದೇ ಸ್ಥಿತಿಯಲ್ಲಿರಲಿ), ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತುಸ್ರಾವ, ಬಿಳುಪು ಹರಿಯುವದು ಇವೇ ಮೊದಲಾದ ಯಾವತ್ತು ಗೊನೋಕೋಕಸ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ

ಬೆಲೆ ೬೦ ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ. ೩—೦—೦ (ಮೂರು) ವಿ. ಪಿ ಖರ್ಚು ಬೇರೆ

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ, ಗಿರಿಗಾಂವ ಬ್ಯಾಕ್ ರೋಡ್, ಮುಂಬಯಿ ೪.

Sole Manufacturer Dr. D. N. JASANI, GIRGAUM BACK ROAD, BOMBAY

ಪತ್ರವ್ಯವಹಾರ

(ಬಾತ್ಮೀದಾರರು ತಮ್ಮ ಸಂಪೂರ್ಣ ವಿಳಾಸವನ್ನು ನಮಗೆ ಕೊಡಬೇಕಾಗಿದೆ. ಬಾತ್ಮಿಗಳು ಆದಷ್ಟು ಸಂಕ್ಷೇಪವಿದ್ದು ಕಾಗದದ ಒಂದೇ ಪುಟ್ಟದಲ್ಲಿ ಶಾಯಿಯಿಂದ ಬರೆಯಲ್ಪಟ್ಟು ಸ್ಪಷ್ಟವಾದ ಅಕ್ಷರಗಳಲ್ಲಿರಬೇಕು ಬಾತ್ಮೀದಾರರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ.)

ಸಂ ನ

ದಕ್ಷಿಣ ಕನ್ನಡ ಜಿಲ್ಲಾ ಪಾರ್ಲಿಮೆಂಟರಿ ಬೋರ್ಡಿನ ಅಧ್ಯಕ್ಷರಿಗೆ ಕುಂದಾಪುರ ಡಿವಿಜನಿಗೆ ಕಾಂಗ್ರೆಸ್ ಹುರಿಯಾಳಾಗಿ ನಿಂತಿರುವ ಶ್ರೀಯುತ ಎ. ಬಿ. ಶೆಟ್ಟರಿಗೆ ಉಡುಪಿ ತಾಲೂಕು ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಿಗೆ ಕೂಡಾ ಬಹಿರಂಗ ಪತ್ರ

ರಾಷ್ಟ್ರಪತಿ ಪಂಡಿತ ಜವಾಹಿರಲಾಲ ನೆಹರುಗಳವರು ದಕ್ಷಿಣ ಕನ್ನಡದಲ್ಲಿ ಚುನಾವಣಾ ಪ್ರವಾಸವನ್ನು ಕೈಕೊಳ್ಳುತ್ತಾರೆಂದು ತಿಳಿದಕೂಡಲೇ, ಮೂಲ್ಕಿಯಿಂದ ಪಡುಬಿದ್ರೆ, ಬೆಳ್ಮಣ್ಣು, ಶಿರ್ವಕ್ಕಾಗಿ ಕಟಪಾಡಿಗೆ ಹೋಗುವುದೆಂದು ನೀವು ಪ್ರಥಮ ಒಂದು ಕಾರ್ಯಕ್ರಮವನ್ನು ರಚಿಸಿಕೊಂಡದ್ದು ನಿಜವೋ? ಇದನ್ನು ಉಡುಪಿ ತಾಲೂಕು ಕಾಂಗ್ರೆಸ್ ಕಮಿಟಿಯ ಚಕ್‌ಬಂದಿಗೆ ಒಳಪಟ್ಟ ಕಾಪಿನ ಜನರು ತಿಳಿದು, ದ ಕ ಜಿ ಪಾ ಬೋರ್ಡಿನ ಅಧ್ಯಕ್ಷರಿಗೆ ಒಂದು ಮನವಿಯನ್ನು ಮಾಡಿಕೊಂಡಿರುವರೇ? ಆ ಮನವಿಯಲ್ಲಿ ಪಂಡಿತ ಜವಾಹಿರಲಾಲರನ್ನು ಕಾಪು ಮಾರ್ಗವಾಗಿ ತಂದು ಕಾಪಿನಲ್ಲಿ ನಿಲ್ಲಿಸಬೇಕೆಂತ ಕೇಳಿಕೊಂಡದ್ದುಂಟೋ? ಆದಕ್ಕೆ ತಾ 4-2-37ರಲ್ಲಿ ಉಡುಪಿಯ ಶ್ರೀ ಯು ಕರ್ಪೂರ್ತ್ತಮ ಶೆಟ್ಟರು ಪಂಡಿತರ ಕಾರ್ಯಕ್ರಮವೆಂಬ ಪ್ರಕಟಣೆಯನ್ನು ಕಾಪು ಕಾಂಗ್ರೆಸ್ ಆಫೀಸಿಗೆ ಪತ್ರಸಹಿತ ಕಳುಹಿಸಿದ್ದುಂಟೇ? ಅದರಲ್ಲಿ ಕಾಪು ಮತ್ತು ಪಡುಬಿದ್ರೆಗಳಲ್ಲಿ ಎರಡೆರಡು ನಿಮಿಷ ನಿಲ್ಲುತ್ತಾರೆಂದು ಪ್ರಕಟಿಸಲ್ಪಟ್ಟಿತ್ತೋ? ಆ ಪ್ರಕಾರ ಕಾಪಿನ ಜನರು ತಾ 11-2-37ರಲ್ಲಿ ಪೇಟೆಯಲ್ಲೆಲ್ಲಾ ತಳಿರು ತೋರಣಾದಿಗಳಿಂದ ಅಲಂಕರಿಸಿ, ಇಲ್ಲಿಯ ರಥಬೀದಿಯಲ್ಲಿ ಏಳೆಂಟು ಮೈಲು ದೂರದಿಂದ ಕೂಡಾ ಬೆಳಿಗ್ಗೆ 8 ಘಂಟೆಗೆ ಹೆಂಗಸರು ಮಕ್ಕಳು, ತರುಣರು ಮುದುಕರೆನ್ನದೆ ಸುಮಾರು ಎರಡು ಮೂರು ಸಾವಿರ ಜನರು ನೆರೆದಿರುತ್ತಾ ಆ ದಿನ ಕಾರ್ಯಕ್ರಮದಲ್ಲಿ ತೋರುವಂತೆ ಸಮಯಕ್ಕೆ ಸರಿಯಾಗಿ ಬಾರದೆ ಇದ್ದರೂ, ಜನರು ಮಾತ್ರ ಪಂಡಿತರನ್ನು ನೋಡುವ ಕಾಂಕ್ಷೆಯಿಂದ ಅನ್ನ ನೀರು ಬಿಟ್ಟು 11½ ಗಂಟೆವರೆಗೆ ಕಾದುಕೂತುಕೊಂಡು ಕೆಲವರು ಮಾರ್ಗದ ಬದಿಗಳಲ್ಲಿ ನಿಂತು ಪಂಡಿತರ ದರ್ಶನಕ್ಕಾಗಿ ಹಾತೊರೆಯುತ್ತಿರುವಾಗ ಉಡುಪಿ ತಾ ಕಾ ಕ ಅಧ್ಯಕ್ಷ ಶ್ರೀ ಪಾಂಗಾಳ ಮಂಜುನಾಥನಾಯ್ಕರು ಕಾರಿನಲ್ಲಿ ಪ್ರಥಮತ ಬಂದವರು ಇಲ್ಲಿನ ಸ್ವಾಗತದ ವಿಚಾರ, ನಿಲ್ದಾಣದ ವಿಚಾರ ಇಲ್ಲಿಯ ಜನರ ಕೂಡೆ ವಿಚಾರಿಸಿ ತಿಳಿದುಕೊಂಡಿರುತ್ತಾರೆಯೇ? ಹಾಗೆ ವಿಚಾರಿಸುವುದು ಈ ಕಾಪು ಉಡುಪಿ ತಾ ಕಾ ಕಮಿಟಿಗೆ ಸೇರಿದ್ದಾದ್ದರಿಂದ ಅವರಿಗೆ ಆಗತ್ಯವಿತ್ತೋ?–ಇಲ್ಲವೋ? ಹಾಗಾದರೆ ಕಾರ್ಯಕ್ರಮದಲ್ಲಿ ಸೇರಿರುವ ಕಾಪಿನಲ್ಲಿ ನಿಲ್ಲಿಸದಿರಲು ಕಾರಣವೇನು? ಸದ್ರಿ ಪಂಡಿತರು ಬಂದ ಕಾರಿನಲ್ಲಿ ನಮ್ಮತ್ತ ಕಡೆಯ ಹುರಿಯಾಳುಗಳಾದ ಶ್ರೀಯುತ ಎ ಬಿ ಶೆಟ್ಟರಿರುತ್ತಾ, ಸದರಿಯವರಿಗೆ ಕಾಪಿನ ಕಾರ್ಯಕ್ರಮ ತಿಳಿದಿದ್ದಿತಲ್ಲದೆ, ಕಾರ್ಯಕ್ರಮದಲ್ಲಿ ಈ ಊರು ಸೇರದೆಇದ್ದರೂ, ಇಲ್ಲಿ ಜಸ್ಟೀಸು ಪಾರ್ಟಿಯ ಕಡೆಯಿಂದ ಹೆಚ್ಚಿನ ಕೆಲಸ ನಡೆಯುತ್ತದೆ ಎಂಬುದು ಗೊತ್ತಿರುವಾಗ–ಜನರ ಮತವನ್ನು ಒಲಿಸಿಕೊಳ್ಳುವುದಕ್ಕಾದರೂ–ಖಾಸಗಿಯಿಂದ ಒಂದೆರಡು ನಿಮಿಷ ಪಂಡಿತರನ್ನು ನಿಲ್ಲಿಸುವ ಆಗತ್ಯವಿತ್ತೋ?–ಇಲ್ಲವೋ? ಆದುದರಿಂದ ಜನರ ಮನೋಗತವು ಈ ವರೆಗೆ ಕಾಂಗ್ರೆಸಿಗೆ ಸಂಪೂರ್ಣ ಒಲಿದಿರುವುದನ್ನು-ಈ ಒಂದು ಘಟನೆಯಿಂದ ಬದಲಾಯಿಸಿಕೊಳ್ಳುವಂತೆಮಾಡಿದ ಇದಕ್ಕೆ ಹೊಣೆಯಾರು? ಎಂಬುದಕ್ಕೆ ಸಾರ್ವಜನಿಕ ಕಾರ್ಯಗಳಲ್ಲಿ ತತ್ಪರರಾಗಿರುವ ಈ ಮೂರುವ ಒದಿಯೂ ಉತ್ತರಕೊಡಬೇಕಾಗಿ ಪ್ರಾರ್ಥನೆ

"ಕಾಂಗ್ರೆಸ್ ಹಿತೈಷಿ"
ಕಾಪು.
ತಾ. 12-2-37

ಕಾಪಿನ ಮಹಾಜನರ ಮನಸ್ಸಿಗೆ ತೀವ್ರ ವೇದನೆಯನ್ನುಂಟುಮಾಡಿದ ಈ ಪ್ರಮಾದದ ಕುರಿತು ವಿಚಾರಿಸಿದಾಗ 'ಪಂಡಿತ ನೆಹರುಗಳು ಬರುವಾಗ ರಸ್ತೆಯ ಬದಿಯಲ್ಲಿ ಪದ್ಧತಿಯಂತೆ ಜನಸಮೂಹವು ನೆರೆದಿರಲಿಲ್ಲ ಇದರಿಂದ ಪಂಡಿತರು ಬರುವಾಗ ಬಹಳ ತಡವಾಗಿದ್ದುದರಿಂದ ಜನರು ಚದರಿ ಹೋಗಿರಬೇಕೆಂದು ಭಾವಿಸಬೇಕಾಯಿತು' ಈ ಭಾವನೆಯನ್ನು ಮಾರಿಗುಡಿಯ ಸಮೀಪ ಸಮರ್ಪಿಸಲ್ಪಟ್ಟ ಹೂಮಾಲೆಯು ದೃಢಗೊಳಿಸಿತು ಹೀಗಾಗಿ ಅವರ ಕಾರು ಅಲ್ಲಿ ನಿಲ್ಲಲಿಲ್ಲ' ಎಂದು ತಿಳಿದುಬಂದಿದೆ ಈ ಕುರಿತು ಶ್ರೀ ಮಂಜುನಾಥ ನಾಯ್ಕರೊಂದು ಪ್ರಕಟಣೆ ಹೊರಡಿಸಿ ಮಹಾಜನರಲ್ಲಿ ಕ್ಷಮಾಯಾಚನೆಮಾಡಿರುವರು ಕಾಪಿನ ಮಹಾಜನರು ಈ ಪ್ರಮಾದದಿಂದ ನಿರುತ್ಸಾಹಗೊಳ್ಳದೆ ರಾಷ್ಟ್ರಪತಿಗಳ ಆಗಮನದ ಉದ್ದೇಶವನ್ನು ನೆರವೇರಿಸಲು ನೆರವಾಗುವರೆಂದು ನಂಬುತ್ತೇವೆ

ಸಂ ನ

ಸ್ವಾಗತ ಪತ್ರ.

ಅಖಿಲ ಭಾರತ ರಾಷ್ಟ್ರ ಸಭಾಧ್ಯಕ್ಷರಾದ ಶ್ರೀ ಪಂಡಿತ ಜವಾಹರಲಾಲ ನೆಹರುಗಳವರ ಸನ್ನಿಧಿಯಲ್ಲಿ—

ಪೂಜ್ಯ ರಾಷ್ಟ್ರಪತಿಗಳೇ,

ತಮ್ಮ ಚಿರಸ್ಮರಣೀಯವಾದ ಸಂದರ್ಶನಕ್ಕಾಗಿ ದಕ್ಷಿಣ ಕನ್ನಡ ಜಿಲ್ಲಾ ಒಕ್ಕಲಿಗರ ಸಹಕಾರ ಸಮಿತಿಯ ಸದಸ್ಯರಾದ ನಾವು ಅತ್ಯಂತಕಾಂಕ್ಷೆಯಿಂದ ಈ ತನಕ ಹಾತೊರೆಯುತ್ತಿದ್ದೆವು ಅಧಃಪತನ ಪರಮಾವಧಿಗಿಳಿದ, ದಾಸ್ಯ ಶೃಂಖಲೆಯಿಂದ ಬಿಗಿಯಲ್ಪಟ್ಟ, ನಮ್ಮ ದುರ್ಭಾಗ್ಯ ಜನ್ಮಭೂಮಿಯ ಭವಿತವ್ಯತೆಯ ಆಶಾಜ್ಯೋತಿಯಾಗಿ ಆರಿಸ್ಪಟ್ಟಿರುವ, ದಿವ್ಯ ಮಾತಾಪಿತೃಗಳ ಕೀರ್ತಿಯುತ ಕುಮಾರರಾಗಿರುವ ತಮಗೆ ಈ ಸುಸಂದರ್ಭದಲ್ಲಿ ನಾವು ನಮ್ಮ ವಿನೀತ ಪ್ರೇಮಾದರಗಳನ್ನು ಸಮರ್ಪಿಸುತ್ತೇವೆ

ನಾವು ಮಂಗಳೂರು ತಾಲೂಕಿನಲ್ಲಿರುವ ಕೊಳಂಬೆ, ಕೆಂದಾವರ ಮತ್ತು ಅದ್ಯಪಾಡಿ ಇವುಗಳಲ್ಲದೆ ಕಾರ್ಕಳ ತಾಲೂಕಿಗೆ ಸೇರಿದ ಪಾಲಡ್ಕ, ಪುತ್ತಿಗೆ ಮತ್ತು ಬೆಳುವಾಯಿ ಗ್ರಾಮಗಳ ರೈತರು ನಮ್ಮ ಎರಡು ಪಂಗಡಗಳು ದಕ್ಷಿಣಕನ್ನದ ಜಿಲ್ಲಾ ಒಕ್ಕಲಿಗರ ಸಹಕಾರ ಸಮಿತಿಗೆ ಸಂಬಂಧಿಸಿರುವವುಗಳಾಗಿವೆ ೧೯೩೦ನೆಯ ಇಸವಿಯಲ್ಲಿ ಪ್ರಾರಂಭಿಸಲ್ಪಟ್ಟ, ರಾಷ್ಟ್ರೀಯ ಧೋರಣೆಗಳಿಗನುಗುಣವಾಗಿರುವ ಮತ್ತು ಭಾರತರಾಷ್ಟ್ರಸಭೆಯ ಎಲ್ಲಾ ರಚನಾತ್ಮಕ ಕಾರ್ಯಕಲಾಪಗಳನ್ನು ಸ್ವೀಕರಿಸಿಕೊಂಡು ದುಡಿಯುತ್ತಿರುವ ರೈತರ ಸಂಸ್ಥೆಯೆಂದರೆ ಇಂದಿಗೆ ನಮ್ಮ ಜಿಲ್ಲೆಯಲ್ಲಿ ಇದೊಂದೇ ನಮ್ಮ ಸಂಸ್ಥೆಯು, ಇದರ ಸ್ಥಾಪಕ ಮತ್ತು ವ್ಯವಸ್ಥಾಪಕರೂ, ೧೯೩೦ನೇ ಇಸ್ಸವಿಯ ಸತ್ಯಾಗ್ರಹಿಗಳು ಆಗಿರುವ ಶ್ರೀ ಬಿ. ಟಿ ರೈ ಇವರ ಯೋಗ್ಯತೆಂಬಲದಿಂದ ನಡೆಯುತ್ತಿರುವುದೆಂದು ತಿಳಿಸಲು ನಾವು ಆನಂದಿಸುತ್ತೇವೆ

ಭಾರತದ ಇನ್ನಿತರ ಕಡೆಗಳಂತೆಯೇ, ಇಲ್ಲಿ ಕೂಡಾ ನಮ್ಮ ಪರಿಸ್ಥಿತಿಯು ಕಠಿಣವಾದುದಲ್ಲದೆ, ಹೃದಯವಿದ್ರಾವಕಗೊಳಿಸುವಂತಾಗಿದೆ ಹಳ್ಳಿಗಳಲ್ಲಿ ನಾವು ಸಮಾಜದಲ್ಲಿಯ ಅತ್ಯಂತ ಕೀಳುವರ್ಗದವರೆಂದು ಪರಿಗಣಿಸಲ್ಪಟ್ಟಿರುವೆವು ನಮ್ಮಲ್ಲಿ ಭೂಮಿ, ಧನ ಅಥವಾ ನಮ್ಮದೇ ಎಂದು ಕರೆಯುವಂತಹ ಯಾವ ಒಳ್ಳೆಯ ವಸ್ತುವೂ ಇಲ್ಲ ಹೆಚ್ಚೇಕೆ ನಮಗೆ ಸಾಕಷ್ಟು ಆಹಾರವಿಲ್ಲ, ಬಟ್ಟೆ ಬರೆಗಳಿಲ್ಲ ಮತ್ತು ತಂಗಿಕೊಳ್ಳಲು ಸರಿಯಾದ ವಸತಿ ಕೂಡಾ ಇರುವುದಿಲ್ಲ ಮಳೆಗಾಲದಲ್ಲಿ ಉದ್ಯೋಗ ಹೀನರಾಗಿ ನಾವು ಕಾಡುಮೃಗಗಳಂತೆ ಕಾಡಿನ ಗಡ್ಡೆ ಸೊಪ್ಪುಗಳನ್ನು ನಮ್ಮ ಜೀವನಕ್ಕಾಗಿ ಉಪಯೋಗಿಸಬೇಕಾಗುತ್ತದೆ ಕೆಲಸವಿರುವ ದಿನಗಳಲ್ಲಿ ನಾವು ಬೆವರು ಸುರಿಸಿ ದುಡಿಯುತ್ತಿರುವೆವಾದರೂ ಬೇಕಾದಷ್ಟು ಆಹಾರವನ್ನು ಗಳಿಸಲು ನಮಗೆ ಶಕ್ಯವಾಗುವದಿಲ್ಲ ಸಂಪತ್ಸಮೃದ್ಧಿಯುಳ್ಳ ನಮ್ಮ ಸ್ವರ್ಣಭೂಮಿಯಲ್ಲಿ ನಾವು ಜೀವಿಸುತ್ತಿರುವೆವಾದರೂ ಸದಾ ಬಳಲುತ್ತಿರುವುದೇ ನಮ್ಮ ಭಾಗ್ಯವಾಗಿದೆ. ಇವೆಲ್ಲವುಗಳ ಫಲವಾಗಿ ನಾವು ಹೊರಲಸಾಧ್ಯವಾದ ಸಾಲದ ಹೊರೆಯನ್ನು ಹೊತ್ತು ನಮ್ಮ ಜಮೀನ್ದಾರರ ಅಂತೂ ಬಂಡವಾಳಗಾರರ ಎಲ್ಲಾ ವಿಧದ ನಿರ್ದಾಕ್ಷಿಣ್ಯ ನಿಷ್ಕಾರುಣ್ಯ ಪೀಡೆಗಳಿಗೊಳಗಾಗಿರುವೆವು ಇಷ್ಟುಮಾತ್ರವಲ್ಲದೆ ನಮ್ಮ ಜೀವನಕ್ಕೆ ಅತ್ಯವಶ್ಯಕವಾದ ವಿಚಾರಗಳಮೇಲೆ ಕೂಡಾ ವಿವಿಧ ರೀತಿಯಲ್ಲಿ ಹೊರಿಸಿರುವ ತೆರಿಗೆಯ ಬಾಧೆಗೊಳಗಾಗಿರುವೆವು ಈಗ ನಾವು ಸಮಾಜದ ಅಂತೂ ಆರ್ಥಿಕ ಗಂಡಾತರದ ಮಡುವಿನಲ್ಲಿ ಬಿದ್ದು ನರಳುತ್ತಿದ್ದೇವೆ ನಮ್ಮ ನಿಸ್ಸಹಾಯಕ ಪರಿಸ್ಥಿತಿಯಲ್ಲಿ ನಾವು ರಾಷ್ಟ್ರದ ಏಕಮಾತ್ರ ಪ್ರಮುಖ ಸಂಸ್ಥೆಯಾದ ಅಖಿಲಭಾರತ ರಾಷ್ಟ್ರ ಸಭೆಯಲ್ಲಿ ವಿಶ್ವಾಸವನ್ನಿಟ್ಟುಕೊಂಡಿರುವೆವಲ್ಲದೆ ಆ ಸಂಸ್ಥೆಯು ನಮ್ಮನ್ನು ಜೀವಂತ ಸ್ಥಿತಿಯಲ್ಲಿರಿಸುವಂತೆ ಮಾಡುವುದೆಂದು ಭರವಸೆಯಿಂದಿದ್ದು ಅದರ ಸಹಾಯವನ್ನು ಕೋರುತ್ತಿದ್ದೇವೆ ಸಾಮೂಹಿಕ ಸಂಬಂಧವನ್ನು ಬೆಳೆಸಿ, ಬಡಜನತೆಯ ದಾರಿದ್ರ್ಯವನ್ನು ನಿವಾರಿಸಲು ಹೊರಡಬೇಕೆಂಬ ಕಾಂಗ್ರೆಸಿನ ನಿರ್ಣಯ ಮತ್ತು ಪ್ರಯತ್ನಗಳ ಕುರಿತು ನಾವು ಎಷ್ಟೋ ಬಾರಿ ಕೇಳಿರುತ್ತೇವೆ ಈ ವಾರ್ತೆಯು ನಮಗೆ ಆನಂದವನ್ನುಂಟುಮಾಡಿರುವದಲ್ಲದೆ ನಮ್ಮ ಹೃದಯದ ಆಶಾಜ್ಯೋತಿಯನ್ನು ಬೆಳಗಿಸುವುದು ಹೇಗಿದ್ದರೂ, ನಮ್ಮ ಏಕಮಾತ್ರ ಕೋರಿಕೆಯೆಂದರೆ, ಸಾಮೂಹಿಕ ಸಂಬಂಧವು ಪ್ರಕೃತದ ಪರಿಸ್ಥಿತಿಗನುಗುಣವಾಗಿ ಫಲದಾಯಕವಾಗಬೇಕಾದರೆ ಆ ಯತ್ನವು ಇಂದಿನ ಹಾಗೂ ಮುಂದಿನ ಕುರಿತು ದೀರ್ಘದೃಷ್ಟಿಯುಳ್ಳದ್ದಾಗಿರಬೇಕು.

ಅದು ನಮ್ಮನ್ನು—ಈಗಿನ ಸಂಕಷ್ಟದಿಂದ ದುಃಖದಾರಿದ್ರ್ಯ ಮೊದಲಾದವುಗಳಿಂದ ದೂರಗೊಳಿಸಿ ನಮ್ಮ ಸಾಮಾಜಿಕ ಆರ್ಥಿಕ ಮತ್ತು ರಾಜಕೀಯ ಭವಿತವ್ಯತೆಯನ್ನು ಕಾಯಬೇಕು ಅದು ಕ್ರಮಪ್ರಕಾರವಾಗಿ, ಶಕ್ತಿಪೂರ್ವಕವಾಗಿ, ಉತ್ಸುಕತೆಯಿಂದ ನಡೆಯವೇಕು ಪ್ರತಿನಿಧಿಕ ಭರಣವು ಬೇಕೆಂದು ಕಂಡಲ್ಲಿ ನಮ್ಮ ನೈಜ ಪ್ರತಿನಿಧಿಗಳನ್ನು ಕಳುಹಿಸಲು ಯೋಗ್ಯ ಏರ್ಪಾಡುಗಳು ನಡೆಯಬೇಕು, ದೀನದಲಿತರ ಕರುಣಾಮಯ ಪರಿಸ್ಥಿತಿಯ ನಿವಾರಣೆಗೆ ಹೆಚ್ಚಿನ ಪ್ರಾಮುಖ್ಯತೆಯನ್ನೀಯುವ ಪುಣ್ಯಪ್ರಭೃತಿಗಳಾದ ಮುಂದಾಳುಗಳಲ್ಲಿ ತಾವೊಬ್ಬರು ನಮ್ಮ ಮಾತುಗಳಿಗಿಂತಲೂ ಕಾರ್ಯಗಳೇ ಎದೆಯೊಡ್ಡಿ ಮುಂಬರಿದಿವೆ ಸಾಂಸಾರಿಕ ಎಡರುಗಳನ್ನು ಕೂಡಾ ಲಕ್ಷಿಸದೆ ತಾವು ಮಾಡಿರುವ ತ್ಯಾಗಗಳೆಷ್ಟೋ ವಿವಿಧ ರೀತಿಗಳದ್ದಾಗಿವೆ ತಾವು ತಮ್ಮಾತ್ಮವನ್ನು ಸಾಂಸ್ಕೃತಿಕ ಜಗತ್ತಿನಲ್ಲಿಯ ಶ್ರೇಷ್ಠವೂ, ಪವಿತ್ರವೂ ಸೌಂದರ್ಯಮಯವೂ, ಸತ್ಯವೂ ಮತ್ತು ಘನವೂ ಆಗಿರುವ ತತ್ವಗಳಿಂದ ತುಂಬಿ ತುಳುಕಿಸಿ, ತಮ್ಮ ಸರ್ವಸ್ವವನ್ನೂ ಜನ್ಮದಾತೆಯ ಪಾದಕಮಲಗಳಿಗರ್ಪಿಸಿರುವಿರಿ ತಾವು ಮೂರುಸಾರಿ ಆರಿಸಲ್ಪಟ್ಟ ನಮ್ಮ ರಾಷ್ಟ್ರಾಧಿಪತಿಗಳು ತಮ್ಮಲ್ಲಿ ನಮಗೆ ಅಚಲ ಭರವಸೆಯಿದೆ ನಮ್ಮೊಲವಿನ ರಾಷ್ಟ್ರಪತಿಗಳೇ, ತಾವು ರೈತರಕುರಿತು ಚಿಂತಿಸುವಾಗ ನಮ್ಮ ನೆನಪು ತಮಗಿರಲಿ, ಮಾತ್ರವಲ್ಲ ನಮ್ಮನ್ನು ಶಾಂತಿ ಸುಖ ಸಂಪತ್ತಿನ ಆ ಸ್ವಾತಂತ್ರ್ಯ ಗುರಿಗೊಯ್ಯಿರೆಂದು ಈಮೂಲಕ ವಿನಯಭಾವದಿಂದ ಪ್ರಾರ್ಥಿಸುವೆವು

ನಮ್ಮ ಜಿಲ್ಲೆಗೆ ತಾವು ತಮ್ಮ ದರ್ಶನವಿತ್ತುದಕ್ಕಾಗಿ ನಾವು ತಮಗೆ ಸದಾ ಋಣಿಗಳಾಗಿರುವೆವು ಮತ್ತು ತಮ್ಮ ಮುಂದಿನ ಪಯಣವು ಸುಖದಾಯಕವಾಗಿ ತಮಗೆ ಚಿರಾಯುರಾರೋಗ್ಯವು ಲಭಿಸಲೆಂದು ಪ್ರಾರ್ಥಿಸುವೆವು

ಕೊಳಂಬೆ, ಕೆಂದಾವರ, ಅದ್ಯಪಾಡಿ, ಪಾಲಡ್ಕ ಪುತ್ತಿಗೆ ಮತ್ತು ಬೆಳುವಾಯಿ ಗ್ರಾಮಗಳ ರೈತರು

ವ್ಯವಸ್ಥಾಪಕ:- ಬಿ. ಟಿ ರೈ

ಬಾಲವಾಙ್ಮಯದ ಆವಶ್ಯಕತೆ ಮತ್ತು ನಿರ್ಮಾಣದ ವಿಷಯಕವಾದ ಪ್ರಬಂಧ

ಬಾಲವಾಙ್ಮಯ

ಬೆಲೆ ಮೂರಾಣೆ

ಉಪಾಧ್ಯಾಯರ ಪ್ರಕಟನ ಸಮಿತಿ, ಉಡುಪಿ.

ಸುವರ್ಣ ತಾಯಿತಿ! ಧರ್ಮಾರ್ಥ ಭಂಗಾರದ ತಾಯಿತಿ!
ಹಿಮಾಲಯ ಪರ್ವತದಲ್ಲಿ ವರ್ಷಗಟ್ಟಲೆ ತಪಸ್ಸು ಮಾಡಿ
ಸಿದ್ಧಿಯನ್ನು ಪಡೆದ ಮಹಾ ಯೋಗೀಶ್ವರರಿಂದ
ಕಂಡು ಹಿಡಿಯಲ್ಪಟ್ಟದ್ದು.

ಈ ತಾಯಿತಿಯನ್ನು

ಧರಿಸಿದ ಮಾತ್ರದಿಂದ ಸಕಲ ಇಷ್ಟಾರ್ಥಗಳೂ ನೆರವೇರುವುವು.
ಪರೀಕ್ಷಿಸಲಪೇಕ್ಷಿಸುವವರು
"ಯೋಗೀಶ್ವರರ ಶಕ್ತಿಸಾಹಸ"
ಎಂಬ ಪುಸ್ತಕವನ್ನು ಧರ್ಮಾರ್ಥವಾಗಿ ಪಡೆಯಬಹುದು.
ಪತ್ತೆ:—ಪಂಡಿತ್ ಎ. ವಿ. ಆರಮುಮ್
ಚಿಕಾಕೋಲ್

ಬ್ರೇಕ್ ಪಿಲ್ಸು

ಸ್ತ್ರೀಪುರುಷರಿಗೆ ಆನಂದವನ್ನುಂಟುಮಾಡುವುದು ಈ ಮಾತ್ರೆಗಳೇ. ಮದಿಸಿದ ಸ್ತ್ರೀಯರ ಗರ್ವ ಭಂಗಮಾಡಲು ಕಂಡು ಹಿಡಿದಿರುವ ಮಾತ್ರೆಗಳಿವು. ಇದರಲ್ಲಿ ವಿಷಾದಿಗಳು ಸೇರಿಲ್ಲ, ಕಸ್ತೂರಿ, ಚಿನ್ನ ಹಿಮಾಲಯಪರ್ವತದ ವನಮೂಲಿಕೆಗಳು ಮುಂತಾದುವುಗಳಿಂದ ದೊಡ್ಡ ಯೋಗೀಶ್ವರರ ಹತ್ತಿರ ಸಂಗ್ರಹಿಸಿ ಮುದುಕತನವನ್ನು ಲೋಕದಲ್ಲಿ ಇಲ್ಲದಂತೆ ಮಾಡುವುದು. ಅರ್ಧ ಘಂಟೆಯೊಳಗಾಗಿ ವೀರ್ಯವನ್ನು ಕಲ್ಲಿನಂತೆ ಮಾಡಿ ರಮಿಸಲು ಉಲ್ಲಾಸವನ್ನು ಮಾಡುವುದು. ಗುಣವಿಲ್ಲದಿದ್ದಲ್ಲಿ ಹಣ ವಾಪಸು. ೬೦ ಮಾತ್ರೆಗಳು ರೂ. ೫-೦-೦ ೩೦ ಮಾತ್ರೆಗಳು ರೂ. ೩-೦-೦ ಕಾಗದ ಪತ್ರಗಳು ಇಂಗ್ಲೀಷಿನಲ್ಲಿಯೇ.

ಡಾ. ಎ. ಎಸ್. ಮೂರ್ತಿ,
ಚಿಕಾಗೋಲ್, ಗಂಜಾಮ್ ಡಿಸ್ಟ್ರಿಕ್ಟ್.

= ತಿರುವಾಂಕೂರಿನ ಮಹಾರಾಜರಿಗೆ =

'ಪದ್ಮನಾಭದಾಸ' ಎಂಬ ಬಿರುದು ಹೇಗೆ ಬಂತು?

ತಿರುವಾಂಕೂರಿನ ಮಹಾರಾಜರ ಬಿರುದಾದ "ಪದ್ಮನಾಭ ದಾಸ" ಎಂಬುವು ೨೦೦ ವರ್ಷಗಳಿಂದಲೂ ವಾಡಿಕೆಯಲ್ಲಿದೆ. ಇಲ್ಲಿನ ಅರಸರು ಈ ಬಿರುದನ್ನು ಧರಿಸುವುದು ಮಾತ್ರವೇ ಅಲ್ಲ; ಬಿರುದಿಗನುಸಾರವಾಗಿ ನಡೆದುಕೊಂಡೂ ಬರುತ್ತಿದ್ದಾರೆ. ಮಹಾರಾಜರು ರಾಜಧಾನಿಯಲ್ಲಿ ಇರುವಷ್ಟು ಕಾಲವೂ ಪ್ರತಿದಿನವೂ ತಮ್ಮ ಕುಲದೇವರಾದ ಶ್ರೀಮದನಂತಪದ್ಮನಾಭ ಸ್ವಾಮಿಯನ್ನು ಪೂಜಿಸುತ್ತಾರೆ, ಯಾವುದಾದರೂ ಪರಸ್ಥಳಕ್ಕೆ ಹೋಗುವಂತಿದ್ದರೆ ಊರು ಬಿಟ್ಟು ಹೊರಡುವಾಗ ದೇವಾಲಯಕ್ಕೆ ಹೋಗಿ ಪೂಜಿಸಿ ಹೋಗುತ್ತಾರೆ. ಮತ್ತೆ ರಾಜಧಾನಿಗೆ ಬಂದ ಕೂಡಲೆ ಮೊದಲು ದೇವಾಲಯದಲ್ಲಿ ಪೂಜೆ ಮಾಡಿ ಅನಂತರ ಆಡಳಿತದ ಕಾರ್ಯಭಾರವನ್ನು ನೋಡುತ್ತಾರೆ. ಈ "ಪದ್ಮನಾಭದಾಸ" ಎಂಬ ಬಿರುದನ್ನು ಇಲ್ಲಿನ ಮಹಾರಾಜರುಗಳು ಎಂದಿನಿಂದ ಧರಿಸುತ್ತಿದ್ದಾರೆಂಬ ವಿಚಾರವಾಗಿ ತಿಳಿದು ಬಂದಿರುವ ವಿವರಗಳಿವು.— ಕ್ರಿ. ಶ. ೧೭೨೯ರಿಂದ ೧೭೫೮ರ ತನಕ ತಿರುವಾಂಕೂರು ರಾಜ್ಯವನ್ನು ಆಳಿ ಕೀರ್ತಿಶಾಲಿಗಳಾದ ರಾಜಾ ಮಾರ್ತಾಂಡ ವರ್ಮರವರೇ ಈ ಬಿರುದನ್ನು ಧರಿಸಲು ಮೊದಲನೆಯವರೆಂದು ತಿಳಿದು ಬಂದಿದೆ. ಈ ಮಾರ್ತಾಂಡವರ್ಮರವರು ಮಹಾಬಲಶಾಲಿಗಳು. ತಮ್ಮ ಭುಜಬಲ ಪರಾಕ್ರಮದಿಂದಲೂ, ಶ್ರೀಮದನಂತಪದ್ಮನಾಭ ಸ್ವಾಮಿಯವರಲ್ಲಿ ಇವರಿಗಿದ್ದ ಅಚಲ ಭಕ್ತಿಯಿಂದಲೂ, ವಿರೋಧಿಗಳನ್ನೆಲ್ಲಾ ಸೋಲಿಸಿ ೧೭೨೯ರಲ್ಲಿ ಸಿಂಹಾಸನವನ್ನು ಹತ್ತಿದರು. ಸಿಂಹಾಸನಾರೂಢರಾದ ಮೇಲೆ ತಾವೂ ತಮ್ಮ ಪ್ರಧಾನಿಗಳೂ ಸೇರಿ ರಾಜ್ಯದಲ್ಲಿ ಐಕಮತ್ಯವನ್ನುಂಟುಮಾಡಿ ಅಧಿಕಾರದ ಬಿಗಿಯೂ ಶಿಸ್ತೂ ನಿಲ್ಲುವಂತೆ ಮಾಡಿದರು. ಅನಂತರ ಶ್ರೀ ಪದ್ಮನಾಭ ಸ್ವಾಮಿಯವರ ದೇವಾಲಯವನ್ನು ಹೊಸದಾಗಿ ಕಟ್ಟಿಸಿ ನಿತ್ಯೋತ್ಸವ, ಪಕ್ಷೋತ್ಸವ ಮಾಸೋತ್ಸವ, ಸಂವತ್ಸರೋತ್ಸವಗಳೇ ಮುಂತಾದ ಅನೇಕ ಉತ್ಸವಗಳನ್ನೇರ್ಪಡಿಸಿ ಅವುಗಳನ್ನು ಸಾರೋದ್ಧಾರವಾಗಿ ನಡೆಸಿಕೊಂಡು ಬರುವುದಕ್ಕೆ ತಸ್ತೀಕುಗಳನ್ನು ನಿಬಂಧನೆ ಮಾಡಿದರು. ಈ ಮಹಾರಾಜರು ತಮ್ಮ ಯೌವನದಲ್ಲಿ ವೀರಾವೇಶದಿಂದ ಒರೆಯಿಂದೆಳೆದು ಪ್ರಯೋಗಿಸುತ್ತಿದ್ದ ಕತ್ತಿಯನ್ನು ಬಹುಕಾಲ ಒರೆಯೊಳಗಿಡಲೇ ಇಲ್ಲ. ಅಷ್ಟು ಕಾಲವೂ ತಮ್ಮ ವಿರೋಧಿಗಳನ್ನು ಸದೆಬಡಿದು ರಾಜ್ಯದಲ್ಲಿ ಶಿಸ್ತನ್ನು ಸ್ಥಾಪಿಸುವುದರಲ್ಲೇ ಆಗಿಹೋಗಿತ್ತು. ರಾಜ್ಯದಲ್ಲಿ ಪ್ರತಿ ಕಕ್ಷಿಗಳ ಬಾಧೆಯೇನೂ ಇಲ್ಲವೆಂದು ಚೆನ್ನಾಗಿ ಮನಗಂಡಮೇಲೆ, ತಮ್ಮ ಕತ್ತಿಯನ್ನು ಮೊದಲಿನಂತೆ ಪ್ರಯೋಗಿಸಬೇಕಾಗಿಲ್ಲವೆಂದು ತಿಳಿದು ಬಂದ ಮೇಲೆ, ಇವರು ತಮ್ಮ ಕತ್ತಿಯನ್ನು ಒರೆಯೊಳಗಿಟ್ಟು, ಅದನ್ನು ತಮ್ಮ ಕುಲದೈವವಾದ ಶ್ರೀ ಪದ್ಮನಾಭಸ್ವಾಮಿಯ ಮುಂದಿಟ್ಟರು. ಅನಂತರ ಅದನ್ನು ತಮ್ಮ ಆರಾಧ್ಯ ಕುಲದೈವದ ಪ್ರತಿನಿಧಿಯೆಂದು ಭಾವಿಸಿ ಪುನಃ ಧರಿಸಿಕೊಂಡರು.

ಈ ಕಾರ್ಯದ ಅಂತರಾರ್ಥವೇನೆಂದರೆ 'ನಾನೀ ಕತ್ತಿಯಿಂದ ಜಯಿಸಿರುವ ಈ ರಾಜ್ಯವೆಲ್ಲವನ್ನೂ ನಿನಗೆ ಅರ್ಪಿಸಿದ್ದೇನೆ. ನಾನೀಗ ನಿನ್ನ ಸೇವಕ. ಈ ಕತ್ತಿಯೇ ನಿನ್ನ ಪ್ರತಿನಿಧಿ. ನಾನು ಸೇವಕನಂತೆ ಈ ಕತ್ತಿಯನ್ನು ಧರಿಸಿ, ನಿನಗೋಸುಗ ಈ ಘೋರೆತನವನ್ನು ಕೈಕೊಳ್ಳುತ್ತೇನೆ' ಎಂಬುದು. ಈ ಪೂರ್ವವೂ ಸಾಂಕೇತಿಕವೂ ಆದ ಈ ಕಾರ್ಯದಿಂದ ತಾವು ಹೊಸದಾಗಿ ಗೆದ್ದು ವಶಪಡಿಸಿಕೊಂಡಿದ್ದ ರಾಜ್ಯವೆಲ್ಲವೂ ಭಗವದರ್ಪಿತವಾದಂತಾಯಿತು. ಹೀಗೆ ತಿರುವಾಂಕೂರಿನ ಮಹಾರಾಜರು ಅಂದಿನಿಂದಲೂ ತಮ್ಮ ಹೆಸರುಗಳ ಜತೆಗೆ 'ಶ್ರೀ ಪದ್ಮನಾಭದಾಸ' ಎಂಬ ಬಿರುದನ್ನು ಸೇರಿಸಿಕೊಳ್ಳುತ್ತಾ ಬಂದರು ತಾವು ತಮ್ಮ ರಕ್ಷಕ ದೈವದ ಸಾಮಂತರೆಂದು ಹೇಳಿಕೊಂಡರು

ಇದೀಗ ಈ ಬಿರುದಿನ ಕಥೆ

ಹೀಗೆ ಇನ್ನೂರು ವರ್ಷಗಳ ಹಿಂದೆ ಆ ಮಾರ್ತಾಂಡ ವರ್ಮರವರು ಏರ್ಪಡಿಸಿದ್ದ ಪವಿತ್ರ ದೇವಾರಾಧನೆಗಳು ಮುಂತಾದ ಸಮಸ್ತ ಪೂಜೆ ಪುರಸ್ಕಾರಗಳೂ ಇಂದಿಗೂ ನಡೆಯುತ್ತಿವೆ. ಇಂತಹ ಪವಿತ್ರ ಉದ್ದೇಶದಿಂದ ಆರಂಭಿಸಲ್ಪಟ್ಟ ಸಂಪ್ರದಾಯಗಳು ಚ್ಯುತಿಯಿಲ್ಲದೆ ಸಾರೋದ್ಧಾರವಾಗಿ ನಿಂತಿವೆ ಸಂಪ್ರದಾಯಗಳು ಜನರನ್ನು ಉತ್ತಮಗೊಳಿಸಲೂ ಬಲ್ಲುವು; ಅವರಲ್ಲಿ ಮೂಢಭಕ್ತಿಯನ್ನು ಉಂಟುಮಾಡಲೂ ಬಲ್ಲವು. ಇದೇ ರೀತಿಯಾಗಿ ಈಗ್ಗೆ ಕೆಲವು ದಿನಗಳ ತನಕ ಈ ಹಿಂದೂರಾಜ್ಯದಲ್ಲಿಯೂ ಅಸ್ಪೃಶ್ಯತೆಯೂ ಒಂದು ಸಂಪ್ರದಾಯವಾಗಿ ಎಣಿಸಲ್ಪಟ್ಟಿದ್ದಿತು ಇಲ್ಲಿ ಈ ಅಸ್ಪೃಶ್ಯತೆಯು ಎಷ್ಟರಮಟ್ಟಿಗೆ ರೂಢಮೂಲವಾಗಿದ್ದಿತೆನ್ನಲು ಹಲವು ಉದಾಹರಣೆಗಳಿವೆ. ಸಾದೃಶ್ಯಗಳಿವೆ

ತ್ರಿವೇಂಡ್ರಂ ನಗರದಲ್ಲಿರುವ 'ಮ್ಯೂಸಿಯಂ'ನಲ್ಲಿ ದಂತದಲ್ಲಿ ಮಾಡಿರುವ ಮಾನವನ ಅಸ್ಥಿಪಂಜರವೊಂದಿದೆ. ಇದು ಯಾರಿಂದಲೂ ಸುಮ್ಮನೆ ಬಹುಮಾನ ಪಡೆಯಲು ಮಾಡಲ್ಪಟ್ಟದ್ದಲ್ಲ ಈಗ್ಗೆ ಎಪ್ಪತ್ತು ವರ್ಷಗಳ ಹಿಂದೆ ಈ ಸಂಸ್ಥಾನಕ್ಕೆ ದೊರೆಗಳಾಗಿದ್ದ ರಾಜ ಮಾರ್ತಾಂಡವರ್ಮ (ಮೊದಲನೆಯಮಾರ್ತಾಂಡರಲ್ಲ) ರವರಿಗಾಗಿ ಮಾಡಿದ್ದದು. ಇವರಿಗೆ ಮಾನವ ದೇಹ ರಚನ ವಿಧಾನವನ್ನು ತಿಳಿಯಬೇಕೆಂಬ ಅಭಿಲಾಷೆಯುಂಟಾಯಿತು. ಆದರೆ ಏನುಮಾಡುವುದು? ಹಿಂದೂ ಸಂಪ್ರದಾಯರೀತ್ಯಾ ಅವರು ಮೂಳೆಗಳನ್ನು ಮುಟ್ಟುವಂತಿರಲಿಲ್ಲ. ಆದುದರಿಂದ ಮೂಳೆಗಳಂತೆಯೇ ದಂತದಲ್ಲಿ ಮಾನವನ ಅಸ್ಥಿಪಂಜರವನ್ನು ಮಾಡಿಸಿಕೊಂಡು ಅದರ ಸಹಾಯದಿಂದ ಮಾನವ ದೇಹರಚನಾ ವಿಧಾನವನ್ನು ತಿಳಿದುಕೊಂಡರು! ಇದೀಗ 'ಆ ಮ್ಯೂಸಿಯಂ'ನಲ್ಲಿರುವ ದಂತದ ಅಸ್ಥಿಪಂಜರದ ಇತಿಹಾಸ ಈ ಅರಸರಿಗೆ ಸಂಬಂಧಪಟ್ಟ ಇನ್ನೊಂದು ಕಥೆಯಿದೆ. ಇಂಡಿಯಾದಲ್ಲಿ ಹುಟ್ಟಿ ಬಹುಕಾಲ ಇಂಡಿಯಾದಲ್ಲೇ ಸೈನ್ಯಾಧಿಕಾರಿಗಳಾಗಿದ್ದು ಅನಂತರ ಫೀಲ್ಡ್ ಮಾರ್ಷಲ್ ರಾಗಿದ್ದ ಲಾರ್ಡ್ ರಾಬರ್ಟ್ಸ್‌ರವರು ಒಂದು ಕಥೆಯನ್ನು ಹೇಳಿದ್ದಾರೆ.

ಆಗ ಮಹಾರಾಜರು ಲೇಡಿ ರಾಬರ್ಟ್ಸ್‌ರವರಿಗೆ ಹಸ್ತಲಾಘವ ಕೊಟ್ಟು ಅವರನ್ನು ಔತಣ ಮಂದಿರಕ್ಕೆ ಕರೆದುಕೊಂಡು ಹೋದದ್ದಲ್ಲದೆ ಔತಣಾನಂತರ ಆಕೆಯ ಕೈ ಹಿಡಿದುಕೊಂಡು ಗಾಡಿಯ ತನಕ ಬಂದು ಹತ್ತಿಸಿದರಂತೆ. ಮಹಾರಾಜರ ಈ ವರ್ತನೆಯನ್ನು ಕಂಡು ಅಲ್ಲಿನ ಬ್ರಾಹ್ಮಣರು ಅಸ್ಪೃಶ್ಯರನ್ನು ಮುಟ್ಟಿದ್ದಕ್ಕಾಗಿ ಮಹಾರಾಜರಿಗೆ ಕಠಿಣವಾದೊಂದು ಪ್ರಾಯಶ್ಚಿತ್ತವನ್ನು ಮಾಡಿಸಿದರಂತೆ! ಇಂತಹ ಕಠಿಣ ಸಂಪ್ರದಾಯಗಳಿದ್ದ ದೇಶದಲ್ಲಿ ಇಂದು ಅಸ್ಪೃಶ್ಯತೆಯು ಸಂಪೂರ್ಣವಾಗಿ ನಿವಾರಿಸಲ್ಪಟ್ಟಿದೆ. ಈ ಮಾರ್ಪಾಟಾಗುವಂತೆ ರಾಜಶಾಸನವನ್ನು ಹೊರಡಿಸಿ ಜಗದ್ವಿಖ್ಯಾತರಾದ ತರುಣ ಮಹಾರಾಜರವರು ಮೊನ್ನೆ ಆರ್ಟಿಂಗಲ್ ಎಂಬ ಊರಿಗೆ ಹೋಗಿದ್ದಾಗ ಅಲ್ಲಿನ ಒಂದು ದೇವಾಲಯದಲ್ಲಿ ಅಸ್ಪೃಶ್ಯರ ಪೂಜಾದಿಗಳಿಗೆ ಅವಕಾಶಗಳನ್ನು ಕಲ್ಪಿಸಿರಲ್ಲವಾಗಿ ತಾವು ಆ ದೇವಾಲಯಕ್ಕೆ ಬರುವುದಿಲ್ಲವೆಂದು ಹೇಳಿಬಿಟ್ಟರಂತೆ! ಇದೀಗ ಈಗಿನ ಮಾರ್ಪಾಟು. ಆದುದರಿಂದಲೆ ಮಹಾತ್ಮಾ ಗಾಂಧಿಜಿಯವರು ಈ ಹರಿಜನೋದ್ಧರಣ ಕಾರ್ಯದ ವಿಷಯವಾಗಿ "ಭಾಷಣಮಾಡುತ್ತಾ, "ಮುಂದೆ ತಿರುವಾಂಕೂರಿನ ವಿಷಯವಾಗಿ ಮಿಕ್ಕ ಎಲ್ಲಾ ವಿಷಯಗಳು ಮರೆತು ಹೋದಾಗ್ಯೂ ಮಹಾರಾಜರವರ ಆ ಒಂದು ಮಹಾಕಾರ್ಯವು ಮಾತ್ರ—(ಅಂದರೆ ದೇವಾಲಯಗಳಲ್ಲಿ ಹರಿಜನ ಪ್ರವೇಶಕ್ಕೆ ಅವಕಾಶ ಕಲ್ಪಿಸಿದ ಕಾನೂನನ್ನು ಜಾರಿಗೆ ತಂದದ್ದು) ಅನೇಕ ಶತಮಾನಗಳ ಪರ್ಯಂತ ಜನರ ನೆನಪಿನಲ್ಲಿ ಉಳಿಯುವುದು ಎಂದು ನಾನು ಭಾವಿಸುತ್ತೇನೆ" ಎಂದು ಹೇಳಿದರು.

(ಪ್ರಜಾಮತ

ತಾಳದೆ ಇರತಕ್ಕ ಮೂತ್ರವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧಿ.

ಡಾ. ಜಸಾನಿಯವರ ಜಗತ್ಪ್ರಸಿದ್ಧ

"ಗೋನೋಕಿಲರ್" (ರಿಜಿಸ್ಟರ್ಡ್)



ಪ್ರಮೇಹ ವ್ಯಾಧಿಗೆ ಸಿದ್ಧೌಷಧ

ಇಂದಿನ ಅಪ್ರತಿಮ ಔಷಧ ಆಂಗ್ಲೇಯ ಮತ್ತು ಆಯುರ್ವೇದ ಔಷಧಿಗಳಿಂದೂ ಫಲಕಾರಿಯಾಗದೇ ಇನ್‌ಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ, ಒಂದಾವರ್ತಿಯಾದರೂ ಈ ನಮ್ಮ **ಗೋನೋಕಿಲರ್** ಎಂಬ ಔಷಧವನ್ನು ಉಪಯೋಗಿಸಿನೋಡಿರಿ ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ, ಗೋನೋಕಿಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ವಿಕೃತಿಗಳಿಗೆ, ಸರ್ವಪ್ರಕಾರದ ಪ್ರಮೇಹ (ಎಷ್ಟೇ ಹಳೆಯದು ಯಾವುದೇ ಸ್ಥಿತಿಯಲ್ಲಿರಲಿ), ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತುಸ್ರಾವ, ಬಿಳುಪು ಹರಿಯುವದು ಇವೇ ಮೊದಲಾದ ಯಾವತ್ತು ಗೊನೋಕೋಕಸ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ.

ಬೆಲೆ ೬೦ ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ ೩—0—೦ (ಮೂರು) ವಿ. ಪಿ. ಖರ್ಚು ಬೇರೆ

ನಕಲಿ ಮದ್ದುಗಳಿಗೆ ಮರುಳಾಗಿ ಮೋಸ ಹೋಗಬೇಡಿರಿ. ಕೊಂಡುಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಗಮನಿಸಿರಿ

ತಯಾರಿಸುವ ಏಕಮಾತ್ರರು ಡಾಕ್ಟರ್ ಡಿ. ಎನ್. ಜಸಾನಿ, ಗಿರಿಗಾಂವ ಬ್ಯಾಕ್ ರೋಡ್, ಮುಂಬಯಿ 4.

Sole Manufacturer Dr. D. N. JASANI, GIRGAUM BACK ROAD, BOMBAY

ನಾರದನ ತಂಬೂರಿ

ನ್ಯಾತಿನಲಿ ಮಾಯಕವ ನಿರ್ಮಿಸಿದವನೆ ಗೆದ್ದ। ಲೋಕದಾ ನೀತಿಯಿದು ಕೇಳಿ ಜನರೆ॥ ನರ ನಾರಾಯಣ! ಶುಭವಾಗಲಿ ಮಾನವರೆ. ಒಂದು ಫಜೀತಿಯಾಯಿತಲ್ಲಾ! ರಾಷ್ಟ್ರಬಂಧುವಿನ ಕು. ವಾಚಸ್ಪತಿಯ ವಾದದ ಗೊತ್ತು ಗುರಿಯೇ ತಿಳಿಯದೆ ಸಿಕ್ಕಿಬಿದ್ದೆ. ವಾಚಸ್ಪತಿ ಸುರಗುರು; ಹೇಳದೆ ಕೇಳದೆ ನನ್ನ ಗುರುತ್ವ ವಹಿಸಿದ್ದಾನೆ. ಶಬ್ದಾರ್ಥ ಕಲಿಸುತ್ತಾನೆ; ಡಿಕ್ಷನರಿ ತೋರಿಸುತ್ತಾನೆ.

●

ವಾಚಸ್ಪತಿಗಳೆ! ಇದೇನು ಗಡಿಬಿಡಿ? ಡಾ। ರಾಮರಾಯರು ಕಾಂಗ್ರೆಸ್ಸಿನ ವಿರುದ್ಧ ಕಳವನ್ನು ಪ್ರವೇಶಿಸಿದರೆಂದು ನೀವೂ ಹೇಳಲಿಲ್ಲ; ನಾನೂ ಹೇಳಲಿಲ್ಲ. ನೀವು ಹಾಗೆ ಹೇಳಿದಿರೆಂದು ಕೂಡಾ ನಾನು ಹೇಳಲಿಲ್ಲ. ನಾನು ಪದವನ್ನೇ ಹೇಳದಿರುವಾಗ ನೀವು ಅರ್ಥ ಹೇಳಲು ಹೊರಟಿರುವಿರಲ್ಲ!

●

ಸುರಗುರುಗಳೆ! ನನ್ನ ಲೇಖನವನ್ನು ಇನ್ನೊಮ್ಮೆ ಓದಿಕೊಳ್ಳಿರಿ. 'ವಿರುದ್ಧ ಕಳ' ಶಬ್ದಕ್ಕೆ ನಾನೂ ನೀವುಕೊಟ್ಟ ಅರ್ಥವನ್ನೇ ಕೊಟ್ಟಿದ್ದೆ. '(Opposite sides) ವಿರುದ್ಧ ಕಳಗಳು ಎಂದರೆ ಒಂದಕ್ಕೆ ಇದಿರಾದ ಇನ್ನೊಂದು ಕಳ' ಸರಿ! 'ಹಾಗೆ ರಾಮರಾಯರೂ ಅವರ ಬಂಧುಗಳೂ ಇದಿರು ಕಳಗಳಲ್ಲಿರುತ್ತಾರೆ'. ನಿಮ್ಮ ಈ ಎರಡು ವಾಕ್ಯಗಳನ್ನು ನನಗಾಗಿ ಒಂದು ಕ್ಷಣ ದಯವಿಟ್ಟು ನೆನಪಿನಲ್ಲಿಟ್ಟುಕೊಳ್ಳಿ.

●

'ರಾಯರು ಕೊಂಗ್ರೆಸಿಗೆವಿರುದ್ಧ ಮಾಡಲಿಲ್ಲ' ಎಂದಿಷ್ಟೇ ನೀವು ಹೇಳಿದರೆ 'ರಾಯರು ಕೊಂಗ್ರೆಸನ್ನು ಸಮರ್ಥಿಸುತ್ತಾರೆ" ಎಂದು ನಾನು ಹೇಳಿದ್ದೆ. ನವಯುಗವು ಅವರು ಕೋಂಗ್ರೆಸನ್ನು ಸಮರ್ಥಿಸಿ ಕೊಟ್ಟಭಾಷಣವನ್ನು ಪ್ರಕಟಿಸಿದ್ದಕ್ಕಲ್ಲವೇ ನೀವು ಜಗಳ ತೆಗೆದುದು?

●

ಇನ್ನು ನಾನೂ ನೀವೂ ಮೂರು ಮೂರುಸಲ ಹೇಳಿಕೊಂಡಂತೆ'ರಾಯರೂ ಅವರ ಬಂಧುಗಳೂ ವಿರುದ್ಧ ಕಳಗಳಲ್ಲಿರುವುದು' ಸರಿಯಷ್ಟೆ. ದಯವಿಟ್ಟು ಲಕ್ಷ್ಯಕೊಡಿ—ರಾಯರು ಕೊಂಗ್ರೆಸ್ ಕಳದಲ್ಲಿರುವಾಗ ಅವರ ಬಂಧುಗಳು ವಿರುದ್ಧ ಕಳದಲ್ಲಿರುವದೆಂದರೆ ಕೊಂಗ್ರೆಸಿನ ವಿರುದ್ಧ ಕಳದಲ್ಲಿರುವದಷ್ಟೆ? ನವಯುಗವೂ ನಾನೂ ಅದನ್ನೇ ಹೇಳಿದೆವು —ನೀವೂ ಅದನ್ನೇ ಹೇಳಿದಿರಿ. ನಮಗೆ ಜಗಳವೇಕೆ ಹೇಳಿ?

●

ರಾಯರ ಬೋಧನೆಯನ್ನು ಅವರಬಂಧುಗಳು ಕೇಳಲಿ ಎಂದು ನವಯುಗವು ಹೇಳಿತು. ನೀವು ನವಯುಗಕ್ಕೆ ಈ ಕೆಲಸ ಬೇಡ ಎಂದು ಜಗಳತೆಗೆದಿರಿ. ನಾನು ಆ ಕೆಲಸ ಬೇಕು ಎಂದೆ-ನೀವು ಬೇಡ ಎಂದಿರಿ-ನಮ್ಮೊಳಗೆ ಜಗಳವಿಷ್ಟೆ! ರಾಷ್ಟ್ರಬಂಧುವಾದ ನೀವು ಹಾಗೆ ಮಾಡಬಾರದಿತ್ತು.

●

ನಿಮಗೆ ಈ ವಾದದಲ್ಲಿ ನೀವೇಗೆದ್ದು ಬಿಡಬೇಕೆಂಬ ಮನಸಿರುವದಾದರೆ ಈ ವರೆಗೆ ಹೇಳಿದುದನ್ನು ಮರೆತು ಇನ್ನೊಮ್ಮೆ ಏನನ್ನಾದರೂ ಹೇಳಿಬಿಡಿ. ನಾನು ನರನಾರಾಯಣ ಹಾಕಿ ಸುಮ್ಮನೆ ಕುಳಿತುಕೊಳ್ಳುತ್ತೇನೆ. ನರ ನಾರಾಯಣ!

●

ಇನ್ನು ಹರಿಜನರ ಸೀಟಿನ ವಿಷಯದಲ್ಲಾದರೂ ನಿಮಗೂ ನನಗೂ ಜಗಳವಿಲ್ಲ. ಮೊನ್ನೆ ಪಂಡಿತ ನೆಹರುಗಳು ಬಂದವರು ಉಡುಪಿಯ ಭಾಷಣದಲ್ಲಿ ಹೇಳಿದ್ದರು—'ತತ್ವವನ್ನೇ ಹಿಡಿಯಲು ಹೋಗಿ ಕೆಲಸ ಕೆಡಿಸಿಕೊಳ್ಳ ಬೇಡಿ. ಕುಂದಾಪುರ ಡಿವಿಜನಿನಲ್ಲಿ ಕೊಂಗ್ರೆಸು ಉಮೇದ್ವಾರಿಗಳಾಗಿರುವ ಮೂವರೂ ಗೆದ್ದು ಬರುವಂತೆ ಮಾಡಿ' ಎಂದು. ಹಾಗಾಗುವುದು ಬೇಡವೆಂದು ನೀವು ಹೇಳುವದಿಲ್ಲವಲ್ಲ?

●

ಶ್ರೀ. ರಾಜಗೋಪಾಲಾಚಾರ್ಯರು ಬೇರೆಯೇ ಹೇಳಿದ್ದಾರೆ ಎಂದು ನೀವು ಹೇಳುತ್ತೀರಿ. ಈ ವಿಷಯದಲ್ಲಿ ಪಂಡಿತರಿಗೂ ಆಚಾರ್ಯರಿಗೂ ಜಗಳ ಬಿದ್ದಿದೆ ಎಂದು ನೀವು ಭಾವಿಸುತ್ತೀರಾ? ಇಲ್ಲಪ್ಪಾ! ನೀವೂ ನಾನೂ ಮಾಡಿಕೊಂಡಂತೆ ಅವರಿಬ್ಬರೂ ಒಂದೇ ಮಾತನ್ನು ಎರಡು ವಿಧದಲ್ಲಿ ಹೇಳುತ್ತಿದ್ದಾರೆ.

●

ಮಹಾಭಾರತದಲ್ಲಿ ಭೀಷ್ಮನು ಧರ್ಮರಾಯನಿಗೆ ಕೊಟ್ಟ ಬೋಧನೆಯಲ್ಲೊಂದು ಕಥೆಯಿದೆ. ಗಾಳಿಗೂ ಒಂದು ಆಲದ ಮರಕ್ಕೂ ಸಂಧಿಬಿತ್ತಂತೆ. 'ನಿನ್ನ ಎಲೆಗಳನ್ನೆಲ್ಲಾ ಉದುರಿಸಿ ಬಿಡುತ್ತೇನೆ ಎಂದಿತು ಗಾಳಿ. 'ನಿನ್ನಿಂದಾಗುವಂತಿಲ್ಲ' ಎಂದಿತು ಆಲದ ಮರ, ಗಾಳಿಗೆ ಪಂಥವೇರಿ ಬೀಸಿಕೊಂಡು ಬರುವ ಮೊದಲೇ ಆಲದ ಮರವು ಎಲೆಗಳನ್ನೆಲ್ಲಾ ಉದುರಿಸಿಕೊಂಡು ನಿಂತಿದೆ; ಗಾಳಿಯ ಕೆಲಸವನ್ನು ಆಲದ ಮರವೇ ಮಾಡಿಕೊಂಡಿದೆ!

●

ಹಾಗಾಯಿತು ಜಮದಗ್ನಿಯ ಕೆಲಸ. ನಾರದನು ಬಯಲಿಗೆಳೆಯ ಬೇಕಿತ್ತು ಜಮದಗ್ನಿಯ ಸ್ವರೂಪವನ್ನು-ಜಮದಗ್ನಿಯು ತಾನಾಗಿ 'ಲಾಂಗೂಲವಾದ್ಯೇ ಶಿರನಾಂತ್ಯ'ದ ವರೆಗೆ ವಾಚಕರಿಗೆ ತೋರಿಕೊಂಡಿದ್ದಾನೆ. ಓಕರಿಕೆಯಾಗದಂತೆ ಮುಂಜಾಗ್ರತೆ ತೆಗೆದುಕೊಂಡು ಅದನ್ನೊಮ್ಮೆ ನೋಡಿಬಿಡಿ! ನನಗೊಂದು ಉಪಕಾರಮಾಡಿದನಲ್ಲಾ ಅದಕ್ಕಾಗಿ ಅವನಿಗೆ 'ಥೇಂಕ್ಸ್'.

●

'ನಾರದ ಕೆಟ್ಟವ' ಎಂದು ಯಾರು ಬೇಕಾದರೂ ಹೇಳಲಿ. ನೀವದನ್ನು ನಂಬಬೇಡಿ. ಲೋಕದಲ್ಲಿ ಎಲ್ಲರೂ ನಾರದನಿಗೆ ಉಪಕಾರಮಾಡುವವರೆ! ನೋಡಿದಿರಲ್ಲಾ-ಕೆಲವರು ನಾರದ ಹೇಳಿದಂತೆ ಹೇಳುತ್ತಾರೆ. ಕೆಲವರು ನಾರದನ ಚಾಕರಿಮಾಡುತ್ತಾರೆ. ಹೀಗಾಗಿ ಈ ವಾರದ ಕೆಲಸ ಭಾರೀ ಸುಲಭದಲ್ಲಾಯಿತು. ಇನ್ನು ಹೋಗುತ್ತೇನೆ. ॥ ನರ ನಾರಾಯಣ। ನರ ನಾರಾಯಣ। ನರದೇವ ॥

—ನಾರದ.

ಬ್ರಿಟಿಷ್ ಮಂತ್ರಿಗಳಿಗೆ ಸಂಬಳದಲ್ಲಿ ಬಡತಿ

ಈ ತಿಂಗಳು ಪಾರ್ಲಿಮೆಂಟ್ ಸಭೆಯು ಮತ್ತೆ ಸಮಾವೇಶವಾದಾಗ ಬ್ರಿಟಿಷ್ ಮಂಡಲದಲ್ಲಿರುವ ಹಲವರ ಸಂಬಳವನ್ನು ಬಡತಿ ಮಾಡುವ ಸರಕಾರದ ಮಸೂದೆಯೊಂದು ಚರ್ಚೆಗೆ ಬರಲಿದೆ. ಮುಂದಿನ ವರ್ಷದ ಆಯವ್ಯಯದ ಪಟ್ಟಿಯು ಚರ್ಚೆಯಾಗುವಾಗ ಈ ಮಸೂದೆಯೂ ಪಾಸಾಗಲಿದೆ. ಈ ಹೊಸ ಖರ್ಚಿಗೆ ದಾರಿ ತೋರಿಸಲಾಗುವುದು.

ಬ್ರಿಟಿಷ್ ಸರಕಾರದ ಪ್ರಧಾನಾಮಾತ್ಯರಾದ ಮಿ. ಬಾಲ್ಡ್‌ವಿನ್‌ರವರಿಗೆ ಇದು ವರೆಗೆ ೫೦೦೦ ಪೌಂಡು ಸಂಬಳ ಬರುತ್ತಿತ್ತು. ಈ ಏಪ್ರೈಲ್ ಗುರ್ತೀ ಲಾಗಾಯಿತು ೮೦೦೦ ಪೌಂಡುಗಳಾಗುತ್ತದೆ.

ಇದೇ ರೀತಿ ಇನ್ನೂ ಹಲವು ಮಂತ್ರಿಗಳ ಸಂಬಳಗಳು ೫೦೦೦ ಪೌಂಡುಗಳಿಗೇರಿಸಲ್ಪಡುವವು. ಅವರು ಯಾರು ಯಾರೆಂದರೆ, ಕಾರ್ಮಿಕ ಮಂತ್ರಿಗಳಾದ ಮಿ. ಎರ್ನೆಸ್ಟ್ ಬ್ರೌನ್, ವಿದ್ಯಾಖಾತೆಯ ಮಂತ್ರಿಗಳಾದ ಮಿ. ಆಲಿವರ್ ಸ್ಟಾನ್ಲಿ, ವ್ಯವಸಾಯ ಖಾತೆಯ ಮಂತ್ರಿಗಳಾದ ಮಿ. ಮಾರಿಸನ್, ಹೀಗೆಯೇ ಮಿ. ಹೋರ್ ಬೆಲೀಷಾ, ಲಾರ್ಡ್ ಸ್ಟಾನ್ ಹೋಪ್, ಮಿ. ಎಲಿಯಟ್, ಸರ್ ಸ್ಯಾಮ್ಯುಯಲ್ ಹೋರ್.

ಇನ್ನು ಚಿಕ್ಕ ಪುಟ್ಟ ಇಲಾಖೆಗಳ ಮಂತ್ರಿಗಳಿಗೂ ೩೦೦ ಪೌಂಡುಗಳ ಬಡ್ತಿ ಕೊಡಲ್ಪಡುವುದು.

ಚುನಾವಣೆಯ ಫಜೀತಿ

ಮಧ್ಯಪ್ರಾಂತಗಳಲ್ಲಿರುವ ಹೋಷಂದಾಬಾದ್ ಸೋಹಗ್‌ಪುರದ ಗ್ರಾಮಾಂತರ ಚುನಾವಣಾ ಕ್ಷೇತ್ರದಿಂದ ಐದು ಮಂದಿ ಉಮೇದುವಾರರಾಗಿ ನಿಂತಿದ್ದಾರೆ. ಇವರ ಪೈಕಿ ಲಾಲಾ ಅರ್ಜುನಸಿಂಗ್‌ರವರು ಕೋಂಗ್ರೆಸ್ ಪಕ್ಷದವರ ಉಮೇದುವಾರರು.

ಇವರಿಗೆ ಪ್ರತಿಕಕ್ಷಿಗಳಾಗಿ ನಿಂತಿರುವವರು ಘಟಾನುಘಟಿಗಳು. ಇಬ್ಬರು ರಾಯ್ ಬಹದ್ದೂರುಗಳು. ಇವರಲ್ಲೊಬ್ಬರು ಹಿಂದೆ ಮಧ್ಯಪ್ರಾಂತಗಳ ಮಂತ್ರಿಗಳಾಗಿದ್ದವರು. ಮತ್ತೊಬ್ಬರು ಮಾಜಿ ಪಬ್ಲಿಕ್ ಪ್ರೊಸಿಕ್ಯೂಟರ್, ಇನ್ನಿಬ್ಬರು ಬೇರೆ.

ಹೀಗಿರುವಾಗ ಅಲ್ಲಿನ ಸರಕಾರಿ ಅಧಿಕಾರಿಗಳು ಚುನಾವಣಾ ಪ್ರಚಾರಕ್ಕಾಗಿ ಮೋಟಾರುಗಳನ್ನು ರಸ್ತೆಗಳಲ್ಲಿ ಉಪಯೋಗಿಸಕೂಡದೆಂದೇ ಆಜ್ಞೆ ಮಾಡಿದ್ದಲ್ಲದೆ, ಇವರ ಸ್ವಂತ ಮೋಟಾರನ್ನೂ ಬಳಸಕೂಡದೆಂದು ಹೇಳಿದರು.

ಅನಂತರ ಇನ್ನು ಚುನಾವಣಾ ಕಾರ್ಯವು ಹೇಗಾಗಬೇಕು. ಪಾಪ! ಲಾಲಾರವರು ಮುದುಕರು. ಆದರೂ ಸಹ ತಮ್ಮ ಕಾಯ ಕಷ್ಟವನ್ನು ಕುರಿತು ಯೋಚಿಸದೆ ಇವರು ಒಂದು ಕುದುರೆಯನ್ನು ಹತ್ತಿ ಗ್ರಾಮಾಂತರಗಳಲ್ಲೆಲ್ಲಾ ಸುತ್ತಿಕೊಂಡುಬರುತ್ತಿದ್ದಾರೆ,

ಪೇಟೆ ಧಾರಣೆ

ಸಾಮಗ್ರಿಗಳು	ಮಂಗಳೂರು ಇಂದ	ಮಂಗಳೂರು ವರೆಗೆ	ಉಡುಪಿ ಇಂದ	ಉಡುಪಿ ವರೆಗೆ
ರಾಶಿ ಅಕ್ಕಿ ...	3 – 6	3—10	3— 0	3— 4
ಮಸ್ಕತಿ ...	3— 8	4 - 4	3 -12	4— 4
ಗುಡ್ಡು ಸುಗ್ಗಿ ...	3—10	3 -14	3— 0	3— 4
ಊರ ಅವ್ವಲ್ ಬೆಳ್ತಿಗೆ ...	4 — 0	4 — 4	4— 0	4— 8
ರಂಗೂನು ಬೆ ಗೋ. ೧ಕ್ಕೆ	7 — 0	7— 4	7— 0	7 — 8
ಗೋಧಿ ಗೋಣಿ ೧ಕ್ಕೆ ...	11— 0	13— 0	13 – 8	14— 0
ತೊಗರಿ ಗೋಣಿ ೧ಕ್ಕೆ ...	9 — 8	12— 8	12— 0	13— 0
ಹುರುಳಿ ಗೋಣಿ ೧ಕ್ಕೆ ...	5 — 0	5 – 6	5— 0	5— 8
ಕಡಲೆ ಗೋಣಿ ೧ಕ್ಕೆ ...	8 — 0	12— 8	8 – 8	8 - 12
ತೊಗರಿಬೇಳೆ ಗೋಣಿ ೧ಕ್ಕೆ	11— 0	19— 0	11— 0	17— 0
ಉದ್ದು ಗೋಣಿ ೧ಕ್ಕೆ ...	9— 0	9— 8	8— 4	8— 8
ಹೆಸರು ಗೋಣಿ ೧ಕ್ಕೆ ...	7 —12	8— 0	9— 4	9— 8
ಊರುಬೆಲ್ಲ ಖಂಡಿ ೧ಕ್ಕೆ...	30— 0	32— 8	20— 0	30— 0
ಉಪ್ಪು ಗೋಣಿ ೧ಕ್ಕೆ ..	4 2	5— 4	4 — 4	4—12
ಕೊಬ್ರಿ ಖಂಡಿ ೧ಕ್ಕೆ ...	75 — 0	84 — 0	75— 0	85— 0
ಕೊಬ್ರಿ ಹಿಂಡಿ ಖಂಡಿ ೧ಕ್ಕೆ	26— 8	28 - 8	27— 0	28— 8
ಎಳ್ಳಿಂಡಿ ಖಂಡಿ ೧ಕ್ಕೆ ...	26 — 4	27— 8	20— 0	21— 4
ಕೊಬ್ರಿ ಎಣ್ಣೆ ಮಣ ೧ಕ್ಕೆ	6 — 0	7— 0	7 – 0	7—12
ಎಳ್ಳೆಣ್ಣೆ ಮಣ ೧ಕ್ಕೆ ...	7— 0	...	6 – 0	6 — 4
ಚಿಮಿಣಿ ಎಣ್ಣೆ ಪೆಟ್ಟಿಗೆ ೧ಕ್ಕೆ	6— 5	7 – 5	6— 2	6— 8
ಮೋರಿಸ ಸಕ್ಕರೆ ಮು. ೧ಕ್ಕೆ	3 — 2	3— 4	2 --15	3— 2
ಮೆಣಸು ...	2— 8	5 — 0	3 – 0	3— 4
ಸಾಸಿವೆ ಮುಡಿ ೧ಕ್ಕೆ ...	5 — 4	5- 8	5— 8	5—12
ಕೊತ್ತಂಬರಿ ಮುಡಿ ೧ಕ್ಕೆ ...	2— 8	3 – 0	2 —12	3 — 8
ಕಾಳುಮೆಣಸು ಖ. ೧ಕ್ಕೆ...	100— 0	120 – 0	110 - 0	120 – 0
ಗೇರುಬೀಜ ಮು ೧ಕ್ಕೆ ...	3 – 4	3— 8	4 – 4	...
ಕಬ್ಬಿಣ ಖಂಡಿ ೧ಕ್ಕೆ ...	35— 0	37— 8	45— 8	50— 0
ತಾಂಬ್ರ ತಗಡು ಮು. ೧ಕ್ಕೆ	12— 4	12— 8	14— 8	...
,, ಪಾತ್ರಗಳು ಮು. ೧ಕ್ಕೆ	12 — 8	14— 0	16— 0	17— 0
ಚೀನಿ ಬೆಳ್ಳಿ ಸೇರು ೧ಕ್ಕೆ...	13— 8	15— 0	13 —12	14 · 0
ಹಿತ್ತಾಳೆ ತಗಡು ಮು. ೧ಕ್ಕೆ	10 — 0	10 – 8	11— 0	...
ಪವನು ೧ಕ್ಕೆ ...	22— 7	22— 8	22— 8	...
ಹುಣಸೆ ಹುಳಿ ಖಂಡಿ ೧ಕ್ಕೆ	40— 0	45 — 0	45 — 0	50— 0
ನೇಟಿವ್ ಕಾಫಿ ಖಂಡಿ ೧ಕ್ಕೆ	170 – 0	180 - 0	160 - 0	170— 0
ಪ್ಲಾಂಟೇರಿ ಕಾಫಿ ಖಂಡಿ ೧ಕ್ಕೆ	175— 0	195— 0	170 – 0	187— 8
ಮಡಿಕೇರಿ ಏಲಕ್ಕಿ ...	50— 0	55 — 0	70— 0	75— 0
ತುಪ್ಪ ಮಣ ೧ಕ್ಕೆ ...	17 — 0	18— 0	14— 0	15— 0
ಏಲಕ್ಕಿ ಬೀಜ ಮಣ ೧ಕ್ಕೆ	80— 0	85— 0	70— 0	80 — 0

ಪ್ರಾಮುಖ್ಯ ಪ್ರಕಟಣೆ

ಅಮೃತಾಂಜನ

— ಡಿಪೋವಿನ ರಿಂಗ್‌ವರ್ಮ್ ಮುಲಾಮು —

ಇಷ್ಟರ ವರೆಗಣ ನಮ್ಮ
ವಿಲಿಯಮ್ ಎಂಡ್ ಕೋ ರವರ
ರಾಜ ಮತ್ತು ರಾಣಿಯ ಟ್ರೇಡ್‌ಮಾರ್ಕುಳ್ಳ ರಿಂಗ್‌ವರ್ಮ್
ಮುಲಾಮು ಈ ಕೆಳಗಣಂತೆ ವ್ಯತ್ಯಾಸಮಾಡಲಾಗಿದೆ.

ಅಮೃತಾಂಜನ ಡಿಪೋವಿನ ತ್ರಿವರ್ಣದ 'ರೈಸಿಂಗ್ ಸನ್'

ಈ ಮೇಲಿನ ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು
ನಮ್ಮ ಗಿರಾಕಿದಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು.

ನಮ್ಮ ಟ್ರೇಡ್‌ಮಾರ್ಕಿನ ಮಾರ್ಪಾಟದಿಂದ ನಮ್ಮ ಔಷಧಿ ತಯಾರಿಯಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲೆಂಬ ಕುರಿತು ನಾವು ಈ ಮೂಲಕ ಭರವಸೆ ಕೊಡುತ್ತೇವೆ.

ಅಮೃತಾಂಜನ ಡಿಪೋ, — ಬೊಂಬಾಯಿ, ಮದ್ರಾಸು, ಕಲ್ಕತ್ತ.

ಕೇವಲ ಎರಡೇ ಆಣೆಗಳಲ್ಲಿ ೨೫ ರೂಪಾಯಿ ಬಹುಮಾನ

ಅಖಿಲ ಕನ್ನಡ ನಾಡಿಗೆ ಪ್ರೀತಿಯಾಗಿರುವ

ಕಥಾಕುಂಜ (ಮಾಸಪತ್ರಿಕೆ)

ನಯನಮನೋಹರವಾಗಿ ಹೊಸ ಹೊಸ ನಿರ್ಣಯಗಳಿಂದ ಅಲಂಕೃತವಾಗಿ ಡಿಸೆಂಬರದಲ್ಲಿ ೬ನೆಯ ವರುಷದ ೧ನೆಯ ಸಂಚಿಕೆಯು ಪ್ರಕಟವಾಗುವದು. ಆದ್ದರಿಂದ ಕನ್ನಡಾಭಿಮಾನಿಗಳು ಈಗಲೆ ಮುಂಗಡ ಹಣ ಕಳುಹಿಸಿ ಚಂದಾದಾರರಾಗಬೇಕು.

ಚಂದಾದಾರರಿಗೆ ೨೫ ರೂಪಾಯಿ ಬಹುಮಾನ.

ಈ ಸಂಧಿ ಕಳಕೊಳ್ಳಬಾರದು. ಕಥಾಕುಂಜವನ್ನು ಕೊಂಡುಕೊಳ್ಳಲು ಎಲ್ಲರಿಗೂ ಅನುಕೂಲವಾಗಲೆಂದು ಚಂದಾ ಹಣವನ್ನು ಇಳಿಸಲಾಗಿದೆ.

ಇಳಿಸಿದ ಚಂದಾ ೧-೮-೦ (ಅಂಚನೆಚ್ಚ ಬೇರೆ)   ಶಾಲೆ, ಕಾಲೇಜು, ಲೈಬ್ರರಿಗಳಿಗೆ ೨-೮-೦

ಮೈಸೂರು, ಮುಂಬೈ ವಿದ್ಯಾಖಾತೆಯವರಿಂದ ಶಾಲೆ ಕಾಲೇಜುಗಳ ವಾಚನಾಲಯಕ್ಕೆ ಮಂಜೂರಾಗಿದೆ. ಜಾಹೀರಾತುದಾರರಿಗೆ ಸುವರ್ಣಸಂಧಿ! ಪತ್ರಿಕೆಗಳನ್ನು ಮಾರಾಟಮಾಡಲು ಎಲ್ಲ ನಗರಗಳಲ್ಲಿ ಪ್ರಾಮಾಣಿಕ ಏಜಂಟರು ಬೇಕು.

ವಿಶೇಷ ಮಾಹಿತಿ ಹಸ್ತಪತ್ರಿಕೆ ನೋಡಿರಿ.

ವ್ಯವಸ್ಥಾಪಕ— **ಕಥಾಕುಂಜ, ಬೆಳಗಾಂವಿ.**

DIAMONDS!   DIAMONDS!!

K. Ramachandra Krishna Shet

Near Mission High School, *Mangalore*

SUPERFINE UP TO DATE CUTTING!   **ವಜ್ರಗಳು**   BEST BRILLIANCY!!

ಉತ್ಕೃಷ್ಟ ತರಗತಿಯ ಚುನ್ಯಾತ (first quality, selected) ಎಮ್‌ಸ್ಟ್ರಡಮ್ಮಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ. ಕೊಂಡುಕೊಳ್ಳುವವರಿಗೆ ಬಜಾರ ಧಾರಣೆಗಿಂತ 5 ಪರ್ಸಂಟಿಗೆ ಕಡಿಮೆಯಾಗಡಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ. ಇದನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ. ಇದರ ಶಾಖೆಯೊಂದನ್ನು ಗವರ್ಮೆಂಟ್ ಕೊಲೆಜಿನ ಎದುರುಗಡೆ ತೆರೆಯಲಾಗಿದೆ.

ಕೆ. ರಾಮಚಂದ್ರ ಕೃಷ್ಣ ಶೇಟ್,
ಜುವೆಲರ್, ಮಿಶನ್ ಹೈಸ್ಕೂಲು ಬಳಿ, ಮಂಗಳೂರು.

ಕಿರಿಯರ ಪ್ರಪಂಚ

೧	ನಾಡಕಥೆ	೦	೨	೦
೨	ಮುಂದಿನ ದೇವರು	೦	೨	೦
೩	ಸ್ವತಂತ್ರ ಜೀವನೋಪಾಯ	೦	೨	೬
೪	ಕುಶ-ಲವ	೦	೪	೦
೫	ಸಂಶಯ ಪಿಶಾಚಿ	೦	೬	೦
೬	ಕಾವ್ಯಸಾಮ್ರಾಜ್ಯ	೦	೧೨	೦
೭	ಮಧುವನ ...	೧	೦	೦
೮	ವ್ಯಭಿಚಾರಿಣಿ ಯಾರು	೦	೮	೦

ಕಿರಿಯರ ಪ್ರಪಂಚ, ಉಡುಪಿ.

ಭಾಷಾಂತರಕಾರರು

ದೊರೆಯುವ ಪೇಚಾಡುವಿರೇಕೆ?

ಇನ್ಶೂರೆನ್ಸ್, ಕಂಪೆನಿ, ಬ್ಯಾಂಕು ಮೊದಲಾದವುಗಳಿಗೆ ಸಂಬಂಧಪಟ್ಟ ಮತ್ತು ಇತರ ಎಲ್ಲಾ ತರದ ಇಂಗ್ಲಿಷ್ ಕನ್ನಡ ಭಾಷಾಂತರಗಳನ್ನು ಉತ್ತಮ ರೀತಿಯಿಂದ ಮಾಡಿಕೊಡಲಾಗುವುದು. ಹೆಚ್ಚಿನ ವಿವರಕ್ಕೆ ಈ ಕೆಳಗಿನ ವಿಳಾಸ ಕೂಡನೆ ಪತ್ರವ್ಯವಹಾರ ಮಾಡಬೇಕು.

'ಟ್ರಾನ್ಸ್‌ಲೇಟರ್,'
C/o 'ಕಿರಿಯರ ಪ್ರಪಂಚ,'
ಉಡುಪಿ.

ಉತ್ತಮ ವರ್ಗದ ಶ್ರೇಷ್ಠವಾದ   **ಸರಸ್ವತಿ**   ಸ್ತ್ರೀಸಾಹಿತ್ಯ ಸಚಿತ್ರ ಮಾಸಪತ್ರಿಕೆ

ಇಡೀ ಕರ್ನಾಟಕದಲ್ಲಿ ಸ್ತ್ರೀಯರ ಅಭ್ಯುದಯಕ್ಕಾಗಿ ಪ್ರಚುರಪಡಿಸುತ್ತಿರುವ ಪತ್ರಿಕೆಯು ಇದೊಂದೇ. ಈ ಪತ್ರಿಕೆಯ ಹದಿನಾರನೆಯ ಸಂಪುಟವು 1937ನೇಯ ಜನವರಿ ತಿಂಗಳಿನಿಂದ ಪ್ರಾರಂಭವಾಗಿದೆ. ಈ ಪತ್ರಿಕೆಯಲ್ಲಿ ಸ್ತ್ರೀಯರ ಉನ್ನತಿಗೆ ಅತ್ಯಾವಶ್ಯಕವಾದ ಶಿಕ್ಷಣ-ಸಾಹಿತ್ಯ ಕಲೆ-ಆರೋಗ್ಯ-ಪಾಕಶಾಸ್ತ್ರ-ಸಮಾಜ ಸುಧಾರಣೆ ಇವುಗಳಿಗೆ ಸಂಬಂಧಪಟ್ಟ ಲೇಖನಗಳೂ, ಸಣ್ಣ ಸಣ್ಣ ಕಥೆಗಳೂ, ನಾಟಕಗಳೂ ಕರ್ನಾಟಕದ ಸುಪ್ರಸಿದ್ಧ ಲೇಖಕ ಲೇಖಕಿಯರಿಂದ ಬರೆಯಲ್ಪಟ್ಟು ಪ್ರಕಟವಾಗುವವು. ಮಕ್ಕಳ ಸಲುವಾಗಿ 'ಮಕ್ಕಳ ಪುಟಗಳು' ಬೇರೆ ಪ್ರಕಟವಾಗುವುವು. ಮೈಸೂರು, ಮುಂಬೈ ವಿದ್ಯಾ ಇಲಾಖೆಯವರಿಂದ ಸರ್ಕಾರದ ಶಾಲೆಗಳಿಗೂ ವಾಚನಾಲಯಗಳಿಗೂ ಮಂಜೂರಾಗಿದೆ ಪ್ರಕಟಣೆಗೆ ಅತ್ಯುತ್ತಮವಾದ ಮಾಸಪತ್ರಿಕೆ.

ವಾರ್ಷಿಕ ಚಂದಾ ರೂ. 3—0—0 ಮಾತ್ರ.   ವಿ. ಪಿ. ಹಾಸಲುಬೇರೆ.

ಸರಸ್ವತಿ ಕಾರ್ಯಾಲಯ,
ಚಾಮರಾಜಪೇಟೆ, ಬೆಂಗಳೂರು ನಗರ

ದಿ ನ್ಯೂ ಗ್ಲಾಸ್ ಎಂಪೋರಿಯಮ್

ಪೋಸ್ಟಾಫೀಸ್ ರೋಡ್, ಉಡುಪಿ

ನಮ್ಮಲ್ಲಿ ಎಲ್ಲಾ ತರದ ಗ್ಲಾಸ್‌ವೇರ್, ಎನಾಮಲ್‌ವೇರ್ ಪೋರ್ಸಲಿನ್‌ವೇರ್, ಲೇಂಪ್ಸ್ ಲಾಟಾನು, ಪೆಟ್ರೊಮೆಕ್ಸ್ ಇತ್ಯಾದಿ ಎಲ್ಲಾ ತರದ ಸಾಮಾಗ್ರಿಗಳು ಮತ್ತು ಹೊಟೇಲು- ಹೊಸ್ಟೆಲುಗಳಿಗೆ ಪಯೋಗ್ಯವಾದ 'ಟೀಸೆಟ್' ಕಪ್-ಸಾಸರ್, ಪ್ಲೇಟ್ಸ್, ಥರ್ಮಸ್‌ಫ್ಲಾಸ್ಕ್, ಜಗ್, ಟ್ರೇ ಸಿಲ್ವರ್ ವೇರ್, ಮತ್ತು ಪ್ರಜಂಟೇಶನ್ ಬಗ್ಗೆ ನಾನಾತರದ ಚಲೋ ಫೆನ್ಸಿ, ಗ್ಲಾಸ್‌ವೇರ್ ಸಾಮಾನುಗಳೂ ಸದಾ ಕಡಿಮೆ ಬೆಲೆಗೆ ಸಿಕ್ಕುವುವು

ನಾವು ಹೊಸತಾಗಿ ಎಲ್ಲಾ ಸಾಮಾನುಗಳನ್ನು ಡೈರೆಕ್ಟ್ ತರಿಸಿರುವುದರಿಂದ ಯಾವತ್ತೂ ಸಾಮಾನುಗಳು ಕಡಿಮೆ ಬೆಲೆಗೆ ಕೊಡಲು ಅನುಕೂಲವಿದೆ. ಕಾರಣ ಗ್ರಾಹಕರು ಸ್ವತಹಾ ನಮ್ಮ 'ಶೋರೂಮ್'ನ್ನು ಸಂದರ್ಶಿಸಿ ಮ್ಯಾಲಿನನ್ನೂ, ದರಗಳನ್ನೂ ಪರಿಶೀಲಿಸಿ ಕೊಂಡುಕೊಳ್ಳಬೇಕಾಗಿ ವಿನಂತಿ.

THE GENERAL STORES, UDIPI

The only Reliable House for quality goods of every description

---

ದೀರ್ಘಕಾಲದ ರೋಗಗಳಿಂದ ಇನ್ನೂ ಇನ್ನೂ ವೃಥಾ ನರಳುತ್ತಿರುವುದೇಕೆ?

ನಾಯಕ್ ಬ್ರದರ್ಸರ ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ.ಕ.

ಇವರ ಅತ್ಯಮೂಲ್ಯವಾದ ಔಷಧಗಳ ಸೇವನೆಯಿಂದ ಶೀಘ್ರದಲ್ಲೇ ಗುಣಹೊಂದಬಹುದಲ್ಲವೇ?

ಇವರ ಔಷಧಗಳ ವೈಶಿಷ್ಟ್ಯ ಏನು?

ದೇಶೀಯ ಉದ್ಯಮ
100 ವರ್ಷಗಳ ಅನುಭವದಿಂದ ತಯಾರಿ.
ಶಾಸ್ತ್ರೀಯ ರೀತಿಯ ಸಿದ್ಧತೆ.
ಅತ್ಯಂತ ಗುಣಕಾರಿ.
ಸ್ವರ್ಣ, ರಜತಪದಕಗಳನ್ನು ಪಡೆದ ದಿವ್ಯೌಷಧಗಳು
ಅತ್ಯಂತ ಕಡಿಮೆ ಬೆಲೆ.

ಭುವನೇಂದ್ರ ತ್ರೈರತ್ನಗಳು

ಗುಡಪಿಪ್ಪಲಿ
(ಮಕ್ಕಳ ಲೀವರ್ ರೋಗಕ್ಕೆ ಅತ್ಯುತ್ತಮ)

ಗರ್ಭಪಾಲ
(ಗರ್ಭಶೂಲೆ, ಗರ್ಭಸ್ರಾವಕ್ಕೆ ದಿವ್ಯೌಷಧ)

ಚಂದ್ರಮಸ್
(ವಾಂತಿಭೇದಿ, ಅತಿಸಾರಗಳ ಮೇಲೆ
(ಅತ್ಯಂತ ಗುಣಕಾರಿ)

ಶಾಸ್ತ್ರೀಯರೀತ್ಯಾ ತಯಾರಿಸಿದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲಗಳು- ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ.
ನಮ್ಮ ಪ್ರತಿನಿಧಿಗಳಿಲ್ಲದ ಕಡೆಗಳಲ್ಲಿ ವ್ಯವಹಾರಕುಶಲರೂ, ವ್ಯಾಪಕರೂ, ಯೋಗ್ಯರೂ ಆದ ಏಜಂಟರು ಬೇಕು. ಅವರಿಗೆ ವಿಪುಲವಾದ ಸೌಕರ್ಯಗಳಿವೆ

ಹೆಚ್ಚಿನ ಮಾಹಿತಿಗೂ, ಸೂಚಿಪತ್ರಕ್ಕೂ, ವ್ಯವಹಾರನಿಯಮಕ್ಕೂ ಬರೆಕೊಳ್ಳಿರಿ.

ಪ್ರೇಮ ವಿದ್ಯಾಪೀಠ, ತುಂಗಭದ್ರಾ, (ಬಳ್ಳಾರಿ ಜಿಲ್ಲಾ)

ಇವರ ಹೊಸವರ್ಷದ ಜುಲೈಯಲ್ಲಿ ಪ್ರಾರಂಭವಾಗುತ್ತದೆ ಮಹಾರ್ಣದಯ ಉದ್ಯೋಗ ಬೇಕಾಗಿದ್ದರೆ ಇಲ್ಲಿ ಶಿಕ್ಷಣವನ್ನು ಪಡೆಯಿರಿ ಸ್ಕೂಲ್, ಅಪ್ಪರ್ ಸೆಕೆಂಡರಿ, ಮೆಟ್ರಿಕ್ ಸ್ಕೂಲ್ ಫೈನಲ್ ಇತ್ಯಾದಿ ಪಾಸ್ ಆದವರೆಲ್ಲರಿಗೂ ಯೋಗ್ಯತೆಗೆ ತಕ್ಕಂತೆ ವಿಧ ವಿಧವಾದ ಕೋರ್ಸ್‌ಗಳಿವೆ. ಪ್ರಾಸ್‌ಪೆಕ್ಟಸ್ ಮಾಹಿತಿಗಾಗಿ ಕೂಡಲೆ ೩ ಆಣೆ ಸ್ಟ್ಯಾಂಪು ಇಟ್ಟು ಬರೆಯಿರಿ.

ಮಹೋಪಾಧ್ಯಾಯಾ ಡಾ॥ ಸುಮತಿಬಾಯಿ,

ಬಿ. ಎ ಎಲ್. ಟಿ., ಎಫ್. ಪಿ. ಎಮ್. ಎಸ್. ಭಿಷಗ್ರತ್ನ. ರಿಜಿಸ್ಟ್ರಾರ್.

LAXMI BRAND COFFEE POWDER.

Pure & Superior quality, will last long without losing its flavour and colour.

TRADE MARK

Use always this LAXMI BRAND COFFEE POWDER prepared from the best & choicest Coffee Beans of Nilgiris. (Hills)

WANTED AGENTS in Southern India (samples available)

ಉತ್ಕೃಷ್ಟ ಕಾಫಿಬೀಜಗಳಿಂದ ತಯಾರಿಸಲ್ಪಟ್ಟ ಸುವಾಸನೆಯುಳ್ಳ ನಮ್ಮ ಲಕ್ಷ್ಮೀಮಾರ್ಕಿನ ಕಾಫಿಹುಡಿಯನ್ನೇ ಸದಾ ಉಪಯೋಗಿಸಿರಿ. ಏಜಂಟರಿಗೆ ಯೋಗ್ಯ ಕಮಿಶನ್ ಕೊಡಲಾಗುವದು. ಹೆಚ್ಚಿನ ಮಾಹಿತಿ ಬಗ್ಗೆ ಕೆಳಗಿನ ವಿಳಾಸಕ್ಕೆ ಬರೆದು ತಿಳಿಯಬಹುದು.

FOR SALE

Fire Resistance Steel Iron Safes. latest pattern.



ನಮ್ಮಲ್ಲಿ ಕಬ್ಬಿಣದ ಟ್ರಿಜರಿಗಳು ಸದಾ ಮಾರಾಟಕ್ಕೆ ಸಿದ್ಧವಿರುತ್ತವೆ. ತಿಂಗಳುಗಟ್ಲೆ ಕಂತುಗಳಿಂದಲೂ ಮಾರುವ ಏರ್ಪಾಡಿದೆ.

For Prices & Particulars Apply to—

K. K. Shanbhag & Sons

Court Road, UDIPI, S. K

Sold also by Instalments

ಮಾಸ] **ವಿಶ್ವವಾಣಿ** [ಪತ್ರಿಕೆ.

ಸಂಪಾದಕರು—ಅ. ನ. ಕೃಷ್ಣರಾಯರು.

ಸಂಸ್ಕೃತಿಯ ಪ್ರಸಾರಕ್ಕಾಗಿ ಕರ್ನಾಟಕದಲ್ಲಿ ಹೊರಟಿರುವ ಪತ್ರಿಕೆ ಇದೊಂದೇ: ಜಗತ್ತಿನ ಸಾಂಸ್ಕೃತಿಕ ಚಲನವಲನಗಳ ಸುದ್ದಿಗಳೆಲ್ಲಾ ಇದರಲ್ಲಿ ಪ್ರಕಟವಾಗುತ್ತವೆ.

ಚಿತ್ರವಿಭಾಗದ ವೈಶಿಷ್ಟ್ಯ—ಜಗತ್ತಿನ ಯಾವದೇ ಪತ್ರಿಕೆಯಲ್ಲಿಯೂ ಪ್ರಕಟವಾಗದಿರುವ ಅನೇಕ ಚಿತ್ರಗಳು 'ವಿಶ್ವವಾಣಿ'ಗೆ ಮೀಸಲು

ಆದುದರಿಂದ ಇಂದೇ ಚಂದಾದಾರರಾಗಿರಿ.

ಸಾಮಾನ್ಯ ಚಂದಾದಾರರಿಗೆ (ವರ್ಷಕ್ಕೆ)	... ...	ರೂ. ೩—೮—೦
,, ,, (೬ ತಿಂಗಳಿಗೆ)	... ...	ರೂ. ೨—೦—೦
ಶಾಲೆ, ಕಾಲೇಜು, ವಾಚನಾಲಯ, ಸಾರ್ವಜನಿಕ ಸಂಸ್ಥೆಗಳಿಗೆ (ವರ್ಷಕ್ಕೆ)		ರೂ. ೫—೦—೦

ವಿಶ್ವವಾಣಿಯು ಮೈಸೂರು, ಮುಂಬಯಿ, ಮದರಾಸು, ಹೈದರಾಬಾದು, ಕೊಡಗು, ಕರ್ನಾಟಕಗಳಲ್ಲಿ ಮಾತ್ರವಲ್ಲದೆ ಕನ್ನಡಿಗರು ನೆಲಸಿರುವ ಎಲ್ಲ ಕಡೆಯಲ್ಲಿಯೂ ಪ್ರಚುರವಾಗುತ್ತದೆ.

ಆದುದರಿಂದ 'ವಿಶ್ವವಾಣಿ'ಯಲ್ಲೇ ಜಾಹೀರಾತನ್ನು ಕೊಡಿರಿ.

ಹೆಚ್ಚು ವಿಚಾರಗಳಿಗೆ ಬರೆಯಿರಿ—

ವ್ಯವಸ್ಥಾಪಕ—'ವಿಶ್ವವಾಣಿ,' 'ಅನ್ನಪೂರ್ಣ', ವಿಶ್ವೇಶ್ವರಪುರಂ,

ಬೆಂಗಳೂರು ನಗರ.

ನಮ್ಮ ಜರಿ ಪೀತಾಂಬರ, ರೇಶ್ಮೆ ಮಡಿಗಳಿಗೆ ಗಮನಕೊಡಿರಿ.

S. U. N. & CO. ***Choukhamba, Benares City.***

ಮೂರು ಇನಾಮುಗಳು.

THIS MAN WISHES HE HAD

ಶ್ರೀ ಕಾಶಿಯಲ್ಲಿ ತಯಾರಾಗತಕ್ಕ ರೇಶ್ಮೆ ಮಾಲುಗಳ ಕೆಟಲಗು 1, ಕಾಶೀನಕ್ಷೆ 1, ವಿಶ್ವೇಶ್ವರ ಪಟ 1, ಈ 3 ಸಾಮಾನುಗಳು 1 ಆಣೆಸ್ಟಾಂಪು ಕಳುಹಿಸಿದರೆ ಇನಾಮಾಗಿ ಕಳುಹಿಸಲಾಗುವವು. ಸ್ಟಾಂಪು ಬಾರದಿದ್ದರೆ ಈಗಿನ ಫೇಶನಿಗೆ ತಕ್ಕಂತೆ ಜರೀ ಕೆಲಸಗಳಿಂದ ತಯಾರಿಸಿದ ರೇಶ್ಮೆ ಸೀರೆಗಳೂ, ಖಣ, ಮಡಿ ಕದಪಾವಿನ್ನಿ, ಪೇಟಾ, ಕೋಟಿಂಗ್, ಶರ್ಟಿಂಗ್ ಶಿಲ್ಕುಗಳೂ, ಕಾಶ್ಮೀರ ಶಾಲುಗಳೂ, ಊಲನ್ ಚಾಳ, ಧಾವಳಿ, ನಾಮುಣಿ, ತರತರದ ರುಮಾಲ್ಕುಗಳೂ ಸಾಮಾನುಗಳೇ ಮೊದಲಾದ ಅನೇಕ ತರದ ಸಾಮಾನುಗಳ ಕೆಟಲಾಗು 1 ಮಾತ್ರ ಇನಾಂ, ಈಗಿನ ಹೊಸನಮೂನೆಯ ಮಡಲು ಬುಟ್ಟಿ ಹಾಕಿದ ಜರೀ ಶೀರೆ ಎಲ್ಲಾ ರಂಗುಗಳಲ್ಲಿ ರೂ. 20ರಿಂದ 55 ವರೆಗೆ ಸಾದಾ 16ಮೊಳದ ಶೀರೆ 1ಕ್ಕೆ ರೂ. 16ರಿಂದ ರೂ. 36ರ ವರೆಗೆ. ಆರಿ ಕಡಮೆ 16ಮೊಳ ಕ್ಲವರ್ ಅಂಚು ರೂ. 10½ಯಿಂದ ರೂ 16. ಖಣ 1ಕ್ಕೆ ರೂ. 1¼ರಿಂದ ರೂ. 10ರ ವರೆಗೆ. ಪೋಸ್ಟು ಖರ್ಚು ಪ್ರತ್ಯೇಕ. ಆರ್ಡರಿನಂ. ಸಾಮಾನುಗಳನ್ನು ಸರಿಯಾದ ಸುಲಭ ದರದಿಂದ ಕಳುಹಿಸಲಾಗುವುದು.

ಶಿರೋಮಣಿ ನಾರಾಯಣಾಚಾರ್ಯ & ಕಂಪೆನಿ, ಚೌಕಂಬಾ, ಬನಾರಿಸ್, ಕಾಶಿ.

USE

SUVASINI AGARBATHIES

(REGD.)

SRI BHARATHA VASTU MANDIRA, UDIPI

ಸಮಗ್ರ ಕರ್ನಾಟಕದಲ್ಲಿ ಜನಪ್ರೀತವಾದ

— 'ಕಿರಿಯರ ಪ್ರಪಂಚ'ದವರ ಸಾಹಸದ ಫಲಸ್ವರೂಪವಾದ —

ಮಧುವನವನ್ನು ಓದಿದ್ದೀರಾ?

(೨೫ ಕಥೆಗಳನ್ನೊಳಗೊಂಡಿದೆ.)

ಕರ್ನಾಟಕದ ಬೇರೆ ಬೇರೆ ಕತೆಗಾರರ ಹಾಗು ಕತೆಗಾರ್ತಿಯರ ಸುಂದರ ರಚನೆಗಳಿಂದ ಆಯ್ದು ನೇಯ್ದ ವೈವಿಧ್ಯ ಪೂರ್ಣವಾದ ೨೫ ಕತೆಗಳ ಸಂಗ್ರಹವಿದು. ಭಿನ್ನ ಭಿನ್ನ ರುಚಿಗಳಿಗೆ ಮೆಚ್ಚುವ ಸಾಮಾಜಿಕ, ರಾಜಕೀಯ, ಮನೋವೈಜ್ಞಾನಿಕ ಕತೆಗಳ ಇಂತಹ ಸಂಗ್ರಹವು ಬೇರೊಂದಿಲ್ಲ.

ಬೆಲೆ: ಕೇವಲ ರೂ. ೧—೮—೦

ಸೋಲ್ ಏಜಂಟರು—

ಸಪ್ಲೈ ಏಜೆನ್ಸಿ, ಲಿಮಿಟೆಡ್,

ಉಡುಪಿ, ದಕ್ಷಿಣ ಭಾರತ

Printed by P. VENKATARAMANACHARYA for & on behalf of SUPPLY AGENCY LTD., at THULUNAD PRESS, UDIPI and Published by K. H. SHETTY at "NAVAYUGA" OFFICE, UDIPI.

Registered No. M. 3618

೨೦ ಪುಟಗಳು—ಒಂದಾಣೆ

NAVAYUGA
A Nationalist Kanarese Weekly, UDIPI, S. K.

It will pay you to advertise in 'NAVAYUGA' The Leading Nationalist Kanarese Weekly of Karnatak

FOR RATES OF ADVT. Etc

APPLY TO THE MANAGER

ನವಯುಗ

ವಾಚಕರನೇಕರ
ಅಪೇಕ್ಷೆಯಂತೆ ಮುದ್ರಿಸಲ್ಪಟ್ಟ
ಮಂಗಳೂರು ಉಡುಪಿಗಳಲ್ಲಿ
ಜಯಶೀಲವಾಗಿ
ಅಭಿನಯಿಸಲ್ಪಟ್ಟ
ಜನಪ್ರಿಯವಾದ ನಾಟಕ

ವ್ಯಭಿಚಾರಿಣಿ ಯಾರು?

ಕೆಲವೇ ಪ್ರತಿಗಳು ಉಳಿದಿವೆ.
ಬೆಲೆ ೦ ೮ ೦
ಕಿರಿಯರ ಪ್ರಪಂಚ, ಉಡುಪಿ

VOL XXVI-NO 26 25-2-1937

ಮೂಡ ಬಾನಿನ ಕಣ್ಣು ಕೆಂಗಿಡಿಯು ಕಾರುತಿದೆ,
ಬನದ ನಾಡೊಳು ಮೊಳಗುತಿದೆ ತುಮುಲನಾದ,

ವಾರಪತ್ರಿಕೆ
ಸಂಪಾದಕ: ಕೆ. ಕೆ. ಶೆಟ್ಟಿ.

ಮೂಡುವುದು ತಂಬೆಳಕ ತಿಂಗಳಿನ ಮೊಗವಲ್ಲ,
'ನವಯುಗ'ದ ರುದ್ರರವಿಯಾರಕ್ತ ಬಿಂಬ.

ಸಂಪುಟ ೧೬] ಉಡುಪಿ, ಗುರುವಾರ ೨೫ ಫೆಬ್ರವರಿ, ೧೯೩೭ [ಸಂಚಿಕೆ ೨೬

THE

Canara Industrial & Banking SYNDICATE, LIMITED.

ESTD: [INCORPORATED IN BRITISH INDIA] 1925

Head Office:
MUKUNDA NIVAS,
UDIPI, S. I.

BRANCHES:

1	BANGALORE CITY	16	KARWAR
2	BELGAUM	17	KUMTA
3	BYADGI	18	ANKOLA
4	BELLARY	19	HONAVAR
5	ADONI	20	BHATKAL
6	HOSPET	21	KARKALA
7	NANDYAL	22	BRAHMAVAR
8	PRODATTUR	23	HUNGARCUTTA
9	TADPATRI	24	SIRSI
10	TALIPARAMBA	25	SAGAR
11	HUBLI	26	KANHANGAD
12	GADAG	27	COONDAPOOR
13	UDIPI	28	PAYYANUR
14	UPPINANGADI	29	CANNANORE
15	KASARGODE	30	MANGALORE

A branch at BOMBAY will be opend in April next

We stand for all that is BEST in
MODERN BANKING SERVICE

OPEN

AN ACCOUNT TO-DAY
IN THIS
Pioneer & Highly Progressive
BANK OF KARNATAKA
AND BE
A SATISFIED CUSTOMER.

ALL KINDS OF BANKING BUSINESS TRANSACTED ON EASY TERMS.

Total Working Funds exceed Rs. 35 Lakhs

Apply for Rules of Business

MUKUNDA NIVAS
UDIPI
22—12—1936

P. A. Pai Brothers,
Managing Agents

ದಿ ಕುಂದಾಪುರ ಬೇಂಕ್ ಲಿಮಿಟೆಡ್ ಕುಂದಾಪುರ

ಬ್ರಾಂಚ್—ಬ್ರಹ್ಮಾವರ.

ಚಾಲ್ತಿ ಮತ್ತು ಸೇವಿಂಗ್ಸ್ ಬೇಂಕ್ ಠೇವಣಾತಿಗಳು ಒಳ್ಳೇ ದರದ ಬಡ್ಡಿಯಲ್ಲಿಯೂ ಖಾಯಂ ಠೇವಣಾತಿಗಳು 3 ತಿಂಗಳಿಗೊಮ್ಮೆ ಸಾಲಿಯಾನ್ ಶೇಕಡಾ ರೂಪ್ಯಾ 4½, 6 ತಿಂಗಳಿಗೆ ಸಾಲಿಯಾನ್ ಶೇಕಡಾ ರೂಪ್ಯಾ 5%, 12 ತಿಂಗಳಿಗೆ ಸಾಲಿಯಾನ್ ಶೇಕಡಾ ರೂಪ್ಯಾ 6%, 24 ತಿಂಗಳಿಗೆ ಸಾಲಿಯಾನ್ ಶೇಕಡಾ 6½% ದರದ ಬಡ್ಡಿಯಲ್ಲಿ ಅಂಗೀಕರಿಸಲ್ಪಡುವುವು.

ಒಂದು ವರುಷದ ಯಾ ಹೆಚ್ಚಿಗೆ ಅವಧಿಯ ಖಾಯಂ ಠೇವಣಾತಿಗಳಿಗೆ ಮೇಲೆ ಕಾಣಿಸಿದ ದರದಲ್ಲಿ 6 ತಿಂಗಳಿಗೊಮ್ಮೆ ಬಡ್ಡಿ ಕೊಡಲಾಗುವುದು. ಬೇರೆ ಎಲ್ಲಾ ತರದ ಬೇಂಕ್ ವ್ಯವಹಾರಗಳು ನಡಿಸಲ್ಪಡುವುವು. ಕರೆಂಟ್, ಸೇವಿಂಗ್ಸ್ ಬೇಂಕ್ ಮತ್ತು ಕ್ಯುಮುಲೇಟಿವ್ ಠೇವಣಾತಿಗಳು ಅಂಗೀಕರಿಸಲ್ಪಡುವುವು.

ವಿಶೇಷ ಸೂಚನೆ—ಬಡವರಿಗೆ ಸಹಾಯವಾಗುವಂತೆ ಕಡಿಮೆ ಎಂದರೆ ರೂಪ್ಯಾ 10 ಸಹಾ ಸಾಲಕೊಡಲಾಗುತ್ತೆ, ವಾಲುಗಳು ದೊರೆಯುತ್ತವೆ. ಹೆಚ್ಚಿನ ಮಾಹಿತಿ ಬಗ್ಗೆ ಬರೆಕೊಳ್ಳಿರಿ

ನವಯುಗ

ಉಜ್ವಲ ರಾಷ್ಟ್ರೀಯ ವಾರಪತ್ರಿಕೆ—

ಉದ್ಬೋಧಕ ಲೇಖನಗಳಿವೆ, ದೇಶ ವಿದೇಶಗಳ ತಾಜಾ
ವರ್ತಮಾನಗಳಿವೆ, ಮನೋಹ್ಲಾದಕ ಕಥೆ, ಕವನ,
ನಾಟಕಗಳಿವೆ, ಧುರೀಣರ ಫೋಟೋಗಳಿವೆ.

ಪ್ರತಿ ಗುರುವಾರ ತಪ್ಪದೆ ಪ್ರಕಟವಾಗುವುದು.

ವಾ. ಚ. ಅಂಚೆವೆಚ್ಚ ಸೇರಿ ಕೇವಲ ೩—೪—೦.

ಇಂದೇ ಚಂದಾದಾರರಾಗಿರಿ!

ಅಖಿಲ ಕರ್ನಾಟಕದಲ್ಲಿಯೂ ಹೊರ ಪ್ರದೇಶದಲ್ಲಿಯೂ ವಿಶಾಲವಾಗಿ
ಪ್ರಚಾರದಲ್ಲಿರುವ "ನವಯುಗ"ವು ಜಾಹೀರಾತುಗಳಿಗೆ ವಾಹನವಾಗಿದೆ.

ಮೆನೇಜರ್— ನವಯುಗ, ಉಡುಪಿ.

THE
MOOLKY BANK, LTD.,
MOOLKY.

ದಿ ಮೂಲ್ಕಿ ಬೇಂಕ್, ಲಿಮಿಟೆಡ್,
ಮೂಲ್ಕಿ.

ಎಲ್ಲಾ ತರದ ಬ್ಯಾಂಕ್ ವ್ಯವಹಾರಗಳು ನಡಿಸಲ್ಪಡುವವು. "ಮುಖ್ಯವಾಗಿ ಭಂಗಾರ ವ ಸರಕು ಈಡಿನ ಮೇಲೆ ಸಾಲವನ್ನು ಕೊಡುವುದು.".

ಕಾಯಂ ಠೇವಣಾತಿಗಳು:

ಒಳ್ಳೇ ದರದ ಬಡ್ಡಿಯಲ್ಲಿಯೂ, ಮಾಸಿಕ, ಸೇವಿಂಗ್ಸ್‌ಬೇಂಕ್ ಮತ್ತು ಠೇವಣಾತಿಗಳು ಯೋಗ್ಯ ತರದ ಬಡ್ಡಿಯಲ್ಲಿಯೂ ಅಂಗೀಕರಿಸಲ್ಪಡುವವು.

ಹೆಚ್ಚಿನ ಮಾಹಿತಿಗೆ ಕೆಳಗಿನವರಿಗೆ ಬರೆದುಕೊಳ್ಳಿರಿ.

M. R Punja, ಯಂ. ಆರ್. ಪೂಂಜ,
President & Manager, ಪ್ರಸಿಡಂಟು ಮತ್ತು ಮೆನೇಜರ್.

ಇದೀಗ ಬಂದಿದೆ— ಹೊಸ ಪುಸ್ತಕ!

ಟಾಲಸ್ಟಾಯಿಯವರ ಕತೆಗಳು

ಶ್ರೀ. ಎಲ್ ಗುಂಡಪ್ಪ, ಎಂ ಎ.ಯವರಿಂದ ಅನುವಾದಿಸಲ್ಪಟ್ಟ ಟಾಲಸ್ಟಾಯಿಯವರ ಕಥೆಗಳೆಲ್ಲಾ ಕನ್ನಡದಲ್ಲಿ ಒಟ್ಟಾಗಿ ಅಚ್ಚಾಗಿ ಬಂದಿವೆ. ಈ ಕಥೆಗಳಲ್ಲಿ ಜೀವನಕ್ಕೆ ಸಂಬಂಧಪಟ್ಟ ಎಲ್ಲಾ ಪ್ರಶ್ನೆಗಳ ಚರ್ಚೆಯೂ ಇದೆ. ಆದುದರಿಂದ ಸ್ತ್ರೀಪುರುಷರೆಲ್ಲರೂ ಅವಶ್ಯ ಓದಬೇಕು.

೪೦೦ ಪುಟಗಳು ಒಂದೂವರ ರೂಪಾಯಿ ಬೆಲೆ

ಪ್ರತಿಗಳು ಸಿಗುವ ಸ್ಥಳ—

ಕಿರಿಯರ ಪ್ರಪಂಚ, ಉಡುಪಿ.

ವಿಜಯನಗರ ಸ್ಮಾರಕೋತ್ಸವ ಮಂಡಲದ ಪರವಾಗಿ ಹೊರಡಲಿರುವ

ಜಯಕರ್ನಾಟಕದ

ವಿಜಯನಗರ ವಿಶೇಷ ಸಂಚಿಕೆ

ವಿಶೇಷ ಸಂಪಾದಕರು. ಪ್ರೊ. ಎಸ್. ಎಸ್. ಭೂಸನೂರಮಠ, ಎಂ.ಎ

ಅಖಿಲ ಭಾರತದ ಪ್ರಸಿದ್ಧ ವಿದ್ವಾಂಸರ ಲೇಖನವೈಭವ!
ವಿಜಯನಗರಕ್ಕೆ ಸಂಬಂಧಿಸಿದ ಚಿತ್ರಮಾಲೆಗಳ ಐಶ್ವರ್ಯ!!
ಹೊಳಪಿನ ಹಾಳೆ ═══ ಅಚ್ಚಿನ ಅಚ್ಚುಕಟ್ಟು

ಬೆಲೆ: ಎಂಟಾಣೆ ಮಾತ್ರ

ಜಯಕರ್ನಾಟಕವು ಜನವರಿಯಿಂದ—ವಿಶೇಷ ಸಂಚಿಕೆಯಿಂದ ಮೊದಲ್ಗೊಂಡು ದೊಡ್ಡ ಆಕಾರದಲ್ಲಿ (ಡೆಮಿ ¼ ದಲ್ಲಿ) ಹೊರಡುವುದು!
ಅಲ್ಲದೆ ಚಂದಾದರವನ್ನು ಇಳಿಸಿದೆ—ರೂ. ೪—೮—೦ ಮಾತ್ರ!
ಚಂದಾದಾರರಾಗಬೇಕೆನ್ನುವವರಿಗೂ ಜಾಹಿರಾತುದಾರರಿಗೂ ಸುಸಮಯ

ಜಯಕರ್ನಾಟಕ ಕಾರ್ಯಾಲಯ, ಧಾರವಾಡ.

ತುಳುನಾಡ್ ವೈದ್ಯಶಾಲೆ, ಉದ್ಯಾವರ, ದ. ಕ.

ಕೊಲೆರಾ ಪಿಲ್ಸ್	ಭೈರವ ಮಾತ್ರೆಗಳು.
ಕೊಲೆರಾ ರೋಗಕ್ಕೆ ರಾಮಬಾಣ ಔಷಧ.	ಬಾಣಂತಿ ರೋಗಸಂಬಂಧವಾದ ಸಕಲ ರೋಗಗಳಿಗೂ ದಿವ್ಯೌಷಧ
೧೦೦ ಮಾತ್ರೆಗಳಿಗೆ ರೂ ೩—೮—೦	೧೦೦ ಮಾತ್ರೆಗಳಿಗೆ ರೂ ೨—೮—೦

ಎಲ್ಲಾ ತರದ ರೋಗಗಳಿಗೂ ಅನುಭವಸಿದ್ಧವಾದ ದಿವ್ಯೌಷಧಗಳು ದೊರೆಯುತ್ತವೆ

ಯು ಪಿ. ಮೇಸ್ತ್ರ, ಗೋಲ್ಡ್ ಮೆಡಲ್ಡ್ ಫಿಜಿಸಿಯನ್.

THE
PANGAL NAYAK BANK
LIMITED.
ESTABLISHED 1920

Head Office: UDIPI.

Branches: MANGALORE and KATAPADI.

Fixed loans and Overdraft advances are granted on the pledge of gold articles, on the mortgage immovable properties and on the personal security of approved constituents on favourable terms.

Genuine trade bills, cheques, drafts etc., are discounted at a nominal charge.

Current, Savings Bank and Cumulative deposits are accepted at moderate rates of interest.

Fixed Deposits are received and interest allowed at 4% on 1 year and at 4½% on 2 years deposits.

Every other description of up-to date Banking business is also undertaken

A few shares are also available to the public

ಮಿರಜದಲ್ಲಿಯ ಸುಪ್ರಸಿದ್ಧ ವೈದ್ಯರಾದ ಎಮ್. ಕೆ. ರಜಪೂತ ಇವರ ಸ್ವದೇಶಿ ಔಷಧಗಳು.

ಗುಣ ಬಾರದಿದ್ದರೆ ## ಸ್ತ್ರೀಧರ್ಮ ಸಂಜೀವಿನೀ ಚೂರ್ಣ (ರಿಜಿಸ್ಟರ್ಡ) **ಹಣ ಪರತ**

ಈ ಚೂರ್ಣವು ಕೆಂಪು ಬಿಳೆ ಶರಗಿಗೆ ಶತ್ರುವಾಗಿರುವುದು. ಅನಿಯಮಿತತನದಿಂದ ಮುಟ್ಟಾಗುವಿಕೆ, ಕ್ಲೇಶ ಮೈಯಲ್ಲಿ ನೋವು, ಉಷ್ಣತಾ ಕ್ಷೀಣತಾ ಗರ್ಭಾಶಯದಲ್ಲಿರುವ ದೋಷ ಗರ್ಭಧಾರಣವಾಗದಿರೋಣ, ಅಕಾಲದಲ್ಲಿ ಗರ್ಭಪತನವಾಗೋಣ ಈ ಮೊದಲಾದ ರೋಗಗಳು ನಿಶ್ಚಯವಾಗಿ ನೆಟ್ಟಗಾಗಿ ಗರ್ಭಕೋಶವು ಸ್ವಚ್ಛವಾಗುವದು ಮಕ್ಕಳಾಗುವದಿಲ್ಲೆಂದು ಎರಡನೇ ಲಗ್ನಮಾಡಿಕೊಳ್ಳುವ ಮೊದಲು ಗೃಹದೇವತೆಯಾದ ಮೊದಲನೇ ಪತ್ನಿಗೆ ಈ ಚೂರ್ಣ ಅವಶ್ಯ ಕೊಡಿರಿ. ಮುಖ್ಯ ಸರ್ಟಿಫಿಕೇಟ ಮ. ರಾ ಎ. ಎಮ್ ಇನ್ಸ್‌ಪೆಕ್ಟರ ಬೆಳಗಾವಿ—ಈ ಚೂರ್ಣದಿಂದ ನನ್ನ ಕುಟುಂಬದ ಹೊಟ್ಟೆಯೊಳಗಿನ ರಕ್ತ ಗುಲ್ಮದ ಗಂಟು ನಾಮಶೇಷವಾಯಿತು. ಮತ್ತು ಎಲ್ಲ ರೋಗಗಳು ನಿಶ್ಶೇಷವಾದವು. ನನ್ನ ಮಿತ್ರನ ಹೆಂಡತಿಯ ರಕ್ತ ಮತ್ತು ಶರಗು ಇಲ್ಲದಂತಾದವು. ೨೧ ದಿವಸದ ಡಬ್ಬಿಯ ಕಿಮ್ಮತು ರೂ. ೩ ಟ ಖ. ಅಣೆ, ೮. ಡಬ್ಬಿಗೆ ೪ರೂ.]

ಸಂತತಿ ಪ್ರತಿಬಂಧಕ ಚೂರ್ಣ. (ರಿಜಿಸ್ಟರ್ಡ) [ವಿ. ಪಿ ಖರ್ಚು ಅಣೆ ೮.

ಬಹಳಸಾರಿ ಹಡಿಯುವುದರಿಂದ ಅತಿಶಯ ಅಶಕ್ತಿಯಾಗುತ್ತದೆ ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ, ಮುಟ್ಟಾಗುವಿಕೆಯು ನೇಮದಂತೆ ಸುರುವಾಗುವದು, ಶರೀರಕ್ಕೇನೂ ಅಪಾಯವಾಗದೆ ಸಂಸಾರ ಸುಖವು ಪೂರ್ಣವಾಗಿದೆ, ಕೂಡಲೇ ಗರ್ಭಧಾರಣ ಬಂದಾಗುವುದು ತದನಂತರ ಏನು ಮಾಡಿದರೂ ಸುರುವಾಗುವದಿಲ್ಲ. ಮೊದಲೇ ಪೂರಾ ವಿಚಾರಮಾಡಿ ಔಷದ ಬೇಡಿರಿ ಮುಖ್ಯಸರ್ಟಿಫಿಕೇಟ ಡಾಕ್ಟರ ಬಿ. ಎ. ವೈದ್ಯ ಎಲ್ ಸಿ. ಪಿ. ಎಸ್. ಮು। ಕೇ। ಮಾ। ಮಾಹಿಮಾ ಜಿ ಠಾಣೆ. ಈ ಚೂರ್ಣದಿಂದ ಯಾವ ತರದ ಅಪಾಯವಾಗದೆ ಗರ್ಭಧಾರಣವಾಗುವದಿಲ್ಲ. ಪೂರ್ಣ ಗುಣಕಾರಿ

ವಿಳಾಸ:—ಸಂಜೀವಿನೀ ಔಷಧಾಲಯ, ಮು. ಪೊ. ಮಿರಜ, S. M. C

ಸಮಾಚಾರ ಸಂಗ್ರಹ

ಇಡೀ ಕುಟುಂಬದ ಕೊಲೆ—ನೆರೆ ಹಾವಳಿ—ಸ್ಪೈನಿನ ಜನತೆಯ ಘೋರ ಸಂಕಷ್ಟ—ವಿಮಾನ ಯುದ್ಧ—ಮೇದ್ರಿದಿನ ಮೇಲೆ ವಿಮಾನ ಧಾಳಿ

ಇಡೀ ಕುಟುಂಬದ ಕೊಲೆ

ಆಂಧ್ರದೇಶದ ಕ್ಯೂಲಕುಂತಲ ತಾಲೂಕಿನ ಕೊಲ್ಲಮಡಗು ಎಂಬ ಹಳ್ಳಿಯಲ್ಲಿ ಇದೇ ತಾ. ೧೭ರಲ್ಲು ಒಂದು ಕುಟುಂಬದವರೆಲ್ಲರೂ ಅವರ ವಿರೋಧಿಗಳಿಂದ ಕೊಲೆಮಾಡಲ್ಪಟ್ಟಿರುವ ಭೀಷಣ ಸಮಾಚಾರ ಬಂದಿರುವುದು. ಕೊಲೆ ಮಾಡಲ್ಪಟ್ಟ ಕುಟುಂಬದ ಗಂಡಸರು ಕೆಲವರು ಜೈಲಲ್ಲಿರುವುದರಿಂದ ಅನುಕೂಲತೆ ಪಡೆದು ಅವರ ವೈರಿಗಳು ಇಡೀ ಮನೆಗೇನೆ ಬೆಂಕಿ ಕೊಟ್ಟರು. ಮನೆಯವರು ಪ್ರಾಣ ಉಳಿಸಿಕೊಳ್ಳಲು ಹೊರಗೋಡುವ ಬಾಗಿಲಲ್ಲ ನಿಂತು ಅವರ ತಲೆ ಕಡಿದು ದೇಹವನ್ನೆಲ್ಲಾ ಕತ್ತರಿಸಿ ಹಾಕಿರುವರು. ಹೀಗೆ ಕೊಲ್ಲಲ್ಪಟ್ಟವರಲ್ಲಿ ೩ ಮಂದಿ ಸ್ತ್ರೀಯರು ಮತ್ತು ೫ ಮಕ್ಕಳು. ಪೋಲೀಸ್ ಅಧಿಕಾರಿಗಳು ಎರಡು ಬಸ್ಸು ರಿಸರ್ವ್ ಪೋಲೀಸರೊಂದಿಗೆ ಈ ಹಳ್ಳಿಗೆ ಹೋಗಿ ತನಿಕ್ಕೆ ನಡಿಸುತ್ತಿರುವರು.

ಸಿಂಧು ಪ್ರಾಂತದ ಚುನಾವಣೆ

ಯಲ್ಲಿ ಸರ್. ಶಾ. ನಾವಾಸ್ ಭೂತೋರವರು ಅಪಜಯ ಹೊಂದಿರುವರು. ಇವರು ಸಿಂಧ್ ಯುನೈಟೆಡ್ ಪಕ್ಷದ ನಾಯಕರಿದ್ದು ಸಿಂಧ್ ಪ್ರಾಂತದ ಗವರ್ನರರ ಬಲಗೈಯಂತಿದ್ದರು. ಮತ್ತು ಸಿಂಧ್ ಪ್ರಾಂತ ರಚನೆಯಾಗುವ ಮೊದಲು ಬೊಂಬಾಯಿ ಪ್ರಾಂತದ ಮಂತ್ರಿಗಳಾಗಿದ್ದರು. ಕಳೆದ ೧೫ ವರ್ಷಗಳಿಂದ ಬೊಂಬಾಯಿ ಕೌನ್ಸಿಲಿನ ಮೆಂಬರರಾಗಿದ್ದರು. ಇವರ ಪ್ರತಿಸ್ಪರ್ಧಿಯಾದ ಶೈಕ್ ಅಬ್ದುಲ್ ಮಜೀದರಿಗೆ ಇವರಿಗಿಂತ ೧೦೦೦ ಓಟು ಹೆಚ್ಚು ದೊರೆತಿರುವುದು. ಸಿಂಧ್ ಗವರ್ನರರ ಇನ್ನೊಬ್ಬ ಸಲಹೆಗಾರರಾದ ದಿವಾನ್ ಬಹದ್ದೂರು ಹೀರಾನಂದ ಗಖೆಮ್ ಸಿಂಘರ ನೊಮಿನೇಶನ್ ಪತ್ರವೇ ಅಸಿಂಧುವೆಂದು ತೆಗೆದುಹಾಕಲ್ಪಟ್ಟಿರುವುದು. ಹೀಗಾಗಿ ಗವರ್ನರರ ಇಬ್ಬರು ಸಲಹೆಗಾರರೂ ಹೊರಗೆ ಬಿದ್ದಂತಾಯಿತು.

೧ ಲಕ್ಷಕ್ಕಿಂತಲೂ ಮಿಕ್ಕಿದ ಭೀಕರ ಸಂಕಷ್ಟ.

ಸ್ಪೈನಿನ ಪ್ರಾಮುಖ್ಯ ಬಂದರವೂ ವ್ಯಾಪಾರ ಸ್ಥಳವೂ ಆದ ಮಲಾಗವು ಬಂಡಾಯಗಾರರ ವಶವಾದಾಗ, ಬಂಡಾಯಗಾರರ ಹಿಂಸೆಯಿಂದ ತಪ್ಪಿಸಿಕೊಳ್ಳಲು ಒಂದು ಲಕ್ಷಕ್ಕಿಂತಲೂ ಮಿಕ್ಕಿದ ಜನರು ಮಲಾಗವನ್ನು ಬಿಟ್ಟು ಆಲ್ಮೇರಿಯಕ್ಕೆ ಹೋಗುತ್ತಿದ್ದಾಗ, ಬಂಡಾಯಗಾರರು ವಿಮಾನ ಮತ್ತು ಯುದ್ಧನಾವೆಗಳ ಮೂಲಕ ಬೋಂಬೆಸೆದು ಹಲವರನ್ನು ಕೊಂದು ಹಾಕಿದರು. ರಸ್ತೆಯಲ್ಲೆಲ್ಲಾ ಶವಗಳು ಬಿದ್ದಿದ್ದವು. ಮಕ್ಕಳುಮರಿಗಳನ್ನು ಹಿಡಿದುಕೊಂಡು ನಡೆಯಲಾರದವರು, ತಮ್ಮ ಮಕ್ಕಳು ವೈರಿಗಳ ಕೈವಶವಾಗಬಾರದೆಂದು ಅವುಗಳ ಕತ್ತು ಹಿಸುಕಿ ಕೊಂದು ಹಾಕಿ ತಮ್ಮ ತಲೆಗಳನ್ನು ಕಲ್ಲಿಗೆ ಚಚ್ಚಿ ಕೊಂಡು ಅಥವಾ ಲೋರಿಗಳ ಅಡಿಗೆ ಬಿದ್ದು ಆತ್ಮಹತ್ಯೆ ಮಾಡಿಕೊಂಡರು. ಹೆತ್ತವರಿಂದ ಬಿಟ್ಟು ಬಿಡಲ್ಪಟ್ಟ ಹಲವು ಮಕ್ಕಳು ಧಾವಿಸುವ ಜನತೆಯಿಂದ ತುಳಿಯಲ್ಪಟ್ಟು ಮೃತವಾಗಿರುವವು. ಆಲ್ಮೇರಿಯಕ್ಕೆ ಮುಟ್ಟುವಾಗ ಅನೇಕರು ಅನ್ನಾಹಾರವಿಲ್ಲದೆ ರಸ್ತೆ ಬದಿಗಳಲ್ಲಿ ಬಿದ್ದುಕೊಂಡಿರಬೇಕಾಯಿತು.

ಟ್ರೈನಿನಿಂದ ರೂ. ೫೮,೦೦೦ ಕಳವು

ಕೋನಪುರದಿಂದ ಬೊಂಬಾಯಿಗೆ ಟ್ರೈನಿನಲ್ಲಿ ಪಾರ್ಸಲ್ ಮಾಡಿ ಕಳುಹಿಸಲ್ಪಟ್ಟದ್ದ ರೂಪಾಯಿ ೫೮,೦೦೦ ಬೆಲೆಬಾಳುವ ಚಿನ್ನದ ಕೊರಡು ನಡುವೆ ಕಳವು ಮಾಡಲ್ಪಟ್ಟಿರುವುದು. ಚಿನ್ನವನ್ನು ಕೋನಪುರದ ಚಾರ್ಟರ್ಡ್ ಬೇಂಕಿನವರು ಬೊಂಬಾಯಿಯ ತಮ್ಮ ಶಾಖೆಗೆ ಕಳುಹಿಸಿದುದಾಗಿದೆ. ಬೊಂಬಾಯಿಯಲ್ಲಿ ಪಾರ್ಸಲ್ ಪೆಟ್ಟಿಗೆ ತೆರೆದು ನೋಡುವಾಗ ಅದರೊಳಗೆ ಕಬ್ಬಿಣದ ತುಂಡುಗಳಿದ್ದುವು. ಈಕುರಿತು ಪೋಲೀಸರು ಪತ್ತೆ ನಡಿಸುತ್ತಿರುವರು.

ನೆರೆ ಹಾವಳಿ

ಆಫ್ರಿಕದ ಮೊಜಾಂಬಿಕ್ ಎಂಬಲ್ಲಿ ಪ್ರಬಲ ನೆರೆ ಬಂದು ೨ ನದಿಗಳ ಕಟ್ಟೊಡೆದು ರಸ್ತೆ ರೈಲ್ವೇ ಲೈನುಗಳೆಲ್ಲಾ ಕಡಿದು ಹೋಗಿರುವವು. ೧೦೦ ಮಂದಿ ದೇಶೀಯಜನರು ನೆರೆಗೆ ಸಿಕ್ಕಿ ಮುಳುಗಿ ಹೋಗಿರುವರು. ಈ ನೆರೆಯು ೫ ಘಂಟೆಯ ವರೆಗೆ ನಿಂತಿದಿತು. ಮರಮಟ್ಟುಗಳ ತುದಿಯಲ್ಲಿದ್ದ ಸುಮಾರು ೧೦೦೦ ಮಂದಿಯನ್ನು ಸರಕಾರದ ಕಡೆಯವರು ರಕ್ಷಿಸಿರುವರು. ಸುಮಾರು ಒಂದು ಮಿಲ್ಯ ಪವನುಗಳಷ್ಟರ ನಷ್ಟವಾಗಬಹುದೆಂದು ಅಂದಾಜು ಮಾಡಲಾಗಿದೆ.

ರಾಸ್‌ಟೆಸ್ಸರು ತಲೆತಪ್ಪಿಸಿಕೊಂಡರು.

ಅಬಿಸೀನಿಯದ ಚಕ್ರವರ್ತಿಗಳಾದ ನೆಗಸರ ಅಳಿಯ ರಾಸ್‌ಟೆಸ್ಸರವರು, ಇಟೆಲಿಯಾನರ ವಿರೋಧವಾಗಿ ಒಂದು ಸೇನೆಯನ್ನು ಗುಪ್ತವಾಗಿ ಸಂಗ್ರಹಿಸುತ್ತಿದ್ದರು. ಅವರನ್ನು ಹಿಡಿಯಬೇಕೆಂದು ಜನರಲ್ ಗ್ರೆಂಟಿಯಾನಿಯವರು, ೨೦,೦೦೦ ಸೇನೆ ಮತ್ತು ವಿಮಾನ ಪಡೆಯ ಮೂಲಕ ಅವರನ್ನಾವರಿಸಿದರು. ಆದರೆ ರಾಸ್ ಟೆಸ್ಸಾರವರು ತಲೆತಪ್ಪಿಸಿಕೊಂಡು ಕೆನ್ಯ ಪ್ರಾಂತದ ವಿಲ್ಲೆಗೆ ಹೋಗಿಬಿಟ್ಟಿರುವರೆಂದು ತಿಳಿದು ಬರುತ್ತದೆ. ಅವರು ರಾತ್ರಿಯೆಲ್ಲಾ ಸಂಚರಿಸಿ ಹಗಲು ಅಡಗಿ ಕೂತು ಇಟೆಲಿಯಾನರ ವಿಮಾನಗಳಿಂದ ತಪ್ಪಿಸಿಕೊಂಡಿರುವರು. ಸುಮಾರು ೧೫೦೦ ಬಂದೂಕು, ೧೫ ಮಿಶಿನ್ ತೋಪು ಮತ್ತು ಬಹಳ ಸಿಡಿಮದ್ದು ಇಟೆಲಿಯಾನರ ವಶವಾಗಿರುವದಂತೆ ಇಟೇಲಿಯಾನರಿಗೆ ವಿರೋಧಿಗಳಾದ ಗಾಬ್ರೆ ಮರಿಯಮ್ ಮತ್ತು ಬೈನೆ ಮೆರಿಡ್ ಎಂಬ ಸೇನಾನಾಯಕರನ್ನು ಹಿಡಿದು ಕೊಟ್ಟರೆ ೨೦,೦೦೦ ಲೀರ್ ಇನಾಮು ಕೊಡಲಾಗುವುದೆಂದು ಇಟೆಲಿಯಾನರು ಪ್ರಕಟಿಸಿರುವುದಾದರೂ ಅವರಿನ್ನೂ ಸಿಕ್ಕಿಲ್ಲ.

ಸ್ಪೈನಿನ ಯುದ್ಧ

ಮೇದ್ರಿದ್ ಮತ್ತು ವೆಲೆನ್ಸಿಯಾ ರಸ್ತೆಯೊಂದು ಮಾತ್ರ ಈಗ ಮೇದ್ರಿದಿನ ಜೀವನಾಳದಂತಾಗಿದೆ. ಅದನ್ನು ವಶಪಡಿಸಿಕೊಂಡು ಮೇದ್ರಿದಿಗೆ ಆಹಾರ ಸಾಮಗ್ರಿಯಾಗಲಿ, ಯುದ್ಧೋಪಕರಣ ಮತ್ತು ಸೈನಿಕರಾಗಲಿ ದೊರೆಯದಂತೆ ಮಾಡಬೇಕೆಂದು ಬಂಡಾಯಗಾರರು ಶತಪ್ರಯತ್ನ ನಡಿಸುತ್ತಿರುವರು. ಸದ್ರಿ ರಸ್ತೆಯು ಬಂಡಾಯಗಾರರ ಅಧೀನವಾಗದಂತೆ ಸ್ಪೆನಿಶ್ ಸರಕಾರವು ಪ್ರಚಂಡ ಹೋರಾಟ ಹೂಡಿರುವದು. ಮೇದ್ರಿದಿನ ಆಗ್ನೇಯದಲ್ಲಿ ೨೦ ಮೈಲು ದೂರದಲ್ಲ ಕಳೆದ ಒಂದು ವಾರದಿಂದ ಭೀಷಣ ಯುದ್ಧ ನಡೆದು ಈಗ ಎರಡನೇ ವಾರ ಆರಂಭಿಸಿರುವುದು. ಸ್ಪೆನಿಶ್ ಸರಕಾರದ ಪ್ರಕಟನೆಯಂತೆ ೬೦೦೦ ಮಂದಿ ಬಂಡಾಯಗಾರರು ಕೊಲ್ಲಲ್ಪಟ್ಟಿರುವರೆಂದು ತಿಳಿದುಬರುತ್ತದೆ ಇವರಲ್ಲಿ ೩೦೦೦ ಮಂದಿ ಜರ್ಮನರೆಂದು ಕಂಡು ಹಿಡಿಯಲಾಗಿದೆ.

ಮೇದ್ರಿದಿನ ಬಳಿಯ ಯುದ್ಧವು ಅಮಾನುಷ ಕ್ರೂರತನದಿಂದ ನಡೆಸಲ್ಪಡುವಾಗ ಬಿಸ್ಸೇ ರಣರಂಗದ ಗುಡ್ಡತಟ್ಟುಗಳಲ್ಲಿ ಹೋರಾಡುವ ಸೈನಿಕರು ರಾತ್ರಿ ಒಟ್ಟಾಗಿ ಶಿಬಿರಾಗ್ನಿಗಳನ್ನು ಹೊತ್ತಿಸಿ ಹಾಡಿ ಆಗಲುವರೆಂದು ತಿಳಿದುಬರುತ್ತದೆ.

ವಾಯುವ್ಯ ಗಡಿನಾಡಿನ ಅಧಿಕಾರಿಯ ಕೊಲೆ

ಇತ್ತಲಾಗಿ ಲೆಫ್ಟನೆಂಟ್ ಬೀಟಿ ಎಂಬವರು ೩೦,೦೦೦ ರೂಪಾಯಿ ಹಿಡಕೊಂಡು ಹೋಗುತ್ತಿದ್ದಾಗ ವಾಯುವ್ಯ ಗಡಿನಾಡಿನ ಕೆಲವರು ಅವರನ್ನು ಕೊಂದು ಹಣವನ್ನು ಲುಟಾಯಿಸಿಕೊಂಡು ಹೋಗಿರುವರಷ್ಟೆ. ಈ ಕೊಲೆಗಾರರನ್ನು ಹಿಡಿದುಕೊಟ್ಟವರಿಗೆ ರೂ. ೧೦,೦೦೦ ಇನಾಮು ಕೊಡಲಾಗುವುದೆಂದು ಸರಕಾರವು ಪ್ರಕಟಿಸಿರುವುದು. ಈ ಕೊಲೆಗಾರರಲ್ಲಿ ೪ ಮಂದಿಯ ಪತ್ತೆಯಾಗಿರುವುದೆಂದು ತಿಳಿದುಬರುತ್ತದೆ.

ವಾಯುವ್ಯ ಗಡಿನಾಡಿನ ಸೈನಿಕರ ಕೊಲೆ

ಇದೇ ತಾ. ೧೭ರಲ್ಲು ವಾಯುವ್ಯ ಗಡಿನಾಡಿನ ಒಂದು ದಳ ಸೈನಿಕರ ಮೇಲೆ ಖಾರೋಟಿ ಸಂಗಡಿಗರು ಗುಂಡೆಸೆದು ೨ ಮಂದಿ ಸೈನಿಕರು ಕೊಲ್ಲಲ್ಪಟ್ಟು ೭ ಮಂದಿ ಜಖಮ್ ಹೊಂದಿರುವರು ಸೈನಿಕ ದಳದೊಂದಿಗಿದ್ದ ವಿಮಾನ ಪಡೆಯು ಸಂಗಡಿಗರ ಮೇಲೆ ಬೋಂಬೆಸೆದು ಹಲವರು ಕೊಲ್ಲಲ್ಪಟ್ಟಿರುವರು.

ಮೇದ್ರಿದಿನ ಮೇಲೆ ವಿಮಾನ ದಾಳಿ

ಇದೇ ತಾ ೧೬ನೇ ರಾತ್ರಿ ಬಂಡಾಯಗಾರರು ಎರಡು ಸಲ ಮೇದ್ರಿದಿನ ಮೇಲೆ ವಿಮಾನ ಧಾಳಿ ನಡಿಸಿದ ಪರಿಣಾಮವಾಗಿ ೧೧ ಮಂದಿ ಕೊಲ್ಲಲ್ಪಟ್ಟು ೬೦ ಮಂದಿಗೆ ನೆಟ್ಟಾಗಿರುವುದು ಸ್ಪನಿಶ್ ಸರಕಾರವು ಖಡ್ಡಾಯವಾಗಿ ಜನರನ್ನು ಸೇನೆಗೆ ಸೇರಿಸುವ ಕಾನೂನನ್ನು ಜಾರಿಗೆ ತಂದಿರುವುದು. ಜರಾಮರಣರಂಗದಲ್ಲಿ ಘೋರ ಕದನ ನಡೆದಿರುವುದು. ಸರಕಾರದ ಕಡೆಯವರು ಮುಂದೊತ್ತಿರುವರೆಂದು ತಿಳಿದು ಬರುತ್ತದೆ.

ವಿಮಾನ ಯುದ್ಧ

ಇದೇ ತಾ. 18ರಲ್ಲು ಮೇದ್ರಿದ್‌ಪಟ್ಟಣದ ಮೇಲೆ ೩ ವಿಮಾನ ಯುದ್ಧಗಳು ನಡೆದು ಇತ್ತಂಡದವರೂ ತಾವು ಗೆದ್ದಿರುವೆವೆಂದು ಪ್ರಕಟಿಸಿರುವರು. ಮೊದಲನೇ ಸಲ 2½ ಮೈಲು ಎತ್ತರದಲ್ಲ 40 ವಿಮಾನಗಳು ಹೋರಾಡಿದುವು. ಸರಕಾರಿ ಕಡೆಯ 10 ವಿಮಾನಗಳು ನಾಶಮಾಡಲ್ಪಟ್ಟಿರುವವೆಂದು ಬಂಡಾಯಗಾರರ ಕಡೆಯವಾರ್ತೆ. ಆದರೆ ಮೇದ್ರಿದಿನ ರ್ಯೂಟರ್ ಪ್ರತಿನಿಧಿಯ ಸಮಾಚಾರದಂತೆ, ಸರಕಾರಿ ಕಡೆಯ ವಿಮಾನಗಳು ವೈರಿಗಳ 7 ವಿಮಾನಗಳನ್ನು ನೆಲಕ್ಕೆ ಕೆಡಹಿರುವವೆಂದು ತಿಳಿದುಬಂದಿದೆ. ಸರಕಾರದ ಕಡೆಯ ಒಂದು ವಿಮಾನ ಮಾತ್ರ ಕಾಣದೆ ಹೋಗಿರುವುದಂತೆ.

ಕಾಂಗ್ರೆಸು ಮತ್ತು ಮಂತ್ರಿ ಪದವಿ ಸ್ವೀಕಾರ

ಹಲವು ಪ್ರಾಂತಗಳಲ್ಲಿ ಕಾಂಗ್ರೆಸಿಗೆ ಈಗ ಬಹು ಪಕ್ಷವು ದೊರೆತಿರುವುದರಿಂದ ಕಾಂಗ್ರೆಸು ಮಂತ್ರಿ ಪದವಿ ಸ್ವೀಕರಿಸಬೇಕೆಂದು ಬಹುಪಕ್ಷದ ಅಭಿಪ್ರಾಯವಿರುತ್ತದೆ. ಕಾಂಗ್ರೆಸಿನವರು ಅಧಿಕಾರ ಸ್ವೀಕರಿಸಿದರೆ ಮಂತ್ರಿಗಳು ರೂ. 200ಕ್ಕಿಂತ ಹೆಚ್ಚಿನ ಸಂಬಳ ಸ್ವೀಕರಿಸಬಾರದು; ಮೋಟರುಕಾರು, ಸ್ಪೆಶಲ್ ಟ್ರೈನುಗಳಲ್ಲಿ ಸಂಚರಿಸಬಾರದು; ಹೆಚ್ಚಿನ ಬೆಲೆಯ ಪೋಷಾಕುಗಳನ್ನು ಧರಿಸಬಾರದೆಂದು ಬಿಹಾರದ ಕಾಂಗ್ರೆಸು ಮುಖಂಡರೊಬ್ಬರು ಅಭಿಪ್ರಾಯಪಿತ್ತಿರುವರು. ಇದುವರೆಗೆ ಒರಿಸ, ಬಿಹಾರ್ ಮತ್ತು ಸಂಯುಕ್ತ ಪ್ರಾಂತಗಳಲ್ಲಿ ಕಾಂಗ್ರೆಸಿಗೆ ಪ್ರಬಲ ಬಹುಪಕ್ಷದೊರೆತಿರುವುದು. ವಾಯುವ್ಯಗಡಿನಾಡಿನಲ್ಲಿ ಕಾಂಗ್ರೆಸ್ ಪಕ್ಷವು ಅತಿ ದೊಡ್ಡ ಪಕ್ಷವಾಗಿರುವುದು. ಮಧ್ಯಪ್ರಾಂತ, ಬೊಂಬಾಯಿ ಮತ್ತು ಮದ್ರಾಸಿನಲ್ಲಿ ಕಾಂಗ್ರೆಸಿಗೆ ಪ್ರಬಲ ಬಹುಪಕ್ಷವು ಸಿಕ್ಕಿಯು. ಒರಿಸ್ಸದ ಗವರ್ನರರು, ಅಲ್ಲಿಯ ಕಾಂಗ್ರೆಸ್ ಪಕ್ಷದ ನಾಯಕರನ್ನು ಕರೆದು ಮಂತ್ರಿಮಂಡಲಿಯ ರಚನೆಯ ಕುರಿತು ಮಾತಾಡಿರುವರು ಭೂಕಂದಾಯವನ್ನು ಕಡಿಮೆ ಮಾಡುವ ಒಕ್ಕಲಿಗರ ಸಾಲನಿವಾರಿಸುವ, ನಿರುದ್ಯೋಗ ನಿವಾರಣೆಯೇ ಮೊದಲಾದ ಕಾರ್ಯಕ್ರಮವನ್ನು ಜನತೆಯ ಮುಂದಿಟ್ಟು ಕಾಂಗ್ರೆಸ್ ಪಕ್ಷೀಯರು ಚುನಾವಣೆಯಲ್ಲ ಹೋರಾಡಿರುವುದರಿಂದ ಈಗ ಮಂತ್ರಿಪದವಿ ಸ್ವೀಕರಿಸದಿದ್ದಲ್ಲಿ ಜನತೆಯನ್ನು ನಿರಾಶೆಗೊಳಿಸಿದಂತಾಗುವುದರಿಂದ ಮಂತ್ರಿಪದವಿ ಸ್ವೀಕರಿಸಲೇಬೇಕೆಂದು ಸಂಯುಕ್ತಪ್ರಾಂತದ ಕೆಲಮಂದಿ ಮುಂದಾಳುಗಳ ಅಭಿಪ್ರಾಯವಿರುವುದು.

ನವಯುಗಕ್ಕೆ ಚಂದಾದಾರರಾಗಿರಿ!

ಈ ವಾರದ ಕಥೆ

ವಾರಾಂಟ್

(ಲೇಖಕ—ಶ್ರೀ ಕೊರಡ್ಕಲ್ ಶ್ರೀನಿವಾಸರಾವ್, ಉಡುಪಿ)

'ಕಾಡೀಗೆ ಚಂದಾ ವರಳೀಯ ಹುಡುಗಿ ಓ! ಓ ಓ ಓ! ಒ ಒ ಒ!' ಎಂದು ತಿಮ್ಮ ಒಳಲು ಎತ್ತಿದುದೇ ತಡ, ಎತ್ತುಗಳು ಉಸಿರುಗಟ್ಟಿ ಓಡತೊಡಗಿದುವು. ಅವನ ರಾಗದಿಂದುತ್ಸಾಹಗೊಂಡಲ್ಲ, ಅದರ ಮುಕ್ತಾಯವಾಗಿ ತಮ್ಮ ಬೆನ್ನಮೇಲೇನು ಬರಲಿಕ್ಕಿರುವುದೆಂಬುದ ಅವುಗಳಿಗೆ ಚನ್ನಾಗಿ ಗೊತ್ತು, ಅದಕ್ಕಾಗಿ! ಆದರೂ 'ರಿಪ್ ರಿಪ್ ರಿಪ್' ಎಂದಿತು ಬಾರುಕೋಲು ಆಗ ಗಾಡಿಯೊಳಗೆ ಕೂತಿದ್ದೂಬ್ಬ ಮಹಾಶಯನು, 'ಥೂ ನಿಮ್ಮ ಜನ್ಮವೇ ಹೀಗ! ಹೆಂಡ ಕುಡಿಯೋದು, ಬಂದು ಹಾಡೋದು! ಸಿಕ್ಕಿದೋರ ತಲೆಯೊಡೆಯೋದು!' ಎಂದು ತಲೆತಿಕ್ಕಿಕೊಳುತ್ತಿದ್ದ! ಗಡ್ ಗಡ್ ಗಡಕ್! ಗಡಕ್ ಗಡಕ್ ಗಡ್! ಎಂದು ಗಾಡಿಸಾಗುತ್ತಿತ್ತು.

"ಪಟ್ಟಾಯಿತಾ ತಲಿಗೆ? ಜೋರ ಗಿಬಿಡು ಅಂತೀರಿ, ಮೊಳದ ಆಳಕ್ಕೆ ಜಾಡುಬಿದ್ದ ರಸ್ತಿಮ್ಯಾಲೆ ಗಾಡಿ ಒಡ್ಸೀರೆ ತಲೀಗೆ ಏಟಾಗೋದ್ದೇ! ಎಲ್ಲಾ ಮಾಡ್ಸೋವ್ರು ನೀವೆ ದುಡ್ಡೆಲ್ಲ ಪ್ಯಾಟೀ ರಸ್ತೀಮ್ಯಾಲೋ ಕಲ್ಕಟ್ರ ಮೋಟಾರ್ ಹೋಗೋ ಹಾದೀಮ್ಯಾಲೋ ಸುರ್‍ಯೋದು! ನಮ್ಮ ಹಳ್ಳೀ ಅವಸ್ಥೆ ಕೇಳೋರ್‍ಯಾರು! ಎರಡು ವರ್ಷದ ಹಿಂದ ಒಬ್ಬರು ಜರೀ ಮುಂಡಾಸಿನ ಮಾನ್ಸಾವ್ರು ಬಂದ್ರು-ನಿಮ್ಗೆ ರಸ್ತೆಕೊಡ್ಸ್ತೀನಿ, ಆಸ್ಪತ್ರಿ ಇಡ್ಸ್ತೀನಿ, ಸಾಲೆಕೊಡ್ತೀನಿ, ಓಟುಕೊಡಿ! ಒಂದ್ರು ಊರ ಪ್ಯಾಂಭೂವ್ರು ನಮ್ನೆಲ್ಲ ಕರಕೊಂಡು ಹೋಗಿ ಓಟುಕೂಡ್ಸೀರು ನಾವು ಎಲ್ಲಾ ಬರ್ತೇಂತ ಬಾಯಿಕಳ್ಕೊಂಡ ಕೂಂತಪ್ರಿಗೆ ಬಂದದ್ದೇನು ಗೊತ್ತಾ? ಉರ್ತಿತೆರಿಗೆ! ನಿಮ್ಮಂಥೋರೆಲ್ಲಾ ನಮ್ಮ ಹಳ್ಳಿಗಳಿಯೋದೇ ಏನಾದ್ರೂಂದು ಅಪಾಂತ್ರ ಎಬ್ಬಿಸೋಕೆ!" ಎನ್ನುತ್ತ, ಹದವಾಗಿ ಗಾಡಿಬಿಡುತ್ತಿದ್ದ ತಿಮ್ಮ.

"ಅಪಾಂತ್ರ ಮಾಡಿಕೊಂಡ್ರೆ ಬಿಡ್ತಾರೇನೋ ಕೋರ್ಟಿನವ್ರು! ನೀವು, ಹಳ್ಳಿಯವರು, ಬಹಳ ಪಾಪದವರ ಹಾಗೆ ತೋರ್‍ಸಿಕೊಳ್ಳುತ್ತೀರಿ. ಆದರೆ ಅಸಲ್ ಬಂದಿವಾನರು ನೀವೆಲ್ಲ! ಕೋರ್ಟಿಗೆ ಬಂದರೆ ಒಂದುಕಾಸು ಬಿಚ್ಚೋದಿಲ್ಲ ನಮಗೆ! ಗರೀಬರೂಂತ ಕಾಣಲಿಕ್ಕೆ ಹರಕುಬಟ್ಟೆ ಸುತ್ತಿಕೊಂಡು ಕಣ್ಣೀರುಹಾಕಿ ಮುನ್ಸೀಪ್ರ ಕಣ್ಣುಕಟ್ಟೆಬಿಡ್ತೀರಿ! ಎಲ್ಲಾದರೂ ಅದು ನಡಿಯದೆ ಜೈಲಿಗೆ ಹುಕುಂ ಆಯ್ತೂಂದ್ರ ಚಿಂದಿ ಬಟ್ಟೆಯೊಳಗಿಂದ ನೋಟು ನೋಟೇ ಹೊರಡುತ್ತೆ! ನಿಮ್ಮದಲ್ಲಾ ರಕ್ತ ಕಲಿಯೋದ್ರಲ್ಲೇ ಈ ಮೀಸ ಹಣ್ಣಾಗಿಹೋಯ್ತು!ಹ್ನೂ, ಹೊಡಿ ಬೇಗ, ಬೆಳಗಾಗೋದ್ರೊಳಗೇ ನಿಮ್ಮ ಕುಂಬಾರ್‍ರ ಹಳ್ಳಿಗ ಸೇರಬೇಕು" ಎಂದು ಕೋರ್ಟುಪೇದ ಲಕ್ಷ್ಮಯ್ಯನು ತನ್ನ ಗಲ್ಲಮೀಸಯಲ್ಲಿ ಬೆರಳೆಳದು ಸಿಕ್ಕುಬಿಡಿಸುತ್ತ ಹೇಳಿದ

"ಬೆಳಗಾಗೋದ್ರೊಳಗೆ ಸೇರೋದು ಯಾವ ದೊಡ್ಡದು? ನನ್ನ ಈ ನೌಕರ್‍ರು ಉಮೇದು ಮಾಡಿದ್ರೂಂದ್ರೆ ಕೋಳಿಕೂಗೋದ್ರೊಳಗೇ ನಾವಲ್ಲಿ!"

"ಏನೋ, ಇಂದು ಹೆಂಡಕ್ಕೆ ನೀರು ಬಿದ್ದಿಲ್ಲಾಂತ ತೋರುತ್ತೆ! ಗಾಡಿಯೆತ್ತುಗಳನ್ನೆಲ್ಲ ನೌಕರ್‍ರು ಅಂತಿಯಲ್ಲ?"

"ಹೌದು ಬುದ್ಧಿ! ಇವ್ರು ನೌಕರ್‍ರೇ! ನೌಕರ್‍ರು ಹಾಗೆ ಹೊತ್ತಾರ ನಿಲ್ತಾವೆ, ಕಾಸಿ ಕೊಡ್ತಾಂಗೆ ಅಕ್ಕಚ್ಚು ಕುಡೀತಾವೆ, ಊಟಮಾಡ್ತಾಂಗೆ ಹೊಟ್ಟೆಗಟ್ಟೆ ಮಾಡ್ಕೊತಾವೆ, ಆ ಮ್ಯಾಲೆ ಆಫೀಸೀಗೆಹೋದ್ಹಾಂಗೆ ಈ ಗಾಡೀನೊಗಕ್ಕೆ ಕುತ್ತಿಗೆಕೊಟ್ಟರೆ, ಕೂಡ್ಲಿ ಕೂಡ್ಸಲೀ, ಸಂಜೀತಂಕಾ ಎಳಿತಾ ಇರ್ತಾವೆ ಬೈಗೀಲಿ ಮನೀಸೇರಿ ಟಿಪ್ಪನ್ ತಕ್ಕೊಂಡು ಗಾಳಿತಿನ್ನೋಕೆ ಹೋದ್ಹಾಂಗೆ ಗುಡ್ಡೆಮ್ಯಾಲೇ ಅಲೀತಾ ಇರ್ತಾವೆ! ನೌಕರ್‍ರಲ್ಲೇ ಮತ್ತೆ! ನಾಳೆ ಇವ್ರಿಗೂ ರಜಾ-ಉಗಾದಿ ಹಬ್ಬದ ಲೆಕ್ಕಕ್ಕೆ! ಅದಿರ್‍ಲಿ ಬುದ್ಧಿ, ಬೆಳಗಾರ್‍ರ ಉಗಾದಿ ಹಬ್ಬ! ತಾವು ಮನೀಬಿಟ್ಟು ಬಂದ್ರಿಯಲ್ಲ!'

"ನಮಗೆ ಹಬ್ಬ ಮಾಡ್ಲಿಕ್ಕೆ, ಮನೇಲಿ ಕೂತ್ಕೊಳ್ಳಿಕ್ಕೆ ನೀವಲ್ಲ ಬಿಡ್ತೀರೊ? ಹೆಂಡ ಕುಡ್ದು, ಬಂಡುಮಾಡಿ, ಧನೀರ ಗಂಟುಮುಳುಗಿಸಿ ನಮ್ಮನ್ನ ಎಳೀತೀರಿಲ್ಲ ಹಳ್ಳಿಮೂಲೆಗ! ಧನೀರ ಗೇಣಿ ತಿಂದು ಹಾಕಿ, ಹಬ್ಬ ಮಾಡ್ತೀರಿ, ಮದ್ವೆ ಮಾಡ್ತೀರಿ! ಆದರೆ ಕಾಸು ಬಿಚ್ಚೋದಿಲ್ಲ ನಾವು ಬಂದ್ರ ಖಾಲಿ ಹೋಗೋ ಗಾಡೀಲಿ ಹತ್ತಿಸಿಕೊಂಡು ಹೋಗೂಂದ್ರ, ಎರಡಾಣೆ ಕೊಡ್ಬೇಕೂಂದಿ! ಬೆಳಗಾಗ್ಲಿ, ನಮ್ಮ ಪವರ್ ಎಷ್ಟು ಎಂಬೋದು ನಿನಗೇ ತಿಳಿಯುತ್ತೇ' ಎನ್ನುತ್ತ ಲಕ್ಷ್ಮಯ್ಯನು ಗುಡುಗುಡಿಸುತ್ತಿರಲು ಗಡ ಗಡ ಗಡ! ಗಡ ಗಡ ಗಡ! ಗಡ್ಕ ಗಡ್ಕ ಎಂದು ಗಾಡಿಯು ಮುಂದೆ ಸಾಗುತ್ತಿತ್ತು.

"ನಮ್ಮ ಕಷ್ಟ ನಿಮಗೇನು ಗೊತ್ತು ಬುದ್ಧೀ! ನೋಡಿ, ಮನೆಬಿಟ್ಟು ಮೂರು ದಿನಾಗುತ್ತೆ ಬೈಹುಲ್ಲು ಗಾಡಿ ಹೊಡ್ಕೊಂಡು ದಣ್ದು ಸುಣ್ಣಾಗಿ, ಪ್ಯಾಟೆ ಸೇರಿ ಮೂರು ಮೂರು ಸುತ್ತು ಬಂದ್ರೆ ಅಲ್ಲಿ ಅಯ್ಯನೋರು ಚಂದಾಗಿ ಉಂಡುತಿಂದು ಜಗ್ಲೀಲಿ ಕಾಲ್ ಮ್ಯಾಲೆ ಕಾಲ್ಹಾಕಿ ಕೂಂತುಕ್ಕೊಂಡು ಎಲೀ ಜಗೀತಾ ಮೂರು ರೂಪಾಯಾಕೇನೊ? ಹೋಗ್ಲೀ, ನಾಲ್ಕಾಣೆ ಜಾಸ್ತಿ ಮಾಡ್ಕೊ-ಅಂತಾ ಬಾಳಾ ಉದಾರ ತೋರಿಸ್ತಾರೆ! ಬೈಹುಲ್ಲಿನೋರಿಗೆ ಕ್ರಯಕೊಟ್ಟು ಮತ್ತುಳಿಯೋದು ಎಂಟಾಣ ನನ್ನ ಕೈಯಾಗೆ! ಮೂರು ದಿನದ ದುಡಿತ, ಗಾಡಿಬಾಡಿಗೆ ಎಲ್ಲ ಅದೇ, ಸಾಕಾ? ಮುಂಚಿನ ಕಾಲ ಅಲ್ಲ! ಕಾಳುಬೆಳೆ ಕೇಳೋರಿಲ್ಲ' ಹಳ್ಳಿಯೋರಿಗೆ ಮಾರಿ ಬಡ್ದದೆ! ಬಚಾವು ಇಲ್ಲ!"

"ಏನದು ಮಾರಿಬಡ್ದಾಳಂತೀ? ಯಾರಲ್ಲಾದ್ರೂ ಪೇವಿ ಇದ್ದಾಳೇನೊ?"

"ಹಾಗಲ್ಲ ಬುದ್ಧಿ, ಹಳ್ಳಿಯೋರಿಗೆ ಕೆಟ್ಟಗಾಲ ಬಂದಿದೇಂದೆ! ಅದ್ರ ದೇವಿನೂ ಬರೋ ದಿನ ಇದು! ಗಟ್ಟಕ್ಕೆ ಹೋದೋರು ಉಗಾದಿ ಹಬ್ಬಕ್ಕೆ ಮನೆ ಸೇರೋದು ಜಾಸ್ತಿ ಅವರು ಬರೋಯೊತ್ತಿಗೆ ಒಂದೂಂದು ಸಲ ಅವರ ಹೆಗಲೇರಿ ಬಂದುಬಿಡ್ತಾಳೆ ದೇವೀ. ಏನು ಗಾಬ್ರಿ ಆಗ್ತಾ ತಮಗೆ ದೇವೀಂದ್ರೆ?"

ಲಕ್ಷ್ಮಯ್ಯನಿಗೆ ಸಿಡುಬು ರೋಗವೆಂದರೆ ಬಹಳ ಬಯ ಆದದರಿಂದ ತಿಮ್ಮನ ಮಾತು ಕೇಳಿ ಆತ ಯೋಚನೆಯಲ್ಲಿ ಬಿದ್ದಿದ್ದ, ವಾದಿ ಗಿರಿಯಪ್ಪನವರು ಹೇಳಿದ್ದ ಮಾತಗಳಲ್ಲಿ ಈಗವನಿಗೆ ಹೊಸದೊಂದು ಅರ್ಥತೋರತೊಡಗಿತ್ತು — "ಪ್ರತಿವಾದಿ ಜಾರಪ್ಪ ಘಟ್ಟದಿಂದ ಬಂದಿದ್ದಾನೆ, ಈ ಸಲ ಜಾರಲಾರ. ಆದರೆ ನಾನು ಬರುವುದಿಲ್ಲ ನೀನೇ ಹೋಗಿ ಹಿಡಿದು ಕೋರ್ಟಿಗೇ ಎಳೆದುಕೊಂಡು ಹೋಗು ನನ್ನ ಮನೆಗೂ ಕರೆದುಕೊಂಡು ಬರಬೇಡ ನಿನಗೆ ೧೫ ರೂಪಾಯಿ ಇನಾಮು!" ಹೀಗೆಂದಿದ್ದರು ಗಿರಿಯಪ್ಪನವರು ಈ ಸಲ ಜಾರಲಾರ! ಏಕೆ? ಘಟ್ಟದಿಂದ ಒಂದವನಿಗೆ ಜ್ವರ? ಎಲ್ಲಿಯಾದರೂ ದೇವಿಯ ಚಿಹ್ನೆ? ತನ್ನ ಮನೆಗೂ ಕರೆದುಕೊಂಡು ಬರಬೇಡವೆಂದುದು ಏಕೆ? ತಾನು ಬರುವದಿಲ್ಲವೆಂದುದು? ಸರಿ, ಏನೋ ದೇವಿಯ ಅನುಮಾನ ಅವರಿಗಿದ್ದಿರಬೇಕು ಆದುದರಿಂದಲೇ ಸುಲಭವಾಗಿ ಸಿಗುವವನನ್ನು ಹಿಡಿಯಲಿಕ್ಕೆ ೧೫ ರೂಪಾಯಿಯ ಇನಾಮು! ಹೀಗಿದ್ದಮೇಲ ವಿಚಾರಿಸಿಕೊಳ್ಳದ ನೇರಾಗಿ ಜಾರಪ್ಪನ ಮನೆಗೆ ಹೋಗುವುದು ಒಳ್ಳೆತಲ್ಲ. ಆದರೆ ಹಳ್ಳಿಯವನಾದರೂ ಕೋರ್ಟು ಪೇದೆಯ ತಲನೋಡಿದನೆಂದರೆ ಅಂದು ಯಾರೂ ವಾರಾಂಟಿಗೆ ಸಿಕ್ಕುವುದು ಅಪೂರ್ವ-ಅಷ್ಟು ಚೆನ್ನಾಗಿ ಕಂಬಿಯಿಲ್ಲದೆ ತಂತಿ ನಡೆದು ಬಿಡುತ್ತೆ! ಇನ್ನು ಜಾರಪ್ಪನ ಹೆಸರು ಹೇಳಿ ವಿಚಾರಿಸಿದಮೇಲ ಅವನು ಸಿಗುವುದುಂಟೆ? ಆದುದರಿಂದ ಗುಟ್ಟು ಬಿಡದೇನೇ ಗಾಡಿಯವನೊಡನೆ ಹರಟೆ ಹೊಡೆಯುತ್ತ ಬೇಕಾದ ಸಂಗತಿಯನ್ನು ಅವನ ಬಾಯಿಂದ ಉದುರಿಸಿಕೊಳ್ಳಬೇಕು—ವಕೀಲರು ಅಡ್ಡಸವಾಲು ಹಾಕಿ ಬಾಯಿ ಬಡಿಸಿದ ಹಾಗೆ, ಒಂದುವೇಳೆ ಗುಟ್ಟು ರಟ್ಟಾದರೂ ಕೆಟ್ಟು ಹೋಗುವುದೇನೂ ಇಲ್ಲ ಇವನು ಗಾಡಿ ಬಿಟ್ಟು ಹೋಗಿ ಜಾರಪ್ಪನಿಗೆ ಸುದ್ದಿ ಕೊಡಲಾರ—ಇಂತಹ ವಿಚಾರ ತರಂಗಗಳಿಂದ ಲಕ್ಷ್ಮಯ್ಯನು ಮೌನ. ಗಡ ಗಡ ಗಡಕ್, ಗಡ್ಕ ಗಡ್ಕ, ಗಡಕ್ ಎಂದು ಗಾಡಿ ಸಾಗುತ್ತಿತ್ತು.

"ಏನು ಬುದ್ಧಿ! ನಿದ್ದೆ ಬಂತಾ?" ಎಂದ ತಿಮ್ಮ. ಎತ್ತೈತ್ತಿ ಬಿಸಾಡ್ತೆ ನಿನ್ನಗಾಡಿ! ಎಲ್ಲಿಯ ನಿದ್ದೆ? ಎಲುಬೆಲ್ಲ ಪುಡಿಪುಡಿಯಾಗಿ ಹೋಯ್ತು, ನಿನ್ನ ಗಾಡೀಲಿ ಕೂತು! ಘಟ್ಟದಿಂದ ಬಂದವರು ಯಾರಾದ್ರೂ ಕೊಟ್ಟದ್ದು ಒಂದು ಹೋಳು ಒಣ ಅಡಿಕೆಯಿದ್ದರ ಇತ್ತ ಕೊಡು ಜಗೀತಾ ಹರಟೆಹೊಡಿಯೋಣ ಹ್ಞಂ—ಆ ಜಾರಪ್ಪ ಬಂದಿರೋನೇನು ಬಂದಿದ್ರ ಅಲ್ಲಿ ಒಂದುಕ್ಷಣ ನನಗೆ ಇಳೀಬೇಕು ಒಣ ಅಡ್ಕೆ ತಂದುಕೊಡ್ತೇನೆಂದಿದ್ದ ಹೋದಕಾಲ ಸಿಕ್ಕಿದ್ದಾಗ

"ಹೋದಕಾಲ" ಮೂರುವರ್ಷಆಯ್ತು ಅಂವ ಊರುಮನೆ ಕಾಣದ!! ಈ ವರ್ಷ ಬಂದಾನಷ್ಟ! ಹೋದಕಾಲ ಸಿಕ್ಕಿದ್ನಾ? ಅಡ್ಕೆ ಕೊಡ್ತೇನೆಂದಿದ್ನಾ? ಹೂಂ ಗೊತ್ತಾಯಿತು! ನೀವು ಅಲ್ಲಿ ಇಳಿಯೋದು ಬೇಡ್ವೇ ಗಲ್ಲ! ಹಿಡಿಯೋಕೆ ಅವನ್ನ! ಪಾಪ! ಇನ್ನೂ ಉಂಟಾ ಆ ಗಿರಿಯಪ್ಪನೋರ ಅಸ್ತ್ರ ಅವನ ಮ್ಯಾಲೆ?"

"ಅವನು ಪಾಪ? ಗಿರಿಯಪ್ಪನೋರಿಗೆ ಒಂದು ಸಾವಿರ ರೂಪಾಯಿಗೆ ಗೋಟು ನಾಮಾ ಕೊಟ್ಟು ಘಟ್ಟಾ ಹತ್ತಿದಂವ ಪಾಪ!"

"ನಿಮ್ಗೆಲ್ಲ ಕೋರ್ಟಿನವರೀಗೆ ಕಾಣೋದು ಹಾಗ! ಕೂರ್ಟೀಲಿ ಕೂಂತವರಿಗೆ ಸತ್ಯಮಿತ್ಯಹ್ಯಾಗೆ ತಿಳಿತದೆ? ನಿಂತದ್ದಕ್ಕೆ ಕೂಂತದ್ದಕ್ಕೆ ರುಜುವಾತು ಕೊಡೂಂತೀರಿ ಸಾಕ್ಷಿಬೇಕೂಂತೀರಿ, ಗೇಣಿಕೊಟ್ಟದ್ದಕ್ಕೆ ರಶೀದು ತೋರ್‍ಸೂಂತೀರಿ ಧನೀರಕೈಯ ರಶೀದು ಕೇಳೊ ಧೈರ್ಯ ಯಾವ ಕುಂಬಾರಗಂಡೀಗದೆ? ರಶೀದು ಕೇಳಿದ್ರೆ ಧನಿಯೋರಮೇಲ ವಿಸ್ವಾಸು ಇಲ್ಲಾಂತಾಯಿತಲ್ಲ! ಜಾರಪ್ಪನೂ ಅಂಥನ್ನೇ. ಅವನ ತಾತ ಮತ್ತು ತಂದಿದೂ ಹಾಗೇ. ತನ್ನ ಸಂಸಾರವನ್ನಾದ್ರೂ ಉಪಾಸಾ ಹಾಕ್ಯಾರು, ಆದರೆ ಧನೀರ ಗೇಣೀಲಿ ಒಂದು ಚಿಕ್ಕಾಸು ಬಾಕಿ ಮಾಡಿಕೊಂಬವರಲ್ಲ! ಕೋರ್ಟು ಸತ್ಯ ಸುಳ್ಳಾತು! ಸುಳ್ಳು ಸತ್ಯಾತು! ಗಿರಿಯಪ್ಪನೋರ ಹಿರಿಯರಿಂದ ಜಾರಪ್ಪನ ಮುತ್ತಾತ ಮಾಡ್ಕೊಂಡ ಜಾಗ ಅದು—ಎರಡು ತಲೆಮಾರಿನ ಸಂಸಾರ ಆ ಗುಡ್ಡೀ ಬದಿ ಕಡ್ದು ಕಡ್ದು ಬೆವರು ನೆತ್ತರ ಸುರ್‍ಸಿಸುರ್‍ಸಿ ಮಾಡಿದ ತೋಟ ಹೊಲಗದ್ದೆ—ಸುಮಾರು ನಾಲ್ಕು ಸಾವ್ರರೂಪಾಯಿನ ಕೃತ್! ಎಲ್ಲ ಗಿರಿಯಪ್ಪನೋರು ಬಡ್ದು ಹಾಕ್ಕೊಂಡ್ರು! ಆದ್ರೂ ಅವರ ಕಿರುಕುಳ ಇನ್ನೂ ತೀರಿಲ್ಲಾಂದ್ರೆ, ಲೋಕದಾಗೆ ನಮ್ಮಂಥಾ ಬಡವ್ರು ಮಾನಾ ಹಿಡ್ಕೊಂಡು ಒಡ್ಕೋದೇ ಅನ್ಯಾಯಾಂತಾಯ್ತು!'

"ಮಾನಾಪಮಾನದ ಪ್ರಸ್ತಾಪ ಎಲ್ಲಿ ಬಂತು ಇದರಲ್ಲಿ? ಲೆಕ್ಕಾಚಾರ ಪ್ರಕಾರ ಕೊಡೋದು ಕೊಟ್ಟುಬಿಟ್ಟರೆ ಮಾನಹೋಗೋದು ಹ್ಯಾಗೊ?"

"ಹೇಳಿದನೆಲ್ಲ ಮೊದ್ಲೇ ಕೊಡೋದಲ್ಲ ಕೊಟ್ಟಿದ್ದ ಚಿಕ್ಕಾಸು ಬಾಕಿ ಮಾಡ್ಕೊಂಡಿಲ್ಲ. ಮಾನ ಮಾತ್ರ ಬಿಟ್ಟು ಕೊಡ್ಲಿಕ್ಕೆ ಜಾರಪ್ಪ ಕೇಳ್ಲಿಲ್ಲ ಅದಕ್ಕಾಗಿ ಎಲ್ಲ ಕಳಕೊಂಡ ನಾವು ಕುರುಬ್ರೂಂದ್ರ ಧನೀರಿಗೆ ಪ್ರಾಣಕೊಡೋವ್ರು!ಖೂನೀಮಾಡು, ಪಾಶೀಗೆ ಕುತ್ತಿಗೆ ಕೊಡೂಂದ್ರ ಹಿಂದುಮುಂದು ನೋಡ್ದೆ ಹ್ಞೂಂ ಅನ್ನೋರೇ ನಾವ್ರು! ಆದ್ರ ಕೊಡಲಾರದ್ದನ್ನ ಕೇಳಿದ್ರೆ ಕೊಡೋದು ಹ್ಯಾಗ್ರಾ? ಮನೀಗೆಬಂದ ನೊಸೇನ್ನ ಕೊಡೂಂದ್ರೆ ಕೊಟ್ಟೇವಾ?"

'ಓಹೋ ಹಾಗೊ? ಹುಚ್ಚು ಮಂಗಗಳು ನೀವೆಲ್ಲ! ಹೌದ್‍ನಾ,ಕೊಟ್ಟಿದ್ರೆ ಹೋಗೋದೇನು ಅದ್ರಿಂದಾ? ಅದೂ ಒಂದು ಗೌರವಾಂತ ತಿಳೀಬೇಕಿತ್ತು! ಧನಿಯರೋರ ಕೃಪಾಕಟಾಕ್ಷ ಶಾಶ್ವತ ಮಾಡಿಕೊಳ್ಳೋ ಹಾದಿ ಬಿಟ್ಟು ಆ ಜಾರಪ್ಪ ಮನೆಮಾರೆಲ್ಲ ಕಳಕೊಂಡ್ನಾ? ಆದ್ರೂ ಆ ಮಾನಾ ಎಂಬೋದು ಉಳೀತದಾ? ಹಾಗಲ್ಲದಿದ್ರೆ ಇನ್ನೊಂದು ರೀತೀಲಿ ಹೋಗಿಯೇ ಹೋಗುತ್ತೆ! ಅಷ್ಟು ದೊಡ್ಡೋವ್ರು ಕೇಳಿದ್ದು ದೊಡ್ಡ್ದಾ? ಇಂವ ಕೊಡೋದು ದೊಡ್ಡ್ದ?— —'

"ದ್ಯಾವ್ರು! ದ್ಯಾವ್ರು! ತಾವು ದೊಡ್ಡ ಮನ್ಸ್ರು! ತಮ್ಮ ಮಾನಮರ್ಯಾದ ಕ್ರಮಾನೇ ಬ್ಯಾರ! ನಮ್ಮದು ಹಳಿಯೋರ್‍ದ್ದ ರೀತಿಯೇ ಬ್ಯಾರೆ! ನಮ್ಮಲ್ಲಿ ಅಂಥಾ ಮರ್ಯಾದಗೆ ಬಾಯಿ ಬಿಡೋರು ಸಿಕ್ಕೋಕಿಲ್ಲ! ಅದರಲ್ಲೂ ಜಾರಪ್ಪನ ಮಗ ಬೀರ ತರೆಯದ ಗಂಡು, ಬಿಸಿರಕ್ತದ ಮುದ್ದೆ! ಏನೋ ಆಗಿಹೋಯ್ತು,ನ್ನಿ ಆವ್ರೆರ ಗಿರಿಯಪ್ಪನೋರು ಸಾಧಿಸ್ತಾರೆ ಲೋಕದಾಗೆ ಬಡವರಾಗಿ ಹುಟ್ಟಿ ಮಾನಮರ್ಯಾದೆ ಕಾದುಕೊಂಬೋದು ಕಷ್ಟ, ಸಾಮಿ ತಮ್ಮಂದವರ ಕಡೀಂದ! ಗಡ್ ಗಡ್ ಗಡ್!

ಗಡ್ ಗಡ್ ಗಡಕ್!ಗಡಕ್ ಗಡಕ್! ಗಾಡಿ ಮುಂದೆಸಾಗುತ್ತಿತ್ತು.

ಕೋರ್ಟಿನ ಪೇದೆಯು ಜಾರಪ್ಪನನ್ನೇ ಹಿಡಿಯಲಿಕ್ಕೆ ಬಂದಿರುವನೆಂಬುದು ತಿಮ್ಮನಿಗೆ ಸ್ಪಷ್ಟವಾಯಿತು. 'ಘಟ್ಟಕ್ಕೆ ಹತ್ತಲಿ, ತಾಯಿಯ ಹೊಟ್ಟೆಯೊಳಗೇ ಹೋಗಿರಲಿ, ಅವನಿಗೆ ಆರುತಿಂಗಳು ಜೈಲನ್ನ ತಿನ್ನಿಸದಿದ್ದರೆ! ಅವನ ಮಕ್ಕಳು ಮರಿಗಳನ್ನ ಆ ನ್ನಾನ್ನ ಅನ್ನಿಸದಿದ್ದರೆ!" ಎಂದು ಗಿರಿಯಪ್ಪನವರು ಏನೇನೋ ಆಣೆಭಾಷೆ ಹಾಕಿಕೊಂಡಿರುವುದು ಊರಿಗೆಲ್ಲ ಗೊತ್ತು. ಕೋರ್ಟಿನ ಪೇದೆಯನ್ನು ಗಾಡಿಯೊಳಗೆ ಅಡಗಿಸಿಟ್ಟುಕೊಂಡು ತಂದು ಆ ನಿರಪರಾಧಿಯನ್ನು ಹಿಡಿಸಿಕೊಟ್ಟ ತಿಮ್ಮ! ತಿಮ್ಮನೂ ಸಹ ಗಿರಿಯಪ್ಪನವರ ಲಂಚಕ್ಕೆ ಕೈಕೊಟ್ಟ, ಎಂಬ ಅಪಖ್ಯಾತಿ ಹೊರಗಿಂದ! ಮನಸಾಕ್ಷಿಯ ಇರಿತ ಒಳಗಿಂದ! ಏನುಮಾಡಲಿ? ಎಂಬಯೋಚನೆ ಹಿಡಿಯಿತು ತಿಮ್ಮನಿಗೆ.

ಗಡ್‌ಗಡ್, ಗಡ್‌ಗಡ್‌ಕ್! ಗಾಡಿಯು ನಿಂತಿತು! ಜೋಗುಳವೂ ತೊಟ್ಟಿಲ ತೂಗಾಟವು ಒಮ್ಮಿಂದೊಮ್ಮೆಗೇ ನಿಂತರೆ ರೆಪ್ಪೆ ಮುಚ್ಚತೊಡಗಿದ್ದ ಮಗುವೂ ಕಣ್ತೆರುವುದು. ಹಾಗಾಯಿತು ಲಕ್ಷ್ಮಯ್ಯನಿಗೆ ಬಾರದ ನಿದ್ದೆ ಬಂತೆಂಬಷ್ಟರಲ್ಲಿ ಭಂಗವಾಯಿತೆಂಬ ಬೇಸರದಿಂದ ಅವನು ಯೇನಾಯ್ತೋ ಏನು ಕರ್ಮಾ ನಿನ್ನದು?" ಎಂದು ಕಣ್ಣು ತೆರಿಯದೆಯೇ ಕೇಳಿದ.

"ಏನಿಲ್ಲ, ಆ ಎತ್ತೊಂದು ನೊಗತಪ್ಪಿಸಿಕೊಂಡು ಬಿಡ್ತು! ಹಗ್ಗದ ಕೊಂಡಿ ಸಡಿಲಾಗಿತ್ತೋ ಏನೋ! ಹಿಡಿದು ತರ್‍ತೀನಿ." ಎಂದು ಮುಂದೆ ಹೋದ. ಲಕ್ಷ್ಮಯ್ಯನಿಗೆ ನಿದ್ದೆಯ ಅಮಲು ಬಲವಾಗಿ ಹಿಡಿದಿತ್ತು. ಕೇಳುವುದಕ್ಕೂ ತಿಳಿಯುವುದಕ್ಕೂ ಅದು ಸಮಯವಾಗಿದ್ದಿಲ್ಲ. ನಿದ್ದೆಯನ್ನು ಗೆದ್ದವರ್‍ಯಾರು?

ತಿಮ್ಮನು ತಿರುಗಿ ಬಂದ ಗಾಡಿಕಟ್ಟಿದ ಸ್ವಲ್ಪ ದೂರಹೋಗುವಾಗ ಲಕ್ಷ್ಮಯ್ಯನಿಗೆ ಎಚ್ಚರವಾಯಿತು. ಏನೋ ಎತ್ತು, ದೂರ ಓಡಿತ್ತೊ"ಎಂದ. "ಇಲ್ಲ, ಅಲ್ಲೇ ಅಚೆ ಹೋಗಿ ನಿಂತಿತ್ತು. ಹಿಡಿದು ತಂದೆ, ಕಟ್ಟಿದೆ. ಗಾಡಿಹೊಡಿಯೋ ಮೊದಲು ಒಂದು ಸಲ ಎಲೆಅಡ್ಕೆ ಹಾಕ್ಕೊಂಡೆ. ಅಷ್ಟರಲ್ಲಿ ತಮಗೆ ನಿದ್ದೆ ಬಂದಿತ್ತು. ಎಚ್ಚರಿಸಬಾರದೂಂತ ಮೆಲ್ಲಮೆಲ್ಲನೆ ಗಾಡಿ ಹೊಡ್ಕೊಂಡುಬಂದೇ" ಎಂದು ತಿಮ್ಮನಿನ ಉತ್ತರ.

"ಆ ಜಾರಪ್ಪನಲ್ಲಿ ಇಳ್ದು ಗಿರಿಯಪ್ಪನೋರ ಹತ್ತಿರ ರಾಜಿ ಮಾಡ್ಕೊಂಬೋದು ಒಳ್ಳೇದೂಂತ ಆವನಿಗೊಂದಿಷ್ಟು ಬುದ್ಧಿಹೇಳಬೇಕೂಂತ ಇದ್ದೇನೆ, ಅಲ್ಲಿ ಏನಾದ್ರೂ ರಗಳೆ ಇಲ್ಲಲ್ಲ?"

"ಯಾರು ಬಲ್ಲ! ಎಂಟ್ಹತ್ತು ದಿನದ ಹಿಂದೆ ಯಾರಿಗೋ ಜ್ವರಬರ್‍ತೆನೆಂತ ಸುದ್ದಿ ಇತ್ತಪ್ಪ! ಆ ಮ್ಯಾಲೆ ನನಗೆ ವಿಚಾರಿಸೋಕೆ ಬಿಡುವೂ ಆಗಿಲ್ಲ; ಅವನಿದ್ದ ಊರಲ್ಲಿ ದೇವಿ ಪರ್ತಾಪಾ ಬಾಳಾ ಜೋರಿತ್ತಂತೆ, ಆದ್ರಿಂದ ಅವನ ಮನಿಗೆ ಹೋಗ್ಲಿಕ್ಕೆ ತುಸು ಅನುಮಾನವೂ ಆಯ್ತನ್ನಿ. ಇನ್ನು ಹೆಚ್ಚು ದೂರಇಲ್ಲ ಅಲ್ಲಿಗೆ ಈಗ್ಲೇ ಬಂದು ಬಿಡ್ತೆ!

ಬೆಳ್ಳಿಯು ಮೂಡಿ ಸುಮಾರುಬಂದಿತ್ತು ಬೆಳಗಾಗಲು ಇನ್ನೂ ಒಂದೆರಡು ಘಳಿಗೆ. ಗಡ್ ಗಡ್ ಗಡಕ್! ಗಾಡಿ ನಿಂತಿತು. 'ಆಗೊಳ್ಳಿ ಅದೇ ಜಾರಪ್ಪನ ಮನೆ ಅಯ್ನೊ ಈ ಹೊತ್ತಿಲಿ ಅದೇನು ಬಿದಿರು ಒಡಿಯೋ ಹಾಗೆ ಸದ್ದು!, ಎಂದ ತಿಮ್ಮ. ಲಕ್ಷ್ಮಯ್ಯನ ಎದೆ 'ದಸ್' ಎಂದೊಮ್ಮೆ ನಿಂತಂತಾಯಿತು ಆಮೇಲೆ ಬಡ ಬಡ ಬಡೆಯಲಾರಂಭಿಸಿತು. ಗಾಡಿಯೊಳಗಿಂದಲೇ ತಟ್ಟೆಯ ತೂತಿನಿಂದ ಇಣಿಕಿ ನೋಡಿದ-ದೂರದಲ್ಲಿ ಚಾವಡಿಯ ಮೇಲೆ ಮಿಣಿಗುಟ್ಟುವ ದೀಪ. ಅದರ ಬಳಿಯಲ್ಲಿ ಏನನ್ನೋ ಮುಸುಕು ಹಾಕಿ ಮಲಗಿಸಿದ ಹಾಗಿತ್ತು. ಅಂಗಳದಲ್ಲಿ ಇಬ್ಬರು ಮೂವರು ಮೌನವಾಗಿ ಅತ್ತಿತ್ತ ಸುಳಿದಾಡುತ್ತಿದ್ದರು. ಆ ಬೆಳಗಿನ ಶಾಂತ ಪರಿಸ್ಥಿತಿಯಲ್ಲಿ ಅದೊಂದು ಭಯಂಕರ ದೃಶ್ಯವಾಗಿ ತೋರಿತು. ಹೆಂಗಸರ್‍ಯಾರೋ ಬಿಕ್ಕಿಬಿಕ್ಕಿ ಅಳುವುದು ಕೇಳಿದ ಹಾಗಾಯಿತು! ಕತ್ತಲೆಯಲ್ಲಿ ಕೂತಿದ್ದ ತಿಮ್ಮನು ಹಿಂದೆ ಲಕ್ಷ್ಮಯ್ಯನ ಕಡೆಗೆ ತಿರುಗಿ 'ದೇವಿ ಒಂದು ಹಾರತಕ್ಕೊಂಡ್ಳೂಂತ ಕಾಣುತ್ತೆ! ಇಳೀತೀರಾ ಇಲ್ಲಿ? ಬೇಗಹೇಳಿ, ಬೇಗ! ಬೇಗ ನಾನು ಹೆಂಡ್ತಿ ಮಕ್ಕಳಿದ್ದವ! ಇಂಥಲ್ಲೆಲ್ಲ ನಿಲ್ಲೊಕಾಗೋದಿಲ್ಲ!

"ನಾನೇನು ಬೈರಾಗೀಂತ ತಿಳ್ದೆಯಾ? ಗಾಡಿ ತಿರುಗಿಸೊ! ಹ್ಞೂಂ, ಬೇಗ, ಬೇಗ! ಮತ್ತೆಲ್ಲ ಹೇ-ಹೇ-ಳ್ತೀ-ನೆ ..." ಎಂದು ಒಂದು ಹೋಗುವ ನಾಲಗೆಯನ್ನು ಎಳೆದೆಳೆದು ಹೇಳಿದ ಲಕ್ಷ್ಮಯ್ಯ.

ತಿಮ್ಮನು ಗಾಡಿ ತಿರುಗಸಿ ಎತ್ತುಗಳನ್ನು ಚೆನ್ನಾಗಿ ಓಡಿಸಿದ. ಎರಡು ಮೈಲುಗಳ ದೂರ ಬಂದಮೇಲೆ ಬೆಳಗಾಯಿತು. ತಿಮ್ಮ ಹೇಳಿದ —"ಈ ಗುಡ್ಡ ಮ್ಯಾಲಿಂದ ನಮ್ಮ ಮನೆಗೆ ಗಾಡಿ ಹೋಗ್ತದೆ. ನೀವು ಇಲ್ಲಿ ಇಳಿತೀರಾ? ಇಲ್ಲಾ ನಮ್ಮೂರಿಗೆ ಬರ್ತೀರಾ?"

"ನಿಮ್ಮೂರು ಹಾಳಾಗ!" ಎನ್ನುತ್ತ ಲಕ್ಷ್ಮಯ್ಯನು ಇಳಿದ. ಹಿಂದೆ ನೋಡದೇ ಮುಂದೆ ನಡೆದ. ಹಿಂದೆ ನೋಡಿದರೆ ಎಲ್ಲ ದೇವಿ ಕಾಣಿಸಿಕೊಳ್ಳುವಳೋ ಎಂದು ಅವನ ಭಯ! ಮೂರುಘಳಿಗೆಯೊಳಗೆ ಆರು ಮೈಲು ಓಡಿದ. ಎಡವಿತಡವಿ ಕಾಲಬೆರಳುಗಳಲ್ಲಿ ಗಾಯ! ಅಂತೂ ದೊಡ್ಡ ರಸ್ತೆ ಹಿಡಿದ. ಬಸ್ಸು ಬಂತು! ಅದನ್ನು ಹತ್ತಿ ಮನೆ ಸೇರಿದ. ಪಾಪ! ಆ ಹದಿನೈದು ರೂಪಾಯಿಂದ ಯುಗಾದಿಯ ಹಬ್ಬವನ್ನು ಗೌಜಿಯಿಂದ ನಡೆಸಬೇಕೆಂದು ಬಾಯಿಬಿಟ್ಟಿದ್ದವನು ಮನೆಯೊಳಗೆ ಕಾಲಿಟ್ಟವನೇ "ತಾಯಿಯಾ, ಮಹಾಂಕಾಳೀ ನನಗೆ 'ಮಾಫು ಕೊಡು ನಿನಗೊಂದು ಕುರಿಪೂಜೆ!" ಎಂದು ಹೆಂಡತಿಯ ಚಿನ್ನದ ಕೈ ಬಳೆಯೊಂದನ್ನು ಹರಿಕೆಯ ಪಣವಾಗಿ ತೆಗದಿಟ್ಟ! ಆದುದರಿಂದಲೇ ತನಗೆ ಆ ಒಂದೇ ದಿನದ ಜ್ವರ ಕೊಟ್ಟು ಕ್ಷಮಿಸಿದಳು ಆ ದೇವಿ ಎನ್ನುತ್ತಿದ್ದ ಲಕ್ಷ್ಮಯ್ಯ! ಹೀಗೆ ಲಕ್ಷ್ಮಯ್ಯನ ಮನೆಯ ಯುಗಾದಿ ಹಬ್ಬವು ಕಂಗಾಲಲ್ಲಿ ಪರ್ಯವಸಾನವಾದರೂ ಅತ್ತ ಜಾರಪ್ಪನಲ್ಲಿ ಅದು ನಗುವಿನ ಹಬ್ಬವಾಗಿತ್ತು. ತಿಮ್ಮನೂ ಅಲ್ಲಿದ್ದನೆಂದು ನಾವೇಕೆ ಹೇಳಬೇಕು?

ಬರುವ ವಾರದ ಕಥೆ

ಪೆಟ್ಟಿಗೆಯ ಬಣ್ಣ

ನವಯುಗಕ್ಕೆ

ಇಂದೇ ಚಂದಾದಾರರಾಗಿರಿ!

ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ)

೩---೪--೦

ಚುನಾವಣೆಗಳಾದವು ಮುಂದೇನು?

ಅಧ್ಯಕ್ಷ ನೆಹರುಗಳ ಸೂಚನೆ

ಪಂಡಿತ ಜವಾಹಿರಲಾಲ ನೆಹರುಗಳು ಪ್ರಾಂತಿಕ ಕಾಂಗ್ರೆಸ್ ಕಮಿಟಿಗಳಿಗೆ ಈ ಕೆಳಗಣ ಸೂಚನಾಪತ್ರವನ್ನು ಕಳುಹಿಸಿರುವರು.

●

ಈಗ ಚುನಾವಣೆಗಳು ಮುಗಿದಿರುವವು. ನಾವು ಪರಿಸ್ಥಿತಿಯ ವಿಮರ್ಶೆ ಮಾಡಿ ಮುಂದಿನ ಕಾರ್ಯಕ್ರಮವನ್ನು ನಿರ್ಧರಿಸಬೇಕಾಗಿದೆ. ನ್ಯಾಯವಿಧಾಯಕ ಸಭೆಗಳಲ್ಲಿ ಮತ್ತು ಹೊರಗಡೆ ನಾವು ಮಾಡಬೇಕಾದ ಕೆಲಸದ ಸ್ಥೂಲರೂಪವು ನಿಶ್ಚಯಿಸಲ್ಪಟ್ಟೇ ಇದೆ—ಹೊಸ ಸುಧಾರಣೆ ಮತ್ತು ಸಂಯುಕ್ತ ರಚನಾಮಂಡಲಿಯನ್ನು ವಿರೋಧಿಸುವದು-ಹಾಗೂ ಕೊನ್ಸ್ಟಿಟ್ಯುಯೆಂಟ್ ಎಸೆಂಬ್ಲಿಗಾಗಿ ಹೋರಾಡುವದು. ನಾವಿದನ್ನು ಹೇಗೆ ಸಾಧಿಸಬಲ್ಲೆವು? ನ್ಯಾಯವಿಧಾಯಕ ಸಭೆಗಳಿಗೆ ಸಂಬಂಧಪಟ್ಟ ವಿಷಯಗಳು ಬರುವ ತಿಂಗಳಲ್ಲಿ ಜರಗಲಿರುವ ಅಖಿಲ ಭಾರತ ರಾಷ್ಟ್ರೀಯ ಸಮಿತಿಯಿಂದ ನಿಶ್ಚಯಿಸಲ್ಪಡಬೇಕಾಗಿದೆ. ಆದರೆ ರಾಷ್ಟ್ರೀಯ ಸಭೆಯ ಹೆಚ್ಚಿನ ಕೆಲಸಗಾರರು ತಮ್ಮ ಕೆಲಸವನ್ನು ಮುಂದೊತ್ತಲು ಆ ವರೆಗೆ ಕಾಯುವದಲ್ಲ. ಅವರನ್ನೀಗ ಅತ್ಯವಸರದ ಪ್ರಾಮುಖ್ಯ ಕೆಲಸವು ಕಾಯುತ್ತಿದ್ದು, ಅಖಿಲ ಭಾರತ ಸಮಿತಿಯ ನಿರ್ಧಾರವು ಹೇಗಾದರೂ ಅವರೀ ಕೆಲಸವನ್ನು ಮುಂದೊತ್ತಲೇ ಬೇಕು. ಸಾರ್ವಜನಿಕರಲ್ಲಿ ಸಂಘಟನೆಯನ್ನುಂಟುಮಾಡುವವರಿಂದ, ಹಾಗೂ ಎಲ್ಲೆಲ್ಲಿಯೂ ಜನಸಮುದಾಯದ ಅಂತರಾಳವನ್ನು ಪ್ರವೇಶಿಸಿರುವ ಪ್ರಾಮುಖ್ಯ ಸಮಸ್ಯೆಗಳನ್ನು ಇದಿರಿಸುವುದರಿಂದ ನಮ್ಮ ಶಕ್ತಿಯು ವೃದ್ಧಿಯಾಗುವುದೆಂಬ ಹಳೆಯ ಪಾಠವನ್ನೇ ಚುನಾವಣೆಗಳು ಇನ್ನಷ್ಟು ಮುಂದಿಟ್ಟು ಮಾಡಿದವು. ನಾವು ನಟ್ಟಿಗೆ ಸಾರ್ವಜನಿಕರನ್ನು ಸಂಧಿಸಿದೆವು; ಅವರು ನಮ್ಮ ನಿವೇದನೆಯನ್ನು ಮನ್ನಿಸಿದರು. ನಮ್ಮ ವಿಜಯದಲ್ಲಿ ಎಲ್ಲಿಯಾದರೂ ಸಣ್ಣ ಪುಟ್ಟ ಕೊರತೆಗಳು ಕಂಡುಬರುತ್ತವಾದರೆ, ಅವುಗಳಿಗೆ ಆ ಭಾಗಗಳ ಕಾರ್ಯಕರ್ತರೇ ಹೊಣೆಗಾರರು. ಅವರು ಸಮೂಹದ ಸಂಬಂಧವನ್ನು ಬಿಟ್ಟು ಸಣ್ಣ ತಂಡಗಳು ಮತ್ತು ವ್ಯಕ್ತಿಗಳ ಮೇಲೆ ಭರವಸೆಯಿಟ್ಟುದೇ ಕಾರಣ. ಪಕ್ಷಸಂಗಡಗಳು ಚುನಾವಣೆಯನ್ನು ಹತೋಟಿಗೆ ತಂದುಕೊಳ್ಳುವ ಕಾಲವು ಹೋಯಿತು. ಎರಡನೆಯದಾಗಿ ಕಾಂಗ್ರೆಸ್ ಕೆಲಸವು ಕ್ರಮಪ್ರಕಾರ ಮತ್ತು ಪರಿಣಾಮಕಾರಿಯಾಗಿ ಎಲ್ಲೆಲ್ಲಿ ನಡೆದಿರುವದೋ ಅಲ್ಲೆಲ್ಲಾ ಕಾಂಗ್ರೆಸ್ ಸಂಸ್ಥೆಗಳು ಚಾಲಾಗುತ್ತಿದ್ದುವು. ನಮಗೆ ಮಹತ್ವಾದ ವಿಜಯವು ದೊರೆತಿದೆ. ನಮ್ಮ ವಿಜಯಕ್ಕೆ ನಾವು ಹಿಂದೆ ಮಾಡಿರುವ ಕೆಲಸ ಮತ್ತು ಸಾರ್ವಜನಿಕ ಸಂಬಂಧವು ಕಾರಣವಾದಷ್ಟು ಚುನಾವಣೆಯ ಚಳವಳವು ಹೇತುವಾಗಲಾರದು. ಮೂರನೆಯದಾಗಿ ಚುನಾವಣೆಯ ಧ್ಯೇಯದಲ್ಲಿ ಕೆಲವು ಕಾಂಗ್ರೆಸ್‌ವಾಲರನ್ನು ನ್ಯಾಯವಿಧಾಯಕ ಸಭೆಗಳಿಗೆ ಕಳುಹಿಸುವದಕ್ಕಿಂತಲೂ ದೊಡ್ಡದಾದ ಒಂದು ಅಂಶವಿದೆ. ಅದೇ ಸ್ವಾತಂತ್ರ್ಯಕ್ಕಾಗಿಯೂ, ಬಡತನ ಮತ್ತು ಸಂಕಷ್ಟಗಳನ್ನಿದಿರಿಸಿ ಅಂತ್ಯಗೊಳಿಸುವ ಸಲುವಾಗಿಯೂ, ಕಾಂಗ್ರೆಸ್ಸಿನೊಡನೆ ಸೇರಿರೆಂದು ಮಿಲ್ಯಗಟ್ಟಳೆ ಜನರಿಗಿತ್ತ ಸಂದೇಶವಾಗಿರುವದು. ಇಂದಿನ ಈ ಮುಖ್ಯ ವಿಜಯವೆಂದರೆ ನಿವೇದನೆಗೆ ಮಿಲಿಯಾವಧಿ ಜನರು ಕೊಟ್ಟ ಉತ್ತರವೇ ಆಗಿದೆ. ನಮ್ಮ ಮುಂದಿನ ಕಾರ್ಯದಲ್ಲಿ ಯಾವಗಲೂ ಈ ಅಭಿಪ್ರಾಯವು ಒಡಮೂಡಿರಬೇಕು. ಇಂದಿನ ಚುನಾವಣೆಗಳ ಜಯಕ್ಕಿಂತ ಪ್ರಾಮುಖ್ಯವಾದ ಕಾರ್ಯವು ಜನ ಸಮೂಹದ ಮಧ್ಯದಲ್ಲಿದೆ ಎಂಬುದನ್ನು ನಾವು ಸದಾಕಾಲ ನೆನಪಿನಲ್ಲಿಡತಕ್ಕದ್ದು. ನ್ಯಾಯವಿಧಾಯಕ ಸಭೆಗಳ ಕಾರ್ಯವು ಏನಾದರೂ ಪರಿಣಾಮವನ್ನೀಯಬೇಕಾದರೆ ಅದು ಸಾರ್ವಜನಿಕ ಕಾರ್ಯ ಹಾಗೂ ಸಾಮೂಹಿಕ ಸಂಬಂಧದ ಜತೆಗೂಡಲೇಬೇಕು. ಹೊಸದಾಗಿ ಚುನಾಯಿಸಲ್ಪಟ್ಟ ಕಾಂಗ್ರೆಸ್ ಮೆಂಬರರು ಸ್ವಾಭಾವಿಕವಾಗಿ ನ್ಯಾಯವಿಧಾಯಕ ಸಭೆಗಳ ಮೂಲಕ ಕಾರ್ಯಸಾಗಿಸಲು ಬದ್ಧರಾಗಿದ್ದಾರೆ. ಆದರೆ ಅವರು ದುಡಿಯಬೇಕಾಗಿರುವ ವಿಶಾಲ ಕಾರ್ಯಕ್ಷೇತ್ರವೆಂದರೆ ಅವರ ಡಿವಿಜನುಗಳು (constituency) ಅವರು ನೇಕಡಾ ಹತ್ತರಷ್ಟಿರುವ ಮತದಾರರ ಪ್ರತಿನಿಧಿಗಳು ಮಾತ್ರವಲ್ಲ, ಅವರ ಕ್ಷೇತ್ರದ ಮಿಕ್ಕ ತೊಂಭತ್ತು ಮಂದಿಯ ಪ್ರತಿನಿಧಿಗಳೂ ಅಹುದು. ಆದ್ದರಿಂದ ಅವರು ಅವರ ಕ್ಷೇತ್ರದ ಸಾರ್ವಜನಿಕರೊಡನೆ ಸಮೀಪದ ಸಂಬಂಧವನ್ನಿಟ್ಟುಕೊಂಡು ಹೊರಗಿನ ಕೆಲಸಗಳೊಡನೆ, ನ್ಯಾಯವಿಧಾಯಕ ಸಭೆಗಳ ಕೆಲಸವನ್ನೂ ಸೇರಿಸಿ ಅವರ ಹಿತವನ್ನು ಸಾಧಿಸಬೇಕು. ಎರಡೂ ಕಡೆಯ ಕೆಲಸಗಳಿಗೂ ಹಿಂದೀ ಸ್ವಾತಂತ್ರ್ಯ ಮತ್ತು ಜನತೆಯ ಹೊರೆಯನ್ನಿಳಿಸುವ ಒಂದೇ ಗುರಿಯಿದೆ. ಸಾರ್ವಜನಿಕ ಕಾರ್ಯವು ಒಬ್ಬೊಬ್ಬರಿಂದಲೇ ಜಯಶೀಲವಾಗಿ ನಡೆಸಲ್ಪಡಲಾರದು; ಅದಕ್ಕೆ ಸಂಘಟಿತ ಸಂಸ್ಥೆಯೇ ಬೇಕು. ಕಾಂಗ್ರೆಸ್ಸೊಂದೇ ಇಂಥಾ ಕೆಲಸವನ್ನು ಜಯಶೀಲವಾಗಿ ಮಾಡಬಲ್ಲ ಸಂಸ್ಥೆಯೆಂಬುದು ವಿದಿತವಿದೆ. ಆದ್ದರಿಂದ ನಮ್ಮ ತ್ವರಿತದ ಕಾರ್ಯವೆಂದರೆ ಫೈಜಪುರ ಅಧಿವೇಶನದ ಸೂಚನೆಗನುಸಾರವಾಗಿ ಪ್ರತಿಯೊಂದು ಹಳ್ಳಿಯಲ್ಲಿಯೂ ಕಾಂಗ್ರೆಸ್ ಸಂಸ್ಥೆಯನ್ನು ಸ್ಥಾಪಿಸುವದು. ನಾನು ದೇಶದ ನಾನಾಗೊಂಡುಗಳಲ್ಲಿ ಸಂಚರಿಸಿ ಹಳ್ಳೀ ಕಮಿಟಿಗಳನ್ನು ಸ್ಥಾಪಿಸುವ ಅಭಿಪ್ರಾಯ ಸೂಚಿಸಿದಾಗ, ರೈತರು ಮತ್ತು ಇತರರು ಈ ಅಭಿಪ್ರಾಯಕ್ಕೆ ಸುಸ್ವಾಗತವಿತ್ತುದನ್ನು ನಾನು ಕಂಡಿದ್ದೇನೆ. ಆದ್ದರಿಂದ ಹಳ್ಳೀ ಕಮಿಟಿಗಳನ್ನು ಸ್ಥಾಪಿಸುವ ಕೆಲಸವನ್ನು ಕೂಡಲೇ ಕೈಕೊಳ್ಳಬೇಕಾಗಿದೆ. ಹಳ್ಳಿಯೂ ರೈತನೂ ನಮ್ಮನ್ನು ಕಾದು ನಿಂತಿರುವಾಗ, ಅವರ ಆತುರವು ನಿಷ್ಪ್ರಯೋಜನವಾಗದಂತೆ ನೋಡೋಣ!

ಹೊಸದು! • **ಐರಾವತ** • ತೀರಾ ಹೊಸದು!!

ಇದರಲ್ಲಿ—ಕಾಮಶಾಸ್ತ್ರ, ಕೈಗಾರಿಕೆಯ ವಿಷಯ, ಇಂದ್ರಜಾಲ-ಮಹೇಂದ್ರಜಾಲ, ಕಾಯದೇಭಾಗ, ತಂತ್ರ-ಮಂತ್ರ-ಯಂತ್ರ, ಸರ್ವ ಮುಹೂರ್ತ ವಿಷಯ, ವೈದ್ಯಭಾಗ. ಈ ಪ್ರಕಾರ ೭ ಪ್ರಕರಣಗಳಿದ್ದು ಅತ್ಯಂತ ಮಹತ್ವದ ವಿಷಯುಗಳು ಅಡಕವಾಗಿವೆ. ಇದರ ಬೆಲೆ ರೂ- ೧--೦--೦ ವಿ. ಪಿ. ಚಾರ್ಜು ಬೇರೆ.

ವಿಳಾಸ:— ಎಸ್. ಸಿ. ಸಾಲಿಮಠ ಅಂಡ್ ಸನ್ಸ್, ಗದಗ ಸಿಟಿ.

ಅನೇಕ ಮರ್ಮ ವಿದ್ಯೆಗಳಿಂದೊಡಗೂಡಿದ

— ಚಿಂತಾರತ್ನ —

ಇದರಲ್ಲಿ ಜಾತಕಫಲ, ಕೈಗಾರಿಕೆಯ ವಿಷಯ, ಇಂದ್ರಜಾಲ, ಮಹೇಂದ್ರಜಾಲ, ಯಕ್ಷಿಣಿ ಮೊದಲಾದ ವಿದ್ಯೆಗಳು ಇರುತ್ತವೆ. ಒಂದೊಂದು ವಿಷಯಕ್ಕೆ ಎಷ್ಟು ಬೆಲೆ ಕೊಟ್ಟರೂ ಸಾಲದು.

೧ ಸಬಕಾರವನ್ನು ತಯಾರಿಸುವ ರೀತಿ
೨ ಮೇಣಬತ್ತಿ ತಯಾರಿಸುವ ರೀತಿ
೩ ಕಾಷ್ಟಿಕ್ ಸೋಡಾ ತಯಾರಿಸುವದು
೪ ಬಿಸ್‌ಕ್ಯೂಟ ತಯಾರಮಾಡುವದು
೫ ದಶಾಂಗ ತಯಾರಮಾಡುವದು
೬ ಪೆಪ್ಪರಮೆಂಟ ಮಾಡುವದು
೭ ಧೂಪದ ಘಟ್ಟಿ ಮಾಡುವದು
೮ ಭಂಗಾರ ಮಾಡುವದು
೯ ಬೆಳ್ಳಿ ತಯಾರಮಾಡುವದು
೧೦ ಜರ್ಮನ್ ಶಿಲ್ವರ ಧಾತು
೧೧ ಊದಿನಕಡ್ಡಿ ತಯಾರಮಾಡುವದು
೧೨ ತಗಡಿನ ವಾಟೆ ತಯಾರಮಾಡುವದು
೧೩ ಕುಂಕುಮವನ್ನು ತಯಾರಿಸುವದು
೧೪ ಹಸಿ ಕುಂಕುಮ ತಯಾರಿಸುವದು
೧೫ ಗೋದೀಸರಿ ಕೆಡದಂತೆ ಮಾಡುವದು
೧೬ ಬುಕ್ಕಿಟ್ಟು ಮಾಡುವದು
೧೭ ಮೀನಸರಿ ಯಾವಾಗಲೂ ನೀರಾಗಿರುವಂತೆ ಮಾಡುವದು
೧೮ ಅಷ್ಟಗಂಧ ಸಾಮಾನುಗಳು
೧೯ ಭರ್ಪ ತಯಾರಮಾಡುವದು
೨೦ ಕಟ್ಟಿಗೆ ಲೋಹಗಳಿಗೆ ಹಚ್ಚುವ ಬಣ್ಣ ಮಾಡುವದು
೨೧ ಕಾಗದವನ್ನು ಮಾಡುವದು
೨೨ ಮೆಂಥೇಲ ಎಣ್ಣೆ ತಯಾರಿಸುವದು
೨೩ ಕನ್ನಡಿಯ ಮೇಲೆ ಬರೆಯುವದು
೨೪ ದಂತಮಂಜನ ಮಾಡುವದು
೨೫ ರಕ್ತಶುದ್ಧಿ, ಧಾತುವೃದ್ಧಿ ಔಷಧಿ
೨೬ ಕಸ್ತೂರಿ ಮಾತ್ರೆ ಮಾಡುವದು
೨೭ ಕುಚಪ್ರಭಾತಕ್ಕೆ ಔಷಧ
೨೮ ಬಾಲಾಮೃತ ಮಾಡುವದು
೨೯ ಶಿಶ್ನವೃದ್ಧಿಗೆ ಔಷಧ
೩೦ ಶರಬತ್ತು ಮಾಡುವದು
೩೧ ಛಳಿಜ್ವರದ ಗುಳಿಗೆ ಮಾಡುವದು
೩೨ ಬೂಟಪಾಲೀಸ ಮಾಡುವದು
೩೩ ಮನೆ, ವಠಾರ, ಅಂಗಡಿ ಮೊದಲಾದುವುಗಳಿಗೆ ಗೆದ್ದಲಿ ಹತ್ತದಂತೆ ಮಾಡುವದು
೩೪ ಹುರುಕು ಖಜ್ಜಿ ಮುಲಾಮು ಮಾಡುವದು
೩೫ ನಾಸೀಪುಡಿ ಮಾಡುವದು
೩೬ ಮನೆ, ವಠಾರ, ಅಂಗಡಿಗಳಲ್ಲಿ ಇಲಿ, ಹೆಗ್ಗಣ ಮೊದಲಾದವುಗಳು ಇರದಂತೆ ಮಾಡುವದು
೩೭ ಜರ್ದಾತಂಬಾಕ ಮಾಡುವದು
೩೮ ಒದನೆ. ಕುಂಬಳ ಮುಂತಾದ ಕಾಯಿಗಳಿಗೂ, ಮಾವು, ಲೀಬು ಮುಂತಾದ ಹಣ್ಣುಗಳಿಗೂ ಬೀಜವಿಲ್ಲದೆ ದೊಡ್ಡವಾಗುವದು
೩೯ ಸಿಮೆಂಟ್ ತಯಾರಿಸುವದು
೪೦ ಬಿಳೀ ಹೂಗಳು ಕೆಂಪಾಗುವಂತೆ ಗಿಡಗಳನ್ನು ತಯಾರಿಸುವದು
೪೧ ಕೆಂಪು ಹೂಗಳು ಬೆಳ್ಳಗಾಗುವಂತೆ ಗಿಡಗಳನ್ನು ತಯಾರಿಸುವದು
೪೨ ಇಸ್ಪೀಟಿನ ಚಮತ್ಕಾರ
೪೩ ಮುಖ ನೋಡಿಕೊಳ್ಳುವ ಕನ್ನಡಿ ಮಾಡುವದು
೪೪ ಸುವಾಸನೆ ಎಣ್ಣೆ ತಯಾರಿಸುವದು
೪೫ ಕೇದಿಗೆ ದವನದೆಣ್ಣೆ ಮಾಡುವದು
೪೬ ಯಾವ ಗಿಡವಾದರೂ ಹುಟ್ಟುತ್ತಲೆ ಹೂವು ಬಿಡುವಂತೆ ಮಾಡುವದು
೪೭ ಗಂಧಕದ ಬಟ್ಟಲ ತಯಾರಿಸುವದು
೪೮ ಕರ್ಪೂರ ಮಾಡುವದು
೪೯ ಬ್ರೆಡ್ಡು ತಯಾರಿಸುವದು
೫೦ ನೂಲ. ಬಟ್ಟೆಗೆ ಬಣ್ಣ ಹಾಕುವದು
೫೧ ಕಪ್ಪು, ಕೆಂಪು, ಹಸುರು, ಹಳದಿ ಬಣ್ಣ ತಯಾರಿಸುವದು
೫೨ ಬರ್ಫ ಕಂಟ್ರೋಲ
೫೩ ಅರಗಿನ ಬಣ್ಣ ತಯಾರಿಸುವದು
೫೪ ಗಿಲೀಟ ಮಾಡುವದು
೫೫ ತಾಮ್ರದ ಮೇಲೆ ಭಂಗಾರದ ಗಿಲೀಟು ಮಾಡುವದು
೫೬ ತಾಮ್ರ, ಹಿತ್ತಾಳಿಗೆ ಬೆಳ್ಳಿ ಗಿಲೀಟು ಮಾಡುವದು
೫೭ ಕಡ್ಡಿ ಪೆಟ್ಟಿಗೆ ತಯಾರಿಸುವದು
೫೮ ರೋಜವಾಟರ ತಯಾರಿಸುವದು

ಇತ್ಯಾದಿ ೧೭೦ ವಿಷಯುಗಳಿವೆ.
ಸ್ಥಳ ಸಂಕೋಚ ಮೂಲಕ ಎಲ್ಲವನ್ನೂ ಕೊಟ್ಟಿಲ್ಲ.
ಬೆಲೆ ೧ ರೂಪಾಯಿ . . (ವಿ. ಪಿ. ವೆಚ್ಚ ಬೇರೆ)

ಎಸ್. ಸಿ. ಸಾಲಿಮಠ, ಪ್ರಿಂಟರ, ಗದಗ
ಇವರಿಂದ ಬರೆಯಲ್ಪಟ್ಟ

ಕಾಮಶಾಸ್ತ್ರ

ಪ್ರತಿ ಒಬ್ಬ ರಸಿಕರು ಅವಶ್ಯ ಓದಬೇಕಾದ
--- ಈ ಪುಸ್ತಕದೊಳಗಿನ ವಿಷಯುಗಳು ---

೧ ಪುರುಷ ಸಾಮುದ್ರಿಕ ಲಕ್ಷಣ ೨ ಸ್ತ್ರೀ ಸಾಮುದ್ರಿಕ ಲಕ್ಷಣ. ೩ ಶಶಕ ಜಾತಿ ಪುರುಷನ ಲಕ್ಷಣ. ೪ ಮೃಗಜಾತಿ ಪುರುಷನ ಲಕ್ಷಣ. ೫ ವೃಷಭಜಾತಿ ಪುರುಷನ ಲಕ್ಷಣ. ೬ ಅಶ್ವಜಾತಿ ಪುರುಷನ ಲಕ್ಷಣ. ೭ ಪದ್ಮಿನಿಜಾತಿ ಸ್ತ್ರೀಯಳ ಲಕ್ಷಣ. ೮ ಚಿತ್ರಿಣಿಜಾತಿ ಸ್ತ್ರೀಯಳ ಲಕ್ಷಣ. ೯ ಶಂಖಿನಿಜಾತಿ ಸ್ತ್ರೀಯಳ ಲಕ್ಷಣ. ೧೦ ಹಸ್ತಿನಿಜಾತಿ ಸ್ತ್ರೀಯಳ ಲಕ್ಷಣ. ೧೧ ಯಾವ ಯಾವ ಜಾತಿ ಪುರುಷನಿಗೆ, ಯಾವ ಯಾವ ಜಾತಿ ಸ್ತ್ರೀಯಳು ಯೋಗ್ಯ. ೧೨ ಮತ್ತು ಅವರಿಂದ ಹುಟ್ಟಿದ ಮಕ್ಕಳ ಫಲವಿಚಾರ (ಜಾತಕ.) ೧೩ ಯಾವ ಯಾವ ಜಾತಿ ಸ್ತ್ರೀಯರಿಗೆ ಯಾವ ಯಾವ ತಿಥಿಯ ದಿವಸ ಭೋಗೇಚ್ಛಾ ಉಂಟಾಗುತ್ತವೆಂಬುದನ್ನು ತಿಳಿಯುವದು. ೧೪ ಯಾವ ಯಾವ ಸ್ತ್ರೀಯರಿಗೆ ಎಷ್ಟೆಷ್ಟು ಹೊತ್ತಿಗೆ ಭೋಗೇಚ್ಛಾ ಉಂಟಾಗುತ್ತದೆಂಬುದನ್ನು ತಿಳಿಯುವದು. ೧೫ ಯಾವ ಯಾವ ಜಾತಿ ಸ್ತ್ರೀಯರಿಗೆ ಯಾವ ಯಾವ ತಿಥಿಯ ದಿವಸ ಯಾವ ಯಾವ ಅವಯವದಲ್ಲಿ ಕಾಮವು ಇರುತ್ತದೆಂಬುದನ್ನು ತಿಳಿಯುವ ಕ್ರಮವು. ೧೬ ಚಂದ್ರಕಲೆಯ ಸ್ಥಾನಗಳು. ೧೭ ಸ್ತ್ರೀವಶೀಕರಣ. ೧೮ ಪುರುಷವಶೀಕರಣ. ೧೯ ಪದ್ಮಿನಿ ಸ್ತ್ರೀಯಳನ್ನು ವಶಮಾಡಿಕೊಳ್ಳುವ ಉಪಾಯ. ೨೦ ಚಿತ್ರಿಣಿ ಸ್ತ್ರೀಯಳನ್ನು ವಶಮಾಡಿಕೊಳ್ಳುವ ಉಪಾಯ. ೨೧ ಶಂಖಿನಿ ಸ್ತ್ರೀಯಳನ್ನು ವಶಮಾಡಿಕೊಳ್ಳುವ ಉಪಾಯ. ೨೨ ಹಸ್ತಿನಿ ಸ್ತ್ರೀಯಳನ್ನು ವಶಮಾಡಿಕೊಳ್ಳುವ ಉಪಾಯ. ೨೩ ಭೋಗಕ್ಕೆ ಯೋಗ್ಯ ಸ್ಥಳ. ೨೪ ಭೋಗಕ್ಕೆ ಅಯೋಗ್ಯ ಸ್ಥಳ ೨೫ ಮೈಥುನಕ್ಕೆ ಅಯೋಗ್ಯವಾದ ವೇಳೆ. ೨೬ ಮೈಥುನಕ್ಕೆ ಅಯೋಗ್ಯ ಸ್ತ್ರೀಯರು ೨೭ ಪರಸ್ತ್ರೀ ಗಮನದಿಂದಾಗುವ ಹಾನಿ. ೨೮ ಸುಗಂಧ ದ್ರವ್ಯ. ೨೯ ಕಂಕುಳದೊಳಗಿನ ದುರ್ಗಂಧ ಹೋಗುವುದಕ್ಕೆ. ೩೦ ಬಾಯಿ ದುರ್ಗಂಧ ಹೋಗುವುದಕ್ಕೆ. ೩೧ ಮಡಿಬಕ್ಕೆಗೆ. ೩೨ ಕೇಶರಂಜನಕ್ಕೆ. ೩೩ ತಿಗಳಿನೆಕ್ಕಿದಕ್ಕೆ. ೩೪ ಕೂದಲು ಉದುರುವುದಕ್ಕೆ. ೩೫ ಶರೀರದ ಕಪ್ಪುಬಣ್ಣಕ್ಕೆ. ೩೬ ಕುಚವೃದ್ಧಿಗೆ. ೩೭ ಸ್ತ್ರೀಯರಲ್ಲಿಯ ಅವಸ್ಥೆಗಳು. ೩೮ ಅವಸ್ಥೆ ಮೇಲಿಂದ ಪ್ರೇಮದ ಇರುವಿಕೆ. ೩೯ ಮೈಥುನದ ಸುಖದಲ್ಲಿ ಅಂತರ ಬೀಳುವ ಕಾರಣ. ೪೦ ದಂಪತಿಗಳು ಕೂಡುವ ದಿಕ್ಕಿನ ಫಲವು. ೪೧ ಸತಿಪತಿಗಳು ಕೂಡುವ ದಿವಸ ಫಲ. ೪೨ ಗರ್ಭ ನಿಂತ ದಿವಸ ಫಲ. ೪೩ ಗರ್ಭ ನಿಂತ ಕಾಲ ಫಲ ೪೪ ಸ್ತ್ರೀಯರ ಜಾತಿ ಮೇಲಿಂದ ಕೂಸಿನ ಲಕ್ಷಣ. ೪೫ ವಿಕಾಸಯೋನಿಗೆ ಉಪಾಯ. ೪೬ ಯೋನಿ ಸಂಕೋಚಕ್ಕೆ. ೪೭ ಶಿಶ್ನ ವೃದ್ಧಿಗೆ. ೪೮ ಸ್ತ್ರೀಯರಿಗೆ ಮೈಥುನವು ಬೇಗನೆ ಸಾಕಾಗುವಂತೆ ಮಾಡುವ ಉಪಾಯ. ೪೯ ಪುರುಷರಿಗಿಂತ ಮೊದಲು ಸ್ತ್ರೀಯರ ರೇತಸ್ಖಲನವಾಗುವ ಉಪಾಯ. ೫೦ ಪುರುಷರ ರೇತಸ್ಸು ಬೇಗ ಬೀಳಬಾರದೆಂಬುದಕ್ಕೆ ಉಪಾಯ. ೫೧ ವಾಜೀಕರಣ ಪ್ರಯೋಗ. ೫೨ ಸ್ತ್ರೀಯರನ್ನು ಜಯಿಸುವುದಕ್ಕೆ. ೫೩ ಬಹಳ ಮುಟ್ಟಾಗುತ್ತಿದ್ದರೆ. ೫೪ ಸಂತತಿ ಪ್ರತಿಬಂಧಕ ಉಪಾಯ. ೫೫ ಮುಟ್ಟು ತಡೆದಿದ್ದರೆ. ೫೬ ಗರ್ಭಾಶಯ ಶುದ್ಧಿಗೆ. ೫೭ ಗರ್ಭಧಾರಣಕ್ಕೆ. ೫೮ ಗರ್ಭಪಾತಕ್ಕೆ ಉಪಾಯ.

ಇತ್ಯಾದಿ ೧೭೦ ವಿಷಯುಗಳಿವೆ. ಸ್ಥಳ ಸಂಕೋಚ ಮೂಲಕ ಎಲ್ಲವನ್ನೂ ಕೊಟ್ಟಿಲ್ಲ.

ಬೆಲೆ ೧ ರೂಪಾಯಿ (ವಿ. ಪಿ. ವೆಚ್ಚ ಬೇರೆ)

ವಿಳಾಸ:—ಎಸ್. ಸಿ. ಸಾಲಿಮಠ ಅಂಡ್ ಸನ್ಸ್, ಗದಗ ಸಿಟಿ.

- ದೇಶದ ಬೇರೆ ಬೇರೆ ಕಡೆಯ ಚುನಾವಣೆಯ ವಿಚಿತ್ರಗಳು -

ಬೀಹಾರದಲ್ಲಿ ಬಾಬು ರಾಜೇಂದ್ರ ಪ್ರಸಾದರವರು ಒಂದು ಭಾಷಣ ಮಾಡುತ್ತಿದ್ದರು ಆಗ ಅಲ್ಲಿದ್ದವನೊಬ್ಬನಿಗೆ ಬಹಳ ಕೋಪ ಬಂದಿತು. ಆದರೆ ಏನು ಮಾಡುವುದು? ಬಾಬೂಗಳು ಹೇಳುತ್ತಿದ್ದ ವಾಗ್ಧಾರಿಯ ಮುಂದೆ ಅವರ ರಾಜಕೀಯ ವಾದದ ಮುಂದೆ ತನ್ನ ಮಾತುಗಳಾವುವೂ ಸಾಗುವಂತಿರಲಿಲ್ಲವಾಗಿ, ಏನೂ ತೋರದೆ, ಹೇಗಾದರೂ ಮಾಡಿ ಅವರ ಮೇಲೆ ತನ್ನ ಕೋಪವನ್ನು ತೀರಿಸಿಕೊಳ್ಳಲು ಕೊನೆಗೆ ಒಂದು ಉಪಾಯವನ್ನು ಹುಡುಕಿದನು. ಒಂದು ತುತ್ತೂರಿಯನ್ನು ತೆಗೆದುಕೊಂಡು ವೇದಿಕೆಯ ಮೇಲಕ್ಕೆ ಹತ್ತಿ ತುತ್ತೂರಿಯನ್ನು ರಾಜೇಂದ್ರ ಬಾಬುಗಳ ಮುಖಕ್ಕಿಟ್ಟು ಘಟ್ಟಿಯಾಗಿ ಊದಿದನು ಆಗ ಒಬ್ಬನು ಹೋಗಿ, ಅವನ ಹೊಟ್ಟೆಯಲ್ಲಿದ್ದ ಘಾಳಿಯ ಚೀಲಕ್ಕೊಂದು ಗುದ್ದು ಕೊಟ್ಟು ಅಲ್ಲಿಂದ ನೂಕಿದ

ಕೆಲವು ಚುನಾವಣಾ ಕ್ಷೇತ್ರಗಳಂತೂ ಬಲು ದೊಡ್ಡವು ಆದುದರಿಂದ ಅಂತಹ ಕ್ಷೇತ್ರಗಳಿಂದ ಉಮೇದುವಾರರಾಗಿ ನಿಂತಿದ್ದವರು ಪ್ರಚಾರ ಕಾರ್ಯಕ್ಕಾಗಿ ಬಹಳ ಸುತ್ತಬೇಕಾಗಿದ್ದಿತು ಪಂಜಾಬಿನಲ್ಲಿ ಇಂತಹ ಕ್ಷೇತ್ರವೊಂದಿದೆ ಅಲ್ಲ ಉಮೇದುವಾರನೊಬ್ಬ ಮೋಟಾರಿನಲ್ಲಿ ೧೪೦೦೦ ಮೈಲಿಯನ್ನು ಸುತ್ತಿಕೊಂಡು ಬಂದ ಅಂದರೆ ಇಂಗ್ಲೆಂಡಿಗೆ ಒಂದು ಬಾರಿ ಹೋಗಿ ಒಂದು ಬಾರಿ ಹಿಂದಕ್ಕೆ ಬಂದಷ್ಟು ದೂರ. ಇನ್ನಿಬ್ಬರು ಉಮೇದುವಾರರು ವಾರಕ್ಕೆ ೨೦೦೦ ಮೈಲಿಗಳಂತ ಹೋಗುತ್ತಾ ಉದ್ದಕ್ಕೂ ಊರುಗಳಲ್ಲಿ ತಮ್ಮ ಪ್ರಚಾರ ಭಾಷಣಗಳನ್ನು ಮಾಡಿದರು.

ಇನ್ನು ರಾಷ್ಟ್ರಪತಿಗಳಾದ ಜವಹರಲಾಲರು ಇವರದಂತೂ ಚಂಡಮಾರುತ ಪರ್ಯಟನ ಇವರು ತಮ್ಮ ಈ ಪರ್ಯಟನ ಕಾಲದಲ್ಲಿ ಉಪಯೋಗಿಸಿದ ಪ್ರಯಾಣ ಸಾಧನವೇ ಇಲ್ಲವೆನ್ನಬಹುದು. ಮೋಟಾರುಕಾರು, ಮೋಟಾರು ಬೋಟು, ದೋಣಿಗಳು, ಹೊಗೆಯ ದೋಣಿಗಳು, ಸಾಮಾನ್ಯ ರೈಲು, ಸ್ಪಶಲ್ ರೈಲು, ಏರೋಪ್ಲೇನ್, ಕುದುರೆಗಳು, ಆನೆಗಳು, ಒಂಟೆಗಳು, ರಾಕಣಾ ಕುದುರೆಗಳು, ಸಡಿಗೆ ಎಲ್ಲವೂ ಇಷ್ಟಾದರೂ ಇವರು ಒಂದು ಬಾರಿಯಾದರೂ ಘರ್ಷಣ, ಬಗ್ನವಾಗಲಿಲ್ಲವೆಂಬುದೊಂದು ಪುಣ್ಯ!

ಆ ರಾಜಕೀಯ ರಂಗದ ಮಹಾ ಪೌರುಷ ಸ್ತ್ರೀಯಾದ ಶ್ರೀಮತಿ ಸರೋಜಿನಿ ನಾಯಡುಯವರಾದರೋ ಸರಾಸರಿ ದಿನಕ್ಕೆ ಮುನ್ನೂರು ಮೈಲಿಗಳಂತೆ ಪ್ರಯಾಣ ಮಾಡುತ್ತಾ (ಈ ರೀತಿ ಹದಿನೈದು ದಿನಗಳು ಏಕಪ್ರಕಾರ) ದಿನಕ್ಕೆ ಏನಿಲ್ಲವೆಂದರೂ ಏಳು ಕಡೆಗಳಲ್ಲಾದರೂ ಪ್ರಚಂಡ ಭಾಷಣಗಳನ್ನು ಮಾಡುತ್ತಿದ್ದರು.

ಆನೆಗಳು ಈ ಚುನಾವಣೆಗಳಲ್ಲಿ ಪಾತ್ರ ವಹಿಸಿದ್ದುವು ಒಂದು ಚುನಾವಣಾ ಮೀಟಿಂಗಿನಲ್ಲಿ ಉಮೇದುವಾರನ ರಾಜಕೀಯ ಅಭಿಪ್ರಾಯಗಳು ತಮಗೆ ಸರಿಹೋಗಲಿಲ್ಲವೆಂಬುದನ್ನು ತೋರ್ಪಡಿಸಲು ಆನೆಗಳನ್ನು ಬಿಟ್ಟು ಸಭೆಯನ್ನು ಚದುರಿಸಿದರು. ಅನೇಕ ಮಂದಿ ಉಮೇದುವಾರರು ತಾವು ಈ ಚುನಾವಣಾ ಯುದ್ಧದಲ್ಲಿ ಜಯಶಾಲಿಗಳಾಗಿ ಬರುತ್ತೇವೆಂಬುದನ್ನು ಮೊದಲೇ ತೋರ್ಪಡಿಸುವುದಕ್ಕೋ ಎನ್ನುವಂತೆ ಆನೆಗಳನ್ನೇರಿ ಚುನಾವಣಾ ಪ್ರಚಾರಕಾರ್ಯ ಮಾಡಿದರು.

ಒಂದು ಚುನಾವಣೆಯಾಗುತ್ತಿದ್ದಾಗ ಗಲಭೆಯುಂಟಾಗಿ ವೋಟಿಂಗೇ ನಿಂತು ಹೋಯಿತು ಯಾಕೆಂದರೆ ಒಬ್ಬ ವೋಟರು ಬಂದ ಹತ್ತಾರು ಮಂದಿ ಕ್ಯಾನ್ವಾಸರುಗಳು ಬಂದು "ನಮ್ಮ ಕಡೆಗೆ ವೋಟು ಕೊಡಿ" ಎಂದು ಎಳೆದಾಡಿದರು. ವೋಟರಿಗೆ 'ಈಗ ಯಾರಿಗೆ ಓಟುಕೊಡುವುದು?' ಎಂಬ ಅನುಮಾನ ಬಂತು. ತಕ್ಷಣ ಸುರುವಾಯಿತು ಕೂಗಾಟಕ್ಕೆ, ಏಟುಗಳಿಗೆ ವೋಟಿಂಗ್ ನಿಂತುಹೋಯಿತು.

ಪಂಜಾಬಿನಲ್ಲಿ ಇದೊಂದು ಚಮತ್ಕಾರ. ಇಲ್ಲಿ ಹೆಂಗುಸರು ಹೆಂಗುಸರಿಗೇ ಕೈಕೈ ಮಿಲಾಯಿಸಿತು. ಹೆಂಗುಸರ ಚುನಾವಣೆಯಲ್ಲಿ ಕುಮ್ಮಕ್ಕಾಗಿ ನಿಂತಿದ್ದ ಹೆಂಗುಸರಲ್ಲೇ ಜಗಳಬಂದು ಹೊಡೆದಾಡಿದರು ಪೋಲೀಸಿನವರು ಬಂದು ಈ ಸಬಲೆಯರಾಗಿದ್ದ ಅಬಲೆಯರನ್ನು ನಿಲ್ಲಿಸಿದರು.

ಪಂಜಾಬಿನಲ್ಲಿ ಒಬ್ಬ ವೋಟರು ವೋಟುಕೊಡಲು ಬಂದಿದ್ದ. ಇವನ ಜತೆಯಲ್ಲಿ ೭೧ ವರ್ಷದ ಇವನ ಮಗ, ೫೨ವರ್ಷದ ಮೊಮ್ಮಗ, ೩೧ವರ್ಷದ ಮರಿಮಗ, ೧೨ ವರ್ಷದ ಮರಿ-ಮರಿಮಗಳು ಈ ಹನ್ನೆರಡು ವರ್ಷದ ಮರಿ-ಮಗಳು ಯಾಕೆ ಈ ಚುನಾವಣೆಗೆ? ಎಂದು ಕೇಳಬಹುದು ಹೌದು ಇವಳು ವೋಟೇನೋ ಮಾಡಲಿಲ್ಲ ಆದರೂ ತನ್ನ ಮನಸ್ಸಿಗೆ ಒಪ್ಪಿದ ಉಮೇದವಾರರು ಯಾರು? ಎಂಬುದನ್ನು ಇವಳು ತೋರಿಸಿದಳು

ಅಂಬಾಲದಲ್ಲಿ ಒಬ್ಬಳು ಹೆಂಗಸು. ಅವಳು ವೋಟುಕೊಡುವುದುಕ್ಕೆ ಹೋಗುತ್ತಿದ್ದಳು. ಆದರೆ ಅವಳಿಗೆ ಎಲ್ಲಿ, ಹೇಗೆ ವೋಟು ಮಾಡಬೇಕೆಂಬುದು ಗೊತ್ತಿರಲಿಲ್ಲ. ಆದುದರಿಂದ ದಾರಿಯಲ್ಲಿ ಸಿಕ್ಕಿದ ಒಬ್ಬನನ್ನು ಕುರಿತು ಕೇಳಿದಳು ಅವನು ಎಲ್ಲವನ್ನೂ ವಿವರಿಸಿ ಹೇಳಿದ ಅದಕ್ಕೆ ಕೃತಜ್ಞಳಾದ ಅವಳು ತನಗೆ ವಿಷಯತಿಳಿಸಿ ತನ್ನ ದಾರಿ ಹಿಡಿದುಕೊಂಡು ಹೊರಟು ಹೋಗುತ್ತಿದ್ದವನನ್ನು ಕರೆದು, 'ನಿನ್ನ ಪೆಟ್ಟಿಗೆ ಯಾವುದು ಹೇಳು? ಪಾಪ ನೀನು ಒಳ್ಳೆಯವನಾಗಿದೀಯೆ. ನಾನು ನಿನಗೆ ವೋಟು ಕೊಡುತ್ತೇನೆ' ಎಂದಳಂತೆ.

ವಾಣಿಪಟ್ಟದಲ್ಲಿ ಕಳೆದ ಅನೇಕ ವರ್ಷಗಳಿಂದ ಏಕಾಂತವಾಸದಲ್ಲಿದ್ದ ನೂರು ವರ್ಷ ವಯಸ್ಸಿನವನೊಬ್ಬನು ಈ ವೋಟಿಂಗಿಗೆ ಬಂದುಬಿಟ್ಟಿದ್ದ.

ಮೂರು ಪ್ರಾಂತ್ಯಗಳಲ್ಲಿ ಚುನಾವಣೆಗಳ ಕಾಲದಲ್ಲಿ ಬೇರೊಬ್ಬರಿಗಾಗಿ ತಾವು ವೋಟು ಮಾಡಿದ್ದಕ್ಕಾಗಿ ಕೊನೆಯ ಪಕ್ಷ ೧೦೦ ಮಂದಿಯ ದಸ್ತಗಿರಿಗಳಾದವು. ಒಬ್ಬ ೭೫ ವರ್ಷದ ಮುದುಕನಂತೂ, ದಸ್ತಗಿರಿ ಮಾಡಲೆತ್ನಿಸಿದಾಗ ಬಹಳ ಗಲಾಟೆಮಾಡಿದ ಅವನ ವಾದವಿದು - ನನ್ನ ಮಗ ಸಾಯಿಲಿ ಬಂದು ವೋಟು ಮಾಡಿದರೆ ತಪ್ಪೇನು?

ಇನ್ನೊಬ್ಬ ಅನಕ್ಷರಸ್ಥ. ಇವನಿಗೆ ತನ್ನ ಸ್ನೇಹಿತನೊಬ್ಬನಿಗೆ ವೋಟುಮಾಡಬೇಕೆಂದು ಆಸೆ, ಆದರೆ ಆ ಸ್ನೇಹಿತನು ಉಮೇದುವಾರನಲ್ಲ ಇವನು ಪೋಲಿಂಗ್ ಸ್ಟೇಷನಿಗೆ ಹೋಗಿ ತನ್ನ ಸ್ನೇಹಿತನ ಹೆಸರು ಎಲ್ಲಿದಯೆಂದು ಕೇಳಲಾಗಿ ಅಲ್ಲಿದ್ದ ಪೋಲಿಂಗ್ ಆಫೀಸರು ಆತನ ಪೆಟ್ಟಿಗೆಯಿಲ್ಲವೆಂದು ಹೇಳಿದರು. ಆಗ ಈ ಅನಕ್ಷರಸ್ಥ ವೋಟರಿಗೆ ತುಂಬಾ ಕೋಪ ಬಂದು 'ಹಾಗಾದರೆ ನಾನು ವೋಟೇ ಮಾಡುವುದಿಲ್ಲ. ಈ ಹೊಸ ಸ್ವರಾಜ್ಯದಲ್ಲಿ ನಮ್ಮನ್ನು ಯಾರು ಆಳಬೇಕೆಂಬುದನ್ನು ನಾವೇ ಆರಿಸಿಕೊಳ್ಳಬಹುದೆಂದು ಹೇಳಿದ್ದರು. ಈಗ ನನಗೆ ಬೇಕಾದವನು ಆತನೊಬ್ಬನೇ. ಆತನೇ ಆಳಬೇಕೆಂದು ನನ್ನಿಷ್ಟ. ಈಗ ಈ ಪಟ್ಟಿಯಲ್ಲಿ ಇರುವವರು ಒಬ್ಬರೂ ನನಗೆ ಬೇಕಿಲ್ಲ. ಇದೆಲ್ಲಾ ಯಾಕೋ ಒಂದು ದೊಡ್ಡ ಮೋಸದಂತೆ ಕಾಣುತ್ತ' ಎಂದು ಹೇಳಿ ಹೊರಟೇ ಹೋದ ಭೂಪ!

ಪಂಜಾಬಿನಲ್ಲಿ ಒಬ್ಬ ಉಮೇದುವಾರ "ತಾನೇನಾದರೂ ಚುನಾವಣೆಯಲ್ಲಿ ಉತ್ತೀರ್ಣವಾದ ಮೇಲೆ ತನಗೆ ಸಹಾಯ ಮಾಡಿದ ಪಾರ್ಟಿಯನ್ನು ಬಿಟ್ಟು ಪ್ರತಿಪಕ್ಷಕ್ಕೆ ಹೊಗುವುದಿಲ್ಲ"ವೆಂಬ ಭರವಸೆಯನ್ನು ಕೊಡುವುದಕ್ಕಾಗಿ ೫೦೦೦ ರೂಪಾಯಿಗಳ ಪ್ರಾಮಿಸರಿ ನೋಟನ್ನು ಬರೆದುಕೊಟ್ಟ.

ಮದರಾಸು ಪ್ರಾಂತ್ಯದಲ್ಲಿ ಒಬ್ಬ ಉಮೇದುವಾರ ೧೬೦ ಮೈಲಿಗಳ ದೂರವನ್ನು ನಡದುಕೊಂಡೇ ಹೋಗಿ ೬೦ ಗ್ರಾಮಗಳಲ್ಲಿ ಚುನಾವಣಾ ಪ್ರಚಾರಮಾಡಿದ.

ಪಂಜಾಬಿನಲ್ಲಿ ಉಮೇದುವಾರರಿಗೆ ಸಹಾಯ ಮಾಡುತ್ತಿದ್ದ ಸ್ವಯಂ ಸೇವಕರಿಗೆ "ನೀವು ಯಾವ ಉಮೇದುವಾರನಿಗೆ ಸಹಾಯ ಮಾಡುತ್ತಿದ್ದೀರೋ ಆತನನ್ನು ಬೀದಿಗಳಲ್ಲಿ ಕಂಡಾಗಲೆಲ್ಲ 'ಸಲ್ಯೂಟ್' ಮಾಡಬೇಕು" ಎಂಬುದಾಗಿ ಹೇಳಲಾಗಿ ಗಲಾಟೆಗಿಟ್ಟುಕೊಂಡಿತು. ಅದನ್ನು ನೋಡಿ 'ನೀವು ಮೂವರು ಉಮೇದುವಾರರು ಯಾರನ್ನು ನೋಡಿದರೂ ಸೆಲ್ಯೂಟ್ ಮಾಡಿ' ಎಂದು ಹುಕುಮನ್ನು ಬದಲಾಯಿಸಿದರು

ಪಂಜಾಬಿನಲ್ಲಿ ಒಂದೇ ಚುನಾವಣಾ ಕ್ಷೇತ್ರದಲ್ಲಿ ಇಬ್ಬರು ದಂಪತಿಗಳು. ಗಂಡಹೆಂಡಿರಿಬ್ಬರೂ ಚುನಾವಣೆಗೆ ನಿಂತಿದ್ದರು. ಆದರ ಹೆಂಗುಸರ ಪೈಕಿ ಒಂದೇ ಒಂದು ಸೀಟಿದ್ದ ಕಾರಣ ಶಾಸನ ಸಭೆಯಲ್ಲಿ ಏಕಕಾಲದಲ್ಲಿ ಇಬ್ಬರು ದಂಪತಿಗಳು ಇರುವ ಸಂಭವ ಒದಗಲಿಲ್ಲ' ಒಬ್ಬ ಏಕಾಂಗಿಯಾಗಬೇಕಾಯಿತು.

ಈ ಬಣ್ಣಗಳ ಗಲಭೆ ಇಷ್ಟೇ ಇಲ್ಲ. ಇಡೀ ದೇಶದಲ್ಲೆಲ್ಲಾ ಗೊಂದಲಹಚ್ಚಿದೆ. ಒಂದು ಚುನಾವಣಾ ಕ್ಷೇತ್ರದಲ್ಲಿ ಸೋತುಹೋದ ಉಮೇದುವಾರನೊಬ್ಬನು ಸರಕಾರಕ್ಕೆ ಚುನಾವಣೆಯನ್ನೇ ಮತ್ತೊಮ್ಮೆ ಮಾಡಬೇಕೆಂದು ಅರ್ಜಿ ಹಾಕಿಕೊಂಡ. ಅವನ ಅರ್ಜಿಯಲ್ಲಿ ಹೇಳಿರುವ ಕಾರಣವೇನೆಂದರೆ 'ನನ್ನ ವೋಟರುಗಳಿಗೆ ನೀಲಿ ಮತ್ತು ಹಸುರು ಬಣ್ಣಗಳಿಗೆ ಇರುವ ವ್ಯತ್ಯಾಸ ತಿಳಿಯದು ಆದ್ದರಿಂದ ನಾನು ಚುನಾಯಿತನಾಗಲಿಲ್ಲ' ಎಂಬುದು.

ಶಕುನಾದಿಗಳಲ್ಲಿ ವಿಶೇಷವಾಗಿ ನಂಬಿಕೆ ಇಟ್ಟಿರುವ ಇಂಡಿಯಾದಲ್ಲಿ ಬಣ್ಣಗಳ ಚುನಾವಣೆಗಳಲ್ಲಿ ಬಹಳ ಕೆಲಸಕೊಟ್ಟಿತು. ಇವು ಉಮೇದುವಾರರಿಗೆ ಕೆಲವು ಓಟುಗಳನ್ನು ಗಳಿಸಿಕೊಟ್ಟಿದ್ದರೂ ಕೆಲವನ್ನೇನೋ ಹಾಳುಮಾಡಿವೆ.

ESTD. 1906

CANARA BANK

LIMITED

(INCORPORATED IN BRITISH INDIA)

MEMBER, RESERVE BANK OF INDIA
MEMBER, CLEARING HOUSE BOMBAY.

SUBSCRIBED CAPITAL	6,00,000
PAID UP CAPITAL	3,53,240
RESERVES	4,50,000
DEPOSITS	79,64,000
TOTAL RESOURCES	98,00,000

OFFICES:

BOMBAY-FORT	MANGALORE
BOMBAY MANDVI	BANGALORE
ALLEPPEY	CHIKMAGALUR
ERNAKULAM	ARSIKERE
COCHIN	DAVANGERE
CALICUT	HUBLI
CANNANORE	DHARWAR ETC., ETC.

ದಕ್ಷಿಣ ಕನ್ನಡದ ಚುನಾವಣೆಯ ವಿದ್ಯಮಾನಗಳ ಪರಿಶೀಲನೆ

ಜಾತಿಭೇದಪ್ರೇತದ ಉಚ್ಚಾಟನೆ * * * ಗೌಡಸಾರಸ್ವತ ಸಮಾಜದ ಅನುಕರಣೀಯ ಮಾದರಿ

ದಕ್ಷಿಣ ಕನ್ನಡದಿಂದ ಕೌನ್ಸಿಲು ಎಸೆಂಬ್ಲಿಗಳಿಗಾಗಬೇಕಾಗಿದ್ದ ಚುನಾವಣೆಗಳು ಇದೇ ತಾ. ೧೫, ೧೬, ೧೮, ೨೦ನೇ ತಾರೀಕುಗಳಲ್ಲಿ ಜರಗಿ ಮುಗಿದಿರುವವು. ಈ ಸಲದ ಚುನಾವಣೆಗಳಲ್ಲಿ ಕಂಡು ಬಂದ ಪ್ರಾಮುಖ್ಯ ವಿಷಯವೆಂದರೆ ರಾಷ್ಟ್ರೀಯಭಾವನೆ. ಈ ಭಾವನೆಯ ಬಲದಿಂದಾಗಿ ಜಾತಿಮತಗಳ ಸುಪಂತೆ, ಯಾ ದ್ವೇಷವು ಚುನಾವಣೆಗಳಲ್ಲಿ ತಲೆಯೆತ್ತಿ ಪರಿಣಾಮವನ್ನೀಯಲಿಲ್ಲ. ಬೇರೆ ಉಪಾಯವಿಲ್ಲದ ಸ್ವಕಾರ್ಯ ಸಾಧಕರು ಕೆಲವರು ಸಾಧ್ಯವಿದ್ದಷ್ಟು ಜಾತಿದ್ವೇಷವನ್ನೆಬ್ಬಿಸಲು ಪ್ರಯತ್ನಿಸಿರಬಹುದು. ಆದರೆ ಜನಸಾಮಾನ್ಯರಲ್ಲಿ ಕೊಂಗ್ರೆಸಿನ ಶ್ರದ್ಧೆಯೊಂದಲ್ಲದೆ ಮತ್ಯಾವ ಆತುರವೂ ತೋರಿಬರಲಿಲ್ಲ. ಇಡೀ ಜಿಲ್ಲೆಯ ಬೇರೆ ಬೇರೆ ಚುನಾವಣೆಗಳನ್ನು ವಿಮರ್ಶಾದೃಷ್ಟಿಯಿಂದ ಕಂಡರೆ ಮತದಾರರೂ ಹಾಗೂ ಚುನಾವಣಾಕೆಲಸಗಾರರೂ ಸಾಮೂಹಿಕ ದೃಷ್ಟಿಯನ್ನೇ ಇಟ್ಟುಕೊಂಡಿದ್ದರೆನ್ನಬಹುದು. ಇದಕ್ಕೆ ಮುಖ್ಯವಾಗಿ ಕೊಂಗ್ರೆಸಿನವರ ಪ್ರಬಲ ಪ್ರಚಾರ ಕಾರ್ಯವೇ ಕಾರಣ.

ಕೌನ್ಸಿಲು ಚುನಾವಣೆ

ಕಳೆದ ತಾ. 16ರಲ್ಲಿ ನಡೆದ ಕೌನ್ಸಿಲು ಚುನಾವಣೆಗೆ ಸ್ವತಂತ್ರವಾಗಿ ಶ್ರೀ ಧರ್ಮಸ್ಥಳ ಮಂಜಯ್ಯ ಹೆಗ್ಗಡೆಯರೂ ಶ್ರೀಯುತ ಕೆ. ಸದಾಶಿವ ಅಡಿಗರೂ ನಿಂತಿದ್ದರು. ಇವರ ಪೈಕಿ ಶ್ರೀಯುತ ಹೆಗ್ಗಡೆಯರ ಒಲವು ಕೊಂಗ್ರೆಸಿನ ಕಡೆಗೂ ಶ್ರೀ ಅಡಿಗರಸಹಾನುಭೂತಿಯು ಜಸ್ಟಿಸ್ ಪಾರ್ಟಿಯ ಕಡೆಗೂ ಇದ್ದಿತೆನ್ನಬಹುದು ಈ ದೆಸೆಯಿಂದ ಕೆಲವು ಕೊಂಗ್ರೆಸ್ ಕೆಲಸಗಾರರು ಶ್ರೀ ಧರ್ಮಸ್ಥಳ ಹೆಗ್ಗಡೆಯವರನ್ನು ಸಮರ್ಥಿಸಿದ್ದರು. ಹಾಗೆಯೇ ಶ್ರೀಮಾನ್ ಅಡಿಗರು ಜಸ್ಟೀಸರ ಬೆಂಬಲವನ್ನು ಪಡಕೊಂಡು ಹೋರಾಡಿದ್ದರು. ಇಡೀ ಜಿಲ್ಲೆಯಲ್ಲಿ ಕೌನ್ಸಿಲು ವೋಟುಗಳು ಹೆಚ್ಚು ಕಡಿಮೆ ೯೫೦ ಮಾತ್ರವಿದ್ದು ಪೋಲಿಂಗ್ ಸ್ಟೇಶನುಗಳು ಬಹಳವಿದ್ದುದರಿಂದ ಚುನಾವಣೆಯ ದಿನ ಜನಸಾಮಾನ್ಯರಲ್ಲಿ ಉದ್ವೇಗವಿರಲಿಲ್ಲ ಆದರೆ ಶ್ರೀ ಹೆಗ್ಗಡೆಯರ ನೀಲಿವರ್ಣದ ಮತ್ತು ಶ್ರೀ ಅಡಿಗರ ಬಿಳಿವರ್ಣದ ಪತಾಕೆಗಳುಳ್ಳ ಕಾರುಗಳು ಚುನಾವಣೆಯದಿನ ಓಡಾಡುತ್ತಿದ್ದು ಮತದಾರರನ್ನು ತರುವ ಕೆಲಸದಲ್ಲಿ ನಿರತವಾಗಿದ್ದವು. ಇತ್ತಂಡದ ಕೆಲಸಗಾರರೂ ಬಹಳ ಹುರುಪಿನಿಂದ ಕೆಲಸಮಾಡುತ್ತಿದ್ದರು.

ಇಬ್ಬರೂ ಸ್ವತಂತ್ರ ಉಮೇದ್ವಾರಿಗಳಾಗಿದ್ದುದರಿಂದ ಜಿಲ್ಲೆಯ ಬ್ರಾಹ್ಮಣ ಮುಖಂಡರು ಕೆಲವರು ಹಟತೊಟ್ಟು ಶ್ರೀ. ಅಡಿಗರ ಕಡೆಯಿಂದ ಕೆಲಸಮಾಡಿದ್ದರು. ಆದರೆ ಸಂತೋಷದ ಸಂಗತಿಯೆಂದರೆ ಈ ಚುನಾವಣೆಯಲ್ಲಾದರೂ ಜಾತಿ ಭೇದವು ತೋರಿಬರಲಿಲ್ಲವೆಂಬುದು. ಕೌನ್ಸಿಲಿನ ಒಂಬೈನೂರ ಚಿಲ್ಲರೆ ಮತದಾರರಲ್ಲಿ ಹೆಚ್ಚಿನವರು ಬಂಟರು ಯಾನೆ ನಾಡವರಾದರೆ ಎರಡನೆಯವರು ಬ್ರಾಹ್ಮಣರು; ಶ್ರೀ ಹೆಗ್ಗಡೆಯವರ ಜೈನ ಸಮಾಜದ ಮತದಾರರು ಕೆಲವೇ ಮಂದಿಮಾತ್ರ. ಹಿಗಿದ್ದೂ ೫೫೦ ವೋಟುಗಳ ಪ್ರಬಲ ಬಹುಮತವನ್ನು ಪಡೆದು ಶ್ರೀಹೆಗ್ಗಡೆಯವರು ಗೆದ್ದುಬಂದುದನ್ನು ನೋಡುವಾಗ ಬ್ರಾಹ್ಮಣ ಸಮಾಜದ ಹೆಚ್ಚಿನ ಮತಗಳೂ ಶ್ರೀ ಧರ್ಮಸ್ಥಳ ಹೆಗಡೆಯವರಿಗೆ ದೊರೆತಿರಬೇಕೆಂಬುದನ್ನು ಊಹಿಸಬಹುದು. ಈ ಚುನಾವಣೆಯ ಅತ್ಯಂತ ವಿನೋದ ವಿಷಯವೆಂದರೆ ಮತದಾರರಲ್ಲಿ ಕೆಲವರು ಧರ್ಮಸ್ಥಳ ದೇವರ ಮೇಲಿನ ಭಕ್ತಿಯಿಂದಲೇ ಶ್ರೀ ಹೆಗ್ಗಡೆಯವರಿಗೆ ಮತವಿತ್ತುದು! ಹೀಗೆ ಶ್ರೀ ಅಡಿಗರಿಗೆ ಬೆಂಬಲ ಕಡಿಮೆ ಇರುವಾಗ ಶ್ರೀಯುತ ಹೆಗ್ಗಡೆರಿಗೆ ಮಿಕ್ಕವರೊಡನೆ ಸ್ಥಳೀಕ ದೇವರ ಬೆಂಬಲವೂ ದೊರೆತುದೇ ಇಂತಹ ಪ್ರಚಂಡ ವಿಜಯಕ್ಕೆ ಕಾರಣವೆನ್ನಬಹುದು.

ಕ್ರೈಸ್ತರ ಸ್ಥಾನಕ್ಕೆ

ಇದೇ ತಾ. ೧೬ರಲ್ಲು ಚುನಾವಣೆಯು ನಡೆಯಿತು. ಕೊಂಗ್ರೆಸಿನ ಕಡೆಯಿಂದ ಮಿ. ವಾರ್ಕಿಯವರೂ ಜಸ್ಟಿಸ್ ಪಕ್ಷದ ಕಡೆಯಿಂದ ಮಿ. ಪ್ರೀಸ್ಟರೂ ನಿಂತಿದ್ದರು. ಶ್ರೀ. ಪ್ರೀಸ್ಟರೆಂದರೆ ಧನಾಢ್ಯರು. ಕೆಲವು ವರ್ಷಗಳಿಂದ ಕೌನ್ಸಿಲುಗಳಲ್ಲಿದ್ದವರು. ಹೆಚ್ಚಿನ ಪ್ರತಿಷ್ಠೆಯನ್ನು ಸಂಪಾದಿಸಿದವರು. ಇಂಥವರ ಇದಿರುವಾಳಿಯಾದ ಕೊಂಗ್ರೆಸ್ ಉಮೇದ್ವಾರರೆಂದರೆ ಶ್ರೀಮಂತರಲ್ಲದ ಪ್ರೊಫೆಸರ್ ವಾರ್ಕಿಯವರು ಕ್ರೈಸ್ತ ಜನರಲ್ಲಿ ಕೊಂಗ್ರೆಸ್ ಭಾವನೆಯು ಇನ್ನೂ ಮೂಡಿಲ್ಲವೆಂಬ ವಾಡಿಕೆಯಿತ್ತು. ಅದನ್ನು ಈ ಚುನಾವಣೆಯು ಸುಳ್ಳೆಂದು ತೋರಿಸಿಕೊಟ್ಟಿರುವುದು. ಹೆಚ್ಚಿನ ಧನ ಬಲವುಳ್ಳ ಶ್ರೀ. ಪ್ರೀಸ್ಟರನ್ನು ಸ್ಪರ್ಧಿಸುವಾಗ ಶ್ರೀಯುತ ವಾರ್ಕಿಯವರಿಗಿದ್ದ ಪ್ರಬಲ ಬೆಂಬಲವೆಂದರೆ ಕ್ರೈಸ್ತ ಮತದಾರರಲ್ಲಿಯೂ ಉತ್ಪನ್ನವಾಗಿದ್ದ ರಾಷ್ಟ್ರೀಯ ಭಾವನೆ. ಅದರಲ್ಲಿಯೂ ಶ್ರೀ. ವಾರ್ಕಿಯವರ ಚುನಾವಣೆಯ ಪ್ರಚಾರ ಕಾರ್ಯವು ಕೊಂಗ್ರೆಸ್ ರೀತಿಗನುಸಾರವಾಗಿಯೇ ಪರಿಣಾಮಕರವಾಗಿ ನಡೆದಿತ್ತು. ಅವರ ಚುನಾವಣಾ ಯುದ್ಧದ ಮೂಲ ಬಲವೆಂದರೆ ರಾಷ್ಟ್ರಧ್ವಜ ಮತ್ತು ಕೊಂಗ್ರೆಸ್ ಬಣ್ಣವಾದ ಹಳದಿ ಟೋಪಿ ಧಾರಿಗಳಾದ ಸ್ವಯಂ ಸೇವಕರು. ಈ ಸ್ವಯಂ ಸೇವಕರು ಎಲ್ಲಾ ಕಡೆಗಳಲ್ಲಿಯೂ ಸಂಚರಿಸಿ ರಾಷ್ಟ್ರ ಸಭೆಯ ಜಯೋದ್ಗಾರಗಳೊಡನೆ ಜನತೆಯನ್ನು ಹುರಿದುಂಬಿಸಿದ್ದರು. ಶ್ರೀ ವಾರ್ಕಿಯವರಾದರೂ ಅಲ್ಲಲ್ಲಿ ಭಾಷಣಗಳನ್ನಿತ್ತು ತನ್ನ ಯೋಗ್ಯತೆಯನ್ನು ಮತದಾರರಿಗೆ ತೋರಿಸಿಕೊಂಡಿದ್ದರು. ದ. ಕನ್ನಡ, ಮಲಬಾರು, ನೀಲಗಿರಿ ಹೀಗೆ ಮೂರು ಜಿಲ್ಲೆಗಳಲ್ಲಿ ಸಾಧಾರಣ ೩೬ ಸಾವಿರ ಮತದಾರರಿದ್ದರು. ಅವರ ಪೈಕಿ ಸುಮಾರು ೨೦ ಸಾವಿರದ ವರೆಗೆ ದಕ್ಷಿಣ ಕನ್ನಡದಲ್ಲಿಯೇ ಇರುವರೆನ್ನಬಹುದು. ಇವರೆಲ್ಲರನ್ನು ಸಂಧಿಸಿ ಇತ್ತಂಡದವರೂ ನಡೆಸಿದ ಪ್ರಬಲ ಪ್ರಚಾರಕಾರ್ಯದ ಪರಿಣಾಮವನ್ನು ನೋಡಬೇಕಾಗಿದೆ. ಕೊಂಗ್ರೆಸ್ ತತ್ವಗಳ ಪ್ರಚಾರವು ಕ್ರೈಸ್ತ ಜನಸಮುದಾಯದಲ್ಲಿ ಈ ಸಲ ನಡೆದಷ್ಟು ಹಿಂದೆಂದೂ ನಡೆದಿಲ್ಲವೆನ್ನಬಹುದು. ತಾ. ೧೬ರಲ್ಲಿ ನಡೆದ ಈ ಸ್ಥಾನದ ಚುನಾವಣೆಯಲ್ಲಿ ೨೦ ಸಾವಿರಕ್ಕೂ ಮಿಕ್ಕಿ ಮತದಾನವಾಗಿರುವುದೆಂದು ಊಹಿಸಬಹುದು. ಕ್ರೈಸ್ತ ಸಮಾಜದೊಳಗೇ ಜಾತಿ ಭೇದವಿದ್ದು ಮಿಕ್ಕಪಂಗಡಗಳವರ ಬಹುಮತವಿರುವಾಗ ಸೀರಿಯನ್ ಕ್ರೈಸ್ತರಾದ ಶ್ರೀ. ವಾರ್ಕಿಯವರಿಗೆ ಸಿಕ್ಕಿರುವ ಪ್ರೋತ್ಸಾಹವು ಜನತೆಯಲ್ಲಿ ತಹ ರಾಷ್ಟ್ರೀಯ ಮನೋವೃತ್ತಿಯುಂಟಾಗಿದೆ ಎಂಬುದನ್ನು ಸ್ಪಷ್ಟಗೊಳಿಸುವುದು.

ಕುಂದಾಪುರ ಡಿವಿಜನು

ಈ ಡಿವಿಜನಿನ ಚುನಾವಣೆಯು ತಾ. ೧೮ಕ್ಕೆ ನಡೆಯಿತು. ಕಾರ್ಕಳ, ಕುಂದಾಪುರ, ಉಡುಪಿ ತಾಲೂಕುಗಳಲ್ಲಿ ಸಾಧಾರಣ ೪೨ ಸಾವಿರ ಮತದಾರರಿರುವ ಕ್ಷೇತ್ರವಿದು. ಕಡಿಮೆ ಎಂದರೆ ಶೇಕಡಾ ೬೦ರಷ್ಟು ಮತದಾರರು ಮತದಾನಮಾಡಿರುವರು. ಸ್ತ್ರೀ ಮತದಾರರೂ ಬಹುಸಂಖ್ಯೆಯಿಂದ ಬಂದು ಮತದಾನಗಳನ್ನಿತ್ತಿರುವರು. ಚುನಾವಣೆಯಾಗಲಿದ್ದುದು ಸವರ್ಣರ ಒಂದು ಸ್ಥಾನಕ್ಕೆ, ಮತ್ತು ಹರಿಜನರ ಸ್ಥಾನವೊಂದಕ್ಕೆ. ಶ್ರೀ ಎ. ಬಿ ಶೆಟ್ಟರೂ, ಹರಿಜನರ ಪರವಾಗಿ ಶ್ರೀ ಕೆ. ಈಶ್ವರನವರೂ ಕೊಂಗ್ರೆಸ್ ಕಡೆಯಿಂದಲೂ ದಿವಾನ್ ಬಹದ್ದೂರು ಬಿ. ಮಹಾಬಲ ಹೆಗ್ಗಡೆಯರೂ ಹರಿಜನರ ಸಲುವಾಗಿ ಶ್ರೀ ಬಾಬುನವರೂ ಜಸ್ಟಿಸ್ ಪಾರ್ಟಿಯ ಕಡೆಯಿಂದಲೂ ಇನ್ನೊಬ್ಬ ಹರಿಜನ ಮೆಂಬರರಾದ ಶ್ರೀ ಗೋಪಾಲ ಸಾಲೆನ್ನರು ಪೀಪಲ್ಸ್ ಪಾರ್ಟಿಯ ಕಡೆಯಿಂದಲೂ ರಂಗಭೂಮಿಗಿಳಿದಿದ್ದರು. ಕೊಂಗ್ರೆಸ್ ಮತ್ತು ಜಸ್ಟಿಸ್ ಪಾರ್ಟಿಯಿಂದ ಸುಮಾರು 6 ತಿಂಗಳುಗಳಿಂದಲೂ ಪ್ರಬಲ ಪ್ರಚಾರ ಕಾರ್ಯ ನಡೆದಿದ್ದಿತು. ಕೊಂಗ್ರೆಸಿನವರು ಸಾಧಾರಣ 100ರ ವರೆಗೆ ಚುನಾವಣಾ ಸಭೆಗಳನ್ನು ಸೇರಿಸಿದ್ದರು. ಪ್ರತಿಯೊಬ್ಬ ಓಟರನಿಗೆ ಎರಡೆರಡು ಓಟುಗಳನ್ನು ಕೊಡುವ ಅಧಿಕಾರವಿತ್ತು. ಹೆಚ್ಚುಕಡಿಮೆ ೩೫ ಸಾವಿರ ಮತದಾನಗಳಾಗಿರಬಹುದು. ಜನತೆಯಲ್ಲಿ ಪ್ರಚಂಡ ಸ್ಫೂರ್ತಿಯೆದ್ದಿತ್ತು. ಕೊಂಗ್ರೆಸು ಭಾವನೆಯು ಸರ್ವತೋಮುಖವಾಗಿ ಹಬ್ಬಿತ್ತು. ಪ್ರಥಮತಃ ಶಿವಳ್ಳಿಬ್ರಾಹ್ಮಣ ಸಮಾಜದ ಮುಂದಾಳುಗಳು, ಶ್ರೀಯುತರಾದ ಕಲ್ಮಾಡಿ, ಕಿದಿಯೂರರೇ ಮೊದಲಾದವರೂ ಅಷ್ಟಮಠಗಳ ಪೈಕಿ ಫಲಿಮಾರು, ಕಾಣೂರು ಮೊದಲಾದ ಆರು ಮಠಗಳೂ ಜಸ್ಟಿಸ್ ಪಾರ್ಟಿಯನ್ನು ಸಮರ್ಥಿಸುತ್ತಿದ್ದುದರಿಂದ ಬ್ರಾಹ್ಮಣ ಸಮಾಜವು ಕೊಂಗ್ರೆಸಿಗೆ ಓಟುಗಳನ್ನೀಯುವದು ಕಷ್ಟವೆಂಬ ಅಭಿಪ್ರಾಯವು ಹಬ್ಬಿತ್ತು. ಆದರೆ ಬ್ರಾಹ್ಮಣ ಸದ್ಗೃಹಸ್ಥರಲ್ಲಿ ಹೆಚ್ಚಿನವರು ಕೊಂಗ್ರೆಸಿಗೆ ಬೆಂಬಲವಿತ್ತಿದ್ದರಲ್ಲದೆ ಶ್ರೀಗಳಾದ ಆರೂರು ಲಕ್ಷ್ಮೀನಾರಾಯಣ ರಾವ್, ಮಿಜಾರು ನರಸಿಂಹಾಚಾರ್, ಪೇಜಾವರ, ಸೋದೆ ಮಠಗಳು, ಪಿ. ವಿ. ಉಪಾಧ್ಯಾಯ, ಎಂ. ಎಸ್. ಅಧಿಕಾರಿ, ಕೃಷ್ಣರಾಯ ಕೊಡ್ಗಿ, ಹಲ್ಸನಾಡು ಸೂರಪ್ಪಯ್ಯ ಮೊದಲಾದವರು ಕೊಂಗ್ರೆಸು ಗೆದ್ದುಬರುವಂತೆ ಮಾಡಬೇಕೆಂದು ಅವಿಶ್ರಾಂತವಾಗಿ ಕೆಲಸಮಾಡಿದ್ದರು. ಬ್ರಾಹ್ಮಣಮತದಾರರಸಮುದಾಯಗಳಿರುವಲ್ಲಿ ಹೆಚ್ಚು ಓಟುಗಳು ಕೊಂಗ್ರೆಸಿಗೇ ಬಿದ್ದಿರುವವಲ್ಲದೆ, ಎಲ್ಲಾ ಸಮಾಜದ ತರುಣರಲ್ಲಿಯೂ ಕೊಂಗ್ರೆಸು ಅಭಿಮಾನವಿದ್ದುದು ಕಂಡುಬಂದಿದೆ. ಗೌಡಸಾರಸ್ವತ ಸಮಾಜವು ಎಂದಿನಂತೆ ಸಂಪೂರ್ಣವಾಗಿ ಕೊಂಗ್ರೆಸಿನ ಬೆಂಬಲಕ್ಕಿತ್ತು. ಕೆಲವು ಖಾಸಗಿ ಕಾರಣಗಳನ್ನು ಕಟ್ಟಿಕೊಂಡು ಬೇರೆ ತಿರುಗಿಸಿದ ಕೆಲವೇ ವ್ಯಕ್ತಿಗಳನ್ನು ಬಿಟ್ಟರೆ, ಇಡೀ ಗೌಡಸಾರಸ್ವತ ಸಮಾಜವು ಉತ್ಸಾಹದಿಂದ ಕೊಂಗ್ರೆಸನ್ನು ಸಮರ್ಥಿಸಿರುವದು. ಆ ಸಮಾಜದ ಎಲಾ ಮುಂದಾಳುಗಳೂ ಕೊಂಗ್ರೆಸಿನ ಬೆಂಬಲಕ್ಕಿದ್ದರು. ಮತ್ತು ಹಲವು ಧುರೀಣರು ಅತ್ಯುತ್ಸಾಹದಿಂದ ಕೆಲಸ ಮಾಡಿದ್ದರು. ಅಂತೂ ಚುನಾವಣೆಯಲ್ಲಿ ಈ ಸಮಾಜವು ತೋರಿಸಿರುವ ಕೊಂಗ್ರೆಸ್ ಭಕ್ತಿಯು ಇತರ ಸಮಾಜಗಳವರಿಗೆ ಮಾದರಿಯಾಗುವಂತಹದಿದೆ. ಇನ್ನೊಂದು ಮಹದಾನಂದದ ಸಂಗತಿಯೆಂದರೆ ಯಾವದೊಂದು ಜಾತಿಮತದ ಕಡೆಗೂ ಚುನಾವಣೆಯಲ್ಲಿ ಲಕ್ಷ್ಯವು ಹೋಗಲಿಲ್ಲ; ಕೊಂಗ್ರೆಸ್-ಜಸ್ಟಿಸ್ ಇವುಗಳೊಳಗಿನ ತಾರತಮ್ಯವನ್ನು ಮತದಾರರು ಅರಿಯುವಂತಾಯಿತೇ ಹೊರತು ಸಣ್ಣ ಪುಟ್ಟ ವಿಷಯಗಳಿಗೆ ಪ್ರಾಮುಖ್ಯತೆ ದೊರೆತಿರಲಿಲ್ಲ. ಚುನಾವಣೆಯ ದಿನವು ಸಮೀಪಿಸುತ್ತಿದ್ದಂತೆ ಎರಡೂ ಕಡೆಗಳ ಪ್ರಚಾರ ಕಾರ್ಯಕ್ಕೆ ತೀವ್ರತೆ ಏರುತ್ತಾ ಬಂದು ತಾ. ೧೮ರಲ್ಲಿ ಜನರ ಉತ್ಸಾಹವು ಮಿತಿಮೀರಿತ್ತು. ಇಡೀ ಡಿವಿಜನಿನ ಪ್ರತಿಯೊಂದು ಪೋಲಿಂಗ್ ಸ್ಟೇಶನುಗಳಲ್ಲಿಯೂ ಹಳದಿ ಮತ್ತು ಕೆಲವು ಕೆಂಪು ಟೋಪಿಗಳು ಗೋಚರಿಸುತ್ತಿದ್ದವು. ಇತ್ತಂಡದವರ ಬಸ್ಸು ಕಾರುಗಳ ಓಡಾಟದ ಗಡಿಬಡಿ ಮತದಾರರನ್ನು ತರುವ ಗದ್ದಲ, ಧ್ವಜಧಾರಿಗಳಾದ ಕೊಂಗ್ರೆಸ್ ಸ್ವಯಂ ಸೇವಕರ ಶಿಸ್ತುಪಾಲನೆ—ಇವುಗಳೆಲ್ಲಾ ನೋಡುವಂತಿದ್ದವು. ರಿಜರ್ವ ಪೋಲೀಸರು ಬಸ್ಸುಗಳಲ್ಲಿ ತಿರುಗುತ್ತಿದ್ದರು. ಎಲ್ಲಿಯೂ ಗಲಭೆಯಾಗದೆ ಕೆಲಸಗಾರರ ಚಾತುರ್ಯದಿಂದಾಗಿ ಚುನಾವಣೆಯು ಶಾಂತರೀಯಿಂದ ನಡೆದಿರುವದು. ಐವರು ಉಮೇದ್ವಾರರಿಗೆ ಐದು ಓಟಿನಪೆಟ್ಟಿಗೆಗಳಿದ್ದು ಗೊತ್ತಿಲ್ಲದ ಮತದಾರರು ತಮ್ಮ ಹಕ್ಕಿನ ಎರಡೆರಡು ಓಟುಗಳನ್ನು ಹಾಕುವಾಗ ಪ್ರಮಾದವಶಾತ್ ತಪ್ಪಿ ಬೀಳಲಿಡೆಯಿದೆ. ಜನರು ಕೊಂಗ್ರೆಸನ್ನು ಸಮರ್ಥಿಸುವದರಲ್ಲಿ ಅಪೂರ್ವ ಉತ್ಸಾಹವನ್ನು ತೋರಿಸಿದ್ದರು. ಕೊಂಗ್ರೆಸಿನ ಇಬ್ಬರು ಉಮೇದ್ವಾರರಿದ್ದುದರಿಂದ ಮತಗಳನ್ನು ಉಪಯೋಗಿಸಲು ಹೆಚ್ಚಿನ ಜಾಣ್ಮೆಯು ಬೇಕಾಗಿತ್ತು. ಕೊಂಗ್ರೆಸಿನವರು ಹರಿಜನ ಉಮೇದ್ವಾರರ ಕಡೆಗೆ ಪ್ರತ್ಯೇಕ ಲಕ್ಷ್ಯವನ್ನಿತ್ತುದು ಸ್ತುತ್ಯವಿದೆ. ಜನರಲ್ಲಿ ಸಬಲ-ಅಬಲರೆಂಬ ಭೇದಭಾವವು ಇನ್ನೂ ಹೋಗದಿರುವ ಕಾರಣ ಪ್ರಾಮುಖ್ಯವಾಗಿರುವ ಹರಿಜನರ ಸ್ಥಾನದ ಕುರಿತು ಲಕ್ಷ್ಯವನ್ನೀಯುವ ಆಗತ್ಯ ಬಿತ್ತೆನ್ನಬಹುದು. ಪೀಪಲ್ಸ ಪಾರ್ಟಿಯಿಂದ ಧನ-ಜನ ಸಹಾಯವನ್ನು ಹೊಂದಿದ ಹರಿಜನ ಉಮೇದ್ವಾರರಿಗೆ ಕೆಲವೆಡೆಗಳಲ್ಲಿ ಅಲ್ಪ

ಪುಟ ೧೪ಕ್ಕೆ

NOTICE

ಉಡುಪಿ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. P. No 13/36

1. ರೊಜಿನಾ ಫೆರ್ನಾಂಡಿಸ .. ..
2. ಗ್ರಿಗೋರಿ ಫೆರ್ನಾಂಡಿಸ
3. ಮಾರ್ಸೆಲ ಫೆರ್ನಾಂಡಿಸ
4. ಎಲೆರಿನ್ ಫೆರ್ನಾಂಡಿಸ
5. ಮೊನಿಕಾ ಫೆರ್ನಾಂಡಿಸ

(2–5) ಪ್ರಾಯಸ್ಥರು ಗಾರ್ಡಿಯನ ತಾಯಿ 1ನೇ ಅರ್ಜಿದಾರಳು ಉಡುಪಿ ತಾಲೂಕು ಕೊಡವೂರು ಗ್ರಾಮದ ಕಲ್ಮಾಡಿಯಲ್ಲಿರುವವರು } ಅರ್ಜಿದಾರರು

2ರಿಂದ 5ನೇ ವರೆಗಿನ ಅರ್ಜಿದಾರರ ತಂದೆ ವ 1ನೇ ಅರ್ಜಿದಾರಳ ಗಂಡ ಮೃತ ಮಾರ್ಟಿನ ಫೆರ್ನಾಂಡಿಸರ ಬಾಬ್ತು ದಿ. ಎಂಪಾಯರ್ ಆಫ್ ಇಂಡಿಯಾ ಲೈಫ್ ಎಸ್ಯೂರೆನ್ಸ್ ಕಂಪೆನಿ ಲಿಮಿಟೆಡ್, ಬೊಂಬಾಯಿ ಕಂಪೆನಿಯಿಂದ ನಂಬ್ರ 83166ನೇ ಪೊಲಿಸಿಯ ಪ್ರಕಾರ ಬರತಕ್ಕ ಇನ್ಸ್ಯೂರ್ ವ ಬೋನಸ್ ವಗೈರೆ ಐವೇಜುಗಳಲ್ಲಿ ಸದರಿ ಮೃತ ಮಾರ್ಟಿನ ಫೆರ್ನಾಂಡಿಸರು ಸದರಿ ಇನ್ಸ್ಯೂರಿನ ಮೇಲೆ ಪಡೆದ ಲೋನಿನ ಐವೇಜು ಹೋಗುತ್ತಾ ಮಿಕ್ಕ ಐವೇಜುಗಳ ವಸೂಲಿ ಕುರಿತು 1ನೇ ಅರ್ಜಿದಾರಳಿಗೆ ಸಕ್ಸೆಶನ್ ಸರ್ಟಿಫಿಕೇಟು ಕೊಡಿಸಬೇಕಾಗಿ ಅರ್ಜಿದಾರರು ಮೇಲ್ಕಂಡ ಕೋರ್ಟಿನಲ್ಲಿ ದಾಖಲು ಮಾಡಿದ ಸದರಿ ಅರ್ಜಿಯು ತಾ. 24-2-1937ರಲ್ಲು ಇಡೋಣಾಗಿಯದೆ. ಆ ಬಗ್ಗೆ ಆಕ್ಷೇಪ ಹೇಳುವವರು ಸದರಿ ತನಕಿ ದಿವಸ ಬೆಳಿಗ್ಗೆ 10ಘಂಟೆಗೆ ಸದರಿ ಕೋರ್ಟಿನಲ್ಲಿ ಆಕ್ಷೇಪ ಜಾಹೀರುಮಾಡಿಕೊಳ್ಳತಕ್ಕದ್ದು.

ತಾರೀಕು 12-1-1937 }
ಉಡುಪಿ, ದ. ಕ }

Gratian C. Rego,
ಅರ್ಜಿದಾರರ ಕಡೆ ವಕೀಲ.

ಸುವರ್ಣ ತಾಯಿತಿ! ಧರ್ಮಾರ್ಥ ಭಂಗಾರದ ತಾಯಿತಿ!

ಹಿಮಾಲಯ ಪರ್ವತದಲ್ಲಿ ವರ್ಷಗಟ್ಟಲೆ ತಪಸ್ಸು ಮಾಡಿ ಸಿದ್ಧಿಯನ್ನು ಪಡೆದ ಮಹಾ ಯೋಗೀಶ್ವರರಿಂದ ಕಂಡು ಹಿಡಿಯಲ್ಪಟ್ಟದ್ದು.

ಈ ತಾಯಿತಿಯನ್ನು

ಧರಿಸಿದ ಮಾತ್ರದಿಂದ ಸಕಲ ಇಷ್ಟಾರ್ಥಗಳೂ ನೆರವೇರುವುವು.

ಪರೀಕ್ಷಿಸಲಪೇಕ್ಷಿಸುವವರು

"ಯೋಗೀಶ್ವರರ ಶಕ್ತಿಸಾಹಸ"

ಎಂಬ ಪುಸ್ತಕವನ್ನು ಧರ್ಮಾರ್ಥವಾಗಿ ಪಡೆಯಬಹುದು.

ಪತ್ತೆ:— ಪಂಡಿತ್ ಎ. ವಿ. ಆರಮುಮ್
ಚಿಕಾಕೋಲ್

ಮಂಗಳೂರು

(ನಮ್ಮ ಸ್ವಂತಬಾತ್ಮಿದಾರರಿಂದ)

ತಾ. ೨೨-೨-೩೭.

ಕ್ರಿಸ್ತ ಪ್ರತಿನಿಧಿಗಳ ಚುನಾವಣೆ

ಕಳೆದ ತಾ. ೧೭ರಲ್ಲಿ ಮದ್ರಾಸ್ ಅಸೆಂಬ್ಲಿಗೆ ಕ್ರಿಸ್ತ ಪ್ರತಿನಿಧಿಗಳನ್ನು ಚುನಾಯಿಸಬೇಕಾದ ದಿನವಾಗಿತ್ತು. ಅಂದಿನ ದಿವಸ ಪ್ರಾತಃಕಾಲ ೪ ಘಂಟೆಯಿಂದಲೂ ಮೋಟರ್ ಬಂಡಿಗಳು ಓಡಾಡುತ್ತಿದ್ದವು ಹಿಂದೂ ಮತ್ತು ಕ್ರಿಸ್ತ ಸ್ವಯಂ ಸೇವಕರು ಪೋಲಿಂಗ್ ಸ್ಟೇಶನುಗಳ ಸಮೀಪ ತುಂಬಾ ಸಂಖ್ಯೆಯಲ್ಲಿ ನಿಂತಿದ್ದು ಮತದಾರರ ಪ್ರೇಮವನ್ನು ಕಾಂಗ್ರೆಸ್ ಪಕ್ಷಕ್ಕೆ ಸೆಳೆದು ಕೊಳ್ಳುತ್ತಿದ್ದರು.

ಬೆಳಿಗ್ಗೆ ೭ಘಂಟೆಯಿಂದ ಬಹುಜೋರಾಗಿ ಓಟುಗಳು ಕೊಡಲ್ಪಟ್ಟುವು. ಕೆಂಪು ಧ್ವಜ, ಹಳದಿ ಧ್ವಜಗಳಿದ್ದ ಮೋಟಾರುಗಳು ಮತದಾರರನ್ನು ಕೂರಿಸಿಕೊಂಡು ಅತ್ತಿತ್ತ ಓಡುತ್ತಿದ್ದುವು ಎಲ್ಲಾ ಕಡೆಗಳಿಂದಲೂ ಕಾಂಗ್ರೆಸಿಗೆ ಬೆಂಬಲವು ಹೆಚ್ಚಾಗಿದೆಯೆಂಬ ವಾರ್ತೆಯು ಬರಲಾರಂಭಿಸಿತು. ಬಿಜೈ ಎಂಬಲ್ಲಿ ಕಾಂಗ್ರೆಸ್ ಉಮೇದ್ವಾರರಿಗಾಗಿ ಇಟ್ಟಿದ್ದ ಓಟಿನ ಪೆಟ್ಟಿಗೆ ತುಂಬಿ ಬೇರೆ ಪೆಟ್ಟಿಗೆ ಇಡಬೇಕಾಯಿತು ಮಿಲಾಗ್ರಿಸ್ ಶಾಲೆಯಲ್ಲಿ ಬೆಳಿಗ್ಗೆ ಜಸ್ಟಿಸ್ ಕಡೆಯವರಿಗೆ ಸ್ವಲ್ಪ ಹೆಚ್ಚು ಮತಗಳು ಸಿಕ್ಕಿದುವು ಎಂದು ಊಹಿಸಲಾಗಿದೆ ಸುಮಾರು ೯ ಘಂಟೆಯಿಂದ ಪರಿಸ್ಥಿತಿಯು ಬದಲಾವಣೆ ಹೊಂದಿತು. ಅನಂತರದ ಓಟುಗಳು ಹೆಚ್ಚಾಗಿ ಕಾಂಗ್ರೆಸಿನ ಕಡೆಯವರಿಗೆ ದೊರೆತವು. ಜನರಲ್ಲಿ ಅದರಲ್ಲಿಯೂ ಕ್ರಿಸ್ತ ಸಮಾಜದಲ್ಲಿ ಇಷ್ಟು ಉತ್ಸಾಹವು ಉಂಟಾದದು ಶುಭಚಿಹ್ನೆಯೇ ಸರಿ.

ಎಯಿಡೆಡ್ ಶಾಲಾ ಉಪಾಧ್ಯಾಯರ ಮೊದಲನೆಯ ಪರಿಷತ್ತು

ಎಲ್ಲಾ ಇಲಾಖೆಗಳವರೂ ತಮ್ಮ ತಮ್ಮ ಹಿತಸಾಧನೆಗಳನ್ನು ಕುರಿತು ಆಲೋಚಿಸುತ್ತಿರುವ ಈ ಕಾಲದಲ್ಲಿ ಎಯಿಡೆಡ್ ಶಾಲಾ ಉಪಾಧ್ಯಾಯರುಗಳೂ ಕೂಡಾ ತಮ್ಮ ಏಳಿಗೆಯ ವಿಚಾರಮಾಡುತ್ತಿರುವುದು ನ್ಯಾಯವಾದುದು ಎಯಿಡೆಡ್ ಪ್ರಾಥಮಿಕ ಶಾಲಾ ಉಪಾಧ್ಯಾಯರ ಪರಿಷತ್ತೊಂದು ಬರುವ ತಾ. ೨೮ರಲ್ಲಿ ಸ್ಥಳೀಯ ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದಲ್ಲಿ ಸೇರಲಿರುವುದು ಎಯಿಡೆಡ್ ಶಾಲಾ ಉಪಾಧ್ಯಾಯರುಗಳ ಸರ್ವಿಸಿನ ಸ್ಥಿತಿ, ಪ್ರೊವಿಡೆಂಟ್ ಫಂಡುಗಳಿಗೆ ಸೇರಲಿರುವ ಅನಾನುಕೂಲತೆಗಳು, ನಿವೃತ್ತ ಉಪಾಧ್ಯಾಯರುಗಳ ಅವಸ್ಥೆ ಮತ್ತು ಬೋರ್ಡಿನವರು ಕೊಡುವ ಸ್ಕೇಲಿಗೆ ಸರಿಯಾಗಿ ತಲಬನ್ನೇರಿಸುವ ವಿಷಯವೇ ಮೊದಲಾದ ಸಂಗತಿಗಳು ಪ್ರಧಾನವಾಗಿ ಪರ್ಯಾಲೋಚಿಸಲ್ಪಡುವುವು

ಕಾಂಗ್ರೆಸ್ ಸಭೆ

ಕಳೆದ ತಾ. ೧೮ನೇ ಗುರುವಾರ ಶ್ರೀಗಳಾದ ಬಿ. ನಾರಾಯಣ ರೈಗಳೂ ಆರ್. ಆರ್. ತಲಚೇರಿಕರರೂ ಉಳ್ಳಾಲಕ್ಕೆ ಹೋಗಿ ಅಲ್ಲಿ ಸಭೆ ಜರಗಿಸಿ ಕಾಂಗ್ರೆಸ್ ಪಕ್ಷದವರಿಗೆ ಮತದಾನ ಮಾಡುವ ಆವಶ್ಯಕತೆಯನ್ನು ವಿವರಿಸಿ ಭಾಷಣಮಾಡಿದರು

ಶ್ರೀ ಸ್ವಾಮಿ ಈಶ್ವರಾನಂದರ ಪುಣ್ಯದಿನ

ಈಶ್ವರಾನಂದ ಸ್ವಾಮಿ ಸ್ಮಾರಕ ಸಂಘದವರು ಕಳೆದ ತಾ. 18ನೇ ಗುರುವಾರ ಉಳ್ಳಾಲ ರಘುನಾಥಯ್ಯನವರ ಸ್ಮಾರಕ ಮಂದಿರದಲ್ಲಿ ದಿವಂಗತ ಶ್ರೀ. ಸ್ವಾಮಿ ಈಶ್ವರಾನಂದರ ಒಂಭತ್ತನೇ ವಾರ್ಷಿಕ ನಿಧನೋತ್ಸವವನ್ನು ಯಶಸ್ವಿಯಾಗಿ ಜರಗಿಸಿದರು ಭಜನೆ ನಗರ ಸಂಕೀರ್ತನೆಗಳು ಕ್ರಮವಾಗಿ ಆಚರಿಸಲ್ಪಟ್ಟ ತರುವಾಯ ಸಾಯಂಕಾಲ ಸಾರ್ವಜನಿಕ ಸಭೆಯು ನಿವೃತ್ತ ಡಿಪ್ಯುಟಿ ಕಲೆಕ್ಟರಾದ ಶ್ರೀ. ಮಂಜಪ್ಪನವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ನರ್ಸಪ್ಪ, ಲಕ್ಷ್ಮಣ ಮತ್ತು ಇನ್ನಿತರ ಮಹನೀಯರುಗಳು ದಿವಂಗತರ ಆದರ್ಶಜೀವನ, ಅವರಿಗೆ ದೀನರಲ್ಲಿದ್ದ ಪ್ರೀತಿ, ಇವೇ ಮೊದಲಾದ ಸದ್ಗುಣಗಳನ್ನು ಎತ್ತಿ ಮಾತಾಡಿದರು ಅಧ್ಯಕ್ಷರು ತಮ್ಮ ಭಾಷಣದಲ್ಲಿ ಶ್ರೀ. ಸ್ವಾಮಿಗಳು ಪತಿತರನ್ನು ಉದ್ಧಾರಮಾಡಿದವರಲ್ಲಿ ಅಗ್ರಗಣ್ಯರೆಂದೂ, ಅವರ ಸಾಹಸದಿಂದಾಗಿ ಹರಿಜನರಿಗಿಂದು ಪೂಜ್ಯಸ್ಥಾನ ದೊರಕಿರುವುದೆಂದೂ, ಶ್ರೀ. ಸ್ವಾಮಿಗಳು ಹರಿಜನರಿಗಾಗಿ ಕೈಕೊಂಡ ಸಾಹಸದ ಕಾರ್ಯಗಳನ್ನು ಇತರರ ಸಹಾಯಕ್ಕಾಗಿ ಕಾಯದೆ ಹರಿಜನರೇ ಮುಂದರಿಸಿ ತಮ್ಮ ಉದ್ಧಾರಕ್ಕಾಗಿ ತಾವೇ ಯತ್ನಿಸಬೇಕೆಂದೂ ಹಿತೋಕ್ತಿಗಳನ್ನಾಡಿದರು. ಧನ್ಯವಾದಾರ್ಪಣೆಯೊಂದಿಗೆ ಸಭಾಂತ್ಯವಾಯಿತು.

ಉತ್ಸವದ ಪರಿಸಮಾಪ್ತಿ

ಸ್ಥಳೀಯ ಶ್ರೀ ವೆಂಕಟರಮಣ ದೇವಸ್ಥಾನದಲ್ಲಿ ವರ್ಷಂಪ್ರತಿ ಜರಗುವ ಉತ್ಸವ-ರಥೋತ್ಸವಾದಿಗಳು ಬಹಳ ವಿಜೃಂಭಣೆಯಿಂದ ನೆರವೇರಿದುವು. ಶ್ರೀ ಕಾಶಿಮಠಾಧೀಶ ಶ್ರೀ ಶ್ರೀ. ಸುಕೃತೀಂದ್ರ ತೀರ್ಥ ಶ್ರೀಪಾದಂಗಳವರು ಈ ವರ್ಷದಲ್ಲಿ ಭಾಗವಹಿಸಿದ್ದ ಕಾರಣ ಉತ್ಸವಕ್ಕೆ ವಿಶೇಷ ಕಳೆಯೇರಿತು.

ಉತ್ಸವಕಾಲದಲ್ಲಿಯೂ ಕಾಂಗ್ರೆಸ್ ಪ್ರಚಾರ

ಕಾಂಗ್ರೆಸ್ ಚಳವಳದ ದೆಸೆಯಿಂದಾಗಿ ಜನರಲ್ಲಿ ಕಾಂಗ್ರೆಸಿನ ತತ್ವವು ಹರಡಿರುವುದು ಶ್ರೀ ವೆಂಕಟರಮಣ ದೇವಸ್ಥಾನದ ಉತ್ಸವದಲ್ಲಿಯೂ ಕಂಡು ಬಂತು ಓಕುಳಿ ಉತ್ಸವದ ದಿನ ಓಕುಳಿ (ಕೆಂಪು) ನೀರಿನ ಬದಲಾಗಿ ಅರಸಿನ ನೀರನ್ನೇ (ಕಾಂಗ್ರೆಸಿನ ಮತದ ಪೆಟ್ಟಿಗೆಯ ಬಣ್ಣ) ಹೆಚ್ಚಾಗಿ ಭಕ್ತಾದಿಗಳು ಉಪಯೋಗಿಸಿ ರಾಷ್ಟ್ರಪಕ್ಷದ ಪ್ರಚಾರಮಾಡಿದರು. ಇದೊಂದು ಅಪೂರ್ವ ಸಂಗತಿಯೇ ಸರಿ.

ಮಂಗಳೂರು ನಗರ ಸಭೆ

ಮಂಗಳೂರು ನಗರ ಸಭೆಯು ನಾಡದು ಶನಿವಾರ ತಾ. 27ಕ್ಕೆ ಜರಗುವುದು. ಹೊಸ ವರ್ಷದ ಬಜೆಟ್ ಸಭೆಯ ಮುಂದೆ ಬರಲಿರುವುದು.

ಮಂಗಳೂರು ಪುತ್ತೂರು ಡಿವಿಜನುಗಳಲ್ಲಿ ಚುನಾವಣೆ

ಮಂಗಳೂರು ಪುತ್ತೂರುಗಳಲ್ಲಿ ಚುನಾವಣೆಯು ನಡೆಯಿತು. ಎರಡು ಕಡೆಗಳಲ್ಲಿಯೂ ಕಾಂಗ್ರೆಸಿನವರೇ ಬಹುಮತ ಪಡೆದು ಆರಿಸಿ ಬರುವರೆಂದು ಓಟುಗಳನ್ನು ಹಾಕುವ ಸ್ಥಳಗಳನ್ನು ಸಂದರ್ಶಿಸಿದವರು ಹೇಳುತ್ತಾರೆ.

THE BOMBAY LIFE ASSURANCE Co., LTD.

ESTD 1908

Church Gate Street, Fort - - BOMBAY.

SPECIAL FEATURES.

1. Rebate on yearly payment of policies.
2. Rebate for larger assurances.
3. Accident Risk covered on small extra premiums
4. Attractive Bonuses.

It pays you to represent this Company.
Wanted Agents in unrepresented parts.

Apply to:—

KOCHIKAR BROTHERS,

Madras Branch Secretaries.

BRANCHES AT:

P. B. 337 Mount Road, Madras.	Visveswarapuram Circle, Bangalore City	Soumyalayam Puthiyara, Calicut.
Car Street, Mangalore	Udipi, S. India	Charni Road, Bombay No. 4

EVIDENCE OF SECURITY & STABILITY

FIGURES THAT SPEAK FOR THEMSELVES

TOTAL ASSETS Rs. 80,66,600

Summary of 1935 Accounts

Total Assets Over ..	Rs. 80,00,000
Life Funds Over . ..	Rs. 68,00,000
Premium Income Over ..	Rs. 22,54,000
Interest Income	Rs 3,16,000
Claims Paid	Rs 5,75,000

Total Claims paid Over Rs. 38,50,000
Total Business in Force Over Rs 4,12,51,200

TOTAL BUSINESS IN FORCE Rs. 4,42,51,200

ಚಂದಾದಾರರಲ್ಲಿ

ಚಂದಾಹಣ ಬಾಕಿ ಇರುವ ನಮ್ಮ ಚಂದಾದಾರರು ಆದಷ್ಟು ಬೇಗನೇ ತಮ್ಮ ಹಣವನ್ನು ಮಣಿಯಾರ್ಡರ್ ಮೂಲಕ ದಯವಿಟ್ಟು ಕಳುಹಿಸಿಕೊಡ ಬೇಕಾಗಿ ಅಪೇಕ್ಷಿಸುತ್ತೇವೆ. ವಿ. ಪಿ. ಮಾಡುವದಾದರೆ ಐದಾಣೆ ಹೆಚ್ಚಿಗೆ ಬೀಳುವದು.

ನಮ್ಮೊಡನೆ ಪತ್ರವ್ಯವಹಾರ ನಡೆಸುವವರು ತಮ್ಮ ಚಂದಾ ನಂಬ್ರವನ್ನು ಸೂಚಿಸಿ ಬರೆಯಬೇಕಾಗಿ ವಿನಂತಿ. ಮೆನೆಜರ್, 'ನವಯುಗ'

ಉಡುಪಿ, ತಾ. ೨೫-೨-'೩೭ ಗುರುವಾರ

ಅ ಭಿ ನಂ ದ ನೆ

ದೇಶದ ಹಾಗೂ ಮದ್ರಾಸ್ ಪ್ರಾಂತದ ಇತರ ಕಡೆಗಳಂತೆ ದಕ್ಷಿಣ ಕನ್ನಡಿಗರೂ ಈ ಸಲದ ಚುನಾವಣೆಯಲ್ಲಿ ಅತ್ಯುತ್ಸಾಹದಿಂದ ಕಾಂಗ್ರೆಸಿನ ಬೆಂಬಲಕ್ಕೆ ನಿಂತು ಅತ್ಯಂತ ಪ್ರಶಂಸನೀಯ ರೀತಿಯಲ್ಲಿ ಕಾಂಗ್ರೆಸಿನ ಗೌರವವನ್ನೆತ್ತಿಹಿಡಿದುದಕ್ಕಾಗಿ ಅವರನ್ನೆಷ್ಟು ಅಭಿನಂದಿಸಿದರೂ ಸಾಲದು. ಚುನಾವಣೆಯ ಪ್ರಚಾರ ಕಾರ್ಯದಿಂದಾಗಿ ಕಾಂಗ್ರೆಸಿನ ತತ್ವವು ಹಳ್ಳಿ ಮೂಲೆಗೂ ಹಬ್ಬಿರುವುದು. ಆಬಾಲವೃದ್ಧರ ನಾಲಿಗೆಯಲ್ಲಿಯೂ ಕಾಂಗ್ರೆಸಿನ ಶುಭನಾಮವು ನಲಿಯುವಂತಾಗಿರುವುದು. ರಾಷ್ಟ್ರಾಭಿಮಾನದ ಆದೊಂದು ನೆರೆಯೇ ಇಡೀ ಜಿಲ್ಲೆಯಲ್ಲೆಲ್ಲಾ ಹಬ್ಬಿ ಕಾಂಗ್ರೆಸಿನ ವಿರೋಧಿಗಳ ನಾನಾ ಸಂಚು ವಂಚನೆಗಳ ಉಸುಬಿನ ಮೇಲೇರಿಸಲ್ಪಟ್ಟ ಕಟ್ಟಡಗಳನ್ನೆಲ್ಲಾ ಸಂಪೂರ್ಣವಾಗಿ ಬಳೆದುಕೊಂಡು ಹೋಗಿರುವುದು. ಅವರು ಈ ನೆರೆಯಿಂದ ವಿಸ್ಮಯಗೊಂಡು ಬೆಟ್ಟು ಕಚ್ಚಿ ಸುಮ್ಮನೆ ಕುಳಿತುಕೊಳ್ಳುವಂತಾಗಿರುವುದು.

ಚುನಾವಣೆಯ ದಿನದ ಕಾಂಗ್ರೆಸ್‌ಕೆಲಸಗಾರರ ಮತ್ತು ಜನತೆಯ ಉತ್ಸಾಹವನ್ನು ನೋಡಿದರೆ ಯಾರಾದರೂ ವಿಸ್ಮಯಗೊಳ್ಳಲೇಬೇಕು. ಅದೊಂದು ಸಾಮುದಾಯಿಕ ಉತ್ಸವವೇ ಆಗಿದ್ದಿತು. ಕಾಂಗ್ರೆಸ್ ಕೆಲಸಗಾರರು ಒಬ್ಬರೊಡನೊಬ್ಬರು ಮೇಲಾಟದಿಂದ ಕಾರ್ಯನಿರತರಾಗಿದ್ದರು. ಅವರ ಉತ್ಸಾಹವನ್ನು ಪರಿಮಿತಿಯಲ್ಲಿರಿಸುವುದೇ ಅಸಾಧ್ಯವಾಗಿದ್ದಿತು ಕಾಂಗ್ರೆಸ್ ಪಕ್ಷದ ಜನತೆಯನ್ನು ಕಂಡು ಅದೊಂದು ದೊಡ್ಡ ಸಮುದ್ರವೆಂದು ಜಿಲ್ಲೆಯ ಜಸ್ಟಿಸ್‌ಪಕ್ಷದ ಪ್ರಮುಖರೊಬ್ಬರು ಹೇಳಿದ ಮಾತು ಅಕ್ಷರಶಃ ನಿಜವಾದುದಾಗಿದೆ. ಜನತೆಯ ಹುರುಪನ್ನು ಕಂಡು, ಇಷ್ಟರ ವರೆಗೆ ಕಾಂಗ್ರೆಸಿನ ಧ್ಯೇಯ, ತತ್ವ ಮತ್ತು ಕಾರ್ಯಕ್ರಮಗಳ ಕುರಿತು ಸಂದೇಹಗೊಂಡು ದಂಡೆಯಲ್ಲಿದ್ದವರು ಅಥವಾ ತಮಗಾವ ಗೋಷ್ಟಿಯೂ ಬೇಡವೆಂದು ತಟಸ್ಥರಾಗಿದ್ದವರು ಕೂಡಾ ಆ ಮಹಾಪ್ರವಾಹದ ಸೆಳತಕ್ಕೆಸಿಕ್ಕಿ ಕಾಲ್ಬಿಟ್ಟು ತೇಲಿಹೋಗಿರುವರು.

ಜನಸೇವೆಯ ಉದಾತ್ತ ಉದ್ದೇಶದಿಂದ ನಿಸ್ವಾರ್ಥ ಮನೋವೃತ್ತಿಯಿಂದ, ತ್ಯಾಗಬುದ್ಧಿಯಿಂದ ಜನತೆಯ ಹೃದಯವನ್ನೆಷ್ಟು ಸುಲಭವಾಗಿ ವಶ ಮಾಡಿಕೊಂಡು ಅವರ ಸರ್ವತೋಮುಖವಾದ ಬೆಂಬಲವನ್ನು ಪಡೆಯಬಹುದೆಂಬುದಕ್ಕೆ ಈ ಚುನಾವಣೆಯೇ ಪ್ರತ್ಯಕ್ಷ ನಿದರ್ಶನವಾಗಿದೆ. ಕಾಂಗ್ರೆಸು ಕನಸಿನಲ್ಲಿಯೂ ನೆನಸದ ದಿಕ್ಕುಗಳಿಂದ ಅದಕ್ಕಿಂದು ಸಹಾಯವು ದೊರೆತಿರುವುದು. ಹಳ್ಳಿ ಮೂಲೆಗಳಲ್ಲಿ ಹೇಳದೆ ಕೇಳದೆ ಕಾಂಗ್ರೆಸಿಗಾಗಿ ಕೆಲಸಮಾಡಿರುವ ಅಜ್ಞಾತ ವ್ಯಕ್ತಿಗಳು ಅನೇಕ ಮಂದಿ ಇರುವರು. ಕಾಂಗ್ರೆಸಿನ ಪ್ರತಿಪಕ್ಷದ ದೊಡ್ಡ ದೊಡ್ಡ ಮಂಡಾಳಿಸವರ ಹಂಗು ದಾಕ್ಷಿಣ್ಯಗಳಿಗೆ ಕಟ್ಟುಬಿದ್ದು ನಿರ್ವಾಹವಿಲ್ಲದೆ ಊಟ ಕೌರವರಲ್ಲಿ ಪಕ್ಷ ಪಾಂಡವರಲ್ಲಿ ಎಂಬಂತೆ ಮಾಡಿದವರು ಎಷ್ಟೋ ಮಂದಿ. ಎಂತಹ ಕಷ್ಟ ಪರಿಸ್ಥಿತಿಯಲ್ಲಿಯೂ ಕಾಂಗ್ರೆಸನ್ನು ಬಿಟ್ಟು ಹಾಕದೆ ದಕ್ಷಿಣ ಕನ್ನಡದಲ್ಲಿ ಕಾಂಗ್ರೆಸು ಅಳಿಯದುಳಿದಿರುವುದು ಮಾತ್ರವಲ್ಲದೆ ವರ್ಚಸ್ಸು ಮತ್ತಷ್ಟು ಬೆಳೆದಿದೆ. ರಾಷ್ಟ್ರೀಯ ಧ್ವಜವು ಯಥಾಪ್ರಕಾರ ಆರೋಹಿತವಾಗಿ ಅಪ್ರತಿಹತವಾಗಿ ಹಾರಾಡುತ್ತಿದೆ ಎಂಬುದನ್ನು ಕಾಂಗ್ರೆಸಿನ ವೈರಿಗಳೂ ಮನಗಾಣುವಂತೆ ಮಾಡಿದುದಕ್ಕಾಗಿ ಜಿಲ್ಲೆಯ ಮಹಾಜನರೂ, ಕಾಂಗ್ರೆಸ್ ಮುಖಂಡರೂ ಅಭಿನಂದನೀಯರು.

ಜಿಲ್ಲೆಯಲ್ಲಿ ಕಾಂಗ್ರೆಸ್ ಪಕ್ಷದವರು ಪಡೆದಿರುವ ಪ್ರಚಂಡ ವಿಜಯವು ವೈಯಕ್ತಿಕ ಅಥವಾ ಯಾವುದೊಂದು ಸಾಮಾಜಿಕ ವಿಜಯವಲ್ಲ, ಕಾಂಗ್ರೆಸ್ ವಿಜಯ. ಅದರ ಉದ್ದೇಶ ಮತ್ತು ತತ್ವದ ವಿಜಯ. ದಕ್ಷಿಣ ಕನ್ನಡಿಗರ ರಾಷ್ಟ್ರಾಭಿಮಾನದ ವಿಜಯ ಮತ್ತು ದೇಶದ ಏಕಮಾತ್ರ ರಾಷ್ಟ್ರೀಯ ಸಂಸ್ಥೆಯಾದ ಕಾಂಗ್ರೆಸಿನ ಮೇಲಿನ ಜನತೆಯ ವಿಶ್ವಾಸದ ಸ್ಪಷ್ಟೀಕರಣ ಮಾತ್ರವಲ್ಲದೆ ಯಾವನೊಬ್ಬ ವ್ಯಕ್ತಿ ಅಥವಾ ಸಮಾಜದ ಅಪಜಯವಾಗಲಿ ಅಗೌರವವಾಗಲಿ ಅಲ್ಲ. ಆದುದರಿಂದ ಅದೇನೋ ಅವಿವೇಕದಿಂದ, ಅಚಾತುರ್ಯದಿಂದ ಕಾಂಗ್ರೆಸನ್ನು ವಿರೋಧಿಸಲು ಸೊಂಟಕಟ್ಟಿ ಭಗ್ನ ಮನೋರಥರಾದವರೇನೂ ನಾಚಿ ತಲೆ ಬಾಗಬೇಕಾಗಿಲ್ಲ. ಕಾಂಗ್ರೆಸು ಸೋತಿದ್ದರೆ ಮಾತ್ರ ನಾಚಿಕೆಗೆ ಆಸ್ಪದವುಂಟಾಗುತ್ತಿತ್ತು. ಇಡೀ ಜಿಲ್ಲೆಯ ಹೆಸರಿಗೆ ಕಳಂಕವುಂಟಾಗುತ್ತಿತ್ತು ಕಾಂಗ್ರೆಸ್ಸಿನ ವರ್ಚಸ್ಸಿಗೆ ಕುಂದುಂಟಾಗುತ್ತಿತ್ತು. ಆದುದರಿಂದ ಈ ಚುನಾವಣೆಯ ಪರಿಣಾಮವಾಗಿ ಎದ್ದಿರುವ ನಾನಾ ರೀತಿಯ ದ್ವೇಷಾಸೂಯೆಗಳನ್ನು ಜನರು, ವಿಶೇಷವಾಗಿ ಕಾಂಗ್ರೆಸನ್ನು ವಿರೋಧಿಸಿದವರು ಮೂಲೆಗೊತ್ತಿ ವ್ಯಾಪಕದೃಷ್ಟಿಯುಳ್ಳವರಾಗಿ, ಮುಂದೆ ಜಿಲ್ಲೆಯಲ್ಲಿ ಕಾಂಗ್ರೆಸ್ ಶಕ್ತಿ–ತೇಜಸ್ಸು ಮತ್ತಷ್ಟು ಹೆಚ್ಚಿ ದಕ್ಷಿಣ ಕನ್ನಡವು ದೇಶದಲ್ಲೆಲ್ಲಾ ಹೆಸರು ಪಡೆಯುವಂತೆ ನೆರವಾಗಬೇಕೆಂದೇ ನಮ್ಮ ಅಂತಃಕರಣ ಪೂರ್ವಕವಾದ ವಿನಂತಿ. ಕೊಂಗ್ರೆಸಿನ ಬೆಂಬಲಕ್ಕೆ ನಿಂತು ಈ ರೀತಿ ಕೊಂಗ್ರೆಸು ಧ್ವಜವನ್ನು ಹಾರಾಡಿಸಿದ ಸಾಮೂಹಿಕ ಶಕ್ತಿಯು ಮುಂದಕ್ಕೂ ಚಾಲಾಗುವಂತಾಗಿ, ಭಾರತದ ಪ್ರಮುಖ್ಯ ಸಮಸ್ಯೆಯನ್ನು ಬಿಡಿಸುವ ಕೆಲಸಕ್ಕದು ಬೀಳುವದೆಂದೇ ನಮ್ಮ ಹಾರೈಕೆ.

ಕೊಂಗ್ರೆಸ್ ವಿಜಯ!

ಹರಿಜನರ ಸೀಟೂ ಕೊಂಗ್ರೆಸಿಗೆ ಸಿಕ್ಕಿತು!

ಕುಂದಾಪುರ ಡಿವಿಜನಿನಲ್ಲಿ ಕೊಂಗ್ರೆಸಿನ ಸಂಪೂರ್ಣ ವಿಜಯ

ಕ್ರೈಸ್ತರ ಸ್ಥಾನ ಮತ್ತು ಕುಂದಾಪುರ ಡಿವಿಜನಿನ ಜನರಲ್ ಸೀಟುಗಳಲ್ಲಿ ಕೊಂಗ್ರೆಸಿಗೆ ಪ್ರಚಂಡ ಬಹುಮತ!

ಕ್ರೈಸ್ತರ ಸ್ಥಾನವನ್ನು ೨,೭೭೭ ಬಹುಮತದೊಡನೆ ಕೊಂಗ್ರೆಸು ಗೆದ್ದಿತು!

ಕುಂದಾಪುರ ಡಿವಿಜನಿನ ಸವರ್ಣರ ಸ್ಥಾನದ ಚುನಾವಣೆಯಲ್ಲಿ ಕಾಂಗ್ರೆಸು ಉಮೇದ್ವಾರಿಗೆ ೨೩,೭೦೪ ಮತಗಳು ಹೆಚ್ಚಿಗೆ!

ಕ್ರೈಸ್ತರ ಸ್ಥಾನ

ಕ್ರೈಸ್ತ ಸೀಟಿನ ಮತಗಳ ಗಣನೆಯು ಇದೇ ತಾ. ೨೩ನೇ ಅಪರಾಹ್ನ ಮತ್ತು ೨೪ನೇ ಪೂರ್ವಾಹ್ನ ಮಂಗಳೂರಿನಲ್ಲಿ ಜಿಲ್ಲಾ ಕಲೆಕ್ಟರರ ಆಫೀಸಿನಲ್ಲಿ ಕಲೆಕ್ಟರರ ಸಮಕ್ಷಮ ನಡೆಯಿತು. ಫಲಿತಾಂಶವು ಹೀಗಿದೆ. ಪ್ರೊ| ಸಿ. ಜೆ. ವಾರ್ಕಿ (ಕೊಂಗ್ರೆಸ್) ೧೧,೧೩೧ ಮತಗಳು. ವಿ. ಶ್ರೇಷ್ಠ (ಜಸ್ಟಿಸು) ೮,೩೫೪ ಮತಗಳು ಹೀಗೆ ಕಾಂಗ್ರೆಸು ಉಮೇದ್ವಾರಿಗೆ ೨೭೭೭ ಮತಗಳು ಹೆಚ್ಚಿಗೆ ಬಿದ್ದಿವೆ.

ಕುಂದಾಪುರ ಡಿವಿಜನಿನ ಎಸೆಂಬ್ಲಿ ಸ್ಥಾನ

ಶ್ರೀ|| ಎ. ಬಿ. ಶೆಟ್ಟರಿಗೆ ೨೩,೭೦೪ ವೋಟುಗಳ ಆಶ್ಚರ್ಯಕರ ಬಹುಮತ!

ಕುಂದಾಪುರ ಡಿವಿಜನಿನ ಎಸೆಂಬ್ಲಿ ಸ್ಥಾನಗಳ ಮತಗಣನೆಯು ಇದೇ ತಾ. 24ರಲ್ಲಿ ಕುಂದಾಪುರದಲ್ಲಿ ಕುಂದಾಪುರ ಸಬ್ ಕಲೆಕ್ಟರರವರ ಸಮಕ್ಷಮ ನಡೆಯಿತು.

ಫಲಿತಾಂಶವು ಹೀಗಿದೆ—

ಶ್ರೀ ಎ. ಬಿ. ಶೆಟ್ಟಿ (ಕೊಂಗ್ರೆಸು) ೩೯,೩೦೪ ಮತಗಳು-

ದಿವಾನ್ ಬಹದ್ದೂರು ಮಹಾಬಲ ಹೆಗ್ಡೆ (ಜಸ್ಟಿಸು) ೧೫,೬೦೦ ಮತಗಳು.

ಈ ರೀತಿ ಕೊಂಗ್ರೆಸಿಗೆ ೨೩,೭೦೪ ವೋಟುಗಳ ಪ್ರಚಂಡ ಬಹುಮತವು ದೊರೆತಿರುವದು.

ಕೌನ್ಸಿಲು ಚುನಾವಣೆಯ ಫಲಿತಾಂಶ

ಶ್ರೀ. ಧರ್ಮಸ್ಥಳ ಮಂಜಯ ಹೆಗ್ಡೆಯರಿಗೆ ೨೨೨ ವೋಟುಗಳ ಬಹುಮತ

ಕೌನ್ಸಿಲಿನ ಮತಗಳ ಗಣನೆಯು ಇದೇ ತಾ. 23-2-'37ನೇ ಮಂಗಳವಾರ ಪೂರ್ವಾಹ್ನ ಜಿಲ್ಲಾ ಕಲೆಕ್ಟರರ ಸಮ್ಮುಖದಲ್ಲಿ ಕಲೆಕ್ಟರ್ ಆಫೀಸಿನಲ್ಲಿ ನಡೆಯಿತು. ಫಲಿತಾಂಶವಿದು—

ಶ್ರೀ ಧರ್ಮಸ್ಥಳ ಮಂಜಯ ಹೆಗ್ಡೆ, (ಸ್ವತಂತ್ರ) ೭೨೪ ಮತಗಳು.

ಶ್ರೀ. ಕೆ. ಸದಾಶಿವ ಅಡಿಗ, (ಸ್ವತಂತ್ರ) ೫೦೨ ಮತಗಳು.

ಶ್ರೀ. ಹೆಗ್ಡೆಯವರಿಗೆ ೨೨೨ ವೋಟುಗಳು ಹೆಚ್ಚಿಗೆ ಬಿದ್ದಿವೆ.

ಡಾ| ಯು. ರಾಮರಾಯರ ವಿಜಯ

ಮದ್ರಾಸು ನಗರದಿಂದ ಕೌನ್ಸಿಲು ಉಮೇದ್ವಾರಿಯಾಗಿ ಕೊಂಗ್ರೆಸ್ ಕಡೆಯಿಂದ ನಿಂತಿದ್ದ ದ. ಕನ್ನಡ ಮುಂದಾಳುಗಳಾದ ಡಾ| ಯು. ರಾಮರಾಯರೂ ಇನ್ನೊಬ್ಬ ಕೊಂಗ್ರೆಸು ಉಮೇದ್ವಾರಿಯೂ ಹೆಚ್ಚಿನ ಬಹುಮತ ಪಡೆದು ಆರಿಸಿಬಂದಿರುವರು. ಮದ್ರಾಸು ನಗರದಿಂದ ಕೌನ್ಸಿಲಿಗೆ ನಿಂತ ಜಸ್ಟೀಸು ಪಕ್ಷೀಯರಲ್ಲಿ ಒಬ್ಬರೂ ಆರಿಸಲ್ಪಡಲಿಲ್ಲ.

ಹರಿಜನ ಸ್ಥಾನದ ವಿಜಯ

ಶ್ರೀ. ಕೆ. ಈಶ್ವರನವರು ಗೆದ್ದರು

ಕುಂದಾಪುರ ಡಿವಿಜನಿನ ಹರಿಜನರ ಸ್ಥಾನದಲ್ಲಿ ಕೊಂಗ್ರೆಸು ಉಮೇದ್ವಾರರಾದ ಶ್ರೀ. ಕೆ. ಈಶ್ವರನವರು ಇನ್ನೂರು ಚಿಲ್ಲರೆ ಹೆಚ್ಚಿಗೆ ಮತಗಳನ್ನು ಪಡೆದು ಅವರ್ಣರಲ್ಲಿ ಮೊದಲನೆಯವರಾಗಿ ಆರಿಸಿಬಂದು ಎಸೆಂಬ್ಲಿಸ್ಥಾನವನ್ನು ಗೆದ್ದಿರುವರು

ಕುಂದಾಪುರ ಡಿವಿಜನಿಗೊಂದು ಶ್ರೇಯಸ್ಸು!

ದಕ್ಷಿಣ ಕನ್ನಡದಲ್ಲಿ ಕುಂದಾಪುರ ಡಿವಿಜನು ಜಸ್ಟೀಸ್ ಪಾರ್ಟಿಯವರ ಆಶ್ರಯಸ್ಥಳವೆಂಬ ಆರೋಪವು ಈ ತನಕವಿತ್ತು; ಅದನ್ನಿಂದು ಈ ಡಿವಿಜನು ಸಂಪೂರ್ಣವಾಗಿ ಝಾಡಿಸಿ ಬಿಟ್ಟಿರುವುದು! ಕೊಂಗ್ರೆಸಿನ ಕಡೆಯ ಮೂವರು ಉಮೇದ್ವಾರಿಗಳನ್ನೂ ಪ್ರಚಂಡ ಬಹುಮತದಿಂದ ಆರಿಸಿ, ಜಸ್ಟೀಸ್ ಪಾರ್ಟಿಯವರನ್ನು ಪೂರ್ಣವಾಗಿನಿರಾಕರಿಸಿರುವುದು. ಜಸ್ಟಿಸ್ ಪಾರ್ಟಿಯವರು ಇದು ತಮ್ಮದೆನ್ನುತ್ತಿದ್ದ ಕುಂದಾಪುರ ತಾಲೂಕು ಕೊಂಗ್ರೆಸನ್ನು ಸಮರ್ಥಿಸಿ ವಿಸ್ಮಯಾನಂದವನ್ನುಂಟು ಮಾಡಿರುವುದು. ಕಾರ್ಕಳ ತಾಲೂಕು ಸಂಪೂರ್ಣವಾಗಿ ಕೊಂಗ್ರೆಸನ್ನು ಸಮರ್ಥಿಸಿರುವದು. ಉಡುಪಿ ತಾಲೂಕಿನಲ್ಲಿ ಕೊಂಗ್ರೆಸಿಗೆ ಪ್ರಬಲ ಬಹುಮತವು ದೊರೆತಿರುವದು. ಮತದಾನ ಪದ್ಧತಿಯ ತಿಕ್ಕು ಜಯಶೀಲವಾಗಿ ಬಿಡಿಸಲ್ಪಟ್ಟು ಹರಿಜನ ಉಮೇದ್ವಾರರು ಆರಿಸಲ್ಪಟ್ಟಿರುವದು ಮಹದಾನಂದದ ಸಂಗತಿ.

ಹಿಂದು ದೇಶ

ಮಧ್ಯಪ್ರಾಂತದಲ್ಲಿ ಕಾಂಗ್ರೆಸಿನ ವಿಜಯ ಮಾಜಿ ಮಂತ್ರಿಗಳ ಪರಾಜಯ

ಮಧ್ಯಪ್ರಾಂತದಲ್ಲಿ ಇದೇ ತಾ. 20ರ ವರೆಗೆ 67 ಎಸೆಂಬ್ಲಿ ಸೀಟುಗಳ ಫಲಿತಾಂಶವು ತಿಳಿದು ಬಂದಿರುವುದು. ಇವುಗಳಲ್ಲಿ 51 ಸೀಟುಗಳನ್ನು ಕಾಂಗ್ರೆಸಿನವರು ಗೆದ್ದಿರುವರು. ರೈ ಬಹದೂರ್

ಕೊಡಗು

ಶ್ರೀ ರಾಮಕೃಷ್ಣ ಪರಮಹಂಸರ ಶತಮಾನೋತ್ಸವವು ಕಳೆದ ತಾ. ೧೩, ೧೪, ೧೫ರಲ್ಲಿ ಕೊಡಗಿನ ಪೊನ್ನಂಪೇಟೆ, ವಿರಾಜಪೇಟೆ, ಮಡಿಕೇರಿಗಳಲ್ಲಿ ವಿವಿಧ ಕಾರ್ಯಗಳಿಂದ ಆಚರಿಸಲ್ಪಟ್ಟಿತು. ಶ್ರೀ ಬೇಂದ್ರೆ ಮೊದಲಾದವರ ಭಾಷಣಗಳಿದ್ದವು.

ವಿದೇಶ

ಗ್ರಿಗಳನ್ನೊದಗಿಸಲು 350 ಅಂಗಡಿಗಳನ್ನು ಮಾತ್ರ ತೆರೆಯಲು ಬಿಡಲಾಗುವುದು.

ಅಡ್ಡಿಸ್ ಅಬಾಬದಲ್ಲಿ ಬೋಂಬೆಸೆತ ಮಾರ್ಶಲ್ ಗ್ರೇಜಿಯಾನಿಷಯವರಿಗೆ ಜಖಮ್

ಇದೇ ತಾ. ೨೦ರಲ್ಲು ಅಬಿಸೀನಿಯದ ವೈಸರಾಯರಾದ ಮಾರ್ಶಲ್ ಗ್ರೆಜಿಯಾನಿಯವರು, ಮುಸೀದಿ [illegible]

2000 ಮಂದಿ ಅಬಿಸೀನಿಯನರ ದಸ್ತಗಿರಿ

ಅಡ್ಡಿಸ ಅಬಾಬದಲ್ಲಿ ಮಾರ್ಶಲ್ ಗ್ರೇಜಿಯಾನಿಯವರ ಮೇಲೆ ಬೋಂಬೆಸದ ಸಂಬಂಧವಾಗಿ ೨೦೦೦ ಮಂದಿ ಅಬಿಸೀನಿಯನರು ದಸ್ತಗಿರಿ ಮಾಡಲ್ಪಟ್ಟಿರುವರು. ೩೦,೦೦೦ ಮಂದಿ ಇಟಲಿಯಾನ ಸೈನಿಕರು ಅಡ್ಡಿಸ್ ಅಬಾಬವನ್ನು ಕಾಯುತ್ತಿರುವರು. ಬೋಂಬೆಸೆಯಲ್ಪಟ್ಟು ಗಾಯಗೊಂಡ ಜನರಲ್ ಲ್ಯೊಟ್ಟು [illegible]ಒಂದು ಕತ್ತರಿಸಲ್ಪಟ್ಟಿರುವುದೆಂದು ತಿಳಿದು

[illegible]ದಲ್ಲಿ ಸರಕಾರಿ ಕಡೆಯ ಸೈನಿಕರ ಕೊಲೆ

ಗವು ಬಂಡಾಯಗಾರರ ವಶವಾದಂದಿನಿಂದ ಕಡೆಯ ೧೦,೦೦೦ ಮಂದಿಯವರೆಗಿನ ಸೈನಿಕರು ಸೆರೆ ಹಿಡಿಯಲ್ಪಟ್ಟಿರುವರೆಂದೂ [illegible]ರು ಮಂದಿಯನ್ನು ಇಷ್ಟರಲ್ಲೇ ತಲೆ ಹಾಕಲಾಗಿದೆಯೆಂದೂ ಬಂಡಾಯಗಾರರು [illegible]ತ್ತಾರೆ.

ನವಯುಗ ತುಳು ಸಂಚಿಕೆ

ಸಂಪುಟ ೧ | ಕುಂಭ (ಮಾಯಿ) ೧೪ ಗುರುವಾರ | ಸಂಚಿಕೆ ೭

ಮಾನ್ಯೆರೆನ ಲೇ ಲೇ ಪಾರ್ದನ

(ತುಳುವಾಲಿ)

ಓಲಿಲೇ ಲೇಲ, ಮಾನಿನಾಗೆರ್ ಓಲು ಪುಟ್ಯೆರ್ ಓಲು ಬಲತ್ತೆರ್ ಮಾನಿ || ಲೆ ಲೇ ||
,, ನಾಗೇರ್ ಕಡಲ್‌ಕಾಡ್ದ್ ಬೆಂದ್ಯೆರ್ ಮುಲ್ಲ ಮಲೆಟ್ ಬಲತ್ತೆರ್ || ಲೆ ಲೇ ||
,, ಮಾಣಿನಾಗೇರ್ ಏರೆ ಮಗೆ ಮಾಣಿನಾಗೇರ್ ಏರೆಡಪ್ಪ ಉಲ್ಲೆರ್ || ಲೇ ||
,, ನಾಗೆರಪ್ಪೆ ಲೆಕ್ಕೆಸಿರಿ ನಾಗ ತಂಗಡಿ ತಲಸಿರಿ ನಾಗಮೊಗ್ಗಿ ಮಲಸಿರಿ || ಲೆ ಲೇ ||
,, ತೊಪ್ಪುಕುಂಟು ತುತ್ತೊಂಡೇರ್ ಅಷ್ಟ ಪತ್ತ್ ಬೂರೊಂಡೇರ್ ಮಾಣಿನಾಗೇರ್ || ಲೆ ಲೇ ||
,, ನಲ್ಪುಜೇವು ಮಲತಿರ್ ಅಜ್ಪುಜೇವು ತಲವೆರ್ ಮಾಣಿನಾಗೆರ್ || ಲೆ ಲೇ ||
,, ಕುಲೆನಾಗೆರ್ ಮಲೆನಾಗೆರ್ ತಲೆನಾಗೆರ್ ಮಾಣಿನಾಗೆರ್ || ಲೇ ಲೇ ಲೇ ||
,, ಕೆಲ್ಲಿಡುಳ್ಳೆರ್ ಇಲ್ಲ್‌ಡುಳ್ಳೆರ್ ಕಲ್ಲ್‌ಡುಳ್ಳೆರ್ ಮಾಣಿನಾಗೇರ್ || ಲೇ ಲೇ ||
,, ಗುಂಡೊಡುಳ್ಳೆರ್ ಗುಡಿಟ್ ಉಳ್ಳೆರ್ ಬನೊಟುಳ್ಳೆರ್ || ಲೇ ಲೇ ||
,, ಹಂಜಡುಳ್ಳೆರ್ ಪೊಗೊಟುಳ್ಳೆರ್ ಬಾರೊಡುಳ್ಳೆರ್ || ಲೇ ಲೇ ಲೇ ||
,, ಗುಂಡೊಗೊಂಜಿ ಕಂಡೆಗೊಂಜಿ ಇಲ್ಲ್‌ಗೊಂಜಿ ಮಾಣಿ || ಲೇ ಲೇ ಲೇ ||
,, ಊರುಗೊಂಜಿ ಕೇರಿಗೊಂಜಿ ರಾಜ್ಯಗೊಂಜಿ ಮಾಣಿ || ಲೇ ಲೇ ಲೇ ||
,, ದಿಕ್ಕ್‌ಗೊಂಜಿ ದಿಕ್ಕಲೆಗೊಂಜಿ ಪಯ್ಯೆರೆಗೊಂಜಿ || ಲೇ ಲೇ ಲೇ ||
,, ಅಟ್ಟೆಡುಳ್ಳೆರ್ ಲಟ್ಟೆಡುಳ್ಳೆರ್ ಮುಟ್ಟೆಡುಳ್ಳೆರ್ || ಲೇ ಲೇ ಲೇ ||
,, ಕಟ್ಟೆಡುಳ್ಳೆರ್ ನಿಟ್ಟೆಡುಳ್ಳೆರ್ ಕಟ್ಟೆಡುಳ್ಳೆರ್ ಮಾಣಿನಾಗೆರ್ || ಲೇ ಲೇ ಲೇ ||
,, ಅಂಕೊಡುಳ್ಳೆರ್ ಅಂಬೊಡಿಡುಳ್ಳೆರ್ ಕೋಲುಡುಳ್ಳೆರ್ || ಲೇ ಲೇ ಲೇ ||
,, ತಗೆಟುಳ್ಳೆರ್ ತಂಗಡಿಡುಳ್ಳೆರ್ ಬಾಲೆಡುಳ್ಳೆರ್ ಮಾಣಿ || ಲೇ ಲೇ ಲೇ ||
,, ಮಾಮುಡುಳ್ಳೆರ್ ಮುರ್ಮಳೆಡುಳ್ಳೆರ್ ಮಗಳೆಡುಳ್ಳೆರ್ || ಲೇ ಲೇ ಲೇ ||
,, ಮೊಗ್ಗಿಡುಳ್ಳೆರ್ ಪಲ್ದಿಡುಳ್ಳೆರ್ ಪುಳ್ಳಿಡುಳ್ಳೆರ್ ಮಾಣಿನಾಗೆರ್ || ಲೇ ಲೇ ಲೇ ||

[illegible]ರು:—ಇಲ್ಲಿಯ ಪಡುಮನೆಯ [illegible]ನಂದ್ಯಪ್ಪ ಶೆಟ್ರು ಇದೇ ತಾ. 23ನೇ ರಾ[illegible]ರು 8 ಘಂಟೆಗೆ ತನ್ನ 62ನೇ ವಯಸ್ಸಿನ[illegible]ತರಾಗಿರುವರೆಂಬುದು ವಿಷಾದಕರವಿರುವು[illegible]ತರು ಒಳ್ಳೇ ವ್ಯವಹಾರಜ್ಞಾನಿಯೂ ಆ[illegible]ಯೂ ಆಗಿ ಬುದ್ಧಿಶಾಲಿಯಾಗಿದ್ದರು. ಕಳ[illegible]ರು ಒಂದು ತಿಂಗಳಿಂದ ಕಾಯಿಲೆಯಲ್ಲಿ[illegible]ಂಡಿತ ಜವ್ವಾರಲಾಲರನ್ನು ಬಹಳ ಪ್ರಯಾ[illegible]ಹೋಗಿ ಕಾಣುವ, ತಾ. 18ರ ಚುನಾವಣೆ[illegible] ಎರಡು ಓಟು ಕಾಂಗ್ರೆಸಿಗೆ ನಷ್ಟವಾಗ[illegible] ಬಹಳ ತ್ರಾಸವನ್ನು ಹೊಂದಿ ಓಟುಕೊ[illegible] ಕಾಂಗ್ರೆಸಿನ ಮೇಲಿನ ಅಭಿಮಾನವುಳ್ಳವ

ನೋಟೀಸು

[illegible]ದಾಪುರ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ.

No. 424/1936 R.E.P. No. 980/36

ವಾದಿ

[illegible]ಣಕಾರಂತ ... ಅರ್ಜಿದಾರ

ಪ್ರತಿವಾದಿ

ಕೂಡಾ .... ಯೆದ್ರಿರು

[illegible]ರಗೋಡು ತಾಲ್ಲೂಕು ಬೇಕಲ್‌ಗ್ರಾ[illegible]ರುವ ಅಬ್ದುಲ್‌ಬ್ಯಾರಿ ಮಕ್ಕಳು [illegible]ಮುಲ್‌ಜ್ಯಾರಿಯು 2ನೆಯೆದ್ರಿ ಅಬ್ದು[illegible]ಮಾನ ಬ್ಯಾರಿ 3ನೇ ಎದ್ರಿ A. K. [illegible]ಬ್ಯಾರಿ ಕೂಡಾ 2 ಜನರಿಗೆ ಈ[illegible]ಕ ತಿಳಿಯಪಡಿಸುವದೇನೆಂದ್ರೆ:— [illegible]ನಿಯು ನೀವು ವಗೈರೇರ ಮೇಲೆ ಪ[illegible]ಲಿನ ಡಿಕ್ರಿ ಸಮಾಧಾನದ ಬಗ್ಗೆ [illegible] R. E. P. No. 980/1936 ವಹರಣೆಯಲ್ಲಿ ಯೆದ್ರಿರಹಕ್ಕಿನ ಸ್ಥಿ[illegible]ನ್ನು ಏಲಂವಿಗೆ ಅಪೇಕ್ಷಿಸಿ ಯಿಸ್ತಿ[illegible]ಕರತ ನಿರ್ಣಯಿಸುವರೆ ಸೇಲ್‌ಪ್ರೊ[illegible] ಬಗ್ಗೆ ಸದ್ರಿ ಅಮುಲ್‌ಜ್ಯಾರಿಯನ್ನು [illegible]-2-37ಕ್ಕೆ ಮೇಲಿನ ಕೋರ್ಟಿ[illegible]ನ್ನಿಗೆಯಿಟ್ಟಿರುತ್ತದೆ. ಆ ಕುರಿತು ನಿ[illegible]ಮ್ಮ ಕಡೆ ಆಕ್ಷೇಪಗಳಿದ್ದರೆ ತಾ. 26-2-37ನೇ ಪೂರ್ವಾಹ್ನ ಗಂಟೆ 11ಕ್ಕೆ ಮೇಲಿನ ಕೋರ್ಟಿನಲ್ಲಿ ಹಾಜರು ಮಾಡಿಕೊಳ್ಳತಕ್ಕದ್ದು.

K. Venkappa Shetty,
Vakil for Petitioner.
ತಾ. 20—2—1937.

ಪುತ್ತೂರು

ಪುತ್ತೂರಿನ ತಾ. ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಾದ ವಕೀಲ್ ಶ್ರೀ. ಬಿ. ಶಿವರಾಮ ಹೊಳ್ಳರು ತಮ್ಮ ಅಧ್ಯಕ್ಷತನಕ್ಕೆ ರಾಜಿನಾಮೆಯನ್ನು ಕಳುಹಿಸಿರುವರು ಪುತ್ತೂರಿನಲ್ಲಿ ಕೊಂಗ್ರೆಸ್ ಕೆಲಸಗಾರರೊಡನೆಂಟಾದ ಭಿನ್ನಾಭಿಪ್ರಾಯವೇ ಇದಕ್ಕೆ ಕಾರಣವೆಂದು ತಿಳಿದು ಬರುತ್ತದೆ.

that all future dealings must be made with The Branch Secretary, The Guardian of India Insurance Co., Ltd., Mangalore Branch.

E. A. PAIS, B. Sc., *Branch Secretary*,
The Guardian of India Insurance Co., Limited,
MANGALORE BRANCH.

ಯಾನ್ ದಾನೊಡು ?

(ಬರೆತಿನಾರ್—ಅಡ್ಡೂರು ಕೃಷ್ಣಯ್ಯೆರ್)

ತಿತ್ತಿರಿ ತಿರಿರಿ ಮಜಲ್‌ಡ್ ಪಂತಿ ಎರ್ಗಂಡೆ ? ॥
ದಾಯೆಮೆರ್ಗ್ ದಾಯೆಮೆರ್ಗ್ ಮೇಯರೆ ಪೋತುಜ್ಜ ? ॥
ಈರೆ ದಿಕ್ಕೆ ಬಲ್ಲ್ ಬುಡಂದ್ನೆಕ್ಕ್ ಯಾನ್ ದಾನೊಡು ? ॥
ದಾಯೆ ದಿಕ್ಕ ದಾಯೆ ದಿಕ್ಕ ಬಲ್ಲ್ ಬುಡುಜ್ಜ ? ॥
ಈರೆ ದೆತ್ತಿ ತೆಳಿ ವೈಪಂದ್ನೆಕ್ಕ್ ಯಾನ್ ದಾನೊಡು ? ॥
ದಾಯೆ ಪೊಣ್ಣೆ ದಾಯೆ ಪೊಣ್ಣೆ ತೆಳಿ ವೈತ್‌ಜ್ಜ ? ॥
ಎನ್ನ ತತ್ತಿ ಕುಡ್ಪು, ತರಿಮುಚ್ಚಿ ಅಸೆನಿ ಕೊಣ್ಪ್ಯನೆಕ್ಕ್ ಯಾನ್
ದಾನೊಡು ? ॥
ದಾಯೆ ಪುಚ್ಚೆ ದಾಯೆ ಪುಚ್ಚೆ ಅಸೆನಿ ಪತ್ತ್‌ಜ್ಜ ? ॥
ಎಂಕ್ ಕಬಿಲೆ ಪತ್ತ ಪೇರ್ ಕೊರಂದಿನೆಕ್ಕ್ ಯಾನ್
ದಾನೊಡು ? ॥
ದಾಯೆ ಪೊಣ್ಣೆ ದಾಯೆ ಪೊಣ್ಣೆ ಕಬಿಲೆ ಪೆತ್ತದ ಪೇರ್
ಕೊರುಜ್ಜ ? ॥

ಎನ್ನ ಕಬಿಲೆ ಪೆತ್ತ ಪಿಲಿ ಕೊಣೊಯಿನೆಕ್ಕ್ ಯಾನ್
ದಾನೊಡು ? ॥
ದಾಯೆ ಬೆಡಿಗರ ದಾಯೆ ಬೆಡಿಗರ ಬೆಡೀ ಬುಡುಜ್ಜ ? ॥
ಎನ್ನ ಬೆಡಿ ಉದಲ್ ಪತ್ತ್ನೆಕ್ಕ್ ಯಾನ್ ದಾನೊಡು ? ॥
ದಾಯೆ ಕೋರಿ ದಾಯೆ ಕೋರಿ ಉದಲ್ ಒಕ್ಕ್ಯಜ್ಜ ? ॥
ಎನ್ನ ಕೋಕಾಯಿ ದಡ್ಡ್ ಕಟ್ನೆಕ್ಕ್ ಯಾನ್ ದಾನೊಡು ? ॥
ದಾಯೆ ಆಚಾರಿ ದಾಯೆ ಆಚಾರಿ ಕೋಕಯಿ ಕೆತ್ತ್‌ಜ್ಜ ? ॥
ಎನ್ನ ಉಳಿ ಬಾಜಿ ಕಳ್ವೆರ್ ಕೊಣೊಯಿನೆಕ್ಕ್ ಯಾನ್
ದಾನೊಡು ? ॥
ದಾಯೆ ಬೂತ ದಾಯೆ ಬೂತ ಕಳ್ವೆರೆನ್ ಪತ್ತ್‌ಜ್ಜ ? ॥
ಕಾಲಗೊಂಜಿ ಕೋಲ ಕೊರ್ಜಂಡ ಯಾನ್ ದಾನೊಡು ? ॥

ಗುಡ್ಡು

ಗುಡ್ಡೋ ಗುಡ್ಡೋ ದಾನೆ ಮಲ್ಪುವಾ	=	ಕುಡು ಪೊದ್ಪುವೆ
ಎಂಕ್ ರಡ್ಡ್ ಕೊರಯನ	=	ಎನ್ನ ಬಾಳಿಲೆಗ್ ಬೊಡ್ಚಾ
ಬಾಳಿಲೆನ್ ಗೊಬ್ಬ್ಯರೆ ಕಡಪುಡು	=	ಎಂಕೇರುಂಡು?
ಕಂಡಣಿಜ್ಜೆನಾ?	=	ಕಂಡಣಿ ದಂಡ್‌ಗ್ ಪೋತೆರ್
ಮಾಮಿಜ್ಜಾ?	=	ಮಾಮಿ ಚಂಡೇವುದ ಮುಂಡೇವುದ ಪಜೆನೊಡೆಪೇರ್
ವೈತ್‌ನೆ ಇಜ್ಜಾ?	=	ವೈತ್ನೆ ತೇವುಗ್ ದೊಂಪ ಪಾಡ್ವೆರ್
ನಾಯಿ ಇಜ್ಜಾ?	=	ನಾಯಿ ಬೋಂಟೆಗ್ ಪೋತುಂಡು
ಪುಚ್ಚೆ ಇಜ್ಜಾ?	=	ಪುಚ್ಚೆ ಆಸೆನಿ ಪತ್ತ್ಯರೆ ಪೋತುಂಡು
ಗುಡ್ಡೋ ಗುಡ್ಡೋ	=	ನಿನ್ನೊಂಜಿ ಸುದ್ದಿ ಕೇನ್‌ನ್ಡೆ
ದಾನೇ?	=	ಈ ಬಂಜಿನಾಳ್ಗ್
ಯೇರ್ ಪಣ್ಣೆ	=	ಕೋಟಿಮೂಲ್ಯೆ

ಹತ್ ಕಳ್ವಾ! ಗುಳ್ಳಂತ ಪಾಡಿಗ್ ಪೋಯೆ, ಗುಳ್ಳಂತ ಇರೆ ಕನತ್ತೆ. ನೆಲ್ಲಿಂತ ಪಾಡಿಗ್ ಪೋಯೆ, ನೆಲ್ಲಿಂತ ಇರೆ ಕನನ್ತೆ. ತೆನ್ಕ್ಯಾದ ಇಲ್ಲ್ ಉಪ್ಪುನಗ ಪೇರ್ಲ ನುಪ್ಪ ಪಾಡಿ ಪಲ ತೂಪಯತ್ತ ಕಳ್ವಾ !! ನನ ನಿನನ್ ನಂಬೊಲಿಯಾ !!!

* 'ತುಳುನಾಡ್‌ಡ್ ಬೂತೊಳೆಗ್ ಪಂಡೊನುನ ಪಾತೆರ' *

ಬರೆತಿನಾಯೆ—**ಶೀನಪ್ಪ ಹೆಗಡೆ.** (ತುಳುನಾಡ್ ಪತ್ರಿಕೆಡ್ದ್)

"ತುಳುವೆರೆನ ಮಾತ ಇಲ್ಲಲೆಡ್‌ಲಾ ಬೂತೊಗು ಮಲ್ಪುನವು ವರ್ಸವರ್ಸಲಾ ಉಂಡು. ಬೂತೊಗು ಅಗ್ಯೆಲ್ ಬಲಸ್‌ದ್ ಆಯಿ ಬೊಕ್ಕ ಅಪಗ ಇತ್ತಿನಾಕ್ಲು ಮಾತೆರ್ಲಾ ಉಂತುದು ಕೈಟ್ ಪೂಪತ್ತ್‌ದ್ ಪನ್ಪಿನಿ ದಾನೆಂದ್‌ನ್ಡ:—ಇತ್ತಿನಾಕ್ಳೆಡ್ ಹಿರಿಯಾಯೆ ಮಾತೆರೆಗ್ಲಾ ಪೂಕೊರ್ದು:

ನಮ ಹೆಚ್ಚಿಗ್ ಆದ್ ಪನ್ಪಿನಿದಾನೆ? ಕಾಲಾದಿಡ್ದ್ ಕಾಲಾದಿಗ್ ವರ್ಸ ಪದ್ರಾಡ್ ತಿಂಗೊಳುಡು ಮಲ್ಪಿಂಚಿ ಪರ್ವ (ಅಗೆಲ್-ತಂಬಿಲ-ಕೋಲ) ಈ ಪತ್ತ್ ಸಂಸಾರ ಒಮ್ಮೆ ಆದ್ ಮಲ್ತಿ ಪರ್ವೊಗು ಕುರಿ ಕೊಟುದು, ದೂಪ ಕೊಪಾರ್‌ದ್ ಐನ್ ಕವ್ರುಳಿ ಬಚ್ಚಿರೆ, ಐನ್ ಬಜ್ಜೇಯಿ, ನೊಗಡ್ದ್ ತಾರಾಯಿಡ್, ದೀಪಾಯಿ ಸುತ್ತಿಗೆಡ್, ಪಾಡಾಯಿ ಕೊಡಿಟ್, ಬರೆಪಾಯಿ ಮಂಡಲೊಡು, ಬಲಸಾಯಿ ಪನಿಯಾರೊಡು ದೀತಿ ಅಮ್ರಿತೊಡು ಪೊತ್ತಾಯಿ ನಂದಲೊಡು, ಏರಾಯಿ ತುಡರ್‌ಡ್, ಮಲ್ಪಾಯಿ ಬಲಿಟ್, ಒತ್ತಾಯಿ ಮುದ್ರೆಡ್, ದೀಪಾಯಿ ಓಮೊಡು, ದರ್ಪಾಯಿ ತಾರಾಯಿಡ್, ಕೊಡಪಾಯಿ ಬೊಂಡೊಡು, ಮಲ್ತಿಂಚಿ ಒಂಟೆಡ್ ಉರಿಯಾ, ಸಿರಿಯಾ, ಸುದ್ದನಾ, ಅಸುದ್ದನಾ, ಲಾಬನಾ ನಸ್ಟನಾ, ಪಾಪನಾ, ಪುಣ್ಯನಾ, ಕೀರ್ತಿಯಾ, ಅಪಕೀರ್ತಿಯಾ, ಇನ್ಪಿ ಸಂಗತಿ ಎಂಕ್ಲೆಗ್ ಗೊಂತು ತಿಕ್ಕಿಜ್ಜಿ. ಎಂಕ್ಲು ಹಿರಿಯ ಪೆರಿಯಾಕ್ಳೆಡ್ದಿಂಚಿ ನಂಬುದಿ ಸತ್ಯ ಈ ಆದುಪ್ಪುನಗ ದಾನೆ ಅಡ್ಡ ಇಡ್ದೂರ ಇತ್ತ್ಂಡಲಾ ಈ ಸರ್ಕೆ ಮಲ್ತೊಂದು ಪತ್ತ್ ಸಂಸಾರೊಡು ಅರ್ಪಿ ಬಾಲೆಗ್, ಕರೆಪಿ ಕಂಜಿಗ್, ನಾಲ್ಕಾರ ಪಸುಗು, ರಡ್ಡ್ ಕಾರ ನರಮಾನಿಗ್, ಮಲ್ತಿ ಮಾಟ, ಬುಡಿ ಬೂತಪಂಡಿ ಚಿದ್ರ, ದಾನೆ ಇತ್ತ್ಂಡಲಾ ಮಾಯೊಡು ಈ ಅವ್ವೆನ್ ದೂರ ಮಲ್ತ್‌ದ್, ಪತ್ತ್ ಸಂಸಾರೊನ್ ಪೂತ ಬಿತ್ತ್‌ಲ್ದ ಲೆಕ್ಕ ಕಾತೊಂದು, ಎರುತ ಇನೆಕ್ಕ್, ಬಿತ್ತ್‌ದ ಮುದೆಲ್‌ಗ್, ಪೋಯಿನಲ್ಪ ಬತ್ತಿನಲ್ಪ, ಈ ಸಾಯುದ ಮಾಯೆಗಾರೆ ಆದ್, ನೆನೆತಿನಲ್ಪ ಬೆರಿಸಾಯ ಕೊರ್ದು, ಪತ್ತ್ ಸಂಸಾರ ಬಕ್ತಿಡ್ ನಂಬುದು ಕೊರಿಂಚಿ ಪರ್ವ ಎಲ್ಯಾಂಡಲಾ ಪೂತ ಎಸಲ್‌ನ್ ಪರ್ವತ ಮಲ್ತೊಂದು ಮಲ್ತಿ ಮಾನಿಡಾವಡ್, ಮಲ್ಪಾಯಿ ಕರ್ತವಡಾವಡ್, ಏರಿ ಮೂತೆರ್ ಡಾವಡ್, ಈ ನಂಬುದಿ ಸಂಸಾರಡಾವಡ್ ದಿಂಜ ಹೆಚ್ಚಿಕಮ್ಮಿ ಕುಂದುಕೊರತೆಲು ಉಪ್ಪು. ಅಂಚಿ ಕುಂದು ಕೊರತೆಲೆನ್ ಈ ತೂವಂದೆ ಇಸ ಇತ್ತಿನಾಂಡ ಕಡಪರಾಜ್ಯೊಗು ಪಾಡ್ದ್ ಅವ್ವು ತೊನ್ ಕೈಗೂಪಡ್ ಕೊರ್ದು, ನಂಬಿ ಸಂಸಾರ ಪಾಡಿ ಪೂಟು ಸಂತೋಸ ಮಲ್ತೊಂದು ಇಂಚಿನೆ ಲಿಕ್ಕ್ಯೊಗ್ಯುಕುಂದೇಲ್ ಇಜ್ಜಂದಿ ಲೆಕ್ಕ ಒರಿತ್‌ಕಟ್ಟ್‌ದ ಕಟ್ಟ್‌ಗ್ ಅಂತರ ಬರಂದಿಲೆಕ್ಕ ಈ ಸಂಸಾರದ ಚಾಕ್ರಿ ಮಲ್ಪಾವೊಂದು ಕಾತ್ ಕೊರ್ಪಿಂಚಿ ಪುಣ್ಯತೀರ್ತಿ ನಿಕ್ಕ್ ಕೂಡುದಿನವು. ದಾನೆ ಇತ್ತ್ಂಡಲಾ ಮಾಪುಮಲ್ತ್‌ದ್ ಪೊಲ್ಯುಡು ಕೈಕೊನೊಡು. ಸಾವಿರಾ, ಸತ್ಯೊಲೆ ಇಂದ್‌ದ್ ಮೂತೆರ್ಲಾ ಕೈಮುಗ್ಗಿದ್ ಬೆರಿಪಾಡ್ದ್ ಉಂತುವೆರ್.

ಬೊಕ್ಕ ಒಂತೆ ಪೊರ್ತುದಗ ದೂಪ ತೋಜಾದ್ ನೀರ್ ತಲಿತ್‌ದ್ ಬಲಸ್‌ದಿನೆನ್ ಮಾತದೆತ್ತ್‌ದ್ ಇತ್ತಿನಾಕ್ಳೆ ಪನಿಯಾರೊಲೆನ್ ಮಿನಿ ಕೊರ್ದು ಪುರ್ಸಾದ ಪಾಡೊನುವೆರ್. ಉಂದು ತುಳುನಾಡ್‌ಡ್ ಅನಾದಿಡ್‌ದಿಂಚಿ ಇತ್ತಿ ದ್ರಾವಿಡ ಸಂಪ್ರದಾಯಲೊಡೊಂಜಿ.

● ತುಳುವೆರ್ ಅವಶ್ಯವ್ರೋದರೆತ್ತಿ ಪುಸ್ತಕಳು. ●

ಕೃಷ್ಣ ಸಂಧಾನ	೦	೮	೦	ಅಳಿಯಸಂತಾನ ಕಟ್ಟ್‌ದ ಗುಟ್ಟು	೦	೪	೦
ಮಿತ್ಯನಾರಾಯಣ ಕತೆ	೦	೮	೦	ಮದ್‌ಮಾಳತ್ತ್ ಮದ್‌ಮಾಯೆ	೦	೨	೦
ಜನಮಲ್‌ರ್	೦	೬	೦	ಮುಂಡತ್ತಾಯೆ	೦	೨	೦
ಸತೀ ಕಮಲೆ	೦	೬	೦	ತುಳು ಪದ್ಯಮಾಲಿಕೆ	೦	೧	೦
ಕಾನಿಗೆ	೦	೪	೦	ಪೂಗಿರೆದ ಆಮಲ್	೦	೦	೦

● ಎಸ್. ಯು. ಪಣಿಯಾಡಿ, ತುಳುವ ಸಾಹಿತ್ಯಮಾಲೆ, ಉಡುಪಿ. ●

• ಪಸು •

(ಬೇಸ-ತಿಂಗೊಲ್ದ 'ತುಳುನಾಡ್' ಪತ್ರಿಕೆಡ್ದ್)

ಬರೆತಿನಾಯೆ: ಪರಮೇಸ್ರಾಯೆ

ಪೂಲೀಸ್ ಆಯಿತ ಅಮ್ಮನ್ ಮಳ್ತ್‌ದ್‌ಂಡ ದಾನ್ನ ಕುಡು ಗಾಡಿದ ಎಲ್ಯುರ್ ತಿಂದ್‌ದುಪ್ಪರೆಯಾವು. ದೆಕ್ಕನವು ಬುಡಿ, ಪಬ್ಬೊರ್‌ಗು ಬಳ್ ತಪ್ಪಾಂಡ ಕಾತೆರ್‌ಲ್ ಮುಟ್ಟೆಗ್ ಬತಿ ಬಸೊರ್ ಲೆಗ್ ಪ್ಪೂರ ಆ ಬೋರಿನಿ ದೆಕ್ಕನವೇ ಕೆಲಸ. ಉಂದೆನ್ ತಾಂಕರೆ ಒರಿ ನಾಣೆರ್‌ೀಂದ್. ಅಯಗ್ ತನ ಸ್ವಂತ (ಪಣಿಯೆರಾವಂದಿನ ಕೆಲವು) ಬೇಲೆಲೆಡ್ ಉಂದೆನ್ ತೂವರೆ ಪುಸೊರ್‌ತುಲಾ. ಇಜ್ಜಿ. ಇಂಚಾದುಪ್ಪನಗ ಅವು ನುಲ್ರ್ ನಾಯಿದ ಲೆಕ್ಕ ತಿರುಗು ನತ್ತಂದೆ ತಿಕಿತಿಕಿನಕುಲೆ ಮೇಲ್‌ಗ್ ಬೂರ್ರಿ ತೂಪುಂಡು ದಾಯೆ? ಬಂಜಿಗ್ ದಂತೆ ಕಾರಣ ಜಾತ್ರೆದಗ ಬತ್ತಿನಕ್ಲು ಪರ್‌ಂದ್ ಮಿನಿ ದೆತ್ ಕೊರುದು ಅಬ್ಬೆಸ ಮಳ್ತೆದಿನ್ಸೈಟ್ ಇತ್ತೆಲ ಅವ್ವೆ ನೆನೆಪು. ಕೊರ್ಜಿಡ ತಂಟೆಲ್‌ಮಾರಿ ಜೋಕ್ಲೆಲೆಕ ಕಾಡುನ ಒಂಜಿ ಅಬ್ಬೆಸ ಕಲ್ತೊಂದು ಕೆಲಜನೊಕು ತಾಡ್‌ದ್ ಇತ್ತೆ ಐನ್ ತೂಯಿಗಳಿಗೆ ತಾಡುನ ಬೋರಿ ಬತ್ತ್‌ಂಡ್‌ಂದ್ ಮಾತೆರ್ಲಾ ಪೋಡ್ಯನಿ. ಉಂದೆತ ನಿಜವಾಯಿನ ಗುಟ್ಟು ಬಂಜಿ ದಿಂಜಂದಿನ, ಅವು ಏರೆಗ್ ತೆರಿಪುಂಡು? ಇಂದೆತ ಇಡೆಟ್ ಪುರಾಲ್ದ್ ಊರುಡು ಕೈಕಂಜಿಲೆನ್ ಅರೆಗಾಲೊಡು ಕಟ್ಟೆರೆಯಿದ್ದಿ. ಆ ಕೈಕಂಜಿಲೆಡಪ್ಪಯಿತ್ತೊಂದು ರಾತ್ರಿ ಪಗೆಲ್ ಐಕ್ ಸೊರ್ಕೆಲುನವೇ ಕೆಲಸ. ಈ ದಿಡ್‌ಂಬೆರುತ ಕಂಜಿಲೆಡ್‌ದ್ ದಾನೆ ಪಲ? ಕಂಡೆಡ್ ಕಾಯಿಂಡ ಕೊಂಡೆಗ್ ಬರುವಾಂದ್ ಪಂಡಿಲೆಕ್ಕ ಬಿತ್ತ್‌ನುಗಾರ್ಯಿಜ್ಜಂಡಲಾ ಬಂಜಿಗ್ ಸಾಂತೆ ರಾತ್ರಿ ಪಗೆಲ್ ಸೊರ್ಕೆಲಿ ಬೋರಿದ ಕಂಜಿಳು ಎತ್ ಎಡ್ಡೆ ಆವ. ಪುರಾಲ್ದ್ ಪುಟಿ ಕಂಜಿಳು ಪೂರಾ ಬಸ್ವ ಲೆಕ್ಕನೆ. ಹೆಚ್ಚಾದ್ ತ್ರೈತ್ ಪೋಸ ಪೊನ್ಸೈಕ್ ಲಕ್ಕೆರೆ ತೀರುಜಿ. ಅವು ನನ ಏತ್ ಮುಟ್ಟೆ ಉಳ್ಳನ ಉಪ್ಪಡ್. ಅಂಜೆನೆ ಬತ್ತಿನ ಬೋರಿ ಸೀದ ಗೋಪ್ರದ ಬಾಕಿಲ್‌ಗ್ ಬತ್ತ್‌ಂಡ್. ಆವುಳೊಂಜಿ ಕಾಗಜಿ ಬುರೊಂದಿತ್ತ್‌ಂಡ್ ಆಯಿನಿ ಪೆಜ್ಜಿದ್ ಮಲ್ಲ ಬಕಾಸುರಲಕ್ಕ ಬಕಬಕ ಅಗ್ಗಿದ್ ದಿಂಗ್‌ಂಡ್. ಅಂಚನೇ ಲಕ್ಕರೆ ತೀರಂದಿನ ಒಂಜಿ ಪೆತ್ತದ ಬೆರಿಪತ್ತೊಂದು ತೆನ್ಕಾಯಿದ ಅಂಜಣೊಗು ಪೋಂಡು. ಅಪಗ ಎಂಕ್ ತೆರಿಜಿಂಡ್. ಐಯ್ಯೋ ದೇವರೆ, ಇಂಚಿ ಸಾರಸೀಮೆಗ್ ಬೋಡಾಯಿನ ದೇವೆರೆ ಬಸ್ವ ಬಂಜಿಗ್ ತೆನಸ್‌ಲ ಇದ್ಯಂದೆ ಪೋಂಡೇಂದ್. ಐತ ಬಂಜಿ ಪೊತ್ತಿಲೆಕ್ಕನೆ ಎನ್ನ ಬಂಜಿಲ ಪೊತ್ತುಂಡು—(ಆಟ) ಪಸು ಹೇಳಿಕೆ—ದಾನೆ ಬಂಧುಳೆ ಎನಪ್ಪೆ ಪೇರ್ ನಿಕ್ಲೆ ಬಂಜಿಗಾಂಡ್. ಯಾನ್ ಬರೆಲ್ದು ಪ್ಪೊಡ? ಎನನ್ಲಾ ಒಂತೆತೂಲೇ|ಗಾವೋ ಮೇ ಮಾತರಸ್ಸಂತು ಗಾವೋ ಮೇ ಪಿತರಸ್ತಥಾ|ಗಾವೋ ಮಮಾಗ್ರತಸ್ಸಂತು ಗಾವೋ ಮೇ ಸಂತು ಪೃಷ್ಠತಃ । ಗಾವೋ ಮೇ ಪಾರ್ಶ್ವತಸ್ಸಂತು ಗವಾಂ ಬೃಂದೇ ವಸಾಮ್ಯಹಂ || ಪಸುವೇ ಎನ ಅಪ್ಪೆ ಆದುಪ್ಪಡ್, ಅಂಚನೆ ಪಸುವೇ ಎನ ಅಮ್ಮೆ ಆದುಪ್ಪಡ್, ಪಸುವೇ ಎನದುಂಬುಪ್ಪಡ್, ಪಸುವೇ ಎನ ಬೆರಿಟುಪ್ಪಡು, ಪಸುವೇ ಎನಮುಗ್ರಿಲ್‌ಡ್ ಉಪ್ಪಡ್, ಪಸುಕುಳೆ ನಡುಟೇ ಯಾನುಪ್ಪುವೆ. (ಭೀಷ್ಮನ ಪಾತೆರ) 'ವಂದೇ ಸತ್ಪುರುಷಾನ್ ಲೋಕೇ ಗುಣಗ್ರಹಣತತ್ಪರಾನ್ || ರಾಜಹಂಸಾನಿವ ಜಲಾತ್ ಕ್ಷೀರಗ್ರಹಣಕೋವಿದಾನ್ ||' ಊರುಡು ನೀರ್ ಬೆರಯಿನ ಪೇರ್‌ಡಿತ್ತಿನ ನೀರ್‌ನ್ ಬೇತೆ ಮಳ್ತ್‌ದ್ ಪೇರ್‌ನ್ ಮಾತ್ರ ಪರ್ಪಿ ಹಂಸಪಕ್ಕಿಲೆಕ್ಕ ನರಮಾನ್ಯಗುಣೊನು ಮಾತೆರೆ ಗೆರೆಪುನೈಟ್ ಪಿರಿತಿಯಿತ್ತಿನ ಸತ್ಯವಂತೆರೆ ಏರ್ ಉಳ್ಳೆರೋ ಅಕುಲೆಗ್ ದುಂಬು ನಮಸ್ಕಾರ, ಅಂದ್‌ಂಡ ಅಕುಳೆಗ್ ದುಂಬು ವಂದನೆ ಮಲ್ಪೊಡುಂದು ಮಲಮಲ್ಲ ಸಾತ್ರೊಲೆಡೇ ಪಣ್ಪುಂಡು. ಆಯಿತ ಇಡೆಟೊಂಜಿ ಪೇರ್‌ಗ್ ಬೆರಯಿನ ನೀರ್‌ನ್ ಕಳೆದ್ ಪೇರ್ ಮಾತ್ರ ಪರ್ಪಿನ ಅಂಸಪಕ್ಕಿದಲೆಕ್ಕ ಅಂದ್‌ದ್‌ಪಂಡ್‌ಂಡ್ ಅಂಚಿನ ಅಂಸಪಕ್ಕಿಯೇ ಇತ್ತೆ ತೂವರೆಗಿಜ್ಜಿ. ಇಜ್ಜಿಂದ್ ಪಣ್ಪೆನ ಐತ ಪಗತೆಗು ಬೋಡಾಯಿನುತ್ ಕೊಂಗುರ್‌ಲು ಉಳ್ಳ. ಇತ್ತೆ ಒಯಿಕ್ ಕೊಡ್ಯಣಾ ತರುನ ಪತ್ತ್ ತಿನಿಯೆರೆ. ನೀರ ಬರಿಟ್ ಮಲ್ಲ (ಪರಮ ಹಂಸೆ) ಅಂದ್‌ಂಡ ಬೆಮ್ರ್‌ದೇವೆರ್ ಅತ್ತ್‌ಂಡ ಮುಲ್ಲ ಸನ್ನೆಸಿಲೆಕ್ಕ ತಪಸ್ ಮಲ್ಪಿನ ತೂವೊಳಿ. ಅಪಂಡ ಈ ಪಕ್ಕಿಲು ಕಂಣ್‌ಗ್ ತಿಕ್ಕುನ ಕಡಮೆ ಆನೆರೆಗ್ ದುಂಬೇ ಪೇರ್‌ಗ್ ನೀರ್ ಬೆರವುನ ರಿವಾಜಿ ಒಂಜಿ ಇತ್ತ್‌ಂಡ್‌ಂದ್ ಪಂಡಿಲೆಕ್ಕಾಂಡ್. ಆಪನಗ ಇತ್ತೆ ಪೇರ್‌ಗ್ ನೀರ್ ಬೆರವುನಗುಳೆಗ್ ದಾಯೆ ದೂರುನಿ? ಹಿರಿಯೆರೆ ಕಾಲೊಡುದು ನಡತೊಂದು ಬೈದಿ ಆಚರಣೆನ್ ಇತ್ತೆ ಆಚರಿತ್‌ಂಡ ಅವುತಪ್ಪು ಆಪುಂಡಾ. ಅಂಚಾದುಪ್ಪನಗ ಇತ್ತೆ ಪೇರ್ ಕೊರ್ಪಿನಕುಳೆನ್ ನೀರ್ ಬೆರವೆರ್‌ಂದ್ ನೆರ್ಪಿನಿ ದಾಯೆ? ಅಂಚ ಪಣೆ, ಆಯಿನ್ ಕೇಣೊಡ್‌ದೆ. ಆಪಂಡ ಕೇಣೆ ಅಂಸಪಕ್ಕಿ ತೂವರೆ ತಿಕ್ಕಂದಿಕಾಲೊಡು ಪೇರ್‌ಗ್ ನೀರ್ ಕೂಟ್‌ದ್ ಮಾರೇದಿನಿ ಮಿನಿ ದಾಲಅತ್ತ್. ಅವು ಅಂಸನ ಗುರ್ತ ಪತ್ತರೆಗ್ ಮಲ್ತೊಂದಿತ್ತಿನ ಕೆಲಸ. ಎಂಚಾಂದ್‌ಂಡ ಸಾಧಾರಣ ಅಂಸೆ, ಬತ್ತ್, ಪ್ರೊನ್ರ್, ಕೊಂಗುರ್, ಕಡಲಕಾವೆ, ನರಯೆ, ನಿಮಿ

ಪಕ್ಕಿಲು ಒಂತೊಂತೆ ಹೆಚ್ಚಕಡಮೆ ಒಂಜೇ ಲೆಕ್ಕ ಇತ್ತಿನ್ನೈಡ್‌ದ್ ನಿಜವಾಯಿನ ಅಂಸ ಗುರ್ತ ತೆರಿಯೆರೆಗಾದ್ ಮಾತ್ರ ಪೇರ್‌ಗ್ ನೀರ್ ಕೂಡಾವೆದೆರ್ ಅತ್ತಾಂದೆ ಅಪಗ ಪೇರ್ ಅತ್ತ್‌ಡ ನೈ ಮಿನಿ ಮಾರ್ರೆನೇ ಮಾರಾಯೆರ್. ದಾಯೆಗಂದ್‌ಂಡ ಅವು ಮಲ್ಲ ಪಾಪೊ ಇಂದ್‌ದ್ ಜನಪಂಡೊಂದಿತ್ತಿನೈಡ್‌ದ್ ೩ ಪಾಪೊತುಗು ಪೋಢಿದ್ ಮಾರೇಯಿಜ್ಜೆರ್. ಒರಿಯಗ್ ಒರಿ ಬೋಡಾಂಡ ಅಂಚನೇ ಕೊರ್ಪೇದೆರ್. ಇತ್ತೆ ಅಂಚದಾಲ ಅತ್ತ್. ಪೇರ್ ನೈತ ಬೇರೊಗಾದೇ ಪೆತ್ತ ಎರ್ಮೆಳೆನ್ ದೆತ್ತೊಣುನ ಜನಹೆಚ್ಚ. ಅಂಚನೇ ಪೇರ್‌ಗ್ ನೀರ್ ಬೆರವುನಲ ಹೆಚ್ಚ, ಅಯಿಕೊಂಜಿ ಸಾಮತಿದ ಕತೆಉಂಡು. ಎಂಚಾಂದ್‌ಂಡ ಒರ್ತಿ ಬೈದ್ಯೇದಿ ಓಡೊಡು ಕುಳ್ಳುದು ತುಪೆ ಕಡಪುನಗ ಮೋನೆಗ್ ನೀರ್‌ಪಾಡ್ರೆಂದ್ ಬಗ್ಗಿಯೊಳ್‌ಗೆ. ಆಪಗ ಒಂಜಿ ಕೆಬಿತ ಓಲಿ ನೀರ್‌ಗ್ ಬೂರುಂಡು. ಓಹೋ ಎನ ಓಲಿ ಪೋಂಡೂಂದ್‌ದ್ ಆಳ್ ಬುಳಿಪುನಗ ಓಡಲೆ ಪಂಡೆಗೆ. ದಾಯೆ ಬುಳಿಪುವ ಅಪ್ಪೆ? ನೀರ್‌ದ ನೀರ್‌ಗ್ ಪೊಂಡ್. ನಿನ್ನನಿನಡ ಉಂಡೂಂದು—ಅಂಚ ಇತ್ತೆ ನೀರ್ ಬೆರಯಿನ ಪೇರ್‌ಬಪಿನಿ ಪೂರಾ ಕಾಸಿದ ಅತ್ತ್‌ಡ ಚಾಯುವ ಗಡಂಗ್‌ಗ್. ಅವುಳು ಅಯಿಕ್ ಬೊಕ್ಕಾತ್ ನೀರ್‌ಕೂಟು ವೆರ್, ಬೇರವುಲ್ಪುವೆರ್. ಕಡೆಕ್ ತೂನಗ ಬ್ಯಾರಿಪಂಡಿಲೆಕ್ಕ 'ಬಿರಾನ್‌ಗ್ ಪತ್ ಪಣ ಇಂದಿನೆಂಗೆ ಕೆಲಜನ ಕಾಪಿ ಸರ್‌ದ್ ದುಡ್ಡು ತಿಂದ್‌ಪಾಡಿಯೆರ್. ಗಂಡಂಗ್ ದಾಯೆ ನಷ್ಟಬೂರ್ದು ದಿವಾಳಿದೆತ್ತೆ. ಪೇರ್ದಾಯದೊಡ್ಡು ಅದೊರ್ಗದ್ದ ಬತ್ತ್ಂಡ್. ನೀರ್‌ದ ನೀರ್‌ಗ್ ಪೋಂಡು. ನಿಜವಾಯಿನ ಪೇರ್‌ದ ಗುಣ ಅಂಚತ್ತ್. ಏತಗುಣ ಏತ ಪಂಡಲಾ ಮುಗ್ಯಂದ್ ಎಂಚಾಂದ್ಂಡ| ಸರ್ವಾ ಗೌಃ ಕ್ಷೀರಾಮೃತೇನ ಬ್ರಹ್ಮಾಂಡೇ ರಾಜತೇ ಪರಮ್ ॥ ಧರ್ಮಾರ್ಥಕಾಮಮೋಕ್ಷಾಣಾಂ ದಾನೇನಾತಿ ವಿರಾಜತೇ || – (ಸೋಣ) ದೇವೆರ್ ಉಂಡುಮಲ್ತ್‌ದಿ ಈ ಲೋಕದುಲಾಯಿ ಬೆಳಗುನ ಮಾತಾವಸ್ತುಲೆಡ್ಲಾ ಪಸುತನ ಪೇರೆನ್ಪಿ ಅಮುತೊರ್ಡುದಾತ್ರ ಧರ್ಮ, ಅರ್ಥ, ಕಾಮ, ಮೋಕ್ಷನೇ ದುಂಬಾಯಿನ 'ಇಷ್ಟಾರ್ತೊಲೆಗ್ ಕೊಪಿರ್ನೈಡ್ದಾತ್ರ ಮಾತ್ಯೆಡ್‌ಡ್‌ಲಾ ಮಿತ್ರಬಗೇಂದ್ ಬೆಳಗೊಂದು ಜನಕುಲೆಡ್‌ದ್ ಪುಗರ್ಪೊಂದುಂಡುಲ ಹಲವು ವಿದತ ಪಾಪೊಕುಳೆನ್ ಕಳಿಪೊಣೊಡಾಂಡ ಪಂಚಗವ್ಯ ಗೆತ್ತೊಣೊಡುಂದು ಧರ್ಮ ಸಾತ್ರೊಡು ಒಂಜನೆ ಪರಿಯಾರ ಪಣ್ತೆಂಡ್ ಅಪನಗ ಈ ಪಸು ಏತ್ ಮಲ್ಲ ವಸ್ತ್ಂದ್ ತೆರಿಯೊಣೊಲಿ.

(ನನದವು ನಸೋರ)

ಈ ದಾಯೆ ಮುದ್ದೆ ಆಯಿನಿ?

ಬರೆತಿನಾಯೆ: **ನಂದೊಳಿಗೆ ಸೀನಪ್ಪ ಹೆಗಡೆ, ಪುರಾಲ್.**

ಒಂಜಿ ದಿನ ನಾಲ್ಪಿಲ್ಲ್ ನಾಗಮಕ್ಕೆ ವ ದ್ಯಾನ್ನೊಗು ಉಂಡುಮು ತನೆಲೆಕ್ಕಂತಿ ಪೊಣ್ಜೀವೆ ಕೂಟದಡೆಗ್ ಪೋದು ಅವುಲು ಒತ್ತೊರ್ತ್ಡನೆ ಈ ದಾಯೆ ಮುದ್ದೆ ಆಯಿನಿ? ಇಂದ್‌ದ್ ಕೇಂಡಿನೆಕ್ಕ ಅಕ್ಲ್ ಪಂಡಿಪಾತೆರೊಲೆನ್ ಕೇನ್ಪಿ ಲೆಕ್ಕ ಬರೆಪೆ:—

ನಾಗಮಕ್ಕೆ—ಅಪ್ಪೇ ಪದ್ದಕ್ಕ! ಈ ದಾಯೆ ಮುದ್ದೆ ಆಯಿನಿ?

ಪದ್ದಕ್ಕ—ಎನ ಅಪ್ಪೆ, ಅಮ್ಮೆ, ತಮ್ಮಲೆಮಿನಿ ಮಾತೆ ಕೂಡ್ದು ಮುದ್ದೆ ಆವೊಡ್ಂದ್ ಪಂಡೆರ್. ಆಕ್ಲೆಗ್ ಪಿಸ್ರ್ ಬರ್ರೆ ಆವಂದ್ಂದ್‌ದ್ ಮುದ್ದೆ ಆಯೆ.

ನಾಗ— ಚಂದಕ್ಕಾ! ಈ ದಾಯೆ ಮುದ್ದೆ ಆಯಿನಿ?

ಚಂದಕ್ಕ—ಆಪಿದಿಲ್ಲದ ಪೂವಕ್ಕೈ ಆಲೆ ಜೋಕ್ಲೆಗ್ ನೋಪುನ ತೊಯಿಪುನ ಹಾಕುನ ಕುಟ್ಟುನ ತೂದು ಎಂಕ್‌ಲಾ ಬಾಲೆಲಾಂಡ ಇಂಚನೇ ಮಲ್ಪೊಲಿಂದ್ ನಿನೇದ್ ಮುದ್ದೆ ಆಯೆ.

ನಾಗ— ಸೇಸಿಯಕ್ಕಾ! ಈ ದಾಯೆ ಮುದ್ದೆ ಆಯಿನಿ?

ಸೇಸಿ— ಮಾತೆರೆಲೆಕ್ಕ ಎಂಕ್‌ಲಾ ಒಂಜಿ ಬಾಲೆಯಿತ್ತ್ಂಡ ಆಪ್ಪೆನಿ ಗೊಬ್ಬಾವೊಂದು ನಲಿಪಾವೊಂದು ತೆಲಿಪಾವೊಂದು, ತಟೊಂದು, ತೂಂಕೊಂದು, ಜೆಪ್ಪಾವೊಂದು, ಉಸ್ಸಾವೊಂದು, ತಿನ್ಪಾವೊಂದು, ಉಪ್ಪೊಲಿಂದ್ ಮುದ್ದೆ ಆಯೆ.

ನಾಗ— ಉಮ್ಮಕ್ಕಾ, ಈ ದಾಯೆ ಮುದ್ದೆ ಆಯಿನಿ?

ಉಮ್ಮಕ್ಕ—ಆಕ್ಲಾದೇ ನಾಡೊಂದು ಬತ್ತಿನ ಪೊದು. ಬದಿ ಇಜ್ಜಾಂದೆ ಆಪಿನೆಡ್ದ್‌ಲಾ ಆರೆಗ್ ಜೊಕ್ಲು ಬಾಲೆಲು ದುಂಬೇ ಇತ್ತಿನೆಡ್ದ್ ಯಾನ್ ಮಾತ ಜೋಕ್ಲೆಗ್ ಅಪ್ಪೆ ಆಪಿನ ಸಂತೋಸೊಗಾದ್ ಮುದ್ದೆ ಆಯೆ.

ನಾಗ— ಪುಟ್ಟಮಕ್ಕಾ! ಈ ದಾಯೆ ಮುದ್ದೆ ಆಯಿನಿ?

ಪುಟ್ಟಕ್ಕ—ಎನ ಅಪ್ಪೆಲಾ ಅಮ್ಮೆರ್ಲಾ ಆ ಮುದಿ ಜಬ್ಬಕ್ಕೈಟ್ ಕಾಸುಂಡು ಇಂದ್‌ದ್ ಮುದ್ದೆ ಮಲ್ತೆರ್. ಇತ್ತೆ ದಾನುನಿ?

ನಾಗ— ಅಬ್ಬಕ್ಕಾ! ಈ ದಾಯೆ ಮುದ್ದೆ ಆಯಿನಿ?

ಅಬ್ಬಕ್ಕೆ—ಎನ್ನ ಪ್ರಾಯದ ಮಾತ ಪೊಣ್ಣುಲೆಗ್ಲಾ ಮುದ್ದೆ ಆಯಿ

ಲೆಕ್ಕ ಯಾನ್‌ದಾಯೆ ಮನಿಪುಂದೆ ಕುಲ್ಲುನಿಂದ್ ಮದ್ಮೆ ಆಯೆ.

ನಾಗ—ಸರ್ಸಕಾ! ಈ ದಾಯೆ ಮದ್ಮೆ ಆಯಿನಿ?

ಸರ್ಸಕ್ಕೆ—ಎಂಕ್ಲೆ ಇಲ್ಲಡ್ ಯಾನ್ ಪಂಡಿಲೆಕ್ಕ ಕೇನು ನಾಕ್ಲು ಯೇರ್ಲಾ ದಾಂತಿನೆಕ್ ಯಾನ್ ಪಂಡಿಲೆಕ್ಕ ಕೇನುನ ಒಂಜಿ ಕಂಡನ್ಯೆ ಆಂಡಲಾ ಉಪ್ಪಂಡ್‌ಂದ್ ಎಣ್ಣ್‌ದ್ ಮದ್ಮೆ ಆಯೆ.

ನಾಗ—ಆಂದಾ ಸೀತಮಕ್ಕ! ಈ ದಾಯೆ ಮದ್ಮೆ ಆಯಿನಿ?

ಸೀತಮಕ್ಕ—ಎನ ಅಣ್ಣಗೊಂಜಿ ಪೊಣ್ಣಾವೊಡಾಂಡ್ ಐಕಾದ್ ಲಾ. ಬೊಕ್ಕ ಎಡ್ಡೆಡ್ಡೆ ಸೀರೆ ಪೊರ್ಲುಪೊರ್ಲುದ ರವಕೆ ಪೊಸ ಪೊಸ ನಗೊಕ್ಕುಲೆನ್ ದೀವೊಂದು ಒಡಿಪುದ ಪರ್ಯಾಯೊಗು, ಕಾರ್ಲದ ದೀಪೊಗು. ಸೂಡದ ಪಸ್ಟಿಗಾಂಡಲಾ ಪೋವೊಲಿಂದ್‌ದ್ ಮದ್ಮೆ ಆಯೆ.

ನಾಗ—ಮುತ್ತಕ್ಕಾ! ಈ ದಾಯೆ ಮದ್ಮೆ ಆಯಿನಿ?

ಮುತ್ತಕ್ಕೆ—ಪರಬ್ಬೆ ಕಂಡೆನ್ಯೆ ಬೇಗತ್ತೈತೆಡ ಆಯನ ಬದ್ಕ್ ಬಾಗ್ಯಪೂರ ತಿಕ್ಕಿನಾಂಡ ಬೊಕ್ಕ ಕುಸಿಬತ್ತಿಲೆಕ್ಕ ಉಪ್ಪೊಲಿಂದ್ ಎಣ್ಣ್‌ದ್ ಮದ್ಮೆ ಆಯೆ.

ನಾಗ—ಕಾವಕ್ಕಾ! ಈ ದಾಯೆ ಮದ್ಮೆ ಆಯಿನಿ?

ಕಾವಕ್ಕ—ಇತ್ತೆ ಕಲ್ಜಿಗದಕಾಲ. ಆಯಿನೆಡ್ದ್ ಒಲ್ಲ ಹೆಚ್ಚಿಕಮಿ ಯಾವ್ ಪೊಣ್ಣ ನಮುಗುಟ್ಟು ಪಿದಾಯಿ ಬೂರಂದಿಲೆಕ್ಕ ಒಂಜಿ ಕಂಡನ್ಯೆ ಇತ್ತಂಡ ಎಡ್ಡೆಂದ್ ಮದ್ಮೆ ಆಯೆ.

ನಾಗ—ಸಾಂತಕ್ಕಾ! ಈ ದಾಯೆ ಮದ್ಮೆ ಆಯಿನಿ?

ಸಾಂತಿ—ಕಂಡನ್ಯಗ್ ಚಾಕ್ರಿಉಂಡುಂದಿನೆನ್ ಕೇಣ್ದ್‌ದ್ ಪುದರ್‌ಗೊಂಜಿ ಕಂಡನ್ಯೆ ಇತ್ತಂಡ, ಪಗೆಲ್ ಇಡೀ ಕುಸಿ ಬತ್ತಿಲೆಕ್ಕ ಉಪ್ಪೊಲಿಂದ್ ಎಣ್‌ದ್ ಮದ್ಮೆ ಆಯೆ.

ನಾಗ—ಮಿನಕ್ಕಾ! ಈ ದಾಯೆ ಮದ್ಮೆ ಆಯಿನಿ?

ಮಿನಕ್ಕ—ಆಣುಲು ಮಾತ ಹಾದ್ರ ಸೂಳೆಗಾರಿಕೆ ಮಲ್ತುದ್ ಹಾಳಾಪೆರ್‌ಂದ್ ಪನ್ಪಿನ ಕೇಣ್ದ್‌ದ್ ಆಣುಲು ಹಾಳಾಂಡ ಊರೇ ಹಾಳಾಪುಂಡುಂದು ಎಣ್ಣ್‌ದ್ ಊರುದ ಎಡ್ಡೆಗಾದ್ ಮದ್ಮೆ ಆಯೆ.

ನಾಗ—ಸುಂದರೀ! ಈ ದಾಯೆ ಮದ್ಮೆ ಆಯಿನಿ?

ಸುಂದರಿ—ಇತ್ತೆದ ಮರ್ಜಿಲೆಡ್ ಇಂಗ್ಲೀಷ್ ಪೇಶನ್ ಹ್ಯಾಟ್, ಬೂಟ್, ಕೋಟ್, ಸೂಟ್, ಬೆಲ್ಟ್, ರಿಸ್ಟ್, ಸೆಂಟ್, ಬಿರ್ಲಿಂಟೈನ್, ಪೌಂಟನ್, ಟವೆಲ್, ಕಲರ್, ಪೌಡರ್ ಕ್ರೀಂ, ವೆಸ್ಲೀನ್, ಕ್ಯಾಸ್, ಇನ್ಪಿನವು ಎಂಚಿನವುಂದು ಗೊತ್ತು ದಾಂತಿನೆಡ್ದ್ ಅವ್ವೆನ್ ತೂವರೆಗಾದ್ ಮದ್ಮೆ ಆಯೆ

ನಾಗ—ಕಮಲಾ! ಈ ದಾಯೆ ಮದ್ಮೆ ಆಯಿನಿ?

ಕಮಲ—ಎನ್ನ ಕುಂಟು ರವಕೆಲೆನ್ ದೆತ್ತ್‌ದ್ ದೀವರೆಲಾ ಎಂಕ್ ಬೋಡು ಬೋಡುತ್ತ ಸಾಮಾನ್‌ಲೆನ್ ಪಂಡಿಲೆಕ್ಕ ಕನವರೆಲಾ ಎಡ್ಡೆಜನ ತಿಕ್ಕಂದಿನೆಕ್ಕಾದ್ ಮದ್ಮೆ ಆಯೆ.

ನಾಗ—ಗಿರಿಜಾ! ಈ ದಾಯೆ ಮದ್ಮೆ ಆಯಿನಿ?

ಗಿರಿಜಾ—ಎನ್ನ ಕೆಲಸ ಮಾತ ಯಾನೇ ಮಲ್ಪೊಡಾಯಿನೆಡ್ದ್ ಕಂಡನ್ಯೆ ಆಯಿನಾಂಡ ಮಾತ ಜೇಲೆಲಾ ಆಯಡ್ದೇ ಮಲ್ಪಾದ್ ಸುಕೊಟ್ಟು ಉಪ್ಪೊಲಿಂದ್‌ದ್ ಮದ್ಮೆ ಆಯೆ

ನಾಗ—ಲಿಲ್ಲೀ! ಈ ದಾಯೆ ಮದ್ಮೆ ಆಯಿನಿ?

ಲಿಲ್ಲಿ—ಬಾಲೆಲುದಾಂತಿ ಆಣುಲೆಗ್ ಗತಿಜ್ಞಂದ್ ಪುರಾಣಿಕೆರ್ ಪನ್ಪಿನ ಗೇನ್‌ದ್ ಆಕ್ಲೆಗೊಂಜಿ ಎಡ್ಡೆ ಗತಿಯಾಂಡಲಾ ತಿಕ್ಕಡ್‌ಂದ್ ಮದ್ಮೆ ಆಯೆ.

ನಾಗ.—ಪೂವಕ್ಕಾ! ಈ ದಾಯೆ ಮದ್ಮೆ ಆಯಿನಿ?

ಪೂವಕ್ಕೆ—ಕಂಡ್ಯನ ಕ್ಯೆಟ್ ಮಸ್ತ್ ಪಣವು ಕಾಸ್ ಉಂಡುಂದಿನ ಕೇಣ್ದ್‌ದ್ ಆಯನ ಬದ್ಕ್ ಬಾಗ್ಯಮಾತ ಎನ್ನ ಬಾಲೆಲೆಗೇ ತಿಕ್ಕುನಿಂದ್ ಗಿರೇದ್ ಮದ್ಮೆ ಆಯೆ.

ನಾಗಮ್ಮ—ಓ ಎನ್ನ ಒಪ್ಪಪುಟ್ಟೆ ಮಗ್ಗಿ ಪಲಿಯಾಲ್ಲೆ. ನಿಕ್ಲು ಪಂಡಿನ ಮಾತಲಾ ನಿಜಾದೇ **ಉಪ್ಪು**. ಆಂಡ ಮದ್ಮೆ ಆವಂದಿನಾಕ್ಲು ಎನ್ನವೊಂಜಿ ಪಾತೆರ ನೆಂಪುದೀವೊಲ್ಲೆ!

ಮದ್ಮೆ ಆಪಿನೆಡ್ದ್ ದುಂಬೇ ಆಣನ **ಎಡ್ಡೆಪಡ್ಕೆನ್** ಸಮಾಪಿಂದೊಂದು ಮದ್ಮೆ ಆಲೆ. ನಿಕುಲು **ಪಂಡಿಲೆಕ್ಕ ಬೇತೆ** ಒವ್ವು ಹಾಳಾಂಡಲಾ ಸಮ ಮಲ್ತೊನೊಲಿ. ಕಂಡ್ಯನೆ ಹಾಲಾಂಡ ಕಷ್ಟನೇ ಸಯಿ. ಮದ್ಮೆ ದಾಲ ದಿನೋಲ ಆಪಿನಾವತ್. ಮರ್ಯಾದಿತ್ತಿನಾಕ್ಲೆಗ್ "ಜನ್ಮೊಗೊಂಜಿ ಮದ್ಮೆ"ಇನ್ಪಿನೆನ್ ಮದಪಡೇ.ಮದ್ಮೆ ಆಯಿಬೊಕ್ಕ ಕಂಡನ್ಯೆ ಪರ್ಪಿನಾಯೆ ಆವಡ್, **ಗೊಬ್ಬುನಾಯೆ** ಆವಡ್ ಎಂಚಿನಾಯೆ ಆಂಡಲಾ ಆಯಗ್ ತಕ್ಕನಡತೊನೊಡಾಪುಂಟು ಇನ್ಪಿನವು ನೆಂಪು ಉಪ್ಪಡ್, ಯಾನ್ ಪೋಪೆಂದ್ ಪೋಯಲ್-

ಕತ್ತಲೆಡ್ ತುಳುನಾಡ್

ಗ್ರೀಕ್ ಭಾಷೆ ಪಾತೆರೋಣ್ಣು, ಗ್ರೀಕೆರೆ ದುಸ್ತು ಪಾಡೊಣ್ಣು, ಗ್ರೀಕೆರೆ ಮರ್ಜಿಡ್ ನಡಪು ಆಸ್ಯಾಖಂಡದಾಕುಳೆಗ್ ಹೆಲ್ಲೇನಿಸ್ತೆರ್ ಇನ್ಪಿ ಪುದರ್ ಉಂಡು. ಗ್ರೀಕೆರೆ ಸಾಮ್ರಾಜ್ಯ ಸತ್ತೆದ ಕಾಲೊಡು ಯೆಹೂದ್ಯೆರ್, ಸೀರಿಯಾದಾಕುಳು, ಪಾರ್ಸಿಯೇರ್ ಬೊಕ್ಕ, ಪಂಜಾಬುದಕ್ಲ್ತ ಹಿಂದುಳುಲಾ ಹೆಲ್ಲೇನಿಸ್ತೆರಾಯೆರ್. ಮಗಧದೇಶದ !ಚಂದ್ರಗುಪ್ತ ಅರಸು ಬಾಕ್ಟ್ರಿಯಾದೇಶದ ಸೆಲ್ಯೂಕಸ್‌ನ ಮಗಳ್ ಪತೇನಾ (Patena) ಇನ್ಪಿನಾಳೆನ್ ಮದ್ಮೆ ಆಯಿನೆಡ್ದ್ ಆಳೆಡೊಪ್ಪ ಗ್ರೀಕ್ ಭಾಷೆ ದುಸ್ತು, ಮರ್ಜಿಳು ಹಿಂದು ಅರಸುಳೆ ಅರಮನೆಳೆಡ್ ಪೊಗ್ಗಿಯು ಮಾತ್ರತ್ತಂಡೆ ಅವೆನ್ ತೂದು ಪ್ರಜೆಳುಲಾ ಗ್ರೀಕೆರೆಡೊಪ್ಪ ಸರಾಗ ಸಂಸರ್ಗಡಿತ್ತೆರ್. ಆಕುಳೇ ಮುಳ್ತ ಹೆಲ್ಲೇನಿಸ್ತೆರ್. ಅಲೆಕ್ಸಾಂದರ್ ಕ್ರಿ. ದು. ೩೨೩ಟ್ ತೀರ್‌ದ್ ಪೋಯೆಡಲಾ ತಾನ್ ಗೆಂದ್‌ದಿ ರಾಜ್ಯೊಳೆಡ್ ಆಯೆ ಉಂತಾದಿತ್ತಿ ಹೆಲ್ಲೇನಿಸ್ತಿರಾಯಿ ಸೈನೀಕೆರ್‌ಲಾ ಆಯ ಸರಕಾರೀ ಇಲಾಖೆದ ಬೇತೆ ಜನಕುಳುಲಾ ಇರಾಣ, ಮೆಸೊಪೊಟಾಮ್ಯ ರಾಜ್ಯೊಳೆಡ್ ನನಲಾ ದಿಂಜ ವರ್ಸಮುಟ್ಟ ಎಲ್ಯ ಎಲ್ಯ ಸ್ವತಂತ್ರ ಸಂಸ್ಥಾನೊಳೆನ್ ಕಟ್ಟ್‌ದ್ ವಾಸಾದಿತ್ತೆರ್- ತನುಕುಳು ಕಟ್ಟೊಂಡಿ ಆಯಾ ಸಂಸ್ಥಾನದ ಮುಖ್ಯ ಪಟ್ಣೊಳೆಡ್ ನಿರ್ಣಯ ಮಳ್ತಿ ಅನಾಪಟ್ಣೊಡು ನಾಲ್‌ವರ್ಸೊಗೊರ ಒಲಿಂಪಿಯಾ ಇನ್ಪಿ ಗೊಬ್ಬುಳೆ ಪರ್ಯಾಯೊನ್ ಏರ್ಪಾಡ್ ಮಳ್ತ್‌ದ್ ಐಕ್, ಬೇತೆ ಮಾತಾ ಹೆಲ್ಲೇನಿಸ್ತ್ ವಸಾಹತೊಳೆಡ್ದ್ ಜನ ಬತ್ತ್‌ದ್ ಕೂಡುಲೆಕ್ಕ ಮೋಜೆಂಡ್, ಹೀರತ್ ಬೊಕ್ಕ ಕಂದಹಾರ್ ಉಂದುಮಾತಾ ದುಂಬು ಅಲೆಕ್ಸಾಂದ್ರಿಯಾ ಇನ್ಪಿ ಪುದರುಳೆಡೇ ಇತ್ತ್. ಇತ್ತೆ ಮೆರ್ವ್ ಉಂದ್‌ದುಪ್ಪುನೆಕ್ ಸುರುಟು ಅಲೆಕ್ಸಾಂದ್ರಿಯಾ ಬೊಕ್ಕ ಅಂತಿಯೋಖ್ ಇನ್ಪಿ ಪುದರಿತ್ತ್ಂಡ್.

ಆ ಕಾಲೊಡು ಮೆಸೊಪೊಟಾಮ್ಯ, ಈರಾಣಿ ರಾಜ್ಯೊಳೆಡಿತ್ತಿ ಹೆಲ್ಲೇನಿಸ್ತಿ ಗ್ರೀಕೆರೆಗ್‌ಲಾ ನಮ ತುಳುಕರಾವಳಿಗ್‌ಲಾ ವ್ಯಾಪಾರ ನಡತೊಣ್ದಿತ್ತ್ಂಡ್ ಇನ್ಪಿನೆಕ್ ಪಾಕ ಆಧಾರೊಳೆನ್ ತಿರ್ತ್ ಬರೆವೆ. ಚರಿತ್ರೆದ ಪ್ರಕಾರ ಆ ಸಮಯೊಳೆಡ್ ಮೂಳು ಸಾತ್ವತ ರಾಜವಂಶದ ಅರಸುಳು ಆಳೊಣ್ದಿತ್ತೆರ್. 'ಸಿರಿಸಾತೋಯಿ' ಅಂದ್‌ದ್ ಗ್ರೀಕ್ ಭಾಷೆಡ್ ಬರೆತಿ ಬರವು ಇತ್ತಿ ಒಂಜಿ ತುಳು 'ಸಿರಿ' ಇನ್ಪಿ ನಾಣ್ಯ. ಐತ ಒಂಜಿ ಮೆಯಿಟ್

ಹೆಲ್ಲೇನಿಸ್ತೆರೆ ಚರಿತ್ರೆಡ್ ತುಳುನಾಡ್

ಕ್ರಿ: ದು. ೨೦೦—ಕ್ರಿ. ಶ. ೧೦೦.

ಆನೆದ ಚಿತ್ರಲಾ ಬೊಕ್ಕೊಂಜಿ ಮೆಯಿಟ್ ರಡ್ದ್ ಕೂವೆಮರ ಇತ್ತಿ ಒಂಜಿ ಕಪ್ಪರ್‌ದ ಚಿತ್ರಲಾ ಇತ್ತಿನವಾದ್, ಮದ್ರಾಸ್ ಪ್ರಾಚೀನ ವಸ್ತು ಸಂಗ್ರಹಾಲಯೊಡು ತೂವೆರೆ ದೀತಿನವು ಉಂಡು. ಒಂಜಿ ದೇಶೊಡು ನಾಣ್ಯ ಮಳ್ಪೊಡಾಂಡ ಔಳು ಸ್ವಾತಂತ್ರ್ಯ, ಉಚ್ಚನಾಗರೀಕತೆ, ಸಂಸ್ಕೃತಿ, ಬರವು, ವ್ಯಾಪಾರ, ಶಾಸ್ತ್ರ, ಶಾಶ್ವತ ವ್ಯಾಪಾರಮಂಡಳಿ ಉಂದು ಮಾತಾ ದಾಂತೆ ಆವಂದ್. ಅಂದ್‌ದ್ (Numismatics) ಇನ್ಪಿ ನಾಣ್ಯ ಶಾಸ್ತ್ರ ಓದಿನಾಕುಳು ಪಿಂಬೆರ್. ಆಫ್ರಿಕದ ಅನಾಗರಿಕೆರೆಡ್ ನಾಣ್ಯ ನಡಪಂದ್. ನಮ ತುಳುನಾಡ್‌ಗ್ ಆ ಕಾಲೊಡು ಸಂಪೂರ್ಣ ರಾಜಕೀಯ ಸ್ವಾತಂತ್ರ್ಯಲಾ ಉಚ್ಚಮಳ್ತ್‌ದ್ ಇಂಚ ಐಕ್ಯೊಡು ಇತ್ತ್‌ದ್, ತನುಕುಳೆ ಉಳಯಿ ಸ್ಥಾಪನೆ ಆಯಿ ಬಲೊನು ಸುತ್ತಮುತ್ತದ ಬಲಿಷ್ಠ ಅರಸುಳೆ ಸಹಾಯೊಗು ಅತ್ತ್‌ಡ ಅಪಾಯೊಗು ಉಪಯೋಗ ಮಳ್ತೊಂದಿತ್ತೆರ್. ಸಮಾಧಾನದ ಕಾಲೊಡು ವ್ಯಾಪಾರನೇ ಆಕುಲೆ ಮುಖ್ಯ ಕಸುಬು ಆದಿತ್ತ್ಂಡ್. ಇಂಚಾದ್ ಆಕುಳೆಡೊಪ್ಪ ವ್ಯಾಪಾರ ಸಂಸೊರ್ಗೊಡಿತ್ತಿ ಪರದೇಶೊಳೆಡ್ ತನುಕುಳೆ ನಾಣ್ಯದ ಬಿಲೆಕ್ ತಕ್ಕದ ಸ್ಥಳೀಕ ನಾಣ್ಯೊಳೆನ್ ಅಳ್ತಳ್ತ ಸರಕಾರ್‌ಡ್ದ್ ಮಳ್ಪಾಯೆರ್. ಗ್ರೀಕೆರೆಡೊಪ್ಪ ಚಲಾವಣೆ ಆಪಿ ಗ್ರೀಕ್ ಅಕ್ಷರದ ಮೇಲ್ಬರವು ಇತ್ತಿ ಇಂಚಿತ್ತಿ ನಾಣ್ಯೊಳೆಗ್ ಆಪಗದ ನಾಗರೀಕ ಲೋಕ ಒರ್ಮೆಲಾ ಚಲಾವಣೆ ಬಿಲೆ ಇತ್ತ್ಂಡ್. ಇಂಚ, ಈರಾಣೆಡ್ ಒಂಜಿ ಊರುದ ಚಿತ್ರ ಬರೆದಿತ್ತಿಂಚಿತ್ತೀ ಇನ್ಪಿ ನಾಣ್ಯ, ಮೇದಿಯಾ ರಾಜ್ಯೊಡು ಒರ್ತಿ ರಾಣಿನ ತರೆತ ರೂಪು ಇತ್ತಿ ಮೂಸಾ ಇನ್ಪಿ ನಾಣ್ಯ ಇತ್ತ್ಂಡ್. ಪರದೇಶೊಳೆಡ್ ತನುಕುಳೆ ವ್ಯಾಪಾರದ ಭಂಡಸಾಲೆಳು ಇತ್ತಿ ಊರುಳೆಗ್ ತನುಕುಳೆ ಭಾಷೆಡ್ ಪುದರ್ ದೀಪಿನವುಲಾ ಅಳ್ತತ್ತ ಸಾರಸ್ವತ ಸಂಗ್ರಹ ಮಳ್ಪುನವುಲಾ ಆಪಗ ಆಕುಳೆಡ್ ಒಂಜಿ ರೂಢಿತ್ತ್ಂಡ್. ಊರುಳೆಗ್ ಆಕುಳು ದೀಯಿ ಪುದರುಳು ಪಲೆಸ್ತೀನೋಡು, ಅಲೆಪ್ಪೊ, ಫಿಲದೆಲ್ಫಿಯ, ಅಂತಿಯೋಖ್ಯ; ಐಗುಪ್ತ್‌ಡು, ಅಲೆಕ್ಸಾಂದ್ರಿಯ; ಮೆಸೊಪೊಟಾಮ್ಯಡ್ ಕ್ತೇಸಿಫೊನ್, ಸೆಲ್ಯೂಸಿಯ; ನಮ ಹಿಂದುಸ್ಥಾನದ ಒತ್ತ್‌ಡು ಈರಾಣೆಡ್ ನಾಗರೀಕತೆಲಾ ಇತ್ತ್ಂಡ್. ಆ ಕಾಲೊಡೇ ಬೌದ್ಧೆರ್, ಜೈನೆರ್ ಜಡಕಾಯಿ ಹಿಂದುಸ್ಥಾನೊಡ್ದು ಇಡೆಗ್ ತನುಕುಳೆ ಮತಪ್ರಚಾರಣೆ ಮಳ್ಪೆರೆ ಬತ್ತೆರ್. ಆಪಗ ಸಂಪೂರ್ಣ ಪಕ್ವ ಆದಿತ್ತಿ ಸಂಸ್ಕೃತ, ಮಾಗಧೀ, ಪಾಲೀ ಭಾಷೆ

ಚಂದಾದಾರರಲ್ಲಿ

ಚಂದಾಹಣ ಬಾಕಿ ಇರುವ ನಮ್ಮ ಚಂದಾದಾರರು ಆದಷ್ಟು ಬೇಗನೇ ತಮ್ಮ ಹಣವನ್ನು ಮಣಿಯಾರ್ಡರ್ ಮೂಲಕ ದಯವಿಟ್ಟು ಕಳುಹಿಸಿಕೊಡಬೇಕಾಗಿ ಅಪೇಕ್ಷಿಸುತ್ತೇವೆ. ವಿ. ಪಿ. ಮಾಡುವದಾದರೆ ಐದಾಣೆ ಹೆಚ್ಚಿ ಬೀಳುವದು.

ನಮ್ಮೊಡನೆ ಪತ್ರವ್ಯವಹಾರ ಸುವವರು ತಮ್ಮ ಚಂದಾ ನಂ ವನ್ನು ಸೂಚಿಸಿ ಬರೆಯಬೇಕ ವಿನಂತಿ. ಮೆನೆಜರ್, 'ನವಯು

ಜನಸೇವೆಯ ಉದಾತ್ತ ಉದ್ದೇಶದಿಂದ ನಿಸ್ವಾರ್ಥ ಮನೋವೃತ್ತಿಯಿಂದ, ತ್ಯಾಗ ಬುದ್ಧಿಯಿಂದ ಜನತೆಯ ಹೃದಯವನ್ನೆಷ್ಟು ಸುಲಭವಾಗಿ ವಶ ಮಾಡಿಕೊಂಡು ಅವರ ಸರ್ವತೋಮುಖವಾದ ಬೆಂಬಲವನ್ನು ಪಡೆಯಬಹುದೆಂಬುದಕ್ಕೆ ಈ ಚುನಾವಣೆಯೇ ಪ್ರತ್ಯಕ್ಷ ನಿದರ್ಶನವಾಗಿದೆ.

ಕೊಂಗ್ರೆಸ್ ವಿಜಯ!

ಹರಿಜನರ ಸೀಟೂ ಕೊಂಗ್ರೆಸಿಗೆ ಸಿಕ್ಕಿತು!

ಕುಂದಾಪುರ ಡಿವಿಜನಿನಲ್ಲಿ ಕೊಂಗ್ರೆಸಿನ

ಳುಲಾ ವಿದ್ವಾಂಸಿಕೆಲಾ ಆಕುಳೆ ನಾಗರೀಕತೆಲಾ ಮೂಳು ಪ್ರಚಾರ ಆಪೇದ್ಂಡ್. ಆ ಮತೊಳೆಡಿತ್ತಿ ಮಹತ್ತತ್ತ್ವೊಕೆನ್ ಗ್ರಹಿತ್‌ದ್ ತನುಕುಳೆಗಿತ್ತಿ ಸರ್ವಸ್ವೊನು ಬುಡುದು ಆವೆನ್ ಅಂಗೀಕಾರ ಮಳ್ಪುಂಚಿತ್ತಿ ಬುದ್ಧಿ ಪ್ರೌಢಿಮೆ ಇತ್ತಿ ಜನಕುಳು ಮೂಳಿತ್ತೆರ್. ಇನಿಮುಟ್ಟೊಗುಲಾ ಉಳ್ಳೆರ್. ಮೋಕುಳು ಆ ಕಾಲದ ಗ್ರೀಕೆರೆಡ್ದ್ಲಾ ರೋಮಾಯೆರೆಡ್ದ್ಲಾ ಉಚ್ಚ ನಾಗರೀಕೆರಾದಿತ್ತಿ ಜನೊಕುಳು. ಅಂಚಾಯಿನೆಡ್ದ್ ಆ ನಾಣ್ಯೊಳು ಹೆಲ್ಲೇನಿಸ್ಟ್ ಗ್ರೀಕೆರೆಡೊಪ್ಪ ತುಳುನಾಡ್‌ದ್ ವ್ಯಾಪಾರೊಗಾದ್ ಮುಳ್ತ ಸಾತ್ವತವಂಶದ ಅರಸುನಾಕುಳು ಟಂಕ ಒತ್ತಾವಿನವಂಡ್‌ದ್ ತೆರಿಯೊಡಾಪುಂಡು.

ಸಿಂಧ್‌ದೇಶದ ಒಂಜಿ ಕಡೆಟ್ ಆಳೊಂದಿತ್ತಿ ಗೊಂಡಫಾರೆಸ್ (ಕ್ರಿ. ಶ. 47-49) ಇನ್ನಿ ಹೆಲ್ಲೆನಿಕ್ ಅರಸುನ ಆಸ್ಥಾನೊಗು ಬತ್ತ್‌ದಿತ್ತಿ ಥೋಮಾಸ್ ಇನ್ನಿ ಒರಿ, ಯೇಸುನ ಶಿಷ್ಯೆ, ಆಳ್ತ್‌ಡ್ದ್ ನಮ ತುಳುನಾಡ್‌ದ ಕಲ್ಯಾಣಪುರೊಕು ಬತ್ತ್‌ದಿತ್ತೆ ಇನ್ನಿ ಕಥೆ ಕ್ರೈಸ್ತೆರೆಡ್ ಉಂಡು. ಆಯೆ ಸನಾತನಿ ಯೆಹೂದಿ ಆದಿತ್ತಿನೆಡ್ದ್ ಯೆಹೂದ್ಯೆರತ್ತಾಯಿನಾಕುಳೆನೌಳು ಉಣಾಯೆ ಇನ್ನಿನೆಡ್ದಾವರ, ಆವು ಚರಿತ್ರೆ ಆದಿತ್ತ್‌ಂಡ, ಆ ಕಾಲೊಡು ಮೂಳು ಹೆಲ್ಲೇನಿಸ್ಟ್ ಯೆಹೂದ್ಯೆರೆ ವಸಾಹತ ಇತ್ತ್‌ಂಡ್ ಉಂಡ್‌ಂದ್ ತೆರಿಯೊಡಾಪುಂಡು.

ಸತೀಶ.

— ತುಳುವೆರೆನ ಮದ್ಮೆದಗ ದಾರೆಯೇರಾವುನ ಪಾತೆರ —

(ತುಳುನಾಡ್ ಪತ್ರಿಕೆಡ್ದ್) ಬರೆತಿನಾಯೆ: **ತುಳುವಾಲಿ**

ಮದ್ಮಾಯೆ-ಮದ್ಮಾಲೆನ್ ದಾರೆದ ಮನೆಟ್ ಕುಲ್ಲಾದ್ ಒಂಜಿ ಕಂಚಿದ ಗಿಂಡಿಡ್ ನೀರ್ ಮೈತದ್, ಒಂಜಿ ತಾರೆದ ಸಿಂಗಾರ, ಕುಕ್ಕುದ ಕೊಡಿ, ಪೆಲತ್ತ ಕೊಡಿ, ಬಚ್ಚಿರೆ ಮಿನಿಮಾತ ಐಟ್‌ದೀದ್, ಐತಮಿತ್ತ್ ಒಂಜಿ ತಾರಾಯಿದೀದ್ ಆನತಮೆರ್ ಪೊಣ್ಣತಮೆರುಲು ಕೂಡುವು. ಪಕ್ಕ ಪರವೂರುದಾಕ್ಲೆಡ ಕೇಂಡೊಂದು—

ದಾರೆಯೇರಾನಗ ಪನ್ಪಿ ಯೆಡ್ಡೆ ಪಾತೆರ:

ನಾಗಬೆರ್ಮೆರೆ ಕಟ್ಟ್‌ಡೇ, ತುಳುವಾಲ ರಿವಾಜಿಡೇ, ಮಗಳೆ ಸಂತಾನೊಡು, ಮಯೂರ ವರ್ಮೆ ದೇವಾಯ ಪಾಂಡಿ ಭೂತಾಳ ಪಾಂಡಿ ಮಲ್ತ್ಂಚಿ ಕಟ್ಟ್‌ಲೆಡ್, ಆನ ತರೆಟ್ ಪೊಣ್ಣ ನೆರಿಟ್, ಪರ್ವಂದ ಪಚ್ಚಡೆಡ್, ಕಾಸಿ ಪಟ್ಟೆದ ರಾಕೆ, ತಾಳಿ ಬಂದಿ, ಪಲ್ಲೆ ನೇವೆಳ, ಯೇರಾವೊಂದು, ಪುಳ್ಳಿ ಬಣ್ಣದ ಥೋತ್ರ ತುತ್ತುದು, ಗದ್ದೆಮಡಿ ತರೆತ್ರ ಕಟ್ಟ್‌ದ್, ಪರ್ವಂದ ಪಚ್ಚಡೆ ಪುಗ್ಗೆಲ್‌ಡ್ ಪಾಡ್ದ್, ಬಂಟಕತ್ತಿ ಕೈಟ್ ಪತ್ತ್‌ದ್, ಬೊಲ್ಲದ ಸಿರಿಗಿಂಡೆಡ್ ಸಿಂಗಾರದ ಪುಪ್ಪೊಡು ದಾರೆಯೇರಾವೊಂದು, ೧೨ ಆನ್ ಪೊಣ್ಣು ಬಾಲೆಲೆನ್ ಸರ್ಕೆಡ್ ಪೆದ್ದ್‌ದ್, ಪುರಾಲ ದೇವಾಸ್ತನೊಡು ಕಲಸ ತೀರ್ಥ ಮಿಂದ್, ಕಟೀಲ್ ದೇವಾಸ್ತ ಪರಕೆ ಸಂದಾದ್, ಬಪ್ಪನಾಡ್‌ದ್ ಆರತಿಮಲ್ತ್‌ದ್ ಅಂಗಾರ್ ನೆರೆ ಬನ್ನಂಗೆ ೧೨ ಜೋಡು ಎರು, ೧೨ ಜೋಡು ಬೋರಿ ದತ್ತ್‌ದ್, ಸಿರಿಪುಪ್ಪೆ ಪಾಡ್ದ ಮುಂಗಾರೆಡ್ ಉಂಬು ಬನ್ನಂಗೆ, ಪೆರ್ಗಪಾಸ್‌ಡ್ ಜತ್ತ್‌ದ್, ಪೇರ ನುಪ್ಪ ಉಂಡುದು ಸುಖ ಸಂತೋಸೊಡು ಕಾಲ ಕರಿತನೊಡು.

ಅಸುರನ್ನೆರೆಡಲಾ, ಹೋಬಳಿದಾಕ್ಲೆಡಲಾ, ಸೀಮೆ ಗುತ್ತು ಬರ್ಕೆ ಬಾರಗೆರೆಡಲಾ, ಪಕ್ಕ ಪರವೂರುದಾಕ್ಲೆಡಲಾ, ಸುತ್ತು ಗುತ್ತು ಪಾಲವೆರೆಡಲಾ, ಊರುದಾಕ್ಲೆಡಲಾ, ನಟ್ಟೆಲ್ ನಾಲ್ ಜಾಗೆದಾಕ್ಲೆಡಲಾ, ಸಾರಬಿದುಕುಲೆಡಲಾ ದಾರೆ ಯೇರಾದ್ ಕೊರ್ಪ, ದಾರೆ ಯೇರಾದ್‌ಕೊರ್ಪ, ದಾರೆ ಯೇರವೊನ್ವಾ ಇಂದ್ ಮೂಜಿ ಸರ್ತಿ ಮದ್ಮಾಯೆ ಮದ್ಮಾಲೆನ್ ಕೈ ಪತ್ತ್‌ದ್ ಲಕ್ಕಾದ್ ಕುಲ್ಲಾದ್ ಆಯಿಬೊಕ್ಕ ಮದ್ಮಾಯನ ದತ್ತ್‌ಡ್ ಮದ್ಮಾಲೆನ್ ಕುಲ್ಲಾವೆರ್. ಉಂದು ತುಳುವೆರೆ ಮದ್ಮೆ ರೀತಿ. ಅಯಿಡ್ದ್ ಬೊಕ್ಕ ಪೊದ್ದೆರಿಸ್ಟೆರ್ ಮಾತ ಕಂಜಿಗ್ ಪನವುನೀದು ಅರಿಟ್ ಸೇಸ ಪಾಡುವೆರ್. ಆಯಿಬೊಕ್ಕ ಮದ್ಮಾಯೆ ಮದ್ಮಾಲ್ ಲಕ್ಕ್ಂಡ್ ದೊಂಪ ಜತ್ತ್‌ದ್ ಬತ್ತಿಬೊಕ್ಕ ಮಾತೆರೆನವುಲಾ ಕಾರ್‌ಪತ್ತ್‌ದ್ ಉಲಾಯಿ ಪೋವೆರ್.

ಬೊಕ್ಕ ಬತ್ತಿ ದಿಬ್ಬಣ ಪಿರ ಪೋಪುನ್ಡು.

ಉಡುಪಿ, ತಾ. ೨೫-೨-'೩೭ ಗುರು

ಅಭಿನಂದನೆ

ದೇಶದ ಹಾಗೂ ಮದ್ರಾಸ್ ಪ್ರಾ ಇತರ ಕಡೆಗಳಂತೆ ದಕ್ಷಿಣ ಕನ್ನಡಿ ಈ ಸಲದ ಚುನಾವಣೆಯಲ್ಲಿ ಅತ್ಯು ದಿಂದ ಕಾಂಗ್ರೆಸಿನ ಬೆಂಬಲಕ್ಕೆ ನಿ ಅತ್ಯಂತ ಪ್ರಶಂಸನೀಯ ರೀತಿಯಲ್ಲಿ ಕಾ ಸಿನ ಗೌರವವನ್ನೆತ್ತಿಹಿಡಿದುದಕ್ಕಾಗಿ ನ್ನೆಷ್ಟು ಅಭಿನಂದಿಸಿದರೂ ಸಾ ಚುನಾವಣೆಯ ಪ್ರಚಾರ ಕಾರ್ಯದಿಂ ಕಾಂಗ್ರೆಸಿನ ತತ್ವವು ಹಳ್ಳಿ ಮೂ ಹಬ್ಬಿರುವುದು. ಆಬಾಲವೃದ್ಧರ ನ ಯಲ್ಲಿಯೂ ಕಾಂಗ್ರೆಸಿನ ಶುಭನಾ ನಲಿಯುವಂತಾಗಿರುವುದು. ರಾಷ ಮಾನದ ಆದೊಂದು ನೆರೆಯೇ ಇಡೀ ಯಲ್ಲೆಲ್ಲಾ ಹಬ್ಬಿ ಕಾಂಗ್ರೆಸಿನ ವಿರೋ ನಾನಾ ಸಂಚು ವಂಚನೆಗಳ ಉಸು ಮೇಲೇರಿಸಲ್ಪಟ್ಟ ಕಟ್ಟಡಗಳನ್ನೆಲ್ಲಾ ಪೂರ್ಣವಾಗಿ ಬಳೆದುಕೊಂಡು ಹೋ ವುದು. ಅವರು ಈ ನೆರೆಯಿಂದ ವಿ ಗೊಂಡು ಬೆಟ್ಟ ಕಚ್ಚಿ ಸುಮ್ಮನೆ ಕು ಕೊಳ್ಳುವಂತಾಗಿರುವುದು.

ಚುನಾವಣೆಯ ದಿನದ ಕಾಂಗ್ರೆಸ್ ಗಾರರ ಮತ್ತು ಜನತೆಯ ಉತ್ಸಾಹ ನೋಡಿದರೆ ಯಾರಾದರೂ ವಿಸ್ಮಯಗೆ ಲೇಬೇಕು. ಅದೊಂದು ಸಾಮುದಾ ಉತ್ಸವವೇ ಆಗಿದ್ದಿತು. ಕಾಂಗ್ರೆಸ್ ಗಾರರು ಒಬ್ಬರೊಡನೊಬ್ಬರು ಮೇ ದಿಂದ ಕಾರ್ಯನಿರತರಾಗಿದ್ದರು. ಉತ್ಸಾಹವನ್ನು ಪರಿಮಿತಿಯಲ್ಲಿಡಿಸು ಅಸಾಧ್ಯವಾಗಿದ್ದಿತು ಕಾಂಗ್ರೆಸ್ ಪ ಜನತೆಯನ್ನು ಕಂಡು ಅದೊಂದು ದೆ ಸಮುದ್ರವೆಂದು ಜಿಲ್ಲೆಯ ಜಸ್ಟಿಸ್ ಪ್ರಮುಖರೊಬ್ಬರು ಹೇಳಿದ ಮಾತು ರಶಃ ನಿಜವಾದುದಾಗಿದೆ. ಜನತೆಯ ಕಾಲು ವನ್ನು ಕಂಡು, ಇಷ್ಟರ ವರೆಗೆ ಕಾಂಗ್ರೆಸಿನ ಧ್ಯೇಯ, ತತ್ವ ಮತ್ತು ಕಾರ್ಯಕ್ರಮಗಳ ಕುರಿತು ಸಂದೇಹಗೊಂಡು ದಂಡೆಯಲ್ಲಿದ್ದವರು ಅಥವಾ ತಮಗಾವ ಗೋಷ್ಠಿಯೂ ಬೇಡವೆಂದು ತಟಸ್ಥರಾಗಿದ್ದವರು ಕೂಡಾ ಆ ಮಹಾಪ್ರವಾಹದ ಸೆಳತಕ್ಕೆ ಸಿಕ್ಕಿ ಕಾಲ್ಜಿಟ್ಟು ತೇಲಿಹೋಗಿರುವರು.

ಕೊಂಗ್ರೆಸಿನ ಬೆಂಬಲಕ್ಕೆ ನಿಂತು ಈ ರೀತಿ ಕೊಂಗ್ರೆಸು ಧ್ವಜವನ್ನು ಹಾರಾಡಿಸಿದ ಸಾಮೂಹಿಕ ಶಕ್ತಿಯು ಮುಂದಕ್ಕೂ ಚಾಲಾಗುವಂತಾಗಿ, ಭಾರತದ ಪ್ರಾಮುಖ್ಯ ಸಮಸ್ಯೆಯನ್ನು ಬಿಡಿಸುವ ಕೆಲಸಕ್ಕದು ಬೀಳುವದೆಂದೇ ನಮ್ಮ ಹಾರೈಕೆ.

ನಿಂತಿದ್ದ ದ. ಕನ್ನಡ ಮುಂದಾಳುಗಳಾದ ಡಾ। ಯು. ರಾಮರಾಯರೂ ಇನ್ನೊಬ್ಬ ಕೊಂಗ್ರೆಸು ಉಮೇದ್ವಾರಿಯೂ ಹೆಚ್ಚಿನ ಬಹುಮತ ಪಡೆದು ಆರಿಸಿಬಂದಿರುವರು. ಮದ್ರಾಸು ನಗರದಿಂದ ಕೌನ್ಸಿಲಿಗೆ ನಿಂತ ಜಸ್ಟೀಸು ಪಕ್ಷೀಯರಲ್ಲಿ ಒಬ್ಬರೂ ಆರಿಸಲ್ಪಡಲಿಲ್ಲ.

ಮಾಡಿರುವುದು. ಕಾರ್ಕಳ ತಾಲೂಕು ಸಂಪೂರ್ಣವಾಗಿ ಕೊಂಗ್ರೆಸನ್ನು ಸಮರ್ಥಿಸಿರುವದು. ಉಡುಪಿ ತಾಲೂಕಿನಲ್ಲಿ ಕೊಂಗ್ರೆಸಿಗೆ ಪ್ರಬಲ ಬಹುಮತವು ದೊರೆತಿರುವದು. ಮತದಾನ ಪದ್ಧತಿಯ ತಿಕ್ಕು ಜಯಶೀಲವಾಗಿ ಬಿಡಿಸಲ್ಪಟ್ಟು ಹರಿಜನ ಉಮೇದ್ವಾರರು ಆರಿಸಲ್ಪಟ್ಟಿರುವದು ಮಹದಾನಂದದ ಸಂಗತಿ.

ಹಿಂದು ದೇಶ

ಮಧ್ಯಪ್ರಾಂತದಲ್ಲಿ ಕಾಂಗ್ರೆಸಿನ ವಿಜಯ ಮಾಜಿ ಮಂತ್ರಿಗಳ ಪರಾಜಯ

ಮಧ್ಯಪ್ರಾಂತದಲ್ಲಿ ಇದೇ ತಾ. 20ರ ವರೆಗೆ 67 ಎಸೆಂಬ್ಲಿ ಸೀಟುಗಳ ಫಲಿತಾಂಶವು ತಿಳಿದು ಬಂದಿರುವುದು. ಇವುಗಳಲ್ಲಿ 51 ಸೀಟುಗಳನ್ನು ಕಾಂಗ್ರೆಸಿನವರು ಗೆದ್ದಿರುವರು. ರೈ ಬಹದ್ದೂರ್ ನ್ಯಾಯು, ಡಾಕ್ಟರ್ ಪಂಜಾಬ್‌ರಾವ್ ದೇಶಮುಖ್, ಶ್ರೀ. ಎ. ಬಿ. ಟಾಬಲ್ ಮತ್ತು ರೈ ಬಹದೂರು ಮಾಸ್ಟರ್ ಪ್ರಸಾದ್ ಜೈಸ್ವಾಲ್ ಎಂಬೀ 4 ಮಂದಿ ಮಾಜಿ ಮಂತ್ರಿಗಳೂ ಪರಾಜಯ ಹೊಂದಿರುವರು ನೋನೆಯುವರು ತನ್ನ ಜಾಮೀನಿನ ಹಣವನ್ನು ಕೂಡಾ ಕಳಕೊಂಡಿರುವರು. ಇಷ್ಟರವರೆಗೆ ಹರಿಜನರ ಹೊರತು 30 ಉಮೇದ್ವಾರಿಗಳು ತಮ್ಮ ಜಾಮೀನು ಹಣಕಳಕೊಂಡಿರುವರು. ಮಧ್ಯ ಪ್ರಾಂತದ ಹೋಮ್ ಮೆಂಬರರೂ, ಮಾಜಿ ಆಕ್ಟಿಂಗ್ ಗವರ್ನರರೂ ಆದ ಸರ್. ರಾಘವೇಂದ್ರರಾಯರು ತನ್ನ ಕಾಂಗ್ರೆಸ್ ಪ್ರತಿಸ್ಪರ್ಧಿಯಾದ ಶ್ರೀ. ಅಗ್ನಿಹೋತ್ರಿಯವರನ್ನು ಜೈಸಿ ವಿಜಯಿಯಾಗಿರುವರು. ಶ್ರೀ. ರಾಯರಿಗೆ 22487 ಮತ್ತು ಶ್ರೀ ಅಗ್ನಿಹೋತ್ರಿಗಳಿಗೆ 20116 ಮತ ದೊರೆತಿರುವುದು.

ಬೊಂಬಾಯಿ ಕೌನ್ಸಿಲು ಚುನಾವಣೆ

ಇಲ್ಲಿ ಕಾಂಗ್ರೆಸು ಒಟ್ಟು 30 ಸೀಟುಗಳಲ್ಲಿ 13ನ್ನು ಗೆದ್ದಿರುವುದು. ಕಾಂಗ್ರೆಸು ಕೇವಲ 15 ಮಂದಿ ಉಮೇದ್ವಾರಿಗಳನ್ನು ಮಾತ್ರ ನಿಲ್ಲಿಸಿದ್ದಿತು. ಬೊಂಬಾಯಿ ಸರಕಾರದ ಮಾಜಿ ಸಚಿವರಾದ ಸರ್. ಗೋವಿಂದರಾವ್ ಪ್ರಧಾನರೂ, ಈಗ ಬೊಂಬಾಯಿ ಕೌನ್ಸಿಲಿನ ಪ್ರೆಸಿಡೆಂಟರಾದ ಸಿ. ಹುಸೇನಲ್ಲಿರಹಿಮತುಲ್ಲಾರವರು ಈ ಚುನಾವಣೆಯಲ್ಲಿ ಪರಾಜಿತರಾಗಿರುವರು. ಬೊಂಬಾಯಿ ಪಟ್ಟಣದ 4 ಸೀಟುಗಳಿಗೆ ಕಾಂಗ್ರೆಸ್ ಉಮೇದ್ವಾರಿಗಳಾದ ಶ್ರೀಮತಿ ಹಂಸಮೆಹತಾರವರಿಗೆ 1227 ಮತ್ತು ಶ್ರೀ ರತಿಲಾಲ ಗಾಂಧಿಯವರಿಗೆ 1105 ಮತಗಳೂ ಸ್ವತಂತ್ರ ಉಮೇದ್ವಾರಿಗಳಾದ ಶ್ರೀ ಕರಂಜಯರವರಿಗೆ 1552 ಮತ್ತು ಪ್ರೊಫೆಸರ್ ದಾವರರಿಗೆ 883 ಮತಗಳು ದೊರೆತು ಜಯಶೀಲರಾಗಿರುವರು. ಪರಾಜಿತರಾದ 4 ಮಂದಿ ಉಮೇದ್ವಾರಿಗಳ ಪೈಕಿ ದಕ್ಷಿಣ ಕನ್ನಡಿಗರಾದ ಎವೆಲ್ ಕಂಪೆನಿಯ ಶ್ರೀ. ವೆಂಕಟರಾಯರಿಗೆ 728 ಓಟು ದೊರೆತಿರುವುದು. ಉಳಿದ 3 ಮಂದಿ ತಮ್ಮ ಜಾಮೀನು ಹಣಕಳ ಕೊಂಡಿರುವರು.

ಸಂಯುಕ್ತ ಪ್ರಾಂತ

ಎಸೆಂಬ್ಲಿಯ ಒಟ್ಟು 228 ಸೀಟುಗಳಲ್ಲಿ 133ನ್ನು ಕಾಂಗ್ರೆಸು ಗೆದ್ದಿರುವುದು. ಇದು ಕಾಂಗ್ರೆಸಿನವರ ನಿರೀಕ್ಷೆಗಿಂತಲೂ ಹೆಚ್ಚಾಗಿರುವುದು.

ಶ್ರೀಮತಿ ಕಮಲಾದೇವಿಯರು

ಮೈಸೂರು ಮತ್ತು ಬೆಂಗಳೂರಲ್ಲಿ ಯಾವ ತರದ ಚುನಾವಣಾ ಪ್ರಚಾರಕಾರ್ಯ ನಡಿಸದಂತೆ, ಖಾಸಗಿನಿವಾಸದಲ್ಲಿ ಸಭೆನಡಿಸದಂತೆ ಮೈಸೂರು ಸರಕಾರವು ನಿಷೇಧಹಾಕಿರುವುದನ್ನು ಪಂಡಿತ ಜವಾಹರಲಾಲರು ಖಂಡಿಸಿರುವರು. ಶ್ರೀಮತಿಯವರು ಇದೇ ತಾ. 21ರಲ್ಲಿ ಮಂಗಳೂರಿಂದ ಮಡಿಕೇರಿಗೆ ಹೋಗಿ ಅಲ್ಲಿ ಕಾಂಗ್ರೆಸ್ ಪ್ರಚಾರದ ಕುರಿತು ಭಾಷಣಗಳನ್ನಿತ್ತು ಅಲ್ಲಿಂದ ಬೊಂಬಾಯಿಗೂ. ಬೊಂಬಾಯಿಯಿಂದ ಡಿಲ್ಲಿಯ ನೆಶನಲ್ ಕನ್ವೆನ್ಶನಿಗೂ ಹೋಗಿ ಎಪ್ರಿಲು ತಿಂಗಳ ಸಮಾರಂಭಕ್ಕೆ ದಕ್ಷಿಣ ಕನ್ನಡಕ್ಕೆ ತಿಂಗಿ ಬರುವರು.

ಪುತ್ತೂರು

ಪುತ್ತೂರಿನ ತಾ. ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಾದ ವಕೀಲ್ ಶ್ರೀ. ಬಿ. ಶಿವರಾಮ ಹೊಳ್ಳರು ತನ್ನ ಅಧ್ಯಕ್ಷತನಕ್ಕೆ ರಾಜಿನಾಮೆಯನ್ನು ಕಳುಹಿಸಿರುವರು ಪುತ್ತೂರಿನಲ್ಲಿ ಕಾಂಗ್ರೆಸ್ ಕೆಲಸಗಾರರೊಡನುಂಟಾದ ಭಿನ್ನಾಭಿಪ್ರಾಯವೇ ಇದಕ್ಕೆ ಕಾರಣವೆಂದು ತಿಳಿದು ಬರುತ್ತದೆ.

ಕೊಡಗು

ಶ್ರೀ. ರಾಮಕೃಷ್ಣ ಪರಮಹಂಸರ ಶತಮಾನೋತ್ಸವವು ಕಳೆದ ತಾ. ೧೨, ೧೩, ೧೪ರಲ್ಲಿ ಕೊಡಗಿನ ಪೊನ್ನಂಪೇಟೆ, ವಿರಾಜಪೇಟೆ, ಮಡಿಕೇರಿಗಳಲ್ಲಿ ವಿವಿಧ ಕಾರ್ಯಗಳಿಂದ ಆಚರಿಸಲ್ಪಟ್ಟಿತು ಶ್ರೀ ಬೇಂದ್ರೆ ಮೊದಲಾದವರ ಭಾಷಣಗಳಿದ್ದವು.

ವಿದೇಶ

ಹೊರಗಣಿಂದ ಬರುವ ಸ್ವಯಂ ಸೇವಕರಿಗೆ ತಡೆ

ಸ್ಪೈನಿನ ಅಂತಃ ಕಲಹವು ಆರಂಭವಾಗಿ ೭ ತಿಂಗಳ ಮೇಲೆ ಈಗ ಇಂಗ್ಲೆಂಡ್, ರಷ್ಯಾ, ಜರ್ಮನಿ, ಫ್ರಾನ್ಸ್, ಇಟೆಲಿ, ಪೋರ್ಚುಗಲ್ ಮೊದಲಾದ 27 ರಾಷ್ಟ್ರಗಳು ಸ್ಪೈನಿಗೆ ಸ್ವಯಂಸೇವಕರನ್ನು ಕಳುಹಿಸಬಾರದೆಂದು ತಡೆ ಹಾಕಿರುವವು. ಇದಕ್ಕೆ ಇಂಗ್ಲೆಂಡ್ ಮತ್ತು ಫ್ರಾನ್ಸಿನ ಪ್ರಯತ್ನವೇ ಕಾರಣವಾಗಿದೆ. ಇನ್ನೀಗ ಸ್ಪೈನಿಗೆ ಯಾವಮಾರ್ಗವಾಗಿಯೂ ಯುದ್ಧ ಸಾಮಾಗ್ರಿಗಳು ಕಳುಹಿಸಲ್ಪಡದಂತೆ ತಡೆಯುವ ಪ್ರಯತ್ನ ನಡಿಸಲಾಗುವುದು. ಮಾರ್ಚ ತಾ. 6ರೊಳಗೆ ಇದು ಸಾಧ್ಯವಾಗಬಹುದೆಂದು ನಂಬಲಾಗಿದೆ.

ಇದೇ ತಾ. 20ರಲ್ಲಿ ಅರಸನ್ ರಣರಂಗದಲ್ಲಿ ಮುಂದೊತ್ತಲು ಬಂಡಾಯಗಾರರು ಪ್ರಬಲ ಹೋರಾಟ ನಡಿಸಿ ನಿರಾಶರಾಗಿರುವರೆಂದು ತಿಳಿದು ಬರುತ್ತದೆ. ಬಂಡಾಯಗಾರರ ಸೇನಾಬಲವು 10,000 ವಿರುವುದಂತೆ. ಲೋಸ್ ರೋಸಾಸ್ ಎಂಬಲ್ಲಿ ಬಂಡಾಯಗಾರರ ಸೇನೆಯನ್ನು ಭೇದಿಸಲು ಸರಕಾರದ ಕಡೆಯ ಸುದ್ದಿ. ಮೇಡ್ರಿಡ್ ವೆಲೆನ್ಸಿಯಾ ರೈಲ್ವೆ ಲೈನಿನಲ್ಲಿರುವ ಪ್ರಾಮುಖ್ಯ ಪಟ್ಟಣವಾದ ಆಲ್ಬಸೀಟ್ ಎಂಬ ಪಟ್ಟಣದ ಮೇಲೆ ಇದೇ ತಾ. 20ರಲ್ಲಿ ಬಂಡಾಯಗಾರರು ವಿಮಾನ ಧಾಳಿ ನಡಿಸಿ 30 ಮಂದಿ ಸೈನಿಕರು ಕೊಲ್ಲಲ್ಪಟ್ಟಿರುವರು. ಪಟ್ಟಣಕ್ಕೆ ಹೆಚ್ಚಿನ ಹಾನಿಯಾಗಿರುವುದು. ಮೇಡ್ರಿಡಿನಲ್ಲಿ ಈಗ ಸುಮಾರು 8 ಲಕ್ಷ ಮಂದಿಯಿರುವರು. ಇವರಿಗೆ ಆಹಾರ ಸಾಮಾಗ್ರಿಗಳನ್ನೊದಗಿಸಲು 350 ಅಂಗಡಿಗಳನ್ನು ಮಾತ್ರ ತೆರೆಯಲು ಬಿಡಲಾಗುವುದು.

ಅಡ್ಡಿಸ್ ಅಬಾಬದಲ್ಲಿ ಬೋಂಬೆಸೆತ ಮಾರ್ಶಲ್ ಗ್ರೇಜಿಯಾನಿಯವರಿಗೆ ಜಖಮ್

ಇದೇ ತಾ. 20ರಲ್ಲಿ ಅಬಿಸೀನಿಯದ ವೈಸರಾಯರಾದ ಮಾರ್ಶಲ್ ಗ್ರೆಜಿಯಾನಿಯವರು, ಮಸೀದಿ ಮತ್ತು ಇಗರ್ಜಿಗಳ ಬಳಿ ಬಡವರಿಗೆ ಧರ್ಮಮಾಡುತ್ತಿದ್ದಾಗ ಕೆಲವು ಮಂದಿ ಅಬಿಸೀನಿಯನರು ಜನವೃಂದದೊಂದಿಗೆ ಬೆರೆತು ಕೆಲವು ಬೋಂಬುಗಳನ್ನೆಸೆದರು. ಇದರಿಂದಾಗಿ ಮಾರ್ಶಲರಿಗೆ ಸ್ವಲ್ಪ ಪೆಟ್ಟಾಗಿರುವುದು. ಜನರಲ್ ಲ್ಯೊಟ್ಟಾರವರು ಹೆಚ್ಚಿನ ಜಖಂ ಹೊಂದಿರುವರು. ಜನಸ್ತೋಮದಲ್ಲಿದ್ದ ಹಲವು ಮಂದಿ ಅಬಿಸೀನಿಯನರಿಗೂ ಪೆಟ್ಟಾಗಿರುವುದು. ಇದರ ಪರಿಣಾಮವಾಗಿ ಅನೇಕ ಮಂದಿ ಅಬಿಸೀನಿಯನರು ಕೈದುಮಾಡಲ್ಪಡುವರೆಂದು ನಂಬಲಾಗಿದೆ.

ಸ್ಪೆನಿಶ್ ಸರಕಾರದ ವಿಜಯ

ಇದೇ ತಾ. 21ರಲ್ಲಿ ಸ್ಪೈನಿನ ಜರಾಮರಣ ರಂಗದಲ್ಲಿ ದೊಡ್ಡ ಕದನ ನಡೆದಿರುವುದು. ಬಂಡಾಯಗಾರ ಸೈನಿಕರು ಮಿಶನ್ ತೋಪುಗಳಿಂದ ಎಡೆಬಿಡದೆ ಗುಂಡು ಹಾರಿಸಿದರು. ಸರಕಾರದ ಸೈನಿಕರು ಮುಂದೊತ್ತಿ ತಮ್ಮ ಸ್ಥಾನಗಳನ್ನು ಬಲಪಡಿಸಿಕೊಂಡರು. ಕ್ಯಾಡಿಯಾರ್ ಎಂಬಲ್ಲಿ ಅನೇಕ ಮಂದಿ ಬಂಡಾಯಗಾರರು ಕೊಲ್ಲಲ್ಪಟ್ಟಿರುವರು. ಸರಕಾರಿ ಕಡೆಯ ಸೈನಿಕರು ಹಲವು ಪ್ರಾಮುಖ್ಯ ಸ್ಥಳಗಳನ್ನು ವಶಪಡಿಸಿಕೊಂಡಿರುವರು. ಆಲ್ಬಸೀಟಿನ ಮೇಲೆ ನಡೆದ ವಿಮಾನಧಾಳಿಯಲ್ಲಿ 30 ಮಂದಿ ಕೊಲ್ಲಲ್ಪಟ್ಟು 100 ಮಂದಿಗೆ ಪೆಟ್ಟಾಗಿರುವುದು. ಅರಗನ್ ರಣರಂಗದಲ್ಲಿ ಬಂಡಾಯಗಾರರು ವಿವೆಲ್‌ಡೆಲ್‌ರಿಯೋ ಎಂಬ ಹಳ್ಳಿಯನ್ನು ವಶಪಡಿಸಿಕೊಂಡಿರುವರೆಂದೂ, ಸರಕಾರದ ಕಡೆಯ ಸೈನಿಕರು 100 ಮಂದಿ ಕೊಲ್ಲಲ್ಪಟ್ಟು ಹಿಂದೆ ಸರಿದರೆಂದೂ ಬಂಡಾಯಗಾರರ ಕಡೆಯ ವಾರ್ತೆ.

2000 ಮಂದಿ ಅಬಿಸೀನಿಯನರ ದಸ್ತಗಿರಿ

ಅಡ್ಡಿಸ ಅಬಾಬದಲ್ಲಿ ಮಾರ್ಶಲ್ ಗ್ರೇಜಿಯಾನಿಯವರ ಮೇಲೆ ಬೋಂಬೆಸೆದ ಸಂಬಂಧವಾಗಿ ೨೦೦೦ ಮಂದಿ ಅಬಿಸೀನಿಯನರು ದಸ್ತಗಿರಿ ಮಾಡಲ್ಪಟ್ಟಿರುವರು. ೩೦,೦೦೦ ಮಂದಿ ಇಟಲಿಯನ ಸೈನಿಕರು ಅಡ್ಡಿಸ್ ಅಬಾಬವನ್ನು ಕಾಯುತ್ತಿರುವರು. ಬೋಂಬೆಸೆಯಲ್ಪಟ್ಟು ಗಾಯಗೊಂಡ ಜನರಲ್ ಲ್ಯೊಟ್ಟಾರವರ ಕಾಲೊಂದು ಕತ್ತರಿಸಲ್ಪಟ್ಟಿರುವುದೆಂದು ತಿಳಿದು ಬರುತ್ತದೆ.

ಮಲಾಗದಲ್ಲಿ ಸರಕಾರಿ ಕಡೆಯ ಸೈನಿಕರ ಕೊಲೆ

ಮಲಾಗವು ಬಂಡಾಯಗಾರರ ವಶವಾದಂದಿನಿಂದ ಸರಕಾರಿ ಕಡೆಯ ೧೦,೦೦೦ ಮಂದಿಯವರೆಗಿನ ಮಿಲಿಶಿಯ ಸೈನಿಕರು ಸೆರೆ ಹಿಡಿಯಲ್ಪಟ್ಟಿರುವರೆಂದೂ ಹಲವು ನೂರು ಮಂದಿಯನ್ನು ಇಷ್ಟರಲ್ಲೇ ತಲೆ ಕಡಿದು ಹಾಕಲಾಗಿದೆಯೆಂದೂ ಬಂಡಾಯಗಾರರು ಪ್ರಕಟಿಸಿರುತ್ತಾರೆ.

ಕೆಮ್ತೂರು:—ಇಲ್ಲಿಯ ಪಡುಮನೆಯ ಶ್ರೀ. ಕೆ. ನಂದ್ಯಪ್ಪ ಶೆಟ್ರು ಇದೇ ತಾ. 23ನೇ ರಾತ್ರಿ ಸುಮಾರು 8 ಘಂಟೆಗೆ ತನ್ನ 62ನೇ ವಯಸ್ಸಿನಲ್ಲಿ ದಿವಂಗತರಾಗಿರುವರೆಂಬುದು ವಿಷಾದಕರವಿರುವುದು. ಮೃತರು ಒಳ್ಳೇ ವ್ಯವಹಾರಜ್ಞಾನಿಯೂ ಅನುಭವಿಯೂ ಆಗಿ ಬುದ್ಧಿಶಾಲಿಯಾಗಿದ್ದರು ಕಳೆದ ಸುಮಾರು ಒಂದು ತಿಂಗಳಿಂದ ಕಾಯಿಲೆಯಲ್ಲಿದ್ದರೂ, ಪಂಡಿತ ಜವಾಹರಲಾಲರನ್ನು ಬಹಳ ಪ್ರಯಾಸದಿಂದ ಹೋಗಿ ಕಾಣುವ, ತಾ. 18ರ ಚುನಾವಣೆಯಲ್ಲಿ ತನ್ನ ಎರಡು ಓಟು ಕಾಂಗ್ರೆಸಿಗೆ ನಷ್ಟವಾಗಬಾರದೆಂದು ಬಹಳ ತ್ರಾಸಪಟ್ಟು ಹೋಗಿ ಓಟುಕೊಡುವಷ್ಟರ ಕಾಂಗ್ರೆಸಿನ ಮೇಲಿನ ಅಭಿಮಾನವುಳ್ಳವರಿದ್ದರು.

THE
Guardian of India
Insurance Company, Ltd.,
Head Office: MADRAS] **[Branch: MANGALORE**
Capital— Indian.
Management—Entirely Indian & Efficient.
LOW PREMIUMS.
CONDITIONS LIBERAL & EQUITABLE.
Schemes— Most novel, suited to all sorts and conditions and attractive.
ASSURED SECURTY
Life is uncertain, Savings are uncertain, Insurance is the only remedy for this uncertainty.
Let the Guardian Guard your future.
Insure your life with this popular and Progressive and Economical Indian Life Office—Do not delay.
Applications are invited from respectable gentlemen and ladies to represent the Company in S Kanara, N. Kanara and Coorg on commission or salary or both.
Notice: All the policy holders & agents are informed that all future dealings must be made with The Branch Secretary, The Guardian of India Insurance Co., Ltd., Mangalore Branch.
E. A. PAIS, B. Sc., ***Branch Secretary,***
The Guardian of India Insurance Co., Limited,
MANGALORE BRANCH.

ನೋಟೀಸು

ಕುಂದಾಪುರ ಡಿಸ್ಟ್ರಿಕ್ಟ ಮುನ್ಸಿಫ್ ಕೋರ್ಟಿನಲ್ಲಿ.

O.S. No. 124/1935 R.E.P. No. 980/36

ವಾದಿ

ನಾರಾಯಣಕಾರಂತ ... ಅರ್ಜಿದಾರ

ಪ್ರತಿವಾದಿ

ಸೀತಶೆಟ್ಟಿ ಕೂಡಾ .... ಯೆದ್ರಿರು

ಕಾಸರಗೋಡು ತಾಲ್ಲೂಕು ಬೇಕಲ್‌ಗ್ರಾಮದಲ್ಲಿರುವ ಅಬ್ದುಲ್‌ಬ್ಯಾರಿ ಮಕ್ಕಳು ಸದ್ರಿ ಅಮುಲ್‌ಜ್ಯಾರಿಯ 2ನೆಯೆದ್ರಿ ಅಬ್ದುಲ್‌ರಹಿಮಾನ ಬ್ಯಾರಿ 3ನೇ ಎದ್ರಿ A. K. ಅಮ್ಮದ್‌ಬ್ಯಾರಿ ಕೂಡಾ 2 ಜನರಿಗೆ ಈ ಮೂಲಕ ತಿಳಿಯಪಡಿಸುವದೇನೆಂದ್ರೆ:—

ವಾದಿಯು ನೀವು ವಗೈರೇರ ಮೇಲೆ ಪಡದ ಮೇಲಿನ ಡಿಕ್ರಿ ಸಮಾಧಾನದ ಬಗ್ಗೆ ನಡಿಸಿದ R. E. P. No. 980/1936 ನೇ ವ್ಯವಹರಣೆಯಲ್ಲಿ ಯೆದ್ರಿರಹಕ್ಕಿನ ಸ್ಥಿರಾಸ್ತಿಯನ್ನು ಏಲಂವಿಗೆ ಅಪೇಕ್ಷಿಸಿ ಯಿಸ್ತಿಹಾರಿನ ಶರತ ನಿರ್ಣಯಿಸುವರೆ ಸೇಲ್‌ಮಾಡಿಸುವ ಬಗ್ಗೆ ಸದ್ರಿ ಅಮುಲ್‌ಜ್ಯಾರಿಯನ್ನು ತಾ. 26-2-37ಕ್ಕೆ ಮೇಲಿನ ಕೋರ್ಟಿನಲ್ಲಿ ತಪ್ಸಿಗೆಯಿಟ್ಟಿರುತ್ತದೆ. ಆ ಕುರಿತು ನಿಮ್ಮ ಕಡೆ ಆಕ್ಷೇಪಗಳಿದ್ದರೆ ತಾ. 26-2-37 ನೇ ಪೂರ್ವಾಹ್ನ ಗಂಟೆ 11ಕ್ಕೆ ಮೇಲಿನ ಕೋರ್ಟಿನಲ್ಲಿ ಜಾಹೀರು ಮಾಡಿಕೊಳ್ಳತಕ್ಕದ್ದು.

K. Venkappa Shetty,
Vakil for Petitioner.
ತಾ. 20—2—1937.

—ಚೀಣಾ ದೇಶದಲ್ಲಿನ ನಾರೀ ಜೀವನ—

ಅಲ್ಲಿನ ಸ್ತ್ರೀಯರ ಆಚಾರವಿಚಾರಗಳು - - - - - ವೈವಾಹಿಕ ಪದ್ಧತಿಗಳು

ಚೀಣಾದೇಶವನ್ನು ಕುರಿತು ಆಲೋಚಿಸಬೇಕಾದರೆ ಅವರ ಜಾತಿ, ಅವರ ಗತ ಚರಿತ್ರೆ ಇವುಗಳ ಮೇಲೆ ನಮ್ಮ ದೃಷ್ಟಿಯು ಹೊರಳುವುದು ಪುರಾತನ ಸಂಪ್ರದಾಯ (ಮೂಢನಂಬಿಕೆ) ಗಳ ವಿಷಯದಲ್ಲಿ, ಇಡೀ ಮಾನವನ ಜಾತಿಯೊಳಗೆ ಚೀಣಾದವರೇ ಅಗ್ರಗಣ್ಯರೆಂದರೆ ಅತಿಶಯೋಕ್ತಿಯಲ್ಲ

ಅಲ್ಲದೆ ಪುರುಷರನ್ನು ಪೂಜಿಸುವಿಕೆಯು ಅವರ ಧರ್ಮಗಳಲ್ಲಿ ಮುಖ್ಯಾಂಗವಾಗಿದೆ. ಆದುದರಿಂದ ಈ ಇಪ್ಪತ್ತನೆಯ ಶತಮಾನದಲ್ಲೂ ಇವರು ಒಂದು ಹೆಜ್ಜೆಯನ್ನೂ ಮುಂದಿಡಲು ಅಂಗೀಕರಿಸರು. ಪುರಾತನ ವಾಸನೆಗಳು, ಕ್ರಿಯಾಕಲಾಪಗಳು ಇವುಗಳನ್ನು ಅನುಸರಿಸುತ್ತಲೇ ಇವರು ತೃಪ್ತಿಹೊಂದುತ್ತಾರೆ. ಚೀಣಾದೇಶದಲ್ಲಿನ ಸ್ತ್ರೀಯರನ್ನು ಕುರಿತು ಸ್ಥಾಲೀ ಪುಲಾಕನ್ಯಾಯ' ರೀತ್ಯಾ (ಅಂದರೆ ತಪ್ಪಲೆಯೊಳಗೆ ಬೇಯುತ್ತಿರುವ ಅನ್ನದಲ್ಲಿ ಒಂದು ಅಗುಳು ಬೆಂದಿದ್ದರೆ ಎಲ್ಲವೂ ಬೆಂದಿದಿರುತ್ತದೆಯೆಂಬ ನ್ಯಾಯ–ಒಂದು ಭಾಗವನ್ನು ಪರೀಕ್ಷಿಸಿ ಆಪರಪೂರ್ತಿ ಲಕ್ಷಣವನ್ನು ನಿರ್ಧರಿಸುವುದು)-ವಿಚಾರಿಸಿದ್ದಲ್ಲಿ ಈ ದೇಶದ ವಿಷಯವು ಇಷ್ಟು ಗೋಚರವಾಗುವುದು.

"ಕಂಫ್ ಪಿಯೊ" ಎಂಬಾತನು ಚೈನಾದೇಶಿಯರ ಗುರು. ಕ್ರಿ. ಪೂ ಆರನೆಯ ಶತಮಾನದಲ್ಲಿ ಆತನು ಸ್ತ್ರೀಯರ ವಿಷಯದಲ್ಲಿ ವಿಧಿಸಿದ ನಿಬಂಧನೆಗಳೇ ಇವೊತ್ತಿಗೂ ವಿಚ್ಛಿತ್ತಿಯಿಲ್ಲದೆ ನಡೆದು ಬರುತಿವೆ ಇದರಿಂದಲೇ ಪೂರ್ವಿಕರಲ್ಲಿ ಅವರಿಗಿರುವ ಭಕ್ತಿ, ಶ್ರದ್ಧೆಗಳು ವಿದಿತವಾಗುವಂತಿಲ್ಲವೇ? ಆತನು ವಿಧಿಸಿರುವ ನಿಯಮಗಳ ಪೈಕಿ ಕೆಲವನ್ನು ಇಲ್ಲಿ ಉದಾಹರಿಸಲಾಗುವುದು.

"ವಿವಾಹಾತ್ಪೂರ್ವ ಯುವತಿಯರು ತಂದೆ ಅಥವಾ ಸಹೋದರನ ಅಧೀನದಲ್ಲಿ ಇರಬೇಕು ವಿವಾಹಾನಂತರ ಗಂಡನ ಹೆಜ್ಜೆಯ ಜಾಡನ್ನು ಅನುಸರಿಸುತ್ತಿರಬೇಕು. ವೃಧವ್ಯ ದಶೆಯಲ್ಲಿ, ಪುತ್ರನನ್ನು ಆಶ್ರಯಿಸಿರಬೇಕು.

"ಭೋಜನವನ್ನು ಸಿದ್ಧಪಡಿಸುವಿಕೆ, ಮದ್ಯವನ್ನು ತಯಾರುಮಾಡುವಿಕೆ ಇವೇ ಸ್ತ್ರೀಯರ ಮುಖ್ಯ ಕಾರ್ಯಗಳು"

ಈ ನಿಯಮಗಳಿಗೆ ವ್ಯತಿಕ್ರಮವು ಅಲ್ಲಲ್ಲಿ ಕೆಲವು ವಿದ್ಯಾವತಿಯರಾದ ಸ್ತ್ರೀಯರಲ್ಲಿ ಕಂಡು ಬರುತ್ತಿದೆ. ಇದರಿಂದಲೇ ಚೀಣಾ ದೇಶದಲ್ಲಿನ ಸ್ತ್ರೀಯರೆಲ್ಲರೂ ಇಪ್ಪತ್ತನೆಯ ಶತಾಬ್ದಾನುಗುಣ್ಯವಾಗಿ ವರ್ತಿಸುತ್ತಾರೆ ಎಂದುಭಾವಿಸಲಾಗದು.

ಚೀಣಾ ಸಮಾಜದಲ್ಲಿ ಸ್ತ್ರೀಯರ ಸರ್ವಸ್ವವೂ ಪುರುಷರ ಕೈಯಲ್ಲಿ ನಿಯಂತ್ರಿತವಾಗಿದೆ. ಬಾಲ್ಯಾವಧಿ ಮರಣ ಪರ್ಯಂತವೂ ಸ್ತ್ರೀಯರು ಪುರುಷರ ಅಧೀನದಲ್ಲಿರದೆ ತಪ್ಪದು ಇವರು ಸ್ವತಂತ್ರಾಭಿಪ್ರಾಯಗಳನ್ನು ವ್ಯಕ್ತೀಕರಿಸುವುದಕ್ಕೆ ಅಣುಮಾತ್ರವಾದರೂ ಅವಕಾಶವಿಲ್ಲ

ಚೀಣಾದಲ್ಲಿನ ನಾರೀ ಜೀವನವನ್ನು ಸ್ಥೂಲವಾಗಿ, ಕುಮಾರಿ, ವಿವಾಹಿತೆ, ವಿಧವೆ ಎಂಬುದಾಗಿ ಅವಸ್ಥಾತ್ರಯಗಳಾಗಿ ವಿಭಜಿಸಬಹುದು. ಈ ಮೂರು ಅವಸ್ಥೆಗಳಲ್ಲೂ ನಾರೀ ಜೀವಿತಕ್ಕೆ ಪುರುಷನೇ ಕರ್ತ. ಚೀಣಾದಲ್ಲಿ ೧೯೧೧ರಲ್ಲಿ ದೇಶದಲ್ಲೆಲ್ಲಾ ಸಂಸ್ಕಾರ ಪ್ರಯತ್ನಗಳು ವಿಶೇಷ ಆಡಂಬರವಾಗಿ ಜರಗಿದುವು. ಅದರಿಂದ ನಾರೀ ಜಾತಿಯಲ್ಲಿ ಯಾವ ವಿಧವಾದ ಅಭಿವೃದ್ಧಿಯೂ ಉಂಟಾಗಲಿಲ್ಲ ಅಷ್ಟೇ ಅಲ್ಲದೆ ಶಿಕ್ಷಾ ಸಂಸ್ಕಾರಕ್ಕೆ ಪ್ರಯತ್ನಗಳು ಜರುಗಿದಾಗ, ಸ್ತ್ರೀ ವಿದ್ಯೆಗೆ ವ್ಯತಿರೇಕವಾಗಿ ಸ್ತ್ರೀಯರು ವಿಶೇಷ ಆಂದೋಳನವನ್ನು ನಡಸಿದರು.

ಆದಾಗ್ಯೂ ವರ್ತಮಾನ ಸಮಾಜದಲ್ಲಿ ಅವರು ಯಾವ ವಿಧವಾಗಿದ್ದಾರೆಂಬ ವಿಷಯವನ್ನು ಗಮನಿಸಬೇಕಾಗುವುದು. ಕೆಲವು ವರ್ಷಗಳ ಹಿಂದೆ ಜನೀವಾ ಅಂತರ ರಾಷ್ಟ್ರೀಯ ಸಮಿತಿಯವರು ಪ್ರಾಚ್ಯದೇಶಗಳಲ್ಲಿನ ಸ್ತ್ರೀಯರ ಸ್ಥಿತಿಗತಿಗಳನ್ನು ತಿಳಿಯಲೋಸುಗ ಒಂದು ಉಪಸಮಿತಿಯನ್ನು ಏರ್ಪಡಿಸಿದರು. ಅವರು ಪ್ರಾಚ್ಯದೇಶಗಳಲ್ಲೆಲ್ಲಾ ಸಂಚರಿಸಿ ಚೀಣಾ ವಿಷಯದಲ್ಲಿ ಈ ರೀತಿ ಬರೆದಿದ್ದಾರೆ –

"ಚೀಣಾದೇಶದಲ್ಲಿ ನೂತನ ಭಾವಗಳು, ಕಾನೂನುಗಳು ಸ್ತ್ರೀಪುರುಷರ ಸಾಮರಸ್ಯಕ್ಕಾಗಿ ಪ್ರಯತ್ನಿಸುತ್ತಿವೆಯೇ ಹೊರತು ಅವರಲ್ಲಿ ಅಸ್ಥಿಗತವಾಗಿರುವ ಪುರಾತನ ಸಂಸ್ಕಾರಗಳು ದಾರುಣವಾಗಿ ಅವನ್ನು ಅಡ್ಡಗಟ್ಟುತ್ತಿವೆ. ಆ ದೇಶದಲ್ಲಿ ಇನ್ನೂ ಜೀರ್ಣ ಸಂಸ್ಕಾರಗಳು ವ್ಯಾಪಕದಲ್ಲೇ ಇವೆ. ಮಕ್ಕಳಿಗಾಗಿ ಆ ದೇಶದಲ್ಲಿ ಪುರುಷರು ಸ್ತ್ರೀಯರನ್ನು ವಾತ್ಸಲ್ಯದಿಂದ ನೋಡುತ್ತಿರುತ್ತಾರೆ! ಸಂಸಾರ ಜೀವಿತಕ್ಕಾಗಿ ಸ್ತ್ರೀಯರ ಜೀವಿತವು ಅರ್ಪಿಸಲ್ಪಟ್ಟಿದೆ. ಆದುದರಿಂದ ಸಂಸಾರವು ದಾರಿದ್ರ್ಯದಲ್ಲಿ ಮುಳುಗಿದೆಯೆಂದೋ ಅಥವಾ ಋಣವಿಮೋಚನಗಾಗಿಯೋ ಸ್ತ್ರೀಯರನ್ನು ವಿಕ್ರಯಿಸುವುದಕ್ಕೂ ಅವರು ಹಿಂದು ಮುಂದು ನೋಡುವುದಿಲ್ಲ

"ಅನೇಕ ಸ್ಥಳಗಳಲ್ಲಿ ಕಳ್ಳರು ಗೃಹಸ್ಥರ ಮನೆಗಳಲ್ಲಿನ ಸ್ತ್ರೀಯರನ್ನು ಕದ್ದುಕೊಂಡು ಹೋಗಿ ಹಣಕ್ಕಾಗಿ ಅಸತ್ಕರ್ಮಮಾಡುವ ದುಶ್ಚರಿತ್ರರಿಗೆ ಮಾರುತ್ತಿರುತ್ತಾರೆ. ಸಂಸಾರದ ಋಣವಿಮೋಚನೆಗಾಗಿ ತಂದೆ ತಾಯಿಗಳು ಹೆಣ್ಣುಮಕ್ಕಳನ್ನು ವೇಶ್ಯಾ ಗೃಹಗಳಲ್ಲಿ ಬಿಟ್ಟು ಹಣ ತಂದು ಸಾಲಗಳನ್ನು ತೀರಿಸುವಿಕೆಯು ಅನೇಕ ಕಡೆಗಳಲ್ಲಿ ಜರುಗುತ್ತಿವೆ"

ಪ್ರಸ್ತುತದಲ್ಲಿ ಚೀಣಾದೇಶದಲ್ಲಿನ ಸ್ತ್ರೀಯರ ಸ್ಥಿತಿಯನ್ನು ಮೇಲಣ ವಿವರಗಳಿಂದ ತಿಳಿಯಬಹುದಾಗಿದೆ. ಅಪರ ರೀತ್ಯಾ ಚೀಣಾದೇಶದಲ್ಲಿನ ನಾರೀ ಜೀವಿತದ ಪ್ರಥಮಾಧ್ಯಾಯವು ದುಃಖಮಯವೆಂಬುದಕ್ಕೆ ಏನೂ ಸಂದೇಹವಿಲ್ಲವಷ್ಟೆ? ದ್ವಿತೀಯಾವಸ್ಥೆಯಾದ ವಿವಾಹಿತ ಜೀವಿತಕ್ಕೂ ಬಾಲ್ಯ ಜೀವಿತಕ್ಕೂ ಅಷ್ಟೇನು ಭೇದವು ಕಾಣಿಸದು

ಸಂಸಾರ ಜೀವಿತವೇ ಚೀಣಾ ಸಂಘದ ತಳಹದಿ ಈ ತಳಹದಿಯನ್ನು ಭದ್ರಪಡಿಸುವುದಕ್ಕಾಗಿ ವಿವಾಹಕ್ಕೆ ಇವರು ಅತ್ಯುತ್ಕೃಷ್ಟ ಸ್ಥಾನವನ್ನು ಕೊಟ್ಟಿದ್ದಾರೆ. ಇವರ ಧರ್ಮಗ್ರಂಥಗಳಲ್ಲಿ ಈ ರೀತಿ ಹೇಳಲ್ಪಟ್ಟಿದೆ:—

"ಸಮಸ್ತಾನುಷ್ಠಾನಗಳಿಗೂ ಮೂಲಭೂತವಾದುದು ವಿವಾಹ. ಜೀವಿತದಲ್ಲಿ ವಿವಾಹವೆಂಬ ಮಹತ್ತರಾನುಷ್ಠಾನದಿಂದ ಸ್ತ್ರೀಯು ಸಂಪೂರ್ಣವಾಗಿ ಪುರುಷನ ಅಧೀನಳಾಗುತ್ತಿದ್ದಾಳೆ."

ನಮ್ಮ ದೇಶದಲ್ಲಿರುವಂತೆಯೇ ತಂದೆ ತಾಯಿಗಳೇ ಮುಂತಾದವರು ವಿವಾಹವನ್ನು ನಿರ್ಣಯಿಸುತ್ತಾರೆ. ವಿವಾಹಕ್ಕೆ ಮೊದಲು ಮುಹೂರ್ತದ ತನಕ ವಧೂವರರು ಪರಸ್ಪರ ನೋಡಿರಲಾರರು. ವಿವಾಹವು ನಿಶ್ಚಯಿಸಲ್ಪಟ್ಟೊಡನೆಯೇ ಎರಡು ಪಕ್ಷಗಳವರೂ ಚಿತ್ರಗಳಿರುವ ಕಾರ್ಡುಗಳನ್ನು ಕೊಟ್ಟು ತಂದುಕೊಳ್ಳುತ್ತಾರೆ

ವರನು ವಧುವಿಗೆ ಕಳುಹಿಸುವ ಕಾರ್ಡಿನ ಮೇಲೆ ಡ್ರ್ಯಾಗನ್ (Dragon) ಮತ್ತು ವಧುವು ವರನಿಗೆ ಕಳುಹಿಸುವ ಕಾರ್ಡಿನ ಮೇಲೆ ಫೋನಿಕ್ಸ್ (Phoenix) ಎಂಬ ಒಂದುವಿಧ ಪಕ್ಷಿಯ ಬೊಂಬೆ ಇರುತ್ತದೆ.

ವಿವಾಹವು ನಿಶ್ಚಯವಾದ ಮೂರು ತಿಂಗಳುಗಳಾದ ಮೇಲೆ ಮದುವೆಯು ಜರುಗುತ್ತದೆ. ಆದರೆ ವಿವಾಹವು ನಿಶ್ಚಯಿಸಲ್ಪಟ್ಟಾಗಿನಿಂದ ಪರಸ್ಪರ ವಧೂವರರ ಗೃಹಗಳಿಗೆ ಬಹುಮತಿಗಳನ್ನು ಕಳುಹಿಸುತ್ತಾರೆ. ಈ ಬಹುಮತಿಗಳ ಪೈಕಿ ವರನ ಪಕ್ಷದವರು ವಧೂಗೃಹಕ್ಕೆ ಎರಡು ಬಾತುಗಳನ್ನು ಕಳುಹಿಸುತ್ತಾರೆ ಹೆಣ್ಣಿನ ಕಡೆಯವರು ವರನ ಮನೆಗೆ ಎರಡು ಕೋಳಿಗಳನ್ನು ಕಳುಹಿಸುತ್ತಾರೆ. ಮೇಣದ ಮೋಂಬತ್ತಿಗಳನ್ನು ಇವರು ಶುಭಪ್ರದವಾದ ವಸ್ತುಗಳೆಂದು ಭಾವಿಸುತ್ತಾರೆ. ಆದುದರಿಂದ ಮಿಕ್ಕ ವಸ್ತುಗಳ ಸಂಗಡ ಮೋಂಬತ್ತಿಗಳನ್ನು ತಪ್ಪದೆ ಕಳುಹಿಸುತ್ತಾರೆ

ವಿವಾಹದ ದಿವಸ ಯುವತಿಯು ರೇಷ್ಮೆ ವಸ್ತ್ರಗಳನ್ನು ಧರಿಸುತ್ತಾಳೆ.

ಇವಳನ್ನು ಪಲ್ಲಕ್ಕಿಯಲ್ಲಿ ಕುಳ್ಳಿರಿಸಿ ನಾಲ್ಕು ಕಡೆಗಳಲ್ಲೂ ಬಟ್ಟೆಗಳಿಂದ ಅವಳನ್ನು ಮುಚ್ಚುತ್ತಾರೆ. ಈ ಪಲ್ಲಕ್ಕಿಯೊಡನೆ ಬಂಧುಗಳೇ ಮುಂತಾದವರು ವರನ ಗೃಹದ ಬಳಿಗೆ ಬಂದೊಡನೆಯೇ ಎಲ್ಲರೂ ಹಿಂದಕ್ಕೆ ಹೋಗುತ್ತಾರೆ. ಪಲ್ಲಕಿಯ ಸಂಗಡ ಒಬ್ಬ ಭೃತ್ಯನು ಮಾತ್ರ ಇರುತ್ತಾನೆ

ಈ ಪದ್ಧತಿಯು ಯಾಕೆಂದರೆ ನವದಂಪತಿಗಳಿಗೆ ಎಲ್ಲಿ ಅಪಶಕುನವಾಗುತ್ತದೆಯೋ ಎಂಬ ಭಯದಿಂದ ವಿವಾಹವನ್ನು ಪುರೋಹಿತನೊಬ್ಬನು ಮಾತ್ರ ಮಾಡಿಸುತ್ತಾನೆ.

ವಿವಾಹದೊಡನೆಯೇ ಚೀಣಾ ಸ್ತ್ರೀಯರ ಜೀವಿತದಲ್ಲಿ ದ್ವಿತೀಯಾಧ್ಯಾಯವು ಪ್ರಾರಂಭವಾಗುವುದು. ಆಗಿನಿಂದ ಆಕೆಯು ಗಂಡನ ಮನೆಯ ಒಂದು ಪದಾರ್ಥದಂತೆ ಪ್ರವರ್ತಿಸಬೇಕಾದುದೇ ಹೊರತು, ತಂದೆಯ ಮನೆಯೊಡನೆ ಯಾವ ವಿಧವಾದ ಸಂಪರ್ಕವೂ ಇರಕೂಡದು. ನೂತನ ಬಂಧು ಬಾಂಧವರ ಮೇಲೆಯೂ ಎಲ್ಲ ಸುಖವೂ, ಶಾಂತಿಯೂ ಆಧಾರಪಟ್ಟಿರುತ್ತದೆ. ಆತ್ಮೀಯ ಸ್ವಜನರ ಅತ್ಯಾಚಾರಗಳಿಂದ ಅನೇಕ ಸಮಯಗಳಲ್ಲಿ ಅನೇಕ ಮಂದಿ ಸ್ತ್ರೀಯರ ಜೀವಿತಗಳು ದುರ್ಭರವಾಗುತ್ತಿರುತ್ತಿವೆ.

ಹಿಂದೆ 'Pendal' ಯುಗದಲ್ಲಿ ಭಾರ್ಯಾಭರ್ತರು ಮುಖಾಮುಖಿಯಾಗಿ ನಿಂತು ಮಾತನಾಡುತ್ತಿರಲಿಲ್ಲ ಇವರಿಬ್ಬರಿಗೂ ಮಧ್ಯ ಮತ್ತೊಬ್ಬ ಪ್ರತಿನಿಧಿಯಿರುತ್ತಿದ್ದನು. ಇವನ ಮುಖಾಂತರ ತಮ್ಮ ಮನೋಭಾವಗಳನ್ನು ತಿಳಿಸಿ ತಮ್ಮ ಕಾರ್ಯಗಳನ್ನು ನಿರ್ವಹಿಸಿಕೊಳ್ಳುತ್ತಿದ್ದರು. ಈಗಲೂ ಈ ಪದ್ಧತಿಯು ಅನೇಕ ಸ್ಥಳಗಳಲ್ಲಿ ನಡೆದು ಬರುತ್ತಿದೆ.

ಚೀಣಾದಲ್ಲಿ ವಿವಾಹವೊಂದೇ ಶಾಸ್ತ್ರಸಮ್ಮತವಾದುದು. ಆದಾಗ್ಯೂ ಹೆಂಡತಿಯೆಂದು ಹೇಳದಿದ್ದಾಗ್ಯೂ ಅನೇಕ ಮಂದಿ ಸ್ತ್ರೀಯರನ್ನು ವಿವಾಹವಿಲ್ಲದೆಯೇ ಮನೆಗಳಲ್ಲಿ ಇಟ್ಟುಕೊಳ್ಳುತ್ತಾರೆ. ಹೀಗಿದ್ದರೂ ಸಹ ಇದೊಂದು ತಪ್ಪಾಗಲಾರದು.

(ಪ್ರಜಾಮತ)

ಪತ್ರವ್ಯವಹಾರ

(ಬಾತ್ಮಿದಾರರು ತಮ್ಮ ಸಂಪೂರ್ಣ ವಿಳಾಸವನ್ನು ನಮಗೆ ಕೊಡಬೇಕಾಗಿದೆ. ಬಾತ್ಮಿಗಳು ಆದಷ್ಟು ಸಂಕ್ಷೇಪವಿದ್ದು ಕಾಗದದ ಒಂದೇ ಮಗ್ಗುಲಲ್ಲಿ ಶಾಯಿಯಿಂದ ಬರೆಯಲ್ಪಟ್ಟು ಸ್ಪಷ್ಟವಾದ ಅಕ್ಷರಗಳಲ್ಲಿರಬೇಕು. ಬಾತ್ಮಿದಾರರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ.)

ಸಂ. ನ

ಉಡುಪಿ ತಾಲೂಕು ಕಮಿಟಿಯ ಇಲೆಕ್ಷನ್ ಆಫೀಸಿನವರ ಅವಗಾಹನೆ ಬಗ್ಗೆ

ಉಡುಪಿಯಲ್ಲಿರುವ ಮರಡಿತ್ತಾಯ ಕೃಷ್ಣ ಭಟ್ಟರ ಮಗ ಮರಡಿತ್ತಾಯ ಪರಮೇಶ್ವರ ಭಟ್ಟನು ಉಡುಪಿಯ ಜನತೆಯಲ್ಲಿಯೂ ಕೋಂಗ್ರೆಸ್ ಕೆಲಸಗಾರರಲ್ಲಿಯೂ ಕೇಳಿಕೊಳ್ಳುವಾದೇನೆಂದರೆ? ನಾನು ಉಡುಪಿ ಕೋಂಗ್ರೆಸ್ ಕಮಿಟಿಯ ಇಲೆಕ್ಷನ್ ಆಫೀಸಿನಲ್ಲಿ ಒಂದು ತಿಂಗಳು ಹಗಲಿರುಳು ರಾತ್ರಿ ಹಗಲು ಸಾಧ್ಯವಿದ್ದಷ್ಟು ಕೆಲಸ ಮಾಡಿದವನಾಗಿದ್ದು ತಾ. ೧೭ನೇ ರಾತ್ರಿ ೧೧ಗಂಟೆಗೆ ಕೆಲವು ಪೂಜ್ಯ ಮನುಷ್ಯರ ದುರ್ಬೋಧನೆಗಳಿಂದ ನನ್ನನ್ನು ಜಸ್ಟಿಸ್ ಪಾರ್ಟಿಗೆ ಸೇರುವಂತೆ ಒತ್ತಾಯಿಸಿದಲ್ಲಿ ನಾನು ಒಪ್ಪದೆ ಇದ್ದುದರಿಂದ ನನ್ನನ್ನು ಅವರು ಶ್ರೀ ಫಲಿಮಾರು ಮಠ ಶ್ರೀ ಸ್ವಾಮಿಗಳವರಲ್ಲಿಗೆ ಕರೆದುಕೊಂಡು ಹೋಗಿ ನನ್ನನ್ನು ದಾಕ್ಷಿಣ್ಯಕ್ಕೆ ಈಡುಮಾಡಿದ್ದರಿಂದ ಉಪಾಯ ಇಲ್ಲದವನಾಗಿ ಕೆಂಪು ಟೋಪಿಯಿಂದ ನನ್ನನ್ನು ಅಲ್ಲಿ ಅಪವಿತ್ರಗೊಳಿಸಿದವರಾಗಿಯೂ ತಾ. ೧೮ಕ್ಕೆ ನನ್ನನ್ನು ಬೆಳಗ್ಗೆ ೭ ಘಂಟೆಗೆ ಮನೆಯಿಂದ ಕರೆದುಕೊಂಡು ಹೋಗಿ ಪೋಲಿಂಗ್ ಆಫೀಸಿನಲ್ಲಿ ಅವರ ಕಡೆಯಿಂದ ಪೋಲಿಂಗ್ ಆಫೀಸಿನ ಹೊರಗೆ ನಿಲ್ಲಿಸಿದುದರಿಂದ ನಾನು ಉಡುಪಿಯ ಬಂಧುಬಾಂಧವರಲ್ಲಿ ಅಪಹಾಸ್ಯಕ್ಕೆ ಈಡಾದರೂ ನನ್ನನ್ನು ಎಲ್ಲರೂ ಮುಂಚಿನಂತೆಯೇ ಕೋಂಗ್ರೆಸ್ ಕೆಲಸಗಾರನೆಂಬ ಅಭಿಮಾನವಿಟ್ಟು ಸ್ವೀಕರಿಸಬೇಕಾಗಿಯೂ ಪ್ರಮಾದದಿಂದ ಆದ ತಪ್ಪಿಗೆ ನನ್ನನ್ನು ಕ್ಷಮಿಸುವಂತೆಯೂ ಪ್ರಾರ್ಥಿಸುತ್ತೇನೆ.

ಇತಿ ತಮ್ಮ ಕೋಂಗ್ರೆಸ್ ಕೆಲಸಗಾರ,

M. Parameshwara Bhatta.

೮ನೇ ಪುಟದಿಂದ

ಸಂಖ್ಯೆಯ ಮತಗಳು ಬಿದ್ದಿರಬಹುದು. ಆದರೆ ಜಸ್ಟೀಸ್ ಪಾರ್ಟಿಯ ಹರಿಜನ ಉಮೇದ್ವಾರಿಯ ಕುರಿತು ಯಾವ ಕೆಲಸವೂ ನಡೆದಿರಲಿಲ್ಲ. ಆ ಪಾರ್ಟಿ ಸವರ್ಣ ಕೆಲಸಗಾರರು ಅವರ ಕಡೆಗೆ ಲಕ್ಷ್ಯವನ್ನೇ ಕೊಟ್ಟಿರಲಿಲ್ಲ. ಜಸ್ಟಿಸ್ ಪಾರ್ಟಿಯ ಕೆಲಸಗಾರರು ತಮ್ಮ ಉಮೇದ್ವಾರಿಗಳಲ್ಲಿ ಸವರ್ಣ-ಅವರ್ಣರೊಳಗೆ ಇಷ್ಟುದೊಡ್ಡ ಭೇದವನ್ನು ಮಾಡಿದರೂ. ಪೆಟ್ಟಿಗೆಯ ಬಣ್ಣ ಅಂತಹ ವ್ಯತ್ಯಾಸವಿಲ್ಲದುದರಿಂದ ಎಲ್ಲಿಯಾದರೂ ಪ್ರಮಾದ ವಶಾತ್ ಮತಗಳು ಶ್ರೀ ಬಾಬುವಿಗೂ ಬಿದ್ದಿರಬಹುದು! ಹೆಗ್ಗಳಿಕೆಯ ವಿಷಯವೆಂದರೆ ಕೋಂಗ್ರೆಸಿನ ಬಣ್ಣವಾದಹಳದಿಸು ಟೊಪ್ಪಿಗಳು ಎಲ್ಲಾ ಕಡೆಯಲ್ಲಿಯೂ ತುಂಬಿಹೋಗಿದ್ದಾಗ ಸ್ವೇಚ್ಛೆಯಿಂದ ಕೆಂಪು ಟೋಪಿಗಳನ್ನಿಡುವವರೇ ದೊರಕದೆ, ಕೂಲಿಕೊಟ್ಟು ಕೆಲವರನ್ನು ಸಂಪಾದಿಸ ಬೇಕಾಗಿ ಬಂದುದು. ಅಂತೂ ಚುನಾವಣೆಯದಿನ ಕೊಂಗ್ರೆಸು ಭಾವನೆಯಲ್ಲದೆ ಮಿಕ್ಕವುಗಳಿಗೆಡೆಯಿರಲಿಲ್ಲ. ಕೊಂಗ್ರೆಸಿನ ಪ್ರತಿಷ್ಠೆಯಲ್ಲದೆ ಇನ್ನಾವುದೂ ಕಂಡುಬರಲಿಲ್ಲ.

ಡಾ। ವಿಟ್ಠಲ ಶೆಟ್ಟರೇ ಮೊದಲಾದ ಬಂಟ ಪ್ರಮುಖರು ಕೊಂಗ್ರೆಸಿನ ಜಯಕ್ಕಾಗಿ ಅವಿಶ್ರಾಂತವಾಗಿ ದುಡಿದಿದ್ದರು. ನಾಡವ ಸಮಾಜದಲ್ಲಿ ಕೆಲವರನ್ನು ಬಿಟ್ಟರೆ ಮಿಕ್ಕವರೆಲ್ಲಾ ಕೊಂಗ್ರೆಸ್ಸನ್ನು ಸಮರ್ಥಿಸಿದ್ದರು. ಹೆಚ್ಚಾಗಿ ತರುಣರು ಉತ್ಸಾಹದಿಂದ ಕೆಲಸ ಮಾಡಿದ್ದರು. ಅಂತೂ ಯಾವ ವಿಧದಿಂದಲೂ ಜಾತೀಯ ಭಾವನೆಗೆ ಪ್ರಾಮುಖ್ಯತೆ ದೊರೆತಿರಲಿಲ್ಲ. ಚುನಾವಣೆಯ ಮುಂಚಿನ ದಿನ ಕೆಲವು ಮುಖಂಡರು ಕೊಂಗ್ರೆಸಿಗಿದುರಾಗಿ ಬ್ರಾಹ್ಮಣ ಸಮಾಜವನ್ನು ಎತ್ತಿಕಟ್ಟುವ ಹಂಚಿಕೆ ನಡೆಸಿದ್ದರೂ ಅದು ಫಲಿಸಲಿಲ್ಲವೆಂಬುದು ಆನಂದದ ಸಂಗತಿ. ಕೆಲವರು ಜಾತೀಯ ಭಾವನೆಯನ್ನು ಉದ್ರೇಕಿಸುವ ಹೇಯ ಕೆಲಸವನ್ನೇನೋ ಮಾಡಿದ್ದರು. ಆದರೆ ಅದಕ್ಕೆ ಬೆಲೆ ದೊರೆತಿಲ್ಲ. ಸ್ತ್ರೀಯರೂ ತಂಡ ತಂಡವಾಗಿ ಬಂದು ಮತದಾನ ಮಾಡಿದ್ದರು. ಜಸ್ಟೀಸ್ ಪಾರ್ಟಿಯವರ ವ್ಯವಸ್ಥೆಯು ಅಷ್ಟೊಂದು ತೃಪ್ತಿಕರವಾಗಿರಲಿಲ್ಲ.

ಪುತ್ತೂರು ಡಿವಿಜನು

ಇಲ್ಲಿ ಶ್ರೀ. ಕೆ. ಆರ್. ಕಾರಂತರು ಕೊಂಗ್ರೆಸ್ ಕಡೆಯ ಉಮೇದ್ವಾರಿಗಳು. ಶ್ರೀ. ಬಿ. ನರಸಿಂಗರಾಯರು ಸ್ವತಂತ್ರವಾಗಿ ಅವರನ್ನು ಸ್ಪರ್ಧಿಸಿರುವರು. ಸಾಧಾರಣ ೪೦ ಸಾವಿರ ಮತದಾರರಿರುವ ಈ ಕ್ಷೇತ್ರದಲ್ಲಿ ಶ್ರೀಯುತ ಕಾರಂತರು ತನ್ನ ಸಾರ್ವಜನಿಕ ಕೆಲಸಗಳಿಂದಾಗಿ ಚಿರಪರಿಚಿತರು. ಇಲ್ಲಿ ಕೊಂಗ್ರೆಸಿನ ಜಯವು ನಿಶ್ಚಯವೆಂದಿದ್ದುದರಿಂದ ಪ್ರಥಮತಃ ಶ್ರೀ. ಕಾರಂತರಿಗೆ ಸ್ಪರ್ಧೆಯಿರಲಾರದೆಂದಿತ್ತು. ಆದರೆ ಜಸ್ಟೀಸ್ ಪಾರ್ಟಿಯವರ ಪ್ರೇರಣೆಯಿಂದಾಗಿ ಶ್ರೀಯುತ ನರಸಿಂಗರಾಯರು ಸ್ಪರ್ಧೆಗಿಳಿದರೆಂಬ ಪ್ರತೀತಿಯಿದೆ. ಆ ಪಾರ್ಟಿಯ ಕೆಲವು ಬೆಂಬಲವು ಶ್ರೀ. ರಾಯರಿಗಿತ್ತಾದರೂ ಕಳೆದ ತಾ. ೨೦ರಲ್ಲಿ ನಡೆದ ಚುನಾವಣೆಯಲ್ಲಿ ನಿರೀಕ್ಷೆಯಂತೆ ಕೊಂಗ್ರೆಸ್ಸಿಗೇನೇ ಹೆಚ್ಚಿನ ಮತಗಳು ಬಿದ್ದಿರುವವು. ಕೊಂಗ್ರೆಸ್ಸಿನ ಕಡೆಯ ಪ್ರಚಾರವೂ ಪ್ರಬಲವಾಗಿತ್ತು. ಹಾಗೆಯೇ ಚುನಾವಣೆಯ ದಿನದ ವ್ಯವಸ್ಥೆಯೂ ಚೆನ್ನಾಗಿತ್ತು. ಪುತ್ತೂರು ಕಾಸರಗೋಡುಗಳಲ್ಲಿ ಹಳ್ಳಿಗಳೇ ಅಧಿಕವಿದ್ದು ಮಲೆನಾಡಿನಂತಿರುವದರಿಂದ ಮತದಾರರನ್ನು ದೂರದಿಂದ ತರುವರೆ ಹೆಚ್ಚಿನ ಅನಾನುಕೂಲತೆಯಿತ್ತು. ಪೋಲ್ ಆದ ಮತಗಳಲ್ಲಿ ಸೇಕಡಾ 24 ಕೊಂಗ್ರೆಸು ಕಡೆಯವರಿಗೆ ದೊರಕೀತೆಂಬ ಊಹನೆಯಿದೆ. ಇಲ್ಲಿಯೂ ಜಾತಿ ಮತಗಳ ಗೊಂದಲವಿಲ್ಲದೆ ಸಾರಸ್ವತ ಸಮಾಜವೇ ಮೊದಲಾಗಿ ಎಲ್ಲಾ ಸಮಾಜಗಳೂ ಕೊಂಗ್ರೆಸನ್ನು ಸಮರ್ಥಿಸಿದ್ದವು. ಅಧಿಕಾರಿಗಳು ಪೋಲೀಸು ಪಡೆಯೊಂದಿಗೆ ಸಂಚರಿಸಿ ಮೇಲ್ವಿಚಾರವನ್ನು ನಡೆಸುತ್ತಿದ್ದರು. ಇಡೀ ಜಿಲ್ಲೆಯಲ್ಲಿ ಹೆಚ್ಚಿನ ಯಾವ ಗೊಂದಲವೂ ಇಲ್ಲದೆ ಚುನಾವಣೆಯು ವ್ಯವಸ್ಥಿತವಾಗಿ ಶಾಂತ ರೀತಿಯಿಂದ ನಡೆದಿರುವುದು. ಇದಕ್ಕೆ ಇತ್ತಂಡದ ಕಾರ್ಯಕರ್ತರ ಶಿಸ್ತುಪಾಲನೆಯು ಕಾರಣವೆನ್ನಬಹುದು.

ಮಂಗಳೂರು ಡಿವಿಜನು

ಇಲ್ಲಿ ತಾ. ೨೦ರಲ್ಲಿ ಚುನಾವಣೆಯು ನಡೆಯಿತು. ಕೊಂಗ್ರೆಸಿನ ಪರವಾಗಿ ಶ್ರೀ ಬಿ. ವೆಂಕಟ್ರಾಯ ಬಾಳಿಗರೂ ಜಸ್ಟೀಸ್ ಪಾರ್ಟಿಯ ಕಡೆಯಿಂದ ಶ್ರೀ ಲಕ್ಕಪ್ಪ ರೈಗಳೂ ಸ್ಪರ್ಧಿಸಿದ್ದರು. ಇಡೀ ತಾಲೂಕಿನಲ್ಲಿರುವ 28 ಸಾವಿರ ಮತದಾರರಲ್ಲಿ ಸುಮಾರು 10 ಸಾವಿರಕ್ಕೆ ಮಿಕ್ಕಿ ಪಟ್ಟಣಗಳಲ್ಲಿರುವರು. ಮಂಗಳೂರಲ್ಲಿಯೇ 7800 ಮತದಾರರಿದ್ದು ಮೊನ್ನೆ ಕಡಿಮೆಯೆಂದರೆ ೫ ಸಾವಿರ ಜನರು ಮತದಾನಮಾಡಿರುವರೆಂದೂ ಅವುಗಳಲ್ಲಿ ಕನಿಷ್ಠ 3500 ಕೊಂಗ್ರೆಸಿಗೆ ದೊರೆತಿರಬೇಕೆಂದೂ ಅಂದಾಜುಮಾಡಲಾಗಿದೆ. ಮಂಗಳೂರು ತಾಲೂಕಿನ ಮತದಾರರಲ್ಲಿ ಹೆಚ್ಚಿನವರು ಬಂಟರು ಮತ್ತು ಬ್ರಾಹ್ಮಣರು ಜಾತಿಯ ಅಭಿಮಾನಕ್ಕೆ ಪ್ರಾಮುಖ್ಯತೆ ದೊರೆಯುವ ಕಾಲವಾಗಿದ್ದರೆ ಶ್ರೀಯುತ ಬಾಳಿಗರು ಗೆಲ್ಲುವಸಂಭವವಿದ್ದಿಲ್ಲ. ಆದರೆ ಕೊಂಗ್ರೆಸ್ ಭಾವನೆಯು ಸಾರ್ವತ್ರಿಕ ಹಬ್ಬಿರುವ ಮಂಗಳೂರಿನಲ್ಲಿ ಕೊಂಗ್ರೆಸಿನ ಉಮೇದ್ವಾರೀ ಶ್ರೀಯುತ ಬಾಳಿಗರಿಗೆ ಪ್ರಬಲ ಬಹುಮತ ದೊರೆತಿರುವದು ಆನಂದದ ಸಂಗತಿಯೆಂದರೆ ಶಿವಳ್ಳಿ ಬ್ರಾಹ್ಮಣ ಸಮುದಾಯವು ಒಗ್ಗಟ್ಟಾಗಿ ಕೋಂಗ್ರೆಸ್ಸನ್ನು ಸಮರ್ಥಿಸಿರುವದು. ಮತದಾನದ ದಿನದ ಕೋಂಗ್ರೆಸ್ಸಿನ ಕಡೆಯ ವ್ಯವಸ್ಥೆಯು ನಾಜೂಕಿನಲ್ಲಿತ್ತು- ಏನೊಂದೂ ಗಲಭೆಯಾಗದಂತೆ ಸ್ವಯಂಸೇವಕರು ಶಿಸ್ತನ್ನು ಪಾಲಿಸಿದ್ದರು. ಮಂಗಳೂರು ನಗರದ ಠಾಣ್ಯಗಳ ಪೈಕಿ ೬ರಲ್ಲಿ ಕೋಂಗ್ರೆಸ್ಸಿಗೆ ಪ್ರಬಲ ಬಹುಮತ ಬಿದ್ದಿರುವುದು. ಜನರ ಉತ್ಸಾಹಕ್ಕೆ ಮೇರೆಯಿರಲಿಲ್ಲ. ಕೊಂಗ್ರೆಸಿನ ಜಯ ಜಯಕಾರಗಳು ಎಲ್ಲೆಲ್ಲಿಯೂ ಕೇಳಿಬರುತ್ತಿದ್ದವು.

ಕೆಲವು ದೃಶ್ಯಗಳು

ಚುನಾವಣೆಯ ಸಮಯ ಕೆಲವು ಹೃದಯೋತ್ತೇಜಕ ದೃಶ್ಯಗಳಿದ್ದವು. ಕೋಂಗ್ರೆಸ್ಸಿನ ಹೆಸರು ಮತ್ತು ಆದರ ರೀತಿ ನೀತಿಗಳಲ್ಲಿ ಜನರಿಗೆಂತಹ ಮೋಹವಿರುವದೆಂಬುದನ್ನು ಕೆಲವು ದೃಷ್ಟಾಂತಗಳು ತೋರಿಸಿಕೊಟ್ಟವು. ಹೆಚ್ಚಿನ ಕಡೆಗಳಲ್ಲ ಕೆಂಪು ಟೋಪಿಗಳನ್ನಿಡಲು ಜನರೇ ಸಿಕ್ಕದೆ ಆ ಕಡೆಯವರು ತುಸು ಪೇಚಾಟಕ್ಕೀಡಾಗಿದ್ದರು. ಖಾಸಗೀ ಕಾರಣಗಳಿಲ್ಲದ ಹೆಚ್ಚಿನವರು ಜಸ್ಟೀಸ್ ಪಾರ್ಟಿಯ ಕಡೆಯಿಂದ ಕೆಲಸ ಮಾಡುವಾಗ ಒಳಗಿಂದೊಳಗೆ ನಾಚುತ್ತಿದ್ದರು. ಕೆಂಪು ಟೋಪಿ, ಕೆಂಪು ಪತಾಕೆಗಳೆಂಬವು ಉಪಾಯವಿಲ್ಲದೆ ಚುನಾವಣೆಯ ಕಾಲ ಗೋಚರಿಸಿ ಜನತೆಯ ವಕ್ರದೃಷ್ಟಿಗೊಳಗಾಗಿರುವವೆನ್ನಬಹುದು. ಹಳದಿ ಟೋಪಿ, ಹಳದಿ ಬಣ್ಣವೆಂದರೆ ಮಕ್ಕಳು ಮರಿಗಳೂ ಮೋಹಿಸುವಂತಾಗಿತ್ತು. ಚುನಾವಣೆಯ ದಿನ ಕಲ್ಯಾಣಪುರದಲ್ಲಿ ಸ್ವಯಂಸೇವಕರ ಬಸ್ಸು ಬರುತ್ತಿದ್ದಾಗ ಸುಮಾರು ಐದು ವರ್ಷದ ಮಗುವೊಂದು 'ಕೋಂಗ್ರೆಸ್ಸಿಗೆ ಓಟು ಕೊಡಿರಿ' ಎಂದು ಬಸ್ಸಿಗಿದಿರಾಗಿ ಓಡಿ ಬಂತು- ಡ್ರೈವರನು ಬಸ್ಸನ್ನು ನಿಲ್ಲಿಸದಿರುತ್ತಿದ್ದರೆ ಮಗುವು ನುಚ್ಚುನುರಿಯಾಗುವ ಗಂಡಾಂತರ. ಪೆರ್ಡೂರಿನ ಸಮೀಪದ ಹಳ್ಳಿಯಲ್ಲಿ ಒಬ್ಬ ೮೧ ವರ್ಷ ಪ್ರಾಯದ ಮುದುಕ. ಮೈಯು ಜೋಲುಬಿದ್ದು, ಕಣ್ಣುಗಳು ಕುಳಿಬಿದ್ದು, ಕೈಕಾಲುಗಳು ಬಲಗುಂದಿ ಮನೆಯೊಳಗೇ ಸುತ್ತಾಡಿಕೊಂಡಿದ್ದವ. ಕೋಂಗ್ರೆಸ್ಸಿನ ಸಂದೇಶವು ಆ ಮುದುಕನಿದ್ದಲ್ಲಿಗೂ ಹೋಗಿತ್ತು. ಕೋಂಗ್ರೆಸ್ಸಿಗೆ ಓಟು ಕೊಡದಿರುವದು ಪಾಪವೆಂದು ಭಾವಿಸಿ ಕೋಲೂರುತ್ತಾ ಹೊರಟ. ಗಾಡಿ ಕಳುಹಿಸುತ್ತೇವೆಂದು ಹೇಳಿ ಹೊರಟವರು-ಬೇರೆ ಗಡಿಬಿಡಿಯಲ್ಲಿ ಬಿದ್ದರು. ಮುದುಕ ಜಗ್ಗುತ್ತಾ....ಮೂರು ಮೈಲಿನ ಹಾದಿಯನ್ನು ನಾಲ್ಕು ಘಂಟೆಗಳಲ್ಲಿ ಮುಗಿಸಿ ಪೋಲಿಂಗ್ ಸ್ಟೇಶನಿಗೆ ಬಂದು ವೋಟು ಕೊಟ್ಟು ಕೃತಾರ್ಥನಾದೆನೆಂದು ಉಬ್ಬಸಬಿಟ್ಟ. ಮತ್ತೊಬ್ಬಳು ಮುದುಕಿ; ಮೇಲಾಗಿ ಕುರುಡಿ. ಇವಳು ಸ್ವೇಚ್ಛೆಯಿಂದ ಮೊಮ್ಮಗನ ಹೆಗಲ ಮೇಲೆ ಕೈಯಿಟ್ಟುಕೊಂಡು ಪೆರ್ಡೂರಿಗೆ ಬಂದು ಬಾಯ್ದೆರೆಯಾಗಿ ಕೋಂಗ್ರೆಸ್ಸಿಗೆ ಓಟು ಹೇಳಿ ಹಾಗೆಯೇ ವಾಪಾಸು ಸಾಗಿದಳು! ಶಿರ್ವ ಪೋಲಿಂಗ್ ಸ್ಟೇಶನಿನಲ್ಲಿ ಸುಮಾರು ೫ ವರ್ಷದ ಕ್ರಿಶ್ಚಿಯನ್ ಹುಡುಗನೊಬ್ಬನು ಬೆಳಗಿನಿಂದ ಸಂಜೆಯ ವರೆಗೆ ಒಂದೇ ಸಮನೆ 'ಕೋಂಗ್ರೆಸ್ಸಿಗೆ ಓಟು ಕೊಡಿರಿ' ಎಂದು ಇದಿರು ಪಾರ್ಟಿಯವರ ಬೆದರಿಕೆಗೂ ಬಗ್ಗದೆ ಕೂಗುತ್ತಿದ್ದನು. ಜನರಲ್ಲಿ ಕೋಂಗ್ರೆಸ್ಸಿನ ಪಾವಿತ್ರ್ಯದ ಕುರಿತು ಹೆಚ್ಚಿನ ಪ್ರಚಾರವಾದುದರ ಪರಿಣಾಮವಾಗಿ ಕೆಲವು ಅಜ್ಞಾನೀ ಮತದಾರರು ಮಹಾ ಭಕ್ತಿಯಿಂದ ಪುಷ್ಪಗಂಧಗಳನ್ನು ಹಿಡಿದುಕೊಂಡು ಓಟು ಕೊಡಲು ಹೋಗುತ್ತಿದ್ದರು!

ತಾಳದೆ ಇರತಕ್ಕ ಮೂತ್ರವ್ಯಾಧಿಗಳಿಗೆ
ಆಶ್ಚರ್ಯಕರವಾದ ಔಷಧ.

ಡಾ. ಜಸಾನಿಯವರ
ಜಗತ್ಪ್ರಸಿದ್ಧ

"ಗೊನೊಕಿಲರ್" (ರಿಜಿಸ್ಟರ್ಡ್)

GONO ORIGINAL KILLER

ನಕಲ ಮದ್ದುಗಳಿಗೆ ಮರುಳಾಗಿ ಮೋಸ ಹೋಗಬೇಡಿರಿ. ಕೊಂಡು ಕೊಳ್ಳುವದಕ್ಕೆ ಮೊದಲು ಬೋಳಿಯ ಗುರುತನ್ನು ಗಮನಿಸಿರಿ

ಪ್ರಮೇಹ ವ್ಯಾಧಿಗೆ ಸಿದ್ಧೌಷಧ

ಇಂದಿನ ಅಪ್ರತಿಮ ಔಷಧ. ಆಂಗ್ಲೇಯ ಮತ್ತು ಆಯುರ್ವೇದ ಔಷಧಗಳೊಂದೂ ಫಲಕಾರಿಯಾಗದೇ ಇನ್‌ಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ, ಒಂದಾವರ್ತಿಯಾದರೂ ಈ ನಮ್ಮ **ಗೋನೋಕಿಲರ್** ಎಂಬ ಔಷಧವನ್ನು ಉಪಯೋಗಿಸಿನೋಡಿರಿ. ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ, ಗೋನೋಕಿಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾತುವಿಕೆ, ಸರ್ವಪ್ರಕಾರದ ಪ್ರಮೇಹ (ಎಷ್ಟೇ ಹಳತು ಯಾ ಯಾವದೇ ಸ್ಥಿತಿಯಲ್ಲಿರಲಿ), ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತುಸ್ರಾವ, ಬಿಳುಪು ಹರಿಯುವದು ಇವೇ ಮೊದಲಾದ ಯಾವತ್ತು ಗೊನೋಕೋಕಸ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ.

ಬೆಲೆ 50 ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ. 3—0—0 (ಮೂರು) ವಿ. ಪಿ. ಛಾರ್ಜು ಬೇರೆ.

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ, ಗಿರಗಾಂವ ಬ್ಯಾಕ್ ರೋಡ್, ಮುಂಬಯಿ 4.

Sole Manufacturer: Dr. D. N. JASANI, GIRGAUM BACK ROAD, BOMBAY

ಆಭಾರ ಮನ್ನಣೆ

ಕಾಂಗ್ರೆಸ್ಸಿನವರು ಕೈಕೊಂಡ ಚುನಾವಣೆಯ ಹೋರಾಟವು ಮುಗಿಯಿತು. ಕಾಂಗ್ರೆಸ್ಸಿನ ಆಜ್ಞೆಯ ಪ್ರಕಾರ ಕರ್ನಾಟಕದಲ್ಲೆಲ್ಲಾ ಕಾಂಗ್ರೆಸ್ ಕಾರ್ಯಕರ್ತರೂ ಕಮಿಟಿಗಳೂ ಪ್ರಚಂಡ ಚಳವಳಿಯನ್ನು ಹೂಡಿ, ಕಾಂಗ್ರೆಸ್ಸಿನ ಸಂದೇಶವನ್ನು ಸಂದು ಗೊಂದುಗಳಲ್ಲಿ ಹರಡಿ, ಜನ ಜಾಗ್ರತೆಯನ್ನುಂಟುಮಾಡಿದೆ. ಚುನಾವಣೆಯಲ್ಲಿ ಕೆಲವರು ಗೆಲ್ಲಬಹುದು ಕೆಲವರು ಸೋಲಬಹುದು ಆದರೆ, ಕಾಂಗ್ರೆಸ್ ಕಾರ್ಯಕರ್ತರು ರಾಷ್ಟ್ರದಲ್ಲಿ ಜಾಗ್ರತೆಯನ್ನುಂಟು ಮಾಡಿದ್ದೇನೂ ಸುಳ್ಳಾಗುವದಿಲ್ಲ.

ಈ ಕಾರ್ಯದಲ್ಲಿ ಸಹಾಯಮಾಡಿದ ಕಾಂಗ್ರೆಸ್ ಕಾರ್ಯಕರ್ತರಿಗೂ, ಮತದಾರರಿಗೂ, ಕಾಂಗ್ರೆಸ್ ಸ್ವಯಂಸೇವಕರಿಗೂ ಕ. ಪ್ರಾ. ಪಾರ್ಲಿಮೆಂಟರಿ ಬೋರ್ಡು ತನ್ನ ಹೃತ್ಪೂರ್ವಕವಾದ ಅಭಿನಂದನೆಗಳನ್ನು ಅರ್ಪಿಸುತ್ತದೆ.

ಇದಲ್ಲದೆ ಅನೇಕ ವೃತ್ತಪತ್ರಗಳು ಬೋರ್ಡಿನ ಪ್ರತಿಯೊಂದು ಸರ್ಕ್ಯುಲರಗಳನ್ನು ಮುದ್ರಿಸಿಯೂ ಸ್ವತಂತ್ರವಾಗಿಯೂ ವಿಶೇಷ ಸಂಚಿಕೆಗಳನ್ನು ತೆಗೆದು ಕಾಂಗ್ರೆಸ್ಸಿನ ಚುನಾವಣೆಯ ಕಾರ್ಯದಲ್ಲಿ ವಿಶೇಷ ಸಹಾಯವಿತ್ತುದಕ್ಕಾಗಿ, ರಾಷ್ಟ್ರೀಯ ಎಲ್ಲಾ ವೃತ್ತಪತ್ರಗಳಿಗೆ ನಮ್ಮ ಅಭಿನಂದನೆಗಳನ್ನು ಅರ್ಪಿಸುತ್ತೇವೆ.

ಇನ್ನು ಮುಂದಾದರೂ ಇದೇ ರೀತಿಯಾಗಿ ಕಾಂಗ್ರೆಸ್ಸಿನವರು ಕೈಕೊಂಡ ಪ್ರತಿಯೊಂದು ಕಾರ್ಯಕ್ರಮದಲ್ಲಿ ಎಲ್ಲರೂ ಸಹಾಯಮಾಡಬೇಕೆಂದು ಬಿನ್ನಯಿಸಿ ಮತ್ತೊಮ್ಮೆ ಎಲ್ಲರ ಆಭಾರವನ್ನು ಮನ್ನಿಸುತ್ತೇನೆ.

ಹುಕ್ಕೇರಿಕರ,
ಕ. ಪ್ರಾ. ಪಾ. ಬೋ. ಗೌ. ಕಾರ್ಯದರ್ಶಿ.

ಕರ್ನಾಟಕ

ಬೆಳಗಾಂವ್

ಶ್ರೀ ಬಾಬುರಾಜೇಂದ್ರ ಪ್ರಸಾದರು ಬೆಳಗಾಂವಿಗೆ ಬಂದು ಪ್ರಚಂಡ ಜನಸಮುದಾಯಕ್ಕೆ ಕೊಂಗ್ರೆಸ್ ಸಂದೇಶವನ್ನು ತಿಳಿಸಿ ಹೋಗಿರುವರು. ಪಂಡಿತ ನೆಹರುಗಳು ಬೆಳಗಾವಿಗೆ ಹೋದಾಗ ೩೦ ಸಾವಿರ ಜನರ ಮಹಾಸಭೆಯಲ್ಲಿ ನಗರ ಸಭೆಯವರ ಮಾನಪತ್ರವನ್ನು ಸ್ವೀಕರಿಸಿ ಕೊಂಗ್ರೆಸನ್ನು ಸಮರ್ಥಿಸಿ ಭಾಷಣವಿತ್ತರು.

ಬೆಳಗಾವಿ ಲಿಂಗರಾಜ ಕೋಲೇಜಿನ ಕರ್ನಾಟಕ ಸಂಘದ ವಾರ್ಷಿಕೋತ್ಸವವು ಕಳೆದ ತಾ. ೧೪ರಲ್ಲಿ ಶ್ರೀ. ನಾಗೇಶ ಶಾಸ್ತ್ರಿಗಳ ಅಧ್ಯಕ್ಷತೆಯಲ್ಲಿ ನಡೆಯಿತು

ಬೊಂಬಾಯಿ ಸರಕಾರದ ಶಿಕ್ಷಣ ಮಂತ್ರಿಯಾದ ಸರ್. ಕಂಬಳಿಯವರಿಗೆ ಕೊಂಗ್ರೆಸಿನವರು ಪ್ರಬಲ ಪ್ರತಿಸ್ಪರ್ಧಿಯನ್ನು ನಿಲ್ಲಿಸಿರುವದರಿಂದ, ಅವರು ಆರಿಸಿಬರುವದು ಅಸಂಭವವಾಗಿ ಕಂಡು ಬರುತ್ತದೆ.

ನ್ಯೂ ಕೋಮಲ ವಿಲಾಸ ಹೊಟೆಲ್

91-101 ಕವಾಸ್ಜಿ ಪಟೇಲ್ ಸ್ಟ್ರೀಟ್, ಫೋರ್ಟ್, ಬೊಂಬಾಯಿ

ನೀವು

ಬೊಂಬಾಯಿಯನ್ನು ಸಂದರ್ಶಿಸುವಾಗ

ನ್ಯೂ ಕೋಮಲ ವಿಲಾಸ

ಇಲ್ಲಿಯೇ ಉಳಕೊಳ್ಳಿರಿ

ಅತ್ಯಾಧುನಿಕ ರೀತಿಯ ಸಲಕರಣೆಗಳು ಸುಲಭದರದಲ್ಲಿ ದೊರೆಯುತ್ತವೆ!

ನಿಮ್ಮನ್ನು ತೃಪ್ತಿಗೊಳಿಸುವ ಮೇಲ್ವಿಚಾರ!

ಕಾಯಂ ಉಳಕೊಳ್ಳುವವರಿಗೆ ರಿಯಾಯತಿಯ ದರಗಳಿವೆ.

ಕುಟುಂಬ ಸಮೇತ ವಾಸಿಸುವರೆ ಪ್ರತ್ಯೇಕ ಏರ್ಪಾಡುಗಳಿವೆ.

ಹೆಚ್ಚಿನ ವಿವರಗಳನ್ನು ಕೆಳಗಿನವರಿಂದ ತಿಳಿಯಿರಿ.

ಕೆ. ವಿ. ರಾವ್, ಮೆನೇಜರ್.

ನೋಟೀಸು

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್, ಲಿಮಿಟೆಡ್, ಉಡುಪಿ

ಈ ಕೆಳಗೆ ಹೆಸರು ಕಾಣಿಸಿದವರು ಈ ಬೇಂಕಿನಿಂದ ಚಿನ್ನಾಭರಣಗಳ ಅಡವಿನ ಮೇಲೆ ಪಡೆದ ಸಾಲಗಳನ್ನು ಮರುಪಾವತಿ ಮಾಡದಿರುವುದರಿಂದ ಈ ಮೂಲಕ ಜಾಹೀರುಪಡಿಸುವುದೇನೆಂದರೆ—ಸದ್ರಿ ನಗಗಳು ತಾ. 1—3—1937ನೇ ಸೋಮವಾರ ಮಧ್ಯಾಹ್ನ 12 ಘಂಟೆಗೆ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮೂಲಕ ಮಾರಾಟ ಮಾಡಲಾಗುವುದು.

ಸಾಲದ ತಾರೀಕು	ಸಾಲದ ನಂಬ್ರ	ಹೆಸರು ಮತ್ತು ವಿಳಾಸ	ಐವಜು
31-5-'34	78/34	ಸರಾಫ್ ಬಾಬುರಾಯ ಸೆಟ್ಟಿ, ನಾಗಪ್ಪ ಸೆಟ್ಟಿ ಮಗ, ಜುವೆಲರ್, ಉಡುಪಿ	125/-
9-6-'34	81/34	ಲಕ್ಷ್ಮೀನಾರಾಯಣ ಕಂಗಿನಾಯ, ಆರ್. ಕಂಗಿನಾಯರ ಮಗ, ಹೊಟೆಲ್ ಕೀಪರ್, ಕುಂಜಾಲು, ಬ್ರಹ್ಮಾವರ	150/-
26-7-'34	106/34	ಯಚ್. ತಿಮ್ಮಪ್ಪ ಸೆಟ್ಟಿ, ಅಂತಯ್ಯ ಸೆಟ್ಟಿ ಮಗ, ಸಾಹುಕಾರ, ಬ್ರಹ್ಮಾವರ	50/-
29-4-'35	79/35	ಅಗುಸ್ಟಿನ್ ಸಿ. ಮಸ್ಕರೇಂಞ, ಲಿಯೊ ಮಸ್ಕರೇಂಞಸ ಮಗ, ಅಧ್ಯಾಪಕ, ಕೊಳಲ್ಗಿರಿ, ಕಲ್ಯಾಣಪುರ ಪೋಸ್ಟು	100/-
30-4-'35	80/35	ಕೆ. ನಾರಾಯಣ ಸೆಟ್ಟಿ, ಕೆ. ರಾಮಯ್ಯ ಸೆಟ್ಟಿ ಅಳಿಯ, ಟೀಚರ್, ಕಡೆಕಾರು, ಉಡುಪಿ	30/-
2-10-'35	190/35	ಯು. ಅಮೃತ ಶೆಣೈ C/o ಸಿ. ಬಿ. ಏಜೆನ್ಸಿ, ಉಡುಪಿ	15/-
7-8-'34	116/34	ಪೆರಂಪಳ್ಳಿ ರಾಘವೇಂದ್ರ ನಾಯಕ್, ನಾಗಪ್ಪ ನಾಯ್ಕರ ಮಗ, ಮರ್ಚಂಟ್ ಉಡುಪಿ	500/-
8-6-'36	109/36	,, ,,	300/-
2-3-'36	39/36	,, ,,	330/-
28-8-'34	133/34	,, ,,	180/-
5-1-'35	3/35	,, ,,	300/-

(*Sd-*) **A. S. KINI**
Agent at Udipi

ಗೃಹಸ್ಥರೇ!

ಗೃಹಕೃತ್ಯೋಪಯೋಗದ ಎಲ್ಲಾ ವಿಧದ ತಾಮ್ರ, ಹಿತ್ತಾಳಿ, ಜರ್ಮನ್ ಬೆಳ್ಳಿ, ಬೆಳ್ಳಿ ಸಾಮಾನುಗಳು ಎಲ್ಲಿ ಸಿಗುತ್ತವೆ ಬಲ್ಲಿರಾ?

ರಥಬೀದಿಯಲ್ಲಿ ಕಲ್ಮಂಜೆ ವ್ಯಾಸಾಚಾರ್ಯರ ಅಂಗಡಿಯಲ್ಲಿ ಮಾತ್ರವೇ.

ಸ್ವದೇಶಿ ಕೈಗಾರಿಕೆ! ಹದಿನೆಂಟು ವರ್ಷಗಳ ಅನುಭವ!

ಮನೆಯ ಉಪಯೋಗಕ್ಕೂ ಉಡುಗರೆ ಕೊಡಲಿಕ್ಕೂ ದಾನಮಾಡಲಿಕ್ಕೂ ಬೇಕಾದ ನಮೂನೆಯ ಸಾಮಾನುಗಳನ್ನು ಮನಮೆಚ್ಚುವ ಮಾದರಿಯಲ್ಲಿ ತಕ್ಕ ಕಾಲದಲ್ಲಿ ನಾಜೂಕಾಗಿ ತಯಾರುಮಾಡಿಸಿಯೂ ಕೊಡಲಾಗುವುದು.

ಹೆಚ್ಚಿನ ವಿವರಗಳಿಗೆ ಸಚಿತ್ರ ಕೆಟಲಾಗಿಗೆ ಬರೆಯಿರಿ.

ಕಲ್ಮಂಜೆ ವ್ಯಾಸಾಚಾರ್ಯ,

ಪಾತ್ರೆ ವ್ಯಾಪಾರಿ, ರಥಬೀದಿ, ಉಡುಪಿ.



ಗೃಹಕೃತ್ಯಕ್ಕೆ ಬೇಕಾದ ವಿಧವಿಧ ತಾಮ್ರದ ಪಾತ್ರೆಗಳು.

ಕಸ್ತೂರಿ ಮಿಶ್ರಣ ದಶಮೂಲವೆಂಬ

ಸೂತಿಕಾ ರಸಾಯನ

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

I. ಶೋಧನ ಗುಣ:—ಶೋಧನದಿಂದ ಪ್ರಸವಾನಂತರ ಗರ್ಭಕೋಶದ ಸರ್ವತರದ ನಂಜನ್ನು ಹೊರಗೆ ಹಾಕಿ ಪ್ರಸೂತವಾದ ಗರ್ಭಕೋಶವನ್ನು ಮೂರು ದಿವಸಗಳೊಳಗೆ ಸಂಕುಚಿತವಾಗಿ ಮಾಡುವದು.

II. ರಸಾಯನ ಗುಣ:—ರಸಾಯನದಿಂದ ಸೂತಿಕಾ ಸ್ತ್ರೀಯು ಗರ್ಭದ ಬೆಳವಣಿಗೆ ಬಗ್ಗೆಯೂ, ಪ್ರಸವವೇದನಾ ಬಗ್ಗೆಯೂ ತಾನು ಕಳಕೊಂಡ ಮೂಲ ಶಕ್ತಿಯನ್ನು ಇಮ್ಮಡಿಯಾಗಿ ತಿರುಗಿ ಹೊಂದುವಳು.

III. ಸುಖಸೇವನ:—ಸುಖಸೇವನದಿಂದ ಮಧುರ ಮನೋಹರವಾದ ಈ ರಸಾಯನವು ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾದುವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವಾನಂತರದ ತೀಕ್ಷ್ಣವೇದನೆಯನ್ನು ಶೀಘ್ರದಿಂದ ನಿಲ್ಲಿಸುವದು.

ಒಬ್ಬಳು ಬಾಣಂತಿಗೆ ಎರಡು ಬಾಟ್ಲಿ ಬೇಕಾಗುವುದು. ಕ್ರಯ ಬಾಟ್ಲಿ 1ಕ್ಕೆ ರೂ. 2-0-0.

ಎಮ್. ವಿ. ಶಾಸ್ತ್ರಿ, ಆಯುರ್ವೇದ ಭೂಷಣ

ಮಂಗಳೂರು, ದ.ಕ.

ಕ್ರೌನ್ ರಬ್ಬರ್ ಸ್ಟಾಂಪ್ ಕಂಪೆನಿ

ಸ್ಥಾಪನೆ: 1926



18 ಬಲ್ಮಠ ರಸ್ತೆ, ಮಂಗಳೂರು.

ಯಾವತ್ತೂ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಅಗತ್ಯವಿರುವ ಎಲ್ಲಾ ತರದ ರಬ್ಬರ್ ಮೊಹರುಗಳೂ ಸೈನ್ ಬೋರ್ಡು, ಪೇಡೆಗಳ ಬೇಜು, ಮೊನೊಗ್ರಾಮ್ ಸೀಲು, ಇತ್ಯಾದಿಗಳನ್ನು ಪ್ರತಿಯೊಬ್ಬರ ಅಭಿರುಚಿಗೊಪ್ಪುವಂತೆ ಸುಲಭ ದರಗಳಲ್ಲಿ ಮಾಡಿಕೊಡೋಣಾಗುವುದು.

ಹೆಚ್ಚೆಚ್ಚು ಒಪ್ಪುವ ಸೆಟ್ಟುಗಳು ಕೂಡಾ ಸಿಗುವವು.

ಮಿಕ್ಕ ವಿಚಾರಗಳನ್ನು ನಮ್ಮ ಆಫೀಸಿಗೆ ಸ್ವತಹ ಬಂದು ಯಾ ಪತ್ರ ಮುಖೇನ ತಿಳಕೊಳ್ಳಬಹುದು.

ಮಂಗಳೂರಲ್ಲಿ ರೈಲು ಬಂಡಿಗಳ ಸಮಯ

ಗಾಡಿಗಳು	ಹೊರಡುವ ಘಂಟೆ.	ತಲಪುವ ಘಂಟೆ.
ಮಿಕ್ಸೆಡ್	ಬೆಳಿಗ್ಗೆ 5-55	ರಾತ್ರಿ 8-55
ಕಾಂಜಂಗಾಂಡ್ ಪ್ಯಾಸಂಜರ್	ಬೆಳಿಗ್ಗೆ 8-25	ಮಧ್ಯಾಹ್ನ 1-20
ಮೈಲ್	ಬೆಳಿಗ್ಗೆ 9-50	ಸಂಜೆ 4-20
ಫಾಸ್ಟ್ ಪೆಸೆಂಜರ್	ಮಧ್ಯಾಹ್ನ 12-45	ಮಧ್ಯಾಹ್ನ 2-40
ಕಾಸರಗೋಡ್ ಪ್ಯಾಸೆಂಜರ್	ಮಧ್ಯಾಹ್ನ 3-20	ಸಂಜೆ 6-15
ಶಟಲ್	ಸಂಜೆ 5-25	ಬೆಳಿಗ್ಗೆ 9-20

ಜನರಲ್ ಎಶ್ಯೂರೆನ್ಸ್ ಸೊಸೈಟಿ ಲಿಮಿಟೆಡ್.

[ಸ್ಥಾಪನೆ: 1907]

ಅತ್ಯಧಿಕ ಬೋನಸು !

ಮರಣಾಂತ್ಯ ಪೋಲಿಸಿಗಳಮೇಲೆ ಸೇಕಡಾ 25,

ಎಂಡೋಮೆಂಟ್ ಪೋಲಿಸಿಗಳಮೇಲೆ ಸೇಕಡಾ 20,

ಬಲವಂತ ಪೋಲಿಸಿಗಳು ರೂ. 3 ಕೋಟಿ ಮಿಕ್ಕಿವೆ.

ಮೂಲಧನವು ರೂ. 75 ಲಕ್ಷ ಮೀರಿವೆ.

ಬಡವರಿಗೂ ಧನಿಕರಿಗೂ ಹಿತಕಾರಿಯಾದ ಎಶ್ಯೂರೆನ್ಸ್ ಯೋಜನೆಗಳು.

ಅತೀ ಲಾಭದಾಯಕವಾದ ಉದಾರ ಏಜೆನ್ಸಿ ಶರ್ತಗಳು.

ವಿಶೇಷ ಮಾಹಿತಿಗಳಿಗಾಗಿ ಈ ಕೆಳಗಣ ವಿಳಾಸಗಳಿಗೆ ಬರೆಕೊಳ್ಳಿರಿ—

ಆಕ್ಟಿಂಗ್ ಮೆನೇಜರ್, ಅಜ್ಮೀರ್

ಅಥವಾ

ಮೆನೇಜರ್, 278, ಲಿಂಗ ಚೆಟ್ಟಿ ಸ್ಟ್ರೀಟ್, ಮದ್ರಾಸ್.

ಸುಪರಿಂಟೆಂಡೆಂಟ್, ಬಳ್ಳಾರಿ. ಆರ್ಗನೈಸರ್, ವೆಲ್ಲೂರು.

ಚೀಫ್ ಏಜೆಂಟ್ಸ್, ಮಧುರ, ತ್ರಿಚಿನಾಪಳ್ಳಿ.

ಸ್ಟೀಮರು ಸಮಯ

	ತಲಪುವುದು	ಹೊರಡುವುದು:
ಮಂಗಳೂರು	ಗುರುವಾರ ಬೆಳಿಗ್ಗೆ ಗಂಟೆ 9	ಶನಿವಾರ ಬೆಳಿಗ್ಗೆ ಗಂಟೆ
	ಸೋಮವಾರ ಬೆಳಿಗ್ಗೆ ಗಂಟೆ 6	ಮಂಗಳವಾರ ಬೆಳಿಗ್ಗೆ ಗಂಟೆ
ಮಲ್ಪೆ	ಗುರುವಾರ ಬೆಳಿಗ್ಗೆ ಗಂಟೆ 3	ಶನಿವಾರ ಮಧ್ಯಾಹ್ನ 2-30
	ಆದಿತ್ಯವಾರ ಸಂಜೆ ಗಂಟೆ 6	ಮಂಗಳವಾರ ಮಧ್ಯಾಹ್ನ 2-30
ಕುಂದಾಪುರ		ಶನಿವಾರ ಸಂಜೆ ಗಂಟೆ 3
		ಮಂಗಳವಾರ ಮಧ್ಯಾಹ್ನ 3

ನಮ್ಮ ಉನ್ನತಿಗಾಗಿ ನಾವೇನು ಮಾಡಬೇಕು? ಇತ್ಯಾದಿ ಸಮಸ್ಯೆಗಳಿಗೆ ಸದುತ್ತರವನ್ನು ಕೊಡುವ ಪತ್ರಿಕೆ ಎಂದರೆ

ಸದ್ಧರ್ಮ ಪ್ರಚಾರಕ

ವಾ. ಚ. 1—4—0.

ಸಂಪಾದಕರು:-

ಬಿ. ಲಕ್ಷ್ಮಣದೇವ ವಿದ್ಯಾರ್ಥಿ.

ಉತ್ಕೃಷ್ಟ ಕಥೆ, ಕವನಗಳಿಂದೊಡಗೂಡಿ, ಪ್ರತಿಮಾಸದ 15ನೇ ತಾರೀಖಿಗೆ ತಪ್ಪದೆ ಹೊರಡುವುದು.

ಸದ್ಧರ್ಮ ಪ್ರಚಾರಕ, ಕಾರ್ಯಲಯ,
ಅಳಕೆ ರಸ್ತೆ, ಮಂಗಳೂರು.

ಪ್ರವಾಸಿ.

ಅತ್ಯುತ್ತಮವಾದ ಸಚಿತ್ರ ಕನ್ನಡ. ಮಾಸಪತ್ರಿಕೆ.

ಬೋಧಪ್ರದವಾದ ಲೇಖನಗಳು-ಮಹಾಪುರುಷರ ಜೀವನ ಚರಿತ್ರೆಗಳು ಉತ್ತಮ ಕಥೆಗಳು-ಆರ್ಥಿಕ ರಾಜಕೀಯ ವಿಚಾರಗಳು. ವೈಜ್ಞಾನಿಕ ವಿಷಯಗಳು-ಪರರಾಷ್ಟ್ರಗಳ ಸಮಸ್ಯೆಗಳು-ಗ್ರಂಥ ವಿಮರ್ಶೆ ಇವುಗಳನ್ನೊಳಗೊಂಡ ಹೊಸ ರೀತಿಯ ಮಾಸಪತ್ರಿಕೆ. ಕೈಗೆಲಸವೆಂಬ ನೂತನ ವಿಭಾಗವಿರುವ ಪತ್ರಿಕೆಯು ಇದೊಂದೇ

ವಾರ್ಷಿಕ ಚಂದಾ ರೂ. 3—8—0.

ಪ್ರವಾಸಿ ಕಾರ್ಯಾಲಯ
ಕಾಸರಗೋಡು, ದಕ್ಷಿಣಕನ್ನಡ

THE

Vijaya Bank, Ltd.

Head Office: MANGALORE. **Branch Office: Court Road, UDIPI.**

ದಿ ವಿಜಯ ಬೇಂಕ್ ಲಿಮಿಟೆಡ್,

ಹೆಡ್ ಆಫೀಸು: **ಮಂಗಳೂರು.** ಶಾಖೆ: **ಕೋರ್ಟು ರಸ್ತೆ, ಉಡ್ಪಿ**

ಚಾಲ್ತಿ ಠೇವಣಾತಿಗಳು ಸಾ. ಶೆ. 2. ಸೇವಿಂಗ್ಸ್ ಬ್ಯಾಂಕ್ ಠೇವಣಾತಿಗಳು ಸಾ. ಶೆ. 3½

ಕಾಯಂ ಠೇವಣಾತಿಗಳು 3 ತಿಂಗಳ ಬಾಬ್ತು ಸಾ. ಶೆ. 3½

6 ಮತ್ತು 9 ತಿಂಗಳ ಬಾಬ್ತು, ಸಾ. ಶೆ. 4. 1 ವರ್ಷದ ಬಾಬ್ತು ಸಾ. ಶೆ. 5.

2 ವರ್ಷದ ಮೇಲಿನವುಗಳ ಬಾಬ್ತು ಸಾ. ಶೆ. 5½ ದರದ ಬಡ್ಡಿಯಲ್ಲಿ ಅಂಗೀಕರಿಸಲ್ಪಡುವುವು.

ಬ್ಯಾಂಕಿಗೆ ಸಂಬಂಧಪಟ್ಟ ಎಲ್ಲಾ ತರದ ವ್ಯವಹಾರಗಳು ನಡೆಸಲ್ಪಡುತ್ತವೆ—

ಅಂಡರಿ—ಪ್ರೊ ನೋಟು, ಸೊಂಡಿ, ಸರಕು, ವಗೈರೆ ಮೇಲೆ ಸಾಲಕೊಡಲಾಗುತ್ತದೆ.

ಭಂಗಾರದ ಈಡಿನ ಮೇಲೆ ಈ ಕೆಳಗಿನ ದರದ ಬಡ್ಡಿಯಲ್ಲಿ ಸಾಲ ದೊರೆಯುವುದು.

ರೂ. 1ರಿಂದ 99ರ ವರೆಗೆ ಸಾ. ಶೆ. 9. 100ರಿಂದ 250ರ ವರೆಗೆ ಸಾ. ಶೆ. 8. ಮತ್ತು 251ರಿಂದ ಮೇಲ್ಪಟ್ಟ ಸಾಲಗಳಿಗೆ ಸಾ. ಶೆ. 7.

ವಿಶೇಷ ಸೂಚನೆ:—ಬಡವರಿಗೆ ಸಹಾಯವಾಗುವಂತೆ ಕಡಿಮೆಯೆಂದರೆ ರೂಪಾಯಿ 10/ ಸಹಾ ಸಾಲಕೊಡಲಾಗುತ್ತದೆ. ಹಾಲುಗಳು ದೊರೆಯುತ್ತವೆ.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಕೊಳ್ಳಿರಿ.

A. B. Shetty,
ಚೆಯರ್‌ಮೇನ್.

K. Gopalakrishna Shetty.
ಸೆಕ್ರೆಟರಿ.

ವಿಜಯ ಬೇಂಕ್ ಲಿಮಿಟೆಡ್, ಕದ್ರಿರೋಡ್, ಮಂಗಳೂರು.

ಸ್ವದೇಶಿ ಕೈಗಾರಿಕೆಯನ್ನು ಪ್ರೋತ್ಸಾಹಿಸಿರಿ.

ಸ್ವದೇಶಿ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗೆಬಗೆಯ ಬಣ್ಣದಲ್ಲಿ, ಅಂಚಿನಲ್ಲಿ, ನಮೂನೆಯಲ್ಲಿ ದೊರೆಯುತ್ತವೆ.

ಶುದ್ಧ ಖಾದಿ ಮತ್ತು ಮಿಲ್ ಬಟ್ಟೆಗಳೂ ವಿಕ್ರಯಿಸಲ್ಪಡುತ್ತವೆ.

P. A. PAI, BROS.

ಪಿ. ಎ. ಪೈ ಬ್ರದರ್ಸ್,

ಆಸ್ಪತ್ರೆ ಎದುರು, ಉಡುಪಿ.

ಕಸಿಗಿಡಗಳು.

ಸಪೋಡಿಲ್ಲ (ಚಿಕ್ಕು)

ಈ ಮರವು ನಮ್ಮ ಜಿಲ್ಲೆಯ ಎಲ್ಲಾ ಭಾಗದಲ್ಲಿಯೂ ಸರಿಯಾಗಿ ಬೆಳೆದು, 3ನೇ ವರ್ಷದಲ್ಲಿಯೇ ತಪ್ಪದೆ ಫಲಬಿಡುತ್ತದೆ. ಒಂದು ಮರದಲ್ಲಿ ಸಾವಿರಗಟ್ಲೆ ಹಣ್ಣಾಗುವದು. ಒಂದು ಎಕ್ರೆಯಲ್ಲಿ ವರ್ಷಕ್ಕೆ ರೂ. ಸಾವಿರದ ಮೇಲೆ ಉತ್ಪತ್ತಿಯಾಗುವದು. ಹಣ್ಣು ಅತಿ ಮಧುರ, ಒಳ್ಳೇ ರುಚಿ, ಕಾಹಿಲೆಯವರಿಗೆ ಉತ್ತಮ ಆಹಾರ ಅದರಲ್ಲಿ ಕಬ್ಬಿಣ ಸತ್ವ ಮತ್ತು ವಿಟಮಿನ್ ತುಂಬ ಇರುವದರಿಂದ ರಕ್ತವನ್ನು ವೃದ್ಧಿಸುವದು. ಮರದಲ್ಲಿ ಯಾವಾಗಲೂ ಹಣ್ಣು ಇರುವುದು, ಎಲ್ಲ ತೋಟದಲ್ಲಿಯೂ ಇರತಕ್ಕದ್ದು. ಗಿಡ ಒಂದರ ಕ್ರಯ ರೂ. 1-0-0 ಮಾತ್ರ. ನಮ್ಮಲ್ಲಿ ಉತ್ತಮ ಮಾವು ಮತ್ತು ಇತರ ಕಸಿ ಗಿಡಗಳು ಕೂಡ ದೊರೆಯುತ್ತವೆ. ಕ್ರಯಪಟ್ಟಿಗೆ ಕೆಳಗಣ ವಿಳಾಸಕ್ಕೆ ಬರೆಯುವುದು.

ಮಂಗಳೂರಲ್ಲಿ ವಿಜಯ ಬ್ಯಾಂಕಿನಲ್ಲಿಯೂ ಸ್ವಾಭಿಮಾನ ಶಾಪು, ಪಂಜನಕಟ್ಟೆಯಲ್ಲಿಯೂ, ಸೋಮಯಾಜಿ ಎಂಡ್ ಕೊ, ರಥಬೀದಿಯಲ್ಲಿಯೂ ಮತ್ತು ಜಿಲ್ಲೆಯ ಎಲ್ಲಾ ಎಗ್ರಿಕಲ್ಚರಲ್ ಡಿಪೋನ್ ಸ್ಟ್ರೇಟರಲ್ಲಿಯೂ ಮೇಲಿನ ಎಲ್ಲಾ ಗಿಡಗಳು ದೊರೆಯುತ್ತವೆ.

ಕೆ. ಎಮ್. ಶೆಟ್ಟಿ, ಕೆನರಾ ನರ್ಸರಿ,
ಪೋಸ್ಟ್ ಕಾಪು, ದ. ಕನ್ನಡ

ಕಲಿಯುಗ

ಪುರಾಣದೃಷ್ಟಿಯಿಂದ ನೋಡುವವರಿಗೆ ಕಲಿಯುಗ ಎಂದರೆ ಕೈಲಾಗದ ಯುಗ. ನಿನ್ನೆ ಆಗಲಿ ಹ್ಯಾಗೆಯೇ ಆಗಲಿ, ಎಲ್ಲವೂ ಹಾಳಾಗಿ ಹೋಗಲಿ—"ಕಲಿಕಾಲ ಮಹಿಮೆ! ಹಾಗೆಯೇ ಆಗತಕ್ಕದ್ದು!" ಎಂದು ಬಾಯಿ ತಳಿಳಿಸಿಬಿಟ್ಟರಾಯಿತು; ಆ ಮನುಷ್ಯ ಆಸ್ತಿಕನಾದ! ಧರ್ಮಾತ್ಮನಾದ!

"ಕಡಲೇ ಗಿಡಕ್ಕೆ ನಿಚ್ಚಣಿಕೆ ಹಚ್ಚುವ ಕಾಲ ಇದು........ಕಲಿಕಾಲ!" ಎನ್ನುವದೊಂದು ಸನಾತನ ಧರ್ಮಪರಾಯಣರ (?)ಶ್ರದ್ಧೆಯ ಮಾತು, ಆದರೆ ಇಂಥಾ ದುರ್ದಶೆಯು ಬರುವದೆಂಬದು ಅನಿವಾರ್ಯವೋ, ಅಚಲ ಸಿದ್ಧಾಂತವೋ, ಅಥವಾ ಹೇಡಿಗಳ ಹಾಹಾಕಾರವೋ, ಎಂದು ಪರೀಕ್ಷಿಸುವ ವರಾದರೂ ಯಾರೆಷ್ಟು ಮಂದಿ?

ಒಂದು ವೇಳೆ ಅವರ ನಂಬಿಕೆಯಂತೆಯೇ ಎಲ್ಲವೂ ಆಗುತ್ತಲೇ ಇದೆ ಎಂದಿಟ್ಟುಕೊಳ್ಳೋಣ. ಅದಕ್ಕೇನು ಕಾರಣ? ಕಾರಣವಿಲ್ಲದೆ ಪರಿಣಾಮವಿಲ್ಲವಷ್ಟೆ? ಅಂದ ಮೇಲೆ ಅಧೋಗತಿಗೆ ಕಾರಣಗಳೇನು?

ಇದಕ್ಕೆ ಉತ್ತರವನ್ನು ಸಯುಕ್ತಿಕವಾಗಿ ಕೊಟ್ಟರಲ್ಲವೆ ಆ ಧರ್ಮಾತ್ಮರ "ಎಲ್ಲವೂ ಆ ಈಶ್ವರನ ಇಚ್ಛೆ" ಎಂದೊಂದು ಉದ್ಗಾರವೇ ಅವರ ಸಕಲ ಶೋಧ ಪರೀಕ್ಷೆಗಳ ಉತ್ತರ! ಆದರೆ ಹಾಗೆ ಹಾಳು ಮಾಡುವದೇ ಆ ಈಶ್ವರನ ಇಚ್ಛೆ ಎಂದೊಪ್ಪಿಕೊಂಡರೆ ಅವನಿಗೆ ವಿಶ್ವಬಂಧು, ವಿಶ್ವನಾಥ, ದಯಾಘನ ಇತ್ಯಾದಿ ಇತ್ಯಾದಿ ಬಿರುದುಗಳೇತಕ್ಕೆ ಮತ್ತೆ? ಅವೆಲ್ಲ ಯಥಾರ್ಥವೋ, ವ್ಯಂಗ್ಯವೋ? ಅವು ನಿಜ್ಜಯ ಗುಣವಾಚಕಗಳೋ? ಹುಳಿ ಹುಳಿ ಉಲ್ಲುಂಠನೆಗಳೋ? ಆತನು ಮಾಡುವುದೆಲ್ಲ ಹಾಳು ಅಂದ ಮೇಲೆ, ಈ ದೊಡ್ಡ ದೊಡ್ಡ ಹೆಸರುಗಳು ಆತನನ್ನು ಬರೇ ಎತ್ತಿ ಹಾಕುವ ಉಪಾಯಗಳೇ ಎನ್ನಬೇಕಲ್ಲವೆ?

"ಆತನಾದರೂ ಏನು ಮಾಡಿಯಾನು, ಇದು ಕಲಿಯುಗ........" ಎಂದು ನಿಟ್ಟುಸಿರು ಬಿಡುವ ಸನಾತನಿಗಳೂ ಇದ್ದಾರೆ. ಆದರೆ ಅವರಿಗೊಂದು ಪ್ರಶ್ನೆ ಸರ್ವತ್ರಾಣಿಯಾದ ದೇವರು ಸಹ ಕಲಿಪ್ರಭಾವಕ್ಕೆ ಪರಾಧೀನನಾದ ಕೃತಿಯೋ? ಅಥವಾ ಆ ಸರ್ವತ್ರಾಣಿ ಎಂಬದೂ ಒಂದು ಬರೀ ಬುರುಡೆಯೋ?

ಕೆಲವು ಪುಣ್ಯಾತ್ಮರು ಇಂಥಾ ಪ್ರಶ್ನೆಗಳೇ ಅವಿವೇಕ ಎಂದೂ ಎನ್ನುತ್ತಾರೆ. "ಯೇಳುವದೇನು ಕೇಳುವದೇನು ಎಲ್ಲಿಯೂ ಏನೂ ಪತ್ತೆ ಹತ್ತುವ ಹಾಗಿಲ್ಲ....ಆದದ್ದಾಗಲಿ ಗೋವಿಂದನ ದಯೆಯೊಂದಿರಲಿ" ಎಂದು ಕೇಳಿ ಎಚ್ಚರಿಸಿಬಿಡುತ್ತಾರೆ!

ಸರಿ! ಇರಲಿ, ಆದರೆ ಆ ಪರಮಾತ್ಮನ ಕಲಿಕಾಲದ ಅಥವಾ ಕಲಿಕಾಲದ ಪರಮಾತ್ಮನ ತಮಃಪ್ರಭಾವವು ಪೂರ್ವಖಂಡಗಳಲ್ಲಿ ಮಾತ್ರ—ಅದರಲ್ಲಿಯೂ ಈ ಹಿಂದುಸ್ಥಾನದಲ್ಲಿ, ವಿಶೇಷವಾಗಿ ನಮ್ಮ ಕರ್ನಾಟಕದಲ್ಲಿ ಏಕ ತನ್ನ ಲೀಲೆಯನ್ನಾಡಬೇಕು? ಇಲ್ಲಿಯಾದರೂ ಜಪಾನ್, ಟರ್ಕಿ, ಪರ್ಶಿಯ ಮುಂತಾದ ದೇಶಗಳು ಸತ್ಯಯುಗವನ್ನಲ್ಲವಾದರೂ ದ್ವಾಪರದ ವಾತಾವರಣವನ್ನು ಹುಟ್ಟಿಸಿ ಉಸಿರುತ್ತಿವೆ. ಪಶ್ಚಿಮದಲ್ಲಂತೂ ಕಲಿಕಾಲದ—ಉದಯ ಊರ್ಜಿತಕ್ಕೆ ಬದಲಾಗಿ ಅಸ್ತಮಯವೇ ಆದಂತೆ ತೋರುತ್ತದೆ. ಅಲ್ಲಿ ಹಿಂದಿನ ಬಡತನವಿಲ್ಲ, ರೋಗರುಜಿನಗಳಿಲ್ಲ, ಅಶಿಕ್ಷಿತತೆಯಿಲ್ಲ, ನಿರಕ್ಷರತೆಯಿಲ್ಲ, ಗತಿವಿಹೀನತೆಯಿಲ್ಲ! ಆಯುರಾರೋಗ್ಯ ಧನಸಂಪತ್ಸಮೃದ್ಧಿ ಇವೆಲ್ಲವೂ ಅಲ್ಲಿ ದಿನೇ ದಿನೇ ಹೆಚ್ಚುತ್ತಲಿವೆ, ಲಕ್ಷ್ಮೀಸರಸ್ವತಿಯರಿಬ್ಬರೂ ಅಲ್ಲಿ ನೇರಿಕೊಂಡಂತಿದೆ! ಕಲಿರಾಜ್ಯ ಇತ್ತಕಡೆ, ಪರಮದಯಾಳು ಪರಮಾತ್ಮನ 'ಹೆಡ್‌ಕ್ವಾರ್ಟರ್ಸ್' ಅತ್ತಕಡೆ ಆಗಿಬಿಟ್ಟಿದೆಯೋ ಏನೋ!

ಇಲ್ಲ ಇಲ್ಲ, ಉದ್ಧರೇದಾತ್ಮನಾತ್ಮಾನಂ ಜ್ಞಾನವಿಜ್ಞಾನಗಳ ಪ್ರಾಬಲ್ಯ ಪ್ರಕಾಶಗಳಿಂದ ಅವರು ತಮ್ಮ ಅಧೋಗತಿಯ ಬೇರನ್ನು ಹುಡುಕಿ, ಅದನ್ನು ಕಿತ್ತೊಗೆಯುತ್ತ ಬಂದಿದ್ದಾರೆ. ಜೀವಿತದ ಅಂಗಾಂಗಗಳನ್ನೂ ಅವುಗಳ ಹಿತಾಹಿತಪಾತಿಗಳನ್ನೂ ಅವರು ಕಂಡು ಹಿಡಿದು ಸರಿಪಡಿಸುತ್ತಲೇ ಇದ್ದಾರೆ. ಅವರ ನಿರ್ಭಯ ಪರೀಕ್ಷಾ ವಿಮರ್ಶೆಗಳ ಮನೋಗತಿಯಿಂದ ಅವರಲ್ಲಿ ಶರೀರ ಮನಸ್ಸು, ಅರ್ಥ ಸಂಪತ್ತು ಇತ್ಯಾದಿಗಳೆಲ್ಲವೂ ಇಂದು ಶಾಸ್ತ್ರವಿಷಯಗಳಾಗಿವೆ ಇವುಗಳೆಲ್ಲವೂ ವಿಜ್ಞಾನಿಗಳ ಪ್ರಲಕ್ಷಿಳಿದಿವೆ ಇವುಗಳನ್ನು ಕುರಿತು ಶಾಸ್ತ್ರಶೋಧಪರೀಕ್ಷಣಗಳೂ ದಿನೇ ದಿನೇ ಬೆಳೆಯುತ್ತಿವೆ. ಅವುಗಳನ್ನು ಹೊಂದಿಕೊಂಡೇ ಜೀವನವನ್ನು ಧೈರ್ಯದಿಂದ ಸಾಗಿಸುವ ಸಾಹಸವೂ ಮೊದಲಾಗಿದೆ ಅವರಿಗೆ ಕಲಿಯುಗ ಎಂದರೆ ಕೈಕಟ್ಟಿ ಕೂಳೆಯುವ ಯುಗವಲ್ಲ; ಕೈಯೆತ್ತಿ ಕಾದಾಡುವ ಯುಗ, ಕಾಲೆತ್ತಿ ಕದನಕ್ಕಿಳಿಯುವ ಯುಗ; ಕಣ್ಣುಮುಚ್ಚಿ ಕನವರಿಸುವ ಯುಗವಲ್ಲ, ಕಣ್ಣೆತ್ತಿ ನೋಡುವ ಯುಗ. ಅಂಥಾ ಕಲಿಯುಗವು ನಮಗೂ ಬರಲಿ!

ತಾರಾನಾಥ.

ಆತಂಕನಿಗ್ರಹ ಮಾತ್ರೆಗಳು

ಯಾವ ಕಾರಣದಿಂದಾಗಲಿ ಉಂಟಾದ ಧಾತುನಷ್ಟ, ನರಗಳ ನಿಶ್ಶಕ್ತಿ ಇವುಗಳನ್ನು ಹೋಗಲಾಡಿಸಿ ಶಾಶ್ವತ ಗುಣ ಉಂಟಾಗುವಂತೆ ಮಾಡುತ್ತದೆ ಈ ಗುಳಿಗೆಗಳು ಆರೋಗ್ಯವಾದ ಹಸಿವನ್ನುಂಟುಮಾಡಿ ದೇಹಕ್ಕೂ ಮತ್ತು ಮನಸ್ಸಿಗೂ ಬಲಹೀನತ್ವವನ್ನು ಹೋಗಲಾಡಿಸಿ ದುಷ್ಟರಕ್ತವನ್ನು ಶುದ್ಧಿ ಮಾಡಿ ಜ್ಞಾಪಕ ಶಕ್ತಿಯನ್ನು ವೃದ್ಧಿಪಡಿಸುವುದು. ಕ್ರಯ: ಡಬ್ಬಿ ೧ಕ್ಕೆ ೧–೦–೦.

ವಾಜೀಕರಣ ತೈಲ:—(ಹೊರಗೆ ಹಚ್ಚಲು ಮಾತ್ರವೇ) ಬಾಲ್ಯದಲ್ಲಿ ಸ್ವತಃ ಅನೇಕ ವಿಧಗಳಲ್ಲಿ ಶರೀರವನ್ನು ಕೆಡಿಸಿಕೊಂಡು ಅದರಿಂದ ಉಂಟಾಗುವ ಅಶಕ್ತಿ, ನರಗಳ ದುರ್ಬಲ, ನಪುಂಸಕತ್ವ, ಮುಂತಾದ ವ್ಯಾಧಿಗಳನ್ನು ಪರಿಹರಿಸುವ ಸಂಜೀವಿನಿಯಾಗಿರುವದು ನರಗಳಿಗೆ ಬಲವನ್ನುಂಟುಮಾಡಿ, ಸಂಭೋಗಕ್ಕೆ ಉತ್ಸಾಹವನ್ನು ಕೊಡುವುದು. ಒಂದು ಸಾರಿ ಔಷಧವನ್ನು ಹಚ್ಚುವುದರಿಂದ ಗುಣವು ಗೊತ್ತಾಗುತ್ತದೆ. ಕ್ರಯ: ಸೀಸೆ ಒಂದಕ್ಕೆ ೫—೦—೦.

ಅಮೃತಾರ್ಣವ ಲೇಹ್ಯ:— ರಕ್ತವನ್ನು ಶುದ್ಧಿ ಮಾಡಿ, ನರಗಳನ್ನು ಬಲಪಡಿಸಿ, ಅತಿ ಉಷ್ಣ, ಕೈಕಾಲುಗಳ ಉರಿ, ಇನ್ನೂ ಮುಂತಾದ ಉಷ್ಣವ್ಯಾಧಿಗಳನ್ನು ಗುಣಪಡಿಸಿ, ಮೆದುಳನ್ನು ತಂಪುಮಾಡಿ, ದೇಹಬಲವನ್ನೂ, ತೇಜಸ್ಸನ್ನೂ ಹೆಚ್ಚಿಸುವುದಲ್ಲದೆ ದೀರ್ಘಕ್ಷಯ, ಎದೆನೋವು, ತಲೆನೋವು, ಮುಂತಾದ ವ್ಯಾಧಿಗಳಿಗೆ ಅಮೃತಪ್ರಾಯವಾದುದು. ಕ್ರಯ: ಡಬ್ಬಿ ೧ಕ್ಕೆ ೨-೦-೦

'ಕಾಮಶಾಸ್ತ್ರ' ಧರ್ಮಾರ್ಥ. ಪೋಸ್ಟೇಜು ಮಾಫಿಯಾಗಿ ಕಳುಹಿಸುವೆವು ಒಂದು ಕಾರ್ಡು ಹಾಕಿರಿ

ಆತಂಕ ನಿಗ್ರಹ ಫಾರ್ಮಸಿ, ೭೪, ಚಿಕ್ಕಪೇಟೆ ಚಾಕ, ಬೆಂಗಳೂರು ಸಿಟಿ

ಪ್ರಸಿದ್ಧ ಪತ್ರಿಕೆ

ಶ್ರೀಶಕೆ ೧೮೫೮ನೇ ಧಾತೃ ನಾಮ ಸಂ॥ರದ ಪುಷ್ಯ ಶು.೧೪ ಸೋಮವಾರ ಶಿರ್ಶಿ ಶ್ರೀ ಮಾರಿಮ್ಮ ದೇವಸ್ಥಾನದ ಮೊಕ್ತೇಸರರ ಕಡೆಯಿಂದ ಪ್ರಕಟಪಡಿಸುವದೇನೆಂದರೆ—

ದೇಶಕಲ್ಯಾಣಾರ್ಥವಾಗಿಯೂ, ಸುಭಿಕ್ಷಾರ್ಥವಾಗಿಯೂ, ಶ್ರೀ ಮಾರಿಮ್ಮ ದೇವರ ಜಾತ್ರೆಯನ್ನು ಮಾಡುವುದಕ್ಕೆ ಶ್ರೀ ದೇವರ ಅಪ್ಪಣೆಯನ್ನು ಪಡಕೊಂಡು ಈ ಕಾರ್ಯವನ್ನು ಆರಂಭಿಸಿ ಇದೇ ಬರುವ ಫಾಲ್ಗುಣ ಬ ೩ ಮಂಗಳವಾರ (ತಾರೀಕು ೩೦–೩–೧೯೩೭)ರಾತ್ರೆ ೮ ಘಂಟೆ ಲಾಗ್ಯಾತು, ಪೂಜಾ ವಿನಿಯೋಗಗಳು ನಡೆದು ಬುಧವಾರ ಬೆಳಗ್ಗೆ ಶ್ರೀ ದೇವರ ರಥೋತ್ಸವವಾಗಿ ಅದೇ ದಿವಸ ಸಾಯಂಕಾಲ ೪ ಘಂಟೆಯಿಂದ ಬಲಿ ಕೆಲಸಗಳು ವಗ್ಯೆರೆ ನಡೆದು ನಂತರ ಗುರುವಾರ ಬೆಳಗಿನ ೮ ಘಂಟೆಯಿಂದ ಫಾಲ್ಗುಣ ಬ. ೧೦ ಮಂಗಳವಾರ ರಾತ್ರೆ೧೦ ಘಂಟೆಯ ವರೆಗೆ ಪ್ರತಿನಿತ್ಯದಲ್ಲಿಯೂ ಸದರಿ ಘಂಟೆಗೆ ಸರಿಯಾಗಿ ಭಕ್ತಜನರಿಂದ ಬಂದ ಕಾಯಿ ಹಣ್ಣು, ಬೇವಿನ ಉಡಿ, ತೊಲ ಭಾರ, ಕಾಣಿಕೆ ವಗ್ಯೆರೆ ಹರಿಕೆಗಳನ್ನು ಒಪ್ಪಿಸುವರೆ ಸದರಿ ವೇಳೆಯನ್ನು ನಿಶ್ಚಯಿಸಿರುತ್ತೇವೆ.

ಪ್ರಯುಕ್ತ:—ಈ ಮಹೋತ್ಸವಕ್ಕೆ ಎಲ್ಲರೂ ದಯಮಾಡಿ ಬರಬೇಕೆಂತ ಅಪೇಕ್ಷಿಸುತ್ತೇವೆ..

ಈ ಶಿವ್ಯಾ ತಾರೀಕು ೩೦–೩–೧೯೩೭ನೇಗೆ ಆಗುವ ಶಿರ್ಶಿ, ಶ್ರೀಮಾರಿಮ್ಮ ದೇವರ ಜಾತ್ರೆ ಸಂಬಂಧ ಮಾರಿಬೈಲಿನಲ್ಲಿ ತಾರೀಕು ೨೫-೩-೧೯೩೭ನೇ ಗುರುವಾರ ಬೆಳಗಿನ ೮ ಘಂಟೆಯಿಂದ ಅಂಗಡಿಗಳ ಬಗ್ಗೆ ಜಾಗಗಳನ್ನು ಗುರ್ತುಮಾಡಿ ಕೊಡಲ್ಪಡುವವು. ಬಾಯಸವುಳ್ಳವರಿಗೆ ಸದರಿ ದಿವಸದಿಂದ ಮುಂದೆ ತಾರೀಕು ೨೯-೩-೧೯೩೭ನೇ ಸೋಮವಾರದ ವರೆಗೆ ಕೊಡಲ್ಪಡುವವು.

ತಮ್ಮ ವಿಧೇಯರಾದ

ಶೇಷಗಿರಿರಾವ ಕೇಶವೈನ,

ರಾಮಕೃಷ್ಣರಾವ ಧಾಕಪ್ಪನ

ಗಣೇಶರಾವ ನಾಡೀಗ.

ಬ್ರೇಕ್ ಪಿಲ್ಸು

ಸ್ತ್ರೀಪುರುಷರಿಗೆ ಆನಂದವನ್ನುಂಟುಮಾಡುವುದು ಈ ಮಾತ್ರೆಗಳೇ. ಮದಿಸಿದ ಸ್ತ್ರೀಯರ ಗರ್ವ ಭಂಗಮಾಡಲು ಕಂಡು ಹಿಡಿದಿರುವ ಮಾತ್ರೆಗಳಿವು. ಇದರಲ್ಲಿ ವಿಷಾದಿಗಳು ಸೇರಿಲ್ಲ, ಕಸ್ತೂರಿ, ಚಿನ್ನ ಹಿಮಾಲಯಪರ್ವತದ ವನಮೂಲಿಕೆಗಳು ಮುಂತಾದವುಗಳಿಂದ ದೊಡ್ಡ ಯೋಗೀಶ್ವರರ ಹತ್ತಿರ ಸಂಗ್ರಹಿಸಿ ಮುದುಕತನವನ್ನು ಲೋಕದಲ್ಲಿ ಇಲ್ಲದಂತೆ ಮಾಡುವುದು. ಅರ್ಧ ಘಂಟೆಯೊಳಗಾಗಿ ವೀರ್ಯವನ್ನು ಕಲ್ಲಿನಂತೆ ಮಾಡಿ ರಮಿಸಲು ಉಲ್ಲಾಸವನ್ನು ಮಾಡುವುದು. ಗುಣವಿಲ್ಲದಿದ್ದಲ್ಲಿ ಹಣ ವಾಪಸು. **೬೦ ಮಾತ್ರೆಗಳು ರೂ. ೫ .. ೦–.–೦**

೩೦ ಮಾತ್ರೆಗಳು ರೂ. ೩—೦—೦ ಕಾಗದ ಪತ್ರಗಳು ಇಂಗ್ಲೀಷಿನಲ್ಲಿಯೇ.

ಡಾ. ಎ. ಎಸ್. ಮೂರ್ತಿ,

ಚಿಕಾಗೋಲ್, ಗಂಜಾಮ್ ಡಿಸ್ಟ್ರಿಕ್ಟ್.



ಧರ್ಮಾರ್ಥ ಬಹುಮಾನಗಳು

1-4-0ಗೆ !

--- ಯಾರಿಗೆ ? ---

ರೂಪಾಯಿ 1—4—0 ಕೊಟ್ಟು 14ಸೀಸೆ ಒಟ್ಟೊರೋಸ್ಟ್ ಅಥವಾ 10 ಡಬ್ಬಿ ಗಜಕರ್ಣ ಮುಲಾಮನ್ನು ಕ್ರಯಕ್ಕೆ ಪಡಕೊಳ್ಳುವವರಿಗೆ !!

ಇನಾಮುಗಳ ವಿವರ:—3ಡಮ್ಮಿ ರಿಸ್ಟ್‌ವಾಚುಗಳು; 1 ರೈಲ್ವೆಟಾಯಂ ಡಮ್ಮಿ ಪಾಕೆಟ್ ವಾಚು; 1 ಸೇಫ್ಟಿರೇಜರ್; 1 ಶೇವಿಂಗ್ ಬ್ರಸ್; 1 ಶೇವಿಂಗ್ ಸೋಪು; 1 ಕನ್ನಡಿ; 1 ಪೌಡರ್ ; 1 ಜತೆ ಗುಬ್ಬಿಗಳು, 1 ಪೌಂಟನ್ ಪೇನು 14 ಕ್ಯಾರೆಟ್ ನಿಬ್ಬು ಸಮೇತ; 1 ಇಮಿಟೇಶನ್ ಮೋತಿಮಲ್ಲರ್; 1 ಹೆಸರು ಕೆತ್ತಲ್ಪಟ್ಟ ರೋಲ್ಡುಗೋಲ್ಡು ಗಿಲ್ಟ್ ಉಂಗುರ, ಆರುನೂರು ಅಡಿ ದೂರಕ್ಕೆ ಪ್ರಕಾಶವೀಯುವ 1 ಟೋರ್ಚ್‌ಲ್ಯಾಟ್ ಅಥವಾ

1 ಅತ್ಯುತ್ತಮ 'B' ಟಾಯಂಪೀಸು (ಹತ್ತು ವರುಷ ಗ್ಯಾರಂಟಿ)

ಪ್ಯಾಕಿಂಗ್ ಮತ್ತು ಪೋಸ್ಟೇಜು 0—12—0. **ಇಂದೇ ಆರ್ಡರುಕೊಡಿರಿ.**

Bengal Watch Co.,

Post Box No. 12214, CALCUTTA.

— ರಾಷ್ಟ್ರೀಯ ಪರಿಷತ್ತು (National Convention) ಮತ್ತು —
ಸ್ಥಳೀಯ ಕಾಂಗ್ರೆಸ್ ಕಮಿಟಿಗಳ ಕರ್ತವ್ಯ

ಲೇಖಕ—ಎಸ್. ಎಸ್. ಚಂಡೂರ.

ಪ್ರಾಂತೀಯ ಕಾಯಿದೆ ಮಂಡಲಗಳಿಗೆ ನಡೆಯುವ ಚುನಾವಣೆಗಳು ಮುಗಿದ ಒಡನೆಯೇ, ಇವುಗಳಲ್ಲಿ ಆರಿಸಿ ಬಂದ ಬೇರೆ ಬೇರೆ ಪ್ರಾಂತಗಳಲ್ಲಿಯ ಹಾಗೂ ಮಧ್ಯವರ್ತಿ ಕಾಯಿದೆಮಂಡಲಗಳ ಕೋಂಗ್ರೆಸ್ ಸದಸ್ಯರು ಮತ್ತು ವರ್ಕಿಂಗ್ ಕಮಿಟಿಯು ಆಮಂತ್ರಣ ಕೊಡುವಂತಹ ಇನ್ನಿತರ ಕೋಂಗ್ರೆಸ್ ಸಭಾಸದರಿಂದ ಕೂಡಿದ ರಾಷ್ಟ್ರೀಯ ಪರಿಷತ್ತೊಂದನ್ನು (National Convention) ಕೂಡಿಸಬೇಕೆಂಬುದಾಗಿ ಫೈಜಪುರದಲ್ಲಿ ನಡೆದ ರಾಷ್ಟ್ರಮಹಾಸಭೆಯ ಅಧಿವೇಶನದಲ್ಲಿ ನಿರ್ಣಯವಾಯಿತು.

ಈಗಾಗಲೇ ಕೆಲವು ಪ್ರಾಂತಗಳಲ್ಲಿ ಚುನಾವಣೆಗಳು ಮುಗಿದಿವೆ. ಇನ್ನೊಂದು ವಾರದೊಳಗಾಗಿ ಉಳಿದ ಎಲ್ಲಾ ಪ್ರಾಂತಗಳಲ್ಲಿಯೂ ಚುನಾವಣೆಗಳು ಮುಗಿದು ಹೋಗುವವು. ೧೯೩೫ನೆಯ ಗವರ್ನಮೆಂಟ್ ಆಫ್ ಇಂಡಿಯಾ ಆಕ್ಟಿನ ಪ್ರಕಾರವಾಗಿ ಹೊಸ ಸುಧಾರಣೆಯು ಎಪ್ರಿಲ್ ೧ನೆಯ ತಾರೀಕಿನಿಂದ ಆರಂಭವಾಗುವುದು. ಅಲ್ಲದೆ ಈಗ ಹೊಸದಾಗಿ ಚುನಾಯಿಸಲ್ಪಟ್ಟಿರುವ ಸದಸ್ಯರು ಹೊಸ ರಾಜ್ಯಘಟನೆಯನ್ನು ಅನುಸರಿಸಿ ಬರಲಿರುವ ಕಾಯಿದೆಮಂಡಲಗಳಲ್ಲಿ ಕುಳಿತು ಕೆಲಸ ಮಾಡಬೇಕಾಗುವುದು. ಈ ಒಳಗಾಗಿ, ಈ ರಾಷ್ಟ್ರೀಯ ಪರಿಷತ್ತು ಸೇರಿ ಯಾವ ರೀತಿಯಲ್ಲಿ ಕೋಂಗ್ರೆಸ್ ಪ್ರತಿನಿಧಿಗಳು ಹೊಸ ಕಾಯಿದೆ ಮಂಡಲಗಳಲ್ಲಿ ಕಾರ್ಯವನ್ನು ಕೈಕೊಳ್ಳಬೇಕೆಂಬುದನ್ನು ನಿರ್ಧರಿಸುವುದು. ಮಾರ್ಚಿ ತಿಂಗಳ ಅಂತ್ಯದೊಳಗಾಗಿ ದೇಹಲಿಯಲ್ಲಿ ಈ ಪರಿಷತ್ತು ಜರಗುವುದೆಂದು ಜಾಹೀರು ಆಗಿದೆ. ಅದ್ದರಿಂದ ಕೋಂಗ್ರೆಸ್ ಸದಸ್ಯರು, ಸ್ಥಳೀಯ ಕೋಂಗ್ರೆಸ್ ಕಮಿಟಿಗಳು, ಕಾಯಿದೆಮಂಡಲಗಳಲ್ಲಿಯ ಕೋಂಗ್ರೆಸ್ ಪ್ರತಿನಿಧಿಗಳು ಇದರ ಸಂಬಂಧವಾಗಿ ವಿಚಾರ ನಡೆಸಿ ಮುಂದೆ ಯಾವ ರೀತಿಯಲ್ಲಿ ಕೋಂಗ್ರೆಸ್ ಪ್ರತಿನಿಧಿಗಳು ಕಾಯಿದೇ ಮಂಡಲಗಳಲ್ಲಿ ವರ್ತಿಸಬೇಕೆಂಬುದರ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ತಿಳಿಸಬೇಕಾಗುವುದು.

ನಮ್ಮ ಮುಂದಿನ ಕಾರ್ಯಕ್ರಮವನ್ನು ನಿಶ್ಚಯಿಸುವುದರ ಸಲುವಾಗಿಯೇ ಈ ಪರಿಷತ್ತು ಕೂಡಿರುವುದರಿಂದ ಪ್ರತಿಯೊಂದು ಸ್ಥಳೀಯ ಸಂಸ್ಥೆಯೂ ಈ ಬಗ್ಗೆ ವಿಚಾರ ವಿನಿಮಯ ನಡಿಸಲೇ ಬೇಕು. ಏಕೆಂದರೆ ಸ್ಥಳೀಯ ವಿದ್ಯಮಾನಗಳನ್ನು ಸ್ಥಳೀಯ ಸಂಸ್ಥೆಗಳೇ ನಡೆಸಬಲ್ಲವು. ಹಾಗೆಯೇ ಸ್ಥಳೀಯ ಚಳವಳಗಳನ್ನಾದರೂ ಸ್ಥಳೀಯ ಸಂಸ್ಥೆಗಳೇ ನಡೆಸಬಲ್ಲವು. ಮೇಲಿನಿಂದ ಬರುವ ಪ್ರಾಂತೀಯ ಮುಂದಾಳುಗಳಿಗಿ ಸಿದವರಿಗಾಗಲೀ ಅಥವಾ ರಾಷ್ಟ್ರದ ಮುಂದಾಳುಗಳಿಗಾಗಲೀ ಸ್ಥಳೀಯ ಕಷ್ಟಸುಖಗಳು ಸ್ಪಷ್ಟವಾಗಿ ಅಥವಾ ವಿವರವಾಗಿ ಗೊತ್ತಾಗಲು ಶಕ್ಯವಿಲ್ಲ. ಈ ರೀತಿಯಿಂದ ವಿವರವನ್ನು ತಿಳಿಯದೆ ಚಳವಳಿಯ ಮಾರ್ಗವನ್ನಾದರೂ ನಿಶ್ಚಯಿಸಲು ಸಾಧ್ಯವಿ ಕಾಯಿದೆ ಮಂಡಲಗಳಲ್ಲ ನಮ್ಮ ಪ್ರತಿನಿಧಿಗಳು ಆಚರಿಸಬೇಕಾದ ಕಾರ್ಯಕ್ರಮವನ್ನು ನಿರ್ಣಯ ಮಾಡಲು ಸಾಧ್ಯವಿಲ್ಲ. ಇದೇ ಈ ಪರಿಷತ್ತಿನ ಮಹತ್ವ. ಈ ಮಹತ್ವವನ್ನು ಅರಿತು ನಾವು ಬಹು ಜಾಗರೂಕತೆಯಿಂದ ಕೆಲಸ ಮಾಡಬೇಕು ಕೋಂಗ್ರೆಸ್ಸಿನ ಪ್ರತಿನಿಧಿಗಳು ತಮ್ಮ ಮನಸ್ಸಿಗೆ ಬಂದಂತೆ ಕಾಯಿದೇ ಮಂಡಲಗಳಲ್ಲಿ ಕೆಲಸ ಮಾಡುವುದಲ್ಲ. ಕೋಂಗ್ರೆಸ್ ಕಮಿಟಿಗಳು ಸ್ಥಳೀಯ ವಿದ್ಯಮಾನಗಳನ್ನರಿತು, ಜನತೆಯ ಹಿತಚಿಂತನೆಯನ್ನೂ, ರಾಷ್ಟ್ರೀಯ ಸ್ವಾತಂತ್ರ್ಯ ಸಂಗ್ರಾಮದ ಪುರೋಭಿವೃದ್ಧಿಯನ್ನೂ ಮನಸ್ಸಿನಲ್ಲಿಟ್ಟುಕೊಂಡು ನಿಶ್ಚಯ ಮಾಡಿದ ಕಾರ್ಯಕ್ರಮಗಳನ್ನು ಅನುಸರಿಸಲೇಬೇಕು. ಇಲ್ಲವಾದರೆ ಕೋಂಗ್ರೆಸ್ಸು ತನ್ನ ಪ್ರತಿನಿಧಿಗಳನ್ನು ಕಾಯಿದೆ ಮಂಡಲಗಳಿಗೆ ಕಳುಹಿಸುವ ಉದ್ದೇಶವಾದರೂ ನೆರವೇರಲಾರದು.

ಇತರ ಪಕ್ಷಗಳು ಕಾಯಿದೆ ಮಂಡಲಗಳಿಗೆ ಹೋಗುವಂತೆ ಕೋಂಗ್ರೆಸ್ಸು ಹೋಗುವದಿಲ್ಲ. ತನ್ನ ನಿಶ್ಚಿತ ಧ್ಯೇಯವಾದ ಸ್ವಾತಂತ್ರ್ಯವನ್ನು ಗಳಿಸುವದಕ್ಕಾಗಿ ನಡೆಯುವ ಸಂಗ್ರಾಮವನ್ನು ಮುಂದೊತ್ತುವ ಸಲುವಾಗಿ, ಇವುಗಳನ್ನು ಸಹ ಉಪಯೋಗಿಸಿಕೊಳ್ಳಲು ಹೋಗುತ್ತದೆ. ಈ ದೃಷ್ಟಿಯನ್ನಿಟ್ಟುಕೊಂಡು ಸ್ಥಳೀಯ ಸಂಸ್ಥೆಯೂ ವಿಚಾರ ವಿನಿಮಯವನ್ನು ನಡೆಸಬೇಕಾಗಿ ಬರುತ್ತದೆ.

ಕೆಲವರು ಈ ಪರಿಷತ್ತು ಮತ್ತೊಂದು ಸರ್ವಪಕ್ಷೀಯ ಪರಿಷತ್ತಿನಂತೆ (All Parties Convention) ಆಗುವುದೇ ಹೊರತು ಮತ್ತೇನೂ ಆಗಲಾರದೆಂದು ಹೇಳುತ್ತಾರೆ. ಮತ್ತೆ ಕೆಲವರು ನಮ್ಮ ಪ್ರತಿನಿಧಿಗಳು ಕಾಯಿದೇ ಮಂಡಲಗಳಲ್ಲಿ ಬಹುಸಂಖ್ಯೆಯಲ್ಲಿರುವಾಗ ಮಂತ್ರಿಪದವಿಯನ್ನು ಸ್ವೀಕರಿಸಬೇಕೋ ಬೇಡವೋ ಎಂಬುದನ್ನು ನಿಶ್ಚಯಿಸುವುದಕ್ಕಾಗಿ ಸೇರುತ್ತದೆ ಎಂಬುದಾಗಿ ತಿಳಿಯುತ್ತಾರೆ. ಇವೆರಡು ಅಭಿಪ್ರಾಯಗಳು ಸರಿಯಾದುವಲ್ಲ.

ಈ ಪರಿಷತ್ತು ಸರ್ವ ಪಕ್ಷೀಯ ಪರಿಷತ್ತು ಅಲ್ಲ. ಇದರಲ್ಲಿ ಕೇವಲ ಕೋಂಗ್ರೆಸ್ಸಿನವರು ಮಾತ್ರ ಇರುತ್ತಾರೆ. ಕೋಂಗ್ರೆಸ್ಸಿನಲ್ಲಿ ಬೇರೆ ಬೇರೆ ವಿಚಾರಗಳುಳ್ಳ ಪಂಗಡಗಳಿರುವುದೇನೋ ನಿಜ. ಆದರೆ ಸಂಪೂರ್ಣ ಸ್ವಾತಂತ್ರ್ಯದ ಧ್ಯೇಯವನ್ನು ಒಪ್ಪಿಕೊಂಡಿರುವವರು ಇರುತ್ತಾರಾದ ಕಾರಣ ಇದು ಸರ್ವಪಕ್ಷೀಯ ಪರಿಷತ್ತಿನಂತಾಗಿ ಎಲ್ಲರಿಗೂ ಸರ್ವಸಾಮಾನ್ಯವಾದ ಒಂದು ಕಾರ್ಯಕ್ರಮವನ್ನು ಸಿದ್ಧಗೊಳಿಸುವಂತಹದಾಗಲಾರದು.

ಮುಖ್ಯವಾಗಿ ಸ್ವಾತಂತ್ರ್ಯದ ಮಾರ್ಗದಲ್ಲಿ ಯಾವ ವಿಧವಾದ ಕಾರ್ಯಕ್ರಮವನ್ನು ಕೈಕೊಂಡು ನಾವು ನಮ್ಮ ಹೋರಾಟವನ್ನು ಬೆಳೆಸಬೇಕೆಂಬ ಮುಖ್ಯ ಧ್ಯೇಯವನ್ನಿಟ್ಟುಕೊಂಡು ಈ ಪರಿಷತ್ತು ವಿಚಾರಗಳನ್ನು ನಡೆಸುವುದು. ಅಂದಮೇಲೆ ಮಂತ್ರಿಪದವಿ ಸ್ವೀಕಾರದ ನಿರ್ಣಯ ಮಾಡುವುದು ಮುಖ್ಯ ವಿಷಯವಲ್ಲ. ಮಂತ್ರಿಪದವಿ ಸ್ವೀಕಾರದ ಪ್ರಶ್ನೆಯು ಕೇವಲ ಅಲ್ಪವಿಷಯ. ಅದಕ್ಕೆ ನಾವು ಅಷ್ಟೊಂದು ಮಹತ್ವವನ್ನು ಕೊಡಬೇಕಾದ ಆವಶ್ಯಕತೆಯಿಲ್ಲ. ಮಂತ್ರಿಪದವಿಯನ್ನು ಸ್ವೀಕರಿಸುವುದರಿಂದ ನಮ್ಮ ಹೋರಾಟವನ್ನು ಬೆಳೆಸಬಹುದೆಂದು ತೋರಿದರೆ ಅದನ್ನು ಸ್ವೀಕರಿಸುವುದಕ್ಕಾದರೂ ಅಡ್ಡಿಯಿಲ್ಲ. ಹಾಗೆ ಆಗುವುದೇ, ಇಲ್ಲವೆ ಎಂಬ ಪ್ರಶ್ನೆಯೇ ಬೇರೆ. ಇದರ ನಿರ್ಣಯವು ಪರಿಸ್ಥಿತಿಯನ್ನು ಅನುಸರಿಸಿ ಆಗುವದು.

ಮುಖ್ಯವಾಗಿ ಕೋಂಗ್ರೆಸ್ಸಿನ ಚುನಾವಣಾ ಪ್ರಸಿದ್ಧ ಪತ್ರಿಕೆಯಲ್ಲಿಯೂ, ಅಖಿಲ ಭಾರತ ಕೋಂಗ್ರೆಸ್ ಕಮಿಟಿಯ ಪ್ರಸ್ತಾಪಗಳಲ್ಲಿಯೂ ಹೇಳಿರುವಂತೆ ಅವುಗಳನ್ನು ಪೂರ್ಣಗೊಳಿಸಿ, ಆ ಮೂಲಕವಾಗಿ ಜನತೆಯಲ್ಲಿ ಶೋಷಣೆಯಾಗುತ್ತಿರುವುದನ್ನು ಯಾವ ರೀತಿಯಲ್ಲಿ ನಿಲ್ಲಿಸಲು ಸಾಧ್ಯವಾಗುವುದು, ಎಂಬ ಪ್ರಶ್ನೆಗೆ ಉತ್ತರ ಕೊಡುವುದೇ ನಮ್ಮ ಮುಖ್ಯ ಕರ್ತವ್ಯ. ಸಾಮ್ರಾಜ್ಯಶಾಹಿಯ ಶೋಷಣಾ ಪದ್ಧತಿಯಲ್ಲ ಶೋಷಣಾ ವಿಧಾನದ ಪ್ರತಿಯೊಂದು ಕಲ್ಲನ್ನು ಸಡಲಿಸದಿದ್ದರೆ ಸಾಮ್ರಾಜ್ಯಶಾಹಿಯನ್ನು ಸಂಪೂರ್ಣವಾಗಿ ಕಿತ್ತೊಗೆಯಲು ಸಾಧ್ಯವಿಲ್ಲ. ಈ ರೀತಿಯಲ್ಲಿ ನಾವು ಪ್ರತಿಯೊಂದು ಕಲ್ಲನ್ನು ಸಡಲಿಸುತ್ತಿರುವಾಗ ಜನತೆಯಲ್ಲಿ ಜಾಗೃತಿಯುಂಟಾಗಿ ಸ್ವಾತಂತ್ರ್ಯಸಂಗ್ರಾಮವು ಮೇಲಿನ ಅಂತಸ್ತನ್ನು ಮುಟ್ಟುವುದು ಇದೀಗ ನಮ್ಮ ಕಾರ್ಯಕ್ರಮವನ್ನು ನಿರ್ಣಯಿಸುವುದರ ಮುಖ್ಯ ಉದ್ದೇಶ.

ಮತ್ತೊಂದು ವಿಷಯವೆಂದರೆ ಫೈಜಪುರದ ಅಧಿವೇಶನದಲ್ಲಿ ಸ್ಪಷ್ಟ ಮಾಡಿದಂತೆ ಕೋಂಗ್ರೆಸ್ ಪ್ರತಿನಿಧಿಗಳು ಕಾಯಿದೇ ಮಂಡಲಗಳಿಗೆ ಹೋಗಿ, ಬ್ರಿಟಿಷರು ತಮ್ಮ ಸ್ವಯಂ ನಿಯಂತ್ರಿತ ಅಧಿಕಾರದಿಂದ ಹಿಂದೂಸ್ಥಾನದ ಮೇಲೆ ಹೊರಿಸಿರುವ ರಾಜ್ಯಘಟನೆಯನ್ನು ಕೊನೆಗಾಣಿಸಲು ಪ್ರಯತ್ನಮಾಡತಕ್ಕದ್ದು. ಪ್ರಾಂತೀಯ ರಾಜ್ಯರಚನೆಯನ್ನು (Provincial structure) ಮಾತ್ರವಲ್ಲದೆ ಹಿಂದೂಸ್ಥಾನವನ್ನು ದೇಶೀರಾಜರು ಜಮೀನುದಾರರೇ ಮೊದಲಾದ ಪ್ರತಿಗಾಮಿ (Reactionary) ಶಕ್ತಿಗಳ ಅಂಕುಶದಲ್ಲಿ ಸಿಕ್ಕಿಸಿ ಹಿಂದೀ ಜನತೆಯ ಶೋಷಣೆಯನ್ನು ಯಥಾಯೋಗ್ಯವಾಗಿ ನಡೆಸಲು ಅನುಕೂಲವಾಗುವಂತಹ ಫೆಡರೇಶನ್ (Federation) ಅಸ್ತಿತ್ವಕ್ಕೆ ಬರದಂತೆಯೇ ಮಾಡಬೇಕಾಗುವುದು.

ಹಿಂದೂಸ್ಥಾನದ ಭಾವೀ ಸ್ವಾತಂತ್ರ್ಯ ಸರಕಾರವು ಲೋಕಶಾಹೀ ತತ್ವನಿಷ್ಠೂ ಅದರ ರಚನೆಯು ಹಿಂದೀ ಜನತೆಯ ಇಷ್ಟಪ್ರಕಾರವಾಗಿ ಆಗಬೇಕು. ಅರ್ಥಾತ್ ಪ್ರಾಪ್ತವಯಸ್ಕರಾದ ಹಿಂದೀಯರ ಪ್ರತಿನಿಧಿಗಳಿಂದಲೇ ಕೂಡಿದ ರಾಜ್ಯಾಂಗ ಸಭೆ ಅಥವಾ ಕಾನ್ಸ್ಟಿಟ್ಯೂಯೆಂಟ್ ಅಸೆಂಬ್ಲಿಯ (Constituant Assembly) ಮೂಲಕವಾಗಿ ಮಾತ್ರ ಆಗತಕ್ಕದ್ದು. ಬ್ರಿಟಿಷರ ಸ್ವಯಂ ನಿಯಂತ್ರಿತ ಹಕ್ಕನ್ನು ಹಿಂದೀಯರು ಎಂದೆಂದಿಗೂ ಒಪ್ಪಿಕೊಳ್ಳತಕ್ಕವರಲ್ಲ. ಇದು ಜನಜನಿತವಾಗಿ ಮಾಡಲು ಬೇಕಾದ ಕಾರ್ಯಕ್ರಮಗಳನ್ನು ಮುಂದಿಟ್ಟುಕೊಂಡು ಕೋಂಗ್ರೆಸ್ಸಿನ ಪ್ರತಿನಿಧಿಗಳು ಕಾಯಿದೇಮಂಡಲಗಳಲ್ಲಿ ಪ್ರವೇಶ ಮಾಡಬೇಕಾಗುವುದು ಇದೀಗ ಕೋಂಗ್ರೆಸ್ಸಿನ ಪ್ರಸ್ತಾವದ ಆಶಯ.

ಮೇಲೆ ಹೇಳಿದ ವಿಷಯಗಳೆಲ್ಲವೂ ಯೋಗ್ಯ ರೀತಿಯಿಂದ ತೀರ್ಮಾನವಾಗಬೇಕಾದರೆ ಗ್ರಾಮ, ತಾಲೂಕು ಮತ್ತು ಜಿಲ್ಲಾ ಕಮಿಟಿಗಳು ಈ ಕಡೆಗೆ ಹೆಚ್ಚು ಗಮನಕೊಟ್ಟು ತಮ್ಮ ಅಭಿಪ್ರಾಯವನ್ನು ವ್ಯಕ್ತಮಾಡುವದಲ್ಲದೆ ಈ ರಾಷ್ಟ್ರೀಯ ಪರಿಷತ್ತು ಅವುಗಳಿಗನುಸಾರವಾಗಿ ಕಾರ್ಯಕ್ರಮವನ್ನು ಹಾಕಿಕೊಡುವಂತೆ ನೋಡಿಕೊಳ್ಳಬೇಕು. ಜನಜಾಗೃತಿಯುಂಟಾಗಿ ಸಾಮೂಹಿಕ ರೀತಿಯಿಂದ ಕಾರ್ಯಕ್ರಮವನ್ನು ಕೈಗೊಂಡು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಮುಂದೆ ಹೆಜ್ಜೆಯಿಡುವಂತಾಗಲು ಈ ಸ್ಥಳೀಯ ಕೋಂಗ್ರೆಸ್ ಕಮಿಟಿಗಳ ಮೇಲೆ ಜವಾಬ್ದಾರಿಯು ಬಹಳವಾಗಿದೆ. ಇದನ್ನು ತಿಳಿದು ಸ್ಥಳೀಯ ಕೋಂಗ್ರೆಸ್ ಕಮಿಟಿಗಳು ಸರಿಯಾದ ಮಾರ್ಗದಲ್ಲಿ ಹೋದದ್ದೇ ಆದರೆ ನಾವು ಬೇಡುವ ವಸ್ತುವು ನಮಗೆ ಸುಲಭವಾಗಿ ದೊರೆಯುವದು.

ಈ ರೀತಿಯಲ್ಲಿ ಸ್ವಾತಂತ್ರ್ಯ ಸಂಗ್ರಾಮವನ್ನು ಯೋಗ್ಯರೀತಿಯಿಂದ ಬೆಳೆಸಲು ಈ ರಾಷ್ಟ್ರೀಯ ಪರಿಷತ್ತು ಒಂದು ಸಾಧನ. ಸಾಧನದ ಈ ಮಹತ್ವವನ್ನು ತಿಳಿಯದ ಹೊರತು ಅದನ್ನು ಉಪಯೋಗ ಮಾಡಿಕೊಳ್ಳುವದಾದರೂ ಸಾಧ್ಯವಿಲ್ಲ.

ಬಾಲವಾಙ್ಮಯದ
ಆವಶ್ಯಕತೆ ಮತ್ತು ನಿರ್ಮಾಣದ
ವಿಷಯಕವಾದ ಪ್ರಬಂಧ
ಬಾಲವಾಙ್ಮಯ
ಬೆಲೆ ಮೂರಾಣೆ
ಉಪಾಧ್ಯಾಯರ ಪ್ರಕಟನ ಸಮಿತಿ,
ಉಡುಪಿ.
"ಕಾಂಗ್ರೆಸ್ ಹಿತೈಷಿ"

ಕುಂದಾಪುರ ಬೇಂಕ್ ಲಿಮಿಟೆಡ್
ಕುಂದಾಪುರ

ನಮ್ಮ ಬೇಂಕಿಗೆ ಬೇಂಕಿಂಗ್ ವ್ಯವಹಾರವು ಚೆನ್ನಾಗಿ ಗೊತ್ತಿರುವ ಒಬ್ಬ ಆಫೀಸು ಸೆಕ್ರೆಟರಿಯೂ ಮೂರು ಜನ ಕ್ಲಾರ್ಕರೂ ಬೇಕಾಗಿದ್ದಾರೆ. ಆಫೀಸು ಸೆಕ್ರೆಟರಿಯು ಸೆಕ್ಯೂರಿಟಿ (ಜಾಮೀನು ಹಣ) ಕೊಡಬೇಕಾಗಿದೆ. ಉಮೇದುವಾರರು ತಮ್ಮ ಯೋಗ್ಯತಾ ಪತ್ರದೊಂದಿಗೆ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ನಡಿಸತಕ್ಕದ್ದು.

ಮೆನೇಜಿಂಗ್ ಡೈರೆಕ್ಟರ್.
ಕುಂದಾಪುರ ಬೇಂಕ್ ಲಿಮಿಟೆಡ್,
ಕುಂದಾಪುರ.

ವಿಶ್ವಕಿರುಕುಳ

ಶಾಂತಿಗಾಗಿ ಶಸ್ತ್ರ! ಇಟಲಿಯ ಅರ್ಥವೇನು? ನಾವೂ ನಿಮ್ಮಂತೆಯೆ! ಮಲಾಗಾಪತನ. ಆಸ್ಟ್ರೇಲಿಯಕ್ಕೂ ಬಂತೆ?

ಶಾಂತಿಗಾಗಿ ಶಸ್ತ್ರ!

ಆಂಗ್ಲೇಯ ಸರಕಾರವು ಒಂದು ಶ್ವೇತಪತ್ರವನ್ನು ಹೊರಡಿಸಿದೆ. ಅದರಲ್ಲಿ ಬ್ರಿಟಿಷ್ ಸಾಮ್ರಾಜ್ಯ ರಕ್ಷಣೆಗಾಗಿ, ಭೂಮಿ, ಸಮುದ್ರ, ಆಕಾಶ— ಈ ಮೂರು ಕಡೆಗಳ ಪಡೆಯನ್ನೂ ಬಲಗೊಳಿಸಬೇಕೆಂದು ಸೂಚಿಸಿದೆ. ಲೋಕಶಾಂತಿಯು ಕಡಿಮೆಯಾಗುತ್ತಾ ಬರಲು ಬ್ರಿಟಿಷರ ಈ ಮೂರು ಬಲಗಳು ಕಡಿಮೆಯಾಗಿದ್ದುದೇ ಕಾರಣವೆಂದು ಬ್ರಿಟಿಷ್ ರಕ್ಷಣಾಖಾತೆಯ ಮಂತ್ರಿಗಳಾದ ಮಿ. ಡಫ್ ಕೂಪರರ ಅಭಿಪ್ರಾಯ. ಅವರು ಹೇಳುತ್ತಾರೆ—ಲೋಕಶಾಂತಿಗಾಗಿ ಬ್ರಿಟಿಷರಿಗೆ ಶಸ್ತ್ರಾಸ್ತ್ರಗಳನ್ನು ಹೆಚ್ಚಿಸಬೇಕಾಗಿ ಬಂದಿದೆ. ದೇಶಕ್ಕೆ ಮುಂದಿರುವ ವಿಪತ್ತು ಬಹು ದೊಡ್ಡದಾದುದರಿಂದ ಅದಕ್ಕಾಗಿ ಮಾಡಲ್ಪಡುವ ತ್ಯಾಗವು ಎಷ್ಟಿದ್ದರೂ ಸಣ್ಣದು. ಈ ಮಾತಿನಲ್ಲಿ ಸ್ವಾರಸ್ಯವಿದೆ. ಶಸ್ತ್ರಗಳನ್ನು ಹೆಚ್ಚಿಸುವುದರಿಂದಲೇ ಶಾಂತಿ ಸ್ಥಾಪನೆಯಾಗುವದಾದರೆ ಎಲ್ಲಾ ರಾಷ್ಟ್ರಗಳೂ ಅದನ್ನೇ ಮಾಡುತ್ತಿರುವುದರಿಂದ ಲೋಕಯುದ್ಧದ ಭಯವೇ ಇಲ್ಲ!

ಇಟಲಿಯ ಅರ್ಥವೇ ಬೇರೆ.

ಆದರೆ ಇಟಲಿಯು ಹಾಗೆ ಭಾವಿಸುವದಿಲ್ಲ. ಅದು ಸ್ವಲ್ಪ ತಳಮಳಗೊಂಡಂತಿದೆ. ಯುದ್ಧ ಸಾಮಗ್ರಿಗಳನ್ನು ಹೆಚ್ಚಿಸಿ ಲೋಕದಲ್ಲಿ ಶಾಂತಿ ಸ್ಥಾಪಿಸುವದರ ಗುಟ್ಟನ್ನು ಇಟಲಿಯು ತಿಳಿದಷ್ಟು ಬೇರೆ ರಾಷ್ಟ್ರಗಳು ತಿಳಿದಿಲ್ಲ. ಅದಕ್ಕೆ ಇತ್ತೀಚೆಗಿನ ಸ್ಪಷ್ಟ ಅನುಭವವಿದೆ. ತಾನು ಯುದ್ಧ ಸಾಮಗ್ರಿಯನ್ನು ಹೆಚ್ಚಿಸಿದುದರಿಂದಲೇ ಅಬಿಸೀನಿಯದಲ್ಲಿ ಶಾಂತಿ ಸ್ಥಾಪನೆಯಾಯಿತೆಂಬುದನ್ನು ಅದು ಬಲ್ಲುದು. ಈಗ ಬ್ರಿಟಿಷರೂ ಅದನ್ನೇ ಹೇಳುತ್ತಿರುವರಲ್ಲಾ! ಹಿರಿಯ ರಾಷ್ಟ್ರಗಳೇ ಈ ರೀತಿ ದುಡ್ಡು ಖರ್ಚು ಮಾಡಹತ್ತಿದರೆ ಬಡ ರಾಜ್ಯಗಳ ಗತಿಯೇನು? ಎಂದು ಇಟಲಿಯ ಪ್ರಶ್ನೆ. ಬಡ ರಾಜ್ಯಗಳಿಗೆ ಅಬಿಸೀನಿಯದ್ದೇ ಗತಿ!

ನಾವೂ ನಿಮ್ಮಂತೆಯೇ

ಆದರೆ ಜರ್ಮನಿಯು ಆ ಪ್ರಶ್ನೆಯನ್ನು ಕೇಳುವದಿಲ್ಲ. "ಆಂಗ್ಲೇಯರಿಗೆ ಮನಬಂದಂತೆ ಮಾಡುವ ಅಧಿಕಾರವಿದೆ. ಅವರು ಅವರ ಸೈನ್ಯ ಸರಂಜಾಮುಗಳನ್ನು ಭರ್ತಿಮಾಡಿಕೊಳ್ಳಲಿ; ನಾವು ನಮ್ಮದನ್ನು ತುಂಬಿಸಿಕೊಳ್ಳುವೆವು" ಎಂದು ಜರ್ಮನಿಯ ಹೇಳಿಕೆ. ಇದರಲ್ಲಿ ತಪ್ಪಿಲ್ಲ. ಎಲ್ಲರೂ ಹೆಚ್ಚಿಸುತ್ತಾ ಬರುವದೆಂದರೆ ಲೋಕವೇ ಅಭಿವೃದ್ಧಿಗೊಂಡಿತೆಂಬ ಅರ್ಥ! ಲೋಕವು ಅಭಿವೃದ್ಧಿ ಹೊಂದುವದು ಬೇಡ; ಅವನತಿಗಿಳಿಯಬೇಕೆಂಬ ಇಚ್ಛೆ ಯಾರಲ್ಲಿಯೂ ಇಲ್ಲ.

ಮಲಾಗಾಪತನ

ಈ ಮಧ್ಯೆ ಸ್ಪೇಯಿನಿನ ಮಲಾಗಾ ಪಟ್ಟಣವು ದಂಗೆಕಾರರ ವಶವಾಗಿದೆ. ಯುದ್ಧದಲ್ಲಿ ಜರ್ಮನಿಯ ಸೇನಾನಾಯಕರು ಪ್ರತ್ಯಕ್ಷವಾಗಿ ಗಲಭೆಗಾರರ ಪರವಾಗಿ ಹೋರಾಡಿದ್ದರಂತೆ. ಇಟಲಿಯವರೂ ಜತೆಗೂಡಿದ್ದರು. ಈ ಅನಾಚಾರಗಳನ್ನು ಕೇಳುವವರಿಲ್ಲ! ಸ್ಪೇಯಿನಿನ ಕ್ರಮಬದ್ಧ ಸರಕಾರಕ್ಕೆ ಇದಿರುನಿಂತವರನ್ನು ಅನ್ಯ ಸರಕಾರಗಳು ಪ್ರೋತ್ಸಾಹಿಸಬಹುದು. ಅವರ ಒಳಜಗಳದಲ್ಲಿ ಪ್ರತ್ಯಕ್ಷವಾಗಿ ಭಾಗವಹಿಸಬಹುದು. ಅಲ್ಲಿ ನ್ಯಾಯವನ್ನು ನೀತಿಯನ್ನು ಕಾಪಾಡುವವರಿಲ್ಲ. ಎಲ್ಲಾ ರಾಷ್ಟ್ರಗಳೂ ಈ ಯುದ್ಧದಿಂದ ಒಂದು ನೀತಿಯನ್ನು ಕಲಿಯುತ್ತಿವೆ ಮಾತ್ರ—"ಯುದ್ಧವು ಎಲ್ಲಿಯೇ ಆದರೂ ಎಲ್ಲಾ ರಾಜ್ಯಗಳ ಯುದ್ಧ ಸಾಮಗ್ರಿಗಳೂ ಖರ್ಚಾಗುವದುಂಟು. ಹೀಗಿರುವಾಗ ನಾವೇಕೆ ಯುದ್ಧಸಾಮಗ್ರಿಗಳನ್ನು ಹೆಚ್ಚಿಸಬಾರದು?" ಆ ಮೇಲೆ ಶಾಂತಿ ದೊರಕದೆ ಎಲ್ಲಿ ಹೋಗುತ್ತದೆ ನೋಡೋಣ!

ಆಸ್ಟ್ರೇಲಿಯಕ್ಕೂ ಬಂತೇ?

ಮಿ. ವಿಲ್ಸರೆಂಬ ಆಂಗ್ಲೇಯರು ನಾಝಿ ಜರ್ಮನಿಯ ಸ್ವಸ್ತಿಕಾ ಚಿಹ್ನೆಗಳುಳ್ಳ ಹೊಸದೊಂದು 'ಫೆಸಿಸ್ಟ್' ಚಳವಳವನ್ನು ಪ್ರಾರಂಭಿಸಿರುವರು. ಈ ಚಳವಳದ ಗುರಿಯೆಂದರೆ ಆಸ್ಟ್ರೇಲಿಯಕ್ಕೆ ಬಂದು ಸೇರುತ್ತಿರುವ ಯೆಹೋದ್ಯರನ್ನು ತಡೆಗಟ್ಟುವದಂತೆ! ಇವರು ತನ್ನ ಚಳವಳವನ್ನೇನೋ ಜೋರಿನಿಂದ ಪ್ರಾರಂಭಿಸಿರುವರು. ಇವರಿಗಿಷ್ಟರ ಕಾರ್ಬಾರು ಹೇಗೆ ಬಂತು? ಇದಕ್ಕೆ ಮೊದಲು ಮಿ. ವಿಲ್ಸರು ಮಾಡಿದ ಕೆಲಸವೆಂದರೆ ಎಲ್ಲಾ ದೇಶಗಳನ್ನೂ ನೋಡಿಕೊಂಡು ಬಂದುದು. ಹೀಗೆ ಮೊನ್ನೆಯ ವರೆಗೆ ಅಲೆದಾಡುತ್ತಿದ್ದ ಇವರು ಈಗ ಫಕ್ಕನೆ ನಾಯಕರಾಗಿ ಹೋಗಿದ್ದಾರಲ್ಲಾ— ಅದಕ್ಕೆಲ್ಲಾ ಹಣವೆಲ್ಲಿಂದ? ಫೆಸಿಸ್ಟ್ ಚಳವಳಿಯು ಧನಸತ್ತೆಯ ಸ್ಥಾಪನೆಗಾಗಿ. ಅದು ಹುಟ್ಟುವಾಗಲೇ ಶ್ರೀಮಂತಿಕೆಯೊಡನೆಯೇ ಹುಟ್ಟುತ್ತದೆಂಬುದಕ್ಕೆ ಇದೊಂದು ದೃಷ್ಟಾಂತ!

ರಾಸ್‌ಡೆಸ್ಟರು ಸಿಕ್ಕಲಿಲ್ಲ

ರಾಸ್‌ಡೆಸ್ಟರು ಅಬಿಸೀನಿಯಾ ಚಕ್ರವರ್ತಿಗಳಾದ ಹೈಲಿ ಸಿಲಾಸಿಯವರ ಮಗಳ ಗಂಡ. ಅವರನ್ನು ಸೆರೆಹಿಡಿಯಿರೆಂದು ಜನರಲ್ ಗ್ರೇಜಿಯಾನಿಗಳು 20,000 ಸೈನಿಕರನ್ನು ಕಳುಹಿಸಿದರು. ಅವರು ಸಿಕ್ಕುತ್ತಿದ್ದರೆ ಈ ಸೈನಿಕರು ಯುದ್ಧ ಮಾಡಿಯೇ ಬಿಡುತ್ತಿದ್ದರು. ಈ ಸೈನಿಕರು ಮನುಷ್ಯರನ್ನೂ ಮೃಗಗಳನ್ನೂ ಒಂದೇ ರೀತಿ ಕಾಣುವ ವಿದ್ಯೆಯನ್ನೇನೋ ಅಬಿಸೀನಿಯದಲ್ಲಿ ಕಲಿತಿದ್ದರು; ರಾತ್ರಿ ಹಗಲುಗಳ ವ್ಯತ್ಯಾಸವನ್ನು ಮರೆಯಲು ಮಾತ್ರ ಕಲಿಯಲಾಗಲಿಲ್ಲ. ಆದ್ದರಿಂದ ರಾಸ್‌ಡೆಸ್ಟರು ತನ್ನ ಸೈನಿಕರೊಂದಿಗೆ ರಾತ್ರಿ ತಲೆತಪ್ಪಿಸಿಕೊಂಡು ಕೆನ್ಯಿಯಾ ಸರಹದ್ದಿಗೆ ಹೋಗಿ ಮುಟ್ಟಿರುವರು! ಅವರ ತಲೆಯನ್ನು ತಂದವರಿಗೆ ಹಲವು ಸಾವಿರಗಳ ಬಹುಮಾನವಿರುವದಂತೆ! ಅಬಿಸೀನಿಯದ ಶಾಂತಿಸ್ಥಾಪನೆಯ ಕೆಲಸವು ಇನ್ನೂ ಪೂರ್ಣವಾಗಿಲ್ಲ.

ಚುನಾವಣೆಯ ಕೆಲವು ವಿದ್ಯಮಾನಗಳು

ಮದ್ರಾಸ್ ಪ್ರಾಂತದ ಚುನಾವಣೆಯು ಈಗ ಮುಗಿದಿರುವುದಷ್ಟೆ. ಚುನಾವಣೆಯ ಸಂದರ್ಭದಲ್ಲಿ ಹಲವು ವಿನೋದಕರ ವಿದ್ಯಮಾನಗಳು ನಡೆದಿರುವವು. ಕೋಂಗ್ರೆಸ್ಸಿನ ಹಳದಿ ಪೆಟ್ಟಿಗೆಗೆ ಓಟರರು ಬಂದು ನಮಸ್ಕರಿಸಿ ಓಟು ಹಾಕುವುದು ಹಲವು ಕಡೆಗಳಲ್ಲಿ ನಡೆದ ಸಂಗತಿಯಿರುವುದು. ತಮಿಳುನಾಡಿನ ತಿರುಪರ್ಣ ಕುಂಡ್ರಮ್ ಎಂಬಲ್ಲಿ ಹರಿಜನ ಓಟರನೊಬ್ಬನು ಓಟು ಕೊಟ್ಟ ಮೇಲೂ ಅರಸಿನ ಪೆಟ್ಟಿಗೆಯನ್ನು ಹಿಡಿದು ಪೂಜೆ ಮಾಡುವುದನ್ನು ದೀರ್ಘಕಾಲದ ವರೆಗೆ ನಡಿಸುತ್ತಾ ಓಟು ಕೊಡುವ ಕೋಣೆಯಿಂದ ಹೊರಗೆ ಬರಲೇ ಇಲ್ಲ. ಕಡೆಗೆ ಪೋಲಿಂಗ್ ಆಫೀಸರರು ಬಹಳ ಪ್ರಯಾಸದಿಂದ ಅವನು ಹೊರ ಹೋಗುವಂತೆ ಮಾಡಿದರು. ಇನ್ನೊಂದು ಕಡೆ ಶ್ರದ್ಧಾಳು ಮುದಿ ಬ್ರಾಹ್ಮಣರೊಬ್ಬರು ಕರ್ಪೂರ ಹಿಡಿದುಕೊಂಡು ಬಂದು ಹಳದಿ ಪೆಟ್ಟಿಗೆಗೆ ಆರತಿ ಮಾಡಿಬಿಡಬೇಕೆಂದು ಛಲ ಹಿಡಿದರು. ಕಡೆಗೆ ಅದು ಕೂಡದೆಂದು ಪೋಲಿಂಗ್ ಆಫೀಸರರು ಅವರಿಗೆ ಬಹಳವಾಗಿ ತಿಳಿಸಿದ ಮೇಲೆ ಅವರು ತನ್ನ ಓಟು ಕೊಟ್ಟರು. ಒಂದು ಕಡೆ ಒಬ್ಬನು ಓಟು ಕೊಟ್ಟು ಬಂದು ಪೋಲಿಂಗ್ ಆಫೀಸರರೊಡನೆ ತನ್ನ ಓಟಿನ ಹಣ ಕೇಳಿದನು. ಎಲ್ಲರೂ ನಕ್ಕು ಅವನನ್ನು ಹೊರ ಕಳುಹಿಸಿದರು. ಕೊಚಡೈ ಎಂಬಲ್ಲಿ ಕಣ್ಣು ಕಾಣದ ಮತ್ತು ಬಾಯಿಬಾರದ ಹಣ್ಣು ಮುದುಕ ಬ್ರಾಹ್ಮಣನೊಬ್ಬನು ಬಹಳ ಪ್ರಯತ್ನದಿಂದ ಸನ್ನೆ ಮಾಡಿ ಅರಸಿನ ಪೆಟ್ಟಿಗೆಯನ್ನು ಸೂಚಿಸಿ ತನ್ನ ಓಟು ಕೊಟ್ಟಿರುವನು. ಮೇಲೂರು ಎಂಬಲ್ಲಿ ಕೆಲವು ಸ್ತ್ರೀಯರು, ಕೋಂಗ್ರೆಸ್ ಪಕ್ಷದ ಏಜಂಟರು ಕೊಟ್ಟಿದ್ದ ಹಳದಿ ಬಣ್ಣದ ಚೀಟುಗಳನ್ನು ಎಷ್ಟಕ್ಕೂ ಕೊಡಲೊಪ್ಪದೆ ಅದನ್ನೇ ಪೆಟ್ಟಿಗೆಗೆ ಹಾಕುವ ಹಠ ಹಿಡಿದರು. ಕಡೆಗೆ ಬಹಳ ಪ್ರಯಾಸಪಟ್ಟು ಅವರ ಕೈಯ ಚೀಟುಗಳನ್ನು ತೆಗೆದುಕೊಳ್ಳಲಾಯಿತು. ಮಾನಪಚೇರಿ ಎಂಬಲ್ಲಿ ಹಣ್ಣು ಮುದುಕಿಯೊಬ್ಬಳು ಓಟುಕೊಡಲೆಂದು 7 ಮೈಲುಗಳಿಂದ ನಡೆದುಬಂದು, ಅವಳಿಗೆ ಓಟಿಲ್ಲೆಂದು ಹೇಳಲ್ಪಟ್ಟಾಗ ಕಣ್ಣೀರಿಟ್ಟು ಅತ್ತುಬಿಟ್ಟಳು.

ಪೇಟೆ ಧಾರಣೆ

ಸಾಮಗ್ರಿಗಳು	ಮಂಗಳೂರು ಇಂದ	ಮಂಗಳೂರು ವರೆಗೆ	ಉಡುಪಿ ಇಂದ	ಉಡುಪಿ ವರೆಗೆ
ರಾಶಿ ಅಕ್ಕಿ ...	3— 6	3—10	3— 0	3— 4
ಮುಕ್ತಿ ...	3— 8	4 4	3 —12	4— 4
ಗುಡ್ಡ ಸುಗ್ಗಿ ...	3—10	3 – 14	3 — 0	3— 4
ಸೂರ ಅವ್ವಲ್ ಬೆಳ್ತಿಗೆ ...	4 — 0	4— 4	4— 0	4— 8
ರಂಗೂನು ಬೆ. ಗೋ. ಗಕ್ಕೆ	7 — 0	7— 4	7— 0	7— 8
ಗೋದಿ ಗೋಣಿ ಗಕ್ಕೆ ...	11 — 0	13— 0	13— 8	14— 0
ತೊಗರಿ ಗೋಣಿ ಗಕ್ಕೆ ...	9— 8	12— 8	12— 0	13— 0
ಹುರುಳಿ ಗೋಣಿ ಗಕ್ಕೆ ...	5 — 0	5 — 6	5 — 0	5 — 8
ಕಡಲೆ ಗೋಣಿ ಗಕ್ಕೆ ...	8 — 0	12 — 8	8— 8	8 —12
ತೊಗರಿಬೇಳೆ ಗೋಣಿ ಗಕ್ಕೆ	11 — 0	19— 0	11— 0	17— 0
ಉದ್ದು ಗೋಣಿ ಗಕ್ಕೆ ...	9— 0	9 — 8	8 — 4	8 — 8
ಹೆಸರು ಗೋಣಿ ಗಕ್ಕೆ ...	7 —12	8— 0	9 — 4	9— 8
ಊರುಬೆಲ್ಲ ಖಂಡಿ ಗಕ್ಕೆ...	30— 0	32— 8	20 — 0	30— 0
ಉಪ್ಪು ಗೋಣಿ ಗಕ್ಕೆ ..	4 - 2	5— 4	4— 4	4—12
ಕೊಬ್ಬರಿ ಖಂಡಿ ಗಕ್ಕೆ ...	75 — 0	84 — 0	75 — 0	85— 0
ಕೊಬ್ಬರಿ ಹಿಂಡಿ ಖಂಡಿ ಗಕ್ಕೆ	26— 8	28 - 8	27 — 0	28— 8
ಎಳ್ಳಿಂಡಿ ಖಂಡಿ ಗಕ್ಕೆ ...	26 — 4	27 — 8	20— 0	21— 4
ಕೊಬ್ಬರಿ ಎಣ್ಣೆ ಮಣ ಗಕ್ಕೆ	6— 0	7— 0	7 — 0	7—12
ಎಳ್ಳೆಣ್ಣೆ ಮಣ ಗಕ್ಕೆ ...	7— 0	...	6 – 0	6 — 4
ಚಿಮಿಣಿ ಎಣ್ಣೆ ಪೆಟ್ಟಿಗೆ ಗಕ್ಕೆ	6 — 5	7 – 5	6 — 2	6— 8
ಮೋರಿಸ ಸಕ್ಕರೆ ಮ ಗಕ್ಕೆ	3 — 2	3— 4	2 --15	3 — 2
ಮೆಣಸು ...	2 — 8	5 -- 0	3 – 0	3— 4
ಸಾಸಿವೆ ಮುಡಿ ಗಕ್ಕೆ ...	5— 4	5- 8	5— 8	5—12
ಕೊತ್ತಂಬರಿ ಮುಡಿ ಗಕ್ಕೆ ...	2— 8	3 – 0	2 —12	3— 8
ಕಾಳುಮೆಣಸು ಖ. ಗಕ್ಕೆ...	100— 0	120 – 0	110 · 0	120 – 0
ಗೇರುಬೀಜ ಮು ಗಕ್ಕೆ ...	3 — 4	3— 8	4 – 4	...
ಕಬ್ಬಿಣ ಖಂಡಿ ಗಕ್ಕೆ ...	35— 0	37— 8	45— 8	50— 0
ತಾಂಬ್ರ ತಗಡು ಮ. ಗಕ್ಕೆ	12— 4	12— 8	14— 8	...
,, ಪಾತ್ರಗಳು ಮ. ಗಕ್ಕೆ	12 — 8	14— 0	16— 0	17— 0
ಚೀನಿ ಬೆಳ್ಳಿ ಸೇರು ಗಕ್ಕೆ...	13— 8	15— 0	13 --12	14 · 0
ಹಿತ್ತಾಳೆ ತಗಡು ಮ ಗಕ್ಕೆ	10 — 0	10 – 8	11— 0	...
ಪವನು ಗಕ್ಕೆ ...	22— 7	22— 8	22— 8	...
ಹುಣಸೆ ಹುಳಿ ಖಂಡಿ ಗಕ್ಕೆ	40 — 0	45 — 0	45 -- 0	50— 0
ನೇಟಿವ್ ಕಾಫಿ ಖಂಡಿ ಗಕ್ಕೆ	170 – 0	180 0	160 - 0	170— 0
ಫಿಟೇರಿ ಕಾಫಿ ಖಂಡಿ ಗಕ್ಕೆ	175— 0	195— 0	170 – 0	187— 8
ಮಡಿಕೇರಿ ಏಲಕ್ಕಿ ...	50 — 0	55 — 0	70— 0	75— 0
ತುಪ್ಪ ಮಣ ಗಕ್ಕೆ ...	17 – 0	18 — 0	14— 0	15— 0
ಏಲಕ್ಕಿ ಬೀಜ ಮಣ ಗಕ್ಕೆ	80— 0	85— 0	70— 0	80 — 0

ಪ್ರಾಮುಖ್ಯ ಪ್ರಕಟಣೆ.

ಅಮೃತಾಂಜನ

— ಡಿಪೋವಿನ ರಿಂಗ್‌ವರ್ಮ್ ಮುಲಾಮು —

ಇಷ್ಟರ ವರೆಗಣ ನಮ್ಮ

ವಿಲಿಯಮ್ ಎಂಡ್ ಕೋ ರವರ

ರಾಜ ಮತ್ತು ರಾಣಿಯ ಟ್ರೇಡ್‌ಮಾರ್ಕಿನ ರಿಂಗ್‌ವರ್ಮ್

ಮುಲಾಮು ಈ ಕೆಳಗಣಂತೆ ವ್ಯತ್ಯಾಸಮಾಡಲಾಗಿದೆ.

ಅಮೃತಾಂಜನ ಡಿಪೋವಿನ ತ್ರಿವರ್ಣದ 'ರೈಸಿಂಗ್ ಸನ್'

ಈ ಮೇಲಿನ ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು

ನಮ್ಮ ಗಿರಾಕಿದಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು.

ನಮ್ಮ ಟ್ರೇಡ್‌ಮಾರ್ಕಿನ ಮಾರ್ಪಾಟದಿಂದ ನಮ್ಮ ಔಷಧಿ ತಯಾರಿಯಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲೆಂಬ ಕುರಿತು ನಾವು ಈ ಮೂಲಕ ಭರವಸೆ ಕೊಡುತ್ತೇವೆ.

ಅಮೃತಾಂಜನ ಡಿಪೋ, --- ಬೊಂಬಾಯಿ, ಮದ್ರಾಸು, ಕಲ್ಕತ್ತಾ.

ಕೇವಲ ಎರಡೇ ಆಣೆಗಳಲ್ಲಿ ೨೫ ರೂಪಾಯಿ ಬಹ

ಅಖಿಲ ಕನ್ನಡ ನಾಡಿಗೆ ಪ್ರೀತಿಯಾಗಿರುವ

ಕಥಾಕುಂಜ (ಮಾಸಪತ್ರಿಕೆ)

ನಯನಮನೋಹರವಾಗಿ ಹೊಸ ಹೊಸ ಚಿತ್ರಗಳಿಂದ ಅಲಂಕೃತವಾಗಿ ಡಿಸೆಂಬರದಲ್ಲಿ ೩ನೆಯ ವರುಷದ ೧ನೆಯ ಸಂಚಿಕೆಯು ಪ್ರಕಟವಾಗುವದು. ಆದ್ದರಿಂದ ಕನ್ನಡಾಭಿಮಾನಿಗಳು ಈಗಲೆ ಮುಂಗಡ ಹಣ ಕಳುಹಿಸಿ ಚಂದಾದಾರರಾಗಬೇಕು

ಚಂದಾದಾರರಿಗೆ ೨೫ ರೂಪಾಯಿ ಬಹುಮಾನ.

ಈ ಸಂಧಿ ಕಳಕೊಳ್ಳಬಾರದು. ಕಥಾಕುಂಜವನ್ನು ಕೊಂಡುಕೊಳ್ಳಲು ಎಲ್ಲರಿಗೂ ಅನುಕೂಲವಾಗಲೆಂದು ಚಂದಾ ಹಣವನ್ನು ಇಳಿಸಲಾಗಿದೆ

ಇಳಿಸಿದ ಚಂದಾ ೧-೮-೦ (ಅಂಚವೆಚ್ಚ ಬೇರೆ) ಶಾಲೆ, ಕಾಲೇಜು, ಲೈಬ್ರರಿಗಳಿಗೆ ೨-೮-೦

ಮೈಸೂರು ಮುಂಬೈ ವಿದ್ಯಾಖಾತೆಯವರಿಂದ ಶಾಲೆ ಕಾಲೇಜುಗಳ ವಾಚನಾಲಯಕ್ಕೆ ಮಂಜೂರಾಗಿದೆ. ಜಾಹೀರಾತುದಾರರಿಗೆ ಸುವರ್ಣಸಂಧಿ! ಪತ್ರಿಕೆಗಳನ್ನು ಮಾರಾಟಮಾಡಲು ಎಲ್ಲ ನಗರಗಳಲ್ಲಿ ಪ್ರಾಮಾಣಿಕ ಏಜಂಟರು ಬೇಕು.

ವಿಶೇಷ ಮಾಹಿತಿ ಹಸ್ತಪತ್ರಿಕೆ ನೋಡಿರಿ

ವ್ಯವಸ್ಥಾಪಕ— **ಕಥಾಕುಂಜ, ಬೆಳಗಾಂವಿ.**

DIAMONDS! DIAMONDS!!

K. Ramachandra Krishna Shet

Near Mission High School, *Mangalore*

SUPERFINE UP TO DATE CUTTING! **ವಜ್ರಗಳು** BEST BRILLIANCY!!

ಉತ್ಕೃಷ್ಟ ತರಗತಿಯ ಚುನ್ನಾಯಿತ (first quality, selected) ಎಮ್ ಸ್ಟೋನ್‌ಗಳನ್ನು ಡಮ್ಮಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ. ಕೊಂಡುಕೊಳ್ಳುವವರಿಗೆ ಬಜಾರ ಧಾರಣೆಗಿಂತ 5 ಪರ್ಸಂಟಿಗೆ ಕಡಿಮೆಯಾಗಡಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ. ಇದನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ. ಇದರ ಶಾಖೆಯೊಂದನ್ನು ಗವರ್ಮೆಂಟ್ ಕೊಲೆಜಿನ ಎದುರುಗಡೆ ತೆರೆಯಲಾಗಿದೆ.

ಕೆ. ರಾಮಚಂದ್ರ ಕೃಷ್ಣ ಶೇಟ್,

ಜುವೆಲರ್, ಮಿಶನ್ ಹೈಸ್ಕೂಲು ಬಳಿ, ಮಂಗಳೂರು.

ಕಿರಿಯರ ಪ್ರಪಂಚ

೧	ನಾಡಕಥೆ	೦	೨	೦
೨	ಮುಂದಿನ ದೇವರು	೦	೨	೦
೩	ಸ್ವತಂತ್ರ ಜೀವನೋಪಾಯ	೦	೨	೬
೪	ಕುಶ-ಲವ	೦	೪	೦
೫	ಸಂಶಯ ಪಿಶಾಚ	೦	೬	೦
೬	ಕಾವ್ಯಸಾಮ್ರಾಜ್ಯ	೦	೧೨	೦
೭	ಮಧುವನ	೧	೮	೦
೮	ವ್ಯಭಿಚಾರಿಣಿ ಯಾರು	೦	೮	೦

ಕಿರಿಯರ ಪ್ರಪಂಚ," ಉಡುಪಿ.

ಭಾಷಾಂತರಕಾರರು

ದೊರೆಯದೆ ಪೇಚಾಡುವಿರೇಕೆ?

ಇನ್ಶೂರೆನ್ಸ್ ಕಂಪೆನಿ, ಬ್ಯಾಂಕು ನೊದಲಾದುವುಗಳಿಗೆ ಸಂಬಂಧಪಟ್ಟ ಮತ್ತು ಇತರ ಎಲ್ಲಾ ತರದ ಇಂಗ್ಲಿಷ್ ಕನ್ನಡ ಭಾಷಾಂತರಗಳನ್ನು ಉತ್ತಮ ರೀತಿಯಿಂದ ಮಾಡಿಕೊಡಲಾಗುವುದು ಹೆಚ್ಚಿನ ವಿವರಕ್ಕೆ ಈ ಕೆಳಗಿನ ವಿಳಾಸದೊಡನೆ ಪತ್ರವ್ಯವಹಾರ ಮಾಡಬೇಕು.

'ಟ್ರಾನ್ಸ್‌ಲೇಟರ್,'
C/o 'ಕಿರಿಯರ ಪ್ರಪಂಚ,'
ಉಡುಪಿ.

ಉತ್ತಮ ವರ್ಗದ ಶ್ರೇಷ್ಠವಾದ **ಸರಸ್ವತಿ** ಸ್ತ್ರೀಸಾಹಿತ್ಯ ಸಚಿತ್ರ ಮಾಸಪತ್ರಿಕೆ

ಇದು ಕರ್ನಾಟಕದಲ್ಲಿ ಸ್ತ್ರೀಯರ ಅಭ್ಯುದಯಕ್ಕಾಗಿ ಪ್ರಚುರವಡಿಸುತ್ತಿರುವ ಪತ್ರಿಕೆಯು ಇದೊಂದೇ. ಈ ಪತ್ರಿಕೆಯ ಹದಿನಾರನೆಯ ಸಂಪುಟವು 1937ನೇಯ ಜನವರಿ ತಿಂಗಳಿನಿಂದ ಪ್ರಾರಂಭವಾಗಿದೆ. ಈ ಪತ್ರಿಕೆಯಲ್ಲಿ ಸ್ತ್ರೀಯರ ಉನ್ನತಿಗೆ ಅತ್ಯಾವಶ್ಯಕವಾದ ಶಿಕ್ಷಣ-ಸಾಹಿತ್ಯ ಕಲೆ-ಆರೋಗ್ಯ-ಪಾಕಶಾಸ್ತ್ರ-ಸಮಾಜ ಸುಧಾರಣೆ ಇವುಗಳಿಗೆ ಸಂಬಂಧಪಟ್ಟ ಲೇಖನಗಳೂ, ಸಣ್ಣ ಸಣ್ಣ ಕಥೆಗಳೂ, ನಾಟಕಗಳೂ ಕರ್ನಾಟಕದ ಸುಪ್ರಸಿದ್ಧ ಲೇಖಕ ಲೇಖಿಕಿಯರಿಂದ ಬರೆಯಲ್ಪಟ್ಟು ಪ್ರಕಟವಾಗುವವು. ಮಕ್ಕಳ ಸಲುವಾಗಿ 'ಮಕ್ಕಳ ಪುಟಗಳು' ಬೇರೆ ಪ್ರಕಟವಾಗುವುವು. ಮೈಸೂರು, ಮುಂಬೈ ವಿದ್ಯಾ ಇಲಾಖೆಯವರಿಂದ ಸರ್ಕಾರದ ಶಾಲೆಗಳಿಗೂ ವಾಚನಾಲಯಗಳಿಗೂ ಮಂಜೂರಾಗಿದೆ. ಪ್ರಕಟಣೆಗೆ ಅತ್ಯುತ್ತಮವಾದ ಮಾಸಪತ್ರಿಕೆ.

ವಾರ್ಷಿಕ ಚಂದಾ ರೂ 3—0—0 ಮಾತ್ರ. ವಿ. ಪಿ ಹಾಸಲುಬೇರೆ,

ಸರಸ್ವತಿ ಕಾರ್ಯಾಲಯ,

ಚಾಮರಾಜಪೇಟೆ, ಬೆಂಗಳೂರು ನಗರ

ದಿ ನ್ಯೂ ಗ್ಲಾಸ್ ಎಂಪೋರಿಯಮ್

ಪೋಸ್ಟಾಫೀಸ್ ರೋಡ್, **ಉಡುಪಿ**

ನಮ್ಮಲ್ಲಿ ಎಲ್ಲಾ ತರದ ಗ್ಲಾಸ್‌ವೇರ್, ಎನಾಮಲ್‌ವೇರ್ ಪೋರ್ಸಿಲಿನ್‌ವೇರ್, ಲೇಂಪ್ಸ್ ಲಾಟೀನು, ಪೆಟ್ರಮೆಕ್ಸ್ ಇತ್ಯಾದಿ ಎಲ್ಲಾ ತರದ ಸಾಮಾಗ್ರಿಗಳು ಮತ್ತು ಹೊಟೇಲು-ಹೊಸ್ಟೆಲುಗಳಿಗೆ ಉಪಯುಕ್ತವಾದ 'ಟೀಸೆಟ್' ಕಪ್ಸ್ ಸಾಸರ್, ಪ್ಲೇಟ್ಸ್, ಥರ್ಮಾಸ್‌ಫ್ಲಾಸ್ಕ್, ಜಗ್, ಟ್ರೇಪ್ಲವರ್ ವೇಜ್, ಮತ್ತು ಪ್ರಜಂಟೇಶನ್ ಬಗ್ಗೆ ನಾನಾತರದ ಚಲೋ ಪೆನ್ಸಿ, ಗ್ಲಾಸ್‌ವೇರ್ ಸಾಮಾನುಗಳೂ ಸದಾ ಕಡಿಮೆ ಬೆಲೆಗೆ ಸಿಕ್ಕುವವು

ನಾವು ಹೊಸತಾಗಿ ಎಲ್ಲಾ ಸಾಮಾನುಗಳನ್ನು ಡೈರೆಕ್ಟ್ ತರಿಸಿರುವುದರಿಂದ ಯಾವತ್ತೂ ಸಾಮಾನುಗಳು ಕಡಿಮೆ ಬೆಲೆಗೆ ಕೊಡಲು ಅನುಕೂಲವಿದೆ. ಕಾರಣ ಗ್ರಾಹಕರು ಸ್ವತಃ ನಮ್ಮ 'ಶೋರೂಮ'ನ್ನು ಸಂದರ್ಶಿಸಿ ಮಾಲನ್ನೂ, ದರಗಳನ್ನೂ ಪರಿಶೀಲಿಸಿ ಕೊಂಡುಕೊಳ್ಳಬೇಕಾಗಿ ವಿನಂತಿ

THE GENERAL STORES, UDIPI

The only Reliable House for quality goods of every description

ದೀರ್ಘಕಾಲದ ರೋಗಗಳಿಂದ ಇನ್ನೂ ಇನ್ನೂ ವೃಥಾ ನರಳುತ್ತಿರುವುದೇಕೆ?

ನಾಯಕ್ ಬ್ರದರ್ಸರ ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕ.

ಇವರ ಅತ್ಯಮೂಲ್ಯವಾದ ಔಷಧಗಳ ಸೇವನೆಯಿಂದ ಶೀಘ್ರದಲ್ಲೇ ಗುಣಹೊಂದಬಹುದಲ್ಲವೇ?

ಇವರ ಔಷಧಗಳ ವೈಶಿಷ್ಟ್ಯ ಏನು?

- ದೇಶೀಯ ಉದ್ಯಮ
- 100 ವರ್ಷಗಳ ಅನುಭವದಿಂದ ತಯಾರಿ
- ಶಾಸ್ತ್ರೀಯ ರೀತಿಯ ಸಿದ್ಧತೆ
- ಅತ್ಯಂತ ಗುಣಕಾರಿ.
- ಸ್ವರ್ಣ, ರಜತಪದಕಗಳನ್ನು ಪಡೆದ ದಿವ್ಯೌಷಧಗಳು.
- ಅತ್ಯಂತ ಕಡಿಮೆ ಬೆಲೆ

ಭುವನೇಂದ್ರ ತ್ರೈರತ್ನಗಳು

ಗುಡಪಿಪ್ಪಲಿ
(ಮಕ್ಕಳ ಲೀವರ್ ರೋಗಕ್ಕೆ ಅತ್ಯುತ್ತಮ)

ಗರ್ಭಪಾಲ
(ಗರ್ಭಶೂಲೆ, ಗರ್ಭಸ್ರಾವಕ್ಕೆ ದಿವ್ಯೌಷಧ)

ಚಂದ್ರಮಸ್
(ವಾಂತಿಭೇದಿ, ಅತಿಸಾರಗಳ ಮೇಲೆ
(ಅತ್ಯಂತ ಗುಣಕಾರಿ)

ಶಾಸ್ತ್ರೀಯರೀತ್ಯಾ ತಯಾರಿಸಿದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲಗಳು—ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ

ನಮ್ಮ ಪ್ರತಿನಿಧಿಗಳಿಲ್ಲದ ಕಡೆಗಳಲ್ಲಿ ವ್ಯವಹಾರಕುಶಲರೂ, ವ್ಯಾಪಕರೂ, ಯೋಗ್ಯರೂ ಆದ ಏಜಂಟರು ಬೇಕು. ಅವರಿಗೆ ವಿಪುಲವಾದ ಸೌಕರ್ಯಗಳಿವೆ

ಹೆಚ್ಚಿನ ಮಾಹಿತಿಗೂ, ಸೂಚಿಪತ್ರಕ್ಕೂ, ವ್ಯವಹಾರನಿಯಮಕ್ಕೂ ಬರೆಕೊಳ್ಳಿರಿ.

ಪ್ರೇಮ ವಿದ್ಯಾಪೀಠ, ತುಂಗಭದ್ರಾ, (ಬಳ್ಳಾರಿ ಜಿಲ್ಲಾ)

ಇದರ ಹೊಸವರ್ಷದ ಜುಲೈಯಲ್ಲಿ ಮೊದಲಾಗುತ್ತದೆ. ಮರ್ಯಾದೆಯ ಉದ್ಯೋಗ ಬೇಕಾಗಿದ್ದವರ ಇಲ್ಲಿ ಶಿಕ್ಷಣವನ್ನು ಪಡೆಯಿರಿ. ಮುಲ್ಕಿ, ಅಪ್ಪರ್ ಸೆಕೆಂಡರಿ, ಮೆಟ್ರಿಕ್ ಸ್ಕೂಲ್ ಫೈನಲ್ ಇತ್ಯಾದಿ ಪಾಸ್ ಆದವರೆಲ್ಲರಿಗೂ ಯೋಗ್ಯತೆಗೆ ತಕ್ಕಂತೆ ವಿಧ ವಿಧವಾದ ಕೋರ್ಸ್‌ಗಳಿವೆ. ಪ್ರೊಸ್‌ಪೆಕ್ಟಸ್ ಮಾಹಿತಿಗಾಗಿ ಕೂಡಲೆ ೩ ಆಣೆ ಸ್ಟ್ಯಾಂಪು ಇಟ್ಟು ಬರೆಯಿರಿ.

ಮಹೋಪಾಧ್ಯಾಯಾ ಡಾ| ಸುಮತಿಬಾಯಿ,

ಬಿ. ಎ ಎಲ್. ಟಿ., ಎಫ್, ಪಿ ಎಚ್. ಎಸ್. ಭಿಷಗ್ರತ್ನ, ರಿಜಿಸ್ಟ್ರಾರ್-

LAXMI BRAND COFFEE POWDER.

Pure & Superior quality, will last long without losing its flavour and colour

TRADE MARK

Use always this LAXMI BRAND COFFEE POWDER prepared from the best & choicest Coffee Beans of Nilgiris. (Hills)

WANTED AGENTS in Southern India (samples available)

ಉತ್ಕೃಷ್ಟ ಕಾಫಿಬೀಜಗಳಿಂದ ತಯಾರಿಸಲ್ಪಟ್ಟ ಸುವಾಸನೆಯುಳ್ಳ ನಮ್ಮ ಲಕ್ಷ್ಮೀಮಾರ್ಕಿನ ಕಾಫಿಹುಡಿ ಯನ್ನೇ ಸದಾ ಉಪಯೋಗಿಸಿರಿ. ಏಜಂಟರಿಗೆ ಯೋಗ್ಯ ಕಮಿಶನ್ ಕೊಡಲಾಗುವದು. ಹೆಚ್ಚಿನ ಮಾಹಿತಿ ಬಗ್ಗೆ ಕೆಳಗಿನ ವಿಳಾಸಕ್ಕೆ ಬರೆದು ತಿಳಿಯಬಹುದು.

FOR SALE

Fire Resistance Steel Iron Safes. latest pattern.

ನಮ್ಮಲ್ಲಿ ಕಬ್ಬಿಣದ ಟ್ರೆಜರಿಗಳು ಸದಾ ಮಾರಾಟಕ್ಕೆ ಸಿದ್ಧವಿರುತ್ತವೆ. ತಿಂಗಳುಗಟ್ಟಲೆ ಕಂತುಗಳಿಂದಲೂ ಮಾರುವ ಏರ್ಪಾಡಿದೆ.

For Prices & Particulars Apply to—

K. K. Shanbhag & Sons

Court Road, UDIPI, S K



Sold also by Instalments

ಮಾಸ] **ವಿಶ್ವವಾಣಿ** [ಪತ್ರಿಕೆ.

ಸಂಪಾದಕರು—ಅ. ನ. ಕೃಷ್ಣರಾಯರು.

ಸಂಸ್ಕೃತಿಯ ಪ್ರಸಾರಕ್ಕಾಗಿ ಕರ್ನಾಟಕದಲ್ಲಿ ಹೊರಟಿರುವ ಪತ್ರಿಕೆ ಇದೊಂದೇ. ಜಗತ್ತಿನ ಸಾಂಸ್ಕೃತಿಕ ಚಲನವಲನಗಳ ಸುದ್ದಿಗಳೆಲ್ಲಾ ಇದರಲ್ಲಿ ಪ್ರಕಟವಾಗುತ್ತವೆ.

ಚಿತ್ರವಿಭಾಗದ ವೈಶಿಷ್ಟ್ಯ—ಜಗತ್ತಿನ ಯಾವದೇ ಪತ್ರಿಕೆಯಲ್ಲಿಯೂ ಪ್ರಕಟವಾಗಿರುವ ಅನೇಕ ಚಿತ್ರಗಳು 'ವಿಶ್ವವಾಣಿ'ಗೆ ಮೀಸಲು

ಆದುದರಿಂದ ಇಂದೇ ಚಂದಾದಾರರಾಗಿರಿ.

ಸಾಮಾನ್ಯ ಚಂದಾದಾರರಿಗೆ (ವರ್ಷಕ್ಕೆ)	... ...	ರೂ. ೩—೮—೦
,, ,, (೬ ತಿಂಗಳಿಗೆ)	... ...	ರೂ. ೨—೨—೦
ಶಾಲೆ, ಕಾಲೇಜು, ವಾಚನಾಲಯ, ಸಾರ್ವಜನಿಕ ಸಂಸ್ಥೆಗಳಿಗೆ (ವರ್ಷಕ್ಕೆ)		ರೂ. ೫—೦—೦

ವಿಶ್ವವಾಣಿಯು ಮೈಸೂರು, ಮುಂಬಯಿ, ಮದರಾಸು, ಹೈದರಾಬಾದು, ಕೊಡಗು, ಕರ್ನಾಟಕಗಳಲ್ಲಿ ಮಾತ್ರವಲ್ಲದೆ ಕನ್ನಡಿಗರು ನೆಲಸಿರುವ ಎಲ್ಲ ಕಡೆಯಲ್ಲಿಯೂ ಪ್ರಚುರವಾಗುತ್ತದೆ.

ಆದುದರಿಂದ 'ವಿಶ್ವವಾಣಿ'ಯಲ್ಲೇ ಜಾಹೀರಾತನ್ನು ಕೊಡಿರಿ.

ಹೆಚ್ಚು ವಿಚಾರಗಳಿಗೆ ಬರೆಯಿರಿ—

ವ್ಯವಸ್ಥಾಪಕ—'ವಿಶ್ವವಾಣಿ,' 'ಅನ್ನಪೂರ್ಣ', ವಿಶ್ವೇಶ್ವರಪುರಂ, ಬೆಂಗಳೂರು ನಗರ.

ನಮ್ಮ ಜರಿ ಪೀತಾಂಬರ, ರೇಶ್ಮೆ ಮಡಿಗಳಿಗೆ ಗಮನಕೊಡಿರಿ.

S. U. N. & CO. ***Choukhamba, Benares City.***

ಮೂರು ಇನಾಮುಗಳು.

THIS MAN WISHES HE HAD

ಶ್ರೀ ಕಾಶಿಯಲ್ಲಿ ತಯಾರಾಗತಕ್ಕ ರೇಶ್ಮೆ ಮಾಲುಗಳ ಕೆಟಲಗು 1, ಕಾಶೀನಕ್ಷೆ 1, ವಿಶ್ವೇಶ್ವರ ಪಟ 1, ಈ 3 ಸಾಮಾನುಗಳು 1 ಆಣೆ ಸ್ಟ್ಯಾಂಪು ಕಳುಹಿಸಿದರೆ ಇನಾಮಾಗಿ ಕಳುಹಿಸಲಾಗುವವು. ಸ್ಟ್ಯಾಂಪು ಬಾರದಿದ್ದರೆ ಈಗಿನ ಫೇಶನಿಗೆ ತಕ್ಕಂತೆ ಜರೀ ಕೆಲಸಗಳಿಂದ ತಯಾರಿಸಿದ ರೇಶ್ಮೆ ಸೀರೆಗಳೂ, ಖಣ, ಮಡಿ ಕದಪಾವಿನ್ನು, ಪೇಟಾ, ಕೋಟಿಂಗ್, ಶರ್ಟಿಂಗ್ ಶಿಲ್ಕುಗಳೂ, ಕಾಶ್ಮೀರ ಶಾಲುಗಳೂ, ಊಲನ್ ಚಾಳ, ಧಾವಳಿ, ನಾಮರ್ದಿ, ತರತರದ ರುದ್ರಾಕ್ಷಿಗಳೂ ಸಾಮಾನುಗಳೇ ಮೊದಲಾದ ಅನೇಕ ತರದ ಸಾಮಾನುಗಳ ಕೆಟಲಾಗು 1 ಮಾತ್ರ ಇನಾಂ. ಈಗಿನ ಹೊಸನಮೂನೆಯ ಪಡಲು ಬುಟ್ಟಿ ಹಾಕಿದ ಜರೀ ಶೀರೆ ಎಲ್ಲಾ ರಂಗುಗಳಲ್ಲಿ ರೂ. 20ರಿಂದ 55 ವರೆಗೆ. ಸಾದಾ 16 ಮೊಳದ ಶೀರೆ 1ಕ್ಕೆ ರೂ. 16 ರಿಂದ ರೂ. 35ರ ವರೆಗೆ. ಆರೆ ಕಡಮೆ 16 ಮೊಳ ಕ್ರೆಪ್ ಅಂಚು ರೂ. 10½ ಯಿಂದ ರೂ 15. ಖಣ 1ಕ್ಕೆ ರೂ. 1¼ ರಿಂದ ರೂ. 10ರ ವರೆಗೆ. ಪೋಸ್ಟು ಖರ್ಚು ಪ್ರತ್ಯೇಕ. ಆರ್ಡರಿನಂ. ಸಾಮಾನುಗಳನ್ನು ಸರಿಯಾದ ಸುಲಭ ದರದಿಂದ ಕಳುಹಿಸಲಾಗುವುದು.

ಶಿರೋಮಣಿ ನಾರಾಯಣಾಚಾರ್ಯ & ಕಂಪೆನಿ, ಚೌಕಂಬಾ, ಬೆನಾರಿಸ್, ಕಾಶಿ

USE

SUVASINI AGARBATHIES

(REGD.)

SRI BHARATHA VASTU MANDIRA, UDIPI

ಸಮಗ್ರ ಕರ್ನಾಟಕದಲ್ಲಿ ಜನಪ್ರೀತವಾದ

— 'ಕಿರಿಯರ ಪ್ರಪಂಚ'ದವರ ಸಾಹಸದ ಫಲಸ್ವರೂಪವಾದ —

ಮಧುವನವನ್ನು ಓದಿದ್ದೀರಾ?

(೨೫ ಕಥೆಗಳನ್ನೊಳಗೊಂಡಿದೆ.)

ಕರ್ನಾಟಕದ ಬೇರೆ ಬೇರೆ ಕತೆಗಾರರ ಹಾಗು ಕತೆಗಾರ್ತಿಯರ ಸುಂದರ ರಚನೆಗಳಿಂದ ಆಯ್ದು ನೇಯ್ದ ವೈವಿಧ್ಯ ಪೂರ್ಣವಾದ ೨೫ ಕತೆಗಳ ಸಂಗ್ರಹವಿದು. ಭಿನ್ನ ಭಿನ್ನ ರುಚಿಗಳಿಗೆ ಮೆಚ್ಚುವ ಸಾಮಾಜಿಕ, ರಾಜಕೀಯ, ಮನೋವೈಜ್ಞಾನಿಕ ಕತೆಗಳ ಇಂತಹ ಸಂಗ್ರಹವು ಬೇರೊಂದಿಲ್ಲ.

ಬೆಲೆ: ಕೇವಲ ರೂ. ೧—೮—೦

ಸೋಲ್ ಏಜಂಟರು—

ಸಪ್ಲೈ ಏಜೆನ್ಸಿ, ಲಿಮಿಟೆಡ್,

ಉಡುಪಿ, ದಕ್ಷಿಣ ಭಾರತ

Printed by P. VENKATARAMANACHARYA for & on behalf of SUPPLY AGENCY LTD., at THULUNAD PRESS, UDIPI and Published by K. H. SHETTY at "NAVAYUGA" OFFICE, UDIPI.

Registered No. M. 3618 — ೨೦ ಪುಟಗಳು---ಒಂದಾಣೆ — **NAVAYUGA**
A Nationalist Kanarese Weekly, UDIPI, S. K.

It will pay you
to advertise in
'NAVAYUGA'
The Leading
Nationalist
Kanarese Weekly
of Karnatak
FOR RATES OF ADVT. Etc.
APPLY TO THE MANAGER

ನವಯುಗ

ನಾಟಕಕರನೇಕರ
ಅಪೇಕ್ಷೆಯಂತೆ ಮುದ್ರಿಸಲ್ಪಟ್ಟ
ಮಂಗಳೂರು ಉಡುಪಿಗಳಲ್ಲಿ
ಜಯಶೀಲವಾಗಿ
ಅಭಿನಯಿಸಲ್ಪಟ್ಟ
ಜನಪ್ರಿಯವಾದ ನಾಟಕ
ವ್ಯಭಿಚಾರಿಣಿ ಯಾರು?
ಕೆಲವೇ ಪ್ರತಿಗಳು ಉಳಿದಿವೆ.
ಬೆಲೆ ೦ ೮ ೦
ಕಿರಿಯರ ಪ್ರಪಂಚ, ಉಡುಪಿ

VOL. XXVII-NO 27 — 4-3-1937

ಮೂಡ ಬಾನಿನ ಕಣ್ಣು ಕೆಂಗಿಡಿಯು ಕಾರುತಿದೆ,
ಬನದ ನಾಡೊಳು ಮೊಳಗುತಿಹ ತುಮುಲನಾದ;

ವಾರಪತ್ರಿಕೆ
ಸಂಪಾದಕ: ಕೆ. ಕೆ. ಶೆಟ್ಟಿ.

ಮೂಡುವುದು ತಂಬೆಳಕ ತಿಂಗಳಿನ ಮೊಗವಲ್ಲ,
'ನವಯುಗ'ದ ರುದ್ರರವಿಯಾರಕ್ತ ಬಿಂಬ.

ಸಂಪುಟ ೧೬] ಉಡುಪಿ, ಗುರುವಾರ ೪ ಮಾರ್ಚಿ, ೧೯೩೭ [ಸಂಚಿಕೆ ೨೭

THE

Canara Industrial & Banking
SYNDICATE, LIMITED.

ESTD: [INCORPORATED IN BRITISH INDIA] 1925

Head Office:
MUKUNDA NIVAS,
UDIPI, S. I.

BRANCHES:

1	BANGALORE CITY	16	KARWAR
2	BELGAUM	17	KUMTA
3	BYADGI	18	ANKOLA
4	BELLARY	19	HONAVAR
5	ADONI	20	BHATKAL
6	HOSPET	21	KARKALA
7	NANDYAL	22	BRAHMAVAR
8	PRODATTUR	23	HUNGARCUTTA
9	TADPATRI	24	SIRSI
10	TALIPARAMBA	25	SAGAR
11	HUBLI	26	KANHANGAD
12	GADAG	27	COONDAPOOR
13	UDIPI	28	PAYYANUR
14	UPPINANGADI	29	CANNANORE
15	KASARGODE	30	MANGALORE

A branch at BOMBAY will be opend in April next.

We stand for all that is BEST in
MODERN BANKING SERVICE
OPEN
AN ACCOUNT TO-DAY
IN THIS
Pioneer & Highly Progressive
BANK OF KARNATAKA
AND BE
A SATISFIED CUSTOMER.

ALL KINDS OF BANKING BUSINESS
TRANSACTED ON EASY TERMS.

Total Working Funds exceed Rs. 35 Lakhs

Apply for Rules of Business

"MUKUNDA NIVAS" UDIPI 22—12—1936

P. A. Pai Brothers.
Managing Agents

ದಿ ಕುಂದಾಪುರ ಬೇಂಕ್ ಲಿಮಿಟೆಡ್ ಕುಂದಾಪುರ
ಬ್ರಾಂಚ್—ಬ್ರಹ್ಮಾವರ.

ಚಾಲ್ತಿ ಮತ್ತು ಸೇವಿಂಗ್ಸ್ ಬೇಂಕ್ ಠೇವಣಾತಿಗಳು ಒಳ್ಳೇ ದರದ ಬಡ್ಡಿಯಲ್ಲಿಯೂ ಖಾಯಂ ಠೇವಣಾತಿಗಳು 3 ತಿಂಗಳಿಗೊಮ್ಮೆ ಸಾಲಿಯಾನ್ ಶೇಕಡಾ ರೂಪಾಯಿ 4½, 6 ತಿಂಗಳಿಗೆ ಸಾಲಿಯಾನ್ ಶೇಕಡಾ ರೂಪಾಯಿ 5%, 12 ತಿಂಗಳಿಗೆ ಸಾಲಿಯಾನ್ ಶೇಕಡಾ ರೂಪಾಯಿ 6%, 24 ತಿಂಗಳಿಗೆ ಸಾಲಿಯಾನ್ ಶೇಕಡಾ 6½% ದರದ ಬಡ್ಡಿಯಲ್ಲಿ ಅಂಗೀಕರಿಸಲ್ಪಡುವುವು.

ಒಂದು ವರುಷದ ಯಾ ಹೆಚ್ಚಿಗೆ ಅವಧಿಯ ಖಾಯಂ ಠೇವಣಾತಿಗಳಿಗೆ ಮೇಲೆ ಕಾಣಿಸಿದ ದರದಲ್ಲಿ 6 ತಿಂಗಳಿಗೊಮ್ಮೆ ಬಡ್ಡಿ ಕೊಡಲಾಗುವುದು. ಬೇರೆ ಎಲ್ಲಾ ತರದ ಬೇಂಕ್ ವ್ಯವಹಾರಗಳು ನಡಿಸಲ್ಪಡುವುವು. ಕರೆಂಟ್, ಸೇವಿಂಗ್ಸ್ ಬೇಂಕ್ ಮತ್ತು ಕ್ಯುಮುಲೇಟಿವ್ ಠೇವಣಾತಿಗಳು ಅಂಗೀಕರಿಸಲ್ಪಡುತ್ತವೆ.

ವಿಶೇಷ ಸೂಚನೆ:—ಬಡವರಿಗೆ ಸಹಾಯವಾಗುವಂತೆ ಕಡಿಮೆ ಎಂದರೆ ರೂಪಾಯಿ 1॥ ಸಹಾ ಸಾಲಕೊಡಲಾಗುತ್ತೆ. ಫಾರ್ಮುಗಳು ದೊರೆಯುತ್ತವೆ. ಹೆಚ್ಚಿನ ಮಾಹಿತಿ ಬಗ್ಗೆ ಬರಕೊಳ್ಳಿರಿ.

ನವಯುಗ

ಉಜ್ವಲ ರಾಷ್ಟ್ರೀಯ ವಾರಪತ್ರಿಕೆ—

ಉದ್ಬೋಧಕ ಲೇಖನಗಳಿವೆ, ದೇಶ-ವಿದೇಶಗಳ ತಾಜಾ ವರ್ತಮಾನಗಳಿವೆ, ಮನೋಹ್ಲಾದಕ ಕಥೆ, ಕವನ, ನಾಟಕಗಳಿವೆ, ಧುರೀಣರ ಫೋಟೋಗಳಿವೆ.

ಪ್ರತಿ ಗುರುವಾರ ತಪ್ಪದೆ ಪ್ರಕಟವಾಗುವುದು.

ವಾ. ಚ. ಅಂಚೆವೆಚ್ಚ ಸೇರಿ ಕೇವಲ ೩—೪—೦.

ಇಂದೇ ಚಂದಾದಾರರಾಗಿರಿ!

ಅಖಿಲ ಕರ್ನಾಟಕದಲ್ಲಿಯೂ ಹೊರ ಪ್ರದೇಶದಲ್ಲಿಯೂ ವಿಶಾಲವಾಗಿ ಪ್ರಚಾರದಲ್ಲಿರುವ "ನವಯುಗ"ವು ಜಾಹೀರಾತುಗಳಿಗೆ ವಾಹನವಾಗಿದೆ.

ಮೆನೇಜರ್— ನವಯುಗ, ಉಡುಪಿ.

ವಿಜಯನಗರ ಸ್ಮಾರಕೋತ್ಸವ ಮಂಡಲದ ಪರವಾಗಿ ಹೊರಡಲಿರುವ

ಜಯಕರ್ನಾಟಕದ

ವಿಜಯನಗರ ವಿಶೇಷ ಸಂಚಿಕೆ

ವಿಶೇಷ ಸಂಪಾದಕರು: ಪ್ರೊ ಎಸ್. ಎಸ್. ಮಾಳವಾಡ, ಎಂ.ಎ

ಅಖಿಲ ಭಾರತದ ಪ್ರಸಿದ್ಧ ವಿದ್ವಾಂಸರ ಲೇಖನವೈಭವ!

ವಿಜಯನಗರಕ್ಕೆ ಸಂಬಂಧಿಸಿದ ಚಿತ್ರಮಾಲೆಗಳ ಐಶ್ವರ್ಯ!!

ಹೊಳಪಿನ ಹಾಳೆ ═══ ಅಚ್ಚಿನ ಅಚ್ಚುಕಟ್ಟು

ಬೆಲೆ: ಎಂಟಾಣೆ ಮಾತ್ರ

ಜಯಕರ್ನಾಟಕವು ಜನವರಿಯಿಂದ—ವಿಶೇಷ ಸಂಚಿಕೆಯಿಂದ ಮೊದಲ್ಗೊಂಡು ದೊಡ್ಡ ಆಕಾರದಲ್ಲಿ (ಡೆಮಿ ¼ ದಲ್ಲಿ) ಹೊರಡುವುದು! ಅಲ್ಲದೆ ಚಂದಾದರವನ್ನು ಇಳಿಸಿದೆ—ರೂ, ೪—೮—೦ ಮಾತ್ರ!

ಚಂದಾದಾರರಾಗಬೇಕೆನ್ನುವವರಿಗೂ ಜಾಹಿರಾತುದಾರರಿಗೂ ಸುಸಮಯ

ಜಯಕರ್ನಾಟಕ ಕಾರ್ಯಾಲಯ, ಧಾರವಾಡ.

THE

MOOLKY BANK, LTD.,

MOOLKY.

ದಿ ಮೂಲ್ಕಿ ಬೇಂಕ್, ಲಿಮಿಟೆಡ್,

ಮೂಲ್ಕಿ.

ಎಲ್ಲಾ ತರದ ಬ್ಯಾಂಕ್ ವ್ಯವಹಾರಗಳು ನಡಿಸಲ್ಪಡುವವು. "ಮುಖ್ಯವಾಗಿ ಭಂಗಾರ ವ ಸರಕು ಈಡಿನ ಮೇಲೆ ಸಾಲವನ್ನು ಕೊಡುವುದು".

ಕಾಯಂ ಠೇವಣಾತಿಗಳು:

ಒಳ್ಳೇ ದರದ ಬಡ್ಡಿಯಲ್ಲಿಯೂ, ಮಾಸಿಕ, ಸೇವಿಂಗ್ಸುಬೇಂಕ್ ಮತ್ತು ಠೇವಣಾತಿಗಳು ಯೋಗ್ಯ ತರದ ಬಡ್ಡಿಯಲ್ಲಿಯೂ ಅಂಗೀಕರಿಸಲ್ಪಡುವವು.

ಹೆಚ್ಚಿನ ಮಾಹಿತಿಗೆ ಕೆಳಗಿನವರಿಗೆ ಬರೆದುಕೊಳ್ಳಿರಿ.

M. R. Punja, *President & Manager,*

ಯಂ. ಆರ್. ಪೂಂಜ, ಪ್ರೆಸಿಡೆಂಟ್ ಮತ್ತು ಮೆನೇಜರ್.

ತುಳುನಾಡ್ ವೈದ್ಯಶಾಲೆ, ಉದ್ಯಾವರ, ದ. ಕ.

ಕೋಲೆರಾ ಪಿಲ್ಸ್

ಕೋಲೆರಾ ರೋಗಕ್ಕೆ ರಾಮಬಾಣ ಔಷಧ.

೧೦೦ ಮಾತ್ರೆಗಳಿಗೆ ರೂ ೩—೮—೦

ಭೈರವ ಮಾತ್ರೆಗಳು

ಬಾಣಂತಿ ರೋಗಸಂಬಂಧವಾದ ಸಕಲ ರೋಗಗಳಿಗೂ ದಿವ್ಯೌಷಧ.

೧೦೦ ಮಾತ್ರೆಗಳಿಗೆ ರೂ. ೨—೮—೦

ಎಲ್ಲಾ ತರದ ರೋಗಗಳಿಗೂ ಅನುಭವಸಿದ್ಧವಾದ ದಿವ್ಯೌಷಧಗಳು ದೊರೆಯುತ್ತವೆ.

ಯು. ಪಿ. ಮೇಸ್ತ್ರ, ಗೋಲ್ಡ್ ಮೆಡಲ್ಡ್ ಫಿಜಿಸಿಯನ್.

THE

PANGAL NAYAK BANK

LIMITED.

ESTABLISHED 1920.

***Head Office*: UDIPI.**

Branches: MANGALORE and KATAPADI.

Fixed loans and Overdraft advances are granted on the pledge of gold articles, on the mortgage of immovable properties and on the personal security of approved constituents on favourable terms.

Genuine trade bills, cheques, drafts etc., are discounted at a nominal charge.

Current, Savings Bank and Cumulative deposits are accepted at moderate rates of interest.

Fixed Deposits are received and interest allowed at 4% on 1 year and at 4½% on 2 years deposits.

Every other description of up-to-date Banking business is also undertaken.

A few shares are also available to the public.

ಇದೀಗ ಬಂದಿದೆ— ಹೊಸ ಪುಸ್ತಕ!

ಟಾಲಸ್ಟಾಯಿಯವರ ಕತೆಗಳು

ಶ್ರೀ. ಎಲ್. ಗುಂಡಪ್ಪ, ಎಂ. ಎ.ಯವರಿಂದ ಅನುವಾದಿಸಲ್ಪಟ್ಟ ಟಾಲಸ್ಟಾಯಿಯವರ ಕಥೆಗಳೆಲ್ಲಾ ಕನ್ನಡದಲ್ಲಿ ಒಟ್ಟಾಗಿ ಅಚ್ಚಾಗಿ ಬಂದಿವೆ. ಈ ಕಥೆಗಳಲ್ಲಿ ಜೀವನಕ್ಕೆ ಸಂಬಂಧಪಟ್ಟ ಎಲ್ಲಾ ಪ್ರಶ್ನೆಗಳ ಚರ್ಚೆಯೂ ಇದೆ. ಆದುದರಿಂದ ಸ್ತ್ರೀಪುರುಷರೆಲ್ಲರೂ ಅವಶ್ಯ ಓದಬೇಕು.

೪೦೦ ಪುಟಗಳು — ಒಂದೂವರೆ ರೂಪಾಯಿ ಬೆಲೆ.

ಪ್ರತಿಗಳು ಸಿಗುವ ಸ್ಥಳ—

ಕಿರಿಯರ ಪ್ರಪಂಚ, ಉಡುಪಿ.

ಮಿರಜದಲ್ಲಿಯ ಸುಪ್ರಸಿದ್ಧ ವೈದ್ಯರಾದ ಎಮ್. ಕೆ. ರಜಪೂತ ಇವರ ಸ್ವದೇಶಿ ಔಷಧಗಳು.

ಗುಣ ಬಾರದಿದ್ದರೆ — ಸ್ತ್ರೀಧರ್ಮ ಸಂಜೀವಿನೀ ಚೂರ್ಣ (ರಿಜಿಸ್ಟರ್ಡ) — **ಹಣ ಪರತ**

ಈ ಚೂರ್ಣವು ಕೆಂಪು ಬಿಳಿ ಶರಗಿಗೆ ಶತ್ರುವಾಗಿರುವುದು. ಅನಿಯಮಿತತನದಿಂದ ಮುಟ್ಟಾಗುವಿಕೆ, ಕ್ಲೇಶ ವೈಯಲ್ಲಿ ನೋವು, ಉಷ್ಣತಾ ಕ್ಷೀಣತಾ ಗರ್ಭಾಶಯದಲ್ಲಿರುವ ದೋಷ ಗರ್ಭಧಾರಣವಾಗದಿರೋಣ, ಅಕಾಲದಲ್ಲಿ ಗರ್ಭಪತನವಾಗೋಣ ಈ ಮೊದಲಾದ ರೋಗಗಳು ನಿಶ್ಚಯವಾಗಿ ನೆಟ್ಟಗಾಗಿ ಗರ್ಭಕೋಶವು ಸ್ವಚ್ಛವಾಗುವದು. ಮಕ್ಕಳಾಗುವದಿಲ್ಲೆಂದು ಎರಡನೇ ಲಗ್ನಮಾಡಿಕೊಳ್ಳುವ ಮೊದಲು ಗೃಹದೇವತೆಯಾದ ಮೊದಲನೇ ಪತ್ನಿಗೆ ಈ ಚೂರ್ಣ ಅವಶ್ಯ ಕೊಡಿರಿ. ಮುಖ್ಯ ಸರ್ಟಿಫಿಕೇಟ ಮಾ. ರಾ. ಎ. ಎಮ್. ಇನ್ಸ್‌ಪೆಕ್ಟರ ಬೆಳಗಾಂವ:—ಈ ಚೂರ್ಣದಿಂದ ನನ್ನ ಕುಟುಂಬದ ಹೊಟ್ಟೆಯೊಳಗಿನ ರಕ್ತ ಗುಲ್ಮದ ಗಂಟು ನಾಮಶೇಷವಾಯಿತು. ಮತ್ತು ಎಲ್ಲ ರೋಗಗಳು ನಿಶ್ಶೇಷವಾದವು. ನನ್ನ ಮಿತ್ರನ ಹೆಂಡತಿಯ ರಕ್ತ ಮತ್ತು ಶರಗು ಇಲ್ಲದಂತಾದವು. ೨೧ ದಿವಸದ ಡಬ್ಬಿಯ ಕಿಮ್ಮತು ರೂ. ೩ ಟ.ಖ. ಆಣೆ, ೮ ಡಬ್ಬಿಗೆ ೪ರೂ.]

ಸಂತತಿ ಪ್ರತಿಬಂಧಕ ಚೂರ್ಣ. (ರಿಜಿಸ್ಟರ್ಡ) [ಎ. ಪಿ. ಖರ್ಚು ಆಣೆ ೮,

ಬಹಳಸಾರೆ ಹಡಿಯುವುದರಿಂದ ಅತಿಶಯ ಅಶಕ್ತಿಯಾಗುತ್ತದೆ ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುರುವಾಗುವದು ಶರೀರಕ್ಕೇನೂ ಅಪಾಯವಾಗದೆ ಸಂಸಾರ ಸುಖವು ಪೂರ್ಣವಾಗಿದೆ. ಕೂಡಲೇ ಗರ್ಭಧಾರಣ ಬಂದಾಗುವುದು. ತದನಂತರ ಏನು ಮಾಡಿದರೂ ಸುರುವಾಗುವದಿಲ್ಲ. ಮೊದಲೇ ಪೂರಾ ವಿಚಾರಮಾಡಿ ಔಷಧ ಬೇಡಿರಿ. ಮುಖ್ಯಸರ್ಟಿಫಿಕೇಟ ಡಾಕ್ಟರ ಬಿ. ಎ. ವೈದ್ಯ ಎಲ್. ಸಿ. ಪಿ. ಎಸ್. ಮು। ಕೇಳವಾ ಮಾಹಿಮಾ ಜಿ. ಠಾಣೆ. ಈ ಚೂರ್ಣದಿಂದ ಯಾವ ತರದ ಅಪಾಯವಾಗದೆ ಗರ್ಭಧಾರಣವಾಗುವದಿಲ್ಲ. ಪೂರ್ಣ ಗುಣಕಾರಿ

ವಿಳಾಸ:—ಸಂಜೀವಿನೀ ಔಷಧಾಲಯ, ಮು. ಪೋ. ಮಿರಜ, S. M. C

ಸಮಾಚಾರ ಸಂಗ್ರಹ

ಮಧ್ಯಪ್ರಾಂತದ ಮಾಜಿ ಗವರ್ನರರ ವಿಜಯದ ಗುಟ್ಟು—ಓಟಿನ ಪೆಟ್ಟಿಗೆಗಳನ್ನೊಡೆದುದು.

ಓಟಿನ ಪೆಟ್ಟಿಗೆಗಳನ್ನೊಡೆದುದು

ಮಧ್ಯಪ್ರಾಂತದ ಮಾಜಿ ಗವರ್ನರರೂ ಹೋಮ್ ಮೆಂಬರರೂ ಆದ ಸರ್ ರಾಘವೇಂದ್ರ ರಾಯರು ಈ ಸಲದ ಚುನಾವಣೆಯಲ್ಲಿ ವಿಜಯಹೊಂದಿರುವುದು ಅಲ್ಲಿಯ ಜನರನ್ನೆಲ್ಲಾ ವಿಸ್ಮಯಗೊಳಿಸಿರುವುದು. ಚುನಾವಣೆಯಲ್ಲಿ ಇವರ ಪ್ರತಿಸ್ಪರ್ಧಿಗಳಾದ ಪಂಡಿತ ಕುಂಜಬಿಹಾರಿಲಾಲ್ ಅಗ್ನಿಹೋತ್ರಿಯವರಿಗೆ ನೇಕಡಾ 70ರಷ್ಟರ ಓಟುಗಳು ದೊರೆತು ಅವರ ವಿಜಯವು ನಿಶ್ಚಯವೆಂದು ಪತ್ರಿಕೆಗಳಲ್ಲೆಲ್ಲಾ ಪ್ರಕಟವಾಗಿತ್ತು. ಆದರೆ ಓಟು ಲೆಕ್ಕಮಾಡಿದಾಗ ಶ್ರೀ ಅಗ್ನಿಹೋತ್ರಿಯವರು ಪರಾಜಯ ಹೊಂದಿರುವುದನ್ನು ಕಂಡು ಮಧ್ಯಪ್ರಾಂತದ ಕಾಂಗ್ರೆಸ್ ಪಕ್ಷೀಯರೆಲ್ಲರೂ ಸಕ್ರೋಧ ವಿಸ್ಮಯಗೊಂಡಿರುವರು. ಈ ಚುನಾವಣೆಯು ಮಧ್ಯಪ್ರಾಂತದ ಬಿಲಾಸಪುರದಲ್ಲಿ ನಡೆದಿದ್ದು ಇಡೀ ಪ್ರಾಂತದ ದೃಷ್ಟಿಯು ಆ ಕಡೆಗೆ ಹರಿದಿದ್ದಿತು. ಆದರೆ ಫಲಿತಾಂಶವನ್ನು ತಿಳಿದು ಬಿಲಾಸಪುರದ ಜನರೆಲ್ಲಾ ಬಹಳ ನಿರಾಶೆಗೊಂಡಿರುವರು. ಜನರು ತಂಡತಂಡವಾಗಿ ಶ್ರೀ ಅಗ್ನಿಹೋತ್ರಿಗಳ ಮನೆಗೆ ಹೋಗಿ, ತಾವೆಲ್ಲಾ ಕಾಂಗ್ರೆಸಿಗೇನೇ ಓಟುಕೊಟ್ಟಿರುವಾಗ ಕಾಂಗ್ರೆಸಿಗೆ ಅಪಜಯ ಆಗಲು ಕಾರಣವೇನೆಂದು ಕ್ರೋಧಗೊಂಡು ಕೇಳುತ್ತಿರುವರು. ಬಿಲಾಸಪುರದ ಮತ್ತು ಮಧ್ಯಪ್ರಾಂತದ ಮುಖಂಡರುಗಳೆಲ್ಲಾ ಈ ಕುರಿತು ವಿಚಾರಣೆ ನಡೆಸುತ್ತಿರುವರು. ಶ್ರೀ ರಾಘವೇಂದ್ರರಾಯರ ಕಡೆಯವರು ರಾಯರ ವಿಜಯದಿಂದುಬ್ಬಿ ಬಿಲಾಸಪುರದಲ್ಲೊಂದು ಮೆರವಣಿಗೆ ನಡೆಸಿದಾಗ ಅದರಲ್ಲಿ ಜನರಾರೂ ಭಾಗಿಯಾಗದಿದ್ದುದರಿಂದ ಅದನ್ನವರು ಮಧ್ಯದಲ್ಲೇ ನಿಲ್ಲಿಸಬೇಕಾಯಿತು.

ಶ್ರೀ ಅಗ್ನಿಹೋತ್ರಿಯವರ ಓಟು ತೆಗೆದುದು

ಕಾಂಗ್ರೆಸ್ ಉಮೇದ್ವಾರಿಗಳಾದ ಶ್ರೀ ಅಗ್ನಿಹೋತ್ರಿಯವರಿಗೆ ಯಾವ ಪೋಲಿಂಗ್ ಸ್ಟೇಶನುಗಳಲ್ಲಿ ಶ್ರೀ ರಾಘವೇಂದ್ರ ರಾಯರಿಗಿಂತ ಅತಿ ಹೆಚ್ಚಿನ ಓಟುಗಳು ದೊರೆತಿವೆಯೋ,ಅಲ್ಲಿಯ ಓಟಿನ ಪೆಟ್ಟಿಗೆಗಳಲ್ಲಿ ತೂತು ಕೊರೆದು ಶ್ರೀ ಅಗ್ನಿಹೋತ್ರಿಗಳ ಪೆಟ್ಟಿಗೆಗಳ ಓಟುಗಳನ್ನು ತೆಗೆದು ಶ್ರೀ ರಾಯರ ಪೆಟ್ಟಿಗೆಗೆ ಹಾಕಿ ಶ್ರೀ ರಾಯರು ಜಯಶೀಲರಾಗುವಂತೆ ಮಾಡುವ ನಿಗೂಢ ಒಳಸಂಚುನಡೆದಿದೆ ಎಂದು ತಿಳಿದುಬಂದಿದೆ. ಈ ಕುರಿತು ನಾನಾ ರೀತಿಯ ಸುದ್ದಿಗಳು ಚುನಾವಣೆಯ ಮುಂಚಿನದಿನವೇ ಹಬ್ಬಿದ್ದು ಬಿಲಾಸಪುರದ ಕಾಂಗ್ರೆಸ್ ಮುಖಂಡರು ಕೆಲವರು ಚುನಾವಣೆಯ ಕಮಿಶನರರನ್ನು ಕಂಡು ತಮ್ಮ ಸಂದೇಹಗಳನ್ನು ತಿಳಿಸಿದ್ದರು. ಆಗ ಕಮಿಶನರರು ಹಾಗಾಗಲಾರದೆಂದು ಆಶ್ವಾಸನೆಯಿತ್ತಿದ್ದರು. ಆ ಮೇಲೆ ಫೆಬ್ರುವರಿ ತಾ. 10 ರಲ್ಲಿ ಸಾರ್ವಜನಿಕ ಸಭೆನಡೆಸಿ ಕಾಂಗ್ರೆಸ್ ಪಕ್ಷೀಯರು ತಮ್ಮ ಭೀತಿಯನ್ನು ವ್ಯಕ್ತಪಡಿಸಿದ್ದರು. ಈಗ ಶ್ರೀ ರಾಯರ ಚುನಾವಣೆಯನ್ನು ರದ್ದುಪಡಿಸುವಂತೆ ಶ್ರೀ ಅಗ್ನಿಹೋತ್ರಿಯವರು ವ್ಯವಹರಣೆ ನಡೆಸುವ ಆಲೋಚನೆಮಾಡಿದ್ದಾರೆ. ಮಧ್ಯಪ್ರಾಂತದ ಮುಖಂಡರೆಲ್ಲಾ ಸಹಿಹಾಕಿ ಸ್ಟೇಟ್ಮೆಂಟೊಂದನ್ನು ಹೊರಡಿಸಿ, ಸರಕಾರವು ಈಕುರಿತು ವಿಚಾರಿಸಲು ಅಧಿಕಾರಿ ಮತ್ತು ಅನಧಿಕಾರಿಗಳ ಕಮಿಟಿಯೊಂದನ್ನೇರ್ಪಡಿಸಬೇಕೆಂದು ಕೇಳಿಕೊಂಡಿರುವರು.

ಓಟಿನ ಪೆಟ್ಟಿಗೆಗಳಲ್ಲಿ ತೂತು

ಹೆಚ್ಚಿನ ಪೋಲಿಂಗ್ ಬೂತುಗಳಲ್ಲಿ ಪೋಲಿಂಗ್ ಆಫೀಸರರು ಓಟುಗಳ ಪೆಟ್ಟಿಗೆಗಳಿಗೆ ಕಾಂಗ್ರೆಸ್ ಪಕ್ಷದ ಏಜಂಟರುಗಳ ಮುದ್ರೆ ಹಾಕಲು ನಿರಾಕರಿಸಿರುವರೆಂದು ತಿಳಿದುಬಂದಿದೆ. ಸಕಾರಿ ಎಂಬ ಬೂತಿನಲ್ಲಿ ಕಾಂಗ್ರೆಸ್ ಉಮೇದ್ವಾರರಿಗೆ ಕಡಿಮೆಯೆಂದರೆ ನೇಕಡಾ 70ರಷ್ಟು ಓಟು ದೊರೆಯುವದೆಂದು ಎಣಿಕೆಮಾಡಲಾಗಿತ್ತು. ಆದರೆ ಲೆಕ್ಕ ಮಾಡುವಾಗ ಶ್ರೀ ಅಗ್ನಿಹೋತ್ರಿಯವರಿಗೆ 132 ಮತ್ತು ಶ್ರೀ ರಾಘವೇಂದ್ರ ರಾಯರಿಗೆ 1261 ಮತಗಳು ದೊರೆತುದನ್ನು ಕಂಡು ಕಾಂಗ್ರೆಸ್ ಪಕ್ಷೀಯರೆಲ್ಲಾ ವಿಸ್ಮಯಗೊಂಡರು. ಆ ಮೇಲೆ ಜಾಗ್ರತೆಯಿಂದ ಓಟಿನ ಪೆಟ್ಟಿಗೆಗಳನ್ನು ಪರೀಕ್ಷಿಸ ಹತ್ತಿದರು. ಒಂದು ಓಟಿನ ಪೆಟ್ಟಿಗೆಯ ಬಿಜಾಗ್ರಿಗಳು ಬಹಳ ಸಡಿಲಿದ್ದು ಮುದ್ರೆ ತೆಗೆದಕೂಡಲೆ ಕೆಳಗೆ ಬಿದ್ದುಬಿಟ್ಟವು. ಈ ಪೆಟ್ಟಿಗೆಯ ಅಡಿಯಲ್ಲಿ ಎರಡು ಹಲಿಗೆಕೂಡುವಲ್ಲಿ ದೊಡ್ಡದೊಂದು ಬಿರುಕಿದ್ದಿತು. ಪೆಟ್ಟಿಗೆಯ ಸಂದುಗಳಿಗೆ ಅಂಟಿಸಲ್ಪಟ್ಟ ಕಾಗದಗಳು ಹರಿದುಹೋಗಿದ್ದುವು. ದಿವೂರಿ ಸೆಂಟರಿನ ಓಟಿನ ಪೆಟ್ಟಿಗೆಯ ಅಡಿಯಲ್ಲಿಯೂ ಒಂದು ತೂತಿದ್ದಿತು. ಇದರಿಂದ ಓಟಿನ ಪೆಟ್ಟಿಗೆಗಳನ್ನು ಒಡೆಯಲಾಗಿದೆಯೆಂಬುದು ಸಿದ್ಧವಾಗುತ್ತದೆ. ಅತ್ಯಂತ ಆಶ್ಚರ್ಯಕರ ಸಂಗತಿಯೆಂದರೆ, ಎಲ್ಲಿ ಕಾಂಗ್ರೆಸಿನ ಪ್ರಬಲ ಬಹುಪಕ್ಷವು ನಿಶ್ಚಯವಾಗಿತ್ತೋ ಅಲ್ಲಿಯ ಕಾಂಗ್ರೆಸ್ ಉಮೇದ್ವಾರಿಯ ಓಟಿನಪೆಟ್ಟಿಗೆಗಳೇ ಖಾಲಿಯಾಗಿ ಶ್ರೀ ರಾಯರ ಪೆಟ್ಟಿಗೆಗಳಲ್ಲಿ 1000ಕ್ಕಿಂತಲೂ ಮಿಕ್ಕಿದ ಓಟುಗಳಿದ್ದುವು. ಸಾಧಾರಣವಾಗಿ ಸಮಸಮ ಸಿಗಬಹುದೆಂಬ ನಿರೀಕ್ಷೆಯಿದ್ದಲ್ಲಿ ಅಗ್ನಿಹೋತ್ರಿಗಳಿಗೆ ಶ್ರೀ ರಾಯರಿಗಿಂತ ಸ್ವಲ್ಪ ಹೆಚ್ಚು ಸಿಕ್ಕಿರುತ್ತದೆ. ಇದರಿಂದ ಈ ಪೆಟ್ಟಿಗೆಗಳನ್ನು ಮುಟ್ಟಲಿಲ್ಲೆಂದು ಸಿದ್ಧವಾಗುತ್ತದೆ. ಈ ಸಂಗತಿಗಳನ್ನೆಲ್ಲಾ ವಿವರಿಸಿ ರಿಟರ್ನಿಂಗ್ ಆಫೀಸರರಿಗೆ ಅರ್ಜಿ ಮಾಡಿಕೊಳ್ಳಲಾಗಿದೆ.

ಬೊಬ್ಬಿಲಿಯ ಚುನಾವಣೆಯ ಗಲಾಟೆ

ಕಾಂಗ್ರೆಸ್ ಪ್ರೆಸಿಡೆಂಟರಾದ ಪಂಡಿತ ಜವಾಹರಲಾಲರಿಗೆ ಮಾಡಿದ ಅವಮಾನದಿಂದ ಬೊಬ್ಬಿಲಿ ಸಂಸ್ಥಾನವು ದೊಡ್ಡ ಹೆಸರು ಪಡೆದಿದ್ದಿತು. ಅನಂತರ ಚುನಾವಣೆಯ ಪ್ರಚಾರ ಕಾರ್ಯಕ್ಕಾಗಿ ಶ್ರೀಮತಿ ಸರೋಜಿನಿಯವರು ಅಲ್ಲಿಗೆ ಹೋದಾಗಲೂ ಹಲವು ರೀತಿಯ ತಡೆಗಳು ಹಾಕಲ್ಪಟ್ಟವು. ಬೊಬ್ಬಿಲಿಯ ಸಂಸ್ಥಾನಾಧಿಕಾರಿಗಳಿಗೆ ನಾಗರೀಕತೆಯ ಗಂಧಗಾಳಿ ಸೋಕಿರುವಂತೆ ತೋರುವುದಿಲ್ಲ. ಅನಂತರ ಚುನಾವಣೆಯಲ್ಲಿಯೂ ಬೊಬ್ಬಿಲಿಯಲ್ಲೆಲ್ಲಾ ಬಲಾತ್ಕಾರ ಪುಂಡಾಟಿಕೆಗಳೇ ನಡೆಸಲ್ಪಟ್ಟಿದ್ದುವು. ಬೊಬ್ಬಿಲಿರಾಜರ ಪ್ರತಿಸ್ಪರ್ಧಿಗಳಾದ ಶ್ರೀ ವಿ. ವಿ. ಗಿರಿಯವರು ಪೋಲೀಸ್ ಅಂಗರಕ್ಷಕರೊಡನೆ ತಿರುಗಾಡಬೇಕಾಯಿತು. ಒಂದೆಡೆ ಅವರ ಡ್ರೈವರರಿಗೂ ಕಂಡಕ್ಟರರಿಗೂ ಸರಿ ಹೊಡೆಯಲಾಯಿತು. ಚುನಾವಣೆಯ ದಿನ ಬೊಬ್ಬಿಲಿಗೆ ಕಾಂಗ್ರೆಸ್ ಸ್ವಯಂಸೇವಕರು ಕಾಲಿಡದಂತೆ ಬಲಾತ್ಕಾರ ನಡೆಸಲ್ಪಟ್ಟಿತ್ತು. ಹೊರಗಿಂದ ಬಂದ 50 ಮಂದಿ ಕಾಂಗ್ರೆಸ್ ಸ್ವಯಂಸೇವಕರನ್ನು ಪುಂಡರು ಮುತ್ತಿಗೆಹಾಕಿ ಹೊಡೆದುಹಾಕುವ ಬೆದರಿಕೆ ಬೀರಿ ಒಂದಂತೆ ಒಂದೆ ಕಳುಹಿಸಿದ್ದರು. ಶ್ರೀ ಗಿರಿಯವರು ಬೊಬ್ಬಿಲಿಯಲ್ಲಿ ಯಾವ ಸಭೆ, ಕೂಟಗಳನ್ನೂ ನಡೆಸದಂತೆ ನಿರ್ಬಂಧ ಹಾಕಲಾಗಿದ್ದಿತು. ಪೋಲೀಸರು ಬೊಬ್ಬಿಲಿ ತಾಲೂಕಿನಲ್ಲಿ ಶ್ರೀ ಗಿರಿಯವರಿಗಾಗಲಿ, ಕಾಂಗ್ರೆಸ್ ಸ್ವಯಂಸೇವಕರಿಗಾಗಲಿ ಯಾವ ತರದ ರಕ್ಷಣೆಯನ್ನೂ ಕೊಡದೆ ಉದಾಸೀನರಾಗಿದ್ದರು. ಇಂತಹ ಜಬರ್ದಸ್ತನ್ನು ಬೊಬ್ಬಿಲಿ ತಾಲೂಕಿನಲ್ಲಿ ಸಂಸ್ಥಾನಾಧಿಕಾರಿಗಳು ನಡೆಸಿದ್ದರು. ಎಲ್ಲೆಲ್ಲಿಯೂ ಕೆಂಪು ಬೊಪ್ಪಿಗಳು, ಹಾದಿ ಬೊಪ್ಪಿ ಕಂಡರ ವೆಟ್ಟು ಎಂಬಂತಿದ್ದಿತು ಚುನಾವಣೆಯ ದಿನ ಬೊಬ್ಬಿಲಿಯ ಪರಿಸ್ಥಿತಿ. ಬೊಬ್ಬಿಲಿ ತಾಲೂಕಿನ ಪೋಲಿಂಗ್ ಆಫೀಸರರು ಕೂಡಾ ಬೊಬ್ಬಿಲಿರಾಜರ ಪಕ್ಷಪಾತಿಗಳಾಗಿದ್ದಂತೆ ತೋರುತ್ತಿತ್ತು. ಅವರು ಕಾಂಗ್ರೆಸ್ ಪಕ್ಷೀಯರಿಗೆ ತಮ್ಮಿಂದ ಸಾಧ್ಯವಿದ್ದಷ್ಟು ಆತಂಕವನ್ನೊಡ್ಡಿದ್ದರು. ಒಂದೆಡೆ ಒಬ್ಬ ಓಟರನು ಹಳದಿಪೆಟ್ಟಿಗೆಗೆ ಓಟುಹಾಕುವಾಗ ವಾಚರನು ಬಲಾತ್ಕಾರದಿಂದ ಅವನ ಓಟನ್ನು ಕೆಂಪು ಪೆಟ್ಟಿಗೆಗೆ ಹಾಕಿಸಿದನು. ಸದ್ರಿ ಓಟರನು ಈ ವಿಷಯವನ್ನು ಪೋಲಿಂಗ್ ಆಫೀಸರರಿಗೆ ಅರ್ಜಿ ಮೂಲಕ ತಿಳಿಸಿದರೂ ಅವರದಕ್ಕೆ ಗಮನ ಕೊಡಲಿಲ್ಲ. ಬೊಬ್ಬಿಲಿ ಸಂಸ್ಥಾನಾಧಿಕಾರಿಗಳು ದೊಡ್ಡ ದೊಡ್ಡ ದೊಣ್ಣೆ ಹಿಡಕೊಂಡು ಕಾಂಗ್ರೆಸ್ ಕಡೆಯ ಓಟರರನ್ನು ಮುತ್ತಿ ಬೆದರಿಕೆಹಾಕುತ್ತಿದ್ದರು. ಶ್ರೀ ಗಿರಿಯವರನ್ನೇ ಈ ರೀತಿ ಬೆದರಿಸಿದ್ದರು. ಪೋಲೀಸರಿಂದ ಇವರಿಗೆ ಏನು ಮಾಡಲೂ ಸಾಧ್ಯವಾಗಲಿಲ್ಲ. ಒಂದೆಡೆ ಪೋಲಿಂಗ್ ಆಫೀಸರರು ಸಮಯವಾಯಿತೆಂದು ಓಟಿನಪೆಟ್ಟಿಗೆಗಳನ್ನು ಬಂದುಮಾಡಿ ಮುದ್ರೆಹಾಕಿದರು. ಬೊಬ್ಬಿಲಿರಾಜರ ಮತ್ತು ಶ್ರೀ ಗಿರಿಯವರ ಕಡೆಯ ಏಜಂಟರೂ ಮುದ್ರೆಯೊತ್ತಿದರು. ಆ ಮೇಲೆ ಬೊಬ್ಬಿಲಿರಾಜರ ಕಡೆಯ ಕೆಲ ಮಂದಿ ಓಟರರು ಬರಲು, ಪೋಲಿಂಗ್ ಆಫೀಸರರೂ ರಾಜರ ಕಡೆಯ ಏಜಂಟರೂ ಪುನಃ ಪೆಟ್ಟಿಗೆ ತೆರೆದು ಓಟುಗಳನ್ನು ಸ್ವೀಕರಿಸಿದರು. ಆ ಮೇಲೆ ಪೆಟ್ಟಿಗೆ ಬಂದುಮಾಡುವಾಗ ಶ್ರೀ ಗಿರಿಯವರ ಕಡೆಯ ಏಜಂಟರು ಆಕ್ಷೇಪಿಸಿ ತನ್ನ ಮುದ್ರೆಯೊತ್ತಲಿಲ್ಲ. ಬೊಬ್ಬಿಲಿ ತಾಲೂಕು ಬಿಟ್ಟು ಇತರ 3 ತಾಲೂಕುಗಳಲ್ಲಿ ಶ್ರೀ ಗಿರಿಯವರಿಗೆ ಹೆಚ್ಚಿನ ಬಹುಪಕ್ಷದೊರೆತಿರುವುದು. ಆದುದರಿಂದ ಬೊಬ್ಬಿಲಿರಾಜರು ಪರಾಜಯಹೊಂದಿರುವರು. ಅವರಿಗೆ 16375 ಮತ್ತು ಶ್ರೀ ಗಿರಿಯವರಿಗೆ 23041 ಓಟು ದೊರೆತಿರುವುದು.

ಒಂದಾಣೆ ಗುಬ್ಬಿ ಕಳವಿಗೆ 6 ತಿಂಗಳು ಶಿಕ್ಷೆ

ಸಿಂಧ ಪ್ರಾಂತದ ಬಾಗ್ದಾಡಿ ಪೋಲಿಸ್ ಸ್ಟೇಶನಿನ ಪೋಲಿಸ್ ಕಾನ್ಸ್ಟೇಬ್ಲನೊಬ್ಬನು, ಒಂದು ಮಗುವಿನ ಅಂಗಿಯಲ್ಲಿದ್ದ ಒಂದಾಣೆ ಬೆಲೆಯ ಗುಂಡಿಯನ್ನು ಕದ್ದನೆಂದು ಮೆಜಿಸ್ಟ್ರೇಟರು ಅವನಿಗೆ 6 ತಿಂಗಳ ಶಿಕ್ಷೆವಿಧಿಸಿರುವರು. ಕದ್ದ ಸಾಮಾನಿನ ಬೆಲೆಯು ಅತ್ಯಲ್ಪವಾದುದಾದರೂ, ಕಳ್ಳರನ್ನು ಹಿಡಿಯಬೇಕಾಗಿರುವ ಪೋಲೀಸನೇ ಕಳ್ಳತನಮಾಡುವುದು ಬಹು ದೊಡ್ಡ ತಪ್ಪು. ಆದುದರಿಂದ ಆತನಿಗೆ ತಾನು ಅತ್ಯಂತ ಕಠಿಣ ಶಿಕ್ಷೆಕೊಟ್ಟಿರುವೆನೆಂದು ಮೆಜಿಸ್ಟ್ರೇಟರು ಅಭಿಪ್ರಾಯಪಟ್ಟಿರುವರು.

ರಾಸ್ ಡೆಸ್ಟರು ಕೊಲ್ಲಲ್ಪಟ್ಟರು

ಇಟಲಿಯನರಿಗೆ ಕಡೆಯವರೆಗೂ ಶರಣಾಗತವಾಗದೆ ಅವರನ್ನು ವಿರೋಧಿಸಿದ ನೆಗಸರ ಅಳಿಯಂದಿರಾದ ರಾಸ್ ಡೆಸ್ಟಾರವರನ್ನೂ ಅವರ ಕೆಲಮಂದಿ ಅನುಯಾಯಿಗಳನ್ನೂ ಇಟಲಿಯನ ಸೈನಿಕದಳವೊಂದು ಹಿಡಿದು ಗುಂಡುಹೊಡೆದು ಕೊಂದುಹಾಕಿರುವುದೆಂದು ರೋಮ ಪಟ್ಟಣದಿಂದ ಸುದ್ದಿ ಬಂದಿರುವುದು. ಇದರಿಂದ ಇಟಲಿಯನರ ಆಳ್ವಿಕೆಯನ್ನು ವಿರೋಧಿಸಿದ ದೊಡ್ಡದೊಡ್ಡ ಸೇನಾನಿಗಳೆಲ್ಲಾ ಕೊಲ್ಲಲ್ಪಟ್ಟಂತಾಯಿತು. ಅಬಿಸೀನಿಯದ ಹಲವು ಕಡೆ ವೀರಸ್ತ್ರೀಯರು ಇಟಲಿಯನರಿಗೆ ಎದುರುನಿಂತು ಕಂಡಕಡಲ್ಲೆಲ್ಲಾ ಅವರನ್ನು ಕೊಂದುಹಾಕುತ್ತಿರುವರೆಂದು ಸುದ್ದಿಯುಂಟಾಗಿದೆ.

ಕಲ್ಮಳೆಯ ಹಾವಳಿ

ಸಂಯುಕ್ತಪ್ರಾಂತದ ಹಲವು ಭಾಗಗಳಲ್ಲಿ ಕಲ್ಮಳೆಬಿದ್ದು ಹೆಚ್ಚಿನ ಹಾವಳಿಯಾಗಿರುವುದು. 2 ಘಂಟೆಗಳವರೆಗೆ ಎಡೆಬಿಡದೆ ದೊಡ್ಡ ದೊಡ್ಡ ಕಲ್ಲುಗಳು ಮಳೆಯಾಗಿ ಬಿದ್ದು ಗದ್ದೆಗಳ ಮೇಲೆಲ್ಲಾ ಬಿಳಿವಸ್ತ್ರ ಹಾಸಿದಂತೆತೋರುತ್ತಿತ್ತು. ಒಂದು ಲೋರಿಯು ಮುರಿದುಹೋಗಿ ಅದರೊಳಗಿದ್ದ ಒರ್ವ ತರುಣನೂ ತರುಣಿಯೂ ಕೂಡಲೆ ಕೊಲ್ಲಲ್ಪಟ್ಟಿರುವರು. ಹಲವು ಮಂದಿಗೆ ಪೆಟ್ಟಾಗಿರುವುದು. ಬೆಳೆಗಳು ನಾಶವಾಗಿರುವವು. ನೂರಾರು ಜಾನುವಾರುಗಳು ಕೊಲ್ಲಲ್ಪಟ್ಟಿರುವವು.

ಎಸೆಂಬ್ಲಿ ಮೆಂಬರರ ದಸ್ತಗಿರಿ

ಅಜ್ಮೀರದ ಎಸೆಂಬ್ಲಿ ಮೆಂಬರರಾದ ಬಾಗಾಚೆಂದ್ ಸೋನಿಯವರು ಇದೇ ತಾ. 25 ನೇ ಜೆಳಗ್ಗೆ ಕೈದುಮಾಡಲ್ಪಟ್ಟು ರೂ. 1 ಲಕ್ಷದ ಜಾಮೀನಿನ ಮೇಲೆಬಿಡಲ್ಪಟ್ಟಿರುವರು. ಡಿಲ್ಲಿಯ ಸರಕಾರಿ ನೌಕರರೊಬ್ಬರಿಗೆ ರೂ. 10,000 ಲಂಚಕೊಡುವ ಆಸೆತೋರಿಸಿ ಇಂಡಿಯಾ ಸರಕಾರದ ಆಯುವ್ಯಯ ಪಟ್ಟಿಯ ಸಂಗತಿಗಳನ್ನು ಮೊದಲಾಗಿ ತಿಳಿಯುವ ಪ್ರಯತ್ನನಡೆಸಿದ ಸಂಬಂಧವಾಗಿ ಈ ದಸ್ತಗಿರಿಯು ನಡದಿರುವುದೆಂದು ನಂಬಲಾಗಿದೆ. ಬ್ರಿಜಕಿಶೋರ್ ಎಂಬ ವ್ಯಾಪಾರಿಯೊಬ್ಬನು ಕಲ್ಕತ್ತದಲ್ಲಿ ಕೈದುಮಾಡಲ್ಪಟ್ಟಿರುವನು. ಇನ್ನಿಬ್ಬರು ವ್ಯಾಪಾರಿಗಳು ಜಯಪುರದಲ್ಲಿ ದಸ್ತಗಿರಿಯಾಗಿರುವರು.

ಪಾಟಿಯಾಲದ ಮಹಾರಾಜರ ವಿಜಯ

ದೇಶೀಯ ರಾಜರುಗಳ ಕೂಟದ ಅಧ್ಯಕ್ಷಸ್ಥಾನಕ್ಕೆ ಪಾಟಿಯಾಲದ ಮಹಾರಾಜರು

(ಪುಟ ೭)

ಈ ವಾರದ ಕಥೆ

ಪೆಟ್ಟಿಗೆಯ ಬಣ್ಣ

ಬರೆದವ:—'ನಿಟ್ಟು'

ಪುಟ್ಟನು ಶೇಖರರಾಯರ ಒಕ್ಕಲು. ಮನೆಮಠ, ತೋಟ, ಕೋಟೆ, ಹಾಡಿ-ಇವೆಲ್ಲಾ ಅವರ ಆಸ್ತಿಯದು. ಹೆಚ್ಚಿನ ಗದ್ದೆಗಳು ಕಾರ್ತಿ, ಸುಗ್ಗಿಯ ಬೆಳೆಕೊಡುತ್ತಿದ್ದುವು. ಸ್ವಲ್ಪ ಕೊಳಕೆಯೂ ಇತ್ತು. ಸುಗ್ಗಿಯ ಬೆಳೆಗೆ ನೀರು ಹರಿದೇ ಬರುತ್ತಿತ್ತು. ಏತಹಾಕುವ, ಬತ್ತ ಅಳೆಯುವ ಫಜೀತಿ ಇದ್ದಿಲ್ಲ. ಬಡಗು ದಿಕ್ಕಿನ ಒಂದೆಡೆಯಲ್ಲಿ ಒಸರಾಗಿ ಹುಟ್ಟಿ ಹೊನಲಾಗಿ ಹರಿದು ಬರುವ ಜಲಕ್ಕೆ ಅಲ್ಲಲ್ಲಿ ಕಟ್ಟಗಳನ್ನು ಕಟ್ಟಿ ಆ ಮೂಲಕ ಆ ಊರಿನವರ ಹೆಚ್ಚಿನ ಸಾಗುವಳಿ ಆಗುತ್ತಿತ್ತು. ಪುಟ್ಟನ ಹೊಲಗದ್ದೆಗಳಿದ್ದುದು ತೀರಾ ತೆಂಕುಮೂಲೆಯಲ್ಲಿ. ಆತನು ಕಟ್ಟಿದ್ದ ಕಟ್ಟವೇ ಆ ತೊರೆಗೆ ಕೊನೆಯದು. ೧೯೩೩ನೇ ಇಸವಿಯ ದಶಂಬರ ತಿಂಗಳಲ್ಲಿ ಒಂದು ದಿನ ರಾತ್ರಿ ಪುಟ್ಟನು ಹಾರೆಯನ್ನು ಹೆಗಲಲ್ಲಿಟ್ಟುಕೊಂಡು ನೀರು ಅಡ್ಡಹಾಕಿ ಬರುವೆನೆಂದು ಹೊರಟ. ಅವನ ತೆನೆಬಿಟ್ಟಿದ್ದ ಕುಕ್ಕಿಮಾರು ಗದ್ದೆಯು ಒಣಗಿ ಹೋಗಿತ್ತು. ಎಲ್ಲಿಯಾದರೂ ಎರಡು ಹಿಡಿಕಾಳು ದೊರೆಯುತ್ತದಾದರೆ ಕುಕ್ಕಿಮಾರಿನಲ್ಲಿ ಎಂದು ಯಾವಾಗಲೂ ಪುಟ್ಟನು ಹೇಳುವದಿತ್ತು. ತೆನೆಬಿಡುವ ಸಮಯವೇ ಒಣಗಿಸಿ ಬಿಟ್ಟರೆ ಎಲ್ಲಾ ಹಾಳಾದೀತೆಂದು ನೆನಸಿ ಪುಟ್ಟನು ಹಾರೆ ಹಿಡಿದುಕೊಂಡು ಹೊರಟಿದ್ದ. ತನ್ನ ಕಟ್ಟಕ್ಕೆ ಹೋಗಿನೋಡುವಾಗ ಮೇಲಿನಿಂದ ನೀರು ಬರುತ್ತಿರಲಿಲ್ಲವಾದ್ದರಿಂದ ಕಟ್ಟವೇ ಒಣಗಿ ಹೋಗಿತ್ತು. ಪುಟ್ಟನು ಸೂಟಿ ಬೀಸುತ್ತಾ ತೋಡಿನಲ್ಲಿಯೇ ಮುಂದುವರಿದ. ಮೇಲಿನ ಕಟ್ಟದ ಅಂತಣ್ಣನ್ಯಾಕನು ಕಟ್ಟವನ್ನು ಸಂಪೂರ್ಣ ಮುಚ್ಚಿ ಕೆಳಗಡೆ ನೀರೇ ಹೋಗದಂತೆ ಮಾಡಿದ್ದನು. ಅಂತಣ್ಣ ನ್ಯಾಕನ ಗದ್ದೆಗಳಲ್ಲಿ ನೀರು ಹುಣಿಗೆ ಅಣೆದಿರುವಾಗ ಬೇಕೆಂದೇ ನೀರನ್ನೆಲ್ಲಾ ಅಡ್ಡ ಹಾಕಿ ಬಿಟ್ಟಿದ್ದಾನಲ್ಲಾ ನ್ಯಾಕ ಎನ್ನುತ್ತಾ ಪುಟ್ಟ ಕಟ್ಟಕ್ಕಿಳಿದ. ಸೂಟಿಯನ್ನೂ ಹಾರೆಯನ್ನೂ ಕಟ್ಟದ ಮೇಲಿಟ್ಟು ಕಟ್ಟದಡಿಗೆ ಕೈಹಾಕಿ ಒಂದು ಮಣ್ಣಿನ ಹೆಂಟೆಯನ್ನು ಅವುಚಿ ತೆಗೆದ. ನೀರು ಗಳಗಳನೆ ಕೆಳಗೆ ಹರಿಯಲಾರಂಭಿಸಿತು. ಇನ್ನೇನು, ಎರಡು ಘಳಿಗೆಯೊಳಗೆ ಕುಕ್ಕಿಮಾರು ತುಂಬಾ ನೀರಾಗುವುದು ಎಂದು ಪುಟ್ಟನು ಸೂಟಿಯನ್ನು ಬೆಳಗಿಸುತ್ತಾ ಹೊರಡುವದರಲ್ಲಿರುವಾಗ, ಅಂತಣ್ಣ ನ್ಯಾಕನು 'ಯಾರವ ಕಟ್ಟಕ್ಕಿಳಿದವ' ಎಂದು ಬೊಬ್ಬೆ ಹೊಡೆಯುತ್ತಾ ಬರುತ್ತಿದ್ದಾನೆ! ಪುಟ್ಟನು ಅಲ್ಲಿಯೇ ನಿಂತ 'ನ್ಯಾಕರೇ ಕುಕ್ಕಿಮಾರು ಗದ್ದೆ ಬಾಯಿಬಿಟ್ಟಿದೆ. ನಿಮ್ಮ ಹೊಲಗಳಲ್ಲೆಲ್ಲಾ ಮೊಣಕಾಲುದ್ದ ನೀರುಂಟಲ್ಲಾ-ಎರಡು ಘಳಿಗೆ ಇಳಿಯಲಿ'ಎಂದ. 'ಇಳಿಯುವದು ನೆತ್ತಿಗೇರಿದವರಿಗೆ' ಎನ್ನುತ್ತಾ ಅಂತಣ್ಣ ಕಟ್ಟಕ್ಕಿಳಿದವನೇ ಅದನ್ನು ಸಂಪೂರ್ಣ ಮುಚ್ಚಿಬಿಟ್ಟ. ಪುಟ್ಟನಿಗೂ ಸಿಟ್ಟುಬಂತು. 'ನ್ಯಾಕ ಹಗೆಗಾರನಂತೆ ಬೇಕೆಂದೇ ತನ್ನ ಗದ್ದೆಯನ್ನೊಣಗಿಸುತ್ತಾನಲ್ಲಾ' ಎನ್ನುತ್ತಾ ಕಟ್ಟದಮೇಲೆ ನಿಂತುಕೊಂಡು ವಾದಿಸಲು ಹತ್ತಿದ. ಅಂತಣ್ಣ ನ್ಯಾಕನ ಬಾಯಿಯಲ್ಲವೆ-ಅದು ಕುರುಕುರುವಿಗೆ ಬಹಳ ಬಿರುಸಾಯಿತು. ಅದನ್ನು ತಡೆಯಲಾರದೆ ಪುಟ್ಟನು ನೀರಿಗಿಳಿದು ನ್ಯಾಕನ ಜುಟ್ಟುಹಿಡಿದು ಬಗ್ಗಿಸಿ ಎರಡುಮೂರು ಗುಟುಕು ನೀರು ಕುಡಿಸಿದ; ಉಳಿದ ನೀರನ್ನೆಲ್ಲಾ ತೂತು ತೆಗೆದು ತನ್ನ ಗದ್ದೆಗೆ ಕೊಂಡು ಹೋದ.

ಕುಕ್ಕಿಮಾರು ಗದ್ದೆಯಲ್ಲಿ ನೀರು ತುಂಬುತ್ತಾ ಬಂತು. ಪುಟ್ಟನ ತಲೆಯಲ್ಲಿಯೂ ಯೋಚನೆ ತುಂಬ ಹತ್ತಿತು. 'ಅಂತಣ್ಣ ನ್ಯಾಕನು ಕುಡಿದ ಎರಡು ಗುಟುಕು ನೀರಿನಿಂದ ಅವನ ಕೋಪವೆಲ್ಲಾ ತಣಿಯುದಂತಿಲ್ಲ; ಅವನು ಬೆಳಗಾದೊಡನೆ ಇಬ್ಬರಿಗೂ ಧನಿಯಾದ ಶೇಖರರಾಯರಲ್ಲಿಗೆ ಹೋಗಿ ದೂರುಕೊಡುವದು ಖಂಡಿತ. ರಾಯರಿಗೆ ತಪ್ಪು ತಿಳಿದು ಬಂತಾದರೆ ಏನಾದರೂ ದಂಡ ವಿಧಿಸುವದೂ ನಿಜ, ಸಿಕ್ಕಿಬಿತ್ತಲ್ಲಾ' ಎಂದು ಭಾರೀಯೋಚನೆಯಲ್ಲಿ ಬಿದ್ದ ಪುಟ್ಟಪ್ಪ. ಅವನಿಗೊಂದು ಉಪಾಯವು ಹೊಳೆಯಿತು. ನ್ಯಾಕನಿಗೆ ಮೊದಲಾಗಿ ತಾನೇ ಹೋಗಿ ರಾಯರನ್ನು ಕಂಡು, ತನ್ನ ಗದ್ದೆಯನ್ನೊಣಗಿಸಿ ಗೇಣಿಕೊಡದ ಹಾಗೆ ಮಾಡಬೇಕೆಂದು ನ್ಯಾಕನು ಹಂಚಿಕೆ ಹೂಡಿದ್ದಾನೆಂಬುದನ್ನು ಶೇಖರರಾಯರಿಗೆ ಮಂದಟ್ಟುಮಾಡಿ ಎಲ್ಲವನ್ನು ಮೊದಲೇ ಸರಿಪಡಿಸಿ ಬಿಡಬೇಕೆಂದು ಬಗೆದು, ಮರುದಿನ ಕೋಳಿಕೂಗಿದೊಡನೆ ಎದ್ದ. ಎರಡು ಕುಂಬಳಕಾಯಿ ಮಿಡಿಗಳು, ಒಂದಷ್ಟು ಹೀರೇ ಕಾಯಿಗಳು, ಹತ್ತಿಪ್ಪತ್ತು ಬದನೇಕಾಯಿಗಳನ್ನು ದೊಡ್ಡದೊಂದು ಬೈರಾಸಿನಲ್ಲಿ ಕಟ್ಟಿ ತಲೆಯಮೇಲೆ ಇಟ್ಟುಕೊಂಡು ಹೊರಟ. ಶಂಕರರಾಯರು ಉಡುಪಿಯಲ್ಲೇ ಬಿಡಾರಮಾಡಿಕೊಂಡು ಇದ್ದರು. ಪುಟ್ಟನು ಕಾಣಿಕೆಯ ಗಂಟನೊಡನೆ ದಶಂಬರದ ನಡು ಮಧ್ಯಾಹ್ನದಲ್ಲಿ ಉಡುಪಿ ಪಟ್ಟಣದೊಳಗೆ ಕಾಲಿಟ್ಟ. ಮೆಲ್ಲನೆ ಧನಿಯರ ಮನೆಯ ಕಿರುಬಾಗಿಲಿನಿಂದ ಪ್ರವೇಶಿಸಬೇಕು, ಅಲ್ಲಿ ಆಳುಮಗನನ್ನು ಕರೆದು ತರಕಾರಿ ಕಟ್ಟನ್ನು ಕೊಡಬೇಕು. ಕರೆಯುವಾಗ ಧನಿಗಳಿಗೂ ಕೇಳುವಂತಾಗಬೇಕು ಅವರೀ ಕಾಣಿಕೆಯನ್ನು ನೋಡುವಂತಾಗಬೇಕು. ಆ ಮೇಲೆ ಚಾವಡಿಯ ಮುಂಬಾಗಕ್ಕೆ ಹೋಗಿ ಮೂರಡಿ ಬಗ್ಗಿ ನಮಸ್ಕಾರ ಹೊಡೆಯಬೇಕು. ರಾಯರು ಕೂತುಕೊಳ್ಳ ಹೇಳಿದರೂ ಕೈ ಜೋಡಿಸಿ ನಿಂತುಕೊಂಡೇ ಅಂತಣ್ಣ ನ್ಯಾಕನ ಅನ್ಯಾಯವನ್ನು ಕಣ್ಣೀರು ಮಿಡಿಯುತ್ತಾ ವಿವರಿಸಬೇಕು. ಹೀಗೆಲ್ಲಾ ನೆನಸುತ್ತಾ ಪುಟ್ಟಣ್ಣ ರಸ್ತೆಯಲ್ಲಿ ಬರುತ್ತಿದ್ದ. ಮೋಟಾರಿನ ಹೋರ್ನು ಕೇಳಿ ಬಂದರೆ, ಸೈಕಲಿನ ಕಿಣಿಕಿಣಿಯಾದರೆ ಪುಟ್ಟಣ್ಣ ಓರೆಯಾಗುತ್ತಿದ್ದ. ಮನಸ್ಸಿನೊಳಗಿನ ಯೋಚನೆಯೂ ಹಾಗೆಯೇ ಓರೆಯಾಗುತ್ತಿತ್ತು. ರಸ್ತೆಯ ಮಧ್ಯೆ ಕಾಲಿಟ್ಟಾಗ ಮೊದಲಿನಂತೆಯೇ. ಶೇಖರರಾಯರ ಬಿಡಾರಕ್ಕೆ ಹೋಗಬೇಕಾದರೆ ಶೇಟ್ ನರೀಮಚಂದರ ಜವಳಿ ಅಂಗಡಿಯನ್ನು ದಾದುಹೋಗಬೇಕಿತ್ತು. ಪುಟ್ಟಣ್ಣ ಆ ಅಂಗಡಿಯನ್ನು ಸಮೀಪಿಸುವದರಲ್ಲಿದ್ದ. ಅವನು ಮುಂದಕ್ಕೆ ಹೆಜ್ಜೆಯಿಡುತ್ತಿದ್ದಂತೆ ಶೇಟರ ಅಂಗಡಿಯೆದುರು ರಸ್ತೆಯಲ್ಲಿ ಜನರು ಹಿಂಡುಗಟ್ಟಿ ನೆರೆದಿದ್ದುದು ಕಂಡು ಬಂತು. ಪುಟ್ಟಣ್ಣನು ಹಳ್ಳಿಯ ರೈತನಾದರೂ ಬೆಟ್ಟಿ ಬೇಗಾರಿಗಾಗಿ, ಇಲ್ಲವೆ ಹೂಲೆ ಕಾಣಿಕೆಗಳನ್ನು ಹೊತ್ತುಕೊಂಡು ಪೇಟೆಯಲ್ಲಿರುವ ಧನಿಗಳಲ್ಲಿಗೆ ತಿಂಗಳಿಗೊಂಭತ್ತು ಸರ್ತಿಯಂತೆ ಬಂದು ಅನುಭವವಿದ್ದವ. ಅವನು ಪ್ರಥಮತಃ ನೆನೆಸಿದ-ಸೇಟರು ಜವಳಿಯ ಏಲಂ ನಡಿಸುತ್ತಿದ್ದಾರೆ ಎಂದು. ಆದರೆ ಹಿಂಡನ್ನು ಸಮೀಪಿಸುತ್ತಿದ್ದ ಹಾಗೆ ಅವನು ಗಾಬರಿಯಲ್ಲಿ ಬಿದ್ದ. ಹಿಂಡಿನ ಮಧ್ಯದಲ್ಲಿ ತರುಣನೊಬ್ಬನನ್ನು ಮಲಗಿಸಿದ್ದಾರೆ. ತರುಣನ ತಲೆಯೆಲ್ಲಾ ಸೀಳು ಸೀಳಾಗಿದೆ. ಇಡೀ ಶಿರಸ್ಸು ರಕ್ತದಿಂದ ಕೆಂಪಾಗಿ ಹೋಗಿದೆ. ಕೂದಲುಗಳಲ್ಲಿ ರಕ್ತವು ಜಿನುಗುತ್ತಿದೆ! ಕೆಲವರು ಅವನ ತಲೆಗೆ ವಸ್ತ್ರಸುತ್ತುವದರಲ್ಲಿಯೂ, ಇನ್ನು ಕೆಲವರು ಅವನ ಬಾಯಿಗೆ ನೀರು ಬಿಡುವದರಲ್ಲಿಯೂ ತೊಡಗಿದ್ದರು. ಸುತ್ತುಮುತ್ತ ನೆರೆದಿದ್ದವರು ಒಂದೇ ಸವನೆ ಕಣ್ಣೀರು ಸುರಿಸುತ್ತಿದ್ದರು. ಘಾಯಗೊಂಡ ತರುಣನು ಅಳುತ್ತಿದ್ದಿಲ್ಲ. ಅವನು ತನ್ನನ್ನು ಸುತ್ತುಗಟ್ಟಿ ಅಳುವವರಿಗೆ ಸಮಾಧಾನ ಹೇಳುತ್ತಿದ್ದ; ತಡೆದು ತಡೆದು ಹೇಳುತ್ತಿದ್ದ. ಮೈಯ ನೋವಿನಿಂದ ಅವನಿಗೆ ಮಾತಾಡುವದು ಕಷ್ಟವಾಗಿತ್ತು. ಆದರೆ ಹೃದಯದ ಉಲ್ಲಾಸದಿಂದ ಆ ಮಾತುಗಳನ್ನು ಉದ್ಗರಿಸುವದು ಸುಲಭವಾಗಿತ್ತು. ಅವ ಹೇಳುತ್ತಿದ್ದ-"ಈಗ ನನಗಾಗಿ ನೀವು ಅಳುತ್ತಿರುವಿರೆಂದು ನಾನು ನಂಬುವದಿಲ್ಲ, ಈ ಅಳುವು ನಿಮಗಾಗಿಯೇ ಇರಬೇಕು. ಅಳುವದು ಒಬ್ಬನ ಅವನತಿಯನ್ನು ಹೀನದೆಸೆಯನ್ನು, ಸಂಕಷ್ಟವನ್ನು ಕಂಡಲ್ಲವೆ? ಇವೀಗ ಒದಗಿರುವದು ನಿಮಗೆ! ನಾನು ಮಾತೃಭೂಮಿಗಾಗಿ ಪೆಟ್ಟು ತಿಂದು ಜನ್ಮಸಾರ್ಥಕಗೊಳಿಸಿದೆನೆಂಬ ಹೆಮ್ಮೆಯಿಂದಿದ್ದೇನೆ. ಆದ್ದರಿಂದ ಅಳುವದಿಲ್ಲ. ನಮಗೀ ಸಂದರ್ಭವೊದಗಲಿಲ್ಲವಲ್ಲಾ ಎಂದು ನೀವು ಅಳುತ್ತೀರಿ ಅಲ್ಲವೇ?" ಇದನ್ನು ಕೇಳುತ್ತಿದ್ದವರು 'ಹೌದು ಹಾಗೆಯೇ ನಾವು ಪಾಪಿಗಳು! ನಮಗೀ ಸಂದರ್ಭವೆಲ್ಲಿಂದ?" ಎನ್ನುತ್ತಿದ್ದರು. ಪುಟ್ಟನು ಹದಿನೈದು ಮಿನಿಟುಗಳವರೆಗೆ ನಿಂತು ಇವೆಲ್ಲವನ್ನೂ ನೋಡಿದ. ಕಣ್ಣುಗಳಲ್ಲಿ ನೀರುಬಂತು. ಇವನ ಹಳ್ಳಿಯಭಾಷೆಯಲ್ಲಿ ಕೆಲವರನ್ನು ಕೇಳಿದ 'ಏನಾಯಿತು?'ಎಂದು. ಕೊನೆಗೊಬ್ಬ ಹೇಳಿದ-ಅವ ಪಿಕೆಟಿಂಗಿಗೆ ಹೋಗಿದ್ದ, ಲಾಠಿ ಚಾರ್ಜಾಯಿತು ಎಂದು. ಪುಟ್ಟನು ಮಿಕ್ಕ ವಿವರವನ್ನು ತಕ್ಕಮಟ್ಟಿಗೆ ತನ್ನಲ್ಲಿಯೇ ಸಂಗ್ರಹಿಸಿಕೊಂಡ; ಗಾಂಧೀ ಕಡೆಯವರು ಪಿಕೆಟಿಂಗ್‌ಮಾಡಿ ಜೈಲಿಗೆ ಹೋಗುತ್ತಿದ್ದಾರೆ. ಪೆಟ್ಟು ತಿನ್ನುತ್ತಿದ್ದಾರೆ ಎಂದು ಆ ಕಾಲದಲ್ಲಿ ಎಲ್ಲರಂತೆ ಅವನೂ ತಿಳಿದಿದ್ದ. ಆ ತಲೆಯ ನೆನಪು ಅವನಿಗೆ ಹೋಗಲೇ ಇಲ್ಲ. 'ಎಂಥಾ ಪೆಟ್ಟಪ್ಪಾ! ಜೀವವಲ್ಲವೇ ಅದು? ತಲೆಯೆಲ್ಲಾ ಭಾಗವಾಗಿ ಹೋಗಿತ್ತು. ಅಬ್ಬಬ್ಬ!' ಎಂದು ಪುಟ್ಟ ತನ್ನ ಗುಡಿಸಲಿನಲ್ಲಿ ಕುಳಿತುಕೊಂಡು ಬಂದವರೊಡನೆಲ್ಲಾ ಕಣ್ಣುಬಾಯರಳಿಸಿ ಹೇಳುವದಿತ್ತು.

ಚುನಾವಣೆಯ ಗದ್ದಲದ ಕಾಲ. ಪುಟ್ಟನ ಮನೆಗೂ ಮೂರು ನಾಲ್ಕು ಕಾರುಗಳು ಬಂದು ಹೋಗಿದ್ದವು. ಬಂದವರಿಗೆ ಪುಟ್ಟನು ಹೇಳುವದಿಷ್ಟೆ "ನನ್ನೊಡನೇಕೆ ಕೇಳುತ್ತೀರಿ ಅಯ್ಯನವರೆ? ನಮ್ಮ ಧನಿಗಳು ಹೇಗೆ ಹೇಳುತ್ತಾರೋ ಹಾಗೆಮಾಡಬೇಕಲ್ಲದೆ ಬೇರೆ ಮಾಡಲಿಕ್ಕೆ ಬರುತ್ತದೆಯೆ?" ಕೊನೆಗೊಂದು ದಿನ ಶೇಖರರಾಯರೇ ಮೊದಲೆರಡು ಸಲ ಪುಟ್ಟನ ಮನೆಗೆ ಬಂದು ಹೋದ ಮಹಾನುಭಾವರೊಂದಿಗೆ ಬಂದರು. ಪುಟ್ಟನನ್ನು ಕರೆದು ಹೇಳಿದರು 'ನಿನ್ನ ಎರಡೂ ಓಟುಗಳನ್ನು ಕೆಂಪು ಪೆಟ್ಟಿಗೆಗೆ ಹಾಕಿಬಿಡು' ಪುಟ್ಟ 'ಓ' ಎಂದು ತಲೆ ಗುಟ್ಟಿದ "ನೆನಪಿನಲ್ಲಿಟ್ಟುಕೋ! ಕೆಂಪು ಪೆಟ್ಟಿಗೆ" ಎಂದು ರಾಯರು ಇನ್ನೊಮ್ಮೆ ಹೇಳಿದರು. ಪುಟ್ಟ ಕೈಹಿಸುಕುತ್ತಾ "ಅಯ್ಯ ಜೀಯಾ! ಮರೆತು ಹೋಗುವ ಹಾಗುಂಟೆ?" ಎಂದ.

ಚುನಾವಣೆಯ ದಿನ. ಪುಟ್ಟನನ್ನು ಕಾರಿನಲ್ಲಿ ಹಾಕಿಕೊಂಡು ಬಂದರು. ಒಂದು ಜನ ಸಂದಣಿಯ ನಡುವೆ ಕಾರನ್ನು ನಿಲ್ಲಿಸಿ ಪುಟ್ಟನನ್ನು ಕೆಳಗಿಳಿಸಿದರು. ಮುಂದುಗಡೆ ಇಬ್ಬರು, ಹಿಂಬದಿಯಲ್ಲಿ ಇಬ್ಬರು ಕೆಂಪು ಟೋಪಿಯವರು ಅವನನ್ನು ಜನರ ನಡುವೆ ಕರಕೊಂಡು ಹೋದರು. ಸುತ್ತಣಿಂದಲೂ 'ಹಳದಿ ಪೆಟ್ಟಿಗೆಗೆ ಹಾಕಿರಿ' ಎಂದು ಕೂಗುಕೇಳಿಬಂತು. ಆ ಗದ್ದಲದಲ್ಲಿ ಪುಟ್ಟನ ತಲೆಗೆ ಯಾವುದೂ ಹತ್ತಲಿಲ್ಲ. ಅವನು ಹೇಗೂ ಪೋಲಿಂಗ್ ಬೂತಿನೊಳಗೆ ಹೋಗಿ ಓಟಿನ ಕಾಗದಗಳನ್ನು ತೆಗೆದುಕೊಂಡು ಒಳಗೆ ಹೋದ. ಶೇಖರರಾಯರು ಹೇಳಿದ ಕೆಂಪು ಪೆಟ್ಟಿಗೆಯನ್ನು ಸಮೀಪಿಸುತ್ತಿದ್ದಂತೆ ನಾಲ್ಕು ವರ್ಷಗಳ ಹಿಂದಿನ ಘಟನೆಯು ನೆನಪಿಗೆ ಬಂತು. ಕೆಂಪು ಪೆಟ್ಟಿಗೆಯೂ ಆ ಸ್ವಯಂ ಸೇವಕನ ತಲೆಯೂ ಒಂದೇಯಾಗಿ ಕಂಡಿತು! ಅದೇ ಕೆಂಪು ಬಣ್ಣ! ಅದೇ ಬರುಕು! ಪುಟ್ಟ ಬೆಚ್ಚಿಬಿದ್ದ. ಪಾಪದ ಹಳ್ಳಿಗನಲ್ಲಿ ಅಸಹ್ಯ ಉತ್ಪನ್ನವಾಯಿತು. ಆ ತಲೆಯನ್ನೇ ಪುನಃ ಕಂಡಂತಾಯಿತು; ಮಾತುಗಳೂ ಕೇಳಬಂದವು "ನಾನು ಮಾತೃ ಭೂಮಿಗಾಗಿ ಪೆಟ್ಟು ತಿಂದು ಜನ್ಮ ಸಾರ್ಥಕಗೊಳಿಸಿದೆನೆಂಬ ಹೆಮ್ಮೆಯಿಂದಿದ್ದೇನೆ; ಆದ್ದರಿಂದ ಅಳುವದಿಲ್ಲ. ನಮಗೀ ಸಂದರ್ಭವೊದಗಲಿಲ್ಲವಲ್ಲಾ-ಎಂದು ನೀವಳುತ್ತೀರಿ ಅಲ್ಲವೆ?" ಆಗ ಅತ್ತವರಲ್ಲಿ ಪುಟ್ಟನೂ ಒಬ್ಬ 'ಹೌದು ಹಾಗೆಯೇ, ಎಂದು ಉತ್ತರಿಸಿದವರಲ್ಲಿಯೂ ಅವನೊಬ್ಬ. ಅವನಿಗೆ ಫಕ್ಕನೆ ಹೊಳೆಯಿತು-"ಇದು ಒಂದು ಸಂದರ್ಭವಲ್ಲವೆ?" ಪುಟ್ಟನು ತಡಮಾಡಲಿಲ್ಲ. ಎರಡು ಓಟುಗಳನ್ನು ಎರಡು ಹಳದಿ ಪೆಟ್ಟಿಗೆಗಳಿಗೆ ಹಾಕಿ ಹೊರಗೆ ಬಂದ. ಒಬ್ಬ ಕೆಂಪು ಟೋಪಿಯವನು ಅವನನ್ನು ಕರಕೊಂಡು ಹೋಗಿ ಹೊಟ್ಟೆ ತುಂಬಾ 'ಶರ್ಬತ್' ಕುಡಿಸಿದ. ಆ ದಿನ ಸಂಜೆ ಜಸ್ಟೀಸ್ ಪಾರ್ಟಿಯ ಮುಖಂಡರೊಬ್ಬರು ದೊಡ್ಡ 'ಹೇರಿಂಗ್' ಮಾಡುತ್ತಿದ್ದರು. ಕೋಂಗ್ರೆಸ್ ಉಮೇದ್ವಾರಿಯ 'ಸೆಕ್ಯೂರಿಟಿ'ಯು ಜಪ್ತಾಗುವದೆಂದೇ ಅದರ ಒಟ್ಟಾರ್ಥ. ಅದಕ್ಕೆ ಆಧಾರವಾಗಿ ಜಸ್ಟೀಸ್ ಪಾರ್ಟಿಯವರಿಗೆ ಬಿದ್ದ ವೋಟುಗಳ ಸಂಖ್ಯೆಯ ದೊಡ್ಡ ಪಟ್ಟಿಯೊಂದು ಅವರ ಕೈಯಲ್ಲಿತ್ತು. ಆ ಪಟ್ಟಿಯಲ್ಲಿ ಪುಟ್ಟನ ಎರಡು ಓಟುಗಳನ್ನೂ ಜಮಾಹಿಡಿಯಲಾಗಿತ್ತು!

ಬರುವ ವಾರದ ಕಥೆ

ಕೂಲಿಯಾಳು ಸುಬ್ಬ

ಬದುಕು-ಸಾವುಗಳ ಗುಟ್ಟು

ಅಥವಾ

ವಿ ಕಾ ಸ

ಲೇಖಕ—**ಪಂಡಿತ ತಾರಾನಾಥರಾಯರು.**

ಮನುಷ್ಯನು ಎಲ್ಲಿಂದ ಬಂದ? ಹಿಂದೇನಿದ್ದ? ಇಂಥಾ ಪ್ರಶ್ನೆಗಳು ಸಾವಿರಾರು ವರ್ಷಗಳಿಂದ ಮಾನವನ ತಲೆಗೆ ಬಂದಿವೆ. ಇವುಗಳನ್ನು ಒಂದೊಂದು ಜನಾಂಗದವರು ಒಂದೊಂದು ರೀತಿಯಿಂದ ಬಿಡಿಸಿದ್ದಾರೆ. ಒಂದೊಂದು ಮತದವರು ಒಂದೊಂದು ವಿಧವಾಗಿ ಉತ್ತರಿಸಿದ್ದಾರೆ. ಹಾಗೆಯೇ ಭೌತಿಕ ವಾದಿಗಳೂ ಒಂದು ಪ್ರಕಾರವಾಗಿ ಶೋಧಿಸಿ ಒಂದು ತೀರ್ಮಾನಕ್ಕೆ ಳಿದಿದ್ದಾರೆ

ಅದೃಶ್ಯಪ್ರಪಂಚದ ಭಯದಿಂದ ಹುಟ್ಟಿದ ಕಲ್ಪನೆಗೇ ತೀರ್ಮಾನವೆಂದು ನಂಬಿಕೊಂಡವರು ಹಲವರು, ದೃಶ್ಯಪ್ರಪಂಚದ ವ್ಯಾಮೋಹಗಳ ಮತ್ತಿನಿಂದ ಮತಿಯಿಲ್ಲದೆ ಮತ ಕಟ್ಟಿದವರು ಹಲವರು, ಭೌತಿಕ ಪ್ರಪಂಚದ ವಸ್ತು ವ್ಯಾಪಾರಗಳನ್ನು ನಿರ್ಮಲ ಮನಸ್ಸಿನಿಂದ ಪರೀಕ್ಷಿಸಿ ತಮಗೆ ಕಂಡು ಬಂದ ಸಾಕಲ್ಯವಾದ ತತ್ವಗಳನ್ನು ಎತ್ತಿಟ್ಟವರು ಹಲವರು, ಇವೆಲ್ಲವುಗಳನ್ನೂ ಬಿಟ್ಟು ಅಂತರ್ಮುಖಿಗಳಾಗಿ ಧ್ಯಾನ ಸಮಾಧಿಗಳ ಮೂಲಕ ಅನುಭವವನ್ನು ಮಾಡಿಕೊಂಡು ನಿಷ್ಕರ್ಷೆಗೆ ಬಂದವರು ಹಲವರು ಹೀಗೆ ಹಲವು ತಂಡದವರು ಹಲವು ವಿಧಗಳಾಗಿ ಈ ಪ್ರಶ್ನೆಗಳಿಗೆ ತಮ್ಮ ತಮ್ಮ ಉತ್ತರಗಳನ್ನು ಕೊಟ್ಟಿದ್ದಾರೆ

ಆದರೆ ನಮಗೆ ಕೊನೆಯ ಎರಡು ಪಕ್ಷಗಳವರ ತೀರ್ಮಾನಗಳೇ ಬೇಕು, ಅಲ್ಲದೆ ಇತರರವು ಉಪಯೋಗಕ್ಕೆ ಬಾರವು ಯಾಕೆಂದರೆ ಭಯ ಮೋಹಗಳಿಂದ ಹುಟ್ಟಿದ ಯಾವ ತೀರ್ಮಾನವೂ ಶುದ್ಧವಾಗಲಾರದು, ನ್ಯಾಯವಾಗಲಾರದು. ಇನ್ನೊಂದು ವಿಶೇಷ. ಈ ಇಬ್ಬರ ಭೌತಿಕ ಮತ್ತು ಅಂತರಿಕ ಪರಿಶೋಧಕರ ತೀರ್ಮಾನಾನುಭವಗಳೂ ಹೊಂದಿಕೊಳ್ಳುತ್ತವೆ ಭೌತಿಕರ ಪರೀಕ್ಷಣ ಸಿದ್ಧಾಂತಗಳಿಗೆ ಯೋಗಿಗಳ ಅನುಭವಗಳು ಪ್ರಮಾಣ, ಯೋಗಿಗಳ ಅನುಭವಕ್ಕೆ ಭೌತಿಕರ ಸಿದ್ಧಾಂತಗಳು ಸಹೇತುಕ ಪ್ರಮಾಣಗಳು ಹೀಗೆ ಇಬ್ಬರ ಸಿದ್ಧಾಂತಗಳೂ ಹೊಂದಿಕೊಂಡಿವೆ ಮಾತ್ರನೇ ಅಲ್ಲದೆ ಪೂರಕವಾಗಿಯೂ ಇವೆ ಎಂದು ವಿವೇಕವು ನಡೆಸಿದ ಪರೀಕ್ಷೆಯ ಫಲವು ಹೇಳುತ್ತದೆ

ಈ ಎರಡು ಪಕ್ಷದವರ ಸಿದ್ಧಾಂತಗಳು ಇಲ್ಲಿ ಭರತವರ್ಷದಲ್ಲಿ ಮಾತ್ರವೇ ಅಲ್ಲ, ಯೂರಪ್ ಅಮೇರಿಕಗಳಲ್ಲಿಯೂ ಇತ್ತೀಚೆಗೆ ಹೊಂದಿಕೊಳ್ಳುತ್ತಾ ಬಂದಿವೆ ಭೌತಿಕ ಮತ್ತು ಮಾನಸಿಕ ಸಂಶೋಧಕರ ಹಾದಿಗಳು ಬೇರೆಬೇರೆಯೇ ಆದರೂ, ಕೊನೆಯಲ್ಲಿ ಒಬ್ಬರ ಸಿದ್ಧಾಂತಗಳು ಇನ್ನೊಬ್ಬರವುಗಳಲ್ಲಿ ಲೀನವಾಗಿ ಹೋಗುತ್ತಿವೆ ಸಾರಾಂಶವೇನು? ಇವರಿಬ್ಬರ ಹಾದಿಗಳೂ **ಸಕಲ** ಶುದ್ಧ ಮನಸ್ಸಿನ ಮಾನವಜೀವಿಗಳಿಗೂ ಸಹಜವಾಗಿ ಸರಿಯೆಂದು ತೋರುತ್ತಿವೆ ಅಂದರೆ ಇವುಗಳಲ್ಲಿ ಒಂದು **ಸಾಕಲ್ಯತೆ** ಇದೆ. ಅಂಥಾ ಸಾಕಲ್ಯತೆ ಇರುವ ತತ್ವಗಳಲ್ಲಿಯೇ ಅಲ್ಲವೆ ಸತ್ಯಾಂಶವೂ ಅಧಿಕವಾಗಿರುವುದು? ಮತ್ತು ಸತ್ಯವನ್ನು ಅವಲಂಬಿಸಿದರೇನೇ ಅಲ್ಲವೆ ಹಿತ ಮತ್ತು ವಿಕಾಸ?

ಇವರಿಬ್ಬರ ಪರಿಶೋಧಗಳ ಫಲವೇನು? ಆದಿಷ್ಟೇ. ಜೀವಿಯು ತನ್ನ ಜೀವಯಾತ್ರೆಯನ್ನು ಮನುಷ್ಯದೇಹದಲ್ಲಿಯೇ ಮೊದಲು ಮಾತ್ರವಲ್ಲ ಬರಿಗಣ್ಣಿಗೆ ಕಾಣದಷ್ಟು ಸೂಕ್ಷ್ಮ ಘಟಗಳಲ್ಲಿ ಮೊದಲು ಹುಟ್ಟಿ, ಪರಿಸ್ಥಿತಿಯೊಡನೆ ಹೋರಾಡಿ ಹೊಂದಿಕೊಳ್ಳುತ್ತ, ಹುಟ್ಟುತ್ತ, ಸಾಯುತ್ತ, ಪುಟ್ಟುತ್ತ, ಸಾಯುತ್ತ ಪ್ರಗತಿ ಹೊಂದುತ್ತ, ಹೊಸ ಹೊಸ ಘಟಗಳನ್ನು ಅನುಭವಿಸುತ್ತ ಹೆಚ್ಚು ಹೆಚ್ಚಿನ ಅನುಕೂಲತೆಯನ್ನು ಉಂಟುಮಾಡಿಕೊಳ್ಳುತ್ತ, ಕೊನೆಗೆ ಮಾನವನಾಗಿದ್ದಾನೆ ನಮ್ಮ ಪೂರ್ವಜರು ಈ ಅನೇಕಾನೇಕ ಘಟಗಳ ಪ್ರವೇಶ ಪ್ರಯಾಣಗಳಿಗೆ ಜೀವಿಯ ೮೪ ಲಕ್ಷ ಯೋನಿಗಳ ಸಂಚಾರ ಎಂದರು,

ಜೀವಿಯು ೮೪ ಲಕ್ಷ ಯೋನಿಗಳನ್ನು ಕ್ರಮವಾಗಿ ಹೊಕ್ಕು ಪ್ರಗತಿ ಹೊಂದುತ್ತ, ಬಾಳಿನೇಣಿಯನ್ನು ಏರುತ್ತ, ಏರುತ್ತ ಕೊನೆಗೆ ಮನುಷ್ಯ ಯೋನಿಯವನಾದನು ಎಂದು ಅನೇಕರು ನಮ್ಮ ಸಮಾಜದಲ್ಲಿ ಹೇಳುವುದನ್ನು ಎಷ್ಟೋ ಸಲ ಕೇಳಬಹುದು ಇದನ್ನು ಕುರಿತು ವೇದದಲ್ಲಿ ಋಕ್ಕುಗಳಿವೆ, ಪುರಾಣಗಳಲ್ಲಿ ಶ್ಲೋಕಗಳಿವೆ, ದರ್ಶನಗಳಲ್ಲಿ ಸೂತ್ರಗಳಿವೆ, ಭಕ್ತರು ಹಾಡಿದ ಪದಗಳಿವೆ, ಜನರ ಬಾಯಿಯಲ್ಲಿ ಎಷ್ಟೋ ಗಾದೆಗಳಿವೆ ಹೀಗಿದು ಹಿಂದೂ ವಿಚಾರಸಂಪ್ರದಾಯ,

ಹೆಚ್ಚು ಕಡಿಮೆ ಇದೇ ಸಿದ್ಧಾಂತವನ್ನು ಪಾಶ್ಚಿಮಾತ್ಯ ಭೌತಿಕಶಾಸ್ತ್ರವೇತ್ತನಾದ ಡಾರ್ವಿನನೂ ಹಲವು ಪ್ರತ್ಯಕ್ಷ ಪ್ರಮಾಣಗಳ ಮೂಲಕ ಮಂಡಿಸಿದ್ದಾನೆ

ಆದರೆ ಜೀವಿಯು ಹಾಗೆ ಏರುತ್ತ ವಿಕಾಸಗೊಂಡದ್ದು ಜೀವಿಯನ್ನು ಬಿಟ್ಟು, ಎಲ್ಲಿಯೋ ಬೇರೆಯಾಗಿ ಕೂತು, ಅಧಿಕಾರ ನಡೆಸುವ ಒಬ್ಬ ದೇವರ ಸ್ವಚ್ಛಂದ ಲೀಲೆಯಿಂದಲೋ? ಅಥವಾ ಆ ವಿಕಾಸದಲ್ಲಿ ಜೀವಿಯ ಕರ್ಮಭಾಗವೂ ಏನಾದರೂ ಇದೆಯೋ? ಜೀವಿಯ ಕರ್ಮಭಾಗವೇ ಹೆಚ್ಚಾಗಿದೆ ಎಂಬದಕ್ಕೆ ನಮ್ಮವರ ಒಪ್ಪಿಗೆಯಿದೆ,ಈಗಿನ ಭೌತಿಕ ವಿಜ್ಞಾನಿಗಳ ತೀರ್ಮಾನವೂ ಹಾಗೆಯೇ ಇದೆ.

ಹಾಗಾದರೆ ಕರ್ಮವು ಎಂತಹುದು? ಯಾವಜೀವಿಗೂ ತನ್ನ ಪರಿಸ್ಥಿತಿಯು ಎಲ್ಲಾ ರೀತಿಗಳಿಂದಲೂಅನುಕೂಲವಾಗಿಲ್ಲ ಪ್ರಾಣಕ್ಕೆ ಆಧಾರಗಳಾಗಿರುವ ನೀರು ಗಾಳಿ ಇತ್ಯಾದಿಗಳೇ ಎಷ್ಟೋ ಸಲ ತಮ್ಮ ವೇಗವಿಕಾರಗಳಿಂದಲೇ ಆಗಲಿ, ಜೀವಿಯ ದೌರ್ಬಲ್ಯದಿಂದಲೇ ಆಗಲಿ, ಪ್ರಾಣಕ್ಕೆ ಅಪಾಯಕರಗಳಾಗಿ ಪರಿಣಮಿಸುತ್ತವೆ, ಜೀವಿಗೆ ಬೇಕಾದದ್ದು ಬದುಕು. ಬದುಕೇ ಅವರಮೊದಲನೇ ಧರ್ಮ. ಬದುಕೇ ಜೀವಿಯ ಸರ್ವಸ್ವ, ಬದುಕಬೇಕೆಂಬುದೇ ಜೀವದ ಒತ್ತಾಯ ಈ ಒತ್ತಾಯದಿಂದ ಜೀವಿಗೆ ತನ್ನ ಬದುಕಿಗಾಗಿ ಎರಡು ಕೆಲಸಗಳನ್ನು ಮಾಡಲೇಬೇಕಾಗುತ್ತದೆ (೧)ವಿರುದ್ಧ ಪರಿಸ್ಥಿತಿಯನ್ನು ಅನುಕೂಲವಾಗಿ ಮಾಡಿಕೊಳ್ಳುವದು (೨) ಆದು ಸಾಧ್ಯವಿಲ್ಲದಲ್ಲಿ ತಾನೇ ಅದರೊಡನೆ ಹೊಂದಿಕೊಳ್ಳುವುದು, ಇದಕ್ಕೇ **ಜೀವನ ಸಂಗ್ರಾಮ** ಎಂದು ಹೆಸರು. ಇದು ಒಂದಲ್ಲನ್ನೊಂದು ರೀತಿಯಿಂದ ಎಲ್ಲಿ ನಡೆಯುವುದಿಲ್ಲವೋ ಅಲ್ಲಿ ಮಾನುಮಾಂಸಗಳಿಗೆ ಹದ್ದು ಕಾದಿರುವಂತೆ, ಮರಣವೇ ಕಾದಿರುತದೆ ಎನೇಯ ಗುಣವು ಬಹಳ ಕೆಳಗಿನ ವರ್ಗದ ಪ್ರಾಣಿಗಳಲ್ಲಿ ಮುಖ್ಯ ಎಂದು ತೋರುತ್ತದೆ ಅನೇಕ ಪ್ರಾಣಿಗಳು ತಮಗಾಗಿ ಬೇರೆ ಆಶ್ರಯಗಳನ್ನು ಮಾಡಿಕೊಳ್ಳುವುದೇ ಇಲ್ಲ ಏಕಾಣುಜೀವಿಗಳು ಮೀನುಗಳು ಅನೇಕಾನೇಕ ಹುಳಹುಪ್ಪಡಿಗಳಿಗೆ ತಾವು ಹುಟ್ಟಿದ ಜಾಗೆಯೇ ಬದುಕಿಗಾಗಿಯೂ ಸಾಕು ಆ ಜಾಗೆಯಲ್ಲಿ ಇವುಗಳಿಗೆ ಯಾವ ಮಾರ್ಪಾಟುಗಳೂ ಬೇಡ ಆದಷ್ಟು ಮಟ್ಟಿಗೆ ಇವುಗಳು ತಮ್ಮ ದೇಹಬಲ ಒಂದರಿಂದಲೇ ಬದುಕಿರುತ್ತವೆ ಪರಿಸ್ಥಿತಿಯಲ್ಲಿ ಅಲ್ಪಸ್ವಲ್ಪ ವ್ಯತ್ಯಾಸವಾಯಿತೋ, ಇವುಗಳಿಗೆ ಮರಣವೊಂದೇ ಗತಿ. ಇವುಗಳು ಹುಟ್ಟುವುದೂ ಹೆಚ್ಚು ಸಾಯುವದೂ ಹೆಚ್ಚು ಇನ್ನೂ ಮುಂದಕ್ಕೆ ಹೋಗಿ ನೋಡಿದರೆ ಹಲವು ಪ್ರಾಣಿಗಳು ಪರಿಸ್ಥಿತಿಯ ವೇಗವಿಕಾರಗಳಿಂದ ತಮ್ಮನ್ನು ಕಾಪಾಡಿಕೊಳ್ಳುವದಕ್ಕಾಗಿ ಕವಚಗಳನ್ನುಂಟುಮಾಡಿಕೊಂಡ -ತಮ್ಮ ಮನೆಗಳನ್ನು ತಾವೇ ಹೊತ್ತುಕೊಂಡೋ ಏನೋ ಎಂಬಂತೆ-ಜೀವಿಸಿರುತ್ತವೆ ದೃಷ್ಟಾಂತಕ್ಕೆ ಶಂಖದ ಹುಳ, ಆಮೆ ಇನ್ನೂ ಮುಂದೆ ನೋಡಿದರೆ, ಹಲವು ಪ್ರಾಣಿಗಳು ತಮ್ಮ ಮತ್ತು ಸಂತತಿಯ ರಕ್ಷಣೆಯನ್ನು, ತಮಗೆ ಅನುಕೂಲವಾದ ಕಟ್ಟಡಗಳನ್ನು ಬೇರೆಯಾಗಿ ಕಟ್ಟಿ ಮಾಡುವವು. ಪಕ್ಷಿಗಳು ಗೂಡು ಕಟ್ಟುವುದು, ಕಾಡು ಜನರು ಗುಡಿಸಲುಗಳನ್ನು ಹಾಕುವುದು ಮುಂತಾದ ದೃಷ್ಟಾಂತಗಳು ಎಲ್ಲರ ಅನುಭವದಲ್ಲಿಯೂ ಇವೆ ಹೀಗೆ ಸುರಕ್ಷಿತ ಬದುಕಿಗಾಗಿ ಹಲವು ವಿಧಗಳಿಂದ ಉಪಾಯಗಳು ಕಂಡು ಬರುತ್ತವೆ.

ಇನ್ನೊಂದು ಮಾತು. ಈ ಉಪಾಯಗಳು ಅಂಥಾ ಸ್ಥೂಲ ಕಟ್ಟಡಗಳಲ್ಲಿ ಮಾತ್ರವೇ ಮುಗಿಯಲಿಲ್ಲ. **ಕಟ್ಟಡಗಳೊಡನೆ ಕಟ್ಟಳೆಗಳೂ ಕಂಡು ಬರುತ್ತವೆ** ಮುಂದೆ ಮುಂದೆಯಾಗಿ ಬದುಕುಮಾಡುವ ಪ್ರಾಣಿಗಳಲ್ಲಿ ಕಟ್ಟಡಗಳಿಗಿಂತಲೂ ಕಟ್ಟಳೆಗಳೇ ವಿಶೇಷವಾಗಿ ಕಂಡು ಬರುತ್ತವೆ ತಮ್ಮ ಬದುಕಿಗಾಗಿ ತಮ್ಮ ಅಂಗಾಂಗಗಳೊಂದು ಸಮೂಹಬಲವಿನ್ನೊಂದು-ಇವೇ ಸಾಕು ಎಂದು ನಂಬಿ ಜೀವಿಸುವ ಪ್ರಾಣಿಗಳಿವು ಎಂದು ತೋರುತ್ತದೆ. ಆದರೆ ಸಮೂಹಬಲ ಎಂದರೆ ಮುಖ್ಯವಾಗಿ ಕಟ್ಟಳೆಗಳಿಂದ ಉಂಟಾದ ಬಲ ತಮ್ಮ ವೈರಿಗಳೊಡನೆ ಕಾದಾಡುವದಕ್ಕೆ ತಮ್ಮ ಹಲ್ಲು ಉಗುರುಗಳನ್ನೋ, ಕೊಂಬುಗಳನ್ನೋ, ಒಕ್ಕಟ್ಟಿನಿಂದ **ಉಪಯೋಗಿಸಿದರೆ** ಬಲ ಹೆಚ್ಚಿಲ್ಲ? ಹೀಗೆ ಸಂಘಬಲ ಹುಟ್ಟಿ ವ್ಯಕ್ತಿಗೆ ಹಿತವಾಯಿತು.

ಸಾರಾಂಶ-ಜೀವಿಗೆ ಬದುಕೇ ಮುಖ್ಯ. ಅದಕ್ಕಾಗಿ ವಿರುದ್ಧ ಪರಿಸ್ಥಿತಿ ವ್ಯಕ್ತಿಗಳೊಡನೆ ಹೊಂದಿಕೊಂಡೇ ಆಗಲಿ ಅವುಗಳನ್ನು ಕೊಂದು ಬಿಟ್ಟೇ ಆಗಲಿ ಜೀವಿಯಯಾತ್ರೆಯು ಸಾಗುತ್ತ ಬಂದಿದೆ ಇದಕ್ಕಾಗಿ ಜೀವಿಯು ಕವಚಗಳನ್ನುಂಟುಮಾಡಿಕೊಂಡಿದೆ ಕದನಕ್ಕೀಳಿದಿದೆ. ಆದಕ್ಕಾಗಿ ಕೊಂಬು ಮುಂತಾದ ಆಯುಧಗಳನ್ನುಂಟುಮಾಡಿಕೊಂಡಿದೆ, ಕಟ್ಟಡಗಳನ್ನುಂಟುಮಾಡಿಕೊಂಡಿದೆ, ಕಟ್ಟಳೆಗಳನ್ನುಂಟುಮಾಡಿಕೊಂಡಿದೆ, ಇದೇ ಜೀವಿಯ ಇತಿಹಾಸ.

ಇವುಗಳ ಉದ್ದೇಶವೇನು? ಬದುಕು ಇವುಗಳ ಒತ್ತಾಯವೆಲ್ಲಿದೆ? ಬದುಕಿನಲ್ಲದೆ, ಬದುಕಲೇಬೇಕು ಎಂಬ ಉತ್ಕಟೇಚ್ಛೆಯಲ್ಲಿದ. ಈ ಇಚ್ಛೆಯೇ ಇಷ್ಟು ಉಪಾಯಗಳನ್ನು ಹುಟ್ಟಿಸಿತು. ಪ್ರತಿಕೂಲ ಪರಿಸ್ಥಿತಿಯು ಹೊಸ ಹೊಸ ಉಪಾಯಗಳನ್ನು ಉಂಟುಮಾಡುವುದಕ್ಕೆ ಬೇಕಾದ ಉತ್ತೇಜನವಾಯಿತು. ಈ ಉತ್ತೇಜನದಿಂದ ಬುದ್ಧಿ ಬಲೆಯುತ್ತಹೋಯಿತು ಬುದ್ಧಿ ಬೆಳದಂತೆ ಉಪಾಯಗಳು ಚೆನ್ನಾಗುತ್ತ ಹೋದುವು. ಇವೆರಡೂ ಬೆಳೆದಂತೆ ಜೀವಿಯ ವಿಕಾಸವೂ ಆಗುತ್ತ ಹೋಯಿತು. ಜೀವಿಯ ವಿಕಾಸಕ್ಕೆ ಇವೇ ಅಳತೆಗಳಾದವು ಇದು ವಿಕಾಸದ ಇತಿಹಾಸ.

ವಿಕಾಸಯಾತ್ರೆಯಲ್ಲಿ ಬರಬರುತ್ತ ಗೂಡು ಗವಿಗಳಂಥಾ ಕಟ್ಟಡಗಳೂ ಇಂದಿನ ಮನೆ ಅರಮನೆಗಳಾಗಿಬಿಟ್ಟವು, ಕಟ್ಟಳೆಗಳು ಕಾಯಿದೆ, ಕಾನೂನು, ಧರ್ಮಶಾಸ್ತ್ರಗಳಾಗಿಬಿಟ್ಟವು ಅವುಗಳಿಗಾಗಿ ಸಂಸ್ಥೆಗಳೇ ಹುಟ್ಟಿಬಿಟ್ಟವೆ ಸಾರಾಂಶ ಕಟ್ಟಡ-ಕಟ್ಟಳೆಗಳು ಮನುಷ್ಯನೊಡನೆಯೇ ಪ್ರಗತಿ ಹೊಂದಿವೆ, ಮನುಷ್ಯನೂ ಇವುಗಳ ಜೊತೆಯಲ್ಲಿಯೇ ಪ್ರಗತಿ ಹೊಂದುತ್ತ ಬಂದಿದ್ದಾನೆ ಆದರೆ ಇವೆರಡರ ತಿರುಳೂ ಬದುಕಿನ ಒತ್ತಾಯ ಒಂದರಲ್ಲಿದೆ ಆ ಬದುಕಿನ ಒತ್ತಾಯವು ಪ್ರೇರೈಸಿದಂತೆಯೇ ಬದುಕಿನೇಣಿಯನ್ನು ಜೀವಿಯು ಏರುತ್ತ ಹೋಗಿದೆ. ಮನುಷ್ಯನ ಪ್ರಗತಿ-ಸಂಸ್ಕೃತಿಗಳೂ ಬೆಳೆಯುತ್ತ ಹೋಗಿವೆ

ಆದರೆ ಇಲ್ಲೊಂದು ಮಾತನ್ನು ಗಮನಿಸಬೇಕು. ಕವಚ ಕಟ್ಟಡ ಕಟ್ಟಳೆಗಳು ಆಯಾ ಕಾಲ-ಪರಿಸ್ಥಿತಿಗಳನ್ನು ಅನುಸರಿಸಿ ಹುಟ್ಟಿವೆ, ಹಾಗೆ ಅನುಸರಿಸಿರುವವರೆಗೇ ಪ್ರಗತಿ. ಕಾಲಪರಿಸ್ಥಿತಿಗೆ ಹೊಂದದ ಇವು ದುರ್ಗತಿಯ ಹಾದಿಯೇ ಸರಿ

ಈ ವಿಕಾಸದ ಗುಟ್ಟನ್ನರಿತುಕೊಂಡು, ಈಗಿನ ಯುವಕರು ತಮ್ಮ ಸದ್ಯದ ಹಾದಿ ಯಾವದು ಎಂಬವನ್ನು ಪರೀಕ್ಷಿಸಬೇಕಲ್ಲವೆ? ತಾವು ಹೊಂದಿಕೆ ತಪ್ಪಿ ಅಡ್ಡ ಹಾದಿ ಹಿಡಿಯದಂತೆ, ಇನ್ನು ಮುಂದೆ ತಿಳಿಯಬೇಕಾದ ಹಾದಿಯಾವುದು ಎಂಬದನ್ನೂ ವಿವೇಚಿಸಿಕೊಳ್ಳಬೇಕಲ್ಲವೇ! ಈಗಿನ ಸಮಾಜದಲ್ಲಿರುವ ಸಂಪ್ರದಾಯಗಳಲ್ಲಿ ನೈಸರ್ಗಿಕವಾದ ವಿಕಾಸತತ್ವಗಳ ಬೆಳಕಿದೆಯೋ?ಅಥವಾ ಈ ಸಮಾಜವು ಇಂದಿನ ಕಾಲ-ಪರಿಸ್ಥಿತಿಗೆ ಏನೇನೂ ಸಂಬಂಧಿಸದ ಹಾದಿಯಲ್ಲಿಯೇ, ಕಣ್ಣು ಮುಚ್ಚಿ ನಡೆಯುತ್ತಿದೆಯೋ?ಇಂದು ಯುವಕ-ಯುವತಿಯರು ಬಿಡಿಸಬೇಕಾದ ಪ್ರಶ್ನೆಗಳು ಇವೇ ಅಲ್ಲವೇ?

ಬಾಲವಾಙ್ಮಯದ
ಆವಶ್ಯಕತೆ ಮತ್ತು ನಿರ್ಮಾಣದ
ವಿಷಯಕವಾದ ಪ್ರಬಂಧ
ಬಾ ಲ ವಾ ಙ್ಮ ಯ
ಬೆಲೆ ನೂರಾಣೆ
ಉಪಾಧ್ಯಾಯರ ಪ್ರಕಟನ ಸಮಿತಿ,
ಉಡುಪಿ

ಹೊಸದು! • ಐರಾವತ • ತೀರಾ ಹೊಸದು!!

ಇದರಲ್ಲಿ—ಕಾಮಶಾಸ್ತ್ರ, ಕೈಗಾರಿಕೆಯ ವಿಷಯ, ಇಂದ್ರಜಾಲ-ಮಹೇಂದ್ರಜಾಲ, ಕಾಯದೇಭಾಗ, ತಂತ್ರ-ಮಂತ್ರ-ಯಂತ್ರ, ಸರ್ವ ಮುಹೂರ್ತ ವಿಷಯ, ವೈದ್ಯಭಾಗ. ಈ ಪ್ರಕಾರ ೭ ಪ್ರಕರಣಗಳಿದ್ದು ಅತ್ಯಂತ ಮಹತ್ವದ ವಿಷಯಗಳು ಅಡಕವಾಗಿವೆ. ಇದರ ಬೆಲೆ ರೂ- ೧--೦--೦ ವಿ. ಪಿ. ಚಾರ್ಜು ಬೇರೆ.

ವಿಳಾಸ:— ಎಸ್. ಸಿ. ಸಾಲಿಮಠ ಅಂಡ್ ಸನ್ಸ್, ಗದಗ ಸಿಟಿ.

ಅನೇಕ ಮರ್ಮ ವಿದ್ಯೆಗಳಿಂದೊಡಗೂಡಿದ

—ಚಿಂತಾರತ್ನ—

ಇದರಲ್ಲಿ ಜಾತಕಫಲ, ಕೈಗಾರಿಕೆಯ ವಿಷಯ, ಇಂದ್ರಜಾಲ, ಮಹೇಂದ್ರಜಾಲ, ಯಕ್ಷಿಣಿ ಮೊದಲಾದ ವಿದ್ಯೆಗಳು ಇರುತ್ತವೆ. ಒಂದೊಂದು ವಿಷಯಕ್ಕೆ ಎಷ್ಟು ಬೆಲೆ ಕೊಟ್ಟರೂ ಸಾಲದು.

೧ ಸಬಕಾರವನ್ನು ತಯಾರಿಸುವ ರೀತಿ
೨ ಮೇಣಬತ್ತಿ ತಯಾರಿಸುವ ರೀತಿ
೩ ಕಾಸ್ಟಿಕ್ ಸೋಡಾ ತಯಾರಿಸುವದು
೪ ಬಿಸ್‌ಕ್ಯೂಟ ತಯಾರಮಾಡುವದು
೫ ದಶಾಂಗ ತಯಾರಮಾಡುವದು
೬ ಪೆಪ್ಪರಮೆಂಟ ಮಾಡುವದು
೭ ದೂಪದ ಪಟ್ಟಿ ಮಾಡುವದು
೮ ಭಂಗಾರ ಮಾಡುವದು
೯ ಬೆಳ್ಳಿ ತಯಾರಮಾಡುವದು
೧೦ ಜರ್ಮನ್ ಶಿಲ್ವರ ಧಾತು
೧೧ ಊದಿನಕಡ್ಡಿ ತಯಾರಮಾಡುವದು
೧೨ ತಗಡಿನ ಪಾಟಿ ತಯಾರಮಾಡುವದು
೧೩ ಕುಂಕುಮವನ್ನು ತಯಾರಿಸುವದು
೧೪ ಹಸಿ ಕುಂಕುಮ ತಯಾರಿಸುವದು
೧೫ ಗೋದೀಸರಿ ಕೆಡದಂತೆ ಮಾಡುವದು
೧೬ ಬುಕ್ಕಿಟ್ಟು ಮಾಡುವದು
೧೭ ಮಿಾನಸರಿ ಯಾವಾಗಲೂ ನೀರಾಗಿರುವಂತೆ ಮಾಡುವದು
೧೮ ಅಷ್ಟಗಂಧ ಸಾಮಾನುಗಳು
೧೯ ಭರ್ಪ ತಯಾರಮಾಡುವದು
೨೦ ಕಟ್ಟಿಗೆ ಲೋಹಗಳಿಗೆ ಹಚ್ಚುವ ಬಣ್ಣ ಮಾಡುವದು
೨೧ ಕಾಗದವನ್ನು ಮಾಡುವದು
೨೨ ಮೆಂಥೇಲ ಎಣ್ಣೆ ತಯಾರಿಸುವದು
೨೩ ಕನ್ನಡಿಯ ಮೇಲೆ ಬರೆಯುವದು
೨೪ ನಂತಮಂಜನ ಮಾಡುವದು
೨೫ ರಕ್ತಶುದ್ಧಿ, ಧಾತುವೃದ್ಧಿ ಔಷಧ
೨೬ ಕಸ್ತೂರಿ ಮಾತ್ರೆ ಮಾಡುವದು
೨೭ ಕುಚಪ್ರಭಾತಕ್ಕೆ ಔಷಧ
೨೮ ಬಾಲಾಮೃತ ಮಾಡುವದು
೨೯ ಶಿಶ್ನವೃದ್ಧಿಗೆ ಔಷಧ
೩೦ ಶರಬತ್ತು ಮಾಡುವದು
೩೧ ಛಳಿಜ್ವರದ ಗುಳಿಗೆ ಮಾಡುವದು
೩೨ ಬೂಟಪಾಲೀಸ ಮಾಡುವದು
೩೩ ಮನೆ, ವಠಾರ, ಅಂಗಡಿ ಮೊದಲಾದುವುಗಳಿಗೆ ಗೆದ್ದಲು ಹತ್ತದಂತೆ ಮಾಡುವದು
೩೪ ಹುರುಕು ಬಜ್ಜಿ ಮುಲಾಮು ಮಾಡುವದು
೩೫ ನಾಸೀಪುಡಿ ಮಾಡುವದು
೩೬ ಮನೆ, ವಠಾರ, ಅಂಗಡಿಗಳಲ್ಲಿ ಇಲಿ, ಹೆಗ್ಗಣ ಮೊದಲಾದವುಗಳು ಇರದಂತೆ ಮಾಡುವದು
೩೭ ಜರ್ದಾತಂಬಾಕ ಮಾಡುವದು
೩೮ ಒಸನೆ, ಕುಂಬಳ ಮುಂತಾದ ಕಾಯಿಗಳಿಗೂ, ಮಾವು, ಲೀಬು ಮುಂತಾದ ಹಣ್ಣುಗಳಿಗೂ ಬೀಜವಿಲ್ಲದೆ ದೊಡ್ಡವಾಗುವದು
೩೯ ಸಿಮೆಂಟ್ ತಯಾರಿಸುವದು
೪೦ ಬಿಳೀ ಹೂಗಳು ಕೆಂಪಾಗುವಂತೆ ಗಿಡಗಳನ್ನು ತಯಾರಿಸುವದು
೪೧ ಕೆಂಪು ಹೂಗಳು ಬೆಳ್ಳಗಾಗುವಂತೆ ಗಿಡಗಳನ್ನು ತಯಾರಿಸುವದು
೪೨ ಇಸ್ಪೀಟಿನ ಚಮತ್ಕಾರ
೪೩ ಮುಖ ನೋಡಿಕೊಳ್ಳುವ ಕನ್ನಡಿ ಮಾಡುವದು
೪೪ ಸುವಾಸನೆ ಎಣ್ಣೆ ತಯಾರಿಸುವದು
೪೫ ಕೇದಿಗೆ ದವನದೆಣ್ಣೆ ಮಾಡುವದು
೪೬ ಯಾವ ಗಿಡವಾದರೂ ಹುಟ್ಟುತ್ತಲೆ ಹೂವು ಬಿಡುವಂತೆ ಮಾಡುವದು
೪೭ ಗಂಧಕದ ಬಟ್ಟಲ ತಯಾರಿಸುವದು
೪೮ ಕರ್ಪೂರ ಮಾಡುವದು
೪೯ ಬ್ರೆಡ್ಡು ತಯಾರಿಸುವದು
೫೦ ನೂಲು ಬಟ್ಟೆಗೆ ಬಣ್ಣ ಹಾಕುವದು
೫೧ ಕಪ್ಪು, ಕೆಂಪು, ಹಸುರು, ಹಳದಿ ಬಣ್ಣ ತಯಾರಿಸುವದು
೫೨ ಬರ್ಫ ಕಂಟ್ರೋಲ
೫೩ ಅರಗಿನ ಬಣ್ಣ ತಯಾರಿಸುವದು
೫೪ ಗಿಲೀಟ ಮಾಡುವದು
೫೫ ತಾಮ್ರದ ಮೇಲೆ ಭಂಗಾರದ ಗಿಲೀಟು ಮಾಡುವದು
೫೬ ತಾಮ್ರ, ಹಿತ್ತಾಳಿಗೆ ಬೆಳ್ಳಿ ಗಿಲೀಟು ಮಾಡುವದು
೫೭ ಕಡ್ಡಿ ಪೆಟ್ಟಿಗೆ ತಯಾರಿಸುವದು
೫೮ ರೋಜವಾಟರ ತಯಾರಿಸುವದು

ಇತ್ಯಾದಿ ೧೭೦ ವಿಷಯಗಳಿವೆ.
ಸ್ಥಳ ಸಂಕೋಚ ಮೂಲಕ ಎಲ್ಲವನ್ನೂ ಕೊಟ್ಟಿಲ್ಲ.
ಬೆಲೆ ೧ ರೂಪಾಯಿ . . (ವಿ. ಪಿ. ವೆಚ್ಚ ಬೇರೆ)

ಎಸ್. ಸಿ. ಸಾಲಿಮಠ, ಪ್ರಿಂಟರ, ಗದಗ
ಇವರಿಂದ ಬರೆಯಲ್ಪಟ್ಟ

ಕಾಮಕಳಾಶಾಸ್ತ್ರ

ಪ್ರತಿ ಒಬ್ಬ ರಸಿಕರು ಅವಶ್ಯ ಓದಬೇಕಾದ
—ಈ ಪುಸ್ತಕದೊಳಗಿನ ವಿಷಯಗಳು—

೧ ಪುರುಷ ಸಾಮುದ್ರಿಕ ಲಕ್ಷಣ ೨ ಸ್ತ್ರೀ ಸಾಮುದ್ರಿಕ ಲಕ್ಷಣ. ೩ ಶಶಕ ಜಾತಿ ಪುರುಷನ ಲಕ್ಷಣ. ೪ ಮೃಗಜಾತಿ ಪುರುಷನ ಲಕ್ಷಣ. ೫ ವೃಷಭಜಾತಿ ಪುರುಷನ ಲಕ್ಷಣ. ೬ ಅಶ್ವಜಾತಿ ಪುರುಷನ ಲಕ್ಷಣ. ೭ ಪದ್ಮಿನಿಜಾತಿ ಸ್ತ್ರೀಯಳ ಲಕ್ಷಣ. ೮ ಚಿತ್ರಿಣಿಜಾತಿ ಸ್ತ್ರೀಯಳ ಲಕ್ಷಣ. ೯ ಶಂಖಿನಿಜಾತಿ ಸ್ತ್ರೀಯಳ ಲಕ್ಷಣ. ೧೦ ಹಸ್ತಿನಿಜಾತಿ ಸ್ತ್ರೀಯಳ ಲಕ್ಷಣ. ೧೧ ಯಾವ ಯಾವ ಜಾತಿ ಪುರುಷನಿಗೆ, ಯಾವ ಯಾವ ಜಾತಿ ಸ್ತ್ರೀಯಳು ಯೋಗ್ಯ. ೧೨ ಮತ್ತು ಅವರಿಂದ ಹುಟ್ಟಿದ ಮಕ್ಕಳ ಫಲವಿಚಾರ (ಜಾತಕ.) ೧೩ ಯಾವ ಯಾವ ಜಾತಿ ಸ್ತ್ರೀಯರಿಗೆ ಯಾವ ಯಾವ ತಿಥಿಯ ದಿವಸ ಭೋಗೇಚ್ಛಾ ಉಂಟಾಗುತ್ತವೆಂಬುದನ್ನು ತಿಳಿಯುವದು. ೧೪ ಯಾವ ಯಾವ ಸ್ತ್ರೀಯರಿಗೆ ಎಷ್ಟೆಷ್ಟು ಹೊತ್ತಿಗೆ ಭೋಗೇಚ್ಛಾ ಉಂಟಾಗುತ್ತದೆಂಬುದನ್ನು ತಿಳಿಯುವದು. ೧೫ ಯಾವ ಯಾವ ಜಾತಿ ಸ್ತ್ರೀಯರಿಗೆ ಯಾವ ಯಾವ ತಿಥಿಯ ದಿವಸ ಯಾವ ಯಾವ ಅವಯವದಲ್ಲಿ ಕಾಮವು ಇರುತ್ತದೆಂಬುದನ್ನು ತಿಳಿಯುವ ಕ್ರಮವು. ೧೬ ಚಂದ್ರಕಲೆಯ ಸ್ಥಾನಗಳು. ೧೭ ಸ್ತ್ರೀವಶೀಕರಣ. ೧೮ ಪುರುಷವಶೀಕರಣ. ೧೯ ಪದ್ಮಿನಿ ಸ್ತ್ರೀಯಳನ್ನು ವಶಮಾಡಿಕೊಳ್ಳುವ ಉಪಾಯ. ೨೦ ಚಿತ್ರಿಣಿ ಸ್ತ್ರೀಯಳನ್ನು ವಶಮಾಡಿಕೊಳ್ಳುವ ಉಪಾಯ. ೨೧ ಶಂಖಿನಿ ಸ್ತ್ರೀಯಳನ್ನು ವಶಮಾಡಿಕೊಳ್ಳುವ ಉಪಾಯ. ೨೨ ಹಸ್ತಿನಿ ಸ್ತ್ರೀಯಳನ್ನು ವಶಮಾಡಿಕೊಳ್ಳುವ ಉಪಾಯ. ೨೩ ಭೋಗಕ್ಕೆ ಯೋಗ್ಯ ಸ್ಥಳ. ೨೪ ಭೋಗಕ್ಕೆ ಅಯೋಗ್ಯ ಸ್ಥಳ. ೨೫ ಮೈಥುನಕ್ಕೆ ಅಯೋಗ್ಯವಾದ ವೇಳೆ. ೨೬ ಮೈಥುನಕ್ಕೆ ಅಯೋಗ್ಯ ಸ್ತ್ರೀಯರು ೨೭ ಪರಸ್ತ್ರೀ ಗಮನದಿಂದಾಗುವ ಹಾನಿ. ೨೮ ಸುಗಂಧ ದ್ರವ್ಯ. ೨೯ ಕಂಕುಳದೊಳಗಿನ ದುರ್ಗಂಧ ಹೋಗುವುದಕ್ಕೆ. ೩೦ ಬಾಯಿ ದುರ್ಗಂಧ ಹೋಗುವುದಕ್ಕೆ. ೩೧ ಮಡಿಬಕ್ಕೆಗೆ. ೩೨ ಕೇಶರಂಜನಕ್ಕೆ. ೩೩ ತಿಗಳಿನೆಕ್ಕಿದಕ್ಕೆ. ೩೪ ಕೂದಲು ಉದುರುವುದಕ್ಕೆ. ೩೫ ಶರೀರದ ಕಪ್ಪುಬಣ್ಣಕ್ಕೆ. ೩೬ ಕುಚ ವೃದ್ಧಿಗೆ. ೩೭ ಸ್ತ್ರೀಯರಲ್ಲಿಯ ಅವಸ್ಥೆಗಳು. ೩೮ ಅವಸ್ಥೆ ಮೇಲಿಂದ ಪ್ರೇಮದ ಇರುವಿಕೆ. ೩೯ ಮೈಥುನದ ಸುಖದಲ್ಲಿ ಅಂತರ ಬೀಳುವ ಕಾರಣ. ೪೦ ದಂಪತಿಗಳು ಕೂಡುವ ದಿಕ್ಕಿನ ಫಲವು. ೪೧ ಸತಿಪತಿಗಳು ಕೂಡುವ ದಿವಸ ಫಲ. ೪೨ ಗರ್ಭ ನಿಂತ ದಿವಸ ಫಲ. ೪೩ ಗರ್ಭ ನಿಂತ ಕಾಲ ಫಲ ೪೪ ಸ್ತ್ರೀಯರ ಜಾತಿ ಮೇಲಿಂದ ಕೂಸಿನ ಲಕ್ಷಣ. ೪೫ ವಿಕಾಸಯೋನಿಗೆ ಉಪಾಯ. ೪೬ ಯೋನಿ ಸಂಕೋಚಕ್ಕೆ. ೪೭ ಶಿಶ್ನ ವೃದ್ಧಿಗೆ. ೪೮ ಸ್ತ್ರೀಯರಿಗೆ ಮೈಥುನವು ಬೇಗನೆ ಸಾಕಾಗುವಂತೆ ಮಾಡುವ ಉಪಾಯ. ೪೯ ಪುರುಷರಿಗಿಂತ ಮೊದಲು ಸ್ತ್ರೀಯರ ರೇತಸ್ಖಲನವಾಗುವ ಉಪಾಯ. ೫೦ ಪುರುಷರ ರೇತಸ್ಸು ಬೇಗ ಬೀಳಬಾರದೆಂಬುದಕ್ಕೆ ಉಪಾಯ. ೫೧ ವಾಜೀಕರಣ ಪ್ರಯೋಗ. ೫೨ ಸ್ತ್ರೀಯರನ್ನು ಜಯಿಸುವುದಕ್ಕೆ. ೫೩ ಬಹಳ ಮುಟ್ಟಾಗುತ್ತಿದ್ದರೆ. ೫೪ ಸಂತತಿ ಪ್ರತಿಬಂಧಕ ಉಪಾಯ. ೫೫ ಮುಟ್ಟು ತಡೆದಿದ್ದರೆ. ೫೬ ಗರ್ಭಾಶಯ ಶುದ್ಧಿಗೆ. ೫೭ ಗರ್ಭಧಾರಣಕ್ಕೆ. ೫೮ ಗರ್ಭಪಾತಕ್ಕೆ ಉಪಾಯ.

ಇತ್ಯಾದಿ ೧೭೦ ವಿಷಯಗಳಿವೆ. ಸ್ಥಳ ಸಂಕೋಚ ಮೂಲಕ ಎಲ್ಲವನ್ನೂ ಕೊಟ್ಟಿಲ್ಲ.
ಬೆಲೆ ೧ ರೂಪಾಯಿ (ವಿ. ಪಿ. ವೆಚ್ಚ ಬೇರೆ)

ವಿಳಾಸ:—ಎಸ್. ಸಿ. ಸಾಲಿಮಠ ಅಂಡ್ ಸನ್ಸ್, ಗದಗ ಸಿಟಿ.

ಶ್ರೀ. ಎ. ಬಿ. ಶೆಟ್ಟಿ ವಂದನಾರ್ಪಣೆ

TO

The Editor,

Navayuga Udipi.

In the name of the Congress I crave indulgence of the hospitable columns of Navayuga to offer my grateful thanks to all the people who have given me their votes and supported my candidature. Several friends have done their best for me and contributed to the success of the Congress cause by spending their time labour and money in a most ungrudging spirit. It is impossible to speak too highly of the splendid service done by young volunteers everywhere Their love and devotion has touched the hearts of the people. Gowd Saraswats have stood by the Congress almost to a man and set an example to the other communities in our District. All honour is due to the members of the Karkala bar who by their unanimous support gave a definite lead to the people at the very commencement of the campaign. But it was all plain sailing in Karkal Taluk compared with the storm we had to face in the troubled voters beyond Mabkal The severest fight had to be waged in Coondapoor taluk where wealth and violence was pitted against the Congress; but thanks to the earnest and persevering work of sincere friends there we were fortunate in winning the general goodwill of the common people and shattering successfully the fortresses of the justice party. Tremendous efforts were made at Udipi and Coondapoor to set Dravida Brahmins against the congress by false propaganda and personal appeals but some stalwart Brahmin congressmen came to our rescue in several centres and frustrated the hopes of the opposite side. The Justice Party candidate and his supporters have by their opposition done a good turn for the Congress. But for this election contest no mass contact would have been established with the Congress. Among those who have done propaganda work and carried the congress message to the man in the village Mr. Narayan Kille deserves special mention. The visit of Pandit Jawaharlal Nehru and his whirlwind tour in the District gave the finishing touch to this work of popularising the Congress. I shall be failing in my duty if I close this letter without expressing my obligations to Navayuga for the contribution it has made to the success of the Congress campaign by its bold advocacy of the national cause. May it live long and flourish!

Madras
20-2-37

A. B. Shetty

ನವಯುಗ ಸಂಪಾದಕರಿಗೆ —

ನನಗೆ ತಮ್ಮ ಓಟು ಕೊಟ್ಟಿರುವ ಮತ್ತು ನನ್ನ ಉಮೇದ್ವಾರಿಕೆಗೆ ಬೆಂಬಲಿಸಿತ್ತಿರುವ ಎಲ್ಲಾ ಜನರಿಗೆ ಕೃತಜ್ಞತಾಪೂರ್ವಕವಾದ ವಂದನೆಯನ್ನರ್ಪಿಸಲು, ಕೋಂಗ್ರೆಸ್ಸಿನ ಹೆಸರಲ್ಲಿ ನಾನು ನವಯುಗದ ಉದಾರಾಶಯವನ್ನು ಕೇಳಿಕೊಳ್ಳುತ್ತೇನೆ. ಅನೇಕ ಮಿತ್ರರು ನನಗೆ ತಮ್ಮಿಂದ ಸಾಧ್ಯವಾದಷ್ಟು ಸಹಾಯ ಮಾಡಿ, ಅತ್ಯಂತ ಉದಾರ ಮನಸ್ಸಿನಿಂದ ತಮ್ಮ ಸಮಯ, ಶ್ರಮ ಮತ್ತು ಧನವ್ಯಯಿಸಿ ಕೋಂಗ್ರೆಸ್ಸಿನ ಪ್ರಚಂಡ ವಿಜಯಕ್ಕೆ ಸಹಾಯಕರಾಗಿರುವರು. ಪ್ರತಿಯೊಂದು ಕಡೆಯಲ್ಲಿಯೂ ತರುಣ ಸ್ವಯಂಸೇವಕರು ಮಾಡಿರುವ ಮಹತ್ವಾದ ಸೇವೆಯನ್ನು ವರ್ಣಿಸಿ ಹೇಳುವರೆ ಸಾಧ್ಯವಿಲ್ಲ. ಅವರ ದೇಶಪ್ರೇಮ ಮತ್ತು ಭಕ್ತಿಯು ಜನತೆಯ ಹೃದಯವನ್ನೊಲಿಸಿರುವುದು,

ಗೌಡಸಾರಸ್ವತರು ಹೆಚ್ಚು ಕಡಿಮೆ ಪ್ರತಿಯೊಬ್ಬರೂ ಎಂಬಂತೆ ಕೋಂಗ್ರೆಸ್ಸಿನ ಸಹಾಯಕ್ಕೆ ಬಂದು ಜಿಲ್ಲೆಯ ಇತರ ಸಮಾಜಗಳಿಗೊಂದು ಉಜ್ವಲ ಮಾದರಿ ಹಾಕಿ ಕೊಟ್ಟಿರುವರು. ಕೋಂಗ್ರೆಸ್ಸಿನ ಚುನಾವಣೆಯ ಚಳವಳಿಯನ್ನಾರಂಭಿಸುವ ಹೊತ್ತು ಮೊದಲಲ್ಲೇ ಒಮ್ಮತದಿಂದ ಅದರ ಬೆಂಬಲಕ್ಕೆ ನಿಂತು ಜನತೆಗೆ ನಿಶ್ಚಿತವಾದ ದಾರಿತೋರಿಸಿಕೊಟ್ಟು ಕೆಲಸಮಾಡಿದ ಕಾರ್ಕಳದ ವಕೀಲರ ಸಂಘವನ್ನು ನಾನೆಷ್ಟು ವಂದಿಸಿದರೂ ಸಾಲದು. ಆದರೆ ಮಾಬುಕಳ ನದಿಯತ್ತ ಕಡೆ ಎಬ್ಬಿಸಲ್ಪಟ್ಟ ಬಿರುಗಾಳಿಯ ನಿಮಿತ್ತ ನಾವು ಇದಿರಿಸಬೇಕಾದ ಕೋಲಾಹಲದೊಡನೆ ಸರಿಹೋಲಿಸಿದರೆ ಕಾರ್ಕಳ ತಾಲೂಕಿನ ಕೆಲಸವು ಅನಾಯಾಸವಾದುದೆಂದೇ ಹೇಳಬಹುದು. ಅತ್ಯಂತ ತೀವ್ರವಾದ ಹೋರಾಟದ ರಂಗಸ್ಥಳವೆಂದರೆ ಕುಂದಾಪುರ ತಾಲೋಕು. ಇಲ್ಲಿ ಧನದೌಲತ್ತು ಮತ್ತು ನಾನಾ ರೀತಿಯ ಹಿಂಸೆಗಳೊಡನೆ ಕೋಂಗ್ರೆಸ್ಸು ಸೆಣಸಾಡಬೇಕಾಗಿದ್ದಿತು. ಆದರೆ ಅಲ್ಲಿಯ ಯಥಾರ್ಥ ಮಿತ್ರರ ಮನಃಪೂರ್ವಕವಾದ ಮತ್ತು ಅವಿಶ್ರಾಂತವಾದ ಕೆಲಸದ ಪರಿಣಾಮವಾಗಿ ನಾವು ಜನಸಾಮಾನ್ಯರ ಮನಸ್ಸನ್ನು ಒಲಿಸಿಕೊಳ್ಳುವ ಮತ್ತು ಜಸ್ಟಿಸ್ ಪಕ್ಷದ ಕೋಟೆಗಳನ್ನು ಜಯಶೀಲವಾಗಿ ಭೇದಿಸಿಬಿಡುವ ಸುದೈವಿಗಳಾದೆವು. ಇದಕ್ಕಾಗಿ ಈ ಮಿತ್ರರಿಗೆಲ್ಲಾ ನನ್ನ ಹೃತ್ಪೂರ್ವಕ ವಂದನೆಗಳು.

ಸುಳ್ಳು ಪ್ರಚಾರ ಮತ್ತು ವೈಯಕ್ತಿಕ ದೂರು ದೂಷಣೆಗಳಿಂದ ಕುಂದಾಪುರ ಮತ್ತು ಉಡುಪಿಯ ದ್ರಾವಿಡ ಬ್ರಾಹ್ಮಣರನ್ನು ಕೋಂಗ್ರೆಸ್ಸಿಗೆ ಎದುರು ನಿಲ್ಲಿಸಲು ನಡೆಸಲ್ಪಟ್ಟ ಪ್ರಯತ್ನವೇನೂ ಅಷ್ಟಿಷ್ಟಲ್ಲ! ಆದರೂ ಅಗ್ರಗಣ್ಯ ಬ್ರಾಹ್ಮಣ ಕೋಂಗ್ರೆಸ್ ಮುಖಂಡರು ಕೆಲವರು ಅನೇಕ ಸೆಂಟರುಗಳಲ್ಲಿ ನಮ್ಮ ಸಹಾಯಕ್ಕೆ ಬಂದು ಪ್ರತಿಪಕ್ಷೀಯರನ್ನು ಭಗ್ನಮನೋರಥರನ್ನಾಗಿ ಮಾಡಿದರು. ಜಸ್ಟಿಸ್ ಪಕ್ಷದ ಉಮೇದ್ವಾರಿಯೂ ತನ್ನ ಸಹಾಯಕರೂ ಕೋಂಗ್ರೆಸ್ಸನ್ನು ವಿರೋಧಿಸಿ ಅದಕ್ಕೊಂದು ಉಪಕಾರವನ್ನೇ ಮಾಡಿದಂತಾಗಿದೆ. ಈ ಚುನಾವಣೆಯಲ್ಲಿ ಅವರು ಪ್ರತಿಸ್ಪರ್ಧಿಸದಿದ್ದಲ್ಲಿ ಕೋಂಗ್ರೆಸ್ಸಿಗೆ ಇಷ್ಟೊಂದು ಜನಸಮುದಾಯ ಸಂಪರ್ಕವುಂಟಾಗಲು ಸಂದರ್ಭವೇ ದೊರೆಯುತ್ತಿದ್ದಿಲ್ಲ. ಕೋಂಗ್ರೆಸ್ಸಿನ ಪರವಾಗಿ ಎಡೆಬಿಡದೆ ಪ್ರಚಾರಮಾಡಿ, ಕೋಂಗ್ರೆಸ್ಸಿನ ಸಂದೇಶವನ್ನು ಹಳ್ಳಿ ಹಳ್ಳಿಗೂ ಒಯ್ದವರಲ್ಲಿ ಶ್ರೀ ನಾರಾಯಣ ಕಿಲ್ಲೆಯವರ ಹೆಸರನ್ನು ನಾನು ಎತ್ತಿಹೇಳಬೇಕು. ಜಿಲ್ಲೆಗೆ, ಕೋಂಗ್ರೆಸ್ಸಿನ ಪ್ರೆಸಿಡೆಂಟರಾದ ಪಂಡಿತ ಜವಾಹರಲಾಲರ ಸಂದರ್ಶನ ಮತ್ತು ಅವರ ಸುಳಿಗಾಳಿಯಂತಹ ಸಂಚಾರದಿಂದ ಕೋಂಗ್ರೆಸ್ಸನ್ನು ಜನಾದರಗೊಳಿಸುವ ಈ ಕೆಲಸಕ್ಕೆ ಕೊನೆಯ ಒಪ್ಪ ಹಾಕಿದಂತಾಯಿತು. ನವಯುಗಕ್ಕೆ ಆಭಾರಸೂಚಿಸದೆ ಈ ಲೇಖನವನ್ನು ಕೊನೆಗೊಳಿಸಿದರೆ ನಾನು ನನ್ನ ಕರ್ತವ್ಯ ಭಂಗಮಾಡಿದಂತಾಗದಿರದು. ನವಯುಗವು ಧೈರ್ಯದಿಂದ ರಾಷ್ಟ್ರ ಹಿತವನ್ನು ಪ್ರತಿಪಾದಿಸಿ, ಕಾಂಗ್ರೆಸಿನ ಚಳವಳಿಯನ್ನು ಜಯಶೀಲಗೊಳಿಸುವುದರಲ್ಲಿ ಪಾಲುಪಡೆದಿರುವುದು. ಅದು ದೀರ್ಘಕಾಲ ಬಾಳಿಬೆಳಗಲಿ!

ಮದ್ರಾಸು.
ತಾ. .8-..37

ಎ. ಬಿ. ಶೆಟ್ಟಿ.

THE THUMPING MAJORITY

IN OUR FAVOUR

PROVES THE CONFIDENCE

REPOSED IN US BY A DISCRIMINATING PUBLIC.

ESTD. 1906

CANARA BANK

LIMITED.

RESOURCES OF A CRORE.

(ಪುಟ ೩ರಿಂದ)

ಮತ್ತು ದೋಲ್ಪುರದ ಮಹಾರಾಜರೊಳಗೆ ತೀವ್ರ ಪ್ರತಿಸ್ಪರ್ಧೆಯಿದ್ದಿತು. ಈ ಸ್ಪರ್ಧೆಗಾಗಿ ಪಾಟಿಯಾಲದ ಮಹಾರಾಜರು ಹಣವನ್ನು ನೀರಿನಂತೆ ವ್ಯಯಿಸಿರುವರೆಂದೂ, ಸುಮಾರು ಒಂದುಕೋಟಿ ವ್ಯಯವಾಗಬಹುದೆಂದೂ ಸುದ್ದಿಯುಂಟಾಗಿದೆ. ಚುನಾವಣೆಯಲ್ಲಿ 30 ಓಟು ಪಾಟಿಯಾಲದ ಮಹಾರಾಜರಿಗೂ 13 ಓಟು ದೋಲ್ಪುರದ ಮಹಾರಾಜರಿಗೂ ದೊರೆತಿರುವುದು.

ನವಯುಗಕ್ಕೆ ಇಂದೇ ಚಂದಾದಾರರಾಗಿರಿ!

ವಿಶ್ವವಿಚಾರ

ಸ್ಪೆಯಿನು ದಂಗೆಯ ಪೋಷಕನಾರು?

ಸ್ಪೆಯಿನಿನಲ್ಲಿ ಕೆಲವು ತಿಂಗಳಿಂದ ರಕ್ತವ ಶರಪೃತುವೇ ನಡೆಯುತ್ತಿದೆ. ರಕ್ತಪ್ರವಾಹವು ಹರಿಯುತ್ತಿದೆ. ಮಕ್ಕಳು ಮರಿಗಳೆಂದಿಲ್ಲ, ಮುದುಕರು ಹೆಂಗಸರೆಂದಿಲ್ಲ, ಎಲ್ಲರನ್ನೂ ಒಂದೇ ರೀತಿ ದಂಗೆಗಾರರ ಬೊಂಬುಗಳು ಭಸ್ಮಮಾಡುತ್ತಿವೆ! ಅನ್ನಬಟ್ಟೆಗೆ ಗತಿಯಿಲ್ಲದೆ, ನಿಲ್ಲಲು ಮನೆಮಾರಿಲ್ಲದೆ, ಬದುಕಿ ಉಳಿದ ಬಂಧುಗಳನ್ನು ಕಟ್ಟಿಕೊಂಡು ಕಂಡಲ್ಲಿಗೋಡುತ್ತಿರುವ ಅನಾಥರ ಸಂಖ್ಯೆಯು ದಿನದಿಂದ ದಿನಕ್ಕೆ ಬೆಳೆಯುತ್ತಿದೆ. ಈ ಮಹಾಯುದ್ಧದಲ್ಲಿ ಪ್ರಥಮತಃ ದಂಗೆಗಾರರು ಒಂದಿಷ್ಟು ಆವೇಗದಿಂದ ವಿಜಯದ ಕಡೆಗೆ ಧಾವಿಸಿದ್ದರು. ಕೊನೆಗೆ ಸರಕಾರವೂ ಬಲಗೊಂಡು ಅಲ್ಲಲ್ಲಿ ಗಲಭೆಗಾರರಿಗೆ ತೀಕ್ಷ್ಣವಾದ ಏಟುಕೊಟ್ಟು ಹಿಂದಕ್ಕಟ್ಟಿದೆ. ಈಗ ಒಂದೆಡೆಯಲ್ಲಿ ದಂಗೆಗಾರರು ಒಂದೆಜ್ಜೆ ಮುಂದೊತ್ತಿದರೆ ಇನ್ನೊಂದೆಡೆಯಲ್ಲಿ ಸರಕಾರದವರು ಅವರನ್ನು ಎರಡು ಹೆಜ್ಜೆ ಹಿಂದೆ ದೂಡುತ್ತಾರೆ. ಹೀಗಾಗಿ ಈ ಯುದ್ಧದ ತೀರ್ಮಾನವು ಯಾವಾಗ ಆಗುವದೆಂಬುದನ್ನು ಹೇಳಬರುವುದಿಲ್ಲ. ಅಂತೂ ಇದೊಂದು ಭಯಂಕರ ಯುದ್ಧ. ಇದರ ಪರಿಣಾಮವು ಲೋಕವ್ಯಾಪಿಯಾಗಲಿದೆ. ಆದ್ದರಿಂದ ಪ್ರಪಂಚದ ಎಲ್ಲಾ ರಾಷ್ಟ್ರಗಳು ಕಣ್ಣು ಕಿವಿಯರಳಿಸಿ ಈ ಯುದ್ಧದ ಪರ್ಯವಸಾನವನ್ನು ಕಾದುಕೂತಿವೆ.

ಈ ಮಹಾ ವಿಪ್ಲವಕ್ಕೆ ಕಾರಣವೇನು? ಇದರ ಮೂಲಪುರುಷರಾರು? ಎಂಬುದನ್ನು ನೋಡೋಣ. ಸ್ಪೆಯಿನ್ ಯುದ್ಧದ ಕೊನೆಯ ಪರಿಣಾಮವನ್ನು ಊಹಿಸಲು ಬರುತ್ತದೆ. ದಂಗೆಗಾರರಿಗೆ ಜಯವಾದರೆ 'ಫಸಿಸ್ಟ' ರಾಜ್ಯಭಾರವು ಸ್ಥಾಪಿಸಲ್ಪಡುವದು. ಸರಕಾರವು ಗೆದ್ದರೆ 'ಸೋಸಿಯಲಿಸ್ಟ' ಕ್ರಮವೇ ಜಾರಿಗೆ ಬರುವದು. ಆದ್ದರಿಂದಲೇ ಸ್ವಾಭಾವಿಕವಾಗಿ ಸೋಸಿಯಲಿಸ್ಟ ರಾಜ್ಯಗಳು ಸರಕಾರವನ್ನೂ ಫಸಿಸ್ಟ ಸರಕಾರಗಳು ದಂಗೆಗಾರರನ್ನೂ ಸಮರ್ಥಿಸುತ್ತವೆ. ನಿಜ. ಆದರೆ ಈ ಯುದ್ಧದ ಮೂಲವಾವುದು? ಪ್ರಥಮತಃ ಸರಕಾರದ ವಿರುದ್ಧವಾಗಿ ದಂಗೆಯೆದ್ದವನು ಜನರಲ್ ಫ್ರಾಂಕೊ. ಈಗ ದಂಗೆಗಾರರ ನಾಯಕನೂ ಅವನೆ. ಆದರೆ ಅವನಲ್ಲೇನಿದೆ ಅಂತಹ ಅನುಕೂಲತೆ? ದಂಗೆಯ ನಾಯಕತ್ವವನ್ನು ವಹಿಸಲಿಕ್ಕೆ ಅವನಿಗೆ ಗೊತ್ತಿರಬಹುದು. ದಂಗೆಗಾರರಲ್ಲಿ ಸಂಘಟನೆಯನ್ನುಂಟುಮಾಡುವ ರೀತಿಯನ್ನವನು ಕಲಿತಿರಬಹುದು. ಅವನಿಂದು ದಂಗೆಯ ನಾಯಕನೆನ್ನುವದು ಅಷ್ಟಕ್ಕಾಗಿಯೆ. ಇನ್ನು ಇಷ್ಟು ದೊಡ್ಡ ವಿಪ್ಲವಕ್ಕೆ ಬೇಕಾಗುವ ಹಣವು ಅವನಿಗೆಲ್ಲಿಂದ? ಯಾವ ಕೆಲಸವಾದರೂ ಹಣವಿಲ್ಲದೆ ಆಗುವದಿಲ್ಲವಷ್ಟೆ! ಬೊಂಬುಗಳು ಶಬ್ದ ಮಾಡಬೇಕಾದರೂ ಮೊದಲು ಹಣದ ಕಿಣಿಕಿಣಿ ಶಬ್ದವು ಆಗಲೇಬೇಕು. ಜನರಲ್ ಫ್ರಾಂಕೋವಿನ ಈ ಮಹಾ ದಂಗೆಗೆ, ದಿನಂಪ್ರತಿ ಲಕ್ಷಗಟ್ಟಳೆ ವ್ಯಯವಾಗಬೇಕಾದ ಈ ಮಹಾ ವಿಪ್ಲವಕ್ಕೆ ಬೇಕಾಗುವ ಹಣವೆಲ್ಲಿಂದ ಬಂತು? ಹಿಟ್ಲರ್ ಮುಸಲೋನಿಗಳೊದಗಿಸಿದರೆ? ಫಸಿಸ್ಟ ಪದ್ಧತಿಯ ಪುರೋಹಿತರಾದ ಹಿಟ್ಲರ್ ಮುಸಲನಿಗಳಿಗೆ ಸ್ಪೆಯಿನಿನಲ್ಲಿ ಫ್ರಾಂಕೋವಿನ ರಾಜ್ಯಸ್ಥಾಪನೆಯೇನೋ ಆಗಬೇಕಾಗಿದೆ. ಈಗಿನ ಸರಕಾರವು ಹೋಗಲೇ ಬೇಕಾಗಿದೆ. ಅದಕ್ಕಾಗಿ ಅವರು ಪ್ರತ್ಯಕ್ಷವಾಗಿ ಹಾಗೂ ಅಪ್ರತ್ಯಕ್ಷವಾಗಿ ಜನರಲ್ ಫ್ರಾಂಕೋವಿಗೆ ಸಹಾಯಮಾಡುತ್ತಿರುವುದೂ ನಿಜ. ಆದರೆ ಅವರೇ ಈ ದಂಗೆಯ ಮೂಲಪುರುಷರೆಂದರೆ ತಪ್ಪಾಗುವದು. ದಂಗೆಯು ಪ್ರಾರಂಭವಾಗುವ ಮೊದಲು ಫ್ರಾಂಕೊನೊಡನೆ ಸಂಬಂಧವಾಗಲೀ ಸ್ಪೆಯಿನಿನ ಅಂತರಂಗ ವಿಷಯಗಳಲ್ಲಿ ಕೈಯಾಗಲೀ ಈ ಹಿಟ್ಲರ್ ಮುಸಲನಿಗಳಿಗಿದ್ದಿಲ್ಲ. ದಂಗೆ ಎದ್ದು ಬಲವಾಗುತ್ತಾ ಬಂತು ಎಂದಾದ ಕೂಡಲೇ ಹಿಟ್ಲರ್ ಮುಸಲನಿಗಳೂ ದಂಗೆಗಾರರಿಗೆ ಸನ್ನೆ ಮಾಡಿದರು, ನಾವು ಬೆಂಬಲಕ್ಕಿದ್ದೇವೆಂದು ಜನರಲ್ ಫ್ರಾಂಕೋವಿನ ಬೆನ್ನು ತಟ್ಟಿದರು. ಹೀಗೆ ಇವರೆಲ್ಲಾ ದಂಗೆಯನ್ನು ಪೋಷಿಸಿದವರು, ದಂಗೆಯನ್ನು ಹುಟ್ಟಿಸಿದವನಾರು ಗೊತ್ತುಂಟೆ? ಅವನೇ 'ಜ್ವಾನ್ ಮಾರ್ಚ್'! ಸ್ಪೆಯಿನಿನ ಒಬ್ಬ ಮಿಲಿಯಾಧಿಪತಿ ಜ್ವಾನ್‌ಮಾರ್ಚ.

ಜ್ವಾನಮಾರ್ಚನು ಮಜೋರ್ಕಾ ಎಂಬಲ್ಲಿ ಜನ್ಮವೆತ್ತಿದನು. ಅವನು ಹುಟ್ಟುದರಿದ್ರ. ಆದರೆ ಮುಟ್ಟಿದ್ದೆಲ್ಲಾ ಬಂಗಾರವಾಗುವಂತಹ ಅದೃಷ್ಟಶಾಲಿ ಇವನು ಸ್ಪೆಯಿನಿನಲ್ಲಿ ಪ್ರಥಮತಃ ತಂಬಾಕುವ್ಯಾಪಾರವನ್ನು ನಡೆಸುತ್ತಿದ್ದನು. ವ್ಯಾಪಾರದ ಗುಟ್ಟನ್ನು ಸರಿಯಾಗಿ ತಿಳಿದ ಜಾಣನಾಗಿದ್ದುದರಿಂದ ತನ್ನ ಕಸಬಿನಲ್ಲಿ ದಿನದಿಂದ ದಿನಕ್ಕೆ ಬೆಳೆಯುತ್ತಿದ್ದ. ಇಡೀ ಸ್ಪೆಯಿನಿನಲ್ಲಿ ಅವನ ವ್ಯಾಪಾರ ನಡೆಯುತ್ತಿತ್ತು. ದುಡ್ಡಿನ ಮುಖವನ್ನು ಮಾತ್ರ ನೋಡುವ ಮನುಷ್ಯನಲ್ಲ, ಎಲ್ಲರೊಡನೆ ಸ್ನೇಹಾಚಾರ ಹೊಕ್ಕು ಬಳಕೆಯನ್ನೂ ಮಾಡಿಕೊಂಡ. ಉತ್ತಮ ಮೇಧಾವಿಯೂ ಆಗಿದ್ದುದರಿಂದ ಸ್ಪೆಯಿನಿನಲ್ಲಿ ಮೂರು ವರ್ತಮಾನ ಪತ್ರಿಕೆಗಳನ್ನು ಸ್ಥಾಪಿಸಿ ತನ್ನ ಕಡೆಗೆ ಜನಮತವನ್ನು ಒಲಿಸಿಕೊಂಡ. ಆ ಕಾಲದಲ್ಲಿ ಸ್ಪೆಯಿನಿನ ಮಿಲಿಟರಿ ಸರ್ವಾಧಿಕಾರವು ಜನರಲ್ ಪ್ರಿಮೋ ಡಿ ರಿವೇರಾ ಎಂಬವರಿಗಿತ್ತು. ಇವರು ಮಾರ್ಚನ ಇಷ್ಟರು. ಆರ್ಥಿಕ ಸಚಿವರಾಗಿದ್ದ 'ಕೈಲೋವಾ ಸೋಟೇಲೋನ್' ಯವರೂ ಜ್ವಾನಮಾರ್ಚನ ಸ್ನೇಹಿತರು. ಇವರಿಂದ ಮೊರೊಕ್ಕೊದಲ್ಲಿ ತಂಬಾಕು ವ್ಯಾಪಾರವನ್ನು ಮಾಡುವ ಏಕಮಾತ್ರ ಅಧಿಕಾರವನ್ನು ಪಡೆದು ಮಾರ್ಚನು ಕೋಟಿಗಟ್ಟಳೆ ಹಣವನ್ನು ಸಂಪಾದಿಸಿದ.

ಸ್ವಲ್ಪಕಾಲಾನಂತರ ಸ್ಪೆಯಿನಿನ ರಾಜಕೀಯ ಕ್ಷೇತ್ರದಲ್ಲಿ ಬದಲಾವಣೆಯಾಯಿತು. ಸರ್ವಾಧಿಕಾರವು ನಿರ್ನಾಮವಾಗಿ ಪ್ರಜಾಬದ್ಧ ಸರಕಾರದ ಸ್ಥಾಪನೆಯಾಯಿತು. ಮಿಲಿಟರಿ ಸರ್ವಾಧಿಕಾರಿ ರಿವೇರಾನ ಅಧಿಕಾರವು ಕಸಿದುಕೊಳ್ಳಲ್ಪಟ್ಟಿತಲ್ಲದೆ ಆರ್ಥಿಕ ಸಚಿವ ಕೈಲೋವ ಸೋಟೆಯವರ ಕೊಲೆಯಾಯಿತು. ಜತೆಯಲ್ಲಿಯೇ ಜ್ವಾನಮಾರ್ಚನ ಪ್ರಭಾವವೂ ಪ್ರಜಾಸತ್ತಾರಾಜ್ಯಭಾರದಲ್ಲಿ ಕುಂದಿಹೋಯಿತು. ಮಾರ್ಚನ ದುಸ್ಥಿತಿಯು ಇಷ್ಟರಲ್ಲಿಯೇ ಕೊನೆಗೊಳ್ಳಲಿಲ್ಲ.

ಅವನಿಗಿದ್ದ ತಂಬಾಕು ವ್ಯಾಪಾರದ ಅಧಿಕಾರವೇ ಕಿತ್ತುಕೊಳ್ಳಲ್ಪಟ್ಟಿತಲ್ಲದೆ ಅವನ ಮೇಲೆ ಠಕ್ಕುತನದ ಆರೋಪವು ಹೊರಿಸಲ್ಪಟ್ಟು ನ್ಯಾಯಸ್ಥಾನದಲ್ಲಿ ಹಾಗೆಯೇ ನಿರ್ಧಾರವಾಯಿತು. ಜ್ವಾನಮಾರ್ಚನು ಹೇಗೋ ತಲೆತಪ್ಪಿಸಿಕೊಂಡು ಫ್ರಾನ್ಸಿಗೆ ಪಲಾಯನಮಾಡಿದ. ೧೯೩೩ರಲ್ಲಿ ಪ್ರಜಾಬದ್ಧ ಸರಕಾರದ ಸೂತ್ರಗಳು ಅಜಾನಾರವರ ಕೈಗೆ ಬಂದಾಗ ಜ್ವಾನಮಾರ್ಚನು ಸ್ಪೆಯಿನಿಗೆ ಮರಳಿದ.

ಜ್ವಾನಮಾರ್ಚನ ಪ್ರಭಾವವು ಮೊರೊಕ್ಕೋದಲ್ಲಿ ಬಹಳವಿತ್ತು. ಅವನ ಕಾರ್ಯಕಲಾಪಗಳ ಕೇಂದ್ರಸ್ಥಾನವದು. ಸ್ಪೆಯಿನಿನ ಇಂದಿನ ದಂಗೆಯು ಪ್ರಾರಂಭವಾದುದೂ ಅಲ್ಲಿಯೇ. ಈಗ ಅದು ಇಡೀ ಸ್ಪೆಯಿನಿಗೆ ವ್ಯಾಪಿಸಿರುವದಾದರೂ ಗಲಭೆಗಾರರ ಮೂಲನಿವಾಸವು ಈಗಲೂ ಅಲ್ಲಿಯೇ. ಆಲೋಚನೆಗಳು ಅಲ್ಲಿಂದಲೇ ಬರುತ್ತಿವೆ. ಮಾತ್ರವಲ್ಲ. ಪ್ರತಿ ಫಲದ ಆಸೆಯಿಂದ ಸಹಾಯಮಾಡುತ್ತಿರುವ ಇಟೆಲಿ, ಜರ್ಮನಿಗಳ ಸಹಾಯವೆಂದರೆ ದಂಗೆಗಾರರಿಗೆ ಅದೊಂದು ಸಾಲಮಾತ್ರ! ಮೂಲ ಭಂಡವಾಳವಿಲ್ಲದ ಇಂತಹ ಭಂಡಾಯವೇಳಲು ಸಾಧ್ಯವಿಲ್ಲ. ಆ ಮೂಲಧನವು ಜ್ವಾನಮಾರ್ಚನಂತಹ ಮಿಲಿಯಾಧಿಪತಿಯಿಂದಲ್ಲದೆ ಇತರರಿಂದ ಜನರಲ್ ಫ್ರಾಂಕೋಗೆ ದೊರಕದು. ಭಂಡವಾಳಗಾರರ ವಿರುದ್ಧವಿರುವ ಇಂದಿನ ಸರಕಾರದ ನಿರ್ನಾಮವನ್ನು ಮಾರ್ಚನು ಹಾರೈಸುತ್ತಿದ್ದಾನೆ. ಜನರಲ್ ಫ್ರಾಂಕೋ ಅದನ್ನೇ ಉಚ್ಚರಿಸುತ್ತಿದ್ದನೆ. ಈ ಧನಸತ್ತೆಯನ್ನು ಸ್ಥಾಪಿಸಬೇಕೆಂದು ಹೆಣಗಾಡುತ್ತಿರುವ ದಂಗೆಗಾರರ ಹಿಂಬದಿಯಲ್ಲಿ ಈ ಧನಿಕರಿದ್ದಾರೆ! ಹಾಗಿಲ್ಲದೆ ನಿರ್ವಾಹವಿಲ್ಲ. ಧನಿಕರ ದುಡ್ಡಿನ ಬಲದಿಂದ ಧನಸತ್ತೆಗಾಗಿ ಹೋರಾಡುವ ದಂಗೆಗಾರರು ಗೆಲ್ಲುವರೋ, ಪ್ರಜಾಬದ್ಧ ಸರಕಾರವು ಗೆಲ್ಲುವದೋ ಎಂಬುವನ್ನು ಮುಂದಕ್ಕೆ ನೋಡಲಿದೆ.

ಗೃಹಸ್ಥರೇ!

ಗೃಹಕೃತ್ಯೋಪಯೋಗದ ಎಲ್ಲಾ ವಿಧದ ತಾಮ್ರ ಹಿತ್ತಾಳಿ, ಜರ್ಮನ್ ಬೆಳ್ಳಿ, ಬೆಳ್ಳಿ ಸಾಮಾನುಗಳು ಎಲ್ಲಿ ಸಿಗುತ್ತವೆ ಬಲ್ಲಿರಾ?

ರಥಬೀದಿಯಲ್ಲಿ ಕಲ್ಮಂಜೆ ವ್ಯಾಸಾಚಾರ್ಯರ ಅಂಗಡಿಯಲ್ಲಿ ಮಾತ್ರವೇ.

ಸ್ವದೇಶಿ ಕೈಗಾರಿಕೆ! ಹದಿನೆಂಟು ವರ್ಷಗಳ ಅನುಭವ!

ಮನೆಯ ಉಪಯೋಗಕ್ಕೂ ಉಡುಗರೆ ಕೊಡಲಿಕ್ಕೂ ದಾನಮಾಡಲಿಕ್ಕೂ ಬೇರಾದ ನಮೂನೆಯ ಸಾಮಾನುಗಳನ್ನು ಮನಮೆಚ್ಚುವ ಮಾದರಿಯಲ್ಲಿ ತಕ್ಕ ಕಾಲದಲ್ಲಿ ನಾಜೂಕಾಗಿ ತಯಾರುಮಾಡಿಸಿಯೂ ಕೊಡಲಾಗುವುದು.

ಹೆಚ್ಚಿನ ವಿವರಗಳಿಗೆ ಸಚಿತ್ರ ಕೆಟಲಾಗಿಗೆ ಬರೆಯಿರಿ.

ಕಲ್ಮಂಜೆ ವ್ಯಾಸಾಚಾರ್ಯ,

ಪಾತ್ರೆ ವ್ಯಾಪಾರಿ, ರಥಬೀದಿ, ಉಡುಪಿ.

ಗೃಹಕೃತ್ಯಕ್ಕೆ ಬೇಕಾದ ವಿಧವಿಧ ತಾಮ್ರದ ಪಾತ್ರೆಗಳು.

ಮಂಗಳೂರು

(ನಮ್ಮ ಸ್ವಂತಬಾತ್ಮಿದಾರರಿಂದ)

ತಾ. ೧-೩-೩೭.

ಚುನಾವಣೆಯ ಫಲಿತಾಂಶ ತಿಳಿಯಲು ಉತ್ಸಾಹ

ಕಳೆದ ತಾ. ೨೫ರಲ್ಲಿ ಮಂಗಳೂರು ಮತ್ತು ಪುತ್ತೂರು ಡಿವಿಜನುಗಳಲ್ಲಾದ ಚುನಾವಣೆಗಳ ಫಲಿತಾಂಶಗಳನ್ನು ತಿಳಿಯಲು ಜನರು ತುಂಬಾ ಆತುರ ಪಡುತ್ತಿದ್ದರು. ಮಧ್ಯಾಹ್ನ ಸುಮಾರು ೧೨ಘಂಟೆಗೆ ಶ್ರೀ॥ ವೆಂಕಟ್ರಾಯಬಾಳಿಗರು ಪ್ರಚಂಡ ಬಹುಮತವನ್ನು ಪಡೆದು ಚುನಾಯಿಸಲ್ಪಟ್ಟರೆಂಬ ವಾರ್ತೆಯು ಜನರನ್ನು ಸಂತೋಷಸಾಗರದಲ್ಲಿ ತೇಲಿಸಿತು. ಶ್ರೀ॥ ಕಾರಂತರು ಜಯಶೀಲರಾಗುವರೆಂದು ಜನರಿಗೆ ಖಂಡಿತ ತಿಳಿದಿದ್ದರೂ ಎಷ್ಟು ಬಹುಮತವೆಂದು ತಿಳಿಯಲು ಅತ್ಯಂತ ತವಕ ಪಡುತ್ತಿದ್ದರು. ಸಾವಿರಾರು ಮಂದಿ ಕಾಂಗ್ರೆಸ್ ಕಛೇರಿಯ ಸಮೀಪ ವಾರ್ತೆ ತಿಳಿಯುವದಕ್ಕಾಗಿ ಕಾದಿದ್ದರು. ಸಾಯಂಕಾಲ ೬॥ಗೆ ಡಾ. ವಿಟ್ಠಲ ಸೆಟ್ಟರು ಸಂತೋಷದ ಸಮಾಚಾರವನ್ನು ತಂದರು. ಶ್ರೀ. ಕಾರಂತರು ಪ್ರಚಂಡ ಬಹುಮತ ಪಡೆದರೆಂದು ತಿಳಿಸಿದರು. ಅದನ್ನು ಕೇಳಿದೊಡನೆಯೇ ಜಯಕಾರಗಳಾದುವು.

ಅಭಿನಂದನೆಯ ಸಭೆ

ದ್ರಾವಿಡಬ್ರಾಹ್ಮಣರ ಹಾಸ್ಟೆಲಿನಲ್ಲಿ ವಿದ್ಯಾರ್ಥಿಗಳು ತಾ. ೨೬ನೇ ರಾತ್ರಿ ಶ್ರೀ. ಕೆ. ಶಂಕರ ರಾಯರ ಅಧ್ಯಕ್ಷತೆಯಲ್ಲಿ ಸಭೆಸೇರಿ ಮದ್ರಾಸ್ ಅಸೆಂಬ್ಲಿ ಚುನಾವಣೆಯಲ್ಲಿ ಜಯಶೀಲರಾದ ಕಾಂಗ್ರೆಸ್ ಸದಸ್ಯರನ್ನು ಅಭಿನಂದಿಸಿ ಠರಾವುಮಾಡಿದರು.

ಪುರಜನರ ಮಹಾಸಭೆ

ತಾ. ೨೬ನೇ ಶುಕ್ರವಾರ ಮಂಗಳೂರ ಪುರಜನರು ಅಸೆಂಬ್ಲಿ ಚುನಾವಣೆಯಲ್ಲಿ ಜಯಶೀಲರಾದ ಮಹನೀಯರನ್ನು ಅಭಿನಂದಿಸಲು ಮೈದಾನಕ್ಕೆ ಸಾವಿರಗಟ್ಟಲೆ ಬಂದು ಸೇರಿದ್ದರು. ಮಂಗಳೂರು ಕಾಂಗ್ರೆಸ್‌ಭವನದಿಂದ ಜಯಶೀಲರಾದ ಕಾಂಗ್ರೆಸ್ ಸದಸ್ಯರನ್ನು ಮುಂದಿಟ್ಟುಕೊಂಡು ಒಂದು ಮೆರವಣಿಗೆಯು ಹೊರಟು ನಗರದ ಮುಖ್ಯಬೀದಿಗಳಲ್ಲಿ ಸಂಚರಿಸಿತು. ಅಲ್ಲಲ್ಲಿ ನೂತನವಾಗಿ ಅಸೆಂಬ್ಲಿಗೆ ಆರಿಸಲ್ಪಟ್ಟ ಸದಸ್ಯರಿಗೆ ಪುಷ್ಪಹಾರಗಳು ಸಮರ್ಪಿಸಲ್ಪಟ್ಟವು.

೬-೩೦ಕ್ಕೆ ಮೆರವಣಿಗೆಯು ಮೈದಾನಕ್ಕೆ ಬಂದು ಸೇರಿತು. ಅಲ್ಲಿ ಡಾ. ವಿಟ್ಠಲ ಸೆಟ್ಟಿಯವರ ಅಧ್ಯಕ್ಷತೆಯಲ್ಲಿ ಪ್ರಚಂಡ ಸಭೆ ಸೇರಿತು. ಶ್ರೀ ಎ. ಬಿ. ಸೆಟ್ಟಿಯವರು ತಮ್ಮ ಭಾಷಣದಲ್ಲಿ ಹೀಗೆಂದರು ಪುರಜನರು ತೋರಿಸಿದ ಈ ಗೌರವವನ್ನು ವೈಯುಕ್ತಿಕವಾದದ್ದೆಂದು ನಾವು ತಿಳಿಯುವುದಿಲ್ಲ. ಅದು ನ್ಯಾಯವಾಗಿ ಕಾಂಗ್ರೆಸ್ಸಿಗೆ ಸಲಬೇಕಾದುದು. ಮಹಾಜನರು ಕಾಂಗ್ರೆಸ್ಸಿನ ಮೇಲೆ ಅಭಿಮಾನವಿಟ್ಟು ಮತದಾನ ಮಾಡಿದ್ದಕ್ಕಾಗಿ ನಾವೆಲ್ಲರೂ ಕೃತಜ್ಞತಾಪೂರ್ವಕವಾಗಿ ವಂದಿಸುತ್ತೇವೆ. ಮತ್ತು ಕಾಂಗ್ರೆಸ್ ಸದಸ್ಯರಿಗೆ ಅನೇಕ ವಿಧದಿಂದ ಸಹಾಯಮಾಡಿದ ಶ್ರೀ॥ ಧರ್ಮಸ್ಥಳ ಮಂಜಯ್ಯ ಹೆಗ್ಗಡೆಗಳು ಜಯಶೀಲರಾದುದಕ್ಕಾಗಿ ನಾವೆಲ್ಲರೂ ಸಂತೋಷ ಪಡುತ್ತೇವೆ ಎಂದರು.

ಶ್ರೀ ಕಾರಂತರು ತಮ್ಮ ಭಾಷಣದಲ್ಲಿ, ಹಲವರು ತಮ್ಮ ತಮ್ಮ ಕೈಯಿಂದ ಹಣ ಖರ್ಚುಮಾಡಿಕೊಂಡು ಹೋಗಿ ಕಾಂಗ್ರೆಸ್ಸಿನವರಿಗೆ ಮತಕೊಟ್ಟು ತಮ್ಮ ಕಾಂಗ್ರೆಸ್‌ಭಕ್ತಿಯನ್ನು ತೋರಿಸಿದ್ದಾರೆ. ಮತ್ತು ಅನೇಕ ಸ್ವಯಂಸೇವಕರೂ, ಶ್ರೀ॥ ಕಿಲ್ಲೆಯವರೂ ಕಾಂಗ್ರೆಸಿನ ಧ್ಯೇಯವನ್ನು ಜಿಲ್ಲೆಯಲ್ಲಿ ತುಂಬಾ ಪ್ರಚಾರಮಾಡಿದ್ದಾರೆ. ಅವರಿಗೆ ನನ್ನ ಕೃತಜ್ಞತೆಯ ವಂದನೆಗಳನ್ನು ಅರ್ಪಿಸುತ್ತೇನೆ.

ಶ್ರೀ. ಬಾಳಿಗರು ತಮ್ಮ ಭಾಷಣದಲ್ಲಿ, ಚುನಾವಣೆ ಕಾಲದಲ್ಲಿ ಒಂದು ಪಕ್ಷದವರು ಮತ್ತೊಂದು ಪಕ್ಷದವರನ್ನು ಟೀಕಿಸಿರಬಹುದೆಂದೂ ಆದರೆ ಇನ್ನು ಮೇಲೆ ಹಾಗೆ ಟೀಕಿಸುವುದು ಸರಿಯಲ್ಲವೆಂದೂ, ಎಲ್ಲರೂ ಅಣ್ಣತಮ್ಮಂದಿರಂತೆ ಒಂದಾಗಿ ಸೇರಿ ದೇಶದ ಕಲ್ಯಾಣಕ್ಕಾಗಿ ಕೆಲಸಮಾಡಬೇಕೆಂದೂ, ಜಸ್ಟಿಸ್ ಪಕ್ಷದವರನ್ನು ಕಾಂಗ್ರೆಸ್ ಪಕ್ಷದವರು ಟೀಕಿಸಿದ್ದಾರೆ, ಅದಕ್ಕಾಗಿ ತಾವು ಕ್ಷಮೆಬೇಡುವುದಾಗಿಯೂ ಹೇಳಿದರು.

ಶ್ರೀ॥ಕೆ. ಈಶ್ವರನವರು ತಮ್ಮ ಭಾಷಣದಲ್ಲಿ, ಸರ್ವಹಿಂದೂಮುಖಂಡರ ಸಹಾಯದಿಂದ ತಾವು ಜಯ ಹೊಂದಿದುದಾಗಿಯೂ ಆದ್ದರಿಂದ ಹಿಂದೂ ಮುಖಂಡರಿಗೂ ಸ್ವಯಂಸೇವಕರಿಗೂ ಧನ್ಯವಾದಗಳನ್ನರ್ಪಿಸುವುದಾಗಿಯೂ ತಿಳಿಸಿದರು.

ಪ್ರೊಫೆಸರ್ ವಾರ್ಕಿಯವರು ಸಭೆಯಲ್ಲಿಲ್ಲದ ಕಾರಣ ಅವರ ಬದಲಾಗಿ ಶ್ರೀ॥ ಜೆ. ಪಿ ಸಿಕೇರರೂ ಮಿಸೆಸ್ ಬ್ರಿಟ್ಟೋರವರೂ, ಶ್ರೀ॥ ಜರೋಮ್ ಪಾಯಸ್‌ರವರೂ ಮಾತಾಡಿ ಹಿಂದೂಗಳು ತಮ್ಮ ಪ್ರತಿನಿಧಿಗಳ ವಿಜಯಕ್ಕೆ ಪ್ರಧಾನ ಕಾರಣಭೂತರೆಂದರು. ಅನಂತರ ಚುನಾವಣೆಯ ವಿಷಯವಾಗಿ ಶ್ರೀ॥ಕಿಲ್ಲೆಯವರು ಸ್ಫೂರ್ತಿದಾಯಕ ಭಾಷಣವಿತ್ತರು.

ಅಧ್ಯಕ್ಷರ ಸಮಯೋಚಿತ ಭಾಷಣದೊಂದಿಗೆ ಸಭಾಂತ್ಯವಾಯಿತು.

ಎಯಿಡೆಡ್ ಶಾಲಾ ಉಪಾಧ್ಯಾಯರ ಪರಿಷತ್ತು

ಶ್ರೀ ರಾಮಕೃಷ್ಣವಿದ್ಯಾರ್ಥಿ ಭವನದಲ್ಲಿ ಈ ಪರಿಷತ್ತು ನಿನ್ನೆಯದಿನ ಸೇರಿತು. ಡಾ. ವಿಟ್ಠಲ ಶೆಟ್ಟಿಯವರು ಅಗ್ರಾಸನ ವಹಿಸಿದ್ದರು ಪರಿಷತ್ತಿನಲ್ಲಿ (೧) ಎಯಿಡೆಡ್ ಶಾಲಾ ಉಪಾಧ್ಯಾಯರಿಗೆ ಬೋರ್ಡು ಶಾಲಾ ಉಪಾಧ್ಯಾಯರ ಸಂಬಳದ ಸ್ಕೇಲನ್ನು ಕೊಡಬೇಕೆಂದೂ (೨) ಪ್ರೊವಿಡೆಂಟ್ ಫಂಡ್ ಕೂಡಿಸುವುದಕ್ಕೆ ಮೇನೇಜರರು ಸ್ವಲ್ಪಹಣ ತೆರಬೇಕೆಂದೂ, (೩) ವಿದ್ಯಾಧಿಕಾರಿಗಳ ಅನುಮತಿವಿನಾ ಅಧ್ಯಾಪಕರನ್ನು ತೆಗೆದುಹಾಕಲು ಮೆನೇಜರರಿಗೆ ಅಧಿಕಾರವಿರಕೂಡದಾಗಿಯೂ (೪) ನಿರುದ್ಯೋಗಿಗಳಾದ ಉಪಾಧ್ಯಾಯರಿಗೆ ವೇತನಕೊಡಬೇಕೆಂದೂ ಠರಾವುಗಳಾದವು, ಕಾಂಗ್ರೆಸ್ಸಿನವರು ಅಧಿಕಾರ ಸ್ವೀಕಾರ ಮಾಡಿದರೆ ಉಪಾಧ್ಯಾಯರ ಸಂಕಷ್ಟಗಳನ್ನು ನಿವಾರಿಸುವರೆಂದು ಅಧ್ಯಕ್ಷರು ತಮ್ಮ ಭಾಷಣದಲ್ಲಿ ಸೂಚಿಸಿದರು. ಪರಿಷತ್ತಿನ ಒಂದು ವಿಶೇಷ ಅಧಿವೇಶನವು ಬರುವ ಎಪ್ರಿಲ್ ತಿಂಗಳಲ್ಲಿ ಸೇರಬೇಕೆಂದಾಯಿತು.ಧನ್ಯವಾದಗಳೊಂದಿಗೆ ಸಭಾಂತ್ಯವಾಯಿತು.

ಕಾಸ್ಮೊಪಾಲಿಟನ್ ಕ್ಲಬ್

ನಿನ್ನೆಯದಿನ ಸಾಯಂಕಾಲ, ದಿವ್ಯವಾಗಿ ಅಲಂಕರಿಸಲ್ಪಟ್ಟ ಕ್ಲಬ್ಬಿನ ಮಂದಿರದಲ್ಲಿ ಈ ಕ್ಲಬ್ಬಿನ ವಾರ್ಷಿಕ ದಿನಾಚರಣೆಯು ವಿಜೃಂಭಣೆಯಿಂದ ಆಚರಿಸಲ್ಪಟ್ಟಿತು. ಸಂಗೀತಕಛೇರಿಯು ಈ ಸಂದರ್ಭದಲ್ಲಿ ಏರ್ಪಟ್ಟಿತ್ತು.

ನಗರ ಸಭೆಯ ಬರುವ ವರ್ಷದ ಆಯವ್ಯಯದ ಪಟ್ಟಿಯ ವಿಮರ್ಶೆ.

ಮಂಗಳೂರು ನಗರ ಸಭೆಯ೧೯೩೭-೩೮ರ ಆಯವ್ಯಯದ ಪಟ್ಟಿಯು ತಾ. ೨೭ರಲ್ಲಿ ನಗರ ಸಭೆಯವರಿಂದ ಪರಿಶೀಲಿಸಲ್ಪಟ್ಟು ಸ್ವೀಕೃತವಾಯಿತು. ನಗರ ಸಭೆಯ ಆದಾಯವು ತೃಪ್ತಿಕರವಾಗಿತ್ತು. ವೆಚ್ಚವು ಸಹ ಕೆಲವು ಮುಖ್ಯ ವಿಷಯಗಳಲ್ಲಿ ಹೆಚ್ಚಿತ್ತು. ಮ್ಯಾನೇಜ್‌ಮೆಂಟಿನ ಕೆಳಗೆ ಹಣವು ಸ್ವಲ್ಪಹೆಚ್ಚು ವೆಚ್ಚವಾಗುವ ಹಾಗಿತ್ತು. ಹೀಗೆ ಮ್ಯಾನೇಜ್‌ಮೆಂಟಿನ ಬಾಬಿನಲ್ಲಿ ವೆಚ್ಚವು ಅಧಿಕವಾಗುವದು ಅಸಮರ್ಪಕವೆಂದು ಶ್ರೀ॥ ಕಾರಂತರು ಸೂಚಿಸಿದರು. ಅತ್ತಾವರದಲ್ಲಿರುವ ಟ್ಯೂಟ್‌ವೆಲ್(ಬಾವಿ)ಯ ನೀರನ್ನು ತೆಗೆದು ಉಪಯೋಗಿಸಬೇಕೆಂದು ಅದಕ್ಕನುಕೂಲವಾಗುವ ಹಾಗೆ ಏರ್ಪಾಡುಮಾಡಲು ಸರಕಾರದವರನ್ನು ಕೇಳಿಕೊಳ್ಳಬೇಕೆಂದೂ ಡಾ॥ ಅಡಪರು ತಂದ ಸೂಚನೆಯು ಮಾನ್ಯವಾಯಿತು. ಸರಕಾರದವರು ಟ್ರಂಕು ರಸ್ತೆಗಳ ದುರಸ್ತಿಗೆ (ಅಸ್ಫಾಟ್ ಮಾಡಿಸುವಬಗ್ಗೆ) ಒಂದು ಲಕ್ಷ ಸಾಲ ಕೊಡಲು ಒಪ್ಪಿದ್ದರಿಂದ ಎಲ್ಲಾ ಮುಖ್ಯರಸ್ತೆಗಳ ಕಾಮಗಾರಿಗಳನ್ನು ಶೀಘ್ರದಲ್ಲಿಯೇ ಉತ್ತಮಗೊಳಿಸುವ ಕೆಲಸವನ್ನು ಕೈಕೊಳ್ಳಬೇಕೆಂದು ನಿರ್ಧಾರವಾಯಿತು. ಆರೋಗ್ಯ ವಿದ್ಯೆ, ಮೊದಲಾದ ಇಲಾಖೆಗಳಿಗೆ ಧಾರಾಳ ಹಣವನ್ನು ಇಟ್ಟಿದ್ದಾರೆ. ಮತ್ತು ಕೆಲರಸ್ತೆಗಳನ್ನು ಅಗಲಮಾಡುವುದಕ್ಕೆ ಹಣವನ್ನು ಮಂಜೂರುಮಾಡಿದರು.

ಶ್ರೀ॥ ಮುಬ್ಬಾದೋರವರ ಸೂಚನೆಯ ಮೇರೆಗೆ ನಗರ ಸಭೆಯ ಸದಸ್ಯರಲ್ಲಿ ಇಬ್ಬರು(ಶ್ರೀ॥ ಕಾರಂತರೂ ಶ್ರೀ॥ ಬಾಳಿಗರೂ) ಅಸೆಂಬ್ಲಿಗೆ ಚುನಾಯಿಸಲ್ಪಟ್ಟದ್ದಕ್ಕಾಗಿ ಅವರಿಗೆ ಸಭೆಯ ಧನ್ಯವಾದವು ಸಮರ್ಪಿಸಲಾಯಿತು. ಶ್ರೀ॥ ಕಾರಂತರು ಶ್ರೀ॥ ಬಾಳಿಗರ ಮತ್ತು ತಮ್ಮ ಪರವಾಗಿ ಕೃತಜ್ಞತೆಯನ್ನು ಸೂಚಿಸಿ ಮಾತನಾಡಿದರು.

ಹರಿಜನ ಲೇಬರ್‌ಲೀಗಿನ ಒಂದು ಮಹಾಸಭೆಯು ಕಳೆದ ಆದಿತ್ಯವಾರ ಬೆಳಿಗ್ಗೆ ಘಂಟೆ೧೦ಕ್ಕೆ ಉಲ್ಲಾಳ ರಘುನಾಥಯ್ಯನ ರೀಡಿಂಗ್ ರೂಮಿನಲ್ಲಿ ಸಂಘದ ಕಾರ್ಯದರ್ಶಿಯವರಾದ, ಕೆ. ಈಶ್ವರನವರ ಅಧ್ಯಕ್ಷತೆಯಲ್ಲಿ ಜರಗಿತು. ಸಭೆಗೆ ಸಂಘದ ಹೆಚ್ಚಿನ ಮೆಂಬರರು ಹಾಜರಿದ್ದರು. (೧) ಪಂಡಿತ ನೆಹರುರವರಿಗೆ ಕೊಟ್ಟ ಮಾನಪತ್ರದ ಖರ್ಚನ್ನು ಮಂಜೂರುಮಾಡಲಾಯಿತು, (೨) ಸಂಘದ ಮೆಂಬರರಿಂದ ಪ್ರತಿ ತಿಂಗಳಲ್ಲಿ ಸಂಘದ ಕಲೆಕ್ಷನ್‌ಮಾಡಲಿಕ್ಕೂ ನೋಟೀಸು ವಗೈರೆ ಮತ್ತು ಸಂಘದ ಎಲ್ಲಾ ಕೆಲಸ ಮಾಡಲಿಕ್ಕೂ ಒಬ್ಬ ಮೆಂಬರರನ್ನು ನೇಮಕಮಾಡಲಾಯಿತು, (೩) ಬರುವ ತಿಂಗಳಿನಿಂದ, ಪ್ರತಿ ಹರಿಜನರಿರುವ ಸ್ಥಳಗಳಿಗೆ ಹೋಗಿ ಸಂಘದ ಉದ್ದೇಶವನ್ನು ಪ್ರಚಾರಮಾಡಬೇಕೆಂದು ಒಂದು ಠರಾವುಮಾಡಲಾಯಿತು. (೪) ಇದೇ ತಿಂಗಳ ತಾ. ೧೦ನೇ ಬುಧವಾರ ಮಹಾಶಿವರಾತ್ರಿಯಾದ್ದರಿಂದ ಸಂಘದ ಕಡೆಯಿಂದ ಒಂದು ನಗರ ಸಂಕೀರ್ತನೆಯನ್ನು ಮಾಡಬೇಕೆಂದು ಸೂಚಿಸಿ ಕಾರ್ಯಕ್ರಮಗಳ ನಿರ್ಧಾರವು ಬಹುಮತದಿಂದ ಪಾಸಾಯಿತು.

ಕೆ. ಈಶ್ವರ

ಕಾರ್ಯದರ್ಶಿ.

ಉಡುಪಿ

ವಿಜಯ ಸೂಚಕ ಮೆರವಣಿಗೆ

ದಕ್ಷಿಣ ಕನ್ನಡದ ಎಲ್ಲಾ ಸ್ಥಾನಗಳೂ ಕೊಂಗ್ರೆಸ್ಸಿಗೆ ಸಿಕ್ಕಿದ ವಾರ್ತೆಯಿಂದ ಉಡುಪಿ ಪಟ್ಟಣವಿಡೀ ಸಂತೋಷಗೊಂಡಿದೆ. ಕಳೆದ ತಾ ೨೫ನೇ ಗುರುವಾರ ಸಂಜೆ ಪ್ರಚಂಡ ಮೆರವಣಿಗೆಯೊಂದು ಕೊಂಗ್ರೆಸ್ ಆಫೀಸಿನಿಂದ ಬೇಂಡ್‌ವಾಲಗದೊಡನೆ ಹೊರಟಿತು. ಜಯಕಾರ, ರಾಷ್ಟ್ರೋದ್ಗಾರಗಳೊಟನೆ ಶಿರಿಬೀಡು, ಕಲ್ಸಂಕ, ಬಡಗುಪೇಟೆ, ರಥಬೀದಿ, ತೆಂಕಪೇಟೆ, ಕೋಳದಪೇಟೆ ಕೋರ್ಟು ರಸ್ತೆಯಲ್ಲೆಲ್ಲಾ ಸುತ್ತಾಡಿ ಗಾಂಧಿಮೈದಾನಿಗೆ ಹೋಯಿತು. ಮೆರವಣಿಗೆಯಲ್ಲಿ ೪-೫ ಸಾವಿರಜನರು ಸೇರಿ ಜಯಕಾರವೆಬ್ಬಿಸುತ್ತಿದ್ದರು. ಮೆರವಣಿಗೆಯೊಡನಿದ್ದ ಶ್ರೀ ಎ. ಬಿ. ಶೆಟ್ಟರಿಗೆ ಅಲ್ಲಲ್ಲಿ ಪುಷ್ಪಹಾರಗಳ ಸಮರ್ಪಣೆಯಾಯಿತು. ಪುರ ಪ್ರಮುಖರು ಕೆಲವರು ಅವರಿಗೆ ಹೂಮಾಲೆಗಳನ್ನು ಹಾಕಿದರು. ಗಾಂಧಿಮೈದಾನಿನಲ್ಲಿ ಶ್ರೀ ಎ. ಬಿ. ಶೆಟ್ರು ಜಾತಿ, ಮತ, ಭೇದವಿಲ್ಲದೆ ಕೊಂಗ್ರೆಸ್ ಭಕ್ತಿಯಿಂದಲೇ ಈ ಸಲ ಚುನಾವಣೆಯು ನಡೆದಿರುವದೆಂದೂ, ಈ ಸಂಭ್ರಮವು ಕೊಂಗ್ರೆಸ್ಸಿಗಲ್ಲದೆ ತಮಗಲ್ಲವೆಂದೂ ತಿಳಿಸಿ, ಎಲ್ಲಾ ಕೆಲಸಗಾರರನ್ನೂ, ಮತದಾರರನ್ನೂ ಸಾರ್ವಜನಿಕರನ್ನೂ ಅಭಿನಂದಿಸಿದರು.

ನಗರಸಭೆ

ತಾ. ೨೬-೨-೩೭ರಲ್ಲಿ ಉಡುಪಿ ಮುನಿಸಿಪಾಲಿಟಿಯ ಬಜೆಟ್‌ಸಭೆಯು ಶ್ರೀ ಅರೂರು ಲಕ್ಷ್ಮೀನಾರಾಯಣರಾಯರ ಅಧ್ಯಕ್ಷತೆಯಲ್ಲಿ ಸೇರಿ ೧೯೩೭ನೇ ಇಸವಿಯ ಜಮಾ ಖರ್ಚುಗಳ ಪಟ್ಟಿಯನ್ನು ಮಂಜೂರುಮಾಡಲಾಯಿತು. ಟೈಲೂರು ಕೇಂದ್ರದ ಶಾಲೆಯನ್ನು ತೆಗೆದುಹಾಕುವ ನಿರ್ಧಾರವಾಗಿರುವದು. ಈಗಣ ಕೌನ್ಸಿಲು ಅಧಿ

(ಪುಟ ೧೨)

THE BOMBAY LIFE ASSURANCE Co., LTD.

ESTD. 1908

Church Gate Street, Fort - - BOMBAY.

SPECIAL FEATURES.

1. Rebate on yearly payment of policies.
2. Rebate for larger assurances.
3. Accident Risk covered on small extra premiums
4. Attractive Bonuses.

It pays you to represent this Company.
Wanted Agents in unrepresented parts.

Apply to:—

KOCHIKAR BROTHERS,

Madras Branch Secretaries.

BRANCHES AT:

P. B. 337 Mount Road, Madras.	Visveswarapuram Circle, Bangalore City.	Soumyalayam Puthiyara, Calicut.
Car Street, Mangalore.	Udipi, S. India.	Charni Road, Bombay No. 4.

EVIDENCE OF SECURITY & STABILITY

FIGURES THAT SPEAK FOR THEMSELVES

TOTAL ASSETS Rs. 80,66,600

Summary of 1935 Accounts

Total Assets Over	... ...	Rs. 80,00,000
Life Funds Over	... ...	Rs. 68,00,000
Premium Income Over	...	Rs. 22,54,000
Interest Income	... ...	Rs. 3,16,000
Claims Paid ...	... ...	Rs. 5,75,000

Total Claims paid Over Rs. 38,50,000
Total Business in Force Over Rs. 4,42,51,200

TOTAL BUSINESS IN FORCE Rs. 4,42,51,200

ಚಂದಾದಾರರಲ್ಲಿ

ಚಂದಾಹಣ ಬಾಕಿ ಇರುವ ನಮ್ಮ ಚಂದಾದಾರರು ಆದಷ್ಟು ಬೇಗನೇ ತಮ್ಮ ಹಣವನ್ನು ಮಣಿಯಾರ್ಡರ್ ಮೂಲಕ ದಯವಿಟ್ಟು ಕಳುಹಿಸಿಕೊಡಬೇಕಾಗಿ ಅಪೇಕ್ಷಿಸುತ್ತೇವೆ. ವಿ. ಪಿ. ಮಾಡುವದಾದರೆ ಐದಾಣೆ ಹೆಚ್ಚಿಗೆ ಬೀಳುವದು.

ನಮ್ಮೊಡನೆ ಪತ್ರವ್ಯವಹಾರ ನಡೆಸುವವರು ತಮ್ಮ ಚಂದಾ ನಂಬ್ರವನ್ನು ಸೂಚಿಸಿ ಬರೆಯಬೇಕಾಗಿ ವಿನಂತಿ. ಮೆನೇಜರ್, 'ನವಯುಗ'

ಉಡುಪಿ, ತಾ. ೪-೩-'೩೭ ಗುರುವಾರ

ಮುಂದೇನು?

ಚುನಾವಣೆಯಲ್ಲಿ ಎಲ್ಲೆಲ್ಲಿಯೂ ಕಾಂಗ್ರೆಸಿನ ದಿಗ್ವಿಜಯವಾಯಿತು. ಹೊಸ ರಾಜ್ಯಾಂಗರಚನೆಯು ಜನತೆಗೆ ಸ್ವೀಕಾರ್ಯವಲ್ಲ; ಕಾಂಗ್ರೆಸಿನ ಹೊರತು ಜನ ವಿಶ್ವಾಸ ಪಡೆದಿರುವ ಇನ್ನೊಂದು ಪಕ್ಷವು ದೇಶದಲ್ಲಿಲ್ಲವೆಂಬುದು ಲೋಕವಿಶ್ರುತವಾಯಿತು. ಆಳರಸರು ದೂರದೃಷ್ಟಿ ಹಾಗೂ ವಿವೇಕಬುದ್ಧಿಯುಳ್ಳವರಾದರೆ, ದೇಶದಲ್ಲಿ ಶಾಂತಿಯು ನೆಲೆಗೊಳ್ಳಬೇಕು ಭಾರತೀಯ ಮತ್ತು ಆಂಗ್ಲೇಯರೊಳಗೆ ಮೈತ್ರಿಭಾವವುಂಟಾಗಬೇಕೆಂಬ ಸದಿಚ್ಛೆಯು ಅವರಲ್ಲಿರುವುದಾದರೆ ಅವರು ಕೂಡಲೆ ಕಾಂಗ್ರೆಸಿನೊಡನೆ ಸಂಧಿ ಪ್ರಸ್ತಾಪ ಮಾಡಿ ದೇಶಕ್ಕೆ ತೃಪ್ತಿಯನ್ನುಂಟುಮಾಡುವಂತಹ ರಾಜ್ಯಾಂಗ ರಚನೆಯನ್ನು ಹಿಂದೀಯರ ಸಮ್ಮತಿಯ ಮೇರೆಗೆ ರೂಪಿಸುವ ಪ್ರಯತ್ನ ಮಾಡಬೇಕು. ಅದಕ್ಕೀಗ ಅನುಕೂಲ ಸಂದರ್ಭವುಂಟಾಗಿರುವುದು. ಆದರೆ ಆಳರಸರಲ್ಲಿ ಈ ಸುಸಂದರ್ಭವನ್ನು ಸದುಪಯೋಗಗೊಳಿಸುವಷ್ಟರ ವಿವೇಕವುಂಟಾಗಲಾರದು.

ಇಂತಹ ಪರಿಸ್ಥಿತಿಯಲ್ಲಿ ಕಾಂಗ್ರೆಸ್ ಪಕ್ಷೀಯರು ಮುಂದೆ ಮಾಡತಕ್ಕದ್ದೇನು? ಕೌನ್ಸಿಲು ಭದ್ರತೆ ರಕ್ಷಣೆಗಳಿಂದ ಗವರ್ನರರ ಚಕ್ರವ್ಯೂಹಗಳಂತಿರುವದು. ಕಾಂಗ್ರೆಸ್ ಪಕ್ಷೀಯರು ಅವುಗಳೊಳಗೆ ಹೊಕ್ಕು ಅವನ್ನು ಭೇದಿಸುವುದಾದರೂ ಹೇಗೆ? ಒಮ್ಮೆ ಒಳಹೊಕ್ಕರೆ ಗವರ್ನರರುಗಳ ಬಲೆಗೆ ಬಿದ್ದು ಕಾಂಗ್ರೆಸಿನ ಉದ್ದೇಶವನ್ನೇ ಮರೆತುಬಿಡಲಾರರೇ? ಹಿಂದಿನ ಸ್ವರಾಜ್ಯಪಕ್ಷದ ಇತಿಹಾಸವೇ ಪುನರಾವರ್ತಿತವಾಗಲಾರದೇ, ಎಂಬ ನಾನಾ ರೀತಿಯ ಸಂದೇಹಗಳು ಕೆಲಮಂದಿ ಉಜ್ವಲ ದೇಶಭಕ್ತರಲ್ಲಿ ಕಲೆಯುತ್ತಿವೆ. ಕಾಂಗ್ರೆಸ್ ಪಕ್ಷೀಯರು ಒಮ್ಮೆ ಅಧಿಕಾರ ಸ್ವೀಕರಿಸಿದರೆಂದರೆ, ಇತರ ಮಂದಪಕ್ಷೀಯರಂತೆ, ಆಡಳಿತ ರಥವನ್ನು ಮುರಿಯುವ ಬದಲಿಗೆ ನಡೆಸುವುದರಲ್ಲಿ ನಿರತರಾಗುವರೆಂದೇ ಈ ಜನರ ಭೀತಿ. ಆದರೆ ದೇಶದ ಹೆಚ್ಚಿನವರ ಅಭಿಪ್ರಾಯವು ಮಂತ್ರಿಪದವಿ ಸ್ವೀಕರಿಸಬೇಕೆಂದಿದೆ. ಹೊಸ ರಾಜ್ಯಾಂಗರಚನೆಯಲ್ಲಿ ಕೆಲಮಟ್ಟಿನ ಸ್ವಾತಂತ್ರ್ಯವು ಪ್ರಜಾಪ್ರತಿನಿಧಿಗಳಿಗಿದೆ. ಹಿಂದಿನಂತೆ ನೌಕರಶಾಹಿಯ ಆಟವು ಇನ್ನು ಮುಂದೆ ನಡೆಯಲು ಸಾಧ್ಯವಿಲ್ಲ. ಕಾಂಗ್ರೆಸಿನವರು ಪ್ರಬಲ ಬಹುಪಕ್ಷೀಯರಿದ್ದಲ್ಲಿ ಮಂತ್ರಿಮಂಡಲವನ್ನು ರಚಿಸಿ ಎಷ್ಟರ ಮಟ್ಟಿನ ಆಡಳಿತ ಸ್ವಾತಂತ್ರ್ಯವು ಕೊಡಲಾಗುವುದೆಂಬುದನ್ನು ನೋಡಬೇಕು. ಗವರ್ನರರು ಮಂತ್ರಿಗಳಿಗೆ ಸ್ವಾತಂತ್ರ್ಯವಿತ್ತರೆ ಕಾಂಗ್ರೆಸು ನಿರ್ದೇಶಿಸುವ ಕಾರ್ಯಕ್ರಮವನ್ನು ಜಾರಿಗೆ ತಂದು ಸಾಧ್ಯವಾದಷ್ಟು ಜನಹಿತಸಾಧನೆ ಮಾಡಲೆತ್ನಿಸಬೇಕು. ಭೂಕಂದಾಯವನ್ನಿಳಿಸುವುದು, ಬೇಸಾಯಗಾರರ ಸಾಲದ ಹೊರೆಯನ್ನು ಸಾಧ್ಯವಾದಷ್ಟು ಕಡಿಮೆ ಮಾಡುವುದೇ ಮೊದಲಾದ ಪ್ರಜಾಹಿತ ಕಾರ್ಯಗಳನ್ನು ಮಾಡಬೇಕು. ಗವರ್ನರರು ಮಂತ್ರಿಗಳಿಗೆ ಬೇಕಷ್ಟು ಸ್ವಾತಂತ್ರ್ಯವೀಯದೆ ಅವರ ಮೇಲೆ ತನ್ನ ಅಧಿಕಾರ ನಡಿಸನೋಡಿದರೆ ಮಂತ್ರಿಗಳು ಕೂಡಲೆ ರಾಜಿನಾಮೆ ಕೊಟ್ಟು, ಪ್ರಾಂತಗಳಲ್ಲಿ ಕೊಡಲ್ಪಟ್ಟಿರುವ ಆಡಳಿತ ಸ್ವಾತಂತ್ರ್ಯದ ಹುರುಳನ್ನು ಬಯಲಿಗೆಳೆಯಬೇಕೆಂದೇ ಹೆಚ್ಚಿನ ಕಾಂಗ್ರೆಸ್ ಪಕ್ಷೀಯರ ಅಭಿಮತ. ನಾವು ಇನ್ನೊಂದೆಡೆ ಕೊಟ್ಟಿರುವ ವರ್ಕಿಂಗ್ ಕಮಿಟಿಯ ನಿರ್ಣಯಗಳನ್ನು ನೋಡಿದರೆ ಇಷ್ಟೊಂದು ನಿರ್ಬಂಧವಿರುವಾಗ ಕಾಂಗ್ರೆಸ್ ಪಕ್ಷೀಯರು ಅಧಿಕಾರ ಸ್ವೀಕರಿಸುವುದರಿಂದ ಯಾವ ತರದ ಕೆಡುಕಿಗೂ ಆಸ್ಪದ ದೊರೆಯಲಾರದೆಂಬುದು ಸ್ಪಷ್ಟವಾಗುವುದು.

ತನ್ನ ಮತ್ತು ವೈರಿಸೇನೆಯ ಬಲಾಬಲವನ್ನಳೆದುಕೊಂಡು ಹೋರಾಟದ ರೀತಿಯನ್ನು ಸಂದರ್ಭಕ್ಕೆ ತನ್ನಂತೆ ಬದಲಾಯಿಸಿ ತನ ಸೈನಿಕರು ಉತ್ಸಾಹಗುಂದದಂತೆ ನಡಿಸುವುದರಲ್ಲೇ ಸೇನಾನಿಯ ವಿಚಕ್ಷಣತೆಯಿದೆ. ಆಗತ್ಯಬಿದ್ದರೆ ಹಿಂದೆ ಸರಿದು ನಿಂತು ಮುಂದೊತ್ತಲು ಹೊಂಚು ಹಾಕಿ ಕೊಂಡಿರುವುದರಲ್ಲಿ ಜಾಣ್ಮೆಯಿದೆ. ಅಂತೆಯೇ ಈಗ ದೇಶವು ಉಗ್ರವಾದ ಯಾವ ಕಾರ್ಯಕ್ಕಾದರೂ ಸಿದ್ಧವಿಲ್ಲದಿರುವಾಗ, ಶಾಸನಬದ್ಧರೀತಿಯಲ್ಲಾದರೂ ಸಾಧ್ಯವಾದ ಕೆಲಸಮಾಡಿ, ಜನತೆಯಲ್ಲಿ ಹುರುಪನ್ನೂ ವಿಶ್ವಾಸವನ್ನೂ ಉಂಟುಮಾಡಿ ಸಂಘಟನೆಯನ್ನುಂಟುಮಾಡಬೇಕು. ಕೌನ್ಸಿಲುಗಳಿಂದ ಸ್ವರಾಜ್ಯಸಾಧನೆಯಾಗುವುದಿಲ್ಲೆಂಬುದು ನಿಜ. ಆದರೆ ಕಾಂಗ್ರೆಸ್ ಪಕ್ಷೀಯರು ಅವುಗಳನ್ನು ವಶಪಡಿಸಿಕೊಳ್ಳುವುದರಿಂದ, ಆಳರಸರು ಅವನ್ನು ತಮ್ಮ ಕೈಗೊಂಬೆಗಳಿಂದ ದೇಶಕ್ಕೆ ಹಾನಿಕರವಾಗಿ ನಡಿಸುವುದನ್ನು ತಡೆದಂತಾಗುವುದು. ನಮ್ಮವರನ್ನೇ ನಮ್ಮಿದಿರಾಗಿ ಎತ್ತಿಕಟ್ಟಿ ಜನಪ್ರತಿನಿಧಿತ್ವ ಸೋಗಿನಿಂದ ರಾಜ್ಯಭಾರ ನಡಿಸುವುದನ್ನು ನಿಲ್ಲಿಸಿದಂತಾಗುವುದು. ಈಗ ಕೌನ್ಸಿಲುಗಳಿಗೆ ಹೋಗಿರುವ ಹೆಚ್ಚಿನವರು ದೇಶಾಭಿಮಾನಿಗಳು. ಅವರ ನಾಯಕರು ದೊಡ್ಡ ದೊಡ್ಡ ರಾಷ್ಟ್ರಭಕ್ತರು. ಕೌನ್ಸಿಲುಗಳಿಂದ ದೇಶಕ್ಕೆ ಸ್ವಲ್ಪವೇನಾದರೂ ಹಾನಿಯಾಗುವುದಾದರೆ ಅವರು ಅವುಗಳೊಳಗೆ ಇರಲಾರರು. ಇದು ಹೊರತು ಅವರ ಮೇಲೆ ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಅಂಕುಶವು ಇದ್ದೇ ಇರುವುದು. ಇಂತಹ ವಿದ್ಯಮಾನಗಳಲ್ಲಿ ಕಾಂಗ್ರೆಸ್ ಪಕ್ಷೀಯರು ಅಧಿಕಾರ ಸ್ವೀಕರಿಸುವುದರಿಂದ ಕಾಂಗ್ರೆಸಿನ ಉದ್ದೇಶಕ್ಕೆ, ರಾಷ್ಟ್ರಹಿತಸಾಧನೆಗೆ ಸಹಾಯವಾಗಬಹುದೇ ಹೊರತು ಎಂದಿಗೂ ತೊಡಕಾಗಲಾರದು.

ಸ್ವದೇಶ

ಸಕ್ಕರೆ ಮತ್ತು ಬೆಳ್ಳಿಯ ಮೇಲೆ ಹೆಚ್ಚಿನ ಕರ

ಪೋಸ್ಟ್ ಪಾರ್ಸೆಲ್ ದರ ಕಡಮೆ ಮಾಡಲ್ಪಟ್ಟಿತು

1936-37ರಲ್ಲಿ ರೂ. 6 ಲಕ್ಷಗಳಷ್ಟರ ಉಳಿತಾಯವಾಗಬಹುದೆಂದು ಅಂದಾಜು ಮಾಡಲ್ಪಟ್ಟಿದ್ದರೂ ತಿದ್ದುಪಡಿ ಮಾಡಿದ ಅಂದಾಜು ಪಟ್ಟಿಯ ಮೇರೆಗೆ ರೂ. 197 ಲಕ್ಷ ಕಡಿಮೆ ಬಿದ್ದಿರುವುದು. 1337-39ರಲ್ಲ ಆದಾಯವು ರೂ. 79.99 ಕೋಟಿಯಾಗುವಾಗ ವೆಚ್ಚವು ರೂ. 83·11 ಯಾಗಬಹುದೆಂದು ಅರ್ಥ ಸಚಿವರು ಅಂದಾಜುಮಾಡಿರುತ್ತಾರೆ ರಾಜ್ಯಾಂಗ ರಚನೆಯ ಒದಲಾವಣೆ ನಿಮಿತ್ತ ರೂ. 3·76 ಕೋಟಿಯಷ್ಟು ಆದಾಯವು ಕಡಿಮೆಯಾಗುವುದು. ಈ ಕಡಿಮೆಯು ಕಾಯಮಾಗಿರಲಾರದೆಂದೂ, ಹೊಸ ಸುಧಾರಣೆಗೆ ಸಾಕಷ್ಟು ಹಣ ದೊರೆಯಬಹುದೆಂದೂ ಅರ್ಥ ಸಚಿವರ ನಿರೀಕ್ಷೆ. ಸಕ್ಕರೆಯ ಮೇಲೆ ಹಂಡ್ರೆಡ್‌ವೇಟಿಗೆ ರೂ. 1—5—0 ಇದ್ದ ಕರವನ್ನು 2ಕ್ಕೇರಿಸಲಾಗಿದೆ. ಇದರಿಂದ ರೂ. 115 ಲಕ್ಷ ಹೆಚ್ಚು ಆದಾಯದೊರೆಯುತ್ತದೆ. ಬೆಳ್ಳಿ ಔನ್ಸಿನ ಮೇಲಿದ್ದ ಕರವನ್ನು ರೂ. 2ರಿಂದ 3ಕ್ಕೇರಿಸಲಾಗುವುದು. ಇದರಿಂದ ರೂ. 60 ಲಕ್ಷ ಹೆಚ್ಚಿಗೆ ಆದಾಯ ದೊರೆಯುವುದು. ಪುಸ್ತಕ ಪೆಕೆಟ್ ಪಾರ್ಸಲ್ ದರವನ್ನು ಪ್ರಥಮ ಎರಡೂವರೆ ತೊಲೆಗೆ 9 ಪೈಯಿಂದ 6 ಪೈಗೆ ಇಳಿಸಲಾಗಿದೆ ಹೆಚ್ಚಿಗೆಯ ಪ್ರತಿ ಎರಡೂವರೆ ತೊಲೆಗೆ 3 ಪೈ. ಇದರಿಂದ ರೂ. 8 ಲಕ್ಷ ನಷ್ಟವಾಗುತ್ತದೆ 40 ತೊಲೆ ಅಥವಾ ಅದಕ್ಕಿಂತ ಕಡಿಮೆ ಭಾರದ ಪಾರ್ಸಲುಗಳಿಗೆಲ್ಲಾ 4 ಆಣೆ ಚಾರ್ಜು ಮಾಡಲಾಗುವುದು.

ವಿದ್ಯಾರ್ಥಿಗಳ ಮೇಲೆ ಬರ್ಬರ ಅತ್ಯಾಚಾರ.

ಪಂಡಿತ ಜವಾಹಿರಲಾಲರೆಂದರೆ ವಿದ್ಯಾರ್ಥಿಗಳಿಗೆ ಬಹಳ ಪ್ರೇಮ. ಅದುದರಿಂದ ಅವರನ್ನು ಕಾಣಲು ಎಲ್ಲೆಲ್ಲಿಯೂ ವಿದ್ಯಾರ್ಥಿಗಳು ಉತ್ಸಾಹಗೊಳ್ಳುವುದರಲ್ಲಿ ಆಶ್ಚರ್ಯವೇನೂ ಇಲ್ಲ. ಹೀಗೆ ಪಂಡಿತರನ್ನು ಕಾಣಹೋದ ವಿದ್ಯಾರ್ಥಿಗಳಿಗೆ ಕೆಲವರಿಗೆ ಸಂಯುಕ್ತ ಪ್ರಾಂತದ ಕೆಲವು ಕಡೆ ಅಧ್ಯಾಪಕರು ಜಾಹೀರಾಗಿ ಹೊಡೆದು ಅವಮಾನಗೊಳಿಸಿದ ನಿಮಿತ್ತ ಇಬ್ಬರು ಹುಡುಗರು ಆತ್ಮಹತ್ಯೆ ಮಾಡಿಕೊಂಡಿರುವರೆಂದು ಪ್ರಕಟವಾಗಿದೆ. ಚುನಾವಣೆಯ ಸಮಯದಲ್ಲಿ ವಿದ್ಯಾರ್ಥಿಗಳು ಪೋಲಿಂಗ್ ಸ್ಟೇಶನುಗಳಿಗೆ ಹೋಗದಂತೆ ಕೂಡಾ ನಿರ್ಬಂಧ ಹಾಕಲಾಗಿದೆ. ಈ ವಿದ್ಯಮಾನಗಳಿಂದ ಪಂಡಿತ ಜವಾಹಿರಲಾಲರು ಬಹಳ ಉದ್ವೇಗಗೊಂಡಿರುವರು. ವಿದ್ಯಾರ್ಥಿಗಳಿಗೆ ಇಷ್ಟೊಂದು ಸ್ವಾತಂತ್ರ್ಯವಿಲ್ಲವೇ? ನಮ್ಮ ಶಾಲೆಗಳು ಈ ಸ್ಥಿತಿಗಿಳಿದಿದೆಯೇ? ಎಂದು ಪಂಡಿತರು ಬಹಳ ಸಂತಾಪಗೊಂಡಿರುವರು. ಈ ಅತ್ಯಾಚಾರಗಳ ಕುರಿತು ವಿಚಾರಣೆ ನಡೆಸಬೇಕೆಂದು ಛಲತೊಟ್ಟಿರುವರು.

ಕಾಂಗ್ರೆಸ್ ವರ್ಕಿಂಗ್ ಕಮಿಟಿ ಸಭೆ

ಕೌನ್ಸಿಲುಗಳೊಳಗೆ ನಡೆಸಬೇಕಾದ ಕಾರ್ಯಕ್ರಮದ ಸ್ಪಷ್ಟೀಕರಣ

ಇದೇ ತಾ. 27ರಲ್ಲು ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ವಾರ್ಧದಲ್ಲಿ ನಡೆಯಿತು. ಪಂಡಿತ ಜವಾಹರಲಾಲ್, ಶ್ರೀಮತಿ ಸರೋಜಿನಿದೇವಿ, ಬಾಬು ರಾಜೇಂದ್ರ ಪ್ರಸಾದ್, ಸರ್ದಾರ್ ವಲ್ಲಭಾಯಿ ಪಟೇಲ್, ಖಾನ್ ಅಬ್ದುಲ್ ಗಾಫರ್ ಖಾನ್, ಶ್ರೀಗಳಾದ ಜೈ ರಾಮದಾಸ್ ದೌಲತ್ ರಾಮ್, ಭೂಲಭಾಯಿ ದೇಸಾಯಿ, ಶಂಕರರಾವ್ ದೇವ್, ಪಂಡಿತ ಗೋವಿಂದ ವಲ್ಲಭಪಂತ್, ಶೇಟ್ ಜಮುನಾಲಾಲ್ ಬಜಜ್, ನರೇಂದ್ರದೇವ್, ಅಚ್ಯುತ್ ಪಟ್ವರ್ಧನ್, ಕೃಪಾಲನಿಗಳಲ್ಲದೆ ವರ್ಕಿಂಗ್ ಕಮಿಟಿಯ ಮೆಂಬರುಗಳಲ್ಲದ ಶ್ರೀಗಳಾದ ಸಿ. ರಾಜಗೋಪಾಲಾಚಾರ್ಯರ್ ಶ್ರೀಮತಿ ರುಗ್ಮಿಣಿ ಲಕ್ಷ್ಮೀ ಪತಿ, ಜೈ ಪ್ರಕಾಶ್, ಡಾಕ್ಟರ್ ಖಾನ್ ಸಾಹೇಬ್, ಶ್ರೀಮತಿ ಮೃದುಲ ಸಾರಭಾಯಿ, ಮತ್ತು ರಾಫಿ ಅಹಮ್ಮದ್ ಕಿದ್ವಾಯಿಯವರು ಹಾಜರಿದ್ದರು. ಗಾಂಧಿಜಿಯವರು ಸಭೆನಡೆಯುವಾಗ ಹಾಜರಿದ್ದರು. ಮೊದಲಾಗಿ ಚುನಾವಣೆಯಲ್ಲಿ ಕಾಂಗ್ರೆಸಿನ ಕರೆಯನ್ನು ವಿಚಿತ್ರ ರೀತಿಯಲ್ಲಿ ಮನ್ನಿಸಿ, ಕಾಂಗ್ರೆಸಿನ ಧೋರಣೆಯನ್ನು ಸಮರ್ಥಿಸಿದ ಜನತೆಯನ್ನು ಅಭಿನಂದಿಸುವ ಸೂಚನೆಯು ಮಂಜೂರಾಯಿತು. ಜನತೆಯು ಕಾಂಗ್ರೆಸಿನ ಮೇಲಿತ್ತಿರುವ ಮಹತ್ತಾದ ಜವಾಬ್ದಾರಿಯನ್ನರಿತು ಶಾಸನ ಸಭೆಗಳ ಮೆಂಬರರು ಕಾಂಗ್ರೆಸಿನ ಉದ್ದೇಶ ಮತ್ತು ತತ್ವಗಳನ್ನೆತ್ತಿ ಹಿಡಿದು ಸ್ವರಾಜ್ಯ ಸಿಪಾಯಿಗಳಾಗಿ ನಡೆಯಬೇಕೆಂದು ಕೇಳಿಕೊಳ್ಳಲಾಯಿತು. ವಿಶೇಷವಾಗಿ, ಸರಕಾರವು ಕಠಿಣ ದಬ್ಬಾಳಿಕೆಯನ್ನು ಜ್ಯಾರಿಯಲ್ಲಿರಿಸಿ ಕಾಂಗ್ರೆಸ್ ಕಮಿಟಿಗಳನ್ನೂ ನಿಷೇಧಿಸಿರುವ ವಾಯುವ್ಯ ಗಡಿನಾಡು ಮತ್ತು ಬಂಗಾಳದ ಮಿಡ್ನಾಪುರದಂಥಾಭಾಗಗಳ ಜನರು ಕಾಂಗ್ರೆಸಿನ ಆಜ್ಞೆಯನ್ನು ಬಹಳ ಯಶಸ್ವಿರವಾಗಿ ಪಾಲಿಸಿದುದು ಅತ್ಯಂತ ತೃಪ್ತಿಕರವಿದೆ. ಮತ್ತು ಇದರಿಂದ ದಬ್ಬಾಳಿಕೆಯು ಎಷ್ಟೊಂದು ಅಪ್ರಯೋಜಕವೆಂಬುದು ವ್ಯಕ್ತವಾಗುತ್ತದೆಂದು ನಿಶ್ಚೈಸಲಾಯಿತು

ಪ್ರಾಂತಿಕ ಕಮಿಟಿಗಳ ಅಭಿಪ್ರಾಯಗಳನ್ನು ತಿಳಿದು ಅನಂತರ ವರ್ಕಿಂಗ್ ಕಮಿಟಿಯವರು ಅಧಿಕಾರ ಸ್ವೀಕಾರದ ಕುರಿತು ತಮ್ಮ ಅಭಿಮತವನ್ನು ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿಗೆ ತಿಳಿಸುವರು. ಆದರೆ ಪಂಡಿತ ಜವಾಹರಲಾಲರೇ ಮೊದಲಾದ ನಾಲ್ಕೈದು ಮಂದಿಯ ಹೊರತು ಇತರರೆಲ್ಲಾ ಅಧಿಕಾರ ಸ್ವೀಕಾರಕ್ಕೆ ಅನುಕೂಲರಿರುವರೆಂದು ತಿಳಿದುಬರುತ್ತದೆ. ಈಗ ಶಾಸನ ಸಭೆಗಳಿಗೆ ಆರಿಸಲ್ಪಟ್ಟಿರುವ ಮೆಂಬರರು ಕೇವಲ ಶಾಸನ ಸಭೆಗಳೇ ತಮ್ಮ ಕಾರ್ಯಕ್ಷೇತ್ರವೆಂದು ಭಾವಿಸಿಕೊಳ್ಳದೆ. ತಮ್ಮನ್ನಾರಿಸಿರುವ ಹೊರಗಣ ಜನತೆಯೊಂದಿಗೆ ಯಾವಾಗಲೂ ನಿಕಟ ಸಂಬಂಧವನ್ನಿಟ್ಟುಕೊಂಡು ತಮ್ಮಿಂದ ಸಾಧ್ಯವಾದ ಮಟ್ಟಿಗೆ ಅವರ ಸಂಕಷ್ಟಗಳನ್ನು ನಿವಾರಿಸಲೆತ್ನಿಸಬೇಕು. ಮತ್ತು ಕಾಂಗ್ರೆಸ್ ಕಮಿಟಿಗಳನ್ನು ಬಲಗೊಳಿಸಿ ಅವುಗಳ ಅಭಿಪ್ರಾಯಗಳನ್ನು ಆಗಾಗ ತಿಳಕೊಳ್ಳಬೇಕು. ಚುನಾವಣೆಯಲ್ಲಿ ಕಾಂಗ್ರೆಸಿನ ಕುರಿತು ಜನತೆಯಲ್ಲಿ ಉಂಟಾಗಿರುವ ಉತ್ಸಾಹವನ್ನು ತಣಿಯಬಿಡದ ಅಲ್ಲಲ್ಲಿ ಹಳ್ಳಿಗಳಲ್ಲಿ ಕಾಂಗ್ರೆಸ್ ಕಮಿಟಿಗಳನ್ನು ಸ್ಥಾಪಿಸಿ ಜನರು ಕಾಂಗ್ರೆಸ್ ಕಾರ್ಯಕಲಾಪಗಳಲ್ಲಿ ನಿರಂತರವಾದ ಆಸಕ್ತಿಯುಳ್ಳವರಾಗುವಂತೆ ಮಾಡಬೇಕು ಕಾಂಗ್ರೆಸ್ ಕೌನ್ಸಿಲರುಗಳು ಪ್ರಭುನಿಷ್ಠೆಯ ಪ್ರತಿಜ್ಞೆ ತೆಗೆದುಕೊಳ್ಳಲು ಯಾವ ಆಕ್ಷೇಪವೂ ಇರಲಾರದು.

ಕಾಂಗ್ರೆಸು ಕೌನ್ಸಿಲುಗಳೊಳಗೆ ಪ್ರವೇಶಿಸಿರುವುದು ಹೊಸ ರಾಜ್ಯಾಂಗ ರಚನೆಯನ್ನು ನಡಿಸಲಿಕ್ಕಲ್ಲ, ವಿರೋಧಿಸಲಿಕ್ಕೆ. ಬ್ರಿಟಿಷ್ ಸಾಮ್ರಾಜ್ಯ ಶಾಹಿಯೊದನೆ ಕಾಂಗ್ರೆಸು ಸಹಕರಿಸಲಿಕ್ಕಿಲ್ಲ. ಪೂರ್ಣ ಸ್ವರಾಜ್ಯವೇ ಕಾಂಗ್ರೆಸಿನ ಗುರಿ ಆ ಗುರಿಯನ್ನು ಮುಟ್ಟುವ ದೃಷ್ಟಿಯಿಂದಲೇ ಎಲ್ಲಾ ಕೆಲಸಗಳು ನಡೆಸಲ್ಪಡಬೇಕು. ಸರ್ವ ರಾಜಕೀಯ ಅಧಿಕಾರವನ್ನೂ ಹಿಂದೀಯರ ಕೈವಶವಿರುವ ಪ್ರಜಾಸತ್ತೆಯನ್ನು ನಾವು ಆಶಿಸುತ್ತೇವೆ, ಅದನ್ನು ನಾವಾಗಿಯೇ ಪಡೆದು ರಚಿಸಿಕೊಳ್ಳಬೇಕು; ಇದಕ್ಕಾಗಿಯೇ ಕಾನ್‌ಸ್ಟಿಟ್ಯುಮೆಂಟ್ ಎಸೆಂಬ್ಲಿಯೆಂಬ ಪ್ರತಿನಿಧಿ ಸಭೆಯನ್ನು ಕಾಂಗ್ರೆಸು ಕರೆಯುವ ನಿರ್ಧಾರವಾಡಿರುವದಾಗಿದೆ. ಹೊಸ ರಾಜ್ಯಾಂಗ ರಚನೆಯನ್ನು ವಿರೋಧಿಸಿ ತಡೆಗಟ್ಟಿ ಹಿಂದೀಯರ ಕೇಳಿಕೆಯನ್ನು ಆಳರಸರು ಮನ್ನಿಸಿ ಅವರಿಗೆ ಬೇಕಾದಂತಹ ರಾಜಕೀಯ ಸೂತ್ರವನ್ನು ರಚಿಸುವ ಸ್ವತಂತ್ರವನ್ನವರಿಗೆ ಕೊಡುವಂತೆ ಮಾಡುವುದೇ ಕಾಂಗ್ರೆಸಿನ ಪ್ರಕೃತದ ಉದ್ದೇಶ.

ಕಾಂಗ್ರೆಸ್ ಪಕ್ಷದ ಕೌನ್ಸಿಲು ಮೆಂಬರರು ಕಾಂಗ್ರೆಸಿನ ಧೋರಣೆಯನ್ನು ಸ್ಮರಣೆಯಲ್ಲಿಟ್ಟುಕೊಂಡು ಬ್ರಿಟಿಷ್ ಸಾಮ್ರಾಜ್ಯಶಾಹಿಯ ಪ್ರತಿಷ್ಠೆಯನ್ನು ಹೆ

ಚ್ಚಿಸುವಂತಹ ಯಾವ ಸಮಾರಂಭಗಳಲ್ಲಿಯೂ ಭಾಗಿಯಾಗಕೂಡದು. ಕಾಂಗ್ರೆಸ್ ಪಕ್ಷೀಯರು ವೈಯಕ್ತಿಕವಾಗಿ ಏನನ್ನೂ ಮಾಡಬಾರದು. ಸರಕಾರದ ಯಾವ ಬಿರುದು ಬಾವಲಿಗಳನ್ನೂ ಸ್ವೀಕರಿಸಬಾರದು. ಕಾಂಗ್ರೆಸ್ ಪಕ್ಷವು ಅತ್ಯಂತ ಶಿಸ್ತಿನಿಂದ ನಡೆಯಬೇಕು. ಅದರ ನಾಯಕರು ತನ್ನ ಕೆಲಸಕ್ಕೆ ಬೇಕಷ್ಟು ಮಾತ್ರವೇ ಅಧಿಕಾರಿಗಳೊಡನೆ ಸಂಪರ್ಕವನ್ನಿಟ್ಟುಕೊಳ್ಳಬೇಕು. ಮೆಂಬರರು ಕೌನ್ಸಿಲು ಮತ್ತು ಪಕ್ಷದ ಸಭೆಗಳಲ್ಲಿ ತಪ್ಪದೆ ಹಾಜರಿರಬೇಕು. ಕಾರಣ ಕೊಟ್ಟು ರಜೆ ಪಡೆದು ಮಾತ್ರ ಗೈರ್ ಹಾಜರಾಗತಕ್ಕದ್ದು. ಎಲ್ಲರೂ ಖಾದಿ ಧಾರಿಗಳಾಗಿರಬೇಕು. ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಅನುಜ್ಞೆಯಲ್ಲದೆ, ಇತರ ಪಕ್ಷಗಳವರೊಡನೆ ಯಾವ ತರದ ಒಡಂಬಡಿಕೆಯನ್ನೂ ಮಾಡಿಕೊಳ್ಳಬಾರದು.

ಕಾಂಗ್ರೆಸ್ ಮೆಂಬರರು ಕಾಂಗ್ರೆಸ್ ಮೆನಿಫೆಸ್ಟೊದಲ್ಲಿ ನಿರೂಪಿತವಾದ ಕಾರ್ಯಕ್ರಮವನ್ನು ಜ್ಯಾರಿಗೆ ತರಲೆತ್ನಿಸಬೇಕು. (೧) ಭೂಕಂದಾಯದಲ್ಲಿ ದೊಡ್ಡ ಭಾಗವನ್ನು ಕಡಿಮೆಮಾಡಬೇಕು. (೨) ಆದಾಯ ಮತ್ತು ಭೂಕಂದಾಯದ ಮೇಲೆ ಅಧಿಕವಾದಂತೆ ಅಧಿಕಪ್ರಮಾಣದ ಟೇಕ್ಸ್ ಯೊಜಿಸಬೇಕು. (೩) ವಕ್ಕಲುತನವನ್ನು ಸ್ಥಿರಗೊಳಿಸಬೇಕು. (೪) ಹಳ್ಳಿಗರು ಸಾಲ ಬಾಕಿ ಉಳಿದಿರುವ ಗೇಣಿ ಮತ್ತು ಕಂದಾಯದಿಂದ ಪೀಡಿತರಾಗದಂತೆ ಮಾಡಬೇಕು. (೫) ಎಲ್ಲಾ ದಬ್ಬಾಳಿಕೆಯ ಕಾನೂನುಗಳನ್ನೂ ತೆಗೆದು ಹಾಕಬೇಕು. (೬) ಡಿಟೆನ್ಯೂ ಕೈದಿಗಳ ಸಮೇತ ಎಲ್ಲಾ ರಾಜಕೀಯ ಕೈದಿಗಳನ್ನು ಬಿಡುಗಡೆ ಮಾಡಬೇಕು, (೭) ಕಾಯಿದೆ ಭಂಗದ ಸಂದರ್ಭದಲ್ಲಿ ಸರಕಾರವು ಜಪ್ತಿಮಾಡಿ ಮಾರಿರುವ ಭೂಮಿ ಮತ್ತು ಸೊತ್ತುಗಳನ್ನು ಜನರಿಗೆ ಹಿಂದೆ ಕೊಡಿಸಬೇಕು, (೮) ಮಜೂರರು ಸಂಬಳ ಕಡಿಮೆಮಾಡಲ್ಪಡದೆ ದಿವಸಕ್ಕೆ 8 ಘಂಟೆ ಕೆಲಸಮಾಡುವಂತಾಗಬೇಕು. (೯) ಮಾದಕ ಪಾನ ಮತ್ತು ವಸ್ತುಗಳನ್ನು ನಿಷೇಧಿಸಬೇಕು. (೧೦) ನಿರುದ್ಯೋಗಿಗಳಿಗೆ ಸಹಾಯ ದೊರೆಯಬೇಕು. (೧೧) ಅತಿ ಹೆಚ್ಚಾಗಿರುವ ಸಂಬಳ, ಭತ್ತೆ ಮತ್ತು ಆಡಳಿತ ವೆಚ್ಚವನ್ನು ಕಡಿಮೆಮಾಡಬೇಕು.

ಗವರ್ನರ್ ಮತ್ತು ವೈಸರಾಯರಿಗೆ ಪ್ರತಿಯೊಂದು ವಿಷಯಕ್ಕೂ ವಿಶಿಷ್ಟ ಅಧಿಕಾರವಿರುವ ಹೊಸ ರಾಜ್ಯಾಂಗ ರಚನೆಯಲ್ಲಿ ಕಾಂಗ್ರೆಸ್ ಪಕ್ಷಕ್ಕೂ ಸರಕಾರಕ್ಕೂ ತಿಕ್ಕಾಟವುಂಟಾಗುವುದು. ಅನಿವಾರ್ಯವಾದುದರಿಂದ ಅವನ್ನು ತಪ್ಪಿಸಿಕೊಳ್ಳಲೆತ್ನಿಸಬಾರದು. ಪ್ರಾಂತಿಕ ಕೌನ್ಸಿಲುಗಳವರು ಅಖಿಲ ಭಾರತ ಪ್ರಶ್ನೆಗಳಾದ, ಸೇವಾವೆಚ್ಚದ ಇಳಿತ, ಉಚ್ಚ ಸಿವಿಲ್ ನೌಕರರ ವೆಚ್ಚ ಕಡಿತ, ವ್ಯಾಪಾರ ವಹಿವಾಟುಗಳ ಮೇಲೆ ಸಂಪೂರ್ಣ ಅಧಿಕಾರ, ಅಖಿಲ ಭಾರತ ದಬ್ಬಾಳಿಕೆ ಕಾನೂನುಗಳ ರದ್ಯಾತಿ, ಭಾಷಣ, ಲೇಖನ ಮತ್ತು ಸಂಘಸ್ವಾತಂತ್ರ್ಯ, ಯುದ್ಧನಿಷೇಧವೇ ಮೊದಲಾದುವುಗಳ ಕುರಿತು ಅಭಿಪ್ರಾಯ ವ್ಯಕ್ತಪಡಿಸಬೇಕು.

ಗವರ್ನರರು ತಮ್ಮ ಯಾವ ವಿಶಿಷ್ಟಾಧಿಕಾರವನ್ನೂ ಉಪಯೋಗಿಸದೆ ತಟಸ್ಥರಾಗಿದ್ದು ಕಾಂಗ್ರೆಸಿನವರು ತಮಗೆ ತೋರಿದ ಕಾರ್ಯಕ್ರಮವನ್ನು ಜ್ಯಾರಿಗೆ ತರಲು ತಳಿಯಿರಲಾರದೆಂಬ ಆಶ್ವಾಸನೆಯನ್ನು ಬ್ರಿಟಿಷ್ ಸರಕಾರವು ಕೊಟ್ಟಲ್ಲಿ ಕಾಂಗ್ರೆಸ್ ಪಕ್ಷೀಯರು ಮಂತ್ರಿಮಂಡಲವನ್ನು ರಚಿಸಬಹುದೆಂದು ಮಹಾತ್ಮಾಗಾಂಧಿಯವರ ಅಭಿಪ್ರಾಯವಿರುವಂತಿದೆ. ಈ ಪ್ರಶ್ನೆಯು ಡಿಲ್ಲಿಯಲ್ಲಿ ಇದೇ ತಾ. ೧೭ರಲ್ಲಿ ಸೇರಲಿರುವ ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿ ಸಭೆಯಲ್ಲಿ ನಿರ್ಧಾರವಾಗಲಿರುವುದು. ಇದೇ ೧೯ ವತ್ತು ೨೦ಕ್ಕೆ ನೆಶನಲ್ ಕನ್ವೆನ್ಶನ್ ಎಂಬ ರಾಷ್ಟ್ರೀಯ ಮಹಾಸಭೆಯು ಡಿಲ್ಲಿಯಲ್ಲಿ ಪಂಡಿತ ಜವಾಹರಲಾಲರ ಅಧ್ಯಕ್ಷತೆಯಲ್ಲಿ ಜರಗುವುದು. ಇದರಲ್ಲಿ ೨೦೦ಕ್ಕಿಂತಲೂ ಮಿಕ್ಕಿದ ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿಯವರು ೭೫೦ ಮಂದಿ ಕೌನ್ಸಿಲ್ ಮೆಂಬರರು ಮಾತ್ರವಲ್ಲದೆ ಇತರರು ಸುಮಾರು ೨೦೦ಮಂದಿ ಭಾಗಿಯಾಗಲಿರುವರು.

ಇನ್ನೊಂದು ಸಹಗಮನ

ಸಂಯುಕ್ತ ಪ್ರಾಂತದಲ್ಲಿ ಇತ್ತಲಾಗಿ ಓರ್ವ ಸ್ತ್ರೀಯು ತನ್ನ ಪತಿಯ ಚಿತೆಯ ಮೇಲೆ ಬಿದ್ದು ಸಹಗಮನ ಮಾಡಿರುವಳಷ್ಟೆ. ಈಗ ಹಾರ್ಡ್ವಾರ ಎಂಬಲ್ಲಿ ಕುರ್ಮಿ ಜಾತಿಯ ಸ್ತ್ರೀಯೊಬ್ಬಳು ವಧುವಿನಂತೆ ಶೃಂಗರಿಸಿಕೊಂಡು ತನ್ನ ಗಂಡನ ಚಿತೆಯಮೇಲೇರಿ ನಿಂತು ಸುಟ್ಟು ಭಸ್ಮವಾಗಿರುವಳೆಂದು ತಿಳಿದು ಬರುತ್ತದೆ. ಜನರು ಈ ಸಂಗತಿಯಿಂದ ಚಕಿತರಾಗಿ ಸದ್ರಿ ಸ್ಥಳದಲ್ಲೊಂದು ದೇವಸ್ಥಾನ ಕಟ್ಟಿಸುವ ಆಲೋಚನೆ ಮಾಡಿರುವರಂತೆ. ಪೋಲೀಸರು ಈ ಸ್ಥಳಕ್ಕೆ ಹೋಗಿ ಪತ್ತೆ ನಡಿಸುತ್ತಿರುವರು.

ವಿದೇಶ

ಬಹು ಪುರಾತನ ಕಪಾಲ

ಒಂದು ಆಫ್ರಿಕದ ಟ್ರಾನ್ಸ್‌ವಾಲಿನ ಒಂದು ಗವಿಯಲ್ಲಿ ಕಂಡುಹಿಡಿಯಲ್ಪಟ್ಟಿರುವುದು. ಇದು 60,000 ಅಥವಾ 1 ಲಕ್ಷ ವರ್ಷಗಳ ಹಿಂದಿನದೆಂದು ಅಂದಾಜುಮಾಡಲಾಗಿದೆ. ಈ ಕಪಾಲದ ಎರಡು ಸಾಲು ಹಲ್ಲುಗಳು ಇರುವವು. ಈ ಕಾಲದ ಮನುಷ್ಯರು ಗುಹೆಗಳಲ್ಲಿ ವಾಸಿಸುತ್ತಿದ್ದರೆಂದೂ, ಅರೆ ನೆಟ್ಟಗೆ ನಡೆಯುತ್ತಿದ್ದರೆಂದೂ, ಕಾಡ ಪ್ರಾಣಿಗಳನ್ನು ಕೊಂದು ಅವುಗಳ ಮಾಂಸ ತಿನ್ನುತ್ತಿದ್ದರೆಂದೂ, ಅವುಗಳ ಹಾವಳಿಯಾವಾಗ ಗುಹೆಯೊಳಗೆ ಅಡಗಿ ಕೂತುಕೊಳ್ಳುತ್ತಿದ್ದರೆಂದೂ ನಂಬಲಾಗಿದೆ.

ಕಿರೀಟ ಧಾರಣೋತ್ಸವಕ್ಕೆ ನೆಗಸರಿಗೆ ಆಮಂತ್ರಣ

ಆರನೇ ಜೋರ್ಜರ ಕಿರೀಟ ಧಾರಣೋತ್ಸವಕ್ಕೆ ಅಬಿಸೀನಿಯದ ಚಕ್ರವರ್ತಿಗಳಾಗಿದ್ದ ನೆಗಸರಿಗೆ ಆಮಂತ್ರಣ ಹೋಗಿರುವುದೆಂದೂ, ಅವರು ಸ್ವತಹ ಹೋಗದೆ ಪ್ರತಿನಿಧಿಯೊಬ್ಬರನ್ನು ಕಳುಹಿಸುವರೆಂದೂ ತಿಳಿದುಬಂದಿದೆ. ಇದರಿಂದ ಇಟಲಿಯಲ್ಲಿ ಆಶ್ಚರ್ಯವುಂಟಾಗಿದೆ. ನೆಗಸರ ಪ್ರತಿನಿಧಿಯು ಕಿರೀಟಧಾರಣೆಗೆ ಹೋದರೆ ಇಟಲಿಯ ಕಡೆಯಿಂದ ಯಾರೂ ಅದರಲ್ಲಿ ಭಾಗಿಯಾಗಬಾರದೆಂದು ನಂಬಲಾಗಿದೆ.

ನಿರ್ದಾಕ್ಷಿಣ್ಯವಾಗಿ ಅಬಿಸೀನಿಯನರ ಕೊಲೆ

ಅಡ್ಡಿಸ್ ಅಬಾಬದಲ್ಲಿ ಮಾರ್ಶಲ್ ಗ್ರೆಜಿಯಾನಿಯವರ ಮೇಲೆ ಇತ್ತಲಾಗಿ ಗುಂಡೆಸದ ಸಂಬಂಧವಾಗಿ ಕೈದುಮಾಡಲ್ಪಟ್ಟವರನ್ನೆಲ್ಲಾ ನಿರ್ಘೃಣವಾಗಿ ಗುಂಡೆಸೆದು ಕೊಲ್ಲಲಾಗಿದೆ. ಯಾರ್‍ಯಾರ ಹಸ್ತ ಆಯುಧಗಳಿದ್ದುವೋ ಅವರೆಲ್ಲಾ ಕೈದುಮಾಡಲ್ಪಟ್ಟಿರುವರು. ಒಟ್ಟು 3000 ಮಂದಿಯು ದಸ್ತಗಿರಿಯಾಗಿರುವುದು. ಇವರಲ್ಲಿ ನಿರ್ದೋಷಿಗಳೆಂದು ಪರಿಗಣಿಸಲ್ಪಟ್ಟ ಕೆಲವರು ಬಿಡಲ್ಪಟ್ಟಿರುವರು.

ಮಾರ್ಶೆಲ್ ಗ್ರೇಟಿಯಾನಿಯವರಿಗೆ ಕಾಯಿಲೆ

ಅಬಿಸೀನಿಯದ ವೈಸರಾಯರಾದ ಮಾರ್ಶೆಲ್ ಗ್ರೇಟಿಯಾನಿಯವರ ಪರಿಸ್ಥಿತಿಯು ಚಿಂತಾಜನಕವಾಗಿದೆ. ಅವರ ಮೇಲೆ ಅಡ್ಡಿಸ್ ಅಬಾಬದಲ್ಲಿ ಇತ್ತಲಾಗಿ ಎಸೆಯಲ್ಪಟ್ಟ ಬೋಂಬಿನ ಚೂರುಗಳು ಅವರ ಶ್ವಾಸಕೋಶದಲ್ಲುಳಿದು ಅದರಿಂದಾಗಿ ಅವರಿಗೆ ಒಂದು ಬಗೆಯ ನ್ಯುಮೋನಿಯ ಉಂಟಾಗಿದೆಯೆಂದು ತಿಳಿದು ಬರುತ್ತದೆ.

ಇಂಗ್ಲೆಂಡ್ ಆಸ್ಟ್ರೇಲಿಯ ಕ್ರಿಕೆಟ್ ಮೇಚು

ಇಂಗ್ಲೆಂಡು ಮತ್ತು ಆಸ್ಟ್ರೇಲಿಯಗಳೊಳಗೆ ಆಸ್ಟ್ರೇಲಿಯದಲ್ಲಿ ಇಷ್ಟರ ವರೆಗೆ 4 ಕ್ರಿಕೆಟ್‌ಮೇಚಗಳು ನಡೆದಿರುವವು. ಎರಡರಲ್ಲಿ ಇಂಗ್ಲೆಂಡು ಗೆದ್ದಿರುವುದು. ಇನ್ನೆರಡರಲ್ಲಿ ಆಸ್ಟ್ರೇಲಿಯವು ಜಯಶಾಲಿಯಾಗಿರುವುದು. ೫ನೇ ಟೆಸ್ಟ್ ಮೇಚು ಈಗ ಮೆಲ್ಬೋರ್ನ್ ಪಟ್ಟಣದಲ್ಲಿ ನಡೆದಿದ್ದು ಆಸ್ಟ್ರೇಲಿಯದವರು ಮೊದಲನೇ ಸರ್ತಿ ೬೦೪ ರನ್ಸ್ ತಗೆದಿರುವುದು. ಕೆಪ್ಟನರಾದ ಬ್ರೆಡ್ಮೆನರು ೧೬೯ ರನ್ಸ್ ತೆಗೆದಿರುವರು. ಈ ಮೇಚನ್ನು ನೋಡಲು ೭೦,೦೦೦ ಜನರು ನೆರೆದಿದ್ದರು. ಇಂಗ್ಲೆಂಡಿನವರು ೪ ಜನರು ಔಟಾಗಿ ೧೮೪ ರನ್ಸ್ ತೆಗೆದಿರುವರು.

ದಕ್ಷಿಣ ಕನ್ನಡ

ಮೂಡಬಿದ್ರೆ

ಪಂಡಿತ ಜವಾಹರಲಾಲ ನೆಹರುಗಳು ಮೂಡಬಿದ್ರೆಯನ್ನು ಸಂದರ್ಶಿಸಿದಾಗ, ಅಲ್ಲಿಯ ಪುರಜನರು ಅವರಿಗೊಪ್ಪಿಸಿದ ಮಾನಪತ್ರದ ಸಾರಾಂಶವು ಈ ಕೆಳಗಣಂತಿರುವದು. ಪ್ರಿಯ ದೇಶಾಭಿಮಾನಿಗಳೇ, ರಾಷ್ಟ್ರಪತಿಗಳಾದ ತಮ್ಮನ್ನು ಮೂಡಬಿದ್ರೆಯ ಪುರಜನರಾದ ನಾವು ಅತ್ಯಾನಂದದಿಂದ ಸ್ವಾಗತೀಕರಿಸುತ್ತೇವೆ. ಶ್ರೀಮಂತಿಕೆಯ ಮಡಿಲಲ್ಲಿ ಹುಟ್ಟಿ ಅತ್ಯಂತ ವಿಲಾಸ ವೈಭವದ ಜೀವನವನ್ನು ಮಾತೃ ಭೂಮಿಯ ಸ್ವಾತಂತ್ರ್ಯದ ಹೋರಾಟಕ್ಕಾಗಿ ತ್ಯಜಿಸಿದ ತ್ಯಾಗವೀರರು ನೀವು. ನೀವು ಪಟ್ಟ ಸಂಕಷ್ಟಗಳು, ದೇಶದ ಸ್ವಾತಂತ್ರ್ಯ ಸಮರಕ್ಕಾಗಿ ನೀವೆಷ್ಟು ಬೆಲೆಕೊಡುವಿರೆಂಬುವನ್ನು ವ್ಯಕ್ತಗೊಳಿಸುವವು. ನಾವು ತಮ್ಮ ಉಜ್ವಲ ಮಾದರಿಯನ್ನು ಕಂಡು ನಮ್ಮಿಂದ ಸಾಧ್ಯವಾದಷ್ಟು ದೇಶಸೇವೆನಾಡಲು ಪ್ರಯತ್ನಿಸುತ್ತಿದ್ದೇವೆ. ಪರಾಧೀನರಾಷ್ಟ್ರವು ತನ್ನ ಬಂಧವಿಮೋಚನೆಗಾಗಿ ಹಾತೊರೆಯುತ್ತಿರುವ ಸ್ವಾತಂತ್ರ್ಯದ ಸಂದೇಶವನ್ನು ನೀವು ಸಾರುತ್ತಾ ಬಂದಿರುವಿರಿ. ಅತ್ಯಂತ ಉದಾತ್ತ ಉದ್ದೇಶಸಾಧನೆಯ ಉತ್ತಮೋತ್ತಮ ಕೆಲಸಗಾರರಾದ ತಮ್ಮನ್ನು ನಾವು ಸ್ತುತಿಸಿ, ತಾವು ಗುರಿಯನ್ನು ಮುಟ್ಟುವಂತೆ ತಮಗೆ ಭಗವಂತನು ಶಕ್ತಿ ಮತ್ತು ಆಯುಷ್ಯನ್ನೀಯಲೆಂದು ಪ್ರಾರ್ಥಿಸುತ್ತೇವೆ.

ಮುದುಕಿ ಹೋದರೂ ವಾಸನೆ ಹೋಗಲಿಲ್ಲ.

ಚುನಾವಣೆಯ ನಾಟಕವಂತೂ ಮುಗಿಯಿತು. ಜಸ್ಟೀಸು ಪಕ್ಷ ವಹಿಸಿದವರಿಗೆಲ್ಲಾ ವಿಷಾದಾಂತ ನಾಟಕವಾಗಿ ಪರಿಣಮಿಸಿತು. ಜಸ್ಟೀಸು ಪಕ್ಷ ಹಿಡಿದು ಸೊಂಟಕಟ್ಟಿ ಹೋರಾಡಿದ ಕೆಲವು ಅಧ್ಯಮಹನೀಯರು ತಮ್ಮ ಊರಿನಲ್ಲಿ ಹಾಗೂ ನೆರೆಕರೆಯ ಗ್ರಾಮಗಳಲ್ಲಿ ಕಾಂಗ್ರೆಸು ಪಕ್ಷ ಹಿಡಿದು ಕೆಲಸಮಾಡಿದವರ ಮೇಲಿನ ವೈಷಮ್ಯವನ್ನು ಇನ್ನೂ ಬಿಡಲಿಲ್ಲ. ಕೆಲವು ಓಟರರನ್ನು ಕರತರಿಸಿ ಪ್ರಮಾಣಮಾಡಿಸುವುದು ಕೆಲವರಿಗೆ ದಂಡನೆ ವಿಧಿಸುವದು ಬಡ ವಕ್ಕಲಿಗರಿಗೆ ಪೀಡಿಸುವುದು. ವಕ್ಕಲುತನ ತೆಗೆಸುವುದು. ಸಾಲಪಡೆದವರನ್ನು ಕರತರಿಸಿ ಈಗಲೇ ಕೊಟ್ಟಿಂತೀರಬೇಕೆಂದು ಪೀಡಿಸುವುದು. ಇಂಥಾ ಆಕೃತ್ಯಗಳು ಕುಂದಾಪುರ ಉಡ್ಪಿ ತಾಲೋಕಿನ ಕೆಲವು ಭಾಗಗಳಿಂದ ಕೇಳಿಬರುತ್ತವೆ. ಅಂಥಾ ಮಹನೀಯರೊಡನೆ ವಿನಯಪೂರ್ವಕವಾಗಿ ಬೇಡಿಕೊಳ್ಳುವದೇನೆಂದರೆ– ತಾವೆಲ್ಲರೂ ದೊಡ್ಡವರು, ಆಗರ್ಭಶ್ರೀಮಂತರು, ದೊಡ್ಡ ವರ್ಗದಾರರು ಆದರೆ ತಾವು ಹಿಡಿದ ಪಕ್ಷ ಮಾತ್ರ. ದೇಶಕ್ಕೆ– ಜನತೆಗೆ ಬೇಡಾದದ್ದು. ಆದುದರಿಂದ ಆ ಪಕ್ಷವನ್ನು ದೇಶವೂ ಪ್ರಾಂತವೂ ಹೊರತಳ್ಳುವಾಗ ನಮ್ಮ ಬಡ ಓಟರರೂ ಹೊರತಳ್ಳಿದರು. ಅದು ಲೋಕನೀತಿ. ನಿಮ್ಮ ಮನೆಯವರೇ ಎಷ್ಟು ಮಂದಿ ಕಾಂಗ್ರೆಸಿಗೆ ಓಟುಕೊಡಲಿಲ್ಲ. ನಿಮ್ಮ ಮಿತ್ರರು, ನೆಂಟರಿಷ್ಟರು, ಬಂಧು ಬಾಂಧವರು ಎಷ್ಟು ಮಂದಿ ಕಾಂಗ್ರೆಸಿಗೆ ಓಟು ಕೊಡಲಿಲ್ಲ? ಹೀಗಿರುವಾಗ ಬಡವಕ್ಕಲಿಗರ ಮೇಲಿನ ಸೇಡನ್ನು ಬಿಟ್ಟುಬಿಡಿರಿ. ಜನ ಸಮುದ್ರವೇ ಉಕ್ಕಿಬರುವಾಗ ಅದನ್ನು ತಡೆಯಲಿಕ್ಕೆ ನೀವು ಕೆಲವು ಮಂದಿ ಸೊಂಟಕಟ್ಟಿದ್ದೇ ದೊಡ್ಡ ತಪ್ಪು. ಪ್ರವಾಹವು ಉಕ್ಕಿ ಬಂದು ನೀವು ಹಾಕಿದ ಕಟ್ಟು, ನಿಮ್ಮ ಹತ್ಯಾರು, ನೀವು ಸಹ ತೇಲಿಹೋದುದು ಸೋಜಿಗವಲ್ಲ. ನಿಮ್ಮ ಇಡೀ ತಾಲೋಕಿನ ಓಟನ್ನು ನಿಮ್ಮ ಉಮೇದ್ವಾರನಿಗೇ ಕೊಟ್ಟರೂ ಅವರು ಉಳಿಯುವಂತಿಲ್ಲ. ಅಂತಿರುವಾಗ ಬಡವಕ್ಕಲು, ಬಡರೈತ, ಬಡನಾಗನ ಮೇಲಿನ ವೈಷಮ್ಯವಾದರೂ ಏಕೆ? ಅದು ನಿರರ್ಥಕ. ತಾವು ಶಾಂತರಾಗಿರಿ. ಪಶ್ಚಾತ್ತಾಪ ಪಡಿರಿ.

ಸತ್ಯವಾದಿ ಕಾಂಗ್ರೆಸುವಾಲ.

ದಿ ಗಾರ್ಡಿಯನ್ ಒಫ್ ಇಂಡಿಯಾ ಇನ್ಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್,

ಮುಖ್ಯ ಆಫೀಸು—ಪೋಸ್ಟ್ ಬೊಕ್ಸ್ ೮೯—ಮದ್ರಾಸು.

ತೀರಾ ದೇಶೀಯ ಭಂಡವಾಳ=ತೀರಾ ದೇಶೀಯ ಆಡಳಿತೆ

ತೀರಾ ಭದ್ರವಾದ ಕಾರ್ಯಕ್ರಮ.

ತೀರಾ ಕಡಿಮೆ ವಿಮೆಯ ದರಗಳು —— ಉದಾರವಾದ ಶರ್ತಗಳು

ನ್ಯಾಯನೀತಿ ಸಮ್ಮತವಾದ ವ್ಯವಹಾರ.

ತೀರಾ ಹೊಸ ಹೊಸ ನಮೂನೆಯ ಏರ್ಪಾಡುಗಳು,

ಎಲ್ಲಾ ಬಗೆಯ ವಿವಿಧ ಸ್ಥಿತಿಯ ಜನರಿಗೆ ಸರ್ವಾನುಕೂಲ.

ಅತ್ಯಾಕರ್ಷಕವಾದ ಶರ್ತಗಳು—ಖಂಡಿತವಾದ ಭದ್ರತೆ.

ಜೀವನ ಅನಿಶ್ಚಿತ; ಸಂಪಾದನೆ ಅನಿಶ್ಚಿತ.

ಇವುಗಳ ಬಾಧಕಕ್ಕೆ ಜೀವವಿಮೆಯೇ ಉತ್ತಮ ಪರಿಹಾರ.

ಒಮ್ಮೆ ನಮ್ಮಲ್ಲಿ ವಿಮೆ ಕೊಂಡವರು

ನಿರಾಶರಾಗಲಾರರು.

ಸೂಚನೆ:—ನಮ್ಮ ಎಲ್ಲಾ ಪಾಲಿಸಿಹೋಲ್ಡರರೂ, ಏಜಂಟರೂ ಇನ್ನು ಮುಂದೆ ತಮ್ಮ ವ್ಯವಹಾರವನ್ನು **ದಿ ಬ್ರಾಂಚ್ ಸೆಕ್ರೆಟರಿ, ದಿ ಗಾರ್ಡಿಯನ್ ಒಫ್ ಇಂಡಿಯಾ ಇನ್ಶ್ಯೂರೆನ್ಸ್ ಕೋ., ಲಿಮಿಟೆಡ್, ಮಂಗಳೂರು ಶಾಖೆ** ಇವರೊಡನೆ ಬೆಳಿಸಬೇಕಾಗಿ ವಿನಂತಿ.

ವಿಶೇಷ ಮಾಹಿತಿಗಳಿಗೆ ಇವರಿಗೆ ಬರೆಯಿರಿ.

E. A. PAIS, B. Sc., ***Branch Secretary,***

The Guardian of India Insurance Co., Limited,

MANGALORE BRANCH.

ಚಂದಾದಾರರಲ್ಲಿ

ಚಂದಾಹಣ ಬಾಕಿ ಇರುವ ನಮ್ಮ ಚಂದಾದಾರರು ಅದನ್ನು ಬೇಗನೇ ತಮ್ಮ ಹಣವನ್ನು ಮನಿಯಾರ್ಡರ್ ಮೂಲಕ ಇನ್ನು ಕಳುಹಿಸಿಕೊಡಬೇಕಾಗಿ ಅಪೇಕ್ಷಿಸುತ್ತೇವೆ. ವಿ. ಪಿ. ಮಾಡುವದಾದರೆ ಐದಾಣೆ ಹೆಚ್ಚಿಗೆ ಬೀಳುವದು.

ನಮ್ಮೊಡನೆ ಪತ್ರವ್ಯವಹಾರ ನಡೆಸುವವರು ತಮ್ಮ ಚಂದಾ ನಂಬ್ರವನ್ನು ಸೂಚಿಸಿ ಬರೆಯಬೇಕಾಗಿ ವಿನಂತಿ. ಮೆನೇಜರ್, 'ನವಯುಗ'

ಉಡುಪಿ, ತಾ. ೪-೩-'೩೭ ಗುರುವಾರ

ಮುಂದೇನು?

ಚುನಾವಣೆಯಲ್ಲಿ ಎಲ್ಲೆಲ್ಲಿಯೂ ಕಾಂಗ್ರೆಸಿನ ದಿಗ್ವಿಜಯವಾಯಿತು. ಹೊಸ ರಾಜ್ಯಾಂಗರಚನೆಯು ಜನತೆಗೆ ಸ್ವೀಕಾರ್ಯವಲ್ಲ; ಕಾಂಗ್ರೆಸಿನ ಹೊರತು ಜನ ವಿಶ್ವಾಸ ಪಡೆದಿರುವ ಇನ್ನೊಂದು ಪಕ್ಷವು ದೇಶದಲ್ಲಿಲ್ಲವೆಂಬುದು ಲೋಕವಿಶ್ರುತವಾಯಿತು. ಆಳರಸರು ದೂರದೃಷ್ಟಿ ಹಾಗೂ ವಿವೇಕಬುದ್ಧಿಯುಳ್ಳವರಾದರೆ, ದೇಶದಲ್ಲಿ ಶಾಂತಿಯು ನೆಲೆಗೊಳ್ಳಬೇಕು ಭಾರತೀಯ ಮತ್ತು ಆಂಗ್ಲೇಯರೊಳಗೆ ಮೈತ್ರಿಭಾವವುಂಟಾಗಬೇಕೆಂಬ ಸದಿಚ್ಛೆಯು ಅವರಲ್ಲಿರುವುದಾದರೆ ಅವರು ಕೂಡಲೆ ಕಾಂಗ್ರೆಸಿನೊಡನೆ ಸಂಧಿ ಪ್ರಸ್ತಾಪ ಮಾಡಿ ದೇಶಕ್ಕೆ ತೃಪ್ತಿಯನ್ನುಂಟುಮಾಡುವಂತಹ ರಾಜ್ಯಾಂಗ ರಚನೆಯನ್ನು ಹಿಂದೀಯರ ಸಮ್ಮತಿಯ ಮೇರೆಗೆ ರೂಪಿಸುವ ಪ್ರಯತ್ನ ಮಾಡಬೇಕು. ಅದಕ್ಕೀಗ ಅನುಕೂಲ ಸಂದರ್ಭವುಂಟಾಗಿರುವುದು. ಆದರೆ ಆಳರಸರಲ್ಲಿ ಈ ಸುಸಂದರ್ಭವನ್ನು ಸದುಪಯೋಗಗೊಳಿಸುವಷ್ಟರ ವಿವೇಕವುಂಟಾಗಲಾರದು.

ಇಂತಹ ಪರಿಸ್ಥಿತಿಯಲ್ಲಿ ಕಾಂಗ್ರೆಸ್ ಪಕ್ಷೀಯರು ಮುಂದೆ ಮಾಡತಕ್ಕದ್ದೇನು? ಕೌನ್ಸಿಲು ಭದ್ರತೆ ರಕ್ಷಣೆಗಳಿಂದ ಗವರ್ನರರ ಚಕ್ರವ್ಯೂಹಗಳಂತಿರುವದು. ಕಾಂಗ್ರೆಸ್ ಪಕ್ಷೀಯರು ಅವುಗಳೊಳಗೆ ಹೊಕ್ಕು ಅವನ್ನು ಭೇದಿಸುವುದಾದರೂ ಹೇಗೆ? ಒಮ್ಮೆ ಒಳಹೊಕ್ಕರೆ ಗವರ್ನರರುಗಳ ಬಲೆಗೆ ಬಿದ್ದು ಕಾಂಗ್ರೆಸಿನ ಉದ್ದೇಶವನ್ನೇ ಮರೆತುಬಿಡಲಾರರೇ? ಹಿಂದಿನ ಸ್ವರಾಜ್ಯಪಕ್ಷದ ಇತಿಹಾಸವೇ ಪುನರಾವರ್ತಿತವಾಗಲಾರದೇ, ಎಂಬ ನಾನಾ ರೀತಿಯ ಸಂದೇಹಗಳು ಕೆಲಮಂದಿ ಉಜ್ವಲ ದೇಶಭಕ್ತರಲ್ಲಿ ಕಲೆಯುತ್ತಿವೆ. ಕಾಂಗ್ರೆಸ್ ಪಕ್ಷೀಯರು ಒಮ್ಮೆ ಅಧಿಕಾರ ಸ್ವೀಕರಿಸಿದರೆಂದರೆ, ಇತರ ಮಂದಪಕ್ಷೀಯರಂತೆ, ಆಡಳಿತ ರಥವನ್ನು ಮುರಿಯುವ ಬದಲಿಗೆ ನಡೆಸುವುದರಲ್ಲಿ ನಿರತರಾಗುವರೆಂದೇ ಈ ಜನರ ಭೀತಿ. ಆದರೆ ದೇಶದ ಹೆಚ್ಚಿನವರ ಅಭಿಪ್ರಾಯವು ಮಂತ್ರಿಪದವಿ ಸ್ವೀಕರಿಸಬೇಕೆಂದಿದೆ. ಹೊಸ ರಾಜ್ಯಾಂಗರಚನೆಯಲ್ಲಿ ಕೆಲಮಟ್ಟಿನ ಸ್ವಾತಂತ್ರ್ಯವು ಪ್ರಜಾಪ್ರತಿನಿಧಿಗಳಿಗಿದೆ. ಹಿಂದಿನಂತೆ ನೌಕರಶಾಹಿಯ ಆಟವು ಇನ್ನು ಮುಂದೆ ನಡೆಯಲು ಸಾಧ್ಯವಿಲ್ಲ. ಕಾಂಗ್ರೆಸಿನವರು ಪ್ರಬಲ ಬಹುಪಕ್ಷೀಯರಿದ್ದಲ್ಲಿ ಮಂತ್ರಿಮಂಡಲವನ್ನು ರಚಿಸಿ ಎಷ್ಟರ ಮಟ್ಟಿನ ಆಡಳಿತ ಸ್ವಾತಂತ್ರ್ಯವು ಕೊಡಲಾಗುವುದೆಂಬುದನ್ನು ನೋಡಬೇಕು. ಗವರ್ನರರು ಮಂತ್ರಿಗಳಿಗೆ ಸ್ವಾತಂತ್ರ್ಯ ಕೊಟ್ಟರೆ ಕಾಂಗ್ರೆಸು ನಿರ್ದೇಶಿಸುವ ಕಾರ್ಯಕ್ರಮವನ್ನು ಜ್ಯಾರಿಗೆ ತಂದು ಸಾಧ್ಯವಾದಷ್ಟು ಜನಹಿತಸಾಧನೆ ಮಾಡಲೆತ್ನಿಸಬೇಕು. ಭೂಕಂದಾಯವನ್ನಿಳಿಸುವುದು, ಬೇಸಾಯಗಾರರ ಸಾಲದ ಹೊರೆಯನ್ನು ಸಾಧ್ಯವಾದಷ್ಟು ಕಡಿಮೆ ಮಾಡುವುದೇ ಮೊದಲಾದ ಪ್ರಜಾಹಿತ ಕಾರ್ಯಗಳನ್ನು ಮಾಡಬೇಕು. ಗವರ್ನರರು ಮಂತ್ರಿಗಳಿಗೆ ಬೇಕಷ್ಟು ಸ್ವಾತಂತ್ರ್ಯವೀಯದೆ ಅವರ ಮೇಲೆ ತನ್ನ ಅಧಿಕಾರ ನಡಿಸನೋಡಿದರೆ ಮಂತ್ರಿಗಳು ಕೂಡಲೆ ರಾಜಿನಾಮೆ ಕೊಟ್ಟು, ಪ್ರಾಂತಗಳಲ್ಲಿ ಕೊಡಲ್ಪಟ್ಟಿರುವ ಆಡಳಿತ ಸ್ವಾತಂತ್ರ್ಯದ ಹುರುಳನ್ನು ಬಯಲಿಗೆಳೆಯಬೇಕೆಂದೇ ಹೆಚ್ಚಿನ ಕಾಂಗ್ರೆಸ್ ಪಕ್ಷೀಯರ ಅಭಿಮತ. ನಾವು ಇನ್ನೊಂದೆಡೆ ಕೊಟ್ಟಿರುವ ವರ್ಕಿಂಗ್ ಕಮಿಟಿಯ ನಿರ್ಣಯಗಳನ್ನು ನೋಡಿದರೆ ಇಷ್ಟೊಂದು ನಿರ್ಬಂಧವಿರುವಾಗ ಕಾಂಗ್ರೆಸ್ ಪಕ್ಷೀಯರು ಅಧಿಕಾರ ಸ್ವೀಕರಿಸುವುದರಿಂದ ಯಾವ ತರದ ಕೆಡುಕಿಗೂ ಆಸ್ಪದ ದೊರೆಯಲಾರದೆಂಬುದು ಸ್ಪಷ್ಟವಾಗುವುದು.

ತನ್ನ ಮತ್ತು ವೈರಿಸೇನೆಯ ಬಲಾಬಲವನ್ನಳೆದುಕೊಂಡು ಹೋರಾಟದ ರೀತಿಯನ್ನು ಸಂದರ್ಭಕ್ಕೆ ತಕ್ಕಂತೆ ಬದಲಾಯಿಸಿ ತನ್ನ ಸೈನಿಕರು ಉತ್ಸಾಹಗುಂದದಂತೆ ನಡಿಸುವುದರಲ್ಲೇ ಸೇನಾನಿಯ ವಿಚಕ್ಷಣತೆಯಿದೆ. ಅಗತ್ಯಬಿದ್ದರೆ ಹಿಂದೆ ಸರಿದು ನಿಂತು ಮುಂದೊತ್ತಲು ಹೊಂಚು ಹಾಕಿ ಕೊಂಡಿರುವುದರಲ್ಲಿ ಜಾಣ್ಮೆಯಿದೆ. ಅಂತೆಯೇ ಈಗ ದೇಶವು ಉಗ್ರವಾದ ಯಾವ ಕಾರ್ಯಕ್ಕಾದರೂ ಸಿದ್ಧವಿಲ್ಲದಿರುವಾಗ, ಶಾಸನಬದ್ಧರೀತಿಯಲ್ಲಾದರೂ ಸಾಧ್ಯವಾದ ಕೆಲಸಮಾಡಿ, ಜನತೆಯಲ್ಲಿ ಹುರುಪನ್ನೂ ವಿಶ್ವಾಸವನ್ನೂ ಉಂಟುಮಾಡಿ ಸಂಘಟನೆಯನ್ನುಂಟುಮಾಡಬೇಕು. ಕೌನ್ಸಿಲುಗಳಿಂದ ಸ್ವರಾಜ್ಯಸಾಧನೆಯಾಗುವುದಿಲ್ಲೆಂಬುದು ನಿಜ. ಆದರೆ ಕಾಂಗ್ರೆಸ್ ಪಕ್ಷೀಯರು ಅವುಗಳನ್ನು ವಶಪಡಿಸಿಕೊಳ್ಳುವುದರಿಂದ, ಆಳರಸರು ಅವನ್ನು ತಮ್ಮ ಕೈಗೊಂಬೆಗಳಿಂದ ದೇಶಕ್ಕೆ ಹಾನಿಕರವಾಗಿ ನಡಿಸುವುದನ್ನು ತಡೆದಂತಾಗುವುದು. ನಮ್ಮವರನ್ನೇ ನಮ್ಮೆದಿರಾಗಿ ಎತ್ತಿಕಟ್ಟಿ ಜನಪ್ರತಿನಿಧಿತ್ವ ಸೋಗಿನಿಂದ ರಾಜ್ಯಭಾರ ನಡಿಸುವುದನ್ನು ನಿಲ್ಲಿಸಿದಂತಾಗುವುದು. ಈಗ ಕೌನ್ಸಿಲುಗಳಿಗೆ ಹೋಗಿರುವ ಹೆಚ್ಚಿನವರು ದೇಶಾಭಿಮಾನಿಗಳು. ಅವರ ನಾಯಕರು ದೊಡ್ಡ ದೊಡ್ಡ ರಾಷ್ಟ್ರಭಕ್ತರು. ಕೌನ್ಸಿಲುಗಳಿಂದ ದೇಶಕ್ಕೆ ಸ್ವಲ್ಪವೇನಾದರೂ ಹಾನಿಯಾಗುವುದಾದರೆ ಅವರು ಅವುಗಳೊಳಗೆ ಇರಲಾರರು. ಇದು ಹೊರತು ಅವರ ಮೇಲೆ ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಅಂಕುಶವು ಇದ್ದೇ ಇರುವುದು. ಇಂತಹ ವಿದ್ಯಮಾನಗಳಲ್ಲಿ ಕಾಂಗ್ರೆಸ್ ಪಕ್ಷೀಯರು ಅಧಿಕಾರ ಸ್ವೀಕರಿಸುವುದರಿಂದ ಕಾಂಗ್ರೆಸಿನ ಉದ್ದೇಶಕ್ಕೆ, ರಾಷ್ಟ್ರಹಿತಸಾಧನೆಗೆ ಸಹಾಯವಾಗಬಹುದೇ ಹೊರತು ಎಂದಿಗೂ ತೊಡಕಾಗಲಾರದು.

ಸ್ವದೇಶ

ಸಕ್ಕರೆ ಮತ್ತು ಬೆಳ್ಳಿಯ ಮೇಲೆ ಹಚ್ಚಿನ ಕರ
ಪೋಸ್ಟ್ ಪಾರ್ಸೆಲ್ ದರ ಕಡಮೆ ಮಾಡಲ್ಪಟ್ಟಿತು

1936-37ರಲ್ಲಿ ರೂ. 6 ಲಕ್ಷಗಳಷ್ಟರ ಉಳಿತಾಯವಾಗಬಹುದೆಂದು ಅಂದಾಜು ಮಾಡಲ್ಪಟ್ಟಿದ್ದರೂ ತಿದ್ದುಪಡಿ ಮಾಡಿದ ಅಂದಾಜು ಪಟ್ಟಿಯ ಮೇರೆಗೆ ರೂ. 1೫7 ಲಕ್ಷ ಕಡಿಮೆ ಬಿದ್ದಿರುವುದು. 1337-39ರಲ್ಲಿ ಆದಾಯವು ರೂ. 79-99 ಕೋಟಿಯಾಗುವಾಗ ವೆಚ್ಚವು ರೂ. 83-41 ಯಾಗಬಹುದೆಂದು ಅರ್ಥ ಸಚಿವರು ಅಂದಾಜುಮಾಡಿರುತ್ತಾರೆ. ರಾಜ್ಯಾಂಗ ರಚನೆಯ ಬದಲಾವಣೆ ನಿಮಿತ್ತ ರೂ. 3·76 ಕೋಟಿಯಷ್ಟು ಆದಾಯವು ಕಡಿಮೆಯಾಗುವುದು. ಈ ಕಡಿಮೆಯು ಕಾಯಮಾಗಿರಲಾರದೆಂದೂ, ಹೊಸ ಸುಧಾರಣೆಗೆ ಸಾಕಷ್ಟು ಹಣ ದೊರೆಯಬಹುದೆಂದೂ ಅರ್ಥ ಸಚಿವರ ನಿರೀಕ್ಷೆ. ಸಕ್ಕರೆಯ ಮೇಲೆ ಹಂಡ್ರಡ್‌ವೇಟಿಗೆ ರೂ. 1—6—0 ಇದ್ದ ಕರವನ್ನು ೨ಕ್ಕೇರಿಸಲಾಗಿದೆ. ಇದರಿಂದ ರೂ. 115 ಲಕ್ಷ ಹೆಚ್ಚು ಆದಾಯದೊರೆಯುತ್ತದೆ. ಬೆಳ್ಳಿ ಔನ್ಸಿನ ಮೇಲಿದ್ದ ಕರವನ್ನು ರೂ. 2ರಿಂದ 3ಕ್ಕೇರಿಸಲಾಗುವುದು. ಇದರಿಂದ ರೂ. 60 ಲಕ್ಷ ಹೆಚ್ಚಿಗೆ ಆದಾಯ ದೊರೆಯುವುದು. ಪುಸ್ತಕ ಪೆಕೆಟ್ ಪಾರ್ಸೆಲ್ ದರವನ್ನು ಪ್ರಥಮ ಎರಡೂವರೆ ತೊಲೆಗೆ 9 ಪೈಯಿಂದ 6 ಪೈಗೆ ಇಳಿಸಲಾಗಿದೆ. ಹೆಚ್ಚಿಗೆಯ ಪ್ರತಿ ಎರಡೂವರೆ ತೊಲೆಗೆ 3 ಪೈ. ಇದರಿಂದ ರೂ. 8 ಲಕ್ಷ ನಷ್ಟವಾಗುತ್ತದೆ 40 ತೊಲೆ ಅಥವಾ ಅದಕ್ಕಿಂತ ಕಡಿಮೆ ಭಾರದ ಪಾರ್ಸೆಲುಗಳಿಗೆಲ್ಲಾ 4 ಆಣೆ ಚಾರ್ಜು ಮಾಡಲಾಗುವುದು.

ವಿದ್ಯಾರ್ಥಿಗಳ ಮೇಲೆ ಬರ್ಬರ ಅತ್ಯಾಚಾರ.

ಪಂಡಿತ ಜವಾಹಿರಲಾಲರೆಂದರೆ ವಿದ್ಯಾರ್ಥಿಗಳಿಗೆ ಬಹಳ ಪ್ರೇಮ. ಅದುದರಿಂದ ಅವರನ್ನು ಕಾಣಲು ಎಲ್ಲೆಲ್ಲಿಯೂ ವಿದ್ಯಾರ್ಥಿಗಳು ಉತ್ಸಾಹಗೊಳ್ಳುವುದರಲ್ಲಿ ಆಶ್ಚರ್ಯವೇನೂ ಇಲ್ಲ. ಹೀಗೆ ಪಂಡಿತರನ್ನು ಕಾಣಹೋದ ವಿದ್ಯಾರ್ಥಿಗಳಿಗೆ ಕೆಲವರಿಗೆ ಸಂಯುಕ್ತ ಪ್ರಾಂತದ ಕೆಲವು ಕಡೆ ಅಧ್ಯಾಪಕರು ಜಾಹೀರಾಗಿ ಹೊಡೆದು ಅವಮಾನಗೊಳಿಸಿದ ನಿಮಿತ್ತ ಇಬ್ಬರು ಹುಡುಗರು ಆತ್ಮಹತ್ಯೆ ಮಾಡಿಕೊಂಡಿರುವರೆಂದು ಪ್ರಕಟವಾಗಿದೆ. ಚುನಾವಣೆಯ ಸಮಯದಲ್ಲಿ ವಿದ್ಯಾರ್ಥಿಗಳು ಪೋಲಿಂಗ್ ಸ್ಟೇಶನುಗಳಿಗೆ ಹೋಗದಂತೆ ಕೂಡಾ ನಿರ್ಬಂಧ ಹಾಕಲಾಗಿದೆ. ಈ ವಿದ್ಯಮಾನಗಳಿಂದ ಪಂಡಿತ ಜವಾಹಿರಲಾಲರು ಬಹಳ ಉದ್ವೇಗಗೊಂಡಿರುವರು. ವಿದ್ಯಾರ್ಥಿಗಳಿಗೆ ಇಷ್ಟೊಂದು ಸ್ವಾತಂತ್ರ್ಯವಿಲ್ಲವೇ? ನಮ್ಮ ಶಾಲೆಗಳು ಈ ಸ್ಥಿತಿಗಿಳಿದಿದೆಯೇ? ಎಂದು ಪಂಡಿತರು ಬಹಳ ಸಂತಾಪಗೊಂಡಿರುವರು. ಈ ಅತ್ಯಾಚಾರಗಳ ಕುರಿತು ವಿಚಾರಣೆ ನಡೆಸಬೇಕೆಂದು ಛಲತೊಟ್ಟಿರುವರು.

ಕಾಂಗ್ರೆಸ್ ವರ್ಕಿಂಗ್ ಕಮಿಟಿ ಸಭೆ
ಕೌನ್ಸಿಲುಗಳೊಳಗೆ ನಡೆಸಬೇಕಾದ ಕಾರ್ಯಕ್ರಮದ ಸ್ಪಷ್ಟೀಕರಣ

ಇದೇ ತಾ. ೨೭ರಲ್ಲು ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ವಾರ್ಧದಲ್ಲಿ ನಡೆಯಿತು. ಪಂಡಿತ ಜವಾಹರಲಾಲ್, ಶ್ರೀಮತಿ ಸರೋಜಿನಿದೇವಿ, ಬಾಬು ರಾಜೇಂದ್ರ ಪ್ರಸಾದ್, ಸರ್ದಾರ್ ವಲ್ಲಭಾಯಿ ಪಟೇಲ್, ಖಾನ್ ಅಬ್ದುಲ್ ಗಾಫರ್ ಖಾನ್, ಶ್ರೀಗಳಾದ ಜೈರಾಮದಾಸ್ ಡೌಲತ್ ರಾಮ್, ಭೂಲಾಭಾಯಿ ದೇಸಾಯಿ, ಶಂಕರರಾವ್ ದೇವ್, ಪಂಡಿತ ಗೋವಿಂದ ವಲ್ಲಭಪಂತ್, ಶೇಟ್ ಜಮುನಾಲಾಲ್ ಬಜಜ್, ನರೇಂದ್ರದೇವ್, ಅಚ್ಯುತ್ ಪಟ್ವರ್ಧನ್, ಕೃಪಾಲಿನಿಗಳಲ್ಲದೆ ವರ್ಕಿಂಗ್ ಕಮಿಟಿಯ ಮೆಂಬರರುಗಳಲ್ಲದ ಶ್ರೀಗಳಾದ ರಾ. ಸಿ. ರಾಜಗೋಪಾಲಾಚಾರ್ಯರ್ ಶ್ರೀಮತಿ ರುಕ್ಮಿಣಿ ಲಕ್ಷ್ಮೀಪತಿ, ಜೈಪ್ರಕಾಶ್, ಡಾಕ್ಟರ್ ಖಾನ್ ಸಾಹೇಬ್, ಶ್ರೀಮತಿ ಮೃದುಲ ಸಾರಬಾಯಿ, ಮತ್ತು ರಾಫಿ ಅಹಮ್ಮದ್ ಕಿದ್ವೈಯವರು ಹಾಜರಿದ್ದರು. ಗಾಂಧಿಜಿಯವರು ಸಭೆನಡೆಯುವಾಗ ಹಾಜರಿದ್ದರು. ಮೊದಲಾಗಿ ಚುನಾವಣೆಯಲ್ಲಿ ಕಾಂಗ್ರೆಸಿನ ಕರೆಯನ್ನು ವಿಚಿತ್ರ ರೀತಿಯಲ್ಲಿ ಮನ್ನಿಸಿ, ಕಾಂಗ್ರೆಸಿನ ಧೋರಣೆಯನ್ನು ಸಮರ್ಥಿಸಿದ ಜನತೆಯನ್ನು ಅಭಿನಂದಿಸುವ ಸೂಚನೆಯು ಮಂಜೂರಾಯಿತು. ಜನತೆಯು ಕಾಂಗ್ರೆಸಿನ ಮೇಲಿತ್ತಿರುವ ಮಹತ್ತಾದ ಜವಾಬ್ದಾರಿಯನ್ನರಿತು ಶಾಸನ ಸಭೆಗಳ ಮೆಂಬರರು ಕಾಂಗ್ರೆಸಿನ ಉದ್ದೇಶ ಮತ್ತು ತತ್ವಗಳನ್ನೆತ್ತಿ ಹಿಡಿದು ಸ್ವರಾಜ್ಯ ಸಿಪಾಯಿಗಳಾಗಿ ನಡೆಯಬೇಕೆಂದು ಕೇಳಿಕೊಳ್ಳಲಾಯಿತು. ವಿಶೇಷವಾಗಿ, ಸರಕಾರವು ಕಠಿಣ ದಬ್ಬಾಳಿಕೆಯನ್ನು ಜ್ಯಾರಿಯಲ್ಲಿರಿಸಿ ಕಾಂಗ್ರೆಸ್ ಕಮಿಟಿಗಳನ್ನೂ ನಿಷೇಧಿಸಿರುವ ವಾಯುವ್ಯ ಗಡಿನಾಡು ಮತ್ತು ಬಂಗಾಳದ ಮಿದ್ನಾಪುರದಂಥಾಭಾಗಗಳ ಜನರು ಕಾಂಗ್ರೆಸಿನ ಆಜ್ಞೆಯನ್ನು ಬಹಳ ಯಶಸ್ವಿರವಾಗಿ ಪಾಲಿಸಿದುದು ಅತ್ಯಂತ ತೃಪ್ತಿಕರವಿದೆ. ಮತ್ತು ಇದರಿಂದ ದಬ್ಬಾಳಿಕೆಯು ಎಷ್ಟೊಂದು ಅಪ್ರಯೋಜಕವೆಂಬುದು ವ್ಯಕ್ತವಾಗುತ್ತದೆಂದು ನಿರ್ಣೈಸಲಾಯಿತು

ಪ್ರಾಂತಿಕ ಕಮಿಟಿಗಳ ಅಭಿಪ್ರಾಯಗಳನ್ನು ತಿಳಿದು ಅನಂತರ ವರ್ಕಿಂಗ್ ಕಮಿಟಿಯವರು ಅಧಿಕಾರ ಸ್ವೀಕಾರದ ಕುರಿತು ತಮ್ಮ ಅಭಿಮತವನ್ನು ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿಗೆ ತಿಳಿಸುವರು. ಆದರೆ ಪಂಡಿತ ಜವಾಹರಲಾಲರೇ ಮೊದಲಾದ ನಾಲ್ಕೈದು ಮಂದಿಯು ಹೊರತು ಇತರರೆಲ್ಲಾ ಅಧಿಕಾರ ಸ್ವೀಕಾರಕ್ಕೆ ಅನುಕೂಲರಿರುವರೆಂದು ತಿಳಿದುಬರುತ್ತದೆ. ಈಗ ಶಾಸನ ಸಭೆಗಳಿಗೆ ಆರಿಸಲ್ಪಟ್ಟಿರುವ ಮೆಂಬರರು ಕೇವಲ ಶಾಸನ ಸಭೆಗಳೇ ತಮ್ಮ ಕಾರ್ಯಕ್ಷೇತ್ರವೆಂದು ಭಾವಿಸಿಕೊಳ್ಳದೆ. ತಮ್ಮನ್ನಾರಿಸಿರುವ ಹೊರಗಣ ಜನತೆಯೊಂದಿಗೆ ಯಾವಾಗಲೂ ನಿಕಟ ಸಂಬಂಧವನ್ನಿಟ್ಟುಕೊಂಡು ತಮ್ಮಿಂದ ಸಾಧ್ಯವಾದ ಮಟ್ಟಿಗೆ ಅವರ ಸಂಕಷ್ಟಗಳನ್ನು ನಿವಾರಿಸಲೆತ್ನಿಸಬೇಕು. ಮತ್ತು ಕಾಂಗ್ರೆಸ್ ಕಮಿಟಿಗಳನ್ನು ಬಲಗೊಳಿಸಿ ಅವುಗಳ ಅಭಿಪ್ರಾಯಗಳನ್ನು ಆಗಾಗ ತಿಳಕೊಳ್ಳಬೇಕು. ಚುನಾವಣೆಯಲ್ಲಿ ಕಾಂಗ್ರೆಸಿನ ಕುರಿತು ಜನತೆಯಲ್ಲಿ ಉಂಟಾಗಿರುವ ಉತ್ಸಾಹವನ್ನು ತಣಿಯಬಿಡದೆ ಅಲ್ಲಲ್ಲಿ ಹಳ್ಳಿಗಳಲ್ಲಿ ಕಾಂಗ್ರೆಸ್ ಕಮಿಟಿಗಳನ್ನು ಸ್ಥಾಪಿಸಿ ಜನರು ಕಾಂಗ್ರೆಸ್ ಕಾರ್ಯಕಲಾಪಗಳಲ್ಲಿ ನಿರಂತರವಾದ ಆಸಕ್ತಿಯುಳ್ಳವರಾಗುವಂತೆ ಮಾಡಬೇಕು ಕಾಂಗ್ರೆಸ್ ಕೌನ್ಸಿಲರುಗಳು ಪ್ರಭುನಿಷ್ಠೆಯ ಪ್ರತಿಜ್ಞೆ ತೆಗೆದುಕೊಳ್ಳಲು ಯಾವ ಆಕ್ಷೇಪವೂ ಇರಲಾರದು.

ಕಾಂಗ್ರೆಸು ಕೌನ್ಸಿಲುಗಳೊಳಗೆ ಪ್ರವೇಶಿಸಿರುವುದು ಹೊಸ ರಾಜ್ಯಾಂಗ ರಚನೆಯನ್ನು ನಡಿಸಲಿಕ್ಕಲ್ಲ, ವಿರೋಧಿಸಲಿಕ್ಕೆ. ಬ್ರಿಟಿಷ್ ಸಾಮ್ರಾಜ್ಯ ಶಾಹಿಯೊದನೆ ಕಾಂಗ್ರೆಸು ಸಹಕರಿಸಲಿಕ್ಕಿಲ್ಲ. ಪೂರ್ಣ ಸ್ವರಾಜ್ಯವೇ ಕಾಂಗ್ರೆಸಿನ ಗುರಿ ಆ ಗುರಿಯನ್ನು ಮುಟ್ಟುವ ದೃಷ್ಟಿಯಿಂದಲೇ ಎಲ್ಲಾ ಕೆಲಸಗಳು ನಡೆಸಲ್ಪಡಬೇಕು. ಸರ್ವ ರಾಜಕೀಯ ಅಧಿಕಾರವನ್ನೂ ಹಿಂದೀಯರ ಕೈವಶವಿರುವ ಪ್ರಜಾಸತ್ತೆಯನ್ನು ನಾವು ಆಶಿಸುತ್ತೇವೆ. ಅದನ್ನು ನಾವಾಗಿಯೇ ಪಡೆದು ರಚಿಸಿಕೊಳ್ಳಬೇಕು; ಇದಕ್ಕಾಗಿಯೇ ಕಾನ್‌ಸ್ಟಿಟ್ಯುಮೆಂಟ್ ಎಸೆಂಬ್ಲಿಯೆಂಬ ಪ್ರತಿನಿಧಿ ಸಭೆಯನ್ನು ಕಾಂಗ್ರೆಸು ಕರೆಯುವ ನಿರ್ಧಾರಮಾಡಿರುವದಾಗಿದೆ. ಹೊಸ ರಾಜ್ಯಾಂಗ ರಚನೆಯನ್ನು ವಿರೋಧಿಸಿ ತಡೆಗಟ್ಟಿ ಹಿಂದೀಯರ ಕೇಳಿಕೆಯನ್ನು ಆಳರಸರು ಮನ್ನಿಸಿ ಅವರಿಗೆ ಬೇಕಾದಂತಹ ರಾಜಕೀಯ ಸೂತ್ರವನ್ನು ರಚಿಸುವ ಸ್ವತಂತ್ರವನ್ನವರಿಗೆ ಕೊಡುವಂತೆ ಮಾಡುವುದೇ ಕಾಂಗ್ರೆಸಿನ ಪ್ರಕೃತದ ಉದ್ದೇಶ.

ಕಾಂಗ್ರೆಸ್ ಪಕ್ಷದ ಕೌನ್ಸಿಲು ಮೆಂಬರರು ಕಾಂಗ್ರೆಸಿನ ಧೋರಣೆಯನ್ನು ಸ್ಮರಣೆಯಲ್ಲಿಟ್ಟುಕೊಂಡು ಬ್ರಿಟಿಷ್ ಸಾಮ್ರಾಜ್ಯಶಾಹಿಯ ಪ್ರತಿಷ್ಠೆಯನ್ನು ಹೆ

ಚ್ಚಿಸುವಂತಹ ಯಾವ ಸಮಾರಂಭಗಳಲ್ಲಿಯೂ ಭಾಗಿಯಾಗಕೂಡದು. ಕಾಂಗ್ರೆಸ್ ಪಕ್ಷೀಯರು ವೈಯಕ್ತಿಕವಾಗಿ ಏನನ್ನೂ ಮಾಡಬಾರದು. ಸರಕಾರದ ಯಾವ ಬಿರುದು ಬಾವಲಿಗಳನ್ನೂ ಸ್ವೀಕರಿಸಬಾರದು. ಕಾಂಗ್ರೆಸ್ ಪಕ್ಷವು ಅತ್ಯಂತ ಶಿಸ್ತಿನಿಂದ ನಡೆಯಬೇಕು. ಅದರ ನಾಯಕರು ತನ್ನ ಕೆಲಸಕ್ಕೆ ಬೇಕಷ್ಟು ಮಾತ್ರವೇ ಅಧಿಕಾರಿಗಳೊಡನೆ ಸಂಪರ್ಕವನ್ನಿಟ್ಟುಕೊಳ್ಳಬೇಕು. ಮೆಂಬರರು ಕೌನ್ಸಿಲು ಮತ್ತು ಪಕ್ಷದ ಸಭೆಗಳಲ್ಲಿ ತಪ್ಪದೆ ಹಾಜರಿರಬೇಕು. ಕಾರಣ ಕೊಟ್ಟು ರಜೆ ಪಡೆದು ಮಾತ್ರ ಗೈರ್ ಹಾಜರಾಗತಕ್ಕದ್ದು. ಎಲ್ಲರೂ ಖಾದಿ ಧಾರಿಗಳಾಗಿರಬೇಕು. ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಅನುಜ್ಞೆಯಲ್ಲಿದೆ. ಇತರ ಪಕ್ಷಗಳವರೊಡನೆ ಯಾವ ತರದ ಒಡಂಬಡಿಕೆಯನ್ನೂ ಮಾಡಿಕೊಳ್ಳಬಾರದು.

ಕಾಂಗ್ರೆಸ್ ಮೆಂಬರರು ಕಾಂಗ್ರೆಸ್ ಮೆನೆಫೆಸ್ಟೊವಲ್ಲಿ ನಿರೂಪಿತವಾದ ಕಾರ್ಯಕ್ರಮವನ್ನು ಜ್ಯಾರಿಗೆ ತರಲೆತ್ನಿಸಬೇಕು. (೧) ಭೂಕಂದಾಯದಲ್ಲಿ ದೊಡ್ಡ ಭಾಗವನ್ನು ಕಡಿಮೆಮಾಡಬೇಕು. (೨) ಆದಾಯ ಮತ್ತು ಭೂಕಂದಾಯದ ಮೇಲೆ ಅಧಿಕವಾದಂತೆ ಅಧಿಕಪ್ರಮಾಣದ ಟೇಕ್ಸ್ ಹೊರಿಸಬೇಕು. (೩) ವಕ್ಕಲುತನವನ್ನು ಸ್ಥಿರಗೊಳಿಸಬೇಕು. (೪) ಹಳ್ಳಿಗರು ಸಾಲ ಬಾಕಿ ಉಳಿದಿರುವ ಗೇಣಿ ಮತ್ತು ಕಂದಾಯದಿಂದ ಪೀಡಿತರಾಗದಂತೆ ಮಾಡಬೇಕು. (೫) ಎಲ್ಲಾ ದಬ್ಬಾಳಿಕೆಯ ಕಾನೂನುಗಳನ್ನೂ ತೆಗೆದು ಹಾಕಬೇಕು. (೬) ಡಿಟನ್ಯೂ ಕೈದಿಗಳ ಸಮೇತ ಎಲ್ಲಾ ರಾಜಕೀಯ ಕೈದಿಗಳನ್ನು ಬಿಡುಗಡೆ ಮಾಡಬೇಕು, (೭) ಕಾಯಿದೆ ಭಂಗದ ಸಂದರ್ಭದಲ್ಲಿ ಸರಕಾರವು ಜಪ್ತಿಮಾಡಿ ಮಾರಿರುವ ಭೂಮಿ ಮತ್ತು ಸೊತ್ತುಗಳನ್ನು ಜನರಿಗೆ ಹಿಂದೆ ಕೊಡಿಸಬೇಕು. (೮) ಮಜೂರರು ಸಂಬಳ ಕಡಿಮೆಮಾಡಲ್ಪಡದೆ ದಿವಸಕ್ಕೆ 6 ಘಂಟೆ ಕೆಲಸಮಾಡುವಂತಾಗಬೇಕು. (೯) ಮಾದಕ ಪಾನ ಮತ್ತು ವಸ್ತುಗಳನ್ನು ನಿಷೇಧಿಸಬೇಕು. (೧೦) ನಿರುದ್ಯೋಗಿಗಳಿಗೆ ಸಹಾಯ ದೊರೆಯಬೇಕು. (೧೧) ಅತಿ ಹೆಚ್ಚಾಗಿರುವ ಸಂಬಳ, ಭತ್ತೆ ಮತ್ತು ಆಡಳಿತ ವೆಚ್ಚವನ್ನು ಕಡಿಮೆಮಾಡಬೇಕು.

ಗವರ್ನರ್ ಮತ್ತು ವೈಸರಾಯರಿಗೆ ಪ್ರತಿಯೊಂದು ವಿಷಯಕ್ಕೂ ವಿಶಿಷ್ಟ ಅಧಿಕಾರವಿರುವ ಹೊಸ ರಾಜ್ಯಾಂಗ ರಚನೆಯಲ್ಲಿ ಕಾಂಗ್ರೆಸ್ ಪಕ್ಷಕ್ಕೂ ಸರಕಾರಕ್ಕೂ ತಿಕ್ಕಾಟವುಂಟಾಗುವುದು. ಅನಿವಾರ್ಯವಾದುದರಿಂದ ಅದನ್ನು ತಪ್ಪಿಸಿಕೊಳ್ಳಲೆತ್ನಿಸಬಾರದು. ಪ್ರಾಂತಿಕ ಕೌನ್ಸಿಲುಗಳವರು ಅಖಿಲ ಭಾರತ ಪ್ರಶ್ನೆಗಳಾದ, ಸೇವಾವೆಚ್ಚದ ಇಳಿತ, ಉಚ್ಚ ಸಿವಿಲ್ ನೌಕರರ ವೆಚ್ಚ ಕಡಿತ, ವ್ಯಾಪಾರ ವಹಿವಾಟುಗಳ ಮೇಲೆ ಸಂಪೂರ್ಣ ಅಧಿಕಾರ, ಅಖಿಲ ಭಾರತದ ದಬ್ಬಾಳಿಕೆ ಕಾನೂನುಗಳ ರದ್ದಿ, ವ್ಯಕ್ತಿ ಭಾಷಣ, ಲೇಖನ ಮತ್ತು ಸಂಘಸ್ವಾತಂತ್ರ್ಯ, ಯುದ್ಧನಿಷೇಧವೇ ಮೊದಲಾದುವುಗಳ ಕುರಿತು ಅಭಿಪ್ರಾಯ ವ್ಯಕ್ತಪಡಿಸಬೇಕು.

ಗವರ್ನರರು ತಮ್ಮ ಯಾವ ವಿಶಿಷ್ಟಾಧಿಕಾರವನ್ನೂ ಉಪಯೋಗಿಸದೆ ತಟಸ್ಥರಾಗಿದ್ದು ಕಾಂಗ್ರೆಸಿನವರು ತಮಗೆ ತೋರಿದ ಕಾರ್ಯಕ್ರಮವನ್ನು ಜ್ಯಾರಿಗೆ ತರಲು ತಳೆಯಿರಲಾರದೆಂಬ ಅಶ್ವಾಸನೆಯನ್ನು ಬ್ರಿಟಿಷ್ ಸರಕಾರವು ಕೊಟ್ಟಲ್ಲಿ ಕಾಂಗ್ರೆಸ್ ಪಕ್ಷೀಯರು ಮಂತ್ರಿಮಂಡಲವನ್ನು ರಚಿಸಬಹುದೆಂದು ಮಹಾತ್ಮಾಗಾಂಧಿಯವರ ಅಭಿಪ್ರಾಯವಿರುವಂತಿದೆ. ಈ ಪ್ರಶ್ನೆಯು ಡಿಲ್ಲಿಯಲ್ಲಿ ಇದೇ ತಾ ೧೭ರಲ್ಲಿ ಸೇರಲಿರುವ ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿ ಸಭೆಯಲ್ಲಿ ನಿರ್ಧಾರವಾಗಲಿರುವುದು. ಇದೇ ೧೯ ವತ್ತು ೨೦ಕ್ಕೆ ನೆಶನಲ್ ಕನ್ವೆನ್ಶನ್ ಎಂಬ ರಾಷ್ಟ್ರೀಯ ಮಹಾಸಭೆಯು ಡಿಲ್ಲಿಯಲ್ಲಿ ಪಂಡಿತ ಜವಾಹರಲಾಲರ ಅಧ್ಯಕ್ಷತೆಯಲ್ಲಿ ಜರಗುವುದು. ಇದರಲ್ಲಿ ೨೦೦ಕ್ಕಿಂತಲೂ ಮಿಕ್ಕಿದ ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿಯವರು ೭೫೦ ಮಂದಿ ಕೌನ್ಸಿಲ್ ಮೆಂಬರರು ಮಾತ್ರವಲ್ಲದೆ ಇತರರು ಸುಮಾರು ೨೦೦ಮಂದಿ ಭಾಗಿಯಾಗಲಿರುವರು.

ಇನ್ನೊಂದು ಸಹಗಮನ

ಸಂಯುಕ್ತ ಪ್ರಾಂತವಲ್ಲಿ ಇತ್ತಲಾಗಿ ಓರ್ವ ಸ್ತ್ರೀಯು ತನ್ನ ಪತಿಯ ಚಿತೆಯ ಮೇಲೆ ಬಿದ್ದು ಸಹಗಮನ ಮಾಡಿರುವಳಷ್ಟೆ. ಈಗ ಹಾರ್ಡ್ವಿ ಎಂಬಲ್ಲಿ ಕುರ್ಮಿ ಜಾತಿಯ ಸ್ತ್ರೀಯೊಬ್ಬಳು ವಧುವಿನಂತೆ ಶೃಂಗರಿಸಿಕೊಂಡು ತನ್ನ ಗಂಡನ ಚಿತೆಯಮೇಲೇರಿ ನಿಂತು ಸುಟ್ಟು ಭಸ್ಮವಾಗಿರುವಳೆಂದು ತಿಳಿದು ಬರುತ್ತದೆ.

ಜನರು ಈ ಸಂಗತಿಯಿಂದ ಚಕಿತರಾಗಿ ಸದ್ರಿ ಸ್ಥಳದಲ್ಲೊಂದು ದೇವಸ್ಥಾನ ಕಟ್ಟಿಸುವ ಆಲೋಚನೆ ಮಾಡಿರುವರಂತೆ. ಪೋಲೀಸರು ಈ ಸ್ಥಳಕ್ಕೆ ಹೋಗಿ ಪತ್ತೆ ನಡಿಸುತ್ತಿರುವರು.

ವಿದೇಶ

ಬಹು ಪುರಾತನ ಕಪಾಲ

ಒಂದು ಆಫ್ರಿಕದ ಟ್ರಾನ್ಸ್‌ವಾಲಿನ ಒಂದು ಗವಿಯಲ್ಲಿ ಕಂಡುಹಿಡಿಯಲ್ಪಟ್ಟಿರುವುದು. ಇದು 60,000 ಅಥವಾ 1 ಲಕ್ಷ ವರ್ಷಗಳ ಹಿಂದಿನದೆಂದು ಅಂದಾಜುಮಾಡಲಾಗಿದೆ. ಈ ಕಪಾಲದ ಎರಡು ಸಾಲು ಹಲ್ಲುಗಳು ಇರುವವು. ಈ ಕಾಲದ ಮನುಷ್ಯರು ಗುಹೆಗಳಲ್ಲಿ ವಾಸಿಸುತ್ತಿದ್ದರೆಂದೂ, ಅರೆ ನೆಟ್ಟಗೆ ನಡೆಯುತ್ತಿದ್ದರೆಂದೂ, ಕಾಡ ಪ್ರಾಣಿಗಳನ್ನು ಕೊಂದು ಅವುಗಳ ಮಾಂಸ ತಿನ್ನುತ್ತಿದ್ದರೆಂದೂ, ಅವುಗಳ ಹಾವಳಿ ಯಾವಾಗ ಗುಹೆಯೊಳಗೆ ಅಡಗಿ ಕೂತುಕೊಳ್ಳುತ್ತಿದ್ದರೆಂದೂ ನಂಬಲಾಗಿದೆ.

ಕಿರೀಟ ಧಾರಣೋತ್ಸವಕ್ಕೆ ನೆಗಸರಿಗೆ ಆಮಂತ್ರಣ

ಆರನೇ ಜೋರ್ಜರ ಕಿರೀಟ ಧಾರಣೋತ್ಸವಕ್ಕೆ ಅಬಿಸೀನಿಯದ ಚಕ್ರವರ್ತಿಗಳಾಗಿದ್ದ ನೆಗಸರಿಗೆ ಆಮಂತ್ರಣ ಹೋಗಿರುವುದೆಂದೂ, ಅವರು ಸ್ವತಃ ಹೋಗದೆ ಪ್ರತಿನಿಧಿಯೊಬ್ಬರನ್ನು ಕಳುಹಿಸುವರೆಂದೂ ತಿಳಿದುಬಂದಿದೆ. ಇದರಿಂದ ಇಟೆಲಿಯಲ್ಲಿ ಆಶ್ಚರ್ಯವುಂಟಾಗಿದೆ. ನೆಗಸರ ಪ್ರತಿನಿಧಿಯು ಕಿರೀಟಧಾರಣೆಗೆ ಹೋದರೆ ಇಟಲಿಯ ಕಡೆಯಿಂದ ಯಾರೂ ಅದರಲ್ಲಿ ಭಾಗಿಯಾಗಬಾರದೆಂದು ನಂಬಲಾಗಿದೆ.

ನಿರ್ದಾಕ್ಷಿಣ್ಯವಾಗಿ ಅಬಿಸೀನಿಯನರ ಕೊಲೆ

ಆಡ್ಡಿಸ್ ಅಬಾಬದಲ್ಲಿ ಮಾರ್ಶಲ್ ಗ್ರೆಜಿಯಾನಿಯವರ ಮೇಲೆ ಇತ್ತಲಾಗಿ ಗುಂಡೆಸೆದ ಸಂಬಂಧವಾಗಿ ಕೈದುಮಾಡಲ್ಪಟ್ಟವರನ್ನೆಲ್ಲಾ ನಿರ್ಘೃಣವಾಗಿ ಗುಂಡೆಸೆದು ಕೊಲ್ಲಲಾಗಿದೆ. ಯಾರ್ಯಾರ ಹಸ್ತ ಆಯುಧಗಳಿದ್ದವೋ ಅವರೆಲ್ಲಾ ಕೈದುಮಾಡಲ್ಪಟ್ಟಿರುವರು. ಒಟ್ಟು 2000 ಮಂದಿಯು ದಸ್ತಗಿರಿಯಾಗಿರುವುದು. ಇವರಲ್ಲಿ ನಿರ್ದೋಷಿಗಳೆಂದು ಪರಿಗಣಿಸಲ್ಪಟ್ಟ ಕೆಲವರು ಬಿಡಲ್ಪಟ್ಟಿರುವರು.

ಮಾರ್ಶಲ್ ಗ್ರೇಟಿಯಾನಿಯವರಿಗೆ ಕಾಯಿಲೆ

ಅಬಿಸೀನಿಯದ ವೈಸರಾಯರಾದ ಮಾರ್ಶಲ್ ಗ್ರೇಟಿಯಾನಿಯವರ ಪರಿಸ್ಥಿತಿಯು ಚಿಂತಾಜನಕವಾಗಿದೆ. ಅವರ ಮೇಲೆ ಅಡ್ಡಿಸ್ ಅಬಾಬದಲ್ಲಿ ಇತ್ತಲಾಗಿ ಎಸೆಯಲ್ಪಟ್ಟ ಬೋಂಬಿನ ಚೂರುಗಳು ಅವರ ಶ್ವಾಸಕೋಶದಲ್ಲುಳಿದು ಅದರಿಂದಾಗಿ ಅವರಿಗೆ ಒಂದು ಬಗೆಯ ನ್ಯುಮೋನಿಯ ಉಂಟಾಗಿದೆಯೆಂದು ತಿಳಿದು ಬರುತ್ತದೆ.

ಇಂಗ್ಲೆಂಡ್ ಆಸ್ಟ್ರೇಲಿಯ ಕ್ರಿಕೆಟ್ ಮೇಚು

ಇಂಗ್ಲೆಂಡು ಮತ್ತು ಆಸ್ಟ್ರೇಲಿಯಗಳೊಳಗೆ ಆಸ್ಟ್ರೇಲಿಯದಲ್ಲಿ ಇಷ್ಟರ ವರೆಗೆ 4 ಕ್ರಿಕೆಟ್‌ಮೇಚುಗಳು ನಡೆದಿರುವವು. ಎರಡಲ್ಲಿ ಇಂಗ್ಲೆಂಡು ಗೆದ್ದಿರುವುದು. ಇನ್ನೆರಡರಲ್ಲಿ ಆಸ್ಟ್ರೇಲಿಯವು ಜಯಶಾಲಿಯಾಗಿರುವುದು. 5ನೇ ಟೆಸ್ಟ್ ಮೇಚು ಈಗ ಮೆಲ್ಬೋರ್ನ್ ಪಟ್ಟಣದಲ್ಲಿ ನಡೆದಿದ್ದು ಆಸ್ಟ್ರೇಲಿಯದವರು ಮೊದಲನೇ ಸರ್ತಿ ೬೦೪ ರನ್ಸ್ ತೆಗೆದಿರುವುದು. ಕೆಪ್ಟನರಾದ ಬ್ರೆಡ್ಮನರು ೧೬೯ ರನ್ಸ್ ತೆಗೆದಿರುವರು, ಈ ಮೇಚನ್ನು ನೋಡಲು ೭೫,೦೦೦ ಜನರು ನೆರೆದಿದ್ದರು. ಇಂಗ್ಲೆಂಡಿನವರು ೪ ಜನರು ಔಟಾಗಿ ೧೮೪ ರನ್ಸ್ ತೆಗೆದಿರುವರು.

ದಕ್ಷಿಣ ಕನ್ನಡ

ಮೂಡಬಿದ್ರೆ

ಪಂಡಿತ ಜವಾಹರಲಾಲ ನೆಹರುಗಳು ಮೂಡಬಿದ್ರೆಯನ್ನು ಸಂದರ್ಶಿಸಿದಾಗ, ಅಲ್ಲಿಯ ಪುರಜನರು ಅವರಿಗೊಪ್ಪಿಸಿದ ಮಾನಪತ್ರದ ಸಾರಾಂಶವು ಈ ಕೆಳಗಣಂತಿರುವದು. ಪ್ರಿಯ ದೇಶಾಭಿಮಾನಿಗಳೇ, ರಾಷ್ಟ್ರಪತಿಗಳಾದ ತಮ್ಮನ್ನು ಮೂಡಬಿದ್ರೆಯ ಪುರಜನರಾದ ನಾವು ಅತ್ಯಾನಂದದಿಂದ ಸ್ವಾಗತೀಕರಿಸುತ್ತೇವೆ. ಶ್ರೀಮಂತಿಕೆಯ ಮಡಿಲಲ್ಲಿ ಹುಟ್ಟಿ ಅತ್ಯಂತ ವಿಲಾಸ ವೈಭವದ ಜೀವನವನ್ನು ಮಾತೃ ಭೂಮಿಯ ಸ್ವಾತಂತ್ರ್ಯದ ಹೋರಾಟಕ್ಕಾಗಿ ತ್ಯಜಿಸಿದ ತ್ಯಾಗವೀರರು ನೀವು. ನೀವು ಪಟ್ಟ ಸಂಕಷ್ಟಗಳು, ದೇಶದ ಸ್ವಾತಂತ್ರ್ಯ ಸಮರಕ್ಕಾಗಿ ನೀವಿಷ್ಟು ಬೆಲೆಕೊಡುವಿರೆಂಬುದನ್ನು ಪ್ರತಿಗೊಳಿಸುವವು. ನಾವು ತಮ್ಮ ಉಜ್ವಲ ಮಾದರಿಯನ್ನು ಕಂಡು ನಮ್ಮಿಂದ ಸಾಧ್ಯವಾದಷ್ಟು ದೇಶಸೇವೆ ಮಾಡಲು ಪ್ರಯತ್ನಿಸುತ್ತಿದ್ದೇವೆ. ಪರಾಧೀನರಾಷ್ಟ್ರವು ತನ್ನ ಬಂಧ ವಿಮೋಚನೆಗಾಗಿ ಹಾತೊರೆಯುತ್ತಿರುವ ಸ್ವಾತಂತ್ರ್ಯದ ಸಂದೇಶವನ್ನು ನೀವು ಸಾರುತ್ತಾ ಬಂದಿರುವಿರಿ. ಅತ್ಯಂತ ಉದಾತ್ತ ಉದ್ದೇಶ ಸಾಧನೆಯ ಉತ್ತಮೋತ್ತಮ ಕೆಲಸಗಾರರಾದ ತಮ್ಮನ್ನು ನಾವು ಸ್ತುತಿಸಿ, ತಾವು ಗುರಿಯನು ಮುಟ್ಟುವಂತೆ ತಮಗೆ ಭಗವಂತನು ಶಕ್ತಿ ಮತ್ತು ಆಯುಷ್ಯನ್ನೀಯಲೆಂದು ಪ್ರಾರ್ಥಿಸುತ್ತೇವೆ.

ಮುದುಕಿ ಹೋದರೂ ವಾಸನೆ ಹೋಗಲಿಲ್ಲ.

ಚುನಾವಣೆಯ ನಾಟಕವಂತೂ ಮುಗಿಯಿತು. ಜಸ್ಟೀಸು ಪಕ್ಷ ವಹಿಸಿದವರಿಗೆಲ್ಲಾ ವಿಷಾದಾಂತ ನಾಟಕವಾಗಿ ಪರಿಣಮಿಸಿತು. ಜಸ್ಟೀಸು ಪಕ್ಷ ಹಿಡಿದು ಸೊಂಟಕಟ್ಟಿ ಹೋರಾಡಿದ ಕೆಲವು ಆಢ್ಯ ಮಹನೀಯರು ತಮ್ಮ ಊರಿನಲ್ಲಿ ಹಾಗೂ ನೆರೆಕರೆಯ ಗ್ರಾಮಗಳಲ್ಲಿ ಕಾಂಗ್ರೆಸು ಪಕ್ಷ ಹಿಡಿದು ಕೆಲಸಮಾಡಿದವರ ಮೇಲಿನ ವೈಷಮ್ಯವನ್ನು ಇನ್ನೂ ಬಿಡಲಿಲ್ಲ. ಕೆಲವು ಓಟರರನ್ನು ಕರತರಿಸಿ ಪ್ರಮಾಣಮಾಡಿಸುವುದು ಕೆಲವರಿಗೆ ದಂಡನೆ ವಿಧಿಸುವದು. ಬಡ ವಕ್ಕಲಿಗರಿಗೆ ಪೀಡಿಸುವುದು. ವಕ್ಕಲುತನ ತೆಗೆಸುವುದು. ಸಾಲಪಡೆದವರನ್ನು ಕರತರಿಸಿ ಈಗಲೇ ಕೊಟ್ಟೇತೀರಬೇಕೆಂದು ಪೀಡಿಸುವುದು. ಇಂಥಾ ಆಕೃತ್ಯಗಳು ಕುಂದಾಪುರ ಉಡ್ಪಿ ತಾಲೂಕಿನ ಕೆಲವು ಭಾಗಗಳಿಂದ ಕೇಳಿಬರುತ್ತದೆ. ಅಂಥಾ ಮಹನೀಯರೊಡನೆ ವಿನಯಪೂರ್ವಕವಾಗಿ ಬೇಡಿಕೊಳ್ಳುವದೇನೆಂದರೆ– ತಾವೆಲ್ಲರೂ ದೊಡ್ಡವರು, ಆಗರ್ಭಶ್ರೀಮಂತರು, ಮೊತ್ತ ವರ್ಗದಾರರು ಆದರೆ ತಾವು ಹಿಡಿದ ಪಕ್ಷ ಮಾತ್ರ. ದೇಶಕ್ಕೆ– ಜನತೆಗೆ ಬೇಡಾದದ್ದು. ಆದುದರಿಂದ ಆ ಪಕ್ಷವನ್ನು ದೇಶವೂ ಪ್ರಾಂತವೂ ಹೊರತಳ್ಳುವಾಗ ನಮ್ಮ ಬಡ ಓಟರರೂ ಹೊರತಳ್ಳಿದರು. ಅದು ಲೋಕನೀತಿ. ನಿಮ್ಮ ಮನೆಯವರೇ ಎಷ್ಟು ಮಂದಿ ಕಾಂಗ್ರೆಸಿಗೆ ಓಟುಕೊಡಲಿಲ್ಲ. ನಿಮ್ಮ ಮಿತ್ರರು, ನೆಂಟರಿಷ್ಟರು, ಬಂಧು ಬಾಂಧವರು ಎಷ್ಟು ಮಂದಿ ಕಾಂಗ್ರೆಸಿಗೆ ಓಟು ಕೊಡಲಿಲ್ಲ? ಹೀಗಿರುವಾಗ ಬಡವಕ್ಕಲಿಗರ ಮೇಲಿನ ಸೇಡನ್ನು ಬಿಟ್ಟುಬಿಡಿರಿ. ಜನ ಸಮುದ್ರವೇ ಉಕ್ಕಿಬರುವಾಗ ಅದನ್ನು ತಡೆಯಲಿಕ್ಕೆ ನೀವು ಕೆಲವು ಮಂದಿ ಸೊಂಟಕಟ್ಟಿದ್ದೇ ದೊಡ್ಡ ತಪ್ಪು. ಪ್ರವಾಹವು ಉಕ್ಕಿ ಬಂದು ನೀವು ಹಾಕಿದ ಕಟ್ಟು, ನಿಮ್ಮ ಹತ್ಯಾರು, ನೀವು ಸಹ ತೇಲಿಹೋದುದು ಸೋಜಿಗವಲ್ಲ. ನಿಮ್ಮ ಇಡೀ ತಾಲೂಕಿನ ಓಟನ್ನು ನಿಮ್ಮ ಉಮೇದ್ವಾರನಿಗೇ ಕೊಟ್ಟರೂ ಅವರು ಉಳಿಯುವಂತಿಲ್ಲ. ಅಂತಿರುವಾಗ ಬಡವಕ್ಕಲು, ಬಡರೈತ, ಬಡನಾಗನ ಮೇಲಿನ ವೈಷಮ್ಯವಾದರೂ ಏಕೆ? ಅದು ನಿರರ್ಥಕ. ತಾವು ಶಾಂತರಾಗಿರಿ. ಪಶ್ಚಾತ್ತಾಪ ಪಡಿರಿ.

ಸತ್ಯವಾದಿ ಕಾಂಗ್ರೆಸುವಾಲ.

ದಿ ಗಾರ್ಡಿಯನ್ ಒಫ್ ಇಂಡಿಯಾ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್,

ಮುಖ್ಯ ಆಫೀಸು—ಪೋಸ್ಟ್ ಬೊಕ್ಸ್ ೮೯—ಮದ್ರಾಸು.

●

ತೀರಾ ದೇಶೀಯ ಭಂಡವಾಳ=ತೀರಾ ದೇಶೀಯ ಆಡಳಿತೆ
ತೀರಾ ಭದ್ರವಾದ ಕಾರ್ಯಕ್ರಮ.

ತೀರಾ ಕಡಿಮೆ ವಿಮೆಯ ದರಗಳು — ಉದಾರವಾದ ಶರ್ತಗಳು
ನ್ಯಾಯನೀತಿ ಸಮ್ಮತವಾದ ವ್ಯವಹಾರ.

ತೀರಾ ಹೊಸ ಹೊಸ ನಮೂನೆಯ ಏರ್ಪಾಡುಗಳು,
ಎಲ್ಲಾ ಬಗೆಯ ವಿವಿಧ ಸ್ಥಿತಿಯ ಜನರಿಗೆ ಸರ್ವಾನುಕೂಲ.
ಆತ್ಯಾಕರ್ಷಕವಾದ ಶರ್ತಗಳು—ಖಂಡಿತವಾದ ಭದ್ರತೆ.

ಜೀವನ ಅನಿಶ್ಚಿತ; - ಸಂಪಾದನೆ ಅನಿಶ್ಚಿತ.
ಇವುಗಳ ಬಾಧಕಕ್ಕೆ ಜೀವವಿಮೆಯೇ ಉತ್ತಮ ಪರಿಹಾರ.

ಒಮ್ಮೆ ನಮ್ಮಲ್ಲಿ ವಿಮೆ ಕೊಂಡವರು
ನಿರಾಶರಾಗಲಾರರು.

ಸೂಚನೆ:—ನಮ್ಮ ಎಲ್ಲಾ ಪಾಲಿಸಿಹೋಲ್ಡರರೂ, ಏಜಂಟರೂ ಇನ್ನು ಮುಂದೆ ತಮ್ಮ ವ್ಯವಹಾರವನ್ನು **ದಿ ಬ್ರಾಂಚ್ ಸೆಕ್ರೆಟರಿ, ದಿ ಗಾರ್ಡಿಯನ್ ಒಫ್ ಇಂಡಿಯಾ ಇನ್ಶೂರೆನ್ಸ್ ಕೋ., ಲಿಮಿಟೆಡ್, ಮಂಗಳೂರು ಶಾಖೆ** ಇವರೊಡನೆ ಬೆಳಸಬೇಕಾಗಿ ವಿನಂತಿ.

ವಿಶೇಷ ಮಾಹಿತಿಗಳಿಗೆ ಇವರಿಗೆ ಬರೆಯಿರಿ.

E. A. PAIS, B. Sc., ***Branch Secretary,***
The Guardian of India Insurance Co., Limited,
MANGALORE BRANCH.

ದಕ್ಷಿಣ ಕನ್ನಡ

(ಪ್ರತಿನಿಧಿಯಿಂದ)

ನನ್ನು ಬೇರೆ ಕಡೆಗೆ ವರ್ಗಾಯಿಸುವ ನಿರ್ಧಾರವಾಯಿತು. ಆಫೀಸಿಗೆ ಕೆಲವು ಸಾಮಾನುಗಳನ್ನು ಒದಗಿಸುವ ನಿರ್ಧಾರವಾಯಿತು. ಹಾಗೆಯೇ ಕೆಲವು ಉದ್ಯೋಗಸ್ಥರ ಸಂಬಳವನ್ನು ಏರಿಸಲಾಯಿತು. ಕೆಲವರ ಸಂಬಳದಲ್ಲಿ ಕಡಿತವುಂಟಾಯಿತು. ನಗರವಾಸಿಗಳಿಂದ ಸೇಕಡಾ ೧೧ರಂತೆ ಮಾತ್ರ ತೆರಿಗೆ ವಸೂಲುಮಾಡಬೇಕೆಂಬ ಸೂಚನೆಯು ಬಿದ್ದುಹೋಗಿ ಸೇಕಡಾ ೧೩ರಂತೆ ವಸೂಲ್ಮಾಡಬೇಕೆಂಬ ಸೂಚನೆಯು ಮಂಜೂರಾಯಿತು.

ಉಡುಪಿತಾಲೂಕು ಕಾಂಗ್ರೆಸ್ ಕಮಿಟಿ

ಸಭೆಯು ಇದೇ ತಾ. ೩—೩—೩೭ನೇ ಬುಧವಾರ ಕಾಂಗ್ರೆಸ್ ಕಛೇರಿಯಲ್ಲಿ ನೆರೆದು ಪದವೀ ಸ್ವೀಕಾರ, ಹಳ್ಳೀ ಕಮಿಟಿಗಳ ಸ್ಥಾಪನೆಯೇ ಮೊದಲಾದ ಪ್ರಾಮುಖ್ಯ ವಿಷಯಗಳನ್ನು ಚರ್ಚಿಸಿರುವದು.

ಶ್ರೀ ಗಾಯತ್ರಿ ಸಂಗೀತ ನಾಟಕ ಮಂಡಲಿಯವರು ಇದೇ ತಾ. ೬—೩—೩೭ನೇ ಶನಿವಾರ ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ ಪ್ರತಿಜ್ಞೆ ಅಥವಾ ಸಾವಿತ್ರಿನಿಷ್ಠೆ ಎಂಬ ನಾಟಕವನ್ನಾಡಲಿರುವರೆಂದು ತಿಳಿದುಬರುತ್ತದೆ.

ಕಾಪು

'ಕಾಪಿನಲ್ಲಿ ಜಸ್ಟೀಸ್ ಪಕ್ಷೀಯರಿಗೆ ಹೆಚ್ಚಿನ ಮತಗಳು ಬಿದ್ದಿವೆ' ಎಂಬ ಪ್ರಭಾತದ ವರ್ತಮಾನವನ್ನು ಆಕ್ಷೇಪಿಸಿ ನಮಗೊಂದು ಬಾತ್ಮಿ ಬಂದಿರುವದು. ಕಾಪಿನಲ್ಲಿಯೂ ಕಾಂಗ್ರೆಸ್ಸಿಗೇ ಬಹುಮತ ಸಿಕ್ಕಿರುವದೆಂದು ಆ ಬಾತ್ಮಿದಾರರು ಬರೆಯುತ್ತಾರೆ. ಚುನಾವಣೆಯಲ್ಲಿ ಕಾಂಗ್ರೆಸ್ಸು ಜಯಶೀಲವಾದುದಕ್ಕಾಗಿ ಸಂತೋಷ ಸೂಚಕ ಮೆರವಣಿಗೆಯು ಕಳೆದ ತಾ. ೨೬ರಲ್ಲಿ ಬೆಂಡು ವಾಲಗದೊಡನೆ ಸಂಭ್ರಮದಿಂದ ನಡೆಯಿತು.

ಶಿರ್ವ

ಕಳೆದ ತಾ ೨೮ರಲ್ಲಿ ಸಂತೋಷ ಸೂಚಕ ಸಭೆಯೊಂದು ಶ್ರೀ. ಜಿನರಾಜ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿ, ಶ್ರೀಗಳಾದ ಎಸ್. ಮಹಾಬಲ ಶೆಟ್ಟರು ಭಾಷಣವಿತ್ತರು. ಶ್ರೀ. ಪಿ. ಉಪೇಂದ್ರ ನ್ಯಾಕರು ಕೆಲಸಗಾರರಿಗಲ್ಲಾ ಸಂತೋಷಸೂಚಕ ಉಪಹಾರವಿತ್ತು ಎಲ್ಲಾ ಕೆಲಸಗಾರರನ್ನೂ ಅಭಿನಂದಿಸಿದರು.

ನಿಧನವಾರ್ತೆ

ದ್ರಾವಿಡ ಬ್ರಾಹ್ಮಣ ಸಮಾಜದ ಒಬ್ಬ ಶ್ರೀಮಂತ ದವಿೂನ್ದಾರರೂ, ಉದಾರಿ ಮತ್ತು ಜನಪ್ರಿಯರೂ ಆಗಿದ್ದ ಶ್ರೀ ನರಿಕೊಂಬು ರಾಮರಾಯರು, ಕಳೆದ ತಾ. ೨೩—೨—೩೭ನೇ ದಿನ ದಿವಂಗತರಾದುದು ಶೋಚನೀಯವಿದೆ. ಮೃತರು ಮಂಗಳೂರಿನಲ್ಲಿ ಲಾಭಿ ವ್ಯಾಪಾರ ನಡೆಸುತ್ತಿದ್ದು ಸ್ವಲ್ಪ ದಿವಸಗಳ ಕಾಯಿಲೆಯಿಂದ ಇಹಲೋಕಯಾತ್ರೆಯನ್ನು ಮುಗಿಸಿದರು. ನಮ್ಮ ಸಂತಾಪ ಸೂಚನೆಯಿದೆ.

ಅಂಜಾರು

ಶ್ರೀ ಅಂಜಾರು ರಾಮಣ್ಣ ಹೆಗ್ಡೆಯರ ಏಕಮಾತ್ರ ಪುತ್ರಿಯೂ ಶ್ರೀ ಕೆ. ಭೋಜರಾಜ ಹೆಗ್ಡೆ ಬಿ. ಎ ಬಿ. ಎಲ್ ರವರ ಪತ್ನಿಯೂ ಆದ ಶ್ರೀಮತಿ ಲೀಲಾವತಿಯವರು, ಕಳೆದ ಶನಿವಾರ ಹೆತ್ತು ದಿವಂಗತರಾದರೆಂದು ತಿಳಿಸಲು ವ್ಯಸನಪಡುತ್ತೇವೆ.

ಬುಡ್ನಾರು

ಇಲ್ಲಿಯ ಅಧ್ಯಾಪಕರಾದ ಶ್ರೀ ಬಿ ದುಗ್ಗಪ್ಪ ಶೆಟ್ಟರು ಕೆಲವು ದಿನಗಳ ದೇಹಾಲಸ್ಯದಿಂದ ಕಳೆದ ತಾ. ೨೩—೨—೩೭ರಲ್ಲಿ ನಿಧನ ಹೊಂದಿದುದು ದುಃಖಕರವಿದೆ.

ಗೌಡಸಾರಸ್ವತ ಬ್ರಾಹ್ಮಣ ವೃಂದದ ಮಹಾಜನಗಳಲ್ಲಿ ವಿನಂತಿ

ಶ್ರೀ ರಾಮೇಶ್ವರ ಕ್ಷೇತ್ರದಲ್ಲಿ ನಮ್ಮ ಗುರುವರ್ಯರಾದ ಶ್ರೀಕಾಶೀಮಠದ ಶ್ರೀಪಾದಂಗಳವರು ಜೀರ್ಣೋದ್ಧಾರಗೊಳಿಸಿರುವ ತಮ್ಮ ಮಠ ಮತ್ತು ಶ್ರೀ ಕೋದಂಡ ರಾಮಸ್ವಾಮಿ ದೇವಸ್ಥಾನಗಳ ಪ್ರವೇಶ ಹಾಗೂ ಪ್ರತಿಷ್ಠಾ ಮಹೋತ್ಸವಗಳು ಇದೇ ಮಾರ್ಚ ತಾ. ೧೫ ಮತ್ತು ೧೯ರಲ್ಲು ಜರಗಲಿದೆಯೆಂಬುದು ನಿಮಗೆಲ್ಲ ವಿದಿತವಿದೆಯಷ್ಟೆ. ಸದ್ರಿ ಮಹೋತ್ಸವಕ್ಕೆ ಶ್ರೀ ರಾಮೇಶ್ವರ ಕ್ಷೇತ್ರಕ್ಕೆ ಯಾತ್ರೆ ಬೆಳಸುವವರ ಸಲುವಾಗಿ ಸೌತ್ ಇಂಡಿಯಾ ರೈಲ್ವೆ ಕಂಪನಿಯವರೊಡನೆ ಪತ್ರವ್ಯವಹಾರ ನಡಿಸಿದ್ದಲ್ಲಿ, ಇದೇ ಮಾರ್ಚ ತಾ. ೧೨ ರಿಂದ ೧೮ರ ವರೆಗೆ ರಿಯಾಯಿತಿ ದರದಲ್ಲಿ ಸಾದಾ (ಒರ್ಡಿನೆರಿ) ಚಾರ್ಜಿನ ೧||| ಅಂಶಕ್ಕೆ ರಾಮೇಶ್ವರಕ್ಕೆ ಹೋಗಿ, ಇದೇ ಮಾರ್ಚ ತಾ. ೨೫ನೇ ಮಧ್ಯರಾತ್ರಿಯೊಳಗೆ ಪ್ರಯಾಣವನ್ನು ಮುಗಿಸುವ ಶರ್ತಕ್ಕೊಳಗಾಗಿ ಟಿಕೇಟುಗಳನ್ನು ಕೊಡಿಸುವ ಏರ್ಪಾಡಿಗೆ ಒಪ್ಪಿರುತ್ತಾರೆ. ಈ ರಿಯಾಯಿತಿ ಟಿಕೇಟಿಗೆ ಮಂಗಳೂರಿನಿಂದ ಸೀದಾ ರಾಮೇಶ್ವರಕ್ಕೆ ಹೋಗಿ ಬರುವ ಏರ್ವೇಜು ಬರೇ ರೂ. ೧೩-೮-೦, ಉಳ್ಳಾಲ, ಮಂಜೇಶ್ವರ, ಕುಂಬಳೆ, ಕಾಸರಗೋಡು, ಹೊಸದುರ್ಗ, ಕಣ್ಣಾನೂರು, ತಲಚೇರಿ, ಕಲ್ಲಿಕೋಟೆ, ಎರ್ನಾಕುಲ (ಕೊಚ್ಚಿ) ದಿಂದಲೂ ಆಯಾಯ ದೂರ ಪ್ರಯಾಣ ದರಗಳು ಕಡಿಮೆಇವೆ. ಈ ಟಿಕೇಟುಗಳನ್ನು ಪಡೆದು ಸೌತ್ ಇಂಡಿಯಾ ರೈಲ್ವೆಯವರ ಯಾವ ಟ್ರೈನುಗಳಲ್ಲೂ ಪ್ರಯಾಣಬೆಳಸಬಹುದು. ೩ ವರ್ಷಕ್ಕೆ ಮೇಲ್ಪಟ್ಟು ೧೨ ವರ್ಷದೊಳಗಣದವರಿಗೆ ಅರ್ಧ ಚಾರ್ಜು. ಸೀದಾ ಪೊದನೂರು ದಾರಿಯಾಗಿ ಪ್ರಯಾಣಬೆಳಸುತ್ತ ಪಳನಿ, ಮಧುರೆ, ರಾಮನಾಡು (ದರ್ಭಶಯನ, ನವಪಾಷಾಣ) ಗಳನ್ನು ಸಂದರ್ಶಿಸಬಹುದಾಗಿದೆ.

ಒಂದು ವೇಳೆ ದಕ್ಷಿಣ ಹಿಂದೂಸ್ಥಾನದ ಪುಣ್ಯಕ್ಷೇತ್ರಗಳನ್ನು ಸಂದರ್ಶಿಸಬೆಳಸುವವರು ರಾಮೇಶ್ವರಕ್ಕೆ ಮಾತ್ರ ಟಿಕೇಟುಪಡೆದು ವಾಪಸುಬರುತ್ತಾ ರೂ. ೧೨-೮-೦ರ ಗೋ-ಎಸ್-ಯೂ-ಪ್ಲೀಸ್ (Go as you please) ಟಿಕೇಟುಗಳನ್ನು ಪಡೆದು ತಮಗೆ ಬೇಕಾದಂತೆ ಅಂದಿನಿಂದ ೧೫ ದಿನಗಳ ಪ್ರವಾಸಮಾಡಬಹುದಾಗಿದೆ.

ಹೆಚ್ಚಿನ ಮಾಹಿತಿ ಬಗ್ಗೆ ಶ್ರೀ ಪಿ. ಪಾಂಡುರಂಗ ಭಂಡಾರಿ, ಸಾಹುಕಾರ, ರಥಬೀದಿ, ಮಂಗಳೂರು ಇವರಲ್ಲಿ ವಿಚಾರಿಸಿಕೊಳ್ಳಬಹುದು.

ಇತಿ ತಮ್ಮವರಾದ

ಪಾಂಗಾಳ ಲಕ್ಷ್ಮೀನಾರಾಯಣ ನಾಯಕ್,

ಕಾಡಬೆಟ್ಟು ಶ್ರೀನಿವಾಸ ಪೈ.

ಉಡುಪಿ, ೩—೩—೩೭

ಕುಂದಾಪುರ ಸರ್ಕಲಿನ ಮಹಾಜನರಲ್ಲಿ ವಿನಂತಿ

ಕುಂದಾಪುರ ಸರ್ಕಲಿನ ಕಳೆದ ಡಿಸ್ಟ್ರಿಕ್ಟ್ ಬೋರ್ಡು ಚುನಾವಣೆಯು ಮದ್ರಾಸ್ ಹೈಕೋರ್ಟಿನ ತೀರ್ಪು ಪ್ರಕಾರ ಇಲೆಕ್ಷನ್ ಬಾಕಿ ಇರುವದು ಎಲ್ಲರಿಗೂ ತಿಳಿದಿರುವದು. ಸದ್ಯದಲ್ಲಿಯೇ ಆಗಲಿರುವ ಸದ್ರಿ ಕುಂದಾಪುರ ಸರ್ಕಲಿನ ಡಿಸ್ಟ್ರಿಕ್ಟ್ ಬೋರ್ಡು ಚುನಾವಣೆಗೆ ನಾನು ಕಾಂಗ್ರೆಸ್ ಕಡೆಯಿಂದ ಉಮೇದ್ವಾರನಾಗಿ ನಿಲ್ಲಬೇಕೆಂತ ನಿಶ್ಚಯಿಸಿಕೊಂಡಿರುತ್ತೇನೆ. ಮಹನೀಯರಾದ ತಾವೆಲ್ಲರೂ ಭಾರತಮಾತೆಯನ್ನು ಸಮರ್ಥಿಸಿ ನನ್ನ ಉಮೇದ್ವಾರಿಕೆಗೆ ಪ್ರೋತ್ಸಾಹಿಸಬೇಕಾಗಿ ನಿಮ್ಮೆಲ್ಲರಲ್ಲಿಯೂ ನನ್ನ ವಿನಂತಿ.

ಯಂ. ನಾಗಪ್ಪ ಹೊಳ್ಳ,

ಮಣೂರು.

ಒಂದಿಷ್ಟು ನಗು

ರೋಗಿ:—ಡಾಕ್ಟರೇ! ಕೊಂಚದಿನಗಳವರೆಗೆ ಮನಸ್ಸಿಗೆ ವ್ಯಥೆಯನ್ನು ಹಚ್ಚಿಕೊಳ್ಳಬಾರದೆಂತ ಹೇಳಿದಿರಲ್ಲಾ.

ಡಾಕ್ಟರ್:—ಹಾಗಿದ್ದರೇನೇ ವ್ಯಾಧಿಯು ಗುಣವನ್ನು ಹೊಂದಬಹುದು.

ರೋಗಿ:—ಹಾಗಾದರೆ ನೀವು ಕಳುಹಿಸಿದ ಬಿಲ್ಲನ್ನು ವಾಪಾಸು ತೆಗೆದುಕೊಳ್ಳಿ.

To

A WOULD BE LIFE AGENT.

Have you considered the multifold advantages gained by representing the East & West? An East & West Policy is the key-note of stability and prosperity. It affords equal protection to the Policy-holder as well as the Agent. An Agent who works solidly for the "East & West" is ever successful in establishing himself on a permanently profitable basis.

Join its Field Force to-day and assist us in building up a record business. It will bring you every credit in your latter years and make us feel proud of you.

No need to worry if you are a beginner. Every facility and personal training given to new entrants to our field.

JUST A POST-CARD WILL BRING YOU FULL PARTICULARS FROM—

Messrs. Padubidri Bros.,

Chief Agents,

Karnataka and Maharashtra,

EAST & WEST INSURANCE CO., LTD.,

40 Narayanlal Bansilal Mansions, Bellasis Road, **Bombay 8.**

— ಚೈತನ್ಯ ಶಕ್ತಿ ಮತ್ತು ದೇಹಬಲ —

ಆರ್. ರಾಜಗೋಪಾಲನ್, ಉಟಕಮಂಡ್, ಇವರಿಂದ.

ಚೈತನ್ಯಶಕ್ತಿ ದೇಹಬಲ, ಇವೆರಡಕ್ಕೂ ಸಮೀಪ ಸಂಬಂಧವಿದ್ದರೂ, ಇವೆರಡಕ್ಕೂ ಹೆಚ್ಚು ಭೇದಗಳುಂಟು. ಜೀವಶಕ್ತಿಯೆಂಬುದು ಒಬ್ಬ ಮನುಷ್ಯನ ಪ್ರಾಣ, ಅಥವಾ ಒಳಗಿನ ಚೈತನ್ಯವು. ದೇಹಬಲವು ಹೊರಗಿನ ದೇಹಕ್ಕೆ ಸಂಬಂಧಿಸಿದುದು. ಒಬ್ಬ ಮನುಷ್ಯನಿಗೆ ಭೀಮನಷ್ಟು ಬಲವಿದ್ದರೂ ಅವನಲ್ಲಿ ಜೀವಶಕ್ತಿಯು ಇಲ್ಲದಿರಬಹುದು. ಈ ವಿಷಯವು ಇನ್ನೂ ಅನೇಕರಿಗೆ ತಿಳಿದಿಲ್ಲ. ಜೀವಶಕ್ತಿಯೆಂಬುದು ತಂದೆ ತಾಯಿಗಳಿಂದ ಅನುಸರಿಸಿ ಬರತಕ್ಕದ್ದು. ದೇಹಬಲವು ಹಾಗಲ್ಲ. ದೇಹಬಲವನ್ನು ನಮ್ಮ ಪ್ರಯತ್ನದಿಂದ ಪಡೆಯಬಹುದು.

ಶ್ರಮವನ್ನು ಸಹಿಸುವ ಶಕ್ತಿ, ಶ್ರಮವಿಲ್ಲದೆ ಬಹಳ ಹೊತ್ತು ಬುದ್ಧಿಗೆ ಕೆಲಸಕೊಡುವುದು, ರೋಗನಿವಾರಣೆ ಶಕ್ತಿ, ಇವೆಲ್ಲಕ್ಕೂ ಜೀವಶಕ್ತಿಯೇ ಮುಖ್ಯಾಧಾರವು. ಹೆಚ್ಚು ಜೀವಶಕ್ತಿಯುಳ್ಳವರು ಬಹಳ ಹೊತ್ತು ಬುದ್ಧಿಗೆ ಕೆಲಸಕೊಡಬಲ್ಲರು. ಅವರ ಆಯುಷ್ಯವೂ ದೀರ್ಘವಾಗಿರುವದು. ಅವರು ಒಳ್ಳೆ ಶಕ್ತಿವಂತರಾಗಿಯೂ, ಚುರುಕಾಗಿಯೂ, ಧೈರ್ಯವಂತರಾಗಿಯೂ ಇರುವರು. ಆದರೆ ದೇಹಬಲವೆಂಬುದು ಹಾಗಲ್ಲ. ದೇಹಬಲವಿದ್ದರೆ ಕೆಲವು ಶಾರೀರಕ ಕಾರ್ಯಗಳನ್ನು ಮಾತ್ರ ಚೆನ್ನಾಗಿ ಮಾಡಬಹುದು. ದೇಹಬಲವು ಮನುಷ್ಯನ ಆಕೃತಿ ಅಥವಾ ಗಾತ್ರವನ್ನವಲಂಭಿಸಿರುವುದು. ಎತ್ತರವಾಗಿಯೂ, ಹೆಚ್ಚು ತೂಕವುಳ್ಳವರಾಗಿಯೂ ಇರತಕ್ಕವರಿಗೆ, ಗಿಡ್ಡಾಗಿರುವವರಿಗಿಂತಲೂ ಬಲವು ಹೆಚ್ಚು. ಆದರೆ ಒಬ್ಬ ಮನುಷ್ಯನು ನೋಡುವುದಕ್ಕೆ ಕೃಶವಾಗಿದ್ದರೂ, ಅವನಿಗೆ ಜೀವಶಕ್ತಿಯು ಹೆಚ್ಚಾಗಿರಬಹುದು. ಸಣ್ಣನಾಗಿರುವವರಿಗೆ ಹೆಚ್ಚು ಸಹನಶಕ್ತಿ, ಧೈರ್ಯ, ಚಟುವಟಿಕೆ ಇವೆಲ್ಲವೂ ಇರಬಹುದು. ಈಚೆಗೆ ದಂಡೆಯೆತ್ತುವುದರಲ್ಲಿ ಪ್ರಖ್ಯಾತಿಗೊಂಡವನೊಬ್ಬನನ್ನೇ ಇವಕ್ಕೆ ಉದಾಹರಣೆಯಾಗಿ ತೆಗೆದುಕೊಳ್ಳಬಹುದು. ಅವನ ಮೈಕಟ್ಟನ್ನು ನೋಡಿದರೆ ಅಷ್ಟು ಭ್ರಮಿಸುವಂತಿಲ್ಲ. ಆದರೆ ಅವನಿಗೆ ಹೆಚ್ಚು ಚೈತನ್ಯಶಕ್ತಿಯಿರುವುದೆಂದು ತಿಳಿಯಬಹುದು. ಬಹಳದೂರ ಆಯಾಸವಿಲ್ಲದೆ ಓಡುವವರೂ ಅನೇಕರಿರುವರು. ಅಂಥವರೂ ನೋಡುವುದಕ್ಕೆ ಅಷ್ಟು ಧೃಢಕಾಯರಾಗಿ ಕಾಣಿಸುವುದಿಲ್ಲ. ಇವೆಲ್ಲಕ್ಕೂ ಜೀವಶಕ್ತಿಯೇ ಮುಖ್ಯಕಾರಣವು. ಜೀವಶಕ್ತಿ, ಮತ್ತು ದೇಹಶಕ್ತಿ, ಇವೆರಡೂ ಯಾರಲ್ಲಿ ಸೇರಿರುವುವೋ ಅಂಥವರು, ಶ್ರೀರಾಮನಂತೆ ಅಮಾನುಷವಾದ ಶಕ್ತಿಯುಳ್ಳವರೆನಿಸುವರು. ಯೂಜೆನ್ ಸಾಂಡೋ ಎಂಬವರಿಗೆ ದೇಹಬಲವು ಮಾತ್ರ ಹೆಚ್ಚಾಗಿರುವುದು. ಮಹಾತ್ಮಾಗಾಂಧಿಯವರಿಗೆ ಜೀವಶಕ್ತಿಯು ಹೆಚ್ಚಾಗಿರುವುದೆಂದು ಹೇಳಬಹುದು. ಏಕೆಂದರೆ, ಅವರು ಮುಪ್ಪಿನಲ್ಲಿಯೂ, ದೇಹಶ್ರಮವನ್ನು ಗಮನಿಸದೆ ಇತರರ ಸುಖಕ್ಕಾಗಿ ಕೆಲಸಮಾಡುವುದನ್ನು ನೋಡಿದರೆ, ಅವರಿಗೆ ಅಸಾಧಾರಣ ಜೀವಶಕ್ತಿಯಿರುವುದೆಂದೇ ಹೇಳಬೇಕು.

ಈಗ ಜೀವಶಕ್ತಿ ಮತ್ತು ದೇಹಬಲ ಇವುಗಳನ್ನು ಹೇಗೆ ವೃದ್ಧಿ ಮಾಡಬೇಕೆಂಬುದನ್ನು ನೋಡುವ. ಜೀವಶಕ್ತಿಯೆಂಬುದು, ಮಾಂಸಗ್ರಂಥಿಗಳು ಮತ್ತು ನರಗಳು ಇವುಗಳನ್ನವಲಂಬಿಸಿದುದು. ದೇಹಬಲವು ಸ್ನಾಯುಗಳನ್ನವಲಂಬಿಸಿದೆ. ಇದರಿಂದಲೇ ದೇಹಬಲಕ್ಕಿಂತ ಜೀವಶಕ್ತಿಯು ಎಷ್ಟು ಮೇಲೆಂಬುದನ್ನು ತಿಳಿಯಬಹುದು. ದೇಹಬಲವನ್ನು ಪ್ರಯತ್ನದಿಂದ ಹೆಚ್ಚಿಸಬಹುದು. ಆದರೆ ಜೀವಶಕ್ತಿಯನ್ನು ಹಾಗೆ ಹೆಚ್ಚಿಸುವುದಸಾಧ್ಯವೆಂದು ನನ್ನ ಅಭಿಪ್ರಾಯವು ಜೀವಶಕ್ತಿಯೆಂಬುದು ಜೀವನಕ್ಕೆ ಅಧಾರವೆನಿಸುವುದು. ಅದು ಮನುಷ್ಯನಿಗೆ ಬೆಂಬಲದಂತಿರುವುದು. ಮನುಷ್ಯನು ತನಗೆ ಬೇಕಾದಾಗ ಅದನ್ನು ಉಪಯೋಗಿಸುವನು. ಅದನ್ನು ಬೇಗನೆ ವೆಚ್ಚಮಾಡಿದಷ್ಟು ಮನುಷ್ಯನ ದೇಹಸ್ಥಿತಿಯು ಕುಂದುತ್ತಬರುವುದು.

ಅಂಗಸಾಧನೆಯನ್ನು ಮಾಡುವುದರಿಂದ ದೇಹಬಲವು ಹೆಚ್ಚಬಹುದು. ಆದರೆ ಆದರಿಂದ ಜೀವಶಕ್ತಿಯು ಕಡಿಮೆಯಾಗುವುದೆಂದೇ ಹೇಳಬೇಕು. ಆದುದರಿಂದ ಮನುಷ್ಯನಲ್ಲಿ ಜೀವಶಕ್ತಿಯು ಕಡಿಮೆಯಾಗದಿರಬೇಕಾದರೆ, ಆಗಾಗ ತನ್ನ ಮಾಂಸಗ್ರಂಥಿಗಳು ಮತ್ತು ನರಗಳು, ಇವುಗಳಿಗೆ ಉತ್ತೇಜನವನ್ನು ಕೊಡುತ್ತಿರಬೇಕು. ಅಂಗಸಾಧನೆಯಿಂದ ಮಾಂಸ ಗ್ರಂಥಿಗಳಿಗಾಗುವಷ್ಟು ನರಗಳಿಗೆ ಪ್ರಯೋಜನವಿಲ್ಲ. ಯೋಗಾಭ್ಯಾಸದಿಂದ ಅವುಗಳಿಗೆ ಉತ್ತೇಜನವುಂಟಾಗುವುದು.

ಆರೋಗ್ಯವಂತರಾಗಿ ಬಾಳಬೇಕೆಂದು ಬಯಸುವವರು ಶುದ್ಧವಾದ ಗಾಳಿಯನು ಶ್ವಾಸಿಸುತ್ತಿರಬೇಕು. ಮತ್ತು ಕ್ರಮವಾದ ಆಹಾರವನ್ನು ತೆಗೆದುಕೊಳ್ಳಬೇಕು. ಆದರೆ, ಈಗಿನ ನವನಾಗರಿಕತೆಯ ಕಾಲದಲ್ಲಿ ಇದು ಸಾಧ್ಯವಲ್ಲ. ಆದುದರಿಂದ ಇದಕ್ಕಾಗಿ ಬೇರೆ ವ್ಯಾಯಾಮಕ್ರಮವನ್ನೇರ್ಪಡಿಸಬೇಕಾಗಿರುವುದು. ಒಳ್ಳೆಯ ಮೈಕಟ್ಟು ಮತ್ತು ಜೀವಶಕ್ತಿ, ಇವುಗಳನ್ನು ಪಡೆಯಬೇಕಾದರೆ, ಅದಕ್ಕೆ ಬೇಕಾದ ಅಂಗಸಾಧನೆಯನ್ನು ಮಾಡಬೇಕು. ಹಾಗೆ ಮಾಡತಕ್ಕ ವ್ಯಾಯಾಮವು ದೇಹಕ್ಕೆ ಬಹಳ ಆಯಾಸವನ್ನುಂಟುಮಾಡದಂತಿರಬೇಕು. ಸಾಧನಗಳ ಸಹಾಯದಿಂದಲೇ ವ್ಯಾಯಾಮವನ್ನು ಮಾಡಬೇಕೆಂಬ ಆವಶ್ಯವಿಲ್ಲ. ಭೂಮಿಯ ಮೇಲೆ ನಿಂತು ಮಾಡುವ ವ್ಯಾಯಾಮದಿಂದ ದೇಹಕ್ಕೆ ಹೆಚ್ಚು ಪ್ರಯೋಜನವುಂಟು. ಭೂಮಿಯು ಸ್ವಂತ ದೇಹಕ್ಕೆ ಶಕ್ತಿಯನ್ನು ಕೊಡುವುದು. ಯೋಗಾಸನಗಳನ್ನೂ ಮಾಡಬಹುದು. ಆದರೆ ಯೋಗಾಸನದಿಂದ ಒಳ್ಳೆಯ ಮೈಕಟ್ಟನ್ನು ಪಡೆಯುವುದು ಸಾಧ್ಯವಲ್ಲ.

ಅಮಾನುಷವಾದ ಶಕ್ತಿಯನ್ನು ಪಡೆಯಬೇಕೆಂದಿರುವವರು, ಅದಕ್ಕಾಗಿ ಏರ್ಪಡಿಸಿದ ಕೆಲವು ಅಂಗಸಾಧನೆಗಳನ್ನು ಸಾಧನಗಳ ಸಹಾಯದಿಂದಾಗಲಿ, ಅವುಗಳ ಸಹಾಯವಿಲ್ಲದೆಯಾಗಲಿ ಪ್ರತಿದಿನವೂ ಮಾಡುತ್ತ ಬರಬಹುದು. ಆದರೆ ಅಂಥವರು ದೀರ್ಘಕಾಲ ಜೀವಿಸಿರಲಾರರು. ಒಳ್ಳೆಯ ಮೈಕಟ್ಟನ್ನು ಪಡೆದರೆ, ಅದು ಮನಸ್ಸಿಗೆ ಒಂದು ವಿಧವಾದ ಸಂತೋಷವನ್ನುಂಟು ಮಾಡುವುದು.

(ಆರೋಗ್ಯಚಂದ್ರಿಕೆ)

ಬೊಂಬಾಯಿಯ ದಕ್ಷಿಣಕನ್ನಡಿಗರಿಗೆ ವಂದನಾರ್ಪಣೆ.

ನಾನು ಫೈಜಪುರ ಕಾಂಗ್ರೆಸಿಗೆ ಹೋಗುವ ಸಂದರ್ಭದಲ್ಲಿ ಬೊಂಬಾಯಿಗೆ ಹೋಗಿದ್ದಾಗ ನನ್ನನ್ನು ಅತ್ಯಾದರದಿಂದ ಸತ್ಕರಿಸಿ ನವಯುಗದ ಮೇಲೆ ಅಭಿಮಾನದಿಂದ ಅದಕ್ಕೆ ಚಂದಾದಾರರನ್ನು ಸೇರಿಸಲು ಸಹಾಯಮಾಡಿದ ದಕ್ಷಿಣ ಕನ್ನಡಿಗರಿಗೆಲ್ಲಾ ನಾನು ಈ ಮೂಲಕ ಹೃತ್ಪೂರ್ವಕ ವಂದನೆಯನ್ನರ್ಪಿಸುತ್ತೇನೆ. ನಾನು ಬೊಂಬಾಯಿಯಿಂದ ಬಿಜಾಪುರಕ್ಕೆ ಹೋಗಿ ಅಲ್ಲಿ ಸ್ವಲ್ಪ ಅಸ್ವಸ್ಥವಾದುದರಿಂದಲೂ, ದಕ್ಷಿಣ ಕನ್ನಡದ ಚುನಾವಣೆಯ ನಿಮಿತ್ತವೂ ಈ ವಂದನಾರ್ಪಣೆಗೆ ಇಷ್ಟೊಂದು ವಿಳಂಬವಾದುದಕ್ಕಾಗಿ ಕ್ಷಮೆಯಾಚಿಸುತ್ತೇನೆ. ನನ್ನನ್ನು ಅತ್ಯಂತ ಪ್ರೀತಿಪೂರ್ವಕವಾಗಿ ಕಂಡು ತಮ್ಮಿಂದ ಸಾಧ್ಯವಾದ ರೀತಿಯಲ್ಲೆಲ್ಲಾ ಸಹಾಯಮಾಡಿದ ನನ್ನ ಹಲವು ಮಿತ್ರರಿಗೆ ವೈಯಕ್ತಿಕವಾಗಿ ಧನ್ಯವಾದವನ್ನರ್ಪಿಸಲು ಸಾಧ್ಯವಿಲ್ಲ. ಅತ್ಯುತ್ಸಾಹದಿಂದ ನನ್ನನ್ನು ಸತ್ಕರಿಸಿ ತಾವಾಗಿಯೇ ನವಯುಗಕ್ಕೆ ಹಲವು ಚಂದಾದಾರರನ್ನೊದಗಿಸಿ ಕೊಟ್ಟ ಬಂಟರಯಾನೆ ನಾಡವರ ಸಂಘದ ಸ್ವಯಂ ಸೇವಕ ಸಂಘದವರಿಗೂ ಕಾರ್ಯದರ್ಶಿಗಳಿಗೂ ನಾನು ತುಂಬಾ ಅಭಾರಿಯಿರುವೆನು. ಅಂತೆಯೇ ಬೊಂಬಾಯಿಯ ನೂತನ ಸಂಗೀತ ಕರ್ನಾಟಕ ನಾಟಕ ಸಭೆಯವರೂ ಮೊಗವೀರ ವ್ಯವಸ್ಥಾಪಕ ಮಂಡಲಿ ಮತ್ತು ಫ್ರೀ ನೈಟ್ ಸ್ಕೂಲಿನವರೂ ನನಗೆ ಮಾಡಿದ ಸತ್ಕಾರ ಮತ್ತು ಸಹಾಯಕ್ಕಾಗಿ ನಾನು ಅವರಿಗೆ ಋಣಿಯಾಗಿರುವೆನು. ವಿಶೇಷವಾಗಿ ನನ್ನನ್ನು ಸರ್ವರೀತಿಯಲ್ಲಿಯೂ ಪ್ರೋತ್ಸಾಹಿಸಿರುವ ನನ್ನ ತರುಣ ಬಂಧು ಮಿತ್ರರಿಗೆ ನಾನು ಅತ್ಯಂತ ಋಣಿಯಾಗಿರುವೆನು.

ಕೆ. ಕೆ. ಶೆಟ್ಟಿ,
ಸಂಪಾದಕ, ನವಯುಗ
ಉಡುಪಿ, 3—3—1937.

ನವಯುಗಕ್ಕೆ ಚಂದಾದಾರರಾಗಿರಿ!

ತಾಳದೆ ಇರತಕ್ಕ ಮೂತ್ರವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧ.



ಡಾ. ಜಸಾನಿಯವರ ಜಗತ್ಪ್ರಸಿದ್ಧ

"ಗೊನೋಕಿಲರ್"

(ರಿಜಿಸ್ಟರ್ಡ್)

GONO KILLER ORIGINAL

ನಕಲಿ ಮದ್ದುಗಳಿಗೆ ಮರುಳಾಗಿ ಮೋಸ ಹೋಗಬೇಡಿರಿ. ಕೊಂಡು ಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಗಮನಿಸಿರಿ.

ಪ್ರಮೇಹ ವ್ಯಾಧಿಗೆ ಸಿದ್ಧೌಷಧ

ಇಂದಿನ ಅಪ್ರತಿಮ ಔಷಧ. ಆಂಗ್ಲೇಯ ಮತ್ತು ಆಯುರ್ವೇದ ಔಷಧಗಳೊಂದೂ ಫಲಕಾರಿಯಾಗದೇ ಇನ್‌ಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ, ಒಂದಾವರ್ತಿಯಾದರೂ ಈ ನಮ್ಮ **ಗೋನೋಕಿಲರ್** ಎಂಬ ಔಷಧವನ್ನು ಉಪಯೋಗಿಸಿನೋಡಿರಿ. ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ, ಗೋನೋಕಿಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾತುವಿಕೆ, ಸರ್ವಪ್ರಕಾರದ ಪ್ರಮೇಹ (ಎಷ್ಟೇ ಹಳತು ಯಾ ಯಾವದೇ ಸ್ಥಿತಿಯಲ್ಲಿರಲಿ), ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತುಸ್ರಾವ, ಬಿಳುಪು ಹರಿಯುವದು ಇವೇ ಮೊದಲಾದ ಯಾವತ್ತು ಗೊನೋಕೋಕಸ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ.

ಬೆಲೆ 30 ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ. 3—0—0 (ಮೂರು) ವಿ. ಪಿ. ಛಾರ್ಜು ಬೇರೆ.

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ, ಗಿರಿಗಾಂವ ಬ್ಯಾಕ್ ರೋಡ್, ಮುಂಬಯಿ ೪.

Sole Manufacturer: Dr. D. N. JASANI, GIRGAUM BACK ROAD, BOMBAY

ಪ್ರೇಕಾಕ್ಸ್ ಪಿಲ್ಸು

ಸ್ತ್ರೀಪುರುಷರಿಗೆ ಆನಂದವನ್ನುಂಟುಮಾಡುವುದು ಈ ಮಾತ್ರೆಗಳೇ. ಮದಿಸಿದ ಸ್ತ್ರೀಯರ ಗರ್ವ ಭಂಗಮಾಡಲು ಕಂಡು ಹಿಡಿದಿರುವ ಮಾತ್ರೆಗಳಿವು. ಇದರಲ್ಲಿ ಪಿಷಾದಿಗಳು ಸೇರಿಲ್ಲ. ಕಸ್ತೂರಿ, ಚಿನ್ನ ಹಿಮಾಲಯಪರ್ವತದ ವನಮೂಲಿಕೆಗಳು ಮುಂತಾದುವುಗಳಿಂದ ದೊಡ್ಡ ಯೋಗೀಶ್ವರರ ಹತ್ತಿರ ಸಂಗ್ರಹಿಸಿ ಮುದುಕತನವನ್ನು ಲೋಕದಲ್ಲಿ ಇಲ್ಲದಂತೆ ಮಾಡುವುದು. ಅರ್ಧ ಘಂಟೆಯೊಳಗಾಗಿ ವೀರ್ಯವನ್ನು ಕಲ್ಲಿನಂತೆ ಮಾಡಿ ರಮಿಸಲು ಉಲ್ಲಾಸವನ್ನು ಮಾಡುವುದು. ಗುಣವಿಲ್ಲದಿದ್ದಲ್ಲಿ ಹಣ ವಾಪಸು. **೬೦ ಮಾತ್ರೆಗಳು ರೂ. ೫ ೦--೦**

೩೦ ಮಾತ್ರೆಗಳು ರೂ. ೩—೦—೦ ಕಾಗದ ಪತ್ರಗಳು ಇಂಗ್ಲೀಷಿನಲ್ಲಿಯೇ.

ಡಾ. ಎ. ಎಸ್. ಮೂರ್ತಿ,

ಚಿಕಾಗೋಲ್, ಗಂಜಾಮ್ ಡಿಸ್ಟ್ರಿಕ್ಟ್.



ಧರ್ಮಾರ್ಥ ಬಹುಮಾನಗಳು 1-4-0ಗೆ!

--- ಯಾರಿಗೆ? ---

ರೂಪಾಯಿ 1—4—0 ಕೊಟ್ಟು 14 ಸೀಸೆ ಒಟ್ಟೊರೋಸ್ಟ್ ಅಥವಾ 10 ಡಬ್ಬಿ ಗಜಕರ್ಣ ಮುಲಾಮನ್ನು ಕ್ರಯಕ್ಕೆ ಪಡೆಕೊಳ್ಳುವವರಿಗೆ!!

ಇನಾಮುಗಳ ವಿವರ:—3 ಡಮ್ಮಿ ರಿಸ್ಟ್‌ವಾಚುಗಳು; 1 ಕ್ರೈಸ್ಟೋಲಿಯಂ ಡಮ್ಮಿ ಪಾಕೆಟ್ ವಾಚು; 1 ಸೇಫ್ಟಿರೇಜರ್; 1 ಶೇವಿಂಗ್ ಬ್ರಷ್; 1 ಶೇವಿಂಗ್ ಸೋಪು; 1 ಕನ್ನಡಿ, 1 ಪೌಡರ್; 1 ಜತೆ ಗುಬ್ಬಿಗಳು; 1 ಫೌಂಟನ್ ಪೆನ್ನು 14 ಕ್ಯಾರೆಟ್ ನಿಬ್ಬು ಸಮೇತ; 1 ಇಮಿಟೇಶನ್ ಮೋತಿಪುಲ್ಲರ್; 1 ಹೆಸರು ಕೆತ್ತಿಸಿಟ್ಟ ರೋಲ್ಡುಗೋಲ್ಡು ಗಿಲ್ಟ್ ಉಂಗುರ, ಆರುನೂರು ಅಡಿ ದೂರಕ್ಕೆ ಪ್ರಕಾಶಬೀರುವ 1 ಟಾರ್ಚ್‌ಲೈಟ್ ಅಥವಾ 1 ಅತ್ಯುತ್ತಮ 'B' ಟೈಮ್‌ಪೀಸು (ಹತ್ತು ವರುಷ ಗ್ಯಾರಂಟಿ)

ಪ್ಯಾಕಿಂಗ್ ಮತ್ತು ಪೋಸ್ಟೇಜು 0—12—0. ಇಂದೇ ಆರ್ಡರು ಕೊಡಿರಿ.

Bengal Watch Co.,
Post Box No. 12214, CALCUTTA.

ಸುವರ್ಣ ತಾಯಿತಿ! ಧರ್ಮಾರ್ಥ ಭಂಗಾರದ ತಾಯಿತಿ!

ಹಿಮಾಲಯ ಪರ್ವತದಲ್ಲಿ ವರ್ಷಗಟ್ಟಲೆ ತಪಸ್ಸು ಮಾಡಿ ಸಿದ್ಧಿಯನ್ನು ಪಡೆದ ಮಹಾ ಯೋಗೀಶ್ವರರಿಂದ ಕಂಡು ಹಿಡಿಯಲ್ಪಟ್ಟದ್ದು.

ಈ ತಾಯಿತಿಯನ್ನು

ಧರಿಸಿದ ಮಾತ್ರದಿಂದ ಸಕಲ ಇಷ್ಟಾರ್ಥಗಳೂ ನೆರವೇರುವುವು.

ಪರೀಕ್ಷಿಸಲಪೇಕ್ಷಿಸುವವರು

"ಯೋಗೀಶ್ವರರ ಶಕ್ತಿ ಸಾಹಸ"

ಎಂಬ ಪುಸ್ತಕವನ್ನು ಧರ್ಮಾರ್ಥವಾಗಿ ಪಡೆಯಬಹುದು.

ಪತ್ತೆ:— ಪಂಡಿತ್ ಎ. ವಿ. ಆರಮುವ್

ಚಿಕಾಕೋಲ್

ಆತಂಕನಿಗ್ರಹ ಮಾತ್ರೆಗಳು

ಯಾವ ಕಾರಣದಿಂದಾಗಲಿ ಉಂಟಾದ ಧಾತುನಷ್ಟ, ನರಗಳ ನಿಶ್ಶಕ್ತಿ ಇವುಗಳನ್ನು ಹೋಗಲಾಡಿಸಿ ವಿಶಿಷ್ಟ ಗುಣ ಉಂಟಾಗುವಂತೆ ಮಾಡುತ್ತವೆ. ಈ ಗುಳಿಗೆಗಳು ಆರೋಗ್ಯವನ್ನು ಉಂಟುಮಾಡಿ ದೇಹಕ್ಕೂ ಮತ್ತು ಮನಸ್ಸಿಗೂ ಬಲಹೀನತ್ವವನ್ನು ಹೋಗಲಾಡಿಸಿ, ದುಷ್ಟರಕ್ತವನ್ನು ಶುದ್ಧಿಮಾಡಿ ಜ್ಞಾಪಕಶಕ್ತಿಯನ್ನು ವೃದ್ಧಿಪಡಿಸುವುದು. ಕ್ರಯ: ಡಬ್ಬಿ ೧ಕ್ಕೆ ೧-೦-೦.

ವಾಜೀಕರಣ ತೈಲ:—(ಹೊರಗೆ ಹಚ್ಚಲು ಮಾತ್ರವೇ) ಬಾಲ್ಯದಲ್ಲಿ ಸ್ವತಃ ಅನೇಕ ವಿಧಗಳಲ್ಲಿ ಶರೀರವನ್ನು ಕೆಡಿಸಿಕೊಂಡು ಅದರಿಂದ ಉಂಟಾಗುವ ಅಶಕ್ತಿ, ನರಗಳ ದೌರ್ಬಲ್ಯ, ನಪುಂಸಕತ್ವ ಮುಂತಾದ ವ್ಯಾಧಿಗಳನ್ನು ಪರಿಹರಿಸುವ ಸಂಜೀವಿನಿಯಾಗಿರುವುದು. ನರಗಳಿಗೆ ಬಲವನ್ನುಂಟುಮಾಡಿ, ಸಂಭೋಗಕ್ಕೆ ಉತ್ಸಾಹವನ್ನು ಕೊಡುವುದು. ಒಂದು ವಾರ ಔಷಧವನ್ನು ಹಚ್ಚುವುದರಿಂದ ಗುಣವು ಗೊತ್ತಾಗುತ್ತದೆ. ಕ್ರಯ: ಸೀಸೆ ಒಂದಕ್ಕೆ ೫—೦—೦.

ಅಮೃತಾರ್ಣವ ಲೇಹ್ಯ:— ರಕ್ತವನ್ನು ಶುದ್ಧಿಮಾಡಿ, ನರಗಳನ್ನು ಬಲಪಡಿಸಿ, ಅತಿ ಉಷ್ಣ, ಕೈಕಾಲುಗಳ ಉರಿ, ಇನ್ನೂ ಮುಂತಾದ ಉಷ್ಣವ್ಯಾಧಿಗಳನ್ನು ಗುಣಪಡಿಸಿ, ಮೆದುಳನ್ನು ತಂಪುಮಾಡಿ, ದೇಹಬಲವನ್ನೂ, ತೇಜಸ್ಸನ್ನೂ ಹೆಚ್ಚಿಸುವುದಲ್ಲದೆ ದೀರ್ಘಕ್ಷಯ, ಎದೆನೋವು, ತಲೆನೋವು, ಮುಂತಾದ ವ್ಯಾಧಿಗಳಿಗೆ ಅಮೃತಪ್ರಾಯವಾದುದು. ಕ್ರಯ: ಡಬ್ಬಿ ೧ಕ್ಕೆ ೨-೦-೦.

'ಕಾಮಶಾಸ್ತ್ರ' ಧರ್ಮಾರ್ಥ. ಪೋಸ್ಟೇಜು ಮಾಫಿಯಾಗಿ ಕಳುಹಿಸುವೆವು. ಒಂದು ಕಾರ್ಡು ಹಾಕಿರಿ.

ಆತಂಕ ನಿಗ್ರಹ ಫಾರ್ಮಸಿ, ೬೪, ಚಿಕ್ಕಪೇಟೆ ಚಾಕ, ಬೆಂಗಳೂರು ಸಿಟಿ

ದಕ್ಷಿಣ ಕನ್ನಡದ ಕಾಂಗ್ರೆಸ್ ವಿಜಯಗಳು

ಕುಂದಾಪುರ ಡಿವಿಜನಿನ ಹರಿಜನ ಸ್ಥಾನ

ಶ್ರೀ. ಕೆ. ಈಶ್ವರ (ಕಾಂಗ್ರೆಸ್)	**೧೪೫೧**
ಶ್ರೀ. ಗೋಪಾಲ ಸಾಲೆನ್ನ (ಪೀಪಲ್ಸ್ ಪಾರ್ಟಿ)	೧೨೧೬
ಶ್ರೀ. ಬಾಬು (ಜಸ್ಟಿಸ್)	೪೬೬

ಕಾಂಗ್ರೆಸ್ ಉಮೇದ್ವಾರಿಗೆ ಸುಮಾರು ೨೦೦ ಮತಗಳು ಜಾಸ್ತಿ.

ಮಂಗಳೂರು ಡಿವಿಜನು.

ಶ್ರೀ ಬಿ. ವೆಂಕಟ್ರಾವ್ ಬಾಳಿಗ (ಕಾಂಗ್ರೆಸ್)	**೧೪೪೫೬**
ಶ್ರೀ. ಬಿ. ಲಕ್ಷ್ಮಪ್ಪ ರೈ ((ಜಸ್ಟಿಸ್)	೫೪೨೦

ಕಾಂಗ್ರೆಸ್ ಉಮೇದ್ವಾರಿಗೆ ೯೦೩೯ ಮತಗಳು ಹೆಚ್ಚಿಗೆ.

ಪುತ್ತೂರು ಡಿವಿಜನು.

ಶ್ರೀ ಕೆ. ಆರ್. ಕಾರಂತ (ಕಾಂಗ್ರೆಸ್)	**೧೮೪೨೭**
ಶ್ರೀ. ಬಿ. ನರಸಿಂಗರಾವ್ (ಸ್ವತಂತ್ರ)	೪೫೬೫

ಕಾಂಗ್ರೆಸ್ ಉಮೇದ್ವಾರಿಗೆ ೧೩೮೬೨ ಮತಗಳು ಜಾಸ್ತಿ!

ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿ, ಧಾರವಾಡ

ಕಾಂಗ್ರೆಸ್ ಕಾರ್ಯಕರ್ತರು ಇತ್ತ ಲಕ್ಷ್ಯಕೊಡಬೇಕು

ಕಾಂಗ್ರೆಸಿನ ಚುನಾವಣೆಗಳ ಫಲಿತಾಂಶವು ಹೊರಬಿದ್ದು ಎಲ್ಲೆಲ್ಲಿಯೂ ಕಾಂಗ್ರೆಸಿಗೆ ವಿಜಯವಾಗಿದೆ. ಈ ವಿಜಯದ ಸಮಾರಂಭಗಳು ಎಲ್ಲಾ ಕಡೆಗೂ ನಡೆಯುವುದು ಸ್ವಾಭಾವಿಕವು. ಆದರೆ ಈ ವಿಜಯೋತ್ಸವದಲ್ಲಿಯೇ ರಾಷ್ಟ್ರವು ಮೈಮರೆಯಬಾರದೆಂದು ರಾಷ್ಟ್ರಾಧಿಪತಿಗಳು ಎಚ್ಚರಿಕೆ ಕೊಟ್ಟಿದ್ದಾರೆ. ಈ ಚುನಾವಣೆಯು ಸ್ವಾತಂತ್ರ್ಯಯುದ್ಧದ ಒಂದು ಅಂಗವು. ಆದುದರಿಂದ ಸಂಪೂರ್ಣ ಸ್ವಾತಂತ್ರ್ಯ ದೊರೆಯುವ ವರೆಗೆ ನಮ್ಮ ಕಾರ್ಯವು ನಿಲ್ಲಕೂಡದು. ಈ ದೃಷ್ಟಿಯಿಂದ ಕಾಂಗ್ರೆಸಿನ ವಿಜಯಿ ಪುರಿಯಾಳುಗಳಿಗೂ ಕಾರ್ಯಕರ್ತರಿಗೂ ಎರಡೇ ಮಾತುಗಳನ್ನು ಹೇಳಬಯಸುತ್ತೇವೆ.

ಇಂದು ಹಿಂದೀ ರಾಷ್ಟ್ರದ ಮುಂದಿರುವ ಮುಖ್ಯ ಪ್ರಶ್ನೆಗಳೆಂದರೆ—ಎರಡು. ಕಾಂಗ್ರೆಸ್ ಸಂಘಟನೆಯನ್ನು ಬಲಪಡಿಸುವದು ಮೊದಲನೆಯದು. ಹೊಸ ರಾಜ್ಯಘಟನೆಯನ್ನು ಮುರಿಯುವುದು ಎರಡನೆಯದು. ಕಾಂಗ್ರೆಸ್ ಸಂಘಟನೆಯು ಬಲವಡಬೇಕಾದರೆ ಅದರ ಸಭಾಸದರ ಸಂಖ್ಯೆಯು ಬೆಳೆಯಬೇಕು. ಅದರ ಶಾಖೋಪಶಾಖೆಗಳು ಹಳ್ಳಿಹಳ್ಳಿಗಳಿಗೂ ಹಬ್ಬಬೇಕು. ಆದ್ದರಿಂದ ನಾವು ಈಗಿನಿಂದಲೇ ಕಾಂಗ್ರೆಸ್ ಸಭಾಸದರನ್ನು ಹೆಚ್ಚಿಗೆಮಾಡುವ ಕಾರ್ಯವನ್ನು ಕೈಕೊಳ್ಳುವುದು ಅವಶ್ಯವಿದೆ. ಯಾಕಂದರೆ ಫೈಜಪೂರಕಾಂಗ್ರೆಸಿನಲ್ಲಿ, ಸಭಾಸದರ ಹಣದ ಬದಲು ಕಾಳುಗಳನ್ನು ತೆಗೆದುಕೊಳ್ಳಬಹುದೆಂದು ರೈತರನ್ನು ಅನುಲಕ್ಷಿಸಿಯೇ ಠರಾವನ್ನು ಮಾಡಿಯದೆ. ಈಗ ಸುಗ್ಗಿಯ ಕಾಲ- ರೈತರು ಸಭಾಸದರು ಆಗಲು ಈಗ ಒಳ್ಳೆಯ ಅನುಕೂಲ. ಆದುದರಿಂದ ಕಾಂಗ್ರೆಸ್ ಕಾರ್ಯಕರ್ತರು ಈ ಕಾರ್ಯವನ್ನು ಕೈಕೊಳ್ಳಬೇಕು.

ಎರಡನೇ ಮಾತೆಂದರೆ ಹೊಸ ರಾಜ್ಯಘಟನೆಯನ್ನು ವಿರೋಧಿಸುವದು. ಹೊಸ ರಾಜ್ಯಘಟನೆಯು ಏಪ್ರಿಲ್ ತಿಂಗಳ ಮೊದಲನೇ ತಾರೀಕಿನಿಂದ ಪ್ರಾರಂಭವಾಗುವುದು. ಆದುದರಿಂದ ಕಾಂಗ್ರೆಸ್ಸು ಹಿಂದೀ ರಾಷ್ಟ್ರಕ್ಕೆ ಅಂದು ಹರತಾಳವನ್ನಾಚರಿಸಲು ಆಜ್ಞೆಗೈದಿದೆ. ಈ ಕಾರ್ಯಕ್ರಮವು ಯಶಸ್ವಿಯಾಗಬೇಕಾದರೆ ಈಗಿನಿಂದಲೇ ಹಳ್ಳಿಗಳಲ್ಲಿ ಪ್ರಚಂಡವಾದ ಚಳವಳಿಯನ್ನು ಹೂಡುವುದು ಅವಶ್ಯವಿದೆ.

ಆದುದರಿಂದ ಈಗ ನಡೆಯುವ ಪ್ರತಿಯೊಂದು ಸಮಾರಂಭದಲ್ಲಿ ಈ ಎರಡೂ ವಿಷಯಗಳನ್ನು ಕಾಂಗ್ರೆಸ್ ಕಾರ್ಯಕರ್ತರೂ ಪುರಿಯಾಳುಗಳೂ ಒತ್ತಿ ಹೇಳಿ ಕಾರ್ಯಪ್ರವೃತ್ತಿ ಮಾಡಬೇಕೆಂದು ಇನ್ನೊಮ್ಮೆ ಬಿನ್ನವಿಸುತ್ತೇವೆ.

ರಾ. ಶ್ರೀ ಹುಕ್ಕೇರಿಕರ, ಗೌ. ಕಾರ್ಯದರ್ಶಿ

ಆಹಾರದಲ್ಲಿ ಲೋಹಸಂಬಂಧಗಳು

ಅಡಿಗೆ ಮಾಡುವುದಕ್ಕಾಗಿ ಅಲ್ಯುಮಿನಿಯಂ ಪಾತ್ರೆಗಳನ್ನು ಉಪಯೋಗಿಸುವುದರ ಫಲ.

ಆಹಾರವನ್ನು ಅಲ್ಯುಮಿನಿಯಂ ಪಾತ್ರೆಗಳಲ್ಲಿ ಅಡಿಗೆಮಾಡುವುದಕ್ಕೆ ಮುಂಚಿತವಾಗಿ, ಅಡಿಗೆಮಾಡಿದ ಮೇಲೆ ಮತ್ತು ಆ ಪಾತ್ರೆಗಳಲ್ಲಿ ಆಹಾರವನ್ನು ಸ್ವಲ್ಪ ಹೊತ್ತು ಮುಚ್ಚಿಟ್ಟದ್ದ ಮೇಲೆ, ಆ ಆಹಾರ ಪದಾರ್ಥಗಳಲ್ಲಿ ಸೇರಿದ ಲೋಹಭಾಗವು ಎಷ್ಟೆಂಬುದನ್ನು ದತ್ತ ಎಂಬವರು ಕೆಲವು ಪರಿಶೋಧನೆಗಳಿಂದ ಕಂಡುಹಿಡಿದಿರುವರು. ಆ ಪರಿಶೋಧನೆಗಳಿಂದ ತಿಳಿದುಬರುವುದೇನೆಂದರೆ. ಅಲ್ಯುಮಿನಿಯಂ ಎಂಬ ಲೋಹವು ಹಣ್ಣಿನ ಮತ್ತು ತರಕಾರಿಗಳ ರಸಗಳೊಡನೆ ಸೇರಿದರೆ ಆ ಲೋಹವು ಸ್ವಲ್ಪ ಸ್ವಲ್ಪವಾಗಿ ಕರಗಿಹೋಗುವುದು. ಬೇರೆ ಎಲ್ಲಾ ರಸಗಳಿಗಿಂತಲೂ ಹುಳಿಯ ರಸವು ಈ ಲೋಹವನ್ನು ಹೆಚ್ಚಾಗಿ ಕರಗಿಸುವುದು. ಅದರೊಡನೆ ಉಪ್ಪೂ ಸೇರಿದ್ದರೆ ಆ ಲೋಹವು ಇನ್ನೂ ಬೇಗನೆ ಕರಗಿಹೋಗುವುದು. ಆದರೆ ಒಮ್ಮೆ ಇದರ ಪರಿಶೋಧನೆಗಾಗಿ ಗಾಜಿನ ಪಾತ್ರೆಗಳಲ್ಲಿಟ್ಟದ್ದ ಹಾಲು, ಮೊಸರು ಇವುಗಳನ್ನು ಕೊಟ್ಟು ಕೆಲವು ಇಲಿಗಳನ್ನು ಬೆಳೆಸಿದರು. ಮತ್ತು ಅಲ್ಯುಮಿನಿಯಂ ಪಾತ್ರೆಗಳಲ್ಲಿಟ್ಟದ್ದ ಹಾಲು, ಮೊಸರು ಇವುಗಳಿಂದ ಇನ್ನು ಕೆಲವು ಇಲಿಗಳನ್ನು ಬೆಳಸಿ ನೋಡಿದರು. ಈ ಪರಿಶೋಧನೆಯಿಂದ, ಆ ಎರಡು ಪಂಗಡದ ಇಲಿಗಳ ಬೆಳವಣಿಗೆಯೂ ಒಂದೇ ರೀತಿಯಾಗಿದ್ದಿತೆಂದು ತಿಳಿಯಬಂದಿತು. ಅವುಗಳ ಆರೋಗ್ಯ, ಸಂತಾನವೃದ್ಧಿ ಇವೆಲ್ಲವೂ ಒಂದೇ ಸಮನಾಗಿದ್ದುವು. ಆದುದರಿಂದ ಉಪ್ಪು ಹುಳಿ ಇವುಗಳ ಸಂಬಂಧವಿದ್ದಾಗ ಮಾತ್ರ ಲೋಹಸಂಬಂಧದಿಂದ ಆಹಾರವು ಕೆಡುವುದು ಎಂಬುದಾಗಿ ಊಹಿಸಬಹುದು.—"ಇಂಡಿಯನ್ ಡೆಂಟಲ್ ಜರ್ನಲ್"

ಕಸ್ತೂರಿ ಮಿಶ್ರಣ ದಶಮೂಲವೆಂಬ

ಸೂತಿಕಾ ರಸಾಯನ

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

I. **ಶೋಧನ ಗುಣ:**—ಶೋಧನದಿಂದ ಪ್ರಸವಾನಂತರ ಗರ್ಭಕೋಶದ ಸರ್ವತರದ ನಂಜನ್ನು ಹೊರಗೆ ಹಾಕಿ ಪ್ರಸೂತವಾದ ಗರ್ಭಕೋಶವನ್ನು ಮೂರು ದಿವಸಗಳೊಳಗೆ ಸಂಕುಚಿತವಾಗಿ ಮಾಡುವದು.

II. **ರಸಾಯನ ಗುಣ:**—ರಸಾಯನದಿಂದ ಸೂತಿಕಾ ಸ್ತ್ರೀಯು ಗರ್ಭದ ಬೆಳವಣಿಗೆ ಬಗ್ಗೆಯೂ, ಪ್ರಸವವೇದನಾ ಬಗ್ಗೆಯೂ ತಾನು ಕಳಕೊಂಡ ಮೂಲ ಶಕ್ತಿಯನ್ನು ಇಮ್ಮಡಿಯಾಗಿ ತಿರುಗಿ ಹೊಂದುವಳು.

III. **ಸುಖಸೇವನ:**—ಸುಖಸೇವನದಿಂದ ಮಧುರ ಮನೋಹರವಾದ ಈ ರಸಾಯನವು ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾದುವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವಾನಂತರದ ತೀಕ್ಷ್ಣವೇದನೆಯನ್ನು ಶೀಘ್ರದಿಂದ ನಿಲ್ಲಿಸುವದು.

ಒಬ್ಬಳು ಬಾಣಂತಿಗೆ ಎರಡು ಬಾಟ್ಲಿ ಬೇಕಾಗುವುದು. ಕ್ರಯ ಬಾಟ್ಲಿ 1ಕ್ಕೆ ರೂ. 2-0-0.

ಎಮ್. ವಿ. ಶಾಸ್ತ್ರಿ, ಆಯುರ್ವೇದ ಭೂಷಣ
ಮಂಗಳೂರು, ದ. ಕ.

ಕ್ರೌನ್ ರಬ್ಬರ್ ಸ್ಟಾಂಪ್ ಕಂಪೆನಿ

ಸ್ಥಾಪನೆ: 1926



18 ಬಲ್ಮಠ ರಸ್ತೆ, ಮಂಗಳೂರು.

ಯಾವತ್ತೂ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಆಗತ್ಯವಿರುವ ಎಲ್ಲಾ ತರದ ರಬ್ಬರ್ ಮೊಹರುಗಳೂ ಸ್ಟೈನ್ ಪೋರ್ಡು, ಪೇದೆಗಳ ಬೇಜು, ಮೊನೊಗ್ರಾಮ್ ಸೀಲು, ಇತ್ಯಾದಿಗಳನ್ನು ಪ್ರತಿಯೊಬ್ಬರ ಅಭಿರುಚಿಗೊಪ್ಪುವಂತೆ ಸುಲಭ ದರಗಳಲ್ಲಿ ಮಾಡಿಕೊಡೋಣಾಗುವುದು.

ಹೆಚ್ಚೆಟ್ಟು ಒತ್ತುವ ಸೆಟ್ಟುಗಳು ಕೂಡಾ ಸಿಗುವವು.

ಮಿಕ್ಕ ವಿಚಾರಗಳನ್ನು ನಮ್ಮ ಆಫೀಸಿಗೆ ಸ್ವತಹ ಬಂದು ಯಾ ಪತ್ರ ಮುಖೇನ ತಿಳಕೊಳ್ಳಬಹುದು.

ಮಂಗಳೂರಲ್ಲಿ ರೈಲು ಬಂಡಿಗಳ ಸಮಯ

ಗಾಡಿಗಳು	ಹೊರಡುವ ಘಂಟೆ.	ತಲಪುವ ಘಂಟೆ.
ಮಿಕ್ಸೆಡ್	ಬೆಳಿಗ್ಗೆ 6-55	ರಾತ್ರಿ 8-55
ಕಾಂಜಂಗಾಂಡ್ ಪ್ಯಾಸಂಜರ್	ಬೆಳಿಗ್ಗೆ 8-25	ಮಧ್ಯಾಹ್ನ 1-20
ಮೈಲ್	ಬೆಳಿಗ್ಗೆ 9-50	ಸಂಜೆ 4-20
ಫಾಸ್ಟ್ ಪೆಸೆಂಜರ್	ಮಧ್ಯಾಹ್ನ 12-15	ಮಧ್ಯಾಹ್ನ 2-40
ಕಾಸರಗೋಡ್ ಪ್ಯಾಸೆಂಜರ್	ಮಧ್ಯಾಹ್ನ 3-20	ಸಂಜೆ 6-15
ಶಟಲ್	ಸಂಜೆ 5-35	ಬೆಳಿಗ್ಗೆ 9-20

ಜನರಲ್ ಎಶ್ಯೂರೆನ್ಸ್ ಸೊಸೈಟಿ ಲಿಮಿಟೆಡ್.

[ಸ್ಥಾಪನೆ: **1907**]

ಅತ್ಯಧಿಕ ಬೋನಸು !

ಮರಣಾಂತ್ಯ ಪೊಲಿಸಿಗಳಮೇಲೆ ಸೇಕಡಾ 25,

ಎಂಡೋಮೆಂಟ್ ಪೊಲಿಸಿಗಳಮೇಲೆ ಸೇಕಡಾ 20,

ಬಲವಂತ ಪೊಲಿಸಿಗಳು ರೂ. **3** ಕೋಟಿ ಮಿಕ್ಕಿವೆ.

ಮೂಲಧನವು ರೂ. **75** ಲಕ್ಷ ಮಿಾಂಚಿ.

ಬಡವರಿಗೂ ಧನಿಕರಿಗೂ ಹಿತಕಾರಿಯಾದ ಎಷ್ಯೂರೆನ್ಸ್ ಯೋಜನೆಗಳು.

ಅತೀ ಲಾಭದಾಯಕವಾದ ಉದಾರ ಏಜೆನ್ಸಿ ಶರ್ತಗಳು.

ವಿಶೇಷ ಮಾಹಿತಿಗಳಿಗಾಗಿ ಈ ಕೆಳಗಣ ವಿಳಾಸಗಳಿಗೆ ಬರಕೊಳ್ಳಿರಿ—

ಆಕ್ಟಿಂಗ್ ಮೆನೇಜರ್, ಅಜ್ಮೀರ್.

ಅಥವಾ

ಮೆನೇಜರ್, 278, ಲಿಂಗ ಚೆಟ್ಟಿ ಸ್ಟ್ರೀಟ್, **ಮದ್ರಾಸ್.**

ಸುಪರಿಂಟೆಂಡೆಂಟ್, ಬಳ್ಳಾರಿ. ಆರ್ಗನೈಸರ್, ವೆಲ್ಲೂರು.

ಚೀಫ್ ಏಜೆಂಟ್ಸ್, ಮಧುರೆ, ತ್ರಿಚಿನಾಪಳ್ಳಿ.

ಸ್ಟೀಮರು ಸಮಯ

	ತಲಪುವುದು	ಹೊರಡುವುದು
ಮಂಗಳೂರು	ಗುರುವಾರ ಬೆಳಿಗ್ಗೆ ಗಂಟೆ 9 ಸೋಮವಾರ ಬೆಳಿಗ್ಗೆ ಗಂಟೆ 6	ಶನಿವಾರ ಬೆಳಿಗ್ಗೆ ಗಂಟೆ ಮಂಗಳವಾರ ಬೆಳಿಗ್ಗೆ ಗಂಟೆ
ಮಲ್ಪೆ	ಗುರುವಾರ ಬೆಳಿಗ್ಗೆ ಗಂಟೆ 3 ಆದಿತ್ಯವಾರ ಸಂಜೆ ಗಂಟೆ 6	ಶನಿವಾರ ಮಧ್ಯಾಹ್ನ 2-30 ಮಂಗಳವಾರ ಮಧ್ಯಾಹ್ನ 2-30
ಕುಂದಾಪುರ		ಶನಿವಾರ ಸಂಜೆ ಗಂಟೆ 3 ಮಂಗಳವಾರ ಮಧ್ಯಾಹ್ನ 3

ನಮ್ಮ ಉನ್ನತಿಗಾಗಿ ನಾವೇನು ಮಾಡಬೇಕು? ಇತ್ಯಾದಿ ಸಮಸ್ಯೆಗಳಿಗೆ ಸದುತ್ತರವನ್ನು ಕೊಡುವ ಪತ್ರಿಕೆ ಎಂದರೆ

ಸದ್ಧರ್ಮ ಪ್ರಚಾರಕ

ವಾ. ಚ. 1—4—0.

ಸಂಪಾದಕರು:-

ಬಿ. ಲಕ್ಷ್ಮಣದೇವ ವಿದ್ಯಾರ್ಥಿ.

ಉತ್ಕೃಷ್ಟ ಕಥೆ, ಕವನಗಳಿಂದೊಡಗೂಡಿ, ಪ್ರತಿಮಾಸದ 15ನೇ ತಾರೀಕಿಗೆ ತಪ್ಪದೆ ಹೊರಡುವುದು.

ಸದ್ಧರ್ಮ ಪ್ರಚಾರಕ, ಕಾರ್ಯಾಲಯ,
ಅಳಕೆ ರಸ್ತೆ, ಮಂಗಳೂರು.

ಪ್ರವಾಸಿ.

ಅತ್ಯುತ್ತಮವಾದ ಸಚಿತ್ರ ಕನ್ನಡ. ಮಾಸಪತ್ರಿಕೆ.

ಬೋಧಪ್ರದವಾದ ಲೇಖನಗಳು-ಮಹಾಪುರುಷರ ಜೀವನ ಚರಿತ್ರೆಗಳು ಉತ್ತಮ ಕಥೆಗಳು-ಆರ್ಥಿಕ ರಾಜಕೀಯ ವಿಚಾರಗಳು. ವೈಜ್ಞಾನಿಕ ವಿಷಯಗಳು-ಪರರಾಷ್ಟ್ರಗಳ ಸಮಸ್ಯೆಗಳು-ಗ್ರಂಥ ವಿಮರ್ಶೆ ಇವುಗಳನ್ನೊಳಗೊಂಡ ಹೊಸ ರೀತಿಯ ಮಾಸಪತ್ರಿಕೆ. ಕೈಗೆಲಸವೆಂಬ ನೂತನ ವಿಭಾಗವಿರುವ ಪತ್ರಿಕೆಯು ಇದೊಂದೇ

ವಾರ್ಷಿಕ ಚಂದಾ ರೂ. 3—8—0.

ಪ್ರವಾಸಿ ಕಾರ್ಯಾಲಯ
ಕಾಸರಗೋಡು, ದಕ್ಷಿಣಕನ್ನಡ.

THE

Vijaya Bank, Ltd.

Head Office: MANGALORE. Branch Office: Court Road, UDIPI.

ದಿ ವಿಜಯ ಬೇಂಕ್ ಲಿಮಿಟೆಡ್,

ಹೆಡ್ ಆಫೀಸು: ಮಂಗಳೂರು. ಶಾಖೆ: ಕೋರ್ಟು ರಸ್ತೆ, ಉಡ್ಪಿ

ಚಾಲ್ತಿ ಠೇವಣಾತಿಗಳು ಸಾ. ಶೆ. 2. ಸೇವಿಂಗ್ಸ ಬ್ಯಾಂಕ್ ಠೇವಣಾತಿಗಳುಸಾ. ಶೆ. 3½

ಕಾಯಂ ಠೇವಣಾತಿಗಳು 3 ತಿಂಗಳ ಬಾಬ್ತು ಸಾ. ಶೆ. 3½

6 ಮತ್ತು 9 ತಿಂಗಳ ಬಾಬ್ತು ಸಾ ಶೆ. 4. 1 ವರ್ಷದ ಬಾಬ್ತು ಸಾ. ಶೆ. 5.

2 ವರ್ಷದ ಮೇಲಿನವುಗಳ ಬಾಬ್ತು ಸಾ. ಶೆ. 5½ ದರದ ಬಡ್ಡಿಯಲ್ಲಿ ಅಂಗೀಕರಿಸಲ್ಪಡುವುವು.

ಬ್ಯಾಂಕಿಗೆ ಸಂಬಂಧಪಟ್ಟ ಎಲ್ಲಾ ತರದ ವ್ಯವಹಾರಗಳು ನಡೆಸಲ್ಪಡುತ್ತವೆ—

ಅಂದರೆ—ಪ್ರೊ ನೋಟು, ಹುಂಡಿ, ಸರಕು, ವಗೈರೆ ಮೇಲೆ ಸಾಲಕೊಡಲಾಗುತ್ತದೆ.

ಭಂಗಾರದ ಈಡಿನ ಮೇಲೆ ಈ ಕೆಳಗಿನ ದರದ ಬಡ್ಡಿಯಲ್ಲಿ ಸಾಲ ದೊರೆಯುವುದು.

ರೂ. 1ರಿಂದ 99ರ ವರೆಗೆ ಸಾ. ಶೆ. 9. 100ರಿಂದ 250ರ ವರೆಗೆ ಸಾ. ಶೆ. 8. ಮತ್ತು 251ರಿಂದ ಮೇಲ್ಪಟ್ಟ ಸಾಲಗಳಿಗೆ ಸಾ. ಶೆ. 7.

ವಿಶೇಷ ಸೂಚನೆ:—ಬಡವರಿಗೆ ಸಹಾಯವಾಗುವಂತೆ ಕಡಿಮೆಯೆಂದರೆ ರೂಪಾಯಿ 10/ ಸಹಾ ಸಾಲಕೊಡಲಾಗುತ್ತದೆ. ಶಾಲುಗಳು ದೊರೆಯುತ್ತವೆ.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಕೊಳ್ಳಿರಿ.

A. B. Shetty, ಚೆಯರ್‌ಮೇನ್. **K. Gopalakrishna Shetty.** ಸೆಕ್ರೆಟರಿ.

ವಿಜಯ ಬೇಂಕ್ ಲಿಮಿಟೆಡ್, ಕದ್ರಿರೋಡ್, ಮಂಗಳೂರು.

ಸ್ವದೇಶಿ ಕೈಗಾರಿಕೆಯನ್ನು ಪ್ರೋತ್ಸಾಹಿಸಿರಿ.

ಸ್ವದೇಶಿ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗೆಬಗೆಯ ಬಣ್ಣದಲ್ಲಿ, ಅಂಚಿನಲ್ಲಿ, ನಮೂನೆಯಲ್ಲಿ ದೊರೆಯುತ್ತವೆ.

ಶುದ್ಧ ಖಾದಿ ಮತ್ತು ಮಿಲ್‌ಬಟ್ಟೆಗಳೂ ವಿಕ್ರಯಿಸಲ್ಪಡುತ್ತವೆ.

P. A. PAI, BROS.

ಪಿ. ಎ. ಪೈ ಬ್ರದರ್ಸ್,
ಆಸ್ಪತ್ರೆ ಎದುರು, ಉಡುಪಿ.

ಕಸಿಗಿಡಗಳು.

ಸಪೋಡಿಲ್ಲ (ಚಿಕ್ಕು)

ಈ ಮರವು ನಮ್ಮ ಜಿಲ್ಲೆಯ ಎಲ್ಲಾ ಭಾಗದಲ್ಲಿಯೂ ಸರಿಯಾಗಿ ಬೆಳೆದು, 3ನೇ ವರ್ಷದಲ್ಲಿಯೇ ತಪ್ಪದೆ ಫಲಬಿಡುತ್ತದೆ ಒಂದು ಮರದಲ್ಲಿ ಸಾವಿರಗಟ್ಟಲೆ ಹಣ್ಣಾಗುವುದು. ಒಂದು ಎಕ್ರೆಯಲ್ಲಿ ವರ್ಷಕ್ಕೆ ರೂ. ಸಾವಿರದ ಮೇಲೆ ಉತ್ಪತ್ತಿಯಾಗುವದು. ಹಣ್ಣು ಅತಿ ಮಧುರ, ಒಳ್ಳೇ ರುಚಿ, ಕಾಹಿಲೆಯವರಿಗೆ ಉತ್ತಮ ಆಹಾರ ಅದರಲ್ಲಿ ಕಬ್ಬಿಣ ಸತ್ವ ಮತ್ತು ವಿಟಮಿನ್ ತುಂಬ ಇರುವದರಿಂದ ರಕ್ತವನ್ನು ವೃದ್ಧಿಸುವುದು ಮರದಲ್ಲಿ ಯಾವಾಗಲೂ ಹಣ್ಣು ಇರುವುದು, ಎಲ್ಲ ತೋಟದಲ್ಲಿಯೂ ಇರತಕ್ಕದ್ದು. ಗಿಡವೊಂದರ ಕ್ರಯ ರೂ. 1-0-0 ಮಾತ್ರ. ನಮ್ಮಲ್ಲಿ ಉತ್ತಮ ಮಾವ ಮತ್ತು ಇತರ ಕಸಿ ಗಿಡಗಳು ಕೂಡ ದೊರೆಯುತ್ತವೆ. ಕ್ರಯಪಟ್ಟಿಗೆ ಕೆಳಗಣ ವಿಳಾಸಕ್ಕೆ ಬರೆಯುವುದು.

ಮಂಗಳೂರಲ್ಲಿ ವಿಜಯ ಬ್ಯಾಂಕಿನಲ್ಲಿಯೂ ಸ್ವಾಂಡರ್ಡ ಸ್ಟೋರ್ಸ, ಹಂಪನಕಟ್ಟೆಯಲ್ಲಿಯೂ, ಸೋಮಯಾಜಿ ಎಂಡ್ ಕೊ, ರಥಬೀದಿಯಲ್ಲಿಯೂ ಮತ್ತು ಜಿಲ್ಲೆಯ ಎಲ್ಲಾ ಎಗ್ರಿಕಲ್ಚರಲ್ ಡೆಮೋನ್ ಸ್ಟ್ರೇಟರಲ್ಲಿಯೂ ಮೇಲಿನ ಎಲ್ಲಾ ಗಿಡಗಳು ದೊರೆಯುತ್ತವೆ.

ಕೆ. ಎಮ್. ಶೆಟ್ಟಿ, ಕೆನರಾ ನರ್ಸರಿ,
ಪೋಸ್ಟ್ ಕಾಪು, ದ ಕನ್ನಡ

ಕಳೆದ ಚುನಾವಣೆಯ ಪಾಠ

ಎಸೆಂಬ್ಲಿ ಮತ್ತು ಕೌನ್ಸಿಲು ಚುನಾವಣೆಗಳು ಮುಗಿದವು. ಹೆಚ್ಚಿನ ಪ್ರಾಂತಗಳಲ್ಲಿ ಕಾಂಗ್ರೆಸಿಗೆ ಪ್ರಚಂಡ ಜಯವು ಸಿಕ್ಕಿತು. ಕಾಂಗ್ರೆಸ್ ಕಡೆ ಉಮೇದ್ವಾರರನೇಕರು ಅತ್ಯಧಿಕವಾಗಿ ಮತಗಳನ್ನು ಪಡೆದು ವಿಜಯಿಗಳಾದರು. ಕಾಂಗ್ರೆಸನ್ನು ವಿರೋಧಿಸಿದ ಮಂತ್ರಿಗಳು ಮೊದಲಾದ ಮುಖ್ಯಸ್ಥರನೇಕರು ಸೋತು ಹೋದರು. ನಮ್ಮ ಮದರಾಸ್ ಸಂಸ್ಥಾನದಲ್ಲಂತೂ ಕಾಂಗ್ರೆಸಿಗೆ ಬಹು ಹೆಚ್ಚಿನ ಸ್ಥಾನಗಳು ದೊರಕಿವೆ.

ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಾಂಗ್ರೆಸಿಗೆ ಸಂಪೂರ್ಣ ಜಯ ಸಿಕ್ಕಿತು. ಒಟ್ಟಾರೆ ಮದರಾಸ್ ಸಂಸ್ಥಾನದಲ್ಲಿ ಜಸ್ಟಿಸ್ ಪಾರ್ಟಿಯ ಬಲವು ಸಂಪೂರ್ಣವಾಗಿ ನಾಶವಾಯಿತೆಂದು ಹೇಳುವುದಕ್ಕೆ ಯಾವ ಸಂಶಯವೂ ಇಲ್ಲ.

ಕಳೆದ ಚುನಾವಣೆಯ ಒಂದು ವಿಶೇಷವೇನೆಂದರೆ—ಕಾಂಗ್ರೆಸ್ ಕಡೆಯ ಉಮೇದ್ವಾರರಲ್ಲಿ ಅನೇಕರು ಧನ ಬಲವಿಲ್ಲದವರು. ದೇಶಸೇವೆಯಿಂದ ಗಳಿಸಲ್ಪಟ್ಟ ಜನರ ಪ್ರೀತಿಯೇ ಅವರ ಧನವಾಗಿತ್ತು. ಕಾಂಗ್ರೆಸನ್ನು ವಿರೋಧಿಸಿದ ಉಮೇದ್ವಾರರಿಗೆ ಧನ ಬಲವೂ ಅಧಿಕಾರ ಬಲವೂ ಇತ್ತು. ಅವರಲ್ಲಿ ಅನೇಕರು ದೊಡ್ಡ ಶ್ರೀಮಂತರು ಮತ್ತು ದೊಡ್ಡ ದೊಡ್ಡ ಜಮೀನುದಾರರು ಅಥವಾ ಸಾಹುಕಾರರು. ಆದರೂ ಅವರ ಎದುರಿಗೆ ನಿಂತ ಕಾಂಗ್ರೆಸ್ ಉಮೇದ್ವಾರರು ಜಯಿಸಿದರು. ಎಷ್ಟು ಧನವಿದ್ದರೂ ಪ್ರಯೋಜನವೇನು? ವೋಟಿನ ಪೆಟ್ಟಿಗೆಗಳನ್ನು ಬಡವರ ಓಟುಗಳಿಂದ ತುಂಬಬೇಕೇ ಹೊರತು ಶ್ರೀಮಂತರ ಕೈಯಲ್ಲಿರುವ ನಾಣ್ಯಗಳಿಂದ ಅಥವಾ ಕರೆನ್ಸಿ ನೋಟುಗಳಿಂದ ತುಂಬಿಸಲು ಸಾಧ್ಯವಿಲ್ಲ. ಎಲ್ಲಾ ಜನರ ಎಲ್ಲಾ ಜಾತಿ ಮತದವರ ಹಿತವನ್ನು ಸಾಧಿಸುವ ನಮ್ಮ ದೇಶದ ಏಕಮಾತ್ರ ರಾಜಕೀಯ ಸಂಸ್ಥೆಯಾದ ಕಾಂಗ್ರೆಸಿನಲ್ಲಿ ಜನರಿಗೆ ಸಂಪೂರ್ಣವಾಗಿ ವಿಶ್ವಾಸವಿದೆ. ಜಸ್ಟಿಸ್ ಮೊದಲಾದ ತಮ್ಮ ಸ್ವಾರ್ಥವನ್ನು ಸಾಧಿಸುವ ಪಕ್ಷಗಳಲ್ಲಿ ಜನರಿಗೆ ವಿಶ್ವಾಸವಿಲ್ಲವೆಂಬುದು ಈ ಚುನಾವಣೆಯ ಫಲಿತಾಂಶದಿಂದ ಇದೀ ಭೂಲೋಕಕ್ಕೆ ವ್ಯಕ್ತಪಡಿಸಿದ ಹಾಗಾಯಿತು.

ನಮ್ಮ ಜಿಲ್ಲೆಯ ಚುನಾವಣೆಯ ವಿಷಯ ಸ್ವಲ್ಪ ವಿವರಿಸೋಣ. ಜಸ್ಟಿಸ್ ಪಾರ್ಟಿಯ ಅಥವಾ ಸ್ವತಂತ್ರ ಪಕ್ಷದ ಕಡೆಯಿಂದ ನಿಂತಿದ್ದ ಉಮೇದ್ವಾರರು ತಮ್ಮ ಅತ್ಯಂತ ಮಿತ್ರರು ಅಥವಾ ಸಂಬಂಧಿಕರು ಅಥವಾ ಜಾತಿಯವರೆಂಬ ಕಾರಣದಿಂದ ಅಥವಾ ತಮ್ಮ ಸ್ವಾರ್ಥಸಾಧನೆಗೋಸ್ಕರ ಸಮಾಜದ ಮುಖಂಡರೆನ್ನಿಸಿಕೊಳ್ಳುವ ಕೆಲವರು ದೇಶದ ಹಿತವನ್ನು ಬಲಿಕೊಡಲಿಕ್ಕೆ ಸಿದ್ಧರಾಗಿ ಜಸ್ಟಿಸ್ ಪಾರ್ಟಿ ಮೊದಲಾದ ಪಕ್ಷಗಳ ಕಡೆಯಿಂದ ರಾತ್ರಿ ಹಗಲು ಕೆಲಸಮಾಡಿದರು. ತಾವು ತಮ್ಮ ಸಮಾಜದ ಮುಖಂಡರು, ತಾವು ಚುನಾವಣೆಯ ರಂಗಕ್ಕಿಳಿದ ಕೂಡಲೇ ತಮ್ಮ ಸಮಾಜದವರು ತಮ್ಮ ಹಿಂದೆಬಿಡದೆ ಒದಗುವರು ಎಂದು ಇವರು ತಪ್ಪು ಅಭಿಪ್ರಾಯಪಟ್ಟಿದ್ದರು. ತಮ್ಮ ಸ್ವಂತ ಬೆನ್ನೆಲುಬು (Back-bone) ಇಲ್ಲದ ಕೆಲವು ಮಂದಿ ವಿದ್ಯಾವಂತರೆನ್ನಿಸಿಕೊಳ್ಳುವವರು ಮಾತ್ರ ಇವರ ಬಲೆಗೆ ಬಿದ್ದರು ಆದರೆ ಸಾಮಾನ್ಯ ಜನತೆಯು ಇವರ ಮುಖಂಡತನವನ್ನು ಸ್ವೀಕರಿಸಿ ದೇಶದ್ರೋಹ ಮಾಡಲಿಕ್ಕೆ ತಯಾರಿಲ್ಲವೆಂಬುದು ಕಳೆದ ಚುನಾವಣೆಯ ಫಲಿತಾಂಶದಿಂದ ವ್ಯಕ್ತವಾಯಿತು. ಈ ಮುಖಂಡರಲ್ಲಿ ಸ್ವಲ್ಪವಾದರೂ ರಾಷ್ಟ್ರೀಯತೆಯು ಅಥವಾ ಸ್ವಾಭಿಮಾನವು ಇದ್ದರೆ ಅವರು ಕಾಂಗ್ರೆಸ್ ಕಡೆ ಉಮೇದ್ವಾರರಿಗೆ ವಿರೋಧವಾಗಿ ಕೆಲಸ ಮಾಡುತ್ತಿರಲಿಲ್ಲ. ಈ ಮಹನೀಯರ ಮನೋವೃತ್ತಿಯಲ್ಲಿ ಗುಲಾಮಗಿರಿಯೆಂಬುದು ಅಂಟಿಕೊಂಡಿದೆ ಎಂದು ಸಂಶಯಪಡಬೇಕಾಗಿದೆ.

ಧಾರ್ಮಿಕ ವಿಷಯಗಳನ್ನು ಪ್ರಚಾರ ಮಾಡುವುದಕ್ಕೋಸ್ಕರ ಮಠಗಳು ನಮ್ಮ ಪೂರ್ವಿಕರಿಂದ ಸ್ಥಾಪಿಸಲ್ಪಟ್ಟವು ಆದರೆ ಈಗಿನ ಅನೇಕ ಮಠಗಳು ಅಧರ್ಮದ ತವರುಮನೆಗಳಾಗಿವೆ. ಅವುಗಳಲ್ಲಿ ಲೌಕಿಕ ವಿಚಾರಗಳು ಹೆಚ್ಚಿಗೆ, ಧಾರ್ಮಿಕ ವಿಚಾರಗಳು ಕಡಿಮೆ. ಮಠದವರು ಕಳೆದ ಚುನಾವಣೆಯಲ್ಲಿ ತಟಸ್ಥರಾಗಿಯಾದರೂ ಇರಬಹುದಿತ್ತು. ಆದರೆ ಕೆಲವು ಮಠದವರು ತಮ್ಮ ಸ್ವಾರ್ಥಕ್ಕೋಸ್ಕರ ಅಥವಾ ದೊಡ್ಡ ಮುಂಡಾಸಿನವರ ದಾಕ್ಷಿಣ್ಯಕ್ಕೋಸ್ಕರ ಇಡೀ ದೇಶಕ್ಕೆ ಸಂಬಂಧಪಟ್ಟ ಪ್ರಶ್ನೆಯಾದ ಈ ಸಾರಿಯ ಚುನಾವಣೆಯಲ್ಲಿ ಕಾಂಗ್ರೆಸಿಗೆ ವಿರೋಧವಾಗಿ ಬಹಿರಂಗವಾಗಿ ರಾತ್ರಿ ಹಗಲು ಕೆಲಸಮಾಡಿ ತಮ್ಮ ಕಡೆಗೆ ಈ ವರೆಗೆ ಸ್ವಲ್ಪ ಉಳಿದಿದ್ದ ಜನರ ಮತ್ತು ತಮ್ಮ ಶಿಷ್ಯರ ಅಭಿಮಾನವನ್ನೂ ಮರ್ಯಾದೆಯನ್ನೂ ಕಳೆದುಕೊಂಡು ಜಸ್ಟಿಸ್ ಪಾರ್ಟಿ ಮೊದಲಾದ ಸಂಸ್ಥೆಗಳ ಹಾಗೆ ದೇಶದ ಶತ್ರುಗಳು ಮತ್ತು ದೇಶದ ಏಳಿಗೆಗೆ ವಿಘ್ನ ತರುವ ಸಂಸ್ಥೆಗಳು ಎಂದೆನ್ನಿಸಿಕೊಂಡರು.

ಕಾಂಗ್ರೆಸಿಗೆ ವಿರೋಧವಾಗಿ ಕೆಲಸ ಮಾಡಿದವರನ್ನು ವ್ಯಕ್ತಿಶಃ ಟೀಕಿಸುವುದು ಕಾಂಗ್ರೆಸ್ ಕೆಲಸಗಾರರ ಧರ್ಮವಲ್ಲ. ಕಾಂಗ್ರೆಸೆಂಬುದು ದೊಡ್ಡ ಪ್ರವಾಹ. ಅದಕ್ಕೆ ವಿರೋಧವಾಗಿ ಹೋಗುವುದು ಎಷ್ಟು ದೊಡ್ಡ ಮನುಷ್ಯನಿಂದಲೂ ಸಾಧ್ಯವಿಲ್ಲವೆಂಬುದು ಕಾಂಗ್ರೆಸಿಗೆ ವಿರೋಧವಾಗಿ ಕೆಲಸಮಾಡಿದವರಿಗೆ ಈಗ ತಿಳಿದು ತಮ್ಮ ವರ್ತನೆಯಿಂದ ಅವರಿಗೆ ಅಂತರಂಗದಲ್ಲಿ ನಾಚಿಕೆಯೂ ಪಶ್ಚಾತ್ತಾಪವೂ ಆಗದೆ ಇರಲಿಕ್ಕಿಲ್ಲ. ಕಾಂಗ್ರೆಸ್ ಕೆಲಸಗಾರರು ಅವರ ಮೇಲೆ ದಯೆ ತೋರಿಸಬೇಕೇ ಹೊರತು ಅವರನ್ನು ದ್ವೇಷಿಸಕೂಡದು. ನಮ್ಮ ಬಂಧುಗಳಾದ ಅವರಿಗೆ ಇನ್ನು ಮುಂದಕ್ಕಾದರೂ ಒಳ್ಳೇ ಬುದ್ಧಿ ಬಂದೀತೆಂದು ನೆನೆಸಬೇಕು. ಕಾಂಗ್ರೆಸ್ ಕಡೆ ಕೆಲಸಗಾರರು ತಮ್ಮ ನಡತೆಯಿಂದ ಅವರನ್ನು ಕಾಂಗ್ರೆಸ್ ಕಡೆಗೆ ಒಲಿಯುವಂತೆ ಪರಿವರ್ತನೆ ಮಾಡಬೇಕು. ಜಾತೀಯತೆಯು ಸಂಕುಚಿತತೆಯು ನಮ್ಮ ಜಿಲ್ಲೆಯಲ್ಲಿ ಫಲಕಾರಿಯಾಗಲಿಲ್ಲವೆಂಬುದು ಕಳೆದ ಚುನಾವಣೆಯಿಂದ ತಿಳಿಯಿತು. ಇನ್ನು ಮುಂದಕ್ಕೂ ಜಾತೀಯತೆಯ ಸಂಕುಚಿತತೆಯನ್ನು ನಮ್ಮ ಜಿಲ್ಲೆಯಿಂದ ಬೇರು ಸಮೇತ ಕಿತ್ತು ತೆಗೆದು ಸಂಪೂರ್ಣವಾಗಿ ನಾಶಮಾಡಿ ಎಲ್ಲಾ ಜಾತಿಯವರೂ ಮತದವರೂ ಐಕ್ಯಮತ್ಯದಿಂದ ಕಾಂಗ್ರೆಸಿನ ಧ್ವಜದಡಿಯಲ್ಲಿ ಸಂತೋಷದಿಂದಿರಬೇಕು.

ಎಂ. ಎಸ್. ಅಧಿಕಾರಿ.

: ಡಂಗುರಕ :

ಡೂಂ, ಡೂಂ, ಡೂಂ! ಡೊಂ, ಡೂಂ! ಡೂಂ!! ದಕ್ಷಿಣಕನ್ನಡದಾಗೆ, ಜಸ್ಟಿಸ್ ಪಾರ್ಟಿಯವರು ಸೋತು ಹೋಗಿ ಕೊಂಗ್ರೆಸ್ ಪಾರ್ಟಿಯವರು ಸಾವಿರಗಟ್ಲೇ ವೋಟುಗಳಿಂದ ಪ್ರಚಂಡ ವಿಜಯ ಹೊಂದಿರುವರು, ಎಂಬ ಸಂಗತಿಯು ಎಲ್ಲರೂ ಕೇಳಿ ಹುರುಪುಗೊಂಡಿರಬಹುದು. ಹುರ್ಪುಗೊಳ್ಳುವುದು ಸರಿ, ಆದರೆ ಇದಕ್ಕೆ ಸರಿಯಾಗಿ ರಾಷ್ಟ್ರಪತಿ ಪುರುಷ ಸಿಂಹ ಪಂಡಿತ ಜವಾಹಿರಲಾಲ ನೇಹರೂರವರು ತಿಳಿಯಪಡಿಸಿದಂತೆ, ತಾ ೧-೪-೧೯೩೭ನೇ ಗುರುವಾರ ದಿನ ಸಂಪೂರ್ಣ ಹರಿತಾಳವನ್ನಾಚರಿಸ ಬೇಕಾಗಿ ವಿನಂತಿ ಡೂಂ ಡೂಂ.

ಈ ಕೊಂಗ್ರೆಸ್ ಎಂಬ ಬೇಟೆಗಾರರಿಂದ ಜಸ್ಟಿಸ್ ಎಂಬ ಹೆಬ್ಬುಲಿ ಕೊಲ್ಲಲ್ಪಟ್ಟಿತು. ಡೂಂ! ಡೂಂ! ಈಗ ಬಂದೈತೆ ಅಧಿಕಾರ ಸ್ವೀಕಾರದ ಗಡಿಬಿಡಿ. ಜಸ್ಟೀಸ್‌ನವರು ಪಡುತ್ತಿರುವ ಚಡಪಡೀ ಡೂಂ! ಡೂಂ!!

ಹೂಂ ಅಂತೀನಿ ಬುದ್ಧಿ, ಅಲ್ಲಾ ಈ ಕೊಂಗ್ರೆಸ್ ಹುಲಿಯಾಳುಗಳನ್ನು ಅವಮಾನಗೊಳಿಸ ಬಂದವರ ಪಾಡು ನೋಡಿದ್ರಾ ಬುದ್ಧಿ? ಕೆಲವೆಡೆಗಳಲ್ಲಿ ದೊಡ್ಡ ದೊಡ್ಡ ಅತಿರಥ ಮಹಾರಥರು ಪ್ರಚಂಡ ಬಿರುಗಾಳಿ ಬಂದು ದೊಡ್ಡ ದೊಡ್ಡ ಮರಗಳು ಉರುಳಿ ಬಿದ್ದುವಂತೆ ತಮ್ಮ ಪದಚ್ಯುತರಾಗಿರುವ ಸಂಗ್ತಿಯನ್ನು ಕೇಳಿದೆ ಅಲ್ವೆ? ಆದರೆ ಇಲ್ಲಿ (ದಕ್ಷಿಣ ಕನ್ನಡ) ಕಣ್ಣಾರೆ ಕಂಡೆ

ಅಲ್ಲಾ ಬುದ್ಧಿ, ಕೇಳಿದ್ರ ಬೊಬ್ಬುಳಿ ಮಹಾರಾಜ್ಯ ಸಂಗ್ತಿ? ಮೆರೆಸಿದರಂತೆ ಕೆಂಪು ಟೊಪ್ಪಿಗಳನ್ನು' ಹೊಡಿಸಿದರಂತೆ ಹಳದಿ ಟೊಪ್ಪಿಯವರನ್ನು! ಕೆಡಿಸಿದರಂತೆ ಓಟಿನ ಪೆಟ್ಟಿಗೆಯ ಸೀಲನ್ನು ಇಷ್ಟೆಲ್ಲಾ ಮಾಡಿಯಾದ್ರೂ ತಾವು ಜಯಶೀಲರಾದ್ರೇನು? ಹೂಂ! ಹೂಂ' ಅಲ್ಲು! ನಮ್ಮ, ಜವಾಹಿರಲಾಲ ಬುದ್ಧಿಯವ್ರ ಇದ್ಕಿಗೆ ಇವ್ರ ಆವ?

ಅಲ್ಲಾ ಈ ಜಸ್ಟೀಸಿನವರ ದುಡ್ಡಿನ ಹೆಮ್ಮೆಯೇನು ಅಂದೀನಿ? ಇಂದಿದ್ದ ನಾಳೆಗೆ ಉಳ್ಯೋದಿಲ್ಲ, ಅಂತ ಇವ್ರು ಇಂಥಾದುಷ್ಕೃತ್ಯ ಮಾಡಿದ್ರೋ ಅಂತೀನಿ? ಅಲ್ಲಾ, ಇವ್ರೀಗೆ ನಾಳೆ ನಮ್ಮವ್ರು, ಮುಖನೋಡ್ಬೇಕು ಎಂಬ ಬೆಯನೇ ಇಲ್ಲವೆ ಬುದ್ಧಿ? ಇದ್ದಿದ್ರೆ, ಹಿಂಗೆ ಮಾಡುತ್ತಿದ್ರೆ ಅಲ್ಲವೆ? ಹೂಂ! ಇವ್ರು ಜಂಭ ಅಂತೀನಿ

ಇಷ್ಟೇಕು ಬುದ್ಧಿ ಇಷ್ಟೇಕು. ಇಂಥ ಪ್ರಕೋದಾ ನಮ್ಮೂರಾಗೆ ಇರ್‌ಬೇಕು ಯಾಕೆ ಅಂತೀರಾ?

ಇಂಥವರು ಇಲ್‌ದಿದ್ರೆ ಬೇರೆಯವರಿಗೆ ನಮ್ಮ ದೊಡ್ಡಸ್ತನ ತಿಳಿಸುವವ್ರು ಯಾರು ಬುದ್ಧಿ? ಹೌದು ಬುದ್ಧಿ ನಮ್ಮ ಬಡ್ತನ ಹೇಳಿದ್ರೆ ಆ ಲಜ್ಜೀ ನಮಗೆ ಅಲ್ವೆ? ಅದಕ್ಕೋಸ್ಕರ ಬುದ್ಧಿ! ನಮ್ಮ ಕೊಂಗ್ರೆಸಿನಾಗೆ ಅಲ್ಲದಿದ್ರೆ ಬೇರೆಯಾಗಿಯಾದ್ರೂ ಬೇಕು. ನಮ್ಮ ಕೊಂಗ್ರೆಸು ನಾಲ್ಕಾಣೆ ಇರದಂತೆ ಹೇಳಕ್ಕಾದ್ರೂ ಬೇಡ್ವೆ?

ಹೌದು ಬುದ್ಧೀ ನಮ್ಮ ಕೊಂಗೆಸ್ಸು ನಾಲ್ಕಾಣೆದ್ದೇ ಸರಿ. ಆದ್ರೆ ನಾಲ್ಕಾಣೆ ಕೊಂಗ್ರೆಸಿಗೆ ಸೇರೊಕ್ಕೆ ಇವ್ರಿಗೆ ಯೋಗ್ಯತೆ ಮತ್ತು ಪೂರ್ವಾರ್ಜಿತ ಬೇಕಲ್ಲವೇ? ಇವ್ರು ಸೇರ್ಬೆಂದ್ರೆ ಇವ್ರನ್ನೂ ತಕ್ಕೊಳ್ತದ್ರು. ಆದ್ರೆ, ಮಾರುದ್ದ ಬಿರುದುಗಳಿವೆಯಲ್ಲಾ? ಅವುಗಳನ್ನ ತ್ಯಜಿಸಿ ಬರಬೇಕು ಬುದ್ಧಿ. ಹಾಂಗೆ ಮಾಡೋದಿದ್ರೆ ನಮ್ಮ ರಾಷ್ಟ್ರಪತಿ ಬುದ್ಧಿಯನ್ನಿಗೆ, ಸಾಹಾಕ್ತೇನೆ ಬದ್ಧಿ ದಮ್ಮಯ್ಯ.

ಅಲ್ಲಾ ಜಸ್ಟಿಸ್, ಜಸ್ಟಿಸ್ ಅಂತಾರಲ್ಲ? ನಾನು ಕಾರ್ಕಳ ತಾಲೋಕಿನ ಒಂದು ಹಳ್ಳಿಯ ವಿಶೇಷ ವರ್ತಮಾನ ಕೇಳಿದೆ ಬುದ್ಧಿ. ಅಲ್ಲಾ ಡಾಕ್ಟರ್ ಇದ್ದಾರಲ್ಲಾ? ತಿಳಿಯಲಿಲ್ಲವೆ? ಹಳ್ಳಿಯ ಡಾಕ್ಟರರು? ಇವ್ರು ಬುದ್ದಿ ತಾ. ೧೫-೨-೩೭ರ ತನಕ ಸುಮ್ಮನಿದ್ರು ಆ ದಿವ್ಸ ಎಲ್ಲಿಗೋ ಹೋಗಿದ್ರೋ ಏನೋ? ಬಂದದ್ದೇ ತಡ, ಬೀಸಿತು ಜಸ್ಟೀಸ್‌ಗಾಳಿ ಆ ಗ್ರಾಮದಾಗೆ ಸಿಕ್ಕಿದವ್ರ ಹತ್ರ ನಂಗೆ ೨೫ ಓಟರ್ಸರನ್ನಾದರೂ, ಒಟ್ಟುಮಾಡಿಕೊಡಬೇಕೆಂದಾಯಿತು. ತಕೊಳ್ಳಿ ಇಷ್ಟರತನಕ ಒಳ್ಳೇ ಪ್ರೀತಿಯಿಂದ ಇದ್ದವ್ರು ನಾವು ಏನೋ ಮನಸಾಗೆ ಮಾಡಿದ್ದೆ ವಂದು ಅಲ್ಲದೆ ನಿಮಗೆ ಒಂದು ಓಟುಕೊಡಾ ಕೊಡ್ಲಿಕ್ಕೆ ಸಾಧ್ಯವಿಲ್ಲ ಅಂದ್ರಂತೆ. ಹಾಗಾದ್ರೆ ನಮಗೂ ನಿಮಗೂ ಹಾಗಾಗೆ ಆಗ್ತದೆ ಅಂತ ಬಂತು, ಜವಾಬು. ಇವ್ರು ಹೆದ್ರುವವ್ರೇ? ನೀವು ಇವತ್ತೇ ಹೊರ್ಟ್ರೂ ಹೋದುರೂನು ಪರ್ವಾ ಇಲ್ಲಾ ಅಂತೂ ನಿಮಗೆ ಒಂದು ಓಟುನೂ ಕೊಡ್ಲಿಕ್ಕೇನೆ ಸಾಧ್ಯವಿಲ್ಲಾ, ಅಂತ ಅಂದ್ರಂತೆ. ದಾರಿಯಲ್ಲಿ ಸಿಕ್ಕಿದವ್ರಿಗೆ ಕೇಳ್ಲಿಕ್ಕೇನೆ ಶುರುಮಾಡಿ ಬಿಟ್ರು ಅವರ ಉತ್ತರಾನು ಇದೇ ಬಂತಂತೆ ಬುದ್ಧಿ ಅಂತೂ, ೧೫-೨-೩೭ನೇ ಓಟಿನ ದಿವ್ಸ ಏನೋ ಅಲ್ಪ ಸ್ವಲ್ಪ ಓಟು ಜಸ್ಟಿಸಿಗೆ ಬಿದ್ದಿವೆಯಂತೆ. ಅದೂ ಕೂಡಾ ಮುದುಕ್ರು ಇಂತವ್ರೇ ತಪ್ಪಿ ಗಡಿಬಿಡಿಯೊಳಗೆ ಕೆಂಪು ಪೆಟ್ಟಿಗೆಗೆ ಹಾಕಿದ್ರಂತೆ. ಈಗ ಪುನಃ ಪ್ರೋಟೆಸ್ಟ್ ಮಾಡೋಕೆ ಹೋಗ್ತಾರಂತೆ. ಯಾಕೆ ಇವ್ರು ಹೀಗೆ ಮಾಡಿದ್ರೋ? ಅಂತೀನಿ

ಇದು ಒಂದು ಸಣ್ಣ ಕಥೆ ಆಯ್ತು ಬುದ್ಧಿ, ಇನ್ನೂ ಎಷ್ಟೋ ಎಷ್ಟದೆ. ಈ ಜಸ್ಟಿಸಿನವರ ಕಾದಂಬರಿಯನ್ನೆಲ್ಲಾ ಬರಿಯಬೇಕೆಂತ ಹೋದ್ರೆ, ಯಾರಾದ್ರೂ ನನ್ನ ಹೆಸ್ರಾಗೆ ಮೂರು ಕಾರ್ಖಾನೆ ಬಿಟ್ಟು ಬಿಟ್ಟದ್ರೆ ಎಲ್ಲನೂ ಬರಿತೇನೆ ಕಾರ್ಖಾನೆಗಳು ಯಾವುವೆಂತ ತಿಳಿಯಿತೇ? ಒಂದು ಕಾಗ್ದದ ಕಾರ್ಖಾನೆ. ಎರಡ್ನೇದು ಪೇಂಡ್ಸು ಮತ್ತು ಸ್ಟೀಲ್ ಕಾರ್ಖಾನೆ. ಮತ್ತೊಂದು ಶಾಯಿ (ಮಸಿ) ಕಾರ್ಖಾನೆ. ಇಷ್ಟು ಸಾಕು ಬುದ್ಧಿ.

ಇನ್ನು ನಾವೆಲ್ಲಾ ನಮ್ಮ ರಾಷ್ಟ್ರಪತಿ ಬುದ್ಧಿಯವ್ರು ಹೇಳಿದಂತೆ ವರ್ತಿಸಿದ್ರೆ ಸರಿ. ನಾನಿನ್ನೂ ಸುಂದರಿಸುತ್ತೇನೆ ಬುದ್ಧಿ ನಮಸ್ಕಾರ ಡೂಂ! ಡೂಂ!

ಕುಂದಾಪುರ, ಕಾರ್ಕಳ ಮತ್ತು ಉಡುಪಿ ತಾಲೂಕುಗಳ ಮತದಾರರಿಗೆ ಅಭಿವಂದನೆಗಳು.

ಪ್ರಿಯ ಮಹಾಶಯರೇ,

ಕಾಂಗ್ರೆಸ್ ಸಂಸ್ಥೆಯ ಮೇಲೆ ಅಭಿಮಾನವಿಟ್ಟು ಅಖಿಲ ಭಾರತ ಕಾಂಗ್ರೆಸ್ ಸಂಸ್ಥೆಯವರು ನಮ್ಮ ಜಿಲ್ಲೆಗೆ ಪ್ರಥಮತಃ ಹರಿಜನರ ಪರವಾಗಿ ಇದ್ದ ಮದ್ರಾಸ್ ಎಸೆಂಬ್ಲಿ ಸ್ಥಾನಕ್ಕೆ ನನ್ನನ್ನು ನೇಮಿಸಿದಾಗ ತಾವೆಲ್ಲರೂ ಕಾಂಗ್ರೆಸ್ ಸಂಸ್ಥೆಯ ಮೇಲೆ ಪ್ರೀತಿ ಇಟ್ಟು ನಾನು ಚುನಾಯಿಸಿ ಬರುವಂತೆ ಸಹಾಯ ಮಾಡಿದ್ದಕ್ಕಾಗಿ ಮತದಾರರಿಗೂ, ಎಲ್ಲಾ ಮಹಾ ಜನರಿಗೂ ಈ ಮೂರು ತಾಲೂಕುಗಳಲ್ಲಿನ ಕೊಂಗ್ರೆಸ್ ಕೆಲಸಗಾರರಿಗೂ ಈ ಮೂಲಕ ನನ್ನ ಕೃತಜ್ಞತೆಯನ್ನು ಸಮರ್ಪಿಸುತ್ತೇನೆ.

ಕೆ. ಈಶ್ವರ.

೬ ಪ್ರಾಂತಗಳಲ್ಲಿ ಕಾಂಗ್ರೆಸ್ಸಿಗೆ ಬಹುಪಕ್ಷ

ಮದ್ರಾಸ್ ಪ್ರಾಂತ್ಯಕ್ಕೆ ಅಗ್ರಗಣ್ಯ ಸ್ಥಾನ—ಜಸ್ಟಿಸ್ ಪಕ್ಷದ ನಿರ್ನಾಮ. ಪೀಪ್ಲ್ಸ್ ಪಾರ್ಟಿಗೆ ಒಂದೇ ಒಂದು ಸ್ಥಾನ.

ಈ ಸಲದ ಚುನಾವಣೆಯಲ್ಲಿ ಕಾಂಗ್ರೆಸಿಗೆ ಆ ಪ್ರಾಂತದ ಎಸೆಂಬ್ಲಿಗಳಲ್ಲಿ ಸಂಪೂರ್ಣ ಬಹುಪಕ್ಷವು ದೊರೆತಿರುವುದು. ಮದ್ರಾಸ್ ಎಸೆಂಬ್ಲಿಯ 215 ಸ್ಥಾನಗಳಲ್ಲಿ ಕಾಂಗ್ರೆಸಿಗೆ 159 ಸ್ಥಾನಗಳು ದೊರೆತಿರುವುವು. ಕಾಂಗ್ರೆಸಿಗೆ ಇಷ್ಟೊಂದು ಪ್ರಬಲ ಬಹುಪಕ್ಷವು ಇನ್ನೆಲ್ಲಿಯೂ ದೊರೆತಿರುವುದಿಲ್ಲ ಸಂಯುಕ್ತ ಪ್ರಾಂತ ಎಸೆಂಬ್ಲಿಯ 228 ಸೀಟುಗಳಲ್ಲಿ ಕಾಂಗ್ರೆಸಿಗೆ 133 ಸೀಟುಗಳು ಸಿಕ್ಕಿರುವುವು ಬಿಹಾರ್ ಎಸೆಂಬ್ಲಿಯ 152 ಸ್ಥಾನಗಳ ಪೈಕಿ 95ನ್ನು ಕಾಂಗ್ರೆಸು ಪಡೆದಿರುವುದು. ಒರಿಸ್ಸ ಎಸೆಂಬ್ಲಿಯಲ್ಲಿ ಒಟ್ಟು 60. ಅವುಗಳಲ್ಲಿ 36ನ್ನು ಕಾಂಗ್ರೆಸು ಪಡೆದಿರುವುದು.

ಮಧ್ಯಪ್ರಾಂತದ 112 ಸೀಟುಗಳ ಪೈಕಿ 66ನ್ನು ಕಾಂಗ್ರೆಸು ಗೆದ್ದಿರುವುದು. ಬೊಂಬಾಯಿ ಎಸೆಂಬ್ಲಿಯ ಒಟ್ಟು ಸೀಟುಗಳು 175. ಇವುಗಳಲ್ಲಿ 88 ಕಾಂಗ್ರೆಸಿಗೆ ಸಿಕ್ಕಿರುವುದು ಈ ಸಲದ ಹೊಸತಾಗಿ ರಚಿಸಲ್ಪಟ್ಟಿರುವ ಪ್ರಾಂತಗಳು ಸೇರಿ ದೇಶದ ಒಟ್ಟು 11 ಪ್ರಾಂತಗಳಲ್ಲಿ 6ರಲ್ಲಿ ಪ್ರಬಲ ಬಹುಮತವು ಕಾಂಗ್ರೆಸಿಗೆ ಸಿಕ್ಕಿ ಕಾಂಗ್ರೆಸ್ ಪಕ್ಷೀಯ ಮಂತ್ರಿಮಂಡಲವು ಅಧಿಕಾರಕ್ಕೆ ಬರುವಂತಾಗಿರುವುದು ಬಂಗಾಳ ಎಸೆಂಬ್ಲಿಯ 250 ಸ್ಥಾನಗಳಲ್ಲಿ 54 ಕಾಂಗ್ರೆಸಿಗೆ ದೊರೆತಿರುವುದು. ಕಾಂಗ್ರೆಸಿಗೆ ಬಹುಪಕ್ಷ ದೊರೆಯುವುದು ಸಾಧ್ಯವಿಲ್ಲೆಂಬಂತೆ ಬಂಗಾಳ ಎಸಂಬ್ಲಿಯ ರಚನೆಯಾಗಿದೆ. ಕೇವಲ ಯುರೋಪಿಯನರಿಗೆ 25 ಸೀಟುಗಳನ್ನು ಕೊಡಲಾಗಿದೆ. ಇಲ್ಲಿ ಬಹುಪಕ್ಷ ಮುಸಲ್ಮಾನರದು. ಈಗ ಹೆಚ್ಚಿನ ಮುಸಲ್ಮಾನರೆಲ್ಲರೂ ಮಿ ಫಜ್ಲುಲ್ ಹಕ್ಕರ ನಾಯಕತ್ವದಲ್ಲಿ ಒಂದಾಗಿದ್ದಾರೆ. ಅವರೇ ಮುಖ್ಯ ಮಂತ್ರಿಗಳಾಗಬಹುದೆಂದು ನಂಬಲಾಗಿದೆ. ಮಿ. ಹಕ್ಕರು ಪ್ರಜಾ ಪಕ್ಷ ಎಂಬ ಜಮೀನುದಾರ ವಿರೋಧಿಯಾದ ಒಕ್ಕಲುಗಳ ಪಕ್ಷದ ನಾಯಕರಾಗಿದ್ದು ಹಿಂದೊಮ್ಮೆ ಕಾಂಗ್ರೆಸಿಗೆ ಸೇರಿದವರಾಗಿರುವರು. ರಾಷ್ಟ್ರೀಯ ಭಾವನೆಯುಳ್ಳವರಾಗಿ, ಜನಸಾಮಾನ್ಯರ ಹಿತಸಾಧನೆಯ ಕಾರ್ಯಕ್ರಮವನ್ನು ಕೈಕೊಂಡಿರುವರು. ಇದರಿಂದ ಬಂಗಾಳದಲ್ಲಿ ಇಷ್ಟರವರೆಗೆ ಸರಕಾರದ ಬಾಲ ಹಿಡಕೊಂಡು ಬಂದವರ ಆಟ ನಡೆಯದಂತಾಗಿರುವುದು. ಆಸ್ಸಾಂ ಪ್ರಾಂತ್ಯದ ಎಸಂಬ್ಲಿಯ ಒಟ್ಟು ಸೀಟು 108. ಇವುಗಳಲ್ಲಿ ಕಾಂಗ್ರೆಸಿಗೆ 35 ಸೀಟು ದೊರೆತಿರುವುದು. ಕಾಂಗ್ರೆಸಿನಷ್ಟು ದೊಡ್ಡ ಪಕ್ಷವಾಗಿ ಆರಿಸಿ ಬಂದ ಪಕ್ಷ ಇನ್ನೊಂದಿಲ್ಲ. ಆದುದರಿಂದ ಕ್ರಮಪ್ರಕಾರ ಕಾಂಗ್ರೆಸ್ ಪಕ್ಷೀಯರನ್ನೇ ಮಂತ್ರಿಮಂಡಲ ರಚಿಸಲು ಮಾನ್ಯ ಗವರ್ನರರು ಆಮಂತ್ರಿಸಬೇಕು. ಯಾರು ಮಂತ್ರಿ ಮಂಡಲವನ್ನು ರಚಿಸಿದರೂ ಕಾಂಗ್ರೆಸ್ ಪಕ್ಷವನ್ನು ಕಡೆಗಣಿಸಲು ಸಾಧ್ಯವಿಲ್ಲ ಪಂಜಾಬ್ ಎಸಂಬ್ಲಿಯ ಒಟ್ಟು ಮೆಂಬರರ ಸಂಖ್ಯೆ 175. ಇದರಲ್ಲಿ ಕಾಂಗ್ರೆಸ್ ಮತ್ತು ಅಕಾಲಿ ಕಾಂಗ್ರೆಸ್ ಪಕ್ಷಕ್ಕೆ ದೊರೆತ ಒಟ್ಟು ಸೀಟುಗಳು 23 ಮಾತ್ರ. ಆದುದರಿಂದ ಇಲ್ಲಿ 99 ಸೀಟು ಪಡೆದಿರುವ ಯೂನಿಯನಿಸ್ಟರ ಕೈಯೇ ಮೇಲಾಗಿರುವುದು. ಆದರೆ ಕಾಂಗ್ರೆಸ್ ಪಕ್ಷದಲ್ಲಿ ದಿವಾನ್ ಚಮನ್‌ಲಾಲ್, ಡಾಕ್ಟರ್ ಕಿಚಿಲು, ಡಾ ಆಲಮ್, ಶ್ರೀ. ಭಾರ್ಗವ ಮೊದಲಾದ ಮೇಧಾವಿಗಳಿರುವರು ಆದುದರಿಂದ ಯೂನಿಯನಿಸ್ಟರು ಇಚ್ಛಾನುಸಾರ ನಡೆಯದಂತೆ ಇವರು ಯಾವಾಗಲೂ ಅಂಕುಶಪ್ರಾಯರಾಗದಿರರು. ಸ್ವಲ್ಪಮಂದಿಯಾದರೂ ಪ್ರತಿಭಾಶಾಲಿಗಳಾದ ಇವರಿಂದ ಕೊಂಗ್ರೆಸ್ಸಿನ ವರ್ಚಸ್ಸು ಬೆಳಗುವಂತಾಗದಿರದು. ವಾಯುವ್ಯ ಗಡಿನಾಡಿನಲ್ಲಿ ಪ್ರಬಲ ಬಹುಪಕ್ಷವಾಗಿ ಆರಿಸಿ ಬಂದಿರುವ ಪಕ್ಷವೆಂದರೆ ಕಾಂಗ್ರೆಸು. ಕಾಂಗ್ರೆಸಿಗೆ ಅಲ್ಲಿ ಬಹುಪಕ್ಷ ದೊರೆತಿರುವುದಿಲ್ಲ. ಆದರೂ ಸ್ವತಂತ್ರವಾಗಿ ಆರಿಸಲ್ಪಟ್ಟ ಕೆಲವೇ ಮಂದಿಯ ಸಹಕಾರದಿಂದ ಕಾಂಗ್ರೆಸ್ ಪಕ್ಷೀಯರಿಗೆ ಮಂತ್ರಿ ಮಂಡಲಿಯನ್ನು ರಚಿಸುವುದೇನೂ ಪ್ರಯಾಸವಾಗಲಾರದು. ಇಲ್ಲಿ ಇಷ್ಟರವರೆಗೆ ಅಧಿಕಾರದಲ್ಲಿದ್ದು ಸುಪ್ರತಿಷ್ಠರಾದ ದೊಡ್ಡ ದೊಡ್ಡ ಖಾನರು ಪರಾಜಯ ಹೊಂದಿರುವರು. ಸಿಂಧಿನಲ್ಲಿ ಆರಿಸಿ ಬಂದಿರುವ ಕಾಂಗ್ರೆಸ್ ಪಕ್ಷೀಯರು ಅತ್ಯಲ್ಪ ಮಂದಿ. ಆದರೆ ಇಲ್ಲಿ ಗವರ್ನರರ ಸಲಹೆಗಾರರಾಗಿದ್ದ ದೊಡ್ಡ ಮುಖಂಡರುಗಳು ಉರುಳಿಬಿದ್ದಿರುವರು. ಹೊಸತಾಗಿ ಆರಿಸಿ ಬಂದಿರುವವರು ವ್ಯಾಪಕ ಹಾಗೂ ಬಹುಮಟ್ಟಿಗೆ ರಾಷ್ಟ್ರೀಯ ಭಾವನೆಯುಳ್ಳವರಾಗಿರುವರು. ಹೀಗೆ ಕಾಂಗ್ರೆಸು ಈ ಸಲದ ಚುನಾವಣೆಯಲ್ಲಿ ಭಾಗವಹಿಸಿದುದರಿಂದ ಇಡೀ ಆಡಳಿತವೇ ಬದಲಾಗಿ ನವೀನವಾದೊಂದು ಮನೋವೃತ್ತಿಯು ಉಂಟಾಗಿರುವುದು. ಜಾತಿ, ವ್ಯಕ್ತಿ, ಸ್ವಾರ್ಥ, ಪ್ರತಿಷ್ಠೆಗಳು ಮೂಲೆ ಗುಂಪಾಗಿ ಜನ ಮತ್ತು ರಾಷ್ಟ್ರಹಿತವು ಮುಂದಾಗಿ ನಿಂತಿರುವುದು. ಇದೀಗ ಆನಂದ ಹಾಗೂ ಅತ್ಯಂತ ಅಭ್ಯುದಯ ಚಿನ್ಹೆಯಾಗಿರುವುದು. ಇನ್ನು ಮುಂದೆ ಶಾಸನ ಸಭೆಗಳಲ್ಲಿ ಬಹುಮಟ್ಟಿಗೆ ಜನಹಿತವು ಎತ್ತಿ ಹಿಡಿಯಲ್ಪಡುವುದೆಂಬ ಭರವಸೆಗೆ ಆಸ್ಪದವುಂಟಾಗಿರುವುದು.

ಮದ್ರಾಸ್ ಪ್ರಾಂತದಲ್ಲಿ ಕಾಂಗ್ರೆಸಿನ ಪ್ರಚಂಡ ವಿಜಯವು ಕಾಂಗ್ರೆಸಿನವರಲ್ಲೇ ಆಶ್ಚರ್ಯವನ್ನುಂಟುಮಾಡಿರುವುದು. ಇಡೀ ದೇಶದಲ್ಲಿ ಪ್ರಥಮಸ್ಥಾನವು ಮದ್ರಾಸಿಗೆ ದೊರೆತಿರುವುದು. 15 ವರ್ಷಗಳವರೆಗೆ ಅಧಿಕಾರದಲ್ಲಿದ್ದು ಧನ ಮತ್ತು ಅಧಿಕಾರ ಬಲದಿಂದ ಸುಸಂಘಟಿತವಾಗಿದ್ದ ಪಕ್ಷವೊಂದನ್ನು ಒಂದೇ ಒಂದು ಚುನಾವಣೆಯಲ್ಲಿ ನಿರ್ನಾಮಗೊಳಿಸಿಬಿಡುವ ಈ ವಿಚಿತ್ರವು ಇಡೀ ಲೋಕದ ರಾಜಕೀಯ ಇತಿಹಾಸದಲ್ಲೇ ಇರಲಾರದು. ಜಸ್ಟಿಸ್ ಪಕ್ಷದ ಆಧಾರಸ್ತಂಭಗಳೇ ಕಳಚಿಬಿದ್ದು ಇಡೀ ಕಟ್ಟಡವೇ ನೆಲಕ್ಕುರುಳಿರುವುದು. ಮುಖ್ಯ ಮಂತ್ರಿಗಳಾದ ಬೊಬ್ಬಿಲಿ ರಾಜರಿಗೇನೇ ತಲೆಯೆತ್ತದಂತಾಗಿರುವುದು. ವೆಂಕಟಗಿರಿಯ ಕುಮಾರರಾಜರು, ಸರ್. ಪಿ. ಟಿ. ರಾಜನರು. ದಿವಾನ್ ಬಹದೂರು ಎಮ್. ಕೆ. ರೆಡ್ಡಿಗಳು, ಸೈಕೂರಿನ ಜಮೀನುದಾರರು, ರಾವ್ ಬಹದೂರು ಚಂಬುಲಿಂಗ ಮುದಲಿಯಾರರು, ಕೌನ್ಸಿಲ್ ಪ್ರೆಸಿಡೆಂಟರಾದ ದಿವಾನ್ ಬಹದೂರು ರಾಮಚಂದ್ರರೆಡ್ಡಿಗಳು, ದಿವಾನ್ ಬಹದೂರು ಬಿ. ಮಹಾಬಲ ಹೆಗ್ಡೆಯವರೇ ಮೊದಲಾದ ಜಸ್ಟಿಸ್ ಪಕ್ಷದ ಅತಿರಥ ಮಹಾರಥರೇ ಸೋತು ನೆಲ ಹಿಡಿದಿರುವರು ಜಸ್ಟಿಸ್ ಪಕ್ಷಕ್ಕೆ ಕೇವಲ 16 ಸೀಟುಗಳು ದೊರೆತಿರುವವು, ಹೊಸತಾಗಿ ಜನ್ಮವೆತ್ತಿದ ಪೀಪ್ಲ್ಸ್ ಪಾರ್ಟಿಯ ಸ್ಥಾಪಕರಾದ ಪಿಠಾಪುರದ ಮಹಾರಾಜರೂ, ಯುವರಾಜರೂ, ಮಾಜಿ ಮಂತ್ರಿಗಳಾದ ಶ್ರೀ ಮುತ್ತಯ ಮುದಲಿಯಾರರೂ ಪರಾಜಯಹೊಂದಿರುವರು. ಈ ಪಕ್ಷಕ್ಕೆ ಕೇವಲ ಒಂದು ಸೀಟು ದೊರೆತಿರುವುದು. ಪಿಠಾಪುರ ರಾಜರು ಇಡೀ ಪ್ರಾಂತನಲ್ಲೆಲ್ಲಾ ಸಂಚರಿಸಿ ಸಾವಿರಗಟ್ಲೆ ಹಣವನ್ನು ನೀರಿನಂತೆ ವ್ಯಯಿಸಿದುದು ಗುಡ್ಡೆಗೆ ಮಣ್ಣು ಹೊತ್ತಂತಾಯಿತು. ರಾಷ್ಟ್ರೀಯ ಭಾವನೆಯ ಮಹಾಪ್ರವಾಹವು, ಲಿಬರಲ್ ಜಸ್ಟಿಸ್ ಮೊದಲಾದ ಎಂತಹ ಸಂದರ್ಭದಲ್ಲಿಯೂ ಸರಕಾರದ ಬೆನ್ನು ಹಿಡಿದು ಹೋಗುವ ಪಕ್ಷಗಳಿಗೆ, ಧನ ಬಲದಿಂದ ತಾವೇ ತಾವಾಗಿ ಮೆರೆದಾಡಿಕೊಂಡಿದ್ದವರಿಗೆ, ಸರ್, ದಿವಾನ್ ಬಹದೂರು, ರಾವ್ ಬಹದೂರು ಬಿರುದುಗಳನ್ನು ಪಡೆದು ಸರಕಾರದ ವಿಧೇಯ ಸೇವಕರಂತಿದ್ದವರಿಗೆಲ್ಲಾ ಪ್ರಳಯಸ್ವರೂಪವಾಗಿರುವುದು. ಅವರೊಮ್ಮೆಯೇ ಆ ಮಹಾ ನೆರೆಗೆ ಸಿಕ್ಕಿ ಸಂಪೂರ್ಣ ಮುಳುಗಿ ಹೋಗಿರುವರು. ಇನ್ನವರು ತಲೆಯೆತ್ತದಂತಾಗಿರುವುದು.

ಮದ್ರಾಸ್ ಪ್ರಾಂತ್ಯದ ಎಸೆಂಬ್ಲಿಯ 146 ಜನರಲ್ ಸೀಟುಗಳಲ್ಲಿ 136 ಸೀಟುಗಳನ್ನು ಕಾಂಗ್ರೆಸು ಗೆದ್ದಿರುವುದು. ಮಜೂರ ಪರವಾದ ಮತ್ತು ಸ್ತ್ರೀಯರಿಗಾಗಿರುವ ಎಲ್ಲಾ ಸೀಟುಗಳನ್ನೂ 3 ಹಿಂದೀ ಕ್ರೈಸ್ತ ಮತ್ತು 1 ಮುಸಲ್ಮಾನ ಸೀಟುಗಳನ್ನೂ ಕಾಂಗ್ರೆಸು ಪಡೆದಿರುವುದು ಒಟ್ಟು 69 ಜಾತಿವಾರು ಮತ್ತು ಪ್ರತ್ಯೇಕ ಸೀಟುಗಳಲ್ಲಿ 22 ಕಾಂಗ್ರೆಸಿಗೆ ಸಿಕ್ಕಿರುವುದು. ಯುನಿವರ್ಸಿಟಿ ಸೀಟಿಗೆ ಏನೊಂದು ಕೆಲಸಮಾಡದೆ ತನ್ನ ಹೆಸರನ್ನು ಮಾತ್ರ ಪ್ರಕಟಿಸಿ ಉಮೇದ್ವಾರರಾಗಿ ನಿಂತಿದ್ದ ಶ್ರೀ. ಸಿ. ರಾಜಗೋಪಾಲಾಚಾರ್ಯರಿಗೆ 5326 ಮತ್ತು ಅವರ ಪ್ರತಿಸ್ಪರ್ಧಿಗಳಿಬ್ಬರಿಗೆ 370 ಮತ್ತು 320 ಓಟುಗಳು ದೊರೆತಿರುವವು. ಕೌನ್ಸಿಲುಗಳೆಂಬ ಅಪ್ಪರ್ ಹೌಸುಗಳ ಚುನಾವಣೆಗೆ ಕಾಂಗ್ರೆಸು ವಿಶೇಷ ಗಮನಕೊಡಲಿಲ್ಲ ಆದರೂ ಮದ್ರಾಸ್ ಕೌನ್ಸಿಲಿನ 35 ಜನರಲ್ ಸೀಟುಗಳಲ್ಲಿ 26 ಕಾಂಗ್ರೆಸಿಗೆ ದೊರೆತಿರುವುದು. ಇನ್ನಾವ ಪ್ರಾಂತ್ಯದಲ್ಲಿಯೂ ಕೊಂಗ್ರೆಸಿಗೆ ಇಷ್ಟೊಂದು ಬಹುಪಕ್ಷವು ದೊರೆತಿರುವುದಿಲ್ಲ.

(ಪುಟ ೧೫ರಿಂದ)

ಮೀನು ಕಸಬಿನವರಲ್ಲಿ ಕುಡುಕತನ, ಅನಾವ್ಯಯಗಳ ಅಭ್ಯಾಸಗಳು ಕಡಿಮೆಯಾಗುವಂತೆ ಫಿಶ್ಶರೀಸ್ ಇಲಾಖೆಯ ಅಧಿಕಾರಿಗಳು ಸಾಮಾಜಿಕೋನ್ನತಿಯ ಕೆಲಸವನ್ನು ಮಾಡುತ್ತಿದ್ದಾರೆ.

ಮಲೆಜ್ವರ ನಿಗ್ರಹದ ಕಾರ್ಯಗಳು

ಮಲೆಜ್ವರವನ್ನು ಕಡಿಮೆಮಾಡಬೇಕಾದರೆ ಸೊಳ್ಳೆಗಳನ್ನು ನಾಶಪಡಿಸುವ ಒಂದ ಜಾತಿಯ ಮೀನನ್ನು ಬೆಳಸುವದೇ ಒಳ್ಳೇ ಉಪಾಯವೆಂಬುದು ಈಗ ಸರ್ವಸಮ್ಮತವಾಗಿದೆ. ಫಿಶ್ಶರೀಸ್ ಇಲಾಖೆಯವರು ಹಲವು ಪ್ರದೇಶಗಳಲ್ಲಿ ಈ ಕುರಿತು ನಡೆಸಿದ ಕಾರ್ಯಗಳು ಸಾರ್ಥಕವಾಗಿವೆ ಕರ್ನೂಲು ಜಿಲ್ಲೆಯ ನಲ್ಲಮಲೆ ಎಂಬುದು ಯಾವಾಗಲೂ ಮಲೆಜ್ವರವು ತಪ್ಪದನಾಡೆಂದು ಹೆಸರುಗೊಂಡಿತ್ತು. ಅಲ್ಲಿ ೧೯೧೫ನೇ ವರ್ಷದಿಂದ ಫಿಶ್ಶರೀಸ್ ಖಾತೆಯವರು ವರ್ಷಂಪ್ರತಿ ಈ ಜಾತಿಯ ಮೀನನ್ನು ಸಂಗ್ರಹ ಮಾಡುತ್ತಾರೆ ಹೀಗೆ ಮಾಡಿದ್ದರಿಂದ ಅಲ್ಲಿ ಮಲೆಜ್ವರದ ಹಾವಳಿಯು ಬಹಳ ಕಡಿಮೆಯಾದದ್ದು ಇತ್ತೀಚೆಗೆ ಆ ಕುರಿತು ಮಾಡಿದ ತನಿಖೆಯಿಂದ ತಿಳಿದು ಬರುತ್ತದೆ

ಈ ಜಿಲ್ಲೆಯಲ್ಲಿರುವ ಕೈಗಾರಿಕೆಗಳಲ್ಲಿ ಮೀನು ಕೈಗಾರಿಕೆಯು ಬಹಳ ಮುಖ್ಯವಾದದ್ದು. ಈ ಅಧಿಪತ್ಯದಲ್ಲಿರುವ ಮೀನುಹಿಡಿಯುವ ದೊಡ್ಡ ಎರಡು ಕೇಂದ್ರಗಳಲ್ಲಿ ಮಲ್ಪೆಯು ಒಂದಾಗಿರುತ್ತದೆ

ಪಶ್ಚಿಮ ಕರಾವಳಿಯ ಇತರ ಕಡೆಗಳಂತೆ, ಈ ಜಿಲ್ಲೆಯಲ್ಲಿ ಸಮುದ್ರದ ಮೀನು ಧಾರಾಳವಾಗಿ ಸಿಕ್ಕುವುದರಿಂದ, ಈ ಜಿಲ್ಲೆಯ ಹೊಳೆಗಳಲ್ಲಿರುವ ಮೀನಿನ ಪ್ರದೇಶಗಳು ವಿಶೇಷ ಪ್ರಾಮುಖ್ಯತೆಯವುಗಳಾಗಿರುವುದಿಲ್ಲ. ಈ ಜಿಲ್ಲೆಯಲ್ಲಿ ೪೫೭ ಮೀನೆಣ್ಣೆ, ಮೀನು ಗೊಬ್ಬರದ ಕಾರ್ಖಾನೆಗಳಿವೆ ಅವುಗಳಿಂದ ಒಳ್ಳೇ ಮುನಾಫೆಯು ಲಭಿಸುತ್ತದೆ. ಈ ಕೈಗಾರಿಕೆಗೆ ಸರಕಾರದಿಂದ ಹೆಚ್ಚಿನ ಅನುಕೂಲತೆಗಳೂ ಪ್ರೋತ್ಸಾಹವೂ ದೊರೆಯುತ್ತದೆ ಮೀನು ಕಸಬಿನವರು ಬೇರೆ ಬೇರೆಯಾಗಿ ಇರುವದು ವಾಡಿಕೆಯಾಗಿರುತ್ತದೆ. ಅವರ ಮಕ್ಕಳಿಗಾಗಿ ಸರಕಾರದವರು ಪ್ರತ್ಯೇಕ ೧೩ ಶಾಲೆಗಳನ್ನು ಈ ಜಿಲ್ಲೆಯಲ್ಲಿ ಸ್ಥಾಪಿಸಿದ್ದಾರೆ ಅವುಗಳಲ್ಲಿ ದರ್ಮಾರ್ಥವಾಗಿ ಶಿಕ್ಷಣವನ್ನು ಕೊಡುತ್ತಾರೆ ಈಗ ಅವುಗಳಲ್ಲಿ ೭೪೫ ಹುಡುಗರೂ ೨೪೦ ಹುಡುಗಿಯರೂ ಶಿಕ್ಷಣಹೊಂದುತ್ತಿದ್ದಾರೆ. ಈ ಜಿಲ್ಲೆಯಲ್ಲಿ ಮೀನು ಕಸಬಿನವರಿಗೆ ಸಂಬಂಧಪಟ್ಟ ೧೪ ಸಹಕಾರ ಸಂಸ್ಥೆಗಳಿವೆ. ಮೀನು ಕಸಬಿನವರು ಮಿತವ್ಯಯದ ಅಭ್ಯಾಸಗಳನ್ನು ಕಲಿಯುವಂತೆ ಅವರಿಗೆ ಅವರವರ ಮಾಲುಬಂದವಾಳ ಮತ್ತು ಜೀವನಾಂಶಗಳ ಆಧಾರದಿಂದ ಮಾತ್ರ ಸಂಘದ ಸಹಾಯವು ಸಿಕ್ಕುವಂತೆ ನಿಯಮಗಳನ್ನು ಮಾಡಿದ್ದಾರೆ.

(ಮದರಾಸು ಸರಕಾರದವರಿಂದ ಪ್ರಕಟಿಸಲ್ಪಟ್ಟದು.)

ಕುಂದಾಪುರ ಬೇಂಕ್ ಲಿಮಿಟೆಡ್
ಕುಂದಾಪುರ

ನಮ್ಮ ಬೇಂಕಿಗೆ ಬೇಂಕಿಂಗ್ ವ್ಯವಹಾರವು ಚೆನ್ನಾಗಿ ಗೊತ್ತಿರುವ ಒಬ್ಬ ಆಫೀಸು ಸೆಕ್ರೆಟರಿಯೂ ಮೂರು ಜನ ಕ್ಲಾರ್ಕರೂ ಬೇಕಾಗಿದ್ದಾರೆ. ಆಫೀಸು ಸೆಕ್ರೆಟರಿಯು ಸೆಕ್ಯೂರಿಟಿ (ಜಾಮೀನು ಹಣ) ಕೂಡಬೇಕಾಗಿದೆ. ಉಮೇದುವಾರರು ತಮ್ಮ ಯೋಗ್ಯತಾ ಪತ್ರದೊಂದಿಗೆ ಕೆಳಗಿನ ವಿಳಾಸಕ್ಕೆ ಪತ್ರ ವ್ಯವಹಾರ ನಡಿಸತಕ್ಕದ್ದು.

ಮೆನೇಜಿಂಗ್ ಡೈರೆಕ್ಟರ್.

ಕುಂದಾಪುರ ಬೇಂಕ್ ಲಿಮಿಟೆಡ್,

ಕುಂದಾಪುರ.

ಮೀನು ವ್ಯವಸಾಯ ವ ಮೀನಿನ ಕಸಬು

ಮೀನಿನ ವ್ಯವಸಾಯವು ದೇಶಕ್ಕೆ ಸಂಪತ್ತನ್ನು ತರುವ ಉಪಾಯಗಳಲ್ಲಿ ಪ್ರಧಾನವಾದವೊಂದಾಗಿರುತ್ತದೆ ಆದರಿಂದ ದೇಶದಲ್ಲಿ ಸಂಪತ್ತು ಹೆಚ್ಚಿ ಜನರಿಗೆ ಆಹಾರವೂ ಒಂದು ಉದ್ಯೋಗವೂ ಸಿಕ್ಕುತ್ತವೆ ಮೀನಿನ ಕೈಗಾರಿಕೆಯು ಹಿಂದೂ ದೇಶದಲ್ಲಿ ಇನ್ನೂ ಸರಿಯಾಗಿ ವೃದ್ಧಿಗೆ ಬರಲಿಲ್ಲ ಮೀನನ್ನು ಹಿಡಿಯುವ ಮತ್ತು ಅದನ್ನು ಹಾಳಾಗದಂತೆ ರಕ್ಷಿಸುವ ವಿಧಾನಗಳ ಕುರಿತೂ, ಮೀನು ವ ಮೀನಿನಿಂದ ತಯಾರಿಸುವ ಪದಾರ್ಥಗಳನ್ನು ಎಲ್ಲಾ ಕಡೆಗಳಿಗೆ ಮುಟ್ಟಿಸುವ ಏರ್ಪಾಡುಗಳ ಕುರಿತೂ ಇನ್ನೂ ಮಾಡಬೇಕಾದ ಕೆಲಸವಷ್ಟೋ ಬಾಕಿಯುತ್ತದೆ ಫಿಶ್ಶರಿಸ್ ಶಾಖೆಯವರು ಸಾಮಾನ್ಯ ಜನರೆಲ್ಲರ ಹಿತಕ್ಕಾಗಿ ಮಾಡುವ ಕಾರ್ಯಕ್ರಮಗಳನ್ನು ಐದು ಬಗೆಯಾಗಿ ವಿಂಗಡಿಸಬಹುದು

೧ ಮೀನಿನ ಕಸಬನ್ನು ರೂಪಿತಕ್ಕೆ ತಂದು ಜನರಿಗೆ ಆಹಾರ ಸಾಮಗ್ರಿಗಳು ಹೆಚ್ಚುವಂತೆ ಮಾಡುವದು.

೨ ಮೀನ ಹಿಡಿಯುವುದನ್ನು ಹೆಚ್ಚಿಸಿ ಹಿಡಿದ ಹಸಿಮೀನು ಹಾಳಾಗದೇನೇ ದೂರದ ಪ್ರದೇಶಗಳಲ್ಲಿ ಮಾರುವ ಬಗ್ಗೆ ಒಯ್ಯುವದಕ್ಕೆ ಅನುಕೂಲತೆಗಳನ್ನು ಕಲ್ಪಿಸಿ, ಆಹಾರಕ್ಕೆ ಉಪಯೋಗವಿಲ್ಲದ ಉಳಿಯುವ ಮೀನಿನಿಂದ ಎಣ್ಣೆ, ಗೊಬ್ಬರ ವ ಇತರ ಉತ್ಪತ್ತಿಗಳನ್ನು ತಯಾರಿಸುವದು ಈ ಉದ್ದೇಶಗಳಿಗಾಗಿ ಮೀನು ಕೈಗಾರಿಕೆ ವ ಅದಕ್ಕೆ ಸಂಬಂಧಿಸಿದ ಇತರ ಕೈಗಾರಿಕೆಗಳ ಕ್ರಮಗಳನ್ನು ತಿದ್ದುಪಡಿ ಹೊಸ ಕ್ರಮಗಳನ್ನು ಜಾರಿಗೆ ತಂದು, ಆ ಕೈಗಾರಿಕೆಗಳನ್ನು ಪ್ರೋತ್ಸಾಹಿಸುವದು.

೩. ಮೀನು ಕಸಬಿನವರ ಮಕ್ಕಳಿಗೆ ವಿದ್ಯಾಭ್ಯಾಸ ಕೊಡುವದು, ಪ್ರಕೃತಿಶಾಸ್ತ್ರದ ಅಭ್ಯಾಸಕ್ಕೆ ಸಹಾಯವಾಗುವಂತೆ ಮೀನುಗಳಲ್ಲಿ ಸಿಕ್ಕುವ ಬೇರೆ ಬೇರೆ ಜಾತಿಗಳನ್ನು ತೋರಿಸುವ ಸಾರ್ವಜನಿಕ ಜಲಜಂತುಪ್ರದರ್ಶನಾಲಯಗಳನ್ನು ಸ್ಥಾಪಿಸುವದು

೪ ಮೀನು ಕಸಬಿನವರ ಆರ್ಥಿಕ ವ ನೈತಿಕ ಸ್ಥಿತಿಯನ್ನು ಉತ್ತಮಗೊಳಿಸುವದು

೫ ಹುಳನಾಶಕ ಜಾತಿಯ ಮೀನನ್ನು ಮಲೇರಿಯ ವಿರುವ ಪ್ರದೇಶಗಳಿಗೆ ಹಂಚಿ, ಅಲ್ಲಿ ಅವರ ಬೆಳೆಯನ್ನು ಹೆಚ್ಚಿಸಿ, ಮಲೇರಿಯದ ಹಾವಳಿಯನ್ನು ತಗ್ಗಿಸಲಿಕ್ಕೆ ಪ್ರಯತ್ನಿಸುವದು,

ಆಹಾರ ಸಾಮಗ್ರಿಗಳನ್ನು ಹೆಚ್ಚಿಸುವದು

ಹಿಂದೀಯರ ನಿತ್ಯದ ಆಹಾರದಲ್ಲಿ ಶರೀರದ ಬೆಳವಣಿಗೆಗೆ ಆತ್ಯಾವಶ್ಯಕವಾದ 'ಪ್ರೊಟೀನ' ಎಂಬ ಪದಾರ್ಥವು ಬಹಳ ಕಡಿಮೆಯೆಂದು ತಜ್ಞರು ಹೇಳುತ್ತಾರೆ ಈ ಪ್ರೊಟೀನು ಅಗ್ಗವಾಗಿ, ಜೀರ್ಣಕ್ಕೆ ಅನುಕೂಲವಾದ ರೂಪದಿಂದ ಮೀನಿನಲ್ಲಿ ಸುಲಭವಾಗಿ ದೊರಕುತ್ತದೆ ಮೀನು ಧಾರಾಳವಾಗಿ ಸಿಕ್ಕುವದು ಸಮುದ್ರದಲ್ಲಿ ಮಾತ್ರ ಆದ್ದರಿಂದ ಅಲ್ಲಿ ಮೀನು ಹಿಡಿಯುವ ಜಾಗವನ್ನು ವಿಸ್ತರಿಸಲಿಕ್ಕೂ, ಮೀನು ಹೆಚ್ಚು ಹಿಡಿಯಲಿಕ್ಕೆ ಸಿಕ್ಕುವಂತೆ ಮಾಡಲಿಕ್ಕೂ, ಸಿಕ್ಕಿದ ಸಮುದ್ರದ ಮೀನನ್ನು ಹಾಳಾಗದಂತೆ ರಕ್ಷಿಸಿ ಹಂಚಲಿಕ್ಕೂ ಪ್ರಯತ್ನಗಳನ್ನು ನಡೆಸುತ್ತಾರೆ ಫಿಶ್ಶರಿಸ್ ಶಾಖೆಯವರು ಈ ಆಧಿಪತ್ಯದ ಸಮುದ್ರಗಳಲ್ಲಿ ಯಾವ ಯಾವ ಆಳಕ್ಕೆ ಏನೇನು ಸಿಕ್ಕುತ್ತದೆಂಬುವದರ ಕುರಿತೂ, ಎಲ್ಲೆಲ್ಲಿ ಮೀನುಸಿಕ್ಕುವ ಪ್ರದೇಶಗಳಿವೆ ಎಂಬುದರ ಕುರಿತೂ, ಬಹಳ ಪ್ರಯೋಜನಕ್ಕೆ ಬೀಳುವ ಸಂಗತಿಗಳನ್ನೆಲ್ಲಾ ಸಂಗ್ರಹಿಸಿದ್ದಾರೆ ಇದರ ಮೂಲಕ ಈ ಮೀನು ವ್ಯವಸಾಯದ ಪ್ರದೇಶಗಳಿಂದ ತುಂಬಾ ಪ್ರಯೋಜನವು ಮೀನು ಕಸಬಿನವರಿಗೆಲ್ಲಾ ದೊರಕುವಂತೆ ಏನು ಮಾಡಬಹುದೆಂಬುದರ ಕುರಿತ ಸರಕಾರದವರು ಆಲೋಚಿಸುತ್ತಿದ್ದಾರೆ

ಈ ಆಧಿಪತ್ಯದ ೧೬ ಜಿಲ್ಲೆಗಳಲ್ಲಿ ಒಳಪ್ರದೇಶದಲ್ಲಿರುವ ಸರೋವರ, ನದಿ ವಗೈರೆಗಳಲ್ಲಿ ಮೀನು ವ್ಯವಸಾಯ ಮಾಡುವ ಹಕ್ಕನ್ನು ಫಿಶ್ಶರಿಸ್ ಶಾಖೆಯವರು ತಾವೇ ಇಟ್ಟುಕೊಂಡು ತಿನ್ನಲಿಕ್ಕೆ ಯೋಗ್ಯವಾದ ಉತ್ಕೃಷ್ಟ ತರದ ಮೀನನ್ನು ಅಲ್ಲಿ ತಪ್ಪದೆ ಸಂಗ್ರಹಿಸಿಡುತ್ತಾರೆ ಈ ಪ್ರದೇಶಗಳಿಗೆ ಮೀನುಮರಿಗಳನ್ನು ಒದಗಿಸುವ ಬಗೆ ಫಿಶ್ಶರಿಸ್ ಖಾತೆಯವರು ಏಳು ಕಡೆಗಳಲ್ಲಿ ಮೀನು ವ್ಯವಸಾಯದ ಪ್ರಾಂತಿಕ ಜಲಪ್ರದೇಶಗಳಿಗೆ ಒದಗಿಸುವ ಉದ್ದಿಷ್ಟ, ಈ ಕ್ಷೇತ್ರಗಳಲ್ಲಿ ತಿನ್ನಲಿಕ್ಕೆ ಯೋಗ್ಯವಾದ ಒಳ್ಳೇ ಜಾತಿಯ ಮೀನನ್ನು ಬೆಳೆಸುತ್ತಾರೆ

ದಕ್ಷಿಣ ಹಿಂದೂದೇಶದಲ್ಲಿರುವ ಜಲಪ್ರದೇಶಗಳಿಗೆ ಬೇಕಾದ ಮೀನು ವ ಮೀನು ವ್ಯವಸಾಯದ ವಿಷಯದ ಜ್ಞಾನವನ್ನು ಕೈತರಲ್ಲಿ ಪ್ರಚಾರಗೊಳಿಸಿ, ಮೀನು ವ್ಯವಸಾಯವು ಮನೆಕೈಗಾರಿಕೆಯಾಗಿ ಬಾಳುವಂತೆ ಮಾಡಬೇಕಾಗಿ ಸರಕಾರದವರು ಸಾಧಿಸುತ್ತಿದ್ದಾರೆ ವರ್ಷ ಹೋಗುತ್ತಾ ಹೋಗುತ್ತಾ ಫಿಶರಿಸ್ ಇಲಾಖೆಯವರು ಈ ಕುರಿತಾದ ಅನುಭವವನ್ನು ಖಾಸಗಿ ಬಾವಿ, ಕೆರೆಗಳ ಮಾಲೀಕರಿಗೆ ಹೆಚ್ಚು ಹೆಚ್ಚಾಗಿ ಕೊಡುತ್ತಾರೆ

ಕೈಗಾರಿಕೆಯ ಸುಧಾರಣೆ

ಹಿಂದೂದೇಶದಲ್ಲಿ ಮೀನನ್ನು ಸಿಗಿಯುವ ಕೈಗಾರಿಕೆಯು ಪುರಾತನ ಕಾಲದಿಂದ ಇರುವಂಥಾದ್ದು ಈ ಕೈಗಾರಿಕೆಯನ್ನು ಇಲ್ಲಿ ಇನ್ನೂ ಹಳೇ ಕ್ರಮಗಳಿಂದಲೇ ನಡೆಸುತ್ತಾರೆ ನೋಟದಲ್ಲಿಯೂ, ವಾಸನೆಯಲ್ಲಿಯೂ, ರುಚಿಕರದಲ್ಲಿಯೂ, ಬಾಳುವಿಕೆಯಲ್ಲಿಯೂ ಈ ಕೈಗಾರಿಕೆಯಲ್ಲಿ ಮಾಡುವ ಪದಾರ್ಥಗಳನ್ನು ಉತ್ತಮರೀತಿಗೆ ತರಲಿಕ್ಕೆ ಒಳ್ಳೇ ಹೊಸ ಸುಧಾರಿತ ಕ್ರಮಗಳನ್ನು ರೂಢಿಗೆ ತರಲು ಸಾಧ್ಯವಿದೆ ತಾನೂರಿನಲ್ಲಿರುವ ಶೋಧನೆ ಸಂಸ್ಥೆಯಲ್ಲಿ ಮೀನು ಹಾಳಾಗದಂತೆ ರಕ್ಷಿಸುವ ಒಳ್ಳೆ ಉಪಾಯಗಳನ್ನು ಈಗ ಕಂಡುಹಿಡಿದಿರುತ್ತಾರೆ ಈ ಉಪಾಯಗಳನ್ನು ಈಗ ಈ ಕೈಗಾರಿಕೆಯಲ್ಲಿ ಉಪಯೋಗಿಸುವದರಿಂದ ಮೀನು ತಿನ್ನುವವರಿಗೆ ಮೊದಲಿಗಿಂತಲೂ ಒಳ್ಳೇ ತರದ ಆಹಾರವೊಂದು ದೊರಕುವಂತೆಯೂ, ಮೀನು ವ್ಯವಸಾಯದವರಿಗೆ ಮೊದಲಿಗಿಂತ ಒಳ್ಳೆಯ ಮತ್ತು ವಿಸ್ತಾರವಾದ ಮಾರಾಟದ ಅನುಕೂಲತೆಗಳು ದೊರಕುವಂತೆಯೂ ಆಗಿದೆ. ಮೀನು ಸಿಗಿಯುವ ಕೈಗಾರಿಕೆಯವರಿಗೆ ಸಹಾಯವಾಗಿ ಸರಕಾರದವರು ಉಪ್ಪನ್ನು ಅವರಿಗೆ ಧರ್ಮಾರ್ಥವಾಗಿ ಹಂಚುತ್ತಾರೆ

ಹಸಿ ಮೀನನ್ನು ಹಾಳಾಗದಂತೆ ಇಟ್ಟು ಕೊಂಡು ಹಂಚಬೇಕಾದರೆ ಅದನ್ನು ತಣ್ಣಗೆ ಮಾಡುವ ಪಾತ್ರೆಗಳಲ್ಲಿಡುವುದೇ ಮುಖ್ಯ ಉಪಾಯವಾಗಿರುತ್ತದೆ ಇಲ್ಲಿಯ ಜನರ ಆರ್ಥಿಕ ಸ್ಥಿತಿ ಮತ್ತು ಮಾರಾಟದ ಸ್ಥಿತಿಗೆ ಸರಿಯಾದ ಸಾಮಾನ್ಯ ತರದ ಹಿಮಯಂತ್ರಗಳಿಂದ ಹೆಚ್ಚು ಖರ್ಚಿಲ್ಲದೆ ಮೀನು ಹೆಪ್ಪು ಕಟ್ಟುವ ಉಪಾಯವನ್ನು ಕಂಡುಹಿಡಿದಿರುತ್ತಾರೆ ಈ ಉಪಾಯವನ್ನು ಒಂದೆರಡು ಖಾಸಗಿ ಕಾರ್ಖಾನೆಗಳಲ್ಲಿ ಉಪಯೋಗಿಸತೊಡಗಿದ್ದಾರೆ

ಮೀನೆಣ್ಣೆ ವ ಮೀನುಗೊಬ್ಬರದ ಕೈಗಾರಿಕೆಯು ಪಶ್ಚಿಮ ಕರಾವಳಿಯಲ್ಲಿ ೧೯೧೦ರ ಲಾಗಾಯ್ತು ನಡೆಯುತ್ತಿದ್ದು ಈಗ ಅದಕ್ಕೆ ಸಂಬಂಧಪಟ್ಟ ೬೨ ಖಾಸಗಿ ಕಾರ್ಖಾನೆಗಳಿವೆ ಅವುಗಳಲ್ಲಿ ವರ್ಷಂಪ್ರತಿ, ಮೀನು ಹೆಚ್ಚಿಗೆ ಸಿಕ್ಕುವ ವರ್ಷಗಳಲ್ಲಿ ಅರ್ಧ ಕೋಟಿ ರೂಪಾಯಿಯ ವ್ಯಾಪಾರವೂ, ಇತರ ಸಾಧಾರಣ ವರ್ಷಗಳಲ್ಲಿ ಸರಾಸರಿಯಾಗಿ ಹತ್ತು ಲಕ್ಷ ರೂಪಾಯಿಯ ವ್ಯಾಪಾರವೂ ನಡೆಯುತ್ತದೆ ಫಿಶ್ಶರಿಸ್ ಇಲಾಖೆಯವರು ನಡೆಸಿದ ಶೋಧನಾಕಾರ್ಯಗಳ ಫಲವಾಗಿಯೇ ಈ ಕೈಗಾರಿಕೆಯು ಅಭಿವೃದ್ಧಿಗೆ ಬಂದದ್ದಾಗಿರುತ್ತದೆ

ಕಳೆದಯುದ್ಧದ ನಂತರ, ಪಾಶ್ಚಾತ್ಯದೇಶಗಳಲ್ಲಿ ಕೃಷಿಗಾರರು ಒಂದು ಬಗೆಯ ಮೀನಿನ ಹಿಟ್ಟನ್ನು ತಯಾರಿಸಿ ಸಂಗ್ರಹ ಮಾಡಿಟ್ಟುಕೊಳ್ಳುತ್ತಾರೆ ಇದಕ್ಕೆ ಸಂಬಂಧಿಸಿದ ಕೈಗಾರಿಕೆಯು ಅಲ್ಲೀಗ ಪ್ರಾಮುಖ್ಯತೆಯನ್ನು ಪಡೆದಿರುತ್ತದೆ ಈ ಕೈಗಾರಿಕೆಯನ್ನು ಇತ್ತೀಚೆಗೆ ಹಿಂದೂದೇಶದಲ್ಲಿ ಆರಂಭಿಸಿದ್ದಾರೆ ದಕ್ಷಿಣ ಹಿಂದೂ ದೇಶದಲ್ಲಿ ತಯಾರಿಸಿದ ಮೀನಿನ ಹಿಟ್ಟನ್ನು ಈಗ ಹಿಂದೂದೇಶದ ಎಲ್ಲಾ ಕಡೆಗಳಲ್ಲಿಯೂ ಬರ್ಮಾದಲ್ಲಿಯೂ ಕಾಣಬಹುದು

ದಕ್ಷಿಣ ಹಿಂದೂದೇಶದ ಮೀನೆಣ್ಣೆಗಳಲ್ಲಿ ವಿಟಾಮಿನ್ ಎಂಬ ದೇಹಪೌಷ್ಟಿಕ ಪದಾರ್ಥವು ಎಷ್ಟಿದೆಯೆಂದು ನೋಡಲಿಕ್ಕೆ ಶೋಧನೆಗಳನ್ನು ನಡೆಸುತ್ತ 'ಕೊಡಲೀವರ' ಎಣ್ಣೆಯ ಬದಲಾಗಿ ಔಷಧೋಪಯೋಗಕ್ಕೆ ಬೇರೆ ಅಗ್ಗದ ಒಳ್ಳೇತರದ ಎಣ್ಣೆ ತಯಾರಿಸಬಹುದೆಂದು ಈ ಶೋಧನೆಗಳಿಂದ ಕಂಡುಬಂದಿರುತ್ತದೆ ಸಾಮಾನ್ಯ ಜನರ ತಿಂಡಿ ಆಹಾರಗಳಲ್ಲಿ ಎ ವಿಟಾಮಿನು ಕಡಿಮೆಯಾಗಿರುವ ಮುಖ್ಯ ಕೊರತೆಯನ್ನು ಹೋಗಲಾಡಿಸಲಿಕ್ಕೆ ಇದು ಬಹಳ ಉಪಯೋಗಕರವಾಗಿರುತ್ತದೆ ಇದರಿಂದ ಜನರ ಆಹಾರ ಸಂಬಂಧವಾದ ಮತ್ತು ಆರ್ಥಿಕ ತೊಂದರೆಗಳನ್ನು ಹೋಗಲಾಡಿಸಲಿಕ್ಕೂ ಬಹಳ ಸಹಾಯವಾಗಬಹುದು

ಮೀನು ಹಿಡಿಯುವ ಮತ್ತು ಮೀನು ಸಿಗಿಯುವ ಕಸಬುಗಳಲ್ಲಿರುವವರ ಆರ್ಥಿಕ ದುರವಸ್ಥೆಯ ಕುರಿತು ಆಲೋಚಿಸುವಾಗ, ಮೀನಿನ ವ ಮೀನು ಪದಾರ್ಥಗಳ ವ್ಯಾಪಾರವು ಇನ್ನೂ ಅವ್ಯವಸ್ಥಿತ ಸ್ಥಿತಿಯಲ್ಲಿಯೇ ಇರುವದು ಇತ್ತೀಚೆಗೆ ಫಿಶ್ಶರಿಸ್ ಶಾಖೆಯವರ ದೃಷ್ಟಿಗೆ ಬಿತ್ತು ಈ ಆಧಿಪತ್ಯದಲ್ಲಿರುವ ಬೇರೆ ಬೇರೆ ಮಾರಾಟಸ್ಥಳಗಳಲ್ಲಿರುವ ಧಾರಣೆಗಳನ್ನು ಮೀನಿನ ವ್ಯಾಪಾರದ ತಿಳುವಳಿಕೆ ಬಗ್ಗೆ ಪ್ರತಿ ವಾರದಲ್ಲಿ ಪ್ರಕಟಿಸುವ ಕುರಿತು ಈಗ ಒಂದು ಏರ್ಪಾಡನ್ನು ಮಾಡಿರುತ್ತಾರೆ

ಮೀನು ಕಸಬಿನವರ ಮಕ್ಕಳ ಶಿಕ್ಷಣ.

೧೯೩೪-೩೫ರಲ್ಲಿ ಪಶ್ಚಿಮ ಕರಾವಳಿಯಲ್ಲಿ ೨,೪೪೧ ಹುಡುಗರೂ, ೧೫೨೭ ಹುಡುಗಿಯರೂ ಫಿಶ್ಶರಿಸ್‌ಶಾಖೆಯವರು ಸ್ಥಾಪಿಸಿದ ೩೭ ಶಾಲೆಗಳಲ್ಲಿ ಶಿಕ್ಷಣಹೊಂದುತ್ತಿದ್ದರು ಈ ಶಾಲೆಗಳಲ್ಲಿ ಧರ್ಮಾರ್ಥವಾಗಿ ಶಿಕ್ಷಣ ಕೊಡುತ್ತಾರೆ ಈ ಶಿಕ್ಷಣವು ಮೀನುಕಸಬಿಗೆ ಸಂಬಂಧಪಟ್ಟ, ವಿಜಾತೀಯವಾದ ಶಿಕ್ಷಣವಾಗಿರುತ್ತದೆ ಮೀನು ಕಸಬಿಗೆ ಸಂಬಂಧಪಟ್ಟ ಎಲ್ಲಾ ಸಾಧನಗಳಲ್ಲಿ ಚೆನ್ನಾಗಿ ತರಬೇತಿಯಾದ ಶಿಕ್ಷಿತರು ದೊರಕುವಂತೆ ಕಲ್ಲಿಕೋಟೆಯಲ್ಲಿ ಶಿಕ್ಷಕ ತರಬೇತಿಯ ವಿಶೇಷತರದ ಸಂಸ್ಥೆಯೊಂದನ್ನು ಸ್ಥಾಪಿಸಿದ್ದಾರೆ.

ಈ ವಿಜಾತೀಯವಾದ ಶಿಕ್ಷಣದ ಪ್ರಯೋಜನವು ತಮಗೂ ದೊರಕಬೇಕೆಂದು ತಮಿಳ ಜಿಲ್ಲೆಯಲ್ಲಿರುವ ಮೀನು ಕಸಬಿನವರು ಹೇಳಿಕೊಂಡದ್ದರಿಂದ ತಿನ್ನವೆಲ್ಲಿಜಿಲ್ಲೆಯಲ್ಲಿರುವ ಮೀನು ಕಸಬಿನವರ ಶಾಲೆಗಳ ಶಿಕ್ಷಕರನ್ನು ಈ ವರ್ಷ ಈ ತರಬೇತಿ ಸಂಸ್ಥೆಗೆ ಹೊಸತಾಗಿ ಸೇರಿಸಿಕೊಂಡಿದ್ದಾರೆ

ಹಿಂದೂದೇಶದಲ್ಲಿ ಕೊಡುವ ಶಿಕ್ಷಣದಲ್ಲಿ ಪ್ರಕೃತಿಶಾಸ್ತ್ರದ ಕುರಿತು ಹೆಚ್ಚಿನ ವಿಚಾರವಿರುತ್ತಿದ್ದಿಲ್ಲ ಆದರೆ ಇಲ್ಲಿ, ಈ ಶಾಸ್ತ್ರಾಭ್ಯಾಸವನ್ನು ಪ್ರೋತ್ಸಾಹಿಸಬೇಕೆಂದು ಸರಕಾರದವರು ಮದ್ರಾಸಿನಲ್ಲಿ ಜಲಜಂತು ಪ್ರದರ್ಶನಾಲಯವನ್ನಿಟ್ಟು ಹಿಂದೂದೇಶದಲ್ಲಿಯೂ ಬರ್ಮಾದಲ್ಲಿಯೂ ಇರುವ ಎಲ್ಲಾ ಶಾಲೆ ಉಚ್ಚ ಶಾಲೆ ವ ಪ್ರದರ್ಶನಾಲಯಗಳಿಗೆ ಶಿಕ್ಷಣದ ಕುರಿತು ಪ್ರಯೋಜನಕ್ಕೆ ಬೀಳುವ ನಾನಾ ತರದ ಜೀವ ಜಂತುಗಳನ್ನು ಕಳುಹಿಸುತ್ತಾರೆ. ಪೌರ್ವಾತ್ಯದೇಶಗಳಲ್ಲೆಲ್ಲಿಯೂ ಮದ್ರಾಸಿನಲ್ಲಿರುವ ತರದ ಜಲಜಂತು ಪ್ರದರ್ಶನಾಲಯಗಳಿಲ್ಲ ಶಾಲೆಗಳಿಗೆ, ಪ್ರದರ್ಶನಾಲಯಗಳಿಗೆ ಹೀಗೆ ಜೀವಜಂತುಗಳನ್ನು ಫಿಶ್ಶರಿಸ್‌ಶಾಖೆಯವರೇ ಹೆಚ್ಚಾಗಿ ಕಳುಹಿಸಿಕೊಡುವಂದುದ್ದು

ಮೀನು ಕಸಬಿನವರ ಆರ್ಥಿಕ ವ ನೈತಿಕ ಉನ್ನತಿ

ಶಿಕ್ಷಣ ಪ್ರಚಾರದಿಂದಲೂ ಸಹಕಾರ ಸಂಘಗಳ ಸ್ಥಾಪನೆಯಿಂದಲೂ ಮೀನು ಕಸಬಿನವರ ಉದ್ಧಾರವನ್ನುಂಟುಮಾಡುವದು ಫಿಶ್ಶರಿಸ್‌ಶಾಖೆಯ ಕರ್ತವ್ಯಗಳಲ್ಲಿ ಒಂದಾಗಿದೆ ಫಿಶ್ಶರಿಸ್ ಶಾಖೆಯವರು ೧೯೧೪ನೇ ವರ್ಷದಂದಿನಿಂದ ಮೀನು ಕಸಬಿನವರ ಹೊಸ ಸಂಘಗಳನ್ನು ಸ್ಥಾಪಿಸಿ ಅವುಗಳ ಜಾಗ್ರತೆಯ ಕುರಿತು ಸಹಕಾರ ಶಾಖೆಯೊಂದಿಗೆ ಸೇರಿ ಕೆಲಸ ಮಾಡುತ್ತಿದ್ದಾರೆ ೧೯೩೪-೩೫ರ ಅಂತ್ಯದಲ್ಲಿ ಹೀಗೆ ಅವರ ಸಂಘಗಳು ಪಶ್ಚಿಮ ಕರಾವಳಿಯಲ್ಲಿ ೪೯, ಪೂರ್ವ ಕರಾವಳಿಯಲ್ಲಿ ೨೧ ಇದ್ದವು ಪುಟ ೧೭ ನೋಡಿ

ಪೇ ಟೆ ಧಾ ರ ಣೆ

ಸಾಮಗ್ರಿಗಳು	ಮಂಗಳೂರು ಇಂದ	ಮಂಗಳೂರು ವರೆಗೆ	ಉಡುಪಿ ಇಂದ	ಉಡುಪಿ ವರೆಗೆ
ರಾಶಿ ಅಕ್ಕಿ ...	3 – 6	3—10	3— 0	3— 4
ಮಸ್ಕತಿ ..	3— 8	4 4	3 -12	4— 4
ಗೆಂಡ್ಡು ಸುಗ್ಗಿ ...	3—10	3 – 14	3— 0	3— 4
ಸೂರ ಅವ್ವಲ್ ಬೆಳ್ತಿಗೆ ...	4 – 0	4 – 4	4— 0	4— 8
ರಂಗೂನು ಬಿ ಗೋ ೧ಕ್ಕೆ	7— 0	7— 4	7— 0	7— 8
ಗೋಧಿ ಗೋಣಿ ೧ಕ್ಕೆ ..	11 — 0	13— 0	13 – 8	14— 0
ತೊಗರಿ ಗೋಣಿ ೧ಕ್ಕೆ	9— 8	12— 8	12— 0	13— 0
ಹುರುಳಿ ಗೋಣಿ ೧ಕ್ಕೆ ...	5 – 0	5— 6	5— 0	5— 8
ಕಡಲೆ ಗೋಣಿ ೧ಕ್ಕೆ ..	8— 0	12— 8	8— 8	8 12
ತೊಗರಿಬೇಳೆ ಗೋಣಿ ೧ಕ್ಕೆ	11— 0	19— 0	11— 0	17 – 0
ಉದ್ದು ಗೋಣಿ ೧ಕ್ಕೆ ..	9— 0	9 – 8	8— 4	8— 8
ಹೆಸರು ಗೋಣಿ ೧ಕ್ಕೆ ..	7 –12	8— 0	9— 4	9— 8
ಉರುಬೆಲ್ಲ ಖಂಡಿ ೧ಕ್ಕೆ ..	30— 0	32— 8	20— 0	30— 0
ಉಪ್ಪು ಗೋಣಿ ೧ಕ್ಕೆ ..	4 2	5— 4	4— 4	4—12
ಕೊಬ್ರಿ ಖಂಡಿ ೧ಕ್ಕೆ ...	75 – 0	84— 0	75 – 0	85— 0
ಕೊಬ್ರಿ ಹಿಂಡಿ ಖಂಡಿ ೧ಕ್ಕೆ	26— 8	28 – 8	27— 0	28— 8
ಎಳ್ಳಿಂಡಿ ಖಂಡಿ ೧ಕ್ಕೆ .	26 – 4	27— 8	20— 0	21— 4
ಕೊಬ್ರಿ ಎಣ್ಣೆ ಮಣ ೧ಕ್ಕೆ	6 – 0	7— 0	7 – 0	7—12
ಎಳ್ಳೆಣ್ಣೆ ಮಣ ೧ಕ್ಕೆ	7— 0		6 – 0	6— 4
ಚಿಮಿಣಿ ಎಣ್ಣೆ ಪೆಟ್ಟಿಗೆ ೧ಕ್ಕೆ	6 – 5	7 – 5	6— 2	6— 8
ಮೋರಿಸ ಸಕ್ಕರೆ ಮ ೧ಕ್ಕೆ	3— 2	3— 4	2- 15	3— 2
ಮೆಣಸು .	2— 8	5— 0	3 – 0	3— 4
ಸಾಸಿವೆ ಮುಡಿ ೧ಕ್ಕೆ .	5— 4	5 8	5— 8	5—12
ಕೊತ್ತಂಬರಿ ಮುಡಿ ೧ಕ್ಕೆ	2 – 8	3— 0	2—12	3— 8
ಕಾಳುಮೆಣಸು ಖ ೧ಕ್ಕೆ .	100— 0	120 – 0	110 0	120 – 0
ಗೇರುಬೀಜ ಮು ೧ಕ್ಕೆ ..	3 4	3 – 8	4— 4	...
ಕಬ್ಬಿಣ ಖಂಡಿ ೧ಕ್ಕೆ ..	35 – 0	37— 8	45— 8	50— 0
ತಾಂಬ್ರ ತಗಡು ಮ ೧ಕ್ಕೆ	12— 4	12— 8	14— 8	...
,, ಪಾತ್ರಗಳು ಮ ೧ಕ್ಕೆ	12 – 8	14— 0	16— 0	17— 0
ಬೀಸಿ ಬೆಳ್ಳಿ ಸೇರು ೧ಕ್ಕೆ ...	13— 8	15— 0	13 -12	14- 0
ಹಿತ್ತಾಳೆ ತಗಡು ಮ ೧ಕ್ಕೆ	10 – 0	10 – 8	11— 0	..
ಪವನು ೧ಕ್ಕೆ .	22 – 7	22— 8	22— 8	...
ಹುಣಸೆ ಹುಳಿ ಖಂಡಿ ೧ಕ್ಕೆ	40 – 0	45 – 0	45 -- 0	50— 0
ನೇಟಿವ್ ಕಾಫಿ ಖಂಡಿ ೧ಕ್ಕೆ	170 – 0	180 – 0	160 – 0	170— 0
ಫಿಟೇರಿ ಕಾಫಿ ಖಂಡಿ ೧ಕ್ಕೆ	175— 0	195— 0	170 – 0	187— 8
ಮಡಿಕೇರಿ ಏಲಕ್ಕಿ ..	50 – 0	55— 0	70— 0	75— 0
ತುಪ್ಪ ಮಣ ೧ಕ್ಕೆ ...	17 – 0	18 — 0	14— 0	15— 0
ಏಲಕ್ಕಿ ಬೀಜ ಮಣ ೧ಕ್ಕೆ	80— 0	85— 0	70— 0	80 – 0

ಪ್ರಾಮುಖ್ಯ ಪ್ರಕಟಣೆ

ಅಮೃತಾಂಜನ

— ಡಿಪೋವಿನ ರಿಂಗ್‌ವರ್ಮ್ ಮುಲಾಮು —

ಇಷ್ಟರ ವರೆಗಣ ನಮ್ಮ
ವಿಲಿಯಮ್ ಎಂಡ್ ಕೋ ರವರ
ರಾಜ ಮತ್ತು ರಾಣಿಯ ಟ್ರೇಡ್‌ಮಾರ್ಕಿನ, ರಿಂಗ್‌ವರ್ಮ್
ಮುಲಾಮು ಈ ಕೆಳಗಣಂತೆ ವ್ಯತ್ಯಾಸಮಾಡಲಾಗಿದೆ.

ಅಮೃತಾಂಜನ ಡಿಪೋವಿನ ತ್ರಿವರ್ಣದ 'ರೈಸಿಂಗ್ ಸನ್'

ಈ ಮೇಲಿನ ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು
ನಮ್ಮ ಗಿರಾಕಿದಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು.

ನಮ್ಮ ಟ್ರೇಡ್‌ಮಾರ್ಕಿನ ಮಾರ್ಪಾಟದಿಂದ ನಮ್ಮ ಔಷಧ ತಯಾರಿಯಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲೆಂಬ ಕುರಿತು ನಾವು ಈ ಮೂಲಕ ಭರವಸೆ ಕೊಡುತ್ತೇವೆ.

ಅಮೃತಾಂಜನ ಡಿಪೋ, --- ಬೊಂಬಾಯಿ, ಮದ್ರಾಸು, ಕಲ್ಕತ್ತ

ಕೇವಲ ಎರಡೇ ಆಣೆಗಳಲ್ಲಿ ೨೫ ರೂಪಾಯಿ ಬಹುಮಾನ

ಅಖಿಲ ಕನ್ನಡ ನಾಡಿಗೆ ಪ್ರೀತಿಯಾಗಿರುವ

ಕಥಾಕುಂಜ (ಮಾಸಪತ್ರಿಕೆ)

ನಯನಮನೋಹರವಾಗಿ ಹೊಸ ಹೊಸ ಸಿವರ್ಣಚಿತ್ರಗಳಿಂದ ಅಲಂಕೃತವಾಗಿ ಡಿಸೆಂಬರದಲ್ಲಿ ೩ನೆಯ ವರುಷದ ೧ನೆಯ ಸಂಚಿಕೆಯು ಪ್ರಕಟವಾಗುವದು. ಆದ್ದರಿಂದ ಕನ್ನಡಾಭಿಮಾನಿಗಳು ಈಗಲೆ ಮುಂಗಡ ಹಣ ಕಳುಹಿಸಿ ಚಂದಾದಾರರಾಗಬೇಕು.

ಚಂದಾದಾರರಿಗೆ ೨೫ ರೂಪಾಯಿ ಬಹುಮಾನ.

ಈ ಸಂಧಿ ಕಳಕೊಳ್ಳಬಾರದು. ಕಥಾಕುಂಜವನ್ನು ಕೊಂಡುಕೊಳ್ಳಲು ಎಲ್ಲರಿಗೂ ಅನುಕೂಲವಾಗಲೆಂದು ಚಂದಾ ಹಣವನ್ನು ಇಳಿಸಲಾಗಿದೆ.

ಇಳಿಸಿದ ಚಂದಾ ೧-೮-೦ (ಅಂಚವೆಚ್ಚ ಬೇರೆ) ಶಾಲೆ, ಕಾಲೇಜು, ಲೈಬ್ರರಿಗಳಿಗೆ ೨-೮-೦

ಮೈಸೂರು, ಮುಂಬೈ ವಿದ್ಯಾಖಾತೆಯವರಿಂದ ಶಾಲೆ ಕಾಲೇಜುಗಳ ವಾಚನಾಲಯಕ್ಕೆ ಮಂಜೂರಾಗಿದೆ. ಜಾಹೀರಾತುದಾರರಿಗೆ ಸುವರ್ಣಸಂಧಿ! ಪತ್ರಿಕೆಗಳನ್ನು ಮಾರಾಟಮಾಡಲು ಎಲ್ಲಾ ನಗರಗಳಲ್ಲಿ ಪ್ರಾಮಾಣಿಕ ಏಜಂಟರು ಬೇಕು.

ವಿಶೇಷ ಮಾಹಿತಿ ಹಸ್ತಪತ್ರಿಕೆ ನೋಡಿರಿ.

ವ್ಯವಸ್ಥಾಪಕ— **ಕಥಾಕುಂಜ, ಬೆಳಗಾಂವಿ.**

DIAMONDS! DIAMONDS!!

K. Ramachandra Krishna Shet

Near Mission High School, *Mangalore*

SUPERFINE UP TO DATE CUTTING! **ವಜ್ರಗಳು** BEST BRILLIANCY!!

ಉತ್ಕೃಷ್ಟ ತರಗತಿಯ ಚುನ್ನಾತ (first quality, selected) ಎಮ್ಸ್ಟರ್ಡಮ್ಮಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ. ಕೊಂಡುಕೊಳ್ಳುವವರಿಗೆ ಬಜಾರ ಧಾರಣೆಗಿಂತ 5 ಪರ್ಸಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ. ಇದನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ. ಇದರ ಶಾಖೆಯೊಂದನ್ನು ಗವರ್ನಮೆಂಟ್ ಕೊಲೇಜಿನ ಎದುರುಗಡೆ ತೆರೆಯಲಾಗಿದೆ.

ಕೆ. ರಾಮಚಂದ್ರ ಕೃಷ್ಣ ಶೇಟ್,
ಜುವೆಲರ್, ಮಿಶನ್ ಹೈಸ್ಕೂಲು ಬಳಿ, ಮಂಗಳೂರು.

ಕಿರಿಯರ ಪ್ರಪಂಚ

೧	ನಾಡಕಥೆ	೦	೨	೦
೨	ಮುಂದಿನ ದೇವರು	೦	೨	೦
೩	ಸ್ವತಂತ್ರ ಜೀವನೋಪಾಯ	೦	೨	೬
೪	ಕುಶ-ಲವ ...	೦	೪	೦
೫	ಸಂಶಯ ಪಿಶಾಚಿ ..	೦	೬	೦
೬	ಕಾವ್ಯಸಾಮ್ರಾಜ್ಯ ...	೦	೧೨	೦
೭	ಮಧುವನ ...	೧	೮	೦
೮	ವ್ಯಭಿಚಾರಿಣಿ ಯಾರು	೦	೮	೦

ಕಿರಿಯರ ಪ್ರಪಂಚ, ಉಡುಪಿ.

ಭಾಷಾಂತರಕಾರರು

ದೊರೆಯದೆ ಪೇಚಾಡುವಿರೇಕೆ?

ಇನ್ಶೂರೆನ್ಸ್ ಕಂಪೆನಿ, ಬ್ಯಾಂಕು ಮೊದಲಾದುವುಗಳಿಗೆ ಸಂಬಂಧಪಟ್ಟ ಮತ್ತು ಇತರ ಎಲ್ಲಾ ತರದ ಇಂಗ್ಲಿಷ್ ಕನ್ನಡ ಭಾಷಾಂತರಗಳನ್ನು ಉತ್ತಮ ರೀತಿಯಿಂದ ಮಾಡಿಕೊಡಲಾಗುವುದು. ಹೆಚ್ಚಿನ ವಿವರಕ್ಕೆ ಈ ಕೆಳಗಿನ ವಿಳಾಸದೊಡನೆ ಪತ್ರವ್ಯವಹಾರ ಮಾಡಬೇಕು.

'ಟ್ರಾನ್ಸ್‌ಲೇಟರ್,'
C/o 'ಕಿರಿಯರ ಪ್ರಪಂಚ,'
ಉಡುಪಿ.

ಉತ್ತಮ ವರ್ಗದ ಶ್ರೇಷ್ಠವಾದ

ಸರಸ್ವತಿ

ಸ್ತ್ರೀಸಾಹಿತ್ಯ ಸಚಿತ್ರ ಮಾಸಪತ್ರಿಕೆ

ಇಡೀ ಕರ್ಣಾಟಕದಲ್ಲಿ ಸ್ತ್ರೀಯರ ಅಭ್ಯುದಯಕ್ಕಾಗಿ ಪ್ರಚುರಪಡಿಸುತ್ತಿರುವ ಪತ್ರಿಕೆಯು ಇದೊಂದೇ. ಈ ಪತ್ರಿಕೆಯ ಹದಿನಾರನೆಯ ಸಂಪುಟವು 1937ನೇಯ ಜನವರಿ ತಿಂಗಳಿನಿಂದ ಪ್ರಾರಂಭವಾಗಿದೆ. ಈ ಪತ್ರಿಕೆಯಲ್ಲಿ ಸ್ತ್ರೀಯರ ಉನ್ನತಿಗೆ ಅತ್ಯಾವಶ್ಯಕವಾದ ಶಿಕ್ಷಣ-ಸಾಹಿತ್ಯ-ಕಲೆ-ಆರೋಗ್ಯ-ಪಾಕಶಾಸ್ತ್ರ-ಸಮಾಜ ಸುಧಾರಣೆ ಇವುಗಳಿಗೆ ಸಂಬಂಧಪಟ್ಟ ಲೇಖನಗಳೂ, ಸಣ್ಣ ಸಣ್ಣ ಕಥೆಗಳೂ, ನಾಟಕಗಳೂ ಕರ್ಣಾಟಕದ ಸುಪ್ರಸಿದ್ಧ ಲೇಖಕ ಲೇಖಕಿಯರಿಂದ ಬರೆಯಲ್ಪಟ್ಟು ಪ್ರಕಟವಾಗುವವು. ಮಕ್ಕಳ ಸಲುವಾಗಿ 'ಮಕ್ಕಳ ಪುಟಗಳು' ಬೇರೆ ಪ್ರಕಟವಾಗುವುವು. ಮೈಸೂರು, ಮುಂಬೈ ವಿದ್ಯಾ ಇಲಾಖೆಯವರಿಂದ ಸರ್ಕಾರದ ಶಾಲೆಗಳಿಗೂ ವಾಚನಾಲಯಗಳಿಗೂ ಮಂಜೂರಾಗಿದೆ. ಪ್ರಕಟಣೆಗೆ ಅತ್ಯುತ್ತಮವಾದ ಮಾಸಪತ್ರಿಕೆ.

ವಾರ್ಷಿಕ ಚಂದಾ ರೂ 3—0—0 ಮಾತ್ರ. ವಿ. ಪಿ. ಹಾಸಲು ಬೇರೆ.

ಸರಸ್ವತಿ ಕಾರ್ಯಾಲಯ,
ಚಾಮರಾಜಪೇಟೆ, ಬೆಂಗಳೂರು ನಗರ

ದಿ ನ್ಯೂ ಗ್ಲಾಸ್ ಎಂಪೋರಿಯಮ್

ಪೋಸ್ಟಾಫೀಸ್ ರೋಡ್, ಉಡುಪಿ

ನಮ್ಮಲ್ಲಿ ಎಲ್ಲಾ ತರದ ಗ್ಲಾಸ್‌ವೇರ್, ಎನಾಮಲ್‌ವೇರ್ ಪೋರ್ಸಿಲಿನ್‌ವೇರ್, ಲೇಂಪ್ಸ್ ಲಾಟೀನು, ಪೆಟ್ರೊಮೇಕ್ಸ್ ಇತ್ಯಾದಿ ಎಲ್ಲಾ ತರದ ಸಾಮಾಗ್ರಿಗಳು ಮತ್ತು ಹೊಟೇಲು-ಹೊಸ್ಟೆಲುಗಳಿಗೆ ಉಪಯುಕ್ತವಾದ 'ಟೀಸೆಟ್' ಕಪ್-ಸಾಸರ್, ಪ್ಲೇಟ್ಸ್, ಥರ್ಮಸ್‌ಫ್ಲಾಸ್ಕ್, ಜಗ್, ಟ್ರೇಪ್ಲವರ್ ವೇಜ್, ಮತ್ತು ಪ್ರಜಂಟೇಶನ್ ಬಗ್ಗೆ ನಾನಾತರದ ಚಲೋ ಪೆನ್ನಿ, ಗ್ಲಾಸ್‌ವೇರ್ ಸಾಮಾನುಗಳೂ ಸದಾ ಕಡಿಮೆ ಬೆಲೆಗೆ ಸಿಕ್ಕುವುವು

ನಾವು ಹೊಸತಾಗಿ ಎಲ್ಲಾ ಸಾಮಾನುಗಳನ್ನು ಡೈರೆಕ್ಟ್ ತರಿಸಿರುವುದರಿಂದ ಯಾವತ್ತೂ ಸಾಮಾನುಗಳು ಕಡಿಮೆ ಬೆಲೆಗೆ ಕೊಡಲು ಅನುಕೂಲವಿದೆ ಕಾರಣ ಗ್ರಾಹಕರು ಸ್ವತಹಾ ನಮ್ಮ 'ಶೋರೂಮ್'ನ್ನು ಸಂದರ್ಶಿಸಿ ಮಾಲನ್ನೂ, ದರಗಳನ್ನೂ ಪರಿಶೀಲಿಸಿ ಕೊಂಡುಕೊಳ್ಳಬೇಕಾಗಿ ವಿನಂತಿ.

THE GENERAL STORES, UDIPI

The only Reliable House for quality goods of every description

ದೀರ್ಘಕಾಲದ ರೋಗಗಳಿಂದ ಇನ್ನೂ ಇನ್ನೂ ವೃಥಾ ನರಳುತ್ತಿರುವುದೇಕೆ?

ನಾಯಕ್ ಬ್ರದರ್ಸರ ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ.ಕ.

ಇವರ ಅತ್ಯಮೂಲ್ಯವಾದ ಔಷಧಗಳ ಸೇವನೆಯಿಂದ ಶೀಘ್ರದಲ್ಲೇ ಗುಣಹೊಂದಬಹುದಲ್ಲವೇ?

ಇವರ ಔಷಧಗಳ ವೈಶಿಷ್ಟ್ಯ ಏನು?

ದೇಶೀಯ ಉದ್ಯಮ
100 ವರ್ಷಗಳ ಅನುಭವದಿಂದ ತಯಾರಿ.
ಶಾಸ್ತ್ರೀಯ ರೀತಿಯ ಸಿದ್ಧತೆ.
ಅತ್ಯಂತ ಗುಣಕಾರಿ.
ಸ್ವರ್ಣ, ರಜತಪದಕಗಳನ್ನು ಪಡೆದ ದಿವ್ಯೌಷಧಗಳು.
ಅತ್ಯಂತ ಕಡಿಮೆ ಬೆಲೆ.

ಭುವನೇಂದ್ರ ತ್ರೈರತ್ನಗಳು

ಗುಡಪಿಪ್ಪಲಿ
(ಮಕ್ಕಳ ಲೀವರ್ ರೋಗಕ್ಕೆ ಅತ್ಯುತ್ತಮ)

ಗರ್ಭಪಾಲ
(ಗರ್ಭಶೂಲೆ, ಗರ್ಭಸ್ರಾವಕ್ಕೆ ದಿವ್ಯೌಷಧ)

ಚಂದ್ರಮಸ್
(ಪಾಂತಿಭೇದಿ, ಅತಿಸಾರಗಳ ವೈರಿ
(ಅತ್ಯಂತ ಗುಣಕಾರಿ)

ಶಾಸ್ತ್ರೀಯರೀತ್ಯಾ ತಯಾರಿಸಿದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲಗಳು—ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ
ನಮ್ಮ ಪ್ರತಿನಿಧಿಗಳಿಲ್ಲದ ಕಡೆಗಳಲ್ಲಿ ವ್ಯವಹಾರಕುಶಲರೂ, ವ್ಯಾಪಕರೂ, ಯೋಗ್ಯರೂ ಆದ ಏಜಂಟರು ಬೇಕು ಅವರಿಗೆ ವಿಪುಲವಾದ ಸೌಕರ್ಯಗಳಿವೆ.

ಹೆಚ್ಚಿನ ಮಾಹಿತಿಗೂ, ಸೂಚಿಪತ್ರಕ್ಕೂ, ವ್ಯವಹಾರನಿಯಮಕ್ಕೂ ಬರೆಕೊಳ್ಳಿರಿ.

ಪ್ರೇಮ ವಿದ್ಯಾಪೀಠ, ತುಂಗಭದ್ರಾ, (ಬಳ್ಳಾರಿ ಜಿಲ್ಲಾ)

ಇದರ ಹೊಸವರ್ಷವು ಜುಲೈಯಲ್ಲಿ ಮೊದಲಾಗುತ್ತದೆ. ಮಹಾರಾದಿಯ ಉದ್ಯೋಗ ಬೇಕಾಗಿದ್ದರೆ ಇಲ್ಲಿ ಶಿಕ್ಷಣವನ್ನು ಪಡೆಯಿರಿ. ಮುಲ್ಕಿ, ಅಪ್ಪರ್ ಸೆಕೆಂಡರಿ, ಮೆಟ್ರಿಕ್ ಸ್ಕೂಲ್ ಫೈನಲ್ ಇತ್ಯಾದಿ ಪಾಸ್ ಆದವರಿಲ್ಲರಿಗೂ ಯೋಗ್ಯತೆಗೆ ತಕ್ಕಂತೆ ವಿಧ ವಿಧವಾದ ಕೋರ್ಸ್‌ಗಳಿವೆ. ಪ್ರಾಸ್‌ಪೆಕ್ಟಸ್ ಮಾಹಿತಿಗಾಗಿ ಕೂಡಲೆ ೨ ಆಣೆ ಸ್ಟಾಂಪು ಇಟ್ಟು ಬರೆಯಿರಿ.

ಮಹೋಪಾಧ್ಯಾಯಾ ಡಾ| ಸುಮತಿಬಾಯಿ,

ಬಿ. ಎ ಎಲ್. ಟಿ., ಎಫ್. ಪಿ. ಎಮ್. ಎಸ್, ಭಿಷಗ್ರತ್ನ, ರಿಜಿಸ್ಟ್ರಾರ್-

ನ್ಯೂ ಕೋಮಲ ವಿಲಾಸ ಹೊಟೆಲ್

91-101 ಕೆವಾಸ್ಜಿ ಪಟೇಲ್ ಸ್ಟ್ರೀಟ್, ಫೋರ್ಟ್, ಬೊಂಬಾಯಿ

ನೀವು

ಬೊಂಬಾಯಿಯನ್ನು ಸಂದರ್ಶಿಸುವಾಗ

ನ್ಯೂ ಕೋಮಲ ವಿಲಾಸ

ಇಲ್ಲಿಯೇ ಉಳಕೊಳ್ಳಿರಿ

ಅತ್ಯಾಧುನಿಕ ರೀತಿಯ ಸಲಕರಣೆಗಳು ಸುಲಭದರದಲ್ಲಿ ದೊರೆಯುತ್ತವೆ!

ನಿಮ್ಮನ್ನು ತೃಪ್ತಿಗೊಳಿಸುವ ಮೇಲ್ಪಚಾರ!

ಕಾಯಂ ಉಳಕೊಳ್ಳುವವರಿಗೆ ರಿಯಾಯತಿಯ ದರಗಳಿವೆ.

ಕುಟುಂಬ ಸಮೇತ ವಾಸಿಸುವವರಿಗೆ ಪ್ರತ್ಯೇಕ ಏರ್ಪಾಡುಗಳಿವೆ.

ಹೆಚ್ಚಿನ ವಿವರಗಳನ್ನು ಕೆಳಗಿನವರಿಂದ ತಿಳಿಯಿರಿ.

ಕೆ. ವಿ. ರಾವ್, ಮೆನೇಜರ್.

ವಿಶ್ವವಾಣಿ

ಸಂಪಾದಕರು:—ಅ. ನ. ಕೃಷ್ಣರಾಯರು.

ಸಂಸ್ಕೃತಿಯ ಪ್ರಸಾರಕ್ಕಾಗಿ ಕರ್ನಾಟಕದಲ್ಲಿ ಹೊರಟಿರುವ ಪತ್ರಿಕೆ ಇದೊಂದೇ; ಜಗತ್ತಿನ ಸಾಂಸ್ಕೃತಿಕ ಚಲನವಲನಗಳ ಸುದ್ದಿಗಳೆಲ್ಲಾ ಇದರಲ್ಲಿ ಪ್ರಕಟವಾಗುತ್ತವೆ.

ಚಿತ್ರವಿಭಾಗದ ವೈಶಿಷ್ಟ್ಯ—ಜಗತ್ತಿನ ಯಾವದೇ ಪತ್ರಿಕೆಯಲ್ಲಿಯೂ ಪ್ರಕಟವಾಗದಿರುವ ಅನೇಕ ಚಿತ್ರಗಳು 'ವಿಶ್ವವಾಣಿ'ಗೆ ಮೀಸಲು.

ಆದುದರಿಂದ ಇಂದೇ ಚಂದಾದಾರರಾಗಿರಿ.

ಸಾಮಾನ್ಯ ಚಂದಾದಾರರಿಗೆ (ವರ್ಷಕ್ಕೆ)	... ...	ರೂ. ೩—೮—೦
,, ,, (೬ ತಿಂಗಳಿಗೆ)	... ...	ರೂ. ೨—೦—೦
ಶಾಲೆ, ಕಾಲೇಜು, ವಾಚನಾಲಯ, ಸಾರ್ವಜನಿಕ ಸಂಸ್ಥೆಗಳಿಗೆ (ವರ್ಷಕ್ಕೆ)		ರೂ. ೫—೦—೦

ವಿಶ್ವವಾಣಿಯು ಮೈಸೂರು, ಮುಂಬಯಿ, ಮದರಾಸು, ಹೈದರಾಬಾದು, ಕೊಡಗು, ಕರ್ನಾಟಕಗಳಲ್ಲಿ ಮಾತ್ರವಲ್ಲದೆ ಕನ್ನಡಿಗರು ನೆಲಸಿರುವ ಎಲ್ಲಾ ಕಡೆಯಲ್ಲಿಯೂ ಪ್ರಚಾರವಾಗುತ್ತದೆ.

ಆದುದರಿಂದ 'ವಿಶ್ವವಾಣಿ'ಯಲ್ಲೇ ಜಾಹೀರಾತನ್ನು ಕೊಡಿರಿ.

ಹೆಚ್ಚು ವಿಚಾರಗಳಿಗೆ ಬರೆಯಿರಿ—

ವ್ಯವಸ್ಥಾಪಕ—'ವಿಶ್ವವಾಣಿ,' 'ಅನ್ನಪೂರ್ಣ', ವಿಶ್ವೇಶ್ವರಪುರಂ,

ಬೆಂಗಳೂರು ನಗರ.

ನಮ್ಮ ಜರಿ ಪೀತಾಂಬರ, ರೇಶ್ಮೆ ಮಡಿಗಳಿಗೆ ಗಮನಕೊಡಿರಿ.

S. U. N. & CO. *Choukhamba, Benares City.*

ನೂರು ಇನಾಮುಗಳು.

THIS MAN
WISHES HE HAD

ಶ್ರೀ ಕಾಶಿಯಲ್ಲಿ ತಯಾರಾಗತಕ್ಕ ರೇಶ್ಮೆ ಮಾಲುಗಳ ಕೆಟಲಾಗ್ 1, ಕಾಶೀನಕ್ಷೆ 1, ವಿಶ್ವೇಶ್ವರ ಪಟ 1, ಈ ಸಾಮಾನುಗಳು 1 ಅಣೆಸ್ಟಾಂಪು ಕಳುಹಿಸಿದರೆ ಇನಾಮಾಗಿ ಕಳುಹಿಸಲಾಗುವವು. ಸ್ಟಾಂಪು ಬಾರದಿದ್ದರೆ ಈಗಿನ ಫೇಶನಿಗೆ ತಕ್ಕಂತೆ ಜರೀ ಕೆಲಸಗಳಿಂದ ತಯಾರಿಸಿದ ರೇಶ್ಮೆ ಸೀರೆಗಳೂ, ಖಣ, ಮಡಿ ಕದಪಾವ್ಲಿ, ಪೇಟಾ, ಕೋಟಿಂಗ್, ಶರ್ಟಿಂಗ್ ಶಿಲ್ಕುಗಳೂ, ಕಾಶ್ಮೀರ ಶಾಲುಗಳೂ, ಊಲ್ಲನ್ ಚೌಕ, ಧಾವಳಿ, ನಾಮರ್ದಿ, ತರತರದ ರುದ್ರಾಕ್ಷಿಗಳೂ ಸಾಮಾನುಗಳೇ ಮೊದಲಾದ ಅನೇಕ ತರದ ಸಾಮಾನುಗಳ ಕೆಟಲಾಗು 1 ಮಾತ್ರ ಇನಾಂ. ಈಗಿನ ಹೊಸನಮೂನೆಯ ಪಡಲು ಬುಟ್ಟಿ ಹಾಕಿದ ಜರೀ ಶೀರೆ ಎಲ್ಲಾ ರಂಗುಗಳಲ್ಲಿ ರೂ. 20ರಿಂದ 55 ವಡಲು ಸಾದಾ 16ಮೊಳದ ಶೀರೆ 1ಕ್ಕೆ ರೂ. 16ರಿಂದ ರೂ. 35ರ ವರೆಗೆ. ಅರೆ ಕಡಮೆ 16ಮೊಳ ಕ್ಲವರ್ ಅಂಚು ರೂ. 10½ ಯಿಂದ ರೂ 16, ಖಣ 1ಕ್ಕೆ ರೂ. 1¼ರಿಂದ ರೂ 10ರ ವರೆಗೆ. ಪೋಸ್ಟು ಖರ್ಚು ಪ್ರತ್ಯೇಕ ಆರ್ಡರಿನಂ. ಸಾಮಾನುಗಳನ್ನು ಸರಿಯಾದ ಸುಲಭ ದರದಿಂದ ಕಳುಹಿಸಲಾಗುವುದು

ಶಿರೋಮಣಿ ನಾರಾಯಣಾಚಾರ್ಯ & ಕೆಂಪೆನಿ, ಚೌಕಂಬಾ, ಬೆನಾರಿಸ್, ಕಾಶಿ

USE

SUVASINI AGARBATHIES

(REGD.)

SRI BHARATHA VASTU MANDIRA, UDIPI

For all that is best in Printing Approach

ಕನ್ನಡ
ಮಲೆಯಾಳ
ತಮಿಳು
ತೆಲಗು
ದೇವನಾಗರಿ
ಇಂಗ್ಲಿಷ್

Orders in all Dravidian Scripts, English & Devanagari executed in

ಈ ಎಲ್ಲಾ ಲಿಪಿಗಳಲ್ಲಿ
ನಿಮ್ಮ ಮುದ್ರಣ ಕಾರ್ಯಗಳನ್ನು
ಮುದ್ದಾದ ಮುದ್ರಣಗಳಿಂದ ಅಗ್ಗವಾಗಿ ಮಾಡಿಕೊಡಲು ಸಮರ್ಥವಾದ
ಮುದ್ರಣಾಲಯ ಯಾವುದು?

ಮಣಿಪಾಲ್ ಪವರ್ ಪ್ರೆಸ್

ಮಣಿಪಾಲ್ . . . ಉಡುಪಿ

MANIPAL POWER PRESS

MANIPAL - - - UDIPI

Printed by P. VENKATARAMANACHARYA for & on behalf of SUPPLY AGENCY LTD., at THULUNAD PRESS, UDIPI and Published by K. H SHETTY at "NAVAYUGA" OFFICE, UDIPI.

Registered No. M. 3618

೨೦ ಪುಟಗಳು—ಒಂದಾಣೆ

NAVAYUGA
A Nationalist Kanarese Weekly, UDIPI, S. K.

It will pay you to advertise in 'NAVAYUGA' The Leading Nationalist Kanarese Weekly of Karnatak

FOR RATES OF ADVT. Etc.
APPLY TO THE MANAGER

ವಾಚಕರನೇಕರ ಅಪೇಕ್ಷೆಯಂತೆ ಮುದ್ರಿಸಲ್ಪಟ್ಟ ಮಂಗಳೂರು ಉಡುಪಿಗಳಲ್ಲಿ ಜಯಶೀಲವಾಗಿ ಅಭಿನಯಿಸಲ್ಪಟ್ಟ ಜನಪ್ರಿಯವಾದ ನಾಟಕ

ವ್ಯಭಿಚಾರಿಣಿ ಯಾರು?

ಕೆಲವೇ ಪ್ರತಿಗಳು ಉಳಿದಿವೆ.
ಬೆಲೆ ೦ ೮ ೦
ಕಿರಿಯರ ಪ್ರಪಂಚ, ಉಡುಪಿ

VOL. XXVIII-NO 28

11-3-1937

ಮೂಡ ಬಾನಿನ ಕಣ್ಣು ಕೆಂಗಿಡಿಯು ಕಾರುತಿದೆ,
ಬನದ ನಾಡೊಳು ಮೊಳಗುತಿದೆ ತುಮುಲನಾದ;

ವಾರಪತ್ರಿಕೆ
ಸಂಪಾದಕ: ಕೆ. ಕೆ. ಶೆಟ್ಟಿ.

ಮೂಡುವುದು ತಂಬೆಳಕ ತಿಂಗಳಿನ ಮೊಗವಲ್ಲ,
'ನವಯುಗ'ದ ರುದ್ರರವಿಯ ಆರಕ್ತ ಬಿಂಬ.

ಸಂಪುಟ ೧೬] ಉಡುಪಿ, ಗುರುವಾರ ೧೧ ಮಾರ್ಚಿ, ೧೯೩೭ [ಸಂಚಿಕೆ ೨೮

THE

Canara Industrial & Banking SYNDICATE, LIMITED.

ESTD: [INCORPORATED IN BRITISH INDIA] 1925

Head Office:
MUKUNDA NIVAS,
UDIPI, S. I.

BRANCHES:

1 BANGALORE CITY	16 KARWAR
2 BELGAUM	17 KUMTA
3 BYADGI	18 ANKOLA
4 BELLARY	19 HONAVAR
5 ADONI	20 BHATKAL
6 HOSPET	21 KARKALA
7 NANDYAL	22 BRAHMAVAR
8 PRODATTUR	23 HUNGARCUTTA
9 TADPATRI	24 SIRSI
10 TALIPARAMBA	25 SAGAR
11 HUBLI	26 KANHANGAD
12 GADAG	27 COONDAPOOR
13 UDIPI	28 PAYYANUR
14 UPPINANGADI	29 CANNANORE
15 KASARGODE	30 MANGALORE

A branch at BOMBAY will be opend in April next.

We stand for all that is BEST in MODERN BANKING SERVICE

OPEN AN ACCOUNT TO-DAY IN THIS Pioneer & Highly Progressive BANK OF KARNATAKA AND BE *A SATISFIED CUSTOMER.*

ALL KINDS OF BANKING BUSINESS TRANSACTED ON EASY TERMS.

Total Working Funds exceed Rs. 35 Lakhs

Apply for Rules of Business

'MUKUNDA NIVAS
UDIPI
22—12—1936

P. A. Pai Brothers,
Managing Agents

ದಿ ಕುಂದಾಪುರ ಬೇಂಕ್ ಲಿಮಿಟೆಡ್ ಕುಂದಾಪುರ
ಬ್ರಾಂಚ್—ಬ್ರಹ್ಮಾವರ.

ಚಾಲ್ತಿ ಮತ್ತು ಸೇವಿಂಗ್ಸ್ ಬೇಂಕ್ ಠೇವಣಾತಿಗಳು ಒಳ್ಳೇ ದರದ ಬಡ್ಡಿಯಲ್ಲಿಯೂ ಖಾಯಂ ಠೇವಣಾತಿಗಳು 3 ತಿಂಗಳಿಗೊಮ್ಮೆ ಸಾಲಿಯಾನ್ ಶೇಕಡಾ ರೂಪಾಯಿ 4½, 6 ತಿಂಗಳಿಗೆ ಸಾಲಿಯಾನ್ ಶೇಕಡಾ ರೂಪಾಯಿ 5%, 12 ತಿಂಗಳಿಗೆ ಸಾಲಿಯಾನ್ ಶೇಕಡಾ ರೂಪಾಯಿ 6%, 24 ತಿಂಗಳಿಗೆ ಸಾಲಿಯಾನ್ ಶೇಕಡಾ 6½% ದರದ ಬಡ್ಡಿಯಲ್ಲಿ ಅಂಗೀಕರಿಸಲ್ಪಡುವುವು.

ಒಂದು ವರುಷದ ಯಾ ಹೆಚ್ಚಿಗೆ ಅವಧಿಯ ಖಾಯಂ ಠೇವಣಾತಿಗಳಿಗೆ ಮೇಲೆ ಕಾಣಿಸಿದ ದರದಲ್ಲಿ 6 ತಿಂಗಳಿಗೊಮ್ಮೆ ಬಡ್ಡಿ ಕೊಡಲಾಗುವುದು ಬೇರೆ ಎಲ್ಲಾ ತರದ ಬೇಂಕ್ ವ್ಯವಹಾರಗಳು ನಡಿಸಲ್ಪಡುವುವು. ಕರೆಂಟ್, ಸೇವಿಂಗ್ಸ್ ಬೇಂಕ್ ಮತ್ತು ಕ್ಯುಮುಲೇಟಿವ್ ಠೇವಣಾತಿಗಳು ಅಂಗೀಕರಿಸಲ್ಪಡುವುವು.

ವಿಶೇಷ ಸೂಚನೆ:—ಬಡವರಿಗೆ ಸಹಾಯವಾಗುವಂತೆ [illegible] ರೂಪಾಯಿ 10 ಸಹಾ ಸಾಲಕೊಡಲಾಗುತ್ತೆ. ಸಾಲುಗಳು ದೊರೆಯುತ್ತವೆ. [illegible] ಬರಕೊಳ್ಳಿರಿ.

ನವಯುಗ

ಉಜ್ವಲ ರಾಷ್ಟ್ರೀಯ ವಾರಪತ್ರಿಕೆ—

ಉದ್ಬೋಧಕ ಲೇಖನಗಳಿವೆ, ದೇಶ ವಿದೇಶಗಳ ತಾಜಾ ವರ್ತಮಾನಗಳಿವೆ, ಮನೋಹ್ಲಾದಕ ಕಥೆ, ಕವನ, ನಾಟಕಗಳಿವೆ, ಧುರೀಣರ ಫೋಟೋಗಳಿವೆ.

ಪ್ರತಿ ಗುರುವಾರ ತಪ್ಪದೆ ಪ್ರಕಟವಾಗುವುದು.

ವಾ. ಚ. ಅಂಚೆವೆಚ್ಚ ಸೇರಿ ಕೇವಲ ೩—೪—೦.

ಇಂದೇ ಚಂದಾದಾರರಾಗಿರಿ!

ಅಖಿಲ ಕರ್ನಾಟಕದಲ್ಲಿಯೂ ಹೊರ ಪ್ರದೇಶದಲ್ಲಿಯೂ ವಿಶಾಲವಾಗಿ ಪ್ರಚಾರದಲ್ಲಿರುವ "ನವಯುಗ"ವು ಜಾಹೀರಾತುಗಳಿಗೆ ವಾಹನವಾಗಿದೆ.

ಮೆನೇಜರ್— ನವಯುಗ, ಉಡುಪಿ.

ವಿಜಯನಗರ ಸ್ಮಾರಕೋತ್ಸವ ಮಂಡಲದ ಪರವಾಗಿ ಹೊರಡಲಿರುವ

ಜಯಕರ್ನಾಟಕದ

ವಿಜಯನಗರ ವಿಶೇಷ ಸಂಚಿಕೆ

ವಿಶೇಷ ಸಂಪಾದಕರು: ಪ್ರೊ. ಎಸ್. ಎಸ್. ಮಾಳವಾಡ, ಎಂ.ಎ.

ಅಖಿಲ ಭಾರತದ ಪ್ರಸಿದ್ಧ ವಿದ್ವಾಂಸರ ಲೇಖನವೈಭವ!

ವಿಜಯನಗರಕ್ಕೆ ಸಂಬಂಧಿಸಿದ ಚಿತ್ರಮಾಲೆಗಳ ಐಶ್ವರ್ಯ!!

ಹೊಳಪಿನ ಹಾಳೆ — ಅಚ್ಚಿನ ಅಚ್ಚುಕಟ್ಟು

ಬೆಲೆ: ಎಂಟಾಣೆ ಮಾತ್ರ

ಜಯಕರ್ನಾಟಕವು ಜನವರಿಯಿಂದ—ವಿಶೇಷ ಸಂಚಿಕೆಯಿಂದ ಮೊದಲ್ಗೊಂಡು ದೊಡ್ಡ ಆಕಾರದಲ್ಲಿ (ಡೆಮಿ ¼ ದಲ್ಲಿ) ಹೊರಡುವುದು!

ಅಲ್ಲದೆ ಚಂದಾದರವನ್ನು ಇಳಿಸಿದೆ—ರೂ. ೪—೮—೦ ಮಾತ್ರ!

ಚಂದಾದಾರರಾಗಬೇಕೆನ್ನುವವರಿಗೂ ಜಾಹಿರಾತುದಾರರಿಗೂ ಸುಸಮಯ!

ಜಯಕರ್ನಾಟಕ ಕಾರ್ಯಾಲಯ, ಧಾರವಾಡ.

THE

MOOLKY BANK, LTD.,

MOOLKY.

ದಿ ಮೂಲ್ಕಿ ಬೇಂಕ್, ಲಿಮಿಟೆಡ್,

ಮೂಲ್ಕಿ.

ಗ್ರಾಮಸ್ಥರ ನಡುವೆ ಸ್ಥಾಪಿಸಲ್ಪಟ್ಟು ಅವರ ಹಿತಕ್ಕಾಗಿ ಯತ್ನಿಸುವ ಸಂಸ್ಥೆ.

ಭಂಗಾರ ವ ಸರಕಿನ ಈಡಿನಮೇಲೆ ಸೇಕಡ 7 ವ 8ರ ದರದಲ್ಲಿ ಸಾಲಕೊಡಲಾಗುವುದು

ಸ್ಥಿರಖು ಠೇವಣಾತಿ ಸೇಕಡ 5½ರ ವರೇಗಿನ ಬಡ್ಡಿಯಲ್ಲಿಯೂ, ಸೇವಿಂಗ್ಸ್ ಬ್ಯಾಂಕ್ ಸೇಕಡ 3½ ದರದ ಬಡ್ಡಿಯಲ್ಲಿಯೂ ಅಂಗೀಕರಿಸಲ್ಪಡುವುದು

ಎಲ್ಲಾ ತರದ ಬ್ಯಾಂಕಿಂಗ್ ವಹಿವಾಟಗಳಿಗೆ ನಿಗಾ ಕೊಡುವುದಲ್ಲದೆ ಸಾಲಗಾರರ ಹಿತವು ಸದಾ ನಮ್ಮ ಚಿಂತನಯಾಗಿರುವುದು

M. R Punja, *President & Manager,* — ಯಂ. ಆರ್. ಪೂಂಜ, ಪ್ರೆಸಿಡೆಂಟ್ ಮತ್ತು ಮೆನೇಜರ್.

ತುಳುನಾಡ್ ವೈದ್ಯಶಾಲೆ, ಉದ್ಯಾವರ, ದ. ಕ.

ಕೊಲೆರಾ ಫಿಲ್ಸ್	ಭೈರವ ಮಾತ್ರೆಗಳು
ಕೊಲೆರಾ ರೋಗಕ್ಕೆ ರಾಮಬಾಣ ಔಷಧ.	ಬಾಣಂತಿ ರೋಗಸಂಬಂಧವಾದ ಸಕಲ ರೋಗಗಳಿಗೂ ದಿವ್ಯೌಷಧ.
೧೦೦ ಮಾತ್ರೆಗಳಿಗೆ ರೂ ೩—೮—೦	೧೦೦ ಮಾತ್ರೆಗಳಿಗೆ ರೂ ೨—೮—೦

ಎಲ್ಲಾ ತರದ ರೋಗಗಳಿಗೂ ಅನುಭವಸಿದ್ಧವಾದ ದಿವ್ಯೌಷಧಗಳು ದೊರೆಯುತ್ತವೆ

ಯು ಪಿ ಮೇಸ್ತ್ರಿ, ಗೋಲ್ಡ್ ಮೆಡಲ್ಡ್ ಫಿಜಿಸಿಯನ್.

ಇದೀಗ ಬಂದಿದೆ— ಹೊಸ ಪುಸ್ತಕ!

ಟಾಲಸ್ಟಾಯಿಯವರ ಕತೆಗಳು

ಶ್ರೀ ಎಲ್. ಗುಂಡಪ್ಪ, ಎಂ.ಎ.ಯವರಿಂದ ಅನುವಾದಿಸಲ್ಪಟ್ಟ ಟಾಲಸ್ಟಾಯಿಯವರ ಕಥೆಗಳೆಲ್ಲಾ ಕನ್ನಡದಲ್ಲಿ ಒಟ್ಟಾಗಿ ಅಚ್ಚಾಗಿ ಬಂದಿವೆ. ಈ ಕಥೆಗಳಲ್ಲಿ ಜೀವನಕ್ಕೆ ಸಂಬಂಧಪಟ್ಟ ಎಲ್ಲಾ ಪ್ರಶ್ನೆಗಳ ಚರ್ಚೆಯೂ ಇದೆ. ಆದುದರಿಂದ ಸ್ತ್ರೀಪುರುಷರೆಲ್ಲರೂ ಅವಶ್ಯ ಓದಬೇಕು

೪೦೦ ಪುಟಗಳು — ಒಂದೂವರೆ ರೂಪಾಯಿ ಬೆಲೆ.

ಪ್ರತಿಗಳು ಸಿಗುವ ಸ್ಥಳ—

ಕಿರಿಯರ ಪ್ರಪಂಚ, ಉಡುಪಿ.

THE

PANGAL NAYAK BANK

LIMITED.

ESTABLISHED 1920.

Head Office: UDIPI.

Branches MANGALORE and KATAPADI.

Fixed loans and Overdraft advances are granted on the pledge of gold articles, on the mortgage of immovable properties and on the personal security of approved constituents on favourable terms.

Genuine trade bills, cheques, drafts etc., are discounted at a nominal charge

Current, Savings Bank and Cumulative deposits are accepted at moderate rates of interest.

Fixed Deposits are received and interest allowed at 4% on 1 year and at 4½% on 2 years deposits.

Every other description of up-to-date Banking business is also undertaken.

A few shares are also available to the public

ಮಿರಜದಲ್ಲಿಯ ಸುಪ್ರಸಿದ್ಧ ವೈದ್ಯರಾದ ಎಮ್. ಕೆ. ರಜಪೂತ ಇವರ ಸ್ವದೇಶಿ ಔಷಧಗಳು.

ಗುಣ ಬಾರದಿದ್ದರೆ — **ಸ್ತ್ರೀಧರ್ಮ ಸಂಜೀವಿನೀ ಚೂರ್ಣ** (ರಿಜಿಸ್ಟರ್ಡ) — ಹಣ ಪರತ

ಈ ಚೂರ್ಣವು ಕೆಂಪು ಬಿಳಿ ಶೆರಗಿಗೆ ಶತ್ರುವಾಗಿರುವುದು ಅನಿಯಮಿತತನದಿಂದ ಮುಟ್ಟಾಗುವಿಕೆ, ಕ್ಲೇಶ ಬೈಯಲ್ಲಿ ನೋವು, ಉಷ್ಣತಾ ಕ್ಷೀಣತಾ ಗರ್ಭಾಶಯದಲ್ಲಿರುವ ದೋಷ ಗರ್ಭಧಾರಣವಾಗದಿರೋಣ, ಅಕಾಲದಲ್ಲಿ ಗರ್ಭಪತನವಾಗೋಣ ಈ ಮೊದಲಾದ ರೋಗಗಳು ನಿಶ್ಚಯವಾಗಿ ನೆಟ್ಟಗಾಗಿ ಗರ್ಭಕೋಶವು ಸ್ವಚ್ಛವಾಗುವದು. ಮಕ್ಕಳಾಗುವದಿಲ್ಲೆಂದು ಎರಡನೇ ಲಗ್ನಮಾಡಿಕೊಳ್ಳುವ ಮೊದಲು ಗೃಹದೇವತೆಯಾದ ಮೊದಲನೇ ಪತ್ನಿಗೆ ಈ ಚೂರ್ಣ ಅವಶ್ಯ ಕೊಡಿರಿ ಮುಖ್ಯ ಸರ್ಟಿಫಿಕೇಟ ಮ. ರಾ ಎ. ಎಮ್ ಇನ್ಸಪೆಕ್ಟರ ಬೆಳಗಾಂವ:—ಈ ಚೂರ್ಣದಿಂದ ನನ್ನ ಕುಟುಂಬದ ಹೊಟ್ಟೆಯೊಳಗಿನ ರಕ್ತ ಗುಲ್ಮದ ಗಂಟು ನಾಮಶೇಷವಾಯಿತು. ಮತ್ತು ಎಲ್ಲ ರೋಗಗಳು ನಿಶ್ಶೇಷವಾದವು. ನನ್ನ ಮಿತ್ರನ ಹೆಂಡತಿಯ ರಕ್ತ ಮತ್ತು ಶೆರಗು ಇಲ್ಲದಂತಾದವು. ೨೧ ದಿವಸದ ಡಬ್ಬಿಯ ಕಿಮ್ಮತ್ತು ರೂ. ೩ ಟ.ಖ. ಆಣೆ, ೮. ಡಬ್ಬಿಗೆ ೪ರೂ]

ಸಂತತಿ ಪ್ರತಿಬಂಧಕ ಚೂರ್ಣ. (ರಿಜಿಸ್ಟರ್ಡ) [ಎ. ಪಿ. ಖರ್ಚು ಆಣೆ ೮.

ಬಹಳಸಾರೆ ಹಡಿಯುವುದರಿಂದ ಅತಿಶಯ ಅಶಕ್ತಿಯಾಗುತ್ತದೆ ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುರುವಾಗುವದು ಶರೀರಕ್ಕೇನೂ ಅಪಾಯವಾಗದೆ ಸಂಸಾರ ಸುಖವು ಪೂರ್ಣವಾಗಿದೆ. ಕೂಡಲೇ ಗರ್ಭಧಾರಣ ಬಂದಾಗುವುದು. ತದನಂತರ ಏನು ಮಾಡಿದರೂ ಶುರುವಾಗುವದಿಲ್ಲ. ಮೊದಲೇ ಪೂರಾ ವಿಚಾರಮಾಡಿ ಔಷಧ ಬೇಡಿರಿ. ಮುಖ್ಯಸರ್ಟಿಫಿಕೇಟ ಡಾಕ್ಟರ ಬಿ. ಎ. ವೈದ್ಯ ಎಲ್ ಸಿ. ಪಿ. ಎಸ್. ಮೂ। ಕೇಳವಾ ಮಾಹಿಮಾ ಜಿ ಠಾಣೆ ಈ ಚೂರ್ಣದಿಂದ ಯಾವ ತರದ ಅಪಾಯವಾಗದೆ ಗರ್ಭಧಾರಣವಾಗುವದಿಲ್ಲ. ಪೂರ್ಣ ಗುಣಕಾರಿ

ವಿಳಾಸ:—ಸಂಜೀವಿನೀ ಔಷಧಾಲಯ, ಮು. ಪೋ. ಮಿರಜ, S. M. C

ಸಮಾಚಾರ ಸಂಗ್ರಹ

ಬಡತನದ ಪರಿಣಾಮ, ಹಿಂದೀ ಸಿಪಾಯಿಗಳ ಕೊಲೆ, ಆಸ್ಟ್ರೇಲಿಯಾನರ ವಿಜಯ, ಬ್ರಿಟಿಷ್ ನೌಕಾ ವೆಚ್ಚ, ಬಿಹಾರಿನಲ್ಲಿ ೧೦೦ ಮಂದಿ ದಸ್ತಗಿರಿ

ಮಕ್ಕಳನ್ನು ಕೊಂದು ತಾಯಿಯ ಆತ್ಮಹತ್ಯೆ

ಕೊಯಮುತ್ತೂರಿನಲ್ಲ ಇದೇ ತಾ ೩ ರಲ್ಲು ದೇವಾಂಗ ಜಾತಿಯ ಕುಪ್ಪಮ್ಮ ಎಂಬ ಸ್ತ್ರೀಯು ತೀವ್ರಬಡತನವನ್ನು ಸಹಿಸಲಾರದೆ ಮತ್ತು ಗೃಹ ಸುಖದ ಅಭಾವದ ನಿಮಿತ್ತ ಜೀವನದಲ್ಲೇ ನಿರಾಶೆಗೊಂಡು, ತನ್ನ ಮೂರು ಮಕ್ಕಳನ್ನು ಕೆರೆಗೆಸೆದು ಕೊಂದುಹಾಕಿ ತಾನೂ ಕೆರೆಗೆಹಾರಿ ಆತ್ಮಹತ್ಯೆಮಾಡಿಕೊಂಡಿರುವಳು.

20 ಸಾವಿರಕ್ಕಿಂತ ಮಿಕ್ಕಿದ ಮಜೂರರ ಮುಷ್ಕರ

ಕಲ್ಕತ್ತದ ಬಜ್‌ಬಜ್ ಎಂಬ ಕಿತ್ತಾನಾರು ಗಿರಣಿಯಲ್ಲಿ ಕೆಲಮಂದಿ ನೇಯಿಗೆಗಾರರನ್ನು ಕೆಲಸದಿಂದ ತೆಗೆದುಹಾಕಿದುದಕ್ಕಾಗಿ ಸದ್ರಿ ಗಿರಣಿಯ ಕೆಲಸಗಾರರೆಲ್ಲಾ ಒಟ್ಟು ಸೇರಿ ಮುಷ್ಕರವನ್ನು ಪ್ರಥಮವಾಗಿ ಆರಂಭಿಸಿದರು. ಆ ಮೇಲೆ ಇನ್ನೈದು ಗಿರಣಿಗಳ ೨೦,೦೦೦ ಮಂದಿ ಮಜೂರರು ಇದೇ ತಾ. ೧ರಲ್ಲು ಈ ಮುಷ್ಕರಕ್ಕೆ ಸೇರಿರುವರು. ಗಿರಣಿ ಪ್ರದೇಶದಲ್ಲಿ ೧೪೪ ಸೆಕ್ಷನು ಜಾರಿಗೆ ತರಲ್ಪಟ್ಟು ಪೋಲೀಸರು ಪಹರೆ ನಡಿಸುತ್ತಿರುವರು. ಪರಿಸ್ಥಿತಿಯು ಶಾಂತವಾಗಿರುವುದು. ಮಜೂರರ ಪ್ರತಿನಿಧಿಗಳು ಗಿರಣಿಗಳ ಚಾಲಕರೊಡನೆ ಸಂಧಿ ಪ್ರಸ್ತಾಪ ನಡಿಸುತ್ತಿರುವರು.

ಹಿಂದೀ ಸಿಪಾಯಿಗಳ ಕೊಲೆ

ವಾಯುವ್ಯ ಗಡಿನಾಡಿನ ಕೆಲವು ಪಂಗಡಿಗರಲ್ಲಿ ಇಂಡಿಯಾ ಸರಕಾರದ ಕುರಿತು ತೀವ್ರ ವಿರೋಧಭಾವವುಂಟಾಗಿ ಅವರು ಒಟ್ಟಾಗಿ ಗಡಿನಾಡಿನಲ್ಲಿ ರಸ್ತೆಯನ್ನು ಮುಂದುವರಿಸುವ ಕೆಲಸವಮಾಡುವ ಸೈನಿಕರ ಮೇಲೆ ಹೊಂಚುಹಾಕಿ ಕೊಲೆಮಾಡಲಾರಂಭಿಸಿರುವರು. ಸರಕಾರದ ಬದ್ಧ ವಿರೋಧಿಯಾದ ಇಪ್ಪಿಯ ಫಕೀರರು ಇಷ್ಟರವರೆಗೆ ಕಾಯಿಲೆಯಲ್ಲಿದ್ದು ಈಗ ಗುಣಹೊಂದಿ ವಿರುದ್ಧ ಚಳವಳವನ್ನಾರಂಭಿಸಿರುವರು. ಈ ಪಂಗಡಿಗರನ್ನಡಗಿಸುವುದಕ್ಕಾಗಿ ಸರಕಾರವು ದೊಡ್ಡ ಸೇನೆಯನ್ನು ಕಳುಹಿಸಿರುವುದು. ಚಂಡೋಲ ಎಂಬಲ್ಲಿಯ ಸೈನಿಕ ಶಿಬಿರದಿಂದ ಕೆಲಮಂದಿ ಹಿಂದೀ ಸೈನಿಕರು ಒಂದು ಬುಗ್ಗೆಯ ಬಳಿ ಹೋದಾಗ, ಹತ್ತಿರವೇ ಅಡಗಿಕೊಂಡಿದ್ದ ಮಸೋದಿ ಪಂಗಡಿಗರು ಕೆಲವರು ಅವರ ಮೇಲೆ ಗುಂಡೆಸೆದು ಇಬ್ಬರು ಕೊಲ್ಲಲ್ಪಟ್ಟಿರುವರು. ವಜೀರಿಸ್ಥಾನದಲ್ಲಿ ಸರಕಾರವು ಹೆಚ್ಚಿನ ಸೈನಿಕರನ್ನು ಸಂಗ್ರಹಿಸಿ ಎಚ್ಚರದಿಂದಿದೆ. ಅಲ್ಲಿಗೆ ಹೊರಗಣಿಂದ ಯಾರನ್ನಾದರೂ ಪರವಾನಗಿ ಇಲ್ಲದೆ ಪ್ರವೇಶಿಸಬಿಡುವುದಿಲ್ಲ.

ಇಟೆಲಿಯ ಯುದ್ಧ ಸಿದ್ಧತೆ

ಇಂಗ್ಲೆಂಡು ಯುದ್ಧೋಪಕರಣಗಳನ್ನು ಬಹಳವಾಗಿ ಹೆಚ್ಚಿಸಿದುದರಿಂದ ಇಟೆಲಿಯು ತಳಮಳಗೊಂಡಿರುವದು. ಅದು ಕೂಡಲೆ ತನ್ನ ವೈಮಾನಿಕ ಮತ್ತು ನಾವಿಕಪಡೆಯನ್ನು ಹೆಚ್ಚಿಸುವ ನಿರ್ಧಾರಮಾಡಿರುವುದು. ಜನತೆಯ ನಾಗರಿಕ ಆವಶ್ಯಕತೆಗಳನ್ನು ಕಡೆಗಣಿಸಿ ಸಂಪೂರ್ಣವಾಗಿ ಸೇನೆಯನ್ನೇ ಭರದಿಂದ ಹೆಚ್ಚಿಸುವ ಹುಚ್ಚು ಇಟೆಲಿಗೆ ಹಿಡಿದಿರುವುದು. ಎಲ್ಲಾ ತರದ ಯುದ್ಧೋಪಕರಣಗಳ ಸಿದ್ಧತೆಯಲ್ಲಿ ಇಟಲಿಯು ಸಂಪೂರ್ಣ ಸ್ವಾವಲಂಬಿಯಾಗಿ ಕಟಿಬದ್ಧವಾಗಿರಬೇಕೆಂದೇ ಇಟೆಲಿಯ ನಿರ್ಧಾರ. ಸಾರ್ಡಿನ್, ಸಿಸಿಲಿ ಮತ್ತು ದಕ್ಷಿಣ ಇಟೆಲಿಯಲ್ಲಿ ಯುದ್ಧ ವಿಮಾನ ನಿಲಯಗಳು ಇಷ್ಟರಲ್ಲೇ ಕಟ್ಟಿಸಲ್ಪಡುತ್ತಿವೆ.

ಎಸೆಂಬ್ಲಿ ಮೆಂಬರರ ದಸ್ತಗಿರಿಗೆ ಕಾರಣವೇನು?

ರೂ. 10,000 ಲಂಚದ ಸಂಚು

ಇಂಡಿಯಾ ಸರಕಾರದ ಬಜೆಟಿನ ಸಂಗತಿಗಳನ್ನು ಮೊದಲಾಗಿ ಗುಟ್ಟಿನಿಂದ ಪಡೆಯಲೆತ್ನಿಸಿದ ಆರೋಪದಿಂದ ಎಸೆಂಬ್ಲಿ ಮೆಂಬರರಾದ ರೈಬಹದೂರ್ ಭಾಗ್ ಚಂದ್ ಸೋನಿ, ಜಯಪುರದ ಹಂಸರಾಜ ಗುಲಾಬ್ ಚಂದ್ ಬದರಿ ನಾಥ್ ಮತ್ತು ಭಗವಾನ್‌ದಾಸ್, ಸಾಂಬೂರಿನ ಶೇಟ್ ಗೋಪಿಕೃಷ್ಣನ್, ಡೆಲ್ಲಿ ಮುನಿಸಿಪಾಲಿಟಿಯ ಕ್ಲಾರ್ಕನಾದ ಅಮರನಾಥರೆಂಬವರು ದಸ್ತಗಿರಿಮಾಡಲ್ಪಟ್ಟಿರುವರಷ್ಟೆ. ಇವರಲ್ಲಿ ಇಬ್ಬರ ಹೊರತು ಉಳಿದವರನ್ನು ಜಾಮೀನಿನ ಮೇಲೆ ಬಿಟ್ಟು ಬಿಡಲಾಗಿದೆ. ಈ ಖಟ್ಲೆಯ ವಿಚಾರಣೆಯು ಇದೇ ತಾ. ೯ರಲ್ಲು ಆರಂಭವಾಗಿರುವುದು. ಬಂಧನದಲ್ಲಿರಿಸಲ್ಪಟ್ಟಿರುವ ಇಬ್ಬರಲ್ಲೊಬ್ಬನು ಅರ್ಥ ಸಚಿವರ ಖಾಸಗಿ ಸೆಕ್ರೆಟರಿಗಳಿಗೆ ರೂ. ೧೦,೦೦೦ ಲಂಚ ಕೊಡುವೆನೆಂದು ಹೇಳಿ ಬಜೆಟಿನ ಸಂಗತಿಗಳನ್ನು ತಿಳಿಸಬೇಕೆಂದು ಕೇಳಿಕೊಂಡನು. ಸೆಕ್ರೆಟರಿಗಳು ಇದನ್ನು ಅರ್ಥಸಚಿವರಿಗೆ ತಿಳಿಸಿ ಅವರಿಬ್ಬರೂ ಒಟ್ಟು ಕೂಡಿ ಈ ಲಂಚಗಾರನನ್ನು ಹಿಡಿಯುವ ಉಪಾಯ ಮಾಡಿದರು. ರೂ. ೧೦,೦೦೦ ತೆಗೆದುಕೊಂಡು ಬಜೆಟಿನ ಸಂಗತಿಗಳನ್ನು ತಿಳಿಸಲು ಅರ್ಥ ಸಚಿವರ ಸೆಕ್ರೆಟರಿಗಳೊಪ್ಪಿದರು. ನಿಶ್ಚಿತ ಸಮಯಕ್ಕೆ ರೂ. ೧೦,೦೦೦ ಚೆಕ್ಕನ್ನವರಿಗೆ ಒಬ್ಬನು ತಂದುಕೊಟ್ಟನು ಚೆಕ್ಕಿನ ಇಸ್ವಿಯು ೧೯೩೭ರ ಬದಲಿಗೆ ೧೯೩೬ ಎಂದಿತ್ತೆಂದು ತಿಳಿದುಬರುತ್ತದೆ ಈ ವಹಿವಾಟು ನಡಿಯುವಾಗ ಮೆಜಿಸ್ಟ್ರೇಟರೊಬ್ಬರು ಸಮೀಪದಲ್ಲಿದ್ದು ಸೆಕ್ರೆಟರಿಗಳಿಗೂ ಲಂಚ ಕೊಡುವ ಮನುಷ್ಯನಿಗೂ ನಡೆದ ಸಂಭಾಷಣೆಯನ್ನು ಮೆಜಿಸ್ಟ್ರೇಟರು ಕೇಳುವಂತ ಮಾಡಿ, ಸದ್ರಿ ಮನುಷ್ಯನನ್ನು ಪ್ರಥಮವಾಗಿ ದಸ್ತಗಿರಿಮಾಡಿನಲಾಯಿತು. ಈತನನ್ನು ಜಪ್ತಿಮಾಡಿದಾಗ ದೊರೆತ ಒಂದು ತಂತಿಯ ಆಧಾರದಿಂದ ಇತರರನ್ನು ದಸ್ತಗಿರಿಮಾಡಲಾಯಿತು.

ಆಸ್ಟ್ರೇಲಿಯಾನರ ದೊಡ್ಡ ವಿಜಯ

ಇಂಗ್ಲೆಂಡು ಮತ್ತು ಆಸ್ಟ್ರೇಲಿಯದ ಕ್ರಿಕೆಟ್ ಟೀಮುಗಳೊಳಗೆ ಆಸ್ಟ್ರೇಲಿಯದ ಮೆಲ್ಬೋರ್ನ್ ಪಟ್ಟಣದಲ್ಲಿ ನಡೆದ ಕೊನೆಯ ಕ್ರಿಕೆಟ್ ಮೇಚಿನಲ್ಲಿ ಇಂಗ್ಲೆಂಡು ದೊಡ್ಡ ಅಪಜಯ ಹೊಂದಿರುವುದು. ಆಸ್ಟ್ರೇಲಿಯಾನರು ಪ್ರಥಮವಾಗಿ ಆಡಿ ಒಟ್ಟು 604 ರನ್ಸ್ ತೆಗೆದರು. ಇಂಗ್ಲೆಂಡಿನವರು ಅನಂತರ ಆಡಿ ಪ್ರಥಮ ಸಲ 239 ಮತ್ತು ಎರಡನೇ ಸಲ 165 ರನ್ಸ್ ತೆಗೆದರು. ಹೀಗೆ ಇಂಗ್ಲೆಂಡಿನವರ ಎರಡು ಸರ್ತಿಯ ರನ್ಸ್ ಕೂಡಾ ಆಸ್ಟ್ರೇಲಿಯದವರ ಒಂದು ಸರ್ತಿಯದಕ್ಕೆ 200 ಕಡಿಮೆ ಬಿದ್ದು ಇಂಗ್ಲೆಂಡಿಗೆ ದೊಡ್ಡ ಪರಾಜಯವಾಗಿರುವುದು. ಆರಂಭದ 2 ಟೆಸ್ಟ್ ಮೇಚುಗಳಲ್ಲಿ ಇಂಗ್ಲೆಂಡು ಸುಲಭವಾಗಿ ಜಯಶಾಲಿಯಾಗಿ ಟೆಸ್ಟಿನಲ್ಲಿ ಜೈಸುವದೆಂಬ ಭರವಸೆಯಿದ್ದಿತು. ಆದರೆ ಅನಂತರದ 3 ಮೇಚುಗಳಲ್ಲಿಯೂ ಆಸ್ಟ್ರೇಲಿಯದ ಕೆಪ್ಟನರಾದ ಬ್ರೇಡ್ಮೆನರು 150,-00ಕ್ಕಿಂತಲೂ ಮಿಕ್ಕಿದ ರನ್ಸ್ ತೆಗೆದ ನಿಮಿತ್ತ ಆಸ್ಟ್ರೇಲಿಯಾನರು ಜಯಶೀಲರಾದರು.

ಹಪ್ತೆಗೆ 40 ಘಂಟೆ ಕೆಲಸ

ಸರಕಾರದ ಮತ್ತು ಮಜೂರ ಮುಖಂಡರುಗಳ ಪ್ರಯತ್ನದಿಂದಾಗಿ ಅಮೆರಿಕದ ದೊಡ್ಡ ದೊಡ್ಡ ಉಕ್ಕಿನ ಕಂಪೆನಿಗಳು ತಮ್ಮ ಕೆಲಸಗಾರರಿಗೆ ಹಪ್ತೆಗೆ ೪೦ ಘಂಟೆ ಮಾತ್ರ ಕೆಲಸ ಮತ್ತು ಕಡಿಮೆಯೆಂದರೆ ೫ ಡಾಲರು ಸಂಬಳವನ್ನೀಯುವರೆ ಒಪ್ಪಿದ್ದವರು. ಇದರಿಂದ ೫,೫೦,೦೦೦ ಕೆಲಸಗಾರರು ಮೊದಲು ೪೮ ಘಂಟೆ ಕೆಲಸಮಾಡುತ್ತಿದ್ದ ಬದಲಿಗೆ ಈಗ ೪೦ ಘಂಟೆ ಮಾತ್ರ ಕೆಲಸಮಾಡಿ ಮೊದಲಿಗಿಂತ ೧೦೦ ಮಿಲ್ಯ ಡಾಲರು ಹೆಚ್ಚಿಗೆ ಸಂಬಳಪಡೆಯುವಂತಾಗುವುದು. ಇದು ಮಜೂರರು ಕಳೆದ ೧೦ ವರ್ಷಗಳಿಂದ ಪಡೆದ ಅತಿದೊಡ್ಡ ವಿಜಯವೆಂದು ಪರಿಗಣಿಸಲಾಗಿದೆ.

ಮಿಶನರಿಗಳನ್ನು ಕೊಲ್ಲುವ ಯತ್ನ

ಪಂಜಾಬಿನ ಕಾಸೂರು ಎಂಬ ಹಳ್ಳಿಗೆ ಇಬ್ಬರು ಸ್ತ್ರೀಯರ ಸಮೇತ ಕೆಲಮಂದಿ ಮಿಶನರಿಗಳು ಧರ್ಮಪ್ರಚಾರಕ್ಕಾಗಿ ಹೋಗಿ ಡೇರೆಹೊಡೆದಿದ್ದಾಗ ರಾತ್ರಿಯಲ್ಲಿ ಸಿಖ್ಖನೊಬ್ಬನು ಬಿಚ್ಚುಗತ್ತಿ ಹಿಡಕೊಂಡು ಅವರನ್ನು ಕೊಲ್ಲಲೆತ್ನಿಸಿ ಇಬ್ಬರು ಸ್ತ್ರೀಯರನ್ನೂ ಇನ್ನೊಬ್ಬ ಗಂಡಸನ್ನೂ ಗಾಯಗೊಳಿಸಿರುವನು. ಕೂಗೆಬ್ಬಿಸಲ್ಪಟ್ಟಾಗ ಸ್ಥಳೀಯ ಡಾಕ್ಟರರು ಕೋವಿಹಿಡಿದು ಓಡಿಬಂದರು ಆಗ ಸಿಖ್ಖನು ತಲೆತಪ್ಪಿಸಿಕೊಂಡನು. ಪೋಲೀಸರು ವಿಚಾರಣೆ ನಡಿಸುತ್ತಿರುವರು.

ಬೆದರಿಕೆ ಹಾಕಿ ಹಣಪಡೆಯುವ ಯತ್ನ

ಉಮರ್‌ಭೂತ ಎಂಬ ಪ್ರಸಿದ್ಧ ದರೋಡೆಖೋರನೊಬ್ಬನು ಅಹಮ್ಮದಾಬಾದಿನ ಸಮೀಪದ ಹಳ್ಳಿಗಳಲ್ಲಿ ಹಲವು ದರೋಡೆ ಮತ್ತು ಕೊಲೆಗಳನ್ನು ನಡಿಸಿ ಜನರಲ್ಲಿ ದಿಗಿಲನ್ನೆಬ್ಬಿಸಿರುವನು. ಅವನೀಗ ಅಹಮ್ಮದಾಬಾದ್ ಪಟ್ಟಣದ ಸುಪ್ರಸಿದ್ಧ ವ್ಯಾಪಾರಿಗಳಾದ ಆನಂದಜಿ ಕಲ್ಯಾಂಜಿಯವರು ತನಗೆ ೪ ದಿವಸಗಳೊಳಗೆ ಹಲವು ಸಹಸ್ರ ರೂಪಾಯಿಗಳನ್ನೀಯದಿದ್ದರೆ ೬ನೇ ದಿನ ಸುಮಾರು ೧೦೦ ಮಂದಿ ದರೋಡೆಗಾರರೊಂದಿಗೆ ಸದ್ರಿ ವ್ಯಾಪಾರಿಗಳ ಅಂಗಡಿಗೆ ನುಗ್ಗಿ ದರೋಡೆ ನಡಿಸುವೆನೆಂಬ ಬೆದರಿಕೆ ಹಾಕಿ ಪತ್ರಬರೆದಿರುವನು. ಈ ಪತ್ರವನ್ನು ಪೋಲೀಸರಿಗೆ ಕೊಡಲಾಗಿದೆ ಅವರು ಆ ಕುರಿತು ವಿಚಾರಣೆ ನಡಿಸುತ್ತಿರುವರು. ಆನಂದಜಿ ಕಲ್ಯಾಂಜಿ ಕಂಪನಿಯವರು ಹಿಂದುದೇಶದ ಹಲವು ದೇವಸ್ಥಾನಗಳ ಆಡಳಿತ ನಡಿಸುತ್ತಿರುವರು. ಇವರ ಖಜಾನೆಯಲ್ಲಿ ಕೋಟಿಗಟ್ಲೆ ಹಣವಿರುವುದು ಇದನ್ನು ರಕ್ಷಿಸುವ ಏರ್ಪಾಡುಮಾಡಲಾಗಿದೆ.

ಬರುವ ಕಾಂಗ್ರೆಸ್ ಅಧಿವೇಶನವು

ಗುಜರಾಥಿನ ಹರಿಪುರ ಎಂಬ ಹಳ್ಳಿಯಲ್ಲಿ ೧೯೩೮ನೇ ಫೆಬ್ರವರಿ ತಿಂಗಳಲ್ಲಿ ಜರಗುವುದು. ಈ ಗ್ರಾಮವು ಬಿ. ಬಿ. ಎಂಡ್ ಸಿ. ಐ. ರೈಲ್ವೆಯ ಅನಂದ ಸ್ಟೇಶನಿನಿಂದ ೯ ಮೈಲು ದೂರವಿರುವುದು. ಕಳೆದ ಕಾಯಿದೆ ಭಂಗ ಚಳವಳದ ಸಂದರ್ಭದಲ್ಲಿ ರಾಸ್ ಗ್ರಾಮವು ಪ್ರಾಮುಖ್ಯ ಭಾಗವಹಿಸಿ ಪ್ರಸಿದ್ಧಿ ಪಡೆದಿರುವುದು

ಬಿಹಾರಿನಲ್ಲಿ 100 ಮಂದಿಯ ದಸ್ತಗಿರಿ

ಬಿಹಾರಿನ ಬಾಖ್ಸಾರಿ ಎಂಬಲ್ಲಿಯ ಕಿಸನ್ (ಒಕ್ಕಲುಗಳು) ಜನರಲ್ಲಿ ತೀವ್ರಅತೃಪ್ತಿಯೆದ್ದು ಅವರಿಗೂ ಜಮೀನ್ದಾರರಿಗೂ ಜಗಳವುಂಟಾಗಿರುವ ನಿಮಿತ್ತ ೧೦೦ ಮಂದಿ ಕಿಸನರು ಕೈದುಮಾಡಲ್ಪಟ್ಟಿರುವರೆಂದೂ, ಗಲಾಟೆಯ ಸ್ಥಳಗಳಲ್ಲಿ ಸೈನಿಕರು ಪಹರೆ ನಡಿಸುತ್ತಿರುವರೆಂದೂ ತಿಳಿದುಬರುತ್ತದೆ.

ಸ್ಪೈನಿಶ್ ಸರಕಾರದ ವಿಜಯ

ಇದೇ ತಾ. ೬ರ ವರ್ತಮಾನದ ಪ್ರಕಾರ ಸ್ಪೈನಿಶ್ ಸರಕಾರದ ಕಡೆಯ ಸೈನಿಕರು ಟೊಲೀಡೋ ಎಂಬ ಪ್ರಾಮುಖ್ಯ ಸ್ಥಳವನ್ನು ವಶಪಡಿಸಿಕೊಂಡಿರುವರೆಂದು ತಿಳಿದುಬಂದಿದೆ. 23 ಘಂಟೆಗಳ ತೀವ್ರ ಹೋರಾಟದ ನಂತರ, ಬಂಡಾಯಗಾರ ಸೈನಿಕರ ನೇಕರು ಕೊಲ್ಲಲ್ಪಟ್ಟ ಮೇಲೆ ಜಯಶಾಲಿಗಳಾದ ಸರಕಾರದ ಕಡೆಯ ಸುಮಾರು 30,000 ಸೈನಿಕರು ಟೇಗಸ್ ಎಂಬ ನದಿ ದಾಟಿ, ಮೇಡ್ರಿಡ್ ಪಟ್ಟಣಕ್ಕೆ ವೆಲೆನ್ಸಿಯದಿಂದ ಸೇನೆಯನ್ನು ತರುವ ರೈಲ್ವೆಮಾರ್ಗವನ್ನು ಕಡಿಯುವುದರಲ್ಲಿದ್ದಾರೆಂದು ತಿಳಿದುಬರುತ್ತದೆ. ಮೇಡ್ರಿಡ್ ಮತ್ತು ವೆಲೆನ್ಸಿಯಾ ಪಟ್ಟಣಗಳ ನಡುವಿನ ರಸ್ತೆಯನ್ನು ಕಡಿಯುವದೆ ಬಂಡಾಯಗಾರರು ನಡಿಸಿರುವ ಪ್ರಬಲ ಪ್ರಯತ್ನವು ನಿರರ್ಥಕವಾಗಿರುವುದೆಂದು ಸರಕಾರದ ಕಡೆಯವಾರ್ತೆ ವಿನಾ ಸ ಮೂಲಕ ಘೋಷಿಸಿದ ಮೇಲೆ ೧ ದಿವಸಗಳ ಪ್ರಬಲ ಹೋರಾಟ ನಡಿಸಿ ಬಂಡಾಯಗಾರರು ಹಲವು ಮಂದಿ ಕೊಲ್ಲಲ್ಪಟ್ಟು ಹಿಂದೆ ಸರಿದಿರುವರಂತೆ. ಒವೀಡೋ ಪಟ್ಟಣದ ಸುತ್ತುಮುತ್ತಲಿನ ರಸ್ತೆಗಳನ್ನು ಕೂಡ ಸರಕಾರದ ಕಡೆಯ ಸೈನಿಕರು ವಶಪಡಿಸಿಕೊಂಡಿರುವರು. ಮೇಡ್ರಿದಿನಲ್ಲಿ ಇದೇ ತಾ. 11ರಿಂದ ಪ್ರತಿಯೊಬ್ಬನಿಗೆ ಹತ್ತೂವರೆ ಔನ್ಸಿನಷ್ಟು ಮಾತ್ರ ರೊಟ್ಟಿ ಕೊಡುವ ನಿರ್ಬಂಧವನ್ನು ಜಾರಿಗೆ ತರಲಾಗುವುದು

ಬ್ರಿಟಿಷ್ ನೌಕಾ ವೆಚ್ಚ

ಇಂಗ್ಲೆಂಡು ತನ್ನ ನೌಕೆಯನ್ನು ಹೆಚ್ಚಿಸುವ ನಿರ್ಧಾರಮಾಡಿ. ಅದಕ್ಕಾಗಿ 105 ಮಿಲ್ಯ ಪವನು ವ್ಯಯಿಸುವ ಅಂದಾಜು ಮಾಡಿರುವುದು. 3 ದೊಡ್ಡ ದೊಡ್ಡ ಯುದ್ಧನೌಕೆ, 2 ವಿಮಾನ ಪಡೆಯ ನೌಕೆಯುವನೌಕೆ 7 ಕ್ರೂಯಿಸರು ಮತ್ತು 16

(೬ನೇ ಪುಟ)

ಈ ವಾರದ ಕಥೆ

— ಕೂಲಿಯಾಳು ಸುಬ್ಬ —

ಸುಬ್ಬನು ರಾತ್ರಿ ಸಂತೆಕಟ್ಟೆಯ ಒಂದು ಅಂಗಡಿಯ ಜಗಲಿಯಲ್ಲಿ ಮಲಗಿದ್ದ. ಅದು ಅವನ ಪದ್ಧತಿ. ಪೂರ್ವಾಹ್ನ ನಾಲ್ಕು ಘಂಟೆಗೆ ಬಸ್ಸುಗಳು ಹೊರಡಹತ್ತುತ್ತವೆ. ದೂರದ ಊರುಗಳಿಗೆ ಹೋಗುವವರು ೪, ೫ ಘಂಟೆಗಳ ಬಸ್ಸು ಹತ್ತುವದೇ ಹೆಚ್ಚಿಗೆ. ಏನಾದರೂ ಬೇಗು, ಬೆಡ್ಡಿಂಗುಗಳಿರುವದಾದರೆ ಅಂಥವರೊಡನೆಯೆ. ಒಂದಾಣೆ ಎರಡಾಣೆ ಕಾಸು ಬಿಸಾಡುವವರೂ ಅವರೆ. ಆದ್ದರಿಂದ ಬೆಳಗ್ಗಿನ ಸರ್ವಿಸನ್ನು ಬಿಡಲಿಕ್ಕಾಗುವದಿಲ್ಲ. ರಾತ್ರಿ ಮನೆಗೆ ಹೋಗಿ ಮಲಗಿದರೆ ನಾಲ್ಕು ಘಂಟೆಗೆ ಎದ್ದು ಬರುವದೆಂದರೆ ಆಗದಕೆಲಸ. ಅದಕ್ಕಾಗಿ ಸುಬ್ಬನು ಸಂತೆಕಟ್ಟೆಯ ಅಂಗಡಿ ಜಗಲಿಯಲ್ಲಿಯೇ ಮಲಗಿಬಿಡುತ್ತಿದ್ದ. ಪ್ರಾತಃಕಾಲದ ನಾಲ್ಕು ಘಂಟೆಯೆಂದರೆ ಪ್ರಶಾಂತಸಮಯ ಆಗ ಹೊರಡುವ ಬಸ್ಸಿನ 'ಹೋರ್ನಿ'ಗೆ ಸುಬ್ಬನಿಗೆ ತಪ್ಪದೆಎಚ್ಚರಿಕೆಯಾಗುತ್ತಿತ್ತು. ಈ ದಿನವೂ ಬಸ್ಸಿನ 'ಕೊಂಬು' ಆಯಿತು. ಸುಬ್ಬಎದ್ದ, ಎದ್ದವನೇ ಬೈರಾಸನ್ನು ಸುತ್ತಿಕೊಂಡು ರಸ್ತೆಯಲ್ಲ ನಾಲ್ಕು ಕಡೆಗಳಿಗೆ ನೋಡುತ್ತಾ ನಿಂತ. ಇವನ ಸಹವ್ಯವಸಾಯಿಗಳು ಇತರರೂ ಎದ್ದು ತಮ್ಮ ಕಾವಲನ್ನಾರಂಭಿಸಿದ್ದರು. ಐದು ಘಂಟೆಯ ಬಸ್ಸಿಗೆ ಹೋಗುವವರು ಯಾರಾದರೂ ಬಂದಾರೆಂದು ಸುಬ್ಬನು ಆತುರದಿಂದ ನೋಡುತ್ತಾ ನಿಂತಿದ್ದ. ಅಷ್ಟರಲ್ಲಿ ತೆಂಕು ರಸ್ತೆಯಲ್ಲಿ ಜೋಡಿನ ಸಪ್ಪಳವು ಕೇಳಿಸಿತು. ಪುಟ್ಟನು ಅವರನ್ನಿದಿರುಗೊಳ್ಳಲು ಓಡಿದ. ಆದರೆ ಅವನಿಗಿಂತ ಮುಂಚಿತವಾಗಿ ನಾಲ್ಕು ಮಂದಿ ಹುಡುಗರು ಓಟದಲ್ಲಿ ಬೆಂಗಳೂರು ರೇಸನ್ನು ನಿರ್ಮಿಸಿ, ಎಲ್ಲರಿಗಿಂತ ಮುಂದಾದವನು ಬಂದ ಗೃಹಸ್ಥರ ಕೈಯಿಂದ ಬೇಗನ್ನು ಕಸಗೊಂಡಾಯಿತು. ಮತ್ತೊಂದೆಡೆಯಿಂದ ದೊಡ್ಡದೊಂದು ಗಂಟನ್ನೆಳಕೊಂಡು ಜಗ್ಗುತ್ತಾ ತಿಪ್ಪಾಭಟ್ಟರು ಬರುತ್ತಿದ್ದರು. ಅವರನ್ನೀ ಸಂಕಷ್ಟದಿಂದ ಪಾರುಮಾಡುವೆನೆಂದು ಸುಬ್ಬನು ಸಹಾಯಕ್ಕೆ ಹೋದ. ಅವನಂತಹ ಇತರ ಸಹಾಯಕರೂ ಭಟ್ಟರನ್ನು ಮುತ್ತಿದರು. ಭಟ್ಟರು ಈ ಮುತ್ತಿಗೆಯ ಮಧ್ಯದಲ್ಲಿ ಟೀಪುಸುಲ್ತಾನನಂತೆ ಕೆರಳಿದರು. ಅವರು ತನ್ನ ಆ ಗಂಟನ್ನೂ, ಆ ಗಂಟಿಗೆ ಎಂಟೂ ದಿಕ್ಕುಗಳಲ್ಲಿ ಕೈಗೊಟ್ಟ ಇವರಿಷ್ಟು ಮಂದಿಯನ್ನೂ ಎಳಕೊಂಡೇ ಬಂದು ಬಸ್ಸನ್ನು ಮುಟ್ಟಿದರು. ಆ ಮೇಲೆ ಬಂದವರೆಂದರೆ ಮಂಗಳೂರಿನಲ್ಲಿರುವ ಮಗಳ ಗಂಡನ ಮನೆಗೆ ಹೊರಟ ತಿಮ್ಮರಾಯರು. ರಾಯರ ಕೈಯಲ್ಲಿ ಏನೂ ಇರಲಿಲ್ಲ ಅವರ ಹಿಂದುಗಡೆ ಒಬ್ಬ ಕೂಲಿಯವನು ಎರಡು ಡಬ್ಬಿಗಳನ್ನು ಹೊತ್ತುಕೊಂಡು ಬರುತ್ತಿದ್ದ. ಆ ಕೂಲಿಯವನೇ ತಂದು ಬಸ್ಸಿನ ಕಂಡಕ್ಟರನ ಕೈಗೆ ಡಬ್ಬಿಗಳನ್ನೊಪ್ಪಿಸಿಬಿಟ್ಟನೆಂದರೆ ರಾಯರ ಕೆಲಸಮುಗಿಯಿತು ಇಷ್ಟು ಗೊತ್ತಿದ್ದರೂ ರಾಯರು ಬಸ್ಸಿನ ನಿಲ್ದಾಣವನ್ನು ಸಮೀಪಿಸುತ್ತಿದ್ದಂತೆ 'ಏನು ಸ್ವಾಮಿ?' 'ಏನು ರಾಯರೆ?' ಎಂದು ಇವರೆಲ್ಲಾ ಸುತ್ತುಗಟ್ಟಿಯಾಯಿತು. ರಾಯರು ಚಕ್ರಬಿಂಬ ಕೋಟೆಯೊಳಗಿನ ಅಭಿಮನ್ಯುವಿನ ಪ್ರತಾಪವನ್ನೊಮ್ಮೆಗೇ ತೋರಿಸಿ, ಸುರಕ್ಷಿತವಾಗಿ ಬಸ್ಸನ್ನು ತಲಪಿದರು.

ಈ ಎಲ್ಲಾ ಮುತ್ತಿಗೆಗಳಲ್ಲಿ ಸುಬ್ಬನೂ ಭಾಗ ವಹಿಸಿದ್ದ. ನಡು ಮಧ್ಯಾಹ್ನದ ವರೆಗೆ ಹೋರಾಡಿ ನೋಡಿದ. ಸುಬ್ಬನಿಗೆ ಒಂದೇ ಒಂದು ಚಾನ್ಸು ಸಿಗಲಿಲ್ಲ. ಅವನಾದಿನ ಒಂದು ಪಾವಾಣೆಯನ್ನೂ ಹಿಡಿದಿರಲಿಲ್ಲ. ಮಧ್ಯದ ವಿರಾಮ ಕಾಲದಲ್ಲಿ ಕಟ್ಟೆಯ ಮೇಲೆ ಕುಳಿತು ಎರಡೂ ಕೈಗಳನ್ನು ತಲೆಯ ಮೇಲಿಟ್ಟುಕೊಂಡು "ನಾನು ಇಂದು ಬೆಳಿಗ್ಗೆ ಯಾರ ಮುಖ ಕಂಡುದೊ?"ಎಂದು ಚಿಂತಿಸಿ ನೋಡಿದ. ಇವನು ಆ ದಿನ ವಿಶೇಷವಾಗಿ ಯಾರನ್ನೂ ಕಂಡಿರಲಿಲ್ಲ. ಸುಬ್ಬನಂತೆಯೇ ರಾತ್ರಿ ಅಂಗಡಿ ಜ ಜಗಲಿಯಲ್ಲಿ ಮಲಗುವ ಮತ್ತು ಓಡಾಡುವ ಅಧಿಕಾರವನ್ನು ಪಡೆದಿದ್ದ. ಒಂದೆರಡು ಆಡುಗಳ ಮುಖವನ್ನಲ್ಲದೆ ಮತ್ತಾರ ಮುಖವನ್ನೂ ಕಂಡಿರಲಿಲ್ಲ; ಹಾಗೆಯೇ ಘಂಟೆ ಹನ್ನೆರಡಾದರೂ ಪಾವಾಣೆಯ ಮುಖವನ್ನೂ ಕಂಡಿರಲಿಲ್ಲ. ಸುಬ್ಬನಿಗೆ ಮನೆಯ ಯೋಚನೆ, ಮಕ್ಕಳ ಯೋಚನೆ, ಎಲ್ಲಾ ಆಗಹತ್ತಿತು. ಹೊಟ್ಟೆಯು ನಿಧಾನವಾಗಿ ಉರಿಯುತ್ತಲೇ ಇತ್ತು. ಮಂಗಳೂರಿನ ಬಸ್ಸು ಬಂದುದು ಅದೇ ಸಮಯದಲ್ಲಿ. ಪುಟ್ಟನು ತಲೆಯ ಮೇಲಿನ ಕೈಗಳನ್ನೂ ಮಡಚಿ ಕೂತ ಕಾಲುಗಳನ್ನೂ ಒಮ್ಮೆಗೇ ಬಿಡಿಸಿ ಬಸ್ಸನ್ನು ಸ್ವಾಗತೀಕರಿಸಲು ಓಡಿದ. ಈ ಸಲ ಏನನ್ನಾದರೂ ಸಂಪಾದಿಸದೆ ಉಪಾಯವೇ ಇಲ್ಲವಾದುದರಿಂದ ಬಸ್ಸು ಪೂರಾ ನಿಲ್ಲುವ ಮೊದಲೇ ಒಂದು ದೊಡ್ಡ ಕಟ್ಟನ್ನು ಬಸ್ಸಿನಿಂದ ಎತ್ತಿಕೊಂಡ. ಆ ಕಟ್ಟಿನ ಹಗ್ಗವನ್ನು ಒಂದೆಡೆಯಲ್ಲಿ ಒಬ್ಬ ಹುಡುಗನು ಹಿಡಿದಾಗಿದೆ. ಸುಬ್ಬನು ಅದನ್ನು ಎತ್ತುವ ಭರದಲ್ಲಿ ತಾನು ಕೈಬಿಡದಿದ್ದರೆ ಆ ಕಟ್ಟಿನೊಟ್ಟಿಗೆ ಸೇರಿ ಹೋಗುತ್ತೇನೆಂದು ತಿಳಿದು ಹುಡುಗ ಕೈಬಿಟ್ಟ! ಅದನ್ನು ಹೊತ್ತುಕೊಂಡು "ಹೋಗೋಣ ಧನಿಗಳೆ" ಎಂದು ಮಾಲಕನನ್ನೂ ಕರೆದು ಸುಬ್ಬ ಮುಂದೆ ಸಾಗಿದ.

ಆ ಧನಿಗಳು ಸಾಮಾನ್ಯ ಮನುಷ್ಯರಾಗಿರಲಿಲ್ಲ. ಅವರೇ ಇಲ್ಲಿಗೆ ಒಂದೇ ಮೈಲು ದೂರದಲ್ಲಿರುವ ಶ್ರೀಮಂತ ಸುಂದರ ರಾಯರು ಕಾಸರಗೋಡಿನ ಮಾಪಿಳ್ಳೆಯೊಬ್ಬನು ಹೊಗೆಸೊಪ್ಪಿನ ವ್ಯಾಪಾರಮಾಡಿಕೊಂಡು ಈ ಊರಿಗೆ ಬಂದಿದ್ದಾಗ ಈ ರಾಯರಿಂದ ಸ್ವಲ್ಪ ಹಣ ಪಡಕೊಂಡಿದ್ದನಂತೆ. ಅದನ್ನು ಕಟ್ಟಿಕೊಂಡು ಕಾಸರಗೋಡಿಗೆ ಪಲಾಯನಮಾಡಿದ್ದ. ಅವನನ್ನು ಹುಡುಕಿಕೊಂಡು ಹೋಗಿ ತಾನು ಕೊಟ್ಟ ಹಣದ ಇಮ್ಮಡಿ ಬೆಲೆಬಾಳುವಷ್ಟು ಹೊಗೆಸೊಪ್ಪನ್ನು ರಾಯರು ಹಿಡಿದುಕೊಂಡು ಬಂದಿದ್ದರು. ಬಸ್ಸಿನಿಂದ ರಾಯರ ಮನೆಯ ವರೆಗೂ ಕಟ್ಟನ್ನು ಹೊತ್ತುಕೊಂಡು ಸುಬ್ಬನು ಸಾಗಿದ. ಹಾದಿಯಲ್ಲಿ ರಾಯರು ಸುಬ್ಬನನ್ನು ವಿಚಾರಿಸಹತ್ತಿದರು. "ನೀನು ಈ ಕಸಬಿನಲ್ಲಿ ದಿವಸಕ್ಕೆಷ್ಟು ದುಡಿಯುತ್ತಿ?"

"ಏನು ಸ್ವಾಮಿ! ಸಿಕ್ಕಿದರೆ ಏಳೆಂಟಾಣೆ ಸಿಕ್ಕಿ ಬಿಡುತ್ತದೆ. ಇಲ್ಲವಾದರೆ ಏನೂ ಇಲ್ಲ ಈ ದಿನ ಇಷ್ಟರ ವರೆಗೆ ಮುಕ್ಕಾಲು ಹುಟ್ಟಲಿಲ್ಲ."

"ಏಳೆಂಟಾಣೆ ಆಗುತ್ತದೊ? ಈ ಕಾಲದಲ್ಲಿ ನಿನ್ನ ಕಸಬೇ ಒಳ್ಳೇದು!"

"ಧನಿಗಳಂಥವರು ದಯೆಯಿಟ್ಟರೆ ಹೇಗೂ ದಿನ ದೂಡಲಿಕ್ಕಾಗುತ್ತದೆ. ಒಮ್ಮೊಮ್ಮೆ ಏನೂಸಿಕ್ಕುವದಿಲ್ಲ ಸ್ವಾಮಿ!"

ಸುಂದರ ರಾಯರ ಮನೆಯ ವರೆಗೂ ಮಾತುಕತೆ ನಡೆಯಿತು ಸುಬ್ಬನು ತನ್ನ ಸಂಕಷ್ಟಗಳನ್ನೆಲ್ಲಾ ಸರಿಯಾಗಿ ನಿವೇದಿಸಿಕೊಂಡಿದ್ದನಾದುದರಿಂದ ರಾಯರು ದಯೆದೋರುವರೆಂದು ಆಶೆಕಟ್ಟಿಕೊಂಡ. ಸುಂದರ ರಾಯರು ಮನೆಯನ್ನು ಸೇರಿದವರು ಹೊಗೆಸೊಪ್ಪಿನ ಕಟ್ಟನ್ನು ಒಂದು ಮೂಲೆಯಲ್ಲಿರಿಸಿದರು. ಯಜಮಾನನ ರೀತಿಗನುಸಾರವಾಗಿ ಬಾಗಿ ಅಂಗಳವನ್ನೊಮ್ಮೆ ನೋಡಿದರು. "ಇಗೊ! ಆ ಕಸವನ್ನು ಸ್ವಲ್ಪ ಗುಡಿಸಿಬಿಡು." ಎಂದರು. ಸುಬ್ಬ ಅದನ್ನೂ ಮಾಡಿದ, ಆ ಮೇಲೆ ರಾಯರಿದಿರಿನಲ್ಲಿ ಕೈಜೋಡಿಸಿ ನಿಂತು "ಅಪ್ಪಣೆಯಯಾಗಲಿ" ಎಂದ. "ಹೊ! ನಿನ್ನ ಕಾಸುಕೊಡಲಿಲ್ಲವಲ್ಲಾ!" ಎಂದು ರಾಯರು ಜೇಬಿನಿಂದ ಎರಡು ಪಾವಾಣೆ ತೆಗೆದು ಕೊಟ್ಟರು. ಸುಬ್ಬನಿಗೆ ಪ್ರಾಣವೇ ಹಾರಿಹೋದಂತಾಯಿತು. "ಇದೇನು ಸ್ವಾಮಿ! ಒಂದು ಮೈಲು ಹೊತ್ತುಕೊಂಡು ಬಂದೆ; ಇಲ್ಲಿ ಕೆಲಸಮಾಡಿದೆ. ಎರಡೇ ಮುಕ್ಕಾಲಿಂದರೆ!" ಹೀಗೆ ಹೇಳುವಾಗ ಸುಬ್ಬನ ಕಣ್ಣುಗಳಲ್ಲಿ ನೀರು ತುಂಬಿತು. "ಸಾಕು, ಸಾಕು! ನಡಿ! ಇಲ್ಲಿವರೆಗೆ ತಂದುದಕ್ಕೆ ಎರಡು ಮುಕ್ಕಾಲು ಸಾಲದೆ?"ಎಂದು ರಾಯರು ಕಣ್ಣು ಕೆರಳಿಸಿದರು! ರಾಯರ ಕಣ್ಣುಗಳು ಎರಡು ಪಾವಾಣೆಯನ್ನು ಕಳಕೊಂಡು ಕೆಂಡಕಾರುತ್ತಿದ್ದವು; ಸುಬ್ಬನ ಕಣ್ಣುಗಳಲ್ಲಿ ನೀರೂರುತ್ತಿತ್ತು–ಆದರೂ ನೀರಿನಿಂದ ಕೆಂಡವನ್ನಾರಿಸಲಾಗಲಿಲ್ಲ!

'ವಿಟ್ಟು'

ಇಂಡಿಯ ಸರಕಾರದ ಆಯವ್ಯಯ ಪಟ್ಟಿ

ಪಂಡಿತ ಗೋವಿಂದ ವಲ್ಲಭ ಪಂತರ ಕಠಿನಟೀಕೆ

ಸೇನೆಯ ಅಪಾರವ್ಯಯ—ಸರಕಾರಿ ನೌಕರರ ವಿಪರೀತ ಸಂಬಳ— ಹಳ್ಳಿಗರ ಹಿತದ ಕುರಿತು ತೀರಾಅಲಕ್ಷ್ಯ ಹಿಂದೀ ಬಜೆಟನ ಕುರಿತು ಇದೇ ತಾ. 3ರಲ್ಲಿ ಚರ್ಚೆನಡೆದಾಗ ಶ್ರೀ ಗೋವಿಂದ ವಲ್ಲಭ ಪಂತರು ಅದನ್ನು ಬರ್ಬರ ಬಜೆಟೆಂದು ಕರೆದರು. ಯಾಕೆಂದರೆ ಯಾವ ನಾಗರೀಕ ರಾಷ್ಟ್ರವಲ್ಲಾದರೂ ಆದಾಯದ ಸೇಕಡ 63ರಷ್ಟನ್ನು ಸೇನೆಗಾಗಿ ವ್ಯಯಮಾಡುವುದಿಲ್ಲ. ಕಳೆದ ವರ್ಷಕ್ಕಿಂತಲೂ ಈ ವರ್ಷ ಸೇನಾವೆಚ್ಚವು ರೂ. 2 ಕೋಟಿ ಹೆಚ್ಚಾಗಿರುವುದು ಇಂತಹ ಕಷ್ಟಕಾಲದಲ್ಲಿಯೂ ಸೇನಾವೆಚ್ಚವು ರೂ. 2ಕೋಟಿಯಷ್ಟು ಹೆಚ್ಚಿಸಲ್ಪಟ್ಟಿರುವುದು ನಾಚಿಕೆಕರ. ಸರಕಾರಕ್ಕೆ ಖರ್ಚಿಗೇನೇ ಹಣವು ಕಡಿಮೆ ಬಿದ್ದಿರುವಾಗ ಸೇನಾ ಖಾತೆಯವರು ತಮಗೆ ಬೇಕಷ್ಟು ವೆಚ್ಚಮಾಡಿ ಹೆಚ್ಚಾದುದನ್ನು ರಿಸರ್ವಫಂಡಿಗೆ ಸೇರಿಸುತ್ತಾರೆ ಇಂಗ್ಲೆಂಡು ಸೇನೆಗಾಗಿ ಖರ್ಚುಮಾಡುವುದು. ಉತ್ಪತ್ತಿಯ ಸೇಕಡ 16ರಷ್ಟು, ಕೆನಡವು ಸೇಕಡ 9ರಷ್ಟು ಮತ್ತು ಆಸ್ಟ್ರೇಲಿಯವು ಕೇವಲ ಸೇಕಡ 4ರಷ್ಟು. ಹಾಗಾದರೆ ಬಡದೇಶಗಳಲ್ಲಿ ಬಡದೇಶವಾದ ಹಿಂದುದೇಶವು ತನ್ನ ಆದಾಯದ ಸೇಕಡ ೬೩ರಷ್ಟನ್ನು, ವಿದೇಶೀಯ ಸೇನೆಯ ಮೇಲೆ ಯಾತಕ್ಕಾಗಿ ವ್ಯಯಿಸಬೇಕು? ಅದೂ ಹಣದ ಅಭಾವವುಂಟಾಗಿರುವಾಗ ಸೇನೆಯ ವೆಚ್ಚವನ್ನೇರಿಸಿರುವುದು ಅಕ್ಷಮ್ಯ ಅಪರಾಧವೆಂದೇ ಶ್ರೀ. ಪಂತರ ಟೀಕೆ. ಎಸೆಂಬ್ಲಿಯವರು ಓಟು ಕೊಟ್ಟು ಮಂಜೂರು ಮಾಡುವ ವೆಚ್ಚಗಳು ಕಡಿಮೆಮಾಡಲ್ಪಟ್ಟು ಅವರ ಓಟಿನ ಅಧಿಕಾರಾತೀತವಾದ ವೆಚ್ಚವು ಹೆಚ್ಚಿಸಲ್ಪಟ್ಟಿದೆ. ವ್ಯವಸಾಯ, ಶಿಕ್ಷಣ ಆರೋಗ್ಯಖಾತೆಗಳಿಗೆ ವಿನಿಯೋಗಿಸಲ್ಪಡುವ ಹಣವನ್ನು ಕಡಿಮೆಮಾಡಲಾಗಿದೆ. ಇದೀಗ ಸ್ವರಾಜ್ಯಕ್ಕೆ ತಯಾರಿಸುವ ರೀತಿ! ಸಮಾಜೋಪಕಾರಕ ಕಾರ್ಯಗಳ ಸಂಬಂಧವಾದ ವೆಚ್ಚವನ್ನು ಇಂಗ್ಲೆಂಡು ಮೊದಲಾದ ರಾಷ್ಟ್ರಗಳು ಬಹಳವಾಗಿ ಹೆಚ್ಚಿಸುವಾಗ ಹಿಂದುದೇಶದಕ್ರಮ ಪ್ರತಿವಿರುದ್ಧ!

ನೌಕರರ ಸಂಬಳದ ಕಡಿತವನ್ನು ಭರ್ತಿಮಾಡಿ, ಇನ್ಕಮ್‌ಟೇಕ್ಸಿನ ಮೇಲಿನ ಸರ್ ಚಾರ್ಜನ್ನು ತೆಗೆದು ಹಾಕಿದುದು ಅರ್ಥಸಚಿವರು ಮಾಡಿದ ಅವಿವೇಕ, ಮುಂದೆ ತೊಂದರೆ ಬರುವುದೆಂಬುದನ್ನು ಅವರು ಮುಂದಾಗಿ ನಿರೀಕ್ಷಿಸಿಕೊಳ್ಳಬೇಕಿತ್ತು. ಹೊರಲು ಶಕ್ತಿಯುಳ್ಳವರ ಮೇಲಿನ ಹೊರೆಯನ್ನಿಳಿಸಿ ಅದನ್ನು ಸಂಪೂರ್ಣ ಅಶಕ್ತರ ಮೇಲೇರಿಸುವುದೆಂದರೆ ದೊಡ್ಡ ಅನ್ಯಾಯ. ಸಾಂಪತ್ತಿಕ ಸುಸ್ಥಿತಿಯು ಬರುವುದೆಂದು ಪರಿಗಣಿಸಿಕೊಂಡುದೇ ಸರ್ ಜೇಮ್ಸ್ ಗ್ರಿಗ್ಗರ ತಪ್ಪು. ಸರಕಾರಕ್ಕೆ ಸಾಂಪತ್ತಿಕ ದುಸ್ಥಿತಿಯೆಂಬುದೇ ಇಲ್ಲ.ಅದಕ್ಕೆ ಯಾವಾಗಲೂ ಸುಸ್ಥಿತಿಯೇ. ಸಾಮಾಗ್ರಿಗಳ ಕ್ರಯಗಳು ಇದ್ದಂತೆಯೇ ಇವೆ ಎಂಬುದು ರಿಸರ್ವ್ ಬೇಂಕಿನ ವರದಿಯಿಂದ ವಿದಿತವಾಗುತ್ತದೆ. ವಿಪರೀತವಾಗಿರುವ ಆಡಳಿತ ವೆಚ್ಚ ಮತ್ತು ನೌಕರರ ಸಂಬಳವು ಇಳಿಸಲ್ಪಡದೆ ಹಿಂದೀ ಸರಕಾರದ ಸಾಂಪತ್ತಿಕ ಸ್ಥಿತಿಯು ಸುಧಾರಿತವಾಗುವ ಬದಲಿಗೆ ದಿನೇ ದಿನೇ ಕೆಟ್ಟು ವಿನಾಶದ ದಾರಿ ಹಿಡಿಯದಿರದೆಂದೇ ಶ್ರೀ ಪಂತರ ಎಚ್ಚರಿಕೆ.

ಪೋಸ್ಟ್ ಕಾರ್ಡಿನ ಬೆಲೆಯನ್ನು ಅರ್ಧಾಣೆಗಿಳಿಸದ ಮತ್ತು ಸಕ್ಕರೆಯ ಮೇಲೆ ಕರಹಾಕಿರುವ ವಿಷಯವನ್ನು ಬಹುತೇಕ ಎಸೆಂಬ್ಲಿ ಮೆಂಬರರೆಲ್ಲರೂ ವಿರೋಧಿಸಿರುವರು. ಈ ಕರದಿಂದಾಗಿ ಸಕ್ಕರೆ ಮಣದ ಬೆಲೆಯು ರೂ. ೭ರಿಂದ, ರೂ. ೧೦ಕ್ಕೇರಿ, ಸಕ್ಕರೆಯನ್ನುಪಯೋಗಿಸುವ ಜನಸಾಮಾನ್ಯರ ಮೇಲೆ ಕರ ಹಾಕಿದಂತಾಗಿ ವ್ಯಾಪಾರಿಗಳು ಲಾಭಹೊಂದುವಂತಾಗುವುದು. ಮತ್ತು ಇತ್ತಲಾಗಿ ದೇಶದ ಹಲವು ಕಡೆ ಸ್ಥಾಪಿಸಲ್ಪಟ್ಟಿರುವ ಸಕ್ಕರೆ ಕಾರ್ಖಾನೆಗಳಿಗೆ ದೊಡ್ಡ ಘಾತವಾಗುವುದೆಂದೇ ಹಲವು ಮೆಂಬರರ ವಾದ. ಸ.ಪ್ರಾಂತಿನ ಮೆಂಬರರಾದ ಶ್ರೀ. ಸಂತಾನರು, ಹೊಸ ತೆರಿಗೆ ಹೊರಿಸುವುದು ಮತ್ತು ಅಧಿಕಾರಿಗಳಿಗೆ ವಿಪರೀತ ಸಂಬಳ ಕೊಡುವುದೊಂದೇ ಸರಕಾರದ ಕೆ

(ಪುಟ ೧೧ಕ್ಕೆ)

ಬದುಕು-ಸಾವುಗಳ ಗುಟ್ಟು

ಅಥವಾ

ವಿ ಕಾ ಸ

ಲೇಖಾಂಕ—೨

ಲೇಖಕ:—**ಪಂಡಿತ ತಾರಾನಾಥರಾಯರು**

ಹುಟ್ಟಿದ ಪ್ರಾಣಿಯು ಬದುಕಲೂ ಬೇಕಾದರೆ ಅದು ಎಂಥೆಂಥಾ ಉಪಾಯಗಳನ್ನು ಮಾಡಿಕೊಂಡಿದೆ ಎಂಬುದನ್ನು ಹಿಂದಿನ ಪ್ರಕರಣದಲ್ಲಿ ವಿವರವಾಗಿ ತೋರಿಸಿದೆ. ಅದರ ಸಾರಾಂಶವನ್ನೇ ಮತ್ತೊಮ್ಮೆ ಹೇಳುವದಾದರೆ—

ಬದುಕಬೇಕಾದರೆ ಪ್ರಾಣಿಗೆ ನೂರಾರು ಕಂಟಕ–ಸಂಕಟಗಳನ್ನು ಎದುರಿಸಲೇ ಬೇಕಾಗುತ್ತದೆ. ಹೀಗೆ ಪ್ರತಿಭಟಿಸಿ ಗೆಲ್ಲುವ ಶಕ್ತಿಯೇ ಬದುಕಿನ ಬಂಡವಾಳ.

ಅಂಥಾ ಪ್ರತಿಭಟನೆಗಾಗಿ ಪ್ರಾಣಿಯೂ ನೂರಾರು ಉಪಾಯಗಳನ್ನು ಮಾಡಿಕೊಂಡಿದೆ. ಚಿಪ್ಪು ಮುಂತಾದ ಕವಚಗಳನ್ನುಂಟುಮಾಡಿಕೊಂಡಿದೆ. ಅಲ್ಲಿಂದ ಕೋರೆ ಕೊಂಬುಗಳಂಥಾ ಆಯುಧಗಳನ್ನುಂಟು ಮಾಡಿಕೊಂಡಿದೆ. ಅಲ್ಲಿಂದ ಬಿಲ-ಗೂಡು ಮನೆಗಳಂಥಾ ಕಟ್ಟಡಗಳನ್ನುಂಟುಮಾಡಿಕೊಂಡಿದೆ.

ಒಂದು ವರ್ಗಕ್ಕೆ ಸೇರಿದ ವ್ಯಕ್ತಿಗಳು **ಕೂಡುತ್ತ** ಹೋದಂತೆ ಒಂದು ಗುಂಪು ಉಂಟಾಗಿ, ಆ ಗುಂಪಿನಿಂದ ವ್ಯಕ್ತಿಗೆ ಸಂರಕ್ಷಣೆ, ವ್ಯಕ್ತಿಯ ಸಂಘಬುದ್ಧಿ ಬೆಳೆದಂತೆ ಸಂಘಬಲ, ಇವೂ ಬೆಳೆಯುತ್ತ ಹೋದವು.

ಈ ಸಂಘಬಲ ವ್ಯಕ್ತಿಬಲ ಇವೆರಡೂ ಪರಸ್ಪರ ಬದುಕಿ ಬೆಳೆಯುವಂತೆ ಕಟ್ಟಳೆಗಳೂ ಉಂಟಾಗುತ್ತ ಬಂದವು.

ಈ ಕಟ್ಟಳೆಗಳಲ್ಲಿ ವಿಶೇಷವಾದ ಸಂಗತಿ ಎಂದರೆ ಪ್ರಾಣಿಯ (ಅ) ಬುದ್ಧಿಯ ಉದಯ; (ಆ) ಮತ್ತು ತನಗೂ ಪರಿಸ್ಥಿತಿಗೂ **ಹೊಂದಿಕೆಯಾಗುವಂತೆ** ಆ ಬುದ್ಧಿಯ ವ್ಯಾಪಾರ; (ಇ) ಈ ವ್ಯಾಪಾರವು ನಿಗ್ರಹ, ಶಿಸ್ತುಗಳಿಲ್ಲದೆ ನಡೆಯುವುದು ಅಸಾಧ್ಯವೇಯಷ್ಟೆ? ಸಾರಾಂಶ, ವ್ಯಕ್ತಿಯಿಂದ ಸಂಘಕ್ಕೆ ಬಲ, ಸಂಘದಿಂದ ವ್ಯಕ್ತಿಗೆ; ಇವುಗಳೆರಡಕ್ಕೂ ಬುದ್ಧಿ, ಅದಕ್ಕೆ ತಕ್ಕಂತೆ **ಶಿಸ್ತು** ಇವೇ ಆಧಾರ.

ಬುದ್ಧಿಗೆ ಶಿಸ್ತುಬೇಕು. ಶಿಸ್ತಿಗೆ ಬುದ್ಧಿ ಬೇಕು. ಶಿಸ್ತು ಕಾಣದ ಬುದ್ಧಿ ಗಾಳಿಗೆ ಬಿದ್ದ ಗರಿಯೇ ಸರಿ. ಅದು ಕುಣಿಯಬಹುದು. ಆದರೂ ಒಂದು ಹಾದಿ ಹಿಡಿದು ನಡೆಯಲಾರದು. ಅದು ಆಕಾಶಕ್ಕೆ ಮುಟ್ಟುವ ಗಾಳಿಯ ಗೋಪುರಗಳನ್ನು ಏರಿಸಬಹುದಾದರೂ ವಸ್ತುತಃ ಒಂದು ಚಿಕ್ಕ ಗುಡಿಸಲನ್ನೂ ಕಟ್ಟಲಾರದು. ಅದರ ಮಾತಿನ ಜಮಾ ಖರ್ಚುಗಳಿಗೂ ವಾಸ್ತವಿಕ ಜೀವನಕ್ಕೂ ಸಂಬಂಧವೇ ಇಲ್ಲ **ಶಿಸ್ತಿಲ್ಲದೆ ಕಾರ್ಯವಿಲ್ಲ.**

ಹಾಗೆಯೇ, ಬರೇ ಶಿಸ್ತು ಕತ್ತೆಚಾಕರಿ ಬರೇ ಶಿಸ್ತಿಗೆ ಬುದ್ಧಿಯ ಉಪಯೋಗವೇ ಆಗಲಿ, ಆವಶ್ಯಕತೆಯೇ ಆಗಲಿ ಅಷ್ಟಿಲ್ಲ. ಬಟ್ಟೆಯ ಮೂಟೆಯನ್ನು ಹೊರುವ ಕತ್ತೆಗೆ ಅಗಸನಿಗೆ ವಿಧೇಯವಾಗಿದ್ದರೆ ಸಾಕು. ಅದಕ್ಕೆ ವಿಚಾರಬೇಕಾಗಿಲ್ಲ. ಆದರೆ ವಿಚಾರವಿಲ್ಲದ ವಿಧೇಯತೆಗೆ ಮಾನವ್ಯದ ಲಕ್ಷಣಗಳೇ ಇಲ್ಲ. ಒಂದು ಯಂತ್ರವೂ ಶಿಸ್ತಿನಿಂದ ಕೆಲಸಮಾಡಬಲ್ಲುದು. ಬುದ್ಧಿ-ವಿಚಾರ ಇಲ್ಲದ ಕಡೆ ಬಟ್ಟೆಯ ಮೂಟೆ ಹೊತ್ತರೂ ಒಂದೇ; ರೂಢಿ ಸಂಪ್ರದಾಯಗಳ ಗಂಟು ಹೊತ್ತರೂ ಒಂದೇ, ವಿಚಾರಕ್ಕೆ ಅವಕಾಶವಿಲ್ಲದ ಕಡೆ, ಅಗಸನ ಚಾಕರಿಯು ಒಂದೇ, ಮುಲ್ಲಾ ಪಾದ್ರಿ-ಪೂಜಾರಿಗಳ ಚಾಕರಿಯೂ ಒಂದೇ. ಗಾದೆಮಾತಿನಲ್ಲಿ ಹೇಳುವದಾದರೆ ಅದಕ್ಕೆಲ್ಲ ಒಂದೇ ಹೆಸರು—ಕತ್ತೇ ಚಾಕರಿ!

ವಿಚಾರ ಮತ್ತು ಶಿಸ್ತು ಇವುಗಳೇ ಸಂಘಬಲಕ್ಕೆ ಆಧಾರವಾದ ಕಟ್ಟಳೆಗಳ ಇಡಾ ಸಿಂಗಲಾ ನಾಡಿಗಳು; ಪ್ರಾಣವನ್ನು ಉಸಿರುವ ಎಡಬಲ ಹೊಳ್ಳೆಗಳು. ಇವುಗಳ ದೌರ್ಬಲ್ಯವೇ ಸಂಘವಿನಾಶಕ್ಕೆ ಕಾರಣ. ಸಂಘವಿನಾಶವು ವ್ಯಕ್ತಿಯ ಸರ್ವ ನಾಶಕ್ಕೆ ಮೂಲ.

ಈಗ ನಮ್ಮಲ್ಲಿ ಇವೆರಡು ಇವೆಯೋ ಎಂದು ಪರೀಕ್ಷಿಸೋಣ. ಇವೆರಡೂ ಇವೆ. ಆದರೆ **ಹೊಂದಿಕೊಂಡಿಲ್ಲ.** ನಮ್ಮಲ್ಲಿ ವಿಚಾರವಿದೆ, ಆದರದು ಸ್ವಾರ್ಥಕ್ಕೆ ಮೀಸಲು! ಶಿಸ್ತೂ ಇದೆ, ಆದರದು ನೆರೆಹೊರೆಯ ಪ್ರೇಮದಿಂದಿಲ್ಲ, ಭಯದಿಂದ ಮಾತ್ರ ನಡೆಯುತ್ತಿದೆ. ಸಂಘಹಿತದಲ್ಲಿಯೇ ಯೋಗ್ಯ ಸ್ವಾರ್ಥವೂ ಇದೆ ಎಂಬ ನಿಶ್ಚಯದಿಂದ, ಸಂಘಕ್ಕಾಗಿ ಸಂಕಲ್ಪದಿಂದ ಪ್ರೀತಿಯಿಂದ ದುಡಿಯುವ ಮನೋಗತಿಯು ವ್ಯಕ್ತಿಯ ಹೃದಯದಿಂದ ಮಾಯವಾಗಿದೆ. ವ್ಯಕ್ತಿಯ ಶಿಕ್ಷಣವೂ ಹಿತವೂ ತನಗೆ ಸೇರಿದೆ ಎಂಬ ಭಾವನೆಯಿಂದ ದುಡಿಯುವ ಸಂಘವೂ ಮಾಯವಾಗಿದೆ. ಆದರೂ ರೂಢಿಗಳನ್ನು ಆ ರೂಢಿಗಳಿಗೂ ಕಾಲಗತಿಗೂ ಹೊಂದಿಕೆ ಇರಲಿ, ಇರದೆ ಹೋಗಲಿ-ಅಸ್ತಿತ್ವವೇ ಇಲ್ಲದ ಯಾವದೋ ಒಂದು ಸಂಘಕ್ಕಾಗಿ ಒಬ್ಬೊಬ್ಬ ಮನುಷ್ಯನೂ ಯಂತ್ರವತ್ ಬಜಾಯಿಸುತ್ತಾನೆ! ಆ ಅಜ್ಜ ಮಾಡಿದಂತೆ ತಾನೂ ಮಾಡದೇ ಹೋದರೆ ಮಂದಿ [ಅಂದರೆ ಸಂಘ (?)] ಏನಂದಾರೋ ಎಂಬ ದಿಗಿಲು ವ್ಯಕ್ತಿಗೆ! ಆದರೆ ಆ ಮಂದಿ ವ್ಯಕ್ತಿಯ ಇಹಪರ ಸುಖಹಿತಗಳಿಗಾಗಿ ಮಾಡುತ್ತಿರುವ ಕೆಲಸಯಾವುದು? ಯಾವ ಮಂದಿ ತಮ್ಮ ಪಂಗಡಕ್ಕೆ ಸೇರಿದ ವ್ಯಕ್ತಿಯ ವಿದ್ಯಾವಿಕಾಸಕ್ಕಾಗಿ ದುಡಿಯುತ್ತಿದ್ದಾರೆ? ಯಾವ ಮಂದಿ ವ್ಯಕ್ತಿಗೆ ಕಷ್ಟಕಾಲ ಬಂದರೆ ಸಲಹುತ್ತಾರೆ? ಹಾಗೆ ಸಲಹುವದಕ್ಕಾಗಿ ಆ ಮಂದಿ ಮಾಡಿಟ್ಟ ಉಪಾಯಗಳಾವವು? ಅದಕ್ಕಾಗಿ ಸಂಸ್ಥೆಗಳೋ ಏರ್ಪಾಡುಗಳೋ ಎಲ್ಲಿವೆ? ಅವು ಇರತಕ್ಕದ್ದು, ಎಂಬ ತಿಳುವಳಿಕೆಯಾದರೂ ಮಂದಿಗಾಗಲಿ ವ್ಯಕ್ತಿಗಾಗಲಿ ಇದೆಯೋ? ಇವಾವವೂ ಇಲ್ಲದೆ ಹೋದರೂ, ಸಂಘಬುದ್ಧಿಯ ವ್ಯಕ್ತಿಪರಿಪೋಷಕ ವ್ಯಕ್ತಿಹಿತಕಾರಕ ಸಂಘವೇ ಇಲ್ಲದೆ ಹೋದರೂ, ಒಬ್ಬೊಬ್ಬನೂ ಮಂದಿ ಮಂದಿ ಎಂದು ಹೇಳಿಕೊಂಡು ಇಲ್ಲದ ವಸ್ತುವಿಗೆ ಹೆದರಿ, ವಿಚಾರವನ್ನು ಬಿಟ್ಟು, ಕಾಲಕ್ಕೆ ಬೇಕಾದ ಹೊಂದಿಕೆಯ ಗೊಡವೆಯನ್ನೇ ಇಟ್ಟುಕೊಳ್ಳದೆ, ಅಜ್ಜ ನೆಟ್ಟ ಆಲದ ಮರಕ್ಕೆ ಇಂದಿಗೂ ನೀರೆರೆಯುತ್ತಿದ್ದಾನೆ! ಇದು ಹಿಂದಿನವರ ಗೌರವಕ್ಕಾಗಿಯೋ, ತನ್ನಲ್ಲಿ ಇಂದಿರುವ ಬರೇ ಭಯದಾಕ್ಷಿಣ್ಯಗಳಿಗೊಳಗಾಗಿಯೋ? ಇಲ್ಲದ ಸಂಘಕ್ಕೆ ಸಲ್ಲದ ಮರ್ಯಾದೆ, ಕಾಲಕ್ಕೇ ಹೊಂದದ ಚರ್ಯೆ, ವಿಚಾರಕ್ಕೇ ಎಡೆಗೊಡದ ಕರ್ಮ-ಇವುಗಳ ಶಿಸ್ತು, ಇವುಗಳ ಅಟ್ಟಹಾಸ, ಇವನ್ನಾಚರಿಸುವವರ ಬೂಟಾಟಿಕೆ, ಇವೆಲ್ಲವೂ ಮನುಷ್ಯನಿಂದ ಮಾನವ್ಯವೇ ಹೊರಟು ಹೋಗಿರುವದರ ಕುರುಹುಗಳು; ಅವನ ಯಂತ್ರವತ್ ಜೀವನದ ಚಿನ್ಹೆಗಳು; ಅವನ ಅವಿವೇಕದ ಪ್ರಮಾಣಗಳು. ಯಂತ್ರಕ್ಕೆ ಬುದ್ಧಿ ಇದೆಯೆ? ಬುದ್ಧಿ ಇಲ್ಲದ ಪ್ರಾಣಿಯಲ್ಲಿ ಮಾನವ್ಯವಿದೆ ಎಂದೆನ್ನುವುದು ಹೇಗೆ? ಅಂಥಾ ಪ್ರಾಣಿಗಳ ಗುಂಪಿಗೆ "ಮಂದಿ ಎನ್ನುವದಕ್ಕಿಂತಲೂ ಮಂದೆ ಎನ್ನುವುದು" ಯೋಗ್ಯವಲ್ಲವೆ?

ಹೀಗೆ ಹಳೇರೂಢಿಯ ಭಯದಿಂದ ಯಂತ್ರಗಳಂತೆ ಜೀವಿಸುವವರು ನಮ್ಮಲ್ಲಿ ಒಂದು ಕಡೆಯಿದ್ದರೆ, ಹೊಸ 'ಫೇಶನ್'ಗಳ ಮೋಹದಿಂದ ಮಂಕಾದವರು ಇನ್ನೊಂದು ಕಡೆ ಇದ್ದಾರೆ. ಅವರು ಹಿಂದಿನದಕ್ಕೆ ಮರುಳಾದವರು. ಇವರು ಇಂದಿನದಕ್ಕೆ ಹುಚ್ಚಾದವರು! ಅವರು ಪೂರ್ವವನ್ನು ಕಣ್ಣು ಮುಚ್ಚಿ ನೋಡುವವರು, ಇವರು ಪಶ್ಚಿಮವನ್ನು ಕಣ್ಣುಮುಚ್ಚಿ ಹಾಡುವವರು! ಎರಡರ ಫಲವೂ ಒಂದೇ! ಬೆಳಕಿಲ್ಲ! ವಿಚಾರವಿಲ್ಲ! ಅಂದರೆ ಮಾನವ್ಯವೇ ಇಲ್ಲ! ಇಬ್ಬರೂ ದಾಸರು, ಗುಲಾಮರು!! ಯಾವ ದೇಶದಲ್ಲಿ ಇಂಥವರ ಸಂಖ್ಯೆಯೇ ಪ್ರಬಲವಾಗಿರುತ್ತದೋ ಅಲ್ಲಿ ಜೀವನ ಸಂಗ್ರಾಮವೆಲ್ಲಿದೆ? ವಿಚಾರವಿದ್ದಲ್ಲೇ ಅಲ್ಲವೇ ಸಹಜ ಸಂಗ್ರಾಮ? ಸಹಜ ಸಂಗ್ರಾಮಕ್ಕೇ ಅಲ್ಲವೆ ಧೀರೋದಾತ್ತ ಫಲಪ್ರಾಪ್ತಿ? ವಿಚಾರವಿಲ್ಲದ ವಿಧೇಯತೆಗೆ ಅಡಿಯಾಳುತನವೇ ಲಭ್ಯ. ಇತರರ ಅನುಕರಣವೇ ಜೀವಿತದ ಜೀವಾಳವಾಗಿರುವಲ್ಲಿ ವಿಕಾಸಕ್ಕೆ ಅವಕಾಶವೇ ಎಲ್ಲಿದೆ? ನಮ್ಮೀ ದೇಶದ ಸಾವಿರಾರು ವರ್ಷಗಳ ಗುಲಾಮಗಿರಿಗೆ ಈ ಕ್ಷುದ್ರ ವಿಧೇಯತೆಯೇ, ಈ ಅಂಧಾನುಕರಣವೇ ಈ ಹೊಂದಿಕೆಯಿಲ್ಲದ ಬದುಕೇ ಕಾರಣ; ವಿಚಾರವಿಲ್ಲದ ವಿಸ್ತೇ ಮೂಲ.

ಬರೇ ಅನುಕರಣ ವಿಧೇಯತೆಗಳು ತತ್ಕಾಲಕ್ಕೆ ಸುಖದ ಮಾರ್ಗಗಳಾಗಿರಬಹುದಾದರೂ ಸಂಗ್ರಾಮವಿಲ್ಲದ ಸುಖವು ಅವಿಚಾರದ ಚಿನ್ಹವೇ ಸರಿ. ಅದು ನಾಳೆ ಬಿಡದೆ ಬರತಕ್ಕ ಗುಲಾಮಗಿರಿಯ ಸಂಚಕಾರ ಎಂಬದನ್ನು ಮರೆಯಲಿಕ್ಕಾಗದು.

ನಮ್ಮಲ್ಲೀಗ ಪ್ರತಿಯೊಬ್ಬರೂ ಜೀವನದಲ್ಲಿ ನೋಡುತ್ತಿರುವುದು ಅಂದರೆ ಅನುಕೂಲತೆ. ಇದು ತಪ್ಪೋ? ಸ್ವಲ್ಪ ಮಟ್ಟಿಗೆ ಅಲ್ಲ. ಯಾಕೆಂದರೆ ಜೀವಿಗೆ ಅನುಕೂಲತೆಯೂ ಬೇಕು. ಆದರೆ **ಅನುಕೂಲತೆಯೇ ಗಮ್ಯವಾಗಿರಕೂಡದು.** ಅನುಕೂಲತೆಯಲ್ಲಿ ವಿರಾಮವಿದೆ. ಉತ್ಸಾಹ ಸಾಮಗ್ರಿ ಇದೆ. ಆದರೆ ಈ ಉತ್ಸಾಹಕ್ಕೆ ಒಂದು ಗಮ್ಯವೂ ಇರಬೇಕು. ಆಗಮ್ಯವು ದೇಹ ಒಂದಕ್ಕೆ ಸುಖವನ್ನು ಕೊಡುವದಾಗಿದ್ದರೆ ಸಾಲದು. ಯಾಕೆಂದರೆ ಮನುಷ್ಯನು ಎಂದರೆ ದೇಹಮಾತ್ರವಲ್ಲ. ಅವನಲ್ಲಿ ವಿಶೇಷವಾಗಿರುವ ಅಂತಃಕರಣಗಳನ್ನು ಗಮನಿಸಬೇಕು. ಅವನ ಹಿರಿತನಕ್ಕೆ ಇವುಗಳ ಪ್ರಭಾವ ಚೈತನ್ಯಗಳೇ ಅಲ್ಲವೆ ಕಾರಣ? ಹೀಗಿರುವಾಗ ಅವನ ದೇಹಪರಿಸ್ಥಿತಿಗಳ ಅನುಕೂಲತೆಗೆ ಇವುಗಳ ವಿಕಾಸವೇ ಅಲ್ಲವೆ ಸಹಜವಾಗಿಯೂ ಗಮ್ಯವಾಗಿರಬೇಕು? ಈ ಗಮ್ಯದ ಗೊಡವೆಯೇ ಇಲ್ಲದ ವಿರಾಮಲಾಲಸೆಯ ಜೀವನದಲ್ಲಿ ಮನುಷ್ಯತ್ವವೇ ಇಲ್ಲವಲ್ಲಾ! ಅದು ಬರೇ ಪಶುಜೀವನ ಹೀಗಿರುವಾಗ ಪಶುಜೀವನಕ್ಕೆ ಮಾನವ ಜೀವಿಯ ವಿಶಿಷ್ಟ ಸುಖಹಿತವಿಕಾಸಗಳು ಹೇಗೆ ಲಭಿಸಿಯಾವು? ಆಚರಣಕ್ಕೆ ತಕ್ಕಂತೆಯೇ ಅಲ್ಲವೆ ಲಭಿಸುವ ಫಲವೂ?

ಈ ದೇಹಪರಿಸ್ಥಿತಿಯ—ಅನುಕೂಲತೆಗಳು ಜೀವಿಯ ಜನ್ಮಸಿದ್ಧ ಕರ್ತವ್ಯವಾದ ಸಂಗ್ರಾಮಕ್ಕೆ ಅಡ್ಡಗೋಡೆಯಾ। ಪರಿಣಮಿಸಬಾರದು. ದೇಹೇಂದ್ರಿಯಗಳು ಮಾನವನ ಕನಿಷ್ಠಭಾಗ. ಅಂತಃಕರಣಗಳಲ್ಲವೆ ಅವನ ವಿಶಿಷ್ಟ ಭಾಗ? ಹೀಗಿರುವಾಗ ತನಗೆ ಪಾಶವೀಭಾಗದಲ್ಲಿ ಲಭಿಸಿದ ವಿರಾಮಾನುಕೂಲತೆಗಳನ್ನು ಮನುಷ್ಯನು ತನ್ನಲ್ಲಿಯ ವಿಶೇಷ ಭಾಗವನ್ನು ಅರಳಿಸುವದಕ್ಕೆ, ತನ್ನ ಮನುಷ್ಯತ್ವನ್ನು ಪೂರೈಸಲಿಕ್ಕಲ್ಲವೇ ಉಪಯೋಗಿಸಬೇಕು? ಹಾಗಿಲ್ಲವಾದರೆ ಅಂತಃಕರಣಗಳ ಜಾಗೃತಿ, ಜ್ಯೋತಿ, ಸ್ಫೂರ್ತಿಗಳೆಲ್ಲವೂ ಉಳ್ಳ ಮನುಷ್ಯನಿಗೂ ಇವುಗಳ ಎಚ್ಚರಿಕೆಯೆ ಇಲ್ಲದ ಇತರ ಜೀವಿಗಳಿಗೂ ವ್ಯತ್ಯಾಸವೇನು? ಮಾನವ ಶಕ್ತಿಗಳನ್ನು ತನ್ನಲ್ಲಿಯ ಪಶುಭಾಗಕ್ಕೇ ಮೀಸಲಾಗಿಟ್ಟರೆ ಫಲವೇನು? ಸಾರ್ಥಕವೇನು? ಮನುಷ್ಯತ್ವಕ್ಕೇರಿದವನು ತನ್ನೊಳಗಿನ ಮನುಷ್ಯತ್ವವನ್ನೇ ಕೊಂದು ನೋಡುವಂತಲ್ಲವೇ ಬದುಕಬೇಕು? ಅದನ್ನು ಬಿಟ್ಟು ತಾನು ಹಿಂದೆ ಬಿಟ್ಟ ಪಶುತ್ವಕ್ಕೆ ಮತ್ತೂ ಸೊಪ್ಪು ಹಾಕಕೊಡಗಿದರೆ ತನ್ನ ಅಂತಸ್ತನ್ನು ತಾನೇ ಮರೆತಂತಾಗುವದಿಲ್ಲವೇ?

ಸಾರಾಂಶ—ವಿರಾಮಾನುಕೂಲತೆಗಳು ಕೈಯೂರಿ ಕುಳಿತುಕೊಳ್ಳುವದಕ್ಕಲ್ಲ; ಕಾಲೂರಿ ಇನ್ನೂ ಇನ್ನೂ ಏರುತ್ತಹೋಗಲಿಕ್ಕೆ. ಸಂಗ್ರಾಮಶಕ್ತಿಗೇ ಎಳ್ಳುನೀರು ಬಿಡಲಿಕ್ಕಲ್ಲ; ತನ್ನ ಮಾನವ್ಯಕ್ಕೆ ಸೇರಿದ ಹೊಸ ಹೊಸ ರಂಗಗಳಲ್ಲಿ ಹೊಸ ಹೊಸ ಸಂಗ್ರಾಮಗಳನ್ನು ಹೂಡಲಿಕ್ಕೆ.

ಇಲ್ಲಿಯ ಸಂಗ್ರಾಮದ ರೀತಿನೀತಿಗಳೂ ಹೊಸದಾಗಿರಬೇಕು. ಯಾಕೆಂದರೆ, ಜೀವಿಯು ಸಂಘಕ್ಕಾಗಿ ಕಟ್ಟಳೆಯನ್ನು ಮಾಡಲಿಕ್ಕೆ ಕಲಿತ ಕ್ಷಣಕ್ಕೇ ಜೀವನ ಸಂಗ್ರಾಮದಲ್ಲಿ ಕೊಂಬು ಚಿಪ್ಪುಗಳ ಬೆಲೆ ಇಳಿದಿದೆ ನಖದಂತಗಳು ಶಿಥಿಲವಾಗಿ ಅವುಗಳ ಕಸುವು ಬುದ್ಧಿಯ ಕಡೆಗೆ ಹೋಗಿದೆ, ಜೀವಿಯು ಈಗ ಮಾನವನಾಗಿದ್ದಾನೆ.

ಮಾನವನಿಗೆ ಮಾನವ್ಯದ ವಿಕಾಸವೇ ಸಹಜಗಮ್ಯ. ಬುದ್ಧಿಯೇ ಸಹಜಸಾಧನ. ವಿಶಿಷ್ಟ ಮಾನವನಿಗೆ ವಿಶಿಷ್ಟ ಗಮ್ಯಸಾಧನಗಳೇ ಅಲ್ಲವೇ ನ್ಯಾಯ? ಜೀವಿಯು ಮನುಷ್ಯನಾದೊಡನೆಯೇ ಸಂಗ್ರಾಮಕ್ಕೆ ನಿಸರ್ಗವು ಕಾಟು ಹಾಕಲಿಲ್ಲ, ಹಾಕಲಾರದು! ಮನುಷ್ಯನಿಗೆ ಈಗ ಒಂದು ಹೊಸದಾದ ಸೂಕ್ಷ್ಮವಾದ ಸಂಗ್ರಾಮರಂಗವೇ ಏರ್ಪಟ್ಟಿದೆ, ಅದನ್ನು ತಪ್ಪಿಸಲಿಕ್ಕಾಗದು. ಅದಕ್ಕಿಳಿದೇ ಮನುಷ್ಯನು ತನ್ನ ವೈಶಿಷ್ಟ್ಯವನ್ನು ನೋಡಬೇಕು, ಅದನ್ನು ಅನುಭವಿಸಿ ಅರಳಬೇಕು.

ಕಸ್ತೂರಿ ಮಿಶ್ರಣ ದಶಮೂಲವೆಂಬ

ಸೂತಿಕಾ ರಸಾಯನ

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

I. ಶೋಧನ ಗುಣ:—ಶೋಧನದಿಂದ ಪ್ರಸವಾನಂತರ ಗರ್ಭಕೋಶದ ಸರ್ವತರದ ನಂಜನ್ನು ಹೊರಗೆ ಹಾಕಿ ಪ್ರಸೂತವಾದ ಗರ್ಭಕೋಶವನ್ನು ಮೂರು ದಿವಸಗಳೊಳಗೆ ಸಂಕುಚಿತವಾಗಿ ಮಾಡುವದು.

II. ರಸಾಯನ ಗುಣ:—ರಸಾಯನದಿಂದ ಸೂತಿಕಾ ಸ್ತ್ರೀಯು ಗರ್ಭದ ಬೆಳವಣಿಗೆ ಬಗ್ಗೆಯೂ, ಪ್ರಸವವೇದನಾ ಬಗ್ಗೆಯೂ ತಾನು ಕಳಕೊಂಡ ಮೂಲ ಶಕ್ತಿಯನ್ನು ಇಮ್ಮಡಿಯಾಗಿ ತಿರುಗಿ ಹೊಂದುವಳು.

III. ಸುಖಸೇವನ:—ಸುಖಸೇವನದಿಂದ ಮಧುರ ಮನೋಹರವಾದ ಈ ರಸಾಯನವು ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾದುವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವಾನಂತರದ ತೀಕ್ಷ್ಣವೇದನೆಯನ್ನು ಶೀಘ್ರದಿಂದ ನಿಲ್ಲಿಸುವದು.

ಒಬ್ಬಳು ಬಾಣಂತಿಗೆ ಎರಡು ಬಾಟ್ಲಿ ಬೇಕಾಗುವದು. ಕ್ರಯ ಬಾಟ್ಲಿ 1ಕ್ಕೆ ರೂ. 2-0-0.

ಎಸ್. ವಿ. ಶಾಸ್ತ್ರಿ, ಆಯುರ್ವೇದ ಭೂಷಣ
ಮಂಗಳೂರು, ದ.ಕ.

ಕ್ರೌನ್ ರಬ್ಬರ್ ಸ್ಟಾಂಪ್ ಕಂಪೆನಿ

ಸ್ಥಾಪನೆ: 1926



18 ಬಲ್ಮಠ ರಸ್ತೆ, ಮಂಗಳೂರು.

ಯಾವತ್ತೂ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಅಗತ್ಯವಿರುವ ಎಲ್ಲಾ ತರದ ರಬ್ಬರ್ ಮೊಹರುಗಳೂ ಸೈನ್ ಬೋರ್ಡು, ಪೇಡೆಗಳ ಬೇಜು, ಮೊನೊಗ್ರಾಮ್ ಸೀಲು, ಇತ್ಯಾದಿಗಳನ್ನು ಪ್ರತಿಯೊಬ್ಬರ ಅಭಿರುಚಿಗೊಪ್ಪುವಂತೆ ಸುಲಭ ದರಗಳಲ್ಲಿ ಮಾಡಿಕೊಡೋಣಾಗುವುದು.

ಹೆಚ್ಚೆಟ್ಟು ಒತ್ತುವ ಸೆಟ್ಟುಗಳು ಕೂಡಾ ಸಿಗುವವು.

ಮಿಕ್ಕ ವಿಚಾರಗಳನ್ನು ನಮ್ಮ ಆಫೀಸಿಗೆ ಸ್ವತಹ ಬಂದು ಯಾ ಪತ್ರ ಮುಖೇನ ತಿಳಕೊಳ್ಳಬಹುದು.

ಮಂಗಳೂರಲ್ಲಿ ರೈಲು ಬಂಡಿಗಳ ಸಮಯ

ಗಾಡಿಗಳು	ಹೊರಡುವ ಘಂಟೆ.		ತಲಪುವ ಘಂಟೆ.	
ಮಿಕ್ಸೆಡ್	ಬೆಳಗ್ಗೆ	5-55	ರಾತ್ರಿ	8-55
ಕಾಂಜಂಗಾಂಡ್ ಪ್ಯಾಸಂಜರ್	ಬೆಳಗ್ಗೆ	8-25	ಮಧ್ಯಾಹ್ನ	1-20
ಮೈಲ್	ಬೆಳಗ್ಗೆ	9-50	ಸಂಜೆ	4-20
ಫಾಸ್ಟ್ ಪೆಸೆಂಜರ್	ಮಧ್ಯಾಹ್ನ	12-45	ಮಧ್ಯಾಹ್ನ	2-40
ಕಾಸರಗೋಡ್ ಪ್ಯಾಸೆಂಜರ್	ಮಧ್ಯಾಹ್ನ	3-20	ಸಂಜೆ	6-15
ಶಟಲ್	ಸಂಜೆ	5-25	ಬೆಳಗ್ಗೆ	9-30

ಜನರಲ್ ಎಶ್ಯೂರೆನ್ಸ್ ಸೊಸೈಟಿ ಲಿಮಿಟೆಡ್.

[ಸ್ಥಾಪನೆ: **1907**]

ಅತ್ಯಧಿಕ ಬೋನಸು !

ಮರಣಾಂತ್ಯ ಪೊಲಿಸಿಗಳಮೇಲೆ ಸೇಕಡಾ **25,**

ಎಂಡೊಮೆಂಟ್ ಪೊಲಿಸಿಗಳಮೇಲೆ ಸೇಕಡಾ **20,**

ಬಲವಂತ ಪೊಲಿಸಿಗಳು ರೂ. **3** ಕೋಟಿ ಮಿಕ್ಕಿವೆ.

ಮೂಲಧನವು ರೂ. **75** ಲಕ್ಷ ಮೀರಿದೆ.

ಬಡವರಿಗೂ ಧನಿಕರಿಗೂ ಹಿತಕಾರಿಯಾದ ಎಷ್ಯೂರೆನ್ಸ್ ಯೋಜನೆಗಳು.

ಅತೀ ಲಾಭದಾಯಕವಾದ ಉದಾರ ಏಜೆನ್ಸಿ ಶರ್ತಗಳು.

ವಿಶೇಷ ಮಾಹಿತಿಗಳಿಗಾಗಿ ಈ ಕೆಳಗಣ ವಿಳಾಸಗಳಿಗೆ ಬರಕೊಳ್ಳಿರಿ—

ಆಕ್ಟಿಂಗ್ ಮೆನೇಜರ್, ಅಜ್ಮೀರ್.

ಅಥವಾ

ಮೆನೇಜರ್, 278, ಲಿಂಗ ಚೆಟ್ಟಿ ಸ್ಟ್ರೀಟ್, ಮದ್ರಾಸ್.

ಸುಪರಿಂಟೆಂಡೆಂಟ್, ಬಳ್ಳಾರಿ. ಆರ್ಗನೈಸರ್, ವೆಲ್ಲೂರು.

ಚೀಫ್ ಏಜೆಂಟ್ಸ್, ಮಧುರ, ತ್ರಿಚಿನಾಪಳ್ಳಿ.

ಸ್ಟೀಮರು ಸಮಯ

	ತಲಪುವುದು	ಹೊರಡುವುದು
ಮಂಗಳೂರು	ಗುರುವಾರ ಬೆಳಗ್ಗೆ ಗಂಟೆ 9	ಶನಿವಾರ ಬೆಳಗ್ಗೆ ಗಂಟೆ
	ಸೋಮವಾರ ಬೆಳಗ್ಗೆ ಗಂಟೆ 6	ಮಂಗಳವಾರ ಬೆಳಗ್ಗೆ ಗಂಟೆ
ಮಲ್ಪೆ	ಗುರುವಾರ ಬೆಳಗ್ಗೆ ಗಂಟೆ 3	ಶನಿವಾರ ಮಧ್ಯಾಹ್ನ 2-30
	ಆದಿತ್ಯವಾರ ಸಂಜೆ ಗಂಟೆ 6	ಮಂಗಳವಾರ ಮಧ್ಯಾಹ್ನ 2-30
ಕುಂದಾಪುರ		ಶನಿವಾರ ಸಂಜೆ ಗಂಟೆ 3
		ಮಂಗಳವಾರ ಮಧ್ಯಾಹ್ನ 3

ನಮ್ಮ ಉನ್ನತಿಗಾಗಿ ನಾವೇನು ಮಾಡಬೇಕು? ಇತ್ಯಾದಿ ಸಮಸ್ಯೆಗಳಿಗೆ ಸದುತ್ತರವನ್ನು ಕೊಡುವ ಪತ್ರಿಕೆ ಎಂದರೆ

ಸದ್ಧರ್ಮ ಪ್ರಚಾರಕ

ವಾ. ಚ. **1—4—0.**

ಸಂಪಾದಕರು:-

ಬಿ. ಲಕ್ಷ್ಮಣದೇವ ವಿದ್ಯಾರ್ಥಿ.

ಉತ್ಕೃಷ್ಟ ಕಥೆ, ಕವನಗಳಿಂದೊಡಗೂಡಿ, ಪ್ರತಿಮಾಸದ 15ನೇ ತಾರೀಕಿಗೆ ತಪ್ಪದೆ ಹೊರಡುವದು.

ಸದ್ಧರ್ಮ ಪ್ರಚಾರಕ, ಕಾರ್ಯಾಲಯ,
ಅಳಕೆ ರಸ್ತೆ, ಮಂಗಳೂರು.

ಪ್ರವಾಸಿ.

ಅತ್ಯುತ್ತಮವಾದ ಸಚಿತ್ರ ಕನ್ನಡ ಮಾಸಪತ್ರಿಕೆ.

ಬೋಧಪ್ರದವಾದ ಲೇಖನಗಳು-ಮಹಾಪುರುಷರ ಜೀವನ ಚರಿತ್ರೆಗಳು ಉತ್ತಮ ಕಥೆಗಳು-ಆರ್ಥಿಕ ರಾಜಕೀಯ ವಿಚಾರಗಳು. ವೈಜ್ಞಾನಿಕ ವಿಷಯಗಳು-ಪರರಾಷ್ಟ್ರಗಳ ಸಮಸ್ಯೆಗಳು-ಗ್ರಂಥ ವಿಮರ್ಶೆ ಇವುಗಳನ್ನೊಳಗೊಂಡ ಹೊಸ ರೀತಿಯ ಮಾಸಪತ್ರಿಕೆ. ಕೈಗೆಲಸವೆಂಬ ನೂತನ ವಿಭಾಗವಿರುವ ಪತ್ರಿಕೆಯು ಇದೊಂದೇ

ವಾರ್ಷಿಕ ಚಂದಾ ರೂ. 3—8—0.

ಪ್ರವಾಸಿ ಕಾರ್ಯಾಲಯ
ಕಾಸರಗೋಡು, ದಕ್ಷಿಣಕನ್ನಡ

THE

Vijaya Bank, Ltd.

Head Office: MANGALORE. Branch Office Court Road, UDIPI.

ದಿ ವಿಜಯ ಬೇಂಕ್ ಲಿಮಿಟೆಡ್,

ಹೆಡ್ ಆಫೀಸು: ಮಂಗಳೂರು. ಶಾಖೆ: ಕೋರ್ಟು ರಸ್ತೆ, ಉಡುಪಿ

ಚಾಲ್ತಿ ಠೇವಣಾತಿಗಳು ಸಾ. ಶೆ. 2. ಸೇವಿಂಗ್ಸ್ ಬ್ಯಾಂಕ್ ಠೇವಣಾತಿಗಳುಸಾ. ಶೆ. $3\frac{1}{2}$

ಕಾಯಂ ಠೇವಣಾತಿಗಳು 3 ತಿಂಗಳ ಬಾಬ್ತು ಸಾ. ಶೆ. $3\frac{1}{2}$

6 ಮತ್ತು 9 ತಿಂಗಳ ಬಾಬ್ತು ನಾ. ಶೆ. 4. 1 ವರ್ಷದ ಬಾಬ್ತು ಸಾ. ಶೆ. 5.

2 ವರ್ಷದ ಮೇಲಿನವುಗಳ ಬಾಬ್ತು ಸಾ. ಶೆ. $5\frac{1}{2}$ ದರದ ಬಡ್ಡಿಯಲ್ಲಿ ಅಂಗೀಕರಿಸಲ್ಪಡುವುವು.

ಬ್ಯಾಂಕಿಗೆ ಸಂಬಂಧಪಟ್ಟ ಎಲ್ಲಾ ತರದ ವ್ಯವಹಾರಗಳು ನಡೆಸಲ್ಪಡುತ್ತವೆ— ಅಂದರೆ—ಪ್ರೊ. ನೋಟು, ಹುಂಡಿ, ಸರಕು, ವಗೈರೆ ಮೇಲೆ ಸಾಲಕೊಡಲಾಗುತ್ತದೆ, ಭಂಗಾರದ ಈದಿನ ಮೇಲೆ ಈ ಕೆಳಗಿನ ದರದ ಬಡ್ಡಿಯಲ್ಲಿ ಸಾಲ ದೊರೆಯುವದು. ರೂ. 1ರಿಂದ 99ರ ವರೆಗೆ ಸಾ. ಶೆ. 8. 100ರಿಂದ ಮೇಲ್ಪಟ್ಟ ಸಾಲಗಳಿಗೆ ಸಾ. ಶೆ. 7.

ವಿಶೇಷ ಸೂಚನೆ:—ಬಡವರಿಗೆ ಸಹಾಯವಾಗುವಂತೆ ಕಡಿಮೆಯೆಂದರೆ ರೂಪಾಯಿ 10/ ಸಹಾ ಸಾಲಕೊಡಲಾಗುತ್ತದೆ. ಹುಂಡಿಗಳು ದೊರೆಯುತ್ತವೆ.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರಕೊಳ್ಳಿರಿ,

A. B. Shetty, ಚೆಯರ್‌ಮೇನ್. **K. Gopalakrishna Shetty.** ಸೆಕ್ರೆಟರಿ.

ವಿಜಯ ಬೇಂಕ್ ಲಿಮಿಟೆಡ್, ಕದ್ರಿರೋಡ್, ಮಂಗಳೂರು.

ಸ್ವದೇಶಿ ಕೈಗಾರಿಕೆಯನ್ನು ಪ್ರೋತ್ಸಾಹಿಸಿರಿ.

ಸ್ವದೇಶಿ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗೆಬಗೆಯ ಬಣ್ಣದಲ್ಲಿ, ಅಂಚಿನಲ್ಲಿ, ನಮೂನೆಯಲ್ಲಿ ದೊರೆಯುತ್ತವೆ.

ಶುದ್ಧ ಖಾದಿ ಮತ್ತು ಮಿಲ್‌ಬಟ್ಟೆಗಳೂ ವಿಕ್ರಯಿಸಲ್ಪಡುತ್ತವೆ.

P. A. PAI, BROS.

ಪಿ. ಎ. ಪೈ ಬ್ರದರ್ಸ್,
ಆಸ್ಪತ್ರೆ ಎದುರು, ಉಡುಪಿ.

ಕಸಿಗಿಡಗಳು.

ಸಪೋಡಿಲ್ಲ (ಚಿಕ್ಕು)

ಈ ಮರವು ನಮ್ಮ ಜಿಲ್ಲೆಯ ಎಲ್ಲಾ ಭಾಗದಲ್ಲಿಯೂ ಸರಿಯಾಗಿ ಬೆಳೆದು, 3ನೇ ವರ್ಷದಲ್ಲಿಯೇ ತಪ್ಪದೆ ಫಲಬಿಡುತ್ತದೆ ಒಂದು ಮರದಲ್ಲಿ ಸಾವಿರಗಟ್ಲೆ ಹಣ್ಣಾಗುವದು. ಒಂದು ಎಕ್ರೆಯಲ್ಲಿ ವರ್ಷಕ್ಕೆ ರೂ. ಸಾವಿರ ದ ಮೇಲೆ ಉತ್ಪತ್ತಿಯಾಗುವದು. ಹಣ್ಣು ಅತಿ ಮಧುರ, ಒಳ್ಳೇ ರುಚಿ, ಕಾಹಿಲೆಯವರಿಗೆ ಉತ್ತಮ ಆಹಾರ ಅದರಲ್ಲಿ ಕಬ್ಬಿಣ ಸತ್ವ ಮತ್ತು ವಿಟಮಿನ್ ತುಂಬ ಇರುವದರಿಂದ ರಕ್ತವನ್ನು ವೃದ್ಧಿಸುವುದು. ಮರದಲ್ಲಿ ಯಾವಾಗಲೂ ಹಣ್ಣು ಇರುವುದು, ಎಲ್ಲ ತೋಟದಲ್ಲಿಯೂ ಇರತಕ್ಕದ್ದು. ಗಿಡವೊಂದರ ಕ್ರಯ ರೂ. 1-0-0 ಮಾತ್ರ. ನಮ್ಮಲ್ಲಿ ಉತ್ತಮ ಮಾವು ಮತ್ತು ಇತರ ಕಸಿ ಗಿಡಗಳು ಕೂಡ ದೊರೆಯುತ್ತವೆ. ಕ್ರಯಪಟ್ಟಿಗೆ ಕೆಳಗಣ ವಿಳಾಸಕ್ಕೆ ಬರೆಯುವುದು.

ಮಂಗಳೂರಲ್ಲಿ ವಿಜಯ ಬ್ಯಾಂಕಿನಲ್ಲಿಯೂ ಸ್ವಾಡಶೋಪು, ಹಂಪನಕಟ್ಟೆಯಲ್ಲಿಯೂ, ಸೋಮಯಾಜಿ ಎಂಡ್ ಕೊ, ರಥಬೀದಿಯಲ್ಲಿಯೂ ಮತ್ತು ಜಿಲ್ಲೆಯ ಎಲ್ಲಾ ಎಗ್ರಿಕಲ್ಚರಲ್ ಡೆಮೋನ್‌ಸ್ಟ್ರೇಟರಲ್ಲಿಯೂ ಮೇಲಿನ ಎಲ್ಲಾ ಗಿಡಗಳು ದೊರೆಯುತ್ತವೆ,

ಕೆ. ಎಮ್. ಶೆಟ್ಟಿ, ಕೆನರಾ ನರ್ಸರಿ,
ಪೋಸ್ಟ್ ಕಾಪು, ದ. ಕನ್ನಡ

ಪ್ರಾಥಮಿಕ ಶಿಕ್ಷಣ ಪ್ರಚಾರವೂ ಸರಕಾರದ ನೀತಿಯೂ

ಲೇಖಕ:— ಕಟಪಾಡಿ ಶ್ರೀನಿವಾಸ ಶೆಣೈ
ಅಧ್ಯಾಪಕ, ಕಾರ್ಕಳ

'ಬಾಲಚಂದ್ರ'ದ ಕಳೆದ ದಶಂಬರ ತಿಂಗಳ ಸಂಚಿಕೆಯಲ್ಲಿ ಪ್ರಕಟವಾದ ಒಂದು ಸರಕಾರಿ ಪ್ರಕಟಣೆಯ ಸಾರಾಂಶವನ್ನು ವಾಚಕರು ಓದಿರಬಹುದು. ಶಿಕ್ಷಣವು ಉಪಯುಕ್ತವೂ, ಅದರ ಪ್ರಚಾರವು ಸರ್ವತ್ರವೂ ಆಗಬೇಕೆಂಬ ಉದ್ದೇಶದಿಂದ ಸರಕಾರವು ಈಗ ಖರ್ಚುಮಾಡುತ್ತಿರುವದಕ್ಕಿಂತಲೂ ಕೆಲವು ಲಕ್ಷರೂಪಾಯಿ ಹೆಚ್ಚಿಗೆ ಖರ್ಚುಮಾಡಲಿಕ್ಕಿರುವ ಸಂಗತಿ ಅದರಿಂದ ವ್ಯಕ್ತವಾಗುತ್ತದೆ. ಲೇಖನ ಭಾಷಣಾದಿಗಳ ಮೂಲಕ ಕೆಲಸಗಾರರು ತಮ್ಮ ಅನುಭವದ ಆಧಾರದಿಂದ ಶಿಕ್ಷಣ ಕ್ರಮದಲ್ಲಿದ್ದ ಯಾವ ಲೋಪದೋಷಗಳನ್ನು ಎತ್ತಿ ತೋರಿಸಿದ್ದರೋ, ಸರಕಾರವು ತಡವಾಗಿಯಾದರೂ ಈಗ ಅವುಗಳನ್ನು ಒಪ್ಪಿ, ಅದರ ನಿವಾರಣೆಗಾಗಿ ಸೊಂಟಕಟ್ಟಿರುವ ಹಾಗೆ ತೋರುತ್ತದೆ!

ಹೀಗಾದರೂ ಶಿಕ್ಷಣ ಕ್ರಮದಲ್ಲಿ ಕಂಡು ಬರುವ ಲೋಪಗಳನ್ನು ತುಂಬಿಸಿ, ದೋಷಗಳನ್ನು ನಿವಾರಿಸುವುದಕ್ಕೆ ಪ್ರಕೃತ ಸರಕಾರವು ಕೈಕೊಂಡ ಕಾರ್ಯಕ್ರಮವೇನಿರುವದೋ, ಅದನ್ನು ಅನುಸರಿಸಿನಡೆಯುವದರಿಂದ ಎಣಿಸಿದಷ್ಟು ಫಲದೊರೆದೀತೆ? ಶಿಕ್ಷಣದ ಉದ್ದೇಶ ಸಾಧನೆಯಾದೀತೆ ಎಂಬುದು ಸಂಶಯಕ್ಕೆಡೆಯನ್ನು ಕೊಡುತ್ತದೆ. ಉಪಯುಕ್ತ ಶಿಕ್ಷಣದ ಸಾರ್ವತ್ರಿಕ ಪ್ರಚಾರವಾಗಬೇಕೆಂಬ ಲವಲವಿಕೆಯು ಸರಕಾರಕ್ಕೆ ನಿಜವಾಗಿಯೂ ಇರುವದಾದರೆ ಇದಕ್ಕೂ ಸುಲಭ ಮತ್ತು ಉತ್ತಮ ಉಪಾಯಗಳನ್ನು ಕೈಕೊಳ್ಳಬಹುದಾಗಿತ್ತಲ್ಲ ಎಂದು ನಮಗನ್ನಿಸುತ್ತದೆ.

ಅಯೋಗ್ಯ ಶಾಲೆಗಳನ್ನು ಗುರುತಿಸಿ ಅವುಗಳನ್ನು ಮಂಜೂರಾತಿಯ ಪಟ್ಟಿಯಿಂದ ತೆಗೆದು ಹಾಕಲಿಕ್ಕೂ, ಉಳಿದ ಶಾಲೆಗಳ ಮೇಲ್ವಿಚಾರದ ಬಗ್ಗೂ, ಈಗ ಇರುವ ಸಿಬಂದಿಯು ಸಾಲದೆಂಬಂತೆ ಇನ್ನೂ ಹೆಚ್ಚಿಗೆಯಾಗಿ ಸರಕಾರವು 79 ಜೂನಿಯರ ಡೆಪ್ಯುಟಿ ಇನ್ಸ್‌ಪೆಕ್ಟರರು, 5 ಇನ್ಸಪೆಕ್ಟರಸರು 4 ಡಿವಿಜನಲ್ ಆಫೀಸರುಗಳನ್ನು ನೇಮಿಸಲಿಕ್ಕಿದೆ. ಈ ಹೆಚ್ಚಿಸಿದ ಸಿಬಂದಿ ಬಗ್ಗೆ 1 ವರ್ಷಕ್ಕೆ ಖರ್ಚಾಗುವ ಹಣವು ಒಂದು ಲಕ್ಷ ರೂಪಾಯಿಗಳಿಗೆ ಕಡಿಮೆಯಾಗಲಿಕ್ಕಿಲ್ಲ.

ಶಾಲೆಗಳಲ್ಲಿ ಮಕ್ಕಳ ಸಂಖ್ಯೆ ಕಡಿಮೆಯಾಗಿರುವದೆಂಬ ಒಂದೇ ಕಾರಣದಿಂದ ಚಿಕ್ಕಶಾಲೆಗಳನ್ನು ತೆಗೆದುಹಾಕಬೇಕೆನ್ನಲಿಕ್ಕಾಗಲೀ, ಅವು ಅಯೋಗ್ಯವೆಂದು ನಿರ್ಧರಿಸಲಿಕ್ಕಾಗಲೀ ನಾವು ಸಿದ್ಧರಿಲ್ಲ. ನಮ್ಮ ದೇಶದ ಹಳ್ಳಿಗಳ ಪರಿಸ್ಥಿತಿಯನ್ನು ಪರ್ಯಾಲೋಚಿಸಿದರೆ, ನಮ್ಮ ದೇಶದಲ್ಲಿ ಕಡಿಮೆ ಸಂಖ್ಯೆಯ ಮಕ್ಕಳಿರುವ ಶಾಲೆಗಳೇ ಅಧಿಕವಾಗಿರಬೇಕಾಗುವದೆಂಬುದು ಸ್ಪಷ್ಟವಾಗುತ್ತದೆ. ಆದ್ದರಿಂದ ಅಲ್ಪ ಸಂಖ್ಯೆಯಲ್ಲಿ ಮಕ್ಕಳಿರುವ ಚಿಕ್ಕ ಶಾಲೆಗಳನ್ನು ಗುರುತಿಸಿ ಅವುಗಳನ್ನು ಮಂಜೂರಾತಿಯ ಪಟ್ಟಿಯಿಂದ ತೆಗೆದುಹಾಕಲಿಕ್ಕೆ ಹೆಚ್ಚಿಸಿದ ಸಿಬಂದಿಯ ಆಗತ್ಯವಿರುವದಿಲ್ಲ.

ಅಥವಾ ಪ್ರಥಮ ದರ್ಜೆಯಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳ ನೇಕಡಾ 10ರಷ್ಟು ಕೂಡ ೪ನೆ ದರ್ಜೆಯಲ್ಲಿ ಓದಿ ಪ್ರಾಥಮಿಕ ಶಿಕ್ಷಣದ ಓದುಬರಹಜ್ಞಾನವನ್ನು ಪಡೆಯುತ್ತಿಲ್ಲವೆನ್ನುವದಾದರೆ, ಹಾಗಾಗಲಿಕ್ಕೆ ಮೇಲಧಿಕಾರಿಗಳ ಮೇಲ್ವಿಚಾರವು ಸಾಕಾಗದೆ ಇರುವದೆಂಬುದು ಏಕಮಾತ್ರಕಾರಣವಾಗಿ ಉಳಿಯಲಾರದು. ಅದಕ್ಕೆ ಶಿಕ್ಷಣವು ಉಪಯುಕ್ತವಾಗಿಲ್ಲದಿರುವದೂ ಕಾರಣವಾಗಿದೆ. ಆ ವಿಷಯವು ಹೇಗಿದ್ದರೂ, ಶಾಲೆಗಳಿಗೆ ಮೊದಲು ವರ್ಷಕ್ಕೊಂದು ಬಾರಿಯಂತೆ ಶಿಕ್ಷಣಾಧಿಕಾರಿಗಳ ಸಂದರ್ಶನವಾಗುತ್ತಾ ಇದ್ದಿತ್ತಾದರೆ, ಈಗ ಹೆಚ್ಚಿಸಿದ ಸಿಬಂದಿಯಿಂದ ವರ್ಷಕ್ಕೆರಡು ಬಾರಿಯಂತೆ ಸಂದರ್ಶನಗಳಾಗುತ್ತ ಇರಬಹುದು. ವರ್ಷಕ್ಕೊಂದು ಬಾರಿ ಇಲಾಖಾಧಿಕಾರಿಗಳ ಕಣ್ಣಿಗೆ ಮಣ್ಣು ಹಾಕಿದವರಿಗೆ ಎರಡುಬಾರಿ ಮಣ್ಣು ಹಾಕುವದು ಅಸಾಧ್ಯವಾದೀತೆಂದು ಯಾರಾದರೂ ಹೇಳಬಲ್ಲರೆ? ಉಪಾಧ್ಯಾಯರು, ಅದರಲ್ಲೂ ರಾಜಮಾರ್ಗವನ್ನು ಬಿಟ್ಟು ಬಹುದೂರದಲ್ಲಿ ಕಾಲ್ನಡೆಯಿಂದ ಹೋಗಿ ಬರಬೇಕಾದಲ್ಲಿ ಇರುವ ಶಾಲೆಗಳಲ್ಲಿ ಕೆಲಸಮಾಡುವ ಉಪಾಧ್ಯಾಯರು ದೇಶಾಭಿಮಾನಿಗಳೂ ನಂಬಿಗೆ ವಿಶ್ವಾಸಗಳಿಗೆ ಪಾತ್ರರೂ, ತಮ್ಮ ಉತ್ತರದಾಯಿತ್ವದ ಸಂಪೂರ್ಣ ಜ್ಞಾನವುಳ್ಳವರೂ ಆಗುವದಿಲ್ಲವಾದರೆ, ಬರೇ ಮೇಲ್ವಿಚಾರಣೆಯ ಸಿಬಂದಿ ಹೆಚ್ಚಿಸುತ್ತ ಇದ್ದ ಮಾತ್ರದಿಂದ ಯಾವ ಕಾರ್ಯಸಾಧನೆಯೂ ಆಗಲಾರದು. ಅದಕ್ಕಾಗಿ ಖರ್ಚುಮಾಡಿದ ಹಣವು ಅಪವ್ಯಯವೆಂದೇ ಅನ್ನಿಸಿಕೊಳ್ಳುವದು. ಈ ಮಾತುಗಳ ಅರ್ಥವನ್ನು ಸಂಬಂಧಪಟ್ಟವರು ಬೇಕಾದಂತೆಮಾಡಿಕೊಳ್ಳಬಹುದು.

ಹೊಟ್ಟೆ ಬಟ್ಟೆಗಳ ಮಟ್ಟಿಗಾದರೂ ತೃಪ್ತರಾಗಿದ್ದ ಹೊರತು ಉಪಾಧ್ಯಾಯರದಂಥಾ ವೃತ್ತಿಯಲ್ಲಿದ್ದವರಿಗೆ ದೇಶಾಭಿಮಾನ, ಉತ್ತರದಾಯಿತ್ವ ಜ್ಞಾನವು ಕಂಡು ಬರುವದು ಅಪರೂಪವೆಂಬುದನ್ನು ಅನುಭವವು ಹೇಳುತ್ತದೆ ಉಪಾಧ್ಯಾಯರಿಗೆ ತಮ್ಮ ಉದ್ಯೋಗದಲ್ಲಿ ತೃಪ್ತಿ ಸ್ಥಾನಮಾನದ ಭದ್ರತೆಗಳು ಪ್ರಾಪ್ತವಾದ ಹೊರತು ಮೇಲ್ವಿಚಾರಕ್ಕಾಗಿ ಖರ್ಚುಮಾಡುವ ಒಂದೊಂದು ಬಿಡಿಕಾಸುಕೂಡ ಸದ್ವ್ಯಯವೆನ್ನಿಸುವದಿಲ್ಲ. ಉಪಾಧ್ಯಾಯರ ಪರಿಶ್ರಮಕ್ಕೆ ದೊರೆಯುವ ದ್ರವ್ಯರೂಪವಾದ ಪ್ರತಿ ಫಲವು ಅತ್ಯಲ್ಪವಾಗಿರುವದೆಂಬುದನ್ನು ಸರಕಾರವೇ ಒಪ್ಪುತ್ತದೆ. ಇಷ್ಟು ಮಾತ್ರವಲ್ಲ, ಸರಕಾರಿ, ಲೋಕಲ್‌ಬೋರ್ಡು ಮತ್ತು ಖಾಸಗಿ ಶಾಲೆಗಳ ಉಪಾಧ್ಯಾಯರಿಗೆ ದೊರೆಯುವ ಪ್ರತಿಫಲಾಂಶದಲ್ಲಿ ಮಹದಂತರವು ಕೂಡ ಇರುತ್ತದೆ. ಇಂಥಾ ವಿಪರೀತಾವಸ್ಥೆಯು ಮುಗಿದು, ಸುಸ್ಥಿಯು ಬರುವ ತನಕ ಉಪಾಧ್ಯಾಯರ ಪ್ರತಿಫಲಾಂಶವನ್ನು ಅವರ ಹೊಟ್ಟೆ ಬಟ್ಟೆಗಳಿಗೆ ಬೇಕಾಗುವಷ್ಟರ ಮಟ್ಟಿಗಾದರೂ ಹೆಚ್ಚಿಸಿ, ಬೇರೆಬೇರೆ ಶಾಲೆಗಳ ಒಂದೇ ವರ್ಗಕ್ಕೆ ಸೇರಿದ ಉಪಾಧ್ಯಾಯರೊಳಗಿರುವ ತಲಬು ಸ್ಥಾನಮಾನಗಳಿಗೆ ಸಂಬಂಧಪಟ್ಟ ಅಸಾಮ್ಯತೆಯನ್ನು ಸಂಪೂರ್ಣನಾಶಮಾಡುವ ತನಕ—ಇತರ ಉದ್ದೇಶಗಳಿಗಾಗಿ ಹಣಖರ್ಚುಮಾಡಿ, ಹೆಸರಿನಪೂರ್ತೆ, ಶಿಕ್ಷಣ ಪ್ರಚಾರಕ್ಕಾಗಿ ಇಂತಿಷ್ಟು ಲಕ್ಷ ರೂಪಾಯಿ ವರ್ಷಕ್ಕೆ ಹೆಚ್ಚಿಗೆ ಖರ್ಚುಮಾಡಿದೆವೆನ್ನುವದು ಆತ್ಮಶ್ಲಾಘನೆಯಾಗಿ ಪರಿಣಮಿಸಬಹುದಲ್ಲದೆ, ಅದರಿಂದ ವಾಸ್ತವಿಕವಾಗಿ ಉಪಯುಕ್ತ ಶಿಕ್ಷಣ ಪ್ರಚಾರವು ಎಷ್ಟುಮಾತ್ರಕ್ಕೂ ಆಗಲಾರದು. ಈ ನಮ್ಮ ಮಾತಿನ ಸತ್ಯಾಂಶವು, ಈಗ ಕೂಡಲೇ ಅಲ್ಲವಾದರೆ, ಕಾಲಾನುಕ್ರಮದಲ್ಲಿಯಾದರೂ ಸರಕಾರದ ಅನುಭವಕ್ಕೆ ಬಾರದೆ ಉಳಿಯಲಾರದು.

ಸರಕಾರಿ ಲೋಕಲ್‌ಬೋರ್ಡು ಮತ್ತು ಖಾಸಗಿ ಶಾಲೆಗಳಲ್ಲಿ ಕೆಲಸಮಾಡುವ ಉಪಾಧ್ಯಾಯರಿಗೆ ಅವರವರ ಯೋಗ್ಯತೆಗನುಸಾರವಾಗಿ, ಗಂಡ ಹೆಂಡತಿ ಮತ್ತು ಮೂವರು ಮಕ್ಕಳಿರುವ ಒಂದು ಚಿಕ್ಕ ಪರಿವಾರಕ್ಕೆ ಜೀವದ ನಿರ್ವಾಹಕ್ಕೆ ಬೇಕಾದ ಕನಿಷ್ಟ ಮಿತಿಯ ತಲಬಾದರೂ ಪ್ರತಿಯೊಬ್ಬನಿಗೂ ದೊರೆಯುವಂತೆ ಸಾಧಿಸುವದು ಸರಕಾರಕ್ಕೆ ಕಷ್ಟವಾದ ಕೆಲಸವೇನೂ ಇಲ್ಲ. ಇಲಾಖೆಯ ಉಚ್ಚ ನೌಕರರಿಗೆ ದೊರೆಯುವ ತಲಬಿನ ಅತ್ಯಧಿಕ ಮಿತಿಯನ್ನು ತಿಂಗಳಿಗೆ 500 ಅಥವಾ 700 ರೂಪಾಯಿಗಳಿಗೆ ಇಳಿಸಿದರೆ, ಶಿಕ್ಷಣ ಪ್ರಚಾರ ಕಾರ್ಯವನ್ನು ಅದಷ್ಟು ಸುಲಭಮಾಡುವ ಮೇಲ್ಕಂಡಂಥಾ ರಾಷ್ಟ್ರೋನ್ನತಿ ಮತ್ತು ರಾಷ್ಟ್ರ ನಿರ್ಮಾಣದ ಯೋಜನೆಗಳಿಗೆ 'ಎಷ್ಟೋ ಹಣ ಪ್ರಯಾಸವಿಲ್ಲದೆ ದೊರೆಯುವದು. ಇತರ ನಾಗರಿಕ ಸ್ವತಂತ್ರ ದೇಶಗಳ ಸರಕಾರಿ ನೌಕರರ ತಲಬು ವಿಚಾರಮಾಡಿದರೆ ನಮ್ಮ ದೇಶದಲ್ಲಿ ಸರಕಾರದ ಉಚ್ಚ ನೌಕರರಿಗೆ ಅತಿ ಹೆಚ್ಚು ಎಂದರೆ ತಿಂಗಳಿಗೆ 500 ಅಥವಾ 700 ರೂಪಾಯಿಗಳನ್ನು ಕೊಡುವದು ಕಡಿಮೆ ಆಗುವದಿಲ್ಲ, ಹೀಗೆಮಾಡಿ ಉಪಾಧ್ಯಾಯರ ಸ್ಥಿತಿಗತಿಗಳನ್ನು ಸುಧಾರಿಸಿ ಅವರ ಜೀವನದಲ್ಲಿ ಅವರಿಗೆ ಒಂದಿಷ್ಟು ತೃಪ್ತಿಯನ್ನು ತಂದುಕೊಟ್ಟರೆಂದರೆ, ಆಗ ಉಪಾಧ್ಯಾಯರಿಗೆ ಸ್ವಯಮೇವ ದೇಶಾಭಿಮಾನವೂ ಉಂಟಾಗುವದು, ಉತ್ತರದಾಯಿತ್ವದ ಜ್ಞಾನವೂ ಬರುವದು, ಅವರು ವಿಶ್ವಾಸಕ್ಕೆ ಪಾತ್ರರಾದ ಉತ್ತಮ ಕೆಲಸಗಾರರೂ ಆಗುವರು. ಹೀಗೆ ಅನುಕೂಲ ಪರಿಸ್ಥಿತಿ ಉಂಟಾದಾಗ ಮಾತ್ರ ಒಂದು ನಿಶ್ಚಿತ ಅವಧಿಯಲ್ಲಿ, ಸ್ಥಳಕಾಲಕ್ಕನುಗುಣವಾಗಿ ವ್ಯಯಕ್ಕೆ ತಕ್ಕಷ್ಟು ಕೆಲಸವನ್ನು, ಮೇಲ್ವಿಚಾರದ ಆಗತ್ಯಕೂಡ ಇಲ್ಲದೆ ಉಪಾಧ್ಯಾಯರಿಂದ ಪಡೆಯಲಿಕ್ಕಾಗುತ್ತದೆ. ಆಗ ಇಲಾಖಾಧಿಕಾರಿಗಳು ಉಪಾಧ್ಯಾಯರಿಗೆ ಮಾರ್ಗದರ್ಶಕರಾಗಿ ಉಳಿಯುವದು ಮಾತ್ರ ಅವರ ಪಾಲಿನ ಕೆಲಸವಾಗುತ್ತದೆ.

ಉಪಯುಕ್ತ ಶಿಕ್ಷಣದ ಸಾರ್ವತ್ರಿಕ ಪ್ರಚಾರದ ಸಾಧ್ಯಾಸಾಧ್ಯತೆಯು ಮುಖ್ಯವಾಗಿ ಉಪಾಧ್ಯಾಯರಿಗೆ ತಮ್ಮ ಉದ್ಯೋಗದಲ್ಲಿರುವ ತೃಪ್ತಿ ಅತೃಪ್ತಿಗಳ ಮೇಲೆ ಅವಲಂಬಿತವಾಗಿರುವದೆಂಬುದನ್ನು ನಾವಿಲ್ಲಿ ಇನ್ನೊಮ್ಮೆ ಒತ್ತಿಹೇಳಿ ಸ್ಪಷ್ಟಮಾಡಲಿಚ್ಛಿಸುತ್ತೇವೆ. ಸರಕಾರವು ಈ ಸತ್ಯವನ್ನು ಎಂದು ಮನಗಂಡಿತೋ, ಅಂದೇ ಶಾಲೆಗಳಲ್ಲಿ ಪರಿಸ್ಥಿತಿಗನುಗುಣವಾಗಿ ಮಕ್ಕಳ ಸಂಖ್ಯೆಯೂ ಹೆಚ್ಚುವದು. ಒಮ್ಮೆ ಶಾಲೆಯಲ್ಲಿ ದಾಖಲಾದ ಮಕ್ಕಳು ಶಾಲಾ ಶಿಕ್ಷಣವು ಪೂರ್ಣಮುಗಿಯುವ ತನಕ ಅದನ್ನು ಬಿಟ್ಟು ಹೋಗಲಿಕ್ಕೂ ಇಲ್ಲ; ಉಪಯುಕ್ತ ಶಿಕ್ಷಣದ ಸಾರ್ವ

ESTD. 1906

CANARA BANK

LIMITED

(INCORPORATED IN BRITISH INDIA)

MEMBER, RESERVE BANK OF INDIA
MEMBER, CLEARING HOUSE BOMBAY.

SUBSCRIBED CAPITAL	6,00,000
PAID UP CAPITAL	3,33,240
RESERVES	4,50,000
DEPOSITS	79,64,000
TOTAL RESOURCES	98,00,000

OFFICES:

BOMBAY-FORT	MANGALORE
BOMBAY-MANDVI	BANGALORE
ALLEPPEY	CHIKMAGALUR
ERNAKULAM	ARSIKERE
COCHIN	DAVANGERE
CALICUT	HUBLI
CANNANOR	DHARWAR ETC., ETC.

ನಾರದನ ತಂಬೂರಿ

ಮರೆವೆಯಾ ಕಾಲವಿದು । ಮಾಯಕದ ಯುಗವಿಂದು । ಐಂದ್ರಜಾಲವೆ ಜಗದ ಜೀವನಾಳ ॥ ನರನಾರಾಯಣ! ಶುಭವಾಗಲಿ ಮಾನವರೆ! ಲೋಕದಲ್ಲಿ ಬೆಳೆದು ಹೋದುದಾವುದು ಗೊತ್ತುಂಟೆ? ಮರವೆ ಅಲ್ಲವಾದರೆ ಮಹಾಯುದ್ಧಮುಗಿದು ಪೂರ್ತಿ ಹದಿನೈದು ವರ್ಷಗಳಾಗಲಿಲ್ಲ. ಎಲ್ಲರೂ ಇನ್ನೊಂದು ಯುದ್ಧವನ್ನು ಹಾರೈಸುತ್ತಿದ್ದಾರಲ್ಲ!

●

ಮಹಾಯುದ್ಧದ ಬೋಂಬುಗಳು ಮಾನವರ ನೆನಪುಶಕ್ತಿಯ ಮೇಲೆ ಬಿದ್ದು ಅದನ್ನು ಧ್ವಂಸಮಾಡಿಬಿಟ್ಟಾಗಿದೆ, ಎಂದೇ ನೆನಸೋಣ! ಆ ಬೊಂಬುಗಳು ಸಿಡಿದುದು ಪಾಶ್ಚಿಮಾತ್ಯ ದೇಶಗಳಲ್ಲಿ. ನಮ್ಮ ಒಂದು ಸ್ಥಾನದ ಕೆಲವು ಅಧಿಕಾರಿಗಳಿಗೂ ವಿಶೇಷ ಮರೆವೆ ಉಂಟಾಗಹತ್ತಿದೆ. ಇದಾವ ರೋಗ ಹೇಳಿ?

●

ನಮ್ಮ ರೈಲ್ವೇ ಏಜಂಟರೇ ಇದಕ್ಕೊಂದು ನಿದರ್ಶನ. ಇತ್ತೀಚೆಗಿನವರೆಗೆ ಸುಮಾರು ೬೦ ದಿನಗಳ ತನಕ ಬಿ ಎನ್ ರೈಲ್ವೇ ಮುಷ್ಕರವು ನಡೆದುದು ಗೊತ್ತುಂಟಷ್ಟೆ. ಅದು ಹೇಗಾದರೂ ಮೊನ್ನೆ ರಾಜಿಯಾಯಿತು. ಸಂಧಾನವೆಂದರೆ ಇತ್ತಂಡದವರೂ ತಮ್ಮದನ್ನು ಸ್ವಲ್ಪ ಸ್ವಲ್ಪ ಬಿಟ್ಟುಕೊಟ್ಟು ಒಂದಾಗುವದು ಮೊನ್ನೆ ಕೂಲಿಗಾರರೂ ರೈಲ್ವೇ ಅಧಿಕಾರಿಗಳೂ ಹಾಗೆಯೇ ಮಾಡಿ ಒಂದಾದರೆನ್ನಿ!

●

ಈ ಮುಷ್ಕರದಲ್ಲಿ ಸುಮಾರು ೪೦ಸಾವಿರ ಕೂಲಿಗಳು ಭಾಗವಹಿಸಿದ್ದರು. ಸರಾಸರಿ ಎರಡು ತಿಂಗಳು ನಡೆಸಿದ್ದರು ಹೀಗಿದ್ದರೂ ಏನೊಂದೂ ಗಲಾಟೆಯಾಗಲಿಲ್ಲ ಕಾರಣವಿಷ್ಟೆ-ಕೆಲಸಗಾರರು ಕೆಲಸ ಬಿಟ್ಟರೂ ಧೈರ್ಯ ಬಿಡಲಿಲ್ಲ,—ಅನ್ನ ಬಿಟ್ಟರೂ ಧೈರ್ಯಗೆಡಲಿಲ್ಲ

●

ಮುಷ್ಕರವನ್ನು ಈ ರೀತಿ ಜಯಶೀಲವಾಗಿ ನಡೆಸಿದವರು ಕೂಲಿಗಾರ ಸಂಘದವರು. ಈ ಎಲ್ಲಾ ಸಂಗತಿಗಳನ್ನು ತಿಳಿದೇ ರೈಲ್ವೇ ಏಜಂಟರು ಕೂಲಿಗಾರ ಪ್ರತಿನಿಧಿಯಾದ ಶ್ರೀ. ಗಿರಿಯವರೊಡನೆ ರಾಜಿ ಮಾಡಿಕೊಂಡಿದ್ದರು ಆ ಸಂಗತಿಯೇ ಈಗ ರೈಲ್ವೇ ಏಜಂಟರಿಗೆ ಮರೆತುಹೋಗಿದೆ! ಹೇಗಿದ ಯುಗಮಹಿಮೆ?

●

ರೈಲ್ವೇ ಏಜಂಟರು ಒಂದು ಪ್ರಕಟಣ ಹೊರಡಿಸಿ ಹೇಳುತ್ತಾರೆ—"ನಾವು ಇನ್ನು ಮುಂದೆ ಕೂಲಿಗಾರ ಸಂಘವನ್ನು ಗಣಿಸುವಂತಿಲ್ಲ. ಸಂಕಷ್ಟಕ್ಕೊಳಗಾದ ಕೂಲಿಗಾರರು ಪ್ರತ್ಯೇಕವಾಗಿ ತಮ್ಮ ಬಿನ್ನಪವನ್ನು ನಿವೇದಿಸಿಕೊಳ್ಳಬೇಕು" ಎಂದು ಇದರರ್ಥ ಇಷ್ಟೆ ಕೂಲಿಗಾರರು ಒಟ್ಟಾಗಬಾರದು ಒಕ್ಕಟ್ಟಿನಲ್ಲಿ ಬಲವಿದೆ. ಒಬ್ಬೊಬ್ಬರಾಗಿ ದುರ್ಬಲರಾಗಿ ಬಂದರೆ ನಾವದಕ್ಕೆ ಲಕ್ಷ್ಯ ಕೊಡುತ್ತೇವೆ. ಸರಿ-ಅಧಿಕಾರಿಗಳ ಇದಿರಲ್ಲಿ ಕೂಲಿಗಾರರು ದುರ್ಬಲರಾಗಿ ಮಾತ್ರ ಇರತಕ್ಕದ್ದು!

●

ಈ ಸಲದ ಹಿಂದೀ ಬಜೆಟಿನಲ್ಲಿ ಸರ್. ಜೇಮ್ಸ್ ಗ್ರಿಗ್ಗರು ಆಯ-ವ್ಯಯವನ್ನು ಒಂದು ಗೂಡಿಸಲು ಭಾರೀ ಪೇಚಾಡಿದಂತೆ ಕಂಡುಬರುತ್ತದೆ ಲೋಕದ ಎಲ್ಲಾ ರಾಷ್ಟ್ರಗಳೂ ಈ ವರ್ಷ ಲಾಭದಾಯಕಬಜೆಟನ್ನು ತಯಾರುಮಾಡಿವೆ ಸೈನ್ಯದ ಖರ್ಚನ್ನು ವಿಪರೀತವಾಗಿ ಹೆಚ್ಚಿಸಿಯೂ ಬೇರೆ ಬೇರೆ ಇಲಾಖೆಗಳಿಗೆ ಹೆಚ್ಚಿನ ಹಣವನ್ನು ಮಂಜೂರುಮಾಡಿವೆ! ನಮ್ಮ ಹಿಂದುಸ್ಥಾನದಲ್ಲಿ ಹಾಗೇನೂ ಇಲ್ಲ. ಹಿಂದುಸ್ಥಾನದಲ್ಲಿ ವರ್ಷದಿಂದ ವರ್ಷಕ್ಕೆ ಬೆಳೆದ ಸಂಪತ್ತಿಯನ್ನು ಕಾಣಬೇಕಾದರೆ ನಿರುದ್ಯೋಗಿಗಳ ಪಟ್ಟಿಯನ್ನೇ ತೆಗೆಯಬೇಕು!

●

ಸರ್ ಜೇಮ್ಸ್ ಗ್ರಿಗ್ಗರ ಬಜೆಟನ್ನು ಕಂಡು ಹಿಂದೀ ಮೆಂಬರರೆಲ್ಲಾ 'ನಾವು ದಿವಾಳಿಯಾಗುತ್ತಿದ್ದೇವೆ' ಎಂದರು ಆದರೆ ಸರ್ ಗ್ರಿಗ್ಗರು 'ಹಾಗೇನೂ ಇಲ್ಲವಯ್ಯಾ! ಎಲ್ಲಾ ತುಂಬಿ ಬರುತ್ತದೆ' ಎಂದು ಸಮಾಧಾನ ಹೇಳಿದರು. ಹಣವು ತುಂಬಿ ಬರುತ್ತದೆ ಎಂಬಾದೊಡನೆ ಮೆಂಬರರೆಲ್ಲಾ ಬೇರೆಬೇರೆ ಕೆಲಸಗಳಿಗೆ ಹಣ ಕೇಳಹತ್ತಿದರು ಕೇಳುವಾಗ ಕೊಡಲಿಕ್ಕೆ ಇಲ್ಲಲ್ಲ-ಆದರೆ 'ಒದಗು ಭರ್ತಿಯಿಲ್ಲ' ಎಂದು ಹೇಳಲಿಕ್ಕೆ ಸರ್ ಗ್ರಿಗ್ಗರು ಬಿಡುವದಿಲ್ಲ ಅಂತೂ ಯಾವುದು ಇಲ್ಲವಾದರೂ ಸರ್ ಜೇಮ್ಸ್ ಗ್ರಿಗ್ಗರಲ್ಲಿ ಇತರರು ಹೇಳಿದ್ದನ್ನು ಕೇಳದಿರುವ ಬುದ್ಧಿಯುಂಟು!

●

ಬೊಬ್ಬಿಲಿ ರಾಜರು ಚುನಾವಣೆಯಲ್ಲಿ ಮಾಡಬಹುದಾದುದನ್ನೆಲ್ಲಾ ಮಾಡಿದರು; ಸೋತರು! ಮೊನ್ನೆ ಯಾರೋ ಕೇಳಿದರಂತೆ 'ನಿಮಗೆ ಬೇರೆ ಕಡೆಯಿಂದ ಎಸೆಂಬ್ಲಿಗೆ ಹೋಗಲು ಮನಸುಂಟೆ?' ಎಂದು. ಬೊಬ್ಬಿಲಿಯವರು ಹೇಳಿದರು 'ಹಾಗೇನೂ ಇಲ್ಲ ನಾವು ಕೊಂಗ್ರೆಸಿನವರ ಕೆಲಸಗಳನ್ನೊಮ್ಮೆ ನೋಡುತ್ತೇವೆ.' ಇತರರು ಮಾಡುವ ಕೆಲಸವನ್ನು ನೋಡುವದೂ ಒಂದು ಕೆಲಸವಷ್ಟೆ!

●

'ನಾವು ಹದಿನಾರೇ ಮಂದಿಯಾದರೂ ಎಸೆಂಬ್ಲಿಯಲ್ಲಿ ಒಂದು ಪಕ್ಷವಾಗಿ ನಿಲ್ಲುವೆವು' ಎಂದರು ಬೊಬ್ಬಿಲಿ ರಾಜರು ಬೊಬ್ಬಿಲಿ ರಾಜರೊಡನೀಗ ಉಳಿದಿರುವದೆಂದರೆ 'ಪಕ್ಷ' ಎಂಬ ಬೊಬ್ಬೆ ಮಾತ್ರ!

●

ಮಧ್ಯಪ್ರಾಂತ್ಯದ ಮಾಜಿ ಗವರ್ನರರಾದ ಶ್ರೀ ಇ ರಾಘವೇಂದ್ರರಾಯರ ಚುನಾವಣೆಯು ಒಂದು ಹೊಸ ಪಾಠವನ್ನು ಕಲಿಸುತ್ತದ ಓಟಿನ ಪೆಟ್ಟಿಗೆಗೆ ಬಂದೇ ಬಾಗಿಲೆಂದು ನಂಬಿಕೊಂಡು ಮತದಾರರು ತಮ್ಮ ಮತಗಳನ್ನು ಹಾಕಿದ್ದರು ಅಲ್ಲಿ ಕೆಲವು ಪೆಟ್ಟಿಗೆಗಳಲ್ಲಿ ಬೇರೆ ತೂತುಗಳೂ ಇದ್ದವೆಂದು ಕೊಂಗ್ರೆಸ್ ಕಡೆಯವರ ಅಂಬೋಣ! ಇದೀಗ ಬಂಧನವಿರುದ್ಧಕಾಲ ಒಂದು ದ್ವಾರದಿಂದ ಹೋಗಿ ಇನ್ನೊಂದು ದ್ವಾರದಿಂದ ಹೊರಡುವ ಸ್ವಾತಂತ್ರ್ಯವು ಓಟುಗಳಿಗೂ ದೊರಕಿದೆ!

●

ಆ ಓಟುಗಳಿಗೆ ಬಂದ ಹಾದಿಯಿಂದ ಹಿಂದಿರುಗಲು ಪ್ರತಿಬಂಧಕವಿತ್ತು. ನನಗ ಹಾಗೇನೂ ಇಲ್ಲ ಬಂದ ಹಾದಿಯಿಂದಲೇ ಹೋಗಿಬಿಡುತ್ತೇನೆ ॥ ಸುಳ್ಳು ವಂಚನೆಯು ಜೊತೆ । ಫಲ ಕೊಡುವ ಕಾಲವಿದು ॥ ಓಟುಗಳ್ಳರು ಕಳ್ಳರಲಿ ಹೊಸಬರು ॥ ನರನಾರಾಯಣ! —ನಾರದ.

(ಪುಟ ೩ರಿಂದ)

ಡಿಸ್ಟ್ರೋಯರುಗಳು, 7 ಜಲಾಂತರ್ಗಾಮಿ ನಾವೆ ಮತ್ತು 45 ಚಿಕ್ಕನಾವೆಗಳು ಹೊಸತಾಗಿ ಕಟ್ಟಲ್ಪಡುವವು ಬ್ರಿಟಿಷ್ ಸರಕಾರವು ಸೈನಿಕರ ವೆಚ್ಚ ಮತ್ತು ಯುದ್ಧೋಪಕರಣ ತಯಾರಿ ಕಾರ್ಖಾನೆಗಳ ಸ್ಥಾಪನೆಗಾಗಿ 7 ಮಿಲ್ಯ ಪವನುಗಳನ್ನು ಈ ವರ್ಷ ಹೆಚ್ಚು ವ್ಯಯಿಸುವುದು. ಇನ್ನು ವಿಮಾನ ಪಡೆಗಾಗಿ 26 ಮಿಲ್ಯ ಪವನುಗಳನ್ನು ಅಧಿಕವಾಗಿ ವೆಚ್ಚಮಾಡುವುದು. ವಿಮಾನ ಪಡೆಯ ಅಧಿಕಾರಿಗಳು 4640 ಮತ್ತು ಸೈನಿಕರು 51,000 ಆಗಲಿರುವರು. 1750 ಯುದ್ಧ ವಿಮಾನಗಳು ಕಟ್ಟಲ್ಪಡುವವು ವಿಮಾನಗಳ ಇಂಜಿನುಗಳನ್ನು ತಯಾರಿಸಲು ಈಗ ಆ ಕಾರ್ಖಾನೆಗಳು ಹೊಸತಾಗಿ ಸ್ಥಾಪಿಸಲ್ಪಡುತ್ತಿವೆ. ಲಂಡನ್ ಪಟ್ಟಣದ ಸುತ್ತಲೂ ಬೆಲೂನುಗಳೆಂಬ ಒಂದು ಬಗೆಯ ವಿಮಾನ ಪಡೆಯನ್ನಿರಿಸಿ ವಿಮಾನಧಾಳಿಯನ್ನು ತಡೆಗಟ್ಟುವ ಏರ್ಪಾಡುಮಾಡುವ ಯೋಚನೆ ನಡೆದಿದೆ.

ಹಡಗು ಮುಳುಗಿ ಪ್ರಾಣ ಹಾನಿ

ಸ್ಪೈನಿನ ಬಳಿಯ ಸಮುದ್ರಭಾಗದಲ್ಲಿ ಬಂಡಾಯಗಾರರು ಸಿಡಿಮದ್ದಿನ ಗನಿಗಳನ್ನಿರಿಸಿರುವುದರಿಂದ ಹಡಗಿನ ಸಂಚಾರವು ಅಪಾಯಕರವಾಗಿದೆ. ಇತ್ತಲಾಗಿ ಬ್ರಿಟಿಷ್ ಸ್ಟೀಮರೊಂದು ಈ ಗನಿಯ ಸ್ಫೋಟಕ್ಕೆ ಸಿಕ್ಕಿ ಜಖಮ್ ಹೊಂದಿರುವುದು. ಇದೇ ತಾ. ೯ರಲ್ಲು ಗ್ರೀಸ್‌ದೇಶದ ಹಡಗವೊಂದು ಈ ಗನಿಯ ಸ್ಫೋಟಕ್ಕೆ ಸಿಕ್ಕಿ ಮುಳುಗಿ ಹೋಗಿ ಅನೇಕ ಮಂದಿ ಕೊಲ್ಲಲ್ಪಟ್ಟಿರುವರು. ಇದರಲ್ಲಿ 3000 ಟನ್ನು ಪೆಟ್ರೋಲಿದ್ದಿತೆಂದು ತಿಳಿದುಬರುತ್ತದೆ

(ಪುಟ ೭ರಿಂದ)

ತ್ರಿಕ ಪ್ರಚಾರವೂ ಆಗುವದು ಆದ್ದರಿಂದ ಸರಕಾರವು ವಿದ್ಯಾ ಇಲಾಖೆಯ ಇತರ ಬಾಬುಗಳಿಗೆ ಹಣ ಖರ್ಚುಮಾಡುವದನ್ನು ಸದ್ಯ ಬಾಕಿಇಟ್ಟು, ಆದಷ್ಟು ಹೆಚ್ಚು ಹಣವನ್ನು ಒದಗಿಸಿಕೊಂಡು ಅದನ್ನು ಕೇವಲ ಉಪಾಧ್ಯಾಯರ ಸ್ಥಿತಿಗತಿಗಳನ್ನು ಸುಧಾರಿಸುವದಕ್ಕಾಗಿಯೇ ಉಪಯೋಗಿಸುವದೆಂಬ ವಿಶ್ವಾಸದಿಂದಿರುತ್ತೇವೆ

ಗೃಹಸ್ಥರೇ!

ಗೃಹಕೃತ್ಯೋಪಯೋಗದ ಎಲ್ಲಾ ವಿಧದ ತಾಮ್ರ ಹಿತ್ತಾಳಿ, ಜರ್ಮನ್ ಬೆಳ್ಳಿ, ಬೆಳ್ಳಿ ಸಾಮಾನುಗಳು ಎಲ್ಲಿ ಸಿಗುತ್ತವೆ ಬಲ್ಲಿರಾ?

ರಥಬೀದಿಯಲ್ಲಿ ಕಲ್ಮಂಜೆ ವ್ಯಾಸಾಚಾರ್ಯರ ಅಂಗಡಿಯಲ್ಲಿ ಮಾತ್ರವೇ.

ಸ್ವದೇಶಿ ಕೈಗಾರಿಕೆ! ಹದಿನೆಂಟು ವರ್ಷಗಳ ಅನುಭವ!

ಮನೆಯ ಉಪಯೋಗಕ್ಕೂ ಉಡುಗರೆ ಕೊಡಲಿಕ್ಕೂ ದಾನಮಾಡಲಿಕ್ಕೂ ಬೇಕಾದ ನಮೂನೆಯ ಸಾಮಾನುಗಳನ್ನು ಮನಮೆಚ್ಚುವ ಮಾದರಿಯಲ್ಲಿ ತಕ್ಕ ಕಾಲದಲ್ಲಿ ನಾಜೂಕಾಗಿ ತಯಾರುಮಾಡಿಸಿಯೂ ಕೊಡಲಾಗುವುದು.

ಹೆಚ್ಚಿನ ವಿವರಗಳಿಗೆ ಸಚಿತ್ರ ಕಟಲಾಗಿಗೆ ಬರೆಯಿರಿ.

ಕಲ್ಮಂಜೆ ವ್ಯಾಸಾಚಾರ್ಯ,
ಪಾತ್ರೆ ವ್ಯಾಪಾರಿ, ರಥಬೀದಿ, ಉಡುಪಿ.



ಗೃಹಕೃತ್ಯಕ್ಕೆ ಬೇಕಾದ ವಿದವಿಧ ತಾಮ್ರದ ಪಾತ್ರೆಗಳು

ಮಂಗಳೂರು

(ನಮ್ಮ ಸ್ವಂತ ವಾರ್ತಾದಾರರಿಂದ)

ತಾ ೮-೩-'೩೭

ಜಿಲ್ಲಾ ಬೋರ್ಡು ಸಭೆ

ದಕ್ಷಿಣ ಕನ್ನಡ ಜಿಲ್ಲಾ ಬೋರ್ಡು ಸಭೆಯು ಬರುವ ತಾ. ೧೪ಕ್ಕೆ ಜಿಲ್ಲಾ ಬೋರ್ಡು ಆಫೀಸಿನಲ್ಲಿ ಜರಗಲಿರುವುದು. ಆ ದಿನ ೧೯೩೬-೩೭ರ ರಿವೈಸ್‌ಡ ಬಜೆಟನ್ನೂ ೧೯೩೭-೩೮ನೇ ಇಸವಿಯ ಬಜೆಟು ಅಂದಾಜನ್ನೂ ಸಭೆಯ ಮುಂದಿಡುವರು

ಸ್ಮಾರಕನಿಧಿಗೆ ಧನಸಹಾಯ

ದಿವಂಗತ ಶ್ರೀ. ಕಾರ್ನಾಡು ಸದಾಶಿವ ರಾಯರ ಸ್ಮಾರಕಕ್ಕೆ ನಿಧಿಯನ್ನು ಕೂಡಿಸುವ ಉದ್ದೇಶದಿಂದ ಮಂಗಳೂರು ನಗರ ಕಾಂಗ್ರೆಸ್ ಸಭೆಯ ಆಶ್ರಯದಲ್ಲಿ ಸೇವಾದಳ ನಾಟಕ ಮಂಡಳಿಯವರು ಒಂದು ನಾಟಕವನ್ನು ಸದ್ಯದಲ್ಲಿಯೇ ಪ್ರದರ್ಶಿಸಲಿರುವರಾಗಿ ತಿಳಿದುಬರುತ್ತದೆ

ಜಿ. ಬೋ. ಉಪಾಧ್ಯಾಯರ ಸಭೆ

ಜಿಲ್ಲಾ ಬೋರ್ಡು ಉಪಾಧ್ಯಾಯರ ಸಂಬಳದಲ್ಲಿ ಪುನಃ ಕಡಿತವಾಗುವುದೆಂಬ ವದಂತಿಯಿರುವದರಿಂದ ತಮ್ಮ ಸಂಕಷ್ಟಗಳನ್ನು ಬೋರ್ಡಿನವರಿಗೆ ಅರಿಕೆಮಾಡಬೇಕೆಂಬ ಉದ್ದೇಶದಿಂದಲೂ ಜಿಲ್ಲಾ ಬೋರ್ಡು ಅಧ್ಯಾಪಕ ಅಧ್ಯಾಪಿಕೆಯರ ಸಭೆಯೊಂದನ್ನು ಕೂಡಿಸಬೇಕೆಂದು ಜಿಲ್ಲಾ ಬೋರ್ಡು ಶಾಲಾ ಉಪಾಧ್ಯಾಯರ ಸಂಘದ ಕಾರ್ಯದರ್ಶಿಗಳು ನಿರ್ಧರಿಸಿ ಎಲ್ಲಾ ಉಪಾಧ್ಯಾಯ ಉಪಾಧ್ಯಾಯಿನಿಯರೂ ದಯವಿಟ್ಟು ಬರಬೇಕೆಂದು ಆಮಂತ್ರಿಸಿದ್ದಾರೆ.

ಪ್ರೊ. ವಾರ್ಕಿಯವರಿಗೆ ಅಪೂರ್ವ ಸತ್ಕಾರ ಪುರಜನರ ಪ್ರಚಂಡ ಸಭೆ

ಕ್ರಿಸ್ತರ ಪರವಾಗಿ ಮದ್ರಾಸ್ ಎಸಂಬ್ಲಿಗೆ ಚುನಾಯಿಸಲ್ಪಟ್ಟಿರುವ ಪ್ರೊ. ಸಿ. ಜೆ. ವಾರ್ಕಿಯವರು ಮೊನ್ನೆಯ ದಿನ (ತಾ ೬-೩-೩೭) ಮಿಲಿಯಿಂದ ಮಂಗಳೂರಿಗೆ ಬಂದರು. ಮಂಗಳೂರಿನ ಪುರಜನರು, ನಗರ ಸಭಾಧ್ಯಕ್ಷರಾದ ಡಾ ಕೆ ವಿಟ್ಠಲ ಶೆಟ್ಟಿಯವರ ಮುಂದಾಳುತನದಲ್ಲಿ ಅವರಿಗೆ ರಾಜಮರ್ಯಾದೆಗೆ ಸದೃಶವಾದ ಮನ್ನಣೆಯನ್ನು ಮಾಡಿದರು ರೈಲು ನಿಲ್ದಾಣಕ್ಕೆ ಬಂದೊಡನೆ ಪ್ರೊ "ವಾರ್ಕೀಕಿ ಜೈ" ಎಂಬ ಜಯಘೋಷವು ನಭೋಮಂಡಲವನ್ನಡರಿತು. ಕ್ರಿಸ್ತ ಪ್ರಮುಖರೂ ಹಲವರು ಬಂದಿದ್ದರು ಎಲ್ಲರೂ ಹೂವಿನ ಹಾರಗಳನ್ನು ಪ್ರೊಫೆಸರರಿಗಿತ್ತು ಸತ್ಕರಿಸಿದರು ಅನಂತರ ಬೇಂಡ್ ವಾದ್ಯದಿಂದ ಯುಕ್ತವಾದ ಒಂದು ಮೆರವಣಿಗೆಯು ರೈಲ್ವೆ ಸ್ಟೇಶನಿನಿಂದ ಹೊರಟು ಕಾಲೇಜಿಗೂ ಅನಂತರ ಅಲ್ಲಿಂದ ನಗರದ ಮುಖ್ಯ ಬೀದಿಗಳಲ್ಲಿ ಸಂಚರಿಸಿ ಮೈದಾನಕ್ಕೆ ಬಂದಿತು ದಾರಿಯುದ್ದಕ್ಕೂ ಪ್ರೊಫೆಸರರಿಗೆ ಹೂವಿನ ಹಾರಗಳು ಸರ್ವ ಜಾತಿಯವರಿಂದಲ್ಲೂ ಅರ್ಪಿಸಲ್ಪಟ್ಟವು

ಸಾಯಂಕಾಲ ೬ ಘಂಟೆಗೆ ಮೆರವಣಿಗೆಯು ಮೈದಾನಕ್ಕೆ ಬಂದು ಸೇರಿತು. ಡಾ| ವಿಟ್ಠಲ ಶೆಟ್ಟಿಯವರ ಸನ್ಮಾನ್ಯ ಅಧ್ಯಕ್ಷತೆಯಲ್ಲಿ ಸಭೆ ಜರಗಿತು. ಪ್ರೊ ವಾರ್ಕಿಯವರು ತಮ್ಮ ಭಾಷಣದಲ್ಲಿ, ಹಿಂದಿನ ಗೌರವವು ತಮಗೆ ವೈಯಕ್ತಿಕವಾಗಿ ದೊರೆತುದಲ್ಲವೆಂದೂ, ಆ ಗೌರವವು ರಾಷ್ಟ್ರಮಹಾಸಭೆಗೆ ಸಲ್ಲತಕ್ಕುದೆಂದೂ ಹೇಳಿದರು. ಚುನಾವಣೆಯ ಹೋರಾಟದಲ್ಲಿ ತಮಗೆ ಅತ್ಯಂತ ಸಹಾಯ ಮಾಡಿದ ಡಾ| ಶೆಟ್ಟಿಯವರೇ ಮೊದಲಾದ ಹಿಂದೂಸದ್ಗೃಹಸ್ಥರಿಗೂ, ಕೆಥೋಲಿಕ್ ವಕೀಲರ ಸಂಘ, ಕೆಥೋಲಿಕ್ ವ್ಯಾಪಾರಿ ಸಂಘದವರಿಗೂ, ಹಿಂದೂ ಮತ್ತು ಕ್ರಿಸ್ತ ಸ್ವಯಂಸೇವಕರಿಗೂ ತಮ್ಮ ಕೃತಜ್ಞತೆಯನ್ನು ಸಮರ್ಪಿಸಿದರು ಕ್ರಿಸ್ತರು ಕಾಂಗ್ರೆಸಿನೊಡನೆ ನಿಂತು ದೇಶದ ಸ್ವಾತಂತ್ರ್ಯಕ್ಕೆ ಹೋರಾಡುವರೆಂಬುದಕ್ಕೆ ಕಳೆದ ಚುನಾವಣೆಯೇ ತಕ್ಕ ನಿದರ್ಶನವೆಂದು ಹೇಳಿದರು. ಮತ್ತು ಈಗಿನ ಕಾಲವು ಬಡ ಜನರ ಕಾಲವೆಂದೂ, ಹಣವಂತರ ದರ್ಪದ ಕಾಲವು ಅಂತ್ಯವಾಯಿತೆಂದೂ ಹೇಳಿದರು. ತಮ್ಮ ಚುನಾವಣೆಯ ಪೂರ್ವದಲ್ಲಿ ತಾವು ಮಾಡಿದ ಪ್ರತಿಜ್ಞೆಯನ್ನೇ ಪುನಃ ಮಾಡಿ ತಾವು ಜನತೆಯ ಮತದಿಂದ ಆರಿಸಿ ಬಂದವರು, ಜನತೆಯ ಹಿತಕ್ಕಾಗಿ ಸದಾ ಹೋರಾಡುವುದಕ್ಕೆ ಸಿದ್ಧರಿದ್ದೇವೆಂದರು ಮೊದಲು ಕೊಟ್ಟ ಸಹಾಯದಂತೆಯೇ ಇನ್ನು ಮುಂದಕ್ಕೂ ತಮಗೆ ಸಹಾಯ ಸಹಾನುಭೂತಿಗಳನ್ನೀಯಬೇಕೆಂದೂ, ಜನತೆಯೇ ತಮ್ಮ ಮೂಲಕ ಕೌನ್ಸಿಲುಗಳಲ್ಲಿ ಹೋರಾಡುವ ಹಾಗಾಗಬೇಕೆಂದೂ ಹೇಳಿದರು. ಆ ಮೇಲೆ ಯುವಕರನ್ನು ಕುರಿತು ಹೇಳುತ್ತಾ, ಯುವಕರು ಬಹಳ ಸಾಹಸ ಮಾಡಿರುತ್ತಾರಾಗಿ ತಿಳಿಸಿ ಅವರನ್ನು ವಂದಿಸಿದರು. ಡಾ| ವಿಟ್ಠಲಶೆಟ್ಟಿಯವರನ್ನು ಕುರಿತು ಹೀಗೆಂದರು. ಡಾ| ಶೆಟ್ಟಿಯವರು ತಮಗೆ ಮಾಡಿದ ಸಹಾಯವು ಅಷ್ಟಿಷ್ಟಲ್ಲ ಅವರು ಸ್ವಾರ್ಥತ್ಯಾಗಿಗಳು ಅವರ ಸ್ವಾರ್ಥತ್ಯಾಗವು ಅವರನ್ನು ಆದರ್ಶ ಧುರೀಣರಲ್ಲೊಬ್ಬರನ್ನಾಗಿ ಮಾಡಿರುವುದು. ಅವರು ಸರಕಾರದವರು ಕೊಟ್ಟ ಬಿರುದನ್ನು ತಿರಸ್ಕರಿಸಿದರಲ್ಲದೆ ಅನೇಕರು ಒತ್ತಾಯಿಸಿದರೂ ಕೌನ್ಸಿಲಿಗಾಗಲಿ ಎಸಂಬ್ಲಿಗಾಗಲಿ, ನಿಲ್ಲದೆ ಇತರರಿಗೆ ಅನುಕೂಲತೆಯನ್ನು ಕಲ್ಪಿಸಿಕೊಟ್ಟರು ಅದು ಸ್ವಾರ್ಥತ್ಯಾಗ ಎಂದು ಹೇಳಿದರು. ಮುಕ್ತಾಯದಲ್ಲಿ ವಾರ್ಕಿ ಮತದಾರರನ್ನೂ ಮತ್ತು ತನಗೆ ಸಹಾಯ ಮಾಡಿದ ಸಕಲರನ್ನೂ ಹೃತ್ಪೂರ್ವಕ ವಂದಿಸಿ ಭಾಷಣವನ್ನು ಮುಗಿಸಿದರು.

ಅನಂತರ ಶ್ರೀ| ಕಿಲ್ಲೆಯರೇ ಮೊದಲಾದ ಹಲವು ಹಿಂದೂ ಗೃಹಸ್ಥರೂ ಮಿ. ಜಾರ್ಜ್ ಹೆಬಿರೇ ಮೊದಲಾದ ಕ್ರಿಸ್ತ ಗೃಹಸ್ಥರೂ ಕ್ರಿಸ್ತ ಮಹಿಳೆಯರಲ್ಲಿ ಕೆಲವರೂ ಪ್ರೊಫೆಸರರನ್ನು ಅಭಿನಂದಿಸಿ ಮಾತಾಡಿದರು ಶ್ರೀ| ಕಿಲ್ಲೆಯವರೂ, ಹಿಂದುಗಳೂ ಕ್ರಿಸ್ತರೂ ಮುಸಲ್ಮಾನರು-ಎಲ್ಲರೂ ಕಾಂಗ್ರೆಸಿಗೆ ಸೇರಿ ಆ ಸಂಸ್ಥೆಯನ್ನು ಬಲಪಡಿಸಿ ಸ್ವಾತಂತ್ರ್ಯಕ್ಕಾಗಿ ಎಲ್ಲರೂ ಮುಂದಡಿಯಿಡಬೇಕೆಂದರು ಆ ಮೇಲೆ ಡಾ| ಶೆಟ್ಟಿಯವರ ಸಮಯೋಚಿತ ಭಾಷಣವಾದ ಮೇಲೆ ಸಭಾಂತ್ಯ ವಾಯಿತು. ಮಂಗಳೂರಿನಲ್ಲಿ ಕ್ರಿಸ್ತ ಬಂಧುಗಳು ಇತರರೊಡನೆ ಬೆರೆತು ಇಂತಹ ಸಮಾರಂಭದಲ್ಲಿ ಭಾಗವಹಿಸಿದುದು ಬಹಳ ವಿಶೇಷದ ಸಂಗತಿಯಾಗಿದೆ ಇದರಿಂದಲೇ ಭಾರತದ ಭವಿಷ್ಯವು ಒಳ್ಳೆಯದಾಗುವಂತಿದೆ ಎಂದು ಹೇಳಬಹುದು

ಅಧಿಕಾರ ಸ್ವೀಕಾರಕ್ಕೆ ಸಮ್ಮತಿ

ಮಂಗಳೂರು ಟೌನ್ (ನಗರ) ಕಾಂಗ್ರೆಸ್‌ಸಮಿತಿಯವರು ಕಳೆದ ತಾ ೩ರಲ್ಲಿ ಸಭೆಸೇರಿ ಅಧಿಕಾರ ಸ್ವೀಕಾರದ ವಿಷಯವಾಗಿ ಬಹುದೀರ್ಘಕಾಲ ಚರ್ಚಿಸಿ ಅನಂತರ ಹೊಸ ಸುಧಾರಣೆಗಳನ್ನು ಮುರಿಯುವುದಕ್ಕಾಗಿ, ಕಾಂಗ್ರೆಸಿನವರು ಅಧಿಕ ಸಂಖ್ಯೆಯಲ್ಲಿರುವ ಪ್ರಾಂತಗಳಲ್ಲಿ ಮಂತ್ರಿಪದವಿಗಳನ್ನು ಸ್ವೀಕರಿಸಬೇಕೆಂದು ಠರಾವುಮಾಡಿದರು.

ಆ ದಿನದ ಸಭೆಯಲ್ಲಿ ಚುನಾವಣಾಕಾಲದಲ್ಲಿ ಸರ್ವವಿಧದಲ್ಲಿಯೂ ಕಾಂಗ್ರೆಸಿಗೆ ಸಹಾಯವನ್ನಿತ್ತ ಸ್ವಯಂಸೇವಕರನ್ನು ವಂದಿಸಿ ಒಂದು ಠರಾವು ಸಹ ಮಂಜೂರಾಯಿತು

ಶ್ರೀ. ಸಿ. ರಾಜಗೋಪಾಲಾಚಾರ್ಯರ ಅಭಿನಂದನ

ದ ಕನ್ನಡದಲ್ಲಿ ಕಾಂಗ್ರೆಸಿಗೆ ದೊರೆತ ಪ್ರಚಂಡ ವಿಜಯಕ್ಕಾಗಿ ಸಂತೋಷಪಟ್ಟು ದೇಶಭಕ್ತ ಸಿ ರಾಜಗೋಪಾಲಾಚಾರ್ಯರು ಮಂಗಳೂರು ಜಿಲ್ಲಾ ಕಾಂಗ್ರೆಸ್ ಕಮಿಟಿಯ ಅಧಿಕಾರಿಗಳಿಗೆ ಒಂದು ತಂತಿಯನ್ನು ಕಳುಹಿಸಿರುವರು.

ಗುರುವಾರ (ಶಿವರಾತ್ರಿಯ) ದಿನ ನಡೆಸಲ್ಪಡುವುದು ಅಂದಿನ ಸಮಾರಂಭದಲ್ಲಿ ನಮ್ಮ ಜಿಲ್ಲಾ ಸಬ್‌ಜಡ್ಜರು ಅಧ್ಯಕ್ಷತೆ ವಹಿಸುವರು

ಬೀಡಿ ತಯಾರಿಸುವವರ ಸಂಘ

ಈ ಸಂಘದ ಜನರಲ್ ಮೀಟಿಂಗು ನಿನ್ನೆಯದಿನ ಸಾಯಂಕಾಲ ಶ್ರೀ ರಂಗರಾವ್ ತಲಚೇರಿಕರರ ಅಧ್ಯಕ್ಷತೆಯಲ್ಲಿ ನಡೆಯಿತು ಸಂಘದ ಆಡಳಿತೆಯ ಬಗ್ಗೆ ತಯಾರಾದ ನಿಯಮಾವಳಿಗಳು ಸಭೆಯಲ್ಲಿ ಚರ್ಚಿಸಲ್ಪಟ್ಟು ಸ್ವೀಕೃತವಾದವು ಅನಂತರ ಶ್ರೀ| ರಂಗರಾವ್ ತಲಚೇರಿಕರರು ಅಧ್ಯಕ್ಷರಾಗಿಯೂ ಶ್ರೀ ಕೆ ಹೈದರು ಜನರಲ್ ಸೆಕ್ರೆಟರಿಗಳಾಗಿಯೂ ಮತ್ತು ಶ್ರೀ ಸ. ಕೆ. ಗೋವಿಂದನ್‌ರವರು ಕಾರ್ಯದರ್ಶಿಗಳಾಗಿಯೂ ಇರುವ ಒಂದು ಕಾರ್ಯಕಾರಿ ಸಮಿತಿಯು ಚುನಾಯಿಸಲ್ಪಟ್ಟಿತು.

ಮುಸ್ಲಿಂ ಅಧ್ಯಾಪಕರ ಪರಿಷತ್ತು

ಮಂಗಳೂರು ಮುಸ್ಲಿಂ ಅಧ್ಯಾಪಕರ ಸಂಘದವರು ಏರ್ಪಡಿಸಿದ ಅಧ್ಯಾಪಕರ ಪರಿಷತ್ತನ್ನೂ, ಶಿಕ್ಷಣ ಪ್ರದರ್ಶನವನ್ನೂ ನಮ್ಮ ಜಿಲ್ಲಾ ಕಲೆಕ್ಟರ್ ದೊರೆಗಳಾದ ಮಿ| ಎ ಡಿ ಕಾ ಬಿ ಸಿ ಪ ಇ, ಪ. ಸ ಎಸ್.ರವರು ಕಳೆದ ತಾ ೫ನೇ ಸಾಯಂಕಾಲ ಉದ್ಘಾಟನೆಮಾಡಿದರು ಕಲೆಕ್ಟರರು ತನ್ನ ಭಾಷಣದಲ್ಲಿ, ಮುಸ್ಲಿಮರು ಹೇಗೆ ವಿದ್ಯೆಯಲ್ಲಿ ಇನ್ನೂ ತಕ್ಕಷ್ಟು ಮುಂದುವರಿದಿಲ್ಲವೆಂಬುದನ್ನು ತಿಳಿಸಿದ್ದಲ್ಲದೆ ಸರಕಾರದವರು ಜಾತಿಮಾರಾಗಿ ಕೆಲಸಕೊಡುವ ನಿರ್ಧಾರಮಾಡಿದ್ದರಿಂದ ಮುಸಲ್ಮಾನರಿಗೆ ತುಂಬಾ ಅನುಕೂಲವಾಗಿದೆ ಎಂದರು ಅಧ್ಯಾಪಕರು ಸಮಾಜದ ಮಕ್ಕಳ ಏಳಿಗೆಗಾಗಿ ಮಾಡುತ್ತಿರುವ ಪ್ರಯತ್ನಗಳನ್ನೂ, ಶಿಕ್ಷಣ ಪ್ರದರ್ಶನಗಳಿಂದ ಆಗತಕ್ಕ ಪ್ರಯೋಜನಗಳನ್ನೂ ಕುರಿತು ಮಾತನಾಡಿ ಸಮಾರಂಭದ ಉದ್ಘಾಟನೆಯನ್ನು ಮಾಡಿದರು ಅನಂತರ ಹಾಜಿ ಹುಸ್ಸೇನ್ ಸಾಹೇಬ್ ಬಹದ್ದೂರರು ವಿದ್ಯಾಭ್ಯಾಸದ ಆವಶ್ಯಕತೆಯನ್ನು ಒತ್ತಿ ಹೇಳಿ ಭಾಷಣಮಾಡಿದರು ಅನಂತರ ಪ್ರಸಿದ್ಧ ಕನ್ನಡ ಸಾಹಿತಿಗಳಾದ ಶ್ರೀ, ಎಮ್. ಎನ್ ಕಾಮತರ ಬಾಷಣವೂ, ಹಾಸ್ಯದಲ್ಲಿ ಹೆಸರುಗೊಂಡ ಶ್ರೀ ಹೊಳ್ಳರ ಪ್ರಹಸನಾದಿಗಳೂ ನಾಟ್ಯವೂ ನಡೆದು ಸಮಾರಂಭವು ಸುಮಾರು ರಾತ್ರಿ ೯ ಘಂಟೆಗೆ ಕೊನೆಗೊಂಡಿತು

ಮರುದಿವಸ ವಿದ್ಯಾಧಿಕಾರಿಗಳಾದ ಶ್ರೀ ಯು

(ಪುಟ ೧೨ಕ್ಕೆ)

ಧನ್ಯವಾದ

ಪ್ರಿಯ ಮಿತ್ರರೇ

ನಿಮ್ಮ ಪ್ರಾಂತದಲ್ಲ ನೀವೂ ನಿಮ್ಮ ಕೆಲಸಗಾರರೂ ಕಾಂಗ್ರೆಸಿಗೆ ನೂರಕ್ಕೆ ನೂರು ಜಯವನ್ನು ಸಂಪಾದಿಸಿದುದಕ್ಕಾಗಿ ನನ್ನ ಹೃತ್ಪೂರ್ವಕ ಧನ್ಯವಾದಗಳನ್ನು ದಯವಿಟ್ಟು ಸ್ವೀಕರಿಸಿರಿ. ಇದನ್ನು ನಮ್ಮ ಎಲ್ಲಾ ಸ್ನೇಹಿತರಿಗೂ ತಿಳಿಸಿರಿ.

(ಸಹಿ) ಸಿ. ರಾಜಗೋಪಾಲಾಚಾರ್.

ಮಹಾಶಿವರಾತ್ರಿ

ಸ್ಥಳೀಯ ಹರಿಜನ ಸೇವಕರಲ್ಲೀಗಿನವರು ತಾ ೧೧ನೇ ಗುರುವಾರ ದಿನ ಮಹಾಶಿವರಾತ್ರಿವ್ರತವನ್ನಾಚರಿಸುವರು. ಅಂದು ಭಜನೆ, ನಗರ ಸಂಕೀರ್ತನೆ ಮೊದಲಾದಕಾರ್ಯ ಕ್ರಮಗಳು ನಡೆಯಲಿವೆ

ಮಂಗಳೂರು ಆರ್ಯಸಮಾಜ

ಮಂಗಳೂರು ಆರ್ಯಸಮಾಜದ ೧೯ನೇ ವಾರ್ಷಿಕ ದಿನಾಚರಣೆಯು ಇದೇ ತಾ ೧೧ನೇ

THE BOMBAY LIFE ASSURANCE Co., LTD.

ESTD. 1908

Church Gate Street, Fort - - BOMBAY.

SPECIAL FEATURES.

1. Rebate on yearly payment of policies.
2. Rebate for larger assurances.
3. Accident Risk covered on small extra premiums
4. Attractive Bonuses.

It pays you to represent this Company.
Wanted Agents in unrepresented parts.

Apply to:—

KOCHIKAR BROTHERS,

Madras Branch Secretaries.

BRANCHES AT:		
P. B. 337 Mount Road, Madras	Visveswarapuram Circle, Bangalore City	Soumyalayam Puthiyara, Calicut.
Car Street, Mangalore	Udipi, S India.	Charni Road, Bombay No 4

EVIDENCE OF SECURITY & STABILITY

FIGURES THAT SPEAK FOR THEMSELVES

TOTAL ASSETS Rs. 80,66,600

Summary of 1935 Accounts

Total Assets Over	Rs 80,00,000
Life Funds Over .. .	Rs 68,00,000
Premium Income Over .	Rs 22,54,000
Interest Income . .	Rs 3,16,000
Claims Paid	Rs. 5,75,000

Total Claims paid Over Rs. 38,50,000
Total Business in Force Over Rs. 4,4251,200

TOTAL BUSINESS IN FORCE Rs. 4,42,51,200

ಚಂದಾದಾರರಲ್ಲಿ

ಚಂದಾಹಣ ಬಾಕಿ ಇರುವ ನಮ್ಮ ಚಂದಾದಾರರು ಆದಷ್ಟು ಬೇಗನೇ ತಮ್ಮ ಹಣವನ್ನು ಮಣಿಯಾರ್ಡರ್ ಮೂಲಕ ದಯವಿಟ್ಟು ಕಳುಹಿಸಿಕೊಡಬೇಕಾಗಿ ಅಪೇಕ್ಷಿಸುತ್ತೇವೆ. ವಿ. ಪಿ ಮಾಡುವದಾದರೆ ಐದಾಣೆ ಹೆಚ್ಚಿಗೆ ಬೀಳುವದು.

ನಮ್ಮೊಡನೆ ಪತ್ರವ್ಯವಹಾರ ನಡೆಸುವವರು ತಮ್ಮ ಚಂದಾ ನಂಬ್ರವನ್ನು ಸೂಚಿಸಿ ಬರೆಯಬೇಕಾಗಿ ವಿನಂತಿ. ಮೆನೇಜರ್, 'ನವಯುಗ'

ಉಡುಪಿ, ತಾ. ೧೧-೩-'೩೭ ಗುರುವಾರ

ಕಾಂಗ್ರೆಸೂ ಅಧಿಕಾರ ಸ್ವೀಕಾರವೂ

ಬಿಕ್ಕಟ್ಟನ್ನು ಬಿಕ್ಕಟ್ಟಿಗಾಗಿಯೇ ಉಂಟುಮಾಡದೆ, ಬಿಕ್ಕಟ್ಟುಂಟಾದಾಗ ಅದನ್ನು ತಪ್ಪಿಸಿಕೊಳ್ಳಲೆತ್ನಿಸದೆ ಕಾಂಗ್ರೆಸ್ ಪಕ್ಷೀಯರು ಕಾಂಗ್ರೆಸ್ ನಿಶ್ಚಯಿಸುವ ಕಾರ್ಯಕ್ರಮವನ್ನು ಕೌನ್ಸಿಲುಗಳಲ್ಲಿ ಜಾರಿಗೆ ತರಬೇಕೆಂಬ ಶ್ರೀ. ರಾಜಗೋಪಾಲಾಚಾರ್ಯರ ಅಭಿಪ್ರಾಯಕ್ಕೆ ಪಂಡಿತ ನೆಹರುಗಳೂ ಒಪ್ಪಿರುವಂತಿದೆ ಆದರೆ ಅವರ ವೈಯಕ್ತಿಕ ಅಭಿಪ್ರಾಯವು ಕಾಂಗ್ರೆಸ್ ಪಕ್ಷೀಯರು ಅಧಿಕಾರ ಸ್ವೀಕರಿಸಬಾರದೆಂದೇ ಇದೆ, ಪಂಡಿತರ ಅಭಿಪ್ರಾಯ ಬಲದಿಂದಲೇ ಸಂಯುಕ್ತ ಪ್ರಾಂತೀಯ ಕಾಂಗ್ರೆಸ್ ಕಮಿಟಿಯವರು ತಮ್ಮ ಪ್ರಾಂತದ ಬಹುಪಕ್ಷೀಯ ಜಿಲ್ಲೆಗಳ ಅಭಿಮತವನ್ನೂ ಮೂಲೆಗೊತ್ತಿ ಅಧಿಕಾರ ಸ್ವೀಕಾರವನ್ನು ವಿರೋಧಿಸಿರುವರು. ಆದರೆ ಇತರ ಹೆಚ್ಚಿನ ಪ್ರಾಂತಿಕ ಕಮಿಟಿಗಳವರು ಅಧಿಕಾರ ಸ್ವೀಕಾರವನ್ನು ಸಮರ್ಥಿಸಿ ನಿರ್ಣಯಗಳನ್ನು ಮಾಡಿರುವರು. ಪಂಡಿತ ಜವಾಹಿರಲಾಲರೂ, ಕಾಂಗ್ರೆಸ್ ಸೋಸಿಯಲಿಸ್ಟ್ ಪಕ್ಷೀಯರೂ ಡಿಲ್ಲಿಯ ನೆಶನಲ್ ಕನ್ವೆನ್ಶನಿನ ಸಂದರ್ಭದಲ್ಲಿ ಎಷ್ಟೊಂದು ಪ್ರಯತ್ನಿಸಿದರೂ ಕಾಂಗ್ರೆಸ್ ಪಕ್ಷೀಯರು ಮಂತ್ರಿಪದವಿ ಸ್ವೀಕರಿಸಬೇಕೆಂದೇ ಅದರಲ್ಲಿಯೂ ನಿರ್ಣಯವಾಗದಿರದು. ಯಾಕಂದರೆ ಪಂಡಿತರ ಮತ್ತು ಕಾಂಗ್ರೆಸ್ ಸೋಸಿಯಲಿಸ್ಟರ ಉಜ್ವಲ ಹಾಗೂ ತೀವ್ರಗಾಮಿ ಧೋರಣೆಯನ್ನನುಸರಿಸಲು ಹೆಚ್ಚಿನ ಕಾಂಗ್ರೆಸ್‌ಪಕ್ಷೀಯರಿಂದು ಸಿದ್ಧರಿರುವುದಿಲ್ಲ. ಅದಕ್ಕೆ ತಕ್ಕ ವಾತಾವರಣವೂ ಮನೋವೃತ್ತಿಯೂ ಇಂದೀಗ ಉಂಟಾಗಿರುವುದೆಂದು ಹೇಳಬರುವುದಿಲ್ಲ.

ಇನ್ನು ಕೆಲಸಮಯದವರೆಗೆ ಯಾವುದಾದರೊಂದು ಉಗ್ರ ಕಾರ್ಯಕ್ರಮಕ್ಕೆ ದೇಶವು ಸಿದ್ಧವಿರಲಾರದೆಂಬುದನ್ನು ಎಲ್ಲರೂ ಒಪ್ಪುವರು. ಅಂದಮೇಲೆ ಯಾವುದಾದರೊಂದು ರೀತಿಯ ಕಾಯಿದೇಶೀರ ಕಾರ್ಯಕ್ರಮವನ್ನೇ ಕೆಲಸಮಯ ನಡಿಸಿ ಕಾಂಗ್ರೆಸು ಜನತೆಯನ್ನು ತನ್ನ ಕಡೆಗೆ ಸಂಪೂರ್ಣವಾಗಿ ಒಲಿಸಿಕೊಳ್ಳತಕ್ಕದ್ದು. ಇದನ್ನು ಕೌನ್ಸಿಲುಗಳೊಳಗೆ ನಡಿಸಿದಷ್ಟು ಯಶಸ್ವಿಯಾಗಿ ಹೊರಗೆ ನಡಿಸಬರುವುದಿಲ್ಲ. ಇಂದೀಗ ಕಾಂಗ್ರೆಸಿನವರು ಎಲ್ಲೆಲ್ಲಿಯೂ ಪ್ರಬಲ ಪಕ್ಷೀಯರಾಗಿ ಆರಿಸಿಬಂದಿರುವುದರಿಂದ ಜನತೆಯಲ್ಲಿ ಆಶೋದಯವುಂಟಾಗಿದೆ. ಕಾಂಗ್ರೆಸಿನವರು ತಮ್ಮ ಹಿತವನ್ನೇನಾದರೂ ಸಾಧಿಸದಿರರೆಂಬ ಭಾವನೆಯುಂಟಾಗಿದೆ. ಕಾಂಗ್ರೆಸ್ ಪಕ್ಷೀಯರು ಚುನಾವಣೆಯ ಸಂದರ್ಭದಲ್ಲಿ ಜನತೆಯಲ್ಲಿ ನಾನಾರೀತಿಯ ಆಶೆಯನ್ನೆಬ್ಬಿಸಿರುತ್ತಾರೆ. ಈಗ ಆರಿಸಲ್ಪಟ್ಟ ಮೇಲೆ ಅಧಿಕಾರ ಸ್ವೀಕರಿಸದೆ ಆರಂಭದಿಂದಲೇ ಆಡಳಿತಕ್ಕೆ ತಡೆ ಹಾಕಿದರೆ ಜನತೆಯಲ್ಲಿ ಕಾಂಗ್ರೆಸಿನವರ ಕುರಿತು ಒಂದು ಬಗೆಯ ವೈರಾಗ್ಯವುಂಟಾಗಬಹುದು. ಕಾಂಗ್ರೆಸಿನ ವೈರಿಗಳೂ ಸರಕಾರವೂ ಇವರ ಸದುಪಯೋಗಪಡೆದು ಜನತೆಯಲ್ಲಿ ಕಾಂಗ್ರೆಸಿನ ಕುರಿತು ಅತೃಪ್ತಿಯನ್ನುಂಟುಮಾಡಲು ಆಸ್ಪದ ದೊರೆಯಬಹುದು.

ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿಯು ನಿಶ್ಚೈಸುವ ಕಾರ್ಯಕ್ರಮವನ್ನು, ಅದರ ಕಠಿಣ ನಿರ್ಬಂಧ ಮತ್ತು ಹತೋಟಿಗೊಳಗಾಗಿ ಕೌನ್ಸಿಲುಗಳ ಮೂಲಕ ಜ್ಯಾರಿಗೆ ತರಲೆತ್ನಿಸುವುದರಿಂದ ಕಾಂಗ್ರೆಸ್ಸಿನ ಪ್ರತಿಷ್ಠೆಯೂ, ಅದರ ಮೇಲಿನ ಜನತೆಯ ವಿಶ್ವಾಸವೂ ಹೆಚ್ಚುವಂತಾಗುವುದು. ಹೊಸ ಸುಧಾರಣಾ ಆಕ್ಟಿನ ಪ್ರಕಾರ ಸಂಪೂರ್ಣ ಪ್ರಾಂತಿಕ ಸ್ವಾತಂತ್ರ್ಯವೀಯಲಾಗಿದೆ. ಗವರ್ನರರು ತನ್ನ ವಿಶಿಷ್ಟ ಅಧಿಕಾರಗಳನ್ನು ಸರ್ವಸಾಮಾನ್ಯ ಪರಿಸ್ಥಿತಿಯಲ್ಲೆಂದೂ ಉಪಯೋಗಿಸಲಾರರು. ಅವರು ಕೇವಲ ಸೂತ್ರಬದ್ಧರಾಗಿ ನಡೆಯುವರು ಎಂಬ ಆಳರಸರ ಮಾತಿನ ಹುರುಳನ್ನು ಪರೀಕ್ಷಿಸಿದಂತಾಗುವುದು. ಕಾಂಗ್ರೆಸ್ಸಿನವರು ಇತರರನ್ನು ಟೀಕಿಸಿ ಖಂಡಿಸುವುದರಲ್ಲೇ ತೃಪ್ತಿಹೊಂದುವ ಬೇಜವಾಬ್ದಾರಿ ಜನರಲ್ಲ, ನಿಜವಾದ ಜವಾಬ್ದಾರಿ ದೊರೆತರೆ ಅದನ್ನು ವಹಿಸಿ, ಜನತೆಯ ಹಿತಸಾಧನೆಗಾಗಿ ಅದನ್ನು ಉಪಯೋಗಿಸುವ ವಿವೇಕಬುದ್ಧಿಯುಳ್ಳವರು. ಆದರೆ ಅದರಿಂದ ಜನಹಿತವನ್ನೇನೂ ಸಾಧಿಸಲಾಗುವುದಿಲ್ಲೆಂದು ಕಂಡುಕೊಂಡರೆ, ಗವರ್ನರರು ಹೆಜ್ಜೆ ಹೆಜ್ಜಗೆ ತನ್ನ ಅಧಿಕಾರ ನಡೆಸುವರೆಂಬುದು ವ್ಯಕ್ತವಾದರೆ ಕಾಂಗ್ರೆಸ್ಸಿನವರೆಂದಿಗೂ ಒಂದು ಕ್ಷಣವಾದರೂ ಅಧಿಕಾರದಲ್ಲಿರಲಾರರು. ಆಗ ಪ್ರಾಂತಿಕ ಸ್ವಾಯತ್ತತೆಯ ಗುಟ್ಟು ರಟ್ಟಾಗುವುದು. ಸರಕಾರದ ಕುರಿತು ಜನತೆಯ ಅತೃಪ್ತಿಯು ಮತ್ತಷ್ಟು ಹೆಚ್ಚುವಂತಾಗುವುದು. ಹೀಗೆ ಸರಕಾರದ ನಿರಂಕುಶತೆ, ಸ್ವಾರ್ಥಪರತೆ, ಬೇಜವಾಬ್ದಾರಿ ವರ್ತನೆಯನ್ನು ಕೌನ್ಸಿಲುಗಳೊಳಗಣ ಕಾರ್ಯಕ್ರಮದಿಂದ ಸಿದ್ಧಗೊಳಿಸಿ ಅದೇ ಸಮಯದಲ್ಲಿ ಎಡೆಬಿಡದ ಹೊರಗಣ ಪ್ರಚಾರದಿಂದ ಜನತೆಯನ್ನು ಸಂಘಟಿಸಿ ಕಾಂಗ್ರೆಸ್ಸಿನ ಬಲವನ್ನು ಹೆಚ್ಚಿಸಿ ಅದರ ಗುರಿಯನ್ನು ಸಾಧಿಸಲು ತಕ್ಕ ಸಿದ್ಧತೆ ಮಾಡುವುದರಲ್ಲಿ ವಿವೇಕವೂ ದೂರದೃಷ್ಟಿಯೂ ಇರುವುದೆಂದು ನಮ್ಮ ಅಭಿಮತ.

ಲೋಕದ ವಿದ್ಯಮಾನಗಳನ್ನು ನೋಡಿದರೆ ಬೇಗನೆ ಏನಾದರೊಂದು ಗಂಡಾಂತರವು ಸಂಭವಿಸುವುದು ನಿಶ್ಚಯವೆಂದು ಹೇಳಬಹುದು. ಆ ಸಂದರ್ಭದಲ್ಲಿ ಕಾಂಗ್ರೆಸಿನವರು ತಮ್ಮ ಶಕ್ತಿಯನ್ನು ಆಳರಸರ ಮೇಲೆ ಸಂಪೂರ್ಣವಾಗಿ ಉಪಯೋಗಿಸಿ ಅವರಿಂದ ರಾಜಕೀಯ ಅಧಿಕಾರವನ್ನು ಕಿತ್ತುಕೊಳ್ಳಬಹುದು. ಇಲ್ಲವೆ ಬ್ರಿಟಿಷ್ ಆಡಳಿತದಾರರೇ ಬದಲಾಗಬಹುದು. ಪ್ರಕೃತ ಕನ್‌ಸರ್ವೇಟಿವ್ ಪಕ್ಷವು ಅಧಿಕಾರದಲ್ಲಿರುವುದರಿಂದ, ಕಾಂಗ್ರೆಸಿನ ಕೇಳಿಕೆಯನ್ನು ಮನ್ನಿಸುವಷ್ಟರ ವಿವೇಕವು ಅದರಲ್ಲಿರುವುದಿಲ್ಲ. ಆದರೆ ಲೇಬರ್ ಪಕ್ಷೀಯರು ಅಧಿಕಾರಕ್ಕೆ ಬಂದಲ್ಲಿ ಅದು ಹಿಂದೀಯರ ಆಕಾಂಕ್ಷೆಗಳನ್ನು ಬಹುಮಟ್ಟಿಗೆ ತೃಪ್ತಿಪಡಿಸಲು ಯತ್ನಿಸದಿರಲಾರದು. ಆ ವರೆಗೆ ಕಾಂಗ್ರೆಸಿನವರು ಕೌನ್ಸಿಲುಗಳ ಒಳಗಣ ಮತ್ತು ಹೊರಗಣ ಅವಿರತವಾದ ಕಾರ್ಯದಿಂದ ಇಡೀ ದೇಶವನ್ನು ತನ್ನ ಕಡೆಗೆ ಸೆಳೆಕೊಳ್ಳಬೇಕು. ಕಾಂಗ್ರೆಸಿನ ಕೇಳಿಕೆಗಳನ್ನು ಮನ್ನಿಸದೆ ಹಿಂದು ದೇಶದಲ್ಲಿ ರಾಜ್ಯಭಾರವೇ ಸಾಧ್ಯವಿಲ್ಲೆಂಬಷ್ಟರ ಪರಿಸ್ಥಿತಿಯುಂಟಾಗುವಂತೆ ಜನತೆಯನ್ನು ಸಿದ್ಧಗೊಳಿಸಬೇಕು.

ವಿದೇಶ

ಸ್ಪೈನಿನ ಯುದ್ಧ

ಒವೀಡೋವನ್ನು ವಶಮಾಡಿಕೊಳ್ಳಲು ಘೋರ ಹೋರಾಟ.

ಒವೀಡೋ ಪಟ್ಟಣವನ್ನು ವಶಪಡಿಸಿಕೊಳ್ಳಲು ಸರಕಾರಿ ಕಡೆಯ ಸೈನಿಕರು ಘೋರ ಹೋರಾಟ ನಡಿಸುತ್ತಿರುವರು. ತಮಗೆ ಅಡ್ಡವಾಗಿರುವ ಕಟ್ಟಡಗಳನ್ನು ಸಿಡಿಮದ್ದು ಹಾಕಿ ಸ್ಫೋಟಗೊಳಿಸಿ ಮುಂದೊತ್ತುತ್ತಿರುವರು ಈ ಸಂದರ್ಭದಲ್ಲಿ ಮೇಲಿನಿಂದ ಸರಕಾರದ ಕಡೆಯ ವಿಮಾನಗಳು ಬೋಂಬೆಸೆಯುವವು. ತೀವ್ರ ಚಳಿ ಮತ್ತು ಮಳೆಯ ನಿಮಿತ್ತ ದೊಡ್ಡ ಕದನವೇನೂ ನಡೆದಿರುವುದಿಲ್ಲ. ಟೋಲುವೇಟೋ ಪಟ್ಟಣವು ಇನ್ನೂ ಸರಕಾರದ ವಶವಾಗಿರುವುದಿಲ್ಲ. ಸರಕಾರದ ಕಡೆಯಿಂದ ಬೇರೆ ಬೇರೆ ನಾಯಕತ್ವದಲ್ಲಿ ಹೋರಾಡುವ ಸೇನೆಗಳೆಲ್ಲಾ ಒಂದೇ ನಾಯಕತ್ವದೊಳಗೆ ಒಂದುಗೂಡಿಸಲ್ಪಟ್ಟಿವೆ ಜರಾಮರ ತರಂಗದಲ್ಲಿ ಬಂಡಾಯಗಾರರು ದೊಡ್ಡ ಸೇನೆ ಸಂಗ್ರಹಿಸುತ್ತಿದ್ದಾರೆ ವೇಲ್ರಿಡಿಗೂ ವೆಲೆನ್ಸಿಯಕ್ಕೂ ನಡುವೆ ಇರುವ ಮುಖ್ಯ ರಸ್ತೆಯನ್ನು ವಶಪಡಿಸಿಕೊಳ್ಳುವುದೇ ಇದರ ಉದ್ದೇಶವಾಗಿದೆ ಇಲ್ಲಿ ಬೇಗನೇ ದೊಡ್ಡ ಹೋರಾಟವು ನಡೆಯಲಿದೆ ಸರಕಾರದ ಕಡೆಯವರು ಈ ಸೇನಾಸಂಗ್ರಹವನ್ನು ತಡೆಗಟ್ಟಲು 4 ಘಂಟೆಗಳ ವರೆಗೆ ಮಿಶಿನ್ ತೋಪುಗಳನ್ನೂ ಹಾರಿಸಿ ಯುದ್ಧ ನಡಿಸಿದರು. ಬಂಡಾಯಗಾರರ 12 ವಿಮಾನಗಳು ಮೇಲಕ್ಕೇರಿ ಬೋಂಬೆಸೆಯಲಾರಂಭಿಸಿದವು. ಆಗ ಸರಕಾರದ ವಿಮಾನಗಳು ಅವನ್ನು ಓಡಿಸಿದುವು

ಮಲಾಗ ರಣರಂಗವನ್ನು ಬಲಪಡಿಸಲು ಮೂರಿಶ್ ಸೈನಿಕರು ಕ್ಯೂಟದಿಂದ ದಿನಕ್ಕೆರಡು ಸಲ ಅತ್ಯವಸರದಿಂದ ಒಯ್ಯಲ್ಪಡುತ್ತಿರುವರು ಅಲ್ಮೆರಿಯ ಎಂಬಲ್ಲಿ ಸರಕಾರದ ಕಡೆಯ ಹೆಚ್ಚಿನ ಸೈನಿಕರು ಸಂಗ್ರಹಿಸಲ್ಪಟ್ಟಿರುವರು. ಬಂಡಾಯಗಾರರು ಅಲ್ಮೆರಿಯವನ್ನು ವಶಪಡಿಸಿಕೊಳ್ಳುವ ಪ್ರಯತ್ನದಲ್ಲಿರುವರು.

ಸ್ಟಿಂಗ್‌ನೇರ್ ಎಂಬ ಬ್ರಿಟಿಷ್ ಹಡಗವೊಂದನ್ನು ಬಂಡಾಯಗಾರರ ನಾವೆಯೊಂದು ನಿಲ್ಲಿಸಿ ಕ್ಯೂಟಕ್ಕೆ ಹೋಗಬೇಕೆಂದು ಕೇಳಿದಾಗ ಕೆಪ್ಟನರು ಲಕ್ಷಿಸದೆ ಜಿಬ್ರಾಲ್ಟರಿಗೆ ಹಡಗವನ್ನು ನಡಿಸಿಬಿಟ್ಟಿರುವರು. ಸ್ಪೇನಿಶ್ ಕರಾವಳಿಯಲ್ಲಿ ಪ್ರತಿದಿನವೂ ಬಂಡಾಯಗಾರರ ಯುದ್ಧನಾವೆಗಳು ಕೆಲವು ಹಡಗಗಳನ್ನು ಹಿಡಿದು ಅವರನ್ನು ಕ್ಯೂಟಕ್ಕೊಯ್ದು ಅವುಗಳ ಸಾಮಾನುಗಳನ್ನು ತೆಗೆದು ಹಿಂದೆ ಬಿಡುತ್ತವೆಂದು ತಿಳಿದುಬರುತ್ತದೆ. ಇವುಗಳಲ್ಲಿ ಹೆಚ್ಚಿನವು ನೋರ್ವೇಯ ಡೆನ್ಮಾರ್ಕಿನ ಹಡಗಗಳು ಗಾಲ್ಡನೆಸ್ ಎಂಬ ಕಾರ್ಗೋ ಹಡಗವನ್ನು ಬಂಡಾಯಗಾರ ನಾವೆಗಳು ಹಿಡಿದು ಅದರ ರಕ್ಷಣೆಗಾಗಿದ್ದ ಸ್ಪೈನಿನ ಬಾಸ್ಕ್ ಪ್ರಾಂತದ ಸ್ವತಂತ್ರ ಸರಕಾರದ ಹಡಗಗಳನ್ನು ಸೋಲಿಸಿ ಸದ್ರಿ ಹಡಗದಲ್ಲಿದ್ದ ಯುದ್ಧ ಸಾಹಿತ್ಯಗಳನ್ನು ಸುಲಿದುಕೊಂಡಿರುವವೆಂದು ತಿಳಿದುಬರುತ್ತದೆ.

ಸ್ವದೇಶ

ಶ್ರೀ ಸೋನಿಯವರ ಬಿಡುಗಡೆ

ಬಜೆಟಿನ ರಹಸ್ಯವನ್ನು ತಿಳಿಯಲೆತ್ನಿಸಿದರೆಂಬ ಆರೋಪದಿಂದ ಕೈದುಮಾಡಲ್ಪಟ್ಟು ಜಾಮೀನಿನಲ್ಲಿ ಬಿಡಲ್ಪಟಿದ್ದ ಶ್ರೀ ಭಾಗ್‌ಚಂದ್ ಸೋನಿಯವರು ತಪ್ಪಿತಸ್ಥರೆಂದು ಸಿದ್ಧಪಡಿಸಲು ರುಜುವಾತಿಲ್ಲದುದರಿಂದ ಬಿಡಲ್ಪಟ್ಟಿರುವರು.

30 ಮಂದಿಯ ದಸ್ತಗಿರಿ

ಕರಾಚಿಯ ಬಳಿಯ ಜಿತಿ ಎಂಬ ಹಳ್ಳಿಯಲ್ಲಿ ಕೆಲಮಂದಿ ಕಳ್ಳಾಟಿಕೆಯಿಂದ ಉಪ್ಪನ್ನು ತಯಾರಿಸಿ ಕರಾಚಿಗೊಯ್ದು ಮಾರುತ್ತಿದ್ದರು. ಈ ಕುರಿತು ಕಸ್ಟಮ್ ಖಾತೆಯವರು ಪತ್ತೆ ಹಚ್ಚಿ ಸದ್ರಿ ಹಳ್ಳಿಗೆ ಹೋಗಿ ಕಳ್ಳಾಟಿಕೆಯಿಂದ ತಯಾರಿಸಿದುವ 70 ಮಣ ಉಪ್ಪನ್ನು ವಶಪಡಿಸಿಕೊಂಡು 20 ಮಂದಿಯನ್ನು ದಸ್ತಗಿರಿಮಾಡಿರುವರು.

ಕಾಂಗ್ರೆಸ್ ಮುಖಂಡರ ದಸ್ತಗಿರಿ

ಚುನಾವಣೆಯ ಸಂದರ್ಭದಲ್ಲಿ ವಾಯುವ್ಯ ಗಡಿನಾಡಿನ ಬನ್ನು ಎಂಬಲ್ಲಿ ರಾಜದ್ರೋಹಕರ ಭಾಷಣಮಾಡಿದುದಕ್ಕಾಗಿ ಲಾಹೋರು ಪಟ್ಟಣದ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಾದ ಶ್ರೀ ಶಾಂತಾರಾಮರವರನ್ನು ಇದೇ ತಾ. 8ರಲ್ಲಿ ಗುಪ್ತ ಪೋಲೀಸರು ಕೈದುಮಾಡಿರುವರು.

ಬೊಬ್ಬಿಲಿ ರಾಜರು

ಪ್ರಕೃತ ಎಸೆಂಬ್ಲಿಗೆ ಪ್ರವೇಶಿಸುವ ಆಲೋಚನೆಯಿಂದಿರುವುದಿಲ್ಲ. ಯಾಕಂದರೆ ವಿಜಯಾಪುರದ ಜಮೀನ್ದಾರರು ಅವರಿಗೆ ಬಿಟ್ಟುಕೊಡಲೊಪ್ಪಿದ ಸೀಟಿಗೆ ಚುನಾವಣೆಗೆ ನಿಲ್ಲಲು ಅವರೊಪ್ಪಿರುವುದಿಲ್ಲ. ಅವರು ಆ ಮತ ಸಮುದಾಯದ ಓಟರರೂ ಅಲ್ಲ. ಅವರು ತನ್ನ 16 ಮಂದಿ ಎಸೆಂಬ್ಲಿ ಮೆಂಬರರ ಪಕ್ಷವನ್ನೇ ಚೆನ್ನಾಗಿ ನಡಿಸಿ, ಕಾಂಗ್ರೆಸಿನವರು ಯಾವ ಯಾವ ರೀತಿಯಲ್ಲಿ ಆಡಳಿತ ನಡಿಸುವರೆಂಬುದನ್ನು ಪರೀಕ್ಷಿಸಲಿರುವರು.

ದಕ್ಷಿಣ ಕನ್ನಡ

ದಿವಂಗತ ದೇಶಭಕ್ತ ಕಾರ್ನಾಡ ಸದಾಶಿವರಾಯರಿಗೆ ಸ್ಮಾರಕ

ಶ್ರೀಮಾನ್ ಎ. ಬಿ ಶೆಟ್ಟಿಯವರ ಸೂಚನೆಯ ಮೇರೆಗೆ ದಿವಂಗತ ಕಾರ್ನಾಡು ಸದಾಶಿವರಾಯರ ಹೆಸರಲ್ಲಿ ಒಂದು ಸ್ಮಾರಕನಿಧಿಯನ್ನು ಕೂಡಿಸಬೇಕೆಂದೂ ಅದಕ್ಕೆ ಅಖಿಲಕರ್ನಾಟಕದ ಮಹಾಜನರಿಂದಲೂ, ಕಾಂಗ್ರೆಸು ಸಂಸ್ಥೆಗಳಿಂದಲೂ ಚಂದಾ ಎತ್ತಿ ಆ ನಿಧಿಯನ್ನು ವೃದ್ಧಿಪಡಿಸಿ ಅದರ ಬಡ್ಡಿಯಿಂದ ಶ್ರೀ. ಕಾರ್ನಾಡು ಸದಾಶಿವರಾಯರ ಪ್ರಧಾನಕಾರ್ಯಕ್ಷೇತ್ರವಾದ ದ ಕನ್ನಡದಲ್ಲಿ ರಾಜಕೀಯ ಕಾರ್ಯಗಳನ್ನು ಮುಂದೊತ್ತಬೇಕೆಂಬ ಸೂಚನೆಯು ಜಿಲ್ಲಾ ಕಾಂಗ್ರೆಸ್ ಕಮಿಟಿಯಲ್ಲಿ ಅಂಗೀಕರಿಸಲ್ಪಟ್ಟಿತು.

ಭಯಂಕರ ಕೊಲೆ

ಬಂಟ ಸಮಾಜದ ಒಬ್ಬ ಶ್ರೀಮಂತ ಜಮೀನ್ದಾರರೂ, ಪರೋಪಕಾರಿ, ಉದಾರಿಯೂ, ಸುಜ್ಞಾನಿಗಳೂ, ಅನ್ಯಾಯವನ್ನು ಖಂಡಿಸುವ ನ್ಯಾಯಪಕ್ಷಪಾತಿಗಳೂ ತನುಮನಧನಗಳನ್ನರ್ಪಿಸಿ ಅಬಲರಿಗೆ ಸಹಾಯಮಾಡುತ್ತಿದ್ದ ಶೂರ ವ್ಯಕ್ತಿಗಳೂ ಆಗಿದ್ದ ಶ್ರೀ ಅರಿಯಡ್ಕ ಸುಬ್ಬಯ ರೈಗಳು, ಕಳೆದ ತಾ. 1-3-37ನೇ ದಿನ ಮಧ್ಯಾಹ್ನ ಎರಡು ಘಂಟೆ ಸಮಯಕ್ಕೆ ಸುಳ್ಯದಿಂದ ಕನಕಮಜಲು ಎಂಬಲ್ಲಿಗೆ ಬರುತ್ತಿರಲು ದಾರಿಯಲ್ಲಿ ಗುಂಡಿನ ಏಟುತಗಲಿ ತನ್ನ ಸಂಗಾತಿಯೊಡನೆ ಮೃತರಾದುದು ಶೋಚನೀಯವಿದೆ. ಮೃತರು ನ್ಯಾಯನಿಲ ಪಂಚಾಯತಿದಾರರಾಗಿದ್ದು ಎಷ್ಟೋ ಮನೆಗಳನ್ನು ಕೋರ್ಟು ವ್ಯವಹರಣೆಯಿಂದ ತಪ್ಪಿಸಿದ್ದರು, ಇವರು ಬಡವಿದ್ಯಾರ್ಥಿಗಳಿಗೆ ಮಾಡುತ್ತಿದ್ದ ಸಹಾಯವು ಶ್ಲಾಘನೀಯವಿರುತ್ತದೆ. ಮೃತರ ಆತ್ಮಕ್ಕೆ ಪರಮಾತ್ಮನು ಚಿರಶಾಂತಿಯನ್ನೀಯಲೆಂದು ಪ್ರಾರ್ಥಿಸುತ್ತೇನೆ. B. S. Rai

ಕುಂದಾಪುರ ತಾಲೋಕು ಕಾಂಗ್ರೆಸು ಕಮಿಟಿ.

ವಿ. ಸೂ — ಕುಂದಾಪುರ ತಾಲೋಕು ಕಾಂಗ್ರೆಸು ಕಮಿಟಿಯ ಪ್ರೆಸಿಡೆಂಟರಾದ ಶ್ರೀ. ಬಿ. ಮಹಾಬಲ ಹೊಳ್ಳರವರು ತನ್ನ ಸ್ಥಾನಕ್ಕೆ ರಾಜಿಕೊಟ್ಟಿರುವರಾಗಿ ಕೆಲವು ಪತ್ರಿಕೆಗಳಲ್ಲಿ ಪ್ರಕಟವಾಗಿರುತ್ತದೆ. ಈ ವರ್ತಮಾನವು ಕೇವಲ ಸುಳ್ಳು ಮತ್ತು ನಿರಾಧಾರವಾದುದೆಂದು ಈ ಮೂಲಕ ಎಲ್ಲಾ ಜನರಿಗೆ ತಿಳಿಸೋಣಾಗುತ್ತದೆ,

ಎಚ್. ಕೆ. ಶೆಟ್ಟಿ, ಸದಸ್ಯ.
ತಾ. ಕಾ. ಕ. ಕುಂದಾಪುರ.

ಸ್ವದೇಶ

ಹಿಂದು ಸೇವಾಸಂಘ

ಇದೇ ತಾ ೭ರಲ್ಲು ಪೂನದಲ್ಲಿ ಶ್ರೀ. ಎನ್. ಸಿ. ಕೇಳ್ಕರರ ಅಧ್ಯಕ್ಷತೆಯಲ್ಲಿ ಹಿಂದುಗಳ ಸಭೆಯೊಂದು ಸೇರಿ ಹಿಂದುಗಳ ಸಂಘಟನೆಯನ್ನು ಸಾಧಿಸಲು ಹಿಂದು ಸೇವಾಸಂಘವೆಂಬ ಅಖಿಲ ಭಾರತ ಸಂಘ ಒಂದನ್ನು ಸ್ಥಾಪಿಸಲಾಯಿತು. ಇದರ ಶಾಖೆಗಳು ದೇಶದಲ್ಲೆಲ್ಲಾ ಸ್ಥಾಪಿಸಲ್ಪಡುವವು. ಇದರ ಸ್ಥಾಪಕರು ಶ್ರೀ ಕ್ಷೇತ್ರ ಜಗದ್ಗುರು ಶಂಕರಾಚಾರ್ಯರು. ಹಿಂದುಗಳ ಧಾರ್ಮಿಕ ಸಾಂಪತ್ತಿಕ, ಸಾಮಾಜಿಕ ಮತ್ತು ಶೈಕ್ಷಣಿಕ ಉನ್ನತಿಗಾಗಿ ಈ ಸಂಘವು ಕೆಲಸ ಮಾಡುವುದು. ಹಿಂದುಗಳ ವೈರಿಗಳನ್ನೆಲ್ಲಾ ವಿರೋಧಿಸಿ ಅಂಧಶ್ರದ್ಧೆ ಅವಿಚಾರಗಳನ್ನು ತೊಲಗಿಸಿ ಹಿಂದು ಧರ್ಮ ಸ್ಥಾಪನೆ ಮಾಡುವುದೇ ಈ ಸಂಘದ ಉದ್ದೇಶವೆಂದು ಶ್ರೀ ಕ್ಷೇತ್ರಜಗದ್ಗುರುಗಳು ನಿರೂಪಿಸಿರುವರು ಇದಕ್ಕಾಗಿ ಒಂದು ಕಮಿಟಿಯು ಸ್ಥಾಪಿಸಲ್ಪಟ್ಟಿರುವುದು.

ನೆಶನಲ್ ಕನ್ವೆನ್ಶನ್

ಡಿಲ್ಲಿಯಲ್ಲಿ ಇದೇ ತಾ. ೧೭ರಲ್ಲು ಜರಗಲಿರುವ ನೆಶನಲ್ ಕನ್ವೆನ್ಶನ್ ಎಂಬ ಜನ ಪ್ರತಿನಿಧಿಗಳ ಮಹಾಸಭೆಗೆ ತಕ್ಕ ಸಿದ್ಧತೆಯು ನಡೆದಿರುವುದು. ಇದಕ್ಕಾಗಿ ಪ್ರತ್ಯೇಕವಾಗಿ ಒಂದು ಚಪ್ಪರ ಹಾಕಿ ಅದಕ್ಕೆ ಅನ್ಸಾರಿ ನಗರವೆಂಬ ಹೆಸರಿಡಲಾಗಿದೆ. ಈ ನಗರಕ್ಕೆ ೬ ದ್ವಾರಗಳಿವೆ. ಈ ದ್ವಾರಗಳಿಗೆ ಅಜ್ಮಲ್ ಗೇಟ್, ಅನ್ಸಾರಿ ಗೇಟ್, ಕಮಲ ಗೇಟ್ ನೆಹರು ಗೇಟ್, ಎಂದೆಲ್ಲಾ ಬೇರೆ ಬೇರೆ ಹೆಸರಿಡಲಾಗಿದೆ. ನಗರದ ಮುಖ್ಯ ಗೇಟಿನ ಮುಂಭಾಗದಲ್ಲಿ ೮೫ ಅಡಿ ಎತ್ತರದ ಧ್ವಜಸ್ತಂಭವು ಊರಲ್ಪಡುವುದು. ಪಂಡಿತ ಜವಾಹರಲಾಲರು ಇದೇ ತಾ ೧೫ಕ್ಕೆ ಡಿಲ್ಲಿಗೆ ಹೋಗುವರು. ಅವರನ್ನು ಪಟ್ಟಣದಲ್ಲೆಲ್ಲಾ ಮೆರವಣಿಗೆಯಿಂದೊಯ್ಯಲಾಗುವುದು. ಡಿಲ್ಲಿ ಮುನಿಸಿಪಾಲಿಟಿಯವರು ಪಂಡಿತರಿಗೆ ಮಾನಪತ್ರವೀಯುವ ನಿರ್ಧಾರಮಾಡಿರುವರು. ಈ ಮಹಾಸಭೆಯ ಪ್ರತಿನಿಧಿಗಳಿಗೆ ನಿವಾಸಕ್ಕೆ ತಲೆಯೊಂದರ ರೂ. ೧-೮-೦ ಮತ್ತು ಊಟಕ್ಕೆ ೬ ಆಣೆಯಿಂದ ೧೨ ಆಣೆಯ ವರೆಗೆ ಚಾರ್ಜು ಮಾಡಲಾಗುವುದು; ಪ್ರೇಕ್ಷಕರಿಗೆ ರೂ. ೨ ರಿಂದ ೧೦೦ರ ವರೆಗಿನ ಸೀಟುಗಳ ಏರ್ಪಾಡುಮಾಡಲಾಗಿದೆ. ಈ ಸಭೆಯಲ್ಲಿ ಮುಂದಿನ ಕಾಂಗ್ರೆಸು ಅಧಿವೇಶನದ ತಾರೀಕು, ಅಧಿಕಾರಸ್ವೀಕಾರದ ಪ್ರಶ್ನೆ ಮತ್ತು ಕೌನ್ಸಿಲುಗಳ ಒಳಗೆ ಮತ್ತು ಹೊರಗೆ ಕೈಕೊಳ್ಳಬೇಕಾದ ಕಾರ್ಯಕ್ರಮವು ನಿಶ್ಚೈಯಿಸಲ್ಪಡುವದು ಪಂಜಾಬು, ಸಂಯುಕ್ತ ಪ್ರಾಂತ, ಮಹಾರಾಷ್ಟ್ರ ಪ್ರಾಂತಗಳು, ಕಾಂಗ್ರೆಸು ಮಂತ್ರಿಪದವಿ ಸ್ವೀಕರಿಸಬಾರದೆಂದು ನಿರ್ಣೈಸಿರುವವು. ಮದ್ರಾಸ್ ಸಿಂದ್, ಬಿಹಾರ್, ಒರಿಸ್ಸ ಮೊದಲಾದ ಪ್ರಾಂತಗಳು ಅಧಿಕಾರಸ್ವೀಕಾರಕ್ಕೆ ಅನುಕೂಲವಾಗಿರುವುವು.

ವಿದೇಶ

ಅಬಿಸೀನಿಯರ ದೀನಾವಸ್ಥೆ

ಅಬಿಸೀನಿಯನರು ಇಟೆಲಿಯಾನರು ಕೆಲಸ ಮಾಡುವ ಮನೆಗಳಲ್ಲಿ ಕೆಲಸಮಾಡಬಾರದು. ಅವರು ಊಟ ಮಾಡುವ ಹೊಟೇಲುಗಳಲ್ಲಿ ಉಣ್ಣಬಾರದು, ಅವರು ನಡಿಯುವ ರಸ್ತೆಗಳಲ್ಲಿ ನಡಿಯಬಾರದೆಂದು ನಿಷೇಧಿಸಲಾಗಿದೆ. ಈ ಪ್ರಕಾರ ಇಟೆಲಿಯಾನರು ತಿಂಡಿ ತಿನ್ನುವ ಮತ್ತು ಊಟಮಾಡುವ ಹೊಟೆಲುಗಳಿಗೆ ಅಬಿಸೀನಿಯನರು ಪ್ರವೇಶಿಸಬಾರದಾಗಿದೆ. ಯಾರಾದರೂ ತಪ್ಪಿ ಪ್ರವೇಶಿಸಿದರೆ ಅವರಿಗೆ ಶಿಕ್ಷೆ ಕೊಡಲಾಗುವುದು: ಮೊದಲು ಅಬಿಸೀನಿಯನರು ಕೆಲಸಮಾಡುತ್ತಿದ್ದಲ್ಲೆಲ್ಲಾ ಈಗ ಇಟೆಲಿಯಾನರು ಕೆಲಸಕ್ಕಾಗಿ ಇಡಲ್ಪಟ್ಟಿದ್ದಾರೆ. ಮೋಟಾರುಕಾರುಗಳನ್ನು ನಡಿಸಲು ಹೊಟೆಲು ಭೋಜನಶಾಲೆಗಳಲ್ಲಿ ಕೆಲಸಮಾಡಲು ಇಟೆಲಿಯಾನರೇ ನೇಮಿಸಲ್ಪಟ್ಟಿದ್ದಾರೆ. ಇದರಿಂದಾಗಿ ಅಬಿಸೀನಿಯನರಿಗೆ ತಮ್ಮ ಊರಲ್ಲೇ ಕೆಲಸದೊರೆಯದಂತಾಗಿದೆ, ಬಿಳಿಯರಿಂದ ನಡಿಸಲ್ಪಡುವ ಮೋಟರ್‌ಕಾರಿನಲ್ಲಿ ಅಬಿಸೀನಿಯನನು ಹೋಗಕೂಡದು. ಯಾರಾದರು ಕರಿಯನನು ಬಿಳಿಯ ಮೋಟರ್‌ಕಾರ್ ಡ್ರೈವರರನ್ನು ನಿಲ್ಲಿಸಿ ತನ್ನನ್ನೊಯ್ಯ ಹೇಳಲು ಎಡೆಗೊಡಲಿಲ್ಲ ದಂಡನೆಗೊಳಗಾಗಬೇಕಾಗುವುದು, ಅಡ್ಡಿಸ್ ಅಬಾಬದಲ್ಲಿರುವ ನ್ಯಾಯಾಧೀಶರುಗಳಿಗೆ ಇಂತಹ ತಕ್ಷೀರುಗಳನ್ನು ವಿಚಾರಿಸಿ ದಂಡಿಸುವ ಹೊರತು ಬೇರೆ ಕೆಲಸವೇ ಇಲ್ಲ. ಇಡೀ ಅಬಿಸೀನಿಯವನ್ನು ಇಟೆಲಿಯಾನರ ವಸಾಹತನ್ನಾಗಿ ಮಾಡುವುದೇ ಇಟೆಲಿಯ ಸರಕಾರದ ಉದ್ದೇಶವಿರುವಂತಿದೆ.

ಆಗಾಖಾನರಿಗೆ ಚಿನ್ನದ ತುಲಾಭಾರ

ಖೋಜ ಮುಸಲ್ಮಾನರ ಜಗದ್ಗುರುವಾದ ಆಗಾಖಾನರ ಸುವರ್ಣೋತ್ಸವವನ್ನು ಪೂರ್ವ ಮತ್ತು ದಕ್ಷಿಣ ಆಫ್ರಿಕೆಯ ಅವರ ಅನುಯಾಯಿಗಳು ನೈರೋಬಿಯಲ್ಲಿ ಬಹಳ ಸಂಭ್ರಮದಿಂದ ಆಚರಿಸಿದರು ಇದೇ ತಾ, ೨ರಲ್ಲಿ ಆಗಾಖಾನರಿಗೆ ಚಿನ್ನದ ತುಲಾಭಾರ ಮಾಡಲಾಯಿತು. ಅವರತೂಕದಷ್ಟು ಅಂದರೆ ೨೩,೦೦೦ ಪವನುಗಳಷ್ಟರ ಚಿನ್ನವನ್ನು ಅವರಿಗೊಪ್ಪಿಸಲಾಯಿತು. ಆಗಾಖಾನರು ಈ ಹಣವನ್ನೆಲ್ಲಾ ತನ್ನ ಶಿಷ್ಯವರ್ಗದ ಸಾಮಾಜಿಕೋನ್ನತಿಯ ಕೆಲಸಕ್ಕಾಗಿ ಹಿಂತಿರುಗಿ ಕೊಟ್ಟರು. ಕಳೆದ ವರ್ಷ ಜನವರಿಯಲ್ಲಿ ಆಗಾಖಾನರ ಶಿಷ್ಯರು ಅವರ ಪಟ್ಟಕ್ಕೇರಿದ ಸುವರ್ಣೋತ್ಸವವನ್ನು ಆಚರಿಸುವ ಸಂದರ್ಭದಲ್ಲಿ ಅವರಿಗೆ ಚಿನ್ನದ ತುಲಾಭಾರಮಾಡಿ ೨೫,೧೨೫ ಪವನುಗಳನ್ನು ಅವರಿಗೊಪ್ಪಿಸಿದರು.

ಮಂಗಳೂರು

ಪದವೀ ಸ್ವೀಕಾರಕ್ಕೆ ಸಮ್ಮತಿ

ದ. ಕನ್ನಡ ಜಿಲ್ಲಾ ಕಾಂಗ್ರೆಸುಸಮಿತಿಯ ಕಾರ್ಯಕಾರಿ ಮಂಡಲಿಯ ಸಭೆಯು ತಾ. ೭ರಲ್ಲಿ ಶ್ರೀ.ಯಂ ಉಮೇಶರಾಯರ ಅಧ್ಯಕ್ಷತೆಯಲ್ಲಿ ಜರಗಿತು.ಶ್ರೀಗ. ಎ. ಬಿ. ಶೆಟ್ಟಿಯವರು ಬಿ.ವಿ. ಬಾಳಿಗರೂ, ಕೆ. ಆರ್. ಕಾರಂತರೂ, ದಾ ಕೆ. ವಿಟ್ಠಲಶೆಟ್ಟಿಯವರೇ ಮೊದಲಾದ ಹಲವು ಮಂದಿಹಾಜರಿದ್ದರು. ಅಧಿಕಾರ ಸ್ವೀಕಾರದ ಪ್ರಶ್ನೆಯು ಸುದೀರ್ಘ ಚರ್ಚಿಸಲ್ಪಟ್ಟಿತು, ಕಾಂಗ್ರೆಸಿನವರು ಪದವಿ ಸ್ವೀಕರಿಸಬೇಕೆಂದು ಸರ್ವಸಮ್ಮತಿಯಿಂದ ನಿರ್ಧಾರವಾಯಿತು. ಇದೇ ಸಂದರ್ಭದಲ್ಲಿಇತರ ಪಕ್ಷಗಳೊಡನೆ ಒಪ್ಪಂದಮಾಡಿಕೊಂಡು ಅಧಿಕಾರ ವಹಿಸಕೂಡದೆಂಬ ಅಭಿಪ್ರಾಯವೂ ಸೂಚಿಸಲ್ಪಟ್ಟಿತು.

ಸ್ವಾಮಿಯ ಸೂಳೆ

ಎಂಬ ಹೃದ್ರಾವಕ ಕಾದಂಬರಿಯು ಬರುವ ವಾರದಿಂದ ಕ್ರಮಶಃ ಪ್ರಕಟವಾಗುವುದು.

ರಸ್ಯದ ನೂತನ ಸೃಷ್ಟಿ

ಎಂಬ ರಸ್ಯದ ಇಂದಿನ ನವೀನ ಪ್ರಯೋಗದ ದೃಶ್ಯಗಳನ್ನು ರಸವತ್ತಾಗಿ ಚಿತ್ರಿಸುವ ಲೇಖಾಂಕಗಳಿಗೆ ಮುಂದಿನ ಸಂಚಿಕೆಗಳನ್ನು ನಿರೀಕ್ಷಿಸಿರಿ.

ಆಯವ್ಯಯದ ಪಟ್ಟಿ

ಜಿಲ್ಲಾ ಕಾಂಗ್ರೆಸ್ ಸಮಿತಿಯ ಮುಂದಿನ ವರುಷದ ಆಯವ್ಯಯದ ಪಟ್ಟಿಯು ಸಭೆಯ ಮುಂದೆ ಬಂದು ಅದರಲ್ಲಿ ಸೂಚಿಸಿದ ಅಂದಾಜು ಬಜೆಟ್ ಸ್ವೀಕೃತವಾಯಿತು.

THE

Guardian of India

Insurance Company, Ltd.

Head Office: MADRAS] **[Branch: MANGALORE**

Capital— Indian.

Management—Entirely Indian & Efficient.

LOW PREMIUMS.

CONDITIONS LIBERAL & EQUITABLE.

Schemes— Most novel, suited to all sorts and conditions and attractive.

ASSURED SECURITY

Life is uncertain, Savings are uncertain, Insurance is the only remedy for this uncertainty.

Let the Guardian Guard your future.

Insure your life with this popular and Progressive and Economical Indian Life Office—Do not delay.

Applications are invited from respectable gentlemen and ladies to represent the Company in S Kanara, N. Kanara and Coorg on commission or salary or both.

Notice: All the policy holders & agents are informed that all future dealings must be made with The Branch Secretary, The Guardian of India Insurance Co., Ltd , Mangalore Branch.

E. A. PAIS, B. Sc., ***Branch Secretary,***

The Guardian of India Insurance Co., Limited,

MANGALORE BRANCH.

(ಪುಟ ೪ರಿಂದ)

ಲಸ. ಜನತೆಯ ಸಂಕಷ್ಟದ ಗೊಡವೆಯೇ ಅದಕ್ಕಿಲ್ಲ. ಜನರ ಸಾಲ ಪರಿಹಾರಕ್ಕಾಗಿ ಸರಕಾರವು ಏನನ್ನೂ ಮಾಡಿಲ್ಲ. ಹಳ್ಳಿಗಳಲ್ಲಿನ ಜನರ ಅವಸ್ಥೆಯನ್ನು ಹೇಳತೀರದು. ಸ್ತ್ರೀಯರ ಆಭರಣಗಳೆಲ್ಲಾ ವಿಕ್ರಯಿಸಲ್ಪಟ್ಟಿವೆ ಎಂದರು. ಶ್ರೀ ಗಾಡ್ಗಿಲರು ಕಳೆದ ೨ ವರ್ಷಗಳಲ್ಲಿ ಹಳ್ಳಿಗಳ ಉದ್ಧಾರ ಕಾರ್ಯಕ್ಕಾಗಿ ಕೊಡಲ್ಪಟ್ಟಿರುವ ರೂ. ಒಂದು ಕೋಟಿಯ ಪ್ರಸ್ತಾಪವೇ ಈ ವರ್ಷದ ಬಜೆಟಿನಲ್ಲಿಲ್ಲ. ಕಾಂಗ್ರೆಸಿನ ಹಳ್ಳಿಗಳ ಉದ್ಧಾರ ಕಾರ್ಯವನ್ನು ಪ್ರತಿಭಟಿಸುವುದಕ್ಕಾಗಿ ರೂ. ೨ ಕೋಟಿಯನ್ನು ೨ ವರ್ಷ ವಿನಿಯೋಗಿಸಲಾಯಿತು. ಆದರೂ ಕಾಂಗ್ರೆಸು ಹಳ್ಳಿಗರ ವಿಶ್ವಾಸಕ್ಕೆ ಪಾತ್ರವಾಗಿ ಈ ಸಲದ ಚುನಾವಣೆಯಲ್ಲಿ ಗೆದ್ದಿದೆ. ಈಗ ಸರಕಾರಕ್ಕೆ ಹಳ್ಳಿಗರ ಯೋಚನೆಯೇ ಬೇಡವಾಗಿದೆಯೆಂದು ಹಳ್ಳಿಗರ ಕುರಿತಾದ ಸರಕಾರದ ತೀವ್ರ ಅಲಕ್ಷ್ಯವನ್ನು ಖಂಡಿಸಿದರು. ಸಕ್ಕರೆಯ ಮೇಲೆ ತೆರಿಗೆ ಹಾಕುವ ಬದಲಿಗೆ ತಲೆಭಾರವಾಗಿರುವ ಸರಕಾರಿ ನೌಕರರ ಸಂಬಳವನ್ನು ಶೇಕಡ 10 ರಷ್ಟು ಕಡಿಮೆ ಮಾಡುವುದು ಉಚಿತವಿತ್ತು. ಇತರ ಯಾವ ದೇಶದಲ್ಲಾದರೂ ಸರಕಾರಿ ನೌಕರರಿಗೆ ಇಷ್ಟೊಂದು ಹೆಚ್ಚಿನ ಸಂಬಳ ಕೊಡಲ್ಪಡುವುದಿಲ್ಲ. ಇತರ ದೇಶಗಳಲ್ಲಿ ಅತ್ಯಂತ ಕೀಳು ಮತ್ತು ಮೇಲು ನೌಕರರ ಸಂಬಳದೊಳಗಿನ ಅಭ್ಯಂತರವು ೧ರಿಂದ ೯ ಮತ್ತು ೧ರಿಂದ ೩೨ ಆಗಿರುವಾಗ ಹಿಂದು ದೇಶದಲ್ಲಿ ಈ ಅಭ್ಯಂತರವು ೧ ರಿಂದ ೧೫೨ ಆಗಿದೆ. ಇಂತಹ ವಿಪರೀತ ವೆಚ್ಚದ ನೌಕರರು ಬಡ ಹಿಂದು ದೇಶಕ್ಕೆ ಬೇಕಾಗಿಲ್ಲ.

ಕಾಂಗ್ರೆಸಿನ ನಿರ್ಣಯದಂತೆ ತಿಂಗಳೊಂದರ ರೂ. 500ಕ್ಕಿಂತ ಹೆಚ್ಚಿನ ಸಂಬಳವನ್ನು ಯಾವ ಹಿಂದೀ ನೌಕರನಿಗೂ ಕೊಡಬಾರದೆಂದು ಶ್ರೀ. ಗಾಡ್ಗಿಲರು ಆಗ್ರಹಪೂರ್ವಕವಾಗಿ ಸೂಚಿಸಿದರು. ಶ್ರೀ. ಶ್ಯಾಮಲಾಲರು, ಸರಕಾರಿ ನೌಕರರ ಜೀವನವನ್ನು ಸ್ವರ್ಗಕ್ಕೂ, ಹಳ್ಳಿಗರ ಜೀವನವನ್ನು ನರಕಕ್ಕೂ ನಮೋಲಿಸಿ, ಹಳ್ಳಿಗರು ದಿನಕ್ಕೊಂದು ಊಟ ಸಹ ಸರಿಯಾಗಿ ದೊರೆಯದೆ ಬಳಲುತ್ತಿರುವಾಗ ಅಧಿಕಾರಿಗಳಿಗೆ ತಿಂಗಳಿಗೆ ರೂ. 5000ದಷ್ಟರ ಸಂಬಳ ಕೊಡುವುದು ಘೋರ ಅನ್ಯಾಯವೆಂದು ಟೀಕಿಸಿ ಕಾಂಗ್ರೆಸಿನವರು ಅಧಿಕಾರ ವಹಿಸಿದರೆ ಕಾಂಗ್ರೆಸಿನ ನಿಯಮದಂತೆ ತಿಂಗಳೊಂದರ ರೂ. 500 ಮಾತ್ರವಲ್ಲ 250 ತೆಗೆದುಕೊಳ್ಳಲೂ ತಾವು ಸಿದ್ಧರಿರುವವೆಂದರು. ಶ್ರೀ. ಬಜೋರಿಯವರು ಸಕ್ಕರೆಯ ಬದಲಿಗೆ ಹಿಂದೀ ಗಿರಣಿಗಳಿಗೆ ಬಹಳ ಹಾನಿಯನ್ನುಂಟುಮಾಡುವ ಆರ್ಟಿಫಿಶಲ್ ಸಿಲ್ಕಿನ ಆಮದಿನ ಮೇಲೆ ಕರಹಾಕುತ್ತಿದ್ದರೆ ಒಳ್ಳೇದಿತ್ತೆಂದು ಸೂಚಿಸಿದರು.

ಕೌನ್ಸಿಲ್ ಆಫ್ ಸ್ಟೇಟಿನ ಮೆಂಬರರೂ ಸಕ್ಕರೆಯ ಮೇಲಿನ ಕರ, ಸರಕಾರಿ ನೌಕರರ ವಿಪರೀತ ಸಂಬಳ, ಸೇನೆಯ ಅಪಾರ ವೆಚ್ಚವನ್ನೆಲ್ಲಾ ತೀವ್ರವಾಗಿ ಟೀಕಿಸಿದರು. ಶ್ರೀ. ರಾಮದಾಸ ಪಂತಲುರವರು, ಅರ್ಥಸಚಿವರಾದ ಸರ್. ಜೇಮ್ಸ್ ಗ್ರಿಗ್ಗರು ಕೇವಲ ಬ್ರಿಟಿಷ್ ವ್ಯಾಪಾರಿಗಳ ಏಜಂಟರಿದ್ದು ಹಿಂದೀಯರ ಒಳ್ಳಿತವನ್ನು ಒಂದಿಷ್ಟು ಗಮನಿಸುವುದಿಲ್ಲೆಂದು ಕಂಠೋಕ್ತವಾಗಿ ಹೇಳಿಬಿಟ್ಟರು.

ದಕ್ಷಿಣ ಕನ್ನಡ

(ಪುಟ ೬ರಿಂದ)

ಕಣ್ಣಪ್ಪ ಇವರ ಅಧ್ಯಕ್ಷತೆಯಲ್ಲಿ ಉಪಾಧ್ಯಾಯರ ಪರಿಷತ್ತು ನಡೆಯಿತು ವಿದ್ಯಾಸಂಬಂಧವಾದ ಹಲವು ಮಹತ್ವಗಳು ಚರ್ಚಿಸಲ್ಪಟ್ಟು ಸ್ವೀಕೃತವಾಯವು. ಅಧ್ಯಕ್ಷರು ಮುಸಲ್ಮಾನ ಸಮಾಜದಲ್ಲಿ ವಿದ್ಯಾಪ್ರಸಾರವಾಗುವುದಕ್ಕೆ ಹಲವು ಸೂಚನೆಗಳನ್ನಿತ್ತರು.

ಸಂಘದ ಕಾರ್ಯದರ್ಶಿಗಳಾದ ಶ್ರೀ ಅಹಮ್ಮದ್ ಬ್ಯಾರಿಗಳು ಅಧ್ಯಕ್ಷರನ್ನೂ ಪ್ರತಿನಿಧಿ ಪ್ರೇಕ್ಷಕರನ್ನೂ ವಂದಿಸಿ ಅವರಿಗೆ ದನ್ಯವಾದಗಳನ್ನರ್ಪಿಸಿದರು.

ಶ್ರೀ ಧರ್ಮಸ್ಥಳ ಮಂಜಯ್ಯ ಹೆಗ್ಗಡೆಯವರಿಗೆ ಸತ್ಕಾರ

ಶ್ರೀಮಾನ್ ದರ್ಮಸ್ಥಳ ಮಂಜಯ್ಯ ಹೆಗ್ಗಡೆಯವರು ಕಳೆದ ಕೌನ್ಸಿಲ್ ಚುನಾವಣೆಯಲ್ಲಿ ಪ್ರಚಂಡ ಬಹುಮತ ಪಡೆದು ಆರಿಸಲ್ಪಟ್ಟ ಕಾರಣ ತಮ್ಮ ಸಂತೋಷವನ್ನು ಪ್ರದರ್ಶಿಸ ಪುದಕ್ಕಾಗಿ ನಿನ್ನೆಯದಿನ ಶ್ರೀಗಳಾದ ಕೆ. ಸದಾಶಿವ ಭಟ್, ಕೆ ಬಿ. ಜನರಾಜ ಹೆಗ್ಗಡೆ, ಎಸ್ ನಾಗರಾಜಯ್ಯ, ಭಾವಿ ಪಾಂಡುರಂಗ ಶೆಣೈ ಮತ್ತು ನೇಮಿರಾಜ ಪಡಿವಾಳ್ ಇವರುಗಳು ಒಂದು ಸತ್ಕಾರ ಕೂಟವನ್ನು ಜೈನ್ ಬೋರ್ಡಿಂಗಿನ ವರಾಂಡದಲ್ಲಿ ಏರ್ಪಡಿಸಿದರು

ನಗರದ ಅನೇಕ ಮುಖಂಡರಿಗೂ, ಕಾಂಗ್ರೆಸ್ ಕಾರ್ಯಕರ್ತರಿಗೂ ಆಹ್ವಾನಕೊಟ್ಟಿದ್ದರು ಮದ್ರಾಸ್ ಎಸೆಂಬ್ಲಿಗೆ ಆರಿಸಲ್ಪಟ್ಟಿರುವ ಐದುಮಂದಿ ಕಾಂಗ್ರೆಸ್ ಸದಸ್ಯರೂ ಚಿತ್ತೈಸಿದ್ದರು ಅತಿಥಿಗಳ ಸಂಖ್ಯೆಯು ಸುಮಾರು ೩೦೦ಕ್ಕೆ ಮೇಲ್ಪಟ್ಟಿದ್ದಿತು. ಶ್ರೀ ಜನರಾಜ ಹೆಗ್ಗಡೆಯವರು ಅತಿಥಿಗಳನ್ನು ಇದಿರುಗೊಂಡು ಅವರಿಗೆ ಪುಷ್ಪಗಳನ್ನಿತ್ತು ಉಚಿತಸ್ಥಾನಗಳಲ್ಲಿ ಕುಳ್ಳಿರಿಸಿದರು

ಸರಿಯಾಗಿ ಆರು ಘಂಟೆಗೆ ಪ್ರಧಾನ ಅತಿಥಿಗಳಾದ ಶ್ರೀ ಮಂಜಯ್ಯ ಹೆಗ್ಗಡೆಯವರನ್ನು ಬ್ಯಾಂಡ್ ವಾದ್ಯಗಳಿಂದ ಸಭಾಸ್ಥಾನಕ್ಕೆ ಕರೆತಂದರು. ಕೂಡಲೇ ಶ್ರೀ ಜನರಾಜ ಹೆಗ್ಗಡೆಯವರು ಒಂದು ಚಿಕ್ಕ ಸ್ವಾಗತ ಭಾಷಣಮಾಡಿ ಅದರಲ್ಲಿ ಶ್ರೀ ಹೆಗ್ಗಡೆಗಳು ಆರಿಸಿಬಂದುದರಿಂದ ತಮಗುಂಟಾದ ಸಂತೋಷವನ್ನು ಸೂಚಿಸಿದ್ದಲ್ಲದೆ, ಜಸ್ಟಿಸ್ ಪಕ್ಷದವರು ಶ್ರೀ ಹೆಗ್ಗಡೆಗಳನ್ನು ತಮ್ಮ ಪಕ್ಷದಿಂದ ನಿಲ್ಲಿಸಬೇಕೆಂದಿದ್ದರೂ ಶ್ರೀ ಹೆಗ್ಗಡೆಗಳು ಸ್ವತಂತ್ರರಾಗಿ ಆರಿಸಿಬಂದುದು ವಿಶೇಷದ ಸಂಗತಿಯೆಂದೂ, ಅವರು ಕಾಂಗ್ರೆಸ್ಸಿನ ಅಭಿಮಾನಿಗಳೆಂದೂ, ಸದಾ ಕಾಂಗ್ರೆಸ್ಸಿಗೆ ಸಹಾಯಮಾಡುವುದಕ್ಕೆ ಸಿದ್ಧರೆಂದೂ ಹೇಳಿದರು

ಆ ಮೇಲೆ ಫಲಾಹಾರಗಳೂ ನಡೆದವು. ಶ್ರೀ ಮಂಜಯ್ಯ ಹೆಗಡೆರುಗಳು ನೆರೆದ ಮಹನೀಯರೆಲ್ಲರಿಗೂ ಹಸ್ತಲಾಘವವನ್ನಿತ್ತು ಕೆಲಮಾತುಗಳನ್ನಾಡಿ ಸರ್ವರನ್ನೂ ಆನಂದಗೊಳಿಸಿದರು. ಫಲಾಹಾರಾನಂತರ ಶ್ರೀ ಕಿಲ್ಲೆಯವರು ೧ ಚಿಕ್ಕ ಭಾಷಣಮಾಡಿ ಶ್ರೀ. ಹೆಗಡೆರುಗಳು ಕಾಂಗ್ರೆಸು ಭಕ್ತರೆಂದೂ, ಅವರು ಕಾಂಗ್ರೆಸಿಗೆ ಕಳೆದ ಚುನಾವಣೆಯಲ್ಲಿ ತುಂಬ ಸಹಾಯ ಮಾಡಿದ್ದರೆಂದೂ ಅಂತಹ ಪ್ರಮುಖರ ಸಹಾಯವು ಕಾಂಗ್ರೆಸಿಗೆ ದೊರೆತುದು ಈ ಜಿಲ್ಲೆಯ ಸುಯೋಗವೆಂದೂ ಹೇಳಿದರು ಪ್ರೊ. ಮಾರ್ಕಂಡು ವರು ತಮ್ಮ ಭಾಷಣದಲ್ಲಿ, ಶ್ರೀ ಹೆಗಡೆಯರು ತಮ್ಮ ಶಿಷ್ಯರೆಂದೂ ಅವರು ನ್ಯಾಯವಿಧಾಯಕ ಸಭೆಗೆ ಆರಿಸಿಬಂದುದರಿಂದ ನಮಗೆ ಅಪಾರವಾದ ಸಂತೋಷಉಂಟಾಗಿದೆಂದೂ ಹೇಳಿ ಅವರಿಗ ಅವರ ವಿಜಯಕ್ಕಾಗಿ ದನ್ಯವಾದಗಳನ್ನರ್ಪಿಸಿದರು

ಮೇಲಿನವರ ಭಾಷಣಕ್ಕೆ ಉತ್ತರಕೊಡುತ್ತಾ ಶ್ರೀ ಮಂಜಯ್ಯ ಹೆಗಡೆಯವರು ಹೀಗೆಂದರು ನನಗೆ ತೋರಿಸಿದ ಈ ಮರ್ಯಾದೆಗಾಗಿ ನಾನು ಕೃತಜ್ಞನಿದ್ದೇನೆ ನನಗೆ ಕಾಂಗ್ರೆಸಿನಲ್ಲಿ ಪ್ರೀತಿಯಿದೆ ನಾನು ಹಿಂದೆಯೂ ಕೂಡ ಕೊಂಗ್ರೆಸ್ ಅಭಿಮಾನಿಯೇ ಆಗಿದ್ದೆನು ಜಸ್ಟಿಸಪಕ್ಷದವನಾಗಿರಲಿಲ್ಲ. ಜಸ್ಟಿಸಪಕ್ಷದವರೊಡನೆ ಕೆಲವು ಸಾರಿ ಮತಕೊಟ್ಟಿರಬಹುದು ನನ್ನ ಮನಸ್ಸಿಗೆ ನ್ಯಾಯ ಮತ್ತು ಉಪಯುಕ್ತವೆಂದು ಕಂಡು ಬಂದ ಮಸೂದೆಗಳಿಗೆ ನಾನು ಮತಕೊಟ್ಟಿದ್ದಾಗಿದೆ ಅಷ್ಟೇಅಲ್ಲದೆ ನಾನು ಜಸ್ಟಿಸಪಕ್ಷದವನು ಆಗಿದ್ದು ಮತಕೊಟ್ಟಿದ್ದಲ್ಲ ದೇಶದ ಅಭ್ಯುದಯಕ್ಕಾಗಿ ಕೆಲಸಮಾಡಲು ನಾನು ಸದಾ ಸಿದ್ಧನಿರುತ್ತೇನೆ ಅನಂತರ ಜಯಘೋಷದೊಡನೆ ಸತ್ಕಾರವು ಮುಗಿಯಿತು

ಬೋಳಾರದ ಒಬ್ಬ ಮೊಗವೀರ ಯುವಕನು ತಾ. ೫-೩-೩೭ರಲ್ಲಿ ಸಮುದ್ರಕ್ಕೆ ಮೀನುಹಿಡಿಯಲು ಹೋಗಿದ್ದು ಅಲ್ಲಿ ಶೇಡಿ ಮೀನಿನ ಒಂದು ಮುಳ್ಳು ಕೈಗೆತಾಗಿ ರಕ್ತಸೋರುವಾಗ ಮೈಮರೆತು ಅಕಸ್ಮಾತ್ ನೀರಿಗೆ ಬಿದ್ದವನು ಮೇಲೆ ಬರಲೇ ಇಲ್ಲ ಶವ ಈ ತನಕ ದೊರೆಯಲಿಲ್ಲ.

ಮಲಬಾರಿನ ಮಲ್ಲಾಪುರದಿನಲ್ಲಿ ಕೆಲವು ವರ್ಷಗಳಿಂದ ಸಬ್‌ರಿಜಿಸ್ಟ್ರಾರರಾಗಿದ್ದ ಬೋಳಾರ ನಾಗಪ್ಪನವರು ಆಕಸ್ಮಿಕ ಪಕ್ಷವಾತರೋಗ ಪೀಡಿತರಾಗಿ ಕಳೆದ ೩-೩-೩೭ರಲ್ಲಿ ಸ್ವರ್ಗಸ್ಥರಾದರೆಂದು ತಿಳಿಸಲು ವಿಷಾದ ಪಡುತ್ತೇವೆ ಮಲ್ಲಾಪುರದಿನಲ್ಲಿಜನಪ್ರೀತರಾದ ಇವರ ಅಂತ್ಯೇಷ್ಟಿ ಸಂಸ್ಕಾರಕಾರ್ಯದಲ್ಲಿ ಅಲ್ಲಿಯ ಸರಕಾರಿ ಉದ್ಯೋಗಸ್ಥರೂ ಅನೇಕ ಹಿಂದೂ ಮುಸಲ್ಮಾನ ಗೃಹಸ್ಥರೂ ಸಹಕರಿಸಿದ್ದರು. ಇವರು ಮೊಗವೀರಜಾತಿಯವರಲ್ಲಿ ಪ್ರಥಮ ಮೆಟ್ರಿಕ್ಯೂಲೇಶನ್ ಪಾಸಾದವರಾಗಿ ರಿಜಿಸ್ತ್ರಿ ಇಲಾಖೆಯಲ್ಲಿ ಗುಮಾಸ್ತೆಯಾಗಿ ಸೇರಿ ಕ್ರಮೇಣ ಸಬ್ ರಿಜಿಸ್ಟ್ರಾರರಾದರು. ಅತ್ಯಂತ ಸರಳ ಹೃದಯರೂ ಧಾರ್ಮಿಕ ಪುರುಷರೂ ಆಗಿದ್ದ ಇವರು ಮೊಗವೀರರ ಅನೇಕ ಸಂಸ್ಥೆಗಳಿಗೆ ಧನಸಹಾಯವನ್ನು ಮಾಡುತ್ತಿದ್ದರು ಇವರ ಆತ್ಮಕ್ಕೆ ಭಗವಂತನು ಶಾಂತಿಯನ್ನೀಯಲಿ

ಉಡುಪಿ

ಮೂರು ಮಕ್ಕಳ ಜನನ

ಇಲ್ಲಿಯ ಹೆಂಗಸರ ಆಸ್ಪತ್ರೆಯಲ್ಲಿಷ್ಟ ಶ್ರೀಮತಿ ಮಾರ್ತಾ ಆನಂದಿ ಎಂಬ ಮಿಶ್ಯನ್ ಮಹಿಳೆಯೊಬ್ಬಳು ಕಳೆದ ತಾ. ೨-೩-೩೭ನೇ ಮಂಗಳವಾರ ೩ ಗಂಡು ಶಿಶುಗಳನ್ನು ಹೆತ್ತಿರುವಳು. ಜನರೆಲ್ಲಾ ತಂಡ ತಂಡವಾಗಿ ಹೋಗಿ ತಾಯಿ ಮತ್ತು ಶಿಶುಗಳನ್ನು ನೋಡಿಬಂದರು. ಮೂರು ಮಕ್ಕಳೂ ಸೌಖ್ಯವಾಗಿರುವವು

ಉಡುಪಿ ತಾಲೂಕು ಕೊಂಗ್ರೆಸು ಕಮಿಟಿ

ಪದವೀಸ್ವೀಕಾರಕ್ಕೆ ಸಮ್ಮತಿ

ಇದರ ವಿಶೇಷ ಪ ಹಾಸಬೆಯೊಂದು ಕಳೆದ ತಾ. ೩-೩-೩೭ನೇ ಬುಧವಾರ ಸಂಜೆ ಐದುವರೆ ಘಂಟೆಗೆ ಉಡುಪಿ ತಾಲೂಕು ಕೊಂಗ್ರೆಸ್ ಕಮಿಟಿ ಆಫೀಸಿನಲ್ಲಿ ನೆರೆದು ಬಂತು ಕಮಿಟಿಯ ಅಧ್ಯಕ್ಷರ ಗೈರುಹಾಜರಿಯಲ್ಲಿ ವಕೀಲ್ ಶ್ರೀ ಎಮ್ ವಿಟ್ಠಲ ಕಾಮತ್, ಬಿ. ಎ, ಬಿ. ಎಲ್. ರವರು ಅಧ್ಯಕ್ಷಸ್ಥಾನವನ್ನು ವಹಿಸಿದರು. ಕಳೆದ ಚುನಾವಣೆಯಲ್ಲಿ ಕೊಂಗ್ರೆಸ್ಸಿಗೆ ಸಂಪೂರ್ಣ ವಿಜಯವನ್ನೊದಗಿಸಿಕೊಟ್ಟ ತಾಲೂಕಿನ ಮತದಾರರನ್ನೂ, ಕೊಂಗ್ರೆಸ ಕೆಲಸಗಾರರನ್ನೂ, ಸಾರ್ವಜನಿಕರನ್ನೂ ಈ ಕಮಿಟಿಯು ಹೃತ್ಪೂರ್ವಕವಾಗಿ ಅಭಿನಂದಿಸುತ್ತದೆ" ಎಂಬ ಠರಾವು ಸರ್ವಾನುಮತದಿಂದ ಮಂಜೂರಾಯಿತು ಆ ಮೇಲೆ ಪದವೀ ಸ್ವೀಕಾರದ ಕುರಿತು ಎರಡು ಘಂಟೆಗಳ ವರೆಗೆ ತೀವ್ರ ಚರ್ಚೆ ನಡೆಯಿತು. ಕೊನೆಗೆ "ಸದ್ಯಸ್ಥಿತಿಯಲ್ಲಿ ಅಖಿಲ ಭಾರತ ವರ್ಕಿಂಗ್ ಕಮಿಟಿಯವರ ಮತೋಟಿಗೊಳಪಟ್ಟು ಪದವೀಸ್ವೀಕಾರವನ್ನು ಮಾಡಬೇಕೆಂಬ ಠರಾವು ಬಹುಮತದಿಂದ ಪಾಸಾಯಿತು. ಹಳ್ಳೀ ಕಮಿಟಿಗಳನ್ನು ಸ್ಥಾಪಿಸಬೇಕೆಂದೂ ಕೊಂಗ್ರೆಸು ಮೆಂಬರರನ್ನು ಸೇರಿಸಬೇಕೆಂದೂ ನಿರ್ಧಾರವಾಗಿ ಸಭಾಂತ್ಯವಾಯಿತು

ನಾಟಕ

ಇಲ್ಲಿಯ 'ಶ್ರೀ ಗಾಯತ್ರೀ ಕರ್ನಾಟಕ ಸಂಗೀತ ನಾಟಕ ಸಭಾ' ಇವರು ಕಳೆದ ತಾ ೬-೩-೩೭ನೇ ಶನಿವಾರ ಸ್ವಾಮಿನಿಷ್ಠೆ ಎಂಬ ನಾಟಕವನ್ನು ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ ಆಡಿ ತೋರಿಸಿದರು ಸ್ತ್ರೀ ಪುರುಷರು ಪಾತ್ರ ವಹಿಸಿದ್ದ ಈ ನಾಟಕಕ್ಕೆ ಜನಬೆಂಬಲವೂ ಸಾಕಷ್ಟು ದೊರಕಿದ್ದಿತು.

ಹರಿಕಥೆ

ಶ್ರೀಮದನಂತೇಶ್ವರ ದೇವಸ್ಥಾನದಲ್ಲಿ ಕಳೆದ ಹದಿನೈದು ದಿವಸಗಳಿಂದ ಶ್ರೀಪಾದ ದಾಸ ಹಂಡೆಯವರಿಂದ ಹರಿಕಥಾ ಕಾಲಕ್ಷೇಪವು ನಡೆಯುತ್ತಿರುವುದು. ಒಟ್ಟಿಗೆ ೩೦ ದಿವಸಗಳ ಹರಿಕಥೆ ನಡೆಯಲಿರುವದೆಂದು ತಿಳಿದುಬರುತ್ತದೆ

ಫಲಿಮಾರು

ಇದೇ ಕಳೆದ ತಾರೀಕು ೫ನೇ ಶುಕ್ರವಾರ ಫಲಿಮಾರು ಗೌಡಸಾರಸ್ವತ ಯುವಕ ಸಂಘದ ಕಾರ್ಯಕಾರಿ ಮಂಡಳಿಯ ಸಭೆಯು ಸದ್ರಿ ಸಂಘದ ಅಧ್ಯಕ್ಷ ಶ್ರೀಯುತ ನಾರಾಯಣ ರಂಗಪ್ಪ ನ್ಯಾಕರವರ ಮನೆಯಲ್ಲಿ ಸೇರಿ ನಮ್ಮದಾದ ದ ಕ. ಜಿಲ್ಲೆಯಿಂದ ನಮ್ಮ ಸಂಸ್ಥಾನದ ಕೌನ್ಸಿಲ್ ಮತ್ತು ಎಸೆಂಬ್ಲಿಗೆ ಚುನಾಯಿಸಲ್ಪಟ್ಟ ಶ್ರೀಮಾನ್ ಧರ್ಮಸ್ಥಳ ಮಂಜಯ್ಯ ಹೆಗ್ಡೆ ವಗೈರೆ ಆರು ಜನ ಮೆಂಬರ ಮಹನೀಯರನ್ನು ಅವರುಗಳ ಮುಂದಿನ ಕಾರ್ಯಕ್ರಮವನ್ನು ಕೈಕೊಳ್ಳುವ ಮುಂಚಿತವಾಗಿಯೇ ಹಿಂದುಸ್ಥಾನದ ೭ ಲಕ್ಷ ಹಳ್ಳಿಗಳಲ್ಲೊಂದಾದ ನಮ್ಮ ಫಲಿಮಾರನ್ನು ಸಂದರ್ಶಿಸುವಂತೆಯೂ ಆ ಸಮಯದಲ್ಲಿ ನಾವುಗಳು ಏರ್ಪಡಿಸಬಹುದಾದ ಸಂತೋಷ ಕೂಟದಲ್ಲಿ ಭಾಗವಹಿಸುವಂತೆಯೂ ಕೇಳಿಕೊಳ್ಳಬೇಕಾಗಿ ನಿಶ್ಚಯಿಸಲ್ಪಟ್ಟಿತು ಮುಂದಿನ ಏರ್ಪಾಡು ಭರದಿಂದ ಸಾಗುತ್ತಿದೆ

ಕಾರ್ಯದರ್ಶಿ

ಕಾನ್ರಾಡಿ

ಇಲ್ಲಿಯ ಹಳನಾಡು ಹೈಯರ ಎಲಿಮೆಂಟರಿ ಶಾಲು ಅಧ್ಯಾಪಕರು ತಮ್ಮ (Frist Halnad Troop) ಎಂಬ ಸ್ಕೌಟುಗಳ ಮತ್ತು ಇನ್ನಿತರ ಕೆಲವು ವಿದ್ಯಾರ್ಥಿಗಳೊಂದಿಗೆ ಕಳೆದ ತಾ. ೨೫-೨-೩೭ನೇ ಗುರುವಾರ ಸಾಯಂಕಾಲ ದೇವಗಂಗೆ, ಬಿದನೂರು ಕೋಟೆ, ಪುರಾತನ ದೇವಾಲಯಗಳು, ಕುಂಚಕಲ್ಲು ಜಲಪಾತ ಮುಂತಾದವುಗಳನ್ನು ನೋಡುವುದಕ್ಕಾಗಿ ಕಾಲ್ನಡಿಯಿಂದ ಹೊರಟು ಹೊಸಂಗಡಿ ಹೈದರ ಘಾಟಿಯ ಕಟ್ಟಿನ ಕೈಯ ನಡಿತೀರ, ಮಾರುತಿ ದೇವಾಲಯ, ಗುತ್ತ್ಯಮ್ಮನ ಗುಡಿ, ಕಾಲಭೈರವ, ರಾಘವೇಂದ್ರ ಸ್ವಾಮಿಯ ವೃಂದಾವನ, ಪಂಚಮುಖಿದ ಹನುಮಂತನ ದೇವಾಲಯ, ಚಿದಂಬರೇಶ್ವರ ದೇವಸ್ಥಾನ, ಗುಡ್ಡೆವೆಂಕಟ್ರಮಣ ಸ್ವಾಮಿದೇವಸ್ಥಾನ, ಶಿಖರೇಶ್ವರ ದೇವಸ್ಥಾನ, ಬಿದನೂರು ಶಿವಪ್ಪ ನಾಯ್ಕನ ಕೋಟೆ ಮುಂತಾದವುಗಳನ್ನು ನೋಡಿ ದೇವಗಂಗೆಯನ್ನು ನೋಡಿ, ಕಟ್ಟಿನ ಕೈಯನ್ನೂ ಕಂಡು ಕುಂಚಕಲ್ಲು ಜಲಪಾತ ನೋಡಿ, ಘಾಟಿಯಲ್ಲಿ ಸೂರ್ಯನು ಮುಳುಗುವಾಗ ಉಂಟಾಗುವ ಆಂದವನ್ನು ನೋಡಿ ಸೋಮವಾರ 5 a. m ಕಾನ್ರಾಡಿಗೆ ಬಂದು ತಲಪಿದರು. ಅವರ ಈ ಎಕ್ಸ್‌ಕರ್ಷನಿನಲ್ಲಿ ಸಹಾಯಮಾಡಿದ ಎಲ್ಲಾ ಮಹಾಶಯರಿಗೂ ತುಂಬಾ ಕೃತಜ್ಞರಾಗಿದ್ದೇವೆಂದು ಆ ಶಾಲೆಯ ಅಧ್ಯಾಪಕರು ತಿಳಿಸುತ್ತಾರೆ.

ದೇಲಂಪಾಡಿ

ಇದೇ ೧ರಲ್ಲು ಆರಿಯಡ್ಕ ಸುಬ್ಬಯ್ಯ ರೈಗಳೂ ದೇಲಂಪಾಡಿ ಗ್ರಾಮದ ಬೆಳ್ಳಿಪ್ಪಾಡಿ ನಾರಾಯಣ ರೈಗಳೂ ಒಟ್ಟಾಗಿ ಸುಳ್ಯಕ್ಕೆ ಹೋದವರು ವಾಪಾಸು ಬರುವಾಗ್ಗೆ ಬೆಳ್ಳಿಪ್ಪಾಡಿ ಮನೆ ಸಮೀಪಕ್ಕೆ ಮುಟ್ಟುತ್ತಲೆ ಇವರೀರ್ವರನ್ನೂ ಬೆನ್ನಟ್ಟಿಯೇ ೫ ಗುಂಡು ಒಂದರ ಹಿಂದೆ ಒಂದು ಹೊಡೆದು ನಿಪಾತಪಡಿಸಿದವು. ನಾರಾಯಣ ರೈಗಳಿಗೆ ತಲೆಗೊಂದು ಗುಂಡು ಎದೆಗೊಂದು ಗುಂಡು ಕೆಲವು ಚಿಲ್ಲುಗಳು ತಾಗಿವೆ ಆಲ್ಲೇ ಪ್ರಾಣಹರಣ ಸಬ್ಬಯ್ಯ ರೈಗಳಿಗೆ ಸೊಂಟದ ಮೇಲ್ಭಾಗಕ್ಕೆ ಒಂದು ಗುಂಡು ಕೆಲವು ಚಿಲ್ಲುಗಳು ಹೊರತಾಗಿ ಅವರನ್ನು ಗುಡ್ಡದಿಂದ ಸುಮಾರು ೪೦ ಮಾರು ದೂರ ಬೆನ್ನಟ್ಟಿ ದೊಣ್ಣೆಯಿಂದ ಹೊಡೆಯುತ್ತಾ ಬಯಲಿಗೆ ಬಿದ್ದುಬಿಟ್ಟರು ಅಲ್ಲಿ ಚನ್ನಾಗಿ ಹೊಡೆದು ಕೊಂದೇ ಬಿಟ್ಟರು. ಇವರು ಸಾರ್ವಜನಿಕ ಪರೋಪಕಾರ ಕೆಲಸದಲ್ಲಿ ನುರಿತವರು. ಎಳೆ ವಯಸ್ಸಿನವರು. ಸ್ವಾರ್ಜಿತವಾಗಿ ಸಾಧಾರಣ ೧೦೦೦ ಮುಡಿ ಅಕ್ಕಿಯ ಜಮೀನುದಾರರು. ಅಂಥವರನ್ನು ಈ ತಾಲೂಕಿನವರು ಕಳಕೊಂಡಂತಾಯಿತು ಇವರು ನ್ಯಾಯ ಅನ್ಯಾಯ ವಿಮರ್ಶೆಯಲ್ಲಿ ಕೆಲವರಿಗೆ ವಿರೋಧಿಯಾಗಲೂ ಬಹುದು. ಆದರೆ ಇವರಲ್ಲಿ ಸ್ವಾರ್ಥದ ಕೆಲಸ ಬಹಳ ಕಡಿಮೆ ಇದರಿಂದಾಗಿಯೇ ಎಳೆ ತರುಣನಾದ ೨೩ ವಯಸ್ಸಿನ ನಾರಾಯಣ ರೈಗೂ ಮರಣಬಂತೆಂತಲೇ ಹೇಳಬೇಕು.

ಕುಂದಾಪುರ

ಇಲ್ಲಿಯ ಕುಂದಾಪುರ ತಾಲೂಕು ಕಾಂಗ್ರೆಸ್ ಕಮಿಟಿ ಸಭೆಯು ತಾ ೩-೩-೩೭ನೇ ಸಾಯಂ ಘಂಟೆ ೫ಕ್ಕೆ ಶ್ರೀ. ಬಿ ಮಹಾಬಲ ಹೊಳ್ಳರು, ಬಿ. ಎ, ಬಿ. ಎಲ್ ಎಡ್ವಕೇಟ್ ಇವರ ಅಧ್ಯಕ್ಷತೆಯಲ್ಲಿ ಅವರ ಸ್ವಂತ ಆಫೀಸಿನಲ್ಲೇ ಜರಗಿ ಈ ಕೆಳಗಿನ ನಿರ್ಣಯಗಳು ಮಂಜೂರಾದವು.

(1) ರಾಷ್ಟ್ರಪತಿ ಪಂಡಿತ ಜವಾಹಿರಲಾಲನೆಹರುಗಳವರ ತಾ. ೯-೨-೩೭ನೇ ನಂಬ್ರ ೬ನೇ ಸರ್ಕಿಲಾರನ್ನು ಓದಿ ಹೇಳಲಾಯಿತು ಅಧಿಕಾರ ಸ್ವೀಕಾರದ ವಿಚಾರದಲ್ಲಿ ಹೆಚ್ಚಿನ ಸಂಖ್ಯೆಯಿಂದ ಆರಿಸಿಬಂದಿರುವ ಪ್ರಾಂತಗಳಲ್ಲಿ ಕಾಂಗ್ರೆಸು ಪ್ರತಿನಿಧಿಗಳು ಅಧಿಕಾರ ಸ್ವೀಕರಿಸುವದು, ದೇಶದ ಈಗಿನ ಪರಿಸ್ಥಿತಿಯಲ್ಲಿ ಉತ್ತಮವೆಂತ ಈ ಕಮಿಟಿಯು ಅಭಿಪ್ರಾಯಪಡುತ್ತದೆ (೨) ನಮ್ಮ ತಾಲೋಕಿನ ಪ್ರತಿ ಗ್ರಾಮಗಳಲ್ಲಿ ಅಥವಾ ಅನುಕೂಲ ತೋರುವ ಕೇಂದ್ರಗಳಲ್ಲಿ ಒಂದೊಂದು ಕಾಂಗ್ರೆಸು ಕಮಿಟಿಗಳನ್ನು ಸ್ಥಾಪಿಸಬೇಕಾಗಿ ನಿರ್ಣಯಿಸಲಾಯಿತು ಈ ಬಗ್ಗೆ ಕೆಳಗೆ ಕಾಣಿಸಿದ ಸದಸ್ಯರ ಒಂದು ಉಪಸಮಿತಿಯನ್ನು ಏರ್ಪಡಿಸಲಾಯಿತು. ೧ ಶ್ರೀ ಬಿ ಮಹಾಬಲ ಹೊಳ್ಳರು, ೨. ಶ್ರೀ. ಕೆ. ವೆಂಕಪ್ಪ ಶೆಟ್ಟರು, ೩. ಶ್ರೀ. ಬಿ. ಶಿವರಾಮ ಶೆಟ್ಟರು, ೪. ಶ್ರೀ. ಕೆ. ಆರ್. ಭಟ್ಟ, ೫ ಶ್ರೀ. ಜಿ ಸಂಜೀವರಾವ್, ೬. ಶ್ರೀ. ಕೆ. ಕೃಷ್ಣರಾಯ ಶ್ಯಾನುಭಾಗರು, ೭. ಶ್ರೀ. ಎಚ್. ಕೋಟಿಯಣ್ಣ ಶೆಟ್ಟರು, ೮ ಶ್ರೀ ಕೆ. ಅಜ್ಜಯ್ಯ ಹವ್ಯಾಲ್ದಾರರು, ೯. ಶ್ರೀ. ಡಿ. ಗೋಪಾಲ ಪೈಗಳು, ೧೦. ಶ್ರೀ ಕೆ. ವಿಟ್ಠಲದಾಸ ಶ್ಯಾನುಭಾಗರು, ೧೧. ಶ್ರೀ. ಎಮ್ ಗೋಪಾಲಕೃಷ್ಣ ಕಾಮತರು, ೧೨ ಶ್ರೀ. ಪಿ ವಿ ಎನ್ ಹೆಬ್ಬಾರರು. (3) ಕಾಂಗ್ರೆಸು ಸದಸ್ಯರನ್ನು ಸೇರಿಸಿಕೊಳ್ಳುವರೆ ಪ್ರಕೃತ ೨೫ ವರ್ಗಣೆ ಪುಸ್ತಕಗಳನ್ನು ತರಿಸಬೇಕಾಗಿ ನಿರ್ಣಯಿಸಲಾಯಿತು. (4) ಕಳೆದ ಚುನಾವಣೆಯಲ್ಲಿ ಈ ತಾಲೋಕಿನ ಮತದಾರರು ಕಾಂಗ್ರೆಸು ಉಮೇದ್ವಾರರಿಗೆ ಸಂಪೂರ್ಣ ಬೆಂಬಲವನ್ನಿತ್ತು ಅವರು ಪ್ರಚಂಡ ಬಹುಮತದಿಂದ ಆರಿಸಿಬರುವಂತೆ ಮಾಡಿದುದಕ್ಕಾಗಿ ಆ ಮತದಾರರಿಗೂ, ಈ ಚುನಾವಣೆಯಲ್ಲಿ ಸಹಕರಿಸಿ, ಪ್ರೋತ್ಸಾಹಿಸಿದ ಎಲ್ಲಾ ಮಹನೀಯರಿಗೂ ಮತ್ತು ವಿಶೇಷ ಪರಿಶ್ರಮದಿಂದ ಕೆಲಸಮಾಡಿದ ಸ್ವಯಂಸೇವಕರನ್ನೂ ಈ ಕಮಿಟಿಯು ಅಭಿನಂದಿಸಿರುತ್ತದೆ.

ಎಮ್. ಗೋಪಾಲಕೃಷ್ಣ ಕಾಮತ್
ಕಾರ್ಯದರ್ಶಿ.

ಬಿ. ಮಹಾಬಲ ಹೊಳ್ಳ,
ಅಧ್ಯಕ್ಷ.

ಬೊಂಬಾಯಿ

ಕಳೆದ ತಾ ೨೮-೨-೧೯೩೭ನೇ ಆದಿತ್ಯವಾರ ಮುಂಬಾಯಿ ಬಂಟರ ಯಾನೆ ನಾಡವರ ಸಂಘದ ಪರವಾಗಿ ಈ ಕೆಳಗಿನ ಮಹನೀಯರು ಮೋಟರ್ ಬಸ್ಸು ಮಾಡಿ ಅದಕ್ಕೆ ಬಂಟರ ಯಾನೆ ನಾಡವರ ಸಂಘದ ಹೆಸರಿನ ಬೋರ್ಡು ಹಚ್ಚಿ ಶ್ರೀಯುತ ಒರೆಪಾಡಿ ನರ್ಸು ಶೆಟ್ರ ಸಹಾಯ ಪಡೆದು ಮುಂಬಾಯಿಯ ಪ್ರೊವಾಡಿ, ಬೈಕ್ಲ, ಡಿಲ್ಯಾರೋಡ್ ವರ್ಲಿ, ದಾದರ್ ಸಾತ್‌ರಸ್ತೆ ಮುಂತಾದ ಅನೇಕ ಸ್ಥಳಗಳಲ್ಲಿರುವ ಹಿಂದೂ ವಿಶ್ರಾಂತಿ ಗೃಹಗಳ ಮ್ಯಾಲೀಕರನ್ನು ಕಂಡು ಅನೇಕ ಜನರನ್ನು ಸಂಘದ ಮೆಂಬರರನ್ನಾಗಿ ಸೇರಿಸಿಕೊಂಡದ್ದಲ್ಲದೆ ಸುಮಾರು ರೂಪಾಯಿ ೩೦ ರಷ್ಟು ವಂತಿಗೆಯನ್ನು ಕೂಡಾ ವಸೂಲು ಮಾಡಿರುತ್ತಾರೆಂಬ ಶುಭವರ್ತಮಾನವನ್ನು ತಿಳಿದು, ಸಂತೋಷಪಟ್ಟೆನು. ಸಂಘದ ಪರವಾಗಿ ಶ್ರೀಗಳಾದ ಕೆ. ಪಿ. ಕೆ ಶೆಟ್ರು, ಕಾಂತಪ್ಪ ಶೆಟ್ರು ಬಹು ಉತ್ತೇಜನದಿಂದ ಬಂಟ ಸಮಾಜದ ಮಹನೀಯರಿಗೆ ಅತೀ ಸರಳ ಭಾವ ಮಾತಿನಿಂದ, ಪೂರ್ಣ ವಿರುದ್ಧ ಮನಸ್ಸಿನಿಂದ ತಾವು ಮೆಂಬರರಾಗಲಾರೆವೆಂಬವರನ್ನು ಮೆಂಬರರನ್ನಾಗಿ ಸೇರಿಸಿಕೊಳ್ಳುವಷ್ಟರ ಮಟ್ಟಿನ ಪ್ರಯತ್ನಪಟ್ಟಿದ್ದಕ್ಕಾಗಿ ಸದ್ರಿ ಕೆ ಪಿ. ಕೆ. ಶೆಟ್ರಿಗೂ, ಕಾಂತಪ್ಪ ಶೆಟ್ರಿಗೂ ನಮ್ಮ ಬಂಟ ಸಮಾಜದ ಕಡೆಯಿಂದ ನನ್ನ ಮನಃಪೂರ್ವಕವಾದ ವಂದನೆಗಳು. ಇದೇ ರೀತಿಯಲ್ಲಿ ಸರ್ವ ಮಹನೀಯರು ಮನವಿಟ್ಟು ಪ್ರಯಾಸಪಟ್ಟಲ್ಲಿ ಮುಂಬಾಯಿ ಬಂಟರ ಯಾನೆ ನಾಡವರ ಸಂಘದ ಆರಿಷ್ಟಗಳು ನೀಗಿ ಉಚ್ಚಪದವಿಗೆ ಬಂದು ಬಂಟ ಸಮಾಜದ ಮಹನೀಯರಿಗೆಲ್ಲರಿಗೂ ಶ್ರೇಯಸ್ಸಾದೀತು.

ತಾ. 28—2—37ರಲ್ಲು ಸಂಘದ ಪರವಾಗಿ ತಿರುಗಾಡಿದ ಮಹನೀಯರು—

ಶ್ರೀಗಳಾದ ಕೆ ಪಿ. ಕೆ. ಶೆಟ್ರು, ಕಾಂತಪ್ಪ ಶೆಟ್ರು, ದೊಂಟಶೆಟ್ರು, ಕುತ್ತೆತ್ತೂರು ರಾಮಣ್ಣ ಶೆಟ್ರು, ಕುಂಞಣ್ಣ ಶೆಟ್ರು, ಬಾಬುಶೆಟ್ರು, ಒರೆಪಾಡಿನ ಸುಬ್ಬಯ ಶೆಟ್ರು, ೪ ಮಂದಿ ಬಂಟರ ಯಾನೆ ನಾಡವರ ಸಂಘದ ವೊಲಂಟಯರರು ಮತ್ತು ಇನ್ನಿಬ್ಬ ತರುಣರು. ಈ ಮೇಲಿನ ಮಹನೀಯರುಗಳಿಗೆ ಪ್ರತ್ಯಪ್ರತ್ಯೇಕವಾಗಿ ನನ್ನ ವಂದನೆಗಳನ್ನು ಅರ್ಪಿಸುತ್ತೇನೆ

ಇಂತೀ ಸಂಘದ ಮೆಂಬರರಲ್ಲೊಬ್ಬ.

—ಚುನಾವಣೆಯ ಬಹಿರಂಗ ಪತ್ರಗಳು—

ದಿವಾನ್‌ಬಹದೂರ್ ಬಿ. ಮಹಾಬಲ ಹೆಗ್ಡೆಯರಿಗೆ.

ಮಾನ್ಯ ದಿವಾನ್ ಬಹದೂರರೇ,

ದೊಡ್ಡ ಮುಂಡಾಸುಗಳನ್ನು ನಂಬಿ ನೀವು ಹೊಂಡಕ್ಕೆ ಬಿದ್ದಿರಿ. ಕಳೆದ ಡಿಸ್ಟ್ರಿಕ್ಟ್ ಬೋರ್ಡು ಚುನಾವಣೆಯಲ್ಲಿ ಬ್ರಹ್ಮಾವರ ಸರ್ಕಲಿನ ಪರಿಣಾಮದಿಂದ ಪಾಠ ಕಲಿತು ಸುಮ್ಮನಿರಬೇಕಿತ್ತು. ಮತ್ತೂ ಚುನಾವಣೆಗೆ ನಿಂತಿರಿ, ಮತ್ತೂ ದೊಡ್ಡ ಹೊಂಡಕ್ಕೆ ಬಿದ್ದಿರಿ. ಮುದಿಪ್ರಾಯದ ತನ್ನಿಚ್ಛೆಯೊಂದನ್ನು ಸಲಿಸಿಕೊಡಬೇಕೆಂಬ ನಿಮ್ಮ ಓಟು ಪಡೆವ ಕಿರುದನಿಯು, ಕಾಂಗ್ರೆಸ್ ಪ್ರೆಸಿಡೆಂಟರ ಘನಗರ್ಜನೆಯೆದಿರಲ್ಲಿಲ್ಲಿ ಕೇಳಿಬಂದೀತು! ಕಟ್ಟಕಡೆಗಾದರೂ ದೊಡ್ಡ ಸಮುದ್ರವೇ ತನ್ನನ್ನಿದಿರಿಸಿ ನಿಂತಿದೆಯೆಂದು ನೀವು ಒಪ್ಪಿದುದು ಸಂತೋಷ. ಕಾಂಗ್ರೆಸಿನ ಮಹತ್ವಿಕೆಯು ನಿಮಗೂ ಕಡೆಗೆ ಹೊಳೆದಂತಾಯಿತು! ಮೊದಲೇ ಹೊಳೆದಿದ್ದರೆ! ಇನ್ನಾದರೂ 'ಅಯಿತೆಮ್ಮಯ ಕಾಲವೀದಿಗ' ಎಂದು ಶ್ರೀರಾಮನ ಮುಂದೆ ಹಿಂದೆಗದ ಪರಶುರಾಮನಂತೆ ಕೊಡಲಿಯನ್ನಿಳಿಸಿರಿ. ನೀವು ಛಲದಂಕ ಮಲ್ಲರೇನೋ ಅಹುದು. ಆದರೆ ಆ ಮಲ್ಲತನದ ಕಾಲವಿಂದು ಸಂದುಹೋಯಿತು. ಮತ್ತೂ ಹೋರಾಡಿ ಸರಳಮಂಚದ ಆರಾಮ ಪಡೆದಿರಿ. ಇನ್ನಾದರೂ ನಿಮ್ಮ ವಿಶ್ರಾಂತಿಯು ಸುಖದಾಯಕವಾಗಲಿ!

ಶ್ರೀ ಕೆ. ಜಗನ್ನಾಥ ಬಲ್ಲಾಳರಿಗೆ

ಸ್ವಾಮಿ,

ತಾನು ಕಾಂಗ್ರೆಸಿನ ಧ್ಯೇಯಕ್ಕೆ ವಿರೋಧಿಯಲ್ಲ, ಸದಾ ಖಾದಿ ಧರಿಸಿಕೊಳ್ಳುವವನೆಂದೆಲ್ಲಾ ದಿಸ್ಟ್ರಿಕ್ಟ್‌ಬೋರ್ಡು ಚುನಾವಣೆಯಲ್ಲಿ ಕಟಪಾಡಿ ಸರ್ಕಲಿನಲ್ಲಿ ಬಹಳ ಪ್ರಚಾರ ಮಾಡಿ ಗೆದ್ದ ವೀರರು ನೀವು. ಈ ಸಲ ಯಾವ ಧ್ಯೇಯ ಹಿಡಿದು ಕೆಲಸ ಮಾಡಿದ್ದೆಂದು ಹೇಳಬಲ್ಲಿರಾ? ನಿಮ್ಮ ಕಟಪಾಡಿ ಶಿರ್ವಗಳನ್ನು ಬಿಟ್ಟು ಈ ಸಲ ಉಡುಪಿಯಲ್ಲೇ ಕಾರ್ಯನಿರತರಾಗಿರಲು ಕಾರಣವೇನು? ಕಟಪಾಡಿ ಶಿರ್ವಗಳ ಓಟುಗಳನ್ನು ಉಡುಪಿಯಲ್ಲಿ ಭರ್ತಿ ಮಾಡುವ ಭರವಸೆಯಿಂದಲೇ? ಅಥವಾ ನಿಮ್ಮ ಕಾಂಗ್ರೆಸಿನ ಧ್ಯೇಯಾನುಸರಣೆಯ ಕುರಿತು ಕಟಪಾಡಿ ಶಿರ್ವಗಳ ಜನರಲ್ಲಿ ತುಸು ವಿಚಾರ ಹುಟ್ಟಿರುವುದೆಂದೇ?

ಮಿಸೆಸ್ ಎಮ್. ಎಸ್. ಶ್ರೇಷ್ಠರಿಗೆ

ಪ್ರಿಯ ಮುದ್ದಮರೇ,

ನಿಮ್ಮ ಉತ್ಸಾಹ, ಸಾಹಸ, ಚಟುವಟಿಕೆಗಳಿಗೆ ಎಂತಹ ಗಂಡುಗಂಡಸಾದರೂ ತಲೆ ಬಾಗಲೇಬೇಕು. ನಿಮ್ಮ ಗಂಡನ ಮಾತೇನು ಮತ್ತೆ? ಇಷ್ಟರವರೆಗೆ ಚುನಾವಣೆಗಳಲ್ಲಿ ಅವರ ವಿಜಯಗಳಿಗೆ ನೀವು ಬಹುತೇಕ ಕಾರಣರೆಂದರೆ ತಪ್ಪಾಗದು. ಆದರೆ ಈ ಸಲ ಮಾತ್ರ ನೀವು ನಿಮ್ಮ ಗಂಡನಿಗಿತ್ತ ಉಪದೇಶ ತಪ್ಪಾಯಿತು. ನೀವು ವ್ಯಯಿಸಿದ ಹಣ ನೀರಲ್ಲಿ ಹೋಮವಿಟ್ಟಂತಾಯಿತು. "ನಾನು ಅಪಜಯವನ್ನು ಅಂಗೀಕರಿಸಲಿಕ್ಕಿಲ್ಲ. ಎಂದಿಗೂ ಇಲ್ಲೆಂಬಷ್ಟರ ನಿಮ್ಮ ದಿಟ್ಟತನಕ್ಕೆ ಯಾರಾದರೂ ಶಹಭಾಸೆನ್ನಲೇಬೇಕು. ನಿಮ್ಮಂತಹ ಶೂರ ಹೆಂಗಸರು ದಕ್ಷಿಣ ಕನ್ನಡದಲ್ಲೇ ಅಪರೂಪ. ಆದರೆ ಇಳಿತಭರತಗಳಂತೆ ಸೋಲುಗೆಲುಗಳು ಮಾನವನಿಗೆ ಸಹಜವಾದುದು. ಈ ಸಲ ಅದೃಷ್ಟವು ನಿಮಗೆ ಮುನಿದುದಕ್ಕೆ ಕಣ್ಣೀರಿಡಬೇಡಿರಿ. ಎದೆ ಎದೆ ಬಡಕೊಳ್ಳಬೇಡಿರಿ. ಧೈರ್ಯ ತಾಳಿರಿ. ಇನ್ನೊಮ್ಮೆ ನಿಮ್ಮ ಗಂಡನ ಅದೃಷ್ಟ ನೆಟ್ಟಗಾದೀತು! ಆಗ ಒಂದು ಕೈ ನೋಡಿಬಿಟ್ಟರಾಯಿತು!

ಪಲಿಮಾರು ಮಠದ ಶ್ರೀ ರಘುಮಾನ್ಯತೀರ್ಥ ಶ್ರೀಪಾದಂಗಳವರಿಗೆ

ಪೂಜ್ಯರೇ,

ತಾನು ದೇಶದ್ರೋಹಿ, ಮಿತ್ರದ್ರೋಹಿ, ಬಂದುದ್ರೋಹಿ! ಆದರೂ ಜಸ್ಟಿಸ್ ಪಾರ್ಟಿಯ ಪರವಾಗಿ ತನಗೆ ಕೆಲಸ ಮಾಡಲೇಬೇಕಾಗಿದೆಯೆಂದು ತಾವು ಕಳೆದ ಚುನಾವಣೆಯ ಸಂದರ್ಭದಲ್ಲಿ ಹೇಳಿದಿರೆಂದು ಯಾರೋ ನನ್ನ ಕಿವಿಗೆ ಹಾಕಿದರು. ಇದು ನಿಜವೇ? ನಿಜವಾದರೆ ತಮ್ಮಂತಹ ಧರ್ಮಾಧಿಕಾರಿಗಳೇ ಶಿಷ್ಯವೃಂದಕ್ಕೆ ಇಂತಹ ಮಾದರಿ ಹಾಕಿಕೊಟ್ಟಲ್ಲಿ ಅವರೇನು ಮಾಡಿಯಾರು ಮತ್ತೆ? ಅವರೂ ಒಂದೇ ಒಂದು ದ್ರೋಹ ಮಾಡಿ ತಮ್ಮ ಮಾತಿಗೆ ವಿರೋಧವಾಗಿ ನಡೆದು ಅಲ್ಪ ಮಟ್ಟಿಗಾದರೂ ತಮ್ಮ ಮಾದರಿಯನ್ನನುಸರಿಸಿಮುದರಲ್ಲಿ ತಪ್ಪೇನು? ಕಲಿಯ ಎಗಕ್ಕೆ ತಕ್ಕಧರ್ಮವೆಂದರೆ ಇದೀಗ? ಅದಕ್ಕೆ ತಕ್ಕ ಗುರುಗಳೆಂದರೆ ತಾವೇ?

ರಾವ್‌ಬಹದೂರು ಎನ್. ಎನ್. ಸುವರ್ಣರಿಗೆ

ಪ್ರಿಯ ರಾವ್‌ಬಹದೂರರೇ,

ನಿಮ್ಮ ಕ್ರೋಧದ ಭಾಷಣ ಮತ್ತು ಕಂಠೀರವದ ಲೇಖನಗಳಿಗಾಗಿ ಕಾಂಗ್ರೆಸಿನವರು ನಿಮಗೆ ತುಂಬಾ ಆಭಾರಿಯಿರಬೇಕು. ಆದರಿಂದ ಮಂಗಳೂರು ಡಿವಿಜನಿನ ಕಾಂಗ್ರೆಸ್ ಉಮೇದ್ವಾರಿಯಾದ ಶ್ರೀ ವೆಂಕಟ್ರಾಯ ಬಾಳಿಗರಿಗೆ ಕಡಿಮೆಯೆಂದರೆ ಒಂದೆರಡು ಸಾವಿರ ಓಟಾದರೂ ಹೆಚ್ಚಿಗೆ ದೊರೆಯದಿರದು. ಕಳೆದ ಕಾಯಿದೆಭಂಗ ಚಳವಳ ಸಂದರ್ಭದ ನಿಮ್ಮ ಕೆಲಸಕ್ಕಾಗಿ ಸರಕಾರದವರು ನಿಮಗೆ ರಾವ್‌ಬಹದೂರು ಬಿರುದಿತ್ತಿರುವುದಾದರೆ, ಈ ಸಲ ಕಾಂಗ್ರೆಸಿನವರು ನಿಮಗೆ ರಾ. ಭ. ಅಂದರೆ ರಾಷ್ಟ್ರಭಕ್ತನೆಂಬ ಬಿರುದು ಕೊಡಲೇ ಬೇಕು. ಯಾಕಂದರೆ ಕೆಂಪು ಟೊಪ್ಪಿ ಹಾಕಿಕೊಂಡು, ಜಸ್ಟಿಸ್ ಪಾರ್ಟಿಗಿತ್ತ ಒಂದು ಓಟಿಗೆ 2000 ಓಟನ್ನು ಕಾಂಗ್ರೆಸಿಗೆ ಗಳಿಸಿಕೊಡುವ ಯೋಗ್ಯತೆ ಯಾರಿಗೆ ಬಂದೀತು! ಇದೇ ರೀತಿ ಮುನ್ನಡೆಯಬೇಕು ನೀವು! ಜಯಶೀಲರಾದೀರಿ! ಸ್ವರಾಜ್ಯ ಗವರ್ನಮೆಂಟಿನಲ್ಲಾದರೂ ನಿಮ್ಮಂತಹ ಪ್ರತಿಭಾಶಾಲಿ ವಕೀಲರ ಯೋಗ್ಯತೆಗೆ ತಕ್ಕ ಬೆಲೆ ದೊರೆತೀತು! ಪಬ್ಲಿಕ್ ಪ್ರೊಸಿಕ್ಯೂಟರ್ ಶಿಪ್ಪೋ ಎಡ್ವೊಕೇಟ್ ಜನರಲ್‌ಶಿಪ್ಪೋ ದೊರೆತೀತು!

ಡಾಕ್ಟರ್ ಪಿ. ಜಿ. ಆಚಾರ್ಯರಿಗೆ

ಪ್ರಿಯ ಡಾಕ್ಟರರೇ,

ತಾನು ಕಳೆದ ಡಿಸ್ಟ್ರಿಕ್ಟ್ ಬೋರ್ಡು ಪ್ರೆಸಿಡೆಂಟರ ಚುನಾವಣೆಯಲ್ಲಿ ಕಾಂಗ್ರೆಸಿಗೆ ವಿದ್ರೋಹ ಮಾಡಲಿಲ್ಲ! ವಿದ್ರೋಹ ಮಾಡಿದವರು ಶ್ರೀಗಳಾದ ಡಾಕ್ಟರ್ ವಿಠಲ ಶೆಟ್ಟಿ, ಕೆ. ಅನಂತ ಶೆಟ್ರಿ, ಬಾಳ್ತಟ್ಟ ಕೃಷ್ಣಯ ಹೆಗ್ಡೆಯರು! ತಾನು ಸದಾ ಕಾಂಗ್ರೆಸ್‌ವಾದಿಯಿರುವೆನು. ಕಾಂಗ್ರೆಸಿನವರೇ ತನ್ನನ್ನು ದೂರ ಮಾಡಿರುವುದು ಹೊರತು ತಾನು ಕಾಂಗ್ರೆಸನ್ನು ಬಿಟ್ಟಿಲ್ಲವೆಂದೆಲ್ಲಾ ಉದ್ದುದ್ದ ಮಾತಾಡುತ್ತಿದ್ದ ಸಂಭಾವಿತರು ನೀವು! ಈ ಸಲ ಮಾಡಿದ್ದೇನು? ತನ್ನ ಕಂಪಾಂಡನ್ನು ಚುನಾವಣೆಯ ದಿನದ ಮಟ್ಟಿಗೆ ಜಸ್ಟಿಸ್ ಪಕ್ಷೀಯರಿಗೆ ಬಾಡಿಗೆಗೆ ಕೊಟ್ಟದ್ದೆ. ತಾನು ಇನ್ನೂ ಕಾಂಗ್ರೆಸ್‌ವಾದಿಯಾಗಿಯೇ ಇರುವೆನೆಂದು ಇನ್ನೂ ಬಾಯಿ ಹಾರಿಸಲಾರಿರಷ್ಟೆ! ಮದ್ರಾಸಿನಲ್ಲಿ ಉಜ್ವಲ ಕಾಂಗ್ರೆಸ್‌ವಾದಿಯಾಗಿ ಕಾಂಗ್ರೆಸ್ ಪಕ್ಷದ ಕೌನ್ಸಿಲ್ ಮೆಂಬರರಾದ ನಿಮ್ಮ ಭಾವ ಡಾಕ್ಟರ್ ಯು. ರಾಮರಾಯರಾದರೂ ನಿಮಗೆ ಬುದ್ಧಿ ಹೇಳದೆ ಹೋದರೇ? ಅಥವಾ ಇದರಲ್ಲೇನಾದರೂ ಬುದ್ಧಿವಂತಿಕೆಯಿದೆಯೇ?

ಶ್ರೀ. ಯು. ಸಿ. ಸುಬ್ರಹ್ಮಣ್ಯ ಭಟ್ಟರಿಗೆ

ಪ್ರಿಯ ಭಟ್ಟರೇ,

ನೀವು ಸ್ವಲ್ಪ ಹುಡುಗಾಟಿಕೆಯವರೆಂದು ನಾನು ಕೇಳಿಬಲ್ಲೆ. ಆದರೆ ಇಷ್ಟೊಂದು ಹುಡುಗಾಟಿಕೆ ಮಾಡುವಷ್ಟು ಅವಿವೇಕಿಯಿರುವಿರೆಂದು ಕನಸಿನಲ್ಲಿಯೂ ನೆನಸಲಿಲ್ಲ. ಈಗ ನೋಡಹೋದರೆ ಕಾಂಗ್ರೆಸ್‌ಪಕ್ಷೀಯರೆನಿಸುವ ನಿಮಗಿಂತ ಸ್ವತಂತ್ರವಾಗಿ ಕೌನ್ಸಿಲಿಗೆ ನಿಂತು ಕಾಂಗ್ರೆಸಿನವರಿಗೆ ಸಹಾಯ ಮಾಡಿದ ಶ್ರೀ. ಧರ್ಮಸ್ಥಳ ಹೆಗ್ಡೆಯರೇ ನಿಮಗಿಂತ ಎಷ್ಟೋ ಹೆಚ್ಚಿನ ದೇಶಾಭಿಮಾನಿಗಳೆನ್ನಬಹುದು. ನೀವು ಪುತ್ತೂರು ಡಿವಿಜನಿಗೆ ನಿಲ್ಲುವೆನೆಂದು ದೊಡ್ಡ ಗುಲ್ಲೆಬ್ಬಿಸಿದಿರಿ. ಆ ಮೇಲೆ ಅದು ಬಿಟ್ಟು ಕೌನ್ಸಿಲು ಉಮೇದ್ವಾರಿಕೆಗೆ ಹಾರಿದಿರಿ. ಅದಕ್ಕೂ ಸ್ಥಳೀಯ ಕಾಂಗ್ರೆಸ್ ಪಾರ್ಲಿಮೆಂಟರಿ ಬೋರ್ಡಿನವರು ಯಾರನ್ನೂ ಆರಿಸುವುದಿಲ್ಲೆಂದು ಸುದ್ದಿಯಾದೊಡನೆ ಕಾಂಗ್ರೆಸಿನ ಮೇಲೆ ಸಂಪೂರ್ಣ ವೈರಾಗ್ಯ ತಳೆದು ಅದರ ನಾಲ್ಕಾಣೆ ಮೆಂಬರಿಕೆಗೂ ರಾಜಿನಾಮೆ ಕೊಟ್ಟುಬಿಟ್ಟಿರಂತೆ. ಪಾಪ ಶ್ರೀಮತಿ ಕಮಲಾದೇವಿಯರು, ದಕ್ಷಿಣಕನ್ನಡದಿಂದ ಕೌನ್ಸಿಲಿಗೆ ಯಾರಾದರೊಬ್ಬರು ಕಾಂಗ್ರೆಸ್ ಉಮೇದ್ವಾರಿಯನ್ನು ನಿಲ್ಲಿಸಲೇಬೇಕೆಂಬ ಲವಲವಿಕೆಯಿಂದ ಸೆಂಟ್ರಲ್ ಪಾರ್ಲಿಮೆಂಟರಿ ಬೋರ್ಡಿನ ಪ್ರೆಸಿಡೆಂಟರಿಂದ, ಯಾರನ್ನಾದರೂ ಆರಿಸುವ ಅಧಿಕಾರ ಪಡೆದು, ಪ್ರಾಂತಿಕ ಪಾರ್ಲಿಮೆಂಟರಿ ಬೋರ್ಡಿನ ಸೆಕ್ರೆಟರಿಗಳೊಡನೆ ನಿಮ್ಮ ಉಮೇದ್ವಾರಿಕೆಯ ಕುರಿತು ವಿಚಾರಿಸಿದಾಗ ನೀವು ಕಾಂಗ್ರೆಸಿನ ನಾಲ್ಕಾಣೆ ಮೆಂಬರಿಕೆಗೂ ರಾಜಿನಾಮೆ ಕೊಟ್ಟಿರುವುದನ್ನು ತಿಳಿದು ತೀವ್ರ ನಿರಾಶೆಗೊಂಡರಂತೆ. ನಿಮಗೆ ಸ್ವಲ್ಪವಾದರೂ ಸಹನೆ ಬೇಡವೇ? ನಿಮ್ಮ ಕಾಂಗ್ರೆಸಿನ ಮೇಲಿನ ಅಭಿಮಾನವು ಇಷ್ಟೊಂದು ಅಸ್ಥಿರವಾದುದೇ? ಹಾಗಾದರೆ ಇತರರನ್ನು ದೂರಿ ಫಲವೇನು?

ಶ್ರೀ. ಎನ್. ರಾಜಗೋಪಾಲ ಕೃಷ್ಣರಾಯರಿಗೆ

ರಾಯರೇ,

ನೀವು ದೇಶಾಭಿಮಾನಿಗಳೆಂದು ನಾನು ಕೇಳಿಬಲ್ಲೆ. ಇದು ಹೊರತು ಕಂಠೀರವದ ಒಳಸಂಪಾದಕರಾದ ಶ್ರೀ. ಭೀಮರಾಯರಂಥ ಉಜ್ವಲ ದೇಶಾಭಿಮಾನಿಯ ಸಲಹೆಯೂ ನಿಮಗಿದೆ. ಕಾಂಗ್ರೆಸಿಗೆ ವಿರುದ್ಧವಾಗಿ ನಡೆಯಲಾರೆನೆಂದು ನೀವು ಮೊದಲೇ ಮಾತು ಕೊಟ್ಟಿರುವಿರೆಂದು ನಾನು ಕೇಳಿಬಲ್ಲೆ. ಆದರೆ ಅನಂತರ ಸ್ವಪ್ರಯೋಜನದ ಆಶೆಯಿಂದ ಕಾಂಗ್ರೆಸನ್ನು ಬಲಿಕೊಡಲೆತ್ನಿಸಿದುದು ನಿಮ್ಮಂಥವರಿಗೆ ಸರಿಯೇ? ನೀವೂ ಹುರುಳಿ ಭೀಮರಾಯರೂ ಚುನಾವಣೆಯ ದಿನ ಜಸ್ಟಿಸ್ ಪಕ್ಷದ ಬೆಂಚನ್ನು ಅಲಂಕರಿಸಿದಕ್ಕೆ ನಿಮ್ಮ ಸ್ವಪ್ರಯೋಜವಾದರೂ ಆಗಿರುವುದೇ? ಅಥವಾ ಬಯಲಾಶೆ ಮಾತ್ರವೇ?

ಕೆ. ಎಸ್. ಕೆ.

---

40 ಪ್ರಾಣಿಗಳು ಸಜೀವವಾಗಿ ಕೊಲ್ಲಲ್ಪಟ್ಟವು

ಆಂಧ್ರದೇಶದ ಮಂಜಲಕಟ್ಟು ಎಂಬೊಂದು ಹಳ್ಳಿಯಲ್ಲಿ ಇದೇ ತಾ. 3 ರಲ್ಲಿ 11 ಮನೆ ಮತ್ತು ಗುಡಿಸಲುಗಳು ಸಂಪೂರ್ಣವಾಗಿ ಸುಟ್ಟುಹೋಗಿರುವವು. 40 ಆಡು ಕುರಿ ಮತ್ತು ದನದ ಕರುಗಳು ಸಜೀವವಾಗಿ ಸುಟ್ಟುಹೋಗಿರುವವು. ರೂ. 500 ಬೆಲೆಯ ಧಾನ್ಯವು ಸುಟ್ಟು ಭಸ್ಮವಾಗಿರುವುದು. ಒಬ್ಬನ ಮೈಯೆಲ್ಲಾ ಸುಡಲ್ಪಟ್ಟಿರುವುದು.

ಶಾಲೆಗಳಲ್ಲೆಲ್ಲಾ ಸೈನಿಕ ಶಿಕ್ಷಣ

ರಷ್ಯದ ಶಾಲೆಗಳಲೆಲ್ಲಾ ಇನ್ನು ಮುಂದೆ 8 ವರ್ಷದ ಮತ್ತು ಅದರ ಮೇಲಿನ ವಯಸ್ಸಿನ ವಿದ್ಯಾರ್ಥಿಗಳಿಗೆ ಸೈನಿಕ ಶಿಕ್ಷಣಕೊಡಲಾಗುವುದು. ಮಿಲ್ಲಗಟ್ಟೆಯಲ್ಲಿ ಚಿಕ್ಕಚಿಕ್ಕ ಗುಂಡು, ಮುಖ ಕವಚ, ಬಂದೂಕು, ಗಾಳಿಕೊಡೆ ಮತ್ತು ವಿಮಾನಗಳನ್ನು ತಯಾರಿಸಿ ಅವನ್ನು ಮಕ್ಕಳ ಉಪಯೋಗಕ್ಕಾಗಿ ಕೊಡಲಾಗುವುದು. ಆಟಗಳ ಸಂದರ್ಭದಲ್ಲಿ ಹುಡುಗರಿಗೆ ಸೈನಿಕ ತರಬೇತಿಯನ್ನೀಯಲಾಗುವುದು.

ಜಪಾನಿನಲ್ಲಿ ಭಾರತೀಯ ಚಲಚ್ಚಿತ್ರಕ್ಕೆ ಮೆಚ್ಚುಗೆ

ಭಾರತೀಯ ಚಲಚ್ಚಿತ್ರ ರಂಗದಲ್ಲಿ ಸುಪ್ರಸಿದ್ಧರಾಗಿರುವ ಶ್ರೀಯುತ ಹಿಮಾಂಶು ರಾಯ್, ಶ್ರೀಮತಿ ದೇವಿಕಾರಾಣಿ ಮುಂತಾದವರು ಅಭಿನಯಿಸಿರುವ 'ಕರ್ಮ' ಎಂಬ ವಾಕ್ಪಟದ ಹಲವು ಪ್ರತಿಗಳನ್ನು ಇಂಗ್ಲಿಷ್ ಸಂಭಾಷಣೆಗಳೊಡನೆ ತಯಾರು ಮಾಡಿ ಅಂತರರಾಷ್ಟ್ರೀಯ ಪ್ರದರ್ಶನ ಮಂದಿರಗಳಿಗೆ ಕಳುಹಿಸಲಾಗಿವೆಯಷ್ಟೆ.

ಅದೇ ರೀತಿ ಒಂದು ಪ್ರತಿಯನ್ನು ಜಪಾನಿಗೂ ಕಳುಹಿಸಲಾಗಿತ್ತು. ಜಪಾನಿನಲ್ಲಿ ಭಾರತೀಯ ವಾಕ್ಪಟವು ಪ್ರದರ್ಶಿಸಲ್ಪಡುವದಕ್ಕೆ ಇದೇ ಮೊದಲು.

ಅದನ್ನು ಅಲ್ಲಿನ ಚಲಚ್ಚಿತ್ರ ಪ್ರೇಮಿಗಳು ನೋಡಿ ಬಹಳವಾಗಿ ಮೆಚ್ಚಿಕೊಂಡಿದ್ದಾರೆ. ಪ್ರತಿದಿನವೂ ಸಹಸ್ರಾರು ಮಂದಿ ಪ್ರೇಕ್ಷಕರು ಹೋಗಿ ನೋಡಿ ಸಂತುಷ್ಟಮಾನಸರಾಗಿ ಬಂದು ಮುಕ್ತಕಂಠವಾಗಿ ಅದನ್ನು ಪ್ರಶಂಸಿಸುತ್ತಾರೆ.

ಹಿಂದೆ ಇದೇ ಹಿಮಾಂಶುರಾಯ್‌ರವರ "ಲೈಟ್ ಆಫ್ ಏಷ್ಯಾ" ಎಂಬ ಚಲಚ್ಚಿತ್ರವು ಇಂಗ್ಲೆಂಡ್, ಜರ್ಮನಿ ಮುಂತಾದ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಪ್ರದರ್ಶಿಸಲ್ಪಟ್ಟಾಗ ಅಪಾರ ಪ್ರಶಂಶೆಗೆ ಪಾತ್ರವಾಗಿತ್ತು.

ಬ್ರೇಕ್ ಪಿಲ್ಸು

ಸ್ತ್ರೀಪುರುಷರಿಗೆ ಆನಂದವನ್ನುಂಟುಮಾಡುವುದು ಈ ಮಾತ್ರೆಗಳೇ. ಮದಿಸಿದ ಸ್ತ್ರೀಯರ ಗರ್ವ ಭಂಗಮಾಡಲು ಕಂಡು ಹಿಡಿದಿರುವ ಮಾತ್ರೆಗಳಿವು. ಇದರಲ್ಲಿ ವಿಷಾದಿಗಳು ಸೇರಿಲ್ಲ. ಕಸ್ತೂರಿ, ಚಿನ್ನ, ಹಿಮಾಲಯಪರ್ವತದ ವನಮೂಲಿಕೆಗಳು ಮುಂತಾ ಮವುಗಳಿಂದ ದೊಡ್ಡ ಯೋಗೀಶ್ವರರ ಹತ್ತಿರ ಸಂಗ್ರಹಿಸಿ ಮುದುಕತನವನ್ನು ಲೋಕದಲ್ಲಿ ಇಲ್ಲದಂತೆ ಮಾಡುವುದು. ಅರ್ಧ ಘಂಟೆಯೊಳಗಾಗಿ ವೀರ್ಯವನ್ನು ಕಲ್ಲಿನಂತೆ ಮಾಡಿ ರಮಿಸಲು ಉಲ್ಲಾಸವನ್ನು ಮಾಡುವುದು. ಗುಣವಿಲ್ಲದಿದ್ದಲ್ಲಿ ಹಣ ವಾಪಸು. **೬೦ ಮಾತ್ರೆಗಳು ರೂ. ೫ ೦-೦**

೩೦ ಮಾತ್ರೆಗಳು ರೂ. ೩—೦—೦ ಕಾಗದ ಪತ್ರಗಳು ಇಂಗ್ಲೀಷಿನಲ್ಲಿಯೇ.

ಡಾ. ಎ. ಎಸ್. ಮೂರ್ತಿ,

ಚಿಕಾಗೋಲ್, ಗಂಜಾಮ್ ಡಿಸ್ಟ್ರಿಕ್ಟ್.



ಧರ್ಮಾರ್ಥ ಬಹುಮಾನಗಳು

1-4-0ಗೆ !

-- ಯಾರಿಗೆ ? --

ರೂಪಾಯಿ 1—4—0 ಕೊಟ್ಟು 14ಸೀಸೆ ಒಟ್ಟೋರೋಸ್ಟ್ ಅಥವಾ 10 ಡಬ್ಬಿ ಗಜಕರ್ಣ ಮುಲಾಮನ್ನು ಕ್ರಯಕ್ಕೆ ಪಡಕೊಳ್ಳುವವರಿಗೆ !!

ಇನಾಮುಗಳ ವಿವರ:—3ಡಮ್ಮಿ ರಿಸ್ಟ್‌ವಾಚುಗಳು; 1 ರೈಲ್ವೆಟಾಯಿಂ ಡಮ್ಮಿ ಪಾಕೆಟ್ ವಾಚು; 1 ಸೇಫ್ಟಿರೇಜರ್; 1 ಶೇವಿಂಗ್ ಬ್ರಸ್; 1 ಶೇವಿಂಗ್ ಸೋಪು; 1 ಕನ್ನಡಿ, 1 ಪೌಡರ್ ; 1 ಜತೆ ಗುಬ್ಬಿಗಳು; 1 ಫೌಂಟನ್ ಪೇನು 14 ಕ್ಯಾರೆಟ್ ನಿಬ್ಬುಸಮೇತ; 1 ಇಮಿಟೇಶನ್ ಮೋತಿಮಲ್ಲರ್; 1 ಹೆಸರು ಕೆತ್ತಲ್ಪಟ್ಟ ರೋಲ್ಡುಗೋಲ್ಡು ಗಿಲ್ಟ್ ಉಂಗುರ, ಅರುನೂರು ಅಡಿ ದೂರಕ್ಕೆ ಪ್ರಕಾಶನೀಯುವ 1 ಟೋರ್ಚ್‌ಲೈಟ್ ಅಥವಾ 1 ಅತ್ಯುತ್ತಮ 'B' ಟಾಯಿಂಪೀಸು (ಹತ್ತು ವರುಷ ಗ್ಯಾರಂಟಿ)

ಪ್ಯಾಕಿಂಗ್ ಮತ್ತು ಪೋಸ್ಟೇಜು 0—12—0. ಇಂದೇ ಆರ್ಡರು ಕೊಡಿರಿ.

Bengal Watch Co.,
Post Box No. 12214, CALCUTTA.

ಸುವರ್ಣ ತಾಯಿತಿ! ಧರ್ಮಾರ್ಥ ಭಂಗಾರದ ತಾಯಿತಿ!

ಹಿಮಾಲಯ ಪರ್ವತದಲ್ಲಿ ವರ್ಷಗಟ್ಟಲೆ ತಪಸ್ಸು ಮಾಡಿ ಸಿದ್ಧಿಯನ್ನು ಪಡೆದ ಮಹಾ ಯೋಗೀಶ್ವರರಿಂದ ಕಂಡು ಹಿಡಿಯಲ್ಪಟ್ಟದ್ದು.

ಈ ತಾಯಿತಿಯನ್ನು

ಧರಿಸಿದ ಮಾತ್ರದಿಂದ ಸಕಲ ಇಷ್ಟಾರ್ಥಗಳೂ ನೆರವೇರುವುವು. ಪರೀಕ್ಷಿಸಲಪೇಕ್ಷಿಸುವವರು

"ಯೋಗೀಶ್ವರರ ಶಕ್ತಿಸಾಹಸ"

ಎಂಬ ಪುಸ್ತಕವನ್ನು ಧರ್ಮಾರ್ಥವಾಗಿ ಪಡೆಯಬಹುದು.

ಪತ್ತೆ:—ಪಂಡಿತ್ ಎ. ವಿ. ಆರಮುವ್
ಚಿಕಾಕೋಲ್

ಆತಂಕನಿಗ್ರಹ ಮಾತ್ರೆಗಳು

ಯಾವ ಕಾರಣದಿಂದಾಗಲಿ ಉಂಟಾದ ಧಾತುನಷ್ಟ, ನರಗಳ ನಿಶ್ಶಕ್ತಿ ಇವುಗಳನ್ನು ಹೋಗಲಾಡಿಸಿ ಶಾಶ್ವತ ಗುಣ ಉಂಟಾಗುವಂತೆ ಮಾಡುತ್ತವೆ. ಈ ಗುಳಿಗೆಗಳು ಆರೋಗ್ಯವಾದ ಹಸಿವನ್ನುಂಟುಮಾಡಿ ದೇಹಕ್ಕೂ ಮತ್ತು ಮನಸ್ಸಿಗೂ ಬಲಹೀನತ್ವವನ್ನು ಹೋಗಲಾಡಿಸಿ ದುಷ್ಟರಕ್ತವನ್ನು ಶುದ್ಧಿಮಾಡಿ ಜ್ಞಾಪಕಶಕ್ತಿಯನ್ನು ವೃದ್ಧಿಪಡಿಸುವುದು. ಕ್ರಯ: ಡಬ್ಬಿ ೧ಕ್ಕೆ ೧-೦-೦.

ವಾಜೀಕರಣ ತೈಲ:—(ಹೊರಗೆ ಹಚ್ಚಲು ಮಾತ್ರವೇ) ಬಾಲ್ಯದಲ್ಲಿ ಸ್ವತಃ ಅನೇಕ ವಿಧಗಳಲ್ಲಿ ಶರೀರವನ್ನು ಕೆಡಿಸಿಕೊಂಡು ಅದರಿಂದ ಉಂಟಾಗುವ ಅಶಕ್ತಿ, ನರಗಳ ದುರ್ಬಲ, ನಪುಂಸಕತ್ವ, ಮುಂತಾದ ವ್ಯಾಧಿಗಳನ್ನು ಪರಿಹರಿಸುವ ಸಂಜೀವಿನಿಯಾಗಿರುವದು. ನರಗಳಿಗೆ ಬಲವನ್ನುಂಟುಮಾಡಿ, ಸಂಭೋಗಕ್ಕೆ ಉತ್ಸಾಹವನ್ನು ಕೊಡುವುದು. ಒಂದು ಸಾರಿ ಔಷಧವನ್ನು ಹಚ್ಚುವುದರಿಂದ ಗುಣವು ಗೊತ್ತಾಗುತ್ತದೆ. ಕ್ರಯ: ಸೀಸೆ ಒಂದಕ್ಕೆ ೫—೦—೦.

ಅಮೃತಾರ್ಣವ ಲೇಹ್ಯ:— ರಕ್ತವನ್ನು ಶುದ್ಧಿಮಾಡಿ, ನರಗಳನ್ನು ಬಲಪಡಿಸಿ, ಅತಿ ಉಷ್ಣ, ಕೈಕಾಲುಗಳ ಉರಿ, ಇನ್ನೂ ಮುಂತಾದ ಉಷ್ಣವ್ಯಾಧಿಗಳನ್ನು ಗುಣಪಡಿಸಿ, ಮೆದುಳನ್ನು ತಂಪುಮಾಡಿ, ದೇಹಬಲವನ್ನೂ, ತೇಜಸ್ಸನ್ನೂ ಹೆಚ್ಚಿಸುವುದಲ್ಲದೆ ದೀರ್ಘಕ್ಷಯ, ಎದೆನೋವು, ತಲೆನೋವು, ಮುಂತಾದ ವ್ಯಾಧಿಗಳಿಗೆ ಅಮೃತಪ್ರಾಯವಾದುದು. ಕ್ರಯ: ಡಬ್ಬಿ ೧ಕ್ಕೆ ೨-೦-೦.

'ಕಾಮಶಾಸ್ತ್ರ' ಧರ್ಮಾರ್ಥ. ಪೋಸ್ಟೇಜು ಮಾಫಿಯಾಗಿ ಕಳುಹಿಸುವೆವು. ಒಂದು ಕಾರ್ಡು ಹಾಕಿರಿ.

ಆತಂಕ ನಿಗ್ರಹ ಫಾರ್ಮಸಿ, ೬೪, ಚಿಕ್ಕಪೇಟೆ ಚಾಕ, ಬೆಂಗಳೂರು ಸಿಟಿ

ಅನುತಾಪ

ಕತೆಗಾರ:— **P. N. ಬನ್ನಂಜೆ ರಾಮಾಚಾರ್ಯ**

[ನನ್ನ ಸ್ನೇಹಿತರೊಬ್ಬರಿಗೆ ಸಹಜವಾಗಿ ಸಂಘಟಿಸಿದ ವಿಚಾರವನ್ನೇ– ಅವರ ಅನುಮತಿಯ ಮೇರೆಗೆ, ಕತೆಯ ರೂಪಗೊಟ್ಟು ವಾಚಕರಿಗೆ– ಅವಗಾಹನೆ ಬಗ್ಗೆ ಸಲ್ಲಿಸಿದ್ದೇನೆ. 'ಲೇಖಕ.']

'ಸೌದಾಮಿನಿ!'

'.......................'

'ಏಕೆ ಮಾತಾಡಲೊಲ್ಲೆ?'

'...................'

'ಕೋಪವೇ?'

'...................'

'ಸೌದಾಮಿನಿ!'

'...............'

'ನಿನಗೇನಾಗಿದೆ?'

'...............'

'ನನ್ನಂತಹ ಹಣವಂತನನ್ನು ಮದುವೆಯಾಗಿಯೂ ನಿತ್ಯವೂ ನೀನು ಹೀಗೇಕೆ....?'

'ನೀವು ಹಣವಂತರಲ್ಲ! ಹನುಮಂತ...'

ಕೊಂಗ್ರೆಸ್ಸು ಎಸೆಂಬ್ಲಿಯನ್ನು ಹೊಕ್ಕು ತನ್ಮೂಲಕ ನಾಡಸೇವೆಯನ್ನು ಮಾಡ ಬಯಸಿರುವುದನ್ನು ಓದುಗರೆಲ್ಲರೂ ಬಲ್ಲರು. ನಮ್ಮೂರಲ್ಲಿ–ಕೊಂಗ್ರೆಸ್ಸಿಗೇ ಓಟು ಕೊಡಬೇಕೆಂದು ಪ್ರಾಂತೀಯ ಕಾಂಗ್ರೆಸ್ಸಿನವರು ಸಾಕಷ್ಟು ಪ್ರಚಾರವನ್ನು ಮಾಡಿದ್ದರು. ಆದರೂ ನಾನು ಮಾತ್ರ ನನ್ನ ಓಟನ್ನು ಜಸ್ಟಿಸ್ ಪಾರ್ಟಿಗೆ ಕೊಟ್ಟಿದ್ದೆ. ಇದು ನನ್ನಾಕೆಗೆ ಸಮ್ಮತವಿದ್ದಿಲ್ಲ! ಆಕೆ ತೀರಾ ಕಾಂಗ್ರೆಸ್ ಭಕ್ತಳು. ಕಾಂಗ್ರೆಸ್ಸಿಗೇ ಓಟು ಕೊಡಿರೆಂದು ಆಕೆ ನನ್ನೊಡನೆ ಹಟಹೂಡಿದ್ದಳು. ನಾನು ಒಪ್ಪಿದ್ದೆ! ಚುನಾವಣೆಯ ದಿನ ಆಕೆಗೆ ತುಸು ನೆಗಡಿಯಾದುದರಿಂದ, ನಾನೊಬ್ಬನೇ ಓಟುಕೊಡಹೋದೆ, ಜಸ್ಟಿಸಿಗೆ ಓಟು ಕೊಟ್ಟುಬಂದೆ. ನಾನು ಕಾಂಗ್ರೆಸಿಗೆ ಓಟುಕೊಡಲಿಲ್ಲವೆಂದು ಹೇಳಿದೊಡನೆಯೇ ಆಕೆ ವಿರಸೆಯಾಗಿ ಹೋದಳು. ಹಲವು ದಿನ ನನ್ನೊಡನೆ ಮಾತುಗಳನ್ನೂ ಬಿಟ್ಟುಬಿಟ್ಟಳು. ಇಂದು ನಾನು ಬಹು ಪ್ರಯಾಸಪಟ್ಟು ಮಾತನಾಡಿಸಿದುದಕ್ಕೆ– ನನಗೆ ದೊರೆತ ಬಿರುದು ಅದು 'ಹನುಮಂತ'ನೆಂದು!

'ಸೌದಾಮಿನಿ!' ನಾನು ಕೇಳಿದೆ. 'ನನಗೆ ಇಂತಹ ಬಿರುದನ್ನು ಕೊಡಲು ನಾನು ಮಾಡಿರುವ ಉಪಕಾರ........'

'ಉಪಕಾರವೇ' ಸೌದಾಮಿನಿಯೆಂದಳು. 'ಜಸ್ಟಿಸಿಗೆ ಓಟುಕೊಟ್ಟದ್ದು!'

'ಓಹೋ! ಅದರಲ್ಲೇನು ತಪ್ಪು?'

'ತಪ್ಪಿಲ್ಲವಪ್ಪಾ....!' ಸೌದಾಮಿನಿಯು ವ್ಯಂಗ್ಯವಾಗಿ ಹೇಳಿದಳು. 'ದೇಶದ್ರೋಹ ಮಾಡಿದರೆ ಏನು ತಪ್ಪು....?'

'ದೇಶದ್ರೋಹವೆಲ್ಲಿ ಬಂತು ಸೌದಾಮಿನಿ,

'ಕಾಂಗ್ರೆಸ್ ಹಿಂದೂದೇಶದ ಉದ್ಧಾರಕ್ಕಾಗಿ ಹಿಂದೀಯರ ಮೇಲ್ಮೈಗಾಗಿ ಹೆಣಗಾಡುವ ಸಂಸ್ಥೆ! ಅದನ್ನು ದ್ವೇಷಿಸುವವರು ದೇಶದ್ರೋಹಿಗಳಲ್ಲದೆ ಮತ್ತಿನ್ನೇನು?....! ಹಿಂದುಳಿದ – ಭಾರತ—ಭಾರತೀಯರ ಉದ್ಧಾರಕ್ಕಾಗಿ, ಅಹೋರಾತ್ರಿ ದುಡಿಯುತ್ತಿರುವ ಸಂಸ್ಥೆಯದು--ಕಾಂಗ್ರೆಸ್! ಅದನ್ನು ನಿಂದಿಸುವವನು–ನಿಂದ್ಯನು. ತನ್ನ ತಾಯಿಯು ಪರಕೀಯನೊಬ್ಬನ ಬಲಾತ್ಕಾರಕ್ಕೆ ಒಳಪಟ್ಟಾಗ, ಅವಳನ್ನು ರಕ್ಷಿಸದೆ ಉದಾಸೀನನಾಗಿರುವ ಕುಪುತ್ರನು ಹೇಗೆ ನಿಂದ್ಯನೋ–ಹಾಗೆ ನಿಂದ್ಯನು! ನಮ್ಮ ತಾಯಿಯಾದ ಹಿಂದೂಮಾತೆಯು ಪಾರತಂತ್ರ್ಯವೆಂಬ ಘೋರಜ್ವಾಲೆಯಲ್ಲಿ ಬೆಂದು ದುರಂತ ದುಃಖವನ್ನು ಅನುಭವಿಸುತ್ತಿದ್ದಾಳೆ! ಆಕೆಯನ್ನು ಆಕೆಯ ಸಂತಾನರಾದ ನಾವು ಬಿಡಿಸುವ ಯೋಚನೆಯನ್ನು ಮಾಡಬೇಡವೇ? ನೀವು ಬಲ್ಲವರಿದ್ದು ಇಂತಹ ಹೇಸಿಕೆ ಕೆಲಸಕ್ಕೇತಕ್ಕೆ ಕೈಹಾಕಿದಿರಿ....?'

'ಹೇಸಿಕೆ ಕೆಲಸಕ್ಕೆ ಏತಕ್ಕೆ ಕೈಹಾಕಿದಿರಿ....?' ಇದೊಂದು ದೊಡ್ಡ ಸಮಸ್ಯೆಯಾಗಿಬಿಟ್ಟಿತು ನನಗೆ! ಮನಸ್ಸಿನಲ್ಲೇಕೋ ಒಂದು ಭೀತಿಯು ಉದಯಿಸಿತು! 'ಕೊಂಗ್ರೆಸಿನ ಕಡೆಗೆ ಹರಿಯು!' ಎಂದು ಆತ್ಮವು ಗರ್ಜಿಸಿತು. 'ನಾನು ಮಾಡಿದುದೇ ನ್ಯಾಯವೆಂದು ಮನಸ್ಸು ಉದ್ಘೋಷಿಸಿತು! ಈ ಆತ್ಮ ಮನಸ್ಸುಗಳ ತುಮುಲ ಯುದ್ಧದಲ್ಲಿ ಮನಸ್ಸು ಸೋತಿತು. ಅದು ರೋದನಕ್ಕಿಟ್ಟಿತು. ಇದರಿಂದ ಹೃದಯದಲ್ಲಿ ಒಂದು ಮಹತ್ತಾದ ಕೋಲಾಹಲವುಂಟಾಯಿತು.

'ಸೌದಾಮಿನಿ!'

'ಏನು—?'

'ನಾನು ಮಾಡಿದುದು ತೀರಾತಪ್ಪು....!'

'ಈಗ ತಿಳಿಯಿತೇ?'

'ನಿನ್ನ ಗುರುತ್ವದಿಂದ....!'

'ಸಾಕುಬಿಡಿರಿ!'

'ಸೌದಾಮಿನಿ....!'

'ಏನು ಪುನಃ ಸೌದಾಮಿನಿಗೆ?'

'ಏಕೋ ಹೃದಯದಲ್ಲಿ ಬಲು ಭೀತಿಯಾಗುತ್ತಿದೆ!'

'ಅದು ಪುಣ್ಯ ಸಂಸ್ಥೆಯಾದ ಕಾಂಗ್ರೆಸ್ಸನ್ನು ವಿದ್ರೋಹಿಸಿ ಉಂಟಾದ ಅಕ್ಷಮ್ಯ ಅಪರಾಧದ ಫಲ!' ಎಂದು ಸೌದಾಮಿನಿಯು ನಕ್ಕಳು.

'ಏಕೆ ನಗುವೆ ಸೌದಾಮಿನಿ?'

'ನಿಮ್ಮ ಮುಟ್ಠಾಳತನಕ್ಕಾಗಿ!'

'ಏನುಮಾಡಲಿ ಒಂದು ಪ್ರಮಾದವು ನಡೆದುಹೋದುದು. ಈಗ ಪಶ್ಚಾತ್ತಾಪವಾಗುತ್ತಿದೆ!'

'ಜಸ್ಟಿಸಿಗೆ ಓಟುಕೊಟ್ಟ ಪೂಜ್ಯರಿಗೆಲ್ಲರಿಗೂ ಈಗ ಪಶ್ಚಾತ್ತಾಪವಾಗಬಹುದು!'

'ಸೌದಾಮಿನಿ, ನಿಜವಾಗಿಯೂ ನನಗೆ ಪಶ್ಚಾತ್ತಾಪವಾಗುತ್ತಿದೆ!'

'ಪಶ್ಚಾತ್ತಾಪವೇ ಮಾಡಿದ ಪಾಪದ ಪ್ರಾಯಶ್ಚಿತ್ತವು! ಮುಂದಕ್ಕೆ ಹುಶಾರಾಗಿರಿ ಕಾಂಗ್ರೆಸಿನ ವಿರೋಧಿಗಳಿಗೆಂದಿಗೂ ಏಳಿಗೆಯಿಲ್ಲ. ಬೊಬ್ಬಿಲಿ ರಾಜರು ಕಾಂಗ್ರೆಸ್ಸನ್ನು ವಿರೋಧಿಸಿ, ಈಗ ಬೊಬ್ಬೆಹೊಡಿಯುತ್ತಿರುವುದನ್ನು ಬಲ್ಲಿರಾ? ಜವಾಹಿರಲಾಲರಿಗೆ ಅಪಮಾನ ಮಾಡಲೆತ್ನಿಸಿದರು. ತನ್ನೂರಾದ ಬೊಬ್ಬಿಲಿಯಲ್ಲೇ ಚುನಾವಣೆಯಲ್ಲಿ ಸೋತರು. ಜಸ್ಟಿಸ್‌ಪಾರ್ಟಿಯ ಲೀಡರರ ಗತಿಯು ಹೀಗಾದ ಮೇಲೂ ಆ ಪಾರ್ಟಿ ಬಾಳಿಕೊಂಡಿರಬೇಕೆ?' ನಾನು ಮೌನವಾಗಿದ್ದೆ. 'ಏನು ಹೇಳಿರಿ!' ಆಕೆಯೆಂದಳು.

'ಇಂದಿನಿಂದ ನಾನು ಕಾಂಗ್ರೆಸಿನ ಭಕ್ತ! ಪರಮಭಕ್ತ!!' ನಾನೆಂದೆ.

'ನಿಜವಾಗಿಯೂ...?' ಎಂದು ಸೌದಾಮಿನಿಯು ಒನಪು ಒಯ್ಯಾರದಿಂದ ನನ್ನ ಹೆಗಲ ಮೇಲೆ ಕೈಹಾಕಿ ಕೇಳಿದಳು.

'ನನ್ನ ಮುದ್ದು ಸೌದಾಮಿನಿ! ಈ ವಿಷಯದಲ್ಲಿ ಇನ್ನೂ ಸಂದೇಹವಿದೆಯೇ?' ಎಂದು ನಾನಾಕೆಯ ಗಲ್ಲವನ್ನಲುಗಿಸಿ ಬಿಂಬಾಧರಗಳನ್ನು ಚುಂಬಿಸಿದೆನು.

ಕಾಂಗ್ರೆಸಿನವರೂ ಪದವೀ ಸ್ವೀಕಾರವೂ

ಕಾಂಗ್ರೆಸ್ಸಿನವರು ಸಂಪೂರ್ಣ ಸ್ವಾತಂತ್ರ್ಯವೇ ತಮ್ಮ ಧ್ಯೇಯವೆಂದು ಹೇಳಿ ಅದಕ್ಕಾಗಿಯೇ ಸತ್ಯಾಗ್ರಹ ಚಳವಳವನ್ನು ಹೂಡಿದರು, ಕೌನ್ಸಿಲು ಎಸೆಂಬ್ಲಿ ಮುಂತಾದ ಯಾವತ್ತೂ ಪ್ರಜಾಪ್ರತಿನಿಧಿ ಸಂಸ್ಥೆಗಳನ್ನು ಕೂಡಾ ಬಹಿಷ್ಕರಿಸಿದರು. ಸತ್ಯಾಗ್ರಹ ಚಳವಳಗಳಿಂದ ಸ್ವಾತಂತ್ರ್ಯವು ದೊರೆಯಲಿಲ್ಲವಾದರೂ ದೇಶದಲ್ಲಿ ಕಾಂಗ್ರೆಸ್ಸಿನ ಶಕ್ತಿಯು ಹೆಚ್ಚಾಗಿ, ಸರಕಾರದವು ಕೂಡಾ ಅದನ್ನು ಒಪ್ಪುವಂತಾಯಿತು. ಬ್ರಿಟಿಷ್ ಪಾರ್ಲಿಮೆಂಟಿನವರು ಮಂಜೂರು ಮಾಡಿದ ಇಂಡಿಯಾ ಆಕ್ಟು ಎಂಬ ಹೊಸ ಸುಧಾರಣೆಗಳು ನಮ್ಮ ದೇಶದ 11 ಪ್ರಾಂತ್ಯಗಳ ಮಟ್ಟಿಗೆ ಸದ್ಯದಲ್ಲಿಯೇ ಜಾರಿಗೆ ಬರಲಿಕ್ಕಿವೆ. ಈ ಹೊಸ ಸುಧಾರಣೆಗಳಿಂದ ಹಿಂದೀಯರು ತಮ್ಮ ಸ್ವಾತಂತ್ರ್ಯವನ್ನು ಸಾಧಿಸುವುದಕ್ಕೆ ಅನುಕೂಲವಾಗುವುದೆಂದೂ, ಈ ಸುಧಾರಣೆಗಳಿಂದ ಪ್ರತೀ ಪ್ರಾಂತ್ಯದ ಸರಕಾರದ ಅಧಿಕಾರವು ಜನರಿಂದಲೇ ಆರಿಸಲ್ಪಟ್ಟ ಪ್ರತಿನಿಧಿಗಳ ಕೈಗೆ ಸೇರುವುದೆಂದೂ, ಹಾಗೆ ಅಧಿಕಾರವು ದೊರಕಿದ ಮೇಲೆ ಅವರು ಜನಮತಕ್ಕನುಸಾರವಾಗಿ ಜನರಿಗೆ ಹಿತವನ್ನು ಮಾಡುವುದಕ್ಕೆ ಆಸ್ಪದವಿದೆಯೆಂದೂ ಬ್ರಿಟಿಷ್ ಪಾರ್ಲಿಮೆಂಟಿನವರ ಅಭಿಪ್ರಾಯವಾಗಿರುತ್ತದೆ.

ಈ ನವಸುಧಾರಣೆಗಳಿಂದ ನಮ್ಮ ಪ್ರತಿನಿಧಿಗಳಿಗಿರುವ ಅಲ್ಪ-ಸ್ವಲ್ಪ ಅಧಿಕಾರಗಳನ್ನೂ ಕಿತ್ತುಕೊಳ್ಳುವ ವಿಶೇಷಾಧಿಕಾರಗಳು ಪ್ರಾಂತಿಕ ಗವರ್ನರನಿಗೆ ಇರುವುದರಿಂದ ಪ್ರಜಾಪ್ರತಿನಿಧಿಗಳು ಕೇವಲ ಗವರ್ನರನೆಂಬ ಸೂತ್ರಧಾರಿಯ ತಾಳಕ್ಕೆ ಸರಿಯಾಗಿ ಕುಣಿಯುವ ಗೊಂಬೆಗಳಂತಾಗಿ ಜನಹಿತವನ್ನು ಮಾಡುವುದಕ್ಕೆ ಆಸ್ಪದವಿಲ್ಲವೆಂದೂ ಅದನ್ನು ಸ್ವೀಕರಿಸಿ ಅದರೊಂದಿಗೆ ಸಹಕರಿಸುವುದರಿಂದ ದೇಶಕ್ಕೆ ಅಪಾಯವನ್ನೇ ಮಾಡಿದಂತಾಗಿ, ನಮ್ಮ ಸಂಪೂರ್ಣ ಸ್ವಾತಂತ್ರ್ಯದ ಧ್ಯೇಯವನ್ನು ಅಲಕ್ಷಿಸಿದಂತಾಗುವುದೆಂದೂ, ಆದುದರಿಂದ ಅದನ್ನು ಸಂಪೂರ್ಣವಾಗಿ ತಿರಸ್ಕರಿಸಬೇಕಾಗಿ ಕಾಂಗ್ರೆಸ್ಸಿನವರು ನಿರ್ಣಯಿಸಿರುತ್ತಾರೆ. ಮತ್ತು ಅದನ್ನು ಜಾರಿಗೆ ತರದಂತೆ ನ್ಯಾಯವಾದ ಪ್ರತಿಬಂಧಗಳನ್ನು ತಂದೊಡ್ಡಿ ಅದನ್ನು ಮುರಿಯಬೇಕಾಗಿಯೂ ನಿರ್ಣಯಿಸಿರುತ್ತಾರೆ.

ಹಿಂದೆ 1919ನೇ ಇಸ್ವಿಯಲ್ಲಿ ಸರಕಾರದವರು ನಮಗಿತ್ತ ಮೆಂಟೋಗ್ ಚೆಮ್ಸ್‌ಫೋರ್ಡ್ ಸುಧಾರಣೆಗಳಿಂದ ನಮಗೆ ದೊರೆತ ದ್ವಿದಳ ರಾಜ್ಯಪದ್ಧತಿಯನ್ನು ಕಾಂಗ್ರೆಸ್ಸಿನವರು ಸಂಪೂರ್ಣವಾಗಿ ಬಹಿಷ್ಕರಿಸಿದರು. ಸರಕಾರದವರ ಹೇಳಿಕೆಯಂತೆ ಅದು ಯಶಸ್ವಿಯಾಗಿ ಜಾರಿಯಾಗಿರುತ್ತದೆ. ಸರಕಾರದವರು ಇತರ ಪಕ್ಷಗಳ ಸಹಾಯದಿಂದ ಆ ಸುಧಾರಣೆಗಳನ್ನು ಜಾರಿಗೆ ತಂದುದರಿಂದ ದೇಶದಲ್ಲಿ ಅನೇಕ ಅನರ್ಥಗಳುಂಟಾಗಿರುತ್ತವೆ. ಆದರೆ ಆ ಅನರ್ಥಗಳು ಸಂಭವಿಸುವಂತೆ ಮಾಡಿದ ಜವಾಬದಾರಿಯು ಸರಕಾರದ ಪಾಲಿಗೆ ಸೇರುವುದಾದರೂ ಅದನ್ನು ಅವರು ನಿರಾಕರಿಸಿ, ಜನರಿಂದಲೇ ಆರಿಸಲ್ಪಟ್ಟ ಮಂತ್ರಿಗಳೆಂದು ಹೇಳಿಸಿಕೊಂಡವರ ಮತ್ತು ಅವರ ಪಕ್ಷದ ಮೇಲೆ ಹೊರಿಸಿರುತ್ತಾರೆ. ಮಂತ್ರಿಗಳು ಮತ್ತು ಅವರ ಪಕ್ಷದವರು ಸರಕಾರದೊಡನೆ ಸಹಕರಿಸಿ ಅವರಕೈಗೊಂಬೆಗಳಾಗಿ ವರ್ತಿಸಿದುದರಿಂದಲೇ ಅವರು ಕೂಡಾ ಜನರ ಅಪ್ರೀತಿಗೆ ಪಾತ್ರರಾಗಬೇಕಾಯಿತು. ಹಾಗಾದುದರಿಂದ ಅವರಿಗೆ ರಾಜಕೀಯ ಕ್ಷೇತ್ರದಲ್ಲಿದ್ದ ಬೆಂಬಲವು ಮಾಯವಾಯಿತು.

ಕಾಂಗ್ರೇಸ್ಸೇತರ ಪಕ್ಷದವರು ಅಧಿಕಾರ ದರ್ಪದಿಂದ ಮಾಡಿದ ಅನರ್ಥಗಳನ್ನು ಹೋಗಲಾಡಿಸುವ ಜವಾಬದಾರಿಯು ಕಾಂಗ್ರೆಸ್ಸಿನವರದ್ದಾಗಿರುತ್ತದೆ. ಕಳೆದ ಹದಿನಾರು ವರುಷಗಳಿಂದ ತೆರಿಗೆಗಳ ಹೊರೆಯನ್ನು ಹೊರಲಾರದೆ, ದಾರಿದ್ರ್ಯದುಃಖವನ್ನು ಸಹಿಸಲಾರದೆ, ನಿರುದ್ಯೋಗಿಗಳಾಗಿ ಚಿಂತಿಸಬೇಕಾದ ಅಸಂಖ್ಯ ಮತದಾರರ ದುಃಖನಿವಾರಣೆಯನ್ನು ಮಾಡಬೇಕಾದುದು ಕಾಂಗ್ರೆಸ್ಸಿನವರ ಪ್ರಥಮಕರ್ತವ್ಯವಾಗಿರುತ್ತದೆ. ನಮಗೆ ಸಮ್ಮತವಿಲ್ಲದ ನವಸುಧಾರಣೆಗಳನ್ನು ಮುರಿಯುವುದು ಮತ್ತು ಅದನ್ನು ಇತರರ ಸಹಾಯದಿಂದ ಸರಕಾರದವರು ಜಾರಿಗೆ ತಾರದಂತೆ ನೋಡುವುದು ಅಗತ್ಯವಾಗಿರುತ್ತದೆ. ಹೊಸ ಸುಧಾರಣೆಗಳಲ್ಲಿರುವ ಕುಂದುಕೊರತೆಗಳನ್ನು ಎತ್ತಿ ತೋರಿಸಿ ಅದರ ನಿಜಸ್ವರೂಪವನ್ನು ಬಯಲಿಗೆ ತಂದು, ದೇಶಕ್ಕೆ ಉಪಯುಕ್ತವಾದ ರಾಜ್ಯಾಂಗಶಾಸನಕ್ಕಾಗಿ ಪ್ರಯತ್ನಿಸಬೇಕಾಗಿದೆ. ಸಂಪೂರ್ಣ ಸ್ವಾತಂತ್ರ್ಯವು ದೊರೆಯಬೇಕಾದರೆ ಅನೇಕ ಚಳವಳಗಳನ್ನು ಹೂಡಲೇ ಬೇಕಾಗುವುದು. ಹಾಗೆ ಹೂಡಬಹುದಾದ ಚಳವಳಗಳಿಗೆ ಜನರ ಸಹಾನುಭೂತಿ ಬೆಂಬಲಗಳು ಅತೀ ಅಗತ್ಯ. ಕಾಂಗ್ರೆಸ್ಸಿನವರು ಈ ಸುಧಾರಣೆಗಳಿಗೆ ವಿರೋಧವಾಗಿ ದೇಶದಲ್ಲಿ ಮಾಡುವ ಯಾವತ್ತು ಚಳವಳಗಳಿಂದ ಜನರನ್ನು ಒಲಿಸಿಕೊಂಡು, ಅನುಕೂಲ ವಾತಾವರಣವನ್ನು ನಿರ್ಮಿಸುವುದಕ್ಕೆ ಆಸ್ಪದವಿದೆ.

ಹೊಸ ಸುಧಾರಣೆಗಳನ್ನು ಮುರಿಯುವ ವಿಧಾನವು ಯಾವುದು? ಈ ವಿಷಯದಲ್ಲಿ ಮಾತ್ರ ಕಾಂಗ್ರೆಸ್ಸಿನಲ್ಲಿ ಮತಭೇದವಿದೆ ಕೆಲವರು ಪದವೀಸ್ವೀಕಾರವನ್ನು ಮಾಡಿದರೆ ಮಾತ್ರ ಅದನ್ನು ಮುರಿಯುವುದಕ್ಕೆ ಅನುಕೂಲವಾಗುವುದೆಂದೂ, ಇನ್ನು ಕೆಲವರು ಪದವೀಸ್ವೀಕಾರಮಾಡದೆಯೇ ಅದನ್ನು ಮುರಿಯಬಹುದೆಂದೂ ಅಭಿಪ್ರಾಯಪಡುತ್ತಿರುವರು. ಹೊಸ ಸುಧಾರಣೆಗಳ ನಿಜವಾದ ರಹಸ್ಯವು ಮಂತ್ರಿಗಳ ಅಧೀನದಲ್ಲಿಯೇ ಇರುವುದರಿಂದ ಪದವೀಸ್ವೀಕಾರ ಮಾಡುವುದರಿಂದ ಮಾತ್ರವೇ ಅದನ್ನು ಸಂಪೂರ್ಣವಾಗಿ ವಿರೋಧಿಸಿದಂತಾಗುವುದು. ಕೇವಲ ಬಹುಪಕ್ಷದಿಂದ ಆರಿಸಿಬಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವುದರಿಂದ ಹಿತವಾಗಲಾರದು. ಬಹುಪಕ್ಷದವರು ಮಂತ್ರಿಪದವಿಯನ್ನು ಸ್ವೀಕರಿಸದೆ ಹೋದರೆ ಗವರ್ನರರು ಈ ಸಭೆಯನ್ನು ಮುಕ್ತಾಯಗೊಳಿಸಿ ಇನ್ನೊಂದು ಸಭೆಯನ್ನು ಆರಿಸುವಂತೆ ಹೇಳಬಹುದು ಹಾಗೆ ಇನ್ನೊಮ್ಮೆ ಆರಿಸುವ ಸಂದರ್ಭದಲ್ಲಿ ಕಾಂಗ್ರೆಸ್ಸಿನವರೂ ಕಾಂಗ್ರೆಸ್ಸೇತರರೂ ಚುನಾವಣೆಯ ರಂಗಸ್ಥಳಕ್ಕೆ ಇಳಿಯಲೇ ಬೇಕಾಗುವುದು. ತತ್ಸಂದರ್ಭದಲ್ಲಿ ಸರಕಾರದವರು ಕಾಂಗ್ರೆಸ್ಸಿನ ಮೇಲೆ ದೋಷಾರೋಪಣೆಗಳನ್ನು ಮಾಡಬಹುದು, ಗವರ್ನರನು ತಾನು ತನ್ನ ವಿಶೇಷಾಧಿಕಾರಗಳನ್ನು ಜಾರಿಗೆ ತರುತ್ತಿರಲಿಲ್ಲವೆಂದೂ, ಮಂತ್ರಿಗಳು ತಮ್ಮ ಇಷ್ಟಬಂದಂತೆ ವರ್ತಿಸುವುದಕ್ಕೆ ಅವಕಾಶವಿತ್ತೆಂದೂ ಹೇಳಿದರೆ ಮತದಾರರುಅದನ್ನು ನಂಬಿ ಕಾಂಗ್ರೆಸ್ಸಿನ ವಿರೋಧಿಗಳನ್ನೇ ಆರಿಸಿದರೆ ಕಾಂಗ್ರೆಸ್ಸಿನ ಕಾರ್ಯಕ್ರಮವೇ ನಿಷ್ಫಲವಾಗಲೂ ಬಹುದು. ಮಂತ್ರಿಪದವಿಗಳನ್ನು ಸ್ವೀಕಾರಮಾಡಿ ಕಾಂಗ್ರೆಸ್ಸಿನ ಅನುಜ್ಞೆಯಂತೆ ವರ್ತಿಸುವ ವೇಳೆಯಲ್ಲಿ ಗವರ್ನರನು ತನ್ನ ವಿಶೇಷಾಧಿಕಾರಗಳ ಬಲದಿಂದ ವಿಘ್ನಗಳನ್ನು ತಂದೊಡ್ಡಿದರೆ ಮಂತ್ರಿಗಳು ತಮ್ಮ ಸ್ಥಾನಕ್ಕೆ ರಾಜಿಕೊಟ್ಟರೆ ಕಾಂಗ್ರೆಸ್ಸಿನ ವರ್ಚಸ್ಸು ಅಧಿಕವಾಗುವುದರಲ್ಲಿ ಸಂದೇಹವಿಲ್ಲ. ಗವರ್ನರರು ಹೊಸಮಂತ್ರಿಮಂಡಲವನ್ನು ರಚಿಸುವುದಕ್ಕೆ ಸಾಧ್ಯವಿಲ್ಲದೆ ಪುನಃ ಚುನಾವಣೆಯಾಗುವಂತೆ ಮಾಡಿದರೆ ಕಾಂಗ್ರೆಸ್ಸಿನವರು ಗವರ್ನರರನ್ನೇ ತಪ್ಪಿತಸ್ಥರನ್ನಾಗಿ ಮಾಡಿ, ತಾವು ಜನರಿಗೆ ಹಿತವನ್ನು ಮಾಡುವ ಸಂದರ್ಭದಲ್ಲಿ ಗವರ್ನರರು ತಡೆದರೆಂದು ಹೇಳಿ ಮತದಾರರನ್ನು ಒಲಿಸಿಕೊಳ್ಳುವುದಕ್ಕೆ ಸುಲಭವಾಗುವುದು. ಕಾಂಗ್ರೆಸ್ಸಿನವರು ಸುಧಾರಣೆಗಳನ್ನು ಮುರಿಯುವುದು ಮಾತ್ರವಲ್ಲ, ಅದರಿಂದ ದೇಶಕ್ಕೆ ಉಂಟಾಗಬಹುದಾದ ಅನರ್ಥಗಳನ್ನೂ ತಪ್ಪಿಸಬೇಕಾಗಿದೆ. ಅಂಥಾ ಅನರ್ಥಗಳು ಮಂತ್ರಿಮಂಡಲದಿಂದಲೇ ಬರುವುದರಿಂದ ಕಾಂಗ್ರೆಸ್ಸಿನವರು ಅಲ್ಲಿಯೇ ಇದ್ದು ಆ ದಾರಿಯಿಂದ ಅನರ್ಥಗಳು ಬಾರದಂತೆ ಪ್ರಯತ್ನಿಸಬೇಕು. ಎಸೆಂಬ್ಲಿಯ ಮೆಂಬರರ ಅನುಮತಿ ವಿನಹಾ ಮಂತ್ರಿಗಳು ತಮ್ಮ ಇಚ್ಛೆಯಂತೆ ಮಾಡುವ ಅನೇಕ ಕಾರ್ಯಗಳಿವೆ. ಕಾರ್ಯಗಳು ಸಾಮಾನ್ಯವಾದವುಗಳಾದರೂ ಅದರಿಂದುಂಟಾಗುವ ಹಾನಿಗಳು ಮಾತ್ರ ಭಯಂಕರವಾದವುಗಳು. ಎಸೆಂಬ್ಲಿಯಲ್ಲಿ ಹೆಚ್ಚಿನ ಸ್ಥಾನಗಳನ್ನು ಆಕ್ರಮಿಸಿದಂತೆ ಮಂತ್ರಿಗಳ ಸ್ಥಾನಗಳನ್ನು ಕಾಂಗ್ರೆಸ್ಸಿನವರೇ ವಶೀಕರಿಸಿಕೊಳ್ಳುವುದರಿಂದ ಹೊಸ ಸುಧಾರಣೆಗಳಿಂದ ದೇಶಕ್ಕಾಗುವ ಅನರ್ಥಗಳನ್ನು ತಪ್ಪಿಸಿದಂತಾಗಿ, ಸುಧಾರಣೆಗಳನ್ನೂ ಮುರಿದಂತಾಗುವುದು.

ಮಂತ್ರಿಮಂಡಲವನ್ನು ನೇಮಿಸುವ ಅಧಿಕಾರವು ಮಾತ್ರ ಅಖಿಲ ಭಾರತ ಕಾಂಗ್ರೆಸ್ಸಿಗೆ ಇರಬೇಕು. ಮಂತ್ರಿಗಳು ಕಾಂಗ್ರೆಸ್ಸಿನ ಆಜ್ಞೆಯಂತೆ ಕಾಂಗ್ರೆಸ್ಸಿನ ಕಾರ್ಯಕ್ರಮಗಳನ್ನೇ ಕೈಕೊಳ್ಳಬೇಕು ಅದಕ್ಕಾಗಿಯೇ ಗವರ್ನರರೊಡನೆ ಹೋರಾಡಬೇಕು. ಯಾವ ಸಂದರ್ಭದಲ್ಲಿಯೂ ತಮ್ಮ ಕೈಮೇಲಾಗುವಂತೆಯೇ ಪ್ರಯತ್ನಿಸಬೇಕು, ಅದರಂತೆ ಮಾಡುವುದಕ್ಕೆ ಸಾಧ್ಯವಿಲ್ಲವೆಂದು ಕಂಡುಬಂದ ಸಂದರ್ಭದಲ್ಲಿ ಕಾಂಗ್ರೆಸ್ಸಿನವರು ಅಜ್ಞೆ ಮಾಡಿದ್ದಲ್ಲಿ ಪದಕ್ಕೆ ತಿಲಾಂಜಲಿಯನ್ನೀಯಲೇ ಬೇಕು, ಹಾಗೆ ಮಾಡುವುದರಿಂದ ಮಾತ್ರವೇ ಮುಂದಿನ ಚುನಾವಣೆಗಳಲ್ಲಿಯೂ ಕಾಂಗ್ರೆಸ್ಸಿನ ಪ್ರತಿನಿಧಿಗಳಿಗೆ ಬಹುಮತವು ದೊರೆತು ಈ ನವಸುಧಾರಣೆಗಳು ಜಾರಿಯಾಗದಂತೆ ಮಾಡುವುದಕ್ಕೆ ಸಾಧ್ಯವಾಗುವುದು ಈಜಿಪ್ತದಲ್ಲಿ ವಫ್ದಿಸ್ಟ್ ಪಕ್ಷದವರು, ಐರ್ಲೆಂಡಿನಲ್ಲಿ ಡಿವೇಲೇರನ ಪಕ್ಷದವರು ಮಾಡಿದಂತೆಯೇ ಇಲ್ಲಿಯೂ ಕಾಂಗ್ರೆಸ್ಸಿನವರು ಮಾಡಿದರೆ ಯುಕ್ತಿ ಯುಕ್ತವಾಗಿ ವರ್ತಿಸಿದಂತಾಗುವುದು.

ಮತದಾರರಲ್ಲೊಬ್ಬ.

ಉಡುಪಿ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. P. No. 1/37

1 ಗುರುರಾಜ ಭಟ್ಟ
2 ವ್ಯಾಸ್ರಾಯ ಭಟ್ಟ } ಅರ್ಜಿದಾರರು.
3 ಶ್ರೀನಿವಾಸ ಭಟ್ಟ

ಮೇಲ್ಕಂಡ ಅರ್ಜಿ ವ್ಯವಹರಣೆಯಲ್ಲಿ ಅರ್ಜಿದಾರರ ಅಣ್ಣ ಮೃತ ರಾಮ ಭಟ್ಟರ ವಿಧವೆ ಶೇಷಮ್ಮನು ತಾರೀಕು 5-1-'37ಲ್ಲಿ ನಿಸ್ಸಂತತಿಯಾಗಿ ಮೌತಿಯಾಗಿ ಅವಳಿಗೆ ಸದ್ರಿ ಅರ್ಜಿದಾರರು ಮುಖ್ಯ ವಾರಿಸ್‌ದಾರರಾಗಿದ್ದು ಸದ್ರಿ ಶೇಷಮ್ಮಗೆ ಕಲ್ಮಂಜೆ ನ್ಯಾಸಾಚಾರ್ಯರು ತಾರೀಕು 25-7-'29ರಲ್ಲು ರೂಪಾಯಿ 200/-ಕ್ಕೆ ಬರಕೊಟ್ಟ ಡಿಮಾಂಡು ನೋಟು ಮೇರೆಗೆ ಬರತಕ್ಕ ಅಸಲು, ಬಡ್ಡಿ ಕೂಡಾ ರೂಪಾಯಿ 208-12 0, ಪಟೇಲ ಶ್ರೀನಿವಾಸ ಭಟ್ಟರು ತಾರೀಕು 24-7-29ಲ್ಲಿ ರೂಪಾಯಿ 175/-ಕ್ಕೆ ಬರಕೊಟ್ಟ ಡಿಮಾಂಡು ನೋಟಿನ ಬಾಬ್ತು ಅಸಲು ಬಡ್ಡಿ ಕೂಡಾ ರೂಪಾಯಿ 182-10-0; ಕೊಡಂಜೆ ದಾಸ ಭಟ್ರು ರೂಪಾಯಿ 50/-ಕ್ಕೆ ಬರಕೊಟ್ಟ ಡಿಮಾಂಡ್ ನೋಟಿನ ಬಾಬ್ತು ಅಸಲು, ಬಡ್ಡಿ ಕೂಡಾ ರೂಪಾಯಿ 52 0-0, ಮತ್ತು ಪಟೇಲ ನಾರಾಯಣ ಭಟ್ರ ಮಗ ಲಕ್ಷ್ಮೀನಾರಾಯಣ ಭಟ್ರು ತಾರೀಕು 22-7-'31ಲ್ಲಿ ರೂಪಾಯಿ 200 ಕ್ಕೆ ಬರಕೊಟ್ಟ ಡಿಮಾಂಡ್ ನೋಟಿನ ಮೇರೆಗೆ ಬರತಕ್ಕ ಅಸಲು, ಬಡ್ಡಿ ಕೂಡಾ ರೂಪಾಯಿ 207-4-0 ಈ ಮೇರೆಗೆ ಒಟ್ಟು ಅಸಲು ಬಡ್ಡಿ ಕೂಡಾ ರೂಪಾಯಿ 650-10 0ನ್ನು ವಸೂಲು ಪಡಿಯುವರೆ ಅರ್ಜಿದಾರರು ಹಕ್ಕುದಾರರಾಗಿ ಆ ಬಗ್ಗೆ ಸಕ್ಸೆಶನ್ ಸರ್ಟಿಫಿಕೇಟು ಕೊಡಬೇಕಾಗಿ ಕೊಟ್ಟ ಸದ್ರಿ ಅರ್ಜಿಯು ತಾರೀಕು 25-3-'37ಕ್ಕೆ ತನ್ನಿಗೆ ಇಟ್ಟಿರುವುದರಿಂದ ಆಕ್ಷೇಪ ಹೇಳತಕ್ಕವರು ಆ ದಿವಸ ಸದ್ರಿ ಕೋರ್ಟಿನ ಮುಂದೆ ಹಾಜರಾಗಿ ಜಾಹೀರುಮಾಡಿಕೊಳ್ಳತಕ್ಕದ್ದು.

ಉಡುಪಿ, 5—3—'37 } P. Padmanabha Rao, Vakil for Petitioners

ನವಯುಗಕ್ಕೆ
ಇಂದೇ ಚಂದಾದಾರರಾಗಿರಿ!
ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ)
೩—೪—೦

ಭಾರತೀಯ ಸಾಹಿತ್ಯ ಪರಿಷತ್ತು.

ಬರುವ ಈಸ್ಟರ್ ರಜಾದಲ್ಲಿ ಮೊದಲನೆಯ ಅಧಿವೇಶನವು ಮದರಾಸಿನಲ್ಲಿ ಸೇರುವುದು.

ಭಾರತೀಯ ಸಾಹಿತ್ಯಪರಿಷತ್ತಿನ ಸ್ಥಾಪನೆಯು ನಾಗಪುರದಲ್ಲಾಯಿತು. ಮಹಾತ್ಮಾಜೀಯವರು ಇದರ ಅಧ್ಯಕ್ಷರಾಗಿದ್ದಾರೆ. ಬಾಬೂ ರಾಜೇಂದ್ರಪ್ರಸಾದರು ಉಪಾಧ್ಯಕ್ಷರು. ಭಾರತದ ಎಲ್ಲಾ ಪ್ರಾಂತಗಳಿಂದಲೂ ಆರಿಸಲ್ಪಟ್ಟ ಸಾಹಿತ್ಯ ಸೇವಕರು ಇದರ ಸದಸ್ಯರಾಗಿದ್ದಾರೆ. ಪರಿಷತ್ತಿನ ಉದ್ದೇಶಗಳು ಈ ಕೆಳಗೆ ಸೂಚಿತವಾಗಿರುತ್ತವೆ.

(೧) ಹಿಂದೂಸ್ಥಾನದ ಎಲ್ಲಾ ಪ್ರಾಂತಗಳ ಭಾಷೆಗಳ ಮತ್ತು ಆಯಾ ಭಾಷೆಗಳ ಸಾಹಿತಿಗಳಲ್ಲಿ ಪರಸ್ಪರ ಸೌಹಾರ್ದವನ್ನು ಬೆಳೆಯಿಸುವುದು, ಮತ್ತು ಇದೇ ರೀತಿಯಾಗಿ ಭಾರತೀಯ ಸಾಹಿತ್ಯದ ವಿಕಾಸ ಹಾಗೂ ಪ್ರಚಾರದಲ್ಲಿ ಸಹಾಯಕರಾಗಲು ಪ್ರಯತ್ನಮಾಡುವದು.

(೨) ಲೋಕ-ಜೀವನದ ಜೀವನ ಮತ್ತು ಪ್ರತ್ಯಕ್ಷ ಪ್ರಶ್ನೆಗಳನ್ನು ಸುಲಭಮಾಡುವ ಸಾಹಿತ್ಯವನ್ನು ನಿರ್ಮಾಣಮಾಡುವುದರಲ್ಲಿ ಪ್ರೋತ್ಸಾಹಕೊಡುವುದು.

(೩) ಇಂತಹ ಸಾಹಿತ್ಯ ಜೀವನದ ಉಚ್ಚ ಆದರ್ಶಗಳಿಗೆ ವಿರೋಧಿಸುವ, ಸುರುಚಿಯನ್ನು ಕೆಡಿಸುವ, ಸಾಂಪ್ರದಾಯಕ ಸಹಯೋಗ (ಜಾತೀಯ ಐಕ್ಯತೆ)ದಲ್ಲಿ ಬಾಧಕವನ್ನೊಡ್ಡುವ ಸಾಹಿತ್ಯಕ್ಕೆ ಪ್ರೋತ್ಸಾಹ ಕೊಡದಿರುವುದು.

(೪) ಈ ಪರಿಷತ್ತಿನ ಎಲ್ಲಾ ಕೆಲಸವೂ ಹಿಂದೀ ಅಥವಾ ಹಿಂದೂಸ್ಥಾನಿಯಲ್ಲಿ ಆಗುವುದು.

(೫) ಈ ಪರಿಷತ್ತಿಗೆ ಸಹಯೋಗವನ್ನು ಕೊಡುವ, ಪ್ರಾಂತೀಯ ಸಾಹಿತ್ಯ ಸಂಸ್ಥೆಗಳ ಸಹಯೋಗಕ್ಕಾಗಿ ಪರಿಷತ್ತಿನ ಪ್ರಾಂತೀಯ ಶಾಖೆಗಳನ್ನು ಸ್ಥಾಪಿಸುವುದು.

(೬) ಆಗಾಗ್ಗೆ (ಕನಿಷ್ಟಪಕ್ಷ ವರ್ಷಕ್ಕೊಮ್ಮೆಯಾದರೂ ಅವಶ್ಯವಾಗಿ) ಅಭ್ಯಾಸಿಕರಾದ ಸದಸ್ಯರು ಸಮ್ಮೇಳನದಲ್ಲಿ, ಭಾಷೆ, ಲಿಪಿ, ಸಾಹಿತ್ಯ ಮತ್ತು ಸಂಸ್ಕೃತಿಯ ವಿಚಾರದಲ್ಲಿ ಚರ್ಚೆಗಳನ್ನು ನಡೆಯಿಸುವುದು.

ಈ ಉದ್ದೇಶಗಳನ್ನು ಸ್ಥಾಪಿಸುವುದಕ್ಕಾಗಿ, ಮದರಾಸಿನ ಅಧಿವೇಶದಲ್ಲಿ ದಕ್ಷಿಣದ ಸಾಹಿತ್ಯ ಸೇವಕರಿಗೆ ಉತ್ತರದ ಸಾಹಿತ್ಯ ಸೇವಕರೊಡನೆ ಪರಿಚಯವಾಗುವ ಅವಕಾಶವು ದೊರೆಯುವುದು. ಇದರ ಮೂಲಕ ಹಿಂದೀ ಪ್ರಚಾರಮಾಡಬೇಕೆಂಬುದು ಪರಿಷತ್ತಿನ ಉದ್ದೇಶವಲ್ಲ, ಆದರೆ ಈಗ ಪ್ರಚಾರವಾಗಿರುವ ಮತ್ತು ಆಗುತ್ತಿರುವ ಹಿಂದೀ ಪ್ರಚಾರದಿಂದ ಲಾಭವನ್ನು ಪಡೆದು ಪ್ರಾಂತೀಯ ಸಾಹಿತ್ಯ ಸೇವಕರಲ್ಲಿ ಪರಸ್ಪರ ಸೌಹಾರ್ದವನ್ನುಂಟು ಮಾಡುವುದು ಈ ಪರಿಷತ್ತಿನ ಆಶಯವಾಗಿದೆ. ಪ್ರಾಂತೀಯ ಸಾಹಿತ್ಯಗಳಲ್ಲಿರುವ ಸದಾಚಾರ ಮತ್ತು ಸುರುಚಿ ಪೋಷಕವಾದ ಅಂಶಗಳನ್ನೂ, ಭಾರತೀಯ ಸಾಂಸ್ಕೃತಿಕ ಐಕ್ಯತೆಗೆ ಸಹಾಯಕವಾಗುವ ಭಾಗಗಳನ್ನೂ, ಹಿಂದಿಯಲ್ಲಿ ಅನುವಾದಮಾಡಿಸಿ ಸರ್ವಗ್ರಾಹ್ಯವಾಗುವ ಹಾಗೆ ಮಾಡುವುದು ಇಂದಿನ ಮುಖ್ಯ ಕೆಲಸ. ಎಲ್ಲಾ ಪ್ರಾಂತೀಯ ಭಾಷೆಗಳಿಗಾಗಿ ಒಂದು ಸಮಾನವಾದ ಪರಿಭಾಷೆಯನ್ನು ರಚಿಸುವ ಕೆಲಸವೂ ಮಹತ್ವದ್ದಾಗಿದೆ. ಪ್ರಾಂತೀಯ ಭಾಷೆಗಳಲ್ಲಿರುವ ಶಬ್ದ-ಸಮೃದ್ಧಿಯನ್ನು ಹೆಚ್ಚಿಸುವ ಪ್ರಯತ್ನವನ್ನೂ ಮಾಡಬೇಕಾಗಿದೆ. ದಕ್ಷಿಣ ಭಾರತದ ಸುಪ್ರಸಿದ್ಧರಾದ ಸಾಹಿತ್ಯ ಸೇವಕರು ಈ ಕಾರ್ಯದಲ್ಲಿ ಸಹಭಾಗಿಗಳಾಗುವರೆಂದು ನಮ್ಮ ಹಾರೈಕೆ. ಭಾರತೀಯ ಸಾಹಿತ್ಯ ಪರಿಷತ್ತಿನ ಮದರಾಸಿನ ಅಧಿವೇಶನವು ಈಸ್ಟರ್ ರಜಾದಲ್ಲಿ ಹಿಂದೀ ಸಾಹಿತ್ಯ ಸಮ್ಮೇಲನದ ಸಂಗಡಲೇ ನಡೆಯುವುದು. ವಿಶೇಷ ಕಾರ್ಯಕ್ರಮಗಳ ಬಗ್ಗೆ ಸ್ವಲ್ಪ ದಿನಗಳಲ್ಲೇ ಪ್ರಕಟಿಸಲಾಗುತ್ತದೆ.

ಕಾಕಾ ಕಾಲೇಲ್‌ಕರ್
ಮಂತ್ರಿ.

ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿ

ಧಾರವಾಡ, ತಾ. ೨೬-೨-೩೭.

ಕ. ಪ್ರಾ. ಕಾಂಗ್ರೆಸ್ ಕಮಿಟಿಯು ಮಾರ್ಚಿ ತಿಂಗಳ ಮೂರನೆಯ ವಾರದಲ್ಲಿ ಕೂಡತಕ್ಕದ್ದಿದೆ. ಅದರ ಒಳಗಾಗಿ ತಾಲೂಕು, ಜಿಲ್ಲಾ, ಸರ್ಕಲು, ಗ್ರಾಮ ಕಾಂಗ್ರೆಸ್ ಕಮಿಟಿಗಳು 'ಮಂತ್ರಿ ಪದವನ್ನು ಸ್ವೀಕರಿಸ ಬೇಕೋ ಬೇಡವೋ? ಎಂಬ ವಿಷಯವನ್ನು ಆಯಾ ತಾಲೂಕುಗಳ ಸಾಧಾರಣ ಸಭೆಗಳನ್ನು ಕರೆದು ಅಲ್ಲಿ ಚರ್ಚಿಸಿ ನಿರ್ಣಯಗಳನ್ನು ಪ್ರಾಂತಿಕ ಕಾಂಗ್ರೆಸ್ ಕಮಿಟಿಗೆ ಮಾರ್ಚಿ ತಿಂಗಳ ೧೦ನೆಯ ತಾರೀಕಿನ ಒಳಗೆ ಕಳುಹಿಸಿಕೊಡಬೇಕು. ಹೀಗೆ ಎಲ್ಲ ಪ್ರಾಂತಗಳ ಕಮಿಟಿಗಳ ವಿಚಾರವನ್ನು ಮಾಡಿ ಅಖಿಲ ಭಾರತ ಕಾಂಗ್ರೆಸ್ ಕಮಿಟಿಯು ವಿಚಾರ ಮಾಡುವದು. ಆದ್ದರಿಂದ ಎಲ್ಲರೂ ಈ ಪ್ರಶ್ನೆಯನ್ನು ಕೂಲಂಕಷವಾಗಿ ವಿಚಾರ ಮಾಡಬೇಕೆಂದು ಬಿನ್ನವಿಸುತ್ತೇವೆ.

ರಾ. ಶ್ರೀ. ಹುಕ್ಕೇರಿಕರ
ಗೌರವ ಕಾರ್ಯದರ್ಶಿ,
ಕ. ಪ್ರಾ. ಕಾ. ಕಮಿಟಿ.

ಪತ್ರ ವ್ಯವಹಾರ

(ಬಾತ್ಮಿದಾರರು ತಮ್ಮ ಸಂಪೂರ್ಣ ವಿಳಾಸವನ್ನು ನಮಗೆ ಕೊಡಬೇಕಾಗಿದೆ. ಬಾತ್ಮಿಗಳು ಆದಷ್ಟು ಸಂಕ್ಷೇಪವಿದ್ದು ಕಾಗದದ ಒಂದೇ ಮಗ್ಗುಲಲ್ಲಿ ಶಾಯಿಯಿಂದ ಬರೆಯಲ್ಪಟ್ಟು ಸ್ಪಷ್ಟವಾದ ಅಕ್ಷರಗಳಲ್ಲಿರಬೇಕು. ಬಾತ್ಮಿದಾರರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ.)

ಸಂ. ನ.

ವೇಣೂರು

ಅಯ್ಯಾ, ಇಲ್ಲಿ ಎಸೆಂಬ್ಲಿ ಚುನಾವಣೆಯ ಸಂಬಂಧ ಕೆಲಸ ಮಾಡಲು ಕಡಂದಲೆ ಬೋರ್ಡು ಹಾಯರ್ ಎಲಿಮೆಂಟರಿ ಶಾಲಾ ಸಹಾಯಕ ಉಪಾಧ್ಯಾಯ ಶ್ರೀ| ದೇವಯ್ಯ ಮತ್ತು ಮೂಡಬಿದ್ರಿ ಬೋರ್ಡು ಎಲಿಮೆಂಟರಿ ಶಾಲಾ ಸಹಾಯಕ ಉಪಾಧ್ಯಾಯ ಶ್ರೀ|| ಸುಂದರ ಶೆಟ್ಟಿ ಕೂಡಾ ಇಬ್ಬರ ಉಪಾಧ್ಯಾಯರು ಇನ್ನು ಕೆಲವರೊಡನೆ ಇಲ್ಲಿಗೆ ಬಂದಿದ್ದು ತಾ. 1-2-37ನೇ ಸಾಯಂಕಾಲದಿಂದ ತಾ. 18-3-37ನೇ ಸಾಯಂಕಾಲದ ವರೆಗೆ ಇಲ್ಲಿಯೇ ಇದ್ದು ಗ್ರಾಮಗಳಲ್ಲಿ ಮನೆ ಮನೆಗೆ ಹೋಗಿ ಓಟು ಕೇಳುತ್ತಾ ಇದ್ದರು. ಇವರಿಗೆ ಹೀಗೆ ಬಂದು ಕೆಲಸಮಾಡಲು ಯಾವ ತರದ ರಜೆ ಇತ್ತೆಂಬು ಗೊತ್ತಾಗುವುದಿಲ್ಲ. ವಿಚಾರಿಸಿ ತಿಳಿಯುವಾಗ ದೇವಯ್ಯ ಮಾಸ್ತರರು ಮಧ್ಯದಲ್ಲಿ ಒಮ್ಮೆ ಕಡಂದಲೆಗೆ ಹೋಗಿ ಉಪಾಧ್ಯಾಯರ ಹಾಜರಿ ರಿಜಿಸ್ತ್ರಿಯಲ್ಲಿ ದಸ್ಕತು ಮಾಡಿ ಬಂದಿದ್ದಾರಾಗಿ ಕೂಡ ವರ್ತಮಾನವುಂಟು. ಸುಂದರ ಶೆಟ್ರು ಒಮ್ಮೆ ಮೂಡಬಿದ್ರೆಗೆ ಹೋಗಿ ಬಂದಿದ್ದಾರೆ. ಮಿಕ್ಕ ಸಂಗತಿ ದೇವರಿಗೆ ಗೊತ್ತು. ಇದೆಂತಹ ನಡತೆ. ಈ ಕುರಿತು ಸಂಬಂಧಪಟ್ಟ ಇಲಾಖಾ ಉದ್ಯೋಗಸ್ಥರು ತಕ್ಕ ತನ್ಖ ನಡಿಸಿ ನೀತಿ ಕಾಪಾಡುವರಾಗಿ ನಂಬಿರುವ,

—ವಿಚಾರಿ.

ಬಹಿರಂಗ ಏಲಂ ಇಸ್ತಿಹಾರು.

ದಕ್ಷಿಣ ಕನ್ನಡ ಜಿಲ್ಲಾ ಜಡ್ಜರ ಕೋರ್ಟು

O. P. No. 130/1936.

ದಿ ಲಕ್ಷ್ಮೀ ಪ್ರೋರೆಸ್ಟು ಕಂಪೆನಿ, ಲಿಮಿಟೆಡ್

(ಲಿಕ್ವಿಡೇಶನ್ ವ್ಯವಹರಣೆಯಲ್ಲಿ)

ಮೇಲ್ಕಂಡ ಲಿಕ್ವಿಡೇಶನ್ ವ್ಯವಹರಣೆಯಲ್ಲಿ ಮಂಗಳೂರು ಒಫೀಶಿಯಲ್ ಲಿಕ್ವಿಡೇಟರವರ ಸ್ವಾಧೀನದಲ್ಲಿರುವ 'ದಿ ಲಕ್ಷ್ಮೀ ಪ್ರೋರೆಸ್ಟು ಕಂಪೆನಿ'ಯ ಬಾಬತು ಈ ಕೆಳಗೆ ತಪಸೀಲು ಕಾಣಿಸಿದ ಚರಸೊತ್ತುಗಳನ್ನು ಇದೇ ತಾ. 26-3-1937ರಲ್ಲು ಪೂರ್ವಾಹ್ನ ಘಂಟೆ 10ರಿಂದ ಕುಂದಾಪುರ ತಾಲೂಕು ಶಿಡಿಮನೆ ಗ್ರಾಮದಲ್ಲಿರುವ ದಿ ಲಕ್ಷ್ಮೀ ಪ್ರೋರೆಸ್ಟು ಕಂಪೆನಿಯ ಬ್ರಾಂಚು ಆಫೀಸಿನಲ್ಲಿ ಈ ಕೆಳಗಣ ಶರ್ತಗಳಿಗೆ ಒಳಪಟ್ಟು ಬಹಿರಂಗವಾಗಿ ಏಲಂ ಮಾಡೋಣಾಗುವುದು.

ಮಾರಾಟದ ಶರ್ತಗಳು

೧. ಏಲಂ ಕರೆಯುವ ಮೊಬಲಗು ಇಷ್ಟೆಂಥು ಒಫೀಶಿಯಲ್ ಲಿಕ್ವಿಡೇಟರವರಿಂದಲೇ ನಿಶ್ಚಯಿಸಲ್ಪಡುವದು.

೨. ಯಾವುದಾದರೂ ಒಂದು ಐಟಮಿನ ಯಾ ಲೋಟಿನ ದರಖಾಸ್ತು ಐವೆಜನ್ನು ಸಂದಾಯಮಾಡುವರೆ ತಪ್ಪಿದರೆ ಕೂಡಲೇ ಮರುವಿಕ್ರಯಮಾಡಲಾದೀತು.

೩. ದರಖಾಸ್ತುದಾರನು ತನ್ನ ಹೆಸರಿಗೆ ದರಖಾಸ್ತಾದ ಐಟಮು ಯಾ ಲೋಟಿನ ಬಾಬ್ತು ದರಖಾಸ್ತು ಐವಜು ಕೂಡಲೇ ಪಾವತಿಮಾಡಿ ಸೊತ್ತನ್ನು ಸ್ವಾಧೀನ ಪಡಕೊಳ್ಳಬೇಕಾಗಿರುತ್ತದೆ.

ಸೊತ್ತುಗಳು.

ಬಾಗಿಲು ಹಲಿಗೆಗಳು—೪; ಸರಳಿನ ಕಿಟಕಿ—೩; ಮುಳ್ಳುಸರಿಗೆಯ ಕಟ್ಟ—೧; ಬಲೆ—೧; ರೈನ್ ಗಾಜ್—೧; ತಾರ್ ಡಬ್ಬಿ—೧; ಬಾಗಿಲು—೧; ಲೋಗುಗಳು—೨೧೨; ಪಕ್ಕಾಸುಗಳು—೫೧೯; ಹಲಿಗೆಗಳು—೧೯೬; ಬೀಮುಗಳು—೬; ತಲುರುಗಳು—೧೦೩; ಪೊರೊಟುಗಳು ಸುಮಾರು ೪೦ ಖಂಡಿ ಸಹ ಕೂಡಾ.

Mangalore, 6-3-'37.

(Sd) A. Moosabba,
Official Liquidator, Mangalore.

ವಂದನಾರ್ಪಣೆ

ಮಹನೀಯರೇ,

ನಾನು ಇದೇ ಫೆಬ್ರವರಿ ತಿಂಗಳಲ್ಲಿ ಜರಗಿದ್ದ ಕೌನ್ಸಿಲು ಮೆಂಬರ ಚುನಾವಣೆ ದಿವಸ, ಸಾರ್ವಜನಿಕ ಕಾರ್ಯಗಳಲ್ಲಿ ಆಸಕ್ತಿಯುಳ್ಳ ಕಾರಣದಿಂದ ನನ್ನ ಪಕ್ಷವಾಗಿ ಅಧಿಕಾರ ಹೊಂದಿದಂಥ ಏಜಂಟರುಗಳಾಗಿ ಪೋಲಿಂಗ್ ಸ್ಟೇಷನ್‌ಗಳಲ್ಲಿ ಕಾರ್ಯ ವಹಿಸಿದ ಮಹನೀಯರುಗಳಿಗೂ, ಅಲ್ಲಿಗೆ ಬಂದಂಥ ಓಟರುಗಳ ಪರವಾಗಿ ಏನೂ ತೊಂದರೆಯಾಗದಂತೆ ಅವರ ಜಾಗ್ರತೆ ತೆಗೆದುಕೊಂಡ ಇತರ ಸ್ನೇಹಿತರುಗಳಿಗೂ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ನಾನು ಅರ್ಪಿಸುವುದಲ್ಲದೆ, ಅವರುಗಳು ಇಂಥ ಸಾರ್ವಜನಿಕ ಕಾರ್ಯಗಳಲ್ಲಿ ಇನ್ನಷ್ಟು ಹೆಚ್ಚಾಗಿ ಭಾಗವಹಿಸಿ ಜನರ ಪ್ರೇಮಕ್ಕೆ ಪಾತ್ರರಾಗಲೆಂದು ಆಶಿಸುತ್ತೇನೆ.

Dharmastal, 2-3-1937 } D Manjayya Heggade

ಬಾಲವಾಙ್ಮಯದ ಆವಶ್ಯಕತೆ ಮತ್ತು ನಿರ್ಮಾಣದ ವಿಷಯಕವಾದ ಪ್ರಬಂಧ
ಬಾಲವಾಙ್ಮಯ
ಬೆಲೆ ಮೂರಾಣೆ
ಉಪಾಧ್ಯಾಯರ ಪ್ರಕಟನ ಸಮಿತಿ,
ಉಡುಪಿ.

ನವಯುಗಕ್ಕೆ ಇಂದೇ ಚಂದಾದಾರರಾಗಿರಿ!

ಡಿಸ್ಟ್ರಿಕ್ಟ್ ಬೋರ್ಡು ಪ್ರಾಥಮಿಕ ಶಾಲಾ ಉಪಾಧ್ಯಾಯ ಉಪಾಧ್ಯಾಯಿನಿಯರ ತಿಳುವಳಿಕೆ ಬಗ್ಗೆ—

ಡಿಸ್ಟ್ರಿಕ್ಟ್ ಬೋರ್ಡು ಬಜೆಟ್ ಕಮಿಟಿಯವರು ೧೯೩೭-೩೮ನೇ ವರ್ಷದ ಬಜೆಟನ್ನು ತಯಾರುಮಾಡುವಾಗ್ಯೆ ಬೋರ್ಡುಸ್ಕೂಲ್ ಅಧ್ಯಾಪಕರಿಗೆ ರೂಪಾಯಿಗೆ ಒಂದುವರೆ ಆಣೆಯಂತೆ ಕಡಿತ ಉಪಾಧ್ಯಾಯಿನಿಯರ ಸ್ಕೇಲಿನ ಹೆಚ್ಚಿನ ಸಂಬಳವನ್ನು ವಜಾಮಾಡಬೇಕೆಂದೂ ನಿರ್ಣಯಮಾಡಿರುತ್ತಾರಾಗಿ ಕೇಳಿರುತ್ತೇನೆ. ಹಾಗೆ ಮಾಡಿಯೂ ೯೮ ಸಾವಿರ ರೂಪಾಯಿ ಎಲಿಮೆಂಟರಿ ಎಜ್ಯುಕೇಶನ್ ಫಂಡಿಗೆ ಡೆಫಿಸಿಟ್ ನಿಂತಿದೆ ಅಂತೆ. ಉಪಾಧ್ಯಾಯರ ಪರಿಸ್ಥಿತಿಯು ವರ್ಷಂಪ್ರತಿ ಹೀಗೆಯೇ ಆದರೆ ಬಹಳ ಕಷ್ಟವೇ ಸರಿ. ಆದುದರಿಂದ ಈ ವಿಷಯದಲ್ಲಿ ನಾವು ಮಾಡತಕ್ಕ ಪ್ರಯತ್ನಗಳೇನು ಎಂದು ನಿರ್ಣಯಿಸುವರೆ ಉತ್ಸಾಹವುಳ್ಳ ಉಪಾಧ್ಯಾಯ ಉಪಾಧ್ಯಾಯಿನಿಯರು ಬರುವ ಡಿಸ್ಟ್ರಿಕ್ಟ್ ಬೋರ್ಡು ಬಜೆಟ್ ಮೀಟಿಂಗಿನ ಮುಂಚಿನ ದಿನ ಪೂರ್ವಾಹ್ನ ೧೦ ಘಂಟೆಗೆ ಮಂಗಳೂರು ಕೊಡಿಯಾಲಬೈಲು ಬಳಿ ಬಂಟ್ಸ್ ಹೋಸ್ಟೆಲ್ ರಾಮಕೃಷ್ಣ ವಿದ್ಯಾರ್ಥಿ ಭವನಕ್ಕೆ ಚಿತ್ತೈಸಬೇಕಾಗಿ ಅಪೇಕ್ಷಿಸುತ್ತೇನೆ. ಡಿ. ಬೋರ್ಡು ಬಜೆಟ್ ಮೀಟಿಂಗಿನ ತಾರೀಕನ್ನು ನೀವೇ ತಿಳಿದುಕೊಳ್ಳಬೇಕಾಗಿರುವುದು. ಸಾಧ್ಯವಾದಷ್ಟು ಮಟ್ಟಿಗೆ ಮಾನ್ಯ ಡಿಸ್ಟ್ರಿಕ್ಟ್ ಬೋರ್ಡು ಮೆಂಬರರನ್ನು ಆ ದಿವಸದ ಮೀಟಿಂಗಿಗೆ ಆಮಂತ್ರಿಸುತ್ತೇನೆ.

ಪಿ. ಬಾಬುಶೆಟ್ಟಿ,
ಜಿಲ್ಲಾ ಉಪಾಧ್ಯಾಯರ ಸಂಘದ ಕಾರ್ಯದರ್ಶಿ

ಭೀಷಣ ಕೊಲೆಗಳು

ಅಡೂರು

ತಾ. ೨೩-೨-೩೭ರಲ್ಲಿ ಕಾಸರಕೊಟ್ಟ ಎಂಬಲ್ಲಿ ಕೊರಗನಾಯ್ಕ ಎಂಬವನಿಗೆ ಮಾಲಿಂಗನಾಯ್ಕನ ಹೆಂಡತಿಯಲ್ಲಿಯೂ ಅವಳ ಅಕ್ಕನಲ್ಲಿಯೂ ಸ್ನೇಹವಿತ್ತಂತೆ. ಇದಕ್ಕಾಗಿ ಕೊರಗ ನಾಯ್ಕನ ತಾಯಿ ಮತ್ತು ಚಿಕ್ಕತಾಯಿ ಇವರಿಬ್ಬರೂ ಮಗನನ್ನು ಬೈದದ್ದಕ್ಕೆ ಇವರೀರ್ವರನ್ನೂ ಕಡಿದು ಕೊಂದೇ ಬಿಟ್ಟನು ಕಡೆಗೆ ಸ್ನೇಹವಿದ್ದ ೨ ಸ್ತ್ರೀಯರನ್ನು ಪೋಲೀಸರ ಭಯಕ್ಕಾಗಿ ತಪ್ಪಿಸಿ ಮಾಲಿಂಗ ನಾಯ್ಕನ ಮನೆ ಬಳಿಯಲ್ಲಿ ಒಂದೇ ಮರಕ್ಕೆ ಮೂವರೂ ನೇಣು ಹಾಕಿ ಪ್ರಾಣಕಳಕೊಂಡರು. ಒಬ್ಬಳು ೬ ತಿಂಗಳ ಗರ್ಭಿಣಿ.

ಕಾಂಗ್ರೆಸ್ಸಿಗೆ ಹೇಗೆ ಜಯವಾಯಿತು?

ಜವಾಹರರ ಸಂಚಾರದಲ್ಲಿ ಜನತೆಯ ಭೂಕಂಪನವೇ ಆಯಿತು! ಒಂದು ಕೋಟಿ ಜನರು ಇವರ ಭಾಷಣ ಕೇಳಿದರು!!

ಮೊನ್ನೆ ನಡೆದ ಚುನಾವಣಾ ಸಮರ ಕಾಲದಲ್ಲಿ ನಡೆದ ಅದ್ಭುತ ಆಂದೋಳನದಿಂದ ಭಾರತ ಭೂಮಿಯೆಲ್ಲವೂ ಕೆಲಕಾಲ ಕಂಪಿಸಿತು! ಈ ಕಾಲದಲ್ಲಿ ಪ್ರಜೆಗಳ ಹೃದಯಾಂತರಾಳದಲ್ಲಿ ಅಡಗಿದ್ದ ರಾಷ್ಟ್ರೀಯ ಅಂತಃಕರಣವು ಹೊರಹೊಮ್ಮಿ ಮೇರೆ ಮೀರಿ ಹರಿಯಿತು. ಜನರು ಹಿಂದೆ ಸತ್ಯಾಗ್ರಹ ಸಮರ ಸಮಯದಲ್ಲಿ ತೋರಿದ ಉತ್ಸಾಹದ ಸಹಸ್ರಪಾಲನ್ನು ಈಗ ತೋರಿದರು.

ಆಳರಸರ ಸರಕಾರದವರು ಕಾಂಗ್ರೆಸ್ ಸಂಸ್ಥೆಗಳನ್ನು ಅಕ್ರಮ ಸಂಘಗಳೆಂದು ಕರೆದು, ಆ ಸಂಘಗಳ ಸಂಚಾಲಕರನ್ನು ವಿವಿಧ ರೀತಿಗಳಲ್ಲಿ ದಂಡಿಸಿ, ಖಂಡಿಸಿ, ಕಾಂಗ್ರೆಸಿನ ಕಾರ್ಯೋದ್ಯಮಗಳನ್ನು ತುಂಡರಿಸಿ ತುಳಿದಾಗ್ಗೂ ಪ್ರಜೆಗಳ ವಿಶ್ವಾಸವೇನೋ ಎಳ್ಳಷ್ಟು ಕುಂಠಿತವಾಗಲಿಲ್ಲ. ಅವಕ್ಕೆ ಪ್ರತಿಯಾಗಿ ಆ ಮಹಾಸಂಸ್ಥೆಯ ವಿಷಯದಲ್ಲಿ ಮತ್ತಷ್ಟು ಅಭಿಮಾನ ಹುಟ್ಟಿ, ಆವೇಶಭರವೋ ಎನ್ನುವ ರೀತಿಯಲ್ಲಿ ಪ್ರಜಾಕೋಟಿಯು ಕಾಂಗ್ರೆಸಿನಲ್ಲಿ ತಾವಿಟ್ಟಿರುವ ಮೆಚ್ಚುಗೆ ನಚ್ಚಿಕೆಗಳು ಎಷ್ಟರ ಮಟ್ಟಿಗಿದೆ ಎಂಬುದನ್ನು ಅನುಮಾನಕ್ಕೆಡೆಯಿಲ್ಲದಂತೆ ಪ್ರದರ್ಶಿಸಿ, ಕಾಂಗ್ರೆಸಿಗೂ ಕೀರ್ತಿತಂದರು.

ಮೇಲೆ ಸೂಚಿಸಿದ ಸತ್ಯಾಗ್ರಹ ಸಮರ ಕಾಲದಲ್ಲಿ ಸರಕಾರದ ದಬ್ಬಾಳಿಕೆಯ ರುಚಿ ಎಷ್ಟುಮಂದಿ ನೋಡಿದರು! ಎಷ್ಟು ಮಂದಿ ಲಾಠೀ ಪೆಟ್ಟುಗಳನ್ನೂ, ಚಬುಕಿನ ಚುರುಕನ್ನೂ, ತುರಂಗಗಳ ತೆರತೆರನಾದ ತೀಕ್ಷ್ಣತೆಗಳನ್ನೂ ತೂಷ್ಣೀಭಾವದಿಂದ ಸಹಿಸಿದರು! ಇಷ್ಟಾದರೂ ಕಾಂಗ್ರೆಸಿನ ವಿಷಯದಲ್ಲಿ ಇವರಿಗೆ ಇದ್ದ ಭಕ್ತಿವಿಶ್ವಾಸಗಳು ಕಡಿಮೆಯಾಗಲಿಲ್ಲ. ಚಿನ್ನವನ್ನು ಬೆಂಕಿಯಲ್ಲಿ ಹಾಕಿ ಕಾಸಿದಷ್ಟೂ ಬೆಲೆಯು ಹೆಚ್ಚುವಂತೆ, ಇವರಿಗೆ ಕಷ್ಟಗಳು ಹೆಚ್ಚಿದಷ್ಟೂ ಕಾಂಗ್ರೆಸಿನ ವಿಷಯದಲ್ಲಿದ್ದ ಭಕ್ತಿವಿಶ್ವಾಸಗಳು ಹೆಚ್ಚಿದುವು. ಆ ಭಕ್ತಿವಿಶ್ವಾಸಗಳ ಪ್ರದರ್ಶನವೇ ಈಗಿನ ಚುನಾವಣೆಗಳ ಫಲಿತಾಂಶ!

ಈಗಿನ ಚುನಾವಣೆಗಳನ್ನು ನೋಡಿದಲ್ಲಿ ಸರಕಾರದವರು ಕಾಂಗ್ರೆಸ್ಸನ್ನು ತುಳಿಯಲೆತ್ನಿಸಿದಷ್ಟೂ ಅದು ಚೆಂಡಿನಂತೆ ಮೇಲಕ್ಕೇ ಏಳುತ್ತಿದೆ. ಪಟ್ಟಣವಾಸಿಗಳು ಹಾಗಿರಲಿ, ಪ್ರಾಂತಗಳ ಒಳಪ್ರದೇಶಗಳಲ್ಲಿರುವವರು, ಮೂಲೆಮೂಲೆಗಳಲ್ಲಿರುವವರು, ಹಳ್ಳಿಗಳಿಂದ ಗುಂಪು ಕಟ್ಟಿಕೊಂಡು, ರಾಷ್ಟ್ರಗೀತಗಳನ್ನು ಹಾಡಿಕೊಂಡು ತಮ್ಮ ವಿಶ್ವಾಸಪಾತ್ರವಾದ ಕಾಂಗ್ರೆಸಿಗೆ ಮತಕೊಡಲು ಕಾಲುನಡೆಯಲ್ಲಿ ಬಂದರೆಂದರೆ ಇದರ ಅರ್ಥವೇನು?

ಕೆಲವೆಡೆಗಳಲ್ಲಿ ಕಾಂಗ್ರೆಸಿನ 'ಬ್ಯಾಲಟ್ ಬಾಕ್ಸು'ಗಳನ್ನು ತಮ್ಮ ದೇವಮೂರ್ತಿಗಳೋ ಎನ್ನುವಂತೆ ಭಾವಿಸಿ ಅವುಗಳಿಗೆ ಪೂಜೆ ಪುನಸ್ಕಾರಗಳನ್ನು ಮಾಡಿ, ಹಣ್ಣುಕಾಯಿಗಳನ್ನು ಅರ್ಪಿಸಿ, ಅವುಗಳಿಗೆ ಅಡ್ಡಬಿದ್ದು, ನಮಸ್ಕರಿಸಿ, ಅನಂತರ ಕಾಂಗ್ರೆಸಿಗೆ ಓಟುಕೊಟ್ಟರೆಂದರೆ ಇದರ ಅರ್ಥವೇನು? ಕೆಲವೆಡೆಗಳಲ್ಲಿ ಹಳದಿ ಬಣ್ಣದ ಬ್ಯಾಲಟ್ ಬಾಕ್ಸನ್ನು ಮೊದಲು ಹಳದಿ ಹೂಗಳಿಂದ ಪೂಜಿಸಿ ಆಮೇಲೆ ತಮ್ಮ ಮತಕೊಟ್ಟರಲ್ಲ, ಇದರ ಅರ್ಥವೇನು? ಇನ್ನು ಕೆಲವು ಪ್ರಾಂತಗಳಲ್ಲಿ ರುಗ್ಣಶಯ್ಯೆಯಲ್ಲಿ ಮಲಗಿದ್ದವರು ಹೋಗಿ ಕಾಂಗ್ರೆಸಿಗೆ ಮತಕೊಟ್ಟು ಬಂದರಂತಲ್ಲ, ಇದರ ಅರ್ಥವೇನು? ಹತ್ತಾರು ಮೈಲಿಗಳ ದೂರದಿಂದ ಬುತ್ತಿಕಟ್ಟಿಕೊಂಡು ಬಂದು, ಬಿಸಿಲಿನಲ್ಲಿ ನಿಂತು, ಮರದ ಕೆಳಗೆ ಮಲಗಿ, ಕಾಂಗ್ರೆಸಿಗೆ ಓಟುಕೊಟ್ಟರಲ್ಲ ಇದರ ಅರ್ಥವೇನು? ಹೀಗೆಯೇ ಉದಾಹರಣೆಗಳನ್ನು ನೂರಾರು ಹೇಳಬಹುದು. ಯಾಕೆ ಬೇಕಿಲ್ಲ. ಭಾರತವು ತನ್ನ ಪ್ರಧಾನ ಸಂಸ್ಥೆ ಯಾವುದೆಂಬುದನ್ನು ತೋರಿಸಿತು. ಕಾಂಗ್ರೆಸಿನ ಧ್ಯೇಯಗಳನ್ನು ಒಪ್ಪಿ ಘೋಷಿಸಿತು. ರಾಜ್ಯದಲ್ಲಿನ ರಾಜಕೀಯ ಸಂಸ್ಥೆಗಳ ಪೈಕಿ ಟೊಳ್ಳು ಯಾವುದು ಘಟ್ಟಿಯಾವುದು ಎಂಬುದನ್ನು ಸ್ಥಿರಪಡಿಸಿತು. ಇದರ ಅರ್ಥವೇನು? ಮತ್ತಾವುದೂ ಅಲ್ಲ–'ಕಾಂಗ್ರೆಸಿನ ಧ್ಯೇಯವೇ ನಮ್ಮ ಧ್ಯೇಯ; ಅದರ ಗುರಿಯೇ ನಮ್ಮ ಗುರಿ; ಸ್ವಾತಂತ್ರ್ಯವೇ ನಮ್ಮ ಲಕ್ಷ್ಯ; ಪರದಾಸ್ಯ ನಿವಾರಣವೇ ನಮ್ಮ ಆಶಯ; ಬಡತನ ನಿರ್ಮೂಲವೇ ನಮ್ಮ ಅಂತರಾರ್ಥ; ರಾಷ್ಟ್ರ ಗೌರವವೇ ನಮ್ಮ ಗೌರವ' ಎಂಬುದಾಗಿ ಇಡೀ ರಾಷ್ಟ್ರವು ಖಚಿತವಾಗಿ, ಖಂಡಿತವಾಗಿ, ವಿವಾದಕ್ಕೆ, ಸಂಶಯಕ್ಕೆ, ಆಂದೋಲನಕ್ಕೆ, ಎಡೆಯಿಲ್ಲದಂತೆ ಏಕಕಂಠವಾಗಿ ಉದ್ಘೋಷಿಸಿ ಪ್ರಕಟಗೊಳಿಸಿತು. ಕಾಂಗ್ರೆಸಿನ ಭವಿಷ್ಯದೊಂದಿಗೆ ನಮ್ಮ ಭವಿಷ್ಯವನ್ನೂ ಬೆರೆಸಿ, ಹೆಣೆದು ಫಲೋಪಭೋಗಮಾಡಲು ಸಿದ್ಧರಿದ್ದೇವೆ ಎಂದು ಪ್ರಜೆಗಳು ಹೇಳಿಬಿಟ್ಟಂತಾಯಿತು. ಇವಿಷ್ಟೂ ಈ ಚುನಾವಣೆಗಳಿಂದ ತಿಳಿದುಬಂದಂತಾಯಿತು.

ಭರತಖಂಡದಲ್ಲಿ ಈ ನವಜಾಗೃತಿಯನ್ನುಂಟುಮಾಡಲು ಕಾರಣಕರ್ತರು ಯಾರು? ಎಂದು ಪ್ರಶ್ನೆಮಾಡಿದಲ್ಲಿ ಕಾಂಗ್ರೆಸಿನ ಐವತ್ತೆರಡು ವರ್ಷಗಳ ಇತಿಹಾಸವನ್ನು ಹೇಳಬೇಕಾಗುತ್ತದೆ. ಅದರದು ಈಗ ಅಪ್ರಕೃತ. ನಾವು ಈಗ ಕೇವಲ ಈ ಚುನಾವಣೆಗಳನ್ನು ಮಾತ್ರ ವಿಹಂಗಮ ದೃಷ್ಟಿಯಲ್ಲಿ ನೋಡೋಣ. ಚುನಾವಣೆಗಳಲ್ಲಿ ಮಹತ್ತರವಾದ ಕಾರ್ಯಕ್ರಮವನ್ನು ಕೈಕೊಂಡವರೆಂದರೆ ಅವರೊಬ್ಬರೇ! ಆ ತ್ಯಾಗಮೂರ್ತಿಗಳಾದ ನಮ್ಮ ರಾಷ್ಟ್ರಪತಿಗಳು! ನಮ್ಮ ಜವಾಹರರು! ಇವರು ಕಳೆದ ವರ್ಷ ತಮ್ಮ ಪ್ರಿಯಪತ್ನಿಯನ್ನು–ತಮ್ಮ ಸುಖದುಃಖಗಳಲ್ಲಿ ಸಹಚರಣಿಯಾಗಿದ್ದ ಶ್ರೀಮತಿ ಕಮಲಾರವರನ್ನು–ಕಳೆದುಕೊಂಡಾಗ, 'ಇವರಿಗೆ ಉಂಟಾದ ಈ ದುಃಖತರಂಗದ ಮಧ್ಯೆ ಇವರು ರಾಷ್ಟ್ರಸೇವೆಯನ್ನು ಮಾಡಲು ಕೆಲಕಾಲಬೇಕಾದೀತು. ದುಃಖೋಪಶಮನವಾದ ಮೇಲೆ ಈ ಸೇವೆಗೆ ನಿಲ್ಲಬಹುದು' ಎಂದುಕೊಂಡಿದ್ದವರಿಗೆಲ್ಲರಿಗೂ ಇವರು 'ನಿಮ್ಮ ಭಾವನೆಯು ತಪ್ಪು! ನನ್ನ ದುಃಖಕ್ಕಿಂತಲೂ ನನ್ನ ರಾಷ್ಟ್ರದ ದುಃಖವೇ ಹಿರಿದಾದುದು!' ಎಂಬುದಾಗಿ ಉತ್ತರಕೊಟ್ಟಂತಾಯಿತು.

೫೦,೦೦೦ ಮೈಲಿಯ ಪ್ರಯಾಣ

ಪಂಡಿತ ಜವಾಹರಲಾಲರು ಈ ಚುನಾವಣೆಗಳಿಗಾಗಿ ಮಾಡಿದಷ್ಟು ಪ್ರವಾಸವು ಜಗತ್ತಿನಲ್ಲೇ ಮತ್ತಾರೂ ಮಾಡಿರಲಾರರೆಂದರೆ ಅತಿಶಯೋಕ್ತಿಯಲ್ಲ. ಈ ಪ್ರವಾಸಗಳ ಕಾಲದಲ್ಲಿ ಇವರು ಉಪಯೋಗಿಸದ ಸಾಧನವೇ ಇಲ್ಲ. ನಡಿಗೆ, ಬೈಸಿಕಲ್ಲು, ಕುದುರೆ, ಗಾಡಿ, ಟಾಂಗಾ, ಎಕ್ಕಾ, ಚಕ್ಕಡಾ, ಗಾಡಿ, ಮೋಟಾರು, ಮೋಟಾರು ದೋಣಿ, ಹೊಗೆಯ ದೋಣಿ, ರೈಲು, ಸ್ಪೆಶಲ್ ರೈಲು, ವಿಮಾನ, ಒಂಟೆ, ಆನೆ, ಇವೆಲ್ಲವನ್ನೂ ಉಪಯೋಗಿಸಿ ೫೦,೦೦೦ ಮೈಲಿಗಳ ಪ್ರಯಾಣಮಾಡಿದರು. ಈ ೫೦,೦೦೦ ಮೈಲಿಗಳ ಪ್ರಯಾಣವನ್ನು ಎಷ್ಟು ಅಲ್ಪ ಅವಧಿಯಲ್ಲಿ ಮಾಡಿದರೆಂಬುದನ್ನು ಹೇಳಿದರೆ ಯಾರೂ ನಂಬುವಂತಿಲ್ಲ. ವಾಯುವೇಗ ಮನೋವೇಗಗಳಂತೆ ಮಾಡಿದರು. ಎಡೆಬಿಡದೆ ಮಾಡಿದರು. ಊಟ ಉಪಚಾರಗಳಿಗೆ, ವಿಶ್ರಾಂತಿ, ವಿರಾಮಗಳಿಗೆ, ನಿದ್ದೆ ನಿಲುಕಡೆಗೆ ಪುರಸತ್ತಿಲ್ಲದಂತೆ ಸಂಚಾರಮಾಡಿದರು. ಇವರು ಕೇವಲ ಮುಖ್ಯ ನಗರಗಳಿಗೆ ಮಾತ್ರ ಹೋಗಿದ್ದರೆಂದೇನು? ಅಲ್ಲ, ಅಲ್ಲ ಅತ್ಯಂತ ಸಣ್ಣ ಹಳ್ಳಿಗೂ ಕೊನೆಗೆ ಕಾಡಿನಲ್ಲಿದ್ದ ಕುಟೀರವಾಸಿಗಳ ಸ್ಥಳಗಳಿಗೂ ಹೋಗಿ ಕಾಂಗ್ರೆಸಿನ ಸಂದೇಶವನ್ನು ಬಿತ್ತರಿಸಿದರು. ಒಂದೊಂದು ದಿನವೂ ಅನೇಕ ಲಕ್ಷಕ್ಕೆ ಮೀರಿದ ಜನಗಳಿಗೆ ತಮ್ಮ ಸಂಸ್ಥೆಯ ಧ್ಯೇಯಗಳನ್ನು ತಿಳಿಸಿ ಅಷ್ಟು ಜನರ ಮನಸ್ಸನ್ನೂ ಒಲಿಸಿಕೊಂಡರು. ಇವರು ೧೩೦ ದಿನಗಳ ಸಂಚಾರಮಾಡಿದರು. ಅದರ ಪೈಕಿ ರೈಲಿನಲ್ಲಿ ೨೫೦೦೦ ಮೈಲು, ಮೋಟಾರಿನಲ್ಲಿ ೨೦೦೦೦ ಮೈಲು ವಿಮಾನದಲ್ಲಿ ೧೬೦೦ ಮೈಲು ಇನ್ನು ಉಳಿದದ್ದನ್ನು ಸೇರಿಸಿಕೊಂಡರೆ ಹತ್ತಿರ ಹತ್ತಿರ ೫೦,೦೦೦ ಮೈಲಿ. ಒಂದೊಂದು ದಿವಸ ೧೮ ಘಂಟೆಗಳ ಕಾಲ ಏಕಪ್ರಕಾರವಾದ ಪ್ರವಾಸ ನಡೆಸಿದ್ದಾರೆ. ೨೪ ಘಂಟೆಗಳಕಾಲವೂ ಬೇಸರಪಟ್ಟುಕೊಳ್ಳದೆ ಪ್ರವಾಸಮಾಡಿದರು.

ತಾಳದೆ ಇರತಕ್ಕ ಮೂತ್ರವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧ.

"ಗೋನೋಕಿಲರ್" (ರಿಜಿಸ್ಟರ್ಡ್)

ಡಾ. ಜಸಾನಿಯವರ ಜಗತ್ಪ್ರಸಿದ್ಧ

ಪ್ರಮೇಹ ವ್ಯಾಧಿಗೆ ಸಿದ್ಧೌಷಧ

ಇಂದಿನ ಅಪ್ರತಿಮ ಔಷಧ. ಆಂಗ್ಲೇಯ ಮತ್ತು ಆಯುರ್ವೇದ ಔಷಧಗಳೊಂದೂ ಫಲಕಾರಿಯಾಗದೇ ಇನ್‌ಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ, ಒಂದಾವರ್ತಿಯಾದರೂ ಈ ನಮ್ಮ **ಗೋನೋಕಿಲರ್** ಎಂಬ ಔಷಧವನ್ನು ಉಪಯೋಗಿಸಿನೋಡಿರಿ. ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ, ಗೋನೋಕಿಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾತುವಿಕೆ, ಸರ್ವಪ್ರಕಾರದ ಪ್ರಮೇಹ (ಎಷ್ಟೇ ಹಳತು ಯಾ ಯಾವದೇ ಸ್ಥಿತಿಯಲ್ಲಿರಲಿ), ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತುಸ್ರಾವ, ಬಿಳುಪು ಹರಿಯುವದು ಇವೇ ಮೊದಲಾದ ಯಾವತ್ತು ಗೊನೋಕೋಕಸ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ.

ಬೆಲೆ 50 ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ. 3—0—0 (ಮೂರು) ವಿ. ಪಿ. ಛಾರ್ಜು ಬೇರೆ.

ನಕಲಿ ಮದ್ದುಗಳಿಗೆ ಮರುಳಾಗಿ ಮೋಸ ಹೋಗಬೇಡಿರಿ. ಕೊಂಡುಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಗಮನಿಸಿರಿ

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ, ಗಿರಿಗಾಂವ ಬ್ಯಾಕ್ ರೋಡ್, ಮುಂಬಯಿ 4.

Sole Manufacturer: Dr. D. N. JASANI, GIRGAUM BACK ROAD, BOMBAY

ಸ್ತ್ರೀವಿಭಾಗ

ಅಧ್ಯಾಪಕಿಯರು

ಅಕ್ಕಂದಿರ!

ಈಗಿನ ಕಾಲದಲ್ಲಿ ನಮ್ಮಂತಹ ಸ್ತ್ರೀಯರು ಪುಸ್ತಕಗಳನ್ನು ಕಂಕುಳಲ್ಲಿಟ್ಟುಕೊಂಡು ಶಾಲೆಗಳಿಗೆ ಹೋಗುತ್ತಿರುವುದನ್ನು ಎಲ್ಲೆಲ್ಲಿಯೂ ಕಾಣುತ್ತೇನೆ. ಆದರೆ ಕೆಲವು ವರ್ಷಗಳಿಗೆ ಹಿಂದೆ ಈ ರೀತಿ ಇರಲಿಲ್ಲ. ಹೆಂಗಸರೆಂದರೆ ಮನೆಯಲ್ಲಿ ಅಡಿಗೆ ಮಾಡಿಕೊಂಡಿರುವುದು, ಮಕ್ಕಳು-ಮರಿಗಳನ್ನು ಉಣ್ಣಿಸಿ, ಮಿಾಯಿಸಿ, ಮಲಗಿಸಿ ಆರೈಕೆಮಾಡುವುದು--ಇಷ್ಟೇ ಅವರ ಕೆಲಸನೆಂದು ಆ ಕಾಲದವರು ಭಾವಿಸಿಕೊಂಡಿದ್ದರು ಕಾಲ ಹೋದಂತೆ ಹೆಮ್ಮಕ್ಕಳೂ ಶಾಲೆಗಳಿಗೆ ಹೋಗಿ ಕಲಿಯಲಿಕ್ಕೆ ತೊಡಗಿದರು. ಆ ಮೇಲೆ ಕಲಿತ ಹುಡುಗಿಯರೇ ಶಾಲೆಗಳಲ್ಲಿ ಅಧ್ಯಾಪಕಿಯರಾಗಿ ಕೆಲಸ ನೋಡ ಹತ್ತಿದರು. ಈಗ ಎಲ್ಲೆಲ್ಲಿಯೂ 'ಮಿಸ್ಟ್ರೆಸ್'ಗಳು ಇರುವರು ಆದರೆ ಹೆಂಗಸರು ಉಪಾಧ್ಯಾಯಿನಿಯರಾಗಬೇಕೇಕೆ? ಎಂದು ಪ್ರಶ್ನಿಸುವವರೂ ಇರುವರು. ನಿರುದ್ಯೋಗವು ಬಹಳವಾಗಿ ಹೆಚ್ಚಿ ಹೋಗಿರುವ ಕಾಲ – ಮನೆಮಾರು ಮಾರಿಯಾದರೂ ಕಲಿತ ಗಂಡಸರಿಗೆ ಕೆಲಸವಿಲ್ಲ. ಇಂಥಾ ಸಮಯದಲ್ಲಿ "ಕಲಿಸುವಿಕೆ"ಯೇ ಮೊದಲಾದ ಉದ್ಯೋಗಗಳಲ್ಲಿಯೂ ಹೆಂಗಸರು ಗಂಡಸರೊಡನೆ ಸ್ಪರ್ಧಿಸ ಹತ್ತಿದರ ಮುಂದೇನು ಗತಿ? ಎಂದು ಕೇಳುವವರೂ ಇದ್ದಾರೆ. ಹೆಂಗಸರಿಗೆ ಕೆಲಸವಿಲ್ಲ ಎಂಬ ಮಾತೇ ಇಲ್ಲ. ಮನೆ ಕೆಲಸ ನೋಡಿಕೊಂಡು ಸಂಸಾರ ನಿರ್ವಹಣಮಾಡಿಕೊಂಡು ಇದ್ದರಾಯಿತು. ಅದನ್ನು ಬಿಟ್ಟು ಅಧ್ಯಾಪಕತನವೇ ಮೊದಲಾದ ಉದ್ಯೋಗಗಳಲ್ಲಿ ಸ್ತ್ರೀಯರು ಕೈಹಾಕುವುದು ಒಳ್ಳೆತಲ್ಲ ಎನ್ನುವವರೂ ಇದ್ದಾರೆ. ಇದು ಯಥಾರ್ಥವಾದ ಮಾತೆ? ಸ್ತ್ರೀಯರು ಕಲಿಸುವ ಕೆಲಸಕ್ಕೆ ಕೈಹಾಕಿ ಪುರುಷರಿಗೆ ಅನ್ಯಾಯ ಮಾಡುತ್ತಾರೆಯೆ? ಎಂಬುದನ್ನು ಒಂದಿಷ್ಟು ವಿಚಾರಿಸೋಣ. ಸ್ತ್ರೀಯರು ಉಪಾಧ್ಯಾಯಿನಿಯರಾಗುವ ಆಗತ್ಯವಿಲ್ಲವೆನ್ನುವವರು ಕೊಡುವ ಮೊದಲಿನ ಕಾರಣವೆಂದರೆ ಸಾಕಷ್ಟು ಕಲಿತು ಉದ್ಯೋಗವಿಲ್ಲದೆ ಪುರುಷರೇ ತೊಳಲುತ್ತಿರುವಾಗ ಸ್ತ್ರೀಯರು ಆ ತಡಬಡೆಯನ್ನು ಮತ್ತಷ್ಟು ಹೆಚ್ಚಿಸುವದೇಕೆ? ಎಂಬುದು. ಇದು ಪುರುಷ ಪಕ್ಷಪಾತಿಗಳ ಅನುಕೂಲ ಶಾಸ್ತ್ರ ಮಾತ್ರ. ಪುರುಷರಂತೆಯೇ ಕಲಿತ ಸ್ತ್ರೀಯರು ಮಾತ್ರ ಉಪಾಧ್ಯಾಯಿನಿಯರಾಗಲು ಸಾಧ್ಯವಿರುವುದರಿಂದ-ಪುರುಷರು ಅಧ್ಯಾಪಕರಾಗುವುದು ಉಚಿತ–ಸ್ತ್ರೀಯರು ಕಲಿಸುವುದು ಅನುಚಿತವೆಂಬುದರಲ್ಲಿ ನ್ಯಾಯವೇ ಉಳಿಯುವದಿಲ್ಲ. ಇನ್ನು 'ಸ್ತ್ರೀಯರು ನಿರುದ್ಯೋಗಿಗಳಾಗುವದೆಂದಿಲ್ಲ; ಏನಿಲ್ಲದಿದ್ದರೂ ಅವರಿಗೆ ಮನೆ ಕೆಲಸವಾದರೂ ಉಂಟಲ್ಲ'– ಎನ್ನುವ ವಾದದಲ್ಲಿ ಸ್ತ್ರೀಯರ ಅಭಿವೃದ್ಧಿಯನ್ನು ಸಹಿಸದ ಮನೋಭಾವವಿದೆ. ಸ್ತ್ರೀಯರಿಗೆ ಮನೆ ಕೆಲಸವೊಂದೇ ಗತಿಯೆನ್ನುವಾಗ ಪುರುಷರಿಗೂ ಅಂತಹ ಕೆಲಸವೇನೂ ಇಲ್ಲವೆಂದಲ್ಲ. ವಿದ್ಯೆ, ಅಭ್ಯಾಸ ಮೊದಲಾದವುಗಳನ್ನು ಉಪಯೋಗಿಸುವ ಹಕ್ಕು ಪುರುಷರಂತೆ ಸ್ತ್ರೀಯರಿಗೂ ಇದ್ದೇ ಇದೆ.

ಮಾತೃಪ್ರೇಮ

ಅಕ್ಕಂದಿರಾ! ಮತ್ತೂ ಒಂದು ವಿಷಯವಿದೆ. ಇತರ ಉದ್ಯೋಗಗಳ ಮಾತು ಹೇಗೂ ಇರಲಿ. ಅಧ್ಯಾಪಕಿಯರಾಗುವದರಲ್ಲಿ ಪುರುಷರಿಗಿಂತ ಸ್ತ್ರೀಯರಿಗೇ ಯೋಗ್ಯತೆ ಹೆಚ್ಚು. ಹೇಗೆ ಗೊತ್ತುಂಟೊ? ಶಾಲೆಯೆಂದರೇನು? ಸಣ್ಣ ಮಕ್ಕಳನ್ನು ತಿದ್ದಿ, ಬುದ್ಧಿ ಕಲಿಸಿ ಅವರು ಮುಂದೆ ಯೋಗ್ಯ ಜನಾಂಗವಾಗುವಂತೆ ಮಾಡುವ ನಿಲಯವಲ್ಲವೆ? ನೋಡಿ–ನಿಸರ್ಗಾತ್ಮಕ ಬುದ್ಧಿಯುಳ್ಳ ಮಹಾ ಪುರುಷರು ಶಿಕ್ಷಣವು ಪ್ರಕೃತಿಯ ಸ್ವಾಭಾವಿಕ ರಂಗದಲ್ಲಿ ನಡೆಯುವದೇ ಉತ್ತಮವೆಂದು ಹೇಳುತ್ತಿದ್ದಾರೆ. ಡಾ। ರವೀಂದ್ರನಾಥ ಠಾಗೋರರಂಥ ಮಹಾಜ್ಞಾನಿಗಳು ಆ ರೀತಿಯ ಬೋಧನೆಯನ್ನೇ ಕೈಕೊಂಡಿದ್ದಾರೆ. ಇದಕ್ಕೆ ಕಾರಣವೇನು ಗೊತ್ತುಂಟೆ? ವಿದ್ಯೆಯೆಂದರೆ ನಮ್ಮ ನಿತ್ಯ ವ್ಯವಹಾರದೊಡನೆ ಸಂಬಂಧವಿಲ್ಲದ ಪ್ರತ್ಯೇಕವಾದೊಂದು ಅಭ್ಯಾಸವಲ್ಲ. ಅದು ಲೋಕ ವ್ಯವಹಾರಕ್ಕೆ ಜನತೆಯನ್ನು ತಯಾರುಮಾಡುವ ಒಂದು ಸಾಧನ. ಆ ಲೋಕ ವ್ಯವಹಾರದ ಅನುಭವವು ಇದ್ದಕ್ಕಿದ್ದಂತೆ ಬರಬೇಕಾದರೆ ಪ್ರಪಂಚದೊಡನೆ ಸಂಧಾನಮಾಡಿಕೊಂಡೇ ಮುಂದುವರಿಯಬೇಕು. ವಿದ್ಯೆಯನ್ನು ಕಲಿಸುವ ರೀತಿ, ಸ್ಥಾನ ಇವೆಲ್ಲಾ ಪ್ರಕೃತಿಯ ನಿಜಾಂಶವನ್ನೊಳಗೊಂಡಿರಬೇಕು. ಈ ದೃಷ್ಟಿಯಿಂದ ನೋಡುವಾಗ ಅಧ್ಯಾಪಕಿಯರು ನಿಜವಾಗಿಯೂ ಎಳೆ ಮಕ್ಕಳ ಮನಸನ್ನರಿತುಕೊಂಡು ಅಲ್ಲಿ ಸಂಸ್ಕೃತಿಯನ್ನುಂಟುಮಾಡಲು ಅರ್ಹರು. ಮಕ್ಕಳ ಎಳಮನಸ್ಸಿಗೆ ಪ್ರಪಂಚದ ಗಹನ ವಿಷಯಗಳನ್ನು ಹೊಗಿಸುವಾಗ-ಆ ಸಂಗತಿಗಳನ್ನೆಲ್ಲಾ ಅವನ್ನು ಸುಲಭಗೊಳಿಸಬೇಕು. ಮಕ್ಕಳು ಅವುಗಳನ್ನು ಗ್ರಹಿಸುವಂತಾಗಬೇಕು. ಹಾಗಾಗಬೇಕಾದರೆ ಮೊದಲು ಕಲಿಸುವವರು ಮಕ್ಕಳ ಹೃದಯವನ್ನರಿತವರಾಗಿ ಇರುವ ಅಗತ್ಯವಿದೆ. ಈ ಗುಣವು ಸ್ತ್ರೀಯರಲ್ಲಿ ಸ್ವಾಭಾವಿಕವಾದುದು. ಮಾತೃತ್ವದ ಮಮತೆಯು ಕಲಿಯುವ ಮಕ್ಕಳಿಗೆಬೇಕಾಗಿದೆ. ಆ ಮಮತೆಯು ಬಲದಿಂದಲೆ ವಿಷಯಗಳನ್ನು ಮಕ್ಕಳು ಮುದ್ದುಮುದ್ದಾಗಿ ಕಲಿತು ಬಿಡುತ್ತವೆ. ಪುರುಷರು ಅದನ್ನು ಕೃತ್ರಿಮವಾಗಿ ಮಾಡಿ ತೋರಿಸಬೇಕಾಗುವುದು. ಅವರ ಆರೈಕೆಯಲ್ಲಿ ಮಾಧುರ್ಯವು ಕಡಿಮೆ. ಮಕ್ಕಳಮೇಲಿನ ಮಮತೆಯೆಂಬುದು ಮಾತೃತ್ವದಲ್ಲಿ ತುಂಬಿರುವ ಪ್ರಪಂಚದ ಒಂದು ಅಮೂಲ್ಯ ಗುಣ. ಅದು ಸಾಧನೆಯಿಂದ ಅಭ್ಯಾಸದಿಂದ ಒದಗುವಂತಹದಲ್ಲ. ಅಧ್ಯಾಪಕರಿಗೆ ಮಕ್ಕಳೊಡನೆ ಹೊಕ್ಕು ಬಳಕೆಯುಳ್ಳವರಾಗಿ ಅದು ಬೇಕಾಗುತ್ತದೆ. ಆದ್ದರಿಂದ ಅವರದನ್ನು ಸಾಧಿಸಿ ತೋರಿಸುತ್ತಾರೆ ಸ್ತ್ರೀಯರಾದರೆ ಹಾಗಲ್ಲ; ಅವರಲ್ಲಿ ಸಹಜವಾದ ಮಾತೃ ಹೃದಯವಿದೆ. ಮಕ್ಕಳಲ್ಲಿ ಮಮತೆಯಿಡುವುದು ಅವರ ಗುಣವಾಗಿದೆ. ಆ ಗುಣದೊಡನೆ ಕಲಿಸುವ ಎಲ್ಲಾ ಪಾಠಗಳನ್ನೂ ಮಕ್ಕಳು ಸಹಜವಾಗಿ ಗ್ರಹಿಸಬಲ್ಲವು. ಅವುಗಳನ್ನು ತಿಳಿದುಕೊಳ್ಳುವಾಗ ಕಷ್ಟ, ಹೆದರಿಕೆ ಉಂಟಾಗದಿರುವಾಗ ಅವು ಉಲ್ಲಾಸದಿಂದ ತಿಳಕೊಳ್ಳುವವು. ಹೀಗೆ ಅಧ್ಯಾಪಕಿಯರು ತಮ್ಮ ಸ್ವಾಭಾವಿಕ ಮಾತೃ ಪ್ರೇಮದಿಂದ ವಿಷಯಗಳನ್ನು ಮಕ್ಕಳಿಗೆ ಸುಗಮವಾಗಿ ಕಲಿಸಬಲ್ಲರಾದುದರಿಂದ ಪುರುಷ ಬೋಧಕರಿಗಿಂತ ಅವರು ಎಷ್ಟೋ ಉತ್ತಮರೆನ್ನಬಹುದು.

ಸಹನಾಗುಣ

ಕಲಿಸುವಿಕೆಯಲ್ಲಿ ಸ್ತ್ರೀಬೋಧಕರಿಗಿರುವ ಇನ್ನೊಂದು ಮಹತ್ವಾದ ಯೋಗ್ಯತೆಯೆಂದರೆ ಅವರಲ್ಲಿರುವ ತಾಳ್ಮೆ. ಸಣ್ಣ ಮಕ್ಕಳೆಂದರೆ ವಿಧಿನಿಯಮಗಳ ಪರಿಚಯವಿಲ್ಲದ ಪೋಕರೇ ಸರಿ! ಪ್ರಾಪಂಚಿಕ ನಿಯಮಗಳ ಪರಿಚಯವನ್ನು ಮಾಡಿಕೊಡುವದೇ ಬೋಧಕರ ಕೆಲಸ. ಹೀಗೆ ತಿಳಿಯದವರಿಗೆ ತಿಳಿಸುವ ಕೆಲಸವೇ ಪ್ರಪಂಚದ ಮಹಾ ಕಷ್ಟಗಳಲ್ಲೊಂದು. ಬೋಧಕನಲ್ಲಿ ಅಷ್ಟು ತಾಳ್ಮೆಯಿರಬೇಕಾಗುತ್ತದೆ. ತಮ್ಮನ್ನು ಸ್ವೇಚ್ಛಾಪರ ವರ್ತನೆಯಿಂದ ತಪ್ಪಿಸಿ, ಎಲ್ಲಿಗೋ ಕೊಂಡುಹೋಗುವ ಬೋಧಕರ ಹಿಡಿತದಿಂದ ಪಾರಾಗಲು ಮಕ್ಕಳ ಮನಸ್ಸು ಸದಾಕಾಲ ಹಾತೊರೆಯುತ್ತಿರುತ್ತದೆ. ಆದ್ದರಿಂದ ಅಧ್ಯಾಪಕ-ಅಧ್ಯಾಪಕಿಯರ ಕೆಲಸವು ಮಕ್ಕಳಿಗೆ ಎಳ್ಳಷ್ಟೂ ಹಿತವೆನ್ನಿಸುವದಿಲ್ಲ. ಆದರೆ ಅದರಿಂದ ಬಿಡುಗಡೆ ಹೊಂದಲು ಅವರು ಅಶಕ್ತರು. ಕಲಿಸುವಾಗ ಅವರನ್ನು ಹಿಡಿದಿಟ್ಟುಕೊಳ್ಳುವ ಕೆಲಸವೇನೋ ಸುಲಭದಲ್ಲಾಗುತ್ತದೆ; ಅವರ ಮನಸ್ಸನ್ನು ಹಿಡಿದುನಿಲ್ಲಿಸುವ ಕೆಲಸ ಮಾತ್ರ ಅಷ್ಟೊಂದು ಸುಲಭವಲ್ಲ. ಅದಕ್ಕೆ ಹೆಚ್ಚಿನ ತಾಳ್ಮೆಬೇಕು. ಆ ತಾಳ್ಮೆಯಾದರೂ ಸ್ತ್ರೀಯರಲ್ಲಿದೆ ಹೊರತು ಪುರುಷರಲ್ಲಿಲ್ಲ. ಕೆಲವರು ಮಕ್ಕಳ ಕಂಡಾಬಟ್ಟೆಯನ್ನು ತಡೆಯಲಾರದೆ ಪ್ರತಿಯಾಗಿ ಅದೇ ರೀತಿಯ ಪಿಕಿಲಾಟದಿಂದ ಮಕ್ಕಳನ್ನು ಜಯಿಸಿಬಿಡುತ್ತಾರೆ. ಇದರಿಂದ ಅವರು ಆಗಿನ ಗಂಡಾಂತರದಿಂದ ಪಾರಾದರಂತಾಯಿತೇ ಹೊರತು ತಮ್ಮ ಧ್ಯೇಯವನ್ನೇನೂ ಸಾಧಿಸಿದಂತಾಗುವದಿಲ್ಲ. ಮಾತ್ರವಲ್ಲ ಆ ರೀತಿ ಮಕ್ಕಳನ್ನು ಸೋಲಿಸಿ ಅವರಿಗೊಂದು ಅನ್ಯಾಯವನ್ನೇ ಮಾಡಿಬಿಡುತ್ತಾರೆ. ಅದು ತಾಳ್ಮೆಯಿಲ್ಲದುದರ ಪರಿಣಾಮ. ಆ ತಾಳ್ಮೆಯು ಸ್ತ್ರೀಯರಲ್ಲಿದೆ ಅವರು ತಾಳಿಯೇ ಬಾಳುವವರು. ತಾಳ್ಮೆಯು ಅವರ ಹುಟ್ಟುಗುಣ ಚಿಕ್ಕ ಮಕ್ಕಳ ಪುಂಡಾಟವನ್ನು ಮೃದುವಾಗಿ ನಿವಾರಿಸಿ, ಸಂತೈಸಿ ಅವರೊಡನೆ ಹೊಕ್ಕು ಬಳಕೆಯುಳ್ಳದ್ದೇ ಜೀವನದ ಬೆಳಕನ್ನು ತೋರಿಸಬೇಕಾದರೆ ಸ್ತ್ರೀಬೋಧಕರೇ ಆಗಬೇಕು. ಆದ್ದರಿಂದ ಈ ಕಾಲದಲ್ಲಿ ಅಧ್ಯಾಪಕಿಯರು ಹೆಚ್ಚಾಗುವ ಅಗತ್ಯವಿದೆ, ಅಕ್ಕಂದಿರಾ! ಸ್ತ್ರೀಯರಲ್ಲಿರುವ ಮಾತೃಪ್ರೇಮ, ಸಹನಾಗುಣ ಮೊದಲಾದ ಅಮೂಲ್ಯ ಗುಣಗಳು ಸಮಾಜದ ಹಿತಕ್ಕೆ ಉಪಯೋಗಿಸಲ್ಪಡಬೇಕಾದರೆ ಅವರಿಗೆ ಅಧ್ಯಾಪಕತನದಂಥ ಉದ್ಯೋಗಗಳು ದೊರಕಬೇಕು.

ಇತಿ ನಿಮ್ಮ ಸಹೋದರೀ,

'ಸರೂ'

ಪೇಟೆಧಾರಣೆ

ಸಾಮಗ್ರಿಗಳು	ಮಂಗಳೂರು ಇಂದ	ಮಂಗಳೂರು ವರೆಗೆ	ಉಡುಪಿ ಇಂದ	ಉಡುಪಿ ವರೆಗೆ
ರಾಶಿ ಅಕ್ಕಿ …	3 – 6	3—10	3— 0	3— 4
ಮಸ್ಕತಿ …	3— 8	4 - 4	3 -12	4— 4
ಗುಡ್ಡೆ ಸುಗ್ಗಿ …	3—10	3 - 14	3— 0	3— 4
ಸೂರ ಅವ್ವಲ್ ಬೆಳ್ತಿಗೆ …	4— 0	4 — 4	4— 0	4— 8
ರಂಗೂನು ಬೆಳ್ತಿಗೆ ಗೋಣಿ ೧ಕ್ಕೆ	7— 0	7— 4	7— 0	7— 8
ಗೋಧಿ ಗೋಣಿ ೧ಕ್ಕೆ …	11— 0	13— 0	13 — 8	14— 0
ತೊಗರಿ ಗೋಣಿ ೧ಕ್ಕೆ …	9— 8	12— 8	12— 0	13— 0
ಹುರುಳಿ ಗೋಣಿ ೧ಕ್ಕೆ …	5 — 0	5 — 6	5— 0	5— 8
ಕಡಲೆ ಗೋಣಿ ೧ಕ್ಕೆ …	8— 0	12— 8	8 - 8	8—12
ತೊಗರಿಬೇಳೆ ಗೋಣಿ ೧ಕ್ಕೆ	11— 0	19— 0	11— 0	17— 0
ಉದ್ದು ಗೋಣಿ ೧ಕ್ಕೆ …	9— 0	9— 8	8— 4	8— 8
ಹೆಸರು ಗೋಣಿ ೧ಕ್ಕೆ …	7 —12	8— 0	9— 4	9— 8
ಸೂರಬೆಲ್ಲ ಖಂಡಿ ೧ಕ್ಕೆ ..	30— 0	32— 8	20— 0	30— 0
ಉಪ್ಪು ಗೋಣಿ ೧ಕ್ಕೆ ..	4 - 2	5— 4	4— 4	4—12
ಕೊಬ್ರಿ ಖಂಡಿ ೧ಕ್ಕೆ …	75— 0	84— 0	75— 0	85-- 0
ಕೊಬ್ರಿ ಹಿಂಡಿ ಖಂಡಿ೧ಕ್ಕೆ	26— 8	28 - 8	27— 0	28— 8
ಎಳ್ಳಿಂಡಿ ಖಂಡಿ ೧ಕ್ಕೆ …	26— 4	27— 8	20— 0	21— 4
ಕೊಬ್ರಿ ಎಣ್ಣೆ ಮಣ ೧ಕ್ಕೆ	6 — 0	7— 0	7— 0	7—12
ಎಳ್ಳೆಣ್ಣೆ ಮಣ ೧ಕ್ಕೆ …	7— 0	…	6 — 0	6— 4
ಚಿಮಿಣಿ ಎಣ್ಣೆ ಪೆಟ್ಟಿಗೆ೧ಕ್ಕೆ	6— 5	7 – 5	6— 2	6— 8
ಮೋರಿಸ ಸಕ್ಕರೆ ಮ ೧ಕ್ಕೆ	3— 2	3— 4	2--15	3— 2
ಮೆಣಸು …	2— 8	5 -- 0	3 — 0	3— 4
ಸಾಸಿವೆ ಮುಡಿ ೧ಕ್ಕೆ …	5— 4	5- 8	5— 8	5—12
ಕೊತ್ತಂಬರಿ ಮುಡಿ ೧ಕ್ಕೆ …	2— 8	3 – 0	2—12	3— 8
ಕಾಳುಮೆಣಸು ಖ. ೧ಕ್ಕೆ..	100— 0	120 – 0	110 - 0	120 – 0
ಗೇರುಬೀಜ ಮ ೧ಕ್ಕೆ …	3 – 4	3 – 8	4— 4	…
ಕಬ್ಬಿಣ ಖಂಡಿ ೧ಕ್ಕೆ …	35— 0	37— 8	45— 8	50 — 0
ತಾಂಬ್ರ ತಗಡು ಮ ೧ಕ್ಕೆ	12— 4	12— 8	14— 8	…
,, ಪಾತ್ರಗಳು ಮ ೧ಕ್ಕೆ	12 — 8	14— 0	16— 0	17— 0
ಚೀನ ಬೆಳ್ಳಿ ಸೇರು ೧ಕ್ಕೆ…	13— 8	15— 0	13 —12	14— 0
ಹಿತ್ತಾಳೆ ತಗಡು ಮ ೧ಕ್ಕೆ	10 — 0	10 — 8	11— 0	…
ಪವನು ೧ಕ್ಕೆ …	22— 7	22— 8	22 – 8	…
ಹುಣಸೆ ಹುಳಿ ಖಂಡಿ ೧ಕ್ಕೆ	40— 0	45— 0	45 -- 0	50— 0
ನೇಟಿವ್ ಕಾಫಿ ಖಂಡಿ ೧ಕ್ಕೆ	170— 0	180 - 0	160— 0	170— 0
ಫಿಬೇರಿ ಕಾಫಿ ಖಂಡಿ ೧ಕ್ಕೆ	175— 0	195— 0	170 — 0	187— 8
ಮಡಿಕೇರಿ ಏಲಕ್ಕಿ …	50— 0	55 — 0	70— 0	75— 0
ತುಪ್ಪ ಮಣ ೧ಕ್ಕೆ …	17 — 0	18 — 0	14— 0	15— 0
ಏಲಕ್ಕಿ ಬೀಜ ಮಣ ೧ಕ್ಕೆ	80— 0	85— 0	70— 0	80 -- 0

ಪ್ರಾಮುಖ್ಯ ಪ್ರಕಟಣೆ

ಅಮೃತಾಂಜನ

— ಡಿಪೋವಿನ ರಿಂಗ್‌ವರ್ಮ್ ಮುಲಾಮು —

ಇಷ್ಟರ ವರೆಗಣ ನಮ್ಮ
ವಿಲಿಯಮ್ ಎಂಡ್ ಕೋ ರವರ
ರಾಜ ಮತ್ತು ರಾಣಿಯ ಟ್ರೇಡ್‌ಮಾರ್ಕುಳ್ಳ ರಿಂಗ್‌ವರ್ಮ್ ಮುಲಾಮು ಈ ಕೆಳಗಣಂತೆ ವ್ಯತ್ಯಾಸಮಾಡಲಾಗಿದೆ.

ಅಮೃತಾಂಜನ ಡಿಪೋವಿನ ತ್ರಿವರ್ಣದ 'ರೈಸಿಂಗ್ ಸನ್'

ಈ ಮೇಲಿನ ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು ನಮ್ಮ ಗಿರಾಕಿದಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು.

ನಮ್ಮ ಟ್ರೇಡ್‌ಮಾರ್ಕಿನ ಮಾರ್ಪಾಟದಿಂದ ನಮ್ಮ ಔಷಧ ತಯಾರಿಯಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲೆಂಬ ಕುರಿತು ನಾವು ಈ ಮೂಲಕ ಭರವಸೆ ಕೊಡುತ್ತೇವೆ.

ಅಮೃತಾಂಜನ ಡಿಪೋ, — ಬೊಂಬಾಯಿ, ಮದ್ರಾಸು, ಕಲ್ಕತ್ತ.

ಕೇವಲ ಎರಡೇ ಆಣೆಗಳಲ್ಲಿ ೨೫ ರೂಪಾಯಿ ಬಹುಮಾನ

ಅಖಿಲ ಕನ್ನಡ ನಾಡಿಗೆ ಪ್ರೀತಿಯಾಗಿರುವ

ಕಥಾಕುಂಜ (ಮಾಸಪತ್ರಿಕೆ)

ನಯನಮನೋಹರವಾಗಿ ಹೊಸ ಹೊಸ ಏರ್ಪಾಡುಗಳಿಂದ ಅಲಂಕೃತವಾಗಿ ಡಿಸೆಂಬರದಲ್ಲಿ ೩ನೆಯ ವರುಷದ ೧ನೆಯ ಸಂಚಿಕೆಯು ಪ್ರಕಟವಾಗುವದು ಅದ್ದರಿಂದ ಕನ್ನಡಾಭಿಮಾನಿಗಳು ಈಗಲೆ ಮುಂಗಡ ಹಣ ಕಳುಹಿಸಿ ಚಂದಾದಾರರಾಗಬೇಕು

ಚಂದಾದಾರರಿಗೆ ೨೫ ರೂಪಾಯಿ ಬಹುಮಾನ.

ಈ ಸಂಧಿ ಕಳಕೊಳ್ಳಬಾರದು ಕಥಾಕುಂಜವನ್ನು ಕೊಂಡುಕೊಳ್ಳಲು ಎಲ್ಲರಿಗೂ ಅನುಕೂಲವಾಗಲೆಂದು ಚಂದಾ ಹಣವನ್ನು ಇಳಿಸಲಾಗಿದೆ
ಇಳಿಸಿದ ಚಂದಾ ೧-೮-೦ (ಅಂಚವೆಚ್ಚ ಬೇರೆ) ಶಾಲೆ, ಕಾಲೇಜು, ಲೈಬ್ರರಿಗಳಿಗೆ ೨-೮-೦
ಮೈಸೂರು ಮುಂಬೈ ವಿದ್ಯಾಖಾತೆಯವರಿಂದ ಶಾಲೆ ಕಾಲೇಜುಗಳ ವಾಚನಾಲಯಕ್ಕೆ ಮಂಜೂರಾಗಿದೆ. ಜಾಹೀರಾತುದಾರರಿಗೆ ಸುವರ್ಣಸಂಧಿ! ಪತ್ರಿಕೆಗಳನ್ನು ಮಾರಾಟಮಾಡಲು, ಎಲ್ಲಾ ನಗರಗಳಲ್ಲಿ ಪ್ರಾಮಾಣಿಕ ಏಜಂಟರು ಬೇಕು.

ವಿಶೇಷ ಮಾಹಿತಿ ಹಸ್ತಪತ್ರಿಕೆ ನೋಡಿರಿ

ವ್ಯವಸ್ಥಾಪಕ— **ಕಥಾಕುಂಜ, ಬೆಳಗಾಂವಿ.**

DIAMONDS! DIAMONDS!!

K. Ramachandra Krishna Shet

Near Mission High School, *Mangalore*

SUPERFINE UP TO DATE CUTTING! **ವಜ್ರಗಳು** BEST BRILLIANCY!!

ಉತ್ಕೃಷ್ಟ ತರಗತಿಯ ಚುನ್ನಾತ (first quality, selected) ಎಮ್ ಸ್ಟ್ರಡಮ್ಮಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ. ಕೊಂಡುಕೊಳ್ಳುವವರಿಗೆ ಬಜಾರ ಧಾರಣೆಗಿಂತ ೮ ಪರ್ಸಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ. ಇದನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ. ಇದರ ಶಾಖೆಯೊಂದನ್ನು ಗವರ್ನ್‌ಮೆಂಟ್ ಕೊಲೇಜಿನ ಎದುರುಗಡೆ ತೆರೆಯಲಾಗಿದೆ

ಕೆ. ರಾಮಚಂದ್ರ ಕೃಷ್ಣ ಶೇಟ್,
ಜುವೆಲರ್, ಮಿಶನ್ ಹೈಸ್ಕೂಲು ಬಳಿ, ಮಂಗಳೂರು.

ಕಿರಿಯರ ಪ್ರಪಂಚ

೧	ನಾಟಕಥೆ	೦	೨	೦
೨	ಮುಂದಿನ ದೇವರು	೦	೨	೦
೩	ಸ್ವತಂತ್ರ ಜೀವನೋಪಾಯ	೦	೨	೬
೪	ಕುಶ-ಲವ	೦	೪	೦
೫	ಸಂಶಯ ಪಿಶಾಚಿ	೦	೬	೦
೬	ಕಾವ್ಯಸಾಮ್ರಾಜ್ಯ	೦	೧೨	೦
೭	ಮಧುವನ	೧	೮	೦
೮	ವ್ಯಭಿಚಾರಿಣಿ ಯಾರು	೦	೮	೦

ಕಿರಿಯರ ಪ್ರಪಂಚ, ಉಡುಪಿ.

ಭಾಷಾಂತರಕಾರರು

ದೊರೆಯದೆ ಪೇಚಾಡುವಿರೇಕೆ?

ಇನ್ಶೂರೆನ್ಸ್ ಕಂಪನಿ, ಬ್ಯಾಂಕು ಮೊದಲಾದುವುಗಳಿಗೆ ಸಂಬಂಧಪಟ್ಟ ಮತ್ತು ಇತರ ಎಲ್ಲಾ ತರದ ಇಂಗ್ಲಿಷ್ ಕನ್ನಡ ಭಾಷಾಂತರಗಳನ್ನು ಉತ್ತಮ ರೀತಿಯಿಂದ ಮಾಡಿಕೊಡಲಾಗುವುದು. ಹೆಚ್ಚಿನ ವಿವರಕ್ಕೆ ಈ ಕೆಳಗಿನ ವಿಳಾಸ ದೊಡನೆ ಪತ್ರವ್ಯವಹಾರ ಮಾಡಬೇಕು.

'ಟ್ರಾನ್ಸ್‌ಲೇಟರ್,'
C/o 'ಕಿರಿಯರ ಪ್ರಪಂಚ,'
ಉಡುಪಿ.

ಉತ್ತಮ ವರ್ಗದ ಶ್ರೇಷ್ಠವಾದ **ಸರಸ್ವತಿ** ಸ್ತ್ರೀಸಾಹಿತ್ಯ ಸಚಿತ್ರ ಮಾಸಪತ್ರಿಕೆ

ಇಡೀ ಕರ್ಣಾಟಕದಲ್ಲಿ ಸ್ತ್ರೀಯರ ಅಭ್ಯುದಯಕ್ಕಾಗಿ ಪ್ರಚುರಪಡಿಸುತ್ತಿರುವ ಪತ್ರಿಕೆಯು ಇದೊಂದೇ. ಈ ಪತ್ರಿಕೆಯ ಹದಿನಾರನೆಯ ಸಂಪುಟವು 1937ನೇಯ ಜನವರಿ ತಿಂಗಳಿನಿಂದ ಪ್ರಾರಂಭವಾಗಿದೆ. ಈ ಪತ್ರಿಕೆಯಲ್ಲಿ ಸ್ತ್ರೀಯರ ಉನ್ನತಿಗೆ ಅತ್ಯಾವಶ್ಯಕವಾದ ಶಿಕ್ಷಣ-ಸಾಹಿತ್ಯ-ಕಲೆ-ಆರೋಗ್ಯ-ಪಾಕಶಾಸ್ತ್ರ-ಸಮಾಜ ಸುಧಾರಣೆ ಇವುಗಳಿಗೆ ಸಂಬಂಧಪಟ್ಟ ಲೇಖನಗಳೂ, ಸಣ್ಣ ಸಣ್ಣ ಕಥೆಗಳೂ, ನಾಟಕಗಳೂ ಕರ್ಣಾಟಕದ ಸುಪ್ರಸಿದ್ಧ ಲೇಖಕ ಲೇಖಕಿಯರಿಂದ ಬರೆಯಲ್ಪಟ್ಟು ಪ್ರಕಟವಾಗುವವು. ಮಕ್ಕಳ ಸಲುವಾಗಿ 'ಮಕ್ಕಳ ಪುಟಗಳು' ಬೇರೆ ಪ್ರಕಟವಾಗುವುವು ಮೈಸೂರು, ಮುಂಬೈ ವಿದ್ಯಾ ಇಲಾಖೆಯವರಿಂದ ಸರ್ಕಾರದ ಶಾಲೆಗಳಿಗೂ ವಾಚನಾಲಯಗಳಿಗೂ ಮಂಜೂರಾಗಿದೆ ಪ್ರಕಟಣೆಗೆ ಅತ್ಯುತ್ತಮವಾದ ಮಾಸಪತ್ರಿಕೆ.
ವಾರ್ಷಿಕ ಚಂದಾ ರೂ 3—0—0 ಮಾತ್ರ. ವಿ ಪಿ ಹಾಸಲುಬೇರೆ.

ಸರಸ್ವತಿ ಕಾರ್ಯಾಲಯ,
ಚಾಮರಾಜಪೇಟೆ, ಬೆಂಗಳೂರು ನಗರ

ದಿ ನ್ಯೂ ಗ್ಲಾಸ್ ಎಂಪೋರಿಯಮ್

ಪ್ರೋನ್ಸ್ಪೆಕ್ಟ್ ರೋಡ್, ಉಡುಪಿ

ನಮ್ಮಲ್ಲಿ ಎಲ್ಲಾ ತರದ ಗ್ಲಾಸ್‌ವೇರ್, ಎನಾಮಲ್‌ವೇರ್ ಪೋರ್ಸಲಿನ್‌ವೇರ್, ಲೇಂಪ್ಸ್ ಲಾಟಾನು, ಪೆಟ್ರಮೆಕ್ಸ್ ಇತ್ಯಾದಿ ಎಲ್ಲಾ ತರದ ಸಾಮಾಗ್ರಿಗಳು ಮತ್ತು ಹೊಟೇಲು-ಹೊಸ್ಟಲುಗಳಿಗೆ ಉಪಯುಕ್ತವಾದ 'ಟೀಸೆಟ್' ಕಪ್ಸ್-ಸಾಸರ್, ಪ್ಲೇಟ್ಸ್, ಥರ್ಮಸ್‌ಫ್ಲಾಸ್ಕ್, ಜಗ್, ಟ್ರೇಸ್ಲವರ್ ವೇಜ್, ಮತ್ತು ಪ್ರಜಂಟೇಶನ್ ಬಗ್ಗೆ ನಾನಾತರದ ಚಲೋ ಫನ್ಸಿ, ಗ್ಲಾಸ್‌ವೇರ್ ಸಾಮಾನುಗಳೂ ಸದಾ ಕಡಿಮೆ ಬೆಲೆಗೆ ಸಿಕ್ಕುವುವು

ನಾವು ಹೊಸತಾಗಿ ಎಲ್ಲಾ ಸಾಮಾನುಗಳನ್ನು ಡೈರೆಕ್ಟ್ ತರಿಸಿರುವುದರಿಂದ ಯಾವತ್ತೂ ಸಾಮಾನುಗಳು ಕಡಿಮೆ ಬೆಲೆಗೆ ಕೊಡಲು ಅನುಕೂಲವಿದೆ ಕಾರಣ ಗ್ರಾಹಕರು ಸ್ವತಹಾ ನಮ್ಮ 'ಶೋರೂಮ್'ನ್ನು ಸಂದರ್ಶಿಸಿ ಮಾಲನ್ನೂ, ದರಗಳನ್ನೂ ಪರಿಶೀಲಿಸಿ ಕೊಂಡುಕೊಳ್ಳಬೇಕಾಗಿ ವಿನಂತಿ

THE GENERAL STORES, UDIPI

The only Reliable House for quality goods of every description

---

ದೀರ್ಘಕಾಲದ ರೋಗಗಳಿಂದ ಇನ್ನೂ ಇನ್ನೂ ವೃಥಾ ನರಳುತ್ತಿರುವುದೇಕೆ?

ನಾಯಕ್ ಬ್ರದರ್ಸರ ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕ.

ಇವರ ಅತ್ಯಮೂಲ್ಯವಾದ ಔಷಧಗಳ ಸೇವನೆಯಿಂದ ಶೀಘ್ರದಲ್ಲೇ ಗುಣಹೊಂದಬಹುದಲ್ಲವೇ?

ಇವರ ಔಷಧಗಳ ವೈಶಿಷ್ಟ್ಯ ಏನು?

- ದೇಶೀಯ ಉದ್ಯಮ
- 100 ವರ್ಷಗಳ ಅನುಭವದಿಂದ ತಯಾರಿ
- ಶಾಸ್ತ್ರೀಯ ರೀತಿಯ ಪದ್ಧತಿ
- ಅತ್ಯಂತ ಗುಣಕಾರಿ
- ಸ್ವರ್ಣ, ರಜತಪದಕಗಳನ್ನು ಪಡೆದ ದಿವ್ಯೌಷಧಗಳು
- ಅತ್ಯಂತ ಕಡಿಮೆ ಬೆಲೆ

ಭುವನೇಂದ್ರ ತ್ರೈರತ್ನಗಳು

ಗುಡಪಿಪ್ಪಲಿ
(ಮಕ್ಕಳ ಲೀವರ್ ರೋಗಕ್ಕೆ ಅತ್ಯುತ್ತಮ)

ಗರ್ಭಪಾಲ
(ಗರ್ಭಶೂಲೆ, ಗರ್ಭಸ್ರಾವಕ್ಕೆ ದಿವ್ಯೌಷಧ)

ಚಂದ್ರಮಾಸ್
(ವಾಂತಿಭೇದಿ, ಅತಿಸಾರಗಳ ವೈರಿ
(ಅತ್ಯಂತ ಗುಣಕಾರಿ)

ಶಾಸ್ತ್ರೀಯರೀತ್ಯಾ ತಯಾರಿಸಿದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲಗಳು—ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ
ನಮ್ಮ ಪ್ರತಿನಿಧಿಗಳಿಲ್ಲದ ಕಡೆಗಳಲ್ಲಿ ವ್ಯವಹಾರಕುಶಲರೂ, ವ್ಯಾಪಕರೂ, ಯೋಗ್ಯರೂ, ಆದ ಏಜಂಟರು ಬೇಕು ಅವರಿಗ ವಿಶೇಷ ಸವಲತ್ತುಗಳಿವೆ

ಹೆಚ್ಚಿನ ಮಾಹಿತಿಗೂ, ಸೂಚಿ ಪತ್ರಕ್ಕೂ, ವ್ಯವಹಾರನಿಯಮಕ್ಕೂ ಬರೆಕೊಳ್ಳಿರಿ.

ಪ್ರೇಮ ವಿದ್ಯಾಪೀಠ, ತುಂಗಭದ್ರಾ, (ಬಳ್ಳಾರಿ ಜಿಲ್ಲಾ)

ಇದರ ಹೊಸವರ್ಷವು ಜುಲೈಯಲ್ಲಿ ಮೊದಲಾಗುತ್ತದೆ. ಮರ್ಯಾದೆಯ ಉದ್ಯೋಗ ಬೇಕಾಗಿದ್ದರೆ ಇಲ್ಲಿ ಶಿಕ್ಷಣವನ್ನು ಪಡೆಯಿರಿ ಮುಲ್ಕಿ, ಅಪ್ಪರ್ ಸೆಕೆಂಡರಿ, ಮೆಟ್ರಿಕ್ ಸ್ಕೂಲ್ ಫೈನಲ್ ಇತ್ಯಾದಿ ಪಾಸ್ ಆದವರೆಲ್ಲರಿಗೂ ಯೋಗ್ಯತೆಗೆ ತಕ್ಕಂತೆ ವಿಧ ವಿಧವಾದ ಕೋರ್ಸ್ ಗಳಿವೆ. ಪ್ರಾಸ್‌ಪೆಕ್ಟಸ್ ಮಾಹಿತಿಗಾಗಿ ಕೂಡಲೆ ೨ ಆಣೆ ಸ್ಟಾಂಪು ಇಟ್ಟು ಬರೆಯಿರಿ.

ಮಹೋಪಾಧ್ಯಾಯಾ ಡಾ॥ ಸುಮತಿಬಾಯಿ,

ಬಿ. ಎ. ಎಲ್. ಟಿ., ಎಫ್, ಹಿ. ಎಮ್. ಎಸ್. ಭಿಷಗ್ರತ್ನ, ರಿಜಿಸ್ಟ್ರಾರ್-

ನ್ಯೂ ಕೋಮಲ ವಿಲಾಸ ಹೋಟೆಲ್

91-101 ಕೆವಾಸ್ಜಿ ಪಟೇಲ್ ಸ್ಟ್ರೀಟ್, ಫೋರ್ಟ್, ಬೊಂಬಾಯಿ

—·— ನೀವು —·—

ಬೊಂಬಾಯಿಯನ್ನು ಸಂದರ್ಶಿಸುವಾಗ

ನ್ಯೂ ಕೋಮಲ ವಿಲಾಸ

ಇಲ್ಲಿಯೇ ಉಳಕೊಳ್ಳಿರಿ

ಅತ್ಯಾಧುನಿಕ ರೀತಿಯ ಸಲಕರಣೆಗಳು ಸುಲಭದರದಲ್ಲಿ ದೊರೆಯುತ್ತವೆ!

ನಿಮ್ಮನ್ನು ತೃಪ್ತಿಗೊಳಿಸುವ ಮೇಲ್ವಿಚಾರ!

ಕಾಯಂ ಉಳಕೊಳ್ಳುವವರಿಗೆ ರಿಯಾಯತಿಯ ದರಗಳಿವೆ.

ಕುಟುಂಬ ಸಮೇತ ವಾಸಿಸುವರೆ ಪ್ರತ್ಯೇಕ ಏರ್ಪಾಡುಗಳಿವೆ.

ಹೆಚ್ಚಿನ ವಿವರಗಳನ್ನು ಕೆಳಗಿನವರಿಂದ ತಿಳಿಯಿರಿ.

ಕೆ. ವಿ. ರಾವ್, ಮೆನೇಜರ್.

ಮಾಸ] **ವಿಶ್ವವಾಣಿ** [ಪತ್ರಿಕೆ.

ಸಂಪಾದಕರು:—ಅ. ನ. ಕೃಷ್ಣರಾಯರು.

ಸಂಸ್ಕೃತಿಯ ಪ್ರಸಾರಕ್ಕಾಗಿ ಕರ್ನಾಟಕದಲ್ಲಿ ಹೊರಟಿರುವ ಪತ್ರಿಕೆ ಇದೊಂದೇ. ಜಗತ್ತಿನ ಸಾಂಸ್ಕೃತಿಕ ಚಲನವಲನಗಳ ಸುದ್ದಿಗಳೆಲ್ಲಾ ಇದರಲ್ಲಿ ಪ್ರಕಟವಾಗುತ್ತವೆ.

ಚಿತ್ರವಿಭಾಗದ ವೈಶಿಷ್ಟ್ಯ—ಜಗತ್ತಿನ ಯಾವದೇ ಪತ್ರಿಕೆಯಲ್ಲಿಯೂ ಪ್ರಕಟವಾಗದಿರುವ ಅನೇಕ ಚಿತ್ರಗಳು 'ವಿಶ್ವವಾಣಿ'ಗೆ ಮೀಸಲು.

ಆದುದರಿಂದ ಇಂದೇ ಚಂದಾದಾರರಾಗಿರಿ.

ಸಾಮಾನ್ಯ ಚಂದಾದಾರರಿಗೆ (ವರ್ಷಕ್ಕೆ)	... ...	ರೂ. ೩—೮—೦
,, ,, (೬ ತಿಂಗಳಿಗೆ)	... ...	ರೂ. ೨—೦—೦
ಶಾಲೆ, ಕಾಲೇಜು, ವಾಚನಾಲಯ, ಸಾರ್ವಜನಿಕ ಸಂಸ್ಥೆಗಳಿಗೆ (ವರ್ಷಕ್ಕೆ)		ರೂ. ೫—೦—೦

ವಿಶ್ವವಾಣಿಯು ಮೈಸೂರು, ಮುಂಬಯಿ, ಮದರಾಸು, ಹೈದರಾಬಾದು, ಕೊಡಗು, ಕರ್ನಾಟಕಗಳಲ್ಲಿ ಮಾತ್ರವಲ್ಲದೆ ಕನ್ನಡಿಗರು ನೆಲಸಿರುವ ಎಲ್ಲಾ ಕಡೆಯಲ್ಲಿಯೂ ಪ್ರಚುರವಾಗುತ್ತದೆ.

ಆದುದರಿಂದ 'ವಿಶ್ವವಾಣಿ'ಯಲ್ಲೇ ಜಾಹೀರಾತನ್ನು ಕೊಡಿರಿ.

ಹೆಚ್ಚು ವಿಚಾರಗಳಿಗೆ ಬರೆಯಿರಿ—

ವ್ಯವಸ್ಥಾಪಕ—'ವಿಶ್ವವಾಣಿ,' 'ಅನ್ನಪೂರ್ಣ', ವಿಶ್ವೇಶ್ವರಪುರಂ,

ಬೆಂಗಳೂರು ನಗರ.

ನಮ್ಮ ಜರಿ ಪೀತಾಂಬರ, ರೇಶ್ಮೆ ಮಡಿಗಳಿಗೆ ಗಮನಕೊಡಿರಿ.

S. U. N. & CO. ***Choukhamba, Benares City.***

ಮೂರು ಇನಾಮುಗಳು.

ಶ್ರೀ ಕಾಶಿಯಲ್ಲಿ ತಯಾರಾಗತಕ್ಕ ರೇಶಮೆಯುಗಳ ಕೆಟಲಗ್‌ 1, ಕಾಶೀನಕ್ಷೆ 1, ವಿಶ್ವೇಶ್ವರ ಪಟ 1, ಈ 3 ಸಾಮಾನುಗಳು 1 ಆಣೆಸ್ಟಾಂಪು ಕಳುಹಿಸಿದರೆ ಇನಾಮಾಗಿ ಕಳುಹಿಸಲಾಗುವವು. ಸ್ಟಾಂಪು ಬಾರದಿದ್ದರೆ ಈಗಿನ ಫೇಶನಿಗೆ ತಕ್ಕಂತೆ ಜರೀ ಕೆಲಸಗಳಿಂದ ತಯಾರಿಸಿದ ರೇಶ್ಮೆಸೀರೆಗಳೂ, ಖಣ, ಮಡಿ ಕದಪಾವ್ಲಿ, ಪೇಟಾ, ಕೋಟಿಂಗ್, ಶರ್ಟಿಂಗ್ ಶಿಲ್ಕುಗಳೂ, ಕಾಶ್ಮೀರ ಶಾಲುಗಳೂ, ಊಲ್ಲನ್ ಚಾಳ, ಧಾವಳಿ, ನಾಮರ್ದ, ತರತರದ ರುದ್ರಾಕ್ಷಿಗಳೂ ಸಾಮಾನುಗಳೇ ಮೊದಲಾದ ಅನೇಕ ತರದ ಸಾಮಾನುಗಳ ಕೆಟಲಾಗು 1 ಮಾತ್ರ ಇನಾಂ. ಈಗಿನ ಹೊಸನಮೂನೆಯ ಪಡಲು ಬುಟ್ಟಿ ಹಾಕಿದ ಜರೀ ಶೀರೆ ಎಲ್ಲಾ ರಂಗುಗಳಲ್ಲಿ ರೂ. 20ರಿಂದ 55 ವರೆಗೂ ಸಾದಾ 16ಮೊಳದ ಶೀರೆ 1ಕ್ಕೆ ರೂ. 16 ರಿಂದ ರೂ. 35ರ ವರೆಗೆ, ಅರೆ ಕಡಮೆ 16ಮೊಳ ಫ್ಲವರ್ ಅಂಚು ರೂ. 10½ ಯಿಂದ ರೂ 16, ಖಣ 1ಕ್ಕೆ ರೂ. 1½ರಿಂದ ರೂ. 10ರ ವರೆಗೆ, ಪೋಸ್ಟು ಖರ್ಚು ಪ್ರತ್ಯೇಕ. ಆರ್ಡರಿನಂ. ಸಾಮಾನುಗಳನ್ನು ಸರಿಯಾದ ಸುಲಭ ದರದಿಂದ ಕಳುಹಿಸಲಾಗುವುದು.

ಶಿರೋಮಣಿ ನಾರಾಯಣಾಚಾರ್ಯ & ಕಂಪೆನಿ, ಚೌಕಂಬಾ, ಬೆನಾರಿಸ್, ಕಾಶಿ

USE

SUVASINI AGARBATHIES

(REGD.)

SRI BHARATHA VASTU MANDIRA, UDIPI

For all that is best in Printing Approach

ಕನ್ನಡ
ಮಲೆಯಾಳ
ತಮಿಳು
ತೆಲಗು
ದೇವನಾಗರಿ
ಇಂಗ್ಲಿಷ್

Orders in all Dravidian Scripts, English & Devanagari executed in

ಈ ಎಲ್ಲಾ ಲಿಪಿಗಳಲ್ಲಿ ನಿಮ್ಮ ಮುದ್ರಣ ಕಾರ್ಯಗಳನ್ನು ಮುದ್ದಾದ ಮುದ್ರಣಗಳಿಂದ ಅಗ್ಗವಾಗಿ ಮಾಡಿಕೊಡಲು ಸಮರ್ಥವಾದ ಮುದ್ರಣಾಲಯ ಯಾವುದು?

ಮಣಿಪಾಲ್ ಪವರ್ ಪ್ರೆಸ್

ಮಣಿಪಾಲ್ . . . ಉಡುಪಿ

MANIPAL POWER PRESS

MANIPAL - - - UDIPI

Printed by P. VENKATARAMANACHARYA for & on behalf of SUPPLY AGENCY LTD., at THULUNAD PRESS, UDIPI and Published by K. H. SHETTY at "NAVAYUGA" OFFICE, UDIPI.

Registered No. M. 3618

೨೦ ಪುಟಗಳು--ಒಂದಾಣೆ

NAVAYUGA
A Nationalist Kanarese Weekly, UDIPI, S.K.

It will pay you to advertise in 'NAVAYUGA' The Leading Nationalist Kanarese Weekly of Karnatak

FOR RATES OF ADVT. Etc.
APPLY TO THE MANAGER

ವಾಚಕರಸೇರರ
ಅಪೇಕ್ಷೆಯಂತೆ ಮುದ್ರಿಸಲ್ಪಟ್ಟ
ಮಂಗಳೂರು ಉಡುಪಿಗಳಲ್ಲಿ
, ಜಯಶೀಲವಾಗಿ
ಅಭಿನಯಿಸಲ್ಪಟ್ಟ
ಜನಪ್ರಿಯವಾದ ನಾಟಕ
ವ್ಯಭಿಚಾರಿಣಿ ಯಾರು?
ಕೆಲವೇ ಪ್ರತಿಗಳು ಉಳಿದಿವೆ.
ಬೆಲೆ ೦ ೮ ೦
ಕಿರಿಯ.ರ ಪ್ರಪಂಚ, ಉಡುಪಿ

VOL. XVI-NO 29

18-3-1937

ಮೂಡ ಬಾನಿನ ಕಣ್ಣು ಕೆಂಗಿಡಿಯ ಕಾರುತಿದೆ,
ಬನದ ನಾಡೊಳು ಮೊಳಗುತಿದೆ ತುಮುಲನಾದ;

ವಾರಪತ್ರಿಕೆ
ಸಂಪಾದಕ: ಕೆ. ಕೆ. ಶೆಟ್ಟಿ.

ಮೂಡುವುದು ತಂಬೆಳಕ ತಿಂಗಳನ ಮೊಗವು
'ನವಯುಗ'ವ ರುಪ್ರರವಿಯ..ಕ್ಷ ಬಿಂಬ.

ಸಂಪುಟ ೧೬] ಉಡುಪಿ, ಗುರುವಾರ ೧೮ ಮಾರ್ಚಿ, ೧೯೩೭ [ಸಂಚಿಕೆ ೨೯

THE

Canara Industrial & Banking SYNDICATE, LIMITED.

ESTD: [INCORPORATED IN BRITISH INDIA] 1925

Head Office:
MUKUNDA NIVAS,
UDIPI, S. I.

BRANCHES:

1	BANGALORE CITY	16	KARWAR
2	BELGAUM	17	KUMTA
3	BYADGI	18	ANKOLA
4	BELLARY	19	HONAVAR
5	ADONI	20	BHATKAL
6	HOSPET	21	KARKALA
7	NANDYAL	22	BRAHMAVAR
8	PRODATTUR	23	HUNGARCUTTA
9	TADPATRI	24	SIRSI
10	TALIPARAMBA	25	SAGAR
11	HUBLI	26	KANHANGAD
12	GADAG	27	COONDAPOOR
13	UDIPI	28	PAYYANUR
14	UPPINANGADI	29	CANNANORE
15	KASARGODE	30	MANGALORE

A branch at BOMBAY will be opened in April next.

We stand for all that is BEST in MODERN BANKING SERVICE

OPEN AN ACCOUNT TO-DAY IN THIS Pioneer & Highly Progressive BANK OF KARNATAKA AND BE *A SATISFIED CUSTOMER.*

ALL KINDS OF BANKING BUSINESS TRANSACTED ON EASY TERMS.

Total Working Funds exceed Rs. 35 Lakhs

Apply for Rules of Business

MUKUNDA NIVAS
UDIPI
22-12-1936

P. A. Pai Brothers.
Managing Agents

ದಿ ಕುಂದಾಪುರ ಬೇಂಕ್ ಲಿಮಿಟೆಡ್ ಕುಂದಾಪುರ
ಬ್ರಾಂಚ್—ಬ್ರಹ್ಮಾವರ.

ಚಾಲ್ತಿ ಮತ್ತು ಸೇವಿಂಗ್ಸ್ ಬೇಂಕ್ ಠೇವಣಾತಿಗಳು ಒಳ್ಳೇ ದರದ ಬಡ್ಡಿಯಲ್ಲಿಯೂ ಖಾಯಂ ಠೇವಣಾತಿಗಳು 3 ತಿಂಗಳಿಗೊಮ್ಮೆ ಸಾಲಿಯಾನ್ ಶೇಕಡಾ ರೂಪ್ಯಾ $4\frac{1}{2}$, 6 ತಿಂಗಳಿಗೆ ಸಾಲಿಯಾನ್ ಶೇಕಡಾ ರೂಪ್ಯಾ 5%, 12 ತಿಂಗಳಿಗೆ ಸಾಲಿಯಾನ್ ಶೇಕಡಾ ರೂಪ್ಯಾ 6%, 24 ತಿಂಗಳಿಗೆ ಸಾಲಿಯಾನ್ ಶೇಕಡಾ $6\frac{1}{4}$% ದರದ ಬಡ್ಡಿಯಲ್ಲಿ ಅಂಗೀಕರಿಸಲ್ಪಡುವುವು.

ಒಂದು ವರುಷದ ಯಾ ಹೆಚ್ಚಿಗೆ ಅವಧಿಯ ಖಾಯಂ ಠೇವಣಾತಿಗಳಿಗೆ ಮೇಲೆ ಕಾಣಿಸಿದ ದರದಲ್ಲಿ 6 ತಿಂಗಳಿಗೊಮ್ಮೆ ಬಡ್ಡಿ ಕೊಡಲಾಗುವುದು. ಬೇರೆ ಎಲ್ಲಾ ತರದ ಬೇಂಕ್ ವ್ಯವಹಾರಗಳು ನಡಿಸಲ್ಪಡುವುವು. ಕರೆಂಟ್, ಸೇವಿಂಗ್ಸ್ ಬೇಂಕ್ ಮತ್ತು ಕ್ಯುಮುಲೇಟಿವ್ ಠೇವಣಾತಿಗಳು ಅಂಗೀಕರಿಸಲ್ಪಡುವುವು.

ವಿಶೇಷ ಸೂಚನೆ:—ಬಡವರಿಗೆ ಸಹಾಯವಾಗುವಂತ ಕಡಿಮೆ ಎಂದರೆ ರೂಪ್ಯಾ 10 ಸಹಾ ಸಾಲಕೊಡಲಾಗುತ್ತೆ. ಸಾಲುಗಳು ದೊರೆಯುತ್ತವೆ, ಹೆಚ್ಚಿನ ಮಾಹಿತಿ ಬಗ್ಗೆ ಬರೆಕೊಳ್ಳಿರಿ.

ನವಯುಗ

ಉಜ್ವಲ ರಾಷ್ಟ್ರೀಯ ವಾರಪತ್ರಿಕೆ—

ಉದ್ಬೋಧಕ ಲೇಖನಗಳಿವೆ, ದೇಶ ವಿದೇಶಗಳ ತಾಜಾ ವರ್ತಮಾನಗಳಿವೆ, ಮನೋಹ್ಲಾದಕ ಕಥೆ, ಕವನ, ನಾಟಕಗಳಿವೆ, ಧುರೀಣರ ಫೋಟೋಗಳಿವೆ.

ಪ್ರತಿ ಗುರುವಾರ ತಪ್ಪದೆ ಪ್ರಕಟವಾಗುವುದು.

ವಾ. ಚ ಅಂಚೆವೆಚ್ಚ ಸೇರಿ ಕೇವಲ ೩—೪—೦.

ಇಂದೇ ಚಂದಾದಾರರಾಗಿರಿ!

ಅಖಿಲ ಕರ್ನಾಟಕದಲ್ಲಿಯೂ ಹೊರ ಪ್ರದೇಶದಲ್ಲಿಯೂ ವಿಶಾಲವಾಗಿ ಪ್ರಚಾರದಲ್ಲಿರುವ "ನವಯುಗ"ವು ಜಾಹೀರಾತುಗಳಿಗೆ ವಾಹನವಾಗಿದೆ.

ಮೆನೇಜರ್— ನವಯುಗ, ಉಡುಪಿ

ವಿಜಯನಗರ ಸ್ಮಾರಕೋತ್ಸವ ಮಂಡಲದ ಪರವಾಗಿ ಹೊರಡಲಿರುವ

ಜಯಕರ್ನಾಟಕದ

ವಿಜಯನಗರ ವಿಶೇಷ ಸಂಚಿಕೆ

ವಿಶೇಷ ಸಂಪಾದಕರು ಪ್ರೊ ಎಸ್. ಎಸ್. ಮಾಳವಾಡ, ಎಂ.ಎ

ಅಖಿಲ ಭಾರತದ ಪ್ರಸಿದ್ಧ ವಿದ್ವಾಂಸರ ಲೇಖನವೈಭವ!

ವಿಜಯನಗರಕ್ಕೆ ಸಂಬಂಧಿಸಿದ ಚಿತ್ರಮಾಲೆಗಳ ಐಶ್ವರ್ಯ!!

ಹೊಳಪಿನ ಹಾಳೆ — ಅಚ್ಚಿನ ಅಚ್ಚುಕಟ್ಟು

ಬೆಲೆ: ಎಂಟಾಣೆ ಮಾತ್ರ

ಜಯಕರ್ನಾಟಕವು ಜನವರಿಯಿಂದ—ವಿಶೇಷ ಸಂಚಿಕೆಯಿಂದ ಮೊದಲ್ಗೊಂಡು ದೊಡ್ಡ ಆಕಾರದಲ್ಲಿ (ಡೆಮಿ ¼ ದಲ್ಲಿ) ಹೊರಡುವುದು!

ಅಲ್ಲದೆ ಚಂದಾದರವನ್ನು ಇಳಿಸಿದೆ—ರೂ. ೪—೮—೦ ಮಾತ್ರ!

ಚಂದಾದಾರರಾಗಬೇಕೆನ್ನುವವರಿಗೂ ಜಾಹಿರಾತುದಾರರಿಗೂ ಸುಸಮಯ

ಜಯಕರ್ನಾಟಕ ಕಾರ್ಯಾಲಯ, ಧಾರವಾಡ.

THE

MOOLKY BANK, LTD.,

MOOLKY.

ದಿ ಮೂಲ್ಕಿ ಬೇಂಕ್, ಲಿಮಿಟೆಡ್,

ಮೂಲ್ಕಿ.

ಗ್ರಾಮಸ್ಥರ ನಡುವೆ ಸ್ಥಾಪಿಸಲ್ಪಟ್ಟು ಅವರ ಹಿತಕ್ಕಾಗಿ ಯತ್ನಿಸುವ ಸಂಸ್ಥೆ

ಬಂಗಾರ ವ ಸರಕಿನ ಈಡಿನಮೇಲೆ ನೇಕಡ 7 ವ 8ರ ದರದಲ್ಲಿ ಸಾಲಕೊಡಲಾಗುವುದು

ನಿರಖು ಠೇವಣಾತಿ ಸೇಕಡ 5½ರ ವರೇಗಿನ ಬಡ್ಡಿಯಲ್ಲಿಯೂ, ಸೇವಿಂಗ್ಸ್ ಬ್ಯಾಂಕ್ ಸೇಕಡ 3½ ದರದ ಬಡ್ಡಿಯಲ್ಲಿಯೂ ಅಂಗೀಕರಿಸಲ್ಪಡುವುದು

ಎಲ್ಲಾ ತರದ ಬ್ಯಾಂಕಿಂಗ್ ವಹಿವಾಟಗಳಿಗೆ ನಿರಾ ಕೊಡುವುದಲ್ಲದೆ ಸಾಲಗಾರರ ಹಿತವು ಸದಾ ನಮ್ಮ ಚಿಂತನೆಯಾಗಿರುವುದು

M. R Punja,	ಯಂ. ಆರ್. ಪೂಂಜ,
President & Manager,	ಪ್ರಸಿಡೆಂಟ್ ಮತ್ತು ಮೆನೇಜರ್.

ತುಳುನಾಡ್ ವೈದ್ಯಶಾಲೆ, ಉದ್ಯಾವರ, ದ. ಕ.

ಕೋಲೆರಾ ಪಿಲ್ಸ್	ಭೈರವ ಮಾತ್ರೆಗಳು
ಕೊಲೆರಾ ರೋಗಕ್ಕೆ ರಾಮಬಾಣ ಔಷಧ.	ಬಾಣಂತಿ ರೋಗಸಂಬಂಧವಾದ ಸಕಲ ರೋಗಗಳಿಗೂ ದಿವ್ಯೌಷಧ.
೧೦೦ ಮಾತ್ರೆಗಳಿಗೆ ರೂ ೩—೮—೦	೧೦೦ ಮಾತ್ರೆಗಳಿಗೆ ರೂ ೨—೮—೦

ಎಲ್ಲಾ ತರದ ರೋಗಗಳಿಗೂ ಅನುಭವಸಿದ್ಧವಾದ ದಿವ್ಯೌಷಧಗಳು ದೊರೆಯುತ್ತವೆ

ಯು ಪಿ ಮೇಸ್ತ್ರ, ಗೋಲ್ಡ್ ಮೆಡಲ್ಡ್ ಫಿಜಿಸಿಯನ್.

THE

PANGAL NAYAK BANK

LIMITED.

ESTABLISHED 1920.

***Head Office*: UDIPI.**

Branches MANGALORE and KATAPADI.

Fixed loans and Overdraft advances are granted on the pledge of gold articles, on the mortgage of immovable properties and on the personal security of approved constituents on favourable terms.

Genuine trade bills, cheques, drafts etc., are discounted at a nominal charge.

Current, Savings Bank and Cumulative deposits are accepted at moderate rates of interest.

Fixed Deposits are received and interest allowed at 4% on 1 year and at 4½% on 2 years deposits.

Every other description of up to date Banking business is also undertaken.

A few shares are also available to the public

ಇದೀಗ ಬಂದಿದೆ— ಹೊಸ ಪುಸ್ತಕ!

ಟಾಲಸ್ಟಾಯಿಯವರ ಕತೆಗಳು

ಶ್ರೀ ಎಲ್. ಗುಂಡಪ್ಪ, ಎಂ ಎ ಯವರಿಂದ ಅನುವಾದಿಸಲ್ಪಟ್ಟ ಟಾಲಸ್ಟಾಯಿಯವರ ಕಥೆಗಳೆಲ್ಲಾ ಕನ್ನಡದಲ್ಲಿ ಒಟ್ಟಾಗಿ ಅಚ್ಚಾಗಿ ಬಂದಿವೆ. ಈ ಕಥೆಗಳಲ್ಲಿ ಜೀವನಕ್ಕೆ ಸಂಬಂಧಪಟ್ಟ ಎಲ್ಲಾ ಪ್ರಶ್ನೆಗಳ ಚರ್ಚೆಯೂ ಇದೆ. ಆದುದರಿಂದ ಸ್ತ್ರೀಪುರುಷರೆಲ್ಲರೂ ಅವಶ್ಯ ಓದಬೇಕು.

೪೦೦ ಪುಟಗಳು — ಒಂದೂವರೆ ರೂಪಾಯಿ ಬೆಲೆ

ಪ್ರತಿಗಳು ಸಿಗುವ ಸ್ಥಳ—

ಕಿರಿಯರ ಪ್ರಪಂಚ, ಉಡುಪಿ.

ಮಿರಜದಲ್ಲಿಯ ಸುಪ್ರಸಿದ್ಧ ವೈದ್ಯರಾದ ಎಮ್. ಕೆ. ರಜಪೂತ ಇವರ ಸ್ವದೇಶಿ ಔಷಧಗಳು.

ಗುಣ ಬಾರದಿದ್ದರೆ — ## ಸ್ತ್ರೀಧರ್ಮ ಸಂಜೀವಿನೀ ಚೂರ್ಣ (ರಿಜಿಸ್ಟರ್ಡ) — **ಹಣ ಪರತ**

ಈ ಚೂರ್ಣವು ಕೆಂಪು ಬಿಳೆ ಶರಗಿಗೆ ಶತ್ರುವಾಗಿರುವದು ಅನಿಯಮಿತತನದಿಂದ ಮುಟ್ಟಾಗುವಿಕೆ, ಕ್ಷೇಶ ಮೈಯಲ್ಲಿ ನೋವು, ಉಷ್ಣತಾ ಕ್ಷೀಣತಾ ಗರ್ಭಾಶಯದಲ್ಲಿರುವ ದೋಷ ಗರ್ಭಧಾರಣವಾಗದಿರೋಣ, ಅಕಾಲದಲ್ಲಿ ಗರ್ಭಪತನವಾಗೋಣ ಈ ಮೊದಲಾದ ರೋಗಗಳು ನಿಶ್ಚಯವಾಗಿ ನೆಟ್ಟಗಾಗಿ ಗರ್ಭಕೋಶವು ಸ್ವಚ್ಛವಾಗುವದು ಮಕ್ಕಳಾಗುವದಿಲ್ಲೆಂದು ಎರಡನೇ ಲಗ್ನಮಾಡಿಕೊಳ್ಳುವ ಮೊದಲು ಗೃಹದೇವತೆಯಾದ ಮೊದಲನೇ ಪತ್ನಿಗೆ ಈ ಚೂರ್ಣ ಅವಶ್ಯ ಕೊಡಿರಿ. ಮುಖ್ಯ ಸರ್ಟಫಿಕೇಟ ಮ. ರಾ ಎ. ಎಮ್ ಇನ್ಸ್‌ಪೆಕ್ಟರ ಬೆಳಗಾಂವ —ಈ ಚೂರ್ಣದಿಂದ ನನ್ನ ಕುಟುಂಬದ ಹೊಟ್ಟೆಯೊಳಗಿನ ರಕ್ತ ಗುಲ್ಮದ ಗಂಟು ನಾಮಶೇಷವಾಯಿತು. ಮತ್ತು ಎಲ್ಲ ರೋಗಗಳು ನಿಶ್ಶೇಷವಾದವು. ನನ್ನ ಮಿತ್ರನ ಹೆಂಡತಿಯ ರಕ್ತ ಮತ್ತು ಶರಗು ಇಲ್ಲದಂತಾದವು ೨೧ ದಿವಸದ ಡಬ್ಬಿಯ ಕಿಮ್ಮತು ರೂ ೩ ಟ.ಖ. ಆಣೆ, ೮. ಡಬ್ಬಿಗೆ ೪ರೂ.]

ಸಂತತಿ ಪ್ರತಿಬಂಧಕ ಚೂರ್ಣ. (ರಿಜಿಸ್ಟರ್ಡ) [ಎ ಪಿ. ಖರ್ಚು ಆಣೆ ೮.

ಬಹಳಸಾರಿ ಹಡಿಯುವುದರಿಂದ ಅತಿಶಯ ಅಶಕ್ತಿಯಾಗುತ್ತದೆ ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುರುವಾಗುವದು ಶರೀರಕ್ಕೇನೂ ಅಪಾಯವಾಗದೆ ಸಂಸಾರ ಸುಖವು ಪೂರ್ಣವಾಗಿದೆ. ಕೂಡಲೇ ಗರ್ಭಧಾರಣ ಬಂದಾಗುವುದು. ತದನಂತರ ಏನು ಮಾಡಿದರೂ ಶುರುವಾಗುವದಿಲ್ಲ. ಮೊದಲೇ ಪೂರಾ ವಿಚಾರಮಾಡಿ ಔಷಧ ಬೇಡಿರಿ. ಮುಖ್ಯಸರ್ಟಿಫಿಕೇಟ ಡಾಕ್ಟರ ಬಿ. ಎ. ವೈದ್ಯ ಎಲ್ ಸಿ. ಪಿ. ಎಸ್ ಮು॥ ಕೇಳವಾ ಮಾಹಿಮಾ ಜಿ, ರಾಣೆ. ಈ ಚೂರ್ಣದಿಂದ ಯಾವ ತರದ ಅಪಾಯವಾಗದೆ ಗರ್ಭಧಾರಣವಾಗುವದಿಲ್ಲ. ಪೂರ್ಣ ಗುಣಕಾರಿ

ವಿಳಾಸ:—ಸಂಜೀವಿನೀ ಔಷಧಾಲಯ, ಮು. ಪೊ. ಮಿರಜ, S. M. C

ಸಮಾಚಾರ ಸಂಗ್ರಹ

ಡಾಕ್ಟರ್ ಅನ್ಸಾರಿಗಳ ಭಾವಚಿತ್ರ ಅನಾವರಣ. ಗಡಿನಾಡಿನ ಗಲಾಟೆ, ಬಂಡಾಯಗಾರರ ಸೈನ್ಯದಲ್ಲಿ ೧೨೦,೦೦೦ ವಿದೇಶೀಯರು

ಗವರ್ನರರು ಮತ್ತು ಕಾಂಗ್ರೆಸ್ ಮಂತ್ರಿಮಂಡಲ

ಕಾಂಗ್ರೆಸಿನವರು ಮಂತ್ರಿಮಂಡಲವನ್ನು ರಚಿಸಿದಾಗ ಗವರ್ನರರು ಅವರಿಗೆ ಅನುಕೂಲರಾಗಿಯೇ ನಡೆದು ತಮ್ಮ ವಿಶೇಷಾಧಿಕಾರಗಳನ್ನು ಉಪಯೋಗಿಸುವ ಸಂದರ್ಭವನ್ನು ಆದಷ್ಟು ಕಡಿಮೆಮಾಡುವಂತೆ ಪ್ರಯತ್ನಿಸುವರೆಂದು ಅಮೃತ ಬಜಾರ್ ಪತ್ರಿಕೆಯ ಡಿಲ್ಲಿಯ ಬಾತ್ಮಿದಾರನ ಅಭಿಪ್ರಾಯ. ಅವರು ಈವರೆಗಿನಂತೆ ಜಮೀನುದಾರರ ಪಕ್ಷಪಾತಿಗಳಾಗಲಾರರು. ಯಾಕಂದರೆ ಜಮೀನುದಾರರು ತಮ್ಮ ಒಕ್ಕಲುಗಳನ್ನು ಚೆನ್ನಾಗಿ ನೋಡುವುದಿಲ್ಲವೆಂದೀಗ ಅವರಿಗೆ ತಿಳಿದಿದೆ. ಆದುದರಿಂದ ಆ ಕುರಿತು ಏನಾದರೂ ಕಾನೂನು ಮಾಡಿದರೆ ಅದನ್ನವರು ತಮ್ಮ ವಿಶೇಷ ಅಧಿಕಾರ ಉಪಯೋಗಿಸಿ ರದ್ದು ಮಾಡಲಾರರು. ಭೂವ್ಯವಸಾಯಿಕ ಆದಾಯದ ಮೇಲಿನ ಕರ ಮತ್ತು ಕಾಯಮ್ ಸೆಟ್ಲ್‌ಮೆಂಟಿನ ರದ್ದತಿಯನ್ನೂ ಗವರ್ನರರು ವಿರೋಧಿಸಲಾರರು. ಎಪ್ರಿಲ್ ತಾ. 1 ನ್ನು ಕಾಂಗ್ರೆಸಿನವರು ಹೊಸ ರಾಜ್ಯಾಂಗ ರಚನೆಯ ನಿಷೇಧ ದಿನವಾಗಿ ಆಚರಿಸಲಿರುವುದರಿಂದ ಆ ದಿನ ಹೊಸ ಕೌನ್ಸಿಲುಗಳನ್ನಾರಂಭಿಸುವುದನ್ನು ಕೆಲವು ಗವರ್ನರರು ನಿಲ್ಲಿಸಿರುವರು. ಕಾಂಗ್ರೆಸ್ ಕಾರ್ಯಕ್ರಮದ ಮೇರೆಗೆ ಕೆಲವು ಪ್ರಾಂತಿಕ ಸರಕಾರಗಳವರು ಕೂಡಲೆ ನೌಕರರ ಸಂಬಳದಲ್ಲಿ ನೇಕಡ 10ರಷ್ಟರ ಕಡಿತವನ್ನು ಮಾಡಲು ಸಿದ್ಧರಿರುವರು.

ಹಿಂದೀಯರೆಲ್ಲಾ ಹರಿಜನರು

ಕಲ್ಕತ್ತೆ ಹರಿಜನ ಸಮಿತಿಯ ವಾರ್ಷಿಕೋತ್ಸವದ ಅಧ್ಯಕ್ಷರಾಗಿ ಶ್ರೀ ಶರಚ್ಚಂದ್ರ ಭೋಸರು, "ಪರದಾಸ್ಯವು ನಮ್ಮನ್ನೆಲ್ಲಾ ಹರಿಜನರನ್ನಾಗಿ ಮಾಡಿದೆ. ನಮ್ಮ ದುರ್ದೈವಿ ದೇಶದಲ್ಲಿ ಎಲ್ಲರೂ ಹರಿಜನರೇ. ಆಳರಸರಿಗೂ ನಮಗೂ ಇರುವ ಸಂಬಂಧವನ್ನು ವಿಚಾರಿಸಿಕೊಂಡು ಹಿಂದೀಯರು ತಮ್ಮ ಶೋಚನೀಯ ಅವಸ್ಥೆಯನ್ನು ಮರೆಯಬಾರದೆಂದರು." ಮತ್ತು ಕಲ್ಕತ್ತೆಯಂತಹ ದೊಡ್ಡ ಪಟ್ಟಣದಲ್ಲಿ ಕೋರ್ಪರೇಶನಿನವರು ಈಗಿರುವ 34 ಶಾಲೆಗಳನ್ನು 2400ಕ್ಕೇರಿಸಬೇಕೆಂದರು.

ಡಾಕ್ಟರ್ ಅನ್ಸಾರಿಗಳ ಭಾವಚಿತ್ರ ಅನಾವರಣ

ಇದೇ ತಾ.6ರಲ್ಲು ಡಿಲ್ಲಿಯ ಏಂಗ್ಲೋ ಅರೆಬಿಕ್ ಕೊಲೇಜಿನಲ್ಲಿ ಶ್ರೀ ಭೂಲಭಾಯಿ ದೇಸಾಯಿಯವರು ದಿವಂಗತ ಡಾಕ್ಟರ್ ಅನ್ಸಾರಿಗಳ ಭಾವಚಿತ್ರವನ್ನು ಅನಾವರಣಮಾಡಿ "ಡಾಕ್ಟರ್ ಅನ್ಸಾರಿಗಳ ಮರಣದಿಂದ ದೇಶಕ್ಕೆ ಮಹತ್ತಾದ ನಷ್ಟವಾಗಿದೆ. ಅವರ ಸರಳ ಜೀವನ ಮತ್ತು ರಾಷ್ಟ್ರಪ್ರೇಮವು ಅನುಕರಣೀಯವಿರುವುದು. ಹಿಂದೀಯರನ್ನು ಜಾತಿ ಪಂಥಗಳಾಗಿ ವಿಂಗಡಿಸಿರುವುದು ನಮ್ಮ ದೋಷಯುಕ್ತವಾದ ಶಿಕ್ಷಣ. ಆದುದರಿಂದ ಹೊಸ ವಾತಾವರಣವನ್ನುಂಟುಮಾಡಲು ಅವಶ್ಯವಾದುದೆಂದರೆ ಈಗಣ ಶಿಕ್ಷಣ ಕ್ರಮವನ್ನೇ ಸಂಪೂರ್ಣ ಬದಲಾಯಿಸುವುದು. ಡಾಕ್ಟರ್ ಅನ್ಸಾರಿಗಳು ನಿಜವಾದ ರಾಷ್ಟ್ರೀಯ ವಾತಾವರಣವನ್ನುಂಟುಮಾಡಲೆತ್ನಿಸಿದವರೆ"ಂದರು. ಪಂಡಿತ ಗೋವಿಂದ ವಲ್ಲಭ ಪಂತರು, ಹಿಂದುದೇಶದ ಬಂಧವಿಮೋಚನೆ ಮತ್ತು ಹಿಂದು ಮುಸಲ್ಮಾನ ಐಕ್ಯವು ಡಾಕ್ಟರ್ ಅನ್ಸಾರಿಗಳ ಜೀವನದ ಏಕಮಾತ್ರ ಆಶೆಯಾಗಿದ್ದಿತೆಂದರು. ಡಾಕ್ಟರ್ ಅನ್ಸಾರಿಗಳ ಸ್ಥಾನವನ್ನು ಭರ್ತಿಮಾಡುವ ಮುಸಲ್ಮಾನ ಮುಖಂಡರೇ ಇಲ್ಲ. ಅವರು ಕಾಂಗ್ರೆಸ್ ಮುಖಂಡರ ಮತ್ತು ತಮ್ಮ ಜಾತಿಯ ವಿಶ್ವಾಸಕ್ಕೆ ಪಾತ್ರರಾಗಿದ್ದರು. ಮುಸಲ್ಮಾನರ ಪ್ರಗತಿಕತನವನ್ನು ನಿವಾರಿಸಲೆತ್ನಿಸಿದ್ದರೆಂದು ಮಿ. ಆಸಾಫ್ ಆಲಿಯವರೆಂದರು.

ಇಟೆಲಿಯಾನರ ಬರ್ಬರ ಪ್ರತೀಕಾರ

ಅಡ್ಡಿಸ್ ಅಬಾಬದಲ್ಲಿ ಮಾರ್ಶಲ್ ಗ್ರೆಜಿಯಾನಿಯವರ ಮೇಲೆ ಬೊಂಬೆಸೆಯಲ್ಪಟ್ಟಾಗ ಇಟೆಲಿಯಾನರು ಅಬಿಸೀನಿಯನರ ಮೇಲೆ ನಡಿಸಿದ ಅತ್ಯಾಚಾರವು ಅತ್ಯಂತ ಪೈಶಾಚಿಕವಿರುವುದೆಂದು ಬ್ರಿಟಿಷ್ ಸರಕಾರವು ಪಾರ್ಲಿಮೆಂಟಿನಲ್ಲಿ ಒಪ್ಪಿಕೊಂಡಿರುವುದು. ಇಟೆಲಿಯಾನ ಸೈನಿಕರು ಹುಚ್ಚರಂತೆ ಸಿಕ್ಕಿಸಿಕ್ಕಿದ ಅಬಿಸೀನಿಯನರನ್ನೆಲ್ಲಾ ಕೊಂದು ಅವರ ಸೊತ್ತುಗಳನ್ನೆಲ್ಲಾ ನಾಶ ಮಾಡಿಬಿಟ್ಟಿರುವರೆಂದು ತಿಳಿದುಬರುತ್ತದೆ. ಈ ಸಂದರ್ಭದಲ್ಲಿ ಇಟೆಲಿಯಾನರು ನಡಿಸಿದ ಬರ್ಬರ ಅತ್ಯಾಚಾರವು ಅವರ್ಣನೀಯವಿರುವುದೆಂದೂ, ಇಂತಹ ಘಾತುಕ ಕೃತ್ಯವು ಆಫ್ರಿಕದಲ್ಲಿ ನಡೆದಿಲ್ಲೆಂದೂ ಪ್ರತ್ಯಕ್ಷ ದರ್ಶಿಗಳು ವಿವರಿಸಿರುವರು.

ಗಡಿನಾಡಿನ ಗಲಾಟೆ

ಗಡಿನಾಡಿನ ಪಂಗಡಿಗರ ಪ್ರದೇಶದಲ್ಲಿ ಸರಕಾರವು ರಸ್ತೆ ಮಾಡುವುದನ್ನು ಪವಿ, ಪಂಗಡಿಗರು ವಿರೋಧಿಸಿ ಹಲವು ಹೋರಾಟಗಳು ನಡೆದಿರುವವು. ಇಪಿಯ ಫಕೀರರು ಸರಕಾರದ ವಿರೋಧವಾಗಿ ಹಲವು ಭಾಷಣ ಮಾಡಿ ಪಂಗಡಿಗರನ್ನೆಲ್ಲಾ ಎತ್ತಿಕಟ್ಟುತ್ತಿರುವರು. ಸರಕಾರವು ತನ್ನ ಸೇನಾಸಂಗ್ರಹ ಕೇಂದ್ರವನ್ನು ರಾವಲಪಿಂಡಿಯಿಂದ ಗಡಿನಾಡಿನ ಬನ್ನುವಿಗೆ ಬದಲಾಯಿಸಿ ಅಲ್ಲಿ ದೊಡ್ಡ ಸೇನೆಯನ್ನು ಸಂಗ್ರಹಿಸಿರುವುದು. ಅಫ್ರಿದಿ ಮತ್ತು ಮಹಮ್ಮದ್ ಪಂಗಡಿಗರು ಸರಕಾರದೊಡನೆ ಮೈತ್ರಿಭಾವದಿಂದಿರುವರು. ನಿಜವಾದ ಗಲಾಟೆಯ ಸ್ಥಳವೆಂದರೆ ವಜೀರಿಸ್ಥಾನ. ಅಲ್ಲಿ ಕೆಲಮಂದಿ ಮುಲ್ಲರು, ಮುಸಲ್ಮಾನನೊಬ್ಬನಿಂದ ಕದ್ದೊಯ್ಯಲ್ಪಟ್ಟ ಹಿಂದು ಹುಡುಗಿಯನ್ನು ಕೋರ್ಟಿನವರು ಅವಳ ನ್ಯಾಯವಾದ ರಕ್ಷಕರಿಗೆ ಕೊಡಿಸಿದ ಮತ್ತು ಲಾಹೋರಿನ ಶಾಹಿದ್ ಗಂಜ್ ಮಸೀದಿಯ ಚಳವಳವನ್ನೆತ್ತಿ ಹಿಡಿದು ಪಂಗಡಿಗರಲ್ಲಿ ಸರಕಾರ ವಿರುದ್ಧ ಪ್ರಚಾರಮಾಡಿರುವರು. ಇದರಿಂದಾಗಿ ಪೈಶೋರ ಪ್ರದೇಶದ ಮೇಲೆ ಹಿಂದೀ ಸೈನಿಕರು ಧಾಳಿಯಿಡಬೇಕಾಯಿತು. ಇಬ್ಬರು ಬ್ರಿಟಿಷ್ ಅಧಿಕಾರಿಗಳ ಕೊಲೆಯಾಗಿರುವುದು. ಟೆಲಿಫೋನ್ ತಂತಿಗಳನ್ನು ಕಡಿದುಹಾಕುವುದು, ವ್ಯಾಪಾರಿಗಳನ್ನು ಲುಟಾಯಿಸುವುದೇ ಮೊದಲಾದ ತಕ್ಷೀರುಗಳು ನಡೆಸಲ್ಪಟ್ಟಿರುವವು. ವಾಯುವ್ಯ ಗಡಿನಾಡಿನ ಮೇಲೆ ಧಾಳಿ ನಡಿಸುವ ಸೇನಾವೆಚ್ಚಕ್ಕಾಗಿ ಚಾಲ್ತಿ ವರ್ಷದಲ್ಲಿ ರೂ. 12 ಲಕ್ಷ ವ್ಯಯಿಸಲ್ಪಟ್ಟಿದೆ.

ಬಂಡಾಯಗಾರರ ಸೈನ್ಯದಲ್ಲಿ ೧೨೦,೦೦೦ ವಿದೇಶಿಯರು

ಸ್ಪೈನಿನ ಬಂಡಾಯಗಾರರ ಸೇನೆಯಲ್ಲಿ 80,000 ಇಟೆಲಿಯಾನ ಮತ್ತು 10000 ಜರ್ಮನ್ ಸೈನಿಕರಿರುವರೆಂದು, ಸರಕಾರಕ್ಕೆ ಸೆರೆಸಿಕ್ಕಿರುವ ಇಟೆಲಿಯಾನರಾದ ಮೇಜರ್ ಲುಸಿಯಾನೋ ಸಿಲ್ವಿರವರು ಅಂದಾಜುಮಾಡಿರುವರೆಂದು ತಿಳಿದುಬರುತ್ತದೆ. 40ರಿಂದ 60 ಸಾವಿರದ ವರೆಗಣ ಇಟೆಲಿಯಾನ ಸೈನಿಕರು ಗೊಡಲಜಾರ ರಣರಂಗದಲ್ಲೇ ಕಾದಾಡುತ್ತಿರುವರಂತೆ. ಸ್ಪೈನಿನಲ್ಲಿರುವ ಇಟೆಲಿಯಾನ ಸೇನೆಯು 40,000 ಕ್ಕಿಂತ ಮಿಕ್ಕಿರುವುದಿಲ್ಲೆಂದು ಇನ್ನೊಬ್ಬ ಸೈನಿಕನ ಅಂದಾಜು. ಒಬ್ಬ ಸೈನಿಕನು ತಾನು ಅಬಿಸೀನಿಯಕ್ಕೆ ಕಳುಹಿಸಲ್ಪಡುವುದೆಂಬ ಭಾವನೆಯುಳ್ಳವನಾಗಿದ್ದನು. ಸ್ಟೀಮರ್ ಹತ್ತಿದ ಮೇಲೆ ಮಾತ್ರ ಗೊತ್ತು ಆತನಿಗೆ ತಾನು ಸ್ಪೈನಿಗೆ ಹೋಗುವುದೆಂದು. ಮೆಂಡ್ರಿಡ್ ರಣರಂಗದಲ್ಲಿಯೇ 35,000 ಕ್ಕಿಂತಲೂ ಮಿಕ್ಕಿದ ಇಟೆಲಿಯಾನ ಸೈನಿಕರು ಬಂಡಾಯಗಾರರ ಕಡೆಯಿಂದ ಕಾದಾಡುತ್ತಿರುವರೆಂದು ಸ್ಪೈನಿನ್ ಸರಕಾರಕ್ಕೆ ಅಧಿಕಾರಿಕವಾಗಿ ತಿಳಿದುಬಂದಿದೆ. ಅದು ಈ ರೀತಿಯ ಅಂತರ ರಾಷ್ಟ್ರೀಯ ಒಡಂಬಡಿಕೆಯ ಉಲ್ಲಂಘನೆಯೆನ್ನು ಲೀಗ್ ಆಫ್ ನೇಶನಿಗೆ ತಿಳಿಸಿದೆ.

೭೦೦ಕ್ಕಿಂತ ಮಿಕ್ಕಿದ ಮನೆಗಳು ಸುಟ್ಟುಹೋದವು.

ಅಪ್ಪರ್ ಬರ್ಮದಲ್ಲಿ 3 ಅನಾಹುತಕಾರಿ ಬೆಂಕಿಗಳುಂಟಾಗಿ ಹಲವು ಲಕ್ಷ ರೂಪಾಯಿಗಳು ನಷ್ಟವಾಗಿರುವವೆಂದು ತಿಳಿದುಬರುತ್ತದೆ. ಪಕೊಕ್ಕು ಎಂಬಲ್ಲಿ ಮುನಿಸಿಪಲ್ ಸೆಕ್ರೆಟರಿಯ ಮನೆಯಲ್ಲಿ ಬೆಂಕಿಬಿದ್ದು 250 ಮನೆಗಳು ಭಸ್ಮವಾಗಿರುವವು. ಮಂಡಲೆ ಸಮೀಪದ ಟಡೂವ ಎಂಬ ಪಟ್ಟಣದಲ್ಲಿ 500 ಮನೆಗಳು ಸುಟ್ಟುಹೋಗಿ ರೂ. 5 ಲಕ್ಷ ನಷ್ಟವಾಗಬಹುದೆಂದು ತಿಳಿದುಬಂದಿದೆ. ವಿವರವು ತಿಳಿದುಬಂದಿಲ್ಲ.

ಡಾಕ್ಟರ್ ಅಧಿಕಾರಿಗಳು ಕಾಣೆಯಾದರು

ಬಿಜಾಪುರ ಪಟ್ಟಣದೊಳಗೆ ನಿರ್ಬಂಧದೊಳಗಿರಿಸಲ್ಪಟ್ಟಿದ್ದ ಡಾಕ್ಟರ್ ಜಿ. ಅಧಿಕಾರಿಗಳು ಫಕ್ಕನೆ ಕಾಣೆಯಾಗಿರುವರು. ಇದರಿಂದ ಬಿಜಾಪುರದ ಪೋಲೀಸರು ವಿಸ್ಮಯಗೊಂಡಿರುವರು. ಡಾಕ್ಟರ್ ಅಧಿಕಾರಿಗಳು ಜರ್ಮನಿಯಿಂದ ಬಂದವರು ಮೀರತ್ ಒಳಸಂಚಿನ ಖಟ್ಲೆಯಲ್ಲಿ 5 ವರ್ಷಗಳ ಶಿಕ್ಷೆಗೊಳಗಾಗಿದ್ದರು. ಕೊನೆಗೆ ಈ ಶಿಕ್ಷೆಯು ಒಂದು ವರ್ಷಕ್ಕೆ ಕಡಿಮೆಮಾಡಲ್ಪಟ್ಟಿತು. ಈ ಶಿಕ್ಷೆ ಮುಗಿದ ಮೇಲೆ 1934ರಲ್ಲಿ ಗಿರಣಿ ಮುಷ್ಕರದ ಕುರಿತು ಕೈದುಮಾಡಲ್ಪಟ್ಟು ಬಿಜಾಪುರದಲ್ಲಿ ನಿರ್ಬಂಧದೊಳಗಿರಿಸಲ್ಪಟ್ಟಿದ್ದರು. ಹೀಗೆಯೇ ನಿರ್ಬಂಧಕ್ಕೊಳಗಾಗಿರುವ ಇವರ ತಮ್ಮ ಶ್ರೀ ಜೆ. ಅಧಿಕಾರಿಯವರು ಬಿಜಾಪುರದಲ್ಲೇ ಇರುವರು.

ಪಂಜಾಬಿನ ಮಂತ್ರಿ ಮಂಡಲ

ಪಂಜಾಬಿನಲ್ಲಿ ಇಷ್ಟರಲ್ಲೇ ಮಂತ್ರಿಮಂಡಲವು ರಚಿಸಲ್ಪಟ್ಟಿರುವುದು. ಎಸೆಂಬ್ಲಿಯ ಅಧಿವೇಶನವು ಎಪ್ರಿಲ್ ತಾ. 5ಕ್ಕೆ ನಡೆಯಬಹುದೆಂದು ಅಂದಾಜುಮಾಡಲಾಗಿದೆ. ಈ ಸಭೆಯಲ್ಲಿ ಪ್ರಸಿಡೆಂಟ್ ಮತ್ತು ಡೆಪ್ಯೂಟಿ ಪ್ರಸಿಡೆಂಟರ ಚುನಾವಣೆ ಮತ್ತು ಮಂತ್ರಿ ಮಂಡಲದ ಸಂಬಳವು ನಿಶ್ಚೈಸಲ್ಪಡುವುದು. ಎಸೆಂಬ್ಲಿ ಪ್ರಸಿಡೆಂಟರ ಸ್ಥಾನಕ್ಕೆ ಯೂನಿಯನಿಸ್ಟ್ ಪಕ್ಷದ ಕಡೆಯಿಂದ ಚೌಧುರಿ ಸರ್ ಶಾಬುದ್ದೀನರು ಉಮೇದ್ವಾರಿಯಾಗಿರುವರು. ಡಾಕ್ಟರ್ ಕಿಚ್ಲು ರವರು ಇವರ ಪ್ರತಿ ಸ್ಪರ್ಧಿಯಾಗಿರುವರು. ಯೂನಿಯನಿಸ್ಟರ ಬಲವು ಇವರಲ್ಲಿ ಪರೀಕ್ಷಿಸಲ್ಪಡುವುದು. ಪಂಜಾಬಿನ ಅತಿದೊಡ್ಡ ಪಕ್ಷವಾದ ಯೂನಿಯನಿಸ್ಟ್ ಪಕ್ಷದ ನಾಯಕರಾದ ಸರ್ ಸಿಕಂದರ್‌ಹಯತ್ ಖಾನರು ಮುಖ್ಯ ಮಂತ್ರಿಗಳಾಗಿರುವರು. ಇವರು ಮಿಯಾನ್ ಅಬ್ದುಲ್ ಹೇ, ರಾವ್ ಬಹದೂರ್ ಚೌಧುರಿ ಛೋಟುರಾಮ್, ಸರ್ ಸುಂದರ ಸಿಂಘ್ ಮಜೀಥಿಯ, ಶ್ರೀ. ಮನೋಹರ್ ಲಾಲ್ ಮತ್ತು ನವಾಬ್ ಹಯತ್ ಖಾನರನ್ನು ಇತರ ಮಂತ್ರಿಗಳಾಗಿ ಆರಿಸಿರುವರು.

ಬರುವ ಕಾಂಗ್ರೆಸ್ ಅಧಿವೇಶನ

ವನ್ನು ಗುಜರಾಥಿನಲ್ಲಿ ಎಲ್ಲಿ ನಡಿಸುವುದೆಂಬುದು ಇನ್ನೂ ನಿಶ್ಚಯವಾಗಿರುವುದಿಲ್ಲ. ಈ ಕುರಿತು ಬೇರೆ ಬೇರೆ ಜಿಲ್ಲೆಗಳವರೊಳಗೆ ಹೋರಾಟವುಂಟಾಗಿರುವುದು. ಕಾಂಗ್ರೆಸ್ ಅಧಿವೇಶನವನ್ನು ಎಲ್ಲ ನಡೆಸುವುದೆಂದು ನಿಶ್ಚೈಸಲು ಗುಜರಾಥ್ ಪ್ರಾಂತಿಕ ಕಾಂಗ್ರೆಸ್ ಕಮಿಟಿಯವರು ಒಂದು ಸಬ್ ಕಮಿಟಿಯನ್ನು ನೇಮಿಸಿದ್ದರು. ಈ ಕಮಿಟಿಯವರು ಬೇರೆ ಬೇರೆ ಜಿಲ್ಲೆಗಳಲ್ಲಿ ಸಂಚರಿಸಿ ಯಾವುದು ಯೋಗ್ಯ ಸ್ಥಳವೆಂಬ ಕುರಿತು ಪರಿಶೀಲನೆ ನಡಿಸುತ್ತಿರುವರು. ಇವರು ಬಾರ್ದೋಲಿಗೆ ಹೋದಾಗ ಸಾವಿರಾರು ಮಂದಿ ಸೇರಿ ಕಾಂಗ್ರೆಸ ಅಧಿವೇಶನವನ್ನು ಬಾರ್ದೋಲಿ ತಾಲೂಕಿನ ಯಾವುದಾದರೊಂದು ಹಳ್ಳಿಯಲ್ಲಿ ನಡಿಸಬೇಕೆಂದು ಕೇಳಿಕೊಂಡರು. ಅದಕ್ಕಾಗಿ ಬೇಕಾದ ಸ್ಥಳ ಮತ್ತು ಹಾಲಿಗಾಗಿ 2500 ದನಗಳನ್ನು ಧರ್ಮಾರ್ಥ ಒದಗಿಸಿಕೊಡುವೆವೆಂದರು. ಕಮಿಟಿಯವರು ಬ್ರೋಚ್ ಜಿಲ್ಲೆಯ ಶುಕ್ಲತೀರ್ಥವೆಂಬಹಳ್ಳಿಯನ್ನು ಸಂದರ್ಶಿಸಿದಾಗ ಅಲ್ಲಿಯ ಜನರೂ ಕಾಂಗ್ರೆಸ್ಸನ್ನು ತಮ್ಮ ಊರಲ್ಲಿ ಜರಗಿಸಬೇಕೆಂದು ಆಗ್ರಹಪಟ್ಟರು. ಯಾವ ಸ್ಥಳವನ್ನಾರಿಸುವದೆಂಬುದು ಕಮಿಟಿಯವರಿಗೊಂದು ದೊಡ್ಡ ಸಮಸ್ಯೆಯಾಗಿರುವುದು. ಈ ವಿಷಯದಲ್ಲಿ ಕೊನೆಯ ತೀರ್ಮಾನವನ್ನು ಗಾಂಧಿಜಿಯವರು ಮಾಡಲಿರುವರು.

೫ನೇ ಪುಟ ನೋಡಿ

ರಷ್ಯದ ನೂತನ ಸೃಷ್ಟಿ

(ರಷ್ಯವು ಇಂದು ಹಳೆಯರ ಸಮಾಜ ರಚನೆಯನ್ನೇ ಸಂಪೂರ್ಣವಾಗಿ ವಿನಾಶಗೊಳಿಸಿ ಇಡೀ ಲೋಕದಲ್ಲೇ ನೂತನವಾದ ಹೊಸ ನಿರ್ಮಾಣವೊಂದನ್ನಾರಂಭಿಸಿರುವುದು. ರಷ್ಯದಲ್ಲಿ ಇಂದಿನ ಪರಿಸ್ಥಿತಿ ಹೇಗಿದೆ, ಅಲ್ಲಿ ಏನೆಲ್ಲಾ ನಡೆಯುತ್ತಿವೆಯೆಂಬುದನ್ನು 'ಮೋರಿಸ್ ಹಿಂಡಸ್' ಎಂಬ ಪ್ರಸಿದ್ಧ ಲೇಖಕರು ಸ್ವತಃ ಹೋಗಿ ಕಂಡು ವಿಚಾರಿಸಿ, ನಿಷ್ಪಕ್ಷಪಾತ ಬುದ್ಧಿಯಿಂದ ವಿಮರ್ಶಕ ದೃಷ್ಟಿಯಿಂದ 'ಮಾನವ ಸಮಾಜದ ಮೂಲೋತ್ಪಾಟನ' (Humanity uprooted) ಎಂಬೊಂದು ಗ್ರಂಥವನ್ನು ಬರೆದಿರುವರು. ನಮ್ಮ ವಾಚಕರಿಗಾಗಿ ಆದರಿಂದ ಪ್ರಾಮುಖ್ಯ ಕೆಲವು ಸಂಗತಿಗಳನ್ನು ತೆಗೆದುಕೊಡಲಾಗಿದೆ.) ಸಂ. ನ.

ಧರ್ಮದ ಪತನ

ಮಧ್ಯರಾತ್ರಿ ದಾಟಿ ಬಹಳ ಹೊತ್ತಾಗಿರಬಹುದು. ನಾನು ರಷ್ಯದ ಪ್ರಧಾನ ಪಟ್ಟಣವಾದ ಮೋಸ್ಕೋವಿನ ಉದ್ಯಾನವನವೊಂದರ ಬೇಲಿಗೊರಗಿ ನಿಂತು, ಬೋಲ್ಶೆವಿಸ್ಮ್ ಮತ್ತು ಅದರಿಂದುಂಟಾದ ಮಹಾಕ್ರಾಂತಿಯ ಕುರಿತು ಆಲೋಚನಾಪರನಾಗಿದ್ದೆನು. ಬೊಬ್ಬೆಗಲಾಟೆಯಿಲ್ಲ ಎಲ್ಲೆಲ್ಲಿಯೂ ನೀರವ. ಝಾರರ ಆಳ್ವಿಕೆಯಲ್ಲಿ ಮಾನವವಿಹಾರ ವಿನೋದಗಳ ನೆಲೆಯಾಗಿ ಇಡೀ ರಾತ್ರಿ ನಾನಾ ಚಟುವಟಿಕೆಗಳಿಂದ ತುಂಬಿದ್ದ ಈ ಉದ್ಯಾವನದಲ್ಲಿ ಇಂದು ಮಾನವನ ಸುಳಿವೇ ಇಲ್ಲ. ಇಷ್ಟರಲ್ಲಿ ಕ್ಷುಲ್ಲಕವಾದೊಂದು ವಿದ್ಯಮಾನವು, ರಷ್ಯವು ರಂಗಭೂಮಿಗಿಳಿಸಿರುವ ಪ್ರಚಂಡ ನಾಟಕದ ನೋಟಕ್ಕೆ ನನ್ನ ನೋಟವನ್ನೆಳೆದು ಬಿಟ್ಟಿತು. "ಮಾವ, ರೊಟ್ಟಿಗಾಗಿ ನಮಗೊಂದಾಣೆ ಕೊಡಿ" ಎಂಬ ದೀನ ಸ್ವರವು ನನ್ನ ಮೌನಧ್ಯಾನ ಸರಸ್ಸಿನಲ್ಲಿ ತೆರೆಯನ್ನೆಬ್ಬಿಸಿ ಬಿಟ್ಟಿತು. ಅದೊಂದು ದಾರಿಹೋಕ ಹುಡುಗನ ಸ್ವರವಾಗಿತ್ತು. ಅವನೊಮ್ಮೆಯೇ ಭೂಮಿಯನ್ನೊಡೆದು ಬಂದಂತೆ ನನಗೆ ತೋರಿತು. ಅವನ ಮಾತು ಮುಗಿಯುವಷ್ಟರಲ್ಲೇ ಇನ್ನೂ ಹಲವರು ಓಡಿಬಂದು ಅವನ ಬಳಿ ನಿಂತರು. ಎಲ್ಲರೂ ಹುಡುಗರು, ಬರಿಗಾಲು ಹರಕು ಕೊಳಕುವಸ್ತ್ರ, ಚಿಮಣಿಯಿಂದ ಹೊರಬಂದವರಂತೆ ಮುಖ ತುಂಬ ಮಸ್ಸಿ ಗೂಡ್ಸ್ ಟ್ರೈನೊಂದರಲ್ಲಿ ಆಗ ತಾನೆ ಬಂದವರೆಂದೂ, ಭಯಂಕರ ಹಸಿವೆಯಾಗುತ್ತಿದೆಂದೂ ತಿಳಿಸಿದರು. ನಾನು ಕನಿಕರಗೊಂಡು ಅವರನ್ನೆಲ್ಲಾ ಕರಕೊಂಡು, ಮೋಸ್ಕೋದಲ್ಲಿ ರೊಟ್ಟಿ, ಬೇಯಿಸಿದ ಮೊಟ್ಟೆ ಮೊದಲಾದ ತಿನಿಸುಗಳನ್ನು ರಾತ್ರಿ ಇಡೀ ಮಾರುತ್ತಿರುವ ಹೆಂಗಸೊಬ್ಬಳನ್ನು ಹುಡುಕುತ್ತಾ ನಡೆದೆನು. ಹಳೆಯ ಕಟ್ಟಡವೊಂದರ ಬಾಗಿಲಲ್ಲಿ ಇಂತಹ ಸ್ತ್ರೀಯೊಬ್ಬಳು ತನ್ನ ತಿಂಡಿ ತಿನಸಿನ ಕುಕ್ಕೆಯ ಬಳಿ ನಿದ್ದೆ ಹೋಗಿದ್ದಳು. ನಾನವಳ ಮೊಟ್ಟೆಗಳನ್ನೆಲ್ಲಾ ತೆಗೆದುಕೊಂಡು ಹುಡುಗರಿಗಿತ್ತೆನು. ಅವರದನ್ನು ಅತಿ ಸಂತೋಷದಿಂದ ಗಬಗಬನೆ ನುಂಗಿದರು. ಹೊಟ್ಟೆ ತುಂಬಿದಂತೆ ಉಲ್ಲಾಸಗೊಂಡು ಮಿತಿಮೀರಿ ಮಾತಾಡ ತೊಡಗಿದರು. ಅವರೆಲ್ಲರೂ ಅನಾಥ ಮಕ್ಕಳು. ಓಲ್ಗಾ ನದಿ ತಟದ ಹಳ್ಳಿಗಳವರು. ಇಷ್ಟರ ವರೆಗೆ ಪಟ್ಟಣವೆಂದರೇನೆಂದು ಕಂಡವರಲ್ಲ. ಮೋಸ್ಕೋಕ್ಕೆ ಬಂದುದು ಅದೇ ಪ್ರಥಮ ಸಲ. ಸೋವಿಯಟ್ ಸರಕಾರವು ಅವರನ್ನು ಮಕ್ಕಳ ವಸತಿಯೊಂದಕ್ಕೆ ಸೇರಿಸುವುದೆಂಬ ಆಶೆಯಿಂದ ಬಂದವರು. ತಮ್ಮ ಹರಕು ವಸ್ತ್ರ, ನಿರ್ಗತಿಕತನ, ಮತ್ತು ಏಕಾಕಿತ್ವದ ಗೊಡವೆಯೇ ಅವರಿಗಿದ್ದಂತೆ ತೋರಿಬರಲಿಲ್ಲ. ಕಟ್ಟಕಡೆಗೆ ನಾನು ತರುಣರಿಗೆ ವಿಶೇಷವಾಗಿ ಬೇಸಾಯಗಾರ ತರುಣರಿಗೆ ಎಂದೂ ಹಾಕಲು ಮರೆಯದ ಪ್ರಶ್ನೆಯನ್ನು ಈ ಹುಡುಗರಿಗೂ ಕೇಳಿದೆ. 'ಹುಡುಗರೇ ನಿಮ್ಮಲ್ಲಿ ಎಷ್ಟು ಮಂದಿ ದೇವರನ್ನು ನಂಬುವಿರಿ? ಒಬ್ಬನೇ ಒಬ್ಬನಾದರೂ ಇಲ್ಲ' ಎಂದು ಅವರಲ್ಲನೇಕರು ಕೂಗಿದರು. ಒಂದೇ ಸ್ವರದಿಂದ. "ನೀವಾರಾದರೂ ಎಂದಿಗೂ ದೇವಾಲಯಕ್ಕೆ ಹೋಗುವುದಿಲ್ಲವೆ?" ಹುಡುಗರೆಲ್ಲಾ ಈ ಪ್ರಶ್ನೆಯಿಂದ ವಿನೋದಗೊಂಡವರಂತೆ "ಇಲ್ಲ" ಎಂದು ಗಟ್ಟಿಯಾಗಿ ಹೇಳಿಬಿಟ್ಟರು. "ಹಾಗಾದರೆ ನೀವೆಲ್ಲಾ ನಾಸ್ತಿಕರೆ?" ಎಂದು ನಾನು ಪ್ರಶ್ನಿಸಿದಾಗ 'ನೀವಲ್ಲವೇ ಮಾವ?' ಎಂದೊಬ್ಬ ಹುಡುಗನು ಪ್ರತಿಪ್ರಶ್ನೆ ಕೇಳುವ ಉದ್ಧಟತನವುಳ್ಳವನಾದ. 'ನಾನೇಕೆ ನಾಸ್ತಿಕನಾಗಿರಬೇಕು?' ಎಂದೆ ನಾನು. 'ಯಾಕಂದರೆ ಪ್ರತಿಯೊಬ್ಬನೂ ನಾಸ್ತಿಕನೆ' ಎಂದ ಹುಡುಗರೊಳಗೆ ಎತ್ತರವಾಗಿದ್ದವನೊಬ್ಬ. ಅವನು ಕೇವಲ ಹುಡುಗನಾದರೂ ತಾನಾ ವಿಷಯವನ್ನು ತರ್ಕಾತೀತವಾಗಿ ನಿಶ್ಚೈಸಿಬಿಟ್ಟಿರುವೆನೆಂಬ ಧೃಡತೆಯು ಅವನ ಮಾತಿನಲ್ಲಿ ಒಡೆದು ಕಾಣುತ್ತಿತ್ತು. "ನೀವೂ ನಾಸ್ತಿಕರೆಂದು ನಾನು ಬೇಕಾದರೆ ಪಂಥ ಹಾಕುತ್ತೇನೆ. ನೀವು ಮಾತ್ರ ಅದನ್ನು ತೋರಿಸುವುದಿಲ್ಲ" ಎಂದು ಕೆಂಗೂದಲಿನ ಹುಡುಗನೊಬ್ಬನು ಕಿರಿಚಿದ. ಅವನೊಂದಿಗೆ ಇತರರೂ ಕಿರಿಚಿದರು. "ನೀನು ಯಾಕೆ ಹಾಗೆ ಹೇಳುವೆ?" ಎಂದೆ ನಾನು 'ಯಾಕೆಂದರೆ ದೇವರಿಲ್ಲ; ಆದುದರಿಂದ —' ಎಂದ ಹುಡುಗರ ಮುಖಂಡ ಪುನಃ ಅವರೆಲ್ಲ ಕಿರಿಚಾಡಿ ವಿನೋದದಿಂದ ನಕ್ಕು ಬಿಟ್ಟರು. ಅವರ ದೃಷ್ಟಿಯಲ್ಲಿ ನಾನೇನೂ ತಿಳಿಯದ ಹೆಡ್ಡನಾಗಿದ್ದೆ.

ಹಳ್ಳಿಮೂಲೆಗಳಲ್ಲೂ ನಾಸ್ತಿಕವಾದ ಪ್ರಚಾರ

ನಾನು ಈ ಮೊದಲು ರಷ್ಯದ ಬೇರೆ ಬೇರೆ ಕಡೆಗಳಲ್ಲಿರುವ ಮಕ್ಕಳ ನಿವಾಸಗಳನ್ನು ನೋಡಿದ್ದೆ. ಹಲವು ಶಾಲೆಗಳಿಗೆ ಹೋಗಿ ಅನೇಕ ವೇಳೆ ಹುಡುಗರನ್ನು ಪ್ರತ್ಯಕ್ಷವಾಗಿ ಪ್ರಶ್ನಿಸುವ ಗೌರವ ಪಡೆದಿದ್ದೆ. ಒಂದಲ್ಲೊಂದು ಕ್ರಾಂತಿಕಾರಕ ಸಂಘಗಳಿಗೆ ಸೇರಿರುವ ತರುಣರನಿಹಾರ, ವಿನೋದ ಕೂಟಗಳಲ್ಲಿ ಭಾಗಿಯಾಗಿದ್ದೆ. ಈ ತರುಣರೆಲ್ಲಾ ನಾಸ್ತಿಕರು. ನಾಸ್ತಿಕವಾದದಲ್ಲೇ ಹೆಗ್ಗಳಿಕೆ ಪಡುವವರು. ಆದರೆ ಇವರಲ್ಲೆಲ್ಲಾ ಪ್ರಚಾರ ನಡೆದಿರುತ್ತದೆ. ಧರ್ಮವು ವಿನಾಶದ ಹೆದ್ದಾರಿ, ಮನೋ ಭ್ರಾಂತಿ, ಅದೊಂದು ಶಾಪವೆಂದೆಲ್ಲಾ ಎಡೆಬಿಡದ ಪ್ರಚಾರದ ಪ್ರವಾಹಕ್ಕೆ ಸಿಕ್ಕಿದವರಿವರು. ಆದರೆ ಮೇಲಿನ ದಾರಿ ಹೋಕ ಹುಡುಗರು ಪಟ್ಟಣಗಳ ಗಂಧಗಾಳಿ ಸೋಕದವರು. ಯಾವುದಾದರೊಂದು ಕ್ರಾಂತಿಕಾರಕ ಸಂಘದ ಪ್ರಚಾರಕ್ಕೊಳಗಾದವರಲ್ಲ. ಶಾಲೆಗೆ ಹೋದವರೇ ಅಲ್ಲ. ಹಾಗಾದರೆ ಇವರಿಗೆ ನಾಸ್ತಿಕತ್ವವು ಹೇಗೆ ತಗಲಿತು? ಅದರಲ್ಲವರು ಅಷ್ಟೊಂದು ಅಭಿಮಾನ ತಾಳಲು ಕಾರಣವೇನು?

ಸ್ವಲ್ಪ ಸಮಯದ ಮೇಲೆ ನಾನು ರಷ್ಯದ ವಿದ್ಯಾರ್ಥಿಯೊಬ್ಬನೊಂದಿಗೆ ಅತ್ಯಂತ ಹಿಂದುಳಿದ ಹಳ್ಳಿ ಪ್ರದೇಶವೊಂದಕ್ಕೆ ಹೆಚ್ಚಾಗಿ ನಡಕೊಂಡೇ ಪ್ರಯಾಣ ಬೆಳೆಸಿದೆ. ಅದರ ವಿಶಾಲ ಪ್ರದೇಶವನ್ನು ಇನ್ನೂ ರೈಲ್ವೇಮಾರ್ಗವು ದಾಟಿ ಹೋಗಿಲ್ಲ. ಆಧುನಿಕ ನಾಗರಿಕತೆಯ ಯಾವ ಚಿನ್ಹೆಯೂ ಅಲ್ಲಿ ತೋರಿಬರಲಿಲ್ಲ, ರಷ್ಯಾನರು ಅನ್ನುವಂತೆ ಅದೊಂದು ಕಿವುಡು ಪ್ರದೇಶವಾಗಿತ್ತು. ನಾವು ಆರಾಮವಾಗಿ ಒಂದು ಹಳ್ಳಿಯಿಂದ ಇನ್ನೊಂದಕ್ಕೆ ಅಡ್ಡಾಡುತ್ತಾ ಬಿರುಗಾಳಿಗೆ ಸಿಕ್ಕಿ ಆಶಯಕ್ಕಾಗಿ ಹತ್ತಿರದ ಒಕ್ಕಲಿಗನ ಗುಡಿಸಲಿಗೆ ಓಡಿದೆವು. ಅದೊಂದು ಬಡವನ ಮುರುಕು ಗುಡಿಸಲಾಗಿದ್ದಿತು. ಅದಕ್ಕೆ ಶವದ ಕಣ್ಣುಗಳಂತೆ ತೋರುವ ಎರಡು ಕಿಂಡಿಗಳಿದ್ದವು. 7 ರಿಂದ 12 ವರ್ಷಗಳ ವರೆಗಣ ಮಕ್ಕಳ ಗುಂಪೊಂದು ಅಲ್ಲಿ ಸೇರಿದ್ದಿತು. ನಾವವರನ್ನು ಕರೆದು ಹತ್ತಿರ ಬರಹೇಳಿದೆವು. ಆದರೆ ಅವರೆಲ್ಲಾ ಬೆಚ್ಚಿ ಒತ್ತೊತ್ತಾಗಿ ಸೇರಿದರು. ನಾನು ಒಕ್ಕಲಿಗರ ಹುಡುಗರಿಗೆ ಅತ್ಯಪೂರ್ವವಸ್ತುವಾದ ಕಲ್ಲುಸಕ್ಕರೆಯನ್ನು ಅವರಿಗೆಲ್ಲಾ ಹಂಚಿದೆನು. ಅವರು ಕೂಡಲೆ ಸಂತೋಷಗೊಂಡು ಸಲುಗೆಯಿಂದ ಮಾತಾಡತೊಡಗಿದರು, ಅವರಲ್ಲಿ ಒಬ್ಬಳು ಮಾತ್ರ ಸ್ವಲ್ಪ ದೊಡ್ಡ ಹುಡುಗಿ. ಅವಳೊಂದು ಅಳುವ ಮಗುವನ್ನು ವಸ್ತ್ರದ ತೊಟ್ಟಿಲೊಳಗಿಟ್ಟು ತೂಗುತ್ತಿದ್ದಳು. ಯೌವನಸ್ಥರೆಲ್ಲರೂ ಹೊಲಕ್ಕೆ ಕೆಲಸಕ್ಕೆ ಹೋಗಿದ್ದರು.

"ಹುಡುಗರೇ, ನಿಮ್ಮಲ್ಲಾದರೂ ದೇವರನ್ನು ನಂಬುವಿರೇ?" ಎಂದು ನಾನು ಪ್ರಶ್ನಿಸಲೆದೆಗೊಂಡೆನು. ಮೊದಲಾದರೆ ಇಂತಹ ಪ್ರಶ್ನೆಯನ್ನು ಒಕ್ಕಲಿಗ ಹುಡುಗರಿಗೆ ಯಾರಾದರೂ ಕೇಳಿದ್ದಲ್ಲಿ, ಆತನಿಗೆ ಒಂದೋ ಬುದ್ಧಿ ಭ್ರಮಣವಾಗಿದೆ, ಇಲ್ಲವೆ ಪಿಶಾಚಿ ಹಿಡಿದಿದೆಯೆಂದು ಅವರೆಲ್ಲಾ ಚಕಿತರಾಗಿ ತಮ್ಮ ಕ್ರೂಜೆ ಹಿಡಿದು ಪ್ರಾರ್ಥನೆ ಹೇಳಲಾರಂಭಿಸುತ್ತಿದ್ದರು. ಚಿಕ್ಕ ಹುಡುಗರಿಗೆ ಇಂತಹ ಪ್ರಶ್ನೆ ಕೇಳುವುದನ್ನು ಹಿರಿಯರಾರೂ ಕೇಳುತ್ತಿದ್ದರೆ ಆತನನ್ನು ತಮ್ಮ ಹಳ್ಳಿಯಿಂದಲೇ ನಿವಾಳಿಸಿ ಬಿಡುತ್ತಿದ್ದರು, ಇಲ್ಲವೆ ಪೋಲೀಸರಿಗೊಪ್ಪಿಸುತ್ತಿದ್ದರು. 10-12 ವರ್ಷಗಳ ಮೊದಲು 'ನಾಸ್ತಿಕ' ಶಬ್ದ ಕೇಳಿದೊಡನೆಯೇ ರಷ್ಯದ ಒಕ್ಕಲಿಗರೆಲ್ಲಾ 'ಶಾಂತಮ್ ಪಾಪಮ್' ಶಾಂತಮ್ ಪಾಪಮ್ ಎಂದು ಕಿವಿಮುಚ್ಚಿಕೊಳ್ಳುತ್ತಿದ್ದರು. ಆದರೆ ಈಗ! ಇಷ್ಟೊಂದು ಅಲ್ಪ ಸಮಯದಲ್ಲಿ ಅದೆಂತಹ ನಂಬಲಸಾಧ್ಯವಾದ ಮಾರ್ಪಾಟ! ನನ್ನ ಪ್ರಶ್ನೆಯು ಹುಡುಗರಲ್ಲಷ್ಟು ನಗೆಯನ್ನೆಬ್ಬಿಸಿ ಬಿಟ್ಟಿತು. "ಅವರಾರೂ ದೇವರನ್ನು ನಂಬುವುದಿಲ್ಲ. ಅವರೆಲ್ಲಾ ನಾಸ್ತಿಕರು" ಎಂದಳು ಹಿರಿಯ ಹುಡುಗಿ. "ನಮ್ಮಂತೆಯೇ ನೀನೂ" ಎಂದೊದರಿದ ಹುಡುಗನೊಬ್ಬ. 'ಅಲ್ಲ ನಾನಲ್ಲ' ಎಂದು ಆಕ್ಷೇಪಿಸಿದಳು ಹುಡುಗಿ. ನಾನು ನನ್ನ ತಾಯಿಯ ಹಾಗೆ; ತಂದೆಯ ಹಾಗಲ್ಲ, ನಾನು ದೇವರನ್ನು ನಂಬುತ್ತೇನೆ, ದೇವಾಲಯಕ್ಕೆ ಹೋಗುತ್ತೇನೆ. ಮೇಣದ ಬತ್ತಿ ಕೂಡಾ ಹೊತ್ತಿಸುತ್ತೇನೆ.' ಹುಡುಗಿಯ ಈ ಮಾತನ್ನು ಕೇಳಿ ಹುಡುಗರೆಲ್ಲಾ ನಕ್ಕು ನಕಲಿಮಾಡಿದರು ಇದರಿಂದ ನೊಂದುಕೊಂಡ ಹುಡುಗಿಯು ಮತ್ತೂ ಆ ಕುರಿತು ವಾದಿಸಹತ್ತಿದಳು. 'ಮಾವ ನಾನು ಸುಳ್ಳು ಹೇಳುವುದೋ ಎಂದು ನೀವು ಬೇಕಾದರೆ ಅಮ್ಮನೊಡನೆ ಕೇಳಿ. ಅವಳು ಬೇಗನೆ ಇಲ್ಲಿಗೆ ಬರುವಳು. ಹೀಗೆ ಮಳೆ ಬರುತ್ತಿರುವಾಗ ಅವರು ಗದ್ದೆಯಲ್ಲಿ ನಿಲ್ಲಲಿಕ್ಕಿಲ್ಲ, ನೋಡಿ ನನ್ನ ಕ್ರೂಜೆಯೂ ಇಲ್ಲಿಯೇ ಇದೆ, ಆದರೆ ಅವರ ಕ್ರೂಜೆ ಎಲ್ಲಿದೆಯೆಂದು ಕೇಳಿ ಮಾವ' ಎಂದು ಹುಡುಗಿಯು ತನ್ನ ಕುತ್ತಿಗೆಗೆ ಕೆಂಪು ನೂಲಿನಿಂದ ಕಟ್ಟಲ್ಪಟ್ಟಿದ್ದ ಹಿತ್ತಾಳೆಯ ಕ್ರೂಜೆಯನ್ನೆತ್ತಿ ಹಿಡಿದು ತೋರಿಸಿದಳು. 'ನಮಗಾರಿಗೂ ಕ್ರೂಜೆಯೇ ಇಲ್ಲ' ಎಂದು ಹುಡುಗರೆಲ್ಲಾ ಹೆಗ್ಗಳಿಕೆಯಿಂದ ನುಡಿದು ಹುಡುಗಿಯನ್ನು ಪರಿಹಾಸ್ಯಮಾಡಿ ಗಹಗಹಿಸಿ ನಗಲಾರಂಭಿಸಿದರು. ಹುಡುಗರಲ್ಲೊಬ್ಬನು 'ನೀವು ದೇವರನ್ನು ನಂಬುವಿರೇ?' ಎಂದು ಕೇಳಿದ. ನಾನು ಉತ್ತರಕೊಡುವ ಮೊದಲೇ ಇನ್ನೊಬ್ಬ ಹುಡುಗನು, 'ಇಲ್ಲ, ದೇವರೇ ಇಲ್ಲ' ಎಂದು ನಿರ್ಧಾರಪೂರ್ವಕವಾಗಿ ಹೇಳಿಬಿಟ್ಟ 'ದೇವರನ್ನು ನೋಡಿದವರು ಯಾರೂ ಇಲ್ಲ' ಎಂದ ಮತ್ತೊಬ್ಬ.

ಈ ಹುಡುಗರ ಮಾತು ಕೇಳುತ್ತಿರುವಾಗ ಅವರು ಒಕ್ಕಲಿಗರ ಮಕ್ಕಳೋ ಎಂದು ನಾನು ಚೋದ್ಯಗೊಂಡೆ. ನನಗದನ್ನು ನಂಬಲಿಕ್ಕೇನೇ ಅಸಾಧ್ಯವಾಯಿತು. ಆದರೂ ನನ್ನೆದುರಿಗೆ ಇದ್ದಾರೆ, ಬರಿಗಾಲು ಕೊಳಕು ಮೈ ಮತ್ತು ಹರಕು ಬಟ್ಟೆಯ ಪೋರರು, ತಾವೊಂದು ಮಹತ್ತಾದ ಕಾರ್ಯಸಾಧಿಸಿದಂತ ಹೆಮ್ಮೆಯಿಂದ ನಾಸ್ತಿಕತ್ವವನ್ನು ಉದ್ಘೋಷಿಸುತ್ತಿದ್ದಾರೆ. ಈ ಉದ್ಧಟ ಅವಿಶ್ವಾಸದ ಕಾರಣವೇನೆಂದು ಎಷ್ಟೊಂದು ಪರೀಕ್ಷಿಸಿದರೂ ನನಗೇನೂ ತೋರದು. ಈ ಹಳ್ಳಿಯಲ್ಲೊಂದು ಸೋವಿಯಟ್ ಸಂಘ ಕೂಡಾ ಇಲ್ಲ. 15 ಮೈಲುದೂರದ ಸೋವಿಯಟ್ ಸಂಘದಿಂದ ಇದರ ಆಡಳಿತೆ ನಡೆಸಲ್ಪಡುವುದು. ಶಾಲೆ, ಕ್ಲಬ್ಬು, ಚಿಕ್ಕ ನಾಟಕ ಶಾಲೆಯೇ ಮೊದಲಾದ ನವಕ್ರಾಂತಿಯ ಯಾವ ಏಜೆನ್ಸಿಯೂ ಇಲ್ಲ. ಮತ್ತೂ ಆಶ್ಚರ್ಯಕರವೆಂದರೆ ಈ ಹಳ್ಳಿಯಲ್ಲಿ ಒಬ್ಬ ಕಮ್ಯೂನಿಸ್ಟನಾಗಲಿ, ಇಲ್ಲ. ಆದರೂ ಹೇಗೋ, ಯಾವ ಅದೃಶ್ಯ ರೀತಿಯಿಂದಲೋ ತೀರಾ ಕಿವುಡೆಂದು ಕರೆಯಲ್ಪಟ್ಟು ಹಿಂದುಳಿದಿರುವ ಈ ಹಳ್ಳಿಯ ನಿರಕ್ಷರಕುಕ್ಷಿ ಒಕ್ಕಲಿಗರ ಮಕ್ಕಳಿಗೂ, ಹೊಸ ಧೈರ್ಯ ಹೊಸಭಾವನೆ ಉತ್ಸಾಹಗಳು ಹಬ್ಬಿ ಅವರು ಮೊಸ್ಕೋ ಅಥವಾ ಇನ್ನಾವುದಾದರೂ ದೊಡ್ಡ ಪಟ್ಟಣದ ಮಕ್ಕಳಷ್ಟೇ ಹೆಮ್ಮೆಯಿಂದ ಧರ್ಮದೇವರುಗಳಲ್ಲಿ ಅವಿಶ್ವಾಸವುಳ್ಳವರಿವರು. ರಷ್ಯದ ಕ್ರಾಂತಿಕಾರಕಭಾವನೆಯು ಇಡೀ ವಾತಾವರಣವನ್ನೇ ತುಂಬಿ ಅದನ್ನು ಉಸಿರಾಡಿದೊಡನೆ ತರುಣರಲ್ಲಿ ಧರ್ಮದೇವರುಗಳ ಮೇಲಿನ ನಂಬಿಕೆಯು ತನ್ನಂತೆಯೇ ಅಳಿದುಹೋಗುವಂತೆ ತೋರುವುದು. ನಾನು ಒಕ್ಕಲಿಗರ ತರುಣರನ್ನು ಗದ್ದೆ, ಧರ್ಮಶಾಲೆ, ಮಾರ್ಕೇಟು ಮತ್ತು ದೇವಾಲಯವಠಾರಗಳಲ್ಲಿ ಸಂಧಿಸಿದಾಗ ಕೂಡಾ ಅವರು ದೇವಾಲಯ ಧರ್ಮದೇವರ ಕುರಿತು ಪೂಜ್ಯತೆಯಿಂದ ಮಾತಾಡುವುದನ್ನು ಕಂ

ಡುವೇ ಅಪರೂಪ. ಹುಡುಗಿಯರು ಮಾತ್ರ ಹಳೆಯ ಧರ್ಮವನ್ನು ಒಮ್ಮೆಯೇ ಬಿಡಲು ಮನಸ್ಸೊಡಂಬಡದವರಾಗಿದ್ದರು.

ಧರ್ಮದ ಕುರಿತು ಹಳ್ಳಿಯ ಒಕ್ಕಲಿಗರಲ್ಲುಂಟಾಗಿರುವ ಮಾರ್ಪಾಟವು ವಿಸ್ಮಯಕರವಿರುವುದು. ಮೊದಲು ಪ್ರತಿಯೊಂದು ರಸ್ತೆ ಸಂದುಗಳಲ್ಲಿ ಯೇಸುಕ್ರಿಸ್ತನ ಗೊಂಬೆಯುಳ್ಳ ದೊಡ್ಡ ದೊಡ್ಡ ಮರದ ಕ್ರೂಜೆಗಳು ಊರಲ್ಪಟ್ಟಿದ್ದುವು. ಈಗ ಅವೆಲ್ಲಾ ಮಾಯವಾಗಿರುವವು. ಅವನ್ನು ಒಕ್ಕಲಿಗರು ಅಗೆದು ತೆಗೆದು ತುಂಡುಮಾಡಿ ಕಟ್ಟಿಗೆಯಾಗಿ ಉಪಯೋಗಿಸಿರುವರು. ಕೆಲವು ಕಡೆ ಸ್ಮಶಾನದ ಘೋರಿಗಳ ಮೇಲೆ ಊರಲ್ಪಟ್ಟಿರುವ ಕ್ರೂಜೆಗಳನ್ನೂ ಕಿತ್ತು ತೆಗೆದು ಒಲೆಗಿಟ್ಟಿರುವರು. ಇದು ಪಾಪವಾದರೂ ಒಕ್ಕಲಿಗರಿಗೀಗ ಪಾಪ-ಪುಣ್ಯದ ಭಾವನೆಯೇ ಇಲ್ಲ. ಕೆಲವರು ದೇವರನ್ನು ಕೂಡಾ ನಂಬುವುದಿಲ್ಲ. ಮೊದಲು ಅಂದಚಂದವಾಗಿ ಚೊಕ್ಕಟವಾಗಿರಿಸಲ್ಪಟ್ಟಿದ್ದ ದೇವಾಲಯಗಳು ಇಂದು ಜೀರ್ಣವಾಗಿ ಹಾಳುಬಿದ್ದಿರುವವು. ಮೊದಲು ಅವುಗಳನ್ನು ಕಂಡೊಡನೆಯೇ ಜನರು ಬಗ್ಗಿ ವಂದಿಸಿ ಪ್ರಾರ್ಥನೆ ಹೇಳಿ ಹೋಗುತ್ತಿದ್ದರು. ಈಗ ಆ ಕಡೆಗೆ ಕಣ್ಣೆತ್ತಿ ನೋಡುವವರೇ ಇಲ್ಲ. ಆದಿತ್ಯವಾರ ದೇವಾಲಯಕ್ಕೆ ಹೋಗುವ ಒಕ್ಕಲಿಗರು ಬಹಳ ಸ್ವಲ್ಪ ಮಂದಿ. ಮೊದಲು ಪೂಜೆಗೆ ಬರುವ ಜನರು ನುಗ್ಗಿ ನುಸಿಯುತ್ತಿದ್ದ ಮಂದಿರಗಳು ಇಂದು ಬರಿದಾಗಿ ನಿರ್ಜನವಾಗಿರುವವು. ಕೆಲಮಂದಿ ಮುದುಕ ಮುದುಕಿಯರು ಮತ್ತು ಚಿಕ್ಕ ಮಕ್ಕಳು ಹೊರತು ಬೇರೆ ಯಾರೂ ದೇವಾಲಯಗಳಿಗೆ ಹೋಗಲಾರರು. ಅದರ ಬದಲಿಗೆ ಹೊರಗೆ ವಿನೋದ ವಿಹಾರಗಳಿಂದ ಸಮಯ ಕಳೆಯುವರು. ಮೊದಲು ಧನ ದೌಲತ್ತಿನಿಂದ ಮೆರೆದಾಡುತ್ತಿದ್ದ ಪಾದ್ರಿಗಳು ಇಂದು ದಾರಿದ್ರ್ಯ ದುಃಖ ಪೀಡಿತರಾಗಿ ಸೊರಗಿ ಕೊರಗಿ ಕೊಂಡಿರುವರು. ಅವರ ಆಸ್ತಿ ಸೊತ್ತುಗಳನ್ನೆಲ್ಲಾ ಸರಕಾರವು ಅಪಹರಿಸಿರುವುದು. ಮೊದಲು ಪಾದ್ರಿಗಳನ್ನು ಅತ್ಯಂತ ಭಕ್ತಿಯಿಂದ ಕಂಡು ಅವರಿಗೆ ಬೇಕಾದುದನ್ನೆಲ್ಲಾ ಕಾಣಿಕೆಯಾಗಿ ತಂದು ಕೊಡುತ್ತಿದ್ದ ಒಕ್ಕಲಿಗರು ಈಗ ಅವರ ಹತ್ತಿರಕ್ಕೆ ಬರಲಾರರು. ಕ್ರಿಸ್ ಮಸ್ ಮತ್ತು ಈಸ್ಟರ್ ಹಬ್ಬಗಳ ಸಮಯದಲ್ಲಿ ಮಾತ್ರ ಜನರು ವಿನೋದಕ್ಕಾಗಿ ಪೂಜೆ ಪ್ರಾರ್ಥನೆಗಾಗಿಯಲ್ಲ, ದೇವಾಲಯಗಳಿಗೆ ಹೋಗುವರು.

ರಶ್ಯದಲ್ಲಿ ಈಗಲೂ ಸಾವಿರಾರು ದೇವಾಲಯಗಳಿರುವವೆಂಬುದೇನೋ ನಿಜ. ಕ್ರಿಸ್ ಮಸ್ ಮತ್ತು ಈಸ್ಟರ್ ಹಬ್ಬಗಳ ಸಂದರ್ಭದಲ್ಲಿ ಅವುಗಳು ಪ್ರೇಕ್ಷಕರಿಂದ ತುಂಬಿ ಹೋಗುವವು. ಹಳಬರಲ್ಲಿ ಇನ್ನೂ ಮೊದಲಿನ ಭಕ್ತಿ ವಿಶ್ವಾಸಗಳೇ ನೆಲೆನಿಂತಿರುವವು. ಒಂದು ಕಡೆ ಒಬ್ಬ ಅಧ್ಯಾಪಕನು, ತನ್ನ ಶಾಲೆಯ ಕಟ್ಟೋಣವು ಅತಿ ಚಿಕ್ಕದಾಗಿ ಕೊಳಕಾಗಿದ್ದುದರಿಂದ ದೇವಾಲಯದೊಂದು ಭಾಗದಲ್ಲಿ ಶಾಲೆ ನಡಿಸುವ ಸೂಚನೆ ಮಾಡಿದಾಗ ಆ ಹಳ್ಳಿಯ ಹಳಬರೆಲ್ಲಾ ಗುಟ್ಟಾಗಿ ಒಟ್ಟು ಸೇರಿ ಆ ಅಧ್ಯಾಪಕನನ್ನು ಕೊಂದು ಹಾಕುವುದರಲ್ಲಿರಲು ಅವನು ಕಡೆಗೆ ಊರು ಬಿಟ್ಟೇ ಹೋಗಬೇಕಾಯಿತು. ಅಲ್ಲಲ್ಲಿ ಹೊಸ ಹೊಸ ಪಂಥಗಳು ಹೊಸ ಭಾವನೆ, ಘೋರಣೆಯಿಂದ ಸ್ಥಾಪಿತವಾಗುತ್ತಿರುವವು. ಹೊಸ ಬೋಧಕರು ತಲೆಯೆತ್ತಿ ಸ್ವಲ್ಪ ಸಮಯದಲ್ಲೇ ಕಣ್ಮರೆಯಾಗುವರು. ಹುಡುಗಿಯರು ದೇವಾಲಯಗಳಲ್ಲಿ ಹೊರತು ಹೊರಗೆ ಮದುವೆಯಾಗಲೊಪ್ಪುವುದಿಲ್ಲ. ಇದರಿಂದೆಲ್ಲಾ ರಶ್ಯದಲ್ಲಿ ಧರ್ಮವು ಇನ್ನೂ ಉಳಿಯದುಳಿದಿದೆಯೆಂದು ಪ್ರತಿವಾದಿಸಬಹುದು. ಪರಂತು ರಶ್ಯವು ಅತಿ ವಿಸ್ತಾರವಾದ ರಾಜ್ಯ. ಅದರ ಸಾವಿರಾರು ಹಳ್ಳಿಗಳಲ್ಲಿ ಮಿಲ್ಯಾಂತರ ಒಕ್ಕಲಿಗರಿರುತ್ತಾರೆ. ಅಲ್ಲಿ ಇನ್ನೂ ಸಾವಿರಗಟ್ಲೆಯಲ್ಲಿ ಒಕ್ಕಲಿಗರು ದೇವಾಲಯಗಳಿಗೆ ಹೋಗುತ್ತಾರೆಂಬುದೇನೂ ಗಣನೀಯ ಸಂಗತಿಯಲ್ಲ. ಮುಖ್ಯ ವಿಷಯವೆಂದರೆ, ಮೊದಲು ದೇವಾಲಯಗಳ ಬೆನ್ನೆಲುಬಾಗಿ ಅವನ್ನು ಪ್ರಾಣಕ್ಕಿಂತಲೂ ಹೆಚ್ಚಿನದಾಗಿ ಪರಿಗಣಿಸುತ್ತಿದ್ದ ಸಹಸ್ರಗಟ್ಲೆ ಒಕ್ಕಲಿಗರು ಇಂದೀಗ ದೇವಾಲಯಗಳಿಗೆ ಹೋಗುವುದನ್ನು ನಿಲ್ಲಿಸಿ ಪ್ರಾರ್ಥನೆ ಮಾಡುವುದನ್ನು ಬಿಟ್ಟು ದೇವರಲ್ಲೇ ವಿಶ್ವಾಸವಿಲ್ಲದವರಾಗಿರುವುದು. ರಶ್ಯದಲ್ಲಿ ಈಗಲೂ ಸಾವಿರಾರು ದೇವಾಲಯಗಳು ತೆರೆದಿರುತ್ತವೆ. ಆದರೆ ಸಾವಿರಾರು ದೇವಾಲಯಗಳು ಮುಚ್ಚಲ್ಪಟ್ಟಿರುತ್ತವೆ. ನಾಸ್ತಿಕತ್ವದ ಮಹಾ ಪ್ರವಾಹವು ರಶ್ಯದ ಯುವಕರನ್ನೆಲ್ಲಾ ಮುಳುಗಿಸಿಬಿಟ್ಟಿದೆ. ಹಳ್ಳಿ ಮೂಲೆಗಳ ಒಕ್ಕಲಿಗ ತರುಣರೂ, ಚಿಕ್ಕ ಹುಡುಗರೂ ಈ ಹೊಸ ಹೊಯ್ಲಿಗೆಸಿಕ್ಕಿ ತೇಲಿ ಹೋಗಿರುತ್ತಾರೆ. ಧರ್ಮ, ದೇವರು, ದೇವಾಲಯ, ಪೂಜೆ ಪ್ರಾರ್ಥನೆಗಳ ಭಾವನೆಯ ಬುಡಕ್ಕೇನೆ ಕೊಡಲಿಯಿಟ್ಟು ಅದನ್ನು ನಿರ್ನಾಮಗೊಳಿಸುವ ಪ್ರಚಂಡ ಶಕ್ತಿಯು ಇಂದು ರಶ್ಯದಲ್ಲಿ ಪ್ರಭಾವ ಹೊಂದಿರುವುದು. ಅದರಿದಿರಲ್ಲಿ ಹಳೆಯ ಧರ್ಮದೇವರು, ಆಚಾರ ವಿಚಾರ, ನೇಮನಿಷ್ಠೆಗಳೆಲ್ಲಾ ಮೂಲೆಗುಂಪಾಗುತ್ತಿರುವವು. ಶ್ರದ್ಧಾಳುವಿನ ಹೃದಯವನ್ನು ತಳಮಳಿಸುವ ಪ್ರಾಮುಖ್ಯ ಸಂಗತಿಯಿದು.

ರಶ್ಯದ ಕಾಶಿಯು ಇಂದು ಹೇಗೆ ವಿನಾಶದ ದಾರಿ ಹಿಡಿದಿರುವುದೆಂಬುದನ್ನು ತಿಳಿಯಲು ಮುಂದಿನ ಸಂಚಿಕೆ ನೋಡಿರಿ.

ಮೂರನೇ ಪುಟದಿಂದ ಮುಂದುವರಿಸಿದ್ದು

ಬೊಂಬಾಯಿ ಕಾಂಗ್ರೆಸ್ ಪಕ್ಷ

ಬೊಂಬಾಯಿ ಪ್ರಾಂತದ ಎಸೆಂಬ್ಲಿಯ ಕಾಂಗ್ರೆಸ್ ಪಕ್ಷೀಯರು ಇದೇ ತಾ. 12 ರಲ್ಲು ಸಭೆಸೇರಿ ಶ್ರೀ. ಬಿ. ಜಿ. ಖೇರ್ ಎಂಬವರನ್ನು ಒಮ್ಮತದಿಂದ ತಮ್ಮ ನಾಯಕರಾಗಿ ಆರಿಸಿರುವರು. ಸರ್ದಾರವಲ್ಲಭಬಾಯಿ ಪಟೇಲ್, ಶ್ರೀ. ಶಂಕರ ರಾವ್ ದೇವ್ ಮತ್ತು ಶ್ರೀ. ಗಂಗಾಧರ ರಾವ್ ದೇಶಪಾಂಡೆಯವರು ಈ ಸಭೆಯಲ್ಲಿ ಭಾಗಿಯಾಗಿದ್ದರು. ಕೌನ್ಸಿಲಿನ 13 ಮತ್ತು ಎಸೆಂಬ್ಲಿಯ 70 ಮಂದಿ ಹಾಜರಿದ್ದರು. ಶ್ರೀ. ಕೆ. ಎಫ್. ನರಿಮನರು ಹಾಜರಿರಲಿಲ್ಲ.

ತಹಸಿಲ್ದಾರರಿಗೆ ಹೊಡೆದು ರಿಕಾರ್ಡನ್ನೊಯ್ದುದು

ಕಳದ ತಾ. ೭ನೇ ರಾತ್ರಿ ರಾಮ್ನಾಡ್ ಸಂಸ್ಥಾನದ ಶ್ರೀ. ನಾಗರಾಜ ಅಯ್ಯರ್ ಎಂಬ ಅಸಿಸ್ಟಾಂಟ ಸ್ಪೆಶಲ್ ತಹಸಿಲ್ದಾರರು ಪಟ್ಟಿವೆಟ್ಟ ಎಂಬ ಹಳ್ಳಿಯ ಬೆಳೆಯನ್ನು ತನಿಖೆ ಮಾಡಿ ರಾತ್ರಿ ಪೆರೆಯೂರು ಎಂಬ ಹಳ್ಳಿಗೆ ಜೋಡೆತ್ತಿನ ಗಾಡಿಯಲ್ಲಿ ಕುಳಿತು ಹೋಗುತ್ತಿದ್ದಾಗ, ಸುಮಾರು ೩ ಮಂದಿ ದೊಣ್ಣೆ ಹಿಡಕೊಂಡು ಮುತ್ತಿಗೆಹಾಕಿ ಗಾಡಿಯವನನ್ನು ಹೊಡೆದೋಡಿಸಿದರು ಆ ಮೇಲೆ ಎತ್ತುಗಳನ್ನು ಬಿಟ್ಟು ತಹಸಿಲ್ದಾರರನ್ನು ಸರಿಯಾಗಿ ಹೊಡೆದು ಹಾಕಿ ಅವರ ವಶವಿದ್ದ ರಿಕಾರ್ಡುಗಳನ್ನೆಲ್ಲಾ ತೆಗೆದು ಕೊಂಡು ಹೋಗಿರುವರು. ರಾಮ್ನಾಡಿನ ಪೋಲೀಸ್ ಸುಪರಿಟೆಂಡೆಂಟರು ಒಂದು ಲೋರಿ ರಿಸರ್ವ ಪೋಲೀಸರ ಸಮೇತ ಪಟ್ಟಿವೆಟ್ಟಿಗೆ ಧಾವಿಸಿ ತನಿಖೆ ನಡಿಸುತ್ತಿರುವರು.

ವಿಷಮಿಶ್ರ ಆಹಾರದಿಂದ 4 ಮಂದಿಯ ಮರಣ

5 ಮಂದಿ ಬ್ರಾಹ್ಮಣರು ತುಂಬಾ ಹಣ ಹಿಡಕೊಂಡು ಮದುವೆಮಾಡಿಕೊಳ್ಳಲು ಚಂದದ ಹುಡುಗಿಯರ ಹುಡುಕಾಟಕ್ಕೆ ಹೊರಟಿದ್ದರು. ದರ್ಭಾಂಗ ಸ್ಟೇಶನಿನಲ್ಲಿ ಯಾರೋ ಅಪರಿಚಿತರು ಮೂವರು ಈ ಬ್ರಾಹ್ಮಣರಿಗೆ ಚೆಲುವ ಹುಡುಗಿಯೊಬ್ಬಳನ್ನು ತೋರಿಸುವೆನೆಂದು ವಂಚಿಸಿ ಒಂದು ಮನೆಗೆ ಕರದೊಯ್ದು ಊಟವಿತ್ತರು. ಊಟಮಾಡಿದೊಡನೆಯೇ ಬ್ರಾಹ್ಮಣರೆಲ್ಲಾ ಬೋಧತಪ್ಪಿ ಬಿದ್ದರು. 4 ಮಂದಿ ಆಸ್ಪತ್ರೆಗೆ ತರುವಾಗ ದಾರಿಯಲ್ಲೇ ಮೃತಪಟ್ಟರು. 5ನೇಯವನು ಕಂಟಕಾವಸ್ಥೆಯಲ್ಲಿರುವನು. ಈ ಸಂಬಂಧವಾಗಿ ಒಬ್ಬನು ಕೈದುಮಾಡಲ್ಪಟ್ಟಿರುವನು.

ನವಯುಗಕ್ಕೆ
ಇಂದೇ ಚಂದಾದಾರರಾಗಿರಿ!
ವಾರ್ಷಿಕ ಚಂದಾ (ಅಂಚವೆಚ್ಚ ಸೇರಿ)
೩--೪--೦

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್

೧೯೦೬ರಲ್ಲು ಸ್ಥಾಪಿತವಾದದ್ದು

ಪ್ರಕಟಣೆ

ಇದರ ಶಾಖೆಗಳು ತಾ. **19-3-1937** ರಲ್ಲು

(1) ವೆಲ್ಲೂರು (ಉತ್ತರಆರ್ಕಾಡು ಜಿಲ್ಲೆ)
ಮತ್ತು
(2) ಬೈಂದೂರು (ದಕ್ಷಿಣಕನ್ನಡ ಜಿಲ್ಲೆ)

ಈ ಸ್ಥಳಗಳಲ್ಲಿ ತೆರೆಯಲ್ಪಡುವುವು

ಈ ಬೇಂಕಿನ ರಿಜಿಸ್ಟರ್ಡ ಆಫೀಸನ್ನು ತಾ. 19-3-1937ನೇ ಶುಕ್ರವಾರ ಇಡೀ ಪಟ್ಟಣದ ಮಧ್ಯಸ್ಥಳವಾದ ಮಸೀದಿ ರಸ್ತೆಯಲ್ಲಿರುವ (ದಿವಂಗತ ಖಾನ್‌ಬಹದೂರ್ ಹಾಜಿಅಬ್ದುಲ್ಲಾ ಹಾಜಿಕಾಸಿಮ ಸಾಹೇಬರು ವಾಸ್ತವಿಸಿದ್ದ) ಭವ್ಯವಾದ ಕಟ್ಟಡಕ್ಕೆ ಒಯ್ಯಲಾಗುವುದು.

Udipi,
15-3-1937

ಎಮ್. ಶ್ರೀನಿವಾಸ ಪ್ರಭು,
Manager.

ಕಸ್ತೂರಿ ಮಿಶ್ರಣ ದಶಮೂಲವೆಂಬ

ಸೂತಿಕಾ ರಸಾಯನ

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

I. ಶೋಧನ ಗುಣ:—ಶೋಧನದಿಂದ ಪ್ರಸವಾನಂತರ ಗರ್ಭಕೋಶದ ಸರ್ವತರದ ನಂಜನ್ನು ಹೊರಗೆ ಹಾಕಿ ಪ್ರಸೂತವಾದ ಗರ್ಭಕೋಶವನ್ನು ಮೂರು ದಿವಸಗಳೊಳಗೆ ಸಂಕುಚಿತವಾಗಿ ಮಾಡುವದು.

II. ರಸಾಯನ ಗುಣ:—ರಸಾಯನದಿಂದ ಸೂತಿಕಾ ಸ್ತ್ರೀಯು ಗರ್ಭದ ಬೆಳವಣಿಗೆ ಬಗ್ಗೆಯೂ, ಪ್ರಸವವೇದನಾ ಬಗ್ಗೆಯೂ ತಾನು ಕಳಕೊಂಡ ಮೂಲ ಶಕ್ತಿಯನ್ನು ಇಮ್ಮಡಿಯಾಗಿ ತಿರುಗಿ ಹೊಂದುವಳು.

III. ಸುಖಸೇವನ:—ಸುಖಸೇವನದಿಂದ ಮಧುರ ಮನೋಹರವಾದ ಈ ರಸಾಯನವು ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾದುವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವಾನಂತರದ ತೀಕ್ಷ್ಣವೇದನೆಯನ್ನು ಶೀಘ್ರದಿಂದ ನಿಲ್ಲಿಸುವದು.

ಒಬ್ಬಳು ಬಾಣಂತಿಗೆ ಎರಡು ಬಾಟ್ಲಿ ಬೇಕಾಗುವದು. ಕ್ರಯ ಬಾಟ್ಲಿ 1ಕ್ಕೆ ರೂ. 2-0-0.

ಎನ್. ವಿ. ಶಾಸ್ತ್ರಿ, ಆಯುರ್ವೇದ ಭೂಷಣ

ಮಂಗಳೂರು, ದ.ಕ.

ಕ್ರೌನ್ ರಬ್ಬರ್ ಸ್ಟಾಂಪ್ ಕಂಪೆನಿ

ಸ್ಥಾಪನೆ: 1926



18 ಬಲ್ಮಠ ರಸ್ತೆ, ಮಂಗಳೂರು.

ಯಾವತ್ತೂ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಅಗತ್ಯವಿರುವ ಎಲ್ಲಾ ತರದ ರಬ್ಬರ್ ಮೊಹರುಗಳೂ ಸೈನ್ ಬೋರ್ಡು, ಪೇದೆಗಳ ಬೇಜು, ಮೊನೊಗ್ರಾಮ್ ಸೀಲು, ಇತ್ಯಾದಿಗಳನ್ನು ಪ್ರತಿಯೊಬ್ಬರ ಅಭಿರುಚಿಗೊಪ್ಪುವಂತೆ ಸುಲಭ ದರಗಳಲ್ಲಿ ಮಾಡಿಕೊಡೋಣಾಗುವುದು.

ಹೆಬ್ಬೆಟ್ಟು ಒತ್ತುವ ಸೆಟ್ಟುಗಳು ಕೂಡಾ ಸಿಗುವವು.

ಮಿಕ್ಕ ವಿಚಾರಗಳನ್ನು ನಮ್ಮ ಆಫೀಸಿಗೆ ಸ್ವತಹ ಬಂದು ಯಾ ಪತ್ರ ಮುಖೇನ ತಿಳಕೊಳ್ಳಬಹುದು.

ಮಂಗಳೂರಲ್ಲಿ ರೈಲು ಬಂಡಿಗಳ ಸಮಯ

ಗಾಡಿಗಳು	ಹೊರಡುವ ಘಂಟೆ.	ತಲಪುವ ಘಂಟೆ.
ಮಿಕ್ಸೆಡ್	ಬೆಳಗ್ಗೆ 5-55	ರಾತ್ರಿ 8-55
ಕಾಂಜಂಗಾಡ್ ಪ್ಯಾಸಂಜರ್	ಬೆಳಗ್ಗೆ 8-25	ಮಧ್ಯಾಹ್ನ 1-20
ಮೈಲ್	ಬೆಳಗ್ಗೆ 9-50	ಸಂಜೆ 4-20
ಫಾಸ್ಟ್ ಪೆಸೆಂಜರ್	ಮಧ್ಯಾಹ್ನ 12-45	ಮಧ್ಯಾಹ್ನ 2-40
ಕಾಸರಗೋಡ್ ಪ್ಯಾಸೆಂಜರ್	ಮಧ್ಯಾಹ್ನ 3-20	ಸಂಜೆ 6-15
ಶಟಲ್	ಸಂಜೆ 5-35	ಬೆಳಗ್ಗೆ 9-20

ಜನರಲ್ ಎಶ್ಯೂರೆನ್ಸ್ ಸೊಸೈಟಿ ಲಿಮಿಟೆಡ್.

[ಸ್ಥಾಪನೆ: **1907**]

ಅತ್ಯಧಿಕ ಬೋನಸು !

ಮರಣಾಂತ್ಯ ಪೊಲಿಸಿಗಳಮೇಲೆ ಸೇಕಡಾ **25,**

ಎಂಡೋಮೆಂಟ್ ಪೊಲಿಸಿಗಳಮೇಲೆ ಸೇಕಡಾ **20,**

ಬಲವಂತ ಪೊಲಿಸಿಗಳು ರೂ. **3** ಕೋಟಿ ಮಿಕ್ಕಿವೆ.

ಮೂಲಧನವು ರೂ. **75** ಲಕ್ಷ ಮೀರಿದೆ.

ಬಡವರಿಗೂ ಧನಿಕರಿಗೂ ಹಿತಕಾರಿಯಾದ ಎಶ್ಯೂರೆನ್ಸ್ ಯೋಜನೆಗಳು.

ಅತೀ ಲಾಭದಾಯಕವಾದ ಉದಾರ ಏಜೆನ್ಸಿ ಶರ್ತಗಳು.

ವಿಶೇಷ ಮಾಹಿತಿಗಳಿಗಾಗಿ ಈ ಕೆಳಗಣ ವಿಳಾಸಗಳಿಗೆ ಬರೆಕೊಳ್ಳಿರಿ—

ಆಕ್ಟಿಂಗ್ ಮೆನೇಜರ್, ಅಜ್ಮೀರ್.

ಅಥವಾ

ಮೆನೇಜರ್, 278, ಲಿಂಗ ಚೆಟ್ಟಿ ಸ್ಟ್ರೀಟ್, ಮದ್ರಾಸ್.

ಸುಪರಿಂಟೆಂಡೆಂಟ್, ಬಳ್ಳಾರಿ. ಆರ್ಗನೈಸರ್, ವೆಲ್ಲೂರು.

ಚೀಫ್ ಏಜೆಂಟ್ಸ್, ಮಧುರ, ತ್ರಿಚಿನಾಪಳ್ಳಿ.

ಸ್ಟೀಮರು ಸಮಯ

	ತಲಪುವುದು	ಹೊರಡುವುದು
ಮಂಗಳೂರು	ಗುರುವಾರ ಬೆಳಗ್ಗೆ ಗಂಟೆ 9	ಶನಿವಾರ ಬೆಳಗ್ಗೆ ಗಂಟೆ
	ಸೋಮವಾರ ಬೆಳಗ್ಗೆ ಗಂಟೆ 6	ಮಂಗಳವಾರ ಬೆಳಗ್ಗೆ ಗಂಟೆ
ಮಲ್ಪೆ	ಗುರುವಾರ ಬೆಳಗ್ಗೆ ಗಂಟೆ 3	ಶನಿವಾರ ಮಧ್ಯಾಹ್ನ 2-30
	ಆದಿತ್ಯವಾರ ಸಂಜೆ ಗಂಟೆ 6	ಮಂಗಳವಾರ ಮಧ್ಯಾಹ್ನ 2-30
ಕುಂದಾಪುರ		ಶನಿವಾರ ಸಂಜೆ ಗಂಟೆ 3
		ಮಂಗಳವಾರ ಮಧ್ಯಾಹ್ನ 3

ನಮ್ಮ ಉನ್ನತಿಗಾಗಿ ನಾವೇನು ಮಾಡಬೇಕು? ಇತ್ಯಾದಿ ಸಮಸ್ಯೆಗಳಿಗೆ ಸದುತ್ತರವನ್ನು ಕೊಡುವ ಪತ್ರಿಕೆ ಎಂದರೆ

ಸದ್ಧರ್ಮ ಪ್ರಚಾರಕ

ವಾ. ಚ. **1—4—0.**

ಸಂಪಾದಕರು:-

ಬಿ. ಲಕ್ಷ್ಮಣದೇವ ವಿದ್ಯಾರ್ಥಿ.

ಉತ್ಕೃಷ್ಟ ಕಥೆ, ಕವನಗಳಿಂದೊಡಗೂಡಿ, ಪ್ರತಿಮಾಸದ 15ನೇ ತಾರೀಕಿಗೆ ತಪ್ಪದೆ ಹೊರಡುವುದು.

ಸದ್ಧರ್ಮ ಪ್ರಚಾರಕ, ಕಾರ್ಯಲಯ,

ಅಳಕೆ ರಸ್ತೆ, ಮಂಗಳೂರು.

ಪ್ರವಾಸಿ.

ಅತ್ಯುತ್ತಮವಾದ ಸಚಿತ್ರ ಕನ್ನಡ ಮಾಸಪತ್ರಿಕೆ.

ಬೋಧಪ್ರದವಾದ ಲೇಖನಗಳು-ಮಹಾಪುರುಷರ ಜೀವನ ಚರಿತ್ರೆಗಳು ಉತ್ತಮ ಕಥೆಗಳು-ಆರ್ಥಿಕ ರಾಜಕೀಯ ವಿಚಾರಗಳು. ವೈಜ್ಞಾನಿಕ ವಿಷಯಗಳು-ಪರರಾಷ್ಟ್ರಗಳ ಸಮಸ್ಯೆಗಳು-ಗ್ರಂಥ ವಿಮರ್ಶೆ ಇವುಗಳನ್ನೊಳಗೊಂಡ ಹೊಸ ರೀತಿಯ ಮಾಸಪತ್ರಿಕೆ. ಕೈಗೆಲಸವೆಂಬ ನೂತನ ವಿಭಾಗವಿರುವ ಪತ್ರಿಕೆಯು ಇದೊಂದೇ

ವಾರ್ಷಿಕ ಚಂದಾ ರೂ. 3—8—0.

ಪ್ರವಾಸಿ ಕಾರ್ಯಾಲಯ

ಕಾಸರಗೋಡು, ದಕ್ಷಿಣಕನ್ನಡ.

THE

Vijaya Bank, Ltd.

Head Office. MANGALORE. Branch Office: Court Road, UDIPI.

ದಿ ವಿಜಯ ಬೇಂಕ್ ಲಿಮಿಟೆಡ್,

ಹೆಡ್ ಆಫೀಸು: ಮಂಗಳೂರು. ಶಾಖೆ: ಕೋರ್ಟು ರಸ್ತೆ, ಉಡ್ಪಿ

ಚಾಲ್ತಿ ಠೇವಣಾತಿಗಳು ಸಾ. ಶೆ. 2. ಸೇವಿಂಗ್ಸ ಬ್ಯಾಂಕ್ ಠೇವಣಾತಿಗಳುಸಾ. ಶೆ. $3\frac{1}{2}$

ಕಾಯಂ ಠೇವಣಾತಿಗಳು 3 ತಿಂಗಳ ಬಾಬ್ತು ಸಾ. ಶೆ. $3\frac{3}{4}$

6 ಮತ್ತು 9 ತಿಂಗಳ ಬಾಬ್ತು ಸಾ ಶೆ. 4. 1ವರ್ಷದ ಬಾಬ್ತು ಸಾ. ಶೆ. 5.

2 ವರ್ಷದ ಮೇಲಿನವುಗಳ ಬಾಬ್ತು ಸಾ. ಶೆ. $5\frac{1}{2}$ ದರದ ಬಡ್ಡಿಯಲ್ಲಿ ಅಂಗೀಕರಿಸಲ್ಪಡುವುವು.

ಬ್ಯಾಂಕಿಗೆ ಸಂಬಂಧಪಟ್ಟ ಎಲ್ಲಾ ತರದ ವ್ಯವಹಾರಗಳು ನಡೆಸಲ್ಪಡುತ್ತವೆ—

ಅಂದರೆ—ಪ್ರೊ. ನೋಟು, ಹುಂಡಿ, ಸರಕು, ವಗೈರೆ ಮೇಲೆ ಸಾಲಕೊಡಲಾಗುತ್ತದೆ.

ಭಂಗಾರದ ಈಡಿನ ಮೇಲೆ ಈ ಕೆಳಗಿನ ದರದ ಬಡ್ಡಿಯಲ್ಲಿ ಸಾಲ ದೊರೆಯುವುದು.

ರೂ. 1ರಿಂದ 99ರ ವರೆಗೆ ಸಾ ಶೆ. 8. 100ರಿಂದ ಮೇಲ್ಪಟ್ಟ ಸಾಲಗಳಿಗೆ ಸಾ. ಶೆ. 7.

ವಿಶೇಷ ಸೂಚನೆ:—ಬಡವರಿಗೆ ಸಹಾಯವಾಗುವಂತೆ ಕಡಿಮೆಯೆಂದರೆ ರೂಪಾಯಿ 10/ ಸಹಾ ಸಾಲಕೊಡಲಾಗುತ್ತದೆ. ಪಾಲುಗಳು ದೊರೆಯುತ್ತವೆ.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಕೊಳ್ಳಿರಿ.

A B Shetty, ಚೆಯರ್‌ಮೇನ್. **K. Gopalakrishna Shetty.** ಸೆಕ್ರೆಟರಿ.

ವಿಜಯ ಬೇಂಕ್ ಲಿಮಿಟೆಡ್, ಕದ್ರಿರೋಡ್, ಮಂಗಳೂರು.

ಸ್ವದೇಶಿ ಕೈಗಾರಿಕೆಯನ್ನು ಪ್ರೋತ್ಸಾಹಿಸಿರಿ.

ಸ್ವದೇಶಿ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗೆಬಗೆಯ ಬಣ್ಣದಲ್ಲಿ, ಅಂಚಿನಲ್ಲಿ, ನಮೂನೆಯಲ್ಲಿ ದೊರೆಯುತ್ತವೆ.

ಶುದ್ಧ ಖಾದಿ ಮತ್ತು ಮಿಲ್‌ಬಟ್ಟೆಗಳೂ ವಿಕ್ರಯಿಸಲ್ಪಡುತ್ತವೆ.

P. A. PAI, BROS.

ಪಿ. ಎ. ಪೈ ಬ್ರದರ್ಸ್,

ಆಸ್ಪತ್ರೆ ಎದುರು, ಉಡುಪಿ.

ಕಸಿಗಿಡಗಳು.

ಸಪೋಡಿಲ್ಲ (ಚಿಕ್ಕು)

ಈ ಮರವು ನಮ್ಮ ಜಿಲ್ಲೆಯ ಎಲ್ಲಾ ಭಾಗದಲ್ಲಿಯೂ ಸರಿಯಾಗಿ ಬೆಳೆದು, 3ನೇ ವರ್ಷದಲ್ಲಿಯೇ ತಪ್ಪದೆ ಫಲಬಿಡುತ್ತದೆ. ಒಂದು ಮರದಲ್ಲಿ ಸಾವಿರಗಟ್ಟಲೆ ಹಣ್ಣಾಗುವದು. ಒಂದು ಎಕ್ರೆಯಲ್ಲಿ ವರ್ಷಕ್ಕೆ ರೂ. ಸಾವಿರದ ಮೇಲೆ ಉತ್ಪತ್ತಿಯಾಗುವದು. ಹಣ್ಣು ಅತಿ ಮಧುರ, ಒಳ್ಳೇ ರುಚಿ, ಕಾಹಿಲೆಯುವರಿಗೆ ಉತ್ತಮ ಆಹಾರ ಅದರಲ್ಲಿ ಸಕ್ಕರೆ ಸತ್ವ ಮತ್ತು ವಿಟಮಿನ್ ತುಂಬ ಇರುವದರಿಂದ ರಕ್ತವನ್ನು ವೃದ್ಧಿಸುವುದು. ಮರದಲ್ಲಿ ಯಾವಾಗಲೂ ಹಣ್ಣು ಇರುವುದು, ಎಲ್ಲಾ ತೋಟದಲ್ಲಿಯೂ ಇರತಕ್ಕದ್ದು. ಗಿಡವೊಂದರ ಕ್ರಯ ರೂ. 1-0-0 ಮಾತ್ರ. ನಮ್ಮಲ್ಲಿ ಉತ್ತಮ ಮಾವು ಮತ್ತು ಇತರ ಕಸಿ ಗಿಡಗಳು ಕೂಡ ದೊರೆಯುತ್ತವೆ. ಕ್ರಯಪಟ್ಟಿಗೆ ಕೆಳಗಣ ವಿಳಾಸಕ್ಕೆ ಬರೆಯುವುದು.

ಮಂಗಳೂರಲ್ಲಿ ವಿಜಯ ಬ್ಯಾಂಕಿನಲ್ಲಿಯೂ ಸ್ವಾಡಶೋಪು, ಹಂಪನಕಟ್ಟೆಯಲ್ಲಿಯೂ, ಸೋಮಯಾಜಿ ಎಂಡ್ ಕೊ, ರಥಬೀದಿಯಲ್ಲಿಯೂ ಮತ್ತು ಜಿಲ್ಲೆಯ ಎಲ್ಲಾ ಎಗ್ರಿಕಲ್ಚರಲ್ ಡೆಮೋನ್ ಸ್ಟ್ರೇಟರಲ್ಲಿಯೂ ಮೇಲಿನ ಎಲ್ಲಾ ಗಿಡಗಳು ದೊರೆಯುತ್ತವೆ.

ಕೆ. ಎಮ್. ಶೆಟ್ಟಿ, ಕೆನರಾ ನರ್ಸರಿ,

ಪೋಸ್ಟ್ ಕಾಪು, ದ. ಕನ್ನಡ

ಎಳೆಯ ಹುಡುಗರಿಗೂ ಸೈನಿಕ ಶಿಕ್ಷಣ!

ಜರ್ಮನಿ, ಇಟಲಿ, ಆಸ್ಟ್ರಿಯಾ, ಪೋಲೆಂಡ್, ಫ್ರಾನ್ಸ್, ರಷ್ಯಾ ದೇಶಗಳಲ್ಲಿ ಸಾವಿರಾರು ವಿದ್ಯಾರ್ಥಿಗಳು ಸೈನಿಕ ತರಬೇತಿ ಹೊಂದುತ್ತಿದ್ದಾರೆ.

ಇಂದಿನ ಮಾತ್ರವಲ್ಲ ಮುಂದಿನ ಪೀಳಿಗೆಯೂ ಯುದ್ಧದ ಮಹಾಮಾರಣಕ್ಕೆ ಸಿದ್ಧಗೊಳಿಸಲ್ಪಡುತ್ತಿದೆ!

ಯುರೋಪಿನಲ್ಲಿರುವ ಎಳೆಯ ಮಕ್ಕಳೆಲ್ಲಾ ಈಗ ಯುದ್ಧರಂಗಗಳಿಗಾಗಿ ಸಿದ್ಧರಾಗುತ್ತಿದ್ದಾರೆ. ಕೈಕಾಲುಗಳು ಸರಿಯಾಗಿದ್ದಲ್ಲಿ, ಮೈಯ್ಯಲ್ಲಿ ಕೊಂಚಮಾತ್ರವಾದರೂ ಸತ್ವವಿದ್ದಲ್ಲಿ, ಅವರೆಲ್ಲರನ್ನು ಯುರೋಪಿನಲ್ಲಿನ ಡಿಕ್ಟೇಟರುಗಳು ಪಟಾಲಂಗಳಲ್ಲಿ ಸೇರಿಸಿ ಸಿಪಾಯಿಗಳನ್ನಾಗಿ ಮಾಡುವುದೇ ಅಲ್ಲದೆ, ಪಾಠಶಾಲೆಗಳಿಗೆ ಹೋಗಿ ಪಾಠ ಪ್ರವಚನಗಳನ್ನು ಓದಿಕೊಳ್ಳಬೇಕಾಗಿದ್ದ ಮಕ್ಕಳ ಕೈಗಳಲ್ಲಿ ಸಹಾ ತುಪಾಕಿಗಳನ್ನಿಟ್ಟು ಅವರಿಗೆ ಸೈನಿಕ ಶಿಕ್ಷಣವನ್ನು ಕಲಿಸುತ್ತಾ ಇದ್ದಾರೆ.

ಜರ್ಮನಿಯಲ್ಲಿ ಮಕ್ಕಳೆಲ್ಲರಿಗೂ ಸೈನಿಕ ಶಿಕ್ಷಣವೇ. ನಿರ್ಬಂಧ ಸೈನಿಕ ಶಿಕ್ಷಣ. ಅದೇ ಧೋರಣೆಯನ್ನು ಪೋಲೆಂಡಿನಲ್ಲಿ ಬಾಲಕರು ಅನುಸರಿಸಬೇಕಾಗಿದೆಯೆಂದು ಕಳೆದ ವಾರದ ಪತ್ರಿಕೆಗಳಲ್ಲಿ ಪ್ರಕಟವಾಗಿತ್ತು. ಪೋಲೆಂಡು ದೇಶದಲ್ಲಿ ಕಾರ್ಮಿಕ ಶಿಬಿರಗಳೆಂದು ಹೊಸದಾಗಿ ಕೆಲವು ಶಿಬಿರಗಳನ್ನು ತಯಾರುಮಾಡಿ ಅವುಗಳಲ್ಲಿ ಬಾಲಕರಿಗೆ ಕತ್ತಿ, ಕರಾರಿ ಬಂದೂಕು, ಮೆಷಿನ್‌ಗನ್, ಮುಂತಾದವುಗಳನ್ನು ಬಳಸುವುದು ಹೇಗೆಂಬುದನ್ನು ಕಲಿಸುತ್ತಾ ಇದ್ದಾರೆ. ಈ ಶಿಬಿರಗಳಲ್ಲಿ ತರಬೇತಾದ ಬಾಲಕರನ್ನು ಆ ಮೇಲೆ ಮಿಲಿಟರಿ ಪಟಾಲಂಗಳಿಗೆ ಸರಕಾರದವರು ಕಳುಹಿಸುತ್ತಾರೆ. ಜರ್ಮನಿಯಲ್ಲಿ ಈಗ ಪಾಠಶಾಲೆಗಳಲ್ಲಿ ಬಾಲಕರಿಗೆ ಪಾಠವೆಲ್ಲಾ ಮಾಮೂಲಿನಂತೆ ವಿದ್ಯೆಯನ್ನು ಕಲಿಸುವುದು ನಿಂತುಹೋಗಿದೆ. ಸಾಧಾರಣವಾಗಿ ಕಲಿಸಲ್ಪಡುವ ಡ್ರಿಲ್ಲನ್ನು ಮತ್ತಷ್ಟು ಕಟ್ಟುನಿಟ್ಟಾಗಿ ಕಲಿಸುತ್ತಿದ್ದಾರೆ. ಅಷ್ಟೇ ಅಲ್ಲದೆ, ವಾರಕ್ಕೆ ಐದು ದಿನಗಳು ಪಾಠಗಳನ್ನು ಕಲಿಸಿ ಆರನೆಯ ದಿವಸ ಜರ್ಮನ್ ಬಾಲಕರಿಗೆ ಸೈನಿಕ ಶಿಕ್ಷಣದಲ್ಲಿ ತರಬೇತುಮಾಡಲು ಏರ್ಪಾಡುಗಳನ್ನು ಮಾಡುತ್ತಿದ್ದಾರೆ. ಜರ್ಮನಿಯಲ್ಲಿ 'ಹಿಟ್ಲರ್ ಯುವಕರು' ಎಂಬ ಸಂಘವೊಂದು ಪ್ರಾರಂಭವಾಗಿದೆ. ಈ ಸಂಘದಲ್ಲೀಗ ೬೦ ಲಕ್ಷ ವಿದ್ಯಾರ್ಥಿಗಳಿದ್ದಾರೆ ಇವರಿಗೆ ಕೊಡಲಾಗುವ ಶಿಕ್ಷಣದಿಂದ ಜರ್ಮನಿಯ ವಿದ್ಯಾರ್ಥಿಗಳು ಬಲಿಷ್ಠರಾಗುತ್ತಿದ್ದಾರೆಂಬ ಮಾತು ನಿಜ. ಆದರೆ ಅದೇ ಸಮಯದಲ್ಲಿ ಅಷ್ಟೊಂದು ಮಂದಿ ವಿದ್ಯಾರ್ಥಿಗಳೂ ಸೈನಿಕರಾಗಿ ತಯಾರಾಗುತ್ತಿದ್ದಾರೆ.

ಆಸ್ಟ್ರಿಯಾ ದೇಶದಲ್ಲಿ ಸಹಾ ಒಂದು ದೊಡ್ಡ ಬದಲಾವಣೆ. ಇಲ್ಲಿ ಎರಡು ದೊಡ್ಡ ಯುವಜನ ಸಂಘಗಳಿವೆ. ಇವನ್ನು ಪ್ರಸ್ತುತದಲ್ಲಿ ಪ್ರಭುತ್ವದವರು ಒಂದೇ ಸಂಘವನ್ನಾಗಿ ಬದಲಾಯಿಸಿದ್ದಾರೆ. ಇದಕ್ಕೆ 'ಯೂತ್ ಫ್ರೋಕ್' ಎಂದು ನಾಮಕರಣ ಮಾಡಿದ್ದಾರೆ. ಈ ಸಂಘದ ನಿಯಮಗಳಲ್ಲಿ ಸಹಾ ಎಷ್ಟೋ ಬದಲಾವಣೆಗಳನ್ನು ಮಾಡಿದ್ದಾರೆ. ಈ ಹೊಸ ನಿಯಮಗಳ ಪ್ರಕಾರ ೧೧ ಮೊದಲು ೧೮ ವರ್ಷ ಪ್ರಾಯದ ವಿದ್ಯಾರ್ಥಿಗಳೆಲ್ಲರೂ ಸೈನಿಕ ದುಸ್ತುಗಳನ್ನು ಧರಿಸಿ ಮಿಲಿಟರಿ ಶಿಕ್ಷಣ ಹೊಂದಬೇಕು.

ಬಾಲಕರನ್ನು ಸೈನಿಕ ಭಟರನ್ನಾಗಿ ತಯಾರು ಮಾಡುವುದರಲ್ಲಿ ಫ್ರಾನ್ಸು ಮಾತ್ರ ಹಿಂದೆ ಬಿದ್ದಿದೆಯೇನು? ಇಲ್ಲ. ಫ್ರಾನ್ಸಿಗೆ ಸಹ ಈ ರೋಗವು ಸಂಕ್ರಮಿಸಿದೆ. ಫ್ರೆಂಚ್ ಸರಕಾರದವರೂ ಬಾಲಕರನ್ನು ಸೈನಿಕ ಭಟರನ್ನಾಗಿ ಬದಲಾಯಿಸುವ ವಿಷಯದಲ್ಲಿ ಮಾತ್ರ ಸರ್ವಾಧಿಕಾರಿಗಳ ನೆರಳಿನಲ್ಲಿ ಅಳ್ಳಾಡುತ್ತಿರುವ ದೇಶಗಳಿಗೆ ಸ್ವಲ್ಪ ಮಾತ್ರವಾದರೂ ಹಿಂದೆ ಬಿದ್ದಿಲ್ಲ. ೬ ಮೊದಲು ೨೧ ವರ್ಷಗಳೊಳಗಿರುವ ಬಾಲಬಾಲಿಕೆಯರೆಲ್ಲರೂ ತಪ್ಪದೆ ಮಿಲಿಟರಿ ತರಬೇತು ಪಡೆಯಬೇಕೆಂದು ನಿರ್ಬಂಧಿಸುವ ಒಂದು ಕಾನೂನನ್ನು ತಯಾರು ಮಾಡುವುದಕ್ಕಾಗಿ ಒಂದು ಬಿಲ್ಲು ಶಾಸನಸಭೆಯಲ್ಲಿ ಚರ್ಚಿಸಲ್ಪಡುತ್ತಿದೆ.

ರಷ್ಯಾ ಸಹ ಈ ವಿಷಯದಲ್ಲಿ ಆತುರತೆಯನ್ನು ತೋರಿಸುತ್ತಿದೆ. ಪ್ರತಿ ಬಾಲನೂ ಸೈನಿಕ ಶಿಕ್ಷಣವನ್ನು ಪಡೆಯಲೇಬೇಕೆಂದು ಒಂದು ನಿರ್ಣಯವಿದೆ. ಅದರಿಂದ ಪ್ರತಿ ಪಾಠಶಾಲೆಯೂ ಸೈನಿಕ ಶಿಕ್ಷೆಯನ್ನು ಕೊಡುವ ಮಿಲಿಟರಿ ಪಾಠಶಾಲೆಯಾಗಿ ಮಾರ್ಪಡುತ್ತಿದೆ. ಇನ್ನು ಈ ಬಾಲಬಾಲಿಕೆಯರಿಗೆ ತರಬೇತು ಕೊಡುವವರಾರೋ? ಎಂದರೆ ಅವರೆಲ್ಲರೂ ಇದುವರೆಗೆ ಯುದ್ಧಗಳಲ್ಲಿ ತರಬೇತು ಹೊಂದಿರುವ ಮಿಲಿಟರಿ ಉದ್ಯೋಗಿಗಳು

ಒಟ್ಟಿನಲ್ಲಿ ಯುರೋಪಿನ ಬಾಲಬಾಲಿಕೆಯರೆಲ್ಲರೂ ಕತ್ತಿ ತುಪಾಕಿಗಳನ್ನು ಹಿಡಿಯುವ ತರಬೇತು ಹೊಂದುತ್ತಾ ಪಟಾಲಂಗಳಿಗಾಗಿ ತಯಾರಾಗುತ್ತಾ ಇದ್ದಾರೆ. ಬ್ರಿಟನು ಏನು ಮಾಡುತ್ತಿದೆಯೆಂದು ಆಶ್ಚರ್ಯಪಡಬಹುದು. ಬ್ರಿಟನ್ ಸಹ ತರಬೇತು ಕೊಡಲು ಪ್ರಯತ್ನಗಳನ್ನು ಮಾಡುತ್ತಿದೆ. ಆದರೆ ಈ ತರಬೇತುಗಳನ್ನು ಮಿಲಿಟರಿ ತರಬೇತೆಂದು ಕರೆಯುವದಕ್ಕೆ ಮಾತ್ರ ಅವಕಾಶವಿಲ್ಲ ಪಂಚಮ ಜಾರ್ಜರ ಸ್ಮಾರಕ ಚಿಹ್ನವಾಗಿ ಬ್ರಿಟನ್ನಿನ ಪ್ರತಿ ಪಟ್ಟಣದಲ್ಲೂ ಪ್ರತಿ ಹಳ್ಳಿಯಲ್ಲೂ ಕ್ರೀಡಾರಂಗಗಳನ್ನು ಏರ್ಪಡಿಸಲು ತೀವ್ರ ಪ್ರಯತ್ನಗಳು ಜರುಗುತ್ತಿವೆ. ಬ್ರಿಟನ್ನಿನ ಆರೋಗ್ಯ, ಬಲ ಇವು ಅಭಿವೃದ್ಧಿಯಾಗಬೇಕೆಂದರೆ ಮಕ್ಕಳು ಆಡಿಕೊಂಡಿರಲು ವಿಶಾಲವಾದ ಬಹಿರಂಗ ಸ್ಥಳಗಳೂ ಕವಾತು ವಗೈರೆ ಶಿಕ್ಷಣಗಳೂ ಅವಶ್ಯಕವೆಂದು ನಿರ್ಣಯಿಸಲ್ಪಟ್ಟಿದೆ. ಈ ಕ್ರೀಡಾರಂಗದ ಸ್ಥಳಗಳನ್ನು ಕೊಂಡುಕೊಳ್ಳಲು ಬ್ರಿಟನ್ನಿನ ಪ್ರತಿಯೊಬ್ಬನೂ ಹಣ ಕೊಡುತ್ತಿದ್ದಾನೆ. ಈ ಕ್ರೀಡಾರಂಗಗಳೇ ಈ ಪ್ರಯತ್ನಗಳೇ ಕ್ರಮೇಣ ಮಿಲಿಟರಿ ಶಿಕ್ಷಣಕೊಡುವ ಪ್ರದೇಶಗಳಾಗಿ ಮಾರ್ಪಡುತ್ತವೆಯೆಂದು ಯುರೋಪಿನಲ್ಲಿ ಕೆಲವರು ಅನುಮಾನಪಡುತ್ತಿದ್ದಾರೆ.

ಇಟಲಿಯಲ್ಲಿ ಹುಡುಗರಿಗೆ ಎಂಟುವರ್ಷ ಬಂದಿತೆಂದರೆ ಸರಿ-ಹಿಂದೆಯೇ ಕರಿಯ ಅಂಗಿತೊಡಿಸಿ, ಮಿಲಿಟರಿ ಬೂಟ್ಸನ್ನು ತಗಲಿಸಿ, ತುಪಾಕಿಯನ್ನು ಹೇಗೆ ಹೊರಬೇಕೆಂಬುದನ್ನು ಕಲಿಸುತ್ತಾ ಇದ್ದಾರೆ. ಸಹಜವಾಗಿ ಚಡ್ಡಿ ಹಾಕಿಕೊಂಡು ಪಾಠಶಾಲೆಗಳಿಗೆ ಹೋಗಬೇಕೆಂದರೇನೆ ಏನೂ ಸರಿಯಾಗಿ ತಿಳಿಯದ ವಯಸ್ಸಿನಲ್ಲಿ ಇಟಲಿಯ ಎಳೆಯ ಮಕ್ಕಳು ತುಪಾಕಿಯನ್ನು ಹೇಗೆ ಉಪಯೋಗಿಸಬೇಕೆಂಬುದನ್ನೂ ಆ ಸಂಬಂಧವಾದ ತರಬೇತನ್ನೂ ಹೊಂದುತ್ತಿದ್ದಾರೆ. ಮೊನ್ನೆ ಈಚೆಗೆ ಮುಸೋಲಿನಿಯು ಮಾಡಿದ ಒಂದು ಉಪನ್ಯಾಸದ ರೀತ್ಯಾ ಇಟಲಿಯಲ್ಲಿ ಡ್ರಿಲ್ಲು ವಗೈರೆ ತರಬೇತು ಹೊಂದಿ ಪಟಾಲಂಗಳಾಗಿ ತಯಾರುಮಾಡಲು ಸಿದ್ಧವಾಗಿರುವ ಬಾಲಕರು ೪೦ ಲಕ್ಷ ಮಂದಿ ಇರುವಂತೆ ತಿಳಿದುಬರುತ್ತಿದೆ

ಇನ್ನು ರೊಮೇನಿಯಾ. ಇಲ್ಲೂ ಅಷ್ಟೆ. 'ಯೂತ್ ಗಾರ್ಡ್' ಎಂಬ ಯುವಕರ ಪಟಾಲಂ ಇದ್ದೇ ಇದೆ. ಬಲ್ಗೇರಿಯಾದಲ್ಲಿಯೂ ಶಾಲಾ ವಿದ್ಯಾರ್ಥಿಗಳು ಸೈನಿಕರಾಗಿ ತಯಾರಾಗುತ್ತಿದ್ದಾರೆ. ಈ ರೀತಿಯಾಗಿ ಯುರೋಪಿನ ಪ್ರತಿಯೊಂದು ರಾಷ್ಟ್ರವೂ ಮಿಲಿಟರಿ ಶಿಕ್ಷಣ ವಿಧಾನವನ್ನು ಜಾರಿಗೆ ತಂದು, ಅದಕ್ಕಾಗಿ ಕೋಟ್ಯಾಂತರ ಹಣವನ್ನು ಖರ್ಚುಮಾಡುತ್ತದೆ.

ಅಬಿಸೀನಿಯದ ವಿಚಿತ್ರ ಜನರು!

ಅಬಿಸೀನಿಯದ ಸಿದಾಮೋ ಪ್ರಾಂತದ ಜನರು ಮನುಷ್ಯರೂ ಅಲ್ಲ; ಮೃಗಗಳೂ ಅಲ್ಲವೆಂದು ಒಬ್ಬರು ಹೇಳುತ್ತಾರೆ. ಅವರಿಗೆ ಏನೇ ಆಗಲಿ, ಎಂತಹ ಪೆಟ್ಟೇಬೀಳಲಿ ಎಷ್ಟೆ ದುಃಖಕರವಾದ ಸನ್ನಿವೇಶವೇ ಒದಗಲಿ; ಅವರ ಕಣ್ಣುಗಳಿಂದ ಒಂದು ತೊಟ್ಟು ನೀರೂ ಬೀಳುವುದಿಲ್ಲ. ಅವರ ಜೀವನವೂ ಅಷ್ಟೆ! ಮೃಗಗಳ ಜೀವಕ್ಕಿಂತಲೂ ಉತ್ತಮವಾದುದಲ್ಲ. ಅವರ ಭಾಷೆಯೋ! ಅತ್ಯಂತ ವಿಚಿತ್ರ. ಕಾಡುಮೃಗಗಳ ಕೂಗುಗಳಿಗೆ ಅದನ್ನು ಹೋಲಿಸಬಹುದು.

ಅವರಲ್ಲಿ ಗಂಡಹೆಂಡರಿಗೆ ವಿಶೇಷವಾಗಿ ಸಂಪರ್ಕವೇ ಇಲ್ಲ. ಗಂಡನು ವಾಸಮಾಡುವ ಪ್ರದೇಶವೇ ಬೇರೆ! ಹೆಂಗಸರು ವಾಸಮಾಡುವ ಪ್ರದೇಶವೇ ಬೇರೆ. ಮದುವೆ ಯಾವ ನೇಮೂ ಹೀಗೆಯೇ. ಧನಿಕನಾದ ಗಂಡನು ಆರೇಳು ಮಂದಿ ಹೆಂಗಸರನ್ನು ವಿವಾಹಮಾಡಿಕೊಳ್ಳುವನು. ಆದರೂ ಅವರೊಡನೆ ಸಂಸಾರಮಾಡುವುದಿಲ್ಲ. ಆಗಾಗ್ಗೆ ಹೋಗಿ ಅವರನ್ನು ನೋಡಿಕೊಂಡು ಬರುವನು. ಒಂದೆರಡು ದಿನ ಅಲ್ಲಿರುತ್ತಾನೆ. ಮಕ್ಕಳಾದರೆ, ಮಕ್ಕಳ ಲಾಲನೆಪಾಲನೆ ಕೆಲಸವಷ್ಟೂ ಹೆಂಗಸರ ತಲೆಯ ಮೇಲೆ ಬೀಳುತ್ತದೆ. ವಿಚಿತ್ರ ಜನರಿವರು.

ಪ್ರಜಾಮತ.

ESTD. 1906

CANARA BANK

LIMITED

(INCORPORATED IN BRITISH INDIA)

MEMBER, RESERVE BANK OF INDIA
MEMBER, CLEARING HOUSE BOMBAY.

SUBSCRIBED CAPITAL	6,00,000
PAID UP CAPITAL	3,33,240
RESERVES	4,50,000
DEPOSITS	79,64,000
TOTAL RESOURCES	98,00,000

OFFICES:

BOMBAY-FORT	MANGALORE
BOMBAY-MANDVI	BANGALORE
ALLEPPEY	CHIKMAGALUR
ERNAKULAM	ARSIKERE
COCHIN	DAVANGERE
CALICUT	HUBLI
CANNANORE	DHARWAR ETC., ETC.

ನಾರದನ ತಂಬೂರಿ

●

ಪರರ ಹೆಗಲಿನಮೇಲೆ ಕೈಯಿಟ್ಟು ತೂಕಡಿಪ। ಸುಖಶಾಂತಿ ನಮ್ಮ ಭಾರತ ಭೂಮಿಗೆ॥ ಶುಭವಾಗಲಿ ಮಾನವರೆ! ಶಾಂತಿ ಬೇಕೆಂದು ಎಲ್ಲಾ ರಾಷ್ಟ್ರಗಳೂ ಹೇಳುತ್ತಾವಲ್ಲ. ಆ ಶಾಂತಿಯನ್ನನುಭವಿಸುವ ಭಾಗ್ಯವಿರುವುದು ನಮ್ಮ ಹಿಂದುಸ್ಥಾನಕ್ಕೆ ಮಾತ್ರ. ಹಿಂದೀಯರನ್ನು ರಕ್ಷಿಸುವ ಜವಾಬ್ದಾರಿಯನ್ನೂ ಬಿಳಿಯವರೇ ಹೊತ್ತಿದ್ದಾರೆ! ಹೀಗಾಗಿ ಹಿಂದೀಯರು ಅನ್ಯರ ಹೆಗಲಮೇಲಿರುವರೇ ಹೊರತು ಹಿಂದೀಯರ ಹೆಗಲಮೇಲೆ ಏನೂ ಇಲ್ಲ. ಇದಲ್ಲವೇ ಸುಖಶಾಂತಿ!

●

ಮೊನ್ನೆ ಎಸಂಬ್ಲಿಯಲ್ಲಿ ಹಿಂದಿಷ್ಟು ಚರ್ಚೆಯಾಯಿತು - ಸೈನ್ಯದಲ್ಲಿ ಹಿಂದೀಯರನ್ನು ಅಧಿಕಾಧಿಕವಾಗಿ ಸೇರಿಸಿಕೊಳ್ಳಬೇಕೆಂದು. ಸರಕಾರದ ಉತ್ತರದ ಸಾರಾಂಶವೆಂದರೆ ಹಿಂದೀಯರಲ್ಲಿ ಆ ಯೋಗ್ಯತೆಯುವದಿಲ್ಲವೆಂಬುದ! ತಮ್ಮ ಸೈನ್ಯವಿರುವುದು ಹಿಂದೂದೇಶದ ಉಪಕಾರಕ್ಕಾಗಿಯೇ ಎನ್ನುವ ಬ್ರಿಟಿಷರು ಇಷ್ಟು ದೀರ್ಘಕಾಲ ಆಳಿಯೂ ಹಿಂದೀಯರಲ್ಲಿ ಸೈನಿಕರಾಗುವ ಯೋಗ್ಯತೆಯನ್ನುಂಟುಮಾಡುವ ಉಪಕಾರವನ್ನೇಕೆ ಮಾಡಲಿಲ್ಲ?

●

೩೫ ಕೋಟಿಗೂ ಮಿಕ್ಕಿ ಜನಸಂಖ್ಯೆ ಹಿಂದೂದೇಶದಲ್ಲಿದೆ. ಇಷ್ಟು ಜನರ ರಕ್ಷಣೆಗೆ ೬೦ ಸಾವಿರ ಸೈನಿಕರು ಬಿಳಿಯರೇ ಆಗಬೇಕು! ಹಿಂದೀಯರನ್ನು ಸೇರಿಸಿಕೊಳ್ಳಿರೆಂದರೆ "ಯೋಗ್ಯರಾದವರಿಲ್ಲ" ಎನ್ನುತ್ತಾರೆ ಸರಕಾರೀ ಮೆಂಬರರು! ಇನ್ನು ಯಾವಾಗ ಯೋಗ್ಯತೆ ಬರುವುದೋ ಹಿಂದೀಯರಿಗೆ!

●

ಇಟಲಿ, ಜರ್ಮನಿ ಮೊದಲಾದ ರಾಷ್ಟ್ರಗಳಲ್ಲಿ ಪ್ರಾಯ ಬಂದವರಿಗೆ ಮಾತ್ರವಲ್ಲ, ಸಣ್ಣ ಹುಡುಗರಿಗೆ ಸಹ ಸೈನಿಕ ಶಿಕ್ಷಣವನ್ನು ಕಲಿಸುತ್ತಾರೆ—ಅಂದರೆ ಅಲ್ಲಿರುವ ನೂರಕ್ಕೆ ನೂರು ಮಂದಿಗೂ ಸೈನಿಕರಾಗುವ ಯೋಗ್ಯತೆಯಿದೆ ೩೫ ಕೋಟಿ ಜನರಿರುವ ಹಿಂದೂದೇಶದಲ್ಲಿ ಸೈನಿಕರಾಗುವ ಯೋಗ್ಯತೆಯು ೬೦ ಸಾವಿರ ಮಂದಿ ದೊರಕುವದಿಲ್ಲ ಅಂದರ ಹತ್ತುಸಾವಿರಕ್ಕೊಬ್ಬರೂ ಇಲ್ಲ!

●

ಅದೇನು ಹೀಗೆ? ಇಟಲಿ-ಜರ್ಮನಿಗಳಲ್ಲಿ ಸ್ವಾತಂತ್ರ್ಯವಿದೆ ಸ್ವತಂತ್ರ ರಾಷ್ಟ್ರಗಳಲ್ಲಿ ಪ್ರಜೆಗಳನ್ನು ಪೋಷಿಸುವ ಹೊಣೆಯು ಸರಕಾರದ್ದು—ಸರಕಾರವು ಕರೆದಾಗ ಸೈನಿಕರಾಗುವ ಕೆಲಸ ಪ್ರಜೆಗಳದ್ದು ಹಿಂದೀಯರಿಗೆ ಅವರ ಉದರಾಗ್ನಿಯೊಡನೆ ಹೋರಾಡುವ ಕೆಲಸವಿದೆ—ಅವರೀಗ ಆ ಹೋರಾಟದ ಸೈನಿಕರಾಗಿ ನಿಂತರೆ ಸಾಕು!

●

ನಮ್ಮ ವಾಯುವ್ಯ ಗಡಿನಾಡಿನವರು ಪುಂಡತನವನ್ನು ಬಿಟ್ಟಿಲ್ಲ—ಎಂದು ಸರಕಾರವು ಹೇಳುತ್ತದೆ ಅದಕ್ಕಾಗಿ ಸೈನ್ಯವನ್ನು ಆ ಕಡೆಗೊಯ್ಯಲಾಗಿದೆ "ನಿಮ್ಮಿಂದ ಅಸಾಧ್ಯವಾದರೆ ಖುದಾಯಿ ಕಿದ್ಮತ್‌ಗಾರರು ಅವರನ್ನು ಸಮಾಧಾನ ಪಡಿಸುತ್ತಾರೆ" ಎಂದು ಡಾ। ಖಾನರೇ ಮೊದಲಾದವರು ಎಸಂಬ್ಲಿಯಲ್ಲಿ ಹೇಳಿದರು ಹೀಗೆ ಮಾಡಿದರೂ ಸರಕಾರವು ಸೋತಂತಾಗುವದೆಂಬುದನ್ನು ಅದು ಬಲ್ಲುದು!

●

ನಿನ್ನೆ ಮೊನ್ನೆಯ ವರೆಗೆ ಯುದ್ಧವನ್ನು ಕನವರಿಸುತ್ತಿದ್ದ ರಾಷ್ಟ್ರಗಳು ಈಗ ಫಕ್ಕನೆ ಶಾಂತಿ ಮಂತ್ರವನ್ನು ಪಠಿಸಲುತೊಡಗಿವೆ ಈ ಬದಲಾವಣೆಯನ್ನು ಕಂಡು ರಾಜಕೀಯ ನಿಪುಣರು "ಇದೇನು ಹೀಗೆ?" ಎಂದು ಯೋಚಿಸತೊಡಗಿದ್ದಾರೆ ಲೋಕದ ಮಾತುಕಥೆಗಳಲ್ಲಿ ಮಾತು ಬೇರೆ-ಕದ ಬೇರೆ. ಆದ್ದರಿಂದ ಮಾತಿನ ಆಧಾರದಮೇಲೆ ಕಥೆ ಹೇಳಲು ಬರುವುದಿಲ್ಲ.

●

ಸೈನ್ಯವನ್ನು ಹೆಚ್ಚಿಸಿಕೊಂಡು 'ನಮಗೆ ಅದು ಬೇಕು ಇದು ಬೇಕು ಕಚ್ಚಾಮಾಲುಗಳಿಗಾಗಿ ಕೊಲೊನಿಗಳು ಬೇಕು" ಎಂದು ಆರ್ಭಟಿಸುತ್ತಿದ್ದ ಹಿಟ್ಲರ್-ಮುಸಲನಿಗಳು ಈಗ ಮಲ್ಲಮೆಲ್ಲನೆ ಬ್ರಿಟಿಷರ ಹೆಗಲಮೇಲೆ ಕೈಹಾಕಿ ಮಾತನಾಡಲು ನೋಡುವಂತಿದೆ ಕಾರಣವಿಷ್ಟೆ—"ನಮಗೆ ಬೇರಾವುದೂ ಬೇಡ; ಲೋಕಶಾಂತಿಮಾತ್ರ ಬೇಕು" ಎನ್ನುತ್ತಾ ಬ್ರಿಟಿಷರೂ ಸೈನ್ಯ ಸರಂಜಾಮುಗಳ ಹೆಚ್ಚಳಕ್ಕಾಗಿ ಹೇರಳ ಹಣ ವ್ಯಯಿಸಲು ತೊಡಗಿದ್ದಾರೆ ಈ 'ಶಾಂತಿ' ಶಬ್ದದ ಅರ್ಥವು ಹಿಟ್ಲರ್-ಮುಸಲನಿಗಳಿಗಾಗಿರಬೇಕು ಆದ್ದರಿಂದ ಅವರು ಒಂದಿಷ್ಟು ಶಾಂತರಾಗಿದ್ದಾರೆ ಬ್ರಿಟಿಷರು ಸೈನ್ಯವನ್ನು ಹೆಚ್ಚಿಸಿ ಶಾಂತಿ ಸ್ಥಾಪಿಸುತ್ತಾರೆಂಬುದಕ್ಕೆ ಇದೊಂದು ನಿದರ್ಶನ!

●

ಸ್ಪೆಯಿನಿನ ದಂಗೆಗಾರರ ಸೈನ್ಯದಲ್ಲಿ ೧೩೦,೦೦೦ ವಿದೇಶಿ ಸೈನ್ಯದವರಿದ್ದಾರಂತೆ, ಇವರೆಲ್ಲಾ ಇಟಲಿ ಮತ್ತು ಜರ್ಮನಿಯಿಂದ ಬಂದವರು. ಇತ್ತ 'ಸ್ಪೆಯಿನಿನ ಅಂತರ್ಯುದ್ಧದಲ್ಲಿ ಕೈಹಾಕ ಬಾರದು" ಎಂದು ರಾಷ್ಟ್ರಗಳು ನಿರ್ಧರಿಸಿ ಕುಳಿತಿವೆ. ಅತ್ತ ೭೫೦೦೦ ಮಂದಿಯು ೨೪೦೦೦೦ ಕೈಗಳು ಬೊಂಬು ಸಿಡಿಮದ್ದುಗಳನ್ನು ಹಾರಿಸುತ್ತವೆ!

●

ಈಗ ಪ್ರಪಂಚದ ಪ್ರತಿಯೊಂದು ರಾಷ್ಟ್ರವೂ ಅನ್ಯಾಯಕ್ಕೆ ಒಪ್ಪಿಗೆಯನ್ನೀಯದ ತಾಜಾ ಸಂಭಾವಿತತನವನ್ನು ತೋರಿಸುತ್ತಿದೆ ಸ್ಪೆಯಿನಿಗೆ ಪರಕೀಯ ಸ್ವಯಂಸೇವಕರು ಪ್ರವೇಶಿಸುವದರಲ್ಲಿ ಅವುಗಳ ಒಪ್ಪಿಗೆಯಿಲ್ಲ. ಹಾಗೆ ತಮ್ಮ ಒಪ್ಪಿಗೆಯಿಲ್ಲದೆ ಆಗುವ ಕೆಲಸಗಳ ಹೊಣೆಯನ್ನು ಈ ರಾಷ್ಟ್ರಗಳು ಹೊರುವ ಹಾಗೂ ಇಲ್ಲ! ಅವುಗಳ ಅಪರಾಧವೇನು? ॥ ಅಚ್ಚುಮೆಚ್ಚಿನ ಮಾತು। ಬಡಿದು ನುಂಗುವ ಹೇತು। ಲೋಕದಾ ರಾಜಕಾರಣದ ನೀತಿ ॥

—ನಾರದ.

ದು ಕಾಂಗ್ರೆಸ್ ಎದುರಾಳಿಗಳು ಮೇಲಿನ ಸಂತೆಯ ಸನ್ನೇ ನಿಲ್ಲಿಸಿಬಿಡುವ ಸಾಹಸಕ್ಕೆ ಕೈಹಾಕಿದರು ಎರಡು ದಿನ ಸಂತೆಯೂ ನಡೆಯಿತು ಸಂತೆಯೂ ಜಯಶೀಲವಾಗಿ ನಡೆಯಿತು ಆದರ ಆ ನಂತರ ಸಂತೆ ಮಾತ್ರ ನಡೆಯುಗೊಡಲಿಲ್ಲ ಇದರಿಂದ ನೆರೆಕರೆ ಗ್ರಾಮದ ಬಡಜನರಿಗೆ ಬಡವ್ಯಾಪಾರಿಗಳಿಗೆ ವಿಶೇಷ ತೊಂದರೆ ಉಂಟಾಗಿತ್ತು ಅಂದು ನಿಂತ ಸಂತೆಯು ತಾ ೯ ೩ ೩೭ನೇ ಮಂಗಳವಾರ ಕಾಂಗ್ರೆಸ್ ಅಭಿಮಾನಿಗಳ ಪ್ರಯತ್ನದಿಂದ ಎರಡನೆ ಸಂತೆ ಪುನಃ ಸಂತೆ ನಡೆಯುತ್ತಿರುವುದನ್ನು ತಿಳಿಸಲು ಸಂತೋಷವನಿಸುತ್ತದೆ ಕಾಂಗ್ರೆಸ್ಸಿಗೂ ಜೈ ನ್ಯಾಬರ ಕಟ್ಟೆ ಸಂತೆಗೂ ಜೈ ಬಾರದೆಮಾತಾಕೀ ಜೈ

ಶಿರಿಯಾರ ಗ್ರಾಮಸ್ಥ

ದಕ್ಷಿಣಕನ್ನಡ

ಮೂಲ್ಕಿ

ಸ್ಥಳೀಕ ಸೆಂಟರಿನ ಉಪಾಧ್ಯಾಯರ ಸಂಘದ ಸಾಮಾನ್ಯ ಮಾಸಿಕ ಸಭೆಯು ಇದೇ ಕಳೆದ ತಾ ೨೭-೨ ೩೭ನೇ ಶನಿವಾರ ಅಪರಾಹ್ನ ಘಂಟೆ ೨ ೩೦ಕ್ಕೆ ಕವತಾರು ಬೋರ್ಡು ಎಲಿಮೆಂಟರಿ ಶಾಲೆಯಲ್ಲಿ ಕೂಡಿಬಂತು. ಅಂದು ಮೂಲ್ಕಿ ಬೋ ಎಲಿಮೆಂಟರಿ ಶಾಲಾ ಅಧ್ಯಾಪಕ ಶ್ರೀ ಯಂ ರಾಮರಾವ್ ಕಾಮತ್‌ರವರು ಸಭಾಧ್ಯಕ್ಷರಾಗಿದ್ದರು ಶ್ರೀ ದೇವತಾ ಪ್ರಾರ್ಥನೆ, ವರದಿ ವಾಚನ, ಕೋಲಾಟ, ಇಂಗ್ಲಿಷ್ ಭಾಷಾ ಪಾಠ, (ಮಿ ರುಡ್ರಿಗ್ಸ್) ಕುಮ್ಮಿ ಆಟ, ಸಂಭಾಷಣೆ, "ಹಳ್ಳಿ ಶಾಲಾ ಪ್ರಾಥಮಿಕ ಶಿಕ್ಷಣದ ಪುನರ್ವ್ಯವಸ್ಥೆ" ಎಂಬುದರ ಕುರಿತು ಉಪನ್ಯಾಸ (ಶ್ರೀ ನಾರಾಯಣ ಶೆಟ್ರಿಂದ) ಆಸನ ಪ್ರದರ್ಶನ, ಸಕ್ಯೂ್ಯಲರ್ ಇತ್ಯಾದಿ ವಾಚನ, ಸಭಾಧ್ಯಕ್ಷರ ಅಮೂಲ್ಯ ಭಾಷಣ, ಉಪಕಾರ ಸ್ಮರಣೆ ಇವೇ ಮೊದಲಾದುವು ಅಂದಿನ ಕಾರ್ಯಭಾಗಗಳು. ಮುಂದಿನ ತಿಂಗಳ ಸಭೆಯು ತಾ ೨೭-೩-೩೭ನೇ ಶನಿವಾರ ಯಥಾ ಸಮಯಕ್ಕೆ ಹೆಜಮಾಡಿ ಬೋ ಎಲಿಮೆಂಟರಿ ಶಾಲೆಯಲ್ಲಿ ಕೂಡಲಿರುವದು

ಮೂಲ್ಕಿ ಹೈಸ್ಕೂಲಿನ ಪರವಾಗಿ ಏರ್ಪಡಿಸಿದ ಸೋಡ್ತಿಯಲ್ಲಿ ಪಡೆದ ಬಹುಮಾನಗಳನ್ನು ಇದೇ ಬರುವ ತಾ ೩೦ ೪—೩೭ರ ಒಳಗೆ ಪಡೆಯುವ ವ್ಯವಸ್ಥೆಯನ್ನು ಮಾಡಬೇಕಾಗಿ ಈ ಮೂಲಕ ಸರ್ವರಿಗೂ ತಿಳಿಸೋಣ ಗುತ್ತದೆಂದು ಸದ್ರಿ ಸೋಡ್ತಿ ಕಮಿಟಿಯ ಕಾರ್ಯದರ್ಶಿಯವರು ವಿನಂತಿಸುತ್ತಾರೆ

ಸ್ಥಳೀಕ ಬಪ್ಪನಾಡು ಶ್ರೀ ದುರ್ಗಾಪರಮೇಶ್ವರಿ ಅಮ್ಮನವರ ಸನ್ನಿಧಿಯಲ್ಲಿ ನೆರವೇರತಕ್ಕ ಕಾಲಾವಧಿ ಜಾತ್ರೆಯ ಪೂರ್ವಾಷ್ಟಕ ಎಂಬಂತೆ ತಾರೀಕು ೧೨ ೩ ೩೭ಕ್ಕೆ ಬಲ ಹೊರಟದೆ ಇನ್ನು ಇದೇ ಬರುವ ತಾ ೨೫ ೩ ೩೭ನೇ ಗುರುವಾರ ಧ್ವಜಾರೋಹಣ, ೨೬ ೩ ೩೭ನೇ ಶುಕ್ರವಾರ ಆಯನೋತ್ಸವ, ೨೭ ೩ ೩೭ನೇ ಶನಿವಾರ ಪೇಟೆ ಸವಾರಿ, ತಾರೀಕು ೨೮ ೩ ೩೭ನೇ ರವಿವಾರ ಕೊಪ್ಪಲ ಸವಾರಿ, ತಾ ೨೯-೩-೩೭ನೇ ಸೋಮವಾರ ಬಾಕಿಮಾರುದೀಪ, ತಾ. ೩೦ ೩ ೩೭ನೇ ಮಂಗಳವಾರ ಕೆರೆದೀಪ, ತಾ ೩೧ ೩ ೩೭ನೇ ಬುಧವಾರ ರಥಾರೋಹಣ, ಮತ್ತು ತಾ ೧ ೪ ೩೭ನೇ ಗುರುವಾರ ರಥೋತ್ಸವ ಮತ್ತು ಅವಭೃತ ಈ ರೀತಿ ಉತ್ಸವಾದಿಗಳು ನಡೆಯುವವು ಭಕ್ತಾದಿಗಳು ಬಂದು ಪ್ರಸಾದವನ್ನು ಸ್ವೀಕರಿಸಿ ಶ್ರೀ ದೇವಿಯ ಕೃಪಾಪಾತ್ರರಾಗಬೇಕಾಗಿ ಆಸಕ್ತಿ ಸೋಣಾಗುತ್ತದೆ

ಇಲ್ಲಿ ಸ್ಟೀಮರು ಬಂದರು ಆಗುವ ಕುರಿತು ಮುಂದಿನ ಅಕ್ಟೋಬರ್ ತಿಂಗಳಿಗೆ ಮುಂದರಿಸಿರುತ್ತಾರೆಂದು ತಿಳಿದುಬರುತ್ತದೆ

ನ್ಯಾಬರ ಕಟ್ಟೆ, ಸಂತೆಯೂ ಜಸ್ಟೀಸು ಪಾರ್ಟಿಯವರ ಬಿರುಗಾಳಿಯೂ

ಮೊನ್ನೆ ಆಗಿಹೋದ ಚುನಾವಣೆಯ ವೇಳೆ, ಕಾಂಗ್ರೆಸ್ ಪ್ರಚಾರಕರು ಸಭೆನಡೆಸದಂತೆ ಮಾಡಬೇಕೆಂ

ಗೃಹಸ್ಥರೇ!

ಗೃಹಕೃತ್ಯೋಪಯೋಗದ ಎಲ್ಲಾ ವಿಧದ ತಾಮ್ರ ಹಿತ್ತಾಳೆ, ಜರ್ಮನ್ ಬೆಳ್ಳಿ, ಬೆಳ್ಳಿ ಸಾಮಾನುಗಳ ಎಲ್ಲಿ ಸಿಗುತ್ತವೆ ಬಲ್ಲಿರಾ?

ರಥಬೀದಿಯಲ್ಲಿ ಕಲ್ಮಂಜೆ ವ್ಯಾಸಾಚಾರ್ಯರ ಅಂಗಡಿಯಲ್ಲಿ ಮಾತ್ರವೇ.

ಸ್ವದೇಶಿ ಕೈಗಾರಿಕೆ! ಹದಿನೆಂಟು ವರ್ಷಗಳ ಅನುಭವ!

ಮನೆಯ ಉಪಯೋಗಕ್ಕೂ ಉಡುಗರೆ ಕೊಡಲಿಕ್ಕೂ ದಾನಮಾಡಲಿಕ್ಕೂ ಬೇಕಾದ ನಮೂನೆಯ ಸಾಮಾನುಗಳನ್ನು ಮನಮೆಚ್ಚುವ ಮಾದರಿಯಲ್ಲಿ ತಕ್ಕ ಕಾಲದಲ್ಲಿ ನಾಜೂಕಾಗಿ ತಯಾರುಮಾಡಿಯೂ ಕೊಡಲಾಗುವುದು.

ಹೆಚ್ಚಿನ ವಿವರಗಳಿಗೆ ಸಚಿತ್ರ ಕೆಟಲಾಗಿಗೆ ಬರೆಯಿರಿ.

ಕಲ್ಮಂಜೆ ವ್ಯಾಸಾಚಾರ್ಯ,

ಪಾತ್ರ ವ್ಯಾಪಾರಿ, ರಥಬೀದಿ, ಉಡುಪಿ.



ಗೃಹಕೃತ್ಯಕ್ಕೆ ಬೇಕಾದ ವಿಧವಿಧ ತಾಮ್ರದ ಪಾತ್ರೆಗಳು.

ಮಂಗಳೂರು

ಸೆನೆಟ್ ಸದಸ್ಯತನ

ದಕ್ಷಿಣ ಕನ್ನಡಿಗರಾದ ಶ್ರೀ ಯು ಸುಬ್ರಹ್ಮಣ್ಯ ಭಟ್ ಎಂ ಎಲ್ ಸಿ ಯವರು ಮದ್ರಾಸು ನ್ಯಾಯವಿಧಾಯಕ ಸಭೆಯಿಂದ ಯುನಿವರ್ಸಿಟಿ ಸೆನೆಟಿಗೆ ಸದಸ್ಯರಾಗಿ ಆರಿಸಲ್ಪಟ್ಟಿರುವರು

ಆರ್ತ ಚಿಕಿತ್ಸಾಭವನ

ಪ್ರಸಿದ್ಧ ವೈದ್ಯರೂ, ದೀನಬಂಧುಗಳೂ ಆದ ಡಾ| ಎನ್ ಡಿ ಸುವರ್ಣರು ಕಳೆದ ತಾ ೭ನೇ ಭಾನುವಾರ ತಾವು ನಡೆಸಿಕೊಂಡು ಬರುತ್ತಿರುವ ಆರ್ತಚಿಕಿತ್ಸಾಭವನದ ವಾರ್ಷಿಕೋತ್ಸವವನ್ನು ಬಹಳ ಯಶಸ್ವಿಯಾಗಿ ನಡೆಸಿದರು ಜನಾಬ್ ಹಾಜಿ ಸಯದ್ ಹುಸೈನ್ ಸಾಹೇಬ್ ಬಹದ್ದೂರು ಎಂ ಎಲ್ ಎ ಯವರು ಅಧ್ಯಕ್ಷತೆ ವಹಿಸಿದ್ದರು ಡಾ| ಸುವರ್ಣರು ಮಾಡುತ್ತಿರುವ ದೀನಸೇವೆ ಹಾಗೂ ದೇಶಸೇವೆಯನ್ನು ಪ್ರಶಂಸಿಸಿ ಶ್ರೀಗಳಾದ ಯು ಆನಂದರಾವ, ಬಿ ಲಕ್ಷ್ಮಣದೇವ ವಿದ್ಯಾರ್ಥಿ, ರೆ ಇ ಸುಬ್ಬುಕೃಷ್ಣಯ್ಯ, ಪ್ರೊ ಶ್ರೀನಿವಾಸಾಚಾರ್ಯರೇ ಮೊದಲಾದವರ ಭಾಷಣಗಳಾದುವು ಅಧ್ಯಕ್ಷರು ತಮ್ಮ ಭಾಷಣದಲ್ಲಿ ಆರ್ತ ಚಿಕಿತ್ಸಾ ಭವನಕ್ಕೆ ಉತ್ತರೋತ್ತರ ಅಭಿವೃದ್ಧಿಯಾಗಲೆಂದೂ, ಡಾ ಸುವರ್ಣರಿಗೆ ಈ ರೀತಿಯ ದೀನಸೇವೆ ಮಾಡಲು ಶಕ್ತಿಯನ್ನೂ ಚಿರಾಯುರಾರೋಗ್ಯವನ್ನೂ ಭಗವಂತನು ಕರುಣಿಸಲೆಂದೂ ಹರಸಿದರು

ಮಂಗಳೂರು ಆರ್ಯಸಮಾಜದ ಹತ್ತೊಂಭತ್ತನೇ ವಾರ್ಷಿಕೋತ್ಸವವು

ಕಳೆದ ಶಿವರಾತ್ರಿ ದಿವಸ ಜರಗಿತು ಆ ದಿನ ಬೆಳಗ್ಗೆ ಆರುವರೆ ಘಂಟೆಗೆ ಶ್ರೀ ಜ್ಞಾನೋದಯ ಸಮಾಜ ಮಂದಿರದಿಂದ ಆರ್ಯ ಸ್ತ್ರೀಪುರುಷರಿಂದೊಡಗೂಡಿದ ಮೆರವಣಿಗೆಯು ಹೊರಟು ನಗರ ಸಂಕೀರ್ತನೆಯೊಂದಿಗೆ, ಸನ್ಯಾಸಿ ಗುಡ್ಡೆಯಲ್ಲಿ ಇರುವ ಆರ್ಯ ಸಮಾಜ ಮಂದಿರಕ್ಕೆ ಬಂತು ಅಲ್ಲಿ ಆರ್ಯ ಮಹಿಳೆಯರು ಓಂಕಾರ ಗೀತವನ್ನು ಹಾಡುತ್ತಾ ವೈದಿಕ ಧ್ವಜಾರೋಹಣಮಾಡಿದರು ತರುವಾಯ ಹವನ, ಸಂಧ್ಯಾವಂದನಗಳು ಜರಗಿ ಶ್ರೀಯುತ ಯು ಗೋಪಾಲ ನ್ಯಾಕರು ಈಶ್ವರ ಉಪಾಸನೆಯನ್ನು ಜರಗಿಸಿದರು ನಂತರ ನೆರೆದ ಸಭಿಕರಿಗೆಲ್ಲ ಲಘು ಫಲಾಹಾರವು ಕೊಡಲ್ಪಟ್ಟಿತು ೯ ಘಂಟೆಗೆ ಪ್ರವಚನ ಸಭೆಯು ಜರಗಿ, ಶ್ರೀಯುತ ಬಸ್ತಿ ವಾಸಪ್ಪ ಶೆಣೈಯವರು "ವೈದಿಕ ಸಂಸ್ಕೃತಿಯ ಕುರಿತೂ, ಬ್ರಹ್ಮ ಪ್ರಚಾರಕರಾದ ಶ್ರೀ ಸುಬ್ಬುಕೃಷ್ಣಯ್ಯನವರು "ವೇದ ಗಳ ಶ್ರೇಷ್ಠ ಬೋಧನೆಯ ಕುರಿತೂ ಭಾಷಣಗಳನ್ನು ಕೊಟ್ಟರು ತರುವಾಯ ಶ್ರೀ ಜ್ಞಾನೋದಯ ಸಮಾಜದ ವೈದಿಕ ಭಜನೆ ಮಂಡಳಿಯವರು, ವಿಗ್ರಹಾರಾಧನೆ ಅವತಾರ, ಜಾತಿಭೇದ, ಇತ್ಯಾದಿ ವಿಷಯಗಳ ಕುರಿತು ವೈದಿಕ ಉಪದೇಶಗಳನ್ನು ಹಾಡಿ, ಮನೋರಂಜನೆಯೊಂದಿಗೆ ವಿಚಾರ ಜಾಗೃತಿಯನ್ನು ಮಾಡಿದರು ಮಧ್ಯಾಹ್ನ ಒಂದು ಘಂಟೆಗೆ ಮೇಲು ಕೀಳು ಎಂಬ ಭೇದಭಾವನೆಗಳನ್ನು ಬಿಟ್ಟು ಸಮಾಜದವರಿಂದ ಆಮಂತ್ರಿಸಲ್ಪಟ್ಟ ಹಿಂದೂಗಳ ಎಲ್ಲಾ ಪಂಗಡದವರೂ ಒಟ್ಟಾಗಿ ಸೇರಿ ಮುನ್ನೂರೈವತ್ತು ಜನರು ಸಹಪಂಕ್ತಿ ಸಹ ಭೋಜನವನ್ನು ಮಾಡಿದರು

ಮಧ್ಯಾಹ್ನ ೩ ಘಂಟೆಗೆ "ವೈದಿಕ ಧರ್ಮ ಪ್ರಚಾರ ಮಂಡಳಿ" ಎಂಬ ಸಂಘವು ಸ್ಥಾಪಿಸಲ್ಪಟ್ಟು ಅನೇಕರು ಇದರ ಸದಸ್ಯರಾಗಿ ಸೇರಿಸಲ್ಪಟ್ಟರು ಈ ಸಂಘದ ಮುಖ್ಯ ಉದ್ದೇಶವು ಸುಲಭ ಬಗೆಗೆ ವೈದಿಕ ಧರ್ಮಗಳನ್ನು ಕನ್ನಡ ಭಾಷೆಯಲ್ಲಿ ಬರೆದು ಪ್ರಚಾರಗೊಳಿಸುವುದಾಗಿದೆ ಈ ಸಂಘದ ಪ್ರಥಮ ಪುಸ್ತಕವಾದ 'ವೇದಗಳ ಮಹತ್ವ' (ಪ್ರಥಮ ಭಾಗ) ಎಂಬ ಒಂದು ಕಾಲಾಣೆ ಬೆಲೆಯ ಪುಸ್ತಕವು ಆಗಲೇ ಪ್ರಚುರಗೊಳಿಸಲಾಯಿತು ತರುವಾಯ ಕಾರ್ಕಳ ಆರ್ಯಸಮಾಜದ ಶ್ರೀ ಮಂಜುನಾಥ ಶೆಣೈಯವರು ಹರಿಕಥಾ ರೂಪದಿಂದ, ಮತಮತಾಂತರಗಳ ಗೊಂದಲದಿಂದ ಆದ ಅವನತಿಯ ಕುರಿತು ಮನೋರಂಜಕವಾದ ಪ್ರವಚನ ಮಾಡಿದರು

ಸಾಯಂಕಾಲ ಐದು ಘಂಟೆಗೆ ಆ ಜೋಧಪೂರ್ ನವ ಹಾಸಪಿಟಲ್ "ಬೋರ್ಡಿನೇಟ್" ಜಡ್ಜರಾದ ಮಹರಾಜ ಶ್ರೀ ಟಿ ಎ ಕೆ ಸ್ವಮೂರ್ತಿ ಪಂತಲು ಗಾರು ಯಂ ಎ ಬಿ ಎಲ್ ರವರ ಅಧ್ಯಕ್ಷತೆಯಲ್ಲಿ ಜರಗಿತು ಕಳೆದ ವರ್ಷದಲ್ಲಿ ಸಮಾಜವು ಸಾಧಿಸಿದೆ ಕಾರ್ಯಗಳ ವೃತ್ತಾಂತವನ್ನೊಳಗೊಂಡ ವರದಿಯನ್ನೂ, ಜಮಾ ಖರ್ಚು ಪತ್ರಗಳನ್ನೂ ಸಮಾಜದ ಕಾರ್ಯದರ್ಶಿ ಬಿ ಮೋಹನರಾಯರು ಓದಿದರು ತರುವಾಯ ಕೇಶವ ನೂರು ಆರ್ಯ ಸ ಶ್ರೀ ಸದಾಶಿವ ಪ್ರಸಾದರವರು ಹಿಂದೂಗಳ ದುರ್ದಶೆಯ ಕುರಿತೂ, ಮಿಸ್ ಅಹಲ್ಯಾಬಾಯಿ ಬಿ ಎ ಎ ವರು ದಯಾನಂದ ಸರಸ್ವತಿಯವರು ಮಾಡಿದ ಶ್ರೇಷ್ಠ ಕಾರ್ಯಗಳ ಕುರಿತೂ, ಬ್ರಹ್ಮ ಶ್ರೀ ನಿಡ್ಲೋಡಿ ಅನಂತ ಉಪಾಧ್ಯಾಯರು ದಯಾನಂದರ ವೇದಪ್ರಚಾರ ಸೇವೆಯ ಕುರಿತೂ ಭಾಷಣಗಳನ್ನು ಮಾಡಿದರು ಅಧ್ಯಕ್ಷರು ದಯಾನಂದರು ಆದರ್ಶವನ್ನು ಹಿಡಿದು, ಸತ್ಯಧರ್ಮವನ್ನು ನಿರ್ಭಯವಾಗಿ ಬೋಧಿಸಿ ಹಿಂದೂಗಳಲ್ಲಿ ಧೈರ್ಯಸಾಹಸಾದಿ ಗುಣಗಳನ್ನು ಹೇಗೆ ಜಾಗೃತಗೊಳಿಸಿದರೆಂದು, ಸುರಸವಾದ ಭಾಷಣದಿಂದ ವ್ಯಕ್ತಗೊಳಿಸಿದರು ಸಾಯಂಕಾಲ ಶಾಂತಿ ಪಾಠದೊಂದಿಗೆ ಉತ್ಸವವು ಕೊನೆಗಂಡಿತು

ದ ಕ ಜಿಲ್ಲಾ ಕಲೆಕ್ಟರರಾದ ಮಿ ಎ ಕ್ಲೂಬಿ ಐ ಸಿ ಎಸ್, ಸಿ ಐ ಇ, ಇವರು ಬೆಂಗಳೆ ರಜೆಯ ಮೇಲೆ ಹೋಗಲಿಕ್ಕಿರುವರು

ಶೋಚನೀಯ ನಿಧನ

ದಕ್ಷಿಣಕನ್ನಡಿಗರೂ, ಸಬ್ ಜಡ್ಜರೂ ಆಗಿದ್ದ ಶ್ರೀ ಎಂ ಎನ್ ಬಂಗೇರರವರು ಕಳೆದ ವಾರ ಪಾಲಾಘಾಟಿನಲ್ಲಿ ರಕ್ತದ ಒತ್ತಡದಿಂದ ದಿವಂಗತರಾದುದು ಶೋಚನೀಯವಿದೆ ಈ ಮಹನೀಯರು ದಿವಂಗತ ದಿವಾನ್ ಬಹದ್ದೂರ್ ಎಂ ಎಂ ಬಂಗೇರರ ದ್ವಿತೀಯ ಮಕಳು ಮಂಗಳೂರಿನ ಗವರ್ಮೆಂಟ್ ಕಾಲೇಜಿನಲ್ಲಿ ಮೆಟ್ರಿಕಿನವರೆಗೂ ಮದ್ರಾಸಿನ ಕ್ರಿಶ್ಚಿಯನ್ ಕಾಲೇಜಿನಲ್ಲಿ ಬಿ ಎ ಯವರೆಗೂ ಓದಿ, ಮೊದಲನೇ ತರಗತಿಯಲ್ಲಿಯೇ ಉತ್ತೀರ್ಣರಾಗಿ ಬಿ ಎಲ್ ಕಲಿತು ಸಲ್ಪಕಾಲ ಮದ್ರಾಸ್ ಮತ್ತು ಮಂಗಳೂರಿನಲ್ಲಿ ವಕಾಲತು ನಡಿಸಿಕೊಂಡಿದ್ದರು ಆ ಮೇಲೆ ಕಾಸರಗೋಡು ಕುಂದಾಪುರಗಳಲ್ಲಿ ಮುನ್ಸೀಫರಾಗಿದ್ದು ಕೊನೆಗೆ ಹಂಗಾಮಿ ಜಡ್ಜರಾಗಿದ್ದರು ರಜೆಯಲ್ಲಿ ಮಲ್ಪೆಗೆ ಹೋಗಿದ್ದವರು ಈ ರೀತಿ ಮರಣಕ್ಕೆ ತುತ್ತಾದರು ಮೃತರು ಸದ್ಗುಣಗಳೂ ಜನಪ್ರಿಯರೂ ಆಗಿದ್ದರು ಅವರ ದುಃಖಿತ ಕುಟುಂಬದೊಡನೆ ನಮ್ಮ ಸಹಾನುಭೂತಿಯಿದೆ

ಯಲ್ಲಿ ಉಡುಪಿ ಟೌನಿನಲ್ಲಿ ಹರಿಜನ ವಿದ್ಯಾರ್ಥಿ ಭವನ ಫಂಡನ್ನು ತೆರೆಯುವುದಾಗಿ ನಿಶ್ಚೈಸಲಾಗಿದೆ ಸಧ್ಯಕ್ಕೆ ೧೫ ಮಂದಿ ವಿದ್ಯಾರ್ಥಿಗಳಿಗೆ ಏರ್ಪಾಡು ಮಾಡಲಾಗಿದೆ ಯೋಗ್ಯ ಹೈಸ್ಕೂಲ್ ಕ್ಲಾಸ್, ವ ನಿರ್ಗತಿಕ ವಿದ್ಯಾರ್ಥಿಗಳ ಅರ್ಜಿಗೆ ಮೊದಲು ಗಮನಕೊಡಲಾಗುವುದು ಬೋರ್ಡಿಂಗ್ ಚಾರ್ಜನ್ನು ಹೆತ್ತವರ ವ ರಕ್ಷಕರ ಆರ್ಥಿಕ ಯೋಗ್ಯತೆಯ ಮೇರೆಗೆ ವಸೂಲು ಮಾಡಲಾಗುವುದು ಸರ್ವರೂ ಸಹಾನುಭೂತಿಯನ್ನೂ ಸಹಾಯವನ್ನೂ ಮಾಡಬೇಕಾಗಿ ಪ್ರಾರ್ಥನೆ

ವಿ ಸೂ —ಅರ್ಜಿಗಳನ್ನು ಉಡುಪಿ ವಿಳಾಸಕ್ಕೆ ವ್ಯವಸ್ಥಾಪಕರಿಗೆ ಕಳುಹಿಸತಕ್ಕದ್ದು

ಯಸ್ ಗೋಪಾಲ ಸಾಲಿನ್ಸ,
ಮೆಂಬರ್ ದ ಕ ಜಿಲ್ಲಾ ಎಜ್ಯುಕೇಶನಲ್
ಮಂಗಳೂರು, ವ್ಯವಸ್ಥಾಪಕ

ಪೆರ್ಡೂರು

ಶ್ರೀ ಅನಂತಪದ್ಮನಾಭ ಸ್ವಾಮಿ ಸನ್ನಿಧಿಯಲ್ಲಿ ವರ್ಷಾವಧಿ ಮಹೋತ್ಸವವು ತಾ ೧೧ನೇ ಗುರುವಾರ ಪ್ರಾರಂಭವಾಗಿ, ೩ನೇ ತಾರೀಕು ಮಹಾರಥೋತ್ಸವ

ಆ ಭಾ ರ ಮ ನ್ನ ಣೆ

ಪುತ್ತೂರು ಕಾಸರಗೋಡು ತಾಲೂಕುಗಳ ಜನರಲ್ ಸಮುದಾಯದ ಕಳೆದ ಚುನಾವಣೆಯಲ್ಲಿ ಕಾಂಗ್ರೆಸ್ಸಿಗೆ ಮತಕೊಟ್ಟ ವ ಕೆಲಸ ಮಾಡಿದ ಬಂಧು ಭಗಿನಿಯರಿಗೆ—

ಕಳೆದ ಎಸೆಂಬ್ಲಿ ಚುನಾವಣೆಯಲ್ಲಿ ತಾವುಗಳು ನನಗೆ ಸಂಪೂರ್ಣ ಬೆಂಬಲವನ್ನಿತ್ತು ಮಾಡಿದ ಯಾವತ್ತೂ ಸಹಾಯಕ್ಕಾಗಿ ನಾನು ತುಂಬಾ ಕೃತಜ್ಞನಾಗಿರುವೆನು ಇನ್ನು ಮುಂದೆಯೂ ಕೂಡಾ ನನ್ನಿಂದ ನ್ಯಾಯವಿಧಾಯಕ ಸಭೆಯಲ್ಲಿ ಪೂರೈಸಬೇಕಾದ ಯಾವತ್ತು ಕಾರ್ಯಗಳಲ್ಲಿ ತಾವು ಪ್ರೀತಿಪೂರ್ವಕವಾಗಿ ಇದೇ ರೀತಿ ಸಹಾಯವನ್ನು ಮಾಡಬೇಕಾಗಿ ಅಪೇಕ್ಷಿಸುವ

ತಮ್ಮ ಹಿತೈಷಿ,
ಕೋಟ ರಾಮಕೃಷ್ಣ ಕಾರಂತ

ಉ ಡು ಪಿ

ಮಹಾಶಿವರಾತ್ರಿ

ಶಿವರಾತ್ರಿ ಉತ್ಸವವು ಶ್ರೀ ಚಂದ್ರಮೌಳೀಶ್ವರ ದೇವಸ್ಥಾನದಲ್ಲಿ ತಾ ೧೧ ೩ ೩೭ರಲ್ಲಿ ಎಂದಿನಂತೆ ವಿಜೃಂಭಣೆಯಿಂದ ಜರಗಿರುವುದು ಶ್ರೀ ವಾದಿದಾಸ ಹಂಡೆಯವರ ಹರಿಕೀರ್ತನೆಯು ಪ್ರತಿದಿನ ನಡಿಯುತ್ತಿದೆ

ನಗರ ಸಭೆ

ನಗರ ಸಭೆಯು ವಿಧಿಸುವ ತೆರಿಗೆಯು ಹೆಚ್ಚಾಯಿತೆಂದು ಕೆಲಮಂದಿ ತರಿಗೆದಾರರ ಅಭಿಪ್ರಾಯವಿದು ವಂತಿದೆ ತರಿಗೆ ವಿಧಿಸುವ ಕಲವು ಕಡೆಗಳಲ್ಲಿ ಪಕ್ಷಪಾತವೂ ನಡೆದಿರುವುದೆಂದು ಅಳವು ಬರುತ್ತದೆ ತೆರಿಗೆದಾರರ ಸಂಘದ ಸಭೆಯೊಂದು ಇದರ ಕುರಿತು ೧೯ ೩ ೩೭ನೇ ಶುಕ್ರವಾರ ನಡಿಯಲಿರುವುದು

ಹರಿಜನ ವಿದ್ಯಾರ್ಥಿಭವನ

ಇದೇ ಬರುವ ಜೂನ್ ತಿಂಗಳಲ್ಲಿ ದ ಕ ಜಿಲ್ಲಾ ಆದಿದ್ರಾವಿಡ ಎಜ್ಯುಕೇಶನಲ್ ಬೋರ್ಡಿನ ಆಪಳತೆ

ಪ್ರಜರಗಿರುವುದು ತಾ ೧೬ರಲ್ಲಿ ಶಮಾಟೋದ್ಘಾಟನ ರಾತ್ರಿ ಅವಭೃತಸ್ನಾನ ಧ್ವಜಾವರೋಹಣ, ತಾ ೧೭ರಲ್ಲಿ ಓಕುಳಿ ತಾ ೧೮ರಲ್ಲಿ ಬ್ರಹ್ಮಕುಂಭಾಭಿಷೇಕವು ಸಮೃದ್ಧಿಯಿಂದ ಜರಗುವವು

ಶಿರ್ವ

ಕಳೆದ ವಾರ ಇಲ್ಲಿಯ ನಾರಾಯಣ ಮಹಾಬಲ ಹೆಗ್ಗಡೆಯವರ ಸುಮಾರು ಏಳು ವರ್ಷದ ಬಾಲಿಕೆಯು ಉಟ್ಟವಸ್ತ್ರಕ್ಕೆ ಪ್ರಮಾದವಶಾತ್ ಬೆಂಕಿ ತಗಲಿ ಎದೆಯವರೆಗೂ ಸುಟ್ಟುಹೋಗಿ ವಿಷಧೋಪಚಾರಗಳು ಫಲಕಾರಿಯಾಗದೆ ಮರುದಿನ ಬಾಲಿಕೆಯು ಮೃತಳಾದುದು ಶೋಚನೀಯವಿದೆ

ಫಲಿಮಾರು

ಫಲಿಮಾರು ಶ್ರೀ ಸದಾಶಿವ ಮಹಾಲಿಂಗೇಶ್ವರ ದೇವರ ಸನ್ನಿಧಿಯಲ್ಲಿ ನಡಿವ ವಾರ್ಷಿಕ ರಥೋತ್ಸವದ ಸಂಬಂಧ ತಾ ೧೧ ೩ ೩೭ಕ್ಕೆ ಧ್ವಜಾರೋಹಣವಾಗಿದೆ ಮೂರನೇ ದಿನ ತಾ ೧೩ ೩ ೩೭ನೇ ಶುಕ್ರವಾರ ಮಧ್ಯಾಹ್ನ ಘಂಟೆಗೆ ರಥಸ್ತಂಭದಲ್ಲಿ ರಥಾರೋಹಣ ಬಹು ವಿಜೃಂಭಣೆಯಿಂದ ನಡೆಯಿತು

THE BOMBAY LIFE ASSURANCE Co., LTD.

ESTD 1908

Church Gate Street, Fort - - BOMBAY

SPECIAL FEATURES.

1. Rebate on yearly payment of policies.
2. Rebate for larger assurances
3. Accident Risk covered on small extra premium
4. Attractive Bonuses

It pays you to represent this Company
Wanted Agents in unrepresented parts.

Apply to.—

KOCHIKAR BROTHERS,

Madras Branch Secretaries

BRANCHES AT		
P B 337 Mount Road Madras	Visveswarapuram Circle Bangalore City	Soumyaha im Puthiyara, Calicut
Car Street, Mangalore	Udipi, S India	Charni Road Bombay No 4

EVIDENCE

OF

SECURITY & STABILITY

FIGURES THAT SPEAK FOR THEMSELVES

TOTAL ASSETS **Rs. 80,66,600**

Summary of 1935 Accounts

Total Assets Over	Rs 80 00 000
Life Funds Over	Rs 68,00,000
Premium Income Over	Rs 22 54 000
Interest Income	Rs 3,16 000
Claims Paid	Rs 5,75,000

Total Claims paid Over	Rs. 38,50,000
Total Business in Force Over	Rs 4,4251 200,

TOTAL BUSINESS IN FORCE **Rs. 4,42,51,200**

ಚಂದಾದಾರರಲ್ಲಿ

ಚಂದಾಹಣ ಬಾಕಿ ಇರುವ ನಮ್ಮ ಚಂದಾದಾರರು ಅದಷ್ಟು ಬೇಗನೇ ತಮ್ಮ ಹಣವನ್ನು ಮಣಿಯಾರ್ಡರ್ ಮೂಲಕ ದಯವಿಟ್ಟು ಕಳುಹಿಸಿಕೊಡಬೇಕಾಗಿ ಅಪೇಕ್ಷಿಸುತ್ತೇವೆ. ವಿ. ಪಿ. ಮಾಡುವದಾದರೆ ಖರಾಣೆ ಹೆಚ್ಚಿಗೆ ಬೀಳುವದು.

ನಮ್ಮೊಡನೆ ಪತ್ರವ್ಯವಹಾರ ನಡೆಸುವವರು ತಮ್ಮ ಚಂದಾ ನಂಬ್ರವನ್ನು ಸೂಚಿಸಿ ಬರೆಯಬೇಕಾಗಿ ವಿನಂತಿ. ಮೆನೆಜರ್, 'ನವಯುಗ'

ನವಯುಗ

ಉಡುಪಿ, ತಾ. ೧೮-೩-'೩೭ ಗುರುವಾರ

ಸರಕಾರದ ದಬ್ಬಾಳಿಕೆಯ ನಿಷೇಧ

ಇದೇ ತಾ. ೧೧ರಲ್ಲಿ ಶ್ರೀ. ಅಖಿಲಚಂದ್ರದತ್ತರು, ಸರಕಾರದ ದಬ್ಬಾಳಿಕೆಯ ಧೋರಣೆಯನ್ನು ನಿಷೇಧಿಸಲು ಎಗ್ಜಿಕ್ಯೂಟಿವ್ ಕಮಿಟಿಯ ಗ್ರಾಂಟಿನಲ್ಲಿ ರೂ.೧೦೦ರ ಕಡಿತ ಸೂಚನೆ ತಂದಾಗ ಎಸೆಂಬ್ಲಿ ಮೆಂಬರರು ಇಡೀ ದಿವಸ ದಬ್ಬಾಳಿಕೆಯ ಕುರಿತು ಚರ್ಚಿಸಿ ಸರಕಾರಕ್ಕೆ ಇನ್ನೊಂದು ಅಪಜಯವನ್ನುಂಟುಮಾಡಿದರು. ದಬ್ಬಾಳಿಕೆಯ ನಿಮಿತ್ತ ಹಿಂದೀಯರ ಭಾಷಣ, ಸಂಘ ಮತ್ತು ಲೇಖನ ಸ್ವಾತಂತ್ರ್ಯವೇ ಮೊದಲಾದ ನ್ಯಾಯವಾದ ಕಾರ್ಯಗಳ ಮೇಲೆ ಹೇಗೆ ನಿರ್ಬಂಧ ಹಾಕಲ್ಪಟ್ಟಿದೆ. ಡಿಟೆನ್ಯೂ ಕೈದಿಗಳು ಎಂತಹ ಶೋಚನೀಯಾವಸ್ಥೆಯಲ್ಲಿದ್ದಾರೆಂಬುದನ್ನು ಈ ಚರ್ಚೆಯು ಚೆನ್ನಾಗಿ ಬಯಲಿಗೆಳೆದಿರುವುದು. ೨೦೦೦ದ ವರೆಗಣ ಬಂಗಾಳದ ಶಿಕ್ಷಿತ ತರುಣರು ಯಾವತರದ ವಿಚಾರಣೆಯೂ ಇಲ್ಲದ ಡಿಟೆನ್ಯೂ ಕೈದಿಗಳಾಗಿ ಕೊಳೆಯುತ್ತಿರುವರು ಗಡಿಪಾರು ಮತ್ತು ಗಡಿ ನಿರ್ಬಂಧದ ಹೊಸ ಹುಕುಮುಗಳು ಜಾರಿಗೆ ಬಂದಿವೆ. ಶ್ರೀ. ಸುಭಾಸಚಂದ್ರಭೋಸರ ಆರೋಗ್ಯ ಕೆಟ್ಟದ್ದರೂ ಅವರನ್ನು ಕೋರ್ಟುವಿಚಾರಣೆಗೊಳಪಡಿಸುವ ಧೈರ್ಯವು ಸರಕಾರಕ್ಕಿಲ್ಲದಿದ್ದರೂ ಅವರಿನ್ನೂ ನಿರ್ಬಂಧದೊಳಗೇನೇ ಇರಬೇಕಾಗಿದೆ. ಮಹಾತ್ಮ ಗಾಂಧಿಯವರ ನಿಷ್ಠಾವಂತ ಅನುಯಾಯಿಗಳಲ್ಲೊಬ್ಬರಾಗಿ ಸತ್ಯ ಅಹಿಂಸೆಗಳ ದೀಕ್ಷಾ ಬದ್ಧರಾಗಿರುವ ಖಾನ್ ಅಬ್ದುಲ್‌ಗಾಫರ ಖಾನರು ಆ ಪ್ರಾಂತಕ್ಕೆ ಹೋಗುವುದರಿಂದ ಶಾಂತಿ ಭಂಗವಾಗುವ ಸರಕಾರದ ಭೀತಿ ಇನ್ನೂ ಹೋಗಿಲ್ಲ. ಕೆಲವೆಡೆ ಕಾಂಗ್ರೆಸ್ ಸಂಸ್ಥೆಯ ಮೇಲೂ ಸಾಮೂಹಿಕವಾಗಿ ಮತ್ತು ವೈಯುಕ್ತಿಕವಾಗಿ ಜನರ ಮೇಲೂ ಹಾಕಲ್ಪಟ್ಟಿರುವ ನಿಷೇಧವು ಇನ್ನೂ ಹಾಗೆಯೇ ಇದೆ. ಕಾಯಿದೆ ಭಂಗದ ಸಮಯದಲ್ಲಿ ಸರಕಾರವು ವಶಮಾಡಿಕೊಂಡ ಸೊತ್ತುಗಳು ಇನ್ನೂ ಹಿಂದೆ ಕೊಡಲ್ಪಟ್ಟಿಲ್ಲ. ಪತ್ರಿಕೆಗಳು ಬಾಯಿಬಿಡದಂತೆ ಅವುಗಳ ಶಿರಮೇಲೆ ಶಾಸನದ ಖಡ್ಗವು ತೂಗಾಡುತ್ತಲೇ ಇದೆ. ದೇಶ ದ್ರೋಹದ ಖಟ್ಲೆಗಳು, ಚುನಾವಣೆಯ ಸಂದರ್ಭದಲ್ಲಿ ಕೂಡಾ ನಡೆದೇ ಇರುತ್ತವೆ. ಪೂರ್ಣ ಸ್ವರಾಜ್ಯ ದಿನಾಚರಣೆಯ ಠರಾವು ಈ ವರ್ಷ ಹೊಸತಾಗಿ ನಿಷೇಧಿಸಲ್ಪಟ್ಟಿದೆ. ಆ ಸಂಬಂಧವಾಗಿ ದಸ್ತಗಿರಿ ಮತ್ತು ಮನೆ ಜಡ್ತಿಗಳು ನಡೆದಿರುತ್ತವೆ. ಹೊಸ ಸುಧಾರಣೆಯು ಜಾರಿಗೆ ಬರುವಾಗ ದೇಶದಲ್ಲಿ ಅನುಕೂಲ ವಾತಾವರಣವನ್ನುಂಟುಮಾಡುವ ಸರಕಾರದ ರೀತಿಯಿದು. ಕಾಯಿದೆ ಭಂಗವು ನಿಲ್ಲಿಸಲ್ಪಟ್ಟು ಈಗ ನಾಲ್ಕೈದು ವರುಷಗಳಾದರೂ, ಬಂಗಾಳದ ಪರಿಸ್ಥಿತಿಯು ಸುಧಾರಿತವಾಗಿ ಇತ್ತಲಾಗಿ ಅತ್ಯಾಚಾರವೇನೂ ನಡೆಯದಿದ್ದರೂ ಕಿರೀಟಧಾರಣೆಯ ಪೂರ್ವದಲ್ಲಿ ಮತ್ತು ಹೊಸಸುಧಾರಣೆಯು ಜ್ಯಾರಿಗೆ ಬರುವ ಸಂದರ್ಭದಲ್ಲಿ ರಾಜಕೀಯ ಕೈದಿಗಳನ್ನಾಗಲೀ ಬಂಗಾಳ ಡಿಟೆನ್ಯೂಗಳನ್ನಾಗಲೀ ಬಿಡುಗಡೆ ಮಾಡುವಷ್ಟರ ಉದಾರ ಬುದ್ಧಿಯಾಗಲೀ ವಿವೇಕವಾಗಲೀ ಸರಕಾರಕ್ಕಿಲ್ಲ ೫ಮಂದಿ ಡಿಟೆನ್ಯೂಕೈದಿಗಳು ಆತ್ಮಹತ್ಯೆ ಮಾಡಿಕೊಂಡಿರುವರು. ಇಬ್ಬರಿಗೆ ಹುಚ್ಚುಹಿಡಿದಿರುವುದು ೨೦ ವರ್ಷಗಳಿಂದ ಡಿಟೆನ್ಯೂ ಕೈದಿಗಳಾಗಿರುವವರೂ ಇದ್ದಾರೆ.

ದಬ್ಬಾಳಿಕೆಯಿಂದ ಜನತೆಯ ರಾಷ್ಟ್ರಾಭಿಮಾನವನ್ನು, ಸ್ವಾತಂತ್ರ್ಯಾಕಾಂಕ್ಷೆಯನ್ನು ಅಣಗಿಸಲು ಅಥವಾ ತಡೆಗಟ್ಟಲು ಸಾಧ್ಯವಿಲ್ಲ, ಅದರಿಂದ ಪ್ರತಿವಿರುದ್ಧ ಪರಿಣಾಮ ಉಂಟಾಗುವುದೆಂಬುದನ್ನು ಬ್ರಿಟಿಷರು ಅನೇಕ ಆಯರ್ಲೆಂಡ್ ಮತ್ತು ಐಗುಪ್ತ ದೇಶಗಳ ಸ್ವಾನುಭವದಿಂದಲೂ ಚೆನ್ನಾಗಿ ಮನಗಂಡಿರುವಂತೆ ತೋರುವುದಿಲ್ಲ. ಒಂದಿಷ್ಟು ವಿವೇಚನಾಶಕ್ತಿಯು ಅವರಲ್ಲಿದ್ದರೆ ಈಸಲದ ಚುನಾವಣೆಯು ಅವರಿಗೆ ಒಳ್ಳೇಪಾಠವಾಗದಿರದು. ಕಾಂಗ್ರೆಸು ನೆಲಹಿಡಿದಿರುವುದು; ಅದಕ್ಕೆ ಜನತೆಯ ಬೆಂಬಲವಿಲ್ಲೆಂದು ಆಳರಸರು ನೆನೆಸಿದ್ದರು. ಆದರೆ ದಬ್ಬಾಳಿಕೆಯ ಕೇಂದ್ರವೇ ಆಗಿದ್ದ ಬಂಗಾಳದಮಿಡ್ನಾಪುರದಲ್ಲಿಯೇ ಕಾಂಗ್ರೆಸ್ ಉಮೇದ್ವಾರರಿಗೆ ಅವರ ಪ್ರತಿಸ್ಪರ್ಧಿಗಿಂತ ೭೦,೦೦೦ ಓಟು ಹೆಚ್ಚು ದೊರೆತಿರುವುದು. ೨೫೦ ಮಿಲ್ಯ ಜನತೆಯ ನ್ಯಾಯವಾದ ಆಕಾಂಕ್ಷೆಗಳನ್ನು ಸರಕಾರಕ್ಕೆ ಎಷ್ಟರವರೆಗೆ ತಡೆದಿಡಲು ಸಾಧ್ಯವಿದೆ ಯೊ ತಿಳಿಯದು! ಇಂಗ್ಲೆಂಡಿನ ಮತ್ತು ಹಿಂದು ದೇಶದ ಸಂಬಂಧವು ಸಂಪೂರ್ಣವಾಗಿ ಕಡಿದು ಹೋಗದೆ ಅವು ಮೈತ್ರಿಭಾವದಿಂದ ಪರಸ್ಪರ ಸಹಕರಿಸಿಕೊಂಡು ನಡೆಯಬೇಕಾದರೆ, ಆಳರಸರು ದೇಶದ ಪರಿಸ್ಥಿತಿ ಜನತೆಯ ಮನೋವೃತ್ತಿಯನ್ನೆಲ್ಲಾ ಚೆನ್ನಾಗಿ ಪರಿಶೀಲಿಸಿಕೊಂಡು, ಸಕಾಲದಲ್ಲೇ ಹಿಂದೀಯರ ಕೇಳಿಕೆಗಳನ್ನೂ ಮನ್ನಿಸಿ ಅವರ ಆಕಾಂಕ್ಷೆಗಳನ್ನು ತೃಪ್ತಿಪಡಿಸುವ ವಿವೇಕಪರ ಧೋರಣೆ ವಹಿಸಬೇಕು. ಈಗಣಂತೆಯೇ ನಡೆದರೆ ಅನೇಕ ಆಯರ್ಲೆಂಡುಗಳಂತೆ ಬ್ರಿಟಿಷ್ ಸಾಮ್ರಾಜ್ಯದಿಂದ ಹಿಂದೂದೇಶವು ಸಿಡಿದು ಹೋಗುವ ಕಾಲವು ದೂರವಿರಲಾರದು.

ಪುರವಣಿ.

ಮಣಿಪಾಲ ಸೆನಿಟೋರಿಯಮಿನ ಪ್ರಕಟಣೆಯೊಂದನ್ನು ಈ ಸಂಚಿಕೆಯ ಪುರವಣಿಯಾಗಿ ಇಟ್ಟಿದ್ದೇವೆ.

ಮಣಿಪಾಲ ಸೆನಿಟೋರಿಯಮ್

ಈ ಸೆನಿಟೋರಿಯಮಿನ ಕುರಿತಾದ ಪುರವಣಿಯೊಂದನ್ನು ಇನ್ನೊಂದೆಡೆ ಕೊಟ್ಟಿರುತ್ತೇವೆ. ಕೋಪ್ಪದಂತೆಯೇ ಕ್ಷಯರೋಗವೂ ದಕ್ಷಿಣ ಕನ್ನಡದಲ್ಲಿ ಪ್ರಬಲವಾಗಿ ಹಬ್ಬಿದೆ. ಅದು ವಂಶ ಪಾರಂಪರ್ಯವಾಗಿ ಬರುವ,ಗುಣಪಡಿಸಲಸಾಧ್ಯವಾದ ಭೀಕರ ರೋಗವೆಂಬ ಮೂಢ ಭಾವನೆಯು ಜನರಲ್ಲಿರುವುದು.ಕ್ಷಯವು ಸ್ವಾರ್ಜಿತವಾಗಿಯೂ ಬರುವುದು. ಕೆಲವೊಂದು ಪರಿಸ್ಥಿತಿಯಲ್ಲಿ ಅವನ್ನು ಗುಣಪಡಿಸಿಕೊಳ್ಳಲೂ ಸಾಧ್ಯವಿದೆ. ಇನ್ನೊಂದು ಪ್ರಾಮುಖ್ಯ ವಿಷಯವೆಂದರೆ ಕ್ಷಯರೋಗಿಯನ್ನು ಕುಷ್ಠರೋಗಿಯಂತೆ ಪ್ರತ್ಯೇಕವಾಗಿರಿಸುವುದು. ಇದರಿಂದ ಅದು ಇತರರಿಗೆ ಹಬ್ಬದಂತಾಗುವುದು. ಇದಕ್ಕೆಲ್ಲಾ ಒಂದು ಸೆನಿಟೋರಿಯಮ್ ಅಗತ್ಯ. ಈಗ ದಕ್ಷಿಣ ಕನ್ನಡದ ಕ್ಷಯರೋಗ ಪೀಡಿತರು ಚಿಕಿತ್ಸೆ ಮತ್ತು ನಿವಾಸಕ್ಕಾಗಿ ಅತಿ ದೂರದ ಮದನಪಳ್ಳಿಗೋ ಮದ್ರಾಸಿಗೋ ಹೋಗಬೇಕು. ಇದು ಬಡವರಿಗೆ ಮಾತ್ರವಲ್ಲ ಮಧ್ಯ ತರಗತಿಯವರಿಗೆ ಕೂಡಾ ಸುಲಭ ಸಾಧ್ಯ ವಿಷಯವಲ್ಲ. ಇಂತಹ ಪರಿಸ್ಥಿತಿಯಲ್ಲಿ ಪಶ್ಚಿಮ ಕರಾವಳಿಗೆ, ವಿಶೇಷವಾಗಿ ದಕ್ಷಿಣ ಕನ್ನಡಕ್ಕೊಂದು ಸೆನಿಟೋರಿಯಮ್ ಅತ್ಯಾವಶ್ಯಕ.

ದಕ್ಷಿಣ ಕನ್ನಡಕ್ಕೆ ಅತ್ಯಾವಶ್ಯಕ

ದಕ್ಷಿಣ ಕನ್ನಡಕ್ಕೊಂದು ಸೆನಿಟೋರಿಯಮಿನ ಆವಶ್ಯಕತೆಯನ್ನು ಮನಗಂಡು ಡಾಕ್ಟರ್ ಟಿ. ಮಾಧವ ಪೈಯವರು ತನ್ನ ಕಷ್ಟಾರ್ಜಿತವನ್ನೆಲ್ಲಾ ವಿನಿಯೋಗಿಸಿ ರೂ. ೧೦,೦೦೦ದ ವರೆಗೆ ವೆಚ್ಚಮಾಡಿ, ಕ್ಷಯರೋಗ ಚಿಕಿತ್ಸೆಗೆ ಉತ್ತಮ ವಾತಾವರಣವಿರುವ ಉಡುಪಿಯಿಂದ ಸುಮಾರು ೩ ಮೈಲು ಪೂರ್ವದ ಮಣಿಪಾಲದಲ್ಲಿ ಒಂದು ಕಟ್ಟಡವನ್ನು ಕಟ್ಟಿಸಿ ೧೫ ಮಂದಿಯ ವರೆಗೆ ಕ್ಷಯರೋಗಿಗಳಿಗೆ ಸ್ವತಃ ಚಿಕಿತ್ಸೆ ನಡಿಸಿ ಸದ್ರಿ ಸ್ಥಳದ ಯೋಗ್ಯತೆಯನ್ನು ಪರೀಕ್ಷಿಸಿರುವರು. ಅದರ ಮೇಲೆಯೇ ಡಾಕ್ಟರ್ ಪೈಗಳು ಈ ಸೆನಿಟೋರಿಯಮನ್ನು ಕೆಲವುಮಂದಿ ಮಹನೀಯರ ಆಡಳಿತಕ್ಕೊಪ್ಪಿಸಿ, ತನ್ನ ಜೀವವಿಮಾ ಹಣದಿಂದ ರೂ. ೫೫,೦೦೦ದಷ್ಟರ ಅತ್ಯುದಾರ ದಾನವಿತ್ತಿರುವರು. ಸೆನಿಟೋರಿಯಮಿನ ಉಪಯುಕ್ತತೆ ಮತ್ತು ಸದ್ರಿ ಸ್ಥಳದ ಯೋಗ್ಯತೆಯ ಕುರಿತು ಲೆಫ್ಟನೆಂಟ್ ಕರ್ನಲ್ ಮಿರಾಜ್ಕರರಂತಹ ಪ್ರಸಿದ್ಧ ಡಾಕ್ಟರರೇ ಬಹಳವಾಗಿ ಪ್ರಶಂಸಿಸಿ ಬರೆದಿರುವರೆಂದ ಮೇಲೆ ಅದಕ್ಕೆ ಇತರರ ಸಮರ್ಥನೆಯೇ ಬೇಡ. ಮಣಿಪಾಲದ ಸೆನಿಟೋರಿಯಮನ್ನು ಅದೊಂದು ಮಾದರಿಯದಾಗಿ ಮಾಡಬೇಕೆಂದೇ ಶ್ರೀ ಮಿರಾಜ್ಕರರ ಹಾರೈಕೆ.

ಉದಾರ ಧನ ಸಹಾಯಕ್ಕಾಗಿ ವಿನಂತಿ

ಧನದ ಅಭಾವದಿಂದ ಯಾವ ಕೆಲಸವನ್ನೂ ಮಾಡಲಾಗದೆ ಟ್ರಸ್ಟಿಗಳು ಸುಮ್ಮನಿರುವಂತಾಗಿದೆ. ಪ್ರಕೃತ ಈ ಸೆನಿಟೋರಿಯಮಿಗೆ ಒಂದು ಎಕ್ಸ್‌ರೇಪ್ಲೇಂಟು ಮತ್ತು ಇನ್ನಿತರ ಅತ್ಯಗತ್ಯ ಸಾಮಾನುಗಳನ್ನು ತೆಗೆದುಕೊಳ್ಳುವ ಆಲೋಚನೆ ಮಾಡಲಾಗಿದೆ. ಇದಕ್ಕೆ ಕಡಿಮೆಯೆಂದರೆ ರೂಪಾಯಿ ೨೦,೦೦೦ ಬೇಕಾಗಿದೆ. ಭೀಕರ ರೋಗವಾಗಿ ವರ್ಷವರ್ಷ ಹಲವರ ಪ್ರಾಣವನ್ನು ಹೀರುವ ಕ್ಷಯರೋಗ ಚಿಕಿತ್ಸಾಲಯವು ಬಹಳ ಜನೋಪಕಾರಕ ಪುಣ್ಯ ಕೆಲಸ. ಅದಕ್ಕಾಗಿ ದೇವಸ್ಥಾನಗಳವರು ಮೊದಲಾಗಿ ಉದಾರ ಸಹಾಯವೀಯತಕ್ಕದ್ದು. ನಮ್ಮ ದಕ್ಷಿಣ ಕನ್ನಡದ ಬೇರೆ ಬೇರೆ ದೇವಸ್ಥಾನಗಳವರು ಮನಸ್ಸುಮಾಡಿದರೆ ಮಣಿಪಾಲದ ಸೆನಿಟೋರಿಯಮನ್ನು ಶ್ರೀ ಮಿರಾಜಕರರ ಹಾರೈಕೆಯಂತೆ ಮಾಡುವುದೇನೂ ಕಷ್ಟವಾಗದು. ಮಹಾಜನರು ವಿಶೇಷವಾಗಿ ಧನವಂತರು, ಜಿಲ್ಲಾ ಬೋರ್ಡು, ಮುನಿಸಿಪಾಲಿಟಿ, ಬೇಂಕು, ಕೋಪರೇಟಿವ್ ಸೊಸೈಟಿಗಳೇ ಮೊದಲಾದುವು ಈ ಜನೋಪಕಾರ ಕಾರ್ಯಕ್ಕೆ ಉದಾರ ಧನಸಹಾಯಮಾಡುವರೆಂದು ನಂಬುತ್ತೇವೆ.

ಕ್ಷಯರೋಗ ನಿವಾರಣ ಸಪ್ತಾಹ

ಮಣಿಪಾಲ ಸೆನಿಟೋರಿಯಮಿನ ಟ್ರಸ್ಟಿಗಳು, ಬೇಗನೆ ಇಡೀ ಜಿಲ್ಲೆಯಲ್ಲಿ ಕ್ಷಯರೋಗದ ಹಾವಳಿ, ಅದರ ನಿವಾರಣೋಪಾಯದ ಕುರಿತೆಲ್ಲಾ ಜನಜಾಗ್ರತಿಯುಂಟು ಮಾಡಲು ಮತ್ತು ಸೆನಿಟೋರಿಯಮಿಗೆ ಆದಷ್ಟು ಹಣ ಸಂಗ್ರಹಿಸಲು ಕ್ಷಯರೋಗ ನಿವಾರಣಾ ಸಪ್ತಾಹವೊಂದನ್ನಾಚರಿಸುವ ಆಲೋಚನೆ ಮಾಡಿರುವರು. ಇದರಲ್ಲಿ ಪ್ರತಿಯೊಬ್ಬ ಡಾಕ್ಟರರೂ ಸಹಕರಿಸುವುದು ಅವರ ಕರ್ತವ್ಯವಿರುತ್ತದೆ. ಜಿಲ್ಲೆಯ ಎಲ್ಲಾ ಡಾಕ್ಟರರು ಈ ವಿಷಯದಲ್ಲಿ ಆಸಕ್ತಿಯಿಂದ ಕೆಲಸಮಾಡಿ ಜನರಲ್ಲಿ ಪ್ರಚಾರಮಾಡಿದರೆ ಮಣಿಪಾಲ ಸೆನಿಟೋರಿಯಮಿನ ಉದ್ದೇಶವು ನೆರವೇರಲೇನೂ ಕಷ್ಟವಾಗಲಾರದು. ಮಹಾ ಜನರು ಈ ಪುಣ್ಯ ಕೆಲಸಕ್ಕೆ ಪ್ರೋತ್ಸಾಹವಿತ್ತು ಭಯಂಕರವಾದ ಕ್ಷಯರೋಗವು ನಮ್ಮ ಜಿಲ್ಲೆಯಲ್ಲಿ ಕಡಿಮೆಯಾಗುವಂತೆ ಮತ್ತು ಅದನ್ನುಂಟುಮಾಡುವ ವಿದ್ಯಮಾನಗಳು ನಿವಾರಿಸಲ್ಪಡುವಂತೆ, ರೋಗಪೀಡಿತರ ಚಿಕಿತ್ಸೆಗೆ ಮಣಿಪಾಲ ಸೆನಿಟೋರಿಯಮ್ ಅತ್ಯುತ್ತಮ ಆಶ್ರಯವಾಗುವಂತೆ ಸೆನಿಟೋರಿಯಮಿನ ಟ್ರಸ್ಟಿನವರು ಕೈಕೊಂಡಿರುವ ಕಾರ್ಯವು ಜಯಪ್ರದವಾಗುವಂತೆ ಮಾಡಲೆಂದು ಪ್ರಾರ್ಥಿಸುತ್ತೇವೆ.

ಸ್ವಾಮಿಯ ಸೂಳೆ

ಎಂಬ ಹೃದಯವಿದ್ರಾವಕ ಕಾದಂಬರಿಯೊಂದನ್ನು ನವಯುಗದಲ್ಲಿ ಕ್ರಮಶಃ ಪ್ರಕಟಿಸಲಾಗುವುದೆಂದು ಕಳೆದವಾರ ನಾವು ಪ್ರಕಟಿಸಿರುವೆವಷ್ಟೆ. ಇದು ಯಾರೊಬ್ಬ ಸ್ವಾಮಿಗಳ ವ್ಯಕ್ತಿ ಪರವಾಗಿ ಬರೆಯಲ್ಪಟ್ಟಿದ್ದರೆ, ನೀತಿವಂತ ಜೀವನ ನಡೆಸಲೆಳಸಿದ ವಿದ್ಯಾವಂತ ವೇಶ್ಯಾ ತರುಣಿಯೊಬ್ಬಳ ಜೀವನದ ಸಮಸ್ಯೆಯನ್ನು ಹೃದ್ರಾವಕವಾಗಿ ವಿವರಿಸುವಂತಹದಾಗಿದೆ. ಆದರೂ ನಮ್ಮ ಹಿತಚಿಂತಕರು ಕೆಲವರು ಅದನ್ನು ಪ್ರಕಟಿಸಬಾರದೆಂದು ಆಗ್ರಹ ಪೂರ್ವಕವಾಗಿ ನಮ್ಮೊಡನೆ ಕೇಳಿಕೊಂಡ ಮೇರೆಗೆ ನವಯುಗದಲ್ಲಿ ಅದನ್ನು ಪ್ರಕಟಿಸುವುದನ್ನು ನಿಲ್ಲಿಸಿರುತ್ತೇವೆ.

ಸಂ. ನ.

Supplement to this issue of Navayuga, dated 18-3-'37

THE MANIPAL SANATORIUM



An Appeal by the Trustees

Being deeply moved to compassion by the suffering and helplessness of the un fortunate victims of tuberculosis, who surely sink into an early grave in despair by the thousands year after year, and determined to pursue vigorously the selfless fight against this scourge of humanity, Dr T Madhava Pai opened unaided a Sanatorium for the treatment of consumptives at Manipal, which is at a distance of about three miles from Udipi It can be easily reached both by road and water This sanatorium is situated on a raised plain, about three hundred feet from the sea level and is considered by experts an ideal place for the purpose for which it is chosen and developed It overlooks the surrounding villages, waving with golden corn and smiling with a wealth of green vegetation, peculiar to our verdant district It also commands a good sea view The distant hills in the background, the glory of the rising and setting sun and the sailing ships on the green glimmering sea lend enchantment to the view and bring inexpressable joy to despairing sufferers

The climate of the place is bracing and fairly dry for the greater part of the year It is only fifteen acres in extent and can be easily extended by acquiring Government waste when the need for expansion may arise in future

This sanatorium is the first of its kind in the West Coast, where the incidence of death by tuberculosis is large, and satisfies a long felt want Dr T Madhava Pai has treated several patients, some of them even of an advanced type in this sanatorium, and it is gratifying to record that without exception all of them received great relief He has already spent nearly ten thousand rupees for the building and equipment exclusive of the cost of the plot which is fifteen acres in extent as stated above

Having bestowed his all on this Dr T Madhava Pai formed a trust composed of all the chief medical men of the district and a few others, and transferred his interest in this sanatorium to this influential trust with a princely donation of twenty five thousand rupees in a life policy The trust is called the Tonse Madhava Anantha Pai Trust for Medical Relief, Manipal

With the transfer of the sanatorium to the trust the responsibility of this great philanthropist partly ceases, and that of the trustees to carry on his work commences Though much has been done and much has been sacrificed by one man, there is much more to be done to make this a self contained and useful institution The building, though large needs extension to house all the patients that seek admission here and many of them are sure to be attracted to this place, as soon as its benefits and service become known to the people As Madanapalle and Madras are beyond the reach of men of average means this sanatorium will grow in popularity soon enough We need a X-Ray plant, other equipment, funds for its maintenance, bore hole latrines furniture etc. The work of expansion is hampered to a great extent by want of funds, and the trustees feel nervous to push on this great project without adequate fund Apart from what Dr T Madhava Pai, its founder, has given there is no other source of income for this institution

It was therefore resolved at a meeting of the trustees to approach the Government, District Boards Municipalities, Banks, Co operative Societies and other institutions with a request to come to the rescue of this useful institution In the fond hope that all those to whom the trustees apply will generously contribute towards the development and upkeep of this sanatorium they send out this appeal in the name of the victims of this fell disease It is the joint endeavour of the people that will give this institution the stability which it seeks and richly deserves The trustees appeal to the public and private bodies with hope and confidence to co operate with them in making this much needed sanatorium accessible to all those that knock for admission.

WHAT OTHERS SAY ABOUT US

"I had the advantage of living in the building for the proposed Sanatorium under construction Dr Madhava Pai is constructing it and proposes to make a gift of it to be used as a Sanatorium It is situated at a height overlooking the sea and open on all sides commanding fresh air and healthy outlook It is a commendable thing that the doctor proposes to do and I have no doubt many persons suffering from lung diseases will derive benefit from a stay here I wish success to this work of mercy"

(sd.) Rajendra Prasad,

10th May 1935.

"Manipal a high barren plateau, is under a transformation under the master mind of Dr T Madhava Pai It is going to be a beautiful model town, within a short distance of the ever growing town of Udipi Though now it comprises an area of 128 acres I am sure with the ever increasing interest and guidance of Dr Madhava Pai such a beautiful spot, with fresh pure air, beautiful panorama round about it, and a sea view of about 24 miles and such plentiful fresh good water supply, he will soon find the area too small to contain all the various activities and he will have to extend it many-fold

"Above all, what interested me most, was the already existing nucleus of a sanatorium for Lung diseases This is a very

noble idea, and he has appropriately thought of a relief for such unfortunates. The place is ideal, climate is excellent, already there are reports that some tuberculosis of the lung cases got very great benefit. In a short time, I would love to see that it has developed into a first class Tuberculosis Sanatorium where all modern treatment, medical, surgical, light therapy etc. equalling one of those in Switzerland.

"All such developments it is impossible to expect from Dr. Madhava Pai alone and I expect the whole medical profession will join hands, encourage and work to make this Sanatorium second to none. Dr. Madhava Pai is such a broad minded Philanthropist that it is the duty of the lay Public and the medical profession to come to his aid and succour to the suffering humanity of this District to start with and take on to the whole of South India.

"I also hope Dr. Pai will gladly accept all help from all quarters and make this as a great Sanatorium."

(Sd.) **V. R. Mirajkar,** LT. Col., L. M. S.

18th September, 1935.

"Doctor T. Madhava Pai, a Medical Graduate of the Madras University, has built a Sanatorium at Manipal Hills at Udipi. These hills are only 2½ miles away from Udipi and overlook the Arabian Sea. The height is about 300 feet above sea level. The climate is salubrious. Dr. Madhava Pai was kind enough to show me over the whole place. The building contains furniture and instruments costing nearly Rs. 3000. Up till now 17 early tuberculosis cases seem to have been admitted and discharged cured. The immediate needs seem to be a number of isolated sheds for patients, an efficient nursing staff and other attendents and arrangements for proper food supply to the poor patients. The Donor says that it is beyond his means to do all this. The installation of an X-ray plant in this building may add to the value of this place. This is a venture which deserves encouragement and support on the part of the Government and the Public. The Donor, Doctor Madhava Pai, will do well to apply to the King George V Memorial Fund Committee for the necessary financial help. He may also seek the sympathy and support of the Surgeon General in this matter."

(Sd.) **H. R. Sadashiva Rao,** L. M. & S.

District Medical Officor, South Kanara District

Mangalore, 10—12—1936.

Trustees

1. P. Sanjiva Pai, M. B. & C. M. *Retired District Medical Officer*, Udipi, *PRESIDENT.*
2. P. Gopal Nayak, *Honorary Magistrate*, Udipi, *Vice-President.*
3. T. Madhava Pai M. B. & B. S. *Registered Medical Practitioner*. Udipi
4. U. Sunder Ram Pai, M. B. & B. S., *Honorary Medical Officer*, Government Hospital, Udipi
5. K. L. Aithala, M. B. & B. S., *Registered Medical Practitioner*. Udipi.
6. P. Raghavendra Nayak, M. B. & B. S., *Registered Medical Practitioner*, Udipi.
7. N. Sripad Rao, L. M. P., *Retired Railway Asst Surgeon*, Udipi.
8. P. G. Achar, L. M. P., *Medical Practitioner & Municipal Councillor*. Udipi.
9. B. Rama Baliga. B. A. M. B. & C. M., *Retired District Medical Officer*. Mangalore.
10. C. P. Kamath, M. B. & B. S., *Registered Medical Practitioner*, Sri Ramakrishna Nursing Home, Mangalore.

MANIPAL POWER PRESS, Manipal, UDIPI

ವಿದೇಶ

ಸ್ಪೈನಿನ ಯುದ್ಧ
ಸರಕಾರದ ವಿಜಯ

ಮೇದ್ರಿದಿನ ಮೇಲೆ ಭರದಿಂದ ಏರಿಬರುತ್ತಿದ್ದ ಬಂಡಾಯಗಾರ ಸೇನೆಯನ್ನು ಸರಕಾರದ ಸೈನಿಕರು ಆಗ್ನೇಯದಲ್ಲಿ ತಡೆಗಟ್ಟಿ 3 ಮೈಲು ಹಿಂದಕ್ಕೋಡಿಸಿರುವರೆಂದು ತಿಳಿದುಬರುತ್ತದೆ. ಬಂಡಾಯಗಾರ ಸೈನಿಕರು ಹೆಚ್ಚಿನ ಯುದ್ಧ ಸಾಮಾಗ್ರಿಗಳನ್ನು ಬಿಟ್ಟು ಹೋಗಿರುವರು. ಮಳೆಯ ನಿಮಿತ್ತ ತಮ್ಮ ಸೇನೆಗೆ ಮುಂದೊತ್ತಲಾಗಿರುವುದಿಲ್ಲೆಂದು ಬಂಡಾಯಗಾರರ ಕಡೆಯ ಸುದ್ದಿ. ಆಗ್ನೇಯದ ಜರಾಮ ರಣರಂಗದಲ್ಲಿ ಸರಕಾರದ ಸೇನೆಯು ಹಿಂದಕ್ಕೊತ್ತಲ್ಪಟ್ಟಿರುವುದಂತೆ.

ಗೊಡಲಿಬಾರ ರಣರಂಗದಲ್ಲಿ ಸರಕಾರದ ವಿಮಾನಗಳು ಇಟೆಲಿಯಾನ ಸೈನಿಕರ ಮೇಲೆ ಬೋಂಬೆಸೆದು ಬಹಳ ಹಾವಳಿಮಾಡಿರುವದು. ನೂರಾರು ಮಂದಿ ಇಟೆಲಿಯಾನರು ಕೊಲ್ಲಲ್ಪಟ್ಟರು. ಸರಕಾರದ ಕಡೆಯ ಸೇನೆಯ ಮುಖ್ಯನಾಯಕರಾದ ಜನರಲ್ ಮಿಯಾಜರವರನ್ನು ಕದ್ದೊಯ್ದು ಕೊಲೆಮಾಡುವ ಒಳಸಂಚೊಂದು ಮೇದ್ರಿದಿನಲ್ಲಿ ಕಂಡುಹಿಡಿಯಲ್ಪಟ್ಟಿರುವುದು. ಈ ಸಂಬಂಧವಾಗಿ 30 ಮಂದಿ ಕೈದುಮಾಡಲ್ಪಟ್ಟಿರುವರು ಇವರಲ್ಲಿ ೫ ಮಂದಿ ಪೋಲೀಸರು. ಬಂಡಾಯಗಾರರು ಈಶಾನ್ಯ ದಿಕ್ಕಿನಿಂದ ಮೇದ್ರಿದಿನ ಮೇಲೆ ಧಾಳಿಯಿಡಲೆತ್ನಿಸಿ ನಡೆದ 4 ದಿವಸಗಳ ಭೀಷಣ ಹೋರಾಟದಲ್ಲಿ 3000 ಮಂದಿ ಹತರಾಗಿರುವರೆಂದು ತಿಳಿದುಬರುತ್ತದೆ, ಚಳಿಮಳೆ ಮತ್ತು ಗಾಳಿಯು ಹೋರಾಟಕ್ಕೆ ಬಹಳ ತೊಂದರೆಯನ್ನುಂಟುಮಾಡಿದೆ.

ಸ್ಪೈನಿಗೆ ನೆಲ, ಜಲ ಮತ್ತು ಆಕಾಶ ಮಾರ್ಗವಾಗಿ ಯುದ್ಧ ಸಾಮಾಗ್ರಿಗಳಾಗಲಿ ಸೈನಿಕರಾಗಲಿ ಕಳುಹಿಸಲ್ಪಡದಂತೆ ನೋಡಲು ತಕ್ಕ ಏರ್ಪಾಡುಗಳು ನೇಮಿಸಲ್ಪಟ್ಟಿವೆ. ಬಂಡಾಯಗಾರರ ಯುದ್ಧ ನಾವೆಗಳು ಸ್ಪೈನ್ ಸರಕಾರಕ್ಕೆ ಯುದ್ಧಸಾಮಾಗ್ರಿಯನ್ನೊಯ್ಯುವ ಹಡಗೊಂದನ್ನು ಹಿಡಿದಿರುವವು.

ರಷ್ಯದ ಎಲ್ಲೆಯ ಅಭೇದ್ಯತೆ

ರಷ್ಯದ ಇಂಗ್ಲೆಂಡಿನ ರಾಯಭಾರಿಯಾದ ಮಿ ಮೈಸ್ಕಿಯವರು ಇದೇ ತಾ ೧೨ರಲ್ಲಿ ಲಂಡನಿನಲ್ಲಿ ಭಾಷಣಮಾಡುವಾಗ, ವಿಶೇಷವಾಗಿರಷ್ಯಕ್ಕೆ ಯುದ್ಧದ ಅಪಾಯವು ಹೆಚ್ಚಿದೆ. ಜರ್ಮನಿ ಮತ್ತು ಜಪಾನಿನೊಳಗಿನ ಒಡಂಬಡಿಕೆಯು ರಷ್ಯದ ವಿರೋಧವಾದ ಸೇನಾ ಒಡಂಬಡಿಕೆಯಾಗಿದೆ. ಬಲವಾದ ಕೋಟೆ ಕೊತ್ತಳ, ದೊಡ್ಡ ಸೇನೆ ಮತ್ತು ಮಹಾತ್ತಾದ ವೈಮಾನಿಕ ಪಡೆಯಿಂದ ರಷ್ಯದ ಎರಡು ಎಲ್ಲೆಗಳು ದುರ್ಭೇದ್ಯವಾಗಿ ಮಾಡಲ್ಪಟ್ಟಿವೆ. ರಷ್ಯವು ಒಂದೇಯಾಗಿ ಯಾವುದಾದರೊಂದು ವೈರಿ ರಾಷ್ಟ್ರದ ಅಥವಾ ರಾಷ್ಟ್ರ ಸಂಗಡದ ಧಾಳಿಯನ್ನು ಪ್ರತಿಭಟಿಸುವ ಶಕ್ತಿಯುಳ್ಳದ್ದಾಗಿರುವುದೆಂದು ವಿದಿತಪಡಿಸಿರುವರು

ಸ್ವದೇಶ

ಕಾಂಗ್ರೆಸಿಗೆ ೩ ಕೋಟಿ ಓಟುಗಳು

ಕಳೆದ ಚುನಾವಣೆಯ ಕುರಿತು ವರದಿಯೊಂದನ್ನು ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿಯ ಗಣನಾ ಶಾಖೆಯವರು ತಯಾರಿಸಿರುವರು. ಈ ವರದಿ ಪ್ರಕಾರ ಕಾಂಗ್ರೆಸ್ ಪಕ್ಷೀಯರಿಗೆ ೩ ಕೋಟಿ ಜನರು ಓಟು ಕೊಟ್ಟಿರುವರೆಂದು ತಿಳಿದುಬರುತ್ತದೆ. ಈ ವರದಿಯಲ್ಲಿ ಇತರ ಪಕ್ಷಗಳ ಸಂಗತಿಗಳೂ ವಿವರಿಸಲ್ಪಟ್ಟಿವೆ.

ಬಂಗಾಳದ ಗಿರಣಿ ಮುಷ್ಕರ
17 ಗಿರಣಿಗಳಲ್ಲಿ ಕೆಲಸವಿಲ್ಲ

ಬಂಗಾಳದ ಹೌರ ಗಿರಣಿ ಮುಷ್ಕರವು ಇನ್ನೂ ಹಬ್ಬುತ್ತಿರುವುದು. ಇಷ್ಟರ ವರೆಗೆ ೧೭ ಗಿರಣಿಗಳಲ್ಲಿ ಕೆಲಸ ನಡಿಯುವುದಿಲ್ಲ. ಇವುಗಳಲ್ಲಿ ಹೆಚ್ಚಿನವು ಕಿತ್ತಾನಾರು ಗಿರಣಿಗಳು. ಒಟ್ಟಿಗೆ ೪೨೦೦೦ ಕೆಲಸಗಾರರು ಮುಷ್ಕರ ಹಿಡಿದಿರುದರು. ತಮ್ಮ ಸಂಬಳ ಹೆಚ್ಚಿಸಬೇಕು, ಪ್ರಸವಕ್ಕೆ ಮತ್ತು ಪ್ರಿವಿಲೆಜ್ ರಜೆ ಕೊಡಬೇಕು, ಧರ್ಮಾರ್ಥ ನಿವಾಸವೀಯಬೇಕೆಂಬುದೇ ಮುಷ್ಕರಗಾರರ ಹೇಳಿಕೆ. ಈ ಗಿರಣಿಗಳಲ್ಲಿ ಹೆಚ್ಚಿನವುಗಳ ಮಾಲಕರು ಯುರೋಪಿಯನರು. ಮುಷ್ಕರಗಾರರು ಶಾಂತ ರೀತಿಯಲ್ಲಿ ವರ್ತಿಸುತ್ತಿದ್ದು ಇಷ್ಟರ ವರೆಗೆ ಗಲಾಟೆಯೇನೂ ನಡೆದಿರುವುದಿಲ್ಲ. ಇದೇ ತಾ ೧೩ರಲ್ಲಿ ದಕ್ಷಿಣ ಕಲ್ಕತ್ತದಲ್ಲಿ ಇನ್ನೊಂದು ಗಿರಣಿಯ ೩೦೦೦ ಮಂದಿ ಕೆಲಸಗಾರರು ಮುಷ್ಕರ ಹಿಡಿದಿರುವರು: ಈ ಕುರಿತು ಶ್ರೀ. ಎನ್. ಟಿ. ರಂಗರವರು ಎಸೆಂಬ್ಲಿಯಲ್ಲಿ ಪ್ರಶ್ನೆ ಕೇಳಿರುವರು.

ಮುಷ್ಕರಗಾರರ ಮೇಲೆ ಬಲಾತ್ಕಾರ

ಕಲ್ಕತ್ತದ ಸುತ್ತುಮುತ್ತಲಿನ ಕಿತ್ತಾನಾರು ಗಿರಣಿಗಳ ಕೆಲಸಗಾರರು ಅರೆ ಹೊಟ್ಟೆ ಬಟ್ಟೆ ಇಂದ ಗೇದು ವಿಲಾಯ್ತಿ ಗಿರಣಿ ಮಾಲಕರ ಖಜಾನೆ ತುಂಬಿಸುತ್ತಿರುವರು. ಇಲ್ಲಿ ಮುಷ್ಕರ ನಡೆದುದೇನೂ ಆಶ್ಚರ್ಯವಲ್ಲ. ಸರಕಾರವು ಪೋಲೀಸರೂ, ಕೆಲಮಂದಿ ದರ್ವಾನರೂ ಈ ಮುಷ್ಕರಗಾರರ ಕುರಿತು ಅತ್ಯಂತ ಕ್ರೂರ ವರ್ತನೆ ವಹಿಸಿರುವರುವರು. ದರ್ವಾನರು ಹಲವರನ್ನು ಹೊಡೆದು ಹಾಕಿರುವರು. ಮುಷ್ಕರಗಾರರ ಸಂಕಷ್ಟಗಳ ಕುರಿತು ವಿಚಾರಿಸಲು ಅಖಿಲ ಭಾರತ ಟ್ರೇಡ್ ಯುನಿಯನ್ ಕಾಂಗ್ರೆಸಿನವರು ಕಳುಹಿಸಿರುವ ಶ್ರೀ ಶಿವನಾಥ ಬಾನರ್ಜಿ ಕೈದುಮಾಡಲ್ಪಟ್ಟಿರುವರು. ಈಗಣ ಕಾನೂನಿನಂತೆ ಶಾಂತ ರೀತಿಯಿಂದ ಮುಷ್ಕರ ಹಿಡಿದು ತಮ್ಮ ಪ್ರಚಾರ ಕಾರ್ಯ ನಡಿಸುವ ಹಕ್ಕು ಕೆಲಸಗಾರರಿಗಿರುವದು. ಅಂದ ಮೇಲೆ ಸರಕಾರವು ಈ ರೀತಿ ಸೆಕ್ಷನ್ ೧೪೪ ಜಾರಿ ಮಾಡಿ ಮುಷ್ಕರಗಾರರ ಮೇಲೆ ಬಲಾತ್ಕಾರ ನಡಿಸುವುದನ್ನು ಕಡೆಗಾಣಿಸಿರುವುದೇಕೆ? ಈ ಕುರಿತು ವಿಚಾರಣೆ ನಡಿಯತಕ್ಕದ್ದು, ಜನತೆಯು ಬಡ ಮಜೂರರ ಕುರಿತು ಸಹಾನುಭೂತಿ ತೋರಿಸಬೇಕೆಂದು ಪಂಡಿತ ಜವಾಹರಲಾಲರು ವಿನಂತಿ ಮಾಡಿಕೊಂಡಿರುವರು.

ಹೈದರಾಬಾದಿನ ಹೊಸ ಪ್ರಧಾನ ಮಂತ್ರಿಗಳು

ಹೈದರಾಬಾದಿನ ಎಗ್ಜಿಕ್ಯೂಟಿವ್ ಕೌನ್ಸಿಲಿನ ಪ್ರೆಸಿಡೆಂಟರೂ ಪ್ರಧಾನ ಮಂತ್ರಿಗಳೂ ಆದ ಸರ್ ಕಿಶನ್ ಪ್ರಸಾದರು ತನ್ನ ಹುದ್ದೆಗಳಿಗೆ ರಾಜಿನಾಮೆಯಿತ್ತು ನಿವೃತ್ತರಾಗಿರುವರು. ಇವರ ಸ್ಥಾನದಲ್ಲಿ ಹೈದರಾಬಾದಿನ ಅರ್ಥ ಸಚಿವರಾಗಿರುವ ಸರ್ ಅಕ್ಬರ್ ಹೈದರಿಯವರು ನೇಮಿಸಲ್ಪಟ್ಟಿರುತ್ತಾರೆ. ಈ ನೇಮಕವು ಎಲ್ಲರನ್ನೂ ತೃಪ್ತಿಗೊಳಿಸಿರುತ್ತದೆ. ಎಲ್ಲಾ ಜಾತಿ ಮತಗಳವರನ್ನೂ ಏಕ ರೀತಿಯಲ್ಲಿ ಕಂಡು ಹೈದರಾಬಾದ್ ಸಂಸ್ಥಾನದ ಸರ್ವತೋಮುಖವಾದ ಅಭಿವೃದ್ಧಿ ಸಾಧಿಸುವುದೇ ತನ್ನ ಧ್ಯೇಯವೆಂದು ವ್ಯಕ್ತಪಡಿಸಿರುತ್ತಾರೆ.

ದಿಲ್ಲಿಯಲ್ಲಿ ಪ್ರಚಂಡ ಮೆರವಣಿಗೆ

ಇದೇ ತಾ ೧೪ರಲ್ಲಿ ಪಂಡಿತ ಜವಾಹರಲಾಲ ನೆಹರುಗಳು ದಿಲ್ಲಿಗೆ ಬಂದಾಗ ಸ್ಥಳೀಯ ಕಾಂಗ್ರೆಸ್ ಅಧಿಕಾರಿಗಳು ಅವರಿಗೆ ಸಂಭ್ರಮದ ಸ್ವಾಗತವಿತ್ತರು. ಆ ಮೇಲೆ ರಾಷ್ಟ್ರೀಯ ಧ್ವಜಗಳಿಂದ ತುಂಬಿದ ರಸ್ತೆಗಳಲ್ಲಿ ಮೆರವಣಿಗೆ ನಡೆಯಿತು. ಮೆರವಣಿಗೆಯು ಅರ್ಧ ಮೈಲು ಉದ್ದವಿದ್ದಿತು. ಸಾವಿರಾರು ಜನರು ರಸ್ತೆ ಬದಿಗಳಲ್ಲಿ ಸಾಲುಗಟ್ಟಿ ನಿಂತು ಜಯಕಾರವೆಬ್ಬಿಸುತ್ತಿದ್ದರು. ಮೆರವಣಿಗೆ ಮುನಿಸಿಪಲ್ ಕಟ್ಟಡದಬಳಿಯಾದು ಹೋಗುವಾಗ ಆ ಕಟ್ಟಡದ ಮುಂಭಾಗದಲ್ಲಿರುವ ವಿಕ್ಟೋರಿಯ ಮಹಾರಾಣಿಯವರ ಪ್ರತಿಮೆಯ ಮೇಲೆ ರಾಷ್ಟ್ರೀಯ ಧ್ವಜ ಹಾರಾಡುತ್ತಿರುವುದನ್ನು ಜನರು ಕಂಡು ಅದರ ಸುತ್ತು ನೆರೆದು ಜಯಕಾರವೆಬ್ಬಿಸಿದರು, ಆಗ ಪೋಲೀಸ್ ಜವಾನನೊಬ್ಬನು ಬಂದು ಧ್ವಜವನ್ನು ತೆಗೆದನು. ಆಗ ಅಲ್ಲಿ ಹೆಚ್ಚಿನ ಜನರು ನೆರೆದು ಬಂದು ಪೋಲೀಸ್ ಜವಾನನ ವಿರುದ್ಧ ಪ್ರದರ್ಶನ ಮಾಡಿದರು. ಕೂಡಲೇ ಲೋರಿಯಲ್ಲಿ ಪೋಲೀಸರು ಬಂದು ಜನರನ್ನು ಚೆದರಿಸಿದರು.

Combined Booking Agency
AND
Joint Booking Office

ಕಂಬ್ಯಾಂಡ್ ಬುಕ್ಕಿಂಗ್ ಏಜನ್ಸಿ ಮತ್ತು ಜೋಯಿಂಟ್ ಬುಕ್ಕಿಂಗ್ ಆಫೀಸು

ಬಸ್ಸು ಸರ್ವಿಸುಗಳ ಮೇಲಾಟವನ್ನು ಹೋಗಲಾಡಿಸಿ,
ಪ್ರಯಾಣಿಕರ ಸೌಕರ್ಯಗಳನ್ನು ಹೆಚ್ಚಿಸಿ,
ಜನ ಸೇವೆಯನ್ನು ಮಾಡುವ ಉದ್ದೇಶದಿಂದ,
ನಾವೆಲ್ಲರೂ ಕೂಡಿ ಸರ್ವಿಸುಗಳ ವ್ಯವಸ್ಥೆಯನ್ನು ಮಾಡಿದ್ದೇವೆ.
ಪ್ರಯಾಣಿಕರಿಗೆ ಯಾವುದೊಂದು ಅನಾನುಕೂಲವು ಒದಗಿದ್ದಾದರೆ,
ಅಥವಾ
ಪ್ರಯಾಣ ಸೌಕರ್ಯದ ಉದ್ದೇಶದಿಂದ ಯಾರಿಗಾದರೂ ಯಾವುದಾದರೊಂದು ಸೂಚನೆ ಕೊಡಲಿದ್ದರೆ,
ಅವುಗಳನ್ನು ತಿಳಿಯಲು ನಾವು ಆತುರಪಡುತ್ತೇವೆ.

ಮೇಲಿನ ಸಂಸ್ಥೆಗಳ ಜೋಯಿಂಟ್ ಮೆನೇಜರ (Joint Manager) ರೊಡನೆ ಅಥವಾ ಕೆಳಗೆ ಹೆಸರು ಕಾಣಿಸಿದ ಯಾರೊಡನಾದರೂ ಪತ್ರವ್ಯವಹಾರವನ್ನು ನಡಿಸಬಹುದು—

The Canara Public Conveyance Co., Ltd.
The Hanuman Transport Co., Ltd.
The Shanker Vittal Motor Co. Ltd.
The Durga Parameshwari Motor Service.
The Popular Motor Service Ltd.
The P. V. Motor Service.
The Modern Motor Service of Mysore Ltd.
The Superb Motor Service.
The Mahalaxmi Motor Service.

ದಕ್ಷಿಣ ಕನ್ನಡ

ನಿಡ್ಲೆ ಗ್ರಾಮದ ಭೂಮ್ಯಾಲಿಕರ ಸಭೆ

ಮಂಗಳೂರು ಜಿಲ್ಲಾ ವರ್ಗದಾರ ಸಂಘದ ಶಾಖೆಯಾದ ನಂಬ್ರ ೨೦ನೇ ನಿಡ್ಲೆ ಗ್ರಾಮದ ಮೂಡಂಕಲ್ಲು ಸುಬ್ರಾಯ ಹೆಬ್ಬಾರರ ಮನೆಯಲ್ಲಿ ಅಪರಾಹ್ನ ಘಂಟೆ ೪ಕ್ಕೆ ಶ್ರೀ ಅನಂತ ರಾಮಯ್ಯನವರ ಅಧ್ಯಕ್ಷತೆಯಲ್ಲಿ ಕೂಡಿದ ರೈತರ ಯಾನೆ ಭೂಮ್ಯಾಲಿಕರ ಸಂಘದ ಸಭೆಯಲ್ಲಿ ಈ ಕೆಳಗಣ ನಿರ್ಣಯಗಳು ಮಂಜೂರಾದವು

(೧) ತಾ ೨-೯ ೩೭ರಲ್ಲಿ ಜರಗಿದ ಈ ಸಭೆಯಲ್ಲಿ ಮಹಾಲಿರೋಗದಿಂದ ಅಡಕೆ ಬೆಳೆಯು ಸಂಪೂರ್ಣ ನಾಶವಾದ ಕಾರಣ ತೀರ್ವೆ ಮಾಫಿಮಾಡಬೇಕೆಂದೂ, ಸಾಲ ರೂಪವಾಗಿ ಹಣ ಸಹಾಯ ಮಾಡಬೇಕೆಂದೂ ಸರಕಾರವನ್ನು ಕೇಳಿಕೊಂಡದ್ದಕ್ಕೆ ಏನೊಂದೂ ಹುಕುಮು ಬಾರದಿರುವದರಿಂದ ಈ ಸಭೆಯು ವಿಷಾದಿಸುತ್ತದೆ. (೨) ಬಾಗ್ಯಾತು ಕೃಷಿಕರೇ ಹೆಚ್ಚಾಗಿರುವ ಈ ಪ್ರಾಂತ್ಯದಲ್ಲಿ ಒಂದ್ಲಿ ಫಸಲು ಸಂಪೂರ್ಣ ನಷ್ಟಹೋಗಿ ಜೀವನ ನಿರ್ವಾಹವೇ ಕಷ್ಟವಾಗಿರುವುದರಿಂದ, ಕೊಳೆ ರೋಗ ತಗಲಿದ ಸ್ಥಳಗಳಿಗಲ್ಲದೆ ನಂಜ ಸ್ಥಳಗಳಿಗೂ ಪ್ರತಿ ಪಟ್ಟೆದಾರನಿಗೂ, ತೀರ್ವೆ ಮಾಫಿಮಾಡಬೇಕಾಗಿ ಮಾನ್ಯ ಜಿಲ್ಲಾ ಕಲೆಕ್ಟರ್ ದೊರೆಗಳನ್ನು ಈ ಸಭೆಯು ಅತಿ ದೈನ್ಯದಿಂದ ಕೇಳಿಕೊಳ್ಳುತ್ತದೆ (೩) ಗ್ರಾಮಾಧಿಕಾರಿಗಳು ತೀರ್ವೆ ಬಾಕಿಯ ಜಪ್ತಿಯಲ್ಲಿ ತೊಂದರೆಗಳನ್ನುಂಟುಮಾಡುವದರಿಂದ ಆ ಕುರಿತು ಎಚ್ಚರಿಸುವಂತೆಯೂ, ಜಪ್ತಾದ ಸೊತ್ತುಗಳನ್ನು ಏಲಂ ಮಾಡದೆ ಬಿಟ್ಟುಕೊಡುವಂತೆ ಹುಕುಂ ದಯಪಾಲಿಸಬೇಕಾಗಿಯೂ ಈ ಸಭೆಯು ಮಾನ್ಯ ಕಲೆಕ್ಟರರನ್ನು ಪ್ರಾರ್ಥಿಸುತ್ತದೆ (೪) ಕೊಳೆ ರೋಗದ ಪರಿಣಾಮವಾಗಿ ಗೇಣಿದಾರರು ಫೀಸು ಕಟ್ಟಲು ಅಶಕ್ತರಾಗಿರುವದರಿಂದ ತಾ ೩-೧ ೩೭ನೇ ಸಭೆಯ ೩ನೇ ನಿರ್ಣಯ ಪ್ರಕಾರ ಈ ವರ್ಷ ಗೇಣಿದಾರರ ಫೀಸು ಮಾಫಿ ಮಾಡಬೇಕಾಗಿ ಮಾನ್ಯ ಡಿ ಯಸ್ ಓ ದೊರೆಗಳಲ್ಲಿ ಈ ಸಭೆಯು ಕೇಳಿಕೊಳ್ಳುತ್ತದೆ (೫) ಕೈಗಳನ್ನು ಧರ್ಮಾರ್ಥ ಹಂಚುವ ಬಗ್ಗೆ ಶ್ರೀ ತಾಳಿರೆ ಗೋಪಾಲಕೃಷ್ಣಯ್ಯನವರನ್ನು ಈ ಸಭೆಯು ಏಜಂಟರಾಗಿ ನೇಮಿಸುತ್ತದಲ್ಲದೆ, ಸದ್ರಿಯವರನ್ನು ಏಜಂಟರಾಗಿ ಅಂಗೀಕರಿಸಿ ಕೈಗಳನ್ನು ಧರ್ಮಾರ್ಥ ಹಂಚುವ ಏರ್ಪಾಡುಮಾಡಬೇಕಾಗಿ ಡಿ ಬೋರ್ಡ್ ಪ್ರೆಸಿಡೆಂಟರನ್ನು ಕೇಳಿಕೊಳ್ಳುತ್ತದೆ

ದ. ಕ. ಜಿಲ್ಲಾ ಪಾರ್ಲಿಮೆಂಟರಿ ಬೋರ್ಡಿನ ಅಭಿನಂದನೆಗಳು

ಮದ್ರಾಸು ಅಸೆಂಬ್ಲಿ ಚುನಾವಣೆಗಳಲ್ಲಿ ಪಾರ್ಲಿಮೆಂಟರಿ ಬೋರ್ಡಿನ ಕಾರ್ಯದಲ್ಲಿ ಸರ್ವವಿಧಗಳಿಂದ ಸಹಕರಿಸಿ ಕಾಂಗ್ರೆಸ್ ಉಮೇದ್ವಾರರೆಲ್ಲರೂ ಪ್ರಚಂಡ ಬಹುಮತದಿಂದ ವಿಜಯಿಗಳಾಗುವಂತೆ ಸಹಾಯ ಮಾಡಿದ ಜಿಲ್ಲೆಯ ಎಲ್ಲಾ ಮತದಾರರಿಗೂ ಕೆಲಸಗಾರರಿಗೂ ಜಿಲ್ಲೆಯ ಮಹಾಜನರೆಲ್ಲರಿಗೂ ಪಾರ್ಲಿಮೆಂಟರಿ ಬೋರ್ಡಿನ ಪರವಾಗಿ ಅಭಿನಂದನೆಗಳನ್ನು ಈ ಮೂಲಕ ಅರ್ಪಿಸುತ್ತೇನೆ

ಈ ಬಾರಿಯ ಚುನಾವಣೆಗಳು ಎಂದಿನಂತೆ ಆಯಾ ಉಮೇದ್ವಾರರಿಗೆ ಮಾತ್ರ ಸಂಬಂಧಿಸಿದ ವಿಚಾರವೆಂದು ಯಾರೂ ಭಾವಿಸದೆ ಕಾಂಗ್ರೆಸು ಸಂಸ್ಥೆಯು ತಮ್ಮ ಸಂಸ್ಥೆಯೆಂದೇ ತಿಳಿದು, ಚುನಾವಣೆಯ ಕಾರ್ಯವು ತಮ್ಮ ಸ್ವಂತ ಕಾರ್ಯವೆಂದೇ ಭಾವಿಸಿ ಜಿಲ್ಲೆಯ ಮಹಾಜನರೆಲ್ಲರೂ ಉತ್ಸಾಹದಿಂದ ಕೆಲಸ ಮಾಡಿ ಕಾಂಗ್ರೆಸ್ ಪಕ್ಷವೆಂದು ಈ ಜಿಲ್ಲೆ ಗಿದ್ದ ಕೀರ್ತಿಯನ್ನು ಇನ್ನಷ್ಟು ಹೆಚ್ಚಿಸಿರುವುದು ಎಲ್ಲರಿಗೂ ಗೌರವದ ಮತ್ತು ಅಭಿಮಾನದ ಸಂಗತಿಯಾಗಿರುತ್ತದೆ

ವಿಜಯಕ್ಕಾಗಿ ಹಿಗ್ಗುವುದು ಕಾಂಗ್ರೆಸ್ಸಿನವರ ಪದ್ಧತಿಯಲ್ಲವೆಂಬುದರಿಂದಲೂ ಕಾಂಗ್ರೆಸ್ಸಿನ ಮುಂದೆ ಎಷ್ಟೋ ಮಹತ್ತರ ಕಾರ್ಯಕ್ರಮಗಳು ಇನ್ನೂ ಸಾಧಿಸಲಿಕ್ಕಿವೆಯೆಂಬುದರಿಂದಲೂ ಈ ವಿಚಾರವನ್ನು ಇನ್ನಷ್ಟು ಬೆಳಸದೆ ಆದ ಕಾರ್ಯಕ್ಕಾಗಿ ಕೃತಜ್ಞತೆಯನ್ನೂ ಧನ್ಯವಾದಗಳನ್ನೂ ಸೂಚಿಸಿ ಕಾಂಗ್ರೆಸಿನ ಮುಂದಿನ ಸರ್ವ ಕಾರ್ಯಕ್ರಮಗಳಲ್ಲಿಯೂ ಇದೇ ರೀತಿ ಸಹಕರಿಸಬೇಕಾಗಿ ಪ್ರಾರ್ಥಿಸುತ್ತೇನೆ

ಮಂಗಳೂರು } ಕೆ ವಿಟ್ಠಲ ಶೆಟ್ಟಿ
೮-೩-೩೭ } ಅಧ್ಯಕ್ಷ

ಜೋಡುಮರ

ಇಲ್ಲಿಯ ಮಾರುತಿ ವ್ಯಾಯಾಮ ಮಂಡಲದ ಪ್ರಥಮ ವಾರ್ಷಿಕೋತ್ಸವವು ತಾರೀಕು ೪ ೩-೩೭ನೇ ಗುರುವಾರ ರಾತ್ರೆ ಘಂಟೆ ೯ಕ್ಕೆ ಶ್ರೀಯುತ ಬಿ ವೆಂಕಟ್ರಾವ್ ಬಾಳಿಗ ಬಿ. ಎ, ಬಿ ಎಲ್ ರವರ ಅಧ್ಯಕ್ಷತೆಯಲ್ಲಿ ಜರಗಿತು ಪ್ರಾರ್ಥನೆ ವರದಿವಾಚನಾದಿ ಕಾರ್ಯಕ್ರಮವಾದ ನಂತರ ವ್ಯಾಯಾಮ ಮಂಡಲದ ಯುವಕರ ಭಾರ ಎತ್ತುವದು, ಜಟ್ಟಿಕಾಳಗ ಬೆಂಕಿಯ ಕಸರತು ಮೊದಲಾದ ಆಟಗಳ ಪ್ರದರ್ಶನವಾಗಿ ಗೆದ್ದವರಿಗೆ ಅಧ್ಯಕ್ಷರಿಂದ ಪಾರಿತೋಷಕಗಳು ಹಂಚಲ್ಪಟ್ಟವು ತರುವಾಯ ನೆರೆದ ಗೃಹಸ್ಥರಲ್ಲಿ ಡಾ ಕೆ ಗಿರಿಧರರಾವ, ರಾ ಎ ಜಿ ರಾವ್, ಕವಿ ಮತ್ತು ಡಾಕ್ಟರ್ ಯು ಪದ್ಮನಾಭ ಮಲ್ಯ ಇವರು ಸಂಘಟನೆ, ಶಾರೀರಿಕ ಜ್ಞಾನಾಭಿವೃದ್ಧಿ, ಯುವಕರ ಕರ್ತವ್ಯ ಮೊದಲಾದ ವಿಷಯಗಳ ಕುರಿತು ಹಿತ ಸೂಚನೆಗಳನ್ನು ಕೊಟ್ಟರು. ಅಧ್ಯಕ್ಷರ ಉಪಸಂಹಾರ ಭಾಷಣವಾದ ಬಳಿಕ ಸಂಘದ ಅಧ್ಯಕ್ಷರಾದ ರಾ ಬಸ್ತಿ ದ ಸಪ್ಪ ಕಿಣ್ಯರವರು ನೆರೆದವರಿಗೆ ವಂದನೆಗಳನ್ನು ಅರ್ಪಿಸಿ ಉಪಹಾರ ಸತ್ಕಾರವಾಗಿ ಸಮಾರಂಭವು ಕೊನೆಗೊಂಡಿತು

ದರದಲ್ಲಿಯೂ ಬರುತ್ತಿವೆ ಈಗ ೮೦ ಮಂದಿ ಸದಸ್ಯರಿದ್ದಾರೆ, ಆದರೆ ಇಷ್ಟರಿಂದಲೇ ಈ ಸಂಸ್ಥೆಯ ಉದ್ದೇಶವು ಕೈಗೂಡಿರುವದೆನ್ನಲಾಗುವದಿಲ್ಲ ಇನ್ನೂ ಎಷ್ಟೋ ಉತ್ತಮ ಪುಸ್ತಕ ವಸ್ತು, ಪತ್ರಿಕೆಗಳನ್ನು ಸಂಗ್ರಹಿಸಬೇಕಲ್ಲದೆ, ಸಭೆ, ಭಾಷಣ, ಕಾವ್ಯವಾಚನ, ಕಥಾ ಕಾಲಕ್ಷೇಪಗಳನ್ನು ಜರಗಿಸಿ ಜನಜಾಗೃತಿಗಾಗಿ ಎಷ್ಟೋ ವಿಧದಿಂದ ಪ್ರಯತ್ನಿಸಬೇಕಾಗಿದೆ ಹೀಗೆ ಸರ್ವರೂ ಈ ವಾಚನಾಲಯಕ್ಕೆ ಮುಕ್ತಹಸ್ತದಿಂದ ಸಹಾಯಮಾಡಿ ಇದರ ವಿಸ್ತರೋನ್ನತಿಗಳಲ್ಲಿ ಭಾಗಿಗಳಾಗಬೇಕೆಂಬ ಬಯಕೆಯಿಂದಲೇ ಸದಸ್ಯತನದಲ್ಲಿಯೂ ಬೇರೆ ಬೇರೆ ತರಗತಿಗಳನ್ನೇರ್ಪಡಿಸಲಾಗಿದೆ. ಈ ವಾಚನಾಲಯ ಬಾಲಿಕೆಯು ಇನ್ನಷ್ಟು ದೇಶಸೇವೆ, ಸಮಾಜಸೇವೆ, ಭಾಷಾಸೇವೆಗಳನ್ನು ಮಾಡುವ ಹಂಬಲದಿಂದ ತಮ್ಮ ಔದಾರ್ಯದ ಬೆಂಬಲವನ್ನು ನಿರೀಕ್ಷಿಸುತ್ತಾಳೆ ಈ ಸಂಸ್ಥೆಗೆ ಶಾಶ್ವತನಿಧಿಯೊಂದನ್ನೇರ್ಪಡಿಸುವ ಸಲುವಾಗಿ ತಾವೆಲ್ಲರೂ ಸದಸ್ಯರಾಗಿಯೋ ಸಹಾಯಕರಾಗಿಯೋ ಸೇರಿ ಪ್ರೋತ್ಸಾಹಿಸಬೇಕೆಂದು ವಾಚನಾಲಯದ ಸಂಚಾಲಕರು ಅಪೇಕ್ಷಿಸುತ್ತಾರೆ

ಊರ ಪರಊರ ವಿದ್ಯಾಭಿಮಾನಿಗಳಲ್ಲಿ ವಿನಂತಿ
ಗ್ರಾಮೋದ್ಧಾರಕ ಸಂಘ
ಪುಂಜಾಲ ಕಟ್ಟೆ

ವಿದ್ಯಾಪ್ರಚಾರಣೆಗೆ ಹೆಚ್ಚಿನ ಅನುಕೂಲಗಳಿಲ್ಲದಿ

ಮಣಿಪಾಲ ಸೆನಿಟೋರಿಯಮಿಗೆ ಸಹಾಯ.

ಉಡುಪಿಯ ಮಣಿಪಾಲದ ಸೆನಿಟೋರಿಯಮಿಗೆ ಉಡುಪಿ ಟೀಚರ್ ಕೋಪರೇಟಿವ್ ಕ್ರೆಡಿಟ್ ಸೊಸ್ಯಾಟಿ ಲಿಮಿಟೆಡ್ ಇವರು ರೂ 20 ಸಹಾಯ ಮಾಡಿರುವರು ದಿ ಕೆನರಾ ಇಂಡಸ್ಟ್ರೀಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟಿನವರು, ಡಾಕ್ಟರ್ ಪಿ ಸಂಜೀವ ಪೈಗಳು ತನ್ನಿಚ್ಛೆಯ ಇನ್ವೆಲಿಡ್ ಫರ್ನಿಚರ್ ತೆಗೆದುಕೊಳ್ಳುವರೆ ರೂ. 375ರ ಉದಾರ ಸಹಾಯವಿತ್ತಿರುವರು

ಪಿ. ಗೋಪಾಲ ನಾಯಕ್,
ಉಪಾಧ್ಯಕ್ಷ ಮತ್ತು ಕೋಶಾಧಿಕಾರಿ.

ದ ಕೆ. ಜಿಲ್ಲಾ ಗ್ರಾಮ ಉದ್ಯೋಗ ಸಂಘದ ವಾರ್ಷಿಕ ಮಹಾಸಭೆ

ದ ಕ ಜಿಲ್ಲಾ ಗ್ರಾಮ ಉದ್ಯೋಗ ಸಂಘದ ವಾರ್ಷಿಕ ಮಹಾಸಭೆಯು ಇದೇ ತಾ ೨೮ ೩ ೩೭ನೇ ಆದಿತ್ಯವಾರ ದಿನ ಸಾಯಂಕಾಲ ಘಂಟೆ ೫ಕ್ಕೆ ಮಂಗಳೂರು ಕಾಂಗ್ರೆಸ್ ಕಚೇರಿಯಲ್ಲಿ ಜರಗುವುದು ಎಲ್ಲಾ ಸದಸ್ಯರೂ ಬರಬೇಕಾಗಿ ವಿನಂತಿ

ವಿಷಯಗಳು —(೧) ವಾರ್ಷಿಕ ವರದಿ ಮತ್ತು ಜಮಾ ಖರ್ಚಿನ ಲೆಕ್ಕ, (೨) ಕಾರ್ಯಕಾರೀಮಂಡಲ ಮತ್ತು ಅಧಿಕಾರಿಗಳ ಚುನಾವಣೆ, (೩) ಮುಂದಿನ ಕಾರ್ಯಕ್ರಮ ಮತ್ತು ಆಯವ್ಯಯಗಳ ಅಂದಾಜುಪಟ್ಟಿ, (೪) ಅಧ್ಯಕ್ಷರ ಅನುಮತಿಯಿಂದ ಇತರ ವಿಷಯಗಳು

ಮಂಗಳೂರು } ಹಿ ರಾಮರಾಯ ಮಲ್ಯ,
೧೨ ೩ ೩೭ } ಕಾರ್ಯದರ್ಶಿ

ಶ್ರೀ ಭಾರತೀ ವಾಚನಾಲಯ
ಮೈರ್ಪಾಡಿ ಸುರತ್ಕಲ್ ದ. ಕ

ಮೇಲಿನ ವಾಚನಾಲಯವು ಸುರತ್ಕಲ್ಲಿನ ಶ್ರೀ ವೆಂಕಟರಮಣ ಮೂಲ ಪಾಠಶಾಲೆಯ ಮಂದಿರದಲ್ಲಿ ತೆರೆಯಲ್ಪಟ್ಟಿರುವದು ವಿರಾಮ ಕಾಲದ ಸದ್ವಿನಿಯೋಗವಾಗಿ ಜನಜಾಗೃತಿಯನ್ನುಂಟುಮಾಡುವದರೊಂದಿಗೆ ವಾಚನಾಭಿರುಚಿಯೂ, ಭಾಷಾಭಿಮಾನೋತ್ಸಾಹವೂ ಹೆಚ್ಚುವಂತೆ ಯತ್ನಿಸುವದು ಈ ಸಂಸ್ಥೆಯ ಮುಖ್ಯೋದ್ದೇಶವಾಗಿರುತ್ತದೆ ಈ ವಾಚನಾಲಯದಲ್ಲಿ ಅನೇಕ ಕಥೆ ಕಾದಂಬರಿ ಮತ್ತು ಕಾವ್ಯ ಪುಸ್ತಕಗಳೂ, ವರ್ತಮಾನ ಪತ್ರಿಕೆಗಳೂ ಇರುವವು ಪ್ರಕೃತ ೩೭೮ ಕಥಾ ಕಾದಂಬರಿಗಳೂ ೪೦ ಪದ್ಯಗ್ರಂಥಗಳೂ, ೪೦೦ ವಿವಿಧ ಪತ್ರಿಕಾ ಸಂಚಿಕೆಗಳೂ ೨೦ ಇಂಗ್ಲಿಷ್ ಪುಸ್ತಕ ಹಾಗೂ ಪತ್ರಿಕೆಗಳೂ ಇವೆ ಇವುಗಳಲ್ಲಿ ಮುಕ್ಕಾಲು ಪಾಲು ಹಿತಚಿಂತಕರಿಂದ ಧರ್ಮಾರ್ಥ ದೊರಕಿರುತ್ತವೆ ಕೆಲವು ಪತ್ರಿಕೆಗಳು ಉಚಿತವಾಗಿಯೂ ಕೆಲವು ರಿಯಾಯತಿಯ

ರುವ ಗ್ರಾಮಗಳ ಕೇಂದ್ರವಾಗಿರುವ ಪುಂಜಾಲಕಟ್ಟೆಯಲ್ಲಿ ಒಂದು ಗ್ರಾಮೋದ್ಧಾರಕ ಸಂಘವು ಸ್ಥಾಪಿಸಲ್ಪಟ್ಟಿರುವದು ಈ ಸಂಘವು ಗ್ರಾಮದಲ್ಲಿ ಹೆಚ್ಚಿನ ಸುಧಾರಣೆಯನ್ನುಂಟುಮಾಡಿ, ಮುಂದಿನ ಜನಾಂಗವಾಗಲಿರುವ ಮಕ್ಕಳ ವಿದ್ಯಾಬುದ್ಧಿಯನ್ನಭಿವೃದ್ಧಿಗೊಳಿಸುವ ಕೆಲಸವನ್ನು ಕೈಕೊಳ್ಳಲಿಕ್ಕಿರುವದು ಈ ಯೋಜನೆಯನ್ನು ಮುಂದುವರಿಸಲು ಧನಸಹಾಯವು ಅತ್ಯಗತ್ಯವಿರುವುದರಿಂದ ಊರ ಪರಊರ ವಿದ್ಯಾಭಿಮಾನಿಗಳು ಉದಾರ ಮನಸ್ಸಿನಿಂದ ಶಕ್ತ್ಯಾನುಸಾರ ಸಹಾಯಮಾಡಿ ಗ್ರಾಮಸ್ಥರ ಯೋಜನೆಯು ಮುಂದುವರಿಯುವಂತೆ ಪ್ರೋತ್ಸಾಹಿಸಬೇಕು ಸಂಘದ ಕಾರ್ಯಕಾರೀಮಂಡಳಿಯ ಮೆಂಬರರಾದ ಶ್ರೀಗಳಾದ ಡಾ| ಎಸ್ ಎಸ್ ರಾವ್, ಬಿ ನಾರಾಯಣ ನಾಯಕ್, ಎಮ್, ಸರ್ವೋತ್ತಮ ಶೇವಪ್ಪ ಕಾಮತ್, ಕುಕ್ಕಳ ಪಟೇಲ ಸುಬ್ರಾಯ ಅತಿಕಾರಿ, ಬಿ ದಾಸಪ್ಪ ಸರ್ವೋತ್ತಮ ಬಾಳಿಗ, ಕೆ ಶ್ರೀನಿವಾಸ ಬಾಳಿಗ, ಪಿ ವೆಂಕಟೇಶ ಬಾಳಿಗ, ಕೆ ಅನಂತ ಕಾಮತ್, ಹುಂಡಿ ಕೃಷ್ಣ ಕಾಮತ್, ಬಿ ವೆಂಕಟೇಶ ಬಾಳಿಗ-ಇವರನ್ನು ವಂತಿಗೆಯನ್ನೆತ್ತಲು ಅಧಿಕೃತರನ್ನಾಗಿ ನಿಯಮಿಸಿರುವುದರಿಂದ, ಊರ ಪರಊರ ಮಹನೀಯರು ಇವರ ಕೂಡೆ ತಮ್ಮ ಶಕ್ತ್ಯಾನುಸಾರ ವಂತಿಗೆಯನ್ನು ಕೊಟ್ಟು ಪಾವತಿ ರಶೀದಿಯನ್ನು ಏನೊಂದೂ ಸಂದೇಹವಿಲ್ಲದೆ ಪಡಕೊಳ್ಳಬಹುದಾಗಿ ಸೆಕ್ರಿಟರಿಯವರಾದ ಶ್ರೀ ಬಿ ನಾರಾಯಣ ನಾಯಕರು ತಿಳಿಸುತ್ತಾರೆ

ಕುಂದಾಪುರ ಸರ್ಕಲಿನ ಜಿಲ್ಲಾ ಬೋರ್ಡ್ ಚುನಾವಣೆ

ಜಿಲ್ಲಾ ಬೋರ್ಡಿನ ಕುಂದಾಪುರ ಸರ್ಕಲಿನ ಸ್ಥಾನವೊಂದು ಖಾಲಿಬಿದ್ದಿರುವುದರಿಂದ ಅದಕ್ಕೆ ನೊಮಿನೇಶನು ತಾ ೩ ೪ ೩೭ರಲ್ಲು ಸ್ವೀಕರಿಸಲ್ಪಡುವುದು ತಾ ೫ರಲ್ಲು ನೋಮಿನೇಶನುಗಳನ್ನು ಪರೀಕ್ಷಿಸಲಾಗುವುದು ಸಿಂಧುವಾದ ನೊಮಿನೇಶನುಗಳ ಪ್ರಕಟಣೆ ತಾ, ೬ರಲ್ಲು, ಚುನಾವಣೆ ತಾ ೨೦ರಲ್ಲು ಓಟುಗಳ ಗಣನೆ ತಾ ೨೧ರಲ್ಲೆಂದು ಜಿಲ್ಲಾ ಪಂಚಾಯತ ಆಫೀಸರರು ತಿಳಿಸುತ್ತಾರೆ ನೋಮಿನೇಶನುಗಳನ್ನು ಜಿಲ್ಲಾ ಪಂಚಾಯತ ಆಫೀಸರ್ ಮಂಗಳೂರು ಇವರಿಗೆ ಕಳುಹಿಸತಕ್ಕದ್ದು

ಮಂತ್ರಿಪದವಿಗಳ ಸ್ವೀಕಾರದ ಕುರಿತು ಜಿಲ್ಲೆಯ ಅಭಿಪ್ರಾಯ

ರಾಷ್ಟ್ರಪತಿ ಪಂಡಿತ ಜವಾಹರಲಾಲರ ಸರ್ಕ್ಯೂಲಾರಿನ ಮೇರೆಗೆ ಜಿಲ್ಲೆಯಲ್ಲಿಯ ಕಾಂಗ್ರೆಸ್ ಕಮಿಟಿಗಳು ಸಭೆ ಸೇರಿ ಮೇಲಿನ ಪ್ರಶ್ನೆಯ ಕುರಿತು ಈ ಕೆಳಗಿನಂತೆ ಅಭಿಪ್ರಾಯಗಳನ್ನು ವ್ಯಕ್ತಗೊಳಿಸಿರುತ್ತವೆ.

ತಾ, ೧-೩-೩೭ರಲ್ಲಿ ಬಂಟ್ವಾಳದಲ್ಲಿ ಸೇರಿದ ಮಂಗಳೂರು ತಾಲೂಕು ಕಾಂಗ್ರೆಸ್ ಕಮಿಟಿಯವರು ಮಂತ್ರಿಪದವಿಗಳನ್ನು ಖಂಡಿತ ಬಹುಮತವಿದ್ದಲ್ಲಿ ಸ್ವೀಕರಿಸಬೇಕಾಗಿ ಸರ್ವಸಮ್ಮತದಿಂದ ನಿರ್ಣಯಮಾಡಿರುವರು

ತಾ ३ ೩ ೩೭ರಲ್ಲಿ ಸಭೆಗಳನ್ನು ಜರಗಿಸಿದ ಮಂಗಳೂರು ಟೌನ್ ಕಾಂಗ್ರೆಸ್ ಕಮಿಟಿ, ಕುಂದಾಪುರ ತಾಲೂಕು ಕಾಂಗ್ರೆಸ್ ಕಮಿಟಿಯವರು ಅದೇ ರೀತಿ ಪದವಿಗಳನ್ನು ಸ್ವೀಕರಿಸಬೇಕಾಗಿ ಸರ್ವಸಮ್ಮತದಿಂದ ನಿರ್ಣಯಿಸಿರುವರು ಅದೇ ದಿನ ನಡೆದ ಉಡುಪಿ ತಾಲೂಕು ಕಾಂಗ್ರೆಸ್ ಕಮಿಟಿ ಸಭೆಯಲ್ಲಿ ಪದವಿ ಸ್ವೀಕಾರಮಾಡಬೇಕಾಗಿ ಬಹುಮತದಿಂದ ನಿರ್ಣಯವಾಗಿರುತ್ತದೆ

ತಾ ೪-೩-೩೭ರಲ್ಲಿ ಸೇರಿದ ಕಾರ್ಕಳ ತಾಲೂಕು ಕಾಂಗ್ರೆಸ್ ಕಮಿಟಿಯವರು ಪದವೀಸ್ವೀಕಾರ ಮಾಡಬೇಕಾಗಿ ಬಹುಮತದಿಂದ ನಿರ್ಣಯಿಸಿರುವರು

ತಾ ೫ ೩ ೩೭ರಲ್ಲಿ ಕೂಡಿದ ಮೂಲ್ಕಿ ಕಾಂಗ್ರೆಸ್ ಕಮಿಟಿಯವರು ಮಂತ್ರಿಪದವಿಗಳನ್ನು ಸ್ವೀಕರಿಸಬೇಕಾಗಿ ತೀರ್ಮಾನಮಾಡಿರುವರು

ತಾ ೬ ೩-೩೭ರಲ್ಲಿ ಕಾಸರಗೋಡು ತಾಲೂಕು ಕಮಿಟಿಯವರು ಅದೇ ಅಭಿಪ್ರಾಯವನ್ನು ವ್ಯಕ್ತಗೊಳಿಸಿರುವರು

ತಾ ೭-೩-೩೭ರಲ್ಲಿ ಸೇರಿದ ದ ಕ. ಜಿಲ್ಲಾ ಕಾಂಗ್ರೆಸ್ ಕಮಿಟಿಯ ಮಹಾಸಭೆಯಲ್ಲಿ ಖಂಡಿತ ಬಹುಮತವಿದ್ದಲ್ಲಿ ಪದವಿಗಳನ್ನು ಸ್ವೀಕರಿಸಬೇಕಾಗಿಯೂ ಇತರ ಪಕ್ಷಗಳ ಒಟ್ಟಿಗೆ ಸೇರಿ ಸಂಯುಕ್ತ ಮಂತ್ರಿಮಂಡಲಗಳಿಗೆ ಸೇರಬಾರದಾಗಿಯೂ ನಿರ್ಣಯಮಾಡಿರುತ್ತಾರೆ

ಕುಂದಾಪುರ ಕಮಿಟಿಯ ಅಧ್ಯಕ್ಷರ ರಾಜಿನಾಮೆ

ಕುಂದಾಪುರ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಾಗಿರುವ ಶ್ರೀ ವಿ ಮಹಾಬಲ ಹೊಳ್ಳರು ತಮ್ಮ ಅಧ್ಯಕ್ಷ ಪದವಿಗೆ ರಾಜಿಯಿತ್ತಿರುವರೆಂದು ಕೆಲವು ಪತ್ರಿಕೆಗಳು ಪ್ರಕಟಿಸಿರುತ್ತವೆ ಈ ಪ್ರಕಟಣೆಯು ಸರಿಯಲ್ಲ ಶ್ರೀ ಹೊಳ್ಳರು ಅಧ್ಯಕ್ಷ ಪದವಿಗೆ ರಾಜಿಕೊಟ್ಟದ್ದಿಲ್ಲವೆಂದು ಈ ಮೂಲಕ ತಿಳಿಸಬೇಕಾಗಿದೆ

ಚುನಾವಣೆಗಳ ಬಗ್ಗೆ ಅಭಿನಂದನೆಗಳು

ತಾ ೭ ೩ ೩೭ನೇ ಸಾಯಂಕಾಲ ಸೇರಿದ ದ ಕ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಮಹಾಸಭೆಯಲ್ಲಿ ಈ ಕೆಳಗಿನ ನಿರ್ಣಯವು ಮಂಜೂರಾಗಿರುತ್ತದೆ

"ಕಾಂಗ್ರೆಸ್ ಉಮೇದ್ವಾರರನ್ನು ಪ್ರಚಂಡ ಬಹುಮತದಿಂದ ವಿಜಯಹೊಂದುವಂತೆ ಮಾಡಿದ ಬಗ್ಗೆ ಜಿಲ್ಲೆಯ ಮಹಾಜನರನ್ನೂ ಕೆಲಸಗಾರರನ್ನೂ ಈ ಸಭೆಯು ಅಭಿನಂದಿಸುತ್ತದೆ ಅಲ್ಲದೆ ವಿಜಯಹೊಂದಿದ ಕಾಂಗ್ರೆಸ್ ಉಮೇದ್ವಾರರನ್ನೂ ಅಭಿನಂದಿಸುತ್ತದೆ

ಹಿ. ರಾ. ಮಲ್ಯ,
ಕಾರ್ಯದರ್ಶಿ ಜಿಲ್ಲಾ ಕಾಂಗ್ರೆಸ್ ಕಮಿಟಿ.

ದಕ್ಷಿಣ ಕನ್ನಡ ಜಿಲ್ಲಾ ಕಾಂಗ್ರೆಸ್ ಕಮಿಟಿ

ತಾ ೧-೨ ೧೯೩೬ರಿಂದ ತಾ ೧೭-೧-೩೭ರ ವರೆಗಿನ ಜಮಾ ಖರ್ಚು—

ಕಾಂಗ್ರೆಸ್ ಸಭಾಸದರ ವಂತಿಗೆ, ಕಾಂಗ್ರೆಸ್ ಪ್ರತಿನಿಧಿ ಫೀ ಮತ್ತು ಇತರ ಉತ್ಪತ್ತಿ ಕೂಡಿ ಜಮಾ ರೂ ೧೯೧೮—೧೪—೭ಪೈಯಿದ್ದು ಮುದ್ರಣ, ಸಿಬ್ಬಂದಿ ಖರ್ಚು, ಕಾಂಗ್ರೆಸ್ ಕಮಿಟಿಗಳಿಗೆ ಸಂದಾಯ ಮತ್ತು ಇತರ ಎಲ್ಲಾ ಖರ್ಚು ಕೂಡಿ ವ್ಯಯ ೧೯೧೮—೧೪—೭ಪೈ ಕಳೆದ ಜಿಲ್ಲಾ ಕಾಂಗ್ರೆಸ್ ಕಮಿಟಿಯಲ್ಲಿ ಮಂಜೂರಾಗಿದೆ.

— ಡಿಲ್ಲಿ ಎಸೆಂಬ್ಲಿಯ ಅಧಿವೇಶನ —

ಸರಕಾರದ ಆಡಳಿತದ ಖಂಡನೆ - - - - - - - - ದಬ್ಬಾಳಿಕೆಯ ತೀವ್ರ ನಿಷೇಧ

ಪರದೇಶದಲ್ಲಿರುವ ಹಿಂದೀಯರ ಸಂಕಷ್ಟಗಳು.

ಬ್ರಿಟಿಷ್ ಸಾಮ್ರಾಜ್ಯದ ಬೇರೆ ದೇಶಗಳಲ್ಲಿರುವ ಹಿಂದೀಯರ ಸಂಕಷ್ಟಗಳ ಕುರಿತು ಚರ್ಚಿಸುವರೆ ಕಾಂಗ್ರೆಸ್ ಪಕ್ಷೀಯರಾದ ಶ್ರೀ ಮೋಹನಲಾಲ್ ಸಕ್ಸೇನರವರು ಇದೇ ತಾ. ೮ರಲ್ಲು ತಂದ ಕಡಿತದ ಸೂಚನೆಯು ಓಟು ತೆಗೆಯದೇನೇ ಮಂಜೂರಾಗಿರುವುದು. ಆಫ್ರಿಕದ ಹೆಚ್ಚಿನ ವಸಾಹತುಗಳಲ್ಲಿ ಹಿಂದೀಯರು ಯುರೋಪಿಯನರಿಗಿಂತಲೂ ಮೊದಲು ಹೋಗಿ ವಾಸಿಸಿ ಅವುಗಳ ಸಾಂಪತ್ತಿಕ, ಮತ್ತು ನೈತಿಕ ಅಭಿವೃದ್ಧಿಗಾಗಿ ಹೆಚ್ಚಿನ ಕೆಲಸಮಾಡಿದವರು. ಆದರೆ ಯುರೋಪಿಯನರಿಗ ಹಿಂದೀಯರನ್ನು ಹೊರದಬ್ಬಲೆತ್ನಿಸುತ್ತಿರುವರು. ಅವರು ಬಿಳಿ ಜನರಿಗೆ ಬೇರೆಯಾದ ಪ್ರತ್ಯೇಕ ಪ್ರದೇಶಗಳಲ್ಲಿ ವಾಸಿಸಬೇಕಾಗಿದೆ. ನ್ಯೂಜಿಲೇಂಡಿಗೆ ತಾತ್ಕಾಲಿಕವಾಗಿ ಹಿಂದೀಯನೊಬ್ಬನು ಹೋಗಬೇಕಾದರೂ 10 ಪವನು ಡಿಪೋಜಿಟ್ ಇಡಬೇಕು. ಇಲ್ಲಿಗೆ ಹೊಸತಾಗಿ ಹಿಂದೀಯರು ಹೋಗಿ ಕಾಯಮಾಗಿ ವಾಸಿಸಲಿಕ್ಕೇನೇ ಇಲ್ಲ. ದಕ್ಷಿಣ ಆಫ್ರಿಕದಲ್ಲಿ ಹಿಂದೀಯರ ಅವಸ್ಥೆಯು ಬಹಳ ಕೆಟ್ಟದಾಗಿರುವುದು. ಸುಪ್ರಸಿದ್ಧ ಹಿಂದೀ ಜಟ್ಟಿಯಾದ ಮತ್ತು ಬ್ರಿಟಿಷ್ ಸೇನೆಗೇನೇ ಸೇರಿರುವ ಶ್ರೀ ಬಲ್ಲಿ ಮೋರಿಯರವರನ್ನು ಇತ್ತಲಾಗಿ ದಕ್ಷಿಣ ಆಫ್ರಿಕಕ್ಕೆ ಪ್ರವೇಶಿಸಲು ಸಹ ಬಿಡಲಿಲ್ಲ. ಜಂಜಿಬಾರಿನ ಹಿಂದೀಯರ ಅವಸ್ಥೆಯೂ ಅತಿ ಹೀನವಾಗಿರುವುದೆಂದು ಆಗಾಖಾನರೇ ಹೇಳಿರುವರು. ಸರಕಾರದವರು ಈ ವಿಷಯದಲ್ಲಿ ಇನ್ನೂ ಇನ್ನೂ ಕಾದು ಕಣ್ಣು ಕಣ್ಣು ನೋಡುತ್ತಾ ಕುಳಿತಿರದೆ ಸಕಾಲದಲ್ಲಿ ಏನಾದರೂ ಮಾಡಲೆತ್ನಿಸಬೇಕೆಂದು ಶ್ರೀ ಸಕ್ಸೇನರು ಎಚ್ಚರಿಸಿದರು ನಾವು ಬ್ರಿಟಿಷ್ ಸಾಮ್ರಾಜ್ಯದೊಳಗಿರಬೇಕಾದರೆ ಹಿಂದೀಯರಿಗೆ ಸಾಮ್ರಾಜ್ಯದ ಎಲ್ಲಾ ಭಾಗಗಳಲ್ಲಿ ಸರಿಸಮಾನ ಹಕ್ಕು ಬಾಧ್ಯತೆಗಳು ದೊರೆಯಬೇಕು. ಇಂತಹ ದೈನ್ಯಾವಸ್ಥೆಯು ಹೆಚ್ಚುಕಾಲ ಇರಬಾರದು ಹಿಂದೀಯರನ್ನು ತಮ್ಮ ಸಮಾನವಾಗಿ ಕಾಣದವರಿಗೂ, ಅದನ್ನು ಕಡೆಗಣಿಸುವವರಿಗೂ ಹಿಂದು ದೇಶದಲ್ಲಿ ಸ್ಥಳವಿರಬಾರದೆಂದು ಎಂ. ಹುಸೇನ್‌ಬಾಯಿ ಲಾಲ್ಜಿಯವರಂದರು. ಶ್ರೀ ಜೇಮ್ಸರು ಕೂಡ ಬ್ರಿಟಿಷ್ ವಸಾಹತುಗಳಲ್ಲಿ ಹಿಂದೀಯರನ್ನು ಕಾಣುವ ರೀತಿಯು ನಾಚಿಕೆಕರ ಅದನ್ನು ಸರಿಗೊಳಿಸುವುದು ಹಿಂದೂದೇಶದ ಮಾತ್ರವಲ್ಲ ಬ್ರಿಟಿಷ್ ಸಾಮ್ರಾಜ್ಯದ ಸ್ವಾಭಿಮಾನದ ವಿಷಯವೆಂದರು. ಸರ್. ಗಿರಿಜಾಶಂಕರವಾಜಪೇಯರವರು ಸರಕಾರದ ಪರವಾಗಿ ಮಾತಾಡುತ್ತಾ, ಬ್ರಿಟಿಷ್ ಸಾಮ್ರಾಜ್ಯದ ಬೇರೆಬೇರೆ ದೇಶಗಳಲ್ಲಿರುವ ಹಿಂದಿಯರ ಹಕ್ಕುಬಾಧ್ಯತೆಗಳನ್ನು ರಕ್ಷಿಸಿ, ಅವರು ಒಳ್ಳೇ ಸ್ಥಿತಿಯಲ್ಲಿರುವಂತೆ ಇಂಡಿಯಾ ಸರಕಾರವು ತನ್ನಿಂದ ಕೂಡಿದ ಮಟ್ಟಿಗೆ ಪ್ರಯತ್ನಮಾಡಿದೆ; ಇನ್ನೂ ಮಾಡುತ್ತಿದೆಯೆಂದರು. ಶ್ರೀ ಲಕ್ಷ್ಮೀಕಾಂತ ಮೈತ್ರರವರು ಶ್ರೀ ವಾಜಪೇಯರನ್ನು ಪ್ರತಿಭಟಿಸಿ, ‘ಇಂಡಿಯಾ ಸರಕಾರವು ಮಾಡಬೇಕಾದುದನ್ನು ಮಾಡದೆ ದುರ್ಬಲಧೋರಣೆ ವಹಿಸಿದೆ. ಕೆನ್ಯದಲ್ಲಿ ಹಿಂದೀಯರು ವಾಸಿಸಿಕೊಂಡು ಅಭಿವೃದ್ಧಿಗೊಳಿಸಿದ ಎತ್ತರ ಪ್ರದೇಶಗಳಿಂದ ಹೊರದಬ್ಬಲ್ಪಟ್ಟಿದ್ದಾರೆ. ನಾವು ಕೂಡಾ ಇದಕ್ಕೆ ತಕ್ಕ ಪ್ರತೀಕಾರಮಾಡಿ ವಿದೇಶಿಯರ ಮೇಲೆ ನಿರ್ಬಂಧಹಾಕಬಹುದು. ಆದರೆ ಬ್ರಿಟಿಷ್ ಸರಕಾರವು ಅದಕ್ಕೊಪ್ಪದು. ಏನಾದರೂ ಉಗ್ರಕಾರ್ಯ ಕೈಕೊಳ್ಳದೆ ಪ್ರಯೋಜನವಿಲ್ಲ. ಹಿಂದೀಯರನ್ನು ಸಮಾನ ರೀತಿಯಲ್ಲಿ ಕಾಣದ ದೇಶಗಳೊಡನೆ ಹಿಂದುದೇಶವು ವ್ಯಾಪಾರ ವಹಿವಾಟಿನ ಸಂಬಂಧವನ್ನು ಕಡಿದುಹಾಕಬೇಕೆಂದರು. ‘ಬ್ರಿಟಿಷ್ ಸಾಮ್ರಾಜ್ಯದಲ್ಲಿ ಬ್ರಿಟಿಷ್ ಪ್ರಜೆಗಳೆಲ್ಲರಿಗೂ ಸರಿಸಮಾನ ನಾಗರಿಕ ಹಕ್ಕು ಬಾಧ್ಯತೆಗಳಿರುವುದೆಂಬುದು ಬರಿಯ ಬಾಯಿಮಾತು. ಹಿಂದೀಯರನ್ನು ಬ್ರಿಟಿಷ್ ಸಾಮ್ರಾಜ್ಯದ ಬೇರೆಬೇರೆ ಭಾಗಗಳಲ್ಲಿ ಕಾಣುವ ರೀತಿಯಲ್ಲಿ ವೈಯಕ್ತಿಕವಾಗಿ ಒಬ್ಬ ಆಂಗ್ಲೇಯನನ್ನು ಎಲ್ಲಿಯಾದರೂ ಕಂಡಲ್ಲಿ ಬ್ರಿಟಿಷ್ ಸರಕಾರವು ಅದೆಷ್ಟು ರೇಗಿಬೀಳುತ್ತಿತ್ತು! ಇದರಲ್ಲಿ ತಮಗೇನೂ ಜವಾಬ್ದಾರಿಯಿಲ್ಲ; ತಮ್ಮ ಕೈಯಿಂದೇನೂ ಸಾಗುವಂತಿಲ್ಲೆಂದು ಇಂಡಿಯಾ ಸರಕಾರದವರು ಹೇಳುವುದೂ, ತಾವು ಬೆಕ್ಕಿನಂತಹ ಅಂಜುಪುರುಕರು, ತಮ್ಮ ಯಜಮಾನರ ಅಡಿಯಾಳುಗಳು, ತಮ್ಮಿಂದ ನಿಮಗೇನೂ ಸಹಾಯಮಾಡಲಾಗುವುದಿಲ್ಲೆಂದು ಹೇಳ್ವುದೂ ಒಂದೇ. ವಾಸ್ತವ ವಿಷಯವೆಂದರೆ ಇಂಡಿಯಾ ಸರಕಾರಕ್ಕೆ ಈ ವಿಷಯದಲ್ಲಿ ಏನು ಮಾಡುವುದಕ್ಕೂ ಮನಸ್ಸಿಲ್ಲ, ಧೈರ್ಯವಿಲ್ಲ’ಂದು ಶ್ರೀ ಭುಲಾಭಾಯಿ ದೇಸಾಯಿಯವರು ಇಂಡಿಯಾ ಸರಕಾರವನ್ನು ಕಠಿಣವಾಗಿ ಟೀಕಿಸಿದರು. ಸರ್. ಜಗದೀಶ ಪ್ರಸಾದರು ಸರಕಾರದ ಪರವಾಗಿ ಮಾತಾಡಿ ಇಂಡಿಯಾ ಸರಕಾರಕ್ಕೆ ಪ್ರತೀಕಾರಮಾಡಲು ಸಾಧ್ಯವಿಲ್ಲೆಂಬುದನ್ನು ಸೂಚಿಸಿ, ಅದು ಸಮಾಧಾನದ ಸಂಧಾನದಿಂದ ಕೆಲಸಮಾಡಬೇಕೆಂದರು.

ವಾಯುವ್ಯಗಡಿನಾಡಿನ ಧೋರಣೆಯ ನಿಷೇಧ

ಶ್ರೀ. ಆಸಫಾಲಿಯವರು ಸರಕಾರದ ವಾಯುವ್ಯ ಗಡಿನಾಡಿನ ಧೋರಣೆಯನ್ನು ನಿಷೇಧಿಸಲು ಕಡಿತದ ಸೂಚನೆ ತಂದು, “ವಾಯುವ್ಯ ಗಡಿನಾಡಿನ ಪರಿಸ್ಥಿತಿಯು ದಿನದಿನಕ್ಕೆ ಬದಲಾಗುತ್ತಿರುವುದು. ಅಲ್ಲಿಯ ಸೇನಾವೆಚ್ಚವು ಅಧಿಕಾಧಿಕವಾಗಹತ್ತಿರುವುದು. ಗಡಿನಾಡಿನ ಸ್ವತಂತ್ರ ಪಂಗಡಿಗರನ್ನು ಬಗ್ಗುಬಡಿದು ಅವರ ಪ್ರದೇಶವನ್ನು ಸ್ವಾಧೀನ ಪಡಿಸಿಕೊಂಡು ಅಲ್ಲಿ ಹೊಸ ರಸ್ತೆಗಳನ್ನು ಮಾಡಿ ತಮ್ಮ ಅಧಿಕಾರವನ್ನು ಬಲಗೊಳಿಸುವ ಪ್ರಯತ್ನವು ಅನಾಹುತಕರವಿರುವುದು. ಇದರಿಂದಲೇ ಗಡಿನಾಡಿನಲ್ಲಿ ಕಾಡ್ಗಿಚ್ಚೆದ್ದಂತಾಗಿರುವುದು. ಇಷ್ಟರವರೆಗೆ ಅಲ್ಲ 26 ಧಾಳಿ ನಡಿಸಲಾಯಿತು. ಇನ್ನೂ ಗಲಾಟೆಯು ನಿಂತಿಲ್ಲ. ಗಡಿನಾಡಿನ ಪಂಗಡಿಗರು ತಮ್ಮ ಸ್ವಾತಂತ್ರ್ಯವನ್ನು ಎಂದಿಗೂ ಬಿಟ್ಟುಕೊಡಲಾರರು. ಇದರಿಂದ ಗಲಾಟೆಯು ಮತ್ತಷ್ಟು ಹೆಚ್ಚಾಗುವುದೆ”ಂದರು.

ಡಾಕ್ಟರ್ ಖಾನ್ ಸಾಹೇಬರು ಮಿ. ಆಸಫಾಲಿಗಳ ಕಡಿತದ ಸೂಚನೆಯನ್ನು ಸಮರ್ಥಿಸಿ, ವಾಯುವ್ಯ ಗಡಿನಾಡಿನ ಪಂಗಡಿಗರ ಮೇಲೆ ನಡಿಸುವ ಅತ್ಯಾಚಾರಗಳು ಅಮಾನುಷವಿರುವವು. ಜನರನ್ನು ಕಟ್ಟಿಹಾಕಿ ಬಾಗುವಂತೆ ಮಾಡಿ ಅವರ ಬೆನ್ನಮೇಲೆ ದೊಡ್ಡ ಕಲ್ಲುಗಳನ್ನಿಡಲಾಗಿದೆ. ಕೆಲವು ತಂತಿ ಕಂಬಗಳನ್ನು ಕಿತ್ತು ಹಾಕಿದುದಕ್ಕಾಗಿ ಇಡೀ ಹಳ್ಳಿಯ ಮೇಲೆ ಜುಲ್ಮಾನೆ ವಿಧಿಸಲಾಗಿದೆ. ಮನೆಗಳನ್ನು ಸುಟ್ಟುಹಾಕಲಾಗಿದೆ. ನಿರ್ದೋಷಿಗಳಾದ ೧೫೦ ಮಂದಿಯನ್ನು ಡೇರ ಇಸ್ಮಯೀಲ್‌ಖಾನ್ ಜೈಲಲ್ಲಿ ಹಾಕಲಾಗಿದೆ. ಗಡಿನಾಡಿನ ಪಂಗಡಿಗರು ಶಾಂತಿಯಿಂದ ಸರಕಾರದೊಡನೆ ಮೈತ್ರಿಯಿಂದಿರಲೆಳಸುತ್ತಾರೆ ಆದರೆ ಸರಕಾರವು ಅವರನ್ನು ಹಾಗಿರಬಿಡುವುದಿಲ್ಲ. ಸರಕಾರಕ್ಕೆ ಗಡಿನಾಡನ್ನು ಸರಿಯಾಗಿರಿಸಲು ಅಸಾಧ್ಯವಾದರೆ ಅವರದನ್ನು ಖುದಾಯಿ ಖಿದ್ಮತಗಾರರಿಗೊಪ್ಪಿಸಿಕೊಡಲಿ. ಅವರು ಯಾವ ರೀತಿಯಲ್ಲಿ ಗಡಿನಾಡಿನ ಪಂಗಡಿಗರನ್ನು ಸಮಾಧಾನ ಪಡಿಸುವರೆಂಬುದನ್ನು ನೋಡಲಿ. ಸರಕಾರದ ಧೋರಣೆಯು ಗಡಿನಾಡಿನ ಪಂಗಡಿಗರೆಲ್ಲಾ ಒಟ್ಟಾಗುವಂತೆ ಮಾಡಿರುವುದು. ಅವರು ತಮ್ಮದೇ ಆದ ಸ್ವತಂತ್ರ ರಾಜ್ಯವನ್ನು ಸ್ಥಾಪಿಸುವುದರಲ್ಲಿರುವರು. ಪ್ರಾಣಕ್ಕಿಂತಲೂ ಸ್ವಾತಂತ್ರ್ಯವ

ತಾಳದೆ ಇರತಕ್ಕ ಮೂತ್ರವ್ಯಾಧಿಗಳಿಗೆ
ಆಶ್ಚರ್ಯಕರವಾದ ಔಷಧ.

ಡಾ. ಜಸಾನಿಯವರ
ಜಗತ್ಪ್ರಸಿದ್ಧ
“ಗೊನೊಕಿಲರ್”
(ರಿಜಿಸ್ಟರ್ಡ್)

GONO KILLER ORIGINAL

ಪ್ರಮೇಹ ವ್ಯಾಧಿಗೆ ಸಿದ್ಧೌಷಧ

ಇಂದಿನ ಅಪ್ರತಿಮ ಔಷಧ. ಆಂಗ್ಲೇಯ ಮತ್ತು ಆಯುರ್ವೇದ ಔಷಧಗಳೊಂದೂ ಫಲಕಾರಿಯಾಗದೇ ಇನ್‌ಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ, ಒಂದಾವರ್ತಿಯಾದರೂ ಈ ನಮ್ಮ ಗೋನೋಕಿಲರ್ ಎಂಬ ಔಷಧವನ್ನು ಉಪಯೋಗಿಸಿನೋಡಿರಿ. ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ, ಗೋನೋಕಿಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾತುವಿಕೆ, ಸರ್ವಪ್ರಕಾರದ ಪ್ರಮೇಹ (ಎಷ್ಟೇ ಹಳತು ಯಾ ಯಾವದೇ ಸ್ಥಿತಿಯಲ್ಲಿರಲಿ), ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತುಸ್ರಾವ, ಬಿಳುಪು ಪರಿಯುವದು ಇವೇ ಮೊದಲಾದ ಯಾವತ್ತು ಗೊನೋಕೋಕಸ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ.

ಬೆಲೆ 50 ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ. 3—0—0 (ಮೂರು) ವಿ. ಪಿ. ಛಾರ್ಜ ಬೇರೆ.

ನಕಲಿ ಮದ್ದುಗಳಿಗೆ ಮರುಳಾಗಿ ಮೋಸ ಹೋಗಬೇಡಿರಿ. ಕೊಂಡುಕೊಳ್ಳುವದಕ್ಕೆ ಮೊದಲು ಕೋಳಿಯ ಗುರುತನ್ನು ಗಮನಿಸಿರಿ.

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ, ಗಿರಿಗಾಂವ ಬ್ಯಾಕ್ ರೋಡ್, ಮುಂಬಯಿ 4.

Sole Manufacturer: Dr. D. N. JASANI, GIRGAUM BACK ROAD, BOMBAY

ಇದೇ ತಾ 17ರಲ್ಲು ಮುಸಲೋನಿಯವರು ಆಫ್ರಿಕದ ಲೇಬಿಯ ಎಂಬ ಇಟಲಿಯ ಆಧೀನ ರಾಜ್ಯವನ್ನು ಸಂದರ್ಶಿಸಿ, ಅಲ್ಲಿಯ ಮುಸಲ್ಮಾನ ಜನತೆಯಿಂದ ಸಂಭ್ರಮದ ಸ್ವಾಗತ ಪಡೆದು ತ್ರಿಪೋಲಿನಂತೆ ಮತ್ತು ರೋಮ್ ಸಾಮ್ರಾಜ್ಯ ಕಟ್ಟಿದ ಜೂಲಿಯಸ್‌ಸೀಸರರ ಪ್ರತಿಮೆಯೊಂದನ್ನು ತೆರೆದರು ಈ ಸಂದರ್ಭದಲ್ಲಿ ಲೇಬಿಯದ ಮುಸಲ್ಮಾನರ ವಿಧೇಯತೆಯನ್ನು ಪ್ರಶಂಸಿಸಿ, ಅಬಿಸೀನಿಯ ಯುದ್ಧದ ಸಂದರ್ಭದಲ್ಲಿ ಇಂಗ್ಲೆಂಡ್, ಫ್ರಾನ್ಸ್ ಮೊದಲಾದ ರಾಷ್ಟ್ರಗಳು ಇಟಲಿಯ ಮೇಲೆ ಜಾರಿಗೆ ತಂದಿದ್ದ ಸಾಂಕ್ಶನುಗಳನ್ನು ತಾನೆಂದಿಗೂ ಮರೆಯಲಾರೆನೆಂದರು. ಲೇಬಿಯದ ಮುಸಲ್ಮಾನಪಾಳೆಯಗಾರರು ಸುಮಾರು 2000 ಪವನು ಬೆಲೆಯ, ಭಂಗಾರದ ಹಿಡಿಯ ಖಡ್ಗವನ್ನು ಮುಸಲೋನಿಯವರಿಗೆ ಇನಾಮಾಗಿ ಒಪ್ಪಿಸಿದರು. ಈ ಸಂದರ್ಭದಲ್ಲಿ ಮುಸಲೋನಿಯವರು, ಈ ಖಡ್ಗವನ್ನು ತಾನು ರೋಮಿಗೊಯ್ದು ತನ್ನ ಜೀವನದ ಅತ್ಯಂತ ಪ್ರಿಯ ಸ್ಮರಣೆಯಾಗಿರಿಸಿಟ್ಟುಕೊಳ್ಳುವನೆಂದರು.

ಜರ್ಮನಿಯಲ್ಲಿ 10 ಲಕ್ಷ ಸೈನಿಕರು

ಜರ್ಮನಿಯಲ್ಲಿ ಈಗ ಚೆನ್ನಾಗಿ ತರಬೇತಿ ಹೊಂದಿರುವ ಸಶಸ್ತ್ರ ಸೈನಿಕರು 8 ಲಕ್ಷ ಮಂದಿಯಿರುವರು ಕಳೆದ ಒಂದೇ ವರ್ಷದಲ್ಲ 3,50,000 ಸೈನಿಕರನ್ನು ಹೆಚ್ಚಿಸಲಾಗಿದೆ. ಈ ವರ್ಷ ಆರಂಭವಾದಂದಿನಿಂದ ಜರ್ಮನಿಯು ಎರಡು ಹೊಸ ಸೈನಿಕದಳವನ್ನುಂಟುಮಾಡಿರುವುದು ಸೈನ್ಯಾಧಿಕಾರಿಗಳನ್ನೂ ಹೆಚ್ಚೆಚ್ಚಾಗಿ ತರಬೇತಿ ಮಾಡಲಾಗುತ್ತದೆ ಮೊದಲು ಪ್ರತಿವರ್ಷ ಸೈನಿಕ ಕಾಲೇಜುಗಳಲ್ಲಿ 3000 ಮಂದಿ ಅಧಿಕಾರಿಗಳು ತರಬೇತಿ ಹೊಂದುತ್ತಿದ್ದರು ಈಗ 5000 ಮಂದಿ ತರಬೇತಿ ಹೊಂದುತ್ತಿರುವರು ಈ ಸೈನಿಕರ ಹೊರತು ಸರಕಾರವು 5 ಲಕ್ಷ ಸೈನಿಕರನ್ನು ರಿಸರ್ವ್ ಮಾಡಿಡಲು ಸಿದ್ಧಗೊಳಿಸುತ್ತಿರುವುದು ಜರ್ಮನಿಯ ವೈಮಾನಿಕ ಸೇನೆಯು ಒಹಳವಾಗಿ ಹೆಚ್ಚಿಸಲ್ಪಟ್ಟಿರುವುದು, ಈಗ ಅಲ್ಲಿ 2060 ಪ್ರಥಮತರಗತಿಯ ವಿಮಾನಗಳುಳ್ಳ 137 ದಳಗಳಿರುವವು ಒಂದು ವರ್ಷದ ಮೊದಲು ಜರ್ಮನಿಯಲ್ಲಿ 750 ಯುದ್ಧವಿಮಾನಗಳು ಮಾತ್ರ ಇದ್ದುವು ಇದೇ ರೀತಿ ಜರ್ಮನಿಯ ಯುದ್ಧಹಡಗುಗಳೂ ಹೆಚ್ಚಿಸಲ್ಪಟ್ಟಿರುವವು

ಜನರಲ್ ಫ್ರೆಂಕೋರವರಿಗೆ ಹೋಲ್ಲಂಡಿನ ಎಚ್ಚರಿಕೆ

ಸ್ಪೈನಿನ ಒಂಡಾಯಗಾರರ ನಾಯಕರಾದ ಜನರಲ ಫ್ರೆಂಕೋರವರ ಯುದ್ಧ ನಾವೆಗಳು ಹೋಲ್ಲೆಂಡಿನ ಕೆಲವು ವ್ಯಾಪಾರಿ ಹಡಗುಗಳನ್ನು ಹಿಡಿದು ಅವುಗಳಲ್ಲಿನ ಸಾಮಾನುಗಳನ್ನು ಅಪಹರಿಸುವವು ಇನ್ನು ಮುಂದ ಹಾಗೇನಾದರೂ ಮಾಡಿದರೆ ಅದನ್ನು ಕಳ್ಳತಿಕೆಯೆಂದು ಪರಿಗಣಿಸಲಾಗುವುದೆಂದು ಹೋಲ್ಲೆಂದಿನ ವಿದೇಶಮಂತ್ರಿಗಳು ಎಚ್ಚರವಿತ್ತಿರುವರು ಇಂತಹ ಸಂದರ್ಭದಲ್ಲಿ ಫ್ರೆಂಕೋರವರ ಯುದ್ಧಹಡಗುಗಳನ್ನು ಹಿಡಿಯಲು ಹೋಲ್ಲೆಂಡು ಯುದ್ಧನಾವೆ ಮತ್ತು ಜಲಾಂತರ್ಗತ ನಾವೆಗಳನ್ನು ಕಳುಹಿಸಿರುವುದು ಒಂಡಾಯಗಾರರು, ಹೋಲ್ಲೆಂಡಿನ ಜೋಗಿಗ ಜೂಹನ್ನಾ ಎಂಬ ಹಡಗವನ್ನು ಹಿಡಿದು ಅದರ ಸಾಮಾನನ್ನು ತೆಗೆದುಬಿಟ್ಟ ಹಾಗೆಯೇ ಬಿಟ್ಟರುವರು.

1 ಮಂದಿಯ ಕೊಲೆ

ಸಿಂಧ್ ಪ್ರಾಂತದ ಸುಕೂರು ಜಿಲ್ಲೆಯ ಒಬ್ಬು ಎಂಬ ಗ್ರಾಮದಲ್ಲ ಮಹಾರ್ ಮತ್ತು ಬಲೂಚಿ ಮುಸಲ್ಮಾನತಂಡಗಳೊಳಗೆ ತೀವ್ರ ವೈಷಮ್ಯವುಂಟಾಗಿತ್ತು ಮಹಾರ್ ತಂಡದ ಕೆಲವರು ಬಲೂಚಿಯೊಬ್ಬನನ್ನು ಪ್ರಾಣ ಹೋಗುವ ವರಗೆ ಹೊಡೆದು ಹಾಕಿದರು ಇದರಿಂದ ರೇಗಿಬಿದ್ದ ಬಲೂಚಿಗಳು ಪ್ರತೀಕಾರೋನ್ಮತ್ತರಾಗಿ ಕತ್ತಿ ಕೈದುಗಳನ್ನು ಹಿಡಕೊಂಡು, ಕೆಲ ಮಂದಿ ಮಹಾರರ ಮೇಲೆ ಬಿದ್ದು 3 ಮಂದಿಯನ್ನು ಸಾಯುವಂತೆ ಕಡಿಮುಹಾಕಿದರು ಮತ್ತು ಅವರ ಶವಗಳನ್ನು ಅಮಾನುಷವಾಗಿ ವಿರೂಪಗೊಳಿಸಿ ಅದೇ ಸ್ಥಳದಲ್ಲಿ ಸುಟ್ಟುಹಾಕಿರುವರು.

ಇಟಲಿಯಾನರ ಅಮಾನುಷ ಪ್ರತೀಕಾರ

ಅಬಿಸೀನಿಯದ ವೈಸರಾಯರಾದ ಮಾರ್ಶಲ್ ಗ್ರೇಜಿಯಾನಿಯವರ ಮೇಲೆ ಒಬ್ಬಿನ ಆವಾಬದಲ್ಲ ಬೋಂಬೆಸೆಯಲ್ಪಟ್ಟ ಮೂರು ದಿನಗಳಲ್ಲಿ ಇಟಲಿಯಾನ ಸೈನಿಕರು ಅಬಿಸೀನಿಯನರ ಮೇಲ ನಡಿಸಿದ ಅತ್ಯಾಚಾರವು ಅಮಾನುಷವೆಂದು ತಿಳಿದುಬಂದಿದೆ ಈ ಸೈನಿಕರು ತಮ್ಮಿಚ್ಛಾನುಸಾರ ನಡಿಯಬಹುದೆಂದು ಹುಕುಮು ಕೊಡಲಟ್ಟಿತ್ತು, ಬ್ಲಾಕ್‌ಶರ್ಟ್ ಸೈನಿಕರು ಬೋಂಬು, ಬೆಂಕಿಮೊಂದಿ, ಪಿಸ್ತೂಲು ಮತ್ತು ಬಂದೂಕುಗಳನ್ನು ಹಿಡಿದುಕೊಂಡು ತಂಡತಂಡವಾಗಿ ಅಬಿಸೀನಿಯನರ ಮನ ಮಾರುಗಳಿಗ ಬೆಂಕಿಕೊಟ್ಟು, ಎಕ್ಕವರ ಮೇಲೆಲ್ಲಾ ಬೋಂಬು ಮತ್ತು ಗುಂಡೆಸೆದು 3000ದಿಂದ 6000ದ ವರಗಣವರನ್ನು ಕೊಂದುಹಾಕಿರುವರೆಂದು ಕ್ಯಾಂಟರ್‌ಬರಿಯ ಆರ್ಚ್‌ಬಿಷೋಪರೇ ಲೋರ್ಡ್ಸ್‌ಸಭೆಯಲ್ಲಿ ತಿಳಿಸಿರುವರು ಎಷ್ಟು ನಾಶವಾದುದು ಎಷ್ಟೆಂದು ಹೇಳಲು ಸಾಧ್ಯವಿಲ್ಲ ಈ ಕುರಿತು ಮತು ಯುದ್ಧದಲ್ಲಿ ಸೆರ ಹಿಡಿಯಲಟ್ಟ ರಾಸ್ ಡೆಸ್ಟರೇ ಮೊದಲಾದ ವೀರ ಸೇನಾನಾಯಕರನ್ನು ಯಾವ ತರದ ವಿಚಾರಣೆಯೂ ಇಲ್ಲದ ಗುಂಡಿಟ್ಟು ಕೊಂದುಹಾಕಿದ ವಿಷಯದಲ್ಲಿ ಲೀಗ್ ಆಫ್ ನೇಶನ್ಸಿನವರು ತಕ್ಕ ವಿಚಾರಣೆ ನಡಿಸಬೇಕೆಂದು ನೆಗಸರು ಮನವಿ ಮಾಡಿಕೊಂಡಿರುವರು. ಬ್ರಿಟಿಷ್ ಪಾರ್ಲಿಮೆಂಟಿನಲ್ಲಿಯೂ ಈ ಸಂಬಂದವಾಗಿ ಪ್ರಶ್ನೋತ್ತರ ನಡೆದಿರುವುದು

ಮುನಿಸಿಪಲ್ ಕಟ್ಟಡದ ಮೇಲೆ ರಾಷ್ಟ್ರೀಯ ಧ್ವಜ

ಇದೇ ತಾ 19ರಲ್ಲು ನಡೆದ ಲಕ್ನೋ ಮುನಿಸಿಪಲ್ ಬೋರ್ಡಿನ ಸಭೆಯಲ್ಲಿ ಮುನಿಸಿಪಲ್ ಕಟ್ಟಡದಲ್ಲ ರಾಷ್ಟ್ರೀಯ ಧ್ವಜವನ್ನೇರಿಸಬೇಕೆಂದೂ, ಅದಕ್ಕಾಗಿ ಮುನಿಸಿಪಾಲಿಟಿಯವರ, ರೂ 100 ವ್ಯಯಿಸಬೇಕೆಂದೂ ನಿರ್ಣಯವಾಗಿರುವುದು ಹಿಂದೊಮ್ಮೆ ಈ ಮುನಿಸಿಪಾಲಿಟಿಯ ಕಟ್ಟಡವನ್ನು ಗಾಂಧಿಜಿಯವರು ತೆರಯುವಾಗ ರಾಷ್ಟ್ರೀಯ ಧ್ವಜವನ್ನೇರಿಸಿದ್ದರು ಆದರೆ ಅದನ್ನು ಕಡೆಗೆ ಡಿಪ್ಯುಟಿ ಕಮಿಶನರರ ಹುಕುಮಿನ ಮೇರೆಗ ತೆಗೆಯಲಾಯಿತು.

ಅಕೋಲ ಮುನಿಸಿಪಾಲಿಟಿಯು

ಕಾಂಗ್ರೆಸ ಕರೆಯಂತೆ ಇದೇ ಬರುವ ಎಪ್ರಿಲ್ ತಾ 1 ರಲ್ಲು ಹೊಸ ರಾಜ್ಯಾಂಗ ರಚನಾ ನಿಷೇದದ ದಿನ ತನ್ನ ಅಧೀನವಿರುವ ಶಾಲೆಗಳನ್ನೆಲ್ಲಾ ಮುಚ್ಚುವ ನಿರ್ಧಾರ ಮಾಡಿರುತ್ತದೆ ಇದಕ್ಕೆ ಸರಕಾರವು ಸಮ್ಮತಿ ಕೊಡುವುದೂ ಇಲ್ಲವೋ ನೋಡಲಿದೆ

ಉದಾರ ದಾನ

ಶೋಲಾಪುರದ ಶ್ರೀ ಮಹದೇವಪ್ಪ ಶಾಡಾಡಿಯವರು ದರ್ಮಾರ್ಥ ಆಸ್ಪತ್ರೆ ಮತ್ತು ಪ್ರಸೂತಿ ಗೃಹಕ್ಕಾಗಿ ತನ್ನ ತಾಯಿಯ ಸ್ಮರಣಾರ್ಥವಾಗಿ ರೂ 1 ಲಕ್ಷದಷ್ಟರ ಅತ್ಯುದಾರ ದಾನಮಾಡಿರುವರು

ಚಿಕ್ಕ ಹುಡುಗಿಯ ಆಭರಣ ಅಪಹಾರ

ಇದೇ ತಾ 19ರಲ್ಲು ಬೆಂಗಳೂರಿನ ಗಾಂಧಿ ನಗರದ ಶ್ರೀ ಮುನಿ ವೆಂಕಟಪ್ಪ ಎಂಬ ಕಂಟ್ರಾಕ್ಟರರ 7 ವರ್ಷದ ಮಗಳು ಶಾಲೆಗೆ ಹೋಗಿ ಹಿಂದೆ ಬರುವಾಗ, ಒಳ್ಳೇ ಡ್ರೆಸ್ಸುಮಾಡಿಕೊಂಡಿದ್ದ ಒಬ್ಬ ತರುಣನು ಅವಳ ಒಳಿಗೆ ಬಂದು, "ರಸ್ತೆಯಲ್ಲಿ ಮುಂದೊಬ್ಬ ಹುಚ್ಚನಿದ್ದಾನೆ. ಅವನು ನಿನ್ನ ಆಭರಣ ಕಸಕೊಳುತ್ತಾನೆ ಎಂದು ಸುಳ್ಳು ಹೇಳಿ ನಂಬಿಸಿ ಅವಳ ಕುತ್ತಿಗೆಯಲ್ಲಿದ್ದ 3 ಪವನುಗಳ ಚೈನನ್ನು ತೆಗಿಸಿ ಅದನ್ನು ತಾನು ಕಟ್ಟಿಕೊಡುವೆನೆಂದು ಕಾಗದದೊಳಗೆ ಮುಚ್ಚಿ, ಕಟ್ಟುಮಾಡಿ, ಒಂದು ಕ್ಷಣದೊಳಗೆ ಆ ಕಟ್ಟಿನ ಬದಲಿಗೆ ಕಲ್ಲಿನ ಕಟ್ಟೊಂದನ್ನು ಹುಡುಗಿಯ ಕಿಸಗೆ ಹಾಕಿ ವಂಚಿಸಿರುವನು ಆ ಹುಡುಗಿಯು ಮನಗೆ ಹೋಗಿ ಕಟ್ಟು ಬಿಚ್ಚಿ ನೋಡುವಾಗ ಅದರೊಳಗೆ ಕಲ್ಲುಗಳಿದ್ದುವು ಬೆಂಗಳೂರಿನಲ್ಲಿ ಇಂತಹ ವಂಚನೆಯು ನಾಲ್ಕೈದು ದಿವಸಗಳಿಂದ ನಡೆದಿತ್ತೆಂದು ತಿಳಿದುಬರುತದೆ

620 ಶಾಲಾ ಮಕ್ಕಳು ಹತರಾದರು

ಅಮೇರಿಕದ ಯೂನೈಟೆಡ ಸ್ಟೇಟ್ಸಿನ ನ್ಯೂ ಲಂಡನ್ ಎಂಬಲ್ಲಿ ಇದೇ ತಾ 18 ರಲ್ಲು ಶಾಲಾಕಟ್ಟಡದಲ್ಲುಂಟಾದ ಸ್ಫೋಟದಲ್ಲಿ ಒಟ್ಟು 670 ಮಂದಿ ಮಕ್ಕಳು ಮತ್ತು ಅಧ್ಯಾಪಕರು ಕೊಲ್ಲಲ್ಪಟಿರುವರೆಂದು ತಿಳಿದುಬರುತ್ತದ ಇಷ್ಟರ ವರಗೆ 600 ಶವಗಳು ದೊರತಿವೆ 175 ಮಂದಿ ಗಾಯಗೊಂಡಿದ್ದಾರೆ. ಕಟ್ಟಡದೊಳಗೆ ಸಿಕ್ಕಿಬಿದ್ದಿರುವ ಕೆಲವು ಮಕ್ಕಳ ಕೂಗು ಕೇಳಬಂದರೂ ಕಬ್ಬಿಣದ ಜಂತಿ ಮೊದಲಾದುವನ್ನು ತುಂಡುಮಾಡದ ಅವರನ್ನು ಹೊರತೆಗೆಯಲಾಗಲಿಲ್ಲ ತಂದ ತಾಯಿಗಳು ಕೂಗುತ್ತಾ ತಮ್ಮ ಮಕ್ಕಳನ್ನು ಹುಡುಕುವ ದೃಶ್ಯವು ಹೃದಯವಿದ್ರಾವಕವಿದ್ದಿತು ಈ ಅನಾಹುತದ ಕುರಿತು ಪ್ರೆಸಿಡೆಂಟ್ ರುಸವೆಲ್ಟರು ತೀವ್ರ ಸಂತಾಪಸೂಚಿಸಿರುವರು, ವಿಮಾನ ಮೂಲಕ 18 ಮಂದಿ ಡಾಕ್ಟರರು ಮತ್ತು ನರ್ಸುಗಳನ್ನು ರೆಡ್ ಕ್ರೋಸಿನವರು ಈ ಸ್ಥಳಕ್ಕೆ ಕಳುಹಿಸಿರುವರು ಈ ಅನಾಹುತ ನಡೆದ ಪ್ರದೇಶದಲ್ಲಿ ಮಾರ್ಶಲ್ ಲೋ ಜಾರಿಗೆ ತರಲಾಗಿದೆ.

ರಷ್ಯದ ನೂತನ ನಿರ್ಮಾಣ

ಧರ್ಮದ ಅಧಃಪತನ! ರಷ್ಯದ ಕಾಶಿಯಾಗಿ ಪವಿತ್ರ ವೈಭವದಿಂದ ಮೆರೆಯುತ್ತಿದ್ದ ಕೀವ್ ನಗರವು ಇಂದು ಪಾಳುಬಿದ್ದಿದೆ

[ರಷ್ಯವು ಇಂದು ಹಳೆಯ ಸಮಾಜ ರಚನೆಯನ್ನೇ ಸಂಪೂರ್ಣವಾಗಿ ವಿನಾಶಗೊಳಿಸಿ ಇಡೀ ಲೋಕದಲ್ಲೇ ನೂತನವಾದ ಹೊಸ ನಿರ್ಮಾಣವೊಂದನ್ನಾರಂಭಿಸಿರುವುದು. ರಷ್ಯದ ಇಂದಿನ ಪರಿಸ್ಥಿತಿಯೇಗಿದೆ, ಅಲ್ಲಿ ಏನೆಲ್ಲಾ ನಡೆಯುತ್ತಿವೆಯೆಂಬುದನ್ನು 'ಮೋರಿಸ್ ಹಿಂಡಸ್' ಎಂಬ ಪ್ರಸಿದ್ಧ ಲೇಖಕರು ಸ್ವತಃ ಹೋಗಿ ಕಂಡುವಿಚಾರಿಸಿ, ನಿಷ್ಪಕ್ಷಪಾತ ಬುದ್ಧಿಯಿಂದ ವಿಮರ್ಶಕ ದೃಷ್ಟಿಯಿಂದ 'ಮಾನವ ಸಮಾಜದ ಮೂಲೋತ್ಪಾಟನ' (Humanity uprooted) ಎಂಬೊಂದು ಗ್ರಂಥವನ್ನು ಬರೆದಿರುವರು. ನಮ್ಮ ವಾಚಕರಿಗಾಗಿ ಅದರಿಂದ ಕೆಲವು ಪ್ರಾಮುಖ್ಯ ಸಂಗತಿಗಳನ್ನು ತೆಗೆದುಕೊಡಲಾಗಿದೆ.]

—ಸಂ. ಸ.

ಕೀವ್ ನಗರಕ್ಕೆ [illegible] ಗಳಿಗಿಂತ ಅತ್ಯಂತ ಪುರಾತನವಾದುದು, ಅತಿ ಸುಂದರವಾದುದು. ಸಂತೋಷಮಯವಾದುದು. [illegible] ಅದರ ವೈಭವವೇನೆ[illegible] ರಷ್ಯದ ಕಾಶಿಯಾದ ಈ ಪುಣ್ಯಕ್ಷೇತ್ರದ ಹೆಸರನ್ನು ಕೇಳದ ಒಕ್ಕಲಿಗನಾವನು ಯಾರು? ಇಲ್ಲಿಯೇ ರಷ್ಯದ ಬರ್ಬರ ಪ್ರಜೆಗಳನ್ನು ಮಹಾ ಪ್ರಭಾವಶಾಲಿ ರಾಜಕುಮಾರ ವಾಲ್ಡಿಮೀರರು ಕ್ರೈಸ್ತಮತಕ್ಕೆ ಮತಾಂತರಗೊಳಿಸಿದುದು. ಪ್ರಥಮ ದೇವಾಲಯ, ಶಾಲೆ, ಮತ್ತು ಪುಸ್ತಕ ಭಂಡಾರಗಳು ಸ್ಥಾಪಿತವಾದದ್ದೇ ಇಲ್ಲಿ. ಪ್ರಥಮ ಕ್ರೈಸ್ತಸಾಧು ದೀಕ್ಷೆ ಹೊಂದಿದುದು ಇಲ್ಲಿ. ಅನೇಕ ಮನುಷ್ಯರ ಅಸ್ಥಿಗಳು ಸಂಗ್ರಹಿಸಲ್ಪಟ್ಟಿರುವ ಸುಪ್ರಸಿದ್ಧ ಗುಹೆ ಮತ್ತು ನೆಲಮಾಳಿಗೆಗಳಿರುವುದು ಇಲ್ಲಿ. ಎಡೆಬಿಡದ ಮರ್ದ್ಯವಪೀಡಿತರಾದ ಒಕ್ಕಲಿಗರು ತಮ್ಮ ಕಷ್ಟನಿವಾರಣೆಗಾಗಿ ಅನನ್ಯಭಕ್ತಿಯಿಂದ ಮೊರೆ ಇಡುತ್ತಿದ್ದುದು ಇಲ್ಲಿ. ಬಂಜೆಯರಾದ ಸ್ತ್ರೀಯರು ಮಕ್ಕಳನ್ನು ಪಡೆಯಲು ಹರಕೆ ಹೊರುವುದು ಈ ಪುಣ್ಯಸ್ಥಳಕ್ಕೆ. ಮಾನವನಿಂದ ನಿವಾರಿಸಲಾಗದ ರೋಗ ರುಜೆ ಪೀಡಿತರಾದವರು, ಪ್ರೇತ ಭೂತ ಪೀಡೆಗಳಗೊಳಗಾದವರು ಬಂದು ತಮ್ಮ ಉಪದ್ರವಗಳನ್ನು ನಿವಾರಿಸಿದ್ದು ಇಲ್ಲಿ. ಈ ಪವಿತ್ರ ನಗರಕ್ಕೆ ಯಾತ್ರಿಕನಾಗಿ ಹೋಗಬೇಕೆಂಬುದು ರಷ್ಯದ ಪ್ರತಿಯೊಬ್ಬ ಒಕ್ಕಲಿಗನ ಜೀವನ ಮುಖ್ಯವಾದ ಒಂದು ಆಶೆ. ವಿಚಿತ್ರ ಶಕ್ತಿಯುಳ್ಳವೆನಿಸುವ ಇಲ್ಲಿಯ ದೇವಾಲಯಗಳ ಗರ್ಭಗುಡಿಗಳಲ್ಲಿ ಮೇಣದ ಬತ್ತಿಯನ್ನು ಹೊತ್ತಿಸಿ, ಸುಪ್ರಸಿದ್ಧ ಸಾಧು ಸಂತರ ಅವಶೇಷಗಳನ್ನೂ ಮುದ್ದಿಸಿ, ಪವಿತ್ರ ಬಾವಿಯ ತೀರ್ಥೋದಕವನ್ನು ಕುಡಿದು ತಮ್ಮ ಬೇರೆ ಬೇರೆ ರೀತಿಯ ಬೇನೆ ಉಪದ್ರವ ಸಂಕಷ್ಟಾದಿಗಳನ್ನೂ ನಿವಾರಿಸಿಕೊಳ್ಳುವ ಅಚಲ ವಿಶ್ವಾಸದಿಂದ ಪುರುಷರೂ, ಸ್ತ್ರೀಯರೂ, ತರುಣರೂ, ಮಕ್ಕಳೂ, ಮುದಿಗಳೂ ಸಾವಿರಗಟ್ಟಲೆಯಲ್ಲ ನೆರೆದು ಬರುತ್ತಿದ್ದುದು ಈ ಕೀವ್ ನಗರದಲ್ಲಿ. ಅದು ಹಳೆಯ ರಷ್ಯದ ವೈಭವ ಮತ್ತು ನೆನಪರಿಕೆಯ ಸ್ಥಳವಾಗಿತ್ತು. ಶ್ರದ್ಧಾಳುತನದ ನೆಲೆಯಾಗಿದ್ದಿತು. ದೀನ ದುಃಖಿತರ ಆಶ್ರಯವಾಗಿತ್ತು. ಇಲ್ಲಿಯ ಪ್ರಕೃತಿ ಸೌಂದರ್ಯವೂ ಪಟ್ಟಣದ ಶೋಭೆಯೂ ಅತ್ಯಂತ ಚಿತ್ತಾಕರ್ಷಕವಾದುದು. ಈಗ ಇಷ್ಟೊಂದು ವೈಭವದ, ಇಷ್ಟೊಂದು ಕೀರ್ತಿಯ ಪುಣ್ಯಕ್ಷೇತ್ರವು ಇಂದೀಗ ಎಲ್ಲೆಲ್ಲಿಯೂ ಪಾಳು ಸುರಿಯುತ್ತಿರುವುದು. ಅದರ ಕಟ್ಟಡಗಳೊಳಗೆ ಆಡು ಕೋಳಿ ಮುಂತಾದ ಪ್ರಾಣಿಗಳು ಸಂಚರಿಸುತ್ತಿರುವುವು. ಗೋಡೆ ಮತ್ತು ನೆಲದ ಮೇಲೆಲ್ಲಾ ಹುಲ್ಲು ಹವಜಿ ಬೆಳೆದಿರುವುದು. ಮೊದಲು ಸನ್ಯಾಸಿಗಳು ಮತ್ತೂ ಯಾತ್ರಿಕರು ನೆಲಸಿಕೊಂಡಿದ್ದ ಸಾಲು ಸಾಲು ಸದನಗಳಲ್ಲಿ ಈಗ ರಷ್ಯದ ಕ್ರಾಂತಿಭಾವನಾಪ್ರೇರಿತರಾದ ಜನರು ವಾಸಿಸುತ್ತಿರುವರು. ಪವಿತ್ರ ಮಂತ್ರ ಪ್ರಾರ್ಥನೆಗಳ ಸ್ವರದ ಬದಲಿಗೆ ಧರ್ಮದೇವರುಗಳ ದೂಷಣೆಯೇ ಎಲ್ಲೆಲ್ಲಿಯೂ ಉದ್ಘೋಷಿತವಾಗುತ್ತಿರುವುದು. ಮೊದಲು ಯಾತ್ರಿಕರ ಪೂಜೆ ಪುರಸ್ಕಾರದ ಸ್ಥಳಗಳು ಇಂದು ವಿನೋದವಿಹಾರದ ನಿಲಯಗಳಾಗಿರುವುವು. ಇಲ್ಲಿ ಸಾವಿರಗಟ್ಟಲೆಯಲ್ಲಿದ್ದ ಕ್ರೈಸ್ತ ಸನ್ಯಾಸಿಗಳು ಎಲ್ಲಿ ಹೋದರೋ?

ಒಂದೆಡೆ ಕೆಲವೇ ಮಂದಿ ಸನ್ಯಾಸಿಗಳು ಮರದ ಬೇಲಿಯೊಂದಕ್ಕ ಒರಗಿ ಅದೇನೋ ಆಲೋಚನಾಮಗ್ನರಾಗಿ ನಿಂತಿದ್ದರು. ಅವರನ್ನು ಕಂಡರೆ ಕನಿಕರ ಉಂಟಾಗುತ್ತಿತ್ತು. ನಾನು ಅವರ ಬಳಿಗೆ ಹೋಗಿ ನನ್ನ ಪರಿಚಯವನ್ನವರಿಗೆ ಹೇಳ ತಿಳಿಸಿದೆನು. ಅವರು ಬಹಳ ಉಲ್ಲಾಸದಿಂದ ನನ್ನನ್ನು ಸ್ವಾಗತೀಕರಿಸಿದರು. ಇನ್ನೂ ಕೆಲವರು ಅವರೊಂದಿಗೆ ಬಂದು ಸೇರಿದರು. ನನ್ನ ಮೇಲೆ ಪ್ರಶ್ನೆಗಳ ಮಳೆಗರೆದರು. ಅವರಿಗೆ ಬಾಹ್ಯ ಲೋಕದ ಯಾವ ಸಂಗತಿಯೂ ತಿಳಿದಿರಲಿಲ್ಲ. ಮಧ್ಯಾಹ್ನದ ಊಟವನ್ನು ನಾನು ಅವರೊಂದಿಗೆ ಮಾಡಬೇಕೆಂದು ಅವರು ಕೇಳಿಕೊಂಡರು. 'ಕಪ್ಪುರೊಟ್ಟಿ ಮತ್ತು ನೇಬಿನ ಹಣ್ಣಿನ ಜೇಂಬನ್ನು ಅವರೇ ತಯಾರಿಸಿದ್ದರು. ಇಷ್ಟೊಂದು ಬಡತನದ ಆಹಾರಕ್ಕಾಗಿ ಅವರು ನನ್ನೊಡನೆ ಬಹಳವಾಗಿ ಕ್ಷಮೆ ಕೇಳಿದರು. ಅವರೀಗ ತೀರಾ ಬಡವರಾಗಿ ಹೋಗಿರುವರು. ಮಾಂಸ ತತ್ತಿ ಮತ್ತು ಕೇಕುಗಳನ್ನು ತಿನ್ನಲು ಅವರಿಂದ ಸಾಧ್ಯವಾಗುತ್ತಿದ್ದಿಲ್ಲ. ಒಂದು ಕಾಲದಲ್ಲಿ ಅವರಿಗೆ ಬಹಳ ಆದಾಯವನ್ನೀಯುತ್ತಿದ್ದ ಭೂಮಿ ಅಂಗಡಿ ಮತ್ತು ಭೋಜನ ಗೃಹಗಳು ಈಗ ಅವರ ಅಧೀನವಿಲ್ಲ. ಸಾವಿರಾರು ಯಾತ್ರಿಕರಿಂದ ಕಾಣಿಕೆ ಬಂದು ಅವರ ಭಂಡಾರವು ಈಗ ತುಂಬುವುದಿಲ್ಲ. ಅವರ ಉಡಿಗೆತೊಡಿಗೆಗಳೆಲ್ಲಾ ಹರಕಾಗಿ ಹೋಗಿದ್ದರೂ ಹೊಸತನ್ನು ತೆಗೆದುಕೊಳ್ಳಲು ಅವರಲ್ಲಿ ಹಣವಿಲ್ಲ. ಅಲ್ಪ ವಸ್ತುವನ್ನಾದರೂ ಬೆಲೆಕೊಟ್ಟು ಕೊಂಡುಕೊಳ್ಳಲು ಅವರಿಂದ ಸಾಧ್ಯವಿಲ್ಲ. ಅವರೀಗ ಹೊಟ್ಟೆಹೊರಕೊಂಡಿರುವುದೆಂದರೆ ಮೇಣದ ಬತ್ತಿ, ಚಿತ್ರ ಮತ್ತು ಇತರ ಪುರಾತನ ಸಾಮಾನುಗಳನ್ನು ಮಾರಿ. ಮಾರುವುದಾದರೂ ಯಾರಿಗೆ? ಯಾತ್ರಿಕರಿಗಲ್ಲ. ಭಕ್ತಿವಂತ ಒಕ್ಕಲಿಗರಿಗಲ್ಲ, ವಿನೋದವಿಹಾರಕ್ಕಾಗಿ ಬರುವ ನಾಸ್ತಿಕರಿಗೆ! ದೇವರು ಮತ್ತು ಕ್ರೈಸ್ತನಮೇಲೆ ಧಾಳಿ ನಡಿಸಲು ಹೊಸ ಹೊಸ ಶೋಧನೆಗಳನ್ನು ಕಂಡುಕೊಳ್ಳಲು ಬರುವ ಧರ್ಮಬಾಹಿರರಿಗೆ! ಇದೀಗ ರಷ್ಯದ ಪರಿಸ್ಥಿತಿ. ಒಂದು ಕಾಲದ ಅತ್ಯಂತ ಪವಿತ್ರಕ್ಷೇತ್ರವು ಇಂದು ವಿಶ್ವಾಸ ಹೀನರ ಆಟದ ರಂಗವಾಗಿ ಪರಿಣಮಿಸಿತು. ಆದರೂ ಈ ಸನ್ಯಾಸಿಗಳಿಗೆ ದೇವರು ನಮ್ಮನ್ನು ಕೈಬಿಡಲಾರನೆಂದು ಇನ್ನೂ ವಿಶ್ವಾಸ. ತಮ್ಮ ಭಕ್ತಿಶ್ರದ್ಧೆಗಳನ್ನು ಪರೀಕ್ಷಿಸಲು ಈ ಸಂಕಷ್ಟಗಳನ್ನಿತ್ತಿರುವನೆಂದು ಅವರ ನಂಬಿಕೆ. ಇಡೀ ರಷ್ಯವು ಮಾತ್ರವಲ್ಲ, ಇಡೀ ಲೋಕವೇ ಆತನನ್ನು ನಿರಾಕರಿಸಿದರೂ ಆತನ ಮೇಲಿನ ತಮ್ಮ ನಂಬಿಗೆಯು ಅಚಲವಾಗಿಯೇ ಇರುವುದು. ಪೂರ್ಣ ನಿರಾಶೆಯ ವಾತಾವರಣದಲ್ಲಿಯೂ ಸನ್ಯಾಸಿಗಳ ಈ ಧರ್ಮವೀರತನವು ಅತ್ಯಂತ ವಂದನೀಯವಿದೆ. ಅವರಲ್ಲಿಬ್ಬರು ನನ್ನನ್ನು ನೆಲದಡಿಯ ಸುರಂಗಕ್ಕೆ ಕರದೊಯ್ಯಲು ಮುಂದಾದರು. ಮೇಣದ ಬತ್ತಿಗಳನ್ನು ಹೊತ್ತಿಸಿಕೊಂಡು ನಾವು ಐತಿಹಾಸಿಕವಾದ ಸುರಂಗದೊಳಕ್ಕಿಳಿದೆವು. ಪರಾಜಿತರಾದ ಯೋಧರು, ರಾಜಪುತ್ರರು, ಸೇನಾನಾಯಕರೇ ಮೊದಲಾದವರು ಈ ಸುರಂಗದಲ್ಲಿ ಆಶ್ರಯ ಪಡೆದು ಹಲವು ಒಳಸಂಚುಗಳನ್ನು ನಡೆಸಿದ್ದರು. ವಿರಕ್ತರಾದ ಸಾಧುಗಳು ಸರ್ವವನ್ನೂ ಬಿಟ್ಟು ಇಲ್ಲಿ ಬಂದು ತಪಸ್ಸುಮಾಡುತ್ತಾ ಕಾಲ ಕಳೆಯುತ್ತಿದ್ದರು. ಅನೇಕ ಮಂದಿ ಇಲ್ಲಿ ತಮ್ಮನ್ನು ತಾವು ಹುಗಿದುಕೊಂಡು ಪ್ರಾಣ ಹೋಗುವವರೆಗೆ ಧ್ಯಾನಪರರಾಗಿರುತ್ತಿದ್ದರು. ನಾವು ಈ ಸುರಂಗದೊಳಗೆ ಸುತ್ತಾಡುತ್ತಿದ್ದಾಗ ಪುರಾತನ ಸಂತ ಸಾಧುಗಳ ಅವಶೇಷಗಳಿದ್ದ ಶವಪೆಟ್ಟಿಗೆಗಳು ಕೆಂಪು ವಸ್ತ್ರಗಳಿಂದ ಮುಚ್ಚಲ್ಪಟ್ಟಿದ್ದವು. ಮೊದಲಾದರೆ ಇಲ್ಲಿಗೆ ಪ್ರತಿ ದಿನವೂ ಸಾವಿರಾರು ಯಾತ್ರಿಕರು ಬಂದು ಪ್ರಾರ್ಥನೆಮಾಡುತ್ತಾ ಹಲವು ಘಂಟೆಮಾತ್ರವಲ್ಲ, ದಿನಗಳನ್ನು ಸಹ ಕಳೆಯುತ್ತಿದರು. ಆದರೆ ಈಗ? ಅದನ್ನು ಯಾರೂ ಹೇಳಬೇಕಾಗಿಲ್ಲ. ಅಲ್ಲಿಯ ಭೀಕರ ಏಕಾಂತತೆಯು ಶಬ್ದಗಳಿಗಿಂತಲೂ ಹೆಚ್ಚಾಗಿ ಎಲ್ಲವನ್ನೂ ತಿಳಿಸಿಬಿಡುತ್ತಿತ್ತು.

ರಷ್ಯದ ಒಕ್ಕಲಿಗರು ಒಮ್ಮೆಯೇ ಧರ್ಮದ ಕುರಿತು ಇಷ್ಟೊಂದು ಅಸಡ್ಡೆತಾಳಲು ಕಾರಣವೇನೆಂದು ನಾನು ಪ್ರಶ್ನಿಸಿದೆ. ಆಗ ಕೆಂಪಗಿನ ದೊರಗು ಗಡ್ಡವುಳ್ಳ ನಿರಾಶೆ ಮತ್ತು ದ್ವೇಷಪೂರ್ಣವಾದ ನೋಟದ ಕುಳ್ಳ ಕ್ರೈಸ್ತ ಸನ್ಯಾಸಿಯೊಬ್ಬನು ಹೀಗೆಂದನು. ಹಾ! ಈ ಒಕ್ಕಲಿಗರೇ, ಅವರು ಶುದ್ಧ ಪಶುಗಳು. ನಮ್ಮ ಮಹತ್ತಾದ ದೇಶವನ್ನು ನಾಶಮಾಡಿದವರು ಅವರೇ, ಈ ಒಕ್ಕಲಿಗರು. ಧರ್ಮದ್ರೋಹಿಗಳೂ, ಬೋಲ್ಶೆವಿಕರು ಮತ್ತು ಕ್ರಾಂತಿಕಾರರಿಗಿಂತ ಈ ಒಕ್ಕಲಿಗರೇ ರಷ್ಯದ ವಿನಾಶಕ್ಕೆ ಮೂಲ ಕಾರಣರು. ಅವರಿಗೇನೂ ತಿಳಿಯದು. ಅವರೆಂದೂ ದೇವರನ್ನು ಹೃದಯದಲ್ಲಿಟ್ಟುಕೊಂಡಿರಲಿಲ್ಲ. ಮಿತ್ರಾ! ಇದೇ ಸತ್ಯ ಸಂಗತಿ. ರಷ್ಯದ ಒಕ್ಕಲಿಗನು ಕ್ರೈಸ್ತನಲ್ಲಿ ಹೃದಯಪೂರ್ಣವಾದ ನಂಬಿಗೆಯುಳ್ಳವನಾಗಿರಲಿಲ್ಲ. ಅವನೆಂದಿಗೂ ಆತನನ್ನು ತಿಳಿದಿರಲಿಲ್ಲ, ಅವರಿಗೆ ಬೆಂಕಿ ಬೀಳದೇ ಈ ಮಾನವಪ್ರಾಣಿಗಳಿಗೆ? "ಹೌದು, ಈ ಸಹೋದರನು ಹೇಳಿದುದು ನಿಜ. ರಷ್ಯದ ಈ ಒಕ್ಕಲಿಗನೂ ಹೃದಯದಲ್ಲಿ ಧರ್ಮಬಾಹಿರನು. ಇಲ್ಲವಾದರೆ ನಾಸ್ತಿಕರು ನಮ್ಮ ದೇಶವನ್ನಾಳುತ್ತಿದ್ದಿಲ್ಲ', ಎಂದು ಇನ್ನೊಬ್ಬ ಸನ್ಯಾಸಿಯು ಹೇಳಿದ. ಹಲವು ಘಂಟೆಗಳ ನಂತರ ನಾನವರನ್ನು ಬಿಟ್ಟುಹೋದೆನು. ನಾನು ಪಟ್ಟಣಕ್ಕೆ ಹಿಂತಿರುಗುತ್ತಿದ್ದಾಗ ಈ ದೇವಾಲಯಗಳ ಶಿಖರಗಳು ಸಂಜೆಯ ನಸು ಕಪ್ಪಿನಲ್ಲಿ ಮಸಗು ಮಸಗಾಗಿ ತೋರುತ್ತಿದ್ದವು. ಈ ಪುರಾತನ ದೇವಾಲಯದ ಮೇಲೆ ಮಾತ್ರವಲ್ಲ. ಅದು ಸಂಕೇತವಾಗಿರುವ ಹಳೆಯ ಧರ್ಮದ ಮೇಲೂ ಕಗ್ಗತ್ತಲೆಯು ಕವಿದು ಬರುವಂತೆ ನನಗೆ ಭಾಸವಾಯಿತು.

ಅನಂತರ ನಾನು ರಷ್ಯದ ಬೇರೆ ಕೆಲವು ಕಡೆ ಹಳ್ಳಿಯಲ್ಲಿ ಸಂಚರಿಸಿದೆನು. ಆಗ ಎಲ್ಲೆಲ್ಲಿಯೂ ನನಗೆ ಒಡೆದು ತೋರುತ್ತಿದ್ದ ವಿಷಯವೆಂದರೆ ರಷ್ಯದ ಒಕ್ಕಲಿಗರ, ವಿಶೇಷವಾಗಿ ತರುಣ ಜನಾಂಗದ ಪ್ರಬಲವಾದ ಧಾರ್ಮಿಕ ಅಸಡ್ಡೆ. ಆಗ ನಾನೇ ನನ್ನೊಳಗೆ ರಷ್ಯದ ಕ್ರೈಸ್ತ ಧರ್ಮದ ಆಧಾರಸ್ತಂಭವಾಗಿದ್ದ ಈ ಒಕ್ಕಲಿಗನಿಗೆ ಈಗ ಏನಾಗಿರುವುದೆಂದು ಪ್ರಶ್ನಿಸಿಕೊಂಡೆನು. ದೈವ, ಭಕ್ತಿ, ಶ್ರದ್ಧೆ ವಿಶ್ವಾಸಗಳ ಕುರಿತು ಯಾರ ಆವೇಶಪರ ಪುಸ್ತಕಗಳು ಬರೆಯಲ್ಪಟ್ಟಿರುವವೋ, ಯಾರು ಪವಿತ್ರ ರಷ್ಯದ ಸಂಕೇತವಾಗಿ ಸೂಚಿಸಲ್ಪಡುತ್ತಿದ್ದನೋ ಯಾರು ಧರ್ಮಕ್ಕಾಗಿ ಎಂತಹ ಕಷ್ಟನಿಷ್ಠುರಗಳನ್ನೂ ಸಹಿಸಿಕೊಳ್ಳುವನೆಂತ ಹೃದಯವೆಂದು ಪರಿಗಣಿಸಲ್ಪಡುತ್ತಿದ್ದನೋ ಅಂಥವನೇ ಈಗ ಸುಲಭವಾಗಿ ಧರ್ಮಬಾಹಿರರ ಬಲೆಗೆ ಬಿದ್ದು ಮಾರ್ಪಾಟುಹೊಂದಲು ಕಾರಣವೇನು? ಬೋಲ್ಶೆವಿಕರ ಪ್ರಚಂಡ ಪ್ರಚಾರಕಾರ್ಯವೆಂದು ಕೆಲವರು ಇದಕ್ಕೆ ಉತ್ತರ ಕೊಡುವರೆಂದು ನಾನು ಬಲ್ಲೆನು. ಆದರೆ ಬೋಲ್ಶೆವಿಕರ ಪ್ರಚಾರವು ಅಷ್ಟೊಂದು ಸರ್ವಶಕ್ತಿಯುಳ್ಳದ್ದೇ? ಅಂತಹ ಭಯಂಕರ ಭಾವಶಾಲಿಯಾದುದೇ? ಪ್ರಬಲವಾದ ಬೋಲ್ಶೆವಿಕರ ಪ್ರಚಾರ ಕಾರ್ಯವು ನಡೆದಿರುವುದೇನೋ ನಿಜ ಆದರೆ ರಷ್ಯದ ಕ್ರೈಸ್ತ ಧರ್ಮವು ಅಥವಾ ಶ್ರದ್ಧಾಳುತನವು ಕಳೆದ ಒಂದು ಸಾವಿರ ವರ್ಷಗಳಿಂದ ಪ್ರಚಾರಮಾಡಿ ದೃಢವಾಗಿ ನೆಲೆಗೊಳಿಸಿದ್ದ ಭಕ್ತಿವಿಶ್ವಾಸಗಳನ್ನು ಅಷ್ಟೊಂದು ಸುಲಭವಾಗಿ ಅದು ತೊಲಗಿಸಿದುದಾದರೂ ಹೇಗೆ? ಬೋಲ್ಶೆವಿಕರು ಧರ್ಮ ವಿರೋಧಿಗಳು. ಎಲ್ಲಾ ದೇವಾಲಯ ಮತ್ತು ಧಾರ್ಮಿಕ

(ಪುಟ ೧೭ಕ್ಕೆ)

ವಂದೇ ಮಾತರಂ

ಪ್ರೇಮ ವಿಜಯ

(V. K. Sinha ಇವರಿಂದ ಬರೆಯಲ್ಪಟ್ಟ ಆಂಗ್ಲ ಕಥೆಯ ಆಧಾರದಿಂದ)

K. L. N. UPADHYAYA

ಪ್ರಶಾಂತ ವಸಂತದ ಸಾಯಂಸಮಯ! ಸಮುದ್ರತೀರದಲ್ಲಿ ತಂಡೋಪತಂಡವಾಗಿ ಜನರು ಬರುತ್ತಿದ್ದರು. ಹಗಲಿಡೀ ಕೋರ್ಟುಗಳಲ್ಲೋ, ಕಚೇರಿಗಳಲ್ಲೋ, ಕಾಲೇಜುಗಳಲ್ಲೋ ಕೆಲಸಮಾಡಿ ಬಳಲಿದ ಅಧಿಕಾರ ವರ್ಗವು ಪ್ರಕೃತಿಯ ನೈಸರ್ಗಿಕಾನಂದವನ್ನು ಅನುಭವಿಸುತ್ತಿದ್ದಿತು. ಪರಸ್ಪರ ಪ್ರೇಮ ಸೌಹಾರ್ದವಲ್ಲದೆ ಅಥವಾ ಕೋರ್ಟಿನಲ್ಲಿ ಅದಾವುದೋ ಒಂದು ತಪ್ಪಿತಕ್ಕಾಗಿ ಬೈದು, ಅವಮಾನಿಸಿದ ಅಧಿಕಾರಿಯು ಅಲ್ಲಿ ಪ್ರೇಮಮಯ ದೃಷ್ಟಿಯನ್ನು ಆ ಅಲ್ಪ ಕ್ಲಾರ್ಕನ ಕಡೆಗೆ ಬೀರುವನು. ಮಂದವಾದರೂ, ಮಧುರವಾದ ಸ್ವರದಿಂದ "ವಂದೇ ಮಾತರಂ....ಮಾತರಂ....ಮಾತರಂ....ವಂದೇ....ಮಾತರಂ" ಎಂದು ಹಾಡುತ್ತಲಿದ್ದ ಬಾಲಕನನ್ನು, ಒಬ್ಬ ದೊಡ್ಡ ಅಧಿಕಾರಿಯು ಎತ್ತಿಕೊಂಡು ಮುದ್ದಿಟ್ಟನು. ಅಧಿಕಾರ ಮದ, ಸ್ಥಾನಮಾನಗಳ ಅರಿವು ಆ ಸಮಯದಲ್ಲಿಲ್ಲ. ತಾವೆಲ್ಲರೂ ಪ್ರಕೃತಿ ಸೌಂದರ್ಯವನ್ನನುಭವಿಸುವ ಸುಹೃದಯಿಗಳಾಗಿ ಒಬ್ಬೊಬ್ಬರಾಗಿ, ಇಬ್ಬಿಬ್ಬರಾಗಿ ಅತ್ತಿಂದಿತ್ತ, ಇತ್ತಿಂದತ್ತ ತಿರುಗಾಡುತ್ತಿದ್ದರು. ಪ್ರಕೃತಿದೇವಿಯು "ಸೂಯ್ ಸೂಯ್" ಎಂದು ಬೀಸುವ ಸುಗಂಧಯುಕ್ತ ಗಾಳಿಯೆಂಬ ವೀಣೆಗನುವಾಗಿ ತಾಂಡವನೃತ್ಯವನ್ನಾಡುತ್ತಿದ್ದಳು. ಅಂಬುಧಿಯು ಉಕ್ಕುಕ್ಕಿ ಬರುವ ತೆರೆಗಳು ಮೃದಂಗಸ್ಥಾನೀಯವಾದವು ಪ್ರೇಕ್ಷಕ ಸಮಾಜವು ಪೂರ್ವೋಕ್ತ ಬಳಲಿದ ಮಾನವ ಸಮೂಹವು!!

ಅದೊಂದು ರಮಣೀಯವಾದ ಭವನದ ಮೇಲ್ಮಹಡಿಯಲ್ಲಿ 17 ವರ್ಷ ಪ್ರಾಯದ ಕಿಶೋರಿಯು, ಪ್ರಕೃತಿಯ ಆಗುಹೋಗುಗಳನ್ನೊಂದನ್ನೂ ಗಣಿಸದೆ, ಚಿಂತಾಕ್ರಾಂತಳಾಗಿದ್ದಳು. ಪ್ರತಿಕ್ಷಣದಲ್ಲೂ, ಚಿತ್ರ, ವಿಚಿತ್ರತರ ರೀತಿಯಲ್ಲಿ, ಬದಲಾಗುವ ತರಣಿ ಬಿಂಬವನ್ನು ಆಕೆಯು ಕಣ್ದಣಿಯೆ ನೋಡುತ್ತಿದ್ದರೂ, ಆಕೆಯ ಗಮನವು ಅಲ್ಲಿರಲಿಲ್ಲ. ಅತ್ತಿತ್ತ ಹೋಗುವ ಪ್ರತಿ ಒಬ್ಬನ ದೃಷ್ಟಿಯೂ ಆ ನಿಸರ್ಗ ಸುಂದರಿಯ ಮೇಲಿದ್ದರೂ, ಆಕೆಯ ದೃಷ್ಟಿಯು ಅವರಾರಲ್ಲೂ ಇರಲಿಲ್ಲ. ಎಲ್ಲರೂ ಪರಸ್ಪರ ಸಲ್ಲಾಪಾದಿಗಳಿಂದ ಉಲ್ಲಾಸಚಿತ್ತರಾಗಿದ್ದಾಗ್ಯೂ, ಆಕೆಯ ಮುಖಭಾವವು ವರ್ಷಋತುವಿನ ಕಮಲದಂತೆ ಶೋಕಾಕುಲಿತವಾಗಿತ್ತು. ಆದರೆ ಆ ಶೋಕದ ಕಾರಣವನ್ನಾರೂ ತಿಳಿಯಲಿಲ್ಲ. ಆ ಮನೋಹರ ರೂಪರಾಶಿಯನ್ನು ಕಂಡು ಎಲ್ಲರೂ ಬೆರಗಾದರು. ಮಾತ್ರವಲ್ಲ, ತಮ್ಮ ಸ್ವಭಾವವನ್ನನುಸರಿಸಿ ಮಂದಹಾಸ ಬೀರುತ್ತ ಏನೇನೋ ಮಾತಾಡುತ್ತ ಮುಂದುವರಿದರು.

ಮೋತೀಚಂದ್ ಗಿರಿಧರಲಾಲ್ ಎಂಬವರು ಡಿಸ್ಟ್ರಿಕ್ಟ್ ರಿಜಿಸ್ಟ್ರಾರ್ ಕೆಲಸದಿಂದ ನಿವೃತ್ತರಾದ ಸುಪ್ರಸಿದ್ಧ ದೈವಭಕ್ತರು. ಅವರ ಅಳಿದುಳಿದ ಮಕ್ಕಳಲ್ಲಿ, ಸ್ವರ್ಣಲತೆಯು ಅಕ್ಕರೆಯ ಒಬ್ಬಳೇ ಮಗಳು. ಸಂಪತ್ತಿಗೆ ತಕ್ಕಂತೆ ಸೌಂದರ್ಯ, ಸೌಂದರ್ಯಕ್ಕೆ ತಕ್ಕಂತೆ ವಿನಯ, ವಿನಯಕ್ಕೆ ತಕ್ಕಂತೆ ವಿದ್ಯೆ ಎಲ್ಲವೂ ಒಟ್ಟಾಗಿದ್ದವು. ಮೋತೀಚಂದನು ಇಹದಯೋಚನೆ ಬಿಟ್ಟು ಪರಲೋಕ ಚಿಂತಾಮಗ್ನನಾಗಿದ್ದನು. ಧಾರ್ಮಿಕ ಉಪನ್ಯಾಸಗಳಲ್ಲಿ ಅಧ್ಯಕ್ಷಸ್ಥಾನವನ್ನು ವಹಿಸುವದು, ಪರಮ ಹಂಸರು ಬಂದಲ್ಲಿ ಭಿಕ್ಷಾದಿಗಳಿಂದ ಸತ್ಕರಿಸುವುದು, ಹರಿಕಥಾ ಕಾಲಕ್ಷೇಪ ಇತ್ಯಾದಿಗಳನ್ನು ಮಾಡಿಸುವುದೇ ಮೊದಲಾದ ಧಾರ್ಮಿಕ ಕಾರ್ಯಗಳು ಆತನ ನಿತ್ಯ ಪದ್ಧತಿಯಾಗಿತ್ತು. ಅಲ್ಲದೆ ತನ್ನ ಆ ಏಕಮಾತ್ರ ಪುತ್ರಿ ಸ್ವರ್ಣಲತೆಯಲ್ಲಿ ಸಾಂಘಿಕ, ನೈತಿಕ ಶಕ್ತಿಯು ಹೆಚ್ಚುವಂತೆ ತಕ್ಕ ಏರ್ಪಾಡು ಮಾಡಿದ್ದನು. ಇಂತಹ ಪ್ರೇಮದ ಫಲದಿಂದಲೋ ಏನೋ ರಮಾಕಾಂತನೆಂಬ ರೂಪದಲ್ಲೂ, ವಿದ್ಯೆಯಲ್ಲೂ ಸಮನಾದ ಯುವಕನು ಸ್ವರ್ಣಲತೆಯನ್ನು ವರಿಸಿ ಆಕೆಯ ಅಚ್ಚಪ್ರೇಮದ ಗುರಿಯಾಗಿದ್ದನು.

ರಮಾಕಾಂತನು ವಿಶ್ವವಿದ್ಯಾಲಯದಲ್ಲಿ ವ್ಯಾಸಂಗವನ್ನು ಮುಗಿಸಿ, ತನ್ನ ಸಂಪತ್ತಿಗೆ ತಕ್ಕುದಾಗಿ, ಐ. ಸಿ. ಯಸ್. ಪರೀಕ್ಷೆ ಕೊಡಲು, ವಿಲಾಯತಿಗೆ ಹೊರಟನು. ಹೊರಡುವಾಗ ಹೊಸದಾಗಿ ಪರಿಗ್ರಹಿಸಿದ್ದ ಲಲನಾಮಣಿಯಲ್ಲೇನು ಹೇಳಬೇಕೆಂದು ತೋಚಲಿಲ್ಲ. ಆದರೂ ತನ್ನ ಬಲಿತ ಬುದ್ಧಿಗನುಸಾರವಾಗಿ "ಸ್ವರ್ಣ........ಶೋಕಿಸಬೇಡ........ಸದಾ........ಆನಂದ........ಚಿತ್ತಳಾಗಿರು........ಕೆಲವೇ ಸಮಯದಲ್ಲಿ ....ಪುನಹ........ಸಂಯೋಗ" ಎಂದು ಹೇಳುತ್ತಲೇ ಕಂಠವು ಬಿಗಿಹಿಡಿಯಿತು. ತಟಕುತಟಕಾಗಿ ಬೀಳುವ ಕಂಬನಿಯು ಆಕೆಯ ಕಪೋಲವನ್ನು ತೋಯಿಸಿತು. ಆಕೆಯು ಪ್ರೇಮಮಯ ಗಾಢಾಲಿಂಗನದಿಂದ ಶೂನ್ಯಚಿತ್ತಳಾಗಿದ್ದಳು. ಮುಖವು ಪ್ರೇಮದಿಂದ ಆಸಕ್ತಿಮಯವಾಗಿದ್ದಿತು. ರಮಾಕಾಂತನು ವಿದ್ಯಾಭ್ಯಾಸಕ್ಕಾಗಿ ಬೊಂಬಾಯಿಯಿಂದ ಹೊರಟು ಹೋದನು.

ಸ್ವರ್ಣಲತೆಯ ಹೃದಯವು ಶೂನ್ಯವಾಗಿ ಬಿಟ್ಟಿತು. ಅವಳು ಆಗಿಂದಾಗ್ಯೆ ಬರುತ್ತಲಿದ್ದ ತನ್ನಿನಿಯನ ಪ್ರೇಮಪರಿಪ್ಲುತ ಪತ್ರಗಳಿಂದ ತುಸು ಶಾಂತಳಾಗುವಳು. ದಿನಗಳಮೇಲೆ ದಿನಗಳು ಉರುಳಿದವು, ಕೆಲ ಮಾಸಗಳೂ ಕಳೆದವು. ಕಾಲವು ಒಂದೇ ರೀತಿಯಾಗಿರುವುದಿಲ್ಲ. ಅಂತೆಯೇ ಮನಸ್ಸಿನ ಭಾವನೆಗಳೂ ಒಂದೇ ತರಹದ್ದಾಗಿರುವದಿಲ್ಲ. ಸ್ವರ್ಣಲತೆಯ ಪವಿತ್ರ ಹೃದಯದಲ್ಲಿ ಭಾರತದ ಅವನತಿಯ ಚಿತ್ರಗಳು ಚಿತ್ರಿಸಲಾರಂಭಿಸಿದವು. ದೇಶದ ದಾರಿದ್ರ್ಯ ಹಾಹಾಕಾರವು ಅವಳ ಕರ್ಣ ರಂಧ್ರವನ್ನು ಪ್ರವೇಶಿಸಿತು. ಅಂದು ಸುಖ ಸಂಪತ್ತಿಗಳಿಂದ ತುಂಬಿ ತುಳುಕುತ್ತಿದ್ದ ಭಾರತ ಮಾತೆಯ ಇಂದಿನ ಪರಿಸ್ಥಿತಿಯನ್ನು ಯೋಚಿಸುವಳು. ಭಾರತಮಾತೆಯ ಪವಿತ್ರ ಹೃದಯದಲ್ಲಿ ಹುಟ್ಟಿ ಬೆಳೆದ ನಾವುಗಳು ಆಕೆಯ ಉದ್ಧಾರಕ್ಕಾಗಿ ಕೈಲಾದಷ್ಟು ಪ್ರಯತ್ನಿಸಬೇಕೆಂಬ ಪವಿತ್ರ ಭಾವನೆಗಳು ಅವಳಲ್ಲಿ ಅಂಕುರಿಸಿದವು. ಅಂದಿನಿಂದ ಸ್ಥಳೀಯ ದೇಶಸೇವಾ ಸಂಘದ ಕಾರ್ಯದರ್ಶಿಯಾಗಿ ಕೆಲಸವನ್ನು ದಕ್ಷತೆಯಿಂದ ನಿರ್ವಹಿಸಲಾರಂಭಿಸಿದಳು. ನಿದ್ರಿಸಿದ ಜನರನ್ನು ಹೊಡೆದೆಬ್ಬಿಸಿದಂತಿದ್ದ, ಆಕೆಯ ಪ್ರಜ್ವಲಿತ ಭಾಷಣಗಳು ದಿಗಂತವಿಶ್ರಾಂತವಾದವು. ಆಕೆಯ ಅಹರ್ನಿಶಿ ಪ್ರಯತ್ನದ ಫಲವಾಗಿ ಜನರಲ್ಲಿ ಜಾಗ್ರತಿಯುಂಟಾಯಿತು; ಕ್ರಾಂತಿಯೂ ಉಂಟಾಯಿತು.

ಇದನ್ನು ರಮಾಕಾಂತನು ತಿಳಿದನು. ಸ್ವಲ್ಪ ಮಟ್ಟಿಗೆ ಸಿಟ್ಟಾದನು. "ಇದು ನಮ್ಮಂತಹ ಕುಲೀನರಿಗೆ ಹೇಳಿಸಿದ ಕೆಲಸವಲ್ಲ" ಎಂದು ಪತ್ರ ಮುಖಾಂತರ ತಿಳಿಸಿದನು. ಪಾಪ; ಸುರಲೋಕದಂತಿದ್ದ ಪಾಶ್ಚಾತ್ಯ ದೇಶಗಳಲ್ಲಿ ಅತುಲವಾದ ಸಂಪತ್ತನ್ನು ಸುರಿದು ವಿದ್ಯಾಭ್ಯಾಸವನ್ನು ಮುಂದರಿಸುವ ರಾಯರಿಗೆ ನಮ್ಮ ಬಡ ಹಿಂದುಸ್ಥಾನದ ದಾರಿದ್ರ್ಯದ ಪರಿಸ್ಥಿತಿಯು ಹೇಗೆ ತಿಳಿಯಬೇಕು? ಸ್ವರ್ಣಲತೆಯು "ಜನತಾ ಜನಾರ್ದನನ ಸೇವೆಯು ನಿಜವಾಗಿಯೂ ಅಪಮಾನವಲ್ಲ" ಎಂದು ಗಂಡನೊಡನೆ ಪತ್ರ ದ್ವಾರಾ ನಿವೇದಿಸಿದಳು. ಉತ್ತರವನ್ನು ನಿರೀಕ್ಷಿಸಿಕೊಂಡಿದ್ದಳು. ಆದರೆ ಉತ್ತರವಿಲ್ಲ.

ರಮಾಕಾಂತನು ಐ. ಸಿ. ಯಸ್. ಪಾಸಾದನು. ಎಸ್. ಎನ್. ರಜಪುತಾನ ಎಂಬ ಸ್ಟೀಮರಿನಲ್ಲಿ ಹಿಂತಿರಿಗಿದನು. ದೇಶೀಯ ಚಳವಳವಾಗ ಪ್ರಬಲಾವಸ್ಥೆಯಲ್ಲಿತ್ತು. ಕಾನೂನುಭಂಗದ್ದೊಂದು ತೆರೆಯೆದ್ದು ದೇಶದಲ್ಲೆಲ್ಲಾ ಮಹಾಕ್ರಾಂತಿಯನ್ನುಂಟು ರಾಜಕ್ರಮಕ್ಕೆ ಅಲ್ಲಲ್ಲಿ ಭಂಗವು ತಾನೇ ಮಾಡಿತ್ತು ತಾನಾಗಿ ಆಗುತ್ತಿತ್ತು.

ಇಂತಹ ಸಂದರ್ಭದಲ್ಲಿ ರಮಾಕಾಂತನು ನದಿಯಾದ ಎಂಬ ಊರಲ್ಲಿ ಸಬ್ ಡಿವಿಜನಲ್ ಮೆಜಿಸ್ಟ್ರೇಟನಾಗಿ ನೇಮಿಸಲ್ಪಟ್ಟನು. ಅಧಿಕಾರವು ಪ್ರಾಪ್ತವಾದೊಡನೆ, ರಾಜದ್ರೋಹವನ್ನು ದೊಡ್ಡ ಅಪರಾಧವೆಂದೆಣಿಸಿ ಆ ಅಪರಾಧಿಗಳನ್ನು ಕಠಿಣವಾಗಿ ಶಿಕ್ಷಿಸುತ್ತಿದ್ದನು. ಈ ದೇಶೀಯ ಚಳವಳವು ಅತ್ಯಂತ ನೀತಿಬಾಹಿರ ವೆಂದೆಣಿಸಿ, ಕಾನೂನು ನಿರೋಧಕರನ್ನು ಅಸಹ್ಯವಾದ ಶಾಸನಕ್ಕೆ ಗುರಿಪಡಿಸುತ್ತಿದ್ದನು. ಇದು ಎಲ್ಲರಲ್ಲಿಯೂ ಒಂದು ತರದ ಭೀತಿಯನ್ನುಂಟುಮಾಡಿತು. ಸರಕಾರವು ಆತನ ಪೂರ್ಣಬೆಂಬಲದಲ್ಲಿತ್ತು. ಇದು ಸ್ವರ್ಣಲತೆಗೆ ಸಹನವಾಗಲಿಲ್ಲ. ಆಕೆಯ ಮಾತೃಭೂಮಿ ಸೇವೆಯು ಮಾತ್ರ ಯಾವುದರಿಂದಲೂ ನಿರುದ್ಧವಾಗದೆ ಒಂದೇಸಮನೆ ನಡೆಯುತ್ತಿತ್ತು.

ಅದೊಂದು ದಿನ ಬೆಳಿಗ್ಗೆ ಕೋರ್ಟು ಎಂದಿನಂತೆ ಆರಂಭವಾಯಿತು. ಮೆಜಿಸ್ಟ್ರೇಟರು ಗಂಭೀರವಾಗಿ ಭಾರವಾದ ಹೆಜ್ಜೆಯನ್ನಿಡುತ್ತ, ವಕೀಲ ಸಂಘದಿದಿರಿನಲ್ಲಿ ಅಭಿಮಾನದಿಂದ ಸ್ವಲ್ಪ ತಲೆಬಾಗಿ ತನ್ನ ಆಸನವನ್ನಲಂಕರಿಸಿದರು. ಎದುರಿನಲ್ಲಿ ದೊಡ್ಡ ದೊಡ್ಡ ರಿಕಾರ್ಡು ಕಟ್ಟುಗಳನ್ನಿಟ್ಟುಕೊಂಡು ವಕೀಲರು ತಮ್ಮ ತಮ್ಮ ಸ್ಥಾನದಲ್ಲಿ ಕುಳಿತರು. ಅಧಿಕಾರಿಗಳ ಹುಕುಮಿನಂತೆ ಕೆಲ ಅಪಾದಿತರು ಕರೆಯಲ್ಪಟ್ಟರು. ಎಲ್ಲರೂ ಖಾದಿಧರಿಸಿಕೊಂಡು ಅಭಿಮಾನದಿಂದ ಮುಂದೆ ಬಂದರು. ನಂತರ "ಸ್ವರ್ಣಲತಾದೇವಿ" ಎಂಬೋರ್ವ ಅಪಾದಿತೆಯು ಕಡೆಗೆ ಕರೆಯಲ್ಪಟ್ಟಳು. ಇದನ್ನು ಕೇಳಿ ಮ್ಯಾಜಿಸ್ಟ್ರೇಟರ ಮುಖವು ಅದೇಕೋ ವಿವರ್ಣವಾಯಿತು. ಸ್ವರ್ಣಲತೆಯು ಒಂದು ಬೆಳ್ಳಗಿನ ಖಾದಿ ಸೀರೆಯನ್ನುಟ್ಟುಕೊಂಡು ತಕಲಿಯಲ್ಲಿ ನೂಲು ತೆಗೆಯುತ್ತ ಅಪಾದಿತ ಸ್ಥಾನದಲ್ಲಿ ನಿಂತಳು. ಸಾಕ್ಷಿ ವಿಚಾರಣೆಯಾಯಿತು. ಪ್ರೊಸಿಕ್ಯೂಶನ್ ಮುಗಿಯಿತು. ಮ್ಯಾಜಿಸ್ಟ್ರೇಟರು, ಪ್ರತಿಯಾಗಿ ಏನಾದರೂ ನಿಮ್ಮ ಮಾತುಗಳುಂಟೇ? ಎಂದು ಕೇಳಿದರು.

ಸ್ವರ್ಣಲತಾದೇವಿಯು ಕಟ್ಟಿನ ಮುಂದೆ ಬಂದು ತುಸು ಧೈರ್ಯಗೊಂಡು ಗಂಭೀರ ವಾದವಾಣಿಯಲ್ಲಿ 'ಮಹೋದಯಾ! ನಾನು ಆಪಾದಿತೆಯು ಅಪಾದನೆಯು ನಾನು ದೇಶಸೇವೆಯಲ್ಲಿ ನಿರತಳಾಗಿರುವೆನೆಂದು, ಯಾವ ನಮ್ಮ ದೇಶವು ಪರದಾಸ್ಯದ ನೆಲೆಮನೆಯಾಗಿರುತ್ತದೋ, ಯಾವ ನಮ್ಮ ದೇಶವು ಬಡವರ ಹಾಹಾಕಾರಗಳಿಂದ ಪ್ರತಿಧ್ವನಿತವಾಗುವದೋ ಅಂತಹ ದೇಶಕ್ಕೋಸುಗ ಅಂತಹ ಮಾತೆಗೋಸುಗ ನನ್ನ ಅಲ್ಪಸೇವೆಯು ಅಪರಾಧವೇ? ಹಿಂದುಳಿದ ಕೈಗಾರಿಕೆಯನ್ನು ಮುಂದೆ ತರಬೇಕು. ಹಿಂದುಳಿದ ಆತ್ಮಶಕ್ತಿಯನ್ನು ಪ್ರಜ್ವಲಿಸ ಬೇಕು. ಜನತೆಯಲ್ಲಿ ಏಕಮತ್ಯವನ್ನು ಸ್ಥಿರಗೊಳಿಸಬೇಕು, ದಾರಿದ್ರ್ಯಮಹಾಮಾರಿಕೆಯನ್ನು ತೊಲಗಿಸಬೇಕು. ನಮ್ಮ ಹಿಂದೂಮಾತೆಯು ಸಂಪತ್ತಿನ ತವರುಮನೆಯಾಗಿರಬೇಕು ಕೈಗಾರಿಕೆಗಳಿಗೆ ಆದರ್ಶಪ್ರಾಯವಾಗಿರಬೇಕು, ಎಂದು ಜನರಲ್ಲಿ ಜಾಗ್ರುತಿಯನ್ನು ಉಂಟುಮಾಡುವುದು ತಪ್ಪೇ? ಹಾಗಾದಲ್ಲಿ ತಾವಿತ್ತ ಎಂತಹ ಕಠಿಣಶಾಸನಕ್ಕಾದರೂ ಬದ್ಧಳಾಗಿರುವೆನು. ತುಚ್ಛ ಪ್ರಾಣವು ಮಾತೆಯ ಹೆಸರಲ್ಲಿ ಅಳಿವುದಾದರೆ ಅದುಅಳಿವಲ್ಲ ಉಳಿವು ಎಂದು ತಿಳಕೊಳ್ಳುವೆನು. ಮಹಾಶಯ ಒಮ್ಮೆ ಈ ನರಕ ಯಾತನೆಯನ್ನನುಭವಿಸಿ ಜನರು ಭೀತರಾಗಬಹುದು. ಆದರೆ ಒಂದಲ್ಲೊಂದು ಕಾಲದಲ್ಲಿ ಮಾತೆಯ ಸರ್ವತೋಮುಖ ಉದ್ಧಾರವು ಆಗಲಿಕ್ಕೇ ಇದೆ' ಎಂದು ಆವೇಶಪರಳಾಗಿ ನುಡಿದಳು.

ಕೋರ್ಟು ಇನ್ನಿಂತಹ ಕಾರ್ಯಕ್ಕೆ ಕೈ ಹಾಕನೆಂದು ಬೇಂದು ಬರಕೊಂಡು ಆಪಾದಿತರನ್ನು ಬಿಟ್ಟು ಬಿಟ್ಟಿತು. ಇದೆಲ್ಲರಿಗೂ ಪರಮಾಶ್ಚರ್ಯವಾಯಿತು. ಅಂತಹ ಕಠೋರಹೃದಯ ಅಧಿಕಾರಿಯು ರಾಜದ್ರೋಹಿಗಳಲ್ಲಿ ಮುಖಂಡಳಾದ ಸ್ವರ್ಣಲತೆಯನ್ನು ಬಿಟ್ಟನೆಂದರೆ ಅವಾರಿಗೆ ಆಶ್ಚರ್ಯವೆನಿಸಲಿಕ್ಕಿಲ್ಲ! ಮನೆ ಮನೆಯಲ್ಲಿಯೂ, ಹಾದಿ ಬೀದಿಗಳಲ್ಲಿಯೂ ಈ ವಿಷಯ ಮಾತುಕಥೆಗಳೇ ನಡೆಯುತ್ತಿದ್ದವು.

ರಾತ್ರಿ 12 ಘಂಟೆ ಸಮಯ, ರಮಾಕಾಂತನ ಹೊರತು ಎಲ್ಲರೂ ನಿದ್ರಾಂಗನಾವಶರಾಗಿದ್ದರು. ಆತನು ಶಿಲಾ ವಿಗ್ರಹದಂತೆ ನಿಶ್ಚಲನಾಗಿ ಬಿದ್ದಿದ್ದನು. ಹೊರಗೆ ಭೀಕರ ರಾತ್ರಿಯನ್ನು ಭೇದಿಸಿಕೊಂಡು ಅದೊಂದು ಸುಸ್ವರವು ಇವನಿಗೆ ಕೇಳಿಸಿತು. ಕಿಟಕಿಯಿಂದ ಹೊರ ಇಣಿಕಿದನು. "ಮಾತಾ ದೇಶಹಿತಾ ಘನ ಸೇವನವೋ! ಮಾತಾ ದೇಶಹಿತಾ" ಎಂಬ ಪದವನ್ನು ಹೇಳುತ್ತಾ ಕೆದರಿದ ಕೇಶಜಾಲವುಳ್ಳ ಓರ್ವ ರಮಣಿಯು ಪಿಶಾಚಿಯಂತೆ ಕೈಯಲ್ಲೊಂದು ತಕಲಿಯನ್ನು ತಿರುವುತ್ತ ಮುಂದ

೮ನೇ ಪೇಜಿಗೆ ಮುಂದುವರಿದಿದೆ

ಶ್ರೀ ಸುಭಾಸಚಂದ್ರರ ಬಿಡುಗಡೆ

ಸಂಪೂರ್ಣ ವಿಶ್ರಾಂತಿ ತೆಗೆದುಕೊಳ್ಳಬೇಕೆಂದು ಡಾಕ್ಟರರ ಸಲಹೆ

ಬಂಗಾಳದಲ್ಲಿ ನಿರ್ಬಂಧದೊಳಗಿರಿಸಲ್ಪಟ್ಟ ಶ್ರೀ ಸುಭಾಸಚಂದ್ರ ಭೋಸರು ಇದೇ ತಾ17ರಲ್ಲಿ ನಿಶ್ಯರ್ತವಾಗಿ ಬಿಡುಗಡೆ ಹೊಂದಿರುವರು. ಈ ಬಿಡುಗಡೆಯು ಅನಿರೀಕ್ಷಿತವಾಗಿರುವುದರಿಂದ ಬಂಗಾಳದಲ್ಲೆಲ್ಲಾ ಆನಂದೋತ್ಸಾಹವುಂಟಾಗಿರುವುದು. ಶ್ರೀ ಭೋಸರ ಬಿಡುಗಡೆಯ ಕುರಿತು ಇತ್ತಲಾಗಿ ಪಾರ್ಲಿಮೆಂಟಿನಲ್ಲಿಯೂ ಎಸೆಂಬ್ಲಿಯಲ್ಲಿಯೂ ಪ್ರಶ್ನೆ ನಡೆದಾಗ ಅವರನ್ನು ಬಿಡುಗಡೆಮಾಡುವುದು ಅಪಾಯಕರವೆಂದೇ ಉತ್ತರ ಕೊಡಲಾಗಿತ್ತು. ಆದುದರಿಂದ ಈಗ ಅವರ ಬಿಡುಗಡೆಯು ಕಾಂಗ್ರೆಸ್ ಮುಖಂಡರಲ್ಲಿ ಆಶ್ಚರ್ಯವನ್ನುಂಟುಮಾಡಿರುವುದು. ಈ ಬಿಡುಗಡೆಯ ಹುಕುಮು ಕೊಟ್ಟವರು ಮಾನ್ಯ ವೈಸರಾಯರು. ಶ್ರೀ ಭೋಸರು ಬಿಡುಗಡೆ ಹೊಂದಿದೊಡನೆಯೇ ಪೋಲೀಸ್ ಕಮಿಶನರೊಡನೆ 2 ಘಂಟೆ ಮಾತಾಡಿದರು. ಅವರು ಮಾತಾಡಿದುದು ಬಂಗಾಳ ಡಿಟೆನ್ಯೂ ಕೈದಿಗಳ ವಿಷಯವೆಂದು ನಂಬಲಾಗಿದೆ. ಶ್ರೀ ಭೋಸರು ಆ ಕುರಿತು ಮೌನ ವಹಿಸಿರುವರು ಅವರು ತನ್ನ ಬಿಡುಗಡೆಯ ಸಂಗತಿಯನ್ನು ತಾಯಿಗೆ ತಿಳಿಸಿ, ತನ್ನ ಚಿಕಿತ್ಸೆ ನಡಿಸಿದ ಮೆಡಿಕಲ್‌ಕೋಲೇಜಿನ ಡಾಕ್ಟರರುಮತ್ತು ಸಿಬ್ಬಂದಿಗೆ ವಂದನೆಯನ್ನರ್ಪಿಸಿ ರಾತ್ರಿ 10 ಘಂಟೆ ಸಮಯಕ್ಕೆ ತನ್ನ ಮನೆಗೆ ಹೋದಾಗ ಬಂಗಾಳ ಕಾಂಗ್ರೆಸ್ ಮುಖಂಡರು ಪುಷ್ಪಹಾರ ಹಾಕಿ ಅವರನ್ನು ಸತ್ಕರಿಸಿದರು.

ಶ್ರೀ ಸುಭಾಸಚಂದ್ರರು ಬಹಳ ಕೃಶರಾಗಿ ತೋರುತ್ತಿರುವರು. ಅವರ ಈಗಣ ದೇಹತೂಕ 146 ರಾತ್ಲು. ಪ್ರತಿ ಸಂಜೆ ಅವರಿಗೆ 99ರಿಂದ 100 ಡಿಗ್ರಿಯ ವರೆಗೆ ಜ್ವರವಿರುವುದು. ಅವರು ರಾಜಕೀಯ ವಿಷಯ ಚರ್ಚಿಸಲೊಪ್ಪದಿದ್ದರೂ ಡಿಲ್ಲಿಯ ಸಮಾಚಾರ ತಿಳಿಯಲು ಆತುರಗೊಂಡರು. ಶ್ರೀ ಭೋಸರು ಅನಾರೋಗ್ಯ ನಿಮಿತ್ತ ಚಿಕಿತ್ಸೆಗಾಗಿ ವಿಯೆನ್ನಕ್ಕೆ ಹೋಗಿ ಅಲ್ಲಿಂದ ಹಿಂದೆ ಬಂದೊಡನೆಯೇ ಶರ್ತಬದ್ಧವಾದ ಬಿಡುಗಡೆಗೊಪ್ಪದೆ ತಾ ೮–೪–೩೭ರಲ್ಲು ಬೊಂಬಾಯಿಯಲ್ಲಿ ದಸ್ತಗಿರಿಯಾಗಿ ಯೆರ್ವಾಡ ಜೈಲಿಗೆ ಒಯ್ಯಲ್ಪಟ್ಟರು. ಅದೇ ಮೇ ತಿಂಗಳ ತಾ ೨೦ರಲ್ಲಿ ಬಂಗಾಳದ ಕುಸಿಕಯೋಂಗ್ ಎಂಬಲ್ಲಿ ನಿರ್ಬಂಧದಲ್ಲಿರಿಸಲ್ಪಟ್ಟು ಕಳೆದ ದಶಂಬರ ತಾ. ೭ರಲ್ಲಿ ರೋಗ ಪರೀಕ್ಷೆ ಮತ್ತು ಚಿಕಿತ್ಸೆಗಾಗಿ ಕಲ್ಕತ್ತದ ಮೆಡಿಕಲ್ ಕೋಲೇಜಿಗೆ ಒಯ್ಯಲ್ಪಟ್ಟಿದ್ದರು.

ಡಾಕ್ಟರರ ವರದಿ

ಇದೇ ತಾ ೧೮ರಲ್ಲಿ ಸರ್. ನೀಲರತ್ನ ಸರ್ಕಾರ್ ಮತ್ತು ಡಾಕ್ಟರ್ ಸುಲಾನಿಚಂದ್ರ ಭೋಸರು ಶ್ರೀ ಸುಭಾಸ ಚಂದ್ರರನ್ನು ಪರೀಕ್ಷಿಸಿ ಈ ಕೆಳಗಣ ವರದಿಯನ್ನು ಪ್ರಕಟಿಸಿರುವರು. "ಶ್ರೀ ಭೋಸರು ಎಲ್ಲಾ ತರದ ಮಾನಸಿಕ ಮತ್ತುಶಾರೀರಕಶ್ರಮವನ್ನು ನಿಲ್ಲಿಸಬೇಕು. ಅವರ ಸಂಜೆಯ ತಾಪವು ಸಂಪೂರ್ಣವಾಗಿ ನಿಲ್ಲುವ ವರೆಗೆ ಅವರು ಸಂಪೂರ್ಣ ವಿಶ್ರಾಂತಿ ತೆಗೆದುಕೊಂಡು ಕೋಣೆಯೊಳಗೇನೇ ಇರಬೇಕು. ಈಗಣ ಜ್ವರವು ಸಂಪೂರ್ಣ ನಿಲ್ಲುವ ವರೆಗೆ ಚಿಕಿತ್ಸೆಗಾಗಿ ಕೂಡಾ ಶಾರೀರಕ ಅಂಗಸಾಧನೆ ಮಾಡಬಾರದು. ಶ್ರೀ ಭೋಸರು ಮೊದಲಿನಂತೆ ಯಾವ ಕೆಲಸವನ್ನಾದರೂ ಆರಂಭಿಸಬೇಕಾದರೆ ಹೆಚ್ಚು ಸಮಯ ಹಿಡಿದೀತು. ಅವರನ್ನು ನೋಡ ಹೋಗುವವರು ಅವರಿಗೆ ಯಾವ ತರದ ಶ್ರಮವು ಆಗದಂತೆ ನೋಡಿದರೆ ಅವರು ಬೇಗ ಗುಣಹೊಂದಲು ಸಹಾಯಮಾಡಿದಂತಾಗುವುದು. ಅವರ ದೇಹಸ್ಥಿತಿಯ ಕುರಿತು ಆಗಾಗ ಬುಲ್ಲೆಟಿನುಗಳು ಹೊರಡಿಸಲ್ಪಡುವವು.

ಪಂಡಿತ ಜವಾಹರಲಾಲರು

ಶ್ರೀ ಸುಭಾಸಚಂದ್ರರ ಬಿಡುಗಡೆಯ ಕುರಿತು ಬಹಳ ಸಂತೋಷಗೊಂಡು, "ನಿಮ್ಮ ಬಿಡುಗಡೆಯ ಸಮಾಚಾರವು ಈಗ ತಾನೆ ತಿಳಿಯಿತು. ಸಂತೋಷವಾಯಿತು. ಡಾಕ್ಟರು ಅನುಮತಿಯಿತ್ತರೆ ನೀವು ಕೂಡಲೆ ದಿಲ್ಲಿಗೆ ಬರುವಿರೆಂದು ಆಶಿಸುತ್ತೇನೆ" ಎಂಬ ಸಂದೇಶ ಕಳುಹಿಸಿರುವರು. ಪಂಡಿತ ಇಂದ್ರರವರು ನೆಶನಲ್ ಕನ್ವೆಶ್ಯನಿನ ಪರವಾಗಿ ಶ್ರೀ ಭೋಸರಿಗೆ ಸ್ವಾಗತದ ಸಂದೇಶವಿತ್ತು ಡಿಲ್ಲಿಯು ಅವರಿಗೆ ವಿಜೃಂಭಣೆಯ ಸ್ವಾಗತವೀಯಲು ಕಾದಿದೆಯೆಂದು ತಿಳಿಸಿರುವರು. ಆದರೆ ಡಾಕ್ಟರರ ಅಭಿಪ್ರಾಯದ ಮೇರೆಗೆ ಶ್ರೀ ಭೋಸರಿಗೆ ಡಿಲ್ಲಿಗೆ ಹೋಗಲು ಸಾಧ್ಯವಿಲ್ಲದಾಗಿದೆ. ಈ ಸಂಗತಿಯನ್ನವರು ಪಂಡಿತ ಜವಾಹರಲಾಲರಿಗೆ ತಿಳಿಸಿರುವರು. ಕವಿ ರವೀಂದ್ರರು ಶ್ರೀ ಸುಭಾಸರ ಬಿಡುಗಡೆಯ ಕುರಿತು ಸಂತೋಷ ಸೂಚಿಸಿ ಸರಕಾರವು ವಿವೇಕಪರ ಹಾಗೂ ಕರುಣೆಯ ಕೆಲಸಮಾಡಿರುವುದೆಂದರು. ಕಲ್ಕತ್ತ ಕೋರ್ಪರೇಶನಿನಲ್ಲಿ ಮಿಸೆಸ್ ನೆಲ್ಲಿ ಸೇನ್ ಗುಪ್ತರು ಶ್ರೀ ಭೋಸರ ಬಿಡುಗಡೆಯ ಕುರಿತು ಸಂತೋಷ ಸೂಚಿಸಿ, ಸರಕಾರವು ಡಿಟೆನ್ಯೂಗಳನ್ನು ಬಿಡುವಷ್ಟರ ವಿವೇಕವುಳ್ಳದಾಗಲೆಂದು ಆಶಿಸಿದರು. ಪಂಡಿತ ಮಾಲವೀಯರೂ ಭೋಸರ ಬಿಡುಗಡೆಯ ಕುರಿತು ಸಂತೋಷ ಸೂಚಿಸಿ, ಮಾತೃಭೂಮಿಯ ಸೇವೆಗಾಗಿ ಅವರಿಗೆ ದೀರ್ಘಾಯುರಾರೋಗ್ಯ ಬಯಸಿ ಸಂದೇಶ ಕಳುಹಿಸಿರುವರು. ಬಂಗಾಳ ಪ್ರಾಂತಿಕ ಕಾಂಗ್ರೆಸ್ ಕಮಿಟಿಯವರು ಶ್ರೀ ಭೋಸರಿಗೆ ಬೇಗನೆ ಸಾರ್ವಜನಿಕ ಸ್ವಾಗತವೀಯುವ ಏರ್ಪಾಡುಮಾಡಲಿರುವರು. ಮಹಾತ್ಮ ಗಾಂಧಿಯವರ ಪರವಾಗಿ ಶ್ರೀ ಮಹದೇವ ದೇಸಾಯಿಯವರು ಶ್ರೀ ಭೋಸರನ್ನು ಕಂಡು ಮಾತಾಡಲು ಕಲ್ಕತ್ತಕ್ಕೆ ಹೋಗಿದ್ದು ಆ ಸಂದರ್ಭದಲ್ಲೇ ಅವರ ಬಿಡುಗಡೆಯಾದುದರಿಂದ ಬಹಳ ಆನಂದಗೊಂಡು ಅವರೊಡನೆ ಮಾತಾಡಿರುವರು. ಶ್ರೀ ಸುಭಾಸಚಂದ್ರರು ದೇಶದ ಹಲವು ಕಡೆಗಳಿಂದ ಅಭಿನಂದನೆಯ ಸಂದೇಶ ಪಡೆದಿರುವರು. ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿ ಮಹಾತ್ಮಾಗಾಂಧಿ, ಸರ್ದಾರ್ ವಲ್ಲಭಾಯಿ ಪಟೇಲ್, ಬಾಬು ರಾಜೇಂದ್ರ ಪ್ರಸಾದ್, ಶೇಟ್ ಜಮುನಾಲಾಲ್ ಬಜಜ್ ಮೊದಲಾದವರಿಂದ ಆನಂದ ಸೂಚನೆಯ ತಂತಿಗಳನ್ನು ಪಡೆದಿರುವರು. ಅವರು ತನ್ನನ್ನು ಅಭಿನಂದಿಸಿದವರೆಲ್ಲರಿಗೂ ವಂದನೆಯನ್ನರ್ಪಿಸಿರುವರು.

• ವಿಚಿತ್ರ ಪ್ರಪಂಚ •

4 ಕಿವಿಗಳ ಕರು

ಸಂಯುಕ್ತಪ್ರಾಂತ್ಯದ ಹಟೋಲಿ ಎಂಬಲ್ಲಿ ಒಂದು ದನವು, 4 ಕಿವಿಗಳುಳ್ಳ ಮತ್ತು ಕಾಲುಗಳ ಪ್ರತಿ ಮೊಣಗಂಟಿನಿಂದ ಮಾನವನ ಕೈಯಂತಹಇನ್ನೊಂದೊಂದು ಕಾಲು ಜೋತಾಡುವ ವಿಚಿತ್ರ ಕರುವೊಂದನ್ನಿಕ್ಕಿರುವುದು.

70 ವರ್ಷ ನಿದ್ದೆ

ಇಟಲಿಯ ಬಿಟೀನ ಪಿಯರಿ ಎಂಬ ಸ್ತ್ರೀಯು ಕಳೆದ 70 ವರ್ಷಗಳಿಂದ ನಿದ್ರಾರೋಗ ಪೀಡಿತಳಾಗಿರುವಳು. 1863ನೇ ಇಸ್ವಿಯಲ್ಲಿ ಬಿಟೀನಳು 15 ವರ್ಷದವಳಿದ್ದಾಗ ಪ್ರಥಮವಾಗಿ ಅವಳಿಗೆ ಈ ರೋಗ ಹಿಡಿದು ಈಗ 73 ವರ್ಷಗಳಿಂದ ಹಾಸಿಗೆಯಲ್ಲಿ ಮಲಗಿಕೊಂಡೇ ಇರುವಳು. ಅಪರೂಪವಾಗಿ ಒಮ್ಮೊಮ್ಮೆ ಬಿಟೀನಳಿಗೆ ಎಚ್ಚರಿಕೆಯಾಗುವುದು. ಎಚ್ಚರಿಕೆಯಾದಾಗ ಅವಳಿಗೆ ದೈವಿಕಶಕ್ತಿಯುಂಟೆಂದು ನಂಬಿ ಅಂಥ ವಿಶ್ವಾಸಿ ಒಕ್ಕಲಿಗರು ಅವಳನ್ನು ಕಾಣಬರುತ್ತಾರೆ. ಬಿಟೀನಳು ಅತ್ಯಂತ ತೆಳ್ಳಗಾಗಿರುವಳು. ಅವಳ ಚರ್ಮವು ಸಿಲ್ಕಿನಂತಿದ್ದು ಅವರ ಮೇಲಿನ ಕೂದಲು ಮಂಜುಗಡ್ಡೆಯಷ್ಟು ಬಿಳುಪಾಗಿರುವುದು.

13ನೇ ವಯಸ್ಸಿನಲ್ಲಿ 6 ಅಡಿ 3 ಇಂಚು ಉದ್ದ

ಲಂಡನಿನ ಈಸ್ಟ್‌ದುಲ್ವಿಚ್ ಎಂಬಲ್ಲಿಯ ಸಿಡ್ನಿವೆಲ್‌ಬ್ರುಕ್ ಎಂಬವನು ಕೇವಲ 13 ವರ್ಷದ ಹುಡುಗ. ಆದರೆ ಅವನ ಎತ್ತರ ಮಾತ್ರ 6ಅಡಿ 3ಇಂಚು. ಇನ್ನೂ ಉದ್ದ ಬೆಳೆಯುತ್ತಿರುವನು. ಶಾಲೆಯಲ್ಲಿ ಅವನು ಅಧ್ಯಾಪಕರಿಗಿಂತಲೂ ಬಹಳ ಉದ್ದವಾಗಿರುವನು. ಶಾಲೆಯಲ್ಲಿ ಅವನಿಗೆ ಎಲ್ಲಾ ಹುಡುಗರಿಗಿಂತ ಹಿಂದುಗಡೆ ಪ್ರತ್ಯೇಕವಾಗಿ ಒಂದು ಡೆಸ್ಕು ಕೊಡಲ್ಪಡುತ್ತದೆ. ಪ್ರಾಯವಾಗಿ ಉದ್ದ ಬೆಳೆಯುತ್ತಿದ್ದರೆ ಸಿಡ್ನಿಗೆ ನಿನಾವರೂ ಚಿಂತೆಯಾಗುತ್ತಿದ್ದಿಲ್ಲವಂತೆ. ಆದರೆ ಈಗ ಅವನಿಗೆ ಅವನ ಪ್ರಾಯದ ಚಿಕ್ಕ ಹುಡುಗ ಹುಡುಗಿಯರೊಂದಿಗೆ ತಿರುಗಾಡಹೋಗಲಾಗುವುದಿಲ್ಲ. ಯಾಕೆಂದರೆ ಅವನು ಅವರೆಲ್ಲರಿಗಿಂತ ಬಹಳ ಎತ್ತರ ತೋರುತ್ತಾನೆ. ಪ್ರಾಯದವರೊಂದಿಗೆ ಹೋಗಲು ಹುಡುಗನಾಗಿದ್ದಾನೆ. ಇದೇ ಆತನ ಜೀವನದ ಸಮಸ್ಯೆ. ಪೋಲೀಸನಾಗಬೇಕೆಂದು ಸಿಡ್ನಿಯ ಆಶೆ.

ಆತ್ಮಹತ್ಯೆಮಾಡಿ ನಿಷೇಧ ಸೂಚನೆ

ಧಾರ್ಮಿಕ ಪೀಡೆ ಮತ್ತು ರಾಜಕೀಯ ಕೊಳಕು ವೃತ್ತಿಯನ್ನು ಆತ್ಮಹತ್ಯೆಮಾಡಿ ನಿಷೇಧಿಸುವ ಸಂಘವೊಂದು ಜಪಾನಿನ ಪ್ರಧಾನ ಪಟ್ಟಣವಾದ ಟೋಕಿಯೋದಲ್ಲಿ ಸ್ಥಾಪಿಸಲ್ಪಟ್ಟಿರುವುದು. ಕಳೆದ ತಿಂಗಳಲ್ಲಿ ಈ ಸಂಘಕ್ಕೆ ಸೇರಿದ 5 ಮಂದಿ ಟೋಕಿಯೋ ಪಟ್ಟಣದ 5 ಕಡೆಗಳಲ್ಲಿ ಹರಿಕರಿ ಅಂದರೆ ಖಡ್ಗದ ಮೂಲಕ ಕುತ್ತಿಗೆ ಕಡಿದುಕೊಂಡು ಆತ್ಮಹತ್ಯೆಮಾಡಿಕೊಳ್ಳಲೆತ್ನಿಸಿದರು. ಇವರು ಕಪ್ಪು ಪೋಷಾಕು ಧರಿಸಿಕೊಂಡು 6 ಮಂದಿಯೂ ಒಟ್ಟು ಮೆರವಣಿಗೆಯಲ್ಲಿ ಹೋಗಿ ತಮ್ಮ ತಮ್ಮ ನಿಶ್ಚಿತ ಸ್ಥಳಕ್ಕೆ ಹೋಗಿ ನಿಂತರು. ಈ ಸಂಬಂಧವಾಗಿ ಪೋಲೀಸರು 15 ಮಂದಿಯನ್ನು ದಸ್ತಗಿರಿ ಮಾಡಿರುವರು.

ಲೋಕದ ಅತ್ಯಮೂಲ್ಯ ತತ್ತಿ

ಅಮೆರಿಕದ ಸಾನ್‌ಫ್ರಾನ್ಸಿಸ್ಕೋವಿನಲ್ಲಿರುವ ಮಿಲ್ಟನ್‌ಸ್ಮಿತ್ ಎಂಬವನಿಗೆ ಮೊಟ್ಟೆಗಳನ್ನು ಸಂಗ್ರಹಿಸುವ ಹುಚ್ಚು. ಲೋಕದಲ್ಲಿ ಇವನಷ್ಟು ಮೊಟ್ಟೆ ಸಂಗ್ರಹಿಸಿದವರು ಲೋಕದಲ್ಲಾರೂ ಇಲ್ಲ. ಇವನಲ್ಲಿರುವ ಒಂದು ಮೊಟ್ಟೆಯು ಸುಮಾರು ಒಂದಡಿ ಉದ್ದವಾಗಿ 10 ಇಂಚು ಎತ್ತರವಿರುವುದು ಇದು ಈಗ ಅಳಿದು ಹೋಗಿರುವ ಆನೆಯಷ್ಟು ದೊಡ್ಡ ಪಕ್ಷಿಜಾತಿಯೊಂದರ ಮೊಟ್ಟೆಯೆಂದು ನಂಬಲಾಗಿದೆ. ಇದಕ್ಕೆ 10,000 ಪವನು ಮಿಕ್ಕಿ ಬೆಲೆಕಟ್ಟಲಾಗಿದೆ. 25 ವರ್ಷಗಳ ಮೊದಲು ಮಡಗಾಸ್ಕರ್ ನದಿಯಲ್ಲಿ ನೆರೆ ಬಂದಿದ್ದಾಗ ಅದರ ತಟದಲ್ಲಿ ಅನಾಗರೀಕ ಪಂಗಡವೊಂದರ ನಾಯಕನೊಬ್ಬನಿಗಿದು ಸಿಕ್ಕಿತು. ಅವನದನ್ನು ಮಿಶನರಿ ಒಬ್ಬನಿಗೆ 5 ತಲೆ ಜಾನುವಾರಿಗೆ ಮಾರಿದನು.

ಸುಳ್ಳುಶೋಧನಾ ಯಂತ್ರ

ರಕ್ತದ ಒತ್ತಾಟದ ಪ್ರಮಾಣವನ್ನು ಕಂಡು ಒಬ್ಬನು ಸುಳ್ಳು ಹೇಳುವುದೋ ಸತ್ಯವೋ ಎಂಬುದನ್ನು ಕಂಡು ಹಿಡಿಯುವ ಯಂತ್ರವೊಂದೀಗ ರಚಿಸಲ್ಪಟ್ಟಿದೆ. ಸುಳ್ಳುಗಾರನೆಂಬವನ ಕೈಯಲ್ಲೊಂದು ಲೋಹದ ತಗಡನ್ನು ಹಿಡಿಯಕೊಟ್ಟು ಅವನ ಶರೀರದಮೇಲೆ ವಿದ್ಯುತ್ ಪ್ರವಾಹವನ್ನು ಬೆಟ್ಟರಿಯ ಮೂಲಕ ಹರಿಸಲಾಗುವುದು ಆ ಮೇಲೆ ಅವನಿಗೆ ಪ್ರಶ್ನೆ ಕೇಳಲಾಗುವುದು. ಅವನು ಸುಳ್ಳು ಹೇಳಿದರೆ ಆತನ ಮೈಯಲ್ಲಿ ಸರ್ವಸಾಮಾನ್ಯಕ್ಕಿಂತಲೂ ಹೆಚ್ಚಿನ ಬೆವರುಂಟಾಗಿ ವಿದ್ಯುತ್ ಪ್ರವಾಹದ ವೇಗವು ಹೆಚ್ಚುವುದು. ಇದರಿಂದ ಅವನು ಸುಳ್ಳುಗಾರನೆಂಬುದು ಸಿದ್ಧವಾಗುವುದು. ಇದಕ್ಕಿಂತಲೂ ಸುಲಭವಾದ ಇನ್ನೊಂದು ಉಪಾಯವೆಂದರೆ ಸುಳ್ಳುಗಾರನಿಗೆ 'ಸತ್ಯದ್ರವ' ಎಂಬ ಒಂದು ಬಗೆಯ ದ್ರಾವಕವನ್ನು ಪ್ರಯೋಗಮಾಡುವುದು. ಇದರಿಂದ ಅವನ ಮೆದುಳಿನ ಕೆಲಭಾಗವು ನಿಶ್ಚೇತನ ಹೊಂದಿ ಆತನು ತಾನುಮಾಡಿದ ಸಂಗತಿಗಳನ್ನೆಲ್ಲಾ ಇದ್ದಕ್ಕಿದ್ದಂತೆ ಹೇಳಿ ಬಿಡುವನು. ಇನ್ನೂ ವಿಚಿತ್ರವೆಂದರೆ ಆತನು ಮರೆತಿದ್ದ ಸಂಗತಿಗಳೂ ಆಗ ನೆನಪಿಗೆ ಬರುವವು.

ಬಾಲವಾಙ್ಮಯದ ಆವಶ್ಯಕತೆ ಮತ್ತು ನಿರ್ಮಾಣದ ವಿಷಯಕವಾದ ಪ್ರಬಂಧ

ಬಾಲವಾಙ್ಮಯ

ಬೆಲೆ ಮೂರಾಣೆ

ಉಪಾಧ್ಯಾಯರ ಪ್ರಕಟನ ಸಮಿತಿ

ಉಡುಪಿ.

ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿ ಸಭೆ

ಕೆಲವು ಶರ್ತಗಳಿಂದ ಅಧಿಕಾರ ಸ್ವೀಕಾರಕ್ಕೆ ಸಮ್ಮತಿ

ಇದೇ ತಾ. 15 ಮತ್ತು 16ರಲ್ಲು ಡಿಲ್ಲಿಯಲ್ಲಿ ಸೇರಿದ ಕಾಂಗ್ರೆಸ್ ವರ್ಕಿಂಗ್ ಕಮಿಟಿ ಸಭೆಗಳಲ್ಲಿ ಕಾಂಗ್ರೆಸಿನವರು ಅಧಿಕಾರ ಸ್ವೀಕರಿಸುವ ಕುರಿತು ಬಹಳ ಚರ್ಚೆ ನಡೆಯಿತು. ಪಂಡಿತ ಜವಾಹರಲಾಲರೇ ಮೊದಲಾದವರು ಮಂತ್ರಿಪದವಿ ಸ್ವೀಕಾರಕ್ಕೆ ಬದ್ಧ ವಿರೋಧಿಗಳಾಗಿದ್ದರು. ಸರ್ದಾರ್ ವಲ್ಲಭಭಾಯಿ, ಬಾಬು ರಾಜೇಂದ್ರ ಪ್ರಸಾದರೇ ಮೊದಲಾದವರು, ಕಾಂಗ್ರೆಸಿನವರು ರಾಷ್ಟ್ರಹಿತ ದೃಷ್ಟಿಯಿಂದ ಅಧಿಕಾರ ಸ್ವೀಕರಿಸುವುದು ಅತ್ಯಾವಶ್ಯಕವೆಂಬ ಅಭಿಪ್ರಾಯದಿಂದಿದ್ದರು. ಈ ಚರ್ಚೆಯಲ್ಲಿ ಮಹಾತ್ಮಾಗಾಂಧಿ ಮತ್ತು ಶ್ರೀ ರಾಜಗೋಪಾಲಾಚಾರ್ಯರು ಮುಖ್ಯಭಾಗವಹಿಸಿದ್ದರು. ದೀರ್ಘ ಸಮಯದ ಚರ್ಚೆಯ ಮೇಲೆ ಗಾಂಧಿಯವರು ತಯಾರಿಸಿದ ಠರಾವೊಂದನ್ನು ವರ್ಕಿಂಗ್ ಕಮಿಟಿಯವರು ಮಂಜೂರು ಮಾಡಿರುವರು. ಆ ಠರಾವಿನ ಸಾರಾಂಶವನ್ನು ಈ ಕೆಳಗೆ ಕೊಡಲಾಗಿದೆ.

ಇತ್ತಲಾಗಿನ ಚುನಾವಣೆಯಲ್ಲಿ ದೇಶವು ಕಾಂಗ್ರೆಸಿಗೆ ಕೊಟ್ಟ ಪ್ರಚಂಡ ಬೆಂಬಲಕ್ಕಾಗಿ ಮತದಾರರು ಕಾಂಗ್ರೆಸಿನ ಧೋರಣೆ ಮತ್ತು ಕಾರ್ಯಕ್ರಮವನ್ನು ಸಮರ್ಥಿಸಿದುದಕ್ಕಾಗಿ ಕಾಂಗ್ರೆಸು ಅವರನ್ನು ಬಹಳವಾಗಿ ಪ್ರಶಂಸಿಸುತ್ತದೆ. ಪೂರ್ಣ ಸ್ವರಾಜ್ಯ ಸಾಧನೆ, ಹೊಸರಾಜ್ಯಾಂಗರಚನೆಯ ನಿರಾಕರಣೆ, ಹಿಂದೀ ರಾಜ್ಯಭಾರ ಸೂತ್ರವನ್ನು ರಚಿಸುವರೆ ಹಿಂದೀಯರ ಪ್ರತಿನಿಧಿ ಸಭೆಯನ್ನು ಕರೆಯುವಕೇಳಿಕೆಗಳನ್ನು ಮುಂದಿಟ್ಟು ಕೊಂಡು ಕಾಂಗ್ರೆಸು ಈ ಚುನಾವಣೆಗಿಳಿಯಿತು. ಹೊಸ ಸುಧಾರಣಾ ಆಕ್ಟನ್ನು ಎದುರಿಸಿ ಅದನ್ನು ಕೊನೆಗೊಳಿಸುವುದೇ ಕಾಂಗ್ರೆಸಿನ ಸುವ್ಯಕ್ತ ಧೋರಣೆಯಿದ್ದಿತು.

ಮತದಾರರು ಈ ಧೋರಣೆ ಮತ್ತು ಕಾರ್ಯಕ್ರಮಕ್ಕೆ ತಮ್ಮ ಪರಿಪೂರ್ಣ ಸಮ್ಮತಿಯ ಮುದ್ರೆಯನ್ನೊತ್ತಿರುವರು. ಮತ್ತು ಬ್ರಿಟಿಷ್ ಸರಕಾರವು ಯೋಚಿಸಿರುವ ಪ್ರಜಾಸತ್ತೆಯ ಕ್ರಮದಲ್ಲಿಯೇ ಹೊಸ ಸುಧಾರಣಾ ಆಕ್ಟು ನಿಷೇಧಿತವಾಗಿ ನಿರಾಕರಿಸಲ್ಪಟ್ಟಿರುವುದು. ಪ್ರಾಯಸ್ಥಮತ ಸಮುದಾಯದಿಂದ ಆರಿಸಲ್ಪಡುವ ಪ್ರತಿನಿಧಿ ಸಭೆಯಲ್ಲಿ, ರಾಷ್ಟ್ರೀಯ ಸ್ವಾತಂತ್ರ್ಯದ ಆಧಾರದ ಮೇಲೆ ತಮ್ಮ ರಾಜಕೀಯ ಘಟನೆಯನ್ನು ತಾನೇ ರಚಿಸುವ ಅಪೇಕ್ಷೆಯನ್ನು ಜನತೆಯು ನಿರೂಪಿಸಿರುವದು. ಆದುದರಿಂದ ಹೊಸ ಸುಧಾರಣೆಯನ್ನು ಹಿಂದೆ ತೆಗೆದುಕೊಳ್ಳಬೇಕೆಂದು ಕಾಂಗ್ರೆಸ್ ಕಮಿಟಿಯು ಹಿಂದೀ ಜನರ ಪರವಾಗಿ ಕೇಳುತ್ತದೆ.

ಜನರು ಈ ರೀತಿ ತಮ್ಮ ನಿರ್ಧಾರವನ್ನು ಸ್ಪಷ್ಟಗೊಳಿಸಿರುವಾಗ ಬ್ರಿಟಿಷ್ ಸರಕಾರವು ಅದನ್ನು ಧಿಕ್ಕರಿಸಿ ಹೊಸ ಸುಧಾರಣೆಯನ್ನು ಜ್ಯಾರಿಗೆ ತಂದ ಪಕ್ಷದಲ್ಲಿ, ಕೌನ್ಸಿಲುಗಳ ಕಾಂಗ್ರೆಸ್ ಮೆಂಬರರ ಕೆಲಸವೆಂದರೆ, ತಾವು ಯಾವುದಕ್ಕಾಗಿ ಚುನಾವಣೆಗೆ ನಿಂತು ಪ್ರಚಂಡ ವಿಜಯ ಪಡೆದಿರುವರೋ ಅದಕ್ಕಾಗಿ, ಅಂದರೆ ಹೊಸ ಸುಧಾರಣಾ ಆಕ್ಟನ್ನು ಎದುರಾಡುವ ಕಾಂಗ್ರೆಸಿನ ಪ್ರಾಮುಖ್ಯ ತತ್ವದ ಆಧಾರದಿಂದ ಅವರು ಕೌನ್ಸಿಲುಗಳ ಒಳಗೂ ಹೊರಗೂ ಕೆಲಸಮಾಡಬೇಕೆಂದು ಕಮಿಟಿಯವರು ಆಗ್ರಹಪೂರ್ವಕವಾಗಿ ಕೇಳಿಕೊಳ್ಳುತ್ತಾರೆ. ಅನಿವಾರ್ಯವಾದ ಈ ಧೋರಣೆಯು ಬ್ರಿಟಿಷ್ ಸರಕಾರದೊಡನೆ ತಿಕ್ಕಾಟವನ್ನುಂಟುಮಾಡಿ, ಬ್ರಿಟಿಷ್ ಸಾಮ್ರಾಜ್ಯ ಶಾಹಿ ಮತ್ತು ಹಿಂದೀ ರಾಷ್ಟ್ರೀಯತೆಯ ಪರಸ್ಪರ ವಿರೋಧವನ್ನು ಮತ್ತೂ ಬಯಲಿಗೆಳೆದು, ಹೊಸ ರಾಜಕೀಯ ಘಟನೆಯ ನಿರಂಕುಶ ಮತ್ತು ಲೋಕಶಾಹಿ ವಿರೋಧಕ ಸ್ವಭಾವವನ್ನು ಸಿದ್ಧಗೊಳಿಸುವುದು. ಕಳದ ಫೆಬ್ರುವರಿ ತಾ. 27 ಮತ್ತು 28ರಲ್ಲು ವಾರ್ಧದಲ್ಲಿ ಸೇರಿದ ಕಾಂಗ್ರೆಸ್ ವರ್ಕಿಂಗ್ ಕಮಿಟಿ ಸಭೆಯಲ್ಲಿ ಮಂಜೂರಾಗಿರುವ, ಕಾಂಗ್ರೆಸ್ ಮೆಂಬರರು ಕೌನ್ಸಿಲುಗಳ ಒಳಗೆ, ಹೊರಗೆ ನಡಿಸಬೇಕಾದ ಕೆಲಸ, ಜನಸಾಮಾನ್ಯರೊಳಗೆ ಪಡೆಯಬೇಕಾದ ಸಂಪರ್ಕ, ಕೌನ್ಸಿಲಿನೊಳಗೆ ಮುಂದೊತ್ತಬೇಕಾದ ಕಾಂಗ್ರೆಸ್ ಕಾರ್ಯಕ್ರಮದ ಕುರಿತಾದ ನಿರ್ಣಯಗಳನ್ನು ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿಯು ಸಮರ್ಥಿಸಿ, ಅವುಗಳಲ್ಲಿ ಸೂಚಿಸಲ್ಪಟ್ಟಂತೆ ಕೌನ್ಸಿಲುಗಳಲ್ಲಿರುವ ಮತ್ತು ಹೊರಗಣ ಕಾಂಗ್ರೆಸ್ ಮೆಂಬರರೆಲ್ಲಾ ಕೆಲಸಮಾಡಬೇಕೆಂದು ಕೇಳಿಕೊಳ್ಳುತ್ತದೆ.

ಕಾಂಗ್ರೆಸ್ಸಿನವರು ಮಂತ್ರಿ ಪದವಿ ಸ್ವೀಕರಿಸುವ ವಿಷಯದಲ್ಲಿ ಮೇಲಿನ ವಾರಾಗಳಲ್ಲಿ ಸಾರಾಂಶವಾಗಿ ಕೊಡಲ್ಪಟ್ಟಿರುವ ಧೋರಣೆಯನ್ನನುಸರಿಸುತ್ತಾ ಕಾಂಗ್ರೆಸ್ ಪಕ್ಷೀಯರು ಬಹುಪಕ್ಷವಾಗಿರುವ ಪ್ರಾಂತಗಳಲ್ಲಿ ಮಂತ್ರಿ ಪದವಿ ಸ್ವೀಕರಿಸಲು ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿಯು ಸಮ್ಮತಿ ಮತ್ತು ಅಧಿಕಾರ ಕೊಡುತ್ತದೆ. ಆದರೆ ಕಾಂಗ್ರೆಸ್ ಮಂತ್ರಿ ಮಂಡಲವು ಹೊಸ ಸುಧಾರಣಾ ಆಕ್ಟಿಗನುಗುಣವಾಗಿ ನಡೆಯುವ ವರೆಗೆ ಗವರ್ನರರು ಆಡಳಿತದಲ್ಲಿ ಕೈಹಾಕುವ ತಮ್ಮ ವಿಶೇಷಾಧಿಕಾರಗಳನ್ನು ಉಪಯೋಗಿಸುವದಿಲ್ಲ ಮತ್ತು ಮಂತ್ರಿಗಳ ಸಲಹೆಯನ್ನು ಮೂಲೆಗೊತ್ತುವದಿಲ್ಲೆಂದು ಎಸೆಂಬ್ಲಿಯ ಕಾಂಗ್ರೆಸ್ ಪಕ್ಷದ ನಾಯಕನು ತಾನು ಸಮಾಧಾನ ಹೊಂದಿ ಅದನ್ನು ಜಾಹೀರಾಗಿ ವ್ಯಕ್ತಪಡಿಸುವಂತಾಗಬೇಕು.

ಈ ನಿರ್ಣಯವು ಕಾಂಗ್ರೆಸ್ ವರ್ಕಿಂಗ್ ಕಮಿಟಿಯಲ್ಲಿ ಸರ್ವ ಸಮ್ಮತಿಯಿಂದ ಮಂಜೂರಾಗಿರುವುದಿಲ್ಲೆಂದೂ, 8 ಅನುಕೂಲ ಮತ್ತು 4 ಪ್ರತಿಕೂಲ ಮತದಿಂದ ಪಾಸಾಗಿರುವುದೆಂದೂ, ಪ್ರೆಸಿಡೆಂಟರಾದ ಪಂಡಿತ ಜವಾಹರಲಾಲರು ತಟಸ್ಥರಾಗಿದ್ದರೆಂದೂ ತಿಳಿದುಬರುತ್ತದೆ.

ಇದೇ ತಾ 17ನೇ ಅಪರಾಹ್ನ ಘಂಟೆ 1–30ಕ್ಕೆ ಚಿತ್ತಾಕರ್ಷಕವಾಗಿ ಶೃಂಗರಿಸಲ್ಪಟ್ಟ ಅನ್ಸಾರಿ ನಗರದಲ್ಲಿ ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿಯ ಸಭೆಯು ಜರಗಿತು. ಪಂಡಿತ ಮಾಲವೀಯರೂ ಈ ಸಭೆಯಲ್ಲಿ ಭಾಗಿಯಾಗಿದ್ದರು. ಶ್ರೀ ಎಂ. ಎನ್. ರ್ಯೊಗಳು ತಾನು ಇತ್ತಲಾಗಿ ಮದುವೆಯಾದ ಅಮೆರಿಕದ ಮಹಿಳೆಯಾದ ಶ್ರೀಮತಿ ವಿಲ್ಸನ್ ರ್ಯೊ ಯೊಂದಿಗೆ ಬಂದಿದ್ದರು. ಕಳೆದ ಕಾಂಗ್ರೆಸ್ ಲೆಕ್ಕ ಪತ್ರ ಪರಿಶೋಧನಾ ವರದಿಯ ಮಂಜೂರಾತಿಯೇ ಮೊದಲಾದ ಕಾರ್ಯವಾದ ಮೇಲೆ ಸರ್ದಾರ್ ವಲ್ಲಭಾಯಿ ಪಟೇಲರ ಸೂಚನೆಯಂತೆ ಮುಂದಿನ ಕಾಂಗ್ರೆಸ್ ಅಧಿವೇಶನವನ್ನು ಫೆಬ್ರುವರಿ ತಿಂಗಳಲ್ಲಿ ಜರಗಿಸುವುದೆಂದಾಯಿತು. ಶ್ರೀ ಬಾಬು ರಾಜೇಂದ್ರ ಪ್ರಸಾದರು, ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ನಿರ್ಣಯವನ್ನು ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿಯ ಮುಂದಿಟ್ಟರು. ಕಾಂಗ್ರೆಸ್ಸಿನವರ್ಚಸ್ಸಿಗಾಗಿ ಮತ್ತು ಜನಹಿತ ಸಾಧನೆಯ ದೃಷ್ಟಿಯಿಂದ ಮಂತ್ರಿ ಪದವಿ ಸ್ವೀಕರಿಸುವ ಆವಶ್ಯಕತೆಯ ಕುರಿತು ಮಾತಾಡಿದರು.

ಮಂತ್ರಿಪದವಿ ಸ್ವೀಕಾರದ ಕುರಿತು ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿಯವರು 2 ದಿನಗಳಲ್ಲಿ 12 ಘಂಟೆ ಚರ್ಚಿಸಿದರು. ಕಾಂಗ್ರೆಸ್ ಸೋಸಿಯಲಿಸ್ಟರ ಪರವಾಗಿ ಪಂಡಿತ ಜವಾಹರಲಾಲರ ತಂಗಿ ಮಿಸೆಸ್ ವಿಜಯಲಕ್ಷ್ಮಿ ಪಂಡಿತರು, ಶ್ರೀಗಳಾದ ಮಸಾನಿ ಮತ್ತು ಪಟ್ವರ್ಧನರು ಅಸಾಧಾರಣ ವಕ್ತೃತ್ವದಿಂದ ಅಧಿಕಾರ ಸ್ವೀಕಾರವನ್ನು ಪ್ರಬಲವಾಗಿ ವಿರೋಧಿಸಿದರು. ಬಾಬು ಪುರುಷೋತ್ತಮ ದಾಸ್ ಟಂಡನರೂ ಉಜ್ವಲ ಭಾಷಣದಿಂದ ಕಾಂಗ್ರೆಸ್ ಸೋಸಿಯಲಿಸ್ಟರಿಗೆ ಬೆಂಬಲವಿತ್ತರು. ಪಂಡಿತ ಮದನಮೋಹನ ಮಾಲವೀಯರು ಮತ್ತು ಶ್ರೀ ಶರಚ್ಚಂದು ಭೋಸರು ತಟಸ್ಥರಾಗಿದ್ದರು. ಪಂಡಿತ ಜವಾಹರಲಾಲರು ಬಲು ದಕ್ಷತನದಿಂದ ಕಾರ್ಯನಿರ್ವಹಿಸಿ ಇತ್ತಂಡದವರೂ ಸರಿಯಾಗಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುವಂತೆ ಆಸ್ಪದವಿತ್ತು ಪ್ರೆಸಿಡೆಂಟರು ಯಾವ ರೀತಿ ನಡೆಯಬೇಕೆಂಬುದಕ್ಕೊಂದು ಮಾದರಿಯಾಗಿದ್ದರು. ವರ್ಕಿಂಗ್ ಕಮಿಟಿಯ ನಿರ್ಣಯದ ಪರವಾಗಿ ಅತ್ಯಂತ ಪರಿಣಾಮಕಾರಿಯಾಗಿ ಮಾತಾಡಿದವರೆಂದರೆ ಶ್ರೀ ಸಿ. ರಾಜಗೋಪಾಲಾಚಾರ್ಯರು. ಅವರ ಭಾಷಣವು ಅದೊಂದು ಮಾನಸಿಕ ಔತಣವೇ ಆಗಿದ್ದಿತು.

ವರ್ಕಿಂಗ್ ಕಮಿಟಿಯ ನಿರ್ಣಯಕ್ಕೆ ಪೂರ್ವಾಪರ ಸಂಬಂಧವಿಲ್ಲ; ಅದು ಬರಿಯ ಶಬ್ದಜಾಲ, ಅಭಿಪ್ರಾಯಗಳ ಗೊಂದಲವೆಂದೆಲ್ಲಾ ಸೋಸಿಯಲಿಸ್ಟರು ಅದರ ಕುರಿತು ಮಾಡಿದ ಉಗ್ರಟೀಕೆಯನ್ನು ಶ್ರೀ ಸಿ ರಾಜಗೋಪಾಲಾಚಾರ್ಯರು ಸಮರ್ಪಕವಾಗಿ ಎದುರಿಸಿದರು. ಕಾಂಗ್ರೆಸಿನ ಉದ್ದೇಶವೇನು? ಹೊಸ ಸುಧಾರಣಾ ಆಕ್ಟನ್ನು ಪ್ರತಿಭಟಿಸಿ ಕೊನೆಗೊಳಿಸುವುದು. ಅದನ್ನು ವರ್ಕಿಂಗ್ ಕಮಿಟಿಯ ನಿರ್ಣಯದ ಪ್ರತಿಯೊಂದು ವಾರಾದಲ್ಲಿಯೂ ಒತ್ತಿ ಹೇಳಲಾಗಿದೆ. ಅದು ಅಸಂಬದ್ಧವಾದರೆ ಇಡೀ ರಾಷ್ಟ್ರದ ಅಸಂಬದ್ಧತೆಯನ್ನೇ ಸೂಚಿಸಿದಂತಾಗುವುದು. ಕಾಂಗ್ರೆಸು ಅಸಹಕಾರ ಚಳವಳವನ್ನಾರಂಭಿಸಿತು. ಕಾಯಿದೆಭಂಗಹೂಡಿತು, ಅನಂತರ ಅದನ್ನು ನಿಲ್ಲಿಸಿ, ಶಾಸನ ಬದ್ಧ ಕಾರ್ಯಕ್ರಮವನ್ನು ಕೈಕೊಂಡು, ಕಾಂಗ್ರೆಸ್ ಉಮೇದ್ವಾರಿಗಳ ಮೇಲಿನ ನಿಷೇಧ

ESTD. 1906

CANARA BANK

LIMITED

(INCORPORATED IN BRITISH INDIA)

MEMBER, RESERVE BANK OF INDIA
MEMBER, CLEARING HOUSE BOMBAY.

SUBSCRIBED CAPITAL	6,00,000
PAID UP CAPITAL	3,33,240
RESERVES	4,50,000
DEPOSITS	79,64,000
TOTAL RESOURCES	98,00,000

OFFICES:

BOMBAY-FORT	MANGALORE
BOMBAY-MANDVI	BANGALORE
ALLEPPEY	CHIKMAGALUR
ERNAKULAM	ARSIKERE
COCHIN	DAVANGERE
CALICUT	HUBLI
CANNANORE	DHARWAR etc., etc.

ವನ್ನು ತೆಗೆದುಹಾಕಲು ಸರಕಾರಕ್ಕೆ ಅರ್ಜಿ ಹಾಕಿ, ಚುನಾವಣೆಗೆ ನಿಂತು, ಕೌನ್ಸಿಲಿನೊಳಗೆ ಪ್ರವೇಶಿಸಿತು ಇದರಲ್ಲೆಲ್ಲಾ ಎಷ್ಟರಮಟ್ಟಿನ "ಅಸಂಬದ್ಧತೆಯಿದೆಯೋ ಅಷ್ಟು" ಅಸಂಬದ್ಧತೆಯು ಕಾಂಗ್ರೆಸ ವರ್ಕಿಂಗ್ ಕಮಿಟಿಯ ನಿರ್ಣಯದಲ್ಲಿದೆ ಕಾಂಗ್ರೆಸ್ ಸೋಶಿಯಲಿಸ್ಟರು ಇವೆರಡರಲ್ಲಿ ಒಂದರ ಕುರಿತು ಪರಿಹಾಸ್ಯಮಾಡಿವರ ಇನ್ನೊಂದರ ಕುರಿತೂ ಪರಿಹಾಸ್ಯಮಾಡಬೇಕು. ಶಾಸನಬದ್ಧ ಕಾರ್ಯವನ್ನಾರಂಭಿಸಿ ಮುಂದುವರಿದು ಈಗ ಅಧಿಕಾರ ಸ್ವೀಕಾರದಿಂದ ಓಡಿಹೋಗುವುದರಲ್ಲಿ ಅರ್ಥವಿಲ್ಲ ಗವರ್ನರರು ನಮಗೆ ನಮ್ಮ ಸೂತ್ರಬದ್ಧವಾದ ಹಕ್ಕುಗಳನ್ನೆಲ್ಲಾ ಕೊಟ್ಟು, ಆ ಸಂಬಂಧವಾದ ಕಾರ್ಯಕಲಾಪಗಳಲ್ಲಿ ನಮ್ಮ ಸಲಹೆಗನುಸಾರವಾಗಿ ನಡೆದಲ್ಲಿ ನಾವು ಅಧಿಕಾರ ಸ್ವೀಕರಿಸಲೇಬೇಕು. ನಾವು ಅದಿಕಾರ ಸ್ವೀಕರಿಸುವುದು ಪಾರ್ಥದಲ್ಲಿ ನಿಶ್ಚೈಸಲ್ಪಟ್ಟಿರುವ ಕಾರ್ಯಕ್ರಮವನ್ನು ಜಾರಿಗೆ ತರುವುದಕ್ಕಾಗಿ. ನಾವು ನಮ್ಮ ತುರ್ಬುಗಳನೆಲ್ಲಾ ಮೇಜಿನ ಮೇಲೆ ಹಾಕಿರುವೆವು. ನಾವು ಏನೆಲ್ಲಾ ಮಾಡುವೆವೆಂಬುದನ್ನು ಗವರ್ನರರಿಗೆ ಮೊದಲಾಗಿಯೇ ತಿಳಿಸಿ, ಅವರನ್ನು ಸಾಂಪತ್ತಿಕ ಭದ್ರತೆಯೇ ಮೊದಲಾದುವುಗಳ ಕುರಿತು ಕೆಲಮಟ್ಟಿನ ಜಾಗ್ರತೆತೆಗದುಕೊಂಡು ಉಳಿದ ಸಂದರ್ಭದಲ್ಲೆಲ್ಲಾ ಕೇವಲ ಸೂತ್ರಬದ್ಧ ಮೇಲ್ವಿಚಾರಕರಾಗಿ ನಮ್ಮ ಕಾರ್ಯಕ್ರಮವನ್ನು ಜಾರಿಗೆ ತರುವುದರಲ್ಲಿ ನೆರವಾಗಿ ಇಂಗ್ಲೆಂಡು ಮೊದಲಾದ ದೇಶಗಳಂತೆ ಸರಿಯಾದ ಆಡಳಿತ ಪದ್ಧತಿಗಳು ಬೆಳೆವಂತೆ ಪ್ರೋತ್ಸಾಹಿಸುವರೋ ಎಂಬುದನ್ನು ಅವರೊಡನೆ ಕೇಳಿತಿಳಕೊಳ್ಳುವೆವು ನಾವು ಅಧಿಕಾರ ಲಾಲಸಿಗಳಾಗಿ, ಸ್ವಾರ್ಥಪರರಾಗಿ ಒಚ್ಚಾಳಿ ಬದ್ಮಾಶಿಗಳಾಗಿ ಮಂತ್ರಿ ಪದವಿ ಸ್ವೀಕರಿಸುವುದಲ್ಲ, ಸೂತ್ರಬದ್ಧವಾಗಿ, ನಡೆವ ಜವಾಬ್ದಾರಿಯುಳ್ಳ ಗೃಹಸ್ಥರಾಗಿ ನಮ್ಮ ಶರ್ತಗಳ ಮೇರೆಗೆ ಗವರ್ನರರು ನಮ್ಮನ್ನು ಸ್ವೀಕರಿಸಿದರೆ ನಾವು ಆಡಳಿತವನ್ನು ನಡಿಸಲೊಪ್ಪುವೆವು ಇಲ್ಲವಾದರ ನಿರಾಕರಿಸುವೆವು

ಮಂತ್ರಿಪದವಿ ಸ್ವೀಕರಿಸವೆಮಾಡುವ ಪ್ರತಿಬಂಧಕ ಕಾರ್ಯವು ಫಲಕಾರಿಯಾಗಲಾರದು. ಕೌನ್ಸಿಲುಗಳಿಗೆ ಹೋಗದೆ ಕೂತರೆ ಇಲ್ಲವೆ ಹೋಗಿ ಹೆಜ್ಜೆಹೆಜ್ಜೆಗೂ ಸರಕಾರಕ್ಕೆ ತಡೆಯೊಡ್ಡಿದರೆ ವಿರೋಧದ ಬರಿಯ ಪ್ರದರ್ಶನವನ್ನಷ್ಟೇ ಮಾಡಿದಂತಾಗುವುದು ಇದರಿಂದ ಸರಕಾರದ ಆಡಳಿತ ಯಂತ್ರವನ್ನೇ ನಿಲ್ಲಿಸುವ ನಿಜವಾದ ಪ್ರತಿಬಂಧಕವುಂಟಾಗಲಾರದು ಅಂದಮೇಲೆ ನಾವು ಮಂತ್ರಿಪದವಿ ಸ್ವೀಕರಿಸಿ, ಆಡಳಿತ ಯಂತ್ರವನ್ನು ಕೈವಶಮಾಡಿಕೊಂಡು, ನಮ್ಮ ಚುನಾವಣೆಯ ಘೋಷಣೆಯಲ್ಲಿ ವಚನವಿತ್ತಂತೆ ಜನತೆಗೆ ಎಂದೋ ಮಾಡಬೇಕಾಗಿದ್ದ ಸಹಾಯವನ್ನೀಯಲೆತ್ನಿಸಬಾರದೇಕೆ? ಮಂತ್ರಿಪದವಿ ಸ್ವೀಕರಿಸುವವರು ಕಾಂಗ್ರೆಸಿಗಾಗಿ ಕಳೆದ 20 ವರ್ಷಗಳಿಂದ ನಾನಾರೀತಿಯ ತ್ಯಾಗಮಾಡಿರುವ ದೇಶಭಕ್ತರು ಅಂಥವರ ಪ್ರಾಮಾಣಿಕತೆಯ ಮೇಲೆ ಅವಿಶ್ವಾಸವಿಡುವುದು ಸರಿಯಲ್ಲೆಂದು ಶ್ರೀ ಸಿ ರಾಜಗೋಪಾಲಾಚಾರ್ಯರು ಸಭಿಕರು ನೃತ್ಯೈಯೊಂದು ತಲೆದೂಗುವ ರೀತಿಯಲ್ಲಿ ಭಾಷಣವಿತ್ತರು, ಪಂಡಿತ ಮಾಲವೀಯರು, ಕಳೆದ 50 ವರ್ಷಗಳಿಂದ ಸರಕಾರವು ತಾನುಕೊಟ್ಟ ಮಾತಿಗೇನೇ ವಿರೋಧವಾಗಿ ನಡೆದಿರುವ ಸಂಗತಿಗಳನ್ನು ವಿವರಿಸಿ, ಅಧಿಕಾರ ಸ್ವೀಕರಿಸುವುದರಿಂದ ಜನತೆಗೆ ಕೆಲಮಟ್ಟಿಗೆ ಸಹಾಯಮಾಡಬಹುದಾದರೂ ಅದಕ್ಕಿಂತ ಅಧಿಕಾರ ಸ್ವೀಕರಿಸದ, ಸ್ವರಾಜ್ಯ ಸಾದನಾ ಚಳವಳವನ್ನು ಭರದಿಂದ ನಡಿಸುವುದು ಉಚಿತವೆಂದರು ಸರ್ದಾರ ವಲ್ಲಭಾಯಿಯವರು, ಕಾಂಗ್ರೆಸ್ ಪಕ್ಷದ ಮಂತ್ರಿಗಳಿಗೂ ಗವರ್ನರರಿಗೂ ತಿಕ್ಕಾಟವುಂಟಾಗುವುದು ಖಂಡಿತ. ಅಂದಮೇಲೆ ಅವರು ಹೆಚ್ಚು ಸಮಯ ಅಧಿಕಾರದಲ್ಲಿರುವಂತಿಲ್ಲ ಪ್ರಕೃತ ಅಧಿಕಾರ ಸ್ವೀಕರಿಸುವುದರಿಂದ ಕಾಂಗ್ರೆಸಿಗೆ ಸಾಧಕವೇ ಹೊರತು ಬಾಧಕವಾಗಲಾರದೆಂದರು. ಕೊನೆಯಲ್ಲಿ ಬಾಬು ರಾಜೇಂದ್ರಪ್ರಸಾದರು ಈ ಚರ್ಚೆಗಿತ್ತ ಉತ್ತರವು ಅತ್ಯಂತ ಉಜ್ವಲವಾದುದಿತ್ತು. ಹಳ್ಳಿಗಳ ಜನತೆಗೆ ಕಾಂಗ್ರೆಸ್ ಮೆಂಬರರು ಮಾಡಬೇಕಾದ ಕರ್ತವ್ಯ, ಕಾಂಗ್ರೆಸು ಕೌನ್ಸಿಲಿಗೆ ಪ್ರವೇಶಿಸಿರುವುದರಿಂದ ತಮಗೇನಾದರೂ ಸಹಾಯವಾದೀತೆಂಬ ಜನ ಸಾಮಾನ್ಯರಲ್ಲುಂಟಾಗಿರುವ ನಿರೀಕ್ಷೆಯ ಕುರಿತೆಲ್ಲಾ ಬಾಬು ರಾಜೇಂದ್ರರು ಮಾತಾಡಿ, ಜನತೆಗೆ ಅಲ್ಪಮಟ್ಟಿಗಾದರೂ ಕಾಂಗ್ರೆಸಿನವರು ಸಹಾಯವೀಯುವಂತಾದರೆ, ಯಾವ ರೀತಿಯಿಂದಾದರೂ ಹಳ್ಳಿಗರಿಗೆ ನಾವು ಸ್ವಾಭಿಮಾನದಿಂದ ಸಹಾಯಮಾಡಬಲ್ಲೆವಾದರೆ ನಾವೆಲ್ಲಾ ಈ ನಿರ್ಣಯಕ್ಕೆ ಅನುಕೂಲ ಮತವೀಯಬೇಕೆಂದು ಕೇಳಿಕೊಂಡು, ಹಳ್ಳಿಗಳ ದುರವಸ್ಥೆಯ ಹೃದ್ರಾವಕ ಚಿತ್ರವನ್ನು ಸಭೆಯ ಮುಂದಿರಿಸಿ ತನ್ನ ವಕ್ತೃತ್ವದಿಂದ ಎಲ್ಲರನ್ನೂ ಚಕಿತರನ್ನಾಗಿ ಮಾಡಿಬಿಟ್ಟರು ಕಟ್ಟಕಡೆಗೆ ಮತ ತೆಗೆಯುವಾಗ 135 ಅನುಕೂಲ ಮತ್ತು 78 ಪ್ರತಿಕೂಲ ಮತಗಳಿಂದ ವರ್ಕಿಂಗ್ ಕಮಿಟಿಯ ನಿರ್ಣಯವು ಮಂಜೂರಾಯಿತು 13 ಘಂಟೆಗಳ ವರೆಗೆ ನಡೆದ ಈ ಚರ್ಚೆಯಲ್ಲಿ 30 ಮಂದಿ ಬಾಷಣವಿತ್ತಿದ್ದರು. ಅಧಿಕಾರ ಸ್ವೀಕಾರವನ್ನು ವಿರೋಧಿಸಿ ಶ್ರೀ ಜಯಪ್ರಕಾಶ್ ನಾರಾಯಣರೇ ಮೊದಲಾದವರು ತಂದ ನಿರ್ಣಯಗಳು ಪ್ರಬಲ ಬಹುಪಕ್ಷದಿಂದ ಬಿದ್ದು ಹೋದುವು ಕಾಂಗ್ರೆಸು ಮಂದಪಕ್ಷೀಯರ ದಾರಿಹಿಡಿಯುವುದೆಂದು ಕಾಂಗ್ರೆಸು ಸೋಶಿಯಲಿಸ್ಟರ ಭೀತಿ. ಅವರಲ್ಲೆಲ್ಲಾ ತೀವ್ರ ಅತೃಪ್ತಿಯುಂಟಾಗಿರುವುದು ಕಾಂಗ್ರೆಸ್ ವರ್ಕಿಂಗ್ ಕಮಿಟಿಯಲ್ಲಿರವ ಸೋಶಿಯಲಿಸ್ಟ ಮೆಂಬರರು ರಾಜಿನಾಮೆಕೊಡಬೇಕೆಂಬಷ್ಟರ ವೈರಾಗ್ಯವೂ ಕೆಲವರಲ್ಲುಂಟಾಗಿರುವುದು. ಈ ಸಲದ ಆಲ್ ಇಂಡಿಯಾ ಕಾಂಗ್ರೆಸ ಕಮಿಟಿ ಸಭೆಗೆ ಒಟ್ಟು 291 ಮೆಂಬರರ ಪೈಕಿ 212 ಮಂದಿ ಬಂದಿದ್ದರು

(ಹಿಸೇ ಪುಟದಿಂದ)

ರಿಯುತ್ತಿದ್ದಳು ಅಕಯನ್ನು ನೋಡುತ್ತಲೇ ಇವನ ಮುಖವು, ಗಂಭೀರಭಾವವನ್ನು ತಾಳಿತು. ತರತರದ ಭಾವನೆಗಳು ಮುಖಮಂಡಲವನ್ನಾವರಿಸಿದವು ಕಟ್ಟಕಡೆಗೆ ಒಂದು ಕಾಗದದಲ್ಲಿ ಏನೇನೋ ಗೀಚಿ ಡಿಸ್ಟ್ರಿಕ್ಟ ಮೆಜಿಸ್ಟ್ರೇಟರ ವಿಳಾಸ ಬರದು ಹಾಯಾಗಿ ನಿದ್ರೆಹೋದನು

ಮರುದಿನ ಬೆಳಿಗ್ಗೆ ರಮಾಕಾಂತ ಸ್ವರ್ಣಲತೆಯರಿಬ್ಬರೂ, ಶುದ್ಧವಾದ ಖಾದಿಯನ್ನುಟ್ಟುಕೊಂಡು, ಆ ಊರಿನ ಪ್ರದಾನ ಪರದೇಶಿ ವಸ್ತು, ಬಾಂಡಾಗಾರದಿದಿರಿನಲ್ಲಿ ನಿಂತು ಪಿಕೆಟ್‌ಮಾಡುತ್ತಿದ್ದರು. ಕೈಯಲ್ಲೊಂದೊಂದು ತಕಲಿಯು ಗರಗರನೆ ತಿರುಗುತ್ತಿತ್ತು

ಮಂಗಳೂರು

(ನಮ್ಮ ಸ್ವಂತ ಬಾತ್ಮೀದಾರರಿಂದ)

ಬೋರ್ಡುಶಾಲಾ ಉಪಾಧ್ಯಾಯ ಉಪಾಧ್ಯಾಯಿನಿಯರ ಸಭೆ

ಕಳೆದ ತಾ. ೧೭ನೇ ಬುಧವಾರ ದಕ್ಷಿಣ ಕನ್ನಡ ಜಿಲ್ಲಾಬೋರ್ಡು ಅಧ್ಯಾಪಕ ಅಧ್ಯಾಪಿಕೆಯರ ಸಭೆಯೊಂದು ಮಂಗಳೂರಲ್ಲಿ ಸೇರಿತು ಜಿಲ್ಲಾಬೋರ್ಡ್ ಸದಸ್ಯರಲ್ಲಿ ಅನೇಕರು ಹಾಜರಿದ್ದರು ಬೋರ್ಡಿನ ಶಾಲಾ ಅಧ್ಯಾಪಕ ಅಧ್ಯಾಪಿಕೆಯರ ಸಂಬಳದಲ್ಲಿ ರೂಪಾಯಿಗೆ ೧॥ ಆಣೆಯಂತೆ ಕಡಿತವಾಗುವದೆಂಬ ವಿಚಾರದಲ್ಲಿ ಭಾಷಣಗಳಾಗಿ ಅಂತಹ ಕಡಿತವಾಗಬಾರದೆಂದು ಬೋರ್ಡಿನವರಿಗೆ ತಿಳಿಸಬೇಕೆಂಬುದಾಗಿ ನಿರ್ಣಯವಾಯಿತು ಮತ್ತೆ ಉಪಾಧ್ಯಾಯನಿಯರ ಸಂಬಳವನ್ನು ಉಪಾದ್ಯಾಯರ ಸಂಬಳದಷ್ಟಕ್ಕೆ ಇಳಿಸುವುದು ಸರಿಯಲ್ಲವೆಂದೂ, ಅವರಿಗೆ ಈಗ ದೊರೆಯುತ್ತಿರುವ ಸಂಬಳದಲ್ಲಿ ಕಡಿಮೆ ಮಾಡಬಾರದಾಗಿಯೂ ನಿರ್ಧಾರವಾಯಿತು,

ಉಪಾಧ್ಯಾಯಿನಿಯರ ಮನವಿ

ಬೋರ್ಡುಶಾಲಾ ಅಧ್ಯಾಪಿಕೆಯರು ಜಿಲ್ಲಾಬೋರ್ಡು ಅದ್ಯಕ್ಷರಾದ ದಿವಾನ್ ಬಹದೂರ್ ಬಿ ಮಹಾಬಲ ಹೆಗ್ಗಡೆಯವರಿಗೆ ಒಂದು ಮನವಿಯನ್ನು ಕಳುಹಿಸಿರುವರು ಅದರಲ್ಲಿ ಅಧ್ಯಾಪಿಕೆಯರಿಗೆ ವೆಚ್ಚವು ಅಧಿಕ ಇರುವುದಂದೂ ಅವರ ಸಂಬಳದಲ್ಲಿ ಐದು ರೂಪಾಯಿಗಳನ್ನು ಕಡಿಮೆಮಾಡುವುದರಿಂದ ಅವರ ಜೀವನವು ಕಷ್ಟಸಾಧ್ಯವೆಂದೂ ರೂಪಾಯಲ್ಲಿ ೧॥ ಆಣೆಯ ಕಡಿತವು ಆಗಬಾರದೆಂದೂ ತಿಳಿಸಿರುವರು

ಮಂಗಳೂರು ನಗರ ಸಭೆ

ಮಂಗಳೂರು ನಗರಸಭೆಯ ಮೀಟಿಂಗು ನಗರ ಸಭಾಮಂದಿರದಲ್ಲಿ ಕಳೆದ ತಾ ೧೬ನೇ ಸಾಯಂಕಾಲ ನಡೆಯಿತು ಮಾನ್ಯ ಮಾ|ಕೆ ವಿಟ್ಠಲ ಶೆಟ್ಟಿಯವರು ಅಧ್ಯಕ್ಷತೆವಹಿಸಿದರು ನಗರದ ಕೆಲವು ಚರಂಡಿಗಳನ್ನು ಎರಡು ದಿನಗಳಿಗೊಂದಾವರ್ತಿಯಾದರೂ ಶುಚಿಮಾಡಬೇಕೆಂದು ಶ್ರೀ ರಂಗರಾಯರು ಠರಾವು ತಂದರು ನೀರಿನ ಅನಕೂಲತೆಯಿಲ್ಲದೆ ಇದು ಕಷ್ಟಸಾಧ್ಯವೆಂದೂ, ಕೂಲಿಯವರ ಸಂಖ್ಯೆಯು ಹೆಚ್ಚಾಗಿ ಬೇಕಾಗುವದೆಂದೂ ಸೂಚಿಸಲ್ಪಟ್ಟಿತು ಶ್ರೀ| ರಂಗರಾಯರು ಒಂದುಕಾಲದಲ್ಲಿ ನಗರ ಸಭೆಯ ಸದಸ್ಯರಾಗಿದ್ದ ದಿವಂಗತ ಕಾರ್ನಾಡು ಸದಾಶಿವರಾಯರ ಹೆಸರಿನಲ್ಲಿ ಒಂದು ರಸ್ತೆಯ ನಾಮಕರಣವಾಗಬೇಕೆಂದೂ ಸೂಚಿಸಿದರು ಭಾವಚಿತ್ರವಿಡುವ ಬಗ್ಗೆ ೭೫ ರೂಪಾಯಿ ಮಂಜೂರಾಯಿತು. (ಸರಕಾರದ ಅನುಮತಿ ಸಿಕ್ಕಿದರೆ ಈ ವೆಚ್ಚಮಾಡಲ್ಪಡುವುದು) ರಸ್ತೆ ನಾಮಕರಣದ ವಿಷಯವು ಮುಂದಿನ ಸಭೆಯಲ್ಲಿ ಇತ್ಯರ್ಥವಾಗಬೇಕೆಂದಾಯಿತು. ಸಿಟಿ ಮೋಟರ್ ಸರ್ವಿಸಿಗೆ ಲೈಸನ್ಸು ಕೊಡುವ ವಿಷಯದಲ್ಲಿ ಜಟ್ಕಾವಾಲರಿಗೆ ಸ್ವಲ್ಪ ಸಮಯಕೊಡಬೇಕೆಂದೂ ಇಲ್ಲದಿದ್ದರೆ ಅವರು ಬಹಳ ಕಷ್ಟಕ್ಕೀಡಾಗುವರೆಂದೂ ಸೂ

ಗೃಹಸ್ಥರೇ!

ಗೃಹಕೃತ್ಯೋಪಯೋಗದ ಎಲ್ಲಾ ವಿಧದ ತಾಮ್ರ ಹಿತ್ತಾಳಿ, ಜರ್ಮನ್ ಬೆಳ್ಳಿ, ಬೆಳ್ಳಿ ಸಾಮಾನುಗಳು ಎಲ್ಲಿ ಸಿಗುತ್ತವೆ ಬಲ್ಲಿರಾ?

ರಥಬೀದಿಯಲ್ಲಿ ಕಲ್ಮಂಜೆ ವ್ಯಾಸಾಚಾರ್ಯರ ಅಂಗಡಿಯಲ್ಲಿ ಮಾತ್ರವೇ.

ಸ್ವದೇಶಿ ಕೈಗಾರಿಕೆ! ಹದಿನೆಂಟು ವರ್ಷಗಳ ಅನುಭವ!

ಮನೆಯ ಉಪಯೋಗಕ್ಕೂ ಉಡುಗರೆ ಕೊಡಲಿಕ್ಕೂ ದಾನಮಾಡಲಿಕ್ಕೂ ಬೇಕಾದ ನಮೂನೆಯ ಸಾಮಾನುಗಳನ್ನು ಮನಮೆಚ್ಚುವ ಮಾದರಿಯಲ್ಲಿ ತಕ್ಕ ಕಾಲದಲ್ಲಿ ನಾಜೂಕಾಗಿ ತಯಾರುಮಾಡಿಸಿಯೂ ಕೊಡಲಾಗುವುದ

ಹೆಚ್ಚಿನ ವಿವರಗಳಿಗೆ ಸಚಿತ್ರ ಕೆಟಲಾಗಿಗೆ ಬರೆಯಿರಿ

ಕಲ್ಮಂಜೆ ವ್ಯಾಸಾಚಾರ್ಯ,

ಪಾತ್ರೆ ವ್ಯಾಪಾರಿ, ರಥಬೀದಿ, ಉಡುಪಿ.



ಗೃಹಕೃತ್ಯಕ್ಕೆ ಬೇಕಾದ ವಿಧವಿಧ ತಾಮ್ರದಪಾತ್ರೆಗಳು.

ಚಿಸಲ್ಪಟ್ಟಿತು. ಇದರ ವಿಷಯ ಪರ್ಯಾಲೋಚಿಸುವುದಕ್ಕೆ ಒಂದು ಸಮಿತಿಯು ನೇಮಕವಾಯಿತು ಇನ್ನಿತರ ಕೆಲವು ವಿಷಯಗಳ ತೀರ್ಮಾನವಾದನಂತೆ ಸಭೆಯು ಮುಗಿಯಿತು.

ವಿದ್ಯಾರ್ಥಿವೇತನ

ವಿಕ್ಟೋರಿಯಾ ಜ್ಯುಬಿಲಿ ವೇತನ ಪಡೆಯಲರ್ಹರಾದ ಇಬ್ಬರು ವಿದ್ಯಾರ್ಥಿಗಳನ್ನು (ಒಬ್ಬ ಬ್ರಾಹ್ಮಣ ಒಬ್ಬ ಹಿಂದೀ ಕ್ರೈಸ್ತ) ಆರಿಸಲು ಬರುವ ಜೂನ್ ತಿಂಗಳ ತಾ. ೨೧ರಲ್ಲಿ ಸ್ಥಳೀಯ ಗವರ್ನಮೆಂಟ್ ಕಾಲೇಜಿನಲ್ಲಿ ಒಂದು ಪರೀಕ್ಷಾ ಸ್ಪರ್ಧೆ ನಡೆಯಲಿರುವುದೆಂದು ಜಿಲ್ಲಾಜಡ್ಜಿಯವರು ತಿಳಿಸುತ್ತಾರೆ

ಆಟಗಳ ಸ್ಪರ್ಧೆ

ಮಂಗಳೂರು ಕೊಸ್ಮೊಪೋಲಿಟನ್ ಕ್ಲಬ್ಬಿನ ಆಶ್ರಯದಲ್ಲಿ ಇದೇ ತಿಂಗಳ ತಾ. ೨೬ರಿಂದ ಟೆನ್ನಿಸ್ ಆಟದ ಸ್ಪರ್ಧೆಯು ಆರಂಭವಾಗುವುದು ಅವೆ ಚೂರ ಆಟಗಾರರಿಗೆ ಮಾತ್ರ ಈ ಸ್ಪರ್ಧೆಯಲ್ಲಿ ಭಾಗವಹಿಸಲು ಅವಕಾಶವಿರುವುದು.

ಮಂಗಳೂರು ನಗರ ಕಾಂಗ್ರೆಸ್ ಸಮಿತಿ

ನಿನ್ನೆಯ ದಿನ (ತಾ. ೨೧ನೇ ಭಾನುವಾರ) ಮಂಗಳೂರ ಟೌನ್ ಕಾಂಗ್ರೆಸ್ ಕಮಿಟಿಯ ಸಭೆನಡೆಯಿತು. ಶ್ರೀ ಕೆ. ಹೈದರರನ್ನು ಟೌನ್ ಕಾಂಗ್ರೆಸ್ ಕಮಿಟಿಯ ಕಾರ್ಯದರ್ಶಿಗಳಾಗಿ ತಿಂಗಳಿಗೆ ರೂ. ೨೦ರ ತಲಬಿನ ಮೇಲೆ ನೇಮಿಸಲಾಯಿತು ಖಜಾಂಚಿಯವರಾಗಿದ್ದ ಶ್ರೀ| ಯು. ಸಂಜೀವರಾಯರು ತಮ್ಮ ಅನಾರೋಗ್ಯದ ದೆಸೆಯಿಂದ ತಮ್ಮ ಅಧಿಕಾರಕ್ಕೆ ರಾಜಿನಾಮೆ ಕೊಟ್ಟದ್ದನ್ನು ವ್ಯಸನ ಪೂರ್ವಕವಾಗಿ ಸ್ವೀಕರಿಸಲಾಯಿತು ಮತ್ತು ಅವರು ಸಭೆಗೆ ಮಾಡಿದ ಸಹಾಯಕ್ಕಾಗಿ ಅವರಿಗೆ ಧನ್ಯವಾದಗಳನ್ನು ಸಮರ್ಪಿಸಿ ಠರಾವಾಯಿತು ರಾಜಿನಾಮೆಕೊಟ್ಟ ಶ್ರೀ| ಸಂಜೀವರಾಯರ ಸ್ಥಾನದಲ್ಲಿ ಶ್ರೀ| ಕೆ. ಭೋಜರಾಯರು ಖಜಾಂಚಿಯಾಗಿ ಆರಿಸಲ್ಪಟ್ಟರು ಏಪ್ರಿಲ್ ತಾ. ೧ರಲ್ಲಿ ಹರತಾಳ ಆಚರಿಸಬೇಕೆಂದೂ ಆ ದಿನ ಮೆರವಣಿಗೆ ಸಾರ್ವಜನಿಕ ಸಭೆ ಜರಗಬೇಕೆಂದೂ ನಿರ್ಧಾರವಾಯಿತು. ದೇಶಭಕ್ತ ಶ್ರೀ| ಸುಭಾಷಚಂದ್ರ ಬೋಸರ ಬಿಡುಗಡೆಯಾದುದಕ್ಕಾಗಿ ಸಭೆಯು ಸಂತೋಷವನ್ನೂ ಸೂಚಿಸಿದ್ದಲ್ಲದೆ ದೇಶಭಕ್ತರು ಬೇಗನೇ ತಮ್ಮ ಆರೋಗ್ಯವನ್ನು ಸಂಪಾದಿಸಿ ದೇಶದ ಸ್ವಾತಂತ್ರ್ಯಸಂಗ್ರಾಮದಲ್ಲಿ ಮುಂದಾಳುತನವನ್ನು ವಹಿಸುವಂತಾಗಲೆಂದು ಹಾರೈಸಿ ಠರಾವು ಮಂಜೂರುಮಾಡಿತು

ಎಯಿಡೆಡ್ ಶಾಲಾ ಉಪಾಧ್ಯಾಯರ ಸಂಘ

ತರಬೇತಿ ಹೊಂದಿ ಈಗ ಕೆಲಸವಿಲ್ಲದೆ ಇರುವ ಉಪಾಧ್ಯಾಯರಿಗೆ ಕೆಲಸವನ್ನು ಹುಡುಕಿ ಕೊಡಿಸುವ ಉದ್ದೇಶದಿಂದ, ಮೇಲಿನ ಸಂಘದವರು ನಿರುದ್ಯೋಗಿಗಳಾದ ಉಪಾಧ್ಯಾಯರ ಸಂಖ್ಯೆಯನ್ನು ಕಂಡು ಹಿಡಿಯಲೆತ್ನಿಸುತ್ತಿರುವರು ಇದು ಸ್ತುತ್ಯ ಕೆಲಸ

ದಕ್ಷಿಣ ಕನ್ನಡಜಿಲ್ಲಾ ಬೋರ್ಡಿನ ಬಡ್ಜೆಟ್ ಅಧಿವೇಶನ

ಉಪಾಧ್ಯಾಯರ ಸಂಬಳದಲ್ಲಿ ಹೊಸ ಕಡಿತವಿಲ್ಲ. ಉಪಾಧ್ಯಾಯಿನಿಯರಿಗೆ ಈಗಿನ ಸಂಬಳ ಖಾಯಂ

ದಕ್ಷಿಣಕನ್ನಡಜಿಲ್ಲಾ ಬೋರ್ಡುಬಡ್ಜೆಟ (ಆಯವ್ಯಯದ ಪರಿಶೀಲನೆ) ಅಧಿವೇಶನದ ಸಭೆಯು ಜಿಲ್ಲಾ ಬೋರ್ಡು ಆಫೀಸಿನಲ್ಲಿ ಕಳೆದ ತಾ. ೧೮ನೇ ಪೂರ್ವಾಹ್ನ ೧೧ ಘಂಟೆಗೆ ನಡೆಯಿತು ದಿವಾನ್ ಬಹದೂರ್ ಬಿ ಮಹಾಬಲಹೆಗಡೆಯವರು ಅಧ್ಯಕ್ಷತೆ ವಹಿಸಿದ್ದರು ಬಜೆಟ್ ಅಧಿವೇಶನವಾಗಿದ್ದರೂ ಸದಸ್ಯರ ಸಂಖ್ಯೆಯು ಬಹಳ ಕಡಿಮೆಯಾಗಿತ್ತು. ಶ್ರೀ| ಎ ಬಿ. ಶೆಟ್ಟಿ, ಯಂ ಎಲ್ ಎ, ಡಾ. ಕೆ ವಿಠಲ ಶೆಟ್ಟಿ, ಮೊದಲಾದ ಪ್ರಮುಖ ಸದಸ್ಯರು ಹಾಜರಿಲ್ಲದ ಕಾರಣ ಪ್ರಶ್ನೋತ್ತರಗಳ ಸಮಯವು ಏನೂ ಚರ್ಚೆಇಲ್ಲದೆ ನಿರುತ್ಸಾಹದಿಂದ ಮುಗಿಯಿತು ಜಾತಿವಾರು ಕೋಮುವಾರು ಪ್ರಕಾರ ಹುದ್ದೆಗೆ ನೇಮಿಸಲ್ಪಟ್ಟವರ ಸಂಖ್ಯೆಯ ವಿಷಯದಲ್ಲಿ ಪ್ರಶ್ನೆಗಳಿದ್ದವು ಇವೆಲ್ಲವೂ ಬಹಳ ಅಲ್ಪಕಾಲದಲ್ಲಿ ಮುಗಿಸಲ್ಪಟ್ಟವು.

ಠರಾವುಗಳು

ಪ್ರಶ್ನೋತ್ತರಗಳಾದ ಮೇಲೆ ಠರಾವುಗಳು ಸಭೆಯ ಮುಂದಕ್ಕೆ ಬಂದವು ಜಿಲ್ಲಾಬೋರ್ಡಿನ ಮಾಜಿ ಸದಸ್ಯರಾಗಿದ್ದ ದಿವಂಗತ ಶ್ರೀ| ಬಂಬ್ರಾಣ ವೆಂಕಪ್ಪ ಪೂಂಜರ ನಿಧನಕ್ಕಾಗಿ ಬೋರ್ಡಿನ ಸಂತಾಪ ಸೂಚಿಸಿ ಠರಾವಾಯಿತು. ಹಾಗೆಯೇ ದಿವಂಗತ ಕಾರ್ನಾಡು ಸದಾಶಿವರಾಯರ ನಿಧನಕ್ಕಾಗಿ ಬೋರ್ಡು ಸಂತಾಪ ಸೂಚಿಸುವುದೆಂಬ ಠರಾವು ಮಂಜೂರಾಯಿತು ಸಭಿಕರೆಲ್ಲರೂ ಎದ್ದು ನಿಂತು ಠರಾವುಗಳನ್ನು ಮಾನ್ಯಮಾಡಿದರು.

ಮಹಾತ್ಮಗಾಂಧಿಯವರ ಛಾಯಾಚಿತ್ರವನ್ನು ಜಿಲ್ಲಾ ಬೋರ್ಡು ಆಫೀಸಿನಲ್ಲಿರಿಸಬೇಕೆಂದು ಶ್ರೀ. ಜಿ. ವೆಂಕಪ್ಪಶೈಗಳು ಠರಾವುತಂದರು ಅದುಮಾನ್ಯವಾಯಿತು ತಿರುವಾಂಕೂರಿನ ಮಹಾರಾಜರು ಹರಿಜನರಿಗೆ ಕ್ಷೇತ್ರಪ್ರವೇಶವನ್ನು ಕೊಟ್ಟದಕ್ಕಾಗಿ ಅವರಿಗೆ ಈ ಬೋರ್ಡ್ ದನ್ಯವಾದಗಳನ್ನರ್ಪಿಸುತ್ತದೆಂಬ ಠರಾವು ಸಹ ಇದೇ ಸದಸ್ಯರಿಂದ ತರಲ್ಪಟ್ಟಿತು, ಶ್ರೀ|ಅಡಿಗರು ಈ ಬೋರ್ಡಿಗೂ ದೇವಳಕ್ಕೂ ಏನು ಸಂಬಂಧವೆಂದು ಕೇಳಿ ಪಾಯಿಂಟ್ ಆಫ್ ಆರ್ಡರನ್ನೆತ್ತಿದರು ಅಧ್ಯಕ್ಷರು ತಾವು ಠರಾವನ್ನು ಸ್ವೀಕರಿಸಿದ್ದರಿಂದ ಈಗ ಅದನ್ನು ತಿರಸ್ಕರಿಸತಕ್ಕ ಅಗತ್ಯವಿಲ್ಲವೆಂದೂ ಆದ್ದರಿಂದ ಠರಾವು ತಂದುದರಲ್ಲಿ ತಪ್ಪಿಲ್ಲವೆಂದೂ ಹೇಳಿದರು. ಶ್ರೀ|ಅಡಿಗರು ತಾವು ಠರಾವನ್ನು ವಿರೋಧಿಸುವುದಾಗಿ ಹೇಳಿದರು. ಬಹು ಪಕ್ಷದವರು ಠರಾವಿನ ಪರವಾಗಿ ಮತಕೊಟ್ಟದ್ದರಿಂದ ಠರಾವು ಮಂಜೂರಾಯಿತು.

ಅಧಿಕಾರ ಸಂಸ್ಥೆಗೆ ವಿರೋಧ

ಶ್ರೀ| ಮಂಜಯ್ಯ ಹೆಗ್ಗಡೆಯವರು ಒಂದು ಠರಾವನ್ನು ತಂದರು. ಅದರಲ್ಲಿ ಜಿಲ್ಲಾಬೋರ್ಡು ಕೈಕೊಳ್ಳುವ ಕೆಲಸವನ್ನೇ ಮಾಡುವಂತಹ ಬೇರೆ ಸಂಸ್ಥೆಗಳ ಅಗತ್ಯವಿಲ್ಲವೆಂದೂ ಈಗಿನ ಜಿಲ್ಲಾ ಇಕನಾಮಿಕ್ ಕೌನ್ಸಿಲುಗಳು ಅಂತಹ ಸಂಸ್ಥೆಗಳೆಂದೂ ಅಭಿಪ್ರಾಯಪಟ್ಟು ಅವುಗಳು ಅನಗತ್ಯವೆಂದೂ ತಿಳಿಸಿದರು. ಶ್ರೀ| ತಿರುಮಪ್ಪರವರು ತಮ್ಮ ಊರಿನವರಿಗೆ ಬೋರ್ಡಿನವರಿಂದ ಅನುಕೂಲವಾದುದು ಕಡಿಮೆಯೆಂದೂ ಇಕನಾಮಿಕ್ ಕೌನ್ಸಿಲಿನವರು ಕೆಲವು ಕಾಲುಸೇತುವೆಗಳನ್ನೂ, ಬಾವಿಗಳನ್ನೂ ಮಾಡಿಸಿ ಜನರಿಗೆ ಉಪಕಾರ ಮಾಡಿರುವರೆಂದೂ ಆದ್ದರಿಂದ ಆ ಕೌನ್ಸಿಲುಗಳು ಅಗತ್ಯವೆಂದೂ ಹೇಳಿ ಶ್ರೀ| ಮಂಜಯ್ಯ ಹೆಗ್ಗಡೆಯವರ ಠರಾವನ್ನು ವಿರೋಧಿಸಿದರು ಈ ಠರಾವಿನ ಮೇಲೆ ಮತ ತೆಗೆದುಕೊಳ್ಳಲಿಲ್ಲ

ಬಡ್ಜೆಟ್ ಚರ್ಚೆ

ಠರಾವುಗಳಾದ ಮೇಲೆ ಬಡ್ಜೆಟಿನ ಮೇಲೆ ಚರ್ಚೆಗಳು ಆರಂಭವಾದವು. ೧೯೩೭-೩೮ರ ಆರಂಭದ ಶಿಲ್ಕು ರೂ ೪೦,೬೮೦ ಮೊದಲು ಅಂದಾಜುಮಾಡಿದಹಣವು ರೂ. ೫೫,೮೫೦ ಇದರಿಂದ ಎಲಿಮೆಂಟರಿ ವಿದ್ಯಾಭ್ಯಾಸದ ಫಂಡಿಗೆ ಸ್ವಲ್ಪಹಣವು ಕೊಡಲ್ಪಟ್ಟಿತು ಪ್ರಾಥಮಿಕ ವಿದ್ಯಾಭ್ಯಾಸದ ಫಂಡಿನಲ್ಲಿ ರೂ ೬೦,೪೭೨ ಕಡಿಮೆಯಿದ್ದಿತು. ಅದನ್ನು ಭರ್ತಿಮಾಡುವುದಕ್ಕಾಗಿ ರೂ ೧೪,೪೪೦ನ್ನು ಪ್ರಾಥಮಿಕ ವಿದ್ಯಾಭ್ಯಾಸದ ಫಂಡಿಗೆ ಕೊಡಲಾಗಿ ಶಿಲ್ಕು ೪೦,೬೮೦ಕ್ಕೆ ಬಂತು

ಆಯಿತಿಯು ಮುಖ್ಯವಾಗಿ ಈ ಕೆಳಗಿನವುಗಳಿಂದ ಬರತಕ್ಕದ್ದು. ಲ್ಯಾಂಡ್ ಸೆಸ್ (ಭೂಕಂದಾಯ ತೆರಿಗೆ) ಇದರಿಂದ ರೂ ೨,೪೬,೯೦೦ ವೃತ್ತಿತೆರಿಗೆಯಿಂದ ರೂ. ೧೦,೦೦೦ ಅಲ್ಲಲ್ಲಿ ಪಂಚಾಯಿತ ಸಂಘಗಳು ಸ್ಥಾಪಿತವಾದಕಾರಣ ಈ ಬಾಬಿನಲ್ಲಿ ಉತ್ಪತ್ತಿ ಹೆಚ್ಚಾಗುವ ಸಂಭವವಿಲ್ಲ

ಟ್ರಂಕ್ ರೋಡುಗಳಿಗೆ ಸರಕಾರದವರಿಂದ ಬರತಕ್ಕ ಗ್ರಾಂಟು ರೂ. ೬೦,೫೩೦ ಸೆಕೆಂಡ ಕ್ಲಾಸ್ ರಸ್ತೆಗಳಿಗೆ ಈ ಬೋರ್ಡಿನಪಾಲು ರೂ. ೫೭,೭೪೦ ಸರಕಾರದವರು ೫ಳ ಮೈಲು ರಸ್ತೆಗಳಿಗೆ ಮಂಜೂರು ಮಾಡಿರುವ ಹಣವು ರೂ. ೧,೦೩,೯೧೭

ಟೋಲ್ ಇದರಿಂದ ಬಡ್ಜೆಟ್‌ವರ್ಷ ರೂ ೨೬,೦೦೦ ಬರಬಹುದೆಂದು ಅಂದಾಜು ಮಾಡಲ್ಪಟ್ಟದೆ.

ಮೋಟರ್ ಬಂಡಿಗಳಫೀಸು ಬಹಳವಾಗಿ ಇಳಿದಿದೆ, ೧೯೩೫ರಲ್ಲಿ ಇದು ರೂ ೧,೧೫,೦೦೦ ಆಗಿತ್ತು ೧೯೩೭-೩೮ರಲ್ಲಿ ಬರೇ ೫೬,೦೦೦ ಬರಬಹುದೆಂದು ಅಂದಾಜು ಮಾಡಲ್ಪಟ್ಟಿದೆ ಫೆರ್ರಿಯಿಂದ ರೂ. ೪೫,೦೦೦ ಬರುವುದಾಗಿಯೂ ಸತ್ರದಿಂದ ೧೫೦೦೦ ಬರಬಹುದೆಂದೂ ಅಂದಾಜುಮಾಡಲ್ಪಟ್ಟದೆ

ಶಾಲಾ ಸಂಬಳದಿಂದ (ಪ್ರಾಥಮಿಕ ವಿದ್ಯಾಭ್ಯಾಸವನ್ನು ಬಿಟ್ಟು) ರೂ. ೫೪,೦೦೦ವು, ಡಿಸ್ಪೆನ್ಸರಿ ಫೀ ಮೊದಲಾದುವುಗಳಿಂದ ರೂ ೩೦೦೦, ಸರಕಾರಿಗ್ರಾಂಟ್ ರೂ. ೧೩,೧೫೦ ಮಾರ್ಕೆಟ್ ಫೀಸು ೪೦೦೦ ಈ ಪ್ರಕಾರವಾಗಿ ಆಯಿತಿಗಳು.

ಒಟ್ಟಿಗೆ ಸರಾಸರಿ ಆಯಿತಿಯ ಅಂದಾಜು ರೂ ೬,೬೫,೯೭೦ ಜನರಲ್ ಆಕ್ಕೌಂಟನಿಂದ ಪ್ರಾಥಮಿಕ ವಿದ್ಯಾಭ್ಯಾಸದ ಫಂಡಿಗೆ ರೂ ೩೩,೫೪೦ ಚಂದಾ ಕೊಡಬೇಕೆಂದು ನಿರ್ಧಾರವಾಗಿದೆ.

ಮುಖ್ಯವಾಗಿ ಎಲಿಮೆಂಟರಿ ವಿದ್ಯಾಭ್ಯಾಸದ ಫಂಡಿಗೆ ಧಾರಾಳ ಹಣ ಬೇಕಾಗಿದೆಯೆಂಬುದು ಬಡ್ಜೆಟಿನಿಂದ ಗೊತ್ತಾಗುತ್ತದೆ ಹಲವು ಬಗೆಯಿಂದ ವೆಚ್ಚ ಕಡಿಮೆ ಮಾಡಲು [illegible]ರಿಸಿದರು ಆ ಸೈಕಿ ಉಪಾಧ್ಯಾಯರ ಸಂಬಳದಲ್ಲಿ ರೂ ೧|| ಆಣೆಯ ಕಡಿತ, ಉಪಾಧ್ಯಾಯಿನಿಯರ ಸಂಬಳದಲ್ಲಿ ಜರೂ ಕಡಿಮೆಮಾಡುವುದು, ಇವೇ ಮೊದಲಾದ ಸೂಚನೆಗಳಿದ್ದವು ಡಾ|ಆಚಾರ್ಯರು ಉಪಾಧ್ಯಾಯರ ಸಂಬಳದಲ್ಲಿ ಕಡಿತವಾಗಕೂಡದೆಂದೂ, ಸ್ತ್ರೀಯರ ಸಂಬಳವು ಕಡಿಮೆಮಾಡಲ್ಪಡಕೂಡದೆಂದೂ,ಬೇರೆ ವಿಷಯಗಳಿಗೆ ಕಡಿಮೆ ವೆಚ್ಚಮಾಡಬೇಕೆಂದೂ ಹೇಳಿದರು ಡಾ| ಆಚಾರ್ಯರ ಸೂಚನೆಯು ಹೆಚ್ಚಿನವರಿಂದ ಅನುಮೋದಿಸಲ್ಪಟ್ಟಿತು ಆದ್ದರಿಂದ ರೂಪಾಯಿಯಲ್ಲಿ ೧|ಆಣೆಯ ಕಡಿತವೂ,ಉಪಾಧ್ಯಾಯಿನಿಯರ ಸಂಬಳದಲ್ಲಿ ಜರೂ ಕಡಿಮೆಯಾಗುವುದೂ ನಿಂತುಹೋದುವು.

ವಿದ್ಯಾಭ್ಯಾಸದ ಫಂಡಿಗೆ ಹಣ ಕೊಡಿಸುವುದಕ್ಕೂ ಬಡ್ಜೆಟನ್ನು ಸಮಾನತೆಗೆ ತರುವುದಕ್ಕೂ ಈ ಕೆಳಗಿನ ವೆಚ್ಚಗಳಲ್ಲಿ ಉಳಿತಾಯ ತೋರಿಸಬೇಕೆಂದಾಯಿತು

ಕ್ಷಯರೋಗದ ನಿಮಿತ್ತ ಇಟ್ಟ ಹಣದಲ್ಲಿ ೫೦೦ ರೂ ಪ್ರಾವಿಡೆಂಟ್ ಫಂಡ್ ರೂ ೧೦೦೦೦ ಸಾಂಕ್ರಾಮಿಕ ರೋಗ ೪೦೦ ಪ್ರೈಮರಿ ೫೦೦ ರೂರಲ್ ಡಿಸ್ಪೆನ್ಸರಿ ೨೦೦೦ ರೂ ಬೆಡ್ ಮೊದಲಾದುವುಗಳಿಂದ ಬೇಡದ ಎತ್ತುಗಳನ್ನು ಬೇಡವೆಂದು ತೀರ್ಮಾನಿಸಿದ್ದರಿಂದ ಈ ಪ್ರಕಾರವಾಗಿ ಹಣವನ್ನು ಉಳಿಸಬೇಕೆಂದಾಯಿತು

ಈ ರೀತಿಯ ಉಳಿತಾಯವಾದ ಕಾರಣ ಬಡ್ಜೆಟ್ ಸಮಾನವಾಯಿತು ಬ್ಯಾಲೆನ್ಸ್

ಜಿಲ್ಲಾ ಬೋರ್ಡಿನವರು ತಮ್ಮ ವಿಷಯವಾಗಿ ಏನು ತೀರ್ಮಾನ ಮಾಡುವರೋ ಎಂದು ತಿಳಿಯಲು ಬಂದಿದ್ದ ಸುಮಾರು ೫೦-೬೦ ಮಂದಿ ಉಪಾಧ್ಯಾಯಿನಿಯರು ಸಂತೋಷಚಿತ್ತರಾಗಿ ಹಿಂತಿರುಗಿದರು.

ಸ್ಪೆಶಲ್ ಮಿಟಿಂಗು

ಅದೇ ದಿನ ಎರಡು ಸ್ಪೆಶಲ್ ಮೀಟಿಂಗುಗಳು ಜರಗಿ ಬೇರೆ ಬೇರೆ ಸಮಿತಿಗಳಿಗೆಸದಸ್ಯರ ಚುನಾವಣೆಯಾಯಿತು

ರೂರಲ್ ಡೆವಲೆಪ್‌ಮೆಂಟ್ ಕಮಿಟಿಗೆ

ಶ್ರೀ| ಗಳಾದ ಯು ಶಿವರಾವ್, ವೆಂಕಪ್ಪ ರೈ, ತಿರುಮಪ್ಪ, ಬಲ್ಲಾಳರು, ಎಚ್ ಎಸ್. ಹುಸೇನ್ ಯಂ ಎಲ್, ಎ, ಐತಪ್ಪ ರೈ ಸುಳ್ಯ ಪಂಚಾಯಿತ ಬೋ ಪ್ರೆಸಿಡೆಂಟರು

ಪಬ್ಲಿಕ್ ಹೆಲ್ತ್

ಶ್ರೀಮತಿ ಸುಶೀಲಾಬಾಯಿ, ಶ್ರೀ| ಗಳಾದ ಬಿ. ಎಚ್ ಅಹಮ್ಮದ್, ಶಿವರಾಮ ಶೆಟ್ಟಿ, ಬಿ. ಮಂಗೇಶರಾವ್, ಡಾ ಕೆ.ಆರ್ ಶೆಣೈ, ಮಹಾಬಲ ರೈ

(೧೧ನೇ ಪುಟಕ್ಕೆ)

THE BOMBAY LIFE ASSURANCE Co., LTD.

ESTD. 1908

Church Gate Street, Fort - - BOMBAY.

SPECIAL FEATURES.

1. Rebate on yearly payment of policies.
2. Rebate for larger assurances.
3. Accident Risk covered on small extra premiums
4. Attractive Bonuses.

It pays you to represent this Company.
Wanted Agents in unrepresented parts.

Apply to:—

KOCHIKAR BROTHERS,

Madras Branch Secretaries.

BRANCHES AT:

P. B. 337 Mount Road, Madras	Visveswarapuram Circle, Bangalore City	Soumyalayam Puthiyara, Calicut.
Car Street, Mangalore.	Udipi, S. India	Charni Road, Bombay No. 4.

EVIDENCE OF SECURITY & STABILITY

FIGURES THAT SPEAK FOR THEMSELVES

TOTAL ASSETS **Rs. 80,66,600**

Summary of 1935 Accounts

Total Assets Over ...	Rs. 80,00,000
Life Funds Over .	Rs 68,00,000
Premium Income Over ..	Rs 22,54,000
Interest Income ..	Rs 3,16,000
Claims Paid	Rs. 5,75,000

Total Claims paid Over Rs. 38,50,000
Total Business in Force Over Rs. 4,4251.200.

TOTAL BUSINESS IN FORCE **Rs. 4,42,51,200**

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್

(1906ರಲ್ಲು ಸ್ಥಾಪಿತವಾದದ್ದು)

ಪ್ರಕಟಣೆ

ಇವರ ಶಾಖೆಗಳು ತಾ. 19-3-1937ರಲ್ಲು

(1) **ವೆಲ್ಲೂರು** (ಉತ್ತರ ಆರ್ಕಾಡು ಜಿಲ್ಲೆ) ಮತ್ತು (2) **ಬೈಂದೂರು** (ದಕ್ಷಿಣ ಕನ್ನಡ ಜಿಲ್ಲೆ) ಈ ಸ್ಥಳಗಳಲ್ಲಿ ತೆರೆಯಲ್ಪಟ್ಟಿರುವವು.

ಈ ಬ್ಯಾಂಕಿನ ರಿಜಿಸ್ಟರ್ಡ್ ಆಫೀಸನ್ನು ತಾ. 19-3-1937ನೇ ಶುಕ್ರವಾರ ಇಡೀ ಪಟ್ಟಣದ ಮಧ್ಯ ಸ್ಥಳವಾದ **ಮಸೀದಿ ರಸ್ತೆಯಲ್ಲಿರುವ** (ದಿವಂಗತ ಖಾನ್ ಬಹದೂರ್ ಹಾಜಿ ಅಬ್ದುಲ್ಲಾ ಹಾಜಿ ಕಾಸಿಮ ಸಾಹೇಬರು ವಾಸ್ತವಿಸಿದ್ದ) **ಭವ್ಯವಾದ ಕಟ್ಟಡಕ್ಕೆ ಒಯ್ಯಲ್ಪಟ್ಟಿರುವುದು.**

ಎಮ್. ಶ್ರೀನಿವಾಸ ಪ್ರಭು,
MANAGER.

ನವಯುಗ

ಉಡುಪಿ, ತಾ. ೨೫-೩-'೩೭ ಗುರುವಾರ

ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿಯ ನಿರ್ಣಯ

ಕಳೆದ ಹಲವು ತಿಂಗಳುಗಳಿಂದ ಯಾವುದಾದರೊಂದು ಇತ್ಯರ್ಥವನ್ನೂ ಹೊಂದದೆ ಮುಂದೆ ಹಾಕಲ್ಪಡುತ್ತಿದ್ದ ಅಧಿಕಾರ ಸ್ವೀಕಾರದ ಪ್ರಶ್ನೆಯನ್ನೀಗ ಕಾಂಗ್ರೆಸಿನವರು ತೀರ್ಮಾನಿಸಿರುವರು. ಈ ವಿಷಯದಲ್ಲಿ ಕಾಂಗ್ರೆಸಿನೊಳಗೆ ತೀವ್ರ ಭಿನ್ನಾಭಿಪ್ರಾಯವಿದ್ದಿತು. ಕಾಂಗ್ರೆಸ್ ಪ್ರೆಸಿಡೆಂಟರೇ ಅಧಿಕಾರಸ್ವೀಕಾರಕ್ಕೆ ಬದ್ಧ ವಿರೋಧಿಯಿದ್ದರು; ಈಗಲೂ ವಿರೋಧಿಯಾಗಿಯೇ ಇರುವರು. ಆದರೆ ಮಹಾತ್ಮಾ ಗಾಂಧಿಯವರೇ ಮೊದಲಾದವರ ಸಲಹೆ ಮೇರೆಗೆ ಮತ್ತು ಬಹುಪಕ್ಷದ ನಿರ್ಣಯದ ಮೇರೆಗೆ ಅವರು ಕಾಂಗ್ರೆಸಿನೊಳಗೆ ಒಡಕನ್ನುಂಟುಮಾಡದೆ, ಅಧಿಕಾರಸ್ವೀಕಾರ ಪಕ್ಷೀಯರು ಕಾಂಗ್ರೆಸಿನ ಪ್ರತಿಷ್ಠೆಗೆ ಕುಂದನ್ನುಂಟುಮಾಡದೆ ಕೌನ್ಸಿಲುಗಳೊಳಗೆ ಯಾವ ರೀತಿ ಪ್ರಜಾಹಿತಸಾಧನೆ ಮಾಡಲಿರುವರೆಂದು ಪರೀಕ್ಷಿಸಿ ನೋಡಲಿರುವರು. ಆದರಿಂದಾಗಿ ಕಾಂಗ್ರೆಸಿನ ವರ್ಚಸ್ಸು ಹೆಚ್ಚುವಂತಾದರೆ ಅವರು ಎಂದಿನಂತೆಯೇ ಕಾಂಗ್ರೆಸ್ ಪ್ರೆಸಿಡೆಂಟರಾಗಿ ಕೆಲಸಮಾಡುವರು. ಕಾಂಗ್ರೆಸಿನ ಹೆಸರು ಕೆಡುವಂತಾದರೆ ಪಂಡಿತ ಜವಾಹರಲಾಲರೆಂದಿಗೂ ಕೌನ್ಸಿಲ್ ಕಾರ್ಯಕ್ಕೊಪ್ಪಲಾರರು. ಆಗಲೂ ಕಾಂಗ್ರೆಸು ಅಂತಹ ಕಾರ್ಯವನ್ನೇ ಮುನ್ನಡೆಸುವ ನಿರ್ಧಾರ ಮಾಡಿದರೆ ಪಂಡಿತರು ಪ್ರೆಸಿಡೆಂಟರಾಗಿರಲಾರರು. ಇಂತಹ ಸನ್ನಿವೇಶವು ಉಂಟಾಗದಂತಾಗಲೆಂದೇ ನಮ್ಮ ಹಾರೈಕೆ.

ಬರುವ ಎಪ್ರಿಲ್ ತಾ ೧ಕ್ಕೆ ಹಿಂದುಸ್ಥಾನದಲ್ಲಿ ಜ್ಯಾರಿಗೆ ಬರಲಿಕ್ಕಿರುವ ಹೊಸ ರಾಜ್ಯಾಂಗರಚನೆಯನ್ನು ನಿಷೇಧಿಸುವ ಸಲುವಾಗಿ ಆ ದಿನ ತಾ ೧-೪-೩೭ನೇ ಗುರುವಾರ ಎಲ್ಲಾ ಕಡೆಗಳಲ್ಲಿಯೂ ಹರತಾಳವನ್ನಾಚರಿಸಬೇಕೆಂದು ರಾಷ್ಟ್ರೀಯ ಮಹಾಸಭೆಯು ಜಾಹೀರು ಮಾಡಿದೆ. ಆದ್ದರಿಂದ ಉಡುಪಿ ತಾಲೂಕಿನ ಪ್ರತಿಯೊಂದು ಪೇಟೆ ಮತ್ತು ಹಳ್ಳಿಗಳಲ್ಲಿ ಆ ದಿನವನ್ನು ಹೊಸ ಸುಧಾರಣೆಯ ತಿರಸ್ಕಾರ ಸೂಚನೆಯ ದಿನವಾಗಿ ಆಚರಿಸಿ ರಾಷ್ಟ್ರಾಭಿಮಾನವನ್ನು ತೋರಿಸಬೇಕಾಗಿ ವಿನಂತಿ.

(೧) ಪ್ರಾತಃಕಾಲದಿಂದ ಸಂಜೆಯ ವರೆಗೂ ಸಂಪೂರ್ಣ ಹರತಾಳವನ್ನಾಚರಿಸುವದು. (೨) ಸಂಜೆ ಬರಿ ತಲೆಯಿಂದ ಕಪ್ಪು ಪತಾಕೆಗಳೊಡನೆ ಮೆರವಣಿಗೆ ಮಾಡುವದು. (೩) ಸಭೆಗಳನ್ನು ಜರಗಿಸಿ ಹೊಸ ಸುಧಾರಣೆಯಿಂದಾಗುವ ಹಾನಿಗಳ ಕುರಿತು ಭಾಷಣಗಳನ್ನೇರ್ಪಡಿಸುವದಲ್ಲದೆ ನಿಷೇಧ ಸೂಚಕ ಠರಾವು ಮಾಡುವುದು.

ಉಡುಪಿ ತಾಲೂಕಿನಲ್ಲಿ ಈ ದಿನವನ್ನಾಚರಿಸಿದವರೆಲ್ಲರೂ ತಮ್ಮ ಕೆಲಸಗಳ ಸವಿವರ ವರದಿಯನ್ನು ಉಡುಪಿ ತಾಲೂಕು ಕೊಂಗ್ರೆಸ್ ಕಮಿಟಿಗೆ ಕಳುಹಿಸಿಕೊಡಬೇಕಾಗಿ ವಿನಂತಿ.

ಕಾರ್ಯದರ್ಶಿ,
ತಾಲೂಕು ಕಾಂಗ್ರೆಸ್ ಕಮಿಟಿ, ಉಡುಪಿ

ತಾಳದೆ ಇರತಕ್ಕ ಮೂತ್ರವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧ.

ಡಾ. ಜಸಾನಿಯವರ ಜಗತ್ಪ್ರಸಿದ್ಧ

"ಗೊನೋಕಿಲರ್" (ರಿಜಿಸ್ಟರ್ಡ್)

GONO KILLER

ನಕಲಿ ಮದ್ದುಗಳಿಗೆ ಮರುಳಾಗಿ ಮೋಸ ಹೋಗಬೇಡಿರಿ ಕೊಂಡು ಕೊಳ್ಳುವಾಗ ಮೊದಲು ಕೋಳಿಯ ಗುರುತನ್ನು ಗಮನಿಸಿರಿ

ಪ್ರಮೇಹ ವ್ಯಾಧಿಗೆ ಸಿದ್ಧೌಷಧ

ಇಂದಿನ ಅಪ್ರತಿಮ ಔಷಧ ಆಂಗ್ಲೇಯ ಮತ್ತು ಆಯುರ್ವೇದ ಔಷಧಗಳಿಂದೂ ಫಲಕಾರಿಯಾಗದೆ ಇನ್‌ಜಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ, ಒಂದಾವರ್ತಿಯಾದರೂ ಈ ನಮ್ಮ **ಗೋನೋಕಿಲರ್** ಎಂಬ ಔಷಧವನ್ನು ಉಪಯೋಗಿಸಿನೋಡಿರಿ. ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ, ಗೋನೋಕಿಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾತುವಿಕೆ, ಸರ್ವಪ್ರಕಾರದ ಪ್ರಮೇಹ (ಎಷ್ಟೇ ಹಳತು ಯಾ ಯಾವದೇ ಸ್ಥಿತಿಯಲ್ಲಿರಲಿ), ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತುಸ್ರಾವ, ಬಿಳುಪು ಹರಿಯುವದು ಇವೇ ಮೊದಲಾದ ಯಾವತ್ತು ಗೊನೋಕೋಕಸ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ

ಬೆಲೆ ೬೦ ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ 3—0—0 (ಮೂರು) ವಿ ಪಿ ಛಾರ್ಜು ಬೇರೆ

ತಯಾರಿಸುವ ಏಕಮಾತ್ರರು ಡಾಕ್ಟರ್ ಡಿ. ಎನ್. ಜಸಾನಿ, ವಿಟ್ಠಲ್‌ಭಾಯಿ ಪಟೇಲ್ ರೋಡ್, ಮುಂಬಯಿ 4.

Sole Manufacture, Dr. D. N. JASANI, Vittalbhai Patel Road, BOMBAY 4

ಡಿಲ್ಲಿಯ ನೇಶನಲ್ ಕನ್ವೆನ್ಶನ್

ಪಂಡಿತ ಜವಾಹರಲಾಲರ ಭಾಷಣ, ಕಾಂಗ್ರೆಸ್ ಮೆಂಬರರ ಪ್ರತಿಜ್ಞೆ

ದೇಶದ ಬೇರೆ ಬೇರೆ ಕೌನ್ಸಿಲುಗಳಿಗೆ ಚುನಾವಣೆಯಲ್ಲಿ ಆರಿಸಲ್ಪಟ್ಟಿರುವ ಸುಮಾರು ೮೦೦ಮಂದಿ ಕಾಂಗ್ರೆಸ್ ಪಕ್ಷೀಯ ೨೦೦ಕ್ಕಿಂತಲೂ ಮಿಕ್ಕಿದ ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿ ಸದಸ್ಯರು ಮತ್ತು 10000ದ ವರೆಗಣ ಪ್ರೇಕ್ಷಕ ಸಮೂಹದೊಂದಿಗೆ ಇದೇ ತಾ. 19ರಲ್ಲು ಡಿಲ್ಲಿಯ ರಾಷ್ಟ್ರೀಯ ಮಹಾ ಸಭೆಯು ಅತ್ಯಂತ ಸಂಭ್ರಮದಿಂದ ಜರಗಿತು. ಸಂಜೆ ಘಂಟೆ 5ಕ್ಕೆ ಸರಿಯಾಗಿ ಕಾಂಗ್ರೆಸ್ ಪ್ರೆಸಿಡೆಂಟರಾದ ಪಂಡಿತ ಜವ್ಹಾರಲಾಲರು, ಶ್ರೀಮತಿ ಸರೋಜಿನಿ ನಾಯುಡು, ಮೌಲಾನಾ ಅಬ್ದುಲ್ ಕಲಮ್ ಅಜದ್, ಬಾಬುರಾಜೇಂದ್ರ ಪ್ರಸಾದ್, ಸರ್ದಾರ್ ವಲ್ಲಭಾಯಿ ಪಟೇಲ್ ಮೊದಲಾದ ಮಾಜಿ ಕಾಂಗ್ರೆಸ್ ಪ್ರೆಸಿಡೆಂಟರುಗಳ ಗಡಣದಿಂದ, ಮಿಲಿಟರಿ ಬೇಂಡು ಬಾರಿಸುತ್ತಿರುವಂತೆ ಮೆರವಣಿಗೆಯು ವಿಶಾಲವಾದ ಸಭಾ ಚಪ್ಪರಕ್ಕೆ ಪ್ರವೇಶಿಸಿದರು. ಎಲ್ಲರೂ ನಿಂತು ವಂದೇ ಮಾತರಮ್ ಹಾಡಿದ ಮೇಲೆ ಸಭಾಕಾರ್ಯ ಆರಂಭವಾಯಿತು. ಸ್ವಾಗತ ಕಮಿಟಿಯ ಅಧ್ಯಕ್ಷರಾದ ಪಂಡಿತ ಇಂದ್ರರವರು, ಮಹಾ ಸಭೆಯ ಪ್ರತಿನಿಧಿಗಳನ್ನೆಲ್ಲಾ ಸ್ವಾಗತೀಕರಿಸಿ, ಡಿಲ್ಲಿಯು ಕಳಕೊಂಡಿರುವ ಉಜ್ವಲ ದೇಶಭಕ್ತರಾದ ಸ್ವಾಮಿ ಶ್ರದ್ಧಾನಂದ, ಹಕಿಮ್ ಅಜ್ಮಲ್‌ಖಾನ್, ಮತ್ತು ಡಾಕ್ಟರ್ ಅನ್ಸಾರಿಗಳ ನಾಮಸ್ಮರಣೆಮಾಡಿ,ಕಾಂಗ್ರೆಸಿನ ಹಿಂದಿನ ದುರ್ಬಲ ಸ್ಥಿತಿ ಇಂದಿನ ಪ್ರಬಲಶಕ್ತಿಯ ಕುರಿತು ಪ್ರಸ್ತಾಪಿಸಿ, ಧೈರ್ಯ-ವಿವೇಕ ಚಾತುರ್ಯದಿಂದ ಕಾಂಗ್ರೆಸು ಮುಂದುವರಿದು ತನ್ನ ಗುರಿಯನ್ನು ಬೇಗನೆ ಮುಟ್ಟುವಂತಾಗಲೆಂದು ಹಾರೈಸಿದರು. ಪಂಡಿತ ಜವ್ಹಾರಲಾಲರ ನಾಯಕತ್ವವು ಅದೆಷ್ಟು ಸಂದರ್ಭೋಚಿತವಾದುದೆಂಬುದನ್ನು ಎತ್ತಿ ಹೇಳಿ ಅವರು, ದೇಶದ ಮಿಲ್ಯಾಂತರ ದೀನದರಿದ್ರ ಜನರ ದುಃಖ ಸಂಕಷ್ಟಗಳ ಮೂರ್ತಿಮದ್ರೂಪವೆಂದು ಕೊಂಡಾಡಿದರು.

ಪಂಡಿತ ಜವ್ಹಾರಲಾಲರು, ಭಾಷಣವನ್ನಾರಂಭಿಸುವ ಮೊದಲು ಕಾಂಗ್ರೆಸ್ ಪಕ್ಷೀಯ ಕೌನ್ಸಿಲ್ ಮೆಂಬರರು ತೆಗೆದುಕೊಳ್ಳಬೇಕಾದ ಪ್ರತಿಜ್ಞೆಯ ಕುರಿತು ಪ್ರಸ್ತಾಪಿಸಿದರು. ಅದನ್ನು ಕಾಂಗ್ರೆಸ್ ಕೌನ್ಸಿಲ್ ಮೆಂಬರರು ಮಾತ್ರವಲ್ಲದೆ ಇಲ್ಲಿ ನೆರೆದವರೆಲ್ಲರೂ ತೆಗೆದುಕೊಳ್ಳಬೇಕೆಂದರು. ಈ ಪ್ರತಿಜ್ಞಾ ಪತ್ರಗಳಿಗೆ ಎಲ್ಲಾ ಮೆಂಬರರು ಸಹಿಹಾಕಿ ಹಿಂದೆ ಕೊಡುವುದಲ್ಲದೆ, ಈ ಮಹಾ ಸಭೆಯಸ್ಮಾರಕವಾಗಿ ಇರಿಸಲ್ಪಡುವ ಪುಸ್ತಕವೊಂದಕ್ಕೆ ಎಲ್ಲರೂ ಸಹಿಹಾಕಬೇಕೆಂಬು ಕೇಳಿಕೊಂಡರು.

ಪಂಡಿತ ಜವ್ಹಾರಲಾಲರು ತನ್ನ ಭಾಷಣದಲ್ಲಿ, ಕಾಂಗ್ರೆಸಿಗೆ ಹೆಚ್ಚಿಚ್ಚಾಗಿ ಮುಸಲ್ಮಾನರು ಸೇರುವಂತೆ ಮಾಡುವ ಆವಶ್ಯಕತೆಯನ್ನು ಬಹಳವಾಗಿ ಒತ್ತಿ ಹೇಳಿದರು. ಪಂಜಾಬಿನಲ್ಲಿ ಮಾತ್ರ ಕಾಂಗ್ರೆಸಿಗೆ ವಿರೋಧವಾದ ಒಂದು ಪಕ್ಷವು ಸಂಪೂರ್ಣ ಬಹುಪಕ್ಷ ಪಡೆದಿರುವ ಕುರಿತು ದುಃಖ ಸೂಚಿಸಿ ಅಲ್ಲಿಯ ಕಾಂಗ್ರೆಸ್ ನಾಯಕತ್ವದ ದುರ್ಬಲತನವೇ ಇದಕ್ಕೆ ಕಾರಣವೆಂದರು. ಕಾಂಗ್ರೆಸ್ ಮುಖಂಡರೆಲ್ಲಾ ಒಂದೇ ಮನಸ್ಸು ಮತ್ತು ಉತ್ಸಾಹದಿಂದ ಕೆಲಸಮಾಡಿದ್ದರೆ ಸಂಯುಕ್ತ ಪ್ರಾಂತದಂತೆ ಪಂಜಾಬಿನಲ್ಲೂ ಯಾರಿಂದಲೂ ಕಾಂಗ್ರೆಸ್ಸನ್ನು ವಿರೋಧಿಸಲು ಸಾಧ್ಯವಾಗುತ್ತಿದ್ದಿಲ್ಲೆಂದರು.

ಕಾಂಗ್ರೆಸಿಗೆ ಅತಿ ದೊಡ್ಡ ವಿಜಯವನ್ನು ದೊರಕಿಸಿದವರು ಕಾಂಗ್ರೆಸಿಗೆ ಅತಿ ವಿಧೇಯರಾಗಿ ನಡಕೊಂಡು ಬಂದ ಬಡಜನರು ಮತ್ತು ಅಜ್ಞಾತರು. ಅತ್ಯಂತ ಕಡಿಮೆ ವೆಚ್ಚದಿಂದವರು ಜಯಶೀಲರಾಗಿರುವರು. ಒಬ್ಬ ಕಾಂಗ್ರೆಸ್ ಉಮೇದ್ವಾರಿಯು ಕೇವಲ ರೂ. 250 ಮಾತ್ರವ್ಯಯಿಸಿದ್ದು, ತನ್ನ ಮನೆಯೆದುರೊಂದು ವಂತಿಗೆ ಪೆಟ್ಟಿಗೆಯನ್ನು ತೂಗ ಹಾಕಿ ರೂ. 350 ಸಂಗ್ರಹಿಸಿರುವ ಸಂಗತಿಯೊಂದು ನನಗೆ ಗೊತ್ತಿದೆ. ಈ ಸಲ ಕಾಂಗ್ರೆಸಿನವರು ಇತರರಿಗಿಂತ ಕಡಿಮೆ ವೆಚ್ಚಮಾಡಿರುವರು. ಆದರೂ ಅದೂ ಹೆಚ್ಚು. ಅದಕ್ಕಿಂತಲೂ ಬಹಳ ಕಡಿಮೆ ವೆಚ್ಚವಾಗುವಂತೆ ಕಾಂಗ್ರೆಸಿನ ಕುರಿತು ಜನಜಾಗ್ರತಿಯುಂಟಾಗಬೇಕೆಂದು ಪಂಡಿತರು ತನಗೆ ಅಧಿಕಾರ ಸ್ವೀಕಾರ ಪ್ರಶ್ನೆಯ ಗೊಡವೆಯೇ ಇಲ್ಲ; ತನಗೂ ಜನಸಾಮಾನ್ಯರಿಗೂ ಸಂಬಂಧವಿರುವ ವಿಷಯವೆಂದರೆ ಕೆಲವು ಗಡಂಗುಗಳನ್ನು ಮುಚ್ಚುವುದಲ್ಲ; ಪೂರ್ಣ ಸ್ವರಾಜ್ಯ ಸಾಧಿಸುವುದೆಂದು ಒತ್ತಿ ಹೇಳಿ ಕಾಂಗ್ರೆಸ್ ಪಕ್ಷೀಯರು ಅಲ್ಪ ಕಾರ್ಯಗಳಿಗೆ ವಿಶೇಷ ಮಹತ್ವವೀಯಬಾರದೆಂದು ಎಚ್ಚರಿಸಿದರು.

ಗವರ್ನರರಿಂದ ಆಶ್ವಾಸನೆ ಪಡೆಯುವ ಕಾಂಗ್ರೆಸಿನ ನಿರ್ಣಯದ ಭಾಗವು ನಾಮ ಮಾತ್ರವಾದುದಲ್ಲ. ಅದು ಕಠಿಣವಾಗಿ ಪಾಲಿಸಲ್ಪಡಬೇಕು. ಗವರ್ನರರು ಕಾಂಗ್ರೆಸ್ ಪಕ್ಷದ ನಾಯಕರಿಗೆ ಏನು ಹೇಳಿದರೆಂಬುದನ್ನು ಅವರು ಜಾಹೀರಾಗಿ ತಿಳಿಸಬೇಕು. ಅಧಿಕಾರ ಸ್ವೀಕರಿಸವುದರಿಂದ ಕಾಂಗ್ರೆಸಿನ ಧ್ವಜವನ್ನು ಕೆಳಗೆ ತಂದಂತಾಗುವುದೆಂದು ತನ್ನ ಭಾವನೆ. ಆದರೆ ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿಯು ಅದನ್ನು ಮಂಜೂರು ಮಾಡಿರುವುದರಿಂದ ದೀನ ಸೈನಿಕನಾಗಿ ತಾನದಕ್ಕೆ ಸಂಪೂರ್ಣ ವಿಧೇಯನಾಗಿ ನಡೆಯುವೆನು. ಆದರೆ ಪರಿಸ್ಥಿತಿಯು ತನಗೆ ಅಸಹನೀಯವಾಗಿ ತೋರಿಬಂದಲ್ಲಿ ತನ್ನನ್ನು ಜವಾಬ್ದಾರಿಯಿಂದ ವಿಮುಕ್ತಗೊಳಿಸಬೇಕೆಂದು ತಾನು ತಮ್ಮೆಲ್ಲರೊಡನೆ ಕೇಳಿಕೊಳ್ಳುವೆನು. ಅಂತಹ ಪರಿಸ್ಥಿತಿಯಲ್ಲಿ ಅವರು ಇನ್ನೊಬ್ಬ ಪ್ರಮುಖನನ್ನು ಆರಿಸಬೇಕಾಗುವುದು ಅಂತಹ ಪ್ರಶ್ನೆಯು ಈಗೇನೂ ಉಂಟಾಗಿರುವುದಿಲ್ಲೆಂಬೇ ಪಂಡಿತ ಜವ್ಹಾರಲಾಲರ ಭಾಷಣದ ಸಾರಾಂಶವಾಗಿದ್ದಿತು. ಕಾಂಗ್ರೆಸಿನವರು ಮಂತ್ರಿ ಪದವಿ ಸ್ವೀಕರಿಸುವುದು ಪಂಡಿತರಿಗೆ ಅಸಹನೀಯವಾಗಿರುವುದೆಂದು ಅವರ ಭಾಷಣವು ಸುವೇದ್ಯಗೊಳಿಸಿರುವುದು. ಕಾಂಗ್ರೆಸಿನ ಅಧಿಕಾರ ಸ್ವೀಕಾರದ ಧೋರಣೆಯು ಜಯಶೀಲವಾಗಬೇಕಾದರೆ ಗವರ್ನರರು ಸರ್ವಸಾಮಾನ್ಯ ನಿರೀಕ್ಷೆಗಿಂತಲೂ ಹೆಚ್ಚಿನ ವಿವೇಕ, ಚಾತುರ್ಯ ಮತ್ತು ಸಹಾನುಭೂತಿಯುಳ್ಳವರಾಗಿ, ಕಾಂಗ್ರೆಸ್ ಪಕ್ಷದ ಮಂತ್ರಿಗಳ ಅಪೇಕ್ಷೆಗೊಪ್ಪುವ ಯಥಾರ್ಥ ಮನಸುಳ್ಳವರಾಗಬೇಕು. ಇದು ಆಕ್ಟಿನ ಪ್ರಕಾರವೇ ಸಾಧ್ಯವಿಲ್ಲವೆಂದು ಪಂಡಿತರ ದೃಢ ನಿರ್ಧಾರವಿರುವುದರಿಂದ, ಮಂತ್ರಿಪದವಿಸ್ವೀಕರಿಸುವುದರಿಂದ ರಾಷ್ಟ್ರದ ಇಚ್ಛೆಯು ನೆರವೇರುವುದೆಂದು ಅವರಿಗೆ ಇನ್ನು ಕೆಲಸಮಯದ ಅನುಭವವು ಖಚಿತಗೊಳಿಸದಿದ್ದಲ್ಲಿ ಅವರು ತನ್ನ ಅಧ್ಯಕ್ಷತನಕ್ಕೆ ರಾಜಿನಾಮೆಕೊಡುವ ಸಂಭವ ತೋರುತ್ತದೆ. ಪಂಡಿತರ ಭಾಷಣವು ಹಲವು ಮಂದಿ ಕಾಂಗ್ರೆಸ್ ಮುಖಂಡರಲ್ಲಿ ಅತೃಪ್ತಿಯನ್ನುಂಟು ಮಾಡಿರುವುದು.

ಅಧ್ಯಕ್ಷರ ಭಾಷಣವಾದ ನಂತರ ಕಾಂಗ್ರೆಸ್ ಪಕ್ಷದ ಕೌನ್ಸಿಲು ಮೆಂಬರರು ಮತ್ತು ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿ ಮೆಂಬರರು ಹೀಗೆ ಸುಮಾರು 1000 ಮಂದಿ ಒಟ್ಟಿಗೆ ಪ್ರತಿಜ್ಞೆ ತೆಗೆದುಕೊಳ್ಳುವ ದೃಶ್ಯವು ಅತ್ಯಂತ ಗಂಭೀರವೂ ಮನೋಜ್ಞವೂ ಆಗಿತ್ತು.

“ಅಖಿಲ ಭಾರತ ರಾಷ್ಟ್ರೀಯ ಮಹಾ ಸಭೆಯ ಸದಸ್ಯನಾದ ನಾನು ಹಿಂದುದೇಶದ ಸೇವೆಗಾಗಿ ಮತ್ತು ಶಾಸನ ಸಭೆಗಳೊಳಗೂ ಹೊರಗೂ ಹಿಂದುದೇಶದ ಪೂರ್ಣ ಸ್ವಾತಂತ್ರ್ಯಕ್ಕಾಗಿಯೂ, ಹಿಂದೀಯರ ಸೂರೆ ಮತ್ತು ದಾರಿದ್ರ್ಯವನ್ನು ನಿವಾರಿಸುವುದಕ್ಕಾಗಿಯೂ ಕೆಲಸಮಾಡುವ ಪ್ರತಿಜ್ಞಾ ಬದ್ಧನಾಗುವೆನು. ಕಾಂಗ್ರೆಸಿನ ಆದರ್ಶ ಮತ್ತು ಉದ್ದೇಶ ಸಾಧನೆಗಾಗಿ ಕಾಂಗ್ರೆಸಿನ ಶಿಸ್ತಿಗನುಸಾರವಾಗಿ, ಹಿಂದುದೇಶವು ಬಂಧವಿಮುಕ್ತವಾಗಿ ಸ್ವತಂತ್ರವಾಗುವವರೆಗೆ ಮತ್ತು ಮಿಲ್ಯಾಂತರ ಹಿಂದೀಯರಮೇಲಿನ ಸಂಕಷ್ಟದ ದೊಡ್ಡ ಭಾರವು ನಿವಾರಿತವಾಗುವನಕ ಕೊನೆಯವರೆಗೂ ಕೆಲಸಮಾಡುವ ಪ್ರತಿಜ್ಞೆ ಮಾಡುತ್ತೇನೆ” ಎಂಬುದೇ ಹಿಂದಿಯಲ್ಲಿ ಬರೆಯಲ್ಪಟ್ಟಿದ್ದ ಪ್ರತಿಜ್ಞಾ ಪತ್ರದ ಭಾಷಾಂತರವಿರುವುದು. ಮಿ. ಯಾಕೂಬ್ ಹುಸೇನರ ಸೂಚನೆಯಂತೆ ಅಧ್ಯಕ್ಷ ಪೀಠದಲ್ಲಿದ್ದ ಸಭಾಸದರೆಲ್ಲರೂ ಕೆಳಗೆ ಬಂದು ನಿಂತರು. ಆಗ ಪಂಡಿತ ಜವ್ಹಾರಲಾಲರೊಬ್ಬರೇ ಪೀಠದಲ್ಲಿ ನಿಂತು ಪ್ರತಿಜ್ಞಾ ಪತ್ರವನ್ನೋದಿದರು. ಸಭಾಸ್ಥಳವು ಪ್ರಶಾಂತವಾಗಿಯೂ, ಗಂಭೀರವಾಗಿಯೂ ಇದ್ದಿತು. ಪ್ರೆಸಿಡೆಂಟರು ಸ್ಪಷ್ಟವಾಗಿ ಮತ್ತು ಸಾವಕಾಶವಾಗಿ ಪ್ರತಿಜ್ಞಾ ಪತ್ರದ ಶಬ್ದಗಳನ್ನೋದಿ ಹೇಳಿದರು. ಇದು ಲೌಡ್ ಸ್ಪೀಕರುಗಳ ಚಪ್ಪರದ ಮೂಲೆ ಮೂಲೆಯಲ್ಲೂ ಪ್ರತಿಧ್ವನಿಸಿತು. ಸದಸ್ಯರೆಲ್ಲರೂ ನಿಧಾನವಾಗಿ ಅಧ್ಯಕ್ಷರು ಹೇಳುವ ಶಬ್ದಗಳನ್ನುಚ್ಚರಿಸಿದರು. ರಾತ್ರಿ ೮ ಘಂಟೆಗೆ ಈ ಐತಿಹಾಸಿಕ ಮಹಾಸಭೆಯು ಕೊನೆಗೊಂಡಿತು.

ಇದೇ ತಾ. 20ನೇ ಸಂಜೆ ಘಂಟೆ 6ಕ್ಕೆ ನೇಶನಲ್ ಕನ್ವೆನ್ಶನ್ ಕೊನೆಗೊಂಡಿತು. ಆ ಮೊದಲು ಹೊಸಸುಧಾರಣಾ ಆಕ್ಟನ್ನು ಹಿಂತೆಗೆದುಕೊಳ್ಳಬೇಕೆಂಬ ಮತ್ತು ಕಾಂಗ್ರೆಸ್ ಪಕ್ಷೀಯರು ವಾರ್ಧ ಕಾಂಗ್ರೆಸ್ ಕಮಿಟಿಯು ನಿಶ್ಚಯಿಸಿರುವ ಕಾರ್ಯಕ್ರಮವನ್ನು ಕೌನ್ಸಿಲುಗಳಲ್ಲಿ ಜಾರಿಗೆ ತರಬೇಕೆಂಬ ನಿರ್ಣಯಗಳು ಮಂಜೂರಾದುವು. ಮೊದಲನೇ ಠರಾವನ್ನು ಮಿ. ಯಾಕೂಬ್ ಹುಸೇನರು ತಂದು, ಪಂಡಿತ ಮಾಲವೀಯ ಮತ್ತು ಮಿ. ಜಿನ್ನರ ಜಾತೀಯ ಪಕ್ಷಗಳನ್ನು ನಿಷೇಧಿಸಿ ಎಲ್ಲರೂ ಕಾಂಗ್ರೆಸಿನೊಳಗೆ ಒಂದಾಗಿ ಯಾರಿಗೂ ಬೇಡವಾದ ಇಂಡಿಯಾ ಆಕ್ಟನ್ನು ವಿರೋಧಿಸಬೇಕೆಂದರು. ಎರಡನೇ ನಿರ್ಣಯವನ್ನು ಶ್ರೀ. ಪಟ್ವರ್ಧನರು ತಂದು, ಕಾಂಗ್ರೆಸ್ ಪಕ್ಷೀಯರು ಶಿಸ್ತಿನಿಂದ ನಡೆದು ಕೌನ್ಸಿಲುಗಳೊಳಗೆ ಕಾಂಗ್ರೆಸಿನ ಧ್ವಜವನ್ನೆತ್ತಿಹಿಡಿಯುವ ಆವಶ್ಯಕತೆಯ ಕುರಿತು ಮಾತಾಡಿದರು. ಈ ಠರಾವುಗಳು ಮಂಜೂರಾದ ಮೇಲೆ ಕೆಲವರು, ಪ್ರಾಂತಿಕ ಕಾಂಗ್ರೆಸ್ ಕಮಿಟಿ ಮತ್ತು ಪ್ರಾಂತಿಕ ಕಾಂಗ್ರೆಸ್ ಕೌನ್ಸಿಲುಪಕ್ಷಗಳೊಳಗಣ ಸಂಬಂಧದ ಕುರಿತು ಪ್ರಶ್ನೆಯನ್ನೆತ್ತಿದರು. ಆಗ ಪಂಡಿತ ಜವ್ಹಾರಲಾಲರು, ಅವೆರಡೂ ಪರಸ್ಪರ ಸಹಕಾರದಿಂದ ನಡೆಯಲೆತ್ನಿಸಬೇಕು. ಅವುಗಳೊಳಗೇನಾದರೂ ವೈಷಮ್ಯವುಂಟಾದರೆ ಅದನ್ನು ಕಾಂಗ್ರೆಸ್ ವರ್ಕಿಂಗ್ ಕಮಿಟಿ ಇಲ್ಲವೆ ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿಯವರು ತೀರ್ಮಾನಿಸತಕ್ಕದ್ದೆಂದರು. ಅಧ್ಯಕ್ಷರು ಕನ್ವೆನ್ಶನನ್ನು ಕೊನೆಗೊಳಿಸುವಾಗ, ಕನ್ವೆನ್ಶನಿನ ಉದ್ದೇಶವೇನೆಂಬುದನ್ನು ವಿವರಿಸಿ ಹೇಳಿದರು. ಕಾಂಗ್ರೆಸಿನ ಕೌನ್ಸಿಲು ಧೋರಣೆಯು ಒಕ್ಕಟ್ಟಿನಿಂದಲೂ ಏಕರೀತಿಯಾಗಿಯೂ ನಡೆಸಲ್ಪಟ್ಟು, ಪ್ರಾಂತಿಕ ಸ್ವಾಯತ್ತತೆಯು ಜಾರಿಗೆ ಬರುವಾಗ ಭಿನ್ನಭಾವ ಮತ್ತು ಪ್ರಾಂತೀಯತೆಯು ಬೆಳೆಯದಂತೆ ತಡೆಗಟ್ಟುವುದಕ್ಕಾಗಿ ಕನ್ವೆನ್ಶನನ್ನು ಕರೆದುದಾಗಿದೆ. ಪಂಡಿತ ನೆಹರುಗಳು ಕನ್ವೆನ್ಶನನ್ನು ಕೊನೆಗೊಳಿಸುವ ಬದಲಿಗೆ ಮುಂದುವರಿಸಿದರು.

ರಾಜಕೀಯ ಕೈದಿಗಳ ಸಹಾಯಕ ಪರಿಷತ್ತು.

ಈ ಪರಿಷತ್ತು ಇದೇ ತಾ. 19ರಲ್ಲು ಅನ್ಸಾರೀ ನಗರದಲ್ಲಿ ಶ್ರೀಯುತ ಶರತ್ಚಂದ್ರ ಭೋಸರ ಅಧ್ಯಕ್ಷತೆಯಲ್ಲಿ ನಡೆದು ರಾಜಕೀಯ ಕೈದಿಗಳ ಡಿಟೆನ್ಯೂಗಳ ಮತ್ತು ಗಡಿ ನಿರ್ಬಂಧದೊಳಗಿರಿಸಲ್ಪಟ್ಟವರ ಶೋಚನೀಯ ಅವಸ್ಥೆಯು ಸುಧಾರಿಸಲ್ಪಡಬೇಕೆಂಬ ಮತ್ತು ಎಲ್ಲಾ ತರದ ದಬ್ಬಾಳಿಕೆಯ ಕಾನೂನುಗಳನ್ನು ರದ್ದುಪಡಿಸಬೇಕೆಂಬ ನಿರ್ಧಾರಗಳಾದವು. ಈ ಸಂದರ್ಭದಲ್ಲಿ ಶ್ರೀ. ಶರತ್ಚಂದ್ರಭೋಸರು “ರಾಜಕೀಯ ಕೈದಿಗಳ ಸಹಾಯಕ್ಕಾಗಿ ನಮ್ಮಿಂದ ಸಾಧ್ಯವಾದ ಪ್ರಯತ್ನಗಳನ್ನೆಲ್ಲಾ ಮಾಡಿ ನೋಡಬೇಕೆಂದೂ, ಮಾನಸಿಕ ಸಹಾನುಭೂತಿ ಮಾತ್ರ ತೋರಿಸದೆ ಎಡೆಬಿಡದೆ ಚಳವಳ ಹೂಡಿದರೆ ಜಯವು ನಿಶ್ಚಯವೆಂದೂ, ಈಗ ಕಾರಾಗೃಹದಲ್ಲಿ ಕೊಳೆಯುತ್ತಿರುವ ನಮ್ಮ ಬಂಧುಗಳಿಗಿಂತ ದೊಡ್ಡ ದೇಶಭಕ್ತರಿಲ್ಲ; ಅವರಂತಹ ತ್ಯಾಗಿಗಳು, ಕಷ್ಟಸಹಿಷ್ಣುಗಳು ಬೇರಿಲ್ಲವೆಂದೂ” ಭಾಷಣಮಾಡಿದರು.

ನಿಮ್ಮ ಜಾಹೀರಾತನ್ನು ನವಯುಗದಲ್ಲೇ ಕೊಡಿರಿ.

ನಾರದನ ತಂಬೂರಿ

ತುಸು ಬೆಳಕು ಬೀಳುತಿದೆ | ಅಲ್ಲಲ್ಲಿ ಮೂಲೆಯಲಿ || ಬೆಳಗಿನಾ ಲಕ್ಷಣವೊ- ಕತ್ತಲೆಯ ಕಿಡಿಯೊ || ನರ ನಾರಾಯಣ! ದೀರ್ಘಕಾಲದಿಂದ ಸೆರೆಮನೆಯಲ್ಲಿದ್ದ ಬಾಬು ಸುಭಾಷಬೋಸರನ್ನು ಸರಕಾರವು ಥಕ್ಕನೆ ಹೊರಗೆ ಕಳುಹಿಸಿದೆ. ಪಾರ್ಲಿಮೆಂಟಿನಲ್ಲಿ ಮತ್ತು ಎಸೆಂಬ್ಲಿಯಲ್ಲಿ 'ಅವರನ್ನು ಬಿಡಲಾಗುವುದಿಲ್ಲ' ಎಂದವರಿಗೆ ಇಷ್ಟು ಬೇಗನೆ ಬಿಡಲಾಯಿತಲ್ಲಾ— ಎಂದು ದೇಶದಲ್ಲೆಲ್ಲಾ ಆಶ್ಚರ್ಯ— ಸಂತೋಷ!

●

ಅವರನ್ನು ಜೈಲಿಗೆ ಹಾಕಿದುದರ ಕಾರಣವು ಈ ವರೆಗೂ ತಿಳಿದು ಬಂದಿಲ್ಲ; ಜೈಲಿನಿಂದ ಹೊರಗೆ ಹಾಕಿದುದರ ಕಾರಣವು ಮಾತ್ರ ತಿಳಿದು ಬಂದಿದೆ—'ಶ್ರೀ. ಬೋಸರ ಆರೋಗ್ಯವು ಕೆಟ್ಟು ಹೋಗಿದೆ; ಪ್ರತಿದಿನ ಸಂಜೆ ಜ್ವರಬರುತ್ತಿದೆ.' ಈ ಅನಾರೋಗ್ಯವು ಮೊದಲಿನಿಂದಲೂ ಇತ್ತು. ಅದರಿಂದ ಕೆಡುಕುಂಟೆಂದು ಸರಕಾರಕ್ಕೆ ಈಗ ಮಾತ್ರ ಗೊತ್ತಾದುದು ಹೇಗೆ? ಬೋಸರ ರೋಗವು ಹೆಚ್ಚಿತೆ? ಅಥವಾ ಸರಕಾರದ ಶಿಕಾಯತು ಗುಣವಾಯಿತೆ?

●

ಸುಭಾಷ ಬಾಬುಗಳು ಮುಖಂಡರು- ಆದುದರಿಂದ ಜೈಲು ಅವರ ಪ್ರಕೃತಿಗೆ ಒಗ್ಗುವುದಿಲ್ಲವೆಂಬುದನ್ನು ಸರಕಾರವು ತಿಳಿಯಿತು. ಅವರಂತೆಯೇ ಜೈಲಿನಲ್ಲಿ ನರಳುತ್ತಿರುವ ಇತರ ಸಾವಿರಾರು ಮಂದಿ ಡೆಟಿನ್ಯೂಗಳಿಗೇನು ಗತಿ? ಸರಕಾರವು ಕೈದಿಗಳನ್ನು ಬಿಡಬೇಕಾದರೆ ಅವರಿಗೆ ರೋಗ ಮಾತ್ರ ಬಂದರೆ ಸಾಲದು— ಧುರೀಣತ್ವವೂ ಬರಬೇಕು? ಅಥವಾ ಇಂತಹ ಧುರೀಣತ್ವವೇ ಮಹಾ ಅಪಾಯಕಾರೀ ರೋಗವೆಂದು ಸರಕಾರವು ತಿಳಿದಿರಬೇಕು.

●

ಸ್ಪೈಯಿನಿನ ಯುದ್ಧದಲ್ಲಿ ಇತ್ತೀಚೆಗೆ ಸರಕಾರದ ಕೈಯೇ ಮೇಲಾಗುತ್ತಾ ಬಂದಿದೆ. ಬಂಡಾಯಗಾರರು ಎಲ್ಲಾ ಕಡೆಗಳಲ್ಲಿಯೂ ಹಿಮ್ಮೆಟ್ಟುತ್ತಿದ್ದಾರೆ. "ನಾವು ಗೆದ್ದಾಯಿತು" ಎನ್ನುವ ವರೆಗೂ ಮುಂದುವರಿದಿದ್ದ ದಂಗೆಗಾರರು ಈಗ ಮೇಲಿಂದ ಮೇಲೆ ಸೋಲನ್ನು ಅನುಭವಿಸಹತ್ತಿದ್ದಾರೆ. ಇದರ ಕಾರಣವೇನಿರಬಹುದು?

●

ಅದರಲ್ಲಿ ಗುಟ್ಟೇನು? ಸ್ಪೆಯಿನ್ ಸರಕಾರದ ಈ ವಿಜಯಗಳಿಗೆಲ್ಲಾ ರಷ್ಯದ ಬೆಂಬಲವೇ ಕಾರಣ. ಜರ್ಮನಿ-ಇಟಲಿಗಳು ದಂಗೆಗಾರರಿಗೆ ಸಹಾಯಮಾಡುತ್ತಿರುವುದು ಸ್ಪಷ್ಟವಾಗಿ ಕಂಡು ಬರುತ್ತಿದೆ. ರಷ್ಯವು ಸರಕಾರಕ್ಕೆ ಸಹಾಯಮಾಡುವ ರೀತಿಯಲ್ಲಿ ಆ ಜಂಭ ಕೂಡಾ ಇಲ್ಲ! ಮೊನ್ನೆ ಸ್ಪೈನಿನ ಒಂದೆಡೆಯ ಯುದ್ಧದಲ್ಲಿ ಸತ್ತವರಲ್ಲಿ ನೂರಾರು ಮಂದಿ ಇಟಲಿಯಾನರು-ಕೊಂದ-ಬೊಂಬುಗಳು ಯಾರದೆಂಬುದು ಇನ್ನೂ ಗೊತ್ತಿಲ್ಲ!

●

ಇಟಲಿಯ ಸರ್ವಾಧಿಕಾರಿ ಮುಸಲಿನಿಯವರು ಸ್ಪೈಯಿನ್ ಯುದ್ಧದಲ್ಲಿ ಹೋರಾಡುತ್ತಿರುವ ಇಟೆಲಿಯಾನ ಸೈನಿಕರನ್ನು ಹುರಿದುಂಬಿಸಲು ಕಳುಹಿರುವ ತಂತಿಯೊಂದನ್ನು ಸರಕಾರದವರು ಕಂಡು ಹಿಡಿದಿರುವರು. ಇಟೆಲಿಯಿಂದ ಬಂದ ಸೈನಿಕರು ಮಾತ್ರವಲ್ಲ-ಕಾಗದ ಪತ್ರಗಳೂ ಸ್ಪೈಯಿನ್ ಸರಕಾರಕ್ಕೆ ಸೆರೆಸಿಕ್ಕುತ್ತಿವೆ!

●

ಸೆರೆಸಿಕ್ಕಿದ ಇಟೆಲಿಯಾನ ಸೈನಿಕನೊಬ್ಬನು 'ನನ್ನನ್ನು ಅಬಿಸೀನಿಯಕ್ಕೆಂದು ಹೊರಡಿಸಿದರು; ಇಲ್ಲಿ ಬಂದು ಇಳಿದ ಮೇಲೆಯೇ ಗೊತ್ತಾದುದು-ಅಬಿಸೀನಿಯಕ್ಕಲ್ಲ, ಸ್ಪೈನಿಗೆಂದು' ಎಂದು ಆತ್ಮಕಥೆಯನ್ನು ಹೇಳಿಕೊಂಡ. ಮುಸಲನಿಯವರು ಅಬಿಸೀನಿಯ ಬೇರೆ-ಸ್ಪೈಯಿನು ಬೇರೆ ಎಂಬ ಭೇದಭಾವವನ್ನೇ ಇಟ್ಟಿಲ್ಲ; ಸೈನಿಕರಿಗೆ ಅಬಿಸೀನಿಯದಲ್ಲಿ ಮಾಡಿದಂತೆಯೇ ಸ್ಪೈಯಿನಿನಲ್ಲಿಯೂ ಮಾಡಲಾಗದಿದ್ದರೆ ಅವಕ್ಕೆ ಹೊಣೆಯಾರು?

●

'ಅಬಿಸೀನಿಯಾ ಯುದ್ಧದಲ್ಲಿ ಇಂಗ್ಲೆಂಡ್ ಮತ್ತು ಫ್ರಾನ್ಸುಗಳು ಇಟಲಿಯ ಮೇಲೆ ಜಾರಿಮಾಡಿದ್ದ ಸೆಂಕ್ಷನುಗಳ ವಿಚಾರವನ್ನು ನಾನೆಂದಿಗೂ ಮರೆಯುವಂತಿಲ್ಲ' ಎಂದರು ಲಿಬಿಯಾದಲ್ಲಿ ಸಂಭ್ರಮದ ಸ್ವಾಗತ ಪಡೆಯುವಾಗ ಮುಸಲನಿಯವರು. ಮುಸಲನಿಯವರ ಈ ಮಾತನ್ನೂ ಇಂಗ್ಲೆಂಡ್-ಫ್ರಾನ್ಸುಗಳು ಎಂದಿಗೂ ಮರೆಯುವಂತಿಲ್ಲ. ಹೀಗೆ ಒಬ್ಬರನ್ನೊಬ್ಬರು ಮರೆಯದ ಕೃತ್ಯಗಳು ಹೆಚ್ಚುತ್ತಾ ಬಂದರೆ ಕೊನೆಗೊಂದು ದಿನ 'ಲೋಕಶಾಂತಿ' ಶಬ್ದವನ್ನಾದರೂ ಮರೆಯಬಹುದಲ್ಲ!

●

ಸ್ವತಂತ್ರವೆಂದರೆ ಎಲ್ಲಾ ಬಂಧನಗಳಿಂದಲೂ ಬಿಡುಗಡೆ ಹೊಂದುವದೆಂದೇ ಅರ್ಥ. ಈ ಅರ್ಥವನ್ನು ಎಸೆಂಬ್ಲಿಯ ಬಜೆಟ್ ಅಧಿವೇಶನದಲ್ಲಿ ಉಪ್ಪಿನ ಸುಂಕವನ್ನಿಳಿಸಬೇಕೆಂದು ಕೊಂಗ್ರೆಸಿನವರು ಸೂಚನೆ ತಂದಾಗ ಮಿ. ಜಿನ್ನಾರವರ ಧುರೀಣತ್ವದಲ್ಲಿರುವ ಸ್ವತಂತ್ರ ಪಕ್ಷೀಯರು ಸ್ಪಷ್ಟಗೊಳಿಸಿದರು. ಅವರು ಉಪ್ಪಿನ ಸುಂಕವನ್ನು ಕಡಿಮೆಮಾಡುವ ಸೂಚನೆಗೆ ಅನುಕೂಲವಾಗಲೂ ಇಲ್ಲ; ಪ್ರತಿಕೂಲವಾಗಲೂ ಇಲ್ಲ. ಸ್ವತಂತ್ರರಾಗಿ ನಿಂತರು! ಇದರಿಂದ ಉಪ್ಪಿನ ಸುಂಕ ಕಡಿಮೆಯಾಗದಿದ್ದರೂ ಸ್ವತಂತ್ರ ಪಕ್ಷದ ಬೆಲೆ ತಗ್ಗಲಿಲ್ಲವೆ?

●

ಅರ್ಧಾಣೆಯ ಟಪ್ಪಾಲು ಕಾರ್ಡುಗಳನ್ನುಪಯೋಗಿಸಬೇಕೆಂದು ಕೊಂಗ್ರೆಸ್ ಪಕ್ಷೀಯರು ತಂದ ಮತ್ತೊಂದು ಸೂಚನೆಯು ಮಂಜೂರಾಯಿತು. ಇನ್ನು ಅರ್ಧಾಣೆಯ ಕಾರ್ಡು ಹೊರಬೀಳುವದೋ— ವೈಸರಾಯರಿಂದ ಈ ನಿರ್ಣಯದ ಪ್ರತಿಕೂಲ ಹುಕುಂ ಹೊರಬೀಳುವದೋ ಎಂಬುದನ್ನು ಕಾಯಬೇಕಾಯಿತು!

—ನಾರದ

Combined Booking Agency

AND

Joint Booking Office

ಕಂಬೈಂಡ್ ಬುಕ್ಕಿಂಗ್ ಏಜನ್ಸಿ ಮತ್ತು ಜೊಯಿಂಟ್ ಬುಕ್ಕಿಂಗ್ ಆಫೀಸು

ಬಸ್ಸು ಸರ್ವಿಸುಗಳ ಮೇಲಾಟವನ್ನು ಹೋಗಲಾಡಿಸಿ,
ಪ್ರಯಾಣಿಕರ ಸೌಕರ್ಯಗಳನ್ನು ಹೆಚ್ಚಿಸಿ,
ಜನ ಸೇವೆಯನ್ನು ಮಾಡುವ ಉದ್ದೇಶದಿಂದ,
ನಾವೆಲ್ಲರೂ ಕೂಡಿ ಸರ್ವಿಸುಗಳ ವ್ಯವಸ್ಥೆಯನ್ನು ಮಾಡಿದ್ದೇವೆ.
ಪ್ರಯಾಣಿಕರಿಗೆ ಯಾವುದೊಂದು ಅನಾನುಕೂಲವು ಒದಗಿದ್ದಾದರೆ,
ಅಥವಾ
ಪ್ರಯಾಣ ಸೌಕರ್ಯದ ಉದ್ದೇಶದಿಂದ ಯಾರಿಗಾದರೂ ಯಾವುದಾದರೊಂದು ಸೂಚನೆ ಕೊಡಲಿದ್ದರೆ,
ಅವುಗಳನ್ನು ತಿಳಿಯಲು ನಾವು ಆತುರಪಡುತ್ತೇವೆ.

ಮೇಲಿನ ಸಂಸ್ಥೆಗಳ ಜೊಯಿಂಟ್ ಮೆನೇಜರ (Joint Manager) ರೊಡನೆ ಅಥವಾ ಕೆಳಗೆ ಹೆಸರು ಕಾಣಿಸಿದ ಯಾರೊಡನಾದರೂ ಪತ್ರವ್ಯವಹಾರವನ್ನು ನಡಿಸಬಹುದು—

The Canara Public Conveyance Co., Ltd.
The Hanuman Transport Co., Ltd.
The Shanker Vittal Motor Co. Ltd.
The Durga Parameshwari Motor Service.
The Popular Motor Service Ltd.
The P. V. Motor Service.
The Modern Motor Service of Mysore Ltd.
The Superb Motor Service.
The Mahalaxmi Motor Service.

ಕಸ್ತೂರಿ ಮಿಶ್ರಣ ದಶಮೂಲವೆಂಬ

ಸೂತಿಕಾ ರಸಾಯನ

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

I. **ಶೋಧನ ಗುಣ:**—ಶೋಧನದಿಂದ ಪ್ರಸವಾನಂತರ ಗರ್ಭಕೋಶದ ಸರ್ವತರದ ನಂಜನ್ನು ಹೊರಗೆ ಹಾಕಿ ಪ್ರಸೂತವಾದ ಗರ್ಭಕೋಶವನ್ನು ಮೂರು ದಿವಸಗಳೊಳಗೆ ಸಂಕುಚಿತವಾಗಿ ಮಾಡುವದು.

II. **ರಸಾಯನ ಗುಣ:**—ರಸಾಯನದಿಂದ ಸೂತಿಕಾ ಸ್ತ್ರೀಯು ಗರ್ಭದ ಬೆಳವಣಿಗೆ ಬಗ್ಗೆಯೂ, ಪ್ರಸವವೇದನಾ ಬಗ್ಗೆಯೂ ತಾನು ಕಳಕೊಂಡ ಮೂಲ ಶಕ್ತಿಯನ್ನು ಇಮ್ಮಡಿಯಾಗಿ ತಿರುಗಿ ಹೊಂದುವಳು.

III. **ಸುಖಸೇವನ:**—ಸುಖಸೇವನದಿಂದ ಮಧುರ ಮನೋಹರವಾದ ಈ ರಸಾಯನವು ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾದುವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವಾನಂತರದ ತೀಕ್ಷ್ಣವೇದನೆಯನ್ನು ಶೀಘ್ರದಿಂದ ನಿಲ್ಲಿಸುವದು.

ಒಬ್ಬಳು ಬಾಣಂತಿಗೆ ಎರಡು ಬಾಟ್ಲಿ ಬೇಕಾಗುವದು. ಕ್ರಯ ಬಾಟ್ಲಿ 1ಕ್ಕೆ ರೂ. 2-0-0.

ಎಮ್. ವಿ. ಶಾಸ್ತ್ರಿ, ಆಯುರ್ವೇದ ಭೂಷಣ
ಮಂಗಳೂರು, ದ.ಕ.

ಕ್ರೌನ್ ರಬ್ಬರ್ ಸ್ಟಾಂಪ್ ಕಂಪೆನಿ

ಸ್ಥಾಪನೆ: 1926

18 ಬಲ್ಮಠ ರಸ್ತೆ, ಮಂಗಳೂರು.

ಯಾವತ್ತೂ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಆಗತ್ಯವಿರುವ ಎಲ್ಲಾ ತರದ ರಬ್ಬರ್ ಮೊಹರುಗಳೂ ಸೈನ್ ಬೋರ್ಡು, ಪೇದೆಗಳ ಬೇಜು, ಮೊನೊಗ್ರಾಮ್ ಸೀಲು, ಇತ್ಯಾದಿಗಳನ್ನು ಪ್ರತಿಯೊಬ್ಬರ ಅಭಿರುಚಿಗೊಪ್ಪುವಂತೆ ಸುಲಭ ದರಗಳಲ್ಲಿ ಮಾಡಿಕೊಡೋಣಾಗುವುದು.

ಹೆಚ್ಚಿಟ್ಟು ಒತ್ತುವ ಸೆಟ್ಟುಗಳು ಕೂಡಾ ಸಿಗುವವು.

ಮಿಕ್ಕ ವಿಚಾರಗಳನ್ನು ನಮ್ಮ ಆಫೀಸಿಗೆ ಸ್ವತಹ ಬಂದು ಯಾ ಪತ್ರ ಮುಖೇನ ತಿಳಕೊಳ್ಳಬಹುದು.

ಮಂಗಳೂರಲ್ಲಿ ರೈಲು ಬಂಡಿಗಳ ಸಮಯ

ಗಾಡಿಗಳು	ಹೊರಡುವ ಘಂಟೆ.	ತಲಪುವ ಘಂಟೆ.
ಮಿಕ್ಸೆಡ್	ಬೆಳಗ್ಗೆ 6-55	ರಾತ್ರಿ 8-55
ಕಾಂಜಂಗಾಂಡ್ ಪ್ಯಾಸಂಜರ್	ಬೆಳಗ್ಗೆ 8-25	ಮಧ್ಯಾಹ್ನ 1-20
ಮೈಲ್	ಬೆಳಗ್ಗೆ 9 50	ಸಂಜೆ 4-20
ಫಾಸ್ಟ ಪೆಸೆಂಜರ್	ಮಧ್ಯಾಹ್ನ 12-45	ಮಧ್ಯಾಹ್ನ 2-40
ಕಾಸರಗೋಡ್ ಪ್ಯಾಸೆಂಜರ್	ಮಧ್ಯಾಹ್ನ 3-20	ಸಂಜೆ 6-15
ಶಟಲ್	ಸಂಜೆ 5-25	ಬೆಳಗ್ಗೆ 9-20

ಜನರಲ್ ಎಶ್ಶೂರೆನ್ಸ್ ಸೊಸೈಟಿ ಲಿಮಿಟೆಡ್.

[ಸ್ಥಾಪನೆ: 1907]

ಅತ್ಯಧಿಕ ಬೋನಸು!

ಮರಣಾಂತ್ಯ ಪೊಲಿಸಿಗಳಮೇಲೆ ಸೇಕಡಾ 25,
ಎಂಡೊಮೆಂಟ್ ಪೊಲಿಸಿಗಳಮೇಲೆ ಸೇಕಡಾ 20,
ಬಲವಂತ ಪೊಲಿಸಿಗಳು ರೂ. 3 ಕೋಟಿ ಮಿಕ್ಕಿವೆ.
ಮೂಲಧನವು ರೂ. 75 ಲಕ್ಷ ಮೀರಿದೆ.

ಬಡವರಿಗೂ ಧನಿಕರಿಗೂ ಹಿತಕಾರಿಯಾದ ಎಷ್ಯೂರೆನ್ಸ್ ಯೋಜನೆಗಳು.

ಅತೀ ಲಾಭದಾಯಕವಾದ ಉದಾರ ಏಜೆನ್ಸಿ ಶರ್ತಗಳು.

ವಿಶೇಷ ಮಾಹಿತಿಗಳಿಗಾಗಿ ಈ ಕೆಳಗಣ ವಿಳಾಸಗಳಿಗೆ ಬರಕೊಳ್ಳಿರಿ—

ಆಕ್ಟಿಂಗ್ ಮೆನೇಜರ್, ಅಜ್ಮೀರ್.

ಅಥವಾ

ಮೆನೇಜರ್, 278, ಲಿಂಗ ಚೆಟ್ಟಿ ಸ್ಟ್ರೀಟ್, ಮದ್ರಾಸ್.
ಸುಪರಿಂಟೆಂಡೆಂಟ್, ಬಳ್ಳಾರಿ. ಆರ್ಗನೈಸರ್, ವೆಲ್ಲೂರು.
ಚೀಫ್ ಏಜೆಂಟ್ಸ್, ಮಧುರ, ತ್ರಿಚಿನಾಪಳ್ಳಿ.

ಸ್ಟೀಮರು ಸಮಯ

	ಬೊಂಬಾಯಿಂದ ಬರುವದು	ಬೊಂಬಾಯಿಗೆ ತೆರಳುವದು
ಮಂಗಳೂರು	ಗುರುವಾರ ಬೆಳಗ್ಗೆ 6 ಗಂಟೆ	ಶನಿವಾರ ಬೆಳಗ್ಗೆ 9 ಗಂಟೆ
	ಸೋಮವಾರ ಬೆಳಗ್ಗೆ 7 ಗಂಟೆ	ಮಂಗಳವಾರ ಬೆಳಗ್ಗೆ ಗಂಟೆ 9
ಮಲ್ಪೆ	ಗುರುವಾರ ಬೆಳಗ್ಗೆ ಗಂಟೆ 2-30	ಶನಿವಾರ ಮಧ್ಯಾಹ್ನ 12
	ಆದಿತ್ಯವಾರ ಹಗಲು 3 ಗಂಟೆ	ಮಂಗಳವಾರ ಮಧ್ಯಾಹ್ನ 12
ಕುಂದಾಪುರ	ರವಿವಾರ ಹಗಲು 1 ಗಂಟೆ	ಶನಿವಾರ ಸಂಜೆ ಗಂಟೆ 3-30
		ಮಂಗಳವಾರ ಮಧ್ಯಾಹ್ನ 3-30

ನಮ್ಮ ಉನ್ನತಿಗಾಗಿ ನಾವೇನು ಮಾಡಬೇಕು? ಇತ್ಯಾದಿ ಸಮಸ್ಯೆಗಳಿಗೆ ಸದುತ್ತರವನ್ನು ಕೊಡುವ ಪತ್ರಿಕೆ ಎಂದರೆ

ಸದ್ಧರ್ಮ ಪ್ರಚಾರಕ

ವಾ. ಚ. 1—4—0.

ಸಂಪಾದಕರು:-

ಬಿ. ಲಕ್ಷ್ಮಣದೇವ ವಿದ್ಯಾರ್ಥಿ.

ಉತ್ಕೃಷ್ಟ ಕಥೆ, ಕವನಗಳಿಂದೊಡಗೂಡಿ, ಪ್ರತಿಮಾಸದ 15ನೇ ತಾರೀಕಿಗೆ ತಪ್ಪದೆ ಹೊರಡುವುದು.

ಸದ್ಧರ್ಮ ಪ್ರಚಾರಕ, ಕಾರ್ಯಾಲಯ,
ಅಳಕೆ ರಸ್ತೆ, ಮಂಗಳೂರು.

ಪ್ರವಾಸಿ.

ಅತ್ಯುತ್ತಮವಾದ ಸಚಿತ್ರ ಕನ್ನಡ ಮಾಸಪತ್ರಿಕೆ.

ಬೋಧಪ್ರದವಾದ ಲೇಖನಗಳು-ಮಹಾಪುರುಷರ ಜೀವನ ಚರಿತ್ರೆಗಳು ಉತ್ತಮ ಕಥೆಗಳು-ಆರ್ಥಿಕ ರಾಜಕೀಯ ವಿಚಾರಗಳು. ವೈಜ್ಞಾನಿಕ ವಿಷಯಗಳು-ಪರರಾಷ್ಟ್ರಗಳ ಸಮಸ್ಯೆಗಳು-ಗ್ರಂಥ ವಿಮರ್ಶೆ ಇವ್ರಗಳನ್ನೊಳಗೊಂಡ ಹೊಸ ರೀತಿಯ ಮಾಸಪತ್ರಿಕೆ. ಕೈಗೆಲಸವೆಂಬ ನೂತನ ವಿಭಾಗವಿರುವ ಪತ್ರಿಕೆಯು ಇದೊಂದೇ

ವಾರ್ಷಿಕ ಚಂದಾ ರೂ. 3—8—0

ಪ್ರವಾಸಿ ಕಾರ್ಯಾಲಯ
ಕಾಸರಗೋಡು, ದಕ್ಷಿಣಕನ್ನಡ

THE

Vijaya Bank, Ltd.

Head Office: MANGALORE. **Branch Office: Court Road, UDIPI.**

ದಿ ವಿಜಯ ಬೇಂಕ್ ಲಿಮಿಟೆಡ್,

ಹೆಡ್ ಆಫೀಸು: ಮಂಗಳೂರು. ಶಾಖೆ: ಕೋರ್ಟು ರಸ್ತೆ, ಉಡ್ಪಿ

ಚಾಲ್ತಿ ಠೇವಣಾತಿಗಳು ಸಾ. ಶೆ. 2. ಸೇವಿಂಗ್ಸ ಬ್ಯಾಂಕ್ ಠೇವಣಾತಿಗಳು ಸಾ. ಶೆ. $3\frac{1}{2}$

ಕಾಯಂ ಠೇವಣಾತಿಗಳು 3 ತಿಂಗಳ ಬಾಬ್ತು ಸಾ. ಶೆ. $3\frac{1}{2}$

6 ಮತ್ತು 9 ತಿಂಗಳ ಬಾಬ್ತು ಸಾ ಶೆ. 4. 1 ವರ್ಷದ ಬಾಬ್ತು ಸಾ. ಶೆ. 5.

2 ವರ್ಷದ ಮೇಲಿನವುಗಳ ಬಾಬ್ತು ಸಾ. ಶೆ. $5\frac{1}{2}$ ದರದ ಬಡ್ಡಿಯಲ್ಲಿ ಅಂಗೀಕರಿಸಲ್ಪಡುವುವು.

ಬ್ಯಾಂಕಿಗೆ ಸಂಬಂಧಪಟ್ಟ ಎಲ್ಲಾ ತರದ ವ್ಯವಹಾರಗಳು ನಡೆಸಲ್ಪಡುತ್ತವೆ—
ಅಂದರೆ—ಪ್ರೊ. ನೋಟು, ಹುಂಡಿ, ಸರಕು, ವಗೈರೆ ಮೇಲೆ ಸಾಲಕೊಡಲಾಗುತ್ತದೆ.
ಭಂಗಾರದ ಈಡಿನ ಮೇಲೆ ಈ ಕೆಳಗಿನ ದರದ ಬಡ್ಡಿಯಲ್ಲಿ ಸಾಲ ದೊರೆಯುವುದು.
ರೂ. 1ರಿಂದ 100ರ ವರೆಗೆ ಸಾ. ಶೆ. 8. 101ರಿಂದ ಮೇಲ್ಪಟ್ಟ ಸಾಲಗಳಿಗೆ ಸಾ. ಶೆ. 7.

ವಿಶೇಷ ಸೂಚನೆ:—ಬಡವರಿಗೆ ಸಹಾಯವಾಗುವಂತೆ ಕಡಿಮೆಯೆಂದರೆ ರೂಪಾಯಿ 10/ ಸಹಾ ಸಾಲಕೊಡಲಾಗುತ್ತದೆ. ಫಾರಂಗಳು ದೊರೆಯುತ್ತವೆ.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಕೊಳ್ಳಿರಿ

A. B. Shetty, ಚೆಯರ್‌ಮೇನ್.
K. Gopalakrishna Shetty. ಸೆಕ್ರೆಟರಿ.

ವಿಜಯ ಬೇಂಕ್ ಲಿಮಿಟೆಡ್, ಕದ್ರಿರೋಡ್, ಮಂಗಳೂರು.

ಸ್ವದೇಶಿ ಕೈಗಾರಿಕೆಯನ್ನು ಪ್ರೋತ್ಸಾಹಿಸಿರಿ.

ಸ್ವದೇಶಿ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗೆಬಗೆಯ ಬಣ್ಣದಲ್ಲಿ, ಅಂಚಿನಲ್ಲಿ, ನಮೂನೆಯಲ್ಲಿ ದೊರೆಯುತ್ತವೆ.

ಶುದ್ಧ ಖಾದಿ ಮತ್ತು ಮಿಲ್ ಬಟ್ಟೆಗಳೂ ವಿಕ್ರಯಿಸಲ್ಪಡುತ್ತವೆ.

P. A. PAI, BROS.
ಪಿ. ಎ. ಪೈ ಬ್ರದರ್ಸ್,
ಆಸ್ಪತ್ರೆ ಎದುರು, ಉಡುಪಿ.

ಕಸಿಗಿಡಗಳು.

ಸಪೋಡಿಲ್ಲ (ಚಿಕ್ಕು)

ಈ ಮರವು ನಮ್ಮ ಜಿಲ್ಲೆಯ ಎಲ್ಲಾ ಭಾಗದಲ್ಲಿಯೂ ಸರಿಯಾಗಿ ಬೆಳೆದು, 3ನೇ ವರ್ಷದಲ್ಲಿಯೇ ತಪ್ಪದೆ ಫಲಬಿಡುತ್ತದೆ. ಒಂದು ಮರದಲ್ಲಿ ಸಾವಿರಗಟ್ಲೆ ಹಣ್ಣಾಗುವದು. ಒಂದು ಎಕ್ರೆಯಲ್ಲಿ ವರ್ಷಕ್ಕೆ ರೂ. ಸಾವಿರದ ಮೇಲೆ ಉತ್ಪತ್ತಿಯಾಗುವುದು. ಹಣ್ಣು ಅತಿ ಮಧುರ, ಒಳ್ಳೇ ರುಚಿ, ಕಾಯಿಲೆಯವರಿಗೆ ಉತ್ತಮ ಆಹಾರ ಅದರಲ್ಲಿ ಕಬ್ಬಿಣ ಸತ್ವ ಮತ್ತು ವಿಟಮಿನ್ ತುಂಬ ಇರುವದರಿಂದ ರಕ್ತವನ್ನು ವೃದ್ಧಿಸುವುದು. ಮರದಲ್ಲಿ ಯಾವಾಗಲೂ ಹಣ್ಣು ಇರುವುದು, ಎಲ್ಲಾ ತೋಟದಲ್ಲಿಯೂ ಇರತಕ್ಕದ್ದು. ಗಿಡವೊಂದರ ಕ್ರಯ ರೂ. 1-6-0 ಮಾತ್ರ. ನಮ್ಮಲ್ಲಿ ಉತ್ತಮ ಮಾವು ಮತ್ತು ಇತರ ಕಸಿ ಗಿಡಗಳು ಕೂಡ ದೊರೆಯುತ್ತವೆ. ಕ್ರಯಪಟ್ಟಿಗೆ ಕೆಳಗಣ ವಿಳಾಸಕ್ಕೆ ಬರೆಯುವುದು.

ಮಂಗಳೂರಲ್ಲಿ ವಿಜಯ ಬ್ಯಾಂಕಿನಲ್ಲಿಯೂ ಸ್ವದೇಶಿ ಕೋಫು, ಹಂಪನಕಟ್ಟೆಯಲ್ಲಿಯೂ, ಸೋಮಯಾಜಿ ಎಂಡ್ ಕೊ, ರಥಬೀದಿಯಲ್ಲಿಯೂ ಮತ್ತು ಜಿಲ್ಲೆಯ ಎಲ್ಲಾ ಎಗ್ರಿಕಲ್ಚರಲ್ ಡಿಪೋಸ್ ಸ್ಟೋರರಲ್ಲಿಯೂ ಮೇಲಿನ ಎಲ್ಲಾ ಗಿಡಗಳು ದೊರೆಯುತ್ತವೆ.

ಕೆ. ಎಮ್. ಶೆಟ್ಟಿ, ಕೆನರಾ ನರ್ಸರಿ,
ಪೋಸ್ಟ್ ಕಾಪು, ದ. ಕನ್ನಡ

॥ ಪ್ರಾಣಿಬಲಿ ನಿಷೇಧ ॥

ಸರುವ ಪ್ರಾಣಿಗಳಿಂಗೆ ಮಾತೆಯು |
ಸರುವ ಪ್ರಾಣಿಗಳಿಂಗೆ ದಾತೆಯು |
ಸರುವ ಪ್ರಾಣಿಗಳನ್ನು ರಕ್ಷಿಪ ದೇವಿ ಜಗನ್ಮಾತೆ ||
ಇರುವ ಮಂದಿರದೆದುರು ಆಕೆಯು |
ಕರುಣ ಕಿರಣಮೊಳಿದ್ದ ಪಶುಗಳ |
ತರಿದರುಂಟೇ ಮೋಕ್ಷ? ದೇವಿಗೆ ತೃಪ್ತಿಯಹುದೇನು ||೧||

ರೋಗರುಜನೆಗಳಧಿಕವಾಗಲು |
ಹೋಗಿ, ಕುರಿ, ಕೋಣಗಳ, ಕೋಳಿಯ |
ಸಾಗಿಸುತ ಮಂದಿರಕೆ ಕಡಿಯಲು ರೋಗತೊಲಗುವುದೇ? ||
ರೋಗಬಂದರೆ ತಕ್ಕ ಔಷಧಿ |
ಯಾಗದಿದ್ದರೆ ರೋಗ ಪೋಗದು |
ಆಗದಾಗದು ದೇವಿ ಹೆಸರಲಿ ಬಲಿಯು ಕೊಡಬೇಡಿ ||೨||

ಕುರಿಯು ಕಡಿದರೆ ಪಾಪ ತಪ್ಪದು |
ಕುರಿಯ ತರಿದರೆ ರುಜೆಯು ನಿಲ್ಲದು |
ಕುರಿಯ ಬಲಿಕೊಡೆ ಒಲಿಯಲಾ ಕರುಣಾನಿಧಿ ಶ್ರೀದೇವಿ ||
ಅರಿತರಿತು ಬಡಮೂಕ ಪಶುಗಳ |
ಕೊಲುವ ಮನುಜಗೆ ಪಾಪವಲ್ಲದೆ |
ದೊರಕಲಾರದು ಪುಣ್ಯ ಕಡಿಯಲು ಬೇಡಿ ಪಶುಗಳನು ||೩||

ಕೆ. ಟ ಕರ್ಕೇರ.

ಸ್ವೀಕಾರ ಮತ್ತು ವಿಮರ್ಶೆ

ಕಥಾಕುಂಜ:—ಬೆಳಗಾವಿಯಿಂದ ಹೊರಡುತ್ತಿರುವ ಈ ಮಾಸಿಕದ ಮಾರ್ಚಿ ತಿಂಗಳ ಸಂಚಿಕೆಯು ನಮ್ಮ ಕೈಸೇರಿದೆ. ಸೊಗಸಾದ ಏಳು ಕಥೆಗಳೂ ಇತರ ವಿಷಯಗಳೂ ಇವೆ. ಕನ್ನಡನಾಡಿನಲ್ಲಿ ಕಥೆಗಳಿಗಾಗಿಯೇ ಪ್ರಕಟಿಸಲ್ಪಡುವ ಮಾಸಪತ್ರಿಕೆ ಇದೊಂದೆ. ವಾರ್ಷಿಕ ಚಂದಾ ೧-೧೨-೦ ಬಿಡಿ ಸಂಚಿಕೆ ೦-೨-೦,

ಸಮಾಜ:—ಧಾರವಾಡದಿಂದ ಈ ತನಕ ಮಾಸಪತ್ರಿಕೆಯಾಗಿ ಹೊರಡುತ್ತಿದ್ದು ಈ ಮಾರ್ಚಿ ತಿಂಗಳಿಂದ ಸಚಿತ್ರ ಪಕ್ಷಪತ್ರಿಕೆಯಾಗಿ ಹೊರಟಿರುವದು; ಮುಂದಕ್ಕೆ ಇದನ್ನು ವಾರಪತ್ರಿಕೆಮಾಡಬೇಕೆಂಬ ಲವಲವಿಕೆಯು ಸಂಪಾದಕರದು. ಪತ್ರಿಕೆಯಲ್ಲಿ ಪ್ರಪಂಚದ ಹಾಗೂ ಹಿಂದೂಸ್ಥಾನದ ರಾಜಕೀಯ ವಿಚಾರ, ಕಥೆ, ಮೊದಲಾದ ವಾಚನೀಯ ವಿಷಯಗಳು ಬರುತ್ತಿವೆ. ಈ ಪಕ್ಷ ಪತ್ರಿಕೆಯ ವಾರ್ಷಿಕ ಚಂದಾ ೧-೧೨-೦ ಮಾತ್ರ.

ಗೋವಿಂದ ದಾಸರ ಕೀರ್ತನೆಗಳು:
ಶ್ರೀ ಪೈರ್ಮಾಡಿ ಗೋವಿಂದ ದಾಸರು ರಚಿಸಿ ಪುಳುನಾಡ್ ಛಾಪಖಾನೆಯಲ್ಲಿ ಮುದ್ರಿಸಲ್ಪಟ್ಟಿರುವ ಗೋವಿಂದ ದಾಸರ ಕೀರ್ತನೆಗಳು, ಎಂಬ ತುಂಡು ಪದ್ಯಗಳ ಸಂಗ್ರಹದ ಮೂರು ಭಾಗಗಳೂ ನಮ್ಮ ಬಳಿಗೆಬಂದಿವೆ. ಪದ್ಯಗಳು ದಾಸರ ಪದಗಳ ಶೈಲಿ, ಮತ್ತು ಅನುಕರಣೆಯಲ್ಲಿದ್ದು ಭಜನೆ ಮೊದಲಾದ ಕೂಟಗಳಲ್ಲಿ ಹಾಡಲು ಯೋಗ್ಯವಾಗಿವೆ. ಬೆಲೆ ಪ್ರತಿಯೊಂದರ ರೂ. ೦-೩-೦.

ಐಶ್ವರ್ಯ:—ಶ್ರೀ ಕಡೆಕಾರು ಶ್ರೀನಿವಾಸರಾಯರಿಂದ ಬರೆಯಲ್ಪಟ್ಟು ಉಡುಪಿ ಪ್ರೆಸ್ಸಿನಲ್ಲಿ ಮುದ್ರಿತವಾದ ಈ ಚಿಕ್ಕ ಪುಸ್ತಕವು ಚುನಾವಣೆಗಳಲ್ಲಿ ಐಶ್ವರ್ಯವೇ ಪ್ರಾಧಾನ್ಯವನ್ನು ಪಡೆಯುತ್ತದೆಂಬುದರ ಕುರಿತು ಸಂಭಾಷಣಾ ರೂಪದಲ್ಲಿ ಬರೆಯಲ್ಪಟ್ಟಿದೆ.

ಪತ್ರವ್ಯವಹಾರ

(ಬಾತ್ಮಿದಾರರು ತಮ್ಮ ಸಂಪೂರ್ಣ ವಿಳಾಸವನ್ನು ನಮಗೆ ಕೊಡಬೇಕಾಗಿದೆ. ಬಾತ್ಮಿಗಳು ಆದಷ್ಟು ಸಂಕ್ಷೇಪವಿದ್ದು ಕಾಗದದ ಒಂದೇ ಮಗ್ಗುಲಲ್ಲಿ ಶಾಯಿಯಿಂದ ಬರೆಯಲ್ಪಟ್ಟು ಸ್ಪಷ್ಟವಾದ ಅಕ್ಷರಗಳಲ್ಲಿರಬೇಕು. ಬಾತ್ಮಿದಾರರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ. ಸಂ. ನ.

ಕಾಪು ಪಂಚಾಯತ ಬೋರ್ಡೂ ನಿತ್ಯಸುಂಕವೂ

ಕಾಪು ಪಂಚಾಯತ ಬೋರ್ಡಿನವರು ನೋಟೀಸು ಹಂಚಿದ ಮೇರೆಗೆ ಕಾಪಿನಲ್ಲಿ ವಾರದ ಸಂತೆಗಳ, ದಿನವಹಿ ಮಾರ್ಕೆಟುಗಳ ವಿಲಾಸಗೆಂದು ಹಲವು ಜನರು ಸೇರಿದ್ದರು. ಬಡವರ ಮೇಲೆ ಬೀಳುವ ಈ ನಿತ್ಯಸುಂಕದ ರೀತಿಯನ್ನು ನೆರೆದವರಿಗ ವಿಸ್ತರಿಸಿ ತಿಳಿಸಿದಾಗ ಯಾರೂ ವಿಲಾಸಿಗೆ ನಿಲ್ಲಲಿಲ್ಲ. ಅದಕ್ಕಾಗಿ ಆ ಮಹನೀಯರಿಗೆಲ್ಲಾ ನನ್ನ ಧನ್ಯವಾದಗಳಿವೆ. ತಾ. ೨೦-೩-೩೭ರಲ್ಲಿ ಕಾಪು ಬಂಗ್ಲೆ ಮೈದಾನಿನಲ್ಲಿ ಸಾರ್ವಜನಿಕರ ಸಭೆ ಸೇರಿಸಿ, ಅದಕ್ಕಾಗಿ ಆಮಂತ್ರಿಸಲ್ಪಟ್ಟಿದ್ದ ಶ್ರೀ. ಪಿ. ಮಂಜುನಾಥ ನಾಯ್ಕರು ಕೊಂಗ್ರೆಸಿಗೆ ವೋಟು ಕೊಟ್ಟ, ಮತ್ತು ಕೆಲಸಮಾಡಿದ ಮಹನೀಯರನ್ನು ಅಭಿನಂದಿಸಿದರಲ್ಲದೆ ಪಂಚಾಯತ ಬೋರ್ಡಿನವರು ನಿತ್ಯಸುಂಕವನ್ನಿಟ್ಟಿದ್ದಕ್ಕಾಗಿ ವ್ಯಸನ ಸೂಚಿಸಿದರು. ಪಂಚಾಯತ ಬೋರ್ಡು ಪ್ರೆಸಿಡೆಂಟರಿಗೆ ಸಭೆಯ ಪರವಾಗಿ ಅರ್ಜಿಮಾಡಿಕೊಳ್ಳಬೇಕೆಂಬ ಠರಾವು ಸಭೆಯಲ್ಲಿ ಮಂಜೂರಾಯಿತು.

ಸಭೆಯ ಅಧ್ಯಕ್ಷಸ್ಥಾನವನ್ನು ಶ್ರೀ. ಕೆ. ಜಗನ್ನಾಥಬಲ್ಲಾಳರು ಬಡವರ ಮೇಲಿನ ಪ್ರೀತಿಯಿಂದ ವಹಿಸಿದರಲ್ಲದೆ ನಾನು ನಿತ್ಯಸುಂಕದಿಂದ ಬಡವರಿಗುಂಟಾಗುವ ಸಂಕಷ್ಟಗಳನ್ನು ವಿವರಿಸಿ ಹೇಳಿದ್ದೆನು. ದಿನಂಪ್ರತಿ ವ್ಯಾಪಾರ ನಡೆಸುವ ಮೊಗವೀರ ವ್ಯಾಪಾರಿಗಳೆಲ್ಲಾ ನಿತ್ಯಸುಂಕವನ್ನು ತೆರಲು ತಮ್ಮಿಂದ ತೀರಾ ಅಸಾಧ್ಯವೆಂದು ಹೇಳಿಕೊಂಡರು. ೧೧೦ ಜನರ ಸಹಿಗಳೊಡನೆ ಪಂಚಾಯತ್ ಬೋರ್ಡ್ ಪ್ರೆಸಿಡೆಂಟರಿಗೆ ಅರ್ಜಿಯನ್ನು ಕಳುಹಿಸುವ ಕೆಲಸವನ್ನು ತಾನು ವಹಿಸಿಕೊಂಡಿದ್ದೇನೆಂದೂ ಡಿ. ಪಂಚಾಯತ್ ಆಫೀಸರರಿಗೂ, ಅಸಿಸ್ಟಾಂಟ್ ಪಂಚಾಯತ ಆಫೀಸರರಿಗೂ ಅರ್ಜಿಗಳನ್ನು ಕಳುಹಿಸಬೇಕಾಗಿ ಸಭೆಯಲ್ಲಿ ನಿರ್ಣಯವಾಗಿದೆಯೆಂದೂ ಊರನಿವಾಸಿಯಾದ ಶ್ರೀ. ಕೆ. ಚರ್ದಪ್ಪ ಯಾನ ಗೋಪಾಲಕೃಷ್ಣ ಶ್ಯಾನುಭೋಗರು ತಿಳಿಸುತ್ತಾರೆ.



ಬ್ರೇಕ್ ಪಿಲ್ಸು

ಸ್ತ್ರೀಪುರುಷರಿಗೆ ಆನಂದವನ್ನುಂಟುಮಾಡುವುದು ಈ ಮಾತ್ರೆಗಳೇ. ಮದಿಸಿದ ಸ್ತ್ರೀಯರ ಗರ್ವ ಭಂಗಮಾಡಲು ಕಂಡು ಹಿಡಿದಿರುವ ಮಾತ್ರೆಗಳಿವು. ಇದರಲ್ಲಿ ವಿಷಾದಿಗಳು ಸೇರಿಲ್ಲ. ಕಸ್ತೂರಿ, ಚಿನ್ನ ಹಿಮಾಲಯಪರ್ವತದ ವನಮೂಲಿಕೆಗಳು ಮುಂತಾದುವುಗಳಿಂದ ದೊಡ್ಡ ಯೋಗೀಶ್ವರರ ಹತ್ತಿರ ಸಂಗ್ರಹಿಸಿ ಮುದುಕತನವನ್ನು ಲೋಕದಲ್ಲಿ ಇಲ್ಲದಂತೆ ಮಾಡುವುದು. ಅರ್ಧ ಘಂಟೆಯೊಳಗಾಗಿ ವೀರ್ಯವನ್ನು ಕಲ್ಲಿನಂತೆ ಮಾಡಿ ರಮಿಸಲು ಉಲ್ಲಾಸವನ್ನು ಮಾಡುವುದು. ಗುಣವಿಲ್ಲದಿದ್ದಲ್ಲಿ ಹಣ ವಾಪಸು. **೬೦ ಮಾತ್ರೆಗಳು ರೂ. ೫-೦-೦**
೩೦ ಮಾತ್ರೆಗಳು ರೂ. ೩-೦-೦ ಕಾಗದ ಪತ್ರಗಳು ಇಂಗ್ಲೀಷಿನಲ್ಲಿಯೇ.

ಡಾ. ಎ. ಎಸ್. ಮೂರ್ತಿ,
ಚಿಕಾಗೋಲ್, ಗಂಜಾಮ್ ಡಿಸ್ಟ್ರಿಕ್ಟ್.



ಧರ್ಮಾರ್ಥ ಬಹುಮಾನಗಳು 1-4-0ಗೆ !

--- ಯಾರಿಗೆ ? ---

ರೂಪಾಯಿ 1—4—0 ಕೊಟ್ಟು 14ಸೀಸೆ ಒಟ್ಟೊ ರೋಸ್ ಅಥವಾ 10 ಡಬ್ಬಿ ಗಜಕರ್ಣ ಮುಲಾಮನ್ನು ಕ್ರಯಕ್ಕೆ ಪಡಕೊಳ್ಳುವವರಿಗೆ !!

ಇನಾಮುಗಳ ವಿವರ:—3 ಡಮ್ಮಿ ರಿಸ್ಟ್‌ವಾಚುಗಳು; 1 ರೈಲ್ವೆಟಾಯಂ ಡಮ್ಮಿ ಪಾಕೆಟ್ ವಾಚು; 1 ಸೇಫ್ಟಿರೇಜರ್; 1 ಶೇವಿಂಗ್ ಬ್ರಸ್; 1 ಶೇವಿಂಗ್ ಸೋಪು; 1 ಕನ್ನಡಿ, 1 ಪೌಡರ್ ; 1 ಜತೆ ಗುಬ್ಬಿಗಳು; 1 ಫೌಂಟನ್ ಪೇನು 14 ಕ್ಯಾರೆಟ್ ನಿಬ್ಬು ಸಮೇತ; 1 ಇಮಿಟೇಶನ್ ಮೋತಿಮಲ್ಲರ್; 1 ಹೆಸರು ಕೆತ್ತಲ್ಪಟ್ಟ ರೋಲ್ಡುಗೋಲ್ಡು ಗಿಲ್ಟ್ ಉಂಗುರ, ಆರುನೂರು ಅಡಿ ದೂರಕ್ಕೆ ಪ್ರಕಾಶವೀಯುವ 1 ಟೋರ್ಚ್‌ಲೈಟ್ ಅಥವಾ 1 ಅತ್ಯುತ್ತಮ 'B' ಟಾಯಂಪೀಸು (ಹತ್ತು ವರುಷ ಗ್ಯಾರಂಟಿ)
ಪ್ಯಾಕಿಂಗ್ ಮತ್ತು ಪೋಸ್ಟೇಜು 0—12—0. **ಇಂದೇ ಆರ್ಡರುಕೊಡಿರಿ.**

Bengal Watch Co.,
Post Box No. 12214, CALCUTTA.

ಸುವರ್ಣ ತಾಯಿತಿ! ಧರ್ಮಾರ್ಥ ಭಂಗಾರದ ತಾಯಿತಿ!

ಹಿಮಾಲಯ ಪರ್ವತದಲ್ಲಿ ವರ್ಷಗಟ್ಟಲೆ ತಪಸ್ಸು ಮಾಡಿ
ಸಿದ್ಧಿಯನ್ನು ಪಡೆದ ಮಹಾ ಯೋಗೀಶ್ವರರಿಂದ
ಕಂಡು ಹಿಡಿಯಲ್ಪಟ್ಟದ್ದು.

ಈ ತಾಯಿತಿಯನ್ನು

ಧರಿಸಿದ ಮಾತ್ರದಿಂದ ಸಕಲ ಇಷ್ಟಾರ್ಥಗಳೂ ನೆರವೇರುವುವು.
ಪರೀಕ್ಷಿಸಲಪೇಕ್ಷಿಸುವವರು
"ಯೋಗೀಶ್ವರರ ಶಕ್ತಿಸಾಹಸ"
ಎಂಬ ಪುಸ್ತಕವನ್ನು ಧರ್ಮಾರ್ಥವಾಗಿ ಪಡೆಯಬಹುದು.

ಪತ್ತೆ:—ಪಂಡಿತ್ ಎ. ವಿ. ಆರಮುಮ್
ಚಿಕಾಕೋಲ್

ಆತಂಕನಿಗ್ರಹ ಮಾತ್ರೆಗಳು

ಯಾವ ಕಾರಣದಿಂದಾಗಲಿ ಉಂಟಾದ ಧಾತುನಷ್ಟ, ನರಗಳ ನಿಶ್ಶಕ್ತಿ ಇವುಗಳನ್ನು ಹೋಗಲಾಡಿಸಿ ಶಿಘ್ರತ ಗುಣ ಉಂಟಾಗುವಂತೆ ಮಾಡುತ್ತದೆ. ಈ ಗುಳಿಗೆಗಳು ಆರೋಗ್ಯವಾದ ಹಸಿವನ್ನುಂಟುಮಾಡಿ ದೇಹಕ್ಕೂ ಮತ್ತು ಮನಸ್ಸಿಗೂ ಬಲಹೀನತ್ವವನ್ನು ಹೋಗಲಾಡಿಸಿ ದುಷ್ಟರಕ್ತವನ್ನು ಶುದ್ಧಿಮಾಡಿ ಜ್ಞಾಪಕಶಕ್ತಿಯನ್ನು ವೃದ್ಧಿಪಡಿಸುವುದು. ಕ್ರಯ: ಡಬ್ಬಿ ೧ಕ್ಕೆ ೧-೦-೦.

ವಾಜೀಕರಣ ತೈಲ:—(ಹೊರಗೆ ಹಚ್ಚಲು ಮಾತ್ರವೇ) ಬಾಲ್ಯದಲ್ಲಿ ಸ್ವತಃ ಅನೇಕ ವಿಧಗಳಲ್ಲಿ ಶರೀರವನ್ನು ಕೆಡಿಸಿಕೊಂಡು ಅದರಿಂದ ಉಂಟಾಗುವ ಅಶಕ್ತಿ, ನರಗಳ ದುರ್ಬಲ, ನಪುಂಸಕತ್ವ, ಮುಂತಾದ ವ್ಯಾಧಿಗಳನ್ನು ಪರಿಹರಿಸುವ ಸಂಜೀವಿನಿಯಾಗಿರುವದು. ನರಗಳಿಗೆ ಬಲವನ್ನುಂಟುಮಾಡಿ, ಸಂಭೋಗಕ್ಕೆ ಉತ್ಸಾಹವನ್ನು ಕೊಡುವುದು. ಒಂದು ಸಾರಿ ಔಷಧವನ್ನು ಹಚ್ಚುವುದರಿಂದ ಗುಣವು ಗೊತ್ತಾಗುತ್ತದೆ. ಕ್ರಯ: ಸೀಸೆ ಒಂದಕ್ಕೆ ೫—೦—೦.

ಅಮೃತಾರ್ಣವ ಲೇಹ್ಯ:— ರಕ್ತವನ್ನು ಶುದ್ಧಿಮಾಡಿ, ನರಗಳನ್ನು ಬಲಪಡಿಸಿ, ಅತಿ ಉಷ್ಣ, ಕೈಕಾಲುಗಳ ಉರಿ, ಇನ್ನೂ ಮುಂತಾದ ಉಷ್ಣವ್ಯಾಧಿಗಳನ್ನು ಗುಣಪಡಿಸಿ, ಮೆದುಳನ್ನು ತಂಪುಮಾಡಿ, ದೇಹಬಲವನ್ನೂ, ತೇಜಸ್ಸನ್ನೂ ಹೆಚ್ಚಿಸುವುದಲ್ಲದೆ ದೀರ್ಘಕ್ಷಯ, ಎದೆನೋವು, ತಲೆನೋವು, ಮುಂತಾದ ವ್ಯಾಧಿಗಳಿಗೆ ಅಮೃತಪ್ರಾಯವಾದುದು. ಕ್ರಯ: ಡಬ್ಬಿ ೧ಕ್ಕೆ ೨-೦-೦.
'ಕಾಮಶಾಸ್ತ್ರ' ಧರ್ಮಾರ್ಥ. ಪೋಸ್ಟೇಜು ಮಾಫಿಯಾಗಿ ಕಳುಹಿಸುವೆವು. ಒಂದು ಕಾರ್ಡು ಹಾಕಿರಿ.
ಆತಂಕ ನಿಗ್ರಹ ಫಾರ್ಮಸಿ, ೬೪, ಚಿಕ್ಕಪೇಟೆ ಚಾಕ, ಬೆಂಗಳೂರು ಸಿಟಿ

(೪ನೇ ಪುಟದಿಂದ)

ಶ್ರದ್ಧೆ ವಿಶ್ವಾಸಗಳನ್ನು ನಿರ್ಮೂಲಗೊಳಿಸುವುದೇ ತಮ್ಮ ಅಂತಿಮ ಧ್ಯೇಯವೆಂದು ಅವರು ಸ್ಪಷ್ಟವಾಗಿ ಮತ್ತು ಅಭಿಮಾನ ಪೂರ್ವಕವಾಗಿ ಒಪ್ಪುವರು. ಧಾರ್ಮಿಕ ವಿಶ್ವಾಸವುಳ್ಳ ಯಾವನಾದರೂ ರಸ್ಯದ ಕಮ್ಯೂನಿಸ್ಟ್ ಪಕ್ಷದ ಮೆಂಬರನಾಗಿ ಸ್ವೀಕರಿಸಲ್ಪಡುವುದಿಲ್ಲ. ಯಾವನಾದರೂ ತನ್ನ ಹೆಂಡತಿ ಅಥವಾ ತಾಯಿಯ ಮಾತನ್ನು ಮನ್ನಿಸಲೆಂದು ಧರ್ಮದ ಕುರಿತೇನಾದರೂ ವಿಶ್ವಾಸ ತೋರಿಸಿದ್ದಲ್ಲಿ ಕೂಡಲೇ ಕಮ್ಯೂನಿಸ್ಟ್ ಪಕ್ಷದಿಂದ ಹೊರ ಹಾಕಲ್ಪಡುವನು.

ಬೋಲ್ಸ್ವಿಕರು ಶ್ರದ್ಧಾಳು ಧರ್ಮಾಧಿಕಾರಿಗಳನ್ನು ಬಲು ಕ್ರೂರವಾಗಿ ಕೆಲವು ವೇಳೆ ಪಾಶವಿಕವಾಗಿ ಕಾಣುತ್ತಿದ್ದರು. ಆದರೆ ಇದು ಅನಿವಾರ್ಯವಾದುದು. ಯಾಕೆಂದರೆ ಈ ಧರ್ಮಾಧಿಕಾರಿಗಳು ಝಾರರ ಆಳ್ವಿಕೆಯಲ್ಲಿ ಬೋಲ್ಸ್ವಿಕರ ಪ್ರಬಲ ವೈರಿಗಳಾಗಿದ್ದರು. ಕ್ರಾಂತಿಗೆ ದೊಡ್ಡ ತಡೆಯಾಗಿದ್ದರು. ಸೋವಿಯಟ್ ಸರಕಾರವು ಅಧಿಕಾರಕ್ಕೆ ಬಂದ ಮೇಲೂ ಈ ಧರ್ಮಾಧಿಕಾರಿಗಳು ಅದರ ವಿರುದ್ಧವಾಗಿ ಜನರಲ್ಲಿ ಪ್ರಚಾರ ಮಾಡುತ್ತಿದ್ದರು. ಇದು ಹೊರತು ಬೋಲ್ಸ್ವಿಕರು ಸಂಘಟಿತವಾದ ಯಾವ ಧರ್ಮಕ್ಕಾದರೂ ವಿರೋಧಿಗಳಿರುವರು. ಕ್ರಾಂತಿಗೆ ಧರ್ಮವು ದೊಡ್ಡ ಆತಂಕವೆಂದವರು ಪರಿಗಣಿಸಿ ಅದಕ್ಕೆ ಯಾವ ಸ್ವಾತಂತ್ರ್ಯವನ್ನೂ ಕೊಡಲಾರರು. ಅವರ ರೀತಿಯಲ್ಲಿ ಯಾವ ಧರ್ಮವನ್ನಾದರೂ ಅನುಸರಿಸುವ ಮನಃ ಸ್ವಾತಂತ್ರ್ಯವು ಪ್ರತಿಯೊಬ್ಬನಿಗೂ ಇರುವುದು. ಆದರೆ ಯಾವ ದೇವಾಲಯವಾದರೂ ಸಾಂಸ್ಕೃತಿಕ ಅಥವಾ ಸಾಮಾಜಿಕ ಕೆಲಸಗಳಲ್ಲಿ ತೊಡಗಬಾರದು. ಪುಸ್ತಕಭಂಡಾರ, ಕ್ಲಬ್ ಆಸ್ಪತ್ರೆ, ಔಷಧಾಲಯ, ಶಿಶುಸಂಗೋಪನಾಲಯ, ಕೋಪರೇಟಿವ್ ಸ್ಟೋರ್ ಮೊದಲಾದ ಜನಹಿತ ಸಾಧಕದ ಯಾವ ಕೆಲಸವನ್ನಾದರೂ ದೇವಾಲಯವು ನಡಿಸಬಾರದು. ದೇವಾಲಯ ಮತ್ತು ಧರ್ಮದ ಕೆಲಸವೆಂದರೆ ಪೂಜೆ ಪುರಸ್ಕಾರ ಮಾತ್ರ. ಬೋಲ್ಸ್ವಿಕರು ತಮ್ಮ ಧೋರಣೆಯನ್ನು ಎಷ್ಟೊಂದು ಜಯಶೀಲವಾಗಿ ಜಾರಿಗೆ ತರಬಲ್ಲರೆಂಬುದನ್ನು ಮುಂದೆ ತಿಳಿಯಬೇಕು. ಸೋವಿಯಟ್ ಸರಕಾರವು ಜಾರಿಗೆ ತಂದಿರುವ ಇನ್ನೊಂದು ನಿಷೇಧವೆಂದರೆ ಹದಿನೆಂಟು ವರ್ಷದೊಳಗಿನ ತರುಣರಿಗೆ ಮನೆಯ ಹೊರಗೆ ಯಾವ ತರದ ಧಾರ್ಮಿಕ ಶಿಕ್ಷಣವನ್ನೂ ಕೊಡಬಾರದೆಂಬುದು. ಇದರಿಂದ ಧರ್ಮಾಧಿಕಾರಿಗಳು ಮನೆ ಮನೆಗೆ ಹೋಗಿ ಧರ್ಮ ಪ್ರಚಾರ ಮಾಡಬಹುದಾದರೂ ಜಾಹೀರಾಗಿ ಧಾರ್ಮಿಕ ಶಾಲೆಗಳನ್ನಾಗಲಿ, ಪ್ರಸಂಗಗಳನ್ನಾಗಲೀ ನಡಿಸಕೂಡದು.

ಇಂತಹ ಕಠಿಣ ಶಾಸನಗಳೇ ರಸ್ಯದ ಜನಸಾಮಾನ್ಯರಲ್ಲಿ ಹಬ್ಬಿರುವ ಧಾರ್ಮಿಕ ಅಸಡ್ಡೆಗೆ ಕಾರಣವೆಂದು ಹೇಳಬರುವುದಿಲ್ಲ. ಬೋಲ್ಸ್ವಿಕರು ಕೆಲವೊಂದು ಸಂತ ಸಾಧುಗಳ ಗೋರಿಗಳನ್ನು ಅಗೆದು ತೆಗೆದು ಅವುಗಳೊಳಗಿನ ಅವಶೇಷವನ್ನು ಪ್ರದರ್ಶನಗಳಲ್ಲಿಟ್ಟಿರುವರೆಂಬುದೇನೋ ನಿಜ. ಆದರೆ ಕೀವ್‌ನಂತಹ ಸುಪ್ರಸಿದ್ಧ ಕ್ಷೇತ್ರಗಳಿಗೆ ಯಾರೂ ಯಾತ್ರಾರ್ಥಿಗಳಾಗಿ ಹೋಗಬಾರದೆಂದು ಅವರು ನಿಷೇಧಿಸಿದುದಿಲ್ಲ. ಹಾಗಾದರೆ ಮೊದಲು ಸಾವಿರಗಟ್ಲೆಯಲ್ಲಿ ಯಾತ್ರಿಕರು ಹೋಗಿ ತುಂಬಿ ತುಳುಕುತ್ತಿದ್ದ ರಸ್ಯದ ಪುಣ್ಯಕ್ಷೇತ್ರಗಳು ಇಂದು ಬರಿದಾಗಿರುವುದೇಕೆ? ತಾಳ ತಂಬೂರಿ ಹಿಡಕೊಂಡು ಧರ್ಮಗೀತೆಗಳನ್ನು ಹಾಡಿ ರಸ್ತೆಗಳಲ್ಲಿ ಬೇಡುತ್ತಿದ್ದ ಭಿಕ್ಷುಕರು ಕೂಡಾ ಇಂದು ಕ್ರಾಂತಿ ಗೀತೆಗಳನ್ನು ಹಾಡುತ್ತಿರುವರು. ಧಾರ್ಮಿಕ ಪ್ರಸಂಗಗಳಿಗೆ ಹೋಗಬಾರದೆಂದು ಬೋಲ್ಸ್ವಿಕರ ಆತಂಕವೇನೂ ಇಲ್ಲ. ಆದರೂ ಹಳ್ಳಿಗಳಲ್ಲಿನ ದೇವಾಲಯಗಳಿಗೂ ಜನರು ಹಿಂದಿಗಿಂತ ಅರೆಪಾಲು ಕೂಡಾ ಹೋಗುವುದಿಲ್ಲ. ನೂರಾರು ದೇವಾಲಯಗಳನ್ನು ಮುಚ್ಚಬೇಕಾಗಿ ಬಂದಿದೆ. ರಸ್ಯದ ಕಾಶಿ ಯಾದ ಕೀವಿನ ಇಂದಿನ ಅವಸ್ಥೆಯಾದರೂ ಏನು? ಯಾತ್ರಿಕರ ಹರಕೆ ಕಾಣಿಕೆಗಳಿಂದ ಸಾವಿರಾರು ಕ್ರೈಸ್ತ ಸನ್ಯಾಸಿಗಳು ಶ್ರೀಮಂತಿಕೆಯ ವೈಭವದಿಂದಿದ್ದ ಆ ಹಳೆಯ ದಿನಗಳು ಈಗೆಲ್ಲಿ? ಈಗ ಅಲ್ಲಿರುವ ಬರೀ ಸ್ವಲ್ಪ ಮಂದಿ ಸನ್ಯಾಸಿಗಳನ್ನು ಸರಿಯಾಗಿ ಪೋಷಿಸಲು ಸಾಕಷ್ಟು ಮಂದಿ ಯಾತ್ರಿಕರು ಕೂಡಾ ಬರುವುದಿಲ್ಲ. ಒಂದು ವೇಳೆ ರಸ್ಯದಲ್ಲಿ ಧರ್ಮವು ಕ್ರೂರಧಾರ್ಮಿಕ ಪೀಡೆಗೊಳಗಾದರೂ ಆ ನಿಮಿತ್ತ ಅದರ ಪತನವಾಯಿತೆಂದು ಹೇಳಲಾಗುವುದಿಲ್ಲ. ಧಾರ್ಮಿಕಪೀಡೆಯು ಪ್ರತಿವಿರುದ್ಧ ಪರಿಣಾಮವುಂಟಾಗಲು ಕಾರಣಗಳು ಚರಿತ್ರೆಯಲ್ಲಿ ತುಂಬಾ ಇವೆ. ಧಾರ್ಮಿಕಹಿಂಸೆಯು ಧರ್ಮದೇವರುಗಳ ಮೇಲೆ ಶ್ರದ್ಧೆಯನ್ನು ಮತ್ತಷ್ಟು ಹೆಚ್ಚಿಸಿರುವುದು. ಆದುದರಿಂದ ರಸ್ಯದಲ್ಲಿ ಧರ್ಮವು ನಾಶ ಹೊಂದಲು ನಿಜವಾದ ಕಾರಣವೇನೆಂಬುದನ್ನು ನಾವು ಬೇರೊಂದು ಕಡೆ ಹುಡುಕಬೇಕು.

(ರಸ್ಯದಲ್ಲಿ ಧರ್ಮವು ಅಳಿಯಲು ಕಾರಣವೇನೆಂಬುದನ್ನು ಮುಂದಿನ ಸಂಚಿಕೆಯಲ್ಲಿ ತಿಳಿಯಿರಿ.)

ಎಪ್ರಿಲ ೧ನೇ ತಾರೀಖಿನ ದಿನ ಹರತಾಳ

ರಾಷ್ಟ್ರದ ಇಚ್ಛೆಯ ವಿರುದ್ಧ ಹೇರಿದ ರಾಜ್ಯಘಟನೆಯ ಜಾಹೀರ ನಿಷೇಧ

●

ಹರತಾಳವನ್ನು ಏಕೆ ಪಾಲಿಸಬೇಕು? ಮತ್ತು ಹೇಗೆ ಪಾಲಿಸಬೇಕು?

(ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿ ಪ್ರಕಟನಾ ಶಾಖೆಯಿಂದ)

(೧) ೧೯೩೫ನೇ ಇಸ್ವಿಯಲ್ಲಿ ಆಗಸ್ಟತಿಂಗಳಲ್ಲಿ ಪಾಸಾದ ಗವರ್ನಮೆಂಟ್ ಆಫ್ ಇಂಡಿಯಾ ಆಕ್ಟ್ ಎಂಬ ಹೊಸ ಹಿಂದೀರಾಜ್ಯಘಟನೆಯ ಕಾನೂನು ಇದೇ ಎಪ್ರಿಲ ೧ನೇ ತಾರೀಕಿನ ದಿವಸ ಅಮಲಿನಲ್ಲಿ ಬರತಕ್ಕದ್ದಿದೆ. ಆದ್ದರಿಂದ ಆ ದಿನ ಹರತಾಳವನ್ನು ಪಾಲಿಸಬೇಕು. (೨) ಆ ಅನಿಷ್ಟವಾದ ಹಾಗೂ ರಾಷ್ಟ್ರ ಘಾತಕವಾದ ಕಾನೂನಿನ ನಿಷೇಧಾರ್ಥವಾಗಿ ಆ ದಿನ ಹರತಾಳವನ್ನು ಪಾಲಿಸಬೇಕಾಗಿದೆ. (೩) ಆ ರಾಜ್ಯ ಘಟನೆಯನ್ನು ಪರಕೀಯ ಮುತ್ಸದ್ದಿಗಳು ನಮ್ಮ ಮೇಲೆ ಹೇರಿದ್ದರಿಂದ ನಾವು ಆ ದಿನ ಹರತಾಳ ಪಾಲಿಸಲಿಕ್ಕೇಬೇಕು. (೪) ಆ ರಾಜ್ಯ ಘಟನೆಯು ನಮ್ಮ ಸಮ್ಮತಿಯಿಲ್ಲದೆ, ನಮ್ಮ ಇಚ್ಛೆಯುವಿರುದ್ಧ, ನಮ್ಮ ಹಿತಾಹಿತಗಳನ್ನು ಲಕ್ಷಿಸದೆ ನಮ್ಮ ಮೇಲೆ ಹೇರಲ್ಪಟ್ಟಿದೆ. ಆದುದರಿಂದ ಹರತಾಳ ಪಾಲಿಸುವ ಹೊರತು ಅನ್ಯ ಮಾರ್ಗವಿಲ್ಲ. (೫) ಹಿಂದೂ, ಮುಸಲ್ಮಾನ, ಸೀಖ, ಕ್ರಿಶ್ಚನ್ ಮುಂತಾದ ಜಾತಿ ವಾಚಕ ಪಕ್ಷಗಳು, ಕಾಂಗ್ರೆಸ್ ಪ್ರಾಗತಿಕ ಮುಂತಾದ ಮತವಾಚಕ ಪಕ್ಷಗಳು, ಡಿಲ್ಲಿ ಅಸೆಂಬ್ಲಿಯಲ್ಲಿಯ ಬಹು ಸಂಖ್ಯಾಕರು, ಈ ರಾಜ್ಯಘಟನೆಯು ಅಸಮಾಧಾನಕಾರಕವು, ತ್ಯಾಜ್ಯವು, ಅನಿಷ್ಟವು ಎಂದು ಏಕಕಂಠದಿಂದ ಸಾರಿರುವರು. ಆದುದರಿಂದ ಈ ಭಾವನೆಯನ್ನು ವ್ಯಕ್ತಗೊಳಿಸಲು ಹರತಾಳದ ಹೊರತು ಬೇರೆ ಉಪಾಯವಿಲ್ಲ. (೬) ಇಂಥಾ ರಾಜ್ಯಘಟನೆಯ ನಿಷೇಧವನ್ನು ವ್ಯಕ್ತಮಾಡಲು ಹರತಾಳದಂಥಾ ಇನ್ನೊಂದು ಶಾಂತವಾದ ರೀತಿಯೇ ಇಲ್ಲ. (೭) ಪ್ರಜೆಗಳು ತಮ್ಮ ಸಾರ್ವತ್ರಿಕ ನಿಷೇಧವನ್ನು ವ್ಯಕ್ತಮಾಡಬೇಕಾದರೆ ಪುರಾತನ ಕಾಲದಿಂದ ಹಿಂದುಸ್ಥಾನದಲ್ಲಿ ಇದೇ ರೀತಿಯು ಅನುಸರಿಸಲ್ಪಡುತ್ತ ಬಂದಿದೆ. (೮) ಪುಂಡತನದ ಅಥವಾ ಹುಂಬತನದ ರೀತಿಗಳು ಬೇರೆ ಇರಬಹುದು. ಆದರೆ ಸುಧಾರಿಸಿದ ಹಾಗೂ ಸುಸಂಸ್ಕೃತವಾದ ನಿಷೇಧರೀತಿ ಅಂದರೆ ಈ ಹರತಾಳವೇ ಇರುವದು. (೯) ಅಯ್ಯೋ! ಇದು ಬೇಡವೆಂದರೂ ನಮ್ಮ ತಲೆಯ ಮೇಲೆ ಹೇರಲ್ಪಟ್ಟಿತಲ್ಲ ಎಂಬ ಭಾವವನ್ನು ವ್ಯಕ್ತಗೊಳಿಸಬೇಕಾದರೆ ಹರತಾಳ ಇದೊಂದೇ ಯೋಗ್ಯ ಉಪಾಯವು. (೧೦) ಇನ್ನು ಹರತಾಳ ಯಾವರೀತಿ ಆಚರಿಸಬೇಕು ಎಂಬುದನ್ನು ವರ್ಕಿಂಗ್ ಕಮಿಟಿಯವರು ವಿವರವಾಗಿ ತಿಳಿಸಿಲ್ಲ. ಸಾಮಾನ್ಯವಾಗಿ ಈ ಕೆಳಗಿನ ಮಾತುಗಳನ್ನು ಈಗಾಗಲೇ ಲಕ್ಷದಲ್ಲಿಡಲು ಅಡ್ಡಿ ಇಲ್ಲ. (ಅ) ಈ ಹರತಾಳ ಇದು ಸೂತಕದ ದಿನವೆಂದು ಅತ್ಯಂತ ಶಾಂತಿಯನ್ನು ಪಾಲಿಸಬೇಕು. (ಬ) ಮೆರವಣಿಗೆ ತೆಗೆಯುವದಾದರೆ ಬೊಕ್ಕತಲೆ ಹಾಗೂ ಕರೆನಿಶಾನೆ ಮೆರವಣಿಗೆ ತೆಗೆಯಬೇಕು. (ಕ) ಎಲ್ಲರೂ ತಮ್ಮ ತಮ್ಮ ಉದ್ಯೋಗಗಳನ್ನು ಬಿಟ್ಟು ನಮ್ಮ ದೇಶದ ಘೋರ ದುರ್ದಶೆಯನ್ನು ಕುರಿತು ವಿಚಾರಿಸಿ ಹೆಚ್ಚಿನ ಸಂಘಟನೆ ಹಾಗೂ ಐಕ್ಯ ಹಾಗೂ ಸಾಮರ್ಥ್ಯ ಇವುಗಳನ್ನು ಪಡೆಯಲು ಪ್ರಯತ್ನಿಸಬೇಕು. (ಡ) ಸಾಯಂಕಾಲ ಜಾಹೀರಸಭೆ ಮಾಡಿ ಅಲ್ಲಿ ಈ ರಾಜ್ಯಘಟನೆಯ ನಿಷೇಧದ ಠರಾವನ್ನು ಪಾಸುಮಾಡಬೇಕು. (ಇ) ತಾವು ಸ್ವತಃ ಹರತಾಳವನ್ನು ಆಚರಿಸಬೇಕೇ ಹೊರತು ಎರಡನೇಯವರ ಮೇಲೆ ಯಾವ ಬಗೆಯ ಒತ್ತಾಯವನ್ನೂ ಮಾಡಲಿಕ್ಕೆ ಹೋಗಬಾರದು. (೧೧) ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರು ಈ ಬಗ್ಗೆ ಯಾವ ನಿಯಮಗಳನ್ನು ಹಾಕಿಕೊಡುವರೋ ಅವುಗಳಂತೆ ಶಬ್ದಶಃ ವರ್ತಿಸಬೇಕು.

THE

PANGAL NAYAK BANK

LIMITED.

ESTABLISHED 1920.

Paid up Capital: Rs. 1,82,100/-

Head Office: UDIPI.

Branches: MANGALORE, KATAPADI and KANHANGAD.

Fixed loans and Overdraft advances are granted on the pledge of gold articles, on the mortgage of immovable properties and on the personal security of approved constituents on favourable terms.

Genuine trade bills, cheques, drafts etc., are discounted at a nominal charge.

Current, Savings Bank and Cumulative deposits are accepted at moderate rates of interest.

Fixed Deposits are received and interest allowed at 4% on 1 year and at 4½% on 2 years deposits.

Every other description of up-to-date Banking business is also undertaken.

ಚಂದಾದಾರರಲ್ಲಿ

ಚಂದಾಹಣ ಬಾಕಿ ಇರುವ ನಮ್ಮ ಚಂದಾದಾರರು ಆದಷ್ಟು ಬೇಗನೇ ತಮ್ಮ ಹಣವನ್ನು ಮಣಿಯಾರ್ಡರ್ ಮೂಲಕ ದಯವಿಟ್ಟು ಕಳುಹಿಸಿಕೊಡಬೇಕಾಗಿ ಅಪೇಕ್ಷಿಸುತ್ತೇವೆ. ವಿ. ಪಿ. ಮಾಡುವದಾದರೆ ಖರ್ಚು ಹೆಚ್ಚಿಗೆ ಬೀಳುವದು.

ನಮ್ಮೊಡನೆ ಪತ್ರವ್ಯವಹಾರ ನಡೆಸುವವರು ತಮ್ಮ ಚಂದಾ ನಂಬ್ರವನ್ನು ಸೂಚಿಸಿ ಬರೆಯಬೇಕಾಗಿ ವಿನಂತಿ. ಮೆನೆಜರ್, 'ನವಯುಗ'

ಸ್ಪೈಯಿನಿನ ಭೀಷಣ ಅಂತಃಕಲಹ

ಸ್ಪೈನಿಶ್ ಸರಕಾರದ ವಿಜಯ * * ೩೦೦೦ಕ್ಕಿಂತಲೂ ಮಿಕ್ಕಿದ ಇಟೆಲಿಯಾನರ ವಧೆ.

ಕಾರ್ಡಿನಲ್ ಇಸಿಲ್ಡೋಗೋಮ ಎಂಬ ಸ್ಪೈನಿನ ಧರ್ಮಾಧಿಕಾರಿಯು, ಸ್ಪೈನಿಷ್ ಅಂತಃಕಲಹವು ಕೊನೆಗೊಳ್ಳುವಾಗ ಒಟ್ಟು ಒಂದು ಮಿಲ್ಯ ಪ್ರಾಣಹಾನಿಯಾಗದಿರದು. ಸ್ಪೈನು ತನ್ನ ಪಾಪಕ್ಕೆ ಪ್ರಾಯಶ್ಚಿತ್ತಮಾಡುವಂತೆ ದೇವರು ಕೊಟ್ಟ ಗಂಡಾಂತರವಿದೆಂದು ದೊಡ್ಡದೊಂದು ಪ್ರವಚನ ಬರೆದಿರುವರು.

ಇದೇ ತಾ. ೧೭ರಿಂದ ಯುದ್ಧವು ಹೆಚ್ಚಾಗಿ ಆಕಾಶದಲ್ಲಿ ನಡೆದಿರುವುದು. ಗೊಡಲಜಾರ ರಣರಂಗದಲ್ಲಿ ಸ್ಪನಿಶ್ ಸರಕಾರದ ೨೫ ಯಂತ್ರ ವಿಮಾನಗಳು ವೈರಿಗಳ ಮೇಲೆ ೭೫೦ ಬೋಂಬುಗಳನ್ನೆಸದು ಭಯಂಕರ ಹಾವಳಿ ಮಾಡಿರುವವು. ೩೦ ವಿಮಾನಗಳು ವೈರಿ ಸೇನೆಯನ್ನು ಜಂಬತ್ತಿ ಮಿಶನ್ ತೋಪುಗಳ ಮೂಲಕ ಗುಂಡೆಸದು ಅವರು ಒಟ್ಟು ಸೇರದಂತೆ ತಡೆಮಾಡಿರುವವು. ಬಂಡಾಯಗಾರರ ೪ ವಿಮಾನಗಳು ನಾಶವಾಗಿರುವವು ಸರಕಾರದ ಕಡೆಯವರು ಒಂದನ್ನು ಕಳಕೊಂಡಿರುವರು. ಸರಕಾರಿ ಪಕ್ಷದ ೧೯ ವಿಮಾನಗಳು ಕೆಳಗುರುಳಿಸಲ್ಪಟ್ಟಿರುವವೆಂದು ಬಂಡಾಯಗಾರರ ಕಡೆಯ ಸುದ್ದಿ.

ಎರಡು ಜರ್ಮನ್ ಹಡಗಗಳು ಬಂಡಾಯಗಾರರಿಗೆ ಯುದ್ಧ ಸಾಮಗ್ರಿಯನ್ನೊಯ್ಯುತ್ತಿರುವವೆಂದು ಸ್ಪೆನಿಶ್ ಸರಕಾರವು ಪ್ರಕಟಗೊಳಿಸಿರುವುದು. ಇಟೆಲಿಯಾನರು ಇನ್ನೂ ಸೈನಿಕರನ್ನು ಕಳುಹಿಸುತ್ತಿರುವರೆಂದು ತಿಳಿದುಬಂದಿದೆ ಪೋರ್ಚುಗೀಸಿನ ಗಡಿನಾಡನ್ನು ಪರೀಕ್ಷಿಸಲು ೧೫೦ ಮಂದಿ ಬ್ರಿಟಿಷರು ಹೊರಟಿರುತ್ತಾರೆ; ಇದೇ ತಾ ೨೩ರೊಳಗೆ ಸ್ಪೈನಿನೊಳಗೆ ಸೈನಿಕರಾಗಲಿ ಯುದ್ಧ ಸಾಮಗ್ರಿಯಾಗಲಿ ಹೋಗದಂತೆ ಮೇಲ್ವಿಚಾರ ನಡಿಸಲು ಸರಿಯಾದ ಏರ್ಪಾಡಾಗುವುದು.

ಸ್ಪನಿಶ್ ಸರಕಾರದ ಸೇನೆಯ ಮುಖ್ಯ ನಾಯಕರಾದ ಜನರಲ್ ಮಿಯಾಜರವರು ಗೊಡಲಜಾರ ರಣರಂಗದ ಪ್ರಾಮುಖ್ಯ ಸ್ಥಳವಾದ ಮೊನ್ಶರ್ಲ್ ಮತ್ತು ಅದರ ಹತ್ತಿರದ ಹಳ್ಳಿಗಳನ್ನು ವಶಪಡಿಸಿಕೊಂಡಿರುವರು. ದೊಡ್ಡ ಇಟೆಲಿಯಾನ ಸೇನೆಯ ಕೇಂದ್ರವಾಗಿದ್ದ ಬ್ರಿಹ್ಯೂಗ ಎಂಬುದನ್ನು ಸರಕಾರದ ಸೈನಿಕರು ಸಂಪೂರ್ಣವಾಗಿ ವಶಪಡಿಸಿಕೊಂಡಿರುವರು. ಇದೇ ತಾ ೧೮ರಲ್ಲಿ ತೋಪು ಫಿರಂಗಿಗಳ ಯುದ್ಧವು ಭರದಿಂದ ನಡೆದಿರುವುದು. ಜನರಲ್ ಫ್ರೇಂಕೋರವರು ಗೊಡಲಜಾರ ರಣರಂಗವನ್ನು ಸಂದರ್ಶಿಸಿ ಹವಾಗುಣವು ಒಳ್ಳೇದಾಗುವ ವರೆಗೆ ಮುಂದಿನ ಧಾಳಿಯನ್ನು ಮುಂದುವರಿಸುವರೆಂದು ತಿಳಿದುಬರುತ್ತದೆ. ಸರಕಾರದ ಸೈನಿಕರು ಬ್ರಿಹ್ಯೂಗವನ್ನು ಜೈಸಿದ್ದು ತಾ. ೧೯ನೇ ಸಂಜೆ. ಇಲ್ಲಿ ಜನರಲ್ ಬರ್ಗೊಂಜೋಲಿ ಎಂಬ ಇಟಲಿಯಾನ ಸೇನಾನಾಯಕನು ತನ್ನ ಕೇಂದ್ರವನ್ನು ಸ್ಥಾಪಿಸಿದ್ದನು. ಮೇದ್ರಿದಿನ ಸಮೀಪದ ಯುನಿವರ್ಸಿಟಿಯ ಬಂಡಾಯಗಾರರ ಕೋಟೆಯಂತಿದ್ದ ಕ್ಲಿನಿಕಲ್ ಆಸ್ಪತ್ರೆಯನ್ನು ಸರಕಾರದ ಕಡೆಯ ಗಣಿಗಾರರು ಸ್ಫೋಟಗೊಳಿಸಿದರು. ಸೈನಿಕರು ಓಡುತ್ತಿರುವ ಬಂಡಾಯಗಾರ ಸೈನಿಕರನ್ನು ಬೆನ್ನಟ್ಟಿ ಹಲವರನ್ನು ಕೊಂದುಹಾಕಿರುವರು.

ಬ್ರಿಹ್ಯೂಗವನ್ನು ವಶಪಡಿಸಿಕೊಳ್ಳಲು ಹಲವು ದಿನಗಳ ವರೆಗೆ ಪ್ರಬಲ ಹೋರಾಟ ನಡೆದಿದ್ದಿತು. ಇಲ್ಲಿ ೩೦೦೦ ಮಂದಿ ಇಟೆಲಿಯಾನರು ಕೊಲ್ಲಲ್ಪಟ್ಟು ಉಳಿದವರು ದಿಗಿಲುಗೊಂಡು ಸಿಕ್ಕಾಬಟ್ಟೆ ಓಡಿ ಹೋದರೆಂದೂ, ಓಡುವವರ ಮೇಲೆ ಸರಕಾರದ ವಿಮಾನಗಳು ಗುಂಡೆಸೆದು ಬಹಳ ಪ್ರಾಣಹಾನಿ ಮಾಡಿರುವವೆಂದೂ ತಿಳಿದುಬಂದಿದೆ. ಕೊಲ್ಲಲ್ಪಟ್ಟವರಲ್ಲಿ ಒಬ್ಬ ಇಟಲಿಯಾನ ಲೆಫ್ಟನೆಂಟ್ ಕರ್ನೆಲನು, ೫ ಮಂದಿ ಇತರ ಅಧಿಕಾರಿಗಳು, ೭೬ ಲೋರಿ, ಹೆಚ್ಚಿನ ಯುದ್ಧಸಾಮಗ್ರಿ ಮತ್ತು ೩೦೦ ಮಂದಿ ಸೈನಿಕರು ಸ್ಪನಿಶ್ ಸರಕಾರಕ್ಕೆ ಸೆರೆಸಿಕ್ಕಿರುವರು

ಬಡೇಜೋ ರಣರಂಗದ ಅತ್ಯಂತ ಪ್ರಾಮುಖ್ಯವಾದೊಂದು ಗುಡ್ಡ ಶಿಖರವನ್ನು ಸ್ಪನಿಷ್ ಸರಕಾರದ ಕಡೆಯ ಸೈನಿಕರು ವಶಪಡಿಸಿಕೊಂಡಿರುವರು. ಸರಕಾರದ ಸೈನಿಕರು ರಾತ್ರಿಯಲ್ಲೇ ಈ ಶಿಖರವನ್ನೇರಿ ಹೋದಾಗ ಬಂಡಾಯಗಾರರ ಕಡೆಯ ಸೈನಿಕರು ನಿದ್ದೆ ಹೋಗಿದ್ದರು. ಸರಕಾರದ ಸೈನಿಕರು ಅವರನ್ನೋಡಿಸಿ ಕೆಲವರನ್ನು ಸೆರೆಹಿಡಿದಿರುವರು.

ಬ್ರಿಹ್ಯೂಗದ ೧೫ ಮೈಲು ಈಶಾನ್ಯದಲ್ಲಿರುವ ನವಲ್ಪೋರ್ಶೋ ಎಂಬ ಸ್ಥಳವನ್ನು ಸರಕಾರದ ಸೈನಿಕರು ವಶಪಡಿಸಿಕೊಂಡಿರುವರು. ಇಲ್ಲಿ ಇಟಲಿಯಾನರು ನಾನಾ ರೀತಿಯಲ್ಲಿ ತಲೆಮರಸಿಕೊಂಡಿದ್ದರು. ಕೆಲವರು ಹುಲ್ಲುಮೂಟೆಗಳಡಿಯಲ್ಲಿ ಹುದುಗಿದ್ದರು. ಇಲ್ಲಿ ವೈರಿಗಳ ಕಡೆಯ ಹೆಚ್ಚಿನ ಮದ್ದು ಗುಂಡುಗಳು ಸರಕಾರದ ವಶವಾಗಿರುವುವು. ೫೦ ಮಂದಿ ಇಟಲಿಯಾನರು ತಮ್ಮ ಸೇನೆ ಬಿಟ್ಟು ಮೇದ್ರಿದಿಗೆ ಹೋಗಿ ಸರಕಾರದ ಮರಹೊಕ್ಕಿರುವರು. ಕಾರ್ಡೋಬ ರಣರಂಗವಲ್ಲಿ ೧೫೦೦೦ ಮಂದಿ ಇಟಲಿಯಾನ ಸೈನಿಕರ ಧಾಳಿಯನ್ನು ಸರಕಾರದ ಸೈನಿಕರು ತಡೆದು ಹಿಂದಕ್ಕಟ್ಟಿರುವರು.

ಇಟಲಿಯಾನ ಸೈನಿಕರು ಗೊಡಲಜಾರ ರಣರಂಗದಲ್ಲಿ ಜಯಶೀಲರಾಗಿ ಮುಂದೊತ್ತಿದುದಕ್ಕಾಗಿ ಅವರನ್ನು ಅಭಿನಂದಿಸಿ ಮುಸಲೋನಿಯವರು ಕಳುಹಿಸಿರುವ ತಂತಿಯೊಂದು ಸ್ಪೆನಿಷ್ ಸರಕಾರಕ್ಕೆ ಸಿಕ್ಕಿರುವುದೆಂದು ತಿಳಿದುಬರುತ್ತದೆ. ಅದರಲ್ಲವರು ಗೊಡಲಜಾರ ಯುದ್ಧದ ಪರಿಸ್ಥಿತಿಯನ್ನೆಲ್ಲಾ ತಾನು ಆಸಕ್ತಿಯಿಂದ ಅನುಸರಿಸುತ್ತೇನೆ; ಇಟಲಿಯ ಸೈನಿಕರು ಶೂರತನದಿಂದ ಹೋರಾಡಿ ವೈರಿಗಳನ್ನು ಗೆದ್ದು ವಿಜಯಿಗಳಾಗುವರೆಂದು ನನಸುತ್ತೇನೆಂದೆಲ್ಲಾ ಬರೆದಿರುವರಂತೆ. ಸ್ಪೈನಿಗೆ ಸೈನಿಕರಾರನ್ನಾದರೂ ಕಳುಹಿಸಬಾರದೆಂಬ ಒಡಂಬಡಿಕೆಯು ಫೆಬ್ರವರಿ ತಾ ೨೦ರಲ್ಲಿ ಜ್ಯಾರಿಗೆ ಬಂದಿರುವುದರಿಂದ ಅನಂತರ ಇಟಲಿಯಾನರು ಸೈನಿಕರನ್ನು ಬಂಡಾಯಗಾರರ ಸಹಾಯಕ್ಕೆ ಕಳುಹಿಸಿರುವರೆಂಬ ಆರೋಪದ ಕುರಿತು ವಿಚಾರಿಸಬೇಕೆಂದು ಬ್ರಿಟಿಷ ಸರಕಾರವು ಇಟಲಿಯ ತನ್ನ ರಾಯಭಾರಿಗೆ ತಿಳಿಸಿರುವುದು.

ತನ್ನ ಸ್ವಾಧೀನವಾಗುವ ಪಟ್ಟಣಗಳಲ್ಲೆಲ್ಲಿಯಾದರೂ ಸಶಸ್ತ್ರ ವಿದೇಶೀಯರು ಸಿಕ್ಕಿದರ ಅವರನ್ನು ಕೂಡಲೆ ಗುಂಡು ಹೊಡೆದು ಕೊಲ್ಲಲಾಗುವುದೆಂದು ಜನರಲ್ ಫ್ರಾಂಕೋರವರು ಬೆದರಿಕೆ ಹಾಕಿರುವರೆಂದು ತಿಳಿದುಬರುತ್ತದೆ.

ಸ್ಪೈನಿನ ಬಂಡಾಯಗಾರರು ಅಬಿಸೀನಿಯನರನ್ನು ಸ್ಪೆನಿಶ್ ಮೊರೊಕ್ಕೋವಿಗೆ ತರುತ್ತಿರುವರೆಂದು ತಿಳಿದುಬರುತ್ತದೆ. ಇಷ್ಟರವರೆಗೆ 1400 ಮಂದಿ ಅಬಿಸೀನಿಯನರು ಗುಪ್ತವಾಗಿ ಮೊರೊಕ್ಕೋವಿಗೆ ತರಲ್ಪಟ್ಟಿರುವರೆಂದು ಸ್ಪನಿಶ್ ಸರಕಾರವು ವಿದಿತಪಡಿಸಿರುವುದು.

ಹೊಸ ರಾಜ್ಯಾಂಗ ರಚನೆಯ ನಿಷೇಧ

ದಿನವನ್ನು ಹಿಂದುದೇಶದ ಮುಸಲ್ಮಾನರೆಲ್ಲರೂ ಆಚರಿಸಿ ಕಾಂಗ್ರೆಸಿನೊಡನೆ ಸಹಕರಿಸಬೇಕು. ಯಾಕೆಂದರೆ ಅದು ಹಿಂದೀಯರ ಸ್ವಾತಂತ್ರ್ಯದ ಹಕ್ಕನ್ನು ನಿರಾಕರಿಸಿ ಬ್ರಿಟಿಷ್ ಸಾಮ್ರಾಜ್ಯ ಶಾಹಿಯ ಹಿಡಿತವನ್ನು ಬಲಪಡಿಸುವುದಾಗಿದೆ. ಆದುದರಿಂದ ಹಿಂದೀಯರೆಲ್ಲರ ಸ್ವಾತಂತ್ರ್ಯ ಮತ್ತು ಹೊಟ್ಟೆಪಾಡಿನ ಹೋರಾಟದಲ್ಲಿ ಮುಸಲ್ಮಾನರೆಲ್ಲರೂ ಭಾಗಿಯಾಗಿ ಹೊಸರಾಜ್ಯ ಸೂತ್ರವನ್ನು ಇತರರಷ್ಟೆ ತೀವ್ರವಾಗಿ ವಿರೋಧಿಸಬೇಕೆಂದು ಪ್ರಾಮುಖ್ಯ ಮುಸಲ್ಮಾನ ಉಲೆಮರು ವಿನಂತಿಮಾಡಿಕೊಂಡಿರುವರು.

ಒಂದಿಷ್ಟು ನಗು

ರಾಮು—ನೀನು ಎಂದಾದರೂ ರೈಲು ಅಪಘಡಕ್ಕೆ ಸಿಕ್ಕಿದ್ದುಂಟೆ?

ಶ್ಯಾಮು—ಹೌದು. ಒಮ್ಮೆ ರೈಲು ಒಂದು ಗುಹೆಯೊಳಗಿಂದ ಹೋಗುವಾಗ ಒಳಗೆ ಕತ್ತಲಾಯಿತು. ನಾನು ಆವಳೆಂದು ಭಾವಿಸಿ ಅವಳ ತಂದೆಯನ್ನು ಮುತ್ತಿಟ್ಟೆ.

ಪೇಟೆ ಧಾರಣೆ

	ಮಂಗಳೂರು		ಉಡುಪಿ	
ಸಾಮಗ್ರಿಗಳು	ಇಂದ	ವರೆಗೆ	ದರ	ವರೆಗೆ
ರಾಶಿ ಅಕ್ಕಿ ...	3 6	3—10	3— 0	3— 2
ಮುಸ್ಕತಿ ...	3— 8	4 4	3 - 4	3—14
ಗುಡ್ಡ ಸುಗ್ಗಿ ...	3—10	3 - 14	3— 0	3— 2
ಬೂರ ಅವ್ವಲ್ ಬೆಳ್ತಿಗೆ ...	4 — 0	4 — 4	4— 4	4— 8
ರಂಗೂನು ಬೆ. ಗೋ. ೧ಕ್ಕೆ	7— 0	7— 4	6 —14	7 — 8
ಗೋಧಿ ಗೋಣಿ ೧ಕ್ಕೆ ...	11 — 0	13 — 0	12 — 0	14— 0
ತೊಗರಿ ಗೋಣಿ ೧ಕ್ಕೆ ...	9 — 8	12— 8	12— 8	13— 0
ಹುರುಳಿ ಗೋಣಿ ೧ಕ್ಕೆ ...	5 — 0	5 — 6	4— 0	5— 8
ಕಡಲೆ ಗೋಣಿ ೧ಕ್ಕೆ ...	8— 0	12— 8	8 — 8	8 —12
ತೊಗರಿಬೇಳೆ ಗೋಣಿ ೧ಕ್ಕೆ	11— 0	19— 0	11— 0	17 — 0
ಉದ್ದು ಗೋಣಿ ೧ಕ್ಕೆ ...	9— 0	9 — 8	9— 0	8— 8
ಹೆಸರು ಗೋಣಿ ೧ಕ್ಕೆ ...	7 —12	8 — 0	10— 0	9— 8
ಉರುಬೆಲ್ಲ ಖಂಡಿ ೧ಕ್ಕೆ ...	30— 0	32— 8	20 — 0	30— 0
ಉಪ್ಪು ಗೋಣಿ ೧ಕ್ಕೆ ..	4 2	5— 4	5— 2	5— 4
ಕೊಬ್ರಿ ಖಂಡಿ ೧ಕ್ಕೆ ...	75— 0	84— 0	90 — 0	95— 0
ಕೊಬ್ರಿ ಹಿಂಡಿ ಖಂಡಿ ೧ಕ್ಕೆ	26— 8	28 — 8	18 —12	20— 0
ಎಳ್ಳಿಂಡಿ ಖಂಡಿ ೧ಕ್ಕೆ ...	26 — 4	27— 8	20— 0	21— 4
ಕೊಬ್ರಿ ಎಣ್ಣೆ ಮಣ ೧ಕ್ಕೆ	6— 0	7— 0	6 — 8	6—12
ಎಳ್ಳೆಣ್ಣೆ ಮಣ ೧ಕ್ಕೆ ...	7— 0	..	6 — 0	6— 4
ಚಮೀಣೆ ಎಣ್ಣೆ ಪೆಟ್ಟಿಗೆ ೧ಕ್ಕೆ	6 — 5	7 — 5	6— 8	6—12
ಮೋರಿಸ ಸಕ್ಕರೆ ಮ ೧ಕ್ಕೆ	3— 2	3— 4	2 - 14	2—15
ಮೆಣಸು ...	2— 8	5 -- 0	3 - 1	3— 6
ಸಾಸಿವೆ ಮುಡಿ ೧ಕ್ಕೆ ...	5— 4	5- 8	5— 8	5—12
ಕೊತ್ತಂಬರಿ ಮುಡಿ ೧ಕ್ಕೆ ...	2— 8	3 — 0	2— 8	3— 4
ಕಾಳುಮೆಣಸು ಖ. ೧ಕ್ಕೆ ...	100— 0	120 — 0	110 - 0	120 — 0
ಗೇರುಬೀಜ ಮು ೧ಕ್ಕೆ ...	3 — 4	3— 8	4 — 6	4— 8
ಕಬ್ಬಿಣ ಖಂಡಿ ೧ಕ್ಕೆ ...	35— 0	37— 8	55— 0	60— 0
ತಾಂಬ್ರ ತಗಡು ಮ. ೧ಕ್ಕೆ	12— 4	12— 8	17— 8	...
,, ಪಾತ್ರಗಳು ಮ. ೧ಕ್ಕೆ	12— 8	14— 0	18— 8	19— 0
ಚೀನಿ ಬೆಳ್ಳಿ ಸೇರು ೧ಕ್ಕೆ ...	13— 8	15— 0	13 - 14	...
ಹಿತ್ತಾಳೆ ತಗಡು ಮ ೧ಕ್ಕೆ	10— 0	10— 8	13— 0	..
ಸವೆಸು ೧ಕ್ಕೆ ...	22— 7	22— 8	22 —12	...
ಹುಣಸೆ ಹುಳಿ ಖಂಡಿ ೧ಕ್ಕೆ	40— 0	45 -- 0	45 -- 0	50— 0
ನೇಟಿವ್ ಕಾಫಿ ಖಂಡಿ ೧ಕ್ಕೆ	170— 0	180 - 0	180 — 0	220— 0
ಪಿಟೇರಿ ಕಾಫಿ ಖಂಡಿ ೧ಕ್ಕೆ	175— 0	195— 0	210 — 0	220— 0
ಮಡಿಕೇರಿ ಏಲಕ್ಕಿ ...	50— 0	55— 0	70— 0	75— 0
ತುಪ್ಪ ಮಣ ೧ಕ್ಕೆ ...	17— 0	18— 0	14— 0	15— 0
ಏಲಕ್ಕಿ ಬೀಜ ಮಣ ೧ಕ್ಕೆ	80— 0	85— 0	70— 0	80--

ಪ್ರಾಮುಖ್ಯ ಪ್ರಕಟಣೆ

ಅಮೃತಾಂಜನ

— ಡಿಪೋವಿನ ರಿಂಗ್‌ವರ್ಮ್ ಮುಲಾಮು —

ಇಪ್ಪರ ವರೆಗಿನ ನಮ್ಮ
ವಿಲಿಯಮ್ ಎಂಡ್ ಕೋ ರವರ
ರಾಜ ಮತ್ತು ರಾಣಿಯ ಟ್ರೇಡ್‌ಮಾರ್ಕಿನ ರಿಂಗ್‌ವರ್ಮ್
ಮುಲಾಮು ಈ ಕೆಳಗಣಂತೆ ವ್ಯತ್ಯಾಸಮಾಡಲಾಗಿದೆ.

ಅಮೃತಾಂಜನ ಡಿಪೋವಿನ ತ್ರಿವರ್ಣದ 'ರೈಸಿಂಗ್ ಸನ್'

ಈ ಮೇಲಿನ ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು
ನಮ್ಮ ಗಿರಾಕಿದಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು.

ನಮ್ಮ ಟ್ರೇಡ್‌ಮಾರ್ಕಿನ ಮಾರ್ಪಾಟದಿಂದ ನಮ್ಮ ಔಷಧ ತಯಾರಿಯಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲೆಂಬ ಕುರಿತು ನಾವು ಈ ಮೂಲಕ ಭರವಸೆ ಕೊಡುತ್ತೇವೆ.

ಅಮೃತಾಂಜನ ಡಿಪೋ, —— ಬೊಂಬಾಯಿ, ಮದ್ರಾಸು, ಕಲ್ಕತ್ತ.

ಕೇವಲ ಎರಡೇ ಆಣೆಗಳಲ್ಲಿ ೨೫ ರೂಪಾಯಿ ಬಹುಮಾನ

ಅಖಿಲ ಕನ್ನಡ ನಾಡಿಗೆ ಪ್ರೀತಿಯಾಗಿರುವ

ಕಥಾಕುಂಜ (ಮಾಸಪತ್ರಿಕೆ)

ನಯನಮನೋಹರವಾಗಿ ಹೊಸ ಹೊಸ ಚಿತ್ರಗಳಿಂದ ಅಲಂಕೃತವಾಗಿ ಡಿಸೆಂಬರದಲ್ಲಿ ೩ನೆಯ ವರುಷದ ೧ನೆಯ ಸಂಚಿಕೆಯು ಪ್ರಕಟವಾಗುವದು. ಆದ್ದರಿಂದ ಕನ್ನಡಾಭಿಮಾನಿಗಳು ಈಗಲೆ ಮುಂಗಡ ಹಣ ಕಳುಹಿಸಿ ಚಂದಾದಾರರಾಗಬೇಕು.

ಚಂದಾದಾರರಿಗೆ ೨೫ ರೂಪಾಯಿ ಬಹುಮಾನ.

ಈ ಸಂಧಿ ಕಳಕೊಳ್ಳಬಾರದು. ಕಥಾಕುಂಜವನ್ನು ಕೊಂಡುಕೊಳ್ಳಲು ಎಲ್ಲರಿಗೂ ಅನುಕೂಲವಾಗಲೆಂದು ಚಂದಾ ಹಣವನ್ನು ಇಳಿಸಲಾಗಿದೆ.

ಇಳಿಸಿದ ಚಂದಾ ೧-೮-೦ (ಅಂಚವೆಚ್ಚ ಬೇರೆ) ಶಾಲೆ, ಕಾಲೇಜು, ಲೈಬ್ರರಿಗಳಿಗೆ ೨-೮-೦

ಮೈಸೂರು, ಮುಂಬೈ ವಿದ್ಯಾಖಾತೆಯವರಿಂದ ಶಾಲೆ ಕಾಲೇಜುಗಳ ವಾಚನಾಲಯಕ್ಕೆ ಮಂಜೂರಾಗಿದೆ. ಜಾಹೀರಾತುದಾರರಿಗೆ ಸುವರ್ಣಸಂಧಿ! ಪತ್ರಿಕೆಗಳನ್ನು ಮಾರಾಟಮಾಡಲು ಎಲ್ಲಾ ನಗರಗಳಲ್ಲಿ ಪ್ರಾಮಾಣಿಕ ಏಜಂಟರು ಬೇಕು.

ವಿಶೇಷ ಮಾಹಿತಿ ಹಸ್ತಪತ್ರಿಕೆ ನೋಡಿರಿ.

ವ್ಯವಸ್ಥಾಪಕ— **ಕಥಾಕುಂಜ, ಬೆಳಗಾಂವಿ.**

DIAMONDS! DIAMONDS!!

K. Ramachandra Krishna Shet

Near Mission High School, *Mangalore*

SUPERFINE UP TO DATE CUTTING! **ವಜ್ರಗಳು** BEST BRILLIANCY!!

ಉತ್ಕೃಷ್ಟ ತರಗತಿಯ ಚುನ್ನಾತ (first quality, selected) ಎಮ್‌ಸ್ಟ್ರಿ ಡಮ್ಮಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ. ಕೊಂಡುಕೊಳ್ಳುವವರಿಗೆ ಬಜಾರ ಧಾರಣೆಗಿಂತ 5 ಪರ್ಸಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ. ಇದನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ. ಇದರ ಶಾಖೆಯೊಂದನ್ನು ಗವರ್ನ್‌ಮೆಂಟ್ ಕೊಲೇಜಿನ ಎದುರುಗಡೆ ತೆರೆಯಲಾಗಿದೆ.

ಕೆ. ರಾಮಚಂದ್ರ ಕೃಷ್ಣ ಶೇಟ್,
ಜುವೆಲರ್, ಮಿಶನ್ ಹೈಸ್ಕೂಲು ಬಳಿ, ಮಂಗಳೂರು.

ಕಿರಿಯರ ಪ್ರಪಂಚ

೧	ನಾಟಕಕಥೆ	೦	೨	೦
೨	ಮುಂದಿನ ಜೀವರು ...	೦	೨	೦
೩	ಸ್ವತಂತ್ರ ಜೀವನೋಪಾಯ	೦	೨	೬
೪	ಕುಶ-ಲವ	೦	೪	೦
೫	ಸಂಶಯ ಪಿಶಾಚಿ .	೦	೬	೦
೬	ಕಾವ್ಯಸಾಮ್ರಾಜ್ಯ .	೦	೧೨	೦
೭	ಮಧುವನ	೧	೮	೦
೮	ವ್ಯಭಿಚಾರಿಣಿ ಚೂರು	೦	೮	೦

ಕಿರಿಯರ ಪ್ರಪಂಚ, ಉಡುಪಿ.

ಭಾಷಾಂತರಕಾರರು

ದೊರೆಯದೆ ಪೇಚಾಡುವಿರೇಕೆ?

ಇನ್ಶೂರೆನ್ಸ್ ಕಂಪನಿ, ಬ್ಯಾಂಕು ಮೊದಲಾದುವುಗಳಿಗೆ ಸಂಬಂಧಪಟ್ಟ ಮತ್ತು ಇತರ ಎಲ್ಲಾ ತರದ ಇಂಗ್ಲಿಷ್ ಕನ್ನಡ ಭಾಷಾಂತರಗಳನ್ನು ಉತ್ತಮ ರೀತಿಯಿಂದ ಮಾಡಿಕೊಡಲಾಗುವುದು
ಹೆಚ್ಚಿನ ವಿವರಕ್ಕೆ ಈ ಕೆಳಗಿನ ವಿಳಾಸ
ದೊಡನೆ ಪತ್ರವ್ಯವಹಾರ
ಮಾಡಬೇಕು

'ಟ್ರಾನ್ಸ್‌ಲೇಟರ್,'
C/o 'ಕಿರಿಯರ ಪ್ರಪಂಚ,'
ಉಡುಪಿ.

ಉತ್ತಮ ವರ್ಗದ ಶ್ರೇಷ್ಠವಾದ

ಸರಸ್ವತಿ

ಸ್ತ್ರೀಸಾಹಿತ್ಯ ಸಚಿತ್ರ ಮಾಸಪತ್ರಿಕೆ

ಇಡೀ ಕರ್ನಾಟಕದಲ್ಲಿ ಸ್ತ್ರೀಯರ ಅಭ್ಯುದಯಕ್ಕಾಗಿ ಪ್ರಚುರಪಡಿಸುತ್ತಿರುವ ಪತ್ರಿಕೆಯು ಇದೊಂದೇ. ಈ ಪತ್ರಿಕೆಯ ಹದಿನಾರನೆಯ ಸಂಪುಟವು 1937ನೇಯ ಜನವರಿ ತಿಂಗಳಿನಿಂದ ಪ್ರಾರಂಭವಾಗಿದೆ. ಈ ಪತ್ರಿಕೆಯಲ್ಲಿ ಸ್ತ್ರೀಯರ ಉನ್ನತಿಗೆ ಅತ್ಯಾವಶ್ಯಕವಾದ ಶಿಕ್ಷಣ-ಸಾಹಿತ್ಯ ಕಲೆ-ಆರೋಗ್ಯ-ಪಾಕಶಾಸ್ತ್ರ-ಸಮಾಜ ಸುಧಾರಣೆ ಇವುಗಳಿಗೆ ಸಂಬಂಧಪಟ್ಟ ಲೇಖನಗಳೂ, ಸಣ್ಣ ಸಣ್ಣ ಕಥೆಗಳೂ, ನಾಟಕಗಳೂ ಕರ್ನಾಟಕದ ಸುಪ್ರಸಿದ್ಧ ಲೇಖಕ ಲೇಖಕಿಯರಿಂದ ಬರೆಯಲ್ಪಟ್ಟು ಪ್ರಕಟವಾಗುವವು. ಮಕ್ಕಳ ಸಲುವಾಗಿ 'ಮಕ್ಕಳ ಪುಟಗಳು' ಬೇರೆ ಪ್ರಕಟವಾಗುವುವು. ಮೈಸೂರು, ಮುಂಬೈ ವಿದ್ಯಾ ಇಲಾಖೆಯವರಿಂದ ಸರ್ಕಾರದ ಶಾಲೆಗಳಿಗೂ ವಾಚನಾಲಯಗಳಿಗೂ ಮಂಜೂರಾಗಿದೆ. ಪ್ರಕಟಣೆಗೆ ಅತ್ಯುತ್ತಮವಾದ ಮಾಸಪತ್ರಿಕೆ.

ವಾರ್ಷಿಕ ಚಂದಾ ರೂ. 3—0—0 ಮಾತ್ರ. ವಿ. ಪಿ. ಚಾರ್ಜು ಬೇರೆ.

ಸರಸ್ವತಿ ಕಾರ್ಯಾಲಯ,
ಚಾಮರಾಜಪೇಟೆ, ಬೆಂಗಳೂರು ನಗರ

ದಿ ನ್ಯೂ ಗ್ಲಾಸ್ ಎಂಪೋರಿಯಮ್

ಪೋಸ್ಟಾಫೀಸ್ ರೋಡ್, ಉಡುಪಿ

ನಮ್ಮಲ್ಲಿ ಎಲ್ಲಾ ತರದ ಗ್ಲಾಸ್‌ವೇರ್, ಎನಾಮಲ್‌ವೇರ್ ಪೋರ್ಸಿಲಿನ್‌ವೇರ್, ಲೇಂಪ್ಸ್ ಲಾಟೀನು, ಪೆಟ್ರೊಮೆಕ್ಸ್ ಇತ್ಯಾದಿ ಎಲ್ಲಾ ತರದ ಸಾಮಾಗ್ರಿಗಳು ಮತ್ತು ಹೊಟೇಲು ಹೊಸ್ಟೆಲುಗಳಿಗೆ ಉಪಯುಕ್ತವಾದ 'ಟೀಸೆಟ್' ಕಪ್ಸ್ ಸಾಸರ್, ಪ್ಲೇಟ್ಸ್, ಟಂಬ್ಲರ್ಸ್ ಗ್ಲಾಸ್, ಜಗ್, ಟ್ರೇಫ್ಲವರ್ ವೇಜ್, ಮತ್ತು ಪ್ರೆಜಂಟೇಶನ್ ಬಗ್ಗೆ ನಾನಾತರದ ಚಲೋ ಫೆನ್ಸಿ, ಗ್ಲಾಸ್‌ವೇರ್ ಸಾಮಾನುಗಳೂ ಸಹಾ ಕಡಿಮೆ ಬೆಲೆಗೆ ಸಿಕ್ಕುವುವು

ನಾವು ಹೊಸತಾಗಿ ಎಲ್ಲಾ ಸಾಮಾನುಗಳನ್ನು ಡೈರೆಕ್ಟ್ ತರಿಸಿರುವುದರಿಂದ ಯಾವತ್ತೂ ಸಾಮಾನುಗಳು ಕಡಿಮೆ ಬೆಲೆಗೆ ಕೊಡಲು ಅನುಕೂಲವಿದೆ ಕಾರಣ ಗ್ರಾಹಕರು ಸ್ವತಹಾ ನಮ್ಮ 'ಶೋರೂಮ್'ನ್ನು ಸಂದರ್ಶಿಸಿ ಮಾಲನ್ನೂ, ದರಗಳನ್ನೂ ಪರಿಶೀಲಿಸಿ ಕೊಂಡುಕೊಳ್ಳಬೇಕಾಗಿ ವಿನಂತಿ

THE GENERAL STORES, UDIPI

The only Reliable House for quality goods of every description

---

ಬಲ್ಲಿರಾ?

ಒಂದು ಶತಮಾನದ ಅನುಭವದಿಂದ ಶಾಸ್ತ್ರೀಯರೀತ್ಯಾ ತಯಾರಿಸಿದ ಅತ್ಯಂತ ಗುಣಕಾರಿಯೂ ಅತ್ಯುತ್ತಮವೂ ಆಗಿರುವ ಆಯುರ್ವೇದಿಕ ಔಷಧಗಳು ಅತೀ ಕಡಿಮೆ ಬೆಲೆಗೆ ಎಲ್ಲಿ ದೊರಕುವುವು?

ನಾಯಕ್ ಬ್ರದರ್ಸರ

ಶ್ರೀಮದ್ಭುವನೇಂದ್ರ ಮಹೌಷಧಾಲಯ,

ಕಟಪಾಡಿ,
ದ. ಕ.

ಇವರಿಗೆ ದೊರಕಿದ ಸ್ವರ್ಣರಜತ ಪದಕಗಳೂ, ಪ್ರಶಂಸಾಪತ್ರಿಕೆಗಳೂ ಇವರ ಔಷಧಗಳನ್ನು ಹೊಗಳುತ್ತಿವೆ.

ಇವರಲ್ಲಿ—

ಗುಡಪಿಪ್ಪಲಿ (ಲೀವರ್ ರೋಗಕ್ಕೆ)	ಗರ್ಭಪಾಲ (ಗರ್ಭಶೂಲೆ, ಗರ್ಭಸ್ರಾವಕ್ಕೆ)	ಚಂದ್ರಮಸ್ (ವಾಂತಿಭೇದಿ, ಅತಿಸಾರಕ್ಕೆ)

ಇವೂ ಅಲ್ಲದೆ ಉತ್ತಮವಾದ ಅರಿಷ್ಟಗಳು, ಆಸವಗಳು, ಲೇಹ್ಯಗಳು. ಭಸ್ಮಗಳು, ತೈಲಗಳು ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿವೆ. ಪ್ರತಿನಿಧಿಗಳಿಲ್ಲದ ಕಡೆಗಳಲ್ಲಿ ವ್ಯವಹಾರ ಕುಶಲರೂ, ವ್ಯಾಪಕರೂ, ಯೋಗ್ಯರೂ ಆದ ಏಜಂಟರು ಬೇಕಾಗಿರುವರು! ಅವರಿಗೆ ವಿಪುಲವಾದ ಸೌಕರ್ಯಗಳಿವೆ.

ಹೆಚ್ಚಿನ ಮಾಹಿತಿಗೂ ಸೂಚೀಪತ್ರಕ್ಕೂ ವ್ಯವಹಾರ ನಿಯಮಕ್ಕೂ ಇಂದೇ ಬರೆಯಿರಿ

ಪ್ರೇಮ ವಿದ್ಯಾಪೀಠ, ತುಂಗಭದ್ರಾ, (ಬಳ್ಳಾರಿ ಜಿಲ್ಲಾ)

ಇದರ ಹೊಸವರ್ಷವು ಜುಲೈಯಲ್ಲಿ ಮೊದಲಾಗುತ್ತದೆ. ಮರ್ಯಾದೆಯ ಉದ್ಯೋಗ ಬೇಕಾಗಿದ್ದರೆ ಇಲ್ಲಿ ಶಿಕ್ಷಣವನ್ನು ಪಡೆಯಿರಿ. ಮುಲ್ಕಿ, ಅಪ್ಪರ್ ಸೆಕೆಂಡರಿ, ಮೆಟ್ರಿಕ್ ಸ್ಕೂಲ್ ಫೈನಲ್ ಇತ್ಯಾದಿ ಪಾಸ್ ಆದವರೆಲ್ಲರಿಗೂ ಯೋಗ್ಯತೆಗೆ ತಕ್ಕಂತೆ ವಿಧ ವಿಧವಾದ ಕೋರ್ಸ್‌ಗಳಿವೆ. ಪ್ರಾಸ್‌ಫೆಕ್ಟಸ್ ಮಾಹಿತಿಗಾಗಿ ಕೂಡಲೆ ೨ ಆಣೆ ಸ್ಟ್ಯಾಂಪು ಇಟ್ಟು ಬರೆಯಿರಿ.

ಮಹೋಪಾಧ್ಯಾಯಾ ಡಾ॥ ಸುಮತಿಬಾಯಿ,

ಬಿ. ಎ. ಎಲ್. ಟಿ., ಎಫ್. ಪಿ. ಎಮ್. ಎಸ್. ಭಿಷಗ್ರತ್ನ, ರಿಜಿಸ್ಟ್ರಾರ್.

ನ್ಯೂ ಕೋಮಲ ವಿಲಾಸ ಹೊಟೆಲ್

91-101 ಕವಾಸ್ಜಿ ಪಟೇಲ್ ಸ್ಟ್ರೀಟ್, ಫೋರ್ಟ್, ಬೊಂಬಾಯಿ

— ನೀವು —

ಬೊಂಬಾಯಿಯನ್ನು ಸಂದರ್ಶಿಸುವಾಗ

ನ್ಯೂ ಕೋಮಲ ವಿಲಾಸ

ಇಲ್ಲಿಯೇ ಉಳಕೊಳ್ಳಿರಿ

ಅತ್ಯಾಧುನಿಕ ರೀತಿಯ ಸಲಕರಣೆಗಳು ಸುಲಭದರದಲ್ಲಿ ದೊರೆಯುತ್ತವೆ!

ನಿಮ್ಮನ್ನು ತೃಪ್ತಿಗೊಳಿಸುವ ಮೇಲ್ವಿಚಾರ!

ಕಾಯಂ ಉಳಕೊಳ್ಳುವವರಿಗೆ ರಿಯಾಯತಿಯ ದರಗಳಿವೆ.

ಕುಟುಂಬ ಸಮೇತ ವಾಸಿಸುವರೆ ಪ್ರತ್ಯೇಕ ಏರ್ಪಾಡುಗಳಿವೆ.

ಹೆಚ್ಚಿನ ವಿವರಗಳನ್ನು ಕೆಳಗಿನವರಿಂದ ತಿಳಿಯಿರಿ.

ಕೆ. ವಿ. ರಾವ್, ಮೆನೇಜರ್.

ಮಾಸ] **ವಿಶ್ವವಾಣಿ** [ಪತ್ರಿಕೆ.

ಸಂಪಾದಕರು—ಅ. ನ. ಕೃಷ್ಣರಾಯರು.

ಸಂಸ್ಕೃತಿಯ ಪ್ರಸಾರಕ್ಕಾಗಿ ಕರ್ನಾಟಕದಲ್ಲಿ ಹೊರಟಿರುವ ಪತ್ರಿಕೆ ಇದೊಂದೇ. ಜಗತ್ತಿನ ಸಾಂಸ್ಕೃತಿಕ ಚಲನವಲನಗಳ ಸುದ್ದಿಗಳೆಲ್ಲಾ ಇದರಲ್ಲಿ ಪ್ರಕಟವಾಗುತ್ತವೆ.

ಚಿತ್ರವಿಭಾಗದ ವೈಶಿಷ್ಟ್ಯ—ಜಗತ್ತಿನ ಯಾವದೇ ಪತ್ರಿಕೆಯಲ್ಲಿಯೂ ಪ್ರಕಟವಾಗದಿರುವ ಅನೇಕ ಚಿತ್ರಗಳು 'ವಿಶ್ವವಾಣಿ'ಗೆ ವಿಶೇಷ

ಆದುದರಿಂದ ಇಂದೇ ಚಂದಾದಾರರಾಗಿರಿ.

ಸಾಮಾನ್ಯ ಚಂದಾದಾರರಿಗೆ (ವರ್ಷಕ್ಕೆ)	...	...	...	ರೂ. ೩—೮—೦
,, ,, (೬ ತಿಂಗಳಿಗೆ)	...	...	...	ರೂ. ೨—೦—೦
ಶಾಲೆ, ಕಾಲೇಜು, ವಾಚನಾಲಯ, ಸಾರ್ವಜನಿಕ ಸಂಸ್ಥೆಗಳಿಗೆ (ವರ್ಷಕ್ಕೆ)				ರೂ. ೫—೦—೦

ವಿಶ್ವವಾಣಿಯು ಮೈಸೂರು, ಮುಂಬಯಿ, ಮದರಾಸು, ಹೈದರಾಬಾದು, ಕೊಡಗು, ಕರ್ನಾಟಕಗಳಲ್ಲಿ ಮಾತ್ರವಲ್ಲದೆ ಕನ್ನಡಿಗರು ನೆಲಸಿರುವ ಎಲ್ಲಾ ಕಡೆಯಲ್ಲಿಯೂ ಪ್ರಚುರವಾಗುತ್ತದೆ.

ಆದುದರಿಂದ 'ವಿಶ್ವವಾಣಿ'ಯಲ್ಲೇ ಜಾಹೀರಾತನ್ನು ಕೊಡಿರಿ.

ಹೆಚ್ಚು ವಿಚಾರಗಳಿಗೆ ಬರೆಯಿರಿ—

ವ್ಯವಸ್ಥಾಪಕ—'ವಿಶ್ವವಾಣಿ,' 'ಅನ್ನಪೂರ್ಣ', ವಿಶ್ವೇಶ್ವರಪುರಂ,

ಬೆಂಗಳೂರು ನಗರ.

ನಮ್ಮ ಜರಿ ಪೀತಾಂಬರ, ರೇಶ್ಮೆ ಮಡಿಗಳಿಗೆ ಗಮನಕೊಡಿರಿ.

S. U. N. & CO. ***Choukhamba, Benares City.***

ಮೂರು ಇನಾಮುಗಳು.

THIS MAN
WISHES HE HAD

ಶ್ರೀ ಕಾಶಿಯಲ್ಲಿ ತಯಾರಾಗತಕ್ಕ ರೇಶಿಮೆಯ ಮಾಲುಗಳ ಕೆಟಲಗ್ 1, ಕಾಶೀನಕ್ಷೆ 1, ವಿಶ್ವೇಶ್ವರ ಪಟ 1, ಈ 3 ಸಾಮಾನುಗಳು 1 ಆಣೆ ಸ್ಟಾಂಪು ಕಳುಹಿಸಿದರೆ ಇನಾಮಾಗಿ ಕಳುಹಿಸಲಾಗುವವು, ಸ್ಟ್ಯಾಂಪು ಬಾರದಿದ್ದರೆ ಈಗಿನ ಫೇಶನಿಗೆ ತಕ್ಕಂತೆ ಜರೀ ಕೆಲಸಗಳಿಂದ ತಯಾರಿಸಿದ ರೇಶ್ಮೆ ಸೀರೆಗಳೂ, ಖಣ, ಮಡಿ ಕದಪಾವ್ಡಿ, ಪೇಟಾ, ಕೋಟಿಂಗ್, ಶರ್ಟಿಂಗ್ ಶಿಲ್ಕುಗಳೂ, ಕಾಶ್ಮೀರ ಶಾಲುಗಳೂ, ಊಲ್ಲನ್ ಚಾಳ, ಧಾವಳಿ, ನಾಮಡಿ, ತರತರದ ರುದ್ರಾಕ್ಷಿಗಳೂ ಸಾಮಾನುಗಳೇ ಮೊದಲಾದ ಅನೇಕ ತರದ ಸಾಮಾನುಗಳ ಕೆಟಲಾಗು 1 ಮಾತ್ರ ಇನಾಂ. ಈಗಿನ ಹೊಸನಮೂನೆಯ ಪಡಲು ಬುಟ್ಟಿ ಹಾಕಿದ ಜರೀ ಸೀರೆ ಎಲ್ಲಾ ರಂಗುಗಳಲ್ಲಿ ರೂ. 20 ರಿಂದ 65 ವರೆಗೆ. ಸಾದಾ 16 ಮೊಳದ ಸೀರೆ 1 ಕ್ಕೆ ರೂ. 16 ರಿಂದ ರೂ. 35 ರ ವರೆಗೆ. ಅರೆ ಕಡಮೆ 16 ಮೊಳ ಕ್ರಪ್ಪ ಅಂಚು ರೂ. 10½ ಯಿಂದ ರೂ. 16 ಖಣ 1 ಕ್ಕೆ ರೂ. 1¼ ರಿಂದ ರೂ. 10 ರ ವರೆಗೆ. ಪೋಸ್ಟು ಖರ್ಚು ಪ್ರತ್ಯೇಕ. ಆರ್ಡರಿನಂ. ಸಾಮಾನುಗಳನ್ನು ಸರಿಯಾದ ಸುಲಭ ದರದಿಂದ ಕಳುಹಿಸಲಾಗುವುದು.

ಶಿರೋಮಣಿ ನಾರಾಯಣಾಚಾರ್ಯ & ಕಂಪೆನಿ, ಚೌಕಂಬಾ, ಬೆನಾರಿಸ್, ಕಾಶಿ

USE

SUVASINI AGARBATHIES

(REGD.)

SRI BHARATHA VASTU MANDIR, UDIPI

Consult

for

Neat Printing
Wall Posters
Calendars
Colour Printing
Book Work
Job Work

MANIPAL POWER PRESS

(Proprietors: SUPPLY AGENCY, LTD.)

WANTED

Compositors

in

Telugu, Malalayalam & Tamil

Please apply to:

The Managing Director,

SUPPLY AGENCY, Ltd., UDIPI

Printed by P. VENKATARAMANACHARYA for & on behalf of SUPPLY AGENCY LTD., at THULUNAD PRESS, UDIPI and Published by K. H. SHETTY at "NAVAYUGA" OFFICE, UDIPI.